ಇತಿಹಾಸ ದರ್ಶನ

KARNATAKA ITIHASA ACADEMY
कर्नाटक इतिहास अकादमि
ಕರ್ನಾಟಕ ಇತಿಹಾಸ ಅಕಾದೆಮಿ (ರಿ.), ಬೆಂಗಳೂರು

ಸಂಪುಟ
೩೦
೨೦೧೫



ಸಂಪಾದಕರು
ಡಾ. ದೇವರಕೊಂಡಾರೆಡ್ಡಿ
ಜಿ.ಕೆ. ದೇವರಾಜ ಸ್ವಾಮಿ

ಇತಿಹಾಸ ದರ್ಶನ ಸಂಪುಟ ೨೯ರ ಬಿಡುಗಡೆ ಸಮಾರಂಭ



ವೇದಿಕೆಯಲ್ಲಿ : ಸುರೇಶ್ ಕಟೀಲ್, ಪ್ರೊ. ಸುಬ್ರಹ್ಮಣ್ಯ ಭಟ್, ಶ್ರೀ ಎಚ್.ಎಂ. ನಾಗರಾಜರಾವ್, ಡಾ. ಅ.ಸುಂದರ,
ಶ್ರೀ ಮಟ್ಟಾರು ರತ್ನಾಕರ ಹೆಗಡೆ, ಡಾ. ವಿವೇಕ ರೈ, ಡಾ. ಕೆ.ಜಿ. ವಂಸತ ಮಾಧವ, ಶ್ರೀ ವಿ.ಸುಬ್ಬಯ್ಯ ಹೆಗಡೆ

ಇತಿಹಾಸ ದರ್ಶನ

ITIHASA DARSANA - *Volume 30* / 2015

ಸಂಪುಟ ೩೦ / ೨೦೧೫

೨೦೧೪ರ ಸೆಪ್ಟಂಬರ್ ೨೬ರಿಂದ ೨೮ರವರೆಗೆ ಕರ್ನಾಟಕ ಇತಿಹಾಸ ಅಕಾದೆಮಿ ಹಾಗೂ ಉಡುಪಿ ಜಿಲ್ಲೆಯ ಶಿರ್ವದ ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜು ಇವರ ಸಂಯುಕ್ತ ಆಶ್ರಯದಲ್ಲಿ ಶಿರ್ವದಲ್ಲಿ ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ೨೮ನೆಯ ವಾರ್ಷಿಕ ಸಮ್ಮೇಳನದಲ್ಲಿ ಅಕಾದೆಮಿಯ ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಪುಟ.

ಸಂಪಾದಕರು

ಡಾ॥ ದೇವರಕೊಂಡಾರೆಡ್ಡಿ

ಜಿ.ಕೆ. ದೇವರಾಜಸ್ವಾಮಿ

KARNATAKA ITIHASA ACADEMY

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA - ***Volume 30* / 2015**

The Volume of the Scholarly papers presented and the General body Proceedings of the 28th Annual Conference of

The Karnataka Ithihasa Academy (Regd.,)
held at Mulki Sundararamashetty College, Shirva, Udupi Dist.
on 26th, 27th & 28th September 2014

ಪುಟಗಳು : ೫೫೨ + xxxvi + Photos XII

Pages : 552 + xxxvi + Photos XII

The publication of the manuscript/Proceedigs was financially supported by the Indian Council of Historical Research and the responsibility for the facts stated, opinions expressed and conclusions reached is entirely that of the author/authors of the articles and the Indian Council of Historical Research accepts no responsibility for them.

Edited by : **Dr. Devarakondareddy**
G.K. Devarajaswamy

Published by : Secretary
Karnataka Itihasa Academy (Regd.)
43/13, Mathru Krupa, 2nd Floor, 2nd Main Road
5th Cross, Mount Joy Extension, Hanumanthanagar, Bangalore - 560 019.

e-mail : **karnatakaitihasaacademy25@gmail.com**
Blog : **itihasaacademy.blogspot.in**
Web : **www.karnatakaitihasaacademy.org**


Price : ₹ **650**

ಬೆಲೆ : ₹ ೬೫೦

ಆರ್ಥಿಕ ನೆರವು : ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ.
ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೇಹೊನ್ನೂರು.

ISBN No. 978-81-921255-5-8

Printed at
ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA Bangalore
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೬೫೨



ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ

ಬಾಳೇಹೊನ್ನೂರು–೫೭೭ ೧೧೨ ಚಿಕ್ಕಮಗಳೂರು ಜಿಲ್ಲೆ

ಶ್ರೀಮದ್ ರಂಭಾಪುರಿ ವೀರಸಿಂಹಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು

ವಾಸ್ತವ್ಯ : ಶ್ರೀಪೀಠ, ಬಾಳೆಹೊನ್ನೂರು

ಶುಭಾಶೀರ್ವಾದ ಸಂದೇಶ

ಸಹನೆ ನಿನ್ನದಾದರೆ ಸಕಲವೂ ನಿನ್ನದೆ
ವಿನಯ ನಿನ್ನದಾದರೆ ವಿಜಯವು ನಿನ್ನದೇ –ಕವಿವಾಣಿ

ಭಾರತೀಯ ಸಂಸ್ಕೃತಿ ಉತ್ಕೃಷ್ಟವಾದುದು. ಹಲವಾರು ದೇಶಗಳ ಸಂಸ್ಕೃತಿ ನಾಶಗೊಂಡರೂ ನಮ್ಮ ಸಂಸ್ಕೃತಿ ಉಳಿದಿರುವುದು ಆದರ್ಶ ಮೌಲ್ಯಗಳಿಂದ ಎಂಬುದನ್ನು ಮರೆಯುವಂತಿಲ್ಲ. ಇತಿಹಾಸ ಮತ್ತು ಪರಂಪರೆ ಮರೆತು ಬಾಳಿದರೆ ಭವಿಷ್ಯ ಜೀವನಕ್ಕೆ ಯಾವ ಬೆಲೆಯೂ ಇಲ್ಲ. ನಮ್ಮ ಶಿಕ್ಷಣ ರಾಷ್ಟ್ರೀಯತೆಯನ್ನು ಬೋಧಿಸುವ ಶಿಕ್ಷಣವಾಗಬೇಕೆ ಹೊರತು ವಿದೇಶಿಯರನ್ನು ಅನುಸರಿಸುವ ಶಿಕ್ಷಣವಾಗಬಾರದು. ನಾವು ನಿಂತ ನೀರಾಗಬಾರದು. ಹರಿಯುವ ಪರಿಶುದ್ಧ ಜಲವಾಗಬೇಕು. ಅದೇ ರೀತಿ ಬೇರು ಬುಡವಿಲ್ಲದ ಅತಂತ್ರರೂ ಆಗಬಾರದು. ಬದುಕಿನಲ್ಲಿ ಪಾಂಡಿತ್ಯವೊಂದಿದ್ದರೆ ಸಾಲದು. ಅದರ ಜೊತೆಗೆ ಇತಿಹಾಸ ಪರಂಪರೆಯ ಪ್ರಜ್ಞೆ ಬೇಕು.

ಸುಂದರವಾದ ಮನೆ ಎಲ್ಲರೂ ಕಟ್ಟಬಲ್ಲರು. ಆದರೆ ಆ ಮನೆಯಲ್ಲಿ ಸುಂದರವಾಗಿ ಬದುಕುವುದನ್ನು ಕೆಲವರು ಮಾತ್ರ ಬಲ್ಲರು. ಬೆಟ್ಟ ಎಂದಿಗೂ ನಮ್ಮ ಮುಂದೆ ಬಾಗುವುದಿಲ್ಲ. ಆದರೆ ಕಷ್ಟ ಪಟ್ಟು ಏರಿದ ಮೇಲೆ ಅದು ನಮ್ಮ ಪಾದದ ಕೆಳಗೆ ಇರುತ್ತದೆ. ಸತ್ಯ ಸಂಸ್ಕೃತಿಯ ದಾರಿ ಕಷ್ಟವಾದರೂ ಆಚರಣೆಯಲ್ಲಿ ತಂದರೆ ಬಾಳು ಬಂಗಾರವಾಗಲು ಸಾಧ್ಯ. ಅನುಕೂಲ ಪ್ರತಿಕೂಲ ಪರಿಸ್ಥಿತಿ ಎರಡರಲ್ಲೂ ಬದುಕುವುದು ಜೀವನದ ಕಲೆಯಾಗಬೇಕು. ಸೆಲೆಯಾಗಬೇಕು. ಒಳ್ಳೆಯ ಮಾತು ಹಣಕ್ಕಿಂತಲೂ ಹೆಚ್ಚು ಬೆಲೆ ಬಾಳುವಂತಹುದು. ದೇಶ ಸುಭಿಕ್ಷವಾಗಿದ್ದರೆ ಜನರು ಶಾಂತಿ ನೆಮ್ಮದಿಯಿಂದ ಬದುಕುತ್ತಾರೆ. ಆದರ್ಶಗಳು ಎಂದೆಂದಿಗೂ ನಾಶಗೊಳ್ಳಬಾರದು.

ಕರ್ನಾಟಕ ಇತಿಹಾಸ ಅಕಾದೆಮಿ (ರಿ) ರಾಜ್ಯದಲ್ಲಿ ಉತ್ತಮ ಕಾರ್ಯ ಮಾಡುತ್ತಾ ಮುನ್ನಡೆದಿದೆ. ಇತಿಹಾಸ ಸಂಶೋಧನೆಯ ಸಾಹಿತ್ಯ ಇಂದಿನ ಯುವ ಜನಾಂಗಕ್ಕೆ ಸ್ಫೂರ್ತಿಯಾಗಬಲ್ಲದು. ಹಳೆಯದನ್ನು ಮರೆಯದೇ ಹೊಸತನವನ್ನು ಅಳವಡಿಸಿಕೊಂಡು ಬಾಳುವುದೇ ಮನುಷ್ಯನ ಧರ್ಮವಾಗಬೇಕು. ಕರ್ನಾಟಕ ಇತಿಹಾಸ ಅಕಾದೆಮಿಯ ೨೯ನೇ ಸಮ್ಮೇಳನ ಮಂಡ್ಯ ಜಿಲ್ಲಾ ಕೇಂದ್ರದಲ್ಲಿ ಸೆಪ್ಟಂಬರ್ ತಿಂಗಳಲ್ಲಿ ಜರುಗಲಿರುವುದು ಸಂತೋಷ ತಂದಿದೆ. ಇತಿಹಾಸ ದರ್ಶನ–೩೦ನೇ ವಿದ್ವತ್ ಪ್ರಬಂಧಗಳ ಸಂಪುಟ ಬಿಡುಗಡೆಯಾಗಲಿರುವುದು ಮತ್ತಷ್ಟು ಹರುಷಕ್ಕೆ ಕಾರಣವಾಗಿದೆ. ಈ ಸಂಪುಟಕ್ಕೆ ಪ್ರತಿ ವರುಷದಂತೆ ಈ ವರ್ಷವು ಸಹ ಶ್ರೀಪೀಠದಿಂದ ಇಪ್ಪತ್ತೈದು ಸಾವಿರ (೨೫೦೦೦–೦೦) ರೂಪಾಯಿಗಳನ್ನು ಆಶೀರ್ವಾದ ರೂಪದಲ್ಲಿ ದಯಪಾಲಿಸಲಾಗಿದೆ. ಇದಕ್ಕಾಗಿ ಶ್ರಮಿಸಿದ ಎಲ್ಲ ಸಂಪಾದಕ ಮಂಡಳಿಯ ಸದಸ್ಯರಿಗೆ ಶುಭ ಹಾರೈಕೆಗಳು.

ಪರಮ ದಯಾಳು ಶ್ರೀ ಪಾರ್ವತಿ ಪರಮೇಶ್ವರರು ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯರು ಸರ್ವರಿಗೂ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.

ಮಲಯಾಚಲ ತಪೋಭೂಮಿ
ದಿನಾಂಕ ೧೭–೭–೨೦೧೫.

ಶುಭಾಶೀರ್ವಾದಗಳೊಂದಿಗೆ
ಶ್ರೀ ರಂಭಾಪುರಿ ಜಗದ್ಗುರುಗಳು

ವಾರ್ಷಿಕನಿಧಿ ರೂ. ೨೫ ಸಾವಿರ ಕೊಡುಗೆ ಆರಂಭಿಸಿದ ವರ್ಷ : ೨೦೦೫



ಡಾ॥ ಕೆ.ಜಿ. ವಸಂತ ಮಾಧವ

ಕರ್ನಾಟಕ ಇತಿಹಾಸ ಅಕಾದೆಮಿಯ

ಇಪ್ಪತ್ತೆಂಟನೆಯ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರು

ಉದ್ಘಾಟನಾ ಸಮಾರಂಭ



ಕರ್ನಾಟಕ ಇತಿಹಾಸ ಅಕಾದೆಮಿಯ ೨೮ನೆಯ ವಾರ್ಷಿಕ ಸಮ್ಮೇಳನದ ಉದ್ಘಾಟನಾ ಸಮಾರಂಭ ಶಿರ್ವ, ಉಡುಪಿ ತಾಲೂಕು



ಡಾ. ಕೆ. ರವೀಂದ್ರನಾಥ್ ಅವರ ಕನ್ನಡ ದಾಖಲು ಸಾಹಿತ್ಯ ಪುಸ್ತಕ ಬಿಡುಗಡೆ



ಸಮ್ಮೇಳನದ ಪ್ರತಿನಿಧಿಗಳು



ಡಾ. ಎಫ್.ಟಿ. ಹಳ್ಳಿಕೇರಿ ಅವರ ಕಂಠ ಪತ್ರ ಸಂಪುಟ - ೩ ಪುಸ್ತಕ ಬಿಡುಗಡೆ



ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಕೆ.ಜಿ. ವಸಂತ ಮಾಧವ ಅವರಿಗೆ ಸನ್ಮಾನ



ಡಾ. ಬಾ.ರಾ. ಗೋಪಾಲ್ ಪ್ರಶಸ್ತಿ ಪುರಸ್ಕೃತರಾದ ಶ್ರೀ ನಾಗರಾಜರಾವ್ ಎಚ್.ಎಂ. ಅವರಿಗೆ ಸನ್ಮಾನ



'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿ ಪುರಸ್ಕೃತರಾದ ಡಾ. ಅ.ಸುಂದರ ಅವರಿಗೆ ಸನ್ಮಾನ



ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಫ್ಯಾಮಿಲಿ ಚಾರಿಟಬಲ್ ಟ್ರಸ್ಟ್ ವತಿಯಿಂದ 'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿ ಪುರಸ್ಕೃತರಾದ ಡಾ. ಅ. ಸುಂದರ ಅವರಿಗೆ ಶ್ರೀ ಅಶೋಕ್‌ಕುಮಾರ್ ಅವರಿಂದ ನಗದು ಅರ್ಪಣೆ



ಡಾ. ಅ. ಸುಂದರ ಅವರಿಂದ ಭಾಷಣ



ಡಾ. ವಿವೇಕ ರೈ ಅವರಿಂದ ಉದ್ಘಾಟನಾ ಭಾಷಣ



ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಕೆ.ಜಿ. ವಸಂತ ಮಾಧವ ಅವರಿಂದ ಅಧ್ಯಕ್ಷೀಯ ಭಾಷಣ



ಶ್ರೀಯುತ ನಾಗರಾಜ ರಾವ್ ಎಚ್.ಎಂ.
ಅವರಿಂದ ಭಾಷಣ

ಶ್ರೀ ವಿ. ಸುಬ್ಬಯ್ಯ ಹೆಗಡೆ ಅವರಿಗೆ
ಡಾ. ದೇವರಕೊಂಡಾರೆಡ್ಡಿ ಅವರಿಂದ
ಗೌರವಾರ್ಪಣೆ





ಪ್ರೊ. ವೈ ಭಾಸ್ಕರ ಶೆಟ್ಟಿ ಅವರಿಗೆ
ಡಾ. ದೇವರಕೊಂಡಾರೆಡ್ಡಿ ಅವರಿಂದ
ಗೌರವಾರ್ಪಣೆ



೨೭ನೇ ಸಮ್ಮೇಳನಾಧ್ಯಕ್ಷರಾದ
ಡಾ. ಎಸ್.ಕೆ. ಜೋಷಿಯವರಿಗೆ
ಸನ್ಮಾನ



ಕರ್ನಾಟಕ ಇತಿಹಾಸ ಅಕಾದೆಮಿ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿಯವರು ಮಾತನಾಡುತ್ತಿರುವುದು



೨೦೧೪ - ಪರಂಪರೆ ಉಳಿಸಿ ಕಾರ್ಯಕ್ರಮದ ಉದ್ಘಾಟನೆ: ಶ್ರೀ ಟಿ.ಎಸ್. ಗಂಗಾಧರ್ ನಿರ್ದೇಶಕರು ಪ್ರಾಚ್ಯವಸ್ತು (ಪ್ರಭಾರ), ಡಾ. ಸಿ.ಆರ್. ಸಂಪತ್ ಕುಮಾರಿ, ಡಾ. ಇಂದಿರಾ ಹೆಗಡೆ, ಡಾ. ದೇವರಕೊಂಡಾರೆಡ್ಡಿ



ಶ್ರೀ ಟಿ.ಎಸ್. ಗಂಗಾಧರ್ ನಿರ್ದೇಶಕರು ಪ್ರಾಚ್ಯವಸ್ತು (ಪ್ರಭಾರ) ಅವರಿಂದ ಭಿತ್ತಿ ಪತ್ರ ಬಿಡುಗಡೆ



ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳೊಂದಿಗೆ ಅತಿಥಿಗಳು

ಅಧ್ಯಕ್ಷರ ನುಡಿ

ಕರ್ನಾಟಕ ಇತಿಹಾಸ ಅಕಾದೆಮಿ ತನ್ನ ೨೯ ವರ್ಷಗಳನ್ನು ಮುಗಿಸಿ, ೩೦ನೆಯ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ. ಈ ಒಂದು ಓಟಕ್ಕೆ ಕಾರಣರಾದವರೆಲ್ಲರಿಗೆ ಕೃತಜ್ಞತೆಗಳನ್ನು ಅಕಾದೆಮಿ ಸಲ್ಲಿಸುತ್ತದೆ.

ಅಕಾದೆಮಿಯ ಧ್ಯೇಯೋದ್ದೇಶಗಳಲ್ಲಿ ಮುಖ್ಯವಾದದ್ದು ಕರ್ನಾಟಕ ಇತಿಹಾಸ ಹಾಗೂ ಸಂಸ್ಕೃತಿಯನ್ನು ಪ್ರಸರಣ ಮಾಡುವುದರ ಜೊತೆಗೆ ಜನಸಾಮಾನ್ಯರಿಗೆ, ಯುವಕರಿಗೆ ಹಾಗೂ ಹೊರಗಿನವರಿಗೆ ಇದರ ಪರಿಚಯ ಮಾಡಿಕೊಡುವುದಾಗಿದೆ. ಆ ಮೂಲಕ ತಮ್ಮ ಸುತ್ತಮುತ್ತಲಿನ ಪ್ರಾಚ್ಯಾವಶೇಷಗಳನ್ನು ಉಳಿಸಿಕೊಳ್ಳಲು ಜಾಗೃತಿ ಮೂಡಿಸುವುದೇ ನಮ್ಮ ಉದ್ದೇಶ. ಕರ್ನಾಟಕದ ಅನೇಕ ಭಾಗಗಳಲ್ಲಿ ಈಗಾಗಲೇ ನಮ್ಮ ಅನೇಕ ಸದಸ್ಯರು ಇತಿಹಾಸ ಹಾಗೂ ಸಂಸ್ಕೃತಿಯನ್ನು ಶಾಲಾ ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರಿಗೆ ಅರಿವು ಮೂಡಿಸುವ ಪ್ರಯತ್ನವಾಗಿ ನಮ್ಮ 'ಐತಿಹಾಸಿಕ ಪರಂಪರೆ ಉಳಿಸಿ' ಎಂಬ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಕೆಲವು ಸಂಘ ಸಂಸ್ಥೆಗಳೂ, ಮಠ ಮಾನ್ಯಗಳೂ ಈ ಕಾರ್ಯಕ್ರಮಕ್ಕೆ ತಮ್ಮ ಸಹಕಾರವನ್ನು ನೀಡುತ್ತಿವೆ. ಆದರೂ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಈ ಚಳವಳಿ ಅಷ್ಟೊಂದು ಸಕ್ರಿಯವಾಗಿಲ್ಲ. ಆ ಕಡೆಗೆ ನಾವು ಗಮನ ಹರಿಸಬೇಕಾಗಿದೆ.

ಅಕಾದೆಮಿಯ ೨೯ನೆಯ ವಾರ್ಷಿಕ ಸಮ್ಮೇಳನವನ್ನು ನಡೆಸಲು ಈ ಬಾರಿ ಮಂಡ್ಯ ನಗರದ ಕರ್ನಾಟಕ ಸಂಘದಿಂದ ಕೋರಿಕೆ ಬಂದಿದ್ದು, ಕಾರ್ಯಕಾರಿ ಸಮಿತಿಯು ಇದನ್ನು ಅನುಮೋದಿಸಿ ಅದರಂತೆ ಅಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಮ್ಮೇಳನವನ್ನು ನಡೆಸಿಕೊಡಲು ಮುಂದೆ ಬಂದ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ಜಯಪ್ರಕಾಶ್‌ಗೌಡ ಅವರಿಗೂ, ಪದಾಧಿಕಾರಿಗಳಿಗೂ ವಿಶೇಷವಾಗಿ ಡಾ. ಪಿ.ಎನ್. ನರಸಿಂಹಮೂರ್ತಿಯವರಿಗೆ ಅಕಾದೆಮಿಯು ಆಭಾರಿಯಾಗಿದೆ.

ಅಕಾದೆಮಿಯ ಜಾಲತಾಣವು (website) ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ, ಸಾರ್ವಜನಿಕರು, ಸಂಶೋಧನಾಸಕ್ತರನ್ನೂ ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ. 'ಇತಿಹಾಸ ದರ್ಶನ'ದ ಎಲ್ಲಾ ಸಂಪುಟಗಳನ್ನು ಈಗ ಜಾಲತಾಣದಿಂದ ಪಡೆಯಬಹುದಾಗಿದೆ. ಈ ವರ್ಷದಿಂದ ಕರ್ನಾಟಕದ ಗ್ರಾಮಗಳ ಪರಿಚಯ ಮಾಡಿಕೊಡುವ ದೃಷ್ಟಿಯಿಂದ 'ನಮ್ಮ ಊರು–ನಮ್ಮ ಇತಿಹಾಸ' ಎಂಬ ಹೊಸ ಜಾಲತಾಣವನ್ನು ಸೃಷ್ಟಿಸಿದ್ದೇವೆ. ಆಸಕ್ತರು ಯಾರು ಬೇಕಾದರೂ ಇದಕ್ಕೆ ವಿಷಯವನ್ನು ಸೇರಿಸಬಹುದು. ಅವರ ಹೆಸರನ್ನು ಉಲ್ಲೇಖಿಸಲಾಗುವುದು. ಶ್ರೀಮತಿ ಸೀತಾರಾವ್ ಅವರು ಇದನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ.

ಕಳೆದ ವರ್ಷ ಉಡುಪಿ ತಾಲ್ಲೂಕಿನ ಶಿರ್ವದಲ್ಲಿ ನಡೆದ ೨೮ನೆಯ ವಾರ್ಷಿಕ ಸಮ್ಮೇಳನದಲ್ಲಿ ಮಂಡಿಸಿದ ಲೇಖನಗಳನ್ನು ಕಳುಹಿಸಲು ಕೋರಲಾಗಿತ್ತು. ಅನೇಕರು ಕಳುಹಿಸಲಿಲ್ಲ. ಈ ವರ್ಷದಿಂದ ಸಂಪಾದಕ ಮಂಡಳಿಯೊಂದಿದ್ದು ಸಂಪುಟದ ಲೇಖನಗಳ ಗುಣಮಟ್ಟವನ್ನು ಕಾಪಾಡುವ ಹೊಣೆಯನ್ನು ಹೊತ್ತುಕೊಂಡಿದೆ. ಸದಸ್ಯರು ಈ ಬಗ್ಗೆ ಗಮನ ನೀಡಿ ಸಹಕರಿಸಲು ಕೋರಿದೆ.

ಇತಿಹಾಸ ದರ್ಶನ ೨೯ನೆಯ ಸಂಪುಟದ ಪ್ರಕಟಣೆಗೆ ಬಾಳೆಹೊನ್ನೂರಿನ ರಂಭಾಪುರಿ ಮಠದ ಈಗಿನ ಪಟ್ಟಾಧ್ಯಕ್ಷರಾದ ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ರೂ. ೨೫,000/–ವನ್ನು ಆಶೀರ್ವಾದ ಪೂರ್ವಕವಾಗಿ ನೀಡಿದ್ದಾರೆ. ಪ್ರಾಚ್ಯವಸ್ತು, ಸಂಗ್ರಹಾಲಯಗಳು, ಪರಂಪರೆ ಇಲಾಖೆಯು ರೂ. ೪,00,000 ಗಳನ್ನು ಸಹಾಯಧನವಾಗಿ ನೀಡಿದೆ. ಈ ಸಂಪುಟ ಪ್ರಕಟಣೆಯ ಹಾಗೂ ಧನಸಹಾಯಕ್ಕಾಗಿ ದೆಹಲಿ ICHR ದೆಹಲಿ ಸಂಸ್ಥೆಗೆ ಕೋರಿಕೆ ಸಲ್ಲಿಸಲಾಗಿದೆ. ಈ ಸಂಸ್ಥೆಗಳಿಗೆ ನಮ್ಮ ಕೃತಜ್ಞತೆಗಳು.

ಅಕಾದೆಮಿಯಿಂದ ಪಾರಂಪರಿಕ ತಾಣಗಳ ಅರಿವು ಮೂಡಿಸಲು ಈ ವರ್ಷ ಎರಡು ಪ್ರವಾಸಗಳನ್ನು ಹಮ್ಮಿಕೊಳ್ಳಲಾಗಿತ್ತು ಒಂದು ನಾಗಮಂಗಲ, ಮೇಲುಕೋಟೆ ಹಾಗೂ ತೊಣ್ಣೂರು ಪ್ರವಾಸ. ಎರಡನೆಯದು ಹೊಯ್ಸಳ ತಾಣಗಳ ಪ್ರವಾಸದ ಪ್ರಯುಕ್ತ ಎರಡು ದಿನಗಳ ಪ್ರವಾಸ. ಹೊಸಹೊಳಲು, ಅಘಲಯ, ಗೋವಿಂದನಹಳ್ಳಿ, ಕಿಕ್ಕೇರಿ, ಶ್ರವಣಬೆಳಗೊಳ, ಆನೆಕೆರೆ, ನುಗ್ಗೇಹಳ್ಳಿಯ ದೇವಾಲಯಗಳನ್ನು ಸಂದರ್ಶಿಸಲಾಯಿತು. ಈ ಪ್ರವಾಸಕ್ಕೆ ಔರಂಗಾಬಾದ್‌ನಿಂದ ಆಸಕ್ತರು ಬಂದಿದ್ದರು. ಅಕಾದೆಮಿಯ ಉಳಿದ ಸದಸ್ಯರೂ ಜಿಲ್ಲಾ ಪ್ರತಿನಿಧಿಗಳೂ ಇಂತಹ ಪ್ರವಾಸ ಕಾರ್ಯಗಳನ್ನು ಹಮ್ಮಿಕೊಂಡಲ್ಲಿ ವಿದ್ಯಾರ್ಥಿಗಳಿಗೆ, ಆಸಕ್ತರಿಗೆ ಅನುಕೂಲವಾಗಲಿದೆ.

ಈ ವರ್ಷದಿಂದ ಅರಸೀಕೆರೆಯ ಮೋಟಣಮಠದ ಲಿಂ. ಶ್ರೀ ವೀ.ಎಸ್. ಸಿದ್ದಪ್ಪ ಮತ್ತು ಲಿಂ. ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟ್ (ರಿ). ಅವರ ನೆರವಿನಲ್ಲಿ ಶ್ರೀ ಪರಶಿವಮೂರ್ತಿಯವರು ೨೦೧೫ರಿಂದ 'ನೊಳಂಬ ಶ್ರೀ' ಪ್ರಶಸ್ತಿಯನ್ನು ಕರ್ನಾಟಕ ಇತಿಹಾಸ ಅಕಾದೆಮಿ ಮೂಲಕ ನೀಡಲು ಮುಂದೆ ಬಂದಿದ್ದಾರೆ. ಇದು ನಗದು ರೂ. ೧೦,೦೦೦/- ಗಳು ಹಾಗೂ ಫಲಕವನ್ನು ಹೊಂದಿರುತ್ತದೆ. ಮೇಲಿನ ದತ್ತಿ ಸಂಸ್ಥೆಗೆ ನಮ್ಮ ಅಭಿನಂದನೆಗಳು.

ದೇವರಕೊಂಡಾರೆಡ್ಡಿ
ಅಧ್ಯಕ್ಷರು
ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

೨೮ ಅಕ್ಟೋಬರ್, ೨೦೧೫
ಬೆಂಗಳೂರು

ಸಂಪಾದಕೀಯ

ಕರ್ನಾಟಕ ಇತಿಹಾಸ ಅಕಾಡೆಮಿಯು ಸ್ಥಾಪಿತವಾಗಿ ೩೦ನೇ ವರ್ಷಕ್ಕೆ ಕಾಲಿಡುತ್ತಿದೆ. ಇದರ ಬೆಳವಣಿಗೆಯಲ್ಲಿ ಅನೇಕ ಸಂಘ ಸಂಸ್ಥೆಗಳು, ಮಠ ಮಾನ್ಯಗಳು, ವ್ಯಕ್ತಿಗಳು, ಸರ್ಕಾರದ ಇಲಾಖೆಗಳ ಪಾತ್ರವಿದೆ. ಈ ಅಕಾಡೆಮಿ ಪ್ರತಿ ವರ್ಷ ನಡೆಸುವ ವಾರ್ಷಿಕ ಸಮ್ಮೇಳನ ಹಾಗೂ ಅದರ ಅಂಗವಾಗಿ ಪ್ರಕಟಿಸುವ 'ಇತಹಾಸ ದರ್ಶನ' ಸಂಪುಟ ಇವು ಪ್ರಮುಖವಾಗಿವೆ. ಇದರಲ್ಲಿ ಹಿರಿಯ ವಿದ್ವಾಂಸರು, ಕಿರಿಯ ವಿದ್ವಾಂಸರು, ಸಾಮಾನ್ಯ ಜನರು, ಕರ್ನಾಟಕ ಸಂಸ್ಕೃತಿ ಇತಿಹಾಸಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಪ್ರಬಂಧವನ್ನು ಮಂಡಿಸುತ್ತಾ ಬಂದಿದ್ದಾರೆ. ಇವನ್ನು ಒಟ್ಟುಗೂಡಿಸಿ ಇತಿಹಾಸ ದರ್ಶನ ಎಂಬ ಹೆಸರಿನಲ್ಲಿ ತರುತ್ತಿದ್ದೇವೆ. ಇದು ೩೦ನೆಯ ಸಂಪುಟ.

೨೦೧೪ರಲ್ಲಿ ಉಡುಪಿ ತಾಲ್ಲೂಕಿನಲ್ಲಿ ಶಿರ್ವದ ಮೂಲ್ಕಿ ಸುಂದರರಾಮ ಶೆಟ್ಟಿ ಕಾಲೇಜಿನಲ್ಲಿ ನಡೆದ ೨೮ನೆಯ ವಾರ್ಷಿಕ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧಗಳ ಸಂಗ್ರಹ. ಈ ಸಮ್ಮೇಳನದಲ್ಲಿ ೧೬೩ ಪ್ರಬಂಧಗಳು ಮಂಡನೆಯಾಗಿದ್ದು ಮುದ್ರಣಕ್ಕೆ ೧೩೨ ಪ್ರಬಂಧಗಳು ಬಂದಿವೆ. ಇವೆಲ್ಲವನ್ನು ಸೇರಿಸಿ ಈ ೩೦ನೆಯ ಸಂಪುಟವನ್ನು ಸಿದ್ಧಗೊಳಿಸಲಾಗಿದೆ. ಈ ಬಾರಿಯೂ ಈ ಸಂಪುಟದಲ್ಲಿ ಕೆಲವು ವರ್ಣಚಿತ್ರಗಳನ್ನು ಹಾಗೂ ಉತ್ತಮ ಮುದ್ರಣ ಕಾಗದದ ಮೇಲೆ ಮುದ್ರಿಸಲಾಗಿದೆ.

ಈ ಸಂಪುಟದ ಮುದ್ರಣಕ್ಕೆ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ನೀಡಿದ್ದ ಹಣದಲ್ಲಿ ರೂ. ೧,೫೦,೦೦೦.೦೦ ಗಳನ್ನು ಬಳಸಲಾಗಿದೆ. ಶ್ರೀಮದ್ ರಂಭಾಪುರಿ ಪೀಠಾಧ್ಯಕ್ಷರಾದ ಶ್ರೀಮದ್ ಪ್ರಸನ್ನ ರೇಣುಕ ವೀರ ಸೋಮೇಶ್ವರ ರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ವರ್ಷಂಪ್ರತಿ ರೂ. ೨೫,೦೦೦ ರೂ.ಗಳನ್ನು ನೀಡುತ್ತಾ ಬಂದಿದ್ದಾರೆ. ಕೇಂದ್ರ ಸರ್ಕಾರದ ಐಸಿಹೆಚ್ಆರ್ ಸಂಸ್ಥೆಗೂ ಧನಸಹಾಯಕ್ಕಾಗಿ ಕಾಗದ ಬರೆಯಲಾಗಿದೆ. ಮುದ್ರಣ ವೆಚ್ಚ ಇತ್ಯಾದಿಗಳು ಹೆಚ್ಚಾಗಿರುವ ಈ ಕಾಲದಲ್ಲಿ ಈ ಬೇಡಿಕೆಗಳು ಅನಿವಾರ್ಯ. ಧನಸಹಾಯ ನೀಡಿದ ಮೇಲಿನ ಮಹನೀಯರಿಗೆಲ್ಲಾ ಕೃತಜ್ಞತೆಗಳು. ಎಂದಿನಂತೆ ವಿದ್ವಜ್ಜನರು ಇದನ್ನು ಬರಮಾಡಿಕೊಳ್ಳುವಿರೆಂದು ಆಶಿಸುತ್ತೇವೆ.

ಈ ವರ್ಷದಿಂದ ಇತಿಹಾಸ ದರ್ಶನದ ಸಂಪಾದಕತ್ವದ ಜೊತೆಗೆ ಸಂಪಾದಕ ಮಂಡಳಿಯೊಂದನ್ನು ರಚಿಸಲಾಗಿದೆ. ಈ ಮಂಡಳಿಯಲ್ಲಿ ಡಾ. ಎಚ್. ಎಸ್. ಗೋಪಾಲರಾವ್, ಅರಶಿನಕುಂಟೆ, ಡಾ. ಎಂ.ಜಿ. ನಾಗರಾಜ್, ಬೆಂಗಳೂರು, ಡಾ. ನಂಜುಂಡಸ್ವಾಮಿ, ತುಮಕೂರು, ಶ್ರೀ ಪ್ರಭಾಕರ್, ಮೈಸೂರು, ಡಾ. ಅಮರೇಶ ಯತಗಲ್ ಬೀಜಾಪುರ ಇದ್ದಾರೆ. ಇತಿಹಾಸ ದರ್ಶನದ ಹಿಂದಿನ ಎಲ್ಲಾ ಸಂಪುಟಗಳು ಈಗ ಅಕಾದೆಮಿಯ ವೆಬ್‌ಸೈಟ್‌ನಲ್ಲಿಯೂ ದೊರೆಯುತ್ತವೆ. ಅವನ್ನು ಆಸಕ್ತರು ಪಡೆಯಬಹುದಾಗಿದೆ.

ಸಂಪುಟ ಹೊರತರಲು ನೆರವಾದ ಕರ್ನಾಟಕ ಇತಿಹಾಸ ಅಕಾಡೆಮಿಯ ಕಾರ್ಯಕಾರಿ ಸಮಿತಿ, ೨೮ನೆಯ ಸಮ್ಮೇಳನದ ಸಹಯೋಗ ನೀಡಿದ್ದ ಶಿರ್ವದ ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜಿನ ಆಡಳಿತ ಮಂಡಳಿ, ಇಂಟರ್‌ನೆಟ್‌ನಲ್ಲಿ ಬಂದಿದ್ದ ಲೇಖನಗಳನ್ನು ಸಂಕಲಿಸಿ ನೀಡಿದ ಶ್ರೀಮತಿ ನಿರ್ಮಲ ಗಣೇಶ್, ಕರಡಚ್ಚು ತಿದ್ದುವಲ್ಲಿ ಸಹಕರಿಸಿದ ಶ್ರೀ ಬಿ.ಎಸ್. ಗುರುಪ್ರಸಾದ್, ಅಂದವಾಗಿ ಮುದ್ರಿಸಿದ ಲಕ್ಷ್ಮೀ ಮುದ್ರಣಾಲಯದ ಶ್ರೀ ಕೆ.ಎಸ್. ಮಂಜು ಅವರಿಗೂ, ಅಂದವಾಗಿ ಮುಖಪುಟ ರಚಿಸಿದ ಶ್ರೀಮತಿ ಮಾಲಾ, ಡಿಟಿಪಿ ಮಾಡಿದ ಪಿ.ಎಸ್. ಸುಬ್ರಮಣಿ ಬಾಬು ಹಾಗೂ ಸಿಬ್ಬಂದಿ ವರ್ಗಕ್ಕೂ ನಮ್ಮ ಕೃತಜ್ಞತೆಗಳು.

ಡಾ. ದೇವರಕೊಂಡಾರೆಡ್ಡಿ
ಶ್ರೀ ದೇವರಾಜ ಸ್ವಾಮಿ

೨೮ ಅಕ್ಟೋಬರ್ ೨೦೧೫
ಶ್ರೀ ಮನ್ಮಥನಾಮ ಸಂವತ್ಸರ ಆಶ್ವಯುಜ
ಬಹುಳ ಬಿದಿಗೆ ಗುರುವಾರ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

ಬೆಂಗಳೂರು

ಕಾರ್ಯಕಾರಿ ಸಮಿತಿ

(೨೭.೦೯.೨೦೧೪ರಲ್ಲಿ ಆಯ್ಕೆಯಾದವರು)

ಗೌರವ ಅಧ್ಯಕ್ಷರು

ಡಾ|| ಸೂರ್ಯನಾಥ ಕಾಮತ್

ಕಾರ್ಯಾಧ್ಯಕ್ಷರು

ಡಾ|| ದೇವರಕೊಂಡಾರೆಡ್ಡಿ

ಉಪಾಧ್ಯಕ್ಷರು

ಡಾ|| ಎಂ.ಜಿ. ನಾಗರಾಜ್

ಡಾ|| ಎಚ್.ಎಸ್. ಗೋಪಾಲರಾವ್

ಪ್ರಧಾನ ಕಾರ್ಯದರ್ಶಿ

ಪ್ರೊ. ಜಿ.ಕೆ. ದೇವರಾಜಸ್ವಾಮಿ

ಕಾರ್ಯದರ್ಶಿಗಳು

ಡಾ|| ಪಿ.ವಿ. ಕೃಷ್ಣಮೂರ್ತಿ

ಡಾ|| ಜಯಮ್ಮ ಎಚ್. ಕರಿಯಣ್ಣ

ಕೋಶಾಧ್ಯಕ್ಷರು

ಶ್ರೀ ಎಂ.ಬಿ. ಪಾಟೀಲ್

ಸದಸ್ಯರು

ಡಾ|| ಎ.ಕೆ. ಶಾಸ್ತ್ರಿ, ಶಿರಸಿ

ಡಾ|| ವೆಂಕಟೇಶ್ ಜೋಯಿಸ್, ಕೆಳದಿ

ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಡಾ|| ಹನುಮಾಕ್ಷಿ ಗೋಗಿ, ಧಾರವಾಡ

ಡಾ|| ಅಮರೇಶ್ ಯತಗಲ್, ಬಿಜಾಪುರ

ಡಾ|| ಬಾಲಕೃಷ್ಣ ಹೆಗ್ಗಡೆ, ಶಿವಮೊಗ್ಗ

ಪ್ರೊ. ಮುರುಗೇಶಿ ಟಿ., ಉಡುಪಿ

ಶ್ರೀ ಪ್ರಭಾಕರ್ ಎಂ.ಎನ್., ಮೈಸೂರು

ಶ್ರೀ ಗುರುಪ್ರಸಾದ್ ಬಿ.ಎಸ್., ಬೆಂಗಳೂರು

ಶ್ರೀ ಟಿ.ಎಚ್.ಎಂ. ಬಸವರಾಜ, ಬಳ್ಳಾರಿ

ಶ್ರೀ ಕಲ್ಲಪ್ಪ ಮಹದೇವಪ್ಪ ಗರಗ, ಗದಗ

ಶ್ರೀ ಸಿದ್ದಗಿರಿ ಓ.ಎಲ್. ಚಂದ್ರೇಗೌಡ, ಚಿಕ್ಕಮಗಳೂರು

ಡಾ|| ಶರಣಬಸಪ್ಪ ಕೋಲ್ಕಾರ್, ಗಂಗಾವತಿ

ಪ್ರೊ|| ರಾಮಚಂದ್ರ ಮಿಟ್ಟಿಮನಿ, ಧಾರವಾಡ

ಡಾ|| ಬಿ. ನಂಜುಂಡಸ್ವಾಮಿ, ತುಮಕೂರು

ಡಾ|| ಶ್ರೀಮತಿ ಸ್ಮಿತಾ ಪಿ. ಸುರೇಬಾನಕರ, ಬೆಳಗಾವಿ

ಡಾ|| ಎಫ್.ಟಿ. ಹಳ್ಳಿಕೇರಿ, ಯಾದಗಿರಿ

ಶ್ರೀ ಪಾಟೀಲ್ ಬಸನಗೌಡ, ಯಾದಗಿರಿ

ಪರಿವಿಡಿ

ಈವರೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು ಹಾಗೂ ಇತರ ವಿವರಗಳು

ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ

೧. **ಡಾ|| ಎಂ. ಚಿದಾನಂದಮೂರ್ತಿ**
೧೫-೧೭ ಮೇ ೧೯೮೭
ಕರ್ನಾಟಕ ಇತಿಹಾಸ ಅಕಾದೆಮಿ
ಬೆಂಗಳೂರು



೨. **ಡಾ|| ಜಿ. ಎಸ್. ಗಾಯಿ**
೨೩-೨೪ ಅಕ್ಟೋಬರ್ ೧೯೮೮
ಸಿದ್ಧಗಂಗಾಕ್ಷೇತ್ರ : ಡಾ| ಶಿವಕುಮಾರ
ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ
ಇತಿಹಾಸ ಪರಿಷತ್ತು, ತುಮಕೂರು



೩. **ಡಾ|| ಶ್ರೀನಿವಾಸ ರಿತ್ತಿ**
೧೦-೧೧ ಜೂನ್ ೧೯೮೯
ಶ್ರೀ ಮ. ನಿ. ಪ್ರ. ಜ|| ಡಾ|| ತೋಂಟದ
ಸಿದ್ಧಲಿಂಗ ಮಹಾಸ್ವಾಮಿಗಳು,
ಶ್ರೀ ತೋಂಟದಾರ್ಯ ಮಠದ
ವೀರಶೈವ ಅಧ್ಯಯನ ಸಂಸ್ಥೆ, ಗದಗ



೪. **ಡಾ|| ಎಸ್. ಆರ್. ರಾವ್**
೨೧-೨೨ ಜುಲೈ ೧೯೯೦
ಡಾ|| ಸದ್ಯೋಜಾತ ಶಿವಾಚಾರ್ಯ
ಸ್ವಾಮೀಜಿ, ಹಿರೇಮಠ, ದಾವಣಗೆರೆ



೫. **ಡಾ|| ಬಾ. ರಾ. ಗೋಪಾಲ್**
೧೨-೧೪ ಜುಲೈ ೧೯೯೧
ಚಿನ್ಮೂಲಾದ್ರಿ ಶ್ರೀ ಮುರುಘ
ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ



೬. **ಡಾ|| ಕೆ. ವಿ. ರಮೇಶ್**
೧೧-೧೩ ಜುಲೈ ೧೯೯೨
ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ
ರಾಯಚೂರು



೭. **ಡಾ|| ಅ. ಸುಂದರ**
೨೩-೨೫ ಜುಲೈ ೧೯೯೩
ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ
ದೇಶಿಕೇಂದ್ರ ಮಹಾಸ್ವಾಮಿಗಳು
ಜೆ. ಎಸ್. ಎಸ್. ಸಂಸ್ಥೆ, ಮೈಸೂರು



೮. **ಡಾ|| ಎಂ. ಎಂ. ಕಲಬುರ್ಗಿ**
೯-೧೦ ಜುಲೈ ೧೯೯೪
ಶ್ರೀ ಎಂ. ವೈ. ಘೋರ್ಪಡೆ
ಕರ್ನಾಟಕ ಸೇವಾ ಸಂಘ
ಸೊಂಡೂರು



೯. **ಡಾ|| ಎ.ವಿ. ನರಸಿಂಹಮೂರ್ತಿ**
೯-೧೧ ಸೆಪ್ಟೆಂಬರ್ ೧೯೯೫
ಶ್ರೀ ಮ. ನಿ. ಪ್ರ. ಸಿದ್ಧರಾಮ
ಮಹಾಸ್ವಾಮಿಗಳು - ಶ್ರೀ ನಾಗನೂರು
ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ
ಬೆಳಗಾವಿ




೧೦. **ಡಾ|| ಜಿ. ಎಸ್. ದೀಕ್ಷಿತ್**
೭-೯ ಜೂನ್ ೧೯೯೬
ಕರ್ನಾಟಕ ವಿಶ್ವವಿದ್ಯಾಲಯ ಮತ್ತು
ಶ್ರೀ ಮ. ನಿ. ಪ್ರ. ಶಿವಯೋಗಿ
ಮಹಾಸ್ವಾಮಿಗಳು ಶ್ರೀ ಮುರುಘಾಮಠ
ಧಾರವಾಡ




೧೧. **ಪ್ರೊ|| ಕೆ. ಅಭಿಶಂಕರ್**
೨೫-೨೭ ಅಕ್ಟೋಬರ್ ೧೯೯೭
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ ಮಠ
ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ
ಶಿರಸಿ



೧೨. **ಡಾ|| ಎಸ್. ನಾಗರಾಜು**
೧೪-೧೬ ನವೆಂಬರ್ ೧೯೯೮
ಕರ್ನಾಟಕ ಇತಿಹಾಸ ಅಕಾದೆಮಿ
ದಿ ಮಿಥಿಕ್ ಸೊಸೈಟಿ, ಬೆಂಗಳೂರು



೧೩. **ಡಾ|| ಶ್ರೀನಿವಾಸ ಹಾವನೂರ**
೧೧-೧೩ ಜೂನ್ ೧೯೯೯
ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್
ಮತ್ತು ಆಯೋಜಕರಾದ ಶ್ರೀ ಕುಂ.ಬಾ.ಸದಾಶಿವಪ್ಪ
ಸ್ವಾಗತ ಸಮಿತಿ, ಹರಪನಹಳ್ಳಿ



೧೪. **ಶ್ರೀ ಸಿ. ಟಿ. ಎಂ. ಕೊಟ್ರಯ್ಯ**
೮-೧೦ ಜುಲೈ ೨೦೦೦
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ
ಹಂಪಿ



ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ	ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ

೧೫. **ಡಾ|| ಜ್ಯೋತ್ಸ್ನಾ ಕಾಮತ್**
೧೩-೧೫ ಅಕ್ಟೋಬರ್ ೨೦೦೧
ಪೂಜ್ಯ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು
ಪೇಜಾವರ ಮಠಾಧೀಶರು, ಉಡುಪಿ



೧೬. **ಡಾ. ಎ.ಕೆ. ಶಾಸ್ತ್ರಿ**
೨೨-೨೪ ಸೆಪ್ಟೆಂಬರ್ ೨೦೦೨
ಪೂಜ್ಯಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು
ಶ್ರೀ ರಾಮಚಂದ್ರಾಪುರ ಮಠ
ಹೊಸನಗರ



೧೭. **ಡಾ. ಎಸ್. ರಾಜಶೇಖರ್**
೧೩-೧೫ ಸೆಪ್ಟೆಂಬರ್ ೨೦೦೩
ವಿಶ್ವಚೇತನ ಸಂಸ್ಥೆ
ಬಾದಾಮಿ



೧೮. **ಶ್ರೀ ಕೆಳದಿ ಗುಂಡಾ ಜೋಯಿಸ್**
೨೪-೨೬ ಸೆಪ್ಟೆಂಬರ್ ೨೦೦೪
ಶ್ರೀ ಚನ್ನಪ್ಪಸ್ವಾಮಿ ವಿದ್ಯಾಪೀಠ
ಚನ್ನ-ಚೇತನ ಪ್ರಕಾಶನ ಮತ್ತು ಹಿರೇಕಲ್ಮಠ
ಹೊನ್ನಾಳಿ




೧೯. **ಡಾ. ಬಿ.ವ್ಹಿ. ಶಿರೂರ**
೧೧-೧೩ ಸೆಪ್ಟೆಂಬರ್ ೨೦೦೫
ಶ್ರೀ ಕೊತ್ತಲ ಬಸವೇಶ್ವರ
ಭಾರತೀಯ ಶಿಕ್ಷಣ ಸಂಸ್ಥೆ, ಸೇಡಂ



೨೦. **ಡಾ. ಸೂರ್ಯನಾಥ ಕಾಮತ್**
೯-೧೧ ಸೆಪ್ಟೆಂಬರ್ ೨೦೦೬
ಶ್ರೀ ರಾಘವೇಂದ್ರ ಸ್ವಾಮಿಗಳ ಮಠ
ನಂಜನಗೂಡು



೨೧. **ಪ್ರೊ. ಲಕ್ಷ್ಮಣ್ ತೆಲಗಾವಿ**
೮-೧೦ ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿಯ
ರಾಮನಗರ, ಹಗರಿಬೊಮ್ಮನಹಳ್ಳಿ
ಶ್ರೀರಾಮ ಯುವಕ ಸಂಘ



೨೨. **ಡಾ. ವಸುಂಧರಾ ಫಿಲಿಯೋಜಾ**
೧೮-೨೧ ಸೆಪ್ಟೆಂಬರ್ ೨೦೦೮
ಧರ್ಮಸ್ಥಳ ಮಂಜುನಾಥೇಶ್ವರ
ದೇವಾಲಯ ಸಂಸ್ಥೆ, ಧರ್ಮಸ್ಥಳ



೨೩. **ಡಾ. ಎಂ.ಜಿ. ನಾಗರಾಜ್**
೧೦-೧೨ ಅಕ್ಟೋಬರ್ ೨೦೦೯
ಶ್ರೀ ಜಗದ್ಗುರು ರಂಭಾಪುರಿ
ವೀರ ಸಿಂಹಾಸನ ಮಹಾಸಂಸ್ಥಾನ ಪೀಠ
ಬಾಳೆಹೊನ್ನೂರು



೨೪. **ಡಾ. ಎಂ.ಎಸ್. ಕೃಷ್ಣಮೂರ್ತಿ**
೧೩-೧೫ ನವೆಂಬರ್ ೨೦೧೦
ಶ್ರೀ ಆದಿಚುಂಚನಗಿರಿ
ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ



೨೫. **ಡಾ. ಎಚ್.ಎಸ್.ಗೋಪಾಲರಾವ್**
೯-೧೧ ಸೆಪ್ಟೆಂಬರ್ ೨೦೧೧
ದಿ ಮಿಥಿಕ್ ಸೊಸೈಟಿ
ಬೆಂಗಳೂರು




೨೬. **ಡಾ. ಎಸ್.ವಿ. ವೆಂಕಟೇಶಯ್ಯ**
೨೨-೨೪ ಸೆಪ್ಟೆಂಬರ್ ೨೦೧೨
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್
ಶೃಂಗೇರಿ



೨೭. **ಡಾ. ಎಸ್.ಕೆ. ಜೋಷಿ**
೨೧-೨೩ ಸೆಪ್ಟೆಂಬರ್ ೨೦೧೩
ದಿ ಮಿಥಿಕ್ ಸೊಸೈಟಿ
ಬೆಂಗಳೂರು



೨೮. **ಡಾ. ಕೆ.ಜಿ. ವಸಂತ ಮಾಧವ**
೨೬-೨೮ ಸೆಪ್ಟೆಂಬರ್ ೨೦೧೪
ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜು
ಶಿರ್ವ, ಉಡುಪಿ ಜಿಲ್ಲೆ
ಉಡುಪಿ



ಡಾ॥ ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿ ಸನ್ಮಾನಿತರು

ಸಂಖ್ಯೆ ದಿನಾಂಕ–ವರ್ಷ ಸ್ಥಳ ಸನ್ಮಾನಿತರು

೧ ***ಡಾ. ಕೆ.ವಿ. ರಮೇಶ***
೧೫ನೇ ವಾರ್ಷಿಕ ಸಮ್ಮೇಳನ
ಅಕ್ಟೋಬರ್ ೨೦೦೧
ಉಡುಪಿ



೨ ***ಡಾ. ಶ್ರೀನಿವಾಸ ರಿತ್ತಿ***
೧೬ನೇ ವಾರ್ಷಿಕ ಸಮ್ಮೇಳನ
ಸೆಪ್ಟಂಬರ್ ೨೦೦೨
ಹೊಸನಗರ




೩ ***ಡಾ. ದೇವರಕೊಂಡಾರೆಡ್ಡಿ***
೧೭ನೇ ವಾರ್ಷಿಕ ಸಮ್ಮೇಳನ
ಸೆಪ್ಟಂಬರ್ ೨೦೦೩
ಬಾದಾಮಿ



೪ ***ಡಾ. ಬಿ. ರಾಜಶೇಖರಪ್ಪ***
೧೮ನೇ ಸಮ್ಮೇಳನ
ಸೆಪ್ಟಂಬರ್ ೨೦೦೪
ಹೊನ್ನಾಳಿ



೫ ***ಡಾ. ಕೆ.ಆರ್. ಗಣೇಶ್***
೧೯ನೇ ಸಮ್ಮೇಳನ
ಸೆಪ್ಟಂಬರ್ ೨೦೦೫
ಸೇಡಂ



೬ ***ಡಾ. ಎಂ.ಜಿ. ನಾಗರಾಜ್***
೨೦ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೬
ನಂಜನಗೂಡು



೭ ***ಡಾ. ಎಚ್.ಎಸ್. ಗೋಪಾಲರಾವ್***
೨೧ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿ



೮ ***ಡಾ. ಪಿ.ಎನ್. ನರಸಿಂಹಮೂರ್ತಿ***
೨೨ನೇ ಸಮ್ಮೇಳನ
ಸೆಪ್ಟೆಂಬರ್ ೨೦೦೮
ಧರ್ಮಸ್ಥಳ



೯ ***ಶ್ರೀಮತಿ ಹನುಮಾಕ್ಷಿ ಗೋಗಿ***
೨೩ನೇ ಸಮ್ಮೇಳನ
ಅಕ್ಟೋಬರ್ ೨೦೦೯
ಬಾಳೇಹೊನ್ನೂರು




೧೦ ***ಡಾ. ಪಿ.ವಿ. ಕೃಷ್ಣಮೂರ್ತಿ***
೨೪ನೇ ಸಮ್ಮೇಳನ
ನವೆಂಬರ್ ೨೦೧೦
ಆದಿಚುಂಚನಗಿರಿ



೧೧ ***ಶ್ರೀ ಕೆ. ಮೊಹಮ್ಮದ್ ಶರೀಫ್***
೨೫ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೧
ಬೆಂಗಳೂರು



೧೨ ***ಶ್ರೀ ಸೀತಾರಾಮ್ ಜಾಗೀರ್‌ದಾರ್***
೨೬ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೨
ಶೃಂಗೇರಿ



ಸಂಖ್ಯೆ	ದಿನಾಂಕ-ವರ್ಷ	ಸ್ಥಳ	ಸನ್ಮಾನಿತರು

೧೩ ***ಡಾ|| ಆರ್. ಶೇಷಶಾಸ್ತ್ರಿ***
೨೭ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೩
ಬೆಂಗಳೂರು



೧೪ ***ಶ್ರೀ ಎಚ್.ಎಂ. ನಾಗರಾಜರಾವ್***
೨೮ನೇ ಸಮ್ಮೇಳನ
ಸೆಪ್ಟೆಂಬರ್ ೨೦೧೪
ಶಿರ್ವ, ಉಡುಪಿ ಜಿಲ್ಲೆ.



೧೫ ***ಡಾ. ಡಿ.ವಿ. ಪರಮಶಿವಮೂರ್ತಿ***
೨೯ನೇ ಸಮ್ಮೇಳನ
ಅಕ್ಟೋಬರ್ ೨೦೧೫
ಮಂಡ್ಯ, ಮಂಡ್ಯ ಜಿಲ್ಲೆ.



ಶ್ರೇಷ್ಠ ಇತಿಹಾಸ ತಜ್ಞರಿಗಾಗಿ ಬಿ.ಆರ್.ಆರ್. ಕುಟುಂಬದ ಸೇವಾ ಟ್ರಸ್ಟ್‌ನ ಸನ್ಮಾನ್ಯ ಶ್ರೀ ಅಶೋಕ್‌ಕುಮಾರ್
ಅವರು ಸ್ಥಾಪಿಸಿರುವ


"ಇತಿಹಾಸ ಸಂಸ್ಕೃತಿ ಶ್ರೀ" ಪ್ರಶಸ್ತಿ

(ಒಂದು ಲಕ್ಷ ರೂಪಾಯಿಗಳ ನಗದು)

೧. ೨೬ನೆಯ ಸಮ್ಮೇಳನ
೨೨.೦೯.೨೦೧೨
ಶೃಂಗೇರಿ

ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯ
ಮಹಾಸಂಸ್ಥಾನಮ್, ದಕ್ಷಿಣಾಮ್ನಾಯ
ಶ್ರೀ ಶಾರದಾ ಪೀಠಮ್, ಶೃಂಗೇರಿ

ಪ್ರೊ. ಲಕ್ಷ್ಮಣ್ ತೆಲಗಾವಿ



೨. ೨೭ನೆಯ ಸಮ್ಮೇಳನ
೨೧.೦೯.೨೦೧೩
ಬೆಂಗಳೂರು

ದಿ ಮಿಥಿಕ್ ಸೊಸೈಟಿ, ಬೆಂಗಳೂರು

ಡಾ. ಸೂರ್ಯನಾಥ ಕಾಮತ್



೩. ೨೮ನೆಯ ಸಮ್ಮೇಳನ
೨೬.೦೯.೨೦೧೪
ಶಿರ್ವ

ಮೂಲ್ಕಿ ಸುಂದರರಾಮ್‌ಶೆಟ್ಟಿ
ಕಾಲೇಜು, ಉಡುಪಿ ಜಿಲ್ಲೆ

ಡಾ. ಅ. ಸುಂದರ



೪. ೨೯ನೆಯ ಸಮ್ಮೇಳನ
೨೯.೧೦.೨೦೧೫
ಮಂಡ್ಯ

ಕರ್ನಾಟಕ ಸಂಘ (ರಿ).
ಮಂಡ್ಯ ಜಿಲ್ಲೆ

ಡಾ. ಎಂ.ಜಿ. ನಾಗರಾಜ್



ಮೇಲಣ ಮಠದ ಲಿಂ. ಶ್ರೀ ವೇ.ಎಸ್. ಸಿದ್ದಣ್ಣಯ್ಯ ಮತ್ತು ಲಿಂ. ಶ್ರೀಮತಿ ಗಂಗಮ್ಮ ಸ್ಮಾರಕ ಟ್ರಸ್ಟ್ (ರಿ).
ಅರಸೀಕೆರೆ, ಸ್ಥಾಪಿಸಿರುವ

"ನೊಳಂಬ ಶ್ರೀ ಪ್ರಶಸ್ತಿ"

[ಪ್ರಾರಂಭ ೨೦೧೫ರಿಂದ ನಗದು ಹತ್ತು ಸಾವಿರ ರೂಪಾಯಿಗಳು]



೧. ೨೯ನೆಯ ಸಮ್ಮೇಳನ
ಮಂಡ್ಯ
೨೯.೧೦.೨೦೧೫

ಕರ್ನಾಟಕ ಸಂಘ (ರಿ).
ಮಂಡ್ಯ
ಮಂಡ್ಯ ಜಿಲ್ಲೆ.

ಡಾ. ಎಂ.ಎಸ್. ಕೃಷ್ಣಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿ ೨೮ನೆಯ ವಾರ್ಷಿಕ ಸಮ್ಮೇಳನ

ಮುಲ್ಕಿ ಸುಂದರರಾಮಶೆಟ್ಟಿ ಕಾಲೇಜು, ಶಿರ್ವ, ಉಡುಪಿ ಜಿಲ್ಲೆ.

ದಿನಾಂಕ ೨೬ ಸೆಪ್ಟೆಂಬರ್ ೨೦೧೪

ಸಮ್ಮೇಳನಾಧ್ಯಕ್ಷರು : **ಡಾ|| ಕೆ.ಜಿ. ವಸಂತ ಮಾಧವ**

ಅಧ್ಯಕ್ಷ ಭಾಷಣ

ಕರ್ನಾಟಕದ ಇತಿಹಾಸ ದೀರ್ಘಕಾಲದ್ದು ಇದರ ಸಂಶೋಧನೆ ಇತ್ತೀಚೆಗಿನದು ಈ ಕಾರ್ಯಗಳಲ್ಲಿ ತೊಡಗಿಸಿ ಕೊಂಡು ಶ್ರಮಿಸುತ್ತಿರುವ ಸಂಸ್ಥೆಗಳಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿ ಒಂದು. ಈ ಸಂಸ್ಥೆಯು ನನ್ನನ್ನು ಗುರುತಿಸಿ ತನ್ನ ೨೮ನೇ ಸಮ್ಮೇಳನದ ಸರ್ವಾಧ್ಯಕ್ಷನಾಗಿ ಆರಿಸಿದೆ ಇದಕ್ಕೆ ಈ ಸಂಸ್ಥೆಯ ಪದಾಧಿಕಾರಿಗಳ ಔದಾರ್ಯಕ್ಕೆ ನಾನು ಋಣಿಯಾಗಿದ್ದೇನೆ. ಈ ಉನ್ನತ ಹುದ್ದೆ ಅಲಂಕರಿಸಲು ನನ್ನ ಹಿರಿಯರು ಮತ್ತು ಗುರುವರ್ಯರ ಮಾರ್ಗದರ್ಶನವೇ ಕಾರಣವಾಗಿದೆ ಎಂದು ನಾನು ತಿಳಿಯುತ್ತೇನೆ. ಈ ಹಿರಿಯರು ಮತ್ತು ಗುರುಗಳಲ್ಲಿ ಸ್ಮರಿಸಬೇಕಾದ ವ್ಯಕ್ತಿಗಳಲ್ಲಿ ನನ್ನ ಅಜ್ಜ ರಾಮರಾಯ ಕೊಡಂಚ, ಗುರುವರ್ಯರಾದ ಬಿ.ಎ. ಸಾಲೆತ್ತೂರ, ಪಾಂಭಿಂ ದೇಸಾಯಿ ದಿ| ಗೋಪಾಲ ಬಿ.ಆರ್. ಮತ್ತು ಜಿ.ಎಸ್. ದೀಕ್ಷಿತರು. ಇವರೊಂದಿಗೆ ನನ್ನ ಶೈಕ್ಷಣಿಕ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ದಾರಿಯಲ್ಲಿ ಮಾರ್ಗದರ್ಶನ ಮಾಡುತ್ತಿದ್ದ ಡಾ. ಶ್ರೀನಿವಾಸ ರಿತ್ತಿಯವರನ್ನು ಇಲ್ಲಿ ನಾನು ಸ್ಮರಿಸಬೇಕಾದ ವ್ಯಕ್ತಿ.

ಇತಿಹಾಸ ಮತ್ತು ಸಂಶೋಧನೆ

ಈ ಎರಡು ಶಬ್ದಗಳ ಬೇರೆ ಅರ್ಥವುಳ್ಳದು ಪ್ರಾಚೀನ ಘಟನೆಗಳನ್ನು ಕ್ರಮಬದ್ಧವಾಗಿ ತಿಳಿಸುವುದೇ ಇತಿಹಾಸ ಇದರ ನಿರೂಪಣೆಯಲ್ಲಿ ಕಾಲ ಘಟನೆ ಮತ್ತು ಭೌಗೋಳಿಕ ಸ್ವರೂಪಗಳ ಪಾತ್ರ ಹಿರಿದು. ಇದು ಮಾನವೀಕ ಶಾಸ್ತ್ರದ ತಳಪಾಯ (foundation) ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ನಮ್ಮ ಜೀವನ ಮೌಲ್ಯಗಳನ್ನು ರೂಪಿಸಿ ಕೊಳ್ಳುವ ಮತ್ತು ಸುಧಾರಿಸಿಕೊಳ್ಳುವ ಸಾಧನವೇ ಇತಿಹಾಸ. ಇತಿಹಾಸ ಅಧ್ಯಯನದಲ್ಲಿ ಪ್ರಭಾವ ಬೀರುವ ಘಟನೆಗಳು ಇಂದಿಗೂ ಪ್ರಭಾವ ಬೀರುವಂತೆ ಅರ್ಥ ಮಾಡಿಕೊಳ್ಳುವುದು ಅಗತ್ಯ. ಇದು ಇತಿಹಾಸ ಅಧ್ಯಯನವನ್ನು ರೋಚಕವಾಗಿ ಮಾಡುತ್ತದೆ.

ಇತಿಹಾಸ ಅಧ್ಯಯನವನ್ನು ಅಧ್ಯಯನಿಸುವವರಿಗೆ ಪಾಠವನ್ನು ನೀಡುತ್ತದೆ. ಆದರೆ ಪಾಠವನ್ನು ಅಧ್ಯಯನಿಸುವವರು ಕಲಿಯುವುದೇ ಇಲ್ಲ. ಇತಿಹಾಸದಲ್ಲಿ ಕೆಲವು ವಚನ ಸೂತ್ರ (dictums) ಗಳಿವೆ. ಇವುಗಳನ್ನು ಅಲಕ್ಷಿಸಿದವರು ಸಾಕಷ್ಟು ಕಷ್ಟಕ್ಕೆ ಒಳಗಾದ ಉದಾಹರಣೆಗಳು ಇವೆ.

ಕರ್ನಾಟಕದ ಇತಿಹಾಸ ಅಂದು-ಇಂದು

೧೯೬೦ರ ದಶಕದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪಡೆದ ನನ್ನಂತಹ ವಿದ್ಯಾರ್ಥಿಗಳಿಗೆ ಕರ್ನಾಟಕದ ಇತಿಹಾಸ ಇದೆ ಎಂಬುದು ತಿಳಿದಿಲ್ಲ. ಇದಕ್ಕೆ ಮುಖ್ಯ ಕಾರಣ ನಾನು ವಿದ್ಯಾಭ್ಯಾಸ ಪಡೆದ ಪ್ರದೇಶವು ಆಗ ಮದ್ರಾಸ್ ಪ್ರಾಂತ್ಯದಲ್ಲಿದ್ದಿತ್ತು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಇತಿಹಾಸದಲ್ಲಿ ಪಲ್ಲವ, ಚೋಳರು ಮತ್ತು ಪಾಂಡ್ಯರ ವಿಚಾರಗಳೇ ಪ್ರಾಧಾನ್ಯವಾಗಿದ್ದವು. ನನಗೆ ಕರ್ನಾಟಕ ಇತಿಹಾಸದ ಕಿಂಡಿಯನ್ನು ತೆಗೆದವರು ನನ್ನ ಅಜ್ಜ ದಿ| ರಾಮರಾಯ ಕೊಡಂಚ. ಇವರು ಕರ್ನಾಟಕದಲ್ಲಿ ವೀರ ಪುರುಷರಾದ ಹನುಮಂತ ಇಲ್ಲಿ ಆಳಿದ ಇಮ್ಮಡಿ ಪುಲಿಕೇಶಿ, ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಹಕ್ಕ ಮತ್ತು ಬುಕ್ಕ ಇವರಿಗೆ ಸ್ಫೂರ್ತಿ ನೀಡಿದ ವಿದ್ಯಾರಣ್ಯ ಮತ್ತು ಹೈದರಾಲಿ ಯವರ ವಿಚಾರಗಳನ್ನು ನಾಟಕೀಯವಾಗಿ ತಿಳಿಸುತ್ತಿದ್ದರು. ಇವರು ಬಹಳ ಮೆಚ್ಚಿಕೊಂಡ ಕನ್ನಡನಾಡಿನ ವೀರರಲ್ಲಿ ಹೈದರಾಲಿ ಪ್ರಮುಖ. ಇವನು ಏನೂ ಇಲ್ಲದವ. ಸ್ವಂತ ಶಕ್ತಿಯಿಂದ ಪ್ರಬಲ ಶಕ್ತಿಯಾಗಿ ಬಂದವ ಗಂಡುಗಲಿಗಳ ಗಂಡ ಹೈದರಾಲಿ ಕನ್ನಡಿಗರಲ್ಲಿ ಅತ್ಯಂತ ಸಮರ್ಥರೆಂದೂ ಜಗತ್ತಿಗೆ ತಿಳಿಸಿದವ ಹೈದರನೆಂದು ಅಜ್ಜಯ್ಯನವರು ಆಗಿಂದಾಗ್ಗೆ ಹೇಳುತ್ತಿದ್ದರು. ಇದು ನನಗೆ ಕರ್ನಾಟಕದ ಇತಿಹಾಸದ ಮೇಲೆ ಆಸಕ್ತಿ ಬೆಳೆಯಲು ಕಾರಣವಾಯಿತು. ನನಗೆ ಕರ್ನಾಟಕ ಇತಿಹಾಸದ ಸ್ಪಷ್ಟ ಚಿತ್ರ ಸಿಕ್ಕಿತು ಎಂ.ಎ. ತರಗತಿಯಲ್ಲಿ ಇಲ್ಲಿ ಅಧ್ಯಯನ ಮಾಡುತ್ತಿರುವಾಗ ಗುರುವರಿಯರಾದ ದಿ| ಸಾಲೆತ್ತೂರ ಬಿ.ಎ. ದೇಸಾಯಿ ಪಾಂಭಿಂ ಮತ್ತು ದೀಕ್ಷಿತ ಜಿ.ಎಸ್. ಕನ್ನಡನಾಡಿನ ಇತಿಹಾಸದ ಮಹತ್ವವನ್ನು ತಿಳಿಸಿದರು.

ಕರ್ನಾಟಕವನ್ನೊಳಗೊಂಡ ತುಳುನಾಡಿನ ಇತಿಹಾಸದ ಮಹತ್ವ

ಕರ್ನಾಟಕದ ಭೌಗೋಳಿಕ ಸ್ಥಿತಿ ಈ ನಾಡನ್ನು ದಕ್ಷಿಣ ಭಾರತದಲ್ಲಿ ಪ್ರಮುಖ ಆಯಕಟ್ಟಿನ ಸ್ಥಳವಾಗಿ ಮಾಡಲು

ಸಹ್ಯಾದ್ರಿ ಪರ್ವತ ಇಲ್ಲಿನ ಸಹ್ಯಾದ್ರಿ ಘಟ್ಟದ ಸಾಲುಗಳು ಅಗಲ ಕಿರಿದಾದ ಕರಾವಳಿಯನ್ನು ಕೊಟ್ಟಿತು. ಈ ಕರವಾಳಿಯು ತನ್ನದೇ ಆದ ರೀತಿಯಲ್ಲಿ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂತು ಅವೇ ತುಳು-ಕೊಂಕಣ ಸಂಸ್ಕೃತಿಗಳು. ತುಳು ಸಂಸ್ಕೃತಿಯು ಕರಾವಳಿ ಕರ್ನಾಟಕದಲ್ಲಿ ಪ್ರಮುಖ ಸ್ಥಾನವನ್ನು ಪಡೆಯಿತು ಇದು ಸ್ವತಂತ್ರವಾದ ಸಂಸ್ಕೃತಿಯಾಗಿದ್ದು ಕನ್ನಡನಾಡಿನಲ್ಲೂ ಮತ್ತು ಕೇರಳದ ಉತ್ತರ ಭಾಗದಲ್ಲೂ ಈ ಸಂಸ್ಕೃತಿಯ ಪ್ರಭಾವವನ್ನು ನೋಡಬಹುದು ಆದರೆ ರಾಜಕೀಯ ಚಟುವಟಿಕೆಗಳಲ್ಲಿ ತುಳುನಾಡು ಘಟ್ಟದ ಮೇಲಿನ ಕರ್ನಾಟಕದ ಮಹಾರಾಜರುಗಳ ನಿಕಟ ಸಂಪರ್ಕವನ್ನು ಹೊಂದಿತ್ತು. ಈ ಅಗಲ-ಕಿರಿದಾದ ಕರಾವಳಿ ಪ್ರದೇಶವು ತುಳು ಹೈವೆ ಮತ್ತು ಕೊಂಕಣವೆಂಬ ಹೆಸರುಗಳು ಕರ್ನಾಟಕ ಇತಿಹಾಸ ದಾಖಲೆಗಳಲ್ಲಿವೆ ಇದನ್ನು ಕೆನರಾ ಎಂದು ಕರೆದವರು ಪೋರ್ಚುಗೀಸರು ೧೫೦೨ರಲ್ಲಿ.

ಕರ್ನಾಟಕದ ರಾಜ ಮಹಾರಾಜರುಗಳು ಕರಾವಳಿ ಕರ್ನಾಟಕಕ್ಕೆ ಹೆಚ್ಚಿನ ಸ್ವಾಯತ್ತತೆಯನ್ನು ಕೊಟ್ಟರು ಇದು ತುಳು ಕನ್ನಡ ಸಂಸ್ಕೃತಿಯ ಸಂಯೋಜನೆಗೆ ಕಾರಣವಾಯಿತು. ಕನ್ನಡ ಭಾಷೆ ಇಲ್ಲಿ ಹುಲುಸಾಗಿ ಬೆಳೆಯಿತು. ದಾಸ ಸಾಹಿತ್ಯದ ಪ್ರಧಾನ ದೇವತೆ ಕರಾವಳಿ ಕರ್ನಾಟಕದಲ್ಲಿದ್ದ ಉಡುಪಿ ಶ್ರೀಕೃಷ್ಣ ಇದು ದಾಸ ಸಾಹಿತ್ಯವು ತುಳುವರಲ್ಲಿ ಮತ್ತು ಕನ್ನಡ ಮಾತಾಡುವ ಜನರಲ್ಲಿ ಜನಾಧರಣೀಯವಾಯಿತು. ಉಡುಪಿ ಶ್ರೀಕೃಷ್ಣ ದಾಸರಿಗೆ ಆರಾಧನಾ ದೇವತೆಯಾದ. ಕನ್ನಡ ಭಾಷೆ ಮತ್ತು ಅದರ ಸಾಹಿತ್ಯ ಕರಾವಳಿಯಲ್ಲಿದ್ದ ತುಳು ಸಂಸ್ಕೃತಿಯ ಮೇಲೆ ಪ್ರಭಾವ ಬೀರಿ ಈ ಎರಡು ಸಂಸ್ಕೃತಿಗಳ ಸಮ್ಮಿಳನ ಆಗುವಂತೆ ಮಾಡಿತು.

ಚಾರಿತ್ರಿಕ ದಾಖಲೆಗಳು ಕರಾವಳಿ ಕರ್ನಾಟಕವನ್ನು ಘಟ್ಟದ ಮೇಲಿನ ಕರ್ನಾಟಕ ಪ್ರದೇಶದ ಹೆಬ್ಬಾಗಿಲು ಎಂದು ತಿಳಿಸುತ್ತವೆ. ಕರಾವಳಿ ಕರ್ನಾಟಕದಲ್ಲಿ ಬೆಳೆದ ವಾಣಿಜ್ಯಮಯ ಸಂಸ್ಕೃತಿ ಇನ್ನಿತರರೊಡನೆ ಕೂಡಿ ಬಾಳಲು ಸಹಕರಿಸಿತು. ಕರ್ನಾಟಕ ಸಾಗರೋತ್ತರ ವ್ಯಾಪಾರ ನಡೆದದ್ದು ಕರಾವಳಿ ರೇವುಗಳಲ್ಲಿ. ಸಾಗರೋತ್ತರ ವ್ಯಾಪಾರವು ಕರ್ನಾಟಕದ ವಾಣಿಜ್ಯ ಕ್ಷೇತ್ರವನ್ನು ವಿಸ್ತರಿಸಿ, ಈ ನಾಡಿನ ಸಂಪತ್ತನ್ನು ವೃದ್ಧಿಗೊಳಿಸಿತ್ತು. ಆದರೆ ವ್ಯಾಪಾರದ ಹಿಡಿತ ಇರುವುದು ಕನ್ನಡೇತರ ಜನರಲ್ಲಿ ಪೋರ್ಚುಗೀಸರ ಕಾಲದ ಆರಂಭದಿಂದ ಬ್ರಿಟಿಷರು ಪ್ರಬಲವಾಗುವವರೆಗೆ ಕರಾವಳಿಯ ದಕ್ಷಿಣ ಭಾಗದ ಮಂಗಳೂರು ದಕ್ಷಿಣಕ್ಕೆ ನಿಲೇಶ್ವರದ ಉತ್ತರಕ್ಕೇ ಮಲೆಯಾಳಿ ಮಾಪಿಳ್ಳೆಯವರು ಸಾಗರೋತ್ತರ ವ್ಯಾಪಾರದ ಹಿಡಿತ ಹೊಂದಿದ್ದರು. ವಿಜಯನಗರ ಅರಸರಿಗೆ ಬೇಕಾಗಿದ್ದ ಯುದ್ಧ ಕುದುರೆಗಳನ್ನು ಪರ್ಶಿಯಾ ಮತ್ತು ಅರೇಬಿಯಾದಿಂದ ಒದಗಿಸುತ್ತಿರುವವರು ಈ ಮಾಪಿಳ್ಳೆಯವರು ಇವರು ಈ ವ್ಯಾಪಾರದ ವ್ಯವಹಾರ ನಡೆಸುತ್ತಿರುವುದು ಕರಾವಳಿ ಕರ್ನಾಟಕದ ರೇವುಗಳಾದ ಮಂಗಳೂರು ಬಾರಕೂರು, ಬಸರೂರು, ಭಟ್ಕಳ ಮತ್ತು ಹೊನ್ನಾವರದೊಂದಿಗೆ ತಮ್ಮ ನಾಡಿನ ಪ್ರದೇಶದ ರೇವುಗಳಾದ ಏಳಿಮಲೆ, ಬಲಿಪಟ್ಟಣ, ಕಣ್ಣಾನ್ನೂರು, ಧರ್ಮಪಟ್ಟಣ ಮತ್ತು ಕಲ್ಲಿಕೋಟೆ ರೇವುಗಳು ಆಗಿದ್ದವು. ವ್ಯಾಪಾರ ಚತುರರಾದ ಈ ಮಾಪಿಳ್ಳೆಯವರು ಕನ್ನಡದ ಅರಸರಿಗೆ ಸಾಕಷ್ಟು ಲಾಭವನ್ನು ತಂದುಕೊಟ್ಟರು. ಈ ಮಾಪಿಳ್ಳೆಯವರಿಗೆ ಆಹಾರ ಒದಗಿಸುತ್ತಿದ್ದದು ಕರಾವಳಿ ರೇವುಗಳು. ಇದರಿಂದಾಗಿ ಈ ರೇವುಗಳಲ್ಲಿ ರಭಸದ ವ್ಯಾಪಾರ ನಡೆದುದರೊಂದಿಗೆ ಮಲೆಯಾಳಿಗರ ವಲಸೆಗಳು ಕರಾವಳಿ ರೇವುಗಳಲ್ಲಿ (ಮುಖ್ಯವಾಗಿ ಮಂಗಳೂರು ಕುಂಬಳೆ ಕಾಸರಗೋಡು) ಗಣನೀಯ ಪ್ರಮಾಣದಲ್ಲಿ ಬೆಳೆಯಿತು.

ಚರಿತ್ರೆಯ ದಾಖಲೆಗಳಲ್ಲಿ ಗ್ರೀಕ್-ರೋಮನರು, ಅರಬರು, ಪರ್ಶಿಯನರು ನಂತರ ಕ್ರಿಯಾತ್ಮಕ (Dynamic) ಪಾಶ್ಚಿಮಾತ್ಯ ವರ್ತಕರು ಇಲ್ಲಿ ತಮ್ಮದೇ ಆದ ವ್ಯಾಪಾರ ನೀತಿ ನಡೆಸಿ ಸಾಕಷ್ಟು ರಾಜಕೀಯ ಮತ್ತು ಧಾರ್ಮಿಕ ಗೊಂದಲಗಳನ್ನುಂಟು ಮಾಡಿದರು. ಈ ಎಲ್ಲಾ ಸಂಗತಿಗಳು ಕರ್ನಾಟಕದ ಸಾಂಸ್ಕೃತಿಕ ಜೀವನದ ಮೇಲೆ ಬಹಳ ಪರಿಣಾಮವನ್ನುಂಟು ಮಾಡಿತು. ಧಾರ್ಮಿಕ ಸಂಸ್ಕೃತಿಯಲ್ಲಿ ಸ್ಥಳೀಯ ದೈವ ಮತ್ತು ದೇವತೆಗಳು ಆರಾಧನೆಯ ಹೊಂದಾಣಿಕೆ ಗಮನಾರ್ಹವಾದುದು. ಕರಾವಳಿ ಕರ್ನಾಟಕ ದಲ್ಲಿ ಭೂತ ಪ್ರಾಣಿಗಳು ಮತ್ತು ವೃಕ್ಷಾರಾಧನೆ ಹೆಚ್ಚು ಜನಪ್ರಿಯ ವಾದುದನ್ನು ಐತಿಹಾಸಿಕ ದಾಖಲೆಗಳಿಂದ ತಿಳಿದು ಬರುತ್ತದೆ.

ಇಲ್ಲಿ ಹೆಚ್ಚು ಆಕರ್ಷನೀಯ ಮತ್ತು ಕುತೂಹಲಕರವಾದ ಆರಾಧನೆ ಆಲಡೆಯ ಧರ್ಮ ಕಟ್ಟಳೆಗಳು ಈ ಆಲಡೆಯಲ್ಲಿ ಪಂಚ ದೈವಗಳಾದ ರಕ್ತೇಶ್ವರಿ, ನಾಗ, ಬ್ರಹ್ಮ, ನಂದಿಗೋಣ ಮತ್ತು ಕ್ಷೇತ್ರಪಾಲಗಳನ್ನು ಒಟ್ಟಿಗೆ ಪೂಜೆ ನಡೆಸುವುದು ಭೂತಗಳ ಉಗಮ ಮತ್ತು ಅವುಗಳು ವಲಸೆ ಹೋಗುವುದರ ವಿವರಗಳು ತುಳು ಪಾಡ್ದನಗಳಲ್ಲಿವೆ. ತುಳುನಾಡಿನಲ್ಲಿ ಮಲೆಯಾಳಿ ದೈವ ಮತ್ತು ಮಲೆಯಾಳಿ ಭಗವತಿಯ ಆರಾಧನೆಯ ಸಾಕಷ್ಟು ಪ್ರಚಾರವಿದೆ ವರ್ತೆ, ಪಂಜುರ್ಲಿ ಮತ್ತು ಸತ್ಯದೇವತೆ ಮನೆಯಲ್ಲಿ ಆರಾಧಿಸುವ ದೈವಗಳು ದೈವ ಆರಾಧನೆಗಳಲ್ಲಿ ನಡೆಯುವ ಸೇವೆಗಳಾದ ತಂಬಿಲ, ಆಯನ, ನೇಮ, ಬಂಡಿಕೋಲ ಮತ್ತು ನಡಾವಳಿಗಳು ಆಕರ್ಷಣೀಯವಾಗಿ ನಡೆಯುತ್ತದೆ. ಕ್ರಿ.ಶ. ೧೫೧೪ರಲ್ಲಿ ದೈವಗಳ ಆರಾಧನೆ ಇರುವುದನ್ನು ಬಾರ್ಬೋಸ್‌ನ ವರದಿ ತಿಳಿಸುತ್ತದೆ. ದೈವಗಳ ಆರಾಧನೆ ಆಕರ್ಷಣೀಯವಾಗಿ ಉಳ್ಳಾಲ ಪ್ರದೇಶದಲ್ಲಿ ನಡೆಯುತ್ತಿದ್ದುದ್ದನ್ನು ೧೬೨೩ರಲ್ಲಿ ಬಂದ ಡೆಲಾವೆಲ್ಲಿ ತನ್ನ ವರದಿಯಲ್ಲಿ ತಿಳಿಸಿದ್ದಾನೆ. ಕ್ರಿ.ಶ. ೧೬೭೫ರಲ್ಲಿ ಭೂತಾರಾಧನೆ ಹೆಚ್ಚು ಆಕರ್ಷಣೀಯವಾಗಿದ್ದದ್ದು

ನಮಗೆ ತಿಳಿದುಬರುವುದು. ಇಂಗ್ಲೀಷ್ ಪ್ರವಾಸಿ ಫ್ರಾಯರ್ (Fryer) ವರದಿಯಿಂದ ಒಟ್ಟಿನ ಸ್ಥಳೀಯ ದೇವ ದೈವಗಳ ಆರಾಧನೆ ೫೦೦ ವರ್ಷದಿಂದ ನಡೆಯುತ್ತಾ ಬಂದಿದೆ ಯೆಂಬುದು ಮೇಲೆ ತಿಳಿಸಿದ ದಾಖಲೆಗಳಿಂದ ತಿಳಿದು ಬರುತ್ತವೆ.

ನಾಗಾರಾಧನೆ ಕರಾವಳಿ ಕರ್ನಾಟಕದಲ್ಲಿ ಹೆಚ್ಚು ಆಕರ್ಷಣೀಯವಾಗಿ ನಡೆದು ಬಂದಿದೆ. ಈ ಆರಾಧನೆಯಲ್ಲಿ ಮನಸೆಳೆಯುವಂತಾದ್ದು ನಾಗ–ಸುಬ್ರಹ್ಮಣ್ಯ ಅರ್ಚನೆಯಲ್ಲಿ ಅಭೇದ್ಯ ಇಲ್ಲಿ ದೇವ–ದೇವಿ ಆರಾಧನೆಯ ಐತಿಹಾಸಿಕ ಮೌಲ್ಯವನ್ನು ತಿಳಿಸಿದ ಕೀರ್ತಿ ದಿ। ಗುರುರಾಜ ಭಟ್ಟರಿಗೆ ಸಲ್ಲುತ್ತದೆ. ದೇವಾಲಯದ ಒಂದು ಅಂಗಳದಲ್ಲಿ ಶಿವ, ವಿಷ್ಣು, ಶಕ್ತಿ ದೇವತೆ ಮತ್ತು ಗಣಪತಿಗಳ ಗುಡಿಗಳು ಇವೆ. ಇಂತಹ ದೇವಾಲಯ ಮಂಗಳೂರು ಮತ್ತು ಉದ್ಯಾವರಗಳಲ್ಲಿ ನೋಡಬಹುದು.

ಕರಾವಳಿ ಕರ್ನಾಟಕದಲ್ಲಿ ಬೌದ್ಧ ಮತ್ತು ಜೈನ ಮತಗಳು ಇದ್ದು ಚಾರಿತ್ರಿಕ ದಾಖಲೆಗಳಲ್ಲಿವೆ. ಬೌದ್ಧ ಮತವು ಕರಾವಳಿಯ ಕೆಲವೇ ಸ್ಥಳಗಳಲ್ಲಿದ್ದರೆ ಜೈನ ಮತವು ಕರಾವಳಿಯಲ್ಲಿ ವ್ಯಾಪಕ ವಾಗಿ ಬೆಳೆದಿದೆ. ಈ ಮತದವರು ಕರಾವಳಿ ಕರ್ನಾಟಕದ ಶಿಲ್ಪ ಮತ್ತು ಸಾಹಿತ್ಯ ಪ್ರಗತಿಗೆ ವಿಪುಲ ಕೊಡುಗೆ ನೀಡಿದ್ದಾರೆ ಇವರು ಸಾಂಸ್ಕೃತಿಕ ಜೀವನವನ್ನು ಸಮೃದ್ಧಿಗೊಳಿಸಿದ್ದಾರೆ.

ಕ್ರಿ.ಶ. ೮ನೇ ಶತಮಾನದ ಮಧ್ಯಾವಧಿಯಲ್ಲಿ ಇಸ್ಲಾಂ ಮತ ಕರಾವಳಿ ಕರ್ನಾಟಕದಲ್ಲಿ ಕಾಣಿಸಿಕೊಂಡಿತು. ಈ ಮತದ ಸಂತರು ಧರ್ಮ ಪ್ರಸಾರ ಮಾಡಿದ್ದರು. ಆದರೆ ಇತಿಹಾಸಗಾರರು ಇದನ್ನು ಹೆಚ್ಚಿಗೆ ಗಣನೆಗೆ ತೆಗೆದುಕೊಂಡಿಲ್ಲ. ಈ ಮತದ ರಾಜಕೀಯ ಪ್ರಸಾರ ಹೆಚ್ಚು ಗಮನ ಸೆಳೆದಿದೆ ಸರಿಯಾಗಿ ವೀಕ್ಷಿಸಿದರೆ ಇಸ್ಲಾಂ ಮತದ ಪ್ರಚಾರ ಮತ್ತು ಇಲ್ಲಿ ಮತಾಂತರವಾದ ಅಸಹಜತೆ ಘಟನೆಗಳಲ್ಲಿ ಎಂದು ತೋರಿ ಬರುತ್ತದೆ. ಇಸ್ಲಾಂ ಕರ್ನಾಟಕದ ಕರಾವಳಿಯಲ್ಲಿ ಇಸ್ಲಾಂ ಮತಸ್ಥರು ವಾಣಿಜ್ಯ ಶಕ್ತಿಯಾಗಿ ಇಲ್ಲಿನ ಸಾಗರೋತ್ತರ ವ್ಯಾಪಾರ ವಿಸ್ತರಿಸಲು ಕಾರಣೀಭೂತರಾಗಿದ್ದರೆಂದು ಪ್ರವಾಸಿಗರ ವರದಿಗಳಿಂದ ತಿಳಿದುಬರುತ್ತದೆ. ಜಲಾಲುದ್ದಿನ, ಜುಲು, ಪೊಕಚು ಬ್ಯಾರಿಗಳಂತ ವ್ಯಕ್ತಿಗಳು ನೌಕಾಧಿಪತಿಗಳಾಗಿ ಕರ್ನಾಟಕದ ಅರಸುಗಳಿಗೆ ಸಹಕರಿಸಿದ್ದರು. ಕ್ರೈಸ್ತ ಮತವು ೧೫೦೨ರ ಪೂರ್ವದಲ್ಲಿ ಇಲ್ಲಿ ಇದ್ದಿತ್ತು ಎಂದು ಕೆಲವು ದಾಖಲೆಗಳ ಅಧ್ಯಯನವು ಸೂಚಿಸುವುದಾದರೂ ಈ ಮತದ ಸ್ಪಷ್ಟ ಇತಿಹಾಸ ಬೆಳಕಿಗೆ ಬಂದದ್ದು ೧೬ನೇ ಶತಮಾನದ ಮಧ್ಯಾವಧಿಯಲ್ಲಿ ಈ ಮತಸ್ಥರು ಕರಾವಳಿ ಕರ್ನಾಟಕದ ಕೃಷಿ, ಪಾಶ್ಚಿಮಾತ್ಯ ವಿದ್ಯಾಭ್ಯಾಸ ಮತ್ತು ಶಿಲ್ಪಕಲೆಗಳಿಗೆ ತಮ್ಮದೇ ಆದ ಕಾಣಿಕೆಗಳನ್ನು ನೀಡಿದ್ದಾರೆ.

ಕರಾವಳಿ ಕರ್ನಾಟಕದಲ್ಲಿ ಸ್ತ್ರೀಯರು ಪ್ರಧಾನ ಪಾತ್ರಗಳನ್ನು ಕುಟುಂಬದಲ್ಲೂ ಮತ್ತು ಸಾಮಾಜಿಕ ಜೀವನದಲ್ಲಿ ಹೊಂದಿದ್ದರು ಸ್ತ್ರೀ ಮತ್ತು ಪುರುಷ ಪರಂಪರೆಯ ಕುಟುಂಬಗಳೂ ಇಲ್ಲಿ ಇವೆ. ಇಲ್ಲಿ ಇದ್ದರೂ ಈ ಎರಡು ಕುಟುಂಬಗಳಲ್ಲಿ ಸ್ತ್ರೀಯರು ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಾಧಾನ್ಯತೆಗಳನ್ನು ಹೊಂದಿದ್ದರು. ಇತಿಹಾಸ ದಾಖಲೆಗಳಲ್ಲಿ ವೀರಗಲ್ಲನ್ನು ನೆಟ್ಟ ಸ್ತ್ರೀಯರು ಆಡಳಿತ ಚತುರರಾದ ಸ್ತ್ರೀಯ ವೀರ ರಮಣೀಯರು ಸಂಗೀತ ನೃತ್ಯ ವಿಶಾರದರು ಮತ್ತು ದಾನಿಗಳಾದ ಸ್ತ್ರೀಯರು ಇದ್ದರೆಂಬ ದಾಖಲೆಗಳು ಸಿಕ್ಕಿವೆ. ಒಗಾರ ಶಾಸನದಲ್ಲಿ ತುಳುನಾಡಿನ ಸ್ತ್ರೀಯರು ಸಪ್ತಾಂಗ ಸಂಪತ್ತಿನಿಂದ ಸುದಂತಿ ವಂಶಾಲಯದವರೆಂದು ತಿಳಿಸಿದೆ. ಪೋರ್ಚುಗೀಸ್ ಇತಿಹಾಸಗಾರ ಕ್ಯುಟೋ ಗೇರಸೊಪ್ಪೆಯ ರಾಣಿ ಮತ್ತು ಎರಡನೆ ಅಬ್ಬಕ್ಕ ದೇವಿಯರ ಪರಾಕ್ರಮಗಳನ್ನು ಕೊಂಡಾಡಿದ್ದಾನೆ. ಇಲ್ಲಿ ಸ್ತ್ರೀಯರು ಕಷ್ಟಜೀವಿಗಳಾಗಿದ್ದು ಎಲ್ಲಾ ಕೆಲಸದಲ್ಲೂ ಪ್ರವೀಣರಾಗಿದ್ದರೆಂದು ಡಚ್ಚ ಪ್ರವಾಸಿ ಬಾಲದಾಯಿಸ್ (Baldues) ತನ್ನ ವರದಿಯಲ್ಲಿ ದಾಖಲಿಸಿದ್ದಾರೆ.

ಕರಾವಳಿ ಕರ್ನಾಟಕದಲ್ಲಿ ವಿದ್ಯಾಕ್ಷೇತ್ರವು ಸಾಕಷ್ಟು ಅಭಿವೃದ್ಧಿ ಹೊಂದಿತ್ತೆಂದು ಹಲವಾರು ಐತಿಹಾಸಿಕ ದಾಖಲೆಗಳಿಂದ ತಿಳಿದುಬರುತ್ತವೆ. ಧಾರ್ಮಿಕ ಮತ್ತು ಲೌಕಿಕ ವಿದ್ಯೆಗಳೂ ಇಲ್ಲಿ ಪ್ರಗತಿ ಹೊಂದಿತ್ತು. ವೈದ್ಯಕೀಯ ವಿಜ್ಞಾನ ಪ್ರಗತಿ ಹೊಂದಿದ್ದನ್ನು ಶಾಸನ ಮತ್ತು ವಿದೇಶಿ ದಾಖಲೆಗಳಿಂದ ತಿಳಿದುಬರುತ್ತವೆ. ಕರ್ನಾಟಕದಲ್ಲಿ ಸ್ತ್ರೀ ವೈದ್ಯರು ಇದ್ದರು. ಅರಬ ದಾಖಲೆಯಲ್ಲಿ ಈ ವಿಚಾರ ಮಾಹಿತಿ ಇದೆ. ಇದರಂತೆ ಗ್ರಂಥವನ್ನು ಕರ್ನಾಟಕದ ಸ್ತ್ರೀ ವೈದ್ಯರು ಬರೆದುದನ್ನು ತಿಳಿಸುತ್ತದೆ. ಈ ಮಾಹಿತಿಯನ್ನು ವೈದ್ಯಕೀಯ ಇತಿಹಾಸ ತಜ್ಞ ಡಾ. ಡಿ.ವಿ. ಸುಬ್ಬಾರೆಡ್ಡಿ ಬೆಳಕಿಗೆ ತಂದಿದ್ದಾರೆ. ಇಲ್ಲಿ ತಿಳಿಸಿದ ಸ್ತ್ರೀ ಕನ್ನಡ ನಾಡಿನವಳು ನಂಜಮ್ಮ ಎಂಬವಳು ಯಾರು ಗುಣಪಡಿಸಲಾರದ ಕಾಲೆರಾವನ್ನು ಗುಣಪಡಿಸಿದ ಳೆಂದು ಒಂದು ಶಾಸನದಲ್ಲಿ ದಾಖಲಾಗಿದೆ. ಕರಾವಳಿ ಕರ್ನಾಟಕದಲ್ಲಿ ಪಾಠಶಾಲೆಗಳು ಮತ್ತು ಗ್ರಂಥಾಲಯಗಳಿದ್ದಕ್ಕೆ ಐತಿಹಾಸಿಕ ದಾಖಲೆಗಳಿವೆ. ಪಾಂತಕ್ಕಿಯಲ್ಲಿ ಗ್ರಂಥಾಲಯ ವಿದ್ದುದು ಶಾಸನ ಒಂದರಲ್ಲಿ ದಾಖಲಾಗಿದೆ. ಕ್ರಿ.ಶ. ೧೬೭೫ರಲ್ಲಿ ಗೋಕರ್ಣದಲ್ಲಿ ಗ್ರಂಥಾಲಯವಿದ್ದುದನ್ನು ಡಾ. ಫ್ರಾಯರ್ ತನ್ನ ವರದಿಯಲ್ಲಿ ತಿಳಿಸಿದ್ದಾನೆ.

ಸಂಶೋಧನೆ ಮತ್ತು ಆಕರಗಳು

ಇತಿಹಾಸ ಅಧ್ಯಯನದ ಪ್ರಗತಿ, ಸಂಶೋಧನಾ ವೈಖರಿಯನ್ನು ಅವಲಂಬಿಸಿದೆ. ಶೋಧನೆ ಮತ್ತು ಸಂಶೋಧನೆಗಳಲ್ಲಿ ವ್ಯತ್ಯಾಸವಿದೆ. ಹೊಸ ಸಂಗತಿಗಳನ್ನು

ಬೆಳಕಿಗೆ ತರುವುದು ಶೋಧನೆಯಾಗಿದೆ. ಮರೆತು ಹೋದ, ವಿರೂಪಗೊಂಡ ಸಂಗತಿಗಳನ್ನು ಗಮನಕ್ಕೆ ತರುವುದೇ ಸಂಶೋಧನೆ. ಶೋಧನೆಯು ಇತಿಹಾಸ ಅಧ್ಯಯನದಲ್ಲಿ ಪಾತ್ರವಹಿಸಿದರೆ ಈ ಅಧ್ಯಯನವು ಅಭಾಸವಾಗುತ್ತದೆ. ಇತಿಹಾಸವು ಹಲವಾರು ಸಂಗತಿಗಳ ಕೊಂಡಿಯಾಗಿದೆ. ಅಧ್ಯಯನದಲ್ಲಿ ಕೆಲವು ಕೊಂಡಿಗಳು ಕಳಚಿ ಹೋಗಿರಬಹುದು ಅಥವಾ ಸಡಿಲಗೊಂಡಿರಬಹುದು. ಇಂತಹ ಕೊಂಡಿಗಳನ್ನು ಪುನರ್ ಸ್ಥಾಪಿಸುವುದು ಇತಿಹಾಸ ಸಂಶೋಧಕರ ಕೆಲಸ ಈ ಕೆಲಸ ನಿಷ್ಠೆಯಿಂದ ನಡೆಸುವುದು ಸಂಶೋಧಕನ ಕೆಲಸ. ಇದರಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ಸಂಶೋಧಕರು ತನ್ನ ಕಾರ್ಯದಲ್ಲಿ ತಪ್ಪಾಗಿರಬಹುದು ಆದರೆ ಇವನು ಇತಿಹಾಸ ನಿರೂಪಣೆಯಲ್ಲಿ ಸುಳ್ಳು ಹೇಳಬಾರದು ಇದ್ದ ಇತಿಹಾಸ ಘಟನೆಯನ್ನು ತಿರುಚುವ ಮುಚ್ಚಿಡುವ ಅಥವಾ ನಡೆಯದ ಘಟನೆಯನ್ನು ನಡೆದಿದೆ ಎಂದು ತಿಳಿಸುವುದು ಇತಿಹಾಸ ಅಧ್ಯಯನದಲ್ಲಿ ನಿರಂತರವಾಗಿ ನಡೆಯುತ್ತಾ ಇವೆ. ಆದರೆ ಇವುಗಳಲ್ಲಿ ಸತ್ಯವಿಲ್ಲ ಎಂಬ ಸಂಗತಿಗಳು ಬೆಳಕಿಗೆ ಬರುತ್ತವೆ. ಇದು ಇತಿಹಾಸದ ವಂಚನೆಯಾಗುತ್ತದೆ (Humbug) ಇದಕ್ಕೆ ಮುಖ್ಯ ಉದಾಹರಣೆ ಕೊನಸ್ಟೆಂಟಿನ್ ನೀಡಿದ ರಾಜಾಜ್ಞೆ ಇದನ್ನು ಇತಿಹಾಸದಲ್ಲಿ ಸೇರಿಸಿದವ ಮೂರನೆ ಇನೋಸೆಂಟ ಇದು ನಡೆಯಲಿಲ್ಲ ವೆಂದು ಬೆಳಕಿಗೆ ತಂದವ ಇತಿಹಾಸ ಅಧ್ಯಯನದ ವಿಮರ್ಶಕ ಲೊರೆಂಜಾವಾಲ. ಸಂಶೋಧಕರಲ್ಲಿ ಅಧ್ಯಯನ ಪ್ರಿ ಯತೆ, ಶ್ರಮ ಮತ್ತು ಸಂಶೋಧಿಸಿದ್ದನ್ನು ತಿಳಿಸುವಲ್ಲಿ ತಾಳ್ಮೆಯಿರುವುದು ಅವಶ್ಯಕ. ಅವಸರದ ನಿರ್ಣಯಗಳನ್ನು ಕೈಕೊಳ್ಳಬಾರದು.

ಇತಿಹಾಸ ಸಂಶೋಧನೆಯಲ್ಲಿ ಆಕರಗಳಿಗೆ ಪ್ರಮುಖ ಸ್ಥಾನವಿದೆ. ಇತಿಹಾಸವು ಆಕರಗಳ ನೆಲೆಯಲ್ಲಿ ನಿಂತಿವೆ. ಆಕರಗಳಿಲ್ಲದ ಇತಿಹಾಸವು ಇತಿಹಾಸವಾಗುವುದಿಲ್ಲ. ಕರ್ನಾಟಕದಲ್ಲಿ ಇತಿಹಾಸ ಸಂಶೋಧನೆಯ ಪರಂಪರೆಯಿದೆ.

ಆಕರಗಳು

ಆಕರಗಳಲ್ಲಿ ಹೆಚ್ಚಿಗೆ ಇತಿಹಾಸ ರಚನೆಗೆ ಉಪಯೋಗಿಸಿದ್ದು ಶಾಸನವೇ. ಕೆಲವು ವಿದ್ವಾಂಸರುಗಳ ಶ್ರಮದಿಂದ ಶಾಸನಗಳು ಬೆಳಕಿಗೆ ಬಂದಿವೆ. ಆದರೂ ಅಪ್ರಕಟಿತ ಶಾಸನಗಳು ಬಹಳಷ್ಟು ಇವೆ. ಕರಾವಳಿ ಕರ್ನಾಟಕದ ಈ ಶಾಸನಗಳನ್ನು ಬೆಳಕಿಗೆ ತರುವಲ್ಲಿ ಶ್ರಮಿಸಿದವರು ಹುಲ್ಟ್ ಪ್ರಥಮರು ಆಗಿದ್ದಾರೆ. ಇವರು ೧೯೦೧ರಲ್ಲಿ ಉದ್ಯಾವರದ ಶಾಸನಗಳನ್ನು ಪತ್ತೆ ಹಚ್ಚಿ ಬೆಳಕಿಗೆ ತಂದಿದ್ದಾರೆ (ದಕ್ಷಿಣ ಭಾರತದ ಶಾಸನದ ವರದಿ ೧೯೦೧ ನಂಬ್ರ, ೧೦೮, ೧೦೯) ಇದನ್ನು ಮುಂದುವರಿಸಿಕೊಂಡು ಬಂದವರಲ್ಲಿ ಕೆ.ವಿ. ರಮೇಶ್, ಎನ್. ಲಕ್ಷ್ಮೀನಾರಾಯಣರಾಯರು, ಪಿ. ಗುರುರಾಜ ಭಟ್ಟರು, ವಸಂತ ಶೆಟ್ಟರು ಗಮನಾರ್ಹರು ಈ ಕೆಲಸವನ್ನು ಡಾ. ಪಿ.ಎನ್. ನರಸಿಂಹ ಮೂರ್ತಿಯವರು ಈಗಲೂ ಮುಂದುವರಿಸಿಕೊಂಡು ಬಂದಿದ್ದಾರೆ. ಉತ್ತರ ಕರ್ನಾಟಕದ ಶಾಸನಗಳನ್ನು ಬೆಳಕಿಗೆ ತಂದವರಲ್ಲಿ ಆರ್.ಎನ್. ಗುರವ್, ಪಂಚಮುಖಿ ಗಮನಾರ್ಹರು ಡಾ. ಗೋಪಾಲಗೌಡ, ಡಾ. ಶ್ರೀನಿವಾಸ ಪಾಡಿಗಾರ ಮತ್ತು ಕೆ.ಜಿ. ಭಟ್ಟಸೂರಿ ಈ ಕೆಲಸಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಕರಾವಳಿ ಕರ್ನಾಟಕದಲ್ಲಿ ದಾನ ಶಾಸನ ಮತ್ತು ವೀರಗಲ್ಲು ಶಾಸನಗಳೊಂದಿಗೆ ರಾಜಕೀಯ ಒಪ್ಪಂದಗಳೂ ನಿಷಿಧಿಕಲ್ಲು ಶಾಸನಗಳು ಸಿಕ್ಕಿವೆ. ಅತ್ಯಂತ ಗಮನಾರ್ಹ ಸಂಗತಿಯೆಂದರೆ ಶಾಸನಗಳು ಇರುವ ಸ್ಥಳಗಳನ್ನು ತಿಳಿಸುವ ಪಟ್ಟಿ ಪಟ್ಟಕುದ್ರು ಗಣಪತಿ ದೇವಸ್ಥಾನದಲ್ಲಿದೆ. ಇದನ್ನು ಪತ್ತೆ ಹಚ್ಚಲು ನೆರವಾದವರು ದಿ. ವಸಂತ ಶೆಟ್ಟರು. ಶಾಸನಗಳ ಆಧಾರದಿಂದ ರಚಿತವಾದ ರಾಜಕೀಯ ಇತಿಹಾಸವು ಪ್ರಧಾನ ಸ್ಥಾನ ಪಡೆದಿದೆ. ಸಮಾಜದ ವ್ಯವಸ್ಥೆ ಧಾರ್ಮಿಕ ಕಟ್ಟುಕಟ್ಟಳೆಗಳು ವ್ಯಾಪಾರ ಕೃಷಿ ವಿಚಾರ ತಿಳಿಸುವ ಶಾಸನಗಳು ಇದ್ದರೂ ಸಂಶೋಧನೆಯಲ್ಲಿ ಇದು ಗಣನೀಯ ಸ್ಥಾನವನ್ನು ಇನ್ನೂ ಪಡೆಯಬೇಕು. ಕರಾವಳಿ ಕರ್ನಾಟಕದ ಶಾಸನಗಳಲ್ಲಿ ಕೆಲವು ವಿಶಿಷ್ಟ ಶಬ್ದಗಳು ಬರುತ್ತದೆ. ಮುಖ್ಯವಾಗಿ ಕಟ್ಟುಂದರ, ಬಾನಗೊಡು, ಬರಗೇಡು, ಹೆಣ್ಣಿಗೆ ದಾನ, ಗಂಡಿಗೆ ಮೂಲ, ಸ್ತ್ರೀ ಧನ, ಮೂಲ ದಂಡ, ನಮ್ಮ ಹುಟ್ಟು, ನಿಮ್ಮ ಕಟ್ಟು ಶಬ್ದಗಳು ಇಲ್ಲಿನ ಸಂಸ್ಕೃತಿಯ ಮುಖಗಳನ್ನು ತಿಳಿಸುವ ದ್ಯೋತಕವಾಗಿದೆ.

ಶಾಸನಗಳಲ್ಲದೆ ಇನ್ನೊಂದು ನಿಕರ ದಾಖಲೆ ಇಲ್ಲಿ ಇದೆ. ಇದಕ್ಕೆ ಕಡತವೆಂದು ಕರೆಯುತ್ತಾರೆ. ಈ ಕಡತಗಳು ಕರಾವಳಿ ಮತ್ತು ಮಲೆನಾಡಿನಲ್ಲಿ ಸಿಕ್ಕಿವೆ. ಈ ದಾಖಲೆಗಳು ಇತಿಹಾಸ ಸಂಗತಿಗಳನ್ನು ನಿಖರವಾಗಿ ತಿಳಿಸಲು ಸಫಲ ವಾಗಿವೆ. ಈ ದಾಖಲೆಗಳನ್ನು ಆಳವಾಗಿ ಅಧ್ಯಯನಿಸಿದವರಲ್ಲಿ ಡಾ. ಎ.ಕೆ. ಶಾಸ್ತ್ರಿ ಗಮನಾರ್ಹರು. ಇವರ ಸಂಶೋಧನೆ ಯಿಂದಾಗಿ ಕನ್ನಡ ನಾಡಿನ ಮಧ್ಯಕಾಲದ ಇತಿಹಾಸದ ಸಂಗತಿಗಳು ಸಾಕಷ್ಟು ಬೆಳಕು ಬರಲು ಕಾರಣೀಯವಾಗಿದೆ. ಇಂತಹ ಘಟನೆಯಲ್ಲಿ ಶೃಂಗೇರಿ ಮಠದಲ್ಲಿ ಗ್ರಂಥಾಲಯವಿದ್ದದ್ದು. ಈ ಗ್ರಂಥಾಲಯವು ಹಲವಾರು ಗ್ರಂಥಗಳನ್ನು ಒಳಗೊಂಡಿವೆ. ಇಂತಹವುಗಳಲ್ಲಿ ವೈದ್ಯಕೀಯ ಗ್ರಂಥ "ಕಾಶ್ಯಪ ಸಂಹಿತೆ". ಏಕೆಂದರೆ ವೈದ್ಯಕೀಯ ಇತಿಹಾಸಕಾರರಿಗೆ ಸಿಕ್ಕಿದ ಕಾಶ್ಯಪ ಸಂಹಿತೆ ನೇಪಾಳದ ರಾಜರ ಗ್ರಂಥಾಲಯದಲ್ಲಿ. ಇದು ಅಪೂರ್ಣ. ಶೃಂಗೇರಿ ಮಠದಲ್ಲಿ ಈ ವೈದ್ಯಕೀಯ ಗ್ರಂಥ ಇರುವುದು ವೈದ್ಯಕೀಯ

ಇತಿಹಾಸಗಾರರಿಗೆ ಇನ್ನೂ ತಿಳಿದಿಲ್ಲ ವೈದ್ಯಕೀಯ ಇತಿಹಾಸ ಅಧ್ಯಯನ ನಡೆಸುವವರು ಶೃಂಗೇರಿ ಮಠದ ಗ್ರಂಥಲಯಗಳ ವೈದ್ಯಕೀಯ ಗ್ರಂಥಗಳನ್ನು ನೋಡುವ ಅವಶ್ಯಕತೆ ಇದೆ ಎಂಬುದು ಡಾ. ಶಾಸ್ತ್ರಿಯವರ ಈ ಸಂಶೋಧನೆ ಪ್ರೇರೇಪಿಸುತ್ತದೆ. ಕಡತಗಳು ಮಧ್ಯಕಾಲೀನ ಅಂತ್ಯದ ಅವಧಿಯ ಕನ್ನಡ ನಾಡಿನ ಇತಿಹಾಸದ ವಿಚಾರ ತಿಳಿಯಲು ಒಂದು ಅಪೂರ್ವ ದಾಖಲೆಗಳಲ್ಲಿ ಒಂದಾಗಿದೆ.

ಹಲವಾರು ಕಾಗದ ಪತ್ರಗಳು ಕರ್ನಾಟಕದಲ್ಲಿ ಸಿಕ್ಕಿವೆ. ಇಂತಹ ಕನ್ನಡ ದಾಖಲೆ ಪತ್ರ ಗಮನಾರ್ಹವಾದುದು. ಟಿಪ್ಪುಸುಲ್ತಾನನು ಬರೆದ ಅಸಂಖ್ಯ ಪತ್ರಗಳು. ಇವುಗಳು ಲಂಡನ್ನಿನ ಗ್ರಂಥಾಲಯಗಳಲ್ಲಿವೆ. ಈ ಪತ್ರಗಳು ಈ ಸುಲ್ತಾನನ ಆಡಳಿತ ವೈಖರಿ, ಇವನಿಗೆ ಜನರ ಮೇಲಿದ್ದ ವಾತ್ಸಲ್ಯ ಜನಹಿತ ಯೋಜನೆಗಳು ಇವನ ವೈಜ್ಞಾನಿಕ ಮತ್ತು ಅವೈಜ್ಞಾನಿಕ ಆಲೋಚನಾ ಲಹರಿಗಳನ್ನು ತಿಳಿಸುತ್ತವೆ ಇವುಗಳನ್ನು ಸಮಗ್ರವಾಗಿ ಅಧ್ಯಯನಿಸಿದರೆ ಟಿಪ್ಪುವಿನ ನಿಜ ಚಿತ್ರಣ ಸಿಗುವ ಸಾಧ್ಯತೆ ಇದೆ. ಐತಿಹಾಸಿಕ ಸಾಹಿತ್ಯ ಕೃತಿಗಳು ಕನ್ನಡನಾಡಿನಲ್ಲೂ ಮತ್ತು ಕರಾವಳಿ ಕರ್ನಾಟಕದಲ್ಲೂ ಸಾಕಷ್ಟು ಇವೆ. ಇಂತಹವುಗಳಲ್ಲಿ ಕಾರ್ಕಳ ಗೋಮಟೇಶ್ವರ ಚರಿತ್ರೆ (ಚಂದ್ರಮ) ಜನದತ್ತರಾಯ ಚರಿತ್ರೆ (ಪದ್ಮನಾಭ) ರಾಮಚಂದ್ರ ಚರಿತ್ರೆ (ಪದ್ಮನಾಭ) ಕೆಳದಿನೃಪ ವಿಜಯಂ (ಲಿಂಗಣ್ಣ) ಮತ್ತು ಹೈದರನಾಮೆ (ನಲ್ಲಪ್ಪ) ಗಮನಾರ್ಹವಾಗಿವೆ.

ಈ ಸಾಹಿತ್ಯ ಕೃತಿಗಳು ರಾಜಕೀಯಕ್ಕಿಂತ ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಹೆಚ್ಚು ಬೆಳಕು ಚೆಲ್ಲುತ್ತವೆ. ಕವಿಗಳ ಕಾಲದಲ್ಲಿ ನಡೆದ ಸಮಗ್ರ ಘಟನೆಗಳನ್ನು ಕವಿಗಳು ಸಮರ್ಥವಾಗಿ ತಿಳಿಸಿದ್ದಾರೆ. ಇದಲ್ಲದೆ ಆಗಿನ ಭಾಷೆಯ ವೈಲಕ್ಷಣಗಳು ಈ ಕಾವ್ಯದ ಅಧ್ಯಯನದಿಂದ ತಿಳಿದು ಬರುತ್ತದೆ. ಇವು ಇತಿಹಾಸ ಸಂಶೋಧಕರಿಗೆ ಪ್ರತ್ಯಕ್ಷ ದಾಖಲೆಗಳಾಗುವ ಸಾಧ್ಯತೆ ಇದೆ. ಕಾರ್ಕಳ ಗೊಮಟೇಶ್ವರ ಚರಿತ್ರೆಯಲ್ಲಿ (೧೬೪೬) ಕವಿ ಚಂದ್ರಮನು ಇಲ್ಲಿನ ನಗರ ಸಂಸ್ಕೃತಿಯನ್ನು ತಿಳಿಸುತ್ತಾನೆ. ಇದರೊಂದಿಗೆ ಜೈನಮತದ ವೈಭವ ಮತ್ತು ಭೈರವನ ಒಡೆಯರ ಧಾರ್ಮಿಕ ಉದಾರತೆ ಮತ್ತು ಸಾಗರೋತ್ತರ ಪ್ರದೇಶಗಳ ಪರಿಚಯವನ್ನು ಈ ಕಾವ್ಯದಲ್ಲಿ ತಿಳಿಸಿದ್ದಾನೆ. ಪದ್ಮನಾಭ ಕವಿ ವಿರಚಿತ ಪದ್ಮಾವತಿ ಮಹಾತ್ಮ (೧೭೦೦) ಕಾವ್ಯದ ಮೂಲಕ ಸಾಮಂತರ ಸಾಂಸ್ಕೃತಿಕ ಚಟುವಟಿಕೆಗಳು ಜೈನ ಧರ್ಮದ ಪ್ರಗತಿ ವ್ಯಾಪಾರ ಮತ್ತು ವ್ಯಾಪಾರ ಚಟುವಟಿಕೆಗಳನ್ನು ತಿಳಿಸಿದ್ದಲ್ಲದೇ ರಾಜನೀತಿಯನ್ನು ತಿಳಿಸಿದ್ದಾನೆ. ಇವನ ಅಭಿಪ್ರಾಯದಂತೆ "ಕಲಿಯನು ಹಂದೆಯೆಂಬದು ಬಲು ಹಂದೆಯರನು ಕಲಿಯೆಂಬವರು ಭೂಪರು" "ಇಂತಹ ರಾಜರುಗಳ ಸೇವೆ ಕಷ್ಟ". ಕೆಳದಿ ನೃಪ ವಿಜಯಂ ಒಂದು ಉತ್ತಮ ಐತಿಹಾಸಿಕ ಕೃತಿ. ಇವನು ಕೆಳದಿ ಅರಸುಗಳ ಚರಿತ್ರೆಯನ್ನು ಇಲ್ಲಿನ ಭೌಗೋಳಿಕ ಸ್ಥಿತಿಯನ್ನು ತಿಳಿಸಿದ್ದಾನೆ. ಇದಲ್ಲದೆ ಇವನು ಸಮಗ್ರ ಭಾರತದ ಚರಿತ್ರೆಯನ್ನು ನಿಖರವಾಗಿ ತಿಳಿಸಿದ್ದು ಗಮನಾರ್ಹ (ನೋಡಿ ಅಧ್ಯಾಯ ೯) ಇದರಿಂದಾಗಿ ಆಗಿನ ಕಾಲದವರ ಇತಿಹಾಸ ಕಲ್ಪನೆ ಹೇಗಿದ್ದಿತ್ತು ಎಂದು ತಿಳಿಸುತ್ತದೆ.

ಸಾಹಿತ್ಯ ಕೃತಿಗಳೊಂದಿಗೆ ಜನಜೀವನ ತಿಳಿಸುವ ಜಾನಪದ ಸಾಹಿತ್ಯಗಳು ಕರ್ನಾಟಕದಲ್ಲಿವೆ. ಇದಕ್ಕೆ ಮುಖ್ಯ ಉದಾಹರಣೆ ತುಳು ಪಾಡ್ದನಗಳು ಇವುಗಳ ಅಧ್ಯಯನವು ತುಳುನಾಡಿನ ಸಾಂಸ್ಕೃತಿಕ ಜೀವನದ ಹಲವು ಮುಖಗಳನ್ನು ತಿಳಿಸುತ್ತವೆ. ಇದರೊಂದಿಗೆ ಈ ಪ್ರದೇಶದ ಅಕ್ಕಪಕ್ಕದಲ್ಲಿರುವ ಭಾಷೆಗಳಲ್ಲಿರುವ ಜಾನಪದ ಗೀತೆಗಳ ಅಧ್ಯಯನದಿಂದ ಆ ಭಾಷೆಯನ್ನಾಡುವ ಜನರು ಕನ್ನಡನಾಡಿನ ವಿಚಾರದಲ್ಲಿ ಯಾವ ಅಭಿಪ್ರಾಯ ಪಟ್ಟಿದ್ದರೆಂಬ ಸಂಗತಿಯು ತಿಳಿದುಬರುತ್ತದೆ. ಇದರಿಂದ ಸಂಶೋಧನೆಯ ಮೌಲ್ಯವು, ಮಹತ್ವವು ಹೆಚ್ಚುತ್ತದೆ. ಇದನ್ನೇ ತುಲನಾತ್ಮಕ ಅಧ್ಯಯನವೆನ್ನುತ್ತಾರೆ.

ವಿದೇಶಿ ಆಕರಗಳು

ಕರ್ನಾಟಕ ಮುಖ್ಯವಾಗಿ ಕರಾವಳಿ ಕರ್ನಾಟಕ ಸಾಗರೋತ್ತರ ಪ್ರದೇಶಗಳೊಂದಿಗೆ ಆಗಿಂದಾಗ್ಗೆ ಸಂಪರ್ಕ ಹೊಂದುತ್ತಾ ಬಂದಿತು. ಇಂತಹ ವಿದೇಶಿಯರಲ್ಲಿ ಗ್ರೀಕೊ-ರೋಮನರು, ಚೀನಿಯರು, ಅರಬರು, ಜ್ಯುಗಳು, ಪರ್ಶಿಯನ್ನರು, ಯುರೋಪಿನ ವರ್ತಕರು, ಗಮನಾರ್ಹರು, ಇವರುಗಳ ದಾಖಲೆಗಳನ್ನು ಅಧ್ಯನಿಸಿದವರು ಬಹಳ ಕಡಿಮೆ. ಇದಕ್ಕೆ ಕಾರಣ ಈ ಭಾಷೆಗಳ ಜ್ಞಾನದ ಅಭಾವ ಹೀಗಿದ್ದರೂ ಅಲ್ಲಲ್ಲಿ ಈ ಭಾಷೆಗಳನ್ನು ಅಧ್ಯಯನಿಸಿದ ಕೆಲವರು ಈ ಭಾಷೆಗಳಲ್ಲಿ ಅಡಗಿರುವ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ. ಇಂತಹವರಲ್ಲಿ ಮಹಮ್ಮದ್ ಹುಸೈನ್‌ನಯನಾರ ಅರಬರು ಭಾರತದ ರೇವುಗಳ ವಿಚಾರ ತಿಳಿಸಿದ್ದನ್ನು ಇವನ ಗ್ರಂಥ Arab's geographers knowledge of southern India Madras 1942 ದಲ್ಲಿದೆ. ಈ ಗ್ರಂಥದಲ್ಲಿ ಕರಾವಳಿ ಕರ್ನಾಟಕದ ರೇವುಗಳ, ಭೌಗೋಳಿಕ ಲಕ್ಷಣಗಳು ಅವುಗಳ ರಚನೆಗಳು ಮತ್ತು ವ್ಯಾಪಾರ ನಡೆಯುವ ಸರಕುಗಳು ಮತ್ತು ವ್ಯಾಪಾರಸ್ಥರ ವಿಚಾರ ತಿಳಿಸುತ್ತವೆ. ಕ್ರಿ.ಶ. ೧೫೦೦ರಿಂದ ಕರಾವಳಿ ಕರ್ನಾಟಕ ಪೋರ್ಚುಗೀಸರ ಸಂಪರ್ಕಕ್ಕೆ ಬಂತು. ಇದರ ವಿಚಾರಗಳನ್ನು ಆಂಗ್ಲ ಭಾಷೆಯ ಮುಖಾಂತರ ತಿಳಿಸಿದವರು ಡಾನವರಿಸ (Danvers) ರೊಬರ್ಟ ಸಿವೆಲ್ಲ (Robert Sewell), ಹೆಸ್ರ (Henry Heras) ಹೆಸರಾಂತ ವಿದೇಶಿ ವಿದ್ವಾಂಸರರು ಕನ್ನಡಿಗರಾದ ಜಿ.ಎಂ. ಮೊರೆಯಿಸ್ ಮತ್ತು ಬಿ.ಎಸ್. ಶಾಸ್ತ್ರಿಯವರು ಕೆಲವು ಪೋರ್ಚುಗೀಸ

ಭಾಷೆಯ ದಾಖಲೆಗಳನ್ನು ಪರಿಚಯಿಸಿ ಕೊಟ್ಟಿದ್ದಾರೆ. ಕನ್ನಡಿಗರೇ ಆದ ಬಿ.ಎಸ್. ಶಾಸ್ತ್ರಿಯವರು ಕರಾವಳಿ ಕರ್ನಾಟಕದ ಮಧ್ಯಕಾಲೀನ ರಾಜಕೀಯ ಸ್ಥಿತಿಗತಿಗಳನ್ನು ಪೋರ್ಚುಗೀಸ ದಾಖಲೆಗಳಲ್ಲಿ ಇದ್ದದನ್ನು ಪ್ರತ್ಯಕ್ಷ ಅಧ್ಯಯನಿಸಿ ಹೊಸ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ. ಇದು ಇವರು ಕನ್ನಡದಲ್ಲಿ ಬರೆದ ಕೆಳದಿ ಅರಸರು ಹಾಗೂ ಪೋರ್ಚುಗೀಸರು ಎಂಬ ಗ್ರಂಥದಲ್ಲಿದೆ. ಈ ಪೋರ್ಚುಗೀಸರು ತಮ್ಮ ಚಟುವಟಿಕೆ ಗಳನ್ನು ಪ್ರಸರಿಸಲು ಭೌಗೋಳಿಕ ಸನ್ನಿವೇಶ ಮತ್ತು ಯಾವ ಬೆಳೆಗಳನ್ನು ಬೆಳೆಸಿ ಅವುಗಳನ್ನು ತಾವು ಹೇಗೆ ಉಪಯೋಗಿಸಿ ಕೊಳ್ಳಬಹುದೆಂಬುದರ ಕುರಿತಾಗಿ ಬರೆದಿದ್ದರು. ಇಲ್ಲಿ ಯಾವ ವೃತ್ತಿಯಲ್ಲಿ ಜನರು ಕುಶಲರಿದ್ದರು. ಅವರನ್ನು ಹೇಗೆ ತಾವು ತಮ್ಮ ಲಾಭಕ್ಕೆ ಉಪಯೋಗಿಸಿಕೊಳ್ಳಬಹುದೆಂಬುದನ್ನು ತಿಳಿದು ಅವರನ್ನು ತಮ್ಮ ಸೇವಾವೃತ್ತಿಯಲ್ಲಿ ಸೇರಿಸಿಕೊಳ್ಳು ತ್ತಿದ್ದರು. ಇದೇ ರೀತಿಯ ಪ್ರಯೋಗ ಆಂಗ್ಲೇಯರು ನಡೆಸಿ ದರು. ಇಲ್ಲಿನ ಸಾಮಾಜಿಕ ದುಸ್ಥಿತಿಯನ್ನು ಪ್ರಥಮವಾಗಿ ಬೆಳಕಿಗೆ ತಂದವರು ಪೋರ್ಚುಗೀಸರೇ. ಇದನ್ನೇ ಮುಂದೆ ಇಂಗ್ಲೀಷರು ಉಪಯೋಗಿಸಿಕೊಂಡರು. ಇಲ್ಲಿನ ಮರಮಟ್ಟು ಗಳನ್ನು ಹಡಗುಕಟ್ಟಲು ಉಪಯೋಗಿಸಿ ಆ ಹಡಗುಗಳನ್ನು ತಮ್ಮ ಹಿತಾಸಕ್ತಿಗೆ ಬಳಸಿಕೊಂಡರು. ಈ ವಿದೇಶಿಗಳು ಈ ಎಲ್ಲಾ ಸಂಗತಿಗಳನ್ನು ಇತಿಹಾಸ ಸಂಶೋಧಕರು ತಿಳಿಯುವ ಅವಶ್ಯಕತೆ ಇದೆ.

ಉಪಸಂಹಾರ

ಕರ್ನಾಟಕದಲ್ಲಿ ಇತಿಹಾಸ ಸಂಶೋಧನೆ, ಆಕರಗಳು ಸಿಕ್ಕಿದ ಪ್ರಮಾಣದಲ್ಲಿ ಸಂಶೋಧನೆ ನಡೆದಿಲ್ಲ. ಪತ್ತೆಯಾದ ಆಕರಗಳು ಹೆಚ್ಚಾಗಿ ರಾಜಕೀಯ ಧಾರ್ಮಿಕ, ಆರ್ಥಿಕ, ವಿಚಾರಗಳ ಸಂಶೋಧನೆಗಳು ಸೀಮಿತ ಕಾಲಾವಧಿಯಲ್ಲಿ ನಡೆದಿವೆ.

ಕನ್ನಡ ನಾಡಿನಲ್ಲಿ ವಿಜ್ಞಾನದ ಇತಿಹಾಸ ಇನ್ನೂ ಸ್ಪಷ್ಟವಾಗಿ ನಡೆದಿಲ್ಲ. ಈ ವಿಚಾರದ ಸಾಕಷ್ಟು ಮಾಹಿತಿಗಳು ದೇಶಿ ಮತ್ತು ದೇಶೀಯ ದಾಖಲೆಗಳಲ್ಲಿ ಇವೆ. ಉದಾ: ವೈದ್ಯಕೀಯ ಇತಿಹಾಸದ ಮಾಹಿತಿಗಳು ಶಾಸನ, ವಿದೇಶಿ ದಾಖಲೆಗಳು ಮತ್ತು ಪ್ರವಾಸಿಗರ ವರದಿಗಳಲ್ಲಿವೆ. ಉದಾ: ಟೊಮಿಪ್ಯಾರಿಸ್ ಬರಹ ಸೂಮಾ ಒರಿಯಂಟಲ್ (೧೫೧೨) ಗ್ರಂಥದಲ್ಲಿ ಗೋವಾ ಮತ್ತು ಕರಾವಳಿ ಕರ್ನಾಟಕದಲ್ಲಿರುವ ಔಷಧಿಯುಕ್ತ ಸಸಿಗಳನ್ನು ಹೆಸರಿಸಿದ್ದಲ್ಲದೆ ಈ ಸಸ್ಯ ಜನ್ಯ ಔಷಧಿ ಸಂಪತ್ತನ್ನು ಹೇಗೆ ಸ್ಥಳೀಯರು ಉಪಯೋಗಿಸು ತ್ತಿದ್ದರೆಂದು ತಿಳಿಸಿದ್ದಾನೆ. ಅಲ್ಲದೆ ಇಲ್ಲಿನ ಔಷಧಿ ಸಂಪತ್ತಿನ ಗಿಡಗಳಿಗೆ ವಿದೇಶದಲ್ಲೂ ಬಹಳ ಬೇಡಿಕೆಗಳು ಇದ್ದದ್ದನ್ನು ಇದೇ ವರದಿಯಲ್ಲಿ ಹೇಳಿದ್ದಾನೆ. ಆಂಗ್ಲ ವೈದ್ಯ ಡಾ. ಪ್ರಾಯರ್ ಇಲ್ಲಿನ ವೈದ್ಯರ ಶಸ್ತ್ರಕ್ರಿಯೆ ಬಳಕೆಯನ್ನು ಬಹಳ ಮೆಚ್ಚಿಕೊಂಡಿದ್ದಾನೆ.

ಇದೇ ರೀತಿ ಸ್ಥಳೀಯರು ನೀರನ್ನು ಹೇಗೆ ನಿಯಂತ್ರಿಸು ತ್ತಿದ್ದನ್ನು, ನೆರೆ ಹಾವಳಿಗಳನ್ನು ಹೇಗೆ ತಡೆಯುತ್ತಿದ್ದರೆಂಬ ಮಾಹಿತಿಗಳು ಶಾಸನದಲ್ಲೂ ಮತ್ತು ವಿದೇಶಿ ದಾಖಲೆಗಳಲ್ಲೂ ಇವೆ. ಇವುಗಳನ್ನು ಬಳಸಿಕೊಂಡು ಈ ವಿಚಾರ ಸಂಶೋಧನೆ ನಡೆದರೆ ಕರ್ನಾಟಕದ ಇತಿಹಾಸ ಅಧ್ಯಯನಕ್ಕೆ ಒಂದು ಮೆರುಗು ಬರುತ್ತದೆ. ಕೊನೆಯದಾಗಿ ಇತಿಹಾಸ ಸಂಶೋಧಕರು ಈ ವಿಚಾರಗಳನ್ನು ಮನದಲ್ಲಿಟ್ಟುಕೊಳ್ಳಬೇಕು. ಚರಿತ್ರೆ ಅಧ್ಯಯನ ಮತ್ತು ಸಂಶೋಧನೆ ಮಾನವೀಯ ನೆಲೆಗಳಿಂದ ಕೂಡಿರಬೇಕು. ದಾಖಲೆಗಳ ಸ್ಪಷ್ಟತೆ ಇರುವುದನ್ನು ಗಮನಿಸಬೇಕು. ಇಲ್ಲಿ ವಿಮರ್ಶಾತ್ಮಕತೆ ಬಳಸಿಕೊಳ್ಳಬೇಕು. ಸಂಶೋಧನೆ ಫಲಿತಾಂಶ ಅಂತಿಮ ಸ್ವರೂಪದಲ್ಲಿ ಎಂಬುದನ್ನು ಸಂಶೋಧನಾ ವಿದ್ಯಾರ್ಥಿಗಳು ತಿಳಿದಿರಬೇಕು. ತಾವು ಸಂಶೋಧಿಸಿದ್ದು ಹಿಂದೆ ಇತರರು ಸಂಶೋಧಿಸಿದ ಶ್ರಮದ ಫಲವೆಂದು ಸಂಶೋಧಕ ವಿದ್ಯಾರ್ಥಿ ನೆನಪಿನಲ್ಲಿಟ್ಟುಕೊಳ್ಳಬೇಕು. ತಾನು ಸಂಶೋಧಿಸಿ ಕ್ಷೇತ್ರದಲ್ಲಿ ಹಿಂದೆ ನಡೆದ ಸಂಶೋಧಕ ರೊಂದಿಗೆ ತನಗೆ ಸಹಕಾರ ನೀಡಿದವರನ್ನು ಸ್ಮರಿಸಿಕೊಳ್ಳಬೇಕು. ಸಂಶೋಧನಾ ಕ್ಷೇತ್ರದಲ್ಲಿ ಅವಸರದ ನಿರ್ಣಯಗಳು ಬರುವ ಸಾಧ್ಯತೆ ಇದೆ. ಇವುಗಳನ್ನು ಸಂಶೋಧಕರು ಪರಿಶೀಲಿಸಬೇಕು. ಸಂಶೋಧಕ ವಿನಯ ಸತ್ಯನಿಷ್ಠನಾಗಿರಬೇಕು ಪೂರ್ವಾಗ್ರಹ ಪೀಡಿತರಿಂದ ಸಾಧ್ಯವಾದಷ್ಟು ದೂರವಿರಬೇಕು.

ಸಂಶೋಧನಾ ಬರಹಗಳನ್ನು ಕಾಲಕಾಲಕ್ಕೆ ವಿಮರ್ಶಿಸುವ ಅವಶ್ಯಕತೆ ಇದೆ. ಒಟ್ಟಿನಲ್ಲಿ ವಿಮರ್ಶಾತ್ಮಕ ಗ್ರಂಥಗಳು ಬೆಳೆಯಬೇಕು. ಆದರೆ ಇದು ಇಲ್ಲಿ ವ್ಯಾಪಕವಾಗಿ ಬೆಳೆದಿಲ್ಲ.

ನನ್ನ ಭಾಷಣವನ್ನು ಶಾಂತ ಚಿತ್ತದಿಂದ ಕೇಳಿದ ವಿದ್ವಾಂಸರುಗಳಿಗೂ ಮತ್ತು ಇತಿಹಾಸ ವಿದ್ಯಾರ್ಥಿಗಳಿಗೂ ನನ್ನ ವಂದನೆಗಳು.

ಜೈ ಭಾರತ ತನುಜಾತೆ
ಜಯ ಕರ್ನಾಟಕ ಮಾತೆ

ಸಂಕ್ಷಿಪ್ತ ಇತಿವೃತ್ತ

ಹೆಸರು	:	**ಕೋಡಂಚ ಗುಜ್ಜಾಡಿ ವಸಂತಮಾಧವ**
ಕಾವ್ಯನಾಮ	:	ಡಾ. ಕೆ.ಜಿ. ವಸಂತಮಾಧವ
ಜನನ	:	೯ನೇ ಏಪ್ರಿಲ್ ೧೯೩೭
ವಿದ್ಯಾರ್ಹತೆ	:	ಎಸ್.ಎಸ್.ಎಲ್.ಸಿ. ಯವರೆಗೆ, ಗಂಗುಳಿ, ಕುಂದಾಪುರ ತಾಲ್ಲೂಕು, ದಕ್ಷಿಣ ಕನ್ನಡ. ಬಿ.ಎ. ೧೯೫೯, ಮೈಸೂರು ವಿಶ್ವವಿದ್ಯಾನಿಲಯ (ಎಕಾನಮಿಕ್ಸ್, ಇತಿಹಾಸ), ಮೈಸೂರು. ಎಂ.ಎ. ೧೯೬೧ ಕರ್ನಾಟಕ ವಿಶ್ವವಿದ್ಯಾಲಯ (ಇತಿಹಾಸ), ಧಾರವಾಡ. ಪಿಎಚ್.ಡಿ. ೧೯೭೭ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ವಿಷಯ: ಕೆನರಾದ ರಾಜಕೀಯ ಶಾಸ್ತ್ರ ೧೫೬೫ ರಿಂದ ೧೭೬೩ರ ಕಾಲಘಟ್ಟದಲ್ಲಿ (ಶಾಸನಗಳ ಆಧಾರಿತ ಸಂಶೋಧನೆ)
ವೃತ್ತಿ-ಅನುಭವ	:	೧೯೬೩ ರಿಂದ ೧೯೯೫ರವರೆಗೆ ಉಪನ್ಯಾಸಕರು, ಪ್ರಾಧ್ಯಾಪಕರು ಮತ್ತು ಪ್ರಾಚಾರ್ಯರಾಗಿ ವಿಜಯ ಕಾಲೇಜು, ಮುಲ್ಕಿಯಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದಾರೆ. ನಿವೃತ್ತಿಯ ನಂತರ ಐಸಿಎಚ್‌ಆರ್‌ನ ಸೀನಿಯರ್ ರೀಸರ್ಚ್ ಫೆಲೋ ಆಗಿ ನೇಮಕಗೊಂಡು ೧೯೯೬ರಿಂದ ೧೯೯೭ರವರೆಗೆ ಕೇರಳದ ಕ್ಯಾಲಿಕಟ್ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನ ಶಾಸ್ತ್ರ ಬೋಧನೆ. ೧೯೯೭ರಿಂದೀಚೆಗೆ ತೀವ್ರವಾಗಿ ಸಂಶೋಧನಾ ಚಟುವಟಿಕೆಗಳಲ್ಲಿ ಕ್ರಿಯಾತ್ಮಕವಾಗಿದ್ದಾರೆ. ಕೇರಳದ ಕ್ಯಾಲಿಕಟ್‌ನ ಭಾರತೀಯಾರ್ ವಿಶ್ವವಿದ್ಯಾನಿಲಯದಲ್ಲಿ ೧೯೮೬ರಿಂದ ಎಂ.ಫಿಲ್ ಮತ್ತು ಪಿಎಚ್.ಡಿ ಪರೀಕ್ಷೆಗಳಿಗೆ ಪರಿವೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.
ಸಂಘ ಸಂಸ್ಥೆಗಳಲ್ಲಿ ಪಾತ್ರ, ವಿದ್ವತ್ ಪೂರ್ಣ ಲೇಖನಗಳ ಮಂಡನೆ ಮತ್ತು ಗೌರವ	:	ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ಸಂಸ್ಥೆಯ ಫೆಲೋಶಿಪ್ ಹೊಂದಿದ್ದು, ಇಲ್ಲಿ ನೂರಕ್ಕೂ ಮಿಗಿಲಾಗಿ ಇವರ ಲೇಖನಗಳು ಪ್ರಕಟಗೊಂಡಿವೆ. ಅಧ್ಯಕ್ಷರು-ಸಾಂಸ್ಕೃತಿಕ ಇತಿಹಾಸ ವಿಭಾಗ, ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಕಾಕತೀಯ ವಿಶ್ವವಿದ್ಯಾನಿಲಯ, ವಾರಂಗಲ್-೨೦೦೦. ಅಮೇರಿಕನ್ ಓರಿಯಂಟಲ್ ಸ್ಟಡೀಸ್ ನಡೆಸಿದ ಸಮ್ಮೇಳನದಲ್ಲಿ-ಸಾನ್‌ಡಿಯಾಗೋದಲ್ಲಿ 'ಕರ್ನಾಟಕದ ಮಧ್ಯಯುಗೀನ ಕಾಲದಲ್ಲಿ-ಕಡತ" "ಒಂದು ಆಕರ ಗ್ರಂಥ"ದ ಬಗ್ಗೆ ವಿದ್ವತ್ ಪೂರ್ಣ ಲೇಖನ ಮಂಡನೆ. ವೆಲಕಮ್ ಟ್ರಸ್ಟ್, ಲಂಡನ್ ಅವರ ಕೋರಿಕೆಯ ಮೇರೆಗೆ, ವೆಲಕಮ್ ಟ್ರಸ್ಟ್ ಗ್ರಂಥಾಲಯಕ್ಕೆ ಸೆಪ್ಟಂಬರ್, ೨೦೦೭ರಲ್ಲಿ ಭೇಟಿ ನೀಡಿ "ಪ್ರಾಚೀನ ವೈದ್ಯಕೀಯ ಇತಿಹಾಸ ಸಾಂಸ್ಕೃತಿಕ ಕೊಂಡಿಗಳು"-ಸಂಶೋಧನಾತ್ಮಕ ವರದಿ ಸಲ್ಲಿಸಿದ್ದಾರೆ. ಸೆಪ್ಟೆಂಬರ್-ಅಕ್ಟೋಬರ್ ೨೦೦೯ರಲ್ಲಿ ಲೂಯಿಸ್ ಎಂ. ಡಾರ್ಲಿಂಗ್ ಮೆಡಿಕಲ್ ಸೈನ್ಸ್ ಹಿಸ್ಟರಿ ಲೈಬ್ರರಿ, ಲಾಸ್ ಏಂಜಲೀಸ್, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಕೋರಿಕೆಯ ಮೇರೆಗೆ ಭೇಟಿ ನೀಡಿ "ಪ್ರಾಚೀನ ವೈದ್ಯಕೀಯ ಇತಿಹಾಸ"ದ ವಿವಿಧ ಆಯಾಮಗಳ ಬಗ್ಗೆ ಕಾರ್ಯ ನಿರ್ವಹಿಸಿ, ವರದಿ ಸಲ್ಲಿಸಿದ್ದಾರೆ.

ಪ್ರಾಚೀನ ವೈದ್ಯಕೀಯ ಇತಿಹಾಸದ ಬಗ್ಗೆ ಲೇಖನಗಳು :

ಇವರ ವಿದ್ವತ್ ಪೂರ್ಣ ಲೇಖನಗಳನ್ನು ಸಂಗ್ರಹಿಸಿ ಸಂಪಾದಿಸಿ, ಕೆ.ಜಿ.ವಿ.ಯವರ ಲೇಖನ ಸಂಗ್ರಹಗಳನ್ನು ಹೊರತಂದರೆ, ಪ್ರಾಚೀನ ವೈದ್ಯಕೀಯ ಇತಿಹಾಸದಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಮತ್ತು ವೈದ್ಯಕೀಯ ಇತಿಹಾಸದಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಮತ್ತು ವೈದ್ಯಕೀಯ ಸಂಘ ಸಂಸ್ಥೆಗಳಿಗೆ ಅಮೂಲ್ಯವಾದ ಗ್ರಂಥ/ಆಕರ ಗ್ರಂಥವಾಗುವುದರಲ್ಲಿ ಸಂದೇಹವಿಲ್ಲ. ೨೫ಕ್ಕೂ ಮಿಗಿಲಾದ ಲೇಖನಗಳಿವೆ.

ಮುಖ್ಯವಾಗಿ ಗಮನ ಸೆಳೆಯುವ ಲೇಖನಗಳು :

"The naval activities of Tipu sultan" -January 2010.

"The Foreign plicy of Krishnadevaraya-Vijayanagara" -January 2010.

"Krishnadevaraya and the Portuguese relation an estimate" -aresearch paper was presented in February 2010 in the Conference organized by The Mythic Society, Banagalore.

Role of Jains in Ancient Indian Medical History-Directorate of Archeology, Govt of Karnataka, Mysore.

Arabs Contribution to Medical Science and Arab Sources to Ancient Indian Medical History-a research paper at Arabic Seminar-Feb, 2011, Mumpad, Calicut, Kerala.

Inscriptions as Sources of Folk Medicine-a research paper presented at Annual Epigraphical Conference-in 2011 at Kalyan

And many many more.

೧

ನವಶೋಧಿತ ತುಮಕೂರು ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು

ರವೀಶ ಜಿ.ಎನ್.*

ಮಾನವನು ಎಲ್ಲಿಂದ ಬಂದ, ಹೇಗೆ ಹುಟ್ಟಿದ, ಹೇಗೆ ಬೆಳೆದ ಅವನ ಕಾಲದ ವ್ಯವಸ್ಥೆ ಹೇಗಿದ್ದಿರಬಹುದೆಂಬುದು ಕುತೂಹಲಕರ ವಿಷಯ. ಯುಗಾಂತರಗಳ ಹಿಂದೆ ವಿವಿಧ ರೀತಿಯ ಜೀವಸತ್ವವನ್ನು ಹೊಂದಿ ಕ್ರಮೇಣ ವಿಕಾಸಗೊಂಡು ಈಗಿನ ರೂಪವನ್ನು ಪಡೆಯುವುದರ ಜೊತೆಯಲ್ಲಿಯೆ, ಜೀವನ ವಿಧಾನವು ಬದಲಾಗಿರುವುದು ಆತ ಬಿಟ್ಟುಹೋದ ಭೌತಿಕ ಅವಶೇಷಗಳಿಂದ ಕಂಡುಬರುತ್ತದೆ. ಅಂದರೆ ಆಯಾಯಾ ಕಾಲಘಟ್ಟಗಳಲ್ಲಿ ಮಾನವ ವಾಸ ಮಾಡುತ್ತಿದ್ದ ಗುಹೆ, ವಸತಿ, ಚಿತ್ರಕಲೆ, ಉಪಯೋಗಿಸುತ್ತಿದ್ದ ಆಯುಧೋಪಕರಣ ಮೊದಲಾದವುಗಳ ಆಧಾರದ ಮೇಲೆ ಆ ಕಾಲದ ಮಾನವನ ವಿಭಿನ್ನ ಸಂಸ್ಕೃತಿಗಳನ್ನು ತಿಳಿಯಬಹುದಾಗಿದೆ.[೧] ಮಾನವನ ಜೀವನ ಕ್ರಮದಲ್ಲಾದ ಇಂತಹ ಮಾರ್ಪಾಡಿನ ವಿವಿಧ ಹಂತಗಳನ್ನು ಶಿಲಾಯುಗ ಸಂಸ್ಕೃತಿಯೆಂದು ಕರೆಯಲಾಗುತ್ತದೆ. ಕರ್ನಾಟಕವು ಶಿಲಾಯುಗ ಸಂಸ್ಕೃತಿಯ ತವರೂರಾಗಿದ್ದು, ಪ್ರತಿಯೊಂದು ಯುಗಕ್ಕೆ ಸಂಬಂಧಿಸಿದ ಸುಮಾರು ೨೫೧೭ಕ್ಕೂ ಅಧಿಕ ನೆಲೆಗಳನ್ನು ಈಗಾಗಲೇ ಹಲವಾರು ವಿದ್ವಾಂಸರು ಪತ್ತೆಹಚ್ಚಿದ್ದಾರೆ.[೨] ಅಲ್ಲದೆ ರಾಮನಗರದಿಂದ ತುಮಕೂರು, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಪ್ರದೇಶಗಳವರೆಗೆ ಹಬ್ಬಿಕೊಂಡಿರುವ ಬೆಟ್ಟಸಾಲುಗಳು ಸುಮಾರು ೨೫೦ ಕೋಟಿ ವರ್ಷಗಳ ಹಿಂದೆ ರೂಪುಗೊಂಡಿತೆಂದು ಭೂವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದು.[೩] ಬೆಟ್ಟಗುಡ್ಡಗಳಿಂದ ಕೂಡಿದ ಈ ಪರಿಸರ ಆದಿಮಾನವನಿಗೆ ವಸತಿ ಯೋಗ್ಯವಾದ ನೀರಿನ ಸೆರೆ, ಹಾಗೂ ಕಗ್ಗಲ್ಲ ಬೆಟ್ಟಗಳು ಸುರಕ್ಷಿತ ಪ್ರದೇಶಗಳಾಗಿ ಕಂಡುಬಂದವು. ಪ್ರಕೃತಿದತ್ತ ರಕ್ಷಣಾ ಸೌಲಭ್ಯವಲ್ಲದೆ ಅಲ್ಲಿ ಹೇರಳವಾಗಿ ದೊರೆಯುತ್ತಿದ್ದ ಶಿಲಾರಚನೆಗಳು ಅವರ ಆಯುಧಗಳಿಗೆ ಉಪಯುಕ್ತ ವಸ್ತುವಾದವು. ಹಾಗಾಗಿ ಈ ಭೂಲಕ್ಷಣವುಳ್ಳ ಪರಿಸರದಲ್ಲಿ ಹೆಚ್ಚು ಪ್ರಾಗೈತಿಹಾಸಿಕೆ ನೆಲೆಗಳನ್ನು ಕಾಣಬಹುದಾಗಿದೆ.[೪] ಅದರಲ್ಲೂ ತುಮಕೂರು ಜಿಲ್ಲೆಯಲ್ಲೇ ಸುಮಾರು ೨೬೬ಕ್ಕೂ ಹೆಚ್ಚು ನೆಲೆಗಳಿರುವುದು ಅಧ್ಯಯನದಿಂದ ಕಂಡುಬಂದಿದೆ. ಪ್ರಸ್ತುತ ಕ್ಷೇತ್ರಕಾರ್ಯ ಕೈಗೊಂಡಾಗ ಪಾವಗಡ, ಮಧುಗಿರಿ, ಶಿರಾ, ಮಡಕಸಿರಾ (ಆಂಧ್ರಪ್ರದೇಶ) ತಾಲ್ಲೂಕುಗಳಲ್ಲಿ ಸುಮಾರು ೪೬ ಹೊಸದಾದ ಪ್ರಾಗೈತಿಹಾಸಿಕ ನೆಲೆಗಳು ಪತ್ತೆಯಾಗಿವೆ. ಅಲ್ಲದೆ ಜಿಲ್ಲೆಯ ಪ್ರತಿಯೊಂದು ಭಾಗವನ್ನು ಸಂಕೀರ್ಣ ಸರ್ವೇಕ್ಷಣೆಗೊಳಪಡಿಸಿದರೆ ಇನ್ನೂ ಹೆಚ್ಚಿನ ನೆಲೆಗಳು ದೊರೆಯುವುದರ ಜೊತೆಗೆ ಪ್ರಾಗಿತಿಹಾಸ ಮಾನವನ ಜೀವನ ಕ್ರಮದ ಬಗೆಗೆ ಮತ್ತಷ್ಟು ಮಹತ್ವದ ಸಂಗತಿಗಳು ದೊರೆಯುವುದರಲ್ಲಿ ಸಂಶಯವಿಲ್ಲ.



ಮೃತ್‌ಪಾತ್ರೆಗಳು

೧. **ಸೂಕ್ಷ್ಮಶಿಲಾಯುಗ ಸಂಸ್ಕೃತಿ:** ಈ ಹಂತದಲ್ಲಿ ಮಾನವ ಅಲೆಮಾರಿ ಜೀವನದಿಂದ ಒಂದೆಡೆ ನೆಲೆನಿಂತು ಬೇಟೆ, ಮೀನುಗಾರಿಕೆ, ಆಹಾರ ಸಂಗ್ರಹಣೆ ಹಾಗೂ ಆಹಾರ ಉತ್ಪಾದನೆ ಆರಂಭಿಸಿದ್ದರಿಂದ ಈ ಕಾಲಮಾನವು ಸ್ಥಿತ್ಯಂತರದ ಹಂತವಾಗಿದೆ.[೫] ಅಲ್ಲದೆ ಅವರಿಗೆ ದೊಡ್ಡ ಸಂಖ್ಯೆಯ ಸಮುದಾಯಗಳನ್ನು ಪೋಷಿಸಬಲ್ಲ ಸಾಮರ್ಥ್ಯ ಹೆಚ್ಚು ಕುಶಲ ಹಗುರ ಉಪಕರಣಗಳಿಂದಲೇ ಸಾಧ್ಯವಾಗಿರುವುದು. ಹಾಗಾಗಿಯೇ ಇವು ಪ್ರಾಣಿಗಳನ್ನು ಬೇಟೆಯಾಡುವಲ್ಲಿ ಬಹಳ ನೆರವಾದವು.[೬] ಪ್ರಸ್ತುತ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸೂಕ್ಷ್ಮಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಚಕಮಕಿಕಲ್ಲು, ಕ್ವಾಟ್ಜ್, ಜಾಸ್ಪರ್, ಅಗೆಟ್ ಮೊದಲಾದ ಶಿಲೆಗಳಿಂದ ತಯಾರಿಸಿದ ಹೆರೆಚೆಕ್ಕೆ, ಮೊನೆ, ಅರ್ಧಚಂದ್ರಾಕೃತಿ, ನೀಳಚಕ್ಕೆ

* S/O ನಾರಾಯಣಪ್ಪ, ಗುಂಡಾರ್ಲಹಳ್ಳಿ, ಬ್ಯಾಡನೂರು ಪೋಸ್ಟ್, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ-೫೭೧೨೦೨

ಸಮಾಧಿ ಮತ್ತು ಕೋರ್‌ಗಳು ಮಧುಗಿರಿ ತಾಲೂಕಿನ ಚಂದ್ರಗಿರಿ ಗ್ರಾಮದ ಪಶ್ಚಿಮಕ್ಕೆ ಛಲವಾದಿ ಆಂಜನೇಯ ದೇವಾಲಯದ ಬಳಿ, ಪಾವಗಡ ತಾಲೂಕಿನ ತಿಪ್ಪಯ್ಯನದುರ್ಗ, ಇಂದ್ರಬೆಟ್ಟ, ದೇವರಬೆಟ್ಟಗಳಲ್ಲಿ ದೊರೆತಿವೆ. ಅವುಗಳ ಕಾಲಮಾನವನ್ನು ಈಗಾಗಲೇ ತುಮಕೂರು ಜಿಲ್ಲೆಯಲ್ಲಿ ದೊರೆತಿರುವ ಈ ನೆಲೆಗಳ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಮೂರು ಹಂತಗಳನ್ನಾಗಿ ಸುಮಾರು ಕ್ರಿಪೂ. ೬೦೦೦–೫೦೦೦ದಿಂದ ಕ್ರಿ.ಪೂ. ೨೦೦೦–೧೫೦೦ರ ಕಾಲಮಾನದಲ್ಲಿ ಇದ್ದಿರಬೇಕೆಂದು ಗುರುತಿಸಲಾಗಿದೆ.[೭]

೨. **ನವಶಿಲಾಯುಗ ಸಂಸ್ಕೃತಿ** : ಈ ಹಂತವು ಮಾನವನ ಪೂರ್ಣ ವಿಕಾಸಕ್ಕೆ ಮತ್ತು ಅವನ ವಿಹಾರಗಳ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಟ್ಟಿದೆ. ಜೊತೆಗೆ ವ್ಯವಸಾಯ, ಪಶುಪಾಲನೆ, ಮನೆಗಳ ನಿರ್ಮಾಣ, ನುಣುಪುಗೊಳಿಸಿದ ಆಯುಧೋಪಕರಣ, ಮಡಿಕೆಗಳ ತಯಾರಿಕೆ, ಬೃಹತ್, ಶಿಲಾಕಟ್ಟಡಗಳಂತಹ ಹೊಸ ಆವಿಷ್ಕಾರಗಳಿಗೆ ನಾಂದಿಹಾಡಿತು. ಈ ಯುಗದ ಮಾನವ ಗುಹೆಗಳಲ್ಲಿಯೂ ಕೆಲವೊಮ್ಮೆ ಗುಡ್ಡಗಾಡು ಪ್ರದೇಶಗಳಲ್ಲಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಾ ಗುಹೆ ಹೆಬ್ಬಂಡೆಗಳ ಕೆಳಗೆ ಚಿತ್ರಕಲೆಯನ್ನು ಬಿಡಿಸಿರುವುದು ಕಂಡುಬರುತ್ತದೆ.[೮] ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬಸಾಲ್ಟ್, ಡೈಕ್, ಗ್ರಾನೈಟ್ ಶಿಲೆಯ ಉಕರಣಗಳಾದ ಕೊಡಲಿ, ಕೊಡಲಿ–ಸುತ್ತಿಗೆ, ಉಳಿ, ಅರೆಯುವ ಕಲ್ಲು, ಕವಣೆಕಲ್ಲು, ಉಂಗುರ ಕಲ್ಲುಗಳು, ಪೂರ್ಣ ಕಂದು, ಬೂದುಬಣ್ಣದ ಮಡಿಕೆಗಳು ಪಾವಗಡ ತಾಲೂಕಿನ ೩೧, ಮಧುಗಿರಿ ತಾಲೂಕಿನ ೧೨, ಕೊರಟಗೆರೆ, ಸಿರಾ ತಾಲೂಕಿನ ಮತ್ತು ಆಂಧ್ರಪ್ರದೇಶದ ಮಡಕಸಿರಾ ಮಂಡಲದ ಒಂದೊಂದು ಗ್ರಾಮದಲ್ಲಿ ಪತ್ತೆಯಾಗಿವೆ. (ಹೊಸದಾಗಿ ಪತ್ತೆಯಾದ ಈ ನೆಲೆಗಳನ್ನು ಪಟ್ಟಿಯಲ್ಲಿ ತಿಳಿಸಲಾಗಿದೆ.) ಈ ನೆಲೆಗಳಲ್ಲಿ ದೊರೆತ ಅವಶೇಷಗಳ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲೆಯಲ್ಲಿ ದೊರೆತ ನವಶಿಲಾಯುಗದ ನೆಲೆಗಳ ಆಧಾರದ ಮೇಲೆ ಮೂರು ಹಂತಗಳಾಗಿ ವಿಂಗಡಿಸಲಾಗಿದ್ದು, ಮೊದಲನೆಯ ಹಂತ ಕ್ರಿ.ಪೂ. ೨೦೦೦–೧೮೦೦, ಎರಡನೆಯ ಹಂತ ಕ್ರಿ.ಪೂ. ೧೮೦೦–೧೪೦೦ ಮೂರನೆಯ ಹಂತ ೧೪೦೦–೧೦೦೦ಗಳಲ್ಲಿ ಇದ್ದಿರಬಹುದೆಂದು ಗುರುತಿಸಲಾಗಿದೆ.[೯]

೩. **ಬೃಹತ್ ಶಿಲಾಯುಗ** : ಸುಮಾರು ೩೦೦೦ ವರ್ಷಗಳ ಹಿಂದೆಯೇ ನೂತನ ಶಿಲಾಯುಗದ ಜನರಿದ್ದಾಗಲೇ ಮತ್ತೊಂದು ಜನಾಂಗದವರು ನಮ್ಮ ಕರ್ನಾಟಕದಲ್ಲಿ ಕಾಣಿಸಿಕೊಂಡರು. ಇವರು ಎಲ್ಲಿಂದ ಹೇಗೆ ಬಂದರೆಂಬುದು ಇನ್ನೂ ಬಿಡಿಸಲಾರದ ಕಗ್ಗಂಟಾಗಿಯೇ ಉಳಿದುಕೊಂಡಿದೆ.[೧೦] ಈ ಹಂತದಲ್ಲಿ ಕಬ್ಬಿಣ ಮಹತ್ವದ ಸ್ಥಾನವನ್ನು ಪಡೆದುಕೊಂಡಿತ್ತು. ಅವರ ನೆಲೆಗಳನ್ನು ವಸತಿ ಮತ್ತು ಸಮಾಧಿ ನೆಲೆಗಳೆಂದು ವಿಂಗಡಿಸಲಾಗಿದೆ. ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಪಾವಗಡ ತಾಲೂಕಿನ ತಿಪ್ಪಯ್ಯನದುರ್ಗ, ದೇವರಬೆಟ್ಟ, ಸಾರವಾಟಪುರ, ದವಡಬೆಟ್ಟ, ಮಧುಗಿರಿ ತಾಲೂಕಿನ ಬೂದೇನಹಳ್ಳಿ ಬೇಡತ್ತೂರು, ಚಂದ್ರಗಿರಿ, ವೀರಣ್ಣೇಶ್ವರಬೆಟ್ಟ, ಕೊಡ್ಲಾಪುರ, ಆಂಧ್ರದ ಮಡಕಸಿರಾ ಮಂಡಲದ ಪತ್ತಿಕುಂಟಾ ಗ್ರಾಮಗಳಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ವಸತಿ ನೆಲೆಗಳಲ್ಲಿ ಹೊಳಪುಳ್ಳ ಕಪ್ಪು, ಹೊಳಪುಳ್ಳ ಕಪ್ಪು ಮತ್ತು ಕೆಂಪು ಮೃತ್ ಪಾತ್ರೆಗಳು ಪತ್ತೆಯಾಗಿವೆ. ಕೊರಟಗೆರೆಯ ನೇಗಿಲಾಲ ಗ್ರಾಮದ ಪಶ್ಚಿಮಕ್ಕೆ ಪಾಂಡವರ ಗುಟ್ಟಿಯಲ್ಲಿ ೪.೯೦ ಮಿ. x ೪.೯೦ ಮೀ. ವ್ಯಾಸವಿರುವ ಮೂರು ವೃತ್ತಾಕಾರದ ಕಲ್ಲು ಚಪ್ಪಟೆಯಾಕಾರದ ಗೋರಿ, ಬೇಡತ್ತೂರಿನ ೪ ಮಿ. x ೪ ಮೀ. ವ್ಯಾಸದ ಎರಡು ವೃತ್ತಾಕಾರದ ಕಲ್ಲುಚಪ್ಪಟೆಯಾಕಾರದ ಗೋರಿಗಳು ಪತ್ತೆಯಾಗಿವೆ. ಈ ಸಂಸ್ಕೃತಿ ಕ್ರಿಪೂ. ೧೨೦೦ ರಿಂದ ಕ್ರಿ.ಶ. ೨೫೦ರವರೆಗೆ ಪ್ರವರ್ಧಮಾನದಲ್ಲಿತ್ತೆಂದು ಅಲ್ಲಿ ದೊರೆಯುವ ಅವಶೇಷಗಳ ಆಧಾರದ ಮೇಲೆ ಗುರುತಿಸಲಾಗಿದೆ.

೪. **ಇತಿಹಾಸ ಆರಂಭ ಕಾಲ:** ಇತಿಹಾಸ ಪೂರ್ವ ಕಾಲದ ಅನಂತರ, ಆದರೆ ಇತಿಹಾಸಕ್ಕೆ ಖಚಿತವಾಗಿ ಸೇರಬಹುದಾದ ಕಾಲಕ್ಕೆ ಮುಂಚಿನ ಈ ಸಂಸ್ಕೃತಿಯೇ ಇತಿಹಾಸ ಆರಂಭಕಾಲದ ಸಂಸ್ಕೃತಿಯಾಗಿದೆ. ಸುಟ್ಟ ಕೆಂಪು ಅಥವಾ ಕಂದು ಬಣ್ಣದ ಮಡಿಕೆಯ ಮೇಲೆ ಬಿಳಿಯ ಬಣ್ಣದ ಗೆರೆಗಳುಳ್ಳ ಅಲಂಕಾರವೇ ಇದರಲ್ಲಿ ಅತಿ ಮುಖ್ಯವಾದದ್ದು.[೧೧] ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಕೆಂಪು ಹೊಳಪುಳ್ಳ ಮೃತ್‌ಪಾತ್ರೆಗಳು ಪಾವಗಡ ತಾಲೂಕಿನ ಕಾಮನದುರ್ಗ, ತಿಪ್ಪಯ್ಯನದುರ್ಗ, ಕೆ.ರಾಂಪುರ, ಇಂದ್ರಬೆಟ್ಟ, ಹೊಸಹಳ್ಳಿ ತಾಂಡ, ಸೂಲನಾಯಕನ ಹಳ್ಳಿ, ದೇವರಬೆಟ್ಟ, ಬಂಗಾರ ನಾಯಕನಬೆಟ್ಟ ಸಾರವಾಟಪುರ, ದವಡಬೆಟ್ಟ ರಾಜನಬಂಡೆ, ಮಧುಗಿರಿ ತಾಲೂಕಿನ ಬೂದೇನಹಳ್ಳಿ, ಬೇಡತ್ತೂರು, ಚಂದ್ರಗಿರಿ, ವೀರಣ್ಣೇಶ್ವರಬೆಟ್ಟ, ಅಪ್ಪೇನಹಳ್ಳಿ ಕೊಡ್ಲಾಪುರ, ನೇಗಿಲಾಲ, ಆಂಧ್ರದ ಪತ್ತಿಕುಂಟಾ ಗ್ರಾಮಗಳಲ್ಲಿ ಪತ್ತೆಯಾಗಿವೆ.

೫. **ವರ್ಣಚಿತ್ರಗಳು:** ಪ್ರಾಗೈತಿಹಾಸದ ಮಾನವ ತನ್ನ ಭಾವನೆಯನ್ನು ಅಭಿವ್ಯಕ್ತಗೊಳಿಸಿದ ಮಾಧ್ಯಮಗಳಲ್ಲಿ ಒಂದಾದ ವರ್ಣಚಿತ್ರಗಳು ಶಿಲಾಯುಗದ ಸಂಸ್ಕೃತಿಯನ್ನು ಕಟ್ಟಿಕೊಡಲು ಮಹತ್ವದ ಆಕಾರಗಳಿವೆಯೆಂದರೂ ಅತಿಶಯೋಕ್ತಿಯಾಗಲಾರದು. ಅಧ್ಯಯನದ ಸಂದರ್ಭದಲ್ಲಿ ನವಶಿಲಾಯುಗ, ಬೃಹತ್ ಶಿಲಾಯುಗ, ಆರಂಭ ಇತಿಹಾಸ ಕಾಲಕ್ಕೆ ಸೇರಿದ ಬಿಳಿ ಮತ್ತು ಕೆಂಪು ಬಣ್ಣದ ವರ್ಣಚಿತ್ರಗಳು ಪತ್ತೆಯಾಗಿವೆ.

೧. **ಕಾಮನದುರ್ಗ:** ಈ ಬೆಟ್ಟದ ಮಧ್ಯಭಾಗದಲ್ಲಿ ಬಾಲಂತಗುಂಡು ಎಂಬ ಕಲ್ಲಾಸರೆಯಲ್ಲಿ ಬಿಳಿ ಬಣ್ಣದ ವ್ಯಕ್ತಿಯ ಚಿತ್ರಗಳಿವೆ.

೨. **ಇಂದ್ರಬೆಟ್ಟ;** ಬೆಟ್ಟದ ತುದಿಯ ಪಶ್ಚಿಮ ದಿಕ್ಕಿನ ಕಲ್ಲಾಸರೆಯಲ್ಲಿ ಬಿಳಿಬಣ್ಣದ ಮನುಷ್ಯನ ಚಿತ್ರವಿದೆ.

೩. **ತಿಪ್ಪಯ್ಯನದುರ್ಗ** : ಬೆಟ್ಟದ ತುದಿಯ ಪೂರ್ವ ದಿಕ್ಕಿನ ಕಲ್ಲಾಸರೆಯಲ್ಲಿ ಬಿಳಿ ಬಣ್ಣದಲ್ಲಿ ಒಬ್ಬನಿಗೆ ತಲೆಯಲ್ಲಿ ಎರಡು ಕೋಡು; ಮತ್ತೊಬ್ಬನಿಗೆ ಒಂದು ಕೋಡು; ಕೋಡಿಲ್ಲದ ಮತ್ತೊಬ್ಬನಿಗೆ ಶಿಶ್ನವನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಹಾಗೆಯೇ ಬಲಗೈ ಮೇಲಕ್ಕೆತ್ತಿ ಎಡಗೈ ನೇರವಾಗಿ ಚಾಚಿರುವ ವ್ಯಕ್ತಿ, ಕೋಲು ಹಿಡಿದಿರುವ ವ್ಯಕ್ತಿ ಪಶುಗಳನ್ನು ಹೊಡೆಯುತ್ತಿರುವುದು, ಇಬ್ಬರು ವ್ಯಕ್ತಿಗಳ ಬಳಿ ಗೂಳಿ ಇರುವಂತಹದು, ಗೂಳಿ ಮತ್ತು ಅದರ ಕೆಳಗೆ ಸೂರ್ಯನ ಚಿತ್ರಗಳನ್ನು ಚಿತ್ರಿಸಲಾಗಿದೆ.

೪. **ಕೊಲಿಮೆಗೆರೆ ರಾಂಪುರ** : ಅಕ್ಕಮ್ಮಗಾರು ಬೆಟ್ಟದ ಬುಡದಲ್ಲಿರುವ ಕಲ್ಲಾಸರೆಯಲ್ಲಿ ವ್ಯಕ್ತಿಯೊಬ್ಬ ತನ್ನ ಎರಡು ಅಂಗೈಗಳಲ್ಲಿ ಏನನ್ನೋ ಕೇಳುವಂತಹ ಮತ್ತು ಆತನ ಕೆಳಗೆ ಮಂಡಲವಿರುವ, ವ್ಯಕ್ತಿಯೊಬ್ಬ ಕೋಲು ಹಿಡಿದಿರುವುದು, ಒಂದು ಅಂಗೈ ಮೇಲಕ್ಕೆ ಒಂದು ಅಂಗೈ ಕೆಳಕ್ಕೆ ಹಿಡಿದಿರುವ ವ್ಯಕ್ತಿ, ವೃತ್ತಾಕಾರದ ಮಂಡಲ, ವ್ಯಕ್ತಿಯ ತಲೆಯಲ್ಲಿ ಒಂದು ಕೋಡು ಮತ್ತು ಶಿಶ್ನವನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ನವಿಲಿನ ತಲೆಯಿರುವ ನಾಟ್ಯ ಭಂಗಿಯಲ್ಲಿ ತ್ರಿಶೂಲವನ್ನು ಯಾರಿಗೋ ಚುಚ್ಚಲು ಹಿಡಿದಂತಹ ವ್ಯಕ್ತಿ, ಗೂಳಿ, ಇಬ್ಬರು ವ್ಯಕ್ತಿಗಳ ಮಧ್ಯೆ ಗೂಳಿಗಳ ಚಿತ್ರಗಳು ಬಿಳಿಬಣ್ಣದಲ್ಲಿವೆ. ಮತ್ತಿಬ್ಬರು ವ್ಯಕ್ತಿಗಳ ಚಿತ್ರಗಳು ಮಾತ್ರ ಕೆಂಪು ಬಣ್ಣದಲ್ಲಿವೆ.

೫. **ನೇಗಿಲಾಲ:** ಗ್ರಾಮದ ಪಶ್ಚಿಮಕ್ಕೆ ಪಾಂಡವರ ಗುಟ್ಟೆಯಲ್ಲಿ ವೃತ್ತಾಕಾರದ ಕಲ್ಲು ಚಪ್ಪಟೆಯಾಕಾರದ ಸಮಾಧಿಯ ಕೆಳಗೆ ಬಿಳಿ ಬಣ್ಣದ ವ್ಯಕ್ತಿಯ ಚಿತ್ರವಿದೆ.

೬. **ಹೊಸಹಳ್ಳಿ:** ಗುರುದೇವಪ್ಪನ ಬೆಟ್ಟದ ತಪ್ಪಲಿನ ಒಂದನೆಯ ಕರಿಕಲ್ಲು ಗುಡ್ಡದಲ್ಲಿ ಹುಲಿ, ಗೂಳಿ, ಕೋಲು ಹಿಡಿದಿರುವ ವ್ಯಕ್ತಿ, ಇಬ್ಬರು ವ್ಯಕ್ತಿಗಳು ಬೇಟೆಯಾಡಿದ ಪ್ರಾಣಿಯನ್ನು ಒಂದು ಕಟ್ಟಿಗೆಯ ಮಧ್ಯಭಾಗ ಕಟ್ಟಿ ಹೆಗಲ ಮೇಲೆ ಹೊತ್ತೊಯ್ಯುತ್ತಿರುವ ಗೀರುಚಿತ್ರಗಳಿವೆ. ಎರಡನೆಯ ಕರಿಕಲ್ಲು ಗುಡ್ಡದಲ್ಲಿ ಗೂಳಿ, ವ್ಯಕ್ತಿಯ ಚಿತ್ರಗಳನ್ನು ಎರಡೆರಡು ಪಟ್ಟಿಕೆಗಳಿಂದ ಚಿತ್ರಿಸಿರುವ ಗೀರುಚಿತ್ರಗಳಿವೆ.

೭. **ಬುಡಸನಹಳ್ಳಿ:** ಗ್ರಾಮದ ಉತ್ತರಕ್ಕಿರುವ ಬೆಟ್ಟದ ತಪ್ಪಲಿನ ೧.೭೦ ಮೀ. ಅಗಲ, ೨.೮೦ ಮೀ. ಉದ್ದದ ಒಂದನೆಯ ಕಲ್ಲಾಸರೆಯಲ್ಲಿ (ಕಂಬಾಲಪ್ಪ ದೇವಾಲಯದ ಬಳಿ) ಬಿಳಿ ಮತ್ತು ಕೆಂಪು ಬಣ್ಣದ ಗೂಳಿ, ವ್ಯಕ್ತಿಯ ಚಿತ್ರಗಳಿವೆ. ಎರಡನೆಯ ಕಲ್ಲಾಸರೆಯಲ್ಲಿ ಗೂಳಿಯ ಬಿಳಿ ಬಣ್ಣದ ವರ್ಣಚಿತ್ರವಿದೆ. ಪಕ್ಕದ ೯.೮೦ ಉದ್ದ ೧೦.೭೦ ಮೀ. ಅಗಲದ ಮೂರನೆಯ ಕಲ್ಲಾಸರೆಯಲ್ಲಿ ಕುಟ್ಟಿ ಅದಕ್ಕೆ ಸುಣ್ಣ ಲೇಪಿಸಿರುವ ಗೂಳಿ, ಮತ್ತು ಮೂರು ವ್ಯಕ್ತಿಗಳ ಚಿತ್ರಗಳಿವೆ.

೮. **ಪತ್ತಿಕುಂಟ:** ಗ್ರಾಮದ ಉತ್ತರಕ್ಕಿರುವ ಅಕ್ಕಮ್ಮಗಾರು ಗುಟ್ಟೆಯಲ್ಲಿರುವ ೩.೪೦ ಮೀ. ಅಗಲ ೬ ಮೀ. ಉದ್ದವಿರುವ ಕಲ್ಲಾಸರೆಯಲ್ಲಿ ಬಿಳಿ ಬಣ್ಣದ ಲೇಪನವಿರುವ ಗೂಳಿಯ ಪಕ್ಕ ಮೂರು ವ್ಯಕ್ತಿಗಳು ನಿಂತಿರುವುದು. ಕೋಲು ಹಿಡಿದಿರುವ ಇಬ್ಬರು ವ್ಯಕ್ತಿಗಳು, ಎರಡು ತಲೆಗಳಿರುವ ವ್ಯಕ್ತಿಯ ಪಾದಗಳು ನೆಲದ ಮೇಲೆ ಸ್ಪಷ್ಟವಾಗಿ ಊರಿರುವಂತಹದ್ದು, ಆಮೆ, ತ್ರಿಶೂಲ, ಒಬ್ಬ ವ್ಯಕ್ತಿ ತನ್ನ ಎರಡೂ ಕೈಗಳನ್ನು ಮುಂದಕ್ಕೆ ಚಾಚಿರುವ ಮತ್ತೊಬ್ಬ ಕೆಳಕ್ಕೆ ತನ್ನ ಕೈಯನ್ನು ಬಾಗಿಸಿರುವ ಹಾಗೂ ಕಾಲ್ಪನಿಕ ಪ್ರಾಣಿಯೊಂದನ್ನು ಚಿತ್ರಿಸಲಾಗಿದೆ.

೯. **ಆಚರಣೆಗಳು:** ಪುರಾತತ್ವಶಾಸ್ತ್ರಜ್ಞ ಅಥವಾ ಸಂಶೋಧಕರು ಕೇವಲ ಅನ್ವೇಷಣೆ ಅಥವಾ ಉತ್ಖನನ ಮಾಡಿದ ಉಪಕರಣ ಅಥವಾ ಅವಶೇಷಗಳನ್ನಷ್ಟೇ ಅಧ್ಯಯನ ಮಾಡಿ ಆ ಕಾಲದ ಮನುಷ್ಯ ಹೇಗೆ ಬದುಕಿದ್ದ ಎನ್ನುವುದನ್ನು ಹೇಳುವುದಕ್ಕೆ ಆಗುವುದಿಲ್ಲ. ಅವರ ಇಡೀ ಬದುಕಿನ ಕ್ರಮವನ್ನು ಪುನರ್ ರಚಿಸಬೇಕಾದರೆ ಊರಾಚೆಗೆ ದೂರದ ಯಾವುದೋ ದುರ್ಗಮ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಹಲವಾರು ವಿಭಿನ್ನ ಬುಡಕಟ್ಟುಗಳ ತೌಲನಿಕ ಅಧ್ಯಯನವನ್ನು ಮಾಡಬೇಕಾಗುತ್ತದೆ.[೧೨] ಅಂದರೆ ಮಾನವ ಅಸ್ತಮಿಸಿದರೂ ಆತ ಬಿಟ್ಟು ಹೋದ ಆಚರಣೆ, ನಂಬಿಕೆಗಳು ಜೀವಂತವಾಗಿರುತ್ತವೆ ಎಂಬುದಕ್ಕೆ ಹಲವಾರು ನಿದರ್ಶನಗಳನ್ನು ಇಂದಿಗೂ ಕಾಣಬಹುದಾಗಿದೆ. ಉದಾ: ಶಿಲಾಯುಗ ಸಂಸ್ಕೃತಿಯ ಬೀಸುವ ಕಲ್ಲು ಹಾಗೂ ರುಬ್ಬುವ ಕಲ್ಲುಗಳ ಬಳಕೆ ಇಂದು ಆಕಾರದಲ್ಲಿ ಬದಲಾಗಿರಬಹುದು. ಆದರೆ ಅದೇ ಪದ್ಧತಿ ಮತ್ತು ಮಾಧ್ಯಮವನ್ನು ಇಂದಿಗೂ ಕಾಣಬಹುದು. ನವಶಿಲಾಯುಗದ ಆಯುಧಗಳನ್ನು ಇಂದಿಗೂ ಪೋಲೇರಮ್ಮ, ಮಾರಮ್ಮ, ದುರ್ಗಮ್ಮ, ಸಪ್ಲಮ್ಮ ಮೊದಲಾದ ಗ್ರಾಮದೇವತೆಗಳಾಗಿ ಇಂದಿಗೂ ಆರಾಧಿಸುತ್ತಿದ್ದಾರೆ. ಅಲ್ಲದೆ ಬೃಹತ್ ಶಿಲಾಯುಗದ ಶವಸಂಸ್ಕಾರ ಪದ್ಧತಿ ಇಂದಿಗೂ ಕೆಲವೊಂದು ಬದಲಾವಣೆಗಳೊಂದಿಗೆ ಆಚರಣೆಯಲ್ಲಿರುವುದನ್ನು ಕಾಣಬಹುದಾಗಿದೆ. ಹೀಗೆ ಒಂದು ಸಂಸ್ಕೃತಿಯ ಅವಶೇಷಗಳನ್ನು ವಿಭಿನ್ನ ದೃಷ್ಟಿಕೋನಗಳಿಂದ ನೋಡಿದಾಗ ಮಾತ್ರ ನೈಜ ಚಿತ್ರಣವನ್ನು ಕಟ್ಟಿ ಕೊಡಲು ಸಾಧ್ಯ.

[ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೆರವು ನೀಡಿದ ನನ್ನ ಪಿಎಚ್.ಡಿ. ಸಹಪಾಠಿಗಳಾದ ಮಂಜುನಾಥ ಪಾಟೀಲ, ಸಣ್ಣಪಾಲಯ್ಯ ಬಿ.ಪಿ., ಮಂಜಣ್ಣ ಪಿ.ಬಿ., ಮಂಜಪ್ಪ ಎಚ್.ಬಿ., ಧನುಂಜಯ ಸಿ. ಹಾಗೂ ಸ್ನೇಹಿತ ಶಿವಣ್ಣ, ಸಿದ್ದಯ್ಯ, ಅಭಿಜಿತ್, ಮಾವನವರಾದ ಮಂಜುನಾಥ ಹಾಗೂ ವಿಶೇಷವಾಗಿ ನನ್ನ ಕ್ಷೇತ್ರಕಾರ್ಯಕ್ಕೆ ಸಹಕಾರ ನೀಡಿದ ಈ ಎಲ್ಲಾ ಗ್ರಾಮಗಳ ಜನರಿಗೂ ವಂದನೆಗಳು]

ಪಾವಗಡ ತಾಲೂಕು

ಕ್ರ. ಸಂ. ಗ್ರಾಮ	ಸೂಕ್ಷ್ಮ ಶಿಲಾಯುಗ	ನವಶಿಲಾಯುಗ ವಸತಿ ನೆಲೆ	ನವಶಿಲಾಯುಗ ವರ್ಣಚಿತ್ರ/ ಗೀರುಚಿತ್ರ	ಬೃಹತ್ ಶಿಲಾಯುಗ ವಸತಿ ನೆಲೆ	ಬೃಹತ್ ಶಿಲಾಯುಗ ಗೋರಿ	ಆರಂಭ ಇತಿಹಾಸ ಕಾಲ	ನಿವೇಶನದ ಸ್ಥಳ
೧. ಹೊಸದುರ್ಗ		✓					ಬೆಟ್ಟದ ತಪ್ಪಲು
೨. ಕಾಮನದುರ್ಗ		✓				✓	ಬೆಟ್ಟದ ತುದಿ
೩. ಬ್ಯಾಡನೂರು		✓					ಬೆಟ್ಟದಲ್ಲಿ
೪. ತಿಪ್ಪಯ್ಯನದುರ್ಗ	✓	✓	✓			✓	ಬೆಟ್ಟದ ತುದಿ
೫. ಕೆ. ರಾಂಪುರ		✓	✓				ಅಕ್ಕಮ್ಮಗಾರು ಬೆಟ್ಟದ ತಪ್ಪಲು
೬. ಇಂದ್ರಬೆಟ್ಟ	✓	✓	✓			✓	ಬೆಟ್ಟದ ತುದಿ ಮತ್ತು ತಪ್ಪಲು
೭. ಓಬೇನಹಳ್ಳಿ		✓					ಗ್ರಾಮದ ಪಶ್ಚಿಮ ದಿಕ್ಕಿನ ಬಯಲು
೮. ಹೊಸಹಳ್ಳಿತಾಂಡ		✓					ಬೆಟ್ಟದ ತುದಿ
೯. ಸೂಲನಾಯಕನಹಳ್ಳಿ		✓				✓	ಶಿವಾಲಯದ ಬಳಿಯ ಬಯಲು ಪ್ರದೇಶ
೧೦. ಸಿಂಗರೆಡ್ಡಿಹಳ್ಳಿ		✓					ಬೆಟ್ಟದ ತಪ್ಪಲು
೧೧. ಮಾರಮ್ಮನಹಳ್ಳಿ		✓					ಮಾರಮ್ಮ ದೇವಾಲಯದ ಬಳಿ
೧೨. ಯರ್ರಮ್ಮನಹಳ್ಳಿ		✓					ಬೆಟ್ಟದ ತುದಿ
೧೩. ಹೊಸಹಳ್ಳಿ (ಅರಸಿಕೆರೆ ಹತ್ತಿರ)		✓	✓	✓			ಬೆಟ್ಟದ ತಪ್ಪಲಿನ ಮಜ್ಜಿಗೆಬಂಡೆ ಬಳಿ
೧೪. ದೇವರಬೆಟ್ಟ	✓	✓		✓	✓		ಬೆಟ್ಟದಲ್ಲಿ
೧೫. ಬಂಗಾರ ನಾಯಕನ ಬೆಟ್ಟ		✓	✓			✓	ಬೆಟ್ಟದ ಮಧ್ಯ ಭಾಗ
೧೬. ಸಾರವಾಟಪುರ		✓		✓		✓	ಗ್ರಾಮದ ಈಶಾನ್ಯ ದಿಕ್ಕಿನ ಬಯಲು ಪ್ರದೇಶ
೧೭. ಮಧುರಾಯನಪಾಳ್ಯ		✓					ಅಕ್ಕಮ್ಮಗಾರು ದೇವಾಲಯದ ಬಳಿ
೧೮. ಹೊಸಹಟ್ಟಿ		✓					ಗ್ರಾಮದ ಉತ್ತರ ದಿಕ್ಕು
೧೯. ಗಂಗಾಧರೇಶ್ವರ		✓					ದುರ್ಗಮ್ಮ ದೇವಾಲಯದ ಬಳಿ ಗುಡ್ಡದ ಗೇಟ್
೨೦. ವೀರನಾಗನಹಳ್ಳಿ		✓					ಮಾರಮ್ಮ ದೇವಾಲಯದ ಬಳಿ ಮತ್ತು ಬೆಟ್ಟದ ತಪ್ಪಲು
೨೧. ಕಡಪಲಕೆರೆ		✓					ದುರ್ಗಮ್ಮ ದೇವಾಲಯದ ಬಳಿ ಮತ್ತು ಬೆಟ್ಟದ ತಪ್ಪಲು
೨೨. ಗೊರಸಮಾವು		✓					ಮಾರಮ್ಮ ದೇವಾಲಯ ಮತ್ತು ಬಯಲು ಪ್ರದೇಶ
೨೩. ರಾಂಪೇಟ ಗೇಟ್		✓					ಮಾರಮ್ಮ ದೇವಾಲಯ ಮತ್ತು ಬಯಲು ಪ್ರದೇಶ
೨೪. ಪಳವಳ್ಳಿ ಗೇಟ್ (ವೈ.ಎನ್. ಹೊಸಕೋಟೆ ಹೆದ್ದಾರಿ)		✓					ದುರ್ಗಮ್ಮ ದೇವಾಲಯ
೨೫. ದವಡಬೆಟ್ಟ		✓		✓		✓	ಬೆಟ್ಟದ ತಪ್ಪಲು
೨೬. ಮುಗದಾಳಬೆಟ್ಟ		✓					ಬೆಟ್ಟದ ಮೇಲಾಗ
೨೭. ಗುಜ್ಜನಡು		✓					ಅಕ್ಕ್ಯಾತಮ್ಮ ದೇವಾಲಯ ಬೆಟ್ಟದ ತಪ್ಪಲು

೨೮. ಕನ್ನೆಲಬೆಟ್ಟ		✓					ಅಕ್ಕಮ್ಮ ದೇವಾಲಯ
೨೯. ಬುಡಸನಹಳ್ಳಿ		✓	✓	✓		✓	ಬೆಟ್ಟದ ತಪ್ಪಲು
೩೦. ರಾಜನಬಂಡೆ		✓		✓		✓	ಬೆಟ್ಟದ ಮೇಲ್ಭಾಗ
೩೧. ಕುರುಬರಹಳ್ಳಿ		✓					ಮಾರಮ್ಮ ದೇವಾಲಯದ ಬಳಿ
				ಮಧುಗಿರಿ ತಾಲೂಕು			
೩೨. ಬೂದೇನಹಳ್ಳಿ		✓		✓		✓	ಗ್ರಾಮದ ಪಶ್ಚಿಮಕ್ಕೆ ಜಯಮಂಗಲಿ ನದಿಯ ತೀರದಲ್ಲಿ
೩೩. ಬೇಡತ್ತೂರು		✓		✓	✓	✓	ಬೆಟ್ಟದ ತಪ್ಪಲು
೩೪. ಗುಟ್ಟೆ		✓					ಬೆಟ್ಟದ ತಪ್ಪಲು
೩೫. ಎಮ್ಮೆತಿಮ್ಮನಹಳ್ಳಿ		✓					ಚೌಡಮ್ಮ ದೇವಾಲಯದ ಬಯಲು
೩೬. ಚಂದ್ರಗಿರಿ	✓	✓		✓		✓	ಬೆಟ್ಟದ ತಪ್ಪಲು
೩೭. ವೀರಣ್ಣೇಶ್ವರಬೆಟ್ಟ		✓					ಬೆಟ್ಟದ ಮೇಲ್ಭಾಗ
೩೮. ಅಪ್ಪೇನಹಳ್ಳಿ		✓					ಭೂತರಾಯ ದೇವಾಲಯದ ಬಳಿ
೩೯. ರೆಡ್ಡಿಹಳ್ಳಿ		✓					ಮಾರಮ್ಮ ದೇವಾಲಯದ ಬಳಿ
೪೦. ಕಡಗತ್ತೂರು		✓					ಭೀಮಲಿಂಗೇಶ್ವರ ದೇವಾಲಯದ ಬಳಿ
೪೧. ಕೊಡ್ಲಾಪುರ		✓		✓		✓	ಗ್ರಾಮದ ಪಶ್ಚಿಮಕ್ಕೆ ಸೂರ್ಯನಾರಾಯಣ ದೇವಾಲಯದ ಬಯಲು
೪೨. ಗರಣಿ		✓					ಗ್ರಾಮದ ದಕ್ಷಿಣಕ್ಕೆ ಭೂತರಾಯನ ದೇವಾಲಯದ ಬಳಿ
೪೩. ತೊಟಮಡಗು		✓					ಬೆಟ್ಟದಲ್ಲಿ
				ಕೊರಟಗೆರೆ ತಾಲೂಕು			
೪೪. ಕಮ್ಮನಕೋಟೆ		✓					ದುರ್ಗಮ್ಮ ದೇವಾಲಯದ ಬಳಿ
೪೫. ನೇಗಿಲಾಲ				✓	✓	✓	ಗ್ರಾಮದ ಪಶ್ಚಿಮ ದಿಕ್ಕಿನ ಪಾಂಡವರ ಗುಟ್ಟೆಯಲ್ಲಿ
				ಸಿರಾ ತಾಲೂಕು			
೪೬. ಜೆಟ್ಟಿ ಅಗ್ರಹಾರ		✓					ಗ್ರಾಮದ ಪೂರ್ವಕ್ಕೆ
				ಮಡಕಸಿರಾ ಮಂಡಲ (ಆಂಧ್ರಪ್ರದೇಶ)			
೪೭. ಪತ್ತಿಕುಂಟ		✓		✓	✓	✓	ಗ್ರಾಮದ ಉತ್ತರ ದಿಕ್ಕಿನ ಮತ್ತು ಅಕ್ಕಮ್ಮಗಾರು ಗುಟ್ಟೆ



ನವಶಿಲಾಯುಗದ ಆಯುಧಗಳು

ಆಧಾರಸೂಚಿ

೧. ಶಿವಣ್ಣ ಡಿ.ಕೆ., ೧೯೮೮, ಮಾನವಶಾಸ್ತ್ರ, ಕಲಾಪ್ರಕಾಶನ, ಬೆಂಗಳೂರು, ಪುಟ ೧, ೨೦.
೨. ನಂಜುಂಡಸ್ವಾಮಿ (ಸಂ.), ೨೦೦೨, ಕಲ್ಲಸಿರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ ೩೭, ೩೮.
೩. ಪರಂಜ್ಯೋತಿ (ಲೇ.), ಭಾನುವಾರ, ೬.೦೩.೨೦೦೭, ಪ್ರಜಾವಾಣಿ ದಿನಪತ್ರಿಕೆ.
೪. ಗೋಪಾಲ್ ಬಾ.ರಾ., ೧೯೮೭, ಕರ್ನಾಟಕದಲ್ಲಿ ನವಶಿಲಾಯುಗ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ ೨೫.
೫. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೫.
೬. ಇರ್ಫಾನ್ ಹಬೀಬ್ (ಮೂ.), ಪ್ರದೀಪ್ ಬೆಳಗಲ್ (ಅನು.), ೨೦೦೮, ಪೂರ್ವೇತಿಹಾಸ, ಚಿಂತನಪುಸ್ತಕ, ಬೆಂಗಳೂರು, ಪುಟ ೬೪.
೭. ನಂಜುಂಡಸ್ವಾಮಿ (ಸಂ.), ಪೂರ್ವೋಕ್ತ, ಪುಟ ೫೧.
೮. ಶಿವಣ್ಣ ಡಿ.ಕೆ., ಪೂರ್ವೋಕ್ತ, ಪುಟ ೮೯, ೯೪.
೯. ನಂಜುಂಡಸ್ವಾಮಿ (ಸಂ.), ಪೂರ್ವೋಕ್ತ, ಪುಟ ೫೩.
೧೦. ಸುಂದರ ಅ., ಕರ್ನಾಟಕದ ಪ್ರಾಗೇತಿಹಾಸ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ಪುಟ ೭೩.
೧೧. ನರಸಿಂಹಮೂರ್ತಿ ಪಿ.ಎನ್., ೨೦೦೧, ಕರ್ನಾಟಕ ಪುರಾತತ್ವ ಕೆಲವು ಅಧ್ಯಯನಗಳು, ಪ್ರಸಾರಾಂಗ, ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಪುಟ ೧.
೧೨. ದಾಮೋದರ್ ಧರ್ಮಾನಂದ ಕೋಸಾಂಬಿ (ಮೂ.), ವೇಣುಗೋಪಾಲ್ ಟಿ.ಎಸ್. ಶೈಲಜಾ (ಅನು.), ೨೦೧೧, ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ ಚಾರಿತ್ರಿಕ ರೂಪುರೇಷೆ, ಚಿಂತನ ಪುಸ್ತಕ, ಬೆಂಗಳೂರು, ಪುಟ ೫೪.

ಜಗಳೂರು ತಾ. ಗುಹೇಶ್ವರ ಗುಡ್ಡದ ಬಳಿ ಕಬ್ಬಿಣಯುಗದ ಬೃಹತ್ ಶಿಲಾಗೋರಿ ನೆಲೆಯ ಹೊಸಶೋಧ

ಮಂಜಣ್ಣ ಪಿ.ಬಿ.*

ಜಗಳೂರು ತಾಲ್ಲೂಕಿನಿಂದ ದಕ್ಷಿಣಕ್ಕೆ ೧೦ ಕಿ.ಮಿ. ಅಂತರದಲ್ಲಿರುವ ಸಾಲನ್ನು ಸ್ಥಳೀಯವಾಗಿ ಗುಹೇಶ್ವರ ಗುಡ್ಡ ಎಂದು ಕರೆಯುತ್ತಾರೆ. ಎನ್.ಹೆಚ್. ೧೩ರಿಂದ ಉತ್ತರಕ್ಕೆ ತೋರಣಗಟ್ಟೆ ಮಾರ್ಗವಾಗಿ ಬಿದರಕೆರೆಗೆ ಹೋಗುವ ಮಾರ್ಗಮಧ್ಯದಲ್ಲಿ ಎಡಕ್ಕೆ ಇದೆ. ಈ ಗುಡ್ಡಸಾಲುಗಳ ಕೆಳಭಾಗದಲ್ಲಿ ಬೃಹತ್ ಶಿಲಾಗೋರಿಗಳ ಸಮಾಧಿ ನೆಲೆಯಿದೆ. ಈ ನೆಲೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಡಾ. ಎಸ್.ವೈ. ಸೋಮಶೇಖರ್ ಅವರು ಆಕನೂರು ಗ್ರಾಮದ ಬಳಿ ಆದಿ ಇತಿಹಾಸ ಕಾಲದ ಕುರುಹುಗಳು ಮತ್ತು ಚಿತ್ರದುರ್ಗ ತಾಲೂಕು ಚಿಪ್ಪಿನಕೆರೆಯಲ್ಲಿ ಕಂಡುಬಂದಿರುವ ಪ್ರಾಕ್ಚಾರಿತ್ರಿಕ ಕುರುಹುಗಳು ಎಂಬ ಲೇಖನಗಳಲ್ಲಿ ಈ ನೆಲೆಗಳಲ್ಲಿ ಕಂಡು ಬಂದಿರುವ ಅವಶೇಷಗಳನ್ನು ಶೋಧಿಸಿ ದಾಖಲಿಸಿದ್ದಾರೆ

ಗುಹೇಶ್ವರ ಗುಡ್ಡದ ಬಳಿ ೨೮ ಸಮಾಧಿಗಳಿವೆ. ಅವುಗಳಲ್ಲಿ ೮ ಸಮಾಧಿಗಳು ೫ x ೫ ಅಡಿ ವ್ಯಾಸದ್ದಾಗಿದ್ದರೆ. ಇನ್ನು ೨೦ ಸಮಾಧಿಗಳು ೨೦ x ೨೦ ಅಡಿ ವ್ಯಾಸದ್ದಾಗಿವೆ. ಇವುಗಳ ಬಳಿ ಕಪ್ಪು ಮತ್ತು ಕೆಂಪು ಬಣ್ಣದ ಮಡಿಕೆಗಳು, ಕಪ್ಪು ಮಡಿಕೆಗಳು, ಕೆಂಪು ಮಡಿಕೆಗಳು ಇತ್ಯಾದಿ ಅವಶೇಷಗಳು ದೊರೆತಿವೆ. ಗುಡ್ಡದ ಮೇಲೆ ಒಂದು ಲಿಂಗಕ್ಕೆ ಗುಡಿಯನ್ನು ಕಟ್ಟಲಾಗಿದೆ. ಅದರ ಹಿಂದಿನ ಬಂಡೆಯಲ್ಲಿ ಗೀರುಬಂಡೆಯ ಚಿತ್ರಗಳಿವೆ. ಅದರಲ್ಲಿ ಒಬ್ಬ ವ್ಯಕ್ತಿ ನೇಗಿಲನ್ನು ಹೊಡೆಯುತ್ತಿದ್ದರೆ, ಮತ್ತೊಂದು ಗೂಳಿಯ ಚಿತ್ರದ್ದಾಗಿದೆ. ಈ ಭಾಗದಲ್ಲಿ ಜಿನಗಿಹಳ್ಳವು ಪ್ರಮುಖವಾಗಿದ್ದು, ಇದರ ಸುತ್ತಲೂ ಸಂಗೇನಹಳ್ಳಿ ಕೆರೆ ನಡುಗಡ್ಡೆ, ಚಿಕ್ಕಗೊಂಡನಹಳ್ಳಿ, ಚಿಪ್ಪಿನಕೆರೆ, ಮತ್ತು ಆಕನೂರುಗಳಲ್ಲಿ ಕಂಡುಬಂದಿರುವ ಕುರುಹುಗಳಿಂದ ಈ ಪ್ರದೇಶದ ಇತಿಹಾಸವನ್ನು ಆದಿ ಇತಿಹಾಸಕಾಲಕ್ಕೆ ಕೊಂಡೊಯ್ಯುತ್ತದೆ. ಸಂಸ್ಕೃತಿಯು ಇಲ್ಲಿ ಉತ್ತುಂಗದಲ್ಲಿತ್ತು ಎನ್ನುವುದು ನೇಗಿಲು ಹೊಡೆಯುವ ಗೀರುಚಿತ್ರದಿಂದ ಸ್ಪಷ್ಟವಾಗುತ್ತದೆ. ಹಾಗೂ ಗೂಳಿ ಚಿತ್ರದಿಂದ ಪಶುಪಾಲನ ಸಂಸ್ಕೃತಿಯ ಆವಾಸಸ್ಥಾನವಾಗಿತ್ತು ಎಂಬುದು ವೇದ್ಯವಾಗುತ್ತದೆ. ಕೃಷಿ ಸಂಸ್ಕೃತಿ ಮತ್ತು ಪಶುಪಾಲನ ಸಂಸ್ಕೃತಿಗಳು ಈ ಪ್ರದೇಶದಲ್ಲಿ ಉತ್ತುಂಗದಲ್ಲಿತ್ತು. ಎನ್ನುವುದು ಈ ಗೀರುಚಿತ್ರಗಳಿಂದ ಸ್ಪಷ್ಟವಾಗುತ್ತದೆ. ಹಾಗೆಯೇ ಈ ಪ್ರದೇಶದ ಸುತ್ತಮುತ್ತ ಇನ್ನು ಹೆಚ್ಚಿನ ಸಂಶೋಧನಾ ಕಾರ್ಯ ಕೈಗೊಂಡರೆ ಇನ್ನು ಹೊಸ ವಾಸದ ನೆಲೆಗಳು, ಸಮಾಧಿ ನೆಲೆಗಳನ್ನು ಗೋಚರಿಸುವುದರಲ್ಲಿ ಅನುಮಾನವಿಲ್ಲ.

[ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಮಿತ್ರ ಶರತ್‌ಬಾಬು ಕೆ.ಎಸ್. ಕ್ಷೇತ್ರಕಾರ್ಯಕ್ಕೆ ಎಂ.ಎ. ಓದುವಾಗಿನಿಂದಲೂ ಸ್ಫೂರ್ತಿ ತುಂಬುತ್ತಿರುವ ಗುರುಗಳಾದ ಡಾ. ಎಸ್.ವೈ. ಸೋಮಶೇಖರ್ ಅವರಿಗೂ ಕೃತಜ್ಞತೆಗಳು].



* ಪಿ.ಎಚ್.ಡಿ. ಸಂಶೋಧನಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩೨೭೬



ಕಬ್ಬಿಣಯುಗದ ಬೃಹತ್ ಶಿಲಾಗೋರಿ

ಆಧಾರಸೂಚಿ

೧. ಷೇಕ್ ಆಲಿ ಬಿ. (ಪ್ರಸಂ. ೧೯೯೭ ಕರ್ನಾಟಕ ಚರಿತ್ರೆ ಸಂ. ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಇತಿಹಾಸ ಮತ್ತು ಪುರಾತತ್ವ ಕನ್ನಡ ವಿಷಯ ವಿಶ್ವಕೋಶ ೨೦೦೯, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩. ಗೋಪಾಲ ಆರ್. (ಸಂ) ೨೦೦೫, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯಗಳು ನಿರ್ದೇಶನಾಲಯ, ಹೊಸಪೇಟೆ.

೪. ಇತಿಹಾಸ ದರ್ಶನ, ಸಂ. ೧೧, ಎಸ್.ವೈ. ಸೋಮಶೇಖರ್ ಚಿತ್ರದುರ್ಗ ತಾಲೂಕು ಚಿಕ್ಕಿನಕೆರೆಯಲ್ಲಿ ಕಂಡುಬಂದಿರುವ ಪ್ರಾಕ್ಚರಿತ್ರಿಕ ಕುರುಹುಗಳು.

೫. ಇತಿಹಾಸ ದರ್ಶನ, ಸಂ. ೧೨, ಎಸ್.ವೈ. ಸೋಮಶೇಖರ್ ಆಕನೂರು ಗ್ರಾಮದ ಬಳಿ ಆದಿ ಇತಿಹಾಸ ಕಾಲದ ಕುರುಹುಗಳು.

೩

ಏಳೂರುಗುಡ್ಡದ ನರಸಿಂಹಗಿರಿಯ ಪ್ರಾಚ್ಯಾವಶೇಷಗಳು

ಡಾ. ಎಚ್. ತಿಪ್ಪೇಸ್ವಾಮಿ*

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕು ಕೇಂದ್ರದಿಂದ ಸು. ೩೭ ಕಿ.ಮೀ. ದೂರದಲ್ಲಿರುವ ನರಸಿಂಹಗಿರಿಯನ್ನು ಏಳೂರು ಗುಡ್ಡವೆಂದು ಕರೆಯಲಾಗುತ್ತದೆ. ಈ ಊರಿನ ಸುತ್ತಲೂ ಏಳು ಬೆಟ್ಟಗಳ ಸಾಲು ಇರುವ ಕಾರಣಕ್ಕಾಗಿ ಇದನ್ನು ಏಳೂರು ಗುಡ್ಡ ಎಂದು ಕರೆಯುತ್ತಾರೆ. ಬೆಳಗಟ್ಟ ಗ್ರಾಮಪಂಚಾಯತಿಗೆ ಸೇರಿರುವ ಈ ಗ್ರಾಮದಲ್ಲಿ ಪ್ರಸಿದ್ಧ ನರಸಿಂಹಸ್ವಾಮಿ ದೇವಾಲಯವಿದೆ. ಬೆಟ್ಟವು ಸಮುದ್ರ ಮಟ್ಟದಿಂದ ಸು. ೨,೩೫೦ ಅಡಿ ಎತ್ತರವಿದೆ. ಹಾಗು ಸುತ್ತಲಿನ ಪ್ರದೇಶದಿಂದ ೮೩೭ ಅಡಿ ಎತ್ತರವಿದೆ. ಇಲ್ಲಿನ ನಿಸರ್ಗ ನಿರ್ಮಿತ ಬೆಟ್ಟಗಳು, ಬಟ್ಟಲನ್ನು ಬೋರಲು ಹಾಕಿದಂತಿರುವ ಬೃಹದಾಕಾರದ ಗ್ರಾನೈಟ್ ಬಂಡೆಗಳು ಎಕರೆಗಟ್ಟಲೇ ವ್ಯಾಪಿಸಿವೆ. ಇಲ್ಲಿನ ಕಡಿದಾದ ಪ್ರಪಾತಗಳು, ಪ್ರಕೃತಿ ನಿರ್ಮಿತ ಗುಹೆಗಳು ಹಾಗು ಸದಾ ನೀರಿರುವ ಬಾವಿ, ಮಳೆಗಾಲದಲ್ಲಿ ತುಂಬಿ ಹರಿಯುವ ಹಳ್ಳಗಳು ಮತ್ತು ಕೆರೆಗಳು ಇಲ್ಲಿನ ಪರಿಸರವನ್ನು ಸುಂದರಗೊಳಿಸಿವೆ. ಕರಡಿಗಳ ವಾಸಕ್ಕೆ ಇದು ಪ್ರಸಿದ್ಧಿಯಾಗಿದೆ. ಈ ಗ್ರಾಮದ ದಕ್ಷಿಣ ಭಾಗದಲ್ಲಿನ ಬೆಟ್ಟದಲ್ಲಿ ನಾನು 'ಡಿಸ್ಕವರಿ ಟ್ರೂಫ್'ನ ನಿರ್ದೇಶಕ ಮತ್ತು ಪರ್ತಕರ್ತ ಭೀಮಸಮುದ್ರದ ರಂಗನಾಥ್ ಮತ್ತು ವಿದ್ಯಾರ್ಥಿಗಳಾದ ಹುಲಿಕೆರೆಯ ತಿಪ್ಪೇಶ್, ಗಿರೀಶ್, ದಶಮಾಪುರದ ವಿಠ್ಠಲ್ ಹಾಗು ಶಿಕ್ಷಕ ಶಿವಣ್ಣ ಓಬಳಶೆಟ್ಟಿಹಳ್ಳಿ ಇವರೊಂದಿಗೆ ಸಂಯುಕ್ತವಾಗಿ ಸರ್ವೇಕ್ಷಣೆ ಕೈಗೊಂಡಾಗ ವಿಜಯ ನಗರೋತ್ತರ ಕಾಲದ ಕೋಟೆ, ಕೊತ್ತಲಗಳು(ಬುರುಜು) ಮತ್ತು ಅದರಲ್ಲಿನ ಅಂಬುಗಂಡಿಗಳು, ಅರಮನೆಯ ಅವಶೇಷಗಳು, ವಿವಿಧ ಕಟ್ಟಡಗಳ ಅಳಿದುಳಿದ ತಳಪಾಯದ ಭಾಗಗಳು, ಸು. ೩೨ ಮನೆಗಳ ಅಧಿಷ್ಠಾನಗಳು, ಮಡಿಕೆ ಕುಡಿಕೆಗಳ ಅಳಿದುಳಿದ ಭಾಗಗಳು, ದವಸ ಧಾನ್ಯ ಸಂಗ್ರಹಕ ಉಗ್ರಾಣಗಳು, ನೀರಿನ ದೋಣೆಗಳನ್ನು ಗುರುತಿಸಲಾಗಿದೆ. ಬೆಟ್ಟದ ಮದ್ದಿನ ಮನೆಯ ಸಮೀಪ ನವ ಶಿಲಾಯುಗ ಕಾಲಕ್ಕೆ ಸೇರಿದ ಕಪ್ಪು ಶಿಲೆಯಿಂದ ತಯಾರಿಸಲಾದ ಮೂರು ಕೊಡಲಿ ಹಾಗು ಬೂದು, ಕಪ್ಪು, ಕೆಂಪು ಬಣ್ಣದ ಮಡಿಕೆ ಚೂರುಗಳನ್ನು ಪತ್ತೆ ಹಚ್ಚಲಾಗಿದೆ. ಇವುಗಳಲ್ಲಿ ಸಣ್ಣ ಬಟ್ಟಲಾಕಾರದ, ಕಂಟದ ಭಾಗಗಳು ಪ್ರಮುಖವಾಗಿವೆ. ಇಲ್ಲಿ ದೊರೆತ ಪ್ರಾಚ್ಯಾವಶೇಷಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಎರಡು ಭಾಗಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ.

ಪ್ರಾಗೈತಿಹಾಸಿಕ ಅವಶೇಷಗಳು: ಶಿಲಾಯುಗ ಕಾಲದಿಂದಲೂ ಈ ಭಾಗದಲ್ಲಿ ಜನ ವಸತಿ ಇದ್ದ ಬಗ್ಗೆ ನಮಗೆ ಹಲವು ಕುರುಹುಗಳು ದೊರೆತಿವೆ. ಅವುಗಳಲ್ಲಿ ಜರ್ಮಲಿ, ಗುಡೇಕೋಟೆ, ಪೇಟೆನಹಳ್ಳಿ, ಹುಲಿಕುಂಟೆ ಮೊದಲಾದ ಪ್ರದೇಶಗಳಲ್ಲಿ ದೊರೆತಿರುವುದನ್ನು ನಾವು ನೆನಪಿಸಿಕೊಳ್ಳಬಹುದು. ಈ ಗ್ರಾಮದ ದಕ್ಷಿಣ ಭಾಗದ ಬೆಟ್ಟದಲ್ಲಿರುವ ಮದ್ದಿನ ಮನೆಯ ಸಮೀಪ ನವ ಶಿಲಾಯುಗ ಕಾಲಕ್ಕೆ ಸೇರಿದ ಕಪ್ಪು ಶಿಲೆಯಿಂದ ತಯಾರಿಸಲಾದ ಮೂರು ಕೊಡಲಿ ಹಾಗು ಅದೇ ಕಾಲಕ್ಕೆ ಸೇರಿದ ಬೂದು, ಕಪ್ಪು, ಕೆಂಪು ಬಣ್ಣದ ಮಡಿಕೆ ಚೂರುಗಳನ್ನು ಪತ್ತೆ ಹಚ್ಚಲಾಗಿದೆ. ಇವುಗಳಲ್ಲಿ ಸಣ್ಣ ಬಟ್ಟಲಾಕಾರದ, ಕಂಟದ ಭಾಗಗಳು ಪ್ರಮುಖವಾಗಿವೆ.

ನವಶಿಲಾಯುಗದ ನೆಲೆ

ಇಲ್ಲಿನ ದಕ್ಷಿಣಭಾಗದ ಬೆಟ್ಟದಲ್ಲಿರುವ ಮದ್ದಿನಮನೆಯ ಸಮೀಪ ಡೈಕ್ ಶಿಲೆಯಲ್ಲಿ ತಯಾರಿಸಲಾದ ಮೂರು ಕೈಗೊಡಲಿಗಳು ದೊರೆತಿದ್ದು, ಅವು ಅಧ್ಯಯನ ದೃಷ್ಟಿಯಿಂದ ಪ್ರಮುಖವಾಗಿವೆ. ಅವುಗಳಲ್ಲಿ ಮೊದಲನೆಯ ಕೈಗೊಡಲಿ (ಶಿಲಾಯುಧ)ಯ ಬಾಯಿ ಭಾಗವನ್ನು ಹರಿತಗೊಳಿಸಿಲ್ಲ ಮತ್ತು ಸುತ್ತಲೂ ಅದನ್ನು ಹೆಚ್ಚಿನ ಮಟ್ಟದಲ್ಲಿ ಉಜ್ಜಿ ನುಣುಪುಗೊಳಿಸಿಲ್ಲ. ಇದರ ಉದ್ದ ೧೫ ಸೆಂ.ಮೀ. ಅಗಲ ೬ ಸೆಂ.ಮೀ. ಇದ್ದು, ಬಾಯಿಭಾಗ ೪ ಸೆಂ.ಮೀ. ಇದೆ. ಮತ್ತೊಂದು ಶಿಲಾಯುಧವನ್ನು ಸಹಾ ಡೈಕ್ ಶಿಲೆಯಿಂದ ತಯಾರಿಸಲಾಗಿದೆ. ಇದನ್ನು ಸುತ್ತಲೂ ಉಜ್ಜಿ ನಯಗೊಳಿಸಲಾಗಿದೆ. ತ್ರುಟಿತವಾಗಿರುವ ಈ ಶಿಲಾಕೊಡಲಿಯ ಕೊನೆಯ ಭಾಗ (ಚೂಪಾಗಿರುವ ಭಾಗ) ಮಾತ್ರ ಉಳಿದುಕೊಂಡಿದ್ದು ಇದರ ಉದ್ದ ೬ ಸೆಂ.ಮೀ. ಅಗಲ ೫ ಸೆಂ.ಮೀ. ಇದೆ. ಇದನ್ನು ಆ ಕಾಲದ ಮನುಷ್ಯ ತನ್ನ ನಿತ್ಯದ ಕೆಲಸಗಳಿಗೆ ಬಳಸಿಕೊಂಡಿದ್ದಾನೆಂದು ಹೇಳಬಹುದು. ಇಲ್ಲಿಯೇ ದೊರೆತಿರುವ ಮತ್ತೊಂದು ಕೈಗೊಡಲಿಯು ಸಹಾ ಡೈಕ್

* ವಾರ್ಡ್ ನಂ. ೧೩, ಕೋಟೆ ಏರಿಯಾ, ಕಮಲಾಪುರ ಅಂಚೆ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ-೫೮೩೨೨೧

ಶಿಲೆಯಿಂದ ತಯಾರಿಸಲ್ಪಟ್ಟಿದ್ದು, ಅದು ೭ ಸೆಂ.ಮೀ. ಅಗಲ ಮತ್ತು ೧೩ ಸೆಂ.ಮೀ. ಉದ್ದವನ್ನು ಹೊಂದಿದೆ. ಇದನ್ನು [illegible] ನುಣುಪುಗೊಳಿಸಲಾಗಿದ್ದು, ಇದರ ಬಾಯಿಯ ಭಾಗ ಹರಿತವಾಗಿದ್ದು, ಅದರ ಹಿಂದಿನ ಭಾಗ ಚೂಪಾಗಿರುವಂತೆ ಮಾಡಲಾಗಿದೆ. ಈ ಶಿಲಾಯುಧಗಳು ಅಂದಿನ ಶಿಲಾಯುಗ ಮಾನವನ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರ ನಿರ್ವಹಿಸಿವೆ.



ಐತಿಹಾಸಿಕ ಅವಶೇಷಗಳು : ಈ ಗ್ರಾಮದ ಮೇಲೆ ಉಲ್ಲೇಖಿಸಿದ ಪ್ರದೇಶದಲ್ಲಿ ಚಾರಿತ್ರಿಕ ಕಾಲಘಟ್ಟಕ್ಕೆ ಸೇರಿದ ಕೆಲವು ಪ್ರಾಚ್ಯಾವಶೇಷಗಳು ದೊರೆತಿದ್ದು, ಅಧ್ಯಯನದ ದೃಷ್ಟಿಯಿಂದ ಪ್ರಮುಖವಾಗಿವೆ. ಅವುಗಳಲ್ಲಿ ಕೋಟೆ, ಪ್ರವೇಶದ್ವಾರ ಮತ್ತು ವಿಶಾಲ ಕಟ್ಟಡಾವಶೇಷಗಳು, ಮದ್ದಿನ ಮನೆ, ಕೆರೆ, ಬಾವಿ, ರುಬ್ಬುವ ಕಲ್ಲು, ಒರಳು ಕಲ್ಲು, ಮಡಿಕೆ, ಕುಡಿಕೆಗಳು, ಕೊಳ ಮತ್ತು ಮಾನವ ಉಪಯೋಗಿಸಿ ಬಿಟ್ಟುಹೋದ ಕೆಲವು ಅವಶೇಷಗಳು ಇಲ್ಲಿ ಪ್ರಮುಖವಾಗಿ ದೊರೆತಿವೆ.

ಕೋಟೆ

ದಕ್ಷಿಣ ಭಾಗದ ಕೋಟೆಯಲ್ಲಿ ಮೂರು ಹಂತಗಳಲ್ಲಿ ನಿರ್ಮಿಸಿದ ಕೋಟೆ ಇದೆ. ಗಿರಿದುರ್ಗ ಪ್ರಕಾರಕ್ಕೆ ಸೇರಿಸಬಹುದಾದ ಈ ಕೋಟೆಯನ್ನು ಬೆಟ್ಟದ ಕೆಳಗಡೆ ಮತ್ತು ಮಧ್ಯಭಾಗದ ಬೆಟ್ಟದಲ್ಲಿ ಹಾಗು ಬೆಟ್ಟದ ತುದಿಯಲ್ಲಿ ಯುದ್ಧ ತಂತ್ರ ಮತ್ತು ರಕ್ಷಣಾ ತಂತ್ರಗಳನ್ನು ಗಮನದಲ್ಲಿಟ್ಟು ಕೊಂಡು ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಬೆಟ್ಟದ ಕೆಳಗಿನ ಮತ್ತು ಬೆಟ್ಟದ ಮಧ್ಯಭಾಗದ ಕೋಟೆಯು ಈಗ ಸಂಪೂರ್ಣ ಹಾಳಾಗಿದ್ದು, ಅದರ ಅಡಿಪಾಯಗಳು ಮಾತ್ರ ಉಳಿದು ಕೊಂಡಿವೆ. ಬೆಟ್ಟದ ಮೇಲಿರುವ ಕೋಟೆಯ ಭಾಗವು ಆಯಾತಾಕಾರವಾಗಿದ್ದು, ಅದರ ನಿರ್ಮಾಣಕ್ಕೆ ಸ್ಥಳಿಯವಾಗಿ ದೊರೆಯುವ ಶಿಲೆಯನ್ನು ಬಳಸಿ ಅವುಗಳನ್ನು ಪರಸ್ಪರ ಸಮಾನಾಂತರವಾಗಿ ಜೋಡಿಸಿ ಕಟ್ಟಲಾಗಿದೆ.





ಇದರ ಅಡಿಪಾಯದ ಭಾಗಕ್ಕೆ ನೈಸರ್ಗಿಕವಾಗಿ ದೊರೆಯುವ ಸ್ವಲ್ಪ ದೊಡ್ಡ ಶಿಲೆಗಳನ್ನು ಮತ್ತು ಅದರ ಮಧ್ಯಭಾಗಕ್ಕೆ ಮಧ್ಯಮ ಗಾತ್ರದ ಶಿಲೆಗಳನ್ನು ಹಾಗೂ ಅದರ ಕೊನೆಯ ಭಾಗಕ್ಕೆ ಸಣ್ಣ ಪ್ರಮಾಣದ ಶಿಲೆಗಳನ್ನು ಬಳಸಿ ನಿರ್ಮಿಸಲಾಗಿದೆ. ಪಾಳೆಗಾರರ ಕಾಲವಧಿಯಲ್ಲಿ ವಿಜಯ ನಗರೋತ್ತರ ಶೈಲಿಯಲ್ಲಿ ನಿರ್ಮಾಣವಾಗಿರುವ ಈ ಕೋಟೆಯ ಹೊರಭಾಗದ ಸುತ್ತಲೂ ಕಂದಕವನ್ನು ರಕ್ಷಣಾತಂತ್ರದ ದೃಷ್ಟಿಯಿಂದ ನಿರ್ಮಿಸಲಾಗಿದೆ. ಈ ಕೋಟೆಯಲ್ಲಿ ಪ್ರಸಕ್ತ ನಾಲ್ಕು ಕೊತ್ತಳಗಳನ್ನು ಕೋಟೆ ಗೋಡೆಯ ಶೈಲಿಯಂತೆಯೇ ವೃತ್ತಾಕಾರವಾಗಿ ನಿರ್ಮಿಸಲಾಗಿದೆ. ಈಶಾನ್ಯ, ಆಗ್ನೇಯ, ನೈರುತ್ಯ ಹಾಗು ವಾಯುವ್ಯ ಭಾಗದಲ್ಲಿ ಈ ಕೊತ್ತಳಗಳಿದ್ದು, ಇವುಗಳ ಕೆಲವು ಭಾಗಗಳು ಹಾಳಾಗಿವೆ, ವಾಯುವ್ಯ ಮತ್ತು ಈಶಾನ್ಯ ಭಾಗದ ಕೊತ್ತಳಗಳ ಭಿತ್ತಿ ಭಗ್ನವಾಗಿ ಹೋಗಿದೆ. ಇವುಗಳಲ್ಲಿ ಅಂಬುಗಂಡಿಗಳನ್ನು ನಿರ್ಮಿಸಲಾಗಿರುವುದು ವಿಶೇಷವಾಗಿದೆ.

ಕೋಟೆಯನ್ನು ಪ್ರವೇಶಿಸಲು ಮೂಲತಃ ಮೂರು ಪ್ರವೇಶದ್ವಾರಗಳಿದ್ದವು ಎನ್ನುವುದನ್ನು ಬೆಟ್ಟದ ಕೆಳ ಮತ್ತು ಮಧ್ಯ ಹಾಗು ಮೇಲಿನ ಕೋಟೆಯಲ್ಲಿರುವ ಅಳಿದುಳಿದ ಭಾಗಗಳಿಂದ ಅಧ್ಯಯನ ಮಾಡಬಹುದಾಗಿದೆ. ಬೆಟ್ಟದ ಮೇಲಿರುವ ಕೋಟೆಯ ಪ್ರವೇಶದ್ವಾರವು ಸಹ ಹಾಳಾಗಿದೆ.

ಆದರೆ ಅದನ್ನು ಪ್ರವೇಶಿಸುವ ದಾರಿ ಮತ್ತು ಅದಕ್ಕಾಗಿ ಮಾಡಿಕೊಂಡ ಸೋಪಾನ (ಮೆಟ್ಟಿಲು) ಈಗ ಉಳಿದಿವೆ.

ದೇವಾಲಯ

ಬೆಟ್ಟದ ದಕ್ಷಿಣ ಭಾಗಕ್ಕೆ ನಿಸರ್ಗನಿರ್ಮಿತ ಗವಿಯೊಂದಿದ್ದು, ಅದನ್ನು ನರಸಿಂಹ ದೇವಾಲಯ ಎಂದು ಕರೆಯಲಾಗುತ್ತದೆ. ಅದರಲ್ಲಿ ಈಗ ಯಾವುದೇ ಮೂಲ ಮೂರ್ತಿಯಾಗಲಿ ಅಥವಾ ಇನ್ನು ಯಾವುದೇ ವಾಸ್ತು ಭಾಗಗಳು ಪ್ರಸಕ್ತ ಉಳಿದಿಲ್ಲ. ಶಿವದೇವಾಲಯ ಎಂದು ಕರೆಯಲ್ಪಡುವ ಮತ್ತೊಂದು ದೇವಾಲಯ ಬೆಟ್ಟದ ಕೆಳಭಾಗದ ಕೋಟೆಯ ಪ್ರವೇಶದ್ವಾರದ ಬಳಿ ಇದೆ. ಗುಡಿಯ ಭಿತ್ತಿ ಭಾಗ ಪ್ರಸಕ್ತ ಸಂಪೂರ್ಣ ನಾಶವಾಗಿ ಹೋಗಿದೆ. ಮತ್ತು ಸಣ್ಣ ಮನೆಗಳ ಕಟ್ಟಡಾವಶೇಷಗಳು, ಕೆರೆ, ಬಾವಿ, ದೋಣೆಗಳು ಮತ್ತು ಕೆಲ ಮೂರ್ತಿ ಮತ್ತು ಶಿಲ್ಪಗಳು ಇಲ್ಲಿವೆ.

ಗರ್ಭಗುಡಿಯಲ್ಲಿ ಕಪ್ಪುಕಲ್ಲಿನಿಂದ ತಯಾರಿಸಿದ ಶಿವಲಿಂಗವಿದೆ. ಆಯಾತಾಕಾರದ ಗುಡಿಯ ತಳಪಾಯದ ಭಾಗ ಮಾತ್ರ ಈಗ ಸ್ಪಷ್ಟವಾಗಿ ಗೋಚರಿಸುತ್ತಿದ್ದು ಉಳಿದ ಯಾವುದೇ ಭಾಗಗಳು ಉಳಿದಿರುವುದಿಲ್ಲ. ಆದ್ದರಿಂದ ಅವುಗಳ ವೈಶಿಷ್ಟ್ಯತೆಯನ್ನು ಗುರುತಿಸುವುದು ಕಷ್ಟಕರ.

ಕಟ್ಟಡಾವಶೇಷಗಳು

ಇಲ್ಲಿ ಸುಮಾರು ೩೨ ಕಟ್ಟಡಗಳ ಅವಶೇಷಗಳು ಕೋಟೆಯ ಹೊರಭಾಗದಲ್ಲಿ ದೊರೆತಿವೆ. ಇವುಗಳಲ್ಲಿ ಮನೆಯ ಒಳಭಾಗದ ಕಟ್ಟಡಗಳ ವಿವಿಧ ಕೋಣೆಗಳ ಅವಶೇಷಗಳು ಇವೆ. ಪ್ರಾಯಶಃ ಇವು ಅಂದಿನ ಜನರ ಇಲ್ಲವೇ ಕಾವಲುಗಾರರ ಮನೆಗಳು ಇರಬಹುದು ಎನಿಸುತ್ತದೆ. ಅದೇ ರೀತಿ ಕೋಟೆಯ ಒಳಭಾಗದಲ್ಲಿ ಸುಮಾರು. ೮೦ x ೪೦ ಅಡಿ ಅಳತೆಯ ಕಟ್ಟಡದ ತಳಪಾಯವಿದ್ದು, ಅದು ಈ ಭಾಗದ ವಿಶಾಲ ಕಟ್ಟಡವೆನಿಸಿದೆ.

ಪ್ರಾಯಶಃ ಇದು ಅರಮನೆ ಇಲ್ಲವೆ ಆಡಳಿತಕ್ಕೆ ಸಂಬಂಧಿಸಿದ ಕಟ್ಟಡ ಇರಬಹುದೆ ಎನಿಸುತ್ತದೆ. ಅಲ್ಲದೆ ಇದರ ಸಮೀಪವೇ ಮತ್ತೊಂದು ಕಟ್ಟಡವಿದ್ದು ಅದು ಸು. ೪೦ x ೩೦ ಅಡಿ ವಿಸ್ತಾರವನ್ನು ಹೊಂದಿದೆ. ಇದರ ಅರ್ಧಭಾಗದ ಗೋಡೆ ಇಂದು ಉಳಿದಿದ್ದು, ಇತರ ಭಾಗಗಳು ಅವಸಾನಗೊಂಡಿವೆ. ಇದನ್ನು ಸ್ಥಳೀಯರು ಮದ್ದಿನ ಮನೆ ಎಂದು ಹೆಸರಿಸುತ್ತಾರೆ.

ಇಲ್ಲಿ ಮೂರು ಕೆರೆ ಮತ್ತು ಎರಡು ಬಾವಿ, ಹಾಗು ನಿಸರ್ಗನಿರ್ಮಿತ ಎರಡು ನೀರಿನ ದೋಣೆ(ಕೊಳ)ಗಳಿವೆ. ಅವುಗಳನ್ನು ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಿದ್ದಾರೆ. ಕೆರೆಗಳ ಏರಿಯನ್ನು ಮೆಟ್ಟಿಲು ಮೆಟ್ಟಿಲಾಗಿ ನಿರ್ಮಿಸಲಾಗಿದೆ.

ಅಲ್ಲಿರುವ ನೈಸರ್ಗಿಕ ಬಂಡೆಗಳಿಗೆ ಹೊಂದಿಕೊಂಡಂತೆ ನಿರ್ಮಿಸಲಾಗಿರುವ ಇವುಗಳನ್ನು ಜಲತಂತ್ರ ಜ್ಞಾನವನ್ನು ಆಧಾರವಾಗಿಟ್ಟುಕೊಂಡು ನಿರ್ಮಿಸಿರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ.



ಉಗ್ರಾಣಗಳು

ಕೋಟೆಯ ಒಳ ಭಾಗದಲ್ಲಿ ವೃತ್ತಕಾರದ ಮೂರು ಕಣಜಗಳಿವೆ. ಸ್ಥಳೀಯರು ಇವುಗಳನ್ನು ಅಗೇವು ಎನ್ನುತ್ತಾರೆ. ಇವುಗಳನ್ನು ಅಂದು ದವಸ ಧಾನ್ಯಗಳನ್ನು ಸಂಗ್ರಹಿಸುವ ಸಲುವಾಗಿ ಬಳಕೆ ಮಾಡುತ್ತಿದ್ದರು. ಸು. ಐದು ಅಡಿ ವಿಸ್ತಾರವಾಗಿರುವ ಇವು ಸು. ಹತ್ತು ಅಡಿಗಳಷ್ಟು ಆಳವನ್ನು ಹೊಂದಿವೆ.

ಮೂರ್ತಿ ಶಿಲ್ಪ ಮತ್ತು ಇತರೆ

ಕೋಟೆಯ ವಿವಿಧ ಭಾಗದಲ್ಲಿ ಕೆಲವು ಕೆಲ ಮೂರ್ತಿ ಮತ್ತು ಶಿಲ್ಪಗಳು ಇಲ್ಲಿವೆ. ಅವುಗಳಲ್ಲಿ ಲಕ್ಷ್ಮಿ ಶಿಲ್ಪವೊಂದನ್ನು ನೈಸರ್ಗಿಕ ಬಂಡೆಯಲ್ಲಿ ಕೆತ್ತಲಾಗಿದೆ. ಸು. ಐದು ಅಡಿ ಎತ್ತರವಿರುವ ಲಕ್ಷ್ಮಿ ಸ್ಥಾನಿಕವಾಗಿದ್ದು, ಕರಂಡ ಮುಕುಟಯಾಗಿದ್ದಾಳೆ. ದೇಹ ಮತ್ತು ಕೈ, ಕಾಲುಗಳಲ್ಲಿ ವಿವಿಧ ಬಗೆಯ



ಅಭರಣಗಳಿವೆ. ಹಿಂದಿನ ಕೈಗಳಲ್ಲಿ ಪುಷ್ಪ ಹಿಡಿದಿದ್ದು, ಮುಂದಿನ ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ಅದೇ ರೀತಿ ಇಲ್ಲಿಯೇ ಅಲಂಕೃತ ನಂದಿ ಮತ್ತು ಪಾದುಕೆಗಳಿವೆ. ಇವುಗಳ ಶೈಲಿಯ ಆಧಾರದ ಮೇಲೆ ಇವು ಕ್ರಿ.ಶ. ೧೪–





೧೬ನೇ ಶತಮಾನಕ್ಕೆ (ವಿಜಯನಗರ) ಕಾಲಕ್ಕೆ ಸೇರಿವೆ ಎಂದು ಹೇಳಬಹುದು. ಅದೇ ರೀತಿ ಇಲ್ಲಿಯ ಬಂಡೆಯೊಂದರ ಮೇಲೆ ಪುಷ್ಪ, ಆಂಜನೇಯ ಮತ್ತು ಸೂರ್ಯ–ಚಂದ್ರರನ್ನು ಅಲಂಕೃತವಾಗಿ ಬಿಡಿಸಲಾಗಿದೆ. ಇವು ಕ್ರಿಶ. ೧೭ನೇ ಶತಮಾನದಲ್ಲಿ ಪ್ರಾಯಶಃ ನಿರ್ಮಾಣವಾಗಿರಬೇಕು ಎನಿಸುತ್ತದೆ.

ಅದೇ ರೀತಿ ಇಲ್ಲಿ ವಿಜಯನಗರೋತ್ತರ ಕಾಲದಲ್ಲಿ ಬಳಸಲ್ಪಟ್ಟ ಮಡಿಕೆ ಕುಡಿಕೆ ಮತ್ತು ಒರಳು, ರುಬ್ಬುವ ಕಲ್ಲು ದೊರೆತಿವೆ. ಇವು ಅಂದಿನ ಜನಜೀವನವನ್ನು ಅರಿಯಲು ನಮಗೆ ಸಹಾಯಕವಾಗಿವೆ.

ಇಲ್ಲಿ ಆಳ್ವಿಕೆ ಮಾಡಿದ ಮಾದೇಯ ನಾಯಕ ಮತ್ತು ಇತರೆ ಪಾಳೇಗಾರರು ಕುರಿತು ಇದುವರೆಗೆ ಶಾಸನ ಅಥವಾ ಇತರೆ ಸ್ಪಷ್ಟ ಲಿಖಿತ ಆಕರಗಳು ನಮಗೆ ಲಭ್ಯವಾಗಿಲ್ಲ. ಅದೇ ರೀತಿ ಈ ನೆಲೆಗೆ ಅತಿ ಸಮೀಪದಲ್ಲಿರುವ ಜರ್ಮಲಿ ಪಾಳೇಯಗಾರನೋರ್ವ ಇಲ್ಲಿ ಕೆಲಕಾಲ ಆಳ್ವಿಕೆ ಮಾಡಿದ ಎನ್ನುವ ಜನರ ಅಭಿಪ್ರಾಯಗಳನ್ನು ಪುನರ್ ಪರೀಶೀಲನೆ ಮಾಡುವ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಮತ್ತಷ್ಟು ಸಂಶೋಧನೆಗಳು ಈ ನೆಲೆಯ ಕುರಿತು ನಡೆಯಬೇಕಾದ ಅವಶ್ಯಕತೆ ಇದೆ.

ಆಧಾರ ಗ್ರಂಥಗಳು

ಇತಿಹಾಸ ದರ್ಶನಗಳು, ಇತಿಹಾಸ ಅಕಾಡೆಮಿ, (ರಿ.) ಬೆಂಗಳೂರು.

ವಿಜಯನಗರ ಅಧ್ಯಯನ, ರಾಜ್ಯ ಪುರಾತತ್ವ ವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು.

ಇ) ಇಂಗ್ಲೀಷ್ ಆಕರಗಳು

1. Mahalingam. T.V.,1957, Administration and Social Life under Vijayanagara , Part-I &II, University of madras, Madras
2. Girijapathi.M.,2009, The Coinage And Histroy of Vijayanagara Empire, Vishvas Prints, Bangalore.
3. Nagaraja Rao. M.S. (Ed): Progress of Archaeology in Karnataka 1956-1972 & 1979-83, Directorate of Archaeology and Museum, Mysore.
4. Rao K.P. Deccan Megaliths, 1988, Sundeep Prakashan , Delhi.
5. Sundara A. Early Megalithic Chamber Tombs of South India - 1975, Pustaka Prakashana, Delhi.
6. Patil C.S. and Vinoda Patil 1997, Inscriptions of Bellary Districts, Directorate of Archaeology and Museum, Mysore
7. Veeratappa. K. 1987, Studies in Karnataka History and Culture, Bharathi Prakashan, Mysore.

ಈ) ಕನ್ನಡ ಆಕರಗಳು

೧. ಕುಂ.ಬಾ. ಸದಾಶಿವಪ್ಪ ಬಳ್ಳಾರಿ ಜಿಲ್ಲಾ ಸಂಸ್ಕೃತಿ ದರ್ಶನ, ಮಾಲತೇಶ ಪ್ರಕಾಶನ, ಹರಪನಹಳ್ಳಿ.

೨. ಕೊಟ್ರೇಶ್.ಎಂ. [illegible], ವಿಜಯನಗರ ಕಾಲದ ಕೋಟೆ ಕೊತ್ತಲಗಳು–ಒಂದು ಅಧ್ಯಯನ, (ಅಪ್ರಕಟಿತ ಪಿಎಚ್.ಡಿ. ಪ್ರಬಂಧ) ಕನ್ನಡ ವಿ.ವಿ.

೩. ದೇವರಕೊಂಡಾರೆಡ್ಡಿ (ಸಂ.) ೧೯೯೮ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧ ಬಳ್ಳಾರಿ ಜಿಲ್ಲೆ ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.

೪ ನಾಯಕ. ಹಾ.ಮಾ. (ಸಂ) ಕನ್ನಡ ವಿಷಯ ವಿಶ್ವಕೋಶ (೧೯೭೮) ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು.

೫. ಪಾಟೀಲ್, ಸಿ.ಎಸ್. ೨೦೦೦, **ಕರ್ನಾಟಕದ ಕೋಟೆಗಳು** (ಸಂ. ೧) ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೬ ರಾಜಶೇಖರ, ಎಸ್. [illegible], **ಕರ್ನಾಟಕ ವಾಸ್ತು ಶಿಲ್ಪ ಮತ್ತು ಚಿತ್ರಕಲೆ**, ಸುಜಾತ ಪಬ್ಲಿಕೇಷನ್, ಧಾರವಾಡ.

೭. ಶ್ರೀ ಕಂಠಶಾಸ್ತ್ರಿ ಎಸ್: **ಪುರಾತತ್ವ ಶೋಧನೆ** (೧೯೭೫) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.


೮. ಶೇಕ್ ಅಲಿ ಬಿ. ಮತ್ತು ಸುಂದರ. ಅ. ೧೯೯೭. **ಕರ್ನಾಟಕ ಚರಿತ್ರೆ ಸಂಪುಟ – ೧**, ಪ್ರಸಾರಾಂಗ, ಕನ್ನಡ ವಿ.ವಿ., ವಿದ್ಯಾರಣ್ಯ.

೪

ಧರ್ಮಪುರ: ಕಲ್ಗುಳಿ ನೆಲೆಯ ಅನ್ವೇಷಣೆ ಮತ್ತು ಸಮಗ್ರ ಅಧ್ಯಯನ

ಮೋಹನ ರಾ.*

ಚಿತ್ರದುರ್ಗ ಜಿಲ್ಲೆಯಲ್ಲಿ ಇದುವರೆಗೂ ಏಳು ಕಲ್ಗುಳಿ ನೆಲೆ (Telagavi 2004, 2006; Thippeswamy 2007; Sundara 1978; Mohana & Sundara in press) ಕಂಡುಬಂದಿದ್ದು ಧರ್ಮಪುರವು ಈ ನೆಲೆಗಳ ಸಾಲಿಗೆ ಸೇರುತ್ತದೆ, ಉಳಿದ ನೆಲೆಗಳೆಂದರೆ ಬ್ರಹ್ಮಗಿರಿ, ಬಗ್ಗಲು ರಂಗವ್ವನಹಳ್ಳಿ, ಬೆಳಗಟ್ಟ, ಚಿತ್ರದುರ್ಗ ಕೋಟೆ, ಭೀಮನಗುಂಡು ಮತ್ತು ಅಜ್ಜಿಗುಡ್ಡ (ನೋಡಿ ನಕಾಶೆ). ಈ ಜಿಲ್ಲೆಯಲ್ಲಿ ಕರ್ನಾಟಕದಲ್ಲಿಯೇ ಅತಿ ಹೆಚ್ಚು ಕಲ್ಗುಳಿ ನೆಲೆಗಳು ಕಂಡುಬಂದಿರುವುದು ವಿಶೇಷ (Mohana & Dalavi 2015).



ಕಲ್ಗುಳಿಗಳು ಬಟ್ಟಲಾಕೃತಿಯಲ್ಲಿದ್ದು ಇವು ನೈಸರ್ಗಿಕವಾಗಿರುವ ಕಲ್ಗುಳಿಗಿಂತ ಭಿನ್ನವಾಗಿದ್ದು ಮಾನವ ನಿರ್ಮಿತವಾಗಿವೆ. ಆಸ್ಟ್ರೇಲಿಯಾದ ಹೆಸರಾಂತ ವರ್ಣ/ರೇಖಾಚಿತ್ರ ವಿದ್ವಾಂಸರಾದ ರಾಬರ್ಟ್ ಜಿ.ಬೆಡ್ನಾರಿಕ್ (೨೦೦೮)ರವರು ಅವುಗಳ ಗುಣ ವೈಶಿಷ್ಟ್ಯತೆಯನ್ನು ಸಮಗ್ರವಾಗಿ ವಿವರಿಸಿದ್ದಾರೆ. ಇವರು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಇವುಗಳ ಇತಿಹಾಸವನ್ನು ಆದಿ ಹಳೇಶಿಲಾಯುಗಕ್ಕೆ ಕೊಂಡ್ಯೊಯುತ್ತಾರೆ (೧೯೯೩). ಭಾರತವಲ್ಲದೇ ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಕಲ್ಗುಳಿಗಳ ಮೇಲೆ ವೈಜ್ಞಾನಿಕವಾಗಿ ಅಧ್ಯಯನ ನಡೆಯುತ್ತಿದ್ದು ಇವುಗಳ ಪರಂಪರೆಯು ಅಂತ್ಯ ಪ್ಲೆಸ್ಟೋಸಿನ್ ಯುಗದಿಂದ ಪ್ರಸ್ತುತದವರೆಗೂ ಚಾಲ್ತಿಯಲ್ಲಿರುವುದು ಗಮನಾರ್ಹ.

ಧರ್ಮಪುರವು ಹಿರಿಯೂರು ತಾಲ್ಲೂಕು ಕೇಂದ್ರದಿಂದ ೩೨ ಕಿ.ಮೀ. ಪೂರ್ವಕ್ಕೆ ಇದ್ದು, ಈ ಕಲ್ಗುಳಿ ನೆಲೆಯು ಧರ್ಮಪುರದಿಂದ ಈಶಾನ್ಯಕ್ಕಿರುವ ಸ್ವಾಭಿಮಾನ ಶಾಲೆಯ ಬಲಭಾಗದಲ್ಲಿ ಅಂದರೆ ಧರ್ಮಪುರ–ಕಣಜನಹಳ್ಳಿ ಮತ್ತು ಧರ್ಮಪುರ–ಕೃಷ್ಣಪುರ ಮಾರ್ಗಗಳ ನಡುವೆ ಇರುವ ಕೃಷಿ ಭೂಮಿಯಲ್ಲಿದೆ. ಈ ನೆಲೆಯು ಸಮುದ್ರ ಮಟ್ಟದಿಂದ ಸು. ೬೨೦ ಮೀ. ಎತ್ತರದಲ್ಲಿದೆ (Mohana 2013).

ಕಲ್ಗುಳಿಗಳ ವಿವರಣೆ

೧೧೯ ಕಲ್ಗುಳಿಗಳನ್ನು ಮೂರು ಗ್ರಾನೈಟ್ ಕಲ್ಲಿನ ಮೇಲ್ಭಾಗದಲ್ಲಿ ಮೂಡಿಸಿದ್ದು ಒಂದು ಸಮುಚ್ಚಯದಲ್ಲಿರುವಂತೆ ಜೋಡಿಸಲಾಗಿದೆ ಈ ಕಲ್ಗುಳಿಗಳು ಒಂದೇ ಆಕಾರದಲ್ಲಿರದೆ ವಿಭಿನ್ನವಾಗಿವೆ ಅಂದರೆ ದುಂಡಾಕೃತಿ, ಅರೆ ದುಂಡಾಕೃತಿ, ತ್ರಿಭುಜಾಕೃತಿ, ಆಯತಾಕೃತಿಯಲ್ಲಿವೆ ಪ್ರತಿಯೊಂದು ಕಲ್ಲುಗಳ ವಿವರಣೆಯನ್ನು ಕೋಷ್ಟಕದಲ್ಲಿ ಕೊಡಲಾಗಿದೆ.



* ಸಂಶೋಧನಾ ವಿದ್ಯಾರ್ಥಿ, ಪುರಾತತ್ವ ಶಾಸ್ತ್ರ ವಿಭಾಗ, ಡೆಕ್ಕನ್ ಕಾಲೇಜ್, ಪುಣೆ.

ಒಂದು ಕಲ್ಲುಳಿಗಳ ಬಂಡೆಯ ಈಶಾನ್ಯ ಭಾಗವು ಹಾಳಾಗಿದ್ದು ಅದು ಕಲ್ಲುಳಿಗಳಿಂದ ಕೂಡಿತ್ತೆಂಬುದು ಲೇಖಕರ ಅಭಿಪ್ರಾಯ. ಈ ಎಲ್ಲ ಕಲ್ಲುಳಿಗಳ ಗುರುತುಗಳನ್ನು ಗಮನಿಸಿದರೆ ಇವೆಲ್ಲ ಒಂದು ಕಾಲಕ್ಕೆ ಸೇರಿದವೆನ್ನಲಾಗಿದೆ.

C-CircularO-OvalS-SquareRC-Roughly Circular RT-Roughly TriangleRS-Roughly SquareRTA-Roughly Rightly-angleSC-Semi CircularRS-Roughly Square

Boulder-1	Dimension	Shape
1	4.3x4.8x0.3	O
2.	9.0x8.8x3.7	RC
3.	4.4x4.4x0.9	RT
4	2.4x3.9x0.3	O
5.	5.8x5.6x1.7	RS
6.	4.4x4.1x1.1	C
7.	4.3x4.3x0.4	C
8.	6.8x6.9x2.6	RS
9.	6.7x5.3x0.8	RS
10.	4.9x4.7x1.4	C
11.	7.6x7x2.4	RC
12.	6.4x6.1x2.1	RT
13.	3.8x4.5x0.9	O
14.	4.6x5.3x1.4	RC
15.	5.6x5.4x2.1	C
16.	6.8x5.7x1.8	O
17.	4.5x3.9x0.8	RC
18.	7.2x6.7x2.5	RC
19	7.2x7.9x1.8	RT
20.	7.7x5.6x1.7	C
21.	7.2x6.3x2	RC
22.	4.2x4.4x1	C
23.	5.6x5.6x1.6	C
24.	10.4x10.7x7.2	C
25.	3.9x4.3x1	C
26.	7.3x7.1x2.4	C
27.	5.1x4.8x0.7	C
28.	3.9x5.2x0.8	O
29.	6.4x7.1x1.1	O
30.	6.3x5.8x0.8	RC
31.	4.9x5.8x1.6	RC
32.	4.2x5.1x0.3	RTA
33.	6.7x6.9x1.9	O
34.	4.1x4x0.9	C
35.	5.5x6.3x1.2	RC
36.	3.9x3.6x0.3	C
37.	9x6.6x2.9	O
38.	6.6x6.6x3.8	C
39.	5.1x4.8x0.5	C
40.	9.1x9x5	C
41.	4.3x2.5x1.1	SC
42.	8.1x7.3x3.1	C
43.	6.3x6.1x2.4	S
44.	6.5x6.6x1.5	C
45.	5.1x5x1.2	RS
46.	5.1x5.2x0.9	O
47.	7.9x7.7x3.5	C
48.	7.1x6.8x2.5	C
49.	5.2x5.3x1.5	C
50.	6.8x6.9x2.5	C
51.	8.5x9.5x3.9	RC
52.	7.1x6.8x1.4	C
53.	6x5.9x2.4	C
54.	5.5x5.1x1.4	O
55.	7.8x7.2x2.1	C
56.	6.4x6x2.5	O
57.	5.4x5.1x0.9	C
58.	5.8x5.2x2.4	RC
59.	5.6x6.7x2.5	RC
60.	4.9x5.5x0.9	O
61.	5.8x5.8x1.7	O

Bolder-2	Dimension	Shape
1.	5.4x6.8x1.5	O
2.	4.6x4.7x1.4	C
3.	4.7x4.3x0.5	C
4.	5.7xx5.8x1.4x	C
5.	7.6x8.3x3.3	C
6.	5.2x5.6x1.1	C
7.	5.5x5.3x1.2	C
8.	6.7x6.4x2.6	RS
9.	5.7x5.5x1.8	C
10.	5.2x6.9x2.5	O
11.	4.5x4.5x1.1	C
12.	5.5x6.1x1.5	RS
13.	5.5x5.4x1.5	C
14.	4.9x3.2x0.7	RT
15.	5.4x5.8x2.2	C
16.	6.2x6.9x1.7	O
17.	4.2x4.5x1.3	C
18.	6.8x7.2x3.1	RT
19.	3.1x2.8x0.3	C
20.	5.7x4.6x1.1	O
21.	5.2x6.1x2.1	RS
22.	5.9x5.6x1.6	C
23.	4.6x4.5x0.3	C
24.	6.1x5.5x1.1	O
25.	5.7x6.1x2.5	RC

26.	6.4x5.2x1.9x	O
27.	6.8x6.1x2.1	C
28.	5.4x5.1x1.4	C
29.	5.5x6.5x2.6	O
30.	5.4x5x2.3	RC
31.	5.5x4.7x1.8	C
32.	5x5.7x1.7	RS
33.	3x2.5x0.3	RS
34.	6.5x7x2	RS
35.	6.6x5.9x2.1	RS
36.	6.2x6x1.4	C
37.	5.7x4.4x1.1x	O
38.	6x5.1x00.9	O
39.	6x5.6x1.5	O
40.	6.6x3.2x2.6	O
41.	4.9x3.8x1	O
42.	6.7x6.1x3.3	C
43.	6.6x6.3x2.2	O
44.	5.4x6.1x1.2	C
45.	4.8x5x1.5	C
46.	5.4x6.2x1.6	C
47.	5.8x2.1x1	C
Bolder-3	**Dimension**	**Shape**
1.	5.4x5.ox2.5	C



[ಕಾರ್ಯಕ್ಷೇತ್ರ ಅನ್ವೇಷಣೆಯಲ್ಲಿ ಸಹಕರಿಸಿದ ಸುನೀಲ್‌ಕುಮಾರ್ ಕಲ್ಪನೆ ಮತ್ತು ಮಂಜುಳಾ ಹಾಗೂ ಈ ಪ್ರತಿಯನ್ನು ಸಿದ್ಧಪಡಿಸುವಲ್ಲಿ ತಾಂತ್ರಿಕವಾಗಿ ಸಹಾಯ ಮಾಡಿದ ಸಿ. ಶಿವರಾಜ್‌ರವರಿಗೆ ಕೃತಜ್ಞತೆಗಳು.]

ಆಧಾರಸೂಚಿ

೧. Bednarik, R. G. 1993. Palaeolithic Art in India. *Man and Environment* 38(2): 33-40.

೨. Bednarik, R. G. 2008. Cupules. *Rock Art Research* 25(1): 61-100.

೩. Mohana, R. 2013. Dharmapura: A Recently Discovered Cupule-sire. District Chitradurga, Karnataka. Poster presented in the Seminar "New Perspectives on the Indian Acheulian: A Seminar to honor Dr. R. S. Pappu in his 80th Year", held on 22nd and in the Seminar "Indian Quaternary and Palaeoenvironment and Geoarchaeology: A Seminar to honor Dr. S. N. Rajaguru in his 80th Year" held on 23rd November 2013 at Department of Archaeology, Deccan College, Post Graduate and Research Institute, Pune, Maharastra.

೪. Mohana, R and Dalavi, Hemant. 2015. Geographical Distribution of Rock Art Sites in Karnataka. Poster Presented in National Conference on *"Ancient Science and Technology: Retrospection and Aspirations (ASTRA-2015)"* Organised by Deccan Education Society's Fergusson College, Pune on 10th-11th January, 2015.

೫. Mohana, R and Sundara A (in press). Petroglyphs in Chitradurga District, Karnataka, Peninsular India

೬. Sundara, A. 1978. "Chitradurga Parisara: Ittichina Puratattva Sodhanegalu", (Recent Archaeological Remains in Chitradurga area. In Kannada) *Manavika Bharati* 2: 32-46., Karnatak University, Dhawad

೭. Telagavi, Lakshman. 2004. Belaghatta Parisarada Addulubande Rekha Chithragalu (In Kannada) *Itihasa Dharshana* 19: 1-5.

೮. Telagavi, Lakshman. 2006. Chitradurga Parisarada Kulibharita Bhimanagundu: Puratathvika Adhyana (Cupules Site at Bhimanagundu: Archaeological Studies. In Kannada). *Itihasa Dharshana 21:* 1-13.

೯. Thippeswamy, S. 2007. Chitradurga Talukina Mattasttu Pragaithihasika Nelegalu (In Kannada) *Itihasa Dharshana* 22: 13-16.

ಹಾಸನ ಜಿಲ್ಲೆ ಚನ್ನರಾಯನಪಟ್ಟಣ ತಾಲ್ಲೂಕಿನ ಕೆಲವು ಪ್ರಾಚೀನ ನೆಲೆಗಳ ಶೋಧ

ಡಾ. ಬಿ. ಬಸವರಾಜ ತಗರಪುರ* ಎಂ.ಎನ್. ನಿರ್ಮಲ**

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ಸಮೃದ್ಧವಾದ ತಾಲ್ಲೂಕು ಕೇಂದ್ರವಾಗಿದೆ. ಈ ತಾಲ್ಲೂಕಿನಲ್ಲಿ ಬೃಹತ್ ಶಿಲಾಯುಗ ಮತ್ತು ನವಶಿಲಾಯುಗಗಳ ಕಾಲದಿಂದ ಈ ಪ್ರಾಂತ್ಯದ ಬೆಳವಣಿಗೆಯನ್ನು ಹಾಗೂ ಇತಿಹಾಸ ಮತ್ತು ಸಂಸ್ಕೃತಿಗಳ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ.

ನಾವು ಚನ್ನರಾಯಪಟ್ಟಣ ಪ್ರದೇಶದಲ್ಲಿನ ಕೆಲವೊಂದು ಗ್ರಾಮಗಳನ್ನು ಪರಿಶೀಲನೆಗೆಂದು ಕ್ಷಿಪ್ರಕಾರ್ಯ ಕೈಗೊಂಡಾಗ ಕಲ್ಲು ಗೋರಿಗಳು, ನಿಲುವು ಗಲ್ಲುಗಳು, ಪ್ರಾಗೈತಿಹಾಸಿಕ ನೆಲೆಗಳು ಹಾಗೂ ಇನ್ನಿತರ ಬಿಡಿಶಿಲ್ಪಗಳನ್ನು ಪತ್ತೆ ಮಾಡಲಾಗಿದೆ. ಅವುಗಳ ವಿವರಣೆಯನ್ನು ಪ್ರಸ್ತುತ ಆಯಾ ಊರಿನ ಹೆಸರಿನಡಿಯಲ್ಲಿ ತಿಳಿಸಲಾಗಿರುತ್ತದೆ.

ಕರ್ನಾಟಕದ ಇತಿಹಾಸವನ್ನು ಅಲ್ಲದೆ ಪ್ರಾಚೀನ ಕಾಲದ ಸಂಸ್ಕೃತಿಯ ಪರಂಪರೆಯನ್ನು ಗಮನಿಸಿದರೆ ಪ್ರಾಚೀನ ಕಾಲದ ಸಂಸ್ಕೃತಿಯ ಸಾವಿರಾರು ನೆಲೆಗಳು ಬೆಳಕಿಗೆ ಬಂದಿದೆ. ಕ್ರಿ.ಶ. ೧೯೪೭ರಲ್ಲಿ ಸರ್ ಮಾರ್ಟಿಮರ್ ವೀಲರ್‌ರವರು ಬ್ರಹ್ಮಗಿರಿಯಲ್ಲಿ ನಡೆಸಿದ ಪುರಾತತ್ವ ಉತ್ಖನನದಿಂದ ಅತ್ಯಂತ ಮುಖ್ಯವಾದದ್ದು, ದಕ್ಷಿಣ ಭಾರತದ ಪೂರ್ವ ಇತಿಹಾಸದ ಇತಿಮಿತಿಗಳನ್ನು ಮತ್ತು ಕಾಲಮಾನವನ್ನು ತಿಳಿಯುವುದೇ ಈ ಉತ್ಖನದ ಮುಖ್ಯ ಉದ್ದೇಶವಾಗಿದೆ ಈ ಬೆಳವಣಿಗೆಯಿಂದ ಮೊದಲ ಬಾರಿಗೆ ಕರ್ನಾಟಕದ ಪುರಾತತ್ವ ಇತಿಹಾಸದಲ್ಲಿ ಒಂದು ಹೊಸ ಕ್ರಾಂತಿಯೇ ಉಂಟಾಯಿತು. ಈ ಹಿನ್ನೆಲೆಯಿಂದ ಕರ್ನಾಟಕದ ಬೇರೆ ಬೇರೆ ಪ್ರಾಚೀನ ನೆಲೆಗಳಲ್ಲಿ ಶೋಧನೆ, ಉತ್ಖನನ ನಡೆದಿದೆ. ಇನ್ನು ನಡೆಯುತ್ತಲೇ ಇದೆ. ಈ ಆಧಾರದಿಂದ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕೆಲವೊಂದು ಊರುಗಳಲ್ಲಿ ಪ್ರಾಚೀನ ಅವಶೇಷಗಳನ್ನು ಪತ್ತೆ ಮಾಡಲಾಗಿದೆ.

(೧) ಬಳುಗಟ್ಟೆ, (೨) ಬಿಡಿಗ, (೩) ಗಂಜಿಗೆರೆ, (೪) ಅಕ್ಕನಹಳ್ಳಿ, (೫) ಕಬ್ಬಳಿ, ಎಂಬ ಐದು ಊರುಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಪ್ರಾಚೀನ ಅವಶೇಷಗಳನ್ನು ಗುರುತಿಸಲಾಗಿದೆ.

೧) **ಬಳುಗುಟ್ಟೆ** : ಚನ್ನರಾಯಪಟ್ಟಣ ತಾಲ್ಲೂಕು ಬಳುಗಟ್ಟೆಯಲ್ಲಿ ಪ್ರಾಚೀನ ನೆಲೆಯನ್ನು ಶೋಧಿಸಲಾಗಿದ್ದು, ಈ ನೆಲೆ ಊರಿನ ಹೊರಗೆ ಇದೆ. ಈ ನೆಲೆಯಲ್ಲಿ ಪ್ರಾಚೀನ ಕಾಲದ ಶಂಭುಲಿಂಗೇಶ್ವರ ದೇವಾಲಯವಿತ್ತೆಂದು ತಿಳಿದು ಬಂದರೂ ಕೂಡ. ಈಗ ಸಂಪೂರ್ಣ ನಾಶವಾಗಿದೆ. ಆದರೆ ಅಲ್ಲಲ್ಲಿ ಅವಶೇಷಗಳು ಕಂಡುಬರುತ್ತದೆ.

ಊರಿನ ಒಂದು ಮರದ ಕೆಳಗೆ ಕಲ್ಲಿನ ಅವಶೇಷಗಳಿಂದು, ಇಲ್ಲಿ ವೀರಗಲ್ಲದೆ, ಹಾಗೂ ದುಸ್ಥಿತಿಯಲ್ಲಿರುವ ಒಂದು ಶಿಲ್ಪವಿದೆ. ಮತ್ತು ಶಿವಲಿಂಗವು ಸಹ ನಾಶವಾಗಿದೆ. ಕೆಲವೊಂದು ಕಲ್ಲಿನ ದಂಬದ ಬೋಧಿಗೆ ಸಹ ಇದೆ. ಈ ಹಿನ್ನೆಲೆಯಿಂದ ಇದು ಪ್ರಾಚೀನ ಕಾಲದ ಪಾಳು ಶಂಭುಲಿಂಗೇಶ್ವರ ದೇವಾಲಯವೆಂದು ಗುರುತಿಸಬಹುದಾಗಿದೆ. ಪಾಳು ಶಂಭುಲಿಂಗೇಶ್ವರ ದೇವಾಲಯದ ಕೆಲವೊಂದು ಅವಶೇಷಗಳು ಅಲ್ಲಲ್ಲಿ ಚೆಲ್ಲಾಪಿಲಿಯಾಗಿ ಬಿದ್ದಿದೆ. ಇದನ್ನು ಮೂಲ ದೇವಾಲಯ ಎನ್ನಬಹುದು. ಇಲ್ಲಿ ದುಸ್ಥಿತಿಯಾಗಿರುವ ಶಿವಲಿಂಗವನ್ನು ಸಹ ಕಾಣಬಹುದಾಗಿದೆ. ಗ್ರಾಮದಲ್ಲಿ ಶೋಧನೆ ನಡೆಸಿದಾಗ ಕಬ್ಬಿಣಯುಗದ ಶಿಲಾಗೋರಿಯು ಕಂಡುಬಂದಿದೆ.

ಪಾಳು ಶಂಭುಲಿಂಗೇಶ್ವರ ದೇವಾಲಯದ ಸ್ವಲ್ಪ ದೂರದಲ್ಲಿ ಒಂದು ಬಿಡಿ ಶಿಲ್ಪ ದೊರೆತಿದ್ದು, ಇದು ಹೊಯ್ಸಳರ ಲಾಂಛನವನ್ನು ಹೊಂದಿದೆ. ಹೊಯ್ಸಳರ ಲಾಂಛನವಾದ ಸಳ ಹುಲಿಯನ್ನು ಕೊಲ್ಲುತ್ತಿರುವ ದೃಶ್ಯ ಈ ಶಿಲ್ಪವಾಗಿದ್ದು, ಸಳನು ವೀರಾವೇಷದಿಂದ ಹೋರಾಡಿ ಹುಲಿಯನ್ನು ಕೊಲ್ಲುತ್ತಿರುವುದು ಕಂಡುಬಂದರು ಕೂಡ, ಇಲ್ಲಿ ಸಳನ

* : ೩೧೩, s/o ಲೇಟ್ ಬಸವಯ್ಯ ತಗರಪುರ, ಚಿಲಕವಾಡಿ ಅಂಚೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ-೫೭೧೪೪೦.
** : ೨೯೮, ಎಚ್ ಪಿ ಓ ಮತ್ತು ಆರ್ ಎಂ ಎಚ್ ಲೇಔಟ್, ಸಾತಗಳ್ಳಿ ಎಕ್ಸಟನ್ಶನ್ (ಶಕ್ತಿ ನಗರ), ಮೈಸೂರು-೫೭೦೦೧೯.

ರುಂಡ ಮುರಿದು ಹೋಗಿರುವುದರಿಂದ ಅದರ ಒಂದು ಛಾಯೆ ಸಂಪೂರ್ಣವಾಗಿ ನಾಶವಾಗಿದೆ. ಹುಲಿಯ ಸಹ ಬಲಿಷ್ಠವಾಗಿದ್ದು ತನ್ನ ಕಾಲನ್ನು ಸಳನ ಕಾಲಿನ ಮೇಲೆ ಹಾಕಿದಂತೆ ಚಿತ್ರದಲ್ಲಿ ತೋರಿಸಲಾಗಿದೆ. ಅಲ್ಲದೆ ಸಳನು ಕೂಡ ರಾಜನಂತೆ ಅಲಂಕಾರಗೊಂಡಿರುವುದು ಕಂಡು ಬಂದಿದೆ. ಹಾಗೂ ಇದು ಹೊಯ್ಸಳರ ಕಾಲದ ವಾಸ್ತು ರಚನೆಯನ್ನು ಸಹ ಹೊಂದಿದೆ. ಪಾಳು ಶಂಭುಲಿಂಗೇಶ್ವರ ದೇವಾಲಯಕ್ಕೆ ಪೂರಕವಾಗಿ ಹೊಯ್ಸಳರ ಕಾಲಕ್ಕೆ ಸೇರಿದ ಶಿಲಾಶಾಸನವು ಸಹ ಇದೆ. ಈ ಎಲ್ಲ ಬೆಳವಣಿಗೆಯಿಂದ ಪಾಳುಲಿಂಗೇಶ್ವರ ದೇವಾಲಯ ಹೊಯ್ಸಳರ ಕಾಲಕ್ಕೆ ಸೇರಿದ ದೇವಾಲಯವಾಗಿದೆ ಎಂದು ದೃಢವಾಗಿರುತ್ತದೆ.

ಕಬ್ಬಳಿ : ಚನ್ನರಾಯಪಟ್ಟಣ ತಾಲ್ಲೂಕು ಕಬ್ಬಳಿಯಲ್ಲಿ ಎರಡು ಶಿಲಾಸಮಾಧಿಗಳನ್ನು ಪತ್ತೆ ಮಾಡಲಾಗಿದೆ. ಇದನ್ನು ಸ್ಥಳೀಯರ ಪ್ರಕಾರ ಜೋಡಿಗಲ್ಲು ಸಮಾಧಿ ಎಂದು ಕರೆಯುವ ವಾಡಿಕೆ ಇದೆ. ಇದನ್ನು ಮೂರು ಕಡೆ ಕಲ್ಲು ಚಪ್ಪಡಿಗಳನ್ನು ನಿಲ್ಲಿಸಿದ್ದು ಅದರ ಮೇಲೆ ಒಂದು ಹಾಸುಕಲ್ಲನ್ನು ಮುಚ್ಚಲಾಗಿರುತ್ತದೆ. ಸ್ಥಳೀಯರು ಇದನ್ನು ದೇವರು ಎಂದು ಪೂಜಿಸುವ ಪದ್ಧತಿ ಇಂದಿಗೂ ಇದೆ. ಊರಿನಿಂದ ಹೊರಗೆ ಒಂದು ಏರಿಯ ಮೇಲೆ ನಿರ್ಮಿತಗೊಂಡಿರುವ ಶಿಲಾ ಸಮಾಧಿಯು ಈ ಮೇಲೆ ತಿಳಿಸಿದ ಮಾದರಿಯಲ್ಲಿಯೇ ಕಂಡುಬಂದು ಒಳಗೆ ಚಿಕ್ಕ ಚಿಕ್ಕ ಮೂರು ಕಲ್ಲುಗಳನ್ನು ಇಡಲಾಗಿದೆ. ಇದನ್ನು ಸಹ ಪೂಜೆ ಮಾಡುವ ಪರಿಪಾಠವನ್ನು ಸ್ಥಳೀಯ ಜನರು ನಡೆಸುತ್ತಾರೆ.

ಗಂಜಿಗೆರೆಯಲ್ಲಿ ಕರೆಕಲ್ಲು ಸಮಾಧಿ ಕಲ್ಲುಗೋರಿಗಳಲ್ಲಿದೆ. ನಿಲುವುಗಲ್ಲುಗಳ ಗೋರಿಗಳು ಅಲ್ಲಲ್ಲಿ ಕಂಡು ಬಂದಿವೆ ಹಾಗಯೇ ನೋಡಿದರೆ ಗಂಜಿಗೆರೆಯಲ್ಲಿ ಪ್ರಾಚೀನ ನಿಂತಿರುವ ನಿಲುವುಗಲ್ಲುಗಳಿವೆ. ಗಂಜಿಗೆರೆ ಕರಿಕಲ್ಲು ಸಮಾಧಿಯನ್ನು ಗಮನಿಸಿದರೆ ಈ ಪ್ರಾಂತ್ಯವು ಹಿಂದೆ ಬೃಹತ್ ಶಿಲಾಯುಗದ ಜನಸಾಮಾನ್ಯರ ಶಾಶ್ವತ ನೆಲೆಯಾಗಿ ಮುಂದುವರೆದಿರಬೇಕು.

ಇದು ಚನ್ನರಾಯಪಟ್ಟಣ ತಾಲ್ಲೂಕು ದಿಡಗ ಎಂಬ ಊರಿನಲ್ಲಿ ಕರಿಗಲ್ಲು ಬಸವಣ್ಣ ಅಥವಾ ಕರಿಗಲ್ಲು ಬ್ರಹ್ಮದೇವರು ಎಂದು ಆರಾಧಿಸುವ ಸಮಾಧಿ ಇದೆ. ದಿಡಗ ಗ್ರಾಮದಲ್ಲಿ ಗಂಜಿಗೆರೆ ನಿಲುಗಲ್ಲಿನ ಮಾದರಿಯ ನಿಲುವು ಗಂಬವನ್ನು ಕಾಣಬಹುದಾಗಿದೆ. ಇದು ಸಹ ಪ್ರಾಚೀನ ವಾದದ್ದು. ಇದು ಊರಿನ ಹೊರಗೆ ರಸ್ತೆಯ ಪಕ್ಕದಲ್ಲಿಯೇ ಇದೆ.

ಒಂದು ಚಪ್ಪಡಿಗೆ ರಂಧ್ರವನ್ನು ಕೊರೆಯಲಾಗಿದ್ದು ಅದರ ಮೂಲಕ ಸಮಾಧಿಗೆ ಪೂಜೆ ಸಲ್ಲಿಸಿ ಜನ ಸಾಮಾನ್ಯರು ಸೇವಿಸುತ್ತಿದ್ದ ಆಹಾರ ಪದಾರ್ಥಗಳನ್ನು ಒಳಗೆ ಹಾಕುವ ಪರಿಪಾಠ ಇದೆ. ಇತ್ತೀಚಿನ ದಿನಗಳಲ್ಲಿ ಈ ನಿಲುವುಗಂಬದ ಸಮಾಧಿಯನ್ನು ನಾವೀನ್ಯ ರೂಪದಲ್ಲಿ ನಿರ್ಮಿಸಿ, ನಿಲುವು ಗಂಬಗಳು ಅದೇ ಮಾದರಿಯಲ್ಲಿ ನಿಲ್ಲಿಸಿ, ಅದರ ಮಧ್ಯದಲ್ಲಿ ಕರಿಗಲ್ಲು ಬಸವಣ್ಣ ಎಂದು ಹೇಳಿ ರಂಧ್ರವನ್ನು ಕೊರೆದು ನಿರ್ಮಿಸಿರುವ ಚಿತ್ರವನ್ನು ಕಾಣಬಹುದಾಗಿದೆ. ಈ ಎಲ್ಲಾ ಬೆಳವಣಿಗೆಯನ್ನು ಗಮನಿಸಿದರೆ ಅಯಾ ಪ್ರಾಂತ್ಯದ ಜನರು ಪ್ರಾಚೀನ ಪರಂಪರೆಯನ್ನು ಚಾಚುತಪ್ಪದೆ ಮುಂದುವರೆಸಿಕೊಂಡು ಹೋಗುತ್ತಿರುವುದು ಪ್ರಸ್ತುತ ದಿನಗಳಲ್ಲಿ ಕಾಣಬಹುದಾಗಿದೆ.

ಚನ್ನರಾಯಪಟ್ಟಣ ತಾಲ್ಲೂಕಿನ **ಅಕ್ಕನಹಳ್ಳಿಯಲ್ಲಿ** ಕಂಡುಬರುವ ಒಂದು ಶಿಲಾ ಸಮಾಧಿಯಾಗಿದ್ದು ಸ್ಥಳೀಯರು ಇದನ್ನು ಕರಿಗಲ್ಲು ಸಮಾಧಿ ಎಂದು ಕರೆಯುತ್ತಾರೆ. ಇದು ಸಹ ಪ್ರಾಚೀನ ಕಾಲದ ಒಂದು ಸಮಾಧಿ. ಆದರೆ ಇದನ್ನು ಇತ್ತೀಚೆಗೆ ಒಂದು ಗುಡಿ ಮಾದರಿಯಲ್ಲಿ ನಿರ್ಮಿಸಿ ಪೂಜಿಸುವ ಸಂಪ್ರದಾಯದ ಪರಿಪಾಠವಿದೆ. ಗುಡಿಯ ಒಳಗೆ ಒಂದು ಕರಿಯ ಕಲ್ಲನ್ನು ನಿಲ್ಲಿಸಿ ಪೂಜಿಸುತ್ತಾರೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಎಷ್ಟೋ ಸಮಾಧಿಗಳು ದೇವಾಲಯಗಳ ರೂಪದಲ್ಲಿ ಪರಿವರ್ತನೆಗೊಂಡು ಪ್ರಾಚೀನ ಪರಂಪರೆಯ ಪ್ರತೀಕಗಳಾಗಿವೆ.

ಅಕ್ಕನಹಳ್ಳಿಯಲ್ಲಿ ಒಂದು ವಿಶೇಷವಾದ ಮಾದರಿಯ ವೀರಗಲ್ಲನ್ನು ಗುರುತಿಸಲಾಗಿದೆ. ಈ ವೀರಗಲ್ಲು ಮೂರು ಹಂತಗಳಿಂದ ಕೂಡಿದೆ. ಕೆಳಗಿನ ಹಂತದಲ್ಲಿ ಕುದುರೆಯ ಮೇಲೆ ಕುಳಿತು ವೀರಾವೇಷದಿಂದ ಹೋರಾಡುವ ಸನ್ನಿವೇಶವನ್ನು ಮಾಡಲಾಗಿರುತ್ತದೆ. ಕುದುರೆಯ ಕಂಠದಲ್ಲಿ ಸರಮಾಲೆಯನ್ನು ಕೂಡಿಸಲಾಗಿದ್ದು, ತಲೆಯ ಮೇಲೆ ಹೂವಿನ ಕಿರೀಟವನ್ನು ಹಾಕಲಾಗಿದೆ. ದೇಹದ ಕೆಳಭಾಗದಲ್ಲಿ ಗಂಟೆಯನ್ನು ಕಟ್ಟಲಾಗಿದೆ. ರಾಜನು ಕುದುರೆ ಮೇಲೆ ಕುಳಿತು ಒಂದು ಕೈಯಲ್ಲಿ ಕುದುರೆಯ ಲಗಾಮು ಹಿಡಿದು ಮತ್ತೊಂದು ಕೈಯಲ್ಲಿ ಭರ್ಜಿ ಹಿಡಿದು ಹೋರಾಡುತ್ತಾನೆ. ಕುದುರೆಯ ಮೇಲೆ ಒಂದು ವೀರಖಡ್ಗವನ್ನು ಹಾಕಿರುವುದು ಕಂಡು ಬರುತ್ತದೆ. ರಾಜನು ವಸ್ತ್ರಾಭರಣಗಳನ್ನು ಧರಿಸಿದ್ದು ತಲೆಯ ಮೇಲೆ ಮೈಸೂರು ಒಡೆಯರ ಮಾದರಿಯ ಪೇಟವನ್ನು ಧರಿಸಲಾಗಿರುತ್ತದೆ. ರಾಜನ ಜೊತೆಗೆ ಆತನ ಇಬ್ಬರು ಪತ್ನಿಯರು ಸಹ ಇದ್ದಾರೆ ಇಬ್ಬರು ಪತ್ನಿಯರು ಸಹ ರಾಜನಿಗೆ ಬೆನ್ನೆಲಾಬಾಗಿ ನಿಂತು ಹೋರಾಟ ನಡೆಸುತ್ತಿರುವುದು ಕಂಡುಬರುತ್ತದೆ. ಇಬ್ಬರು ಪತ್ನಿಯರು ಸಹ ಅಲಂಕೃತರಾಗಿದ್ದು ತಲೆಯ ಮೇಲೆ ಬೇರೆ–ಬೇರೆ ರೀತಿಯ ಕಿರೀಟ ಧರಿಸಲಾಗಿರುತ್ತದೆ. ಆದರೆ ಪ್ರಾಯಶಃ ಈ ಯುದ್ಧದಲ್ಲಿ ಮೂರು ಜನರು



ಸಮಾಧಿ ಕರಗಿಲ್ಲು



ಸಮಾಧಿ ಜೋಡಗಲ್ಲು (ಸ್ಥಳೀಯರ ಪ್ರಕಾರ)



ಕರಗಿಲ್ಲು ಬ್ರಹ್ಮದೇವರು



ಕರಿಗಲ್ಲು ಬಸವಣ್ಣ



ಪಾಳು – ಶಂಭುಲಿಂಗೇಶ್ವರ ದೇವಾಲಯ ಸಂಪೂರ್ಣ ನಾಶಗೊಂಡಿದೆ. ಹರಳೀಮರದ ಕೆಳಗಿದೆ.

ವೀರಮರಣ ಹೊಂದಿದ ಕಾರಣ ಈ ವೀರಗಲ್ಲನ್ನು ನಿಲ್ಲಿಸಿರಬೇಕು.

ಎರಡನೆಯ ಅಂತಸ್ತಿನಲ್ಲಿ ಮೂರು ಜನರು ಪದ್ಮಾಸನದಲ್ಲಿ ಕುಳಿತು ಭಯಭಕ್ತಿಯಿಂದ ದೇವರಿಗೆ ಪೂಜೆ ಸಲ್ಲಿಸುತ್ತಿರುವುದು ಕಂಡುಬಂದಿದೆ. ಹಾಗೂ ಶೈವಪರಂಪರೆಗೆ ಪೂರಕವಾಗಿ ಒಂದು ಗಂಟೆಯನ್ನು ಸಹ ಕಡೆಯಲಾಗಿದೆ. ಅಲ್ಲದೆ ಒಂದು ಮರವನ್ನು ಕಡೆಯಲಾಗಿರುತ್ತದೆ ಮೂರನೇ ಅಂತಸ್ತಿನಲ್ಲಿ ಶಂಖ, ಚಕ್ರ, ತ್ರಿನಾಮ ಹಾಗೂ ಸೂರ್ಯ, ಚಂದ್ರರ ಚಿತ್ರವನ್ನು ಕಡೆಯಲಾಗಿದೆ. ಆದಕಾರಣ ಈ ವೀರಗಲ್ಲನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇಲ್ಲಿರುವ ವ್ಯಕ್ತಿಗಳು ಶೈವಧರ್ಮಕ್ಕೂ ಹಾಗೂ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ವ್ಯಕ್ತಿಗಳು ಇದ್ದಿರಬೇಕೆಂದು ಹೇಳಬಹುದಾಗಿದೆ.

ಹುತ್ತರಿದುರ್ಗದ ಶಿಲಾಸಮಾಧಿಗಳ ಮೇಲೊಂದು ಹೊಸ ಬೆಳಕು

ಲಿಂಗರಾಜು ತಂಡಸನಹಳ್ಳಿ* ಡಾ. ಬಿ.ಪಿ. ಕುಮಾರ್**

ಕರ್ನಾಟಕವು ಬಹಳ ಪುರಾತನ ಸಂಸ್ಕೃತಿಯನ್ನು ಹೊಂದಿರುವಂತಹ ಐತಿಹಾಸಿಕ ಪ್ರದೇಶವಾಗಿದ್ದು, ಸುಮಾರು ಮೂರು ಸಾವಿರ ವರ್ಷಗಳಷ್ಟು ಹಿಂದಿನ ಶಿಲಾಸಮಾಧಿಯ ಅವಶೇಷಗಳು ದೊರೆತಿರುವುದು ಇಲ್ಲಿನ ಐತಿಹಾಸಿಕತೆಗೆ ಕನ್ನಡಿ ಹಿಡಿದಿದೆ. ಆದ್ದರಿಂದ ಶಿವತಾರಕ್ ಕೆ.ಬಿ.ರವರು ಕರ್ನಾಟಕದ ಪುರಾತತ್ವ ನೆಲೆಗಳು ಕೃತಿಯಲ್ಲಿ ಭಾರತದ ಪ್ರಾಗೈತಿಹಾಸದ ಅಧ್ಯಯನದ ಪ್ರಾರಂಭ ಕರ್ನಾಟಕದ ಪ್ರದೇಶದಿಂದಲೇ ಆಗಿದೆ ಎಂಬುದು ಒಂದು ಪ್ರಮುಖ ಸಂಗತಿಯಾಗಿದೆಯೆಂದು ಉಲ್ಲೇಖಿಸಿದ್ದಾರೆ.

ಕರ್ನಾಟಕದಲ್ಲಿ ಶಿಲಾಯುಗ ಸಂಸ್ಕೃತಿಯ ನೆಲೆಗಳ ಸಂಶೋಧಕರು:

ಭಾರತದಲ್ಲಿ ಮೊಟ್ಟ ಮೊದಲಿಗೆ ಕ್ರಿ.ಶ. ೧೮೨೩ರಲ್ಲಿ ಜೆ. ಬಾಂಬಿಗ್ಟನ್‌ರವರು ವಿವಿಧ ನಮೂನೆಯ ಶಿಲಾಗೋರಿಗಳನ್ನು ಕೇರಳದಲ್ಲಿ ಬೆಳಕಿಗೆ ತಂದರು.[೧] ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಪುರಾತತ್ವ ಅಧ್ಯಯನವನ್ನು ಪ್ರಾರಂಭಿಸಿದವರು ರಾಬರ್ಟ್ ಬ್ರೂಸ್ ಫೂಟ್‌ರವರೆಂದು ತಿಳಿದು ಬರುತ್ತದೆ. ಇವರು ಮಲಪ್ರಭಾ ನದಿ ದಂಡೆಯ ಮೇಲೆ ಕೆಲವು ಶಿಲಾಯುಧಗಳನ್ನು ಪತ್ತೆ ಹಚ್ಚಿದರು.[೨] ನಂತರ ಮೆಡೋಸ್ ಟೇಲರ್‌ರವರು ಸುರಪುರದ ಬಳಿಯ ಚಿಕಾನಹಳ್ಳಿಯಲ್ಲಿ ಶಿಲಾ ಸಮಾಧಿಗಳನ್ನು ಕಂಡುಹಿಡಿದರು. ಬಿ.ಎಲ್. ರೈಸ್‌ರವರು ಕ್ರಿ.ಶ. ೧೮೮೪–೮೫ರಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಐಮಂಗಲದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಕಲ್ಲುವೃತ್ತ ಸಮಾಧಿಗಳನ್ನು ಪತ್ತೆ ಹಚ್ಚಿದರು.[೩] ಭಾರತದಲ್ಲಿ ಇಂತಹ ಶಿಲಾಯುಗದ ಅವಶೇಷಗಳು ಕ್ರಿ.ಶ. ೧೮೬೩ರಲ್ಲಿ ದೊರೆತಿದ್ದು, ಅಲ್ಲಿಂದಾಚೆಗೆ ಕರ್ನಾಟಕದಾದ್ಯಂತ ಸಂಶೋಧನೆಗಳು ಹೆಚ್ಚಿನ ಪ್ರಮಾಣದಲ್ಲಿ ನಡೆದಿವೆ.[೪] ಕ್ರಿ.ಪೂ. ೧೨೦೦ರಿಂದ ೨೦೦೦ ವರ್ಷದವರೆಗಿನ ಇತಿಹಾಸವು ಕಬ್ಬಿಣದ ಯುಗದ ಕಾಲವಾಗಿದ್ದು ಭಾರತದಲ್ಲಿ ಇಂತಹ ಸ್ಥಳಗಳೂ ಪತ್ತೆಯಾಗಿರುವುದು ಈ ಪ್ರದೇಶದ ಪ್ರಾಚೀನತೆಯನ್ನು ಸಾರುತ್ತದೆ.

ಕರ್ನಾಟಕದ ಅನೇಕ ಕಡೆಗಳಲ್ಲಿ ಪುರಾತತ್ವ ನೆಲಗಳನ್ನು ಕುರಿತು ಸಂಶೋಧನೆ ನಡೆಸಿರುವ ಸಂಶೋಧಕರೆಂದರೆ: ಸಂಪತ್ ಅಯ್ಯಂಗಾರ್ ಅ. ಸುಂದರರವರು, ಎಚ್.ಡಿ. ಸಂಕಾಲಿಯ ಆರ್.ಎಸ್. ಪಪ್ಪು ಎಸ್. ಅನ್ಸಾರಿ ಕೋರಿ ಶೆಟ್ಟರ್, ಎಂ. ಶೇಷಾದ್ರಿರವರು ಜಡಗೇನಹಳ್ಳಿ, ನರಸಿಂಹ ಮೂರ್ತಿ, ಪಿ.ಗುರುರಾಜ್. ಬಿ. ವಸಂತ ಶೆಟ್ಟಿ, ಎಚ್.ಆರ್. ರಘುನಾಥ್ ಭಟ್. ಗಣಪಯ್ಯ ಭಟ್. ಪಿ. ರಾಜೇಂದ್ರನ್. ದೇವರಾಜು ಡಿ.ವಿ., ಪೂಣಚ್ಚ. ಕೆ.ಪಿ. ಶಿವತಾರಕ್ ಮೊದಲಾದವರು[೫] ಇವರೆಲ್ಲರ ಪರಿಶ್ರಮದಿಂದ ಪುರಾತನ ನೆಲೆಗಳಿಗೆ ಸಂಬಂಧಿಸಿದಂತೆ ಅನೇಕ ಕುರುಹುಗಳು ದೊರೆತಿವೆ.

ತುಮಕೂರು ಜಿಲ್ಲೆಯ ಪ್ರಾಕ್ತನ ವಿಶೇಷತೆಗಳು:

ತುಮಕೂರು ಜಿಲ್ಲಾ ಪ್ರದೇಶದ ಕ್ಷೇತ್ರ ಕಾರ್ಯ ಹಾಗೂ ಅಧ್ಯಯನವನ್ನು ಶಿವತಾರಕ್ ಕೆ.ಬಿ. (೧೯೯೯)ರವರು ಕೈಗೊಂಡು ಇಡೀ ಜಿಲ್ಲೆಯ ಪ್ರಾಗಿತಿಹಾಸದ ಮೇಲೆ ಹೊಸಬೆಳಕು ಚೆಲ್ಲುವುದರ ಮೂಲಕ ರಾಜ್ಯದಲ್ಲಿಯೇ ಹೆಚ್ಚಿನ ಪುರಾತನ ನೆಲೆಗಳನ್ನು ಇಲ್ಲಿ ಶೋಧಿಸಿದಂತಾಗಿದೆ.[೬] ಕುಣಿಗಲ್ ತಾಲ್ಲೂಕಿನ ಗುಂಗಾಡಾನಹಳ್ಳಿ ತೆಪ್ಪಸಂದ್ರ, ಓಮಗಿರಿ, ಹುಲಿಯೂರು ದುರ್ಗಗಳಲ್ಲಿ ದೊರೆತಿರುವ ನೆಲೆಗಳಲ್ಲಿ ಹಳೆಯ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ಹಾಗೂ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಮಾಹಿತಿಗಳು ದೊರೆಯುತ್ತವೆ. ತುಮಕೂರು ಜಿಲ್ಲೆಯ ವಿವಿಧೆಡೆ ದೊರೆತಿರುವ ಶಿಲಾಯುಗದ ನೆಲೆಗಳು ಬಹಳ ಪುರಾತನ ಸಂಸ್ಕೃತಿಯ ಬೇರನ್ನು ಹುಡುಕುವ ಯತ್ನ ಮಾಡುತ್ತವೆ.[೭] ಕುಣಿಗಲ್, ಕೊರಟಗೆರೆ, ಗುಬ್ಬಿ, ಚಿಕ್ಕನಾಯಕನಹಳ್ಳಿ, ತಿಪಟೂರು, ತುಮಕೂರು, ತುರುವೇಕೆರೆ, ಪಾವಗಡ, ಮಧುಗಿರಿ, ಸಿರಾ, ಮೊದಲಾದ ಸ್ಥಳಗಳಲ್ಲಿ ಶಿಲಾಯುಗದ ಒಟ್ಟು ೨೬೩ ನೆಲೆಗಳು ಮತ್ತು ಮಾದರಿಗಳು ದೊರೆತಿರುವುದು

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ, (ಸ್ವಾಯತ್ತ), ಮಂಡ್ಯ.
** ಇತಿಹಾಸ ಸಹ ಪ್ರಾಧ್ಯಾಪಕರು, ಎ.ವಿ.ಕೆ. ಮಹಿಳಾ ಕಾಲೇಜು, ದಾವಣಗೆರೆ.

ಇದಕ್ಕೆ ಸಾಕ್ಷಿಯಾಗಿದೆ.[೮] ಮೂಗನಾಯಕನ ಕೋಟೆ, ಬೆಟ್ಟದಹಳ್ಳಿ, ಯಕ್ಕಲಕಟ್ಟೆ, ಸೌರನಕೋಟೆ, ಜಲಗಾರ ದಿಬ್ಬ, ಅಂಕನ ಭಾವಿ, ಬಿಜ್ಜಾವರ, ಗುರಮ್ಮನ ಕಟ್ಟೆ, ಬಸವನ ಬೆಟ್ಟ, ಬೂವಿಬೆಟ್ಟ, ತೆಪ್ಪದಾಗ ದೊಡ್ಡಿ, ಕರೆಕಲ್ಲುಬಂಡೆ, ಬುಕ್ಕಪಟ್ಣ. ಮೊದಲಾದ ಸ್ಥಳಗಳಲ್ಲಿ ದೊರೆತಿರುವ ನೆಲೆಗಳು ಇತಿಹಾಸಕಾರರಿಗೆ ಸಂಶೋಧನೆಯ ಹೊಸ ಕೊಂಡಿಗಳಂತಿವೆ. ತುಮಕೂರಿನ ಗುಬ್ಬಿ ತಾಲ್ಲೂಕಿನಲ್ಲಿ ಸುಮಾರು ೭೪ ನೆಲೆಗಳನ್ನು ಗುರುತಿಸಲಾಗಿದೆ. ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ಒಟ್ಟು ಈ ಜಿಲ್ಲೆಯಲ್ಲಿ ೩೮ ನೆಲೆಗಳು ಶೋಧವಾಗಿದ್ದು ಇವುಗಳಲ್ಲಿ ೨೧ ಸಮಾಧಿ ನೆಲೆಗಳಾಗಿದ್ದರೆ, ೧೭ ವಸತಿ ನೆಲೆಗಳಾಗಿವೆ.[೯] ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗದಲ್ಲಿ ಇಂತಹ ಅವಶೇಷಗಳು ದೊರೆತಿವೆ.[೧೦]

ಹುತ್ರಿದುರ್ಗದ ಶಿಲಾ ಸಮಾಧಿಯ ಅವಶೇಷಗಳು

ಹುತ್ರಿದುರ್ಗವು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಆಗ್ನೇಯಕ್ಕೆ ೧೯ ಕಿ.ಮೀ. ದೂರದಲ್ಲಿರುವ ಒಂದು ಗ್ರಾಮವಾಗಿದ್ದು ಬೆಟ್ಟದಿಂದ ಆವೃತವಾಗಿದೆ. ಈ ಬೆಟ್ಟ ಸಮುದ್ರ ಮಟ್ಟದಿಂದ ೧೧೩೦ ಮೀ. ಎತ್ತರದಲ್ಲಿದೆ. ಬೆಟ್ಟದ ಮೇಲೆ ಕೋಟೆಯಿದ್ದು ಇದಕ್ಕೆ ಎಂಟು ಹೆಬ್ಬಾಗಿಲುಗಳಿವೆ.[೧೧] ಈ ಬೆಟ್ಟದ ತುದಿಯ ಮೇಲಿನ ವಿಶಾಲವಾದ ಸಮತಲ ಪ್ರದೇಶದಲ್ಲಿ ದೇವಾಲಯಗಳು, ದೋಣೆಗಳು, ಕಣಜ, ಮದ್ದಿನ ಮನೆ, ಮತ್ತು ಇತರ ಅನೇಕ ಕಟ್ಟಡಗಳಿವೆ. ಬೆಟ್ಟದ ಮೂರನೇ ಒಂದು ಭಾಗದಷ್ಟು ಪ್ರದೇಶ ವನ್ನು ಹತ್ತಿದಾಗ ಸಿಗುವ ಸಮತಲ ಪ್ರದೇಶದಲ್ಲಿರುವ ಊರಿನ ಸುತ್ತ ಬಲವಾದ ಕೋಟೆಯಿದೆ. ಈ ಕೋಟೆಯಲ್ಲಿ ಎಲೆಯೂರು ಬಾಗಿಲು, ಬಾಲಿಕಟ್ಟೆ ಬಾಗಿಲು, ಮಾಗಡಿ ಬಾಗಿಲು, ಎಂಬ ಹೊರ ಬಾಗಿಲುಗಳಿವೆ. ಅಲ್ಲದೆ ಅನೇಕ ಕೊತ್ತಳಗಳಿವೆ. ಈ ಕೋಟೆಯನ್ನು ಅನಿಯಮಿತಕಾರದ ಚಿಕ್ಕ ಕಲ್ಲುಗಳಿಂದ ಗಾರೆಯನ್ನು ಉಪಯೋಗಿಸಿದೆ ಕಟ್ಟಲಾಗಿದೆ. ಹುತ್ರಿದುರ್ಗವನ್ನು ಕೆಂಪೇಗೌಡ ಕಟ್ಟಿಸಿದನೆಂದು ತಿಳಿದುಬರುತ್ತದೆ.[೧೨] ಹುತ್ರಿದುರ್ಗದ ಕೋಟೆ ಪೂರ್ವ ದಿಕ್ಕಿನ ಮಾಗಡಿ ದ್ವಾರದ ಮುಚ್ಚಾಲಮ್ಮನ ಗುಡಿ ಮುಂಭಾಗದಿಂದ ಅಲ್ಲಿನ ಬಿಸಲು-ಬಸವಣ್ಣ ಮಂಟಪದ ವರೆಗಿನ ಸರ್ವೆ ನಂಬರ್ ೫೯ರಲ್ಲಿ ಬೃಹತ್ ಶಿಲಾಯುಗದ ಅವಶೇಷಗಳು ದೊರೆತಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಈ ಬೃಹತ್ ಶಿಲಾಯುಗದ ಅವಶೇಷಗಳ ವೈಶಿಷ್ಟ್ಯಗಳೆಂದರೆ ಈ ಶಿಲಾ ಸಮಾಧಿಗಳು ೧೨ ಮೀ. ವ್ಯಾಸ ಹೊಂದಿವೆ. ಈ ಸಮಾಧಿಗಳು ವೃತ್ತಾಕಾರದಲ್ಲಿ ಜೋಡಿಸಿದ ಕಪ್ಪು ಮತ್ತು ಗ್ರಾನೈಟ್ ಶಿಲೆಗಳಿಂದ ಕೂಡಿವೆ.[೧೩] ಈ ಸಮಾಧಿಗಳಲ್ಲಿ ಪ್ರಾಚೀನ ಕಾಲದ ಮಾನವರ ದೇಹ / ಅಸ್ಥಿಪಂಜರಗಳನ್ನು ಅವುಗಳ ಜೊತೆಗೆ ಮುಂದಿನ ಜನ್ಮಕ್ಕೆ ಉಪಯೋಗವಾಗಲೀ ಎಂಬ ನಂಬಿಕೆ ಯಿಂದ ಅವರು ಬಳಸಿದ ಪಾತ್ರೆ, ಮಡಿಕೆ, ಕುಡಿಕೆ, ಮತ್ತು ಆಯುಧಗಳನ್ನು ಸಮಾಧಿಯಲ್ಲಿರಿಸುತ್ತಿದ್ದರೆಂದು ತಿಳಿದು ಬರುತ್ತದೆ. ಒಟ್ಟಾರೆ ಈ ಶಿಲಾ ಸಮಾಧಿಗಳು ಅತ್ಯಂತ ಪ್ರಾಚೀನವಾಗಿದ್ದು ಹುತ್ರಿದುರ್ಗದ ಇತಿಹಾಸವನ್ನು ಸುಮಾರು ಮೂರು ಸಾವಿರ ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ಯುತ್ತದೆ.

ಹುತ್ತರಿ ದುರ್ಗದ ಬೆಟ್ಟದ ಪಕ್ಕದಲ್ಲೇ ಶಿಲಾಯುಗದ ಸಮಾಧಿಗಳು ದೊರೆತಿರುವುದು ಸುತ್ತಮುತ್ತಲಿನ ಪರಿಸರದ ಶವಸಂಸ್ಕಾರ ವಿಧಾನದ ಬಗ್ಗೆ ತಿಳಿದುಕೊಳ್ಳಲು ನೆರವಾಗಿದೆ. ಏಕೆಂದರೆ ಮಾಗಡಿ ಮತ್ತು ಹುತ್ರಿದುರ್ಗದ ಪರಿಸರದಲ್ಲಿ 'ಕಲ್ಲು ಸೇವೆ' ಎಂಬ ವಿಶಿಷ್ಟ ಶವಸಂಸ್ಕಾರ ಪದ್ಧತಿಯೊಂದಿತ್ತೆಂದು ಸ್ಥಳೀಯರಿಂದ ತಿಳಿದುಬರುತ್ತದೆ. ಈ ಪರಿಸರದಲ್ಲಿ ಶವಗಳನ್ನು ಸುಡದೇ ಅಥವಾ ಹೂಳದೇ ನಿರ್ಜನ ಪ್ರದೇಶದ ಬಂಡೆಯ ಮೇಲೆ ಪ್ರಾಣಿ ಪಕ್ಷಿಗಳಿಗೆ ಆಹಾರವನ್ನಾಗಿ ಬಿಟ್ಟು ಕೆಲ ದಿನಗಳ ನಂತರ ಗ್ರಾಮದವರು ಅಳಿದುಳಿದು ಮೂಳೆಗಳನ್ನು ಸಂಗ್ರಹಿಸಿ ಶವಸಂಸ್ಕಾರದ ಪದ್ಧತಿಯಂತೆ ಹೂಳುತ್ತಿದ್ದುದು ಕಂಡುಬರುತ್ತದೆ. ಕ್ಷೇತ್ರಕಾರ್ಯ ಕೈಗೊಂಡಾಗ ಹುತ್ರಿದುರ್ಗದ ಪರಿಸರದಲ್ಲಿ ಹಿಂದೆ ಇಂತಹ ಪದ್ಧತಿ ಆಚರಣೆಯಲ್ಲಿದ್ದಿತ್ತೆಂಬುದು ಸ್ಥಳಿಯರಿಂದ ಸಾಮಾನ್ಯವಾಗಿ ತಿಳಿದುಬರುತ್ತದೆ. ಈ ರೀತಿ ಕಲ್ಲು ಸೇವೆ ನಡೆಯುತ್ತಿದ್ದ ಬೆಟ್ಟದ ಪಕ್ಕದಲ್ಲಿಯೇ ಶಿಲಾಯುಗದ ಸಮಾಧಿಗಳು ದೊರೆತಿರುವುದು ವಿಶೇಷ ಸಂಗತಿಯಾಗಿದೆ. ಆದ್ದರಿಂದ ಶಿಲಾಯುಗದ ಶವಸಂಸ್ಕಾರ ಪದ್ಧತಿಗೂ ಕಲ್ಲುಸೇವೆ ಶವಸಂಸ್ಕಾರ ಪದ್ಧತಿಗೂ ಸಾಮ್ಯತೆಗಳಿರುವುದರಿಂದ ಇಂತಹ ಕಲ್ಲು ಸೇವೆಯು ಸುಮಾರು ಮೂರು ಸಾವಿರ ವರ್ಷಗಳ ಹಿಂದಿನ ಪದ್ಧತಿಯ ಮುಂದುವರಿಕೆಯಾಗಿರುವ ಸಾಧ್ಯತೆಯಾಗಿರಬಹುದೆಂದು ಅರ್ಥೈಸಬಹುದು. ಹೀಗೆ ಕರ್ನಾಟಕದ ಇತಿಹಾಸವನ್ನು ಮತ್ತಷ್ಟು ರೋಚಕವಾಗಿಸುವ ಬೃಹತ್ ಶಿಲಾಯುಗದ ನೆಲೆಯಾಗಿ ಹುತ್ರಿದುರ್ಗದ ಸಮಾಧಿಯ ಅವಶೇಷಗಳು ಕಂಡುಬಂದಿವೆ.

ಕಬ್ಬಿಣ ಯುಗದ ಸಂಸ್ಕೃತಿಯಲ್ಲಿ ಶವಗಳನ್ನು ಕಲ್ಲಿನ ನೆಲಮಾಳಿಗೆ ಗೋರಿಯಲ್ಲಿಟ್ಟು ಅದರ ಮೇಲ್ಭಾಗವನ್ನು ದಪ್ಪನೆಯ ವೃತ್ತಾಕಾರದ ಬಂಡೆಯಿಂದ ಮುಚ್ಚುತ್ತಿದ್ದುದರಿಂದ ಇದನ್ನು ಬೃಹತ್ ಶಿಲಾಸಂಸ್ಕೃತಿಯೆಂದು ಕರೆಯಲಾಗಿದೆ. ಆದರೆ ಈ ಜನರ ಸಾಧನ ಸಾಮಾಗ್ರಿಗಳಲ್ಲಿ ಕಬ್ಬಿಣದ ಬಳಕೆಯಿದ್ದಿತ್ತೆಂದು ಹೇಳಬಹುದು. ನೆಲಮಾಳಿಗೆಯ ಶವದ ಗೋರಿಗಳು ಏಳು ಚದರಡಿಗಳಿಂದ ಇಪ್ಪತ್ತೈದು ಚದರಡಿಯ ವಿಸ್ತೀರ್ಣದಲ್ಲಿವೆ. ವೃತ್ತಾಕಾರದ ಮುಚ್ಚಳಿಕೆ ಬಂಡೆಕಲ್ಲುಗಳು

ನಾಲ್ಕು ಅಡಿಯಿಂದ ಎಂಟು ಅಡಿ ಅಗಲವಾಗಿಯೂ ಎಂಬತ್ತು ಅಂಗುಲ ದಪ್ಪನಾಗಿಯೂ ಇವೆ. ಕೆಲವು ಗೋರಿಗಳಲ್ಲಿ ಪೂರ್ವ ದಿಕ್ಕಿಗೆ ಒಬ್ಬರು ನುಸುಳುವಂತಹ ಒಂದರಿಂದ ಒಂದುವರೆ ಅಡಿ ಸುತ್ತಳತೆಯ ರಂಧ್ರಗಳಿವೆ. ಸತ್ತವರ ಆತ್ಮಗಳ ಸಂಚಾರಕ್ಕಾಗಿ ಈ ರಂಧ್ರಗಳನ್ನು ನಿರ್ಮಿಸಿರಬಹುದು.[೧೪] ಕುಣಿಗಲ್ ಮಾಗಡಿ ಪ್ರದೇಶದ ಈ ಶಿಲಾಸಮಾಧಿಗಳ ಸುತ್ತಲೂ ವೃತ್ತಾಕಾರದಲ್ಲಿ ಎಂಟು ಕಲ್ಲುಬಂಡೆಗಳನ್ನು ಇಲ್ಲವೆ ಚಪ್ಪಡಿಗಳನ್ನು ನೆಡಲಾಗಿದೆ. ಇನ್ನೊಂದು ರೀತಿಯ ಮೂರರಿಂದ ನಾಲ್ಕು ಅಡಿ ಎತ್ತರವುಳ್ಳ, ಕಲ್ಲಿನ ಮಂಟಪದಂತಹ ಶಿಲಾಸಮಾಧಿಗಳು ಭೂಮಿ ಇಲ್ಲವೇ ಬಂಡೆಗಳ ಮೇಲೆ ರಚನೆಯಾಗಿವೆ. ಸ್ಥಳೀಯರು ಇವುಗಳನ್ನು ಪಾಂಡವರ ಗುಡಿಗಳೆಂದು ಕರೆದು ಪೌರಾಣಿಕ ಮಹತ್ವ ನೀಡಿದ್ದಾರೆ.[೧೫]

ಉಪಸಂಹಾರ: ಹೀಗೆ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಎಂಬಲ್ಲಿ ಕಬ್ಬಿಣ ಯುಗಕ್ಕೆ ಸೇರಿರಬಹುದಾದ ಅವಶೇಷಗಳು ದೊರೆತಿರುವುದು ಇತಿಹಾಸಜ್ಞರ ಸಂಶೋಧನಾತ್ಮಕ ಮನೋಸ್ಥಿತಿಗೆ ಸವಾಲೆಸೆಯುವಂತಹ ವಿಷಯವಾಗಿರುವುದು ಗಮನಾರ್ಹ ಸಂಗತಿಯಾಗಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಇಂತಹ ಸಮಾಧಿಗಳು ಇನ್ನೂ ಸಿಗುತ್ತಲೇ ಇವೆ. ತುಮಕೂರು ಜಿಲ್ಲೆಯ ಅಂತಹ ಪ್ರಮುಖ ನೆಲೆಯಾಗಿದೆ. ಇಲ್ಲಿ ಇನ್ನೂ ಬಹಳ ಸಂಶೋಧನೆಗಳು ಆಗಬೇಕಾಗಿದ್ದು ಕರ್ನಾಟಕದ ಪ್ರಾಚೀನತೆಯು ಮತ್ತಷ್ಟು ಹಿಂದಕ್ಕೆ ಸರಿಯುವ ಎಲ್ಲಾ ಲಕ್ಷಣಗಳಿವೆ.

ಅಡಿಟಿಪ್ಪಣಿಗಳು ಮತ್ತು ಪರಾಮರ್ಶನ ಗ್ರಂಥಗಳು

೧. ರಾಮದಾಸ ರೆಡ್ಡಿ, ಎಸ್.ಜಿ. (೨೦೧೧) ಕ್ಷೇತ್ರಕಾರ್ಯ ಇತಿಹಾಸ ಮತ್ತು ಪುರಾತತ್ವ ಶೋಧ ಕಾರ್ಯ ರೇಣುಕ ಶ್ರೀ ಪ್ರಕಾಶನ, ಮೈಸೂರು. ಪು. ೪೪.

೨. ರಮೇಶ್ ನಾಯಕ (ಸಂ) (೨೦೦೭), ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪು. ೧೩.

೩. ರಾಮದಾಸ ರೆಡ್ಡಿ, ಎಸ್.ಜಿ. (೨೦೧೧) ಕ್ಷೇತ್ರಕಾರ್ಯ ಇತಿಹಾಸ ಮತ್ತು ಪುರಾತತ್ವ ಶೋಧ ಕಾರ್ಯ ರೇಣುಕ ಶ್ರೀ ಪ್ರಕಾಶನ, ಮೈಸೂರು. ಪು. ೪೪.

೪. ವಸಂತ ಶೆಟ್ಟಿ, ದಕ್ಷಿಣ ಕನ್ನಡ ಜಿಲ್ಲೆಯ ನೂತನ ಶಿಲಾಯುಗ, ಇತಿಹಾಸ ದರ್ಶನ-೨, ಸಂ.೧, (೧೯೮೭) ಕರ್ನಾಟಕ ಇತಿಹಾಸ ಅಕಾದೆಮಿ.

೫. ಈ ಕೆಳಕಂಡ ಸಂಶೋಧನಾ ಪುಸ್ತಕಗಳು ಸಂಶೋಧನಾತ್ಮಕ ಲೇಖನಗಳನ್ನು ಹೊಂದಿವೆ-ಹೊಳಕಲ್ಲು ಬೆಟ್ಟದ ಇತಿಹಾಸ, ಮೂಗನಾಯಕನ ಕೋಟೆಯ ಇತಿಹಾಸ, ಹುನಗುಂದ ತಾಲ್ಲೂಕಿನ ಶೋಧನೆಗಳು, ದೊಡ್ಡಬಳ್ಳಾಪುರದ ಶೋಧನೆಗಳು, ಆನೇಕಲ್ ತಾಲ್ಲೂಕಿನ ಸಂಶೋಧನೆ ಇತ್ಯಾದಿ.

೬ ಶಿವತಾರಕ್ ಕೆ.ಬಿ. (೨೦೦೧), ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪು. ೦೮.

೭. ಶಿವತಾರಕ್ ಕೆ.ಬಿ. ಅದೇ ಪು. ೨೭೦ ರಿಂದ ೩೨೨.

೮. ಶಿವತಾರಕ್ ಕೆ.ಬಿ. ತುಮಕೂರು ಜಿಲ್ಲೆಯ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿ, ಇತಿಹಾಸ ದರ್ಶನ, ೧೫.

೯. ಇತಿಹಾಸ ದರ್ಶನ, ಸಂ.೧೭, (೨೦೦೨), ಪು. ೧೨.

೧೦. ಗುರುರಾಜ್. ಜಿ.ಕೆ. (೧೯೭೦), ಕರ್ನಾಟಕ ಶಿಲಾಯುಗ ಸಂಸ್ಕೃತಿ, ಪ್ರಚಾರ ಪುಸ್ತಕ ಮಾಲೆ, ೧೭೨, ಪ್ರಸಾರಾಂಗ, ಮೈಸೂರು ವಿ.ವಿ.

೧೧. ಕನ್ನಡ ವಿಷಯ ವಿಶ್ವಕೋಶ, (ಸಂ-೨, ಪರಿಷ್ಕೃತ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೭, ಪು. ೧೬೫೫.

೧೨. ಯೋಗೀಶ್ವರಪ್ಪ ಡಿ.ಎನ್. ಕಲ್ಪಶೋಧ, ತುಮಕೂರು ಜಿಲ್ಲೆಯ ಸಂಶೋಧನಾ ಲೇಖನಗಳು, ಪ್ರಗತಿ ಗ್ರಾಫಿಕ್ಸ್, ೨೦೧೨, ಪು. ೩೯೯.

೧೩. ಗಣಪತಿ ಗೌಡ, (೧೯೯೨), ಇತ್ತೀಚಿನ ಕೆಲವು ಪುರಾತತ್ವ ಶೋಧಗಳು, ಇತಿಹಾಸ ದರ್ಶನ, ಸಂ-೦೭.

೧೪. ನರಸಿಂಹಮೂರ್ತಿ ಎ.ವಿ. (ಸಂ.) (೧೯೭೮), ಆರ್ಕಿಯಾಲಜಿ ಆಫ್ ಕರ್ನಾಟಕ, ಪ್ರಸಾರಾಂಗ, ಮೈಸೂರು, ಪು. ೯೩.

೧೫. ಮುನಿರಾಜಪ್ಪ (೨೦೦೫), ಮಾಗಡಿ ಸೀಮೆ, ಇತಿಹಾಸ ಸಂಸ್ಕೃತಿ, ಸ್ಫೂರ್ತಿ ಪ್ರಕಾಶನ, ಹೊಸಪಾಳ್ಯ, ಮಾಗಡಿ, ಪು. ೧೩ ಮತ್ತು ವಿಜಯ ಕರ್ನಾಟಕ ಪತ್ರಿಕೆಯ ವರದಿ ದಿನಾಂಕ ಜುಲೈ ೧೨, ೨೦೧೪ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸ್ಥಳೀಯ ಜನರಿಂದ ಮೌಖಿಕ ಮಾಹಿತಿ.

೭

ಬೆಟ್ಟಹಳ್ಳಿ ಪಾಳ್ಯ ಮತ್ತಿತರ ನೆಲೆಗಳಲ್ಲಿ ಪ್ರಾಗ್ ಮತ್ತು ಇತಿಹಾಸ ಕಾಲದ ಕುರುಹುಗಳು

ಡಾ. ಎಚ್.ಎಸ್. ಗೋಪಾಲರಾವ್* ವೇದಾವತಿ ಎಸ್. ಬಾಲು*

ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ಮಾಚೋನಾಯಕನ ಹಳ್ಳಿ, ಪಾಪಾಬೋವಿ ಪಾಳ್ಯ, ಬೆಟ್ಟಹಳ್ಳಿ ಪಾಳ್ಯ ಗ್ರಾಮಗಳ ಆಸುಪಾಸಿನಲ್ಲಿ ಕಳೆದ ವರ್ಷ (೨೦೧೮) ಮಾರ್ಚ್ ತಿಂಗಳು ಪ್ರಾಗಿತಿಹಾಸ ಕಾಲದ ಕೆಲವು ಬೃಹತ್ ಶಿಲಾಯುಗದ ಸಮಾಧಿಗಳು ಮತ್ತು ಇತಿಹಾಸ ಕಾಲದ ವೀರಗಲ್ಲುಗಳು ಬೆಳಕಿಗೆ ಬಂದಿವೆ. ಇವು ಬೆಳಕಿಗೆ ಬರಲು ನೆಲಮಂಗಲದ ಸಿದ್ಧಗಂಗಾ ಪದವಿ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ವಿಶೇಷ ರಾಷ್ಟ್ರೀಯ ಸೇವಾ ಯೋಜನಾ ಶಿಬಿರವು ಕಾರಣವಾಗಿದೆ.

ಮೊದಲಿಗೆ ಪ್ರಾಗಿತಿಹಾಸ ಕಾಲದ ಕುರುಹುಗಳನ್ನು ಪರಿಚಯಿಸಿಕೊಂಡು ನಂತರ ಇತಿಹಾಸ ಕಾಲದ ಕುರುಹುಗಳತ್ತ ಗಮನ ಹರಿಸಬಹುದು. ಈಗಾಗಲೇ ನೆಲಮಂಗಲ ತಾಲ್ಲೂಕಿನಲ್ಲಿ ಪ್ರಾಗಿತಿಹಾಸ ಕಾಲದ ಕೆಲವು ನೆಲೆಗಳನ್ನು, ವಿಶೇಷವಾಗಿ ಬೃಹತ್ ಶಿಲಾಯುಗದ ಸಮಾಧಿಗಳನ್ನು ಕೆಲವು ಸಂಶೋಧಕರು ಗಮನಿಸಿ ಬೆಳಕಿಗೆ ತಂದಿದ್ದಾರೆ. ಅವುಗಳ ಪೈಕಿ ಎಲೆಕ್ಯಾತನಹಳ್ಳಿ[೧], ಬಂಡೆಚಿಕ್ಕನಹಳ್ಳಿ[೨], ಬಿಲ್ಲನಕೋಟೆ[೩], ಮಹದೇವಪುರ[೪], ಮಹಿಮಾಪುರ[೫], ಮಾದೀಪುರ[೬], ಮೈಲನಹಳ್ಳಿ[೭] ಮತ್ತು ಶ್ರೀನಿವಾಸಪುರ[೮]ಗಳು ಮುಖ್ಯವಾದವು. ಇವುಗಳಿಗೆ ಸಂಬಂಧಿಸಿದ ಬಹುತೇಕ ಎಲ್ಲ ಲೇಖನಗಳೂ ಸಹಜವಾಗಿಯೇ ಕಣ್ಣಿಗೆ ಕಾಣುವ ಬೌತಿಕ ಸ್ವರೂಪದ ಸಮಾಧಿಗಳ ಪರಿಚಯವಷ್ಟೆ. ಬೃಹತ್ ಶಿಲಾಯುಗದ ಸಮಾಧಿಗಳನ್ನು ಹೊರಗೆ ಕಾಣುವಷ್ಟರ ಮಟ್ಟಿಗೆ ನೋಡಿ, ಆ ಬಗ್ಗೆ ಸ್ಥೂಲವಾಗಿ ಹೇಳಲು ಮಾತ್ರ ಸಾಧ್ಯವಾಗುತ್ತದೆ. ಈವರೆಗೆ ಬೃಹತ್ ಶಿಲಾಯುಗ ಕಾಲದ ಬಗ್ಗೆ ಆಗಿರುವ ಅಧ್ಯಯನಗಳನ್ನು ಆಧರಿಸಿ, ನಮ್ಮ ಕಣ್ಣಿಗೆ ಕಾಣುವ ವಸ್ತುವಿಶೇಷಗಳ ಬಗ್ಗೆ ತಿಳಿಸಿದರೆ ಹವ್ಯಾಸಿ ಸಂಶೋಧಕರ ಮತ್ತು ವೃತ್ತಿಪರ ಸಂಶೋಧಕರ ಕೆಲಸ ಮುಗಿದಂತೆ. ಅಲ್ಲಿಂದ ಮುಂದಕ್ಕೆ ಬೃಹತ್ ಶಿಲಾ ಯುಗದ ಸಮಾಧಿಗಳನ್ನು ಉತ್ಖನನ ಮಾಡಿ ಅಧ್ಯಯನವನ್ನು ಮುಂದುವರಿಸಲು ಹಲವು ಘಟ್ಟಗಳಿವೆ. ಆ ಘಟ್ಟಗಳನ್ನು ದಾಟುವುದು ಸುಲಭದ ಮಾತಲ್ಲ. ಈ ಕಾರಣದಿಂದ ಹಲವು ಬೃಹತ್‌ಶಿಲಾಸಮಾಧಿಗಳು ಪತ್ತೆಯಾದರೂ, ಅವುಗಳ ಬಗ್ಗೆ ಪರಿಚಯಾತ್ಮಕ ಮಾಹಿತಿ ನೀಡಲು ಮಾತ್ರ ಸಾಧ್ಯವಾಗುತ್ತದೆ. ಇದರಿಂದ ಆಯಾ ಪ್ರದೇಶದ ಜನರಿಗೆ ಅವುಗಳ ಬಗ್ಗೆ ಇರುವ ಕೆಟ್ಟ ಕುತೂಹಲಕ್ಕೆ ಕಡಿವಾಣ ಬೀಳುವುದರ ಜೊತೆಗೆ ಆಯಾ ಪ್ರದೇಶದ ವಿದ್ಯಾವಂತ ಯುವ ಜನಾಂಗಕ್ಕೆ ತಮ್ಮ ಸ್ಥಳದ ಇತಿಹಾಸ ಪೂರ್ವ ಮತ್ತು ಇತಿಹಾಸ ಕಾಲದ ಪರಿಚಯ ಆಗುತ್ತದೆ. ಹೀಗೆ ಬೃಹತ್‌ಶಿಲಾಸಮಾಧಿಗಳು ಮಾತ್ರವಲ್ಲದೆ ಐತಿಹಾಸಿಕ ಕುರುಹುಗಳು ಒಂದಷ್ಟು ಕಾಲ ಸುರಕ್ಷಿತವಾಗಿ ಉಳಿಯುತ್ತವೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳು ಒಂದಷ್ಟು ಐತಿಹಾಸಿಕ ಕುರುಹುಗಳನ್ನು ಉಳಿಸುತ್ತಿರುವುದು ಶ್ಲಾಘನೀಯ.

ಬೃಹತ್ ಶಿಲಾಯುಗದ ಸಮಾಧಿಗಳು

ಮಾಚೋನಾಯಕನಹಳ್ಳಿಯ ಪೂರ್ವಕ್ಕಿರುವ ಖಾಸಗಿ ಒಡೆತನದ ನೀಲಗಿರಿ ತೋಪಿನಲ್ಲಿ ಸುಮಾರು ೨೦ಕ್ಕೂ ಹೆಚ್ಚು ವೃತ್ತಾಕಾರದ ಕಲ್ಲಿನ ಜೋಡಣೆಗಳಿವೆ. ಬೃಹತ್ ಶಿಲಾಯುಗದ ಸಮಾಧಿಗಳನ್ನು ಸಾಮಾನ್ಯವಾಗಿ ಕಲ್ಲುಗಳನ್ನು ವೃತ್ತಾಕಾರದಲ್ಲಿ ಜೋಡಿಸಿ ನಿರ್ಮಿಸಲಾಗಿರುತ್ತದೆ. ಸುತ್ತಲೂ ವೃತ್ತಾಕಾರದ ಅಂಚಿನಲ್ಲಿ ಕಲ್ಲುಗಳನ್ನು ನೆಟ್ಟರಲಾಗುತ್ತದೆ ಮತ್ತು ಅವುಗಳನ್ನು ಬಿಟ್ಟು ನಡುವಿನಲ್ಲಿ ಕಲ್ಲು ಚಪ್ಪಡಿಯನ್ನು ಇಡಲಾಗಿರುತ್ತದೆ. ಈ ಕಲ್ಲು ಚಪ್ಪಡಿಗಳು ಸುಸ್ಥಿತಿಯಲ್ಲಿದ್ದಾಗ, ಭಾರೀ ಗಾತ್ರ ಮತ್ತು ವಿಸ್ತೀರ್ಣದ್ದಾಗಿರುತ್ತವೆ. ಮುಚ್ಚುಕಲ್ಲನ್ನು ತೆಗೆದರೆ, ಒಳಗೆ ನಾಲ್ಕು ಕಲ್ಲುಗಳನ್ನು ಪೆಟ್ಟಿಗೆಯಂತೆ ಜೋಡಿಸಿ, ಅದರ ಒಳಗೆ ಸತ್ತ ವ್ಯಕ್ತಿಯ ಅಸ್ಥಿ ಮತ್ತು ಆ ವ್ಯಕ್ತಿ ಬಳಸುತ್ತಿದ್ದ ಆಯುಧ, ಮಡಕೆ, ಕುಡಿಕೆ ಇತ್ಯಾದಿಗಳನ್ನು ಇಡಲಾಗಿರುತ್ತದೆ. ಅದರ ಮೇಲೆ ಭಾರೀ ಗಾತ್ರದ ಕಲ್ಲು ಚಪ್ಪಡಿಯನ್ನು ಸುಲಭವಾಗಿ ಎತ್ತಲಾಗದಂತೆ ಮತ್ತು ಜರುಗಿಸಲಾಗದಂತೆ ಮುಚ್ಚಲಾಗಿರುತ್ತದೆ. ಅದರ ಸುತ್ತಲೂ

* [illegible], 'ವೃಷ್ಟಿಶ್ರೀ ಸ್ಕಂದ', [illegible] ರಸ್ತೆ, [illegible], ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-[illegible]

ವೃತ್ತಾಕಾರದಲ್ಲಿ ಕಲ್ಲುಗಳನ್ನು ಓರೆಯಾಗಿ ಜೋಡಿಸಲಾಗಿರುತ್ತದೆ. ಪೆಟ್ಟಿಗೆಯ ಲಕ್ಷಣವನ್ನು ಆಧರಿಸಿ, ಅದು ಎಂತಹ ಸಮಾಧಿ ನಿರ್ಧರಿಸಲಾಗುತ್ತದೆ. ಅಲ್ಲಿ ದೊರೆತ ಮಡಕೆ, ಆಯುಧ ಇತ್ಯಾದಿಗಳ ಮಾದರಿಗಳನ್ನು ಆಧರಿಸಿ, ಅವುಗಳ ಕಾಲವನ್ನು ನಿರ್ಧರಿಸಲಾಗುತ್ತದೆ. ಪ್ರಸ್ತುತ ಪ್ರಸ್ತಾಪಿಸುತ್ತಿರುವ ಪ್ರದೇಶದ ಆಸುಪಾಸಿನಲ್ಲಿ ಕಂಡುಬಂದಿರುವ ಬೃಹತ್ ಶಿಲಾಯುಗದ ಸಮಾಧಿಗಳ ಬಗ್ಗೆ ಹೇಳಬಹುದಾದರೆ, ಇಲ್ಲಿ ದೊರೆತಿರುವ ಸಮಾಧಿಗಳು ಕಿಂಡಿ ಕೋಣೆಗಳ ಮಾದರಿಯವು. ಆ ಹೊತ್ತಿಗಾಗಲೇ ದಿಕ್ಕುಗಳ ಪರಿಚಯ ಮನುಷ್ಯನಿಗೆ ಚೆನ್ನಾಗಿಯೇ ಆಗಿತ್ತು ಎಂದು ತಿಳಿಯುತ್ತದೆ.

ಮಾಚೋನಾಯಕನಹಳ್ಳಿಯ ಬೃಹತ್ ಶಿಲಾಯುಗದ ಸಮಾಧಿಗಳು ಕಿಂಡಿಕೋಣೆಯ ಮಾದರಿಯವು. ಇಲ್ಲಿನ ಬಹುತೇಕ ಸಮಾಧಿಗಳ ಸುತ್ತಳತೆ ಒಂದೇ ಆಗಿದೆ. ಮಾದರಿಯೂ ಒಂದೇ ಆಗಿದೆ. ಈ ಸಮಾಧಿಗಳಿರುವ ಜಮೀನು ಉಳುಮೆಗೆ ದಕ್ಕಿರುವುದರಿಂದ ಬಹುತೇಕ ಎಲ್ಲವೂ ವಿನಾಶದ ಅಂಚಿನಲ್ಲಿವೆ. ಈಗ ಸುಮಾರು ೨೫ಕ್ಕೂ ಹೆಚ್ಚು ಸಮಾಧಿಗಳು, ಎರಡು ಅಥವಾ ಮೂರು ಸಾಲಿನಲ್ಲಿ, ಉತ್ತರ–ದಕ್ಷಿಣ ದಿಕ್ಕಿನಲ್ಲಿ ಉಳಿದಿವೆ. ಇಲ್ಲಿ ಇದಕ್ಕೂ ಹೆಚ್ಚಿನ ಸಮಾಧಿಗಳು ಇದ್ದ ಸಾಧ್ಯತೆಗಳಿವೆ. ಈ ಪ್ರದೇಶದ ಮಣ್ಣು ಮರಳು ಮಿಶ್ರಿತವಾಗಿರುವುದರಿಂದ. ಕೆಲವು ಕೆಲಸಗಳಿಗಾಗಿ ಇಲ್ಲಿನ ಮಣ್ಣನ್ನು ಮರಳಿನ ಬದಲಿಗೆ ಉಪಯೋಗಿಸಲಾಗುತ್ತಿರುವುದರಿಂದ ಇಲ್ಲಿನ ಸಮಾಧಿಗಳು ನೆಲಸಮವಾಗುತ್ತಿವೆ. ಇವುಗಳ ಉತ್ಖನನ ಮಾಡಿದರೆ, ಇವುಗಳ ಬಗ್ಗೆ ಹೆಚ್ಚಿನ ವಿಚಾರಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ. ಇಲ್ಲಿ ಜನವಸತಿ ಇತ್ತು ಎಂದು ಸಮಾಧಿಗಳು ಸೂಚಿಸುತ್ತವೆಯಾದರೂ, ಜನವಸತಿಗೆ ಆಶ್ರಯವಾದ ಮತ್ತು ನೆಲೆ ನಿಂತ ಜನರಿಗೆ ಅಗತ್ಯವಾದ ನೀರಿಗೆ ಎಂತಹ ವ್ಯವಸ್ಥೆ ಇತ್ತು ಎಂಬುದರ ಎಲ್ಲ ಸುಳಿವುಗಳೂ ಮರೆಯಾಗಿವೆ. ಬೆಟ್ಟ–ಗುಡ್ಡಗಳು ಮತ್ತು ಹರಿಯುವ ಅಥವಾ ನಿಂತ ನೀರಿನ ಸೌಲಭ್ಯ ಈಗ ಇಲ್ಲವಾದರೂ, ಒಂದು ಕಾಲಕ್ಕೆ ಈ ಪ್ರದೇಶದಲ್ಲಿ ಕಾಡುಗಳಿದ್ದುದಕ್ಕೆ ಸಾಕ್ಷಿಯಾಗಿ ಈಗಲೂ ಇಲ್ಲಿನ ಆಸುಪಾಸಿನ ಕೆಲವು ಪ್ರದೇಶಗಳನ್ನು ಸಂರಕ್ಷಿತ ಅರಣ್ಯ ಎಂದು ಕರೆಯಲಾಗುತ್ತಿದೆ. ಇಲ್ಲಿನ ಬೃಹತ್ ಶಿಲಾಯುಗದ ಸಮಾಧಿಗಳು ದಿಣ್ಣೆಯಂತಹ ಸ್ಥಳದಲ್ಲಿ ನಿರ್ಮಾಣಗೊಂಡಿವೆ. ಕೆಲವು ಸಮಾಧಿಗಳು ಜನರ ನಿರ್ಲಕ್ಷ್ಯ ಅಥವಾ ಮಳೆಯ ನೀರಿನ ಕೊರೆತದಿಂದ ಹಾಳಾಗಿವೆ. ಆ ಸಮಾಧಿಗಳ ಒಳಗೆ ಏನಾದರೂ ವಸ್ತುಗಳು ದೊರೆತಿದ್ದುವೆ ಎಂದು ತಿಳಿಸುವ ಜನರೂ ನಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾಣಲಿಲ್ಲ. ಕುತೂಹಲವಿದ್ದವರಿಗೆ ಮಾತ್ರ ಕಾಣುವಂತಿರುವ ಈ ಬೃಹತ್ ಶಿಲಾಯುಗದ ಸಮಾಧಿಗಳು ಇನ್ನೆಷ್ಟು ದಿನ ಉಳಿಯುತ್ತವೆಯೋ ತಿಳಿದಿಲ್ಲ.

ನೆಲಮಂಗಲಕ್ಕೆ ಸಮೀಪದ ರೈಲ್ವೆಗೊಲ್ಲಹಳ್ಳಿಯ ಪಕ್ಕದ ಬೆಟ್ಟಹಳ್ಳಿ ಪಾಳ್ಯದ ನಡುವೆ ಗೊಲ್ಲಹಳ್ಳಿ–ತ್ಯಾಮಗೊಂಡಲು ರಸ್ತೆ ಹಾದುಹೋಗುತ್ತದೆ. ತ್ಯಾಮಗೊಂಡಲುವಿನ ಕಡೆ ಹೋಗುವಾಗ, ರಸ್ತೆಯ ಎಡಬದಿಗೆ ಉಚಿತ ನಿವೇಶನಗಳು ಮತ್ತು ಅವುಗಳಲ್ಲಿ ಕಟ್ಟಲಾಗಿರುವ ಕೆಲವು ಮನೆಗಳಿದ್ದು, ಬಲಬದಿಗೆ ವಿಶಾಲವಾದ ಒಂದು ತೋಪಿದೆ. ಈ ತೋಪಿನಲ್ಲಿರುವ ಎಲ್ಲ ಮರಗಳೂ ತೀರಾ ಹಳೆಯವು ಎನ್ನುವಂತಿಲ್ಲ. ಕೆಲವು ಮರಗಳು ಮಾತ್ರ ಹಳೆಯವು. ಈ ಮರಗಳ ನಡುವೆ ಸುಮಾರು ೧೧ರಿಂದ ೧೨ ಬೃಹತ್ ಶಿಲಾಯುಗದ ಸಮಾಧಿಗಳಿವೆ. ಈ ಶಿಲಾವೃತ್ತಗಳು ಸುಮಾರು ೨೦ ಅಡಿ ವ್ಯಾಸದವು. ತೋಪಿನ ನಡುವೆ ಇರುವ ಯಾವ ಸಮಾಧಿಯೂ ನಾಶವಾದಂತೆ ಕಾಣುವುದಿಲ್ಲ. ತೋಪಿನ ಉತ್ತರಕ್ಕೆ ಕೆಲವು ಬಂಡೆಗಳಿದ್ದು, ಅವುಗಳ ನಡುವಿನ ಕೆಲವು ಸಮಾಧಿಗಳು ನಾಶವಾಗಿವೆ. ಈಗ ಆ ಪ್ರದೇಶದಲ್ಲಿ ತೋಟವೋ ಅಥವಾ ಉದ್ಯಮವೋ ಇದ್ದು, ಸಧ್ಯದಲ್ಲೇ ಆ ಭಾಗವು ಆಧುನಿಕ ಕಟ್ಟಡಗಳ ನಿರ್ಮಾಣಕ್ಕೆ ಅಣಿಯಾಗಿರುವಂತಿದೆ. ಹಾಗಾದಾಗ ಅಲ್ಲಿ ಸೇರಿಕೊಂಡಿರುವ ಮತ್ತು ಆಸುಪಾಸಿನಲ್ಲಿರುವ ಕೆಲವು ಬೃಹತ್ ಶಿಲಾಯುಗದ ಸಮಾಧಿಗಳು ನಾಶವಾಗುವ ಸೂಚನೆಗಳಿವೆ. ಇಲ್ಲಿ ಕಾಣುವ ಬಹುತೇಕ ಎಲ್ಲ ಸಮಾಧಿಗಳೂ ಕಿಂಡಿ ಕೋಣೆಯ ಮಾದರಿಯವು: ಒಂದು ಅಥವಾ ಎರಡು ವೃತ್ತಗಳಿರುವ ಬೃಹತ್ ಶಿಲಾಯುಗದ ಸಮಾಧಿಗಳಲ್ಲಿ ಕೆಲವದರ ಮುಚ್ಚಳ ಕಲ್ಲುಗಳು ಕಾಣೆಯಾಗಿವೆ; ಒಂದು ಸಮಾಧಿಯನ್ನಂತೂ ಒಂದು ಅಡಿಯಷ್ಟು ಆಳಕ್ಕೆ ತೆಗೆಯಲಾಗಿದೆ. ಆದರೂ ಒಳಭಾಗ ಕಾಣುವಂತಿಲ್ಲ. ಈ ಪ್ರದೇಶವನ್ನು ಸಂರಕ್ಷಿಸುವ ಅಗತ್ಯತೆ ಇದೆ.

ಇಲ್ಲಿನ ಒಂದು ಬೃಹತ್ ಶಿಲಾಯುಗದ ಸಮಾಧಿಯ ವಿಶೇಷವೆಂದರೆ, ಒಂದು ದೊಡ್ಡ ವೃತ್ತದ ನಡುವೆ ನಾಲ್ಕು ಸಣ್ಣಸಣ್ಣ ವೃತ್ತಗಳಿವೆ. ಇವೆಲ್ಲವೂ ಸಮವಾಗಿವೆ ಮತ್ತು ದೊಡ್ಡ ವೃತ್ತದ ಪರಿಧಿಯಿಂದ ಆಚೆ ಇಲ್ಲ. ಒಂದು ದೊಡ್ಡ ವೃತ್ತವನ್ನು ನಾಲ್ಕು ಸಮಾನ ಭಾಗಗಳನ್ನಾಗಿ ವಿಭಾಗಿಸಿರುವ ಜ್ಯಾಮಿತೀಯ ಜ್ಞಾನವು ಆಶ್ಚರ್ಯ ಹುಟ್ಟಿಸುತ್ತದೆ. ಈವರೆಗಿನ ಅಧ್ಯಯನವನ್ನು ಆಧರಿಸಿ ಹೇಳುವುದಾದರೆ, ಇದು ಒಂದೇ ಕುಟುಂಬದ ನಾಲ್ವರ ಸಮಾಧಿಯಾಗಿರಬಹುದು ಅಥವಾ ಯಾವುದೋ ಸಂದರ್ಭದಲ್ಲಿ ಒಟ್ಟಿಗೆ ಸತ್ತ ನಾಲ್ವರ ಸಮಾಧಿಯಾಗಿರಬಹುದು. ಈ ಬಗ್ಗೆ ಸಧ್ಯಕ್ಕೆ ಊಹೆಗೆ ಅವಕಾಶ ಇದೆಯಷ್ಟೇ ಹೊರತು ಖಚಿತವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ.

ಸ್ಥಳೀಯರ ಹೇಳಿಕೆಯ ಪ್ರಕಾರ ತೋಪಿನ ಎದುರುಬದಿಯಲ್ಲಿ, ರಸ್ತೆಯ ಪಕ್ಕದಲ್ಲಿನ ಉಚಿತ ನಿವೇಶನಗಳ ಪೈಕಿ

ಒಂದು ನಿವೇಶನದಲ್ಲಿ ಮನೆಯನ್ನು ನಿರ್ಮಿಸಲು ತಳಪಾಯ ತೋಡುತ್ತಿದ್ದಾಗ, ಇಂತಹುದೇ ವೃತ್ತಗಳು ಕಂಡು ಬಂದಿದ್ದು, ಅವುಗಳನ್ನು ಅಗೆದಾಗ ಒಳಗೆ ಕಬ್ಬಿಣದ ಭರ್ಜಿ, ಕೆಲವು ಮಡಕೆ ಮತ್ತು ಕುಡಿಕೆಗಳು ದೊರೆತಿದ್ದವು. ಇನ್ನೂ ಕೆಲವು ನಿವೇಶನಗಳಲ್ಲೂ ಇಂತಹ ಹಲವು ವಸ್ತುಗಳು ದೊರೆತಿದ್ದವು. ಈಗ ಅವುಗಳಲ್ಲಿ ನೋಡಲು ಒಂದೂ ಲಭ್ಯವಾಗಲಿಲ್ಲ.

ಇಲ್ಲಿನ ವಸ್ತುಸ್ಥಿತಿಯನ್ನು ಗಮನಿಸಿದರೆ, ಈ ಸ್ಥಳವು ಉತ್ಖನನಕ್ಕೆ ಯೋಗ್ಯವಾಗಿದ್ದು, ಉತ್ಖನನದ ಫಲಿತಗಳು ಮಹತ್ವದ ಮಾಹಿತಿಯನ್ನು ಒದಗಿಸಬಲ್ಲವು. ಈ ಬೃಹತ್ ಶಿಲಾಯುಗದ ನೆಲೆಯು ಬರ್ಜಿ ಬೆಟ್ಟದ ಪೂರ್ವ ಭಾಗದಲ್ಲಿದ್ದು, ಜನವಸತಿಗೆ ಬೆಟ್ಟವು ಆಶ್ರಯ ನೀಡಿರುವ ಸಾಧ್ಯತೆ ಇದೆ. ಅಲ್ಲದೆ, ಬೆಟ್ಟದ ಮೇಲಿರುವ ಹೊಂಡದಲ್ಲೂ ಸಾಮಾನ್ಯವಾಗಿ ಸದಾ ನೀರಿರುವುದರಿಂದ ನೀರಿನ ಆಶ್ರಯವೂ ಉತ್ತಮವಾಗಿದೆ. ಈ ನೆಲೆಯು ಬೆಟ್ಟಕ್ಕೆ ಹೊಂದಿಕೊಂಡಂತಿರುವುದರಿಂದ ಇದನ್ನು ಬೆಟ್ಟಹಳ್ಳಿ ಎಂದು ಕರೆದಿರುವಂತಿದೆ.

ಈ ನೆಲೆಗೆ ಸಮೀಪ ಇರುವ ಬೋಳಮಾರನಹಳ್ಳಿಗೆ ಸೇರಿದ ನೀಲಗಿರಿ ತೋಪಿನಲ್ಲೂ ಹಲವು ಬೃಹತ್ ಶಿಲಾಯುಗದ ಸಮಾಧಿಗಳಿದ್ದು, ಆ ಪ್ರದೇಶದಲ್ಲಿ ಬಡಾವಣೆಯೊಂದು ರೂಪುಗೊಳ್ಳುತ್ತಿರುವುದರಿಂದ, ರಸ್ತೆ, ಚರಂಡಿ ಇತ್ಯಾದಿ ಕಾಮಗಾರಿಗಳ ಸಂದರ್ಭದಲ್ಲಿ ಹಲವು ಸಮಾಧಿಗಳು ನಾಶವಾಗಿವೆ.

ಸ್ಮಾರಕ ಶಿಲೆಗಳು

ಮಾಚೋನಾಯಕನಹಳ್ಳಿಯ ರಸ್ತೆಯ ಬದಿಯಲ್ಲಿ ಹೂತುಹೋಗಿದ್ದ ಒಂದು ಕಲ್ಲು ಚಪ್ಪಡಿಯನ್ನು ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು ಹೊರತೆಗೆದಾಗ ಅದರ ಎರಡೂ ಬದಿಗಳಲ್ಲಿ ಉಬ್ಬುಶಿಲ್ಪಗಳಿದ್ದು, ಅವುಗಳ ಪೈಕಿ ಒಂದು ಬದಿಯ ಶಿಲ್ಪವು ವಿಶೇಷ ಎನಿಸುತ್ತದೆ. ಸುಮಾರು ಏಳು ಅಡಿ ಉದ್ದ, ನಾಲ್ಕು ಅಡಿ ಅಗಲ ಮತ್ತು ಒಂದು ಅಡಿ ದಪ್ಪ ಇರುವ ಚಪ್ಪಡಿಯ ಒಂದು ಬದಿಯಲ್ಲಿ ಅಡ್ಡಡ್ಡಲಾಗಿ ಮೂವರು ವೀರರ ಉಬ್ಬುಶಿಲ್ಪಗಳಿವೆ. ಮೂವರ ನಡುವೆಯೂ ಸಮಾನ ಅಂತರವಿದೆ. ಎಡತುದಿಯಲ್ಲಿ ಎಡಹೆಜ್ಜೆಯನ್ನು ಮುಂದಿಟ್ಟು, ಚಲನಸ್ಥಿತಿಯಲ್ಲಿರುವ ವೀರನು ಎರಡೂ ಕೈಗಳಲ್ಲಿ ಭರ್ಜಿಯೊಂದನ್ನು ಹಿಡಿದು, ಮುನ್ನುಗ್ಗುತ್ತಿದ್ದಾನೆ. ಚೂಪಾದ ಮುಂದಿನ ಭಾಗವನ್ನು ಎಡಗೈನಲ್ಲಿ ಮತ್ತು ಹಿಡಿಯನ್ನು ಬಲಗೈನಲ್ಲಿ ಹಿಡಿದು ತಿವಿಯಲು ಸಿದ್ಧನಾಗಿದ್ದಾನೆ. ಮಧ್ಯೆ ಇರುವ ವೀರ ಬಲಗೈನಲ್ಲಿ ಕತ್ತಿ ಮತ್ತು ಎಡಗೈನಲ್ಲಿ ಗುರಾಣಿ ಹಿಡಿದಿದ್ದಾನೆ. ಇವನೂ ಮುಂದೆ ನುಗ್ಗುವ ಸ್ಥಿತಿಯಲ್ಲೇ ಇದ್ದಾನೆ. ಈಗ ಪ್ರಸ್ತಾಪಿಸಿದ ಇಬ್ಬರೂ ವೀರರ ತಲೆಯ ಮೇಲಿನ ಶಿಖೆಯನ್ನು ಪೇಟದಂತೆ ಕಟ್ಟಲಾಗಿದೆ. ಬಲಬದಿಯಲ್ಲಿರುವ ವೀರನು ಎಡಗೈನಲ್ಲಿ ಬಿಲ್ಲನ್ನು ಹಿಡಿದು, ಬಲಗೈನಿಂದ ಬಾಣ ಪ್ರಯೋಗ ಮಾಡಲು ಅಣಿಯಾಗಿದ್ದಾನೆ. ಇಡೀ ಸ್ಮಾರಕ ಶಿಲೆಯ ವಿಶೇಷ ಆಕರ್ಷಣೆಯೆಂದರೆ, ಈ ವೀರನ ಶಿಖೆಯು ಜಡೆಗಟ್ಟಿ, ಬಲಬದಿಗೆ ಇಳಿಬಿದ್ದಿದೆ. ಈ ಉಬ್ಬುಶಿಲ್ಪವು ಕಾಳಾಮುಖ ಯತಿಯನ್ನು ನೆನಪಿಗೆ ತರುತ್ತದೆ. ಶೈಲಿಯ ಆಧಾರದ ಮೇಲೆ ಈ ಸ್ಮಾರಕವನ್ನು ೧೧ನೆಯ ಶತಮಾನದ ಉತ್ತರಾರ್ಧ ಅಥವಾ ೧೨ನೆಯ ಶತಮಾನದ ಪೂರ್ವಾರ್ಧಕ್ಕೆ ಸೇರಿಸಬಹುದಾಗಿದೆ. ಸಾಮಾನ್ಯವಾಗಿ ಆ ಕಾಲದ ಸ್ಮಾರಕಶಿಲೆಗಳಲ್ಲಿ ಸ್ಮಾರಕದ ಕೊನೆಯ ಹಂತದಲ್ಲಿ ಲಿಂಗವನ್ನು ಪೂಜಿಸುತ್ತಿರುವ ಕಾಳಾಮುಖ ಯತಿಯ ಶಿಲ್ಪವನ್ನು ಕಾಣಬಹುದಷ್ಟೇ ಹೊರತು ಮೊದಲನೆಯ ಅಂದರೆ ಹೋರಾಟದ ಚಿತ್ರಣವಿರುವ ಭಾಗದಲ್ಲಿ ಸಾಮಾನ್ಯವಾಗಿ ಕಾಣಲಾಗುವುದಿಲ್ಲ. ಒಂದೇ ಮುಖವಾಗಿ ಮತ್ತು ಒಂದೇ ರೀತಿಯ ಚಲನೆಯಲ್ಲಿ ಮೂವರು ವೀರರೂ ಇರುವುದರಿಂದ, ಇದು ಮೂವರು ವೀರರು ಒಟ್ಟಿಗೇ ಸಾಮಾನ್ಯ ಶತೃವಿನ ವಿರುದ್ಧ ಹೋರಾಟದಲ್ಲಿ ನಿರತರಾಗಿರುವ ಘಟನೆಯನ್ನು ದಾಖಲಿಸಿರುವಂತಿದೆ. ಪ್ರತಿಯೊಬ್ಬನ ಕೈಲೂ ಇರುವ ಆಯುಧಗಳು ಬೇರೆ ಆಗಿರುವುದರಿಂದ ಮತ್ತು ಒಬ್ಬನ ಜಟೆಯು ಧಾರ್ಮಿಕ ವೀರನೊಬ್ಬನನ್ನು ಸಂಕೇತಿಸಿರುವುದರಿಂದ ಇದು ಯಾವುದೋ ಒಂದು ಧಾರ್ಮಿಕ ಹೋರಾಟದ ಘಟನೆಯ ಸ್ಮಾರಕ ಎನಿಸುತ್ತದೆ. ಈ ಭಾಗದಲ್ಲಿ ಯಾವುದೇ ಧಾರ್ಮಿಕ ಹೋರಾಟದ ಸೂಚನೆಗಳು ಈವರೆಗೆ ದೊರೆತಿಲ್ಲವಾದರೂ, ನೆಲಮಂಗಲ ತಾಲ್ಲೂಕು ೧೧-೧೨ನೆಯ ಶತಮಾನದಲ್ಲಿ ಪ್ರಬಲ ಕಾಳಾಮುಖ ಕ್ಷೇತ್ರವಾಗಿದ್ದ ಸುಳಿವನ್ನು ಸೋಲದೇವನಹಳ್ಳಿಯ[7] ಮತ್ತು ಬಿನ್ನಮಂಗಲದ[10] ಶಾಸನಗಳು ನೀಡುತ್ತವೆ. ಆ ಸಂದರ್ಭದಲ್ಲಿ ಇಲ್ಲಿ ಧಾರ್ಮಿಕ ಘರ್ಷಣೆಗಳು ನಡೆದಿರುವ ಸಂಭವವಿದೆ. ಆದರೂ ಇದು ಒಂದು ಊಹೆ ಎನ್ನುವುದನ್ನು ಮರೆಯುವಂತಿಲ್ಲ.

ಈ ಮೇಲೆ ಪ್ರಸ್ತಾಪಿಸಿದ ಸ್ಮಾರಕದ ಇನ್ನೊಂದು ಪಕ್ಕ ಉದ್ದುದ್ದವಾಗಿ ಕೆತ್ತಿರುವ ಇಬ್ಬರು ವೀರರ ಉಬ್ಬುಶಿಲ್ಪಗಳಿವೆ. ಇಬ್ಬರೂ ಸಮಾನರಲ್ಲ ಎಂದು ಶಿಲ್ಪದ ಆಕಾರ ನೋಡಿಯೇ ಹೇಳಬಹುದು. ಈ ಇಬ್ಬರೂ ಪರಸ್ಪರ ಹೋರಾಟದಲ್ಲೂ ನಿರತರಾಗಿಲ್ಲ. ಒಬ್ಬರ ಜೊತೆಗೊಬ್ಬರು ನಿಂತಿದ್ದಾರೆ. ದೊಡ್ಡ ವ್ಯಕ್ತಿಯು ಎರಡೂ ಕೈಗಳನ್ನು ಇಳಿಬಿಟ್ಟಿದ್ದರೆ, ಕಿರಿಯ ವ್ಯಕ್ತಿಯು ತೋಳುಗಳನ್ನು ಮೇಲೆತ್ತಿ ಸ್ನಾಯುಗಳನ್ನು ಪ್ರದರ್ಶಿಸುತ್ತಿರುವಂತಿದೆ. ಈ ಉಬ್ಬುಶಿಲ್ಪವೂ ಕ್ರಿ.ಶ. ೧೧-೧೨ನೆಯ ಶತಮಾನಕ್ಕೆ ಸೇರುತ್ತದೆ ಎಂದು ಊಹಿಸಬಹುದು. ಒಂದೇ ಕಲ್ಲಿನಲ್ಲಿ ಎರಡು ಸ್ಮಾರಕಗಳನ್ನು ಕೆತ್ತಲು ಅವಕಾಶ ಮಾಡಿಕೊಂಡಿರುವುದು ವಿಶೇಷ ಎನಿಸುತ್ತದೆ.



ಬೆಟ್ಟಹಳ್ಳಿ ಪಾಳ್ಯದ ಬೃಹತ್ ಶಿಲಾಯುಗದ ಸಮಾಧಿ

ಮಾಚೋನಾಯಕನಹಳ್ಳಿಯಿಂದ ನೈಋತ್ಯಕ್ಕೆ ಸುಮಾರು ಒಂದು ಕಿ.ಮೀ. ದೂರದಲ್ಲಿರುವ ಪಾಪಾಬೋವಿ ಪಾಳ್ಯಕ್ಕೆ ಸೇರಿದ ಒಂದು ಹೊಲದಲ್ಲಿ ಎರಡು ಸ್ಮಾರಕ ಶಿಲೆಗಳಿದ್ದು, ಅವುಗಳಲ್ಲಿ ಒಂದು ವೀರಮಾಸ್ತಿಯನ್ನೂ, ಮತ್ತೊಂದು ಹಂದಿ ಬೇಟೆಯನ್ನೂ ದಾಖಲಿಸಿವೆ. ಹಂದಿ ಬೇಟೆಯ ವೀರಗಲ್ಲಿನಲ್ಲಿ ಆಯುಧ ಹಿಡಿದ ಇಬ್ಬರು ವೀರರು ಹಂದಿಯೊಂದರ ಜೊತೆಗೆ ಹೋರಾಡುತ್ತಿರುವ ಮತ್ತು ಅವರಿಗೆ ಕೆಲವು ನಾಯಿಗಳು ಸಹಕರಿಸುತ್ತಿರುವ ಚಿತ್ರಣವಿದೆ. ಈ ಪ್ರದೇಶವನ್ನು ಈಗಲೂ ಸಂರಕ್ಷಿತ ಅರಣ್ಯ ಎಂದು ಕರೆಯಲಾಗುತ್ತಿದೆ. ಬೂದಿಹಾಳ್ ಅರಣ್ಯ ಪ್ರದೇಶಕ್ಕೆ ಸೇರಿದಂತಿರುವ ಇಲ್ಲಿ ಈಗ ಕಾಡುಹಂದಿಗಳು ಇರುವುದರ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲವಾದರೂ, ಮೊಲ, ಕಾಡುಕೋಳಿ, ನರಿ ಇತ್ಯಾದಿ ಪ್ರಾಣಿಗಳಿರುವುದನ್ನು ನನ್ನ ಕೆಲವು ವಿದ್ಯಾರ್ಥಿ ಮಿತ್ರರು ಹಿಂದೆ ತಿಳಿಸಿದ್ದರು. ಒಂದು ಕಾಲಕ್ಕೆ ಈ ಪ್ರದೇಶದಲ್ಲಿ ಕಾಡುಹಂದಿಗಳೂ ಇದ್ದುದಕ್ಕೆ ಈ ಸ್ಮಾರಕ ಸಾಕ್ಷಿಯಾಗಿದೆ.



ಪಾಪಾಬೋವಿ ಪಾಳ್ಯದ ವೀರಗಲ್ಲು



ಪಾಪಾಬೋವಿ ಪಾಳ್ಯದ ಹಂದಿ ಬೇಟೆಯ ವೀರಗಲ್ಲು

ಈ ಪ್ರದೇಶದಲ್ಲಿ ಇನ್ನೂ ಹಲವು ಸ್ಮಾರಕ ಶಿಲೆಗಳಿವೆ. ಆಯುಧ ಹಿಡಿದು, ಹೋರಾಟಕ್ಕೆ ಸನ್ನದ್ಧನಾಗಿ ನಿಂತಿರುವ ವೀರ, ಒಬ್ಬ ಸಾಮಾನ್ಯ ವೀರ ಇತ್ಯಾದಿ ಉಬ್ಬುಶಿಲ್ಪಗಳ ಜೊತೆಗೆ ಎರಡು ಪಾಲಾಗಿ ಬಿದ್ದಿರುವ ಒಂದು ವೀರಗಲ್ಲು ನಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ಹಲವು ವರ್ಷಗಳವರೆಗೆ ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ನೆಲೆಗಳಿದ್ದುದೇ ತಿಳಿದಿರಲಿಲ್ಲ. ಈಗ ಪರಸ್ಪರ ಹೊಂದಿಕೊಂಡಂತೆಯೇ ಹಲವು ಪ್ರದೇಶಗಳಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ಪತ್ತೆಯಾಗಿರುವುದರಿಂದ, ತಜ್ಞರು ಉತ್ಖನನ ನಡೆಸುವುದರ ಮೂಲಕ ಈ ಪ್ರದೇಶದ ಇತಿಹಾಸಪೂರ್ವ ಬದುಕಿನ ಬಗೆಗೆ ಮತ್ತು ಸ್ಮಾರಕ ಶಿಲೆಗಳ ಅಧ್ಯಯನದ ಮೂಲಕ ಇತಿಹಾಸ ಕಾಲದ ಬಗ್ಗೆ ಹೆಚ್ಚಿನ ಮಾಹಿತಿಗಳು ದೊರೆಯುವ ಸಾಧ್ಯತೆಗಳಿವೆ.

ಆಧಾರಸೂಚಿ

೧. ಇ.ದ. ೧೦, ೧೯೯೫, ಪು. ೧೮-೨೦.

೨. ಅದೇ, ೧೦.

೩. ಅದೇ, ೧೦.

೪. ಅದೇ, ೧೦.

೫. ಅದೇ, ೧೦.

೬ ಅದೇ, ೧೩, ೧೯೯೮, ಪು. ೧೩-೧೪.

೭. ಅದೇ, ೧೩.

೮. ಅದೇ, ೧೩.

೯. ಎ.ಕ. IX, ನೆಲಮಂಗಲ ೧, ಕಿ.ಶ. ೧೦೨೯.

೧೦. ಎ.ಕ. IX, ನೆಲಮಂಗಲ ೩, ಕ್ರಿ.ಶ. ೧೧೧೦.

೯

ಕೂಡ್ಲಿಗಿ ತಾಲ್ಲೂಕಿನ ಮಾನವಾಕೃತಿಯ ಶಿಲಾಶಿಲ್ಪಗಳು ಮತ್ತು ಬೃಹತ್ ಕಲ್ಗೋರಿಯ ಬಹುಮುಖೀ ಅಧ್ಯಯನ

ಡಾ. ಎಚ್. ಚಂದ್ರಶೇಖರ*

ಮಾನವಾಕೃತಿಯ ಚಿತ್ರಗಳು ಎಂದರೆ, ಮಾನವನನ್ನು ಚಿತ್ರಿಸುವ ಗೀರುಚಿತ್ರಗಳು ವರ್ಣಚಿತ್ರಗಳು ಮತ್ತು ಶಿಲಾಶಿಲ್ಪಗಳು ಸೇರುತ್ತವೆ. ಇವುಗಳಲ್ಲಿ ಕಾಷ್ಠಶಿಲ್ಪಗಳು ಸೇರಿಸಬಹುದಾಗಿದೆ. ಇದು ವ್ಯಾಪಕವಾದ ತೀರ ಶುದ್ಧವಾದ (strict definition) ವಿವರಣೆಯಾಗುತ್ತದೆ. ಆದರೆ, ಪ್ರಸ್ತುತ ಅಧ್ಯಯನವನ್ನು ಮಾನವಾಕೃತಿಯ ಶಿಲಾಶಿಲ್ಪಗಳಿಗೆ ಸೀಮಿತಗೊಳಿಸಲಾಗಿದೆ. ಕೆ.ಪಿ. ರಾವ್ ಅವರು (೨೦೦೦)ರಲ್ಲಿ ಒಂದು ಅವಲೋಕನದ ಲೇಖನ(Review paper)ವನ್ನು ಪ್ರಕಟಿಸಿದ್ದಾರೆ. ನರಸಿಂಹಯ್ಯನವರು ತಮಿಳುನಾಡಿನ ಮತ್ತೂರಿನಲ್ಲಿರುವ ಮಾನವಾಕೃತಿಯ ಚಿತ್ರಗಳನ್ನು ಪ್ರಕಟಿಸಿದ್ದಾರೆ (Anthropo moplic Figures) (೧೯೭೫) ಪೂಣಚ್ಚ ಅವರು ಕೂಡ್ಲಿಗಿ ತಾಲ್ಲೂಕಿನ ಮಾನವಾಕೃತಿಯ ಚಿತ್ರಗಳನ್ನು ಚರ್ಚಿಸಿದ್ದಾರೆ (೧೯೯೫-೯೬) ಇವರಿಬ್ಬರೂ "Figures" (ಚಿತ್ರಗಳು) ಎಂಬ ಶಬ್ದವನ್ನು ಬಳಸಿದ್ದರೂ, ವಾಸ್ತವವಾಗಿ ಅವುಗಳು ಶಿಲಾಶಿಲ್ಪಗಳೇ ಆಗಿವೆ. ಯಾಕೆಂದರೆ "ಚಿತ್ರ"ಕ್ಕೆ ಎರಡೇ ಆಯಾಮಗಳಿರುತ್ತವೆ (Two Dimenficons).

ಆದರೆ ಈ ಶಿಲ್ಪಗಳು ಸುಮಾರು ೭೦-೯೦ ಸೆಂ.ಮೀ. ದಪ್ಪವಿರುವದಿಂದ ಇವುಗಳನ್ನು ಶಿಲಾಶಿಲ್ಪಗಳೆಂದು ಹೆಸರಿಸಿದರೆ ಸರಿಯಾದೀತು. ನಾನು ಕುಮತಿಯಲ್ಲಿರುವ ಶಿಲಾಶಿಲ್ಪಗಳನ್ನು ಮತ್ತು ಬೃಹತ್ ಕಲ್ಗೋರಿಯನ್ನು ಎರಡು ಸಲ ಸಂದರ್ಶಿಸಿ ಅಧ್ಯಯನ ಮಾಡಿದ್ದೇನೆ (೧೯-೦೯-೧೯೯೬ ಮತ್ತು ೧೩ ಹಾಗೂ ೧೪ರಂದು ಜನವರಿ ೨೦೧೪). ತಿಪ್ಪೇಸ್ವಾಮಿಯವರು ಕೂಡ್ಲಿಗಿ ತಾಲ್ಲೂಕಿನ ಹುಲಿಕುಂಟೆಯ ಬಳಿಯ ಒಂದು ಮಾನವಾಕೃತಿಯ ಶಿಲ್ಪವನ್ನು ವರ್ಣಿಸಿದ್ದಾರೆ. (೧೯೯೯).

ಕುಮತಿ ಹಳ್ಳಿಯು ಕೂಡ್ಲಿಗಿ ತಾಲ್ಲೂಕಿನಲ್ಲಿದೆ. ಈ ಹಳ್ಳಿಯು, ಕೂಡ್ಲಿಗಿಯಿಂದ ಆಗ್ನೇಯ ದಿಕ್ಕಿನಲ್ಲಿ ಸುಮಾರು ೩೦ ಕಿ.ಮೀ. ದೂರದಲ್ಲಿದೆ. ಹುಲಿಕುಂಟೆ ಹಳ್ಳಿಯು ಕುಮತಿಯಿಂದ ವಾಯವ್ಯ ದಿಕ್ಕಿನಲ್ಲಿ ಸುಮಾರು ೨೦ ಕಿ.ಮೀ. ದೂರದಲ್ಲಿದೆ.

ಪ್ರಸ್ತುತ ಅಧ್ಯಯನವು ನಾಲ್ಕು ಉದ್ದೇಶಗಳನ್ನು ಹೊಂದಿದೆ:-

೧. ಸದರಿ ಮಾನವಾಕೃತಿಯ ಶಿಲಾ ಶಿಲ್ಪಗಳ ಪರಿಸ್ಥಿತಿಯೇನಾಗಿದೆ?

೨. ಈ ಶಿಲಾಶಿಲ್ಪಗಳನ್ನು ಉದ್ಭವ ಶಿಲಾ ಗುಂಡುಗಳಲ್ಲಿ (In-situ boulders) ಕೆತ್ತಲಾಗಿದೆಯೋ ಅಥವಾ ಬೇರೆ ಕಡೆಯಲ್ಲಿ ಲಭ್ಯವಿರುವ ಗುಂಡುಗಳಲ್ಲಿ ಕೊರೆದು ಸ್ಥಳಾಂತರಿಸಿ ತಂದು, ಸದ್ಯದ ಸ್ಥಳಗಳಲ್ಲಿ ನಿಲ್ಲಿಸಲಾಗಿದೆಯೇ?

೩) ಕುಮತಿಯ ಬೃಹತ್ ಕಲ್ಗೋರಿಯ ಪರಿಸ್ಥಿತಿ ಹೇಗಿದೆ ಹಾಗೂ ಈ ಶಿಲಾಫಲಕಗಳ ಮೂಲ ಯಾವುದು?

೪) ಕೊಡಗು ಜಿಲ್ಲೆಯ 'ಎರವರು' ಎಂಬ ಬುಡಕಟ್ಟು ಜನಾಂಗದ ಆಚರಣೆಗಳೊಂದಿಗೆ ಈ ಮಾನವಾಕೃತಿಯ ಶಿಲ್ಪಗಳನ್ನು ಹೋಲಿಸಬಹುದೇ?

ಕುಮತಿಯ ಮಾನವಾಕೃತಿಯ ಶಿಲ್ಪಗಳು

ಕುಮತಿಯ ಪೂರ್ವ ದಿಕ್ಕಿನಲ್ಲಿ ೩ ಕಿ.ಮೀ. ಅಂತರದಲ್ಲಿ, ಒಂದು ಸಣ್ಣ ಕೆರೆಯ ಬಳಿ ಎರಡು ಶಿಲ್ಪಗಳಿವೆ. ಈ ಕೆರೆಯು ಅಪರೂಪವಾಗಿ ನೀರಿನಿಂದ ತುಂಬಿರುತ್ತದೆ. ಸದ್ಯ ಇಲ್ಲಿ ಬೀಳುವ ವಾರ್ಷಿಕ ಮಳೆ ೫೦೦ ಮಿ.ಮೀ. ಒಂದು ಶಿಲ್ಪದ ಎತ್ತರ ೨.೯೫ ಮೀ. ಮತ್ತು ಒಂದು ಹಸ್ತದಿಂದ ಇನ್ನೊಂದು ಹಸ್ತದ ಅಗಲ ೧.೮೧ ಮೀ. ಇದೆ. ಇನ್ನೊಂದು ಶಿಲ್ಪದ ಎತ್ತರ ೨.೯ ಮೀ. ಇದೆ. ಮತ್ತು ಅಗಲ ೨.೪೫ ಮೀ. ಇದೆ. ಮೂರನೆಯ ಶಿಲ್ಪವನ್ನು ಕತ್ತರಿಸಲಾಗಿದೆ. ಅದರ ಎತ್ತರ ೨೦ ಸೆಂ.ಮೀ. ಮತ್ತು ಅಗಲ ೭೩ ಸೆಂ.ಮೀ. ಇದೆ. ಈ ಎಲ್ಲಾ ಶಿಲ್ಪಗಳು ೩೦-೪೦ ಸೆಂ.ಮೀ. ದಪ್ಪ ಇವೆ.

ದಿನಾಂಕ ೧೩-೦೧-೨೦೧೪ರಂದು ಸಂದರ್ಶಿಸಿದಾಗ ಈ ಎರಡೂ ಎತ್ತರದ ಶಿಲಾಶಿಲ್ಪಗಳ ಅಡಿಯಲ್ಲಿ ಯಾರೋ ಒಂದೊಂದು ಕುಣಿಗಳನ್ನು ಅಗೆದಿದ್ದಾರೆ. ಆ

* 'ಸಂಗಮ', ಎಮ್‌ಐಜಿ-೭೭, ೬ನೇ ಕ್ರಾಸ್, ೬ನೇ ಮೇನ್, ಕೆ ಹೆಚ್ ಬಿ ಕಾಲೋನಿ, ೨ನೇ ಹಂತ, ಬಸವೇಶ್ವರನಗರ, ಬೆಂಗಳೂರು-೭೯

ಕುಣಿಗಳು ೯೦ ಸೆಂ.ಮೀ ಆಳವಾಗಿದ್ದು ಅಗಲವು ೮೫ ಸೆಂ.ಮೀ ಮತ್ತು ೧.೧೬ ಸೆಂ.ಮೀ. ಇದೆ. ಈ ಕೃತ್ಯ, ಯಾರೋ ಮೂರ್ಖ ನಿಧಿಶೋಧಕರ ಕೆಲಸವಾಗಿದೆ ಇಂದು ಹೇಳಬಹುದು.

ಸದರಿ ಶಿಲಾಶಿಲ್ಪಗಳನ್ನು ನೈಸಿಕ್ ಗ್ರಾನೈಟ್‌ಕಲ್ಲಿನಲ್ಲಿ (Gneissic Granitic Rock) ಕಡೆಯಲಾಗಿದೆ. ಈ ಶಿಲ್ಪಗಳ ಸುತ್ತಲೂ ३-४ ಕಿ.ಮೀ. ಅಳತೆಯಲ್ಲಿ ಯಾವ ಗುಡ್ಡವು ಇಲ್ಲ. ಅಲ್ಲದೆ ನಿಧಿಶೋಧಕರು ತೋಡಿರುವ ಕುಣಿಗಳಲ್ಲಿ ಇಳಿದು ಶೋಧಿಸಿದಾಗ ಯಾವ ಬಗೆಯ ಬುನಾದಿ ಕಟ್ಟಡ (Foundation Stone structure) ಕಾಣಲಿಲ್ಲ. ಇದರರ್ಥ ವೇನೆಂದರೆ ಅಂದಿನ ಆದಿ ಮಾನವನು ಉದ್ಭವ ಬಂಡೆಗಳಲ್ಲಿ (Insitu boulders) ಈ ಮಾನವಾಕೃತಿಯ ಶಿಲ್ಪಗಳನ್ನು ಕಡೆದಿದ್ದಾನೆ. ಉದ್ಭವ ಬಂಡೆಗಳಲ್ಲಿರುವ ಸೂಕ್ಷ್ಮವಾದ ಭೇದಗಳನ್ನು ಗುರ್ತಿಸಿ ಈ ಶಿಲ್ಪಗಳನ್ನು ಅಂದಿನ ಆದಿಮಾನವ ಕಡೆದಿದ್ದಾನೆ. ಅಂದಿನ ಮಾನವನು ತನ್ನ ಕಲಾ ಸೃಷ್ಟಿಯನ್ನು ಮಾಡಿದ್ದನೆಂದರೆ ಶ್ಲಾಘನೀಯವೇ ಸರಿ.

ಹುಲಿಕುಂಟೆಯ ಮಾನವಾಕೃತಿಯ ಶಿಲ್ಪ: ಸದರಿ ಶಿಲ್ಪವು ಸಧ್ಯಗಣಗಾರಿಕೆಯಲ್ಲಿರುವ (Quarrying) ನೈಸಿಕ್ (Gneissic) ಕಲ್ಲುಗಣಿಯ ಪಕ್ಕದಲ್ಲಿದೆ. ಈ ಶಿಲ್ಪದ ಎತ್ತರ ೧.೭೬ ಮೀ. ಇದ್ದು, ೧.೧೭ ಮೀ. ಅಗಲವಾಗಿದೆ. ನಿಧಿ ಶೋಧಕರು, ಶಿಲ್ಪದ ಪಕ್ಕದಲ್ಲಿಯೇ ಒಂದು ಕುಣಿಯನ್ನು ತೋಡಿದ್ದಾರೆ. ಈ ಕುಣಿಯು ೧.೫ ಮೀ. ಆಳವಾಗಿದೆ. ಈ ಕುಣಿಯ ಉದ್ದ ೧.೮ ಮೀ. ಇದೆ ಹಾಗೂ ಅಗಲ ೧.೫ ಮೀ ಇದೆ. ಶಿಲ್ಪವು ಕೆಳಕ್ಕೆ ಉರುಳಿಲ್ಲ. ಕುಣಿಯಲ್ಲಿ ಬುನಾದಿಯ ಕಟ್ಟಡವಿಲ್ಲ. ಕುಮತಿಯಲ್ಲಿಯಂತೆ ಉದ್ಭವ ಬಂಡೆಯಲ್ಲಿ ಆದಿಮಾನವನು ಈ ಶಿಲ್ಪವನ್ನು ಕೆತ್ತಿದ್ದಾನೆ.

ಬೃಹತ್ ಕಲ್ಗೋರಿ: ಈ ಬೃಹತ್ ಕಲ್ಗೋರಿಯು ಕುಮತಿ ಗ್ರಾಮದ ತೀರ ಹತ್ತಿರದಲ್ಲಿದೆ. ಈ ಕಲ್ಗೋರಿಯು ತುಂಬಾ ದೊಡ್ಡದು. ಇದರ ನಾಲ್ಕು ಶಿಲಾಫಲಕಗಳು (Stone slabs) ನೈಸಿಕ್ ಗ್ರಾನೈಟ್ ಕಲ್ಲಿನ ಫಲಕಗಳಾಗಿವೆ. ೧೯೯೬ರಲ್ಲಿ ಈ ಕಲ್ಗೋರಿಯು ಸುಸ್ಥಿತಿಯಲ್ಲಿತ್ತು. ಈ ಕಲ್ಗೋರಿಯನ್ನು ಸ್ಥಳೀಯರು "ಮೂಗು ಮಲೇರಗುಡಿ" ಎಂದು ಕರೆಯುತ್ತಾರೆ. ಇದು ಶ್ರೀ ಅಂಕಲಪ್ಪನವರ ಹೊಲದಲ್ಲಿದೆ. ಸದ್ಯ ಕಲ್ಗೋರಿಯ ಎಲ್ಲಾ ಫಲಕಗಳು ಬಿದ್ದಿವೆ (೨೦೧೪) ಇದಕ್ಕೆ ಕಾರಣ ನಿಧಿ ಶೋಧಕರು ನಾಲ್ಕು ಕಡೆಗಳಲ್ಲಿ ಕುಣಿಗಳನ್ನು ತೋಡಿದ್ದಾರೆ. ಕುಣಿಗಳು ಅರ್ಧ ಮೀಟರ್ ಆಳವಾಗಿವೆ. ಅಕ್ಕ ಪಕ್ಕದ ಶಿಲಾಫಲಕಗಳ ಅಳತೆ ಸುಮಾರು ३ ಮೀ. ಇದೆ. ಶಿಲಾಫಲಕವು ३.३೫ (३.३೫) ಚೌಕಾಕಾರದಲ್ಲಿದೆ. ಒಂದು ಶಿಲಾಫಲಕದಲ್ಲಿ ३೦ ಸೆಂ.ಮೀ. ವ್ಯಾಸದ ರಂಧ್ರವಿದೆ.

ಈ ಕಲ್ಗೋರಿಯ ಫಲಕಗಳನ್ನು ಪೂರ್ವದಿಕ್ಕಿನಲ್ಲಿರುವ ನೈಸಿಕ್ ಗ್ರ್ಯಾನೈಟ್ ಚಿಕ್ಕ ಗುಡ್ಡಗಳಲ್ಲಿ ಕೊರೆಯಲಾಗಿದೆ. ಗುಡ್ಡದಿಂದ ಕಲ್ಗೋರಿಯ ಕಡೆಗೆ ಭೂಮಿಯು ಇಳುಕಲಾಗಿದೆ. ಇಲ್ಲಿಯ ಮಣ್ಣು ಮರಳು ಮಿಶ್ರಿತ ಕೆಂಪು ಮಣ್ಣು ಶಿಲಾಫಲಕಗಳನ್ನು ಗುಡ್ಡದಿಂದ ಕೆಳಗೆ ಸ್ಥಳಾಂತರಿಸಲಾಗಿದೆ. ಆಗ, ದೊಡ್ಡ ದೊಡ್ಡ ಮರದ ದಿಮ್ಮಿಗಳ ಮೇಲೆ (Wooden logs) ನಿಧಾನವಾಗಿ ಉರುಳಿಸಿಕೊಂಡು ಬಂದು ಕಲ್ಗೋರಿಯ ನಿವೇಶನದ ಮೇಲೆ ನಿಲ್ಲಿಸಲಾಗಿದೆ. ಇದೊಂದು ಎಂಜಿನಿಯರಿಂಗ್ ಸಾಹಸವೆಂದೇ (Engineering feat) ಹೇಳಬೇಕು. ಇದರ ಇನ್ನೊಂದು ಅರ್ಥವೆಂದರೆ ಕುಮತಿಯ ಪ್ರದೇಶದಲ್ಲಿ ದೊಡ್ಡ ಮರಗಳ ಅರಣ್ಯವಿತ್ತು. ಇಂಥ ಅರಣ್ಯ ಬೆಳೆಯಲು ಕನಿಷ್ಠ ಪ್ರತಿವರ್ಷ ೧೦೦೦ ಮಿ.ಮೀ. ಮಳೆ ಬೀಳುತ್ತಿರಲೇಬೇಕು. ಈಗ ಕೇವಲ ೫೦೦ ಮಿ.ಮೀ. ವಾರ್ಷಿಕ ಮಳೆ ಪಡೆಯುವ ಈ ಪ್ರದೇಶವು ಒಳ್ಳೆಯ ಮಳೆಯನ್ನು ಪಡೆಯುತ್ತಿತ್ತು ಎಂದರೆ ತಪ್ಪಾಗದು.

ಬುಡಕಟ್ಟು ಜನಾಂಗದ ಆಚರಣೆ: ಕೊಡಗು ಜಿಲ್ಲೆಯ ಅರಣ್ಯದಲ್ಲಿ "ಎರವರು" ಎಂಬ ಬುಡುಕಟ್ಟು ಜನಾಂಗದ ಜನರು ವಾಸಿಸುತ್ತಿದ್ದಾರೆ. ಈ ಜನರು ಮೃತರ ಬಗ್ಗೆ, ಮೃತರಾದ ಹತ್ತನೇ ದಿನದಂದು ಒಂದು ವಿಶಿಷ್ಟವಾದ ಆಚರಣೆಯನ್ನು ಆಚರಿಸುತ್ತಾರೆ. ಇದು ಮೃತಪಟ್ಟವರಿಗೆ ಇಡೀ ಜನಾಂಗ ತೋರಿಸುವ ಗೌರವವೆಂದು ಹೇಳಲಾಗುತ್ತದೆ. ಹತ್ತನೆಯ ದಿನ ಮೃತರ ಸಮಾಧಿಯ ಸುತ್ತಲೂ ಈ ಹಳ್ಳಿಯ ಜನರು ಸೇರುತ್ತಾರೆ. ಈ ಜನಾಂಗದ ನಾಯಕನ ಹೆಸರು ಛಾತಾ. ಇವರ ನಿರ್ದೇಶನದಲ್ಲಿ, ಒಂದೊಂದು ಬಾಳೆಎಲೆಯ ಮೇಲೆ ಖಾದ್ಯ ವಸ್ತುಗಳನ್ನು ಇಟ್ಟು ಪೂಜೆಮಾಡಿ ನೈವೇದ್ಯ ಸಲ್ಲಿಸುತ್ತಾರೆ. ಪೂಜಾ ನಂತರ ವ್ಯಕ್ತಿಯೊಬ್ಬನು ಸಮಾಧಿಯ ಮೇಲೆ ಅಕ್ಕಿಕಾಳನ್ನು ಮಾನವಾಕೃತಿ ರೂಪದಲ್ಲಿ ಸಿಂಗರಿಸುತ್ತಾನೆ. ಕೊನೆಯಲ್ಲಿ ಸಾಮೂಹಿಕ ಭೋಜನಮಾಡಿ ನರ್ತಿಸುತ್ತಾರೆ. ಇದೊಂದು ರೀತಿಯಲ್ಲಿ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ "ಪರೋಕ್ಷ ವಿನಯ"ಕ್ಕೆ ಸಮನಾದುದು ಎಂದು ಹೇಳಬಹುದು. ಈ ಎಲ್ಲಾ ಆಚರಣೆಗಳನ್ನು ರಾಜ್ಯ ಸರ್ಕಾರದ ಸಮಾಚಾರ ಇಲಾಖೆಯು ಚಿತ್ರೀಕರಿಸಿದೆ.

ಮೇಲೆ ವಿವರಿಸಲಾಗಿರುವ ಕ್ಷೇತ್ರಕಾರ್ಯದ ಆಧಾರ ಮತ್ತು ಸಾಕ್ಷ್ಯಚಿತ್ರದ ವಿವರಗಳನ್ನು ಹೋಲಿಸಿದಾಗ, ಕೆಳಗೆ ಕಾಣಿಸಲಾಗಿರುವ ನಿರ್ಣಯಗಳಿಗೆ ನಾವು ತಲುಪುತ್ತೇವೆ.

೧. ಕುಮತಿ ಮತ್ತು ಹುಲಿಕುಂಟೆಯ ಮಾನವಾಕೃತಿಯ ಶಿಲಾಶಿಲ್ಪಗಳು, ಬುಡಕಟ್ಟು ಜನಾಂಗದ ಆಚರಣೆಯಂತೆ ಮರಣಹೊಂದಿದ ವ್ಯಕ್ತಿಗಳ ಬಗ್ಗೆ ಪ್ರಾಗೈತಿಹಾಸಿಕ ಜನರು ತೋರಿಸುವಂಥ ಗೌರವಸೂಚಕ ಸೃಷ್ಟಿ

ಗಳಾಗಿವೆ. ಇವರೆ ಕುಮತಿಯಲ್ಲಿ ಆಗಲೀ, ಹುಲಿಕುಂಟೆಯಲ್ಲಿ ಆಗಲಿ ಮಾನವನ ಅಸ್ಥಿಗಳಿಲ್ಲ. ಇವುಗಳು ಕೇವಲ ಕಲಾಸೃಷ್ಟಿಗಳು.

೨. ಕಲ್ಗೋರಿ ಮತ್ತು ಮಾನವಾಕೃತಿಗಳನ್ನು ಆದಿಮಾನವನು ನೈಸಿಕ್ ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದಾನೆ. ಮಾನವಾಕೃತಿಯ ಶಿಲ್ಪಗಳನ್ನು ಉದ್ಭವ ಕಲ್ಲುಗುಂಡಿನಲ್ಲಿ ಕಡೆದು ಮಾಡಲಾಗಿದೆ. ಕಲ್ಗೋರಿಯ ಶಿಲಾಫಲಕಗಳು ನೈಸಿಕ್ ಗ್ರಾನೈಟಿನ ಫಲಕಗಳಾಗಿವೆ.

೩. ಪ್ರಾಗೈತಿಹಾಸಿಕ ಕಾಲದಲ್ಲಿ ಕುಮತಿ–ಹುಲಿಕುಂಟೆಯ ಪ್ರದೇಶವು ದಟ್ಟವಾದ ಅರಣ್ಯ ಪ್ರದೇಶವಾಗಿತ್ತು.

[ಕೃತಜ್ಞತೆಗಳು: ನಾನು ಶ್ರೀ [illegible] ಸುಂದರ ಅವರೊಂದಿಗೆ ಚರ್ಚಿಸಿದ್ದೇನೆ. ಅವರ ಮಾರ್ಗದರ್ಶನಕ್ಕಾಗಿ ನಾನು ಕೃತಜ್ಞ. [illegible] "[illegible]" [illegible] ಛಾಯಾಚಿತ್ರ [illegible] ಉಪಕರಿಸಿದ್ದಾರೆ. ಹೊಸಪೇಟೆಯ ಎಂ.ಎಸ್.ಪಿ.ಎಲ್. ಕಂಪನಿಯವರು ಕ್ಷೇತ್ರಕಾರ್ಯಕ್ಕಾಗಿ ೨೦೧೧ರಲ್ಲಿ ಜೀಪನ್ನು ಒದಗಿಸಿದ್ದಾರೆ. ಡಾ|| ಕೆ.ಎನ್. ದೀಕ್ಷಿತರು, [illegible] ಅವರ ಸಂಪ್ರಬಂಧದ ಪ್ರತಿಯನ್ನು ನೀಡಿದ್ದಾರೆ. ಕರ್ನಾಟಕ ರಾಜ್ಯ ದೂರಸಂವೇದಿ ಕೇಂದ್ರದ ನಿರ್ದೇಶಕರಾದ ಡಾ|| ಪ್ರಭುರಾಜ ಮತ್ತು ಇವರೆಲ್ಲರಿಗೂ ನಾನು ಕೃತಜ್ಞ.]



Port hole ಬೀಳಿಸಿದ್ದರಿಂದ ಶಿಲಾಫಲಕವು ಬಿದ್ದಿದೆ (೧೪–೧–೨೦೧೪)



ಕುಮತಿಯ ಶಿಲಾಶಿಲ್ಪಗಳು ಮತ್ತು ಇತ್ತೀಚಿಗೆ ತೋಡಿರುವ ಕುಣಿ (೧೯–೦೧–೨೦೧೪)



೧೯–೦೯–೧೯೯೬ರಲ್ಲಿ ಸುಸ್ಥಿತಿಯಲ್ಲಿದ್ದ ಬೃಹತ್ ಕಲ್ಗೋರಿ ಬೃಹತ್ ಶಿಲಾಫಲಕ.



ರಂಧ್ರವಿರುವ ಫಲಕ. (೧೪–೦೧–೨೦೧೪)

ಆಧಾರಸೂಚಿ

೧. Narasimhaiah B, (1975). A monolithic figure of Mottor, Tamilnadu. Journal of the Oriental Institute, Baroda (25) pp. 157-59.

೨. Poonacha K.P., (1996). Anthropomorpinc Figures and other remains of Kumati, Puratatva. Vo 26, pp 118-119

೩. Rao K P (2000) Megalithic Anthropomorphic Statues: Meaning and Significance Indo-Pacific Pre-History Association. Bull No.19, Bol.3, pp.111-116.

೪. ಶಿವಸ್ವಾಮಿ.ಹೆಚ್. (೧೯೯೯). ಕೂಡ್ಲಿಗಿ ತಾಲೂಕಿನ ಅಪರೂಪದ ಮಾನವಾಕೃತಿಗಳು. ಇತಿಹಾಸ ದರ್ಶನ, ಸಂ. ೧೪, ಪು. ೧೯–೨೨.

೬

ಸಾಂತರ ಒಂದನೆಯ ಒಡ್ಡುಗನ ಅಪ್ರಕಟಿತ ನಾಗರಹಳ್ಳಿಯ ಶಿಲಾಶಾಸನ

ಜಯದೇವಪ್ಪ ಜೈನಕೇರಿ* ಡಾ. ಜಗದೀಶ**

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ನಾಗರಹಳ್ಳಿಯಲ್ಲಿ ಸಾಂತರರ ಕಾಲದ ಅಪ್ರಕಟಿತ ಶಿಲಾಶಾಸನ ದೊರಕಿದೆ. ಶಾಸನವು ದೀರ್ಘಚತುರಸ್ರ ಆಕಾರದಲ್ಲಿದ್ದು, ಸುಮಾರು ಎರಡು ಅಡಿ ಅಗಲ ಮತ್ತು ಒಂದು ಅಡಿ ದಪ್ಪವಿದೆ ಹಾಗೂ ನಾಲ್ಕು ಅಡಿ ಎತ್ತರವಿದೆ. ನಾಲ್ಕೂ ಮುಖದಲ್ಲಿ ಶಾಸನವಿದೆ. ಇನ್ನು ಸ್ವಲ್ಪ ಭಾಗ ಮಣ್ಣಿನಲ್ಲಿ ಹೂತು ಹೋಗಿದ್ದು ಮುಂಭಾಗದಲ್ಲಿ ಇನ್ನು ಎರಡು ಮೂರು ಸಾಲು ಇರುವ ಸಾಧ್ಯತೆ ಇದೆ.

ಮೊದಲು ಶಾಸನದ ಶಿಲ್ಪಪಟ್ಟಿಕೆಗಳನ್ನು ಗಮನಿಸಬಹುದಾಗಿದೆ. ಮೊದಲ ಪಟ್ಟಿಕೆಯಲ್ಲಿ ಮೂರು ಹೆಡೆಯ ಹಾವು, ಸೂರ್ಯ ಚಂದ್ರ, ಹಸು-ಕರು ಮತ್ತು ಬಲಕ್ಕೆ ಮುಖ ಮಾಡಿರುವ ಎರಡು ಮೀನುಗಳಿವೆ. ಎರಡನೆಯ ಪಟ್ಟಿಕೆಯಲ್ಲಿ ಇಬ್ಬರು ಯೋಧರು ಕತ್ತಿ ಮತ್ತು ಗುರಾಣಿ ಹಿಡಿದಿದ್ದಾರೆ. ಇವರ ಸೊಂಟದಲ್ಲಿ ಕಿರು ಕತ್ತಿಗಳಿವೆ (ಬಾಕು) ಮತ್ತು ಇಬ್ಬರು ಪ್ರಮುಖರು ಪರಸ್ಪರ ಎದಿರುಬದಿರಾಗಿ ಆಸನದ ಮೇಲೆ ಕುಳಿತಿದ್ದಾರೆ. ಒಬ್ಬನು ಎರಡು ಕೈಗಳಲ್ಲಿ ಹಾರವನ್ನು ಹಿಡಿದು ಮತ್ತೊಬ್ಬನಿಗೆ ನೀಡುತ್ತಿರುವಂತಿದೆ. ಮೂರನೆಯ ಪಟ್ಟಿಕೆಯಲ್ಲಿ ವ್ಯಕ್ತಿಯೊಬ್ಬನು ಕಂದುಕ ಮತ್ತು ಅದನ್ನು ಆಡಲು ಬಳಸುತ್ತಿದ್ದ ಕೋಲನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಇವನ ಸೊಂಟದಲ್ಲಿ ಕೂಡಾ ಕಿರು ಕತ್ತಿ ಇದೆ. ಸ್ತ್ರೀ ನೀರಿನ ಕೊಡವನ್ನು ಹಿಡಿದು ದಾನ ನೀಡುವಂತಿದೆ. ದಾನ ಸ್ವೀಕರಿಸುತ್ತಿರುವ ವ್ಯಕ್ತಿ ತನ್ನ ಕೈಯನ್ನು ಮುಂದೆ ಒಡ್ಡಿದ್ದಾನೆ. ಅವನ ಹಿಂದುಗಡೆ ಮತ್ತೊಬ್ಬ ವ್ಯಕ್ತಿ ನಿಂತಿದ್ದಾನೆ.

ಶಾಸನದ ಹಿಂಬದಿಯಲ್ಲಿ ಮೇಲ್ಗಡೆ ಮೂರು ಹೆಡೆಯ ಹಾವು, ಸೂರ್ಯ ಚಂದ್ರ, ಮತ್ತು ಎಡಕ್ಕೆ ಮುಖ ಮಾಡಿರುವ ಎರಡು ಮೀನುಗಳಿವೆ. ಹಿಂಬದಿಯಲ್ಲಿ ಕೆಳಗಡೆ ದಾನ ನೀಡುತ್ತಿರುವ ಸ್ತ್ರೀ ನೀರಿನ ಕೊಡವನ್ನು ಹಿಡಿದುಕೊಂಡಿದ್ದಾಳೆ. ಮತ್ತು ದಾನ ಸ್ವೀಕರಿಸುತ್ತಿರುವ ವ್ಯಕ್ತಿಯು ಒಂದು ಕೈಯನ್ನು ಮುಂದೆ ಮಾಡಿ ನೀರನ್ನು ಸ್ವೀಕರಿಸುತ್ತಿರುವುದು ಮತ್ತು ಇನ್ನೊಂದು ಕೈಯಲ್ಲಿ ಹಸುವಿಗೆ ಕಟ್ಟಿದ ಹಗ್ಗವನ್ನು ಹಿಡಿದುಕೊಂಡಿರುವಂತೆ ಚಿತ್ರಿಸಲಾಗಿದೆ. ದಾನ ನೀಡುವವರು ಮತ್ತು ಪಡೆಯುತ್ತಿರುವವರು ನಿಂತಿರುವ ಪೀಠದಲ್ಲಿ ಕೂಡಾ ಮೂರು ಹೆಡೆಯ ಹಾವು ಇದೆ. ಎಡಬದಿಯಲ್ಲಿ ಇರುವ ಎರಡು ಸಾಲಿನ ಶಾಸನದ ಕೆಳಗೆ ವ್ಯಕ್ತಿಯೊಬ್ಬನನ್ನು ಚಿತ್ರಿಸಲಾಗಿದೆ. ಪಾಂಡ್ಯರ ಲಾಂಛನ ಮೀನು ಇರುತ್ತದೆ, ಸಾಂತರ ಆಳ್ವಿಕೆಗಿಂತ ಮುಂಚೆ ಈ ಪ್ರದೇಶವು ಪಾಂಡ್ಯರ ಆಡಳಿತಕ್ಕೆ ಒಳಪಟ್ಟಿತ್ತು.

ನಾಗರಹಳ್ಳಿಯಲ್ಲಿ ಇತ್ತೀಚೆಗೆ ದೇವಾಲಯವೊಂದನ್ನು ನಿರ್ಮಿಸಿದ್ದಾರೆ. ಇದರಲ್ಲಿ ಐದು ಹೆಡೆಯ ಮನುಷ್ಯಾಕಾರದ ತಲೆ ಮತ್ತು ಕೈಗಳಲ್ಲಿ ಹಾರ ಹಿಡಿದಿರುವ ಮತ್ತು ಬಾಲವನ್ನು ಹೊಂದಿರುವ ಶಿಲ್ಪವಿದೆ. ಪ್ರಭಾವಳಿಯ ಬುಡದಲ್ಲಿ ಎರಡು ಮನುಷ್ಯ ದೇಹವುಳ್ಳ ಹಾವಿನ ಶಿಲ್ಪಗಳಿವೆ. ಪ್ರಭಾವಳಿಯ ಉದ್ದಕ್ಕೂ ಅನೇಕ ಹಾವಿನ ಮರಿಗಳಿವೆ.

ಹೊಸನಗರ ತಾಲ್ಲೂಕು ಮಣಸಟ್ಟೆ ಗ್ರಾಮದ ರಾಷ್ಟ್ರಕೂಟ ಕನ್ನರದೇವನ ಶಾಸನದಲ್ಲಿ ಸಾನ್ತರ ಅಮ್ಮಣದೇವನ ಉಲ್ಲೇಖವಿದೆ. ಸಾಗರ ತಾಲ್ಲೂಕು ಮಡಸೂರಿನ ಮತ್ತೊಂದು ಶಾಸನದಲ್ಲಿ ಶಾನ್ತರ ಅರಸನೊಬ್ಬನ ಉಲ್ಲೇಖವಿದೆ. ಈ ಕನ್ನರದೇವನು ರಾಷ್ಟ್ರಕೂಟರ ಎರಡನೆಯ ಕೃಷ್ಣ ಮತ್ತು ಈತನ ಆಳ್ವಿಕೆಯ ಅವಧಿ ಕ್ರಿ.ಶ. ೮೭೮-೯೧೪. ಹುಂಚದಲ್ಲಿ ಎರಡು ರಾಷ್ಟ್ರಕೂಟರ ಕಾಲದ ದೇವಾಲಯಗಳಿವೆ. ಕ್ರಿ.ಶ. ೯೫೦ಕ್ಕೆ ಸೇರಬಹುದಾದ ಪಾಳಿಯಕ್ಕನ ಪಾರ್ಶ್ವನಾಥ ಬಸದಿ (ಪಂಚಕೂಟ ಬಸದಿ ಆವರಣದಲ್ಲಿ) ಮತ್ತೊಂದು ಬಿಲ್ಲೇಶ್ವರ ಬಳಿ ಇರುವ ಕಮಠೇಶ್ವರ ದೇವಾಲಯ. ಕೋಟೆಯ ಸೋಮೇಯನಾಯಕನಿಂದ ಕಮಠೇಶ್ವರ ದೇವಾಲಯವು ಕ್ರಿ.ಶ. ೧೩೮೭ರಲ್ಲಿ ಪುನಃ ಪ್ರತಿಷ್ಠೆಗೊಳಪಟ್ಟಿದೆ.

ನಾಗರಹಳ್ಳಿಯ ಶಾಸನವು ರಾಷ್ಟ್ರಕೂಟ ಅಮೋಘವರ್ಷನ ಕಾಲದಲ್ಲಿ ಹೊರಡಿಸಲಾಗಿದೆ. ಶಾಸನೋಕ್ತ

* ನಂ. ೮೭, 'ಶಾಂತಲಾ' ಜಿಲ್ಲಾ ಪಂಚಾಯತಿ ಎದಿರು, ಶಿವಮೊಗ್ಗ-೫೭೭೨೦೧.
** ನಂ. ೬೬, ಮೊದಲ ಅಡ್ಡರಸ್ತೆ, ಹೊಸಮನೆ ಬಡಾವಣೆ, ಶಿವಮೊಗ್ಗ-೫೭೭೨೦೧.

ಹೇವಿಳಂಬಿ ಸಂವತ್ಸರ ಕ್ರಿ.ಶ. ೯೫೭ (ಶಾ.ಶ. ೮೭೯)ರಂದು ಬರುತ್ತದೆ. ಈ ಕಾಲಕ್ಕೆ ಮೂರನೆಯ ಅಮೋಘವರ್ಷ ಆಳುತ್ತಿದ್ದನು. ಈತನ ಆಳ್ವಿಕೆಯ ಕ್ರಿ.ಶ. ೯೩೬ರ ಮಾಸಣಗಿ ಮತ್ತು ಕ್ರಿ.ಶ. ೯೪೨ ರೂಗಿಯ ಎರಡು ಶಾಸನಗಳು ದೊರಕಿವೆ. ಈತನು ಕ್ರಿ.ಶ. ೯೩೯ರಲ್ಲಿ ಮರಣ ಹೊಂದಿದನೆಂದು ತಿಳಿಯಲಾಗಿದೆ.

ಹುಂಚದಲ್ಲಿನ ಕ್ರಿ.ಶ. ೧೦೭೭ರ ಶಾಸನದಲ್ಲಿನ ವಿವರದಂತೆ ಬೀರ ಶಾನ್ತರ ಹಾಗೂ ಬೀರಲ ಮಹಾದೇವಿಗೆ ದಶರಥನಿಗಿದ್ದಂತೆ ನಾಲ್ಕು ಮಕ್ಕಳಿದ್ದರು. ಇವರು ತೈಲ, ಗೊಗ್ಗಿ, ಒಡ್ಡುಗ ಮತ್ತು ಬಮ್ಮ. ನಾಗರಹಳ್ಳಿಯ ಕ್ರಿ.ಶ. ೯೩೭ರ ಶಾಸನದಲ್ಲಿ ಒಡ್ಡುಗನ ಉಲ್ಲೇಖ ಬರುತ್ತಿದೆ. ನಾಗರಹಳ್ಳಿಯ ಒಡ್ಡುಗ ಅಮ್ಮಣದೇವ ನಂತರ ಬರುತ್ತಾನೆ.

ಸಾಂತರರ ಬಿರುದಾವಳಿಗಳಲ್ಲಿ ಬರುವ ಮೃಗಧ್ವಜ ಉತ್ತರಮಧುರಾಧೀಶ್ವರ ಉಲ್ಲೇಖ ಈ ಶಾಸನದಲ್ಲಿ ಕೂಡಾ ಬಂದಿದೆ. ಈ ಎರಡು ಶಾಸನಗಳ ಅಂತರ ಸುಮಾರು ೧೩೮ ವರ್ಷ. ಇದರಿಂದಾಗಿ ಇಬ್ಬರು ಒಡ್ಡುಗರನ್ನು ಬೇರ್ಪಡಿಸಬೇಕಾಗಿದೆ. ಸದ್ಯಕ್ಕೆ ಪಂಚಬಸದಿಯ ಕ್ರಿ.ಶ. ೧೦೭೭ ಶಾಸನದಲ್ಲಿ ಉಲ್ಲೇಖವಾಗುವ ಒಡ್ಡುಗನನ್ನು ಎರಡನೆಯ ಒಡ್ಡುಗ ಸಾಂತರ ಎಂದು ಕರೆಯಬೇಕಾಗಿದೆ. ನಾಗರಹಳ್ಳಿಯ ಶಾಸನೋಕ್ತ ಒಡ್ಡುಗ ಒಂದನೆಯ ಒಡ್ಡಿಗ (ಒಡ್ಡುಗ) ಎಂದು ಕರೆಯಬಹುದು.

ಪ್ರಾಯಶಃ ಈ ಶಿಲ್ಪ ರಾಷ್ಟ್ರಕೂಟರ ಕಾಲಕ್ಕೆ ಸೇರುವುದಾದರೆ, ಶಾಸನದಲ್ಲಿ ಹಾವಿನ ಚಿತ್ರ, ದೇವಾಲಯದಲ್ಲಿನ ಶಿಲ್ಪ ಮತ್ತು ದೇವಾಲಯದ ಆವರಣದಲ್ಲಿ ಇತ್ತೀಚೆಗೆ ಹರಕೆ ಹೊತ್ತಿರುವವರು ನಿಲ್ಲಿಸಿರುವ ಅನೇಕ ನಾಗರ ಕಲ್ಲುಗಳು, ಶಾಸನದಲ್ಲಿ ಉಲ್ಲೇಖವಾಗುವ ನಾಗರಕೆರೆ ಈ ಸ್ಥಳದ ಮಹತ್ವವನ್ನು ಸೂಚಿಸುತ್ತದೆ. ಇದು ಸಾಂತರರ ರಾಜಧಾನಿ ಹುಂಚದಿಂದ ಕೇವಲ ಐದು ಕಿ.ಮೀ. ದೂರದಲ್ಲಿದೆ. ಪ್ರಸ್ತುತ ಶಾಸನವು ಶಿಲ್ಪ ಮತ್ತು ಪಾಠದ ದೃಷ್ಟಿಯಿಂದ ಮಹತ್ವದೆಂದು ಹೇಳಬಹುದಾಗಿದೆ. ನಾಗರಹಳ್ಳಿಯ ಉಲ್ಲೇಖವು ಹೊಸನಗರ ತಾಲೂಕಿನ ಕಡಸೂರು ಗ್ರಾಮದ (ಇಸಿ ೧೫, ಹೊಸತು ನಂ. ೪) ತೇದಿಯಿಲ್ಲದ ಮತ್ತೊಂದು ಶಾಸನದಲ್ಲಿ ಉಲ್ಲೇಖವಾಗಿದೆ. ಪ್ರಾಯಶಃ ಇದು ವಿಜಯನಗರ ಕಾಲದ್ದೆಂದು ತೋರುತ್ತದೆ.

ಮುಂಭಾಗ

ಮೊದಲ ಪಟ್ಟಿಕೆ

೧. ದಾಯ . . ದೇವಾ ಒಡ್ಡಿಗಂ ಪರಚಕ್ರಗಣ್ಡ

ಎರಡನೆಯ ಪಟ್ಟಿಕೆ

೧. ದೊನ್ನಯ್ಯಂ
೨. ದೇವಿಯರು
೧. ಸ್ವಸ್ತಿ ಸಖನೃಪಕಾಲಾತೀಥ ಸಂವತ್ಸರಗಳೆಟು
೨. ನೂಱಅರುವತ್ತನೆಯ ಹೆಮಳಂಬಿ ಎಂಬ ಸಂವ
೩. ತ್ಸರ ಪ್ರವರ್ತಿಸೆ ಅಮೋಘವರ್ಷಂ ಪೃಥುವೀರಾಜ್ಯ
೪. ಗೆಯ್ಯುತ್ತಿರೆ ಸ್ವಸ್ತನುಪಮ ಪರಶಂಸ
೫. ಮಹೋಗ್ರ ಕುಳಾತಿಲಕ ಮೃಗೇನ್ದ್ರಲಾ
೬. ಛನ ತುಲಾ ಮೃಗಧ್ವಜನುತ್ತರ ಮ
೭. ಧುರಾದಿನಾಥ ಪರಚಕ್ರ .ಮನ
೮. ಭ

ಎಡಭಾಗ

೧.	ಪ್ರಸಿದ್ಧವ	೧೩.	ಗಣ ಸರಿಕೋ
೨.	ಳ್ವೆಯ ಮಣ್ಣು	೧೫.	ಱಯ ಕೆಟಗ
೩.	ಆವಾವುದಾ	೧೬.	ಣ ಮಣ್ಣಂ ಭಗವ
೪.	. . ಟಳ್ವಯ	೧೭.	ತಿಗೆ ಒಡ್ಡಿಗ
೫.	ಲುಂ ದಾಗಿಟೞಯು	೧೮.	ನ ಕೆಱ ಒಳಗಾ
೬.	ಆದಿಯ ದಾಗಿ	೧೯.	ಗಿ ಬಡಗಣ ಪಾ
೭.	ಟೞಯು ಇಱು	೨೦.	ಲಿನ ಬಯ್ಸಗು
೮.	ದೇಗೋದು ಬಾ	೨೧.	ನ್ದಂಗೆ ದೇವಿಯರು
೯.	ಳಿಂಗೆ ಗೇರೆಯ	೨೨.	ಒಡ್ಡುಗನು ಕಾಲ ಕ
೧೦.	ಬಯಲು ಕಾ	೨೩.	ಟ್ಚೆ ಕೊಟ್ಟ ರಾಮಗೌಡ
೧೧.	ನಬಯಲು ಸು	೨೪.	ಸನ್ದಿವಿಗ್ರಹನ .
೧೨.	ಳ್ಳಿಯ ಕಾರ ಮೇ	೨೫.	. . . .

ಹಿಂಭಾಗ

೧.	ಬಯ್ಸಗುನ್ದರ ನಾಗಯ್ಯಗೆ	೧೦.	. . . ಪೊಂಬುಳ್ಚ
೨.	ಆದಾಯ ಗೊಳೂಟತ್ತ	೧೧.	ತ್ತುಂ ನಾಟ್ಸಿಸ್ಸರು ಇದ
೩.	ಯ್ಯಂ ರೆಲೆಱ ಯಿ ದೇವಿ	೧೨.	ನಟಿದೋ ಕವಿಲೆಯ
೪.	ಯ ಕಾಲಂಕಟ್ಚ್ ತಮ್ಮ	೧೩.	ಕೆರೆಯು ಮಾ ..
೫.	ಬ್ರಹ್ಮದೇಯ ಮೊನ್ದು ಕೊ	೧೪.	ನಟಿದೋ
೬.	ಟ್ಟರು ಈ ಧರ್ಮ್ಮಮ ಕಾದು		
೭.	. ಯು.ತ್ಯಂಬರ		
೮.	ಕವಿಲ್ಯೆ. ದೇವಿಯರ ಮಾ		
೯.	ತು ಧರ್ಮ್ಮಮಂ ನಿಟಿಸಿನಂ		

ಬಲಭಾಗ

೧. ಮ . . . ಮೋ
೨. ಗ ತುಲಾ

೧೦

ಲಕ್ಕುಂಡಿಯಲ್ಲಿ ಹೊಸದಾಗಿ ದೊರೆತಿರುವ ಶಾಸನಗಳು

ಡಾ. ಹನುಮಾಕ್ಷಿ ಗೋಗಿ*

ಗದಗ ತಾಲೂಕಿನ ಲಕ್ಕುಂಡಿಯು ಇತಿಹಾಸವನ್ನು ತನ್ನ ಭೂಗರ್ಭದಲ್ಲಿ ಅಡಗಿಸಿ ಇಟ್ಟುಕೊಂಡಿರುವ, ದಾನ ಚಿಂತಾಮಣಿ ಅತ್ತಿಯಬ್ಬೆ ನೆಲೆ ನಿಂತ, ಚತುಸ್ಸಮಯಗಳು ಪಲ್ಲವಿಸಿದ, ವಾಸ್ತುಶಿಲ್ಪ ಮತ್ತು ಕಲೆಗಳು ಅರಳಿದ ಸಂಸ್ಕೃತಿ ಸಮೃದ್ಧ ಗ್ರಾಮ. ಪ್ರತಿ ಬಾರಿ ಗ್ರಾಮಕ್ಕೆ ಭೇಟಿ ಇತ್ತಾಗ ಹೊಸ ಶಾಸನಗಳು ಹೊಸ ವಿಷಯಗಳನ್ನು ಅದು ತೆರೆದು ತೋರಿಸುತ್ತದೆ. ಇತಿಹಾಸ–ಸಂಸ್ಕೃತಿ ಸಂಶೋಧಕರ ಪಾಲಿಗೆ ಈ ಗ್ರಾಮವೊಂದು ತವನಿಧಿಯಂತಿದೆ. ಇತ್ತೀಚೆಗೆ ಲಕ್ಕುಂಡಿಯಲ್ಲಿ ಹೊಸ ಶಾಸನವೊಂದು ಕಲ್ಮೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡುವಾಗ ದೊರೆತಿದೆ ಎಂದು ತಿಳಿದು ಬಂದು, ಅದನ್ನು ನೋಡಲು ಹೋದಾಗ ಮತ್ತೆ ಕೆಲವು ಹೊಸ ಶಾಸನಗಳು ಮತ್ತು ವಿಷಯಗಳು ತಿಳಿದುಬಂದಿದ್ದು, ಅವುಗಳನ್ನು ಈ ಪ್ರಬಂಧದಲ್ಲಿ ನೀಡುತ್ತಿದ್ದೇನೆ.

೧

ಬಸದಿಯ ಅಧಿಷ್ಠಾನದಲ್ಲಿರುವ ಶಾಸನ
ಸು. ೧೦ನೆಯ ಶತಮಾನ

೧ ಸತ್ಯಾಸ್ರಯನ ರಾಜ್ಯದೊಳೆ ಅತ್ತಿಯಬ್ಬೆಯ ಪಿ(?) . . .

. . . .

ಎಂಬ ಶಾಸನದ ಕೆಳಗೆ ಎರಡು ಬಾಣದ ಗುರುತುಗಳಿದ್ದು, ಅವುಗಳ ಮಧ್ಯದ ಅಂತರ ೧೧೦" ಇದೆ. ಈಗಾಗಲೇ ಪ್ರಸಿದ್ಧವಾಗಿರುವಂತೆ ದಾನ ಚಿಂತಾಮಣಿ ಅತ್ತಿಮಬ್ಬೆ/ಅತ್ತಿಯಬ್ಬೆ ಬದುಕಿದ್ದುದು ಕಲ್ಯಾಣ ಚಾಲುಕ್ಯ ಅರಸರಾದ ತೈಲಪ ಮತ್ತು ಸತ್ಯಾಶ್ರಯ ಇಜೆವ ಬೆಡಂಗರ ಕಾಲದಲ್ಲಿ. ನಾಗದೇವ ಮತ್ತು ಅತ್ತಿಯಬ್ಬೆ ದಂಪತಿ ಹಾಗೂ ಅವರ ಕುಟುಂಬ ವರ್ಗದವರು ಸಲ್ಲಿಸಿದ ಸೇವೆ ಮತ್ತು ಗಳಿಸಿದ ಕೀರ್ತಿಗಳಿಂದಾಗಿ ಅವರ ಹೆಸರು ಜನಮನದಲ್ಲಿ ಹಾಗೂ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯಲು ಅತ್ತಿಯಬ್ಬೆಯ ಮತ್ತು ಆಕೆಯ ಪತಿ ನಾಗದೇವರ ಪ್ರಶಸ್ತಿಗಳ ಹೆಸರಿನಲ್ಲಿ ಭೂಮಿಯ ಅಳತೆ ಕೋಲುಗಳಿದ್ದವು. ಅವುಗಳನ್ನು ದಾನಚಿನ್ತಾಮಣಿಯ ಗಳೆ/ಕೋಲು ಮತ್ತು ಒರಂಟರ ಮಲ್ಲನ ಗಳೆ/ಕೋಲು ಎಂದು ಕರೆಯಲಾಗುತ್ತಿತ್ತು. ಈ ವಿವರಗಳನ್ನು ಹಲವಾರು ಶಾಸನಗಳು ಖಚಿತಪಡಿಸಿವೆ. ಆದರೆ ಇವುಗಳ ಅಳತೆ ಎಷ್ಟಿತ್ತು ಎಂದು ಇದುವರೆಗೆ ತಿಳಿದು ಬಂದಿರಲಿಲ್ಲ. ಬೇರೆಡೆಗಳಲ್ಲಿ ಮೇಲೆ ಶಾಸನ ಬರೆದು ಕೆಳಗೆ ಬಾಣದ ಗುರುತುಗಳಿದ್ದಾಗ, ಅದು ಭೂಮಿಯ ಅಳತೆಯ ಕೋಲಿನ ಪ್ರಮಾಣವನ್ನು ಗುರುತಿಸುತ್ತದೆ ಎಂದು ವಿದ್ವಾಂಸರು ಒಪ್ಪಿಕೊಂಡಿರುವುದರಿಂದ, ಇಲ್ಲಿಯೂ ಅತ್ತಿಯಬ್ಬೆಯ ಹೆಸರು ಮೇಲೆ ಬಂದು, ಕೆಳಗೆ ಬಾಣದ ಗುರುತುಗಳಿರುವುದನ್ನು ಗಮನಿಸಿದಾಗ ಈ ಅಳತೆಯ ಪ್ರಮಾಣದ ಕೋಲಿದ್ದು, ಅದರ ಪರಿಮಾಣವನ್ನೇ ಅತ್ತಿಯಬ್ಬೆಯ ಕೋಲು ಎಂದು ಕರೆದು, ಅದರನ್ವಯ ಆ ಕಾಲದಲ್ಲಿ, ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇಜೆವಬೆಡಂಗ ಸತ್ಯಾಶ್ರಯನ ರಾಜ್ಯದ ಉದ್ದಗಲಗಳಲ್ಲಿ, ಭೂಮಿಯನ್ನು ಅಳತೆ ಮಾಡಲಾಗುತ್ತಿತ್ತು ಎಂದು ತಿಳಿದು ಬರುತ್ತದೆ. ಇದಕ್ಕೆ ಚಕ್ರವರ್ತಿಯ ಮನ್ನಣೆಯೂ ಇತ್ತು. ಈ ಶಾಸನ ಮತ್ತು ಅಳತೆ ಇರುವ ಪಕ್ಕದ ಇಕ್ಕಟ್ಟಾದ ಸ್ಥಳದಲ್ಲಿಯೇ ಇಂದು ವಸ್ತು ಸಂಗ್ರಹಾಲಯಕ್ಕೆ ಸ್ಥಳಾಂತರಗೊಂಡಿರುವ ಅತ್ತಿಯಬ್ಬೆಯ ಶಾಸನವಿತ್ತು ಎಂದು ಊರಿನ ಹಿರಿಯರು ಹಾಗೂ ನಿವೃತ್ತರಾಗಿರುವ ಪ್ರಾಚ್ಯವಸ್ತು ಇಲಾಖೆಯ ಸಿಬ್ಬಂದಿ ನೆನಪಿಸಿಕೊಳ್ಳುತ್ತಾರೆ.

ಅಳತೆ ಕೋಲುಗಳ ಕುರಿತು ಡಾ. ಹಂಪನಾ ಅವರು 'ಚಂದ್ರಕೊಡೆಯ'ಯಲ್ಲಿ ಹೀಗೆ ಉಲ್ಲೇಖಿಸುತ್ತಾರೆ.

ಅ. ಪ್ರಮಾಣವಾಚಿಯಾದ ಅಳತೆಗೋಲುಗಳು : ಉದಾ:

೧ ಮೂವತ್ತು ಗೇಣ ಘಳೆಯು ಕೋಲಲು ಮೇರೆಯಾಗಿ (ಸೌ.ಇ.ಇ.೧೫, ೫೭.೧೧೮೪. ಡಂಬಳ (ಧಾಜಿ/ಮುಂಡರಗಿ ತಾ) ಪು. ೭೪ ಸಾಲು: ೮೨)

೨ ಮೂವತ್ತೆರಡು ಗೇಣ ಕೋಲು ಕೊಟ್ಟ (ಸೌ.ಇ.ಇ.೧೫, ೨೯.೧೧೮೪. ಶಿರೂರ (ಬಿಜಾಪುರ/ಬಾಗಲಕೋಟೆ ತಾ) ಪುಟ ೫೧)

೩ ರಾಜಹಸ್ತದ ಲೆಕ್ಕ ಕೆಯ್ಯಗಲ ಇಪ್ಪತ್ತೊಂದು ಕೈ ನೀಳ (ಸೌ.ಇ.ಇ. ೨೦. ೨೪೮, ೧೨೨೮, ಸೌಂದತ್ತಿ. ಪುಟ ೨೦೮. ಸಾಲು ೬೮)

* ಎಚ್.ಐಜಿ. ೨೭, ನವನಗರ, ಹುಬ್ಬಳ್ಳಿ.

ಆ. ಸ್ಥಳವಾಚಿಯಾದ ಅಳತೆ ಕೋಲುಗಳು : ಉದಾ:

೧ ಅಂತು ಅಂಗೆಗೆರೆಯ ಕೋಲೊಳ್ ಬಿಟ್ಟ (ಅದೇ, ೫೪, ಸು. ೧೧೫೭. ಮಲ್ಲಸಮುದ್ರ (ಧಾಜಿ/ಗದಗ ತಾ) ಪುಟ ೭೧. ಸಾಲು; ೧೪)

೨ ನವಿಲ್ಗುಂದಗೋಲಿನಲಳೆದು ಸರ್ವ್ವನಮಸ್ಯವಾಗಿ ಕೊಟ್ಟ (ಸೌ.ಇ.ಇ. ೨೦. ೨೪೮. ೧೨೨೮. ಸೌಂದತ್ತಿ (ಬೆಳಗಾವಿ ಜಿ.) ಪುಟ ೩೦೮. ಸಾಲು: ೭೭

ಇ. ವ್ಯಕ್ತಿವಾಚಿಯಾದ ಕೋಲುಗಳು : ಉದಾ:

೧ ಧಾರಾಪೂರ್ವ್ವಕಮ್ಮಾಡಿ ದೇವರ ಪೊಲದಿಂ ಮೂಡಣಂಗಳೇಳು ದಾನಚಿನ್ತಾಮಣಿಯ ಘಳೆಯ (ಸೌ.ಇ.ಇ. ೧೫, ೫೯೬.೧೨ ಶ ಕುಂಟೋಜಿ (ಬಿಜಾಪುರ ಜಿ/ ಮುದ್ದೇಬಿಹಾಳ ತಾ) ಪು. ೩೯೦. ಸಾಲು: ೭–೮)

೨ ಮೂವತ್ತು ಗೇಣು ಬಾಚಿವಿಡಿಂಯುಲು ದಾನಚಿಂತಾಮಣಿ ಘಳೆಯೆನಿಸುವ ಆ ಘಳೆಯಲು (ಸೌ.ಇ.ಇ. ೧೮, ೩೮೧. ೧೨೭೮. ಬಿಜಾಪುರ ಮ್ಯೂಜಿಯಂ. ಪುಟ ೪೬೨. ಸಾಲು; ೪೯–೫೧)

೩ ಒರಂಟರ ಮಲ್ಲನ ಘಳೆಯೊಳ್ ಅಳೆದು ಬಿಟ್ಟ ಕರಿಯ ನೆಲಂ (ಎ.ಇ.೧೨.೩೨.ಬಿ. ೧೦೭೭. ಪುಟ ೨೮೩. ಸಾಲು: ೯

೪ ಬಿಟ್ಟ ಕೆಯಿ ಪೊರಂಟನ ಮಲ್ಲನ ಕೋಲ ಮತ್ತರು (ಅದೇ, ೩೭–ಎಫ್, ೧೧೨೫. ಪುಟ ೩೩೫–೩೬, ಸಾಲು: ೯)

ಕೋಲು ಎಂಬುದು ಭೂಮಿಯ ಅಳತೆಗಾಗಿ ಬಳಸುವ (ಬಿದಿರ) ಕಡ್ಡಿ. ಇದು ಅಚ್ಚಕನ್ನಡದ ಮಾತು. ಇದರ ಸಮಾನಾರ್ಥಕ ಪದ ಗಟಿ–ಗಳೆ ಎಂಬ ವಿವರಗಳನ್ನು ತಮ್ಮ ಲೇಖನದಲ್ಲಿ (ಚಂದ್ರಕೊಡೆ ಪುಟ ೨೧) ಕೊಡುತ್ತಾರೆ. ಈಗಲೂ ಉತ್ತರ ಕರ್ನಾಟಕದಲ್ಲಿ ಬಿದಿರಿನ ಚಿಕ್ಕ ಭಾಗವನ್ನು ಕೋಲು, ಗಳಲೆ ಅಥವಾ ಗಳ ಎಂದೇ ಕರೆಯುತ್ತಾರೆ. ಇದನ್ನು ಗಣ್ಣು ಎಂದು ಈಗಲೂ ಕರೆಯುತ್ತಾರೆ. ಎಂದರೆ ಇದರ ಪರಿಮಾಣ ಅಂದಾಜು ೧೦" ಆಗುತ್ತದೆ. ಅತ್ತಿಯಬ್ಬೆಯ ವಂಶದವರ ಸಾಹಸ ತ್ಯಾಗ ಹೋರಾಟ ದಾನಾದಿಗಳನ್ನು ಪೊನ್ನನು ಶಾಂತಿಪುರಾಣದಲ್ಲಿ, ರನ್ನನು ಅಜಿತಪುರಾಣದಲ್ಲಿ, ಬ್ರಹ್ಮಶಿವನು ಸಮಯ ಪರೀಕ್ಷೆಯಲ್ಲಿ ದಾಖಲಿಸಿದ್ದಾರೆ ಎನ್ನುತ್ತಾರೆ ಡಾ. ಕಮಲಾ ಹಂಪನಾ (ಗುಣದಂಕಕಾರ್ತಿ ಅತ್ತಿಮಬ್ಬೆ. ೧೯೯೩.) ಮುಂದುವರೆದು ಡಾ. ಹಂಪನಾ ಅವರು ಅತ್ತಿಯಬ್ಬೆ ಮತ್ತು ನಾಗದೇವ ದಂಪತಿಗಳ (ಪ್ರಶಸ್ತಿ) ಹೆಸರನ್ನು ಚಾಳುಕ್ಯ ಸಾಮ್ರಾಜ್ಯದ ಭೂಮಿಯ ಅಳತೆಗಾಗಿ ಬಳಸುವ ಅಳತೆ ಕೋಲುಗಳಿಗೆ ಇಡುವುದರ ಮೂಲಕ ಗಂಡ ಹೆಂಡತಿಯರ ಸೇವೆಯನ್ನು ಸ್ಮರಿಸಲಾಗಿದೆ; ಇಂತಹ ದಾಖಲೆ ಇನ್ನೊಂದು ಇಲ್ಲ ಎಂಬುದು ಇದರ ಅನನ್ಯತೆಯನ್ನು ಪ್ರಕಟಪಡಿಸುತ್ತದೆ ಎಂದಿದ್ದಾರೆ (ಚಂದ್ರಕೊಡೆ ಪುಟ ೨೩)

ಹೀಗೆ ಅಳತೆ ಕೋಲಿನ ಅಳತೆಯನ್ನು ಗುರುತಿಸುವಾಗ, ದೇವಾಲಯ/ಬಸದಿ ಯಾವ ದೇವರದ್ದಾಗಿರುತ್ತದೆಯೋ ಅದೇ ಹೆಸರಿನಲ್ಲಿದ್ದರೆ, ಅದೇ ದೇವಾಲಯ/ಬಸದಿಯ ಅಧಿಷ್ಠಾನದಲ್ಲಿಯೇ ಗುರುತಿಸಲಾಗುತ್ತಿತ್ತು. ಅಂತೆಯೇ ವ್ಯಕ್ತಿಗಳ ಹೆಸರಿನಲ್ಲಿದ್ದರೆ ಅವರು ಕಟ್ಟಿಸಿದ ದೇವಾಲಯದ ಅಧಿಷ್ಠಾನ ದಲ್ಲಿಯೇ ಗುರುತಿಸಲಾಗುತ್ತಿತ್ತು. ಈ ಸಾಕ್ಷಾಧಾರಗಳಿಂದ ಅತ್ತಿಯಬ್ಬೆ ಕಟ್ಟಿಸಿದ ಬಸದಿ ಇಂದು ನಾವು ಬ್ರಹ್ಮ ಜಿನಾಲಯ ಎಂದು ಕರೆಯುವ ಬಸದಿಯಾಗಿರದೇ, ಈ ಅಳತೆಯನ್ನು ಪ್ರಮಾಣಪೂರ್ವಕವಾಗಿ ಗುರುತಿಸುವ ಶಾಸನ ದೊರೆತಿರುವ ಅಧಿಷ್ಠಾನವುಳ್ಳ, ಈಗ ಮೇಲ್ಭಾಗ ಬಿದ್ದಿರುವ ಬಸದಿಯಾಗಿರ ಬೇಕು. ಇದು ಒಮ್ಮೆ ನೆಲಕ್ಕುರುಳಿದ ಮತ್ತು ಇನ್ನೊಮ್ಮೆ ಸ್ವಲ್ಪ ಭಾಗ ಬೆಂಕಿಗೆ ಆಹುತಿಯಾದ ಬಸದಿಯಾಗಿತ್ತೆಂಬುದಕ್ಕೆ ಮತ್ತು ಅದನ್ನು ಪುನರ್ನಿರ್ಮಾಣ ಮಾಡಿದವರು ಭರತಾರ್ಯ, ನಾಕಿಮಯ್ಯ, ಸಿರಿಪಾಳರು ಎನ್ನುವುದಕ್ಕೆ ಶಾಸನಾಧಾರವೇ ಇದೆ. ಸದ್ಯ ಬ್ರಹ್ಮ ಜಿನಾಲಯ ಎಂದು ಕರೆಸಿಕೊಳ್ಳುತ್ತಿರುವ ಬಸದಿಯ ನವರಂಗದ ಭಿತ್ತಿಯ ಗೋಡೆಯಲ್ಲಿರುವ ಅರೆಗಂಬದಲ್ಲಿ, ಬಲ್ಲೆಯ ಜೇಮಯ್ಯನ ಬಸದಿಗೆ ಬಿಟ್ಟ ದಾನದ ಉಲ್ಲೇಖವಿರುವ ಶಾಸನವಿರುವುದರಿಂದ, ಅದು ಬಲ್ಲೆಯ ಜೇಮಯ್ಯ ಎನ್ನುವವನು ಕಟ್ಟಿಸಿದ ಬಸದಿಯಾಗಿದೆ ಎನ್ನುವ ಆಂತರಿಕ ಪ್ರಮಾಣ ದೊರೆಯುತ್ತದೆ. ಅತ್ತಿಯಬ್ಬೆ ಕಟ್ಟಿಸಿದ ಬಸದಿ ಆದಿನಾಥನದ್ದಾಗಿತ್ತು (ಬ್ರಹ್ಮಜಿನ). ಸದ್ಯ ಬ್ರಹ್ಮ ಜಿನಾಲಯದ ಪಕ್ಕದ ಬಸದಿಯ ಎದುರಿನಲ್ಲಿ ಭಗ್ನಗೊಂಡ ಆದಿನಾಥ ತೀರ್ಥಂಕರನ ವಿಗ್ರಹವಿದೆ. ಬ್ರಹ್ಮ ಜಿನಾಲಯದ ಎದುರಿನ ನೀಲಕಂಠೇಶ್ವರನ ಗುಡಿ ಮೂಲತಃ ಬಸದಿ ಯಾಗಿದ್ದು, ಅಲ್ಲಿ ಆದಿನಾಥನ ವಿಗ್ರಹವಿತ್ತು ಎಂಬುದನ್ನು ದ್ವಾರಬಂಧದಲ್ಲಿರುವ ಮೂರ್ತಿಯಿಂದ ಗುರುತಿಸಬಹುದು. ಆದರೆ ಈಗ ಆ ಮೂರ್ತಿ ಲಭ್ಯವಿರುವುದಿಲ್ಲ. ಆದರೆ ಅದರ ಪೀಠ ಮಾತ್ರ ಹಿಂದಿನ ಮುಳ್ಳುಕಂಟಿಯಲ್ಲಿ ಬಿದ್ದಿದೆ. ಬಹುಶಃ ಈಗ ದೊರೆತಿರುವ ಭಗ್ನಗೊಂಡ ಆದಿನಾಥನ ಮೂರ್ತಿ ಅದೇ ಬಸದಿಯದ್ದು ಇಲ್ಲವೇ ಅತ್ತಿಯಬ್ಬೆ ಪ್ರತಿಷ್ಠಾಪಿಸಿದ ಬಸದಿಯದ್ದಾಗಿರಬಹುದು. ಬ್ರಹ್ಮಜಿನಾಲಯದ ಗರ್ಭಗೃಹ ದಲ್ಲಿರುವ ಮೂರ್ತಿಯು ದೇವಗಣಕ್ಕೆ ಸೇರಿದ ವ್ಯಕ್ತಿಯೊಬ್ಬ ಸ್ಥಾಪಿಸಿದ ನೇಮಿನಾಥನದು ಎಂದು ಆ ಮೂರ್ತಿಯ ಪಾದಪೀಠದಲ್ಲಿರುವ ಶಂಖ ಚಿಹ್ನೆ ಮತ್ತು ಶಾಸನವು ತಿಳಿಸುತ್ತದೆ. ಸದ್ಯ ಗರ್ಭಗೃಹದಲ್ಲಿರುವ ಮೂಲಪೀಠದಲ್ಲಿರುವ ಶಾಸನವು ಯಾಪನೀಯ ಸಂಘದ ವಡಿಯೂರ್ಗಣವನ್ನು

ಉಲ್ಲೇಖಿಸುತ್ತದೆ. ಆದರೆ ಅತ್ತಿಯಬ್ಬೆಯು ಜಿನಭವನವನ್ನು ನಿರ್ಮಾಣ ಮಾಡಿ ತನ್ನ ಗುರುಗಳಾದ ಸೂರಸ್ತ ಗಣ ಕೌರೂರು ಗಚ್ಛದ ಅರ್ಹನನ್ದಿ ಪಣ್ಡಿತದೇವರಿಗೆ, ಬ್ರಹ್ಮಜಿನನ ಪೂಜೆ-ಪುರಸ್ಕಾರಗಳಿಗಾಗಿ ಸುಜುಕಿ ಗ್ರಾಮವನ್ನು ದತ್ತಿಯಾಗಿ ನೀಡುತ್ತಾಳೆ.

ಭರತಾರ್ಯ, ನಾಕಿಮಯ್ಯ, ಸಿರಿಪಾಳರು ಅತ್ತಿಯಬ್ಬೆ ಕಟ್ಟಿಸಿದ ಬಸದಿಯನ್ನು ಪುನರ್‌ನಿರ್ಮಾಣ ಮಾಡಿದಾಗ, ವಿಗ್ರಹ ಮತ್ತು ಪೀಠಗಳು ಬದಲಾಗಿವೆಯೇ ಎಂಬ ಪ್ರಶ್ನೆಗೆ ನೀಡುವ ಉತ್ತರವು ಸಾಕ್ಷಾಧಾರಗಳನ್ನು ಬಯಸುತ್ತದೆ. ಮೇಲ್ಕಾಣಿಸಿದ ಎಲ್ಲ ಸಾಕ್ಷಾಧಾರಗಳಿಂದ ಇಂದು ಬ್ರಹ್ಮ ಜಿನಾಲಯದಲ್ಲಿರುವ ಪೀಠವಾಗಲೀ ಮೂರ್ತಿಯಾಗಲೀ ಅತ್ತಿಯಬ್ಬೆ ಕಟ್ಟಿಸಿದ ಬಸದಿಯಲ್ಲಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಈಗ ಬ್ರಹ್ಮಜಿನಾಲಯ ಎಂದು ಕರೆಸಿಕೊಳ್ಳುತ್ತಿರುವ ಬಸದಿಯ ವಾಸ್ತುಶಿಲ್ಪ, ರಚನೆ, ಕಲಾಕೌಶಲ್ಯಗಳು ಕಲ್ಯಾಣ ಚಾಲುಕ್ಯರ ಆದಿ ಕಾಲದ್ದಾಗಿಲ್ಲ ಎಂದರೆ ಪೂರ್ವಾರ್ಧದ ೧೧ನೆಯ ಶತಮಾನದವುಗಳಲ್ಲ. ಅವು ಕಲ್ಯಾಣ ಚಾಲುಕ್ಯರ ಉತ್ತರಾರ್ಧದ ಕಾಲ ಎಂದರೆ ೧೨ನೆಯ ಶತಮಾನದವು ಗಳಾಗಿವೆ. ಈ ಬಾಹ್ಯ ಪ್ರಮಾಣಗಳಿಂದಲೂ ಇದು ಅತ್ತಿಯಬ್ಬೆ ಕಟ್ಟಿಸಿದ ಜಿನಬಸದಿಯಲ್ಲ ಎಂಬುದು ಖಚಿತಗೊಳ್ಳುತ್ತದೆ. ಕಾರಣ ಇದನ್ನು ಬಲ್ಲೆಯ ಜೇಮಯ್ಯನ ಬಸದಿ ಎಂದು, ಅತ್ತಿಯಬ್ಬೆಯ ಹೆಸರನ್ನು ಹೊಂದಿದ ಅಧಿಷ್ಠಾನದ ಮೇಲಿದ್ದ ಬಸದಿ ಅತ್ತಿಯಬ್ಬೆ ಕಟ್ಟಿಸಿದ ಬಸದಿ ಎಂದು ಖಚಿತವಾಗಿ ಹೇಳಬಹುದು.

ಹೀಗೆ ಲಕ್ಕುಂಡಿಯಲ್ಲಿ ಬ್ರಹ್ಮ ಜಿನಾಲಯ (ಬಲ್ಲೆಯ ಜೇಮಯ್ಯನ ಬಸದಿ-ಮೂಲ ಪೀಠದಲ್ಲಿ ಯಾವ ವಿಗ್ರಹ ವಿತ್ತೆನ್ನುವುದನ್ನು ಶಾಸನದಲ್ಲಿ ಹೇಳಿಲ್ಲ-ಸದ್ಯ ಮೂಲಸಂಘ ದೇವಗಣಕ್ಕೆ ಸೇರಿದವರಿಂದ ಪ್ರತಿಷ್ಠಾಪಿತನಾದ ಸಂತಿ ದೇವರು=ನೇಮಿನಾಥನ ಪ್ರತಿಮೆ ಇದೆ), ಚಿಕ್ಕಬಸದಿ (ಅಜಿತನಾಥ?), ಅತ್ತಿಮಬ್ಬೆಯ ಜಿನಾಲಯ (ಬ್ರಹ್ಮಜಿನ= ವೃಷಭನಾಥ), ಕಾಳಿಮಯನ ಬಸದಿ (ನಖರ ಜಿನಾಲಯ- ಕಳ್ಪ ಜಿನೇಂದ್ರ=ಪಾರ್ಶ್ವನಾಥ?), ಹಾಳಾದ ಬಸದಿ (ಅತ್ತಿಯಬ್ಬೆಯ ಬಸದಿ ಮತ್ತು ಕಾಳಿಮಯನ ಬಸದಿಗಳ ನಡುವೆ ಇದ್ದದ್ದು-ನೇಮಿನಾಥನದೇ?), ನೋಂಪಿಯ ಬಸದಿ (ತೀರ್ಥಂಕರ?), ಆದಿನಾಥ ಬಸದಿ (ಸದ್ಯ ನೀಲಕಂಠೇಶ್ವರ ದೇಗುಲ), ವಸುಧೈಕ ಬಾಂಧವ ಜಿನಾಲಯ (ತ್ರಿಭುವನ ತಿಲಕ ಶಾಂತಿನಾಥ), ಘಟಾಂತಕಿಯ ಬಸದಿ (ಪಾರ್ಶ್ವನಾಥ- ಶಾಸನದೇವಿ=ವರದೇವತೆ ಪದ್ಮಾವತಿ), ಪಂಚಕೂಟ ಬಸದಿ (ಸದ್ಯ ನಾರಾಯಣ ದೇವಾಲಯದ ಮಹಾದ್ವಾರ ಬಂಧ - ನಾರಾಯಣ ದೇವಾಲಯದ ಎಡಭಾಗದ ಮೂಲೆಯಲ್ಲಿ ಇದ್ದ ಹಾಳಾದ ಬಸದಿ), ತಿಲಸಂಘ ಜಿನಾಲಯ, ಕಮ್ಮಟ ಜಿನಾಲಯ (ಶಾಂತಿನಾಥ) ಎಂಬ ೧೨ ಬಸದಿಗಳು ಇದ್ದವೆಂಬ ತೀರ್ಮಾನಕ್ಕೆ ಖಚಿತವಾಗಿ ಬರಬಹುದಾಗಿದೆ. ಇವುಗಳನ್ನು ಗಮನಿಸಿದಾಗ, ಅತ್ತಿಯಬ್ಬೆ ೧೫೦೦ ಜಿನಬಿಂಬ ಗಳನ್ನು ಮಾಡಿಸಿ ೧೫೦೦ ಜಿನಬಸದಿಗಳನ್ನು ಬಹುಶಃ ಎರಡರುನೂರರ ನಾಡು ಮತ್ತು ಮಾಸವಾಡಿ ನಾಡಿನಲ್ಲಿ ಕಟ್ಟಿಸಿ, ಅವೆಲ್ಲವುಗಳಿಗೆ ಕಲಶಪ್ರಾಯವಾಗಿ ಲಕ್ಕುಂಡಿಯಲ್ಲಿ ಜಿನಭವನ ನಿರ್ಮಾಣ ಮಾಡಿಸಿದಳೆನ್ನುವುದು ಉತ್ಪ್ರೇಕ್ಷೆಯಲ್ಲ ಎನ್ನಿಸುತ್ತದೆ.

೨

ಗದಗ ಮ್ಯೂಸಿಯಂನಲ್ಲಿರುವ ಲಕ್ಕುಂಡಿಯ ಶಾಸನ

೪೫" ಎತ್ತರ ಮತ್ತು ೨೫" ಅಗಲದ ಕರಿಕಲ್ಲಿನ ಮೇಲೆ ಶಾಸನವನ್ನು ಕೆತ್ತಲಾಗಿದೆ. ಮೇಲೆ ಚಂದ್ರ, ಸೂರ್ಯರ ಉಬ್ಬುಶಿಲ್ಪಗಳಿವೆ. ಮುಂಗಾಲೂರಿ ಕೈಮುಗಿದು ಕುಳಿತ ಗರುಡ, ಚಾಮರಧಾರಿ, ಪದ್ಮಾಸನದಲ್ಲಿ ಕುಳಿತ ವಿಷ್ಣು, ಚಾಮರಧಾರಿ ಮತ್ತು ಕರುವಿಗೆ ಹಾಲೂಡಿಸುತ್ತಿರುವ ಆಕಳುಗಳ ಉಬ್ಬು ಶಿಲ್ಪಗಳಿವೆ.

ಶಾಸನದ ಪ್ರಾರಂಭದಲ್ಲಿ ಲೊಕ್ಕಿಗುಂಡಿಯ ಊರೊಡೆಯರಾದ ಮಹಾಜನರನ್ನು ಅವರ ಎಲ್ಲ ಗುಣ ವಿಶೇಷ ಗಳೊಂದಿಗೆ ವರ್ಣಿಸುತ್ತದೆ. ನಂತರ ಆಸಿತರ ವಾಸುದೇವಯ್ಯ ಎನ್ನುವವರು ಕೇಶವಾದಿತ್ಯದೇವರಿಗೆ ಸೂಲಿಯ ಮೂವತ್ತಾಱು ಮತ್ತರು ಭೂಮಿಯನ್ನು ಹಾಗೂ ಒಂದು ಮತ್ತರು ಹೂವಿನ ತೋಟವನ್ನು ದೀವಿಗೆ, ನಿವೇದ್ಯ, ದೇವರನ್ನು ಪೂಜಿಸುವ ಮಾಣಿಯರ ಜೀವಿತ, ಗಂಧ, ಧೂಪ, ನೂಲ ಹಬ್ಬಗಳಿಗಾಗಿ ಬಿಟ್ಟ ದಾನವನ್ನು ತಿಳಿಸುತ್ತದೆ. ಪುರೋಹಿತರು ಮತ್ತು ಉಳಿದವರು ಸತ್ರವನ್ನು ನಡೆಸಬೇಕೆಂದು ಸೂಚಿಸುತ್ತದೆ.

"ಸಕವರ್ಷ ೯೩೦ನೆಯ ಸೌಮ್ಯ ಸಂವತ್ಸರದ ಪುಷ್ಯಾಮಾಸ್ಯೆಯಾದಿತ್ಯವಾರದುತ್ತರಾಯಣ ಸಂಕ್ರಾನ್ತಿ ವ್ಯತಿಪಾತದನ್ದು" ಎನ್ನುವ ಶಾಸನೋಕ್ತ ತಿಥಿಯು ಕ್ರಿ.ಶ. ೧೦೦೮ನೆಯಕ್ಕೆ ಸರಿಹೊಂದುತ್ತದೆ.

೦೧ ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೋನಾನುಷ್ಠಾಣ ಪರಾಯ-

೦೨ ಣರ್ ಸಪ್ತಸೋಮ ಸಂಸ್ಥಾವಾಭೃತಾ[ವ*]ಗಾಹನ ಪವಿತ್ರಿತ ಶರೀರರ್ ಚತುರ್ವ್ವೇದ ಪಾರಗ-

೦೩ ರಷ್ಟಾದಶ ಧರ್ಮ್ಮಶಾಸ್ತ್ರಕುಶಲರೇಕ ವಾಕ್ಯರಚಿತ ಧೈರ್ಯ್ಯರ್ ಧೈರ್ಯ್ಯಪರಾ-

೦೪ ಕ್ರಮರಾಶ್ರಿತಜನ ಕಳ್ಪವೃಕ್ಷರಹಿತ ಪಕ್ಷಕ್ಷಯರ್ ಕಲಿಯುಗ ಗಾಂಗೇಯರ್

೦೫ ಪರೋಪಕಾರಿಗಳಾಹವದೂರರ್ ವರ ಶಾಪಾನುಗ್ರಹ ಸಮರ್ತ್ಥರ್ಕ್ಕಾರ್ಯ್ಯಬೃಹ-

೦೬ ಷಟ್ಕರ್ಮಗಳೆಕ್ಕ ಪಣ್ಡಿತರ್ ಗ್ರಾಮಣಾಮೋತ್ತಮರ್ ವೈಷ್ಣವಗೀತ ಮನೋಹರರ್

೦೭ ಪಾಪಭೀರುಗಳ್ ಪರನಾರೀದೂರರ್ ದುಷ್ಟ ವಿಧ್ವಂಸಕರ್ ವಿಶಿಷ್ಟ ಜನಾಶ್ರಯರ್ ಕಾ-

೦೮ ಮ ಕ್ರೋಧ ಲೋಭ ದ್ವಾತ್ರಿಂಸ ಸಹಸ್ರ ಸಮೆಯಾಗ್ಘ್ಯಪಹರ್

೦೯ ದ್ವಿಜಕುಲತಿಲಕರ್ ಶರಣಾಗತ ವಜ್ರಪಂಜರರ್ ಸಮಸ್ತ ಗುಣವಿಶೇಷೋ-

೧೦ ನ್ನತರಪ್ಪ ಶ್ರೀಮತ್ ಮಹಾಗ್ರಾಮಂ ಲೊಕ್ಕಿಗುಣ್ಡಿಯ ಊರೊಡೆಯ ಪ್ರಮುಖಂ

೧೧ ಮಹಾಜನಂ ಸಾಸಿರ್ವ್ವರುಂ ಸ್ವಸ್ತಿ ಸಕವರ್ಷ ೯೩೦ನೆಯ ಸೌಮ್ಯ ಸಂವತ್ಸರದ-

೧೨ ಮವಾಸ್ಯೆಯಾದಿತ್ಯವಾರಮುತ್ತರಾಯಣ ಸಂಕ್ರಾನ್ತಿ ವ್ಯತಿಪಾತದನ್ದು ಅಷಿ-

೧೩ ತರ ವಾಸುದೇವಯ್ಯಂಗಳ್ ಕೇಶವಾದಿತ್ಯದೇವರ್ಗ್ಗೆ ಸೂಲಿಯ ಬಾಗಿನಲೊದ್ದ-

೧೪ ವಾದದ ಸತ್ರದಲು ಬಿಟ್ಟ ಮತ್ತಮೂರ್ಱವತ್ತಾಱು ಪೂವಿನ ತೋಂಟಂ ಮತ್ತರೊನ್ದು

೧೫ ಕೆಯ್ಯ ಪತ್ತಗೆಯ ಪೊನ್ನಲು ದೇವರ ದೀವಿಗೆಗಂ ನಿವೇದ್ಯಕ್ಕಂ ದೇವರರ್ಚ್ಚಿಸುವ

೧೬ ಮಾಣಿಯ ಜೀವಿತಕ್ಕಂ ಗಂಧ ಧೂಪಕ್ಕಂ ನೂಲ ಕಲುವಿಟುಪುವುದಕ್ಕಂ ಕೊಟ್ಟು

೧೭ ಮಿಕ್ಕರ್ತ್ಥದಲು ಅಳುವಬೆಯುಂ ಪುರೋಹಿತನು ಮೊಳಗಾಗಿ ಸತ್ರವಂ ನಡಯಿ-

೧೮ ಸುವರ್ [॥*] ಈ ಧರ್ಮ್ಮಂ ಸಾಸಿರ್ವ್ವರು ಕಿರಿಯ ನೂರ್ವ್ವರ ಧರ್ಮ್ಮವಿದಂ ಸಾಸಿರ್ವ್ವರುಂ ತಮ್ಮ ಧರ್ಮ್ಮವೆನ್ದು

೧೯ ಪರಿಪಂಥನಂ ಗೆಯ್ದು ರಕ್ಷಿಸುವರ್ [॥*] ಈ ಧರ್ಮ್ಮವಂ ರಕ್ಷಿ[ಸಿ]ದಾತಂ ವಾರಣಾಸಿ ಕುರು-

೨೦ ಕ್ಷೇತ್ರವರ್ಗ್ಘ್ಯತೀರ್ತ್ಥದಲು ಸಾಸಿರ ಕವಿಲೆಯ ಕೋಡುಂ ಕೊಳಗುವಂ ಪೊನ್ನೊಳಂ ಬೆಳ್ಳಿಯೊ-

೨೧ ಳಂ ಕಟ್ಟಿಸಿ ಚತುರ್ವ್ವೇದಪಾರಗರಪ್ಪ ಬ್ರಾಹ್ಮಣರ್ಗ್ಗೆ ಗೊಟ್ಟ ಫಳವಂ ಪಡೆಗುಂ ಈ ಧರ್ಮ್ಮವನಟಿದಾ-

೨೨ ತಂ ಕುರುಕ್ಷೇತ್ರಂ ವಾರಣಾಸಿಯರ್ಗ್ಘ್ಯತೀರ್ತ್ಥದಲು ಸಾಸಿರ ಕಪಿಲೆಯುವಂ ಸಾಸಿರ ಬ್ರಾಹ್ಮಣರು-

೨೩ ವ ಕೊನ್ದ ಪಞ್ಚ ಮಹಾಪಾತಕನಕುಂ ರೌರವಮೆಂಬೀ ನರಕದೊಳಿನ್ದುಂ ಪೊಱಮಡುವನಲ್ಲ ॥

೨೪ ಸಾಮಾನ್ಯೋಯಂ ಧರ್ಮ್ಮಸೇತು ನೃಪಾಣಾಂ ಕಾಲೇ ಕಾಲೇ ಪಾಲನಿಯೋ ಭವದ್ಭಿಃ ಸರ್ವ್ವಾನೇತಾಂ ಭಾ-

೨೫ ಗಿನಃ ಪಾರ್ತ್ಥಿವೇನ್ದ್ರಾ ಭೂಯೋ ಭೂಯೋ ಯಾಚತೇ ರಾಮಭದ್ರಃ ॥ ಸ್ವದತ್ತಂ ಪರದತ್ತಂ ವಾ

೨೬ ಯೋ ಹರೇತಿ ವಸುಂಧರಾ ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ॥

೩

ಲಕ್ಕುಂಡಿ

ವಸ್ತು ಸಂಗ್ರಹಾಲಯದಲ್ಲಿಯ ತ್ರುಟಿತ ಶಾಸನ

ಕ್ರಿ.ಶ. ೧೦೭೬–೧೧೨೫

ಶಾಸನದ ಮೇಲಿನ ೧೨" ಭಾಗದಲ್ಲಿ ಚಂದ್ರ-ಸೂರ್ಯರ ಉಬ್ಬುಶಿಲ್ಪಗಳು ಮಾತ್ರ ಇದ್ದು, ಉಳಿದಂತೆ ಯಾವುದೇ ಚಿತ್ರಗಳಿಲ್ಲ.

ಶಿವ ಮತ್ತು ಶ್ರೀನಿವಾಸರ ಸ್ತುತಿಪರ ಮಂಗಲ ಪದ್ಯಗಳೊಂದಿಗೆ ಪ್ರಾರಂಭವಾಗುವ ಶಾಸನವು, ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲನನ್ನು ಹೆಸರಿಸುತ್ತದೆ. ನಂತರ ನಾಡುಗಳ ಅರಸನೆನಿಸಿದ ಕುಂತಳ ದೇಶವನ್ನು ವರ್ಣಿಸುತ್ತದೆ. ತದನಂತರ ಲೊಕ್ಕಿಗುಂಡಿಯ ವಿವರಗಳನ್ನು ನೀಡುತ್ತ, ಮಹಾಜನರ ವಿಶೇಷತೆಗಳನ್ನು ದಾಖಲಿಸುವಲ್ಲಿಗೆ ನಿಂತು ಹೋಗುತ್ತದೆ. ಮುಂದೆ ಇರಬಹುದಾದ ದಾನದ ವಿವರಗಳು ಶಾಸನ ಒಡೆದಿರುವುದರಿಂದ ಲಭ್ಯವಿಲ್ಲ. ಕಂದ ಪದ್ಯಗಳು ಸುಂದರವಾದ ವರ್ಣನೆಗಳನ್ನು ಒಳಗೊಂಡಿವೆ.

॥ ಕನ್ದ ॥ ಸುಲಲಿತಮೆನಿಸುವ ಧಾತ್ರೀ
ಲಲನೆಗೆ ಕುನ್ತಳವಿದೆನಿಸಿ ಕುನ್ತಳ ದೇಶಂ
ತಿಲಕವಿದೆನಿಸಿ ಕರಂ ಬೆ
ಳ್ವಲವೆಸೆಗುಂ ಭಾವಿಸಲ್ಕೆ ನಾಡುಗಳರಸ ॥
ಆ ನಾಡೊಳ್ಸೊಗಯಿಸುಗು
ರ್ನ್ನಾನಾವಿಧದಿಂ ಸಮಸ್ತ ವಸ್ತುಗಳಿನ್ದಂಭೋ
ನಿಧಿಯನ್ತನ್ತಿರೆ ನಯನಾ
ನನ್ದ ಲೊಕ್ಕಿಗುಣ್ಡಿ ಲಕ್ಷ್ಮೀನಿಳಯಂ ॥
ಎನೆ ನೆಗಟ್ದ ಲೊಕ್ಕಿಗುಣ್ಡಿಯೊ
ಳನವದ್ಯಾಚಾರರಮಳ ಮಹಿಮಾಧಾರ
ರ್ದ್ದಿನಕರ ತೇಜರ್ವ್ವಿದ್ವ
ಜ್ಜನ ಕಲ್ಪಮಹೀಜರೆನಿಸಿದರ್ಸ್ಸಾಸಿರ್ವ್ವರ್ ॥

ಲಭ್ಯವಿರುವ ಶಾಸನದ ಪಠ್ಯವಿಂತಿದೆ–

೦೧ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂ–

೦೨ ಭಾಯ ಶಂಭವೇ ॥ ನಮಸ್ತಸ್ಮೈ ವರಾಹಾಯ ಲೀಲಯಾಚರತೆ ಮಹೀಂ ಖುರಾ–

೦೩ ನ್ತರಗತೋ ಯಸ್ಯ ಮೇರುಃ ಕಣಕಣಾಯತೇ ॥ [ಗಣಪತ್ಯಾ*]ಯ ನಮಃ ॥

೦೪ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿ–

೦೫ ಜ ಪರಮೇಶ್ವರ ಪರಮ ಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾ–

೦೬ ಭರಣಂ ಶ್ರೀಮತ್ತ್ರಿಭುವನಮಲ್ಲದೇವರ ವಿಜಯರಾಜ್ಯ ಮುತ್ತರೋತ್ತರಾ–

೦೭ ಭಿವೃದ್ಧಿ ಪ್ರವರ್ಧಮಾನಮಾ ಚಂದ್ರಾರ್ಕತಾರಂಬರಂ ಸಲುತ್ತಮಿರೆ ॥ ಕನ್ದ ॥ ಸುಲ–

೦೮ ಲಿತಮೆನಿಸುವ ಧಾತ್ರಿ ಲಲನೆಗೆ ಕುನ್ತಳವಿದೆನಿಸಿ ಕುನ್ತಳ ದೇಶಂ ತಿಲಕವಿದೆ–

೦೯ ನಿಸಿ ಕರಂ ಬೆಳ್ವಲವೆಸೆಗುಂ ಭಾವಿಸಲ್ಕೆ ನಾಡುಗಳರಸ ॥ ಆ ನಾಡೊಳ್ಗೊಗಯಿಸು–

೧೦ ಗುರ್ನ್ನಾನಾವಿಧದಿಂ ಸಮಸ್ತ ವಸ್ತುಗಳಿನ್ತಂಭೋನಿಧಿಯ ನ್ತನ್ತಿರೆ ನಯನಾನನ್ದ ಲೊ–

೧೧ ಕ್ಕಿಗುಣ್ಡಿ ಲಕ್ಷ್ಮೀನಿಳಯಂ ॥ ಎನೆ ನೆಗಟ್ದಿ ಲೊಕ್ಕಿಗುಣ್ಡಿ ಯೊಳನವದ್ಯಾಚಾರರಮ–

೧೨ ಳ ಮಹಿಮಾಧಾರರ್ದ್ದಿನಕರ ತೇಜರ್ವ್ವಿದ್ವಜ್ಜನ ಕಲ್ಪಮಹೀಜರೆನಿಸಿದರ್ಸ್ಸಾಸಿರ್ವ್ವರ್ ॥

೧೩ ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೋನಾನುಷ್ಠಾನ ಪರಾ–

೧೪ ಯಣ ಜಪ ಸಮಾಧಿ ಶೀಲಸಂಪನ್ನರ್ಸ್ಸಮಸ್ತ ಗುಣಗಣಾಳಂಕ್ರಿತ . . . . . *

* ಶಾಸನದ ಮುಂದಿನ ಭಾಗ ಒಡೆದಿದೆ.

೪

ಕಲ್ಮೇಶ್ವರ ದೇವಾಲಯದ ಥರದಲ್ಲಿ

೩೬" ಉದ್ದ ೧೪" ಅಗಲದ ಡೊಲರೈಟ್ ಡೈಕ್ ಕರಿಕಲ್ಲಿನಲ್ಲಿರುವ ಶಾಸನವಿದು. ಮೇಲಿನ ೧೨" ನಲ್ಲಿ ಕುಡುವಿನ ಚಿತ್ರವಿದ್ದು, ಅದರಲ್ಲಿ ನಾಟ್ಯ ಮಾಡುತ್ತಿರುವ ಶಿವನಿದ್ದಾನೆ. ಶಿವನ ಕೆಳಗೆ ಮಧ್ಯೆ ಶಿವಲಿಂಗವಿದ್ದು, ಎದುರಿಗೆ ನಂದಿ ಮತ್ತು ಹಿಂದೆ ಕರುವಿಗೆ ಹಾಲೂಡುತ್ತಿರುವ ಆಕಳಿನ ಉಬ್ಬುಶಿಲ್ಪಗಳಿವೆ. ಉಳಿದ ೨೪" ನ ಭಾಗದಲ್ಲಿ ಶಾಸನವಿದೆ. ಉಳಿದ ೨೦" ನ ಭಾಗ ಖಾಲಿಯಿದೆ.

ಶಿವ ಸ್ತುತಿಯೊಂದಿಗೆ ಪ್ರಾರಂಭವಾಗಿ, ಕಲ್ಯಾಣ ಚಾಲುಕ್ಯ ಚಕ್ರವರ್ತಿ ಮೂರನೆಯ ತೈಲಪನನ್ನು ಹೆಸರಿಸುವ ಶಾಸನವು, ಲೊಕ್ಕಿಗುಣ್ಡಿಯ ಊರೊಡೆಯರು, ಮಹಾಜನ ಸಾಸಿರ್ವರನ್ನು ಸಕಲ ಗುಣ ವಿಶೇಷಣಗಳೊಂದಿಗೆ ವರ್ಣಿಸುತ್ತ, ಚಂದೇಶ್ವರ ಮಠದ ಆಚಾರ್ಯರಾದ ಶ್ರೀ ರುದ್ರಶಕ್ತಿಪಣ್ಡಿತದೇವರಿಗೆ ಧಾರಾಪೂರ್ವಕವಾಗಿ ಸರಸ್ವತಿ ಭಣ್ಡಾರ ಸುಯಿಧಾನವಾಗಿ ಮನೆಯೊಂದನ್ನು ದಾನವಾಗಿ ನೀಡಿದುದನ್ನು ದಾಖಲಿಸುತ್ತದೆ. ಮುಂದುವರೆದು ಶ್ರೀ ಸಾಸಿರ್ವರ ಪ್ರಿಯಪುತ್ರನಾದ ಕೇಶವದೇವ ಎನ್ನುವವನ ಮಹಿಮೆಯ ವರ್ಣನೆಯನ್ನು ಮಾಡುತ್ತದೆ.

"ಶ್ರೀಮಚ್ಚಾಳುಕ್ಯ ಚಕ್ರವರ್ತ್ತಿ ತ್ರೈಲೋಕ್ಯಮಲ್ಲದೇವ ವರ್ಷದ ೨ನೆಯ ಪ್ರಜಾಪತಿ ಸಂವತ್ಸರದ ಪುಷ್ಯ ಶುದ್ಧ ೧೩ ಸೋಮವಾರಮುತ್ತರಾಯಣ ಸಂಕ್ರಾನ್ತಿ ವ್ಯತೀಪಾತ ದಂದು" ಎನ್ನುವ ಶಾಸನೋಕ್ತ ಮಿತಿಯು ಕ್ರಿ.ಶ. ೧೧೫೧ರ ಡಿಸೆಂಬರ್ ೨೨ ಕ್ಕೆ ಸರಿಹೊಂದುತ್ತಿದ್ದು, ವಾರ ಮಾತ್ರ ರವಿವಾರವಾಗಿದೆ.

೧ ಓಂ ನಮಃ ಶಿವಾಯ [॥*] ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರ–

೨ ವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ [॥*] ಸ್ವಸ್ತಿ ಸಮಸ್ತ

೩ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮ ಭ–

೪ ಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ತ್ರೈಲೋಕ್ಯಮಲ್ಲ–

೫ ದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕ

೬ ತಾರಂಬರಂ ಸಲುತ್ತಮಿರೆ ॥ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ

೭ ಮೋನಾನುಷ್ಠಾನ ಜಪ ಸಮಾಧಿ ಶೀಳಗುಣ ಸಂಪನ್ನರ್ಸ್ಸಮ–

೮ ಸ್ತ ಗುಣಗಣಾಳಂಕೃತರ್ವ್ವಿದಿತ ವೇದಾರ್ತ್ಥ ವಿದ್ಯಾಪಾರಗರ್ಷಟ್ಕರ್ಮ್ಮ ನಿರತರ್ಸ್ಸ–

೯ ಪ್ತ ಸೋಮಸಂಸ್ಥಾವಭೃಥಾವಗಾಹನ ಪವಿತ್ರೀಕ್ರಿತ ಶರೀರರ್ಜ್ಜತುರ್ವ್ವೇದ ಪಾರಗ–

೧೦ [illegible]

೧೧ [illegible]

೧೨ ಗಾಂಗೇಯರ್ಪ್ಪರಮ ಪರೋಪಕಾರಿಗಳಾಹವ ಧುರನ್ಧರರ್ ಶಾಪಾನುಗ್ರಹ ಸ–

೧೩ ಮರ್ತ್ಥರ್ಕ್ಕಾರ್ಯ್ಯ ಬ್ರಿಹಸ್ಪತಿಗಳೇಕೈಕ ಪಣ್ಡಿತ ಗ್ರಾಮ ನಾಮೋತ್ತಮ ವೈಷ್ಣವ

೧೪ ಗೀತಿ ಮನೋಹರರ್ಪ್ಪಾಪಭೀರುಗಳ್ಪರನಾರೀ ದೂರದುರ್ವ್ವಿಷ್ಟ ವಿಧ್ವಂಸಕ–

೧೫ ವ್ವಿಶಿಷ್ಟ ಜನಾಶ್ರಯರ್ ಕಾಮ ಕ್ರೋಧ ಲೋಭ ಮೋಹ ವಿವರ್ಜ್ಜಿತರ್ದ್ವಾತ್ರಿಂಶತ್ಸ–

೧೬ ಹಸ್ರ ಸಮಯಾರ್ಘ್ಯಾರ್ಹರ್ದ್ವಿಜಕುಳತಿಳಕರ್ಶ್ಯರಣಾಗತ ವಜ್ರಪಂ–

೧೭ ಜರರ್ಸ್ಸಮಸ್ತ ಗುಣವಿಶೇಷೋನ್ನತರಪ್ಪ ಶ್ರೀ ರಾಮರ ದತ್ತಿ ಮಹಾಗ್ರಾಮ

೧೮ ಲೊಕ್ಕಿಗುಣ್ಡಿಯೂರೊಡೆಯ ಪ್ರಮುಖ ಮಹಾಜನಂ ಶ್ರೀ ಸಾಸಿರ್ವ್ವ–

೧೯ ರುಂ ಸಮಸ್ತ ಗೋಲೆ ಗೋಬ್ರಾಹ್ಮಣರ್ಮೊದಲಾಗಿ ಸಬಾಲವ್ರಿದ್ಧರ್ನ್ನಿರೆ–

೨೦ ದು ಧರ್ಮ್ಮಂಗಳಂ ಸ್ವಧರ್ಮ್ಮದಿಂ ಸುರಕ್ಷಿತಮಾಗಿ ರಕ್ಷಿಸುತ್ತಂ ಧರ್ಮ್ಮನಿರ್ಮ್ಮಾಣ–

೨೧ ಮಾದರಚಿತ್ತರುಂ ನಿರವದ್ಯ ವಿದ್ಯಾನುಪಾಳನ ಗೋ . . . . ತರುಮಾಗಿರೆ

೨೨ ಶ್ರೀಮಚ್ಚಾಳುಕ್ಯ ಚಕ್ರವರ್ತ್ತಿ ತ್ರೈಲೋಕ್ಯಮಲ್ಲದೇವ ವರ್ಷದ ೨ನೆಯ ಪ್ರಜಾಪ–

೨೩ ತಿ ಸಂವತ್ಸರದ ಪುಷ್ಯ ಶುದ್ಧ ೧೩ ಸೋಮವಾರ ಮುತ್ತರಾಯಣ ಸಂಕ್ರಾನ್ತಿ ವ್ಯತೀಪಾ–

೨೪ ತದಂದು ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೋನಾನುಷ್ಠಾ–

೨೫ ನ ಜಪ ಸಮಾಧಿ ಶೀಳಸಂಪನ್ನರುಂ ಸಕಳ ಗುಣೋಪಪನ್ನರುವೆನಿಪ ಚಂದೇಶ್ವರ ಮಠದಾ–

೨೬ ಚಾರ್ಯ್ಯರಪ್ಪ ಶ್ರೀ ರುದ್ರಶಕ್ತಿಪಣ್ಡಿತದೇವರ್ಗ್ಗೆ ಧಾರಾಪೂರ್ವ್ವಕಮಾಗೆ ಸರಸ್ವತಿ ಭಣ್ಡಾ–

೨೭ ರ ಸುಯಿಧಾನಮಾಗಿ ಕಡಕಟಿಗೇರಿಯಿಂ ತೆಂಕಲು ಕವತಾಳೇಶ್ವರದ ಸೂರ್ಯ್ಯದೇವ–

೨೮ ರ ಪಿರಿಸೂತ್ರದಿಂ ಹತ್ತಿದ ಬಡಗಲು ಓಟ್ಟೆಯಗೇರಿಯ ಸ್ಥಳದ ಹಡುವಣ ದೇ . .

೨೯ . . . ನೊಳೆ ಕಾಳ್ಗತ್ತಿಯ ನೆಲದೊಳೆ ಸರ್ವ್ವಬಾಧಾ ಪರಿಹಾರಂ ಸರ್ವ್ವ ನಮಸ್ಯವಾಗಿ

೩೦ ಆಚಂದ್ರಾರ್ಕ್ಕ ಸ್ಥಾಯಿಯಾಗಿ ಮನೆಯ ಕೊಟ್ಟರು ॥ ಮೊದಲೊಳೆ ವೇದಂಗಳಂ ತಾಳ್ದಿದ ಸ .

೩೧ . . . ಜಗಭಂಗಮಾ ವೇದಮಂ ತಿರ್ದ್ದಿದ ವೇದವ್ಯಾಸನೆ . ಬಗ್ಗದ ಮುನಿಪತಿಗಂ ಚಿತ್ತದೊಳೆ ನಿಶ್ಚಯ

೩೨ . . . ದ ವೇದಾರ್ತ್ಥೋಕ್ತಿಯಂ ವ್ಯಕ್ತಮಿದನೆ ತಿಳಿಪಲು ಸಾಲ್ವ ಚಾತುರ್ಯ್ಯ ವಾಗ್ಮಿತ್ವದಿನೀ ಸಾಸಿರ್ವ್ವರ

೩೩ . . . ಸೆದರೋ ಪರಮ ಬ್ರಹ್ಮ ತೇಜೋನಿಧಾ[ನ*]ರು ॥ ಇನ್ತೆನಿಸಿ ನೆಗರ್ತ್ತೆವೆತ್ತ ಶ್ರೀ ಸಾಸಿರ್ವ್ವರ ಪ್ರಿಯಪುತ್ರನಪ್ಪ

೩೪ ಕೇಶವದೇವನ ಮಹಿಮೆಯೆನ್ತೆಂದಡೆ ॥ ಕಳಿಪ ಕೋಶಿತರ ಕ್ರಿಯಾಪರರ ಸತ್ಯವೀರರತ್ಯಂತ

೩೫ ಸಂಚಳರಾಚಾರ ವಿಹೀನರರ್ತ್ಥಿಗರ ಸರ್ಬ್ಬಶಿಷ್ಟರಂ ಕೇಶಮ ಕಳೆಯಲ್ಕಿನವರಾರ್ಪ್ಪರ್ ಬಂ .

೩೬ ಜನ ವ್ಯಾಪಾರ ಪಾರಂಗಮಂ ಕಳೆಗುಂ ಜಗದಿ ನಾಗಳುಂ ವಿಬುಧ ವ್ರಿಂದಾಯಾಸವಂ ಕೇಸವಂ [॥*]

೩೭ ಸಾಮಾನ್ಯೋಯಂ ಧರ್ಮ್ಮಸೇತು ನ್ರಿಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ ಸ–

೩೮ ರ್ವ್ವಾನೇತಾನ್ಭಾವಿನಃ ಪಾರ್ತ್ಥಿವೇಂದ್ರಾನ್ಭೂಯೋ ಭೂಯೋ ಯಾಚತೇ ರಾಮ–

೩೯ ಚಂದ್ರಃ ॥ ಸ್ಥಿರವಾಗಿಂತಿದನೂಜಿಂ ನಿಲಿಸಿದಂಗಾ ರುದ್ರಲೋಕ ನಿರಂತರಮ–

೪೦ ಕುಂ . . . . ಪರಮ ಶ್ರೀ . .

೪೧ ಣ ಗೋವಧೂಮ . . . . ಕೋದದುನ್ತರ ಪಾಪದೊ

೪೨ . . ಮಿಕ್ಕ . . . . ಕೋರಹಂಬೋಧಿಯೊಳು॥

೫

ಬಸದಿಯ ಅಧಿಷ್ಠಾನದಲ್ಲಿ
ಸು. ೧೧–೧೨ನೆಯ ಶತಮಾನ

ಬಮ್ಮಯ್ಯ ಎಂದು ಬರೆದಿದ್ದು, ಬಹುಶಃ ಇದು ಅತ್ತಿಯಬ್ಬೆ ಕಟ್ಟಿಸಿದ ಬಸದಿ ನಿರ್ಮಿಸಿದ ರೂವಾರಿಯ ಹೆಸರಾಗಿರಬೇಕು.

೧ ಬಮ್ಮಯ್ಯ

೬
ವೀರಭದ್ರ ದೇವಸ್ಥಾನದ ಹಿಂದಿನ ಥರದಲ್ಲಿ ದೊರೆತ ಶಾಸನ
ಸು. ೧೨ನೆಯ ಶತಮಾನ

ಶಾಸನದ ಮೇಲ್ಭಾಗ ಒಡೆದಿದ್ದು, ಕೇವಲ ಫಲಶ್ರುತಿಯ ಭಾಗದ ಪಠ್ಯ ಮಾತ್ರ ಸದ್ಯ ದೊರೆತ ಫಲಕದಲ್ಲಿದೆ. ಶಾಸನದ ಕೊನೆಯಲ್ಲಿ ಸೇನಬೋವ ಮಾರ್ತಂಡಯ್ಯನು ಧರೆ, ಚಂದ್ರ-ಸೂರ್ಯ, ಮಂದರ ಪರ್ವತ, ಸಾಗರ, ಆಕಾಶಗಳು ಇರುವವರೆಗೆ ಶಾಸನವು ಶಾಶ್ವತವಾಗಿ ನಿಲ್ಲುವಂತೆ ಬರೆದನೆಂದು ಕಂದಪದ್ಯದಲ್ಲಿ ದಾಖಲಿಸುತ್ತದೆ. ಇನ್ನೊಬ್ಬ ಸೇನಬೋವ ಬಾಚಣ್ಣ ಲಿಪಿಕಾರನಾಗಿ (ಸೇನಬೋವ ಬಾಚಣ್ಣನ ಸ್ವಹಸ್ತ ಲಿಖಿತ [॥*]) ಬರೆದನೆಂದೂ ತಿಳಿಸುತ್ತದೆ.

@ ಧರೆಯಂ ಚಂನ್ದ್ರಾರ್ಕ್ಕಂ ಮಂ
ದರಗಿರಿಯುಂ ವಾರ್ದ್ಧಿ ಗಗನಮುಂ ನಿಲ್ವಿನಮು
ರ್ಬ್ಬರೆಯೊಳಗೀ ಶಾಸನಮಂ
ಬರೆದಂ ಶ್ರೀ ಸೇನಬೋವ ಮಾರ್ತ್ತಣ್ಡಯ್ಯ @

ಶಾಸನದ ಪೂರ್ಣಪಾಠ ಇಂತಿದೆ-

೧ ಶ್ರೀ ಗಂಗೆ ವಾರಣಾಶಿ . . . .

೨ ಮಹಾತಿಥಿಯುಲು ವೇದಪಾರಗರಪ್ಪ ಸಾಸಿರ ಬ್ರಾಹ್ಮಣರ್ಗ್ಗೆ ಸುಧೇನುವಾಗಿ ವತ್ಸ ಸಮೇತಂ ಸಾಸಿರ ಕವಿಲೆಯನಳಂಕಾರ ಸಮೇತಂ ಕೊ-

೩ ಟ್ಟ ಫಲಮನೆಯ್ದುವರು [॥*] ಈ ಧರ್ಮ್ಮಮನುಪೇಕ್ಷೆ ಗೆಯ್ದವರು ಷಾ(ಸಾ)ಸಿರ ಬ್ರಾಹ್ಮಣರುಮಂ ಸಾಸಿರ ಕವಿಲೆಯುಮಂ ಹಿಂಸೆ ಮಾಡಿದ ದೋಷ-

೪ ಮನೆಯ್ದುವರು @ ಸ್ವದತ್ತಾಂ ಪರದತ್ತಾಂ ವಾಯೋ ಹರೇತಿ ವಸುನ್ಧರಾಂ ಷಷ್ಟಿರ್ವ್ವರ್ಷ ಸಹಶ್ರಾಣಿ ವಿಷ್ಟಾಯಂ ಜಾಯತೇ ಕ್ರಿಮಿ @ ಸಾಮಾನ್ಯೋ-

೫ ಯಂ ಧರ್ಮ್ಮಸೇತುಂನ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ ಸರ್ವ್ವಾನೇತಾನ್ಭಾಗಿನಃ ಪಾರ್ತ್ಥಿವೇನ್ದ್ರಾ ಭೂಯೋ ಭೂಯೋ ಯಾಚತೇ ರಾಮ-

೬ ಭದ್ರಃ @ ದಾನಂ ವಾ ಪಾಲನಂ ವೇತಿ ದಾನಾಚ್ಛ್ರೇ ಯೋನು ಪಾಲನಂ ದಾನಾತ್ಸ್ವರ್ಗ್ಗಮ ವಾಪ್ನೋತಿ ಪಾಲನಾದಚ್ಯುತಂ ಪದಂ@

೭ ಧರ್ಮ್ಮ ಯೇವತೋ ಹನ್ತಿದಂ

೮ ರಕ್ಷತಿ ರಕ್ಷತಿ ತಸ್ಮಾದ್ಧರ್ಮ್ಮೋನ ಹನ್ತವ್ಯೋ ಮಾನೋ ಧರ್ಮ್ಮೋಹತೋವಧಿಃ @ ಧರೆಯಂ ಚಂನ್ದ್ರಾರ್ಕ್ಕಂ ಮಂದರಗಿರಿಯುಂ ವಾರ್ದ್ಧಿ ಗಗ-

೯ ನಮುಂ ನಿಲ್ವಿನಮುರ್ಬ್ಬರೆಯೊಳಗೀ ಶಾಸನಮಂ ಬರೆದಂ ಶ್ರೀ ಸೇನಬೋವ ಮಾರ್ತ್ತಣ್ಡಯ್ಯ @ ಸೇನಬೋವ ಬಾಚಣ್ಣನ ಸ್ವಹಸ್ತ ಲಿಖಿತ [॥*]

೭
ಲಕ್ಕುಂಡಿ ವಸ್ತುಸಂಗ್ರಹಾಲಯ
ಸು. ೧೨ನೆಯ ಶತಮಾನ

೧೬" ಉದ್ದ ೧೨" ಅಗಲದ ತ್ರುಟಿತ ಶಾಸನವಿದು. ಶಾಸನದ ನಾಲ್ಕೂ ಭಾಗಗಳು ತ್ರುಟಿತಗೊಂಡಿದ್ದು, ವಿಷ್ಣುವಿನ ಮುಂಡಭಾಗ ಅರ್ಧ ಮಾತ್ರವಿದ್ದು, ನಿಂತಿದ್ದಾನೆ. ವಿಷ್ಣುವಿನ ಎದುರಿಗೆ ಗರುಡ ಅಂಜಲಿಮುದ್ರೆಯಲ್ಲಿ ಮೊಣಕಾಲೂರಿ ಕುಳಿತಿದ್ದಾನೆ.

ಶಾಸನದ ಆರಂಭದಲ್ಲಿ ಶಿವ ಮತ್ತು ವಿಷ್ಣುಗಳಿಬ್ಬರ ಸ್ತುತಿಗಳಿವೆ. ಲೊಕ್ಕಿಗುಂಡಿಯ ಉಲ್ಲೇಖವಿದೆ.

೦೧ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮ

೦೨ ವರಾಹಾಯ ಲೀಲಯಾ

೦೩ ಣಯತೇ ॥ ಶ್ರೀ ಮದ್ಗೌರೀಶ ರಕ್ಷಿಸು

೦೪ ರ ಸಬೋದಾರ್ತ್ಥಮೂರ್ತ್ತಿ ಪ್ರೇಮಂ ಶ್ರೀಲೊಕ್ಕಿಗುಂಡಿ-

೦೫ ದಭಿಮತಲರಡುಗಾನಂದದಿಂದಂ ॥ ಕಂದ ॥ ಜಲನಿಧಿ

೦೬ ಶಯಂಗಲಿನೇಂ ನವವಿಧಮಾದುದು ವಿ

೦೭ ನಾಗಿರಿನಿರಕ್ಕದ್ರಿರಾಜನೇದ್ಭವತೇಜ

೦೮ ಸೋದ್ರಯ ವರಶೈಳಕ್ಕೆ ಹಿಮಾ

೦೯ ದಿಂದೊಪ್ಪಿಪು ಸಧರ್ಮ್ಮದಿ

೧೦ ಮಹೀಧರದ

೧೧ ವಂಶದೊಳು ॥ ಕ ॥ ನುರ್ವ್ವಿಖ್ಯಾತ*

* ಶಾಸನದ ನಾಲ್ಕೂ ಭಾಗಗಳು ಒಡೆದು ಕಳೆದಿವೆ.

೮
ಲಕ್ಕುಂಡಿ
ಅಜಿತನಾಥ ಬಸದಿ (ಚಿಕ್ಕ ಬಸದಿ)
ಸು. ೧೩-೧೪ನೆಯ ಶತಮಾನ

ಶಾಸನವನ್ನು ಪೀಠವೊಂದರ ಮೇಲೆ ಬರೆಯಲಾಗಿದ್ದು, ಪೀಠದ ಉಳಿದ ಭಾಗ ತ್ರುಟಿತಗೊಂಡಿದೆ. ಬಸದಿಯೊಂದಕ್ಕೆ ಬಿಟ್ಟ ಗ್ರಾಮದಾನವನ್ನು ದಾಖಲಿಸುತ್ತಲಿದ್ದು, ಶ್ರಾವಕರು ಮತ್ತು ಗುರುಗಳ ಉಲ್ಲೇಖವಿದೆ. ಹೆಸರುಗಳಿಲ್ಲ.

೨೧ . . . . ರಕ ದೇವರು ತಂದು [ಕಾಷ್ಠಾಭಾವದಿಂ ಪ್ರತಿಷ್ಠಿತರಿದಾಗಿ

೦೨ . . . [ಕಾತ*]ರಿಕೆಯ ಹಳ್ಳಿಯ [ಕೊಟ್ಟ ಸ್ಥಳ ಸಮಸ್ತ ಶ್ರಾವಕರ ಮುಂದೆ ಇಟ್ಟ (ದ್ದ)

೦೩ . . . . . ಸರ ಗುರುಗಳು + ಸಸಿಬರಿ । +

೯

ಕಲ್ಮಠದ ಬಾವಿಯಲ್ಲಿರುವ ಶಾಸನದ ತುಂಡು

ಕ್ರಿ.ಶ. ೧೦೭೬–೧೧೨೫

೧೨" ಅಗಲ ಮತ್ತು ೧೨" ಎತ್ತರದ ಶಾಸನದ ತುಣುಕಾಗಿದ್ದು, ಎಲ್ಲಿಂದಲೋ ತಂದು ಬಾವಿಯ ಗೋಡೆಯಲ್ಲಿ ಹಾಕಿ ಕಟ್ಟಲಾಗಿದೆ. ನಾಲ್ಕೂ ಭಾಗಗಳು ಒಡೆದಿವೆ. ಉಳಿದಿರುವ ಭಾಗದ ಪಠ್ಯವನ್ನು ಮಾತ್ರ ನೀಡಿದೆ.

ಶಿವನ ಸ್ತುತಿ ಮತ್ತು ಶ್ರೀನಿವಾಸನ ಸ್ತುತಿಯೊಂದಿಗೆ ಪ್ರಾರಂಭವಾಗುವ ಶಾಸನವು ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳ ವಂಶಾವಳಿಯನ್ನು ನೀಡುತ್ತ, ತ್ರಿಭುವನಮಲ್ಲನನ್ನು ಹೆಸರಿಸುವಲ್ಲಿಗೆ ನಿಂತುಹೋಗುತ್ತದೆ.

೦೧ ಮೂಳ ಸ್ತಂಭಾಯ ಶಂಭವೇ ॥ ಜಯತ್ಯಾನನ್ದ

೦೨ ಕುಶಾರ ವಚಃ ಶ್ರೀನಿವಾಸವಮಳ ಯಶೋ ವಿಸ್ತಾ

೦೩ ರ್ಪೂರಾದ್ರಯದಿಂ ಪಾಳಿಸುತಂ ಬರಲ್ ಧರಣಿಯಂ

೦೪ ಪಂ ಧಾತ್ರೀತಳಂ ॥ ಕ ॥ ಎನೆ ನೆಗರ್ದ್ದ ಭೂಪನಿಂ ತತ್ತನಯಂ

೦೫ ರರಂ ತತ್ಸೂನು ಸೋಮೇಶ್ವರಂ ಭೂಭಾರೋದ್ಧರಣ ಕ್ಷಮ–

೦೬ ತ ವೀರೋತ್ತಮಂ ॥ ಅಂತಾ ಭೂಪನಿನವನೀ ಕಾನ್ತಾಪತಿಯಂ

೦೭ ಯರಿನ್ನುಂ ಮುನ್ನುಂ ತನ್ನ ದೊರೆಯೆನಿಪರಿಂಲೆಂಬನ್ನಂ ಪೆರ್ಮ್ಮಾಡಿರಾ–

೦೮ ಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ತ್ರಿಭುವನಮಲ್ಲ

೦೯ ಕೆಯೆ ಪೊಡಪ್ಪುಳಿದ . . . .*

* ಶಾಸನದ ಮುಂದಿನ ಭಾಗ ಒಡೆದಿದೆ.

೧೦

ಲಕ್ಕುಂಡಿ

ಸೊಂಡಿಯವರ ಹೊಲದಲ್ಲಿಯ ಶಾಸನ

ಕ್ರಿ.ಶ. ೧೨೦೦

ಈ ಶಾಸನವಿರುವ ಹೊಲದ ಬದುವಿನಲ್ಲಿ ಗಣಪತಿಯ ವಿಗ್ರಹವಿರುವುದರಿಂದ, ಗಣಪತಿಯ ಸೊಂಡಿಲಿನ ಕಾರಣದಿಂದ ಆ ಹೊಲದ ಒಡೆಯರಿಗೆ ಸೊಂಡಿಯವರು ಎಂಬ ವಿಶೇಷವಾದ ಅಡ್ಡಹೆಸರು ಬಂದಿದೆ.

ಶಿವಸ್ತುತಿಯೊಂದಿಗೆ ಪ್ರಾರಂಭವಾಗುವ ಶಾಸನವು, ಯಾದವ ಚಕ್ರವರ್ತಿ ಸಿಂಘಣದೇವನ ಆಳ್ವಿಕೆಯನ್ನು ಸೂಚಿಸುತ್ತದೆ. ಮೇರುಗಿರಿ, ಭಾರತ ವರ್ಷ, ಕುಂತಳದೇಶ, ಬೆಳ್ವಲ ನಾಡು, ಲೊಕ್ಕಿಗುಂಡಿಗಳನ್ನು ಕ್ರಮವಾಗಿ ವರ್ಣಿಸುತ್ತದೆ. ತದನಂತರ ಲೊಕ್ಕಿಗುಂಡಿಯ ಮಹಾಜನರ ಗುಣ ವಿಶೇಷತೆಗಳನ್ನು ತಿಳಿಸುತ್ತದೆ. ಇದಾದ ಮೇಲೆ ಅರಿಯ ಮಲ್ಲಿಸೆಟ್ಟಿಯ ವಂಶಾವಳಿಯನ್ನು ನೀಡುತ್ತದೆ. ಆತನ ಮಗ ಹೊನ್ನ ಬೊಮ್ಮಿಸೆಟ್ಟಿಯ ವಿವರಗಳನ್ನು ನೀಡುತ್ತ, ಆತನು ದೇವರಿಗೆ ಕೊಟ್ಟ ದಾನದ ವಿವರಗಳಿವೆ.

೧ ಓಂ ನಮಃ ಶಿವಾಯಃ [॥*] ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ

೨ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀಪ್ರಿಥ್ವೀವಲ್ಲಭಂ ಮಹಾರಾಜಾಧಿರಾಜಂ ದ್ವಾರಾವತೀ ಪುರವರಾಧೀಸ್ವರಂ

೩ ವಿಷ್ಣುವಂಶೋದ್ಭವಂ ಯಾದವಕುಳಕಮಳಕಳಿಕಾ ವಿಕಾಸ ಭಾಸ್ಕರಂ । ರಾಯನಾರಾಯಣಂ । ಭುಜಬಳ ಪ್ರತಾಪ

೪ ಚಕ್ರವರ್ತ್ತಿ ಶ್ರೀಸಿಂಘಣದೇವ ವಿಜಯರಾಜ್ಯ ಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕ ತಾರಂಬರಂ ಸಲುತ್ತಮಿ–

೫ ರೆ ॥ ಅಂತಿರ್ದ್ದ ಮೇರುಗಿರಿಯಂ ತೆಂಕಣ ದೆಸೆಯೊಳಿರ್ಪ್ಪ ಭಾರತದೇಶದಶ್ವರದೇಶದೊಳಾಳು ಪಿರಿದು ಕುಂ

೬ ತಳದೇಶದೊಗಯಿಸುತ ಕುಂತಳದೇಶಂ ॥ ವನನಿಧಿ ವೇಷ್ಟಿತ ವಸುಧಾವನಿತೆಯ ಕುಂತಳವಿದೆನಿಪ ಕುಂತಳ ದೇಶಕನವರತ

೭ ಮಣಿಮಯಮಂಣ್ಡನವೆಂಬಿನಲ್ಲಿ ಬೆಳ್ವಲಂ ಸೊಗಯಿಸುಗಂ ॥ ಆ ನಾಡೊಳು ರಂಜಿಸುಗುಂ ನಾನಾವಿಧದಿಂ ಸಮಸ್ತ ವಸ್ತು–

೮ ಗಳಿಂದಂಭೋನಿಧಿಯೆಂನ್ತಂನ್ತಿರೆ ಲಕ್ಷ್ಮೀನಿಳಯಂ ಲೊಕ್ಕಿಗುಂಡಿ ವಿಶ್ವಂಬರೆಯೊಳು ॥ ಸರಸಿಜಯೋನಿ । ಜಿಣ್ಣನಜೆಂಯಬುಕ್ಕಮರಾವತಿ ಲೊಕ್ಕಿಗುಂಡಿ–ಯೆಂಬೆರಡುಮನೆಯ್ದೆ ತೂಗಲ್ಕಮರಾವತಿ ಮುಟ್ಟದ್ದು ದೂರ್ಧ್ವ ಲೋಕಮಂ ಧರೆಯೊಳು ಲೊಕ್ಕಿಗುಂಡಿ ನೆಲೆಸಿತ್ತೆನೆ ಧರಾ ಜಗಕ್ಕಳಂಕರಿಸು–

೯ ವ ಲೊಕ್ಕಿಗುಂಡಿಯ ಮಹತ್ವಮುಮಂ ದೊರೆವೆತ್ತ ಬಿಣ್ಪುಮಂ ॥ ಸುರಪುರವಂ ತೆಗಳು ರಮಪ್ಷಣಿಂ . . . ಕೊಱೆದ

೧೦ ಚ್ಚಿಗುಂ ನಭಿಶ್ವರಪುರವಂ ಪಣಂಚಲೆಯಾದಂ ಬುಜನಾಭಿ ಪುರೋಪಸೋಭೆಯಂ । ಪರಿಭವವೆತ್ತಿ ಪಾಡಿಸುವುದು । ಮತಿದಾಶ್ಯಪುರಂ

೧೧ ರಳೆಮೊಳಿವದಾರೆಯನುಗ್ಗಿಪುದೀ ದೊರೆತುದೆ । ಪಿನ ಪಾಂಚಾಳ ಲೊಕ್ಕಿಗುಂಡಿಯುಂ ॥ ಭೂನುತ ಶಂಕರಾಲಯದ ಭೂಪರಾರ್ವ್ವಿನುತ

೧೨ ವಿಷ್ಣುಗೆ ಹಂಸಂ ತಾನರಮನಂಬುಜ ಗರ್ಬ್ಭಸದ್ಮಂ ಗಳನುತ್ತಮ ಚೈತ್ಯರಾಜಿಯ ಯಾತಿತ ಸೊಗಲೊ ವಸಂತಮಂ ಮಣಿಕಾಂಚನಂ ಹಂರ್ಮ್ಯ

೧೩ ರಂಮ್ಯಮಂ ಮಾನನೊಳೆ ನಾಲಗೆಯೊಲದಿಯೊಳ ದಿಂರ್ವೊಗಳ್ದಪ್ಪನೋ ಲೊಕ್ಕಿಗುಂಡಿಯುಂ ॥ ಪಿಡಿಕಟ್ಟಬುದಾಬಲೊಳು ಅಱಿಡಿಗ

೧೪ . . . ತಗಂಡಂಗಳೊಳು ಮಡಿಪಗ್ರದ ಸಮೂಹದೊಳು ಬಡತನಂ ದಿಬ್ಯಾಂಗನಾ ಮಧ್ಯದೊಳು ಜಡ ವಾಕ್ಯಪತಿ ತೋಱಿಸಲ್ಕೆ ದಿಬದೊ

೧೫ . . ಲೊವಟಿಲೂಂಗೋಡಿಪಡೆ ವಾತುಂಗಳ ಲೊಕ್ಕಿಗುಂಡಿಯನಗಂ ಬಣ್ಣಿಸಲು ಬಕ್ಕುಮೆ ॥ ಸ್ವಸ್ತಿ ಯಮ ನಿಯಮ ಸ್ವಾಧ್ಯಾಯದೋಜೆ

೧೬ ಧ್ಯಾನ ಧಾರಣ ಮೋನಾನುಷ್ಠಾನ ಪರಾಯಣ ಜಪ ಸಮಾಧಿ ಶೀಳ ಸಂಪನ್ನರ್ಸಮಸ್ತ ಗುಣಗಳಾಂಕ್ರಿತ ರ್ವ್ವಿನುತ ವೇದಾರ್ತ್ಥ–

೧೭ ವಿದ್ಯಾಪಾರಗರ್ಶಟ್ಕರ್ಮ್ಮ ನಿಯತರ್ಸ್ಸಪ್ತ ಸೋಮ ಸಂಸ್ಥಾವಭ್ರಿತಾವಗಾಹನ ಪವಿತ್ರೀಕ್ರಿತ ಶರೀರರ್ಚ್ಚ ತುರ್ವ್ವೇದ ಪಾರಗರಷ್ಟಾದ–

೧೮ ಶ ಧರ್ಮ್ಮಶಾಸ್ತ್ರ ಕುಶಲರೇಕವಾಕ್ಯರಚಳಿತಧೈರ್ಯ್ಯ ಪರಾಕ್ರಮರಾಶ್ರಿತಜನ ಕಳ್ಪವ್ರಿಕ್ಷ ಕ್ಷಯಕರರ್ಕ್ಕಲಿಯುಗ ಗಾಂಗೇಯ ರ್ಪ್ಪರಮ ಪರೋಪ–

೧೯ ಕಾರಿಗಳಾಹವಧುರಂಧರಶ್ಶಾಪಾನುಗ್ರಹ ಸಮರ್ತ್ಥ ರ್ಕ್ಕಾರ್ಯ್ಯ ಬ್ರಿಹಸ್ಪತಿಗಳೇಕಕ್ಕೈಕ ಪಣ್ಡಿತಗ್ರಾಮ ನಾಮೋತ್ತಮರ್ವ್ವೈಷ್ಣವ

೨೦ ಗೀತಿ ಮನೋಹರರ್ಪ್ಪಾಪಭೀರುಗಳುಂ ಪರನಾರಿ ದೂರರುಂ ದುಷ್ಟವಿಧ್ವಂಸಕರ್ವ್ವಿಶಿಷ್ಟ ಜನಾಶ್ರಯರ್ಕ್ಕಾಮ ಕ್ರೋಧ ಲೋಭ ಮೋಹ

೨೧ ವಿವರ್ಜ್ಜಿತದ್ದ್ವಾತ್ರಿಂಶತ್ಸಹಸ್ರ ಸಮಯಾರ್ಗ್ಘದ್ವಿಜ ಕುಳತಿಳಕರ್ಶ[ರ]ಣಾಗತ ವಜ್ರಪಂಜರರ್ಸ್ಸಮಸ್ತ ಗುಣ ವಿಶೇಷೋನ್ನತರಪ್ಪ

೨೨ ಶ್ರೀರಾಮರ ದತ್ತಿ ಮಹಾಗ್ರಾಮಂ ಶ್ರೀಮಲ್ಲೊಕ್ಕಿ ಗುಂಡಿಯೂರೊಡೆಯ ಪ್ರಮುಖವಶೇಷ ಮಹಾಜನಂ ಶ್ರೀ ಸಾಸಿರ್ವ್ವರು ಸಮಸ್ತ

೨೩ ಗೋಲೆ ಬ್ರಾಹ್ಮಣರ್ಮ್ಮೊದಲಾಗಿ ಸಬಾಲವ್ರಿದ್ಧರ್ನ್ನೆರೆದು ಧರ್ಮ್ಮಂಗಳಂ ಸ್ವಧರ್ಮ್ಮದಿಂ ರಕ್ಷಿಸುತ್ತಮಿರೆ ॥ ನಮಃ ಶಿವಾಯಃ [॥*] ಸ್ವ–

೨೪ ಸ್ತಿ ಸಮಸ್ತ ವಿಸ್ತೀರ್ಣ ಘೂರ್ಣ್ನಿತಾರ್ಣ್ನವ ಪ್ರಖ್ಯಾತ ಭುವನ ವಿಖ್ಯಾತ ವೀರ ಬಣಂಜುಧರ್ಮ್ಮ ಪ್ರತಿಪಾಳನುಂ ವೈರಿ ನಿರ್ಮೂಳನುಂ ಕೊಂಕಣ ಚಕ್ರ–

೨೫ ವರ್ತ್ತಿಯುಂ ಸಂತತ ವಿಮಳಕೀರ್ತ್ತಿಯುಂ ಕೊಂಡ ವಿರೋಧಿಗಳ ಬಂಗಾಜನು ಬೂರೆಯಗೋವಿಂದ ಗರ್ವ್ವ ಸರ್ವ್ವಸ್ವ ಸೂಱೆಕಾಜನು ಮೈದರಸೆಟ್ಟಿ ಶಿರಃ ಕಂದುಕಕ್ರೀ–

೨೬ ಡಾವಿನೋದನುಂ ಸತ್ಯವಿ ಸ್ತುತ್ಯವಾದನುಂ ರಾಯಸೆಟ್ಟಿ ಬಲಹಕ ಮರನುಂ ಮಲೆವರಮಲ್ಲನುಂ ಸಿಂಘಣದೇವ ರಾಜ್ಯಲಕ್ಷ್ಮೀಮುಖದರ್ಪ್ಪಣನುಂ ಸಜ್ಜನನುಂ

೨೭ ತ್ರಣನುಂ ಸೋಮನಾಥದೇವ ದಿಬ್ಯ ಶ್ರೀಪಾದಾರಾಧ ಕನುಂ ಧುರಬಳ ಸೂದನುಯಪ್ಪ ಶ್ರೀಮನ್ಮಹಾರಾಜ್ಯವ ಹರೆಯ ಹ(ಅ)ರಿಯ ಮಲ್ಲಿಸೆಟ್ಟಿ

೨೮ ಯರ ವಂಶಾವತಾರವೆನ್ತೆನೆ ॥ ಕಂದ ॥ ವಸಧಿ ಪರೀತಾವನಿಯೊಳು ತಕರಲದೆ ಸೆಟ್ಟಿತನದ ಪಟ್ಟದಲ್ಮಿಗಿಲೆನಿಸಿದನತುಳಬಳ ಸರ್ಜ್ಜನ ನಾರಿಯಪಂ–

೨೯ ಟಿಂಹಂಬ ಮಹಾತ್ಮಂ ॥ ಕದನಥಲಿ ಕಲಿಯು ಯುಳಬಳಂ ಸತ್ಕುಲನಾರಿಯ ಬಮ್ಮಸೆಟ್ಟಿಯ ದಾಸ ತಾಂ ತೊಲಗೆಯಂ ಸತ್ಯವನುತ ಬಲಪಂಗಯ್ಯ ನಿಡಿಹೊರದಾ–

೩೦ ರನಮನೆಯಂ ॥ ಕ ॥ ಜಗವಜೆಯಲು ಪಿರಿದ ತಂನೊಳ್ಪಾರಿಯ ಬಂಮಸೆಟ್ಟಿಗೆ ಗುಣಿ ಮಹಿಮರ ಉದೆಯಿಸಿ ಪೆಂಟಿನ ಮಿಗಗೋರಿಯ ಮಲ್ಲಿಸೆಟ್ಟಿಯ

೩೧ ಚತುಳಬಳಂ ॥ ವಚನ ॥ ಆತನ ಪ್ರತಾಪವೆಂತೆಂದೊಡೆ ॥ ಪ್ರ ॥

೩೨ ತತಿಗಾದ ಮಹಾದರಿದ್ರ ವೇದಪ

೩೩ ಡ್ಡಿಯಂ ॥ ಕಂದ ॥ ಭೂತಳ ಕೈಕಪ್ಪುರ

೩೪ ನಯ್ತುಲೆ ॥ ಪ್ರಿತ್ತ ॥ ರಥರಾಜ

೩೫ . . . . ಸ್ವೂಪಸೇವಾರ್ಯ್ಯಮಲ್ಲಯಕನಂ ಶ್ರೀಕಾನ್ತ ಕೈಮಾಡಿ ಬಡುಬಳದಂದವಳಿಗಳಂ

೩೬ ಮಲ್ಲಪ್ರಭು ವರದಾಮರರಾಜವೆಗ್ಗಂ ಪುಟ್ಟಿದರು ಲಕ್ಷ್ಮೀವಾಸರು ಶ್ರೀವಿಳಾಸರು ಜರಾ . . . ನಿಳಯನ್ತ್ಯಾಗಿಗಂ ಭೋಗಿಗಳುಂ ಧಾತ್ರಿ ವೇದ ಲೋಕ

೩೭ ತ್ರಿಭುವನಮಲ್ಲತಿಲಕನಾ ರೇವಣಂ ಹೊಂನ್ನಬೊಂಮ್ಮಂ ಪಾದಿ*

* ಶಾಸನ ೬೩ ಸಾಲುಗಳವರೆಗೆ ಮುಂದುವರೆದಿದೆ.

೧೧

ನಾಗನಾಥ ದೇವಾಲಯದ ಭಿತ್ತಿಯ ಮೇಲಿರುವ ಶಾಸನ ಸು.೧೨–೧೩ನೆಯ ಶತಮಾನ

೧೦" ಅಗಲ ೩" ಎತ್ತರದ ಭಾಗದಲ್ಲಿ ಶಾಸನವನ್ನು ಕೆತ್ತಲಾಗಿದ್ದು, ಮೇಲೆ ಯಾವುದೇ ಚಿತ್ರಗಳಿಲ್ಲ. ಕಾಳಿಮಯ್ಯನ ಬಸದಿಯಿಂದಾಗಿ ನಕರರ ಧರ್ಮದ ಕೀರ್ತಿ ಬೆಳೆಯಿತೆಂದು ಸೂಚಿಸುತ್ತದೆ.

೧ ಶ್ರೀ ಕಾಳಿಮಯನ ಬಸದಿಯ

೨ ಕಿಱು ನಕರದ ಧರ್ಮ ಮೆರೆದು–

೩ ದೇ ॥ ೨ ಕೊಟ

೧೨

ನಾಗನಾಥ ದೇವಾಲಯದ ಹಿಂಭಾಗದ ಭಿತ್ತಿಯ ಮೇಲಿರುವ ಶಾಸನ ಸು. ೧೨–೧೩ನೆಯ ಶತಮಾನ

೧ ಕಾಳಿಮಯನ ಬ–

೨ ಸದಿ

೧೩

ಲಕ್ಕುಂಡಿ ವಸ್ತು ಸಂಗ್ರಹಾಲಯದಲ್ಲಿರುವ ಬೆಟಗೇರಿಯಲ್ಲಿ ದೊರೆತ ಕಂಬ ಸು. ೧೨ನೆಯ ಶತಮಾನ

೧ ಆದಿತ್ಯದೇವರ ಕಿ–

೨ [ರಣ]ದ ಕಂಬ [॥*]

೧೪

ಸೋಮೇಶ್ವರ ದೇಗುಲದ ಹೊರಭಿತ್ತಿಯ ಮೇಲೆ

೧೫

ಕೆರೆ ಒಡ್ಡಿನಲ್ಲಿರುವ ವೈಷ್ಣವ ಶಾಸನ

೧೬

ವೀರಭದ್ರ ದೇವಾಲಯದ ಹಿಂದಿನ ತ್ರುಟಿತ ಶಾಸನ

೧೭

ಅಂಬಕ್ಕಿಯವರ ಭಾವಿಯ ಮೇಲೆ

೧೮

ಅಂಬಕ್ಕಿಯವರ ಭಾವಿಯ ಮೇಲೆ

೧೯

ನಾಗನಾಥ ಬಸದಿಯ ಮುಂಭಾಗದ ಭಿತ್ತಿಯ ಮೇಲೆ

ಅತ್ತಿಯಬ್ಬೆ ದಾನವಾಗಿ ಕೊಟ್ಟ ಸುಱು(ರು)ಕಿ ಎಲ್ಲಿದೆ?

ಕನ್ನಡ ನಾಡಿನ ಇತಿಹಾಸದಲ್ಲಿ ಅತ್ತಿಮಬ್ಬೆಯದು ಪ್ರಖ್ಯಾತವಾದ ಹೆಸರು. ಇದಕ್ಕೆ ಕಾರಣ ಅತ್ತಿಯಬ್ಬೆಯ ದಾನಶೀಲತೆ. ಆಕೆ ೧೫೦೦ ಜಿನಬಿಂಬಗಳನ್ನು ಮಾಡಿ, ಜಿನಬಸದಿಗಳನ್ನು ಕಟ್ಟಿಸಿ ದಾನ ನೀಡಿದುದೇ ಕಾರಣವಾಗಿದೆ. ಈ ಎಲ್ಲ ಬಸದಿಗಳಿಗೆ ಕಳಸವಿಟ್ಟಂತೆ ಲಕ್ಕುಂಡಿಯಲ್ಲಿ ಜಿನಭವನವೊಂದನ್ನು ಕಟ್ಟಿಸಿ, ಗುರುಗಳಾದ ಅರ್ಹನಂದಿ ಪಂಡಿತರಿಗೆ ದಾನ ಕೊಟ್ಟದ್ದನ್ನು ಲಕ್ಕುಂಡಿ ಶಾಸನವು ಸುದೀರ್ಘವಾಗಿ ತಿಳಿಸುತ್ತದೆ. ಪಾಠ ಹೀಗಿದೆ–" ಅತ್ತಿಮಬ್ಬರಸಿಯರ್ಸ್ವಕಳ ಗೂರ್ಜ್ಜರ ವಿಜಯಾನನ್ತರಂ ಶ್ರೀಮದಾಹವಮಲ್ಲದೇವಂಗೆ ಬಿನ್ನಪಂಗೆಯ್ದು ಚಕ್ರವರ್ತಿದತ್ತಿ ಪ್ರಖ್ಯಾತಮಪ್ಪ ಶಾಸನಮಂ ಪೊನ್ನಕಳಶಂ ಬೆರಸು ಪಡೆದು ಸಕವರ್ಷ ೯೨೯ನೆಯ ಪ್ಲವಂಗ ಸಂವತ್ಸರದ ಫಾಲ್ಗುಣಮಾಸದ ನಂದೀಶ್ವರದಷ್ಟ[ಮಿ]ಯುಂ ಬೃಹಸ್ಪತಿವಾರದಂದು ಶುಭಲಗ್ನೋದಯದೊಳ್ಮಹಾಧ್ವಜ ಮಹಾಭಿಷೇಕ ಮಹಾದಾನ ಧರಣಾನನ್ತರಂ ತಮ್ಮ ಗುರುಗಳು ಸೂರಸ್ತಗಣದ ಕೌಱೂರ್ಗ್ಗಚ್ಛದ ಅರ್ಹನನ್ದಿಪಣ್ಡಿತದೇವರ್ಗ್ಗೆ ಶ್ರೀಲೊಕ್ಕಿಗುಣ್ಡಿಯೊಳ್ಬಸದಿಯಂ ಮಾಡಿಸಿಯದಕ್ಕೆ ತಳವೃತ್ತಿಯೆಂದು ಕೊಟ್ಟ ಸುಱುಕಿಯ ಸೀಮಾಮರ್ಯ್ಯಾದೆಯೆನ್ತೆನ್ದೊಡೆ [॥*] ತೆಂಕ ಪಾಲ್ವಳ್ಳಂ ನೈರಿತಿಯೊಳ್ಬರವುಲಿಗೆಱೆಯ ತೆಂಕಣ ಕೋಡಿಯಿಂ ಬಡಗಲ್ಬರೆಯೆರೆದ ಕೊಳನುಂ ಬೂದಿವಾಳುಂ ವಾಯುವ್ಯದ ದೆಸೆಯೊಳು ಗುರಿಯಪಳ್ಳಂ ಬಡಗಲಾ ಪಳ್ಳಮೆ ನೀರ್ವ್ವರಿಯಾಗೆ ಮೂಡಲೆರಡುಂ ಪಳ್ಳದ ಕೂಡಲೆ ಮೇರೆಯಾಗೆ ಬಿಟ್ಟರದಕ್ಕಱುವಣ ಗದ್ಯಾಣಮಿರ್ಪ್ಪತ್ತು ಅಲ್ಲಿಯ ಗಾವುಂಡುಗಳ್ಗೆ ಪನ್ನಿರ್ಪ್ಪತ್ತೆರ್ಕ್ಕೆಯುಮೊಂದು ಮನೆ" ಎಂದು ಹೇಳುತ್ತದೆ ಲಕ್ಕುಂಡಿಯ ಶಾಸನ (SII XI-I No.52, ಕ್ರಿ.ಶ. ೧೦೦೭).

ಈ ಶಾಸನದನ್ವಯ ದಾನವಾಗಿ ಕೊಟ್ಟ ಗ್ರಾಮ ಸುಱುಕಿ. ಈ ಊರನ್ನು ಕುರಿತ ಶಾಸನೋಕ್ತ ಉಲ್ಲೇಖಗಳು ಇಂತಿವೆ–

ಚಿಕ್ಕ ವಡ್ಡಟ್ಟಿ ಶಾಸನವು (SII XI–I No ೧೭೮, ಕ್ರಿ.ಶ. ೧೧೨೭) " . . . ಕಕ್ಕರಸರುಂ ಸುಱುಕಿ ಪನ್ನೆರಡುಮಂ" ಎಂದು ಉಲ್ಲೇಖಿಸುತ್ತವೆ. ಡಂಬಳದ ಶಾಸನವು (ಹೊಸ

ಶಾಸನ ಕ್ರಿ.ಶ. ಸು. ೧೧೨೦)" ಸುಜುಕಿ ಪನ್ನೆರಡರ" ಎಂದು ಉಲ್ಲೇಖಿಸುತ್ತದೆ. ಈ ಎರಡು ಶಾಸನಗಳಿಂದ ಸುಜುಕಿ ಗ್ರಾಮವು ಹನ್ನೆರಡು ಹಳ್ಳಿಗಳ ಕೇಂದ್ರವಾಗಿತ್ತು ಎಂದು ತಿಳಿದುಬರುತ್ತದೆ. ಇದು ಮಾಸವಾಡಿ ೧೪೦ರೊಳಗಣ ಒಂದು ಚಿಕ್ಕ ವಿಭಾಗವಾಗಿತ್ತು.

ಈ ಶಾಸನಗಳಲ್ಲಿರುವ ಸುರುಕಿಯು ಕಾಲಕ್ರಮೇಣ ಸುಜುಕಿ > ಸುರುಕಿ > ಸುರ್ಕಿ > ಚುರ್ಕಿ > ಚುರ್ಚಿ ಎಂದು ಹೆಸರು ಬದಲಾಗುತ್ತ ಬಂದಿರಬಹುದಾಗಿದೆ. ಲಕ್ಕುಂಡಿಯ ಆಸುಪಾಸಿನ ಊರುಗಳ ಹೆಸರುಗಳನ್ನು ಗಮನಿಸಿದಾಗ, ಲಕ್ಕುಂಡಿಯಿಂದ ೩ ಕಿ.ಮೀ. ಅಂತರದಲ್ಲಿರುವ ಚುರ್ಚಿಹಾಳ ಹೆಸರಿನ ಊರು ನನ್ನ ಗಮನಕ್ಕೆ ಬಂದಿತು. ಚುರ್ಚಿಯಲ್ಲಿರಬಹುದಾದ ಹಳ್ಳದಿಂದಾಗಿ ಇಲ್ಲವೇ ಚುರ್ಚಿ ಊರು ಹಾಳಾಗಿದೆ ಎನ್ನುವ ಕಾರಣದಿಂದಾಗಿ ಚುರ್ಚಿಹಾಳ ಎಂದಾಗಿರಬಹುದು ಎಂಬ ಊಹೆಯನ್ನು ಮಾಡಿ, ಕ್ಷೇತ್ರ ಕಾರ್ಯಕ್ಕೆ ಹೋದಾಗ ಆ ಗ್ರಾಮದ ದಕ್ಷಿಣಕ್ಕೆ ಪಾಲ್ವಳ್ಳವಿತ್ತು. ನೈರುತ್ಯದಲ್ಲಿ ವುಲಿಗೆರೆಯ ದಕ್ಷಿಣ ಕೋಡಿಯಿಂದ ಉತ್ತರಕ್ಕೆ ಎರೆದ ಕೊಳ ಮತ್ತು ಬೂದಿವಾಳು. ವಾಯವ್ಯದಲ್ಲಿ ಗುರಿಯ ಪಳ್ಳ, ಉತ್ತರಕ್ಕೆ ಇದೇ ಹಳ್ಳವೇ ಹರಿಯುತ್ತದೆ. ಅಲ್ಲದೆ ಈ ಎರಡೂ ಹಳ್ಳಗಳ (ಪಾಲ್ವಳ್ಳ ಮತ್ತು ಗುರಿಯಪಳ್ಳ) ಸಂಗಮವಿದೆ ಎಂದು ತಿಳಿಸುತ್ತದೆ. ಈ ಮೇರೆಗಳ ಅನುಗುಣವಾಗಿ ಯಥಾವತ್ ಇರುವ ಊರು ಚುರ್ಚಿಹಾಳ. ಈಗಲೂ ಸದಾಕಾಲ ನೀರಿಲ್ಲದಿದ್ದರೂ ಮಳೆಗಾಲದಲ್ಲಿ ಹಳ್ಳಗಳು ಹರಿಯುತ್ತವೆ. ಇಂದು ಊರಿನ ಉತ್ತರಕ್ಕೆ ಕೆರೆಯೂ ಇದೆ. ಅದನ್ನು ಜಂತ್ಲಿಕೆರೆಯೆಂದು ಕರೆಯುತ್ತಾರೆ. ಅಂದಿನ ಊರಿನ ನೈರುತ್ಯದಲ್ಲಿದ್ದ ಕೆರೆ ವುಲಿಗೆರೆಯೂ ಇದೆ. ಗ್ರಾಮದ ದಕ್ಷಿಣಕ್ಕೆ ಪಾಲ್ವಳ್ಳ = ಕದಾಂಪುರ ಹಳ್ಳ ಈಗಲೂ ಇದೆ. ನೈರುತ್ಯದಲ್ಲಿದ್ದ ವುಲಿಗೆರೆ ಈಗ ಕದಾಂಪುರ ಕೆರೆ ಎಂದು ಹೆಸರಾಗಿದೆ. ಉತ್ತರದಲ್ಲಿದ್ದ ಎರದ ಕೊಳ ಈಗ ಜಂತ್ಲಿಕೆರೆ ಎಂದಾಗಿದೆ. ಅದರ ಪಕ್ಕದಲ್ಲಿಯೇ ಬೂದಿವಾಳು = ಇಂದಿನ ಬೂದಿಹಾಳ ಗ್ರಾಮ ಇದೆ. ಊರಿನ ಪೂರ್ವ ದಿಕ್ಕಿಗೆ ಗುರಿಯ ಪಳ್ಳ ಮತ್ತು ಕದಾಂಪುರ ಹಳ್ಳಗಳು ಸೇರಿ ಪೇಠಾಲೂರ ಕಡೆಗೆ ಈಗಲೂ ಹರಿದುಹೋಗುತ್ತವೆ.

ಹೀಗೆ ಗ್ರಾಮ ನಾಮಾಧ್ಯಯನ, ಕ್ಷೇತ್ರಕಾರ್ಯ ಮತ್ತು ಶಾಸನಗಳ ಅಧ್ಯಯನದ ಮೂಲಕ ಅತ್ತಿಯಬ್ಬೆ ದಾನವಾಗಿ ಕೊಟ್ಟ ಗ್ರಾಮ ಇಂದಿನ ಮುಂಡರಗಿ ತಾಲೂಕಿನಲ್ಲಿರುವ ಚುರ್ಚಿಹಾಳ ಎನ್ನುವ ಊರು ಆಗಿದೆ ಎಂದು ಭಾಷಾಶಾಸ್ತ್ರ, ಶಾಸನ ಉಲ್ಲೇಖಗಳು ಮತ್ತು ಕ್ಷೇತ್ರಕಾರ್ಯಗಳ ಮೂಲಕ ಖಚಿತವಾಗಿ ಗುರುತಿಸಬಹುದಾಗಿದೆ.

ಲಕ್ಕುಂಡಿಯ ಮಠಗಳು

೧ ಕಲ್ಮಠ
೨ ಚೌಕಿಮಠ
೩ ಬದ್ನಿಮಠ
೪ ಪತ್ರಿಮಠ
೫ ಹಿರೇಮಠ
೬ ನಾಗಾವಿಮಠ (ಶಾಸನ)
೭ ಶಿವಪ್ಪಯ್ಯನಮಠ
೮ ಮುಳಕೊಂಪಿಮಠ
೯ ಅಲ್ಲಮಪ್ರಭುಮಠ
೧೦ ಚರಲಿಂಗಪ್ಪನಮಠ (ಕಪ್ಪಚರ)
೧೧ ಮಾಯಕಾರಮಠ (ಹರಟಿ-ಮಲ್ಲಿಕಾರ್ಜುನಗುಡಿ)
೧೨ ಮರಿದೇವರಮಠ (+ಕೊಪ್ಪಳ)
೧೩ ಅನ್ನದಾನೇಶ್ವರಮಠ (+ಮುಂ)
೧೪ ಕಳ್ಳೀಮಠ
೧೫ ನಡುವಿನಮಠ
೧೬ ಫಕೀರಸ್ವಾಮಿಮಠ
೧೭ ಪ್ರಭುದೇವರಮಠ
೧೮ ಹಿರೇಮಠ (೨)
೧೯ ಚೌಕಿಮಠದ ಹತ್ತಿರದ ಮಠ

೧೧

ವಚನವಿರುವ ಏಕೈಕ ಶಿಲಾಶಾಸನ

ಡಾ. ಬಿ. ರಾಜಶೇಖರಪ್ಪ*

ಚಿತ್ರದುರ್ಗದ ಹಿರಿಯ ಸಂಶೋಧಕರಾಗಿದ್ದ ಹುಲ್ಲೂರು ಶ್ರೀನಿವಾಸ ಜೋಯಿಸರು ಪ್ರಕಟಿಸಿರುವ ಶಾಸನಗಳಲ್ಲಿ 'ಚಿತ್ರದುರ್ಗದಲ್ಲಿ ಮೋಕ್ಷಗುಂಡಂ ಶ್ರೀನಿವಾಸ ಅವಧಾನಿಗಳ ತೋಟದ ಬಾವಿಯ ವಾಯವ್ಯ ದಿಕ್ಕಿನಲ್ಲಿ ಬಿದ್ದಿರುವ ಕಲ್ಲು' ಎಂದು ಹೆಸರಿಸಿರುವ ಶಾಸನವೂ ಒಂದು. ೧೯೫೬ರ 'ಶರಣ ಸಾಹಿತ್ಯ' ಪತ್ರಿಕೆಯ ಒಂದು ಸಂಚಿಕೆಯಲ್ಲಿ ಪ್ರಕಟವಾಗಿರುವ ಆ ಶಾಸನದ ಪಾಠವನ್ನು 'ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು' ಪುಸ್ತಕದಲ್ಲಿ (ಪುಟ ೯೧–೯೨ರಲ್ಲಿ) (ಸಂ : ಲಕ್ಷ್ಮಣ್ ತೆಲಗಾವಿ ಮತ್ತು ಡಾ. ಎಂ. ವಿ. ಶ್ರೀನಿವಾಸ್) ಹೀಗೆ ಕೊಟ್ಟಿದ್ದಾರೆ :

(ಪ್ರಮಾಣ : ಸು ೪ ಅಡಿ, ೧ ೧/೨ ಅಡಿ)

೧ ಶ್ರೀಗುರು ಹರಿಶರಣಂ ಯೋಗಿಜನ ವಂದ್ಯೇಶಃ ಕರು
೨ ಣೆಯಾಗೆನ್ನ ಜನನ ಮರಣಂ ಬನೀಗಿಪ ಗು
೩ ರು ಮೂರ್ತಿ ಕರುಣಂ ರಾಯ ಗಿರಿಶರಣಂ ॥
೪ ವೇದಾದಿ ಮೂಲಂ ಪ್ರತಿತೇಶ್ವರಾಣಾಂ ತ್ರೈಯೋ
೫ ದಶಸ್ತಂ ಶಸಿಬಿಂಬರೂಪಂ ನಾದಾತ್ಮಕಂ
೬ ಸುಪ್ತೇ ಭುಜಂಗರೂಪಂ ಶ್ರೀತಾತ ಮೂಲಂ
೭ ಪ್ರಣಮಂ ನಮಾಮಿ ॥ ೦ ॥ ಕಲಿಯುಗ
೮ ೪೮೩೯ ನೇ ಕಾಳಯುಕ್ತಿ ಸಂವತ್ಸರದ ಕಾ
೯ ರ್ತಿಕ ಶೂ ೧೫ ಸಉಂಮ್ಯವಾರ ರೋಹಿಣಿ
೧೦ ನಕ್ಷತ್ರ ಸುಭಲಗ್ನ

ಯಂತ್ರ

೧೧ ನಾದ ಬಿಂದು ಕಳೆ ಭೇದವ ತಿಳಿದಲ್ಲದೆ
೧೨ ಆರಕ್ಷರವಾದ ತೆರನನರಿಯ ಬಾ
೧೩ ರದು । ಆರಕ್ಷರಕೆ ಮೂಲ ಪ್ರಣಮನ
೧೪ ತಿಳಿದಲ್ಲದೆ ನಾದ ಕಲೆದೋರದು ಆ ನಾದದೊ
೧೫ ಳಗಿನ ಕಳೆಯ ನೋಡಿ ಕಂಡಲ್ಲದೆ ರಾಜಶಿವಯೋ
೧೬ ಗಿಯಾಗಬಾರದು । ರಾಜಶಿವಯೋಗವೆಂಬುದು
೧೭ ಆದಿಯಲ್ಲಿ ಶಿವಬೀಜವಾದ ಮಹಾಮಹಿ
೧೮ ಮರಿಗೆ ಸಾಧ್ಯವಪ್ಪುದಲ್ಲದೆ ತ್ರೈಜಗದಲ್ಲಾರಿ
೧೯ ಗು ಅಸಾಧ್ಯ ನೋಡಾ ಮಹಾಲಿಂಗ ಗುರುಶಿವ
೨೦ ಸಿದ್ಧೇಶ್ವರ ಪ್ರಭುವೇ

ಈ ಪಾಠದ ಕೆಳಗೆ ಅವರು ಕೊಟ್ಟಿರುವ ಟಿಪ್ಪಣಿ ಹೀಗಿದೆ :

"ಇದನ್ನು ಯಂತ್ರದ ಕಲ್ಲು ಎಂದು ಕರೆಯುವರು. ದನಗಳಿಗೆ ಕಾಯಿಲೆ ಬಂದಾಗ ಈ ಶಿಲಾಶಾಸನವನ್ನು ನೀರಿನಿಂದ ಸ್ನಾನ ಮಾಡಿಸಿ, ಆ ಮಜ್ಜನದ ನೀರನ್ನು ಕಾಯಿಲೆದನಗಳಿಗೆ ಕುಡಿಸಿದರೆ ಕಾಯಿಲೆ ಗುಣವಾಗುವುದಂತೆ. ಇಂತಹ ಯಂತ್ರದ ಕಲ್ಲುಗಳೂ, ಈ ನಂಬಿಕೆಯೂ ಈ ಜಿಲ್ಲೆಯ ತುರುವನೂರು, ಮಾಡನಾಯಕನಹಳ್ಳಿ ಮುಂತಾದ ಸ್ಥಳಗಳಲ್ಲಿವೆ.

ಈ ಶಾಸನದ ಕಾಲ ಕಲಿಯುಗ ೪೮೩೯ಕ್ಕೆ ಸರಿಯಾದ ಶಾಲಿವಾಹನ ಶಕೆ ೧೬೬೦ನೆಯ ಕಾಳಾಯುಕ್ತಿ (ಕ್ರಿ.ಶ. ೧೭೩೮) ಸಂವತ್ಸರದ ಕಾರ್ತಿಕ ಶುದ್ಧ ಪೂರ್ಣಿಮಾ ಸೌಮ್ಯವಾರ ರೋಹಿಣೀ ನಕ್ಷತ್ರದಂದು. ಆಗ್ಗೆ ಚಿತ್ರದುರ್ಗದಲ್ಲಿ ಕಾಮಗೇತಿ ವಂಶದ ಹಿರೆಮದಕರಿ ಭೂಪಾಲನು ರಾಜ್ಯವಾಳುತ್ತಿದ್ದನು.

ಆಗ್ಗೆ ಚಿತ್ರದುರ್ಗ ಶ್ರೀ ಬೃಹನ್ಮಠದಲ್ಲಿ ಶ್ರೀ ಸಿರಹಟ್ಟಿ ಸಿದ್ಧಲಿಂಗ ಸ್ವಾಮಿಗಳವರು ಪೀಠಾಧಿಪತಿ ಗಳಾಗಿದ್ದರು."

ಈ ಶಾಸನದ ಪುನರ್ಪರಿಶೀಲನೆ

೧೯೭೬ರಲ್ಲಿ 'ಚಿತ್ರದುರ್ಗ ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ' ಪ್ರಕಟಿಸಿರುವ 'ಐತಿಹಾಸಿಕ ಚಿತ್ರದುರ್ಗ' ಪುಸ್ತಕಕ್ಕೆ 'ಚಿತ್ರದುರ್ಗದ ಪ್ರಮುಖ ಶಾಸನಗಳು' ಎಂಬ ಲೇಖನವನ್ನು ಬರೆಯುವಾಗ, ನಾನು ಈಮೇಲಿನ ಸಂಪುಟವನ್ನು ಆಧರಿಸಿ ಬರೆದಿದ್ದೆನಾದರೂ ಆಕಾಲಕ್ಕೆ ಈ ಶಾಸನವನ್ನು ಖುದ್ದಾಗಿ ನೋಡಲು ಸಾಧ್ಯವಾಗಿರಲಿಲ್ಲ.

* ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು (ನಿ), ೨ನೇಯ ಕ್ರಾಸ್ (ಪಶ್ಚಿಮ), ಜಯಚಾಮರಾಜೇಂದ್ರ ಬಡಾವಣೆ, ಚಿತ್ರದುರ್ಗ–೫೭೭೫೦೧

ಮುಂದೆ ೧೯೭೯ರ ಅಕ್ಟೋಬರ್ ೧೨ರಂದು ಈ ಶಾಸನವನ್ನು ಖುದ್ದಾಗಿ ನೋಡುವ ಸದವಕಾಶ ನನಗೆ ದೊರೆಯಿತು. ಆಗ ಅದು ಇದ್ದ ತೋಟ ಹು.ಶ್ರೀ. ಜೋಯಿಸರು ಹಿಂದೆ ನಮೂದಿಸಿದ್ದಂತೆ ಮೋಕ್ಷಗುಂಡಂ ಶ್ರೀನಿವಾಸ ಅವಧಾನಿಗಳದ್ದಾಗಿರದೆ ಅದರ ಮಾಲೀಕತ್ವ ಬದಲಾಗಿ ಅದು ಆಗ ಮೆದಕೇರಿಪುರದ ಹೊಸೂರಪ್ಪಳ ಜುಂಜಪ್ಪನವರದಾಗಿತ್ತು ಮತ್ತು ಹಿಂದೆ ತೋಟದ ಬಾವಿಯ ವಾಯವ್ಯ ದಿಕ್ಕಿನಲ್ಲಿ ಬಿದ್ದಿದ್ದ ಕಲ್ಲು, ಈಗ ಸುಮಾರು ಪಶ್ಚಿಮದಲ್ಲಿ ಒಂದು ಸಿಮೆಂಟ್ ಕಟ್ಟೆಯ ಮೇಲೆ ಸ್ಥಾಪಿತವಾಗಿತ್ತು. ಇದರ ಮೇಲೆ ಹಾಕಿದ ನೀರು ಇದರ ಮುಂಭಾಗದ ಎಡ ಪಾರ್ಶ್ವದಲ್ಲಿ ಹರಿದು ಕೆಳಗಿಳಿದು ಬರುವಂತೆ ಗಾರೆಯ ಕಟ್ಟೆಯಲ್ಲಿ ಎಡಕ್ಕೆ ಇಳಿಜಾರಾದ ತಗ್ಗುನಾಲೆಯೊಂದನ್ನು ಮಾಡಿ ಅದಕ್ಕೆ ಜಾಚುತುದಿಯೊಂದನ್ನು ಕಲ್ಪಿಸಲಾಗಿತ್ತು. ಈ ಕಟ್ಟೆ ಇತ್ಯಾದಿ ರಚನೆಗೆ ಕಾರಣ ಸ್ಪಷ್ಟವಾಗಿಯೆ ಇತ್ತು. ಹಿಂದೆ ಹು. ಶ್ರೀ. ಜೋಯಿಸರು ಬರೆದಿದ್ದಂತೆ, ಈ ಕಲ್ಲನ್ನು ಪೂಜೆ ಮಾಡಿ ತೊಳೆದ ನೀರನ್ನು ಬಾಯಿಬೆ ಆದ ಪಶುಪ್ರಾಣಿಗಳಿಗೆ ಕುಡಿಸಲಿಕ್ಕಾಗಿ ಸಂಗ್ರಹಿಸಿಕೊಳ್ಳಲು ಅನುಕೂಲವಾಗಲಿ ಎಂದು ಧರ್ಮಬುದ್ಧಿಯಿಂದ ಯಾರೋ ಅದಕ್ಕೆ ಆ ಕಟ್ಟೆ ಇತ್ಯಾದಿ ರಚನೆಯನ್ನು ಮಾಡಿಸಿದ್ದರೆಂದು ತಿಳಿಯಿತು. ಇದರಿಂದ ಹಿಂದೆ ಜೋಯಿಸರು ಬರೆದ ಕಾಲದಿಂದ ಈ ಕಾಲದವರೆಗೂ ಪಶುಪ್ರಾಣಿಗಳ ರೋಗನಿವಾರಣೆಯ ಮಹಿಮೆಯ ಕಲ್ಲು ಇದು ಎಂಬ ನಂಬಿಕೆ ಏಕಪ್ರಕಾರವಾಗಿ ಉಳಿದುಕೊಂಡು ಬಂದಿದ್ದುದು ಸ್ಪಷ್ಟವಾಗಿತ್ತು.

ಬಿಳಿಯ ಗ್ರಾನೈಟ್ ಕಲ್ಲುಚಪ್ಪಡಿಯಲ್ಲಿ, ಕ್ರಿ. ಶ. ೧೮ನೆಯ ಶತಮಾನದ ಕನ್ನಡ ಲಿಪಿ ಮತ್ತು ಕನ್ನಡ ಹಾಗೂ ಸಂಸ್ಕೃತ ಭಾಷೆಯ ೨೦ ಪಂಕ್ತಿಗಳ ಈ ಶಾಸನದ ಪಾಠವನ್ನು, ನಡುವೆ ಹಾಕಲಾಗಿರುವ ಒಂದು 'ಯಂತ್ರ'ದ ಎಡಬಲಕ್ಕೆ ಸಮವಾಗಿ ಹಂಚಿ, ಮೊದಲಿಗೆ ಶಾಸನಪಾಠದ ಮೊದಲ ಅರ್ಧಭಾಗ (೧೦ ಪಂಕ್ತಿ), ಆಮೇಲೆ ಯಂತ್ರ, ಆದಾದಮೇಲೆ ಶಾಸನಪಾಠದ ಕಡೆಯ ಅರ್ಧಭಾಗ (೧೦ ಪಂಕ್ತಿ) – ಹೀಗೆ ಅಡ್ಡಲಾಗಿ ಮೂರು ಭಾಗಗಳಾಗಿ ಮಾಡಿಕೊಂಡು ಕೆತ್ತಲಾಗಿದೆ. ಇದರ ಪಾಠವನ್ನು ಹಿಂದೆ ಜೋಯಿಸರು ಓದಿ ಪ್ರಕಟಿಸಿದ್ದ ಪಾಠದೊಂದಿಗೆ ತಾಳೆನೋಡಿ ಪರಿಶೀಲಿಸಿದಾಗ, ಕೆಲವೆಡೆ ತುಂಬ ವ್ಯತ್ಯಾಸವಾಗಿದ್ದುದು ಕಂಡಿತು. ಕೆಲವು ಮುಖ್ಯ ನಿದರ್ಶನಗಳನ್ನು ಹೇಳುವುದಾದರೆ, ಜೋಯಿಸರು 'ಶ್ರೀಗುರು ಗುಹೇಶ ಶರಣಂ' ಎಂಬುದನ್ನು 'ಶ್ರೀಗುರು ಹರಿಚರಣಂ' ಎಂದೂ, 'ತ್ರಿತತ್ವ ಮೂಲಂ' ಎಂಬುದನ್ನು 'ಶ್ರೀತಾತ ಮೂಲಂ' ಎಂದೂ, 'ರಾಮಗಿರಿಶರಣಂ' ಎಂಬುದನ್ನು 'ರಾಯಗಿರಿಶರಣಂ' ಎಂದೂ, 'ನಾದ ತಲೆದೋರದು' ಎಂಬುದನ್ನು 'ನಾದ ಕಲೆ ದೋರದು' ಎಂದೂ ಕೊಟ್ಟಿರುತ್ತಾರೆ. ಇದಲ್ಲದೆ ಇನ್ನು ಕೆಲವು ಅಂಶಗಳ ವಿವರವೂ ವ್ಯತ್ಯಾಸಗೊಂಡಿದೆ. ಹೀಗಾಗಿ ಇದರ ವಾಸ್ತವ ಪಾಠವನ್ನು ಕೊಟ್ಟು ಕೆಲವು ಸಂಗತಿಗಳನ್ನು ಪ್ರಸ್ತಾಪಿಸುವುದು ಅಗತ್ಯ ಎನ್ನಿಸಿದ್ದರಿಂದ ಈ ಸಂಪ್ರಬಂಧವನ್ನು ಸಾದರಪಡಿಸುತ್ತಿದ್ದೇನೆ.

ಶಾಸನದ ಮರುಪರಿಶೀಲನೆಯ ಪಾಠ

(ಪ್ರಮಾಣ : ಅಡ್ಡ ಸು ೬೬ ಅಂಗುಲ. ಎತ್ತರ ೧೭ ಅಂಗುಲ. ದಪ್ಪ ೬ ಅಂಗುಲ)

೧ ಶ್ರೀಗುರು ಗುಹೇಶಶರಣಂ ಯೋಗಿಜನ ವಂದ್ಯತಃ ಕರು
೨ ಣಾಂ ಯೀಗೆಂನ ಜನನ ಮರಣಂ ನೀಗಿಪ ಗು
೩ ರು ಮೂರ್ತಿ ಕರುಣಂ । ರಾಮಗಿರಿಶರಣಂ ॥ ೦ ॥
೪ ವೇದಾದಿ ಮೂಲಂ ಪ್ರತಿತಶ್ವರಾಣಾಂ । ತ್ರೈಯ್ಯೋ
೫ ದಶಸ್ತಂ । ಶಸಿಬಿಂಬರೂಪಂ । ನಾದಾತ್ಮಕಂ
೬ ಸುಪ್ತ ಭುಜಂಗರೂಪಂ । ತ್ರಿತತ್ವಮೂಲಂ
೭ ಪ್ರಣಮಂ ನಮಾಮೀ ॥ ೦ ॥ ಕಲಿಯುಗ
೮ ೪೮೮೯ । ನೇ । ಕಾಳಯುಕ್ತಿ ಸಂವತ್ಸರದ ಕಾ
೯ ರ್ತಿಕ ಶು ೧೫ ಸಉಂಮ್ಯವಾರ ರೋಹಿಣಿ
೧೦ ನಕ್ಷತ್ರ ಸುಭಲಗ್ನ

ವಾ೫	ಯ೬	ಮ೩	ಶಿ೪	ಅ೭	ಒ೧	ನ೨
ಒ೧	ನ೨	ವಾ೫	ಯ೬	ಮ೩	ಶಿ೪	ಅ೭
ಶಿ೪	ಅ೭	ಒ೧	ನ೨	ವಾ೫	ಯ೬	ಮ೩
ಯ೬	ಮ೩	ಶಿ೪	ಅ೭	ಒ೧	ನ೨	ವಾ೫
ನ೨	ವಾ೫	ಯ೬	ಮ೩	ಶಿ೪	ಅ೭	ಒ೧
ಅ೭	ಒ೧	ನ೨	ವಾ೫	ಯ೬	ಮ೩	ಶಿ೪
ಮ೩	ಶಿ೪	ಅ೭	ಒ೧	ನ೨	ವಾ೫	ಯ೬

೧೧ ನಾದ ಬಿಂದು ಕಳೆ ಭೇದವ ತಿಳಿದಲ್ಲದೆ ।
೧೨ ಅರಕ್ಷರವಾದ ತೆರನನರಿಯಬಾ
೧೩ ರದು । ಅರಕ್ಷರಕೆ ಮೂಲ ಪ್ರಣಮವ
೧೪ ತಿಳಿದಲ್ಲದೆ । ನಾದ ತಲೆದೋರದು ಆ ನಾದ ಬೆ
೧೫ ಳಗಿನ ಕಳೆಯ ನೋಡಿ ಕಂಡಲ್ಲದೆ ರಾಜಶಿವಯೋ
೧೬ ಗಿಯಾಗಬಾರದು । ರಾಜಶಿವಯೋಗವೆಂಬುದು
೧೭ ಆದಿಯಲ್ಲಿ ಶಿವಬೀಜವಾದ ಮಹಾಮಹಿ

ನಿಜ ಮನೆಗೆ ಸಾಧ್ಯವಪ್ಪುದಲ್ಲದೆ । ಶ್ರೀ ಜಗದ್ಗುರು
[illegible] ಶ್ರೀ ಮಹಾಲಿಂಗ ಗುರುಶಿವ
[illegible] ಸಿದ್ಧೇಶ್ವರ ಪ್ರಭುವೇ

ಶಾಸನದ ಕಾಲ

ಶಾಸನದಲ್ಲಿ ಅದರ ಕಾಲವಾಗಿ ಹೇಳಿರುವ ಕಲಿಶಕದ ವರ್ಷ ಮೇಲೆ ಉಲ್ಲೇಖಿಸಿರುವಂತೆ ಹಾಗೂ ಹು.ಶ್ರೀ. ಜೋಯಿಸರು ಬರೆದಿರುವಂತೆ ಶಾಲಿವಾಹನ ಶಕ ೧೬೬೦ ಮತ್ತು ಕ್ರಿ.ಶ. ೧೭೩೮ ಆದರೂ, ಅದರ ನಿಖರವಾದ ಕ್ರಿಸ್ತ ಶಕದ ದಿನಾಂಕ ೧೭೩೮ ನವೆಂಬರ್ ೧೫ ಬುಧವಾರ ಆಗುತ್ತದೆ. ಹಾಗೆಯೇ ಜೋಯಿಸರು ಬರೆದಿರುವಂತೆ ಇದು ಚಿತ್ರದುರ್ಗದ ದೊರೆ ಹಿರೇಮದಕೇರಿನಾಯಕನ (೧೭೨೧–೧೭೪೮) ಕಾಲಕ್ಕೆ ಸೇರಿದ್ದು ಎನ್ನುವುದು ಸರಿ. ಆದರೆ, ಆಗ ಚಿತ್ರದುರ್ಗದ ಬೃಹನ್ಮಠದಲ್ಲಿ ಪೀಠಾಧೀಶರಾಗಿ ಇದ್ದವರು ಶಿರಹಟ್ಟಿ ಸಿದ್ಧಲಿಂಗಸ್ವಾಮಿಗಳೇ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಏಕೆಂದರೆ, ಸ್ವಾದಿ ಚೆನ್ನಬಸವಸ್ವಾಮಿಗಳು ಪೀಠಾಧೀಶರಾಗಿ ಪಟ್ಟಕ್ಕೆ ಬಂದದ್ದು ೧೭೦೯ರಲ್ಲಿ ಎನ್ನುವುದು, ಮುಂದೆ ಅವರ ತರುವಾಯ ಬಂದ ಶಿರಹಟ್ಟಿ ಸಿದ್ಧಲಿಂಗಸ್ವಾಮಿಗಳು ಲಿಂಗೈಕ್ಯರಾದದ್ದು ೧೭೫೭ರಲ್ಲಿ ಎನ್ನುವುದು ಸ್ಪಷ್ಟವಾಗಿ ತಿಳಿದುಬಂದಿದೆ. ಆದರೆ, ಆಮಧ್ಯೆ ಸ್ವಾದಿ ಚೆನ್ನಬಸವಸ್ವಾಮಿಗಳು ಲಿಂಗೈಕ್ಯರಾದದ್ದು ಮತ್ತು ಅವರ ತರುವಾಯ ಶಿರಹಟ್ಟಿ ಸಿದ್ಧಲಿಂಗಸ್ವಾಮಿಗಳು ಪೀಠಾಧೀಶರಾದದ್ದು ಯಾವ ಯಾವ ವರ್ಷದಲ್ಲಿ ಎನ್ನುವುದು ನಿರ್ದಿಷ್ಟವಾಗಿ ತಿಳಿದುಬಂದಿಲ್ಲ. ಹಾಗಾಗಿ ಈ ಶಾಸನ ಹಾಕಿಸಿದ ಕಾಲಕ್ಕೆ ಬೃಹನ್ಮಠದಲ್ಲಿ ಸ್ವಾಮಿಗಳು ಯಾರು ಇದ್ದರು ಎಂದು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಇಲ್ಲಿ ಆ ವಿಚಾರ ಕೂಡಾ ಪ್ರಸ್ತುತವಲ್ಲ.

ಕಾಲದ ಬಗೆಗೆ ಸ್ಪಷ್ಟವಾದ ವಿವರ ಕೊಟ್ಟಿರುವ ಈ ಶಾಸನದಲ್ಲಿ ಇದನ್ನು ಹಾಕಿಸಿದವರು ಯಾರು ಮತ್ತು ಏಕೆ ಎಂಬ ವಿವರ ಕೊಟ್ಟಿಲ್ಲದಿರುವುದು ಆಶ್ಚರ್ಯಕರವಾಗಿದೆ.

ಶಾಸನಪಾಠದ ಪೂರ್ವಾರ್ಧ

ಶಾಸನಪಾಠದ ಮೊದಲ ಅರ್ಧಭಾಗದಲ್ಲಿ, ಕನ್ನಡದ ಒಂದು ಅಪೂರ್ಣ ಕಂದಪದ್ಯ, ಆಮೇಲೆ ಸಂಸ್ಕೃತದ ಒಂದು ವೃತ್ತ, ಅದರ ತರುವಾಯ ಕನ್ನಡ ಗದ್ಯದಲ್ಲಿ ಕಾಲಸೂಚನೆಯ ವಿವರ ಬಂದಿವೆ. ಇಲ್ಲಿಯ ಕಂದಪದ್ಯ ಹೀಗಿದ್ದಿರಬೇಕು ಎಂದು ಕಾಣುತ್ತದೆ :

ಶ್ರೀಗುರುಗುಹೇಶಶರಣಂ
ಯೋಗಿಜನವಂದಿತ ಕರುಣೆ[*ಯೆನಗೆ ಕೃಪೆದೋರು*]
ಈಗೆನ್ನ ಜನನಮರಣಮಂ
ನೀಗಿಪ ಗುರುಮೂರ್ತಿ ಕರುಣಿ ರಾಮಗಿರಿ ಶರಣ

"ಶ್ರೀಗುರು ಗುಹೇಶನ ಶರಣನೂ ಯೋಗಿಜನರಿಂದ ವಂದಿಸಲ್ಪಟ್ಟವನೂ ಜನನ–ಮರಣಗಳ ಕೋಟಲೆಯನ್ನು ನೀಗಿಸಬಲ್ಲ ಗುರುಮೂರ್ತಿಯೂ ಆದ ರಾಮಗಿರಿಯ ಶರಣನೇ [ನನಗೆ ಕೃಪೆ ತೋರು]" – ಎಂದು 'ರಾಮಗಿರಿಯ ಶರಣ'ನನ್ನು ಬೇಡುವ ಅರ್ಥದ ಒಂದು ಸ್ತೋತ್ರ ಇದು. ಇಲ್ಲಿ ಚೌಕ ಕಂಸಗಳಲ್ಲಿ ಕೊಟ್ಟಿರುವುದು ಊಹಾಪಾಠ ಮಾತ್ರ ಅಷ್ಟು ಮಾತ್ರೆಗಳಷ್ಟು ಭಾಗ ಶಾಸನಪಾಠದಲ್ಲಿ ಪದ್ಯವನ್ನು ಕೂಡುವಲ್ಲಿ ಬಿಟ್ಟುಹೋದಂತಿದೆ. ಇಲ್ಲಿ 'ಗುಹೇಶ' ಎಂಬುದು ಅಲ್ಲಮಪ್ರಭುವಿನ ಪ್ರಸಿದ್ಧ ವಚನಾಂಕಿತವನ್ನು ನೆನಪಿಗೆ ತರುತ್ತದೆ. ಇದರಿಂದ ಈ ಪದ್ಯದಲ್ಲಿ ಸೂಚಿತವಾಗಿರುವ ಗುರು ಪ್ರಸಿದ್ಧ ಶರಣ ಅಲ್ಲಮಪ್ರಭುವಿನ ಸಂಪ್ರದಾಯಕ್ಕೆ ಅಥವಾ ಪರಂಪರೆಗೆ ಸೇರಿದವನಿರಬೇಕು ಎನಸುತ್ತದೆ. ಅವನ ಹೆಸರನ್ನು ಏಕೆ ಇಲ್ಲಿ ಹೇಳಲಿಲ್ಲ ಎಂಬ ಪ್ರಶ್ನೆ ಮನಸ್ಸನ್ನು ಕಾಡುತ್ತದೆ.

ಅದಲ್ಲದೆ, ಆ ಗುರುವನ್ನು 'ರಾಮಗಿರಿ ಶರಣ' ಎಂದು ಕರೆದಿರುವುದು ಕೂಡಾ ಗಮನಾರ್ಹವಾಗಿದೆ. ಈ ರಾಮಗಿರಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನಲ್ಲಿರುವ ಒಂದು ಪ್ರಸಿದ್ಧ ಐತಿಹಾಸಿಕ ಹಾಗೂ ಧಾರ್ಮಿಕ ಸ್ಥಳ; ಅದು ಕರಿಯ ಸಿದ್ಧೇಶ್ವರ ಅಥವಾ ಕರಿಸಿದ್ಧೇಶ್ವರ ಎಂಬ ಶರಣಗುರುವಿನ ಕಾರ್ಯಕ್ಷೇತ್ರವೂ ಹೌದು. ಇಲ್ಲಿ 'ರಾಮಗಿರಿ ಶರಣ' ಎಂದು ಕರೆದಿರುವುದು ಇದೇ ಕರಿಯಸಿದ್ಧೇಶ್ವರನನ್ನೇ ಇರಬಹುದೆ ಎಂದು ಒಂದು ಸಂದೇಹ. ಏಕೆಂದರೆ, ಕ್ರಿ.ಶ. ೧೬ನೆಯ ಶತಮಾನದ ಮಧ್ಯದಲ್ಲಿದ್ದರೆಂದು ತಿಳಿಯಲಾಗಿರುವ ಈ ಗುರು ಮೊದಲಿಗೆ ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಹೊನ್ನವಳ್ಳಿಯಲ್ಲಿ ಇದ್ದವರು. ಅವರ ಹೆಸರಿನ ಮಠವೊಂದು ಈಗಲೂ ಅಲ್ಲಿದೆ. ಅವರು ಧರ್ಮಸಂಚಾರ ಕೈಕೊಂಡು ಬಂದು ನಿಂತದ್ದು ಮತ್ತು ತಮ್ಮ ಕಡೆಯ ದಿನಗಳನ್ನು ಕಳೆದದ್ದು ರಾಮಗಿರಿಯಲ್ಲಿ. 'ಪ್ರಬೋಧಚಂದ್ರೋದಯ' ಎಂಬ ತತ್ತ್ವಕಾವ್ಯವೊಂದನ್ನು ಇವನು ಷಟ್ಪದಿಯಲ್ಲಿ ರಚಿಸಿದ್ದಾನೆ. ರಾಮಗಿರಿಯಲ್ಲಿದ್ದ ಸಿದ್ಧಲಿಂಗ ಎಂಬ ಹೆಸರಿನ ಗುರುವನ್ನು ತನ್ನ ಗುರುವೆಂದು ಅದರಲ್ಲಿ ಇವನು ಸ್ಮರಿಸಿದ್ದಾನೆ.

ಎಡೆಯೂರಿನಲ್ಲಿ ತೋಂಟದ ಸಿದ್ಧಲಿಂಗೇಶ್ವರರು ಲಿಂಗೈಕ್ಯರಾದ ಕಾಲಕ್ಕೆ ಅವರ ಗಣಪರ್ವ–ರಥೋತ್ಸವಕ್ಕೆ ದೇಶದ ಬಹುಭಾಗಗಳಿಂದ ಬಂದಿದ್ದ ಬಹುಸಂಖ್ಯೆಯ ಗುರುಗಳ ಶರಣರ ಸಮೂಹದಲ್ಲಿ ಈ ಕರಿಯಸಿದ್ಧೇಶ್ವರರೂ ಒಬ್ಬರಾಗಿದ್ದರು ಎಂದು ತಿಳಿಯಲಾಗಿದೆ. ಕರಿಸಿದ್ಧದೇವರಿಗೆ (ರಾಮಗಿರಿಯಲ್ಲಿ ಇವರಿಂದ ಪ್ರಾರಂಭಗೊಂಡು ಪಾಳೆಯಗಾರರ ಕಾಲಕ್ಕೂ ಸಾಗಿಬಂದಿದ್ದ ಮಠಕ್ಕೆ?) ಚಿತ್ರದುರ್ಗದ

ಪಾಳೆಯಗಾರರಲ್ಲಿ ದಳವಾಯಿಯಾಗಿದ್ದ ಚಿಕ್ಕಯ್ಯ ಮತ್ತು ಕಲಿವೀರಯ್ಯ ಎಂಬುವರು ಒಂದು ಭೂಮಿಯನ್ನು ಕಾಣಿಕೆಯಾಗಿ ನೀಡಿದ್ದರೆಂದು ಈಗ್ಗೆ ಕೆಲವು ವರ್ಷಗಳ ಹಿಂದೆ ಹೊಳಲ್ಕೆರೆ ತಾಲೂಕಿನಲ್ಲಿ ನನಗೆ ದೊರೆತಿದ್ದ ಶಾಸನವೊಂದರಿಂದ ತಿಳಿದುಬಂದಿರುತ್ತದೆ. ಹೀಗೆ ಅವರಿಗೆ ಚಿತ್ರದುರ್ಗ ಪ್ರಾಂತದೊಂದಿಗೆ ವಿಶೇಷವಾದ ಸಂಬಂಧ ವಿದ್ದುದನ್ನು ನೆನೆದರೆ, ಇಲ್ಲಿ 'ರಾಮಗಿರಿ ಶರಣ' ಎಂದು ಕರೆದಿರುವುದು ಅವರೇ ಇರಬೇಕು ಎನಸುತ್ತದೆ. ಚಿತ್ರದುರ್ಗ ದಲ್ಲಿ ಅವರನ್ನು ಹೀಗೆ ಹೆಸರಿಸಲು ಇಲ್ಲಿ ಯಾರಾದರೂ ಅವರ ಪರಂಪರೆಯ ಶಿಷ್ಯರು ಇದ್ದರೇ? ಇದ್ದರೆ ಅವರು ಯಾರು? ಇಂಥ ಪ್ರಶ್ನೆಗಳು ಬರುತ್ತವೆ. ಆದರೆ ಆ ಪ್ರಶ್ನೆಗಳಿಗೆ ಉತ್ತರ ಎಲ್ಲಿ?

ಇನ್ನು ಮುಂದಿನದು ಸಂಸ್ಕೃತ ವೃತ್ತ. ಅದು ಹೀಗಿದೆ:

ವೇದಾದಿಮೂಲಂ ಪ್ರತಿತಶ್ವರಾಣಾಂ
ತ್ರೈಯ್ಯೋದಶಸ್ತಂ ಶಸಿಬಿಂಬರೂಪಂ
ನಾದಾತ್ಮಕಂ ಸುಪ್ತಭುಜಂಗರೂಪಂ
ತ್ರಿತತ್ವಮೂಲಂ ಪ್ರಣಮಂ ನಮಾಮೀ

ಈ ಮೇಲಿನ ವೃತ್ತದಲ್ಲಿ ೧ನೆಯ ಪಂಕ್ತಿಯಲ್ಲಿ 'ಪ್ರತಿತಶ್ವರಾಣಾಂ' ಎಂಬುದು 'ಪ್ರಥಿತಸ್ವರಾಣಾಂ' ಎಂಬುದರ ಅಪಲಿಖಿತವೆಂದು, ಹಾಗೆಯೇ ೨ನೆಯ ಪಂಕ್ತಿಯಲ್ಲಿ 'ತ್ರೈಯ್ಯೋದಶಸ್ತಂ ಶಸಿಬಿಂಬರೂಪಂ' ಎಂಬುದು 'ತ್ರಯೋದಶಸ್ಥಂ ಶಶಿಬಿಂಬರೂಪಂ' ಎಂಬುದರ ಅಪಲಿಖಿತ ಎಂದು ಸ್ಪಷ್ಟವಾಗಿಯೆ ಇದೆ.

ಗುಬ್ಬಿಯ ಶಾಂತೇಶ ಎಂಬ ಕವಿ ರಚಿಸಿರುವ 'ತೋಂಟದ ಸಿದ್ಧೇಶ್ವರ ಪುರಾಣ' (೧೬ನೇ ಶತಮಾನ) ದಲ್ಲಿ ಈಮೇಲಿನ ವೃತ್ತವೇ ಸ್ವಲ್ಪ ವ್ಯತ್ಯಾಸದೊಂದಿಗೆ ಹೀಗೆ ಕೊಡಲ್ಪಟ್ಟಿದೆ :

ವೇದಾದಿಮೂಲಂ ಪ್ರಥಮಂ ಸ್ವರಾಣಾಂ
ತ್ರಯೋದಶಸ್ಥಂ ಶಶಿಸೂರ್ಯಬಿಂಬಂ
ನಾದಾತ್ಮಕಂ ಸುಪ್ತಭುಜಂಗರೂಪಂ
ತ್ರಿತತ್ತ್ವಮೂಲಂ ಪ್ರಣಮಂ ನಮಾಮಿ

ಅಲ್ಲಿ ಇದನ್ನು 'ಉಪೇಂದ್ರವಜ್ರ ವೃತ್ತ' ಎಂದು ಹೆಸರಿಸಲಾಗಿದೆ. ವೀರಶೈವ ಪರಂಪರೆಯಲ್ಲಿ 'ಎರಡನೆಯ ಅಲ್ಲಮ' ಎಂದು ಪರಿಗಣಿತನಾದ ಎಡೆಯೂರಿನ ತೋಂಟದ ಸಿದ್ಧಲಿಂಗಯತಿ ತನ್ನ ಶಿಷ್ಯರಲ್ಲಿ ಒಬ್ಬನಾದ ಚಂದ್ರಶೇಖರ ಮೂರ್ತಿ ಎಂಬುವನಿಗೆ ತತ್ತ್ವಸೂಕ್ಷ್ಮಗಳನ್ನು ವಿವರಿಸುವ ಭಾಗದಲ್ಲಿ ಈಮೇಲಿನ ವೃತ್ತ ಬಂದ ಹಾಗೆ ಆ ಕೃತಿಯಲ್ಲಿ ನಿರೂಪಿಸಲಾಗಿದೆ. ಸಕಲ ಸೃಷ್ಟಿಗೆ ಸರ್ವಕ್ಕೆ ಮೂಲವಾದದ್ದು ಪ್ರಣವ ಅಥವಾ ಓಂಕಾರ ಎಂದು ಅದರ ಮಹತ್ತ್ವವನ್ನು ಗುರು ತೋಂಟದ ಸಿದ್ಧಲಿಂಗಯತಿ ಶಿಷ್ಯನಿಗೆ ಹೇಳುವಾಗ ಈಮೇಲಿನ ವೃತ್ತವನ್ನು ಉಲ್ಲೇಖಿಸಲಾಗಿದೆ. ಈ ಶಾಸನದಲ್ಲಿ ಮುಂದೆ ಬರುವ ವಚನ ಕೂಡಾ ಅದೇ ಸಿದ್ಧಲಿಂಗೇಶ್ವರರದ್ದೇ. ಅಲ್ಲಿ ಕೂಡಾ ಪ್ರಣವದ ಮಹತ್ತ್ವವನ್ನು ಸೂಚಿಸಲಾಗಿದೆ. ಅದೆಲ್ಲ ಸರಿಯೇ. ಅದರೆ, ಇದನ್ನು ಪ್ರಸ್ತುತ ಶಾಸನದಲ್ಲಿ ಯಾರು ಯಾರಿಗೆ ಏತಕ್ಕಾಗಿ ಉಲ್ಲೇಖಿಸಿದ್ದಾರೆ? – ಇದೇ ಒಗಟಾಗಿದೆ.

ಮುಂದಿನದು ಕಾಲಸೂಚನೆಯ ಭಾಗ. ಈ ಕಾಲ ಸೂಚನೆಯಿಂದ ಇದು ಕ್ರಿಸ್ತ ಶಕೆಯ ಯಾವ ದಿನಾಂಕ ವಾಗುತ್ತದೆ ಎಂಬುದನ್ನು ಹಿಂದೆಯೇ ಹೇಳಿದೆ. ಆದರೂ ಇಲ್ಲಿ ಒಂದು ಮಾತು : ಇದು 'ಕಾಳಯುಕ್ತಿ ಸಂವತ್ಸರದ ಕಾರ್ತ್ತಿಕ ಶು ೧೫' ಅಂದರೆ ಹುಣ್ಣಿಮೆಯ ದಿನ ಎಂದೂ. ಆದಿನ 'ಸಉಂಮ್ಯವಾರ' ಅಂದರೆ ಬುಧವಾರ ಎಂದೂ. 'ರೋಹಿಣೀ ನಕ್ಷತ್ರ ಸುಭಲಗ್ನ' ಎಂದೂ ಹೇಳಿದೆ. ಯಾವುದಕ್ಕಾಗಿ ಇದನ್ನು 'ಶುಭಲಗ್ನ' ಎನ್ನಲಾಗಿದೆ? – ಇದು ಕೂಡಾ ತಿಳಿಯದು.

ಶಾಸನದ ಮಧ್ಯಭಾಗ

ಇದಾದ ಮೇಲೆ – ಶಾಸನದ ಮಧ್ಯದಲ್ಲಿ – ಬರುವುದೇ 'ಯಂತ್ರ'. ದೊಡ್ಡ ಚೌಕದೊಳಗೆ ಅಡ್ಡ–ಉದ್ದ ಸಾಲಾಗಿ ೭–೭ ಚೌಕಮನೆಗಳಿರುವ ಈ ಯಂತ್ರದಲ್ಲಿ. ಒಂದೊಂದು ಮನೆಯಲ್ಲಿ ಒಂದೊಂದರಂತೆ ಒ, ನ, ಮ, ಶಿ, ವಾ, ಯ, ಅ ಎನ್ನುವ ೭ ಬೀಜಾಕ್ಷರಗಳಿದ್ದು ಅವು ಒಂದೊಂದರ ಜೊತೆಗೂ ಅನುಕ್ರಮವಾಗಿ ೧, ೨, ೩, ೪, ೫, ೬, ೭, ಹೀಗೆ ಒಂದೊಂದು ಸಂಖ್ಯೆಯನ್ನು ಕೊಡಲಾಗಿದೆ; ಈ ೭ ಬೀಜಾಕ್ಷರಗಳೇ ಎಲ್ಲ ೭ ಪಂಕ್ತಿಗಳಲ್ಲೂ ಪುನರಾವರ್ತನೆ ಯಾಗುತ್ತವೆ. ಅವನ್ನು ಅಡ್ಡಲಾಗಿ–ಉದ್ದವಾಗಿ–ಓರೆಯಾಗಿ ಹೇಗೆ ಕೂಡಿದರೂ ಒಟ್ಟು ಸಂಖ್ಯೆ ೨೮ ಬರುತ್ತದೆ. 'ಓಂ ನಮಃ ಶಿವಾಯ' ಎಂಬ ಶಿವಷಡಕ್ಷರ ಮಂತ್ರದ ಅಕ್ಷರಗಳನ್ನೇ ಸ್ವಲ್ಪ ಶಿಥಿಲಗೊಳಿಸಿ ಒ, ನ, ಮ, ಶಿ, ವಾ, ಯ, ಅ ಎನ್ನುವ ೭ ಬೀಜಾಕ್ಷರಗಳನ್ನು ಮಾಡಿಕೊಂಡಿರುವುದು ಸ್ಪಷ್ಟವಾಗಿದೆ. ಈ ಅಕ್ಷರಗಳಿಗೆ ಒಂದೊಂದಕ್ಕೂ ಒಂದೊಂದು ಸಂಖ್ಯೆಯನ್ನು ನಿರ್ದಿಷ್ಟಗೊಳಿಸಿರುವುದೇಕೆ? ಮತ್ತು (ಹೇಗೆ) ಕೂಡಿದರೂ ಒಟ್ಟು ಸಂಖ್ಯೆ ೨೮ ಬರುವಂತೆ ನಿಕ್ಷೇಪಗೊಳಿಸಿರುವುದೇಕೆ? ಈ ಪ್ರಶ್ನೆಗಳು ಬರುತ್ತವೆ.

ಮೇಲೆ ತಿಳಿಸಿದ ಸಂಪುಟದ ಸಂಪಾದಕರು ಇಂಥ ವಿಶಿಷ್ಟತೆ ಇರುವ ಯಂತ್ರವನ್ನು ಕೇವಲ ಒಂದು ಜ್ಯಾಮಿತೀಯ ಆಯಾಕೃತಿಯ ಮಧ್ಯೆ 'ಯಂತ್ರ' ಎಂಬ ಒಂದೇ ಒಂದು ಪದವನ್ನು ಹಾಕಿ ಕೊಟ್ಟಿರುವುದು ಆಶ್ಚರ್ಯಕರವಾಗಿದೆ.

ಏಕೆಂದರೆ ಅವರು ಹಾಗೆ ಮಾಡಿರುವುದರಿಂದ 'ಯಂತ್ರ' ಹೇಗಿದೆ ಎಂಬ ಕಲ್ಪನೆ ಬರುವುದಿಲ್ಲ. ಅದನ್ನು ಅವರು ಇವರ [illegible] ಹಾಗೆ, ಇಲ್ಲಿ ಬೀಜಾಕ್ಷರ ಮತ್ತು ಬೀಜಸಂಖ್ಯೆ ಸಹಿತ ಕೊಡಬೇಕಾಗಿತ್ತು. ೧೯೭೦ರಲ್ಲಿ ಬಂದ ಡಾ.ಕಲಬುರ್ಗಿ ಅವರ 'ಶಾಸನಗಳಲ್ಲಿ ಶಿವಶರಣರು' ಪುಸ್ತಕದಲ್ಲಿ 'ಯಂತ್ರ'ವನ್ನು ಅಡ್ಡ-ಉದ್ದ ೭-೭ ಮನೆಗಳಲ್ಲಿ ಬೀಜಾಕ್ಷರಗಳನ್ನು ಕೊಟ್ಟಿರುವರಾದರೂ ಬೀಜಸಂಖ್ಯೆಗಳನ್ನು ಭಾಗಶಃ ಮಾತ್ರ ತುಂಬಿಕೊಟ್ಟಿದ್ದಾರೆ. ಇದರಿಂದ ಕೂಡಾ ಇಲ್ಲಿಯ ಯಂತ್ರದ ಪೂರ್ಣ ಕಲ್ಪನೆ ಬರುವುದಿಲ್ಲ.

ಆದಿಶಂಕರಾಚಾರ್ಯರ 'ಸೌಂದರ್ಯಲಹರೀ' ಎಂಬ ಪ್ರಖ್ಯಾತ ಕೃತಿಯಲ್ಲಿ ಶ್ಲೋಕ ೩೪ಕ್ಕೆ ಅನ್ವಯಿಸಿ ಬರುವ - ಒಂದು ದೊಡ್ಡ ಚೌಕದಲ್ಲಿ, ಅಡ್ಡ ಉದ್ದ ೫-೫ ಮನೆಗಳಿದ್ದು, ಅವುಗಳಲ್ಲಿ ಒಂದೊಂದರಲ್ಲೂ ನ, ಮ, ಶಿ, ವಾ, ಯ ಎಂಬ (ಶಿವಪಂಚಾಕ್ಷರಿ ಮಂತ್ರದ) ೫ ಅಕ್ಷರಗಳಿರುವ - ಯಂತ್ರವನ್ನು ಪ್ರಸ್ತುತ ಶಾಸನದ ಯಂತ್ರ ಹೋಲುತ್ತದೆ. ಆದರೆ ಇಲ್ಲಿರುವುದು ಐದು ಅಲ್ಲ, ಏಳು ಅಕ್ಷರಗಳ ಯಂತ್ರ. ಮೇಲೆ ತಿಳಿಸಿದ ಸೌಂದರ್ಯಲಹರಿಯ ಯಂತ್ರವು 'ಅಪಸ್ಮಾರ ಭೂತ ಪ್ರೇತ ಪಿಶಾಚಾದಿಗಳ ನಿವಾರಣೆಯ ಯಂತ್ರ' ಎಂದು ಹೇಳಲಾಗಿದೆ. ವೀರಶೈವ ಪರಿಭಾಷೆಯಲ್ಲಿ ಇಂಥವನ್ನು 'ಉದ್ಧರಣೆ' ಎನ್ನುತ್ತಾರೆ. 'ಉದ್ಧರಣೆ' ಎಂಬುದಕ್ಕೆ ಸಾಮಾನ್ಯವಾಗಿ 'ಮೇಲೆತ್ತುವಿಕೆ, ಬಿಡುಗಡೆ' ಮುಂತಾದ ಅರ್ಥಗಳಿದ್ದರೂ, ವೀರಶೈವದ ಸಂದರ್ಭದಲ್ಲಿ 'ರೋಗ ಭಯ ಇತ್ಯಾದಿಗಳ ಪರಿಹಾರಾರ್ಥವಾಗಿ ಕಟ್ಟುವ ತಾಯಿತ ಯಂತ್ರ' ಎಂಬ ಅರ್ಥವಿದೆ. ಆದರೆ, ಅದಕ್ಕಿಂತ ವಿಶೇಷವಾಗಿ 'ವೀರಶೈವ ತತ್ತ್ವಗಳನ್ನು ತಿಳಿಸುವ ಸಾಧನಗಳು' ಎಂಬ ಅರ್ಥವೂ ಇದೆ. ವೀರಶೈವದ ಅನೇಕ ಹಸ್ತಪ್ರತಿಗಳಲ್ಲಿ 'ಉದ್ಧರಣೆ ಚಿತ್ರ'ಗಳಿರುವ 'ಉದ್ಧರಣೆ ಪಟಲಗಳು' ಇರುತ್ತವೆ. ಪ್ರಸ್ತುತ ಶಾಸನದಲ್ಲಿ ಅಳವಡಿಸಿರುವ ಈ ಉದ್ಧರಣೆಯ ಮಹತ್ತ್ವ ಏನು? ಯಾವ ಉದ್ದೇಶಕ್ಕಾಗಿ ಇದನ್ನು ಇಲ್ಲಿ ಸೇರಿಸಲಾಗಿದೆ? ಇದು ಸದ್ಯಕ್ಕೆ ತಿಳಿಯದು.

ಈ ರೀತಿ ಏಳು ಮನೆಗಳಲ್ಲಿ ಏಳು ಬೀಜಾಕ್ಷರಗಳನ್ನು ಹೊಂದಿರುವ ಯಂತ್ರ ಯಾವುದಾದರೂ ಯಂತ್ರ-ಮಂತ್ರ-ತಂತ್ರ ಗ್ರಂಥಗಳಲ್ಲಿ ಸಿಕ್ಕಬಹುದೇ ಎಂದು ಕುತೂಹಲದಿಂದ ಹುಡುಕಿದಾಗ, 'ಹಿಂದು- ಯುನಾನಿ ವೈದ್ಯ ಯಂತ್ರ ಮಂತ್ರ ಸುಗಂಧಬೋಧಕ' ಎಂಬ ಗ್ರಂಥವೊಂದರಲ್ಲಿ ಮಾತ್ರ ಇದನ್ನು ಹೋಲುವ 'ಆದಿಪರಂಜ್ಯೋತಿಸಿದ್ಧಿ ಯಂತ್ರ' ಎಂಬ ಯಂತ್ರವೊಂದು ಸಿಕ್ಕಿತು. ಅದರ ಮನೆಗಳಲ್ಲಿ ೧ ರಿಂದ ೭ ರವರೆಗೆ ಸಂಖ್ಯೆಗಳು ಇದ್ದು, ಅಡ್ಡ-ಉದ್ದ-ಓರೆ ಹೇಗೆ ಕೂಡಿದರೂ ಒಟ್ಟು ಸಂಖ್ಯೆ ೨೮ ಬರುವುದಾದರೂ, ಪ್ರಸ್ತುತ ಶಾಸನದಲ್ಲಿ ಬರುವ ರೀತಿಯ ಬೀಜಾಕ್ಷರಗಳು ಮಾತ್ರ ಇರದೆ ಬೇರೆ ಬೇರೆಯವೂ ಬಂದಿವೆ. ಈ ಯಂತ್ರದ ಜೊತೆಗೆ ಮಹಾಶಕ್ತಿದೇವತೆಯಾದ ದುರ್ಗೆ ಅಥವಾ ಕಾಳಿಯನ್ನು ಆವಾಹನ ಮಾಡುವ ಮಂತ್ರವನ್ನೂ ಕೊಡಲಾಗಿದೆ. ಈ 'ಯಂತ್ರವನ್ನು ಬರೆದು ಅಷ್ಟವಿಧಾರ್ಚನೆ ಮಾಡಿ ಕಟ್ಟಿದರೆ ಸರ್ವ ಗ್ರಹಗಳೂ ಭೂತಪ್ರೇತಪಿಶಾಚಾದಿಗಳೂ ತೊಲಗುವುವು' ಎಂದು ಒಂದು ವಿವರಣೆಯನ್ನು ಕೂಡಾ ಅಲ್ಲಿ ಕೊಡಲಾಗಿದೆ. ಪ್ರಸ್ತುತ ಶಾಸನದಲ್ಲಿಯೂ ದುಷ್ಟಶಕ್ತಿ ನಿವಾರಣೆಗಾಗಿ ಮತ್ತು ಸ್ವರಕ್ಷಣೆಗಾಗಿ ಗುರುವಿನಲ್ಲಿ ಮತ್ತು ಶಿವನಲ್ಲಿ ಮೊರೆಯಿಡುವ ಸಾಧನವೆಂಬಂತೆ ಬಳಕೆಯಾಗಿರಬಹುದೆ? - ಈ ಪ್ರಶ್ನೆ ಬರುತ್ತದೆ.

ಯಂತ್ರಗಳ ಪರಿಕಲ್ಪನೆಗೆ ಮತ್ತು ನಂಬಿಕೆಗೆ ಆಧಾರವೇನು? ವೈಜ್ಞಾನಿಕವಾಗಿ ಈ ಶಾಸ್ತ್ರದ ಅಸ್ತಿತ್ವಕ್ಕೆ ಅರ್ಥವಿದೆಯೇ? ಇದ್ದರೆ ಅದೆಷ್ಟು? ಇಂಥ ಪ್ರಶ್ನೆಗಳು ಮೂಲಭೂತವಾಗಿ ಬರುತ್ತವಾದರೂ ಅವುಗಳನ್ನು ಅಲ್ಲಿಗೇ ಬಿಟ್ಟು ಪ್ರಸ್ತುತ ಶಾಸನದತ್ತ ದೃಷ್ಟಿಯನ್ನು ಹಾಯಿಸಬೇಕಾಗಿದೆ. ಮೇಲೆ ಹೇಳಿದಂತೆ ಮಹಾಶಕ್ತಿದೇವತೆಯಾದ ದುರ್ಗೆ ಅಥವಾ ಕಾಳಿಯ ರಕ್ಷಣೆಯನ್ನು ಆಶಿಸುವ 'ಆದಿಪರಂಜ್ಯೋತಿ ಸಿದ್ಧಿಯಂತ್ರ' ದಂತೆ ಪ್ರಸ್ತುತ ಶಾಸನದ (ಉದ್ಧರಣೆ) ಯಂತ್ರ ಕೂಡಾ ದುಷ್ಟಶಕ್ತಿ ನಿವಾರಣೆಗಾಗಿ ಮತ್ತು ಸ್ವರಕ್ಷಣೆಗಾಗಿ ಶಿವನಲ್ಲಿ ಮೊರೆಯಿಡುವ ಸಾಧನವಾಗಿ ಪ್ರಯೋಗವಾಗಿರಬಹುದೆ?

ಇಲ್ಲಿ ಎರಡು ಮುಖ್ಯ ಪ್ರಶ್ನೆಗಳು ಉದ್ಭವಿಸುತ್ತವೆ : ಯಂತ್ರ ಜ್ಯೋತಿಷ್ಯ ಮುಂತಾದವುಗಳಿಗೆ ಸಾಮಾನ್ಯವಾಗಿ ಪ್ರಾಶಸ್ತ್ಯವಿಲ್ಲದ ವೀರಶೈವ ಧರ್ಮಕ್ಕೆ ಸಂಬಂಧ ಹೊಂದಿರುವ ಈ ಶಾಸನದಲ್ಲಿ ಈ ಯಂತ್ರದ ಪ್ರಸಕ್ತಿಗೆ ಹೇಗೆ ಅವಕಾಶವಾಯಿತು? - ಎನ್ನುವುದು. ಇನ್ನೊಂದು, ಈ ಶಾಸನದಲ್ಲಿ ತೋಂಟದ ಸಿದ್ಧಲಿಂಗೇಶ್ವರರ ಒಂದು ವಚನವೂ ಕೂಡಾ ಇರುವುದರಿಂದ, ಅವರಿಗೂ ಈ ಯಂತ್ರಕ್ಕೂ ಅರ್ಥಾತ್ ಈ ಶಾಸನಕ್ಕೂ ಏನಾದರೂ ಸಂಬಂಧವಿದೆಯೇ - ಎನ್ನುವುದು. ಈ ಎರಡು ಪ್ರಶ್ನೆಗಳಿಗೂ ನಮಗೆ ಸಿಗುವ ಉತ್ತರವೆಂದರೆ, ವೀರಶೈವ ಧರ್ಮ ಯಂತ್ರ ಜ್ಯೋತಿಷ್ಯ ಮೊದಲಾದವುಗಳಿಗೆ ಪ್ರಾಶಸ್ತ್ಯ ಕೊಟ್ಟಿರಲಿಲ್ಲವಾದರೂ, ಪ್ರಣವ ಅಥವಾ ಓಂಕಾರ, ಶಿವಪಂಚಾಕ್ಷರಿ, ಶಿವಷಡಕ್ಷರಿ ಇಂಥ ಮಂತ್ರಗಳ ಮತ್ತು ಇನ್ನು ಕೆಲವು ಬೀಜಾಕ್ಷರಗಳನ್ನು ಮೂಲವಾಗಿ ಉಳ್ಳ 'ಉದ್ಧರಣೆ' ಎಂದು ಕರೆಯುವ ಇಂಥ ಯಂತ್ರಗಳಿಗೆ ಒಂದಷ್ಟು ಸ್ಥಾನವನ್ನು ಕೊಟ್ಟಂತಿದೆ. ಗುರುವಿನಿಂದ ಶಿಷ್ಯನಿಗೆ ರಹಸ್ಯವಾಗಿ ಬೋಧಿಸಲ್ಪಡುವವೆಂದು ಹೇಳಲಾಗುವ ಈ ಉದ್ಧರಣೆಗಳು ಸಾಮಾನ್ಯ ಯಂತ್ರಗಳಂತೆ ಅಲ್ಲ, ಇವು

ವಾತೂಲ, ವೀರ ಮುಂತಾದ ಆಗಮಗಳಲ್ಲಿ ಹೇಳಿರುವಂಥವು ಎಂದು ಇವುಗಳ ಬಗ್ಗೆ ಗಂಭೀರ ಭಾವನೆ ಇದೆ. ಇಲ್ಲಿ ಮತ್ತೊಂದು ವಿಚಾರವೆಂದರೆ, ತೋಂಟದ ಸಿದ್ಧಲಿಂಗೇಶ್ವರರು ತಮ್ಮ ಶಿಷ್ಯರಿಗೆ ಇಂಥ ಹಲವಾರು ಬಗೆಯ ಉದ್ಧರಣೆಗಳನ್ನು ಬೋಧಿಸಿದ್ದರೆಂದು ಅವರ ಜೀವನಚರಿತ್ರೆಯನ್ನು ನಿರೂಪಿಸಿರುವ ಕೃತಿಗಳು ಹೇಳುತ್ತವೆ. ಉದಾಹರಣೆಗೆ, ಗುಬ್ಬಿ ಶಾಂತೇಶ ವಿರಚಿತ 'ತೋಂಟದ ಸಿದ್ಧೇಶ್ವರ ಪುರಾಣ' ದಲ್ಲಿ ಸಂಧಿ ೧೨, ೧೩, ೧೪ ಇವನ್ನು ನೋಡಬಹುದು. ಹಾಗೆಯೇ, ಸಿದ್ಧಲಿಂಗಕೃತ 'ತತ್ತ್ವಜ್ಞಾನ ತಾರಾವಳಿ' ಯಲ್ಲಿ ಸಹ ಇಂಥ ಕೆಲವು ಉದ್ಧರಣೆಗಳ ವಿವರಣೆಯನ್ನು ಕಾಣಬಹುದು. ತೋಂಟದ ಸಿದ್ಧಲಿಂಗೇಶ್ವರರ ಕೆಲವು ವಚನಗಳಲ್ಲಿ ಪ್ರಣವ, ನಾದ, ಬಿಂದು, ಕಳೆ, ಯೋಗಸಂಬಂಧಿಯಾದ ಚಕ್ರಗಳು ಇತ್ಯಾದಿ ವಿವರಗಳು ಇಂಥ ಉದ್ಧರಣೆಗಳಿಗೆ ಪೂರಕ ಎನ್ನುವಂತಿವೆ. ಈಬಗ್ಗೆ ಸ್ವಲ್ಪ ವಿವರಣೆಯನ್ನು ಹೀಗೆ ಕೊಡಬಹುದು:

ಗುಬ್ಬಿಯ ಪ್ರಖ್ಯಾತ ಕವಿ ಮಲ್ಲಣಾರ್ಯನ ಮಗನೂ, ತೋಂಟದ ಸಿದ್ಧಲಿಂಗೇಶ್ವರನ ಪ್ರಮುಖ ಶಿಷ್ಯರಲ್ಲೊಬ್ಬನಾದ ಚಂದ್ರಶೇಖರ ಗುರುವಿನ ಶಿಷ್ಯನೂ ಆದ ಶಾಂತೇಶನು ಆ ಗುರುವಿನ ನೇರ ಮಾರ್ಗದರ್ಶನದಲ್ಲಿ ಕ್ರಿ. ಶ. ೧೫೬೧ರಲ್ಲಿ ರಚಿಸಿರುವ ಕೃತಿ 'ತೋಂಟದ ಸಿದ್ಧೇಶ್ವರ ಪುರಾಣ'. ೧೭ ಸಂಧಿಗಳ ಈ ಕೃತಿಯಲ್ಲಿ ಗುರು ತೋಂಟದ ಸಿದ್ಧಲಿಂಗಯತಿ ತನ್ನ ಶಿಷ್ಯ ಚಂದ್ರಶೇಖರನಿಗೆ ನಾನಾ ಬಗೆಯ ಉದ್ಧರಣೆ (ಯಂತ್ರ)ಗಳ ಬಗೆಗೆ ವಿಶದವಾಗಿ ಬೋಧಿಸಿದ್ದನ್ನು ಚಂದ್ರಶೇಖರನೇ ಹೇಳಿದಂತೆ ಕವಿ ಶಾಂತೇಶ ಈ ಕೃತಿಯಲ್ಲಿ ನಿರೂಪಿಸಿದ್ದಾನೆ. ಸಿದ್ಧಲಿಂಗ ಶಿವಯೋಗಿ ಶಿಷ್ಯನನ್ನು ಉದ್ದೇಶಿಸಿ, ಶೂನ್ಯಲಿಂಗೋತ್ಪತ್ತಿ, ಆ ಶೂನ್ಯಲಿಂಗದ ಮಧ್ಯದಲ್ಲಿ ಚಿದಂಬರದ ಉತ್ಪತ್ತಿ ಆಯಿತೆಂದು ಹೇಳುತ್ತಾ, ಆ ಚಿದಂಬರದ ಉದ್ಧರಣೆಯನ್ನು ವಿವರಿಸುತ್ತಾನೆ. ಬೇರೆ ಬೇರೆಯ ನೀಳರೇಖೆಗಳನ್ನೂ ಅಡ್ಡರೇಖೆಗಳನ್ನೂ ಚೌಕವಾಗಿ ಕಾಣುವಂತೆ ಬರೆದು, ಆಗ ಅಡ್ಡವಾಗಿ ಉದ್ದವಾಗಿ ಆದ ಚೌಕಾಕಾರದ ಚಿಕ್ಕ ಮನೆಗಳಲ್ಲಿ ಅಷ್ಟದಿಕ್ಕುಗಳಲ್ಲೂ ಹರಡಿದಂತೆ 'ನಮಃ ಶಿವಾಯ' ಎಂಬ ಶಿವಪಂಚಾಕ್ಷರಿ ಮಂತ್ರದ ಅಕ್ಷರಗಳನ್ನೇ ಬೀಜಾಕ್ಷರಗಳನ್ನಾಗಿ ಮಾಡಿಕೊಂಡು ಹೇಗೆ ತುಂಬುತ್ತ ಹೋಗಬೇಕೆಂದು ಹೇಳುತ್ತಾನೆ. ಇವಷ್ಟೇ ಅಲ್ಲದೆ ಕ್ಷುಂ, ಹ್ರೀಂ, ಕ್ಲೀಂ, ಓಂ ಅಥವಾ ಶ್ರೀಂ, ಸೌಂ ಅಥವಾ ಸಾಂ ಮುಂತಾದ ಅಕ್ಷರಗಳನ್ನು ಸಹ ಹೇಗೆ ತುಂಬಬೇಕೆಂದೂ ಹೇಳುತ್ತಾ, ಇದೇ ಶಿವನಿಗೆ ಪ್ರಿಯವಾದ 'ವರಚಿದಂಬರದುದ್ಧರಣೆ' ಎಂದೂ ಈ ಅಕ್ಷರಗಳೆಲ್ಲವೂ 'ವರಚಿದಂಬರದಕ್ಷರಗಳೆ'ಂದೂ ಇವಕ್ಕೆ ಮೂಲದಲ್ಲಿ ಪ್ರಣವ(ಓಂಕಾರ)ವು ಮಲಗಿದ ಹಾವಿನಂತೆ (ಸುಪ್ತಭುಜಂಗರೂಪಂ) ಇರುವುದೆಂದೂ ಇದೆಲ್ಲವನ್ನೂ ವಾತೂಲಾಗಮಾರ್ಥದಲ್ಲಿ ಹೇಳುವೆನೆಂದೂ ತುಂಬ ವಿಶದವಾಗಿಯೆ ವಿವರಿಸುತ್ತಾನೆ. ಹೀಗಾಗಿ ತೋಂಟದ ಸಿದ್ಧಲಿಂಗೇಶ್ವರನ ಅಂಥ ಬೋಧೆಯಿಂದ ಪ್ರಭಾವಿತರಾಗಿರುವವರೋ ಅಥವಾ ಅವನ ಪರಂಪರೆಯವರೋ ಈ ಉದ್ಧರಣೆ ಇಲ್ಲಿ ಸೇರ್ಪಡೆಯಾಗಲು ಕಾರಣರಾಗಿರಬೇಕು ಎನಿಸುತ್ತದೆ.

ಶಾಸನಪಾಠದ ಉತ್ತರಾರ್ಧ

ಶಾಸನಪಾಠದ ಕಡೆಯಭಾಗವನ್ನು ಪೂರ್ಣವಾಗಿ ಆಕ್ರಮಿಸಿರುವುದು ಒಂದು ತತ್ತ್ವಾರ್ಥಗರ್ಭಿತವಾದ ವಚನ. ಆ ವಚನ ಹೀಗಿದೆ :

ನಾದ ಬಿಂದು ಕಳೆ ಭೇದವ ತಿಳಿದಲ್ಲದೆ
ಆರಕ್ಷರವಾದ ತೆರನನರಿಯಬಾರದು.
ಆರಕ್ಷರಕೆ ಮೂಲಪ್ರಣಮವ ತಿಳಿದಲ್ಲದೆ
ನಾದ ತಲೆದೋರದು.
ಆ ನಾದ ಬೆಳಗಿನ ಕಳೆಯ ನೋಡಿ ಕಂಡಲ್ಲದೆ
ರಾಜಶಿವಯೋಗಿಯಾಗಬಾರದು.
ರಾಜಶಿವಯೋಗವೆಂಬುದು ಆದಿಯಲ್ಲಿ ಶಿವಬೀಜವಾದ
ಮಹಾಮಹಿಮರಿಗೆ ಸಾಧ್ಯವಪ್ಪುದಲ್ಲದೆ
ತ್ರೈಜಗದಲ್ಲಾರಿಗು ಅಸಾಧ್ಯ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ!

ಇದರ ಅಂತ್ಯದಲ್ಲಿರುವ 'ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ' ಎಂಬ ಅಂಕಿತದಿಂದ, ಈಗಾಗಲೇ ಪ್ರಸ್ತಾಪವಾಗಿರುವಂತೆ ಇದು ತೋಂಟದ ಸಿದ್ಧಲಿಂಗ ಶಿವಯೋಗಿಯ ಒಂದು ವಚನ ಎಂಬುದು ಸ್ಪಷ್ಟವಾಗಿದೆ. ಪ್ರಸ್ತುತ ಶಾಸನದಲ್ಲಿ ತೋಂಟದ ಸಿದ್ಧಲಿಂಗೇಶ್ವರರಂಥ ಪ್ರಸಿದ್ಧ ಶರಣರ ಒಂದು ವಚನವಿದೆಯೆಂಬ ಸಂಗತಿಯನ್ನು, ಈ ಶಾಸನವನ್ನು ಓದಿ ಮೊದಲಿಗೆ ಪ್ರಕಟಿಸಿದ ಜೋಯಿಸರು ಗುರ್ತಿಸಿರಲಿಲ್ಲ. ಡಾ. ಕಲಬುರ್ಗಿ ಅವರು ಅದನ್ನು ಮೊದಲಿಗೆ 'ಶಾಸನಗಳಲ್ಲಿ ಶಿವಶರಣರು' ಎಂಬ ತಮ್ಮ ಪುಸ್ತಕದಲ್ಲಿ ಗುರ್ತಿಸಿದ್ದರಲ್ಲದೆ, ವೀರಶೈವ ಅಪಾರ ವಚನರಾಶಿಯಲ್ಲಿ ಶಿಲಾಶಾಸನವನ್ನೇರಿ ನಿಂತುದು ಇದೊಂದೇ ವಚನ ಎಂದು ಸಹ ಅವರು ನಿಚ್ಚಳವಾಗಿ ತಿಳಿಸಿದ್ದರು. (ಮೇಲೆ ಉಲ್ಲೇಖಿಸಿದ 'ಚಿತ್ರದುರ್ಗದ ಪ್ರಮುಖ ಶಾಸನಗಳು' ಲೇಖನವನ್ನು ನಾನು ಬರೆದ ಕಾಲಕ್ಕೆ ಡಾ ಕಲಬುರ್ಗಿ ಅವರ ಆ ಪುಸ್ತಕವನ್ನು ನೋಡಿರಲಿಲ್ಲವಾದರೂ 'ಈ ವಚನದ ಅಂಕಿತ ಎಡೆಯೂರು ತೋಟದ ಸಿದ್ಧಲಿಂಗಯತಿಗಳದ್ದೆಂದು ವಚನಸಾಹಿತ್ಯದಲ್ಲಿ ಸುಪರಿಚಿತವಿದೆ. ಸಿದ್ಧಲಿಂಗೇಶ್ವರರ ವಚನವೊಂದು ಇಲ್ಲಿ ಶಾಸನಸ್ಥವಾಗಿರುವುದು ಗಮನಾರ್ಹ ಸಂಗತಿ' ಎಂದು ಬರೆದಿದ್ದೆ).

ಕರ್ನಾಟಕದಲ್ಲಿ ಈವರೆಗೆ ಐವತ್ತು ಸಾವಿರಕ್ಕೂ ಮೇಲ್ಪಟ್ಟು ಸಂಖ್ಯೆಯಲ್ಲಿ ದೊರೆತಿರುವ ವಚನ ಸಾಹಿತ್ಯದ ಇತಿಹಾಸದಲ್ಲಿ ಶಿಲಾಶಾಸನದಲ್ಲಿ ಕಂಡರಿಸಲ್ಪಟ್ಟದ್ದು ಇದೊಂದೇ ವಚನ ಎನ್ನುವುದು ಈ ಶಾಸನದ ಮಹತ್ತ್ವದ ಅಂಶವಾಗಿದೆ.

ಇದು ಎಡೆಯೂರು ತೋಟದ ಸಿದ್ಧಲಿಂಗಯತಿಗಳ 'ಷಟ್ಸ್ಥಲಜ್ಞಾನ ಸಾರಾಮೃತ' ಎಂಬ ವಚನಗ್ರಂಥದಲ್ಲಿ 'ಪ್ರಾಣಲಿಂಗಿ ಸ್ಥಲ'ದಲ್ಲಿ ಬರುವ ಒಂದು ವಚನ. ಈ ಗ್ರಂಥಕ್ಕೆ ಈಗಾಗಲೇ ಎರಡು ಟೀಕುಗಳು ಪ್ರಕಟವಾಗಿವೆ. ಈ ವಚನದ ಹೆಚ್ಚಿನ ವಿವರವನ್ನು ಅವುಗಳಲ್ಲಿ ನೋಡಬಹುದು. ಇಲ್ಲಿ ಸ್ವಲ್ಪ ಮಾತ್ರ ವಿವರವನ್ನು ಕೊಡಲಾಗಿದೆ. ವೀರಶೈವ ತತ್ತ್ವದ ಪರಿಭಾಷೆಯಿಂದ ತುಂಬಿರುವ ಈ ವಚನ, ಎಂಥವರು ರಾಜಶಿವಯೋಗಿಯಾಗುತ್ತಾರೆ ಅಥವಾ ರಾಜಶಿವಯೋಗಿಗಳಾಗುವುದು ಎಂಥವರಿಗೆ ಮಾತ್ರ ಸಾಧ್ಯ, ಎಂಬುದನ್ನು ವಿವರಿಸುತ್ತದೆ. ಇದರ ಅರ್ಥವನ್ನು ಸ್ಥೂಲವಾಗಿ ಈ ಮುಂದಿನಂತೆ ಹೇಳಬಹುದು : ನಾದ ಬಿಂದು ಕಳೆ ಇವುಗಳ ಭೇದ, ಆರು ಅಕ್ಷರದ ಸ್ವರೂಪ, ಆ ಆರು ಅಕ್ಷರಕ್ಕೆ ಮೂಲವಾದ ಪ್ರಣವ, ನಾದ ಬೆಳಗಿನ ಕಳೆ – ಇವುಗಳನ್ನು ಅನುಭವ ಮಾಡಿಕೊಂಡವನು ಮಾತ್ರ 'ರಾಜಶಿವಯೋಗಿ', ಅಂಥ 'ರಾಜಶಿವಯೋಗ' ಎಂಬುದು ಆದಿಯಲ್ಲಿ 'ಶಿವಬೀಜ'ವಾದ ಮಹಾಮಹಿಮರಿಗೆ ಮಾತ್ರ ಸಾಧ್ಯವೇ ಹೊರತು ಮೂಲೋಕದಲ್ಲಿ ಯಾರಿಗೂ ಅಸಾಧ್ಯವೇ ಸರಿ.

ವಚನ ಸಾಹಿತ್ಯ ಸಾಗರದೊಳಗೆ ಅನೇಕಾನೇಕ ವಚನ ರತ್ನಗಳಿದ್ದರೂ ಒಗಟಿನ ರೀತಿ ಇರುವ ತತ್ತ್ವಾರ್ಥದ ಈ ವಚನವನ್ನೇ ಆಯ್ದು ಇಲ್ಲಿ ಉದ್ಧರಿಸಿರುವುದರ ಉದ್ದೇಶ ಅಭಿಪ್ರಾಯ ಏನಿರಬಹುದು?– ಇದಾವುದೂ ತಿಳಿಯದಾಗಿದೆ. ಎಂಥವನು ರಾಜಶಿವಯೋಗಿ ಎಂಬುದನ್ನು ಈ ವಚನವು ಒತ್ತಿಹೇಳುವುದರಿಂದ ಅಂಥ 'ರಾಜಶಿವಯೋಗಿ' ಯೊಬ್ಬನನ್ನು ಕುರಿತಂತೆ ಈ ಶಾಸನವನ್ನು ಹಾಕಿಸಿರಬಹುದೆ? – ಎನ್ನುವ ಪ್ರಶ್ನೆಯೊಂದು ಮೂಡುತ್ತದೆ. ಹಾಗೆಯೇ ಪ್ರಾರಂಭದಲ್ಲಿಯ ಕಂದಪದ್ಯವು 'ರಾಮಗಿರಿಯ ಶರಣ'ನೊಬ್ಬನನ್ನು ಬೇಡಿಕೊಳ್ಳುವ ಸ್ತೋತ್ರವಾಗಿರುವುದರಿಂದ ಮೇಲಿನ ಪ್ರಶ್ನೆಗೆ ಇನ್ನಷ್ಟು ಎಡೆ ದೊರೆತು, ಅಂಥ ರಾಜಶಿವಯೋಗಿಯನ್ನು ಕುರಿತೇ ಈ ಶಾಸನವನ್ನು ಹಾಕಿಸಿರಬಹುದೇನೋ – ಎಂಬ ಭಾವನೆ ಬರುತ್ತದೆ. ಹಾಗಿದ್ದರೆ ಅಂಥ ರಾಜಶಿವಯೋಗಿ ಯಾರಿರಬಹುದು?

ಈ ಹಿಂದೆ ನೋಡಿದ 'ರಾಮಗಿರಿಶರಣ' ರಾಮಗಿರಿಯ ಪ್ರಸಿದ್ಧ ಶರಣನಾದ ಕರಿಯಸಿದ್ಧೇಶ್ವರನೇ ಇದ್ದಿರಬಹುದೇ? – ಈ ಪ್ರಶ್ನೆಯೂ ಬರುತ್ತದೆ. ಈ ಶಾಸನದ ಕಾಲಕ್ಕೆ ಆ ಶರಣ ಇರಲಿಲ್ಲವಾದರೂ ಅಂಥವರೆಲ್ಲ ಅಳಿಯದ ಚೇತನಗಳೆಂಬ ಭಾವನೆ ಇರುವುದರಿಂದ ಅವನನ್ನು ಅನಂತರದ ಕಾಲದಲ್ಲೂ ಸ್ತೋತ್ರ ಮಾಡಿರಬಹುದಲ್ಲವೇ? ಬೇಕಾದುದನ್ನು ಕೊಡು ಎಂದು ಬೇಡಿರಬಹುದಲ್ಲವೇ? ಹಾಗೆ ಇಲ್ಲಿ ಮಾಡಿರಬಹುದೆನಿಸುತ್ತದೆ. ಇಲ್ಲಿ ಮತ್ತೊಂದು ವಿಚಾರ : 'ರೇವಣ ಸಾಂಗತ್ಯ'ದ ಕರ್ತೃ ದೇವಪುರದ ಆರಾಧ್ಯಮಠದ ವೀರಣ್ಣೊಡೆಯನ ಪುತ್ರನಾಗಿದ್ದ ಚೆನ್ನಬಸವ. ಇವನ ಕಾಲ ಕ್ರಿ.ಶ.ಸು. ೧೭೦೦ ಎಂದು ತಿಳಿಯಲಾಗಿದೆ. ಕವಿ ತಾನು ರಾಮಗಿರಿಯ ಕರಿಯಸಿದ್ಧೇಶ್ವರನ ಕರಸಂಜಾತ ಶಿಷ್ಯ ಎಂದು ಹೇಳಿರುವುದರಿಂದ, ಕನ್ನಡದ ಉತ್ತಮ ಸಾಂಗತ್ಯ ಕೃತಿಗಳಲ್ಲಿ ಒಂದಾದ ಆ ಕೃತಿಯನ್ನು ಅವನು ರಚಿಸುವಲ್ಲಿ ಅವನಿಗೆ ಗುರುವಾಗಿದ್ದ ಕರಿಯಸಿದ್ಧೇಶನ ಪ್ರೇರಣೆ ಪ್ರಭಾವಗಳು ಪಾತ್ರವಹಿಸಿರುವ ಸಾಧ್ಯತೆ ಇದೆ. ಅಷ್ಟೇ ಏಕೆ, ರೇವಣಸಿದ್ಧನಂತಹ ದೊಡ್ಡ ಗುರುವಿನ ವ್ಯಕ್ತಿತ್ವವನ್ನು ಕಂಡರಿಸುವಲ್ಲಿ ಕೂಡಾ ಕವಿಗೆ ಅವನ ಗುರುವಾದ ಕರಿಯಸಿದ್ಧೇಶನ ವ್ಯಕ್ತಿತ್ವವೂ ಒಂದು ಆದರ್ಶವಾಗಿ ನಿಂತಿದ್ದರೆ ಆಶ್ಚರ್ಯವಿಲ್ಲ. ನಿಗೂಢ ಉದ್ದೇಶದ ಪ್ರಸ್ತುತ ಶಾಸನದ ಹಿಂದೆ ಅವನು ಅಥವಾ ರಾಮಗಿರಿಶರಣನ ಹಾಗೂ ತೋಂಟದ ಸಿದ್ಧಲಿಂಗೇಶ್ವರನ ಯಾರೋ ಅಭಿಮಾನಿ ಇದ್ದಿರಬೇಕು ಎನಿಸುವುದಂತೂ ನಿಜ. ಅದೇನೆ ಇದ್ದರೂ ಎಷ್ಟೋ ಊರುಗಳಲ್ಲಿ ಕಲ್ಲುಚಪ್ಪಡಿಗಳ ಮೇಲೆ ಕೇವಲ ಯಂತ್ರಗಳ ಕೆತ್ತನೆ ಕಾಣಸಿಗುವುದುಂಟು. ಆದರೆ, ಯಂತ್ರದ ಜೊತೆ ಹೀಗೆ ಸ್ತೋತ್ರ, ವೃತ್ತ, ಕಾಲಸೂಚನೆ ಮತ್ತು ವಚನ ಇಂಥದೆಲ್ಲ ಇರುವುದು ಮಾತ್ರ ಅತ್ಯಂತ ವಿರಳ. ಇದರಿಂದ ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಇದೊಂದು ಬಹುಮುಖ್ಯ ಶಾಸನ ಎನ್ನುವುದು ಸ್ವಯಂ ಸ್ಪಷ್ಟವಾಗಿದೆ.

ಪ್ರಸ್ತುತ ಶಾಸನದ ಸಂರಕ್ಷಣೆ

ಚಿತ್ರದುರ್ಗದ ಕೆಳಗೋಟೆ ಪ್ರದೇಶದಲ್ಲಿ, ಹಿಂದೆ ಮೆದಕೆರಿಪುರದ ಹೊಸೂರಪ್ಪಳ ಜುಂಜಪ್ಪನವರ ತೋಟವಿದ್ದ ಜಾಗ, ಕೆಲವು ವರ್ಷಗಳ ತರುವಾಯ ನಿವೇಶನಗಳಾಗಿ ಮಾರ್ಪಟ್ಟು ಬಡಾವಣೆ ಬೆಳೆದಾಗ, ಈ ಶಾಸನದ ಕಲ್ಲುಚಪ್ಪಡಿ ಹೊಸೂರಪ್ಪಳ ಅಂಜನಪ್ಪನವರ ಖಾಲಿ ನಿವೇಶನದಲ್ಲಿತ್ತು. ಕ್ರಮೇಣ ಅಲ್ಲಿ ಈ ಕಲ್ಲುಚಪ್ಪಡಿಗೆ ಅನಾಥಸ್ಥಿತಿ ಒದಗಿ, ಗಲೀಜು ತುಂಬಿದ ಜಾಗದಲ್ಲಿ ಗಿಡಗಳ ಪೊದೆಯಲ್ಲಿ ಮುಚ್ಚಿಹೋಗಿತ್ತು. ವಚನವಿರುವ ಕರ್ನಾಟಕದ ಈ ಏಕೈಕ ಶಿಲಾಶಾಸನಕ್ಕೆ ಸೂಕ್ತ ರಕ್ಷಣೆಯಾಗಬೇಕೆಂದು ನಾನು ಬಹಳ ಹಿಂದಿನಿಂದ ಕೈಕೊಂಡ ಪ್ರಯತ್ನ ಇತ್ತೀಚೆಗೆ ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠದ ಪೀಠಾಧೀಶರಾದ ಡಾ. ಶಿವಮೂರ್ತಿ ಮುರುಘಾ ಶರಣರಿಂದ ಈಡೇರಿದೆ. ಇದು ಆ ಮಠದ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಸೇರ್ಪಡೆಯಾಗಿ ಸಂರಕ್ಷಿತವಾಗಿದೆ

ಎನ್ನುವುದು ತುಂಬ ಸಂತೋಷದ ಸಂಗತಿ. ಇದನ್ನು ಶಾಪಗ್ರಸ್ತ ಸ್ಥಿತಿಯಿಂದ ಮುಕ್ತಗೊಳಿಸುವಲ್ಲಿ ಸಹಕಾರ ನೀಡಿದವರು ಹೊಸೂರಪ್ಪಳ ಮನೆತನದವರೇ ಆದ ಯುವರಾಜ್, ಎನ್. ಗಂಗಾಧರ್, ಎ.ಜೆ. ಪರಮಶಿವಯ್ಯ, ಎಚ್.ವಿ. ಇಂದುಶೇಖರ್, ವಿಷ್ಣುಪ್ರತಾಪ್ ಮತ್ತು ಮುರುಘಾಮಠದ ಭುವನೇಶ್ ಹಾಗೂ ತಂಡದವರು.

[ನನ್ನ ಅಧ್ಯಯನಕ್ಕೆ ಡಾ. ಎಚ್. ಚಂದ್ರಶೇಖರ ಅವರು 'ಪ್ರಬೋಧಚಂದ್ರೋದಯ' ಕೃತಿಯನ್ನೂ, ಡಾ. ಬಿ. ನಂಜುಂಡಸ್ವಾಮಿ ಅವರು ಪ್ರೊ. ಸಿ. ಮಹಾದೇವಪ್ಪನವರು ಸಂಪಾದಿಸಿರುವ ಕೃತಿ ಹಾಗೂ ಡಾ. ಸಾ.ಶಿ. ಮರುಳಯ್ಯನವರು ಮತ್ತು ಡಾ. ಎಸ್. ವಿದ್ಯಾಶಂಕರ್ ಅವರು ಸಂಪಾದಿಸಿರುವ ಕೃತಿಗಳು ಪ್ರೊ. ಎಸ್. ಉಮಾಪತಿ ಅವರು ತಾವು ಸಂಪಾದಿಸಿರುವ ಕೃತಿಯನ್ನೂ ನೀಡಿ ಸಹಕರಿಸಿರುತ್ತಾರೆ. ಇವರೆಲ್ಲರಿಗೆ ನನ್ನ ಕೃತಜ್ಞತೆಗಳು].



ಚಿತ್ರದುರ್ಗದ ಮುರುಘರಾಜೇಂದ್ರ ಮಠದಲ್ಲಿ ಈಚೆಗೆ ಸಂರಕ್ಷಿಸಲ್ಪಟ್ಟಿರುವ ಪ್ರಸ್ತುತ ಶಿಲಾಶಾಸನ

ಆಧಾರಸೂಚಿ

೧. ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಸಂ. ಲಕ್ಷ್ಮಣ್ ತೆಲಗಾವಿ, ಡಾ. ಎಂ.ವಿ. ಶ್ರೀನಿವಾಸ್, ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ, ೧೯೭೬.

೨. ಶಾಸನಗಳಲ್ಲಿ ಶಿವಶರಣರು, ಡಾ. ಎಂ. ಎಂ. ಕಲಬುರ್ಗಿ, ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦.

೩. ಐತಿಹಾಸಿಕ ಚಿತ್ರದುರ್ಗ, ಸಂ. ಡಾ. ಎಂ.ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ, ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ, ೧೯೭೬. ಇದರಲ್ಲಿ ಲೇಖನ: ಚಿತ್ರದುರ್ಗದ ಪ್ರಮುಖ ಶಾಸನಗಳು, ಲೇಖಕರು: ಬಿ.ರಾಜಶೇಖರಪ್ಪ.

೪. ಶರಣ ಸಾಹಿತ್ಯ (ನಿಯತಕಾಲಿಕೆ), ಬೆಂಗಳೂರು, ೧೯೫೬.

೫. ಗುಬ್ಬಿ ಶಾಂತೇಶ ವಿರಚಿತ 'ತೋಂಟದ ಸಿದ್ದೇಶ್ವರ ಪುರಾಣ', ಸಂ. ಪ್ರೊ. ಸಿ. ಮಹಾದೇವಪ್ಪ, ಬೆಂಗಳೂರು, ೨೦೦೫. ಬಸವ ಪಥ (ಮಾಸಿಕ), ಸಂಪುಟ ೧೧, ಸಂಚಿಕೆ ೭. ಅಕ್ಟೋಬರ್ ೧೯೮೯. ಇದರೊಳಗೆ 'ಸಿದ್ಧಲಿಂಗಕೃತ ತತ್ತ್ವಜ್ಞಾನ ತಾರಾವಳಿ', ಸಂ. ಡಾ. ಬಿ.ಆರ್. ಹಿರೇಮಠ.

೬ ಪ್ರಬೋಧ ಚಂದ್ರೋದಯ, ಸಂ. ಎನ್. ಬಸವಾರಾಧ್ಯ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೨.

೭. ಹಿಂದು-ಯುನಾನಿ ವೈದ್ಯ ಯಂತ್ರ ಮಂತ್ರ ಸುಗಂಧ ಬೋಧಕ, (ಇದರ ಪ್ರಕಾಶನ ವಿವರ ಸದ್ಯಕ್ಕೆ ಅನುಪಲಬ್ಧ).

೮. ಷಟ್ಸ್ಥಲಜ್ಞಾನ ಸಾರಾಮೃತ, ಸಂ. ಡಾ. ಆರ್.ಸಿ. ಹಿರೇಮಠ, ವೀರಶೈವ ಅಧ್ಯಯನ ಸಂಸ್ಥೆ, ಗದಗ-ಡಂಬಳ, ೧೯೮೩.

೯. ಷಟ್‌ಸ್ಥಲಜ್ಞಾನ-ಸಾರಾಮೃತ ಟೀಕೆ, ಸಂ. ಡಾ. ಎಸ್. ವಿದ್ಯಾಶಂಕರ್, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೮೭.

೧೦. ತೋಂಟದಾರ್ಯ ವಚನ:ವ್ಯಾಖ್ಯೆ, ಸಂ. ಡಾ. ಸಾ.ಶಿ.ಮರುಳಯ್ಯ, ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ (ದಾಸೋಹ) ಸೇವಾ ಸಂಘ.

೧೧. ರೇವಣಸಿದ್ಧೇಶ್ವರನ ಚರಿತೆ (ರೇವಣ್ಣ ಸಾಂಗತ್ಯ), ಸಂ. ಎಸ್. ಉಮಾಪತಿ, ದಾವಣಗೆರೆ, ೨೦೦೩.

೧೨. ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಸಂ. ಎಸ್. ಶಿವಣ್ಣ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜ.ತೋಂ. ಸಂಸ್ಥಾನ ಮಠ, ಡಂಬಳ-ಗದಗ, ೧೯೯೪.

೧೨

ಚನ್ನಪಟ್ಟಣ ತಾಲ್ಲೂಕಿನ ಅಪ್ರಕಟಿತ ಶಾಸನಗಳು

ಮಂಜುನಾಥ ಎಂ.ಕೆ.*

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ವೀರೇಗೌಡನದೊಡ್ಡಿ, ಮೆಣಸಿಗನಹಳ್ಳಿ, ಸಿಂಗರಾಜಪುರ, ಸುಣ್ಣೂರು, ನೇರಳೂರು ಹಾಗೂ ಸರಗೂರು ಗ್ರಾಮಗಳಲ್ಲಿ ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ದೊರೆತ ಗಂಗ ಹಾಗೂ ಹೊಯ್ಸಳರ ಕಾಲದ ಅಪ್ರಕಟಿತ ಶಾಸನಗಳ ಕುರಿತ ವಿಶ್ಲೇಷಣೆ ಈ ಲೇಖನದಲ್ಲಿದೆ.

೧. ವೀರೇಗೌಡನದೊಡ್ಡಿ ಗ್ರಾಮದ ವೀರಗಲ್ಲು

ವೀರೇಗೌಡನದೊಡ್ಡಿ ಗ್ರಾಮದ ಹೊರವಲಯದ ತೆಂಗಿನತೋಟವೊಂದರಲ್ಲಿರುವ ವೀರಗಲ್ಲು ಗುಡಿಯ ಬಲಭಾಗದ ಕಲ್ಲಿನಲ್ಲಿನ ಶಾಸನವೊಂದಿದ್ದು, ಇದನ್ನು ಮೂರು ಅಡಿ ಅಗಲ ಹಾಗೂ ಎರಡು ಅಡಿ ಉದ್ದದ ವಿಸ್ತೀರ್ಣತೆಯಲ್ಲಿ ಕಡೆಯಲಾಗಿದೆ. ಕಣಶಿಲೆಯಲ್ಲಿ ಕಡೆದಿರುವ ಈ ಶಾಸನದ ಕೆಲಭಾಗ ತ್ರುಟಿತಗೊಂಡಿದೆ. ಶಾಸನದ ಭಾಷೆ ಹಾಗೂ ಲಿಪಿಯು ಕನ್ನಡದಲ್ಲಿದ್ದು, ಒಟ್ಟು ೧೨ ಸಾಲುಗಳ ಶಾಸನ ಪಾಠವಿದೆ.

ಶಾಸನ ಪಾಠ

೧. [ಸ್ವ*]ಸ್ತಿ ಶ್ರೀಪ್ರತಾಪಚ[ಕ್ರ*]ವ[ರ್ತಿ*]
೨. ವೀರನಾರಸಿಂಗದೇವನು ಪ್ರಿಥುವಿರಾ
೩. ಜ್ಯ[ಂ*]ಗೆಯುತ್ತಿರಲು ಸಕ ವರಿಷ ಸಾಸಿ
೪. ರದನೂಜ ಎಂಭತ್ತ ಏಳು ವರಿಷ ಸಂದ ರಕ್ತಾ
೫. ಕ್ಷಿ ಸಂವತ್ಸರದ ಭಾದ್ರಪದ। ಸು।೧೦।ಮು।ದಂ
೬. ದು ಸುಣನೂರು ನೆಜಿಲೂರ ಮಾದಿಗರೊಳ್ಳಿಯ ಗೌ
೭. ಡಿಯರ ಮೇದಗೌಡನ ಮಗ ವೈಜೆಯನು ಊ
೮. ಜುಹಟಿವಿನಲಿ ಬಿದ್ದು ಸ್ವರ್ಗಸ್ತನಾದ ಸುಣನೂ
೯. ರು ನೆಜಿಲೂರ ಸಮಸ್ತ ಗವುಂಡುಗಳು . . ಹಿ
೧೦. ರಿಯ ಕೆರೆಯಲಿ [ಮೇದ*]ಗವುಂಡಂಗೆ ಗೌಉಂಡ ಕೊಡಗೆ
೧೧. ಯ ಗಟ್ಟಿ ಸ೧। . ಪ್ರೂ . ಪ . . . . . .
೧೨. ಳಂ ಆದಿಓಜ ಕಂದರ್ಪ ಮಂಗಳ ಮಹಾಶ್ರೀ

ಹೊಯ್ಸಳ ದೊರೆ ಪ್ರತಾಪ ಚಕ್ರವರ್ತಿ ವೀರನಾರಸಿಂಗನು (ಮೂರನೇ ನರಸಿಂಹ) ರಾಜ್ಯಭಾರ ಮಾಡುವ ಸಂದರ್ಭದಲ್ಲಿ ಶಕವರ್ಷ ೧೧೮೭, ರಕ್ತಾಕ್ಷಿ ಸಂವತ್ಸರದ ಭಾದ್ರಪದ ಮಾಸ, ಶುದ್ಧ ೧೦ ಮಂಗಳವಾರ ಅಂದರೆ ಕ್ರಿ.ಶ. ೧೨೬೫ರ ಸೆಪ್ಟೆಂಬರ್ ೨ರಂದು ನುಣನೂರು, ನೆರೆಳೂರ ಮಾದಿಗರೊಳ್ಳಿಯ ಗೌಡಿಯರ ಮೇದಗೌಡನ ಮಗನಾದ ವೈಜೆಯನು ಊರುಹಟಿವಿನಲ್ಲಿ ಬಿದ್ದು ಮಡಿದಾಗ, ನುಣನೂರು-ನೆರೆಳೂರ ಸಮಸ್ತ ಗವುಂಡರು ವೈಜೆಯನ ತಂದೆಯಾದ ಮೇದಗೌಡನಿಗೆ ಗೌಉಂಡಗೊಡುಗೆಯಾಗಿ ಹಿರಿಯ ಕೆರೆಯಲ್ಲಿ ಗದ್ದೆಯನ್ನು(ಸಲಗೆ-೧) ಬಿಟ್ಟುಕೊಟ್ಟ ವಿವರ ಶಾಸನದಲ್ಲಿದೆ. ಈ ಶಾಸನ ಮತ್ತು ವೀರಗಲ್ಲನ್ನು ಕಂಡರಿಸಿದವನು ಆದಿಓಜ ಎಂಬ ಶಿಲ್ಪಿ ಎಂಬುದು ತಿಳಿಯುತ್ತದೆ.

ಶಾಸನೋಕ್ತ 'ಊರುಹಳಿವು' (ಊರಳಿವು) ಅಂದರೆ ಹಿಂದಿನ ಕಾಲದಲ್ಲಿ ಶತ್ರುಗಳು ಊರಿನ ಮೇಲೆ ದಾಳಿ ಮಾಡಿ ತುರುಗಳನ್ನು ಕದ್ದು, ಸ್ತ್ರೀಯರನ್ನು ಮಾನಭಂಗಗೊಳಿಸಿ ಊರನ್ನು ನಾಶಪಡಿಸುತ್ತಿದ್ದ ಸನ್ನಿವೇಶವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಶತ್ರುಗಳು ದಾಳಿ ಮಾಡಿದಾಗ ಅವರೊಂದಿಗೆ ಹೋರಾಡಿ ಪ್ರಾಣ ಕಳೆದುಕೊಂಡ. ಮಡಿದ ವೈಜೆಯನ ನೆನಪಿಗಾಗಿ ಈ ವೀರಗಲ್ಲನ್ನು ಪ್ರತಿಷ್ಠಾಪಿಸಿ, ಆತನ ತಂದೆಗೆ ಆ ಗ್ರಾಮದ ದೊಡ್ಡ ಕೆರೆಯ ಬಳಿ ಗದ್ದೆಯನ್ನು ಗೌವುಂಡ ಗೊಡುಗೆಯಾಗಿ ದತ್ತಿ ಬಿಟ್ಟಿರುವುದನ್ನು ಕಾಣಬಹುದು. ಶಾಸನದಲ್ಲಿ ಬರುವ ಮಾದಿಗರೊಳ್ಳಿ ಅಂದರೆ ಈಗಿನ ವೀರೇಗೌಡನ ದೊಡ್ಡಿ ಗ್ರಾಮವಾಗಿರಬಹುದು. ಶಾಸನದಲ್ಲಿ ಉಕ್ತವಾಗಿರುವ ನುಣ್ಣನೂರು ಹಾಗೂ ನೆಜಿಲೂರು (ಈಗಿನ ನೇರಳೂರು) ಗ್ರಾಮಗಳು ಪ್ರಸ್ತುತದ ವೀರೇಗೌಡನದೊಡ್ಡಿ ಗ್ರಾಮದ ನೆರೆ ಹೊರೆಯ ಗ್ರಾಮಗಳಾಗಿವೆ.

ಈ ಗುಡಿಯ ಮಧ್ಯದಲ್ಲಿ ಸುಮಾರು ಮೂರು ಅಡಿ ಉದ್ದ ಹಾಗೂ ಎರಡುವರೆ ಅಡಿ ಅಗಲವಾದ ಕಣಶಿಲೆಯ ಮೇಲೆ ವೀರಗಲ್ಲು ಶಿಲ್ಪವನ್ನು ಕಡೆಯಲಾಗಿದ್ದು, ಮೂರು

* # ೪೧, ಮಾಕಳಿ ಗ್ರಾಮ ಮತ್ತು ಅಂಚೆ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಹಂತದ ಚಿತ್ರಣವನ್ನು ಹೊಂದಿದೆ. ಕೆಳಹಂತದಲ್ಲಿ ವೀರನು ಶತ್ರುವಿನೊಂದಿಗೆ ಹೋರಾಡುತ್ತಿದ್ದಾನೆ. ವೀರನು ಎಡಗೈಯಲ್ಲಿ ಆಳೆತ್ತರದ ಬಿಲ್ಲನ್ನು ಹಿಡಿದಿದ್ದು, ಬಲಗೈಯಲ್ಲಿ ಸೊಂಟದಲ್ಲಿರುವ ಖಡ್ಗವನ್ನು ಹಿಡಿದು ಶತ್ರುವನ್ನು ಎದುರಿಸುವಂತೆ ನಿಂತಿದ್ದರೆ, ಶತ್ರುವು ಭರ್ಜಿ–ಗುರಾಣಿಯನ್ನು ಹಿಡಿದು ವೀರನಿಗೆ ಚುಚ್ಚುವಂತೆ ನಿಂತಿದ್ದಾನೆ. ಇಲ್ಲಿ ವೀರನನ್ನು ದೊಡ್ಡದಾಗಿ ಕೆತ್ತಲಾಗಿದ್ದು, ಎರಡನೇ ಹಂತದಲ್ಲಿ ಚಾಮರಧಾರಿಯರು ವೀರನನ್ನು ಎತ್ತಿಕೊಂಡು ಹೋಗುತ್ತಿದ್ದರೆ, ಮೂರನೇ ಹಂತದಲ್ಲಿ ಬಸವ, ಶಿವಲಿಂಗ ಮುಂದೆ ವೀರನು ಕೈಮುಗಿದು ಕುಳಿತಿದ್ದರೆ, ಯತಿಯೊಬ್ಬ ಶಿವಲಿಂಗಕ್ಕೆ ಪೂಜೆ ಮಾಡುತ್ತಿರುವ ಚಿತ್ರಣವನ್ನು ಕಡೆಯಲಾಗಿದೆ.

೨. ಮೆಣಸಿಗನಹಳ್ಳಿಯ ಈಶ್ವರ ದೇವಾಲಯದ ಮುಂದಿರುವ ಶಿಲಾಶಾಸನ

ಚನ್ನಪಟ್ಟಣ ತಾಲ್ಲೂಕಿನ ಮೆಣಸಿಗನಹಳ್ಳಿ ಗ್ರಾಮದ ಹೊರವಲಯದಲ್ಲಿನ ಪಾಳುಬಿದ್ದಿರುವ ಈಶ್ವರ ದೇವಾಲಯದ ಮುಂದೆ ಶಿಲಾಶಾಸನವೊಂದು ಪತ್ತೆಯಾಯಿತು. ಅರ್ಧದಷ್ಟು ಭೂಮಿಯಲ್ಲಿ ಹೂತುಹೋಗಿದ್ದ ಈ ಶಾಸನವು ಸುಮಾರು ಐದು ಅಡಿ ಉದ್ದ, ಎರಡುವರೆ ಅಡಿ ಅಗಲ ಹಾಗೂ ಮುಕ್ಕಾಲು ಅಡಿ ದಪ್ಪವಾದ ಕಣಶಿಲೆಯ ಫಲಕದ ಮೇಲೆ ಈ ಶಾಸನವನ್ನು ಕಂಡರಿಸಲಾಗಿದೆ. ಈ ಶಾಸನದ ಭಾಷೆ ಹಾಗೂ ಲಿಪಿಯು ಕನ್ನಡವಾಗಿದೆ. ಶಾಸನದ ಲಿಪಿಯು ಹೊಯ್ಸಳರ ಕಾಲದ್ದಾಗಿದ್ದು, ಒಟ್ಟು ೧೯ ಸಾಲುಗಳ ಶಾಸನಪಾಠವನ್ನು ಹೊಂದಿದೆ. ಶಾಸನ ಪಠ್ಯದ ಕೆಳಭಾಗದಲ್ಲಿ ಶಿವಲಿಂಗ, ಸೂರ್ಯ, ಚಂದ್ರರ ರೇಖಾಚಿತ್ರಗಳನ್ನು ಕಂಡರಿಸಲಾಗಿದೆ.

ಶಾಸನ ಪಾಠ

೧. ಸ್ವಸ್ತಿ ಸಮಸ್ತ ಭುವನಾಶ್ರ
೨. ಯಂ ಶ್ರೀಪ್ರಿಥ್ವೀವಲ್ಲಭ
೩. ಂಮಹಾರಾಜಾಧಿರಾಜಂ
೪. ಪರಮೇಸ್ವರ ದ್ವಾರಾವತಿಪುರವರಾಧೀ
೫. ಸ್ವರಂ ಯಾದವ ಕುಳಾಂಬರ ದ್ವಿಮಣಿ
೬. ಸರ್ವಗ್ಞ ಚೂಡಾಮಣಿ [ಮಲೆ*]ರಾಜರಾಜ
೭. ಮಲಪರೊಳುಗಂಡ ಗಂ[ಡ*]ಭೇರುಂಡ ಕ
೮. ದನ ಪ್ರಚಂಡನಸಹಾಯಸೂರ ಸನಿವಾರಸಿದ್ಧಿ ಗಿರಿದು
೯. ರ್ಗ್ಗಮಲ್ಲ ಚಲದಂಕರಾಮ ನಿಸ್ಸಂಕ ಪ್ರತಾಪ
೧೦. ಚಕ್ರವರ್ತಿ ಹೊಯಿಸಳಭುಜಬಳ ಶ್ರೀನಾರಸಿಂಹದೇವ
೧೧. ರು ಪ್ರಿಥ್ವೀರಾಜ್ಯಂಗೆಯ್ಯುತ್ತಿರಲು ವಿಷು ಸಂ
೧೨. ವತ್ಸರದ ಮಾರ್ಘಶಿರ ಬ ೧೪ ಬು ದಂದು [ಮೆಣ*]
೧೩. ಸಿಂಗನಹಳ್ಳಿಯ ರಾಮಗಉಡನ ಮೊಮಗ ಕು . .
೧೪. . . ರಿ ಗುರುಲಿಂಗ ಪ್ರತಿಷ್ಟೆಯ ಮಾಡಿಸಿದನಂ .
೧೫. ಕನಕಗಿಜಿ ದೇವರಿಂಗೆ ಭಂಡಾರಿ ರಾಮಯ್ಯನ ಕು
೧೬. ಮಾರ್ತೆ ಮಾಟಿ ಕೊಂಡು ಬಿಟ್ಟ ಗಟ್ದೆ ಸ ೧ ಬೆದ್ದ
೧೭. ಲು ಮಂಣು ಕಂಭ ೧೦೦ . ಯೀ ಧರ್ಮಕೆ
೧೮. ಅಳುಪಿದವ ನಾಯಕ ನರಕ
೧೯. ದೊಳು ಹೊಕ್ಕ

ಶಾಸನದಲ್ಲಿ ಹೊಯ್ಸಳ ದೊರೆ ಮೂರನೇ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಅಂದರೆ ವಿಷು ಸಂವತ್ಸರದ ಮಾರ್ಘಶಿರ ಬಹುಳ ೧೪ ಬುಧವಾರ ಅಂದರೆ ಕ್ರಿ.ಶ. ೧೨೮೧ರ ಡಿಸೆಂಬರ್ ೧೦ನೇ ಬುಧವಾರದಂದು ಮೆಣಸಿಂಗನಹಳ್ಳಿಯ ರಾಮಗೌಡ ಎಂಬುವನ ಮೊಮ್ಮಗನು ಗುರುಲಿಂಗವನ್ನು (ಪ್ರಸ್ತುತವಿರುವ ಪಾಳು ದೇವಾಲಯದಲ್ಲಿ) ಪ್ರತಿಷ್ಠೆಯನ್ನು ಮಾಡಿಸಿದನು. ಇದೇ ಸಂದರ್ಭದಲ್ಲಿ ಭಂಡಾರಿ ರಾಮಯ್ಯನ ಕುಮಾರ್ತಿ(ಮಗಳು) ಕನಕಗಿರಿಯ ದೇವರಿಗೆ ಗದ್ದೆ (ಸಲಗೆ ೧) ಮತ್ತು ಬೆದ್ದಲು ಭೂಮಿ (ಕಂಭ ೧೦೦)ಯನ್ನು ದಾನ ಬಿಟ್ಟ ವಿವರಗಳು ದಾಖಲಾಗಿವೆ. ಶಾಸನದ ಕೊನೆಯಲ್ಲಿ 'ಈ ಧರ್ಮಕ್ಕೆ ಅಳುಪಿದವ ನಾಯಕ ನರಕದೊಳು ಹೊಕ್ಕ' ಎಂಬ ಶಾಪವಾಕ್ಯವಿದೆ.

ಶಾಸನದಲ್ಲಿ ನರಸಿಂಹದೇವನನ್ನು 'ಸ್ವಸ್ತಿ ಸಮಸ್ತಭುವನಾಶ್ರಯ, ಪೃಥ್ವೀವಲ್ಲಭ, ಮಹಾರಾಜಾಧಿರಾಜಂ, ಪರಮೇಶ್ವರ, ದ್ವಾರಾವತಿ ಪುರವರಾಧೀಶ್ವರಂ, ಯಾದವಕುಳಾಂಬರ ದ್ಯುಮಣಿ, ಸರ್ವಗ್ನ ಚೂಡಾಮಣಿ, ಮಲೆರಾಜರಾಜ, ಮಲಪರೊಳ್‌ಗಂಡ, ಗಂಡಭೇರುಂಡ, ಕದನಪ್ರಚಂಡ, ಅಸಹಾಯಸೂರ, ಶನಿವಾರ ಸಿದ್ಧಿ, ಗಿರಿದುರ್ಗಮಲ್ಲ, ಛಲದಂಕರಾಮ, ನಿಸ್ಸಂಕಪ್ರತಾಪ ಚಕ್ರವರ್ತಿ, ಹೊಯಿಸಳ ಭುಜಬಳ' ಮುಂತಾದ ವೀರ ನರಸಿಂಹನ ಬಿರುದಾವಳಿಗಳಿವೆ.

ಈ ದೇವಾಲಯ ಗಂಗರ ಕಾಲದ ರಚನೆಯಾಗಿದ್ದು, ಯಾವುದೋ ಕಾರಣಕ್ಕೆ ಗರ್ಭಗೃಹದಲ್ಲಿದ್ದ ಶಿವಲಿಂಗ ಭಗ್ನಗೊಂಡಿದ್ದಾಗ ಪುನಃ ಲಿಂಗ ಪ್ರತಿಷ್ಠಾಪನೆ ಮಾಡಿರಬಹುದು. ಪ್ರಸ್ತುತ ಈ ದೇವಾಲಯದಲ್ಲಿ ಗಂಗರ ಕಾಲದ ಬಸವ, ಗಣಪತಿ ಮೂರ್ತಿಗಳಿವೆ. ಆದರೆ ಗರ್ಭಗೃಹದಲ್ಲಿ ಶಿವಲಿಂಗ ವಿಲ್ಲ. ಹಾಗೆಯೇ ಇದೇ ಶಾಸನದಲ್ಲಿ ಬರುವ ಕನಕಗಿರಿ ಎಂಬುದು ಈಗಿನ ಮದ್ದೂರು ತಾಲ್ಲೂಕಿನ ಆರೆತಿಪ್ಪೂರಾಗಿದೆ. ಇದು ಚನ್ನಪಟ್ಟಣ ತಾಲ್ಲೂಕಿನ ಗಡಿಯಲ್ಲಿರುವ ಸ್ಥಳ. ಈ ಆರೆತಿಪ್ಪೂರು ಕ್ರಿ.ಶ. ೯ನೇ ಶತಮಾನದಲ್ಲಿಯೇ ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಈ ಕನಕಗಿರಿಯ ವಿಶೇಷವೆಂದರೆ ಶ್ರವಣಬೆಳಗೊಳದಲ್ಲಿ ಚಾವುಂಡರಾಯನಿಂದ ಗೊಮ್ಮಟನ ಮೂರ್ತಿ ಪ್ರತಿಷ್ಠಾಪನೆಯಾಗುವುದಕ್ಕಿಂತ ಮುಂಚಿತವಾಗಿಯೇ ಇಲ್ಲಿನ

ಬೆಟ್ಟದಲ್ಲಿ ಸುಮಾರು ಹನ್ನೆರಡು ಅಡಿ ಎತ್ತರದ ಗೊಮ್ಮಟನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿರುವುದು. ಈ ಜೈನತೀರ್ಥ ಕನಕಗಿರಿಯು ಗಂಗರ ಕಾಲದಿಂದ ವಿಜಯನಗರ ಅರಸರ ಕಾಲದವರೆಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತ್ತು ಎಂಬುದು ಶಾಸನಗಳಿಂದ ತಿಳಿದುಬರುತ್ತದೆ.

೩. ಸಿಂಗರಾಜಪುರ ಗ್ರಾಮದ ಕೆರೆಯ ಬಳಿಯಿರುವ ಶಾಸನ

ಚನ್ನಪಟ್ಟಣ ತಾಲ್ಲೂಕಿನ ಸಿಂಗರಾಜಪುರ ಗ್ರಾಮದ ದೊಡ್ಡಕೆರೆಯ ಕೋಡಿಯ ಬಳಿಯಲ್ಲಿ ಚನ್ನಪಟ್ಟಣ–ಸಾತನೂರು ರಸ್ತೆಯಲ್ಲಿರುವ ಅಪ್ರಕಟಿತ ಶಿಲಾಶಾಸನವೊಂದು ನನ್ನ ಕ್ಷೇತ್ರಕಾರ್ಯದ ವೇಳೆಯಲ್ಲಿ ಪತ್ತೆಯಾಯಿತು. ಕೆರೆಯಲ್ಲಿ ಹೂತುಹೋಗಿದ್ದ ಈ ಶಾಸನವನ್ನು ಗ್ರಾಮಸ್ಥರು ಇತ್ತೀಚೆಗೆ ಅಲ್ಲಿಂದ ತಂದು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿರುತ್ತಾರೆ. ಸುಮಾರು ಐದುವರೆ ಅಡಿ ಉದ್ದ, ಎರಡು ಅಡಿ ಅಗಲ ಹಾಗೂ ಒಂದುಕಾಲು ಅಡಿ ದಪ್ಪವಾದ ಕಣಶಿಲೆಯ ಫಲಕದ ಮೇಲೆ ಈ ಶಾಸನವನ್ನು ಕಂಡರಿಸಲಾಗಿದೆ. ಈ ಶಾಸನದ ಭಾಷೆ ಹಾಗೂ ಲಿಪಿಯು ಕನ್ನಡವಾಗಿದೆ. ಈ ಲಿಪಿಯು ಹೊಯ್ಸಳರ ಕಾಲದ್ದಾಗಿದ್ದು, ಸುಂದರವಾಗಿ ಕಡೆಯಲಾಗಿದೆ. ಕಣಶಿಲೆಯಾಗಿದ್ದರೂ ಬಳಪದ ಕಲ್ಲಿನಲ್ಲಿ ಕೊರೆಯುವಂತೆ ಸಣ್ಣದಾದ ಅಕ್ಷರಗಳನ್ನು ಸುಂದರವಾಗಿ ಕೊರೆದಿರುವುದು ವಿಶೇಷವಾಗಿದೆ. ಶಾಸನದಲ್ಲಿ ಒಟ್ಟು ೪೮ ಸಾಲುಗಳ ಪಾಠವಿದೆ.

ಶಾಸನ ಪಾಠದ ಮೇಲ್ಭಾಗದಲ್ಲಿ ಸುಮಾರು ಒಂದು ಅಡಿ ಎತ್ತರವಾದ ಉಬ್ಬುಶಿಲ್ಪವನ್ನು ಕಡೆಯಲಾಗಿದೆ. ಶಾಸನ ಫಲಕದ ತೀರಾ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಶಿಲ್ಪಗಳ ಕೆಳಭಾಗದಲ್ಲಿ ಬಲಮುಂಗಾಲನ್ನು ಮೇಲಕ್ಕೆ ಎತ್ತಿ ನಿಂತಿರುವ ಹುಲಿ, ಅದರ ಪಕ್ಕದಲ್ಲಿ ಕಠಾರಿ, ಅಂಕುಶ, ನೇಗಿಲು, ಎಣ್ಣೆಯ ಗಾಣದ ಶಿಲ್ಪಗಳನ್ನು ಕಾಣಬಹುದು.

ಶಾಸನ ಪಾಠ

೧. ಶ್ರೀ ಸ್ವಸ್ತಿ ಸಮಸ್ತ ಭುವನಾಸ್ರಯಂ ಪ್ರಿಥ್ವೀವಲ್ಲಭಂ
೨. ಮಹಾರಾಜಾಧಿರಾಜಂ ದ್ವಾರಾವತಿ ಪುರವರಾಧೀಸ್ವರಂ ಯಾ
೩. ದವ ಕುಲಾಂಬರ ದ್ವಿಮಣಿ . . . .
೪. . . . . . ಮಲಪರೊಳುಗಂಡ . . . .
೫. ಪೊಯ್ಸಳ . . . ಯದಂ . . . .
೬. ದೇವರಿಂ . . ಯ . . ರ . ರ . . . . ತನೆಯಂ
೭ ವಿನೆಯಾದಿತ್ಯಂ। ಆತನ ತನಯಂ ಎಱೆಯಂಗಂ ಆತ
೮. ನ ತನಯಂ ವಿಷ್ಣುನ್ರಿಪಾಳಂ। ಆತನ್ಗಾದಂ ಶ್ರೀವಿಭು ವಿಕ್ರಂ
೯. ತ ನಾರಸ್ಹಿಂನಾಹವಸ್ಹಿಂ। ಆತನ ತನಯಂ ಬಲ್ಲಾಳಂ। ಆ
೧೦. ತನ ತನೆಯಂ ಬಲ್ಲಾಳದೇವಂ। ಆತನ ಮಗಂ ಬಲ್ಲಾಳ
೧೧. ಂ। ಆತನ ಮಗಂ ನಾರಾಸ್ಹಿಂ। ಆತ[ನ*] ಮಗಂ ಸೋಮನರೇ
೧೨. ಂದ್ರಂ॥ ಆ[ತನ*]ತನೂಭವ ಶ್ರೀವೀರನಾರಾಸ್ವಿಂ॥ ಬಿರುದಾವ
೧೩. ಳಿ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀಪ್ರಿಥ್ವೀವಲ್ಲಭಂ
೧೪. ಮಹಾರಾಜಾಧಿರಾಜಂ ಪರಮಪರಮೇಸ್ವರಂ ದ್ವಾ
೧೫. ರಾವತಿ ಪುರವರಾಧೀಸ್ವರಂ ಯಾದವ ಕುಲಾಂಬ
೧೬. ರದ್ಯುಮಣಿಯಂ। ಸರ್ಬ್ಬಜ್ಞಚೂಡಾಮಣಿ ಮಲೆ
೧೭. ರಾಜರಾಜ ಮಲಪರೊಳುಗಂಡ ಗಂಡಭೇರುಂ
೧೮. ಡ ಕದನಪ್ರಚಂಡನಸಹಾಯಸೂರ ಏಕಾಂಕವೀರ
೧೯. ಸನಿವಾರಸಿದ್ಧಿ ಗಿರಿದುರ್ಗ್ಗಮಲ್ಲ ಛಲದಂಕ ರಾಮ
೨೦. ವೈರಿಭ ಕಂಠೀರವಂ। ಮಗರಾರಾಜ್ಯ ನಿರ್ಮ್ಮೂಲನುಂ ಚೋ
೨೧. ಳು ರಾಜ್ಯ ಪ್ರತಿಷ್ಠಾಚಾರಿಯನುಂ। ಪಾಂಡ್ಯ ಕುಲ ಸ
೨೨. ಮುದ್ಧರಣನುಂ ಚೋಳ . . . ಸಮಳ . ಚೇರಭ
೨೩. ಯಂಕರನುಂ ಕಾಡ[ವ*]ರಾಯ ದಿಸಾಪಟ್ಟನುಂ ನಿಸ್ಸಂಕ
೨೪. ಪ್ರತಾಪ ಚಕ್ರವರ್ತ್ತಿ ಹೊಯ್ಸಣ ಭುಜಬಳ ಶ್ರೀ ವೀ
೨೫. ರನಾರಸ್ವಿಂಹದೇವರಸರು ದೋರಸಮುದ್ರದ ನೆಲೆ
೨೬. ವೀಡಿನೊಳು ಪ್ರಿಥುವಿರಾಜ್ಯಂಗೆಯುತ್ತಿರೆ
೨೭. ವಿರೋಧಿ ಸಂವತ್ಸರದ ಮಾಘ ಸು ೧೫ । ಬುಧ
೨೮. ದಂದು । ನಾರಸ್ವಿಂ ನೆ[ನಿ*]ಪಂದೇವಂ [ಅ*]ಹವ ಮಂಡಳಿಕರ
೨೯. ಗಂಡ ಸ್ವಾಮಿವ್ರಿಹಶ್ರೀದಾಸರ ಗಂಡ ಜಗದೊ
೩೦. ಬ್ಬ್ರಗಂಡ ಕೆಳಲಾದಿರಾಯ ಭಂಡಾರಿ ರಾಮಯ
೩೧. ಮಯನ ಮಗ ರಾಮಂಣ ಹೊಂನಪ್ಪಗವುಡು
೩೨. ಹನಿವೂರಲು ಬು[ಧ*]ವಾರ ಸಂಥೆಯನಿರಿಸಲು ವೂರ
೩೩. ಪಟ್ಟಣಸ್ವಾಮಿ ರಾಘವಸೆಟ್ಟಿಯ ಮಗ
೩೪. ಮಸಣಿಸೆಟ್ಟಿ ತಂಗಿ ಗಿರ್ಜೆಯ ಮಗ ಚವ
೩೫. ಣ ಸೆಟ್ಟಿಯರಿಗೆ ಕೊಟ್ಟ ಷಾಸನದ ಕ್ರಮವೆಂಥೆ
೩೬. ಂದಡೆ। ಹನಿವೂರ ಹಿರಿಯಕೆರೆಯ ಕೆಟಗೆ ಗೌ
೩೭. ಡನು ಧರ್ಮದೊಳಗೂಡಿ ಸಲಗೆ ಆಱು ಬೆ
೩೮. ದಲು ಭೂಮಿಯ ಸಱುವ ಮಾನ್ಯದಲು . . .
೩೯. ಹದಿನಾಲ್ಕು ಪಟಣದಲಿ ದಂಡವಿಲ್ಲ ತಪ್ಪು
೪೦. ತಲುಡಿಯಿಲ್ಲ ಅಂಣನ ಹೊಡವೆ ಥಮಂ
೪೧. ಗೆ ಥಂಮನ ಹೊಡವೆ ಅಣ್ಣಂಗೆ ಆರು ಯಿಲದೆಡೆ

೪೨. ಕೆ . . ನಡವುದು. . . . .
೪೩. . ಯ . . . . . . ಡಸಲಮನ . . ವಡು
೪೪. . ವ . . ಯಾದಿಹರ . ೦ . ಣ . . . .
೪೫. ಆಚಂದ್ರಾರ್ಕ ತಾರಾಬರಂ ಸಲುವಂತಾಗಿ ಕೊಟ್ಟ ದಾ
೪೬. ನ ಮಂಗಳ ಮಹಾ ಶ್ರೀಶ್ರೀ। ಯೀ ಸಾಸನವ ಬ
೪೭. ರದಂ ರಾಮಯನ . . ಚಾಕರಿಯ ಮಾಯಂಣ
೪೮. ನವರ ಅಳಿಯ ಮಾಯಂಣ

ಹೊಯ್ಸಳ ದೊರೆ ಮೂರನೇ ನರಸಿಂಹನು ದೋರಸಮುದ್ರದ ನೆಲೆವೀಡಿನಿಂದ ಆಳ್ವಿಕೆ ನಡೆಸುವ ಕಾಲದಲ್ಲಿ ಆತನ ಮಾಂಡಲಿಕನಾದ 'ಕೆಳಲಾದಿರಾಯ' ಭಂಡಾರಿ ರಾಮಯ್ಯನ ಮಗ ರಾಮಣ್ಣಹೊನ್ನಪ್ಪಗವುಡು ಹನಿವೂರಿ (ಈಗಿನ ಹನಿಯೂರು)ನಲ್ಲಿ ಬುಧವಾರದ ಸಂತೆಯನ್ನು ಸ್ಥಾಪಿಸಲು ಊರ ಪಟ್ಟಣಸ್ವಾಮಿಯಾದ ರಾಘವಸೆಟ್ಟಿಯ ಮಗ ಮಸಣಿಸೆಟ್ಟಿ, ತಂಗಿ ಗಿರಿಜೆಯ ಮಗ ಚವಣಸೆಟ್ಟಿಯರಿಗೆ ಹನಿವೂರಿನ ಹಿರಿಯ ಕೆರೆಯ ಕೆಳಗೆ (ಸಲಗೆ-೬) ಬೆದಲು ಭೂಮಿಯನ್ನು ಸರ್ವಮಾನ್ಯವಾಗಿ ದಾನ ಕೊಟ್ಟ ವಿವರ ಶಾಸನದಲ್ಲಿದೆ. ಜೊತೆಗೆ ಇವರಿಗೆ ಹದಿನಾಲ್ಕು ಪಟ್ಟಣದಲ್ಲಿ ದಂಡ ಹಾಗೂ ತಪ್ಪುತವುಡಿ ತೆರಿಗೆಗಳಿಂದ ವಿನಾಯಿತಿ ನೀಡಿರುವುದನ್ನು ದಾಖಲಿಸಲಾಗಿದೆ. ಕೊನೆಯಲ್ಲಿ ಈ ಶಾಸನವನ್ನು ಭಂಡಾರಿ ರಾಮಯ್ಯನ ಮನೆಚಾಕರಿಯ ಮಾಯಣ್ಣನವರ ಅಳಿಯ ಮಾಯಣ್ಣನು ಬರೆದನೆಂಬ ಉಲ್ಲೇಖವಿದೆ.

ಈ ಶಾಸನದ ಆರಂಭದಲ್ಲಿ ಹೊಯ್ಸಳ ರಾಜರ ವಂಶಾವಳಿಯನ್ನು ನೀಡಿ, ಮೂರನೇ ನರಸಿಂಹನ ಬಿರುದಾವಳಿಗಳನ್ನು ವಿಸ್ತೃತವಾಗಿ ನೀಡಲಾಗಿದೆ. ನರಸಿಂಹನ ಮಾಂಡಲೀಕನಾದ ಭಂಡಾರಿ ರಾಮಯ್ಯನು 'ಅಹವ ಮಂಡಳಿಕರಗಂಡ, ಸ್ವಾಮಿವ್ರಿಹ (ವಿದ್ರೋಹರ)ಗಂಡ, ಜಗದೊಬ್ಬಗಂಡ, ಕೆಳಲಾದಿರಾಯ' ಎಂಬ ಬಿರುದುಗಳನ್ನು ಹೊಂದಿದ್ದನು ಎಂದು ತಿಳಿಯುತ್ತದೆ. ಭಂಡಾರಿ ರಾಮಯ್ಯನು ಈಗಿನ ರಾಮನಗರ, ಚನ್ನಪಟ್ಟಣ, ಮಂಡ್ಯ, ಕನಕಪುರ, ಮದ್ದೂರು, ಮಳವಳ್ಳಿ, ಟಿ.ನರಸೀಪುರ ಮೊದಲಾದ ತಾಲ್ಲೂಕುಗಳನ್ನು ಒಳಗೊಂಡಿದ್ದ ಕೆಳಲೆನಾಡಿನ ಅಧಿಪತಿಯಾಗಿದ್ದ ಎಂದು ತಿಳಿಯುತ್ತದೆ.

ಶಾಸನದಲ್ಲಿ ಕಾಲವನ್ನು ವಿರೋಧಿ ಸಂವತ್ಸರ, ಮಾಘ ಸು ೧೫, ಬುಧವಾರವೆಂದು ದಾಖಲಾಗಿದೆ. ಇದು ಕ್ರಿ.ಶ. ೧೨೯೦ನೇ ಜನವರಿ ೨೫ಕ್ಕೆ ಸರಿಹೊಂದುತ್ತದೆ. ಈ ಶಾಸನ ಲಿಪಿಗೆ ಸಂಬಂಧಿಸಿದಂತೆ ಹೇಳುವುದಾದರೆ ಹೊಯ್ಸಳರ ಸುಂದರ ಲಿಪಿಯನ್ನು ಶಿಲ್ಪಿಯು ಕಣಶಿಲೆಯ ಮೇಲೆ ಬಳಪದ ಕಲ್ಲಿನಲ್ಲಿ ಕೆತ್ತುವಂತೆ ಕಂಡರಿಸಿರುವುದು ವಿಶೇಷವಾಗಿದೆ. ಆದರೂ ಈತನಿಗೆ ಅಕ್ಷರ ಜ್ಞಾನವಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಶಾಸನದ ೯-೧೦ನೇ ಸಾಲಿನಲ್ಲಿ ಬರುವ ಹೊಯ್ಸಳರ ವಂಶಾವಳಿಯನ್ನು ತಿಳಿಸುವಲ್ಲಿ ಬಲ್ಲಾಳ ಶಬ್ದದಲ್ಲೂ ಉಲ್ಲೇಖ ಮೂರು ಬಾರಿ ಬರುವುದನ್ನು ಕಾಣಬಹುದು. ಜೊತೆಗೆ ಶಾಸನದಲ್ಲಿ ಬಹಳಷ್ಟು ಕಾಗುಣಿತ ದೋಷಗಳಿಂದ ಕೂಡಿರುವುದನ್ನು ಕಾಣಬಹುದು. ಶಾಸನದಲ್ಲಿ ಕೆಲವೆಡೆ ಪದದೋಷ, ಅಲ್ಪಪ್ರಾಣ, ಮಹಾಪ್ರಾಣ ಅಕ್ಷರಗಳ ಬಳಕೆಯಲ್ಲೂ ತಪ್ಪು ಮಾಡಿರುವುದನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ ಶಾಸನದಲ್ಲಿ ಬರುವ 'ಥಂಮ' (ತಮ್ಮ), 'ಷಾಸನ'(ಶಾಸನ), 'ಹೊಡವೆ'(ಒಡವೆ) 'ಸಾಸನ' (ಶಾಸನ) ಮೊದಲಾದ ಪದಗಳನ್ನು ಗಮನಿಸಬಹುದು.

೪. ಸಿಂಗರಾಜಪುರದ ಗೋಪಾಲಕೃಷ್ಣ ದೇವಾಲಯದ ಗೋಡೆಯಲ್ಲಿನ ಶಾಸನ

ಸಿಂಗರಾಜಪುರ ಗ್ರಾಮದ ಚೋಳರ ಕಾಲದ ಗೋಪಾಲ ಕೃಷ್ಣ ದೇವಾಲಯದ ನವರಂಗದ ಗೋಡೆಯ ಕಲ್ಲಿನಲ್ಲಿದ್ದ ಶಾಸನದ ತುಣುಕೊಂದನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ ಅಲ್ಲಿಂದ ತೆಗೆದು ದೇವಾಲಯದ ಆವರಣದಲ್ಲಿ ತಂದು ಇಟ್ಟಿರುತ್ತಾರೆ. ಬಹುಪಾಲು ತ್ರುಟಿತವಾಗಿರುವ ಈ ಶಾಸನವು ಸುಮಾರು ಎರಡುವರೆ ಅಡಿ ಉದ್ದ ಹಾಗೂ ಒಂದು ಅಡಿ ಅಗಲದ ಕಣಶಿಲೆಯ ಫಲಕದ ಮೇಲೆ ಕಂಡರಿಸಲಾಗಿದೆ. ಶಾಸನದಲ್ಲಿ ಒಟ್ಟು ೧೯ ಸಾಲುಗಳ ಪಾಠವಿದೆ. ಶಾಸನ ಲಿಪಿ ಹಾಗೂ ಭಾಷೆ ಕನ್ನಡದಲ್ಲಿದೆ. ಲಿಪಿಯ ದೃಷ್ಟಿಯಿಂದ ಈ ಶಾಸನವನ್ನು ಕ್ರಿ.ಶ. ೧೪ನೇ ಶತಮಾನದೆಂದು ಗುರುತಿಸಬಹುದು. ಈ ಶಾಸನ ಸಾಕಷ್ಟು ಸವೆದಿರುವುದರಿಂದ ಸಂಪೂರ್ಣ ಪಾಠವನ್ನು ಓದಲು ಸಾಧ್ಯವಾಗಲಿಲ್ಲ.

ಶಾಸನ ಪಾಠ

೧. . . . . . .
೨. . . . . . .
೩. ಮ . ದ . [ರೋ*]
೪. ಹಿಣಿ ನಕ್ಷತ್ರ
೫. . . . ಲಕ್ಕಿ ಶ
೬. ನಸಂದುದು .[ಸಿಂ*]
೭. ಗರಾಜಪುರದ .
೮. . . ಹೋದ . ದಿ
೯. ವೀರತನಂ ಮಗ .
೧೦. ಮೆಣಸಿಹಳಿಯ .
(ಮುಂದಿನ ಐದು ಸಾಲುಗಳು ತ್ರುಟಿತವಾಗಿವೆ)
೧೫. ಮುಂತಾದ ಭೂ

೧೬. . ಗೆ ಆ ಊರ
(ಮುಂದಿನ ಎರಡು ಸಾಲುಗಳು ತ್ರುಟಿತವಾಗಿವೆ)

ಈ ಶಾಸನದಲ್ಲಿ ದಾಖಲಾಗಿರುವ ಮಾಹಿತಿಯನ್ನು ಗಮನಿಸಿದಾಗ ಸಿಂಗರಾಜಪುರದ ಗೋಪಾಲಕೃಷ್ಣ ದೇವಾಲಯಕ್ಕೆ ರೋಹಿಣಿ ನಕ್ಷತ್ರದ ಕಾಲದಲ್ಲಿ ಮಣಸಿಹಳ್ಳಿ (ಈಗಿನ ಮಣಸಿಗನಹಳ್ಳಿ) ಗ್ರಾಮದಲ್ಲಿ ಭೂದಾನ ಮಾಡಿ ಶಾಸನ ಹಾಕಿಸಿರಬಹುದು. ಈ ಶಾಸನದ ಆಧಾರದಿಂದ ಈ ಗ್ರಾಮಕ್ಕೆ ಕ್ರಿ.ಶ. ೧೪ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ 'ಸಿಂಗರಾಜಪುರ' ಎಂಬ ಹೆಸರು ಬಂದಿತ್ತು ಎಂದು ತಿಳಿಯುತ್ತದೆ. ಬಹುಶಃ ನರಸಿಂಹನೆಂಬ ಹೊಯ್ಸಳ ಸಾಮ್ರಾಜ್ಯದ ರಾಜನೊಬ್ಬನಿಂದ ಈ ಗ್ರಾಮ ಸ್ಥಾಪನೆಗೊಂಡಿದೆ ಎಂದು ಊಹಿಸಬಹುದು. ಈ ಶಾಸನ ಕಲ್ಲಿನ ಜೊತೆಗಿದ್ದ ಮತ್ತೊಂದು ಶಾಸನ ತುಣುಕನ್ನು ದೇವಾಲಯದ ಗೋಡೆಗೆ ಸೇರಿಸಿ ಮುಚ್ಚಿದ್ದಾರೆ ಎಂದು ತಿಳಿದುಬರುತ್ತದೆ.

೫. ನುಣ್ಣೂರು ಗ್ರಾಮದಲ್ಲಿ ದೊರೆತ ಹೊಯ್ಸಳ ನರಸಿಂಹನ ಕಾಲದ ಅಪ್ರಕಟಿತ ಶಾಸನ

ಚನ್ನಪಟ್ಟಣ ತಾಲ್ಲೂಕಿನ ನುಣ್ಣೂರು ಗ್ರಾಮದ ಹೊರವಲಯದಲ್ಲಿನ ಹೊಲವೊಂದರಲ್ಲಿ ಶಿಲಾಶಾಸನವೊಂದು ಪತ್ತೆಯಾಯಿತು. ಅರ್ಧಕ್ಕಿಂತ ಹೆಚ್ಚು ಭಾಗ ಭೂಮಿಯಲ್ಲಿ ಹೂತುಹೋಗಿದ್ದ ಈ ಶಾಸನವನ್ನು ಅಗೆದು ತೆಗೆದು ಪರಿಶೀಲಿಸಿದಾಗ ಅಪ್ರಕಟಿತ ಶಾಸನವೆಂದು ತಿಳಿಯಿತು. ಐದು ಅಡಿ ಉದ್ದ, ಎರಡುವರೆ ಅಡಿ ಅಗಲ ಹಾಗೂ ಅರ್ಧ ಅಡಿ ದಪ್ಪವಾದ ಕಣಶಿಲೆಯ ಫಲಕದ ಮೇಲೆ ಈ ಶಾಸನವನ್ನು ಕಂಡರಿಸಲಾಗಿದೆ. ಈ ಶಾಸನದ ಭಾಷೆ ಹಾಗೂ ಲಿಪಿಯು ಕನ್ನಡವಾಗಿದೆ. ಈ ಲಿಪಿಯು ಹೊಯ್ಸಳರ ಕಾಲದ್ದಾಗಿದ್ದು, ಸುಂದರವಾಗಿದೆ. ಶಾಸನದಲ್ಲಿ ಒಟ್ಟು ೨೧ ಸಾಲುಗಳ ಪಾಠವಿದೆ. ಕಣಶಿಲೆಯ ಗಡಸುಕಲ್ಲಿನ ಮೇಲೆ ಗುಂಡಾಗಿ, ಆಕರ್ಷಕವಾಗಿ ಶಾಸನವನ್ನು ಕೊರೆದಿರುವುದು ವಿಶೇಷ.

ಶಾಸನ ಪಾಠದ ಮೇಲ್ಭಾಗದಲ್ಲಿ ಸುಮಾರು ಒಂದು ಅಡಿ ಎತ್ತರವಾದ ಉಬ್ಬುಶಿಲ್ಪವನ್ನು ಕಡೆಯಲಾಗಿದೆ. ಶಾಸನ ಫಲಕದ ತೀರಾ ಮೇಲ್ಭಾಗದಲ್ಲಿ ಸೂರ್ಯಚಂದ್ರರ ಶಿಲ್ಪಗಳ ಕೆಳಭಾಗದಲ್ಲಿ ಇಬ್ಬರು ವ್ಯಕ್ತಿಗಳು ಪ್ರತ್ಯೇಕವಾದ ಪೀಠಗಳ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾರೆ. ಅವರ ಮಧ್ಯದಲ್ಲಿರುವ ಗಂಡಸಿನ ಉಡುಗೆ ಧರಿಸಿರುವ ಗಂಡಭೇರುಂಡದ ತಲೆಯುಳ್ಳ ವ್ಯಕ್ತಿಯೊಬ್ಬ, ತನ್ನ ಎರಡೂ ಕೈಗಳನ್ನು ಎರಡೂ ಬದಿಗೆ ಚಾಚಿ ಇಕ್ಕೆಲಗಳಲ್ಲಿ ಕುಳಿತಿರುವ ವ್ಯಕ್ತಿಗಳ ತಲೆಯ ಮೇಲೆ ಇರಿಸಿ ಆಶೀರ್ವದಿಸುತ್ತಿದ್ದಾನೆ. ಬಲಗಡೆ ಕುಳಿತ ವ್ಯಕ್ತಿಯ ಮೇಲೆ ಹುಲಿಯೊಂದು ತನ್ನ ಎರಡುಮುಂಗಾಲನ್ನು ಮೇಲೆತ್ತಿ ಆಕ್ರಮಣ ಮಾಡುವ ಭಂಗಿಯಲ್ಲಿದೆ. ಹುಲಿಯ ಪಕ್ಕದಲ್ಲಿ ಪೂರ್ಣಕುಂಭ ಹಾಗೂ ಅಂಕುಶದ ಶಿಲ್ಪವಿದೆ. ಈ ರೀತಿಯ ಶಾಸನಶಿಲ್ಪಗಳು ಚನ್ನಪಟ್ಟಣ ತಾಲ್ಲೂಕಿನ ಹೊಯ್ಸಳರ ಕಾಲದ ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಈ ಶಿಲ್ಪವನ್ನು ಗಮನಿಸಿದರೆ ವೀರತನಕ್ಕೆ ನೀಡಿದ ದಾನ ಎನ್ನುವುದನ್ನು ಸೂಚಿಸುತ್ತದೆ. ಒಟ್ಟಾರೆ ಶಾಸನದ ಶಿಲ್ಪ ಅಭೂತ ಪೂರ್ವವಾದದ್ದು ಎಂದು ಹೇಳಬಹುದು. ಶಿಲ್ಪಿ ಶಿಲ್ಪಿಯೊಬ್ಬನ ಕೈಚಳಕದ ಫಲಿತವಾದ ಈ ಶಿಲ್ಪವು ಆಕರ್ಷಕವಾಗಿಯೂ ಇದೆ.

ಶಾಸನ ಪಾಠ

೧. ಶ್ರೀಸ್ವಸ್ತಿ ಸಮಸ್ತ ಭುವನಾಶ್ರಯ
೨. ಶ್ರೀಪ್ರಿಥ್ವೀವಲ್ಲಭ ಮಲೆರಾಜರಾಜ
೩. ಮಲಪರೊಳ್‌ಗಂಡ ಗಂಡ
೪. ಭೇರುಂಡ ಕದನಪ್ರಚಂಡ ಶನಿ
೫. ವಾರಸಿದ್ಧಿ ಗಿರಿದುರ್ಗಮಲ್ಲ ಚಲದಂಕ
೬ ರಾಮ ಮಗರರಾಯಸ್ಥಾಪನಾಚಾರಿಯ
೭ ಪಾಂಡ್ಯರಾಯಪ್ರತಿಷ್ಟಾಚಾರ್ಯ ನಿಶ್ಶಂ
೮. ಕ ಪ್ರತಾಪ ಹೊಯಿಸಳ ಭುಜಬಳ ವೀರ
೯. ನಾರಸಿಂಹದೇವರಸರು ಕವಿಕುಮುದ
೧೦. ಚಂದ್ರಲೋಭಿರಾಯ ಗಜಾಂಕುಶ ಶ್ರೀ ವಾರಜನ
೧೧. ಗಂಡ . ತ್ರಿಭುವನ ವಂದಿಜನ ಚಕ್ರವ
೧೨. ರ್ತಿ ಕೀರ್ತಿದೇವರಸರಿಗೆ ನುಣ್ಣನೂರ ಚತುಃ
೧೩. ಸೀಮೆಯ ಭೂಮಿಯನು ಅಚ್ಚಾಗತಿ ಕಿಱು
೧೪. ಕುಳ ಕಾಣಿಕೆ ಹಣವನು ವ೧ದು ಅಮು .
೧೫. . . . ಪಂಚಕಾರುಕ . ಲೆಡಿಯೊಳಗಾದ ನಮ
೧೬. . ಕೆಱೆಯನೂ ಬಿಟ್ಟು ಧಾರೆಯನೆಱದು ಸರ್ಬ್ಬ
೧೭. ನಮಸ್ಯವಾಗಿ ಕೀರ್ತಿದೇವರಸರಿಗೆ ಕೊಟ್ಟೆವು
೧೮. ಯೀ ಮರಿಂಯಾದೆಂಯುಲು ಸೂರಿ[ಂಯು*] ಚಂದ್ರನುಳೊನಕ
೧೯. ವು ನಡವುದು ಇವರ ಒಡವೆ . ಂಡಿನೆ ಸಿಮೋಲ್ಲ[ಂ*]ಘ
೨೦. . ಳ ದೇವನ ಲಿಂಗ ಅಳಿಪಿದವನು ತಾಯ . . .
೨೧. . ಕತ್ತೆಗೇದ ಕವಿಲೆಯ ಕೊಂದ ಪಾಪ[ದಲಿ ಹೋಹರು*]

ಶಾಸನದ ಆರಂಭದಲ್ಲಿ ಸ್ವಸ್ತಿ ಸಮಸ್ತಭುವನಾಶ್ರಯ, ಪೃಥ್ವೀವಲ್ಲಭ, ಮಲೆರಾಜರಾಜ, ಮಲಪರೊಳ್ ಗಂಡ, ಗಂಡಭೇರುಂಡ, ಕದನಪ್ರಚಂಡ, ಶನವಾರಸಿದ್ಧಿ, ಗಿರಿದುರ್ಗ ಮಲ್ಲ, ಛಲದಂಕರಾಮ, ಮಗರರಾಯ ಸ್ಥಾಪನಾಚಾರ್ಯ, ಪಾಂಡ್ಯರಾಯ ಪ್ರತಿಷ್ಠಾಪನಾಚಾರ್ಯ ಮುಂತಾದ

ವೀರನರಸಿಂಹನ ಬಿರುದಾವಳಿಗಳಿವೆ. ಶಾಸನದ ಮುಂದಿನ ಭಾಗದಲ್ಲಿ ಕವಿಕುಮುದಚಂದ್ರ, ಲೋಭಿರಾಯ, ಗಜಾಂಕುಶ, ಶ್ರೀವಾರಜನಗಂಡ, ತ್ರಿಭುವನ ವಂದಿಜನ ಚಕ್ರವರ್ತಿ ಎಂದು ಕೀರ್ತಿದೇವರಸ ಎಂಬುವರಿಗೆ ವೀರನರಸಿಂಹನು ನುಣ್ಣೂರು ಗ್ರಾಮದ ಚತುಃಸ್ಸೀಮೆಯ ಭೂಮಿಯನ್ನು ಧಾರೆಯೆರೆದು ಯಾವುದೇ ರೀತಿಯ ತೆರಿಗೆಗಳಿಲ್ಲದಂತೆ ದಾನವಾಗಿ ಕೊಟ್ಟ ವಿವರಗಳಿವೆ. ಶಾಸನದ ಅಂತ್ಯದಲ್ಲಿ ಶಾಪಾಶಯಗಳಿವೆ.

ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲದಿದ್ದರೂ, ಈ ಶಾಸನದಲ್ಲಿ ಉಕ್ತನಾಗಿರುವ ಕೀರ್ತಿದೇವರಸನ ಇತರ ಶಾಸನಗಳು (ಇತಿಹಾಸ ದರ್ಶನ, ಸಂ. ೨೬, ಪು. ೧೪೯) ಹಾಗೂ ಶಾಸನದಲ್ಲಿ ಉಲ್ಲೇಖಿತನಾಗಿರುವ ವೀರನರಸಿಂಹನ ಬಿರುದುಗಳ ಆಧಾರದಿಂದ ಹೊಯ್ಸಳ ಚಕ್ರವರ್ತಿ ಸೋಮೇಶ್ವರನ ಪುತ್ರನಾದ ಮೂರನೇ ವೀರ ನರಸಿಂಹ ನೆಂದು ಗುರುತಿಸಬಹುದು. ಕ್ರಿ.ಶ. ೧೨೫೩ರಿಂದ ೧೨೯೨ರ ವರೆಗೆ ಆಳ್ವಿಕೆ ನಡೆಸಿದ ಮೂರನೇ ವೀರ ನರಸಿಂಹನ ಕಾಲಕ್ಕೆ ಈ ಶಾಸನ ಸೇರುತ್ತದೆ. ಮೂರನೇ ನರಸಿಂಹನ ಕಾಲದಲ್ಲಿ ಕೀರ್ತಿದೇವರಸನು ಈ ಪ್ರದೇಶವನ್ನು ಆಳುತ್ತಿದ್ದ ಮಾಂಡಲಿಕನೆಂಬುದು ಸ್ಪಷ್ಟವಾಗುತ್ತದೆ. ಶಾಸನದಲ್ಲಿ ಅಚ್ಚುಗರ್ತಿ, ಕಿರುಕುಳ, ಕಾಣಿಕೆ, ಪಂಚಕಾರುಕ ಮೊದಲಾದ ತೆರಿಗೆಗಳ ಪ್ರಸ್ತಾಪವಿದೆ. ಈ ಎಲ್ಲಾ ತೆರಿಗೆಗಳ ವಿನಾಯಿತಿ ಯನ್ನು ನೀಡಿ, ಈ ಗ್ರಾಮದ ಕೆರೆಯನ್ನೂ ವೀರನರಸಿಂಹನು ಕೀರ್ತಿದೇವರಸನಿಗೆ ಸರ್ವನಮಸ್ಯವಾಗಿ ಧಾರೆಯೆರೆದು ಕೊಟ್ಟ ವಿವರ ಶಾಸನದಲ್ಲಿದೆ.

೬. ಸರಗೂರಿನ ಗಂಗರ ಕಾಲದ ವೀರಗಲ್ಲು

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಸರಗೂರು ಗ್ರಾಮದ ಹೊರವಲಯದಲ್ಲಿರುವ ಗದ್ದೆ ಬಯಲಿನಲ್ಲಿ ಗಂಗರ ಕಾಲದ ವೀರಗಲ್ಲೊಂದು ಪತ್ತೆಯಾಯಿತು. ಸುಮಾರು ಆರು ಅಡಿ ಅಗಲ ಹಾಗೂ ನಾಲ್ಕುವರೆ ಅಡಿ ಉದ್ದದ ಕಣಶಿಲೆಯ ಮೇಲೆ ವೀರಗಲ್ಲನ್ನು ಕಡೆಯಲಾಗಿದ್ದು, ವೀರಗಲ್ಲು ಶಿಲ್ಪದ ಮೇಲ್ಭಾಗದಲ್ಲಿ ಮೂರು ಸಾಲುಗಳ ಬರಹವಿದೆ. ಲಿಪಿಯ ದೃಷ್ಟಿಯಿಂದ ಗಂಗರ ಕಾಲ ಅಂದರೆ ಕ್ರಿ.ಶ. ೯ನೇ ಶತಮಾನಕ್ಕೆ ಸೇರಿದ್ದಾಗಿದೆ ಎಂದು ಗುರುತಿಸಬಹುದು. ಶಾಸನ ಪಾಠವು ಸಾಕಷ್ಟು ತ್ರುಟಿತವಾಗಿದೆ. ಓದಿರುವ ಪಾಠದ ಆಧಾರದಿಂದ 'ಆಜ್ಕೊಡೆಯ ಎಂಬ ವೀರನು ಯುದ್ಧವೊಂದರಲ್ಲಿ ಮಡಿದಾಗ ಈ ವೀರಗಲ್ಲನ್ನು ಪ್ರತಿಷ್ಠಾಪನೆ' ಮಾಡಿರಬಹುದು ಎಂದು ಊಹಿಸಬಹುದು.

ಶಾಸನ ಪಾಠ

೧. ಸ್ವಸ್ತಿ ಶ್ರೀ ಆಜ್ಕೊಡೆಯ . . . . .

೨. ದಯ ಗಾವುಂಡ . ರಾ . ಮ . . .

೩. ಯುದ್ಧದೊಳೆ . . . . . .

ಈ ವೀರಗಲ್ಲಿನ ಶಿಲ್ಪವನ್ನು ನೋಡುವುದಾದರೆ, ವೀರನು ಕುದುರೆಯ ಮೇಲೆ ಕುಳಿತು ಬಲಗೈಯಲ್ಲಿ ಭರ್ಜಿ ಯನ್ನು ಹಿಡಿದು ಎಸೆಯುತ್ತಿದ್ದಾನೆ. ಎಡಗೈಯಲ್ಲಿ ಚಿಕ್ಕದಾದ ಗುರಾಣಿಯನ್ನು ಹಿಡಿದಿದ್ದಾನೆ. ವೀರನು ಹಿಡಿದಿರುವ ಭರ್ಜಿಯ ಮುಂಭಾಗ ಕಠಾರಿಯಂತಿದೆ. ಕುದುರೆಯು ಮುಂದಿನ ಕಾಲು ಗಳನ್ನು ಮೇಲಕ್ಕೆ ಎತ್ತಿದ್ದು, ಮುನ್ನುಗ್ಗುತ್ತಿರು ವಂತಿದೆ. ವೀರನ ಹಿಂಭಾಗದಲ್ಲಿ ವ್ಯಕ್ತಿಯೊಬ್ಬ ಎಡಗೈಯಲ್ಲಿ ಶ್ವೇತಛತ್ರಿಯನ್ನು ಹಿಡಿದಿದ್ದು, ಬಲಗೈಯಲ್ಲಿ ಕತ್ತಿಯನ್ನು ಹಿಡಿದು ನಿಂತಿದ್ದಾನೆ. ಆತನ ಹಿಂಭಾಗದಲ್ಲಿ ಮತ್ತೊಬ್ಬ ವ್ಯಕ್ತಿಯು ತಲೆಯ ಮೇಲೆ ಕುಂಭವನ್ನು ಹೊತ್ತುಕೊಂಡು, ಎಡಗೈಯಲ್ಲಿ ಬುತ್ತಿಯ ಗಂಟೊಂದನ್ನು ಹಿಡಿದಿದ್ದಾನೆ. ವೀರನಿಗೆ ಶ್ವೇತಛತ್ರಿಯನ್ನು ಹಿಡಿದಿರುವುದರಿಂದ ಈತ ದೊಡ್ಡದಾದ ಹುದ್ದೆಯನ್ನು ಹೊಂದಿದ ವ್ಯಕ್ತಿಯಾಗಿದ್ದ ಎಂಬುದನ್ನು ಗುರುತಿಸಬಹುದು. ಒಟ್ಟಾರೆಯಾಗಿ ಈ ವೀರಗಲ್ಲು ಶಿಲ್ಪವನ್ನು ಶಿಲ್ಪಿಯು ಸುಂದರ ವಾಗಿ ಕಡೆದಿದ್ದಾನೆ ಎನ್ನಬಹುದು.

೭. ನೆರಳೂರು ಗ್ರಾಮದ ಕೀರ್ತಿದೇವರಸನ ಶಾಸನ

ನೆರಳೂರು ಗ್ರಾಮದ ಬೋರೇದೇವರ ದೇವಸ್ಥಾನದ ನಿವೇಶನ ಎಂದು ಹೇಳಲಾಗುವ ಸ್ಥಳದಲ್ಲಿರುವ ಹೊಯ್ಸಳರ ಕಾಲದ ಶಾಸನವನ್ನು ಡಾ. ಎಚ್.ಎಸ್. ಗೋಪಾಲರಾವ್ ಅವರು ಮೊದಲ ಬಾರಿಗೆ ಗುರುತಿಸಿ ಪ್ರಕಟಿಸಿದ್ದಾರೆ. (ಇತಿಹಾಸ ದರ್ಶನ, ಸಂಪುಟ ೨೬, ಪು.೧೪೯) ಆದರೆ ೧೮ ಸಾಲು ಗಳನ್ನು ಹೊಂದಿರುವ ಈ ಶಾಸನಪಾಠವನ್ನು ಕೇವಲ ೧೨ ಸಾಲುಗಳನ್ನು ಓದಿ, ಮುಂದಿನ ಆರು ಸಾಲುಗಳು ಅಸ್ಪಷ್ಟ ಎಂದು ಹೇಳಿರುತ್ತಾರೆ ಇತ್ತೀಚೆಗೆ ಕ್ಷೇತ್ರಕಾರ್ಯಕ್ಕೆ ಹೋಗಿದ್ದ ಸಂದರ್ಭದಲ್ಲಿ ಈ ಶಾಸನ ಕಲ್ಲನ್ನು ಸ್ವಚ್ಛಗೊಳಿಸಿ ದಾಗ ೧೮ ಸಾಲುಗಳಲ್ಲಿ ಬಹುಪಾಲು ಪಾಠ ಸ್ಪಷ್ಟವಾಗಿ ಗೋಚರ ವಾಗುವುದನ್ನು ಗಮನಿಸಿದೆ. ನಂತರ ಈ ಶಾಸನದ ಪಡಿಯಚ್ಚನ್ನು ತೆಗೆದು ಪರಿಷ್ಕೃತ ಪಾಠವನ್ನು ನೀಡಿರುವುದಲ್ಲದೆ ವಿಶ್ಲೇಷಿಸಿ ದ್ದೇನೆ.

ಪ್ರಸ್ತುತದ ಪರಿಷ್ಕೃತ ಶಾಸನಪಾಠ ಈ ಕೆಳಗಿನಂತಿದೆ

೧. ಸ್ವಸ್ತಿಸಮಸ್ತಭುವನಾಶ್ರಯ ಶ್ರೀಪೃಥ್ವೀವಲ್ಲಭ ಮ

೨. ಹಾರಾಜಾಧಿರಾಜ ಪರಮೇಸ್ವರ ಯಾದವ ಕುಲಾಂಬರ

೩. ದ್ಯುಮಣಿ ಮಲೆರಾಜರಾಜ ಮಲೆಪೊರುಳುಗಂಡ ಗಂ

೪. ಡರಗಂಡ ಕದನಪ್ರಚಂಡ ಸನಿವಾರಸಿದ್ಧಿ ಗಿರಿದುರ್ಗ್ಗಮ

೫. ಲ್ಲ ಚಲದಂಕರಾಮ ಚೋಳರಾಯ ಸ್ಥಾಪನಾಚಾರಿಯ ಪಾಂ

೬. ಡ್ಯರಾಯ ಪ್ರತಿಷ್ಠಾಚಾರಿಯ ನಿಸ್ಸಂಕಪ್ರತಾಪಚ
೭. ಕ್ರವರ್ತಿ ಹೊಯಿಸಳ ಭುಜಬಳ ವೀರನಾರಸಿಂಹ ದೇವ
೮. ರಸರು ಸ್ವಸ್ತಿಶ್ರೀಮತು ಕವಿಕುಮು[ದಚಂ*]ದ್ರ ಲೋಭಿರಾಯ
೯. ಗಜಾಂಕುಸ ಶ್ರೀ ವಾರಜಗ . . ತ್ರಿಭುವನವಂದಿಜನ
೧೦. ಚಕ್ರವರ್ತಿ ಕೀರ್ತಿದೇವರಸರಿಗೆ ಕೆಳಲೆನಾಡನು ಕೊಟ್ಟ
೧೧. ರು ನೆಱಿಲೂರ ಚತುಸೀಮೆಯ ಭೂಮಿಯನೂ ಬಿಟ್ಟ
೧೨. ಸಂ ಕಿಱುಕುಳ ಕಾಣಿಕೆ ಮಳಬೀಯ ಖಾಣ . . .
೧೩. ಮಗ್ಗದೆಱೆ ಮನೆವಣ ಪಂಚಕಾ[ರು*]ಕ ಸಮಸ್ತ ತೆಱಿಯ
೧೪. ನೂ ಆ ಕೀರ್ತಿದೇವರಸರಿಗೆ ಬಿಟ್ಟು ಧಾರೆಯನೂ ಎಱಿದು
೧೫. ಸಬ್ಬನಮಸ್ಯವಾಗಿ ಕೊಟ್ಟೆವು ಯಿ ಧರ್ಮದಲಿ ಚಂದ್ರನುಳೊ
೧೬. ಕ ನಡವುದು ಯಿ ಧರ್ಮಕೆ ಅಳುಪಿದವ . . .
೧೭. . . ಕತ್ತೆಗಂಡ ಗಂಗೆಯ ತಡಿಯಲಿ ಕವಿಲೆ
೧೮. ಕೊಂದ ಪಾಪದಲು ಹೋಹರು

ಈ ಶಾಸನದಲ್ಲಿ ಹೊಯ್ಸಳ ದೊರೆ ಮೂರನೇ ನರಸಿಂಹನು 'ಕವಿಕುಮುದಚಂದ್ರ ಲೋಭಿರಾಯ ಗಜಾಂಕುಸ ಶ್ರೀ ವಾರಜಗ . . ತ್ರಿಭುವನವಂದಿಜನ ಚಕ್ರವರ್ತಿ' ಎಂಬ ಬಿರುದಾಂಕಿತನಾದ ಕೀರ್ತಿದೇವರಸರಿಗೆ ಕೆಳಲೆನಾಡನು ಕೊಟ್ಟ ವಿವರವಿದೆ. ಜೊತೆಗೆ ಕೀರ್ತಿದೇವರಸರಿಗೆ ನೆರಲೂರ (ಈಗಿನ ನೇರಳೂರು) ಚತುಸ್ಸೀಮೆಯ ಭೂಮಿಯನ್ನು ದಾನ ಕೊಟ್ಟ ಸಂಬಂಧ ಕಿರುಕುಳ, ಕಾಣಿಕೆ, ಮಳಬೀಯ, ಖಾಣ, ಮಗ್ಗದೆರೆ, ಮನೆವಣ, ಪಂಚಕಾರುಕ ಮೊದಲಾದ ತೆರಿಗೆಗಳನ್ನೂ ಬಿಟ್ಟುಕೊಟ್ಟ ವಿವರವಿದೆ. ಶಾಸನದ ಕೊನೆಯಲ್ಲಿ ಶಾಪಾಶಯ ವಾಕ್ಯವಿರುವುದನ್ನು ಕಾಣಬಹುದು.

ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲದಿದ್ದರೂ, ಹೊಯ್ಸಳ ದೊರೆ ಮೂರನೇ ನರಸಿಂಹನ ಬಿರುದಾವಳಿಗಳಿಂದ ಹಾಗೂ ಕೀರ್ತಿದೇವನ ಇತರೆ ಶಾಸನಗಳ ಆಧಾರದಿಂದ ಮೂರನೇ ನರಸಿಂಹನ ಆಳ್ವಿಕೆಯ ಕಾಲವಾದ ಕ್ರಿ.ಶ. ೧೨೫೪ರಿಂದ ೧೨೯೨ರವರೆಗಿನ ಕಾಲಘಟ್ಟದಲ್ಲಿ ರಚಿತವಾಗಿದೆ ಎಂದು ನಿರ್ಧರಿಸಬಹುದು. ಕೀರ್ತಿದೇವ ಕೆಳಲೆನಾಡನ್ನು ಆಳ್ವಿಕೆ ನಡೆಸುತ್ತಿದ್ದ ಮಾಂಡಲಿಕನೆಂದು ತಿಳಿಯುತ್ತದೆ. ಈತನ ಇತರೆ ಶಾಸನಗಳು ಚನ್ನಪಟ್ಟಣ ತಾಲ್ಲೂಕಿನ ನುಣ್ಣೂರು (ಅಪ್ರಕಟಿತ ಶಾಸನ ಇದೇ ಕೃತಿಯಲ್ಲಿದೆ) ಹಾಗೂ ಹಾರೋಕೊಪ್ಪ ಗ್ರಾಮಗಳಲ್ಲೂ ದೊರೆತಿರುವುದನ್ನು ಕಾಣಬಹುದು.


ಸರಗೂರಿನ ಗಂಗರ ಕಾಲದ ವೀರಗಲ್ಲು

ನೇರಳೂರಿನ ಈ ಶಾಸನವನ್ನು ಸುಮಾರು ಆರುವರೆ ಅಡಿ ಉದ್ದ ಹಾಗೂ ಎರಡುವರೆ ಅಡಿ ಅಗಲವಿರುವ ಕಣಶಿಲೆಯ ಮೇಲೆ ಕೊರೆಯಲಾಗಿದ್ದು, ಶಾಸನಪಾಠದ ಮೇಲ್ಭಾಗದಲ್ಲಿ ಸುಮಾರು ಒಂದು ಅಡಿ ಎತ್ತರದಲ್ಲಿ ಉಬ್ಬುಶಿಲ್ಪದ ಪಟ್ಟಿಕೆಯಿದೆ. ಈ ಪಟ್ಟಿಗೆಯ ಮಧ್ಯಭಾಗದಲ್ಲಿ ಗಂಡುಡುಗೆಯ ಗಂಡಭೇರುಂಡದ ಚಿತ್ರಣವಿದ್ದು, ಇದರ ಇಕ್ಕೆಲಗಳಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಒಬ್ಬ ಸ್ತ್ರೀ ಮತ್ತು ಒಬ್ಬ ಪುರುಷ ಕುಳಿತಿದ್ದು, ಇವರ ತಲೆಯ ಮೇಲೆ ಗಂಡಭೇರುಂಡದ ಆಶೀರ್ವಾದ ನೀಡುತ್ತಿರುವ ಕೈಗಳಿವೆ. ಬಲಬದಿಗೆ ಕುಳಿತ ಪುರುಷನ ಪಕ್ಕದಲ್ಲಿ ಮುಂದಿನ ಎಡಗಾಲನ್ನು ಮೇಲಕ್ಕೆತ್ತಿ ಆಕ್ರಮಣ ಮಾಡುವ ಭಂಗಿಯಲ್ಲಿರುವ ಹುಲಿಯ ಚಿತ್ರಣವಿದ್ದರೆ, ಎಡಬದಿಯಲ್ಲಿ ಕುಳಿತ ಸ್ತ್ರೀಯ ಪಕ್ಕದಲ್ಲಿ ಪೂರ್ಣಕುಂಭ ಮತ್ತು ಕಠಾರಿಯ ಚಿತ್ರಣವಿದೆ. ಈ ಶಿಲ್ಪಗಳ ಮೇಲ್ಭಾಗದಲ್ಲಿ ಸೂರ್ಯಚಂದ್ರರನ್ನು ಚಿತ್ರಿಸಿರುವುದನ್ನು ಕಾಣಬಹುದು. ಈ ಶಿಲ್ಪಪಟ್ಟಿಗೆಯ ಕೆಳಭಾಗದಲ್ಲಿ ೧೮ ಸಾಲುಗಳ ಶಾಸನಪಾಠವನ್ನು ಕೊರೆಯಲಾಗಿದೆ. ಒಟ್ಟಾರೆಯಾಗಿ ಈ ಶಾಸನದ ಶಿಲ್ಪಚಿತ್ರಣದಿಂದ ವೀರತನಕ್ಕೆ ದಾನ ನೀಡಿರಬಹುದೆಂದು ಗುರುತಿಸಬಹುದು.

[ಈ ಶಾಸನಗಳನ್ನು ಓದಲು ನೆರವಾದ ಪ್ರೀತಿಯ ಗುರುಗಳಾದ ಪ್ರೊ. ಎಂ.ಜಿ. ಮಂಜುನಾಥ್, ಸೀತಾರಾಮ ಜಾಗೀರ್‌ದಾರ್ ಅವರಿಗೂ ಹಾಗೂ ಕ್ಷೇತ್ರಕಾರ್ಯದ ಸಮಯದಲ್ಲಿ ಸಹಾಯ ಮಾಡಿದ ಸ್ನೇಹಿತರಾದ ಕೆ.ವಿ. ಮುರಳಿ ಹಾಗೂ ಬಿ.ವಿ. ಸತೀಶ್‌ಕುಮಾರ, ಸಹೋದರನಾದ ರಾಮಸ್ವಾಮಿ ಅವರಿಗೂ ನನ್ನ ಕೃತಜ್ಞತೆಗಳು]

ಕುನ್ನಹಳ್ಳಿಯ ಸ್ಮಾರಕ ಶಾಸನ ಹಾಗೂ ಕುಂದಗ್ರಾಮದ ಅಪ್ರಕಟಿತ ನಿಶಿಧಿ ಶಾಸನ

ಮೇಕನಗದ್ದೆ ಲಕ್ಷ್ಮಣಗೌಡ*

ಕುನ್ನಹಳ್ಳಿಯಲ್ಲಿ ದೊರೆತ ಹೊಯ್ಸಳರ ಕಾಲದ ಸ್ಮಾರಕ ಶಾಸನ

ಮೂಡಿಗೆರೆ ತಾಲೂಕು ಚಿಕ್ಕಮಗಳೂರು ಜಿಲ್ಲಾಕೇಂದ್ರದಿಂದ ದಕ್ಷಿಣಕ್ಕೆ ೩೦ ಕಿಲೋ ಮೀಟರ್‌ಗಳಷ್ಟು ದೂರದಲ್ಲಿದೆ. ಪ್ರಸ್ತುತ ಉಲ್ಲೇಖಿಸುವ ಶಾಸನ ಲಭ್ಯವಿರುವ ಕುನ್ನಹಳ್ಳಿ ಎಂಬ ಗ್ರಾಮವು ತಾಲೂಕು ಕೇಂದ್ರದಿಂದ ಪೂರ್ವಕ್ಕೆ ನಾಲ್ಕು ಕಿಲೋ ಮೀಟರುಗಳಷ್ಟು ದೂರದಲ್ಲಿದೆ. ಕುನ್ನಹಳ್ಳಿ ಗ್ರಾಮದ ಐತಿಹಾಸಿಕ ಅಂಶಗಳೇನೂ ಲಭ್ಯವಿಲ್ಲವಾದರೂ ಸುತ್ತಮುತ್ತಲಲ್ಲಿ ಹಲವಾರು ಐತಿಹಾಸಿಕ ಮಹತ್ವ ತಿಳಿಸುವ ಅಂಶಗಳಿವೆ.

ಸ್ಥಳನಾಮದ ಅಧ್ಯಯನ ಕೈಗೊಂಡಲ್ಲಿ ಇದೇ ಗ್ರಾಮದಲ್ಲಿ, 'ಸುಂಕಸಾಲೆ' ಈ ಗ್ರಾಮದ ಪೂರ್ವಕ್ಕೆ ದುಂಡುಗ, ಉತ್ತರಕ್ಕೆ ಹೊಯ್ಸಳಲು ಮುದ್ರೆಮನೆ, ಮುತ್ತಿಗೆ ಪುರಗಳಿವೆ. ಮೂಡಿಗೆರೆಯಿಂದ ಕುನ್ನಹಳ್ಳಿಗೆ ಹೋಗುವ ದಾರಿಯಲ್ಲಿರುವ ಸುಂಡೇಕೆರಿ ಹಳ್ಳದ ಬದಿಯಲ್ಲಿ ನಿಲ್ಲಿಸಲಾಗಿರುವ [ತೋಟಗಾರಿಕೆ ಫಾರಂ ಒಳಗೆ] ನಿಲಿಸುಗಲ್ಲುಗಳು ವಿಷ್ಣುವರ್ಧನನ ಸಮಾಧಿ ಎನ್ನಲಾಗುತ್ತಿದೆ. ಹೊಯ್ಸಳರ ಮೂಲಸ್ಥಾನ ಅಂಗಡಿಗೂ ಇಲ್ಲಿಂದ ಏಳೆಂಟು ಕಿಲೋ ಮೀಟರಷ್ಟು ದೂರ.

ಪ್ರಸ್ತುತ ಪತ್ಯಲಭ್ಯವಾಗಿರುವ ಶಾಸನವು ಕುನ್ನಹಳ್ಳಿ ಗ್ರಾಮದ ಪೂರ್ವದಿಕ್ಕಿಗೆ ಹಾಳುಬಿದ್ದ ಕೆರೆಯೊಂದರ ಬಳಿಯ ಇಳಿಜಾರಾಗಿರುವ ಪೊದೆಯೊಳಗೆ ದೊರೆತಿದೆ. ಸೊಗಸಾದ ಶಿಲ್ಪಕಲಾ ಕೆತ್ತನೆಗಳಿರುವ ನಾಲ್ಕು ಅಡಿ ಎತ್ತರದ ಕಲ್ಲಿನಲ್ಲಿ ಮೂರು ಪಟ್ಟಿಗಳಲ್ಲಿ ಬರಹವಿದೆ. ಮೇಲ್ಭಾಗದಲ್ಲಿ ಪಸು-ಕರು, ಸೂರ್ಯ-ಚಂದ್ರ ಧ್ಯಾನಮುದ್ರೆಯಲ್ಲಿ ಕುಳಿತ ಸ್ತ್ರೀಯ ಚಿತ್ರ, ವೀರನ ಚಿತ್ರ, ಶಿವಲಿಂಗ, ಅದರ ಮೇಲೆ ಧಾರಾಪಾತ್ರೆ, ಅದನ್ನಾವರಿಸಿರುವ ಛತ್ರಿ, ಕಲಶ ಡಮರುಗ ಹಿಡಿದ ಜಟಾಧಾರಿಯ ಚಿತ್ರಗಳಿವೆ.

ನಡುವಣ ಪಟ್ಟಿಯಲ್ಲಿ ಮೃತ ವೀರ, ಆತನ ಪತ್ನಿಯನ್ನು ಚಾಮರಧಾರಿಗಳು ಸುರಲೋಕಕ್ಕೆ ಕರೆದೊಯ್ಯುತ್ತಿರುವ ಚಿತ್ರವಿದೆ. ಕೆಳಗಿನ ಪಟ್ಟಿಯಲ್ಲಿ ಖಡ್ಗ ಹಿಡಿದ ವೀರನನ್ನು ಈಟಿಯಿಂದ ಇರಿಯುತ್ತಿರುವ ದೃಶ್ಯ, ಪಕ್ಕದಲ್ಲಿ ಪದ್ಮಾಸನ ಭಂಗಿಯಲ್ಲಿರುವ ಸ್ತ್ರೀ ಮತ್ತು ಆಕೆಯ ಪಕ್ಕದಲ್ಲಿ ಬಿಲ್ಲು ಬಾಣ ಹಿಡಿದಿರುವ ಭಟನಿದ್ದಾನೆ.

ವಿರೋಧಿ ಸಂವತ್ಸರದ ಆಷಾಢ ಶುದ್ಧ ಭಾನುವಾರ ಅಂದರೆ ೧೧-೦೬-೧೧೬೯ರಂದು ಹೊಯ್ಸಳರ ದೊರೆ ಒಂದನೇ ನರಸಿಂಹ ರಾಜ್ಯವಾಳುತ್ತಿದ್ದಾಗ ಆತನ ಮಗಳು ಬಿಚಲಾದೇವಿ ಮೃತಳಾಗುತ್ತಳೆ. ಆ ಸಂದರ್ಭದಲ್ಲಿ ಹಳಸಿಯ ಗಾವುಡ ವೇಳೆವಾಳಿಯಾಗಿ ಮರಣ ಹೊಂದಿದಾಗ ಆತನ ಪತ್ನಿ ತಂಗಬ್ಬೆಯು ಆತನೊಂದಿಗೆ ಮರಣ ಹೊಂದುತ್ತಾಳೆ.

ಈ ದಂಪತಿಗಳು ಮಾಡಿದ ತ್ಯಾಗಕ್ಕಾಗಿ ದೊರೆಯು ಎರಡು ಹಣ ಮೌಲ್ಯದ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಶಾಸನದ ಕೊನೆಯಲ್ಲಿ ಶಾಪಾಶಯಗಳಿವೆ. ಶಾಸನಕಲ್ಲನ್ನು ಮೃತ ದಂಪತಿಗಳ ಸುಪುತ್ರ ತಿಪ್ಪಗಾವುಂಡ ಹಾಕಿಸಿದ್ದಾನೆ.

ಪ್ರಸ್ತುತ ಶಾಸನದಲ್ಲಿ ಹಳಸೆ ಎಂಬ ಗ್ರಾಮನಾಮವು ಹಳಸಿ ಎಂದು ದಾಖಲಾಗಿದ್ದು, ಹೊಯ್ಸಳರ ದೊರೆ ಒಂದನೆಯ ನರಸಿಂಹನಿಗೆ 'ಬಿಚಲಾದೇವಿ' ಎಂಬ ಮಗಳಿದ್ದ ಉಲ್ಲೇಖ ಒಂದು ಹೊಸ ಐತಿಹಾಸಿಕ ದಾಖಲೆಯಾಗಿದೆ.

ಶಾಸನ ಪಾಠ

ಒಂದನೆಯ ಪಟ್ಟಿ

೧. @ಸ್ವಸ್ತಿ ಶ್ರೀಮನು[ಮ*]ಹಾಮಣ್ಡಳೇಶ್ವರ ತ್ರಿಭುವನಮಲ್ಲ ತಳಕಾಡು ಗಂಗವಾಡಿ

೨. ನೊಣಂಬವಾಡಿ ಬನವಾಸೆ ಹಾನುಗಲ್ಲುಗೊಣ್ಡ ವೀರ ಭುಜಬಳ ಪ್ರತಾ

೩. ಪ ನಾರಸಿಂಹದೇವರು ದೋರಸಮುದ್ರದಲು ಪ್ರಿತಿವಿ ರಾಜ್ಯಂಗೆಯುತಿರಲು ವಿರೋ [ಧಿ*]

* s/o ಸೋಮೇಗೌಡ, ಓಣಿಮನೆ, ಮೇಕನಗದ್ದೆ ಅಂಚೆ, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ.

೪. ಸ[೦]ವತ್ಸರ ಆಸಾಡ । ಸುದ್ದ । ಆದಿ । ದೇವನ ಕುಮಾರಿ ಏಚಲ ದೇವಿ ಸ್ವರ್ಗ್ಗತ್ಸೆಯಾ

ಎಡಪಾರ್ಶ್ವ

೫. ದಾಗ ಹಳಸಿಯಕೊಳ್ಳವ [ಗಾವು]

೬ ಡಮಗೆ ದೇವ ಸಡಲಿಕ್ಕಿದಾಗ ವೇ

೭ [ಳೆ] ವಳಿಯಂ ನೆಜಿ । ಹಲು ಆತನ

ಎರಡನೆಯ ಪಟ್ಟಿ

೮. [ಗಾ]ವುಡಿ ತಂಗಬ್ಬೆಯುಂ ಕೂಡಿ ಸ್ವರ್ಗತೆಯಾದಳು । ಎರಡು ಹಣವಿನ ಮಣ್ಣ ಅಂಕದ ಕಳ

೯. [ತೋ] ಡುಸಾ ಎಂಬಿನಿತಂ ದೇವಂ ಸಲಿಸಿ ದಯಕಾರಣ್ಯಂ ಗೆಯಿದರು । ಅನ್ತಪ್ಪ

೧೦. ದಕ್ಕೆ ತಪ್ಪಿದವಂಗೆ ಏಳಾನು ನರಕ ॥ ಗಂಗೆಯ ತಡಿಯಲು ತಂಗ್ಗೇಳು ಕವಿಲೆಯ ಕೊ (೦) ನ್ದ ಪಾಪ ।

ಬಲಪಾರ್ಶ್ವ

೧೧. @ ಕೊಟ್ಟುದಂ ಬಿಟ್ಟುದಂ ತಪ್ಪಿದ

೧೨. ವಂಗೆ ಏಳಾನು ನರ

೧೩. ಕ ॥ ಸುಪುತ್ರ ಕುಲದೀಪ ತಿಪ್ಪ

೧೪. ಗಾವುಂಡ ಯಿಕ್ಕಿಸಿದ ಕಲು ॥

ತೀರ್ಥಹಳ್ಳಿ ತಾಲ್ಲೂಕು ಕುಂದ ಗ್ರಾಮದ ನಿಶಿಧಿ ಶಾಸನ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಂದ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೩೦ ಕಿ.ಮೀ. ಗಳಷ್ಟು ದೂರದಲ್ಲಿದ್ದು ಕುಂದಾದ್ರಿ ಪರ್ವತದ ಬುಡದಲ್ಲಿದೆ. ಗ್ರಾಮದ ನಡುವೆ ಬಯಲು ಹಾಗು ಸಣ್ಣ ಕುರುಚಲು ಕಾಡೊಳಗೆ ಪ್ರಸ್ತುತ ಶಾಸನ ಲಭ್ಯವಾಗಿದೆ.

ಈಗಾಗಲೇ ತಿಳಿದಿರುವಂತೆ ಪ್ರಸಿದ್ದವಾದ ಕುಂದಾದ್ರಿ ಬೆಟ್ಟದ ನೆತ್ತಿಯ ಮೇಲೆ ಜೈನ ಶಾಸನ ಲಭ್ಯವಿದ್ದು, ಅದೊಂದು ಜೈನರ ಧಾರ್ಮಿಕ ಕೇಂದ್ರವಾಗಿದೆ. ಇದಕ್ಕೆ ಹೊಂದಿಕೊಂಡಂತೆ ಸುತ್ತಮುತ್ತಲಿನಲ್ಲಿಯೂ ಹಲವಾರು ಜೈನ ಸ್ಮಾರಕಗಳಿದ್ದು ಆ ಸಾಲಿಗೆ ಈ ಶಾಸನವು ಸೇರುತ್ತದೆ.

ಶಾಸನಗಳಿರುವ ಜಾಗವು ಹಾಳುಬಿದ್ದ ನೆಲಕಟ್ಟಡಗಳು, ಕಲ್ಲಿನ ಕಟ್ಟಡದ ಅವಶೇಷಗಳು ಕಂಡುಬರುತ್ತವೆ. ಆ ಹಿನ್ನೆಲೆಯಲ್ಲಿ ಇಲ್ಲಿ ಬಸದಿ ಇತ್ತೆಂದು ತಿಳಿಯುತ್ತದೆ. ಅದು ನಾಶವಾದ ನಂತರ ಅಲ್ಲಿ ಕುರುಚಲು ಕಾಡುಗಳು ಬೆಳೆದಿವೆ. ಸಮೀಪದಲ್ಲಿಯೆ ಅಸ್ಪಷ್ಟ ಲಿಪಿ ಇರುವ ಮೂರು ಅಡಿ ಎತ್ತರದ ಇನ್ನೊಂದು ಶಾಸನವಿದೆ.

ಪ್ರಸ್ತುತ ಶಾಸನವು ನಾಲ್ಕು ಅಡಿ ಎತ್ತರವಿದ್ದು ಬಳಪದ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಕೆಳಭಾಗದಲ್ಲಿ ಪಟ್ಟಿಕೆಗಳಂತೆ ಮಾಡಿ ಅದರ ಮೇಲೆ ಹತ್ತು ಸಾಲುಗಳಲ್ಲಿ ಬರೆಯಲಾಗಿದೆ. ಮೇಲಿನ ಎರಡು ಪಟ್ಟಿಕೆಗಳಲ್ಲಿ ಇರುವ ಕೆತ್ತನೆಗಳು ಹಾಳಾಗಿದೆ.

ದಿನಾಂಕವು ೦೨-೦೫-೧೧೫೮ರ ತೇದಿಯ ಬಹುಧಾನ್ಯ ಸಂವತ್ಸರದ ಜೇಷ್ಠ ಶುದ್ಧ ೩ರ ಶುಕ್ರವಾರಕ್ಕೆ ಸರಿಹೊಂದುತ್ತದೆ. ಕನ್ನಡ ಲಿಪಿಯಲ್ಲಿದ್ದು, ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಬರೆಯಲಾಗಿದೆ.

ಲಭ್ಯವಾಗಿರುವ ಶಾಸನ ಪಾಠದಂತೆ ಮೂಲಸಂಘ ದೇಶಿಗಣ ಪುಸ್ತಕಗಚ್ಛ ಮತ್ತು ಕೊಂಡಕುಂದಾನ್ವಯಕ್ಕೆ ಸೇರಿದ ಹಲವು ಶಿಷ್ಯ ಮತ್ತು ಪ್ರಶಿಷ್ಯರಿಂದ ಕೂಡಿದ ಖ್ಯಾತ ಜೈನಗುರು ದೇವಿಚಂದ್ರ ಸ್ವರ್ಗಸ್ಥನಾದ. ಆತನ ಗುಡ್ಡ ಅಥವಾ ಸಾಮಾನ್ಯ ಶಿಷ್ಯನಾದ ಬಮ್ಮಯ ಈ ನಿಶಿಧಿ ಕಲ್ಲನ್ನು ನಿಲ್ಲಿಸಿದ ಎಂಬ ವಿವರಗಳಿವೆ.

ಇದರಲ್ಲಿ ಕಂಡುಬರುವ ಶಿಲ್ಪ ವಿವರಗಳು ಸೂರ್ಯ, ಚಂದ್ರ, ಕಲಶ, ಪದ್ಮಾಸನದಲ್ಲಿ ಕುಳಿತ ವ್ಯಕ್ತಿ, ಉಭಯ ಪಾರ್ಶ್ವಗಳಲ್ಲಿ ಚಾಮರಧಾರಿಗಳು ಕಂಡುಬರುತ್ತವೆ. ಶಿಲ್ಪಗಳು ಮುಕ್ಕಾಗಿವೆ.

ಶಾಸನ ಪಾಠ

೧. ಶ್ರೀಮಾನ್। ಶ್ರೀ ಮೂಲ ಸಂಘೇ. ಧಿತ ಪೃಥುಯ ಶೋಕೊ [೦]

೨. ಡಕುಂದಾನ್ವಯೀಜನಿ ಖ್ಯಾತೇ ದೇಶಿಗಣಾಗ್ರ ॥ .ದ್ಯ [ದಾರ] ವಿ

೩. ಳ ಸತ್ಪುಸ್ತಕಾಭಿಖ್ಯಗಚಃ । ನಾನಾ ಶಿಷ್ಯ ಪ್ರಶಿಷ್ಯ

೪. ದೇಶಾಧಿಪ ವಿಭಜತೀರ್ಥಿ [ರು] ದ್ಯತ್ಪ್ರಭಾವಃ ಸ

೫. ಚ್ಚಾರಿತ್ರ್ಯಂ ಭೂಮಿ ಮ್ಮೂರ್ಮಲರವನಿತಳ ವ್ರಾ

೬ ವೃತ [ದೇ] ಮಿಚಂದ್ರಃ ॥@ಕತ . . ರುಗ .

೭ ಗುಡ್ಡನು ಬಮ್ಮಯ . ನ ಬೋವಾ . . [ಧಿ]

೮. ಯ ಕಲು ॥ ಸ್ವಸ್ತಿ ರಸ್ತು ॥ ಬಹುಧಾನ್ಯ ಸಂದ

೯. ತ್ಸರ ಜೇಘ ಸುದ್ಧ ೩ ಸುಕ್ರವಾರದಲಿ

೧೦. ವಿದಿಯಂ ಸ್ವರ್ಗ್ಗಸ್ಥ

[ಈ ಎರಡೂ ಶಾಸನಗಳನ್ನು ಮೈಸೂರಿನ ನಿವೃತ್ತ ಶಾಸನತಜ್ಞ ಶ್ರೀ ಎಚ್.ಎಂ. ನಾಗರಾಜರಾವ್ ಓದಿ ತರ್ಜುಮೆ ಮಾಡಿ ಶಾಸನ ಪಾಠ ತಯಾರಿಸಿಕೊಟ್ಟಿದ್ದಾರೆ. ಅವರಿಗೆ ಕೃತಜ್ಞತೆಗಳು.]

೧೪

ಸಿರಾ ತಾಲ್ಲೂಕು ಓಜಗುಂಟೆ, ಮಧುಗಿರಿ ತಾಲ್ಲೂಕಿನ ತಾಡಿ ಹಾಗೂ ಚೀಲನಹಳ್ಳಿಯ ಅಪ್ರಕಟಿತ ಶಾಸನಗಳು

ಡಾ. ಎನ್. ನಂದೀಶ್ವರ *

ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಕಸಬಾ ಹೋಬಳಿಯ ಓಜಗುಂಟೆಯು ತಾಲ್ಲೂಕು ಕೇಂದ್ರದಿಂದ ೩ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಕುಂಚಿಟಿಗರ ಮಾಣಸೇರ ಕುಲದ ಮನೆದೇವರಾದ ಮಲ್ಲೇಶ್ವರ ದೇವಸ್ಥಾನ ದಲ್ಲಿರುವ ಹರೆಯ ಮೇಲೆ ಶಾಸನ ಬರೆಯಲಾಗಿದೆ. ಈ ಅಪ್ರಕಟಿತವಾದ ಶಾಸನದ ಪ್ರಾರಂಭದಲ್ಲಿ ಲಿಂಗ, ಬಸವ, ಚಕ್ರ, ನಾಮ ಹಾಗೂ ಶಂಖುವಿನ ಚಿತ್ರ ಬಿಡಿಸಲಾಗಿದೆ. ಈ ಶಾಸನವು ಹರೆಯ ೨ ಭಾಗಗಳಲ್ಲಿ ಬರೆಯಲಾಗಿದೆ. ಮೊದಲ ಭಾಗದಲ್ಲಿ ೯ ಸಾಲುಗಳಿವೆ. ೨ನೇ ಭಾಗದಲ್ಲಿ ೧೫ ಸಾಲುಗಳಿವೆ. ಈ ಶಾಸನವು ಕ್ರಿ.ಶ. ೧೬೯೮ರ ಕಾಲದ್ದಾಗಿದೆ.

ರೌದ್ರಿ ಸಂವತ್ಸರದ ಮಾಘ ಬ೬ ಗುರುವಾರ ಚಿಕ್ಕನ ಕೋಟೆ ಕುಮಾರ ಪೂಜಾರಿ ವೀರಬೊಮಂಣನ ಮಗ ವೀರಂಣ ವೋಜಗುಂಟೆ ರಂಗಧಾಮನ ಪೂಜಾರಿ ಮುದ್ದ ರಂಗೈನ ಮಗ ಚಿಂಣಪ, ಮಾವಿನಮರದ ಮಲ್ಲಪ್ಪನ ಪೂಜಾರಿ ಕೊಟ್ಟದ್ದು. ಬಂಮಂಣನ ಮುಟರಾ ಸಹ ಮೂರು ದೇವರು ಪಾದಕ್ಕೆ ಮಾಡಿಸಿ ಕೊಟ್ಟ ಪಟ್ಟದ ಅರೆ.

ಶಾಸನ ಪಾಠ

೧ನೇ ಭಾಗ

೧ ರವದ್ರಿ ಸಂವತ್ಸರದ
೨ ಮಾಘ ಬ ೬ ಗುರ್ರಾವಾ
೩ ರಾ ಚಿಕ್ಕನಕೊಟೆಲ
೪ ರ ಬಂಮಂಣನ ಮ
೬ ಗ ವಿರಂಣ ವೊಜಗುಂಠೆ
೭ ರಂಗಧಾಮನ ಪು
೮ ಜಾರಿ ಮುದರಂಗೈ
೯ ಯನ ಮಗ ಚಿಂಣಪ

೨ನೇ ಭಾಗ

೧ ಮಾವಿನಮರದ ಮಲ್ಲ
೨ ಪ್ಪನ ಪೂಜಾರಿ ಕೊಟ್ಟ
೩ ದ ಬಂಮಂಣನ ಮ
೪ ಗ ಮಲಂಣ ಮುಟ
೫ ರಾ ಸಹ ಮೂರು ದೆ
೬ ವರು ಪಾದಕ್ಕೆ ಮಾ
೭ ಡಿಸಿ ಕೊಟ ಪಠದ
೮ ರೆ
೯ ಚಿಕನಕೊಟೆಯ ಯೆಳು
೧೦ ಕೊಟಿ ಮಾಣಸೆನೋರು
೧೧ ಬರುವಾಗೆ ಅವರ
೧೨ ಬಂಡಿಯ ಚೆರನಕ
೧೩ ಥ ಬಂದೊನು ಬಲ
೧೪ ಗೈ ದಾಸನ ಮಗ ಜಿಜಿ
೧೫ ಯರಂಗಗೆ ಕೊಟ ಬಿರುದು

ತಾಡಿಯ ಈರಚಿಕ್ಕಣ್ಣಸ್ವಾಮಿ ದೇವಸ್ಥಾನದ ಹರೆ ಮೇಲಿನ ಶಾಸನ

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಗಡಿಗ್ರಾಮ ತಾಡಿಯು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ. ಇಲ್ಲಿ ಕುಂಚಿಟಿಗರ ಬಸಲೇನವರ ಕುಲದ ತಾಡಿ ನಾಗಮ್ಮ, ಕುಂಚಿಟಿಗರ ರಾಗೇನವರ ಕುಲದ ಮನೆ ದೇವರು ಬಳುಮಂದಮ್ಮ, ಕುಂಚಿಟಿಗರ ಹಾಓನವರ ಕುಲದ ಮನೆದೇವರು ವೀರಚಿಕ್ಕಣ್ಣಸ್ವಾಮಿ, ಬ್ರಾಹ್ಮಣ ಜನಾಂಗದವರ ಮನೆದೇವರು ನರಸಿಂಹಸ್ವಾಮಿ, ಉಪ್ಪಾರ ಜನಾಂಗದವರ

* ಪ್ರಾಂಶುಪಾಲರು, ಪೂರ್ಣಚಂದ್ರ ತೇಜಸ್ವಿ ಸದನ, ಸಿದ್ಧಪ್ಪ ಲೇಔಟ್, ಬಾಲಾಜಿನಗರ, ಸಿರಾ ಟೌನ್, ತುಮಕೂರು ಜಿಲ್ಲೆ.

ಮನೆದೇವರು ಪಾತಲಿಂಗಪ್ಪ, ಕುರುಬರ ಜನಾಂಗದ ದೈದ ಪಂಗಡದ ಮನೆದೇವರು ಸಿದ್ದೇಶ್ವರ, ಗ್ರಾಮದೇವತೆ ಒಡುಸಮ್ಮ ದೇವಸ್ಥಾನಗಳು ಇರುತ್ತವೆ.

ಹಾವಿನವರ ಕುಲದವರು ಗ್ರಾಮದ ಹೊರಭಾಗದಲ್ಲಿ ಒಂದು ಚಿಕ್ಕ ಗುಡಿ ಕಟ್ಟಿಸಿ, ಅದರ ಗೋಡೆಯ ಮೇಲೆ ಮೈಸೂರು ಒಡೆಯರ ಕಾಲದ ವೀರ ಹೋರಾಟದ ಚಿತ್ರಗಳನ್ನು ಬರೆಸಿರುತ್ತಾರೆ. ಬಣ್ಣ ಹಳೆಯದಾದಾಗ ಮತ್ತೆ ಮೊದಲಿನಂತೆ ಬಣ್ಣ ಬಳಿಸುತ್ತಾರೆ. ವೀರಚಿಕ್ಕಣ್ಣನಿಗೆ ಗ್ರಾಮದಲ್ಲಿ ಮೆರವಣಿಗೆ ದೇವಸ್ಥಾನವಿದೆ. ಈ ದೇವಸ್ಥಾನದಲ್ಲಿ ಎರಡು ಬಂಡಿಯ ನಾಲ್ಕು ಚಕ್ರಗಳು ಇರುತ್ತವೆ. ಈ ಗುಡಿಯಲ್ಲಿ ವೀರಚಿಕ್ಕಣ್ಣನ ಹಿತ್ತಾಳೆಯ ಮೆರವಣಿಗೆ ವಿಗ್ರಹ ಇದೆ. ಇದನ್ನು ಐದು ಭಾಗ ಗಳನ್ನಾಗಿ ಮಾಡಲಾಗಿದೆ. ಮೊದಲ ಹಂತದಲ್ಲಿ ಗೋವುಗಳ ಚಿತ್ರ ಬಿಡಿಸಲಾಗಿದೆ. ಎರಡನೇ ಹಂತದಲ್ಲಿ ವೀರನು ಕತ್ತಿಯನ್ನು ಹಿಡಿದು ಹುಲಿಯೊಡನೆ ಹೋರಾಡುವ ಚಿತ್ರ ಬಿಡಿಸಿರುತ್ತಾರೆ. ಮೂರನೇ ಹಂತದಲ್ಲಿ ವೀರನು ಶಿವಲಿಂಗದ ಪಕ್ಕ ಕೈಮುಗಿದು ಕುಳಿತಿದ್ದು, ಅದರ ಪಕ್ಕದಲ್ಲಿ ಶಿವಲಿಂಗ, ನಂದಿ ಬಿಡಿಸಿರುತ್ತಾರೆ. ಎರಡು ತುದಿಯಲ್ಲಿ ಸೂರ್ಯ, ಚಂದ್ರರನ್ನೂ ಸಹ ಬಿಡಿಸಿರುತ್ತಾರೆ. ನಾಲ್ಕನೇ ಹಂತದಲ್ಲಿ ನಂದಿ, ದಂಪತಿ ಸಮೇತವಾದ ದೇವರು ಕುಳಿತ ದೇವರ ಪಕ್ಕದಲ್ಲಿ ವೀರನು ಕೈಮುಗಿದು ನಿಂತಿರುತ್ತಾನೆ. ನಾಲ್ಕನೇ ಹಂತದಲ್ಲಿ ವ್ಯಾಳಿಯ ತಲೆ ಚಿತ್ರ ಬಿಡಿಸಲಾಗಿದೆ.

ತಾಡಿಯ ವೀರಚಿಕ್ಕಣ್ಣಸ್ವಾಮಿ ದೇವರು ಕುಂಚಿಟಿಗರ ಹಾವಿನವರ ಕುಲದ ಮನೆದೇವರಾಗಿರುತ್ತದೆ. ಚಿಕ್ಕಣ್ಣಸ್ವಾಮಿಯ ಮೆರವಣಿಗೆ ದೇವಸ್ಥಾನದಲ್ಲಿ ಎರಡು ಹರೆಗಳು ಇರುತ್ತವೆ. ಈ ಹರೆಯನ್ನು ೩ ಕಟ್ಟುಗಳಲ್ಲಿ ರಚಿಸಿ, ೪ ಭಾಗಗಳನ್ನು ಮಾಡಲಾಗಿದೆ. ಶಾಸನವನ್ನು ೧ ಭಾಗದಲ್ಲಿ, ೮ ಸಾಲುಗಳಲ್ಲಿ, ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಶಾಸನದ ಕಾಲ ೧೯ನೇ ಶತಮಾನದ್ದಾಗಿರುತ್ತದೆ.

ಶಾಸನ ಪಾಠ

೧ ಶ್ರೀ

೨ ಆವಿನ ಕಾಮರಾಯ ತಾಡಿ ಶ್ರೀ

೩ ವೀರ ಚಿಕ್ಕಣಸ್ವಾಮಿ ದೇವ

೪ ರ ಮುದಿ ಭಂಡಿ ಮದ್ಲಿಗೆ

೫ ತುಮ್ಕೂರು ಶ॥ ಪಿರಿ ದೊ

೬ ಡ್ಡವಾಡಿ ಸದರಿ ಮದ್ಲಿನ

೭ ಅಂಣತಂಮ ತಿಂಮೆ

೮ ಗವುಡನ ಭಕ್ತಿ

ತಾಡಿಯ ವೀರಚಿಕ್ಕಣ್ಣಸ್ವಾಮಿ ದೇವಸ್ಥಾನದ ಮತ್ತೊಂದು ಹರೆ ಮೇಲಿನ ಶಾಸನ

ಚಿಕ್ಕಣ್ಣಸ್ವಾಮಿಯ ಮೆರವಣಿಗೆ ದೇವಸ್ಥಾನದಲ್ಲಿ ಮತ್ತೊಂದು ಹರೆ ಇರುತ್ತವೆ. ಈ ಹಾರೆಯ ಮೇಲಿನ ಬರಹವು ಹರೆಯನ್ನು ೩ ಕಟ್ಟುಗಳಲ್ಲಿ ರಚಿಸಿ, ೪ ಭಾಗಗಳನ್ನು ಮಾಡಲಾಗಿದೆ. ಶಾಸನವನ್ನು ೨ನೇ ಭಾಗದಲ್ಲಿ ಬರೆಯಲಾಗಿದೆ. ಶಾಸನವು ೧೩ ಸಾಲುಗಳಲ್ಲಿ, ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಶಾಸನದ ಕಾಲ ಕ್ರಿಶ. ೧೬೯೨ರ ಕಾಲದ್ದಾಗಿರುತ್ತದೆ. ಈ ಅಪ್ರಕಟಿತ ಶಾಸನದಲ್ಲಿ ತಾಡಿ ವಿರಚಿಕ್ಕಣ್ಣಸ್ವಾಮಿಯವರ ದಿವ್ಯಶ್ರೀಪಾದಕ್ಕೆ ಪೂಜಾರಿ ಮುದ್ದಪನವರ ಹೆಂಡತಿ ಪೆಂಮಕನ ಕೊಮಾರ ಕೆಂಪಂಣ ಮಾಡಿಸಿದ ಪಟ್ಟದ ಹರೆ ಎಂದು ತಿಳಿಸುತ್ತದೆ.

ಶಾಸನ ಪಾಠ

೧ ಶುಭಮಸ್ತು

೨ ಸಸ್ತಿ ಶ್ರೀ ವಿಜಯಾಬ್ಯುದ

೩ ಯ ಶಾಲಿ ವಾಹನಶಕೆ ಅ

೪ ಬ್ದಾ ೧೬೧೪ ನೇ ಆನಂದ ಸ

೫ ಂತ್ಸರದ ಚೈತ್ರ ಶು೯ ಬುದವಾರ

೬ ದಲ್ಲು ತಾಡಿ ವಿರಚಿಕ್ಕಂಣ

೭ ಸ್ವಾಮಿಯವರ ದಿವ್ಯ ಶ್ರೀ

೮ ಪಾದಕ್ಕೆ ಯಿ ಪೂಜಾರಿ ಮ

೯ ದ್ದಪನವರ ಹೆಂಡತಿ ಪೆಂ

೧೧ ಮಕನ ಕೊಮಾರ ಕೆಂಪ

೧೨ ಂಣ ಮಾಡಿಸಿದ ಪಟ್ಟ

೧೩ ದ ಅರ್ರೆ

ಚೀಲನಹಳ್ಳಿಯ ವೀರಗಲ್ಲು ಶಾಸನ

ಮಧುಗಿರಿ ತಾಲ್ಲೂಕಿನಂದ ಚೀಲನಹಳ್ಳಿಯು ೧೮ ಕಿ.ಮೀ. ದೂರದಲ್ಲಿರುವ ಗ್ರಾಮವಾಗಿದೆ. ಗ್ರಾಮದ ಸಿ.ಎಂ. ವೀರಣ್ಣನವರ ತೋಟದಲ್ಲಿನ ವೀರಗಾರರ ಗುಡಿ ಇದೆ. ಇದರಲ್ಲಿ ಪೂರ್ವಾಭಿಮುಖವಾಗಿರುವ ವೀರಗಲ್ಲಿನಲ್ಲಿ ಎರಡು ಹಂತವಿದೆ. ಈ ವೀರಗಲ್ಲು ವಿಜಯನಗರ (೧೬ನೇ ಶತಮಾನ) ಕಾಲದ್ದಾಗಿದೆ. ಮೊದಲ ಹಂತದಲ್ಲಿ ಕುದುರೆಯ ಮೇಲೆ ಕುಳಿತ ವೀರನು, ಕತ್ತಿ ಗುರಾಣಿ ಹಿಡಿದ ಎದುರಿನ ಶತ್ರುವಿನ ವಿರುದ್ಧ ಹೋರಾಡುವ ಚಿತ್ರ ಬಿಡಿಸಿರುತ್ತಾರೆ. ಎರಡನೇ ಹಂತದಲ್ಲಿ ವೀರನ್ನು ಸ್ವರ್ಗಲೋಕವನ್ನು ಸೇರಿ, ಶಿವಲಿಂಗ ಹಾಗೂ ನಂದಿಯನ್ನು ಪೂಜಿಸುವ ಚಿತ್ರ





ಮಧುಗಿರಿ ತಾಲ್ಲೂಕಿನ ತಾಡಿಯು ವೀರ ಚಿಕ್ಕಣ್ಣಸ್ವಾಮಿ ದೇವಸ್ಥಾನದ ಹರೆ ಶಾಸನ



ಮಧುಗಿರಿ ತಾಲ್ಲೂಕು ಚೀಲನಹಳ್ಳಿ ವೀರಗಲ್ಲು ಶಾಸನ

ಬಿಡಿಸಿದ್ದಾರೆ. ಇಲ್ಲಿ ವೀರನಿಗೆ ಅಪ್ಸರೆಯರು ಪೂಜೆ ಸಲ್ಲಿಸಲು ನೆರವಾಗುತ್ತಿದ್ದಾರೆ. ಈ ಎರಡು ಹಂತಗಳ ಮಧ್ಯೆ ಒಂದು ಸಾಲಿನ ಶಾಸನ ಇದೆ. ಅಪ್ರಕಟಿತ ಶಾಸನದಲ್ಲಿ ಮುಚಿಗೌಂಡನ ಮಗ ಮಲ್ಲನು ಮಾಡಿಸಿದನು ಎಂದು ತಿಳಿಸುತ್ತದೆ. ಬಹುಶಃ ತಂದೆಯಾದ ಮುಚಿಗೌಡನಿಗೆ ಮಾಗನಾದ ಮಲ್ಲನು ವೀರಗಲ್ಲನ್ನು ಮಾಡಿಸಿರಬಹುದು.

ಉತ್ತರಕ್ಕೆ ಮುಖ ಮಾಡಿ ನಿಲ್ಲಿರುವ ವೀರಗಲ್ಲು ಒಂದು ಹಂತ ಮಾತ್ರವಿದೆ. ಇದರಲ್ಲಿ ವೀರನು ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದರೆ, ಬಲಗೈಯಲ್ಲಿ ಬಾಣ ಹಿಡಿದಿರುತ್ತಾರೆ. ಮೇಲ್ಭಾಗದಲ್ಲಿ ಎರಡು ಗುಳಿಗಳು ಇರುತ್ತವೆ. ಈ ವೀರಗಲ್ಲು ವಿಜಯನಗರ ಕಾಲದ್ದಾಗಿದೆ.

ದಕ್ಷಿಣಕ್ಕೆ ಮುಖ ಮಾಡಿ ನಿಲ್ಲಿಸಿರುವ ಕಲ್ಲಿನಲ್ಲಿ ಎರಡು ಜನ ಭಕ್ತರು ಕೈಮುಗಿದು ನಿಂತ ಚಿತ್ರ ಬಿಡಿಸಿರುತ್ತಾರೆ. ಇವರ ಮೇಲೆ ಎರಡು ಗುಳಿಗಳನ್ನು ಮಾಡಿರುತ್ತಾರೆ. ಇವರ ಪಕ್ಕದಲ್ಲಿ ಎಡೆ ಬಿಚ್ಚಿ ನಿಂತ ನಾಗರಹಾವಿನ ಚಿತ್ರ ಬಿಡಿಸಲಾಗಿದೆ.

ಶಾಸನ ಪಾಠ

೧ ಮುಚಿ ಗೌಂಡನ ಮಗ ಮಲ್ಲಯ ಮಾಡಿಸಿದನು

ಒಟ್ಟಾರೆ ಮೇಲಿನ ಮೂರು ಮೇಲಿನ ಹರೆ ಶಾಸನಗಳು ಕುಂಚಿಟಿಗ ಜನಾಂಗದ ಇತಿಹಾಸ ತಿಳಿಯಲು ಸಹಾಯಕವಾಗಿವೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಡಾ. ಎಸ್. ನಂದೀಶ್ವರ, ೨೦೦೮ **ಸಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು,** ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರಾ.

೨. ಡಾ. ಎಸ್. ನಂದೀಶ್ವರ, ೨೦೦೮ **ಸಿರಾ ತಾಲ್ಲೂಕು ದರ್ಶನ,** ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರಾ.

೩. **ಎಫಿಗ್ರಾಫಿಯ ಕರ್ನಾಟಕ,** ಸಂಪುಟ ೧೨. ತುಮಕೂರು.

ಉಪ್ಪಾರ್ತಿಯ ಅಪ್ರಕಟಿತ ಶಾಸನಗಳು, ರಾಮನಗರ ಜಿಲ್ಲೆ

ಭೈರಪ್ಪ ಎಂ.ಜಿ.* ಶಶಿಕುಮಾರ್ ಎಸ್.**

ಮಾಗಡಿ, ರಾಮನಗರ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದ್ದು ಪ್ರಾಗೈತಿಹಾಸಿಕ ಕಾಲದಿಂದ ಪ್ರಾರಂಭವಾಗುವ ತಾಲೂಕಿನ ಇತಿಹಾಸಕ್ಕೆ ಗಂಗರು, ಹೊಯ್ಸಳರು, ವಿಜಯ ನಗರದ ಅರಸರು ಮತ್ತು ಸಾಮಂತ ರಾಜರು ಈ ಪ್ರಾಂತ್ಯದಲ್ಲಿ ಆಳ್ವಿಕೆ ಮಾಡಿದ್ದಾರೆ. ಈ ತಾಲೂಕಿಗೆ ವಿಜಯನಗರ ಸಾಮ್ರಾಜ್ಯದ ಸಾಮಂತರಾದ ಯಲಹಂಕನಾಡ ಪ್ರಭುಗಳ ಕೊಡುಗೆ ಅಪಾರ. ಇಮ್ಮಡಿ ಕೆಂಪೇಗೌಡ ವಿಜಾಪುರದ ಸೈನ್ಯಕ್ಕೆ ಸೋತ ಪರಿಣಾಮವಾಗಿ ಕ್ರಿ.ಶ. ೧೬೩೮ರಲ್ಲಿ ಬೆಂಗಳೂರು ಷಹಜಿಯ ವಶವಾಯಿತು. ಬೆಂಗಳೂರನ್ನು ಕಳೆದುಕೊಂಡು ನಂತರ ಇವರು ಮಾಗಡಿಯನ್ನು ಕೇಂದ್ರವನ್ನಾಗಿಸಿಕೊಂಡು ಆಳ್ವಿಕೆ ಮಾಡಿ ಮಾಗಡಿ ಕೆಂಪೇಗೌಡರೆಂದು ಪ್ರಸಿದ್ಧರಾದಲ್ಲದೆ ತಾಲೂಕಿನ ಸಮಗ್ರ ಬೆಳವಣಿಗೆಗೆ ಶ್ರಮಿಸಿದರು.

ಪ್ರಸ್ತುತ ಲೇಖನವು ಉಪ್ಪಾರ್ತಿಯಲ್ಲಿ ದೊರೆತಿರುವ ಮೂರು ಅಪ್ರಕಟಿತ ಶಾಸನಗಳ ಕುರಿತುದ್ದಾಗಿದೆ. ಉಪ್ಪಾರ್ತಿಯು ಮಾಗಡಿಯಿಂದ ೧೧ ಕಿ.ಮೀ. ದೂರದಲ್ಲಿದೆ ಈ ಗ್ರಾಮಕ್ಕೆ ಉಪ್ಪಾರ್ತಿ ಎಂಬ ಹೆಸರು ಬರಲು ಕಾರಣವೆಂದರೆ ಹಿಂದೆ ಈ ಊರಿನಿಂದ ಹೊರಗೆ ಹೋಗಿ ಮತ್ತೆ ಬಂದವರಿಗೆ ಆರತಿ ಮಾಡುತ್ತಿದ್ದ ಪದ್ಧತಿ ಇದ್ದುದರಿಂದ ಉಪ್ಪಾರ್ತಿ ಎಂಬ ಹೆಸರು ಬಂದಿತ್ತೆಂಬ ಪ್ರತೀತಿ ಇದೆ. ಉಪ್ಪಾರ್ತಿ ಎಂದರೆ ಕುಂಕುಮ, ಉಪ್ಪು, ನೀರು ಬೆರೆಸಿ ದೃಷ್ಟಿ ನಿವಾಳಿಸುವ ಆರತಿಯಾಗಿದೆ. ಈ ಗ್ರಾಮದಲ್ಲಿ ೭೦ ಮನೆಗಳಿದ್ದು ಸುಮಾರು ೩೫೦ ಜನರು ವಾಸಿಸುತ್ತಿದ್ದಾರೆ. ಇಲ್ಲಿ ಮಳೆಯಾಧಾರಿತ ಕೃಷಿ ಮತ್ತು ಹೈನುಗಾರಿಕೆ ಇಲ್ಲಿನ ಜನರ ಮುಖ್ಯ ಕಸುಬಾಗಿದೆ. ಅವಶ್ಯಕ ಮೂಲ ಸೌಕರ್ಯಗಳಿಂದ ವಂಚಿತವಾಗಿರುವ ಈ ಗ್ರಾಮವು ಐತಿಹಾಸಿಕ ಸ್ಥಳಗಳಿಂದ ಕೂಗಳತೆಯ ದೂರದಲ್ಲಿದ್ದರೂ ಈ ಗ್ರಾಮವು ಇತಿಹಾಸ ಸಂಶೋಧಕರ ದೃಷ್ಟಿಗೆ ಬೀಳದೆ ಹೋಗಿದೆ ಎನ್ನಬಹುದು. ಈ ಮಾತನ್ನು ಪುಷ್ಟೀಕರಿಸಲು ಇಲ್ಲಿ ದೊರೆತಿರುವ ಅಪ್ರಕಟಿತ ವೀರಗಲ್ಲುಗಳು ಹಾಗೂ ಶಾಸನಗಳೇ ಸಾಕ್ಷಿ.

ಶಾಸನ ಸಂಖ್ಯೆ–೧

೧. . . ಪ್ಲವಂಗ ಸಂವತ್ಸರದ
೨. ಜೇಷ್ಠ ಶುದ್ಧ ೧೫ಲು
೩. ಶ್ರೀಮತು. . . . . .
೪. . ಗಂಯ . . . . .
೫ . . . . ದೇವ ಮಹಾ ಅ
೬. ರಸುಗಳವರ ಅಮ . .
೭ ವರಿಗೆ . . . . . .
೮. ಯ ಸ (ಮ) ಆರಿಗೆ ಮಂಗಳ
೯. ಮಹಾ . . . .
೧೦. . . . .

ಈ ಮೇಲಿನ ಶಾಸನವು ಉಪ್ಪಾರ್ತಿಯ ಊರಿನ ಪಶ್ಚಿಮಕ್ಕೆ ಇರುವ ಬಸವನ ಗುಡ್ಡೆ ಎಂಬ ಪ್ರದೇಶದಲ್ಲಿ ದೊರೆತಿದ್ದು, ಮೊದಲು ಇದು ಊರಿನ ಲಕ್ಷ್ಮಿದೇವಾಲಯದ ಬಳಿಯಿದ್ದು, ನಂತರ ಇದನ್ನು ಸ್ಥಳಾಂತರಿಸಲಾಯಿತು ಎಂದು ಸ್ಥಳೀಯರು ಹೇಳುತ್ತಾರೆ. ಈ ಶಾಸನಗಳು ೧೦ ಸಾಲುಗಳನ್ನು ಒಳಗೊಂಡಿದ್ದು ಬಹಳಷ್ಟು ಅಕ್ಷರಗಳು ತೃಟಿತವಾಗಿದೆ. ಅಲ್ಲದೆ ಈ ಶಾಸನ ಕಲ್ಲು ಪೂಜೆಗೆ ಒಳಪಡುತ್ತಿರುವುದರಿಂದಲೂ ಅಕ್ಷರಗಳು ಸ್ಪಷ್ಟವಾಗಿ ಗೋಚರವಾಗುವುದಿಲ್ಲ. ಶಾಸನದ ಕಾಲವು ನಿರ್ದಿಷ್ಠವಾಗಿ ತಿಳಿಯದಿದ್ದರೂ ಪ್ಲವಂಗ ಸಂವತ್ಸರದ ಜೇಷ್ಟ ಶುದ್ಧ ೧೫ಲು ಎಂದು ತಿಳಿಸುತ್ತದೆ. ಶಾಸನ ತೃಟಿತ ವಾಗಿದ್ದರೂ ಶಾಸನದ ಸಾರಾಂಶವನ್ನು ತಿಳಿಯಲು ಅಡ್ಡಿಯಿಲ್ಲ. ಆದರೆ ಯಾರು ಹೊರಡಿಸಿದರು ಎಂಬುದು ಅಸ್ಪಷ್ಟವಾಗಿದೆ. ಈ ಶಾಸನವು ದಾನಶಾಸನವಾಗಿದ್ದು ಮಹಾರಾಜರವರ ಅಮ್ಮನವರಿಗೆ ಪುಣ್ಯವಾಗಲೆಂದು ದಾನ ನೀಡಿದ ಶಾಸನ ವಾಗಿದೆ. ಏನನ್ನು ದಾನ ನೀಡಿದರು ಎಂಬುದು ಅಸ್ಪಷ್ಟವಾಗಿದೆ.

ಶಾಸನ ಸಂಖ್ಯೆ–೨

೧. ಹ.
೨. ಹೊಡೆಯ.

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
** ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ಈ ಶಾಸನವು ಮೇಲಿನ ಶಾಸನದ ಪಕ್ಕದಲ್ಲಿಯೇ ದೊರೆತಿದ್ದು ಇದು ಒಂದು ರೀತಿ ಹಸ್ತಾಕ್ಷರದಂತಿದೆ ಇಲ್ಲಿ ನಾಲ್ಕು ಅಕ್ಷರಗಳನ್ನು ಮಾತ್ರ ಕಾಣಬಹುದು.

ಶಾಸನ ಸಂಖ್ಯೆ–೩

೧. ಸ್ವಸ್ತಿಶ್ರೀ ಮತು ಕಲ್ಯದ ಜಿ.....

೨. (ನಿ) ಯ ಅನಂತಜಿನದೇವರಿಗೆ ಸರ್ವ.

೩. ಮಾನ್ಯವಾಗಿ (ನವಮಿ) ಹ (ಗ) . . . . . . ತುಗಂ

೪. ಯಿ ದಮ್ಮ ಕಾರ್ಯ(ಕ್ಕೆ) ಅಳುಪಿದವರು

೫. ಗೊ ಬ್ರಹ್ಮ (ಣ)ನ ಕೊಂದ ಪಾಪಕ್ಕೆ ಹೋಗುಹರು.

ಈ ಶಾಸನವು ಊರಿನ ವಾಯುವ್ಯ ಭಾಗದಲ್ಲಿ ಈರಪ್ಪ ಕಟ್ಟೆ ಎಂಬ ಪ್ರದೇಶದಲ್ಲಿ ಬಂಡೆಯ ಮೇಲೆ ಕಂಡುಬರುತ್ತದೆ. ಇದೊಂದು ಜಿನಶಾಸನವಾಗಿದ್ದು ಶಾಸನದ ಮೇಲ್ಭಾಗದಲ್ಲಿ ಛತ್ರಾವಳಿ ಬಲಭಾಗದಲ್ಲಿ ಸ್ವಸ್ತಿಕ್ ಚಿನ್ಹೆ ಇದೆ. ಈ ಶಾಸನವು ಸಹ ತೃಟಿತವಾಗಿದೆ. ಶಾಸನದ ಲಿಪಿಯ ಆಧಾರದ ಮೇಲೆ ೧೬ನೇ ಶತಮಾನದ ಕಾಲದ್ದೆಂದು ನಿರ್ಣಯಿಸಲಾಗಿದೆ. ಕಲ್ಯದ ಆನಂತ ಜಿನದೇವರಿಗೆ ಸರ್ವಮಾನ್ಯವಾಗಿ ಬಿಟ್ಟದ್ದು ಈ ಧರ್ಮವನ್ನು ಹಾನಿ ಮಾಡಿದವರು ಗೋವು ಮತ್ತು ಬ್ರಾಹ್ಮಣನ ಕೊಂದ ಪಾಪಕ್ಕೆ ಹೋಗುವರು ಎಂದಿದೆ. ಮಾಗಡಿಯಿಂದ ೪ ಕಿ.ಮೀ. ದೂರದಲ್ಲಿರುವ ಕಲ್ಯದಲ್ಲಿ ಕಲಿನಾಥ ಅಥವಾ ಕಲ್ಲೇಶ್ವರ ದೇವಾಲಯವನ್ನು ಇಂದು ನಾವು ಕಾಣಬಹುದು. ಇದಕ್ಕೆ ಹಲವಾರು ದಾನದತ್ತಿಗಳನ್ನು ಸಹ ನೀಡಲಾಗಿದೆ. ಆದರೆ ಅನಂತಜಿನದೇವ ಎಂದು ಈ



ಶಾಸನ ಸಂಖ್ಯೆ–೧



ಶಾಸನ ಸಂಖ್ಯೆ–೨

ಶಾಸನದಲ್ಲಿರುವುದು ವಿಶೇಷವಾಗಿದ್ದು ಕಲ್ಯದಲ್ಲಿ ಈ ಹೆಸರಿನ ದೇವಾಲಯ ಇಂದು ಅಸ್ತಿತ್ವದಲ್ಲಿಲ್ಲ. ಇದಕ್ಕೆ ನಿದರ್ಶನವೆಂಬಂತೆ ಒಂದು ಮಾನಸ್ತಂಭವನ್ನು ಕಾಣಬಹುದಾಗಿದೆ. ಕಲ್ಯವು ಪ್ರಾಚೀನ ಕಾಲದಿಂದಲೂ ಪ್ರಸಿದ್ಧ ಜೈನ ಕೇಂದ್ರವಾಗಿ ತ್ತೆಂಬುದನ್ನು ಬುಕ್ಕರಾಯನ ಕಾಲದ ಶಾಸನ ಹಾಗೂ ಇತರೆ ಅಂಶಗಳಿಂದ ವಿದ್ವಾಂಸರು ಗುರುತಿಸಿದ್ದಾರೆ.

ಒಟ್ಟಾರೆಯಾಗಿ ಉಪ್ಪಾರ್ತಿಯಲ್ಲಿ ದೊರೆತಿರುವ ಶಾಸನಗಳು ಸ್ಥಳಿಯ ಇತಿಹಾಸ ರಚನೆಯಲ್ಲಿ ಹೆಚ್ಚಿನ ಮಹತ್ವ ಪಡೆದಿವೆ ಎಂದು ಹೇಳಬಹುದು. ಈ ತಾಲೂಕಿನಲ್ಲಿ ಕಂಡುಬರುವ ಬಹುತೇಕ ಶಾಸನಗಳು ತೃಟಿತವಾಗಿವೆ. ಕೇವಲ ದಾನ ನೀಡಿದವರ ಹೆಸರು ಮತ್ತು ದಾನದ ವಿಷಯವೇ ಪ್ರಧಾನವಾಗಿ ತೃಟಿತವಾಗಿರುವುದು ಕಂಡುಬಂದಿರುವುದೇ ಒಂದು ವಿಪರ್ಯಾಸ. ಉಪ್ಪಾರ್ತಿಯ ಶಾಸನಗಳು ಸಹ ಇದರಿಂದ ಹೊರತಾಗಿಲ್ಲ. ಒಟ್ಟಾರೆಯಾಗಿ ಈ ಶಾಸನಗಳು ಸ್ಥಳೀಯ ಇತಿಹಾಸಕ್ಕೆ ಮಹತ್ವದ ಕೊಡುಗೆ ಎನ್ನಬಹುದು.

[ಕೃತಜ್ಞತೆಗಳು : ಡಾ. ಜಿ. ಕರಿಯಪ್ಪ, ಅಧ್ಯಕ್ಷರು, ಪ್ರೊ. ಎಂ.ಪಿ. ಮಹದೇವಯ್ಯ, ಡಾ. ಕೆ. ಪ್ರಭು., ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ. ಡಾ. ಶಲ್ವ ಪಿಳ್ಳೈ ಅಯ್ಯಂಗಾರ್, ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. ಡಿ.ಎಂ. ನಾಗರಾಜು, ಅನಿಲ್‌ಕುಮಾರ್, ನಾಗರಾಜಪ್ಪ, ನಜಿರ್‌ಉಲ್ಲಾ, ಭಾರತೀಯ ಸರ್ವೇಕ್ಷಣ ಇಲಾಖೆ, ಶಾಸನಶಾಸ್ತ್ರ ವಿಭಾಗ, ಹೆಬ್ಬಾಳ, ಮೈಸೂರು.]

ಕುಂಬಳೂರು ಗ್ರಾಮದ ಅಪ್ರಕಟಿತ ತುಱುಗೋಳ್-ಊರಱಿವಿನ ಸ್ಮಾರಕಗಳು

ನಾಗರಾಜಪ್ಪ ಎಸ್.*

ಕುಂಬಳೂರು ಗ್ರಾಮವು ದಾವಣಗೆರೆ ಜಿಲ್ಲೆ, ಹರಿಹರ ತಾಲೂಕಿನಲ್ಲಿರುವ ಮಲೆಬೆನ್ನೂರು ಹೋಬಳಿಗೆ ಸೇರಿರುವ ಪುಟ್ಟ ಗ್ರಾಮ. ಈ ಊರಿನ ವೀರಶೈವ ರುದ್ರಭೂಮಿಯಲ್ಲಿ ಇತ್ತೀಚೆಗೆ ಕಟ್ಟಲಾಗಿರುವ ಈಶ್ವರ ದೇವಾಲಯದ ಬಳಿ ಶಾಸನೋಕ್ತ ವೀರಗಲ್ಲನ್ನು ಇರಿಸಲಾಗಿದೆ. ದೇವಾಲಯದ ಬಳಿ ಇದರೊಡನೆ ನಾಗಶಿಲ್ಪ, ಶಿವಲಿಂಗದ ಪಾಣಿವಟ್ಟ, ಭೈರವಿ ಮತ್ತು ವಿಷ್ಣು? ಶಿಲ್ಪಗಳೊಡನೆ ಮತ್ತೊಂದು ಶಿಲಾಶಾಸನವಿದೆ. ಶಿಲಾಶಾಸನದಲ್ಲಿರುವ ಅಕ್ಷರಗಳೆಲ್ಲವೂ ಸಂಪೂರ್ಣವಾಗಿ ಸವೆದಿದ್ದು, ಅಲ್ಲೊಂದು ಇಲ್ಲೊಂದು ಅಕ್ಷರ ಮಾತ್ರ ಕಾಣುತ್ತಿರುವುದು ದುರದೃಷ್ಟಕರ. ಪ್ರಸ್ತುತ ಶಾಸನೋಕ್ತ ವೀರಗಲ್ಲನ್ನು ಕುರಿತು ಸವಿವರವಾಗಿ ಚರ್ಚಿಸುವ ಪ್ರಯತ್ನವನ್ನು ಲೇಖನದಲ್ಲಿ ಮಾಡಲಾಗಿದೆ.

ಪ್ರಸ್ತುತ ಶಾಸನೋಕ್ತ ವೀರಗಲ್ಲನ್ನು ಕುಂಬಳೂರು ಗ್ರಾಮದ ವೀರಶೈವ ರುದ್ರಭೂಮಿಯಲ್ಲಿರುವ ಈಶ್ವರ ದೇವಾಲಯದ ಬಲಬದಿಯಲ್ಲಿ ನಿಲ್ಲಿಸಲಾಗಿದೆ. ಸರಿಸುಮಾರು ನಾಲ್ಕು ಅಡಿ ಎತ್ತರ ಇರುವ ವೀರಗಲ್ಲನ್ನು ಹಸಿರು ಮಿಶ್ರಿತ ನೀಲಿ ಛಾಯೆಯ ಬಳಪದ ಶಿಲೆಯಲ್ಲಿ ಕೆತ್ತಿರುವುದನ್ನು ಕಾಣಬಹುದು. ವೀರಗಲ್ಲಿನ ಕೆಳಭಾಗ ಚೌಕಾಕಾರದಲ್ಲಿದ್ದು, ಮೇಲ್ಭಾಗವು ಅರ್ಧವೃತ್ತಾಕಾರದಲ್ಲಿದೆ. ಮೂರು ಪಟ್ಟಿಕೆಗಳಲ್ಲಿ ಕೆತ್ತಲಾಗಿರುವ ವೀರಗಲ್ಲಿನ ವಿಷಯ ನಿರೂಪಣೆ ಕೆಳಗಿನಿಂದ ಮೇಲಕ್ಕೆ ಸಾಗುತ್ತದೆ. ಕೆಳಗಿನ ಹಂತದಲ್ಲಿ ವೀರನ ಹೋರಾಟದ ದೃಶ್ಯವಿದೆ. ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವುದು ಮಧ್ಯದ ಪಟ್ಟಿಕೆಯಲ್ಲಿದ್ದರೆ, ಮೇಲಿನ ಪಟ್ಟಿಕೆಯಲ್ಲಿ ವೀರ ಕೈಲಾಸ ಸೇರಿರುವುದನ್ನು ಕಂಡರಿಸಲಾಗಿದೆ. ಈ ಶಿಲ್ಪಪಟ್ಟಿಕೆಯ ಮೂರು ಹಂತಗಳ ಮಧ್ಯದಲ್ಲಿನ ಎರಡು ಪಟ್ಟಿಕೆಗಳಲ್ಲಿ ಶಾಸನವನ್ನು ಕೊರೆಯಲಾಗಿದೆ. ಮೇಲಿನ ಪಟ್ಟಿಕೆ ಹಾಳಾಗಿರುವುದರಿಂದ ಅಲ್ಲಿನ ಅಕ್ಷರಗಳು ತೃಟಿತವಾಗಿವೆ. ಎರಡನೆಯ ಪಟ್ಟಿಕೆಯಲ್ಲಿರುವ ಅಕ್ಷರಗಳು ಉತ್ತಮ ಸ್ಥಿತಿಯಲ್ಲಿವೆ.



ಶಾಸನದ ಪಾಠ

೧ನೇ ಪಟ್ಟಿಕೆ

೧. ಸ್ವಸ್ತಿಶ್ರೀಮತು . . . . . ವಲಿರಾಜ್ಯ

೨. ದ ಸಕವ[ರ್ಷ]೧೨೩[೫*] ನೆಯ ಪ್ರಮಾದಿ ಸಂವ

೩. [ತ್ಸರದ*] . . . . . ಸ ರಾಜಗುರುಕಾಯ

೪. . . . . . ರ.(ಪ್ಪ)ಯರು ಕುಂಬೂರನಾಳುವಲ್ಲಿ

೨ನೇ ಪಟ್ಟಿಕೆ

೫. ಪೂರಳಿವಿನಲು ನಾರಣಪನು ಸುರಾಲೋಕ ಪ್ರಾಪ್ತನಾದಲ್ಲಿ

೬. ದೇವೂರೊಡೆಯ ಗೋಪಯೊಡೆಯರು ಬಿಟ್ಟ ಕೆ[ಱ*]ಯ ಕಂ

೭ ಬ ೧೫ ಮಂಗ[ಳ*] ಮಹಾಶ್ರೀ

* ಸಹಾಯಕ ಶಾಸನತಜ್ಞ, ನಿರ್ದೇಶಕರ ಕಛೇರಿ, ಭಾರತೀಯ ಪುರಾತತ್ವ ಸರ್ವೇಕ್ಷಣ, ಕೆಡ್ಡಾಳ ೨ನೇ ಕ್ರಾಸ್, ಗಂಗೋತ್ರಿ ಬಡಾವಣೆ ..., ಮೈಸೂರು

ಪ್ರಸ್ತುತ ಶಾಸನದ ಕಾಲದ ಭಾಗ ೧೨೩[೫*] ಎಂದಿದ್ದು, ಯಾವುದೇ ತಿಥಿ ಹಾಗು ನಕ್ಷತ್ರದ ಉಲ್ಲೇಖವಿಲ್ಲ. ಆದರೆ ಸಂವತ್ಸರವನ್ನು ಪ್ರಮಾದಿ ಸಂವತ್ಸರ ಎಂದಿದೆ. ಪ್ರಮಾದಿ ಸಂವತ್ಸರವು ಶಕವರ್ಷ ೧೨೩೫ನೆಯ ವರ್ಷದಲ್ಲಿ ಬರುತ್ತದೆ.[1] ಇದು ಕ್ರಿ.ಶ. ೧೩೧೩ಕ್ಕೆ ಸರಿಹೊಂದುತ್ತದೆ. ಈ ಶಾಸನದಲ್ಲಿ ಕುಂಬಳೂರನ್ನು ಕ್ರಿ.ಶ. ೧೩೧೩ರಲ್ಲಿ ಆಳುತ್ತಿದ್ದ ಪ್ರಮುಖನ ಹೆಸರು ತೃಟಿತವಾಗಿದೆ. ಪ್ರಸ್ತುತ ಶಾಸನವು ಕುಂಬೂರ ಊರಳಿವಿನ ಕಾಳಗದಲ್ಲಿ ನಾರಣಪನು ಮರಣ ಹೊಂದಿದನು. ಆಗ ಅದೇ ಗ್ರಾಮದ ಅಥವಾ ದೇವೂರ ಗ್ರಾಮದ ಮುಖ್ಯಸ್ಥ ಅಥವಾ ಒಡೆಯ ಗೋಪಯೊಡೆಯನು ಕೆರೆಯ ಬಳಿ ೧೫ ಕಂಬವನ್ನು ದಾನ ನೀಡಿದ್ದ ಬಗ್ಗೆ ಶಾಸನ ತಿಳಿಸುತ್ತದೆ. ಊರೊಡೆಯ ಕೆರೆಯ ಬಳಿ ದಾನ ಬಿಟ್ಟ ಎಂಬ ಉಲ್ಲೇಖವಿರುವುದರಿಂದ ಇವನು ಬಹುಶಃ ಕೆರೆಯ ಕೆಳಗಿನ ೧೫ ಕಂಬ ಗದ್ದೆಯನ್ನು ದಾನವಾಗಿ ನೀಡಿದ್ದಿರಬಹುದು.

ಪ್ರಸ್ತುತ ಶಾಸನದಲ್ಲಿ ಉಲ್ಲೇಖಗೊಂಡಿರುವ ಕುಂಬೂರು ಪ್ರಸ್ತುತ ಶಾಸನದಲ್ಲಿ ಉಲ್ಲೇಖಗೊಂಡಿರುವ ಗ್ರಾಮ. ಇದೇ ಗ್ರಾಮದಲ್ಲಿ ದೊರೆತ ಕ್ರಿ.ಶ. ೯೨೯ರ ರಾಷ್ಟ್ರಕೂಟ ಅರಸ ನಾಲ್ಕನೇ ಗೋವಿಂದನ ತಾಮ್ರಶಾಸನವು ಈ ಗ್ರಾಮವನ್ನು ಕುಭವೂರು, ಕುಂಭವೂರು ಎಂದು ಉಲ್ಲೇಖಿಸುತ್ತದೆ.[2] ಇದು ಇಂದಿನ ಕುಂಬಳೂರು ಎಂದು ಗುರುತಿಸಬಹುದು.

ವೀರಗಲ್ಲಿನ ಕೆಳಗಿನ ಪಟ್ಟಿಕೆಯಲ್ಲಿ, ಹೋರಾಟದ ಭಂಗಿಯಲ್ಲಿ ಆಯುಧಗಳ ಸಹಿತ ನಿಂತಿರುವ ವೀರನು ಏಕಾಂಗಿಯಾಗಿ ವೈರಿಗಳ ವಿರುದ್ಧ ಹೋರಾಡುತ್ತಿದ್ದಾನೆ. ವೀರನು ತನ್ನ ಎಡಗೈಯಲ್ಲಿ ಬಿಲ್ಲು ಹಿಡಿದಿದ್ದರೆ. ಬಲಗೈಯಲ್ಲಿ ಆಯುಧವನ್ನು ಹಿಡಿದಿದ್ದಾನೆ. ಬಿಲ್ಲು ಮತ್ತು ಅದಕ್ಕೆ ಕಟ್ಟಿರುವ ದಾರವನ್ನು ಅತ್ಯಂತ ದಪ್ಪವಾಗಿ ತೋರಲಾಗಿದೆ. ವೀರನು ವೀರಗಚ್ಚೆಯನ್ನು ಹಾಕಿಕೊಂಡಿದ್ದು, ಸೊಂಟದಲ್ಲಿ ನಡುಪಟ್ಟಿಯನ್ನು ಧರಿಸಿದ್ದಾನೆ. ನಡುಪಟ್ಟಿಯಲ್ಲಿ ಸಿಕ್ಕಿಸಿಕೊಂಡಿರುವ ಕಠಾರಿಯಲ್ಲಿ ಸಣ್ಣ ಕತ್ತಿಯನ್ನು ಇಟ್ಟುಕೊಂಡಿರುವುದನ್ನು ಶಿಲ್ಪದಲ್ಲಿ ಕಾಣಬಹುದು. ಅಲ್ಲದೆ ವೀರ ತನ್ನ ಎರಡೂ ಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ತನ್ನ ಬಲಗೈಯಲ್ಲಿ ಮಾತ್ರ ಕೈಕಡಗವನ್ನು ಧರಿಸಿದ್ದು, ಇದು ವೀರನ ಶೌರ್ಯ ಮತ್ತು ಧೈರ್ಯದ ಸಂಕೇತವೆನ್ನಬಹುದು. ವೀರನು ತನ್ನ ಕಿವಿಗಳಲ್ಲಿ ಕರ್ಣಕುಂಡಲಗಳನ್ನು ಧರಿಸಿದ್ದು, ಶಿಲ್ಪ ತೃಟಿತವಾಗಿರುವುದರಿಂದ ಅದು ಸ್ಪಷ್ಟವಾಗಿ ಕಾಣುತ್ತಿಲ್ಲ. ವೀರನು ಕೊರಳಲ್ಲಿ ಕಂಠೀಹಾರ ಧರಿಸಿದ್ದಾನೆ. ವೀರನ ಮುಂಬದಿಯಲ್ಲಿ ನಿಂತಿರುವ ಇಬ್ಬರು ಎದುರಾಳಿಗಳು ವೀರನ ಮೇಲೆ ದಾಳಿ ಮಾಡುವುದರಲ್ಲಿ ನಿರತರಾಗಿದ್ದಾರೆ. ಇಬ್ಬರು ತಮ್ಮ ಬಲ ಕೈಗಳಲ್ಲಿ ಉದ್ದನೆಯ ಈಟಿ ಅಥವಾ ಭರ್ಚಿಯನ್ನು ಹಿಡಿದಿದ್ದಾರೆ. ವೀರನ ಸಹಿತ ಅವನ ಎದುರಾಳಿಗಳೂ ಸಹ ಏಕ ಪ್ರಕಾರದ ಖಡ್ಗ ಹಿಡಿದಿರುವುದು ವಿಶೇಷ. ಮೊಣಕಾಲ ವರೆಗೆ ತೊಟ್ಟಿರುವ ಇವರ ಉಡುಗೆಯು ನೆರಿಗೆಗಳಿಂದ ಅಲಂಕೃತವಾಗಿದೆ. ಇಬ್ಬರ ನಡುವಿನಲ್ಲಿ ಸೊಂಟಪಟ್ಟಿಯಿದೆ. ಎದುರಾಳಿಗಳಿಬ್ಬರು ತಮ್ಮ ಕಾಲುಗಳಿಗೆ ಕಡಗಗಳನ್ನು ಹಾಕಿಕೊಂಡಿದ್ದಾರೆ. ಇವರ ಕೊರಳುಗಳಲ್ಲಿ ಕಂಠೀಹಾರಗಳನ್ನು ಹಾಕಿಕೊಂಡಿರುವುದನ್ನು ಕಾಣಬಹುದು. ತೋಳುಗಳಿಗೆ ತೋಳ್ಬಂದಿಯನ್ನು, ಕೈಗಳಿಗೆ ಕೈಕಡಗಗಳನ್ನು ಧರಿಸಿದ್ದಾರೆ. ಇಬ್ಬರೂ ತಮ್ಮ ಕೂದಲನ್ನು ಮುಡಿಕಟ್ಟಿರುವರು. ಕೆಳಗಿನ ಹಂತದಲ್ಲಿ ಕಳ್ಳರೊಡನೆ ಹೋರಾಡುತ್ತಿರುವ ವೀರನ ಹಿಂಬದಿಯಲ್ಲಿ ಒಂದರ ಮೇಲೆ ಒಂದರಂತೆ ಒಟ್ಟು ನಾಲ್ಕು ತುರುಗಳನ್ನು ಕಂಡರಿಸಿರುವುದು ಗಮನಾರ್ಹ. ಈ ಪಟ್ಟಿಕೆಯಲ್ಲಿ ಕೆಳಗೆ ವ್ಯಕ್ತಿಯೊಬ್ಬ ಸತ್ತು ಬಿದ್ದಿರುವಂತೆ ತೋರಲಾಗಿದೆ. ಇವನು ಬಹುಶಃ ಶಾಸನದಲ್ಲಿ ಉಲ್ಲೇಖವಾಗಿರುವಂತೆ ಕುಂಬೂರು ಗ್ರಾಮದ ರಕ್ಷಣೆಗಾಗಿ ಹೋರಾಡಿ ಮಡಿದ ನಾರಣಪ ಎಂದು ಗುರುತಿಸಬಹುದು.

ವೀರಮರಣ ಪಡೆದ ವ್ಯಕ್ತಿಯು ಅಂಜಲಿಮುದ್ರೆಯಲ್ಲಿ ಪೀಠದ ಮೇಲೆ ಕುಳಿತಿರುವುದನ್ನು ಎರಡನೆಯ ಹಂತದಲ್ಲಿ ಕಂಡರಿಸಲಾಗಿದೆ. ಇವನು ಮಂಟಪದಲ್ಲಿ ಕುಳಿತಿರುವಂತೆ ತೋರಲಾಗಿದೆ. ಅತ್ಯಂತ ಆಕರ್ಷಕವಾಗಿರುವ ಮಂಟಪದ ಮೇಲೆ ಕಳಶವನ್ನು ಕಾಣಬಹುದು. ಮಂಟಪದ ಎರಡೂ ಬದಿಯಲ್ಲಿ ಅಪ್ಸರೆಯರು ನಿಂತಿದ್ದಾರೆ. ಅಪ್ಸರೆಯರು ಕ್ರಮವಾಗಿ ತಮ್ಮ ಬಲ ಮತ್ತು ಎಡ ಕೈಗಳಲ್ಲಿ ಚಾಮರವನ್ನು, ಹಾಗೂ ಎಡ ಮತ್ತು ಬಲ ಕೈಗಳಲ್ಲಿ ಮಂಟಪವನ್ನು ಹಿಡಿದುಕೊಂಡಿದ್ದಾರೆ. ಮಂಟಪದ ಬಲಗಡೆ ಇರುವ ಸ್ತ್ರೀ ತನ್ನ ಬಲಕಾಲಿನ ಮಂಡಿಯನ್ನು ನೆಲಕ್ಕೆ ಊರಿದ್ದರೆ, ಎಡಬದಿಯಲ್ಲಿರುವವಳು ಎಡಗಾಲ ಮಂಡಿಯನ್ನು ನೆಲಕ್ಕೆ ಊರಿದ್ದಾಳೆ. ಹಾಗಾಗಿ ಈ ಅಪ್ಸರೆಯರಿರ್ವರು ಚಾಮರದಿಂದ ವೀರನಿಗೆ ಗಾಳಿ ಬೀಸುತ್ತಾ ಅವನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ ಎನ್ನಬಹುದು. ಈ ಅಪ್ಸರೆಯರಿಬ್ಬರು ಕಿರೀಟಗಳನ್ನು ಧರಿಸಿದ್ದು, ವಿವಿಧ ಆಭರಣಗಳನ್ನು ಧರಿಸಿದ್ದಾರೆ. ಇವರ ಉಡುಗೆಗಳನ್ನು ಅತ್ಯಂತ ಸುಂದರವಾಗಿರುವಂತೆ ಚಿತ್ರಿಸಿರುವುದನ್ನು ಶಿಲ್ಪದಲ್ಲಿ ಕಾಣಬಹುದು.

ಮೇಲಿನ ಹಂತದಲ್ಲಿ ಅಂಜಲಿಮುದ್ರೆಯಲ್ಲಿ ಪೀಠದ ಮೇಲೆ ಪದ್ಮಾಸನದಲ್ಲಿ ವೀರ ಕುಳಿತಿದ್ದಾನೆ. ಇವನ ಬಳಿಯಿರುವ ಜಟಾಧಾರಿ ಯತಿಯು ಸಾಕ್ಷಾತ್ ಶಿವನ ಪ್ರತಿರೂಪವಾದ ಶಿವಲಿಂಗವನ್ನು ಪೂಜಿಸುತ್ತಿದ್ದಾನೆ. ವೀರ ಮತ್ತು ಯತಿಯ ಮುಖಗಳು ಭಗ್ನವಾಗಿವೆ. ಶಿವಲಿಂಗದ ಮುಂದೆ ಶಿವನ

ವಾಹನ ನಂದಿಯನ್ನು ಕಂಡರಿಸಲಾಗಿದೆ. ಕಾಳಗದಲ್ಲಿ ವೀರ ಮರಣವನ್ನು ಪಡೆದ ನಾರಣಪ ಕೈಲಾಸವನ್ನು ಸೇರಿದನೆಂಬುದನ್ನು ಸಾಂಕೇತಿಕವಾಗಿ ಮೂರನೇ ಶಿಲ್ಪಪಟ್ಟಿಕೆಯಲ್ಲಿ ತೋರಿಸಲಾಗಿದೆ. ಈ ಪಟ್ಟಿಕೆಯಲ್ಲಿ ನಂದಿಶಿಲ್ಪದ ಮೇಲಿನ ಭಾಗದಲ್ಲಿ ಪದ್ಮದಳಗಳಿಂದ ಕೂಡಿದ ಹೂವಿನ ಅಲಂಕರಣೆಯನ್ನು ಮಾಡಲಾಗಿದೆ. ಅಲ್ಲದೆ ಮೇಲ್ಭಾಗದಲ್ಲಿ ಸೂರ್ಯ ಮತ್ತು ಪೂರ್ಣಚಂದ್ರನನ್ನು ಕೆತ್ತಿರುವರು. ಅರ್ಧವೃತ್ತಾಕಾರದಲ್ಲಿರುವ ವೀರಗಲ್ಲಿನ ಮೇಲ್ಭಾಗದಲ್ಲಿ ಕೀರ್ತಿಮುಖವನ್ನು ಕೆತ್ತಲಾಗಿದೆ. ಕೀರ್ತಿಮುಖದಲ್ಲಿರುವ ಮಣಿಸರದ ಗುಚ್ಛವು ಕೆಳಗೆ ಇಳಿಬಿದ್ದಿದೆ.

ಪ್ರಸ್ತುತ ವೀರಗಲ್ಲಿನ ಕೆಳಗಿನ ಪಟ್ಟಿಕೆಯಲ್ಲಿ ಹೋರಾಡುತ್ತಿರುವ ವೀರನ ಹಿಂಬದಿಯಲ್ಲಿ ೪ ತುರುಗಳನ್ನು ತೋರಲಾಗಿದೆ. ಶಿಲ್ಪದ ಹಿನ್ನೆಲೆಯಲ್ಲಿ ನೋಡಿದರೆ ಇದೊಂದು ತುರುಗೋಳ್ ವೀರಗಲ್ಲಿನಂತೆ ಕಾಣುತ್ತದೆ. ಆದರೆ ಶಾಸನದಲ್ಲಿ 'ಪೂರಳಿವು' ಎಂಬ ಉಲ್ಲೇಖವಿರುವುದರಿಂದ ಇದು ಊರಳಿವಿಗೆ ಸಂಬಂಧಪಟ್ಟ ವೀರಗಲ್ಲು ಎನ್ನುವುದು ಸ್ಪಷ್ಟ. 'ಕಳ್ಳರು ತುರುಗಳನ್ನು ಕದ್ದು, ಸ್ತ್ರೀಯರನ್ನು ಮಾನಭಂಗಗೊಳಿಸಿ, ಊರನ್ನು ನಾಶಪಡಿಸುತ್ತಿದ್ದರು. ಇದನ್ನು ಊರಳಿವು ಅಥವಾ ಊರಿನ ನಾಶ'[೩] ಎನ್ನಲಾಗುತ್ತದೆ. ಆದರೆ ಊರಿನ ನಾಶ ಇಷ್ಟಕ್ಕೆ ಮುಗಿಯುವುದಿಲ್ಲ. ಹಿಂದೆ ಯಾವುದೇ ಊರಿನ ಮೇಲೆ ದಾಳಿಕೋರರು ಆಕ್ರಮಣ ಮಾಡಿದಾಗ ಊರಿನಲ್ಲಿದ್ದ ತುರುಗಳನ್ನು ಕದಿಯುವುದು, ಸ್ತ್ರೀಯರನ್ನು ಅಪಹರಿಸುವುದರೊಡನೆ, ಗ್ರಾಮಸ್ಥರನ್ನು ದೋಚುವುದು ಮತ್ತು ಗ್ರಾಮವನ್ನು ಸುಡುವುದು, ರೈತರು ಬೆಳೆದ ಬೆಳೆಗಳನ್ನು ಕದಿಯುವುದು ಅಥವಾ ಸುಡುವುದು ಮುಂತಾದ ದುಷ್ಕೃತ್ಯಗಳನ್ನು ಮಾಡುತ್ತಿದ್ದರು. ಈ ಬಗೆಯ ಅನೇಕ ನಿದರ್ಶನಗಳು ಕರ್ನಾಟಕದಲ್ಲಿವೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ, ದೊಡ್ಡಉಳ್ಳರ್ತಿ ಗ್ರಾಮದಲ್ಲಿರುವ ವೀರಗಲ್ಲಿನಲ್ಲಿ ವಿವಸ್ತ್ರಳಾದ ಸ್ತ್ರೀಯ ಮಾನಹಾನಿಗೆ ಪ್ರಯತ್ನಿಸಿದವರನ್ನು ವೀರ ಕೊಲ್ಲುತ್ತಿರುವಂತೆ, ಮತ್ತೊಬ್ಬ ಪುರುಷ ಸ್ತ್ರೀಯ ಮೇಲೆ ಆಕ್ರಮಣ ಮಾಡುತ್ತಿರುವಂತೆ ಶಿಲ್ಪದಲ್ಲಿ ತೋರಲಾಗಿದೆ. ಆದರೆ ಶಾಸನವು ಇದನ್ನು 'ಊರಟಿವು' ಎಂದು ಉಲ್ಲೇಖಿಸುತ್ತದೆ.[೪] ಹೊಯ್ಸಳ ಅರಸ ವಿಷ್ಣುವರ್ಧನನು ಘಟ್ಟ ಪ್ರದೇಶದ ಮೇಲೆ ಆಕ್ರಮಣ ಮಾಡಿದಾಗ ಅಡಿಕೆ, ತೆಂಗು, ಮುಂತಾದ ಬೆಳೆಗಳನ್ನು, ತೇಗದ ಮರಗಳನ್ನು ಸುಟ್ಟ ವಿಷಯ ತಿಳಿಯುತ್ತದೆ.[೫] ಹಾಗಾಗಿ ಊರಳಿವಿನಲ್ಲಿ ಸಂಪತ್ತಿನ ಸಂಕೇತವಾದ ತುರುಗಳನ್ನು ಕದಿಯುವುದು, ಸ್ತ್ರೀಯರನ್ನು ಅಪಹರಿಸುವುದು ಸರ್ವೆಸಾಮಾನ್ಯವಾಗಿದ್ದವು. ಪ್ರಸ್ತುತ ಕುಂಬಳೂರು ವೀರಗಲ್ಲಿನಲ್ಲಿ ಸಹ ಇಂತಹ ಚಿತ್ರಣವನ್ನು ಕಾಣಬಹುದು. ಶಾಸನದಲ್ಲಿ ಉಲ್ಲೇಖಿಸುವಂತೆ ದಾಳಿಕೋರರು ಕುಂಬೂರು ಗ್ರಾಮವನ್ನು ಹಾಳು ಮಾಡಲು ದಾಳಿ ಮಾಡಿದಾಗ ಗ್ರಾಮವನ್ನು ಹಾಳುಮಾಡಿ ತುರುಗಳನ್ನು ಕದ್ದಿರುವ ಸಾಧ್ಯತೆಯಿದೆ. ಅವುಗಳ ರಕ್ಷಣೆಗಾಗಿ ನಾರಣಪ ಹೋರಾಡಿ ಮರಣ ಹೊಂದಿದ್ದಾನೆ. ಹಾಗಾಗಿ ವೀರಗಲ್ಲಿನ ಕೆಳಗಿನ ಶಿಲ್ಪಪಟ್ಟಿಕೆಯಲ್ಲಿ ಒಂದೆಡೆ ತುರುಗಳನ್ನು ತೋರಲಾಗಿದೆ ಎನ್ನಬಹುದು.

ಒಟ್ಟಾರೆಯಾಗಿ ಕುಂಬಳೂರು ಗ್ರಾಮದ ವೀರಗಲ್ಲು ಕ್ರಿ.ಶ. ೧೩೧೫ರಲ್ಲಿ ಆ ಗ್ರಾಮದ ಊರಳಿವಿನಲ್ಲಿ ತುರುಗಳನ್ನು ಮತ್ತು ಜನರ ಜೀವವನ್ನು ರಕ್ಷಿಸಿ, ಪ್ರಾಣತ್ಯಾಗ ಮಾಡಿದ ನಾರಣಪನ ಸ್ಮರಣಾರ್ಥ ಹಾಕಲಾಗಿದೆ. ಹಾಗಾಗಿ ಪ್ರಸ್ತುತ ವೀರಗಲ್ಲನ್ನು ನಾರಣಪ್ಪನ ಪ್ರಾಣತ್ಯಾಗದ ಸಂಕೇತವೆನ್ನಬಹುದು. ವೀರಗಲ್ಲಿನಲ್ಲಿ ಎದುರಾಳಿಗಳೊಡನೆ ನಾರಣಪನ ಹೋರಾಟ, ಅಪ್ಸರೆಯರು ಅವನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಹಾಗೂ ನಾರಣಪ್ಪ ಕೈಲಾಸ ಸೇರಿದ ದೃಶ್ಯಗಳನ್ನು ಅತ್ಯಂತ ಸೊಗಸಾಗಿ ಶಿಲ್ಪಿ ಕಂಡರಿಸಿದ್ದಾನೆ.

[ಪ್ರಸ್ತುತ ಶಾಸನವನ್ನು ನನ್ನ ಗಮನಕ್ಕೆ ತಂದು, ಓದಲು ಸಹಕರಿಸಿದ ದಾವಣಗೆರೆಯ ಸಂಶೋಧಕರಾದ ಶ್ರೀ ಬುರುಡೆಕಟ್ಟೆ ಮಂಜಣ್ಣ ಮತ್ತು ಶ್ರೀ ರಾಘವೇಂದ್ರಾಚಾರ್ ಅವರಿಗೂ ಮತ್ತು ಪ್ರಸ್ತುತ ಲೇಖನ ರಚಿಸಲು ಅನುಮತಿ ನೀಡಿದ ಡಾ. ಟಿ.ಎಸ್. ರವಿಶಂಕರ್, ಪ್ರಭಾರ ನಿರ್ದೇಶಕರು (ಶಾಸನಶಾಸ್ತ್ರ), ಭಾರತೀಯ ಪುರಾತತ್ವ ಸರ್ವೇಕ್ಷಣ, ಮೈಸೂರು ಇವರಿಗೆ ಧನ್ಯವಾದಗಳು. ಪ್ರಸ್ತುತ ಲೇಖನದಲ್ಲಿರುವ ಛಾಯಾಚಿತ್ರವು ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಸ್ವಾಮ್ಯಕ್ಕೆ ಒಳಪಟ್ಟಿದೆ].

ಆಧಾರಸೂಚಿ

೧. Swamy Kannu Pillai L.D., *An Indian Ephemeris*, Vol. 4, pp. 228

೨. Ramesh K.V. and Sampath M.D., Kumbaluru plates of Govinda. *Journal of Epigraphical Society of India*. Vol 17, PP 45 ff.

೩. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ, ಪುಟ ೬೦

೪. ಎಪಿಗ್ರಫಿಯಾ ಕರ್ನಾಟಿಕಾ, ಸಂ.೧೧ (ಹಳೆಯದು), ಚಳ್ಳಕೆರೆ, ಶಾಸನ ಸಂಖ್ಯೆ-೬

೫. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಪುಟ ೧೬೫

ಮುದ್ದೇಬಿಹಾಳದ ಅಪ್ರಕಟಿತ ಶಾಸನಗಳು

ಡಾ. ಮಹೇಶಕುಮಾರ ಹ. ಪಾಟೀಲ* ಅಶೋಕ ಕೆ. ಕಂದಗಲ್ಲ**

ಮುದ್ದೇಬಿಹಾಳವು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಮುಖ್ಯ ಪಟ್ಟಣವಾಗಿದೆ. ಮುದ್ದೇಬಿಹಾಳದಲ್ಲಿ ಇತ್ತೀಚಿಗೆ ಎರಡು ಶಾಸನಗಳು ದೊರೆತವು. ಬಿಜಾಪುರ ಶಾಸನಗಳಿಗೆ ಪರಿಶೀಲಿಸಲಾಗಿ ಇವೆರಡು ಹೊಸ ಶಾಸನಗಳೆಂದು ಕಂಡುಬಂದಿತು. ಅವುಗಳ ಕುರಿತು ವಿವರವಾದ ಅಧ್ಯಯನವನ್ನು ಕೈಕೊಂಡು ಮಾಹಿತಿಯನ್ನು ನೀಡುತ್ತಿದ್ದೇವೆ.

ಒಂದನೆಯ ಶಾಸನ

ಇಲ್ಲಿಯ ಈಶ್ಯಾನ್ಯದ ಕಡೆಗಿರುವ ಕೋಟೆಯ ಒಳಗಡೆಯ ಪ್ರಾಚೀನ ಶಿವದೇವಾಲಯದಲ್ಲಿ ಈ ಶಾಸನವು ಪತ್ತೆಯಾಗಿದೆ. ಪ್ರಸ್ತುತ ಶಾಸನವು ೬ ಅಡಿ ಎತ್ತರ ಹಾಗೂ ೧.೫ ಅಡಿ ಅಗಲ ಮತ್ತು ೮ ಇಂಚು ದಪ್ಪವಾಗಿದ್ದು, ೩೫ ಸಾಲುಗಳನ್ನು ಒಳಗೊಂಡಿದೆ. ಈ ಶಾಸನವನ್ನು ಕಪ್ಪು ಬೆಣಚುಕಲ್ಲಿನಲ್ಲಿ ಕೆತ್ತಲಾಗಿದೆ. ಶಾಸನದ ಮೇಲ್ಭಾಗದ ಫಲಕದ ಮಧ್ಯದಲ್ಲಿ ಈಶ್ವರಲಿಂಗವನ್ನು, ಅದರ ಇಕ್ಕೆಲಗಳಲ್ಲಿ ಸೂರ್ಯ-ಚಂದ್ರ ಮತ್ತು ಅದರ ಎಡಕ್ಕೆ ನಂದಿ, ಬಲಕ್ಕೆ ಆಕಳು-ಕರುಗಳನ್ನು ಕೆತ್ತಲಾಗಿದೆ.

ಶಾಸನವು ನಮಸ್ತುಂಗ ಶಿರಶ್ಚುಂಬಿ ಎಂಬ ಮಂಗಲ ಪದ್ಯದಿಂದ ಆರಂಭಗೊಳ್ಳುತ್ತದೆ. ಶಾಸನದ ಕಾಲವನ್ನು ಶಾಸನದಲ್ಲಿ "ಶ್ರೀ ರಾಮಚಂದ್ರದೇವ ರಾಜ್ಯೋದಯದ ೧೨ ಚಿತ್ರಭಾನು ಸಂವತ್ಸರದ ಸಂಕ್ರಾತಿಯಲಿ" ಎಂದು ಉಲ್ಲೇಖಿಸಲಾಗಿದೆ. ಈ ರಾಮಚಂದ್ರದೇವನು ದೇವಗಿರಿ ಯಾದವ (ಸೇವುಣ)ರ ದೊರೆಯಾಗಿದ್ದು, ಈತನು ಕ್ರಿ.ಶ. ೧೨೭೧-೧೩೧೨ರವರೆಗೆ ಆಳ್ವಿಕೆ ಮಾಡಿರುವನು. ಹಾಗಾದರೆ ೧೨೭೧ಕ್ಕೆ ೧೨ ವರ್ಷಗಳನ್ನು ಕೂಡಿದಾಗ, ಕ್ರಿ.ಶ. ೧೨೮೩ನೆಯ ವರ್ಷ ದೊರೆಯುತ್ತದೆ. ಅಲ್ಲದೇ ಚಿತ್ರಭಾನು ಸಂವತ್ಸರವು ಕ್ರಿ.ಶ. ೧೨೮೨ ಏಪ್ರಿಲ್‌ನಿಂದ ಕ್ರಿ.ಶ. ೧೨೮೩ ಮಾರ್ಚ್‌ವರೆಗೆ ಇರುತ್ತದೆ. ಹಾಗಾಗಿ ಈ ಶಾಸನವನ್ನು ಕ್ರಿ.ಶ. ೧೨೮೩ರಲ್ಲಿ ನೀಡಲಾಗಿದ್ದು ಎಂದು ತಿಳಿದುಬರುತ್ತದೆ. ಜೊತೆಗೆ ಯಾದವ ರಾಮಚಂದ್ರದೇವನ ಸಾಮಂತನಾದ ದೇವರಾಣೆಯ, ಸೋಮನೆಂಬ ಅಧಿಕಾರಿ ಮತ್ತು ತಂತ್ರಪಾಳ ಹೆಮ್ಮಾಡಿಯೆಂಬ ಅಧಿಕಾರಿಗಳ ಹೆಸರುಗಳು ಕಂಡುಬರುತ್ತವೆ.

ನಾಲ್ವತ್ತುಂಬಾಡದ (ನಾಲತವಾಡ) ನಾಡೊಳಗ ಸಿರಿವೊಳಲ (ಶಿರೋಳ) ಬಳಿಯಲ್ಲಿ ಕೊಳ್ಳದ ಭೈರವನ ನಾಡಿಗೆ ಮೂಲಸ್ಥಾನವಾಗಿ ಲಕುಮೇಶ್ವರ ದೇವರನ್ನು ಯಾದವ ರಾಮಚಂದ್ರದೇವ ಪ್ರತಿಷ್ಠಾಪಿಸುತ್ತಾನೆ. ಪ್ರಸ್ತುತ ಶಾಸನವು ಮುದ್ದೇಬಿಹಾಳದ ಕೋಟೆಯ ಗೋಡೆಯಲ್ಲಿರುವ ಪ್ರಾಚೀನ ಶಿವದೇವಾಲಯದಲ್ಲಿ ದೊರಕಿದ್ದು, ಈ ದೇವಾಲಯವು ಮೂಲತಃ ಲಕುಮೇಶ್ವರ ದೇವಾಲಯವಾಗಿರಬಹುದು. ಆ ದೇವಾಲಯದ ವಾಸ್ತುಲಕ್ಷಣಗಳನ್ನು ಗಮನಿಸಿದಾಗ, ಪ್ರಸ್ತುತ ದೇವಾಲಯವು ಆ ಕಾಲಕ್ಕೆ ಸೇರಿದ್ದೆಂದು ತಿಳಿದುಬರುತ್ತದೆ. ಈ ದೇವಾಲಯವಿದ್ದ ಪ್ರದೇಶವನ್ನು ಇಂದಿಗೂ ಶಿರೊಳಕೊಳ್ಳ ಎಂದು ಕರೆಯಲಾಗುತ್ತದೆ. ಹಾಗಾಗಿ ಈ ಶಾಸನದ ಕಾಲಕ್ಕೆ ಮುದ್ದೇಬಿಹಾಳ ಎಂಬ ಪಟ್ಟಣವಿದ್ದ ಬಗ್ಗೆ ಯಾವುದೇ ಮಾಹಿತಿ ದೊರಕುವುದಿಲ್ಲ.

ಹೀಗೆ ದೇವಾಲಯವನ್ನು ಪ್ರತಿಷ್ಠಾಪಿಸಿದಾಗ ಅಲ್ಲಿನ ದೇವರ ಅಂಗಭೋಗ, ರಂಗಭೋಗ, ಚೈತ್ರ-ಪವಿತ್ರ, ದೇವರ ಪೂಜೆ, ಧೂಪಾರತಿ ಮುಂತಾದವುಗಳಿಗಾಗಿ ಮೇಲೆ ಉಲ್ಲೇಖಿಸಲಾದ ಸಾಮಂತ ದೇವರಾಣೆಯನು ಅರಸನ ಅನುಮತಿಯನ್ನು ಪಡೆದು ನಾಲ್ವತ್ತಿಬ್ಬರು, ಸ್ಥಳಸಮಸ್ತರು, ಮುಮ್ಮುರಿದಂಡಗಳ ಸಮಕ್ಷಮದಲ್ಲಿ ಭೂದಾನವನ್ನು ನೀಡುತ್ತಾನೆ. ಅದರ ಸೀಮೆಯನ್ನು ಶಾಸನದಲ್ಲಿ ಈ ಮುಂದಿನಂತೆ ನೀಡಲಾಗಿದೆ.

"ಕೆಂಗೆರೆಯ ಎಡದೆಸೆಯ ಕೋಡಿಯಿಂ ಪಡುವಲು ಕಮ್ಮಾರ ಠಾಣೆಯಂ ಮೂಡಲು ಕೋಳೂರ ದಾರಿಯ ಪಡುದೆಸೆಯಿಂ ತೆಂಕಲು ಚತುರಾಘಾಟ ಬಡಗಲು ಸಿಡಿಲು ಭಾವಿಯ ಕೆರೆಯ ಮಧ್ಯದಲ್ಲಿ ಬರುವ ೩೦೦ ಮತ್ತರು ಭೂಮಿ" ಜೊತೆಗೆ ಸಿರಿವೊಳಲದೊಳಗೆ ದೇವರಿಗೆ "೧ ಕೇರಿ (ಓಣಿ), ೨ ಗಾಣ, ೧ ಹೇರಿಗೆ ಕಾಲು ಕೊಳಗ"ವನ್ನೂ ಹಾಗೂ ನಾಲ್ವತ್ತುಂಬಾಡದ (ನಾಲತವಾಡ) ನಾಡೊಳಗಣ ಸಂತೆವೊಳಗೆ

* ಸಹ ಉಪನ್ಯಾಸಕರು, ಇತಿಹಾಸ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ದಾರವಾಡ
* ಉಪನ್ಯಾಸಕರು, ಇತಿಹಾಸ ವಿಭಾಗ, ಶಂಕ್ರಪ್ಪ ಸಕ್ರಿ ಪದವಿಪೂರ್ವ ಮಹಾವಿದ್ಯಾಲಯ, ಬಾಗಲಕೋಟೆ.

ಮಾಡುವ ವಸ್ತುಗಳ ಮೇಲೆ ಹಾಕಲಾಗುವ ಕೆಲವು ಸುಂಕ ಗಳಾದ "ಹೊರೆಗೆ ಒಮ್ಮಾನ ಭತ್ತ, ಹೇರಿಂಗೆ ಒಮ್ಮಾನ, ಹೆಡಗೆಗೆ ಅರಮಾನ. ಕೊಡ ಎಣ್ಣೆಗೆ ಸೊಲ್ಲಿಗೆ. ಹೇರಿಂಗೆ ೧೨ ಕಾಯಿ, ಹೆಡಗೆಗೆ ೬ ಕಾಯಿ, ಹೇರಿಂಗೆ ೧೦೦ ಎಲೆ, ಹೊತ್ತಿಳಿಕ್ಕೆ ೨೧ ಎಲೆ"ಗಳನ್ನು ದಾನ್ಯ ಮಾಡಿ ದೇವರಿಗೆ ಬಿಟ್ಟುಕೊಡಲಾಗಿದೆ. ಜೊತೆಗೆ ಬಳ್ಳುಬಟ್ಟೆ (ಬಳಬಟ್ಟಿ)ಯಲ್ಲಿ "೨ ಮತ್ತರು ಕೆಯ್ಯಿ"ಯನ್ನು ಕೋಮರಯ ಕೊಟ್ಟಯ್ಯ ನಾಯಕನು ದೇವರಿಗೆ ಬಿಟ್ಟುಕೊಟ್ಟಿದ್ದಾನೆ. ಅಲ್ಲದೇ ಹೊಡಲಗೇರೆ(ಹಡಲಗೇರಿ)ಯ ಪ್ರಭುಗಳು "೬ ಮತ್ತರು ಕೆಯ್ಯ ಮತ್ತು ೧ ಮತ್ತರು ತೋಟ"ಗಳನ್ನು ಬಿಟ್ಟುಕೊಟ್ಟಿರುವರು. ನಾಗಪುರ(ನಾಗೂರ)ದಲ್ಲಿ ಸೋವಗೌಡನ ಮಕ್ಕಳು "೪ ಮತ್ತರು ಕೆಯ್ಯಿ ಮತ್ತು ಹೊಸ್ತಿಲಿಗೆ ೧ ಹಾಗ"ವನ್ನು ಬಿಟ್ಟುಕೊಟ್ಟರು. ಮತ್ತು ನಾಲ್ವತ್ತುಂಬಾಡದ(ನಾಲತವಾಡ) ನಾಡಕುರುಬರು "ಹಿಂಡಿಗೆ ೧ ಮರಿಯನ್ನು ಬಿಟ್ಟುಕೊಟ್ಟರು ಎಂಬ ವಿಷಯವನ್ನು ಈ ಶಾಸನ ತಿಳಿಸುತ್ತದೆ. ಈ ಎಲ್ಲ ಮೂಲಗಳಿಂದ ಬರುವ ಆದಾಯದಿಂದ ಆ ದೇವಸ್ಥಾನದ ಕೆಲಸ ಕಾರ್ಯಗಳೆಲ್ಲವೂ ನಡೆಯುತ್ತಿದ್ದವು.

ಈ ಶಾಸನದಿಂದ ತಿಳಿದುಬರುವ ಕೆಲವು ಸ್ಥಳನಾಮಗಳನ್ನು ಗಮನಿಸಿದಾಗ ಪ್ರಾಚೀನ ಕಾಲದಲ್ಲಿ ಈ ಪ್ರದೇಶದಲ್ಲಿ ಕಂಡುಬರುವ ಗ್ರಾಮನಾಮಗಳು ಅಷ್ಟೇನೂ ಬದಲಾವಣೆಯಾಗಿರದೇ ಇರುವುದು ಕಂಡುಬರುತ್ತದೆ. ಅವುಗಳನ್ನು ಈ ರೀತಿಯಾಗಿ ನೋಡಬಹುದು. ಸಿರಿವೊಳಲು ಶಿರೋಳ, ಕೋಳೂರ-ಕೋಳೂರು, ಬಳ್ಳುಬಟ್ಟೆ-ಬಳಬಟ್ಟಿ, ಹೊಡಲಗೇರಿ-ಹಡಲಗೇರಿ, ನಾಗಹುರ-ನಾಗೂರ, ನಾಲ್ವತ್ತುಂಬಾಡ-ನಾಲತವಾಡ. ಅಲ್ಲದೇ ಈ ಎಲ್ಲ ಗ್ರಾಮಗಳೂ ಮುದ್ದೇಬಿಹಾಳದ ಪಟ್ಟಣದ ಸುತ್ತಮುತ್ತಲೂ ಕಂಡುಬರುತ್ತವೆ.

ಶಾಸನದ ಪಠ್ಯ

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾ

೨. ರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂ(ಭಾ)ಯ ಸಂಭವೇ॥ ಶ್ರೀಗಿರಿಜೆ

೩. ರಚಾಗಿದಯಾಪರಚಿಂತ್ಯಾನಗರಾರಂಭಂ ನಾಗರ . . ವಳವಂದಿತಭೋಗಿ . .

೪. ದೇವನಿಗೆ ಸುಕಸಂಪದವಂ॥ವ॥ ಅದೆಂತೆಂದೆಡೆ ಕ್ರಿತಮುಗ ತ್ರೇತ ದ್ವಾಪರ . . .

೫. ವೆಂಬ ನಾಲ್ಕು ಯುಗವಂ ಪ್ರವರ್ತಿಸಲಾದಂ ಬಳಿಕ ತ್ರೇತಾಯುಗದೊಳಂ . . .

೬. ಭುವನಾಸ್ರಂಯ ಶ್ರೀ ಪ್ರಿಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪರಮಭಟ್ಟಾರ

೭. ಕಂ ಸತ್ಯಾಶ್ರಯನೆನಿಪ ದಸರಥನುದರದೊಳಂ ಜನಿಸಿ॥ ಶ್ರೀರಾ . . ದಸಸರಥತ

೮. ನಯಂ ಕಾಕುಶ್ಚ್ಯ ಕರುಣಾಕರಂ ಪಿಪ್ರಿಯಂ ರಾಮ[ಚಂ]ದ್ರಂ ಸತ್ಯಸಾವಂ

೯. ತಂ ಸಾವಲೋ ಸಾಂತಮೂರ್ತಿವಂದೆ ಲೋಕಾಭಿ ರಾಮನುಂ . . ಕುಲತಿಲಕನುಂ ಪೂ

೧೦. ರುಸೋತ್ತಮನುಂ ಅಗಣ್ಯ ಪುಣ್ಯೋದಯನುಂ ದೇವಜನಾ . . ನುಂ ಧರಣಿಧಾರನುಂ ತಾವ(ರತಿ?)

೧೧. . . . ಂ ತಾಟ . ವರ್ಧನರುಂ ರಾವಣಶಿರಚ್ಛೇದಕರುಂ ಭೂ . . . ರುಂ ಕಳದು ಜಂಬೂದ್ವೀಪದೊಳು ಅ

೧೨. ನಂತ ಲಿಂಗಮಂ ಪ್ರತಿಷ್ಠೆಯಂ ಮಾಡಿಬರುತ್ತ ನಾಲ್ವತ್ತುಂ ಬಾಡನಾಡೊಳಗೆ ಸಿರಿವೊಳಲ ಹೊರವಳ ಜ

೧೩. . ಳಪಾಸಾಳ(ಣ)ಚಕ ಸುಕ್ಷೇತ್ರವರಿದು ರಾಮನಾಥ ಲಕುಮೇಸ್ವರದೇವರಂ ಆಕ್ಷೇತ್ರಕೆ ಅಧಿಪತಿ ಕೊಳ್ಳ

೧೪. ದ ಭೈರವನಂ . ನಾಡಿಗೆ ಮೂಲಸ್ತಾನನಾಗಿ ರಾಮನಾಥ ಪ್ರತಿಷ್ಠೆಯಂ ಮಾಡಿ ರಾಜ್ಯಂಗೆಯ್ಯುತ್ತ

೧೫. . ಕಲುಂ ವ್ರಿ ತ್ತುಂಗದುತುಂಗ ಮಾತಂಗತುರಂಗ ಸಮಾಸ್ರಯ ಸಂಕು(ದೊಜ್ಜಾ?)

೧೬. ರಾಜ್ಯಶ್ರೀ ಸೋಭಿತ ಯಾದವಾನ್ವಯಂ॥ ಸ್ವಸ್ತಿ ಶ್ರೀಮತು ಯಾದವನಾರಾಯಣ ಭೂ

೧೭. ಜಬಳ ಪ್ರೌಢಪ್ರತಾಪ ಚಕ್ರವರ್ತಿ ಶ್ರೀ ರಾಮಚಂದ್ರದೇವ ರಾಜ್ಯೋದಯ

೧೮. ದ ೧೨ ಚಿತ್ರಭಾನು ಸಂವತ್ಸರದ ಸಕವರುಷ ೧೨೦೦ ಚೌಕಾಲದುರ್ಗಕೆ ನಗಳ್ತೆವಡೆದ ದೇವಗಿರಿಯ

೧೯. ತಳವೀಡಿನೊಳು ಸುಕಸಂಕತವಿನೋದದಿಂದ ರಾಜ್ಯಂಗೆಯ್ಯುತ್ತಮಿರಲುಂ ಅನಂತ

೨೦. . . . ರಾಮದಂಡಾದೀಸ ಮಂಡಳಿಗೋಮನ ಪುರುಖೆಯ ನಾಯಕನೂರ್ಜ್ಜಿತ

೨೧. . . . . . ದೇವರಾಣೆಯ ನುಡಿದಂತೆಗಂಡ ಕಲಿಯುಗ ಗಣೋತ್ತಮನುಂ ವಕ್ರಿ . . .

೨೨. . . . . ಸಂಕ್ರಾಂತಿಯಲಿ ದೇವರ ಅಂಗಭೋಗ ರಂಗಭೋ

೨೩. ಗ ಚೈತ್ರಪವಿತ್ರ . . . . . . ರಮಾಗಿ ಧಾರಾಪೂರ್ಬ್ಬಕಂ ಮಾಡಿ ಬಿಟ್ಟ ಅ

೨೪. ದರ . . . . ಡಳ . . . . . ನಾಲ್ವತ್ತಿಬ್ಬರು ಸ್ತಳಸಮಸ್ತ ಮುಮ್ಮರಿದಂಡಂಗ

೨೫. ಳ ಸಮಕ್ಷದಲಿ ಬಿಟ್ಟ ಧರ್ಮ್ಮವ . . . . ವಹವ್ರಿ . . . ವನಂತಶಿಖಾಮಣಿ ಯಾದವಗೋ



ಶಿವದೇವಾಲಯದಲ್ಲಿ ದೊರೆತ
ಯಾದವ ರಾಮಚಂದ್ರದೇವನ ಶಾಸನ

೨೬. ತ್ರ ಯಾದವಾಂಬರ ದಿನಪತಿ ಯಾದವಕುಳಾಬ್ಧಿ ಚಂದ್ರಂ ಯಾದವಸಂತಾನ ನೆರಲ . . .
೨೭. . . . ಂ ಯಾದವನೃಪಕುಳತಿಳಕಂ ಯಾದವಕುಲಕುಮುದಿನಿ ನಿಸಾಕನುದ್ಗತು . . ೪ವ ಜನಾರ್ಧನಂ
೨೮. ಲರಿ . . ಯೊಳು ನೆಗಳ್ದ ವೀರಸೋಮನೃಪಾಳನುಂ॥ ಅ . ನತ . ವ ಅವನಂ . . ತಳದೊಳು ಅತುಳ
೨೯. ಮೂರ್ತಿ ಹೆಮ್ಮಾಡಿನೃಪಾಳನುಜಾತಕುಲ ರಾ . . ಯಾನ್ವಯ ಭೂತಳದೊಳು ಸುಜನಜನ . . .
೩೦. . . ಂ ಸುರಧೇನುವಿಂ ಸರ್ವ್ವೋರ್ಬ್ಬಿರುಹುಂ . . . . ಧಿಕಮಾಗಿರೆ ಲೋಕಕ್ಕೆ . . ಯ . . ಯನ
೩೧. ರಿ ರಾಜ್ಯಕ್ಕೆ ಪರಿಯಿಸಿದಂ ವಿಜಯ ತೈಲಪ . . ನಿಪ್ರರತ್ನಂ॥ ಭೂಮಿಯವಿರತಕರ
೩೨. ಭಾವಿಯ ಕರೆಯ ಪಡುದೆಸೆಯ ಕೋಡಿಯಿಂ ಮೂಡಲ ಕೋಳೂರ
೩೩. ದಾರಿಯಿಂ ಪಡುದೆಸೆಯಿಂ ತೆಂಕಲು ಚತುರಾಘಾಟ ಮತ್ತರು ೩೦೦ ಸಿರಿವೊಳಲಮಳಗೆ
೩೪. ದೇವರಿಗೆ ಕೇರಿ ೧ ಗಾಣ ೨ ಮಾರಕೊಂಡಲ್ಲಿ ೧
೩೫. ಆ ಹೇರಿಗೆ ಕಾಲ ಕೊಳಗ ಚರ ನಾಲ್ವತುಂಬಾಡ ನಾಡೊಳಗೆದು . ರಿಗೆ ಹಣ ೧ ಮವಿಗೆ ಲೋಕುಳದಾ
೩೬. ನವಿಟ್ಟನಾಸ್ಸುಭಿಕ್ಷವಾಗಿ ನಾಡ ಸಂತೆಮೊಳಗೆ ಒಮ್ಮನ ಭತ್ತ ಹೇರಿಂಗೆ ಒಮ್ಮನಮಂ ಹೆಡಗೆಗೆ ಅ
೩೭. ರಮಾನ ಹೊಡೆಕ್ಕೆಯಂಣ್ಣೆ ಸೊಲ್ಲಿಗೆ ಹೇರಿಂಗೆಕಾಯಿ ೧೨ ಹೆಡಗೆಗೆ ೬ ಹೇರಿಂಗೆ ಎಲೆ ೧೦೦ ಹೊತ್ತಳಕ್ಕೆ ೨೫ . . ರ
೩೮. ಹೇರಿಂಗೆ ೨೦ ಮಾನ್ಯವಂ ಮಾಡಿ ದೇಳ ದೇವರ ಧೂಪಾರತಿ . ಗದಹ . ಯ ಸರ್ಬ್ಬಮನನ್ನವ ಕೊಟ್ಟ ತೈಲಪದೇವ
೩೯. ಬಳುಬಟ್ಟೆಯ ಕೊಡುಗೆಯ ಒರಟನವಂಮತ್ತರು ಕೆಯ್ಯ ಕೋಮರಯ ಕೊಟ್ಟಣ
೪೦. ಯ್ಯನಾಯಕ ತೈಲಪದೇವನ ಸಮಕ್ಷದಲಿ ಬಳ್ಳುಬಟ್ಟೆಯ . ಲಿ ಮತ್ತರು ಕೆಯ್ಯಿ ಕೊಟ್ಟ ಹೊಡಲಗೆರೆಯಲಿ ಪ್ರಭುಗಳು
೪೧. ಯರವತ್ತುಕೆಯ್ಯ ವಂಮತ್ತರು ತೋಟವಂ ಕೊ
೪೨. ಟ್ಟರು ಮಾದರ ಸೋವಗೌಡನ ಮಕ್ಕಳು ದೇವರಿಗೆ ನಾಲ್ಕು ಮತ್ತರು ಕೆಯ್ಯ ಮತ್ತಂ ನಾಗಪುರದಲಿ ಶಿಬಲ
೪೩. ವಲಿ ಹೊಸ್ತಿಲಿಗೆ ಹಾಗ ನಾಲ್ವತ್ತುಂಬಾಡನಾಡ ಕುರುಬರಲ್ಲಿ ಹಿಂ
೪೪. ಡಿಂಗೆ ಮರಿ ೧ ಪಟ್ಟಣದೊಳೆ ತಂತ್ರಹಾಳನ ಮನೆಯ ಬಡಗದೆಸೆಯ
೪೫. ೧೨ ಕೆಯ್ಯ ವನವ ಬರಿಕರಲ್ಲಿ ಮಪ್ಪಕಟ್ಟಿಗೆ ಒಬಳ

ಎರಡನೆಯ ಶಾಸನ

ಮುದ್ದೇಬಿಹಾಳದ ಆಗ್ನೇಯ ದಿಕ್ಕಿನಲ್ಲಿರುವ ಪದ್ಮಾವತಿ ದೇವಸ್ಥಾನದಲ್ಲಿರುವ ಆದಿನಾಥ ತೀರ್ಥಂಕರನ ಪಾದಪೀಠದ ಮೇಲೆ ೩ ಸಾಲುಗಳ ಶಾಸನವೊಂದು ಕಂಡುಬಂದಿದೆ. ಕಪ್ಪು ಬಳಪದ ಕಲ್ಲಿನಲ್ಲಿ ಕೆತ್ತಿರುವ ೨.೫ ಅಡಿ ಎತ್ತರದ ಆದಿನಾಥನ ವಿಗ್ರಹವಿದಾಗಿದ್ದು, ಅದರ ಕೆಳಗೆ ಪಾದಪೀಠದಲ್ಲಿ ಈ ಶಾಸನವನ್ನು ಕೆತ್ತಲಾಗಿದೆ. ಕಾಲದ ಉಲ್ಲೇಖವಿಲ್ಲದ ಈ ಶಾಸನವು ಲಿಪಿಯ ಆಧಾರದ ಮೇಲೆ ಸುಮಾರು ಕ್ರಿ.ಶ. ೧೧-೧೨ನೆಯ ಶತಮಾನಕ್ಕೆ ಸೇರಿದ್ದಾಗಿದೆ. ಇದು ಮೂಲ ಸಂಘ ದೇಶಿಯಗಣ ಪುಸ್ತಕಾನ್ವಯದ ಶ್ರೀಮುನರೇಂದ್ರಕೀರ್ತಿ ತ್ರೈವಿದ್ಯದೇವನನ್ನು ಹೆಸರಿಸುತ್ತಿದ್ದು, ಮುದ್ದೇಬಿಹಾಳದಲ್ಲಿ ಈ ಸಂಘದ ಜೈನಗಣವು ಕ್ರಿ.ಶ. ೧೧-೧೨ನೆಯ ಶತಮಾನದಿಂದಲೇ ಇತ್ತೆಂದು ತಿಳಿದುಬರುತ್ತದೆ. ಪ್ರಸ್ತುತ ಶಾಸನದಲ್ಲಿ ಮಾದಿಸೆಟ್ಟಿ ಎಂಬುವವನು ಈ ತೀರ್ಥಂಕರನ ಮೂರ್ತಿಯನ್ನು ಮಾಡಿಸಿದನೆಂದು ಉಲ್ಲೇಖವಿದೆ. ಹಾಗಾಗಿ ಮುದ್ದೇಬಿಹಾಳದಲ್ಲಿ ಕೂಡ ಜೈನಧರ್ಮ ಅಸ್ತಿತ್ವದಲ್ಲಿತ್ತೆಂದು ಹೇಳಬಹುದು.

ಶಾಸನದ ಪಠ್ಯ

೧. ಸ್ವಸ್ತಿ ಶ್ರೀ ಮೂಳಸಂಘ ದೇಶಿಯಗಣ ಪುಸ್ತಕಾನ್ವ
೨. ಯ ಶ್ರೀ ಮಂನರೇಂದ್ರಕೀರ್ತಿ ತ್ರೈವಿದ್ಯದೇವರ್ಗ್ಗೆ ಮಾದಿ
೩. ಸೆಟ್ಟಿ ಮಾಡಿಸಿದ ॥

ಮಂಗಳೂರಿನ ಶ್ರೀಮಂತಿಬಾಯಿ ಸ್ಮಾರಕ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿರುವ ಅಪ್ರಕಟಿತ ಶಾಸನಗಳು

ಶೇಜೇಶ್ವರ.ಆರ್.*

ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಿಗೆ ಸೇರಿದ ಏಕೈಕ ಸರ್ಕಾರಿ ವಸ್ತುಸಂಗ್ರಹಾಲಯ ಇದಾಗಿದ್ದು, ಕರ್ನಲ್ ಮಿರಾಜ್‌ಕರ್‌ರವರು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಲಾಹೋರ್‌ನಲ್ಲಿ ವೈದ್ಯರಾಗಿದ್ದಾಗ ಅಲ್ಲಿನ ಹಡಗಿನ ಆಕಾರದ ಕಟ್ಟಡಗಳಿಂದ ಪ್ರೇರಿತರಾಗಿ ಮಂಗಳೂರಿನ ಬಿಜೈನ ಬಟ್ಟಗುಡ್ಡದಲ್ಲಿ ೧೯೩೯ರಲ್ಲಿ ಮುಂಬೈನ ನುರಿತ ಇಂಜಿನಿಯರುಗಳಿಂದ ಹಡಗಿನ ಆಕಾರದಲ್ಲಿ ಈ ಕಟ್ಟಡವನ್ನು ನಿರ್ಮಿಸಿದರು. ಈ ಕಟ್ಟಡವು ಮಂಗಳೂರಿನ ಕಾಂಕ್ರೀಟ್ ಕಟ್ಟಡಗಳಲ್ಲಿ ಎರಡನೆಯದು ಹಾಗೂ ವಿದ್ಯುತ್ ಸಂಪರ್ಕ ಹೊಂದಿದ ಕಟ್ಟಡಗಳಲ್ಲಿ ಮೊದಲನೆಯದು ಎನ್ನಲಾಗಿದೆ. ಮೊದಲು ಈ ಕಟ್ಟಡವು ದವಾಖಾನೆಯಾಗಿದ್ದು ತಾಯಿಯ ಮರಣದ ನಂತರ ತಾಯಿಯ ಹೆಸರಿನಲ್ಲಿ ವಸ್ತು ಸಂಗ್ರಹಾಲಯವನ್ನಾಗಿ ಮಾಡಲು ೧೯೫೫ರಲ್ಲಿ ಕರ್ನಾಟಕ ಸರ್ಕಾರಕ್ಕೆ ದಾನವಾಗಿ ನೀಡಿದರು. ೧೯೫೫ರಲ್ಲಿ ತನ್ನ ತಾಯಿಯ ನೆನಪಿಗೋಸ್ಕರ ಸರ್ಕಾರಕ್ಕೆ ದಾನ ನೀಡಿದ ನಂತರ ದಿನಾಂಕ ೦೪-೦೫-೧೯೬೦ರಲ್ಲಿ ಅಧಿಕೃತವಾಗಿ ಆಗಿನ ಉಪರಾಷ್ಟ್ರಪತಿಯಾಗಿದ್ದ ಶ್ರೀಮಾನ್ ಬಿ.ಡಿ. ಜತ್ತಿಯವರು ಶ್ರೀಮಂತಿಬಾಯಿ ಸ್ಮಾರಕ ಸರ್ಕಾರಿ ವಸ್ತುಸಂಗ್ರಹಾಲಯ ಎಂಬ ನಾಮಕರಣದೊಂದಿಗೆ ಈ ವಸ್ತುಸಂಗ್ರಹಾಲಯವನ್ನು ಉದ್ಘಾಟನೆ ಮಾಡಿದರು, ಈ ಬಂಗಲೆಯನ್ನು ಯಥಾಸ್ಥಿತಿಯನ್ನು ಕಾಪಾಡಿಕೊಂಡು ಕರ್ನಲ್ ಮಿರಾಜ್‌ಕರ್‌ರವರು ದೇಶ ವಿದೇಶಗಳಿಂದ ಸಂಗ್ರಹಿಸಿದ ಅಪರೂಪದ ಪ್ರಾಚ್ಯವಸ್ತುಗಳು, ಅಂದಿನ ಡಿ.ಸಿ. ಪದ್ಮನಾಭನ್ ಸಂಗ್ರಹಿಸಿಕೊಟ್ಟ ಪ್ರಾಚ್ಯವಸ್ತುಗಳು, ಸ್ಥಳೀಯ ದಾನಿಗಳು ಕೊಟ್ಟ ಪ್ರಾಚ್ಯವಸ್ತುಗಳು, ಇಲಾಖೆಯಿಂದ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಪ್ರಾಚ್ಯವಸ್ತುಗಳು. ಹಾಗೂ ರಾಜ್ಯದ ವಿವಿಧ ಕಲಾವಿದರಿಂದ ರಚಿಸಿದ ಚಿತ್ರಕಲೆಗಳನ್ನು ಪ್ರದರ್ಶಿಸಲಾಗಿದೆ. ಇವುಗಳಲ್ಲಿ ಕೆಲವು ಅಪ್ರಕಟಿತ ಶಾಸನಾಧಾರಿತ ಪ್ರಾಚ್ಯವಸ್ತುಗಳಿವೆ. ಅವುಗಳನ್ನು ಈ ಪ್ರಬಂಧದಲ್ಲಿ ಮಂಡಿಸಿದ್ದೇನೆ. ಇವುಗಳಲ್ಲಿ ಕಂಚಿನ ಬಾಗಿಲುವಾಡ, ಕಂಚಿನ ಅಳತೆ ಪಾತ್ರೆ ಹಾಗೂ ತೂಕದ ಕಲ್ಲು ಪ್ರಮುಖವಾಗಿವೆ.

ಕಂಚಿನ ಬಾಗಿಲುವಾಡ

ಈ ಶಾಸನವುಳ್ಳ ಕಂಚಿನ ಬಾಗಿಲುವಾಡವು ಸುಬ್ರಮಣ್ಯ ದೇವಸ್ಥಾನ ಸಮಿತಿ ಸುಬ್ರಮಣ್ಯದಿಂದ ಜಿಲ್ಲಾಧಿಕಾರಿ ಪದ್ಮನಾಭ ಅವರಿಂದ ವಸ್ತುಸಂಗ್ರಹಾಲಯಕ್ಕೆ ನೀಡಲಾಗಿದೆ, ಈ ಬಾಗಿಲುವಾಡವು ಕಂಚಿನದಾಗಿದ್ದು ಅಗಲ ೮೦ ಸೆಂ.ಮೀ. ಉದ್ದ ಎರಡು ಕಡೆ ೩೬x೩೬ ಸೆಂ.ಮೀ ಹಾಗೂ ಮಧ್ಯದ ಎತ್ತರ ೧೪.೦೫ ಸೆಂ.ಮೀ ಅಳತೆ ಹೊಂದಿದೆ, ಇದು ಕನ್ನಡ ಭಾಷೆ ಹಾಗೂ ಕನ್ನಡ ಲಿಪಿಯನ್ನು ಹೊಂದಿದ್ದು ಇದರಲ್ಲಿ ಕೆಲವು ಅಕ್ಷರಗಳು ಅಳಿಸಿಹೋಗಿವೆ.

ಶಾಸನದ ಪಠ್ಯ


೧ ಸ್ವಸ್ತಿ ಶ್ರೀ ವಿಜಯಾಭ್ಯುದಯಾ ಶಾಲಿವಾಹನ ಶಕವರುಷ
೨ ೧೬೪೯ ನೆ ವ್ಯಯ ಸಂ ! ಮಾರ್ಗಶಿರ ಶು ೧೦ ಯಾ ಬ್ರಹಸ್ಪತಿ
೩ ವಾರದಲ್ಲು ಕೆಪಿನ ಶ್ರೀ ಅಂಮನವರ ಭಕ್ತಿಯುಕ್ತರಾದ
೪ ವಿಠಲದ ಪಾರ್ಥಂಪಾಡಿ ಸಿಂಹಾಸನಸ್ತರಾದ !! ನರಸಿ...........
೫ ಸಿಂಹ್ವರಾದ ಡೊಂಬಿಹೆ(ಗ)ಡವರು ಶ್ರೀ ಅಂಮನವರ
೬ ಸಂನಿದಿಯಲ್ಲು ಕಂಚಿನ
೭ ಬಕುತ್ತಿಯಿಂದ ವಪ್ಪಿಸಿದ ಸೆವೆ !!

ಸಾರಾಂಶ

ಈ ಶಾಸನವು ಕ್ರಿ.ಶ. ೧೭೬೭ರ ೧೮ನೇ ಶತಮಾನದ ವಿಟ್ಲ ಅರಸರ ಕಾಲಕ್ಕೆ ಸಂಬಂಧಿಸಿದ ಶಾಸನವಾಗಿದೆ. ಈ ಶಾಸನದಲ್ಲಿ ಕಂಡುಬರುವ ಕೇಪಿನ ಎಂಬುದು ಕೇಪು ಎಂಬ ಊರಾಗಿದ್ದು ಬಂಟ್ವಾಳ ತಾಲ್ಲೂಕಿನ ವಿಟ್ಲದ ಬಳಿ ಇರುವ ಗ್ರಾಮವಾಗಿದೆ. ಇಲ್ಲಿ ವಿಟ್ಲದ ಅರಸರಿಗೆ ಸಂಬಂಧಪಟ್ಟ

* ಕ್ಯೂರೇಟರ್, ಶ್ರೀಮಂತಿ ಬಾಯಿ ಸ್ಮಾರಕ ಸರ್ಕಾರಿ ವಸ್ತುಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಬಿಜೈ, ಮಂಗಳೂರು-೦೪

ಉಳ್ಳಾಲ್ತಿ ಕ್ಷೇತ್ರವಿದೆ. ಈ ಉಳ್ಳಾಲ್ತಿಯ ಕ್ಷೇತ್ರಕ್ಕೆ ಸಂಬಂಧಿಸಿದ ಬಾಗಿಲುವಾಡಕ್ಕೆ ಅಳವಡಿಸಿದ ಕಂಚಿನ ಕವಚವೇ ಈ ಶಾಸನವುಳ್ಳ ಬಾಗಿಲುವಾಡವಾಗಿದೆ. ಪಾರ್ಥಪಾಡಿ ಸಿಂಹಾಸನ ಎಂದರೆ ವಿಟ್ಲದ ಅರಸರ ಸಿಂಹಾಸನದ ಚಾರಿತ್ರಿಕ ಹೆಸರು. ಅಂಮನವರು ಎಂದರೆ ಕೇಪಿನ ಉಳ್ಳಾಲ್ತಿ ದೈವ ಎಂದು ತಿಳಿದುಬರುತ್ತದೆ. ಕ್ರಿ.ಶ. ೧೩ನೇ ಶತಮಾನದಿಂದ ೧೯ನೇ ಶತಮಾನದವರೆಗೆ ವಿಟ್ಲದ ಪ್ರದೇಶವನ್ನು ಆಳುತ್ತಿದ್ದ ರಾಜಮನೆತನದ ಹೆಸರು ಡೊಂಬೆ ಹೆಗಡೆ ಆ ಕಾಲದ ಅರಸ ನರಸಿಂಹರಸಡೊಂಬೆ ಹೆಗಡೆ ಕ್ರಿ.ಶ. ೧೭೬೭ರ ಮಾರ್ಗಶಿರ ಶುಕ್ಲ ೧೦ರ ಗುರುವಾರದಂದು ಇದನ್ನು ಕೇಪಿನ (ಗ್ರಾಮ) ಅಂಮನವರಿಗೆ ಭಕ್ತಿಯಿಂದ ಸಮರ್ಪಿಸಿದ ಕಂಚಿನ ಬಾಗಿಲುವಾಡವಾಗಿದೆ.



ಕಂಚಿನ ಬಾಗಿಲುವಾಡ

ಕಂಚಿನ ಅಳತೆ ಪಾತ್ರೆ

ಈ ಶಾಸನವುಳ್ಳ ಕಂಚಿನ ಅಳತೆ ಪಾತ್ರೆಯು ಸುಬ್ರಮಣ್ಯ ದೇವಸ್ಥಾನ ಸಮಿತಿ ಸುಬ್ರಮಣ್ಯದಿಂದ ಜಿಲ್ಲಾಧಿಕಾರಿ ಪದ್ಮನಾಭ ಅವರಿಂದ ವಸ್ತುಸಂಗ್ರಹಾಲಯಕ್ಕೆ ನೀಡಲಾಗಿದೆ, ಇದು ೮ ಸೆಂ.ಮೀ. ಎತ್ತರ, ೫೭ ಸೆಂ.ಮೀ. ಸುತ್ತಳತೆ ಹೊಂದಿದೆ ಅರ್ಧಚಂದ್ರಾಕೃತಿಯ ಗುರುತು ಹಾಗೂ ಹುಕ್ಸ್‌ನ್ನು ಹೊಂದಿದ್ದು ನಾಲ್ಕು ಕಾಲುಗಳನ್ನು ಹೊಂದಿದ್ದು, ಅವುಗಳಲ್ಲಿ ಒಂದು ಕಾಲಿಗೆ ಹಾನಿಯಾಗಿದೆ. ಇದು ಕನ್ನಡ ಲಿಪಿ ಹಾಗೂ ಕನ್ನಡ ಭಾಷೆಯ ಒಂದೇ ಸಾಲಿನ ಶಾಸನವನ್ನು ಹೊಂದಿದೆ.

ಶಾಸನದ ಪಠ್ಯ

ಅ ರ ಮ ನೆ ಪೊ ರ ಹಾ ನಿ

ಸಾರಾಂಶ

ಈ ಶಾಸನವು ೧೮-೧೯ನೇ ಶತಮಾನದ ಶಾಸನ ವಾಗಿದ್ದು ಇದರಲ್ಲಿ ಅರಮನೆ ಪೊರಹಾನಿ ಎಂದಿದ್ದು, ಇದನ್ನು ಅರಮನೆ ಹೊರಹಾನೆ ಎಂದು ಅರ್ಥೈಸಬಹುದಾಗಿದೆ, ಹಾನೆ ಎಂಬುದನ್ನು ಕ್ರಿ.ಶ. ೧೭ರ ಬಂಬರ ಬಟ್ಟರ ಶಾಸನದಲ್ಲಿ ದ್ರವರೂಪಕ್ಕೆ ಬಳಸಿರುವುದು ಕಂಡುಬರುತ್ತದೆ, ೧೭೭೦ರ ಕೋಟೇಶ ಶಾಸನದಲ್ಲಿ ಹಾನೆಯ ಉಲ್ಲೇಖವನ್ನು ನೋಡಬಹುದು. ಒಂದು ಹಾನೆಗೆ ೩½ ಸೇರು ಎಂದು ತಿಳಿಯಬಹುದಾಗಿದೆ, ೪೦ ಹಾನೆಗೆ ಬಂದ ಮುಡಿ ಪ್ರಯೋಗವನ್ನು ನೋಡಬಹ್ಮದು. ೧೩ ಹಾನೆ ತುಪ್ಪದ ಪ್ರಯೋಗ ಬರುತ್ತೆ ಆದರೆ ಅಳತೆ ಪ್ರಮಾಣ ನಿಗದಿಯಾಗಿಲ್ಲ. ಡಾ॥ ಇಂದಿರಾ ಹೆಗಡೆಯವರು ಕಂಚಿನಿಂದ ಮಾಡಿದ ತಾಮ್ರದ ಹಾನೆ ಇರಬಹುದೆಂದು ಕೆಲವು ಉಲ್ಲೇಖದ ಮೂಲಕ ತಿಳಿಸಿದ್ದಾರೆ. ಅರಮನೆಯಿಂದ ಪ್ರಮಾಣಿತವಾದ ಅರಮನೆಯಲ್ಲಿ ಅಳತೆ ಮಾಡಲು ಉಪಯೋಗಿಸುತ್ತಿದ್ದರು ಎನ್ನಬಹುದು.

ತೂಕದ ಕಲ್ಲು

ಈ ಶಾಸನವುಳ್ಳ ತೂಕದಕಲ್ಲನ್ನು ಮಂಗಳೂರಿನ ಪ್ರೊ. ಕೈಲಾರ್ ಶಂಕರ ಭಟ್ಟರವರು ದಿನಾಂಕ ೨೦-೦೬-೨೦೧೪ರಂದು ವಸ್ತುಸಂಗ್ರಹಾಲಯಕ್ಕೆ ದಾನವಾಗಿ ನೀಡಿರುತ್ತಾರೆ. ಈ ತೂಕದ ಕಲ್ಲು ಗ್ರಾನೈಟ್ ಕಲ್ಲಿನದಾಗಿದ್ದು ಬೀಗದ ರೀತಿಯ ಆಕಾರ ಹೊಂದಿದ್ದು ಕಬ್ಬಿಣದ ಬಳೆ ಹೊಂದಿದೆ. ಉದ್ದ ೨೪ ಸೆಂ.ಮೀ. ಅಗಲ ೧೮ ಸೆಂ.ಮೀ. ಅಳತೆ ಹೊಂದಿದ್ದು, ಈ ಶಾಸನ ಮೂರು ಸಾಲಿನದಾಗಿದ್ದು ಕನ್ನಡ ಭಾಷೆ ಕನ್ನಡ ಲಿಪಿಯನ್ನು ಹೊಂದಿದೆ.

ಶಾಸನದ ಪಠ್ಯ

ಮೊದಲ ಸಾಲು– ನ ಡ ವ ಮ

ಎರಡನೇ ಸಾಲು– ಣ ರು ಪ ಆ ರ

ಮೂರನೇ ಸಾಲು– ೧೦೦೦

ಸಾರಾಂಶ

ಈ ಶಾಸನವು ಸುಮಾರು ೧೮ನೇ ಶತಮಾನದ ಕಾಲದ ಪಾಳೆಯಗಾರರಿಗೆ ಸಂಬಂಧಿಸಿದ ಶಾಸನವಾಗಿದ್ದು, ಸ್ಥಳೀಯ ವರ್ತಕರು ಇದನ್ನು ಬಳಸುತ್ತಿದ್ದರು ಎನ್ನಬಹುದು. ಮಣ ಇದು ತೂಕದ ಪ್ರಮಾಣವಾಗಿದೆ. ಈ ತೂಕದ ಕಲ್ಲು ೧೨ ಕೆ.ಜಿ. ೫೦೫ ಗ್ರಾಂ ತೂಕ ಹೊಂದಿದ್ದು ಒಂದು ಮಣಕ್ಕೆ ಆರು ರೂಪಾಯಿಗಳು ಎಂದಿದೆ. ಸಾವಿರದಲ್ಲಿ ೧೨ ಕೆ.ಜಿ. ೧ ಮಣದ ತೂಕದ ಕಲ್ಲು ಎಂದು ತಿಳಿಯಬಹುದಾಗಿದೆ. ನಿರ್ದಿಷ್ಟವಾಗಿ ಯಾವುದನ್ನು ತೂಕ ಮಾಡುವುದಕ್ಕೆ ಬಳಸುತ್ತಿದ್ದರು ಎಂಬುದನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ ಎನ್ನಬಹುದು.

[ಕೃತಜ್ಞತೆ : ಈ ಪ್ರಬಂಧವನ್ನು ರಚನೆ ಮಾಡುವಲ್ಲಿ ಸಹಕರಿಸಿದ ಡಾ. ಜಗದೀಶ, ನಾಗರಾಜಪ್ಪ, ಎಸ್. ಡಾ. ಪುಂಡಿಕ್ಯಾ ಗಣಪಯ್ಯ ಭಟ್, ಡಾ॥ ಇಂದಿರಾ ಹೆಗಡೆ, ಹಾಗೂ ನನ್ನ ಗುರುಗಳು ಸಂಶೋಧನಾ ಮಾರ್ಗದರ್ಶಕರಾದ ಡಾ. ಹನುಮನಾಯಕರವರಿಗೆ ಹಾಗೂ ಆಯುಕ್ತರು ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು, ಇವರುಗಳಿಗೆ ಆಭಾರಿಯಾಗಿರುತ್ತೇನೆ.]

೧೬

ಸಿದ್ದಾಪುರದ ಗಡ್ಡದಮಠ ಮತ್ತು ರಾಯದುರ್ಗ ಹಿರೇಮಠಗಳಿಗೆ ಸಂಬಂಧಿಸಿದ ತಾಮ್ರಪತ್ರಗಳು

ಡಾ. ಅಮರೇಶ ಯತಗಲ್*

ಸಿದ್ದಾಪುರದ ಗಡ್ಡದ ಶಿವಯ್ಯಸ್ವಾಮಿಗಳ ಶಿಷ್ಯರ ವಂಶಾವಳಿಗೆ ಸಂಬಂಧಿಸಿದ ಎರಡು ತಾಮ್ರಪತ್ರಗಳು ಮತ್ತು ರಾಯದುರ್ಗ ಹಿರೇಮಠದ ಶಿವಯ್ಯಸ್ವಾಮಿ ಹಾಗೂ ಚಿಕ್ಕೂರ ಸಿದ್ಧಯ್ಯ ಸ್ವಾಮಿಗಳ ಶಿಷ್ಯರ ವಂಶಾವಳಿಯ ಕುರಿತಾದ ಒಂದು ತಾಮ್ರಪತ್ರ, ಹೀಗೆ ಮೂರು ತಾಮ್ರಪತ್ರಗಳು ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಈಚನಾಳ ಗ್ರಾಮದ ಶ್ರೀ ಸಂಗಯ್ಯಸ್ವಾಮಿ ಹಿರೇಮಠ ಅವರ ಮನೆಯಲ್ಲಿ ದೊರೆತವು. ಈ ತಾಮ್ರಪತ್ರಗಳು ಐತಿಹಾಸಿಕ ಅಂಶಗಳ ನ್ನೊಳಗೊಂಡಿವೆ.

ತಾಮ್ರಪತ್ರ : ಒಂದು

ಈಶ್ವರ ಚಿತ್ರ ಶ್ರೀ **ಈಶ್ವರ ಚಿತ್ರ**

ಶ್ರೀಮತು ಸಚ್ಚಿದಾನಂದ ನಿತ್ಯಪರಿಪೂರ್ಣ

ಆವಿರಳ ಪರಜೋತಿ ಸ್ವರೂಪಿಗಳಾದ ಸಂಸ್ಥಾನ ಪೈಕಿ ಹಂಪಸಾಗರ ನಿಜಾಮಯಿಲಾಖಿ ಪೈಕಿ ಸಿದ್ದಾಪುರದ ಗಡ್ಡದ ಶಿವಯ್ಯಸ್ವಾಮಿಗಳ ಶಿಷ್ಯರ ವಂಶಾವಳಿ.

ಶಾಲಿವಾಹನ ಶಕೆ ೧೧೨೬ನೇ ದುರ್ಮತಿ ನಾಂ॥ಸಂ॥ದ ಚೈತ್ರ ಮಾಸ ಇಂದು


ವಾರ ಕ್ರುತಿಕ ನಕ್ಷತ್ರ ದಿವಸ ಕಣಿ ಬಸ್ಸಿಕೊಪ್ಪದ ಗೌಡಕಿಗಳಸಿದರು. ಅಲ್ಲಿ ಮ

ಗಲಾದಿ ಕಾಲಕ್ಕೆ ವ್ಯಾಜ್ಯಮಾಡಿ ಬಿಟ್ಟು ನೈಜಾಮ ಇಲಾಖಿ ಪೈಕಿ ಗಡಿ ಸುಂಕಾಪು

ರಕ್ಕೆ ಬಂದು ಮಾಲಿಗೌಡಕಿ ಗಳಿಸಿದರು. ಗಳಿಸಿದಾತನ ಹೆಸರು ಹನುಮನಗೌಡ.

ಇವರ ಮನಿದೇವರು ವೆಂಕಟರಮಣ, ಸಂಗಮನಾಥ, ಹನಮಂತ, ಬಸವಂಣ

ದೇವರು ಯಲ್ಲಂಮ ದೇವರು.



* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ತೊರವಿ, ವಿಜಯಪುರ-೦೮.


ಆಯತಾಕಾರದ ತಾಮ್ರದ ತಗಡಿನ ಮೇಲೆ ಬರೆಯಲಾಗಿದ್ದು, ಇದರ ಮೇಲಿನ ಬಲ ಹಾಗೂ ಎಡಭಾಗದಲ್ಲಿ ಈಶ್ವರನ ರೇಖಾಚಿತ್ರಗಳಿವೆ. ಆ ಎರಡೂ ರೇಖಾಚಿತ್ರಗಳ ನಡುವೆ 'ಶ್ರೀ' ಎಂದು ಬರೆಯಲಾಗಿದೆ. ಈ ತಾಮ್ರಪತ್ರವು ೧೪ ಸೆಂ.ಮೀ. ಅಗಲ, ೨೫ ಸೆಂ.ಮೀ. ಉದ್ದ ವಿಸ್ತೀರ್ಣವನ್ನು ಹೊಂದಿದೆ.

ಈ ತಾಮ್ರಪತ್ರದ ಮುಂಬದಿಯಲ್ಲಿ ಮಾತ್ರ ಬರೆಯಲಾಗಿದ್ದು, ಹಿಂಬದಿಯು ಖಾಲಿ ಇದೆ. ಮುಂಬದಿಯಲ್ಲಿ ೧೦ ಸಾಲುಗಳಿವೆ. ಅದರ ಕೆಳಗೆ ವಂಶಾವಳಿ ಇದ್ದು, ಅದರಲ್ಲಿ ೧೬ ವ್ಯಕ್ತಿಗಳ ಹೆಸರುಗಳಿವೆ.

ತಾಮ್ರಪತ್ರ : ಎರಡು

ಈಶ್ವರ ಚಿತ್ರ ಶ್ರೀ ಈಶ್ವರ ಚಿತ್ರ

ಶ್ರೀ ಮದ್ಘನಲಿಂಗ ಚಕ್ರವರ್ತಿಗಳಾದ ಗುರು ಅರ್ಜೆದೀರ
ಮಕ್ಕಾ ಶಿದ್ದಾಪುರ ಗಡ್ಡದ ಮಠದ ಶಿದ್ಧಾಂತಿ ಸ್ವಾಮಿಗಳ
ಸನ್ನಿಧಾನಕ್ಕೆ
ಶಾಲಿವಾಹನ ಶಕೆ ೧೧೨೬ ನೇ ವಿಕ್ರುತಿ ನಾಂ॥ಸಂ॥ದ
ಚೈತ್ರ ಸು॥ ಗುರುವಾರ ಶಿಷ್ಯ
ರ ವಂಶಾವಳಿ ಧಾತು ಮಾಡಿದ್ದು ಯಿವರ ಮನಿದೇವರು
ನಡಗೊಂಡ ಅಮರೈಯ್ಯ
ದೇವರು ಬಸವಂಣ ದೇವರು ಯಿವರ ಪೂರ್ವಿ ಆದಿಸ್ಥಳ
ಅಂಕಲಕೋಟಿ ದೇಸ
ಗತಿಗಳಸಿದರು. ಗಳಸಿದಾತನ ಹೆಸರು ಅಮರೇಗೌಡ
ಹೆಂಣು ಮಗಳು ತಿ
ಮ್ಮವ್ವನ ಕಿಲೇಕ ಆಹುತಿಕೊಟ್ಟು ಅಂಕಲಕೋಟಿ ದೇಸಗತಿ
ಬಿಟ್ಟು ನಂದಿ
ಲಕ್ಕುಂದಿಗೆ ಬಂದರು. ಅಲ್ಲಿ ಗೌಡಿಕಿಗಳಿಸಿದರು. ಗಳಸಿದಾತನ
ಹೆಸರು ಚನ್ನನ
ಗೌಡ. ಆಗ್ಗೆ ಧೊರಿಗಳ ಕೂಡ ವ್ಯಾಜ್ಯಮಾಡಿ ಬಿಟ್ಟು
ನಾದಿಗೆ ಬಂದರು. ಅಲ್ಲಿ ಗೌಡಕಿ ಗಳ
ಸಿದರು. ಗಳಸಿದಾತನ ಹೆಸರು ಅಮರೇಗೌಡ. ಅಲ್ಲಿವಂದು
ಬೊಡ್ಡಿ ಬಿಟ್ಟು ಕೊಮಲಾಪು
ಮೂಲ ಪುರುಷ
ರಕ್ಕೆ ಬಂದರು. ಗೌಡಕಿ ಗಳಿಸಿದರು, ಗಳಸಿದಾತನ ಹೆಸರು



ಈ ಶಾಸನವನ್ನು ಆಯತಾಕಾರದ ತಾಮ್ರದ ತಗಡಿನ ಮೇಲೆ ಬರೆಯಲಾಗಿದ್ದು, ಇದರ ಮೇಲಿನ ಬಲ ಹಾಗೂ ಎಡಭಾಗದಲ್ಲಿ ಈಶ್ವರನ ರೇಖಾಚಿತ್ರಗಳಿವೆ. ಈ ಎರಡು ರೇಖಾಚಿತ್ರಗಳ ನಡುವೆ 'ಶ್ರೀ' ಎಂದು ಬರೆಯಲಾಗಿದೆ. ಇದು ೧೬ ಸೆಂ.ಮೀ. ಅಗಲ ಹಾಗೂ ೨೭ ಸೆಂ.ಮೀ. ಉದ್ದ ವಿಸ್ತೀರ್ಣವನ್ನು ಹೊಂದಿದೆ. ಈ ತಾಮ್ರಪತ್ರದ ಮುಂಭಾಗದಲ್ಲಿ ಮಾತ್ರ ಬರೆಯಲಾಗಿದ್ದು, ಹಿಂಬದಿಯು ಖಾಲಿ ಇದೆ. ಈ ತಾಮ್ರಪತ್ರದಲ್ಲಿ ೧೦ ಸಾಲುಗಳಿದ್ದು, ಕೆಳಗೆ ವಂಶಾವಳಿಯನ್ನು ಹೊಂದಿದೆ. ಈ ವಂಶಾವಳಿಯಲ್ಲಿ ೩೧ ವ್ಯಕ್ತಿಗಳ ಹೆಸರುಗಳಿವೆ.

ತಾಮ್ರಪತ್ರ : ಮೂರು

ಈಶ್ವರ ಚಿತ್ರ ಶ್ರೀ ಈಶ್ವರ ಚಿತ್ರ

ಶಾಲಿವಾಹನ ಶಕೆ –೧೧೨೬


ಶ್ರೀಮತು ಸಚ್ಚಿದಾನಂದ ನಿತ್ಯಪರಿಪೂರ್ಣ ಅವಿರಳ ಪ
ರಂಜ್ಯೋತಿ ಸ್ವರೂಪಿಗಳಾದ ಗುರುಸ್ವಾಮಿ ರಾಯದುರ್ಗ
ಹಿರೇಮಠದ ಶಿವಯ್ಯಸ್ವಾಮಿ ಹಾಂಗು ಚಳ್ಳೂರ ಶಿದ್ದಯ್ಯ
ಸ್ವಾಮಿ
ಶಿಷ್ಯರ ವಂಶಾವಳಿ.
ಯಿವರ ಮನಿದೇವರು ಸಂಗಮೇಶ್ವರ. ಯಿವರ ಬೆಡಗು
ವಾಲೆನವರು.
ಯಿವರ ಪೂರ್ವಿ ಆದಿಸ್ಥಳ ಪರಮತ ಪಾಣಗಲ್ಲ
ಗೌಡ್ಕಿಗಳಿಸಿದ
ರು. ಆತನ ಹೆಸರು ಸಂಗಪ್ಪಗೌಡ. ಅಲ್ಲಿ ವ್ಯಾಜ್ಯ ಮಾಡಿ ಬ
ಟ್ಟು ಕುಷ್ಟಿಗ್ಗೆ ಬಂದರು. ಅಲ್ಲಿ ವಾಲಿಶೆಟ್ಟಿತನ ಗಳಿಸಿದರು. ಆತನ
ಹೆಸರು ದೊಡ್ಡಪ್ಪಶೆಟ್ಟಿ ಅಲ್ಲಿಂದ ಬಿಟ್ಟು ಕಂದಗಲ್ಲಿಗೆ ಬಂದರು.
ಅದ್ದ ಹೆಸ
ರು ಕುಷ್ಟಗಿ ವಾಲಿಶೆಟ್ಟರು.


ಆಯತಾಕಾರದ ತಾಮ್ರದ ತಗಡಿನ ಮೇಲೆ ಬರೆಯಲಾಗಿದ್ದು, ಮೇಲ್ಭಾಗದ ಬಲ ಹಾಗೂ ಎಡಭಾಗದಲ್ಲಿ ಈಶ್ವರನ ರೇಖಾಚಿತ್ರಗಳಿವೆ. ನಡುವೆ 'ಶ್ರೀ' ಎಂದು ಬರೆಯಲಾಗಿದೆ. ೧೪ ಸೆಂ.ಮೀ. ಅಗಲ ಹಾಗೂ ಇದು ೨೪ ಸೆಂ.ಮೀ. ಉದ್ದ ವಿಸ್ತೀರ್ಣವನ್ನು ಹೊಂದಿದೆ. ಮುಂಭಾಗದಲ್ಲಿ ಮಾತ್ರ ಅಕ್ಷರಗಳನ್ನು ಬರೆಯಲಾಗಿದ್ದು, ಹಿಂಬದಿಯು ಖಾಲಿ ಇದೆ. ಹನ್ನೊಂದು ಸಾಲುಗಳ ಬರಹವನ್ನೊಳಗೊಂಡಿದೆ. ಕೆಳಗೆ ೨ ಭಾಗದಲ್ಲಿ ವಂಶಾವಳಿ ಇದ್ದು, ಇದರಲ್ಲಿ ೨೧ ವ್ಯಕ್ತಿಗಳ ಹೆಸರುಗಳಿವೆ.

ತಾಮ್ರಪತ್ರಗಳ ಸಾರಾಂಶ

ತಾಮ್ರಪತ್ರ –೧

ಇದು ಹಂಪಸಾಗರ ನಿಜಾಮ ಇಲಾಖೆಯ ಪೈಕಿ ಸಿದ್ಧಾಪುರದ ಗಡ್ಡದ ಶಿವಯ್ಯ ಸ್ವಾಮಿಗಳ ಶಿಷ್ಯರ ವಂಶಾವಳಿಯಾಗಿದೆ. ಇವರು ಶಾಲಿವಾಹನ ಶಕ ೧೧೨೬ರಲ್ಲಿ (ಕ್ರಿ.ಶ. ೧೨೦೪) ರಂದು ಕಣಿಬನ್ನಿಕೊಪ್ಪದ ಗೌಡಕಿಯನ್ನು ಗಳಿಸಿದರು. ಅಲ್ಲಿ ಮೊಗಲಾಯಿಯರ ಕಾಲಕ್ಕೆ ಜಗಳ ಮಾಡಿ ಅಲ್ಲಿಂದ ನಿಜಾಮ ಇಲಾಖೆಯ ಅಧೀನದಲ್ಲಿದ್ದ ಗಡಿ ಸುಂಕಾಪುರಕ್ಕೆ ಬಂದು ಮಾಲಿಗೌಡಕಿ ಹುದ್ದೆಯನ್ನು ಪಡೆದರು.





ಈ ಹುದ್ದೆಯನ್ನು ಗಳಿಸಿದಾತ ಹನುಮನಗೌಡ. ಇವರ ಮನೆದೇವರುಗಳು ವೆಂಕಟರಮಣ, ಸಂಗಮನಾಥ, ಹನುಮಂತ, ಬಸವಣ್ಣ, ಯಲ್ಲಮ್ಮ. ಈ ಮನೆತನದ ಮೂಲಪುರುಷ ಹನಮನಗೌಡ. ಈತನಿಗೆ ಹೀರೆಭೀಮನಗೌಡ ಹಾಗೂ ಸಣ್ಣಭೀಮನಗೌಡ ಎಂಬ ಮಕ್ಕಳಿದ್ದರು. ಹಿರೇಭೀಮನಗೌಡನಿಗೆ ದೊಡ್ಡನಗೌಡ ಎಂಬ ಮಗನಿದ್ದನು. ಈತನಿಗೆ ಮಕ್ಕಳಾಗಲಿಲ್ಲ. ಇಲ್ಲಿಗೆ ಆತನ ವಂಶ ಕೊನೆ ಗೊಂಡಿತು.

ಸಣ್ಣಭೀಮನಗೌಡನಿಗೆ ತಿಮ್ಮನಗೌಡ ಮತ್ತು ಹನುಮನ ಗೌಡರೆಂಬ ಮಕ್ಕಳಿದ್ದರು. ತಿಮ್ಮನಗೌಡನಿಗೆ ಸಂಗನಗೌಡ, ನಿಂಗನಗೌಡ, ವೆಂಕನಗೌಡ, ಗೋವಿಂದಗೌಡ, ಭೀಮನಗೌಡ ಎಂಬ ೬ ಜನ ಮಕ್ಕಳಿದ್ದರು. ಸಂಗನಗೌಡನ ಮಗ ಹನುಮನಗೌಡ. ಈ ವಂಶ ಮುಂದುವರೆದ ಕುರಿತು ಮಾಹಿತಿ ಇಲ್ಲ.

ತಿಮ್ಮನಗೌಡನ ತಮ್ಮನಾದ ಹನುಮನಗೌಡನಿಗೆ ದೊಡ್ಡನಗೌಡ, ಗೋವಿಂದಗೌಡ, ಚನ್ನನಗೌಡ ಹಾಗೂ ಬಸನಗೌಡರೆಂಬ ನಾಲ್ಕು ಜನ ಮಕ್ಕಳಿದ್ದರು. ಅವರ ವಂಶ ಮುಂದುವರೆದ ಕುರಿತಾಗಿ ಈ ತಾಮ್ರಪತ್ರದಲ್ಲಿ ವಿವರಗಳಿಲ್ಲ.

ತಾಮ್ರಪತ್ರ-೨

ಶ್ರೀಮದ್ಘನಲಿಂಗ ಚಕ್ರವರ್ತಿಗಳಾದ ಸಿದ್ಧಾಪುರ ಗಡ್ಡದಮಠದ ಸಿದ್ಧಾಂತಿಸ್ವಾಮಿಗಳ ಸನ್ನಿಧಾನಕ್ಕೆ ಎಂದಿದ್ದು. ಶಾಲಿವಾಹನ ಶಕೆ ೧೧೨೬ (ಕ್ರಿ.ಶ. ೧೨೦೪) ರಲ್ಲಿ ಇವರ ಶಿಷ್ಯರ ವಂಶಾವಳಿಯನ್ನು ಬರೆಯಲಾಗಿದೆ. ಈ ಶಿಷ್ಯರ ಮನೆದೇವರು ನಡಗೊಂಡ ಅಮರಯ್ಯ ಮತ್ತು ಬಸವಣ್ಣ. ಇವರ ಪೂರ್ವಸ್ಥಳ ಅಂಕಲಕೋಟಿ. ಅಲ್ಲಿ ದೇಸಗತಿ ಗಳಿಸಿದರು. ದೇಸಗತಿಯನ್ನು ಗಳಿಸಿದವನು ಅಮರೇಗೌಡ. ಈತನ ಮಗಳಾದ ತಿಮ್ಮವ್ವಳನ್ನು ಕಿಲ್ಲೆಗೆ ಆಹುತಿ ಕೊಡಲಾಯಿತು. ಅನಂತರ ಅಂಕಲಕೋಟಿ ದೇಸಗತಿಯನ್ನು ಬಿಟ್ಟು ನಂದಿ ಲಕ್ಕುಂದಿಗೆ ಬಂದರು. ಅಲ್ಲಿ ಚನ್ನನಗೌಡ ಎಂಬುವನು ಗೌಡಕಿ ಗಳಿಸಿದನು. ಅಲ್ಲಿಯ ದೊರೆಗಳ ಕೂಡ ಜಗಳವನ್ನು ಮಾಡಿ ನಾದಿಗೆ ಬಂದರು. ಅಲ್ಲಿ ಗೌಡಕಿಯನ್ನು ಗಳಿಸಿದಾತ ಅಮರೇಗೌಡ. ಆತ ಅಲ್ಲಿಯೇ ಒಂದು ಮನೆತನವನ್ನು ಬಿಟ್ಟು ಕೋಮಲಾಪುರಕ್ಕೆ ಬಂದನು. ಅಲ್ಲಿ ಗೌಡಕಿ ಗಳಿಸಿದನು.

ಈ ಮನೆತನದ ಮೂಲಪುರುಷ ಅಮರೇಗೌಡ. ಈತನ ಮಗ ಚನ್ನನಗೌಡ. ಚನ್ನನಗೌಡನ ಮಗ ತಿಮ್ಮನಗೌಡ. ಈತನ ಮಗ ಚನ್ನನಗೌಡ. ಈತನಿಗೆ ಅಮರೇಗೌಡ, ಪರನಗೌಡ, ಕೊಳ್ಳನಗೌಡ ಎಂಬ ಮೂರು ಜನ ಮಕ್ಕಳು. ಅಮರೇಗೌಡನಿಗೆ ಕೊಳ್ಳನಗೌಡ, ಲಿಂಗನಗೌಡ, ಬಸನಗೌಡ ರೆಂಬ ಮಕ್ಕಳು. ಕೊಳ್ಳನಗೌಡನಿಗೆ ದೊಡ್ಡ ಅಮರೇಗೌಡ, ಸಣ್ಣ ಅಮರೇಗೌಡ, ಲಿಂಗನಗೌಡ ಎಂಬುವವರು ಮಕ್ಕಳು. ಲಿಂಗನಗೌಡನಿಗೆ ಚನ್ನನಗೌಡ ಎಂಬ ಮಗ. ಆತನಿಗೆ ಆದನಗೌಡ ಎಂಬ ಮಗನಿದ್ದನು.

ದೊಡ್ಡ ಅಮರೇಗೌಡನಿಗೆ ರಾಜನಗೌಡ ಮತ್ತು ರಾಯನಗೌಡ ಎಂಬ ಮಕ್ಕಳು. ಸಣ್ಣ ಅಮರೇಗೌಡನಿಗೆ ಪರನಗೌಡನೆಂಬ ಮಗನಿದ್ದನು. ರಾಯನಗೌಡನಿಗೆ ಬಸನಗೌಡ ಮತ್ತು ಅಪ್ಪನಗೌಡ ಎಂಬ ಇಬ್ಬರು ಮಕ್ಕಳು. ಬಸನಗೌಡನಿಗೆ ಪರನಗೌಡ, ಈತನಿಗೆ ಚನ್ನನಗೌಡ, ಈತನಿಗೆ ಅಮರೇಗೌಡ ಎಂಬ ಮಗನಿದ್ದನು. ಈ ಅಮರೇಗೌಡನಿಗೆ ಅಮರೇಗೌಡ, ರಾಯನಗೌಡ, ಲಿಂಗನಗೌಡ ಮತ್ತು ಅಪ್ಪನಗೌಡರೆಂಬ ನಾಲ್ಕು ಜನ ಮಕ್ಕಳಿದ್ದರು. ಬಸನಗೌಡನ ತಮ್ಮನಾದ ಅಪ್ಪನಗೌಡನಿಗೆ ಚನ್ನನಗೌಡ. ಈತನಿಗೆ ಅಪ್ಪನಗೌಡ, ಈತನಿಗೆ ರಾಯನಗೌಡ, ಈತನಿಗೆ ಅಮರೇಗೌಡ ಎಂಬ ಮಗನಿದ್ದನು. ಇಲ್ಲಿಗೆ ಈ ವಂಶಾವಳಿ ಮುಗಿಯುತ್ತದೆ.

ತಾಮ್ರಪತ್ರ-೩

ಶಾಲಿವಾಹನ ಶಕೆ ೧೧೨೬ (ಕ್ರಿ.ಶ. ೧೨೦೪)ರ ಈ ತಾಮ್ರಶಾಸನವು ರಾಯದುರ್ಗ ಹಿರೇಮಠದ ಶಿವಯ್ಯಸ್ವಾಮಿ ಹಾಗೂ ಚಳ್ಳೂರ ಸಿದ್ದಯ್ಯಸ್ವಾಮಿಗಳ ಶಿಷ್ಯರ ವಂಶಾವಳಿ ಯನ್ನು ನೀಡುತ್ತದೆ.

ಸಂಗಪ್ಪಗೌಡನೆಂಬುವನು ಈ ಮನೆತನದವನು. ಈತನ ಮನೆದೇವರು ಸಂಗಮೇಶ್ವರ. ಇವರ ಬೆಡಗು ವಾಲೆನವರು. ಇವರ ಪೂರ್ವಸ್ಥಳ ಪರವತಪಾಣಗಲ್ಲು. ಇವರು ಅಲ್ಲಿಯ ಗೌಡಕಿ ಗಳಿಸಿದರು. ನಂತರ ಅಲ್ಲಿ ಸಂಗಪ್ಪಗೌಡನು ಜಗಳ ಮಾಡಿ ಕುಷ್ಟಗಿಗೆ ಬಂದನು. ಅಲ್ಲಿ ವಾಲೆಶೆಟ್ಟಿತನ ಗಳಿಸಿದನು. ಆತನ ಹೆಸರು ದೊಡ್ಡಪ್ಪ ಶೆಟ್ಟಿ. ಅಲ್ಲಿಂದ ಕಂದಗಲ್ಲಿಗೆ ಬಂದನು. ಹೀಗಾಗಿ ಈ ಮನೆತನಕ್ಕೆ 'ಕುಷ್ಟಗಿ ವಾಲಿಶೆಟ್ಟರು' ಎಂದು ಅಡ್ಡ ಹೆಸರು ಬಂದಿತ್ತು.

ಇವರ ಮೂಲ ಪುರುಷ ಸಿದ್ದಪ್ಪ. ಈತನಿಗೆ ಇಬ್ಬರು ಮಕ್ಕಳು. ದೊಡ್ಡಪ್ಪ ಹಾಗೂ ಅಯ್ಯಪ್ಪ. ಅಯ್ಯಪ್ಪನಿಗೆ ಮೂರು ಜನ ಮಕ್ಕಳು. ಅವರುಗಳೆಂದರೆ ಸಿದ್ದಪ್ಪ, ರುದ್ರಪ್ಪ, ಸಂಗಪ್ಪ. ಸಿದ್ದಪ್ಪನ ಮಗ ಅಯ್ಯಪ್ಪ. ರುದ್ರಪ್ಪನಿಗೆ ೪ ಜನ ಮಕ್ಕಳು. ದೊಡ್ಡಪ್ಪ, ಬಸಪ್ಪ, ವೀರಸಂಗಪ್ಪ ಮತ್ತು ಸಂಗಪ್ಪ. ರುದ್ರಪ್ಪನ ಸಹೋದರ ಸಂಗಪ್ಪನಿಗೆ ಮಕ್ಕಳಾಗಲಿಲ್ಲ. ರುದ್ರಪ್ಪನ ಮಗ. ಸಂಗಪ್ಪನ ಪುತ್ರ ದೊಡ್ಡಪ್ಪ. ಆತನಿಗೆ ಬಸಪ್ಪ ಮತ್ತು ಅಯ್ಯಪ್ಪನೆಂಬ ಮಕ್ಕಳು. ಬಸಪ್ಪನಿಗೆ ಮಕ್ಕಳಾಗಲಿಲ್ಲ. ಅಯ್ಯಪ್ಪನ ಮಗ ಸಂಗಪ್ಪ. ಸಂಗಪ್ಪನಿಗೆ ಹೀರೆದೊಡ್ಡಪ್ಪ ಹಾಗೂ ಸಣ್ಣದೊಡ್ಡಪ್ಪ ಎಂಬ ಮಕ್ಕಳು. ಹಿರೇದೊಡ್ಡಪ್ಪನಿಗೆ

ಮಕ್ಕಳಾಗಿದ್ದರು. ಚನ್ನ ದೊಡ್ಡಪ್ಪನಿಗೆ ಅಂದಪ್ಪ ಎಂಬ ಮಗ. ಆತನಿಗೆ ಸಂಗಪ್ಪ ಎಂಬ ಮಗನಿದ್ದನು. ಇಲ್ಲಿಗೆ ಈ ವಂಶಾವಳಿ ಮುಗಿಯುತ್ತದೆ.

ಐತಿಹಾಸಿಕ ಅಂಶಗಳು

ಈ ತಾಮ್ರಪತ್ರಗಳಲ್ಲಿಯ ಅಕ್ಷರಗಳನ್ನು ಗಮನಿಸಿದಾಗ ಇವು ಇತ್ತೀಚಿನ ೧೮-೧೯ನೇ ಶತಮಾನಕ್ಕೆ ಸೇರಿದ ಅಕ್ಷರಗಳಾಗಿವೆ. ಆದರೆ ಈ ಮೂರು ತಾಮ್ರಪತ್ರಗಳಲ್ಲಿ ಉಲ್ಲೇಖಿಸಲ್ಪಟ್ಟ ಕಾಲವು ಕ್ರಿ.ಶ. ೧೨೦೪ ಆಗಿದೆ. ಹೀಗಾಗಿ ಈ ಮೂರು ತಾಮ್ರಪತ್ರಗಳನ್ನು ಕೂಟ ಶಾಸನಗಳೆಂದು ಕರೆಯಬಹುದಾಗಿದೆ. ಆದರೂ ಈ ತಾಮ್ರಪತ್ರಗಳಲ್ಲಿ ಕೆಲವು ಐತಿಹಾಸಿಕ ಅಂಶಗಳಿರುವುದರಿಂದ ಇವುಗಳನ್ನು ಇತಿಹಾಸದ ಅಧ್ಯಯನಕ್ಕೆ ಪರಿಗಣಿಸಬಹುದಾಗಿದೆ.

ಈ ಮೂರು ತಾಮ್ರಪತ್ರಗಳು ಸಿದ್ದಾಪುರದ ಗಡ್ಡದ ಶಿವಯ್ಯಸ್ವಾಮಿಗಳ, ಇದೇ ಮಠದ ಸಿದ್ಧಾಂತಿ ಸ್ವಾಮಿಗಳ ಹಾಗೂ ರಾಯದುರ್ಗ ಹಿರೇಮಠದ ಶಿವಯ್ಯಸ್ವಾಮಿಗಳ ಮತ್ತು ಚಳ್ಳೂರು ಸಿದ್ದಯ್ಯಸ್ವಾಮಿಗಳ ಶಿಷ್ಯರ ವಂಶಾವಳಿಯ ಕುರಿತಾಗಿ ವಿವರಣೆಯನ್ನು ನೀಡುತ್ತವೆ.

ತಾಮ್ರಪತ್ರ ಒಂದರಲ್ಲಿಯ ಐತಿಹಾಸಿಕ ಅಂಶಗಳೆಂದರೆ: ಸಿದ್ದಾಪುರವು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿದ್ದು, ಅಲ್ಲಿ ಇಂದಿಗೂ ಗಡ್ಡದ ಮಠವಿದೆ. ಇವರಿಗೆ 'ಶ್ರೀಮದ್ಘನ ಲಿಂಗಚಕ್ರವರ್ತಿ' ಎಂಬ ಬಿರುದಿತ್ತು ಎಂಬ ವಿಷಯ ಈ ತಾಮ್ರಪತ್ರದಲ್ಲಿದೆ. ಆ ಮಠದವರೂ ಇಂದಿಗೂ ತಮ್ಮ ಹೆಸರಿನ ಮುಂದೆ 'ಶ್ರೀಮದ್ಘನಲಿಂಗಚಕ್ರವರ್ತಿ' ಎಂದು ಬರೆದು ಕೊಳ್ಳುತ್ತಾರೆ. ತಾಮ್ರಪತ್ರ ಒಂದರಲ್ಲಿಯ ವಿವರಣೆಯಂತೆ ಹಂಪಸಾಗರದಲ್ಲಿಯ ನಿಜಾಮ ಇಲಾಖೆಯ[೧] ಆಡಳಿತಾವಧಿಯ ಸಂದರ್ಭದಲ್ಲಿ ಗಡ್ಡದಮಠದ ಶಿಷ್ಯರು ಇಂದಿನ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಕಣಿ ಬನ್ನಿಕೊಪ್ಪದ ಗೌಡಕಿಯನ್ನು ಗಳಿಸಿದರು.

ಆಗ ಒಂದೆಡೆ ಮೊಗಲಾಯಿ[೨]ಯವರ ಕಾಲದಲ್ಲಿ ಅವರೊಂದಿಗೆ ಇವರು ಜಗಳವನ್ನು ಮಾಡಿ ಹೈದರಾಬಾದ ನಿಜಾಮರ ಅಧೀನದಲ್ಲಿದ್ದ ಇಂದಿನ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಇಲಕಲ್ ಹತ್ತಿರದ ಗಡಿ ಸುಂಕಾಪುರಕ್ಕೆ ಬಂದು ಅಲ್ಲಿ ಮಾಲೀಗೌಡಕಿಯನ್ನು ಗಳಿಸಿದರು. ಇಂದಿಗೂ ಇಲ್ಲಿ ಈ ಮನೆತನಗಳಿವೆ. ಇವರು ಅಲ್ಲಿ ಮಾಲೀಗೌಡಕಿಯನ್ನು ಮಾಡಿಕೊಂಡು ಬಂದವರು. ಈ ಮನೆತನದಲ್ಲಿದ್ದ ವಂಶಾವಳಿಗೂ ಹಾಗೂ ಈ ತಾಮ್ರಪತ್ರದ ವಂಶಾವಳಿಗೂ ಹೋಲಿಕೆ ಇದೆ.

ಈ ಮನೆತನದವರು ವೈಷ್ಣವಮತದ ವೆಂಕಟರಮಣ, ಶೈವಮತದ ಸಂಗಮನಾಥ, ಹನುಮಂತ, ಬಸವಣ್ಣ ಹಾಗೂ ಶಾಕ್ತಪಂಥದ ಯಲ್ಲಮ್ಮ ದೇವರುಗಳನ್ನು ಆರಾಧ್ಯ ದೇವರುಗಳನ್ನಾಗಿ ಮಾಡಿಕೊಂಡಿದ್ದರು. ಇಂದಿಗೂ ಈ ದೇವರುಗಳಿಗೆ ಇವರು ನಡೆದುಕೊಳ್ಳುತ್ತಾರೆ.

ತಾಮ್ರಪತ್ರ ಎರಡರಲ್ಲಿಯ ಕೆಲವು ಐತಿಹಾಸಿಕ ಅಂಶಗಳೆಂದರೆ : ಸಿದ್ದಾಪುರದ ಗಡ್ಡದಮಠದ ಸಿದ್ಧಾಂತಿ ಸ್ವಾಮಿಗಳಿಗೆ 'ಶ್ರೀಮದ್ಘನಲಿಂಗಚಕ್ರವರ್ತಿ' ಎಂಬ ಬಿರುದಿತ್ತು. ಇವರ ಶಿಷ್ಯರು ಅಂಕಲಕೋಟಿ ದೇಸಗತಿ ಗಳಿಸಿದರು. ಈ ಅಂಕಲಕೋಟಿಯು ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯ ಜತ್ತ ತಾಲ್ಲೂಕಿನಲ್ಲಿ ಬರುತ್ತದೆ.

ಈ ಮನೆತನ ವ್ಯಕ್ತಿ ಅಮರೇಗೌಡ. ಈತನ ಹೆಣ್ಣುಮಗಳು ತಿಮ್ಮವ್ವ ಎಂಬಾಕೆಯನ್ನು ಕೋಟೆಗೆ ಆಹುತಿಕೊಟ್ಟರು. ನಂತರ ಅಂಕಲಕೋಟಿಯಿಂದ ನಂದಿಲಕ್ಕುಂದಿಗೆ ಬಂದರು. ಈ ನಂದಿಲಕ್ಕುಂದಿಯು ಗದಗ ಜಿಲ್ಲೆಯಲ್ಲಿ ಬರುತ್ತದೆ. ಇಲ್ಲಿ ಇವರ ಮನೆತನದ ಚನ್ನನಗೌಡ ಎಂಬುವನು ಗೌಡಕಿ ಗಳಿಸಿದನು. ನಂತರ ಅಲ್ಲಿಯ ದೊರೆಗಳೊಂದಿಗೆ ಜಗಳಮಾಡಿ ನಾದಿಗೆ ಬಂದನು. ಅಲ್ಲಿ ಗೌಡಕಿಗಳಿಸಿದನು. ಗೌಡಕಿಗಳಿಸಿದಾತ ಅಮರೇಗೌಡ ಎಂಬುವನು. ಈತ ನಾದಿಗೆಯಲ್ಲಿ ತಮ್ಮ ಸಂಬಂಧಿಕರನ್ನು ಬಿಟ್ಟು ಕೋಮಲಾಪುರಕ್ಕೆ ಬಂದನು. ಈ ಕೋಮಲಾಪುರವು ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಸಜ್ಜಲಗುಡ್ಡ ಗ್ರಾಮದ ಸಮೀಪ ಬರುತ್ತದೆ. ಇಲ್ಲಿ ಈ ಮನೆತನದ ಸಂಬಂಧಿಕರು ಇಂದಿಗೂ ಇದ್ದಾರೆ.

ಇವರ ಮನೆದೇವರು ನಡಗೊಂಡ ಅಮರಯ್ಯ ಹಾಗೂ ಬಸವಣ್ಣ ದೇವರು. ಹೀಗಾಗಿ ಇವರು ಶೈವಮತದವರಾಗಿದ್ದರು. ಇಂದಿಗೂ ಈ ಮನೆತನದವರು ಈ ದೇವರುಗಳನ್ನು ಆರಾಧಿಸುತ್ತಾರೆ.

ತಾಮ್ರಪತ್ರ ಮೂರರಲ್ಲಿಯ ಕೆಲವು ಚಾರಿತ್ರಿಕ ಅಂಶಗಳೆಂದರೆ : ರಾಯದುರ್ಗದ ಹಿರೇಮಠದ ಶಿವಯ್ಯ ಸ್ವಾಮಿಗಳು ಹಾಗೂ ಚಳ್ಳೂರುನ ಸಿದ್ಧಯ್ಯಸ್ವಾಮಿಗಳ ಶಿಷ್ಯರ ವಂಶಾವಳಿಯ ಕುರಿತಾದ ವಿವರಣೆ ನೀಡುತ್ತದೆ.

ಈ ಮನೆತನದವರ ಬೆಡಗು ವಾಲೆನವರು. ಈ ಬೆಡಗು ಲಿಂಗಾಯತ ಪಟ್ಟಣಶೆಟ್ಟಿ ಅಥವಾ ಬಣಜಿಗರಲ್ಲಿ ಬರುತ್ತದೆ. ಇಂದಿಗೂ ಇವರನ್ನು 'ವಾಲೆಶೆಟ್ಟರು' ಎಂದು ಕರೆಯುತ್ತಾರೆ. ಈ ಮನೆತನದ ಸಂಗಪ್ಪಗೌಡ ಎಂಬುವನು ಪರವತಪಾಣಗಲ್ಲ ಗೌಡಕಿಯನ್ನು ಗಳಿಸಿದನು.

ಈ ಮನೆತನದ ದೊಡ್ಡಪ್ಪಶೆಟ್ಟಿಯು ಜಗಳಮಾಡಿ ಕೊಪ್ಪಳ ಜಿಲ್ಲೆಯ ಕುಷ್ಟಗಿಗೆ ಬಂದು ಅಲ್ಲಿ ವಾಲೆಶೆಟ್ಟಿತನ ಗಳಿಸಿದನು. ನಂತರ ಅಲ್ಲಿಂದ ಕಂದಗಲ್ಲುಗೆ ಬಂದನು. ಈ ಕಂದಗಲ್ಲು ಇಂದಿನ ಬಾಗಲಕೋಟೆ ಜಿಲ್ಲೆಯ ಹುನಗುಂದ



ಸಿದ್ದಾಪುರದ ಗಡ್ಡದಮಠದ ಸ್ವಾಮಿಗಳ ಶಿಷ್ಯರ ವಂಶಾವಳಿ

ತಾಲ್ಲೂಕಿನ ಇಲಕಲ್ ಸಮೀಪ ಬರುತ್ತದೆ. ಈ ಮನೆತನದವರು ಕುಷ್ಟಗಿಯಿಂದ ಕಂದಗಲ್ಲಿಗೆ ಬಂದು ನೆಲೆಸಿರುವುದರಿಂದ ಇವರ ಅಡ್ಡ ಹೆಸರು 'ಕುಷ್ಟಗಿ ವಾಲಿಶೆಟ್ಟರು' ಎಂದು ಕರೆಯುತ್ತಾರೆ. ಇಂದಿಗೂ ಇವರ ವಂಶಸ್ಥರು ಕಂದಗಲ್ಲುನಲ್ಲಿ ಇದ್ದಾರೆ. ಇವರ ಮನೆದೇವರು ಸಂಗಮೇಶ್ವರ. ಇಂದಿಗೂ ಇವರು ಈ ದೇವರಿಗೆ ನಡೆದುಕೊಳ್ಳುತ್ತಾರೆ.

ಈ ಮೂರು ತಾಮ್ರಪತ್ರಗಳನ್ನು ನೀಡಿದ ಶ್ರೀ ಸಂಗಯ್ಯ ತಂ. ವಿರುಪಯ್ಯ ಹಿರೇಮಠರವರು ಈ ತಾಮ್ರಪತ್ರಗಳಲ್ಲಿ ಉಲ್ಲೇಖವಾದ ಮಠದ ಸಂಬಂಧಿಕರೆಂದು ಹೇಳಿಕೊಳ್ಳುತ್ತಾರೆ. ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ನೀರಲಕೇರಿ ಬಸವಲಿಂಗ ಶರಣರು[೩] ನೀರಲಕೇರಿ ನಾಡಗೌಡರಿಗೆ ಶಾಪಕೊಟ್ಟಾಗ, ಆ ಶಾಪಮುಕ್ತಿಗಾಗಿ ಶ್ರೀ ಸಂಗಯ್ಯಸ್ವಾಮಿಗಳ ಪೂರ್ವಜರನ್ನು ಇಲ್ಲಿಗೆ ಕರೆದುಕೊಂಡು ಬಂದರು. ಇವರಿಗೆ ಈಚನಾಳ ಗ್ರಾಮದ ಕನ್ನೆಯನ್ನು ಕೊಟ್ಟು ವಿವಾಹ ಮಾಡಿದರು. ಹೀಗಾಗಿ ಇವರು ಈಚನಾಳ ಗ್ರಾಮದಲ್ಲಿಯೇ ವಾಸವಾಗಿ, ಪೌರೋಹಿತ್ಯ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಆಗಾಗ ಸಿದ್ದಾಪುರದ ಗಡ್ಡದಮಠಕ್ಕೂ ಮತ್ತು ರಾಯದುರ್ಗದ ಹಿರೇಮಠಕ್ಕೂ ಹೋಗಿ ಬರುತ್ತಾರೆ.

[ಈ ಮೂರೂ ತಾಮ್ರಪತ್ರಗಳು ಇರುವ ಮಾಹಿತಿಯು ಲಿಂಗಸೂಗೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಷಯ ಸಹಾಯಕ ಪ್ರಾಧ್ಯಾಪಕರಾದ ಡಾ. ಶರಣಬಸವ ಅರಿಕೇರಾ ಅವರಿಂದ ತಿಳಿಯಿತು. ಅವರು ಈ ತಾಮ್ರಪತ್ರಗಳನ್ನು ಅವರ ಶಿಷ್ಯಂದಿಳಾದ ಶ್ರೀದೇವಿ ಪತ್ರಿಮಠ ಅವರಿಂದ ಒದಗಿಸಲು ನೆರವಾಗಿದ್ದಾರೆ. ಶ್ರೀ ಸಂಗಯ್ಯಸ್ವಾಮಿ ಹಿರೇಮಠ ಅವರು ಈ ತಾಮ್ರಪತ್ರಗಳನ್ನು ನೀಡಿ ಸಹಕರಿಸಿದ್ದಾರೆ. ಹೀಗಾಗಿ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.]

ಆಧಾರಸೂಚಿ

೧. 'ಹೈದರಾಬಾದ್ ನಿಜಾಮ ಸಂಸ್ಥಾನ'ವನ್ನು ಕ್ರಿ.ಶ. ೧೭೨೪ರಲ್ಲಿ ಮೊಘಲ್ ಅವನತಿಯ ತರುವಾಯ ದಕ್ಷಿಣ ಭಾರತದಲ್ಲಿ ಅವರ ಸುಬೇದಾರನಾದ ಅಸಫ್‌ಜಾಹ ನಿಜಾಮ ಉಲ್ಕ್ ಮುಲ್ಕ್‌ನು ಸ್ಥಾಪಿಸಿದನು. ೧೮೫೭ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿಜಾಮನಾದ ಅಫಜಲ್ ಉದ್ದೌಲ್ ಮತ್ತು ಆತನ ಪ್ರಧಾನಿ ಮೊದಲನೇ ಸಾಲಾರಜಂಗ್‌ನು ಬ್ರಿಟಿಷರಿಗೆ ಸಹಾಯ ಮಾಡಿದಕ್ಕಾಗಿ, ಕ್ರಿ.ಶ. ೧೮೬೦ರ ಒಪ್ಪಂದದಂತೆ ಉಸ್ಮಾನಾಬಾದ್‌ದೊಂದಿಗೆ ರಾಯಚೂರು ಪ್ರದೇಶವನ್ನು ಇವರಿಗೆ ನೀಡಿದರು. ಅಂದಿನಿಂದ ರಾಯಚೂರು ಮತ್ತು ಇಂದಿನ ಕೊಪ್ಪಳ ನಿಜಾಮರ ಆಡಳಿತಕ್ಕೆ ಒಳಪಟ್ಟಿತು.

೨. ಆದಿಲ್‌ಶಾಹಿ ರಾಜ್ಯಗಳು ಉತ್ತರದ ಔರಂಗಜೇಬನ ದಾಳಿಗೆ ತುತ್ತಾದವು. ಈತನ ದಖನ್ ಸುಬೇದಾರನು ಕ್ರಿ.ಶ. ೧೭೨೪ರಲ್ಲಿ ಸ್ವತಂತ್ರನಾದನು. ಆಗ ಈ ಪ್ರದೇಶದಲ್ಲಿ ಅಸಫ್‌ಜಾ ಮನೆತನದವರು ಅಧಿಕಾರಕ್ಕೆ ಬಂದರು. ಮೊಗಲ್‌ರಿಂದ ಅಧಿಕಾರ ಪಡೆದ ಹೈದರಾಬಾದ್ ನಿಜಾಮನು ೧೬ ಜಿಲ್ಲೆಗಳನ್ನಾಳಿದನು. ಆ ೧೬ ಜಿಲ್ಲೆಗಳಲ್ಲಿ ೮ ತೆಲುಗು, ೫ ಮರಾಠಿ, ೩ ಕನ್ನಡ ಭಾಷೆಯನ್ನು ಮಾತನಾಡುವ ಜಿಲ್ಲೆಗಳನ್ನೊಳಗೊಂಡ ಪ್ರದೇಶವೇ ಮೊಗಲಾಯಿ ಆಗಿತ್ತು.

೩. ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ನೀರಲಕೇರಿ ಮತ್ತು ಐದನಾಳ ಗ್ರಾಮಗಳನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದ ತತ್ವಪದಕಾರರಾದ ನೀರಲಕೇರಿ ಬಸವಲಿಂಗ ಶರಣ (ಕ್ರಿ.ಶ. ೧೮೧೨–೧೮೭೨)ರು ನೀರಲಕೇರಿ ಮಠಕ್ಕೆ ಅಧಿಪತಿಯಾಗಿದ್ದವರು. ಸಂತೆಕಲ್ಲೂರಿನ ಘನಮಠದಾರ್ಯರೊಂದಿಗೂ ಅನುಭಾವದ ಚರ್ಚೆನಡೆಸಿದ ಅನುಭಾವಿಗಳು. ಅನೇಕ ತತ್ವ ಪದಗಳನ್ನು ರಚಿಸಿದವರು.

೨೦

ತೀರ್ಥಹಳ್ಳಿ ತಾಲೂಕಿನ ನಿವಣೆ ಗ್ರಾಮದ ಅಪ್ರಕಟಿತ ವೀರಗಲ್ಲು ಶಾಸನ

ಎಂ.ಎ. ಪ್ರಭಾಕರ *

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ನಿವಣೆ ಗ್ರಾಮವು ತಾಲೂಕು ಕೇಂದ್ರದಿಂದ ೩೩ ಕಿ.ಮೀ. ದೂರದಲ್ಲಿದೆ. ಇಲ್ಲಿನ ಕಾಡಿನ ಮಧ್ಯೆ ಹೊಯ್ಸಳರ ಕಾಲದ ವೀರಗಲ್ಲು ಶಾಸನವು ಸಂಶೋಧನೆ ಕೈಗೊಂಡ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ. ಈ ಗ್ರಾಮದಲ್ಲಿ ಇನ್ನು ಹಲವಾರು ತೃಟಿತ ವೀರಗಲ್ಲು ಶಾಸನಗಳನ್ನು ಇಲ್ಲಿನ ಚಾಮುಂಡೇಶ್ವರಿ ದೇವಾಲಯದ ಆವರಣದಲ್ಲಿಡಲಾಗಿದೆ. ಕಪ್ಪು ಶಿಲೆಯಿಂದ ಕಂಡರಿಸಲ್ಪಟ್ಟ ಈ ಶಾಸನವು ಏಳು ಅಂತಸ್ತುಗಳನ್ನು ಒಳಗೊಂಡಿದೆ. ಎಂಟು ಅಡಿ ಎತ್ತರ ಮೂರುವರೆ ಅಡಿ ಅಗಲವಿದೆ.

ಮೊದಲನೆಯ ಪಟ್ಟಿಕೆಯಲ್ಲಿ ವೀರನನ್ನು ಪಲ್ಲಕ್ಕಿಯಲ್ಲಿ ದೇವಲೋಕಕ್ಕೆ ಹೊತ್ತೊಯ್ಯುವ ಅಪ್ಸರೆಯರು, ಕಹಳೆಯನ್ನೂದುತ್ತ ಸಾಗುತ್ತಿರುವ ಮೃದಂಗ, ತಬಲ ಬಾರಿಸುತ್ತ ಸಾಗುತ್ತಿರುವ ದೃಶ್ಯಗಳಿವೆ.

ಎರಡನೆ ಪಟ್ಟಿಕೆಯಲ್ಲಿ ವೀರನು ಅಲಂಕಾರಭೂಷಿತವಾಗಿ ರಣರಂಗದಲ್ಲಿ ವೀರಾವೇಶದಿಂದ ಹೋರಾಡುತ್ತಿರುವನು. ಎರಡು ಕಡೆಯವರು ಕತ್ತಿ, ಗುರಾಣಿ, ಖಡ್ಗ ಹಿಡಿದು ಹೋರಾಡುತ್ತಿರುವ ಚಿತ್ರಗಳಿವೆ.

ಮೂರನೆ ಪಟ್ಟಿಕೆಯಲ್ಲಿ ವೀರನು ಅಲಂಕೃತವಾದ ಕುದುರೆಯ ಮೇಲೆ ಕುಳಿತು ಹೋರಾಡುತ್ತಿದ್ದಾನೆ. ಸೈನಿಕರು ಎರಡು ಕಡೆಯವರು ಯುದ್ಧರಂಗದಲ್ಲಿ ಸತ್ತುಬಿದ್ದಿರುವ ದೃಶ್ಯಾವಳಿಗಳಿವೆ.

ನಾಲ್ಕನೆಯ ಪಟ್ಟಿಯಲ್ಲಿ ವೀರನು ಮಂಟಪದೊಳಗೆ ಕೈಮುಗಿದು ಕುಳಿತಿದ್ದು ಎರಡು ಕಡೆ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ.

ಐದನೆ ಪಟ್ಟಿಯಲ್ಲಿ ಸ್ತ್ರೀ ಮತ್ತು ಪುರುಷರು ವಿವಿಧ ವಾದ್ಯಗಳನ್ನು ಬಾರಿಸುತ್ತ ನೃತ್ಯ ಮಾಡುತ್ತಿದ್ದಾರೆ.

ಆರನೇ ಪಟ್ಟಿಯಲ್ಲಿ ಮಂಟಪದ ಮಧ್ಯದಲ್ಲಿ ಶಿವಲಿಂಗವಿದ್ದು ಎರಡು ಕಡೆ ಪೂಜಿಸುತ್ತಿರುವ ಯತಿಗಳು, ಬಲಭಾಗದಲ್ಲಿ ವೀರ ಕೈಮುಗಿದು ಕುಳಿತಿದ್ದಾನೆ. ಎಡಗಡೆ ಬಸವನಿದ್ದು ಅಪ್ಸರೆಯೊಬ್ಬಳು ಚೌರಿ ಬೀಸುತ್ತಿದ್ದಾಳೆ.

ಏಳನೆಯ ಪಟ್ಟಿಯಲ್ಲಿ ವೀರ ಕುಳಿತಿದ್ದು, ಮಂಟಪ ಸುತ್ತಲೂ ಅಲಂಕೃತವಾದ ಪ್ರಭಾವಳಿಯಿಂದ ಕೂಡಿದೆ.

ಶಾಸನದ ಪಾಠ

ಒಂದನೆಯ ಪಟ್ಟಿ

೧. ನಮಸ್ತುಂಗ ಸಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಳೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ

೨. ಸ್ವಸ್ತಿ ಶ್ರೀ ಸಕವರುಷ ೧೨೨೪ನೆಯ ಸುಭಕ್ರತು ಸಂವತ್ಸರದ ಕಾರ್ತಿಕ ಸುದ್ಧ ೧೫ ಮಂಗಳವಾರ

ಎರಡನೆಯ ಪಟ್ಟಿ

೩. ದಂದು ಶ್ರೀಮಂನು ಮಹಾಮಂಡಳೇಶ್ವರಂ ಆದಿಯರಾದಿತ್ಯ ಉಭಯ ಮಾರ್ತಂಡ ಸತ್ಯರತ್ನಾಕರಂ

೪. ಶರಣಾಗತ ವಜ್ರಪಂಜರಂ ಮಂಡಳಿಕ ಜಗದಳೆಯ ಹೊಂನ ಕೊಟ್ಟು ಕುದುರೆಯ ಕಟ್ಟುವ

೫. ಮಂಡಳಿಕರಗಂಡ ಪಟ್ಟಿಪೊಂಬುರ್ಚಪುರವರಾ ಧೀಸ್ವರಂ ಶ್ರೀ ಬಿಲ್ಲೇಶ್ವರದೇವರ ದಿವ್ಯಶ್ರೀಪಾದಪ

೬. ದ್ಮಾರಾಧಕರುವಪ್ಪ ಬಲ್ಲವೆಗಡೆ ಕೊಳಗಿಯ ಬೊಂಮರ್ಸ ದೇವರ್ಸನ ಪೊಂವು ಸೊಡಾ

೭ ಳ ದೇವರ್ಸರ . . . . . ಸಾಂತಳಗೆ ಸಾವಿರ ಹದಿನೆಂಟು ಕಂಪಣಂ ಸುಖಸಂಕಥಾ ವಿನೋದದಿಂ

೮. ರಾಜ್ಯಂ ಗೆಯ್ಯುತಮಿರ್ದ್ದಲ್ಲಿ ಯಬರನಾಯಕನ ಕೂಡೆ ನಡೆದಲ್ಲಿ ಕಾಳಗ

ಮೂರನೆಯ ಪಟ್ಟಿ

೯. ವಾದಲ್ಲಿ (ವ್ರಿ)ನುತಾರಿ . . ರುನಾಡ . . . . ನುರಿದು ಸಾವಿರ ಸೀಮಾ . . ಮ

೧೦. ಸ(ರ) . . . . ನುವಣೆಯಲಿಹ . . . ಟ್ಟಿದಗಂಡ . . . ಪ್ಪಾಜಗವಳೆಯಸ . . .

---

* ಇತಿಹಾಸ ಪ್ರಾಧ್ಯಾಪಕರು, ರಾಜೀವಗಾಂಧಿ ಪರಿಸರ, ಶೃಂಗೇರಿ.

೧೧. . . . ಬೊಂಮೆಯನು ವೀರದೊಳು ವಿತರಣ . . . . . ದ . . . ವದೊಳು ಕಾದಿತಳು

ನಾಲ್ಕನೆಯ ಪಟ್ಟಿ

೧೨. ತಿವಿದು ಎಱದ್ದ ಕುದುರೆಯ ಮೀಱದ ಕಾಲಾಳನಾ ಕೊತ್ತಿಕು

೧೩. ತ್ತಿಸಿಕೊಂಡು . . . ತ ಸರ್ಗ್ಗ ಸೂರೆಗೊಂಡು ಸುರಲ್ಫೋಕ ಪಾಪ್ತನಾದನು

ಐದನೆಯ ಪಟ್ಟಿ

೧೪. ಮಂಗಳ ಮಹಾಶ್ರೀ . . . . ಮಾಡಿ . . ಸುಮಘರಿ

೧೫. ಸುವ ಕಲ್ಲು ಕುಟಿ ಗಂಟಲುಗಾಳ ಮ . . . . ಣಸೂಲ ಬೀರೋಜ ಶ್ರೀ

ಶಾಸನದ ಸಾರಾಂಶ

ಹೊಯ್ಸಳರ ಸಾಮಂತರಾಗಿ ರಾಜ್ಯಪಾಲನೆ ಮಾಡುತ್ತಿದ್ದ ಸಾಂತರದ ಬಿರುದುಗಳ ಈ ವೀರಗಲ್ಲಿನಲ್ಲಿವೆ. ಸೊಡಾಳದೇವ ಇಲ್ಲಿನ ಸಾಮಂತ ರಾಜ. ಈತ ಕೊಳಗಿಯ ಬೊಮ್ಮಚದೇವನ ಮೊಮ್ಮಗ ಹೊಯ್ಸಳ–ಸೇಹುಣರ ಮಧ್ಯೆ ನಡೆದ ಕದನಗಳಿಗೆ ಸಂಬಂಧಿಸಿದೆ. ಯಬಿರನಾಯಕನ ಜೊತೆ ನಡೆದ ಯುದ್ಧದಲ್ಲಿ ಬೊಮ್ಮೆಯ ಎಂಬ ವೀರ ಮರಣಹೊಂದಿದ ವಿಷಯವಿದೆ.

ಈ ವೀರಗಲ್ಲಿನಲ್ಲಿ ನೀಡಿರುವ ಕಾಲ ಶಕವರ್ಷ ೧೨೨೪ ಸುಭಕೃತ್ ಸಂವತ್ಸರದ ಕಾರ್ತಿಕ ಶುದ್ಧ ೧೫ ಮಂಗಳವಾರ ಇವು ಸರಿಯಾಗಿ ಕ್ರಿ.ಶ. ೧೩೦೨ರ ನವೆಂಬರ ೬. ಮಂಗಳವಾರಕ್ಕೆ ಸರಿಹೊಂದುತ್ತದೆ. ಶಾಸನ ರೂವಾರಿ ಜಿರೋಜ.

ಆಧಾರಸೂಚಿ

೧. ಶೇಷಶಾಸ್ತ್ರಿ ಆರ್. ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨. ಪರಮಶಿವಮೂರ್ತಿ ಡಿ.ವಿ. ಕನ್ನಡ ಶಾಸನಶಿಲ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಖಾನಾಪುರ ಮತ್ತು ದಿದ್ದಿಗಿ ಗ್ರಾಮಗಳ ಕೆಲವು ಅಪ್ರಕಟಿತ ಶಾಸನ ಮತ್ತು ಅವಶೇಷಗಳು

ಡಾ. ಚನ್ನಬಸಪ್ಪ ಮಲ್ಕಂದಿನ್ನಿ*

ರಾಯಚೂರು ಜಿಲ್ಲೆಯ ಖಾನಾಪೂರು (ದೇವದುರ್ಗ ತಾಲ್ಲೂಕು) ದಿದ್ದಿಗಿ, (ಸಿಂಧನೂರು ತಾಲ್ಲೂಕು) ಗ್ರಾಮ ಗಳಲ್ಲಿನ ಅಪ್ರಕಟಿತ ಅವಶೇಷಗಳು ಮತ್ತು ಶಾಸನಗಳು.

೧. **ಖಾನಾಪುರ:** ಇದು ಐತಿಹಾಸಿಕ ಪ್ರಸಿದ್ದಿ ಪಡೆದ ಸ್ಥಳವಾದ ಗಬ್ಬೂರು ಗ್ರಾಮಕ್ಕೆ ಉತ್ತರ ದಿಕ್ಕಿನಲ್ಲಿ ಅನತಿ ದೂರದಲ್ಲಿರುವ ಗ್ರಾಮವಾಗಿದೆ. ಇಲ್ಲಿನ ಕೆಲವು ಪುರಾತತ್ವ ಅವಶೇಷಗಳು ಈ ಮುಂದಿನಂತಿವೆ.

ಅ) ದೇವಾಲಯುಗಳು ಮತ್ತು ಗದ್ದುಗೆಗಳು: ಕೂಡಲೂರು ಬಸವಲಿಂಗ (ಕ್ರಿ.ಶ. ೧೮ನೇ ಶತಮಾನ), ಮಸ್ತಾನ್ ಅಲಿ ಸಾಹೇಬ (ಕ್ರಿ.ಶ. ೧೯ನೇ ಶತಮಾನ) ಶರಣರ ಗದ್ದುಗೆಗಳು. ಈಶ್ವರ, ಹನುಮಾನ್, ಪ್ಯಾಟೆ ಬಸಪ್ಪ ದೇವಾಲಯ (ಕ್ರಿ.ಶ. ೨೦ನೇ ಶತಮಾನ) ಮೊದಲಾವುಗಳಿವೆ.

ಆ) ಜುಮ್ಮಾ ಮಸೀದೆ: ಇದು ಮೂಲತಃ ಕಲ್ಯಾಣ ಚಾಳುಕ್ಯರ ಕಾಲದ ಹಿಂದೂ ದೇವಾಲಯವಾಗಿದ್ದು, ವಿಜಯ ನಗರೋತ್ತರ ಕಾಲದಲ್ಲಿ ಮಸೀದೆಯಾಗಿ ಮಾರ್ಪಟ್ಟಿರಬೇಕು. ಇಲ್ಲಿನ ನವರಂಗದ ಸ್ತಂಭಗಳು ಕ್ರಿ.ಶ. ೧೧–೧೨ನೇ ಶತಮಾನಕ್ಕೆ ಸೇರಿದವುಗಳಾಗಿದ್ದು, ಇತ್ತೀಚೆಗೆ ಗಾರೆಯಿಂದ ಸಂಪೂರ್ಣ ಜೀರ್ಣೋದ್ಧಾರಗೊಳಿಸಲಾಗಿದೆ. ಇಲ್ಲಿನ ಭಿತ್ತಿಯ (ಪಶ್ಚಿಮ)ಲ್ಲಿ ಪರ್ಶಿಯನ್–ಅರೇಬಿಕ್ ಭಾಷೆಯಲ್ಲಿ ಅಪ್ರಕಟಿತ ಶಾನಸವಿದೆ.

ಇ) ವೀರಗಲ್ಲುಗಳು: ಖಾನಾಪುರ ಗ್ರಾಮದ ವೀರಗಲ್ಲು ಮೊದಲಾದ ಶಿಲ್ಪಗಳನ್ನು ರಾಯುಚೂರು ವಸ್ತು ಸಂಗ್ರಹಾಲಯಕ್ಕೆ ಸರ್ಕಾರದವರು ತೆಗೆದುಕೊಂಡು ಹೋಗಿದ್ದಾರೆಂದು ಇಲ್ಲಿನ ಸ್ಥಳೀಯರು ತಿಳಿಸಿರುತ್ತಾರೆ. ಈಗ ಪ್ರಸ್ತುತದಲ್ಲಿ ನಾಲ್ಕು ವೀರಗಲ್ಲುಗಳು ಮಾತ್ರ ಕಾಣಬರುತ್ತವೆ. ಹನುಮಾನ್ ದೇವಾಲಯದ ಆವರಣದಲ್ಲಿರುವ ವೀರಗಲ್ಲು (ಕ್ರಿ.ಶ. ೧೨–೧೩ನೇ ಶತಮಾನ), ಕೂಡಲೂರು ಬಸವಲಿಂಗ ಶರಣರ ಗದ್ದುಗೆ ಎಡ (ಪಶ್ಚಿಮ) ಬದಿಯಲ್ಲಿರುವ ವೀರಗಲ್ಲು ಮತ್ತು ಕೆರೆಯ ಏರಿಯ ಮೇಲೆ ಇರುವ ವೀರಗಲ್ಲು (ಕ್ರಿ.ಶ. ೧೭–೧೮ನೇ ಶತಮಾನ) ಹಾಗೂ ಕೆರೆಯ ಏರಿಯ ಪೂರ್ವಕ್ಕೆ ಹುಣಸೆ ಮರದ ಕೆಳಗಡೆ ವೀರಗಲ್ಲು (ಕ್ರಿ.ಶ. ೨೦ನೇ ಶತಮಾನ)ಗಳಿವೆ.

ಈ) ಶಿಲ್ಪಗಳು: ಸೂರ್ಯ ವಿಗ್ರಹದ ಪೀಠ, ಮಹಿಶಮರ್ದಿನಿ (ಇಂದಿನ ದ್ಯಾವಮ್ಮನಗುಡಿ), ಪುರಾತನ ದೇವಾಲಯಗಳ ಬಿತ್ತಿಗಳಲ್ಲಿರುವ ಆನೆ ಶಿಲ್ಪಗಳ ಚಪ್ಪಡಿ ಕಲ್ಲುಗಳು (ಕ್ರಿ.ಶ. ೧೨–೧೩ನೇ ಶತಮಾನ) ಮೊದಲಾದವು ಗಳಿವೆ.

ಉ) ಶಾಸನಗಳು: ಖಾನಾಪುರ ಗ್ರಾಮದಲ್ಲಿ ಎರಡು ಅಪ್ರಕಟಿತ ಶಾಸನಗಳಿವೆ. ಇಲ್ಲಿನ ಜುಮ್ಮಾ ಮಸೀದಿ ಭಿತ್ತಿ ಯಲ್ಲಿರುವ ಶಾಸನ ಪರ್ಶಿಯನ್–ಅರೇಬಿಕ್ ಭಾಷೆಯಲ್ಲಿದ್ದು, ಇದನ್ನು ಓದುವುದಕ್ಕೆ ಸಾಧ್ಯವಾಗಿಲ್ಲ. ಇನ್ನೊಂದು ಶಾಸನವು ಹನುಮಾನ್ ದೇವಾಲಯದ ಆವರಣದಲ್ಲಿದ್ದು, ಅದರ ವಿವರ ಈ ಮುಂದಿನಂತಿದೆ.

ಶಾಸನದ ಮೂಲ ಪಾಠ

೧. ಓಂ ಶ್ರೀ ಗಣಾಧಿಪತೆಯೇ ನಮಃ ॥ ನಮಸ್ತುಂಗ ಶಿರಶ್ಚುಂಬಿ ಚಂ

೨. ದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಬಾಯ

೩. ◎ ಶಂಭವೇ ॥ ಜಯತ್ಯ ವಿಷ್ಕೃತಂದ ವಿಷ್ಣೋರ್ವ ರಾಹಂ ಕ್ಷೋಬಿತಾರ್ಣ್ನವಂದಕ್ಷಿಣೋನ್ನ

೪. ತದಂ ದಷ್ಟಾಗ್ರಹರಂ ಭುವನ ವಪುಃ ॥ ಸ್ವಸ್ತಿ ಶ್ರೀಮತು ಕಳಚುರ್ಯಭುಜ

೫. ಬಳಚಕ್ರವರ್ತಿ ಆಹವಮಲ್ಲದೇವವರ್ಷದ ೪ನೆಯ ಶುಭಕೃತ್ಸಂವ

೬ ತ್ಸರದ ಆಷಾಡ ಶುದ್ಧ ೧೦ ಆದಿತ್ಯವಾರದಂದು ಸ್ವಸ್ತಿ ಯಮನಿಯಮ ಸ್ವಾ

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ದೇವನಾಂಪ್ರಿಯ ಅಶೋಕ ಗು ವಿ ವಿ ಸ್ನಾತಕೋತ್ತರ ಕೇಂದ್ರ ಮಸ್ಕಿ, ರಾಯಚೂರು ಜಿಲ್ಲೆ-೫೮೪೧೨೪

೭ ಧ್ಯಾಯ ಧ್ಯಾನ ದಾರಣ ಮೋನಾನುಷ್ಠಾನ ಜಪಸಮಾಧಿ ಶೀಲಗುಣಸಂಪ
೮. ನ್ನರೌಪಾಸನಾಗ್ನಿಹೋತ್ರದ್ವಿಜಗುರು ದೇವತಾ ಪೂಜಾತತ್ಪರರು ಮತ್ತಂ
೯. ರಣೋಜ್ವಳ ಕೀರ್ತ್ತಿಂಯುತರ್ಸ್ಸಕಳ ವಿಶಾಸ್ತ್ರ ವಿಶಾರಾದರುಮಪ್ಪ ಶ್ರೀವ್ಮತು
೧೦. ಸಮಸ್ತಪ್ರಶಸ್ತಿಸಹಿತಂ ಪಿರಿಯಗೊಬ್ಬೂರ ಅಶೇಷ ಮಹಾಜನಂಗಳ
೧೧. ಸ್ವಸ್ತಿ ಸಮಸ್ತಭುವನ ವಿಖ್ಯಾತವಿಪಂಚಶತಕ ವೀರಶಾಸನ ಲಬ್ದಾನೇಕಗುಣಗ
೧೨. ಣಾಳಂಕ್ರಿತಸತ್ಯ ಶೌಚಾ ಚಾರು ಚಾರಿತ್ರ್ಯನಯವಿನಯ ವಿಜ್ಞಾನ ವೀರಬ
೧೩. ಣಂಜುಧರ್ಮ್ಮಪ್ರತಿಪಾಳನರುಪ್ಪ ಶ್ರೀಮದಯ್ಯಣವಾಡಿ ಮೂನ್ನೂರರ ಸದ್ವಿ
೧೪. ಖ್ಯಾತಬೂಬಯನಾಕನುಂ ಚಾ ವೆಯ ಳದ ಬಣಜಮುಖ್ಯವಾಗಿ ಶ್ರೀ
೧೫. ಮದುಭಯ ನಾನಾದೇಶಿಪ್ರಮುಖ ಪಿರಿಯಗೊಬ್ಬೂರ ಸ್ತಳದ ಅಯ್ನೂರ್ವರಿಗಂ
೧೬. ಅವರ ಮಕ್ಕಳು ಕುರುಬ ಸೇಣಗಳಿಗಂ ಜಗತಿಯಂ ಜಾಡಗೊತ್ತಳಿಗಳಾದ . . .
೧೭. ಬವ . ವಾಗುತ್ತಿರಲು ಆ ಇತ್ತಡ . . . . . ಅಶೇಷ ಮಹಾಜನಂಗಳು.
೧೮. ಪ್ರಕಾರವೆಂತಿಂದಡೆ ಕುರುಬ ಸೇಣಗರು . . ಬನ . ಗರ . . ಳೆಯ ನೆಯ್ಯ
೧೯. . . . ಮಹಾಜನಂ ನ ಆ ಕುರುಬ ಸೇಣಗ . ತಂಮ ಸ್ವರು . ಕ್ರಿ. ದಿಂದೊಡಂ
೨೦. ಬ. . ಂ ಬನ ತಾಗರನು . ಳೆಯ ನೆಯ್ವುದಂಮ . ರು ಆ ಐನೂರ್ವರು ಮಹಾಜನಂ
೨೧. ಸಮಯ . . ಯ . ಯ ಸ್ವರೂಪವಾಗಿ ಮಧ್ಯಸ್ತರಾಗಿಪ್ಪ . . . . . .
೨೨. ವಾಗಿ ಳಿದು ಬ ಸಲ ಪಿರಿಯಗೊಬ್ಬೂರ ಮುಖ್ಯವಾಗಿ ಅಯ್ಯಣವಾ
೨೩. ಡಿ ನಾಡಾಳಿಕೆ ಸಮಂಯ ದೊಳಿಯನಾರು ಮಾಡಿಸಲೆಂದು ಆ ಸಮ
೨೪. ಯಂಗಳಿಗೆ ಶ್ರೀ ಸ್ವಯಂಭು ರಾಜೇಶ್ವರ ದೇವರು ಶ್ರೀ ಕಲಿದೇವರು ಮೊದಲಾಗಿ ದಿ
೨೫. . . . ಬಳಿ ವಿ ಬಳಿ ನಿರನು . . ಮಹಾಜನಂಗಳೆರಡು ಆಚಂದ್ರಾರ್ಕ್ಕತಾ
೨೬. ರಂಬರುಂ ನಿರನ್ಯಯ . . ಪ್ಪಂತಾಗಿ . . ದ್ದರು ಈ ಬ . . ನಾರು ಮೀರಿ
೨೭. ದೊಡಂ ಮಹಾಜನ ದಾ . ಬ . ಹ . ಣ ಶ್ರೀ ಸ್ವಯಂಭು ರಾಜೇಶ್ವರ
೨೮. ದೇವರು ಇದನಾರು ಮೀರಿದರು ಮೀರಿದವರು ಹನ್ನೆರಡು ಸಾಸಿರ
೨೯. . . . . . ಹಂ ಬ್ಬರತ . . . . . . ಮಹಾಜನಂಗಳಿಗೆ ತರುವಾ
೩೦. . . ಹಂನ್ನೆರಡು ಖಂಡುಗ ಅಕ್ಕಿ ಹಂನ್ನೆರಡು ಖಂಡು . ಂ . ಹಂನ್ನೆರಡು ಸ
೩೧. . . . . ದ . ಹಂನ್ನೆರಡು ಸಾಸಿರ . . ಇಂತಿ ದಂಡವಂ ಶ್ರೀ ಸ್ವಯಂಭು ರಾ
೩೨. ಜೇಶ್ವರ ದೇವರಿಗೆ ತರುವರು॥

ಶಾಸನದ ಸಾರಾಂಶ:

ಇದು ಶೈವ ಶಾಸನವಾಗಿದ್ದು ನಾಲ್ಕೂವರೆ ಅಡಿ ಎತ್ತರ, ಎರಡು ಅಡಿ ಅಗಲವಿದ್ದು, ಕರಿಯ ಚಪ್ಪಡಿ ಕಲ್ಲಿನಲ್ಲಿ ಕೆತ್ತಲ್ಪಟ್ಟಿದೆ. ಕಳಚೂರಿ ವಂಶದ ಭುಜಭಳ ಚಕ್ರವರ್ತಿ ಆಹವಮಲ್ಲದೇವನಿಗೆ ಸಂಬಂಧಿಸಿದ್ದು ಕ್ರಿ.ಶ. ೧೩-೦೬-೧೧೮೨ಕ್ಕೆ ಸರಿ ಹೊಂದುತ್ತದೆ. ಶಾಸನದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ, ಖಡ್ಗ, ಈಶ್ವರಲಿಂಗ, ಕರುವಿಗೆ ಹಾಲುಣಿಸುತ್ತಿರುವ ಹಸು ಹಾಗೂ ನಂದಿಚಿತ್ರಗಳಿವೆ.

ಶಾಸನದ ಕೆಳಗಿನ ಸಾಲುಗಳಲ್ಲಿ ಪಿರಿಯ ಗೊಬ್ಬೂರ ಅಶೇಷಮಹಾಜನಂಗಳು, ಬೂಬಯ್ಯನಾಯಕ, ಕುರುಬ ಸೇಣಗಳು, ಜಗತಿಯರು, ಜಾಡಗೊತ್ತಳಿಗಳು ಹಾಗೂ ವರ್ತಕರಾದ ಉಭಯನಾನಾದೇಶಿ, ವೀರಬಣಂಜು, ಮೊದಲಾದವರು ಉಲ್ಲೇಖದೊಂದಿಗೆ ಅಯ್ಯಣವಾಡಿ-೩೦೦ರ ವಿಭಾಗವ ಪ್ರಸ್ತಾಪವಿದೆ. ಹಾಗೆಯೇ ಶಾಸನ ಮುಂದುವರಿದು ಅಂದಿನ ದಿನಗಳಲ್ಲಿ ಪ್ರಸಿದ್ಧಿ ಪಡೆದ ಸ್ವಯಂಭೂ ರಾಜೇಶ್ವರ, ಶ್ರೀ ಕಲಿದೇವರುಗಳಿಗೆ ಗ್ರಾಮಸ್ಥರು ೧೨ ಖಂಡುಗ ಅಕ್ಕಿಯನ್ನು ದಾನ ನೀಡಿದ ವಿಷಯವಿದೆ.

೨ ದಿದ್ದಿಗಿ:

ಇದು ಪುರಾತನ ಕಾಲದಲ್ಲಿ ಪ್ರಸಿದ್ದಿ ಪಡೆದ ಅಗ್ರಹಾರವಾಗಿತ್ತು. ಶ್ರೀ ಅಮರೇಶಪ್ಪ ತಲೇಖಾನ ಎಂಬಾತನ ಈಗಿನ ಬಣವೆಯದೊಡ್ಡಿ ಇರುವ ಸ್ಥಳದಲ್ಲಿ ಆಳವಾದ ಬಾವಿಯೊಂದು ಇದ್ದುದರಿಂದ ಈ ಊರಿಗೆ ದೀರ್ಘಿಕೆ ದಿಗ್ಗಿಗೆ>ದಿದ್ದಿಗೆ >ದಿದ್ದಿಗಿ

ಆಗಿದೆಯೆಂದು ಪ್ರೊ. ಡಿ.ಕೆ. ಭೀಮಸೇನರಾಯರು ಹೇಳಿದ್ದಾರೆ. ದೀರ್ಘಿಕಾ ಎಂದರೆ ಸಂಸ್ಕೃತದಲ್ಲಿ ಆಳವಾದ ಬಾವಿ ಎಂದರ್ಥ. ಇದಲ್ಲದೆ ದಿದ್ದಿಗಿಯಲ್ಲಿ ಅನೇಕ ಪ್ರಾಚ್ಯಾವಶೇಷಗಳು ಕಂಡುಬಂದಿದ್ದು ಅವುಗಳು ಈ ಮುಂದಿನಂತಿವೆ.

ಅ) ದೇವಾಲಯಗಳು:

ದಿದ್ದಿಗಿ ಗ್ರಾಮದಲ್ಲಿ ಶಾಸನೋಕ್ತ ಸೋಮೇಶ್ವರ, ರಾಮೇಶ್ವರ, ಬಿಕೇಶ್ವರ, ಸುಬ್ರಹ್ಮಣ್ಯ (ಕ್ರಿ.ಶ. ೯೧೮), ಈಶ್ವರ (ಕ್ರಿ.ಶ. ೧೦–೧೧ನೇ ಶತಮಾನ), ವೀರಭದ್ರೇಶ್ವರ, ಬಸವಣ್ಣ, ಕಂಬತ್ತರಾಯ, ಕಾಳಿಕಾದೇವಿ ಮೊದಲಾದ ದೇವಾಲಯಗಳು ಇವೆ. ಇವುಗಳಲ್ಲಿ **ಸೋಮೇಶ್ವರ** ದೇವಾಲಯವು ಸಂಪೂರ್ಣ ಹಾಳಾಗಿದ್ದು. ಅದರಲ್ಲಿ ವೀರಗಲ್ಲು, ನಾಗಶಿಲ್ಪಗಳಿವೆ. ಅಂದಿನ **ರಾಮೇಶ್ವರ** ದೇವಾಲಯವು ಇಂದು ರಾಮಲಿಂಗೇಶ್ವರ ದೇವಾಲಯವೆಂದು ಕರೆಸಿಕೊಳ್ಳುತ್ತಿದೆ. ಈಗ ಸದ್ಯದಲ್ಲಿ ಗರ್ಭಗೃಹವು ಮಾತ್ರ ಉಳಿದಿದ್ದು ಅಂತರಾಳ ನವರಂಗ ಭಾಗಗಳು ನಶಿಸಿವೆ. ಗರ್ಭಗೃಹದಲ್ಲಿ ಈಶ್ವರಲಿಂಗ ಮತ್ತು ಗಣೇಶ ವಿಗ್ರಹಗಳಿವೆ. **ಈಶ್ವರ** ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಭಾಗಗಳು ಮಾತ್ರ ಕಾಣಬರುತ್ತಿದ್ದು, ನವರಂಗ ಭಾಗ ನಶಿಸಿ ಹೋಗಿವೆ. ಈ ದೇವಾಲಯದ ಗರ್ಭಗೃಹದಲ್ಲಿ ಪಾಣಿವಾಟದ ಈಶ್ವರಲಿಂಗವಿದೆ. **ಕಂಬತ್ತರಾಯ** ದೇವಾಲಯದಲ್ಲಿ (ಕ್ರಿ.ಶ. ೧೦–೧೧ನೇ ಶತಮಾನ) ಎರಡು ದೊಡ್ಡ ಪಾಣಿವಾಟದ ಈಶ್ವರ ಲಿಂಗಗಳು ಕಾಣಬರುತ್ತಿದ್ದು. ದೇವಾಲಯವು ಸಂಪೂರ್ಣ ನಶಿಸಿ ಹೋಗಿವೆ. ಹಿಂದೆ ಯಾವುದೋ ದೇವಾಲಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಪಾಣಿವಾಟದ ಸೂರ್ಯ ವಿಗ್ರಹವನ್ನು ಕಳ್ಳರು ದಿದ್ದಿಗಿ ಗ್ರಾಮದಿಂದ ದಕ್ಷಿಣ ದಿಕ್ಕಿಗೆ ೩ ಕಿ.ಮೀ. ದೂರ ತಗೆದುಕೊಂಡು ಹೋಗಿ ಜಮೀನಿನಲ್ಲಿ ಅದರ ಕೈಗಳನ್ನು ಭಗ್ನಗೊಳಿಸಿದ್ದಾರೆ. ಈಗಲೂ ಸೂರ್ಯ ವಿಗ್ರಹವು ಬಾಗೋಡೆಪ್ಪ ತಂ. ಬಸಣ್ಣ ಮಾನ್ವಿಯವರ ಹೊಲದಲ್ಲಿದೆ. ಕಾಳಿಕಾ ದೇವಿ, ವೀರಭದ್ರೇಶ್ವರ, ಹನುಮಾನ್ ದೇಗುಲಗಳು ಇತ್ತೀಚಿನ ಕಾಲದವುಗಳು. ಶಾಸನೋಕ್ತ ಬಿಕೇಶ್ವರ, ಸುಬ್ರಹ್ಮಣ್ಯ ದೇವಾಲಯಗಳನ್ನು ಗುರುತಿಸುವುದಕ್ಕೆ ಸಾಧ್ಯವಾಗಿಲ್ಲ. ಹಾಗೆಯೇ ಬಸವಣ್ಣ ದೇವಾಲಯದಲ್ಲಿ ಹಳೆಯ ನಂದಿ ವಿಗ್ರಹವನ್ನು ಕೂಡಿಸಿ ಹೊಸ ದೇವಾಲಯವನ್ನು ಕಟ್ಟಿಸಿದ್ದಾರೆ.

ಆ) ಜೈನ ಬಸದಿ:

ಈ ಗ್ರಾಮದಲ್ಲಿ ಶೈವ, ವೈಷ್ಣವ, ಕ್ರಿಶ್ಚಿಯನ್, ಇಸ್ಲಾಂ ಧರ್ಮಗಳ ಜನರು ನೆಲೆಸಿದ್ದರೆಂದು ಇಲ್ಲಿಯವರೆಗೆ ದೃಢಪಟ್ಟಿತ್ತು. ಆದರೆ ನಾನು ಈ ಊರಲ್ಲಿ ಮಹಾವೀರನ ಪೀಠವಿರುವ ಬಸದಿಯನ್ನು ಪತ್ತೆಯಚ್ಚಿದ್ದೇನೆ. ಆದುದರಿಂದ ದಿದ್ದಿಗಿ ಗ್ರಾಮದಲ್ಲಿ ಹಿಂದಿನ ದಿನಗಳಲ್ಲಿ ಜೈನರು ನೆಲೆಸಿರುವುದರೊಂದಿಗೆ ಬಸದಿ ಕಟ್ಟಿಕೊಂಡಿದ್ದು ತಿಳಿದುಬರುತ್ತದೆ. ಹಿಂದಿನ ವೀರಭದ್ರೇಶ್ವರ ದೇವಾಲಯವು ಬಹುಶಃ ಹಿಂದೆ ಜೈನರ ಬಸದಿಯಾಗಿರಬೇಕು? ಏಕೆಂದರೆ, ಈ ದೇವಾಲಯದ ಗರ್ಭಗೃಹದಲ್ಲಿ ಮೂರು ಸಿಂಹಗಳು ಇರುವ ಪಾಣಿಪೀಠವಿದೆ. ಇದರ ಮೇಲೆ ಅಂದಿನ ದಿನಗಳಲ್ಲಿ ಮಹಾವೀರ ತೀರ್ಥಂಕರನ ವಿಗ್ರಹವಿದ್ದು, ಅದು ಭಗ್ನಗೊಂಡ ಮೇಲೆ ಬಿಸಾಡಿರಬೇಕು. ನಂತರ ದಿನಗಳಲ್ಲಿ ಮಹಾವೀರ ತೀರ್ಥಂಕರನ ಪೀಠದ ಮೇಲೆ ವೀರಭದ್ರೇಶ್ವರನ ವಿಗ್ರಹವನ್ನು ಪ್ರತಿಷ್ಠಾಪಿಸಿ ಬಸದಿಯ ರೂಪವನ್ನು ಬದಲಾಯಿಸಿ ಜೀರ್ಣೋದ್ಧಾರಗೊಳಿಸಲಾಗಿದೆ. ಮೂಲ ಬಸದಿಯ ತೀರ್ಥಂಕರನ ವಿಗ್ರಹದ ತಲೆಯಭಾಗವು ಇಂದಿನ ರಾಮಲಿಂಗೇಶ್ವರ ದೇವಾಲಯದ ಆವರಣದಲ್ಲಿ ಬಹುಕಾಲ ಅನಾಥವಾಗಿ ಬಿದ್ದುದನ್ನು ಮನಗಂಡ ದಿದ್ದಿಗಿ ಗ್ರಾಮದ ಶ್ರೀ ಅಶೋಕ ನಾಯಕರವರು ತಗೆದುಕೊಂಡು ತಮ್ಮ ಮನೆಯಲ್ಲಿ ಸಂರಕ್ಷಿಸಿದ್ದಾರೆ.

ಇ) ವೀರಗಲ್ಲುಗಳು:

ದಿದ್ದಿಗಿ ಗ್ರಾಮದಲ್ಲಿ ಒಟ್ಟು ೨೯ ವೀರಗಲ್ಲುಗಳಿವೆ. ಇವುಗಳಲ್ಲಿ ಹೆಚ್ಚಿನವು ಕಪ್ಪುಶಿಲೆಯಲ್ಲಿದ್ದು ಕೆಲವು ಮಾತ್ರ ಕಣಶಿಲೆಯಲ್ಲಿವೆ. ಆ ವೀರಗಲ್ಲುಗಳ ವಿವರ ಇಂತಿದೆ. ಬಸಮ್ಮ ಗೊಲ್ಲರ ಹೊಲದ ಬದುವಿನಲ್ಲಿ ಎರಡು (ಕ್ರಿ.ಶ. ೧೦ನೇ ಶತಮಾನ) ವೀರಗಲ್ಲು, ಸೋಮೇಶ್ವರ ದೇವಾಲಯದಲ್ಲಿ ಹತ್ತು, ಉಟಕನೂರು ಬಸಲಿಂಗ ತಾತನ ಕಟ್ಟೆಯ ಹತ್ತಿರ ನಾಲ್ಕು, ವೀರೇಶಪ್ಪ ಬೆಂಡೋಣೆ ಇವರ ಮನೆಯ ಹತ್ತಿರದಲ್ಲಿ ಎರಡು (ಕ್ರಿ.ಶ. ೧೦–೧೧ನೇ ಶತಮಾನ) ವೀರಗಲ್ಲುಗಳು, ಅಮರೇಗೌಡ ತಂ. ಶಂಕರಗೌಡ ಜಮೀನಿನ ಬದುವಿನಲ್ಲಿ ಎರಡು, ಹೋಮಣ್ಣನವರ ಮನೆಯ ಹತ್ತಿರ ಒಂದು, ಗೌರಮ್ಮ ಗಂ. ಫಕೀರಪ್ಪ ನಾಯಕರ ಜಮೀನನಲ್ಲಿ (ಫೀರಲಕಟ್ಟಿ) ನಾಲ್ಕು, ಲಿಂಗಪ್ಪ ತಂದೆ ಅಗರೆಪ್ಪ ಕರುಬರ ಜಮೀನಿನ ಕಟ್ಟೆಯಲ್ಲಿ ನಾಲ್ಕು (ಕ್ರಿ.ಶ. ೧೭–೧೮ನೇ ಶತಮಾನ) ವೀರಗಲ್ಲುಗಳಿವೆ. ಇವುಗಳಲ್ಲಿ ೨೨ ಸಾಮಾನ್ಯ ವೀರಗಲ್ಲುಗಳು, ೪ ತುರುಗೋಳ್ ವೀರಗಲ್ಲುಗಳು, ೧ ಹುಲಿಬೇಟೆ ವೀರಗಲ್ಲು, ಎರಡು ದಂಡನಾಯಕನಿರುವ ವೀರಗಲ್ಲುಗಳಿವೆ. ಇವೆಲ್ಲವುಗಳನ್ನು ಗಮನಿಸಿದಾಗ ದಿದ್ದಿಗಿಯು ಅಂದಿನ ದಿನಗಳಲ್ಲಿ ರಣರಂಗದ ಸ್ಥಳವಾಗಿರಬೇಕು. ವೀರರು ಹೋರಾಟದಲ್ಲಿ ಮರಣವನ್ನಪ್ಪಿದವರ ಶಾಶ್ವತ ನೆನಪಿಗಾಗಿ ಅವರ ಸಂಬಂಧಿಕರು ಅಥವಾ ಅಭಿಮಾನಿಗಳು ವೀರರ ಸ್ಮರಣಾರ್ಥವಾಗಿ ಚಪ್ಪಡಿ ಕಲ್ಲುಗಳಲ್ಲಿ ಅವರ ಹೋರಾಟದ ವಿವಿಧ ಭಂಗಿಗಳನ್ನು ಶಾಸನ ರಹಿತವಾಗಿ ಕೆತ್ತಿಸಿದ್ದಾರೆ. ಆದರೆ ಅಂದು ಕೆತ್ತಿಸಿದ ಈ ವೀರಗಲ್ಲುಗಳಿಗೆ ಇಂದು ದಿದ್ದಿಗಿ ಗ್ರಾಮದ ಜನರು

ಎಣ್ಣೆ ಸುರಿದು ವಿರೂಪಗೊಳಿಸಿರುವುದು ವಿಷಾದಕರ ಸಂಗತಿಯಾಗಿದೆ.

ಈ) ಶಾಸನ ಮತ್ತು ಶಿಲ್ಪಗಳು:

ಮಹಿಷಮರ್ದಿನಿ, ಸಪ್ತಮಾತೃಕೆ, ಹಲವು ನಾಗ ವಿಗ್ರಹ ಮೊದಲಾದ ಶಿಲ್ಪಗಳು ಕಾಣಬರುತ್ತವೆ. ಇದೇ ಗ್ರಾಮದ ಪ್ರೊ. ಡಿ.ಕೆ. ಭೀಮಸೇನರಾಯರು ತಮ್ಮ ಲೇಖನದಲ್ಲಿ ೪ ಶಾಸನಗಳನ್ನು ಉಲ್ಲೇಖಿಸಿದ್ದಾರೆ. ಈಗಾಗಲೇ ಬಸಮ್ಮ ಗೊಲ್ಲರ ಹೊಲದ ಬದುವಿನಲ್ಲಿರುವ ಒಂದು ಶಾಸನವನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ (೨೦೦೩) ಶಾಸನಶಾಸ್ತ್ರ ವಿಭಾಗದವರು ಪ್ರಕಟಿಸಿದ್ದಾರೆ. ಆದರೆ ಇನ್ನೂ ಮೂರು ಶಾಸನಗಳು ಕಾಲಗರ್ಭದಲ್ಲಿ ಹೂತು ಹೋಗಿರಬೇಕು. ಇತ್ತೀಚೆಗೆ ಈ ಗ್ರಾಮದ ಕ್ಷೇತ್ರಕಾರ್ಯಕ್ಕೆ ನಾನು ಹೋದಾಗ ಶ್ರೀ ಅಮರೇಶಪ್ಪ ತಲೇಖಾನ (ದಿದ್ದಿಗಿ)ರವರ ಹೊಲದ ಬದುವಿನಲ್ಲಿ ಅಪ್ರಕಟಿತ ಶಾಸನ ದೊರೆತಿದ್ದು ಅದರ ವಿವರ ಈ ಮುಂದಿನಂತಿದೆ.

ಶಾಸಸದ ಮೂಲ ಪಾಠ:

೧. ಪದವಡಿಸಿದ
೨. ವರದೇವರ ಸಿ
೩. ಶ್ಯರಾಚುರಾ
೪. ರುದ್ರಪದೇವ
೫. ರ ಕೊಮಾರ(ಳ್ಗೆ)
೬. ದಶ(ವಂದ)

ಶಾಸನದ ಸಾರಾಂಶ:

ಕಣಶಿಲೆಯ ಚಪ್ಪಡಿಕಲ್ಲಿನಲ್ಲಿ ಕೆತ್ತನೆಗೊಂಡ ಈ ಶಾಸನವು ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿದ್ದು, ಆರು ಸಾಲುಗಳಿಂದ ಕೂಡಿದೆ. ಇದು ಕ್ರಿ.ಶ. ಸು. ೧೫-೧೬ನೇ ಶತಮಾನದ ಲಿಪಿಯಲ್ಲಿದೆ. ಶಾಸನದಲ್ಲಿ ವರದೇವರ ಶಿಷ್ಯ ರಾಯಚೂರಿನ



ಈಶ್ವರ ದೇವಾಲಯದ ಪಾರ್ಶ್ವ ನೋಟ

ರುದ್ರಪದೇವರ ಕುಮಾರರಿಗೆ ಭೂಮಿಯನ್ನು ದತ್ತಿ ನೀಡಿ ಶಾಸನ ಹಾಕಿಸಿದ ವಿಷಯವಿದೆ.

[ದಿದ್ದಿಗಿ ಗ್ರಾಮದ ಕ್ಷೇತ್ರಕಾರ್ಯದಲ್ಲಿ ನನ್ನ ಜೊತೆ ಬಂದು ಸಹಕರಿಸಿದ ಡಾ. ದೇವಪ್ಪ ಹನುಮಂತಪ್ಪ ಬಿರಾದಾರ, ಶಶಿಧರ ಕಟಗೇರಿ, ದಿದ್ದಿಗಿಯ ಶ್ರೀ ಅಶೋಕ ನಾಯಕ, ಗಂಗಾಧರ ಹಾಗೂ ಖಾನಾಪೂರ ಗ್ರಾಮದ ಕ್ಷೇತ್ರ ಕಾರ್ಯದಲ್ಲಿ ಭಾಷುಮಿಯಾ ಗಲಗ, ಶರಣಪ್ಪಗೌಡ ಖಾನಪೂರ ಮೊದಲಾದವರಿಗೆ ಕೃತಜ್ಞತೆಗಳು]



ತುರುಗೋಳ್ ವೀರಗಲ್ಲುಗಳು

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧) ಡಾ. ದೇವರಕೊಂಡಾರೆಡ್ಡಿ (ಪ್ರಧಾನ ಸಂಪಾದಕರು) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭. "ರಾಯಚೂರು ಜಿಲ್ಲೆ", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.
೨) ಪ್ರೊ. ದೇವೇಂದ್ರಕುಮಾರ ಹಕಾರಿ (ಸಂಪಾದಕರು), ಅವಲೋಕನ – ಸಂಶೋಧನ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.
೩) ಡಾ. ಬಿ. ಚನ್ನಬಸಪ್ಪ, ರಾಯಚೂರು ಜಿಲ್ಲೆಯ ಚರಿತ್ರೆ ಶಾಸನಗಳ ಹಿನ್ನೆಲೆಯಲ್ಲಿ, ಅಕ್ಷರ ಮಂಟಪ ಪ್ರಕಾಶನ ಹಂಪಿನಗರ, ಬೆಂಗಳೂರು, ೨೦೧೦.
೪) ಡಾ. ಚನ್ನಬಸಪ್ಪ ಮಲ್ಕಂದಿನ್ನಿ (ಲೇಖಕರು), ಪ್ರಾಚ್ಯಾವಶೇಷಗಳು, ಶಾಸನ ಪತ್ತೆ, ವಿಜಯವಾಣಿ ದಿನಪತ್ರಿಕೆ, ದಿನಾಂಕ: ೧೮-೦೮-೨೦೧೪, ಪುಟ ಸಂಖ್ಯೆ ೭.
೫) ಡಾ. ಚನ್ನಬಸಪ್ಪ ಮಲ್ಕಂದಿನ್ನಿ (ಲೇಖಕರು), ಕಳಚೂರಿ ಅರಸರ ಶಾಸನ ಪತ್ತೆ, ವಿಜಯ ಕರ್ನಾಟಕ ದಿನಪತ್ರಿಕೆ, ದಿನಾಂಕ: ೨೬-೦೬-೨೦೧೪, ಪುಟ ಸಂಖ್ಯೆ ೩.

೨೨

ಹರಿಹರ ತಾಲ್ಲೂಕು ಹಿರೇಹಾಲಿವಾಣದಲ್ಲಿ ದೊರೆತ ಅಪ್ರಕಟಿತ ಶಾಸನ

ರಾಘವೇಂದ್ರಚಾರಿ ಕೆ.ಎಂ.*

ಹಿರೇಹಾಲಿವಾಣ ಹರಿಹರ ತಾ, ಈಶ್ವರ ದೇವಾಲಯದ ಬಳಿ ಇರುವ ೧ನೇ ವೀರಗಲ್ಲು

ಕ್ರಿ.ಶ. ೧೩ ಶತಮಾನದ ಹೊಯ್ಸಳ ವೀರನಾರಸಿಂಹನ ಆಳ್ವಿಕೆಯಲ್ಲಿ ಯುದ್ಧದಲ್ಲಿ ಹೋರಾಡಿ ಮಡಿದ ವೀರನಿಗೆ ದಾನ ನೀಡಿದ್ದನ್ನು ತಿಳಿಸುವ ಶಾಸನವಾಗಿದೆ.

ಶಾಸನ ಪಾಠ

(೧ನೇ ಪಟ್ಟಿಕೆಯಲ್ಲಿ ಶಾಸನ ಅಳಿಸಿದೆ)

೨ನೇ ಪಟ್ಟಿಕೆಯಲ್ಲಿ

೧ ವ ವೀರತ್ತೆವಿಳಸದ . . . . . ನಮ . . . . . . ಗಂಪ.

೨ ಲಿವಾಂರೋಯರಧೀಕಾದಿ ಮಡಿದ ಬನ ದ. ರುನಾದ. ಮದಾಜಿ

೩ ಮಗೆಹಾರೊಡೆಯ . . ಲಿಮ . . ರು ತ್ತಲದೆರಹಾದಿ. ದೇರಲೂ. ಆಲಯ

೪ . ಯ.ಮ ಪಿರಿಯ . ದೆಳಿಕವ . ಗೆ. ಸ . . ಲಾ. ಯಯಿಗಿರಿ

೫ [ಶ್ರೀಮ]ತು ಹೊಯ್ಸಣ ವೀರನಾರಸಿಂಹೇ . . ಲಿ. ದಚಿತ್ರಭಾನು ಸಂವತ್ಸ[ರ]

೬ . . ೦ ಆದಿವಾರದಂದು ಕಿತ್ತೂರ ಕೋಟೆಯ ಕೆಳಗೆ ಮೂಡಲ ತಿಯ

೭ . . ಹರಿಯ . ಗಬಂ . . . . ರದುರಿಯ .

೩ನೇ ಪಟ್ಟಿಕೆಯಲ್ಲಿ

೮ . . ಮೂಡಲ . . ಯಿ ಅಸ್ತು ಕಂಬಯಿಸ್ತಿ ಭೂಮಿಯನುಸಲಿಮ . ಮ ॥ ಮಲಿ . .

೯ . ವೆ ಅವನಾಗಿಯೊಬ್ಬ ಸಲಿಸದವನು ಗಂಗೆಯ ತಾಡಿಯಲು ಕವಿಲೆಯ ಕೊ

೧೦ ಂದ ಪಾಪ ಸತ್ತು ಪಡದೆದ ವೀರವ್ರಿತ್ತಿ ॥

ಹೊಯ್ಸಣ ವೀರನಾರಸಿಂಹನ ಕಾಲದಲ್ಲಿ ಯುದ್ಧದಲ್ಲಿ ಹೋರಾಡಿ ಮಡಿದ ವೀರನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಈಶ್ವರ ದೇವಾಲಯದ ಬಳಿ ಇರುವ ೨ನೇ ವೀರಗಲ್ಲು

ರಾಷ್ಟ್ರಕೂಟರ ಕಾಲದಲ್ಲಿ ಕನ್ನರದೇವನ ಆಳ್ವಿಕೆಯಲ್ಲಿ ಗೊಡಗಡಿಲದೇವನು ರಾಜ್ಯವಾಳು ತ್ತಿರಲು ಹೋರಾಟದಲ್ಲಿ ಗಂಗವಂಶದ ಎರೆಗಂಗಯ್ಯನು ಮರಣ ಹೊಂದಿದ್ದನ್ನು ತಿಳಿಸುತ್ತದೆ. ಮತ್ತು ಗೊಡ್ಡಿಲದೇವನನ್ನು ಮೊದಲ ಬಾರಿಗೆ ಪರಿಚಯಿಸುವ ಶಾಸನ ಇದಾಗಿದೆ.

ಶಾಸನ ಪಾಠ

೧ನೇ ಪಟ್ಟಿಕೆಯಲ್ಲಿ

೧ ಸ್ವಸ್ತಿ ಶ್ರೀ ಸಭಕಾಳಭೂಪಾಳ ಕ್ರೋಧನ

೨ ಸಂತ್ಸರದ ಸತಂಗಳ್ ಎಂಟುನೂ_

೩ ತ್ರೈ[ದ*]ನೆಯ ಪ್ರಭವ ಸಮೋತ್ತ

೨ನೇ ಪಟ್ಟಿಕೆಯಲ್ಲಿ

೪ ಪ್ರವರ್ತ್ತಿಸೆ ಗೊಡ್ಡಿಲದೇವಪ್ರಿಥಿ[ವಿ*] ರಾಜ್ಯ[೦*] ಗೆಯ್ಯು[ತ್ತಿರೆ*] ಕಡಂಬು

೫ . . . ಸಾತಿ . ನೃಪಪನ್ನಿಗ . . . [ದ .] ಳೆತ್ತಟ್ಟಿಸಿದಯ್ಯಬ್ಯರಾದ .

೬ ಪೂವಾಸನ . . . . ಬೃಹಸ್ಪತಿವಾರದಂನ್ದು ಎರಡೆ . . .

೩ನೇ ಪಟ್ಟಿಕೆಯಲ್ಲಿ

೭ ಗಂಗಯ್ಯ ಸ್ವರ್ಗಸ್ಥನಾದಂ[*]

* ರಾಷ್ಟ್ರಕೂಟರ ಕಾಲದ ಈ ಶಾಸನ ಎಂಟನೇ ಶತಮಾನದ್ದಾಗಿದ್ದು ಗೊಡ್ಡಿಲದೇವನೆಂಬುವನು ರಾಜ್ಯವಾಳುತ್ತಿರಲು ಹೋರಾಟದಲ್ಲಿ ಗಂಗವಂಶದ ಎರೆಗಂಗಯ್ಯನು ಮರಣ ಹೊಂದಿದ್ದನ್ನು ಉಲ್ಲೇಖಿಸುತ್ತದೆ.

* ಟೈಲ್ಸ್ ಮೇಸ್ತ್ರಿ, ೩ನೇ ಕ್ರಾಸ್, ಭಾರತ್ ಕಾಲೋನಿ, ದಾವಣಗೆರೆ-೩.

೨೩

ದೊಡ್ಡಬೇಗೂರು ಗ್ರಾಮದ ಅಪ್ರಕಟಿತ ತುರುಗೋಳ್ ಶಾಸನ

ಡಾ. ಪಿ.ವಿ. ಕೃಷ್ಣಮೂರ್ತಿ*

ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆಯ ದಕ್ಷಿಣ ತಾಲ್ಲೂಕಿಗೆ ಸೇರಿರುವ, ದೊಡ್ಡಬೇಗೂರು ಗ್ರಾಮವು ಅತ್ಯಂತ ಪ್ರಾಚೀನ ಇತಿಹಾಸವನ್ನು ಹೊಂದಿದೆ. ಈ ಗ್ರಾಮದಲ್ಲಿ ಅನೇಕ ದೇವಾಲಯಗಳು, ಗಂಗರ ಕಾಲದ ಮಣ್ಣಿನ ಕೋಟೆ ಮುಂತಾದ ಪ್ರಾಚೀನ ಅವಶೇಷಗಳು ಇವೆ. ಈ ಪ್ರದೇಶವನ್ನು ಬಾಣವಂಶೀಯನಾದ ನಾಗತ್ತರ ಎಂಬ ಸಾಮಂತನು ತಲಕಾಡು ಗಂಗರ ಅಧೀನದಲ್ಲಿ ಬೆಂಪೂರು-೧೨ ಪ್ರದೇಶ ವನ್ನು ಆಳುತ್ತಿದ್ದ ಸಂಗತಿ ಶಾಸನಗಳಿಂದ ತಿಳಿದುಬರುತ್ತದೆ. ಈತನನ್ನು ಉಲ್ಲೇಖಿಸುವ ಒಂಬತ್ತು ಶಾಸನಗಳು ಬೇಗೂರು ಮತ್ತು ಬೇಗೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದೊರೆತಿವೆ. ಈಗ ಪ್ರಕಟವಾಗಿರುವ ಶಾಸನಗಳು ಮಾತ್ರವಲ್ಲದೆ ಇನ್ನೂ ಕೆಲವು ಅಪ್ರಕಟಿತ ಶಾಸನಗಳೂ ಇರುವುದು ಕಂಡುಬರುತ್ತದೆ. ಈಚೆಗೆ ನಮ್ಮ ಗಮನಕ್ಕೆ ಬಂದ ಮಟ್ಟಿಗೂ ಅಪ್ರಕಟಿತವೆಂದು ತೋರುವ ಶಾಸನವೊಂದು ಗೋಚರಕ್ಕೆ ಬಂದಿತು. ಅದರ ಪಾಠವನ್ನು ಪ್ರಕಟಿಸುವುದು ಮತ್ತು ತುರುಗೋಳ್ ಶಿಲ್ಪದ ವಿವರಗಳನ್ನು ಸ್ಥೂಲವಾಗಿ ಪರಿಚಯಿಸುವುದು ಪ್ರಕೃತ ಲೇಖನದ ಉದ್ದೇಶ.

ಸುಮಾರು ೭೫ ಸೆಂ.ಮೀ. ಅಗಲ ಮತ್ತು ೨೦೦ ಸೆಂ.ಮೀ. ಎತ್ತರವಿರುವ ಪ್ರಸ್ತುತ ಸ್ಮಾರಕಶಿಲೆಯ ಬಲ ಅಂಚಿನ ಮೇಲ್ತುದಿಯಲ್ಲಿ ತ್ರುಟಿತ ಸ್ವರೂಪದ ಶಾಸನವಿದೆ. ಉಳಿದ ಭಾಗದಲ್ಲಿ ಎರಡು ಹಂತದ ಶಿಲ್ಪವಿದೆ. ಮೇಲಿನ ಹಂತದಲ್ಲಿ: ವೀರ ಆಸೀನ ಭಂಗಿಯಲ್ಲಿ ಕುಳಿತಿರುವಂತೆ ಹಾಗೂ ಆತನನ್ನು ಇಬ್ಬರು ಅಪ್ಸರೆಯರು ಆತನ ತೋಳುಗಳನ್ನು ಬಳಸಿ ಹಿಡಿದು ಮೇಲಕ್ಕೆತ್ತಿಕೊಂಡು ಸಾಗುತ್ತಿರುವಂತೆ ಬಿಡಿಸಲಾಗಿದೆ. ಕೆಳಹಂತದಲ್ಲಿ: ವೀರ ಆಲೀಢಭಂಗಿಯಲ್ಲಿದ್ದು ಎಡಗೈಯಲ್ಲಿ ಆಳೆತ್ತರದ ಬಿಲ್ಲನ್ನು, ಬಲಗೈಯಲ್ಲಿ ಚೂರಿಯಂತಹ ಆಯುಧ ವನ್ನು ಹಿಡಿದಿರುವಂತೆ ಬಿಡಿಸಲಾಗಿದೆ. ವೀರಮುಡಿಯನ್ನು ಕಟ್ಟಿರುವ ವೀರ, ಕೊರಳಲ್ಲಿ ಕಂಠಾಭರಣವನ್ನು ಧರಿಸಿದ್ದಾನೆ. ನಡುವಿಗೆ ಸೊಂಟಪಟ್ಟಿಯನ್ನೊಳಗೊಂಡಂತೆ ವಸ್ತ್ರಾಲಂಕಾರ ವಿದೆ. ಕೈ-ಕಾಲುಗಳು ಕಡಗಗಳಿಂದ ಅಲಂಕೃತಗೊಂಡಿವೆ. ವೈರಿಯ ಬಾಣಗಳು ವೀರನ ಶಿರ, ಎದೆ, ಸೊಂಟ ಹಾಗೂ



ಮೊಣಕಾಲುಗಳಿಗೆ ನಾಟಿರುವಂತೆ ಬಿಡಿಸಲಾಗಿದೆ. ವೀರನ ಶಿಲ್ಪದ ಬಲಗಡೆ; ತುರುಗಳು ಹಿಂತಿರುಗುತ್ತಿರುವಂತೆ ಚಿತ್ರಿತ ಗೊಂಡಿದೆ.

ಶಾಸನಪಾಠ

೧ . . . ರ

೨ . . .

೩ . . . ಸಾರ

೪ . . . ವ

೫ . . . ಟಿವ

೬ . . ೃ ಟ್ದು ಕೇಳ್ದು

೭ . . [ವ*] ದುವನ್ನುದ್ತು

೮ . . . ಸಿ ಸತ್ತಂ

ಮೇಲಿನ ಶಾಸನವು ತುರುಗೋಳ್ ಶಾಸನವಾಗಿದ್ದು ಶಾಸನಪಾಠ ಹೆಚ್ಚು ತ್ರುಟಿತವಾಗಿದೆ. ಹೆಚ್ಚು ಗಟ್ಟಿಯಾದ ಗ್ರಾನೈಟ್ ಶಿಲೆಯ ಮೇಲೆ ಕೆತ್ತಲಾಗಿದೆ. ಶಾಸನದ ಬಲಬದಿಯ ಭಾಗ ದೊರೆತಿಲ್ಲ. ಹಾಗಾಗಿ ಶಾಸನದ ಅಭಿಪ್ರಾಯ ಸ್ಪಷ್ಟವಾಗುವುದಿಲ್ಲ.

* # ೩೭, 'ಶ್ರೀಕೃಷ್ಣಕೃಪ', ೩ನೆಯ ಅಡ್ಡರಸ್ತೆ, ಸುಬ್ಬಣ್ಣ ಲೇಔಟ್, ಹರಿನಗರ ಕ್ರಾಸ್, ಬೆಂಗಳೂರು-೫೬೦೧೦೮.

೧೪

ಕನಕೂರು ಗ್ರಾಮದ ಅಪ್ರಕಟಿತ ಕನ್ನಡ ಶಾಸನಗಳು ಮತ್ತು ಸ್ಮಾರಕ ಶಿಲ್ಪಗಳು

ವಿರೂಪಾಕ್ಷಿ ಎನ್.ಬಿ.*

ಸೀಮಾಂಧ್ರದ ಅನಂತಪುರಂ ಜಿಲ್ಲೆಯ ಶೆಟ್ಟೂರು ಮಂಡಲಂನಲ್ಲಿರುವ ಗ್ರಾಮ ಕನಕೂರು. ಇದು ಶೆಟ್ಟೂರಿನಿಂದ ದಕ್ಷಿಣಕ್ಕೆ ಹತ್ತು ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ಮಧ್ಯ ಭಾಗದಲ್ಲಿರುವ ರಾಮಲಿಂಗೇಶ್ವರ ದೇವಾಲಯದ ಆವರಣದಲ್ಲಿ ವಿಜಯನಗರೋತ್ತರ ಕಾಲದ ಮೂರು ಶಾಸನಗಳಿವೆ. ಅವುಗಳಲ್ಲಿನ ಒಂದು ಶಾಸನವು ಸ್ಫುಟವಾಗಿದ್ದು, ಮತ್ತೆರಡು ಶಾಸನಗಳು ತ್ರುಟಿತವಾಗಿವೆ. ಒಂದನೆಯ ಶಾಸನವು ಏಳು ಸಾಲುಗಳನ್ನು ಹೊಂದಿದ್ದು, ದಾನ ಶಾಸನವಾಗಿದೆ.

ಶಾಸನದ ಪಠ್ಯ

೧) . . . ನಾಯಕ ಚಯನಂದ ಕುದ್ರುಪೆ(ಪ್ಪ)ರ ನಾ

೨) ಗಪ(ಪ್ಪ) ನಾಂಯುಕರು ಕನಕು(ಕೂ)ರ ಕಂಬಲದೆ(ೀ)ವರಿಗೆ ಬೆ

೩) ದ(ದ್ದ)ಲು ಬಿ(ೀ)ಜವರಿ ನಲೆಪ(ಪ್ಪ)ನ ನಲೆಮೆ ಕವಲು

೪) ಕಣವಿ ಬೇವಿನಹಳ್ಳಿ ಚಿಕೋಜರ ಗ(ಘ)ನತೆಗೆ ತಂ

೫) ಮ ತಂದೆ ತಿರುಮಲನಾಯಕಗೆ ಪುನ್ಯ(ಣ್ಯ)

೬) ವಾಗಿ ಕೊಟ(ಟ್ಟ) ದ(ದಾ)ನ ಯಿದಕೆ ತಪಿ(ಪ್ಪಿ)ದರೆ ಬ್ರಂಹಣ ಕೊಂ

೭) ದಪ್ಪ ಗೋವ ಕೊಂದಪ್ಪ ಶ್ರೀ ಚಿಕೊ(ಕ್ಕೋ)ಜ . . .

ಈ ಶಾಸನದ ಮೇಲ್ಭಾಗದ ಎಡಭಾಗದಲ್ಲಿ ಶಿವಲಿಂಗ ಎದುರಿಗೆ ನಂದಿಯಿದೆ. ಬಲಭಾಗದಲ್ಲಿ ಸೂರ್ಯ–ಚಂದ್ರ ಮಧ್ಯೆ ಶಿವಲಿಂಗವನ್ನು ಖಂಡರಿಸಲಾಗಿದೆ. ಕುದ್ರುಪ್ಪರ ಅಥವಾ ಕುಂದುರ್ಪಿಯ ನಾಗಪ್ಪನಾಯಕ ಎಂಬಾತನು ತಮ್ಮ ಹಿರಿಯರಾದ ಚಿಕ್ಕೋಜರ ತಂದೆ ತಿರುಮಲನಾಯಕನಿಗೆ ಪುಣ್ಯವಾಗಲಿ ಎಂದು ಕನಕೂರು ಕಂಬಲ ದೇವರಿಗೆ (ದೇವಾಲಯಕ್ಕೆ) ಬೆದ್ದಲು ಭೂಮಿಯನ್ನು ದಾನ ನೀಡಿರುವುದನ್ನು ಉಲ್ಲೇಖಿಸಿದೆ. ಶಾಸನದ ನಾಲ್ಕನೆಯ ಸಾಲಿನ ಬೇವಿನಹಳ್ಳಿ ಪದದ ಪಕ್ಕದಲ್ಲಿ ಹಂಸಪಾದವನ್ನು ಕೊಟ್ಟಿರುವರು. ಹಾಗಾಗಿ ಶಾಸನದ ಪಠ್ಯದಲ್ಲಿ ಹಂಸಪಾದ ಸ್ಥಳದಲ್ಲಿ ಚಿಕ್ಕೋಜ ಹೆಸರನ್ನು ಸೇರಿಸಲಾಗಿದೆ. 'ತ' ಕಾರ ಮತ್ತು 'ಳ' ಕಾರಗಳು ಸ್ಪಷ್ಟವಾಗಿರುವುದರಿಂದ ಇದನ್ನು ವಿಜಯನಗರೋತ್ತರ ಕಾಲಘಟ್ಟದಲ್ಲಿ ರಚನೆಯಾಗಿದ್ದೆಂದು ನಿಖರವಾಗಿ ಹೇಳಬಹುದು. ಕೊನೆಯಲ್ಲಿ ಇದಕ್ಕೆ ತಪ್ಪಿದರೆ ಬ್ರಾಹ್ಮಣರನ್ನು, ಗೋವುಗಳನ್ನು ಕೊಂದ ಪಾಪಕ್ಕೆ ಗುರಿಯಾಗುವರು ಎಂಬ ಶಾಪಾಶಯವಿದೆ.

ಎರಡನೆಯ ಶಾಸನದ ಪಠ್ಯ

೧) ಅಂಸ . . . .

೨) . . . .

೩) . . ದ . ರನು . . ದು . . .

೪) . . . . ಕಂಬಾಲ ವಡಯ

೫) . . . . ಐದ . . ನ . .

೬) ಇವ . . ಪಾ . ಕಕೆ . ಗುವ ಗುರು

೭) . . . .

೮) . . . ದ . . . . ಹಾ

ಈ ಶಾಸನವು ಎರಡು ತುಂಡಾಗಿದ್ದು, ಮೇಲಿನ ಭಾಗದಲ್ಲಿ ಸೂರ್ಯ–ಚಂದ್ರ ಮಧ್ಯೆದಲ್ಲಿ ಶಿವಲಿಂಗವನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಎರಡು ಸಾಲಿನ ಪಠ್ಯವಿದ್ದು ತ್ರುಟಿತವಾಗಿದೆ. ಕೆಳಗಿನ ಭಾಗದಲ್ಲಿ ಎಂಟು ಸಾಲುಗಳಿದ್ದು, ಅಲ್ಲಲ್ಲಿ ಒಂದೊಂದು ಅಕ್ಷರಗಳು ಮಾತ್ರ ಕಾಣಿಸುತ್ತವೆ. ನಾಲ್ಕನೆಯ ಸಾಲಿನ ಕೊನೆಯಲ್ಲಿ ಕಂಬಾಲವಡ(ಡೆ)ಯ ಎಂಬ ಪದ ಮಾತ್ರ ಕಾಣಬಹುದಾಗಿದೆ.

ಮೂರನೆಯ ಶಾಸನವು ಎರಡು ತುಂಡಾಗಿದ್ದು ಒಂದು ತುಣುಕು ಮಾತ್ರವಿದೆ. ಈ ಶಾಸನವು ಆರು ಸಾಲುಗಳನ್ನು ಹೊಂದಿದ್ದು, ಅಲ್ಲಲ್ಲಿ ಕೆಲ ಅಕ್ಷರಗಳನ್ನು ಮಾತ್ರ ಗುರುತಿಸಲು ಸಾಧ್ಯವಾಗುವಂತಿದೆ. ಹಾಗಾಗಿ ಎರಡನೆಯ ಮತ್ತು

* s/o ಬೋಸಯ್ಯ, ಪಿಎಚ್‌ಡಿ ಸಂಶೋಧನ ವಿದ್ಯಾರ್ಥಿ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಮೂರನೆಯ ಶಾಸನಗಳು ಯಾವ ವಿಷಯವನ್ನು ಒಳಗೊಂಡಿವೆ ಎಂಬುದು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ದೇವಾಲಯದ ಆವರಣದಲ್ಲಿ ಈ ಶಾಸನಗಳಲ್ಲದೆ ಎರಡು ವೀರಗಲ್ಲುಗಳು, ಒಂದು ವಿಷ್ಣು ಶಿಲ್ಪವಿದೆ. ಈ ವೀರಗಲ್ಲುಗಳನ್ನು ಹೊರತುಪಡಿಸಿ ಊರ ಹೊರ ಬಯಲಿನ ಈಶಾನ್ಯಕ್ಕೆ ಉಪ್ಪಾರ ಸಮುದಾಯದವರ ಹೊಲ(ಕಣ)ದಲ್ಲಿ ಸಾಲಾಗಿ ಎರಡು ವೀರಗಲ್ಲುಗಳು ಮೂರು ಮಹಾಸತಿಕಲ್ಲುಗಳು, ಒಂದು ಗೋಶಾಸನಕಲ್ಲನ್ನು ನಿಲ್ಲಿಸಲಾಗಿದೆ. ಹಾಗೆಯೇ ಊರ ದಕ್ಷಿಣಕ್ಕಿರುವ ಕೆರೆ ಏರಿಯ ಪಕ್ಕದಲ್ಲಿ ಒಂದು ವೀರಗಲ್ಲಿದೆ.

೧. ವೀರಗಲ್ಲುಗಳು

ದೇವಾಲಯದ ಬಲಭಾಗದಲ್ಲಿ ಉತ್ತರ ದಿಕ್ಕಿಗೆ ಮುಖ ಮಾಡಿ ನಿಲ್ಲಿಸಿರುವ ಮರಳುಶಿಲೆಯಲ್ಲಿರುವ ಈ ವೀರಗಲ್ಲು ಮೂರು ಪಟ್ಟಿಕೆಗಳನ್ನು ಒಳಗೊಂಡಿದೆ. ಮೊದಲ ಪಟ್ಟಿಕೆಯಲ್ಲಿ ವೀರನು ಎದುರಾಳಿಯೊಂದಿಗೆ ಹೋರಾಡುತ್ತಿರುವ ಚಿತ್ರಣವಿದೆ. ಎಡಗೈಯಲ್ಲಿಯ ಬಿಲ್ಲಿಗೆ ಬಾಣವನ್ನು ಹೂಡಿದ್ದಾನೆ. ಆತನ ಹಿಂದೆ ಸೇವಕನು ಎಡಗೈಲಿ ಗುರಾಣಿ ಬಲಗೈಲಿ ಖಡ್ಗವನ್ನು ಹಿಡಿದುಕೊಂಡು ಹೋಗುತ್ತಿದ್ದಾನೆ. ಆದರೆ ಎದುರಾಳಿಯನ್ನು ಇಲ್ಲಿ ಚಿತ್ರಿಸಲಾಗಿಲ್ಲ. ಮೊಳಕಾಲದವರೆಗೆ ನೆರಿಗೆಯುಳ್ಳ ವೀರಗಚ್ಚೆಯ ಉಡುಪು ಇದ್ದು, ತುರುಬುಧಾರಿಯಾಗಿದ್ದಾನೆ. ಈತನ ಹಿಂದೆ ಸೇವಕನೊಬ್ಬ ಯುದ್ಧಕ್ಕೆ ಹೋಗುತ್ತಿರುವುದನ್ನು ಗಮನಿಸಿದರೆ ಇವನೊಬ್ಬ ಸೈನಿಕ ಮುಖ್ಯಸ್ಥನಾಗಿದ್ದನೆಂದು ಪರಿಗಣಿಸಬಹುದು. ಎರಡನೆಯ ಪಟ್ಟಿಕೆಯಲ್ಲಿ ಅಪ್ಸರೆಯರು ವೀರನನ್ನು ತಮ್ಮ ತೋಳತೆಕ್ಕೆಯಲ್ಲಿ ಹಿಡಿದು ಮತ್ತೊಂದು ಕೈಯಲ್ಲಿ ಚಾಮರವನ್ನು ಬೀಸುತ್ತ ಸ್ವರ್ಗಕ್ಕೆ ಕರೆದೊಯ್ಯುವ ದೃಶ್ಯವಿದೆ. ನಂತರದ ಪಟ್ಟಿಕೆಯಲ್ಲಿ ಶಿವಲಿಂಗದ ಪಕ್ಕದಲ್ಲಿ ವೀರನು ಪದ್ಮಾಸನಬದ್ಧವಾಗಿ ದೇವರನ್ನು ಪ್ರಾರ್ಥಿಸುವ ರೀತಿಯಲ್ಲಿ ಕುಳಿತಿರುವುದು. ಯತಿಯು ಶಿವಲಿಂಗಕ್ಕೆ ಎಡಗೈಲಿ ಗಂಟೆ ಬಲಗೈಲಿ ಧೂಪವನ್ನು ಹಿಡಿದು ಪೂಜಿಸುತ್ತಿದ್ದಾನೆ. ಶಿವಲಿಂಗದ ಮೇಲೆ ಸೂರ್ಯ–ಚಂದ್ರರನ್ನು ಚಿತ್ರಿಸಲಾಗಿದೆ.

ದೇವಾಲಯದ ಎಡಭಾಗದಲ್ಲಿ ಉತ್ತರದಿಕ್ಕಿಗೆ ಮುಖ ಮಾಡಿ ನಿಲ್ಲಿಸಿದ ಮರಳುಶಿಲೆಯಲ್ಲಿರುವ ಈ ವೀರಗಲ್ಲು ಮೂರು ಪಟ್ಟಿಕೆಗಳನ್ನು ಒಳಗೊಂಡಿದೆ. ಮೊದಲ ಹಂತದಲ್ಲಿ ವೀರನು ಮತ್ತು ಎದುರಾಳಿಯು ಪರಸ್ಪರ ಕುದುರೆಗಳ ಮೇಲೆ ಹೋರಾಡುತ್ತಿರುವ ದೃಶ್ಯವಿದೆ. ಎರಡನೆಯ ಹಂತದಲ್ಲಿ ಅಪ್ಸರೆಯರಿಬ್ಬರು ವೀರನನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ತದನಂತರ ಕೈಲಾಸದಲ್ಲಿ ಯತಿಯು ಶಿವಲಿಂಗಕ್ಕೆ ಧೂಪವನ್ನು ಬೆಳಗುತ್ತಿದ್ದಾನೆ. ಎದುರಿಗೆ ವೀರನು ಪೀಠದ ಮೇಲೆ ಪದ್ಮಾಸನಬದ್ಧವಾಗಿ ಧ್ಯಾನಾಸಕ್ತ ಭಂಗಿಯಲ್ಲಿ ಶಿವಲಿಂಗದತ್ತ ಮುಖ ಮಾಡಿ ಕುಳಿತ ದೃಶ್ಯವಿದೆ. ಮೇಲೆ ಸೂರ್ಯ–ಚಂದ್ರರನ್ನು ಖಂಡರಿಸಲಾಗಿದೆ.

ದೇವಾಲಯದಿಂದ ಅನತಿ ದೂರದಲ್ಲಿ ಮತ್ತೊಂದು ಚಿಕ್ಕಗುಡಿಯಲ್ಲಿರುವ ಒಂದು ಪಟ್ಟಿಕೆಯಲ್ಲಿ ಖಂಡರಿಸಿದ ಮೃದುಶಿಲೆಯ ವೀರಗಲ್ಲು. ಇದರಲ್ಲಿ ವೀರನನ್ನು ದೊಡ್ಡದಾಗಿಯೂ ಸತಿಯನ್ನು ಚಿಕ್ಕದಾಗಿ ಪಕ್ಕದಲ್ಲಿ ಚಿತ್ರಿಸಲಾಗಿದೆ. ಬಲಗೈಯಲ್ಲಿ ಖಡ್ಗ, ಎಡಗೈಲಿ ಒಂದು ರೀತಿಯ ಆಯುಧವನ್ನು ನೆಲಕ್ಕೆ ಊರಿದಂತಿದೆ. ತಲೆಗೆ ಪೇಟ ಸುತ್ತಿಕೊಂಡಿದ್ದು, ಕೊರಳಹಾರ, ತೋಳಬಂಧಿ, ಕೈಕಡಗ, ಕಾಲಕಡಗಗಳನ್ನು ಹಾಕಿದ್ದು, ಸೊಂಟದಲ್ಲಿ ಕಿರುಗತ್ತಿಯಿದೆ. ಕಿವಿಗಳನ್ನು ದೊಡ್ಡದಾಗಿ ಚಿತ್ರಿಸಿದ್ದು ಕಿವಿಯೋಲೆ ಧರಿಸಿದ್ದಾನೆ. ಪಕ್ಕದಲ್ಲಿ ಸತಿಯು ಬಲಗೈಯನ್ನು ಮೇಲಕ್ಕೆ ಎತ್ತಿ ನಿಂತಿರುವಳು.

ಮರಳುಶಿಲೆಯಲ್ಲಿರುವ ಏಕಪಟ್ಟಿಯ ಈ ಶಿಲ್ಪದಲ್ಲಿ ವೀರನು ಬಲಗೈಲಿ ದೊಡ್ಡ ಖಡ್ಗವನ್ನು ಮೇಲಕ್ಕೆತ್ತಿ ಎಡಕೈಯಲ್ಲಿಯ ಚಿಕ್ಕ ಖಡ್ಗವನ್ನು ಕೆಳಮುಖವಾಗಿ ಹಿಡಿದಿರುವನು. ತುರುಬನ್ನು ಎಡಭಾಗಕ್ಕೆ ಕಟ್ಟಿಕೊಂಡಿದ್ದು ಹಣೆಗೆ ವಿಭೂತಿಯನ್ನು ಹಚ್ಚಿದ್ದಾನೆ. ತೋಳಬಂಧಿ, ಕೈಕಡಗ, ಕಾಲುಕಡಗ ಹಾಕಿದ್ದು, ವೀರಗಚ್ಚೆಯನ್ನು ಹಾಕಿಕೊಂಡಿದ್ದಾನೆ. ಬೆನ್ನಿಂದ ಕಾಲುಗಳವರೆಗೆ ಬಂದಿರುವಂತಹ ವಸ್ತ್ರವನ್ನು ಧರಿಸಿದ್ದಾನೆ. ಶಿಲ್ಪದ ಮೇಲೆ ಸೂರ್ಯ–ಚಂದ್ರರಿದ್ದು, ಸ್ಥಾನಿಕ ಭಂಗಿಯಲ್ಲಿರುವ ವೀರ ಹೋರಾಟಕ್ಕೆ ಹೊರಟು ನಿಂತಿರುವಂತೆ ಚಿತ್ರಿಸಲಾಗಿದೆ. ಮತ್ತೊಂದು ವೀರಗಲ್ಲು ಇದೇ ರೀತಿಯಲ್ಲಿದೆ.

ಊರ ದಕ್ಷಿಣಕ್ಕೆ ಕೆರೆ ಏರಿಯ ಪಕ್ಕದಲ್ಲಿರುವ ಮರಳುಶಿಲೆಯ ಈ ವೀರಗಲ್ಲು ಉಳಿದ ವೀರಗಲ್ಲುಗಳಿಗಿಂತ ಭಿನ್ನವಾದುದು. ಏಕೆಂದರೆ ಇಲ್ಲಿರುವ ವೀರನು ವೈಷ್ಣವ ನಾಮಧಾರಿ (ಮೂರುನಾಮ) ಯಾಗಿದ್ದಾನೆ. ಹಾಗೆಯೇ ಇಲ್ಲಿನ ಉಳಿದ ವೀರಗಲ್ಲುಗಳು ಗುಂಪಾಗಿ ಒಂದೆಡೆ ಇರುವುದು ಕಂಡುಬಂದರೆ ಈ ವೀರಗಲ್ಲು ಮಾತ್ರ ಒಂದೇ ಇದೆ. ಇದಕ್ಕೆ ಸಂಬಂಧಿಸಿದಂತೆ ಜನರು ಹೇಳುವ ಐತಿಹ್ಯವೊಂದು ಹೀಗಿದೆ. ಈ ವೀರ ಊರಲ್ಲಿನ ಚೌಡಮ್ಮ(ದೈವ)ನ ಗಂಡ. ಒಮ್ಮೆ ಗಂಡ–ಹೆಂಡತಿಯರ ನಡುವೆ ಜಗಳವಾಯಿತು. ಇದರಿಂದ ಕುಪಿತಳಾದ ಚೌಡಮ್ಮ ಗಂಡನ ಜುಟ್ಟನ್ನು ಹಿಡಿದು ಎಸೆದಳಂತೆ. ಅಲ್ಲಿಂದ ಬಂದು ಬಿದ್ದ ಸ್ಥಳದಲ್ಲಿಯೇ ನೆಲೆಸಿದ ಸ್ಥಳವಿದು ಎಂದು ಹಿರಿಯರಾದ ಹನುಮಂತಪ್ಪ ಅವರು ಹೇಳುವರು. ಈ ಎಳೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದು ಕಾಲಘಟ್ಟದಲ್ಲಿ ಹೆಚ್ಚಾಗಿದ್ದ ಶಿವಭಕ್ತರ ಮತ್ತು ವಿಷ್ಣುಭಕ್ತರ ನಡುವಿನ ತಿಕ್ಕಾಟಗಳ ಸುಳುಹುಗಳು ಗೋಚರಿಸುತ್ತವೆ. ಇದು ಒತ್ತಟ್ಟಿಗಿರಲಿ; ಈ ಶಿಲ್ಪವು ಎಡಗೈಲಿ ಬೃಹದಾಕಾರದ ಧನಸ್ಸನ್ನು

ಬಲಗೈಲ್ಲಿ ಬಿಚ್ಚುಗತ್ತಿಯನ್ನು ಕೆಳಮುಖವಾಗಿ ಹಿಡಿದಿರುವುದು ಕಂಡುಬರುತ್ತದೆ. ತಲೆಯಲ್ಲಿ ದೊಡ್ಡ ತುರುಬಿದ್ದು, ಹಣೆಯಲ್ಲಿ ನಾಮ, ಕೊರಳಹಾರ, ಸೊಂಟದಲ್ಲಿ ಕಿರುಗತ್ತಿ, ತೋಳಬಂಧಿ, ಕೈಕಡಗ, ಕಾಲುಕಡಗಗಳನ್ನು ಚಿತ್ರಿಸಲಾಗಿದೆ. ಮೇಲ್ಭಾಗದಲ್ಲಿ ಸೂರ್ಯ-ಚಂದ್ರರನ್ನು ಖಂಡರಿಸಲಾಗಿದೆ.

ಮರಳುಶಿಲೆಯ ಒಂದು ಹಂತದಲ್ಲಿರುವ ಶಿಲ್ಪದಲ್ಲಿ ವೀರನು ಎಡಗೈಲಿ ಬೃಹದಾಕಾರದ ಧನಸ್ಸು ಬಲಗೈಲಿ ಬಾಣವನ್ನು ಹಿಡಿದಿದ್ದು, ಕೊರಳಲ್ಲಿ ಹಾರ, ತೋಳಬಂಧಿ, ಕೈಕಡಗ, ಕಾಲುಗಡಗಗಳಿವೆ. ಸೊಂಟ ಪಟ್ಟಿಯನ್ನು ಕಟ್ಟಿಕೊಂಡಿದ್ದು ಅದಕ್ಕೆ ಕಿರುಗತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಈತನ ಪಾದಗಳ ಕೆಳಗೆ ಎಡ-ಬಲದಲ್ಲಿ ತುರುಗಳೆರಡು ಮೇಲು ಮುಖ ಮಾಡಿ ನಿಂತಿವೆ. ಅಂದರೆ ವೀರನು ಶತ್ರುಗಳಿಂದ ಗೋವುಗಳನ್ನು ರಕ್ಷಿಸುವಲ್ಲಿ ಸಫಲನಾಗಿದ್ದು, ತಾನು ಮಾತ್ರ ಸ್ವರ್ಗಸ್ಥನಾಗಿದ್ದಾನೆ.

೨. ಮಹಾಸತಿಗಲ್ಲುಗಳು

ಮರಳು ಶಿಲೆಯಲ್ಲಿ ಎರಡು ಪಟ್ಟಿಕೆಗಳಲ್ಲಿ ಚಿತ್ರಿಸಿರುವ ಈ ಶಿಲ್ಪವು ಮೊದಲ ಪಟ್ಟಿಕೆಯಲ್ಲಿ ಸ್ತ್ರೀಯು ಕುದುರೆಯ ಮೇಲೆ ಕುಳಿತಿದ್ದು, ಎಡಗೈಲಿ ಕನ್ನಡಿ, ಬಲಗೈಲಿ ನಿಂಬೆಹಣ್ಣು ಹಿಡಿದಿದ್ದಾಳೆ. ತಲೆಕೂದಲನ್ನು ತುರುಬ ಕಟ್ಟಿದ್ದು ಕಿವಿಗಳನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಹಣೆಯಲ್ಲಿ ವಿಭೂತಿಯನ್ನು ಧರಿಸಿದ್ದು ಸ್ಪಷ್ಟವಾಗಿ ಕಾಣಿಸುತ್ತದೆ. ಎರಡನೆಯ ಪಟ್ಟಿಕೆಯಲ್ಲಿ ಎಡಗೈಲಿ ಬಿಲ್ಲು ಬಲಗೈಲಿ ಬಾಣವನ್ನು ಹಿಡಿದು ಯುದ್ಧಕ್ಕೆ ಹೊರಟಂತಿದೆ. ಕೊರಳಹಾರ, ತೋಳಬಂಧಿ, ಕೈಕಡಗ, ಕಾಲುಕಡಗ, ಕಿವಿಯೋಲೆ, ಸೊಂಟದಲ್ಲಿ ಕಿರುಗತ್ತಿಯಿದ್ದು ಕಟಿವಸ್ತ್ರಧಾರಿಯಾಗಿದ್ದಾಳೆ. ಸ್ಥಾನಿಕ ಭಂಗಿಯಲ್ಲಿರುವ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರನ್ನು ಖಂಡರಿಸಲಾಗಿದೆ. ಮತ್ತೊಂದು ಶಿಲ್ಪವು ಇದೇ ನಮೂನೆಯಲ್ಲಿದೆ.

ಮರಳುಶಿಲೆಯ ಎರಡು ಹಂತದಲ್ಲಿರುವ ಮತ್ತೊಂದು ಶಿಲ್ಪದಲ್ಲಿ ಮೊದಲ ಭಾಗದಲ್ಲಿ ಕುದುರೆಯ ಮೇಲೆ ಕುಳಿತು ಇಬ್ಬರು ಸ್ತ್ರೀಯರು ಹೋರಾಟಕ್ಕೆ ಹೋಗುವಂತೆ ಚಿತ್ರಿಸಲಾಗಿದೆ. ಎರಡನೆಯ ಹಂತದಲ್ಲಿ ಒಬ್ಬ ಸ್ತ್ರೀಯು ಕೈಗಳಲ್ಲಿ ಬಿಲ್ಲು-ಬಾಣಗಳನ್ನು ಹಿಡಿದಿದ್ದು, ಸೊಂಟದಲ್ಲಿ ಕಿರುಗತ್ತಿಯಿದೆ. ಸ್ಥಾನಿಕ ಭಂಗಿಯಲ್ಲಿದ್ದು, ಕಿವಿಯೋಲೆ, ಕಂಠಹಾರ, ತೋಳಬಂಧಿ, ನೆರಿಗೆಯುಳ್ಳ ಸೀರೆಯನ್ನು ಉಟ್ಟಿರುವಳು. ಮೇಲೆ ಸೂರ್ಯ-ಚಂದ್ರರನ್ನು ಖಂಡರಿಸಲಾಗಿದೆ.

೪. ವಿಷ್ಣು ಶಿಲ್ಪ

ದೇವಾಲಯದ ಮುಂಭಾಗದಲ್ಲಿ ಸ್ಥಾನಿಕಭಂಗಿಯಲ್ಲಿರುವ ವಿಷ್ಣು ಶಿಲ್ಪವು ಮೃದುಶಿಲೆಯಲ್ಲಿದ್ದು, ಕೈಗಳಲ್ಲಿ ಕ್ರಮವಾಗಿ ಭಗ್ನ, ಚಕ್ರ, ಶಂಖ, ಗದೆಗಳನ್ನು ಹಿಡಿದಿರುವುದು. ಕಿರೀಟದಾರಿಯಾದ ಶಿಲ್ಪವು ಕೊರಳಹಾರ, ವನಮಾಲ. ಕಿವಿಯೋಲೆ, ಕೈಕಡಗ, ತೋಳಬಂಧಿ, ಕಾಲುಕಡಗಗಳನ್ನು ಧರಿಸಿದ್ದು, ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ-ಭೂದೇವಿಯರಿದ್ದಾರೆ. ಶಿಲ್ಪದ ಹಿಂದೆ ಸಾಧಾರಣ ಪ್ರಭಾವಳಿಯಿದ್ದು, ಇದನ್ನು ೧೨-೧೩ನೆಯ ಶತಮಾನದ್ದೆಂದು ಅಂದಾಜಿಸಬಹುದು.

ಹೀಗೆ ಕನಕೂರು ಗ್ರಾಮವು ಶಾಸನಗಳು ಮತ್ತು ಪ್ರಾಚೀನ ಶಿಲ್ಪಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡ ಪುರಾತನ ಗ್ರಾಮವಾಗಿರುವುದರ ಜೊತೆಗೆ ಈ ಗ್ರಾಮದಿಂದ ೨ ಕಿ.ಮೀ. ಅಂತರದಲ್ಲಿ ೬ ಬೃಹತ್ ಶಿಲಾಸಮಾಧಿಗಳಿವೆ. ಇವುಗಳನ್ನೆಲ್ಲ ಗಮನಿಸಿದರೆ ಈ ಪ್ರದೇಶವು ಬೃಹತ್ ಶಿಲಾಯುಗ ಅಥವಾ ಕಬ್ಬಿಣ ಯುಗದಿಂದ ಇಂದಿನವರೆಗೆ ಸತತವಾಗಿ ಜನ ಸಂಸ್ಕೃತಿಯನ್ನು ಒಳಗೊಂಡ ಪ್ರದೇಶವಾಗಿದೆ ಎಂಬುದಾಗಿ ಗ್ರಹಿಸಬಹುದು.

[ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಸೂಕ್ತ ಸಲಹೆಗಳನ್ನು ನೀಡಿದ ಗುರುಗಳಾದ ಡಾ. ಎಫ್.ಟಿ. ಹಳ್ಳಿಕೇರಿ ಅವರಿಗೆ, ಶಾಸನಗಳ ಪ್ರತಿಯನ್ನು ಓದಿಕೊಟ್ಟ ಶಾಸನಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಕಲ್ಲವೀರ ಮಣ್ಣಾಚಾರ್ ಅವರಿಗೆ ಕೃತಜ್ಞತೆಗಳು. ಕ್ಷೇತ್ರಕಾರ್ಯಕ್ಕೆ ನನ್ನೊಂದಿಗೆ ಬಂದಿದ್ದ ಸ್ನೇಹಿತರಾದ ನಿರಂಜನಮೂರ್ತಿ ಟಿ., ಮಂಜಣ್ಣ ಬಿ.ಜಿ. ಅವರು ಹಾಗೂ ಕನಕೂರು ಗ್ರಾಮದ ಹಿರಿಯರಾದ ಹನುಮಂತಪ್ಪ ಕೆ., ರಡ್ಡಪ್ಪ ಮೊದಲಾದ ಗ್ರಾಮಸ್ಥರ ಸ್ನೇಹಪರತೆಯನ್ನು ಪ್ರೀತಿಯಿಂದ ನೆನೆಯುತ್ತೇನೆ.]

೨೪

ಕಳಸದ ಅಪ್ರಕಟಿತ ಪ್ರತಿಮಾಶಾಸನಗಳು ಹಾಗೂ ಚಾರಿತ್ರಿಕ ಕಲ್ಲಿನ ಬಾವಿಗಳು

ಹೆಚ್.ಆರ್. ಪಾಂಡುರಂಗ*

ಪಶ್ಚಿಮ ಘಟ್ಟದ ಮಡಿಲ ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕು ಭದ್ರಾನದಿ ತೀರದಲ್ಲಿ ನಿತ್ಯ ಹರಿದ್ವರ್ಣ ಕಾಡಿನ ಮಡಿಲಲ್ಲಿ ಬೆಳೆದಿರುವ ಐತಿಹಾಸಿಕ ಪಟ್ಟಣ ಕಳಸ, ಕಳಸ ಹೋಬಳಿ ಕೇಂದ್ರವಾಗಿದ್ದು ಸಾಂತಾರರು, ವಿಜಯ ನಗರದ ಅರಸರು, ಕಾರ್ಕಳದ ಭೈರವರಸರು, ಕೆಳದಿ ನಾಯಕರು ಗಳಿಂದಲೂ ಆಳಲ್ಪಟ್ಟದ್ದು ಕಳಸ. ಕಾರ್ಕಳದ ಭೈರವರಸರ ಆಳ್ವಿಕೆಯಲ್ಲಿ ಬೇಸಿಗೆ ರಾಜಧಾನಿಯಾಗಿದ್ದು ಐತಿಹಾಸಿಕ ಅವಶೇಷಗಳನ್ನು ತನ್ನ ಮಡಿಲಲ್ಲಿಟ್ಟುಕೊಂಡು ಆಸಕ್ತರಿಗಾಗಿ ಕಾತರದಿಂದ ಕಾಯುತ್ತಿದೆ. ಇಲ್ಲಿನ ಪುರಾಣ ಪ್ರಸಿದ್ಧ, ಐತಿಹಾಸಿಕ ಶ್ರೀ ಕಳಸೇಶ್ವರ ದೇವಾಲಯ ಪಟ್ಟಣದ ಎತ್ತರವಾದ ಗುಡ್ಡದ ಮೇಲೆ ಹೊಯ್ಸಳರಿಂದ ನಿರ್ಮಾಣವಾಗಿದ್ದು ನಂತರ ವಿಜಯ ನಗರ, ಬೈರವರಸರು, ಹಾಗೂ ಕೆಳದಿ ನಾಯಕರಿಂದ ವಿವಿಧ ಹಂತಗಳಲ್ಲಿ ವಿಸ್ತರಿಸಲ್ಪಟ್ಟು ನಿರ್ಮಾಣವಾಗಿದೆ. ಇಲ್ಲಿ ಸಾಂತಾರರು, ವಿಜಯನಗರದ ಅರಸರು, ಕೆಳದಿ ನಾಯಕರ ಕಾಲದ ಹಲವಾರು ತಾಮ್ರಶಾಸನ, ಶಿಲಾಶಾಸನಗಳಿದ್ದು ಇವು ಗಳೊಂದಿಗೆ ಕೆಳದಿ ನಾಯಕರಿಂದ ದೇವಾಲಯ ನಿರ್ಮಾಣ ಹಂತದಲ್ಲಿ ಸೇವೆ ಸಲ್ಲಿಸಿದ ವಿವಿಧ ಭಕ್ತ ಮಹಾಜನರ ಪ್ರತಿಮೆ ಗಳ ಮೇಲಿರುವ ಅಪ್ರಕಟಿತ ಪ್ರತಿಮಾ ಶಾಸನಗಳು ಕಂಡು ಬಂದಿವೆ.

ಕಳಸ ಪಟ್ಟಣದ ಭದ್ರಾ ನದಿ ತೀರದಲ್ಲಿರುವ ಶಾಸನೋಕ್ತ ರುದ್ರಪಾದ ಅಗ್ರಹಾರದ ಸುತ್ತಮುತ್ತ ಶಾಸನೋಕ್ತ ವೀರಶೈವ ಮಠಗಳ ದೈನಂದಿನ ಉಪಯೋಗಕ್ಕೆ ನಿರ್ಮಿಸಲಾಗಿದ್ದ ಚಾರಿತ್ರಿಕ ಕಲ್ಲಿನ ಸುಂದರವಾದ ಬಾವಿಗಳು ಕಂಡುಬಂದಿದ್ದು ನಾಲ್ಕು ನೂರು ವರ್ಷಗಳ ನಂತರವೂ ಇಂದಿಗೂ ಉಪಯೋಗಕ್ಕೆ ಬರುತ್ತಿರುವುದು ಕೆಳದಿ ನಾಯಕರ ಪ್ರಜಾವಾತ್ಸಲ್ಯ ಹಾಗೂ ಧಾರ್ಮಿಕ ಭಾವನೆಗಳಿಗೆ ಹಿಡಿದ ಕೈಗನ್ನಡಿಯಾಗಿವೆ.

೧. ಪ್ರತಿಮಾ ಶಾಸನಗಳು [ದೇವಾಲಯದ ಕಲ್ಲುಹಾಸಿನ ಮೇಲೆ]

ಅ) ಕಳಸೇಶ್ವರ ದೇವಾಲಯದ ಪ್ರವೇಶಾಂಕಣದ ನಂದಿ ವಿಗ್ರಹದ ಎದುರಿನ ಪ್ರವೇಶದ್ವಾರದ ಕಲ್ಲಿನ ಕಟ್ಟೆಯ ಮೇಲಿನ ಏಕ ಸಾಲಿನ ಶಿಲಾಶಾಸನ. ಒಂಟಿ ಭಕ್ತ ವಿಗ್ರಹದ ಮೇಲಿನ ಈ ಶಾಸನ ಬಹುಶಃ ಕೆಳದಿ ನಾಯಕರ ಕಾಲದಲ್ಲಿ ದೇವಾಲಯದ ಮುಂಭಾಗದ ಕಟ್ಟಡ ವಿಸ್ತರಣೆ ವೆಚ್ಚದ ದಾನಿ ಮುತ್ತೂರ ತಮ್ಮರಸಯ್ಯ ಎಂಬ ವ್ಯಕ್ತಿಯ ಪ್ರಸ್ತಾಪದ ಶಾಸನ. ಹಳೆಗನ್ನಡ ಭಾಷೆ ಯಲ್ಲಿದೆ.

"ಮುತ್ತೂರ ತಂಮರಸ್ಯಯನ ನಮಸ್ಕಾರ"

ಆ) ನಂದಿ ವಿಗ್ರಹದ ಎಡಭಾಗದಲ್ಲಿ ಒಂಟಿ ಭಕ್ತ ವಿಗ್ರಹದ ಮೇಲಿನ ಈ ಶಾಸನ ಕೆಳದಿ ನಾಯಕರ ಕಾಲದ ಕಳಸ ನಗರದ ಸೇನಬೋವ ಸೂರಣ್ಣನ ಪ್ರಸ್ತಾಪ ವಿರುವ ಏಕ ಸಾಲಿನ ಶಾಸನ ಹಳೆಗನ್ನಡದಲ್ಲಿದೆ.

"ಸ್ಥಳ ಸೇನ ಬೋವ ಸೂರಂಣ"

ಇ) ನಂದಿ ವಿಗ್ರಹದ ಎಡಭಾಗದಲ್ಲಿ ದಂಪತಿ ಭಕ್ತ ವಿಗ್ರಹಗಳ ಮೇಲಿನ ಶಾಸನ ನಿರವಿಗೆ ಕೃಷ್ಣಪ್ಪ ಎಂಬ ವ್ಯಕ್ತಿಯ ಪ್ರಸ್ತಾಪ ಒಳಗೊಂಡಿರುವ ಹಳೆಗನ್ನಡದ ಈ ಶಾಸನ.

"ನಿರಲಿಗೆ ಕೃಷ್ಣಪನ ನಮಸ್ಕಾರ"

ಈ) ನಂದಿ ವಿಗ್ರಹದ ಹಿಂಭಾಗದಲ್ಲಿ ನೆಲದ ಕಲ್ಲು ಹಾಸಿನ ಮೇಲಿರುವ ಒಂಟಿ ಭಕ್ತ ವಿಗ್ರಹದ ಮೇಲಿನ ಈ ಹಳೆಗನ್ನಡದ ಏಕ ಸಾಲಿನ ಶಿಲಾಶಾಸನ ಕೃಷ್ಣಪ್ಪ ಎಂಬ ದಾನಿ ವ್ಯಕ್ತಿಯದ್ದಾಗಿರಬಹುದಾದ ಈ ಶಾಸನ.

"ಕೃಷ್ಣಪನ ನಮಸ್ಕಾರ"

೨. ಘಂಟೆ ಶಾಸನ

ಶ್ರೀ ಕಳಸೇಶ್ವರ ದೇವಾಲಯದ ನವರಂಗದಲ್ಲಿರುವ ಹಳೆಯ ಘಂಟೆಯ ಮೇಲಿರುವ ಈ ಕನ್ನಡ ಶಾಸನ ಬಹುಶಃ ಹತ್ತೊಂಬತ್ತನೇ ಶತಮಾನದಲ್ಲಿ ಮೈಸೂರು ರಾಜ ಒಡೆಯರ ಆಳ್ವಿಕೆಯಲ್ಲಿ ಕಳಸದ ಕಂದಾಯ ಅಧಿಕಾರಿಯಾಗಿದ್ದ ಸೇನಬೋವ ಕಳಸಣ್ಣನ ಹೆಸರಿನ ಘಂಟಾ ಶಾಸನ.

* ಕಳಸ, ಚಿಕ್ಕಮಗಳೂರು ಜಿಲ್ಲೆ.













“ಶ್ರೀ ಕಳಸೇಶ್ವರನ ಪಾದಕೆ ಸ್ಥಳ ಸೇನಭಾಗ ಕಳಸಂಣನ ಭಕ್ತಿ”

೩. ಕಳಸೇಶ್ವರ ದೇವಾಲಯದ ಎಡಪಾರ್ಶ್ವದ ಪ್ರವೇಶ ದ್ವಾರದ ಶಾಸನ.

ಶ್ರೀ ಚಂಡಿಕೇಶ್ವರ ಲಿಂಗದ ಹತ್ತಿರದ ನೆಲಹಾಸಿನ ಕಲ್ಲಿನ ಚಪ್ಪಡಿ ಮೇಲೆ ಕಂಡು ಬಂದಿರುವ ಈ ಏಕಸಾಲಿನ ಅಪ್ರಕಟಿತ ಶಾಸನ ೧೬೩೧ರಲ್ಲಿ “ಶಿವಗಂಗೆ ಮೇಲಣ ಗವಿಯ ಬಗೆಯ ಸಿದ್ಧವೀರಣ್ಣ ವೊಡೆರ” ನಾಮ ಸೂಚಕವನ್ನು ಹೋಲುತ್ತಿರುವುದರಿಂದ ಬಹುಶಃ ಈ ಶಾಸನೋಕ್ತ “ಮಾಕರಾಜವಾಡೆರು” ಅಂದು ಕಳಸದಲ್ಲಿದ್ದ ಕೆಳದಿ ಸಾಮ್ರಾಜ್ಯದ ಪ್ರಸಿದ್ಧ ವೀರಶೈವ ಮಠಾಧಿಪತಿ ಒಬ್ಬರ ಹೆಸರನ್ನು ಸೂಚಿಸುವ ಮಹತ್ವದ ಶಾಸನವಾಗಿದೆ. ಹಾಗೂ ಕಳಸ ನಗರದಲ್ಲಿ ಅಂದು ಅಸ್ಥಿತ್ವದಲ್ಲಿದ್ದ ವೀರಶೈವ ಮಠಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

“ಮಾಕರಾಜವಾಡೆರು”

೪. ಆನೆ ಗಣಪತಿ ಮಂಟಪದ ಮುಂದಿರುವ ಶಾಸನಗಳು

ಶ್ರೀ ಕಳಸೇಶ್ವರ ದೇವಾಲಯದ ಪ್ರವೇಶದ್ವಾರದ ಹತ್ತಿರ ವಿರುವ ಆನೆಗಣಪತಿ ದಂಪತಿಗಳ ದೇವಸ್ಥಾನದ ಮಧ್ಯೆ ಭಕ್ತ ವಿಗ್ರಹ ನೆಲದ ಕಲ್ಲು ಹಾಸಿನ ಮೇಲೆ ಕಂಡುಬಂದಿದ್ದು ವಿಗ್ರಹದ ಮೇಲೆ “ನಮಸ್ಕಾರ” ಎಂಬ ಏಕ ಪದದ ಶಾಸನ ಕಂಡು ಬಂದಿದ್ದು ಭಕ್ತರ ಹೆಸರು ಅಳಿಸಿಹೋಗಿದೆ. ಬಹುಶಃ ಈ ಭಕ್ತ ವಿಗ್ರಹ ಕೆಳದಿ ನಾಯಕರ ಕಾಲದ ಶಿಲ್ಪಿಯದಾಗಿರ ಬಹುದೆಂದು ಊಹಿಸಬಹುದಾಗಿದೆ. ಹಾಗೂ ಆನೆ ಗಣಪತಿ ದೇವಸ್ಥಾನದ ಎದುರು ಲಾಂದ್ರದ ಕಂಬದ ಹತ್ತಿರ ಹಾಸಿದ ಕಲ್ಲಿನ ಚಪ್ಪಡಿಯಲ್ಲಿ ಎರಡು ಏಕಸಾಲಿನ ಕೆಳದಿ ಕಾಲದ ಕನ್ನಡ ಲಿಪಿಯ ಶಾಸನಗಳಿದ್ದು ಭಕ್ತರ ಪಾದಾಘಾತದಿಂದ ಸವೆದು ಹೋಗಿ ಅಸ್ಪಷ್ಟವಾಗಿದ್ದು ಓದಲು ಕಷ್ಟವಾಗಿದೆ. ಹಾಗೂ ಇದರ ಪಕ್ಕದಲ್ಲಿ ಹಾಸಿದ ಕೆಳದಿ ಕಾಲದ ಎರಡು ಲಿಂಗಮುದ್ರೆ ಕಲ್ಲುಗಳು ಸಹ ಕಂಡುಬಂದಿವೆ.

ಕೆಳದಿ ನಾಯಕರ ಕಾಲದ ಶಾಸನೋಕ್ತ ಮಠದ ಕಲ್ಲಿನ ಬಾವಿಗಳು.

ಕಳಸ ನಗರದ ಪಶ್ಚಿಮ ದಿಕ್ಕಿನಲ್ಲಿ ಭದ್ರಾನದಿ ತೀರದಲ್ಲಿರುವ ರುದ್ರಪಾದ ಅಗ್ರಹಾರದ ಸುತ್ತಮುತ್ತ ಬಸವನ ತೋಟ, ಮಠದತೋಟ, ಅಯ್ಯನವರ ಹಡ್ಲು ಹೆಸರಿನ ಸ್ಥಳಗಳಿವೆ. ಅಲ್ಲಿ ಎರಡು ಚಾರಿತ್ರಿಕ ಕಲ್ಲಿನ ಬಾವಿಗಳು ಕಂಡು ಬಂದಿದ್ದು ವೀರಶೈವ ಮಠಗಳ ಅಸ್ಥಿತ್ವಕ್ಕೆ ಸಾಕ್ಷಿಯಾಗಿವೆ. ಕಳಸವನ್ನು ಆಳಿದ ಕೆಳದಿ ಹಿರಿಯ ಬಸವಪ್ಪ ನಾಯಕರ ಕಾಲದಲ್ಲಿ ಕಳಸದ ವೀರಶೈವ ಮಠಕ್ಕೆ ದಾನ ನೀಡಿದ ಬಗ್ಗೆ ಕ್ರಿಶ. ೧೭೦೮ ತಾಮ್ರ ಶಾಸನ ಬಾಳೆಹೊನ್ನೂರು ಮಠದಲ್ಲಿದೆ. ಈ ಶಾಸನದ ಪ್ರಕಾರ “ಕುರುವದ ಹಾಲದೇವರಿಗೆ” – “ಕೆಳದಿಯ ಬೊಕ್ಕಸದ ಸಿದ್ಧಬಸವಯ್ಯನು ಕಳಸದಲ್ಲಿ ಕಟ್ಟಿಸಿಕೊಟ್ಟ ವಿರಕ್ತ ಮಠಕ್ಕೆ ಬರೆಸಿಕೊಟ್ಟ ಭೂದಾನ ಧರ್ಮ” ಎಂದಿರುವ ಪ್ರಕಾರ ಈ ಚಾರಿತ್ರಿಕ ದಾಖಲೆಗೆ ಪೂರಕವಾಗಿ ಕೆಳದಿ ಶಿಲ್ಪಕಲಾ ಮಾದರಿಯ ಸುಂದರ ಎರಡು ಕಲ್ಲಿನ ಬಾವಿಗಳು ಮಠಗಳ ದೈನಂದಿನ ಉಪಯೋಗಕ್ಕೆ ನಿರ್ಮಿಸಿದ್ದಿರಬಹುದಾಗಿದೆ. ಈ ಎರಡೂ ಬಾವಿಗಳು ಸದಾ ನೀರಿನಿಂದ ತುಂಬಿದ್ದು “ಶುಭ್ರ ಸ್ಪಟಿಕ ಜಲಕುಂಡ”ಗಳಂತೆ ತೋರುತ್ತವೆ.

೧. ಶ್ರೀ ಮಹಾಬಲಶಾಸ್ತ್ರಿ – ರುದ್ರಪಾದ ಅಗ್ರಹಾರ ಇವರ ಅಡಿಕೆ ತೋಟದಲ್ಲಿ ಕಂಡುಬಂದಿರುವ ೪*೪*೪ ಅಳತೆಯ ಕಲ್ಲಿನ ಚೌಕಾಕಾರದ ಜಲಹರಿ ಹೊಂದಿದ ಈ ಸುಂದರ ಬಾವಿ ಇಂದಿಗೂ ನೀರಿನಿಂದ ತುಂಬಿದೆ. ಬಾವಿಯ ಹತ್ತಿರವೇ ವೀರಶೈವ ಸಂಸ್ಕೃತಿಯ ಲಿಂಗಮುದ್ರೆ ಕಲ್ಲು ಕಂಡುಬಂದಿರುವುದು ಇಲ್ಲಿ ವೀರಶೈವ ಮಠ ಅಸ್ತಿತ್ವದಲ್ಲಿದ್ದುದಕ್ಕೆ ಸಾಕ್ಷಿಯಾಗಿದ್ದು ಈ ಬಾವಿ ಮಠದ ಸ್ವಾಮಿಗಳ ಶಿವಲಿಂಗ ಅಭಿಷೇಕಕ್ಕೆ ಪವಿತ್ರ ಜಲ ಒದಗಿಸುವ ಅಭಿಷೇಕದ ಬಾವಿ ಅಥವಾ ಮಜ್ಜನದ ಬಾವಿ ಎನ್ನಬಹುದಾಗಿದೆ.

೨. ಶ್ರೀ ಆದಿತ್ಯ ಕೆರೆಮಕ್ಕಿ– ರುದ್ರಪಾದ ಅಗ್ರಹಾರದ ಹತ್ತಿರದ ಇವರ ಅಡಿಕೆ ತೋಟದಲ್ಲಿ ಕಂಡುಬಂದಿರುವ ೬*೬*೪ ಅಡಿ ಅಳತೆಯ ಈ ಬಾವಿ ಕೂಡ ಶುಭ್ರ ಸ್ಪಟಿಕ ಜಲದಿಂದ ಸದಾ ತುಂಬಿದ್ದು ಹೆಚ್ಚಿನ ನೀರು ಹರಿದು ಹೋಗಲು ಕಲ್ಲಿನ ಜಲಹರಿ ಇದೆ. ಈ ಬಾವಿಯ ಬಳಿಯೂ ಲಿಂಗಮುದ್ರೆ ಕಲ್ಲು ಸ್ಥಾಪನೆಯಾಗಿರುವುದನ್ನು ನೋಡಿದರೆ ಈ ಬಾವಿ ಕೆಳದಿ ನಾಯಕರ ಕಾಲದಲ್ಲಿ ಕಳಸದಲ್ಲಿ ನಿರ್ಮಾಣವಾದ ವೀರಶೈವ ವಿರಕ್ತ ನಾಯಕರ ಕಾಲದಲ್ಲಿ ಕಳಸದಲ್ಲಿ ನಿರ್ಮಾಣವಾದ ವೀರಶೈವ ವಿರಕ್ತ ಮಠದ ಅಸ್ತಿತ್ವವನ್ನು ಸಾರುತ್ತದೆ. ಈ ಬಾವಿಯು ಕೂಡ ಅಭಿಷೇಕ ಜಲದ ಬಾವಿಯಾಗಿದ್ದಿರಬಹುದು.

ಇಲ್ಲಿಯೇ ಶ್ರೀ ಆದಿತ್ಯರವರ ಮನೆ ಮೇಲಿನ ಎತ್ತರದ ಜಾಗದಲ್ಲಿ ಇಂದು ಕಾಫಿತೋಟವಾಗಿ ಬದಲಾಗಿರುವ ಜಾಗದಲ್ಲಿ ವೀರಶೈವ ಮಠದ ಕಟ್ಟಡದ ತಳಪಾಯದ ಅವಶೇಷಗಳನ್ನು ಇಂದೂ ಸಹ ಕಾಣಬಹುದಾಗಿದೆ.

ಕಳಸ ಹೋಬಳಿಯಲ್ಲಿ ಕೆಳದಿ ನಾಯಕರ ಹಲವಾರು ವೀರಗಲ್ಲು ಮಾಸ್ತಿಕಲ್ಲುಗಳ ಅವಶೇಷಗಳಿದ್ದು ಹೆಚ್ಚಿನ ಸಂಶೋಧನೆ ಅಗತ್ಯವಾಗಿದೆ.

ಕಾಸರಗೋಡು ಜಿಲ್ಲೆಯ ಕೋಳ್ಯೂರಿನ ಅಪ್ರಕಟಿತ ಶಾಸನ ಮತ್ತು ಇತರ ಐತಿಹಾಸಿಕ-ಸಾಂಸ್ಕೃತಿಕ ವಿಚಾರಗಳು

ಲಕ್ಷ್ಮೀ ಜಿ. ಪ್ರಸಾದ್*

ಪ್ರಸ್ತುತ ಕೇರಳ ರಾಜ್ಯಕ್ಕೆ ಸೇರಿರುವ ಗಡಿನಾಡು ಕಾಸರಗೋಡು ಜಿಲ್ಲೆಯ ಒಂದು ಗ್ರಾಮ ಕೋಳ್ಯೂರು ಹೊಸಂಗಡಿ ಆನೇಕಲ್ಲು ಮಾರ್ಗದಲ್ಲಿ ಸುಂಕದಕಟ್ಟೆಯಿಂದ ಒಂದೂವರೆ ಕಿಲೋಮೀಟರು ಒಳಭಾಗದಲ್ಲಿ ಶಂಕರ ನಾರಾಯಣ ದೇವಾಲಯವಿದೆ.

ಸೀಮಾ ದೇವಸ್ಥಾನವಾಗಿರುವ ಕೋಳ್ಯೂರಿನ ಶ್ರೀ ಶಂಕರನಾರಾಯಣ ದೇವಾಲಯ ಬಹಳ ಪ್ರಸಿದ್ಧವಾದುದು. ಅನೇಕ ಪಾಡ್ದನಗಳಲ್ಲಿ ಜನಪದ ಹಾಡುಗಳಲ್ಲಿ ಕೋಳ್ಯೂರು ದೇವರ ಹಾಗೂ ಆಯನದ ಉಲ್ಲೇಖಗಳಿವೆ. ಇಲ್ಲಿ ಪ್ರತಿವರ್ಷ ಲಕ್ಷ ದೀಪದಿಂದ ಆರಂಭಿಸಿ ನಲುವತ್ತೆಂಟು ದಿನಗಳ ಕಾಲ ಮಂಡಲ ಪೂಜೆ ಎಂಬ ಜಾತ್ರೆ ನಡೆಯುತ್ತದೆ.

ಈ ದೇವಾಲಯ ಮೊದಲು ಮುಳಿಹುಲ್ಲಿನ ಚಾವಣಿಯನ್ನು ಹೊಂದಿತ್ತು. ಈಗ್ಗೆ ನೂರು ವರ್ಷಗಳ ಹಿಂದೆ ದೇವಾಲಯಕ್ಕೆ ಬೆಂಕಿ ಹಿಡಿದು ಚಾವಣಿ ಸುಟ್ಟು ಹೋಯಿತು. ನಂತರ ಹೆಂಚಿನ ಚಾವಣಿಯನ್ನು ಹೊಂದಿಸ ಲಾಯಿತು. ಬೆಂಕಿ ಹಿಡಿದಾಗ ಎಲ್ಲ ಮಾಹಿತಿಗಳು ಇದ್ದ ಕಡತ ಸುಟ್ಟು ಹೋಗಿದೆ.

ದೇವಾಲಯದ ಎದುರು ಭಾಗದಲ್ಲಿ ಬಲಭಾಗದಲ್ಲಿ ಒಂದು ನಂದಿಯ ಸಣ್ಣ ಗುಡಿ ಇದೆ. ಇದರ ಪ್ರತಿಷ್ಠಾಪನೆ ಸಂದರ್ಭದಲ್ಲಿ ಬರೆಸಿರುವ ಒಂದು ಶಾಸನ ಅಲ್ಲಿದೆ. ೧೯೩೨ನೇ ವರ್ಷದಲ್ಲಿ ರಚಿತವಾದ ಇತ್ತೀಚಿಗಿನ ದಾನ' ಶಾಸನವಿದು. ಇದರಲ್ಲಿ ಒಟ್ಟು ಹದಿನೆಂಟು ಸಾಲುಗಳಿವೆ.

ಶಾಸನ ಪಾಠ

ಶಕ । ೧೮೫೪ ಆಂಗಿರಸ ಸಂ। ಪುಷ್ಯ ಶುಕ್ಲ ಬಿದಿಗೆ ರ
ವಿವಾರ ಈ ಕಟ್ಟೆಯಲ್ಲಿ ನಂದಿ ಪ್ರತಿಷ್ಠೆ
ಶ್ಲೋಕ । ನಮಸ್ಸುಧಾದೀದಿತಿ ಶೇಖರಾಯ ।
ದೇವ್ಯೈ ಚ ತಸ್ಯೈ ಗಿರಿಕನ್ನಿಕಾಯೈ ॥
ನಮೋಸ್ತು ನಂದೀಶ ಗಣೇಶ್ವರಾಭ್ಯಾಂ ।
ನಮೋಸ್ತು ತಚ್ಚಂಖರ ಕಿಂಕರೇಭ್ಯಃ ॥
ಶ್ರೀ ಶಂಕರನಾರಾಯಣ ದೇವರ ಸನ್ನಿಧಿಯಲ್ಲಿ
ಧನುರ್ಮಾಸ ೧೮ ಕ್ಕೆ ಮಂಡಲ ಪೂಜೆ ರಾತ್ರಿ ಉತ್ಸವ
ಕಟ್ಟೆ ಪೂಜೆಗೆ ರೂ ೨/ಮರುದಿನ ಬೆಳಗಿನ ಬಲಿಗೆ
ರೂ ೧/ಬೆಳಗಿನ ಉತ್ಸವದ ಬಲಿ ಒಳಗಾದ ಕೂಡಲೇ
ಬ್ರಾಹ್ಮಣ ಸಂತರ್ಪಣೆ ಬಗ್ಗೆ ರೂ ೧೭೫/ಜುಮ್ಲಾ ೧೮೨
ರಿಜಿಸ್ತ್ರಿ ಮೂಲಕ ಮಾಡಿಟ್ಟ ದಾನ ಶಾಸನ ಪ್ರಕಾರ ಧನು
ಪುಷ್ಯ ದಿನ ಮಧ್ಯಾಹ್ನಕ್ಕೆ ಸಹಸ್ರ ಬ್ರಾಹ್ಮಣ ಸಂತರ್ಪಣೆ
..... ಎಲ್ಲವರೂ ಹರಿಸಿ ಪೂರ್ಣಾಶೀರ್ವಾದಿಸ
ಬೇಕಾಗಿ ಅಪೇಕ್ಷಿಸುವ ಹವ್ಯಕ ಬ್ರಾಹ್ಮಣ ಉತ್ತರ ಕೊಡಂಗೆ
ಮೆಟ್ಟು ಕುಂಡೆ ಗಣಪತಿ ಭಟ್ಟ । ಗಣಪತಿ ಭಟ್ಟರ ಮಗ
ಕೃಷ್ಣ ಭಟ್ಟ

ದೇವಾಲಯದ ಹೊರಭಾಗದಲ್ಲಿ ಮಂದ್ರಾಯ ದೈವದ ಸಣ್ಣ ಗುಡಿಯಿದೆ. ಈ ದೈವದ ಬಗೆ ಹೆಚ್ಚಿನ ಮಾಹಿತಿ ಸಿಕ್ಕಿಲ್ಲ. ಬಹುಶಃ ಈ ಮಂದಿರವನ್ನು ಕಟ್ಟಿದ ರಾಜನೇ ಮಂದಿರಾಯ ಇರಬೇಕು. ದೇವಾಲಯದ ಎದುರು ಭಾಗದಲ್ಲಿನ ಗಣಪತಿ ವಿಗ್ರಹದ ಹಿಂಭಾಗದಲ್ಲಿ ಒಂದು ಅರ್ಧ ಅಡಿ ಎತ್ತರದ ಬಿಲ್ಲು ಬಾಣ ಹಿಡಿದ ವೀರಭಾವವನ್ನು ಸೂಚಿಸುವ ಕಂಚಿನ ವಿಗ್ರಹ ವಿತ್ತು. ಇದನ್ನು ಸುಮಾರು ೬೦ ವರ್ಷಗಳ ಹಿಂದೆ ಪುನರ್ ಪ್ರತಿಷ್ಠೆ ಬ್ರಹ್ಮಕಲಶದ ಸಂದರ್ಭದಲ್ಲಿ ಜಲ ವಿಸರ್ಜನೆ ಮಾಡಿದ್ದಾರೆ. ದೇವಾಲಯವನ್ನು ಕಟ್ಟಿಸಿದ ಅರಸುವಿನ ವಿಗ್ರಹ ಸ್ಥಾಪನೆ ಹಾಗೂ ದೈವದ ನೆಲೆಯಲ್ಲಿ ಆತನಿಗೆ ಆರಾಧನೆ ಇರುವುದು ತುಳುನಾಡಿನ ದೇವಾಲಯಗಳಲ್ಲಿ ಕೆಲವೆಡೆ ಕಂಡು ಬರುತ್ತದೆ. ಆದ್ದರಿಂದ ಇದು ಮಂದಿರವನ್ನು ಕಟ್ಟಿದ ರಾಜನ ವಿಗ್ರಹವಾಗಿದ್ದಿರಬಹುದು. ಇದು ತೋಳಂಭಟನ ಮೂರ್ತಿ ಎಂಬ ಅಭಿಪ್ರಾಯವೂ ಇದೆ. ತೋಳಂಭಟನ ಕುರಿತಾದ ಒಂದು ಐತಿಹ್ಯ ಪ್ರಚಲಿತವಿದೆ. ತೋಳಂಭಟ ಎನ್ನುವ ಮಂತ್ರವಾದಿ ದೇವರ ಬಲಿ ಹೊರಡದಂತೆ ತಡೆಯುತ್ತಾನೆ. ಆಗ ಅವನನ್ನು ಎಳೆದು ತರುವಂತೆ ದೇವರ ಅಪ್ಪಣೆಯಾಗುತ್ತದೆ.

ಅವನು ಬರಲು ಒಪ್ಪುವುದಿಲ್ಲ. ಆಗ ಅವನಿಗೆ ಎರಡೇಟು ಕೊಟ್ಟು ಎಳೆದು ತರುತ್ತಾರೆ. ದಾರಿ ನಡುವೆ ಆತ ಸಾಯುತ್ತಾನೆ.

* ಕನ್ನಡ ಉಪನ್ಯಾಸಕಿ, ಸರ್ಕಾರಿ ಪದವಿಪೂರ್ವ ಕಾಲೇಜು, ಬೆಳ್ಳಾರೆ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ

ಮುಂದೆ ಅವನ ಉಪದ್ರ ಕಾಣಿಸಿದ್ದಕ್ಕೆ ಆತನ ವಿಗ್ರಹ ಮಾಡಿ ಆರಾಧಿಸುತ್ತಾರೆ.

ಅಲೌಕಿಕ ನೆಲೆಯನ್ನು ಬಿಟ್ಟು ವಾಸ್ತವಿಕ ನೆಲೆಯಲ್ಲಿ ಯೋಜಿಸುವಾಗ ಈತನಾರೆಂಬ ಸಂಶಯ ಉಂಟಾಗುತ್ತದೆ. ಮೂಲತಃ ತೋಳಂಭಟ > ತೊಳಹರ ಭಟ ಸುಂಕ ವಸೂಲಿಗಾಗಿ ನೇಮಿಸಲ್ಪಟ್ಟ ವ್ಯಕ್ತಿ. ಸೂರಾಲಿನ ಕ್ರಿ.ಶ. ೧೪೩೫ರ ಡಿಸೆಂಬರ್ ನಾಲ್ಕರಂದು ಬರೆಸಲಾದ ದೇವರಾಯನ ಶಾಸನದಲ್ಲಿ ಸುಂಕಗಳನ್ನು ವಸೂಲಿ ಮಾಡುವ ಅಧಿಕಾರವನ್ನು ತೊಳಹ ಶಂಕರನಾಯಕನಿಗೆ ವಹಿಸಿದ್ದು ತಿಳಿದುಬರುತ್ತದೆ. ಹೀಗೆ ಸುಂಕ ವಸೂಲಿಗೆ ತೊಳಹ ಶಂಕರನಾಯಕ ನಿಯೋಜಿಸಿದ ತೊಳಹರ ಭಟ ಈತ. ಸುಂಕ ನೀಡದೆ ಇದ್ದುದಕ್ಕಾಗಿ ಅಥವಾ ಇನ್ನೇನೋ ಕಾರಣಕ್ಕೆ ಉತ್ಸವ ಆಗದಂತೆ ತಡೆ ಹಿಡಿದುದಕ್ಕೆ ಕೋಪಗೊಂಡ ಊರ ಜನರಿಂದ ಈತ ದುರಂತವನ್ನಪ್ಪಿರಬೇಕು. ಇಲ್ಲಿಯೇ ಸಮೀಪ ಸುಂಕದ ಕಟ್ಟೆ ಎಂಬ ಪ್ರದೇಶವಿರುವುದು ಇವಕ್ಕೆ ಬಲವನ್ನು ಒದಗಿಸುತ್ತದೆ. ತೋಳಂಭಟ ವಾಸಿಸುತ್ತಿದ್ದ ಜಾಗ ಕೋಳ್ಯೂರು ದೇವಾಲಯಕ್ಕೆ ಸಮೀಪದ ತೋರಣ ಕುಕ್ಕು ಎಂಬ ಪ್ರದೇಶದಲ್ಲಿದೆ. ಆ ಪ್ರದೇಶದಲ್ಲಿ ಈಗ ಒಂದು ಕೆರೆ ಇದೆ. ತಟ್ಟೆ, ಪಾತ್ರೆ ಮೊದಲಾದ ಅವಶೇಷಗಳು ಸಿಕ್ಕಿವೆ. ಆದ್ದರಿಂದ ಕೋಳ್ಯೂರಿನ ಶ್ರೀ ಶಂಕರನಾರಾಯಣ ದೇವಾಲಯ ಕ್ರಿ.ಶ. ೧೪೩೫ಕ್ಕಿಂತ ಹಿಂದೆಯೇ ಇತ್ತು. ೬೦೦ ವರ್ಷಗಳ ಹಿಂದೆಯೇ ಈ ದೇವಾಲಯ ಇತ್ತು ಎಂಬುದನ್ನು ಖಂಡಿತ ವಾಗಿ ಹೇಳಬಹುದು. ತೋಳಂಭಟ್ಟ ತನ್ನ ಕವಣೆಯಲ್ಲಿ ಸಿಕ್ಕಿಸಿ ಬಿಸಾಡುವ ಕಲ್ಲು ಎಂದು ಪರಿಗಣಿಸಲ್ಪಡುವ ಒಂದು ಗುಂಡಗಿನ ಕಲ್ಲು ಈಗಲೂ ದೇವಸ್ಥಾನದ ಎದುರು ಕೆಳಭಾಗದಲ್ಲಿ ಇದೆ. ಇದನ್ನು ಶಕ್ತಿ ಕಲ್ಲು ಎಂದೂ ಕರೆಯುತ್ತಾರೆ.

ಇಲ್ಲಿ ತುಲಾಭಾರದ ತೊಲೆಯನ್ನು ಕಟ್ಟುವಾಗ ನಡಿಬೈಲು ಗುತ್ತಿನ ಮೇಲಾಂಟರಿಗೆ ವಿಶೇಷ ಗೌರವ ಇದೆ. ಹಿಂದೊಮ್ಮೆ ತುಲಾಭಾರ ಸೇವೆ ನಡೆಯುತ್ತಿರುವಾಗ ತೊಲೆಯ ದಡೆ ಮುರಿದು ಹೋಯಿತಂತೆ. ಆಗ ಅಲ್ಲಿಯೇ ಇದ್ದ ಮೇಲಾಂಟರು ತೊಲೆಗೆ ಹೆಗಲು ಕೊಟ್ಟು ಅಪಾಯವನ್ನು ತಪ್ಪಿಸಿದರಂತೆ. ಅದಕ್ಕಾಗಿ ಅವರ ಕುಟುಂಬಕ್ಕೆ ಇಂದಿಗೂ ಗೌರವ ಇದೆ. ಮೇಲಾಂಟಾಯ ಎಂಬ ಒಂದು ದೈವ ಇದೆ. ಇಲ್ಲಿ ಈ ದೈವಕ್ಕೆ ಆರಾಧನೆ ಇಲ್ಲ.

ಇಲ್ಲಿ ಶಂಕರ, ನಾರಾಯಣ ಮತ್ತು ಬ್ರಹ್ಮ ಎಂಬ ತ್ರಿಮೂರ್ತಿ ದೇವರುಗಳು ಉದ್ಭವಿಸಿದ್ದು, ಇಲ್ಲಿ ಮೂಲದಲ್ಲಿ ಉದ್ಭವ ಲಿಂಗ ಇದೆ. ಬ್ರಹ್ಮನಿಗೆ ಆರಾಧನೆ ಇಲ್ಲದ ಕಾರಣ ಗಣಪತಿಯನ್ನು ಆರಾಧಿಸುತ್ತಾರೆ. ದಿನನಿತ್ಯವೂ ಓರ್ವ ಬ್ರಾಹ್ಮಣ ನಿಗೆ ಉಣಬಡಿಸಿ "ಬ್ರಹ್ಮ ಸಮಾರಾಧನೆ" ಎಂಬ ಸೇವೆಯನ್ನು ಬ್ರಹ್ಮನಿಗೆ ಮಾಡಲಾಗುತ್ತದೆ. ತುಳುನಾಡಿನ ಅದಿದೈವ ಬೆರ್ಮೆರ್‌ಗೆ ಬ್ರಹ್ಮ ಸಮಾರಾಧನೆ ಎಂಬ ಸೇವೆ ಇರುವುದನ್ನು ಇಲ್ಲಿ ನೆನೆಪು ಮಾಡಿಕೊಳ್ಳಬಹುದು.

ತುಳುನಾಡಿನ ಹೆಚ್ಚಿನ ದೇವಾಲಯಗಳಿಗೂ ಅಲ್ಲಿನ ಮೂಲ ನಿವಾಸಿಗಳಿಗೂ ಅವಿನಭಾವ ಸಂಬಂಧ ಇರುವಂತೆ ಇಲ್ಲಿಯೂ ಅಂತಹ ಒಂದು ಐತಿಹ್ಯ ಪ್ರಚಲಿತ ಇದೆ. ಈ ಊರಿಗೆ ಬೇಟೆಯಾಡುತ್ತಾ ಬಂದ ಕುರವ ಕುರತ್ತಿಯರು (ಕೊರಗ ಸಮುದಾಯದ ಗಂಡು ಮತ್ತು ಹೆಣ್ಣು) ದೇವರ ಗುಡ್ಡದ ಬಳಿಯಲ್ಲಿ ನೆಲೆಯಾದರು. ಒಂದು ದಿನ ದೇವರ ಗುಡ್ಡದಲ್ಲಿರುವ ದೇವರ ಕೆರೆಯಲ್ಲಿ ಒಂದು ಆಮೆ ಕಾಣಿಸಿಕೊಳ್ಳುತ್ತದೆ. ದೇವರ ಕೆರೆಯಲ್ಲಿ ಮೀನು, ಆಮೆ ಮೊದಲಾದವುಗಳನ್ನು ಹಿಡಿಯಬಾರದು ಎಂಬ ನಿಷೇಧ ಇತ್ತು. ಆದರೆ ಇದನ್ನು ಮೀರಿದ ಕೊರತಿ (ಕೊರಗ ಸಮುದಾಯದ ಹೆಂಗಸು) ಆಮೆಯ ಮೇಲೆ ಕತ್ತಿಯಿಂದ ಬಡಿಯುತ್ತಾಳೆ. ಆಗ ಅಲ್ಲಿ ತುಂಬಾ ರಕ್ತ ಹರಿಯುತ್ತದೆ. ಕೊರತಿ ಮಗುಚಿ ಬೀಳುತ್ತಾಳೆ. ಮುಂದೆ ಅವಳ ದುರ್ಗಾ ದೇವಸ್ಥಾನದ ಸಂನಿಧಿಯಿಂದ ಎದ್ದು ನಿಂತು ಕೋಳ್ಯೂರು ದೇವಸ್ಥಾನದ ಮೇಲಿನ ಭಾಗದಲ್ಲಿರುವ ಸಂತೆ ಗದ್ದೆಯಲ್ಲಿ ನಿಲ್ಲುತ್ತಾಳೆ. ಆಗ ಅವಳನ್ನು ನೋಡಿದ ಶಂಕರನಾರಾಯಣ ದೇವರು "ನೀನು ನನ್ನ ಅಂಗಳವನ್ನು ಗುಡಿಸಿಕೊಂಡು ಕೋಳ್ಯೂರು ದೇವಳದಲ್ಲಿ ಇರು" ಎನ್ನುತ್ತಾರೆ. ಹಾಗೆ ಅವಳು ಸತ್ಯಂಗಳದ ಕೊರತಿ ಎಂಬ ಹೆಸರಿನಲ್ಲಿ ದೇವತ್ವ ಪಡೆದು ಕೋಳ್ಯೂರು ದೇವಸ್ಥಾನದ ಕೆಳಭಾಗದಲ್ಲಿ ನೆಲೆಯಾಗುತ್ತಾಳೆ.

ಕೋಳ್ಯೂರು ಕಂಬಳ ಗದ್ದೆಯಲ್ಲಿ ಪೂಕರೆ ಕಂಬಳ ಇತ್ತು. ಒಂದು ವರ್ಷ ಕೋಳ್ಯೂರು ಕಂಬಳ ಗದ್ದೆಯಲ್ಲಿ ಪೂ ಕರೆಯಂದು ಕೋಣಗಳನ್ನು ಓಡಿಸುವಾತ ಕೋಣಗಳನ್ನು ಅಡ್ಡಕ್ಕೆ ಓಡಿಸುವ ಬದಲು ನೀಟಕ್ಕೆ ಓಡಿಸುತ್ತಾನೆ. ಆಗ ಕೋಣಗಳು ಅಲ್ಲಿಯೇ ಕಲ್ಲಾದವು. ಓಡಿಸುವಾತ ಓಡಿ ಹೋಗಿ ಗದ್ದೆ ಬಳಿಯ ತೋಡಿನ ನೀರ ಗುಂಡಿಗೆ ಹಾರಿ ಮಾಯವಾಗು ತ್ತಾನೆ. ಅಂದು ಆತನ ಮುಟ್ಟಾಳೆ ಬಿದ್ದ ಜಾಗ ಎಂಬಲ್ಲಿ ಈಗ ನಾಲ್ಕು ಅಡಿ ಎತ್ತರ ನಾಲ್ಕಡಿ ಅಗಲದ ಮಣ್ಣಿನ ದಿಬ್ಬ. ಈ ದಿಬ್ಬದ ಒಳಗೆ ಕಲ್ಲುಗಳು ಇವೆ. ಏದನ್ನು ಮುಟ್ಟಾಳೆ ಕಲ್ಲು ಎನ್ನುತ್ತಾರೆ. ಗದ್ದದಲ್ಲಿ ಕೋಣಗಳು ಮಲಗಿದಂತೆ ಕಾಣುವ ಎರಡು ಕಲ್ಲುಗಳಿದ್ದು ಅದನ್ನು ಎರು ಮಾಜಿನ ಕಲ್ಲು (ಕೋಣ ಮಾಯವಾದ ಕಲ್ಲು) ಎಂದು ಕರೆಯುತ್ತಾರೆ.

ಶೃಂಗೇರಿ ಮಠದ ಕಡತದಲ್ಲಿ ದಾಖಲಾದ ಹಾಲಾಡಿಯೊಳಗಿನ ಹುಯ್ಯಾರು-ಹೊಂನಗಲ್ಲು ಗ್ರಾಮಗಳ ಶಿಲಾಶಾಸನ ಪ್ರತಿ

ಡಾ. ಎ.ಕೆ. ಶಾಸ್ತ್ರಿ*

ಶ್ರೀ ಆದಿಶಂಕರಾಚಾರ್ಯರು ಸುಮಾರು ೧೨೦೦ ವರ್ಷಗಳ ಹಿಂದೆ ಶೃಂಗೇರಿಯಲ್ಲಿ ದಕ್ಷಿಣಾಮ್ನಾಯ ಪೀಠ ಸ್ಥಾಪನೆ ಮಾಡಿದಾಗಿನಿಂದ ಆ ಪೀಠದ ಜಗದ್ಗುರು ಪರಂಪರೆ ಇಂದಿನವರೆಗೂ ಅವಿಚ್ಛಿನ್ನವಾಗಿ ಸಾಗಿಬಂದಿದೆ. ವಿಜಯನಗರದ ಸಾಮ್ರಾಟರು, ಕೆಳದಿ ನಾಯಕರು, ಮೈಸೂರಿನ ಒಡೆಯರು, ಹೈದರಲಿ, ಟಿಪುಸುಲ್ತಾನ, ಹೈದರಾಬಾದಿನ ನಿಝಾಮರು, ಮರಾಠಾ ದೊರೆಗಳು, ಸಾಮಂತರು, ಬ್ರಿಟಿಷ್ ಕಮಿಷನರ್‌ರು ಮತ್ತು ಪ್ರಜೆಗಳು ಕಾಲಕಾಲಕ್ಕೆ ಶೃಂಗೇರಿ ಮಠ ಮತ್ತು ಗುರುಗಳನ್ನು ಗೌರವಿಸಿ, ಭೂದಾನ ಮಾಡುತ್ತ ಬಂದುದರಿಂದ, ಅದೊಂದು ಧರ್ಮಸಂಸ್ಥಾನವಾಗಿ ರೂಪುಗೊಂಡಿತು. ಇಂಥ ಐತಿಹಾಸಿಕ ಬೆಳವಣಿಗೆಯನ್ನು ಶಾಸನ, ಕಡತ, ಕಾಗದಪತ್ರ, ತಾಡೋಲೆ, ದೇವಾಲಯ ಮತ್ತು ಸಾಹಿತ್ಯಕ ಕೃತಿಗಳಂಥ ಆಕರಗಳಿಂದ ಅರಿಯಬಹುದಾಗಿದೆ. ಪ್ರಸ್ತುತದಲ್ಲಿ, ವಿಜಯನಗರ ಸಾಮ್ರಾಟರಾದ ಕೃಷ್ಣದೇವರಾಯರ ಕಾಲದ, ಶೃಂಗೇರಿ ಮಠದ ಕಡತದಲ್ಲಿ ಉಲ್ಲೇಖವಾದ ಶಿಲಾಶಾಸನದ ಪ್ರತಿಯನ್ನು ಕುರಿತು ಪರಿಶೀಲಿಸೋಣ[೧].

ಹಾಲಾಡಿಯೊಳಗಿನ ಹುಯ್ಯಾರ ಹೊಂಗನಲ್ಲು ಗ್ರಾಮದ ಶಿಲಾಶಾಸನ ಪ್ರತಿಯನ್ನು ಕಡತವೊಂದರಲ್ಲಿ ದಾಖಲಿಸಲಾಗಿದೆ. ಘಟ್ಟದ ಕೆಳಗಿನ ರಾಜ್ಯದಲ್ಲಿ ಶ್ರೀಮಠಕ್ಕೆ ಉತ್ತಾರವಾದ ಗ್ರಾಮಗಳ ಶಿಲಾಶಾಸನ ಮತ್ತು ತಾಮ್ರಶಾಸನದ ಪ್ರತಿಗಳೆಂಬ ಸಂಗತಿಯನ್ನು ಪ್ರಾರಂಭದಲ್ಲಿ ನಮೂದಿಸಲಾಗಿದೆ[೨]. ಶಾಲಿವಾಹ ಶಕವರುಷ ೧೪೩೭, ಆಶ್ವಿಜ ಶು. ೧ (ರವಿವಾರ, ಸೆಪ್ಟಂಬರ್ ೯, ೧೫೧೫) ರಂದು, ಬಾರಕೂರು ರಾಜ್ಯದ ರತ್ನಪ್ಪ ವಡೆಯರು ಆಳುತ್ತಿದ್ದ ಕಾಲದಲ್ಲಿ, ಅವರ ಕುಮಾರ ವಿಜಯಪ್ಪವಡೆಯರು ಋಷ್ಯಶೃಂಗ ಪುರಿಯ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣ ಯಮನಿಯಮಾದ್ಯಷ್ಟಾಂಗ ಯೋಗಸಂಪನ್ನರಾದ ಶ್ರೀ ವಿದ್ಯಾರಣ್ಯ ವಡೆಯರಿಗೆ[೩] ಧರ್ಮಶಾಸನದ ಪಟ್ಟೆ ನೀಡಿದರೆಂದು ಶಾಸನವು ತಿಳಿಸುತ್ತದೆ. ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರಕೃಷ್ಣರಾಯ ಮಹಾರಾಯರು ವಿಜಯನಗರಿಯ ಸಿಂಹಾಸನದಲ್ಲಿ ಸುಖಸತ್ಕಥಾ ವಿನೋದದಿಂದ ದುಷ್ಟನಿಗ್ರಹ ಶಿಷ್ಟಪ್ರತಿಪಾಲಕರಾಗಿ ಸಕಲ ವೇದಾಶ್ರಮ ಧರ್ಮವನ್ನು ಪ್ರತಿಪಾಲಿಸಿ ಸಿರಿರಾಜ್ಯಂಗೈದು ಚಿತ್ತೈಸಿರುವ ಸಮಯದಲ್ಲಿ, ಕೃಷ್ಣದೇವರಾಯರ ಆಜ್ಞಾನುಸಾರವಾಗಿ ರತ್ನಪ್ಪ ವಡೆಯರು ಬಾರಕೂರು ರಾಜ್ಯವನ್ನು ಆಳುತ್ತಿದ್ದ ಕಾಲದಲ್ಲಿ ಭೂದಾನ ಮಾಡಲಾಯಿತೆಂಬ ಸಂಗತಿಯೂ ಶಾಸನದಿಂದ ತಿಳಿದು ಬರುತ್ತದೆ.

ಶ್ರೀ ವಿದ್ಯಾರಣ್ಯ ವಡೆಯರು ವಿದ್ಯಾನಗರಿಗೆ ಚಿತ್ತೈಸಿ, ಕೃಷ್ಣರಾಯ ಮಹಾರಾಯರಿಗೆ ದರುಶನ ನೀಡಿ[೪], ಹಂಪೆಯ ಮಠದಲ್ಲಿ ತಂಗಿದ್ದಾಗ, ಅಲ್ಲಿಗೆ ರತ್ನಪ್ಪೊಡೆಯರು ಚಿತ್ತೈಸಿ, ಶ್ರೀ ಕೃಷ್ಣರಾಯ ಮಹಾರಾಯರಿಗೆ ಶತ್ರುಕ್ಷಯ, ಮಿತ್ರೂರ್ಜಿತ, ಆಯುರಾರೋಗ್ಯ, ಐಶ್ವರ್ಯ ವೃದ್ಧಿಯಾಗಬೇಕೆಂದು, ಶ್ರೀ ವಿದ್ಯಾರಣ್ಯ ವಡೆಯರಿಗೆ, ಹಂಪೆಯ ಶ್ರೀ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಕೆಲನಾಡ ಒಳಗಿನ ಹುಯ್ಯಾರು ಗ್ರಾಮವನ್ನು ಮತ್ತು ತೊಂಭತ್ತಿನ ಸೀಮೆಯ ಹೊಂನಗಲ್ಲ ಉಪಗ್ರಾಮಗಳನ್ನು ಧಾರೆಯೆರೆದುಕೊಟ್ಟು, ತಮ್ಮ ಕುಮಾರ ವಿಜಯಪ್ಪ ಅರಸರಿಗೆ ಪಟ್ಟೆಯ ಶಾಸನವ ಬರೆಸಿಕೊಡಹೇಳಿ ರಾಯಸ ಕಳುಹಿದರು. ರತ್ನಪ್ಪೊಡೆಯರ ಆಜ್ಞಾನುಸಾರ, ಕುಮಾರ ವಿಜಯಪ್ಪ ವಡೆಯರು ಶ್ರೀ ವಿದ್ಯಾರಣ್ಯ ವಡೆಯರಿಗೆ ಮೇಲ್ಕಾಣಿಸಿದ ಗ್ರಾಮ ಮತ್ತು ಉಪಗ್ರಾಮಗಳನ್ನು, ಚತುಃಸೀಮೆಯೊಳಗಿನ ನಿಧಿ, ನಿಕ್ಷೇಪ, ಜಲ, ಪಾಷಾಣ, ಅಕ್ಷಿಣಿ, ಆಗಾಮಿನಿ, ಸಿದ್ಧಸಾಧ್ಯಂಗಳೆಂಬ ಅಷ್ಟಭೋಗ ತೇಜಸ್ವಾಮ್ಯವನ್ನು ಸರ್ವಮಾನ್ಯವಾಗಿ, ಸಹಿರಣ್ಯೋದಕ ದಾನ ಧಾರಾಪೂರ್ವಕವಾಗಿ, ಆಚಂದ್ರಾರ್ಕಸ್ಥಾಯಿಗಳಾಗಿ ಭೋಗಿಸಿ ಬರುವಂತೆ ಧಾರೆಯನೆರೆದು ಕೊಟ್ಟರು. ಶೃಂಗೇರಿಯ ಶ್ರೀ ವಿದ್ಯಾಶಂಕರ ಮತ್ತು ಹಾಲಾಡಿ ಶ್ರೀ ನರಸಿಂಹ ದೇವರ ಅಮೃತಪಡಿ ಮತ್ತು ನಂದಾದೀಪ್ತಿಗಾಗಿ ಭೂದಾನ

* 'ಭವಾನಿ', ಟಿ ಎಸ್ ಎಸ್, ರೈಸ್‌ಮಿಲ್ ಕೆಳಗೆ, ವಿದ್ಯಾಗಿರಿ, ಶಿರಸಿ, ಉತ್ತರ ಕರ್ನಾಟಕ-೫೮೧೪೦೨

ಮಾಡಲಾಯಿತು. ಹುಯ್ಯಾರ ಗ್ರಾಮದ ಪ್ರಾಕು ಪ್ರಮಾಣದ ಕುಳ (ತೆರಿಗೆ) ಉಪಚಾರ ಕಾಟಿ (ನಾಣ್ಯ) ೩೬೯ ಮತ್ತು ಹೊಂನಗಲ್ಲ ಗ್ರಾಮ ೧೮ ತೆರಿಗೆ ಕಾಟಿ ೧೫೦, ಎಂಬ ಅಂಶವನ್ನೂ ಶಾಸನದಲ್ಲಿ ಗಮನಿಸಬಹುದಾಗಿದೆ.

ಒಟ್ಟಿನಲ್ಲಿ, ಶೃಂಗೇರಿ ಮಠದ ದ್ವಿತೀಯ ಶ್ರೀ ಪುರುಷೋತ್ತಮ ಭಾರತೀ (ಕ್ರಿ.ಶ. ೧೪೭೯–ಕ್ರಿ.ಶ. ೧೫೧೭) ಸ್ವಾಮಿಗಳ ಶಿಷ್ಯರಲ್ಲೊಬ್ಬರಾದ ಶ್ರೀ ವಿದ್ಯಾರಣ್ಯ ವಡೆಯರಿಗೆ, ಶೃಂಗೇರಿಯ ಶ್ರೀ ವಿದ್ಯಾಶಂಕರ ಮತ್ತು ಹಾಲಾಡಿ ನರಸಿಂಹ ದೇವರ ಅಮೃತಪಡಿ ಮತ್ತು ನಂದಾದೀಪ್ತಿಗಾಗಿ, ಬಾರಕೂರು ರಾಜ್ಯದಲ್ಲಿಯ ಕೆಲನಾಡ ಒಳಗಿನ ಹುಯ್ಯಾರ ಗ್ರಾಮ ಮತ್ತು ತೊಂಭತ್ತಿನ ಸೀಮೆಯ ಹೊಂನಗಲ್ಲ ಉಪಗ್ರಾಮಗಳನ್ನು ಬಾರಕೂರು ರಾಜ್ಯದ ರತ್ನಪ್ಪೊಡೆಯರ ನಿರೂಪದ ಮೇರೆಗೆ, ಅವರ ಕುಮಾರ ವಿಜಯಪ್ಪ ವಡೆಯರು, ದಾನಪಟ್ಟೆ ಬರೆಸಿದರೆಂದು, ಕಡತದಲ್ಲಿ ಉಲ್ಲೇಖವಾದ ಶಿಲಾಶಾಸನದ ಪ್ರತಿಯಿಂದ ಅರಿಯಬಹುದಾಗಿದೆ. ಕುಳವ (ತೆರಿಗೆಯ) ಕಡಿದು ಸರ್ವಮಾನ್ಯವಾಗಿ ಗ್ರಾಮಗಳನ್ನು ದಾನ ಮಾಡಲಾಯಿತೆಂದು ಶಾಸನವು ತಿಳಿಸುತ್ತದೆ. ಕರಣಿಕ ಮಲ್ಲರಸರ ಹೆಸರೂ ಉಲ್ಲೇಖವಾಗಿದೆ. ಇನ್ನುಳಿದ ಶಾಸನಗಳಲ್ಲಿರುವಂತೆ, ಅಂತ್ಯದಲ್ಲಿ ಸಾಕ್ಷಿಗ್ರಂಥಗಳ ಪ್ರಾರಂಭಿಕ ಸಾಲುಗಳನ್ನಷ್ಟೇ ಉಲ್ಲೇಖಿಸಲಾಗಿದೆ. ಮುದುವರಿ ಮಹಾಲಿಂಗದೇವರ ಬಳಿಯಲ್ಲಿ ನೆಟ್ಟ ಶಿಲಾಶಾಸನದ ಪ್ರತಿ, ಎಂಬುದಾಗಿ ನಮೂದಿಸಲಾಗಿದೆ.

ಶಾಸನದ ಪಾಠ ಇಂತಿದೆ

ಕಡತ ೧೯೫, ದಾಖಲೆ ೨೯

ಪುಟ ೫೪

ಸಾಲು

೧. ಃ ಘಟದ ಕೆಳಗಣ ರಾಜ್ಯದಲ್ಲು ಶ್ರೀಮಠ
೨. ಕೆ ಉತ್ತಾರವಾದ ಗ್ರಾಮಗಳ ಸಿಲಾಶಾಸನ ತಾಂಬ್ರಶಾಸ
೩. ನದ ಸಾಧನ ಪ್ರತ್ತಿಗಳ್ಳು।
೪. ಹಾಲಾಡ್ಡಿ ವಳಗಣ। ಹುಯಾರ್‍ರು ಹೊಂನಗಲ್ಲು ಗಾಮದ ಸಿಲಶಾ
೫. ಸನ ಪ್ರತ್ತಿ।
೬. ಶ್ರೀ ಗಣಾದಿ ಪತ್ತಯೆ ನಮಃ। ನಮಸ್ತುಂಗ ಯಂಬ ಗ್ರಂತ್ತ ಬರದು। ಸ್ವಸ್ಥಿ ಶ್ರೀ
೭. ಜಯಾಭ್ಯುದಯ ಶಾಲಿವಾಹನ ಶಕ ವರುಶ ನಾ ೧೪೩೭ ಸಂದ। ಯಂಟನೆ
೮. ವರ್ತಮಾನ ಯುವ ಸಂವತ್ಸ್ತುರದ। ಆಗಶ್ವಿಜ ಶು ೧ ಲ್ಲು। ಶ್ರೀಮಂನ್ಮಹಾರಾಹಾ
೯. ದಿರಾಜ। ರಾಜಪರಮೆಶ್ವರ। ಶ್ರೀ ವಿರಪ್ರತ್ತಾಪ। ಶ್ರೀ ವಿರಕ್ರಿಷ್ಣರಾಯ ಮಹಾ
೧೦. ರಾಯರು। ವಿಜಯನಗರ್‍ರಿಯ ಸಿಂಹಾಸನದಲ್ಲಿ। ಸುಖ। ಸತ್ಕಥಾ
೧೧. ವಿನೊದದಿಂ। ದುಷ್ಟನಿಗ್ರಹ ಸಿಷ್ಟಪ್ರತ್ತಿಪಾಲಕರಾಗಿ। ಸಕಲ ವೆದಾ
೧೨. ಶ್ರಮ ದರ್ಮವಂನ್ನು। ಪ್ರತ್ತಿಪಾಲಿಸಿ ಸಿರಿರಾಜ್ಯಂಗಯಿದು। ಚಿತ್ತೈ
೧೩. ಯಿಹ ಸಮುಯದಲ್ಲಿ ಅವರ ನಿರೂಪದಿಂದ ಬಾರಕೂರ ರಾಜ್ಯದ
೧೪. ರತ್ನಪ್ಪ ವಡೆಯರ್‍ರು ಆಳುತ್ತಿಹ ಕಾಲದಲ್ಲು ಅವರ ಕುಮಾರ ವಿಜಯಪ್ಪವಡೆ
೧೫. ಯರ್‍ರು ರುಶ್ಯಶ್ರುಂಗಪುರಿಯ ಶ್ರೀಮತ್ಪರಮಹಂಸ ಪರ್‍ರಿವ್ರಾಜಕಾಚಾ
೧೬. ರ್ಯವರ್ಯ ಪದವಾಖ್ಯ ಪ್ರಮಾಣ। ಪಾರಾವಾರ ಪಾರ್‍ರಿಣ। ಯಮನಿ
೧೭. ಯ್ಯಮಾದ್ಯಾಷ್ಟಾಂಗ ಯೊಗಸಂಪಂನ್ನರು ಮಪ। ಶ್ರೀ ವಿದ್ಯಾರಂಣ್ಯ

ಪು.೫೫

ಸಾಲು

೧. ವಡೆಯರ್‍ರಿಗೆ। ಕೊಟ ಧರ್ಮಶಾಸನ ಪಟೆ। ಕ್ರಮವೆಂತೆಂದರ್‍ರೆ ಶ್ರೀ
೨. ವಿದ್ಯಾರಂಣ್ಯ ವಡೆಯರ್‍ರು ಶ್ರೀ ಕ್ರಿಷ್ಣರಾಯರು। ಮಹಾರಾಯರಿಗೆ।
೩. ದರುಶನವ ಚಿತ್ತೈಯಿಸುವರ್‍ರೆ ವಿದ್ಯಾನಗರ್‍ರಿಗೆ। ಬಿಜಯಂ ಮಾಡ್ಡಿ ಹಂ
೪. ಪೆಯು ಮಟದಲ್ಲು ಚಿತ್ತೈಸಿಯಿದಾಗ। ಅಲ್ಲಿಗೆ ರತ್ನಪ್ಪೊಡೆಯರು। ಚಿತ್ತೈಸಿ।
೫. ಶ್ರೀ ಕ್ರುಷ್ಣರಾಯರು ಮಹಾರಾಯರಿಗೆ। ಶತ್ರುಕ್ಷಯ ಮಿತ್ರೋರ್ಜಿತ। ಆ
೬. ಯುರಾರೊಗ್ಯ ಆಯಿಶ್ವರ್ಯ ಅಭಿವೃದ್ಧಿಗಳಾಗಬೆಕೆಂದು। ಶ್ರೀ ವಿದ್ಯಾ
೭. ರಂಣ್ಯ ವಡೆಯರಿಗೆ। ಹಂಪೆಯ ಶ್ರೀ ವಿರುಪಾಕ್ಷದೇವರ ಸಂನಿಧಿಯಲ್ಲು।ಕೆ
೮. ಲನಾಡ ವಳಗಣ। ಹುಯ್ಯಾರ ಗ್ರಾಮವಂನ್ನು। ತ್ತೊಂಭತ್ತಿನ ಶಿಮೆಯ
೯. ಹೊಂನಗಲ್ಲ ಉಪಗ್ರಾಮಗಳಂನ್ನು ದಾರೆಯರದು ಕೊಟು। ತಂಮ
೧೦. ಕುಮಾರ ವಿಜಯಪ ಅರಸರ್‍ರಿಗೆ। ಪಟ್ಟೆಯ ಶಾಸನವ ಬರಸಿಕೊಡ

೧೧. ಹೇಳಿ। ರಾಯಸ ಬಂದದಕೆ ಆ ವಿಜಯಪ್ಪ ವಡೆಯರ್‍ರು ಶ್ರೀ ವಿದ್ಯಾರಂ
೧೨. ಣ್ಯ ವಡೆಯರಿಗೆ। ಬರಸಿಕೊಟ ದಾನಪಟೆಯ ವಿವರ। ಬಾರಕ್ಹೂರ
೧೩. ರಾಜ್ಯದ ಕೆಲನಾಡ ವಳಗಣ ಹುಯಾರ ಗ್ರಾಮ ವಂದಕೆಂ। ಪ್ರಾಕು ಪ್ರಮಾ
೧೪. ಣ ಕುಳ ಉಪಚಾರ ಸಹಾ ಕಾಟ ೩೬೯ ಅಕ್ಷರದಲ್ಲು। ಕಾಟಿ। ಮುಂ
೧೫. ನೂರು ಅರುವತ್ತೊಂಭತ್ತು ಕಾಟಯು। ಹೊಂನನ್ನು ಕಾಲಕಾಲಕ್ಕೆ ತೆತ್ತು
೧೬. ತಂದುಕೊಂಡು। ಹೊಂನಗಲ್ಲಿ ಗ್ರಾಮ ೧ರ ಕಾಟ ೧೫೦ ನೂರು ಐವತ್ತು।
೧೭. ಸಹಿತ್ತವಾಗಿ। ಶ್ರೀ ವಿದ್ಯಾಶಂಕರ ದೇವರು ಹಾಲಾಡ್ಡಿ ಶ್ರೀನರಸುಂಹ್ವದೇವರ ಅ
೧೮. ಮ್ರುತಪಡ್ಡಿ ನಂದಾದಿಪ್ಟಿಯಂನ್ನು ನಡೆಸಿಕೊಂಡು। ಸುಖದಲು ಅನುಭ
೧೯. ವಿಸಿ ಬಹಿರ್‍ರಿ ಯಂದು ವಿಜಯಪ್ಪ ವಡೆಯರ್‍ರು ಶ್ರೀ ವಿದ್ಯಾರಂಣ್ಯ ವಡೆ।
೨೦. ಯರಿಗೆ। ಯೀ ಹುಯಾರ್‍ರ ಹೊಂನಗಲ್ಲಿ ಗ್ರಾಮ ಉಪಗ್ರಾಮಗಳು
೨೧. ಚತ್ತುಃ ಸಿಮೆಯ ವಳಗಣ ನಿಧಿ ನಿಕ್ಷೆಪ ಜಲ ಪಾಷಾಣ ಅಕ್ಷಿಣಿ
೨೨. ಆಗಾಮಿ। ಸಿದ್ಧ ಸಾದ್ಯಂಗಳೆಂಬ ಅಷ್ಟಭೊಗ ತೆಜ ಸಾಮ್ಯವಂನ್ನು ನಾಲು ನಿಮಗೆ।

ಪು.೫೬

ಸಾಲು

೧. ಸರ್ವಮಾಂನ್ಯವಾಗಿ ಸಹಿರಂಣ್ಯೋದಕ ದಾನ ಧಾರಾಪೂರ್ವಕವಾಗಿ।
೨. ಆಚಂದ್ರಾರ್ಕ ಸ್ಥಾಯಿಗಳಾಗಿ ಭೋಗಿಸಿ ಬಹಿರಿ ಯಂದು। ಆ ಹು
೩. ಯ್ಯಾರ ಗ್ರಾಮ ಉಪಗ್ರಾಮಗಳು ಸಹಿತ್ತವಾಗಿ। ಕುಳವ ಕಡ್ಡಿದು
೪. ಜರುಣೆಕ ಮಲ್ಲರಸರ್‍ರು ವಿಜಯಪ್ಪ ವಡೆಯರ್‍ರು ಸರ್ವಮಾಂನ್ಯ।
೫. ವಾಗಿ ದಾರೆಯನೆರದುಕೊಟು। ಆ ಗ್ರಾಮದ ಹೊಂನಂನ್ನ।
೬. ಶ್ರೀಮಠಕೆ ತಂದುಕೊಂಡು ಶ್ರೀ ವಿದ್ಯಾಶಂಕರ ದೇವರ್‍ರು ಶ್ರೀ ನರಸುಂ
೭. ಹ್ಯ ದೇವರು ಅಮ್ರುತಪಡ್ಡಿ। ನಂದಾದಿಪ್ಟಿಗೆ। ನಡೆಸಿ ಸುಖದಲ್ಲು ಅನು
೮. ಭವಿಸಿ। ಬಹಿರಿ ಯಂದು ಕೊಟ॥ ಹುಯ್ಯಾರ ಗ್ರಾಮದ ದಾನ ಪ
೯. ಟ್ಟೆ ದಾನಪಾಲನ ಯಂಬ ಗ್ರಂಥ್ಯ ೧ ಯೆಕ್ಕದ ಭಗಾ। ಲೊ
೧೦. ಕ ಯಂಬ ಗ್ರಂಥ ೧ ಶ್ರೀ ಚಿತ್ರರಾಗ ಯಂತ್ರ ಬರದ ಶಿಲಾಶಾಸನ।
೧೧. ಮುದುವರ್‍ರಿ ಮಹಾಲಿಂಗ ದೇವರ ಬಳಿಯಲ್ಲಿ। ನೆಟ ಸಿಲಾಶಾಸನ ೧ ಯಥಾಪ್ರತ್ತಿ।
೧೨. ಪುಸ್ತುಕಕೆ ದಾಖಲು।

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಅಕ್ಕಿ ಇಲ್ಲವೆ ಗೋಧಿ ಗಂಜಿಯ ಅಂಟಿಗೆ ಹುಣಸೆ ಬೀಜಗಳ ಪುಡಿಯನ್ನು ಸೇರಿಸಿ, ಬಟ್ಟೆಗೆ ಬಳಿದು, ಇದ್ದಲ ಪುಡಿಯ ಲೇಪನ ಮಾಡಿ, ಗಾರೆಕಲ್ಲಿನಿಂದ ಅಥವಾ ಗಣಪೆಕಾಯಿಯಿಂದ ತಿಕ್ಕಿ, ನೆರಳಿನಲ್ಲಿ ಒಣಗಿಸಿ, ಆಮೇಲೆ ಪುಸ್ತಕ ರೂಪದಲ್ಲಿ ಮಡಚಿ ಸಿದ್ಧಪಡಿಸಿದ ಕಪ್ಪು ಪುಸ್ತಕವೇ ಕಡತ. ಕಡತಗಳ ಹಾಳೆಗಳ ಮೇಲೆ ಸೀಸದಂಥ ಬಳಪದ ಕಡ್ಡಿಯಿಂದ ಬರೆಯಲಾಗುತಿತ್ತು. ಹೆಚ್ಚಿನ ಮಾಹಿತಿಗಾಗಿ ಲೇಖಕರ ಪೂರ್ವಪ್ರಕಟಿತ ಪುಸ್ತಕಗಳನ್ನು ಓದಿರಿ.

೨. ಕಡತ ೧೯೫, ದಾಖಲೆ ೨೯.
ಸಾಮಾನ್ಯವಾಗಿ, ಶಾಸನವು ಒಂದು ಸ್ಥಳದಲ್ಲಿ ಸ್ಥಿರವಾಗಿರಲೆಂಬ ಉದ್ದೇಶದಿಂದ ಶಿಲಾಶಾಸನವನ್ನು ನಿಲ್ಲಿಸಲಾಗುತ್ತಿತ್ತು. ದಾನ ಪಡೆದವರ ಪತ್ತಿರವೂ ಆ ಶಾಸನವು ಇರಲೆಂದು, ತಾಮ್ರಶಾಸನವನ್ನು ದಾನಿಗಳು ನೀಡುತ್ತಿದ್ದರು. ಆದ್ದರಿಂದ, ಪ್ರಸ್ತುತ ಶಾಸನದಲ್ಲಿಯೂ, 'ಶಿಲಾಶಾಸನ' ಮತ್ತು 'ತಾಮ್ರಶಾಸನ' ಎಂದು ನಮೂದಿಸಲಾಗಿದೆ.

೩. ವಿಜಯನಗರ ಸ್ಥಾಪನೆಗೆ ಕಾರಣರಾದ ಮತ್ತು ಶೃಂಗೇರಿ ಜಗದ್ಗುರು ಪೀಠದಲ್ಲಿ ೧೨ನೆಯವರಾದ ಶ್ರೀ ವಿದ್ಯಾರಣ್ಯರು ಮತ್ತು ಪ್ರಸ್ತುತ ಶಾಸನದಲ್ಲಿ ನಮೂದಿಸಲಾದ ವಿದ್ಯಾರಣ್ಯ ವಡೆಯರು, ಶೃಂಗೇರಿ ಜಗದ್ಗುರು ದ್ವಿತೀಯ ಶ್ರೀ ಪುರುಷೋತ್ತಮ ಭಾರತೀಗಳ ಶಿಷ್ಯರಲ್ಲಿ ಒಬ್ಬರಾಗಿದ್ದು, ಹಂಪೆಯಲ್ಲಿ ಮಠ ಸಂಘಟಿಸಿದರು. ಶೃಂಗೇರಿ ಜಗದ್ಗುರು ಪೀಠದಲ್ಲಿ ೧೯ನೆಯವರಾದ ಪುರುಷೋತ್ತಮ ಭಾರತೀಗಳ ಪೀಠಾಧಿಪತ್ಯ ಕ್ರಿ.ಶ. ೧೪೭೯–೧೫೧೭.

೪. ಕೃಷ್ಣದೇವರಾಯರು ಕಳಿಂಗದ ವೀರರುದ್ರ ಗಜಪತಿಯೊಂದಿಗೆ ಯುದ್ಧ(ಕ್ರಿ.ಶ.೧೫೧೨–೧೭) ಮಾಡುವ ಪೂರ್ವದಲ್ಲಿ, ಶ್ರೀ ವಿದ್ಯಾರಣ್ಯ ವಡೆಯರ ಮುಖಾಂತರ ದ್ವಿತೀಯ ಪುರುಷೋತ್ತಮ ಭಾರತೀಗಳು ಕಳುಹಿದ ಆಶೀರ್ವಾದ ಪಡೆದು, ನಂತರ ಜಯ ಸಂಪಾದಿಸಿದರೆಂಬುದು ಗಮನಾರ್ಹ ಸಂಗತಿ.

೨೮

ಕೆಲ್ಲವತ್ತಿಯ ಪ್ರಾಚ್ಯಾವಶೇಷಗಳು ಮತ್ತು ನವಶೋಧಿತ ವೀರಗಲ್ಲುಗಳು

ಮಲ್ಲೇಶ ಕೆ.ಎಫ್.*

ಹಾಸನ ತಾಲ್ಲೂಕು ಸಾಲಗಾಮೆ ಹೋ. ಕೆಲ್ಲವತ್ತಿ ಗ್ರಾಮ, ಹಾಸನದಿಂದ ೧೫ ಕಿ.ಮೀ. ದೂರದಲ್ಲಿದ್ದು ಚಾರಿತ್ರಿಕ ಅಂಶಗಳನ್ನೊಳಗೊಂಡಿದೆ. ಕರ್ನಾಟಕ ಇತಿಹಾಸದಲ್ಲಿ ಮಹತ್ವ ನೀಡುವುದಕ್ಕೆ ಸಂಬಂಧಿಸಿದ ಅರ್ಹವಾದ ಎಲ್ಲಾ ಅಂಶಗಳನ್ನೆಲ್ಲಾ ಈ ಸ್ಥಳ ಒಳಗೊಂಡಿದೆ.

ಐತಿಹಾಸಿಕ ಹಿನ್ನಲೆ/ಸ್ಥಳನಾಮ: ಹಾಸನ ಜಿಲ್ಲಾ ಕೇಂದ್ರದಿಂದ ೧೫ ಕಿ.ಮೀ. ದೂರವಿರುವ ಈ ಸ್ಥಳ ಎಮ್.ಸಿ.ಎಫ್.ನಿಂದ ೬ ಕಿ.ಮೀ. ದೂರದಲ್ಲಿದೆ. ಪುರದಮ್ಮ ದೇವಾಲಯಕ್ಕೆ ಹೋಗುವ ಎಲ್ಲಾ ಬಸ್‌ಗಳು ಕೆಲ್ಲವತ್ತಿ ಮಾರ್ಗವಾಗಿ ಹೋಗುತ್ತವೆ. ಎಫಿಗ್ರಾಫಿಯಾ ಕರ್ನಾಟಕ ಸಂಪುಟ ೮ರಲ್ಲಿ ಕೆಲ್ಲವತ್ತಿ ಹಾ-೧೧೭೫, ಕೆಲವತ್ತಿ ಹಾ-೭೬, ಕೆಲ್ಲವತ್ತಿ ಹಾ-೭೭ರಲ್ಲಿ ಶಾಸನಗಳಲ್ಲಿ ಈ ಸ್ಥಳವನ್ನೆಲ್ಲಾ ಕೆಲ್ಲವತ್ತಿ ಎಂದು ಉಲ್ಲೇಖಿಸಲಾಗಿದೆ. ಈಗ ಕೆಲ್ಲವತ್ತಿ ಎಂದು ಕರೆಯುವುದು ರೂಢಿಯಲ್ಲಿದೆ. ಚಾರಿತ್ರಿಕವಾಗಿ ಗಂಗರು, ಹೊಯ್ಸಳರು, ವಿಜಯನಗರ ಅರಸರು ಆಳಿದ ಈ ಗ್ರಾಮದಲ್ಲಿ ಕ್ರಿ.ಶ. ೧೧೨೩ ಹೊಯ್ಸಳ ವಿಷ್ಣುವರ್ಧನನ ಕಾಲದ ಒಂದು ಶಾಸನ, ೩ನೇ ನರಸಿಂಹನ ಕಾಲದ ೧೨೬೭ರ ಕಾಲಕ್ಕೆ ಸೇರಿದ ಲಕ್ಷ್ಮೀನಾರಾಯಣ/ಶ್ರೀರಂಗ ಅಲ್ಲಾಳನಾಥನ ದೇವಾಲಯದ ಹಿಂಭಾಗದಲ್ಲಿರುವ ಶಾಸನ ವಿಜಯನಗರದ ಶ್ರೀ ರಂಗರಾಯನ ಕಾಲಕ್ಕೆ ಸೇರಿದ ಒಂದು ಶಾಸನ ಒಟ್ಟು ೩ ಶಾಸನಗಳಲ್ಲಿ ಚಾರಿತ್ರಿಕ ದಾಖಲೆಗಳಿವೆ.

ಶಾಸನಗಳಲ್ಲಿ ಚಾರಿತ್ರಿಕ ದಾಖಲೆಗಳು

ಕ್ರಿ.ಶ. ೧೧೨೩ರ ಡಿಸೆಂಬರ್ ೨೫ರಂದು ಹೊರಡಿಸಿದ ಹಾ-೭೬ನೆಯ ಶಾಸನವು ಹೊಯ್ಸಳ ವಿಷ್ಣುವರ್ಧನನ ತಮ್ಮ ಉದಯಾದಿತ್ಯದೇವ ಕೆಲ್ಲವತ್ತಿಯಲ್ಲಿ ಮರಣ ಹೊಂದಿದ ವಿಷಯ ತಿಳಿಸುತ್ತದೆ. ಕಾವೇರಿ ನದಿಯ ತೀರದಲ್ಲಿ ಬೀಡುಬಿಟ್ಟಿದ್ದ ವಿಷ್ಣುವರ್ಧನನು ನೀರ್ಗುಂದ ನಾಡಿಗೆ ಸೇರಿದ ಕೆಲ್ಲವತ್ತಿಯನ್ನು ಅಗ್ರಹಾರವನ್ನಾಗಿ ಮಾರ್ಪಡಿಸಿ ೧೮ ಮಾತ್ರಗಳಾಗಿ ಅದನ್ನು ವಿಂಗಡಿಸಿ ಪರೋಕ್ಷವಿನಯದ ಒಂದು ಅಂಗವಾಗಿ ದಾನವಿತ್ತನೆಂದು ಅದು ಹೇಳುತ್ತದೆ. ಶಾಸನದಲ್ಲಿ ಉದಯಾದಿತ್ಯನ ಆಶ್ರಿತ ಬ್ರಾಹ್ಮಣ (ಪ್ರತಿಗಹಿಗಳನ್ನು)ರೆಂದು ವರ್ಣಿಸಿರುವುದು ಮಹತ್ವವಾದ ಅಂಶವಾಗಿದೆ. ೧೮ರಲ್ಲಿ ೨ ವೃತ್ತಿಗಳು ಅತ ಎಂದರೆ ಅರಸ ಅಥವಾ ಉದಯಾದಿತ್ಯನು (ಪ್ರತಿಷ್ಠೆ ಮಾಡಿಸಿದ ಜನಾರ್ಧನ ದೇವಾಲಯಕ್ಕೆ ಸಂದವು ಉಯ್ಯಕೊಂಡ ದೇವರ ಲೋಹದ ಪ್ರತಿಮೆಗೆ ಮಾಡಬೇಕಾದ ನೈವೇದ್ಯವನ್ನು ಈ ಶಾಸನ ಉಲ್ಲೇಖಿಸುತ್ತದೆ.

ಜನಾರ್ಧನ ದೇವಾಲಯದಲ್ಲಿನ ಲೋಹದ ಪ್ರತಿಮೆ ಇದು ಸ್ಪಷ್ಟವಾಗಿ ಉತ್ಸವಮೂರ್ತಿ ನೈವೇದ್ಯವಾಗಿಯೇ ನಿರ್ದಿಷ್ಟವಾಗಿ ದಾನ ನೀಡಿದ ಅಪರೂಪದ ಉದಾಹರಣೆ ಇದು. ಬ್ರಾಹ್ಮಣರು ನವ್ಯ ತೋಟಗಳಲ್ಲಿ ದಾನವಿತ್ತರೆಂದು ಹೇಳಿವೆ. ಇವುಗಳಲ್ಲಿ ಒಂದರ ಹೆಸರು ತೋರಣರು (ಹೂವಿನ ತೋಟ), ಇನ್ನೊಂದರ ಹೆಸರು ಅರಟ್ಯಮಿಕ್ಕಿ, ನೈವೇದ್ಯಕ್ಕೆ ನಿತ್ಯಪಡಿಸಿದ ನಿಗದಿಗೊಳಿಸಿದ ಮೊತ್ತವನ್ನು-ಸಮೃದ್ಧ ಮತ್ತು ಅಲ್ಪ ಬೆಳೆಗಳನ್ನು ಪರಿಗಣಿಸಿ ಅದಕ್ಕೆ ಅನುಗುಣ ಪ್ರಮಾಣದಲ್ಲಿ ಅಕ್ಕಿ ಪಡಿದುಣ ನೀರರೆಗೈದುದು, ಇದು ಹೊಯ್ಸಳ ವಿಷ್ಣುವರ್ಧನನಿಗೆ ಪ್ರಜೆಗಳ ಬಗ್ಗೆ ಅನುಕಂಪ, ನಿತ್ಯಾ ಪೂಜಿಸಿ ೩ ಬಳ್ಳಕ್ಕಿ ನೈವೇದ್ಯಕ್ಕೆ ದೇವರ ಪೂಜಾರಿಗೆ ೩ ಗದ್ಯಾಣ, ಪರಿಕರಣೆ ೨ ಗದ್ಯಾಣ-ನಂದನ ವನದಾತಗೆ ಎರಡು ಗದ್ಯಾಣ ಗಜವಾಹಿದ ಕಾಹಿನವಂಗೆ ಐದು ಪಣ ಎಂದು ಉಲ್ಲೇಖಿಸಿದೆ.

ಕೆಲ್ಲವತ್ತಿ ಗ್ರಾಮದ ಪಕ್ಕದಲ್ಲಿ ಇರುವ ಕುದುರೆಗುಂಡಿ ಹಾ-೭೯ನೇ ಶಾಸನದಲ್ಲಿ ಅಶ್ವದ ಮತ್ತು ಆನೆ ಸುಂಕದ ತೆರಿಗೆಯನ್ನು ವಿಜಯನಗರ ಅರಮನೆಗೆ ತೆರಿಗೆಯಾಗಿ ನೀಡಲಾಗುತ್ತಿತ್ತೆಂದು ತಿಳಿಸಲಾಗಿದೆ. ಹಾಗೇಯೆ ಕೆಲ್ಲವತ್ತಿಯಲ್ಲಿ ಆನೆಗಳನ್ನು ಸಾಕುತ್ತಿದ್ದರೆಂಬುದಕ್ಕೆ ಈ ಶಾಸನ ಸ್ಪಷ್ಟೀಕರಿಸುತ್ತವೆ. ಸುತ್ತಮುತ್ತ ದಟ್ಟವಾದ ಕಾಡುಗಳಿದ್ದು ಕೆಲ್ಲವತ್ತಿ ಗ್ರಾಮ ಹೊಯ್ಸಳರ ಕಾಲದಲ್ಲಿ ಜಾವಗಲ್ ನಾಡು, ಸಿಗೇನಾಡು, ನೀರಗುಂದ ನಾಡು, ಹಾಸನ ಸೀಮೆ ಇವೆಲ್ಲಾ ನಾಡುಗಳ ಕೇಂದ್ರ ಭಾಗದಲ್ಲಿದ್ದು ಒಳ್ಳೆಯ ಹವಾಗುಣಕ್ಕೆ ಹಾಗೂ ಚಾರಿತ್ರಿಕ ದಾಖಲೆಗಳಿಗೆ ಮಹತ್ವ ಪಡೆದಿದೆ.

* ಉಪನ್ಯಾಸಕರು, ಪ್ರಾಚ್ಯ ಸಂಶೋಧಕರು, ಜೆ.ಎಸ್.ಕೆ.ಪಿ.ಯು. ಕಾಲೇಜು, ಅರಸೀಕೆರೆ



ವೀರಗಲ್ಲು



ಅಲ್ಲಾಳನಾಥ

ದೇಶವಣಿ ಶಾಸನದಲ್ಲಿ ಹೊಯ್ಸಳರ ಕಾಲದಲ್ಲಿ ಆನೆಗಳ ಕಾಯಿಲೆಯನ್ನು ವಾಸಿ ಮಾಡಲು ಕೇರಳದಿಂದ ಮಲೆಯಾಳಿ ವೈದ್ಯರನ್ನು ಕರೆಸಿದ್ದ ಬಗ್ಗೆ ಎಫಿಗ್ರಾಫಿಯ ಕರ್ನಾಟಕ ಅರಸೀಕೆರೆ ಸಂಪುಟ ಹಾಗೂ ಇತಿಹಾಸ ದರ್ಶನದಲ್ಲಿ ಉಲ್ಲೇಖಿಸಲಾಗಿದೆ.

೩ನೇ ನರಸಿಂಹನ ಕಾಲಕ್ಕೆ ಸೇರಬಹುದಾದ ಕ್ರಿ.ಶ. ೧೨೬೭ (ಹಾ೭೫): ಈ ಶಾಸನದಲ್ಲಿ ದೇವಣ್ಣದವರು ಲಕ್ಷ್ಮೀನಾರಾಯಣ ದೇವಾಲಯದಲ್ಲಿ ಅಲ್ಲಾಳಪೆರುಮಾಳ್ ದೇವರ ಅರ್ಚನೆಗಾಗಿ ಮತ್ತು ಅಮೃತಪಡಿಗೆ ದಾನ ತಿಳಿಸಿದೆ. ಇಲ್ಲಿಯ ಸ್ಥಳೀಯರು ಈ ದೇವಾಲಯವನ್ನು ಸೂರ್ಯ ನಾರಾಯಣ ದೇವಾಲಯವೆಂದು ಕರೆಯುತ್ತಾರೆ. ಅದು ಶಿಥಿಲವಾಗುತ್ತಿದೆ.

೧೬ನೇ ಶತಮಾನಕ್ಕೆ ಸೇರಿದ ಹಾ೭೭ಈ ಶಾಸನವು ಶ್ರೀರಂಗರಾಯನ ಕಾಲಕ್ಕೆ ಸೇರಿದ್ದು ಸಾಲಗಾಮೆ ಸೀಮೆಗೆ ಸೇರಿದ ಕೆಲ್ಲವತ್ತಿ ಗ್ರಾಮಕ್ಕೆ ಬಯಪ್ಪನಾಯಕನ ಮಗ ಕೃಷ್ಣಪ್ಪ ನಾಯಕನು ಬೇಲೂರು ನಾಡ ಅಧಿಪತಿ ಆಗಿದ್ದಾಗ ಕೆಲ್ಲವತ್ತಿ ಗ್ರಾಮವನ್ನು ಅಮರ ಮಾಗಣೆಯಾಗಿ ಪಾಲಿಸಿದರೆಂದು ಭೂಮಿಯನ್ನು ದಾನ ನೀಡಿದ್ದಾನೆಂದು ತಿಳಿಸುತ್ತದೆ.

ಕೆಲ್ಲವತ್ತಿ ಗ್ರಾಮದಲ್ಲಿಯ ದೇವಾಲಯಗಳು

೧. ಲಕ್ಷ್ಮೀನರಸಿಂಹ/ಅಲ್ಲಾಳ ಪೆರುಮಾಳ್, ೨. ತಿರುಮಲ ದೇವಾಲಯ – ಶಿಥಿಲಗೊಂಡಿದೆ, ೩. ಜನಾರ್ಧನ ದೇವಾಲಯ, ೪. ಸೋಮೇಶ್ವರ ದೇವಾಲಯ, ೫. ಮಲ್ಲಿಕಾರ್ಜುನಸ್ವಾಮಿ ದೇವಾಲಯ, ೬. ನವಶೋಧಿತ ವೀರಗಲ್ಲು.

ಲಕ್ಷ್ಮೀನರಸಿಂಹ/ ಅಲ್ಲಾಳ ಪೆರಮಾಳ್ ದೇವಾಲಯ: ಸ್ಥಳೀಕರು ಇದನ್ನು ಸೂರ್ಯನಾರಾಯಣ ದೇವಾಲಯ ವೆಂದು ಕರೆಯುತ್ತಾರೆ. ೧೨೬೭ರ ಕಾಲಕ್ಕೆ ಸೇರಿದ ಈ ದೇವಾಲಯದಲ್ಲಿ ಗರ್ಭಗೃಹವಿದ್ದು, ಅದರ ಒಳಗಡೆ ಅಲ್ಲಾಳನಾಥನ ಶಿಲ್ಪವಿದೆ. ಈ ಶಿಲ್ಪವು ಸುಮಾರು ೨ ಅಡಿ ಎತ್ತರದ ಪದ್ಮಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿದೆ. ಈ ಅಲ್ಲಾಳನಾಥ ಶಿಲ್ಪವು ಹೊಯ್ಸಳರ ಕಾಲದ ಶಿಲ್ಪವಾದರೂ ಅಲ್ಪಮಟ್ಟಿಗೆ ಕಂಚಿಯ ಶಿಲ್ಪವನ್ನು ಅನುಸರಿಸಿ ರೂಪಿಸಿರು ವಂತಿದೆ. ಈ ಶಿಲ್ಪದ ಶಿರದಲ್ಲಿ ಎತ್ತರದ ಕಿರೀಟ ಮುಕುಟವಿದ್ದು ಕಿವಿಗಳಲ್ಲಿ ಮಕರಕುಂಡಲಗಳಿವೆ. ಚತುರ್ಭುಜಧಾರಿಯಾದ ಶಿಲ್ಪದ ಮೇಲಿನ ಬಲಗೈಯಲ್ಲಿ ಚಕ್ರವನ್ನು ಎಡಗೈಯಲ್ಲಿ ಶಂಖವನ್ನು ಬಿಡಿಸಿದೆ. ಬಲಗೈ ವರದಹಸ್ತವಾಗಿದ್ದು ಹೆಬ್ಬರಳಿ ಗೊರದಿಕೊಂಡಂತಿದ್ದು ಚಿಕ್ಕದಾದ ಪದ್ಮವನ್ನು ಬಿಡಿಸಿದೆ. ಮುಂದಿನ ಎಡಗೈ ಗದೆಯನ್ನು ಆಧರಿಸಿದೆ. ಕರ್ನಾಟಕದ ಹಲವಾರು ಊರುಗಳಲ್ಲಿ ಅಲ್ಲಾಳನಾಥನ ದೇವಾಲಯಗಳನ್ನು ಸ್ಥಾಪಿಸಿದ್ದಾರೆ. ಇದೇ ಊರಿನ ಪಕ್ಕದಲ್ಲಿರುವ ಕೊಂಡಜ್ಜಿಯಲ್ಲಿ ಅಲ್ಲಾಳನಾಥನ ಶಿಲ್ಪವಿದೆ.



ಲಕ್ಷ್ಮೀನರಸಿಂಹ ದೇವಾಲಯ

ದೇವಾಲಯದ ಹೊರಭಾಗ ಹೊಯ್ಸಳರ ಕಲಾ ಶೈಲಿಯ ಲಕ್ಷಣಗಳನ್ನು ಒಳಗೊಂಡಿದ್ದು, ಲತಾಪಟ್ಟಿಕೆಗಳಿವೆ. ಈ ದೇವಾಲಯದ ಪ್ರವೇಶದ್ವಾರ ಪಶ್ಚಿಮಕ್ಕಿದ್ದು ಇದರ ಎಡಭಾಗದಲ್ಲಿ ಶಾಸನವಿದೆ.

ತಿರುಮಲ ನಾರಾಯಣ ದೇವಾಲಯ: ಹೊಯ್ಸಳ ವಿಷ್ಣುವರ್ಧನನು ತನ್ನ ಸಹೋದರ ಉದಯಾದಿತ್ಯನಿಗಾಗಿ ನಿರ್ಮಿಸಿದ ಈ ತಿರುಮಲ ನಾರಾಯಣ ದೇವಾಲಯ ಪೂರ್ವಕ್ಕಿದ್ದು ಗರ್ಭಗೃಹದಲ್ಲಿ ತಿರುಮಲನ ವಿಗ್ರಹವಿತ್ತು. ಒಂದು ವರ್ಷದ ಹಿಂದೆ ಈ ವಿಗ್ರಹ ಕಳುವಾಗಿದೆ. ಗರ್ಭಗೃಹದ ಎದುರು ಗರುಡುಗಂಭವಿದೆ. ಈ ಕಂಬದ ಕೆಳಭಾಗದಲ್ಲಿ ದಕ್ಷಿಣಕ್ಕೆ ಹನುಮಂತನ ಶಿಲ್ಪವನ್ನು ಕೆತ್ತಲಾಗಿದೆ. ಮುಂಭಾಗದಲ್ಲಿ ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನವಿದೆ. ಈ ದೇವರ ಅರ್ಚನೆಗಾಗಿ ಸಾಕಷ್ಟು ದಾನದತ್ತಿಗಳನ್ನು ನೀಡಿದ ಬಗ್ಗೆ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ನವಶೋಧಿತ ವೀರಗಲ್ಲು : ಗ್ರಾಮಸ್ಥರ ನೆರವಿನಿಂದ ತಿರುಮಲ ದೇವಾಲಯದ ಆವರಣವನ್ನು ಸ್ವಚ್ಛ ಮಾಡುವಾಗ ಬೋರಲಾಗಿ ಬಿದ್ದಿದ್ದ ಏಕಶಿಲೆಯಲ್ಲಿ ಕೆತ್ತಲ್ಪಟ್ಟಿರುವ ವೀರಗಲ್ಲು ಪತ್ತೆಯಾಗಿದೆ. ಸದ್ಯಕ್ಕೆ ಇದನ್ನು ಸಂರಕ್ಷಿಸಿ ನಿಲ್ಲಿಸಲಾಗಿದೆ.

ಜನಾರ್ದನ ದೇವಾಲಯ : ಈ ಹಿಂದೆ ಹಾಳಾಗಿದ್ದು ಇದರ ಅವಶೇಷಗಳು ಮಾತ್ರ ದೊರಕಿವೆ. ಉಳಿದ ಸೋಮೇಶ್ವರ ದೇವಾಲಯ ಸುಮಾರು ೭೦೦ ವರ್ಷಗಳಷ್ಟು ಹಿಂದಿನದ್ದು, ಹಾಗೆಯೇ ಇಲ್ಲಿರುವ ಮತ್ತೊಂದು ಮಲ್ಲಿಕಾರ್ಜುನ ದೇವಾಲಯವು ಈ ಊರಿನಲ್ಲಿದ್ದು ಅನೇಕ ಸ್ಮಾರಕಗಳನ್ನೊಳಗೊಂಡಿದೆ.

ಹೀಗೆಯೇ ಮೇಲೆ ವಿವರಿಸಿದ ಚಾರಿತ್ರಿಕ ದಾಖಲೆಗಳಲ್ಲದೆ ಹೊಸದಾಗಿ ಪತ್ತೆಯಾದ ವೀರಗಲ್ಲನ್ನು ಕೂಡ ಸಂಶೋಧನ ಲೇಖನದಲ್ಲಿ ಸೇರಿಸಲಾಗಿದೆ. ಶಿಥಿಲವಾಗಿರುವ ದೇವಾಲಯಗಳ ಸಂರಕ್ಷಣೆಗೆ ರಾಜ್ಯ ಹಾಗೂ ಕೇಂದ್ರ ಪುರಾತತ್ವ ಇಲಾಖೆ ಗಮನಹರಿಸಬೇಕಾಗಿದೆ.

ಆಧಾರಸೂಚಿ

೧. ಇತಿಹಾಸ ದರ್ಶನ, ಸಂಖ್ಯೆ ೨೬ ಕರ್ನಾಟಕದಲ್ಲಿ ಅಲ್ಲಾಳನಾಥನ ಆರಾಧನೆ, ಡಾ. ವಸಂತಲಕ್ಷ್ಮಿ, ಪುಟ ೬೫.

೨. ಎ.ಕೆ. ಶೇಷಾದ್ರಿ ಕಂಚೀಪುರಂ ಆಂಡ್ ಇಟ್ಸ್ ಟೆಂಪಲ್ಸ್, ತಿರುಪತಿ ೨೦೦೩.

೨೮

ಅರಸೀಕೆರೆ ತಾಲ್ಲೂಕಿನ ವೀರಗಲ್ಲುಗಳು-ಒಂದು ಐತಿಹಾಸಿಕ ವಿಶ್ಲೇಷಣೆ

ಪ್ರವೀಣ್ ಬೆಳ್ತಂಗಡಿ* ಡಾ. ಹನುಮನಾಯಕ**

ಪ್ರಾದೇಶಿಕ ಇತಿಹಾಸದ ಅಧ್ಯಯನದಲ್ಲಿ ನಮಗೆ ನೆರವಾಗುವಂತಹ ಆಕರಗಳಲ್ಲಿ ವೀರಗಲ್ಲುಗಳು ಕೂಡಾ ಪ್ರಮುಖವಾಗಿವೆ. ಯಾವುದೇ ಪ್ರದೇಶ ಇಲ್ಲವೇ ಗ್ರಾಮವೊಂದರ ವೀರತ್ವ, ಶೌರ್ಯ, ಸಾಹಸ ಹಾಗೂ ತ್ಯಾಗ ಬಲಿದಾನದ ಪ್ರತೀಕಗಳಂತೆ ಇವುಗಳು ಕಂಡುಬಂದಿವೆ. ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಬಗೆಯ ಕಲ್ಲುಗಳಲ್ಲಿ ಮೂಡಿ ಬಂದಿರುವ ವೀರಗಲ್ಲುಗಳು ಅಧ್ಯಯನ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆದುಕೊಂಡಿವೆ. ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಅನೇಕ ಪ್ರದೇಶಗಳಲ್ಲಿ ತುರುಕಾಳಗ, ಹುಲಿಯೊಂದಿಗೆ ವೀರನ ಕಾಳಗ, ಹಂದಿಬೇಟೆ, ಅಶ್ವಪಡೆ, ಗಜಪಡೆ, ಕೈಗತ್ತಿ, ಖಡ್ಗ, ಬಿಲ್ಲು-ಬಾಣ, ಈಟಿ ಇವೇ ಮುಂತಾದವುಗಳ ಬಳಕೆಯೊಂದಿಗೆ ವೀರರ ಹೋರಾಟದ ಸನ್ನಿವೇಶಗಳುಳ್ಳ ವಿವಿಧ ಬಗೆಯ ವೀರಗಲ್ಲುಗಳು ನಮಗೆ ಕ್ಷೇತ್ರಕಾರ್ಯದಲ್ಲಿ ಕಂಡುಬಂದಿವೆ.

ಪ್ರದೇಶವೊಂದರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ತಿಳಿಯುವಲ್ಲಿ ಈ ಪ್ರದೇಶಗಳಲ್ಲಿ ಕಂಡುಬಂದಿರುವ ವೀರಗಲ್ಲುಗಳು ಹೇಗೆ ಸಹಾಯಕವಾಗಿವೆ ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಅರಸೀಕೆರೆ ತಾಲೂಕಿನಾದ್ಯಂತ ಕ್ಷೇತ್ರಕಾರ್ಯ ಕೈಗೊಂಡಾಗ ಸುಮಾರು ೨೦ಕ್ಕೂ ಅಧಿಕ ಸ್ಥಳಗಳಲ್ಲಿ ವೀರಗಲ್ಲುಗಳು ಹೊಸದಾಗಿ ಕಂಡುಬಂದಿದ್ದು, ಅವುಗಳಲ್ಲಿ ಪ್ರಮುಖವಾಗಿ ಮೂತಿಕೆರೆ, ನೀರ್ಗುಂದ, ಗುಂಡುಕಾನಹಳ್ಳಿ, ತೊಂಡಿಗೆನಹಳ್ಳಿ, ಸಾತಂಗೆರೆ, ತಳಲೂರು, ಕೆಂಕೆರೆ, ಮಾವಿನಕೆರೆ, ಸೈದರಹಳ್ಳಿ, ಹೊಸಹಳ್ಳಿ, ವಾಲೇಹಳ್ಳಿ, ಹಿರಿಯಾಳು, ಸೂಳೆಕೆರೆ, ಕೆಲ್ಲಂಗೆರೆ, ಹುಲ್ಲೇಕೆರೆ, ಆಲದಹಳ್ಳಿ, ದೊಡ್ಡಯರಗನಾಳು, ಮುಂಜೇನಹಳ್ಳಿ ಹಾಗೂ ಅಪ್ಪೇನಹಳ್ಳಿಯಲ್ಲಿ ಕಂಡುಬಂದಿರುವ ವೀರಗಲ್ಲುಗಳು ವಿಶೇಷವಾಗಿವೆ.

ಮೂತಿಕೆರೆಯಲ್ಲಿ ಪಾಳು ದೇವಾಲಯವೊಂದರ ಮುಂಭಾಗದಲ್ಲಿ ಕಂಡುಬಂದಿರುವ ವೀರಗಲ್ಲಿನಲ್ಲಿ ಮೂರು ಪಟ್ಟಿಕೆಗಳಿದ್ದು, ತಳಪಟ್ಟಿಕೆಯಲ್ಲಿ ವೀರನೋರ್ವ ತನ್ನ ಎದುರಾಳಿಯೊಂದಿಗೆ ಹೋರಾಡುತ್ತಿರುವ ಶಿಲ್ಪವನ್ನು ಗಮನಿಸಬಹುದಾಗಿದೆ. ಮಧ್ಯದ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಾರೋಹಣಗೈಯ್ಯುತ್ತಿರುವ ಶಿಲ್ಪವಿದೆ. ಮೇಲಿನ ಪಟ್ಟಿಕೆಯಲ್ಲಿ ಶಿವಲಿಂಗ, ನಂದಿ, ಸೂರ್ಯ ಮತ್ತು ಚಂದ್ರರ ಶಿಲ್ಪಗಳಿವೆ. ಮುಖ್ಯವಾಗಿ ಈ ವೀರಗಲ್ಲು ಶಿಲ್ಪದಲ್ಲಿ ವೀರನು ಬಿಲ್ಲುಬಾಣಗಳೊಂದಿಗೆ ಎದುರಾಳಿಯೊಂದಿಗೆ ಹೋರಾಟ ಮಾಡುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರಸ್ತುತ ವೀರಗಲ್ಲಿನಲ್ಲಿ ಶಾಸನಗಳು ತ್ರುಟಿತಗೊಂಡಿರುವುದರಿಂದ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ.

ನೀರ್ಗುಂದ ಪ್ರದೇಶದಲ್ಲಿರುವ ವೀರಗಲ್ಲೊಂದರಲ್ಲಿ ಮೂರು ಪಟ್ಟಿಕೆಗಳಿದ್ದು, ಎರಡು ಪಟ್ಟಿಕೆಗಳ ಮಧ್ಯಭಾಗದಲ್ಲಿರುವ ಶಾಸನವು ತ್ರುಟಿತಗೊಂಡ ಸ್ಥಿತಿಯಲ್ಲಿದೆ. ತಳಪಟಿಕೆಯಲ್ಲಿರುವ ಶಿಲ್ಪದಲ್ಲಿ ವೀರನು ತನ್ನ ಸಂಗಡಿಗರೊಂದಿಗೆ ಎದುರಾಳಿ ಅಶ್ವಧಾರಿ ಸೈನಿಕರೊಂದಿಗೆ ಹೋರಾಡುತ್ತಿರುವ ಸನ್ನಿವೇಶವುಳ್ಳ ಶಿಲ್ಪಗಳಿವೆ. ವೀರನ ಹಿಂಭಾಗದಲ್ಲಿ ಗೋವುಗಳ ಶಿಲ್ಪಗಳಿದ್ದು, ಬಹುಶಃ ವೀರನು ತುರುಕಾಳಗದಲ್ಲಿ ಮಡಿದಿರಬಹುದಾಗಿದೆ. ವೀರನ ಎದುರಾಳಿಯು ಅಶ್ವಪಡೆಯೊಂದಿಗೆ ಹೋರಾಟ ಮಾಡುತ್ತಿದ್ದಾಗ್ಯೂ, ವೀರನು ತನ್ನ ಬಿಲ್ವಿದ್ಯೆಯ ಮೂಲಕ ಸೆಣಸಾಟದಲ್ಲಿ ಭಾಗಿಯಾಗಿದ್ದಂತೆ ಭಾಸವಾಗುತ್ತದೆ. ಮಧ್ಯದ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಾರೋಹಣ ಮಾಡುವ ಸನ್ನಿವೇಶವುಳ್ಳ ಶಿಲ್ಪಗಳನ್ನು ಗಮನಿಸಬಹುದಾಗಿದೆ. ಮೇಲಿನ ಪಟ್ಟಿಕೆಯಲ್ಲಿ ಶಿವಲಿಂಗದ ಪೂಜೆ, ನಂದಿ, ಸೂರ್ಯ ಹಾಗೂ ಚಂದ್ರರ ಶಿಲ್ಪಗಳಿರುವುದನ್ನು ಗಮನಿಸಬಹುದಾಗಿದೆ.

ಗುಂಡುಕಾನಹಳ್ಳಿಯಲ್ಲಿರುವ ವೀರಗಲ್ಲೊಂದು ಬಹುಸುಂದರ ಕೆತ್ತನೆಗಳಿಂದ ಕೂಡಿದೆ. ಇದರಲ್ಲಿ ಮೂರು ಪಟ್ಟಿಕೆಗಳಿದ್ದು, ತಳಭಾಗದಲ್ಲಿರುವ ಪಟ್ಟಿಕೆಯಲ್ಲಿ ಒಂದು

* ಇತಿಹಾಸ ಉಪನ್ಯಾಸಕರು, ಶ್ರೀ ಗೋಕರ್ಣನಾಥೇಶ್ವರ ಪದವಿಪೂರ್ವ ಕಾಲೇಜು, ಗಾಂಧಿನಗರ, ಮಂಗಳೂರು, ದಕ್ಷಿಣ ಕನ್ನಡ-೫೭೫೦೦೩.
** ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

ಹಂತದಲ್ಲಿ ಇಬ್ಬರು ಬಿಲ್ವಿದ್ಯೆಯಲ್ಲಿ, ಮತ್ತೀರ್ವರು ಖಡ್ಗ, ಗುರಾಣಿಗಳೊಂದಿಗೆ ಹೋರಾಡುತ್ತಿರುವ ಸನ್ನಿವೇಶದ ಶಿಲ್ಪಗಳಿರುವುದನ್ನು ಗಮನಿಸಬಹುದಾಗಿದೆ. ಇನ್ನೊಂದು ಹಂತದಲ್ಲಿ ವೀರರ ನಡುವಿನ ಅಶ್ವದಳಗಳ ಹೋರಾಟದ ಶಿಲ್ಪಗಳಿರುವುದನ್ನು ಗಮನಿಸಬಹುದಾಗಿದೆ. ವಿಶೇಷವಾಗಿ ಇಲ್ಲಿರುವ ಶಿಲ್ಪವೊಂದರಲ್ಲಿ ವೀರನೋರ್ವ ಅಶ್ವರೂಢ ನಾಗಿದ್ದಲ್ಲದೇ, ತನ್ನ ಕೈಯಲ್ಲಿ ಉದ್ದವಾದ ಈಟಿಯಿಂದ ಎದುರಾಳಿಯನ್ನು ಇರಿದಿರುವುದನ್ನು ಸ್ಪಷ್ಟವಾಗಿ ಗುರುತಿಸ ಬಹುದಾಗಿದೆ. ಈ ಶಿಲ್ಪದ ಮೇಲ್ಭಾಗದಲ್ಲಿರುವ ಶಾಸನವೊಂದು ತೃಟಿತಗೊಂಡಿದೆ. ಎರಡನೆಯ ಪಟ್ಟಿಕೆಯಲ್ಲಿ ಬಹು ಅಲಂಕೃತ ಗೊಂಡಿರುವ ವೀರನ ಸ್ವರ್ಗಾರೋಹಣ ಸನ್ನಿವೇಶವುಳ್ಳ ಶಿಲ್ಪಗಳಿವೆ. ಮೇಲಿನ ಪಟ್ಟಿಕೆಯಲ್ಲಿ ಶಿವಲಿಂಗಾರಾಧನೆ, ನಂದಿವಿಗ್ರಹ, ಪೂಜಾಕೈಂಕರ್ಯದಲ್ಲಿ ತೊಡಗಿರುವ ಭಕ್ತವೃಂದವನ್ನು ಬಹಳ ಸುಂದರವಾಗಿ ಕೆತ್ತನೆ ಮಾಡಿರುವುದು ಕಂಡುಬಂದಿದೆ.

ಸೈದರಹಳ್ಳಿಯ ಕೃಷಿ ಜಮೀನಿನಲ್ಲಿರುವ ವೀರಗಲ್ಲಿನಲ್ಲಿ ಎರಡು ಪಟ್ಟಿಕೆಗಳಿವೆ. ತಳಭಾಗದ ಪಟ್ಟಿಕೆಯಲ್ಲಿ ಧ್ಯಾನಭಂಗಿ ಯಲ್ಲಿರುವ ಕುಳಿತಿರುವ ವ್ಯಕ್ತಿಯೋರ್ವನ ಶಿರಚ್ಛೇದ ಗೊಂಡಿರುವುದು, ಪಕ್ಕದಲ್ಲಿ ಇನ್ನೋರ್ವ ವ್ಯಕ್ತಿ ನಿಂತಿರುವ ಶಿಲ್ಪಗಳಿವೆ. ಎರಡನೆಯ ಪಟ್ಟಿಕೆಯಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಾರೋಹಣಕ್ಕೆ ಕರೆದೊಯ್ಯುವ ಸನ್ನಿವೇಶವುಳ್ಳ ಶಿಲ್ಪವಿದೆ. ಈ ವೀರಗಲ್ಲು ಬಳಪದಕಲ್ಲಿಗೆ ಬದಲಾಗಿ ಬಂಡೆಗಲ್ಲಿನಿಂದ ರಚಿತಗೊಂಡಿರುವುದನ್ನು ಗಮನಿಸಬಹುದಾಗಿದೆ. ಹೊಸಹಳ್ಳಿ ಯಲ್ಲಿರುವ ವೀರಗಲ್ಲೊಂದರಲ್ಲಿ ಅಶ್ವಧಾರಿ ವೀರನೋರ್ವ ತನ್ನ ಕೈಯಲ್ಲಿ ನೀಳವಾದ ಖಡ್ಗವೊಂದನ್ನು ಹಿಡಿದಿದ್ದು ಮುಂಭಾಗದಲ್ಲಿ ಸೇವಕನೋರ್ವ ಕುದುರೆಯನ್ನು ಮುನ್ನಡೆ ಸುವ ರೀತಿಯಲ್ಲಿ ಹಾಗೂ ಹಿಂಭಾಗದಲ್ಲಿ ಮತ್ತೋರ್ವ ಸೇವಕ ಛತ್ರಿಯನ್ನು ವೀರನಿಗೆ ಹಿಡಿದಿರುವ ಭಂಗಿಯಲ್ಲಿರುವ ಶಿಲ್ಪಗಳಿರುವುದನ್ನು ಸ್ಪಷ್ಟವಾಗಿ ಗಮನಿಸಬಹುದಾಗಿದೆ.

ವಾಲೇಹಳ್ಳಿಯಲ್ಲಿರುವ[7] ವೀರಗಲ್ಲು ನಾಲ್ಕು ಪಟ್ಟಿಕೆ ಗಳಿಂದ ಕೂಡಿದೆ. ತಳಭಾಗದ ಪಟ್ಟಿಕೆಯಲ್ಲಿ ಬಿಲ್ಲುಬಾಣ ಗಳೊಂದಿಗೆ ಎದುರಾಳಿಯೊಂದಿಗೆ ಹೋರಾಡುತ್ತಿರುವ ಸನ್ನಿವೇಶವುಳ್ಳ ಶಿಲ್ಪಗಳಿವೆ. ಇದು ತುರುಕಾಳಗವಾಗಿದ್ದು, ಎರಡನೆಯ ಪಟ್ಟಿಕೆಯಲ್ಲಿ ಗೋವುಗಳು, ವೀರರು ಬಿಲ್ಲುಬಾಣ ಗಳೊಂದಿಗೆ ಎದುರಾಳಿ ಪಡೆಯೊಂದಿಗೆ ಹೋರಾಟ ನಡೆಸುವ ಸನ್ನಿವೇಶವುಳ್ಳ ಶಿಲ್ಪಗಳಿವೆ. ಮೂರನೆಯ ಪಟ್ಟಿಕೆಯಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಾರೋಹಣಗೈಯ್ಯುವ ಹಾಗೂ ಮೇಲ್ಭಾಗದ ಪಟ್ಟಿಕೆಯಲ್ಲಿ ಶಿವಲಿಂಗಾರಾಧನೆ, ಸೂರ್ಯ, ಚಂದ್ರ, ಹಾಗೂ ನಂದಿಯ ಶಿಲ್ಪಗಳಿವೆ. ಈ ವೀರಗಲ್ಲಿನ ಮೂರು ಪಟ್ಟಿಕೆಗಳ ಮೇಲ್ಭಾಗದಲ್ಲಿ ತೃಟಿತಗೊಂಡ ಶಾಸನ ಗಳಿರುವುದನ್ನು ಗಮನಿಸಬಹುದಾಗಿದೆ.

ಓರಿಯಾಳುವಿನಲ್ಲಿರುವ ವೀರಗಲ್ಲು ಬಳಪದಕಲ್ಲಿಗೆ ಬದಲಾಗಿ ಬಂಡೆಗಲ್ಲಿನಿಂದ ರಚಿಸಲ್ಪಟ್ಟಿದೆ. ಇದರಲ್ಲಿ ಮೂರು ಪಟ್ಟಿಕೆಗಳಿದ್ದು, ತಳಭಾಗದ ಪಟ್ಟಿಕೆಯಲ್ಲಿ ತುರುಕಾಳಗದ ಸನ್ನಿವೇಶವುಳ್ಳ ಶಿಲ್ಪಗಳಿವೆ. ತುರುಗಳನ್ನು ಹಿಂದಕ್ಕೆ ಪಡೆಯುವಲ್ಲಿ ಎದುರಾಳಿಯೊಂದಿಗೆ ವೀರನ ಕಾದಾಟ ಮಾಡುತ್ತಾ, ತನ್ನ ಎಡಗೈಯಿಂದ ಎದುರಾಳಿಯ ಕೈಯನ್ನು ತಡೆದು, ತನ್ನ ಬಲಗೈಯಲ್ಲಿರುವ ಆಯುಧದಿಂದ ಆತನೆದೆಗೆ ಇರಿಯುವ ಸನ್ನಿವೇಶವುಳ್ಳ ಶಿಲ್ಪವಿದೆ. ಎರಡನೆಯ ಪಟ್ಟಿಕೆಯಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದರ ಹಾಗೂ ಮೂರನೆಯ ಪಟ್ಟಿಕೆಯಲ್ಲಿ ಧ್ಯಾನಾಸಕ್ತ ಮೂವರು ವ್ಯಕ್ತಿಗಳ ಶಿಲ್ಪಗಳಿರುವುದನ್ನು ಗಮನಿಸಬಹುದಾಗಿದೆ. ಇವರ ಮೇಲ್ಭಾಗ ಹಾಗೂ ಕೆಳಭಾಗದಲ್ಲಿ ಶಾಸನಗಳಿವೆ.

ಸೂಳೆಕೆರೆ ಗ್ರಾಮದ ಕರುಗಲ್ಲೊಂದರ ಸಮೀಪದಲ್ಲಿ ವೀರಗಲ್ಲೊಂದನ್ನು ನಿಲ್ಲಿಸಲಾಗಿದೆ. ಬಹುಶಃ ಈ ವೀರಗಲ್ಲು ಊರಿನ ಜಮೀನಿನಲ್ಲಿ ಹುದುಗಿಹೋಗಿದ್ದು, ಕೃಷಿ ಕಾರ್ಯ ದಲ್ಲಿ ಗೋಚರಿಸಿದೆ. ಹಾಗಾಗಿ ಈ ಊರಿನ ಜನತೆ ಇದನ್ನು ಕರುಗಲ್ಲಿನ ಪಕ್ಕದಲ್ಲಿ ನಿಲ್ಲಿಸಿದ್ದಾರೆ. ಇದರಲ್ಲಿ ಎರಡು ಪಟ್ಟಿಕೆ ಗಳಿವೆ. ತಳಭಾಗದ ಪಟ್ಟಿಕೆಯಲ್ಲಿ ವೀರನೋರ್ವ ಪ್ರಾಣಿ ಯೊಂದಿಗೆ ಹೋರಾಡುತ್ತಿರುವ ಸನ್ನಿವೇಶವುಳ್ಳ ಶಿಲ್ಪವಿದೆ. ಇಲ್ಲಿ ಪ್ರಾಣಿಯ ಶಿಲ್ಪ ಅಸ್ಪಷ್ಟರೂಪದಲ್ಲಿದೆ. ವೀರನು ತನ್ನ ಬಲಗೈಯಲ್ಲಿ ಕತ್ತಿಯಿಂದ ಪ್ರಾಣಿಯ ಎದೆಯ ಭಾಗಕ್ಕೆ ಇರಿಯುತ್ತಿರುವ, ಆ ಪ್ರಾಣಿಯು ಆತನ ಎಡಗೈಯನ್ನು ಕಚ್ಚಿರುವ ಸನ್ನಿವೇಶವುಳ್ಳ ಶಿಲ್ಪಗಳಿವೆ. ಮೇಲ್ಭಾಗದ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಾರೋಹಣಗೈಯ್ಯುವ ಭಂಗಿಯಲ್ಲಿರುವ ಶಿಲ್ಪವಿದೆ.

ಕೆಲ್ಲಂಗೆರೆಯಲ್ಲಿರುವ ವೀರಗಲ್ಲೊಂದರಲ್ಲಿ ಅಶ್ವಾರೋಹಿ ವೀರನು ತನ್ನ ಕೈಯಲ್ಲಿ ಈಟಿಯೊಂದಿಗೆ ಹೋರಾಟಕ್ಕೆ ಸನ್ನದ್ಧನಾಗಿದ್ದು, ಹಿಂಭಾಗದಲ್ಲಿ ಛತ್ರಧಾರಿಯೋರ್ವನಿರುವ ಶಿಲ್ಪವನ್ನು ಹೊಂದಿದೆ. ಇದೇ ರೀತಿಯ ಮತ್ತೊಂದು ವೀರಗಲ್ಲು ದೊಡ್ಡಯರಗನಾಳು ಪ್ರದೇಶದಲ್ಲಿ ಕಂಡುಬಂದಿದೆ. ಸೂರ್ಯ, ಚಂದ್ರರ ಶಿಲ್ಪಗಳೊಂದಿಗೆ ಎಡಭಾಗದಲ್ಲಿ ಎತ್ತರವಾದ ಛತ್ರವನ್ನು ಹಿಡಿದಿರುವ ವ್ಯಕ್ತಿ, ಅಶ್ವಾರೋಹಿ ವೀರ. ವೀರನ ಬಲಗೈಯಲ್ಲಿ ಜೀಸಿದಂತಿರುವ ಖಡ್ಗ, ಮುಂಭಾಗದಲ್ಲಿ ಇನ್ನೋರ್ವ ವ್ಯಕ್ತಿ ಕುದುರೆಯನ್ನು ಹಿಡಿದು ಕೊಂಡಿರುವ ಶಿಲ್ಪಗಳಿರುವುದನ್ನು ನಾವಿಲ್ಲಿ ಗಮನಿಸಬಹು ದಾಗಿದೆ. ಈ ಬಗೆಯ ವೀರ ಸಾಮ್ಯತೆಯಿರುವ ವೀರಗಲ್ಲುಗಳು ಹೊಸಹಳ್ಳಿ, ದೊಡ್ಡಯರಗನಾಳು ಹಾಗೂ ಹುಲ್ಲೇಕೆರೆಗಳಲ್ಲಿ ಕಂಡುಬಂದಿವೆ.

ಮುಂಜೇನಹಳ್ಳಿಯಲ್ಲಿರುವ ಆಂಜನೇಯ ಗುಡಿಯ ಎಡಭಾಗದಲ್ಲಿ ಮರದ ಕೆಳಗೆ ಎರಡು ವೀರಗಲ್ಲುಗಳು ಕಂಡುಬಂದಿವೆ. ಎಡಭಾಗದ ವೀರಗಲ್ಲಿನಲ್ಲಿ ಮೂರು ಹಂತಗಳಿದ್ದು, ತಳಭಾಗದ ಪಟ್ಟಿಕೆಯಲ್ಲಿ ವೀರನು ಬಿಲ್ಲು ಬಾಣ ಸಹಿತನಾಗಿ ಎದುರಾಳಿಯೊಂದಿಗೆ ಹೋರಾಟ ನಡೆಸುತ್ತಿರುವ, ಎದುರಾಳಿಯು ತನ್ನ ಕೈಯಲ್ಲಿ ಖಡ್ಗ, ಗುರಾಣಿ ಹಾಗೂ ಹಿಂಬಾಲಕರೊಂದಿಗೆ ಸೆಣಸಾಟ ನಡೆಸುತ್ತಿರುವ ಸನ್ನಿವೇಶವುಳ್ಳ ಶಿಲ್ಪಗಳಿವೆ. ಎರಡನೆಯ ಪಟ್ಟಿಕೆಯಲ್ಲಿ ವೀರನ ಸ್ವರ್ಗಾರೋಹಣದ ಶಿಲ್ಪ ಹಾಗೂ ಮೂರನೆಯ ಪಟ್ಟಿಕೆಯಲ್ಲಿ ಶಿವಲಿಂಗಾರಾಧನೆಯ ಶಿಲ್ಪಗಳಿರುವುದನ್ನು ಗಮನಿಸಬಹುದು. ಬಲಭಾಗದಲ್ಲಿರುವ ಇನ್ನೊಂದು ವೀರಗಲ್ಲಿನಲ್ಲಿಯೂ ಮೂರು ಹಂತಗಳಿವೆ. ತಳಭಾಗದ ಪಟ್ಟಿಕೆಯಲ್ಲಿ ವೀರನು ಬಿಲ್ಲುಬಾಣ ಆಯುಧಗಳೊಂದಿಗೆ ಸನ್ನದ್ಧನಾಗಿ ಎದುರಾಳಿಯೊಂದಿಗೆ ಹೋರಾಡುವ ಸನ್ನಿವೇಶದ ಶಿಲ್ಪಗಳು, ಇದಕ್ಕೆ ಪ್ರತಿಯಾಗಿ ಎದುರಾಳಿಯು ತನ್ನ ಕೈಯಲ್ಲಿ ಗುರಾಣಿ ಹಾಗೂ ಬಿಲ್ಲು ಬಾಣಗಳೊಂದಿಗೆ ಹೋರಾಟ ನಡೆಸುತ್ತಿರುವ, ಆತನಿಗೆ ಹಿಂಬಾಲಕರು ಸಹಕರಿಸುತ್ತಿರುವ ಹೋರಾಟದ ಸನ್ನಿವೇಶವುಳ್ಳ ಶಿಲ್ಪಗಳು ಗೋಚರಿಸುತ್ತವೆ. ಎರಡನೆಯ ಪಟ್ಟಿಕೆಯಲ್ಲಿ ವೀರನ ಸ್ವರ್ಗಾರೋಹಣದ ಶಿಲ್ಪ, ಹಾಗೂ ಮೂರನೆಯ ಪಟ್ಟಿಕೆಯಲ್ಲಿ ಶಿವಲಿಂಗಾರಾಧನೆಯ ಸನ್ನಿವೇಶವುಳ್ಳ ಶಿಲ್ಪಗಳಿವೆ. ಈ ಎರಡೂ ವೀರಗಲ್ಲುಗಳು ಸಾಮಾನ್ಯವಾಗಿ ಮೇಲ್ನೋಟಕ್ಕೆ ಒಂದೇ ಬಗೆಯ ಶಿಲ್ಪಗಳನ್ನು ಮೂರು ಪಟ್ಟಿಕೆಗಳಲ್ಲಿಯೂ ಹೊಂದಿರುವುದು ವಿಶೇಷವೆನಿಸುತ್ತದೆ.

ಅಪ್ಪೇನಹಳ್ಳಿಯಲ್ಲಿರುವ ವೀರಗಲ್ಲು ಸ್ವಲ್ಪ ವಿಶೇಷವೆನಿಸುತ್ತದೆ. ಈ ವೀರಗಲ್ಲು ಊರಿನ ಬೆಟ್ಟದಲ್ಲಿರುವ ದೇವಾಲಯದ ಪ್ರಾಂಗಣದಲ್ಲಿರುವ ಸಣ್ಣ ಗುಡಿಯೊಳಗೆ ಗೋಚರಿಸುತ್ತದೆ. ಈ ವೀರಗಲ್ಲಿಗೆ ಇಂದಿಗೂ ಈ ಊರಿನ ಜನತೆ ಅರಶಿನ, ಕುಂಕುಮ, ಎಣ್ಣೆ, ಬಣ್ಣ ಹಚ್ಚಿ ಪೂಜೆ ಮಾಡುತ್ತಿದ್ದಾರೆ. ಮೂರು ಹಂತಗಳನ್ನೊಳಗೊಂಡಿರುವ ಈ ವೀರಗಲ್ಲಿನ ತಳಭಾಗದ ಪಟ್ಟಿಕೆಯಲ್ಲಿ ವೀರನು ತನ್ನ ಎದುರಾಳಿಗಳೊಂದಿಗೆ ಕೈಯಲ್ಲಿ ಬಿಲ್ಲು ಬಾಣ ಸಹಿತ ಹೋರಾಟ ಮಾಡುತ್ತಿರುವ ಸನ್ನಿವೇಶದ ಶಿಲ್ಪಗಳು, ಎರಡನೆಯ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಾರೋಹಣಗೈಯ್ಯುವ ಸನ್ನಿವೇಶವುಳ್ಳ ಅತ್ಯಂತ ಶೃಂಗಾರಮಯವಾಗಿ ಕೆತ್ತನೆಯಾಗಿರುವ ಶಿಲ್ಪ, ಮೂರನೆಯ ಪಟ್ಟಿಕೆಯಲ್ಲಿ ಸೂರ್ಯ, ಚಂದ್ರ, ಶಿವಲಿಂಗಾರಾಧನೆ ಹಾಗೂ ನಂದಿಯ ಶಿಲ್ಪಗಳಿರುವುದನ್ನು ಕಾಣಬಹುದಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಅರಸೀಕೆರೆ ತಾಲೂಕಿನಾದ್ಯಂತ ಹೊಸದಾಗಿ ಕಂಡುಬಂದಿರುವ ವೀರಗಲ್ಲುಗಳನ್ನು ಅವಲೋಕಿಸಿದಾಗ ವಿಭಿನ್ನ ಬಗೆಯ ಹಾಗೂ ವಿಶೇಷ ಉಬ್ಬುಶಿಲ್ಪಗಳನ್ನೊಳಗೊಂಡಿರುವ ವೀರಗಲ್ಲುಗಳು ಈ ಪ್ರದೇಶದ ಕುರಿತಾಗಿ ಮಾಹಿತಿಗಳನ್ನು ಹೊರಗೆಡಹುವಲ್ಲಿ ನೆರವಾಗಿವೆ ಎನ್ನಬಹುದು. ಅವುಗಳಲ್ಲಿ ಪ್ರಮುಖವಾಗಿ ಈ ಭಾಗದಲ್ಲಿ ನಡೆದಿರಬಹುದಾದ ತುರುಕಾಳಗಗಳು, ಹಂದಿಬೇಟೆ, ಹುಲಿಬೇಟೆ, ಶಿರಚ್ಛೇದನ, ಗಜಕಾಳಗ ಇವೇ ಮುಂತಾದ ಲಕ್ಷಣಗಳುಳ್ಳ ಅಂಶಗಳು ಗೋಚರಿಸಿವೆ. ಅರಸೀಕೆರೆ ತಾಲೂಕಿನಲ್ಲಿ ಹೊಸದಾಗಿ ಕಂಡುಬಂದಿರುವ ಸೈದರಹಳ್ಳಿಯ ವೀರಗಲ್ಲಿನಲ್ಲಿ ನಿಂತಭಂಗಿಯಲ್ಲಿರುವ ವ್ಯಕ್ತಿಯೋರ್ವನು ಕುಳಿತಿರುವ ವ್ಯಕ್ತಿಯ ಶಿರಚ್ಛೇದನ ಮಾಡಿರುವ ಶಿಲ್ಪದಲ್ಲಿ ಸ್ಪಷ್ಟವಾಗಿ ರುಂಡ ಮತ್ತು ಮುಂಡಗಳು ಪ್ರತ್ಯೇಕಗೊಂಡಿರುವುದನ್ನು ಗಮನಿಸಬಹುದಾಗಿದೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕಂಡುಬಂದಿರುವ ವೀರಗಲ್ಲುಗಳನ್ನು ಸತ್ತ ವ್ಯಕ್ತಿಯ ನೇರ ಸಂಬಂಧಿಗಳು, ಆಳರಸರು, ಅಧಿಕಾರಿವರ್ಗದವರು ಇಲ್ಲವೇ ಸಾರ್ವಜನಿಕರು ವೀರತ್ವದ ಪ್ರತೀಕದ ಸ್ಮಾರಕಗಳಾಗಿ ನೆಟ್ಟಿರುವ ಸಾಧ್ಯತೆಗಳಿವೆ. ಹೊಸದಾಗಿ ಕಂಡುಬಂದಿರುವ ಇಲ್ಲಿನ ವೀರಗಲ್ಲುಗಳು ಶಿವಾಲಯಗಳು, ಆಂಜನೇಯ, ವೀರಭದ್ರ, ಕೃಷಿ ಜಮೀನಿನಲ್ಲಿ, ಕೆರೆಗಳ ಸನಿಹದಲ್ಲಿ, ಊರಬಾಗಿಲ ಮುಂದೆಡೆಗಳಲ್ಲಿ ಕಂಡುಬಂದಿವೆ. ಪ್ರಾದೇಶಿಕ ನೆಲೆಯಲ್ಲಿ ಗಮನಹರಿಸಿದಾಗ ಅರಸೀಕೆರೆಯಲ್ಲಿ ಕಂಡುಬಂದಿರುವ ಹೊಸ ವೀರಗಲ್ಲುಗಳ ಶಾಸನಗಳು ಹಾಗೂ ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿಭಿನ್ನ ಬಗೆಯ ಕಾರಣಗಳಿಗಾಗಿ ವೀರರು ಪ್ರಾಣಾರ್ಪಣೆ ಮಾಡಿದಂತೆ ಗೋಚರವಾಗುತ್ತದೆ.

ಕರ್ನಾಟಕದ ವೀರಗಲ್ಲುಗಳನ್ನು ಪರಿಶೀಲಿಸಿದಾಗ ಮುಖ್ಯವಾಗಿ ಕಾಡುಹಂದಿ ಮತ್ತು ಹುಲಿಯೊಡನೆ ಹೋರಾಡಿ ಸತ್ತ ವೀರರ ವೀರಗಲ್ಲುಗಳು ದೊರೆಯುತ್ತವೆ.[೨] ಈ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಿದಾಗ ಮೂಲತಃ ಕೃಷಿ ಪ್ರಧಾನ ಹಾಗೂ ಪಶುಪಾಲನೆಯನ್ನು ನೆಚ್ಚಿಕೊಂಡಿರುವ ಈ ಪ್ರದೇಶದಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ ತಮ್ಮ ಬೆಳೆಗಳನ್ನು ರಕ್ಷಣೆ ಮಾಡುವುದಕ್ಕಾಗಿ ಊರಿನ ವೀರರು ಹೋರಾಡಿ ತಮ್ಮ ಪ್ರಾಣತ್ಯಾಗ ಮಾಡಿದಂತೆ ಭಾಸವಾಗುತ್ತದೆ. ಇದಕ್ಕೆ ಪೂರಕವಾಗಿ ಕಾಡುಹಂದಿ ಬೇಟೆಗೆ ಸಂಬಂಧಿಸಿದಂತೆ ಉಂಡಿಗನಾಳಿನಲ್ಲಿರುವ ವೀರಗಲ್ಲೊಂದರಲ್ಲಿನ ಎರಡು ಪಟ್ಟಿಕೆಗಳಲ್ಲಿಯೂ ಕಾಡುಹಂದಿಯೊಂದನ್ನು ವೀರ ತನ್ನ ಬೇಟೆ ನಾಯಿಗಳೊಂದಿಗೆ ಬೇಟೆಯಾಡುವ ಸನ್ನಿವೇಶವುಳ್ಳ ಶಿಲ್ಪಗಳು ಕಂಡುಬಂದಿವೆ. ಅಸಹಾಯಕ ಸ್ಥಿತಿಯಲ್ಲಿರುವ ಕಾಡುಹಂದಿ. ಅದನ್ನು ಸುತ್ತಲೂ ಸುತ್ತುವರಿದಿರುವ ಬೇಟೆ ನಾಯಿಗಳು ಹಾಗೂ ವೀರ ತನ್ನ ಬಿಲ್ಲಿನಿಂದ ಆ ಕಾಡುಹಂದಿಗೆ ಗುರಿಯಿಡುವ ಸನ್ನಿವೇಶ

ವುಳ್ಳ ಶಿಲ್ಪಗಳು ಮನೋಜ್ಞವಾಗಿ ಶಿಲ್ಪಗಳಲ್ಲಿ ಮೂಡಿಬಂದಿವೆ. ಇದೇ ರೀತಿ ಸೂಳೆಕೆರೆಯಲ್ಲಿರುವ ವೀರಗಲ್ಲೊಂದರಲ್ಲಿ ವೀರ ನೋರ್ವ ಪ್ರಾಣಿಯೊಂದರ ಎದೆಗೆ ತನ್ನ ಬಲಗೈಯಲ್ಲಿರುವ ಆಯುಧದಿಂದ ಬಲವಾಗಿ ಇರಿಯುತ್ತಿರುವ ಸನ್ನಿವೇಶದ ಶಿಲ್ಪವನ್ನು ಗಮನಿಸಿದಾಗ ಬಹುಶಃ ಆ ಪ್ರಾಣಿ ಆತನ ಮೇಲೆ ದಾಳಿ ನಡೆಸಿರುವುದರ ಕುರುಹಾಗಿ ಎಡಗೈಯನ್ನು ಕಚ್ಚಿರುವ ಶಿಲ್ಪವಿರುವುದನ್ನು ಕಾಣಬಹುದಾಗಿದೆ. ಹುಲಿಬೇಟೆಗೆ ಸಂಬಂಧಿಸಿದಂತೆ ಮುದುಡಿಯಲ್ಲಿ ಭಾಗಶಃ ಹಾನಿಗೊಳಗಾಗಿರುವ ವೀರಗಲ್ಲೊಂದರಲ್ಲಿ ಶಿಲ್ಪವೊಂದು ಮೂಡಿಬಂದಿದೆ. ತನ್ನ ಮೇಲೆ ಬಾಲವನ್ನು ಎತ್ತಿ ಮುನ್ನುಗ್ಗಿ ಬಂದಿರುವ ಹುಲಿಯನ್ನು ವೀರನು ಬಿಲ್ಲು ಬಾಣಗಳ ಮೂಲಕ ಎದುರಿಸಿ ಹೋರಾಟ ಮಾಡುತ್ತಿರುವ ಚಿತ್ರಣವನ್ನು ಈ ವೀರಗಲ್ಲಿನ ಶಿಲ್ಪ ಹಾಗೂ ಬರಹಗಳ ಮೂಲಕ ಗುರುತಿಸಬಹುದಾಗಿದೆ.

ಇದೇ ರೀತಿ ಹೊನ್ನಶೆಟ್ಟಿಯಲ್ಲಿ ಕಂಡುಬಂದಿರುವ ವೀರಗಲ್ಲಿನಲ್ಲಿ ಹುಲಿಯೊಂದು ವ್ಯಕ್ತಿಯೊಬ್ಬನನ್ನು ಸಾಯಿಸಿ ಆತನ ದೇಹದ ಮೇಲೆ ನಿಂತು ವೀರನೋರ್ವನ ಮೇಲೆ ದಾಳಿ ಮಾಡುತ್ತಿರುವ ಸನ್ನಿವೇಶದ ಶಿಲ್ಪಗಳು ಮೂಡಿಬಂದಿವೆ. ವೀರನು ಹುಲಿಯೊಂದಿಗೆ ತನ್ನಲ್ಲಿರುವ ಬಿಲ್ಲುಬಾಣಗಳೊಂದಿಗೆ ಹೋರಾಟ ಮಾಡುತ್ತಿರುವ ಸನ್ನಿವೇಶವುಳ್ಳ ಶಿಲ್ಪಗಳು ಗೋಚರಿಸಿವೆ. ಹಾಗೆಯೇ ಬೆಂಡೆಕೆರೆಯಲ್ಲಿರುವ ವೀರಗಲ್ಲಿನಲ್ಲಿ ಕೂಡಾ ವೀರನೋರ್ವ ಹುಲಿಯೊಂದಿಗೆ ಹೋರಾಟ ಮಾಡುತ್ತಿರುವ ಶಿಲ್ಪವನ್ನು ಗಮನಿಸಬಹುದಾಗಿದೆ. ಇವೆಲ್ಲವನ್ನು ಗಮನಿಸಿದಾಗ ಹುಲಿಬೇಟೆ ಹಾಗೂ ಹಂದಿಬೇಟೆಯಲ್ಲಿ ಈ ಭಾಗದ ವೀರರು ತಮ್ಮ ಪ್ರಾಣತ್ಯಾಗ ಮಾಡಿದಂತೆ ಗೋಚರಿಸುತ್ತದೆ.

ಮೊದಲನೆಯದಾಗಿ ತುರುಗಳನ್ನು ಅಪಹರಿಸಲು ಹೋಗಿ ಮಡಿದವರ ವೀರಗಲ್ಲುಗಳು ಮತ್ತು ಎರಡನೆಯದಾಗಿ ರಾಜಕೀಯ ಉದ್ದೇಶದಿಂದ ನಡೆದ ತುರುಕಾಳಗಗಳಲ್ಲಿ ಮಡಿದ ವೀರರ ಶಿಲ್ಪಗಳುಳ್ಳ ವೀರಗಲ್ಲುಗಳು. ಅರಸೀಕೆರೆ ತಾಲೂಕಿನಾದ್ಯಂತ ಕಂಡುಬಂದಿರುವ ತುರುಕಾಳಗದ ವೀರಗಲ್ಲುಗಳಲ್ಲಿ ಪ್ರಮುಖವಾಗಿ ವಾಲೇಹಳ್ಳಿಯ ವೀರಗಲ್ಲು ನಾಲ್ಕು ಹಂತಗಳಿಂದ ಕೂಡಿದ್ದು, ತುರುಗಳು, ವೀರರ ಹೋರಾಟದ ಸನ್ನಿವೇಶವುಳ್ಳ ಶಿಲ್ಪಗಳು, ಶಾಸನಗಳು ಅಧ್ಯಯನದ ದೃಷ್ಟಿಯಿಂದ ವಿಶೇಷವಾಗಿವೆ. ಶಂಕರನಹಳ್ಳಿ, ನೀರ್ಗುಂದ, ಕೆಲ್ಲಂಗೆರೆ, ಕರುಗುಂದ, ಕಲ್ಲಹಳ್ಳಿ, ಹಿರಿಯಾಳು, ಚಲ್ಲಾಪುರ ಮುಂತಾದೆಡೆಗಳಲ್ಲಿ ಕಂಡುಬಂದಿರುವ ಮೂರು ಅಂತಸ್ತಿನ ವೀರಗಲ್ಲುಗಳು ವಿಶೇಷತೆಯನ್ನು ಪಡೆದುಕೊಂಡಿವೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕಂಡುಬಂದಿರುವ ಹೊಸ ವೀರಗಲ್ಲುಗಳಲ್ಲಿ ವೀರರು ಬಳಸಿರುವ ಆಯುಧಗಳಲ್ಲಿ ಖಡ್ಗ, ಕಠಾರಿ, ಭರ್ಚಿ, ಚಾಕು, ಸಬಳ, ಬಿಲ್ಲುಬಾಣಗಳು, ಸುರಿಗೆ, ಗುರಾಣಿಗಳು ಪ್ರಮುಖವಾಗಿವೆ. ಇವಲ್ಲದೆ ಧ್ವಜಗಳು, ಪಲ್ಲಕ್ಕಿಗಳನ್ನುಳ್ಳ ಶಿಲ್ಪಗಳನ್ನು ಕೂಡಾ ವಿಶೇಷವಾಗಿ ಕೆತ್ತನೆ ಮಾಡಲಾಗಿದೆ. ವೀರರು ಎದುರಾಳಿಯೊಂದಿಗೆ ಹೋರಾಟ ನಡೆಸುವಾಗ ತಾವು ಬಳಸಿದ ಅಶ್ವದಳಗಳ ಸನ್ನಿವೇಶವುಳ್ಳ ಶಿಲ್ಪಗಳು ನೀರ್ಗುಂದ, ಮೊಸಳೆ, ಜೆ.ಸಿ.ಪುರ, ಹುಲ್ಲೇಕೆರೆ, ಹೊಸಹಳ್ಳಿ, ಗುಂಡುಕಾನಹಳ್ಳಿ, ಬಾಗೇವಾಳು ಮುಂತಾದೆಡೆಗಳಲ್ಲಿ ಕಂಡುಬಂದಿವೆ. ಗಜಪಡೆಗಳ ಬಳಕೆಗೆ ಸಂಬಂಧಿಸಿದಂತೆ ಈ ಪ್ರದೇಶದ ನೇರ್ಲಿಗೆ ಹಾಗೂ ಅರಕೆರೆಯಲ್ಲಿ ಕಂಡುಬಂದಿರುವ ವೀರಗಲ್ಲುಗಳಲ್ಲಿ ಗಮನಿಸಬಹುದಾಗಿದೆ. ಸಾಮಾನ್ಯವಾಗಿ ಕಾಲಾಳು ಪಡೆಗೆ ಸಂಬಂಧಿಸಿದಂತೆ ಬಹುತೇಕ ವೀರಗಲ್ಲುಗಳಲ್ಲಿ ಶಿಲ್ಪಗಳಿರುವುದನ್ನು ಕಾಣಬಹುದಾಗಿದೆ.

ಹೀಗೆ ಯಾವುದೇ ನದಿಪಾತ್ರವಿಲ್ಲದಿರುವ ಅರಸೀಕೆರೆ ಪ್ರದೇಶದಲ್ಲಿ ನಮಗೆ ಹೊಸದಾಗಿ ಕಂಡುಬಂದಿರುವ ವೀರಗಲ್ಲು ಶಿಲ್ಪಗಳನ್ನು ಗಮನಿಸಿದಾಗ ಈ ಪ್ರದೇಶದ ಗತಕಾಲದ ಶ್ರೀಮಂತಿಕೆ, ವೀರತ್ವ, ಕೃಷಿ, ಪಶುಪಾಲನೆ, ಆಡಳಿತ, ಅಧಿಕಾರಿವರ್ಗದವರು ಆರ್ಥಿಕತೆ, ಸಾಮಾಜಿಕ ಸ್ಥಿತಿಗತಿಗಳು, ಕರಕುಶಲ ಕಲೆ, ತ್ಯಾಗ ಹಾಗೂ ಬಲಿದಾನದ ವಿವರಗಳನ್ನು ಅರಿಯುವಲ್ಲಿ ನೆರವಾಗಿವೆ ಎನ್ನಬಹುದು. ಸಾಮಾನ್ಯವಾಗಿ ಕೃಷಿಯನ್ನೇ ಅವಲಂಬಿಸಿರುವ ಜನತೆ ಅದರ ರಕ್ಷಣೆಯಲ್ಲಿ ತೊಡಗಿಕೊಂಡಿರುವ ಊರಿನ ಸಾಹಸಿಗರು, ಊರಿನ ಸಂಪತ್ತಿನ ಮೂಲವಾದ ಗೋವುಗಳ ರಕ್ಷಣೆ, ಕಳ್ಳರೊಡನೆ ಹೋರಾಡಿ ಮಡಿದ ವೀರರ ಶೌರ್ಯ ಸಾಹಸಗಳು, ವೀರರ ಬಲಿದಾನದ ಬಳಿಕ ಅವರ ಅಮರತ್ವದ ಸಂಕೇತದಂತೆ ಪ್ರತಿಬಿಂಬಿತವಾಗಿರುವ ಶಿಲ್ಪಗಳು, ಇಂದಿಗೂ ಇಲ್ಲಿನ ಜನತೆ ಈ ಶಿಲ್ಪಗಳಿಗೆ ಸಲ್ಲಿಸುತ್ತಿರುವ ಪೂಜೆ ಪುನಸ್ಕಾರಗಳು ಅಧ್ಯಯನದ ದೃಷ್ಟಿಯಿಂದ ವಿಶೇಷವಾಗಿವೆ. ಒಟ್ಟಾರೆಯಾಗಿ ಪ್ರಾದೇಶಿಕ ನೆಲೆಯಲ್ಲಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ಸಂಗತಿಗಳನ್ನು ಅರಿಯುವಲ್ಲಿ ಅರಸೀಕೆರೆಯಲ್ಲಿ ದೊರೆತಿರುವ ಹೊಸ ವೀರಗಲ್ಲುಗಳು ನೆರವಾಗಿವೆ ಎನ್ನಬಹುದು.

(ನನ್ನ ಸಂಶೋಧನಾ ಮಾರ್ಗದರ್ಶಕರಾಗಿರುವ ಡಾ. ಹನುಮ ನಾಯಕರವರು ಹಾಗೂ ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಶ್ರೀ ಕಿರಣ್, ಶ್ರೀ ರವಿಕುಮಾರ್ ಹಾಗೂ ಊರಿನ ಜನತೆಗೆ ನಾನು ಅಭಾರಿಯಾಗಿರುತ್ತೇನೆ.)

ಆಧಾರಸೂಚಿ

೧. ಡಾ.ಹನುಮ ನಾಯಕ., 'ಅರಸೀಕೆರೆ ತಾಲ್ಲೂಕಿನ ಹೊಸ ವೀರಗಲ್ಲುಗಳು', ಇತಿಹಾಸ ದರ್ಶನ, ಸಂ. ೨೫, ಬೆಂಗಳೂರು, ೨೦೧೦, ಪುಟ ೬೧.
೨. ಡಾ. ಆರ್. ಶೇಷಶಾಸ್ತ್ರಿ., "ಕರ್ನಾಟಕದ ವೀರಗಲ್ಲುಗಳು", ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨, ಪುಟ ೧೩೦.

೩೦

ರಾಜಮನೆತನಗಳಲ್ಲಿ ಪೆಣ್ಬುಯಲ್

ಸಂಧ್ಯಾ.ವಿ.*

ಯುದ್ಧಕ್ಕೆ ಮೂಲಕಾರಣವೆನಿಸಿದ ಹೆಣ್ಣು ಹೊನ್ನು ಮಣ್ಣುಗಳಲ್ಲಿ, ಹೆಣ್ಣಿನ ಕಾರಣಕ್ಕಾಗಿ ನಡೆದ ಯುದ್ಧಗಳನ್ನು ಪ್ರಪಂಚದಾದ್ಯಂತ ಕಾಣುತ್ತೇವೆ. ಯುದ್ಧಕ್ಕೆ ಆಹ್ವಾನ ನೀಡುವುದಕ್ಕೆ ಗೋಗ್ರಹಣ (ತುರುಗೋಳ್) ದಂತೆ ಹೆಣ್ಣಿನ ಅಪಹರಣವನ್ನು ಕಾರಣವನ್ನಾಗಿರಿಸಿಕೊಳ್ಳುತ್ತಿದ್ದರು. ಮಹಾಭಾರತದ ವಿರಾಟ ಪರ್ವದಲ್ಲಿ ಗೋಗ್ರಹಣವು ಯುದ್ಧಕ್ಕೆ ಕಾರಣವಾದರೆ, ರಾಮಾಯಣದಲ್ಲಿ ಹೆಣ್ಣಿನ ಅಪಹರಣ ಯುದ್ಧಕ್ಕೆ ಕಾರಣ ವಾಯಿತು. ಪ್ರಸಿದ್ಧ ಗ್ರೀಕ್ ಮಹಾಕಾವ್ಯ 'ಒಡಿಸ್ಸಿ' ಕಾವ್ಯದ ವಸ್ತುವು ಕೂಡ ಹೆಣ್ಣಿನ ಅಪಹರಣವೇ ಆಗಿದೆ.

ಪ್ರಾಚೀನ ಕಾಲದಿಂದಲೂ ಕೇಳಿಬರುತ್ತಿರುವ ಪೆಣ್ಬುಯಿಲ್, ಹೆಣ್ಣಿನ ಹುಯಿಲು, ಆರ್ತನಾದ ಇಂದಿಗೂ ನಿಲ್ಲದ ಆಕ್ರಂದನವಾಗಿದೆ. ಇದು ಸಾಮಾನ್ಯರಿಂದ ಹಿಡಿದು ರಾಜಮನೆತನದವರೆಗಿನ ಎಲ್ಲ ವರ್ಗದ ಮಹಿಳೆಯರೂ ಎದುರಿಸಿದ ಸಮಸ್ಯೆಯಾಗಿದೆ. ಕರ್ನಾಟಕದ ವಿವಿಧ ರಾಜಮನೆತನಗಳಲ್ಲಿ ಸಂಭವಿಸಿದ ಹೆಣ್ಣಿನ ಅಪಹರಣವನ್ನು ಕುರಿತಂತೆ ಕೆಲವು ಘಟನೆಗಳನ್ನು ಪ್ರಸ್ತುತ ಲೇಖನದಲ್ಲಿ ಗಮನಿಸಲಾಗಿದೆ. ಇಲ್ಲಿ ಪ್ರಸಿದ್ಧ ರಾಜಮನೆತನಗಳೊಂದಿಗೆ ಪಾಳೇಗಾರ ಮನೆತನದ ಹೆಣ್ಣುಮಕ್ಕಳನ್ನೂ ಗಮನಿಸಲಾಗಿದೆ.

ಪೆಣ್ಬುಯಲಿಗೆ ಕಾರಣ

ಯುದ್ಧಕ್ಕೆ ಕರೆ ನೀಡಲು ಹೆಣ್ಣಿನ ಅಪಹರಣ ನಡೆಯುತ್ತಿದ್ದುದಲ್ಲದೆ, ಯುದ್ಧಾನಂತರ ಯುದ್ಧಕೈದಿಗಳಂತೆ, ಗೆದ್ದ ರಾಜ್ಯದ ಭಂಡಾರವನ್ನು ಲೂಟಿಮಾಡುವಂತೆ ಅರಮನೆಯ ಹೆಣ್ಣುಮಕ್ಕಳನ್ನು ಹೊತ್ತೊಯ್ಯುತ್ತಿದ್ದ ಘಟನೆಗಳೂ ಸಾಮಾನ್ಯ ವಾಗಿರುತ್ತಿತ್ತು. ಯುದ್ಧಾನಂತರದ ವಿಜಯದ ಸಂಭ್ರಮಾಚರಣೆ ಯಲ್ಲಿ ಮಹಿಳೆಯರ ಮಾನ-ಪ್ರಾಣ ಹರಣ ನಡೆಯುತ್ತಿತ್ತು.

ಮೈಸೂರು ಯುದ್ಧವನ್ನು ಗಮನಿಸುವುದಾದಲ್ಲಿ ಕೊಡಗನ್ನು ವಶಪಡಿಸಿಕೊಂಡ ಟಿಪ್ಪು, ಹಾಲೇರಿ ಮನೆತನದ ವೀರರಾಜನ ಮೂವರು ಸಹೋದರಿಯರನ್ನು ತನ್ನ ಜನಾನಕ್ಕೆ ಸೇರಿಸಿಕೊಳ್ಳುತ್ತಾನೆ, ಅವರಲ್ಲಿ ದೇವಮ್ಮಾಜಿಗೆ ಮಹ್ತಾಬ್ ಎಂದೂ ಅವಳ ತಂಗಿ ನೀಲಮ್ಮಾಜಿಗೆ ಅಫ್ತಾಬ್ ಎಂದೂ ನಾಮಕರಣ ಮಾಡಿ, ಮೂರನೆಯವಳನ್ನು ತನ್ನ ಆಪ್ತ ಖಾದರ್ ಖಾನನಿಗೆ ಬಹುಮಾನವನ್ನಾಗಿ ನೀಡುತ್ತಾನೆ. ಮತ್ತೊಂದು ಪ್ರಕರಣದಲ್ಲಿ, ಮಂಗಳೂರನ್ನು ಇಂಗ್ಲಿಷರಿಗೆ ಬಿಟ್ಟುಕೊಟ್ಟುದಕ್ಕಾಗಿ ರುಸ್ತುಮಲ್ಲಿಯ ಮೇಲೆ ಕುಪಿತನಾದ ಟಿಪ್ಪುವು ಆತನನ್ನು ಕೊಲ್ಲುವಂತೆ ತನ್ನ ಅಧಿಕಾರಿಗೆ ಅಪ್ಪಣೆ ನೀಡುತ್ತಾನೆ. ಈ ಸಂದರ್ಭದಲ್ಲಿ ರುಸ್ತುಮಲ್ಲಿಯ ಪರವಾಗಿ ನಿಂತ ಮಹಮ್ಮದಲ್ಲಿ ಎಂಬುವವನು ಟಿಪ್ಪುವಿನ ವಿರುದ್ಧ ದಂಡೆತ್ತಿ ಬರುತ್ತಾನೆ. ಇದರಿಂದ ಕೋಪಗೊಂಡ ಟಿಪ್ಪು ಸುಲ್ತಾನನು ಮಹಮ್ಮದಲ್ಲಿಯನ್ನು ಬಂಧಿಸಿ, ಅವನನ್ನು ಕೊಲ್ಲಿಸು ತ್ತಾನಲ್ಲದೆ ಅವನ ಮಕ್ಕಳನ್ನು ಆಳುಗಳನ್ನಾಗಿ ಮಾಡಿಕೊಂಡು, ಅವನ ಹೆಂಡತಿಯನ್ನು ಕೀಳುಜಾರಕನಿಗೆ ಒಪ್ಪಿಸುತ್ತಾನೆ. ಈ ಮೇಲಿನ ಎರಡು ಘಟನೆಗಳಲ್ಲಿ ಒಂದು ವಿಜಯೋತ್ಸವದ ಸಂಭ್ರಮಕ್ಕಾಗಿ ನಡೆದರೆ ಮತ್ತೊಂದು ಸೇಡಿಗಾಗಿ ನಡೆದ ಘಟನೆಗೆ ಉದಾಹರಣೆಯಾಗಿದೆ.

ಹನ್ನೊಂದನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರು ಹಾಗೂ ಚೋಳರ ನಡುವೆ ಅನೇಕ ಬಾರಿ ಯುದ್ಧಗಳು ನಡೆದಿರುವುದು ತಿಳಿದುಬರುತ್ತದೆ. ಕ್ರಿ.ಶ. ೧೦೫೩-೫೪ರಲ್ಲಿ ಕೊಪ್ಪಳ (ಕುಪ್ಪಂ)ದಲ್ಲಿ ನಡೆದ ಇವರೀರ್ವರ ನಡುವಿನ ಘೋರ ಸಮರದಲ್ಲಿ ಚೋಳರ ರಾಜಾಧಿರಾಜನನ್ನು ಮಾರಣಾಂತಿಕ ವಾಗಿ ಘಾಸಿಗೊಳಿಸಲಾಯಿತಾದರೂ ರಾಜಾಧಿರಾಜನ ತಮ್ಮ ಇಮ್ಮಡಿ ರಾಜೇಂದ್ರನು ಚಾಳುಕ್ಯರನ್ನು ಸೋಲಿಸಿ, ಚಾಳುಕ್ಯರ ರಾಜ್ಯವನ್ನು ಲೂಟಿ ಮಾಡುತ್ತಾನೆ, ಈ ಸಂದರ್ಭದಲ್ಲಿ ಆನೆ ಕುದುರೆ ಒಂಟೆ ಅಪಾರ ಸಂಪತ್ತಿನೊಡನೆ ಅರಮನೆಯ ಸ್ತ್ರೀಯರನ್ನೂ ಸೆಳೆದೊಯ್ದನೆಂದು ತಿಳಿದುಬರುತ್ತದೆ[೧] ಇದು ಯುದ್ಧಾನಂತರದ ಹಿಂಸೆಗಳಿಗೆ ರಾಜಮನೆತನದ ಮಹಿಳೆಯರು ಬಲಿಯಾಗುತ್ತಿದ್ದುದಕ್ಕೆ ಉದಾಹರಣೆಗಳಾಗಿವೆ.

ವೈವಾಹಿಕ ಕಾರಣಗಳು

ವೈವಾಹಿಕ ಸಂಬಂಧಗಳಿಗಾಗಿ ಹೆಣ್ಣಿನ ಅಪಹರಣ ನಡೆಯುತ್ತಿತ್ತು. ಹೀಗೆ ಹೆಣ್ಣನ್ನು ಹೊತ್ತೊಯ್ದು ಮದುವೆ ಯಾಗುವ 'ರಾಕ್ಷಸ ವಿವಾಹ' ಪದ್ಧತಿಯು ಅಂದಿನ ಕಾಲದಲ್ಲಿ

* # ೧೫೩, ೫ನೇ ಅಡ್ಡರಸ್ತೆ, ಮೊದಲನೆಯ ಹಂತ, ಆರ್ ಕೆ ಬಡಾವಣೆ, ಪದ್ಮನಾಭನಗರ, ಬೆಂಗಳೂರು-೭೦

ಕ್ಷತ್ರಿಯೋಚಿತ, ಶಾಸ್ತ್ರಸಮ್ಮತವಾದ ವಿವಾಹವೆನಿಸಿತ್ತು. ಇದು ಪ್ರಾಚೀನ ಸಮಾಜದಲ್ಲಿ ಸಮ್ಮತಿ ಇದ್ದ ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ, ಪೈಶಾಚ ಎಂಬ ಎಂಟು ವಿಧವಾದ ವಿವಾಹ ಪದ್ಧತಿಗಳಲ್ಲಿ ಒಂದಾಗಿತ್ತು. ಚಿದಾನಂದಮೂರ್ತಿಯವರು 'ವಿವಾಹ' ಎಂಬುದರ ಅರ್ಥವೇ ಅಪಹರಿಸಿ ಒಯ್ಯು ಎಂಬುದಾಗಿದೆ ಎಂದು ತಿಳಿಸಿದ್ದಾರೆ. ವಿವಾಹ ಪದವು 'ವಹ್' ಧಾತುವಿನಿಂದ ಬಂದುದಾಗಿದೆ, (ವಹ್ = to carry, ನೋಡಿ – ವಾಹನ) ಇಂದಿಗೂ ವಿವಾಹ ಮಹೋತ್ಸವಗಳಲ್ಲಿ ಗಂಡು ಹೆಣ್ಣುಗಳ ನಡುವೆ ಹಿಡಿಯುವ ತೆರೆಯು, ಹೆಣ್ಣನ್ನು ಬಚ್ಚಿಡುತ್ತಿದ್ದ ಕುರುಹಾಗಿದೆ ಎಂದು ವಾದಿಸುತ್ತಾರೆ[೩]. ಪುರಾಣಗಳಲ್ಲಿಯೂ ಹೆಣ್ಣುಮಕ್ಕಳನ್ನು ಮದುವೆಗಾಗಿ ಅಪಹರಣ ಮಾಡಿದಂಥ ಪ್ರಸಂಗಗಳಿರುವುದನ್ನು ಕಾಣುತ್ತೇವೆ. ಮಹಾಭಾರತದಲ್ಲಿ ಭೀಷ್ಮನು ಕಾಶಿ ಪಟ್ಟಣದ ರಾಜಕುವಾರಿಯರನ್ನು ಅಪಹರಿಸಿ ತಂದು ತನ್ನ ತಮ್ಮನೊಂದಿಗೆ ಮದುವೆ ಮಾಡಿಸುತ್ತಾನೆ.

ರಾಕ್ಷಸ ವಿವಾಹದ ಹಿನ್ನೆಲೆಯಲ್ಲಿ ಅಪಹರಣಕ್ಕೆ ಒಳಗಾದ ಕೆಲವು ಕರ್ನಾಟಕದ ರಾಜಕುಮಾರಿಯರ ಪ್ರಕರಣಗಳನ್ನು ಕಾಣಬಹುದು. ಗಂಗರಾಜಕುಮಾರಿಯನ್ನು ಅಪಹರಿಸಿದ ವಿಚಾರವು ಪಾಂಡ್ಯರ ಶಾಸನದಲ್ಲಿ ಉಲ್ಲೇಖ ಗೊಂಡಿದೆ. ಈ ಘಟನೆಯು ಪಾಂಡ್ಯ ತೇರ್ಮಾರನ ಕಾಲದಲ್ಲಿ ನಡೆದಿರುವುದರಿಂದ ಅವನ ಸಮಕಾಲೀನನಾಗಿದ್ದ ಗಂಗದೊರೆ ಶ್ರೀಪುರುಷನೆಂದೂ, ಈ ಆಧಾರದಿಂದ ಅಪಹರಣ ವಾಗಿದ್ದವಳು ಶ್ರೀಪುರುಷನ ಮಗಳೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[೪] ಪಾಂಡ್ಯರಾಜನಾದ ಪರಾಂತಕ ನೆಡುಂಜಡೈಯನ ಮೂರನೆಯ ವರ್ಷದ ವೆಳ್ವಿಕುಡಿ ತಾಮ್ರಶಾಸನದಲ್ಲಿ[೫] ತನ್ನ ತಂದೆಯಾದ ತೇರ್ಮಾರನು ಗಂಗರಾಜನೊಡನೆ ಸಂಬಂಧವನ್ನು ಬೆಳೆಸಿದ್ದನೆಂದು ತಿಳಿಸಿದೆ. ಅದೇ ಶಾಸನದ ಕೊನೆಗೆ 'ಪೂರ್ವರಾಜರು' ಗಂಗರಾಜನ ಮಗಳನ್ನು ಅಪಹರಿಸಿಕೊಂಡು ಬಂದು ಪಾಂಡ್ಯರಾಜನಿಗೆ ಕೊಟ್ಟ ಸಮಯದಲ್ಲಿ ಗಂಗರಾಜನ ಪರವಾಗಿ ಇವರ ಮೇಲೆ ಯುದ್ಧಕ್ಕೆ ಬಂದ ವಲ್ಲಭನನ್ನು ವೇಣ್ಬೈಯಲ್ಲಿ ಸೋಲಿಸಿದ ಪ್ರಸ್ತಾಪವಿದೆ. ಈ ವಲ್ಲಭ ಬಾದಾಮಿ ಚಳುಕ್ಯದೊರೆ ಎರಡನೆಯ ಕೀರ್ತಿವರ್ಮನಿರಬಹುದು ಎಂದು ವಿದ್ವಾಂಸರು ತರ್ಕಿಸು ತ್ತಾರೆ[೬].

ಇದೇ ರೀತಿಯ ಮತ್ತೊಂದು ಘಟನೆ ರಾಷ್ಟ್ರಕೂಟ ದೊರೆಯಿಂದಾದದ್ದನ್ನು ಕಾಣಬಹುದು. ಕ್ರಿ.ಶ. ೭೧೫ರಲ್ಲಿ ರಾಜ್ಯಭಾರ ಕೈಗೊಂಡಿದ್ದ ರಾಷ್ಟ್ರಕೂಟ ಇಂದ್ರನು ಸಾಮಂತ ರಾಜನಾಗಿದ್ದರೂ ಮಹತ್ವಾಕಾಂಕ್ಷೆಯ ದೊರೆಯೆನಿಸಿದ್ದ. ಇವನು ರಾಷ್ಟ್ರಕೂಟ ಸಂಸ್ಥಾಪಕ ದಂತಿದುರ್ಗನ ತಂದೆ. ಈತನ ಕುರಿತಾಗಿ ಮೊದಲನೆಯ ಅಮೋಘವರ್ಷನ ಸಂಜಾನ ತಾಮ್ರಪಟವೊಂದು ಈ ರೀತಿ ಹೇಳುತ್ತದೆ:

> **ಇನ್ದ್ರರಾಜಸ್ತತೋ ಗೃಹ್ಣಾತ್ ಯಶ್ಚಲುಕ್ಯ ನೃಪಾತ್ಮಾಜಾಂ**
> **ರಾಕ್ಷಸೇನ ವಿವಾಹೇನ ರಣೇ ಖೇಟಕಮಂಡಲೇ॥**

ಇಂದ್ರನು ಖೇಟಕಮಂಡಲದ ಮಂಗಳರಾಜ ನೊಂದಿಗಿನ ಯುದ್ಧದಲ್ಲಿ **ಭಗವಣಾ** ಅಥವಾ **ಭವನಾಗಾ** ಎಂಬ ಲಾಟ ಚಾಲುಕ್ಯ ರಾಜಕುಮಾರಿಯನ್ನು ಅಪಹರಿಸಿ ತಂದು, ರಾಕ್ಷಸವಿವಾಹ ಮಾಡಿಕೊಂಡನೆಂದು ಈ ಶಾಸನವು ತಿಳಿಸುತ್ತದೆ.

ಕರ್ನಾಟಕದ ಪ್ರಸಿದ್ಧ ರಾಜಮನೆತನಗಳಲ್ಲೊಂದಾಗಿದ್ದ ವಿಜಯನಗರದ ಅರಸು ಸಾಳ್ವ ನರಸಿಂಹನ ಪುತ್ರಿ ಹೇಮಾಂಬಿಕೆಯನ್ನು ಒರಿಸ್ಸಾದ ಪ್ರತಾಪರುದ್ರ ಗಜಪತಿಯ ತಂದೆ ಪುರುಷೋತ್ತಮ ಗಜಪತಿಯು ಅಪಹರಿಸಿ ಮದುವೆ ಯಾಗಿದ್ದನೆಂಬ ಐತಿಹ್ಯವಿದೆ. ಪುರುಷೋತ್ತಮ ಗಜಪತಿಯು ಸಂಬಂಧ ಬೆಳೆಸಲು ಬಯಸಿ ಬಂದಾಗ, ನಡುವಯಸ್ಸಿನ ಅರಸನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡಲು ಸಾಳ್ವ ನರಸಿಂಹರಾಯ ನಿರಾಕರಿಸುತ್ತಾನೆ. ಇದರಿಂದ ಕುಪಿತನಾದ ಪುರುಷೋತ್ತಮ ಗಜಪತಿಯು 'ಹೇಮಾಂಬಿಕೆಯನ್ನು ಅಪಹರಿಸಿ, ಕಟಕಪುರಿಯ ದೇವಸ್ಥಾನದ ಬೀದಿಯನ್ನು ಗುಡಿಸುವ ಜಲಗಾರನಿಗೆ ಕೊಟ್ಟು ಮದುವೆ ಮಾಡುವುದಾಗಿ' ಘೋಷಿಸುತ್ತಾನೆ. ಅದರಂತೆ ಆಕೆಯನ್ನು ಅಪಹರಿಸುತ್ತಾನೆ. ಮದುವೆ ಏರ್ಪಾಟು ನಡೆಯುತ್ತದೆ. ಆದರೆ ವರ್ಷದಲ್ಲಿ ಒಂದುಬಾರಿ ನಡೆಯುವ ಉತ್ಸವದಲ್ಲಿ ಒರಿಸ್ಸಾದ ಅರಸರು, ಪುರಿಯ ಜಗನ್ನಾಥ ದೇವಾಲಯದ ಬೀದಿಯ ಕಸವನ್ನು ಗುಡಿಸುವ ನೇಮವನ್ನು ನಡೆಸುತ್ತಿರುತ್ತಾರೆ. ಹೀಗೆ ತನ್ನ ನೇಮವನ್ನು ನಡೆಸುವ ಸಂದರ್ಭದಲ್ಲಿ ಜಲಗಾರನ ವೇಶ ದಿಂದಲೇ ಗಜಪತಿಯು ಹೇಮಾಂಬಿಕೆಯನ್ನು ವಿವಾಹ ವಾದನೆಂಬ ಜನಜನಿತವಾದ ಕತೆಯೊಂದಿದೆ[೭].

ಪೆಣ್ಬುಯಿಲನ್ನು ತಡೆಯುವಲ್ಲಿ ಕೈಕೊಂಡ ಕ್ರಮಗಳು

ಪೆಣ್ಬುಯಿಲನ್ನು ತಪ್ಪಿಸಲು ನಡೆದ ಅನೇಕ ಹೋರಾಟ, ಯುದ್ಧಗಳನ್ನು ಕಾಣುತ್ತೇವೆ. ಯುದ್ಧ ಮಾಡಿ ಎದುರಿಸಲಾರ ದವರು ಪಲಾಯನಗೈದ ಉದಾಹರಣೆಗಳೂ ಇವೆ. ಪಲಾಯನ ಮಾಡಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಆತ್ಮಹತ್ಯೆಗೆ ಶರಣಾದ ಘಟನೆಗಳು ಸಾಮಾನ್ಯವಾಗಿರುತ್ತಿತ್ತು. ಹೀಗೆ ಹೆಣ್ಣಿನ ಮಾನರಕ್ಷಣೆಗೆ ಯುದ್ಧ, ಪಲಾಯನ, ಕಡೆಗೆ ಆತ್ಮಹತ್ಯೆ, ಜೋಹರ್ (ಕೊಂಡಕ್ಕೆ ಬೀಳುವುದು)ಗೆ ಮುಂದಾಗುತ್ತಿದ್ದ ಘಟನೆಗಳನ್ನು ಕಾಣುತ್ತೇವೆ.

ಪೆಣ್ಬುಯಿಲನ್ನು ತಪ್ಪಿಸಲು ನಡೆದ ಯುದ್ಧ

ನಮ್ಮ ನಾಡಿನಲ್ಲಿ ದೊರೆತಿರುವ ಶಾಸನಗಳಲ್ಲಿ ಬಹು ಪಾಲು ವೀರಗಲ್ಲುಶಾಸನಗಳಾಗಿವೆ. ಕಾಳಗದಲ್ಲಿ ಮಡಿದ ವೀರರುಗಳಿಂದ ಸ್ಥಾಪಿಸಿರುವ ಇಂತಹ ವೀರಗಲ್ಲುಗಳಲ್ಲಿ, ಪೆಣ್ಬುಯಿಲಿನ ಸಂದರ್ಭದಲ್ಲಿ ಹೋರಾಡಿ ಮಡಿದ ವೀರರ ಯಶೋಗಾಥೆಗಳನ್ನು ಕುರಿತು ಸಾರುವ ಶಾಸನಗಳೂ ಸಾಕಷ್ಟು ದೊರೆಯುತ್ತವೆ. ಪ್ರಾಚೀನ ಕನ್ನಡ ಕವಿಗಳಾದ ರನ್ನ, ನಾಗಚಂದ್ರ, ಜನ್ನ, ಅಗ್ಗಳ, ಕುಮುದೇಂದು ಮೊದಲಾದವರು ತಮ್ಮ ಕಾವ್ಯಗಳಲ್ಲಿ ಸ್ತ್ರೀಯರ ಮಾನ ರಕ್ಷಣೆಗೆ ಹೋರಾಡದ ಪುರುಷರನ್ನು ಕಟುವಾಗಿ ಟೀಕಿಸಿದ್ದಾರೆ[೯]. ಪ್ರಸಿದ್ಧಕವಿ ರನ್ನ 'ಸಾಹಸಭೀಮ ವಿಜಯ'ದಲ್ಲಿ ಪೆಣ್ಬುಯಿಲಿನಲ್ಲಿ ಹೋರಾಡದವನು ವೀರನಲ್ಲ, ಷಂಡ ಎಂದು ನುಡಿದಿದ್ದಾನೆ. ಪ್ರಾಚೀನ ಕಾವ್ಯಗಳು ಸ್ತ್ರೀಯರ ಮಾನರಕ್ಷಣೆ ಪುರುಷರ ಕರ್ತವ್ಯವೆಂಬ ಧರ್ಮಸೂಕ್ಷ್ಮವನ್ನು ಸಾರಿದರೆ, ಶಾಸನಗಳು ಹೋರಾಡುವ ಕೆಚ್ಚನ್ನು ಪ್ರೇರೇಪಿಸುತ್ತಿತ್ತು.

ರಾಜಮನೆತನದಲ್ಲಿನ ಮಹಿಳೆಯರ ಅಪಹರಣದ ಸಂದರ್ಭಗಳಲ್ಲಿ ನಡೆದ ಹಲವಾರು ಯುದ್ಧಪ್ರಸಂಗಗಳನ್ನು ಕಾಣಬಹುದು. ಈ ಹಿಂದೆ ಗಮನಿಸಿರುವಂತೆ ಗಂಗರಾಜ ಕುಮಾರಿಯನ್ನು ಅಪಹರಿಸಿದ ಸಂದರ್ಭದಲ್ಲಿ ಗಂಗರು ಹಾಗೂ ಪಾಂಡ್ಯರ ನಡುವೆ ಯುದ್ಧ ನಡೆದಿದೆ, ಇಲ್ಲಿ ಪಾಂಡ್ಯರ ಪರವಾಗಿ ಯುದ್ಧ ಮಾಡಿದ ಪೂರ್ವರಾಜರು ಗಂಗರಾಜನ ಸಹಾಯಕ್ಕೆ ಬಂದ ವಲ್ಲಭನನ್ನು ವೇಣ್ಬೈಯಲ್ಲಿ ಸೋಲಿಸಿದಂತೆ ತಿಳಿಸಿದೆ. ಈ ಘಟನೆಯಲ್ಲಿ ರಾಜಕುಮಾರಿಯನ್ನು ಬಿಡಿಸಿ ತರಲು ಯುದ್ಧ ನಡೆದಿದೆಯಾದರು ಸಫಲವಾಗಿಲ್ಲ.

ಗಂಗ ಅರಸರಿಗೆ ಸಂಬಂಧಿಸಿದ ಮತ್ತೊಂದು ಪೆಣ್ಬುಯಿಲ್ ಪ್ರಕರಣದಲ್ಲಿ ನಡೆದ ಯುದ್ಧ ಸಫಲವಾಗಿರುವ ಉದಾಹರಣೆ ದೊರಕುತ್ತದೆ. ಇದು ಸುಮಾರು ೬ನೆಯ ಶತಮಾನದಲ್ಲಿ ಆಳ್ವಿಕೆ ನಡೆಸುತ್ತಿದ್ದ ಗಂಗದೊರೆ ಮಾಧವನ ಕಾಲದಲ್ಲಿ ನಡೆದ ಘಟನೆಯಾಗಿದೆ. ಈ ಕುರಿತಾಗಿ ಬೆಳಕು ಚೆಲ್ಲುವ ಹರಿಹರ (ತಾಗರ್ತಿ) ತಾಮ್ರಶಾಸನ್ ತಿಳಿಸುವಂತೆ ರಾಜಮಲ್ಲನ ಹೆಂಡತಿಯನ್ನೂ, ಆಕೆಯ ಸೇವಕನನ್ನೂ ಯೆರಕುಲದ ರಾಮದೇವ ಎಂಬಾತನು ಶತ್ರುಗಳ ಕೈಯಿಂದ ತಪ್ಪಿಸಿ, ರಾಜಧಾನಿಗೆ ಸುರಕ್ಷಿತವಾಗಿ ಕರೆದೊಯ್ದಿದ್ದಾನೆ. ಈ ಸಾಹಸಕ್ಕಾಗಿ ಕಾರೆನಾಡ ದೇವನೂರನ್ನು ಯೆರೆಕುಲದ ರಾಮದೇವನನಿಗೆ ಬಹುಮಾನವಾಗಿ ನೀಡಲಾಗಿದೆ[೧೦]

ಇಂಥ ಘಟನೆಗಳನ್ನು ಕಾಲಮಾನ ಭೇದವಿಲ್ಲದೆ ಪ್ರಾಚೀನ, ಮಧ್ಯಕಾಲೀನ ಎಲ್ಲ ಸಂದರ್ಭಗಳಲ್ಲಿಯೂ ಕಾಣಬಹುದು. ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಚಂದ್ರಗುತ್ತಿಯನ್ನು ಆಳುತ್ತಿದ್ದ ಅರಸು ತ್ರಿಯಂಬಕದೇವನ ಸಹೋದರಿ ಪದ್ಮಲದೇವಿಯ ಮಗಳು ಪೊನ್ನಲದೇವಿಯನ್ನು ದುರುಳನಾದ ಮುಮ್ಮೇನಾಯಕನು ಮದುವೆಯಾಗ ಬಯಸುತ್ತಾನೆ. ಇದಕ್ಕೆ ತ್ರಿಯಂಬಕದೇವ ಸಮ್ಮತಿಸುವುದಿಲ್ಲ. ಆದರೆ ಮುಮ್ಮೇನಾಯಕನು ತ್ರಿಯಂಬಕದೇವನನ್ನು ಕೊಂದು ಪೊನ್ನಲದೇವಿ ಹಾಗೂ ಅವಳ ತಾಯಿ ಪದ್ಮಲದೇವಿಯರನ್ನು ಅಪಹರಿಸಿ ತನ್ನ ಜೋಳೀದುರ್ಗಕ್ಕೆ ಒಯ್ಯುವಾಗ ಪ್ರೌಢದೇವ ರಾಯನ ಅಧಿಕಾರಿ ವೀರಣ್ಣೊಡೆಯ ಹಾಗೂ ಲಿಂಗಣ್ಣನಾಯಕ ಮೊದಲಾದವರು ಮುಮ್ಮೇನಾಯಕನೊಂದಿಗೆ ಕಾದಾಡಿ ಪೊನ್ನಲದೇವಿಯನ್ನು ಪಾರುಮಾಡುತ್ತಾರೆ[೧೧].

ಹೆಣ್ಣಿನ ರಕ್ಷಣೆಗಾಗಿ ನಾಡನ್ನು ತೊರೆದ ಘಟನೆ

ಹೆಣ್ಣುಮಕ್ಕಳ ಅಪಹರಣ ತಪ್ಪಿಸಲು ಹೋರಾಟ ಮಾಡಿದ ಉದಾಹರಣೆಗಳಲ್ಲದೆ, ಎದುರಿಸಿ ನಿಲ್ಲಲಾಗುವುದಿಲ್ಲ ವೆಂದು ತಿಳಿದ ಮನೆತನದವರು ಊರನ್ನೇ ತೊರೆದು ಹೋದ ಉದಾಹರಣೆಗಳೂ ಇವೆ. ಸುಗುಟೂರು ಪ್ರಭುಗಳ ಮೂಲ ವನ್ನು ಕುರಿತು ಇಂಥ ಒಂದು ಐತಿಹ್ಯ ತಿಳಿದು ಬರುತ್ತದೆ. ಈ ವಂಶದಲ್ಲಿ ದೇವಪ್ಪಗೌಡನ ಮಗಳು ಬಯ್ಯಮ್ಮನನ್ನು ಕಂಚಿಯ ಅರಸು ಮದುವೆಯಾಗ ಬಯಸುತ್ತಾನೆ. ಈತ ಅನ್ಯ ಜಾತಿಯವನೆಂದು ದೇವಪ್ಪಗೌಡನ ಸಹೋದರರು ಹಾಗೂ ಬಂಧುಗಳು ನಿರಾಕರಿಸುತ್ತಾರೆ. ಇದರಿಂದ ಕುಪಿತ ನಾದ ಅರಸು ದುಷ್ಟತನವನ್ನು ತೋರಲು, ಅವನನ್ನು ಎದುರಿಸ ಲಾರದ ಈ ಕುಟುಂಬದವರು ಪಾಲಾರು ಹೊಳೆಯನ್ನು ದಾಟಿ ತಮ್ಮ ರಾಜ್ಯವನ್ನು ತೊರೆದು ಬರುತ್ತಾರೆ. ಮುಂದೆ ಈ ಮನೆತನದವರೇ ಆವತಿ, ದೇವನಹಳ್ಳಿ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಯಲಹಂಕ ಮೊದಲಾದೆಡೆಗಳಲ್ಲಿ ನೆಲೆಸಿ ರಾಜ್ಯ ನಿರ್ಮಾಣ ಮಾಡಿದರು ಎಂದು ತಿಳಿದು ಬರುತ್ತದೆ[೧೨].

ಆತ್ಮಹತ್ಯೆ

ಹೆಣ್ಣುಮಕ್ಕಳ ಅಪಹರಣದ ಭೀತಿ ಇಡೀ ಕುಟುಂಬ ವನ್ನೇ ಪಲಾಯನ ಮಾಡುವಂತಾಗಿಸಿದರೆ, ಕೆಲವೊಂದು ಸಂದರ್ಭದಲ್ಲಿ ಬೇರೇನು ದಾರಿ ಕಾಣದೆ ಆತ್ಮಹತ್ಯೆಗೆ ಶರಣಾದ ಉದಾಹರಣೆಯನ್ನೂ ಕಾಣುತ್ತೇವೆ.

ಮಂಡ್ಯ ತಾಲ್ಲೂಕಿನ ದುದ್ದ ಹಾಗು ಬಸರಾಳಿನ ಪಾಳೇಗಾರರ ನಡುವೆ ಒಳಜಗಳ ನಡೆಯುತ್ತಿತ್ತು. ಒಮ್ಮೆ ದುದ್ದ ಪಾಳೇಗಾರನು ಬಸರಾಳಿನ ಪಾಳೇಗಾರನನ್ನು ಕರೆಸಿ, ಮೋಸದಿಂದ ಬಂಧಿಸಿದ್ದಲ್ಲದೆ ಆತನ ಶಿರಚ್ಛೇದನ ಮಾಡಿಸು ತ್ತಾನೆ. ಅಲ್ಲದೆ ಅವನ ರಾಣಿಯನ್ನು ವಂಚಿಸಿ ಪಡೆಯಲು ಸಂಚು ರೂಪಿಸುತ್ತಾನೆ. ಆದರೆ ಇವನಿಂದ ಪಾರಾಗಲು ದಾರಿ ಕಾಣದ ಬಸರಾಳಿನ ಪಾಳೇಗಾರ್ತಿ ದುದ್ದದ ಹೆಬ್ಬಾಗಿಲು ಬಳಿ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ[೧೩].

ಮರಣಿಸಿದ ಪತಿಯೊಂದಿಗೆ ಚಿತೆಯೇರಿ ಜೀವಂತ ದಹನಕ್ಕೆ ಒಳಗಾಗುತ್ತಿದ್ದ ಸತಿ ಪದ್ಧತಿಗೆ ಮುಖ್ಯಕಾರಣ ಹೆಣ್ಣಿಗಿರುತ್ತಿದ್ದ ಅಭದ್ರತೆಯೇ ಆಗಿದೆ. ಪ್ರಬಲ ವೈರಿಯೊಂದಿಗೆ ಯುದ್ಧ ನಡೆಯುವುದು ನಿಶ್ಚಿತವಾದಾಗ ಅವರ ಹೆಣ್ಣುಮಕ್ಕಳೆಲ್ಲಾ ಸಾಮೂಹಿಕವಾಗಿ ಕೊಂಡಕ್ಕೆ ಜೀಳುತ್ತಿದ್ದರು. (ಜೌಹರ್). ವಿಜಯನಗರದ ಸೈನ್ಯವನ್ನು ಎದುರಿಸಿದ ಸಂದರ್ಭದಲ್ಲಿ ಬೂದಿಹಾಳು ಪಾಳೇಗಾರ ಮನೆತನದ ಹೆಣ್ಣುಮಕ್ಕಳು, ನಾಯಿಕನ ಮಡದಿ ಚಿಕ್ಕಮ್ಮ ಎಲ್ಲರೂ ಕೊಂಡಕ್ಕೆ ಬೀಳುತ್ತಾರೆಂದು ಸಿರುಮಣ ಸಾಂಗತ್ಯ ಉಲ್ಲೇಖಿಸುತ್ತದೆ.

ಕೆಲವು ಪ್ರಕರಣಗಳಲ್ಲಿ ಅಂತಃಪುರದ ಮಹಿಳೆಯರೆಲ್ಲಾ ಒಟ್ಟಾಗಿ ಕೊಂಡಕ್ಕೆ ಹಾರಿದ ವಿಚಾರ ತಿಳಿದು ಬಂದರೆ, ಮತ್ತೆ ಕೆಲವು ಸಹಗಮನ, ಅನುಗಮನಗಳಲ್ಲಿ ಪತಿಯ ರೊಂದಿಗೆ, ಪತಿಯ ನೆನಪಿನಲ್ಲಿ ಚಿತೆಗೆ ಬಿದ್ದ ವಿಚಾರ ತಿಳಿಸುತ್ತದೆ. ಚೋಳಮಂಡಲಕ್ಕೆ ಸೇರಿದ ತಾರಾಮಂಗಲ (ವೆಂಗಿಪಟ್ಟಣ)ದ ದೊರೆ ಚೊಕ್ಕಭೂಪತಿ (ಚೊಕ್ಕಬಾಬತಿ)ಯ ಮಗಳು ದೇವಲೆ (ದೇವಮ್ಮ)ಯನ್ನು ಕಾಂಚೀಪುರದ ಮಾಟ್ಲ ಮನೆತನದ ಪೊಟ್ಟರಾಜ ನರೇಂದ್ರವರ್ಮ ಮದುವೆಯಾಗಲು ಬಯಸುತ್ತಾನೆ. ವಯಸ್ಸಿನಲ್ಲಿ ದೇವಲೆಯ ತಂದೆಗಿಂಗಲೂ ಹಿರಿಯ ನಾಗಿಯೂ, ಅನೇಕ ಪತ್ನಿ, ಉಪಪತ್ನಿಯರನ್ನೂ ಹೊಂದಿದ್ದ ನರೇಂದ್ರವರ್ಮನಿಗೆ ಮಗಳನ್ನು ಕೊಡಲು, ಚೊಕ್ಕಭೂಪತಿಯು ಒಪ್ಪುವುದಿಲ್ಲ. ಆದರೆ ನರೇಂದ್ರವರ್ಮನು ದೇವಲೆಯನ್ನು ಕುತಂತ್ರದಿಂದ ಅಪಹರಿಸಿ ಸೆರೆಯಲ್ಲಿಡುತ್ತಾನೆ.

ದೇವಲೆಯ ನಾಟ್ಯಗುರು ಶಂಕರದೇವ[೧೪]ನು ನರೇಂದ್ರ ವರ್ಮನ ಮಗ ವರದರಾಜ ವೀರವರ್ಮನ ಸಹಕಾರದಿಂದ ಸೆರೆಯಲ್ಲಿದ್ದ ದೇವಲೆಯನ್ನು ಪಾರುಮಾಡಿ ಅವಳ ತಂದೆಯ ಬಳಿಗೆ ಕರೆದುಕೊಂಡು ಬರುತ್ತಾನೆ. ಚೊಕ್ಕಭೂಪತಿಯು ನರೇಂದ್ರವರ್ಮನ ಮಗ ವರದರಾಜನಿಗೆ ದೇವಲೆಯನ್ನು ಕೊಟ್ಟು ವಿವಾಹ ನಡೆಸುತ್ತಾನೆ. ಈ ಘಟನೆಯಿಂದ ಮುಖಭಂಗ ವಾದ ನರೇಂದ್ರವರ್ಮನು ವೆಂಗಿಪಟ್ಟಣದ ಮೇಲೆ ದಾಳಿಯಿಡುತ್ತಾನೆ. ಕೂಡಲೆ ಚೊಕ್ಕನಾಥನು ತನ್ನ ಪತ್ನಿ ಪುತ್ರಿಯರೊಂದಿಗೆ ವಿಜಯನಗರದ ಅಚ್ಯುತರಾಯನ ಮಾಂಡಲೀಕನಾಗಿದ್ದ ತನ್ನ ಬಂಧುವಿನ ಆಶ್ರಯಕ್ಕೆಂದು ಇಂದಿನ ಕೋಲಾರ ಜಿಲ್ಲೆಯ ಶಿವಾರಪಟ್ಟಣಕ್ಕೆ ರಹಸ್ಯಮಾರ್ಗದಿಂದ ಬರುತ್ತಾನೆ. ಇತ್ತ ವೆಂಗಿಪಟ್ಟಣವನ್ನು ಮುತ್ತಿದ ನರೇಂದ್ರ ವರ್ಮನನ್ನು ಆತನ ಮಗ ವರದರಾಜ ಎದುರಿಸುತ್ತಾನೆ. ಯುದ್ಧದಲ್ಲಿ ವೀರಾವೇಶದಿಂದ ಕಾದಾಡಿದ ವರದರಾಜ ಹತನಾಗುತ್ತಾನೆ. ಪತಿಯ ಮರಣದ ವಿಚಾರ ತಿಳಿದ ದೇವಲೆಯು ಚಿತೆಯನ್ನು ಏರ್ಪಡಿಸಿ ಪತಿಯನ್ನು ಅನುಸರಿಸಿ ಮಹಾಸತಿಯಾಗುತ್ತಾಳೆ. ಇಂದಿಗೂ ಕೋಲಾರ ಜಿಲ್ಲೆಯ ಮಾಸ್ತಿ ಎಂಬ ಊರು ದೇವಲೆಯ ಸಹಗಮನದ ಸಂಕೇತ ವಾಗಿ ಉಳಿದಿದೆ[೧೫].

ಹೆಣ್ಣಿನ ಅಪಹರಣಗೈದು ಸರ್ವನಾಶ ಹೊಂದಿದ ಗುಜ್ಜಲ ವಂಶ ನಾಯಕ

'ಹೆಣ್ಣಿಂದ ರಾವಣ ಕೆಟ್ಟ' ಎಂಬ ಮಾತಿದೆ. ಪುರಾಣದಲ್ಲಿ ವೀರಾದಿವೀರರೆನಿಸಿದ ಕೀಚಕ, ರಾವಣ, ದುರ್ಯೋಧನ, ದುಶ್ಯಾಸನ ಮೊದಲಾದವರೆಲ್ಲ ಹೆಣ್ಣನ್ನು ಕೆಣಕಿ, ಅಪಹರಣ ಮಾಡಿ ತಮ್ಮ ನಾಶವನ್ನು ತಾವೇ ತಂದುಕೊಂಡರು. ಇದೇ ರೀತಿಯ ಘಟನೆ ಕರ್ನಾಟಕದ ಇತಿಹಾಸದಲ್ಲಿಯೂ ಕಾಣು ತ್ತೇವೆ.

ಕನಕಗಿರಿಯಲ್ಲಿ ಆಳ್ವಿಕೆ ನಡೆಸುತ್ತಿದ್ದ ಗುಜ್ಜಲ ವಂಶದಲ್ಲಿ, ೧೭೮೮ರಲ್ಲಿ ಅಧಿಕಾರಕ್ಕೆ ಬಂದ ಹಿರೇನಾಯಕನು ಕ್ರೂರ ಸ್ವಭಾವದವನೂ, ಪ್ರಜಾಪೀಡಕನೂ ಆಗಿದ್ದನು. ಇವನು ತನ್ನ ಅಧೀನದಲ್ಲಿದ್ದ ಮುಂಡರಗಿ ದೇಸಾಯಿಯ ಮಗಳನ್ನೂ, ಬಾದರಬಂಡಿಯ ದೇಸಾಯಿಯ ಹೆಂಡತಿಯನ್ನೂ ಅಪಹರಿಸು ತ್ತಾನೆ. ಇವನನ್ನು ಎದುರಿಸಲಾಗದ ದೇಸಾಯಿ ಮನೆತನದವರು ಹೈದರಾಬಾದಿನ ನಿಜಾಮನ ಮೊರೆಹೋಗುತ್ತಾರೆ. ನಿಜಾಮನ ಆಣತಿಯಂತೆ ಸುರಪುರದ ಪಾಮನಾಯಕ ಕನಕಗಿರಿಗೆ ದಾಳಿ ಮಾಡಿ ಮೂರು ತಿಂಗಳವರೆಗೂ ಕಾದಾಡಿದರೂ ಹಿರೇನಾಯಕ ವಶವಾಗುವುದಿಲ್ಲ. ಗಂಗಾವತಿಯ ಬಳಿಯ ಎಮ್ಮಿಗುಡ್ಡದಲ್ಲಿ ಸುರಕ್ಷಿತವಾಗಿದ್ದ ಇವನನ್ನು ಸೆರೆಹಿಡಿಯಲು ನಿಜಾಮನು ಅಪಾರ ಸೈನ್ಯವನ್ನು ಕಳಿಸುತ್ತಾನೆ. ಕಡೆಗೆ ಸುರಪುರದ ಪಾಮನಾಯಕನ ಸೈನಿಕರಿಗೆ ದುಷ್ಟ ಹಿರೇನಾಯ ಕನು ಸೆರೆಯಾಗಿ, ಹೈದರಾಬಾದಿನಲ್ಲಿ ತೋಪಿನಬಾಯಿಗೆ ಕಟ್ಟಿ ಹಾರಿಸಲ್ಪಡುತ್ತಾನೆ[೧೬].

ಹೆಣ್ಣಿಗಾಗಿ ರಾಜ್ಯವನ್ನು ಕಳೆದುಕೊಂಡ ಐಗೂರಿನ ನಾಯಕ

ಐಗೂರಿನ ವೆಂಕಟಾದ್ರಿನಾಯಕನ ಅರಮನೆಯಲ್ಲಿ ಹೆಗ್ಗಡೆಯ ಕೆಲಸದಲ್ಲಿದ್ದ ಹಿರೇಗೌಡನ ಮಗಳು ಕೆಂಪಾಂಬಿಕೆ ಯನ್ನು ದಳಪತಿ ನಾಗಣ್ಣನಾಯಕನಿಗೆ ಕೊಟ್ಟು ಮದುವೆ ಮಾಡಲು ಅವಳ ಹಿರಿಯರು ನಿಶ್ಚಯಿಸಿರುತ್ತಾರೆ. ಆದರೆ ಕಾಮಾಂಧನಾಗಿದ್ದ ವೆಂಕಟಾದ್ರಿನಾಯಕನು ನಾಲ್ವರು ಪತ್ನಿಯರು, ಅನೇಕ ಉಪಪತ್ನಿಯರನ್ನು ಹೊಂದಿದ್ದರೂ, ಎಳೆ ಪ್ರಾಯದ ಕೆಂಪಾಂಬಿಕೆಯ ಮೇಲೆ ಕಣ್ಣಿಡುತ್ತಾನೆ. ಕೆಂಪಾಂಬಿಕೆಗಾಗಿ, ವೆಂಕಟಾದ್ರಿನಾಯಕನು ಅವಳ ತಂದೆ-ತಾಯಿ ಹಾಗೂ ನಾಗಣ್ಣನನ್ನು ಬಂಧನದಲ್ಲಿಡುತ್ತಾನೆ. ಕಡೆಗೆ ಇವನ ಒತ್ತಾಯಕ್ಕೆ, ಬೆದರಿಕೆಗೆ ಮಣಿದ ಕೆಂಪಾಂಬಿಕೆಯು ಇವನ ಅರಮನೆ ಸೇರಲು ಒಪ್ಪುತ್ತಾಳೆ, ಸೆರೆಯಲ್ಲಿದ್ದ ಇವಳ ತಂದೆ-ತಾಯಿ ಹಾಗೂ ನಾಗಣ್ಣ ಬಿಡುಗಡೆ ಹೊಂದುತ್ತಾರೆ.

ಅಲ್ಲದೆ ಕೂಡಲೆ ಗುಪ್ತವಾಗಿ ಮೈಸೂರು ದೊರೆ ಚಿಕ್ಕದೇವ ರಾಯನಿಗೆ ದೂರು ನೀಡುತ್ತಾರೆ. ಕೆಲವೆ ದಿನಗಳಲ್ಲಿ ಹಿರೇಗೌಡ ಹಾಗೂ ನಾಗಣ್ಣರ ನೇತೃತ್ವದಲ್ಲಿ ಮೈಸೂರಿನ ಒಡೆಯರ ಸೈನ್ಯ ಐಗೂರನ್ನು ಮುತ್ತಿ ವೆಂಕಟಾದ್ರಿನಾಯಕನ ರಾಜ್ಯವನ್ನು ಸ್ವಾಧೀನ ಪಡಿಸಿಕೊಂಡು ಅವನನ್ನು ಸೆರೆ ಹಿಡಿಯುತ್ತಾರೆ.

ಹೀಗೆ ಇತಿಹಾಸದಲ್ಲಿ ಪೆಣ್ಬುಯಿಲ್ ಅನೇಕ ಘಟನೆಗಳಿಗೆ ಕಾರಣವಾಗಿದೆ. ಪ್ರತಿಷ್ಠೆಗಾಗಿ, ಸೇಡಿಗಾಗಿ, ವಿಜಯೋತ್ಸವಕ್ಕಾಗಿ, ವಿವಾಹ ಕಾರಣಗಳಿಗಾಗಿ ಹೆಣ್ಣಿನ ಅಪಹರಣ, ಶೀಲ-ಪ್ರಾಣ ಹರಣಗಳು ನಡೆದಿವೆ. ರಾಜಮನೆತನದ ಹೆಣ್ಣು ಮಕ್ಕಳಿಗೂ ಭದ್ರತೆ ಇರುತ್ತಿರಲಿಲ್ಲ, ಅವರೂ ಕೂಡ ಅಪಹರಣಕ್ಕೆ ಒಳಗಾಗುತ್ತಿದ್ದರೆಂಬ ವಿಚಾರಗಳು, ಸಮಾಜದ ಸಾಮಾನ್ಯ ಹೆಣ್ಣಿನ ಪರಿಸ್ಥಿತಿಯನ್ನು ಕುರಿತು ಪ್ರಶ್ನಿಸುವಂತಾಗುತ್ತದೆ. ಹೆಣ್ಣಿನ ಇಚ್ಛೆಗೆ ವಿರುದ್ಧವಾಗಿ ನಡೆಯುತ್ತಿದ್ದ 'ರಾಕ್ಷಸ ವಿವಾಹ' ಪದ್ಧತಿಗೆ ಸಮ್ಮತಿ ನೀಡಿದ ಅಂದಿನ ಸಮಾಜದ ನೀತಿ ಹಾಗೂ ಶಾಸ್ತ್ರಗಳಲ್ಲಿ ಸ್ತ್ರೀ ವಿರೋಧಿ ನಿಲುವು ಕಂಡುಬಂದು, ಖಂಡನಾರ್ಹವೆನಿಸುತ್ತದೆ.

ಪ್ರಜೆಗಳನ್ನು ರಕ್ಷಿಸಬೇಕಿದ್ದ ರಾಜ ಸ್ತ್ರೀಪೀಡಕನಾಗಿದ್ದಂಥ ಉದಾಹರಣೆಗಳು ಇತಿಹಾಸದಲ್ಲಿನ ಕಪ್ಪು ಚುಕ್ಕೆಗಳೆನಿಸಿದರೆ, ಮಹಿಳೆಯರ ಮಾನ-ಪ್ರಾಣ ರಕ್ಷಿಸಲು ಪ್ರಾಣದ ಹಂಗು ತೊರೆದು ಹೋರಾಡಿದ ವೀರರು, ಕಾವ್ಯ-ಶಾಸನಗಳಲ್ಲಿ ಕಂಡುಬರುವ ವೀರ ನುಡಿಗಳು ಹೆಮ್ಮೆಯ ಪ್ರತೀಕವೆನಿಸುತ್ತದೆ ಹಾಗೂ ಇವು ಅಂದಿನ ಸಮಾಜದ ನೈತಿಕ ಮೌಲ್ಯಗಳನ್ನು ಕುರಿತು ಸಾರುತ್ತದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಟಿ.ಪಿ. ವಿಜಯ, ಪಾಳೇರಿ ಅರಸರು, 'ಮಲೆಕರ್ನಾಟಕದ ಅರಸುಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ ೩೨.

೨. ಹಂಪನಾ, ಚಂದ್ರಕೊಡೆ.

೩. ಡಾ. ಎಂ. ಚಿದಾನಂದಮೂರ್ತಿ, ಶಿವಾಜಿ ಮಲ್ಲಮ್ಮಾಜಿ ಸಮರೋತ್ಸವ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂ. ಪುಟ ೭.

೪. ಕರ್ನಾಟಕದ ಅರಸು ಮನೆತನಗಳು, ಪುಟ ೧೪೩.

೫. ಎ.ಇ. xvii ಪುಟ ೨೯೧ ವೆಳ್ವಿಕುಡಿ ತಾಮ್ರಶಾಸನ (ಕ್ರಿ.ಶ. ೭೭೦).

೬ ಕರ್ನಾಟಕದ ಅರಸು ಮನೆತನಗಳು, ಪುಟ ೧೪೩.

೭. ಕೋಟ ಶ್ರೀನಿವಾಸರಾವ್, ವಿಜಯನಗರ ಇತಿಹಾಸ ಮಾಲೆ ೧೧, "ಜಗನ್ಮೋಹಿನಿ" ಪವನ ಪ್ರಕಾಶ, ಬೆಂ. ೧೯೫೫.

೮. ಡಾ. ಗೀತಾಚಾರ್ಯ, ಪೆಣ್ಬುಯ್ಯಲ್-ಒಂದು ವಿಶ್ಲೇಷಣೆ, ಸಾಧನೆ, ಬೆಂಗಳೂರು ವಿಶ್ವವಿದ್ಯಾನಿಲಯ.

೯. ಎಂ.ಎ.ಆರ್. ೧೯೧೦, ಪುಟ ೨೯.

೧೦. ಇದೊಂದು ಕೂಟ ಶಾಸನವೆಂದು ಎನ್. ಲಕ್ಷ್ಮೀನಾರಾಯಣರವರು ಅಭಿಪ್ರಾಯಪಡುತ್ತಾರೆ. ಕರ್ನಾಟಕದ ಅರಸು ಮನೆತನಗಳು, ಧಾರವಾಡ, ಪುಟ ೧೨೩.

೧೧. ಕೋಟ ಶ್ರೀನಿವಾಸರಾವ್, ವಿಜಯನಗರ ಇತಿಹಾಸ ಮಾಲೆ-೭, "ಗಜಬೇಂಟೆಗಾರ" ಆನಂದ ನಿಲಯ ಪ್ರಕಾಶನ, ಬೆಂ.

೧೨. ಪಿ.ವಿ. ಕೃಷ್ಣಮೂರ್ತಿ, ಸುಗಟೂರು ಪ್ರಭುಗಳು, ದಕ್ಷಿಣ ಕರ್ನಾಟಕ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೧. ಪುಟ ೩೬೦.

೧೩. ತೈಲೂರು ವೆಂಕಟಕೃಷ್ಣ, ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ, ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೮, ಪುಟ ೨೮೮.

೧೪. ಈತನ ತಂದೆ ಭೂಪಾಲದೇವ. ಇವನು ವಿಜಯನಗರ ಕೃಷ್ಣದೇವರಾಯನ ಮಡದಿ ಚಿನ್ನಾದೇವಿಗೆ ನಾಟ್ಯ ಕಲಿಸಿದ ಗುರುವಾಗಿದ್ದನು. ಅಲ್ಲದೆ ಕೃಷ್ಣದೇವರಾಯನಿಂದ ನಾಟ್ಯ ಕಲಾಪಿತಾಮಹನೆಂಬ ಬಿರುದನ್ನು ಪಡೆದಿದ್ದವನು.

೧೫. ಕೋಟ ಶ್ರೀನಿವಾಸರಾವ್, ವಿಜಯನಗರ ಇತಿಹಾಸ ಮಾಲೆ, ಆನಂದ ನಿಲಯ ಪ್ರಕಾಶನ ಬೆಂಗಳೂರು ; ಕನ್ನಡ ವಿಷಯ ವಿಶ್ವಕೋಶ ೨. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ, ೨೦೦೭, ಪುಟ ೬೫೬.

೧೬. ಕಪಟರಾಳ ಕೃಷ್ಣರಾವ್, ಸುರಪುರ ಸಂಸ್ಥಾನ ಇತಿಹಾಸ, ೧೯೭೭ ಪುಟ ೮೦.

ಹರಿಹರ ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳು

ಹೆಚ್. ರಮೇಶ್*

ಯಾವ ಒಂದು ವಸ್ತು, ವ್ಯಕ್ತಿ ಪ್ರದೇಶಗಳನ್ನು ಗುರುತಿಸ ಬೇಕಾದರೆ ಒಂದು ನಿರ್ದಿಷ್ಟ ನಾಮಬೇಕಾಗುತ್ತದೆ. ಅದು ರೂಢನಾಮ, ಅಂಕಿತನಾಮ ಅಥವಾ ಅನ್ವರ್ಥನಾಮವಾಗ ಬಹುದು. ಪ್ರಾಪಂಚಿಕ ಜೀವನದ ಚೇತನಾಚೇತನಗಳ ಬಾಹುಳ್ಯಗಳನ್ನು ಕಂಡುಕೊಳ್ಳಲು ವಿವಿಧ ರೀತಿಯ ಹೆಸರು ಗಳು ಹಣೆಪಟ್ಟಿಗಳಾಗಿ ಬಳಕೆಯಾಗಿರುವುದುಂಟು ಸ್ಥಳನಾಮ ಮತ್ತು ವ್ಯಕ್ತಿನಾಮಗಳ ಪೈಕಿ ಸ್ಥಳನಾಮಗಳೇ ಹೆಚ್ಚು ಪ್ರಾಚೀನ ವೆನಿಸಿಕೊಳ್ಳುವುದರ ಮೂಲಕ ಶಾಶ್ವತವಾಗಿ ಉಳಿಯು ವಂತಹುಗಳಾಗಿವೆ. ಇವು ವ್ಯಕ್ತಿ ಹಾಗೂ ಸ್ಥಳಗಳೊಂದಿಗಿನ ಅವಿನಾಭಾವ ಸಂಬಂಧವನ್ನು, ಪರಸ್ಪರಾವಲಂಬನವನ್ನು ಎತ್ತಿ ಹಿಡಿಯುತ್ತದೆ. ವ್ಯಕ್ತಿಗಳು ಇಂದು ಇದ್ದು ನಾಳೆ ಇಲ್ಲದೆ ಹೋಗಬಹುದು ಆದರೆ ಒಂದು ನಿರ್ದಿಷ್ಟ ಸ್ಥಳ ಬಹುಮಟ್ಟಿಗೆ ತನ್ನ ಭೂವೈಶಿಷ್ಟ್ಯಗಳನ್ನು ಕಳೆದುಕೊಳ್ಳದೆ ಸಹಸ್ರಾರು ವರ್ಷಗಳು ಹಾಗೆಯೇ ಉಳಿಯುತ್ತವೆ. ಭೌಗೋಳಿಕ ಮತ್ತು ಪ್ರಾಕೃತಿಕ ಹೆಸರುಗಳು ಪರಿಸರದ ಚೌಕಟ್ಟಿನಲ್ಲಿ ಅವುಗಳ ಸ್ವರೂಪ ಹಾಗೂ ಕ್ರಿಯೆಗಳನ್ನು ಆಧರಿಸಿ ಬಂದವು. ಹರಿಯುವ ನೀರಿಗೆ ಹೊಳೆ, ಕಾಲುವೆ, ಹಳ್ಳ ಎಂದೂ, ಎತ್ತರದ ಭೂಭಾಗಕ್ಕೆ ಬೆಟ್ಟ, ಗುಡ್ಡ, ಶಿಖರಗಳೆಂದೂ, ಇಳಿಜಾರಾದ ಭೂಪ್ರದೇಶಕ್ಕೆ ಕಣಿವೆ, ಕಮರಿ ಎಂದೂ, ಕೃಷಿಯೋಗ್ಯವಾದ ಸ್ಥಳಗಳಿಗೆ ಹೊಲ, ಗದ್ದೆ ಎಂದೂ, ನೆಲೆನಿಂತ ಭೂಪ್ರದೇಶಕ್ಕೆ ಊರು, ಕೇರಿ ಎಂದೂ ಅಶ್ರಯ ಮಾಡಿಕೊಂಡ ನೆಲೆಗೆ ಮನೆ, ಗುಡಿಸಲು, ಕುಟೀರ, ಮಠವೆಂದೂ ಹೆಸರುಗಳು ರೂಢಿಗತ ವಾದವು. ಹಾಗಾಗಿ ಅವುಗಳೆ ಸ್ಥಳನಾಮಗಳಾಗಿ ಪ್ರಖ್ಯಾತ ವಾದವು. ಈ ಹಿನ್ನೆಲೆಯಲ್ಲಿ ಹರಿಹರ ತಾಲೂಕಿನ ಶಾಸನಗಳಲ್ಲಿ ಲಭ್ಯವಿರುವಂತಹ ಸ್ಥಳನಾಮಗಳನ್ನು ಕುರಿತು ಪರಿಚಯಿಸುವ ಪ್ರಯತ್ನ ಪ್ರಸಕ್ತ ಲೇಖನದ ಉದ್ದೇಶವಾಗಿದೆ.

ಇದಕ್ಕೆ ಸಂಬಂಧಿಸಿದಂತೆ ತಾಲೂಕಿನ ಶಾಸನೋಕ್ತ ಸ್ಥಳಗಳಾದ ಹರಿಹರ, ದೇವರಬೆಳಕೆರೆ, ಭಾನುವಳ್ಳಿ, ನಂದಿ ತಾವರೆ, ಗುತ್ತೂರು, ಕೊಕ್ಕನೂರು, ಕೊಂಡಜ್ಜಿ, ಗಂಗನರಸಿ, ಎಳೆಹೊಳೆ, ಕುಂಬಳೂರು, ಬನ್ನಿಕೋಡು, ಚಿಕ್ಕಬಿದರೆ, ನಿಟ್ಟೂರು, ಜಿಗಳಿ, ನಾಗೇನಹಳ್ಳಿ, ದೀಟೂರು, ಬುಳ್ಳಾಪುರ, ಮಲೆಬೆನ್ನೂರು ಮುಂತಾದ ಸ್ಥಳನಾಮಗಳನ್ನು ಅಧ್ಯಯನಕ್ಕೆ ತೆಗೆದುಕೊಂಡಿದ್ದು ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಹರಿಹರ: ದೈವಸೂಚಕ ಸ್ಥಳನಾಮವಾದ ವಿಷಯದ ಕೇಂದ್ರಬಿಂದು ಹರಿಹರ ಪುರಾಣ ಕಾಲದಿಂದಲೂ ತನ್ನದೇ ಆದ ಐತಿಹಾಸಿಕ ಮಹತ್ವ ಹೊಂದಿದ ಕ್ಷೇತ್ರ. ಶಾಸನಗಳಲ್ಲಿ ಹರಿಷಪುರ[೧], ಕೂಡಲೂರು[೨], ಗುಹಾರಣ್ಯ[೩], ಹರಿಹರಕ್ಷೇತ್ರ[೪], ಹರಿಹರದೇವರಪುರ[೫], ಕೂಡಲಸಂಗಮ[೬], ಹರಿಹರ[೭] ಮುಂತಾದ ಹೆಸರುಗಳಿಂದ ಉಲ್ಲೇಖವಾಗಿದೆ. ಕರ್ನಾಟಕದ ಕೈಫಿಯತ್ತುಗಳು ಪುಸ್ತಕದಲ್ಲಿನ ಹರಿಹರ ಕೈಫಿಯತ್ತು ಹಾಗೂ ಇತರೆ ಕೈಫಿಯತ್ತುಗಳನ್ನು ಅವಲೋಕಿಸಿದಾಗ ಗೌತಮಗ್ರಾಮ[೮], ಕುಂಭಕ್ಷೇತ್ರ[೯], (ಕುಂಭಕಾಶಿ), ಮತ್ತು ಲಿಂಗಾಪುರ[೧೦] ಎಂದು ಹರಿಹರವನ್ನು ಹೆಸರಿಸಿವೆ. ಹರಿದ್ರಾ ನದಿ ತುಂಗಭದ್ರೆಯನ್ನು ಸೇರುವುದರಿಂದ ಆ ಸ್ಥಳಕ್ಕೆ ಕೂಡಲೂರು ಎಂದೂ ಕರೆದರೆ ಗುಹಾಸುರನೆಂಬ ರಾಕ್ಷಸನು ನೆಲೆಸಿದ್ದರಿಂದ ಈ ಪ್ರದೇಶಕ್ಕೆ ಗುಹಾರಣ್ಯವೆಂದು ಹೆಸರು ಬಂದಿದೆ. ಇದಕ್ಕೆ ಪೂರಕವಾಗಿ ಕ್ರಿ.ಶ. ೧೨೨೪ರ ಪೊಲಾಳ್ವ ದಂಡನಾಥನ ಶಾಸನವು ಊರನ್ನು ಕೂಡಲೂರು ಎಂದು ಆ ಪ್ರದೇಶವನ್ನು ಗುಹಾರಣ್ಯ ವೆಂದು ಉಲ್ಲೇಖಿಸಿದೆ.

ಕ್ರಿ.ಶ. ೬೯೪ರ ಬಾದಮಿ ಚಲುಕ್ಯರ ವಿನಯಾದಿತ್ಯನ ಶಾಸನದಲ್ಲಿ "ಚತುರ್ದಶೇ ವರ್ತಮಾನೇ ಹರಿಷಪುರ ಪ್ರತ್ಯಸನ್ನೇ"[೧೧] ಎಂದಿದೆ. ಇಲ್ಲಿ ಉಲ್ಲೇಖವಾಗಿರುವ ಹರಿಷಪುರ ಎಂಬ ಹೆಸರು ಹರಿ ಮತ್ತು ಈಶರನ್ನು ಹೆಸರಿಸುತ್ತದೆ. ಜೊತೆಗೆ ಹರಿಷ ಪದ ಬಳಕೆಯ ನಂತರ ಬಂದ ವಾರ್ಗಿಕ ಪದವಾದ ಪುರ ಎಂಬುದು ವಾಸ್ತವ್ಯವಾಚಿ ಪದವಾಗಿದ್ದು ವಿಷ್ಣು ಮತ್ತು ಶಿವನನ್ನು ಕುರಿತು ಆರಾಧಿಸುವ ತಾಣ ಇದಾಗಿದೆ. ಎಂಬುದು ಸ್ಪಷ್ಟವಾಗುತ್ತದೆ. ಕ್ರಿ.ಶ. ೧೨೬೯ ಹಾಗೂ ೧೪೧೧ರ ಶಾಸನಗಳಲ್ಲಿ ಹರಿಹರವನ್ನು ಹರಿಹರ ಕ್ಷೇತ್ರವೆಂದು ವರ್ಣಿಸಿದೆ. ಅದರೆ ಇದಕ್ಕೂ ಮುಂಚೆಯೆ ಕ್ರಿ.ಶ. ೧೧೭೪ರ ನೊಳಂಬ ಚಕ್ರವರ್ತಿ ಚಳುಕ್ಯ ಜಗದೇಕಮಲ್ಲನ ಅಕ್ಕನ ಬಾಡ[೧೨] ಶಾಸನದಲ್ಲಿ "ಹರಿಹರ ಕ್ಷೇತ್ರದಲ್ಲಿ ನೊಣಂಬೇಶ್ವರ

* ಹೆಚ್. ಈಶ್ವರಪ್ಪ, ಅರಸೀಕೆರೆ ಪೋಸ್ಟ್, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ-೫೮೩೧೨೫.

ದೇವರಿಗೆ ಭೂಮಿಯನ್ನು ದಾನ" ಬಿಟ್ಟ ಬಗ್ಗೆ ತಿಳಿಸುತ್ತದೆ. ಅಂದರೆ ಈಗಿನ ಹರಪನಹಳ್ಳಿ ತಾಲೂಕಿನ ಅರಸೀಕೆರೆ ಗ್ರಾಮಕ್ಕೆ ಕ್ರಿ.ಶ. ೧೨ನೇ ಶತಮಾನದಲ್ಲಿ ಹರಿಹರಕ್ಷೇತ್ರವೆಂದು ಕರೆಯುತ್ತಿದ್ದರು ಕ್ರಿ.ಶ. ೧೧೬೪ರ ಹರಿಹರದ ಶಾಸನದಲ್ಲಿ ಹರಿಹರವನ್ನು ದಕ್ಷಿಣಕಾಶಿಯೆಂದು ವರ್ಣಿಸಿರುವುದು ವಿಶೇಷವಾಗಿದೆ.

ಇವಷ್ಟೇ ಅಲ್ಲದೆ ಶಾಸನಗಳು ಹರಿಹರ ದೇವರನ್ನು ಶಂಕರನಾರಾಯಣ[೧೩]ವೆಂದು ಸಹ ಉಲ್ಲೇಖಿಸಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹರಿಹರ ಹೆಸರಿನಲ್ಲಿ ಮೊದಲು ವಿಷ್ಣುವನ್ನು ನಂತರ ಶಿವನನ್ನ ಗುರುತಿಸಿದರೆ ಶಂಕರನಾರಾಯಣ ಎಂಬ ಹೆಸರು ಮೊದಲು ಶಿವನನ್ನ ನಂತರ ವಿಷ್ಣುವನ್ನು ಗುರುತಿಸುತ್ತದೆ. ಎರಡು ಹೆಸರುಗಳನ್ನು ಗಮನಿಸಿದರೆ ಆಂದಿನ ಶೈವ-ವೈಷ್ಣವ ಪಂಥಗಳ ಮಧ್ಯೆ ಇದ್ದಂತಹ ಧಾರ್ಮಿಕ ಸಂಘರ್ಷವನ್ನು ತಿಳಿಯಬಹುದು. ಪುರಾಣಗಳಲ್ಲೇ ಹರಿಹರರ ವಿಲೀನಿಕರಣವಾದರೂ ಭಕ್ತರು ಮಾತ್ರ ಇವರಲ್ಲಿ ಬೇಧವನ್ನು ಕಲ್ಪಿಸಿದರು ಎಂಬುದನ್ನು ಪೋಲಾಳ್ವ ದಂಡನಾಥನ ಶಾಸನದ ಒಂದು ವೃತ್ತದಿಂದ ತಿಳಿದುಬರುತ್ತದೆ.

> **ಹರಿಯಿಂದಂ ಬಿಟ್ಟು ದೈವಂ ಧರಣಿತಳದೊಳಿಲ್ಲೆಂದು ಪೇಳ್ವರ್ ಕೆಲಂಬರ್**
> **ಹರನಿಂದಂ ಬಿಟ್ಟು ದೈವಂ ಧರಣಿತಳದೊಳಿಲ್ಲೆಂದು ಪೇಳ್ವರ್ ಕೆಲಂಬರ್**
> **ನರರಾ ಸಂದೇಹಮಂ ಪಿಂಗಿಸಲತಿಶಯದಿಂ ಕೂಡಲೂರಲ್ಲಿ ಶೋಭಾ**
> **ಕರಮಪ್ಪಂತೊಂದೆ ರೂಪಂ ತಳೆದು ಹರಿಹರಂ ಕೂರ್ತು ರಕ್ಷಿಕ್ಕೆ ನಮ್ಮಂ**[೧೪]

ದೇವರುಗಳೇ ಮಿಲನೀಕರಣಗೊಂಡ ಭಾವೈಕ್ಯತಾ ಸಂದೇಶ ಸಾರುವ ವೃತ್ತ ಇದು.

ದೇವರಬೆಳಕೆರೆ: ಇದೊಂದು ವಿಶಿಷ್ಠ ಜಲವಾಚಕ ಮತ್ತು ದೈವ ವಾಸ್ತವ್ಯಸ್ಥಳ ನಾಮ ಬೆಳ್+ಅ=ಬೆಳ+ಕೆರೆ=ಬೆಳ್ಗೆರೆ >ಬೆಳಕೆರೆ, ಬೆಳ್=ನೀರು, ನೀರನ್ನು ದೇವರೆಂದು ಜನ ನಂಬಿದ್ದರು. ಮೈಲಾರನ ಆರಾಧನೆ ಮತ್ತು ಹತ್ತಿರದಲ್ಲಿ ನೀರಿನ ಶ್ಯಾಗಲೆಹಳ್ಳ ಅಥವಾ ಹರಿದ್ರಾ ನದಿ ಇರುವುದರಿಂದ ಸಹಜವಾಗಿಯೇ ಜನರ ಬಾಯಲ್ಲಿ ದೇವರಬೆಳ್ಕೆರೆ ಎಂದು ಬಂದಿರಬೇಕು. ಹತ್ತಿರದ ಕುಣಿಬೆಳಕೆರೆಯ ಕಾಲಮಾನವಿಲ್ಲದ ಒಂದು ಶಾಸನದಲ್ಲಿ 'ಶ್ರೀಮತ್‌ಬೆಳಕೆರೆಯ'[೧೫] ಎಂದೂ, ದೇವರಬೆಳಕೆರೆಯ ಗ್ರಾಮಕ್ಕೆ ಸೇರಿದ ಹಳೇಹಾಳುವಾಳು ಬೆಚಾರಕ್ ಗ್ರಾಮದಲ್ಲಿನ ಕಲ್ಲೇಶ್ವರ ದೇವಾಲಯದ ದಕ್ಷಿಣಕ್ಕೆ ನೆಟ್ಟಿರುವ ೧೩ನೇ ಶತಮಾನದ ವೀರಗಲ್ಲಿನಲ್ಲಿ 'ಚಿಕ್ಕಬೆಳುಕರಿಯ ತುರುಪರಿಯಲು'[೧೬] ಎಂದಿದೆ. ಅದೇ ದೇವಾಲಯದ ರಂಗಮಂಟಪದ ಮುಂಬಾಗಿಲ ಬಳಿಯ ಎಡಕಂಬದಲ್ಲಿನ ಶಾಸನದಲ್ಲಿ 'ಚಂಬೆಯಗೆರೆಯ ತೆಂಕಣಕೋಡಿಯಂ'[೧೭] ಎಂದೂ ಉಲ್ಲೇಖಿಸಿವೆ. ಬೆಳ್ಕರೆ>ಬೆಳಗೆರೆ>ಚಿಕ್ಕಬೆಳುಕರಿ> ದೇವರಬೆಳಕೆರೆ ಎಂದು ಪ್ರಚಲಿತದಲ್ಲಿದೆ. ಪ್ರಾದೇಶಿಕತೆಯಲ್ಲಿ ಸುತ್ತಲಿನ ನೈಸರ್ಗಿಕ ವೈಲಕ್ಷಣಗಳಿಂದ ನಿರ್ಮಾಣವಾದ ಹಾಗೂ ದೈವಸೂಚಕ ಸ್ಥಳನಾಮ ಇದಾಗಿದೆ.

ಬಾನುವಳ್ಳಿ: ಪ್ರಕೃತಿವಾಚಕ ಸ್ಥಳನಾಮದಿಂದಿರುವ ಈ ಸ್ಥಳಕ್ಕೆ 'ಲಕ್ಷ್ಮೀನಾರಾಯಣಪುರ'[೧೮] ಎಂದು ಸಹ ಕರೆಯಲಾಗುತ್ತಿತ್ತು. ಹಾಗಾಗಿ ಇದು ದೈವಸೂಚಕ ಸ್ಥಳವೂ ಹೌದು ಕ್ರಿ.ಶ. ೧೨೨೩ರಲ್ಲಿ ಪೋಲಾಳ್ವ ದಂಡನಾಥನು ಹರಿಹರ ದೇವಾಲಯವನ್ನು ಕಟ್ಟಿಸಿ, ಲಕ್ಷ್ಮೀನಾರಾಯಣಪುರ ಹೆಸರಿನ ಬಾನುವಳ್ಳಿಯನ್ನು ನಿರ್ಮಿಸಿ ಲಕ್ಷ್ಮೀನಾರಾಯಣ ದೇಗುಲವನ್ನು ಕಟ್ಟಿಸುತ್ತಾನೆ. ಹಾಗಾಗಿ ಈ ಗ್ರಾಮಕ್ಕೆ ಲಕ್ಷ್ಮೀನಾರಾಯಣಪುರವೆಂದು ಹೆಸರು ಬಂದಿದೆ. ಈ ಶಾಸನದಲ್ಲಿ 'ಲಕ್ಷ್ಮೀನಾರಾಯಣವೆಸರ ಬಾನುವಳ್ಳಿ'[೧೯] ಎಂದಿದೆ. ಕ್ರಿ.ಶ. ೧೨೭೭ರ ಶಾಸನದಲ್ಲಿ 'ಬನವಳ್ಳಿ', ಕ್ರಿ.ಶ. ೧೪೦೫ರ ಶಾಸನದಲ್ಲಿ 'ಭಾನುವತಿಪಟ್ಟಣ' ಹಾಗೂ ಕ್ರಿ.ಶ. ೧೪೫೫ರಲ್ಲಿ 'ಬಾನವಳ್ಳಿ'[೨೦] ಎಂದಿದ್ದು ಪ್ರಸ್ತುತ ಬಾನುವಳ್ಳಿ ಎಂದಾಗಿದೆ. ಹಾಗಾದರೆ ಈ ಪದದ ನಿಷ್ಪತ್ತಿಯನ್ನು ನೋಡುವುದಾದರೆ ಬಾನ್+ಪ(ವ)ಳ್ಳಿ>ಬಾನ್ವಳ್ಳಿ, ಬಾನವಳ್ಳಿ> ಬಾನುವಳ್ಳಿ. ಬಾನ್ ಎಂದರೆ ಆಕಾಶ, ಈ ಪದಕ್ಕೆ ಆಕಾಶಪುರಿ ಎಂದೇ ಹೇಳಬೇಕಾಗುತ್ತದೆ. ಭಾನು ಎಂದರೆ ಸೂರ್ಯ. ಬಾನುವಳ್ಳಿ ಸೂರ್ಯಪುರಿ ಎಂದು ಸಹ ಆಗುತ್ತದೆ. ಬಾನುವಳ್ಳಿಯನ್ನು ಸ್ವರ್ಗಕ್ಕೆ ಸಮಾನ ಎಂದು ಕರೆಯಲಾಗಿದೆ.[೨೧]

ಜಿಗಳಿ: ಇದು ಪ್ರಾಣಿವಾಚಕ ಸ್ಥಳನಾಮವಾಗಿದ್ದು ಇಲ್ಲಿ ಜಿಗಳಿ ಹುಳುಗಳು ಹೆಚ್ಚಾಗಿ ಇರುವುದರಿಂದ ಜಿಗಣಿ ಎಂದು ಕರೆದು ನಂತರದಲ್ಲಿ ಜಿಗಳಿ ಆಗಿರುವುದಾಗಿಯೂ, ಮತ್ತು ಜಿಗಳಿ ಎನ್ನುವ ಹುಲ್ಲು ಜಾತಿಯ ಸಸ್ಯ ಹೆಚ್ಚಾಗಿ ಬೆಳೆಯುತ್ತಿದ್ದದರಿಂದ ಈ ಗ್ರಾಮ ಜಿಗಳಿ ಎಂದು ಹೆಸರಾಗಿರಬಹುದು. ಇದು ಸಸ್ಯವಾಚಕ ಸ್ಥಳನಾಮವು ಹೌದು. ಕ್ರಿ.ಶ. ೧೨೨೦ರ ನಂದಿತಾವರೆಯ ಶಾಸನದಲ್ಲಿ ಜಿಗುಳೇ[೨೨] ಎಂದೂ, ಕ್ರಿ.ಶ. ೧೪೦೫ರ ಮಲೆಬೆನ್ನೂರಿನ ಶಾಸನದಲ್ಲಿ ಜಿಗಳೆ ಎಂದೂ ಜಿಗಳಿ ಗ್ರಾಮದ ಕಾಲಮಾನವಿಲ್ಲದ ಶಾಸನದಲ್ಲಿ ಜಿಗಾಲಿ ಎಂದು ಉಲ್ಲೇಖಿಸಿದೆ. ಶಾಸನಗಳ ಆಧಾರದಿಂದ ಜಿಗುಳೆ> ಜಿಗಳೆ>ಜಿಗಾಲಿ>ಜಿಗಳಿ ಎಂದಾಗಿದೆ. ಜಿಗಳಿ>ಜೌಗು=ಜೌಗು ಭೂಮಿಯುಳ್ಳ ಸ್ಥಳವಾಗಿದ್ದಿರಬಹುದು.

ಗಂಗನರಸಿ: ವ್ಯಕ್ತಿ ವಾಚಕ ಹಾಗೂ ಐತಿಹಾಸಿಕ ಸ್ಥಳನಾಮದ ಗ್ರಾಮ ಇದಾಗಿದೆ. ಗಂಗ+ಅ+ನ್+ನ+ ಗಂಗನ+ಅರಸಿ, ಗಂಗನರಸಿ. ಪ್ರಾಚೀನ ಕಾಲದಲ್ಲಿ ಇದು ಗಂಗರಸರ ಪಟ್ಟಣವಾಗಿದ್ದು ಗಂಗರ ಅರಸನ ಅರಸಿಯೊಬ್ಬಳಾಗಿದ್ದ ಗಂಗಾದೇವಿಯು ಇಲ್ಲಿ ವಾಸಿಸುತ್ತಿದ್ದಳು.

ಅದರಿಂದಾಗಿ ಗಂಗನ ಅರಸಿ, ಗಂಗನರಸಿಯಾಗಿರುವುದಾಗಿ ಸ್ಥಳೀಯ ಐತಿಹ್ಯಗಳು ತಿಳಿಸುತ್ತವೆ. ಕ್ರಿ.ಶ. ೧೫೩೧ರ ಹರಿಹರದ ಶಾಸನದಲ್ಲಿ 'ಹರಿಹರದ ಸೀಮೆಯೊಳಗಿನ ಗಂಗನರಸಿ'[೨೩] ಎಂದಿದೆ. ವಿಜಯನಗರ ಕಾಲದಲ್ಲಿ ಗಂಗನರಸಿ ಗ್ರಾಮವು ಹರಿಹರದ ಸೀಮೆಗೆ ಒಳಪಟ್ಟಿತ್ತು. ಹರಿಹರಸೀಮೆ ವಿಜಯನಗರ ಕಾಲದ ಆಡಳಿತ ಕೇಂದ್ರವಾಗಿತ್ತು ಎಂಬುದು ಶಾಸನಾಧಾರಗಳಿಂದ ತಿಳಿಯುತ್ತದೆ. ಹಾಗೂ ಕ್ರಿ.ಶ. ೧೫೬೧ರ ಹರಿಹರದ ಶಾಸನದಲ್ಲಿಯು ಸಹ ಗಂಗನರಸಿ ಗ್ರಾಮದ ಉಲ್ಲೇಖವಿದೆ. ವಿಜಯನಗರ ಕಾಲದಿಂದಲೂ ಪ್ರಸ್ತುತದ ವರೆಗೂ ಪ್ರಾಚೀನ ಹೆಸರೇ ಮುಂದುವರೆದುಕೊಂಡು ಬಂದಿದೆ.

ಗುತ್ತೂರು: ಪ್ರಾದೇಶಿಕ ಸ್ಥಳನಾಮವಾದ ಗುತ್ತೂರು ತುಂಗಭದ್ರಾ ನದಿಯ ಎಡದಂಡೆಯಲ್ಲಿರುವ ಶಾಸನಸ್ಥ ದಾನ ನೀಡಿದ ಗ್ರಾಮವಾಗಿದೆ. ಗುತ್ತ ಎಂದರೆ ಸಮೀಪ ಎಂದಾರ್ಥ. ಕ್ರಿ.ಶ. ೧೧೪೯ರ ಹರಿಹರದ ಶಾಸನದಲ್ಲಿ ಗುತ್ತಿವೂರು. ಕ್ರಿ.ಶ. ೧೪೧೦ರ ಶಾಸನದಲ್ಲಿ ಗುತ್ತೂರು ಎಂದು ಉಲ್ಲೇಖ ಗೊಂಡಿದ್ದು ಗುತ್ತಿ ಕಡೆಯಿಂದ ಬಂದಂತಹ ಜನರು ಈ ಪ್ರದೇಶದಲ್ಲಿ ನೆಲೆಸಿದ್ದರಿಂದ ಗುತ್ತಿವೂರು ಎಂದಾಗಿರಬೇಕು. ಇಲ್ಲಿ ಸೈನಿಕರ ದಂಡು ಗಸ್ತು ಹೊಡೆಯುತ್ತಿದ್ದುದರಿಂದಾಗಿ ಇದನ್ನು ಗಸ್ತು ಊರು>ದಂಡು ಗಸ್ತೂರು>ದಂಡುಗತ್ತೂರು ಎಂದು ಹೆಸರಾಗಿ ನಂತರದಲ್ಲಿ ಗುತ್ತೂರು ಆಗಿದ್ದಿರಬಹುದಾದ ಸಾಧ್ಯತೆ ಇದೆ.

ನಂದಿತಾವರೆ: ದೈವವಾಚಕ, ಪ್ರಾಣಿವಾಚಕ ಮತ್ತು ಸಸ್ಯವಾಚಕ ಸ್ಥಳನಾಮದಿಂದ ಕೂಡಿದಾಗಿದೆ. ಶಾಸನಗಳಲ್ಲಿ ತಾವರೆಹಳ್ಳಿ೨ಳ, ತಾವರೆಗೆ,[೨೪] ಎಂಬುದಾಗಿ ಉಲ್ಲೇಖಿಸಿವೆ ಗ್ರಾಮದ ಅಮೃತಲಿಂಗೇಶ್ವರ ದೇವಾಲಯದ ಮುಂದಿನ ಮಂಟಪದಲ್ಲಿರುವ ಆಳೆತ್ತರದ ನಂದಿಯ ಆರಾಧನೆಯಿಂದಾಗಿ ಗ್ರಾಮಕ್ಕೆ ನಂದಿತಾವರೆ ಎಂದು ಹೆಸರು ಬಂದಿದ್ದು ನಂದಿಯ ಸ್ಥಾಪನೆಯ ಕಾಲಮಾನದ ಶಾಸನಗಳು ದೊರೆತಿಲ್ಲ ಬಹುಶಃ ಅಂತಹ ಶಾಸನಗಳೇನಾದರೂ ದೊರಕಿದರೆ ಗ್ರಾಮದ ಅಂದಿನ ಹೆಸರು ತಿಳಿಯುತ್ತದೆ. ತಾವರೆ ಎಂಬುದು ಸಸ್ಯವಾಚಕವಾಗಿದ್ದು ಅದರ ಉತ್ತರ ಪದಗಳಾಗಿ ಬಂದಿರುವ ಹಳ್ಳಿ, ಗೆರೆ ಪದಗಳು ಕ್ರಮವಾಗಿ ವಾಸ್ತವ್ಯವಾಚಿ ಹಾಗೂ ಜಲವಾಚಿ ಸ್ಥಳನಾಮ ವಾಗಿವೆ.

ಮಲೆಬೆನ್ನೂರು: ಭೂವಾಚಕ ಸ್ಥಳನಾಮ ಇದಾಗಿದೆ ಮಲೆಯ+ಬೆನ್+ಊರು=ಗುಡ್ಡದ ಬೆನ್ನಿನಲ್ಲಿರುವ ಊರು. ದಾವಣಗೆರೆ ತಾಲೂಕಿನ ಅವರಗೆರೆಯ ಶಾಸನದಲ್ಲಿ 'ಬಿನ್ನವೂರು' ಎಂದಿದೆ. ವಿಜಯನಗರದ ಶ್ರೀಕೃಷ್ಣದೇವರಾಯನ ಆಳ್ವಿಕೆಯ ಕಾಲದ ಕ್ರಿ.ಶ. ೧೫೧೬ರ ಶಾಸನದಲ್ಲಿ 'ಮಲೆಯ ಜೆನ್ನೂರ ಸೀಮೆಯ' ಎಂದಿದ್ದು ಮುಂದೆ 'ಜೆನ್ನೂರ ನರಸ' ಮತ್ತು 'ಜೆನ್ನೂರಸೂರಿಸೆಟ್ಟಿ'[೨೫] ಎನ್ನುವ ಹೆಸರುಗಳ ಉಲ್ಲೇಖವಿದೆ. ಈ ಎರಡು ಹೆಸರುಗಳು ಅಂದಿನ ಕಾಲದಲ್ಲಿದ್ದ ಮನೆತನದ ಹೆಸರಾಗಿರಬೇಕು ಎಂದೆನಿಸುತ್ತದೆ. ಇದೆ ಕೃಷ್ಣದೇವರಾಯನ ಕಾಲದಲ್ಲಿನ ಇನ್ನೊಂದು ಶಾಸನವು 'ಶ್ರೀಮತು ಆದಿಯಪ್ಪ ನಾಯಕರು ಮಲೆಯಬೆಂನ್ನೂರು ಗ್ರಾಮ ಕೆಸಟ ಪಟ್ಟಣಸ್ವಾಮಿಗೌಡ ಮತ್ತು ಪ್ರಜೆಗಳಿಗೆ ಬಿಟ್ಟ ಕಬ್ಬಿನ ಸುಂಕ'[೨೬] ದ ಬಗ್ಗೆ ತಿಳಿಸುತ್ತದೆ. ಇಲ್ಲಿ ಉಲ್ಲೇಖ ವಾಗಿರುವ ಮಲೆಯಬೆನ್ನೂರು ಗ್ರಾಮ ಆರಂಭದ ಶಾಸನ ಗಳಲ್ಲಿ ಬಿನ್ನವೂರು, ಬೆಂನ್ನೂರು ಆಗಿ ನಂತರದಲ್ಲಿ ಮಲೆಬೆನ್ನೂರು ಆಗಿರುವುದು ತಿಳಿದುಬರುತ್ತದೆ.

ಕೊಕ್ಕನೂರು: ಭೂವಾಚಕ ಸ್ಥಳನಾಮ ಇದಾಗಿದೆ ಹರಿಹರದಲ್ಲಿನ ಶಾಸನದಲ್ಲಿ 'ಕುಕನೂರ ನಾಗೆಯನಮಗ ಗೋಪಯನಾಯ್ಕನು' ಎಂದಿದ್ದು ಈ ಗ್ರಾಮಕ್ಕೆ ಕೂಕನೂರ ಎಂದು ಶಾಸನ ಉಲ್ಲೇಖಿಸಿದೆ. ಕ್ರಿ.ಶ. ೧೧೬೨ರ ವಾಸನದ ಶಾಸನದಲ್ಲಿ 'ಕೊಕ್ಕಲೂರುಮಂ'[೨೭] ಎಂದು ಉಲ್ಲೇಖಿಸಿದೆ. ಇಲ್ಲಿ ಕುಕ್ಕಟ (ಕೋಳಿ)ಗಳನ್ನು ಸಾಕಾಣಿಕೆ ಮಾಡುತ್ತಿದ್ದು ದರಿಂದಾಗಿ 'ಕುಕ್ಕಟ' ಊರು 'ಕುಕ್ಕಟೂರು' ಆಗಿ ನಂತರದಲ್ಲಿ 'ಕೊಕ್ಕಲೂರು' ಆನಂತರ 'ಕೊಕ್ಕನೂರು' ಎಂದಾಗಿದೆಯೆಂದು ಶ್ರೀಕಾಂತ ತಾಂಬೆಯವರು ಕೊಕ್ಕನೂರು ಶ್ರೀ ಆಂಜನೇಯ ಸ್ವಾಮಿಯ ಮಹಾತ್ಮೆ ಪುಸ್ತಕದಲ್ಲಿ ತಿಳಿಸಿದ್ದಾರೆ. ಈ ಭಾಗದ ಪ್ರಸಿದ್ಧ ಕೀರ್ತನಗಾರ್ತಿ ಹೆಳವನಕಟ್ಟೆ ಗಿರಿಯಮ್ಮನವರು ಇಲ್ಲಿನ ಆಂಜನೇಯಸ್ವಾಮಿ ಭಕ್ತಳಾಗಿದ್ದು 'ಲೆಕ್ಕವಿಲ್ಲದ ಖಳರ ಗೆಲಿದು ಬಂದು ಕೊಕ್ಕನೂರಿನೊಳು ನಿಂತನು' ಎಂದು ಸ್ವಾಮಿಯನ್ನು ಕುರಿತು ಹಾಡಿದ್ದಾಳೆ. ಹೆಳವನಕಟ್ಟೆ ಗಿರಿಯಮ್ಮನ ಕಾಲಕ್ಕಾಗಲೆ ಇಂದಿನ ಕೊಕ್ಕನೂರು ತನ್ನ ಈಗಿರುವ ಸ್ಥಳನಾಮ ವನ್ನು ಹೊಂದಿತ್ತು ಎಂದು ತಿಳಿಯುತ್ತದೆ. ಕೊಕ್/ಕುಕ್=ಪರ್ವ, ತಾಗ್ರ/ಗುಡ್ಡದ ತುದಿ+ಬಣ>ಬನ=ಬೆಟ್ಟ, ಶಿಖರ, ತುದಿ, ಎತ್ತರವಾದ ಪರ್ವತ ಪಂಕ್ತಿಯ ಬಳಿ ಇರುವ ಊರು.

ಚಿಕ್ಕಬಿದರೆ: ಸಸ್ಯವಾಚಕ ಹಾಗೂ ಪ್ರದೇಶವಾಚಕ ಸ್ಥಳನಾಮವಾಗಿದೆ. ಕ್ರಿ.ಶ. ೧೨೫೭ರ ಹೊಯ್ಸಳ ಚಕ್ರವರ್ತಿ ವೀರಕನ್ನರದೇವನ ಕಾಲದ ಇದೇ ಗ್ರಾಮದ ಕಲ್ಲೇಶ್ವರ ದೇವಾಲಯದ ಶಾಸನದಲ್ಲಿ 'ಚಿಕ್ಕಿಗನೆಪ್ಪತ್ತರ ತುಂಗಭದ್ರಾನದೀ ಪೂರ್ವಭಾಗದ ದುರ್ಗತ್ತಿಯ ಪ್ರವಿಷ್ಟದ ಬಿದರೆಯಲ್ಲಿ'[೨೮] ಎಂದು ಉಲ್ಲೇಖವಿದೆ. ತುಂಗಭದ್ರಾ ನದಿ ಪೂರ್ವಭಾಗದ ದುರ್ಗ್ಗವತಿಯ ಪ್ರವಿಷ್ಟದ ಬಿದರೆ ಎಂದರೆ ನದಿಯ ಬಲದಂಡೆ ಯಲ್ಲಿರುವ ಚಿಕ್ಕಬಿದರೆಯಾಗುತ್ತದೆ.

ಬನ್ನಿಕೋಡು: ಪ್ರಾಕೃತಿಕ ಸ್ಥಳನಾಮವಾಗಿದ್ದು, ಬನ್ನಿ– ವೃಕ್ಷದ ಹೆಸರನ್ನು ಪ್ರತಿನಿಧಿಸಿದರೆ. ಕೋಡು–ಉನ್ನತ ಭೂವಾಚಕ

ಸ್ಥಳ ನಿರ್ದೇಶಿಸುವುದು. ಇದೊಂದು ಐತಿಹಾಸಿಕ ಶಾಸನಸ್ಥ ಗ್ರಾಮ. ಚಲುಕ್ಯದೊರೆಯ ಸಾಮಂತನಾಗಿದ್ದ ನೊಳಂಬ ಪಲ್ಲವ ಪೆರ್ಮಾಡಿದೇವನ ಆಡಳಿತದ ಕ್ರಿ.ಶ. ೧೦೩೪ರ ನಿಟ್ಟೂರಿನ ಶಾಸನದಲ್ಲಿ 'ಬನ್ನಿಕೋಡುಂ' ಎಂದು ಉಲ್ಲೇಖಿಸಿದೆ. ಕ್ರಿ.ಶ. ೧೧೨೫ರ ಶಾಸನದಲ್ಲಿ 'ಚಿಕಬನ್ನಿಕೋಡು' ಎಂದಿದೆ. ವಿಜಯನಗರ ಕಾಲದ ಕ್ರಿ.ಶ. ೧೪೧೦ರ ಹರಿಹರದ ಶಾಸನದಲ್ಲಿ 'ಬನ್ನಿಕೋಡ ಸೀಮೆಯೊಳಗೆ ಹರಿದ್ರೆಯೆಂಬ ನದಿಯಕಟ್ಟ'[೩೦], ಎಂದು ಉಲ್ಲೇಖಗೊಂಡಿದೆ. ಶಾಸನಾಧಾರಗಳಿಂದ ಉಲ್ಲೇಖಗೊಂಡಿರುವ ಬನ್ನಿಕೋಡು, ಚಿಕಬನ್ನಿಕೋಡು, ಬನ್ನಿಕೋಡು ಕಾಲಾಂತರದಲ್ಲಿಯು ಸಹ ಬನ್ನಿಕೋಡು ಎಂದೇ ಉಳಿದುಕೊಂಡು ಬಂದಿರುವುದನ್ನು ಈಗಲೂ ಕಾಣುತ್ತೇವೆ.

ಹೆಸರೇ ಸೂಚಿಸುವಂತೆ ಸಸ್ಯವಾಚಕ ಸ್ಥಳನಾಮವಾಗಿರುವ ಕುಂಬಳೂರು, ಶಾಸನಗಳಲ್ಲಿ ಕುಂಬೂರ, ಕುಂಬಲೂರ ಎಂದು ಉಲ್ಲೇಖವಾಗಿದೆ. ಇದೇ ರೀತಿಯಾಗಿ ಸಹಜ ಜಲವಾಚಕ ಸ್ಥಳನಾಮವಾಗಿರುವ ಎಳೆಹೊಳೆ ಗ್ರಾಮ ತುಂಗಭದ್ರಾ ತಟದಲ್ಲಿದೆ. ನದಿ ಎಳೆಯಾಗಿ ಹರಿದಿರುವುದರಿಂದ ಎಳೆಹೊಳೆಯಾಗಿ ಕರೆದಿರಬೇಕು. ಶಾಸನಗಳಲ್ಲಿ ಎಲೆವಳ್ಳಿ ಎಂದು ಹೆಸರಿಸಿವೆ. ಸಸ್ಯವಾಚಕ ಸ್ಥಳನಾಮದಿಂದಿರುವ ಊರು ಎಲವಟ್ಟಿ, ಶಾಸನಗಳಲ್ಲಿ 'ಮಂಬೆತು..... ನೆಲೆವಿಡಿನಲ್ಲಿದ್ದಾಗ ಎಲವಟ್ಟಿಯ ಸೋಮೇಶ್ವರದೇವರ ನೈವೇದ್ಯಕಂ ನಾರಾಯಣದೇವರ ನೈವೇದ್ಯಕಂ'[೩೧] ಎಂದಿದೆ. ನಂತರದ ಶಾಸನಗಳಲ್ಲಿ ಎರೆಹಿಟ್ಟಿ, ಎಡವಟ್ಟಿ, ಎಲೆವಟ್ಟಿ ಎಂಬುದಾಗಿ ಉಲ್ಲೇಖಿಸಿವೆ. ಇದೇ ರೀತಿ ಇಂದಿನ ಮಿಟ್ಲಕಟ್ಟೆ ೧೩೫೪ರ ಶಾಸನದಲ್ಲಿ ಮಿಟ್ಟಲಿಗನಕಟ್ಟೆ ಎಂದಿದೆ. ಹಾಗೆಯೆ ಬೆಳ್ಳೂಡಿ ಗ್ರಾಮವನ್ನು ಶಾಸನಗಳಲ್ಲಿ ಬೆಳವಡಿ, ಬೆಳ್ವಡಿ, ಬೆಳುವಡಿ ಎಂದೂ ಉಲ್ಲೇಖಿಸಿ ಪ್ರಸ್ತುತ ಬೆಳ್ಳೂಡಿಯಾಗಿರುವುದನ್ನು ಕಾಣುತ್ತೇವೆ.

ಇಂದಿನ ವಾಸನವು ತಾಲೂಕಿನ ಹಲವಾರು ಶಾಸನಗಳಲ್ಲಿ 'ಓಸನ' ಎಂದೂ ಉಲ್ಲೇಖವಾಗಿದೆ. ವಾಸನ>ಬಾಸನವಾಗಿ>ಬಾಸಿಂಗವಾಗಿದೆ. ಬಾಸಿಂಗಕ್ಕೆ ಪ್ರಸಿದ್ಧಿಯಾದ ಊರಾಗಿರಬಹುದೇ? ಹೀಗೆ ಸಾಲಕಟ್ಟೆ ಗ್ರಾಮವನ್ನು ಕ್ರಿ.ಶ. ೧೩೫೪ರ ವಿಜಯನಗರ ಕಾಲದ ಶಾಸನದಲ್ಲಿ 'ಯರಚುಗ್ರಮದಿಂ ಪಡುವಲು ಸಾಲಕಟ್ಟೆ'[೩೨] ಎಂದಿದೆ. ಇನ್ನೂ ಕೆಲವು ಶಾಸನಗಳಲ್ಲಿ 'ಸಾಲಿಕಟ್ಟೆಫಿಧಾದ್ರಾಯಾಮುತ್ತ'[೩೩] ಎಂದಿದೆ. ಹೀಗೆಯೆ ಹನಗವಾಡಿಯು ಸಹ ಕ್ರಿ.ಶ. ೧೪೧೦ರ ವಿಜಯನಗರ ಕಾಲದ ಶಾಸನದಲ್ಲಿ ಹನಗವಾಡಿ ಎಂದಿದೆ. ಇದೇ ರೀತಿಯಾಗಿ ತಾಲೂಕಿನ ಹಲವಾರು ಗ್ರಾಮಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ.

ಆಧಾರಸೂಚಿ

೧. ಎ.ಕ. ಸಂ. ೧೧, ದಾವಣಗೆರೆ, ೬೬.
೨. ಅದೇ, ದಾ. ೩೨.
೩. ಅದೇ, ದಾ. ೨೫.
೪. ಅದೇ, ದಾ. ೨೩.
೫ ಅದೇ, ದಾ. ೬೭.
೬. ರವಿಕುಮಾರ ಕೆ. ನವಲಗುಂದ, ವರಾಹ ಲಾಂಛನ ತಾಮ್ರಪತ್ರೆ, ಪ್ರಜಾವಾಣಿ, ಆಗಸ್ಟ್, ೦೯-೨೦೧೩.
೭. ಪೂರ್ವೋಕ್ತ, ದಾ. ೩೮.
೮. ಕರ್ನಾಟಕದ ಕೈಫಿಯತ್ತುಗಳು, ಪುಟ ೩ ಮತ್ತು ೧೭೨.
೯. ಅದೇ, ಪುಟ ೬೭.
೧೦. ಅದೇ, ಪುಟ ೯೬.
೧೧. ಪೂರ್ವೋಕ್ತ ದಾ. ೬೬.
೧೨. ಕ.ವಿ.ವಿ.ಶಾ.ಸಂ. ೧, ಹರಪನಹಳ್ಳಿ.
೧೩. ಪೂರ್ವೋಕ್ತ, ದಾ. ೮೪.
೧೪. ಅದೇ, ದಾ. ೨೫.
೧೫. ಅದೇ, ದಾ. ೭೩.
೧೬. ಅದೇ, ದಾ. ೭೫.
೧೭. ಅದೇ, ದಾ. ೭೪.
೧೮. ಅದೇ, ದಾ. ೭೦.
೧೯. ಅದೇ, ದಾ. ೨೫.
೨೦. ಅದೇ, ದಾ. ೨೨.
೨೧. ಹರಿಹರ ದೇವಾಲಯ, ಪುಟ ೨೯೩.
೨೨. ಪೂರ್ವೋಕ್ತ, ದಾ. ೬೯.
೨೩. ಅದೇ, ದಾ. ೩೧.
೨೪. ಅದೇ, ದಾ. ೬೧.
೨೫. ಅದೇ, ದಾ. ೬೯.
೨೬. ಅದೇ, ದಾ. ೧೦೭.
೨೭. ಅದೇ, ದಾ. ೧೦೬.
೨೮. ಅದೇ, ದಾ. ೧೧೫.
೨೯. ಅದೇ, ದಾ. ೧೦೩.
೩೦. ಅದೇ, ದಾ. ೨೩.
೩೧. ಅದೇ, ದಾ. ೧೨೨.
೩೨. ಅದೇ, ದಾ. ೬೭.
೩೩. ಅದೇ, ದಾ. ೨೭.

೩೨

ಹಿರಿಯೂರು ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳು

ಕಾಂತರಾಜ್ ಹೆಚ್. ದೊಡ್ಮನೆ*

ಸ್ಥಳನಾಮಗಳು ಜೀವಂತ ಪಳಿಯುಳಿಕೆಗಳು; ಸ್ಥಳನಾಮಗಳು ಮೇಲ್ನೋಟಕ್ಕೆ ಸಾಮಾನ್ಯ ಗುರುತಿನ ಚಿಹ್ನೆಗಳಾಗಿ ಕಂಡರೂ ಭಾಷಾಶಾಸ್ತ್ರಜ್ಞರೋ, ಇತಿಹಾಸಕಾರರೋ, ಪ್ರಾಕ್ತತ್ವ ಶಾಸ್ತ್ರಜ್ಞರೋ ಅವುಗಳನ್ನು ತನ್ನ ಶಾಸ್ತ್ರಕ್ಕನುಗುಣವಾಗಿ ಒರೆಹೆಚ್ಚಿ ನೋಡಿದಾಗ ಅವುಗಳಿಂದ ಅತ್ಯಂತ ಕುತೂಹಲಕಾರಿ ಅಂಶಗಳು ಹೊರಬರುತ್ತವೆ. ನಮ್ಮ ಹಿಂದಿನ ತಲೆಮಾರಿನ ಭಾಷೆ ಜೀವವಿಧಾನ, ದೃಷ್ಟಿವೈಶಾಲ್ಯ ಭೌಗೋಳಿಕ ಹಾಗೂ ಚಾರಿತ್ರಿಕ ಅಂಶಗಳ ಮೇಲೆ ಸ್ಥಳನಾಮ ಅಧ್ಯಯನವು ಹೊಸ ಬೆಳಕನ್ನು ಚೆಲ್ಲುತ್ತದೆ. ಸ್ಥಳನಾಮಗಳಲ್ಲಿ ಪರಸ್ಪರ ಹೋಲಿಕೆ ಇಲ್ಲವೇ ಸಾಮ್ಯವು ಕಂಡುಬಂದರೆ ಅಂತಹ ಸ್ಥಳನಾಮಗಳು ಪ್ರಪಂಚದ ಯಾವ ಭಾಗದಲ್ಲೇ ಇರಲಿ ಅಲ್ಲಿ ಒಂದೇ ರೀತಿಯ ಅಥವಾ ಹೋಲಿಕೆಯುಳ್ಳ ನಾಗರಿಕತೆಯ ಕುರುಹುಗಳನ್ನು ಕಾಣಲು ಸಾಧ್ಯವಿದೆಯೆಂದು ಸ್ಥಳನಾಮಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ.[೧]

ಈ ಅಧ್ಯಯನಕ್ಕಾಗಿ ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕಿನ ಶಾಸನಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಇದು ಬಿ.ಎಲ್. ರೈಸ್ ಅವರು ಸಂಪಾದಿಸಿದ ಎಫಿಗ್ರಾಫಿಯ ಕರ್ನಾಟಕ ಶಾಸನ ಸಂಪುಟ ೧೧ರಲ್ಲಿ ತಾಲ್ಲೂಕಿನ ೮೭ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಪ್ರಾಚೀನ ಸ್ಥಳಗಳನ್ನು ಗುರುತಿಸಲಾಗಿದೆ. ೧೬ನೇ ಶತಮಾನದಲ್ಲಿ ಮಾಯಸಂದ್ರದ ದೊರೆ ಕೇಶವನಾಯ್ಕನು ಹಿರಿಯೂರನ್ನು ಸ್ಥಾಪಿಸಿದನೆಂದು ಹೇಳುತ್ತಾರೆ. ಆದರೆ ೧೫ನೇ ಶತಮಾನದ ಮಧ್ಯಭಾಗದಲ್ಲಿ ಬೂದಿಹಾಳು ಸೀಮೆಯನ್ನು ಕಸವೇಂದ್ರ ಭೂಪಾಲನು ಆಳುತ್ತಿದ್ದನೆಂದೂ, ಈತ ಸಿರುಮಾನ್ಯಪಾಲನೊಂದಿಗೆ ಯುದ್ಧ ಸಾರಿದ್ದನೆಂದು ತಿಳಿದುಬರುತ್ತದೆ. ೧೧-೧೨ನೇ ಶತಮಾನದಲ್ಲಿ ಇದ್ದಂತಹ ಶ್ರೇಷ್ಠ ವಚನಕಾರ ದೇವರದಾಸಿಮಯ್ಯನ ನಾಮೋಲ್ಲೇಖವಿರುವ ಶಾಸನಗಳು ಹಿರಿಯೂರು-ಮರಡಿಪುರ ಸ್ಥಳಗಳಲ್ಲಿ (ಕ್ರಿ.ಶ. ೧೦೬೦-೧೧೫೦) ದೊರೆತಿರುವುದರಿಂದ ಹಿರಿಯೂರು ಕೇಶವನಾಯ್ಕನ ಸ್ಥಾಪನೆಗೆ ಮೊದಲೇ ಇದ್ದಿತೆಂದು ತಿಳಿಯಬಹುದಾಗಿದೆ.[೨]

ಬಬ್ಬೂರಿನ ಕವಿ ರಂಗನು ತನ್ನ ಕಾವ್ಯದಲ್ಲಿ (ಅಂಬಿಕಾ ವಿಜಯ, ಪರಶು ರಾಮರಾಮಾಯಣ) 'ಘನಪುರಿ' ಎಂದು ಉಲ್ಲೇಖಿಸಿದ್ದಾನೆ. 'ಘನಪುರಿ' ಎಂದರೆ ದೊಡ್ಡ ಊರು ಎಂದರ್ಥ.

ಐಮಂಗಲ – ಹಿರಿಯೂರು ತಾಲ್ಲೂಕಿನ ಐಮಂಗಲದ ಕ್ರಿ.ಶ. ೯೭೫ರ ಶಾಸನವು[೩] ಅಯ್ಯಪಮಂಗಳದೇವನ ಮಗ ನನ್ನಿನೊಳಂಬನು ಅಯ್ಯಮಂಗಳಕ್ಕೆ ಬ್ರಹ್ಮದೇಯವನ್ನು ಬಿಟ್ಟಿರುತ್ತಾನೆ. ಈ ಬ್ರಹ್ಮದೇಯದ ಪೂರ್ವಮರ್ಯಾದೆ ತಪ್ಪಿಸಿದ್ದನ್ನು ತಿಳಿದು ಇದಕ್ಕೆ ಕಾರಣವಾದ ಮಾರಯ್ಯನ ಮಗ ಏಚಯ್ಯನನ್ನು ಶಿಕ್ಷಿಸಲು ನನ್ನಿನೊಳಂಬನ ಸಾಮಂತಾಧಿಪತಿ ಪಂಚಲದೇವನ ಪೆರ್ಗ್ಗಡೆ ಪಡುವಗೆರೆಯ ೫೦೦ರ ಭೋಗಪತಿ ಗುಂಡಯ್ಯನು ಹೋಗುತ್ತಾನೆ. ಆಗ ಏಚಯ್ಯನನಿಗೆ ತನ್ನ ತಪ್ಪಿನ ಅರಿವಾಗಿ ತನ್ನ ದೇಹವನ್ನೇ ದಂಡಿಸಿಕೊಂಡು ಪೆರ್ಗ್ಗಡೆ ಗುಂಡಯ್ಯನ ಕ್ಷಮೆಯಾಚಿಸುತ್ತಾನೆ. ಕ್ಷಮೆ ಕೊಟ್ಟ ಗುಂಡಯ್ಯ ಅಯ್ಯಮಂಗಳದ ಪೂರ್ವ ಮರ್ಯಾದೆಯನ್ನು ಉಳಿಸಿ ಅದನ್ನು ಮುಂದುವರಿಸಿಕೊಂಡು ಹೋಗುವಂತೆ ಹೇಳಿದುದನ್ನು ತಿಳಿಸುತ್ತದೆ. ನೊಳಂಬ ಪಲ್ಲವರ ರಾಜ ಅಯ್ಯಪದೇವನು ಆಕ್ವೆಕೆ ಮಾಡಿದ್ದರ ಪರಿಣಾಮವಾಗಿ ಈ ಗ್ರಾಮಕ್ಕೆ ಅಯ್ಯಪಮಂಗಳ, ನಂತರ ಶಾಸನಗಳಲ್ಲಿ ಆಯಿಮಂಗಲ[೪], ಐಮಂಗಲ[೫] ಎಂಬುದಾಗಿ ಕರೆಯಲಾಗಿದೆ. ಇಲ್ಲಿ 'ಮಂಗಲ' ಎಂಬ ಪಾರ್ಗಿಕವೇ ಇದೊಂದು ಅಗ್ರಹಾರ ಎಂಬುದನ್ನು ಸೂಚಿಸುತ್ತದೆ.

ಹೆಮದಳ – ಹೆಮದಳದ ಕ್ರಿ.ಶ. ೧೫೯೨ರ ಶಾಸನವು[೬] ವಿಜಯನಗರ ಅರಸರ ಸಾಮಂತರಾದ ಹರತಿಪಾಳೆಯಗಾರ ಲಕ್ಷ್ಮೀಪತಿ ನಾಯಕನ ಮಗ ಚಿಕ್ಕರಂಗಪ್ಪ ನಾಯಕನು ಹರತಿ ಕೋಟೆಯಲ್ಲಿ ಆಳುತ್ತಿದ್ದು, ತನ್ನ ಕಾಳಾಮುಖಿ ಗುರುಗಳಾದ ಹೊಟ್ಟೆಯಿಶ್ವರಯ್ಯ ಎಂಬುವವರ ಸಿಂಹಾಸನ ಮಠಕ್ಕೆ ರಾಯದುರ್ಗಕ್ಕೆ ಸಲ್ಲುವ ಹರತಿಯ ಸ್ಥಳದೊಲಗಿನ ಹೆಂಮಡಿಹಾಳು ಎಂಬ ಗ್ರಾಮವನ್ನು ಅರ್ಪಿಸಿದ ಅಂಶ ಸ್ಪಷ್ಟವಾಗುತ್ತದೆ. ಶಾಸನಗಳಲ್ಲಿ ಹೆಂಮಡಿಹಾಳು, ಹೆಮಡಾಳು, ಯಮ್ದಾಳು ಎಂದೆಲ್ಲಾ ಆಗಿ ಇತ್ತೀಚೆಗೆ ಇದೇ ಗ್ರಾಮದ ಶಿಕ್ಷಕ ರಾಮದಾಸ ಎಂಬುವವರು 'ಹೆಮದಳ'ವೆಂದು ಸುಂದರಗೊಳಿಸಿದ್ದಾರೆ. ಈ ಶಾಸನದಿಂದ ಹರತಿ ಪಾಳೆಯಗಾರರ ವಂಶಾವಳಿ ಮತ್ತು ಹೊಟ್ಟೆಯೀಶ್ವರಯ್ಯನವರ ಮಠದ ವಂಶಾವಳಿಯನ್ನು ತಿಳಿಸುತ್ತದೆ.

* ಪಿ.ಎಚ್.ಡಿ., ಸಂಶೋಧನಾರ್ಥಿ, ಭಾರತೀಯಾರ್ ವಿಶ್ವವಿದ್ಯಾಲಯ, ಕೋಯಿಮತ್ತೂರ್.

ಹೆಂಮಡಿಹಾಳು > ಯಮ್ಡಾಳು > ಹೆಮ್ಡಾಳು.

ಉಪ್ಪಾರಹಳ್ಳಿ – ಉಪ್ಪಾರಹಳ್ಳಿಯ ಕ್ರಿ.ಶ. ೧೫೫೪೮ರ ಶಾಸನವು[೩] ವಿಜಯನಗರದ ಸದಾಶಿವರಾಯನು ಆಳ್ವಿಕೆಯ ಸಂದರ್ಭದಲ್ಲಿ ಯಜುಶಾಖೆಯ ಮಹಾಮಂಡಲೇಶ್ವರನಾದ ವೆಂಗಲರಾಜರು, ಪಾಪೈದೇವ ಚೋಳ, ಅರಸರು, ರಾಮ ರಾಜ್ಯದ ತಿರುಮಲರಾಜ ಇವರೆಲ್ಲರೂ ತಮಗೆ ಉಂಬಳಿ ಯಾಗಿ ರಾಯದುರ್ಗ ರಾಜ್ಯದ ಗೋಸಿಕೆರೆ ನಾಡೊಳಗಣ ಹರತಿಸ್ಥಳಕ್ಕೆ ಸಲ್ಲುವ ಪರಿಕರಹಳ್ಳಿಗೆ ಪ್ರತಿನಾಮವಾದ ವೆಂಗಳಾಪುರವೆಂಬ ಗ್ರಾಮದ ಅಷ್ಟಭೋಗ, ತೇಜಸ್ವಾಮ್ಯ, ಸುಂಕವನ್ನು ಅಂಬಲಗೆರೆಯ ತಿರುವೆಂಗಳನಾಥ ದೇವರಿಗೆ ಅರ್ಪಿಸಿದಂತೆ ಹೇಳಿದೆ. ಈ ಶಾಸನದಿಂದ ಉಪ್ಪಾರಹಳ್ಳಿಯನ್ನು ಹಿಂದೆ ಪರಿಕರಹಳ್ಳಿ ಎಂದು ಕರೆಯುತ್ತಿದ್ದರು. ನಂತರ ಸದಾಶಿವರಾಯನ ಕಾಲದಲ್ಲಿ ವೆಂಗಳಾ ಪುರವನ್ನು ಅಂಬಲ ಗೆರೆಯ ತಿರುವೆಂಗಳನಾಥನ ಹೆಸರಿನಲ್ಲಿ ಕರೆದಿರಬಹುದು.

ಶಿಡ್ಲೆಯ್ಯನಕೋಟೆ – ಶಿಡ್ಲೆಯ್ಯನಕೋಟೆಯ ಕ್ರಿ.ಶ. ೧೧೩೬ರ ಶಾಸನವು[೪] ಸಿಡುಲಯನಕೋಟದ ಗೌಡ ಸಿರಿಯ ಗೊಂಡ ಚಿಕ್ಕಯ್ಯ ಮತ್ತು ಅವರ ಚಿಕ್ಕಪ್ಪ ದೊಟ್ಟಲಕ್ಕಯ್ಯನವರು, ಪೋಲೋ ಎಂಬ ಕಲ್ಲುಕುಟುಕನಿಂದ ಬ್ರಹ್ಮದೇವರ ಗುಡಿ ಯನ್ನು ಕಟ್ಟಿಸಿದರು. ವಿಜಯನಗರ ಅರಸರ ಸಾಮಂತರಾದ ಹರತಿ ಪಾಳೆಯಗಾರರ ಪದಣನಾಯಕನು ಹರತಿಸ್ಥಳದಲ್ಲಿ ಆಳುತ್ತಿದ್ದಾಗ ಸಿಡುಲಯನ ಕೋಟದಲ್ಲಿ ಕ್ರಿ.ಶ. ೧೫೭೩ರಲ್ಲಿ ಕೆರೆಯನ್ನು ಕಟ್ಟಿಸಿದ ವಿಚಾರ ಸ್ಪಷ್ಟವಾಗುತ್ತದೆ. ಈ ಎರಡು ಶಾಸನಗಳಿಂದ ಶಿಡ್ಲೆಯ್ಯನಕೋಟೆಯನ್ನು ಸಿಡುಲಯನಕೋಟ ಎಂದು ಕರೆಯುತ್ತಿದ್ದರು. ಕ್ರಮೇಣ ಸಿಡಿಲು ಪದ ಬಿಟ್ಟು ಶಿಡ್ಲು ಬಳಕೆಯಾಗಿ ಶಿಡ್ಲೆಯ್ಯನಕೋಟೆ ಎಂದು ನಾಮಾಂಕಿತ ವಾಗಿದೆ.

ತವಂದಿ – ಹರ್ತಿಕೋಟೆಯ ಕ್ರಿ.ಶ. ೧೨೦೮ರ ಶಾಸನವು[೫] ವಿಜಯನಗರದ ಅರಸ ಬಲ್ಲಾಳರಾಯನ ಆಳ್ವಿಕೆ ಕಾಲದಲ್ಲಿ ತನ್ನ ಪ್ರಧಾನಿಯಾದ ಬೆಬ್ಬಯ ದಣ್ಣಾಯಕ ಮತ್ತು ಕೆನ್ನೆಯ ನಾಯಕರುಗಳು ತವನಿಧಿಯ ನಾಗಗೌಡನಿಗೆ ಕೆಂಡನ ಕೆರೆಯ ಚತುಸೀಮೆಯೊಳಗಿನ ಸರ್ಬ ಕೊಡಗಿಯನ್ನು ಕೊಟ್ಟೆವು ಎಂದು ಉಲ್ಲೇಖಿಸಲಾಗಿದೆ. ಈ ಶಾಸನದಿಂದ ತವಂದಿ ತವನಿಧಿಯಾಗಿತ್ತೆಂದು, ಬೇರೆ ಶಾಸನಗಳಲ್ಲಿ ತಡಸೂರರಕೆರೆ ಅಥವಾ ತವನಿಧಿ ಕೆರೆ ಎಂದು ಉಲ್ಲೇಖಗೊಂಡಿವೆ.

ತವ + ನಿಧಿ = ತವನಿಧಿ > ತವಂಧಿ

ತವ = ನಾಶವಾಗು, ವ್ಯಯವಾಗು, ಬರಿದಾಗು

ನಿಧಿ = ಸಂಪತ್ತು, ಐಶ್ವರ್ಯ, ಎಂದರ್ಥ

ಅಬ್ಬಿನಹೊಳೆ – ಅಬ್ಬಿನಹೊಳೆಯ ಕ್ರಿ.ಶ. ೧೨೪೭೭ರ ಶಾಸನವು[೧೦] ೬೬ ಮಾಂಡಲಿಕರ ತಲೆಗೊಂಡ ದಾನವ ಮಯರಾರಿ ಇರುಗೋಳದೇವನು ಆಳ್ವಿಕೆ ಮಾಡುತ್ತಿರುವಾಗ ಕ್ರಿ.ಶ. ೧೧೯೯ರಲ್ಲಿ ಸುಂಕದ ಭಾಗೆಯ್ಯ ಭೀಮಯ್ಯನು ಅಬಿನ ಹೊಳಲು ಗ್ರಾಮಕ್ಕೆ ಸುಂಕವನ್ನು ಸಾರಿಗೆಯಲ್ಲಿ ತುಂಬಿಕೊಂಡು ಶ್ರೀರಾಮದೇವರ ಅಖಂಡ ದೀಪ – ಧೂಪ, ನೈವೇದ್ಯಕ್ಕೆ ಮಾನ್ಯ ಮಾಡಿದ ವಿಚಾರ ತಿಳಿಸುತ್ತದೆ. ಈ ಶಾಸನದಿಂದ ಅಬ್ಬಿನಹೊಳೆ, ಅಬಿನಹೊಳಲು ಆಗಿತ್ತದೆಂಬ ಅಂಶ ಸ್ಪಷ್ಟವಾಗು ತ್ತದೆ. ಹೊಳಲು ಕ್ರಮೇಣ ಹೊಳೆಯಾಗಿ ಅಬ್ಬಿನಹೊಳೆ ಎಂದು ನಾಮಾಂಕಿತವಾಗಿದೆ.

ಆನೆಸಿದ್ರಿ – ಆನೆಸಿದ್ರಿಯ ಕ್ರಿ.ಶ. ೧೬೮೭ ರ ಶಾಸನವು[೧೧] ಪೂರ್ವದಲ್ಲಿ ಕೃಷ್ಣರಾಯ ಪಾಲಿಸಿದಂತಹ ಆನೆಸಿದಾರಿ ಅಗ್ರಹಾರ ಗ್ರಾಮವನ್ನು ಚಿತ್ರದುರ್ಗ ಪಾಳೆಯಗಾರ ಕಾಮಗೇತಿ ಕಸ್ತೂರಿ ಮದಕರಿನಾಯಕನ ಆಳ್ವಿಕೆಯಲ್ಲಿ ಕೋನಪ್ಪನ ಅಗ್ರಹಾರವಾದ[೧೨] ಆನೆಸಿದಾರಿ ಗ್ರಾಮದ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿಸಿದ ವಿಚಾರ ತಿಳಿಯುತ್ತದೆ. ಈ ಶಾಸನದಲ್ಲಿ ಆನೆಸಿದ್ರಿ ಆನೆಸಿದಾರಿ ಆಗಿತ್ತು. ಆನೆಸಿದಾರಿ ಗ್ರಾಮವೇ ಇಂದಿನ ಆನೆಸಿದ್ರಿಯಾಗಿ ಕರೆಯಲ್ಪಟ್ಟಿದೆ.

ಗೂಳ್ಯ – ವೇಣುಕಲ್ಲುಗುಡ್ಡದ ಕ್ರಿ.ಶ. ೧೫೪೪೮ರ ಶಾಸನವು[೧೩] ಮಹಾಮಂಡಲೇಶ್ವರರಾದ ಕೊಂಡಯದೇವ ಅರಸರುಗಳು ಗುಡ್ಡದ ಸೀಮೆಯೊಳಗಣ ಗೂಳಿಯ ಕೆರೆ ಒಡೆದು ಖಿಲವಾಗಿ ಹೋದಾಗ ಗುಡ್ಡದ ಗಿರಿಯಣ್ಣನಿಗೆ ಮಣಲ್ ೨೦ನ್ನು ನಾವು ಕೊಟ್ಟೆವು ಎಂದು ಉಲ್ಲೇಖಿಸಲಾಗಿದೆ. ಈ ಶಾಸನದಲ್ಲಿ ಗೂಳಿಯ ಗ್ರಾಮವೇ ಇಂದು ಗುಳ್ಯ, ಗೂಳ್ಯ ಎಂದು ಕರೆಯುತ್ತಿದ್ದಾರೆ.

ಒಟ್ಟಿನಲ್ಲಿ ಸ್ಥಳನಾಮ ಅಧ್ಯಯನವು ಈ ಪರಿಸರದಲ್ಲಿನ ಅಧ್ಯಯನಕ್ಕೆ ಪ್ರತಿಯೊಂದು ಗ್ರಾಮಗಳು ಯಾವ ಕಾಲದಲ್ಲಿ ಯಾವ ಹೆಸರುಗಳನ್ನು ಪಡೆದವು, ಏಕೆ ಪಡೆದೆವು, ಇಂದಿನ ಹೆಸರೇನು ಮುಂತಾದ ವಿಷಯಗಳನ್ನು ಕುರಿತು ಚರ್ಚಿಸ ಲಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಗೋಪಾಲಕೃಷ್ಣ ವಿ., ಸ್ಥಳನಾಮ ಅಧ್ಯಯನಗಳು. ಪುಟ ೨೯.
೨. ಗಿರಿಜಾ ಟಿ., ಚಿತ್ರದುರ್ಗ ಜಿಲ್ಲಾ ದರ್ಶಿನಿ. ಪುಟ ೩೩೫.
೩. ಎಫಿಗ್ರಾಫಿಯಾ ಕರ್ನಾಟಿಕ, ಸಂ ೧೧. ಹಿರಿಯೂರು ೧. ಪುಟ ೨೮೮.
೪. ಅದೇ, ಸಂಖ್ಯೆ ಹಿರಿಯೂರು ೧೩.
೫. ಅದೇ, ೩. ೬. ಅದೇ, ೬. ೭. ಅದೇ, ೨೨. ೮. ಅದೇ, ೨೩.
೯. ಅದೇ, ೧೮. ೧೦. ಅದೇ, ೩೭.
೧೧. ಅದೇ, ೫೮.
೧೨. ಅದೇ, ೫೭.
೧೩. ಅದೇ, ೩೫.

ಶಾಸನಗಳಲ್ಲಿ ಜಾನಪದ ವಾದ್ಯ ಮದ್ದಳೆ ಮತ್ತು ಕಂಸಾಳೆ

ಟಿ.ಎಚ್.ಎಂ. ಬಸವರಾಜ್*

ಎಫಿಗ್ರಾಫಿಯ ಕರ್ನಾಟಕ ನಂ. ೯ (ಬಿ.ಎಲ್. ರೈಸ್ ಆವೃತ್ತಿ) ಬೆಂಗಳೂರು ಜಿಲ್ಲೆ, ಬೆಂಗಳೂರು ತಾಲೂಕ ಶಿಲಾಶಾಸನ ಸಂಖ್ಯೆ ೧೨೭ (ಕೊಡಿಗೇನಹಳ್ಳಿ, ಕ್ರಿ.ಶ. ೧೪೩೧) ವಿಜಯನಗರದಲ್ಲಿ ದೇವರಾಯ ಆಳುತ್ತಿದ್ದ ಸಮಯ ಕೊಡಿಗೇನಹಳ್ಳಿ ಸೋಮೇದೇವರ ನೈವೇದ್ಯ ಅಂಗರಂಗಭೋಗ ನಡೆಸುವ ಕಟ್ಟಳೆ ಎರಡು ಹೊತ್ತಿನ ನೈವೇದ್ಯ ಪಾತ್ರ ಭೋಗಕ್ಕೆ ಪಾತ್ರದ ಜನಾನುಷ್ಠಾನ ಜನತೆಗೆ ಮದ್ದಲೆಕಾರನ ಜನ ೧ ಸಿತಾರನ ಜನ ೧ ಉಪಾಂಗದ ಜನ ೧, ಕಂಸಾಳೆ ಜನ ೧ ಅಂತು ಜನ ಏಳು ಜನ ಮೇಳೆ ಎರಡು ಹೊತ್ತು ಅಂಗರಂಗ ಭೋಗವನ್ನು ನಡೆಸಿ ಆ ವಿರುಪಾಕ್ಷಪುರವೆಂಬ ದೇವರಾಯಪುರವಾದ ಗ್ರಾಮ ದೇವ ಸಮುದ್ರದ ಕೆರೆಯ ಕೆಳಗಣ ಗದ್ದೆಯ ಆಗುಮಾಡಿಕೊಂಡು ಆ ಚಂದ್ರಾರ್ಕವಾಗಿ ಸುಖದಿಂದ ಭೋಗಿಸುವುದು.

ಮದ್ದಲೆಯ ಮಧ್ಯಭಾಗದಲ್ಲಿ ಕವಚಗಳಿರುತ್ತವೆ. ಕಟ್ಟು ಕವಳೆ, ಜೀವ ಕವಳೆ, ಒತ್ತು ಕವಳೆ ಜೀವ ಕವಳೆಯು ಗುಣಪಟ್ಟ ಮದ್ದಲೆಗೆ ಸಹಜವಾಗಿ ನಾದ ಮಾದುರ್ಯವನ್ನು ಒದಗಿಸುತ್ತದೆ. ಚರ್ಮವನ್ನು ಆರಿಸುವಾಗ ದನದ, ಆಡಿನ, ಎಮ್ಮೆಯ ಚರ್ಮವನ್ನು ಬಳಸಬೇಕು. ಮರದ ಕಳಸಿಗಿಗೆಯ ಬಲ ಬದಿಯಲ್ಲಿ ೩ ಬಗೆಯ ಚರ್ಮವನ್ನು ಹಾಕಿ, ಮೊದಲ ಹಂತದಲ್ಲಿಯೇ ಧೋಕಾರದಂಥ ನಾದವನ್ನು ನಿಯಂತ್ರಿಸುವುದು. ಅಡ್ಡಿಗೆಯೆಂಬ ವೃತ್ತದ ಸುತ್ತ ೩೨ ಕಟ್ಟುಗಳನ್ನು ಬಿಗಿದು ೩ ಕವಚಗಳನ್ನು ಒಂದಕ್ಕೊಂದು ಕಟ್ಟಿ ಬಿಡುವುದು, ಎಡಭಾಗ ಬಲಭಾಗಕ್ಕಿಂತ ಭಿನ್ನವಾಗಿರಬೇಕು. ಈ ಮುಂತಾದ ವಿಷಯಗಳಿಂದ ತೊಡಗಿ ಕರ್ಣ ಬೋನಗಳನ್ನು ಬಳಸುವ ಸರಸ್ವತಿ ಗಂಟುಗಳನ್ನು ಬಿಗಿಯುವ ವರೆಗಿನ ಸೂಕ್ಷ್ಮಗಳನ್ನು ತಿಳಿಯಬೇಕು. ಮದ್ದಲೆಯ ಮಧುರ ನಾದವನ್ನು ಕೇಳಿದಾಗ ಲೆಲ್ಲ ಅದನ್ನು ನುಡಿಸುವ ವ್ಯಕ್ತಿಯನ್ನು ಪ್ರಶಂಸಿಸುತ್ತೇವೆ. ಆದರೆ ಅಂಥ ನಾದವನ್ನು ಹೊರಹೊಮ್ಮಿಸು ವಂತೆ ಸಿದ್ದಗೊಳಿಸಲು ಶ್ರಮಿಸಿದ ಕೈಗಳು ಮರೆಯಲ್ಲಿಯೇ ಉಳಿದುಬಿಡುತ್ತವೆ.

ಸ್ವತಃ ವೀರಗಾಸೆಯ ಸಮಾಳವಾದ್ಯದಲ್ಲಿ ಜಾನಪದ ಕಲಾವಿದನಾದ ನಾನು ಸಮಾಳವಾದ್ಯದಲ್ಲಿ ಸಂಶೋಧನೆ ಮಾಡಬೇಕೆಂಬ ಹಂಬಲವನ್ನು ಹೊತ್ತು ಕಳೆದೊಂದು ವರ್ಷದಿಂದ ವೀರಭದ್ರದೇವರ ಗುಡಿಯಲ್ಲಿರುವ ಶಾಸನಗಳನ್ನು ಹುಡುಕಿ, ನಿರಾಶೆಗೊಂಡು ಕೊನೆಗೆ ಎಫಿಗ್ರಾಫಿಯ ಮೂಲಕ ಜಾನಪದ ವಾದ್ಯಗಳಾದ ಮದ್ದಲೆ ಮತ್ತು ಕಂಸಾಳೆಗಳಿಗೆ ಕೈ ಹಾಕಿ ಬೆಂಗಳೂರು ತಾಲೂಕ ಕೊಡಗೇನಹಳ್ಳಿ ಹೋಬಳಿ ಗ್ರಾಮಕ್ಕೆ ಹೋಗಿ ವಾಯುವ್ಯ ದಿಕ್ಕಿನ ಆಂಜನೇಯ ದೇವಾಲಯಕ್ಕೆ ಪಶ್ಚಿಮಕ್ಕೆ ನೆಟ್ಟಿರುವ ಕಲ್ಲನ್ನು ಹುಡುಕಲು ಹೋದಾಗ ನಾನು ಮತ್ತೆ ಡಾ॥ ಹೆಚ್.ಎಸ್. ಗೋಪಾಲರಾವ್ ಹಾಗೂ ಡಾ॥ ಕೆ. ರವೀಂದ್ರನಾಥ್‌ರವರನ್ನು ಸಂಪರ್ಕಿಸಿದಾಗ ಎಪಿಗ್ರಾಫಿಯನ್ನೇ ಆಧಾರವಾಗಿಟ್ಟುಕೊಂಡು ಪ್ರಬಂಧವನ್ನು ಮಂಡಿಸಲು ತಿಳಿಸಿದರು. ಕಾರಣ ಆಗಿನ ಕಾಲದಲ್ಲಿ (ಕ್ರಿ.ಶ. ೧೪೩೧) ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿಯೂ ಸಹಿತ, ಮದ್ದಲೆ ಮತ್ತು ಕಂಸಾಳೆ ಜಾನಪದ ವಾದ್ಯಗಳು ಪ್ರಚಲಿತದಲ್ಲಿದ್ದವು ಎಂದು ತಿಳಿಸಲು ಈ ಸಂಶೋಧನ ಪ್ರಬಂಧ ಮಂಡಿಸಲು ಸಹಕಾರಿಯಾಯಿತು. ನಮ್ಮ ಮಾರ್ಗದರ್ಶಕರಿಗೆ ನನ್ನ ಅಭಿವಂದನೆಗಳು.

ಬೆಂಗಳೂರು ತಾಲೂಕು

೧೨೭

ಅದೇ ಹೋಬಳಿ ಕೊಡಿಗೆಹಳ್ಳಿ ಗ್ರಾಮಕ್ಕೆ ವಾಯವ್ಯ ಆಂಜನೇಯ ದೇವಾಲಯಕ್ಕೆ ಪಶ್ಚಿಮ ನೆಟ್ಟಿರುವ ಕಲ್ಲು

ಶ್ರೀ ಗಣಾಧಿಪತಯೇ ನಮಃ ನಮಸ್ತುಂಗ ಶಿರಶ್ಚುಂಬಿ ಚಂದ್ರ

ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾ[ಯ ಶಂಭವೇ] ಸ್ವಸ್ತಿ ಶ್ರೀ ಜಯಾಭ್ಯುದಯ ಶಕವರುಷ ೧೩೫೩ನೆಯ

ಸಂದ ವರ್ತಮಾನ ವಿರೋಧಿಕ್ರುತು ಸಂವತ್ಸರದ ಭಾದ್ರಪದ

ಸು ಗುಲು ಶ್ರೀಮನ್ಮಹಾರಾಜ ರಾಜಪರಮೇಶ್ವರ ಶ್ರೀವೀರ

ವಿಜಯಭೂಪತಿರಾಯ ಮಹಾರಾಯರ ಕುಮಾರರು ದೇವರಾಯಮ

* ಜಾನಪದ ಕಲಾವಿದರು, ೩೭/೨೫, ವಿದ್ಯಾಗಿರಿ ಬಡಾವಣೆ, ಬಳ್ಳಾರಿ.

ಹಾರಾಯರು ವಿಜಯನಗರಿಯ ಸಿಂಹಾಸನದಲು ಸುಕಸಂಕ
ತಾ ವಿನೋದದಿಂದ ಪ್ರಿತಿವೀರಾಜ್ಯಂಗೆಯಿಉತಯಿದಲ್ಲಿ ಅ ದೇವರಾ
ಯಮಹಾರಾಯರ ಸಮುಕದ ನಿರೂಪದಿಂದ ಸಕನಸಮುದ್ರ
ದ ವೊಳಗಣೂರ ಮುಂದಣ ಸೋಮೇದೇವರ ನಯಿವೇದ್ಯ ಅಂ
ಗರಂಗಭೋಗಕ್ಕೆ ಶ್ರೀಮಂಮಹಾಪ್ರಧಾನ ಮಂಗಪ್ಪದಂಣಾಯ
ಕರ ಮಕ್ಕಳು ಪ್ರಥಾಪರಾಯರು ಕೊಟ್ಟ ಧರ್ಮಸಾಸನ ಶ್ರೀ ಸೋಮೆಯ
ದೇವರ ನಯಿವೇದ್ಯ ಅಂಗರಂಗಭೋಗಕ್ಕೆ ಮಾಡಿದ ಕಟ್ಟಳೆ ನಂ
ಮ ನಾಯಕತನಕೆ ಕೊಟ್ಟಿಹ ಶಿವನಸಮುದ್ರದ ಕೆಳಗೆಸಲು
ವ ಯೆಲಹಂಕನಾಡಲ್ಲಿ ತರಣೆಯಪ್ಪನ ಬಾಗಿಯೊಳಗಣ ದೇವಸ
ಮುದ್ರದ ಗ್ರಾಮ್ಮದ ಕಾಲುವಳಿ ವಿರುಪಾಕ್ಷಪುರ ಗ್ರಾಮ ಕಂ
ಪ್ರಾಕು ಗುತ್ತಿಗೆಯ ಪ್ರಮಾಣ ಕಾಣಿಕೆ ಸಹ ಹುಟ್ಟುವಳಿ ಗ ೧೬ ॥ ಆ
ಗ್ರಾಮಕ್ಕೆ ಅಂದಿನಾದಾಯಾಪೂರ್ವ ಆದಾಯಕ್ಕಾಗಿ ಬಿ
ಟ್ಟಕೊಟ್ಟದು ಗ ೩ ॥ ಉಭಯಂ ವರಹಗೂಂ ವರಹ ಯಿಪ್ಪತ್ತು
ಹೊಂನಿನ ಗ್ರಾಮವಾಗಿ ಯಿರಲಾಗಿ ಆ ಗ್ರಾಮವನು ವಿಜಿಯದೇ
ವರಾಯಪುರವೆಂಬ ಗ್ರಾಮವನು ಮಾಡಿ ಆ ದೇವರಾಯಪು
ರ ಯೆಂಬ ಗ್ರಾಮವನು ದೇವನಸಮುದ್ರದ ಹಿರಿಯ ಕೆಜೆಯರ
ಳಗೆ ಬೀಜವರಿಯ ಗದ್ದೆ ಖ೫ ಬೀಜವರಿ ಗದ್ದೆ ಅಯಿ
ಗಂಡುಗವನು ಶ್ರಾವಣ ಬ ೩೦ ಸೂರಿಯಪರಾಗ ಪುಣ್ಯಕಾ
ಲದಲು ಆ ದೇವರಾಯ ಮಹಾರಾಯರಿಗೆ ಆಯುರಾರೋಗ್ಯ
ಯಿಸ್ವರಿಯ ವೃದ್ಧಿಅಹಂತಾಗಿ ಶ್ರೀಪರಮೇಸ್ವರ ಪ್ರೀತಿಯಾಗಿ
ಧಾರೆನೆಱದು ಕೊಟ್ಟವಾಗಿ ಅ ದೇವಸಮುದ್ರದ
ಕಾಲುವಳಿ ವಿರುಪಾಕ್ಷಪುರವಾದ ವಿಜಿಯದೇವರಾ
ಯಪುರವೆಂಬ ಗ್ರಾಮದರೇಕೆಗೂಂ ವರಹ ಯಿಪ್ಪ
ತ್ತು ಹೊಂನಿನಗ್ರಾಮವನು ದೇವಸಮುದ್ರದ ಹಿರಿಯ ಕೆಜೆ
ಯನಿ ಗದ್ದೆ ಅಯಿಗಂಡು ಗದ್ದೆಯಲು ಮಾಡಿಕೊಂ
ಡು ತೋಟ ತುಡಿಕೆ ಮುಂತಾಗಿ ಆಗಾಮಿಯಾಗಿ ಮಾ
ಡಿಕೊಂಬಂ ತಾಲು ಆ ಗ್ರಾಮಕ್ಕೆ ಸಲುವ ನಿಧಿ ನಿಕ್ಷೇಪ
ಜಲ ಪಾಷಾಣ ಅಕ್ಷೀಣಿ ಆಗಾಮಿ ಸಿದ್ಧ ಸಾಧ್ಯ ಅಷ್ಟ
ಭೋಗ ತೇಜ ಸ್ವಾಮ್ಯ ಮುಂತಾಗಿಯೇನುಳ್ಳ ಸರ್ವಸ್ವಾಮ್ಯವನು
ಆಗುವಮಾಡಿಕೊಂಡು ಅ ಸೋಮೆಯಿದೇವರ ನಯಿವೇದ್ಯ
ಅಂಗರಂಗಭೋಗಕ್ಕೆ ನಡಸುವ ಕಟ್ಟಳೆ ಯರಡು ಹೊ
ತ್ತಿನ ನಯಿವೇದ್ಯ ಪಾತ್ರಭೋಗಕೆ ಪಾತ್ರದ ಜನ ೧ ನಟ್ಟ
ವನ ಜನ ೧ ಮದ್ದಳೆಕಾಱನ ಜನ ೧ ಸಿತಾರನ ಜನ ೧
ಉಪಾಂಗದ ಜನ ೧ ಕಂಸಾಳೆಜನ ೧ ಅಂತು ಜನ ಏಳು
ಜನ ಯೇಳಱಲು ಯೆರಡು ಹೊತ್ತು ಅಂಗರಂಗ ಭೋಗ
ವನು ನಡೆಸಿ ಆ ವಿರೂಪಾಕ್ಷಪುರವೆಂಬ ದೇವರಾಯಪುರ
ವಾದ ಗ್ರಾಮ ದೇವಸಮುದ್ರದ ಕೆರೆಯ ಕೆಳಗಣ ಗದ್ದೆಯ
ಆಗುಮಾಡಿಕೊಂಡು ಆ ಚಂದ್ರಾರ್ಕಸ್ಥಾಯಿಯಾಗಿ ಸು
ಖದಿಂ ಭೋಗಿಸುವದು ॥ ದಾನಪಾಲನ ಯೋರ್ಮಧ್ಯೆ ದಾನಾತ್ಶ್ರೇ
ಯೋನು ಪಾಲನಂ । ದಾನಾತ್ಸ್ವರ್ಗ ಮವಾಪ್ನೋತಿ ಪಾಲನಾದ
ಚ್ಯುತಂ ಪದಂ ॥ ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನು
ಪಾಲನಂ ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್
ಮಂಗಳ ಮಹ ಶ್ರೀಮತು ಪ್ರಥಾಪರಾಯರ ಬರಹ

[ಲೇಖನ ಬರೆಯಲು ಸಲಹೆ ಸೂಚನೆಗಳನ್ನಿತ್ತ ಡಾ. ಎಂ.ಜಿ. ನಾಗರಾಜ್, ಡಾ. ಹೆಚ್.ಎಸ್. ಗೋಪಾಲ್ ರಾವ್ ಹಾಗೂ ಡಾ. ಕೆ. ರವೀಂದ್ರನಾಥ್ ಅವರಿಗೆ ಕೃತಜ್ಞತೆಗಳು]

ಆಧಾರಸೂಚಿ

೧. ಎಫಿಗ್ರಾಫಿಯ ಕರ್ನಾಟಕ ನಂ ೯ (ಬಿ.ಎಲ್. ರೈಸ್ ಆವೃತ್ತಿ), ಬೆಂಗಳೂರು ಜಿಲ್ಲೆ, ಬೆಂಗಳೂರು ತಾಲ್ಲೂಕು ಶಿಲಾಶಾಸನ ಸಂಖ್ಯೆ ೧೨೭ (ಕೊಡಿಗೇನಹಳ್ಳಿ ಕ್ರಿ.ಶ. ೧೪೩೧).
೨. ಕೆಲವು ದಿನಪತ್ರಿಕೆಗಳು, ಪ್ರಜಾವಾಣಿ ದಿ: ೧೪-೦೭-೨೦೧೩, ಭಾನುವಾರ.
೩. ಜಾನಪದ ವಾದ್ಯಗಳ ಪುಸ್ತಕಗಳು.
೪. ಅಂತರ್ಜಾಲ.

೩೪

ಹಳೇಉಪ್ಪಳ್ಳಿ ಶಾಸನದ ಮೇಘಚಂದ್ರಮುನಿ

ಡಾ. ಕೆ. ವಸಂತಲಕ್ಷ್ಮೀ*

ಕರ್ನಾಟಕ ಇತಿಹಾಸದಲ್ಲಿ ೧೧-೧೨ನೇ ಶತಮಾನವು ಕ್ರಾಂತಿಯ ಕಾಲವೆನ್ನಿಸಿದೆ. ರಾಜಕೀಯ ಸ್ಥಿತ್ಯಂತರಗಳಲ್ಲದೇ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ರಂಗದಲ್ಲೂ ಮಹತ್ತರವಾದ ಪರಿವರ್ತನೆಯುಂಟಾದ ಕಾಲವಿದು. ಈ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ವೈಷ್ಣವ, ಶೈವ ಮತ್ತು ಜೈನ ಧರ್ಮಗಳು ಪ್ರಮುಖ ಮತಗಳಾಗಿದ್ದವು. ಮೂರು ಮತದ ಮುನಿಗಳು ಆಚಾರ್ಯರು, ಯತಿಗಳು ತಮ್ಮ ಮತವೇ ಸರ್ವಶ್ರೇಷ್ಠವೆಂದು ಸಾರಲು ಗ್ರಂಥರಚನೆ, ಪ್ರವಚನಗಳು ಧಾರ್ಮಿಕಗೋಷ್ಠಿಗಳನ್ನು ನಡೆಸುತ್ತಿದ್ದರು. ತಮ್ಮ ವಿದ್ಯಾಪ್ರೌಢಿಮೆಯನ್ನು, ವಾಗ್ವೈಖರಿಯನ್ನು ಪ್ರಕಟಿಸುತ್ತಾ, ಅನ್ಯಮತದ ಮುನಿಗಳೊಂದಿಗೆ ವಾದವಿವಾದಗಳನ್ನು ಮಾಡಿ ಜಯಪತ್ರಗಳನ್ನು ಗಳಿಸುತ್ತಿದ್ದರು. ಹೀಗೆ ಸ್ಪರ್ಧಾತ್ಮಕವಾಗಿದ್ದ ಆ ಕಾಲದಲ್ಲಿ ಪ್ರಾಚೀನಕಾಲದಿಂದ ಉಳಿದು ಬಂದಿದ್ದ ಜೈನಮತವು ತನ್ನ ಪ್ರಭಾವವನ್ನು ಉಳಿಸಿಕೊಳ್ಳಬೇಕಾಗಿತ್ತು. ಪ್ರಾಚೀನ ದಿಗಂಬರ ಪಂಥದ ಜಿನಮುನಿಗಳ ಕಠೋರ ಜೀವನ ಕ್ರಮವು ವ್ಯತ್ಯಸ್ತಗೊಂಡು ಸರಳವಾಗತೊಡಗಿತು. ಜಿನಮುನಿಗಳು ಬಸದಿಗಳಲ್ಲಿ ನೆಲೆಸಿ ಜಿನಮುಖೀ ಕಾರ್ಯಗಳಲ್ಲಿ ತೊಡಗಿದ್ದನ್ನು ಶಾಸನಗಳು ತಿಳಿಸುತ್ತಿವೆ.

ಚಿಕ್ಕಮಗಳೂರು ತಾಲೂಕಿನ ಹಳೇ ಉಪ್ಪಳ್ಳಿ ಗ್ರಾಮದಲ್ಲಿ ದೊರೆತ ಶಾಸನವೊಂದು ಅನೇಕ ಹೊಸ ವಿಷಯಗಳನ್ನು ತಿಳಿಸುತ್ತಿದೆ. ೨೦೦೫ರಲ್ಲಿ ದೊರೆತಿರುವ ಈ ಹೊಸಶಾಸನವನ್ನು ಆಧರಿಸಿ ಶ್ರೀ ಎಚ್.ಎಂ. ನಾಗರಾಜರಾವ್‌ರವರು - "ಹೊಯ್ಸಳ ವಂಶದ ಆದಿ ಅರಸರು' ಎಂಬ ಲೇಖನವನ್ನು ರಚಿಸಿದ್ದಾರೆ. ಇವರು ಪ್ರಕಟಿಸಿರುವ "ಶಿವಮುಖ" ಎಂಬ ಕೃತಿಯಲ್ಲಿ ಈ ಲೇಖನದೊಂದಿಗೆ ಪೂರ್ಣ ಶಾಸನಪಾಠವನ್ನು ನೀಡಿದ್ದು, ಇಲ್ಲಿಯ ಜಿನಮುನಿಯ ಬಗೆಗೆ ಬೇರೆಯೇ ಅಧ್ಯಯನವಾಗಬೇಕಾಗಿದೆ ಎಂದು ಸೂಚಿಸಿದ್ದಾರೆ. ಅವರ ಶಾಸನ ಪಾಠ ಮತ್ತು ಸೂಚನೆಯನ್ನಾಧರಿಸಿ ರಚಿತವಾದ ಪ್ರಬಂಧವೇ ಈ ಲೇಖನ.

ಹಳೇ ಉಪ್ಪಳ್ಳಿಯ ಶಾಸನವು ಮುಗುಳಿಯ ಬಸಿದಿಗೆ ಬಿಟ್ಟ ಎರಡು ದಾನದ ವಿವರಗಳನ್ನು ತಿಳಿಸುತ್ತಿದೆ. ಈ ಶಾಸನದಲ್ಲಿರುವ ವಿವರಗಳಂತೆ, ಹೊಯ್ಸಳರ ದೊರೆ ಎರಡನೇ ವಿನಯಾದಿತ್ಯನು, ತನ್ನ ಮಕ್ಕಳಾದ ಎಱೆಯಂಗ ದೇವ, ಬಲ್ಲಾಳದೇವ, ವಿಷ್ಣುವರ್ಧನ ಮತ್ತು ಉದಿಯಾದಿತ್ಯ ದೇವರೆಂಬ ಕುಮಾರರೊಂದಿಗೆ ಸುಖದಿಂದ ರಾಜ್ಯವಾಳುತ್ತಿದ್ದಾಗ, ಅವನ ರಾಣಿ ಜಗದಳದೇವಿಯು ಮುಗುಳಿಯಲ್ಲಿ ಸುಂದರವಾದ ಜಿನಬಸದಿಯನ್ನು ಮಾಡಿಸಿದಳು. ಈ ಬಸದಿಯು ಪೂಜಾಕಾರ್ಯಕ್ಕೆಂದು, ನಾಲ್ಕು ಮತ್ತರು ಗದ್ದೆಯನ್ನು ಕ್ರಿ.ಶ. ೧೦೮೩ರ ಉತ್ತರಾಯಣ ಸಂಕ್ರಾಂತಿಯಂದು, ಶ್ರೀಮೂಲಸಂಘದ ಕುಳಚಂದ್ರ ಸಿದ್ಧಾನ್ತದೇವರ ಸದ್ಧರ್ಮಿಗಳಾದ ಗುಣಚಂದ್ರಭಟಾರಕರಿಗೆ ದಾನ ನೀಡಿದರೆಂದು ತಿಳಿಸಿದೆ. ಗುಣಚಂದ್ರದೇವರ ಶಿಷ್ಯರಾದ ವರ್ದ್ಧಮಾನದೇವರು ಈ ದಾನವನ್ನು ಪರಿಗ್ರಹಿಸಿದರೆಂದು ತಿಳಿಸಿದೆ.

ಈ ಶಾಸನವು, ಮುಂದೆ ಹೊಯ್ಸಳದೊರೆ ವಿಷ್ಣುವರ್ಧನನು ತನ್ನ ಮಕ್ಕಳಾದ ಬಲ್ಲಾಳದೇವ, ನಾರಸಿಂಘದೇವ ಮತ್ತು ವಿಜಯನಾರಾಯಣ ದೇವರೊಂದಿಗೆ ಬಂಕಾಪುರದ ಬೀಡಿನಲ್ಲಿದ್ದಾಗ, ನೀಡಿದ ದಾನವನ್ನು ಉಲ್ಲೇಖಿಸಿದೆ. ಕ್ರಿ.ಶ. ೧೧೭೭ರ ನಳಸಂವತ್ಸರದ ಉತ್ತರಾಯಣ ಸಂಕ್ರಾಂತಿಯಂದು, ಶ್ರೀ ಮೂಲಸಂಘದಾಚಾರ್ಯ್ಯರಾದ ಮಾಘಣಂದಿ ಸಿದ್ಧಾಂತ ದೇವರ ಶಿಷ್ಯರಾದ ಗಂಡವಿಮುಕ್ತದೇವರ ಸದ್ಧರ್ಮರಾದ ಶ್ರೀಮನುಮಹಾಮಂತ್ರವಾದಿ ಮೇಘಚಂದ್ರದೇವರಿಗೆ ಸಿಂಧಗೆರೆ ಮತ್ತು ಕಿರಿಯ ಮುಗುಳಿ ಸ್ಥಾನಗಳನ್ನು ದಾನ ನೀಡಿದ್ದನ್ನು ಶಾಸನವು ದಾಖಲಿಸಿದೆ. ಈ ದಾನವನ್ನು ವಿಷ್ಣುವರ್ಧನನು ತುಂಗಭದ್ರೆಯ ದಡದಲ್ಲಿರುವ ಗಳಗೇಶ್ವರ ದೇವರ ಸನ್ನಿಧಿಯಲ್ಲಿ ನೀಡಿದ್ದಾನೆ. ಇದರಂತೆ ಹೊಯ್ಸಳ ದೊರೆ ನಾರಸಿಂಘದೇವನ ಕಾಲದಲ್ಲಿ ಹೆಂಮಾಡಿಗೌಡನು ಹೊಯ್ಸಳ ಜಿನಾಲಯಕ್ಕೆ ಪುರವರ್ಗವಾಗಿ, ದೇವರ ಚರುಗೆಗೆಂದು ಹರಳಮಕ್ಕಿಯಲ್ಲಿ ಗದ್ದೆಯನ್ನು ದಾನ ನೀಡುತ್ತಾನೆ. ಇವನಂತೆ ಬಂಮಗೌಡನು ಹೂವಿನ ತೋಟವನ್ನು ಬಿಟ್ಟಿದ್ದನ್ನು ತಿಳಿಸಿದೆ ಈ ಬಸದಿಗೆ ಸಂಬಂಧಿಸಿದಂತಿದ್ದ ಗುರುಕುಳವನ್ನು ತಿಳಿಸುತ್ತಾ ಶಾಸನವು......

* # ೧೭೩೭, ೧೭ನೇ ಮುಖ್ಯರಸ್ತೆ, ಬನಶಂಕರಿ ೧ನೇ ಘಟ್ಟ, ಬೆಂಗಳೂರು-೫೬೦೦೫೦.

ಮೂಲಸಂಘದಾಚಾರ್ಯ್ಯರ ಪರಂಪರೆಯನ್ನು ಹೀಗೆ ಗುರುತಿಸಿದೆ.

ವಿದ್ಯಾಚಕ್ರವರ್ತಿ ಪ್ರಭಾಚಂದ್ರ ಪಂಡಿತದೇವರು

|

ಕುಮುದಚಂದ್ರಪಂಡಿತ ದೇವರು

|

ಪದುಮಣಂದಿ ಭಟ್ಟಾರಕರು

|

ಶಿಷ್ಯರು – ಕುಳಚಂದ್ರದೇವರು ಗುಣಚಂದ್ರದೇವರು

|

ಶಿಷ್ಯರು – ವರ್ಧ್ದಮಾನ ದೇವರು ಮತ್ತು ಮಾಘಣಂದಿಸಿದ್ಧಾಂತದೇವರು

|

ಮಾಘಣಂದಿ ಸಿದ್ಧಾಂತದೇವರು

|

ಶಿಷ್ಯರು – ಗಂಡವಿಮುಕ್ತದೇವರು, ಮೇಘಚಂದ್ರದೇವರು

ಈ ಶಾಸನದಲ್ಲಿ ವಿಶೇಷವಾಗಿ ಮೇಘಚಂದ್ರದೇವರ ಘನಮಹಿಮೆಯನ್ನು ಜೀವನದ ವಿವರಗಳನ್ನು ದಾಖಲಿಸಿದೆ. ಜಿನಮುನಿಯೊಬ್ಬರ ಪೂರ್ವ ವೃತ್ತಾಂತವನ್ನು ತಿಳಿಸುತ್ತಿರುವ ವಿಶೇಷವಾದ ದಾಖಲೆ ಇದಾಗಿದೆ. ಹೊಯ್ಸಳ ದೊರೆ ವಿಷ್ಣುವರ್ಧನನು ಮೇಘಚಂದ್ರದೇವರಿಗೆ ದಾನ ನೀಡಿದ ಸಂದರ್ಭದಲ್ಲಿ ಶಾಸನವು ಈ ಮುನಿಯನ್ನು ರಾಜನು 'ಹಳೆಯರ ಮಗನೆಂದು ಕಾರುನ್ಯಾಂಗೆಯ್ದು' ದಾನ ನೀಡಿದನೆಂದು ತಿಳಿಸುತ್ತಾ, ಈ ಮುನಿಯ ತಾತನಾದ ಆನೆಯ ಲೋಕಿಮಯ್ಯನಾಯಕನು ಹೊಯ್ಸಳದೊರೆ ವಿನಯಾದಿತ್ಯನ ದಂಡನಾಯಕನಾಗಿದ್ದು, ಬೇಡರ ಚಾವಣನೊಡನೆ ಹೋರಾಡಿ, ಅವನನ್ನು ಓಡಿಸಿ, ಆಸಂದಿ ಅಯ್ನೂರನ್ನು ಹೊಯ್ಸಳದೇವರಿಗೆ ಏಕಛತ್ರಂ ಮಾಡಿಸಿಕೊಟ್ಟ ಯುದ್ಧದಲ್ಲಿ ತಲೆಗೊಟ್ಟ ವೀರನೆಂದು ತಿಳಿಸಿದೆ. ಲೋಕಿಮಯ್ಯ ದಂಡನಾಯಕನ ಮಗನಾದ ಗೊಗ್ಗಿಮಯ್ಯದಂಡನಾಯಕ ಹೊಯ್ಸಳದೊರೆ ವಿಷ್ಣುವರ್ಧನನೊಂದಿಗೆ ಯುದ್ಧದಲ್ಲಿ ಪಾಲ್ಗೊಂಡಿದ್ದು ಕಲ್ಯಾಣದಲ್ಲಿ ತಲೆಗೊಟ್ಟ ವೀರನೆಂದು ಶಾಸನ ತಿಳಿಸಿದೆ.

ಲೋಕಿಮಯ್ಯ ದಂಡನಾಯಕನಿಗೆ ಮೂರು ಜನ ಮಕ್ಕಳಿದ್ದು ಹಿರಿಯ ಮಗ ಗೊಗ್ಗಿಮಯ್ಯ. ಗೊಗ್ಗಿಮಯ್ಯನ ತಮ್ಮಂದಿರಾದ ಭಂಡಾರಿ ಚಟ್ಟಿಮಯ್ಯ ಮತ್ತು ಕಿರಿಯವನಾದ 'ಮೇಘಚಂದ್ರಮುನಿ' ಎಂದು ತಿಳಿಸಿದೆ. (ಆದರೆ ಲೊಕ್ಕಿಮಯ್ಯ ದಂಡನಾಯಕ ಗೊಗ್ಗಿಮಯ್ಯ ಮತ್ತು ಚಟ್ಟಿಮಯ್ಯರ ಬಗೆಗೆ ಹೆಚ್ಚಿನ ವಿವರಗಳು ಬೇರೆ ಶಾಸನಗಳಲ್ಲೂ ಲಭ್ಯವಿಲ್ಲ). ಹೀಗೆ ಮುನಿಯ ಪೂರ್ವ ವೃತ್ತಾಂತವನ್ನು ತಿಳಿಸುತ್ತಾ ಇವನನ್ನು 'ಹಳಯರಮಗ' ಎಂದೂ ಕರೆದಿದೆಯಲ್ಲದೇ ಮುನಿಯ ಪೂರ್ವಜರ ಸೇವೆಯನ್ನು ಸ್ಮರಿಸಿಯೇ ರಾಜನು ದಾನ ಬಿಟ್ಟನೆಂದು ತಿಳಿಯುತ್ತದೆ.

ಈ ಶಾಸನವು ಮೇಘಚಂದ್ರದೇವರನ್ನು ಮಹಾ ಮಂತ್ರವಾದಿ ಎಂದು ಕರೆದಿದೆಯಲ್ಲದೇ ಅವರ ಮಂತ್ರವಿದ್ಯ ಪ್ರಭಾವವನ್ನು ಹೀಗೆ ಬಣ್ಣಿಸಿದೆ. ಶ್ರೀ ಮೇಘಚಂದ್ರ ವ್ರತಿನಾಥನು, ಅತ್ಯಂತ ಕ್ರೂರಗ್ರಹಗಳನ್ನು ಬಲವಾಗಿ ನಿಗ್ರಹಿಸಬಲ್ಲ ತ್ರಯಂಬಕನಂತಿದ್ದಾನೆ. ಇವನು ಶಾಖಿನಿಯರು ಸೃಷ್ಟಿಸಿದ ಮಾಯೆಯ ಗಾಢಾಂಧಕಾರವನ್ನು ಪರಿಹರಿಸಬಲ್ಲ ಸೂರ್ಯನೂ, ಕ್ರೂರ ಸರ್ಪಗಳಂತಿರುವ ಅನೇಕ ದುಷ್ಟ ಶತ್ರುಮಂತ್ರಿಗಳ ದರ್ಪವನ್ನು ಭಂಗಿಸಬಲ್ಲ ಮಹಾಮಂತ್ರ ವಾದಿಯಾಗಿದ್ದು ಸಜ್ಜನರಿಗೆ ಉಪಕಾರ ಮಾಡಲೆಂದು ಜಗತ್ತಿನ ವ್ಯವಹಾರಗಳಲ್ಲಿ ನಿರತನಾಗಿದ್ದಾನೆ' ಎಂದು ಶಾಸನ ತಿಳಿಸಿದೆ.

ಮೇಘಚಂದ್ರಯತಿಯ ಅಪಾರ ಯಶೋಗಾಥೆಯನ್ನು ಶಾಸನವು– "ಎಲೈ ವೀರರಾದ ದುಷ್ಟ ಶಕ್ತಿಗಳೇ (ಗ್ರಹಗಳೇ) ಅಡಗಿಕೊಳ್ಳಿ, ನಿನ್ನ ತೋಳ್ಬಲವನ್ನು ನೆಚ್ಚಿಕೊಂಡಿರುವ ಭೂತವೇ, ಮರುಳನಂತೆ ಆಟೋಪವನ್ನು ಮಾಡದೇ ತೊಲಗು; ಇತರರನ್ನು ಕೊಂದು ಆಳುವ ಗಾಂಧರ್ವರ ಗುಂಪಿನವರೇ ಈ ಕಡೆ ಬರಬೇಡಿ ಹೊರಟು ಹೋಗಿ; ರಾಕ್ಷಸಿಯರೇ ಆಕ್ಷೇಪವನ್ನೆತ್ತದೆ ಹೋಗಿರಿ" ಎಂದು ಎಲ್ಲರನ್ನು ಭಯಭೀತ ಗೊಳಿಸುವಂತೆ ಮೇಘಚಂದ್ರ ವ್ರತಿಯ ಯಶೋದುಂಧು ಭಿಯು ಮೊಳಗುತಿತ್ತೆಂದು ಬಣ್ಣಿಸಿದೆ.

ಮಹಾಮಂತ್ರವಾದಿಯೆನ್ನಿಸಿದ್ದ ಮೇಘಚಂದ್ರ ಮುನಿಗಳ ಮಂತ್ರವಿದ್ಯಾ ಪ್ರಭಾವವನ್ನು ಶಾಸನವು – "ಭೂಮಂಡಲದಲ್ಲಿ ಕ್ರೂರ ಸರ್ಪಗಳ, ಪಿಶಾಚಿಗಳ ಭೂತಗಣಗಳ, ಉಗ್ರವಾದ ನವಗ್ರಹಗಳ ಮತ್ತು ಶಾಖಿನಿಯರ, ರಾಕ್ಷಸರ ಭಯವನ್ನು ನಿವಾರಿಸಲು ಮೇಘಚಂದ್ರ ಮುನಿಯು ಜಿನಶಾಸನ ದೇವತೆಯಾದ ಜೈನಯಕ್ಷಿಯನ್ನು ಪ್ರಾರ್ಥಿಸಿ, ಆ ದೇವಿಯ ಆಜ್ಞೆಯಂತೆ ಮಾಡುತ್ತಿದ್ದನು. ಮುನಿಯು ಬರೆದುದೆ ಯಂತ್ರ, ಓದಿದುದೇ ಮಂತ್ರ, ಒರಲ್ದುದೇ ತಂತ್ರ"ವೆಂಬಂತಾಗಿದ್ದು, ಜನರು ಭೂಮಂಡಲದಲ್ಲಿ ಅಚ್ಚರಿಯಿಂದ ಅವರ ಗುಣಗಾನ ಮಾಡುತ್ತಿದ್ದರು ಎಂದು ಶಾಸನ ಉಲ್ಲೇಖಿಸಿದೆ.

ಮೇಘಚಂದ್ರಮುನಿಯ ಮಂತ್ರವಿದ್ಯಾ ಪ್ರಭಾವವನ್ನು ಶಾಸನವು ದರ್ಪದಿಂದ ಮೆರೆಯುತ್ತಿದ್ದ ವಿದ್ಯಾಧರರೂ, ಕಿನ್ನರರು, ಗಂಧರ್ವರು, ಈ ಮುನಿಯ ಮಹತ್ವಕ್ಕೆ ಹೆದರಿ ಕೈಹಿಸುಕಿಕೊಳ್ಳುತ್ತಾ (ಅಸಹಾಯಕರಾಗಿ), ಜಾಗ್ರತೆಯಿಂದ ದೂರ ಸರಿಯುತ್ತಿದ್ದರಂತೆ. ಮೇಘಚಂದ್ರಮುನಿಯ ಮಂತ್ರಶಕ್ತಿ ಎದುರು ನಿಲ್ಲಲಾರದೇ ಶರಣಾಗಿ ಸೊಪ್ಪಾಗಿ, ಮೊರೆ ಇಡುತ್ತಾ, ಹಲ್ಲುಗಿಂಜುತ್ತಾ ದೂರಕ್ಕೆ ಹೋದ ಹಲವು ಭೂತಗಳೇ

'ಈ ಮುನಿಯು ಎಂಥವನೆಂದು' ಕೂಗಿ ಹೇಳವೇ? ಎಂದು ವಿಶೇಷವಾಗಿ ಬಣ್ಣಿಸಲಾಗಿದೆ.

ಹೊಯ್ಸಳ ದೊರೆ ನಾರಸಿಂಘದೇವನ ಕಾಲದಲ್ಲಿ ಹೊಯ್ಸಳ ಜಿನಾಲಯಕ್ಕೆ ಹೆಂಮಾಡಿಗೌಡ ಮತ್ತು ಎರೆಯ ಗೌಡನ ಮಗ ಬಂಮಗೌಡರು ಭೂದಾನ ನೀಡಿದ್ದಾರೆ. ಈ ದಾನವನ್ನು ಸ್ವೀಕರಿಸಿದ ಗುರುಗಳ ಗುರುಕುಲದ ವಿವರಗಳನ್ನು ತಿಳಿಸುವಲ್ಲಿ ಮೇಲೆ ದಾಖಲಿಸಿರುವ ಮೇಘಚಂದ್ರ ಮುನಿಯ ಮಹತ್ವವನ್ನು ಬಣ್ಣಿಸಲಾಗಿದೆ. ಇದರಿಂದ ಈ ಮೇಘಚಂದ್ರ ಮುನಿಯ ಕಾಲವನ್ನು ಸು.೧೧೩೦ರ ನಂತರದ ಕಾಲವೆಂದು ಸು. ೧೧೬೦-೭೫ರವರೆಗೆ ಇದ್ದಿರಬಹುದೆಂದು ತಿಳಿಯುತ್ತದೆ.

ಜೈನಯತಿ ಪರಂಪರೆಯ ಪಟ್ಟಿಕೆಯಲ್ಲಿ ಪ್ರಸಿದ್ಧವಾಗಿರುವ ಮೇಘಚಂದ್ರಯತಿಯೊಬ್ಬರು, ಮೂಲಸಂಘದ ದೇಸೀಯ ಗಣದ ಪುಸ್ತಕಗಚ್ಛದ ಪ್ರಮುಖ ಯತಿಗಳಾಗಿದ್ದು ಇವರನ್ನು ಶಾಸನಗಳು 'ಸುತಾರ್ಕಿಕ ಚಕ್ರವರ್ತಿ', ಸೈದ್ಧಾಂತಿಕೇಶ್ವರ ಸಿಖಾಮಣಿ' ಎಂದೂ ಪ್ರಶಂಸಿಸಿವೆ. ಇವರು ಸಕಲಚಂದ್ರ ಸಿದ್ಧಾನ್ತದೇವರ ಶಿಷ್ಯರಾಗಿದ್ದು ಕ್ರಿ.ಶ. ೧೧೧೫ರಲ್ಲಿ 'ಸಮಾಧಿ ಮರಣ'ವನ್ನು ಸಾಧಿಸಿದರೆಂದು ಶ್ರವಣಬೆಳಗೊಳದ ಶಾಸನವು (೧೫೬)ತಿಳಿಸುತ್ತಿದೆ. ಇವರನ್ನು ಕೊಂಡಕುಂದಾನ್ವಯ ದೇಶೀಯಗಣ ಪುಸ್ತಕಗಚ್ಛದ ಪರಂಪರೆಯಲ್ಲಿನ ಮೇಘಚಂದ್ರ ೧ ಎಂದು ಕರೆಯಬೇಕಾಗಿದೆ. ಇವರ ಕಾಲವು ಸು. ೧೦೯೦ರಿಂದ ೧೧೧೫ ಎಂದು ತಿಳಿಯುತ್ತದೆ.

ಇದೇ ಪರಂಪರೆಯಲ್ಲಿ ಹೊಯ್ಸಳದೊರೆ ವಿಷ್ಣುವರ್ಧನ ನಿಂದ ಕ್ರಿ.ಶ. ೧೧೩೭ರಲ್ಲಿ ದಾನವನ್ನು ಸ್ವೀಕರಿಸಿರುವ ಉಪ್ಪಳ್ಳಿಯ ಶಾಸನೋಕ್ತ ಮೇಘಚಂದ್ರ ಮುನಿಯು ಕ್ರಿ.ಶ. ೧೧೨೦ರ ಸುಮಾರಿನಲ್ಲಿ ಇದ್ದವರು. ಇವರ ಗುರುಗಳಾದ ಮಾಘಣಂದಿ ಸಿದ್ಧಾಂತದೇವರ ಬಗೆಗೆ ಶ್ರವಣಬೆಳಗೊಳದ ಕ್ರಿ.ಶ. ೧೧೬೩ರ ಶಾಸನವು (೭೧) ತಿಳಿಸುತ್ತಿದೆ. ಈ ಶಾಸನವು ದೇವಕೀರ್ತಿಮುನಿಯ ನಿಶಿಧಿ ಶಾಸನವಾಗಿದ್ದು, ಇಲ್ಲಿ ಸೂಚಿಸಿರುವ ಗುರುಪರಂಪರೆಯು ಗಮನಾರ್ಹವಾಗಿದೆ. ಮೂಲಸಂಘ ದೇಶೀಯಗಣದ ಕೊಂಡಕುಂದಾನ್ವಯದ ಪುಸ್ತಕಗಚ್ಛದ ಗುರುಪರಂಪರೆಯ ಪಟ್ಟಿಕೆಯಲ್ಲಿ ಕುಳಭೂಷಣ ಪಂಡಿತರ ಶಿಷ್ಯನಾದ ಕುಳಚಂದ್ರದೇವರು, ಅವರ ಶಿಷ್ಯರಾದ ಮಾಘಣಂದಿಮುನಿಯನ್ನು ಬಣ್ಣಿಸಲಾಗಿದೆ. ಮಾಘಣಂದಿ ಮುನಿಯ ಗುಣಾತಿಶಯಗಳನ್ನು ಬಣ್ಣಿಸುತ್ತಾ "ಎಳೆಮಾವಿಂ ಬನವಬ್ಬದಿಂ ತಿಳಿಗೊಳಂ...... ಮಾಘಣಂದಿ ಮುನಿಯಿಂ ಶ್ರೀ ಕೊಣ್ಡಕುಂದಾನ್ವಯಂ-" ಎಂಬ ಪದ್ಯವಿದ್ದು, ಇದೇ ಪದ್ಯವನ್ನು ಉಪ್ಪಳ್ಳಿಯ ಶಾಸನದಲ್ಲೂ ಕಾಣುತ್ತೇವೆ. ಮಾಘಣಂದಿ ಮುನಿಗಳ ಶಿಷ್ಯರಾದ ಸಾಮನ್ತ ಕೇದಾರ, ಸಾಮನ್ತ ನಿಂಬದೇವ, ಶ್ರೀಗಂಡವಿಮುಕ್ತದೇವಯತಿಯನ್ನು ಉಲ್ಲೇಖಿಸಿದೆ. ಈ ಗಂಡವಿಮುಕ್ತದೇವಯತಿಯ ಶಿಷ್ಯರು ಉಪ್ಪಳ್ಳಿ ಶಾಸನದ ಮೇಘಚಂದ್ರ ಮುನಿಯಾಗಿದ್ದಾರೆ. ಉಪ್ಪಳ್ಳಿ ಶಾಸನವು ಮೇಘಚಂದ್ರರ ಮಂತ್ರ ವಿದ್ಯೆಯುನ್ನು ಬಣ್ಣಿಸಿರುವಂತೆ, ಶ್ರವಣಬೆಳಗೊಳದ ಈ ಶಾಸನದಲ್ಲಿ ದೇವಕೀರ್ತಿಮುನಿಯ ವಿಶೇಷತೆಯನ್ನು ಹೀಗೆ ಬಣ್ಣಿಸಿದೆ: "ಯಾರ ಪಾದಗಳ ಬಳಿ ಬೇತಾಳಗಳು ಕೈಮುಗಿದು ನಿಂತುಕೊಂಡು ಸೇವೆ ಮಾಡುತ್ತವೆಯೋ, ಯಾರ ಸನ್ನಿಧಾನದ ದ್ವಾರವನ್ನು ಯೊಟ್ಟಿಂಗಗಳು ಕಾವಲು ಕಾಯುತ್ತಿದ್ದವೋ, ಯಾರೊಂದಿಗೆ ತಪೋಲಕ್ಷ್ಮಿ ಮತ್ತು ಯಶಶ್ರೀಯರು ಆಟವಾಡಲು ಬಯಸುವರೋ ಅಂಥ ದೇವಕೀರ್ತಿ ಮುನಿಯು ಶುಭವನ್ನುಂಟುಮಾಡಲಿ" - ಎಂದು ಬಣ್ಣಿಸಿದೆ.

ಇದರಂತೆ ಶ್ರವಣಬೆಳಗೊಳ ೭೩ರ ಶಾಸನವು ನಯಕೀರ್ತಿ ಸಿದ್ಧಾಂತದೇವರ ನಿಷಧಿ ಶಾಸನವಾಗಿದ್ದು. ಈ ಶಾಸನೋಕ್ತ ಗುರುಪರಂಪರೆಯಲ್ಲಿ ಬರುವ ಪದ್ಮನಂದಿ ಮುನಿಯನ್ನು-"ಪದ್ಮನಂದಿ ಮುನಿನಾಥೋ ಮಂತ್ರವಾದೀಶ್ವರ" ಎಂದೇ ಕರೆಯಲಾಗಿದೆ. ಈ ಅನೇಕ ಉದಾಹರಣೆಗಳನ್ನು ಗಮನಿಸಿದಾಗ, ೧೨ನೇ ಶತಮಾನದಲ್ಲಿ ಮೂಲಸಂಘ ಕೊಂಡಕುಂದಾನ್ವಯದ ದೇಶೀಯಗಣಕ್ಕೆ ಸೇರಿದ ಅನೇಕ ಜಿನಮುನಿಗಳು 'ಮಂತ್ರವಿದ್ಯೆ, ಯಂತ್ರ-ತಂತ್ರಗಳ ಸಿದ್ಧಿ'ಯನ್ನು ಗಳಿಸಿದ್ದರೆಂದು ಖಚಿತವಾಗಿ ತಿಳಿಯುತ್ತದೆ.

ಹನ್ನೊಂದು-ಹನ್ನೆರಡನೇ ಶತಮಾನದಲ್ಲಿದ್ದ ಜೈನ ಧರ್ಮದ ಸ್ಥಿತಿಗತಿಗಳ ಬಗೆಗೆ ಅವಲೋಕಿಸಿದರೆ, ಜೈನ ಧರ್ಮವು ತನ್ನ ಅಸ್ತಿತ್ವಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿತ್ತೆಂದು ತಿಳಿದು ಬರುತ್ತದೆ. ಕೊಂಡಕುಂದಾಚಾರ್ಯರಿಂದ ಸ್ಥಾಪಿತವಾದ ದೇಶೀಯಗಣದಲ್ಲಿ ನಂದಿಸಂಘದ, ಸೇನಗಣ, ಬಲತ್ಕಾರಗಣ, ಯಾಪನೀಯಸಂಘದ ಕಾಗಣ ಮುಂತಾದವೆಲ್ಲ ಸಮ್ಮಿಳಿತ ಗೊಂಡಿದ್ದು, ಎಲ್ಲರು ಒಟ್ಟಾಗಿ ಪುಸ್ತಕಗಚ್ಛದವೆಂದೇ ಕರೆದು ಕೊಂಡಂತಿದೆ. ಜೈನರ ಪ್ರಮುಖ ಕೇಂದ್ರವಾಗಿದ್ದ ಶ್ರವಣಬೆಳ ಗೊಳದಲ್ಲಿ ಶಾಸನಗಳು, ಗೋಪಣಂದಿ, ಅರ್ಹಣಂದಿ, ಮಾಘಣಂದಿ ದಿನಾಕರಣಂದಿ ಮುನಿಗಳಂತೆಯೇ, ನಯಕೀರ್ತಿ ಸಿದ್ಧಾಂತದೇವ, ಭಾನುಕೀರ್ತಿ ಪಂಡಿತ, ಚಾರುಕೀರ್ತಿ ಯತಿಗಳನ್ನು ಉಲ್ಲೇಖಿಸಿವೆ. ಶ್ರೀಪಾಲತ್ರೈವಿದ್ಯದೇವರು, ಮಲಧಾರಿ ಮಲ್ಲಿಸೇನಾಚಾರ್ಯರು, ಗಂಡವಿಮುಕ್ತದೇವರು, ಬಾಳಚಂದ್ರ ಪಂಡಿತ, ಶುಭಚಂದ್ರ ಯತಿ ಮುಂತಾದವರ ಘನತೆಗಳನ್ನು ಸಾರುತ್ತಿವೆ. ಇದನ್ನು ಗಮನಿಸಿದಾಗ, ಯಾಪನೀಯ ಸಂಘವು ಮೂಲಸಂಘದಲ್ಲಿ ಮಿಳಿತವಾಗಿತ್ತೆಂಬ ಅಂಶವು ದೃಢಪಡುತ್ತದೆ. ಯಾಪನೀಯ ಸಂಘದ ಮುನಗಳು ವಿಶೇಷವಾಗಿ ಸಮಾಜಮುಖೀ ಕಾರ್ಯಗಳಲ್ಲಿ ತೊಡಗು ತ್ತಿದ್ದರು ಇವರು ರಾಜರಿಂದ, ಶ್ರೀಮಂತರಿಂದ ದಾನದತ್ತಿಗಳನ್ನು

ಸ್ವೀಕರಿಸುತ್ತಿದ್ದರು. ಜ್ಯೋತಿಷ್ಯಶಾಸ್ತ್ರದಲ್ಲಿ ಪಾರಂಗತರಾಗಿರುತ್ತಿದ್ದ ಇವರು ಮಂತ್ರ, ತಂತ್ರ ವಿದ್ಯೆಗಳಲ್ಲಿ ನಿಷ್ಣಾತರಾಗಿದ್ದರು. ಜೈನ ಮತದಲ್ಲಿ ಇವರು ಯಕ್ಷಿ ಆರಾಧನೆಯನ್ನು ಜನಪ್ರಿಯಗೊಳಿಸಿದರು. ಸಾಹಿತ್ಯ ರಚನೆಯನ್ನು ತೊಡಗಿದ್ದು, ತಮ್ಮ ವಿದ್ಯಾಪ್ರೌಢಿಮೆಯನ್ನು, ಮಂತ್ರಸಿದ್ಧಿಯನ್ನು ಶಾಸನಗಳಲ್ಲಿ ಯಶಸ್ಸನ್ನು ದಾಖಲಿಸಿದ್ದಾರೆ. ಬಸದಿಗಳಲ್ಲಿ ಉತ್ಸವ, ಪರ್ವಗಳ ಆಚರಣೆ ಮತ್ತು ರಂಗಭೋಗದ ಪರಿಪಾಠವನ್ನು ತಂದ ಯಾಪನೀಯರು–ಜನತಾನಂದಕಾರಕರಾಗಿದ್ದರು. ಅಂತೇ ಇವರನ್ನು 'ಜಿನಾಭಾಸ'ರೆಂದು ಶ್ರುತಸಾಗರನು ಕರೆದಿದ್ದಾನೆ. ಇಂಥ ಯಾಪನೀಯ ಸಂಘದ ಮುನಿಗಳನೇಕರು ಇಂಥ ಮುನಿಗಳಲ್ಲಿ ಒಬ್ಬರಾದ ಮೇಘಚಂದ್ರಯತಿಯು ತನ್ನ ಪ್ರದೇಶದಲ್ಲಿದ್ದ ಜನರ ಅನುಕೂಲಕ್ಕಾಗಿ ಹಿತಕ್ಕಾಗಿ ಮಂತ್ರ, ತಂತ್ರ ವಿದ್ಯೆಯನ್ನು ಬಳಸುತ್ತಿದ್ದರು. ಜಿನಭಕ್ತರ, ಶಿಷ್ಯರ ಅಭೀಷ್ಟಗಳನ್ನು ನೆರವೇರಿಸಲು, ಯಕ್ಷಿಯನ್ನು ಪೂಜಿಸಿ ಪ್ರಾರ್ಥಿಸುತ್ತಿದ್ದರು. ಮಲೆನಾಡಿನ ಚಿಕ್ಕಮಗಳೂರು ತಾಲೂಕಿನ ಉಪ್ಪಳ್ಳಿ ಪ್ರದೇಶದಲ್ಲಿ ಇಂದೂ ಕಾಫಿ ಎಸ್ಟೇಟ್ ಟೀ ತೋಟಗಳನ್ನು ಚೌಡಿ, ಯೊಟ್ಟಿಂಗ ಬ್ರಹ್ಮ ಪಿಶಾಚಿ ಮುಂತಾದ ದುಷ್ಟ ಶಕ್ತಿಗಳ ಆಚರಣೆ ಪ್ರಚಲಿತದಲ್ಲಿವೆ. ಇವುಗಳಿಂದ ಅನುಕೂಲವಿರುವಂತೆ, ಅವು ಮುನಿದರೆ ಸರ್ವನಾಶವೂ ಆಗುತ್ತದೆ. ಇವುಗಳಿಂದಾಗುವ ತೊಂದರೆಗಳನ್ನು ಪರಿಹರಿಸಲು ಮೇಘಚಂದ್ರಮುನಿಯು ಯಕ್ಷಿಯನ್ನು ಪ್ರಾರ್ಥಿಸಿ ಮಾಡುತ್ತಿದ್ದದನ್ನು ಶಾಸನವು–"ಜಿನ ಶಾಸನ ದೇವ್ಯರಾಜ್ಞೆಯಿಂ ಬರೆದುದೆ ಯಂತ್ರ ವೋದಿದುದೆ ಮಂತ್ರ ಮೊರಲುರ್ದುದೆ ತಂತ್ರ' ಮೆಂದಿದೆ. ಇವರ ಮಂತ್ರಸಿದ್ಧಿ ಮಹತ್ವವನ್ನು ಈ ಮುನಿ ಪ್ರಭಾವದಿಂದ ಸೊಪ್ಪಾಗಿ, ಶರಣಾಗಿ ಹೋದ ಹಲವು ಭೂತಂಗಳೇ ಪೇಳಮೇ"–ಎಂದೂ ಬಣ್ಣಿಸಿದೆ. ಹೀಗೆ ಜಿನಮುನಿಯೊಬ್ಬರ ಮಾಂತ್ರಿಕ ಸಿದ್ಧಿಯನ್ನು ಸವಿವರವಾಗಿ ಸ್ಪಷ್ಟವಾಗಿ ಬಣ್ಣಿಸಿರುವ ಈ ಶಾಸನವು ಮುನಿಗಳ ಬಗೆಗೆ ಅಧ್ಯಯನ ಮಾಡುವಲ್ಲಿ ಮಹತ್ವದ್ದಾಗಿದ್ದು ಅಪೂರ್ವವೆನ್ನಿಸಿದೆ. ೧೨ನೇ ಶತಮಾನದಲ್ಲಿದ್ದ ಜೈನಧರ್ಮದ ಇತಿಹಾಸವನ್ನರಿಯುವಲ್ಲಿ ಹೊಸ ಆಯಾಮವನ್ನು ತೆರೆಯುತ್ತಿರುವ ಈ ಶಾಸನದ ಅಧ್ಯಯನವು ವಿಶೇಷವಾಗಿದೆ.

ಅನುಬಂಧ

೧. ಶ್ರೀಮತು ಪರಮಗಂಭೀರ ಸ್ಯಾದ್ವಾದಾಮೋಘ ಲಾಂಛನಂ ಜೀಯಾ ತ್ರೈಲೋಕ್ಯನಾಥಸ್ಯ ಶಾಶನಂ ಜಿನಶಾಶನಂ॥ ಸ್ವಸ್ತಿ ಸ

೨. ಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ದ್ವಾರಾವತೀಪುರವರಾಧೀಶ್ವರಂ ಯಾದವಕುಳಾಂಬರ ದ್ಯುಮಣಿ ಸಮ್ಯ

೩. ಕ್ತಚೂಳಾಮಣಿ ಮಲೆಪರೊಳುಗಂಡಾದ್ಯ ನೇಕನಾಮಾದೇಶ ವಿರಾಜಮಾನನಪ್ಪ ಶ್ರೀಭುವನಮಲ್ಲ ಪೊರ ವೊಯ್ಸಳ ದೇವನಾತ

೪. ನಿಂ ಬಳಿಕೆ ॥ ಎಪ್ಪಿಡಿವೊಯ್ಸ[ಳ*] ಎಱೆಯಂಗವೊಯ್ಸಳ ತಳೆಕಾಡು ವೊಯ್ಸಳನುದಯಾದಿತ್ಯ ಕೂಂಟಪಿನ ಯಾದಿತ್ಯ ನ್ರಿಪಕಾಮಹಿರಿಯ

೫. ಹೊಯ್ಸಳದೇವನಿಂ ಬಳಿಕೆ ॥ ಸ್ವಸ್ತಿ ಸಮಸ್ತ ಭೂಮಿಪತಿ ವಿಕ್ರಮಗಂಗ ನ್ರಿಪಾಳನೇಕಭೋಗ್ಯಸ್ಥಿರಶಾಸನಂ ಸಕಳ ಧಾರಿಣಿಯಂ ಪರಿ

೬. ಪಾಳಿಸಲುಕೆ ಭೂಮಿಸುತ್ತನೇಕವಾಕ್ಯನೆನೆ ಹೊಯ್ಸಳ ಭೂಪತಿ ಗಂಗವಧೂಟೀ ಸ್ತನತಾರಹಾರನೆನೆ ರಾಜಿಸಿ ರಾಜ್ಯದೊಳಿದ್ದು

೭. ರಾಗದಿಂ ॥ ದೇವಶ್ರೀ ವಿನಯಾರ್ಕವೊಯ್ಸಳ ನಿಜಶ್ರೀಕೀರ್ತಿಲತಾವಲ್ಲಿ ವಾಗ್ದೇವಿ ಕಳ್ಪಮಹೀರ್ಹಗಳನೆ ಸುತ್ತಿರ್ದ್ದ ಬುಜಾಣ್ಡಕೆನಿಲ್ಪಾ ವಿದ್ಯಾಧ

೮. ರಕಾನ್ತಕುನ್ತಳಕೆ ಪುಟ್ಟಾನೇಕಮಾಯ್ತೆಂದೊಡಿಂನೇವೇಳ್ವೆಂ ಭವದೀಯ ವಿಕ್ರಮದುಪಮಾ ಶ್ರೀವಲ್ಲಿ ಸಂಲೀಲೆಯಂ ॥ ಇಂತೊಳ್ಪಿಂ ನೆರೆ

೯. ದಿರ್ದ್ದ[ರ] ಹೊಯ್ಸಳನ್ರಿಪಂಗುತ್ಸಾಹದಿಂ ಪುಟ್ಟಿದಂ [ಶೌ]ತಿಶ್ರೀ ಜಿನದೇವಪಾದ ಕಮಳಂ ಸಂಗ್ರಾಮರಾಮಂ ದ್ವಿಶತ್ ಸನ್ತಾನಾನ್ತ ಕ್ರಿತಾನ್ತನಾ

೧೦. ಹವಜಯಶ್ರೀಕಾನ್ತಂ ವರಕಾನ್ತಂ ತಾನೆಱೆಯಂಗ ಯಂಗನೆಱೆಯಂಗಭೂಪನೆ ವಲಂ ವಿಶ್ವಂಭರಾ ಭಾಗದೊಳ್ ॥ ಅನ್ತು ವಿನಯಾದಿತ್ಯ

೧೧. ಹೊಯ್ಸಳದೇವನೆಱೆಯಂಗದೇವ ಬಲ್ಲಾಳದೇವ ವಿಷ್ಣುವರ್ದ್ಧ[ರ]ನದೇವ ನುದಯಾದಿತ್ಯದೇವನೊಳಗಾದ ಕುಮಾರರಿಂ[ಲ್ಸು] ಖಿದಿಂ ರಾಜ್ಯಂ ಗೆ

೧೨. ಯುತ್ತಿರೆ ॥ ◎ ॥ ಶ್ರೀವಧುಗೆ ಪಾರ್ವ್ವತಿವಧುಗಾವಾಸಿಷ್ಟಬ್ರತೀಂದ್ರ ವಧುಗೆಣೆಯೆಂದೀ ಭೂವಳೆಯಂ ಜಗದಳಮಾದೇವಿಯ ಗುಣ

೧೩. ಗಣದ ಮಹಿಮೆಯಂ ಬಂಣ್ನಿಸುಗುಂ ॥ ಎನೆ ಪೆಂಪಂ ತಳೆದ ಜಗಜ್ಜನವಂದಿತೆ ಜೈನಧರ್ಮ್ಮನಿರ್ಮ್ಮಳೆ ಸಕಳಾವನಿ ಪೊಗಳೆ ಮುಗುಳಿಯೊಳ್

೧೪. ಚೆಲ್ವೆನೆ ಜಿನಮಂದಿರಮನರ್ತ್ಥಿ[ರ]ಯಿಂ ಮಾಡಿಸಿದಳು ॥ ಮಾಡಿಸಿದಳು ಗಗನತಳಕ್ಕೊಡೆನೆ ಸುರರಾಜಸದನ ಮಣಿಮಯಗ್ರಿಹ

೧೫. ದೊಳ್ತೆಡೆನೆ ವರ ಮುಕ್ತಿಗ್ರಿಹಕ್ಕಿಡೆನೆ ರಮಣೀಯ ಜೈನಗ್ರಿಹ ಮಂಡನಮಂ ॥ ಈ ಜಿನನಿಳಯಕ್ಕಾನೀರೇಜಾನನೆ ನೆಗಳ್ದ ನಾಲುಕು ಮತ್ತ

೧೬. ರನಿತ್ತಳು ಪೂಜಾವಿಧಿಗಿದು ನಿಲುಕಿಂನೀ ಜಗದೊಳು ಚಂದ್ರಸೂರ್ಯ್ಯರುಳ್ಳಂನೆವರ ॥ ಅಂತು ವಿನಯಾದಿತ್ಯ ಹೊಯ್ಸಳ ಜಿನಾ

೧೭. ಲಯಕ್ಕೆ ಜಗದಳ ಮಹಾದೇವಿಯರ ಗುರುಗಳು ಶ್ರೀ ಮೂಲಸಂಘದಾಚಾರ್ಯ್ಯರು ಕುಳಚಂದ್ರಸಿದ್ಧಾನ್ತ ದೇವರ ಸಧರ್ಮ್ಮರಪ್ಪ

೧೮. ಗುಣಚಂದ್ರಭಟ್ಟಾರಕದೇವರ್ಗ್ಗೆ ಸಕವರ್ಷ[ಽ*] ೧೦೦೫ ದೆನೆಯ ರುದಿರೋದುಗಾರಿಸಂವತ್ಸರದುತ್ತರಾಯಣ ಸಂಕ್ರಾನ್ತಿ ಸೋಮವಾರದಂದು

೧೯. ದೇವರ್ಗ್ಗೆ[ಽ*] ಮಲೆಪರೊಳುಗಣ್ಡನ ನಾಲ್ವತ್ತು ಗೇಣ ಕೋಲಲು ದೇವರಂಗಭೋಗಕ್ಕೆ ಪೂಜಾರಿಗೆ ಜೀರ್ಣ್ನೋದ್ಧಾರಕ್ಕೆ ಅಥಿತಿಪೂಜೆ

೨೦. ಗೆ ಬಿಟ್ಟ ಗದ್ದೆ ಮತ್ತರು ನಾಲುಕು ॥ ಸಾಗರಬೆಟ್ಟೆಯ ಕಟ್ಟಿನಿಳಿಯ ತೋಂಟ ಸಂಪಗೆಯ ಮೊಗೆಯ ಹೂವಿನಿಳಿಯ ತೋಂಟವ

೨೧. ಕರಿಯ ದೇವಚಂದ್ರನಿಕ್ಕಿದ ಮೊದುಹಲದ ತೋಂಟ । ಅಸಗರ ಹೊಳೆಯ ಹೂವಿನ ತೋಂಟವಂತು ನಾಲ್ಕುಂ ॥ ರಿಶಿಯರ ಹ

೨೨. ಳ್ಳಿಯಂ ಮಾಡಿಯಲ್ಲಿಗೆ ನೂಱೆತ್ತಿನ ಸುಂಕ । ಕವರ್ತ್ತೆ । ಬೀರವಣ । ಮಾವಟ್ಟವಣ ಕೊಡತಿವಣ ಕತ್ತಿಗೆದೆಱೆ ಸಾದಬಣ್ಣಿಗೆ ಹಂದಲುವಣ ಬಿಟ್ಟ

೨೩. ಸೊಲ್ಲಗೆ । ಸನಿವಾರದ ಹಗಲಿರುಳ ಎಂಟು ಜಾವದ ಹಿರಿನೀರು ಮೊದಲಾಗೆ ಆ ತೇಜವ ವಿನಯಾದಿತ್ಯ ಹೊಯ್ಸ[ಳ*]ದೇವರು ಗುಣಚಂದ್ರ

೨೪. ದೇವರ್ಗ್ಗೆ ಧಾರಾಪೂರ್ವ್ವಕಂ ಮಾಡಿಕೊಟ್ಟರು । ಗುಣಚಂಪ್ರದೇವರ ಶಿಷ್ಯರ್ವ್ವರ್ದ್ಧಮಾನಪಂಡಿತರ್ಗ್ಗೆ ಜಗದಳ ಮಹಾದೇವಿಯರು ಧಾರಾಪೂರ್ವ್ವಕ

೨೫. ಮಾಡಿದರನ್ತು ಸುಖದಿಂ ಹೊಯ್ಸ[ಳ*] ರಾಜ್ಯವೆ ಗಾದಿಯಾಗಿ ರಾಜ್ಯಂ ಗೆಯುತ್ತಿರೆ ॥ ॥ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವ

೨೬. ರಂ ದ್ವಾರಾವತೀ ಪುರವರಾಧೀಶ್ವರಂ ಸಂಮ್ಯಕ್ತ ಚೂಡಾಮಣಿ । ಕೊಂಗುನಂಗಲಿ ಗಂಗವಾಡಿ ನೊಳಂಬವಾಡಿ ಬನವಸೆ ಹಾನುಂಗಲ್ಲುಚ್ಚಂಗಿ ಕಂಚಿಕೊಂಡ ಶ್ರೀ

೨೭. ಮತ್ತ್ರಿಭುವನಮಲ್ಲ ವಿಷ್ಣುವರ್ದ್ಧ[ಽ*]ನ ವೀರಗಂಗ ಹೊಯ್ಸಳದೇವರು ॥ ಬಲ್ಲಾ[ಳ*]ಳದೇವ ನಾರಸಿಂಘ ದೇವ ವಿಜಯ ನಾರಾಯಣದೇವನೊಳಗಾದ

೨೮. ಕುಮಾರರಿಂ ಬಂಕಾಪುರದ ಬೀಡಿನೊಳು ಸುಖ ಸಂಕತಾ ವಿನೋದದಿಂ ರಾಜ್ಯಂಗೆಯುತ್ತಿರೆ ॥ ತತ್ಪಾದ ಪದುಮೋಪಜೀವಿಗಳು ಆನೆಯ

೨೯. ಲೋಕಿಮೆಯ ದಂಡನಾಯಕ ಬೇಡರ ಚಾವಣನ ಕಾದಿಯೋಡಿಸಿ ಆಸಂದಿಯ್ಯೆನೂಱುವ ವಿನಯಾದಿತ್ಯ ಹೊಯ್ಸಳ ದೇವಂಗೇಕಚ್ಛ

೩೦. ತ್ರಂ ಮಾಡಿ ತಲೆಗೊಟ್ಟ ॥ ಆಯನ ಪುತ್ರ ಗೊಗ್ಗಿಮಯ ದಂಡನಾಯಕ ವಿಷ್ಣುವರ್ದ್ಧನದೇವನ ಸಮೀಪದಲು ಕಲ್ಯಾಣದಲು ತಲೆಗೊ

೩೧. ಟ್ಟ ಗೊಗ್ಗಿಮಂಯನಿಂ ಕಿಱಿಯ ಭಂಡಾರಿ ಚಟ್ಟಮಯ್ಯನಿಂ ಕಿಱಿಯ ಶ್ರೀಮೂಲಸಂಘದಾ ಚಾರ್ಯ್ಯರು ಮಾಘ(ವ) ಣಂದಿಸಿದ್ಧಾಂತ

೩೨. ದೇವರ ಶಿಷ್ಯರು ಗಂಡವಿಮುಕ್ತಸಿದ್ಧಾಂತದೇವರ ಸಧರ್ಮ್ಮ[ಽ*]ರಪ್ಪ ಶ್ರೀಮನುಮಹಾಮಂತ್ರವಾದಿ ಮೇಘಚಂದ್ರ ದೇವರ್ಗ್ಗೆ ಹಳಯ

೩೩. ರ ಮಗನೆಂದು ಕಾರುಣ್ಯಂ ಗೆಯ್ದಯ ಸಕವರ್ಷ ೧೦೫೫ಯ ನಳ ಸಂವತ್ಸ[ರ*] ದುತ್ತರಾಯಣ ಸಂಕ್ರಾನ್ತಿಯಾದಿವಾರದಂ

೩೪. ದು ತುಂಗಭದ್ರೆಯ ತಡಿಯಲು ಗಳಗೇಶ್ವರದೇವರ ಸಮೀಪದಲು ವಿಷ್ಣುವರ್ದ್ಧ[ಽ*]ನದೇವ ಸಿಂದಗೆಱೆಯ ಸ್ಥಾನಮುಂ ಕಿಱಿಯ ಮುಗುಳಿ

೩೫. ಯ ಸ್ಥಾನಮುಮ ಶ್ರೀಹಸ್ತದಿಂ ಧಾರಾಪೂರ್ವ್ವಕಂ ಮಾಡಿದ ॥ ॥ ಸ್ವಸ್ತಿ ಶ್ರೀಮನು ಮಹಾಮಂಡಳೇಶ್ವರ ವಿಷ್ಣುವರ್ದ್ಧನ ವೀರಗಂಗ ನಾರಸಿಂಘ

೩೬. ದೇವ ಪ್ರಿಥ್ವಿರಾಜ್ಯಂ ಗೆಯುತ್ತಿರೆ ಹೊಯ್ಸಳ ಜಿನಾಲಯಕ್ಕೆ ಪುರವರ್ಗ್ಗ[ಽ*]ವಾಗಿ ಹೆಂಮಾಡಿಗೌಡ ತಂನ ಸಾಮ್ಯದ ಭೂಮಿಯ ಕೊಟ್ಟು ದೇ

೩೭. ವರ ಸರುಗಿಂಗೆ ಹರಳಮಕ್ಕಿಯಲೊಂದು ಗದ್ದೆಯ ಬಿಟ್ಟ ಎಱೆಯಗೌಡನ ಪುತ್ರ ಬಂಮಗೌಡ ತುಱುವಳ ಮಂಣಿಂ ಮೇಲಣ ಮೆ

೩೮. ಯ್ಯಲೊಂದು ಹೂವಿನ ತೋಟವ ದೇವರಿಗೆ ಬಿಟ್ಟ । ಶ್ರೀ ಮೂಲಸಂಘದಾಚಾರ್ಯ್ಯ ಗುರುಕುಳ ॥ ಧಾರೆಯ ವಿದ್ಯಾಚಕ್ರವರ್ತಿ ಪ್ರಭಾಚಂದ್ರ[ಪಂ]

೩೯. ಡಿತದೇವರು । ಏಕಸನೆಗಳಗಂಡೆಗರ್ತ್ತರಿ ಕುಮುದಚಂದ್ರ ಪಂಡಿತ ದೇವರು । ಪದುಮಣಂದಿ ಭಟ್ಟಾರಕರ ಶಿಷ್ಯರು ಕುಳಚಂದ್ರಸಿದ್ಧಾಂತದೇವರುಂ ಗುಣ

೪೦. ಚ[ಂ*]ದ್ರದೇ[ವ*]ರು ॥ ಅವ[ರ*] ಶಿಷ್ಯರು ವರ್ದ್ಧ[ಽ*]ಮಾನಪ[ಂ*]ಡಿತರುಂ ಮಾಘ[ವ]ಣಂದಿ ಸಿದ್ಧಾಂತದೇವರು ॥ ಎಳೆಮಾವಿಂ ಬಸವ ಬುಜದಿಂ ತಿಳಿಗೊಳಂ ಮಾಣಿಕ್ಯದಿಂ ಮಂಡನಾವ

೪೧. ಳಿತಾರಾಧಿಪನಿಂ ನಭಂ ಶುಭದಮಾಗಿರ್ಪ್ಪುತಿರಿದತ್ತು ನಿರ್ಮ್ಮಳಮೀಗಳು ಕುಳಚಂದ್ರ ದೇವಚರಣಾಂ ಭೋಜಾತ ಸೇವಾವಿನಿಶ್ಚಳ ಸೈದ್ಧಾಂತಿಕ ಮಾಘ

೪೨. ಣಂದಿ ಮುನಿಯಿಂ ಶ್ರೀ ಕೊಂಡಕುಂದಾನ್ವಯ ॥ ಅವರ ಶಿಷ್ಯರು ॥ ವರೇರ್ವರ ॥ ವಿಚಾರುಚಾರುನಿಪುಣಂ ವೀರಂ ವೃಥಾಮಾಕ್ರಿಥಾ ಕಿಂಚಿತು ಕೌ

೪೩. ತುಕ ಮಸ್ತಿಮಸ್ತಕತರ್ಪ್ಪೋರ್ವನ್ನಸ್ತಹಸ್ತಾಂಜಳರ್ಮಾಹೇಭಃ ಕಣಕುಂಭ ಪೀಠಲು ಠನಾರಕ್ಕೋರ್ವ್ವಿ ಮುಕುತಾಫಲೈಃ ಸೋಯಂ ಗ[ಂ*]ಡವಿಮುಕುತ

೪೪. ದೇವಮುನಿಶ್ಚಾರಿತ್ರ ಚಕ್ರೇಶ್ವರ ॥ ॥ ಅತಿಧೂರ್ತ ಗ್ರಹನಿಗ್ರಹಾಗ್ರಹನಿಯೋಗತ್ರಿಯಂಬಕಂ ಸ್ರಾಖಿನೀಕ್ರಿತ ಮಾಯಾತಿಮಿರಪ್ರ

೪೫. ಭೇದನ ದಿನೇಶಂ ಸರ್ಪ್ಪಸೌಪರ್ಣ್ಣನುದ್ಧತ ನಾನಾ ರಿಪು ಮಂತ್ರಿದರ್ಪ್ಪದಳನಂಃ । ಶ್ರೀಮೇಃ ಚಂದ್ರಾಹ್ವಯ ಬ್ರತಿನಾರ್ಥ ಸುಜನೋಪ

೪೬. ಕಾರಕರಣ ವ್ಯಾಪಾರ ಪಾರಾಯಣಂ ॥ ಎಲೆ ವೀರಗ್ರಮೆಯಡಂಗು । ಮರುಳೆಯಾಟೋಪಮಂ ಮಾಣುದೋರ್ವ್ವಲಮಂ ನಚ್ಚುವ ಭೂತ

೪೭. ಮೆ ತೊಲಗುವಮಾ ಕೊಂ[ದಾ]ಲ್ಯ ಗಾಂಧರ್ವ್ವ ಸಂಕುಲಮೆ ಸಾರದೆ ಪೋಗು ರಾಕ್ಷಸಿಯರಿಂ ನಾಕ್ಷೇಪಮಂ ಮಾಣಿಮೆಂದುಲಿಗುಂ । ಶ್ರೀಮು

೪೮. ನಿಮೇಘಚಂದ್ರನ ಯಶೋ(ಂ)ಭೇರೀರವಂ ಧಾತ್ರಿಯೊಳು ॥ ಉರಗ ಪಿಶಾಚ ಭೂತ ಗಣವು ಗ್ರನವಗ್ರಹ ಶಾಖಿನೀ ನಿಶಾಚರಭ

೪೯. ಯಮಂ ನಿವಾರಿಸಲುಕಾ ಜಿನಶಾಸನದೇವ್ಯರಾಜ್ಞೆಯಿಂ ಬರೆಮದೆ ಯಂತ್ರಮೋದಿದುದೆ ಮಂತ್ರಮೊರಲು ರ್ದುದೆ ತಂತ್ರಮೆಂದೊಡ

೫೦. ಚ್ಚರಿ ಮುನಿಮೇಘಚಂದ್ರನ ಗುಣೋಂನತಿ ಗೀತಿಸುವಾ ತಳಾಗ್ರದೊಳು ॥ ಉಱದೀ ತಾಪಸನೇವನೆಂದು ಕಡುಪಿಂ ವಿದ್ಯಾಧರರ್ಕ್ಕಿಂನರಣ್ಣೆ

೫೧. ಱ^ ಗಾಂಧರ್ವ್ವ[ರ*] ರಗುರ್ವ್ವೋರ್ಪ್ಪೆಸುಕರಾದೆ ತೊರಗಪ್ಪೊರ್ವ್ವಮೋಚ್ಚಱದಿಂ ಶ್ರೀಮನು ಮೇಘಚಂದ್ರ ಮುನಿ ಯೊಳುಮಾಱುನು

೫೨. ಸೊಪ್ಪಾಗಿಗೊದ್ಮೊಱೆಯಿಟ್ಟುಂ ಮಲುಗಚ್ಚಿಪೋದ ಪಲರುಂ ಭೂತಗಳೇಂ ಪೇಳವೇ ॥ ವಿನಯಾದಿತ್ಯ ಹೊಯ್ಸಳ ಜಿ

೫೩. ನಾಲಯಕ್ಕೆ ಸರುಗಿಂಗೆ ಸೋವೆಯನಾಯಕ ತಂಣ ಕೊಡಂಗಿಯೊಳಗೆ ಬಿಟ್ಟ ಗದ್ದೆ ಕಂಮ ಹತ್ತು । ◎ । ಇಂತೀ ಧರ್ಮ್ಮನವನಾರು ಕೆಲಂಬ

೫೪. ರು ಸರ್ವ್ವಶಾನ್ತರಾಗೆ ನಡೆವರಾ ಮಹಾಪುಷ[ರ*] ರಿಗೆ ಕುರುಕ್ಷೇತ್ರ ಗಂಗೆ ಬಾಣರಾಸಿ ಪ್ರಯಾ[ಗ*] ದಿವ್ಯತೀರ್ತ್ಥಗ ಳೊಳೇಳು ಕೋಟಿಕವಿಲೆ

೫೫. ಕೋಡುಂ ಕೊಳಗ[ಮಂ*] ಹೊಂನಲು ಕಟ್ಟಿಸಿ ಯೇಳು ಕೋಟಿ ಬ್ರಾಹ್ಮಣಗ್ಗೆ[ರ*] ಧಾರಾಪೂರ್ವ್ವಕಂ ಮಾಡಿಕೊಟ್ಟ ಪುಣ್ಯಮಕ್ಕು ॥ ತಂನಂದಂ ಹ

೫೬. ಱಿಂದವಾರು ಕೆಲಂಬರೀ(ಂ) ಧರ್ಮ್ಮಕೆ ಪಾಪ ಬುದ್ಧಿಂಯಂ ಚಿಂ[ತಿ*]ಸಿದವರಾದಿವ್ಯತೀರ್ತ್ಥ ಗಳೊಳೇಳುಕೋಟಿ ಕವಿಲೆಯ ಕೊ[ಂ*]ದವಱ ಮಾಂಸವವೇಳು ಕೋ

೫೭. ಟಿ ಬ್ರಾಹ್ಮಣರ ಕೊಂದವರ ರಕುತದಲು ತುಯ್ಯಲಿನರ್ದ್ದಿ ತೀರ್ತ್ಥ[ರ*]ಂಗಳೊಳು ಏಳು ಕೋಟಿ ಬ್ರಹ್ಮಾತಿಕಱರ ಹಂತಿಲುಯಲುಂಡ ಬ್ರಹ್ಮಾತಿಯ

೫೮. ಕ್ಕು ॥ ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂಧರಾಂ । ಷಷ್ಟಿ[ರ್ವ್ವ*]ರ್ಷಸಹಶ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ॥ ◎ ॥

[ಈ ಶಾಸನವನ್ನು ಪತ್ತೆ ಹಚ್ಚಿದ ಶ್ರೀ ಹರೀಶ್ ಸಿಂಗಟ ಗೆರೆಯವರಿಗೂ ಮೊದಲಿಗೆ ಶಾಸನವನ್ನು ಅಧ್ಯಯನಕ್ಕೆ ಒಳಪಡಿಸಿರುವ ಶ್ರೀ ಎಚ್.ಎಂ. ನಾಗರಾಜ್‌ರವರಿಗೂ ಋಣಿಯಾಗಿದ್ದೇನೆ.

ಈ ಲೇಖನದ ಅನುಬಂಧವಾಗಿ ನಾಗರಾಜ್ ರಾವ್‌ರವರ 'ಶಿವಮುಖ' ಪುಸ್ತಕದಲ್ಲಿ ಪ್ರಕಟಿಸಿರುವ ಶಾಸನ ಪಾಠವನ್ನು ಇಲ್ಲಿ ಸಾಧಾರವೆಂಬಂತೆ ಪ್ರಕಟಿಸಲಾಗಿದೆ.]

ಗ್ರಂಥಋಣ

೧. ಎಪಿಗ್ರಾಫಿಯಾ ಕರ್ನಾಟಕಾ ಸಂ.೨ ಶ್ರವಣಬೆಳಗೊಳದ ಶಾಸನಗಳು, ಮೈಸೂರು ವಿ.ವಿ. ೧೯೭೩.

೨. ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು – ಡಾ. ಕೆ. ವಸಂತಲಕ್ಷ್ಮಿ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೬.

೩. 'ಶಿವಮುಖ' ಸಂಶೋಧನ (ಪ್ರಬಂಧ ಸಂಕಲನ) – ಡಾ. ಎಚ್.ಎಂ. ನಾಗರಾಜ್‌ರಾವ್, ಈಶ್ವರಿ ಪ್ರಕಾಶನ, ಮೈಸೂರು, ೨೦೦೫.

೪. ಯಾಪನೀಯ ಸಂಘ, ಡಾ. ಹಂ.ಪ. ನಾಗರಾಜಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೩೫

ಗಂಗವಾಡಿ ಪ್ರದೇಶದ 'ಶಾಸನೋಕ್ತ ಪ್ರಭುಗಾವುಂಡರು'

ಉಷಾರಾಣಿ*

ಕರ್ನಾಟಕದ ಹಲವಾರು ಶಾಸನಗಳಲ್ಲಿ ಪ್ರಭು ಗಾವುಂಡರ ಉಲ್ಲೇಖ ಕಂಡುಬರುತ್ತದೆ. ಅದರಲ್ಲಿ ಗಂಗವಾಡಿ ಪ್ರದೇಶದ ವ್ಯಾಪ್ತಿಗೆ ಸಂಬಂಧಿಸಿದ ಶಾಸನಗಳಲ್ಲಿ ಪ್ರಭು ಗಾವುಂಡರ ಉಲ್ಲೇಖವಿದೆ. ಈ ಪ್ರಭುಗಾಂವುಂಡರು (ಪದ ಪ್ರಯೋಗಗಳು ಒಂದೊಂದು ಕಡೆ ಒಂದೊಂದು ರೀತಿ ಇದೆ.) ಗ್ರಾಮದಲ್ಲಿ ಧಾರ್ಮಿಕ, ಸಾಮಾಜಿಕ, ಕಾರ್ಯಗಳು, ನಡೆಯುವ ಸಂದರ್ಭದಲ್ಲಿ ದಂಡನಾಯಕರು ಮತ್ತು ಇನ್ನಿತರ ಅಧಿಕಾರಿಗಳ ಜೊತೆ ಉಪಸ್ಥಿತರಿರುತ್ತಿದ್ದರು. ಹಾಗೆಯೇ ಅಲ್ಲಿನ ದಾನ ದತ್ತಿಗಳನ್ನು ರಕ್ಷಣೆ ಮಾಡುವ ಹೊಣೆಯನ್ನು ಹೊಂದಿದ್ದರು, ಇದಿಷ್ಟೇ ಅಲ್ಲದೆ ಶಾಸನಗಳಲ್ಲಿ ಉಲ್ಲೇಖ ವಾಗಿರುವಂತೆ ಪ್ರಭುಗಾವುಂಡರ ಕರ್ತವ್ಯ ಇನ್ನೂ ಹೆಚ್ಚಿನ ದಾಗಿತ್ತು ಮತ್ತು ಊರ/ಗ್ರಾಮದ ಗಾವುಂಡನೇ ಪ್ರಭುಗಾವುಂಡ ಎಂಬುದನ್ನು ತಿಳಿಸುವುದೇ ಈ ಲೇಖನದ ಉದ್ದೇಶ.

ಈ ಪ್ರಭುಗಾಂವುಂಡರು ಯಾರು ? ಎಂಬ ಬಗ್ಗೆ ವಿದ್ವಾಂಸರು ವಿವಿಧ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ಡಾ. ಜಿ.ಎಸ್. ದೀಕ್ಷಿತರ ಪ್ರಕಾರ ಗ್ರಾಮದ ಗಾವುಂಡ ನನ್ನೇ ಪ್ರಭುಗಾವುಂಡ ಎಂದು ಕರೆಯಲಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

"ಕೇಂದ್ರಾಡಳಿತಕ್ಕೂ ಆ ಊರಿನ ಜನರಿಗೂ ಮಧ್ಯ ವರ್ತಿಯಾಗಿದ್ದ ಗಾವುಂಡುಗಳನ್ನು ಅಥವಾ ಪ್ರಭು ಗಾವುಂಡ ರನ್ನು ರಾಜ್ಯದ ಅಧಿಕಾರಿಗಳೆಂದು ಭಾವಿಸುವುದಕ್ಕಿಂತ ಜನರ ಪ್ರತಿನಿಧಿಗಳೆಂದು ಭಾವಿಸುವುದೇ ಹೆಚ್ಚು ಉಚಿತವಾದುದು"[೧]

"ಪ್ರಭುಗಾವುಂಡರು ಗ್ರಾಮದ ಅಥವಾ ಊರಿನ ಗಾವುಂಡರಿಗಿಂತ ಭಿನ್ನರಾಗಿದ್ದಾರೆ. ಪ್ರಭುಗಾವುಂಡನೆಂಬುದು ಗಾವುಂಡರ ಮೇಲಿನ ಅಧಿಕಾರಿಗಳು. ಇವರು ಮಹಾ ಸಾಮಂತರ ಕೆಳಗಿನ ಅಧಿಕಾರಿಗಳಾಗಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಉತ್ತರ ಕರ್ನಾಟಕದ ಶಾಸನಗಳಲ್ಲಿ ಪ್ರಭುಗಾವುಂಡರನ್ನು' ಮಹಾಪ್ರಭು' ಎಂದು ಕರೆಯಲಾಗಿದೆ.

ಸ್ಥಳೀಯ ಆಡಳಿತಾಧಿಕಾರಿ ವರ್ಗಕ್ಕೆ ಸೇರಿದ ಇವರು ಮಹಾಸಾಮಂತರಾಗಿ ಅಧೀನರಾಗಿದ್ದು, ತಮ್ಮ ಅಧಿಕಾರ ಕ್ಕೊಳಪಟ್ಟ ಗ್ರಾಮಗಳನ್ನು ಪ್ರಭುತ್ವದಿಂದ ಆಳುತ್ತಿದ್ದರು. ಪ್ರತಿ ಯೊಂದು ಗ್ರಾಮಕ್ಕೆ ಒಬ್ಬ ಅಥವಾ ಹೆಚ್ಚು ಗಾವುಂಡರಿರು ತ್ತಿದ್ದರು. ಇವರ ಮೇಲೆ ಪ್ರಭುಗಾವುಂಡರಿರುತ್ತಾರೆ. ಈ ಪ್ರಭು ಗಾವುಂಡರ ಒಡೆತನಕ್ಕೆ ಇಂತಿಷ್ಟೆ ಗ್ರಾಮಗಳಿರಬೇಕು ಎಂಬ ನಿಯಮವೇನೂ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ದ್ದಾರೆ".[೨]

"ಗಾವುಂಡಗಳು ಊರಿನ ಯಾವುದೇ ಧರ್ಮಕಾರ್ಯ ಗಳಿಗೆ ಮುಂದೆ ನಿಲ್ಲುತ್ತಿದ್ದರು. ಅವರು ಸ್ವತಂತ್ರವಾಗಿಯೋ ಅಥವಾ ಇತರ ಸ್ಥಳೀಯ ಸಂಸ್ಥೆಗಳ ಜೊತೆ ಸೇರಿಯೋ ಅಥವಾ ಬೇರೆ ಅಧಿಕಾರಿಗಳ ಜೊತೆ ಸೇರಿಯೋ ಅನೇಕ ಧರ್ಮಕಾರ್ಯಗಳಲ್ಲಿ ಭಾಗಿಗಳಾಗಿದ್ದಾರೆ."[೩]

ಗಂಗವಾಡಿ ಪ್ರದೇಶದ ವ್ಯಾಪ್ತಿಯ **ಹೊಯ್ಸಳರ** ಶಾಸನ ಗಳಲ್ಲಿ ಎಲ್ಲಿಯು ಪ್ರತ್ಯೇಕವಾಗಿ ಇಂತಹ ವ್ಯಕ್ತಿಯೇ **'ಪ್ರಭು ಗಾವುಂಡ'** ಎಂದು ವ್ಯಕ್ತವಾಗಿಲ್ಲ. ಗಾವುಂಡರನ್ನೊಳಗೊಂಡ **'ಸಮಸ್ತ ಪ್ರಭುಗಾವುಂಡ'** ಎಂದೇ ಉಲ್ಲೇಖ ಸಿಗುತ್ತದೆ. ಅದಕ್ಕೆ ಈ ಕೆಲವು ಶಾಸನಗಳನ್ನು ಗಮನಿಸಬಹುದು.

ನಂಜನಗೂಡು ತಾಲ್ಲೂಕಿನ **ಬದನಾಳ ಗ್ರಾಮದ ಶಾಸನ** ದಲ್ಲಿ ಎಡೆನಾಡು ಶ್ರೀಗಂಗಾ ಪುರವಾದ ಬಣವಾಳ ಶ್ರೀ ಮೂಲ ಸ್ತಾನ ದೇವರಿಗೆಉ. ಆಂ ದೊಂಬೇಶ್ವರದೇವರಿಗೆ ಅರಸತಿಗಉಂಡನ ವರ್ಗದ, ಕುತ್ತಿಗಉಂಡ, ಅಂಕಗಉಂಡ, ಮಾರಿಗಉಂಡ, ಬೆಟ್ಟಗಉಂಡನ ಮಗ, ಬಯಿರೆಗುಂಡ, ಕೊತ್ತಗಉಂಡನ ಮಗ ಮಾರಗಉಂಡ, ಶಂಕರಗಉಂಡನ ಮಗ ಚಾಮಿಗಉಂಡ ಇಂತಿವರೊಳಗಾದ **ಸಮಸ್ತ ಪ್ರಭುಗಉಂಡಗಳು**, ಆಸ್ತಾನಿಕರು ನಿಬಂಧಿಯಾಗಿ ತರುಜುವ ಗ ೬ ರರೊಳಗೆ ಗ ೨ ಪ ೫ ಮ ನಿತ್ಯನೈವೇದ್ಯ ಹತ್ತು ಮಾನಕ್ಕಿಯನು ಆಸ್ತಾನಿಕರ ಸಲಿಸ್ವಂತಾಗಿ ಧಾರಾಪೂರ್ವಕಂ ಮಾಡಿ ಬಿಟ್ಟ ಧರ್ಮ್ಮ ಎಂಬುದಾಗಿ ಉಲ್ಲೇಖವಾಗಿದೆ.

ಗುಂಡ್ಲುಪೇಟೆಯ **ಕುಮಾರಬೀಡು** ಶಾಸನದಲ್ಲಿಯೂ ಪ್ರತಾಪ ಹೊಯ್ಸಳ ವೀರಬಲ್ಲಾಳದೇವರು ಪ್ರಥ(ಪಿ) ರಾಜ್ಯಂಗೆಯ್ಯುತ್ತಮಿರೆ ಸಕವರಿಷ ದಂಡನಾಯಕ ಬಿಟ್ಟಿಮಯ್ಯಂ

* ನಂ. ೯, ರಾಜರಾಜೇಶ್ವರಿ ನಿಲಯ, ೧೦ನೇ ಅಡ್ಡರಸ್ತೆ, ೧ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮.

ಗಳ ಸಂನ್ನಿಧಾನದಲು ಹಡದವರ ಮಂಡಳಿಕ ಮರವಿಸೆಯ ಕೇಸದೇವ ಹೆಗ್ಗಡದ ಭೂತಗೌಡ. ದೇಸಗನಹಳ್ಳಿಯ ಹರದ ಗೌಂಡ ಬಚ್ಚಕೋಟಿದ ಸೆಟ್ಟಗೌಂಡ ಬಜಗೌಂಡ ಪುತ್ತೂರ ಹಳ್ಳಗೌಂಡ ಕಜೆಯ ಗೌಂಡ ಸೂಕ್ಕಯದ ಜಟಿಯಾಂಡೆ ತೆಂತಲೆ ಗೌಂಡ ಸ್ವಾಮಿ ಗೌಂಡ ದೇಮಗಂಬಳಿರು ಹೊಯ್ಸಳ ಗೌಂಡ ಪುರದ ಬೊಪ್ಪಸೆಟ್ಟಿ ಮೈಸುನಾಡ **ಸಮಸ್ತ ಪ್ರಭುಗೌಂಡು ಗಳು** ಕುಮಾರನ್ನ ಜೀಡಿನ ಜೆಂಟೇಸ್ವರ ದೇವರಿಗೆ ದೇವದಾನ ವನ್ನು ಕೊಟ್ಟಿದು ಎಂದು ಉಲ್ಲೇಖವಾಗಿದೆ.

ಗುಂಡ್ಲುಪೇಟೆಯ ಮತ್ತೊಂದು ಶಾಸನದಲ್ಲಿ ಒಂದು ಬಸದಿಗೆ ಮತ್ತೊಂದು ದೇವಸ್ಥಾನದ ಜೀರ್ಣೋದ್ಧಾರಕ್ಕೆ ದಾನ ಕೊಡುವಾಗ ಕುಡುಗುನಾಡ ಮುಂನೂಜಿ **ಸಮಸ್ತ ಪ್ರಭುಗಾವುಂಡುಗಳಿರ್ದು** ಎಂದು ಉಲ್ಲೇಖವಾಗಿದೆ.

ಹೆಗ್ಗಡದೇವನ ಕೋಟೆಯ **ಕಳ್ಳಂಬಾಳದ ೨** ಶಾಸನದಲ್ಲಿ **ಹದಿನಾಲ್ಕುನಾಡ ಸಮಸ್ತ ಪ್ರಭುಗಾವುಣ್ಡಗಳು** ಎಂದೇ ಉಲ್ಲೇಖವಾಗಿದೆ. ನುಗುನಾಡ ಶ್ರೀ ಮಚವಂಶದ ಒಂಕಗವುಡ ಯಿಂಮಿಡಿನಾಡಾಳು ಮಾದ್ದಿಗವುಡ ಕಲ್ಲಂಬಾಳ ಸಮಸ್ತ ನಖರಂಗಳು ಮುಖ್ಯವಾಗಿ ನುಗುನಾಡೊಳಗಣ ಕುಂದೂರನು ಕಲ್ಲಿಂಬಾಳ ಕಲಿಯುಗ ಕಾಮೇಶ್ವರ ದೇವರ ನಿತ್ಯ ನೇವೇದ್ಯ ಶ್ರೀ ಕಾರ್ಯನರಂತಾರಿ ಧಾರಾಪೂರ್ವ್ವಕ್ಕಂ ಮಾಡಿ ಕೊಟ್ಟ ದತ್ತಿ ಎಂದಿದೆ.

ಕೊಳ್ಳೆಗಾಲದ **ಮುಡಿಗೊಣ್ಡದ ೩** ಶಾಸನದಲ್ಲಿಯೂ ಪದಿನಾಲು ನಾಟ್ಟು **ಸಮಸ್ತ ಪ್ರ(ಪೊ)ಗಾಮುಣ್ಡುಗ[ಳೋಮ್]** ಎಂದು ಉಲ್ಲೇಖವಾಗಿದೆ.

ಚಾಮರಾಜನಗರದ ಎಡೂರು ಹರಳಕೂಟ ಶಾಸನ ದಲ್ಲಿಯೂ ಎಣ್ಣೆನಾಡ **ಸಮಸ್ತ ಪ್ರಭುಗಾವುಂಡಗಳುಂ** ಎಂದೂ, ಕುಲಗಾಣದ ಶಾಸನದಲ್ಲಿ ಇಡ್ಯೆನಾಡು ಈರ್ಮುಪ್ಪದು **ಸಮಸ್ತ ಪ್ರಭುಗಾಮುಣ್ಡುಗಲೋಮ್** ಎಂದಿದೆ.

ಚಾಮರಾಜನಗರ ಜಿಲ್ಲೆಯ ಹೊಮ್ಮ ಶಾಸನದಲ್ಲಿ ಉಲ್ಲೇಖವಾಗಿರುವಂತೆ ಶ್ರೀ ವೀರಬಲ್ಲಾಳ ದೇವರಸ ಬೆಸದಿಂ ದೇವರ ಸಜ್ಜನ ವಿತ್ತಿಯ ಕಮ್ಮನಿಗುರು ಕುಮಾರನ ನಾಡದ ತೊಜಿನಾಡ, ತಗಡೂರ, ಬೇಗೂರು, ಮುಖ್ಯವಾದ ಹದಿನಾಲ್ಕುನಾಡ **ಸಮಸ್ತ ಪ್ರಭುಗಲುಡುಗಳು** ಆ ಹೊಂಮಿದ ಆಲೂರನು ಆದೇ ಸೀಮೆ ಪಿಳೆನಾಯರಿಗೆ ನಾಡಾಗಿ ಧಾರೆಯನೆಜಿದು ಕೊಟ್ಟೆ ಬಾ। ಎಂದು ಆಜ್ಞೆ ಮಾಡಿರುವುದು ಕಂಡುಬರುತ್ತದೆ.

ಚಾಮರಾಜನಗರದ **ದೊಳ್ಳಪುರದ** ಎಂಬ ಮತ್ತೊಂದು ಶಾಸನದಲ್ಲಿ ಉಲ್ಲೇಖವಾಗಿರುವಂತೆ ಚಾವಡಿಯ ಅಲ್ಲಾಳ ಗವುಡ, ನಗರಲ ಕೊಡಿಯಾಂಡೆ, ಹಂಡರಕನ ಹಳ್ಳಿಯ ಚಿಕ್ಕಗವುಡ, ಹಳಲಕೋಟೆಯ ಮರಜಿಗವುಡ ರಾಘವಗವುಡ ನಿಟ್ಟಹಳ್ಳಿಯ ಮಾದಿಗವುಡ ಎಜಿಗನಹಳ್ಳಿಯ ಮೋಟಗವುಡ ನೊಳಗಾದ **ಸಮಸ್ತ ಪ್ರಭುಗವುಡ** ಒಳಗೊಂಡು ಎಂದೂ.

ಹಾಸನದ ಹೆರಗುವಿನ ಶಾಸನದಲ್ಲಿ ಉಲ್ಲೇಖ ವಾಗಿರುವಂತೆ ಅಲ್ಲಿನ ದೇವಸ್ಥಾನಕ್ಕೆ ದತ್ತಿಕೊಟ್ಟ ಪ್ರದೇಶ. ಆಧರ್ಮವನ್ನು ಮಹಾಜನಂಗಳುಂ ಊರು ನಾಗರಹಳ್ಳಿ ಯಲ್ಲಿ **ಸಮಸ್ತವಂ ಪ್ರಭುಗಾವುಂಡುಗಳು** ಪ್ರತಿಪಾಳೀಸುವರು ಎಂದು ಉಲ್ಲೇಖವಾಗಿದೆ.

ಚಿದರವಳ್ಳಿ ಶಾಸನ ಇದಕ್ಕೆ ಉದಾಹರಣೆ ಸಂಕಾಚಾರಿಯ ಮಗ ಕವಿಲೆಜಾರಿ ಕಿರಿಯ ಕುಲಕಣಿ ಎಂಬಲ್ಲಿ ತಿದವಳ್ಳಿಯ ಗಾವುಂಡಗಳ ಜೊತೆ ಯುದ್ಧಕ್ಕೆ ಹೋಗಿ ಕಾಪಾಡಿ ಸತ್ತವನಿಗೆ ಚಿದರವಳ್ಳಿ ಪುರದ ಕೊಳಗ ಗದ್ದೆಯನ್ನು ಕೊಡುಗೆಯಾಗಿ **ಸಮಸ್ತ ಪ್ರಭುಗಾವುಂಡರು** ಕೊಟ್ಟರು ಎಂದು ಉಲ್ಲೇಖವಾಗಿದೆ.

೧೮೯ **ಎಂ.ಎ.ಆರ್**. ೧೯೪೪-೩೦ ಪುಟ ೨೮೯ರಲ್ಲಿ ಉಲ್ಲೇಖವಾಗಿರುವ ಹದಿನಾರು ಎಂಬ ಶಾಸನವು ಸಾಕಷ್ಟು ತೃಟಿತವಾಗಿದ್ದು ಅದರಲ್ಲಿ ಉಳಿದಿರುವ ಭಾಗವನ್ನು ಗಮನಿಸಿ ದಾಗ ಗಲುಡ, ತಗೌಡರೂ, ಳ ಗೌಡ ಹಟಿ ತಲೆಗೊಟಿನ ಸಾವಿನಾಡ, ಹೊನಿಗೌಡ **ಸಮಸ್ತ ಪ್ರಭುಗಾಂಡುಗಳುಂ** ಎಂದೂ ಉಲ್ಲೇಖವಾಗಿದೆ.

ಈ ಮೇಲಿನ ಶಾಸನಗಳನ್ನೆಲ್ಲಾ ಗಮನಿಸಿದರೆ ಗ್ರಾಮಾಡಳಿತದಲ್ಲಷ್ಟೆ ಅಲ್ಲದೆ ಕರ್ನಾಟಕದ ರಾಜವಂಶಗಳ ರಾಜ್ಯವ್ಯವಸ್ಥೆಯಲ್ಲಿ ಪ್ರಭುಗಾವುಂಡರು ಅತ್ಯಂತ ಪ್ರಮುಖ ಸ್ಥಾನದಲ್ಲಿದ್ದರು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಈ ಪ್ರಭುಗಾವುಂಡರ ಕರ್ತವ್ಯಗಳು ಗಾವುಂಡರ ಕರ್ತವ್ಯಗಳಂತೆಯೇ ಇರುತ್ತಿದ್ದವು. ಅವುಗಳೆಂದರೆ ಗ್ರಾಮ ಧಾರ್ಮಿಕ, ದಾನ ದತ್ತಿ ನೀಡುವಿಕೆ, ಇತರರು ನೀಡಿದ ದಾನಗಳ ಸಂರಕ್ಷಣೆ, ಆಡಳಿತ ಕರ್ತವ್ಯಗಳಾದ (ಬ್ರಹ್ಮದೇಯ, ದೇವದಾಯ, ದೇವರ ಪ್ರಜೆ, ಉತ್ಸವ) ಆಡಳಿತ, ಶಾಂತಿ, ರಕ್ಷಣೆ, ರಾಜ ಬೊಕ್ಕಸಕ್ಕೆ ಸಂದಾಯ, ಆಡಳಿತ ವೆಚ್ಚಕ್ಕಾಗಿ ದ್ರವ್ಯ ವಿನಿಯೋಗ, ಜನರ ಕ್ಷೇಮ, ಜನಕಲ್ಯಾಣ ಸೈನಿಕ ಕರ್ತವ್ಯಗಳು ಇವುಗಳನ್ನೆಲ್ಲ ಗಮನಿಸಿದರೆ ಗ್ರಾಮದಲ್ಲಿ ಇವರ ಸ್ಥಾನ ರಾಜ ಅಥವಾ ಪ್ರಭುವಿನಂತೆಯೇ ಉನ್ನತವಾಗಿದ್ದಿತು.

ಪ್ರಭುಗಾವುಂಡರು ವೀರರಾಗಿದ್ದು ಯುದ್ಧಕಲೆಗಳಲ್ಲಿ ನಿಪುಣರಾಗಿದ್ದ ಇವರು ತಮ್ಮ ಚಕ್ರವರ್ತಿ ಮಹಾಮಂಡಳೇಶ್ವರ ಇಲ್ಲವೇ ಮಹಾಸಾಮಂತ ಅಥವಾ ದಂಡನಾಯಕರ ಸಲುವಾಗಿ ಯುದ್ಧಗಳಲ್ಲಿ ಭಾಗವಹಿಸಿ, ಅವರಿಗೆ ಜಯವನ್ನು ತಂದು ಕೊಡುತ್ತಿದ್ದರು. ಈ ಪ್ರಭುಗಾವುಂಡರ ಜೊತೆಗೆ

ಗ್ರಾಮದ ವ್ಯಕ್ತಿಗಳು ಯುದ್ಧದಲ್ಲಿ ಭಾಗವಹಿಸಿ ಹೋರಾಡಿ, ಸತ್ತರೆ, ಅಂತವರಿಗೆ ಕೊಡುಗೆಗಳನ್ನು ನೀಡುವ ಅಧಿಕಾರವನ್ನು ಹೊಂದಿದ್ದರು.

ಈ ಮೇಲಿನ ಶಾಸನಗಳಲ್ಲಿ ಉಲ್ಲೇಖವಾಗಿರುವ ವಿಚಾರಗಳನು ಗಮನಿಸಿದರೆ ಮತ್ತು ಈಗಾಗಲೇ ವಿದ್ವಾಂಸರುಗಳು ಗಾವುಂಡರು ಮತ್ತು ಪ್ರಭುಗಾವುಂಡರು ಭಿನ್ನರಲ್ಲ ಗಾವುಂಡರನ್ನೇ ಪ್ರಭುಗಾವುಂಡ ಎಂದೂ ಕರೆಯುತ್ತಿರುವುದು ಪ್ರಶಂಸನೀಯ ಎಂಬುದು ನನ್ನ ಲೇಖನ ಉದ್ದೇಶ.

ಆಧಾರಸೂಚಿ

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಎಂ. ಚಿದಾನಂದಮೂರ್ತಿ, ಪುಟ ೩೧೮, ೩೯೬.

೨. ಆರನೇ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ, ಡಾ. ಜೆ.ಎಂ. ನಾಗಯ್ಯ.

೩. ಶಾಸನಗಳು ಮತ್ತು ಕರ್ನಾಟ ಸಂಸ್ಕೃತಿ, ಸಿ.ಯು. ಮಂಜುನಾಥ, ಪುಟ ೩೧೯–೩೨೨, ಇವರು ಕೂಡ ಪ್ರಭುಗಾವುಂಡನ ಬಗ್ಗೆ ಪ್ರತ್ಯೇಕತೆ ತೋರಿಸಿಲ್ಲ ಶಾಸನದಲ್ಲಿ ಉಲ್ಲೇಖವಾಗಿರುವುದನ್ನೇ ಸೂಚಿಸುತ್ತಾರೆ.

ಪರಾಮರ್ಶನ ಗ್ರಂಥಗಳು

೧. ಎ.ಕ. III, IV, ಮೈಸೂರು ಜಿಲ್ಲೆ.

೨. ಎಂ.ಎ.ಆರ್. ೧೯೪೪–೩೦.

೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಎಂ. ಚಿದಾನಂದಮೂರ್ತಿ.

೪. ಆರನೇ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ, ಡಾ. ಜೆ.ಎಂ. ನಾಗಯ್ಯ.

೫. ಶಾಸನಗಳು ಮತ್ತು ಕರ್ನಾಟ ಸಂಸ್ಕೃತಿ, ಸಿ.ಯು. ಮಂಜುನಾಥ.

೩೭

ಬಳ್ಳಿಗಾವೆಯ ಕೆಲ ಹೊಸ ಶಾಸನ ಆಕರಗಳು

ಡಾ. ಜಗದೀಶ*

ಬಳ್ಳಿಗಾವೆ ಒಂದು ಪ್ರಸಿದ್ಧ ಕೇಂದ್ರವಾಗಿತ್ತು. ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಕೆಲವು ವರ್ಷಗಳಿಂದ ಬಳ್ಳಿಗಾವೆಯಲ್ಲಿ ಕೆಲವು ದೇವಾಲಯಗಳ ಸಂರಕ್ಷಣೆ ಕೈಗೊಂಡಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯೂ ಕೂಡ ಕೆಲವು ಸಂರಕ್ಷಣಾ ಕೆಲಸಗಳನ್ನು ಕೈಗೊಂಡಿದೆ. ಕಳೆದ ದಶಕದಲ್ಲಿ ಬಳ್ಳಿಗಾವೆಯ ಸ್ಮಾರಕಗಳನ್ನು ವೀಕ್ಷಿಸುವ ಸಮಯದಲ್ಲಿ ಕೆಲವು ಹೊಸ ವಿಚಾರಗಳು ತಿಳಿದುಬಂದಿವೆ. ಈಗಾಗಲೇ ಒಂದು ರಾಷ್ಟ್ರಕೂಟರ ಕಾಲದ ತುರುಗೋಳು ವೀರಕಲ್ಲು ಮತ್ತು ಕೇದಾರೇಶ್ವರ ದೇವಾಲಯದ ಮಹಾನಾಸಿ ಭಾಗದಲ್ಲಿ ಶಿವಸ್ತುತಿಯ ಪ್ರಾರಂಭಿಕ ಸಾಲು ಇರುವ ಬಗ್ಗೆ ನಾನು ಪ್ರಕಟಿಸಿರುತ್ತೇನೆ.

ಭೇರುಂಡೇಶ್ವರ ಸ್ಥಂಭದ ಬಳಿ ಇರುವ ವೀರಭದ್ರ ದೇವಾಲಯದ ಬಳಿ ಹೋಳಾಗಿರುವ ಲಿಂಗದ ಒಂದು ಭಾಗವಿದೆ. ಈ ಲಿಂಗ ಮೂರು ಭಾಗಗಳನ್ನು ಹೊಂದಿದೆ. ಭಕ್ತರಿಗೆ ಎದಿರಾಗಿರುವಂತೆ ನೋಡಿದಾಗ ಬ್ರಹ್ಮ ಭಾಗದಲ್ಲಿ ಶ್ರೀ ಎಂಬ ಲಿಪಿ ಇದೆ. ಲಿಪಿಯ ಸ್ವರೂಪದಿಂದ ಈ ಲಿಂಗ ರಾಷ್ಟ್ರಕೂಟರ ಕಾಲಕ್ಕೆ ಸೇರಿಸಬಹುದಾಗಿದೆ.

ಜಡ್ಡಿಕೆರೆಯ ಬಳಿ ಇರುವ ನೀಲಕಂಠೇಶ್ವರ ದೇವಾಲಯದ ಸಂರಕ್ಷಣೆ ಬಳಿ ಕೆಲಸ ನಡೆಯುತ್ತಿರಬೇಕಾದರೆ ಮಣ್ಣಿನಲ್ಲಿ ಹೂತುಹೋಗಿದ್ದ ಒಂದು ಶಾಸನ ಬಿಡಿಸಲಾಯಿತು. ಆಗ ಕಂಡುಬಂದ ಅಂಶವೆಂದರೆ ಶಾಸನ ಮುಗಿದ ನಂತರ ಕೆಳಗೆ ಮತ್ತೊಂದು ಶಾಸನ ಪ್ರಾರಂಭವಾಗಿದೆ. ಶಾಸನದ ಪಾಠ ಮತ್ತು ಪ್ರಕಟಿತ ಶಾಸನಗಳನ್ನು ಪರಿಶೀಲಿಸಲು ಈ ಶಾಸನ ಈಗಾಗಲೇ ಪ್ರಕಟವಾಗಿದೆಯೆಂದು ತಿಳಿಯಿತು. ಎಪಿಗ್ರಾಫಿಯಾ ಕರ್ನಾಟಕ ಸಂಪುಟ ೮ ಶಿಕಾರಿಪುರ ತಾಲೂಕು ಶಾಸನಗಳಲ್ಲಿ ಇವು ಕ್ರಮವಾಗಿ ೧೨೬ ಮತ್ತು ೧೨೭ ಸಂಖ್ಯೆಯಲ್ಲಿ ನಮೂದಾಗಿವೆ. ಶಾಸನದ ಪ್ರಮಾಣ ೭ ಅಡಿ ಎತ್ತರ ೩ ಅಡಿ ಅಗಲ ಎಂದು ನಮೂದಾಗಿದೆ. ೧೨೬ನೆಯ ಶಾಸನ ಕ್ರಿ.ಶ. ೧೦೩೬ಕ್ಕೆ ಮತ್ತು ೧೨೭ನೆಯ ಶಾಸನ ಕ್ರಿ.ಶ. ೧೧೧೮ಕ್ಕೆ ಸೇರಿದೆ ಎಂದು ನಮೂದಾಗಿದೆ. ಇವುಗಳ ಅಂತರ ೮೨ ವರ್ಷ ಇದೆ. ಎರಡನೆಯ ಭಾಗದಲ್ಲಿರುವ ಶಾಸದಲ್ಲಿರುವ . . . ಬಿಸಂವತ್ಸರ ಎಂಬ ಪಾಠವನ್ನು ಹೇವಿಳಂಬಿ ಎಂದು ಪರಿಗಣಿಸುವುದಾದರೆ ಹೇವಿಳಂಬಿ ಸಂವತ್ಸರವು ಕ್ರಿ.ಶ. ೧೦೫೮ ಮತ್ತು ೧೧೧೮ರಲ್ಲಿ ಬರುತ್ತದೆ. ಆದರೆ ಎರಡೂ ಶಾಸನಗಳು ಒಂದೇ ಕಲ್ಲಿನಲ್ಲಿ ಇದೆ. ಎರಡು ಶಾಸನಗಳು ಒಂದೇ ಕಲ್ಲಿನಲ್ಲಿ ಇರುವ ಕಾರಣ ಪ್ರಾಯಶಃ ಎರಡು ಶಾಸನಗಳ ಕಾಲವನ್ನು ಕ್ರಿ.ಶ. ೧೦೩೬ ಹಾಗೂ ೧೦೫೮ ಎಂದು ಪರಿಗಣಿಸಬಹುದೆಂದು ತೋರುತ್ತದೆ. ಆಗ ಶಾಸನಗಳ ಅಂತರ ೨೨ ವರ್ಷ ಆಗುತ್ತದೆ.

ಬಳ್ಳಿಗಾವೆಯಿಂದ ಆನವಟ್ಟಿಗೆ ಹೋಗುವ ರಸ್ತೆಯಲ್ಲಿ ಎಡಭಾಗಕ್ಕೆ ಕಲ್ಲೇಶ್ವರ ದೇವಾಲಯುವಿದೆ. ಕಲ್ಲೇಶ್ವರ ದೇವಾಲಯದ ಹೊರ ಗೋಡೆ ಬೀಳುವಂತಾದಾಗ ಸ್ಥಳೀಯರು ತಮ್ಮ ಸಂರಕ್ಷಣಾ ವಿಧಾನದಲ್ಲಿ ಗೋಡೆಯ ಪಕ್ಕದಲ್ಲಿ ಮಣ್ಣು ಪೇರಿಸಿದ್ದರು. ಇತ್ತೀಚೆಗೆ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಕಲ್ಲೇಶ್ವರ ದೇವಾಲಯ ಸಂರಕ್ಷಣೆ ಕೈಗೊಂಡಿದೆ. ಆಗ ಮಣ್ಣಿನಲ್ಲಿ ಒಂದು ಶಾಸನ ದೊರಕಿತು. ಶಾಸನದ ಪಾಠ ಪರಿಶೀಲಿಸಿದಾಗ ಅದು ೧೯೨೯ರ ಎಂ.ಎ.ಆರ್. ಪುಟ ೨೩೮ ನಂ.೬೫ರಲ್ಲಿ ಶಾಸನ ಎಂದು ಪ್ರಕಟವಾಗಿರುವುದು ತಿಳಿಯಿತು. ಈ ಭಾಗದಲ್ಲಿ ದೇವಾಲಯಗಳ ಗೋಡೆ ಬೀಳುವಂತಾದಾಗ ಸಾಮಾನ್ಯವಾಗಿ ಗೋಡೆಗಳ ಪಕ್ಕದಲ್ಲಿ ಮಣ್ಣು ಪೇರಿಸುತ್ತಾರೆ. ಇದರಿಂದ ಗೋಡೆಗಳು ಹೊರಕ್ಕೆ ವಾಲಿಕೊಂಡು ಬೀಳುವುದು ತಪ್ಪುತ್ತದೆ. ೧೯೨೯ರ ಎಂ.ಎ.ಆರ್.ನಲ್ಲಿ ಶಾಸನ ಪ್ರಕಟವಾಗಿರುವುದರಿಂದ, ದೇವಾಲಯವನ್ನು ಸ್ಥಳಿಯವಾಗಿ ಸಂರಕ್ಷಿಸುವ ಕಾರ್ಯ ಕ್ರಿ.ಶ. ೧೯೨೯ ನಂತರ ಆಗಿರಬೇಕು. ಹಾಗೆ ಸಂರಕ್ಷಿಸುವ ಸಮಯದಲ್ಲಿ ಶಾಸನವನ್ನು ಕೂಡಾ ಮಣ್ಣನಲ್ಲಿ ಮುಚ್ಚಿ ಸಂರಕ್ಷಿಸಿರಬೇಕು. ಶಾಸನವಲ್ಲಿ ಕಲಿದೇವೇಶ್ವರ ಎಂಬ ಉಲ್ಲೇಖವಿದೆ, ಸ್ಥಳೀಯವಾಗಿ ಕಲ್ಲೇಶ್ವರ ಎಂದು ಹೇಳಲಾಗುತ್ತದೆ. ದೇವಾಲಯ ಕಲಿದೇವೇಶ್ವರ ಆಗಿರಬೇಕು.

ಕೇದಾರೇಶ್ವರ ದೇವಾಲಯ ಸಂಕೀರ್ಣದಲ್ಲಿ ಪ್ರಭುದೇವರ ದೇವಾಲಯ ಇದೆ. ಈ ದೇವಾಲಯ ಮುಂದಿನ ನವರಂಗದ ಮಾಳಿಗೆ ಭಾಗದಲ್ಲಿ ಕೆಲವು ಶಾಸನೋಕ್ತ

* # ೩೩, ಮೊದಲ ಅಡ್ಡರಸ್ತೆ, ಹೊಸಮನೆ ಬಡಾವಣೆ, ಶಿವಮೊಗ್ಗ-೫೭೭೨೦೧.

ತುಂಡುಕಲ್ಲುಗಳನ್ನು ಮಾಳಿಗೆಯ ಇಳಿಜಾರಿನ ಭಾಗಕ್ಕೆ ಬಳಸಲಾಗಿದೆ. ಈ ಎರಡು ತುಂಡುಗಳಲ್ಲಿರುವ ಶಾಸನ ಪಾಠವನ್ನು ಗಮನಿಸಿದಾಗ ಇದು ಇಸಿ ಸಂಪುಟ ೮ರಲ್ಲಿ, ೮ ಅಡಿ ೬ ಇಂಚು ಎತ್ತರ ಹಾಗೂ ೩ ಅಡಿ ಅಗಲ ಇರುವ ನಂ ೧೨೪ರಲ್ಲಿ ನಮೂದಾಗಿರುವ ಕ್ರಿ.ಶ. ೧೦೭೭ರ ಶಾಸನ ಆಗಿದೆ. ಇದನ್ನು ಆನವಟ್ಟಿಗೆ ಹೋಗುವ ರಸ್ತೆಯಲ್ಲಿ ಬಡಗಿಯರ ಹೊಂಡದ ಬಳಿ ನೆಟ್ಟ ಕಲ್ಲು ಎಂದು ನಮೂದಾಗಿದೆ. ಇದರಲ್ಲಿ ಚಾಳುಕ್ಯ ಗಂಗ ಪೆರ್ಮ್ಮಾನಡಿ ಜಿನಾಲಯ ಎಂಬ ಉಲ್ಲೇಖವಿದೆ.

ಬಿ.ಎಲ್.ರೈಸ್ ಅವರ ಎಪಿಗ್ರಾಫಿಕಾ ಕರ್ನಾಟಕಾ ಶಿವಮೊಗ್ಗ ಸಂಪುಟ ೮ ಪ್ರಕಟವಾದ ನಂತರ ಪ್ರಭುದೇವರ ಗುಡಿಯ ನವರಂಗದ ಚೆಜ್ಜಾ ಭಾಗದ ಜೀರ್ಣೋದ್ಧಾರ ಆಗಿದೆಯೆಂದು ತಿಳಿಯಬಹುದು. ಏಕೆಂದರೆ ಶಾಸನವನ್ನು ಪ್ರಮುಖವಾಗಿ ಎರಡು ತುಂಡು ಮಾಡಿ ಮಾಳಿಗೆಯ ಭಾಗಕ್ಕೆ ಬಳಸಿಕೊಂಡಿರುವುದನ್ನು ಕಾಣಬಹುದು. ಶಾಸನದ ಪ್ರಾಮುಖ್ಯತೆಯನ್ನು ತಿಳಿಯದವರು ಈ ಕೆಲಸ ಮಾಡಿರಬಹುದು.

ಪಂಚಲಿಂಗೇಶ್ವರ ದೇವಾಲಯದ ಬಳಿ ಒಂದು ಪೀಠ ಇದೆ. ಈ ಪೀಠದಲ್ಲಿ ಅಪ್ರಕಟಿತ ಶಾಸನವಿದೆ. ಅದರ ಮೇಲಿರುವ ಲಘು ಶಾಸನ ಹೀಗಿದೆ "....ಬಾಳಚಂದ್ರ ದೇವರ ಗುಡ್ಡ ಕಚವಿಯರ ಬೊಪ್ಪ .. ಪಾರ್ಶ್ವದೇವರ ಬಸದಿಯಂ ಮಾಡಿದರು". ಈಗ ಬಳ್ಳಿಗಾವೆಯಲ್ಲಿ ಎರಡು ಬಸದಿಗಳಿದ್ದವು ಎಂಬುದು ಸಿದ್ಧವಾಗುತ್ತದೆ. ಒಂದು ಪೆರ್ಮ್ಮಾನಡಿ ಬಸದಿ ಮತ್ತು ಇನ್ನೊಂದು ಪಾರ್ಶ್ವನಾಥ ಬಸದಿ.


ಪಂಚಲಿಂಗೇಶ್ವರ ದೇವಾಲಯ ಸಮುಚ್ಚಯದ ಪೂರ್ವಕ್ಕೆ ಒಂದು ಈಶ್ವರ ದೇವಾಲಯ ಇದೆ. ಅಧಿಷ್ಠಾನ ಭಾಗ ಮಣ್ಣಿನಲ್ಲಿ ಹೂತುಹೋಗಿತ್ತು. ಈ ದೇವಾಲಯವನ್ನು ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಸಂರಕ್ಷಿಸಿದೆ. ದೇವಾಲಯದ ಅರಣ್ಯದಲ್ಲಿ ಕೆಲವು ಇಟ್ಟಿಗೆ ತುಂಡುಗಳು ಕಂಡುಬಂದಿವೆ. ಅಧಿಷ್ಠಾನದ ಕಪೋತ ಮತ್ತು ಮಕರಪಟ್ಟಿಕೆಯ ಸಾಲುಗಳಲ್ಲಿ ಸಣ್ಣ ಶಿಲ್ಪಗಳು ಕಂಡುಬಂದಿವೆ. ಅವುಗಳಲ್ಲಿ ಹಂಸ ಮತ್ತು ಆಮೆ ಪಂಚತಂತ್ರ ಕಥೆಯ ಶಿಲ್ಪ ಪತ್ತೆ ಆಗಿದೆ. ಇದು ಬಳ್ಳಿಗಾವೆಯ ಪಂಚತಂತ್ರ ಶಿಲ್ಪಗಳ ಪಟ್ಟಿಗೆ ಮತ್ತೊಂದು ಸೇರ್ಪಡೆ. ಎರಡು ಹಂಸಗಳು ಬಾಯಿಯಲ್ಲಿ ಒಂದು ಕಡ್ಡಿಯನ್ನು ಹಿಡಿದು ಹಾರುತ್ತಿವೆ. ಆ ಕಡ್ಡಿಗೆ ಒಂದು ಆಮೆಯು ಜೋತಾಡುತ್ತಿದೆ. ಆ ಆಮೆಯು ಕೆಳಕ್ಕೆ ಬೀಳುವುದನ್ನೆ ಕಾಯುತ್ತಿರುವ ನರಿಯ ಚಿತ್ರಣವಿದೆ. ತಂತ್ರೋಪಾಖ್ಯಾಯನ ಕಥೆಯಲ್ಲಿ ಆಮೆಯು ಊರಿನ ಮೇಲೆ ಹಾದು ಹೋಗುತ್ತಿರುವಾಗ ಜನರು ಈ ದೃಶ್ಯ ಮಾತನಾಡತೊಡಗಿದರು. ಮೊದಲೆ ಹಂಸ ಮತ್ತು ಆಮೆಯ ನಡುವೆ ಒಪ್ಪಂದವಾಗಿತ್ತು. ಆಮೆಯು ಮಾತನಾಡಬಾರದೆಂದು ಇಲ್ಲಿ ಆಮೆಯು ಜನರನ್ನು ಕುರಿತು ಮಾತನಾಡಲು ಬಾಯಿ ತೆರೆದು, ಕೆಳಗಿನ ಬಂಡೆಯ ಮೇಲೆ ಬಿದ್ದು ಸತ್ತು ಹೋಯಿತು. ಆಗ ನರಿಯು ಆಮೆಯ ಮಾಂಸವನ್ನು ತಿಂದಿತು.

ಬಳ್ಳಿಗಾವೆಯ ತ್ರಿಪುರಾಂತಕ ದೇವಾಲಯದಲ್ಲಿ ಪಂಚತಂತ್ರ ಕಥಾನಕ ಪಟ್ಟಿಕೆಗಳಿವೆ. ಅವುಗಳಲ್ಲಿ ಒಂದು ಹಾವು ಮತ್ತು ಮುಂಗಸಿಯ ಕಥೆ ಇರುವ ಪಟ್ಟಿಕೆ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಶಿವಮೊಗ್ಗ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿದೆ. ಉಳಿದಂತೆ ಬಳ್ಳಿಗಾವೆಯಲ್ಲಿ ಬ್ರಾಹಣ ಏಡಿ ಮತ್ತು ಕಾಗೆ, ಮಂಗ ಮತ್ತು ಮೊಸಳೆ, ಟಗರು ಕಾಳಗ ಮತ್ತು ನರಿ, ಅತಿ ಲೋಭಿಯಾದ ನರಿ, ಸ್ವಯಂ ಸೋಲಿಸುವ ಮುಂದಾಲೋಚನೆ, ಹಂಸ ಮತ್ತು ಆಮೆ ಇತ್ಯಾದಿ ಕಥಾನಕ ಪಟ್ಟಿಕೆಗಳಿವೆ.

ಸೀತೆ ಕೊಣದ ಬಳಿ ವಿಷ್ಣು ವಿಗ್ರಹದ ಪೀಠ ಭಾಗದ ತುಣುಕು ಪತ್ತೆ ಆಗಿದೆ. ಈ ಪೀಠದಲ್ಲಿ ಒಂದು ಶಾಸನವಿದೆ. ಈ ಶಾಸನದಲ್ಲಿ "...ದಾಸೋಜನ ಬೆಸ" ಎಂಬ ಉಲ್ಲೇಖವಿದೆ. ಈಗಾಗಲೇ ತಿಳಿದಿರುವಂತೆ ಬಳ್ಳಿಗಾವೆಯ ದಾಸೋಜ ಬೇಲೂರಿನ ಚನ್ನಕೇಶವ ದೇವಾಲಯದಲ್ಲಿ ಕೆಲಸ ಮಾಡಿದ ಪ್ರಮುಖ ಶಿಲ್ಪಿ. ಇದೇ ದೇವಾಲಯದಲ್ಲಿ ದಾಸೋಜನ ಮಗ ಚಾವಣ ಕೂಡಾ ಕೆಲಸ ಮಾಡಿರುತ್ತಾನೆ. ತಾವು ಬಳ್ಳಿಗಾವೆಯವರು ಎಂದು ಹೇಳಿಕೊಂಡಿದ್ದಾರೆ. ಈ ಶಾಸನದಿಂದ ಬಳ್ಳಿಗಾವೆಯಲ್ಲಿ ಕೂಡಾ ದಾಸೋಜ ಕೆಲಸ ಮಾಡಿರುವುದು ತಿಳಿದುಬರುತ್ತದೆ.

ಶಾಂತಲೆಯ ತವರೂರು ಈಸೂರು. ಆಕೆಯು "ಈಸೂರು" ಹೆಸರಿನ ನಾಣ್ಯ ಹೊರಡಿಸಿದ್ದಾಳೆ. ತಾನು ಈಸೂರಿನ ಧರ್ಮೇಶ್ವರದೇವರ ಪ್ರಸಾದದಿಂದ ಜನ್ಮ ಪಡೆದವಳೆಂದು ಹೇಳಿಕೊಳ್ಳುತ್ತಾಳೆ. ತನಗೆ ತನ್ನ ಪತಿಯಿಂದ ದತ್ತಿಯಾಗಿ ಬಂದ ಇಂದಿನ ಹಾಸನ ಜಿಲ್ಲೆ ಮತ್ತು ತಾಲೂಕಿನ ಶಾಂತಿ ಗ್ರಾಮದಲ್ಲಿ ಧರ್ಮೇಶ್ವರ ದೇವಾಲಯವಿದೆ. ಧರ್ಮೇಶ್ವರ ಎನ್ನುವುದು ಲಿಂಗವೆಂದು ತಿಳಿದುಬಂದಿದೆ. ಆಕೆಯ ಹುಟ್ಟೂರಿನ ಸಮೀಪ ಬಳ್ಳಿಗಾವೆ ಇದೆ. ಪ್ರಾಯಶಃ ತಾನು ವಿದ್ಯೆ ಕಲಿಯುವ ಸಮಯದಲ್ಲಿ ದಾಸೋಜ ಆಗಲೇ ಪ್ರಸಿದ್ಧ ಶಿಲ್ಪಿಯಾಗಿರಬೇಕು. ಪ್ರಾಯಶಃ ಶಾಂತಲೆ ಮತ್ತು ಚಾವಣ ಒಂದೇ ವಯಸ್ಸಿನವರಾಗಿರಬೇಕು. ತಾನು ವಿಷ್ಣುವರ್ಧನನನ್ನು ಮದುವೆ ಆದ ನಂತರ ಚನ್ನಕೇಶವ ದೇವಾಲಯ ನಿರ್ಮಾಣ ಕಾಲಕ್ಕೆ ದಾಸೋಜನನ್ನು ಕರೆಸಿರುವ ಸಾಧ್ಯತೆ ಇದೆ. ರಾಮಾನುಜರು ಶಾಂತಲೆಗೆ ದೇವಾಲಯ ನಿರ್ಮಾಣಕ್ಕಾಗಿ







ಜಕಣಾಚಾರ್ಯ ಶಿಲ್ಪಿಯನ್ನು ಪರಿಚಯಿಸಿದರು ಎನ್ನುವುದು ಕಟ್ಟುಕಥೆ ಎಂದು ಈ ಶಾಸನಗಳು ತೋರಿಸಿ ಕೊಡುತ್ತವೆ.

ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕು ಜಂಬಾಣಿಯಲ್ಲಿ ಬದಾಮಿ ಚಲುಕ್ಯ ವಿನಯಾದಿತ್ಯನ ಶಾಸನವಿದೆ. ಶಾಸನದ ಶಾಪಾಶಯ ಭಾಗದಲ್ಲಿ ನಾಲ್ಕು ಗ್ರಾಮವನ್ನು ಅಳಿದ ಮಹಾ ಪಾತಕ ಹೊಂದುತ್ತಾರೆ ಎಂದು ಹೇಳಿ ತಾನಗುಂದೂರು, ಈಸವೂರು, ಗೌಡ ಮತ್ತು ಬಾಡವಿಯನ್ನು ಉಲ್ಲೇಖಿಸಲಾಗಿದೆ. ತಾನಗುಂದೂರು ಪ್ರಾಚೀನ ಸ್ಥಾನಕುಂದೂರು ಮತ್ತು ಬಾಡವಿಯು ಚಲುಕ್ಯರ ರಾಜಧಾನಿಯಾದ ಬಾದಾಮಿಯನ್ನು ಉಲ್ಲೇಖಿಸುತ್ತಿದೆ ಮತ್ತು ಈಸವೂರು ಹಾಗೂ ಗೌಡ ಸದ್ಯದ ಜ್ಞಾನದ ಮಿತಿಯಲ್ಲಿ ಗುರ್ತಿಸಲಾಗದೆಂದು ಎಂ.ಜಿ. ಶರ್ಮ ಅಭಿಪ್ರಾಯ ಹೊಂದಿದ್ದರು.

ಈಸವೂರು ಮತ್ತು ಗೌಡ ಗ್ರಾಮಗಳನ್ನು ಗುರ್ತಿಸಬಹುದಾಗಿದೆ. ಈಸವೂರ ಇಂದಿನ ಈಸೂರು ಆಗಿದೆ. ಇದು ಶಿಕಾರಿಪುರ ತಾಲೂಕಿನಲ್ಲಿದೆ. ಇದು ಶಾಂತಲೆಯ ತವರು ಕೂಡಾ ಆಗಿತ್ತು ಹಾಗೂ ಸ್ವಾತಂತ್ರ್ಯ ಹೋರಾಟಕ್ಕೂ ಹೆಸರಾಗಿದೆ. ಗೌಡ ಗ್ರಾಮವು ಸಾಗರ ತಾಲೂಕಿನ ಅಗ್ರಹಾರ ಗೌಜ ಆಗಿದೆ. ಶಿವಮೊಗ್ಗ ಜಿಲ್ಲೆಯ ತಾಳಗುಂದ, ಗೌಜ ಮತ್ತು ಈಸವೂರು ಮೂರು ಗ್ರಾಮಗಳು ಪ್ರಾಯಶಃ ಕದಂಬರ ಕಾಲದಲ್ಲೇ ಪ್ರಸಿದ್ಧ ಗ್ರಾಮಗಳಾಗಿದ್ದವು.



ಈಸೂರಿನಲ್ಲಿ ಗಜಪೃಷ್ಠಾಕಾರದ ಶಿಲಾಭಾಗವುಳ್ಳ ಅಧಿಷ್ಠಾನ ಮಾತ್ರ ಹೊಂದಿದ ದೇವಾಲಯವಿದೆ. ಇತ್ತೀಚೆಗೆ ಇದರ ತಳಪಾಯ ಅಗೆದಾಗ ಇಟ್ಟಿಗೆಯ ಅಧಿಷ್ಠಾನ ಪತ್ತೆ ಆಗಿದೆ. ಇಲ್ಲಿರುವ ಇಟ್ಟಿಗೆಗಳ ಆಕಾರವು ಸಾತವಾಹನರ ಕಾಲದ ಇಟ್ಟಿಗೆಗಳನ್ನು ಹೋಲುತ್ತದೆ ಎಂದು ಹೇಳಲಾಗಿದೆ. ಗೌಜ ಗ್ರಾಮದಲ್ಲಿ ಕೂಡಾ ಗಜಪೃಷ್ಠಾಕಾರದ ದೇವಾಲಯವಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ೨೦೧೩-೧೪ನೆಯ ಸಾಲಿನಲ್ಲಿ ತಾಳಗುಂದದ ಪ್ರಣವೇಶ್ವರ ದೇವಾಲಯ ಅಡಿಪಾಯ ಉತ್ಖನನ ನಡೆಸಿದೆ. ಇಲ್ಲಿ ಕೂಡಾ ಗಜಪೃಷ್ಠಾಕಾರದ ಇಟ್ಟಿಗೆ ತಳಪಾಯ ಪತ್ತೆ ಆಗಿದೆ. ಕದಂಬರ ಶಾಸನದಲ್ಲಿ ಇಲ್ಲಿನ ಲಿಂಗವನ್ನು ಸಾತವಾಹನ ರಾಜ ಪೂಜಿಸಿದ್ದರೆಂದು ಹೇಳಲಾಗಿದೆ. ಈ ನಾಲ್ಕು ಸ್ಥಳಗಳಲ್ಲಿ ಪ್ರಾಯಶಃ ಶಾತವಾಹನರ ಕಾಲಕ್ಕೆ ಅಥವಾ ಅದಕ್ಕಿಂತಲೂ ಹಿಂದಿನ ಕಾಲದ ದೇವಾಲಯಗಳಿದ್ದಿರಬಹುದು.

ಬಳ್ಳಿಗಾವೆಯಲ್ಲಿ ದೊರೆಯುತ್ತಿರುವ ಹೊಸ ಆಕರಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ಹಂತಕ್ಕಿಂತ ಹಿಂದಿನ ಅವಧಿಯ ಕುರಿತು ಸಂಶೋಧನೆಗೆ ಅವಕಾಶ ಇದೆ.



೩೭

ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಕಾಳಾಮುಖ ಸ್ಥಾನಾಚಾರ್ಯರು

ಮಂಜುಳಾ ಆಚಾರಿ*

ಕರ್ನಾಟಕ ರಾಜ್ಯದ ಈಶಾನ್ಯ ದಿಕ್ಕಿನಲ್ಲಿರುವ ಕೊಪ್ಪಳ ಜಿಲ್ಲೆಯು ಕುಷ್ಟಗಿ, ಕೊಪ್ಪಳ, ಗಂಗಾವತಿ ಹಾಗು ಯಲಬುರ್ಗಾ ತಾಲೂಕುಗಳನ್ನು ಹೊಂದಿದೆ. ಸಾತವಾಹನ, ಗುಪ್ತರು, ಬಾದಾಮಿ ಚಾಲುಕ್ಯರು, ಕಲಚೂರ್ಯರು, ಶಿಲಾಹಾರರು, ಗಂಗರು, ಹೊಯ್ಸಳರು, ಸೇವುಣರು, ನೊಳಂಬರು, ವಿಜಯನಗರ, ಬಹಮನಿ ಆದಿಲ್ ಷಾಹಿಗಳು, ಮರಾಠರು, ಪಾಳೆಯಗಾರರು ಇಲ್ಲಿ ಆಳ್ವಿಕೆ ಮಾಡಿದ್ದಾರೆ. ಪ್ರಾಚೀನ ಕಾಲದಿಂದಲೂ ಧರ್ಮ ಸಂಸ್ಕೃತಿಗಳ ನೆಲೆವೀಡು ಕೊಪ್ಪಳ ಜಿಲ್ಲೆ. ಇಲ್ಲಿ ಜೈನ, ಬೌದ್ಧ, ಶೈವ, ವೈಷ್ಣವ, ಶಾಕ್ತ ಪಂಥಗಳು ಹಿಂದಿನಿಂದಲೂ ತಮ್ಮ ಛಾಪನ್ನು ಮೂಡಿಸಿವೆ. ಶೈವ ಧರ್ಮದ ಹಲವು ಶಾಖೆಗಳಲ್ಲಿ ಕಾಳಾಮುಖವು ಒಂದು. ೧೦-೧೧ನೇ ಶತಮಾನದ ಅವಧಿಯಲ್ಲಿ ಜಿಲ್ಲೆಯ ಕುಕನೂರು, ಕಲ್ಲೂರು ಪ್ರದೇಶಗಳು ಕಾಳಾಮುಖರ ಪ್ರಮುಖ ಕೇಂದ್ರಗಳಾಗಿದ್ದವು. ಈ ಜಿಲ್ಲೆಯಲ್ಲಿ ಕಾಳಾಮುಖರ ನೇರ ಉಲ್ಲೇಖವುಳ್ಳ ಶಾಸನಗಳ ಸಂಖ್ಯೆ ಕೇವಲ ೦೬. ಇವು ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯ ಮತ್ತು ಮೂರನೇ ಸೋಮೇಶ್ವರನ ಹಾಗು ಕಳಚೂರಿ ಸಂಕಮದೇವನ ಕಾಲಕ್ಕೆ ಸೇರಿವೆ.

ಭಾರತೀಯ ಶೈವ ಪ್ರಪಂಚ ತುಂಬಾ ವಿಸ್ತಾರವಾದುದು. ಅದರ ಶಾಖೋಪಶಾಖೆಗಳಾದ ಪಾಶುಪತ, ಲಾಕುಳ, ಕಾಳಾಮುಖ, ಕಾಶ್ಮೀರ ಶೈವ, ತಮಿಳು ಶೈವ, ವೀರಶೈವ, ಶುದ್ಧ ಶೈವ ಮೊದಲಾದವುಗಳಲ್ಲಿ ಪಾಶುಪತ, ಲಾಕುಳಗಳು, ಕಾಳಾಮುಖ ಮತ್ತು ವೀರಶೈವಗಳು ತೀವ್ರತರ ಚಟುವಟಿಕೆ ಯಲ್ಲಿದ್ದವು. ಇವುಗಳಲ್ಲಿ ಸಿಂಧೂ ನಾಗರೀಕತೆಯಷ್ಟು ಪ್ರಾಚೀನ ವಾದುದು ಪಾಶುಪತ, ಮಧ್ಯಯುಗದ ಇದರ ಪರಿಷ್ಕೃತ ರೂಪ ಲಾಕುಳ, ಶೈವೀಯ ಶಾಖೆ ಕಾಳಾಮುಖ ಪ್ರಮುಖ ವಾಗಿವೆ.

ಪ್ರಮುಖ ಸ್ಥಾನಾಚಾರ್ಯರು

೧. ಶಿವಶಕ್ತಿ ಪಂಡಿತ: ಕ್ರಿ.ಶ. ೧೦೯೮: ಈ ಯತಿಯು ಕಲ್ಲೂರಿನ ಸ್ವಯಂಭೂ ಕಲಿದೇವ ದೇವಾಲಯದ ಸ್ಥಾನಾಚಾರ್ಯರಾಗಿದ್ದರು. ಶಾಸನದಲ್ಲಿ ಕಾಳಾಮುಖ ಸಂಬದ್ಧದ ಶಿವಶಕ್ತಿ ಪಂಡಿತರು ಎಂದು ಉಲ್ಲೇಖಿಸಿದೆ. ಮಹಾಮಂಡಳೇಶ್ವರನಾದ ಚಾಮುಂಡರಸನು ಕಲ್ಲೂರಿನ ಶ್ರೀ ಸ್ವಯಂಭೂ ಕಲಿದೇವಸ್ವಾಮಿದೇವರ ಅಂಗಭೋಗ, ತಪೋಧನರ ಆಹಾರಕ್ಕೆಂದು ಬೆನತೂರು ಸೀಮೆಯ ದಕ್ಷಿಣಕ್ಕೆ ೫೦ ಮತ್ತರು ಭೂಮಿಯನ್ನು ೨ ಮತ್ತರು ಹೂತೋಟ ಬೇರೆ ಬೇರೆ ಕಡೆಗಳಲ್ಲಿ ಒಟ್ಟು ೧೨೦ ಮತ್ತರು ಭೂಮಿಯನ್ನು ದಾನ ನೀಡುವ ಸಂದರ್ಭದಲ್ಲಿ ಶಿವಶಕ್ತಿ ಪಂಡಿತರ ಕಾಲ್ತೊಳೆದು ದಾನ ನೀಡಿದ್ದಾನೆ. ಈ ದಾನವನ್ನು ಚೈತ್ರ ಶುದ್ಧ ಬಹುಳ ಅಮವಾಸ್ಯೆ ಸೂರ್ಯಗ್ರಹಣದ ದಿನ ನೀಡಲಾಗಿದೆ.

೨. ರುದ್ರಶಕ್ತಿ ಪಂಡಿತ: ಕ್ರಿ.ಶ. ೧೧೨೫: ಕಲ್ಲೂರಿನ ಸ್ವಯಂಭೂ ಕಲ್ಲೇಶ್ವರದ ಸ್ಥಾನಾಚಾರ್ಯನಾಗಿದ್ದನು. ಪ್ರಧಾನ ದಂಡನಾಯಕನಾದ ಕನ್ನಡ ಸಂಧಿವಿಗ್ರಹಿ ಮನೆವರ್ಗಡೆ ಮಹದೇವಯ್ಯನು ಎರಡುನೂರನ್ನು ಆಳುತ್ತಿದ್ದಾಗ ಅವನ ಕೈಕೆಳಗಿನ ಅಧಿಕಾರಿಯಾದ ಬಾದಾಮಿಯ ಬಮ್ಮದೇವಯ್ಯ ನಾಯಕನು ಕಲ್ಲೂರಿನ ಕಲ್ಲೇಶ್ವರದ ಸ್ಥಾನಾಚಾರ್ಯರಾದ ರುದ್ರಶಕ್ತಿ ಪಂಡಿತರ ಕಾಲ್ತೊಳೆದು ದೇವರ ಚೈತ್ರಪವಿತ್ರಕ್ಕೆಂದು ಕುಕನೂರು ೩೦ರಲ್ಲಿ ಯಾವ ಸ್ಥಳದಲ್ಲಿಯಾದರೂ ದೇವಾಲಯದ ಬಯಲಿಗೆ ಅಡಿಕೆ, ಮೆಣಸು, ಜೀರೆ, ಅರಿಶಿಣ ಮಳವೆ, ಅಲ್ಲದ ಮಳವೆ ನೀಲಿಯ ಕೊಡ, ಎತ್ತು, ಕತ್ತೆ, ಕೋಣ ಮುಂತಾದವುಗಳ ಮೇಲೆ ಹತ್ತಕ್ಕೆ ಒಂದು ದಸವಂದವಾಗಿ ನೀಡಬೇಕೆಂದು ದಾನ ನೀಡುತ್ತಾನೆ.

೩. ಕಳೇಶ್ವರ ಪಂಡಿತ: ಕ್ರಿ.ಶ. ೧೧೭೮: ಕುಕನೂರಿನ ಜೇಷ್ಠಾದೇವಿಯ ಸ್ಥಾನಾಚಾರ್ಯನಾಗಿದ್ದನು. ನವಲಿಂಗದ ಸೋಮೇಶ್ವರ ದೇವರ ನವಮಠದ ಆಡಳಿತದ ಜವಾಬ್ದಾರಿ ಹೊತ್ತಿದ್ದನು. ಯರಂಬರವಿಯ ಮೂಲಸ್ಥಾನ ಸಿಂಗೇಶ್ವರ, ರಾಜೇಶ್ವರ, ಚೌಡೇಶ್ವರ, ವಿಕ್ರಮೇಶ್ವರ ದೇವಾಲಯಗಳ ಮಠದ ಆಚಾರ್ಯನಾಗಿದ್ದನು. ಮಹಾಮಂಡಳೇಶ್ವರ ಸಿಂಧರಾಜ ಪೆರ್ಮಾಡಿಗೂ ಹಾಗು ಮಂಡಳೇಶ್ವರ ಚಾವುಂಡನಿಗೆ ರಾಜಗುರುವಾಗಿದ್ದನು. ಸೂಂಡಿಯ ನಗರೇಶ್ವರದ ಕಾಳಾಮುಖಾನ್ವಯಕ್ಕೆ ಸೇರಿದ್ದನು. ಕಾಳಾಮುಖ ಗುರು ಸೋಮೇಶ್ವರರಾಚಾರ್ಯರ ಶಿಷ್ಯ ಯೋಗೇಶ್ವರ ದೇವರಾಜ

---

* ಶಿರಸಿ, ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ವಿ.ವಿ., ಹಂಪಿ.

ಗುರುಗಳಿಗೆ ಇವನು ಶಿಷ್ಯನಾಗಿದ್ದನು. ಅನೇಕ ಪಾಂಡಿತ್ಯಗಳಲ್ಲಿ ಇವನು ಪ್ರವೀಣನಾಗಿದ್ದರಿಂದ ಸಿದ್ಧಾಂತಿ ಕಳೇಶ್ವರ ಎಂಬ ಬಿರುದು ಪಡೆದಿದ್ದ. ಇವನು ಮಂತ್ರ-ತಂತ್ರಗಳಲ್ಲಿಯೂ ಪರಿಣಿತಿ ಪಡೆದಿದ್ದ. ಇವನು ಕಾಳಿಕಾಜೇಷ್ಠೆಯ ಆರಾಧಕನಾಗಿದ್ದ. ಇವನಿಗೆ ತಿಳಿಯದ ವಿದ್ಯೆಯೇ ಇರಲಿಲ್ಲ. ಶೈವಾಗಮ ಸರ್ವಜ್ಞನೆಂದು ಶಾಸನದಲ್ಲಿ ಮತ್ತೆ ಮತ್ತೆ ಹೊಗಳಿದೆ. ಶಾಸನದಲ್ಲಿ ಯತಿಯನ್ನು ಕುರಿತು ಅರಿಯದ ಸಿದ್ಧಾಂತ ನಿಯಮದ ಮಂತ್ರಗಕ್ಷಣೇಯಸಿದಂ ಕಳೇಶ್ವರ ದೇವ ಸಿದ್ಧಾವಳಿ, ದೇವ್ವಾವಳಿ, ಶಿವಾಗಮಾವಳಿ, ಸಿದ್ಧಾಂತಿ ಕಳೇಶ್ವರಬುಧನು ದ್ಧರಿಸಿ ಜಲಕ್ಕುನಾದವುರ್ಬ್ಬಿರತಳದೊಳು ಸಕಲೋರ್ವ್ವರೆ ಮೆಚ್ಚಲು ಯಾಂತ್ರಿಕ, ತಾಂತ್ರಿಕ ಕಳಂ ಮೆಚ್ಚಿಸಿ ಮಾಂತ್ರಿಕನೆನೆ, ತಾಂತ್ರಿಕನೆನೆ ಯಾಂತ್ರಿಕನೆನೆ ಧರೆ ಸೋಗಯಿಪಂ ಕಳೇಶ್ವರ ದೇವಂ ಆರ್ಯನಖಿಳ ಪ್ರತಿಷ್ಠಾಚಾರ್ಯಂ ಸಿಂದಾನ್ವಯ ಶಿಕ್ಷಾ ದೀಕ್ಷಾಚಾರ್ಯ, ಶಿವ ಸಿದ್ಧಾಂತಾಚಾರ್ಯ ರಾಜಗುರು, ಮಂತ್ರಜ್ಞ, ತ್ರೈಕಾಲದರ್ಶಿ, ಶೈವಾಗಮ, ಶಬ್ದಜ್ಞ, ನೆನೆದುದೇ ದೈವಂ ಎಂದುದೇ ಜಪಮಂತ್ರಂ ಎಂದು ಹೊಗಳಿದೆ. ಅನೇಕ ತರ್ಕ, ವ್ಯಾಕರಣ, ಪುರಾಣ ಕಾವ್ಯ ನಾಟಕ ನಾಟಿಕಾ ಭರತ ವಾತ್ಸಾಯನಾದಿ ವಿದ್ಯಾಸರಾಸಾರಾ ವಿಚರಚರುಚತುರಾನನರ್ ಮದನಮದಗಜ ಪಂಚಾನನರ್ ಸ್ವ ಪರ ಪಾಪ ಪ್ರಕ್ಷಾಳನ ಮಂತ್ರಾಧೀಶ್ವರ ನೆನಿಪ ಶ್ರೀಮತ್ಸಿಂದಾಂತಿ ಕಳೇಶ್ವರ ಎಂದು ಹೊಗಳಿದೆ. ಶಾಸನದಲ್ಲಿರುವ ವರ್ಣನೆಯನ್ನು ಗಮನಿಸಿದರೆ ಕಳೇಶ್ವರನು ಬಹುಶಃ ಮೊದಲು ಈ ಯತಿಯು ಕಾಪಾಲಿಕ ನಾಗಿದ್ದಿರಬೇಕು. ಕ್ರಮೇಣ ಕಾಳಾಮುಖನಾಗಿ ಬದಲಾಗಿರ ಬಹುದೆಂದು ತೋರುತ್ತದೆ. ಕಾಳಿಯ ಪೂಜೆ, ಮಂತ್ರ ತಂತ್ರ ಆಚರಣೆಯು ಇದನ್ನು ಬೆಂಬಲಿಸುತ್ತದೆ. ಅಥವಾ ಕಾಳಾಮುಖರು ಮಂತ್ರ ತಂತ್ರದಲ್ಲಿ ಸಾಧನೆ ಮಾಡಿರಬಹು ದೆಂದು ಊಹಿಸಲು ಅವಕಾಶವಿದೆ. ಶೈವ ಧರ್ಮ ಸಮಾಜಮುಖಿಯಾಗಿ ಬದಲಾಗುತ್ತಿದ್ದುದರ ಸಂಕೇತವಾಗಿರ ಬಹುದು. ಯಲ್ಬುರ್ಗಾ ತಾಲೂಕಿನ ಮಹಾಮಾಯೆ ದೇವಾಲಯ ಇಂದಿಗೂ ಶಕ್ತಿ ಕೇಂದ್ರವಾಗಿದೆ. ಶಾಸನದಲ್ಲಿ ಇತರ ದೈವಗಳ ಜೊತೆಗೆ ಕಾಳಿಕಾ, ಭೈರವನನ್ನು ಸ್ತುತಿಸಿದೆ. ಐವತ್ತು ಲಿಂಗ, ಶಕ್ತಿಪೀಠ, ಶಿವಶಕ್ತಿ ಕ್ಷೇತ್ರವಾಗಿದೆ. ಸಿದ್ಧ ಯೋಗೇಶ್ವರ, ಸಹಜಾಯೋಗಿನೀವ್ರತ ಇಲ್ಲಿ ಇದ್ದವು. ಕುಕನೂರು ವನದಲ್ಲಿ ಅಂಬಿಕೆ, ಪುರಾಣದೇವಿ, ಚಾಮುಂಡಿ ದೇವಿ, ಮಹಾಮಾಯೆ, ತಡಾಗದಂಬಿಕೆ, ವಸಂತಾದೇವಿ, ಕಾಳ್ಯಂಬೆ, ವಿಶ್ವಮಹೀವಂದಿತೆ, ಶಾಂತಿಕಾರಿ, ಶ್ರೀಗುಪ್ತಾ, ಮುಂತಾದ ದೇವಿಯರಿದ್ದಾರೆ. ಇವರಲ್ಲಿ ಹಿರಿಯಳು ಜೇಷ್ಠಾದೇವಿ. ಈಕೆ ಅಗ್ರಹಾರದಲ್ಲಿ ನೆಲೆಗೊಂಡಿದ್ದಾಳೆ. ಜಪ್ಯೇಶ್ವರ, ಗಣೇಶ್ವರ, ಮೂಲೇಶ್ವರ, ಮಲ್ಲಿಕಾರ್ಜುನಗಳು ಸ್ವಯಂಭೂಯ್ತ್ವವನ್ನು ಪಡೆದಿರಲು ಇವರ ಮಧ್ಯೆ ಜೇಷ್ಠೆ ನೆಲೆಸಿದ್ದಾಳೆ. ಭೈರವ ಮತ್ತು ಅವನ ಶಕ್ತಿದೇವತೆ [illegible] ತಂತ್ರದಲ್ಲಿರುವ ಸಾಮಾನ್ಯ ಸಂಗತಿ. ಜೇಷ್ಠಾದೇವಿಯನ್ನು ಇಲ್ಲಿ ಸ್ತ್ರೀತತ್ವವಾಗಿ ಭಾವಿಸಿ ಉಳಿದೆಲ್ಲ ಸ್ತ್ರೀಶಕ್ತಿಗಳನ್ನು ಆಕೆಯ ವಿಭಿನ್ನ ಆಕಾರಗಳೆಂದು ಭಾವಿಸಲಾಗಿದೆ. ಕುಕನೂರು ಶಕ್ತಿಪೀಠಕ್ಕೆ ಆಚಾರ್ಯನಾಗಿದ್ದವ ಕಾಳಾಮುಖ ಪರಂಪರೆಯ ರಾಜಗುರು ಎಂಬುದು ಕಾಳಾಮುಖ ಪಂಥಕ್ಕೂ ಶಾಕ್ತ ಅಥವಾ ತಂತ್ರಪಂಥಕ್ಕೂ ಇರುವ ನಿಕಟ ಸಂಬಂಧದ ದ್ಯೋತಕ. ಇಂದಿಗೂ ಕುಕನೂರಿನ ನವಲಿಂಗಗಳು ಶಕ್ತಿ ಭೈರವನ ಭಾಗಗಳಾಗಿ ಪೂಜಿಸಲ್ಪಡುತ್ತಿವೆ. ಈ ಜೇಷ್ಠೆಗೆ ಮಹಾಮಾಯೆ ಎಂಬ ಹೆಸರಿದೆ.

೪. **ಅಮೃತರಾಶಿ ಮುನಿ**: ಕ್ರಿ.ಶ. ೯೯೧: ತಳಕಲ್ಲು ಶಾಸನದಲ್ಲಿ ಶೋಭನರಸನು ಅಮೃತರಾಶಿ ಮುನೀಶ್ವರರ ಕಾಲ್ತೊಳೆದು ಇಲ್ಲಿಯ ನಾಗಲೇಶ್ವರ ದೇವಾಲಯಕ್ಕೆ ೪೦೦ ಮತ್ತರು ಭೂಮಿಯನ್ನು ದಾನ ಕೊಟ್ಟಿದ್ದಾನೆ. ಈ ಯತಿಯು ಕಾಳದಾಲೂರಿನ ಸಿದ್ಧೇಶ್ವರದ ಸಂಕರಾಶಿ ಭಟಾರರ ಶಿಷ್ಯ ನಾಗಿದ್ದನು. ಅಮೃತರಾಶಿಯವರ ಶಿಷ್ಯ ಸೂರ್ಯಾಭರಣರು. ಇಲ್ಲಿ ಮೂರು ತಲೆಮಾರುಗಳ ವಿವರ ಸಿಗುತ್ತದೆ.

೫. **ಸೋಮೇಶ್ವರ ಮುನಿ**: ಕ್ರಿ.ಶ. ೧೦೦೫: ಕುಕನೂರಿನ ಶಾಸನದಲ್ಲಿ "ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಸಮಾಧಿ ಜಪ ತಪಂಗೋಪ ಆರಾಧಿ ಸಂಪನ್ನರ್ ಅಖಿಳಪ್ರಾಣಿಪ್ರಸಂನರ್ ಅನೇಕ ತರ್ಕ ವ್ಯಾಕರಣ ನಾಟಕ ಭರತ ವಾತ್ಸ್ಯಾಯನಾದಿ ವಿದ್ಯಾಸಾರಾಸಾರ ವಿಚಾರ ಚತುರಾನನರ್। ದುಷ್ಟದರ್ಪಿಷ್ಟಪಟಿಷ್ಠನಿಷ್ಠುರಾನೇಕಾನ್ತವಾದಿ ಮತ್ತ ಮಾತಂಗ ಮಸ್ತಕವಿದಳನ ಪಂಚಾನನರ್। ಪ್ರಚಂಡ ಮಾರ್ತಾಂಡರ್। ಸುಜನಜನಿತ ಸಂತೋಷರ್ ಅಶೇಷಗುಣ ವಿಶೇಷರ್। ಸ್ವ ಪರಪಾಪ ಪ್ರಕ್ಷಾಳನ ಮಂತ್ರಾಧೀಶ್ವರರ್। ನಿಜ ಹೃದಯ ಕಮಳಮಧ್ಯಾದ್ಯಾಸಿತ ಪರಮೇಶ್ವರರ್ ಕಲಿಕಲುಷಾ ಪಹರಣತಾನ್ತಃಕರಣ ಸಂಶುದ್ಧರ। ಸಾಧುಕುಳ ಪ್ರಸಿದ್ಧರೆನಿಪ ಸೂಂಡಿಯ ನಗರೇಶ್ವರದ ...ಆಚಾರ್ಯರ್" ಎಂದು ಹೊಗಳಿದೆ.

೬. **ಸೋಮೇಶ್ವರ ಪಂಡಿತ**: ಕ್ರಿ.ಶ. ೧೧೮೫: ಕಲ್ಲೂರಿನ ಕಲಿದೇವ ಸ್ವಾಮಿಯ ಸ್ಥಾನಾಚಾರ್ಯರಾಗಿದ್ದರು. ಸಾಮಂತ ಸಿಂಧವಂಶದ ವೀರಬಿಜ್ಜಲದೇವನ ಅನುಮತಿಯ ಮೇರೆಗೆ ಮಹಾಪಸಾಯಿತ ಸಣ್ಣಗೇತಯ ನಾಯಕನು ಸ್ವಯಂಭೂ ಕಲಿದೇವಸ್ವಾಮಿ ದೇವರ ಮಠದ ಆಚಾರ್ಯರಾದ ಸೋಮೇಶ್ವರಪಂಡಿತರ ಕಾಲ್ತೊಳೆದು ದೇವರ ಅಂಗಭೋಗ, ತಪೋಧನರ ಆಹಾರಕ್ಕೆಂದು ೨೪ ಮತ್ತರು ಭೂಮಿಯನ್ನು ದಾನ ನೀಡಿದ್ದಾನೆ.

೨. ದೇವರಾಸಿ ಪಂಡಿತ: ಕ್ರಿ.ಶ. ೧೨ನೇ ಶತಮಾನ: ಪುರದ ಗವರೇಶ್ವರದ ಆಚಾರ್ಯರಾದ ದೇವರಾಸಿ ಪಂಡಿತರ ಕಾಲ್ತೊಳೆದು ಗವರೇಶ್ವರದೇವರ ಅಂಗಭೋಗ ರಂಗಭೋಗ ಪಾತ್ರಪಾವುಳಕ್ಕೆ ಚೈತ್ರಪವಿತ್ರಕ್ಕೆ ಮಹಾನೈವೇದ್ಯಕ್ಕೆ ಭೋಜನ ಅತಿಥಿ ಬ್ರಾಹ್ಮಣ ಮತ್ತು ತಪೋಧನರ ನಿತ್ಯ ಆಹಾರಕ್ಕಾಗಿ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದಾನ ನೀಡಲಾಗಿದೆ.

ಹೀಗೆ ಶೈವ ಸ್ಥಾನಾಚಾರ್ಯರು ಪ್ರಚಂಡ ಪಂಡಿತರು ವೇದ, ಆಗಮ, ವ್ಯಾಕರಣ, ಶಾಸ್ತ್ರ, ಛಂದಸ್ಸು ಹಾಗೂ ಕಲೆಗಳಲ್ಲಿ ಪಾರಂಗತರಾಗಿದ್ದು, ಅವುಗಳನ್ನು ಇವರ ಆಶ್ರಯದಲ್ಲಿದ್ದ ಹಲವಾರು ವಿದ್ಯಾರ್ಥಿಗಳಿಗೆ ಕಲಿಸುವ ಮೂಲಕ ಹೊಸ ಚೈತನ್ಯ ತುಂಬುತ್ತಿದ್ದರು. ತರ್ಕಶಾಸ್ತ್ರದಲ್ಲಿ ಚಕ್ರವರ್ತಿ ಎಂಬ ಉಲ್ಲೇಖ ಇವರ ಬಹುತರ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಇದರಿಂದ ಇವರು ಕೇವಲ ಸ್ಥಾನಾಚಾರ್ಯರಾಗಿದ್ದುದ್ದಲ್ಲದೇ ಸಮಾಜೋಪಕಾರಿ ಕೆಲಸಗಳಲ್ಲೂ ತೊಡಗಿರುತ್ತಿದ್ದರೆಂದು ತಿಳಿದುಬರುತ್ತದೆ. ಕೆಲವೊಮ್ಮೆ ರಾಜಗುರುಗಳಾಗಿಯೂ ಇವರು ಸೇವೆ ಸಲ್ಲಿಸುತ್ತಿದ್ದರು. ೧೩ನೆಯ ಶತಮಾನದ ನಂತರ ರಾಜಾಶ್ರಯದ ಕೊರತೆಯಿಂದಾಗಿ ಈ ಯತಿ ಪರಂಪರೆ ಸಮಾಜದಿಂದ ಹಿಂದಕ್ಕೆ ಸರಿಯಿತು. ಇದಕ್ಕೆ ಶರಣ ಚಳುವಳಿಯ ಪ್ರಭಾವವೂ ಆಗದೇ ಇಲ್ಲ.

ಆಧಾರಸೂಚಿ

೧. **ಗೋಪಾಲ ಆರ್.**, ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೫.

೨. ದೇವರಕೊಂಡಾರೆಡ್ಡಿ (ಸಂ.) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨, ಕೊಪ್ಪಳ ಜಿಲ್ಲೆ, ಕ.ವಿ.ವಿ. ಹಂಪಿ, ೧೯೯೯.

೩. ಹಿರೇಮಠ ಎಸ್.ಎಸ್, ಕಾಳಾಮುಖ ದರ್ಶನ, ಸಮತಾ ಪ್ರಕಾಶನ, ೨೦೦೪.

೪. ಸುರೇಶ ಕೆ.ಎಂ., ವಾಸುದೇವ ಬಡಿಗೇರ, ಸೋಮಶೇಖರ ಎಸ್.ವೈ., ಕೊಟ್ರೇಶ ಎಂ., ಕರ್ನಾಟಕ ದೇವಾಲಯ ಕೋಶ–ಕೊಪ್ಪಳ ಜಿಲ್ಲೆ ಕ.ವಿ.ವಿ., ಹಂಪಿ, ೨೦೦೧.

೫. ವಿರೂಪಾಕ್ಷ ಕುಲಕರ್ಣಿ (ಕ.ಅನು.), ಕಾಪಾಲಿಕರು ಮತ್ತು ಕಾಳಾಮುಖರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೫.

ಉಡುಪಿ ಜಿಲ್ಲೆಯ ವಿಜಯನಗರ ಕಾಲದ ಶೈವ ಶಾಸನಗಳು

ಡಾ. ಡಿ.ಎಂ. ನಾಗರಾಜು*

ಉಡುಪಿ ಜಿಲ್ಲೆ ಕರ್ನಾಟಕದ ನೈಋತ್ಯ ಭಾಗದಲ್ಲಿನ (೧೯೯೭ಕ್ಕೂ ಮುಂಚೆ) ಈ ಜಿಲ್ಲೆಯ ಪ್ರದೇಶ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿತ್ತು. ಆ ವರ್ಷ ಜಿಲ್ಲಾ ಪುನರ್ವಿಂಗಡಣೆಯ ಯೋಜನೆಯನ್ನು ಜಾರಿಗೆ ತಂದು ಉಡುಪಿಯನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ರಚಿಸಲಾಯಿತು. ಈ ಜಿಲ್ಲೆಯ ಉತ್ತರದಲ್ಲಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳು. ದಕ್ಷಿಣಕ್ಕೆ ದಕ್ಷಿಣ ಕನ್ನಡ ಜಿಲ್ಲೆ, ಅರಬ್ಬೀಸಮುದ್ರ ಇವೆ. ವಿಸ್ತೀರ್ಣ ೩೯೦೨೪೪ ಚ.ಕಿ.ಮೀ. ಜನಸಂಖ್ಯೆ ೧೧,೦೯,೪೯೪. ಈ ಜಿಲ್ಲೆಯಲ್ಲಿರುವ ತಾಲ್ಲೂಕುಗಳ ಸಂಖ್ಯೆ ಮೂರು. ಉಡುಪಿ, ಕುಂದಾಪುರ ಮತ್ತು ಕಾರ್ಕಳ. ಉಡುಪಿ ಪ್ರಸಿದ್ಧ ಧಾರ್ಮಿಕಕೇಂದ್ರ ಹಾಗೂ ಯಾತ್ರಾಸ್ಥಳ.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಇತಿಹಾಸ ಪರಂಪರೆಯು ಹೆಚ್ಚು ಸಮಾನ ಸ್ವರೂಪದ್ದು. ಇಡೀ ಕರ್ನಾಟಕದ ಕರಾವಳಿ ಪ್ರದೇಶ ಪರಶುರಾಮ ಸೃಷ್ಟಿಯೆಂದು ಪ್ರತೀತಿಯುಂಟು. ತಮಿಳಿನ ಸಂಗಂ ಕಾಲದ ಸಾಹಿತ್ಯದಲ್ಲಿ ತುಳುನಾಡಿನ ಪ್ರಸ್ತಾಪ ಬರುತ್ತದೆ. ಅಶೋಕನ ಶಾಸನಗಳಲ್ಲಿ ಬರುವ ಸಾತಿಯಪುತ ಅಥವಾ ಸತ್ಯಪುತ್ರರೆಂಬ ಸಮುದಾಯದ ಉಲ್ಲೇಖ ಈ ಪ್ರದೇಶದ ಜನರನ್ನು ಕುರಿತದ್ದೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಈ ಜಿಲ್ಲೆ ಕ್ರಿಸ್ತಪೂರ್ವ ಕಾಲದಿಂದಲೂ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಹೊಂದಿದ ಪ್ರದೇಶವೆಂಬುದು ದೃಢಪಡುತ್ತದೆ.

ಈ ಜಿಲ್ಲೆಯ ಇತಿಹಾಸ ಕಾಲದ ಸ್ಪಷ್ಟಪುರಾವೆಗಳು ದೊರಕುವುದು ಆಳುಪರ ಕಾಲದಲ್ಲಿ. ಆಳುಪರ ಆಳ್ವಿಕೆ ಕ್ರಿಸ್ತಶಕಾರಂಭದ ಕಾಲಕ್ಕೆ ಪ್ರಾರಂಭವಾಗುತ್ತದೆಂದು ತಿಳಿದು ಬರುತ್ತದೆ.

ಉಡುಪಿ ಜಿಲ್ಲೆ ಮುಖ್ಯವಾಗಿ ಶೈವಪರಂಪರೆ ಹೊಂದಿದ್ದ ಪ್ರದೇಶಗಳು. ನಾಗಾರಾಧನೆ ಮತ್ತು ಶಿವಪೂಜೆ ಇಲ್ಲಿನ ಮೂಲ ಧಾರ್ಮಿಕ ಪರಂಪರೆಯ ಸ್ವರೂಪವಾಗಿತ್ತು. ವಿಜಯನಗರ ಆಳ್ವಿಕೆ ಪ್ರಾರಂಭವಾದಾಗ ಹಿಂದಿನ ಪಾಳೆಯಗಾರರ ಅಥವಾ ಸ್ಥಾನಿಕ ರಾಜರ ಆಳ್ವಿಕೆಯ ಪ್ರಭಾವ ತಗ್ಗಿತು. ಆ ಕಾಲದಲ್ಲಿ ವಿಜಯನಗರದ ಸಾಮ್ರಾಟರು ನೇರವಾಗಿ ತಮ್ಮ ಪ್ರಾಂತಾಧಿಕಾರಿಗಳ ಮೂಲಕ ಆಳ್ವಿಕೆ ನಡೆಸಲು ಪ್ರಾರಂಭಿಸಿದರು. ಬಾರಕೂರು ಮತ್ತು ಮಂಗಳೂರು ಈ ಆಡಳಿತ ಕೇಂದ್ರಗಳಾಗಿದ್ದವು. ಮಂಗಳೂರು ರಾಜ್ಯವೆಂದೇ ಈ ಪ್ರಾಂತ್ಯವನ್ನು ಕರೆಯುತ್ತಿದ್ದರು.

ಈ ಜಿಲ್ಲೆಯನ್ನು ಆಳುಪರು, ಮಧ್ಯಕಾಲೀನ ಆಳುಪತು ಹೊಯ್ಸಳರು ವಿಜಯನಗರ ಮನೆತನದವರು ಈ ಭಾಗದ ಮೇಲೆ ಒಡೆತನ ನಡೆಸಿದರು.

ಈ ಜಿಲ್ಲೆಯಲ್ಲಿ ಶೈವ ಮತ್ತು ಜೈನ ಧರ್ಮಗಳು ಹೆಚ್ಚಿನ ಆಚರಣೆಯಲ್ಲಿವೆ ಎಂದರೆ ತಪ್ಪಾಗಲಾರದು. ಏಕೆಂದರೆ ಶೈವ ದೇವಾಲಯಗಳು, ಜೈನ ಬಸದಿಗಳು ಬಹಳ ಪ್ರಮುಖವಾದ ಧಾರ್ಮಿಕ ಕೇಂದ್ರ, ಪ್ರಾಚೀನ ಕರ್ನಾಟಕದಲ್ಲಿ ಧಾರ್ಮಿಕ ಜೀವನವನ್ನು ನಾವು ಗಮನಿಸಿದಾಗ ಹಿಂದಿನಿಂದಲೂ ಹಲವಾರು ಧರ್ಮಗಳು ಬೆಳೆದುಬಂದಿವೆ. ಇಲ್ಲಿಯ ಜನತೆಯ ಧಾರ್ಮಿಕ ಶ್ರದ್ಧೆ, ಸಮನ್ವಯತೆ, ಔದಾರ್ಯ ಹಾಗೂ ಇಲ್ಲಿನ ವಾತಾವರಣ ಪ್ರಾಚೀನ ಕಾಲದಿಂದಲೂ ಧಾರ್ಮಿಕ ನಂಬಿಕೆಗಳನ್ನು ಆಕರ್ಷಿಸುತ್ತಿತ್ತು. ಕ್ರಿಪೂ. ೬ ಮತ್ತು ೫ನೇ ಶತಮಾನದಲ್ಲಿ ಉಗಮವಾದ ಜೈನ ಮತ್ತು ಶೈವ ಧರ್ಮಗಳು ದೇಶದ ಮತ್ತು ಕರ್ನಾಟಕದ ಧಾರ್ಮಿಕ ಸಾಂಸ್ಕೃತಿಕ ಇತಿಹಾಸದಲ್ಲಿ ತಮ್ಮದೇ ಆದಂತಹ ಸ್ಥಾನಮಾನಗಳನ್ನು ಪಡೆದುಕೊಂಡು ಬೆಳವಣಿಗೆ ಹೊಂದಿದ್ದವು. ಕರ್ನಾಟಕದಲ್ಲಿ ವಿಜಯನಗರ ಕಾಲದ ಧಾರ್ಮಿಕ ಸ್ಥಿತಿಗಳ ಪೂರಕವಾಗಿ ಅಂದು ಪ್ರಚಲಿತದಲ್ಲಿದ್ದ ಧರ್ಮಗಳಿಗೆ ಪೀಠಿಕೆಯಾಗಿ ಅವುಗಳ ಬೆಳವಣಿಗೆಯ ಹಿನ್ನೆಲೆಯ ಅವಶ್ಯಕತೆ ಇದೆ. ಪ್ರಾಯಶಃ ಕರ್ನಾಟಕದ ಮಟ್ಟಿಗೆ ಜೈನಧರ್ಮದ ನಂಬಿಕೆಗಳೇ ಅತ್ಯಂತ ಪ್ರಾಚೀನ ದಾಖಲೆಗಳೆಂದು ಹೇಳಬಹುದು.

ವೈದಿಕಧರ್ಮವೂ ವೈಷ್ಣವ, ಶೈವ, ಶಾಕ್ತ ನಂಬಿಕೆಗಳ ಒಂದು ಸಮ್ಮಿಳಿತ ಬೆಳವಣಿಗೆಯಾಗಿದೆ. ಕರ್ನಾಟಕದಲ್ಲಿ ವೈದಿಕಧರ್ಮ ಪ್ರಚಲಿತವಲ್ಲಿದ್ದರೂ ಅದರ ಸ್ಪಷ್ಟತೆ ಆಗುವುದು

* [illegible] ಪುರಾತತ್ತ್ವ ಸರ್ವೇಕ್ಷಣ ಇಲಾಖೆ, ಹೆಬ್ಬಾಳ ೨ನೇ ಹಂತ, ಸಂಕ್ರಾಂತಿ ಸರ್ಕಲ್, ಮೈಸೂರು–೧೭

ಕ್ರಿ.ಶ.ದ ಆರಂಭದಲ್ಲಿ ವಡಗಾಂವ-ಮಾಧವಪುರ ಶಾಸನಗಳ ಉಲ್ಲೇಖದಲ್ಲಿ ಮೊಟ್ಟಮೊದಲ ಬಾರಿಗೆ ವೈದಿಕ ಯಜ್ಞಗಳು ಹಾಗೂ ಶೈವ ಪಂಥದ ದಾಖಲೆಗಳನ್ನು ಗಮನಿಸಬಹುದು. ಅನಂತರದಲ್ಲಿ ಶಾತವಾಹನ, ಚುಟುಕುಲಾನಂದ, ಶಾತಕರ್ಣಿಗಳ ಕಾಲದಲ್ಲಿ ಕೂಡ ವೈದಿಕ ಪಂಥದ ಪ್ರಚಲಿತೆಗೆ ಪೂರಕವಾದ ದಾಖಲೆಗಳು ದೊರೆಯುತ್ತವೆ. ಕದಂಬರ ಕಾಲದಿಂದ ಸ್ಪಷ್ಟವಾಗಿ ಹಿಂದೂಧರ್ಮದ ಪ್ರಾಮುಖ್ಯತೆ ಕಂಡುಬಂದು, ಅದೊಂದು ಪ್ರಬಲ ಧರ್ಮವಾಗಿ ಬೆಳವಣಿಗೆ ಹೊಂದಿರುವುದು, ನಂತರ ಕಾಲದಲ್ಲಿಯೂ ಕಂಡುಬರುತ್ತದೆ. ಶೈವಧರ್ಮವು ಕರ್ನಾಟಕದ ಪ್ರಾಚೀನ ಧರ್ಮಗಳಲ್ಲಿ ಒಂದು ಅತ್ಯಂತ ಪ್ರಮುಖವಾದಂತರ ಧರ್ಮವೂ ಕೂಡ ಇದಾಗಿದೆ. ಪ್ರಾರಂಭದಿಂದಲೇ ಶೈವಧರ್ಮಕ್ಕೆ ಪೂರಕವಾದ ದೇವಾಲಯಗಳ ನಿರ್ಮಾಣ, ಶಿಲ್ಪಗಳ ರಚನೆ ಹಾಗೂ ಉತ್ತರ ಭಾರತದಿಂದ ವಿಶೇಷವಾಗಿ ಕಾಶ್ಮೀರದಿಂದ ಶೈವ ಗುರುಗಳ ಆಗಮನ ಮೊದಲಾದ ಚಟುವಟಿಕೆಗಳು ಕ್ರಿ.ಶ. ೧ನೆಯ ಶತಮಾನದಿಂದ ೬-೭ನೇ ಶತಮಾನದಲ್ಲಿ ನಡೆದಿದೆ. ಶೈವಧರ್ಮವನ್ನು ಅತ್ಯಂತ ಪ್ರಾಚೀನ ಧರ್ಮವೆಂದೂ ಕೂಡ ತಿಳಿಯಲಾಗಿದೆ.

ವಿಜಯನಗರ ರಾಜ್ಯಸ್ಥಾಪನೆ ಮಾಡಿದ ನಂತರದಲ್ಲಿ ಬಹುತೇಕ ಶೈವಧರ್ಮಕ್ಕೆ ಸಮಾನ ಪ್ರಾಧಾನ್ಯತೆ ನೀಡಿದ್ದಾರೆ. ಈ ಜಿಲ್ಲೆಯಲ್ಲಿ ಶೈವಧರ್ಮದ ನಂಜಿಕೆ, ಪಾಶುಪತ, ಲೋಕೇಶ್ವರ, ಶೈವದೇವತೆ, ನಾಥಪಂಥ, ಜೈನಧರ್ಮ, ವೈಷ್ಣವಧರ್ಮ ಬಹುಜನಪ್ರಿಯಗೊಂಡು ಅಂದಿನ ಸಮಾಜದಲ್ಲಿ ಅತ್ಯಂತ ಪ್ರಭಾವಕಾರಿಯಾದಂತಹ ಸ್ಥಾನವನ್ನು ಹೊಂದಿದ್ದವು. ಸಾಂಸ್ಕೃತಿಕ ಜೀವನದಲ್ಲಿ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ಇವರು ಪ್ರಮುಖ ಪಾತ್ರ ವಹಿಸುತ್ತಿದ್ದರು. ದೇವಾಲಯಗಳ ಸ್ಥಾನಪತಿಗಳಿಗಾಗಿ ಮಠಗಳನ್ನು ಸ್ಥಾಪಿಸಿ ವಿದ್ಯಾರ್ಜನೆಗೈಯುತ್ತಿದ್ದರು. ಈ ಕಾಲದಲ್ಲಿ ನಿರ್ಮಾಣವಾದಂತಹ ದೇವಾಲಯಗಳಲ್ಲಿ ಪರಿವಾರ ದೇವತೆಗಳ ಪರಿಕಲ್ಪನೆ ಇದರ ಅಂಗವಾಗಿ ತ್ರೈಪುರುಷ ದೇವಾಲಯಗಳಲ್ಲಿ ಪರಿವಾರ ದೇವತೆಗಳ ಪ್ರತಿಷ್ಠಾಪನೆ ಹಾಗೂ ಸೌರರಾಧನೆಗೆ ವಿಶೇಷ ಒತ್ತು ದೊರೆತವು.

ವಿಜಯನಗರ ಕಾಲದ ಶಾಸನಗಳಲ್ಲಿ ಒಟ್ಟಾರೆಯಾಗಿ ನೋಡಿದಾಗ ನೂರಾರು ಶೈವ ದೇವಾಲಯಗಳು ಈ ಜಿಲ್ಲೆಯಲ್ಲಿ ನಿರ್ಮಾಣವಾಗಿವೆ. ಇವುಗಳ ಜೀರ್ಣೋದ್ಧಾರಕ್ಕೆ ನಿತ್ಯ ನೈವೇದ್ಯಕ್ಕೆ ಅಂಗರಂಗಭೋಗಕ್ಕೆ ಇನ್ನಿತರ ಚಟುವಟಿಕೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ನೇರವಾಗಿ ಮತ್ತು ರಾಜಪರವಾಗಿ ಅವರವರ ಮಾಂಡಲಿಕರು, ದಂಡನಾಯಕರು, ಮಹಾಪ್ರಧಾನರು, ಪೆರ್ಗಡೆಗಳು ದಾನ ನೀಡಿದ ದಾಖಲೆಗಳಿವೆ. ಸಾಮಾನ್ಯವಾಗಿ ಶೈವ ದೇವಾಲಯಗಳೊಂದಿಗೆ ಮಠಗಳ ನಿರ್ಮಾಣ ಆಗುತ್ತಿತ್ತು. ಇದರಿಂದ ಸಂಸ್ಕೃತಿ ಆರಾಧನೆ ಮಠದ ಭಾಗವಾಗಿ ಬೆಳವಣಿಗೆ ಹೊಂದಿತು. ವಿದ್ಯೆಯ ಅಧಿದೇವತೆಯಾದ ಸರಸ್ವತಿ ದೇವಾಲಯಗಳು ಮಠದ ಭಾಗವಾಗಿ ಈ ಕಾಲದಲ್ಲಿ ಕಂಡುಬರುತ್ತದೆ. ಅದಕ್ಕೆ ಹಲವಾರು ಶಾಸನೋಕ್ತ ದಾಖಲೆಗಳು ಕೂಡ ಇವೆ. ಶೈವಧರ್ಮದ ಬೆಳವಣಿಗೆ ಈ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಮಾಡುವುದು ಹಾಗೂ ಅವುಗಳಿಗೆ ದಾನದತ್ತಿಗಳನ್ನು ಕೊಡುವುದರ ಮೂಲಕ ಬೆಳವಣಿಗೆ ಹೊಂದಿತು ಎಂದು ಹೇಳಬಹುದು.

ಒಂದನೇ ಬುಕ್ಕನ ಕ್ರಿ.ಶ. ೧೩೫೬ರ ಬೈಂದೂರು ಶಾಸನದಲ್ಲಿ ಗೋಕರ್ಣೇಶ್ವರ, ಮಾರ್ತಾಣೇಶ್ವರ ದೇವರುಗಳಿಗೆ ಪೂಜು ರುದ್ರಪೂಜೆಗೋಸ್ಕರ ಮಹಾಪ್ರದಾನ ಮಲ್ಲೆಯ ದಣ್ಣಾಯಕರು ಭೂಮಿ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೩೫೮ರ ಕೆಂಜೂರು ಶಾಸನದಲ್ಲಿ ಬಾರಾಬಳಿಯ ಮಲುನಿಡುವಳನ ಕೋಟಿನಾಥ ದೇವರಿಗೆ ದಿನಪ್ರತಿ ಪ್ರೋಸಾನೆ ಅಡಿಗೆ ದೀಪ ಕಲ್ಪಿಸುವುದಕ್ಕೆ ಕೋಟಿಯನ ನಿಡುವಳನು ಕೇಶ ಅಂಚರಿಗೆ ವಹಿಸಿದ ವಿವರವಿದೆ. ಇಲ್ಲಿ ವ್ಯಕ್ತಿಯ ಹೆಸರನ್ನು ಕೋಟಿನಾಥದೇವರ ಹೆಸರು ಹಾಗೂ ವ್ಯಕ್ತಿಯ ಹೆಸರು ಕೋಟಿಯನ ಎಂಬುದನ್ನು ಇವನು ದೇವರ ಹೆಸರಿನ ಭಕ್ತನಾಗಿರಬಹುದು. ಕ್ರಿ.ಶ. ೧೩೫೯ನೇ ಬೈಂದೂರು ಶಾಸನದಲ್ಲಿ ಮಲೆಯ ದಂಣಾಯ್ಕರು ಬಾರಕೂರ ರಾಜ್ಯವಾಳುತ್ತಿರುವಾಗ ಬಯದೂರ ಸೇನೇಶ್ವರ ದೇವರಿಗೆ ಭೂಮಿ ಮತ್ತು ತೆಂಗಿನತೋಟ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೩೬೧ನ ಕಟಲೇಟನ ಶಾಸನದಲ್ಲಿ ಮಂಗಲೂರ ರಾಜ್ಯವನು ಮಾದರಸರು ಆಳುತ್ತಿರುವಾಗ ಕಟ್ಲೆಪಾಡಿಯ ಮಠದ ದೇವರ ನಂದಾದೀವಿಗೆಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೩೬೩-೬೪ರ ಕಟ್ಟೇರೂ ಮಾರ್ಕ್ಕಡೇಸ್ವರ ದೇವರ ನಿವೇದ್ಯಗೋಸ್ಕರ ಸಾಳ ಮತ್ತು ನಾಲ್ಕರೂ ಹಣ ಮತ್ತು ಭೂಮಿ ಕೊಟ್ಟ ವಿವರವಿದೆ. ಕ್ರಿ.ಶ. ೧೩೭೦ರ ಆವರಸೆ ಶಾಸನ ಸವೆದಿದೆ. ಕೋಟಿನಾಥ ಕೋಟೇಶ್ವರದೇವರ ಸೇವೆ ಗೋಸ್ಕರ ಹಣ ತೆಂಗೆಗಳಿಂದ ಬಂದ ಆದಾಯ ಹೂವಿನ ತೋಟ, ಭೂಮಿ ನೀಡಿದ ವಿಷಯ ಇದೆ.

ಎರಡನೇ ಹರಿಹನ ಕ್ರಿ.ಶ.೧೩೭೯ರ ಕೋಡಿ ಶಾಸನದಲ್ಲಿ ಬೊಂಮರಸ ವೊಡೆಯರು ಬಾರಕೂರ ರಾಜ್ಯವಾಳುತ್ತಿರುವಾಗ ನಾಗಂಣದಂಣಾಯ್ಕನ ಮಗ ನಾಗಪ್ಪವೊಡೆಯ ಮತ್ತು ಸಾಯಣ್ಣ ಕಿರಿಯ ತಮ್ಮ ನರಸಿಂಹಸಾಹುಗೆ ಕೋಡಿಯಲ್ಲಿ ಭೂಮಿದಾನ ನೀಡಿದ್ದನು. ಹಾಗೂ ಸಿದ್ಧಾಂತದೇವರಿಗೆ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೩೮೭ರ ನೀಲಾವರ ಶಾಸನದಲ್ಲಿ ಮನ್ಮಮಹಾಪ್ರಧಾನ ಬಯಿಚೆಯದಂಣಾಯಕರ

ಕುಮಾರ ಇರುಗಪ್ಪ ಒಡೆಯರ ಮನೆಯ ಮಲ್ಲಗೌಡೆಯನ ಮಗ ಬಯಿರಂಣಗಳು ಆ ನೀರುವಾರದ ದುರ್ಗಾಭಗವತಿ ದೇವಿಯ ದೇವಾಲಯದ ಜೀರ್ಣೋದ್ಧಾರ ಅಂಗರಂಗ ಭೋಗ, ಬಲಿ, ನಯಿವೆದ್ಯ ಮುಂತಾದವುಗಳ ಆದಾಯದಿಂದ ಭೂಮಿ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ನಂದಲಿಕೆ ಶಾಸನದಲ್ಲಿ ಕಾರ್ಕಳದ ಬ್ರಹ್ಮೇಶ್ವರ ದೇವರಿಗೆ ಸಂಗಣಜೀಯ ದಾನ ನೀಡಿದ್ದಾನೆ. ಕ್ರಿ.ಶ. ೧೩೯೭ರ ಹೊಸಾಳ ಶಾಸನ ಸವೆದಿದೆ. ಕೆಲ್ಲಂಗೆಜೆಯ ವಿನಾಯಕದೇವರ ನೈವೇದ್ಯ ಪೂಜೆಗೆ ಇತರ ದೇವತೆಗಳಿಗೋಸ್ಕರ ದೇವರ ಮುಂದೆ ಶಂಕರದೇವರವೊಡೆಯನು ಬಾರಕೂರ ರಾಜ್ಯವಾಳುತ್ತಿರುವಾಗ ಭೂಮಿ ದಾನ ನೀಡಿದ ದಾಖಲೆಯಿದೆ. ಹಾಗೂ ನಾಲವಟ್ಟುನಾಡಿನ ಬೆಳುಗೊಂಡ ಗ್ರಾಮದಲ್ಲಿ ಜೈನ ಬಸದಿಗೆ ಕೆಲವು ಭೂಮಿಯನ್ನು ದಾನ ನೀಡಿದ ವಿವರವಿದೆ. ಈ ಶಾಸನದಲ್ಲಿ ಎರಡನೇ ಹರಿಹರ ಶೈವ ಮತ್ತು ಜೈನಧರ್ಮವನ್ನು ಸಮಾನವಾಗಿ ಕಾಣುತ್ತಿದ್ದನು ಎಂದು ಈ ಶಾಸನದಿಂದ ತಿಳಿದುಬರುತ್ತದೆ. ಇದೇ ಕಾಲದ ಕಚೇರು (ಕೂಟಕೇರಿ) ಶಾಸನದಲ್ಲಿ ರಾಜನು ದೋರಸಮುದ್ರ ನೆಲೆವೀಡಿನಲ್ಲಿ ಆಳುತ್ತಿರುವಾಗ ಮಾರ್ಕಂಡೇಶ್ವರ ದೇವರಿಗೆ ಹಣ, ಭೂಮಿಗಳಿಂದ ಆದಾಯ ಅನೇಕ ವ್ಯಕ್ತಿಗಳು ದಾನ ನೀಡಿದ ವಿವರವಿದೆ. ಕ್ರಿ.ಶ. ೧೪೦೪ರ ಚಾತಾವು ಶಾಸನದಲ್ಲಿ ಬ್ರಹ್ಮಮೂರ ಗ್ರಾಮದಲ್ಲಿ ನಿಡುವಂಪಳ್ಳಿ ಶಂಕರನಾರಾಯಣ ದೇವಾಲಯಕ್ಕೆ ಇಶ್ವರ ಊಳ್ಳೂರ ಮತ್ತು ಜಾರಂಣ ಉಪಾಧ್ಯ ಕುಂಜುರಂಣ ಊಳ್ಳೂರ ಇವರಿಂದ ದಾನ ಪಡೆದು ಶ್ರೀ ವಿದ್ಯಾರಣ್ಯ ಶ್ರೀಪಾದಂಗಳ ಶಿಷ್ಯರಾದ ಶಂಕರಾರಣ್ಯ ಶ್ರೀಪಾದವರಿಗೆ ವಹಿಸಿದ ವಿವರವಿದೆ. ಒಂದನೇ ದೇವರಾಯನ ಕ್ರಿ.ಶ. ೧೪೦೭ರ ನೀಲಾವರ ಶಾಸನದಲ್ಲಿ ದುರ್ಗ್ಗಾದೇವಿ ನಯಿವೇದ್ಯಕ್ಕೆ ಪೂಜೆಗೋಸ್ಕರ ಸಿವದಾಸಿದೇವ ಆಯಗಳು ನಿರಂವಾರದ ಗ್ರಾಮ ಹರಿನಾಜು, ಜಗತ್ತು ಮುನೂಜು ಪಾದಾಳಿ ಸೂಲಪಾಣಿ ಅಕ್ಕಿ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಪಾಂಡೇಶ್ವರ ಶಾಸನದಲ್ಲಿ ಸಂಖರನಾರಾಯಣದೇವರ ನಂದಾದೀವಿಗೆಗೆ ರಾಜನಿಂದ ಪ್ರಜೆಗಳಿಂದ ಮತ್ತು ಹೆಗ್ಗಡೆ ಮತ್ತು ಬೇರೆಯವರು ಗ್ರಾಮದಿಂದ ದಾನ ನೀಡಿದ ವಿವರವಿದೆ.

ಎರಡನೇ ದೇವರಾಯನ ಕ್ರಿ.ಶ. ೧೪೩೪ರ ಹೊಸಾಳ ಶಾಸನದಲ್ಲಿ ಕೆಲ್ಲಮಗೆಜೆಯ ವಿನಾಯಕದೇವರಿಗೆ ಚೌಳಿಕೆಯ ಕೊಟೆಯಣ್ಣಸೆಟ್ಟಿಯ ಮಗ ನಾರಣಸೆಟ್ಟೆ ವುದಾನ ದ್ವಾದಶಿ ಪುಣ್ಯಕಾಲದಲ್ಲಿ ದಾನ ನೀಡಿದ ದಾಖಲೆಯಿದೆ. ಕ್ರಿ.ಶ.೧೪೩೫ರ ಕಡೆಕಾರು ಶಾಸನದಲ್ಲಿ ನರಸಿಂಹ ವೊಡೆಯ ಬಾರಕೂರ ರಾಜ್ಯ ಆಳುತ್ತಿರುವಾಗ ಗೋಪಿನಾಥದೇವರಿಗೆ ಮಠದಲ್ಲಿ ಪ್ರತಿಷ್ಠೆಯ ಮಾಡಿ ಆ ಮಠವನ್ನು ದೇವಪೂಜೆಯನು ಶ್ರೀಪಾದಂಗಳು ತಮ್ಮ ಶಿಷ್ಯರು ವಿಶ್ವಪತಿತೀರ್ಥ ಶ್ರೀಪಾದಂಗಳಿಗೆ ಅಂಣನಿಡುಂಬರರು ಮುಂದಿಟ್ಟು ವಿಭಾಗವ ಮಾಡಿ ಯೇಕಾಧಿಪತ್ಯವನ್ನು ಕೊಟ್ಟು ನಂದಾದೀವಿಗೆಗೆ, ನೈವೇದ್ಯಕ್ಕೆ ನೀಡಿದ ವಿವರವಿದೆ. ಕ್ರಿ.ಶ. ೧೪೩೧ರ ಸಹುರು ಶಾಸನದಲ್ಲಿ ಮಣಿಗೇರಿಯ ಶ್ರೀಗೋಪಿನಾಥದೇವರಿಗೆ ಚಂಡರಸ ವೊಡೆಯರು ಬಾರಕೂರ ರಾಜ್ಯವಾಳುತ್ತಿರುವಾಗ ದೇವರ ಅಮೃತಪಡಿಗೆ ನಡಲುರನಲ್ಲಿ ಭೂಮಿದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೪೩೨ರ ಹೊಸಾಳ ಶಾಸನದಲ್ಲಿ ವಿನಾಯಕ, ಜಟೇಶ್ವರ, ನಾರಾಯಣದೇವರ ಸೇವೆಗೋಸ್ಕರ ಅಕ್ಕಿ, ನೈವೇದ್ಯ, ಗಂಧ, ಧೂಪ, ಪೂಜಾರಿಗೆ, ಮಾಲೆಯ ಕಟ್ಟುವವರಿಗೆ ದೇವರ ಚೌತಿಯ ಹೋಮ, ಬಲಿಪೂಜೆ, ಕಥೆ ಹೇಳುವವರಿಗೆ ಉಡುಗೊರೆ, ಕೆಜೆಯ ಕೆಸರೆ ತೆಗೆಯುವುದಕ್ಕೆ, ಜೀರ್ಣೋದ್ಧಾರಕ್ಕೆ ರಂಗನ ಕೆಜೆಯ ನಿರ್ವಹಣೆಗೆ ರಂಗಣಸೆಟ್ಟಿಯು ಸೆಟ್ಟಿಗಳು ಮುಖ್ಯಸ್ಥರು ದಾನವಾಗಿ ಭೂಮಿ ನೀಡಿದ ದಾಖಲೆಯಿದೆ. ಕ್ರಿ.ಶ. ೧೪೪೧ರ ಕೋಟ ಶಾಸನದಲ್ಲಿ ಕೋಟದ ಹಿರಿಯ ದೇವಾಲಯದ ಮಹದೇವ ದೇವರಿಗೆ ಮುಂಜಾನೆ ನೈವೇದ್ಯ ಪೂಜೆಗೋಸ್ಕರ ಪವಿತ್ರಾರೋಪಣದ ಪರ್ವಹಬ್ಬಕ್ಕೆ ದೇವರಾಯ ಮಹಾರಾಯರ ಆಯುರಾರೋಗ್ಯ, ಆಯಿಶ್ವರಿಯಾಭಿವೃದ್ಧಿಯಾಗಬೇಕೆಂದು ಮಹಾಪ್ರಧಾನ ಚಂಡರಸನು ಬಾರಕೂರ ತುಳುರಾಜ್ಯ ಆಳುತ್ತಿರುವಾಗ ದಾನ ನೀಡಿದ ವಿವರವಿದೆ. ಕ್ರಿ.ಶ. ೧೪೪೩ರ ಕೊಕ್ಕರಣೆ ಶಾಸನದಲ್ಲಿ ಕೊಡಗೆಯ ಶಂಕರನಾರಾಯಣ ದೇವರಿಗೆ ಗೋವಿಂದಸೆಟ್ಟಿಯು ದಾನ ನೀಡಿದ ವಿವರವಿದೆ. ಕ್ರಿ.ಶ. ೧೪೪೪ರ ಹೇರೂರು ಶಾಸನದಲ್ಲಿ ಹೆರೂರು ಮಹಾದೇವದೇವರ ದೇವಾಲಯದಲ್ಲಿ ಸೂರ್ಯರಾಗ ಪುಣ್ಯಕಾಲದಲ್ಲಿ ನಂದಾದೀವಿಗೆಗೆ ಎಣ್ಣೆಗೋಸ್ಕರ ಹೊಸಬಸೆಟ್ಟಿಯಿಂದ ಕೊಂಡು ಭೂಮಿ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೪೪೬ರ ಉಪ್ಪುಂದ ಶಾಸನದಲ್ಲಿ ಉಪ್ಪುಂದ ದುರ್ಗಾಪರಮೇಶ್ವರಿ ದೇವಾಲಯದಲ್ಲಿ ಶ್ರೀಬಲಿ ಮತ್ತು ಪಂಚವಾದ್ಯಗಳಿಗೋಸ್ಕರ ಭೂಮಿ, ಮನೆ ನಿವೇಶನ, ತೆರಿಗೆರಹಿತವನ್ನು ಕುಪ್ಪಿಸೆಟ್ಟಿಯ ಅಳಿಯದೇವಣ್ಣಸೆಟ್ಟಿ ದಾನ ನೀಡಿದ ವಿವರವಿದೆ. ಕ್ರಿ.ಶ. ೧೪೫೧ರ ಉಪ್ಪುಂದ ಶಾಸನ ಸವೆದಿದೆ. ಉಪ್ಪುಂದ ದುರ್ಗಾಪರಮೇಶ್ವರಿ ದೇವತೆಗಳಿಗೋಸ್ಕರ ಬಾನಪ್ಪವೊಡೆಯ ಬಾರಕೂರ ರಾಜ್ಯವಾಳುತ್ತಿರುವಾಗ ಭೂಮಿ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. ೧೪೫೩ರ ಚಾರ ಶಾಸನದಲ್ಲಿ ಮಹಾಪ್ರಧಾನ ವಲ್ಲಭದಂಣಾಯಕ ಮತ್ತು ಬಾಣಪ್ಪ ವಡೆಯ ಬಾರಕೂರ ರಾಜ್ಯವಾಳುತ್ತಿರುವಾಗ ಆದಿಪರಮೇಶ್ವರ ದೇವರ ಅಮುತ್ರಪಡಿಗೆ ನೈವೇದ್ಯ ಮತ್ತು ಪೂಜೆ ಬೇರೆ ಬೇರೆ ಸಂದರ್ಭಗಳಲ್ಲಿ ಕುಮದಯ ಶ್ರೇಷ್ಠಿ ಮತ್ತು ಕೋಟೆಯಕ್ಕನ ಮಕ್ಕಳು ಹೊಸಬುಸೆಟ್ಟಿ, ಮಾದಣಸೆಟ್ಟಿ ಭೂಮಿ ದಾನ ನೀಡಿದ

ದಾಖಲೆಯಿದೆ. ಇದೇ ಕಾಲದ ಹೇರಾಡಿ ಶಾಸನದಲ್ಲಿ ಜನಾರ್ಧನ ದೇವರ ನೈವೇದ್ಯಕ್ಕೆ ಮೊಸರು ಅನ್ನವನ್ನು ಸೆಟ್ಟಿಯ ಮಗಳು ಲಖುಮಾಸೆಟ್ಟಿಯು ಭೂಮಿಯನ್ನು ಕೊಂಡು ತೋಟವನ್ನು ಕೊಟ್ಟ ಬಗ್ಗೆ ಶಾಸನ ತಿಳಿಸುತ್ತದೆ. ಕ್ರಿ.ಶ.೧೪೫೫ರ ಹೇರುಂಜೆ ಶಾಸನದಲ್ಲಿ ಬಾರಕೂರಿನ ಮಹಾದೇವರ ಅಮೃತಪಡಿ, ನಂದಾದೀವಿಗೆಗೆ ಅನೇಕ ವ್ಯಕ್ತಿಗಳು ಹಣ ಮತ್ತು ಭೂಮಿ ದಾನ ನೀಡಿದ ವಿವರವಿದೆ. ಕ್ರಿ.ಶ. ೧೪೫೯ರ ಹೊಸಾಳ ಶಾಸನದಲ್ಲಿ ಮಹಾಪ್ರಧಾನ ಲಖಣ್ಣ ಬಾರಕೂರ ರಾಜ್ಯವಾಳುತ್ತಿರುವಾಗ ದಾಮೋದರ ದೇವರಿಗೆ ಹಣ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೪೬೩ರ ಕೋಟ ಶಾಸನದಲ್ಲಿ ಕೋಟ ಗ್ರಾಮದ ವೊಳಗಣ ಹಿರಿಯ ದೇವಾಲಯದ ಶ್ರೀ ಮಹಾಲಿಂಗ ದೇವರಿಗೆ ಮಲ್ಲಿಕಾರ್ಜುನ ಮಹಾರಾಯರಿಗೆ ರಾಮಚಂದ್ರ ದಣ್ಣಾಯಕರಿಗೆ ಆಯುರಾರೋಗ್ಯ ಆಯಶ್ವರ್ಯಭಿವೃಧ್ಧಿಯಾಗಬೇಕೆಂದು ಪ್ರದೋಷ ಪೂಜೆಗೆ ಅಯನವರ್ತನೆಯ ಕಾಟಿಯ ಗದ್ಯಾಣ ೧೪ ಹೊಂನನು ಪ್ರತಿ ವರುಷ ಮಹಾಪ್ರಧಾನ ಹೆಗಡೆ ಲಖಣನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೪೫೪ರ ನೀಲಾವರ ಶಾಸನ ದಲ್ಲಿ ಮಹಾಮಣ್ಡಳೇಶ್ವರ ರಾಮಚಂದ್ರ ದಣ್ಣಾಯಕರ ನಿರೂಪದಿಂದ ಪಂಡರಿದೇವ ಒಡೆಯರು ನಿರುವಾರದ ದುರ್ಗ್ಗಾಭಗವತಿಯ ದೇವರ ಮುಂದೆ ತೆರಿಗೆಗಳನ್ನು ಮನ್ನಾ ಮಾಡಿ ದಾನ ಕೊಟ್ಟ ವಿವರವಿದೆ.

ವಿರುಪಾಕ್ಷನ ಕ್ರಿ.ಶ. ೧೪೭೯ರ ಕನ್ಯಾನ ಶಾಸನದಲ್ಲಿ ಬಸರೂರಿನ ಮಹಾದೇವ ದೇವಾಲಯದ ಪೂಜೆ ನಯಿವೇದ್ಯ ಗೋಸ್ಕರ ಮಹಾಪ್ರಧಾನ ವಿಠರಸ ಒಡೆಯನು ನಿಗದಿಪಡಿಸಿದ ದಾನದ ದಾಖಲೆಯಿದೆ. ಕ್ರಿ.ಶ. ೧೪೬೬ರ ಹೊಸಾಳ ಶಾಸನ ದಲ್ಲಿ ಅನುಪಮನಾಥ ವೊಡೆಯರ ಮಠದ ಚತುಸೀಮೆ ಯೊಳಗೆ ಅಱುವರ ಬೀರಣಸೆಟ್ಟಿಯರ ಅಳಿಯ ಅಯಿವರ ಕೋಟಿನಾಥಸೆಟ್ಟಿಯರು ತಾವು ಕಟ್ಟಿಸಿದ ಭಯಿರನದೇವರ ದೇವಾಲಯದ ಅಮೃತಪಡಿ ನಂದಾದೀವಿಗೆಗೆ ಭೂಮಿ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. ೧೪೮೬ರ ಹಾನೇ ಹಳ್ಳಿ ಶಾಸನದಲ್ಲಿ ವಿರುಪಾಕ್ಷ ಒಡೆಯರು ಮೂಱುಕೇರಿಯ ಸೋಮನಾಥ ದೇವರಿಗೆ, ಆದಾಯಗಳಿಂದ ತೆರಿಗೆಗಳು. ಸಾಲದೆಱೆ, ನಿರುವದಾಯ ಸುಂಕಗಳಿಂದ ದಾನವಾಗಿ ಧಾರೆಯನೆಱೆದು ಕೊಟ್ಟದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೪೮೭ರ ಕೊಲ್ಲೂರು ಶಾಸನದಲ್ಲಿ ಮೂಕಾಂಬಿಕೆ ದೇವತೆಯ ಅಮೃತಪಡಿಗೋಸ್ಕರ ಕೊಲ್ಲೂರು ದುರ್ಗಾಧಿಪತಿ ಗದ್ದೆಯನ್ನು (೪೦ ಮೂಟೆ ಬೀಜವರಿ ಅನೆಗದ್ದೆ) ದಾನ ನೀಡಿದ ವಿವರ ವಿದೆ. ಹೊಸಾಳ ಶಾಸನದಲ್ಲಿ ಮೂಱುಕೇರಿಯ ಸೋಮನಾಥ ದೇವರಿಗೆ ಶೆಟ್ಟಿ ಎಂಬುವವನು (ಹೆಸರು ಇಲ್ಲ) ಭೂಮಿ, ಮನೆ, ಕೆಲವು ಹಣವನ್ನು ದಾನ ನೀಡಿದ್ದಾನೆ. ಇದೇ ಸ್ಥಳದ ಕ್ರಿ.ಶ. ೧೪೯೪ರಲ್ಲಿ ಚೌಳಿಯಕೇರಿಯ ಕೆಲ್ಲಂಗೆಱೆಯ ವಿನಾಯಕ ದೇವರ ಸಂನಿಧಿಯಲ್ಲಿ ಬೆಂಮಂಣ ಭಂಡಾರಿಯರ ಮಗ ಚೌಳೀಯ ಕೇರಿಯಬಜ್ಜಾಱಿನ ಬಳಿಯ ಮಾಬಳ ಸೆಟ್ಟಿಯರು ಸೋಮೋಪರಾಗ ಪುಣ್ಯಕಾಲದಲ್ಲಿ ಭೂಮಿ ಆದಾಯ ಸುಂಕಗಳಿಂದ ಭೂಮಿ ದಾನ ನೀಡಿದ್ದಾನೆ.

ಇಮ್ಮಡಿ ನರಸಿಂಹನ ಹಂದಾಡಿ ಶಾಸನದಲ್ಲಿ ತ್ರಿಯಂಬಕರಾಯರ ಕುಮಾರ ಹೊಂನ ಕಳಸರಾಯನು ಗೋಪಿನಾಥ ದೇವಾಲಯದಲ್ಲಿ ಖರ್ಚುವೆಚ್ಚ ಶ್ರೀಬಲಿ ಸೇವೆಗೋಸ್ಕರ ೩೦೦ ಗದ್ಯಾಣಗಳನ್ನು ದಾನವಾಗಿ ನೀಡಿದ ದಾಖಲೆಯಿದೆ. ಕ್ರಿ.ಶ. ೧೪೯೪ರ ಹೊಸಾಳ ಶಾಸನದಲ್ಲಿ ಚೌಳಿಯಕೇರ್ಯ ಕೆಲ್ಲಂಗೆಱೆಯ ಅನುಪಮನಾಥ ವೊಡೆಯರ ಮಠದ ಭಯಿರವದೇವರ ಅಮೃತಪಡಿ, ನಂದಾದೀವಿಗೆಗೆ, ಅಂಗರಂಗ ವೈಭೋಗಗಳಿಗೋಸ್ಕರ ತ್ತಿರುವಹೆಗ್ಗಡೆ ಮತ್ತು ಜೇರೆಯುವರು ಸುಬದ್ದಿನಾಥ ವೊಡೆಯರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.

ಭಜಬಳರಾಯ ವೀರನರಸಿಂಹನ ಕ್ರಿ.ಶ. ೧೫೦೯ರ ಹೊಸಾಳ ಶಾಸನದಲ್ಲಿ ಶಿವದೇವಾಲಯದ ಅಜರನಾರಣ ಸೆಟ್ಟಿಯ ಅಳಿಯ ಬಸವಸೆಟ್ಟಿಯರು ಭೂಮಿ ದಾನ ನೀಡಿದ ವಿಷಯವಿದೆ.

ಕೃಷ್ಣದೇವರಾಯನ ಕ್ರಿ.ಶ. ೧೫೧೬–೧೯ರ ಹೆಮ್ಮಾಡಿ ಶಾಸನದಲ್ಲಿ ಶ್ರೀ ರಘುನಾಥದೇವರ ಅಮೃತಪಡಿಗೋಸ್ಕರ ತೆರಿಗೆಗಳ ಆದಾಯದಿಂದ ಹಣ ಸಂಗ್ರಹಿಸಿ ಹೆಂಮಾಡಿಯ ಗ್ರಾಮವನ್ನು ವಿಜಯಪ್ಪ ಒಡೆಯರು ದಾನ ನೀಡಿದ ದಾಖಲೆ ಯಿದೆ. ಇದೇ ಕಾಲದ ಪೆರ್ಡೂರು ರತುನಪ್ಪ ಒಡೆಯರ ಮಗ ವಿಜಯಪ್ಪ ಒಡೆಯರು ಮಂಗಳೂರು ರಾಜ್ಯವಾಳು ತ್ತಿರುವಾಗ ರಾಜ ಆಯುರಾರೋಗ್ಯ, ಅಯಶ್ವರಿಯಾಭಿವೃಧ್ಧಿ ಯಾಗಬೇಕೆಂದು ಪೆರಡೂರ ಅನಂತದೇವರ ಅಮೃತಪಡಿ. ನಂದಾದೀಪ, ಶ್ರೀಬಲಿಗೋಸ್ಕರ ೩೦೦ ಮೂಟೆ ಭತ್ತ, ೧೮೦ ವರಹ ಗದ್ಯಾಣಗಳನ್ನು ದಾನವಾಗಿ ನೀಡಿದ ದಾಖಲೆಯಿದೆ. ಕ್ರಿ.ಶ. ೧೫೨೮ರ ನೀಲಾವರ ಶಾಸನದಲ್ಲಿ ವಿಜಯಂಣ ವೊಡೆಯರು ಬಾರಕೂರ ರಾಜ್ಯವನಾಳುವ ಕಾಲದಲ್ಲಿ ನಿರುವಾರ ಗ್ರಾಮದ ದುರ್ಗ್ಗಾದೇವಿಗೆ ನವರಾತ್ರಿಯ ಪೂಜೆಗೆ ನಿಂಮ ಗ್ರಾಮದ ಸಿದ್ಧಾಯನ ಕಾಟಿ ೭ ೧/೨ ತೆರಿಗೆಗಳನ್ನು ಮನ್ನಾ ಮಾಡಿ ದಾನ ನೀಡಿದ ವಿವರವಿದೆ.

ಅಚ್ಯುತರಾಯನ ಕಾಲದ ಕ್ರಿ.ಶ. ೧೫೩೬ರ ಉಪ್ಪುರು ಶಾಸನದಲ್ಲಿ ಕೂಡಪ್ಪವೊಡೆಯರು ರಾಜ್ಯಕಾರ್ಯವ ಮಾಡು ವಾಗ ಹರಿಣಿನ ನೀರನೆ ಗಂಡಿನ ತಲೆ ತಪ್ಪಿದ್ದಕ್ಕೆ ಅರಸಿಗೆ ಅರ್ಧರಾಜ್ಯಕ್ಕೆ ಪಂಥೆಯಂಬ ವಿವರಕ್ಕೆ ಅರಮನೆಯ ಭಂಡಾರ

ಸ್ಥಿರ ನಾಯೂರ ಗ್ರಾಮ. ಕೆರುವ ಕುಳಾಗದ ಯೋಂಬೆನೋಳಗ ಒಂದು ಪದಾಂಶಕಕ್ಕೆ ನಿಂದ ಗ್ರಾಮದ ಒಳಗೆ ಯೆಂಭತ್ತು ಮುಡಿ ಕುಳಾಗ್ರ ಅವರೊಳಗೆ ನಾಲ್ಕು ಮುಡಿ ಕುಳಾಗ್ರವನು ಬಂಗಾಕೆಕುಡೆಯರ ಮಗ ಶಿವಕುಡೆಯರಿಗೆ ಕೊಟ್ಟ ದಾಖಲೆ ಯಿದೆ.

ವೆಂಕಟಾದ್ರಿಯ ಕ್ರಿ.ಶ. ೧೫೪೨ರ ಹಂದಾಡಿ ಶಾಸನದಲ್ಲಿ ಅಚ್ಚಪ್ಪವೊಡೆಯರು ಬಾರಕೂರು ಸಿಂಹಾನವನಾಳುವ ಕಾಲ ದಲ್ಲಿ ಗೋಪಿನಾಥ ದೇವಾಲಯದ ಶ್ರೀಪಾದಪದ್ಮಂಗಳ ಸನ್ನಿಧಿ ಯಲ್ಲಿ ಕಟ್ಟಿದ ಯೆರಡುಮಠದಲ್ಲಿ ಆ ದೇವರ ಅಂಗರಂಗ ಭೋಗಕ್ಕೆ ಶಂಕರಲಿಂಗಸೆಟ್ಟಿ ಮತ್ತು ಮಹಾಲಿಂಗಸೆಟ್ಟಿ ದಾನ ನೀಡಿದ ವಿವರವಿದೆ.

ಸದಾಶಿವರಾಯನ ಕಾಲದ ೧೫೪೪ರ ಅವರಸೆ ಶಾಸನ ಸವೆದಿದೆ. ಕೀರಾಡಿಮಠದ ಪೂಜೆ ನಂದಾದೀವಿಗೆಗೋಸ್ಕರ ಜಿಂಮಸೆಟ್ಟಿ ವೊಬಳರಾಜ ವಡೆಯರು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೫೫೫ರ ಬೈಂದೂರು ಶಾಸನದಲ್ಲಿ ಚನ್ನಬಯಿರಾದೇವಿ ಅಂಮನವರು ಸಂಗೀತಪುರದಲ್ಲಿ ಬಯಿದೂರು ಆಳುತ್ತಿರುವಾಗ ಶನೇಶ್ವರ ದೇವಾಲಯ ಪಡುವ ದಿಕ್ಕಿನಲ್ಲಿ ಕಟ್ಟಿಸಿದ ಮಠಕ್ಕೆ ಬಳಸೆಟ್ಟಿಯ ಮಗ ಚೌರ ಬಳಿಯ ಸೆಟಿಗಾರ ಸೇನಬೋವಸೆಟ್ಟಿಯು ತೆರಿಗೆರಹಿತ ಭೂಮಿ ದಾನ ನೀಡಿದ ವಿವರವಿದೆ. ಇದೇ ಕಾಲದ ಇದೇ ಊರಿನ ಮತ್ತೊಂದು ಶಾಸನ ಪರಮೇಶ್ವರಿದೇವಿಯ ದೀಪಕ್ಕೆ, ಗಂಧಕ್ಕೆ, ಪೂಜೆ ಗೋಸ್ಕರ ಒಂದು ಮಠಕ್ಕೆ ಅನೇಕ ವ್ಯಕ್ತಿಗಳು, ಸಂಕರಸೆಟ್ಟಿಯರ ಮಗ ಮುದಣಸೆಟ್ಟಿಯರ ಮೂಂಮಗ ಚೂರಜಿರ ಬಳಿಯ ಕೇಸವಣ ಸೆಟ್ಟಿಯರು ಭೂಮಿಯನ್ನು ಕೊಂಡು ನಿವೇಶನ ಭೂಮಿ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೫೬೦ರ ಗುಂಡಿಮಿ ಶಾಸನ ಸವೆದಿದೆ. ಹಬ್ಬದ ಸಂದರ್ಭದಲ್ಲಿ ದೀಪಾರಾಧನೆ ಪೂಜೆಗೆ ನಿತ್ಯನೈವೇದ್ಯಕ್ಕೆ ಕೋಟ ಗ್ರಾಮದ ಐದು ಸ್ಥಾನಿಕರು ದೇವತೆಗೆ ಭೂಮಿ ದಾನ ನೀಡಿದ ವಿಷಯ ವಿದೆ. ಕ್ರಿ.ಶ. ೧೫೬೩ರ ಹೊಸಾಳ ಶಾಸನದಲ್ಲಿ ಕಾರೆ ಎಲ್ಲಪ್ಪ ವೊಡೆಯರು ಬಾರಕೂರ ರಾಜ್ಯವಾಳುತ್ತಿರುವಾಗ ಸಿಧ್ದನಾಥ ದೇವರ ದೇವಾಲಯದ ಸೇವೆಗೋಸ್ಕರ ಮಾಣಿಗಾರಕೇರಿಯ ಸಂಕುಸೆಟ್ಟಿ ಮಗ ತೂಳಹಾರ ಬಳಿಯ ವಾಳಚಸೆಟ್ಟಿ ದಾನ ನೀಡಿದ್ದಾನೆ. ಇದೇ ಕಾಲದ ಸುರಾಳ ಶಾಸನದಲ್ಲಿ ಮಹಾಲಿಂಗ ದೇವಾಲಯದ ಪೂಜೆ, ನೈವೇದ್ಯಕೋಸ್ಕರ ತೊಳಹಬೆಂನೆಯ ಅರಸ ಭೂಮಿದಾನ ನೀಡಿದ್ದಾನೆ. ಕ್ರಿ.ಶ. ೧೫೬೫ರ ಯಡತಾಡಿ ಶಾಸನದಲ್ಲಿ ಸದಾಶಿವನಾಯಕ ಬಾರಕೂರ ರಾಜ್ಯವಾಳು ತ್ತಿರುವಾಗ ಒಂದು ಮಠ ಉಮಾಮಹೇಶ್ವರ ದೇವರ ಪ್ರತಿಮೆ ಪ್ರತಿಷ್ಠಾಪಿಸಿ ನೈವೇದ್ಯ ನಂದಾದೀಪಗೋಸ್ಕರ ಯಡತಾಡಿಯ ಕೋಟಿ ಆದಿ ಅಲಿಯಾಸ್ ಬಂಮಜಣ ಹೆಗ್ಗಡೆ ಭೂಮಿ ದಾನ ನೀಡಿದ್ದಾನೆ. ಕ್ರಿ.ಶ. ೧೫೭೦ರ ಅಂಬಳಪಾಡಿ ಶಾಸನದಲ್ಲಿ ರಾಮಕೃಷ್ಣಪ್ಪ ಒಡೆಯ ಬಾರಕೂರ ರಾಜ್ಯವಾಳುತ್ತಿರುವಾಗ ಜನಾರ್ಧನದೇವರ ದೇವಾಲಯ ಜೀರ್ಣೋದ್ಧಾರ, ನೈವೇದ್ಯ ಕ್ಕೋಸ್ಕರ ರಾಮೇಶ್ವರದಿಂದ ಹಿಂದರಿಗೆ ಜೀರ್ಣೋದ್ದಾರ ಮಾಡಿಸಿ ನಿಡುಂಬೂರ ಶ್ರೀಧರ ದತ್ತಿಯಾಗಿ ಭೂಮಿದಾನ ನೀಡಿದ ವಿಷಯವಿದೆ. ಕ್ರಿ.ಶ. ೧೫೭೭ರ ಹೊಸಾಳ ಶಾಸನದಲ್ಲಿ ಒಂದು ಮಠದಲ್ಲಿ ಚಾಳೆಯಕೇರಿಯ ವಿಘ್ನೇಶ್ವರ ದೇವರ ಸಂನಿಧಿಯಲು ಕೆಳದಿಯ ಸದಾಶಿವನಾಯಕರ ಮಕ್ಕಳು ಸಂಕಣನಾಯಕರು ರಾಜರಾಜ ನಾಯಕರು ಗುತ್ತಿ ಅರಸ ಬಾರಕೂರು ಮಂಗಲುರು ರಾಜ್ಯದ ಆಳುವ ಕಾಲದಲು ಅವನ ನಿರೂಪದಿಂದ ಕರಊರ ಅಚ್ಚಪ್ಪೊಡೆಯರು ಮುದ್ದ ಹೆಗ್ಗಡೆ ಅಣಿಸೆಟ್ಟಿಯ ದೇವರ ನಿರ್ವಹಣೆಗೋಸ್ಕರ ಅನ್ನದಾನಕ್ಕೆ ಭೂಮಿ ದಾನ ನೀಡಿದ್ದಾನೆ.

ಕೊನೆಯದಾಗಿ ನಾವು ಈ ಜಿಲ್ಲೆಯ ಮೂರು ತಾಲ್ಲೂಕು ಗಳಲ್ಲಿ ಶೈವ ಮತ್ತು ಜೈನಧರ್ಮದ ಧಾರ್ಮಿಕ ಚಟುವಟಿಕೆ ಗಳನ್ನು ನೋಡಿದಾಗ ಸ್ಪಷ್ಟವಾಗಿ ಶೈವಧರ್ಮವು ವಿಜಯನಗರ ಕಾಲದಲ್ಲಿ ಒಂದು ಆದ್ಯತೆಯ ಧರ್ಮವಾಗಿತ್ತೆಂದು ಹೇಳ ಬಹುದು.

ಆಧಾರಸೂಚಿ

೧. ಎ.ಆರ್.ಐ.ಇ. ವಾರ್ಷಿಕ ವರದಿಗಳು.
೨. ಎಸ್.ಐ.ಐ. ಸಂಪುಟ ೨೭.

೩೮

ಚಿಕ್ಕಮಗಳೂರಿನ ಜಿಲ್ಲೆಯ ಶಾಸನೋಕ್ತ ಜೈನಧರ್ಮಕ್ಕೆ ನೀಡಿದ ದಾನ ದತ್ತಿಗಳು

ಡಾ. ಎಚ್. ಜಯಮ್ಮ ಕರಿಯಣ್ಣ*

ಚಿಕ್ಕಮಗಳೂರು ಜಿಲ್ಲೆಯು ಭೌಗೋಳಿಕವಾಗಿ ಬಯಲು, ಅರೆಬಯಲು ಹಾಗೂ ಹರಿದ್ವರ್ಣದ ಕಾಡನ್ನು ಹೊಂದಿದೆ. ಜಿಲ್ಲಯ ಪೂರ್ವದಿಕ್ಕಿಗೆ ಜನಸಂದಣಿ ಜಾಸ್ತಿ ಮತ್ತು ವಸತಿ ಪ್ರದೇಶಗಳು ಹೆಚ್ಚಾಗಿವೆ. ಈ ಜಿಲ್ಲೆಗೆ ಸಂಬಂಧಿಸಿದಂತೆ ಹೊಯ್ಸಳರು ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿರುವುದು ಕಂಡುಬರುತ್ತದೆ. ಗಂಗರ ಕಾಲದ ಕೆಲವು ಶಾಸನಗಳು ಇವೆ. ವಿಜಯನಗರದ ಅರಸರ ಕಾಲದಲ್ಲಿ ಪ್ರೋತ್ಸಾಹ ನೀಡಿದರೂ ಸಹ ಜೈನಧರ್ಮ ಮುಂದುವರಿಯಲಿಲ್ಲ ಎಂಬುದಕ್ಕೆ ಅವರ ಕಾಲದಲ್ಲಿ ಶೃಂಗೇರಿ ತಾಲೂಕಿನಲ್ಲಿ ಕೇವಲ ಐದು ಶಾಸನಗಳು ಮಾತ್ರ ದೊರಕಿರುವುದನ್ನು ಗುರುತಿಸಬಹುದು. ಜೈನಧರ್ಮದ ಧಾರ್ಮಿಕ ಸ್ಥಿರತೆಯನ್ನು ವಿವರಿಸುವ ವಿವಿಧ ಚಟುವಟಿಕೆಯ ಮಾಹಿತಿಗಳನ್ನು ಕೆಲವು ಶಾಸನಗಳು ನೀಡುತ್ತವೆ. ಜೈನಧರ್ಮಕ್ಕೆ ಸಂಬಂಧಿಸಿದಂತೆ ಕ್ರಿ.ಶ. ೧೦ನೇ ಶತಮಾನದ ಅಂಗಡಿಯಲ್ಲಿ ದೊರಕಿರುವ ಮೂಡಗೆರೆ ೨೩ರ ಶಾಸನ ಅತ್ಯಂತ ಪ್ರಾಚೀನ ಶಾಸನವಾಗಿದೆ. ಈ ಜಿಲ್ಲೆಯ ಪರಿಸರದಲ್ಲಿ ಆಳ್ವಿಕೆ ಮಾಡಿದ ಅರಸರು, ಮಹಾಮಂಡಲೇಶ್ವರರು, ಸಾಮಂತರು ಹಾಗೂ ಇತರರು ಜೈನಧರ್ಮದ ಚೈತ್ಯಾಲಯಗಳನ್ನು ನಿರ್ಮಾಣ ಮಾಡಿ ಅವುಗಳ ಜೀರ್ಣೋದ್ಧಾರ ಮಾಡಿರುವುದಲ್ಲದೆ ಅವುಗಳ ನಿರ್ವಹಣೆಗಾಗಿ ದಾನ ದತ್ತಿಗಳನ್ನು ನೀಡಿರುವ ಉಲ್ಲೇಖ ಗಳಿವೆ.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನಲ್ಲಿ ೧೨, ಕೊಪ್ಪ-೩, ಚಿಕ್ಕಮಗಳೂರು-೧೦, ತರಿಕೆರೆ-೪, ನರಸಿಂಹರಾಜಪುರ-೪, ಮೂಡಗೆರೆ-೧೨, ಶೃಂಗೇರಿ-೫ ಶಾಸನಗಳು ಉಲ್ಲೇಖಿಸಿರುವಂತೆ ಜೈನ ಧರ್ಮಕ್ಕೆ ಸಂಬಂಧಿ ಸಿದ ಕೆಲವು ವಿಷಯಗಳನ್ನು ಪರಿಚಯಿಸಲಾಗಿದೆ.

ಕಡೂರು ತಾಲೂಕಿನ ಶಾಸನಗಳು

ಸಿಥಗಾನ ಹಳ್ಳಿಯ ಕ್ರಿ.ಶ. ೯೬೧-೬೨ರ ಶಾಸನವು ಪಾಲ್‌ನವಿಲೂರಗಣದ ಬಾಳಂಬಾ ಕಂತಿಯರ ಮಗಳು ವಿಜಕ್ಕನಿಗೆ ಪರೋಕ್ಷವಿನಯಕ್ಕೆ ಅಸಂದಿಯ ಮೂಲಸ್ಥಾನದಲ್ಲಿ ಬಸದಿಯನ್ನು ನಿರ್ಮಿಸಿದ ಉಲ್ಲೇಖವಿದೆ. ಕಡೂರು ಕೋಟೆಯ ಬಾಗಿಲಲ್ಲಿರುವ ಕ್ರಿ.ಶ. ೯೭೧ರ ಶಾಸನವು ಕೊಂಡಕುಂದಾನ್ವಯ ದೇಸಿಯಗಣ ಶ್ರೀಮದಭಯಣನಂದಿ ಪಂಡಿತದೇವರ ಶಿಷ್ಯೆ ನಾಣಬ್ಬೆ ಕಂತಿಯ ಶಿಷ್ಯೆ ಪಡಿಯರ ದೊರಪಯ್ಯನ ಪಿರಿಯರಸಿ ಪಾಂಬಬ್ಬೆಯು ಗಂಗ ಬೂತುಗನ ಹಿರಿಯ ಸೋದರಿ. ಈಕೆ ತಲೆವಜಿಂದು ಮೂವತ್ತು ವರ್ಷ ತಪವನ್ನು ಮಾಡಿ ನೋನ್ತು ಮುಡುಪಿ ಉತ್ತಮ ಸ್ಥಾನ ಪಡೆದ ವಿಷಯ ಉಲ್ಲೇಖವಾಗಿದೆ. ಪಾಂಬಬ್ಬೆಯನ್ನು ಶಾಸನ ನಿಯಮ ಸ್ವಾಧ್ಯಾಯ, ಧ್ಯಾನ, ಮೌನಾನುಷ್ಠಾನ ಪರಾಯಣೆ ಮುಂತಾಗಿ ಹೊಗಳಿದೆ. ಇದನ್ನು ಬರೆದವನು ಅವರ ಮಗ ಅರ್ಹದಭಕ್ತ ಎಂದಿದೆ.

ಮಲ್ಲೇಶ್ವರ ಗ್ರಾಮದ ೧೦ನೇ ಶತಮಾನಕ್ಕೆ ಸೇರಿದ ಶಾಸನವು ಚಾವುಂಡನಾಯಕನು ತನಗೆ ದಾನವಾಗಿ ಕೊಟ್ಟದ್ದ ಅಯ್ಗಣ್ಡುಗ ಮಣ್ಣ (ಭೂಮಿ)ನ್ನು ಮಲ್ಲೇಶ್ವರ ಗಾವುಂಡಗಳ ಸಾಕ್ಷಿ ಎಂದು ಹೇಳಿ ಬಸದಿಗೆ ದಾನ ಕೊಟ್ಟದ್ದಾನೆ. ಶಾಸನವು ತ್ರುಟಿತವಾಗಿರುವುದರಿಂದ ಕೆಲವು ವಿಷಯಗಳ ಬಗ್ಗೆ ಮಾಹಿತಿ ನೀಡಲಾಗುತ್ತಿಲ್ಲ.

ಅಸಂದಿಯ ಒಂದು ತಾಮ್ರಶಾಸನವು ಗಂಗ ಭೂವಿಕ್ರಮನ ಮಗ ಅರಸಾಣೆ ಆಳ್ವಿಕೆ ಮಾಡುತ್ತಿದ್ದ. ಶಾಸನ ಕೊಂಗುಣಿವರ್ಮ್ಮ ಅರಸನಿಂದ ಅರಸಾಣೆಯವರೆಗೆ ವಂಶದ ವಿವರವನ್ನು ನೀಡಿದೆ. ಈತ ನೀತಿಶಾಸ್ತ್ರ, ತರ್ಕ, ಆಖ್ಯಾಯಿಕೆ ಇತಿಹಾಸ, ಪುರಾಣ, ವ್ಯಾಕರಣ, ನಾಟಕ ಮುಂತಾದ ವಿಷಯಗಳಲ್ಲಿ ಪ್ರಾವೀಣ್ಯತೆ ಪಡೆದಿದ್ದ ಎಂದು ಹೊಗಳಿದೆ. ಈತ ಕಣ್ವಾಯನ ಗೋತ್ರದ ಮೂಲಸಂಘದ ಗುಣನಂದಿ ಮುನಿಗೆ ಮರುಗೆರೆ ವಿಷಯದ ಪೆರುಗ್ರಾಮದಲ್ಲಿ ಚೈತ್ಯಾಲಯ ಕಟ್ಟಲು ಭೂಮಿ ದಾನ ನೀಡಿದ ವಿಷಯವಿದೆ. ಕಾಲದ ಉಲ್ಲೇಖ ವಿಲ್ಲದ ಅರಕೆರೆ ಗ್ರಾಮದ ಶಾಸನ ಕರ್ಮ್ಮಯೋಧಿ ಗುರುಗಳ ಶಿಷ್ಯೆಯಾದ ಮರಮತಿ ಕಂತಿ ಮುಡುಪಿದ ವಿಷಯ ತಿಳಿಸು ತ್ತದೆ. ಕನಕನಕೆರೆ ಗುಡ್ಡದ ಬಂಡೆಯ ಮೇಲಿರುವ ತ್ರುಟಿತ ಶಾಸನದಲ್ಲಿ ಕೊಂಡಯ್ಯ ಸೆಟ್ಟಿಯು ಕಟ್ಟಿಸಿದ ಮೂಲಸ್ಥಾನದ

* ಆಶೀರ್ವಾದ, # ೨೯೩೩, ೧೩ನೇ ಮುಖ್ಯರಸ್ತೆ, ಬಿಜಯನಗರ ೨ನೇಯ ಹಂತ, ಬೆಂಗಳೂರು-೫೬೦೦೪೦

ಬಸದಿಗೆ ..... ಕನ್ತಿಯರ ಮಗಳು ವಿಜಯಕ್ಕ ಎಂಬುವಳು ಭೂದಾನ ಮಾಡಿದ ವಿಷಯವಿದೆ.

ಕಬ್ಬಳ್ಳಿ ಜೈನ ಬಸದಿಯಲ್ಲಿರುವ ವಿಗ್ರಹದ ಪೀಠದದ ಮೇಲಿರುವ ಶಾಸನದ ಮುಖ್ಯ ಭಾಗ ತ್ರುಟಿತವಾಗಿದ್ದು ದಾನ ಕೊಟ್ಟ ವಿಷಯ ಉಲ್ಲೇಖವಾಗಿದೆ. ವಿಷಯದ ವಿವರ ತಿಳಿಯಲಾಗುವುದಿಲ್ಲ. ಕಬ್ಬಳ್ಳಿ ಹಳೇಊರ ನಿವೇಶನದಲ್ಲಿರುವ ಕ್ರಿ.ಶ. ೧೧೫೯ರ ಶಾಸನವು ದ್ರಮಿಳಸಂಘ ಅರುಣಂಗಲಾನ್ವಯದ ಚಟ್ಟವ್ವೆ ಗಾವುಂಡಿಯ ಮಗ ಹೊಯ್ಸಳ ಗಾವುಂಡನು ತನ್ನ ತಾಯಿಗೆ ಪರೋಕ್ಷ ವಿನಯವಾಗಿ ಬಸದಿಯನ್ನು ನಿರ್ಮಿಸುತ್ತಾನೆ. ಈತ ಮತ್ತು ಊರ ಹಲವು ಪ್ರಜೆಗಾವುಂಡರು ಹಲವು ದಾನ ದತ್ತಿಗಳನ್ನು ಬಸದಿ ಮತ್ತು ಅಲ್ಲಿನ ದೇವಸ್ಥಾನಕ್ಕೆ ಸಮನಾಗಿ ಹಂಚುತ್ತಾರೆ. ಇದಲ್ಲದೆ ಹೊಯ್ಸಳ ಗಾವುಂಡನು ನಾಲ್ಕು ಸಲಗೆ ಗದ್ದೆ, ನಾಲ್ಕು ಮತ್ತರು ಬೆದ್ದಲೆಗಳನ್ನು ಹಾಗೂ ಅವುಗಳ ಜೊತೆಯಲ್ಲಿ ಎರಡು ಮನೆಗಳನ್ನು, ಒಂದು ಕಣ, ಒಂದು ತೋಟ ಮತ್ತು ಒಂದು ಗಾಣವನ್ನು ಹೊಯ್ಸಳ ನರಸಿಂಹನಿಂದ ಪಡೆದು ಆಹೋಬಲ ಪಂಡಿತರ ಕಾಲನ್ನು ತೊಳೆದು ಬಸದಿಗೆ ದಾನ ನೀಡಿದ ವಿಷಯವಿದೆ. ಬರೆದವನು ನಿಲ್ಕುದುರೆಯ ಮುಖ್ಯಸ್ಥನಾದ ಕಲಿದೇವ ಮತ್ತು ಕಂಡರಿಸಿದವನು ಮಣಿವೋಜ.

ವಕ್ಕಲಗೆರೆಯ ಬಾಣರಂಗನಾಥ ದೇವಾಲಯದ ಹೊರಪ್ರಾಕಾರದಲ್ಲಿರುವ ಕ್ರಿ.ಶ. ೧೨೦೨ರ ಶಾಸನವು ಪ್ರಭಾಚಂದ್ರ ಯೋಗೀಂದ್ರನ ಪುತ್ರ ಸಚ್ಚರಿತ ಮುನಿಪತಿ ಜಿನಚಂದ್ರ ಗುಣಾಭೋಧಿಚಂದ್ರ ಅವರ ಶಿಷ್ಯ ನಯಕೀರ್ತಿ ಪಂಡಿತದೇವನು ಮಹಾಪ್ರಧಾನ ಅಮೃತಯ್ಯದಂಡನಾಯಕ ಮತ್ತು ಅವನ ಮೂವರು ಸೋದರರಾದ ಕಲ್ಲಯ್ಯ, ಮಸಣಯ್ಯ, ಬಸವಯ್ಯ ದಂಡನಾಯಕರು ಏಕ್ಕೋಟಿ ಜಿನಾಲಯವನ್ನು ಶಾಂತಿನಾಥನ ಪ್ರತಿಮೆಯನ್ನು ಒಕ್ಕಲಗೆರೆಯಲ್ಲಿ ಮಾಡಿಸಿ ಕೆಲವು ನಾಯಕರ ಅನುಮತಿ ಪಡೆದು ತಮ್ಮ ಅಭ್ಯುದಯಕ್ಕಾಗಿ ಶಾಂತಿನಾಥದೇವರ ಅಷ್ಟವಿಧಾರ್ಚನೆಗೆ, ರಿಷಿಯರಾಹಾರ ದಾನಕ್ಕೆ ನಯಕೀರ್ತಿ ಪಂಡಿತರ ಕಾಲಂಕರ್ಚಿ ಧಾರಾಪೂರ್ವಕ ದಾನ ಮಾಡಿದ ಉಲ್ಲೇಖವಿದೆ.

ಸಕ್ಕರೆಪಟ್ಟಣದ ಕ್ರಿ.ಶ. ೧೩೬೦ರ ಶಾಸನವು ಜೈನ ಉಪಾಧ್ಯಾಯರಾದ ಮೌನದಾಚಾರ್ಯರ ಶಿಷ್ಯನಾದ ಹೊಸವೂರ ನೂಲವಂದಿ ಸೆಟ್ಟಿಯ ಮಗನ ಜ್ಞಾಪಕಾರ್ಥವಾಗಿ ನೂಲವಂದಿ ಸೆಟ್ಟಿಯು ನಿಸದಿ ಮಾಡಿಸಿದ ಉಲ್ಲೇಖವಿದೆ. ಇದೇ ಸಕ್ಕರೆಪಟ್ಟಣದ ಕ್ರಿ.ಶ. ೧೪೦೫-೬ರ ಶಾಸನವು ಲಕ್ಷ್ಮಿಸೇನಭಟ್ಟಾರಕರ ಶಿಷ್ಯ ಮಾರಸೇನದೇವರ ನಿಸಿದಿಯನ್ನು ಶ್ರೀಮುತ್ತದ ಹೊಸೂರ ಬೈಚಸೆಟ್ಟಿಯ ಮಕ್ಕಳಾದ ಮಾಯಸೆಟ್ಟಿ, ಬೊಮ್ಮಿಸೆಟ್ಟಿ, ನಾಗಣಸೆಟ್ಟಿ ಮತ್ತು ಅವರ ಮೊಮ್ಮಕ್ಕಳು ಸೇರಿ ಮಾಡಿಸಿದ ಉಲ್ಲೇಖವಿದೆ. ಕಾಲದ ಉಲ್ಲೇಖವಿಲ್ಲದ ಇದೇ ಸ್ಥಳದ ಮನೆಯೊಂದರ ಮುಂದಿರುವ ಮತ್ತೊಂದು ಶಾಸನವು ವೈಶ್ಯಕುಲದ ದೇವಮಾಂಬೆ ಮತ್ತು ಹೊಲ್ಲರಾಜನ ಮಕ್ಕಳಾದ ಮಾಯಣ್ಣ ಮತ್ತು ಮಾಕಪ್ಪ ಬಳಿಗಾರ ಕುಟುಂಬದವರು ಹೊಸಪಟ್ಟಣದ ಜೈನ ಉಪಾಧ್ಯಾಯರಾದ ಲಕ್ಷ್ಮಿಸೇನ ಭಟ್ಟಾರಕರ ನಿಸಿದಿ ಮಾಡಿಸಿ ದಾನವನ್ನು ಲಕ್ಷ್ಮಿಸೇನ ಭಟ್ಟಾರಕರ ಸಂತತಿಯವರಿಗೆ ನೀಡಿದ ಉಲ್ಲೇಖವಿದೆ.

ಕೊಪ್ಪ ತಾಲೂಕು

ಕಲ್ಲುಬಸ್ತಿಯಲ್ಲಿರುವ ಕ್ರಿ.ಶ. ೧೫೩೦ರ ಶಾಸನದಲ್ಲಿ ಬೊಮ್ಮಲದೇವಿಯ ಮಗನಾದ ವೀರಭೈರರಸ ಒಡೆಯನು ಕಾರ್ಕಳದಿಂದ ಆಳ್ವಿಕೆ ಮಾಡುತ್ತಿದ್ದ. ದೊರೆಯ ಸೋದರಿ ಕಾಳಲದೇವಿಯು ಬಗುಂಜಿ ಸೀಮೆಯನ್ನು ಪಾಲಿಸುತ್ತಿದ್ದ ತನ್ನ ಮಗಳು ರಾಮಾದೇವಿಯು ಮೃತಳಾದಾಗ ಆಕೆ ತನ್ನ ಕುಲದೇವತೆ ಕಲ್ಲಬಸ್ತಿಯ ಪಾರಿಶ್ವತೀರ್ಥಂಕರರ ನಿತ್ಯಧರ್ಮದ ಸೇವೆಗೆ ದಿನವೊಂದಕ್ಕೆ ೨ ಪಡಿ ಅಕ್ಕಿ, ನೈವೇದ್ಯಕ್ಕೆ ಭತ್ತ ೧೫ರ ಪೂರ್ವದಲ್ಲಿ ನೀಡುತ್ತಿದ್ದುದನ್ನು ಸೇರಿಸಿ ದಾನ ನೀಡಿದ ಮತ್ತು ನಂದಾದೀಪಕ್ಕೆ ಭೂದಾನ ಮಾಡಿದ ಉಲ್ಲೇಖವಿದೆ. ಇದಕ್ಕೆ ಬಗುಂಜಿ ಸೀಮೆಯ ಪೂರ್ವ ಪ್ರಧಾನಿಗಳು, ಮಹಾಜನಗಳು, ನಾಡಬಳಿ ಕೋಲಬಳಿಯರು ಮುಂತಾದವರು ಸಾಕ್ಷಿಯಾಗಿದ್ದಾರೆ.

ಕೊಪ್ಪದ ಸರ್ಕಾರಿ ಭೂಮಿಯಲ್ಲಿರುವ ಕ್ರಿ.ಶ. ೧೫೪೮ರ ಶಾಸನವು ಕಂದಲಬಳಿಯ ಮಯಿಲನಾಯಕರ ಮದವಳಿಗೆ ತಳಾರಬಳಿಯ ದುಗ್ಗಂಮನ ಮಗ ಪಾಂಡ್ಯನಾಯಕ ಅವರ ತಮ್ಮ ದೆರೆನಾಯಕರು ಕೊಪ್ಪವನ್ನು ಪಾಲಿಸುತ್ತಿದ್ದಾಗ ಸಾಧನ ಚೈತ್ಯಾಲಯವನ್ನು ಕಟ್ಟಿಸಿ ಪ್ರತಿಷ್ಠೆಯನ್ನು ಮಾಡಿಸಿ ಅಮೃತಪಡಿಗೆ ಭೂದಾನ ನೀಡಿರುವರು. ಭೈರರಸವೊಡೆಯರು ಮುದುರ ದಾನಿ ಮತ್ತು ನರಸಿಪುರದ ಬ್ರಾಹ್ಮಣರಿಂದ ಕೊಂಡ ಭೂಮಿಯನ್ನು ಪಾರೀಶ್ವನಾಥ ದೇವರಿಗೆ ದಾನ ಮಾಡಿರುವ ಹಾಗು ಪಾಂಡ್ಯಪ್ಪವೊಡೆಯನು ಕೊಪ್ಪದ ಬಸ್ತಿಗೆ ಭೂದಾನ ಮಾಡಿದ ಹೇಳಿಕೆಗಳಿವೆ.

ಪೇಟೆಗದ್ದೆ ಆಂಜನೇಯ ದೇವಾಲಯದ ಮುಂದಿರುವ ತುಂಡುಗಲ್ಲಿನ ಶಾಸನದ ಆರಂಭದ ಸಾಲುಗಳಲ್ಲಿನ ಲಿಪಿಗಳು ಸಾಕಷ್ಟು ನಾಶವಾಗಿದ್ದು 'ಆರೊಬ್ಬರು ಅಳುಪಿದರು ಜಿನಬಿಂಬವನು ಬಿನ್ನವ ಮಾಡಿದ ಪಾಪಕೆ ಹೋಹರು' ವರಾಣಾಸಿಯಲಿ ಕಪಿಲೆಯನು, ಬಿಳುಫರೆ ಯೆತ್ತ, ತಂದೆ ತಾಯಿಗಳ ಕೊಂದ ಪಾಪಕೆ ಹೋಹರು ಎಂಬ ಶಾಪಾಶಯವಿದೆ. ಇದನ್ನು ಮಾಡಿಸಿದವನು ಬೆಳಗುಳದ ಬೊಂಮರಸ ಎಂದಿದೆ.

ಚಿಕ್ಕಮಗಳೂರು ತಾಲೂಕು

ಮತ್ತಾವಾರದ ಬೆಟ್ಟದ ಮೇಲೆ ಈ ಮೊದಲೇ ಒಂದು ಸಣ್ಣ ಬಸದಿ ಮತ್ತು ಒಂದು ಕಾಲುವೆ ಇದ್ದಿತು. ಊರಿನಲ್ಲಿರುವ ಬಸದಿಯ ಸುಖನಾಸಿಯಲ್ಲಿರುವ ಕ್ರಿ.ಶ. ೧೦೭೭ರ ಶಾಸನವು ಹೊಯ್ಸಳ ವಿನಿಯಾದಿತ್ಯನು ಮತ್ತಾವರದ ಬೆಟ್ಟದ ಮೇಲಿರುವ ಬಸದಿಗೆ ಭೇಟಿ ನೀಡಿದಾಗ ಊರೊಳಗೆ ಬಸದಿಯನ್ನು ಮಾಡಿಸದೆ ಇಲ್ಲಿ ಏಕೆ ಮಾಡಿಸಿದಿರಿ ಎಂದು ಗ್ರಾಮಸ್ಥರನ್ನು ಕೇಳಿದಾಗ ಗ್ರಾಮಸ್ಥನಾದ ಮಾಣಿಕಸೆಟ್ಟಿ ಎಂಬುವವನು ಬಿನ್ನಪಂಗೆಯ್ದಂ "ದೇವರ್ನ್ನಿರ್ವೂರೊಳೊಂದು ಬಸದಿಯಂ ಮಾಡಿಸಿ ಭೂಮಿಯಂ ಕೊಟ್ಟಡೆ ಬಡವಬ್ಬರ್ ನಿಮ್ಮಡವ ರ್ಥಕ್ಕೆ ಪ್ರಮಾಣುಂಟೆ ದೇವರರ್ಥಮಂ ಮಲೆಯರಸುಗಳ ಪಡೆದ ಭತ್ತಮುಂ ಸಮಾನಮದರ" ಘನತವೆತ್ತ ನೀವು ಗ್ರಾಮದಲ್ಲಿ ಒಂದು ಬಸದಿಯನ್ನು ಕಟ್ಟಿಸಿ ಅದಕ್ಕೆ ದಾನ ನೀಡಬೇಕು, ನಾವು ಬಡವರು, ಆದರೆ ನಿಮ್ಮ ಸಂಪತ್ತಿಗೆ ಎಲ್ಲೆಯೇ ಇಲ್ಲ ಎಂದು ವಿನಂತಿಸಿಕೊಂಡಾಗ ಅರಸ ಸಂತೋಷ ಗೊಂಡು ಗ್ರಾಮಸ್ಥರ ಕೋರಿಕೆಯಂತೆ ವಿನಯಾದಿತ್ಯನು ಊರಿನಲ್ಲಿ ಒಂದು ಬಸದಿಯನ್ನು ನಿರ್ಮಿಸಿ, ಹತ್ತಿರದಲ್ಲಿ ಮನೆಗಳನ್ನು ನಿರ್ಮಿಸಿ ಆ ಗ್ರಾಮಕ್ಕೆ ರಿಷಿಹಳ್ಳಿಯೆಂದು ಹೆಸರಿಟ್ಟು, ಮನೆದೆರೆ, ಮದುವೆದೆರೆ, ಉರುಟ್ಟಿಗೆ ತೌದೆ ಸುರಂದು ಕವರ್ತ್ತೆ ಸೇಸೆ ಒಸಗೆ ಮನಕರೆ ಕೂಟ ಕಕನ್ದಿ, ಬೀರವಣ, ಹದಿಯ ಊಾಯ ಕುಂಬಳಿ ಬಿಟ್ಟಿಕಂಮಜಿವಿಟ್ಟಿಯ ವೊಳಗಾಗಿ ಹಲವು ತೆರಿಗೆಗಳನ್ನು ಕೊಟ್ಟ ಉಲ್ಲೇಖ ಊರಿನಲ್ಲಿರುವ ಬಸದಿಯ ಸುಖನಾಸಿಯಲ್ಲಿದೆ.

ಅದೇ ಮತ್ತಾವಾರ ಬಸದಿಯ ಗಂಟೆಯ ಮೇಲೆ ಪಾರ್ಶ್ವನಾಥಸ್ವಾಮಿ ಚೈತ್ಯಾಲಯಕ್ಕೆ ಐವಾರ ಅಂಬಣ್ಣನು ಗಂಟೆ ದಾನ ಮಾಡಿದ ವಿಷಯವಿದೆ. ಮತ್ತಾವಾರ ಪಾರ್ಶ್ವನಾಥ ಬಸದಿಯ ಪ್ರಾಕಾರದಲ್ಲಿ ಕ್ರಿ.ಶ. ೧೧೧೮ರ ಶಾಸನವು ಚಿದವಳ್ಳಿಯ ಮಾಯನ ... ಮಗ ಮಾವಂಣನ ಶಿಷ್ಯ ಸನ್ಯಸನ ಗೆಯ್ದು ಮುಡುಪಿದಕ್ಕೆ ನಿಸಿದಿ ಮಾಡಿಸಿದ ಉಲ್ಲೇಖವಿದೆ. ಅದೇ ಜಾಗದಲ್ಲಿರುವ ೧೨ನೇ ಶತಮಾನದ ಶಾಸನವು ಮರುಳಜಿನಜಕವೆಹಟ್ಟಿ ಚಟವೆಗಂತಿ ಮತ್ತಲೂರ ಬಸದಿಯಲ್ಲಿ ತಪಸ್ಸು ಮಾಡಿ ಸಿದ್ಧಿ ಆದಳು. ಆಗ ಅಬೆಯ ಮಾಚರಸನ ಮಗ ಮಾರ (ನಿಸಿದಿ) ಕಲ್ಲು ನಿಲ್ಲಿಸಿದ ವಿಷಯವಿದೆ. ಅದೇ ಸ್ಥಳದಲ್ಲಿರುವ ಕ್ರಿ.ಶ. ೧೧೪೩–೪೪ರ ಶಾಸನವು ಹೆಗ್ಗೆರೆಯ ಮತ್ತಿಕಾಪುರದಿಂದ ಬಂದ ಜಕ್ಕವ್ವೆ ಗಂತಿಯು ಮತ್ತು ಗೌಜೆ ಹೆಗ್ಗಡೆಯ ಗುರುಗಳಾದ ಸುಕವಿ ದೇವೇಂದ್ರಬುಧನ ಪತ್ನಿ. ಮತ್ತಾವಾರದ ಗಾವುಂಡ ಬೂಚಿವೆಗ್ಗಡೆ, ನಾರಣವೆಗ್ಗಡಯ್ಯನು ಪಡಿಕರ ಮಾದುವ ಮಾಬಲಯ್ಯನು ನಿಸಿದಿ ಕಲ್ಲನ್ನು ನಿಲ್ಲಿಸಿದ ಉಲ್ಲೇಖವಿದೆ. ಶಾಸನ ದೇವೇಂದ್ರ ಪಂಡಿತನನ್ನು ಶ್ರಾವಕರ ತೋಯೆಕರ ಬುದಾವಳಿಪರಮೋಪಕಾರಿ ಮತಿಚತುರ ಕಳಾಕೋವಿದರ ಬಂದು ಎಂದು ಪ್ರಶಂಸೆ ಮಾಡಿದೆ.

ಚಿಕ್ಕಮಗಳೂರಿನ ಅಗ್ರಹಾರದ ಬೀದಿಯಲ್ಲಿರುವ ದಿಣ್ಣೆಯ ಮೇಲಿರುವ ಕ್ರಿ.ಶ. ೧೧೦೧ರ ಶಾಸನವು ಸನ್ಯಸನದಿಂದ ಮರಣ ಹೊಂದಿದ ಜೈನಮುನಿಗಾಗಿ ಆತನ ಶಿಷ್ಯೆ ಮಾಳೆಯಬ್ಬಿ ಗಂತಿಯು ಪರೋಕ್ಷವಿನಯವಾಗಿ ನಿಸಿದಿಯನ್ನು ಮಾಡಿಸಿದಳು. ಅದೇ ಸ್ಥಳದಲ್ಲಿ ಮತ್ತೊಂದು ಶಾಸನವು ಬೂಚಬ್ಬೆ ಗಂತಿಯರ ಶಿಷ್ಯೆ ನೆಚಟಿಮತಾಯ ... ನಿಸಿದಿಗೆಯನ್ನು ಮಾಡಿಸಿದ ಉಲ್ಲೇಖವಿದೆ. ಮೇಲಿನ ಶಾಸನಗಳು ನಿಸಿದಿಕಲ್ಲು ನಿಲ್ಲಿಸಿದ ಮತ್ತು ಮಾಡಿಸಿದ್ದನ್ನು ಉಲ್ಲೇಖಿಸಿದೆ.

ಸಿಂಘಗಿರಿ ಬಸ್ತಿಯ ಕೈಸಾಲೆಯಲ್ಲಿರುವ ಕಂಬದ ಮೇಲಿರುವ ಕ್ರಿ.ಶ. ೧೧೩೭ರ ಶಾಸನವು ತುಲಾಪುರುಷ ಮಹಾದಾನವನ್ನು (ಭೀಮೋರಗ ವಿಷರುಜಾಮಹೋಗ್ರಹ ದೋಷಂ) ಮಾಡಿದ್ದಕ್ಕಾಗಿ ಸವಗೋವನಹಳ್ಳಿಯನ್ನು ಹೊಯ್ಸಳ ವಿಷ್ಣುವರ್ಧನ ಮಹಾರಾಜರಿಂದ ಮಹಾಪ್ರಧಾನಿ ಮರಿಯಾನೆ ದಂಡನಾಯಕ ಮತ್ತು ಮಹಾಪ್ರಧಾನ ಭರತಮಯ್ಯನ ಮಕ್ಕಳಾದ ಡಾಕರಸ ದಂಡನಾಯಕ, ಮಕ್ಕಳು ದ್ರೋಹರಘಟ್ಟ ಗಂಗಪಯ್ಯ ದಂಡನಾಯಕ, ಬಾಚರಸ ದಂಡನಾಯಕ, ಸೋವರಸ ದಂಡನಾಯಕರಳಿಯ ಮೊದಲಾದವರು ಮಾಡಿದ್ದಕ್ಕಾಗಿ ಸವಗೋವನಹಳ್ಳಿಯನ್ನು ಪಿಂಗಳ ಸಂವತ್ಸರದ ಪುಷ್ಯ ಸು. ೧೦ ಆದಿವಾರದ ಉತ್ತರಾಯಣ ಸಂಕ್ರಾಂತಿಯಂದು ಪಡೆದು. ಸವಗೋವನ ಹಳ್ಳಿಯನ್ನು ತಮ್ಮ ನೆಲೆಯೂರಾದ ಸಿಂಧಿಗೆರೆಯ ಬಸ್ತಿಗೆ ಜೈನ ಶಿಕ್ಷಕರಾದ ಕುಲಚಂದ್ರ ಸಿದ್ಧಾಂತದೇವರ ಶಿಷ್ಯ ಮಾಘ ನಂದಿ ಮುನಿಯ ಶಿಷ್ಯರಾದ ಗಂಡವಿಮುಕ್ತಬ್ರತೀಶ್ವರ ಮೂಲಸಂಘ ದೇಸಿಯಗಣ ಪೊಸ್ತಕಗಚ್ಛ ಕೊಂಡಕುಂದಾನ್ವಯ ಆಚಾರ್ಯರಾದ ಶ್ರೀಕುಳಚಂದ್ರ ಸಿದ್ಧಾಂತ ದೇವರಿಗೆ ದಾನ ವಾಗಿ ನೀಡಿದ ಉಲ್ಲೇಖವಿದೆ. ಈ ಶಾಸನದಲ್ಲಿ ಭರತಮಯ್ಯ ದಂಡನಾಯಕರನ್ನು ಹೊಗಳಿದೆ.

ಕಳಾಸಪುರದ ಆಂಜನೇಯ ದೇವಾಲಯದ ಮೇಲ್ಛಾವಣಿಯಲ್ಲಿರುವ ಕ್ರಿ.ಶ. ೧೧೭೬ರ ಶಾಸನವು ಇಮ್ಮಡಿ ಬಲ್ಲಾಳನ ಕಾಲಕ್ಕೆ ಸೇರುತ್ತದೆ. ಇಲ್ಲಿ ಕವಡಮಯ್ಯ ವ್ಯಾಪಾರಿ ಕುಟುಂಬದ ದೇವಿಸೆಟ್ಟಿಯು ವೀರಬಲ್ಲಾಳ ಜಿನಾಲಯ ಬಸದಿಯನ್ನು ನಿರ್ಮಿಸಿ ಅದರಲ್ಲಿ ಶಾಂತಿನಾಥ ತೀರ್ಥಂಕರರ ವಿಗ್ರಹವನ್ನು ಮೂಲಸಂಘದ ಕುಂದಕುಂದಾನ್ವಯ ದೇಸಿಗಚ್ಛಕ್ಕೆ ಸೇರಿದ ಬಾಲಚಂದ್ರ ಮುನಿಯ ಕೋರಿಕೆಯಂತೆ ಸ್ಥಾಪಿಸ ಲಾಗಿದೆ. ಈ ಬಸದಿಯ ಸಂರಕ್ಷಣೆಗೆ, ಸೇವೆಗೆ ಮತ್ತು ದುರಸ್ತಿ ಗಳ ಖರ್ಚಿಗಾಗಿ ಇಮ್ಮಡಿ ಬಲ್ಲಾಳನಲ್ಲಿ ಸಹಾಯ ಬೇಡಿ

೬ಸಾಂದ ಕೆರೆಗೆ ಸಹಿತ ಹಳ್ಳಿಗಳನ್ನು ಪಡೆದು ದಾನವಾಗಿ ನೀಡಿದ ಉಲ್ಲೇಖವಿದೆ. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿಷಯದ ಸ್ಪಷ್ಟತೆ ಸಿಗುತ್ತಿಲ್ಲ. ಚಿಕ್ಕಮಗಳೂರಿನ ಬಾಳೆಬಾಗಿನಲ್ಲಿ ನೆಟ್ಟಿರುವ ಕಲ್ಲಿನಲ್ಲಿ ಕ್ರಿ.ಶ. ೧೨೦೦ರ ಶಾಸನವು ಮೂಲಸಂಘ ದೇಸಿಗಣ ಪುಸ್ತಕ ಗಚ್ಛ ಪನಸೋಗೆಬಳಿ, ಕೊಂಡಕುಂದಾನ್ವಯ ಶ್ರೇಯಾಂಸ ಭಟ್ಟಾರಕರ ಗುಡ್ಡನಾಗಿದ್ದ ಚಿಕ್ಕಮುಗಳಿಯ ಮಸಣ ಗೌಡನ ಅಗ್ರಪುತ್ರನಾಗಿದ್ದ ಸೋಮಗೌಡನು ಸಮಾಧಿವಡದು ಸುರಲೋಕಕ್ಕೆ ಪ್ರಾಪ್ತನಾದಾಗ ಆತನ ಮಗ ಹೆಗ್ಗಡೆಗೌಡನು ನಿಸಿದಿಯನ್ನು ನಿರ್ಮಿಸಿ ಅಷ್ಟವಿಧಾರ್ಚನೆಗೆ ಚರುವಿಗೆ ಭೂಮಿ ದಾನ ಮಾಡಿದ ವಿಷಯವಿದೆ.

ತರೀಕೆರೆ ತಾಲೂಕು

೧೦ನೇ ಶತಮಾನಕ್ಕೆ ಸೇರಿದ ಕಾರೇಹಳ್ಳಿಯ ಶಾಸನವು ಅರಕೆರೆಯ ಪರಮತಿ ಕಂತಿ ಮುಡಿಪಿದ ವಿಷಯ ಹೇಳಿದೆ. ೧೧-೧೨ನೇ ಶತಮಾನಕ್ಕೆ ಸೇರಿದ ಕೂಡ್ಲೂರು ಕೆರೆಕೋಡಿಯಲ್ಲಿರುವ ನಿಸಿದಿಕಲ್ಲಿನಲ್ಲಿ ಪೆರಿಯಕುಳುಗುಡದ ರಾಚೆಯ ಗಾವುಂಡನು ಬಸದಿಗೆ ಬಂದು ಸನ್ಯಸನ ವಿಧಿಯಿಂದ ನೋಂತು ಮುಡುಪಿದ. ಶೀಲಸಂಪನ್ನಳಾದ ಆತನ ಗಾವುಂಡಿ ಪರೋಕ್ಷವಿನಯವಾಗಿ ಪೂಜೆಯನ್ನು ಮಾಡಿ ಆಕೆಯು ಸಹ ಸ್ವರ್ಗಸ್ಥಳಾದ ಉಲ್ಲೇಖವಿದೆ ಮುದಿಗೆರೆಯಲ್ಲಿನ ತಾಮ್ರಶಾಸನದಲ್ಲಿ ಅಸಂದಿ ತಟಾಕಕ್ಕೆ ದಕ್ಷಿಣದಲ್ಲಿರುವ ಬಸದಿಯಲ್ಲಿ ಜಿನಾರಾಧನೆಗೆ ಕದಂಬ ದೊರೆಯು ಐದು ನಿರ್ವತನ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಮತ್ತೊಂದು ಶಾಸನವು ಶಿವಮಾರ ಮತ್ತು ಪಸೂಂಡಿ ಇವರಿಬ್ಬರೂ ಸೇರಿ ತಗರೆ ಜನಪದಕ್ಕೆ ಸೇರಿದ ಮಲ್ಲವಳ್ಳಿ ಎಂಬ ಗ್ರಾಮವನ್ನು ತೊಳಲಿನ ಚೈತ್ಯಾಲಯಕ್ಕೆ ದಾನವಿತ್ತ ಮತ್ತು ಶಾಂತಿಸೇನ ಅಬ್ಬೆ ಹಾಗೂ ಮಣಲಿಮನೆ ಒಡೆಯರು ನೀಡಿದ ದಾನಗಳನ್ನು ಕೂಡ ಈ ಶಾಸನ ದಾಖಲಿಸಿದೆ.

ನರಸಿಂಹರಾಜಪುರ ತಾಲೂಕು

ನರಸಿಂಹರಾಜಪುರದ ಜೈನ ಮಠದಲ್ಲಿದ್ದ ಗಂಗ ವಂಶದವರ ಕಾಲದ ತಗರೆಗೆ ಸೇರಿದ ಮುಳವಳ್ಳಿ ಗ್ರಾಮದ ತೊಳ್ಳ ಗ್ರಾಮದಲ್ಲಿರುವ ಚೈತ್ಯಾಲಯಕ್ಕೆ ಕೌಶಿಕ ವಂಶದ ಮನಾಲಿಮನೆ ಒಡೆಯ ಮುಖ್ಯಸ್ಥರು, ಮಹಾಪ್ರಧಾನರು ತೊಳ್ಳ ಗ್ರಾಮದ ಪಿರಿಯರ ಸಾಕ್ಷಿಯಾಗಿ ದಾನಕೊಟ್ಟಿದ್ದನ್ನು ಹಾಗೂ ಶಾಂತಿಸೇನೆ ಅಬ್ಬೆಯು ದಾನಕೊಟ್ಟ ಉಲ್ಲೇಖವಿದೆ. ೮ನೇ ಶತಮಾನಕ್ಕೆ ಸೇರಿದ ಜೈನ ಮಠದಲ್ಲಿರುವ ಶಾಸನ ಶಿವಮಾರನ ಆಳ್ವಿಕೆಯಲ್ಲಿ ಸಿಂದ ನಾಡು ೮ ಸಾವಿರ ಮತ್ತು ತಗರೆನಾಡು ಆಳುತ್ತಿದ್ದ ವಿಠರಸನು ಕಾರಿಮಾನಿಯನ್ನು ತೊಳ್ಳ ಗ್ರಾಮದ ೭೬ ಜನ ಕೋಸಿಗರ ಸಾಕ್ಷಿಯಾಗಿ ತೊಳ್ಳಗ್ರಾಮದ ಚೈತ್ಯಾಲಯಕ್ಕೆ ದಾನ ನೀಡಿದೆ. ಇದೇ ಸ್ಥಳದಲ್ಲಿರುವ ೮ನೇ ಶತಮಾನಕ್ಕೆ ಸೇರಿದ ಶಿವಮಾರಮಾರನ ಆಳ್ವಿಕೆಯಲ್ಲಿ ವಿಜಯಶಕ್ತಿ ಅರಸ ಎಂಬುವನು ಮುಳವಳ್ಳಿ ಚೈತ್ಯಾಲಯಕ್ಕೆ ೬ ಖಂಡುಗ ಭೂಮಿ ದಾನವಾಗಿ ಕೊಟ್ಟು ಅದನ್ನು ರಕ್ಷಿಸುವ ಮತ್ತು ಅದಕ್ಕೆ ಸಾಕ್ಷಿಯಾಗಿ ಅಯ್ಯಗಾದರ, ಅಜ್ಜಗಿಯಾರ, ತೊರೆಯವಲ್ಲಿಯರು ಮುಂತಾದವರ ಸಾಕ್ಷಿಯಾಗಿ ದಾನ ನೀಡಿದ ವಿಷಯವಿದೆ. ಅದಲ್ಲದೆ ಮತ್ತೂ ಕೆಲವು ದಾನ ನೀಡಿದ ಉಲ್ಲೇಖವಿದೆ. ಸಿಂಗನೆ ಗದ್ದೆಯಲ್ಲಿರುವ ನೇಮಿನಾಥ ಮೂರ್ತಿಯ ಪ್ರಭಾವಳಿಯ ಮೇಲೆ ಉದ್ದರೆಯ ಚಾಗಿಯಬ್ಬೆ ಕಂತಿಯರ ಗುಡ್ಡಿ ಚಂದಿಯಬ್ಬೆ ಮಾಡಿಸಿದ ಉಲ್ಲೇಖವಿದೆ.

೧೧ನೇ ಶತಮಾನದ ಬಾಳೇಹೊನ್ನೂರಿನ ಭದ್ರಾ ನದಿಯ ಹೊಸಸೇತುವೆಯ ಹುಟ್ಟು ಗುಂಡಿನ ಮೇಲೆ ಶಾಸನವು ಜೈನಧರ್ಮಾನುಯಾಯಿ ಮಾರ ಎಂಬುವವನು ತನ್ನ ತಂದೆ ಮಯೂರವರ್ಮ ತಾಯಿ ದತ್ತಾಳ್ವ ವಂಶದ ವಿನಯಾದಿತ್ಯನ ಸೋದರಿ ಎಂದು ಹೇಳಿದೆ. ಈ ಪ್ರದೇಶದಲ್ಲಿ ವಾರೀಭ ಸಿಂಹನೆನಿಸಿದ ಆತನಿಗೆ ಅಜಿತಸೇನ ಎಂಬ ಹೆಸರಿದ್ದು ಸಾಂತರ ವಂಶದ ಮಾರನು ಆತನ ಅಗ್ರಶಿಷ್ಯನಾಗಿದ್ದ. ಪಾವಿತ್ರ್ಯದಲ್ಲಿ ಶೌಚಗಾಂಗೇಯನೆನಿಸಿದ್ದನಚಿತೆ.

ಮೂಡಗೆರೆ ತಾಲೂಕು

ಕ್ರಿ.ಶ. ೧೧೨೯ರ ಶಾಸನವು ವಿಷ್ಣುವರ್ಧನನ ಮಗಳಾದ ಹರಿಯಬ್ಬರಸಿಯು ತನ್ನ ತಾಯಿಯ ಮೂಲಕ ಜೈನಧರ್ಮದ ನಿಷ್ಠೆ ಪಡೆದುಕೊಂಡಳು. ಈಕೆಯು ಹಂತೂರಿನಲ್ಲಿ ಎತ್ತರದ ಚೈತ್ಯಾಲಯವನ್ನು ನಿರ್ಮಾಣ ಮಾಡಿದ ವಿಷಯ ತಿಳಿಯುತ್ತದೆ. ತನ್ನ ಮಗಳ ಕಾರ್ಯದಿಂದ ಸಂತುಷ್ಟನಾದ ವಿಷ್ಣುವರ್ಧನನು ಈ ಬಸದಿಯ ಕೆಲಸ ಕಾರ್ಯಗಳಿಗೆ ಮತ್ತು ಅದರ ದುರಸ್ತಿಗಾಗಿ ದಿನನಿತ್ಯದ ಪೂಜೆಗಾಗಿ ಜೈನಮುನಿಗಳ ಊಟಕ್ಕಾಗಿ ಮೂಲಸಂಘದ ಕುಂದಕುಂದಾನ್ವಯ ದೇಶಿಗಣ ಪುಸ್ತಕಗಚ್ಛಕ್ಕೆ ಸೇರಿದ ಮೇಘನಂದಿ ಸಿದ್ಧಾಂತದೇವನ ಶಿಷ್ಯನಾದ ಗಂಡವಿಮುಕ್ತ ಸಿದ್ಧಾಂತದೇವನಿಗೆ ದತ್ತಿಗಳನ್ನು ಕೊಟ್ಟನು.

ಕ್ರಿ.ಶ. ೧೦ನೆಯ ಶತಮಾನಕ್ಕೆ ಸೇರಿದ ಕೆಸವೊಳಲು ಬಸದಿ ತೋಟದಲ್ಲಿರುವ ಈ ಶಾಸನವು ದೇಸಿಗಣ ಮತ್ತು ಪನಸೋಗೆ ಬಳಿಗೆ ಸೇರಿದ ಮತ್ತು ಜೈನ ಮುನಿಗಳ ಗುಂಪಿಗೆ ಮುಖ್ಯಸ್ಥನಾಗಿದ್ದ ದಾಮನಂದಿದೇವ ಎಂಬ ಮುನಿಯು ಶ್ರೀಧರದೇವನ ಶಿಷ್ಯನಾಗಿದ್ದ. ದಾಮನಂದಿದೇವ ಮುನಿಗೆ ಶೋಭನಯ್ಯ ಅಥವಾ ಸುಭಗನೆಂಬ ಶಿಷ್ಯನಿದ್ದ. ಈತ ಚಾಲುಕ್ಯ ವಿಕ್ರಮಾಂಕ ಮತ್ತು ಮೇಚಕ್ಕ ದಂಪತಿಗಳ ಮಗ. ಈತ ಹೊಯ್ಸಳದೇವನ ಅಮಾತ್ಯನಾಗಿ, ಸಂಧಿವಿಗ್ರಹಿಯಾಗಿದ್ದು

ಕಿಸುವೊಳಲಿನಲ್ಲಿ ಅತಿಶಯವಾದ ಬಸದಿಯನ್ನು ನಿರ್ಮಿಸಿ ಸೊಸೆವೂರಿನಲ್ಲಿ ತನ್ನ ಗುರುವಿಗಾಗಿ ನಿಸಿಧಿ ಸ್ಥಾಪಿಸಿ ಪೂಜಾ ಕಾರ್ಯಗಳಿಗೆ ಏರ್ಪಾಡು ಮಾಡಿದನು.

ಅಂಗಡಿ ಗ್ರಾಮದ ಬಸದಿಯ ಸಮೀಪದಲ್ಲಿರುವ ಕ್ರಿ.ಶ. ೧೦೫೪ರ ಶಾಸನವು ಹೊಯ್ಸಳ ವಿನಯಾದಿತ್ಯನ ಆಳ್ವಿಕೆಯಲ್ಲಿ ಸೂರಸ್ತಗಣದ ವಜ್ರಪಾಣಿ ಪಂಡಿತದೇವರ .... ಗಂತಿಯರಪ್ಪ ಜಾಕಿಯಬ್ಬೆ ಗಂತಿಯು ಸೊಸೆವೂರ ಬಸದಿಗೆ ಮತ್ತು ಮಕರಜಿನಾಲಯಕ್ಕೆ ನಾಲ್ಕು ಗಣ್ಣ ಕೊಟ್ಟು ಎರಡು ಹಳ್ಳದ ಮೇಗಣ ಭೂಮಿಯನ್ನು ಕೊಂಡು ದಾನ ಮಾಡಿದ ಉಲ್ಲೇಖವಿದೆ. ಅದೇ ಸ್ಥಳದಲ್ಲಿರುವ ಮತ್ತೊಂದು ಶಾಸನವು ಚಟಯನು ನಿಲಿಸಿದ ಶಾಸನ ಎಂದಿದೆ. ದಾಸಿಸೆಟ್ಟಿ ಹೆಸರು ಉಲ್ಲೇಖವಿದ್ದು ಉಳಿದ ವಿಷಯ ತ್ರುಟಿತವಾಗಿದೆ. ಅಂಗಡಿ ಗ್ರಾಮದ ಬಸದಿಯಲ್ಲಿರುವ ಮತ್ತೊಂದು ಕಲ್ಲಿನಲ್ಲಿರುವ ಶಾಸನದಲ್ಲಿ ಕೊಂಡಕುಂದಾನ್ವಯ ಪುಸ್ತಕಗಚ್ಛ ಮಾನಿಭಟ್ಟರಕರ ಶಿಷ್ಯ ವಿಮಳಚಂದ್ರ ಪಂಡಿತ ದೇವರು ಸನ್ಯಾಸನ ವಿಧಿಯಿಂದ ಮುಡಿಪಿ ಮುಕ್ತಿಯನ್ನು ಪಡೆದಾಗ ಇವರ ಗುಡ್ಡಿ ಹವುಂಬ್ಬೆಯ ತಂಗೆ ಸಾಂತಿಯಬ್ಬೆ ತಮ್ಮ ಗುರುಗಳಿಗೆ ಪರೋಕ್ಷವಿನಯವಾಗಿ ಬಸದಿ ನಿರ್ಮಿಸಿದಳು. ಅದೇ ಸ್ಥಳದಲ್ಲಿರುವ ಕ್ರಿ.ಶ. ೧೧೭೨–೭೩ರ ಶಾಸನವು ಹೊಸತೂರು ಕಂಬರಸ ಹೊನ್ನಂಗಿ ಬಸದಿ ಮಾಡಿಸಿದ ವಿಷಯವಿದೆ.

ಅದೇ ಸ್ಥಳದಲ್ಲಿರುವ ಕ್ರಿ.ಶ. ೧೦೬೩ರ ಮತ್ತೊಂದು ಶಾಸನ ಮೊದಲೇ ವಿದ್ಯಾವಂತ ಪೊಯ್ಸಳಾಚಾರಿಯ ಮಗ ಮಾಣಿಕ ಪೊಯ್ಸಳಾಚಾರಿ ಹೊಯ್ಸಳರ ಹುಟ್ಟೂರಾದ ಅಂಗಡಿಯಲ್ಲಿ ನಿರ್ಮಿಸಿದ ಬಸದಿಯ ಮೇಲು ಭಾಗ ಹಾಳಾಗಿದ್ದು ಅದರ ಉಳಿದ ಭಾಗದ ನಿರ್ಮಾಣಕ್ಕೆ ಹೊಯ್ಸಳರಸನ ಗುರುವಾಗಿದ್ದ ಮುಳ್ಳೂರ ಗುಣಸೇನ ಪಂಡಿತದೇವರಿಗೆ ಭೂಮಿ ದಾನ ಮಾಡಿದ ಉಲ್ಲೇಖವಿದೆ. ಅಲ್ಲಿರುವ ಮತ್ತೊಂದು ಶಾಸನ ಹೊಯ್ಸಳ ನರಸಿಂಹನ ತಾರಣಸಂವತ್ಸರದ ಚಯಿತ್ರ ಶುದ್ಧ ... ಸೊಸೆವೂರ ಪಟ್ಟಣಸ್ವಾಮಿ ನಾಗಿಸೆಟ್ಟಿ] ... ಮಾಡಿದ ಬಸದಿಗೆ ಕೊಟ್ಟ ... ದತ್ತಿ. ಅದೇ ಸ್ಥಳದಲ್ಲಿರುವ ಶಾಸನವು ಸೊಸೆವೂರ ಸೆಟ್ಟಿಗಳ ಲೋಕಜಿತನಿಗೆ ನಿಸಿದಿಯ ಕಲ್ಲನ್ನು ನಖರ ಸಮೂಹ ನೆಟ್ಟರು ಎಂದಿದೆ. ಅದೇ ಸ್ಥಳದಲ್ಲಿರುವ ಕ್ರಿ.ಶ. ೧೦೬೭ರ ಶಾಸನವು ಸನ್ಯಸನ ವಿಧಿಯನ್ನು ಆಚರಿಸಿ ಮುಡುಪಿದ ಶಾಂತಿದೇವನಿಗೆ ನಖರ ಸಮೂಹ ಪರೋಕ್ಷ ವಿನಯವಾಗಿ ನಿಸಿದಿ ಮಾಡಿಸಿದೆ. ಸಾಕಷ್ಟು ತ್ರುಟಿತವಾಗಿರುವ ಹಾರಮಕ್ಕಿ ಗ್ರಾಮದ ಶಾಸನವು ದ್ರವಿಳಾನ್ವಯದ ಮೂಲಸಂಘ ... ಪಂಡಿತ .... ಸನ್ಯಾಸನ ವಿಧಿಯಿಂದ ವಜ್ರಪಾಣಿ ಬ್ರತೀಶ್ವರರು ಮುಡಿಪಿ ಮುಕ್ತಿಯನ್ನು ಪಡೆದಾಗ ಮಾರನೃಪತಿ ಎಂಬುವವನು ಗುರುಗಳಿಗೆ ನಿಸಿದಿ ಮಾಡಿಸಿದ ವಿಷಯವಿದೆ. ಮೇಲಿನ ಅಂಗಡಿ ಗಾಮದ ಒಂಬತ್ತು ಶಾಸನಗಳು ಬಹಳಷ್ಟು ತ್ರುಟಿತವಾಗಿದೆ.

ಮಾವಿನಕೆರೆ ಕೆಳಂಗಡಿ ಚಂದ್ರನಾಥ ಬಸದಿಯಲ್ಲಿರುವ ಕ್ರಿ.ಶ. ೧೫೫೩ರ ಶಾಸನವು ಅದಿಶೆಟ್ಟಿ ಎಂಬುವನು ಈ ಬಸದಿಯಲ್ಲಿ ಚತುರ್ವಿಂಶತಿ ತೀರ್ಥಂಕರರ ವಿಗ್ರಹವನ್ನು ಸ್ಥಾಪಿಸಿದ ಉಲ್ಲೇಖವಿದೆ. ಅದೇ ಸ್ಥಳದಲ್ಲಿರುವ ಕಾಲದ ಉಲ್ಲೇಖ ವಿಲ್ಲದ ಶಾಸನವು ಕುಂದಕುಂದಾನ್ವಯ ಮೂಲಸಂಘ ಪನಸೋಗೆಬಳಿ ದೇಸಿಗಣ ಪುಸ್ತಕಗಚ್ಛಕ್ಕೆ ಸೇರಿದ ಮುನಿವಂಶ ಲಲಾಮ ಲಲಿತಕೀರ್ತಿ ಮಹಾಮುನೀಂದ್ರನ ಶಿಷ್ಯ ದೇವ ಚಂದ್ರನು ಈ ಬಸದಿಯಲ್ಲಿ ಚಂದ್ರನಾಥಪ್ರಭುವಿನ 'ಪ್ರೀತ್ಯಾ ಸಾಧಯದುತ್ತ ವೇನ ಮಹತಾ ಬಿಂಬ ಪ್ರತಿಷ್ಠಾಪಿತಂ' ಎಂಬ ಉಲ್ಲೇಖವಿದೆ.

ಶೃಂಗೇರಿ ತಾಲೂಕು

ಶೃಂಗೇರಿ ಪಾರ್ಶ್ವನಾಥ ಬಸದಿಯ ಮುಖಮಂಟಪದಲ್ಲಿರುವ ಕ್ರಿ.ಶ. ೧೧೫೦ರ ಶಾಸನವು ಬಹಳಷ್ಟು ತ್ರುಟಿತವಾಗಿದ್ದು ಕಾಣೂರ್ಗ್ಗಣ ಮೂಲಸಂಘ .... ಪುಸ್ತಕ ಗಚ್ಛದ .... ಹರಿಯ .... ಮಂಗಲದ ಉಲ್ಲೇಖ ಮಾತ್ರವಿದೆ. ಅದೇ ಬಸದಿಯ ನವರಂಗದಲ್ಲಿರುವ ಕ್ರಿ.ಶ. ೧೧೬೧ರ ಮತ್ತೊಂದು ಶಾಸನವು ನಿಡುಗೋಡಿನ ವಿಜಯಾನಾರಾಯಣ ಶಾಂತಿಸೆಟ್ಟಿಯ ಪುತ್ರ ಬಾಸಿಸೆಟ್ಟಿಯರ ಅಕ್ಕ ಸಿರಿಯಪೆಸೆಟ್ಟಿತಿಯರ ಮಗಳು ಸಿರಿಯಾಲೆಸೆಟ್ಟಿತಿ ಹೆಮ್ಮಾಡಿ ಸೆಟ್ಟಿಗೆ ಸುಪುತ್ರನಾದ ಮಾರಿಸೆಟ್ಟಿಗೆ ಪರೋಕ್ಷವಿನಯಕ್ಕೆ ಮಾಡಿಸಿದ ಬಸದಿಗೆ ಬಿಟ್ಟ ಭೂದಾನ ದತ್ತಿ ಮತ್ತು ಕೆಲವು ತೆರಿಗೆಗಳನ್ನು ನಾನಾ ದೇಸೀತರು ಸಹ ದಾನವಾಗಿ ನೀಡಿದ ಉಲ್ಲೇಖವಿದೆ. ಅದೇ ಬಸದಿಯಲ್ಲಿರುವ ಅನಂತನಾಥ ಪ್ರತಿಮೆಯ ಪೀಠದ ಮೇಲಿರುವ ಕ್ರಿ.ಶ. ೧೫೨೩ರ ಶಾಸನವು ಹಲುಮಿಡಿಯ ದೇವಿಸೆಟ್ಟಿಯ ಮಗ ದೇವಣಸೆಟ್ಟಿ ಶೃಂಗೇರಿಯ ಬಸದಿಗೆ ೧೮೦ ಹಲ ತೂಕವಿರುವ ಅನಂತನಾಥನ ಪ್ರತಿಮೆ ಸ್ಥಾಪಿಸಿ ಪಾದಪೂಜೆಯನ್ನು ಮಾಡಿ ಪುಣ್ಯವನ್ನು ಪಡೆದುಕೊಂಡ ವಿಷಯವಿದೆ. ಅದೇ ಬಸದಿಯಲ್ಲಿರುವ ಅನಂತನಾಥನ ಕಂಚಿನ ಪ್ರತಿಮೆಯ ಪೀಠದ ಮೇಲಿರುವ ಕ್ರಿ.ಶ. ೧೫೨೩ರ ಶಾಸನವು ಶೃಂಗೇರಿಯ ಬಸದಿಗೆ ಆದಿಸೆಟ್ಟಿಯವರ ಮಗ ಬೊಮ್ಮರಸೆಟ್ಟಿಯರು ಚಂದ್ರನಾಥನ ಪ್ರತಿಮೆಯನ್ನು ೧೯ ಬಿಗೆ ತೂಕದಲ್ಲಿ ಮಾಡಿಸಿ ಪಾದಪೂಜೆ ಮಾಡಿ ಪುಣ್ಯವನ್ನು ಪಡೆದ ವಿವರವಿದೆ. ಅದೇ ಬಸದಿಯ ಮೂಲ ವಿಗ್ರಹದ ಮೇಲೆ 'ಶ್ರೀಮತ್ಶಾಂತಿಸನಾಥಾಯ ನಮಃ' ಎಂದಿದೆ.

ಆಧಾರಸೂಚಿ

೧. ಎಪಿಗ್ರಾಫಿಯ ಕರ್ನಾಟಕ ಸಂಪುಟ ೧೧ ಮತ್ತು ೧೨.

೪೦

ತಲಕಾಡಿನ ಗಂಗರ ಕಾಲದ (ಕ್ರಿ.ಶ. ೩೫೦–೧೦೦೪) ಶಾಸನೋಕ್ತ ಕೃಷಿ ಬೆಳೆಗಳು: ಒಂದು ಅಧ್ಯಯನ

ಲತಾ*

ಪೀಠಿಕೆ

ಕೃಷಿಯು ಮಾನವನ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಧಾನ ಪಾತ್ರವನ್ನು ಗತದಲ್ಲಿ ವಹಿಸಿದ್ದು, ಅದು ಒಂದು ರಾಜ್ಯದ/ರಾಷ್ಟ್ರದ ಏಳುಬೀಳುಗಳಲ್ಲಿ ನಿರ್ಣಾಯಕ ಪಾತ್ರವನ್ನು ಇಂದಿಗೂ ವಹಿಸುತ್ತದೆ. ಕೃಷಿಯು ಮಾನವನ ಆರ್ಥಿಕ ಚಟುವಟಿಕೆಗಳಲ್ಲಿ ಮೂರನೆ ಹಂತವಾಗಿದ್ದು, ಇದು ಸಮಾಜದ ಶ್ರೇಣಿಕೃತ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿತು. ಈ ಲೇಖನದಲ್ಲಿ ಕ್ರಿ.ಶ. ೪ನೇ ಶತಮಾನದಿಂದ ಕ್ರಿ.ಶ. ೧೦ನೇ ಶತಮಾನದವರೆಗೆ ಕರ್ನಾಟಕದ ಭಾಗವನ್ನು ಆಳಿದ ಗಂಗರು ಕೃಷಿ ಕ್ಷೇತ್ರಗಳಿಗೆ ನೀಡಿದ ಪ್ರಾಶಸ್ತ್ಯ ಮತ್ತು ಪ್ರೋತ್ಸಾಹ ಹಾಗೆ ಇದರಿಂದಾಗಿ ಕೃಷಿಯು ಅಂದಿನ ಸಮಾಜ ಮತ್ತು ಆರ್ಥಿಕತೆಯ ಮೇಲೆ ಮಾಡಿದ ಪರಿಣಾಮಗಳನ್ನು ತಿಳಿದುಕೊಳ್ಳಲಾಗುವುದು. ಈ ಲೇಖನವನ್ನು ಪ್ರಮುಖವಾಗಿ ಅಂದಿನ ಶಾಸನಗಳನ್ನೇ ಆಧಾರಿಸಿ ರಚಿಸಲಾಗಿದೆ.

ರಾಜಕೀಯ ಹಿನ್ನೆಲೆ

ಕರ್ನಾಟಕವನ್ನು ಆಳಿದ ಪ್ರಮುಖ ರಾಜವಂಶಗಳಲ್ಲಿ ತಲಕಾಡಿನ ಗಂಗರು ಒಬ್ಬರು. ಇವರು ಕರ್ನಾಟಕದ ದಕ್ಷಿಣ ಭಾಗವನ್ನು ಸುಮಾರು ಕ್ರಿ.ಶ. ೪ನೇ ಶತಮಾನದ ಆರಂಭದ ದಶಕಗಳಿಂದ ೧೦ನೇ ಶತಮಾನಗಳವರೆಗೆ ಸ್ವತಂತ್ರ ರಾಜರಾಗಿ ಆ ನಂತರ ಸಣ್ಣಪುಟ್ಟ ಸಂಸ್ಥಾನಗಳ ಅಧೀನರಾಗಿ ಆಳ್ವಿಕೆ ನಡೆಸಿದ್ದಾರೆ. ತಲಕಾಡಿನ ಗಂಗರನ್ನು ಪಶ್ಚಿಮದ ಗಂಗರೆಂದೂ ಗುರುತಿಸಲಾಗಿದೆ. ಇವರು ಕದಂಬರ ಸಮಕಾಲೀನರಾಗಿದ್ದರು. ಇವರು ಆಳಿದ ಪ್ರದೇಶವನ್ನು ಮೊದಲು ಗಂಗವಾಡಿ–೬೦೦೦ ಎಂದು ಕರೆಯಲಾಗಿದೆ. ನಂತರದ ಕಾಲದಲ್ಲಿ ಕೊಡಗು ಜಿಲ್ಲೆಯಿಂದ ಉತ್ತರದ ಅರ್ಕಾಟ್ ಜಿಲ್ಲೆಯವರೆಗೂ ಬಳ್ಳಾರಿ ಜಿಲ್ಲೆಯಿಂದ ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳವರೆಗೂ ಇವರ ರಾಜ್ಯವು ವಿಸ್ತರಿಸಿದ್ದ ಕಾರಣ ಇವರ ಪ್ರದೇಶವನ್ನು ಗಂಗವಾಡಿ ೯೬೦೦೦ ಎಂದೂ ಕರೆಯಲಾಗಿದೆ. ತಲಕಾಡು ಗಂಗರ ರಾಜಧಾನಿಯಾಗಿದ್ದು ಇದೇ ಕಾರಣದಿಂದ ತಲಕಾಡಿನ ಗಂಗರು ಎನ್ನುವ ಹೆಸರಿನಿಂದ ಪ್ರಸಿದ್ಧರಾಗಿದ್ದರು. ಕುವಲಾಲಪುರ (ಕೋಲಾರ), ನೆಲಮಂಗಲ ತಾಲ್ಲೂಕಿನ ಮಾನ್ಯಪುರ (ಮಣ್ಣೆ) ಮತ್ತು ಚನ್ನಪಟ್ಟಣ ತಾಲ್ಲೂಕಿನ ಮಾಕುಂದ ಗ್ರಾಮಗಳು ಇವರ ಉಪರಾಜಧಾನಿಗಳಾಗಿದ್ದವು.

ಕೃಷಿಯ ಚಾರಿತ್ರಿಕ ಹಿನ್ನೆಲೆ

ಕೃಷಿಯ ಪ್ರಾರಂಭವು ನವಶಿಲಾಯುಗದ ಕಾಲದಲ್ಲಿಯೇ ಆರಂಭವಾಗಿರುವುದನ್ನು ನಾವು ಕಾಣಬಹುದಾಗಿದೆ.

ಬೃಹತ್ ಶಿಲಾಯುಗದಲ್ಲಿ ಕೃಷಿಯು ಇನ್ನೂ ಸುಧಾರಿಸಲ್ಪಟ್ಟಿತ್ತು. ಬ್ರಹ್ಮಗಿರಿಯಲ್ಲಿ ನೇಗಿಲಿನ ಗುಳವನ್ನು ಹೋಲುವ ಕಬ್ಬಿಣದ ಉಪಕರಣವೊಂದು ಸಿಕ್ಕಿದ್ದು, ಇದು ರೋಮನ್ ಮೂಲದ್ದಿರಬಹುದೆಂದು ಒಂದು ಅಭಿಪ್ರಾಯ. ಆದರೆ ಇಂಥ ಗುಳ ಇಲ್ಲಿಯೇ ತಯಾರಾಗಿರುವ ಸಾಧ್ಯತೆಯಿದೆಯೆಂಬ ಅಭಿಪ್ರಾಯವೂ ಇದೆ. ಈ ಹಂತದಲ್ಲಿ ಬೆಳೆಯುತ್ತಿದ್ದ ಬೆಳೆಗಳ ಅವಶೇಷಗಳೂ ದೊರೆತಿದೆ. ವಡಗಾವ್–ಮಾಧವಪುರದಲ್ಲಿದ್ದ ಕಣಜವೊಂದರಲ್ಲಿ ಸುಟ್ಟ ಅಕ್ಕಿ ಕಾಳುಗಳು ಕಂಡುಬಂದಿರುವುದು ಬತ್ತದ ಕೃಷಿಗೆ ರುಜುವಾತಾಗಿದೆ. ಮಹಾರಾಷ್ಟ್ರ ಆಂಧ್ರಪ್ರದೇಶದಲ್ಲಿನ ಸಮಕಾಲೀನ ನೆಲೆಗಳಲ್ಲಿ ಗೋದಿ, ಭತ್ತ, ರಾಗಿ, ಜೋಳ, ಬಟಾಣಿ, ಉದ್ದು, ಕಡಲೆ ಮೊದಲಾದ ಧಾನ್ಯಗಳನ್ನು ಬೆಳೆಯಲಾಗುತ್ತಿತ್ತು.

ಗಂಗರ ಕಾಲದ ಕೃಷಿಗೆ ಸಂಬಂಧಿಸಿದಂತೆ ಇರುವ ಬರವಣಿಗೆಗಳು

ಬೆಂಜಮಿನ್ ಲೂಯಿ ರೈಸ್ ತಮ್ಮ ಕೃತಿಯಲ್ಲಿ ಗಂಗರ ಕಾಲದ ಕೃಷಿ ಮತ್ತು ನೀರಾವರಿ ವ್ಯವಸ್ಥೆಯ ಕುರಿತು ಚರ್ಚಿಸುವಾಗ ಭೂದಾನಗಳ ಬಗ್ಗೆ ಹಾಗೂ ಅವರ ಕಾಲದಲ್ಲಿದ್ದ ಕೆರೆಗಳು, ಕಾಲುವೆಗಳು ಮತ್ತು ಬಾವಿಗಳನ್ನು ತೋಡುವ ಪದ್ಧತಿಯಿದ್ದುದನ್ನು ಗುರುತಿಸಿದ್ದಾರೆ. ಕೆರೆಗಳು ಒಡೆದು ಹೋದಾಗ ಅವುಗಳ ಸಂರಕ್ಷಣೆ ಕೆಲಸವನ್ನು ಆಡಳಿತ ವರ್ಗ ನೋಡಿಕೊಳ್ಳುತ್ತಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ[೧]. ಎಮ್.ವಿ.

* ಸುಮಾಂದಾರಾ ಮನೆ. ಸುಬ್ರಹ್ಮಣ್ಯ ಗ್ರಾಮ ಮತ್ತು ಅಂಚೆ. ಸುಳ್ಯ ತಾ. ದಕ್ಷಿಣ ಕನ್ನಡ ಜಿಲ್ಲೆ-೫೭೪೨೩೮

ಕೃಷ್ಣರಾವ್‌ರವರು ಹೇಳುವ ಪ್ರಕಾರ ಸರಕಾರದ ಪ್ರಮುಖ ಆಧಾರ ಭೂತೆರಿಗೆಯಾಗಿತ್ತು. ಅಲ್ಲದೆ ವಿವಿಧ ಬಗೆಯ ತೆರಿಗೆಗಳನ್ನು ವಸೂಲಿ ಮಾಡುತ್ತಿದ್ದುದನ್ನು, ಭೂಮಿಯನ್ನು ಗೇಣಿಗೆ ನೀಡುತ್ತಿದ್ದುದು ಅಲ್ಲದೆ ಭೂಮಿಯನ್ನು ದಾನ ನೀಡುತ್ತಿದ್ದ ಬಗ್ಗೆಯೂ ಹೇಳಲಾಗಿದೆ. ಕೃಷಿ ಭೂಮಿಯನ್ನು ಅಳತೆ ಮಾಡಿ ಅದನ್ನು ನೋಂದಾವಣೆ ಮಾಡಿ ಕೃಷಿ ಭೂಮಿಯ ಮೇಲೆ ತೆರಿಗೆಯನ್ನು ನಿಗದಿಪಡಿಸಲಾಗುತ್ತಿತ್ತು. ಎಲ್ಲಾ ಕೃಷಿ ಭೂಮಿಗಳನ್ನು ಏಕಪ್ರಕಾರವಾಗಿ ಅಳತೆ ಮಾಡುತ್ತಿರಲಿಲ್ಲ ಹಾಗೂ ಅಳತೆ ಮಾಡಲು ವಿವಿಧ ಮಾಪನಗಳನ್ನು ಬಳಸುತ್ತಿದ್ದ ಬಗೆಗೆ ಉಲ್ಲೇಖಿಸಿದ್ದಾರೆ[೨]. ಕುಪ್ಪುಸ್ವಾಮಿ ಜಿ.ಆರ್.ರವರು ೪ನೇ ಶತಮಾನಕ್ಕೆ ಸಂಬಂಧಿಸಿದ ಚರಿತ್ರೆಯಲ್ಲಿ ಕೃಷಿ, ಕೈಗಾರಿಕಾ ಹಾಗೂ ಕರಕುಶಲ ಸಂಘಗಳ ಬಗ್ಗೆ ವಿವರಿಸಲಾಗಿದೆ[೩] ನೀಲಕಂಠ ಶಾಸ್ತ್ರಿಯವರು ಬಹು ಸಂಖ್ಯಾತ ಜನರು ಹಳ್ಳಿಗಳಲ್ಲಿ ಜೀವಿಸುತ್ತಿದ್ದು, ಕೃಷಿಯು ಅವರ ಪ್ರಮುಖ ಕಸುಬಾಗಿತ್ತು. ಸಾಗುವಳಿಗೆ ಯೋಗ್ಯವಾದ ಭೂಮಿಯನ್ನು ಅಧಿಕಾರಿಗಳು ಜನರಿಗೆ ನೀಡುತ್ತಿದ್ದುದಲ್ಲದೆ ಆ ಭೂಮಿಯಲ್ಲಿ ಕೃಷಿಯನ್ನು ಮಾಡುತ್ತಿದ್ದರು. ಅಲ್ಲದೆ ಆ ಭೂಮಿಯಲ್ಲಿ ಬೇಳೆಯುವ ಬೆಳೆಗಳಿಗೆ ತೆರಿಗೆಗಳನ್ನು ವಿಧಿಸುತ್ತಿದ್ದರು[೪]. ಷೇಕ್ ಅಲಿಯವರು ತಮ್ಮ ಕೃತಿಯಲ್ಲಿ ಭೂಮಿಯ ವಿಧಗಳು, ಭೂ ಒಡೆತನ, ಭೂಸಮೀಕ್ಷೆ ಮತ್ತು ಅಳತೆ ಭೂ ಹಿಡುವಳಿ, ಭೂದಾನಗಳು, ತೋಟದ ಕೆಲಸಗಾರರು, ನೀರಾವರಿ, ಪ್ರಾಣಿಸಂಗೋಪನೆ, ಮಣ್ಣಿನ ವಿಧಗಳು, ಆ ಭೂಮಿಯಲ್ಲಿ ಬೆಳೆಯುತ್ತಿದ್ದ ಬೆಳೆಗಳು, ಹಣ್ಣಿನ ಮರಗಳು, ಕೃಷಿಗೆ ಅಗತ್ಯವಾಗಿದ್ದ ನೀರಾವರಿ, ಕೃಷಿ ಉಪಕರಣಗಳ ಬಗ್ಗೆ ಅಷ್ಟೇ ಅಲ್ಲದೆ ಹಲವಾರು ಭತ್ತದ ನಮೂನೆಗಳು ಇದ್ದ ಬಗ್ಗೆಯೂ ಉಲ್ಲೇಖಿಸಿದ್ದಾರೆ[೫]. ಡಾ. ಎಂ. ಚಿದಾನಂದ ಮೂರ್ತಿಯವರು ಕೃಷಿಗೆ ಯೋಗ್ಯವಾದ ಮಣ್ಣನ್ನು ನೀರಾವರಿಗೆ ಸಂಬಂಧಿಸಿದಂತೆ ವಿಂಗಡಿಸಿರುವುದನ್ನು ಗಮನಿಸಬಹುದಾಗಿದೆ. ಇಲ್ಲಿ ಬೆಳೆಯುತ್ತಿದ್ದ ಬೆಳೆಗಳ ಬಗ್ಗೆ ಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ನೀರಾವರಿಗಾಗಿ ನದಿ, ಬಾವಿ, ಕೆರೆ ಹಾಗೂ ಕಾಲುವೆಗಳನ್ನು ಅವಲಂಬಿಸಿರುವುದನ್ನು ಗುರುತಿಸಬಹುದಲ್ಲದೆ, ರಾಜರು, ಶ್ರೀಮಂತರು ಮತ್ತು ಗ್ರಾಮಸಂಸ್ಥೆಗಳು ಕೆರೆ, ಬಾವಿಗಳನ್ನು ಕಟ್ಟಿಸುತ್ತಿದ್ದ ಬಗ್ಗೆ ಹೇಳಲಾಗಿದೆ[೬]. ಡಾ. ಶ್ರೀನಿವಾಸ್ ರಿತ್ತಿಯವರು ಗಂಗರ ಕಾಲದ ಆರ್ಥಿಕ ಬೆಳವಣಿಗೆಯು ವೈಶ್ಯ ವರ್ಗದವರ ಮೇಲಿನ ತೆರಿಗೆಯಿಂದ ಬರುತ್ತಿದ್ದು, ಅವರ ಪ್ರಮುಖ ವೃತ್ತಿಯು ಕೃಷಿ ಮತ್ತು ವಾಣಿಜ್ಯ ವ್ಯಾಪಾರಿಗಳು ಮತ್ತು ಪ್ರಮುಖ ನಾಗರೀಕರ ಬಗ್ಗೆ ಗಂಗರ ಕಾಲದ ಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದು[೭]. ಬಿ.ಆರ್. ಹಿರೇಮಠರವರು ಕ್ರಿ.ಶ. ೪೫೦ರಿಂದ ಕ್ರಿ.ಶ. ೧೫೬೫ ರವರೆಗಿನ ಕನ್ನಡ ನಾಡಿನಲ್ಲಿ ನಡೆಯುತ್ತಿದ್ದ ವ್ಯಾಪಾರ ವಾಣಿಜ್ಯಗಳ ಬಗ್ಗೆ ಉಲ್ಲೇಖಿಸಿದ ಅವರು ಗಂಗರ ಕಾಲದ ಕೃಷಿಯ ಬಗ್ಗೆ ಯಾವುದೇ ಮಾಹಿತಿಗಳನ್ನು ಒದಗಿಸಿಲ್ಲ[೮]. ನೀಲತ್ತಹಳ್ಳಿ ಕಸ್ತೂರಿಯವರು ಆರನೇಯ ಶತಮಾನದಲ್ಲಿ ಅವನೀತನ ಕಾಲದ ಹೊಸ ಕೋಟೆ ಶಾಸನದಲ್ಲಿ ಕಬ್ಬು ಬೆಳೆಯುವ ತೋಟ ಇದ್ದುದರ ಬಗ್ಗೆ ಹೇಳಲಾಗಿದೆ. ಗಂಗರು ಕೆರೆ ನಿರ್ಮಾಣಕ್ಕೆ ಒತ್ತಾಸೆಯನ್ನು ನೀಡಿದ್ದನ್ನು ಗಮನಿಸಬಹುದು[೯]. ಮಾಲಿನಿ ಅಡಿಗರವರು ತಮ್ಮ ಕೃತಿಯಲ್ಲಿ ಭೂಮಿಗಳನ್ನು ದಾನ ನೀಡುತ್ತಿದ್ದುದರ ಮತ್ತು ಆ ಭೂಮಿಗಳ ಗಡಿ ರೇಖೆಗಳ ಬಗ್ಗೆ ಹಾಗೂ ಕೃಷಿಬೆಳೆಗಳು ಮತ್ತು ನೀರಾವರಿ ಬಗೆಗೆ ವಿವರಿಸಿದ್ದಾರೆ[೧೦]. ಡಾ. ಎಂ.ವಿ. ಕೃಷ್ಣಪ್ಪನವರು ಗ್ರಾಮೀಣ ಪ್ರದೇಶದ ಕೃಷಿ ವ್ಯವಸ್ಥೆಯ ಬಗ್ಗೆ ವಿವರಿಸಿದ್ದಾರೆ. ದಾನವನ್ನು ಭೂಮಿ ಅಥವಾ ಹಣದ ರೂಪದಲ್ಲಿ ಕೊಡುತ್ತಿದ್ದ ಬಗ್ಗೆ ಶಾಸನದಲ್ಲಿ ಉಲ್ಲೇಖಿಸಿದ್ದಾರೆ[೧೧].

ಶಾಸನಗಳು ಗಂಗರ ಕಾಲದ ಕೃಷಿ ಚಟುವಟಿಕೆಗಳ ಮೇಲಾಗಲಿ, ಮಣ್ಣಿನ ವೈವಿದ್ಯತೆ ಮತ್ತು ಬೆಳೆಗಳ ಬಗ್ಗೆಯಾಗಲಿ ನೇರವಾಗಿ ಬೆಳಕು ಚೆಲ್ಲುವುದಿಲ್ಲ. ಇವುಗಳನ್ನು ನಾವು ಪರೋಕ್ಷವಾಗಿ ಭೂದಾನಗಳಿಂದ ತಿಳಿದುಕೊಳ್ಳಬಹುದು. ತಾಮ್ರ ಶಾಸನಗಳಲ್ಲಿ ಹೇಳಿರುವ ಪ್ರಕಾರ ಗ್ರಾಮಗಳನ್ನು ದಾನ ಮಾಡುವಾಗ ಅವುಗಳಿಗೆ ಎಲ್ಲೆಗಳಿದ್ದುದನ್ನು ತಿಳಿಸಲಾಗುತ್ತದೆ. ಅವುಗಳೆಂದರೆ, ಪ್ರಾಕೃತಿಕವಾದಂತಹ ಗಡಿರೇಖೆಗಳು, ನದಿಗಳು, ಹೊಳೆಯ ಹರಿವು, ನೀರಿನ ಕಾಲುವೆಗಳು, ಬೆಟ್ಟಗಳು, ದೊಡ್ಡ ದೊಡ್ಡ ಕಲ್ಲು ಮೊದಲಾದವುಗಳಾಗಿದ್ದವು.

ಕ್ರಿ.ಶ. ೬ನೇ ಶತಮಾನದಲ್ಲಿ ದೊರೆತ 'ಹಿರೇಸಕುನ (Hiresakuna) ತಾಮ್ರಶಾಸನ'ವು ಮೊತ್ತಮೊದಲ ಬಾರಿಗೆ ಗ್ರಾಮದ ಗಡಿರೇಖೆಗಳ ಬಗ್ಗೆ ಸವಿಸ್ತಾರವಾದ ವಿವರಗಳನ್ನು ನೀಡಲಾಗಿದ್ದು, ಈ ಶಾಸನಗಳ ದಾಖಲೆಯಲ್ಲಿಯ ಪ್ರಕಾರ ಕಡಲಕಲಾನಿ (kadalakalni) ಗ್ರಾಮವನ್ನು ವಸುಕ ಗದ್ದೆಯನ್ನು ದಾನ ನೀಡಿದ ಬಗ್ಗೆ ಹೇಳಲಾಗಿದೆ[೧೨]. ಹರಿವರ್ಮನು ತಳವನಪುರದಲ್ಲಿ ಆಳುತ್ತಿದ್ದಾಗ ಹೆಂಜೇರುವಿನಲ್ಲಿ ನಡೆದ ಯುದ್ಧದಲ್ಲಿ ಜಯ ಗಳಿಸಿದಾಗ ಅನೇಕ ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ದಾನ ನೀಡಿದ ಬಗ್ಗೆ ತಗಡೂರು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ತುಂಬಲು ತಾಮ್ರಶಾಸನದಲ್ಲಿ ಹರಿವರ್ಮನು ಮೂರು ಸಂಘಗಳಿಗೆ ದಾನ ನೀಡಿದ ಬಗ್ಗೆ ಹೇಳಲಾಗಿದ್ದು, ಅವರು ಸೋಸಲೆಯ ಕುರುದಯಾಡರು ತಗಡೂರಿನ ಕೋಮ್ಮೆಯ ಕೋವರು (ಬುಟ್ಟಿಹೆಣೆಯುವವರು) ಮತ್ತು ಪೀಳ್ಳವೆಲೆಯ ಅಥವಾ ಭತ್ತವನ್ನು ಮಾರುವವರು ಆಗಿದ್ದರು. ಶ್ರೀಪುರುಷನ ಕಾಲದಲ್ಲಿ ಕುರುಂಬತೆರೆ ಎನ್ನುವ ಹಲವು

ವಿಧವಾದ ತೆರಿಗೆಗಳು ಇದ್ದ ಬಗ್ಗೆ 'ಹೊಮ್ಮದ ಶಾಸನ'ವು ತಿಳಿಸುತ್ತದೆ. ಕ್ರಿ.ಶ. ೭೧೩ರಲ್ಲಿ ಮೊದಲನೇ ಶಿವಮಾರ ಗಂಗನಿಗೆ ಸಂಬಂಧಿಸಿದ ಪಲ್ಲಗೆರೆ ತಾಮ್ರಶಾಸನದಲ್ಲಿ ಹೇಳಿರುವ ಪ್ರಕಾರ ಬ್ರಹ್ಮದೇಯಕ್ಕಾಗಿ ಪಲ್ಲವ ತಟಾಕ ಗ್ರಾಮವನ್ನು ದಾನ ಮಾಡಿದ ಬಗ್ಗೆ ಹೇಳಲಾಗಿದೆ[೧೩]. ಕ್ರಿ.ಶ. ೭೫೦ರಲ್ಲಿ ಶ್ರೀಪುರುಷ ಗಂಗನ 'ಬರದೂರು ದಾನದ' (ಕೃಷ್ಣರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ) ಶಾಸನದಲ್ಲಿ ತೆಗತ್ತೂರು ವಿಷಯದ ಬರದೂರು ಗ್ರಾಮವನ್ನು ವಾತಾಪಿಯಲ್ಲಿ ವಾಸಿಸುತ್ತಿದ್ದ ಬಾಣಶರ್ಮನಿಗೆ ದಾನ ನೀಡಿರುವ ಬಗ್ಗೆ ಹೇಳಲಾಗಿದೆ. ಈ ಪಟ್ಟಿಯಲ್ಲಿ ಗ್ರಾಮಗಳ ಎಲ್ಲೆಗಳ ಬಗ್ಗೆ ವಿವರಿಸಲಾಗಿದೆ. ಅಲ್ಲದೆ, ಇಲ್ಲಿ ಪ್ರಾಕೃತಿಕವಾಗಿ ನೀರಿನ ಪ್ರವಾಹ ಇದ್ದ ಬಗ್ಗೆ ಹೇಳಲಾಗಿದೆ[೧೪]. ಗಂಗ ರಾಜ ಶ್ರೀಪುರುಷನು ಕ್ರಿ.ಶ. ೭೫೦ರಲ್ಲಿ ದಾನ ಮಾಡಿದ ದಾಖಲೆಗಳು 'ಹುಲ್ಲೆನಹಳ್ಳಿಯಲ್ಲಿ ತಾಮ್ರಶಾಸನ'ದಲ್ಲಿ ಕೊವಲ ಬೆಟ್ಟು ಗ್ರಾಮವನ್ನು ಮೂವರು ಬ್ರಾಹ್ಮಣರಿಗೆ ಮೂರು ಭಾಗ ಮಾಡಿ ದಾನ ನೀಡಿದ ಬಗ್ಗೆ ಹೇಳಲಾಗಿದ್ದು, ಅಲ್ಲದೆ ಅವುಗಳ ಗಡಿರೇಖೆಗಳ ಬಗ್ಗೆಯೂ ಹೇಳಲಾಗಿದೆ. ಆ ಗ್ರಾಮಗಳಲ್ಲಿ ಹುಣಸೆ ಮರ, ಪದರಿ ಮರ ಅಲ್ಲದೆ ಸಾಕಷ್ಟು ಮರಗಳಿರುವುದನ್ನು ಉಲ್ಲೇಖಿಸಲಾಗಿದೆ. ಗ್ರಾಮದಲ್ಲಿ ನೀರಾವರಿಗಾಗಿ ಒಲಗೆರೆ ಕೆರೆ, ದೊಡ್ಡ ನೀರಿನ ನಾಲೆಗಳು, ಬೆದರೆ ಕೆರೆಯ, ಜಲಾಶಯ, ಕೊಳ ಹಾಗೂ ಪಶ್ಚಿಮಕ್ಕೆ ವೆಲಗೊಲ ಕೆರೆ, ಕಾಲುವೆ, ನದಿ ಇದ್ದುದ್ದನ್ನು ಹೇಳುತ್ತವೆ[೧೫]. 'ದೇವನೂರು ತಾಮ್ರಪಟ'ದಲ್ಲಿ ತೋರಿಸಿರುವಂತೆ ಬದನೆಗುಪ್ಪೆಯು ೯ನೇ ಶತಮಾನಕ್ಕೆ ಸೇರಿದ್ದು ಈ ಗ್ರಾಮದಲ್ಲಿ ಅನೇಕ ಔಷಧೀಯ ಗಿಡಗಳು ಮತ್ತು ಮರಗಳು ಇದ್ದುದನ್ನು ಹೇಳಲಾಗಿದೆ. ಅಲ್ಲದೆ ೮, ೯, ೧೦ನೇ ಶತಮಾನದಲ್ಲಿ ಹೊಸನಾಡುಗಳ ಬಗ್ಗೆ ಹಾಗೂ ಅವುಗಳ ಗಡಿ ರೇಖೆಗಳ ಬಗ್ಗೆ ಉಲೇಖಿಸಲಾಗಿದೆ. ಈ ಗಡಿರೇಖೆಗಳ ಬದಿಗಳಲ್ಲಿ ಮಡಿವಾಳರು ಇದ್ದ ಬಗ್ಗೆ ಮಾಹಿತಿಗಳನ್ನು ನೀಡಲಾಗಿದೆ. ಗ್ರಾಮಗಳಲ್ಲಿದ್ದ ನೀರಿನ ಬೇರೆ ಬೇರೆ ಮೂಲಗಳು, ಅವುಗಳ ಉಗಮ, ಕೃಷಿ ವಿಧಾನಗಳು ಅದೇ ರೀತಿ ಬೇರೆ ಬೇರೆ ವೃತ್ತಿ ಸಂಘಗಳ ಬಗ್ಗೆಯೂ ಹೇಳಲಾಗಿದೆ[೧೬]. ಗಂಗರಾಜ ಮೊದಲನೆಯ ರಾಚಮಲ್ಲನಿಂದ ಕ್ರಿ.ಶ. ೮೯೯ರಲ್ಲಿ ದಾನವಾಗಿ ಪಡೆದ ಪೆರ್ಜ್ಜರಂಗಿ (ಕೃಷ್ಣರಾಜ ತಾಲೂಕು ಮೈಸೂರು ಜಿಲ್ಲೆ) ಗ್ರಾಮದ ದಾನದ ದಾಖಲೆಗಳ ಬಗ್ಗೆ ಹೇಳಲಾಗಿದೆ. ಮರುಗರೆ ವಿಷಯದಲ್ಲಿನ ಎಡೆನಾಡು–೭೦ನ್ನು ಭಾರದ್ವಜ ಕುಲದ ನಾಗದೇವ ಭಟ್ಟನಿಗೆ ಬ್ರಹ್ಮದೇಯವಾಗಿ ನೀಡಿರುವ ಬಗ್ಗೆ ಹೇಳಲಾಗಿದೆ. ಈ ಪೆರ್ಜ್ಜರಂಗಿಯ ಎಲ್ಲೆಗಳ ಬಗ್ಗೆಯೂ ಉಲ್ಲೇಖಿಸಲಾಗಿದೆ[೧೭]. 'ಗಳಿಗೆಕೆರೆ ಪಟ' (ಕೃಷ್ಣರಾಜನಗರ ತಾಲೂಕು ಮೈಸೂರು ಜಿಲ್ಲೆ) ಗಂಗರಾಜ ರಣವಿಕ್ರಮ ಎರೆಯಗಂಗ ಹೇಳಿರುವ ಪ್ರಕಾರ ಕೊಲ್ಲನೆಲ್ಲೂರು ಗ್ರಾಮದ ಮನೆ ಮತ್ತು ಬೀದಿಗಳನ್ನು ಆರಿದ್ರ ಗೋತ್ರದ ಪರಪ್ಪಾಡಿ ಭಟ್ಟ ಎನ್ನುವ ಬ್ರಾಹ್ಮಣನಿಗೆ ದಾನ ನೀಡಿರುವ ಬಗ್ಗೆ ಹೇಳಲಾಗಿದೆ. ಕೊಲ್ಲನೆಲ್ಲೂರು ಗ್ರಾಮದ ೨೦ ಖಂಡುಗ ಭೂಮಿಯನ್ನು ದಾನ ಮಾಡಿರುವ ಬಗ್ಗೆ, ಅದರ ಗಡಿರೇಖೆಗಳ ಬಗ್ಗೆ ಹಾಗೂ ನೀರಿನ ಮೂಲದ ಬಗ್ಗೆ ಹೇಳಲಾಗಿದೆ[೧೮].

'ಹೊಸಕೋಟೆಯ ತಾಮ್ರಪಟ'ದಲ್ಲಿ ಹೇಳಿರುವ ಪ್ರಕಾರ ಈ ಶಾಸನವು ಗಂಗರಾಜನ ಕಾಲಕ್ಕೆ ಸೇರಿದ್ದಾಗಿದ್ದು, ಇದರಲ್ಲಿ ಸಿಂಹ ವಿಷ್ಣುವಿನ ತಾಯಿ ಜೈನ ದೇವಾಲಯವನ್ನು ಸ್ಥಾಪಿಸಿರುವ ಬಗ್ಗೆ ಹೇಳಲಾಗಿದೆ. ಇದರಲ್ಲಿ ವ್ಯವಸಾಯ ಭೂಮಿ ರಚನೆಯ ಬಗ್ಗೆ ಹಾಗೂ ಭೂದಾನ ಮಾಡಿದ ಬಗ್ಗೆ ಮಾಲಿನಿ ಅಡಿಗರವರು ತಿಳಿಸಿದ್ದಾರೆ. ಇದರಲ್ಲಿ ಹೇಳಿರುವ ಪ್ರಕಾರ ೭೨ ಖಂಡೂಗವಾಪವನ್ನು ಜೈನ ಭಿಕ್ಷು ಶರ್ಮನ್‌ರವರಿಗೆ ಸೇರಿರುವ ಮಹಾಕೆರೆಯ ಕೆಳಗಿನ ತೇವಭರಿತ ಭೂಮಿ, ಗ್ರಾಮದ ಮಧ್ಯಭಾಗದಲ್ಲಿರುವ ೫ ಖಂಡುಕವಾಪ ಗದ್ದೆ ಮತ್ತು ಒಂದು ಕಬ್ಬು ಬೆಳೆಯುವ ತೋಟ, ಗ್ರಾಮದ ದಕ್ಷಿಣ ಭಾಗದಲ್ಲಿರುವ ಒಂದು ಖಂಡುಕವಾಪ ಗ್ರಾಮದ ಉತ್ತರ ಭಾಗಕ್ಕಿರುವ ೧೨ ಖಂಡುಕವಾಪ ಅರಣ್ಯ ಭೂಮಿಯನ್ನು ದಾನ ಮಾಡಿರುವ ಬಗ್ಗೆ ಹೇಳಲಾಗಿದೆ[೧೯]. ಪಲ್ಲಿಯೂರು ಗ್ರಾಮ ಕೋರಿಕುಂಡದ ಬೋಗದ (ಪ್ರಾಂತ್ಯ)ದಲ್ಲಿದ್ದು, ಪಲ್ಲಿಯೂರು ಗ್ರಾಮವನ್ನು ಗುರುತಿಸುವಾಗ ಗ್ರಾಮವು ಜೈನ ಭಿಕ್ಷುಗಳಿಗೆ ಸೇರಿದ್ದು ತಾತ್ಪಾರ್ಯವೆಂದರೆ ಅವರಿಂದ ಅರಣ್ಯ ಭೂಮಿಯನ್ನು ರಾಜನು ಮತ್ತೆ ಪಡೆದಿರುವ ಬಗ್ಗೆ ಹೇಳಲಾಗಿದೆ[೨೦]. 'ನಂದಿ ತಾಮ್ರಪಟ'ದಲ್ಲಿರುವ (ಚಿಕ್ಕಬಳ್ಳಾಪುರ ತಾಲೂಕು ಕೋಲಾರ ಜಿಲ್ಲೆ) ಪ್ರಾಚೀನ ಶಾಸ್ತ್ರದಲ್ಲಿ ಗಂಗರಾಜನಾದ ಮಾಧವವರ್ಮನು ೮ನೇ ಶತಮಾನದಲ್ಲಿ ಮೊರಸನಾಡಿನಲ್ಲಿರುವ ಪೆರ್ ಪುಸೂರುನಲ್ಲಿರುವ ಕೆರೆಯ ಕೆಳಗಿರುವ ೧೦ ಖಂಡುಕ ಭೂಮಿಯನ್ನು ಕೊನ್ನಿಂದ (ಕೌಂಡಿನ್ಯ) ಗೋತ್ರದ ಗಟ್ಟಿಶರ್ಮನಿಗೆ ದಾನ ನೀಡಿದ ಬಗ್ಗೆ ಹೇಳಲಾಗಿದೆ. ಕುಂದಚ್ಚಿಯಲ್ಲಿರುವ ಕೆರೆಗಳ ನಿರ್ಮಾಣವು ಒಂದು ದೃಷ್ಟಾಂತವಾಗಿದ್ದು ಪರಮಗುಳನ ರಾಣಿ ಪೃಥ್ವಿನಿರ್‌ಗುಂದರಾಜನು ಕ್ರಿ.ಶ. ೭೭೬ರಲ್ಲಿ ಶ್ರೀಪುರದ ಉತ್ತರ ಭಾಗದಲ್ಲಿರುವ ಲೋಕ ತಿಲಕ (ಜಿನ ದೇವಾಲಯ) ದೇವಾಲಯಕ್ಕೆ ಭೂಮಿಯ ಗಡಿಯನ್ನು ಗುರುತಿಸಿ ದಾನ ಮಾಡಿರುವ ಬಗ್ಗೆ ಹೇಳಲಾಗಿದೆ. ಆ ದಾನದಲ್ಲಿ ಸೇರಿದ್ದಂತಹವುಗಳು–(೧) ದುಂಡು ಕೆರೆಯ ಕೆಳಗಿರುವ ೧೦ ಖಂಡುಗ ಭೂಮಿ (ಸಮುದ್ರ) (೨) ಶ್ರೀಪುರದಲ್ಲಿರುವ ಕಮರಗುತ್ತು ಅಣೆಕಟ್ಟಿನ ಕೆಳಗಿರುವ ಬಯಲು ಕೆರೆಯ ೨ ಖಂಡುಗ ಭತ್ತದ ಗದ್ದೆ (೩) ಪೆರ್ಗರೆ ಕೆರೆಯ ಕೆಳಗಿನ ೬ ಖಂಡುಗ (೪) ೨೦ ಖಂಡುಗ ಬೇಸಾಯದ ಭೂಮಿಯ ಎರೆಪುಲಿಗೆರೆ ಕೆರೆ ಮತ್ತು ಕೊಯಿಲಗೊತ್ತದಲ್ಲಿರುವ

ಭೂಮಿಗಳನ್ನು ದಾನ ಕೊಟ್ಟಿರುವ ಬಗ್ಗೆ ಹೇಳಲಾಗಿದೆ[೨೧]. 'ಮಾವಲಿ ಶಾಸನ'ದಲ್ಲಿ (ಸೊರಬ ತಾಲೂಕು, ಶಿವಮೊಗ್ಗ ಜಿಲ್ಲೆ) ದಾಖಲಿಸಿರುವ ಪ್ರಕಾರ ಒಂದು ಮತ್ತರ್ ಭೂಮಿಯನ್ನು ಗೋಲಿಯಕೆರೆ ಕೆರೆಯನ್ನು ನಿರ್ವಹಿಸುವುದಕ್ಕಾಗಿ ದಾನ ನೀಡಿರುವ ಬಗ್ಗೆ ಹೇಳಲಾಗಿದೆ. ದಾನ ಮಾಡಿದ ಭೂಮಿಯು ದಕ್ಷಿಣದಲ್ಲಿರುವ ಕೋಡಿಯ ಮುವ್ವೆಲ್ವಕೆರೆ ಕೆರೆಯ ದಾರಿಯಲ್ಲಿರುವ ಭೂಮಿಯಾಗಿದೆ[೨೨]. 'ತಲಪಲ್ಲಿ ಶಾಸನವು (ಬೌರಿಂಗ್‌ಪೇಟೆ ತಾಲೂಕು, ಕೋಲಾರ ಜಿಲ್ಲೆ) ೮ನೇ ಶತಮಾನದ ದಾಖಲೆಯ ಪ್ರಕಾರ ಕಲ್ನಾಡ್‌ನಲ್ಲಿರುವ ಬೊಳ್ವ ಗಂಗ ಗಾವುಂಡನಿಗೆ ಪೆಲ್ಪಡುವಿನ ಪಶ್ಚಿಮದ ಕೆರೆಯ ತಮರ ಕಟ್ಟು ತೂಬಿನ ಕೆಳಗಿರುವ ೩೦ ಕೊಲಗ (ಭೂಮಾಪನ) ಭತ್ತದ ಗದ್ದೆಯನ್ನು ದಾನ ನೀಡಿರುವ ಬಗ್ಗೆ ಹೇಳಲಾಗಿದೆ[೨೩]. ಈ ಶಾಸನಕ್ಕೆ ಹೋಲಿಕೆಯಾಗುವ ೧೦ನೇ ಶತಮಾನದ 'ತಾಳಗುಂದ ಶಾಸನ' (ಶಿಕಾರಿಪುರ ತಾಲೂಕು, ಶಿವಮೊಗ್ಗ ಜಿಲ್ಲೆ)ದಲ್ಲಿರುವ ದಾಖಲೆಯ ಪ್ರಕಾರ ಕೆರೆಯ ನಿರ್ಮಾಣಕ್ಕಾಗಿ ಮತ್ತು ದೇವತೆಗೆ ನಂದಾದೀಪವನ್ನು ನೀಡುವುದಕ್ಕಾಗಿ ಕೆರೆಯ ಕೆಳಗಿರುವ ೫ ಮತ್ತರ್ ತೋಟದ ಭೂಮಿಯನ್ನು ದಾನ ನೀಡಿರುವ ಬಗ್ಗೆ ಹೇಳಲಾಗಿದೆ[೨೪]. 'ಒತೂರ್ (otur) ಶಾಸನ'ದ (ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ) ದಾಖಲೆಯ ಪ್ರಕಾರ ಚಿತ್ತರತೆಯ ಆಡಳಿತಗಾರನಾದ ಪೆರ್ಗಡೆ ನಾಕಿಯಯ್ಯನು ದೇವಾಲಯದ ನಿರ್ಮಾಣಕ್ಕಾಗಿ ನೊಸಿಗದಲ್ಲಿರುವ ಕೊಳದ ಕೆಳಗಿರುವ ೨ ಮತ್ತರ್ ಭೂಮಿಯನ್ನು ದಾನ ನೀಡಿರುವ ಬಗ್ಗೆ ಹೇಳಲಾಗಿದೆ[೨೫]. 'ಕಂಪಲಪುರ ಶಾಸನ'ದಲ್ಲಿ (ಪಿರಿಯ ಪಟ್ಟಣ ತಾಲೂಕು, ಮೈಸೂರು ಜಿಲ್ಲೆ) ೯ನೇ ಶತಮಾನದ ದಾಖಲೆಯಲ್ಲಿ ಮಲ್ತಿಕೆರೆಯ ಕೆರೆಯ ೨ ಖಂಡುಗ ಭತ್ತದ ಭೂಮಿಯನ್ನು ದಾನ ನೀಡಿರುವ ಬಗ್ಗೆ ಹೇಳಲಾಗಿದೆ[೨೬]. ಆ ಶಾಸನಕ್ಕೆ ಹೋಲಿಕೆಯಾಗುವ 'ಹೊನ್ನುರು ಶಾಸನ' (ಯಲಂದೂರು ತಾಲೂಕು, ಮೈಸೂರು ಜಿಲ್ಲೆ)ದ ಪ್ರಕಾರ ಪೊನ್ನವಯ್ಯನ ಹಿರಿಯನಾದ ಪೊನ್ನವಯ್ಯನು ಕೆರೆಯ ಕೆಳಗಿರುವ ೫ ಕೋಲಗ ತೇವ ಭರಿತ (ಜೆಡೆ ಗದ್ದೆ) ಭೂಮಿಯನ್ನು ದಾನ ಮಾಡಿರುವ ಬಗ್ಗೆ ಹೇಳಲಾಗಿದೆ. ಶಿಲಾ ಶಾಸನಗಳ ದಾಖಲೆಗಳಲ್ಲಿ ನೀರಿನ ಕಾಲುವೆಗಳ ಬಗ್ಗೆಯೂ ಹೇಳಲಾಗಿದೆ[೨೭]. ಕುಂಷಿ ಶಾಸನದಲ್ಲಿ (ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ) ಕ್ರಿ.ಶ. ೯೩೧ರ ದಾಖಲೆಯ ಪ್ರಕಾರ ಒಂದು ಮತ್ತರ್ ಭತ್ತದ ಭೂಮಿ, ೨ ಕಾಲುವೆಗಳು ಹಾಗೂ ದೊಡ್ಡ ನೀರಾವರಿ ಕೊಳವೆಗಳನ್ನು ದಾನ ನೀಡಿರುವ ಬಗ್ಗೆ ಹೇಳಲಾಗಿದೆ[೨೮]. 'ದೊಡ್ಡ ಹೊಮ್ಮ ಶಾಸನ'ದ ಪ್ರಕಾರ (ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ) ಕ್ರಿ.ಶ. ೯೭೭ರಲ್ಲಿ ಬದಿಕೆರೆ ಕೆರೆಯ ಸಣ್ಣ ಬಂಡುವಿನಿಂದ ದೊಡ್ಡ ಕಾಲುವೆಯ ವರೆಗಿನ ಭಾಗವನ್ನು ದಾನ ಮಾಡಿರುವುದನ್ನು ಉಲ್ಲೇಖಿಸಲಾಗಿದೆ[೨೯].

ಹಳ್ಳಿಗಳ ಗಡಿರೇಖೆಗಳನ್ನು ಗುರುತಿಸುವಾಗ ನೀರಿನ ಹರಿವುಗಳ ಬಗ್ಗೆ ಹೇಳಲಾಗಿದೆ. ೯ನೇ ಶತಮಾನದಲ್ಲಿ 'ಮರಾಸೆಯ ದಾಖಲೆ'ಯಲ್ಲಿ (ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ) ಮರಿಯಾಸೆಯಲ್ಲಿರುವ ಜಿಜ್ಜಯತನು ಭಗವತಿ ದೇವತೆಗೆ ದಿಬ್ಬದ ಮೇಲಿರುವ ಭೂಮಿಯನ್ನು ದಾನ ನೀಡಿರುವ ಬಗ್ಗೆ ಹೇಳಲಾಗಿದೆ[೩೦]. ಕೆಲವು ಶಾಸನಗಳಲ್ಲಿ ಗದ್ದೆಗಳ ಗಡಿರೇಖೆಗಳ ಬಗ್ಗೆ ಸಂಪೂರ್ಣ ವಿವರಗಳು ದೊರೆಯುತ್ತದೆ. 'ಮರೂರು ಶಾಸನ'(ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ) ೯ನೇ ಶತಮಾನದ ದಾಖಲೆಯಲ್ಲಿ ತದ್ದಯ್ಯನು ಅಕ್ಷಾನಂದ ಭಟ್ಟರ ವಿದ್ಯಾಭ್ಯಾಸಕ್ಕಾಗಿ ವೇಣಿಗೆಯನ್ನು ನೀಡುವುದಕ್ಕಾಗಿ ಕೆಲವು ಗದ್ದೆಗಳನ್ನು ದಾನ ನೀಡಿದ ಬಗ್ಗೆ ಉಲ್ಲೇಖಿಸಲಾಗಿದೆ[೩೧]. ದಾನದಲ್ಲಿ ಒಳಗೊಂಡಿರುವವುಗಳು ಪೂರ್ವಕ್ಕಿರುವ ದೊಡ್ಡ ಕಾಲುವೆಯ ಪರಿಮಿತದಲ್ಲಿರುವ ೫ ಖಂಡುಕ ಭತ್ತದ ಭೂಮಿ, ದಕ್ಷಿಣಕ್ಕಿರುವ ದಿಣ್ಣೆ ಪಶ್ಚಿಮಕ್ಕಿರುವ ದೊಡ್ಡ ದಿಣ್ಣೆ (ಪೆಲ್ ದಾವರೆ) ಮತ್ತು ನರಗಾವಲ್ಲ ಕೆರೆಯ ಕಾಲುವೆ, ಪೂರ್ವದಲ್ಲಿರುವ ಅರಕೆರೆ ಕೆರೆಯ ಗಷ್ಟಿಗೆ ಸಂಬಂಧಿಸಿದ ಮಣ್ಣು ೩ ಮತ್ತು ೫ ಕೊಳಗ ತೇವಭರಿತ ಭೂಮಿ ಪೂರ್ವದ ಪರಿಮಿತದಲ್ಲಿರುವ ಕಾಲುವೆ ದಕ್ಷಿಣದ ಮೇಲಿನ ದಿಣ್ಣೆ ಪಶ್ಚಿಮದಲ್ಲಿ ನೀರಿನ ಹರಿವು, ಉತ್ತರದಲ್ಲಿ ದೊಡ್ಡ ದಿಣ್ಣೆಗಳು ದೊಡ್ಡದಾದ ಗದ್ದೆಗಳಿದ್ದವು. ಕೊಸಿಗಗೆರೆ ಕೆರೆಯ ಗಷ್ಟಿಗೆ ಸಂಬಂಧಿಸಿದ ಮಣ್ಣು. ಇನ್ನೊಂದು ದಾಖಲೆಯ ಪ್ರಕಾರ ಮಾಧವ ಮಹಾಧಿರಾಜರ್ ದಾಖಲೆಯ ಪ್ರಕಾರ ಶಕ್ತಿಶರ್ಮನ್ ಮೊರಸನಾಡಿನಲ್ಲಿರುವ ಪರಪ್ಪಸುರು ಅಥವಾ ಪ್ರಸುರು ಎಂಬ ಹತ್ತು ಖಂಡುಗ ಭೂಮಿಯನ್ನು ಕೆರೆಯ ಜೊತೆಗೆ ದಾನ ಮಾಡಿರುವ ಬಗ್ಗೆ ಉಲ್ಲೇಖವಿದೆ[೩೨].

'ಪೆನುಕೊಂಡ ಪಟಶಾಸನ'ದ ಪ್ರಕಾರ ಸಿಂಹವರ್ಮನು ೬೫ ತುಂಡು ಫಲವತ್ತಾದ ಭೂಮಿಯನ್ನು ವಿಸ್ತರಿಸಿ ಕೆರೆಯ ಕೆಳಗಿರುವ ೭೨ ಖಂಡುಗ ಕರಮತ್ವ ಗದ್ದೆಯ ಬಿತ್ತನೆಯ ಬೀಜದ ಭೂಮಿಯನ್ನು ಪರ್ವಿ ವಿಷಯದಲ್ಲಿರುವ ಪರ್ವಿಯಲ್ಲಿರುವ ಕುಮಾರ ಶರ್ಮನಿಗೆ ದಾನ ನೀಡಿದ ಬಗ್ಗೆ ಹೇಳಲಾಗಿದೆ. ಮಾಧವವರ್ಮನು ಕುಮಾರಪುರ ಗ್ರಾಮದ ಹೊಲ, ಕೆರೆ, ಫಲವತ್ತಾದ ೧೨ ಖಂಡುಗ ಬಿತ್ತನೆಯ ಭೂಮಿ, ತೋಟದಭೂಮಿ ಮತ್ತು ಪತ್ತು ಕ್ಷೇತ್ರವನ್ನು ಮುದುಕೊಟ್ಟುರ ವಿಷಯದಲ್ಲಿರುವ ಪೆರಮೊಲಾಲ್ ಗ್ರಾಮದ ಅರಹಟ್ ದೇವಾಲಯಕ್ಕೆ ದಾನ ನೀಡಿರುವ ಬಗ್ಗೆ ಹೇಳಲಾಗಿದೆ[೩೩]. 'ಮೇಲುಕೋಟೆ ತಾಮ್ರಪಟ'ದಲ್ಲಿ ಮಾಧವನು ವಿಹಾರಗಳಿಗೆ ದಾನ ನೀಡಿರುವ ಬಗ್ಗೆ ಮಾಹಿತಿ ನೀಡಲಾಗಿದೆ. ಅವುಗಳೆಂದರೆ,

ಏಕಕಾಲದಲ್ಲಿ ಫಲವತ್ತಾದ ಭೂಮಿ ಮತ್ತು ಎರಡು ಕೆರೆ, ೬ ಖಂಡುಕವಾಪಾಸ್ ಭೂಮಿ ಶಿಲಾ ತಟಾಕದಲ್ಲಿರುವ ಆ ಗದ್ದೆಯ ಆಗ್ನೇಯ ಭಾಗವು ವ್ಯಾಪಾರಿ ವಿತ್ತಾಂಬನ ಸ್ವಂತ ಭೂಮಿಯಾಗಿತ್ತು ಮತ್ತು ಈ ಭೂಮಿಯಲ್ಲಿ ವರ್ಷದಲ್ಲಿ ೨ ಬಾರಿ ಅಂದರೆ ಶರತ್ಕಾಲ ಮತ್ತು ಬೇಸಿಗೆ ಕಾಲದಲ್ಲಿ ಬೆಳೆಯನ್ನು ತೆಗೆಯುತ್ತಿದ್ದರು. ೫ ಖಂಡುಕವಾಪಾಸ್ ಭೂಮಿಯ ಪಶ್ಚಿಮ ಭಾಗದ ಗದ್ದೆಯೂ ನೇಯ್ಗೆಯವರಿಗೆ ಸೇರಿತ್ತು. ಅಲ್ಲದೆ ವಾಯುವ್ಯ ಭಾಗದ ಸ್ಯಾಮಾಕ ಹೊಲವು ಇದೇ ಜನರಿಗೆ ಸೇರಿದ್ದಾಗಿತ್ತು. ಕೆರೆಯ ಕೆಳಗಿರುವ ೩ ಖಂಡುಕವಾಪಾಸ್ ಭೂಮಿಯನ್ನು ರಕ್ತ–ತಟಕ ಎಂಬುದಾಗಿ ಕರೆಯಲಾಗುತ್ತದೆ. ಇದೇ ಕೆರೆಯ ಭಾಗದಲ್ಲಿ ೧೦ ಖಂಡುಕವಾಪಾಸ್ ಭೂಮಿಯ ಇದ್ದು ಈ ಭೂಮಿಯಲ್ಲಿ ಶರತ್ಕಾಲದಲ್ಲಿ ಬೆಳೆಯನ್ನು ತೆಗೆಯ ಲಾಗುತ್ತಿತ್ತು. ೧೮ ಖಂಡುಕವಾಪಾಸ್ ಭೂಮಿಯ ಆವನಿ ನದಿಯ ಪೂರ್ವ ಭಾಗದಲ್ಲಿ ಫಲವತ್ತಾದ ಸ್ಯಾಮಕ ಬೆಳೆಯನ್ನು ಉತ್ಪಾದಿಸಲಾಗುತ್ತಿತ್ತು, ಪಶ್ಚಿಮ ಭಾಗದ ಗದ್ದೆಯು ಮಹಾ–ಸ್ರೆಸ್ಟಿನ್‌ಗೆ ಉತ್ತರಭಾಗದ ಭೂಮಿಯು ಕುಮಾರನಿಗೆ ಸೇರಿತ್ತು. ೧೨ ಖಂಡುಕವಾಪಾಸ್ ಭೂಮಿಯ ಪೂರ್ವಭಾಗದಲ್ಲಿ ಸ್ಯಾಮುಕ ಬೆಳೆಯನ್ನು ಶಾಕ್ಯಾ–ಶಿಲಾ ಪ್ರದೇಶದಲ್ಲಿ ಬೆಳೆಯಲಾಗು ತ್ತಿತ್ತು. ಪಶ್ಚಿಮ ಭಾಗದ ಗದ್ದೆಯು ನೇಯ್ಗೆಯವರಿಗೆ, ಉತ್ತರ ಭಾಗದಲ್ಲಿ ಮುಖ್ಯ ರಸ್ತೆಯಿದ್ದು ಮತ್ತು ದಕ್ಷಿಣದ ಭೂಭಾಗವು ಚೋಲಿಗ ವ್ಯಾಪಾರಿಗಳಿಗೆ ಸೇರಿತ್ತು. ಚಿನ್ನ ಹಾಗೂ ತಾವು ಉಪಯೋಗಿಸಿದ ಬಟ್ಟೆಗಳನ್ನು ಸುಡಲು ನೆಲವನ್ನು ನೀಡಲಾಗಿತ್ತು[೩೪].

'ನೊಣಮಂಗಲ ಪಟ'ಶಾಸನವು ೫–೬ನೇ ಶತಮಾನಕ್ಕೆ ಸೇರಿದ್ದಾಗಿದ್ದು ಈ ಶಾಸನದ ಪ್ರಕಾರ ಕೊಂಗುಣಿವರ್ಮನು ಕೋರಿಕುಂಡ ವಿಷಯದಲ್ಲಿರುವ ಚೆನ್ನೆಲ್‌ಕರನಿ ಗ್ರಾಮವನ್ನು ಉರನುರದಲ್ಲಿರುವ ಅರಹಟ್ ದೇವಾಲಯವನ್ನು ಗಂಧರ ನಂದ ಆಚಾರ್ರ್ಯರ ನೇತೃತ್ವದಲ್ಲಿ ಮೂಲಸಂಘದ ಅನುಯಾಯಿ ಗಳಿಂದ ನಿರ್ಮಿಸಲ್ಪಟ್ಟಿತು. ಹೊರಗೆ ನಿರ್ಮಿಸಲಾದ ಚನಿದಿ ಗಲ್ ಅರ್‌ಹಟ್ ದೇವಾಲಯಕ್ಕೆ ೧/೪ ಭಾಗದಷ್ಟು ಕರ್ಷಪಣ ವನ್ನು ಅನುದಾನ ನೀಡಲಾಗಿದೆ[೩೫].

'ಮಲ್ಲೋಹಳ್ಳಿ ಪಟ' ಈ ಶಾಸನದಲ್ಲಿ ಅವನಿತನು ಮರುಗರೆ ರಾಷ್ಟ್ರದಲ್ಲಿರುವ ತಿಪ್ಪುರವನ್ನು, ಕಡ ಮತ್ತು ಸ್ವಾಮಿಗೆ ಬ್ರಹ್ಮದೇಯ ಪದ್ಧತಿಯ ರೂಪದಲ್ಲಿ ಮೇಲೂರದಲ್ಲಿರುವ ೧೨ ಖಂಡುಗ ಕೆರೆಯ ಕೆಳಗಿರುವ ಭತ್ತದ ಗದ್ದೆಯನ್ನು ದಾನ ನೀಡಿರುವ ಬಗ್ಗೆ ಹೇಳಲಾಗಿದೆ[೩೬]. 'ದಿವೆಗರ್ ಪಟ' ಶಾಸನದಲ್ಲಿ ದುರ್ವಿನಿತ ರಾಜನು ಕುವಲಾಲ ವಿಷಯದಲ್ಲಿರುವ ಪರಲ್ ಕುಂಡ ಗ್ರಾಮವನ್ನು ೧/೪ ಕರೂರ ಗ್ರಾಮವನ್ನು ಅಲ್ಲಿಯ ಕೆರೆಯನ್ನು ತೊಲವಕುಂಟೆ ಮತ್ತು ಕೆರೆಯ ಕೆಳಗಿರುವ ಹೊಲವನ್ನು ಸೇನ ಶರ್ಮನ್ ಎನ್ನುವ ಬ್ರಾಹ್ಮಣನಿಗೆ ದಾನ ನೀಡಿರುವ ಬಗ್ಗೆ ಉಲ್ಲೇಖವಿದೆ[೩೭]. 'ಕಲ್ಲೂರು ಶಾಸನ'ದಲ್ಲಿ ಶಿವಮಾರ ಆಳ್ವಿಕೆಯಲ್ಲಿ ನಡೆದ ಯುದ್ಧದಲ್ಲಿ ಪಬ್ಬಾಬ್ಬು ತೀರಿಕೊಂಡಾಗ ರಕ್ಕಸನೂರು ಮತ್ತು ಒಂದು ಖಂಡುಗ ಹೊಲವನ್ನು ದಾನ ನೀಡಿರುವ ಬಗ್ಗೆ ಉಲ್ಲೇಖವಿದೆ[೩೮]. 'ಕುಲಾಗಾಣ ಪಟ' ಶಾಸನದಲ್ಲಿ ಶಿವಮಾರನ ಕಾಲದಲ್ಲಿ ಪಲ್ಲವ ರಾಜನಾದ ಪೃಥ್ವಿ ಕೊಂಗುಣಿ ಮುತ್ತಾರಸನು ವಸದಿಗಲ್ ಗ್ರಾಮದ ಜೊತೆಗೆ ಕರಗುಲ ಪೊಲ ಮತ್ತು ತಡುವಲ್ಲು ೨ ತುಂಡು ಭತ್ತದ ಗದ್ದೆ ತೋಟ ಮತ್ತು ಮನೆಯ ಜಾಗವನ್ನು ಕೊಡುಗುರ್ ನಾಡಿನಲ್ಲಿರುವ ಕೆಲ್ಲಪುಸುರ್ ಚೈತ್ಯಕ್ಕೆ ದಾನ ನೀಡಿರುವ ಬಗ್ಗೆ ಹೇಳಲಾಗಿದೆ. ಗಂಜೆನಾಡುನ ಕಣ್ಣಮನ್ ಪೃಥ್ವಿ ಕೊಂಗುಣಿ ಮತ್ತು ಅರಸನು ಒಪ್ಪಿಗೆಯ ಮೇರೆಗೆ ಮೆಲಾಪಾಲು, ಜಾದಿಗಲ್ಲು, ಕೊಲಿಗನಕೆರೆ ಕಲ್ಲು, ಒಂದು ತೋಟ ೬ ಭತ್ತದ ಗದ್ದೆಯನ್ನು ಕೊಡಗುರು ನಾಡಿನಲ್ಲಿರುವ ಕೆಲ್ಲಿಪುಸುರು ಚೈತ್ಯಕ್ಕೆ ನೀಡಿರುವ ಬಗ್ಗೆ ಹೇಳಲಾಗಿದೆ[೩೯]. 'ನಂದಿ ಪಟ'ಶಾಸನವು ಶ್ರೀಪುರುಷನ ಪುರದಲ್ಲಿರುವ ಚೈತ್ಯಾಲಯ ಅದನ್ನು ಕೊಂಗೇಶ್ವರ ಎಂಬುದಾಗಿ ಹೇಳಲಾಗಿದೆ. ಇದನ್ನು ಈಶ್ವರ ಶರ್ಮನ್ ಎನ್ನುವ ಬ್ರಾಹ್ಮಣನ ಚಿಕ್ಕ ತಮ್ಮನಾದ ಶಿವಾ ಶರ್ಮನಿಗೆ ದಾನ ನೀಡಿರುವ ಬಗ್ಗೆ ತಿಳಿಸಲಾಗಿದೆ ಅವುಗಳೆಂದರೆ, ಕಿಟ್ಟಂಗಡಿಯಲ್ಲಿರುವ ವೆಲುಕಂಡ ಮತ್ತು ಸೇರಪಾದ್ಯದಲ್ಲಿರುವ ಮನೆಯ ಜಾಗ; ಉಮಾದತ್ತನ ತೋಟದ ಪೂರ್ವದಲ್ಲಿರುವ ಎರಡು ತೋಟದ ಭೂಮಿಗಳು; ಕಲ್ಕೆರೆಯ ಕೆಳಗಿನ ಭಾಗದಲ್ಲಿರುವ ಕಲಿಂಗದ್ವಾರಮುಖದ ೬ ಖಂಡುಗ ಜೋಳದ ಗದ್ದೆ, ಉತ್ತರ ಭಾಗದ ಅಗಳವಾದ ಕೊಳ, ಪೂರ್ವಕ್ಕೆ ಬಾಟಕಾರಿ ಗದ್ದೆ ಹಾಗೂ ದಕ್ಷಿಣಕ್ಕೆ ಬಾಲಿ ಕ್ಷೇತ್ರ ; ಆಲಮಂಡಲ ದಲ್ಲಿರುವ ೬ ಖಂಡರಿಗ ಜೋಳದ ಗದ್ದೆ; ಒಂದು ಖಂಡಿಕ ಅರಣ್ಯಭೂಮಿಯ ದಕ್ಷಿಣಕ್ಕಿರುವ ಕರ್ಪೂರ ಬಾವಿ, ಪೂರ್ವದ ಆನೆ ಬಾವಿ, ಉತ್ತರದ ದೇವಬೋಗ ಇವುಗಳೆಲ್ಲವನ್ನು ಒಟ್ಟಾಗಿ ಕಾಯವನರೇ ಎನ್ನುವರು ಮತ್ತು ಪಶ್ಚಿಮದಲ್ಲಿ ಬಂಡಿ ಎಳೆಯುವ ಮಾರ್ಗ; ೮ ಖಂಡಿಕಾಸ್ ಅರಣ್ಯಭೂಮಿಯ ಪಶ್ಚಿಮದಲ್ಲಿರುವ ಬನಿಯನ್ ಮರ ಇವುಗಳನ್ನು ರೋಹಿಣಿ ಎಂದು ಕರೆಯುತ್ತಾರೆ ಮೊದಲಾವುಗಳನ್ನು ನೀಡಿರುವ ಬಗ್ಗೆ ಉಲ್ಲೇಖಿಸಲಾಗಿದೆ[೪೦]. 'ಹೊಸುರು ಪಟಶಾಸನ'ದಲ್ಲಿ ಶ್ರೀಪುರುಷನು ೪ ಗ್ರಾಮಗಳನ್ನು ಅವುಗಳೆಂದರೆ ಎಲಂಗುದ ಲೂರು, ಮರಿಯಾಚಿಗುದಲೂರು, ಪರ್ವಿ ಮತ್ತು ಶ್ರೀಪುರಂ. ೧೨ ಖಂಡುಕ ವಿಸ್ತರಣೆಯ ಜೊತೆಗೆ ಜೋಳ ಬಿತ್ತನೆಯ ಭೂಮಿ; ೩ ಕುದುಬು ವಿಸ್ತರಣೆಯ ಮನೆಯ ಜಾಗ; ೩೦ ಕುದಬ ವಿಸ್ತರಣೆಯ ಬಿತ್ತನೆ ಬರಡು ಭೂಮಿ; ೨ ಖಂಡೂಕ

ವಿಸ್ತರಣೆಯ ತೋಟ ಭೂಮಿ; ೩೦ ಖಂಡೂಕ್ಕಾಸ್ ಅರಣ್ಯ ಭೂಮಿಯ ಜೊತೆಗೆ ಮೆಕ್ಕೆಜೋಳದ ಬಿತ್ತನೆ ಮಾಡಿದ ಭೂಮಿ ಮುಂತಾದವುಗಳನ್ನು ತೋಳೂರುನಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣ ಮಾಧವ ಶರ್ಮನ್ ಅವನ ಮಗ ಮಾರಶರ್ಮನ್‌ಗೆ ದಾನ ನೀಡಿರುವ ಬಗ್ಗೆ ಹೇಳಲಾಗಿದೆ[೪೧].

'ಸಾಲೇಮ್ ಪಟಶಾಸನ'ದಲ್ಲಿರುವ ಪ್ರಕಾರ ಶ್ರೀಪುರುಷನ ಶಾಸನದಲ್ಲಿ ಹೇಳಿರುವ ಪ್ರಕಾರ ಪೂರ್ವ ಭಾಗದಲ್ಲಿರುವ ಕೆರೆಯ ಕೆಳಗಿರುವ ೨ ಖಂಡುಕ ಜೋಳದ ಗದ್ದೆ, ೨ ಖಂಡುಕ ಜೋಳದ ಗದ್ದೆ, ೨ ಖಂಡೂಕ ಭೂಮಿಯು ಅಡಕೆ ಮತ್ತು ಬಾಳೆಗಿಡ ಬೆಳೆಯಲು ಯೋಗ್ಯವಾಗಿತ್ತು, ಪುದುಕುಂಡ ವಿಷಯದಲ್ಲಿರುವ ಕೋಮರಮಂಗಳ ಗ್ರಾಮದ ಪಶ್ಚಿಮ ಭಾಗದಲ್ಲಿರುವ ಕೆರೆಯ ಕೆಳಗಿನ ಮನೆಯ ಜೊತೆಗಿರುವ ಅರ್ಧ ಕರ ಭೂಮಿಯಲ್ಲಿ ಸಾಸಿವೆ ಮತ್ತು ಮೆಕ್ಕೆಜೋಳದ ಬೇಸಾಯವನ್ನು ಮಾಡುತ್ತಿದ್ದ ಭೂಮಿ ಇವುಗಳೆಲ್ಲವನ್ನು ಒಟ್ಟಾಗಿ ಬ್ರಾಹ್ಮಣ ನೀಲಕಂಠ ಶರ್ಮನ್ ಮತ್ತು ಅವನ ೫ ಜನ ಮಕ್ಕಳಿಗೆ ದಾನ ನೀಡಿರುವ ಉಲ್ಲೇಖವಿದೆ[೪೨]. 'ಮೇಲಾಗಾನಿ ಶಾಸನ'ದಲ್ಲಿ ಶ್ರೀಪುರುಷನು ತನ್ನ ಮಗ ಕುವಲಾಲ ನಾಡು ೩೦೦ ಮತ್ತು ಗಂಗ ೬೦೦೦ ಇಲ್ಲಿಯ ಪ್ರಾಂತ್ಯಾಧಿಪತಿಯಾದಾಗ ಅವನ ರಾಣಿ ಕಾಂಚಿಲ ಅಬ್ಬೆಯು ಆಡಳಿತ ನಡೆಸಿದ್ದರ ನೆನಪಿಗಾಗಿ ಒಂದು ಖಂಡೂಕ ಮತ್ತು ೫ ಕುಲ ಭತ್ತದ ಗದ್ದೆ ಕನ್ನ ಭತ್ತದ ಗದ್ದೆ ಮತ್ತು ೮ ಖಂಡೂಗ ತೋಟದ ಭೂಮಿಯ ಗದ್ದೆಯನ್ನು ಸಮನ್ ಪಾಲ್ ಎಂಬುದಾಗಿ ಕರೆಯಲಾಗಿದ್ದು ಇದನ್ನು ಮದುರೆಗಿಳ್ಳದ ವೆಲ್ಲ ಶರ್ಮನಿಗೆ ದಾನ ನೀಡಿದ್ದರ ಬಗ್ಗೆ ಹೇಳಲಾಗಿದೆ[೪೩]. 'ಮುದಹಳ್ಳಿ ಶಾಸನ'ದಲ್ಲಿ ಎಡೆತೆರೆ ನಾಡು ೧೦೦೦ದಿಂದ ದೇವರಿಗೆ ಒಂದು ಸೊಲ್ಲಿಗೆ ಭತ್ತವನ್ನು ದಾನ ನೀಡಿದ ಬಗ್ಗೆ ಹೇಳಲಾಗಿದೆ[೪೪]. 'ಬೇಗೂರು ಶಾಸನ'ದಲ್ಲಿ ಎರೆಯಪ್ಪನು ರಣರಂಗದಲ್ಲಿ ನಾಗತ್ತರಸನು ತೋರಿಸಿದ ಪರಾಕ್ರಮಕ್ಕಾಗಿ ಕಲ್ನಾಡನ್ನು, ೧೨ ಬೆಂಮಪುರವನ್ನು, ಉಪವಿಭಾಗಗಳಾಗಿ ಮಾಡಿ ದಾನ ನೀಡಿದ ಬಗ್ಗೆ ಉಲ್ಲೇಖವಿದೆ[೪೫]. 'ಮಾಗದಿಲು ಶಾಸನವು' ಶಿವಮಾರನಿಗೆ ಸೇರಿದ್ದು ಇತನು ಒಂದು ಸೊಲ್ಲಗೆ ಭತ್ತವನ್ನು ದೇವರಿಗೆ ಪಾವತಿಸುತ್ತಿದ್ದರು ಇಲ್ಲಿ ವಿಸ್ತಾರವಾಗಿ ಹರಡಿಕೊಂಡಿರುವ ಭೂಮಿಯಿಂದ ತೆರಿಗೆಯನ್ನು ಸಂಗ್ರಹಿಸ ಲಾಗುತ್ತಿತ್ತು. ಕೆಲವು ಸಲ ಬೇಸಾಯಗಾರರಿಗೆ ವಿನಾಯಿತಿ ಯನ್ನು ನೀಡಲಾಗುತ್ತಿತ್ತು[೪೬].

ಭೂಮಿಗಳ ವಿಧಗಳು

ಗಂಗಾವಾಡಿಯು ಭೌಗೋಳಿಕವಾಗಿ ಏರುಪೇರಾದ ಪ್ರದೇಶವನ್ನು ಪರ್ವತಗಳನ್ನು ಹೊಂದಿತ್ತು. ಗ್ರಾಮೀಣ ಪ್ರದೇಶದ ನೆಲೆಗಳು, ಕೃಷಿಯೋಗ್ಯ ಭೂಮಿ, ಪಶು ಸಂಗೋಪನೆಗೆ ಯೋಗ್ಯವಾದ ಭೂಮಿ ಮತ್ತು ಸ್ವಲ್ಪ ಭಾಗ ಅರಣ್ಯ ಭಾಗವನ್ನು ಹೊಂದಿರುವಂತಹ ಪ್ರದೇಶವಾಗಿತ್ತು.

ದಕ್ಷಿಣ ಭಾರತದಲ್ಲಿ ಭೂಮಿಯನ್ನು ೫ ಭಾಗವಾಗಿ ವಿಭಾಗಿಸಲಾಗಿತ್ತು. ಅವುಗಳೆಂದರೆ ೧) ವಾಸಕ್ಕೆ ಯೋಗ್ಯವಾದ ಭೂಮಿ ೨) ಸಾಗುವಳಿ ಭೂಮಿ ೩) ಬರಡು ಭೂಮಿ ೪) ಗೋಮಾಳ ೫) ಅರಣ್ಯ ಭೂಮಿ, ಇದು ಸರಕಾರದ ಆಸ್ತಿಯಾಗಿತ್ತು.

ಸಾಗುವಳಿ ಭೂಮಿಯು ತೇವಾಂಶದ ಭೂಮಿ, ಒಣಭೂಮಿ, ಫಲವತ್ತಾದ ಭೂಮಿ, ಬಂಜರು ಭೂಮಿ ನದಿಗಳ ಸಮೀಪದಲ್ಲಿದ್ದು, ಕಾಲುವೆಗಳ ಮುಖಾಂತರ ನೀರು ಹರಿಸಿ ಕೃಷಿಯನ್ನು ಮಾಡುವ ಭೂಮಿ, ಕೆರೆಯ ಕೆಳಭಾಗದ ಭೂಮಿ, ಮಳೆ ನೀರಿನ ಆಧಾರಿತ ಭೂಮಿ, ಕೃಷಿ ಮಾಡದೆ ಇರುವ ಭೂಮಿ, ಕಲ್ಲಾವೃತ ಭೂಮಿ, ಏರುಪೇರಾದ ಭೂಮಿ. ಗಂಗರ ಕಾಲದಲ್ಲಿ ಈ ಎಲ್ಲ ವಿಧಗಳಿಗೆ ಸಂಬಂಧಿಸಿದ ಭೂಮಿಗಳಿಗೆ ಕಾರಣಗಳನ್ನು, ಮಾಹಿತಿಗಳನ್ನು, ಕೆಲವು ಶಾಸನ ಗಳಲ್ಲಿ ಬೇರೆ ಬೇರೆ ವಿಧದ ಭೂಮಿಗಳ ಬಗ್ಗೆ ಹೇಳಿರುವುದನ್ನು ಗಮನಿಸಬಹುದು[೪೭].

೩ನೇ ಮಾಧವನ ಮೇಲುಕೋಟೆ ಶಾಸನದಲ್ಲಿ ದಾನ ಮಾಡಿದ ಭೂಮಿ ವರ್ಷಕ್ಕೆ ೨ ಬಾರಿ ಫಸಲು ಬೆಳೆಯಲು ಉಪಯೋಗಿಸಲಾಗುತ್ತಿತ್ತು. ಈ ಭೂಮಿಯನ್ನು ದೇಣಿಗೆ ನೀಡುತ್ತಿದ್ದ ಬಗ್ಗೆ ಹೇಳಲಾಗಿದೆ. ಅರಣ್ಯ ಭೂಮಿಯನ್ನು ಹುಲ್ಲು ಮೇಯಿಸುವುದಕ್ಕಾಗಿ ಉಪಯೋಗಿಸಲಾಗುತ್ತಿತ್ತು. ಇವುಗಳನ್ನು ಋಷಿ ಮುನಿಗಳು ವಾಸದ ನೆಲೆಗಳಾಗಿ ಬಳಸು ತ್ತಿದ್ದರು. ಅರಣ್ಯಭೂಮಿಯಿಂದ ಮುಖ್ಯವಾಗಿ ಮರಮುಟ್ಟು, ಗಂಧದ ಮರ, ಆನೆಗಳಿಗೆ ಹೆಚ್ಚಿನ ಬೇಡಿಕೆ ಇದ್ದವು. ಬರಡು ಭೂಮಿಯು ದೊಡ್ಡ ದೊಡ್ಡ ಬಂಡೆಗಳಿಂದ ಏರಿಪೇರಾದ ಪರ್ವತಗಳಿಂದ ಕೂಡಿತ್ತು.

ಮಣ್ಣಿನ ಲಕ್ಷಣ

ಮಣ್ಣಿನ ವಿಧಗಳನ್ನು ಗುರುತಿಸುವಾಗ ಕೃಷಿಯನ್ನು ಆಧಾರಿತ ಭೂಮಿಯನ್ನು ಮುಖ್ಯವಾಗಿ ಮೂರು ವಿಧವಾಗಿ ವಿಂಗಡಿಸಬಹುದು ಕಪ್ಪುಮಣ್ಣು (kariyamannu) ಸಿಂದ–೮೦೦೦ ಪ್ರಾಂತ್ಯದಲ್ಲಿರುವ ಕೆಂಪು ಮಣ್ಣು (kebbaya mannu) ಒದ್ದೆ ಭೂಮಿ, ಮತ್ತು ಒಣ ಭೂಮಿ ಭತ್ತದ ಪ್ರಬಲ ಬೆಳೆ ಬೆಳೆಯುವ ಪ್ರದೇಶದ ಜೊತೆಗೆ ಸ್ವಲ್ಪ ಮಟ್ಟಿಗೆ ತೋಟದ ಭೂಮಿ, ತೇವಭರಿತ ಭೂಮಿ, ಕಲಾನಿ ಗದ್ದೆ, ನೀರ್ ಮಣ್ಣು ಅಥವಾ ನೀರ್ ಪನ್ನಯಗಳೆಂದು ಮತ್ತು ಭತ್ತದ ಭೂಮಿ ಅಥವಾ ಗದ್ದೆ ಮೊದಲಾದವುಗಳು ಇದ್ದುದನ್ನು ಹೇಳಲಾಗಿದೆ.

ಗಂಗರ ಕಾಲದಲ್ಲಿ ಭೂಒಡೆತನ ಮತ್ತು ವಿವಿಧ ಬಗೆಯ ಭೂಗೇಣಿಗಳಿದ್ದವು ರಾಜ್ಯದ ಎಲ್ಲಾ ಭೂಮಿಗಳು ಮುಖ್ಯವಾಗಿ ರಾಜನ ಹಿಡಿತದಲ್ಲಿತ್ತು. ಗಂಗರ ಕಾಲದಲ್ಲಿ ವಿವಿಧ ನಮೂನೆಯ ಭೂ ಹಿಡುವಳಿಗಳಿದ್ದು, ಅವುಗಳು ಉಂಬಳಿ, ಸರ್ವಮಾನ್ಯ, ತ್ರಿಭೋಗ, ವಾಲಗಲಟ್ಟು ಅಥವಾ ಪಾಲಗಲಟ್ಟು ನೆತ್ತರ ಕೋಡಿ ಅಥವಾ ಕೊಲ್ನಾಡು ಅಥವಾ ನೆತ್ತಿರಪಾಡಿ, ತಲವೃತ್ತಿ, ದೇವಮೋಗ, ಬ್ರಹ್ಮದೇಯ, ದೇವದಾಸಿ ಇತ್ಯಾದಿಗಳ ರೂಪದಲ್ಲಿ ಬ್ರಾಹ್ಮಣರು ರಾಜರಿಂದ ಭೂಮಿಯನ್ನು ದಾನ ಪಡೆದು ಜಮಿನ್ದಾರರಾಗುತ್ತಿದ್ದರು. ಭೂಮಿಯನ್ನು ಕೃಷಿ ಮಾಡಲು ಗೇಣಿಗೆ ಇವರು ಕೊಡುತ್ತಿದ್ದರು. ವಿವಿಧ ರೀತಿಯ ಗಡಿಗಳಿಂದ ಅಂದರೆ ನದಿಗಳಿಂದ, ಪರ್ವತಗಳಿಂದ, ದೇವಸ್ಥಾನಗಳಿಂದ, ಕೆರೆಗಳಿಂದ, ಬಾವಿಗಳಿಂದ ಗ್ರಾಮಗಳು ಸೀಮಿತಗೊಳ್ಳುತ್ತಿದ್ದವು. ಕೃಷಿಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳಾದ ಬೆಳೆದ ಪೈರುಗಳ ವಿಧಗಳು ಕೃಷಿ ಕೆಲಸಗಾರರು, ನೀರಾವರಿ ಸೌಲಭ್ಯಗಳು ಅರಣ್ಯ ಸಂಪತ್ತಿನ ಉಪಯೋಗ ತೋಟದ ಬೆಳೆಗಳ ಬಗ್ಗೆ ವಿವರಣೆ, ಪ್ರಾಣಿ ಸಾಕಣಿಕೆ ಮೊದಲಾದ ಸಮಸ್ಯೆಗಳಿವೆ. ಕೃಷಿಯ ಪ್ರಾಕೃತಿಕ ಚಿತ್ರಣ ಸಂಪೂರ್ಣವಾಗಿ ಅಲ್ಲದಿದ್ದರೂ ಸಾಕಷ್ಟು ದೊರೆಯುತ್ತದೆ. ನಿರ್ದಿಷ್ಟವಾಗಿ ವಿವಿಧ ಬೆಳೆಗಳನ್ನು ಬೆಳೆಯುವ ಭೂಮಿ ಕೃಷಿಗಾಗಿ ವಿವಿಧ ಬಗೆಯ ಗೊಬ್ಬರಗಳ ಬಳಕೆ, ವಿವಿಧ ಮಣ್ಣಿನ ಫಲವತತ್ತೆಯನ್ನು ಅಭಿವೃದ್ಧಿಪಡಿಸುವಂತಿದ್ದು ಬೇಸಾಯಗಾರರು ಸಲಕರಣೆಗಳನ್ನು ಬಳಸುವುದು ಉತ್ಪಾದನೆಯನ್ನು ಹೆಚ್ಚಿಸಲು ವಿವಿಧ ಕ್ರಮಗಳನ್ನು ಅನುಸರಿಸುವುದು ಹಾಗೂ ಫಸಲುಗಳನ್ನು ವಿವಿಧ ರೋಗಗಳಿಂದ ರಕ್ಷಿಸಲು ಮತ್ತು ಉತ್ಪಾದನೆಯನ್ನು ಹೆಚ್ಚಿಸುವುದು, ಹಿಡುವಳಿಯ ಆಕಾರಗಳನ್ನು ಅನುಸರಿಸುವುದು ಇವುಗಳೆಲ್ಲವೂ ಗಂಗರ ಕಾಲದ ದಾಖಲೆಗಳಲ್ಲಿ ಅನುಸರಿಸಿರುವುದನ್ನು ಗಮನಿಸಬಹುದು. ಕರ್ನಾಟಕದಲ್ಲಿ ಕೃಷಿಯು ಪ್ರಕೃತಿಯ ಪಾತ್ರವನ್ನು ಅವಲಂಬಿಸಿದೆ. ಗಂಗವಾಡಿ ಪ್ರಾಂತ್ಯವು ಹೆಚ್ಚಾಗಿ ಪ್ರಸ್ಥಭೂಮಿ ಮತ್ತು ಮಳೆಯ ನೀರನ್ನು ಅವಲಂಬಿಸಿತ್ತು ಸಕಾಲದಲ್ಲಿ ಅಗತ್ಯವಾದ ಮಳೆ ಬಂದರೆ ಉತ್ತಮವಾದ ಫಸಲು ಪಡೆಯಬಹುದಾಗಿತ್ತು. ಕಾವೇರಿ ನದಿಯು ಬೇಸಿಗೆಯಲ್ಲಿ ನೀರು ಬತ್ತುತಿತ್ತು. ಈ ಸಮಯದಲ್ಲಿ ಮಳೆಗಾಲದಲ್ಲಿ ಕೆರೆಗಳಲ್ಲಿ ನೀರನ್ನು ಶೇಖರಿಸಲಾಗುತ್ತಿತ್ತು. ನಂತರ ಆ ಕೆರೆಯನ್ನು ನೀರಿನ ಮೂಲವಾಗಿ ಅವಲಂಬಿಸಲಾಗಿತ್ತು.

ಗಂಗರ ಕಾಲದ ಕೃಷಿ ಬೆಳೆಗಳು

ಗಂಗರ ಕಾಲದಲ್ಲಿ ಬೆಳೆಯುತ್ತಿದ್ದ ಬೆಳೆಗಳ ಬಗ್ಗೆ ಶಾಸನಗಳಲ್ಲಿ ಹೇಳಿರುವ ಪ್ರಕಾರ ಭತ್ತ, ಜೋಳ, ಮೆಕ್ಕೆಜೋಳ, ರಾಗಿ, ಕಬ್ಬು, ತೆಂಗು, ಕಂಗು, ಕಾಳುಮೆಣಸು, ಸಾಸಿವೆ, ಮೊದಲಾದವುಗಳ ಬಗ್ಗೆ ಹೇಳಲಾಗಿದ್ದು ಅತೀ ಹೆಚ್ಚಾಗಿ ಭತ್ತವನ್ನು ಬೆಳೆಯುತ್ತಿದ್ದ ಬಗ್ಗೆ ಉಲ್ಲೇಖಿಸಲಾಗಿದೆ. ಹೆಚ್ಚಾಗಿ ನೀರು ಸರಬರಾಜು ಆಗುತ್ತಿದ್ದ ಜಾಗದಲ್ಲಿ ಭತ್ತದ ಬೇಸಾಯ ಮಾಡಲಾಗುತ್ತಿತ್ತು. ಇದಕ್ಕೆ ಮುಖ್ಯವಾಗಿ ಫಲವತ್ತಾದ ಮಣ್ಣು ಅಗತ್ಯವಾಗಿತ್ತು. ಕರ್ನಾಟಕದಲ್ಲಿ ಪ್ರಮುಖವಾದ ಭತ್ತದ ಬೆಳೆಗೆ ಕೆರೆ ಮತ್ತು ಸರೋವರದ ಕೆಳಗಿನ ತಳ, ನದಿಯ ತಟ ಮತ್ತು ಒದ್ದೆ ನೆಲಗಳು ಮೀಸಲಾಗಿದ್ದವು. ಕಬ್ಬು ಬೆಳೆಯಲು ಇದೇ ರೀತಿಯ ಮಣ್ಣು ಬಹುತೇಕ ಅಗತ್ಯವಿದೆ. ಭತ್ತದ ಗದ್ದೆಯಲ್ಲಿ ಭತ್ತ ಬೆಳೆಸಿದ ನಂತರದ ಸಮಯದಲ್ಲಿ ಅದೇ ಭೂಮಿಯಲ್ಲಿ ಬೇರೆ ಸರದಿ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಇದೇ ರೀತಿಯಲ್ಲಿ ಸರದಿ ಬೆಳೆಗಳು ಮತ್ತು ಮಿಶ್ರಿತ ಬೇಸಾಯದಲ್ಲಿ ಭರವಸೆ ಇದ್ದವು. ಭಾರತದಲ್ಲಿ ಸರದಿ ಬೆಳೆಯು ಹೊಸದೇನಲ್ಲ. ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಇದೇ ಮಾದರಿಯ ಬೆಳೆಗಳ ಬಗ್ಗೆ ಉಲ್ಲೇಖಿಸಿದ್ದಾನೆ. ವಿವಿಧ ಋತುಗಳಲ್ಲಿ ವಿವಿಧ ಸರದಿ ಬೆಳೆಗಳನ್ನು ಬೆಳೆಯುತ್ತಿದ್ದ ಬಗ್ಗೆ ಹೇಳಲಾಗಿದೆ. ಇದರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದು ಮತ್ತು ರೋಗಗಳ ನಿಯಂತ್ರಣ ಮಾಡುವಲ್ಲಿ ಇದು ಸಹಾಯಕವಾಗಿದೆ. ಇದರಿಂದಾಗಿ ಮಿಶ್ರಿತ ಬೇಸಾಯ ಒಳ್ಳೆದು. ಇದೇ ಕ್ಷೇತ್ರದಲ್ಲಿ ದ್ವಿದಳ ಧಾನ್ಯಗಳು, ಎಣ್ಣೆ ಬೀಜಗಳು ಮತ್ತು ಹತ್ತಿ ಬೆಳೆಗಳನ್ನು ಬೆಳೆಯುತ್ತಿದ್ದರು. ಶಾಸನಗಳಲ್ಲಿ ಶ್ರೀಪುರುಷನ ರಾಜ್ಯದಲ್ಲಿ ನಿರ್ದಿಷ್ಟವಾದ ಭೂಮಿಯ ಭಾಗವನ್ನು ದಾನ ನೀಡಲು ೩೦ ಖಂಡೂಕ ರಾಗಿ ಬಿತ್ತನೆಯ ಮತ್ತು ಉಳಿದ ಬೆಳೆಗಳನ್ನು ಕೊಡುಗೆಯಾಗಿ ನೀಡಿದ ಬಗ್ಗೆ ಹೇಳಲಾಗಿದೆ[೪೮]. ಶಾಸನಗಳಲ್ಲಿ ಎರಡನೇ ನೀತಿಮಾರ್ಗನು ಭೂಮಿಗಳನ್ನು ಕೊಡುಗೆಯಾಗಿ ನೀಡಿದ ಬಗ್ಗೆ ಹೇಳಲಾಗಿದ್ದು ಜೊತೆಗೆ ಮೆಕ್ಕೆಜೋಳದ ಗದ್ದೆಯ ಜೊತೆಗೆ ಕಟ್ಟೆಯನ್ನು ನೀಡಿರುವುದನ್ನು ಹೇಳಲಾಗಿದೆ. 'ಹೊಸಕೋಟೆ ಪಟ ಶಾಸನ'ವು (ಹೊಸಕೋಟೆ ತಾಲೂಕು. ಬೆಂಗಳೂರು ಜಿಲ್ಲೆ) ಕೊಂಗುಣಿಯಾಧಿರಾಜನ ಕಾಲಕ್ಕೆ ಸೇರಿದ್ದು ಇಲ್ಲಿ ಕಬ್ಬು ಬೆಳೆಯುತ್ತಿದ್ದ ಬಗ್ಗೆ ಹೇಳಲಾಗಿದೆ[೪೯]. ಕ್ರಿ.ಶ. ೬ನೇ ಶತಮಾನದ ಅವಿನೀತನ ಮಲ್ಲೋಹಳ್ಳಿ ಪಟ ಶಾಸನದಲ್ಲಿ (ಬೆಂಗಳೂರು ತಾಲ್ಲೂಕು, ಬೆಂಗಳೂರು ಜಿಲ್ಲೆ) ಭತ್ತ ಬೆಳೆಯುತ್ತಿದ್ದ ಬಗ್ಗೆ ಹೇಳಲಾಗಿದೆ[೫೦]. ೮ನೇ ಶತಮಾನದ ಕಲ್ಲೂರುಶಾಸನವು (ಶ್ರೀನಿವಾಸಪುರ ತಾಲ್ಲೂಕು ಕೋಲಾರ ಜಿಲ್ಲೆ) ಶ್ರೀವಿಕ್ರಮನಗೆ ಸೇರಿದ್ದು ಈ ಪ್ರದೇಶದಲ್ಲಿ ಭತ್ತದ ಗದ್ದೆ ಇದ್ದುದನ್ನು ಉಲ್ಲೇಖಿಸಲಾಗಿದೆ[೫೧]. ಕುಲಾಗಾನ ಪಟ ಶಾಸನವು ೭, ೮ನೇ (ಚಾಮರಾಜನಗರ ತಾಲ್ಲೂಕು, ಮೈಸೂರು ಜಿಲ್ಲೆ) ಪೃಥ್ವಿ ಕೊಂಗಣಿವೃದ್ಧರಾಜ ಶಿವಕುಮಾರನಿಗೆ ಸೇರಿದ್ದು, ಭತ್ತದ ಗದ್ದೆ ಮತ್ತು ತೋಟ ಇದ್ದುದರ ಬಗ್ಗೆ ಹೇಳಲಾಗಿದೆ[೫೨]. ಕ್ರಿ.ಶ. ೮ನೇ ಶತಮಾನದ

ಶಿವಮಾರನ ಮಾಗದಿಲು ಶಾಸನದಲ್ಲಿ (ಹೆಗ್ಗಡೆದೇವನಕೋಟೆ, ಮೈಸೂರು) ಭತ್ತ ಬೆಳೆಯುತ್ತಿದ್ದ ಬಗ್ಗೆ ಹೇಳಲಾಗಿದೆ[೫೩]. ಕ್ರಿ.ಶ. ೭೨೭–೨೮ರ ಪೃಥ್ವಿ ಕೊಂಗುಣಿ ವಿಕ್ರಮ ಮಹಾರಾಜ ಶ್ರೀಪುರುಷನ ನಂದಿ ಪಟಶಾಸನದಲ್ಲಿ ತೋಟದ ಭೂಮಿ ಮತ್ತು ಜೋಳದ ಗದ್ದೆ ಇದ್ದುದನ್ನು ಹೇಳಲಾಗಿದೆ[೫೪]. ಕ್ರಿ.ಶ. ೭೪೮ರ ಅಗಲಿ ದಾನ ಶಾಸನವು (ಚಿಕ್ಕಸಾರಂಗಿ) ಶ್ರೀಪುರುಷನ ಕಾಲಕ್ಕೆ ಸೇರಿದ್ದು ಧಾನ್ಯಗಳನ್ನು ಬೆಳೆಯುತ್ತಿದುದನ್ನು ತಿಳಿಸಲಾಗಿದೆ[೫೫]. ಕ್ರಿ.ಶ. ೭೫೦–೫೧ರ ಜವಳಿಪಟದ ಶಾಸನದಲ್ಲಿ (ಮೂಡಿಗೆರೆ ತಾಲ್ಲೂಕು, ಚಿಕಮಗಳೂರು ಜಿಲ್ಲೆ) ತಿಳಿಸಿರುವ ಪ್ರಕಾರ ೪ ಖಂಡೂಗ ಬೆಳೆಯನ್ನು ಮತ್ತು ೨ ಮೆಕ್ಕೆಜೋಳವನ್ನು ಬೆಳೆಯುತ್ತಿದ್ದ ಬಗ್ಗೆ ಉಲ್ಲೇಖಿಸಲಾಗಿದೆ[೫೬]. ಕ್ರಿ.ಶ. ೭೬೨–೬೩ರ ಶ್ರೀಪುರುಷನ ಹೊಸುರು ಪಟಶಾಸನ (ಗೌರಿಬಿದನೂರು ತಾಲ್ಲೂಕು, ಕೋಲಾರ ಜಿಲ್ಲೆ)ವು ಜೋಳ, ಸಾಸಿವೆ, ಬೆಳೆಯುತ್ತಿದ್ದ ಬಗ್ಗೆ ಹೇಳಲಾಗಿದೆ[೫೭]. ಶ್ರೀಪುರುಷನ ಕ್ರಿ.ಶ. ೭೬೭–೬೮ರ ಶತಮಾನಕ್ಕೆ ಸೇರಿದ ಮೇಲಾಗನಿ ಶಾಸನವು (ಮುಳಬಾಗಿಲು ತಾಲ್ಲೂಕು ಕೋಲಾರ ಜಿಲ್ಲೆ) ಭತ್ತದ ಗದ್ದೆ ಇದ್ದುದನ್ನು ತಿಳಿಸಲಾಗಿದೆ[೫೮]. ಕ್ರಿ.ಶ. ೭೭೧ರ ಶ್ರೀಪುರುಷನ ಸಾಲೆಮ್ ಪಟಶಾಸನದಲ್ಲಿ (ಸಾಲೆಮ್ ತಾಲ್ಲೂಕು ತಮಿಳುನಾಡು ಜಿಲ್ಲೆ) ಜೋಳ, ಸಾಸಿವೆ, ಅಡಿಕೆ, ಬಾಳೆಗಿಡಗಳು ಬೆಳೆಯುತ್ತಿದ್ದ ಬಗ್ಗೆ ಹೇಳಲಾಗಿದೆ[೫೯]. ಕ್ರಿ.ಶ. ೭೭೬–೭೭ರ ಶ್ರೀಪುರುಷನ ದೇವರಹಳ್ಳಿ ಪಟಶಾಸನದಲ್ಲಿ (ನಾಗಮಂಗಲ ತಾಲ್ಲೂಕು ಮೈಸೂರು ಜಿಲ್ಲೆ) ಭತ್ತ ಮತ್ತು ಜೋಳ ಬೆಳೆಯುತ್ತಿದ್ದ ಬಗ್ಗೆ ತಿಳಿಸಲಾಗಿದೆ[೬೦]. ಮಾರಸಿಂಹನ ಕ್ರಿ.ಶ. ೭೯೯ರ ಮನ್ನೆ ಶಾಸನವು (ನೆಲಮಂಗಲ ತಾಲ್ಲೂಕು, ಬೆಂಗಳೂರು ಜಿಲ್ಲೆ) ಇಲ್ಲಿ ಭತ್ತ, ಧಾನ್ಯಗಳು, ನವಣೆ ಬೆಳೆಯುತ್ತಿದ್ದುದನ್ನು ತಿಳಿಸುತ್ತದೆ[೬೧]. ಕ್ರಿ.ಶ. ೭೯೯ರ ಕೊಟ್ಟಂಬ ದಾನಶಾಸನವು (ಹೊಸಪೇಟೆ ಸಿದ್ಲಾಗಹಟ್ಟ ತಾಲ್ಲೂಕು ಕೋಲಾರ ಜಿಲ್ಲೆ) ಯುವರಾಜ ಮಾರಸಿಂಹನ ಕಾಲಕ್ಕೆ ಸೇರಿದ್ದು, ಈ ಪ್ರದೇಶದಲ್ಲಿ ಜೋಳ ಬೆಳೆಯುತ್ತಿದ್ದುದನ್ನು ಹೇಳಲಾಗಿದೆ[೬೨]. ಕ್ರಿ.ಶ. ೮ನೇ ಶತಮಾನದ ಶ್ರೀಪುರುಷನ ಹುಲ್ಲೇನಹಳ್ಳಿ ಪಟದಲ್ಲಿ (ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ) ಹೇಳಿರುವ ಪ್ರಕಾರ ಈ ಪ್ರದೇಶದಲ್ಲಿ ಹುಣಸೆಮರಗಳನ್ನು ಬೆಳೆಯುತ್ತಿದ್ದ ಬಗ್ಗೆ ಹೇಳಲಾಗಿದೆ[೬೩]. ರಾಜಮಲ್ಲನ ಪೆರ್ಜ್ಜರಂಗಿ ದಾನಶಾಸನವು (ಸಾಲಿಗ್ರಾಮ ಎಡೆತೋರೆ ತಾಲ್ಲೂಕು, ಶಿವಮೊಗ್ಗ ಜಿಲ್ಲೆ) ಇಲ್ಲಿ ಜೋಳ ಮತ್ತು ಕಂಗು ಬೆಳೆಯುತ್ತಿದ್ದ ಬಗ್ಗೆ ಹೇಳಲಾಗಿದೆ. ದಾವಣಗೆರೆ (ದಾವಣಗೆರೆಯ ತಾಲ್ಲೂಕು ಚಿತ್ರದುರ್ಗ ಜಿಲ್ಲೆ) ಗಂಗರ ದಾನಶಾಸನದಲ್ಲಿ ಜೋಳ, ಕಂಗು ಬೆಳೆಯುತ್ತಿದ್ದ ಬಗ್ಗೆ ಹೇಳಲಾಗಿದೆ. ಕ್ರಿ.ಶ. ೯೦೨ರ ಸತ್ಯವಾಕ್ಯ ಪೆರ್ಮಾನಡಿ ರಾಜಮಲ್ಲನ ನರಸಪುರ ಪಟ ಶಾಸನದಲ್ಲಿ (ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ) ಭತ್ತ, ತೆಂಗಿನ ತೋಟ ಇದ್ದುದನ್ನು ಉಲ್ಲೇಖಿಸಿದ್ದಾರೆ. ಗಂಗರ ಕಾಲದಲ್ಲಿ ಬೆಳೆಯುತ್ತಿದ್ದ ಪ್ರಮುಖ ಬೆಳೆಗಳೆಂದರೆ ಆಹಾರ ಧಾನ್ಯಗಳಾದ ರಾಗಿ, ಜೋಳ, ದ್ವಿದಳ ಧಾನ್ಯಗಳು, ಎಣ್ಣೆ ಬೀಜಗಳು, ಹತ್ತಿ, ಕಬ್ಬು, ತರಕಾರಿಗಳು, ಹಣ್ಣುಗಳು, ಮಸಾಲೆಗಳು, ಔಷಧೀಯ ಗಿಡಮೂಲಿಕೆಗಳು ಮತ್ತು ತೋಟದ ಬೆಳೆಗಳಾದ ಬಾರ್ಲಿ, ಮೆಕ್ಕೆ ಜೋಳ ಮತ್ತು ರಾಗಿ ಕೆಲವು ಪ್ರಮುಖ ಧಾನ್ಯಗಳಾಗಿದ್ದವು. ಈ ಎಲ್ಲ ಆಹಾರಗಳನ್ನು ತೇವ ಮತ್ತು ಒಣಭೂಮಿಗಳಲ್ಲಿ ಕೃಷಿ ಮಾಡಬಹುದು. ಗಂಗವಾಡಿಯ ಕೃಷಿಯಲ್ಲಿ ಭತ್ತವು ಅತ್ಯಂತ ಪ್ರಧಾನ ಬೆಳೆಯಾಗಿತ್ತು. ಭತ್ತವನ್ನು ಬಿತ್ತನೆಯ ನಂತರ ಸ್ಥಳಾಂತರಿಸಲಾಗುತ್ತಿತ್ತು. ಬುದ್ಧನ ಕಾಲದಲ್ಲಿ ೨೫ ಬಗೆಯ ಭತ್ತವನ್ನು ಬೆಳೆಯುತ್ತಿದ್ದ ಬಗ್ಗೆ ಹೇಳಲಾಗಿದೆ. ತೋಟಗಳಲ್ಲಿ ಎಲ್ಲಾ ರೀತಿಯ ಹಣ್ಣುಗಳಿದ್ದವು ಅವುಗಳೆಂದರೆ, ಮಾವು, ಬಾಳೆ, ಕಿತ್ತಳೆ, ನಿಂಬೆಹಣ್ಣು, ತೆಂಗು, ಮತ್ತು ದ್ರಾಕ್ಷಿಗಳನ್ನು ಬೆಳೆಯುತ್ತಿದ್ದರು. ಇಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಸಲಾಗುತ್ತಿತ್ತು ಅವುಗಳು ಕಾಳು ಮೆಣಸು, ಏಲಕ್ಕಿ, ಹುಣಸೆ, ಶುಂಠಿ, ವೀಳ್ಯದೆಲೆ, ಹಿಪ್ಪನೇರಳೆ, ಅಡಕೆ, ಮೊದಲಾದವುಗಳಾಗಿದ್ದವು. ಕರ್ನಾಟಕವು ಉತ್ತಮ ಗುಣಮಟ್ಟದ ಜೇನು ಉತ್ಪಾದನೆಗೆ ಹೆಸರುವಾಸಿಯಾಗಿದೆ. ದಾಖಲೆಗಳಲ್ಲಿ ಗಂಗರ ಕಾಲದಲ್ಲಿ ಬರಗಾಲ ಅಥವಾ ಬರ ಪುನರಾವರ್ತಿತವಾದದ್ದು ಉಲ್ಲೇಖವಿಲ್ಲ. ಆದರೆ ಏಳು ಶತಮಾನಗಳ ದೀರ್ಘ ಅವಧಿಗಳಲ್ಲಿ ಕೊರತೆಗಳ ಬಗ್ಗೆ ನಿರ್ಲಕ್ಷಿಸಲು ಸಾಧ್ಯವಿಲ್ಲ. ಕಾವೇರಿ ನದಿಯ ಜಲಾಶಯನದ ಹೃದಯದ ಭೂಮಿಯಾಗಿರುವ ಗಂಗವಾಡಿಯೂ ಬರ ಪರಿಸ್ಥಿತಿಗೆ ಒಳಪಟ್ಟಿರುವುದನ್ನು ನಾವು ಗಮನಿಸಬಹುದಾಗಿದೆ. ಅಸಂಖ್ಯ ಶಾಸನಗಳಲ್ಲಿ ಭತ್ತದ ಗದ್ದೆಯನ್ನು ದಾನ ನೀಡಿರುವ ಬಗ್ಗೆ ಮತ್ತು ಉತ್ತಮ ಭತ್ತದ ಇಳುವರಿ ಇದ್ದುದನ್ನು ಉಲ್ಲೇಖಿಸಲಾಗಿದೆ. ಇವರ ಕಾಲದಲ್ಲಿ ಕೃಷಿಯು ಪ್ರವರ್ಧಮಾನಕ್ಕೆ ಬಂದದ್ದು ಸ್ಪಷ್ಟವಾಗುತ್ತದೆ. ಗಂಗ ಎನ್ನುವ ಪದವು 'ಗಂಗಾಧಿಕಾರಸ್' ಎನ್ನುವ ಕೃಷಿ ಪದದಿಂದ ಬಂದಿದೆ.

ದಾಖಲೆಗಳಲ್ಲಿ ವರ್ಷದಲ್ಲಿ ಎರಡು ಬೆಳೆ ತೆಗೆಯುತ್ತಿದ್ದ ಬಗ್ಗೆ ಹೇಳಲಾಗಿದ್ದು, ಮೇಲುಕೋಟೆ ಶಾಸನದಲ್ಲಿ ಮೂರನೇ ಮಾಧವನಿಗೆ ಸಂಬಂಧಿಸಿದ ದಾಖಲೆಯಲ್ಲಿ ಬೌದ್ಧರಿಗೆ ದಾನ ನೀಡಿದ ಭೂಮಿಯಲ್ಲಿ ವರ್ಷದಲ್ಲಿ ಎರಡು ಬಾರಿ ಶರತ್ಕಾಲ ಹಾಗೂ ಬೇಸಿಗೆಯಲ್ಲಿ ಬೆಳೆಯನ್ನು ತೆಗೆಯುತ್ತಿದ್ದ ಬಗ್ಗೆ ಉಲ್ಲೇಖಿಸಲಾಗಿದೆ. ಅಕ್ಕಿ, ರಾಗಿ, ಮೆಕ್ಕೆಜೋಳ ಮೊದಲಾದ ಆಹಾರ ಧಾನ್ಯಗಳನ್ನು ಶರತ್ಕಾಲದ ನವಂಬರ್ ಮತ್ತು ದಶಂಬರ್‌ನಲ್ಲಿ ಕೊಯ್ಲು ಮಾಡುತ್ತಿದ್ದ ಬೆಳೆಯನ್ನು ಮುಂಗಾರು ಬೆಳೆ ಎನ್ನುವರು. ಎರಡನೆಯ ಬೆಳೆಯನ್ನು ಶರತ್ಕಾಲದಲ್ಲಿ

ಬೆಳೆಯುತ್ತಿದ್ದ ಬೆಳೆಗಳು ದ್ವಿದಳ ಬೆಳೆಗಳು, ಎಣ್ಣೆ ಬೀಜಗಳು ಮೊದಲಾದವುಗಳನ್ನು ಬೆಳೆಯಲಾಗುತ್ತಿತ್ತು. ಸುಗ್ಗಿಯ ಪ್ರಸ್ತುತ ದಿನಗಳಲ್ಲಿ ಅಂದರೆ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಕೊಯ್ಲು ನಡೆಯುತ್ತದೆ. ಹಣ್ಣುಗಳಾದ ಕಿತ್ತಳೆ ಮತ್ತು ಮಾವುಗಳನ್ನು ಬೆಳೆಯುತ್ತಿದ್ದರು. ಆದರೆ ತೆಂಗು, ಬಾಳೆ ಮತ್ತು ಕಬ್ಬು ಬೆಳೆಯಲು ಯಾವುದೇ ನಿರ್ದಿಷ್ಟ ಕಾಲವಿರಲಿಲ್ಲ.

ಗಂಗಾವತಿಯಲ್ಲಿ ಉತ್ತಮ ಮಳೆಯಾಗುತ್ತಿದ್ದರಿಂದ ನೀರಿನ ಅಭಾವವಿಲ್ಲದೆ ಉತ್ತಮ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಶಾಸನದಲ್ಲಿ ಮೂರನೇ ಮಾರಸಿಂಹನು ನಿರ್ದಿಷ್ಟ ಫಲವತ್ತಾದ ಭೂಮಿಯ ತುಂಡನ್ನು ದಾನ ಮಾಡಿದ ಬಗ್ಗೆ ಹೇಳಲಾಗಿದೆ. ಅದೇ ರೀತಿ ಎರಡನೆಯ ರಾಚಮಲ್ಲನು ವಿವಿಧ ಮಣ್ಣುಗಳಿರುವ ಭೂಮಿಯನ್ನು ದಾನ ನೀಡಿದ ಬಗ್ಗೆ ಹೇಳಲಾಗಿದೆ. ಇನ್ನೊಂದು ಶಾಸನದಲ್ಲಿ ಮಣ್ಣನ್ನು ಮಂಡುವಿನ ಮಣ್ಣು (ಬಾವಿ ಮತ್ತು ತೊಟ್ಟಿಗಳ ನೀರು ಸರಬರಾಜಾಗುತ್ತಿದ್ದ ಮಣ್ಣು) ಮತ್ತು ನೀರ್ ಮಣ್ಣು (ಮಳೆಯಿಂದ ಪಡೆದ ನೀರು) ಎಂದು ಗುರುತಿಸಲಾಗಿದೆ. ಕರ್ನಾಟಕದ ಎಲ್ಲಾ ಕೃಷಿ ಭೂಮಿಗಳಿಗೆ ಬೆಳೆಯನ್ನು ಬೆಳೆಯಲು ಉತ್ತಮವಾದ ನೀರಿನ ಮೂಲಗಳಿವೆ. ಶ್ರೀಪುರುಷನ ಶಾಸನದಲ್ಲಿ ಕಪ್ಪು ಮಣ್ಣಿನ ಬಗ್ಗೆ ಹೇಳಲಾಗಿದೆ.

ಕೃಷಿ ಕಾರ್ಯಕ್ಕೆ ಉಪಕರಣಗಳು ಅತ್ಯಂತ ಅಗತ್ಯವಾಗಿದೆ. ಮಹಾಭಾರತ ಮತ್ತು ರಾಮಾಯಣ ಕಾಲದಲ್ಲಿ ನೇಗಿಲನ್ನು ಉಪಯೋಗಿಸುತಿದ್ದು, ಈ ನೇಗಿಲುಗಳನ್ನು ಹೊರಲು ಒಂದು ಜೊತೆ ಕೋಣಗಳನ್ನು ಬಳಸುತ್ತಿದ್ದರು. ಭೂಮಿಯನ್ನು ನೇಗಿಲಿನಿಂದ ಉಳುತ್ತಿದ್ದರು. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕಾರ್ಯದಲ್ಲಿ ಪೈರನ್ನು ಕೊಯ್ಯಲು ಮಟ್ಟುಗತ್ತಿ ಉಪಯೋಗಿಸುತ್ತಾರೆ. ಪೈರನ್ನು ಕೊಯ್ಯಲು ಬೇರೆ ಉಪಕರಣಗಳನ್ನು ಬಳಸಲಾಗುತ್ತಿತ್ತು ಅವುಗಳು ನಲಿಕೆ, ಹಾರೆಗೋಲು, ಬುಟ್ಟಿ, ಮಟ್ಟುಗತ್ತಿ, ಕೊಡಲಿ ಮುಂತಾದವುಗಳು. ಕುಡಗೋಲಿನಿಂದ ಬೆಳೆಗಳ ಕೊಯ್ಲು ಮಾಡಲಾಗುತ್ತಿತ್ತು. ಸನಿಕೆಯಿಂದ ಅಗೆದು ಬುಟ್ಟಿ, ಕುಯಿಲುಗತ್ತಿ ಕೊಡಲಿ ಮೊದಲಾದವುಗಳನ್ನು ಬಳಸಲಾಗುತ್ತದೆ. ಶಾಸನಗಳಲ್ಲಿ ನೀರು ಎತ್ತಲು ಎತ್ತುಗಳನ್ನು ಬಳಸುತ್ತಿದ್ದ ಬಗ್ಗೆ ಹೇಳಲಾಗಿದೆ

ಗಂಗರ ಕಾಲದ ನೀರಾವರಿಗೆ ಸಂಬಂಧಿಸಿದ ಮೂಲಗಳು ನದಿಗಳು ಕಾಲುವೆಗಳು, ಕೆರೆಗಳು ಕೊಳಗಳು, ಬಾವಿ, ಹೊಂಡ, ಕೃತಕ ಜಲಾಶಯಗಳು ಮಳೆಯ ನೀರನ್ನು ಸರೋವರ ಇವುಗಳಿಂದ ನೀರನ್ನು ವ್ಯವಸಾಯಕ್ಕೆ ಬಳಸುತ್ತಿದ್ದುದನ್ನು ಕಾಣಬಹುದು. ಉದಾ: ಕ್ರಿ.ಶ. ೫ನೆ ಶತಮಾನದ ಎರಡನೆ ಮಾಧವನು ಕೂಟಲೂರು (ಗುಬ್ಬಿ ತಾಲ್ಲೂಕು) ತಾಮ್ರಪಟಗಳು ಮರುಕೆರೆ ವಿಷಯದಲ್ಲಿ ತೊಲ್ಲ ನದಿಯಿದ್ದುದನ್ನು ತಿಳಿಸುತ್ತದೆ. ಆರನೇ ಶತಮಾನದ ಮುಸ್ಕರನ ಕಿರುಮೊರೆಕೋಲಿ ತಾಮ್ರಪಟಗಳು ಕಪಿನಿ (ಕಪುನಿ) ನದಿ ಇದ್ದುದನ್ನು ತಿಳಿಸುತ್ತವೆ. ಕ್ರಿ.ಶ. ೭೧೩-೧೪ರ ಶಿವಮಾರನ ಹಲ್ಲೆಗೆರೆ (ಮಂಡ್ಯ ತಾಲ್ಲೂಕು) ತಾಮ್ರಪಟಗಳು ಕೆರೆಗೋಡು ವಿಷಯದಲ್ಲಿ ಕೀಲಿನ ನದಿಗೆ ಅಡ್ಡಲಾಗಿ ಸೇತುವೆಯನ್ನು ಕಟ್ಟಿದ್ದನ್ನು ಹಾಗೂ ಆ ನದಿಯ ದಕ್ಷಿಣ ಭಾಗದಲ್ಲಿ ಪಲ್ಲತಟಾಕ ಎಂಬ ಗ್ರಾಮವನ್ನು ಶಿವಮಾರನು ಸ್ಥಾಪಿಸಿ ಅದನ್ನು ಬ್ರಾಹ್ಮಣರಿಗೆ ನೀಡಿದ್ದನ್ನು ತಿಳಿಸುತ್ತದೆ. ದತ್ತಿ ನೀಡಿದ ಗ್ರಾಮದ ಎಲ್ಲೆಗಳನ್ನು ಸೂಚಿಸುವಾಗ ಅಲ್ಲಿದ್ದ ಕೆರೆಗಳ ವಿವರಗಳನ್ನು ನೀಡುತ್ತದೆ. ಅವುಗಳೆಂದರೆ ಕಿರುಕೊನ್ನಿಂದ ಕೆರೆ, (ಕೀಲಿನ ನದಿ) ಪೆಗ್ಗೊನ್ನಿಂದ ಕೆರೆ, ಹಾಗೂ ಇಗ್ಗರೆ ನದಿ[೮]. ಕೃಷಿಯ ಮಿತವ್ಯಯವಲ್ಲಿ ದನಕರುಗಳು, ನೇಗಿಲು, ಸಾರಿಗೆ ಮುಂತಾದವುಗಳ ಬಗ್ಗೆ ಶಾಸನಗಳಲ್ಲಿ ಮಾಹಿತಿಗಳು ದೊರೆಯುತ್ತವೆ. ರೈತರು ತಮ್ಮ ಉತ್ಪನ್ನದ ೧/೬ರಿಂದ ೧/೧೨ ಭಾಗವನ್ನು ಮಾತ್ರ ರಾಜ್ಯಕ್ಕೆ ಸಲ್ಲಿಸುತ್ತಿದ್ದರು.

ಆಧಾರಸೂಚಿಗಳು

೧. ಪಿ. ಶೋಭಾ, 'ಕರ್ನಾಟಕದಲ್ಲಿ ಆರಂಭಿಕ ಕೃಷಿಯ ಉಗಮ, ವಿಕಾಸ ಮತ್ತು ತಂತ್ರಗಾರಿಕೆ-ಒಂದು ಅವಲೋಕನ', 'ಇತಿಹಾಸ ದರ್ಶನ' (ಬೆಂಗಳೂರು, ೨೦೧೨) ಪುಟ ೨೯.

೨. ಬೆಂಜಮಿನ್ ಲೂಯಿ ರೈಸ್, 'ಮೈಸೂರು ಅಂಡ್ ಕೂರ್ಗ್ ಫ್ರಮ್ ದಿ ಇನ್ ಸ್ಕ್ರಿಪ್ಷನ್ಸ್', ಮರುಮುದ್ರಣ, (ನವದೆಹಲಿ, ೧೯೮೬), ಪುಟಗಳು ೧೭೯-೧೮೦.

೩. ಎಂ.ವಿ. ಕೃಷ್ಣರಾವ್., 'ದಿ ಗಂಗಾಸ್ ಆಫ್ ತಲಕಾಡ್', (ಮದ್ರಾಸ್, ೧೯೩೬), ಪುಟಗಳು ೧೫೪-೧೫೬.

೪. ಕುಪ್ಪುಸ್ವಾಮಿ ಜಿ.ಆರ್., 'ಎಕಾನಮಿಕ್ ಕಂಡೀಷನ್ಸ್ ಇನ್ ಕರ್ನಾಟಕ (ಕ್ರಿ.ಶ. ೯೭೩-೧೩೩೬)", ಕರ್ನಾಟಕ ವಿಶ್ವವಿದ್ಯಾನಿಲಯ, (ಧಾರವಾಡ, ೧೯೭೫).

೫. ನೀಲಕಂಠಶಾಸ್ತ್ರಿ, 'ಎ ಹಿಸ್ಟರಿ ಆಫ್ ಸೌತ್ ಇಂಡಿಯಾ', (ನ್ಯೂ ಡೆಲ್ಲಿ, ೧೯೭೬), ಪುಟಗಳು ೩೧೩-೩೪೦.

೬ ಡಾ. ಎಂ. ಚಿದಾನಂದಮೂರ್ತಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' (ಕ್ರಿ.ಶ.೪೫೦–೧೧೫೦), (ಬೆಂಗಳೂರು, ೧೯೭೯) ಪುಟಗಳು ೪೦೩–೪೧೩.

೭. ಡಾ. ಶ್ರೀನಿವಾಸ್ ರಿತ್ತಿ, 'ದ ಗಂಗಾಸ್ ಪಿರಿಯಡ್', ಎಚ್.ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್, ಅವಲೋಕನ (ಸಂ.), (ಬೆಂಗಳೂರು, ೧೯೮೫).

೮. ಬಿ.ಆರ್. ಹಿರೇಮಠ, 'ಶಾಸನಗಳಲ್ಲಿ ಕರ್ನಾಟಕದ ವರ್ತಕರು', ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ, (ಧಾರವಾಡ, ೧೯೮೬) ಪುಟ೪.

೯. ನೀಲತ್ತಹಳ್ಳಿ ಕಸ್ತೂರಿ, 'ಕರ್ನಾಟಕದಲ್ಲಿ ಕೆರೆ ನೀರಾವರಿ', ಪ್ರಸಾರಾಂಗ, (ಹಂಪಿ, ೨೦೦೦).

೧೦. ಮಾಲಿನಿ ಅಡಿಗ, 'ದ ಮೇಕಿಂಗ್ ಆಫ್ ಸದರ್ನ್ ಕರ್ನಾಟಕ ಸೊಸೈಟಿ, ಪಾಲಿಟಿಕ್ಸ್ ಆ್ಯಂಡ್ ಕಲ್ಚರ್ ಇನ್ ದ ಅರ್ಲಿ ಮೆಡಿವಲ್ ಪಿರಿಯಡ್ ಕ್ರಿ.ಶ. ೪೦೦–೧೦೩೦', (ಚೆನ್ನೈ, ೨೦೦೬), ಪುಟಗಳು ೨೧–೮೭.

೧೧. ಡಾ. ಎಂ.ವಿ. ಕೃಷ್ಣಪ್ಪ, 'ಸೋಷಿಯಲ್ ಆ್ಯಂಡ್ ಎಕಾನಾಮಿಕ್ ಕಂಡೀಷನ್ಸ್ ಆಫ್ ಕರ್ನಾಟಕ (ಎ.ಡಿ. ೪೦೦–೧೦೦೦)', (ಮೈಸೂರು, ೧೯೯೪).

೧೨. ಮಾಲಿನಿ ಅಡಿಗ ಚೆನ್ನೈ, ೨೦೦೬, ಪುಟ ೨೨.

೧೩. ಅದೇ., ಪುಟ ೨೨

೧೪. ಕೆ.ವಿ.ರಮೇಶ್, (ಸಂ) ಇನ್‌ಸ್ಕ್ರಿಪ್ಷನ್ಸ್ ಆಫ್ ವೆಸ್ಟರ್ನ್ ಗಂಗಸ್, (ದೆಹಲಿ, ೧೯೮೪) ಪುಟಗಳು. ೧೪೫–೧೪೯.

೧೫. ಮಾಲಿನಿ ಅಡಿಗ ಚೆನ್ನೈ, ೨೦೦೬, ಪುಟ ೨೩.

೧೬. ಅದೇ., ಪುಟ ೨೩.

೧೭. ಅದೇ., ಪುಟ ೨೫.

೧೮. ಅದೇ., ಪುಟ ೨೬.

೧೯. ಅದೇ., ಪುಟ ೨೮.

೨೦. ಅದೇ., ಪುಟ ೨೮.

೨೧. ಅದೇ., ಪುಟ ೨೮.

೨೨. ಅದೇ., ಪುಟ ೨೯.

೨೩. ಕೆ.ವಿ. ರಮೇಶ್, ಪೂರ್ವೋಕ್ತಿ ಪುಟ ೨೬೫.

೨೪. ಅದೇ., ಪುಟ ೨೯.

೨೫. ಅದೇ., ಪುಟ ೨೯.

೨೬ ಅದೇ., ಪುಟ ೨೯.

೨೭. ಕೆ.ವಿ. ರಮೇಶ್, ಪೂರ್ವೋಕ್ತಿ ಪುಟ ೩೯೫.

೨೮. ಅದೇ., ಪುಟಗಳು ೪೬೩–೬೪.

೨೯. ಅದೇ., ಪುಟ ೩೦.

೩೦. ಅದೇ., ಪುಟ ೩೦.

೩೧. ಅದೇ., ಪುಟಗಳು ೩೦–೩೧.

೩೨. ಅದೇ., ಪುಟಗಳು ೨೭–೨೯.

೩೩. ಅದೇ., ಪುಟಗಳು ೩೭–೩೮.

೩೪. ಅದೇ., ಪುಟಗಳು ೪೦–೪೩.

೩೫. ಅದೇ., ಪುಟಗಳು ೫೬–೬೦.

೩೬. ಅದೇ., ಪುಟಗಳು ೮೫–೮೮.

೩೭. ಅದೇ., ಪುಟಗಳು ೧೦೯–೧೧೦.

೩೮. ಅದೇ., ಪುಟಗಳು ೧೩೫–೧೩೯.

೩೯. ಅದೇ., ಪುಟಗಳು ೧೫೨–೫೪.

೪೦. ಅದೇ., ಪುಟಗಳು ೧೬೯–೭೩.

೪೧. ಅದೇ., ಪುಟಗಳು ೧೭೫–೮೧.

೪೨. ಅದೇ., ಪುಟ ೧೭೪.

೪೩. ಅದೇ., ಪುಟ ೨೭೨.

೪೪. ಅದೇ., ಪುಟಗಳು ೩೦೩–೦೫.

೪೫. ಅದೇ., ಪುಟಗಳು ೧೪೩–೪೪.

೪೬ ಬಿ. ಶೇಖ್ ಅಲಿ, ಪೂರ್ವೋಕ್ತ, ಪುಟ ೨೧೬

೪೭ ಅದೇ., ಪುಟ ೨೨೫

೪೮. ಕೆ.ವಿ. ರಮೇಶ್, ಪೂರ್ವೋಕ್ತ ಪುಟ ೪೮–೫೧.

೪೯. ಅದೇ., ಪುಟಗಳು ೫೬–೬೦.

೫೦. ಅದೇ., ಪುಟಗಳು ೧೦೯–೧೦.

೫೧. ಅದೇ., ಪುಟಗಳು ೧೩೫–೩೯.

೫೨. ಅದೇ., ಪುಟಗಳು ೧೪೩–೪೪.

೫೩. ಅದೇ., ಪುಟಗಳು ೧೫೨–೫೪.

೫೪. ಅದೇ., ಪುಟಗಳು ೨೦೬–೧೬.

೫೫. ಅದೇ., ಪುಟಗಳು ೨೪೦–೪೫.

೫೬ ಅದೇ., ಪುಟಗಳು ೨೮೨–೯೨.

೫೭. ಅದೇ., ಪುಟಗಳು ೨೯೫–೩೦೦.

೫೮. ಅದೇ., ಪುಟಗಳು ೩೨೭–೩೩.

೫೯. ಬಿ.ಶೇಖ್ ಅಲಿ, ಪೂರ್ವೋಕ್ತ, ಪುಟ ೨೨೬

೬೦. ಹನುಮನಾಯಕ, 'ಗಂಗರ ಕಾಲದ ನೀರಾವರಿ ವ್ಯವಸ್ಥೆಯ ಅಧ್ಯಯನದ ಕೆಲವು ಸಮಸ್ಯೆಗಳು: ಒಂದು ವಿಶ್ಲೇಷಣೆ', ಸ್ಟಡೀಸ್ ಇನ್ ಕರ್ನಾಟಕ ಹಿಸ್ಟೋರಿ ಆ್ಯಂಡ್ ಕಲ್ಚರ್, (ಸಂ.೧೦), ಕರ್ನಾಟಕ ಹಿಸ್ಟೋರಿ ಕಾಂಗ್ರೆಸ್ ಫೆಬ್ರವರಿ–೨೦೧೧, (ಮೈಸೂರು, ೨೦೧೧) ಪುಟಗಳು ೧೬೩–೧೬೪.

೬೧. ಖಂಡುಗ ಎಂದರೆ ಭೂ ಆಳತೆ ಮಾಪನ.

೬೨. ಖಂಡುಕ ಎಂದರೆ ಅಳತೆಯ ವಿಸ್ತಾರ.

೬೩. ಖಂಡುಕವಾಪ–ಒಂದು ಖಂಡುಕ ಪ್ರದೇಶದಲ್ಲಿ ಧಾನ್ಯಗಳನ್ನು ಬೆಳೆಸುವ ಭೂಮಿಯ ಅವಶ್ಯಕವಾದ ಆಳತೆ ಮಾಪನವನ್ನು ಖಂಡುಕವಾಪಾ ಎಂದು ಕರೆಯುತ್ತಾರೆ.

೫೧

ಬಾಸವೂರು ಪರಿಸರದ ಶಾಸನೋಕ್ತ ಮಹಿಳೆಯರು

ಪ್ರೊ. ಶಿವಯೋಗಿ ಕೋರಿಶೆಟ್ಟರ*

ಪ್ರಾಚೀನ ಭಾರತದ ಸಮಾಜದಲ್ಲಿ ಮಹಿಳೆ ಹಲವಾರು ಏಳುಬೀಳುಗಳನ್ನು ಕಂಡಿದ್ದಾಳೆ. ಇದರ ಮಧ್ಯೆಯೂ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಅನೇಕ ಮಹಿಳೆಯರು ತಮಗೆ ಒದಗಿದ ಅವಕಾಶಗಳನ್ನು ಬಳಸಿಕೊಂಡು, ತಮ್ಮಲ್ಲಿನ ಆಡಳಿತ ಪ್ರತಿಭೆ ಮತ್ತು ಸಾಂಸ್ಕೃತಿಕ ಸಾಧನೆಗಳ ಮೂಲಕ ಪ್ರಖ್ಯಾತಿ ಪಡೆದಿದ್ದಾರೆ. ಇವರು ಸಾಮಾನ್ಯವಾಗಿ ಅರಸರು, ಮಾಂಡಳಿಕರು, ನಾಳ್ಗಾವುಂಡರು, ಗಾವುಂಡರು, ಅಧಿಕಾರಿಗಳ ಪತ್ನಿಯರು ಇಲ್ಲವೆ ಶ್ರೀಮಂತ ವರ್ಗಕ್ಕೆ ಸೇರಿದವರಾಗಿದ್ದಾರೆ. ಪ್ರತಿಷ್ಠಿತರ ಬಹುಪತ್ನಿತ್ವವನ್ನು ಅಂದಿನ ಸಮಾಜ ಒಪ್ಪಿದ್ದು, ಚಾಲುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನಗೆ ೧೯ ಜನ ರಾಣಿಯರು ಇದ್ದ ವಿಷಯ ತಿಳಿಯುತ್ತದೆ.[೧] ಅನೇಕ ರಾಣಿಯರು ರಾಜಕೀಯ ಚತುರೆಯರೂ ಲೋಕಾನುಭವ ಉಳ್ಳವರೂ ಆಗಿದ್ದರು. ಅವರು ಅಂತಃಪುರದ ಗೊಂಬೆಗಳಾಗಿರದೆ, ರಾಜಕೀಯ ಧಾರ್ಮಿಕ ಸಾಮಾಜಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದನ್ನು ಕಾಣಬಹುದು. ಅದರಂತೆ ಸಾಮಾನ್ಯ ವರ್ಗದ ಮಹಿಳೆಯರೂ, ಸಮಾಜ ಒಪ್ಪಿತ ಮೌಲ್ಯಗಳ ರಕ್ಷಣೆಗೆಗಾಗಿ, ತ್ಯಾಗ, ಬಲಿದಾನಗಳ ಮೂಲಕ ತಮ್ಮತನವನ್ನು ಮೆರೆದ್ದಾರೆ.

ಪ್ರಾಚೀನ ಕುಂತಳ ದೇಶದ, ಬನವಾಸಿ-೧೨೦೦೦ದ ಆಧೀನಕ್ಕೊಳಪಟ್ಟ ಹಲವು ಆಡಳಿತ ಕಂಪಣಗಳಲ್ಲಿ ಬಾಸವೂರು-೧೪೦ ಕಂಪಣವೂ ಒಂದು. ಅದು ಇಂದಿನ ಹಾವೇರಿ ಜಿಲ್ಲೆಯ ಹಾವೇರಿ, ಹಾನಗಲ್ ಹಾಗೂ ಬ್ಯಾಡಗಿ ತಾಲೂಕಿನ ಪ್ರದೇಶಗಳನ್ನು ಒಳಗೊಂಡಿತ್ತು. ಕ್ರಿ.ಶ. ೮ನೇ ಶತಮಾನದಿಂದ ಕ್ರಿ.ಶ. ೧೩ನೇ ಶತಮಾನದ ಅಂತ್ಯದವರೆಗೆ ಈ ಆಡಳಿತ ಕಂಪಣ ಅಸ್ತಿತ್ವ ಹೊಂದಿತ್ತು. ಇಂದಿನ ಹಾನಗಲ್ ತಾಲೂಕಿನ ಹಿರೇಬಾಸೂರು ಈ ಕಂಪಣದ ಕೇಂದ್ರಸ್ಥಳ ವಾಗಿತ್ತು. ಕಂಪಣ ಬಾಸವೂರು ಪರಿಸರದ ಹಲವಾರು ಶಾಸನಗಳಲ್ಲಿ ಅನೇಕ ಮಹಿಳೆಯರು ತಮ್ಮ ಸಾಧನೆಗಳ ಮೂಲಕ ಉಲ್ಲೇಖಿತರಾಗಿದ್ದಾರೆ. ಅಂತಹ ಮಹಿಳೆಯರನ್ನು ಪರಿಚಯಿಸುವುದೇ ಈ ಲೇಖನದ ಪ್ರಮುಖ ಉದ್ದೇಶ.

ಬಾಸವೂರು-೧೪೦ರ ಮೇಲೆ ಪ್ರಭುತ್ವ ಹೊಂದಿದ್ದ ಅನೇಕ ಸಾಮ್ರಾಟರು ತಮ್ಮ ರಾಣಿಯರನ್ನು ವಿವಿಧ ಪ್ರದೇಶಗಳ ಆಡಳಿತ ನೋಡಿಕೊಳ್ಳಲು ನೇಮಿಸಿದ್ದರು. ಕಲ್ಯಾಣ ಚಾಲುಕ್ಯ ಚಕ್ರವರ್ತಿ ೧ನೇ ಸೋಮೇಶ್ವರನ ಹಿರಿಯರಸಿ ಮೈಳಲದೇವಿ ಬನವಾಸಿ ಪ್ರಾಂತವನ್ನು ನೋಡಿಕೊಳ್ಳುತ್ತಿದ್ದಳು ಎಂಬುದಾಗಿ ಹತ್ತಿರದ ತಿಳವಳ್ಳಿ ಶಾಸನ ತಿಳಿಸುತ್ತದೆ.[೨] ೬ನೇ ವಿಕ್ರಮಾದಿತ್ಯನ ರಾಣಿ ಜಾಕಲಮಹಾದೇವಿ ಪ್ರದೇಶವೊಂದನ್ನು ಆಳುತ್ತಿದ್ದುದನ್ನು ಹಿರೆಲಿಂಗದಳ್ಳಿ ಶಾಸನವು ಉಲ್ಲೇಖಿಸಿದೆ.[೩]

ಚಕ್ರವರ್ತಿಯರ ಪತ್ನಿಯರು ಮಂಡಲ, ಕಂಪಣ ಇಲ್ಲವೆ ಅಗ್ರಹಾರಗಳನ್ನು ಆಳುತ್ತಿದ್ದಂತೆ ಮಂಡಲೇಶ್ವರ ಸಾಮಂತರ ಪತ್ನಿಯರೂ ಪುರ, ಗ್ರಾಮಗಳನ್ನು ಆಳುತ್ತಿದ್ದರು. ರಾಷ್ಟ್ರಕೂಟ ಅಮೋಘವರ್ಷನ ಪ್ರಿಯತನಯಾತ್ಮಜ ಇಂದನು ಬನವಾಸಿ-೧೨೦೦೦ವನ್ನು ಆಳುತ್ತಿರುವಾಗ ಆತನ ಮನೋವಲ್ಲಭೆ ಗೋವಿನ್ದಬ್ಬೆ ಊರನಾಳೆ ಎಂಬ ಉಲ್ಲೇಖ ಬರುತ್ತದೆ.[೪] ಹಾಗೆಯೇ ಚಾಲುಕ್ಯ ೨ನೇ ಜಯಸಿಂಹನ ಕಾಲದಲ್ಲಿ ಬನವಾಸಿ-೧೨೦೦೦ವನ್ನು ಆಳುತ್ತಿದ್ದ ಕುಂದರಾಜನ ಹಲವಾರು ರಾಣಿಯರು ವಿವಿಧ ಊರುಗಳ ಆಡಳಿತ ಹೊಂದಿದ್ದನ್ನು ನೋಡಬಹುದು. ಕುಂದರಾಜನ ಒಬ್ಬ ಪತ್ನಿ ಜೋಗಬ್ಬೆ ಎಂಬವಳು ಅಜ್ಜಡಿಯ(ಕಳ್ಳಿಹಾಳ) ಆಡಳಿತವನ್ನು ನೋಡಿಕೊಳ್ಳುತ್ತಿದ್ದಳು.[೫] ಇದೇ ಅರಸನ ಇನ್ನೊಬ್ಬ ಪತ್ನಿ, ಪಂಪಾದೇವಿ ಎಂಬವಳು ಜಿಡುಗೂರ (ದಿಡಗೂರು ಹಾವೇರಿ ತಾಲೂಕ) ಊರಾಡಳಿತ ವಹಿಸಿಕೊಂಡಿದ್ದರು[೬].

ರಾಜಕೀಯದಂತೆ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿಯೂ ರಾಣಿಯರು ಪಾಲ್ಗೊಂಡಿದ್ದಾರೆ. ಚಾಳುಕ್ಯ ದೊರೆ ೨ನೇ ಜಯಸಿಂಹ ಪೊಟ್ಟಳಕೆರೆಯ ಬೀಡಿನಲ್ಲಿರುವಾಗ ಲಕ್ಷ್ಮಾದೇವಿಯರ (ಬಹುಶಃ ಆತನ ರಾಣಿ) ಬಿನ್ನಪದ ಮೇರೆಗೆ ಅಜ್ಜಡಿಯ ಸಹದೇಶ್ವರ ದೇವರಿಗೆ ಶ್ರೀಕಂಠಭಟ್ಟಾರಕರ ಹಸ್ತೋದಕಮ್ಮಾಡಿ ಸರ್ವನಮಸ್ಯವಾಗಿ ಪೂರ್ವವೃತ್ತಿಯಾಗಿ ಬಿಟ್ಟು ಕೊಟ್ಟರ್ ಎಂಬುದಾಗಿ ಕಳ್ಳಿಹಾಳ ಶಾಸನವು ಉಲ್ಲೇಖಿಸಿದೆ[೭] ಕುಂದರಾಜನ ಮಹಾದೇವಿ ಕುದಂಬ್ಬರಸಿ ಎಂಬವಳು ಕಲ್ಮೇಶ್ವರ ದೇವಾಲಯದ ಮಠಕ್ಕೆ ದಾನ ನೀಡಿದ್ದನ್ನು ಉಪ್ಪುಣಸಿ ಶಾಸನವು ತಿಳಿಸುತ್ತದೆ.[೮] ಇದೇ ಕುಂದಬ್ಬರಸಿ ಬಾಚಯ್ಯನ ಪುತ್ರಿಯಾಗಿದ್ದು, ಸಂಕ್ರಾಂತಿಯ ಪುಣ್ಯದಿನದಂದು ಧರ್ಮಚಿತ್ತರಾಗಿ ದೇಗುಲಕ್ಕೆ ಶಂಕರ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆ, ಗುದ್ಲೆಪ್ಪ ಹಳ್ಳಿಕೇರಿ ಕಲಾ ಮಹಾವಿದ್ಯಾಲಯ, ಹಾವೇರಿ

ರಾಸಿಜೀಯರ ಪಾದ ತೊಳೆದು ಮಠದ ವಿದ್ಯಾದಾನಕ್ಕೆ ವಂಶಿಯರ್ಗೆ, ಪರೆಕಾರರ್ಗೆ, ಭೂಮಿ, ಮನೆಗಳನ್ನು ದಾನ ಬಿಟ್ಟದ್ದನ್ನು ಕುಳೇನೂರ ಶಾಸನವು ತಿಳಿಸುತ್ತದೆ.[೯] ಬಾಸವೂರು-೧೪೦ರ ಮನ್ನೇಯ ರಾಜಾದಿತ್ಯರಸರು, ರಾಣಿ ಪಂಪಾ ದೇವಿಯ ಜೊತೆಗೂಡಿ ಮಲ್ಲವೂರಿಗೆ ಭೇಟಿಯಿತ್ತು ಪಿರಿಯ ಕೆರೆಯನ್ನು ನೋಡಿ ಕೆರೆಯ ಅಭಿವೃದ್ಧಿಗೆ ಸುಂಕದಾನ ಮಾಡಿದ್ದನ್ನು ಮಲ್ಲೂರ ಶಾಸನ ತಿಳಿಸುತ್ತದೆ.[೧೦] ಕುಂದರಾಜನ ಮಹಾದೇವಿ ಜೋಗಬ್ಬರಸಿ ಅಜ್ಜಡಿಯ ಗಾವುಂಡ ರಾಚಮಲ್ಲನ ಮನವಿಯ ಮೇರೆಗೆ ಅಲ್ಲಿನ ಸಹದೇಶ್ವರ ದೇವಾಲಯಕ್ಕೆ ಬಂದು ಧರ್ಮಚಿತ್ತರಾಗಿ ಗದ್ದೆ, ಹಕ್ಕಲು, ಎಲೆಬಳ್ಳಿ ತೋಟವನ್ನು ದಾನ ಮಾಡಿದ್ದಾಳೆ.[೧೧]

ಮಾಳಲದೇವಿ ಬನವಾಸಿ ಮಹಾಮಂಡಳೇಶ್ವರ ವೀರನೊಳಂಬ ಉದಯಾದಿತ್ಯನ ರಾಣಿಯಾಗಿದ್ದು, ಬಾಸವೂರು ಕಂಪಣಕ್ಕೆ ಒಳಪಟ್ಟ ಕಲಕೇರಿಯ ಶಾಸನದಲ್ಲಿ ಉಲ್ಲೇಖಿತಳಾಗಿದ್ದಾಳೆ. ಕಂಪಲಿಯನ್ನು ರಾಜಧಾನಿಯನ್ನಾಗಿ ಹೊಂದಿ ನೊಳಂಬವಾಡಿ-೩೨೦೦೦ದ ಅಧಿಪತಿಯಾಗಿದ್ದ ವೀರನೊಳಂಬ ಉದಯಾದಿತ್ಯನು ಕಲ್ಯಾಣ ಚಾಲುಕ್ಯ ಚಕ್ರವರ್ತಿ ೨ನೇ ಸೋಮೇಶ್ವರನಿಗೆ ನಿಷ್ಠನಾಗಿದ್ದನು. ಚಕ್ರವರ್ತಿ ೨ನೇ ಸೋಮೇಶ್ವರನು ಬಂಕಾಪುರದ ನೆಲೆವೀಡಿನಲ್ಲಿದ್ದಾಗ, ಉದಯಾದಿತ್ಯನಿಗೆ ನೊಳಂಬವಾಡಿಯಿಂ ಮೇಲೆ ಪಾನುಂಗಲ್ಲು ನಾಡು ಬನವಾಸೆದೇಸಮಂ ಸಾಸನವರ್ತಿಯಾಗಿ ದಯೆಗೆಯ್ದು ದಕ್ಷಿಣ ಸಮುದ್ರಂಬರಂ ಸಾಧಿಸಿಕೊಳ್ಳೆಂದು ಆಜ್ಞೆ ಮಾಡುತ್ತಾನೆ.[೧೨] ಇದನ್ನು ಸ್ವೀಕರಿಸಿದ ಉದಯಾದಿತ್ಯ ಬನವಾಸಿಯ ಮೇಲೆ ಯುದ್ಧ ಸಾರುತ್ತಾನೆ. ಈ ಯುದ್ಧದಲ್ಲಿ ೨ನೇ ಸೋಮೇಶ್ವರನ ಸಹೋದರ ೬ನೇ ವಿಕ್ರಮಾದಿತ್ಯ ಜಯಗಳಿಸಿ ಕಲ್ಯಾಣದ ಸಿಂಹಾಸನವನ್ನೇರುತ್ತಾನೆ.

ಮಾಳಲದೇವಿ ಕಲಕೇರಿ ಪ್ರದೇಶದವಳಾಗಿರಬಹುದೇ ಎಂಬ ಸಂದೇಹ ಮೂಡುತ್ತದೆ. ಪ್ರಾಚೀನ ಕಾಲದಲ್ಲಿ ರಾಣಿಯರು ತಮ್ಮ ತವರೂರಲ್ಲಿ ಶಾಲೆ, ಕೆರೆ, ದೇವಾಲಯಗಳನ್ನು ನಿರ್ಮಿಸುವ ಧರ್ಮಕಾರ್ಯ ಕೈಗೊಳ್ಳುತ್ತಿದ್ದರು. ಚಕ್ರವರ್ತಿ ೨ನೇ ಸೋಮೇಶ್ವರನು ಉದಯಾದಿತ್ಯನಿಗೆ ಬನವಾಸಿ ಹಾಗೂ ಪಾನುಂಗಲ್ ನಾಡುಗಳ ಒಡೆತನವನ್ನು ದಯಪಾಲಿಸಿದಾಗ ಈ ವಿಭಾಗಗಳು ಉದಯಾದಿತ್ಯನ ಆಳ್ವಿಕೆಗೆ ಒಳಪಡುತ್ತವೆ. ಹೀಗೆ ಒಳಪಟ್ಟ ಸಂದರ್ಭದಲ್ಲಿ ಇತ್ತ ಬಂದ ಉದಯಾದಿತ್ಯ ಮಾಳಲದೇವಿಯ ವಿದ್ಯೆ, ರೂಪ, ಗುಣಗಳಿಗೆ ಮನಸೋತು ವಿವಾಹವಾಗಿರಬೇಕು. ಮಾಳಲದೇವಿಯ ಸೌಂದರ್ಯವನ್ನು ಶಾಸನ ಅತಿಯಾಗಿಯೇ ಬಣ್ಣಿಸಿದೆ. ಅವಳು ಸೌಂದರ್ಯದ ಜೊತೆಗೆ ಗುಣವತಿಯೂ, ವಿಶಾಲ ಮನೋಭಾವದವಳೂ, ಸರ್ವಧರ್ಮಪ್ರಿಯಳಾಗಿದ್ದಳು.[೧೩] ಇವಳು ಕಲಕೇರಿಯಲ್ಲಿ ಸಾರ್ವಜನಿಕರಿಗೆ ಉಪಯೋಗವಾಗುವ ಹಲವಾರು ಕಾರ್ಯಗಳನ್ನು ಕೈಗೊಂಡಿದ್ದನ್ನು ಶಾಸನವು ಬಣ್ಣಿಸಿದೆ. ಶಿವಾಲಯ, ಆದಿತ್ಯಾಲಯ, ಶಾಲೆ, ವಿಷ್ಣುಗೃಹ, ಬುದ್ಧವಿಹಾರ, ಮಹಾಭವನ, ನಾಗಾಲಯ, ಭಾವಿ, ಅಗ್ಗಿಷ್ಟಿಗೆ, ಛತ್ರ, ಕೆರೆ, ದೀಪಮಾಲೆ ಮುಂತಾದ ಧರ್ಮಕಾರ್ಯಗಳನ್ನು ಕೈಗೊಳ್ಳುವುದರ ಮೂಲಕ ಸುಸಂಸ್ಕೃತ ಮಹಿಳೆ ಎನಿಸಿದ್ದಾಳೆ.

ವೀರನೊಳಂಬ ಉದಯಾದಿತ್ಯ ಹಾಗೂ ಮಾಳಲದೇವಿಯರು ಕಲಕೇರಿ ಪ್ರಸಿದ್ಧ ಸೋಮೇಶ್ವರ ಲಿಂಗಕ್ಕೆ ಮಹಾಪೂಜೆಯನ್ನು ಸಲ್ಲಿಸಿ, ಬಾಸವೂರು-೧೪೦ರ ಪುಲ್ಲವಳ ಗ್ರಾಮವನ್ನು ಸೋಮೇಶ್ವರ ದೇವರ ಖಂಡಸ್ಫುಟಿತ, ಗಂಧ, ಧೂಪ, ನಿವೇದ್ಯ, ತಪೋಧನರ ಪಾವುಳಕ್ಕೆ ಮಲಯಾಳ ತಪೋನಿಧಿ ದೇವಸಿಂಗಜೀಯರ ಕಾಲು ತೊಳೆದು ಧಾರಾಪೂರ್ವಕವಾಗಿ ಬಿಟ್ಟಿದ್ದಾರೆ.[೧೪] ಬಾಸವೂರು ಕಂಪಣದ ಮಹಾಮಂಡಳೇಶ್ವರ ಮಾಚಿದೇವರಸರು ತನ್ನ ತಂಗಿ ಲಚ್ಚಲದೇವಿಯ ಶ್ರೇಯಸ್ಸಿಗಾಗಿ ದೇವಗೇರಿಯ ರಾಮಸಿಂಗಿ ಪಂಡಿತರ ಕಾಲನ್ನು ತೊಳೆದು ಗ್ರಾಮೇಶ್ವರ ದೇವರ ರಂಗಭೋಗ, ನೈವೇದ್ಯ ಖಂಡಸ್ಫುಟಿತಕ್ಕೆ ದಾನ ನೀಡಿದ್ದನ್ನು ದೇವಗಿರಿ ಶಾಸನವು ಉಲ್ಲೇಖಿಸಿದೆ.[೧೫]

ಬಾಸವೂರು ಕಂಪಣದ ಹಲವಾರು ಸಾಮಾನ್ಯ ಮಹಿಳೆಯರು ತಮ್ಮ ಮಹಾತ್ಯಾಗ ಬಲಿದಾನಗಳ ಮೂಲಕ ಆದರ್ಶವನ್ನು ಮೆರೆದಿದ್ದಾರೆ. ಇಂತಹವರ ಸ್ಮರಣೆಗಾಗಿ ನಿಲ್ಲಿಸಿದ ಕಲ್ಲುಗಳೇ ಮಹಾಸತಿಕಲ್ಲು ಅಥವಾ ಮಾಸ್ತಿಕಲ್ಲು ಎನ್ನಲಾಗಿದೆ. ಇಂತಹ ಹಲವಾರು ಮಾಸ್ತಿಕಲ್ಲುಗಳು ಬಾಸವೂರು ಕಂಪಣದಲ್ಲಿ ದೊರೆತಿವೆ. ಜಯಸಿಂಗಸೆಟ್ಟಿಯ ತಾಯಿಯೂ ನಾಭಿಸೆಟ್ಟಿಯ ಪತ್ನಿಯಾದ 'ಭೋ*****' ಎಂಬವಳನ್ನು ಶಾಸನದಲ್ಲಿ "ಪತಿಭಕ್ತೆ ಮಹಾಸತಿ ಭೋ*****" ಎಂದು ಕರೆಯಲಾಗಿದೆ. ಮಹಾಸತಿ ಎಂದು ಕರೆದಿರುವುದು ಪತಿಯೊಡನೆ ಸತಿ ಹೋದದ್ದನ್ನು ತಿಳಿಸುತ್ತದೆ.[೧೬] ಮುತ್ತೂರಿನಲ್ಲಿನ ಮಾಸ್ತಿಕಲ್ಲು ಹನುಬರ ಸಂಗಿಯ ಕೀತಗೊಂಡನ ಮಗ ಬೊಂಮಯನು ಸತ್ತಂ ಆತನ ಹೆಂಡತಿ ಕಾಮಾಯಿ ಕಿಚಹಾದಲ್ಲಿ ಆ ಕಿತೆಗೊಂಡನು ಅವರಿಬ್ಬರ ಹೆಸರಿನಲ್ಲಿ ಕಲ್ಲನ್ನು ನಿಲ್ಲಿಸಿದ್ದನ್ನು ಉಲ್ಲೇಖಿಸಿದೆ.[೧೭] ಸಾಮಾನ್ಯ ಮಹಿಳೆಯರೂ ಸ್ಮಾರಕ ಶಿಲೆಗಳನ್ನು ನಿಲ್ಲಿಸುತ್ತಿದ್ದುದರ ಬಗ್ಗೆ ಶಾಸನವೊಂದು ಉಲ್ಲೇಖಿಸುತ್ತದೆ. ತುರುಗಾಳಗದಲ್ಲಿ ಗೋವಿಂದನೆಂಬವನು ವೀರಮರಣ ಹೊಂದಿದ್ದರ ಸ್ಮರಣೆಗಾಗಿ, ಚಿನ್ನಪೋಟಿ ಎಂಬವಳು ಸ್ಮಾರಕಶಿಲೆ ನಿಲ್ಲಿಸಿದ್ದಾಳೆ.[೧೮] ಹಾಗೆಯೇ ತಿರುವರಾ ಮಾರಮ್ಮ ಗೋಸಾಸಿ ಎಂಬವಳು ಮೇಂಟಿ ನಿಲ್ಲಿಸಿದ್ದನ್ನು ದೇವಗೇರಿ ಶಾಸನವು ತಿಳಿಸುತ್ತದೆ.[೧೯]

ಶಾಸನವೊಂದು ಮುದ್ದವೆಯ ವಿಶೇಷತೆಯನ್ನು ಈ ರೀತಿಯಾಗಿ ತಿಳಿಸಿದೆ. 'ಆ ವಿಭುವಿಂಗಂ ಸಕಳ ಕಳಾವಿದನೆನೆಸಿಳ್ದ ಮತ್ತೆ ಗುಣವತಿ ಲಾವಣ್ಯವತಿ ಲಕ್ಷ್ಮೀವತಿ ರೂಪಾವತಿ ಮದ್ದವೆಯ ಮದುವೆಯಾದಿಂ ಬಳಿಕ ಮುದ್ದವೆಗಂ ಸಿಂಗಿಸೆಟ್ಟಿಗಂ ಪುಟ್ಟ ಕಾಳಿಸೆಟ್ಟಿ ಕೃತಾರ್ಥಂ'[೨೦] ಇದೇ ಶಾಸನದ ಮತ್ತೊಂದು ಕಡೆ ಕಾಳಿಸೆಟ್ಟಿಯ ವಧು ಕಂಚವೆ ಸಚ್ಚಾತುರ್ಯೆ ಪತಿಬ್ರತೆ ಎಂದು ಉಲ್ಲೇಖಿಸಿದೆ. ಕಾಗಿನೆಲೆಯ ಮತ್ತೊಂದು ಶಾಸನವು ಕಂಚಿಕಬ್ಬೆಗೆ ಪಾಂಡವರಂತಹ ಐವರು ಮಕ್ಕಳಿದ್ದುದನ್ನು ತಿಳಿಸುತ್ತದೆ.[೨೧] ಇದೇ ಶಾಸನದಲ್ಲಿ ಕಾಗಿನೆಲೆ ನಾಳ್ಪ್ರಭು ಸಿಂಗನ ಮಡದಿ ಬಾಣಗಬ್ಬೆಯನ್ನು ಸೀತೆಯನಿಳಿಸುವ ಪತಿಬ್ರತಾಗುಣದಿ ಎಂದು ಹೊಗಳಿದೆ. ಮಲ್ಲಿಕವ್ವೆ, ಜೀಜಿಕವ್ವೆ, ಚಂಡಿಕವ್ವೆ, ಜಕ್ಕಣವ್ವೆ, ಸೋಮಿಯಕ್ಕ ಇನ್ನಿತರ ನಾಳ್ಪ್ರಭುಗಳ ರಾಣಿಯರನ್ನು ಬೇರೊಂದು ಶಾಸನವು ಉಲ್ಲೇಖಿಸಿದೆ.[೨೨]

ಬಾಸವೂರು ಕಂಪಣದ ಹಲವಾರು ಮಹಿಳೆಯರು ರಾಜಕೀಯ, ಸಾಂಸ್ಕೃತಿಕ ಮತ್ತಿತರ ರಂಗಗಳಲ್ಲಿ ಸಾಧನೆಗೈದಿದ್ದಾರೆಂಬುದು ಮೇಲಿನ ನಿದರ್ಶನಗಳಿಂದ ಸ್ಪಷ್ಟವಾಗುತ್ತದೆ. ಇವರೆಲ್ಲರೂ ಸಾಮಾನ್ಯವಾಗಿ ಪ್ರಭುವರ್ಗದ ಮನೆತನಕ್ಕೆ ಸಂಬಂಧಿಸಿದವರಾಗಿದ್ದು, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮ ಸ್ಥಿತಿಯನ್ನು ಹೊಂದಿದವರಾಗಿದ್ದರು. ಈ ವರ್ಗದ ಮಹಿಳೆಯರ ಸೌಂದರ್ಯ ಹಾಗೂ ಗುಣಗಳನ್ನು ಶಾಸನಗಳು ಅತಿಯಾಗಿ ಬಣ್ಣಿಸಿವೆ. ಆದರೆ ಇಂತವರನ್ನೇ ನಿದರ್ಶನವಾಗಿಟ್ಟುಕೊಂಡು ಸಾಮಾನ್ಯ ವರ್ಗದ ಮಹಿಳೆಯರೂ ಸಮಾಜದಲ್ಲಿ ಉತ್ತಮ ಸ್ಥಾನಮಾನ ಹೊಂದಿದ್ದರೆಂದು ಭಾವಿಸುವುದು ತಪ್ಪಾಗುತ್ತದೆ. ಸಾಮಾನ್ಯ ವರ್ಗದ ಅನೇಕ ಮಹಿಳೆಯರು ಆ ಕಾಲದ ಸಾಮಾಜಿಕ ನಂಬುಗೆ ಹಾಗೂ ಮೌಲ್ಯಗಳಿಗಾಗಿ ತಮ್ಮ ತ್ಯಾಗ, ಬಲಿದಾನಗಳ ಮೂಲಕ ಶ್ರೇಷ್ಠತೆಯನ್ನು ಮೆರೆದ್ದಾರೆ.

ಆಧಾರಸೂಚಿ

೧. ಕದಂಬ ಜಯಕೇಶಿ–೧ನೇ ಮಗಳು, ಚೋಳರಾಜಕುಮಾರಿ, ಸಾವಳದೇವಿ, ಪದ್ಮಲದೇವಿ, ಕೇತಲದೇವಿ, ಲಕ್ಷ್ಮಾದೇವಿ, ಚಂಚಲದೇವಿ, ಅಂಗಬ್ಬರಸಿ, ಪಿರಿಯ ಕೇತಲದೇವಿ, ಇಂಗಿಳಗೆಯ ಜಾಕಲದೇವಿ, ಮೈಳಲದೇವಿ, ಮಲ್ಲಣದೇವಿ, ಸುಗ್ಗಲದೇವಿ, ಅಬ್ಬಲದೇವಿ, ಭಾಗಲದೇವಿ, ಹಿರೇಲಿಂಗದಹಳ್ಳಿ ಜಾಕಲದೇವಿ ಹೀಗೆ ೧೯ ಜನ ರಾಣಿಯರನ್ನು ಗುರುತಿಸಿದ್ದಾರೆ. ನಾಗಯ್ಯ. ಜೆ.ಎಂ: 'ಆರನೇ ವಿಕ್ರಮಾದಿತ್ಯನ ಶಾಸನಗಳು–ಒಂದು ಅಧ್ಯಯನ' ಪುಟ ೪೫.

೨. ಎ.ಇಂ.ಸಂ. ೧೬. ತಿಳವಳ್ಳಿ ಕ್ರಿ.ಶ. ೧೦೫೩–೫೪.

೩. ಸೌ.ಇಂ.ಇನ್ಸ್. ೧೮. ಶಾ. ಸಂ. ೧೨೭. ಹಿರೆಲಿಂಗದಹಳ್ಳಿ, (ತಾ) ಹಾವೇರಿ.

೪. ಅದೇ, ಶಾ.ಸಂ. ೧೪. ದೇವಗೇರಿ.

೫. ಅದೇ, ಶಾ.ಸಂ. ೪೪. ಕಳ್ಳಿಹಾಳ. ಕ್ರಿ.ಶ. ೧೧೧೯.

೬. ಅದೇ, ಶಾ.ಸಂ. ೫೨. ಬಿದರಗಡ್ಡಿ.

೭. ಅದೇ, ಶಾ.ಸಂ. ೫೦, ಕಳ್ಳೀಹಾಳ ಕ್ರಿ.ಶ. ೧೦೩೪.

೮. ಧಾ.ಜಿ.ಶಾ.ಸೂ. ಶಾ.ಸಂ. ೨೮. ಪು. ೫೯. ಉಪ್ಪುಣಸಿ. (ತಾ) ಹಾನಗಲ್.

೯. ಎ.ಇಂ.ಸಂ. ೧೫. ಕುಳೇನೂರ ತಾ. ಹಾವೇರಿ ಕ್ರಿ. ಶ. ೧೦೨೮.

೧೦. ಸೌ.ಇಂ.ಇನ್ಸ. ಸಂ. ೧೮. ಶಾ.ಸಂ, ೬೫ ಮಲ್ಲೂರ. (ತಾ.) ಬ್ಯಾಡಗಿ.

೧೧. ಅದೇ, ಶಾ.ಸಂ. ೪೪. ಕಳ್ಳಿಹಾಳ.

೧೨. ಅದೇ, ಸಂ. ೨೦. ಶಾ.ಸಂ, ೪೯ ಕಲಕೇರಿ.

೧೩. ಅದೇ.

೧೪. ಅದೇ.

೧೫. ಅದೇ, ಸಂ. ೧೮ ಶಾ.ಸಂ. ೧೭೭ ದೇವಗೇರಿ. ಕ್ರಿ. ಶ. ೧೧೬೧.

೧೬. ಅದೇ, ಸಂ. ೨೦, ಶಾ.ಸಂ, ೮೭ ಕಲಕೇರಿ.

೧೭. ಕ ಇನ್ಸ, ಸಂ. ೪ ಶಾ.ಸಂ.೫೧ ಮುತ್ತೂರು.

೧೮. ಸೌ ಇಂ ಇನ್ಸ ಸಂ. ೧೮ ಶಾ.ಸಂ. ೩೦೯ ದೇವಿಹೊಸೂರು.

೧೯. ಅದೇ, ಶಾ ಸಂ. ೧೪, ದೇವಗೇರಿ.

೨೦. ಅದೇ, ಶಾ ಸಂ. ೧೧೯ ಕಾಗಿನೆಲ್ಲಿ.

೨೧. ಅದೇ, ಶಾ.ಸಂ. ೧೧೭ ಕಾಗಿನೆಲ್ಲಿ.

೨೨. ಕ. ಇನ್ಸ ಸಂ–೪ ಶಾ.ಸಂ ೧೦. ಹಿರೇಹಳ್ಳಿ.

ಗ್ರಂಥಋಣ

೧. ಕರ್ನಾಟಕಾ ಇಸ್ಕ್ರಿಪ್ಸನ್ಸ್, ಸಂ iv (ಸಂ) ಎ.ಎಮ್. ಅಣ್ಣಿಗೇರಿ ಮತ್ತು ಜಿ.ವಿ. ಸಾಲೀತೊರೆ, ಕೆ.ಆರ್.ಆಯ್. ಧಾರವಾಡ, ೧೯೬೧.

೨ ಸೌತ್ ಇಂಡಿಯನ್ ಇಸ್ಕ್ರಿಪ್ಸನ್ಸ್, ಸಂ. xviii ಎನ್. ಲಕ್ಷ್ಮಿನಾರಾಯಣರಾವ್ ೧೯೭೫. ಸಂ. xx ಡಾ. ಜಿ.ಎಸ್. ಗಾಯ್, ದಿಲ್ಲಿ, ೧೯೮೮.

೩ ಎಪಿಗ್ರಾಫಿಯಾ ಇಂಡಿಕಾ, ಸಂ. xv, ೧೯೧೯–೨೦ ಅದೇ. ಸಂ. xvi, ೧೯೨೧–೨೨ (ಸಂ).

೪ ಕಲಬುರ್ಗಿ ಎಂ.ಎಂ. ಸಮಾದಿ ಬಲಿದಾನ ವೀರಮರಣ ಸ್ಮಾರಕಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೦.

೫ ಚನ್ನಕ್ಕ ಪಾವಟೆ, ಪ್ರಾಚೀನ ಕರ್ನಾಟಕದ ರಾಣಿಯರು, ಧಾರವಾಡ, ೧೯೮೭.

೬ ನಾಗಯ್ಯ ಜೆ.ಎಂ. ೬ನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ. ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೧೯೯೨. ಕಲಕೇರಿ. ಶ್ರೀ ಬಸವೇಶ್ವರ ಟ್ರಸ್ಟ್ ಕಮಿಟಿ, ಕಲಕೇರಿ, ೧೯೯೫.

೭ ಪಾಟೀಲ ಚೋಳರಾಜ, ನಾಗರಖಂಡ–೭೦ ಒಂದು ಅಧ್ಯಯನ, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರಂ, ೧೯೯೫

೪೨

ಶಾಸನಗಳಲ್ಲಿ "ಸೂಡಿ ಸಂತೆ"

ಡಾ. ಮಲ್ಲಿಕಾರ್ಜುನ ಕುಂಬಾರ*

"ಸೂಡಿ" ಎಂಬ ಹೆಸರನ್ನು ಹೇಳುವಂತೆ ನಮ್ಮ ಕಣ್ಮುಂದೆ ಸುಳಿಯುವದು, ರೋಣ ರಸ್ತೆಗೆ ಹೊಂದಿದ ಜೋಡು ಕಳಸದ ಗುಡಿ ಮತ್ತು ಇದನ್ನಾಳಿದ ಚಾಲುಕ್ಯ ರಾಣಿ ಅಕ್ಕಾದೇವಿ. ಈ ಧೀರ ಮಹಿಳೆ ಅನೇಕ ಯುದ್ಧಗಳಲ್ಲಿ ಸೇನಾಧಿಪತಿಯಾಗಿ, ಅನೇಕ ಪ್ರಾಂತ್ಯಗಳ ಆಡಳಿತವನ್ನು ನಡೆಸುತ್ತಿದ್ದಳು. ಶಾಸನಗಳಲ್ಲಿ ಸೂಂಡಿ ಎಂದು ಉಲ್ಲೇಖಿತವಾದ ಇದು ಕಿಸುಕಾಡು-೭೦ಕ್ಕೆ ಸೇರಿತ್ತು, ಈ ಅಕ್ಕಾದೇವಿಯು ಆಳುತ್ತಿದ್ದ ಪ್ರಾಂತ್ಯಗಳಲ್ಲಿ ಸೂಡಿಯೂ (ಕ್ರಿ.ಶ. ೧೦೧೦) ಒಂದಾಗಿತ್ತು. ಆಕೆಯ ಆಳ್ವಿಕೆಯ ಸಮಯದಲ್ಲಿ ಇದು ದೊಡ್ಡ ಅಗ್ರಹಾರವಾಗಿತ್ತು. ಜೊತೆಗೆ ನಾಣ್ಯಗಳನ್ನು ತಯಾರಿಸುವ ಹೆಸರಾಂತ ಟಂಕಶಾಲೆ ಕೂಡಾ ಇಲ್ಲಿತ್ತು. ಈ ವಿಷಯಗಳನ್ನು ಇಲ್ಲಿರುವ ಶಾಸನಗಳು ವಿವರಿಸುತ್ತವೆ. ಸೂಡಿಯಿಂದ ಸುಮಾರು ೯ ಶಾಸನಗಳು ಈಗಾಗಲೇ ಪ್ರಕಟಗೊಂಡಿವೆ. ಒಂದು ಕಾಲದಲ್ಲಿ ವೈಭೋಗದ ತುತ್ತತುದಿಯಲ್ಲಿ ಮೆರೆದ ಸೂಡಿಯಲ್ಲಿ ಹೆಸರಾಂತ ಪಂಡಿತರು, ಶಕ್ತಿ ಆರಾಧರು, ಕಾಳಾಮುಖರು, ಪಾಶುಪತರು ಇದ್ದರು.

ಇಂದಿನ ಗದಗ ಜಿಲ್ಲೆಯ ರೋಣ ತಾಲೂಕಿಗೆ ಸೇರಿದ ರೋಣ ಗಜೇಂದ್ರಗಡ ರಸ್ತೆಗೆ ಹೊಂದಿರುವ ಸೂಡಿಯಲ್ಲಿ ಪ್ರಾಚ್ಯ ಅವಶೇಷಗಳು ಅಳಿದುಳಿದು ಇತಿಹಾಸಕ್ಕೆ ಮೂಕಸಾಕ್ಷಿಯಾಗಿ ನಿಂತಿವೆ. ರಸ್ತೆಗೆ ಹೊಂದಿರುವ ದ್ವಿಕೂಟಾಚಲದ ಮಾದರಿಯ ಜೋಡು ಕಳಸದ ಗುಡಿ ನೋಡುಗರ ಗಮನವನ್ನು ಸೆಳೆಯುತ್ತದೆ. ಕ್ರಿ.ಶ. ೧೦೭೪-೭೫ಕ್ಕೆ ಸೇರಿದ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ IIನೆಯ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಸೂಂಡಿಯ ಪಂಚಲಿಂಗೇಶ್ವರದೇವರಿಗೆ ಕಿಸುಕಾಡು-೭೦ರಲ್ಲಿರುವ ಮುಶಿಗೇರಿ, ಕಲ್ಲಿಗನೂರು ಮತ್ತು ಗುಳಗುಳಿ ಗ್ರಾಮಗಳನ್ನು ಸೂಡಿಯ ಸೋಮೇಶ್ವರಪಂಡಿತರಿಗೆ ದಾನ ನೀಡಿದ ವಿಷಯವನ್ನು ಈ ಶಾಸನವು ಹೇಳುತ್ತದೆ. ಇದರಲ್ಲಿಯೇ ಸುಮಾರು ೯೦೦ ವರ್ಷಗಳ ಹಿಂದೆ ದೊಡ್ಡ ಸಂತೆಯು ಜರುಗುತ್ತಿದ್ದ ಬಗ್ಗೆ ಮಹತ್ವಪೂರ್ಣವಾದ ಮಾಹಿತಿಯನ್ನು ನೀಡುವದರಿಂದ ಈ ಶಾಸನವು ವಿಶೇಷವಾದ ಮಹತ್ವವನ್ನು ಪಡೆದಿದೆ.

ಸಂತೆ ಅಥವಾ ಬಜಾರ ಎಂಬುದು ವಾಣಿಜ್ಯ ಪರಿಭಾಷಿಕ ಪದದ ಕಲ್ಪನೆಯಾಗಿದೆ. ಇದರ ಅರ್ಥವ್ಯಾಪ್ತಿ ಮತ್ತು ಉಪಯುಕ್ತತೆ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿರುವುದನ್ನು ಇತಿಹಾಸದುದ್ದಕ್ಕೂ ನಾವು ಕಾಣುತ್ತೇವೆ. ವಾಣಿಜ್ಯ ಚಟುವಟಿಕೆಗಳ ವಿಕಾಸದ ವಿವಿಧ ಹಂತಗಳನ್ನು ಗುರುತಿಸುವಲ್ಲಿ ಈ ಸಂತೆಯನ್ನು ಪ್ರಾರಂಭದ ಮತ್ತು ಮೂಲಹಂತವೆಂದು ಗುರುತಿಸಬಹುದು. ವಾಣಿಜ್ಯ ಪದದ ಅರ್ಥ ವ್ಯಾಪ್ತಿಯು ಬಹಳ ವ್ಯಾಪಕವಾದುದು. ಅದು ಹಲವಾರು ಚಟುವಟಿಕೆಗಳನ್ನು ಒಳಗೊಂಡಿದೆ. ಆ ಚಟುವಟಿಕೆಗಳ ಒಂದು ಭಾಗವೇ 'ಸಂತೆ'. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಮುಖ್ಯ ವ್ಯಾಪಾರಿವೇದಿಕೆಯು ಸಂತೆಯಾಗಿತ್ತು. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ಪ್ರಗತಿಯನ್ನು ಸಾಧಿಸುಲ್ಲಿ ಸಂತೆಯು ಮಹತ್ತರ ಪಾತ್ರವನ್ನಾಡಿದೆ. ಇದು ನಮ್ಮ ಬದುಕನ್ನು, ಬದುಕಿನ ವ್ಯಾಪಾರವನ್ನು ಸಾಂಕೇತಿಸುತ್ತದೆ. ಅಲ್ಲಿ ಕೊಡುಕೊಳ್ಳುವಿಕೆ ಇರುತ್ತದೆ. ಇದು ಸಂಸ್ಥಾ>ಸಂಸ್ಥೆ>ಸಂತೆ ಎಂಬ ಸಂಸ್ಕೃತದಿಂದ ರೂಪಗೊಂಡ ಪದ. ಅಂದು ಸಂತೆ ನಡೆಸುವ ಕಾರ್ಯದ ಹಿಂದೆ ಸದಾ ರಾಜರ ಪ್ರೇರಣೆ, ಪ್ರೋತ್ಸಾಹ ಇರುತ್ತಿತ್ತು. ಏಕೆಂದರೆ ಅದರಿಂದ ರಾಜ್ಯಕ್ಕೆ ಆದಾಯ ಬರುತ್ತಿತ್ತು. ಸಂತೆಯನ್ನು ಆ ಊರಿನ ಗೌಡ, ಮಹಾಪ್ರಭುಗಳು, ವರ್ತಕ ಮೊದಲಾದವರೆಲ್ಲರೂ ಸೇರಿ ನಡೆಸುತ್ತಿದ್ದರು. ಸಂತೆಗಳಿಗೆ ವರ್ತಕರನ್ನು ಆಕರ್ಷಿಸಲು ಅವರು ತಂದ ಸರಕುಗಳಿಗೆ ಸುಂಕದ ರಿಯಾಯಿತಿಗಳನ್ನು ನೀಡುತ್ತಿದ್ದರು. ವಾರದಲ್ಲೊಂದು ದಿನ ನಡೆಯುವ ಸಂತೆಯು ಹೊರಪೇಟೆಯಲ್ಲಿ ನಡೆದರೆ, ಉಳಿದ ದಿನಗಳಲ್ಲಿ ನಿತ್ಯವೂ ಅದು ಒಳಪೇಟೆಯಲ್ಲಿ ನಡೆಯು ತ್ತಿತ್ತು. ಅಲ್ಲಿ ನಡೆಯುವ ಅಂಗಡಿಗಳಲ್ಲಿ ಕಟ್ಟಿದ ಅಂಗಡಿ (ಇದು ಕಟ್ಟೆ ಮೇಲಿನ ಅಂಗಡಿ ಇರಬಹುದು), ಬಯಲು ಅಂಗಡಿ, ಧರ್ಮದಂಗಡಿ, ದೇವರಂಗಡಿ, ಮಾನ್ಯದಂಗಡಿಗಳೆಂಬ ಪ್ರಭೇಧಗಳಿದ್ದವು. ಸಂತೆ ನಡೆಯುವದರಿಂದ ಮಾತ್ರ ಗ್ರಾಮವು ಪಟ್ಟಣವೆನ್ನಿಸಿಕೊಳ್ಳುತ್ತಿತ್ತು. ಸಂತೆ ನಡೆಯುವ ಸ್ಥಳಕ್ಕೆ ವ್ಯಾಪಾರಸ್ಥರು ತಮ್ಮ ಸರಕುಗಳನ್ನು ಮಾರಾಟಕ್ಕೆ ತರಲು

* 'ವಚನ', ರಾಜೂರ, ರೋಣ ತಾಲ್ಲೂಕು, ಗದಗ ಜಿಲ್ಲೆ-೫೮೨೨೩೦.

ಎತ್ತು, ಬಂಡಿ, ಕುದುರೆ, ಕೋಣ ಮತ್ತು ಕತ್ತೆಗಳನ್ನು ಬಳಸುತ್ತಿದ್ದರು. ಇಲ್ಲವೇ ತಲೆ ಮೇಲೆ ಹೆಗಲ ಮೇಲೆ ಕೂಡಾ ಹೊತ್ತು ತರುತ್ತಿದ್ದರು. ಇವರನ್ನು ಶಾಸನಗಳು 'ತೆಲ್ಲಿಗಸೆಟ್ಟಿ', 'ಅಯ್ಯತ್ತೊಕ್ಕಲ ಸೆಟ್ಟಿ'ಯರೆಂದು ಕರೆದಿವೆ. ಆಗ ಸಂತೆ ಸ್ಥಳಕ್ಕೆ ಬರಲು ಅವರಿಗೆ ಹಲವಾರು ದಿನಗಳು ಹಿಡಿಯುವ ಕಾರಣ ಅವರು ಯಾವುದಾದರೂ ಮಧ್ಯದ ಊರುಗಳಲ್ಲಿ ತಂಗುವದು ಅನಿವಾರ್ಯವಾಗಿತ್ತು. ಸಂತೆಯ ದಿನ ಸ್ವಸ್ಥಳ ಮತ್ತು ಪರಸ್ಥಳದ ವರ್ತಕರು ಸಂತೆ ನಡೆಯುವ ಬಯಲಿನಲ್ಲಿ ಅಂಗಡಿ ಹಾಕಿ ದವಸ ಧಾನ್ಯ ಮತ್ತು ಇತರ ವಸ್ತುಗಳನ್ನು ರಾಶಿರಾಶಿಯಾಗಿ ಕೂಡಿ ಹಾಕುತ್ತಿದ್ದರು. ಅಲ್ಲಿ ಇವರು ತಾವು ತಂದ ಸರಕುಗಳನ್ನು ತೂಗಿ, ಎಣಿಸಿ, ಅಳೆದು ಮಾರುತ್ತಿದ್ದರು. ವರ್ತಕರು ಮಾರಲು ತಂದ ಸರಕುಗಳ ಮೇಲೆ ಸಂತೆ ಆಯ, ಮಾರಾಟ ಕರಗಳನ್ನು ಅಲ್ಲಿನವರು ಆಕರಿಸುತ್ತಿದ್ದರು. ಶಾಸನಗಳು ಇದನ್ನು 'ಅಂಗಡಿ ಆಯ' 'ಅಂಗಡಿದೆರೆ' ಎಂದು ಕರೆಯುತ್ತಿದ್ದರು. ಅಲ್ಲಿ ವಸೂಲಾದ ಕರವನ್ನು ದೇವಾಲಯಗಳಿಗೆ ನೀಡುತ್ತಿದ್ದರು. ಅದನ್ನು ಆಗ ಧರ್ಮದ ಸಂತೆ ಎಂದು ಕರೆಯುತ್ತಿದ್ದರು. ಅಂತಹ ಧರ್ಮದ ಸಂತೆಯು ಸೂಡಿಯಲ್ಲಿ (ಕ್ರಿ.ಶ. ೧೦೭೪–೭೫) ಪ್ರತಿ ರವಿವಾರ ದಿನ ಜರಗುತ್ತಿತ್ತು ಇಲ್ಲಿಗೆ ಬಹು ದೂರದ ಊರುಗಳಿಂದ ವ್ಯಾಪಾರಗಾರರು ತಮ್ಮ ಸರಕು ಗಳನ್ನು ಮಾರಾಟಕ್ಕೆ ತರುತ್ತಿದ್ದರು. ಈ ಸಂತೆಯಲ್ಲಿ ಮಾರಾಟ ಕರವನ್ನು ವಸೂಲಿ ಮಾಡಲು ಕೆಲವರು ಮೇಲ್ವಿಚಾರಕರಿದ್ದರು. ಸೂಡಿಯಲ್ಲಿ ಸಂತೆಯು ಆರಂಭವಾಗುತ್ತಿದ್ದಂತೆ ವರ್ತಕರಿಗೆ ಕರವನ್ನು ನೀಡಲು ಎಚ್ಚರಿಕೆ ಗಂಟೆಯನ್ನು ಬಾರಿಸುತ್ತಿದ್ದರು. ಆಗ ವ್ಯಾಪಾರಿಗಳು ತಾವು ನೀಡುವ ಕರದೊಂದಿಗೆ, ವ್ಯಾಪಾರಕ್ಕಾಗಿ ತಂದ ಆಹಾರ ಧಾನ್ಯ ಇತ್ಯಾದಿ ಸಾಮಾನುಗಳಲ್ಲಿ ಸ್ವಲ್ಪ ಭಾಗವನ್ನು ದೇವತಾ ಕಾರ್ಯಕ್ಕೆ ಅರ್ಪಿಸಲು ತಯಾರಾಗುತ್ತಿರುವಂತೆ, ಅದನ್ನು ಕೆಲವರು ಸಂಗ್ರಹಿಸುತ್ತಿದ್ದರು. ಇದನ್ನು ಸಂತೆಯ ಪಸಿಗೆ ಎಂದು ಶಾಸನಗಳು ಕರೆಯುತ್ತವೆ. ಈ ಪಸಿಗೆ ಪದ್ಧತಿ ಸೂಡಿ ಸಂತೆಯಲ್ಲಿ ಜರಗುತ್ತಿತ್ತು. ಧಾರ್ಮಿಕ ಸಂಸ್ಥೆ, ಉಚಿತ ಪ್ರಸಾದ ನಿಲಯಗಳಿಗಾಗಿ ಸಂತೆಯ [illegible] ಪಸಿಗೆ ಎತ್ತುವದನ್ನು ನಾವು ಈಗಲೂ ಕಾಣುತ್ತೇವೆ. ಈ ಸಂತೆ ಪಸಿಗೆ ಪದ್ಧತಿಯು ಇಂದಿಗೂ ಜೀವಂತವಾಗಿ ಬಂದಿರುವದು ಗಮನಾರ್ಹ. ಈ ಸಂತೆಯು ಹೊಂಡದ (ಪಾಂಡವರ ಬಾವಿ) ಕೆಳಭಾಗದ ದೇವಾಲಯದ ಉತ್ತರ ದಿಕ್ಕಿನ ವಿಸ್ತಾರವಾದ ಬಯಲು ಜಾಗೆಯಲ್ಲಿ ಜರಗುತ್ತಿತ್ತು. ಆಗ ಸೂಡಿಯ ಆಳರಸರು ಮಾಡಿದ ಕಾನೂನಿಗನುಸಾರವಾಗಿ ದೇವತಾ ಕಾರ್ಯದ ಈ ಕರವನ್ನು ೬ ಜನ ಗಾವುಂಡರು (ಗೌಡರು) ಮತ್ತು ೮ ಜನಶೆಟ್ಟರು (ಶಾಸನಗಳು ಇವರನ್ನು ಎಣ್ಬರ್ ಸೆಟ್ಟಿಯರ್, ಎಂದರೆ ೮ ಬಣದ ಶೆಟ್ಟರು ಎಂದು ಕರೆದಿವೆ) ಸೇರಿ ವಸೂಲಿ (ಈ ಕರವನ್ನು ಶಾಸನವು 'ಸಿಮ್ಮಾಗವತ್ತಿಗೆ' ಕರವೆಂದು ಕರೆದಿದೆ) ಮಾಡುತ್ತಿದ್ದರು. ಈ ಸಂತೆಗೆ ವ್ಯಾಪಾರಕ್ಕಾಗಿ ಬರುವ ಸರಕುಗಳ ಪಟ್ಟಿಯನ್ನು ಈ ಶಾಸನಗಳು ನಮಗೆ ನೀಡುತ್ತವೆ.

ಅಂದು ರವಿವಾರ ಕೂಡುವ ಸೂಡಿಯ ಸಂತೆಯು ಕಾಲ ಗತಿಸಿದಂತೆ ಬದಲಾಯಿತು. ಅದು ಮುಂದೆ ಸುಮಾರು ೧೮–೧೯ನೆಯ ಶತಮಾನದ ಹೊತ್ತಿಗೆ ಶುಕ್ರವಾರ ನಡೆಯಲಾರಂಭಿಸಿತು. ಅದು ಈಗಲೂ ಹಾಗೆ ಮುಂದುವರಿದಿದೆ. ಅದರೊಂದಿಗೆ ಸಂತೆ ನಡೆಯುವ ಸ್ಥಳವೂ ಬದಲಾಗಿ ಈಗ ಊರ ಒಳಗಿನ ಮೊದಲಿನ ಹಳೆಯ ಬಸ್ ನಿಲುಗಡೆ ಸ್ಥಳದ ಧ್ವಜದ ಕಟ್ಟೆಯ ಹತ್ತಿರ ನಡೆಯುತ್ತದೆ. ಇದು ಸಾಯಂಕಾಲ ಆರಂಭವಾಗಿ ಸ್ವಲ್ಪ ನಸುಗತ್ತಲಾಗುವವರೆಗೆ ನಡೆಯುತ್ತದೆ. ಆಗ ಸೂಡಿಯ ಸುತ್ತಲಿನ ವ್ಯಾಪಾರಿಗಳು ವ್ಯಾಪಾರ ಮಾಡಲು ಬಂದರೆ, ಈಗ ಸೂಡಿಯ ಸನಿಹದ ಹಳ್ಳಿಯ ಜನರು ಸಂತೆಗೆ ಬರುತ್ತಾರೆ.

ಆಧಾರಸೂಚಿ

೧. SII XV-i-144, ಸೂಡಿ ಶಾಸನ (೧೦೭೫).

೨. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಡಾ. ಬಿ.ಆರ್. ಹಿರೇಮಠ, (ಕ.ವಿ.ವಿ. ೧೯೮೬).

೪೩

ಕುರುಬಸೇಣಿ: ಪ್ರಾಚೀನ ಕಾಲದ ಒಂದು ಸಹಕಾರಿ ಸಂಘ

ಡಾ. ಎಫ್.ಟಿ. ಹಳ್ಳಿಕೇರಿ*

ಪ್ರತಿಯೊಂದು ಸಮುದಾಯ ಅಥವಾ ವೃತ್ತಿಯವರು ಉತ್ಪಾದಿಸುತ್ತಿದ್ದ ಉತ್ಪಾದನೆಗಳ ಮಾರಾಟಕ್ಕಾಗಿ ಸಾರ್ವಜನಿಕ ಸಹಕಾರ ಸಂಸ್ಥೆ (Public Co-operative Society)ಗಳನ್ನು ಸ್ಥಾಪಿಸಿಕೊಂಡು ಬರುತ್ತಿದ್ದ ವಿಷಯ ಬಹು ಹಿಂದಿನಿಂದಲೂ ನಡೆದುಕೊಂಡು ಬರುವ ಸಂಗತಿ. ಇಂಥ ಸಂಘಗಳಿಗೆ ಶಾಸನಗಳಲ್ಲಿ ಸಂಘ, ಶ್ರೇಣಿ, ಒಕ್ಕಲು, ಸಮಯ ಮೊದಲಾದ ಪದಗಳು ಪ್ರಯೋಗಗೊಂಡಿವೆ. ತೆಲ್ಲಿಗರೈವತ್ತೊಕ್ಕಲು, ಮಾಲೆಗಾರ ನಾಲ್ವತ್ತೊಕ್ಕಲು, ಸಾಲಿಗ ಸಮಯದವರು ಇತ್ಯಾದಿ ಹೆಸರಿನ ಸಂಸ್ಥೆಗಳು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಬಗೆಗೆ ಶಾಸನಗಳು ತಿಳಿಸುತ್ತವೆ. ಇಂಥ ಸಂಘಗಳಲ್ಲಿ ಒಂದಾದ ಕುರುಬಸೇಣಿಯು ಕುರುಬ ಸಮುದಾಯಕ್ಕೆ ಸಂಬಂಧಿಸಿದ್ದಾಗಿದೆ. ಈ ಕುರುಬಸೇಣಿಯವರ ಸ್ಥಾನಮಾನ, ಕಾರ್ಯಚಟುವಟಿಕೆಗಳ ಕುರಿತು ಶಾಸನಾಧಾರಗಳ ಹಿನ್ನಲೆಯಲ್ಲಿ ಪ್ರಸ್ತುತ ಸಂಪ್ರಬಂಧದಲ್ಲಿ ಕೆಲವು ವಿಚಾರಗಳನ್ನು ಚರ್ಚಿಸಲಾಗುವುದು.

೧. ಕುರುಬಸೇಣಿ

ಸೇಣಿ ಎಂಬ ಪದವು ಗುಂಪು, ಸಮೂಹ, ಕಸಬುದಾರರ ಮುಖ್ಯಸ್ಥರು ಸೇರಿ ನಡೆಸುವ ಸಭೆ ಎಂದು ಅರ್ಥೈಸಲಾಗಿದೆ.[೧] ಶಾಸನಗಳಲ್ಲಿ ಉಲ್ಲೇಖಗೊಂಡ ತೆಲ್ಲಿಗಸೇಣಿ[೨], ಪಟ್ಟಗಾರಸೇಣಿ[೩], ಕಂಚಗಾರಸೇಣಿ[೪], ಕುರುಬಸೇಣಿ[೫] ಇತ್ಯಾದಿ ಪದಗಳು ಆಯಾ ಸಮುದಾಯದವರು ಸೇರಿ ಸ್ಥಾಪಿಸಿಕೊಂಡ ಸಹಕಾರ ಸಂಘಗಳಾಗಿವೆ. ಸಮುದಾಯದವರ ಸ್ವಹಿತ ರಕ್ಷಣೆ, ಸಂಘಟಣೆ, ಸಹಕಾರ ವೃತ್ತಿಸೌಲಭ್ಯ ಹಾಗೂ ಸಾಮಾಜಿಕ ಸ್ಥಾನಮಾನಗಳಿಗಾಗಿ ಇಂಥ ಸಂಘಗಳನ್ನು ಸ್ಥಾಪಿಸಿದ ಉದಾಹರಣೆಗಳು ಶಾಸನಗಳಲ್ಲಿ ಹೇರಳವಾಗಿವೆ. ಇಂಥ ಸಂಘಗಳನ್ನು ಪ್ರಮುಖವಾಗಿ ಉತ್ಪಾದಕ ಸಂಘ, ವಿನಿಮಯ ಸಂಘ, ಉತ್ಪಾದಕ-ವಿನಿಮಯ ಸಂಘಗಳು ಎಂದು ಬಿ.ಆರ್. ಹಿರೇಮಠ ಅವರು ವರ್ಗೀಕರಿಸುತ್ತಾರೆ.[೬]

ಉತ್ಪಾದಕ-ವಿನಿಮಯ ಸಂಘಗಳಲ್ಲಿ ಒಂದಾದ "ಕುರುಬಸೇಣಿ"ಯು ಕುರುಬ ಸಮುದಾಯ ಹಾಗೂ ಅವರ ವೃತ್ತಿಗೆ ಸಂಬಂಧಿಸಿದ್ದಾಗಿದೆ. ಇವರು ಕುರಿಗಳ ಪಾಲನೆ-ಪೋಷಣೆ, ಕುರಿ ಉಣ್ಣೆಯಿಂದ ಕಂಬಳಿ ತಯಾರಿಕೆ ಮತ್ತು ಮಾರಾಟದ ಕಾಯಕಗಳನ್ನು ಪ್ರಾಚೀನ ಕಾಲದಿಂದಲೂ ಮಾಡಿಕೊಂಡು ಬರುತ್ತಿದ್ದಾರೆ. ಇದರಿಂದ ಕುರುಬರು ಆರ್ಥಿಕವಾಗಿ ಸಾಮಾಜಿಕವಾಗಿ ಸ್ವಾವಲಂಬಿಗಳಾಗಿ ಜೀವನ ನಿರ್ವಹಿಸಲು ಅನುಕೂಲವಾಗುತ್ತದೆ. ಈಗಲೂ ಗ್ರಾಮ-ತಾಲೂಕು-ಜಿಲ್ಲೆ-ರಾಜ್ಯಮಟ್ಟದಲ್ಲಿ ಕುರಿಸಾಕಣೆ ಹಾಗೂ ಉಣ್ಣೆ-ಕಂಬಳಿ ಉತ್ಪಾದಕರ ಸಹಕಾರ ಸಂಘಗಳಿರುವುದನ್ನು ಗಮನಿಸಬಹುದು. ಕೆಲವೇ ಕೆಲವು ಶಾಸನಗಳು ಮಾತ್ರ ಕುರುಬಸೇಣಿಗರ ಬಗ್ಗೆ ಉಲ್ಲೇಖಿಸುತ್ತವೆ.

೨. ಶಾಸನಗಳಲ್ಲಿ ಕುರುಬಸೇಣಿಗರು

ಕುರುಬಸೇಣಿಗೆ ಸಂಬಂಧಿಸಿದಂತೆ ಈವರೆಗೆ ನಾಲ್ಕು ಶಾಸನಗಳು ಲಭ್ಯವಿವೆ. ಮೊದಲ ಉಲ್ಲೇಖ ಮುಂಬೈನ ಪ್ರಿನ್ಸ್ ಆಫ್ ವೇಲ್ಸ್ ವಸ್ತುಸಂಗ್ರಹಾಲಯದಲ್ಲಿರುವ ಕ್ರಿ.ಶ. ೧೧೬೮ರ ಶಿಲಾಶಾಸನದಲ್ಲಿದೆ. ಕುರುಬಸೇಣಿಗರಿಗೆ ಸಂಬಂಧಿಸಿದಂತೆ ಅನೇಕ ವಿವರಗಳನ್ನು ನೀಡುವ ಈ ಶಾಸನ (೩೯ರಿಂದ ೫೩ನೆಯ ಸಾಲು)ದ ಭಾಗ ಹೀಗಿದೆ:

೩೯. ....ಯಗ್ರಹಾರಂ ಎ

೪೦. ಲೆಯ ಪೂರ್ವದವಳ್ಳಿಯೂರೊಡೆಯ ಪ್ರಮುಖ
ಮಹಾಜನಂಗಳಿನ್ನೂರ್ವ್ವರುಂ ಸವಿತಾಣದಲು
ಮಹಾಸಭೆಯಾಗಿರ್ದ್ದು ಚೌಗಾಂವೆಯ

೪೧. ನವಿಲೂರು ಕುರುಂಬಸೇಣಿಗರು ಮುಖ್ಯವಾ
ಸಮೆಯಂಗಳ ಕೈಯಲು ಅಪ್ಪಣೆಯಂ ಕೊಂಡು ಆ
ಸೇಣೆಗೇಶ್ವರ ದೇವರ
ಅಂಗಭೋಗ ರಂಗಭೋಗ

೪೨. ಕ್ಕೆ ಚೈತ್ರಪವಿತ್ರಕ್ಕೆ ಕೊಟ್ಟ ಕ್ರಮವೆಂತೆಂದಡೆ ॥ ಸ್ವಸ್ತಿ
ಕಲಿಯುಗ ಸಂವತ್ಸರಂ ೪೨೮೮ ಸಂದಂದಾದಿಯಾಗಿ
ಶ್ರೀಕಾದಂಬ ಭುಜಬಳ

೪೩. ವಿಜಯಕೇಶಿರ್ದೇವ ವರ್ಷದ ೧೨ನೆಯ ಕಾಳಯುಕ್ತ
ಸಂವತ್ಸರದ ಪುಶ್ಯ ಬ ೧೧ ಆದಿತ್ಯವಾರ ಉತ್ತರಾಯಣ
ಸಂಕ್ರಮಣ

* ಪ್ರಾಧ್ಯಾಪಕ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ-೫೮೩೨೭೬.

೪೪. ದಂದು ಶ್ರೀಮದಶೇಶ ಮಹಾಜನಂಗಳು ಕೊಟ್ಟ ಕೆಯ್ಯ ಸ್ಥಳ ಉಣಕಲ್ಲ ದಾರಿಯ ಪಡುವಲು ಬ್ರಹ್ಮಪ್ಮರಿಯ ಕೆಯಿಂ

ತೆಂಕಲು

೪೫. ಸರ್ವನಮಶ್ಯ ಸರ್ವಬಾದಾ ಪರಿಹಾರವಾಗಿ ಕೊಟ್ಟ ಮತ್ತರೆಂಟು ದೇವರ ಪೌಳಿ ಯಿಪ್ಪತ್ತಾರು ಕೈಯನೀಳ ಯಿಪ್ಪತ್ತೊಂದು ಕೈಯ ಅಗಲದೊಳಗೆ

೪೬. ಮಠಮನೆಯಾಗಿ ಮಾಡಿದಡಂ ಸರ್ವ್ವಬಾಧೆ ಪರಿಹಾರವಾಗಿ ಮಹಾಜನಂಗಳು ಕೊಟ್ಟರು ॥ ಆ ಕುರಿಬ

ಕುಲವರ್ಣ್ಣನಮನೆಂ

೪೭. ದಡೆ ॥ ಕುರುಬಿತಿಗ ಪಂಚಪುಟ್ಟಗವರಿತೆಯೊಳೆಂ ಪುಟ್ಟಿ ಕುರುಬಸೇಣಿಗರೆಂಬೀ ತೆರನ ಕುಲವಾಗಿ ಲೋಕದ ನೆರೆ

ಮಾಹೇಶ್ವರರೆನಿಪ್ಪ ಹೆಸರಂ ಪಡೆದ

೪೮. ರೂ ॥ ಜಗದೊಳಗೆಲ್ಲಿಯುಂ ಕುರಿಬಸೇಣಿಗರೆಂಬ ಕುಲೋತ್ತಮರ್ಸ್ಸದಾ ಬಗೆಯದು ಧರ್ಮ್ಮಜೀರ್ಣ್ಣ ಶಿವಗೇಹದ

ಮಾಟ ಸಮಸ್ತ ವಿಸ್ತರಂ ಮಿಗಿ

೪೯. ಲೆನೆ ಕೀರ್ತ್ತಿಯಂ ಪಡೆಯುತ್ತ ಶಿವಧರ್ಮ್ಮಮ ನಾವಕಾಲಮುಂ ಬಗೆಗೊಳುತ್ತಿಪ್ಪರೆಂದು ಪರತರ್ಸ್ಸ ಮಯೆಯಾದಿಗಳೆಯ್ದೆ

ಕೀತ್ತಿಪರೂ ॥ ಅಂತು ಕೀರ್ತ್ತಿಸಿ ॥

೫೦. ಮಿಗೆ ಸಾಹಿತ್ಯ ಸಮಸ್ತ ಶಾಸ್ತ್ರ ವಿಷಯ ಬ್ಯಾಪಾರ ಮೊಳು ಪೇಳ್ದಡೇಂ ಭ್ರಿಗುಪಿಂದತ್ಯಧಿರ್ಕ್ಕಳಾಸುರಿಗೆ ವಿಣ್ಣಾಗಳೊಳು

ವೀರದೊಳು ಹಗೆಸಿಂ

೫೧. ಹಕ್ಕಿದಿರಾಗೆ ತಾಗಿ ಕೊಲ್ವರ್ಪಾವನ ವಿಲಾಸಾನ್ವಯ ರ್ಮಿಗಿಲಿಂತೊಪ್ಪೆ ಕುರುಬಸೇಣಿಗರಿದೇಂ ಲೋಕಕ್ಕೆ ವಿಖ್ಯಾತರೊ ॥ ಅಂತೆನಿಸಿ ॥ ॥ ಕಂದ ॥ ನವಿಲೂರು ಕುರಿಬಸೇಣಿಗರವರೆಲ್ಲಂ ಮುಖ್ಯವಾಗಿ ಚೌಗಾಂವೆಯ ವರ್ತವತವಗೆ ಬಂದುದಂ ರ್ಮೊ....ವದಿಂದೀ ಕೆಯ್ಯ

೫೨. ಹಡೆದು ದೇವರ್ಗ್ಗಿತ್ತರೂ ॥ ದೀನಾನಾಥರೂ ಬಾಳ್ವೆನೆ ಕಾನೀನನ ತೆರದೆ ಕುಡುವರಹಿತರ್ವ್ವರಲಭಿಮಾನಮನೆ ಸೂರೆಗೊಂಬಮ್ಮನಿಸ ನವಿಲೂ(ರ)

೫೩. ಕುರಿಬಸೇಣಿನಿವಹ ॥ ಈ ಧರ್ಮ್ಮಮನಾದರ ವಿರ್ಪೊಧಿಗಳಿಂ ಕಾದವರ್ಗ್ಗೆ ಸುಖಸಂಪದ

ಸೂಸಾಧಿತಮೆನಿಕುವಳಿಪನಿಗೊ .... ನರಕಾಗ್ನಿ ಯೊಳಗೆ ಗಳಗಳನಿಳಿವರೂ ॥ ಸ್ವದತ್ತಂ ಪರದತ್ತಂ ವಾಯೋ

ಹರೇತಿ ವಸುಂಧರಾ ॥ ಷಷ್ಟಿರ್ವರ್ಶ್ಯ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ ॥ ೭

ಈ ಶಾಸನ ಭಾಗದ ವಿಶೇಷತೆಯನ್ನು ಸಂಗ್ರಹಿಸಿ ಹೀಗೆ ಹೇಳಬಹುದು.

೧. ಕುರುಬಸೇಣಿಗರನ್ನು ಸುದೀರ್ಘವಾಗಿ ವರ್ಣಿಸುವ ಶಾಸನ ಇದಾಗಿದೆ. ಹುಬ್ಬಳ್ಳಿಯ ಎರಡುನೂರು ಪ್ರಮುಖ ಮಹಾಜನಗಳಿದ್ದ ಮಹಾಸಭೆಯು ಚೌಗಾವೆ(ನಾಲ್ಕು ಗ್ರಾಮಗಳಿಗೆ ಕೇಂದ್ರಸ್ಥಾನ)ಯ ನವಿಲೂರ ಕುರುಬ ಸೇಣಿಗರಿಂದ ಅಪ್ಪಣೆಯನ್ನು ಪಡೆದುಕೊಂಡು ಸೇಣಿಗೇಶ್ವರ ದೇವರ ಅಂಗಭೋಗ-ರಂಗಭೋಗಕ್ಕೆ ದಾನ ನೀಡಿತು. ಧಾರವಾಡದಿಂದ ಹುಬ್ಬಳ್ಳಿಗೆ ಹೋಗುವ ಹೆದ್ದಾರಿಗುಂಟ ನಾಲ್ಕು ಕಿ.ಮೀ. ಕ್ರಮಿಸಿದರೆ, ಎಡಭಾಗದಲ್ಲಿ ನವಲೂರ ಗ್ರಾಮವಿದೆ.

೨. ಈ ದಾನವನ್ನು "ಸ್ವಸ್ತಿ ಕಲಿಯುಗ ಸಂವತ್ಸರಂ ೪೨೮೮ ಸಂದಂದಾದಿಯಾಗಿ ಶ್ರೀ ಕಾದಂಬ ಭುಜಬಳ ವಿಜಯಕೇಶಿದೇವ ವರ್ಶ್ಯದ ೧೨ನೆಯ ಕಳಯುಕ್ತ ಸಂವತ್ಸರದ ಪುಶ್ಯ ಬ ೧೧ ಆದಿತ್ಯವಾರ ಉತ್ತರಾಯಣ ಸಂಕ್ರಮಣ" ದಂದು ಅಂದರೆ ಕ್ರಿ.ಶ. ೨೩-೧-೧೧೩೮ರ ಭಾನುವಾರ, ಉತ್ತರಾಯಣ ಸಂಕ್ರಾಂತಿಯಂದು ನೀಡಲಾಗಿದೆ.

೩. ಈ ಅವಧಿಯಲ್ಲಿ ಕಲ್ಯಾಣ ಚಾಲುಕ್ಯ ದೊರೆ ಭೂಲೋಕಮಲ್ಲದೇವನ ಸಾಮಂತ ದೊರೆ ಮಹಾ ಮಂಡಳೇಶ್ವರ ಹಾಗೂ ಬನವಾಸಿಯ ಪುರವರಾಧೀಶ್ವರನಾದ ಗೋವೆಯ ಕದಂಬ ವಂಶದ ಜಯಕೇಶಿಯು ರಾಜ್ಯಭಾರ ಮಾಡುತ್ತಿದ್ದನು.

೪. ಉಣಕಲ್ಲು ದಾರಿಯ ಪಶ್ಚಿಮದಲ್ಲಿರುವ ಬ್ರಹ್ಮಪುರಿಯ ದಕ್ಷಿಣ ಭಾಗಕ್ಕಿರುವ ಎಂಟು ಮತ್ತರು ಭೂಮಿಯಲ್ಲಿ ದೇವರ ಪೌಳಿ, ಇಪ್ಪತ್ತಾರು ಕೈಮೊಳ(ಅಡಿ) ಉದ್ದ ಹಾಗೂ ಇಪ್ಪತ್ತೊಂದು ಕೈಮೊಳ ಅಗಲದೊಳಗೆ ಮಠ-ಮನೆಯನ್ನು ಸರ್ವ ಬಾಧೆಗಳು ಪರಿಹಾರವಾಗಲೆಂದು ಮಹಾಜನಂಗಳು ಕಟ್ಟಿಸಿಕೊಟ್ಟರು.

೫. ಕುರುಬಸೇಣಿಗರ ಕುಲವರ್ಣನೆ ಮಾಡಿರುವುದು ಈ ಶಾಸನದ ವಿಶೇಷತೆಯಾಗಿದೆ. ಐದು ಪುಟ್ಟ ವ್ಯಾಪಾರಿ ಸಂಘಗಳಲ್ಲಿ ಒಂದಾದ ಕುರುಬಸೇಣಿಗ ಕುಲವು ಮಾಹೇಶ್ವರ ರೆಂದು ಲೋಕದಲ್ಲಿ ಹೆಸರುವಾಸಿಯಾಗಿತ್ತು. ಕುಲೋತ್ತಮ ರಾದ ಇವರು ಸದಾಕಾಲ ದಾನದತ್ತಿಗಳನ್ನು ನೀಡುತ್ತ ಶಿವಧರ್ಮ

ವನ್ನು ಪಾಲಿಸುತ್ತ ಜಗತ್ತಿನೆಲ್ಲೆಡೆ ಕೀರ್ತಿಯನ್ನು ಹೊಂದಿದ್ದರು. ಮೇಲಾಗಿ ಸಾಹಿತ್ಯ ಹಾಗೂ ಶಾಸ್ತ್ರ ವಿಷಯಗಳಲ್ಲಿ ಪಾರಂಗತರಾಗಿದ್ದರು. ಪರಾಕ್ರಮದಲ್ಲಿ ವೀರಾಧಿವೀರರಾಗಿ ವಿಖ್ಯಾತರಾಗಿದ್ದರು. ದೀನದಲಿತರೂ ಬಾಳಲಿ ಎಂದು ಕರ್ಣನಂತೆ ದಾನಶೂರರಾಗಿದ್ದರು. ಒಟ್ಟಿನಲ್ಲಿ ಚೌಗಾವೆಯ ನವಲೂರ ಸೇಣಿಗರು ಅಭಿಮಾನಧನರಾಗಿ ಲೋಕದಲ್ಲಿ ಪ್ರಸಿದ್ಧರಾಗಿದ್ದನ್ನು ಈ ಶಾಸನವು ವರ್ಣನಾತ್ಮಕವಾಗಿ ನಿರೂಪಿಸುತ್ತದೆ.

೬. ಛಂದಸ್ಸಿನ ದೃಷ್ಟಿಯಿಂದಲೂ ಈ ಶಾಸನ ನಮ್ಮ ಗಮನ ಸೆಳೆಯುತ್ತದೆ. ಕಂದ, ಚಂಪಕಮಾಲೆ ಹಾಗೂ ಉತ್ಪಲ ಮಾಲಾ ವೃತ್ತಗಳ ಮೂಲಕ ಕುರುಬಸೇಣಿಗರನ್ನು ಇಲ್ಲಿ ವರ್ಣಿಸಲಾಗಿದೆ.

ಇನ್ನು ಕ್ರಿ.ಶ. ೧೧೬೧ರ ಮನಗೂಳಿ ಶಾಸನವು ಕಲಿದೇವರ ಧಾರ್ಮಿಕ ಕಾರ್ಯಗಳಿಗೆ ಮತ್ತು ನೂಲಹುಣ್ಣಿಮೆಗೆ ತೆಲ್ಲಿಗರು, ಜೇಡ ಕೊತ್ತಳಿಗಳು, ಬಿಲ್ಲಮುನ್ನೂರ್ವರು, ಮೇದರು ಮೊದಲಾದ ವಿವಿಧ ವೃತ್ತಿಯವರು, ವ್ಯಾಪಾರಿ ಸಂಘಗಳು ವರ್ಷಂಪ್ರತಿ ನೀಡಬೇಕಾದ ದಾನದ ವಿವರಗಳನ್ನು ದಾಖಲಿಸಿದೆ. ೬೯ನೆಯ ಸಾಲಿನಲ್ಲಿ "ನೂಲಪರ್ವಕ್ಕೆ ವರ್ಷಂ ಪ್ರತಿ ಕುರುಬಸೇಣಿಗರೊಕ್ಕಲೊಕ್ಕಲು ವೀಸವಯ್ದಂ ಕೊಟ್ಟರ್"[೮] ಎಂಬ ಉಲ್ಲೇಖವಿದೆ. ಅಂದರೆ ನೂಲಹುಣ್ಣಿವೆಗೆ ಪ್ರತಿವರ್ಷ ೫ ವೀಸ ಹಣವನ್ನು ಕುರುಬಸೇಣಿಗರು ನೀಡುತ್ತಿದ್ದರು ಎಂಬುದು ಇದರಿಂದ ತಿಳಿದುಬರುವ ಸಂಗತಿ.

ರಾಯಚೂರ ಜಿಲ್ಲೆಯ ದೇವದುರ್ಗ ತಾಲೂಕಿನ ಖಾನಾಪುರ ಗ್ರಾಮದಲ್ಲಿ ದೊರೆತ ಕ್ರಿ.ಶ. ೧೧೮೨ರ ಶಾಸನದಲ್ಲಿ ಪಿರಿಯ ಗಬ್ಬೂರಿನ ಕುರುಬಸೇಣಿಗರ ಉಲ್ಲೇಖವಿದೆ.[೯]

"..............................ಪಿರಿಯ ಗೊಬ್ಬೂರ ಸ್ಥಳದ
ಅಯ್ಯಾಬರಿಗರ
ಅವರ ಮಕ್ಕಳು ಕುರುಬ ಸೇಣಿಗಳಿಗಂ ಜಗತಿಯಂ
ಜಾಡಗೊತ್ತಳಿಗಳಾದ......
ಬವ.........ವಾಗುತ್ತಿರಲು ಆ ಇತ್ತಡ...........ಅಶೇಷ
ಮಹಾಜನಂಗಳು
ಪ್ರಕಾರವೆಂತೆಂದಡೆ ಕುರುಬ ಸೇಣಿಗರು........ ಬನ.......
ಗರ.........ಳೆಯ ನೆಯ್ಯೆ
.........ಮಹಾಜನಂ ಆ ಕುರುಬ ಸೇಣಿಗ.........................

ಇನ್ನು ಕುರುಬಸೇಣಿಗ ದಾಸಗೌಡನನ್ನು ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಕೊಲ್ಹಾರ ಗ್ರಾಮದ ಶಾಸನ (ಕ್ರಿ.ಶ. ೧೨೨೩) ವೊಂದು ಹೀಗೆ ಉಲ್ಲೇಖಿಸಿದೆ.

"...ಕೋಲಾರದ ಅಸೇಷ ಮಹಾಜನಂಗಳುಂ ಅಲ್ಲಿಯ
ನಾಲ್ಕು ಮೊದಲ ಪ್ರಭುಗಳಿಂ ತಂಮ
ಮಕ್ಕಳು ಕುರುಬಸೇಣಿಗ ದಾಸಗೌಡ ಸಿವಶಕ್ತಿ ಗುರುಗಳುಂ
ಸಮಸ್ತ ಕೊತ್ತಳಿಗಳುಂ ಪ್ರತಿಷ್ಟಯಂ
ಮಾಡಿಸಿದ ಶ್ರೀ ಮಲ್ಲಿಕಾರ್ಜುನದೇವರ ಅಂಗಭೋಗ
ಖಂಡಸ್ಫುಟಿತ ಜೀರ್ಣೋದ್ದಾರಕಂ ಪಾದಪೂಜೆಯ
ಕೊಂಣ್ಡು ಹಿರಿಯಹಳ್ಳದಿಂ ಪಡುವ ನಾರಹನಾಲದಿಂ
ಬಡಗ ಕರುವಗೆಯಿಂ ಮೂಡ ಪಡ್ಡಯಗೆ..
ಯಿಂ ತೆಂಕ ಮತ್ತರೆರಡುಂ ಚರಿಬೆಟಕಿಯವೊಳಗೆ
ಇಡುಕಬಂ ವೂರೊಡೆಯರ ಕೇರಿಯ ನೈ
ರಿತ್ಯದೆ ಗೋಂಟಿನಲು ಏಳು ಕೈಯ[ಗಲ] ಹನಿಕೈಯೆ ನೀಳದ
ಮನೆಯು ಮಗ್ಗ ಸಹಿತ ಸರ್ವ್ವ ನಮಸ್ಯ
ವಾಗಿ ಆ ಚಂದ್ರಾರ್ಕ್ಕತಾರಂಬರಂ ಕೊಟ್ಟರು ಆ ದೇವರಿಗೆ
ದಾಸಗೌಡನುಂ ಕೊತ್ತಳಿಗಳುಂ ತಾವು
ಕೊಟ್ಟ ಆಯ ಕೊಡಗೂಸಿನ ಮದುವೆಗೆ ಹಣ ಹಾಗ
ಮರುವತ್ತಿಗೆ ಅಡಂ ಬೇಳೆ ವೀಳೆಯ ದೇ
ವರಿಗೆ ಅಡಕೆ ೧೨ ಎಲೆ ೨೪ ಜೀಯಗೆ ಅಡಕೆ ೬ ಎಲೆ
೧೨ ವೊಕ್ಕಲಲು ಚೈತ್ರಕೆ ಬೇಳೆ ಪಯಿತ್ರ
ಕ್ಕೆ ಹಾಗ ಸಂಕ್ರಮಣದಲು ಬೇಳೆ...[೧೦]

ಯಾದವ ಚಕ್ರವರ್ತಿ ಸಿಂಘಣನ ಕಾಲ (ಕ್ರಿ.ಶ. ೧೨೨೩)ದಲ್ಲಿ ಕೊಲ್ಹಾರ ಗ್ರಾಮದ ಮಹಾಜನರು ಪ್ರಭುಗಳು, ಕುರುಬಸೇಣಿಗ ದಾಸೇಗೌಡ, ಶಿವಶಕ್ತಿ ಗುರುಗಳು, ಸಮಸ್ತ ಕೊತ್ತಳಿಗಳು ಸೇರಿಕೊಂಡು ಅಲ್ಲಿ ಮಲ್ಲಿಕಾರ್ಜುನ ದೇವರನ್ನು ಪ್ರತಿಷ್ಠಾಪಿಸಿದ್ದು, ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಎರಡು ಮತ್ತರು ಭೂಮಿಯನ್ನು ದಾನ ನೀಡಿದ್ದು, ವಿಶೇಷವಾಗಿ ಕುರುಬಸೇಣಿಗ ದಾಸಗೌಡನು ಹಾಗೂ ವರ್ತಕರ ವಿವಿಧ ಸಂಘಗಳು ಕೊಡಗೂಸಿನ ಮದುವೆಗೆ ಹಣ-ಹಾಗ, ಬೇಳೆ, ಅಡಕೆ ಎಲೆ ಇತ್ಯಾದಿಗಳನ್ನು ದಾನ ನೀಡಿದ್ದನ್ನು ಈ ಶಾಸನ ಪಠ್ಯಭಾಗದಿಂದ ತಿಳಿಯಬಹುದು.

ಈವರೆಗಿನ ಅವಲೋಕನದಿಂದ ಬೆಳಕಿಗೆ ಬಂದ ಕುರುಬಸೇಣಿಗರ ಬಗೆಗಿನ ಶಾಸನೋಕ್ತ ಮಾಹಿತಿಗಳಿವು. ಕುರುಬರು ಚಾರಿತ್ರಿಕವಾಗಿ ಪ್ರಾಚೀನರು, ಸಾಂಸ್ಕೃತಿಕವಾಗಿ ಸಮೃದ್ಧರೂ ಹೌದು. ಆದರೆ ಶೈಕ್ಷಣಿಕವಾಗಿ ಸಾಮಾಜಿಕವಾಗಿ ಹಿಂದುಳಿದವರು. ಹೀಗಾಗಿ ಶಾಸನಗಳಲ್ಲಿ ಇವರ ಬಗ್ಗೆ ವಿಪುಲವಾದ ಮಾಹಿತಿಗಳು ದಾಖಲಾಗಿಲ್ಲ. ಅಷ್ಟೇ ಏಕೆ, ತೆಲ್ಲಿಗರು, ತೋಟಿಗರು, ವಾಲೆಗಾರರು, ಉಗುರ ಮುನ್ನೂರ್ವರು, ಮೊದಲಾದ ಸಂಘಗಳ ಕುರಿತು ಅನೇಕ ಶಾಸನಗಳು ವಿವರಿಸುತ್ತವೆ. ಆದರೆ ಕುರುಬಸೇಣಿಗರ ಕುರಿತು ಶಾಸನಗಳು ಮೌನವಹಿಸಿವೆ. ಅಲ್ಲದೇ, ಇಂಥ ವಿಷಯಗಳ ಕುರಿತು ಅಧ್ಯಯನ ಮಾಡಿದ ವಿದ್ವಾಂಸರು ಸಹ ಈ ಬಗ್ಗೆ ಅಷ್ಟೊಂದು ಗಮನವಹಿಸಿಲ್ಲ. ಶಾಸನಗಳ ಮುಖೇನ ಪ್ರಾಚೀನ ಸಂಘಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡಿದ ಆರ್.ಎನ್. ಗುರವ ಅವರಾಗಲೀ[೧೧], ಶಾಸನಗಳಲ್ಲಿ ಕರ್ನಾಟಕದ ವರ್ತಕರ

ಬಗ್ಗೆ ಸಂಶೋಧನ ಮಹಾಪ್ರಬಂಧ ರಚನೆ ಮಾಡಿದ ಜಿ.ಆರ್. ಹಿರೇಮಠ ಅವರಾಗಲೀ[12] ಅಥವಾ ಇತರೇ ವಿದ್ವಾಂಸರು ಕುರುಬಸೇಣಿಗರ ಬಗೆಗಿನ ಶಾಸನಗಳನ್ನು ಶೋಧಿಸಿ, ಅವುಗಳ ಅನನ್ಯತೆಯನ್ನು ಗುರುತಿಸಿರಲಿಲ್ಲ. ಆದರೆ ಹನುಮಾಕ್ಷಿ ಗೋಗಿ ಅವರು ಇತ್ತೀಚೆಗೆ ಪ್ರಕಟಿಸಿದ ಹುಬ್ಬಳ್ಳಿ ತಾಲೂಕಿನ ಶಾಸನಗಳು ಕೃತಿಯಲ್ಲಿ ನವಲೂರ ಕುರುಬಸೇಣಿಗರ ಬಗೆಗಿನ ಶಾಸನಪತ್ಯದ ವಿಶೇಷತೆಯನ್ನು ಪ್ರಸ್ತಾವನೆಯಲ್ಲಿ ವಿಶ್ಲೇಷಣೆಗೊಳಪಡಿಸಿದ್ದಾರೆ[13]. ಹೀಗಾಗಿ ಈ ಕೊರತೆಯನ್ನು ಮನಗಂಡು ನಾನು ಪ್ರಾಚೀನ ಕಾಲದ ಸಂಪುಟಗಳಲ್ಲಿ ಬಂದಿರುವ ಕುರುಬಸೇಣಿಯ ಕುರಿತು ನನಗೆ ಲಭ್ಯವಾದ ಶಾಸನಗಳನ್ನಿಟ್ಟುಕೊಂಡು ಇಲ್ಲಿ ಚರ್ಚಿಸಿದ್ದೇನೆ. ಈ ಚರ್ಚೆಯ ಮೂಲಕ ಕನ್ನಡ ಶಾಸನಗಳನ್ನು ಸಮಗ್ರವಾಗಿ ಪರಿಶೀಲಿಸಿದರೆ ಕುರುಬಸೇಣಿಗರ ಬಗ್ಗೆ ಇನ್ನೂ ಅನೇಕ ಸಂಗತಿಗಳು ತಿಳಿದು ಬರುವ ಸಾಧ್ಯತೆಗಳಿವೆ.

ಆಧಾರಸೂಚಿ

೧. ಕನ್ನಡ ನಿಘಂಟು ಸಂ. ೮, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫, ಪುಟ ೮೬೨.

೨. ಎಪಿಗ್ರಾಫಿಯ ಆಫ್ ಇಂಡಿಕಾ, ಸಂ. XIII ಪುಟ ೧೮೯.

೩. ಎಪಿಗ್ರಾಫಿಯ ಆಫ್ ಇಂಂಡಿಕಾ, ಸಂ. XI ಪುಟ ೧೬೬.

೪. ಎಪಿಗ್ರಾಫಿಯ ಆಫ್ ಇಂಡಿಕಾ, ಸಂ: XII ಪುಟ ೩೩೨.

೫. ದಿ ಕದಂಬ ಕುಲ, ಪುಟ ೪೬೮.

೬. ವಿಸ್ತೃತವಾದ ಅಧ್ಯಯನಕ್ಕೆ ನೋಡಿ : ಜಿ.ಆರ್. ಹಿರೇಮಠ, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೮೬.

೭. ಈ ಶಾಸನ ಪತ್ಯವು ಈವರೆಗೆ ಮೂರು ಕಡೆ ಮುದ್ರಣವಾಗಿದೆ. ನೋಡಿ : ೧. ಕದಂಬಕುಲ ಪುಟ ೪೬೮. ೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು, ಸಂ. ಜಿ.ಎಸ್. ಉಪಾಧ್ಯೆ, ದೇವರಕೊಂಡಾರೆಡ್ಡಿ), ಶಾ.ಸಂ. ೧೦೨, ಪುಟ ೧೪೦, ೨೦೦೧, ೩. ಹುಬ್ಬಳ್ಳಿ ತಾಲೂಕಿನ ಶಾಸನಗಳು, ಶ್ರೀಮತಿ ಹನುಮಾಕ್ಷಿ ಗೋಗಿ (ಸಂ), ಶಾ.ಸಂ. ೬೯, ಪುಟ ೧೦೪, ೨೦೧೩.

೮. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂ. ೧೫, ನಂ. ೧೦೧.

೯. ಶಿರ್ಸಿಯಲ್ಲಿ ನಡೆದ ಕರ್ನಾಟಕ ಇತಿಹಾಸ ಸಮ್ಮೇಳನದಲ್ಲಿ ಶ್ರೀ ಚನ್ನಬಸಪ್ಪ ಮಸ್ಕಿ ಅವರು ಮಂಡಿಸಿದ ಅಪ್ರಕಟಿತ ಶಾಸನವಿದು.

೧೦. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂ. ೧೫, ನಂ. ೧೬೯.

೧೧. ಅಸಿಸ್ಟಂಟ್ ಕಲೆಕ್ಟರ್ ಡಾ. ಆರ್.ಎಸ್. ಗುರವ ಶಾಸನ ಸಂಶೋಧನ ಪ್ರಬಂಧಗಳು, ಹನುಮಾಕ್ಷಿ ಗೋಗಿ (ಸಂ), ಮಹಿಕಾ ಪ್ರಕಾಶನ ನವನಗರ, ಹುಬ್ಬಳ್ಳಿ, ೨೦೧೪.

೧೨. ಜಿ.ಆರ್. ಹಿರೇಮಠ, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬.

೧೩. ಹುಬ್ಬಳ್ಳಿ ತಾಲೂಕಿನ ಶಾಸನಗಳು, ಶ್ರೀಮತಿ ಹನುಮಾಕ್ಷಿ ಗೋಗಿ (ಸಂ), ಪ್ರಸ್ತಾವನೆ, ಪುಟ ೩೧, ೨೦೧೩.

ಬಿಜಾಪುರದ ಶಾಸನೋಕ್ತ ಕೋಟೆ ಮತ್ತು ಕೊತ್ತಲಗಳು

ಪ್ರೊ. ಎಂ.ಎನ್. ಬೆನ್ನೂರ* ಡಾ. ಎಸ್.ಕೆ. ಮೇಲಕಾರ**

ಕ್ರಿ.ಶ. ೧೪೮೧ರಲ್ಲಿ ಮಹಮ್ಮದ ಗವಾನನ ಮರಣದ ತರುವಾಯ ಬಹಮನಿ ಸಾಮ್ರಾಜ್ಯ ಆಂತರಿಕ ಕಲಹಗಳಿಂದಾಗಿ ಒಡೆದು ಐದು ಭಾಗವಾಗಿ ಮಾರ್ಪಟ್ಟಿತು. ಅದರಲ್ಲಿ ಬಿಜಾಪುರ, ಕ್ರಿ.ಶ. ೧೪೮೯ರಲ್ಲಿ ಯೂಸುಪ್ ಆದಿಲ್‌ಖಾನನಿಂದ ಸ್ವತಂತ್ರಗೊಂಡಿತು. ಬಿಜಾಪುರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ೯ ಮಂದಿ ಸುಲ್ತಾನರು ಆಳ್ವಿಕೆ ಮಾಡಿದರು. ಮುಖ್ಯವಾಗಿ ಯುಸುಪ್ ಆದಿಲ್ ಷಾಹಿ, ಇಸ್ಮಾಯಿಲ ಆದಿಲ್ ಷಾಹಿ, ಮಲ್ಲುಖಾನ್, ೧ನೇ ಇಬ್ರಾಹಿಂ ಆದಿಲ್ ಷಾಹಿ, ೧ನೇ ಅಲಿ ಆದಿಲ್ ಷಾಹಿ. ೨ನೇ ಇಬ್ರಾಹಿಂ ಆದಿಲ್‌ಷಾಹಿ. ಮಹಮ್ಮದ್ ಆದಿಲ್‌ಷಾಹಿ ೨ನೇ ಅಲಿ ಆದಿಲ್ ಷಾಹಿ, ಸಿಕಂದರ ಆದಿಲ್‌ಷಾಹಿ ಎಂಬ ಸುಲ್ತಾನರು ಕ್ರಿ.ಶ. ೧೬೮೬ ರವರೆಗೆ ಆಳ್ವಿಕೆ ಮಾಡಿದರು. ಆದಿಲ್ ಷಾಹಿಗಳ ಪ್ರತಿಯೊಬ್ಬ ಸುಲ್ತಾನರು ಪಾರಂಪರಿಕವಾಗಿ ಕಟ್ಟಡಗಳನ್ನು ನಿರ್ಮಿಸಿ ತಮ್ಮ ಕಲಾಸೌಂದರ್ಯವನ್ನು ಮೆರೆಯಲು ವಿಜಯನಗರ. ಗೊಲ್ಕಂಡ, ಅಹಮದ್ ನಗರ. ಬೀದರದ ಅರಸರೊಂದಿಗೆ ಪೈಪೋಟಿ ನಡೆಸಿದರು. ತಮ್ಮ ಕಟ್ಟಡಗಳನ್ನು ಟರ್ಕಿ, ಇಂಡೋ-ಇಸ್ಲಾಮಿಕ್, ಪರ್ಶಿಯನ್. ದಖ್ಖನಿ. ಶೈಲಿಗಳಿಂದ ನಿರ್ಮಿಸಿದರು.

ಸುಲ್ತಾನರು. ಸಾಮಂತರು. ದಂಡನಾಯಕರು, ಮಂತ್ರಿಗಳು ರಾಜಧಾನಿಯಾದ ಬಿಜಾಪುರವನ್ನು ವೈರಿಗಳಿಂದ ರಕ್ಷಣೆ ಮಾಡಿಕೊಳ್ಳಲು ಅರ್ಕ್‌ಕಿಲ್ಲಾ. ಬುರಜು. ಕಾವಲ ಗೋಪುರ, ಫಿರಂಗಿ ಬುರುಜುಗಳು ಹಾಗೂ ಕೋಟೆಗಳನ್ನು ನಿರ್ಮಿಸಿ, ಅದರ ಒಳಗೆ ತಮ್ಮ ಅರಮನೆ ಮತ್ತು ಆಡಳಿತ ಕಛೇರಿಗಳನ್ನು ನಿರ್ಮಿಸಿದರು. ಉದಾ: ಗಗನಮಹಲ್. ಆಸರಮಹಲ್, ಸಾತ್‌ಮಂಜಿಲ್. ಮೇಹತರಮಹಲ್ ಮುಂತಾದ ಕಟ್ಟಡಗಳನ್ನು ನಿರ್ಮಿಸಿದರು. ಬಿಜಾಪುರದಲ್ಲಿರುವ ಕೋಟೆ ಕೊತ್ತಲಗಳು ಕಲ್ಲು, ಮಣ್ಣು, ಗಚ್ಚು ಹಾಗೂ ಗಾರೆಗಳಿಂದ ನಿರ್ಮಿಸಿದರು.

ಬಿಜಾಪುರದ ಅರ್ಕಕಿಲ್ಲಾ ಮತ್ತು ಕೋಟೆ

ಬಿಜಾಪುರದ ಕೋಟೆ, ಅರ್ಕಕಿಲ್ಲಾ, ಬುರ್ಜುಗಳ ಬಗ್ಗೆ ೨೨ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಸುಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ೧೨ ಶಾಸನಗಳು ಅರ್ಕಕಿಲ್ಲಾ ಮತ್ತು ಕೋಟೆ ನಿರ್ಮಾಣದ ಕುರಿತು ತಿಳಿಸುತ್ತವೆ. ಫೆರಿಸ್ತಾನು ಕ್ರಿ.ಶ. ೧೫೧೨-೧೩ರ ಪರ್ಶಿಯನ್ ಶಾಸನವನ್ನು ಆಧಾರವಾಗಿಟ್ಟುಕೊಂಡು ಬಿಜಾಪುರದಲ್ಲಿ ಪ್ರಾಚೀನ ಕಾಲದ ಮಣ್ಣಿನ ಕೋಟೆ ಇತ್ತು. ಮುಂದೆ ಯೂಸೂಫ್ ಆದಿಲ್‌ಷಾನು ಆ ಕೋಟೆಗೆ ಕಲ್ಲುಗಳನ್ನು ಉಪಯೋಗಿಸಿ ಕೋಟೆಯ ಗೋಡೆಯನ್ನು ನಿರ್ಮಿಸಿದನು. ಈ ಕೋಟೆಯು ದೇವಗಿರಿಯ ಸೇವುಣರಿಂದ ಕಟ್ಟಲ್ಪಟ್ಟಿರುವ ಸಾಧ್ಯತೆ ಇದೆ. ಅರ್ಕ್‌ಕಿಲ್ಲಾ ಇದೊಂದು ನಗರದ ಒಳಕೋಟೆಯಾಗಿದೆ ಕ್ರಿ.ಶ. ೧೫೧೦ರಲ್ಲಿ ಯೂಸೂಫ್ ಆದಿಲ್‌ಷಾನ ಮರಣದ ತರುವಾಯ ಕ್ರಿ.ಶ. ೧೫೧೪ರಲ್ಲಿ ಈ ಕಟ್ಟಡದ ಕಾರ್ಯವನ್ನು ಆತನ ಮಗನಾದ ಇಸ್ಮಾಯಿಲ್ ಆದಿಲ್‌ಷಾನು ಪೂರ್ಣಗೊಳಿಸಿದ.

ಕ್ರಿ.ಶ. ೧೫೩೮-೩೯ರ ಅರ್ಕಕಿಲ್ಲೆಯ ದಕ್ಷಿಣ ಬಾಗಿಲದಲ್ಲಿರುವ ಅರಬ್ಬಿ ಮತ್ತು ಪರ್ಷಿಯನ ಭಾಷೆಯ ಶಾಸನದ ಉಲ್ಲೇಖದಂತೆ ೧ನೇ ಇಬ್ರಾಹಿಂ-ಆದಿಲ್ ಶಾಹಿ ಅರ್ಕಕಿಲ್ಲೆಯ ಬುರ್ಜನ್ನು ಪೂರ್ಣಗೊಳಿಸಿದರ ಬಗ್ಗೆ ದಾಖಲಿಸಿದೆ. ಹಾಗೆಯೇ ಕ್ರಿ.ಶ. ೧೫೪೨-೪೩ರ ಅರ್ಕಕಿಲ್ಲೆಯ ಬಾಗಿಲದ ಮೇಲಿರುವ ಪರ್ಷಿಯನ್ ಭಾಷೆಯ ಶಾಸನ ಉಲ್ಲೇಖಿಸಿರುವಂತೆ ೧ನೇ ಇಬ್ರಾಹಿಂ-ಆದಿಲ್ ಶಾಹಿಯ ದಂಡನಾಯಕ ಇಖ್ತ್ಯಾರ್ ಖಾನನು ಅರ್ಕಕಿಲ್ಲೆಯ ಕಟ್ಟಡವನ್ನು ನಿರ್ಮಿಸಿದನೆಂದು ಹೇಳುತ್ತದೆ.

ಕ್ರಿ.ಶ. ೧೫೨೨ ಮಾರ್ಚ ೨೩ ಅಂದರೆ ರಬ್ಬಿ-ಉಲ್-ಅಖಿರ್ ೨೪ಕ್ಕೆ ಸಮನಾದ ದಿವಸ ಕಿಶನ್‌ರಾಯನು ದೇವರ ದಯೆ ಹಾಗೂ ನಂತರ ಆಗಮನದಿಂದ ನಾಲ್ಕೇ ದಿವಸಗಳಲ್ಲಿ ಹಿಂದಕ್ಕೆ ಹೋಗಬೇಕಾಯಿತು. ಸುಲ್ತಾನ (ಆದಿಲ್ ಖಾನನ ಪುತ್ರ ಮಜಲಿಸ್-ಇ-ರಫೀ ಅಲೀಖಾನ) ತನ್ನ ಸಹಾಯಕ ಅಧಿಕಾರಿ ನಾಯಿಬ್-ಇ-ಘೈಬತ್ ಸೂಚನೆ ಮೇರೆಗೆ ನಗರದ ನಾಲ್ಕು ದಿಕ್ಕುಗಳಲ್ಲಿ ರಕ್ಷಣಾ ಕೋಟೆ ಗೋಡೆಗಳನ್ನು ನಿರ್ಮಾಣ ಮಾಡಿರುವ ಬಗ್ಗೆ ಅರ್ಕಕಿಲ್ಲೆಯ ಹೊರಗೋಡೆ ಬಾಗಿಲಿನಲ್ಲಿರುವ ಪರ್ಷಿಯನ್ ಭಾಷೆಯ ಶಾಸನ ತಿಳಿಸುತ್ತದೆ.

* ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ಟಿ.ಸಿ. ಕಾಲೇಜು, ಬನಹಟ್ಟಿ.
** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಬಿಜಾಪುರ ಕನ್ನಡ ನಾಡಿನಲ್ಲಿತ್ತು ಎನ್ನುವುದಕ್ಕೆ ಚೀನಿ ಮಹಲ್‌ನ ದಕ್ಷಿಣ ದಿಕ್ಕಿನಲ್ಲಿರುವ ಕಡಕ್ ಬಿಜಿಲಿಯಲ್ಲಿರುವ ಕ್ರಿ.ಶ. ೧೫೫೦, ಏಪ್ರಿಲ್ ೧೮ರ ಪರ್ಷಿಯನ್ ಭಾಷೆಯ ಶಾಸನ ಉಲ್ಲೇಖಿಸಿರುವಂತೆ ಮಾಮ್ಲಾ ಬಿಜಾಪುರ ಕನ್ನಡ ನಗರಕ್ಕೆ ಕೋಟೆಯನ್ನು ಅಲಿಜಾ: ೧ನೇ ಇಬ್ರಾಹಿಂ–ಆದಿಲ್ ಶಾಹಿಯ ಅಧಿಕಾರಿ ಖಾನ–ಇ–ಆಜಮ್ ಇಖ್ತ್ಯಾರ್ ಖಾನ ಗುಜರಾತಿ ಎಂಬುವನು ಕಟ್ಟಿಸಿದನೆಂದು ಉಲ್ಲೇಖಿಸುತ್ತದೆ.

ಮೆಕ್ಕಾಗೇಟಿನ ದಕ್ಷಿಣದಲ್ಲಿರುವ ಎರಡನೇ ಬುರುಜಿನ ಪರ್ಷಿಯನ ಶಾಸನ ಕ್ರಿ.ಶ. ೧೬೫೫–೫೬ರಲ್ಲಿ ಮಹಮ್ಮದ್ ಆದಿಲ್ ಷಾನ ಆಜ್ಞೆ ಮೇರೆಗೆ ಸುಲ್ತಾನನಿಂದ ನುಸರತ್–ಷಿಯಾರ್ ಬಿರುದನ್ನು ಪಡೆದ ಮಲ್ಲಿಕ್ ಸಂದರ್‌ನು (ಖಾನ–ಇ–ಖಾನ್ ಮಹಮ್ಮದ್ ಷಾ) ವೈರಿಗಳಿಂದ ರಕ್ಷಿಸಲು ಕೋಟೆಯ ಗೋಡೆಗಳನ್ನು ಕಟ್ಟಿಸಿದ ಸಂಗತಿಗಳನ್ನು ತಿಳಿಸುತ್ತದೆ.

ಕ್ರಿ.ಶ. ೧೫೬೧, ಸೆಪ್ಟೆಂಬರ್ ೧೧ರ ಅಲ್ಲಾಪುರ ದ್ವಾರದ ತಬೂತ್ ಬುರ್ಜನಲ್ಲಿರುವ ಪರ್ಷಿಯನ್ ಭಾಷೆಯ ಶಾಸನ ದಂತೆ ೧ನೇ ಅಲಿ ಅದಿಲ್ ಷಾನ ಆಳ್ವಿಕೆಯಲ್ಲಿ ಜಗದಿರಾವ್ ಪುತ್ರ ಜಗತ್‌ರಾವ್ ಎಂಬುವನು ಕೋಟೆ ಗೋಡೆಯನ್ನು ಸಂಪೂರ್ಣಗೊಳಿಸಿರುವುದನ್ನು ಸೂಚಿಸುತ್ತದೆ.

ಹಿಲಾಲಿಬಾಗ್ ಬುರುಜನಲ್ಲಿರುವ ಪರ್ಷಿಯನ್ ಶಾಸನವು ಕ್ರಿ.ಶ. ೧೬೬೧–೬೨ರಲ್ಲಿ ಷಾಹ ಮಂಜ್ಹಲೇಯ ಪ್ರಯತ್ನದಿಂದ ೨ನೇ ಅಲಿ ಆದಿಲ್‌ನ ಕಾಲದಲ್ಲಿ ಕೋಟೆ ಗೋಡೆಯ ಅಳುವೇರಿಗಳನ್ನು ಕಟ್ಟುವ ಕಾರ್ಯ ಪೂರ್ಣ ಗೊಳಿಸಿದ್ದರ ಬಗ್ಗೆ ಸೂಚಿಸುತ್ತದೆ.

ಕ್ರಿ.ಶ. ೧೫೬೮–೬೯ರ ಲಂಡಾ ಕಸ್ಸಾಬ ಬುರುಜಿನ ದಿಡ್ಡಿಬಾಗಿಲಿನಲ್ಲಿ ದೊರೆತಿರುವ ಪರ್ಷಿಯನ್ ಭಾಷೆಯ ಶಾಸನದಂತೆ ೧ನೇ ಅಲಿ ಅದಿಲ್ ಷಾನ ಆಳ್ವಿಕೆಯಲ್ಲಿ ಪಂಡಿತ್ ನಂದಜಿ ಎಂಬುವನು ಬುರ್ಜಿನ ಬಳಿ ಇರುವ ದಿಡ್ಡಿಬಾಗಿಲನ್ನು ನಿರ್ಮಾಣ ಮಾಡಿರುವದನ್ನು ಉಲ್ಲೇಖಿಸಿರುತ್ತದೆ. ದಿಡ್ಡಿ ಬಾಗಿಲೆಂದರೆ ಉಪಪ್ರವೇಶ ದ್ವಾರವೆಂದು ಕರೆಯುತ್ತಾರೆ. ಇದು ಪ್ರಮುಖ ಜನರು ಸುಲ್ತಾನನಿಗೆ ಭೇಟಿಯಾಗುವ ದ್ವಾರವಾಗಿತ್ತು. ಕಾರಣ ಮುಖ್ಯ ಪ್ರವೇಶದ್ವಾರದಲ್ಲಿ ಈ ಜನರನ್ನು ಬಿಡುತ್ತಿರಲಿಲ್ಲ ಹೀಗಾಗಿ ಸುಲ್ತಾನ ಈ ವ್ಯವಸ್ಥೆಯನ್ನು ಮಾಡಿಸಿರಬಹುದು.

ಶಹಾಪುರ ದರವಾಜಾ ಒಳಬಾಗಿಲಿನಲ್ಲಿ ಲಭ್ಯವಾಗಿರುವ ೧೫೭೦–೭೧ರ ಪರ್ಷಿಯನ್ ಭಾಷೆಯ ಶಾಸನದ ಉಲ್ಲೇಖ ದಂತೆ ೧ನೇ ಅಲಿ ಅದಿಲ್ ಷಾನ ಆಳ್ವಿಕೆಯಲ್ಲಿ ಖಾನ್–ಇ–ಆಜಮ್–ಮುರಾದಖಾನ ಅಮೀರ್ ಜುಮ್ಲಾ ಎಂಬ ಅಧಿಕಾರಿಯ ಕಾಲದಲ್ಲಿ ಶಹಾಪುರ ದರವಾಜಾದ ಬಾಗಿಲನ್ನು ಸಂಪೂರ್ಣಗೊಳಿಸಿದರ ಬಗ್ಗೆ ತಿಳಿಸುತ್ತದೆ.

ಕೊತ್ತಲಗಳು

ಕೊತ್ತಳವೆಂದರೆ ಕೋಟೆಯ ಮೇಲ್ಭಾಗ ಕೋಟೆಯ ಮೇಲಿನ ಸೈನಿಕರು ನಿಂತು ಕಾಯುವ ಎತ್ತರ ಪ್ರದೇಶ ವಾಗಿರುತ್ತದೆ ಇದಕ್ಕೆ ಬುರುಜು, ಕೊತ್ತಲ, ಕಾವಲುಗೋಪುರ ಎಂದು ಕರೆಯುತ್ತಾರೆ ಕೋಟೆಗೋಡೆಯಿಂದ ಚೌಕಾಕಾರದಲ್ಲಿ ಮುಂದೆ ಚಾಚಿದ ಭಾಗವನ್ನು ಕೊತ್ತಳವೆಂದು ಕರೆಯುತ್ತಾರೆ ಇವುಗಳಲ್ಲಿ ಫಿರಂಗಿಗಳನಿಟ್ಟು ವೈರಿಗಳನ್ನು ಬಗ್ಗು ಬಡೆಯು ತ್ತಿದ್ದರು.

ಫಿರಂಗಿ ಬುರುಜ: ಕ್ರಿ.ಶ. ೧೫೭೬–೭೭ರ ಪರ್ಷಿಯನ್ ಭಾಷೆಯ ಶಾಸನ ಫತೇದರವಾಜಾ ಮೇಲಿರುವ ಫಿರಂಗಿ ಬುರುಜದಲ್ಲಿದೆ. ಈ ಶಾಸನದಲ್ಲಿ ೧ನೇ ಅಲಿ ಅದಿಲ್ ಷಾನ ಗುಲಾಮನಾದ ಯಫ್ರೇಷ್‌ಖಾನನು ಈ ಬುರುಜನ್ನು ಕಟ್ಟಿಸಿದನೆಂದು ಹೇಳುತ್ತದೆ.

ಫಿರಂಗೀಷಾಹಿ ಬುರುಜ: ಮೆಕ್ಕಾ ಗೇಟನಲ್ಲಿರುವ ಪರ್ಷಿಯನ್ ಶಾಸನವನ್ನು ಆದಿಲ್ ಷಾನ ಸೇವಕ ಖಾಜಿ ಇಸ್ಮಾಯಿಲ್ ರಚಿಸಿದ್ದಾನೆ. ಕ್ರಿ.ಶ. ೧೫೭೭–೭೮ರಲ್ಲಿ ಯಫ್ರೇಷ್ ಖಾನ ಫಿರಂಗೀಷಾಹಿ ಬುರುಜನ ನಿರ್ಮಾಣ ಮಾಡಿದ್ದರ ಕುರಿತು ತಿಳಿಸುತ್ತದೆ.

ಉಪಲಿ ಬುರುಜ: ಕ್ರಿ.ಶ. ೧೫೮೩–೮೪ರಲ್ಲಿ ಪರ್ಷಿಯನ ಪದ್ಯದ ಶಾಸನ ಹೈದರ ಬುರುಜನಲ್ಲಿದೆ. (ಉಪಲಿ ಬುರುಜ) ೨ನೇ ಇಬ್ರಾಹಿಮ್ ಆದಿಲ್ ಷಾನ ಸಹಾಯಕ ಅಧಿಕಾರಿ ಹೈದರ ಖಾನ ಈ ಬುರ್ಜನ್ನು ಕಟ್ಟಿಸಿದನೆಂಬ ಸಂಗತಿ ದಾಖಲಾಗಿದೆ.

ಈ ಅರಬ್ಬ ಹಾಗೂ ಪರ್ಷಿಯನ ಶಾಸನವು ಅರ್ಕಕಿಲ್ಲೆಯ ದಕ್ಷಿಣ ಬಾಗಿಲಿನ ಮೇಲಿದೆ. ಇದು ಕ್ರಿ.ಶ. ೧೫೮೯–೯೦ರ ಶಾಸನವಾಗಿದೆ. ಈ ಬುರುಜನ್ನು ೧ನೇ ಇಬ್ರಾಹಿಂ ದೊರೆಯ ಆಳ್ವಿಕೆಯಲ್ಲಿ ಕಟ್ಟಿ ಪೂರ್ಣಗೊಳಿಸಿರು ವುದನ್ನು ಸೂಚಿಸುತ್ತದೆ.

ಷರಾಪ್ ಬುರುಜ: ಪುರಾತತ್ವ ಇಲಾಖೆಯಲ್ಲಿರುವ ಪದ್ಯರೂಪದಲ್ಲಿರುವ ಪರ್ಷಿಯನ ಶಾಸನವು ಮೂಲತಃ ಪಾನೀಮಹಲ್ಲಿಗೆ ಸಂಬಂಧಿಸಿದೆ. ಇಬ್ರಾಹಿಂ ಆದಿಲ್ ಷಾ ಆರಂಭಿಸಿದ **ಷರಾಪ್** ಬುರುಜನ ಕಟ್ಟಡವು ಕ್ರಿ.ಶ. ೧೬೪೧–೪೨ರಲ್ಲಿ ಪೂರ್ಣವಾಯಿತೆಂದು ಇದರಲ್ಲಿ ವಿವರಿಸಿದೆ.

ಅಹಮ್ಮದ್ ಬುರುಜ: ಪರ್ಷಿಯನ್ ಭಾಷೆಯ ಪದ್ಯದಲಿರುವ ಈ ಶಾಸನವು ಶಹಪುರ ಗೇಟಿನಲ್ಲಿದೆ. ಕ್ರಿ.ಶ. ೧೬೪೩–೪೪ರಲ್ಲಿ ಈ ಬುರುಜನ ನಿರ್ಮಾಣವನ್ನು ಮಹಮ್ಮದ್ ಆದಿಲ್ ಷಾ ದೊರೆಯ ಕಾಲದಲ್ಲಿ ರಾಜಾಜ್ಞೆ

ಮೇರೆಗೆ ಸೇನಾಧಿಪತಿ ಅಹಮ್ಮದ್ ಖಾನನು ನಿರ್ಮಿಸಿದನು ಎಂದು ಉಲ್ಲೇಖಿಸುತ್ತದೆ.

ಮಹಮ್ಮದ್ ಬುರುಜ: ಮಲಿಕ್ ಮೈದಾನ ಬುರುಜನಲ್ಲಿ ಉಪಲಬ್ದವಾಗಿರುವ ಶಾಸನವು ಪರ್ಷಿಯನ್ ಭಾಷೆಯ ಪದ್ಯ ರೂಪದಲ್ಲಿದೆ. ಸುಲ್ತಾನ ಮಹಮ್ಮದ್ ದೊರೆಯ ಹೆಸರಿನಲ್ಲಿ ರಾಜನ ಆಪ್ತನು ಘನತೆವೆತ್ತವನೂ ಆದ ಅಫ್ಜಲ ಖಾನನು ಕ್ರಿ.ಶ. ೧೬೪೩–೪೪ರಲ್ಲಿ ಬುರುಜನ್ನು ಕಟ್ಟಿಸಿದ ನೆಂದು ದಾಖಲಿಸಿದೆ.

ಲಾಂಡೆ ಕಸ್ಸಾಬ ಬುರುಜ: ಈ ಬುರುಜಿನ ಪಶ್ಚಿಮ ದಿಕ್ಕಿನಲ್ಲಿರುವ ನಾಲ್ಕನೇ ಬುರುಜನಲ್ಲಿ ಈ ಶಾಸನ ದೊರೆತಿದೆ. ಇದು ಕ್ರಿ.ಶ. ೧೬೪೬–೪೭ರಲ್ಲಿ ಮಹಮ್ಮದ್ ಷಾ ಸುಲ್ತಾನನ ಕಾಲದಲ್ಲಿ ನಿಯಮತ್ ಖಾನ ಎಂಬ ಸೇನಾಪತಿ ಇದನ್ನು ನಿರ್ಮಿಸಿದ್ದರಿಂದ **ಲಾಂಡೆ ಕಸ್ಸಾಬ ಬುರುಜಿಗೆ ಇವನ ಹೆಸರನ್ನು** ಬುರುಜ–ಇ–ನಿಯೊಮತ್ ಎಂದು ದಾಖಲಿಸಿದೆ.

ಷಾರ್ಜಾ ಬುರುಜ: ಈ ಬುರುಜಿನ ಮೇಲ್ಭಾಗದಲ್ಲಿರುವ ಕ್ರಿ.ಶ. ೧೬೫೮–೫೯ರ ಶಾಸನ ೨ನೇ ಅಲಿ ಆದಿಲ್ ಷಾನ ಕಾಲದಲ್ಲಿ ಮಂಜ್ಜಲೀಷಾಹನು ಷಾರ್ಜಾ ಬುರುಜನ್ನು ಐದು ತಿಂಗಳ ಮುದ್ದತಿನ ನಿಗದಿತ ವೇಳೆಯಲ್ಲಿ ನಿರ್ಮಿಸಿದನೆಂದು ಶಾರ್ಜ ಬುರುಜನಲ್ಲಿರುವ ಶಾಸನ ಹೇಳುತ್ತದೆ.

ಲಂಡಾ ಕಸ್ಸಾಬ್ ಬುರುಜನ ಮೇಲಿರುವ ಪದ್ಯ ರೂಪದ ಪರ್ಷಿಯನ್ ಶಾಸನವು ಬುರುಜನ ನಿರ್ಮಾಣವನ್ನು ೨ನೇ ಆದಿಲ್ ಷಾಹಿ ಕಟ್ಟಿಸಿದರ ಬಗ್ಗೆ ತಿಳಿಸಿದೆ. ಈ ಸ್ಥಳದಲ್ಲಿ ಮಲ್ಲಿಕ್ ಔಬತ್ ಎಂಬ ತೋಪನ್ನು ಸ್ಥಾಪಿಸಿ ಬುರುಜನ್ನು ಕ್ರಿ.ಶ. ೧೬೬೬–೬೭ರಲ್ಲಿ ಪೂರ್ಣಗೊಳಿಸಿದನೆಂದು ತಿಳಿಸುತ್ತದೆ.

ಅಹಮ್ಮದ್ ಬುರುಜ: ಶಹಪುರ ಗೇಟಿಗೆ ಉತ್ತರ ದಲ್ಲಿರುವ ಅಹಮ್ಮದ್ ಬುರುಜನಲ್ಲಿರುವ ಪರ್ಷಿಯನ್ ಭಾಷೆಯ ಶಾಸನವು ಖಾನ–ಇ–ಖಾನ ಮೊಹಮ್ಮದ್ ಷಾನ ಆಜ್ಞೆಯ ಮೇರೆಗೆ ನಾಯಿಬ್ ದಿವಾನ್ ಅಲಿ ಸಂದರ್ ನುಸರತ್‌ಷಾ ಈ ಬುರುಜನ್ನು ನಿರ್ಮಾಣ ಮಾಡಿರುವುದನ್ನು ತಿಳಿಸಿದೆ. ಅಲುಂದಾ (ಇರಾನಿನಲ್ಲಿರುವ ಹಮ್‌ದಾಸ್) ಬೆಟ್ಟದಂಥ ಬುರ್ಜಿರುವ ಭಾಗವನ್ನು ಮೊಹಮ್ಮದ್‌ಪುರ ಎಂದು ಉಲ್ಲೇಖಿಸಿದೆ.

ಪುರಾತತ್ವ ವಸ್ತುಸಂಗ್ರಹಾಲಯದಲ್ಲಿರುವ ಪರ್ಷಿಯನ್ ಶಾಸನ ಮೂಲತಃ ಫತೇದರವಾಜಾಕ್ಕೆ (ವಿಜಯದ್ವಾರ) ಸಂಬಂಧಿಸಿದ್ದು, ಶರೀಫ್–ಉಲ್–ಮುಲ್ಕನ ಪುತ್ರ ಯಫ್ರೇಷ ಖಾನನು ಮುಲ್ಕುಕ್ (ಹುಲಿಮುಖ) ಕಟ್ಟಿಸಿದನೆಂದು ಟರ್ಕಿ ಮಾದರಿಯಲ್ಲಿ ಫಿರಂಗಿಯನ್ನು ಸಿಡಿಸಲು ಬುರುಜಿನ ಮೇಲ್ಭಾಗದಲ್ಲಿ ಚಿಕ್ಕ ಚಿಕ್ಕ ಕಿಂಡಿಗಳನ್ನು ಅಳವಡಿಸಲಾಗಿದೆ. ಶಾಸನಗಳಲ್ಲಿ ಉಲ್ಲೇಖವಾದಂತಹ ಕೋಟೆ, ಅರ್ಕಕಿಲ್ಲಾ, ಕಾವಲು ಗೋಪುರ, ಬುರುಜುಗಳ ಬಗ್ಗೆ ಸುಪ್ರಬಂಧದಲ್ಲಿ ದಾಖಲಿಸುವ ಉದ್ದೇಶವಾಗಿದೆ.

[ಮಾರ್ಗದರ್ಶಕರಾದ ಡಾ. ಎಸ್.ಕೆ. ಮೇಲಕಾರವರಿಗೆ ಧನ್ಯವಾದ ಗಳನ್ನು ಅರ್ಪಿಸುತ್ತೇನೆ.]

ಆಧಾರಸೂಚಿ

೧. ಡಾ. ಎಂ. ಕೊಟ್ರೇಶ : ಬಳ್ಳಾರಿ ಜಿಲ್ಲೆಯ ಕೋಟೆಗಳು. ಕ.ವಿ.ವಿ. ಹಂಪಿ. ೨೦೧೧.

೨. ಎಂ. ಯಾಸೀನ ಖುದ್ದುಸಿ – ಸೀತಾರಾಮ ಜಾಗೀರದಾರ: ಕರ್ನಾಟಕ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪ್ರಸಾರಂಗ ಕ.ವಿ.ವಿ. ಹಂಪಿ, ೨೦೦೧.

೩. ಮಹಮದ್ ಇಬ್ರಾಹಿಂ ಜುಬೇರಿ ವಿರಚಿತ – ಡಾ. ಕೃಷ್ಣಾ ಕೋಲ್ಹಾರ ಕುಲಕರ್ಣಿ ಬಸಾತಿನೆ ಸಲಾತೀನ ಬಿಜಾಪುರ ಆದಿಲ್‌ಷಾಹಿಗಳ ಚರಿತ್ರೆ. ಪ್ರಸಾರಂಗ ಕ.ವಿ.ವಿ., ಹಂಪಿ.

೪. ಗೋವಿಂದಮೂರ್ತಿ ದೇಸಾಯಿ: ಸವಣೂರಿನ ನವಾಬರು, ಪ್ರಸಾರಂಗ ಕ.ವಿ.ವಿ., ಹಂಪಿ. ೧೯೯೯.

೫. Dr. M.A. Nayeem : The Heritage of The Adilshahis of Bijapur, Hydrabad Publishers, Hydrabad 2008.

೬. Cousens Henry : Bijapur and its Architectural Remains, Bombay 1916.

೭. ಬಿಜಾಪುರ ಜಿಲ್ಲಾ ಗೆಜೆಟಿಯರ್.

೩೫

ಪಿರಿಯಾಪಟ್ಟಣ ತಾಲೂಕಿನ ಶಾಸನಗಳ ಹಿನ್ನೆಲೆಯಲ್ಲಿ ಚಂಗಾಳ್ವರ ಕಾಲದ ಅಧ್ಯಯನ

ಡಾ. ಕೆ.ಎನ್. ಮೋಹನ್*

ಪಿರಿಯಾಪಟ್ಟಣ ತಾಲೂಕು ಮೈಸೂರು ಜಿಲ್ಲೆಯಲ್ಲಿರುವ ಒಂದು ತಾಲ್ಲೂಕು ಕೇಂದ್ರವಾಗಿದೆ. ಇದು ಮೈಸೂರು, ಕೊಡಗು, ಹಾಸನದ ಗಡಿ ಭಾಗಕ್ಕೆ ಹೊಂದಿಕೊಂಡಿರುವಂತಹ ಭಾಗವಾಗಿದೆ. ಪ್ರಾಚೀನ ಕಾಲದಿಂದಲೂ ಈ ಭಾಗವನ್ನು ಸಾಂಸ್ಕೃತಿಕ ಕೇಂದ್ರವಾಗಿ ಗುರುತಿಸಬಹುದು. ಪ್ರಾಚೀನ ಕಾಲದಲ್ಲಿನ ಶಿಲಾಯುಗದ ಕುರುಹುಗಳು ಹಾಗೂ ಕದಂಬರ ಕಾಲದಿಂದ ಮೈಸೂರು ಅರಸರ ಕಾಲದವರೆಗೂ ವಿವಿಧ ಕಾಲಘಟ್ಟದಲ್ಲಿ ಪ್ರಮುಖ ಕೇಂದ್ರವಾಗಿದ್ದಂತೆ ಕಂಡುಬರುತ್ತದೆ. ಪ್ರಸ್ತುತ ಚರ್ಚಿತ ವಿಷಯದಲ್ಲಿ ಚಂಗಾಳ್ವರು ಈ ಭಾಗಕ್ಕೆ ಕೊಟ್ಟಿರುವ ಕೊಡುಗೆಯನ್ನು ತಿಳಿಸುವುದಾಗಿದೆ. ಇವರು ಹೊಯ್ಸಳರು, ವಿಜಯನಗರ ಮತ್ತು ಮೈಸೂರು ಅರಸರ ಕಾಲದ ಸಮಕಾಲೀನರು. ಚಂಗಾಳ್ವರು ವಿರಾಜಪೇಟೆ, ಪಿರಿಯಾಪಟ್ಟಣ, ಹುಣಸೂರು, ಸೋಮವಾರಪೇಟೆ, ಅರಕಲಗೂಡು ಈ ಐದು ತಾಲ್ಲೂಕುಗಳನ್ನು ತಮ್ಮ ಆಡಳಿತ ವಾಪ್ತಿಗೆ ಒಳಪಡಿಸಿಕೊಂಡು ಪದೇ ಪದೇ ಹೊಯ್ಸಳರು, ಕೊಡಗಿನ ಅರಸರು, ಮೈಸೂರು ಅರಸರೊಟ್ಟಿಗೆ ಹೋರಾಡಿ ತಮ್ಮ ಆಡಳಿತ ಕೇಂದ್ರವನ್ನು ನಂಜರಾಯಪಟ್ಟಣ (ಕೊಡಗು) ಸಿಂಗಾಪಟ್ಟಣ (ಪಿರಿಯಾಪಟ್ಟಣ) ಕೆಲಸಮಯದವರೆಗೆ ಬೆಟ್ಟದಪುರವು ಸಹ ಇವರ ಆಡಳಿತ ಕೇಂದ್ರವಾಗಿದ್ದಂತೆ ತೋರುತ್ತದೆ. ಪ್ರಸ್ತುತ ತಾಲ್ಲೂಕಿನಲ್ಲಿ ಲಭ್ಯವಿರುವ ೧೫೦ ಶಾಸನಗಳಲ್ಲಿ ಚಂಗಾಳ್ವರಿಗೆ ಸಂಬಂಧಿಸಿದ ಸುಮಾರು ೩೫ ಶಾಸನಗಳು ಲಭ್ಯವಿದ್ದು ಅವುಗಳಲ್ಲಿ ಆಡಳಿತ, ಸಂಸ್ಕೃತಿ, ಮತ್ತು ದಿಗ್ವಿಜಯಕ್ಕೆ ಸಂಬಂಧಿಸಿದ್ದಾಗಿವೆ. ಇವುಗಳಿಂದ ಚಂಗಾಳ್ವರ ವಂಶಾವಳಿ ಅವರ ಆಡಳಿತದ ಎಲ್ಲೆ, ಹಾಗೂ ಅವರ ಕೊಡುಗೆಗಳನ್ನು ಉಲ್ಲೇಖಿಸುವ ಪ್ರಯತ್ನ ಮಾಡಲಾಗಿದೆ.

ಪಿರಿಯಾಪಟ್ಟಣದ ಚನ್ನಿಗರಾಯ ಸ್ವಾಮಿ ದೇವಾಲಯದ ಬಾಗಿಲುವಾಡದಲ್ಲಿ ಇರುವ ಶಾಸನದಲ್ಲಿ ಸೋಮವಂಶದ ಶ್ರೀಕಂಠರಾಜಯ್ಯನ ಮಗ ಕುಲೋತುಂಗ ಚಂಗಾಳ್ವ ಪಿರಿಯಾರಾಜದೇವ ಮಹಾ ಅರಸು ತನ್ನನ್ನೇ ಮಹಾಮಾಂಡಲಿಕ, ಮಹಾಮಂಡಲೇಶ್ವರ ಎಂದು ಕರೆದುಕೊಂಡಿದ್ದಾನೆ. ಕುಲೋತುಂಗನು ಸಿಂಗಾಪಟ್ಟಣವನ್ನೆ ಪುನರ್ ರಚಿಸಿ ಮುಂದೆ ಪಿರಿಯಾರಾಜಪಟ್ಟಣವೆಂದು ಕರೆಯಲ್ಪಟ್ಟಿತು ಎಂದು ಕ್ರಿ.ಶ. ೧೫೧೧ರ ಶಾಸನದಲ್ಲಿ ಉಲ್ಲೇಖಿತ ವಾಗಿದೆ. ಕೋಟೆಯ ಹೊರಭಾಗದಲ್ಲಿನ ೪ ಮತ್ತು ೫ನೆಯ ಶಾಸನಗಳಲ್ಲಿ ಕುಲೋತುಂಗ ಚಂಗಾಳ್ವನ ಹೆಸರು ಉಲ್ಲೇಖಿತವಾಗಿದೆ.

ದೊಡ್ಡನೇರಳೆಯಲ್ಲಿರುವ ಶಾಸನವು ಕ್ರಿ.ಶ. ೧೫೩೩ರ ಕಾಲದ್ದಾಗಿದ್ದು ಇದರಲ್ಲಿ ನಂಜರಾಯಪಟ್ಟಣದ ರಾಜ ವೀರಪ ರಾಜಯ್ಯನನ್ನು ಮಹಾಮಾಂಡಲಿಕ, ಮಂಡಲೇಶ್ವರ, ಕುಲೋತುಂಗ ಚಂಗಾಳ್ವ ಎಂಬ ಬಿರುದಿನಿಂದ ಉಲ್ಲೇಖಿಸಿದೆ. ಯದುವಂಶದ ಹಾರತಿ ಗೋತ್ರದಲ್ಲಿ ಜನಿಸಿದ ವೀರ ಶ್ರೀಕಂಠರಾಜಯ್ಯನ ಜ್ಞಾಪಕಾರ್ಥವಾಗಿ ತೀರುಮಲಾಪುರ ಎಂಬ ಹಳ್ಳಿಯನ್ನು ತಂದೆ ತಾಯಿ ಮತ್ತು ಹಿರಿಯರ ಸಮ್ಮುಖದಲ್ಲಿ ಸಾಮೆಯ ಮಠಕ್ಕೆ ಧಾನ ನೀಡಿರುವುದು ತಿಳಿಯುತ್ತದೆ. ೯ನೇ ಶಾಸನವು ಕ್ರಿ.ಶ. ೧೬೨೦ರ ಕಾಲದ್ದಾಗಿದ್ದು ಇದರಲ್ಲಿಯೂ ಸಹ ಮಹಾಮಾಂಡಲಿಕನಾದ ವೀರರಾಜಯ್ಯ ಕುಲೋತುಂಗ ಚಂಗಾಳ್ವನು ಹಳ್ಳಿಯೊಂದನ್ನು ಸಾಮೆಯ ಮಠಕ್ಕೆ ದಾನ ನೀಡಿರುವುದು ಗಮನಿಸಿದರೆ ವೀರ ನಂಜರಾಯದೇವನು ನಂಜರಾಯ ಪಟ್ಟಣದಲ್ಲಿ ಅಧಿಕಾರಕ್ಕೆ ಬಂದ ಜ್ಞಾಪಕಾರ್ಥವಾಗಿ ಈ ದಾನಗಳನ್ನು ನೀಡಿರಬಹುದೆಂದು ಊಹಿಸಬಹುದಾಗಿದೆ. ಕ್ರಿ.ಶ. ೧೬೦೦ರ ಹಾರನಹಳ್ಳಿ ಶಾಸನದಲ್ಲಿ ನಂಜರಾಯಪಟ್ಟಣದ ಅರಸು ಕುಲೋತುಂಗ ಚಂಗಾಳ್ವ ಚೆನ್ನೇಯಾ ಬೈರವಪುರದ (ಬೆಟ್ಟದಪುರ) ಅನ್ನದಾನಿ ಮಲ್ಲಿಕಾರ್ಜುನನಿಗೆ ಜಾತ್ರೆಯ ಸಂದರ್ಭದಲ್ಲಿ ಬರುವ ರುದ್ರಂಗಣಗಳವರೆಗೆ ಮಠದ ವತಿಯಿಂದ ಊಟ ಮತ್ತು ವಸತಿಗೆ ಆಗುವ ಖರ್ಚು ವೆಚ್ಚಗಳ ಲೆಕ್ಕದ ನಿರ್ವಹಣೆಗಾಗಿ ಶ್ಯಾನುಭೋಗ ದೇವಪ್ಪಯ್ಯನನ್ನು ದೇವಾಲಯದ ಪರವಾಗಿ ನೇಮಿಸಲಾಯಿತು.

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಮೈಸೂರು-೧೫

ಚಪ್ಪರದ ಹಳ್ಳಿಯಲ್ಲಿರುವ ಕ್ರಿ.ಶ.೧೨ನೆಯ ಶತಮಾನದ ವೀರಗಲ್ಲಿನಲ್ಲಿ ಅಂಕರಸ ಎಂಬಾತ ಅತ್ತಿಕುಪ್ಪೆಯಲ್ಲಿ ಪಶುಗಳನ್ನು ಕದ್ದಿದ್ದ ಕಳ್ಳರ ವಿರುದ್ಧ ಹೋರಾಡಿ ಪಶುಗಳನ್ನು ರಕ್ಷಿಸಿ ಸ್ವರ್ಗಸ್ತನಾದ ವಿಚಾರವು ಉಲ್ಲೇಖಿತವಾಗಿದ್ದು, ಇದು ಸಹ ಚೆಂಗಾಳ್ವ ವೀರರಾಜಯ್ಯನ ಕಾಲಕ್ಕೆ ಸೇರಿದ್ದಾಗಿದೆ. ಅಡಗೂರಿನ ಆಲದ ಮರದ ಕೆಳಗಿರುವ ಕ್ರಿ.ಶ. ೧೧೭೪ರ ಕಾಲಘಟ್ಟದ ವೀರಶಾಸನದಲ್ಲಿ ವಡಗೊರು (ಅಡಗೂರು) ಭೂವಿಸೆಟ್ಟಿಯ ಬಾವ ಮೈದ ಮಲ್ಲಿಸೆಟ್ಟಿಯ ಮದುವೆ ದಿಬ್ಬಣದ ಮೆರವಣಿಗೆಯ ಸಂದರ್ಭದಲ್ಲಿ ಕಳ್ಳರ ದಾಳಿ ನಡೆದಿತ್ತು. ಆ ಕಾದಾಟದಲ್ಲಿ ಭುವಿಸೆಟ್ಟಿ ಮರಣಿಸಿದ್ದು ತಿಳಿದುಬರುತ್ತದೆ. ಜೊತೆಗೆ ಅಡಗೂರಿನ ಈ ಶಾಸನದಲ್ಲಿ **"ಭುಜಬಲ ಚೆಂಗಾಳ್ವ ದೇವ"** ಮತ್ತು ಈತನ ರಾಜಧಾನಿಯನ್ನು "ದ್ವಾರವತಿ"ಗೆ ಹೋಲಿಕೆ ಮಾಡಲಾಗಿದೆ. ಮತ್ತೊಂದು ವೀರಶಾಸನವಿದ್ದು ಇದು ಕ್ರಿ.ಶ. ೧೧೭೪ರ ಕಾಲಘಟ್ಟದಾಗಿದೆ. ಇದರಲ್ಲಿ ಮಲ್ಲಸೆಟ್ಟಿ ಎಂಬುವವನು ಗೋವುಗಳ ರಕ್ಷಣೆಯ ಸಂದರ್ಭದಲ್ಲಿ ಕಾದಾಡಿ ಗೋವುಗಳನ್ನು ವಶಪಡಿಸಿಕೊಂಡು ಮರಣ ಹೊಂದಿದ್ದನೆಂದು ತಿಳಿಸುತ್ತದೆ. ೧೮ನೇ ವೀರಗಲ್ಲು ಶಾಸನವು ಕಣಗಾಲಿನಲ್ಲಿ ಗೊಸಂರಕ್ಷಣೆ ಕುರಿತದ್ದಾಗಿದೆ. ಪಿರಿಯಾ ಪಟ್ಟಣದ ೨೨ನೇ ಶಾಸನವು ಅಪ್ಪನಹಳ್ಳಿಯಲ್ಲಿದ್ದು ಕ್ರಿ.ಶ. ೧೫೨೧ರದಾಗಿದ್ದು, (ವೀರನಂಜೇಯದೇವ ಕುಲೋತುಂಗ ಚಂಗಾಳ್ವನ ಕಾಲ) ಈ ಶಾಸನದಲ್ಲಿ ಅನ್ನದಾನಿ ಮಲ್ಲಿಕಾರ್ಜುನನ ಅಂಗ, ರಂಗಭೋಗದ ಆಚರಣೆಗೆ ಹಳ್ಳಿಯ ಸಕಲ ಆಸ್ತಿಯನ್ನು ವಹಿಸಲಾಯಿತು ಎಂಬ ವಿಷಯ ಪ್ರಸ್ತಾಪಿಸಿದೆ.

೨೫ನೇ ಶಾಸನವು ಸುರ್ಗಹಳ್ಳಿಯಲ್ಲಿದ್ದು, ಕ್ರಿ.ಶ. ೧೫೯೮ರದಾಗಿದ್ದು, ಈ ಶಾಸನದಲ್ಲಿ ಸುರ್ಗಳ್ಳಿಯನ್ನು ನಂಜರಾಯಪಟ್ಟಣ ಸೀಮೆಯ ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನನ ಸನ್ನಿದಾನದ ಕೊಡುಗೆಯಾಗಿ ನೀಡಿದ ವಿಷಯ ಪ್ರಸ್ತಾಪಿಸಿದೆ. ಬ್ಯಾಡರ ಬೆಳಗುಲಿಯ ಮಾದಿಗರ ಕೊಪ್ಪಲಿನ ೨೬ನೇ ಶಾಸನವು ಕ್ರಿ.ಶ. ೧೫೯೧ಕ್ಕೆ ಸೇರಿದ್ದು, ಇದರಲ್ಲಿ "ನಂಜರಾಯಪಟ್ಟಣದ ಶ್ರೀಕಂಠರಾಜಯ್ಯನ ಮಗನಾದ ಪಿರಿಯಾರಾಜದೇವ ಮಹಾ ಅರಸರು ಬೆಟ್ಟದಪುರದ ಅನ್ನದಾನಿ ದೇವರಿಗೆ ಕಾರ್ತಿಕ ಪೂಜೆಯ ದೀಪದ ಖರ್ಚಿಗೆ ಕೊಡುಗೆಯನ್ನು ಉಲ್ಲೇಖಿಸಿದೆ. ೩೩ನೇ ಶಾಸನವು ದೇವರಾಯ ಮಹಾರಾಯ ಗೊಪರಸನು ಇರುಗಾಲ ಹಳ್ಳಿಯ ಕುರುಗಲ್ಲನ್ನು ಬೆಟ್ಟದ ಅನ್ನದಾನಿಗೆ ಅಂಗ-ರಂಗ ಭೋಗನೈವೈದ್ಯಕ್ಕೆ ಕೊಡುಗೆ ನೀಡಿದ ಉಲ್ಲೇಖವಿದೆ.

೫೯ನೇ ಶಾಸನವು ಬೆಟ್ಟದಪುರಕ್ಕೆ ಸಂಬಂಧಿಸಿದ್ದು, ಇದರ ಕಾಲಮಾನ ಕ್ರಿ.ಶ. ೧೬೦೭ದಾಗಿದೆ ವಿಜಯನಗರದ ಅರಸು ತಿರುಮಲರಾಜಯ್ಯ ತನ್ನ ತಂದೆ ಮತ್ತು ತಾಯಿಗಳ ನೆನಪಿನ ಕೊಡುಗೆಯಾಗಿ ಬೆಟ್ಟದಪುರದ ಅನ್ನದಾನಿಗೆ ೨೧ ಕುಟುಂಬಗಳ ಕಟ್ಟೆಮಳಲವಾಡಿಯನ್ನೇ ಮೇಲುಕೋಟೆಯ ಶೆಲ್ವಪಿಳ್ಳೆ (ಚೆಲುವನಾರಾಯಣ) ಸಾಕ್ಷಿಯಾಗಿ ಶ್ರೀರಂಗಪಟ್ಟಣದ ಆಡಳಿತಗಾರರ ಮೂಲಕ ಕಟ್ಟೆಮಳಲವಾಡಿ ಪೊಗದಿಯನ್ನು ಪೇರಿಯರಾಜನ ಮೂಲಕ ಅನ್ನದಾನಿಗೆ ಸಂದಾಯಿಸಲು ಭೂಮಿಯನ್ನು ನೀಡಿರುವುದರ ಬಗ್ಗೆ ಉಲ್ಲೇಖಿಸಿದೆ. ಅದೇ ಬೆಟ್ಟದಪುರದ ೩೬ನೇ ಶಾಸನವು ಅನ್ನದಾನಿ ಗುಡಿಯ ಕಂಚಿನ ಗಂಟೆಯ ಮೇಲಿದ್ದು. ಇದು ಕ್ರಿ.ಶ. ೧೫೯೦ರ ದ್ದಾಗಿದ್ದು, ಚೆಂಗಾಳ್ವ ಅರಸು ಪಿರಿಯಾರಾಜನು ತನ್ನ ತಂದೆ-ತಾಯಿಗಳ ನೆನಪಿನ ಕೊಡಗೆಯಾಗಿ ಈ ಗಂಟೆಯನ್ನು ಕೊಡುಗೆ ಯಿತ್ತಿರುವನು. ಅನ್ನದಾನಿ ಮಲ್ಲಿಕಾರ್ಜುನ ಗುಡಿಯಲ್ಲಿನ ೭೧ನೇ ಶಾಸನವು ಕ್ರಿ.ಶ. ೧೫೭೬ಕ್ಕೆ ಸೇರಿದ್ದು, ಪಿರಿಯಾರಾಜ ದೇವ ಅರಸು ತನ್ನ ನಂಜರಾಯಪಟ್ಟಣಕ್ಕೆ ಸೇರಿದ ತುಂಗದ ಸ್ಥಳ, ಬಲಿಸೊಗೆ ಸ್ಥಳ, ರಾವಂದೂರು ಸ್ಥಳದ (೩ ಹೋಬಳಿ) ಸುತ್ತಮುತ್ತ ೩೩ ಹಳ್ಳಿಗಳನ್ನು ಅನ್ನದಾನಿ ಬೆಟ್ಟದ ಮಲ್ಲಿಕಾರ್ಜುನ ಅಂಗ-ರಂಗ ಭೋಗಕ್ಕೆ ಬಿಟ್ಟುಕೊಡಲಾಯಿತು.

೯೦ನೇ ಶಾಸನವು ನಿಲವಾಡಿಯಲ್ಲಿದ್ದು ಇದು ಕ್ರಿ.ಶ. ೧೬೧೩ರದ್ದಾಗಿದೆ. ಇದರ ಉದ್ದೇಶ ಮಲ್ಲಿಕಾರ್ಜುನನಿಗೆ ದೀಪ, ಅಂಗ, ರಂಗ ಬೋಗಕ್ಕಾಗಿ ನೀಲವಾಡಿಯನ್ನೇ ಕೊಡುಗೆಯಿತ್ತರು. ೯೪ನೇ ಶಾಸನ ಕುಡೂಕೊರಿನಲ್ಲಿದ್ದು, ಇದರಲ್ಲಿ ಚೆಂಗಾನಾಡಿನ ಅನ್ನದಾನಿ ದೇಗುಲವನ್ನು ಲೂಟಿ ಮಾಡಿದ ಮಾಹಿತಿ ಅಪೂರ್ಣವಾಗಿದೆ. ಕ್ರಿ.ಶ. ೧೫೬೫ರ ಆಯತನಹಳ್ಳಿಯ ೧೦೩ನೇ ಶಾಸನವು ಚಂಗಾಳ್ವರ ಚಿಕ್ಕರಾಜ ಒಡೆಯನು ಆಯತನಹಳ್ಳಿ ಮತ್ತು ಮಕಲೀಹಾಳುಗಳನ್ನು ಶ್ರೀಗಿರಿಯ ಮಲ್ಲಿಕಾರ್ಜುನ ದೇವರ ಅಂಗ-ರಂಗಗಳಿಗೆ ಅರ್ಪಿಸಲಾಯಿತೆಂದು ಉಲ್ಲೇಖಿಸಲಾಗಿದೆ. ೧೦೯ನೇ ಬೆಟ್ಟದ ತುಂಗ ಶಾಸನವು ೧೪ನೇ ಶತಮಾನಕ್ಕೆ ಸೇರಿದ್ದು, ಚಂಗಾಳ್ವ ಅರಸರಿಂದ ಬೀರರಾಜನಿಗೆ ನೀಡಿದ ಉಂಬಳಿಯ ಉಲ್ಲೇಖ ಅಪೂರ್ಣವಾಗಿದೆ. ೧೧೦ನೇ ಶಾಸನವು ಅದೇ ಸ್ಥಳದಲ್ಲಿದ್ದು, ಕ್ರಿ.ಶ. ೧೫೭೬ರದ್ದು, ಇದರಲ್ಲಿ ಪಿರಿಯಾರಾಜ ದೇವ ಸ್ವಂತಹ ತನ್ನ ತಂದೆ ತಾಯಿಗಳ ಆತ್ಮ ಶಾಂತಿಗಾಗಿ ಅನ್ನದಾನಿಗೆ ಅಂಗ, ಬೋಗ, ರಂಗಉತ್ಸವಗಳಿಗೆ ತುಂಗದ ಸ್ಥಳದ ೯ ಹಳ್ಳಿಗಳನ್ನು ಕೊಡುಗೆ ನೀಡಿದನು. ೧೧೪ನೇ ಶಾಸನವು ಸನ್ಯಾಸಿಪುರದಲ್ಲಿದ್ದು, ಈ ತಾಮ್ರ ಶಾಸನದಲ್ಲಿ ವೀರದೇವ ಮಹಾ ಅರಸರು ನರಸಿಂಹಭಟ್ಟರಿಗೆ ವೀರಾಂಬುದಿಯನ್ನೇ ಅಗ್ರಹಾರವಾಗಿ ಮಾಡಿದ್ದು, ಅದರ ವ್ಯಾಪ್ತಿಯ ಉಲ್ಲೇಖವಿದೆ. ವೀರಾಂಬುದಿಯು ಹಿಟ್ನೇಹೆಬ್ಬಾಗಿಲಿನಿಂದ ಪೂರ್ವದ ಕಗ್ಗುಂಡಿಯಿಂದ ಉತ್ತರದ (ಬಡಗ) ಆಲದ ಮರದಿಂದ

ಪಶ್ಚಿಮದ (ಪಡುವ) ಕಟ್ಟುಮೋರಿಯಿಂದ (ತೆಂಕ) ದಕ್ಷಿಣದ ನಡುವಿನ ಸಂಪತ್ತನ್ನು ನೀಡಿರುವುದು ಉಲ್ಲೇಖವಾಗಿದೆ. ೧೨೧ನೇ ದೊಡ್ಡಬೇಳಾಲು ಶಾಸನವು ಕ್ರಿ.ಶ. ೧೫೪೫ರಲ್ಲಿ ಶ್ರೀಕಂಠ ಒಡೆಯನು ದೊಡ್ಡಬೇಳಾಲು ಗ್ರಾಮವನ್ನು ಉಂಬಳಿಯಾಗಿ ನಂದಿಯಾಲದ **"ಉಂಬಳೇಶ್ವರ"** ಅರಸರು ಚೆಂಗಾಳ್ವರಿಗೆ ಪಲ್ಲಕಿಯನ್ನು ಕೊಟ್ಟ ಉಂಬಳಿ ಸ್ಥಳದ ವಿವರಣೆಯಿದೆ. ಕ್ರಿ.ಶ. ೧೬ನೇ ಶತಮಾನದ ೧೨೯ನೇ ರಾವಂದೂರು ಶಾಸನವಲ್ಲಿ ರಾವಂದೂರಿನ ಸುತ್ತಮುತ್ತಲಿನ ಸುಮಾರು ೬ ಸ್ಥಳಗಳನ್ನು ಕೊಡುಗೆ ನೀಡಿದ ವಿವರಣೆಯಿದೆ.

ಹಿರೇಮಳಲಿಯ ೧೩೨ನೇ ಶಾಸನವು ಪ್ರಮುಖವಾಗಿದ್ದು, ಇದರಲ್ಲಿ ಕ್ರಿ.ಶ. ೧೪೨೫ರಿಂದ ೧೫೦೩ರವರೆಗಿನ ವಂಶಾವಳಿಯ ಉಲ್ಲೇಖವಿದ್ದು. ಚೆಂಗಾಳ್ವ, ನಾಗ, ರಂಗ, ಪಿರಿಯಣ (ನಂಜಾ, ಮಹದೇವ) ಎಂದು ಉಲ್ಲೇಖಿಸಿದೆ. ೧೩೬ನೇ ಹರೀನಹಳ್ಳಿ ಶಾಸನದಲ್ಲಿ ಕುಪ್ಪೆನಾಡಿನ ಉಲ್ಲೇಖವಿದ್ದು, ಇದನ್ನು ದಾನವಾಗಿ ನೀಡಿದ ಉಲ್ಲೇಖವಿರುತ್ತದೆ. ಅಂತಿಮವಾಗಿ ೧೪೦ನೇ ವಡ್ಡರಹಳ್ಳಿ ಶಾಸನದಲ್ಲಿ ಈ ಹೊಸಹಳ್ಳಿಯನ್ನು ಬೆಟ್ಟದಪುರದ ಅನ್ನದಾನಿಗೆ ದಾನ ಮಾಡಿದ ಉಲ್ಲೇಖವಿದೆ.

ನಾವು ಅಧ್ಯಯನಕ್ಕೊಳಪಡಿಸಿರುವ ಸುಮಾರು ೩೫ ಶಾಸನಗಳನ್ನು ಪರಿಗಣಿಸಿದಾಗ ಹೆಚ್ಚಿನ ಶಾಸನಗಳು ಬೆಟ್ಟದಪುರದ ಮಲ್ಲಿಕಾರ್ಜುನನಿಗೆ ಅಗತ್ಯ ಸೇವೆಗಾಗಿ ನೀಡಿದವುಗಳಾಗಿರುವುದು ಕಂಡುಬರುತ್ತದೆ. ಇನ್ನು ಕೆಲವು ವೀರರ ಸಾಧನೆಗಳನ್ನು ತಿಳಿಸುತ್ತವೆ. ಜೊತೆಗೆ ಇವರ ಸಂಬಂಧ ನೇರವಾಗಿ ಹೊಯ್ಸಳರು ಮತ್ತು ಮೈಸೂರು ಅರಸರೊಂದಿಗಿನ ಸಂಬಂಧ ಉತ್ತಮವಾಗಿರಲಿಲ್ಲ. ಬದಲಿಗೆ ವಿಜಯನಗರದ ಅರಸರೊಂದಿಗಿನ ಸಂಬಂಧ ಸುಸ್ಥಿತಿಯಲ್ಲಿದ್ದುದ್ದು ತಿಳಿಯುತ್ತದೆ. ಇವರು ನಂಜರಾಯಪಟ್ಟಣವನ್ನು ಮೂಲಕೇಂದ್ರವಾಗಿ ಹೊಂದಿದ್ದರು. ನಂತರದ ಇವರ ಶಾಸನಗಳಲ್ಲಿ ಸಿಂಗಾಪಟ್ಟಣ ಮತ್ತು ಬೆಟ್ಟದಪುರಗಳ ಬಗ್ಗೆ ಹೆಚ್ಚು ಚರ್ಚೆ ಆಗುವುದರಿಂದ ನಂತರದ ಅಥವಾ ಕಾಲ-ಕಾಲಕ್ಕೆ ಈ ಎರಡು ಸ್ಥಳಗಳನ್ನು ತಮ್ಮ ಆಡಳಿತ ಕೇಂದ್ರವಾಗಿ ಮಾಡಿಕೊಂಡಂತೆ ಕಂಡುಬರುತ್ತದೆ. ಇವರ ವಂಶಾವಳಿ ಸಾರುವ ಏಕೈಕ ಶಾಸನವಿದ್ದು, ಇದರಲ್ಲಿನ ಉಲ್ಲೇಖ ಮತ್ತು ಶಾಸನಗಳಲ್ಲಿನ ಚರ್ಚಿತ ಹೆಸರುಗಳ ಸಾಮ್ಯತೆ ಕಂಡುಬರುತ್ತದೆ. ಜನಪದರ ಪ್ರಕಾರ ಪೇರಿಯಾರಾಜನ ಹೆಸರು ಮತ್ತು ಆ ಸ್ಥಳದ ಚರ್ಚೆ ಸಾಮ್ಯತೆ ನೋಡಿದರೆ ಜನಪದ ಇತಿಹಾಸ ಸತ್ಯವೆನಿಸುತ್ತದೆ. ಉಳಿದಂತೆ ಇವರು ಯಾವ ಅರಸರೊಟ್ಟಿಗೂ ಕಾದಾಡಿದ ಉಲ್ಲೇಖವಿಲ್ಲ. ಜೊತೆಗೆ ಇವರ ರಾಜ್ಯದಲ್ಲಿ ಹಲವು ಆಡಳಿತ ಪ್ರದೇಶಗಳ (ನಂದಿಯೊಲ ಕುಪ್ಪೆನಾಡು) ಉಲ್ಲೇಖಿಪಿದೆ.

ಒಟ್ಟಾರೆಯಾಗಿ ಚೆಂಗಾಳ್ವರು ಕ್ರಿ.ಶ. ೧೨ನೆಯ ಶತಮಾನದಿಂದ ೧೭ನೆಯ ಶತಮಾನದವರೆಗೂ ನಂಜರಾಯಪಟ್ಟಣ, ಸಿಂಗಾಪಟ್ಟಣ, ಬೆಟ್ಟದಪುರಗಳನ್ನು ಕೇಂದ್ರವನ್ನಾಗಿ ಮಾಡಿಕೊಂಡು ವಿಜಯನಗರದ ಕೊನೆಯ ಅರಸರೊಟ್ಟಿಗೆ ಸ್ನೇಹವಿರಿಸಿಕೊಂಡು ಈ ಭಾಗದಲ್ಲಿ ಚೆಂಗಾಳ್ವರು ತಮ್ಮ ಛಾಪನ್ನು ಮುದ್ರೆಯೊತ್ತಿ ಅಚ್ಚಳಿಯದಂತೆ ಮಾಡಿರುವುದು ಇವತ್ತಿಗೂ ಇತಿಹಾಸದ ಜೊತೆಗೆ ಜನಪದರ ಇತಿಹಾಸದೊಂದಿಗೆ ಚಂಗಾಳ್ವರ ಕೊಡುಗೆಗಳು ಪಿರಿಯಾಪಟ್ಟಣ ಭಾಗದಲ್ಲಿ ಅಚ್ಚಳಿಯದಂತಿವೆ. ಶಾಸನಗಳಲ್ಲಿ ಕುಲೋತುಂಗ ಚೋಳ ಚಂಗಾಳ್ವ ಎಂದು ಕರೆದುಕೊಂಡಿದ್ದು ಎಲ್ಲಿಯೂ ಚೋಳರಿಗೂ ಮತ್ತು ಚಂಗಾಳ್ವರಿಗೂ ಇರುವ ಸಂಬಂಧ ಉಲ್ಲೇಖವಾಗದೆ ಇರುವುದರಿಂದ ಬಿರುದು ಅಥವಾ ಹೆಸರಿನ ಬಗ್ಗೆ ನಿಖರತೆ ಇಲ್ಲವಾಗಿದೆ.

ಆಧಾರಸೂಚಿ

೧. ಎಪಿಗ್ರಾಫಿಯಾ ಕರ್ನಾಟಕ (ಪರಿಷ್ಕೃತ ಮುದ್ರಣ) ಸಂಪುಟ ೪. ಪಿರಿಯಾಪಟ್ಟಣ. ಶಾಸನ ಸಂಖ್ಯೆ ೪.
೨. ಅದೇ. ಶಾಸನ ಸಂಖ್ಯೆ ೧.
೩. ಅದೇ. ಶಾಸನ ಸಂಖ್ಯೆ ೪ ಮತ್ತು ೫.
೪. ಅದೇ. ಶಾಸನ ಸಂಖ್ಯೆ ೧೪ ಮತ್ತು ೧೫.
೫. ಅದೇ. ಶಾಸನ ಸಂಖ್ಯೆ ೧೮.
೬. ಅದೇ. ಶಾಸನ ಸಂಖ್ಯೆ ೨೨.
೭. ಅದೇ. ಶಾಸನ ಸಂಖ್ಯೆ ೨೫ ಮತ್ತು ೨೭.
೮. ಅದೇ. ಶಾಸನ ಸಂಖ್ಯೆ ೩೩.
೯. ಅದೇ. ಶಾಸನ ಸಂಖ್ಯೆ ೫೯.
೧೦. ಅದೇ. ಶಾಸನ ಸಂಖ್ಯೆ ೬೨.
೧೧. ಅದೇ, ಶಾಸನ ಸಂಖ್ಯೆ ೬೩ ಮತ್ತು ೬೪.
೧೨. ಅದೇ, ಶಾಸನ ಸಂಖ್ಯೆ ೭೧ ಮತ್ತು ೭೨.
೧೩. ಅದೇ, ಶಾಸನ ಸಂಖ್ಯೆ ೯೦.
೧೪. ಅದೇ, ಶಾಸನ ಸಂಖ್ಯೆ ೯೪.
೧೫. ಅದೇ, ಶಾಸನ ಸಂಖ್ಯೆ ೧೦೩.
೧೬. ಅದೇ, ಶಾಸನ ಸಂಖ್ಯೆ ೧೦೯ ಮತ್ತು ೧೧೦.
೧೭. ಅದೇ, ಶಾಸನ ಸಂಖ್ಯೆ ೧೧೩ ಮತ್ತು ೧೧೪.
೧೮. ಅದೇ, ಶಾಸನ ಸಂಖ್ಯೆ ೧೨೧ ಮತ್ತು ೧೨೨.
೧೯. ಅದೇ, ಶಾಸನ ಸಂಖ್ಯೆ ೧೨೯ ಮತ್ತು ೧೩೨.
೨೦. ಅದೇ, ಶಾಸನ ಸಂಖ್ಯೆ ೧೩೬ ಮತ್ತು ೧೩೭.
೨೧. ಅದೇ, ಶಾಸನ ಸಂಖ್ಯೆ ೧೪೦.

೪೬

ಕೆಳದಿ ಆಸ್ಥಾನದ ತತ್ವಕೌಸ್ತುಭ ಅಪ್ರಕಟಿತ ಹಸ್ತಪ್ರತಿ

ಡಾ. ಕೆಳದಿ ಗುಂಡಾಜೋಯಿಸ್*

ಭಾರತದ ಚರಿತ್ರೆಯಲ್ಲಿಯೇ ಪ್ರಮುಖವಾದ ಕೆಳದಿ-ಆಸ್ಥಾನ, ವಿದ್ವಾಂಸರು ಮತ್ತು ಕವಿಗಳಿಗೆ ಪ್ರಮುಖ ಕೇಂದ್ರವೆಂಬುದು ಇತಿಹಾಸ ವೇದ್ಯವಾಗಿದೆ. ಹೊರನಾಡಿನಿಂದ ಈ ಆಸ್ಥಾನಕ್ಕೆ ಭೇಟಿಯಿತ್ತು ವಿಶ್ವವಿದ್ಯಾನಿಲಯದೋಪಾದಿಯಲ್ಲಿ ವಿದ್ವತ್ ಸಭೆಗಳು, ಕೃತಿಗಳು ರಚನೆಯಾಗಿರುವುದು ಸಾಧಾರಣ ಸಂಗತಿಯೆನಿಸಲಾರದು. ಮುಖ್ಯವಾಗಿ ಕೆಳದಿ ಅರಸರು ಹಾಗೂ ಸಚಿವರು ಸ್ವತಃ ವಿದ್ವಾಂಸರಾಗಿದ್ದುದು ಹೆಗ್ಗಳಿಕೆ. ೧೫೪೬ರಿಂದ ೧೫೫೯ರವರೆಗೆ ಆಳಿದ ದೊಡ್ಡ ಸಂಕಣ್ಣ ನಾಯಕನಿಂದಾರಂಭಿಸಿ ೧೭೪೦-೫೫ರವರೆಗೆ ಕಿರಿಯ ಬಸಪ್ಪನಾಯಕನವರೆಗೆ ಕೆಳದಿ ಆಸ್ಥಾನದಲ್ಲಿ ಸರಿ ಸುಮಾರಾಗಿ ೨೯ ಕವಿಗಳೂ ೫೪ ಕೃತಿಗಳೂ ರಚನೆಯಾಗಿರುವುದು ಉಪಲಬ್ಧವಿದೆ. ಇನ್ನೂ ವಿದ್ವತ್ಪೂರ್ಣ ಕೃತಿಗಳು ಅಲ್ಲಲ್ಲಿಯೇ ಇರಬಹುದಾಗಿದೆ.೧ ೧೫೮೬-೧೬೨೯ರಲ್ಲಿ ಆಳಿದ ಸ್ವತಃ ವಿದ್ವಾಂಸನಾದ ಹಿರಿಯ ವೆಂಕಪ್ಪನಾಯಕನ ಕಾಲದಲ್ಲಿ ಈ ಆಸ್ಥಾನದಲ್ಲಿ ಉತ್ತರ ಭಾರತದ ವಿದ್ವಾಂಸರಿಂದ ಶ್ರೇಷ್ಠ ಕೃತಿಗಳು ಬೆಳಕು ಕಂಡಿವೆ. ಬಹಳಷ್ಟು ಕೃತಿಗಳು ಹಸ್ತಪ್ರತಿಯಾಗಿ ಅಡಗಿ ಕುಳಿತಿವೆ. ಇತ್ತೀಚಿನವರೆಗೂ ಅಜ್ಞಾತದಲ್ಲಿದ್ದು ಅಲಹಾಬಾದಿನಲ್ಲಿದ್ದ ತಿರುಮಲ ಭಟ್ಟನ ಗೀತಗೌರೀವರ ಹಸ್ತಪ್ರತಿಯನ್ನು ಸಿಮ್ಲಾ ದೆಹಲಿ ಖ್ಯಾತ ವಿದ್ವಾಂಸ ಡಾ॥ ಗಯಾಚರಣ ತ್ರಿಪಾಠಿರವರು ಭಾರತೀಯ ಸಂಸ್ಕೃತ ಸಂಸ್ಥಾನದ ನೆರವಿನಿಂದ ಪ್ರಕಟಿಸಿದರು. ಜಯದೇವ ಕವಿಯ ಗೀತಗೋವಿಂದಕ್ಕಿಂತಲೂ ಗೀತಗೌರೀವರವು ಶ್ರೇಷ್ಠ ಕೃತಿಯೆಂದು ಪರಿಗಣಿಸಲ್ಪಟ್ಟಿದೆ. ಈಚೆಗೆ ದಿ. ಎಂ.ಪಿ.ಎಲ್. ಶಾಸ್ತ್ರಿಗಳ ಖಾಸಗಿ ಗ್ರಂಥಭಂಡಾರದಲ್ಲಿ ನನ್ನ ಸರ್ವೇಕ್ಷಣೆಯಲ್ಲಿ ಗೋಚರಿಸಿದ 'ತತ್ವಕೌಸ್ತುಭ' ಹಸ್ತಪ್ರತಿಯು ಕೆಳದಿ ಇತಿಹಾಸಕ್ತನಾದ ನನ್ನಲ್ಲಿ ಕುತೂಹಲವನ್ನುಂಟು ಮಾಡಿದ್ದರಿಂದ ವಿದ್ವಾಂಸರ ಅವಗಾಹನೆಗಾಗಿ ಈ ಅಪ್ರಕಟಿತ ಹಸ್ತಪ್ರತಿಯನ್ನು ಪರಿಚಯಿಸಿ ಕೊಡುವುದೇ ನನ್ನ ಉದ್ದೇಶವಾಗಿದೆ. ಇದನ್ನು ದೊರೆಕಿಸಿಕೊಟ್ಟ ಎಂ.ಇ.ಎಸ್. ಕಾಲೇಜಿನ ಪ್ರಾಚಾರ್ಯರಾದ ಡಾ॥ ಶೇಷಯ್ಯಂಗಾರ್‌ವರಿಗೆ ವಿದ್ವಾಂಸರ ಪರವಾಗಿ ಕೃತಜ್ಞತೆಗಳು ಸಲ್ಲಿಸುವೆನು.

ಹಸ್ತಪ್ರತಿ ವಿವರಗಳು

೧೮೯೬ರಲ್ಲಿ ದಕ್ಷಿಣ ಭಾರತದ ಸಂಸ್ಕೃತ ಹಸ್ತಪ್ರತಿಗಳ ಕುರಿತು ಡಾ॥ ಈ ಹುಲ್ಜ್‌ರವರು ತಮ್ಮ ವರದಿಯಲ್ಲಿ ನಿರೂಪಿಸಿದಂತೆ

Page XII "The Tattwakaustubha" (No.1243) was written by Bhattoji Dixita at the order of Venkatendra of KELADI, According to Mr. Sewells lists of Antiquities Vol.II P. 177 Venkatappa Nayaka of Keladi reigned from A.D. 1604 to 1626 (page 122 of Appendix- Ms No. 1243 begins as follows)

> ವಿಶ್ವೇಶಂ ಸಚ್ಚಿದಾನಂದಂ ವಂದೇಹಂ ಯೋ ಅಖಿಲಂ ಜಗತ್ ।
> ಚರೀಕರ್ತಿ ಭರೀಭರ್ತಿ ಸಂಜರೀಹರ್ತಿ ಲೀಲಯಾ ॥
> ಕೇಲದೀ ವೆಂಕಟೇಂದ್ರಸ್ಯ ನಿರ್ದೇಶಾದ್ವಿದುಷಾಂ ಮುದೇ ।
> ಧ್ವಾಂತೋಚ್ಛತ್ತೌ ಪಟುತರಸ್ತನ್ಯತೇ ತತ್ವಕೌಸ್ತುಭಃ ॥

ತತ್ವಕೌಸ್ತುಭ ಹಸ್ತಪ್ರತಿ ವಿವರಣೆಯು ಈ ಕೆಳಕಂಡಂತೆ ಕ್ಯಾಟಲಾಗ್‌ನಲ್ಲಿ ಕಂಡುಬಂದಿದೆ.

[catalogue catalogourm]

ಡಾ॥ ಕೆ. ಕುಂಜುನ್ನಿರಾಜಾ: New catalogorum ಸಂಪುಟ ೮

1. Ibid: Tatwa Koustubha: Unspecified, Kavindracarya-333: Nasik II 298 C. Jodhpur-1632
2. Ibid: Mad; uni, R.K. S. 69 (Pariccheda 1) – or Matadnsanagratha, Taylor II

   Ibid: 298, (Pariccheda 1)Prob. Bhattoji Dixita's work
3. Ibid: dh, B III, 84. CPB. 1102, Khn 92, oppert I 1834, 3785, 3981, II 810 1072, 4612, 7562
4. Ibid: dh, Anandasrama 5969 (Taptamudravidravana)

   Ibid: ny, Sakti 107

* ಕೆಳದಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ-೫೭೭೪೦೧.

6. Ibid: Jain, by Akalanka. BORI 1070 of 1891-95 This is ch.7 of C. Varthikalankara

7. Ibid: by Thimmappa, grand father of Rama (a. of Sannitiramayana). See Mss notices and studies, J. of the Trav, uni, ori, Mss. Libr, VIII, p.4

8. Ibid: adv. Refulation of Madhva's theories. By Bhattoji Dixita, son of Lakshmidhara Bhatta.

   Adyar II p 137b. Adyar D, IX 809, 810 (inc). As. P 70. Baroda 376 (pariccheda 1) .6704 (inc), 11657(inc), Bikaner 6410,6411 (inc), BORI. 319 and 371 of 1899-1915, BORI, D IXI, 261-64 (inc), GD, 571 (inc), Grantha Ppaura p 24 (nm. 571) Gov. Of. Libr, Madras 30, HZ, 1243, 1359, Extr.P. 121, Jodhpur 1631, 1632 (with c) L 2355 MD 4583 (Ist section), 4584 (inc), Mithila. MT.591 (Breaks off in II, 1.3) 791, 1815 (Ist Section) Mysore I.pp.430-31 (4Mss) Rice 144 Sringeri Mutt 211, SSPC IB-52, Triv, Cur, II 56 (inc) Ujjain P.68

Catalogue of Sanskrit Manuscript in Mysore and coorg, by Lewis Rice 1884.

(Bodleian Library-25867 d 1)

No. 1351; Tatwa Koustubha

Bhattoji Dixita

Vedanta, 3000 Grantha,

Nagara; Sri Tale;

Sringeri Matha, Sringeri,

Incomplete; pp- 144-45.

Karnataka Historical Review Vol IV p.98, (p.97), For a new approach to the date of Bhattoji Dixita see annals of the S.V. Oriental Institute Vol. I p. 117 ff; also P.K. Gode studies in Indian literary History Vol. II (Sighji Jain Series No.38; Bombay 1954), p.65 ff. For a list of works ascribed to Bhattoji Dixita see P.K. Gode, op.c.it., Vol II, p 75 n 3.

There is a Ms of the Tatwa Koustubha in the Govt. Ori Mss Library, Madras (No. 4583 described on p. 3417 of vol IX of the Descriptive catalogue, Madras, 1910). The three verses quoted by me from the Ms. Of this work described by Hultzsch are also found in this Ms. The reading in the first line of verse 2 in this Ms is ಕೆಳದಿ ವೇಂಕಟೇಂದ್ರಸ್ಯ

Which is evidently a wrong reading for the correct- reading ಕೆಳದಿ ವೆಂಕಟೇಂದ್ರಸ್ಯ

There is an incomplete Ms. Of the Tatwa Koustubha in the Govt. Mss Library at the B.O.R. Institute, Poona (No.319 of 1899-1915) At the end of the third Pariccheda of this work (folios 6) we find the following colophon:-

> "ಕೆಳದೀ ವೆಂಕಟೇಂದ್ರೋಸೌ ಅಘೋರೇಶಪರಾಯಣಃ
> ಅಚೀಕರದಿಮಂ ಗ್ರಂಥ ತತ್ವಕೌಸ್ತುಭ ಸಂಜ್ಞಿತಮ್॥
> ಪದವಾಕ್ಯಪ್ರಮಾಣಜ್ಞಾನ್ ಗುಣಗೃಹ್ಯಾನ್ ವಿಪಶ್ಚಿತಃ।
> ಕೌತುಕಾಕ್ರಾಂತಮಾನಸಃ (ಕೌತುಕಾಂತಮಾನಸಃ
> ಪ್ರಮೋದಯತುಮತ್ಕೃತಃ ॥

ಇತಿ ಶ್ರೀಮದ್ವಿಶುದ್ಧಾದ್ವೈತಪ್ರತಿಷ್ಠಾಪಕೇತ್ಯಾದಿ ಬಿರುದಾವಲೀ ವಿರಾಜಮಾನ ಕೆಳದಿ ವೆಂಕಟಾಘೋರೇಣ ಕಾರಿತೇ ವಿದ್ವನ್ಮುಕುಟಮಾಣಿಕ್ಯ ಲಕ್ಷ್ಮೀಧರಭಟ್ಟಸೂನು ಭಟ್ಟೋಜಿಭಟ್ಟವಿರಚಿತೇ ತತ್ವಕೌಸ್ತುಭೇ ತೃತೀಯಃ ಪರಿಚ್ಛೇಧಃ॥

ಶೃಂಗೇರಿ ಮಠದಲ್ಲಿನ ಕಾಗದ ಹಸ್ತಪ್ರತಿ ನಂ: ೪೭೭: ತತ್ವಕೌಸ್ತುಭ: ಭಟ್ಟೋಜಿ ದೀಕ್ಷಿತ; ಆಂಧ್ರಲಿಪಿ: ಪ್ರ: ೬೦ ಪುಟ ೪೧; ಪ್ರಥಮ ಪರಿಚ್ಛೇದ ಮಾತ್ರ

ದಿ॥ ಪ್ರೊ, ಎಂ.ಪಿ.ಎಲ್. ಶಾಸ್ತ್ರಿಗಳ ಖಾಸಗೀ ಕಡತದಲ್ಲಿ 'ತತ್ವಕೌಸ್ತುಭ' ಕುರಿತ ಪತ್ರ ವ್ಯವಹಾರವೊಂದು ಈ ಕೆಳಗಿನಂತಿದೆ.

Govt Oriental Library Mysore, 16th December (19)14

Sir,

In reply to your letter of 4th instant. I have to inform you that copying charges & Paper for preparing a transcript in Devanagari character, of Tatwa Koustubha will amount to Rs. 25/- I shall get the copy prepared for you on your remitting to this office Rs. 25/- in advance.

Yours sincerely

Sd/-

H. Vyasa Rao. Esq. B.A.

Reverse

My Dear father,

Please see the letter on the reverse, and let me know

Whether you want the copy at the cost mentioned.

Hoping that you are doing well.

I am

Your most obedient

Bangalore — Affectionate son.

17-12-1914 — Sd/- H. Vyasa Rao.3

ಹಸ್ತಪ್ರತಿಯ ಲಿಪ್ಯಂತರ ಪಠ್ಯಭಾಗ

ಪೂನಾ, ಚೆನ್ನೈ, ಜೋಧಪುರ, ಲಂಡನ್ನ ಬೋಡ್ಲೀನ್ ಲೈಬ್ರರಿ ಆದಿಯಾಗಿ ಮೈಸೂರು ಪ್ರಾಚ್ಯಕೋಶಾಗಾರದಲ್ಲಿ ಸರಿಸುಮಾರಾಗಿ "ತತ್ವಕೌಸ್ತುಭ" ೫೭ ಹಸ್ತಪತಿಗಳು ಕಂಡು ಬರುತ್ತವೆ. ಮೈಸೂರು ಪ್ರಾಚ್ಯಕೋಶಾಗಾರದಲ್ಲಿ ನಾಲ್ಕು ಹಸ್ತಪ್ರತಿಗಳಿವೆ. ಬಹುಷಃ ೧೭-೧೨-೧೯೧೧ಳರಲ್ಲಿ ಸುಮಾರು ೧೦೦ ವರ್ಷಗಳ ಹಿಂದೆ ಮೈಸೂರಿನಲ್ಲಿರುವ ಹಸ್ತಪ್ರತಿಗಳನ್ನೇ ಎಂ.ಪಿ.ಎಲ್ ಶಾಸ್ತ್ರಿಗಳಿಗೆ ಲಿಪ್ಯಂತರ ಮಾಡಿ ಕೊಟ್ಟಿರಬಹುದಾಗಿದೆ. ಇದು ೧೫೫ ಪುಟಗಳನ್ನೊಳಗೊಂಡಿದೆ. ವಿದ್ವಾಂಸರ ಅವಗಾಹನೆಗಾಗಿ ಆದಿ ಮತ್ತು ಅಂತ್ಯಗಳನ್ನು ಮಾತ್ರ ಉಲ್ಲೇಖಿಸಲಾಗಿದೆ.

ಪಠ್ಯಭಾಗ

॥ಶ್ರೀ॥
॥"ತತ್ವಕೌಸ್ತುಭಃ॥
॥ಪ್ರಥಮಃ ಪರಿಚ್ಛೇದಃ॥
"ಶ್ರೀಗಣೇಶಾಯನಮಃ ವಿಶ್ವೇಶಂ ಸಚ್ಚಿದಾನಂದಂ ವಂದೇಹಣ ಯೋಖಿ (ಥ) ಜಗತ್। ಚರೀಕರ್ತಿ ಬರೀಭರ್ತಿ ಸಂಜರೀಹರ್ತಿ ಲೀಲಯಾ ॥೧॥ ಕೇಲದೀ ವೆಂಕಟೇಂದ್ರಸ್ಯ ನಿರ್ದೇಶಾದ್ವಿದುಷಾಂ ಮುದೇ। ಧ್ವಾಂತೋಚ್ಛಿತ್ತ್ಯೈ ಪಟುತರಸ್ತನ್ಯತೇ ತತ್ವಕೌಸ್ತುಭ ॥೨॥ ಫಣಿಬಾಷಿತ ಭಾಷ್ಯಾಬ್ಧೇಃ ಶಬ್ದಕೌಸ್ತುಭ ಉದ್ಧೃತಃ ಶಾಂಕರಾದಪಿ ಭಾಷ್ಯಾಬ್ಧೇಸ್ತತ್ವಕೌಸ್ತುಭಮುದ್ದರೇ ॥೩॥ ಇಹ ಖಲು ಕೇಚಿತು ಪಾಂಚರಾತ್ರಾಗಮಾನ್ ತದನುಸಾರಿ ಪುರಾಣಭಾಗಾನ್ನ ಉಪಜೀವ್ಯತದಧಿಕಾರಿತತ್ವಮಪರ್ಯಾಲೋಚಯಂತಃ ಶ್ರೌತಸ್ಮಾರ್ತಮಾರ್ಗಂ ತ್ಯಜಂತಿ ತ್ಯಜಯಂತಿ। ತಾನ್ ಸಮ್ಯಕ್ ಶಿಕ್ಷಯಿತುಂ ತಂತ್ರಾದ್ಯಧಿಕಾರೀ ತಾವನ್ನಿರೂಪ್ಯತೇ ಅತ್ರಾಯಂ ಸಿದ್ಧಾತಃ। "ಶಾಪಾದ್ವಾ ಗೌತಮಾದೀನಾಂ ಪಾಪಾದ್ವಾ ಮಹತೋನರಾಃ। ಸಂಗತಾ ವೇದಬಾಹ್ಯತ್ವಂ ಯೇಚಸಂಕೀರ್ಣಯೋನಿಜಾಃ। ತೇ ಧಿಕ್ರಿಯಂತೇ ತಂತ್ರಾದೌ (ಸ್ತ್ರೀಶುದ್ರಾ) ಶ್ಚಯಥಾತಥಾ"।

ಅಂತ್ಯ

॥ ಏವಂ ಮುಕ್ತಿ ಫಲಾನಿಯಮಸ್ತದವಸ್ಥಾವಧುತೇಸ್ತದವಸ್ಥಾವ ಧೃತೇ॥ (೩-೪-೫?)
ಏವಂ ಪ್ರಾರಬ್ಧಕರ್ಮಾಭಾವೇ ಶರೀರಪಾತಾನಂತರಮೇವಮೋಕ್ಷಃ।
ತದ್ಭಾವೇ ಜನ್ಮಾಂತರಾಣೇತ್ಯನಿಯಮಃ। ಧರ್ಮಾಸ್ವರ್ಗಂ ವಿಧರ್ಮಾನಿಕಯಮೇತ್ಯೇವ ಬ್ರಹ್ಮಸಂಸ್ಥೋ ಮೃತಮೇತ್ಯೇವೇತ ಬ್ರಹ್ಮಸಂಸ್ಥಸ್ಯಮೋಕ್ಷಸ್ಯೈವವಾಧಾರಿತತ್ವಾತ್ ॥ ವಿದ್ವಾನಮೃತಮಾಪ್ನೋತಿನಾತ್ರಕಾರ್ಯಾವಿಚಾರಣಾ।ಅವಸನ್ನಂ ಯದಾಶಬ್ದಂ ಕರ್ಮತಿತ್ರೈವಗಚ್ಛತಿ। ನಚೇದ್ಬಹೂನಿ ಜನ್ಮಾನಿ ಪ್ರಾಪ್ಯವಾಂತೇನ ಸಂಶಯ ಇತಿ ನಾರಾಯಣಾಧ್ಯಾತ್ಮೇ ಇತಿಮಾಧ್ವಾಃ।
ಅನಾವಿಷುರ್ವನ್ನನ್ವಯಾದಿತ್ಯಾದಿನಾ (೩-೪-೪೭) ಯದುಕ್ತಂ ತನ್ನಾರ್ತಾವಾಸ್ಮಾಕಂ ವಿರುದ್ಧಯವಮ್॥ ಸಾಮಾನ್ಯ ಖಂಡನೇಗತಾರ್ಥಂಚೇತಿದಿಕ್॥
ಭಟ್ಟೋಜೀಭಟ್ಟವಿರಚಿತೇಸ್ಮಿನ್ ಗ್ರಂಥೇ ತತ್ವಕೌಸ್ತುಭೇ ತೃತೀಯಾಧ್ಯಾಯೇ ಮಧ್ವೋಕ್ತಭಾಷ್ಯಭಂಗಃ ಸಮಾಪಿತಃ। ಇತಿ ಶ್ರೀ ವಿದ್ವನ್ಮುಕುರಮಣಿಕ ಲಕ್ಷ್ಮೀಧರಭಟ್ಟಸೂನು ಭಟ್ಟೋಜೀಭಟ್ಟ ವಿರಚಿತೇ ತತ್ವಕೌಸ್ತುಭೇ ತೃತೀಯಾಧ್ಯಾಯೆಸ್ಯ ಚತುರ್ಥಃ ಪಾದಃ॥

॥ ಸಮಾಪ್ತಶ್ಚಾಧ್ಯಾಯಃ॥

ಅಂತ್ಯದಲ್ಲಿ ಉಲ್ಲೇಖನಗೊಂಡಿರುವ ಲಕ್ಷ್ಮೀಧರ ಭಟ್ಟ ಸೂನು ಭಟ್ಟೋಜೀಭಟ್ಟ (ಭಟ್ಟೋಜೀ ದೀಕ್ಷಿತ) ಕುರಿತಂತೆ ಕ್ಯಾಟಲಾಗ್ ಕ್ಯಾಟಲೋಗೋರಂ ಕಾಲಂ ನಂ. ೮ ರೈಸ್ ಅವರ ನಂ. ೧೩೫೧, ಬೋಡ್ಲೀನ್ ಲೈಬ್ರರಿ ನಂ. ೨೫೮೬೭ D1:BOR, Poona 319 ಹಾಗೂ ಶೃಂಗೇರಿ ಮಠ ನಂ. ೪೭೭ (ಆಂಧ್ರಲಿಪಿ)ಗಳಲ್ಲಿ ಕಂಡುಬರುತ್ತವೆ. ಕೆಳದಿ ಆಸ್ಥಾನದ "ಶಬ್ಧಕೌಸ್ತುಭ" ಕೃತಿಯ ಉಲ್ಲೇಖನವೂ ಪ್ರಸ್ತಾಪಿಸಲ್ಪಟ್ಟಿದೆ. ಒಟ್ಟಿನಲ್ಲಿ 'ತತ್ವಕೌಸ್ತುಭ' ಭಟ್ಟೋಜಿ ದೀಕ್ಷಿತನ ಕೃತಿಯೆಂಬುದನ್ನು ಹಸ್ತಪ್ರತಿಯಿಂದ ಕಂಡುಕೊಳ್ಳಬಹುದು. ಈ ದಿಶೆಯಲ್ಲಿ ಮೂಲ ಹಾಗೂ ಶುದ್ಧಪ್ರತಿಯ ಅನ್ವೇಷಣೆ ಅಗತ್ಯ.

ಉಪಸಂಹಾರ

ಭಾರತದ ದೇಶೀಯ ಸಂಸ್ಥಾನದ ಇತಿಹಾಸದಲ್ಲಿ ಸುಮಾರು ೫೯ ಕೃತಿಗಳಿಗೆ ಬೆಳಕು ನೀಡಿದ ಕೆಳದಿ ಆಸ್ಥಾನ ಪ್ರಮುಖವಾದುದು. ಕೆಳದಿ ಅರಸರು ವೀರಶೈವರಾಗಿದ್ದರೂ ಪೂರ್ವಾಗ್ರಹ ಪೀಡಿತರಾಗದೆ ಪ್ರಾಮಾಣಿಕವಾಗಿ ಭಾರತಾದ್ಯಂತ ವಿದ್ವಾಂಸರಿಗೂ ಕವಿಗಳಿಗೂ ಪ್ರೋತ್ಸಾಹ ನೀಡಿರುವುದು ಅದಮ್ಯವಾದುದು. ಮೇಲಾಗಿ ಸ್ವತಃ ವಿದ್ವಾಂಸರಾಗಿದ್ದ ಈ ಅರಸರ ಪ್ರಕಟಣೆಯು ಈಗಲೂ ವಿವಿಧ ರೀತಿಗಳಲ್ಲಿ ವಿದ್ವತ್ ಜನಪ್ರಿಯವಾಗಿರುವುದನ್ನು ಕಾಣಬಹುದು.

'ತತ್ವಕೌಸ್ತುಭ' ಗ್ರಂಥದಲ್ಲಿಯೇ ಉಲ್ಲೇಖನಗೊಂಡಂತೆ ಭಟ್ಟೋಜೀ ದೀಕ್ಷಿತನಿಂದ 'ಶಬ್ದಕೌಸ್ತುಭ' ಕೃತಿ ರಚನೆಯಾಗಿರುವುದೂ ವ್ಯಕ್ತಪಡುತ್ತದೆ. ಹಲವು ಹಸ್ತಪ್ರತಿ ಸಂಗ್ರಾಹಕರು ನನ್ನಲ್ಲಿ ಆಯಾಮತೀಯ ತತ್ವಪ್ರತಿಪಾದನೆಯ ಗ್ರಂಥಗಳನ್ನು ದೊರಕಿಸಿಕೊಡಲು ಕೇಳಿಕೊಂಡು ಉಳಿದುದನ್ನು ನಮ್ಮಲ್ಲಿಟ್ಟುಕೊಳ್ಳಲು ಮನಪಿ ಸಲ್ಲಿಸಿದ್ದರು. ಇದೇ ರೀತಿ ಪೂರ್ವಾಗ್ರಹ ಪೀಡಿತ ವಿದ್ವಾಂಸರೊಬ್ಬರು ಲಿಪ್ಯಂತರಾದಿ ಸಂಶೋಧನೆ ನಡೆಸಿಕೊಡಲು ಹಸ್ತಪ್ರತಿಗಳನ್ನು ನನಗೆ ನೀಡಿದ್ದರು. ಮೋಡಿ ಲಿಪಿಯಲ್ಲಿದ್ದ ಕಾಗದ

ಹಸ್ತಪ್ರತಿಯೊಂದರಲ್ಲಿ ಕೆಳದಿ ಸೋಮಶೇಖರ ನಾಯಕನು ದ್ವೈತಪೀಠಕ್ಕೆ ನೀಡಿದ ಶಾಸನವಿರುವುದನ್ನು ತಿಳಿಸಿದಾಗ, ಅದನ್ನು ಕಡ್ಡಾಯವಾಗಿ ಅಗ್ನಿಗಾಹುತಿ ಮಾಡಲು ತಿಳಿಸಿದರು. ಇತಿಹಾಸದ ಪ್ರಾಮಾಣಿಕತೆಗೆ ಇದು ಪೂರ್ವಾಗ್ರಹ ಪೀಡಿತ ಹಾನಿಯೆಂಬುದನ್ನು ಒತ್ತಿ ಹೇಳಬೇಕಾಗಿಲ್ಲವಷ್ಟೆ?

ದಿ॥ ಎಂ.ಪಿ.ಎಲ್. ಶಾಸ್ತ್ರಿಗಳು ದಿನಾಂಕ ೧೭-೧೨-೧೯೧೪ರಂದು ಸುಮಾರು ೧೦೦ ವರ್ಷದ ಹಿಂದೆ ಪ್ರತಿ ಮಾಡಿಸಿದ್ದ 'ತತ್ವಕೌಸ್ತುಭ' ಕೃತಿಯು ಅಂತಹ ವಿದ್ವಾಂಸರಿಂದ ಪ್ರಕಟವಾಗದೆ ಇರುವುದು ದುರ್ದೈವವೆಂದೇ ಹೇಳಬಹುದು; ಇದೂ ಪೂರ್ವಾಗ್ರಹ ಪೀಡಿತವಾಗಿದೆಯೇ? ಪೂರ್ವಾಗ್ರಹ ಪೀಡಿತ ಅಪ್ರಕಟಿತ ಕೃತಿಗಳು (ಪುರಾತನ ಜ್ಞಾನ ಭಂಡಾರದ) ಬೆಳಕು ಕಾಣದಿರುವುದು ಬೇಕಷ್ಟಿವೆ. 'ತತ್ವಕೌಸ್ತುಭ' ಕೃತಿಗೂ ಈ ದುರವಸ್ಥೆಯುಂಟಾಯಿತೇ? ಪ್ರಾಮಾಣಿಕ ವಿದ್ವಾಂಸರೇ ನಿರ್ಣಯಿಸಬೇಕಲ್ಲವೇ?

೧ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿರುವ ಓಲೆಗರಿ ಹಸ್ತಪ್ರತಿ- ಕಾಳಿಕಾಖಂಡ ಕೆಳದಿ ಕಾಲದ ಕೃತಿಯನ್ನು ಡಾ॥ ದೇವರಕೊಂಡಾರೆಡ್ಡಿ ಸಂಪಾದಿಸಿದ್ದಾರೆ.

೨ ನನ್ನ ಸಂಶೋಧನೆಯಲ್ಲಿ ಕಂಡುಬಂದ ಶ್ರೀ ಅಘೋರೇಶ್ವರ ಮೂರ್ತಿ ಬಿಂಬ ಕುರಿತ ಪ್ರಕಟಿತ ಲೇಖನಗಳನ್ನು ಅವಲೋಕಿಸಬಹುದು. ಇಟಲಿ ಪ್ರವಾಸಿ ಡೆಲ್ಲಾವಲ್ಲೆಯ ಪ್ರವಾಸಿ ಕಥನದ ಮೊದಲನೇ ಸಂಪುಟ ಕೆಎಂಆರ್ಸಿಯಿಂದ ಪ್ರಕಟವಾಗಿದೆ. (ಕಾಲ ೨೦೧೧)

ಆಧಾರಸೂಚಿ

೧. New catalogus catalogorun: An Alphabetical Register of Sanskrit and Allied Works and Authors. Dr. Kunjunni Raja, Vol 8, 1974.

೨. The Nayakas of Ikkeri, By K.D, Swaminathan, 1957, Madras

೩. The contact of Bhattoji Dixita and some members of his family with the Keladi Rulers of Ikkeri AD 1592 &1645. Dr. P.K. Gode M.A. D.itt., Curator BORI, Poona.

೪. A Descriptive catalogue of Sanskrit Manuscripts, Vol I Dr.K.T. Pandurangi, V.S.M, Library, Malamaddi Dharwar-1963.

ಮೊಗರನಾಡು ನರಿಕೊಂಬು ಶ್ರೀ ಲಕ್ಷ್ಮೀನರಸಿಂಹ ದೇವಾಲಯದ ಅಪ್ರಕಟಿತ ಮೂರು ನಿರೂಪಗಳು

ಡಾ. ಕೆಳದಿ ವೆಂಕಟೇಶ್ ಜೋಯಿಸ್*

ತುಳುನಾಡನ್ನು ಆಳಿದ ಜೈನ ಬಂಗ ಅರಸರಿಗೆ ವಿಶೇಷ ಸ್ಥಾನವಿದೆ. ಈ ಮನೆತನದ ಕುರಿತು ಕ್ರಿ.ಶ. ೧೧೫೭ಕ್ಕೂ ಮುಂಚಿನ ಇತಿಹಾಸ ತಿಳಿಯಲು ಸಾಧ್ಯವಾಗುತ್ತಿಲ್ಲ. ಈ ಅರಸರ ಮೂಲದ ಬಗೆಗೂ ಭಿನ್ನ ಭಿನ್ನ ಅಭಿಪ್ರಾಯವಿದೆ. ಕ್ರಿ.ಶ. ೧೫೩೩-೧೫೪೫ರಿಂದ ಬಂಗರ ೧೩ನೆಯ ದೊರೆ ೩ನೇ ಹಾವಳಿ ಬಂಗರಾಜನ ನಂತರ ಕೆಳದಿ ಇತಿಹಾಸದಲ್ಲಿ ಬಂಗರ ಪ್ರಸ್ತಾಪ ಬರುತ್ತದೆ. ಹಾಗಾಗಿ ಇವರ ಇತಿಹಾಸಕ್ಕೂ ಕೆಳದಿಗೂ ಸಂಬಂಧ ಇತ್ತೆಂದು ಹೇಳಬಹುದು. ಈ ಕುರಿತಂತೆ ಮೊಗರ್ನಾಡ ದಾಮರಸ ಪೈ ದೇವಸ್ಥಾನದ ಮೋಡಿ ದಾಖಲೆಗ್ಗಳಲ್ಲಿ ಅಲ್ಪಸ್ವಲ್ಪ ಮಾಹಿತಿ ಇದೆ.

ಚೌಟ ರಾಣಿ ಅಬ್ಬಕ್ಕಾದೇವಿ ಕಾಲದಲ್ಲಿ ಕೆಳದಿ ವೆಂಕಟಪ್ಪ ನಾಯಕನ ಆಡಳಿತ, ಇವರ, ನಂತರದ ೨ನೇ ಲಕ್ಷ್ಮಪ್ಪರಸ ಬಂಗರಾಜ, ೩ನೇ ಕಾಮರಾಯ, ೩ನೇ ಲಕ್ಷ್ಮಪ್ಪರಸ ಬಂಗರಾಜ ಈ ಮೊದಲಾದವರ ಕಾಲದಲ್ಲಿ ಇವರುಗಳಿಗೆ ನಡೆದ ಯುದ್ಧ, ಮೂರನೇ ಲಕ್ಷ್ಮಣ ಬಂಗರಾಜ (ಕ್ರಿ.ಶ. ೬೧೨-೧೬೨೯) ಪೋರ್ತುಗೀಸರ ಸಂಗಡ ಒಪ್ಪಂದವನ್ನು ಮಾಡಿ ವೆಂಕಟಪ್ಪನಾಯಕನಿಗೆ ಕಪ್ಪ ಕೊಡದೆ ಇದ್ದುದರಿಂದ ಪೋರ್ಚುಗೀಸರ ಹಾವಳಿಯು ಹೆಚ್ಚಾಗಿ ಕೆಳದಿ ಅರಸರಿಗೆ ಸಿಗುತ್ತಿದ್ದ ಸುಂಕವು ಕಡಿಮೆಯಾಗಿ ಇವನು ಯುದ್ಧ ಸಾರಿದ್ದು, ಈ ಸಂದರ್ಭದಲ್ಲಿ ಪೋರ್ಚುಗೀಸರಿಗೂ ವೆಂಕಟಪ್ಪ ನಾಯಕನಿಗೂ ಒಪ್ಪಂದ ಏರ್ಪಟಿತ್ತು. ಕೆಳದಿ ವೆಂಕಟಪ್ಪ ನಾಯಕನ ನಂತರ ಶಿವಪ್ಪನಾಯಕನ ಕಾಲದಲ್ಲಿನ ಸಂಬಂಧ, ಕೆಳದಿ ಶಿವಪ್ಪನಾಯಕನು ದೊಡ ಸೈನ್ಯದೊಡನೆ ಬೇಕಲದವರೆಗೆ ಮುನ್ನುಗ್ಗಿ ಕೊಲತ್ತರಸನ ರಾಜ್ಯವನ್ನು ವಶಪಡಿಸಿಕೊಂಡುದಲ್ಲದೆ ಅನಂತರ ಬಂಗರಾಜನು ೩೫೦೦ ವರಹ ಕಪ್ಪ ಕೊಡುವಂತೆ ಒಪ್ಪಂದ, ೧೭ನೆಯವನಾದ ಲಕ್ಷ್ಮಣ ಬಂಗ್ನರಾಜನ ತರುವಾಯ ಅವನ ಅಳಿಯ ನಾಲ್ಕನೆ ಹಾವಳಿ ಬಂಗರಾಜನು (ಕ್ರಿ.ಶ. ೧೬೨೮-೧೬೩೧) ಆಡಳಿತ ನಡೆಸಿದ್ದು, ಕ್ರಿ.ಶ. ೧೬೩೧ರಲ್ಲಿ ಕೆಳದಿ ಶಿವಪ್ಪನಾಯಕನು ಈ ಹಾವಳಿ ಬಂಗಾರಾಜನು ಮಾಡಿಕೊಂಡಿದ್ದ ಒಪ್ಪಂದದಂತೆ ೩೫೦೦ ವರಹಗಳನ್ನು ಕೊಡದೆ ಇದ್ದುದಕ್ಕಾಗಿ ಅವನನ್ನು ಕೆಳದಿ ರಾಜಧಾನಿಗೆ ಕರೆಸಿ ಪಹರೆಯಲ್ಲಿಟ್ಟದ್ದು, ಆ ಸಂದರ್ಭದಲ್ಲಿ ಆಗ ಪಾಣೆ ಮಂಗಳೂರಿನ ಹತ್ತಿರದ ಮೊಗರನಾಡಿನಲ್ಲಿದ್ದ ಗೌಡ ಸಾರಸ್ವತ ಬ್ರಾಹ್ಮಣ ದಾಮರ್ಸ ಪೈ ಎಂಬ ದೊಡ್ಡ ಸಾಹುಕಾರನು ಈ ೩೫೦೦ ವರಹಗಳಿಗೆ ಜಾಮೀನಾಗಿ ನಿಂತು ಅರಸನನ್ನು ಬಿಡಿಸಿದ್ದು ಇದೆಲ್ಲವೂ ಇತಿಹಾಸ.

ವಿಜಯನಗರ, ಕೆಳದಿ ಕಾಲದಲ್ಲಿ ವೈಷ್ಣವ ಸಾರಸ್ವತರು ಹೊನ್ನಾವರ, ಭಟಕಲ ಮಂಗಳೂರು ಮೊದಲಾದ ಕಡೆಗಳಲ್ಲಿ ವ್ಯಾಪಾರ ವ್ಯವಹಾರಗಳಲ್ಲಿ ಹೆಸರು ಮಾಡಿದವರಾಗಿದ್ದರು. ಈ ಸಾರಸ್ವತರಲ್ಲಿ ಸಾಗರದ ದಾಮರ್ಸ ಪೈ ಸಹ ಒಬ್ಬನಾಗಿದ್ದನು. ಇವನು ನರ್ರಿಕೊಂಬು ಗ್ರಾಮದಲ್ಲಿ ಶ್ರೀಲಕ್ಷ್ಮೀನರಸಿಂಹ ದೇವಾಲಯ ನಿರ್ಮಿಸಿರುವುದು ಕಂಡುಬರುತ್ತದೆ. (ಎ ಓಸ್ಟರಿ ಆಫ್ ಕೆನರ ಎಂಡ್ ದಿ ಸರಸ್ವತಾಸ್ ಇನ್ ಕರ್ನಾಟಕ ಪುಟ ೧೧೭)

ದಾಮರ್ಸ ಪೈ ಮಾಡಿದ ಸಹಾಯಕ್ಕಾಗಿ ವೀರನರಶಿಂಹ ಹಾವಳಿ ಬಂಗರಾಜನು ಮೊಗರನಾಡು ಸಾವಿರ ಸೀಮೆಯಿಂದ ಮೊಗರನಾಡು ದಾಮರ್ಸ ಪೈ ಸ್ಥಾಪಿಸಿದ ಶ್ರೀಲಕ್ಷ್ಮೀ ನರಸಿಂಹ ದೇವಸ್ಥಾನಕ್ಕೆ ಉಂಬಳಿ ಬಿಟ್ಟನು. (ಎಂ. ಗಣಪತಿ ರಾವ್ ಐಗಳ್, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಬಂಗರಸರು ಪು. ೨೮೧-೨೮೩) ಈ ಶ್ರೀಲಕ್ಷ್ಮೀನರಸಿಂಹ ದೇವಾಲಯವು ಇಂದೂ ಸಹ ಈ ಮೊಗರ ನಾಡು ಸೀಮೆಯಲ್ಲಿ ಅಸ್ತಿತ್ವದಲ್ಲಿದ್ದು ಅಂದಿನಿಂದ ನಡೆದು ಬರುತ್ತಿರುವ ಪೂಜಾ ವಿಧಾನದಂತೆಯೇ ಮುಂದುವರೆದುಕೊಂಡು ಬರುತ್ತಿರುವುದನ್ನು ಕಾಣಬಹುದು.

ಮೊಗರನಾಡು ಸೀಮೆಯ ನರಿಕೊಂಬು ಗ್ರಾಮದಲ್ಲಿರುವ ಈ ದೇವಾಲಯಕ್ಕೆ ಸಂಬಂಧಿಸಿದ ಮೋಡಿ ಲಿಪಿಯ ದಾಖಲೆಗಳು ಈ ದೇವಾಲಯದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಸುಮಾರು ಎಂಟುನೂರು ಪುಟಗಳಷ್ಟಿರುವ

* ಕ್ಯುರೇಟರ್, ಕೆಳದಿ ವಸ್ತು ಸಂಗ್ರಹಾಲಯ, ಕೆಳದಿ.

ದಾಖಲೆಗಳು ಇಲ್ಲಿವೆ. ಇದರಲ್ಲಿ ಕೆಳದಿ ಇತಿಹಾಸಕ್ಕೆ ಸಂಬಂಧಿಸಿದಂತಹ ಹಲವು ದಾಖಲೆಗಳಿದ್ದು ಅದರ ಮೇಲೆ ಬೆಳಕು ಚೆಲ್ಲುವುದು ಈ ಪ್ರಬಂಧದ ಉದ್ದೇಶವಾಗಿದೆ.

ನಿರೂಪ ೧ (ಅರ್ಧದಿಂದ) : ಪ್ರಾರಂಭದ ಸಾಲುಗಳಿಲ್ಲ. ೧೮ನೇ ಸಾಲಿನಿಂದ ಈ ನಿರೂಪ ಪ್ರಾರಂಭವಾಗಿದೆ.

೧. ನಷ್ಟ । ಗ ೨ ಹಾ ೪= ಅಂತ್ತು ।ಗ ೭ಹಾ ೨॥೦ ದಾಸೊಹದೆವರ್‍ರು ಕಾಂತಮಂಗಲಕೊಟೆ ಸಾ।ಗ ॥೦

೨. ಉಭಯಂ।ಗ ೭॥೨॥೦ವೆಟ್ಟಿಶೆಟ್ಟಿಗೈವ ಬಗೆಲು ಅಂತ್ರದಸ್ತಳ ೧ರ ಪ್ರಾಕು ಸಿಸ್ತು।ಗ ೧೧ ಹಾ ೩

೩. ಸಿಸ್ತಿನ ನಷ್ಟ ಗ ೧॥೦= ರೆಖೆ ನಷ್ಟ ಗಾ ೫ ಹಾ ೧ ॥=- ಅಂ।ಗ ೧೮ ದಾಸೊಹ।ಕಾಂತಮಂಗಲ ಕೊಟೆ

೪. ಸಹಾ।ಗ ೧ಹಾ೨ ಉಭಯಂ।ಗ ೧೯ ಹಾ೨ ತಳವಾರಕಟ್ಟೆ।ತಿಂಮ್ಮೈಯ್ಯ ಸೆನಬೊವಗೈವ ಸ್ತಳ ೧ ಕ್ರುರ ಸ್ತಳ

೫. ಪ್ರಾಕ್ಲು ಸಿಸ್ತು ।ಗ ೮ ಸಿಸ್ತಿನ ನಷ್ಟ।ಗ ೨ ಹಾ ೧ ರೆಖೆ ನಷ್ಟ ಗ ೪ ಹಾ ೪ ಅಂ।ರೆಖೆ ಗ ೧೩॥೦ ದಾಸೊ

೬. ಹ ದೆವರ್‍ರು ಕಾಂತಮಂಗಲ ಕೊಟೆ ಸಹಾ ಗ ॥೩॥= -- ಗ ೧೪ ಹಾ ೩॥= ಉಳಿಗದ ಮಲ್ಲಂಣಗೈವ

೭. ಪಳತ್ತಿಲ ಸ್ತಳ ೧ರ ಪ್ರಾಕು ಸಿಸ್ತು ।ಗ ೫ ಹಾ ॥=ಸಿಸ್ತಿನನಷ್ಟ ಗ॥೧॥= ರೆಕೆ ನಷ್ಟ ಗ ೧।೨।೦ ಅಂತು

೮. ಗ ೭।೦ದಾಸೊಹ ದೆವರ್‍ರು ಕಾಂತ ಮಂಗಲಕೊಟೆಸಹಾ ಗ ।೨॥೦ಉಭಯಂ।ಗ ೮ ಹಾ ೨॥೦ ವೆಂಕಟೆಶಭ

೯. ರ್‍ರು ಗೈವ ಪಳಸಿನ ಸ್ತಳ ೧ರ ಪ್ರಾಕು ಸಿಸ್ತು ಗ ೩ ಸಿಸ್ತಿನ ನಷ್ಟ ಗ ಹಾ ೪=ರೆಖೆ ನಷ್ಟ ಗ ೧॥೦॥= ಅಂ।ಗ೫

೧೦. ದಾಸೊಹ ದೆವರ್‍ರು ಕಾಂತ ಮಂಗಲಕೊಟೆ ಸಹಾ।ಹಾ ೩॥೦ಉಭಂ।ಗ ೫ ಲ್ಹಾ೩॥೦ ಅಂತ್ತು ।ಗ ೮೫ ಅಂ

೧೧. ಯೆಂಭತ್ತೈದು ವರಾಹಾಂನ್ನ ಸ್ವಾಸ್ತಿನ ಭುಮಿಯಂನ್ನು। ನಿಉ।ನಿಂಮ ಸಂತಾನ ಪಾರಂಪ

೧೨. ರ್ಯವಾಗಿ ಅನುಭವಿಶಿಕೊಂಡು।ದೆವತ್ತಾಸೆವೆಯಂನ್ನು ನಡಶಿಕೊಂಡು।ಸುಖದಿಂದ।ಅನುಭವಿಶಿಕೊಂ

೧೩. ಡು ಬಾಹಾದು।ಯೆಂದು ಬರಕೊಟ್ಟ ಭುಮಿಸ್ವಾಸ್ತೆ।ಪಟ್ಟಿಗೆ ಸಾಕ್ಷಿ।ಆದಿತ್ಯಚಂದ್ರೋ।ಬಿಂದಲೊ ನಿಲ

೧೪. ಂವೆವ್ರೋ।ಭು।ಮಿ।ರಾಪ್ರೋ।ಹೃದಂ।ಯಂ।ಂಯ।ವಾಶ್ಚ। ಅಹಶ್ಚ।ರಾಚ್ತಿಶ್ಚ ಉಭೆಯಂಚ।ಸಂದೆ।ದವೆ

೧೫. ಶ್ವಜಾನಾತ್ತಿ ನರಪ್ರಮೆತ್ತಿ। ದಾನಪಾಲನಯೊರ್ಮದ್ಯೆ ।ದಾನಾಶ್ಚ ಯೊದಿಪಾಲನಾತ್।ಸ್ವ

೧೬. ದತ್ತಾದ್ವುಗುಣಂಪುಣ್ಯ।ಪರದತ್ತಾನುಪಾಲನಂ। ಪರದತ್ತಾಪಹಾರೆಣ।ಸ್ವದತ್ತಂ ನಿಷ್ಪಲಂ

೧೭. ಭವೆತ್।ಸ್ವದತ್ತ।ಪರಿತ್ತಾ ಧಾತ್ರಿ ಓತ್ರೊದತ್ತ।ಸ್ತಪೊಧರ। ಪರದತ್ತಾ।ಸ್ವಯ।ಮಾರ್ತಾಂಡಂ

೧೮. ಭುಮಿಪರಿತ್ಯಚೆತ್।ಶ್ರೀ ಯಿರಿತ್ತಿ ಬರದ ಪಟ್ಟೆ ಪ್ರತಿ.

ನಿರೂಪ ೨. ೨೨ ಸಾಲಿದೆ.

೧. ಶ್ರೀಮತು।ಗರಜಿನ ಶಾಂತ್ತಪ್ಪೊಡೆರ್‍ರು।ನಂಮ ಮಾದಪ್ಪಗೆ ಹರಶಿಕಳುಹಿದ ಆಶೀರ್ವಾ

೨. ದಾ ಸಾಗರದ।ದಾಮರ್ಸಪಯಿಯು।ಹುಜುರ್‍ರಿಗೆ।ಬಂದು। ಮಂಗಲೂರ ಹೊಬಳಿ।ಮೊಗರ್ನಾಡ।

೩. ನರ್‍ರಿಕೊಂಬಿನ ಗ್ರಾಮದಲು ತಾಂನು ದೆವಸ್ತಾನ ಕಟ್ಟಿಶಿ ಪ್ರತಿಷ್ಟೆ ಮಾಡಿದ।ಲಕ್ಷ್ಮಿ ನರಸಿಂಹ್ವ ದೆವ

೪. ನರ್‍ರಿಕೊಂಬಿನ ಗ್ರಾಮದಿಂದ್ ಕ್ರಯ।ಗ ೮೫೦ ನ್ನು ತೆಗದುಕೊಂಡು।ಯಂಭತ್ತೈದು।ಗ ೮೫ ವರ

೫. ಉತ್ತಾರೌ ಕೊಟ್ಟು ನಿರ್‍ರುಪವಾಗಿ ಶಿಲಾಸ್ತಾಪಿತವಾಗಿದ್ದಲ್ಲಿ। ಯಿತ್ತಲಾಗಿ।ವಿಶ್ವಾವಸು

೬. --ಲ್ಲು।ಯಿಗ್ರಾಮದ।ವಿಚಾರ ಮುಖ ನಷ್ಟ।ಗ ೩೯॥೧।೦ ಗರನಷ್ಟ।ಗ೦-॥೦ಉಭಂ

೭. ----------------ಬೆಕೆಂದು।ಉತ್ತಾರವಾದ ಸ್ವಾಸ್ತೆಯ--ದರ್‍ರಿ

೮. ----ರಾತವವಮಾಡುತಾರೆ ಯಿನಷ್ಟದ ಬಗ್ಯೆ। ಕ್ರಯವಂನ್ನು ಕೊಡಬಾರ್‍ರೆ।ಯಿ--

೯. ----ಗೆ ಉತ್ತಾರವ ಕೊಟ್ಟು।ತಂನ್ನ ಹೆಸ್ರಲು। ಬರಶಿದ। ಕ್ರಯ।ಕಡಶಿದ ಸ್ವಾಸೆ---

೧೦. ----ಂದು।ಹೆಳಿಕೊಳುತಾನೆಂದು।ಅರ್‍ರಿಕೆ ಆದಲ್ಲಿ।ಯಿ ಬಗ್ಯೆ ವಿಚಾರ ಮುಖದ---

೧೧. --ಗ ೩।೨॥ ಉಭಂ।ಗ ೪೩ ಹಾ ೩॥ನಾಲ್ವತ್ತ ಮುರ್‍ರು ವರಹಾಂನ್ನು ಮುರಣ ಮುಪಾಂಗವ

೧೨. -ಲಕ್ಷ್ಮೀ ನರಸಿಂಹ್ವ ದೆವಸ್ತ್ರಿಗೆ। ಶಿವಾರ್ಪಿತವಾಗಿ। ಉತ್ತಾರವ ಕೊಡಹೆಳಿಯು।ಯಿಬಗೆ।ದಾಮ

೧೩. ಪಯಿಯಿಂದ।ಬರಬೆಕೆಂದು।ಬರಶಿದ। ಕ್ರಯನಾನೂರ। ಐವತ್ತಮುರ್‍ರು ಯೆಳಣವತ್ತಲು।ಬಿಟ್ಟಿ

೧೪. ಬೆರ್‍ರೆ ಹೆಳಿಯು।ಪ್ರಾಕು ಉತ್ತಾರವಾದ ಸ್ವಾಸ್ತೆಯಂನು ತರಶಿದಾರಭ್ಯ।ಬಿಟ್ಟುಕೊಡಹೆಳಿಸಹಾ।ಕಿಲಕ

೧೫. ಸ್ಸಂವತ್ಸರದ।ಭಾದ್ರಪದ ಬ ೧೧ಲುಅಪ್ಪಣೆ ಆಗ್ಯದೆ ಆಪ್ರಮಾಣು।ಯಿನರ್ರಿಕೊಂಬಿನ ಗ್ರಾಮದಿಂದ

೧೬. ಚಾರಮುಖಗತನಷ್ಟಸಹಾ।ಗ ೪೩ ಹಾ ೩॥ ನಾಲ್ವತ್ತಮುರ್ರು ವರಹಾಂನು ಮುರಣ ಮುಪ್ಪಾಗವಂ

೧೭. ಯಿದಾಮರ್ಸಪಯಿ ದೇವಸ್ತಾನಕಟ್ಟಿಶಿ।ಪ್ರತಿಷ್ಟೆಮಾಡ್ಸಿದ ಲಕ್ಷ್ಮಿ ನರಶಿಂಹ ದೇವರ್ರಿಗೆ ವರ್ಷಿಕ

೧೮. ವಾಗಿ।ಉತ್ತಾರವಕೊಟ್ಟು।ಯಿ ಬಗ್ಯೆ।ಯಿತನಿಂದ। ಬಸ್ರಬೆಕೆಂದು।ಪ್ರಾಕು ಬರಶಿ ಕ್ರಯ।ನಾ

೧೯. ರ ಮೂವತ್ತಮೂರ್ರು ಯೆಳಣ ವಡ್ಡವಂನ್ನು।ಬಿಟದು ಬಸ್ರಶಿಥೆ ಯಿಬಗ್ಯೆ ಹಣ ಯಿ ದೇವರ್ರಿಗೆ

೨೦. ಪ್ರಾಕು ಉತ್ತಾರವಾದ ಸ್ವಾಸ್ತೆಯಿಂದ।ನಡಶಿದಾರಭ್ಯುಬಾಹ ಹಣ ಸಹಾ ಕೆಳದ ಹಾಗೆ।ತಾಕಿತ್ತಿಮಾ

೨೧. ಡ್ಡಿಯಿವಾಲೆಯು।ಶ್ಯಾನಬೊವರ ಕಡುತಕ್ಕೆ ಬರಶಿ। ತ್ತಿರುಗಾಯಿತನವಶಕ್ಕೆ ಕೊಡ್ಸುವದಾಗಿ।

೨೨. ಯಂತ್ತಾ।ಬರದ।ವಾಲೆ ಪ್ರತ್ತಿ।

ಈ ನಿರೂಪದಲ್ಲಿ ಶಿಲಾಸ್ತಾಪಿತವಾಗಿದ್ದಲ್ಲಿ – ಎಂಬ ಸಾಲು ಬರುತ್ತದೆ. ಆದರೆ ಈ ಸುತ್ತಮುತ್ತಲಲ್ಲಿ ಎಲ್ಲಿಯೂ ಶಿಲಾ ಶಾಸನ ಇಲ್ಲ.

ನಿರೂಪ ೩ : ಇದು ೨೧ ಸಾಲಿದೆ.

೧. ಶ್ರೀಮತ್ ಕೆಳದಿ।ಬಸಪ್ಪನಾಯ್ಕರು।ಗರಜಿನ ಶಾಂತಪ್ಪಗೆ। ಶರಣಾರ್ಥಿ।ಸಾಗರ

೨. ದ।ಸುರಪಯಿ।ಮಗ ದಾಮಾರ್ಸಪಯಿಯು ।ಹುಜುರ್ರು ಬಂದು।ಮಂಗಲೂರ ಹೊಬಳಿಯಲ್ಲು।

೩. ತನಗೆ।ಬಲ್ಲಾಳಿಕೆಯಾಗಿ।ಮುಲಕ್ಕೆ ಕೊಟ್ಟ।ಮೊಗರ್ನಾಡ ಸಿಮೆ।ನರ್ರಿಕೊಂಬಿನ ಗ್ರಾಮದಲ್ಲು

೪. ಕುಮಾರಧಾರನೆತ್ರಾವತ್ತಿ ತ್ತಿರದಲ್ಲು।ತಾನು ದೇವಸ್ತಾನವ ಕಟ್ಟಿ।ಪ್ರತಿಷ್ಟೆ ಮಾಡಿಸ್ತ।ಶ್ರೀ ಲಕ್ಷ್ಮಿ

ಮುಂದಿನ ಪುಟ:

೧. ನರಶಿಂಹ್ವ ದೇವರ್ರಿಗೆ ದೇವತ್ತಾ ವೆಚ್ಚದ ಬಗ್ಗೆ ಇ ಸಿಮೆ ಪ್ರಜೆಗಳು ।ಗ ೧ರ ಹಾ ॥೦ ಗ ೮೫ ನ

೨. ತಂಮ್ಮ ।ಸಿಸ್ತಿಗೆ ಕುಡಿಕೊಂಡು। ಕಾಲಕಾಲಂಪ್ರತಿಯಲು। ಕೊಟುಬಂದೆವೆಂದು।ಒಪಿ ಬರಶಿಕೊ

೩. ಟ ಬಗೆಲು।ನರಿಕೊಂಬಿನ ಗ್ರಾಮದಲು ಗ ೮೫ನ್ನ ಭುಮಿಯು।ವಿಂಗಡಿಶಿಕೊಟು ಯಿದರಲ್ಲಿ

೪. ಹೆಮಳಂಬಿ ಸಂವತ್ಸರದಲ್ಲು ಪ್ರಜೆಗಳು ಇ ಭುಮಿ ಬಾಹ ಹಣವಂನ್ನು।ಅಪ್ಪಣೆ ಪ್ರಮಾಣು।ಸಿಸ್ತಿ

೫. ಗೆ ಕೊಡಿಶಿ ಅಥೆ।ದೇವರಿಗೆ ಸ್ವಾಸ್ತೆಯಿಲ್ಲ ಯೆಂದು ಕೊಟೆನು।ಯಿ ದೇವರಿಗೆ ಸ್ವಾಸ್ತೆ ಪಾಲಿಶಿಕೊಡಬೆಕೆಂ

೬. ದು।ಹೆಳಿಕೊಂಡಲ್ಲಿ।ವಿಳಂಬಿ ಸಂವತ್ಸಸ್ರದ ಯಿ ತನ ಕೈಯ।ಕ್ರಯ ಗ ೮೫೦ನ್ನು ತರಿಶಿಕೊಳು

೭. ನರಿಕೊಂಬಿನ ಗ್ರಾಮದಿಂದ।ಗ ೮೫ನ್ನು – ಹೆಳಿ।ಅಪ್ಪಣೆಯಾಗಿ।ಬರಶಿಕೊಟ್ಟ ವಾಲೆಪ್ರಮಾಣು

೮. ಸ್ವಾಸ್ತೆಯು।ನಡದುಬರುತ್ತಿದ್ದಲ್ಲಿ।ಕ್ರಯದ ಹಣವಿನಲು ಕೆಲವು ಹಣ ಸಂದುಳಿದ ಹಣ

೯. ಕೊಟೆನು। ನಿರುಪವ ಬರಶಿಕೊಡಬೆಕೆಂದು ಕೆಳಿಕೊಳು ತಾಧಾನೆ। ಆ ರಿತ್ತಿ ಅಪ್ಪಣೆ ಆಗಬೆಕೆಂದೂ।ಅಳಿಯ

೧೦. ನಿರ್ವಾನ್ಯೆಯ್ಯ ಹೆಳಿದ ಸಂಮಂದಾ।ಯಿ ದಾಮರ್ಸ ಪಯ್ಯನು ।ಪ್ರಾಕು ಬರಸ್ತ ಕ್ರಯ।ಗ – ನ್ನು ಅರ

೧೧. ಮನೆಗೆ।ತೆಗದುಕೊಂಡು ಯಿ ಮೊಗರ್ನಾಡ ಶಿಮೆ ನರ್ರಿಕೊಂಬಿನ ಗ್ರಮದಿಂದ ಪ್ರಾಕು ––೦ಕೊಟ

೧೨. ದರ್।ಯಿ ಭುಮಿಗೆ\ವಾಮನಮುದ್ರೆ ।ಶಿಲಸ್ತಾಪಿತವ ಮಾಡಿಶಿ ಕೊಡುವಲ್ಲಿಗೆ।ಹುಜುರ್ರಿಂದ–ಕಾಗದ ಶಿ

೧೩. ಕಳುಹಿಥೆವೆ।ಚೌ ಗ್ರಾಮದವರ ಕರಶಿಕೊಂಡು ।ಗಡ್ಡಿ ತಕ್ಸಾರ ಬಾರದ ರಿತ್ತಿ।ಯಿ –ಮುಂತ್ತಿ

೧೪. ರೆಖೆ ಪ್ರಮಾಣ ವಿಂಗಡ್ಡಿಶಿಕೊಟ್ಟು ಭುಮಿಗೆ।ಶಿಲಸ್ತಾಪಿತ ಮಾಡಿಶಿಕೊಟ್ಟು।ಯಿ ಕಾಗದ।ಶೆನಬೊವರ

೧೫. ಕಡಿಹಕ್ಕೆ ಬರಶಿ।ತ್ತಿರುಗಾ।ಯಿತಗೆ।ಕೊಡ್ಸುವರ್ರಿತ್ತಿ ಕಟ್ಟುಮಾಡಿಶಿ ಅಥೆಯಾಗಿ ಶ್ರೀ

೧೬. ಯಂತ್ತ ಬರದ ನಿರೂಪ ಪ್ರತಿ.

ನಿರೂಪ ೪. ೨೨ ಸಾಲಿದೆ.

೧. ಶ್ರೀಮತ್ಕೆಳದಿ ಬಸಪ್ಪನಾಯಕರ್ರು ಶಿವಪ್ಪೊಡೆರ್ರಿಗೆ ಶರಣಾರ್ಥಿ।ಸಾಗರದ। ಸೂರಪಯಿ

೨. ಮಗ ದಾಮರ್ಸ ಪಯಿಯು ಹುಜುರ್ರು ಬಂದು।ತಂನ್ನ ತಂದೆಯು।ತೀರ್ಥರಾಜಪುರದಲ್ಲು।

೩. ದೇವಸ್ತಾನವ ಕಟಿಶಿ ಪ್ರತಿಷ್ಟೆ ಮಾಡ್ಸಿದ ವಿಠಲದೇವರ್ರು ಕುಮಾರಧಾರ ನೆತ್ರಾವತಿ ತಿರದಲು।ತ

೪. ೦ತಾಯಿ ಹೆಸರ್ರಲು ದೇವಸ್ತಾನವ ಕಟಿಶಿಪ್ರತಿಷ್ಟೆ ಮಾಡುವ ದೇವರ್ರಿಗೆ ಸಹಾ ಸ್ವಾಸ್ತೆಯಿಲ್ಲ।ಕ್ರಯ

೫. ವ ಕೊಟೆನು ಸ್ವಾಸ್ತೆ ಪಾಲಿಸಿ ಕೊಡಬೆಕೆಂದು ಹೆಳಿಕೊಳುತ್ತಾನೆ ಆರ್ರಿತ್ತಿ ಅಪ್ಪಣೆ ಆಗಬೆ

೬. ೦ದು ಸೂರಪಯ್ಯನವರ್ರು ಹೆಳಿಕೊಂಡದರ್ರಿಂದ ಯಿತನ ಕಯ್ಯ ।ಕ್ರಯ ಗ ೮೫೦ನ್ನು

೭. ನ್ನು--ತ್ತು ವರಹಾಂನ್ನು ಅರಮನೆಗೆ ತೆಗದುಕೊಂಡು ಉತ್ತಾರವ ಕೊಟ್ಟು--

೮. -ಳಿ ಕೊಡೆಯಾಲ ಶಿಮೆಃನುಜಿರ ಗ್ರಾಮ ೧ರ ಕರಣಿಕರ ಶ್ರೀ------

೯. ---ಕ್ಕೆಃಪ್ರಾಕು ಉತ್ತಾರ ಭೂಗಳಿಗೆ ಯಿ ಗ್ರಾಮದ ಮಂಗಳಾದೆ--

೧೦. --- ರಃಗ ೩ ದುಮಾವತ್ತಿ ಉತ್ತರಾಃಗ ॥೨॥೦ ಉಭಯಂಃಗ ೩॥೨॥೦ ಶುದ್ಧ ಗ ೬ --

೧೧. --ವಳ್ಳಿಃಗ ೫೯ ಹಾ ೩॥= ವಿವರ ಗಾಂಬಿರೆಖೆಯಿಂದಃಗ ೧ಹಾ =ಉಭಯಂ ಗ ೬೦ --

೧೨. -- ಸಿಸ್ತಿನ ನಷ್ಟದ ಬಬೆಲು ಃಗ ೫ ಉಭಯಂ ಗ ೬೫ ಹಾ ೩॥೦ ಸಿಸ್ತಿನ ನಷ್ಟದಿಂದ --

೧೩. ಉಭಯಂ ಗ ೬ ಹಾ ॥೪॥೦ ಯಿಗಾ ಕುಡಿದ ಬಗೆಲುಃಹೆಚ್ಚಿಗೆ ಃಗ ೧೨ ಹಾಃ೦ ಉಭಯಂ ಗ

೧೪. ೦ಭತ್ತೈದು ವರಾಂನ್ನ ಸ್ವಾಸ್ತೆಯಂನ್ನುಃ ತಿರ್ಥರಾಜಪುರ ದಲುಃದೆವಸ್ತಾನವ ಕಟಿಶಿ ಪ್ರತಿಷ್ಟೆ

೧೫. ಮಾಡ್ಸಿದ ವಿಠಲದೆವರ್ರುಃಕುಮಾರಧಾರ್ರನೆತ್ರಾವತ್ತಿ ತ್ತಿರದಲುಃತಂನ್ನ ತಾಯಿ ಹೆಸರ್ರಲು

೧೬. ದೆವಸ್ತಾನವ ಕಟ್ಟಿಶಿ ಪ್ರತಿಷ್ಟೆ ಮಾಡುವ ದೆವರ್ರಿಗೆ ಸಹಾ ಶಿವಾರ್ಪಿತವಾಗಿ ಕೊಟ್ಟೆನುಃಯಿ ಗ್ರಾ

೧೭. ಕ್ಕೆಃವಾಮನ ಮುದ್ರೆಃಶಿಲಾಸ್ತಾಪಿತವಾಡ್ಸುವಲ್ಲಿಗೆಃ ಹುಜುರ್ರಿಂದ ಉಳಿಗದಃದುರಿಯನ

೧೮. ಕಳುಹಿದ್ದೆನೆಃಚೌಗ್ರಾಮದವರ ಕರಶಿಕೊಂಡು ಗಡ್ಡಿ ತಕ್ವಾರ ಬಾರದ ರಿತ್ತಿ ಃಯಿತನ ಯಿ

೧೯. ಭೂಃರೆಖೆ ಪ್ರಮಾಣು ಭೂಮಿಗೆಃಶಿಲಾಸ್ತಾಪಿತವ ಮಾಡಿಕೊಟ್ಟುಃಭೂಗಳಿಗೆಃರೆಖೆಲ್ಲುಃ

೨೦. -ರದ ಉತ್ತಾರಃಪುರ್ವ ಪ್ರಮಾಣ ನಡಾಶಿಕೊಂಡುಃ ಬಾಹರ್ರಿತ್ತಿಗುಃಯಿ ಕಾಗದಃಶ್ಯಾನಭೊ

೨೧. ವರ ಕಡುತಕ್ಕೆ ಬರಶಿ ತ್ತಿರುಗಾಃಯಿತನ ವಶಕ್ಕೆ ಕೊಡುವ ಹಾಗೆ ಸಹಾಃವಿರೋಧಿ

೨೨. ೦ವತ್ಸರದ ಶ್ರಾವಣ ಶು ೨ಲುಃಕಟ್ಟು ಮಾಡ್ಸಿಅಥೆಯಾಗಿಃ ನಿರ್ರುಪ ಪ್ರತಿಃ

ಈ ಎಲ್ಲಾ ದಾಖಲೆಗಳು ಬಂಟವಾಳ ತಾಲ್ಲೂಕು ನರಿಕೊಂಬು ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀನರಸಿಂಹ ದೇವಾಲಯದ ಅರ್ಚಕ ಜನಾರ್ದನ ಭಟ್ಟರ ಸಂಗ್ರಹದಲ್ಲಿ ದೊರೆತದ್ದು. ಇವರಲ್ಲಿ ಸುಮಾರು ಕ್ರಿಶ. ೧೬೮೪ರಿಂದಲೂ ಇರುವ ದಾಖಲೆಗಳಿವೆ. ಈ ನಿರೂಪಗಳ ಕೊನೆಯಲ್ಲಿ ವಾಲೆ ಪ್ರತಿ ಎಂದಿದ್ದು, ಇವು ಪ್ರತಿ ಎನ್ನುವುದು ಸ್ಪಷ್ಟ. ಕೆಳದಿ ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹ ದಾಖಲೆಗಳು ಇವಾಗಿವೆ. ಬಂಟವಾಳ, ತೀರ್ಥಹಳ್ಳಿ, ಗಂಗೊಳ್ಳಿ, ಹೊನ್ನಾವರ ಈ ಮೊದಲಾದ ಕಡೆಗಳಲ್ಲಿ ದಾಮರಸ ಪೈ ದೇವಾಲಯ ಕಟ್ಟಿಸಿದ್ದು ಆ ಕುರಿತು ಸಂಶೋಧನೆ ನಡೆದಿದೆ. ಈ ನಿರೂಪಗಳು ಅಂದು ಆಡಳಿತ ನಡೆಸುತ್ತಿದ್ದ ರಾಜ, ಅಂದಿನ ಗ್ರಾಮ ವ್ಯವಸ್ಥೆ, ಜನಜೀವನ, ಗ್ರಾಮದಲ್ಲಿದ್ದ ದೇವಾಲಯ ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುವಂತಹದ್ದಾಗಿದೆ. ಕುಂದಾಪುರ ಸುತ್ತಮುತ್ತಲಲ್ಲಿ, ಕಾವ್ರಾಡಿ ಮನೆಯಲ್ಲಿಯೂ ಈ ಕುರಿತು ಮಾಹಿತಿ ಇರುವ ದಾಖಲೆಗಳಿವೆ ಎಂದು ತಿಳಿದುಬರುತ್ತದೆ.

ಶಿರಸಂಗಿ ಲಿಂಗರಾಜ ಮೃತ್ಯು (ದಾನ)ಪತ್ರ

ಡಾ. ಮಿಸ್. ಎಂ.ಎಂ. ಗೊಂದಿ*

ಸ್ವತಂತ್ರಕ್ಕೆ ಮೊದಲು ಭಾರತದಲ್ಲಿ ಸುಮಾರು ೫೬೮ಕ್ಕಿಂತ ಹೆಚ್ಚು ಸಂಸ್ಥಾನಗಳಿದ್ದವು. ಅವುಗಳಲ್ಲಿ ವಿಶೇಷತಹ ಕನ್ನಡ ನಾಡಿನಲ್ಲಿ ಅದರಲ್ಲು ಬೆಳಗಾವಿ ಜಿಲ್ಲೆಯಲ್ಲಿ ಇಂತಹ ದೇಸಗತಿಗಳು-ಸಂಸ್ಥಾನಗಳು ಅಸ್ತಿತ್ವದಲ್ಲಿದ್ದವು. ಅಂತಹ ಅನೇಕ ದೇಸಗತಿಗಳಲ್ಲಿ "ನವಲಗುಂದ-ಸಿರಸಂಗಿ ದೇಸಗತಿ"ಯು ಒಂದು. ಇದು ವೀರಶೈವ ಕೂಡುವಕ್ಕಲಿಗ ರಾಜಮನೆತನ. ಈ ದೇಸಗತಿಗೆ "ಸಂಸ್ಥಾನ" ಎಂದು ಕರೆಯುವದು ರೂಢಿಯಲ್ಲಿದೆ. ಸಿರಸಂಗಿ ಸಂಸ್ಥಾನದ ಚರಿತ್ರೆ ೧೩೦೧ರಿಂದ ಪ್ರಾರಂಭವಾಗುತ್ತದೆ. "ಕೊಕಟನೂರ ಪರಗಣೆ"; "ಕೊಕಟನೂರ-ನವಲಗುಂದ ದೇಸಗತಿ"; "ನವಲಗುಂದ-ಸಿರಸಂಗಿ ದೇಸಗತಿ"; "ಸಿರಸಂಗಿ ದೇಸಗತಿ" ಎಂದು ಹೆಸರು ಪಡೆದಿದೆ. ಈ ಸಂಸ್ಥಾನವನ್ನು ಕ್ರಿ.ಶ. ೧೩೦೧ರಿಂದ ೧೯೦೬ರವರೆಗೆ ಒಟ್ಟು ೩೨ ವ್ಯಕ್ತಿಗಳು (೨೭ ದೇಸಾಯಿ ಹಾಗೂ ೫ ಜನ ದೇಸಾಯಿಣಿಯರು) ಆಳಿದರು. ಇವರ ಮೂಲ ಉದ್ಯೋಗ ಕೃಷಿಯಾಗಿತ್ತು. ೧೭೧೬ ರಿಂದ ೧೭೩೪ರವರೆಗೆ ಚನ್ನವ್ವ ದೇಸಾಯಿಣಿಯಂತಹ ಸಮರ್ಥ ಮಹಿಳೆ ಆಳಿದ್ದು ವಿಶೇಷ ಸಂಗತಿ. ಈ ಸಂಸ್ಥಾನದ ಚನ್ನವ್ವ ದೇಸಾಯಿಣೀಯು ೧೭ನೇ ದೇಸಾಯಿಯಾದ ಲಿಂಗಗೌಡ (ಹಿರೇಲಿಂಗಪ್ಪ ಗೌಡ -೧) ೧೬೬೦-೧೭೧೬ ಇವನ ಹಿರಿಯ ಪತ್ನಿಯಾಗಿದ್ದಳು ಇವಳಿಗೆ ಮೂರು ಮಕ್ಕಳು (ಲಖಗೌಡ, ಚನ್ನಪ್ಪ ಹಾಗೂ ಮೂರನೆಯ ಮಗನ ಹೆಸರು ತಿಳಿದಿಲ್ಲ.) ಲಖಗೌಡ ಕೊಕಟನೂರ ದೇಸಗತಿಗೆ ದತ್ತಕನಾದನು ಎರಡನೇ ಮಗ ಚನ್ನಪ್ಪನು ಅಕಾಲಿಕ ಮರಣ ಹೊಂದಿದನು. ಮೂರನೆಯ ಮಗ ಶೈಶವಾವಸ್ಥೆಯಲ್ಲಿ ಮರಣ ಹೊಂದಿರಬಹುದು. ಹೀಗಾಗಿ ತೋರಗಲ್ಲ ಸೀಮೆಗೆ ಅರಸನಾಗಿದ್ದ ಲಿಂಗಗೌಡ ಲಿಂಗವ್ವ ಎಂಬುವಳನ್ನು ವಿವಾಹವಾದನು ಅವಳ ಮಗನೆ ಎರಡನೆಯ ಜಾಯಗೊಂಡ ದೇಸಾಯಿ (೧೭೧೬). ಹಿರಿಯ ತಾಯಿ ಚನ್ನವ್ವ ದೇಸಾಯಿಣಿ ಮಾರ್ಗದರ್ಶನದಲ್ಲಿ ಬೆಳೆದು ಸವದತ್ತಿಯಲ್ಲಿ (ಕ್ರಿ.ಶ. ೧೭೪೩-೧೭೫೧) ಕುಸುಗಲ್ ೧೭೩೯-೧೭೪೯, ನವಲಗುಂದ ಗ್ರಾಮಗಳಲ್ಲಿ ಅತ್ಯಂತ ಭದ್ರವಾದ ಕೋಟೆಗಳನ್ನು ಕಟ್ಟಿಸಿದನು. ಈತನು ಧರ್ಮನಿಷ್ಟ ಕವಿಯಾಗಿದ್ದು "ಕನ್ನಡ ಕುವಲಯಾನಂದ" ಗ್ರಂಥವನ್ನು ರಚಿಸಿದ್ದಾನೆ. ಈ ವಂಶ ಪರಂಪರೆಯಲ್ಲಿ ೨೬ನೇ ದೇಸಾಯಿಯಾದ ೪ನೇ ಜಾಯಪ್ಪ ೧೮೫೪ರಿಂದ ೧೮೬೯ವರೆಗೆ ಆಳಿದ ಈತನಿಗೆ ಮೂರು ಜನ ಪತ್ನಿಯರು ಮೊದಲನೆಯವಳು ಸಂತಾನವಿಲ್ಲದೆ ಮರಣ ಹೊಂದಿದಳು. ೨ನೆಯವಳು ಕುಮಟೆಯ ಗಂಗಾಬಾಯಿ, ಅವಳಿಗೂ ಪುತ್ರ ಸಂತಾನವಾಗಲಿಲ್ಲ. ೩ನೇಯವಳು ನಾಗರಹಳ್ಳಿಯ ಉಮಾಬಾಯಿ. ಜಾಯಪ್ಪನು ೧೮೬೯ರಲ್ಲಿ ಲಿಂಗೈಕ್ಯನಾದನು ಮತ್ತು ೧೮೭೧ರ ಅಕ್ಟೋಬರ ೪ರಂದು ಉಮಾಬಾಯಿಯ ಮಗು ಮರಣಹೊಂದಿತು. ಹೀಗೆ ಸಿರಸಂಗಿ ಸಂಸ್ಥಾನವು ಅಪುತ್ರಕವಾದಾಗ ಅದಕ್ಕೆ ದತ್ತಕ ವಾರಸುದಾರರಾಗಿ ಬಂದವರೆ ಸಿರಸಂಗಿ ಲಿಂಗರಾಜರು.[೧]

ಲಿಂಗರಾಜರು (೧೮೭೨-೧೮೦೬)

ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ ಗ್ರಾಮದ ಹತ್ತಿರದ "ವನಸಿಗ್ಗಲಿ" ಗ್ರಾಮದ "ಮಡ್ಲಿ" ಮನೆತನದ "ಗುಳಪ್ಪ-ಎಲ್ಲವ್ವ" ಎಂಬ ಹೆಸರಿನ ವೀರಶೈವ ಕೂಡುವಕ್ಕಲಿಗ ದಂಪತಿಗಳಿಗೆ ಕಿರಿಯ ಮಗನಾಗಿ ಕ್ರಿ.ಶ. ೧೮೬೧ ಜನೇವರಿ ೧೦ ಗುರುವಾರದಂದು ಜನಿಸಿದ ರಾಮಪ್ಪನೇ. ಸಿರಸಂಗಿ ಸಂಸ್ಥಾನಕ್ಕೆ ಲಿಂಗರಾಜನಾಗಿ ರವಿವಾರ ದಿನಾಂಕ ೦೨ ಜೂನ ೧೮೭೨ರಂದು "ಲಿಂಗಪ್ಪ ಜಾಯಪ್ಪ ಸರ್‌ದೇಸಾಯಿ" ಎಂಬ ಅಭಿದಾನದಿಂದ ಹಿರಿಯ ರಾಣಿ ಗಂಗಾಬಾಯಿಯವರಿಗೆ ದತ್ತಕ ಮಗನಾಗಿ ಎಲ್ಲ ಕ್ರಿಯಾವಿಧಾನಗಳಿಗನುಗುಣವಾಗಿ "ಅಪ್ಪಾಸಾಹೇಬ" ಎಂಬ ಪ್ರೀತಿಯ ಹೆಸರನ್ನು ಹೊಂದಿ ಸಿರಸಂಗಿ ಸಂಸ್ಥಾನದ ಉತ್ತರಾಧಿಕಾರಿಯಾದನು. ಇವರು ಸಿರಸಂಗಿ ವಾಡೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪಡೆದು ನಂತರ ೧೮೭೬-೭೭ರಲ್ಲಿ ಇಂಗ್ಲೀಷ ಭಾಷೆಯ ಅಧ್ಯಯನಕ್ಕಾಗಿ ಕೊಲ್ಲಾಪೂರಕ್ಕೆ ಹೋದರು. ನಂತರ ತಾಯಿ ಗಂಗಾಬಾಯಿಯವರು ೧೮೭೮ರಲ್ಲಿ ನಿಧನರಾದರಿಂದ ಲಿಂಗರಾಜರ ಶಿಕ್ಷಣ ಅಷ್ಟಕ್ಕೆ ನಿಂತಿತು. ತಮ್ಮ ಹಿಂತಚಿಂತಕರ ಅಭಿಪ್ರಾಯದಂತೆ ಉಕ್ಕಲಿಯ ಬಸನಗೌಡರ ಮಗಳು (ಲಿಂಗವ್ವಾ) ಬಸವ್ವಾ, ಶಿರಹಟ್ಟಿಯ ಚನ್ನವ್ವಾ, ತಿಕೋಟೆಯ

* ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ಎಸ್.ಎಂ.ಎಸ್. ಮಹಾವಿದ್ಯಾಲಯ, ಅಥಣಿ, ಬೆಳಗಾವಿ ಜಿಲ್ಲೆ.

ಚನ್ನಪ್ಪ ಗೌಡರ ಮಗಳು ಭಾಗಿರಥಿಬಾಯಿ, ಸವಳಭಾವಿಯ ಗಿರಿಜಾಬಾಯಿ, ನೀಲಮ್ಮ, ಸುಂದ್ರಾಬಾಯಿ ಈ ೬ ಜನ ಪತ್ನಿಯರನ್ನು ವಿವಾಹವಾಗಿದ್ದರು. ೧೮೮೧ರಲ್ಲಿ ಮಲತಾಯಿ ಉಮಾಬಾಯಿಯವರು ಎದುರು ಹೋರಾಡಿ ಸಿರಸಂಗಿ ಸಂಸ್ಥಾನದ ಅಧಿಕಾರ ಸೂತ್ರ ಹಿಡಿದುಕೊಂಡರು.

ಸಿರಸಂಗಿ ಲಿಂಗರಾಜರು ವ್ಯವಸಾಯ ಅಭಿವೃದ್ಧಿ ಯೋಜನೆಗಳು, ಧರ್ಮಕಾರ್ಯಗಳು, ಸಮಾಜ ಸೇವೆ, ಶಿಕ್ಷಣ ಸೇವೆಗಾಗಿ ತಮ್ಮ ಜೀವನವನ್ನು ಮೀಸಲಿಟ್ಟರು ಮತ್ತು ಮುಂಬಯಿ ಸರಕಾರದಿಂದ ಪದವಿ ಪತ್ತು ಅಧಿಕಾರಗಳನ್ನು ಪಡೆದಿದ್ದರು. ಉದಾ: ದೇಸಗತಿಯ ೧೦ ಇನಾಮ ಗ್ರಾಮಗಳ ಗದ್ದೆಯಲ್ಲಿ ವಾಸಿಸುವ ವಾದಿ ಪ್ರತಿವಾದಿಗಳ ವ್ಯಾಜ್ಯ ಕುರಿತು ಎಲ್ಲ ಸ್ಥಾವರ ಜಂಗಮ ಆಸ್ಥಿಗಳ ಮೂಲ ವ್ಯಾಜ್ಯಗಳನ್ನು ಪರಿಶೀಲಿಸಿ ನಿರ್ಣಯಿಸುವ ನ್ಯಾನದಾನ ಮಾಡುವ ಬಗ್ಗೆ ೧೮೩೦ರ ಕಾಯಿದೆ ಸಂಖ್ಯೆ ೧೩ ಪ್ರಕಾರ ಮುಂಬಯಿ ಸರಕಾರದ ನ್ಯಾಯ ಮಂಡಳಿಯ ಗವರ್ನರರು ಜ್ಯುಡಿಶಿಯಲ್ ಇಲಾಖೆಯ ವತಿಯಿಂದ ಜೂನ ೨೩ ಸೋಮವಾರ ೧೮೮೪ರಂದು ಲಿಂಗರಾಜರಿಗೆ ಸನದು ಬರೆದುಕೊಟ್ಟರು.[2]

ನವಲಗುಂದ ಶಿರಸಂಗಿ ಟ್ರಸ್ಟ್ ಫಂಡ

ಲಿಂಗರಾಜರ ಇಚ್ಛಾ ಪತ್ರದ ಫಲವೇ ಬೆಳಗಾವಿಯಲ್ಲಿ ಸ್ಥಾಪನೆಯಾದ ಈ ಟ್ರಸ್ಟ ಫಂಡ ಇಚ್ಛಾ ಪತ್ರವನ್ನು ರದ್ದು ಗೊಳಿಸಲು ಕೊನೆಯ ಪತ್ನಿ ರಾಣಿ ಸುಂದ್ರಾಬಾಯಿಯವರು ೧೩ ವರ್ಷ ೪ ತಿಂಗಳಗಳವರೆಗೆ ಲಂಡನಿನಲ್ಲಿ ವ್ಯಾಜ್ಯ ನಡೆದು ಅಲ್ಲಿಯ ಪ್ರಿವ್ಹಿ ಕೌನ್ಸಿಲ್ಲು ದಿನಾಂಕ ೧೫ ಅಕ್ಟೋಬರ ೧೯೧೮ರಂದು ಲಿಂಗರಾಜರ ಇಚ್ಛಾಪತ್ರವನ್ನು ಸಮರ್ಥಿಸಿತು. ಈ ಟ್ರಸ್ಟ್ ಕರ್ನಾಟಕ ಮಹಾರಾಷ್ಟ್ರದ ಅನೇಕ ವಿದ್ಯಾರ್ಥಿಗಳಿಗೆ ಸಹಾಯಧನ ಒದಗಿಸುತ್ತಿದೆ. ೧೯೨೦ರಿಂದ ೧೯೮೪ ಡಿಸೆಂಬರ್‌ವರೆಗೆ ಕರ್ನಾಟಕದ ೧೨ ಜಿಲ್ಲೆ ಮಹಾರಾಷ್ಟ್ರದ ೧೨ ಜಿಲ್ಲೆಯ ಒಟ್ಟು ೬೯೨೫ ವಿದ್ಯಾರ್ಥಿಗಳಿಗೆ ಒಟ್ಟು ೨೨,೯೮,೩೨೧ ರೂಗಳಿಗಿಂತಲೂ ಹೆಚ್ಚಿನ ಸಹಾಯ ನೀಡಿದೆ. ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಗೆ ಸುಮಾರು ೫೦,೦೦೦/- ರೂಗಳ ಸಹಾಯಧನ ನೀಡಿದೆ ಇದರ ಫಲವೇ ಲಿಂಗರಾಜ ಕಾಲೇಜು ಬೆಳಗಾವಿಯಲ್ಲಿ ಸ್ಥಾಪನೆಯಾಯಿತು. ಇಂದು ಕೆ.ಎಲ್.ಇ. ಎಂಬ ಬೃಹತ್ ಸಂಸ್ಥೆಯಾಗಿ ಬೆಳೆದಿದೆ. ಬೆಳಗಾವಿಯ ಶಿರಸಂಗಿ ಟ್ರಸ್ಟು ವಿದ್ಯಾರ್ಥಿಗಳಿಗೆ ಸಹಾಯಧನ ನೀಡುತ್ತಿದೆ. ಲಿಂಗರಾಜರು ತಮ್ಮ ಅಂತ್ಯಸಂಸ್ಕಾರಕ್ಕೆ ಎರಡು ಸಾವಿರ ರೂಗಳನ್ನು ಮಾತ್ರ ಉಪಯೋಗಿಸಬೇಕೆಂದು ಹೇಳಿ ಅರಟಾಳ ರುದ್ರಗೌಡ ಸರದಾರ ಸಿದ್ದಪ್ಪಾ ರಾಣಿ ಸುಂದ್ರಾಬಾಯಿ ಸಮ್ಮುಖದಲ್ಲಿ ನವಲಗುಂದದ ಹಳೆಯ ವಾಡೆಯಲ್ಲಿ ದಿ. ೨೩-೦೮-೧೯೦೬ರಂದು ನಿಧನರಾದರು. ತಮ್ಮ ಚರ ಸ್ಥಿರ ಆಸ್ತಿಯನ್ನು ಉಪಯೋಗಿಸಲು ಮೃತ್ಯು ಪತ್ರವನ್ನು ಬರೆದಿಟ್ಟು ಬೆಳಗಾವಿ ಕಲೇಕ್ಟರ್ ಮಿ. ಎಎಮ್‌ಟಿ ಜಾಕ್ಸನ್ ಹತ್ತಿರ ಭದ್ರಗೊಳಿಸಿದರು ಮತ್ತು ಇಚ್ಛಾಪತ್ರದ ಪುರವಣಿಯೊಂದನ್ನು ಅಗಷ್ಟ ೧೩ ೧೯೦೬ರಂದು ಬರೆದಿಟ್ಟು ನವಲಗುಂದ ತಹಶೀಲ್ದಾರ ಮೆ॥ ರೇವಣಸಿದ್ದಪ್ಪಾ ಕಿತ್ತೂರ ಅವರ ಹತ್ತಿರ ಇಟ್ಟರು.

ಮೃತ್ಯು ಪತ್ರ

ನಾನು ಲಿಂಗಪ್ಪಾ ಜಾಯಪ್ಪಾ ದೇಸಾಯಿ ಮತ್ತು ಸರ್‌ದೇಸಾಯಿ ನಾಡಗೌಡ, ಸುಭೆ ತೊರಗಲ್ಲ, ಹೊರಗಣೆ ಕೊಕಟನೂರ, ಸಂಸ್ಥಾನ ನವಲಗುಂದ, ಇನಾಮ ಶಿರಸಂಗಿ ಮುಂತಾದ ೧೦ ಗ್ರಾಮಗಳು, ಈ ದಿವಸ ಇರುವದು ಬೆಳಗಾಂವ ತಾರೀಖ ೬ನೇ ಜೂನ ೧೯೦೬ರಂದು ಬರೆದಿಡುವ ಮೃತ್ಯು ಪತ್ರ ಏನೆಂದರೆ.

೧. ಈ ತಾರಿಖಿಗೆ ನನಗೆ ಯಾವ ಸಂತತಿಯು ಇಲ್ಲ ಒಬ್ಬಳು ಪತ್ನಿ ಮತ್ತು ನಾನು ಇಬ್ಬರೆ ಮತ್ತು ಸಂಸ್ಥಾನ ಸಂಬಂಧದ ಬೇರೆ ಯಾರು ಇಲ್ಲ ನಾನು ಸ್ವತಃ ಎರಡನೆ ಮನೆತನದವನಿದ್ದು, ಈ ಸಂಸ್ಥಾನಕ್ಕೆ ದತ್ತಕ ಬಂದಿರುವೆ. ಒಂದು ವೇಳೆ ಇನ್ನು ಮೇಲೆ ನನಗೆ ಅವರಸ ಸಂತತಿ ಹೆಣ್ಣು ಅಥವಾ ಗಂಡು ಮಗು ಆದರೆ ಅವನು ಅಥವಾ ಅವಳು ಸಂಸ್ಥಾನದ ವಡೆಯರಾಗುವರು. ಗಂಡು ಹೆಣ್ಣು ಎರಡು ಆದರೆ ಗಂಡು ಮಗನೆ ಪೂರ್ಣ ಒಡೆನಾಗುವನು. ಹೆಣ್ಣು ಮಗಳು ಆಕೆಯ ವಂಶ ಇರುವ ವರೆಗೆ ಪ್ರತಿ ವರ್ಷ ೫ ಸಾವಿರ ರೂಗಳ ಸ್ಥಾವರ ಉತ್ಪನ್ನ ಭಾಗ ಮಾಡಿ ಕೊಡಬೇಕು. ಒಂದು ವೇಳೆ ಅವಳ ವಂಶ ನಷ್ಟವಾದರೆ ಆ ಆಸ್ಥಿ ಸಂಸ್ಥಾನಕ್ಕೆ ಬರಬೇಕು. ಗಂಡು ಮಗನ ವಂಶ ನಷ್ಟವಾದರೆ ಹೆಣ್ಣು ಮಗಳ ಮಗುವನ್ನು ದತ್ತಕ ಮಾಡಿಕೊಂಡು ಸಂಸ್ಥಾನಕ್ಕೆ ಭಾದ್ಯಸ್ಥನನ್ನಾಗಿ ಮಾಡುವುದು. ಮಗ ಅಥವಾ ಮಗಳ ಅಜ್ಞಾನತ್ವದಲ್ಲಿ ಮೆ॥ ಕಲೇಕ್ಟರ್ ಸಾಹೇಬ ಇವರು ಪ್ರತಿ ತಿಂಗಳಿಗೆ ೧೦೦ ಸಂಬಳದ ಒಬ್ಬ ಸಂಭಾವಿತ ಲಿಂಗಾಯತ ಕಾರಭಾರಿಯನ್ನು ಇಟ್ಟು ಪ್ರಾಪ್ತ ವಯಸ್ಕ ಬರುವ ವರೆಗೆ ಸಂಸ್ಥಾನ ನಡೆಸಿಕೊಂಡು ಹೋಗಬೇಕು. ೫ ವರ್ಷದ ತರುವಾಯ ಹುಡುಗರು ಪತ್ನಿಯ ಹತ್ತಿರ ಇರಬಾರದು ಕೂಡಲೇ ಕಲೆಕ್ಟರ್ ಸಾಹೇಬರ ವಶಕ್ಕೆ ತೆಗೆದುಕೊಂಡು ಒಬ್ಬ ಲಿಂಗಾಯತ ಮನುಷ್ಯನನ್ನು ಸಂರಕ್ಷಣೆಗೆ ಇಡಬೇಕು. ಹುಡುಗ ಅಥವಾ ಹುಡುಗಿಯ ವಿದ್ಯಾಭ್ಯಾಸ ಉತ್ತಮ ರೀತಿಯಿಂದ ಮಾಡಿಸುವುದಲ್ಲದೇ. ಮೊದಲಿನಿಂದ ಗ್ರಾಜ್ಯುಯೇಟ್ (ಇಂಗ್ಲೀಷ ಕಲಿತ ಪಧವಿಧರರು) ಶಿಕ್ಷಕರನ್ನೇ ನೇಮಿಸಬೇಕು. ಆತ ಕೊಂಕಣಸ್ತ ಬ್ರಾಹ್ಮಣನಾಗಿರಬೇಕು.

ಹುಡುಗನ ಮಾನಮರ್ಯಾದೆಗಳನ್ನು ಚನ್ನಾಗಿಟ್ಟು ಆತನು ಸುಜ್ಞಾನನಾಗುವವರೆಗೆ ಆತನ ನಡೆನುಡಿಗಳ ಕಡೆಗೆ ಲಕ್ಷ ವಹಿಸಬೇಕು. ವಿದ್ಯಾಭ್ಯಾಸ ಅಥವಾ ಬೇರೆ ಕಾರಣ ದಿಂದಾಗಲೀ ವಿದೇಶಕ್ಕೆ ಕಳಿಸಲೇಬಾರದು. ಹಿಂದುಸ್ಥಾನದಲ್ಲಿ ಎಲ್ಲಿಯಾದರೂ ಇರಲಿ ಆದರೆ ಅವರ ಜಾತಿ ಪದ್ಧತಿಗನುಸರಿಸಿ ಯಾವಾಗಲೂ ಅವರ ವಿಷಯದಲ್ಲಿ ವರ್ತಿಸುತ್ತಿರಬೇಕು.

೨. ಹೆಂಡತಿಗೆ ಪ್ರತಿ ತಿಂಗಳಿಗೆ ನೂರು ರೂಪಾಯಿ ಹೊಟ್ಟೆಯ ಖರ್ಚಿಗೆ ಕೊಡಬೇಕು. ಅಲ್ಲದೆ ನೌಕರ ಚೌಕರರನ್ನು ಸಂಸ್ಥಾನದಿಂದ ಕೊಡಬೇಕು. ಅವರು ಮುಪ್ಪಿನವರಿರಬೇಕು. ಮತ್ತು ಅವರು ಮೆ॥ ಕಲೇಕ್ಟರ್ ಸಾಹೇಬರ ಮನಗಾಣಿಕೆಯವ ರಾಗಿರಬೇಕು. ಹೆಂಡತಿಗೆ ಬೇಕಾದ ನೌಕರರನ್ನು ನೇಮಿಸ ಬಾರದು. ಆಕೆಗೆ ಒಂದು ಸಾವ್ಪ ಅಥವಾ ಕುದುರೆಗಾಡಿ, ಒಬ್ಬ ಸ್ವಾರ, ನಾಲ್ಕು ಜನ ಶಿಪಾಯರು, ಇಬ್ಬರು ಹುಜುರೆ, ಒಬ್ಬ ದಾಸಿ, ಒಬ್ಬ ಕಾರಕೂನ, ಮೂವರು ಅಡುಗೆಯವರು ಈ ಪ್ರಕಾರ ಸರಂಜಾಮು ಕೊಡಬೇಕು. ಅವರ ಸಂಬಳ ಸಂಸ್ಥಾನದೊಳಗಿಂದ ಬೇರೆಯೇ ಅವರದವರಿಗೆ ಮುಟ್ಟಿಸ ಬೇಕು. ಅವಳು ಯಾತ್ರೆ ಮಾಡಬಯಸಿದರೆ ದರ ಯೋಗ್ಯ ವೆಚ್ಚಕ್ಕಾಗಿ ಕೊಡಬೇಕು. ಅವರ ಮೈಮೇಲೆ ಕೆಲವು ಆಭರಣ ಗಳಿರುವವು. ಅವುಗಳನ್ನು ಅವಳಿಗೆ ಸ್ತ್ರೀ ಧನವೆಂದು ಕೊಟ್ಟಿದ್ದೇನೆ. ಇದಲ್ಲದೆ ಬಳಿಸಲಿಕ್ಕೆ ಪಾತ್ರೆ ಮೊದಲಾದ ಸಾಮಾನು ಅವಶ್ಯಕವಿದ್ದಷ್ಟೆ ಕೊಡಬೇಕು. ಹೆಚ್ಚಿಗೆ ಕೊಡ ಬಾರದು. ಉಳಿದ ಯಾವತ್ತೂ ಜಂಗಮ ಸೊತ್ತನ್ನು ಮೆ॥ ಕಲೆಕ್ಟರ ಸಾಹೇಬರು ತಮ್ಮ ವಶದಲ್ಲಿ ತೆಗೆದುಕೊಂಡು ನಾಶ ವಾಗತಕ್ಕ ಪದಾರ್ಥಗಳನ್ನು ಮಾರಿ ಉಳಿದದ್ದನ್ನು ಮೈನರ್ ವಯಸ್ಸಿಗೆ ಬರುವವರೆಗೆ ಇಟ್ಟು ಅವರಿಗೆ ಒಪ್ಪಿಸಬೇಕು.

೩. ಸಂಸ್ಥಾನದ ಆಶ್ರಯದಲ್ಲಿ ಇನಾಮದಾರರು ಬಹಳ ಇದ್ದು ಅವರ ನೌಕರಿ ಸರಿಯಾಗಿ ಸಾಗುವುದಿಲ್ಲ. ಅದಕ್ಕೆ ಅವರ ವಿಚಾರ ಮಾಡಿ ಅವರವರ ಲೇಖಿ ಆಧಾರಗಳಂತೆ ನಡೆಯಿಸಬೇಕು. ನೌಕರಿ ಇನಾಮು ಇದ್ದು ಅವರ ಕಡೆಯಿಂದ ಭರಜೂರಿ (ಅರ್ಧ ತೆರಿಗೆ) ತಕ್ಕೊಳ್ಳಬೇಕು. ಒಂದು ವೇಳೆ ಅವರು ಒಪ್ಪದಿದ್ದರೆ ರೀತಿಯಂತೆ ಭೂಮಿ ಬಿಡಿಸಿಕೊಳ್ಳಬೇಕು.

೪. ರೈತರ ಸಂಗಡ ಬಹಳ ವಾದವಿವಾದ ಮಾಡಿ ಕಚ್ಚಾ ತೆರಿಗೆಯನ್ನು ಕೂಡ್ರಿಸಿರುತ್ತದೆ. ಮುಂದೆ ಕಾಲಕಾಲಕ್ಕೆ ಯೋಗ್ಯ ತೆರಿಗೆಯನ್ನು ಕೂಡ್ರಿಸಿ ತಕ್ಕೊಳ್ಳುತ್ತ ಹೋಗಬೇಕು, (ರಿ॥ ತರ್ಮುಜ ಸರಕಾರದ ಮುಖಾಂತರ ಮಾಡಿಸಬಾರದು)

೫. ಈಗ ಕಾಗದ ಪತ್ರ ಖಜೀನಿ ಮತ್ತು ಇತರ ಎಲ್ಲ ಸರಕು ರಾ॥ ನರಸಿಂಹ ರಾಮಚಂದ್ರ ಫಡಣೀಸ ಅವರ ವಶದಲ್ಲಿರುವುದು. ಆದರೂ ಬಹುಶಃ ಜಂಗಮಸೊತ್ತಿನ ಪಟ್ಟಿ ತಯಾರಿಸುವೆನು. ಅದರಂತೆ ಅವರ ಕಡೆಯಿಂದ ಒಪ್ಪಿಸಿ ಕೊಳ್ಳಬೇಕು. ಜಡ ಜಾವಾಹೀರ ಮತ್ತು ಬಂಗಾರ ಬೆಳ್ಳಿಯ ಅಲಂಕಾರಗಳ ಪೆಟ್ಟಿಗೆಗಳು ಎರಡು ತಿಜೋರಿಯೊಳಗೆ ಇರುವವು. ಅದರ ಬೀಗದ ಕೈ ಯಾವಾಗಲೂ ನನ್ನ ಕಡೆಗೆ ಇರುವದು. ಒಂದು ವೇಳೆ ನರಸಿಂಹರಾಯನ ವಶದಲ್ಲಿಯೂ ಇರಬಹುದು. ಕಮತದ ಸಂಬಂಧದ ಯಾವತ್ತೂ ಎತ್ತುಗಳನ್ನೂ ಸಾಮಾನುಗಳನ್ನೂ ಮಾರಿ ಕಮತದ ಲಾವಣೀ ಕೊಡಬೇಕು. ಶಿರಸಂಗಿ ಮತ್ತು ಹೊಸಬಾಳ ಹದ್ದಿಯಲ್ಲಿ ಎರಡು ಕೆರೆಗಳಿವೆ. ಅವು ಕೆಟ್ಟಭಾಗವನ್ನು ಪ್ರತಿ ವರ್ಷ ಸರಿಮಾಡಿಸುತ್ತಿರಬೇಕು. ಅವುಗಳ ಕೆಳಗಿನ ಭೂಮಿಸುಧಾರಿಸಿ ಲಾವಣಿ ಮಾಡಬೇಕು. ಪ್ರತಿ ವರ್ಷ ಜಮಾಬಂದಿ ತಯಾರಿಸಿ ಮೇ॥ ಕಲೇಕ್ಟರ್ ಸಾಹೇಬರು ಸಹಿ ಮಾಡಿಸುತ್ತಿರಬೇಕು. ಶಿರಸಂಗಿಯ ಖಜಾನೆಯಲ್ಲಿ ಐದು ಸಾವಿರಕ್ಕಿಂತ ಹೆಚ್ಚು ಶಿಲ್ಕ ಇಡಬಾರದು. ಅದನ್ನು ಬ್ಯಾಂಕಿನಲ್ಲಿ ಇಡಬೇಕು. ಈಗಿದ್ದ ನೌಕರರಲ್ಲಿ ಅವಶ್ಯವಿದ್ದ ಒಳ್ಳೇ ನೌಕರರನ್ನು ಇಟ್ಟುಕೊಂಡು ಉಳಿದವರನ್ನು ತೆಗೆಯಬೇಕು.

೬. ರಾಯನಗೌಡಾ ಇಂಗಳೇಶ್ವರ ಇವರ ಹೆಸರಿನಿಂದ ವಿಜಾಪೂರ ಶಿರಸಂಗಿಗಳೊಳಗೆ ಅಂಗಡಿಗಳಿವೆ. ಅವುಗಳಲ್ಲಿ ನಮ್ಮ ಹತ್ತು ಸಾವಿರ ರೂಗಳಿವೆ. ಅವುಗಳ ಬಡ್ಡಿ ಸಹಿತ ತೆಗೆದುಕೊಂಡು ರಾ॥ ಮಲ್ಲಪ್ಪಾ ಕರಿಬಸಪ್ಪಾ ಮಡ್ಡಿ ಸಿಗ್ಗಿ ಇವನು ವಯಸ್ಸಿಗೆ ಬಂದ ನಂತರ ಕೊಡಬೇಕು. ಮಾತೋಶ್ರೀ ಗಂಗಾಬಾಯಿ ಗೌಡತಿ ಬೋರುಟಗಿ ಇವರು ೨೦ ವರ್ಷ ಗಳಿಂದ ನನ್ನ ಹತ್ತಿರ ಇದ್ದಾರೆ ಅವರಿಗೆ ಒಂದು ಶೇರು ಬಂಗಾರ ಕೊಟ್ಟು ಅವರು ಜೀವಿಸಿರುವವರೆಗೆ ಪ್ರತಿ ತಿಂಗಳು ೮ ರೂಗಳನ್ನು ಅವರಿಗೆ ಮುಟ್ಟಿಸಬೇಕು. ಮಾ. ಬಸವ್ವಾ ಇವರಿಗೆ ೬೦ ರೂಪಾಯಿ ವರ್ಷಾಸನ ಕೊಡಬೇಕು. ರಾ. ಕರಿಬಸಪ್ಪಾ ಮತ್ತು ಶಿವಬಸಪ್ಪಾ ತಂದೆ ಘೂಳಪ್ಪಾ ಮಡ್ಡಿ ಸಿಗ್ಗಿ ಇವರಿಗೆ ಐದೈದು ಸಾವಿರ ರೂ ಕೊಡಬೇಕು. ಸೌ. ಮರಿಯಲ್ಲವ್ವ ಮೂಲಿಮನಿ ಸಿಗ್ಗಿ ಇವರಿಗೆ ೫ ಸಾವಿರ ರೂ ಕೊಡಬೇಕು. ಇವೆಲ್ಲವನ್ನು ಕೊಟ್ಟು ಮೈನರ್ ವಯಸ್ಸಿಗೆ ಬಂದು ಅಧಿಕಾರಿಗಳಾಗುವ ಕಾಲಕ್ಕೆ ಇರುವ ಎಲ್ಲ ಶಿಲ್ಕು ಹಣವನ್ನು ಲಿಂಗಾಯತ ವಿದ್ಯಾಭಿವೃದ್ಧಿ ಫಂಡಿಗೆ ಕೊಡಬೇಕು. ಮೈನರ ಕಾರಬಾರ ಮಾಡುವುದಕ್ಕೆ ಅವಕಾಶ ಕೊಡಬಾರದು. ಅವರ ಲಗ್ನ ಮುಂತಾದ ಕಾರ್ಯಗಳನ್ನು ಮಾಡಬೇಕು. ಮತ್ತು ಹೆಂಡತಿ ಬದುಕಿದ್ದರೆ ಅವಳ ಅಭಿಪ್ರಾಯ ಕೇಳಬೇಕು. ಇಲ್ಲದಿದ್ದರೆ ನಮ್ಮ ಆಪ್ತರಾದ ಉಕಲಿ, ತಿಕೋಟಾ, ಇಂಗಳೇಶ್ವರ ಗೌಡರ ಒಪ್ಪಿಗೆಯಂತೆ ಕನ್ಯಾ ಅಥವಾ ವರ ಗೊತ್ತುಮಾಡಬೇಕು. ಮೆ॥ ಕಲೇಕ್ಟರ್ ಸಾಹೇಬರು ಲಗ್ನದ ವೆಚ್ಚವನ್ನು ಕೊಡುವುದು.

೭. ತಲ್ಲೂರಕರರ ಆಭರಣಗಳು ನಮ್ಮ ಕಡೆ ಇವೆ ಅವುಗಳನ್ನು ಮೆ॥ ಕಲೇಕ್ಟರ್ ಸಾಹೇಬರು ಪಟ್ಟಿಯ ಪ್ರಕಾರ

ತಮ್ಮ ವಶಕ್ಕೆ ಇಟ್ಟುಕೊಳ್ಳಬೇಕು. ಶಿವಮೂರ್ತಿ ರಾ. ಹಿರಾಮಯ್ಯ ಗದಗಯ್ಯಾ ಹಿರೇಮಠ ಕೊಲ್ಹಾಪೂರ ಇವರ ಆಭರಣಗಳ ಪೆಟ್ಟಿಗೆ ಇದೆ. ಆದರೆ ಪೆಟ್ಟಿ ಇಲ್ಲಿ ಒಳಗೆ ಏನಿದೆ ಗೊತ್ತಿಲ್ಲ. ಅವರ ದತ್ತಕ ತಾಯಿಯ ಕಲಹದ ಸಲುವಾಗಿ ನಾನು ಅವರಿಗೆ ಕೊಟ್ಟಿಲ್ಲ. ಈ ಕಲಹ ತೀರಿ ಇಬ್ಬರು ಬಂದು ಬೇಡಿದರೆ, ಅವರ ಪಾವತಿ ತೆಗೆದುಕೊಂಡು ಕೊಡಬೇಕು. ಅಥವಾ ತಾಯಿಯ ನಿಧನಾನಂತರ ಮಗನಿಗೆ ಸೇರತಕ್ಕದ್ದು. ರಾ. ಮಹಾದೇವ ಯಲ್ಲಪ್ಪಾ ಗೌತವಾಲೇ ಬೆಳಗಾಂವ ಇವನಿಂದ ನನಗೆ ಉಪಯೋಗವಾಗಿದ್ದು ಆತನಿಗೆ ೨ ಸಾವಿರ ರೂಗಳನ್ನು ಕೊಡಬೇಕು. ಮತ್ತು ಬೆಳಗಾಂವ ಬಂಗ್ಲೆಯ ವೆವಸ್ಥೆಯನ್ನು ಆತನು ಜೀವಿಸಿರುವವರೆಗೆ ಆತನ ಕಡೆಗಿಟ್ಟು ಪ್ರತಿ ತಿಂಗಳು ೧೨ ರೂ ಸಂಬಳ ಕೊಡಬೇಕು.

೮. ಸಂಸ್ಥಾನದ ಮನೆಗಳು ಊರೂರಿಗೆ ಬಹಳ ಇದ್ದು ಅವುಗಳನ್ನು ಹೊತ್ತು ನೋಡಿ ಮಾರಿಬಿಡಬೇಕು. ಸೌದತ್ತಿ ಹೊಂಗಲದೊಳಗಿನ ಕಮತ ಮನೆಗಳನ್ನು ಶಿರಸಂಗಿ ನವಲಗುಂದ ದೊಳಗಿನ ಕಿಲ್ಲೆ ಮಂದಿರಗಳನ್ನು, ಬೆಳಗಾಂವ ಬಂಗ್ಲೆಯನ್ನು ಮಾತ್ರ ಮೈನರ ವಯಸ್ಸಿಗೆ ಬರುವ ವರೆಗೆ ಚನ್ನಾಗಿ ಇಟ್ಟು ಅವರಿಗೆ ಒಪ್ಪಿಸಬೇಕು. ಸವದತ್ತಿಯ ಸೌ.ಸಾವಕ್ಕಾ ಗಂಡ ದೊಡ್ಡಪ್ಪಾ ದಾನಗೊಂಡ ಇವಳಿಗೆ ಸವದತ್ತಿಯೋಳಗಿನ ಸು. ೨೮ ಎಕರೆಯ ಗುರುಬಾಳದವರ ಎಂಬ ಹೊಲ ಕೊಟ್ಟಿದೆ. ಅದನ್ನು ಅವಳಿಗೆ ಖರೀದಿ ಮಾಡಿಕೊಡಬೇಕು. ಸವದತ್ತಿಯ ನಿಂಗಪ್ಪಾ ಮತ್ತು ಭರಮಪ್ಪಾ ಮುತಗೊಂಡ ಇವರ ಮನೆ ಸರಕು ಮತ್ತು ಭೂಮಿ ನಮ್ಮ ಕಡೆ ಖರೀದಿ ಇವೆ ಒಂದು ವೇಳೆ ಅವರು ಗಂಟು ಮತ್ತು ಬಡ್ಡಿ ಕೊಟ್ಟರೆ ಅದನ್ನು ಅವರ ಮಕ್ಕಳ ಹೆರಿನಿಂದ ಖರೀದಿ ಮಾಡಿಕೊಡಬೇಕು ಅವರಿಗೆ ಕೊಡಬಾರದು. ಈ ವ್ಯವಸ್ಥೆಯನ್ನು ನನಗೆ ಸಂತತಿಯಾದರೆ ಮಾಡುವುದು. ಇಲ್ಲದಿದ್ದರೆ ನನ್ನ ಸ್ಥಾವರ ಮತ್ತು ಜಂಗಮ ಆಸ್ಥಿಯನ್ನು ಧರ್ಮಾರ್ಥ ಕೊಡುವ ಸಂಕಲ್ಪ ಮಾಡಿದ್ದೇನೆ. ಆನು ದತ್ತಕ ತೆಗೆದುಕೊಳ್ಳುವುದಿಲ್ಲ ಕುಟುಂಬದಲ್ಲಿ ಬೇರೆ ಯಾರಿಗೂ ದತ್ತಕ ತೆಗೆದುಕೊಳ್ಳುವ ಅಧಿಕಾರ ಕೊಟ್ಟಿಲ್ಲ ಮತ್ತು ಕೊಡುವುದಿಲ್ಲ. ಒಂದು ವೇಳೆ ಯಾರಾದರೂ ದತ್ತಕ ತೆಗೆದುಕೊಂಡು ನನ್ನ ಒಪ್ಪಿಗೆ ಇದೆ ಎಂದು ಹೇಳಿದರೆ ಅದು ಸುಳ್ಳು ಎಂದು ತಿಳಿಯಬೇಕು. ನಾನು ಕೆಳಗೆ ಬರೆದ ಪ್ರಕಾರ ಸೊತ್ತಿನ ವ್ಯವಸ್ಥೆ ಮಾಡಬೇಕು.

೯. ಮೆ॥ ಕಲೆಕ್ಟರ್ ಸಾಹೇಬ ಬೆಳಗಾಂವ ಇವರು ನನ್ನ ಯಾವತ್ತು ಸ್ಥಾವರ ಮತ್ತು ಜಂಗಮ ಆಸ್ಥಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ನಾನು ಮೇಲೆ ಎರಡರಿಂದ ಎಂಟು ಪೂರ್ಣ ಕಲಂಗಳಲ್ಲಿ ಬರೆದ ಪರಕಾರ ವ್ಯವಸ್ಥೆ ಮಾಡಿ, ಒಂದು ಲಿಂಗಾಯತ ಕಮೀಟಿ ಸ್ಥಾಪಿಸಿ ತಾವು ಅದಕ್ಕೆ ಅಧ್ಯಕ್ಷರಾಗಬೇಕು ಅದಕ್ಕೆ ಸರಕಾರದವರು ಒಪ್ಪಿಗೆ ಕೊಡಬೇಕು. ಇದರಲ್ಲಿ

೧. ರಾವಬಹಾದ್ದೂರ ರುದ್ರಗೌಡ ಅರಟಾಳ

೨. ರಾವಸಾಹೇಬ ಸತ್ಯಪ್ಪಾ ಘಾಳಿ

೩. ರಾವಸಾಹೇಬ ರೇವಣಸಿದ್ದಪ್ಪಾ ಕಿತ್ತೂರ

೪. ರಾ.ರಾ. ಭೀಮನಗೌಡ ಪಾಟೀಲ ಉಕಲಿ

೫. ರಾ.ರಾ. ರಾಯಣಗೌಡ ಪಾಟೀಲ ಇಂಗಳೇಶ್ವರ

೬. ರಾ.ರಾ. ತಿಮ್ಮನಗೌಡಾ ಪಾಟೀಲ ತಿಕೋಟಿ

೭. ರಾ.ರಾ. ಮಲ್ಲಿಕಾರ್ಜುನ ರೈನಾಪೂರ

ಇವರನ್ನು ಸಭಾಸದನರನ್ನಾಗಿ ಮಾಡಬೇಕು ಇದರಲ್ಲಿ ಯಾರಾದರೂ ತೀರಿದರೆ ಉಳಿದವರ ಒಪ್ಪಿಗೆಯಂತೆ ಹೊಸ ಮೇಂಬರರನ್ನು ನೇಮಿಸಿಕೊಂಡು ಮುಂದೆ ಬರೆದ ಪ್ರಕಾರ ಕೆಲಸ ನಡೆಸಬೇಕು.

೧೦. ಯಾವತ್ತೂ ಜಂಗಮ ಆಸ್ಥಿಯನ್ನು ಮೇಲೆ ಬರೆದಂತೆ ಮಾಡಿ ಉಳಿದದ್ದನ್ನು ಮಾರಿ ಹಣ ಕೂಡಿಸಬೇಕು ಪ್ರತಿವರ್ಷ ಸಂಸ್ಥಾನದ ಖರ್ಚು ವಜಾ ಆಗಿ ಉಳಿದ ಹಣ ವನ್ನು ಲಿಂಗಾಯತರ ವಿದ್ಯಾಭಿವೃದ್ಧಿಗಾಗಿ ಬಹುಮತದಂತೆ ಖರ್ಚು ಮಾಡಬೇಕು. ನನ್ನ ಮನಸಿನಲ್ಲಿ ಲಿಂಗಾಯತ ಜನರಿಗೆ ಒಕ್ಕಲುತನ ಕಲಾ ಕೌಶಲ್ಯ ಕಲಿಸಬೇಕೆಂದು ಬಹಳವಿದೆ ಆದ್ದರಿಂದ ಅದಕ್ಕೆ ಪ್ರಯತ್ನಿಸಬೇಕು. ಸ್ವಜಾತಿಯು ಅಥವಾ ಕೂಡುಒಕ್ಕಲಿಗ ಜಾತಿಯ ಜನರು ಕಲಿಯುವವರಿದ್ದರೆ ಮೊದಲು ಅವರಿಗೆ ಸಹಾಯ ಮಾಡಿ ನಂತರ ಉಳಿದ ಲಿಂಗಾಯತರಿಗೆ ಮಾಡಬೇಕು.

೧೧. ಈ ಸಂಸ್ಥೆಗೆ ಸರ್‌ದೇಸಾಯಿ ನವಲಗುಂದ ಇವರ ಹೆಸರು ಕೊಡಬೇಕು. ಉಳಿದ ಸ್ಥಾವರ ಆಸ್ತಿಯ ಖಾತೆಗಳಿಗೆ ಸಂಸ್ಥಾನದ ಹೆಸರೇ ಬರೆದು ವ್ಯವಸ್ಥಾಪಕ ಪಂಚ ಮತ್ತು ಪ್ರೆಸಿಡೆಂಟ ಎಂದು ಬರೆಯಬೇಕು. ಯಾವತ್ತೂ ವ್ಯವಸ್ಥೆಯನ್ನು ಅಧ್ಯಕ್ಷರೇ ಮಾಡಬೇಕು. ಮೆ॥ ಕಲೇಕ್ಟರ್ ಸಾಹೇಬ ಬೆಳಗಾಂವ ಇವರೇ ಅಧ್ಯಕ್ಷರಾಗಿರಬೇಕು. ಈ ಕೆಲಸದಲ್ಲಿ ನೌಕರರು ಮುಂತಾದವರು ಲಿಂಗಾಯತರೆ ಇರಬೇಕು. ಬೇರೆ ಜಾತಿಯವರು ಇರಕೂಡದು. ಸಂಸ್ಥಾನದ ಆಯಾ ಉತ್ಪನ್ನ ಬೆಳೆಸುವುದರಲ್ಲಿ ಅಧ್ಯಕ್ಷರು ಲಕ್ಷಗೊಡಬೇಕು. ಈ ಎಲ್ಲ ವ್ಯವಸ್ಥೆಯನ್ನು ನಾನು ಮೇಲೆ ಹೇಳಿದಂತೆ ಮಾಡಬೇಕು ಒಂದು ವೇಳೆ ಸಭಾಸದರು ಉತ್ಪನ್ನ ಬೆಳೆಸು ವವರಲ್ಲಿ ಏನು ಅಭಿಪ್ರಾಯ ಕೊಡುತ್ತಾರೆಂಬುದನ್ನು ಅಧ್ಯಕ್ಷರೇ ವಿಚಾರಿಸಬೇಕು. ಸಭಾಸದರು ಸಂಸ್ಥಾನದ ಕೆಲಸದಲ್ಲಿ ಕೈ ಹಾಕದೇ ವೇಳೆ ವೇಳೆಗೆ ತಮ್ಮ ಮತವನ್ನು ಮಾತ್ರ ಕೊಡಬೇಕು.

೧೨. ಈ ಮೃತ್ಯು ಪತ್ರದ 'ಏಗ್ಜಿಕ್ಯೂಶನ್' ಮೆ॥ ಕಲೇಕ್ಟರ್ ಸಾಹೇಬ ಬೆಳಗಾಂವ ಇವರು ಕಟ್ಟಳಯಂತೆ ಮಾಡಬೇಕು.

ಈ ಪ್ರಕಾರ ಈ ೧೨ ಕಲಮಿನ ಮೃತ್ಯು ಪತ್ರವನ್ನು ನಾನು ಸ್ವ ಸಂತೋಷದಿಂದ ಪೂರ್ಣ ಪ್ರಜ್ಞೆಯಿಂದಲೂ ಬರೆದಿಟ್ಟಿದ್ದೇನೆ. ತಾ. ೦೬ ಜೂನ ೧೯೦೬ ಇಸ್ವಿ[2]

ಬೆಳಗಾಂವ
ತಾ: ೦೬/೦೬/೧೯೦೬

(ಸಹಿ ಇಂಗ್ರೇಜಿ)
ಸರ್‌ದೇಸಾಯಿ ನವಲಗುಂದ

ಆಧಾರಸೂಚಿ

೧. ಸಂ. ಡಾ. ಆರ್.ಎಸ್. ಗುಂಜಾಳ, ಬೆಳಗಾವಿ ಬೆಳಕು, ಅಖಿಲ ಭಾರತ ೭೦ನೇ ಕನ್ನಡ ಸಾಹಿತ್ಯ ಸಮ್ಮೇಳನ ಬೆಳಗಾವಿ, ಸಂಸ್ಮರಣ ಸಂಪುಟ ೨೦೦೩ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ಪುಟ ೨೨೩–೨೨೫.

೨. ಅದೇ, ಬೆಳಗಾವಿ ಬೆಳಕು, ಅಖಿಲ ಭಾರತ ೭೦ನೇ ಕನ್ನಡ ಸಾಹಿತ್ಯ ಸಮ್ಮೇಳನ ಬೆಳಗಾವಿ, ಸಂಸ್ಮರಣ ಸಂಪುಟ ೨೦೦೩ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ಪುಟ ೨೨೬–೨೩೪.

೩. ಹರ್ಡೆಕರ್ ಮಂಜಪ್ಪನವರು, ತ್ಯಾಗವೀರ ಲಿಂಗರಾಜರ ಚರಿತ್ರೆ ಜಗದ್ಗುರ ಸಾರಂಗ ಧರೇಶ್ವರ ಪ್ರಕಾಶನ ಶ್ರೀಶೈಲ–೧೯೯೦ (೨ ಇ.ಡಿ) ೧ ಇ.ಡಿ ೧೯೩೦, ಪುಟ ೭೨–೮೦.

೪೮

ಗ್ರಾಮ ಮ್ಯಾನುಯಲ್ : ಚಾರಿತ್ರಿಕ ದಾಖಲೆಗಳು

ಡಾ. ಕೆ. ರವೀಂದ್ರನಾಥ*

ಮ್ಯಾನುವಲ್ ಎಂಬುದಕ್ಕೆ ಒಂದು ಗ್ರಾಮದ ಘಟನೆ, ಸಂಗತಿ ಗಳನ್ನು ಮತ್ತು ಪಾಲನೆಗಳನ್ನು ಕಾನೂನಾತ್ಮಕವಾಗಿ ಇಲ್ಲವೇ ವಿಧಿವತ್ತಾಗಿ ನಿರ್ವಹಿಸುವ ಕಾರ್ಯರೂಪಕ್ಕೆ ತರುವ ಆಡಳಿತಾತ್ಮಕ ದಾಖಲೆಗಳು ಎಂದು ಹೇಳಬಹುದು.

೧. **ಆಕರಗಳು:** ಇತ್ತೀಚಿನ ನೋಟು ಪುಸ್ತಕಗಳಲ್ಲಿ ಬರೆದಿಟ್ಟ ಗ್ರಾಮಮ್ಯಾನುವಲ್ ಹೆಸರಿನ ಹಸ್ತಪ್ರತಿಗಳು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ಕ್ರಮ ಸಂಖ್ಯೆ ೧೧೧೮, ೧೧೧೯, ೧೧೨೨, ೧೧೨೩ ನಂಬರಿನ ನಾಲ್ಕು ಪ್ರತಿಗಳು ಸಂರಕ್ಷಿಸಲ್ಪಟ್ಟಿವೆ. ಈ ಹಸ್ತಪ್ರತಿಗಳನ್ನು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕು ಉತ್ತಂಗಿ ಗ್ರಾಮದ ಚಿಕ್ಕಗೌಡ್ರು ಚನ್ನವೀರಗೌಡನ ಮನೆಯಿಂದ ಸಂಗ್ರಹಿಸಿಕೊಂಡು ಬರಲಾಗಿದೆ.

೧೧೨೩ನೇ ಕ್ರಮ ಸಂಖ್ಯೆಯ ಗ್ರಾಮ ಮ್ಯಾನುವಲ್ ಪ್ರತಿಯ ಕೊನೆಯಲ್ಲಿ ತಾರೀಖು ೨೨-೬-೧೯೫೩ಕ್ಕೆ ಮುಗಿದಿರುತ್ತದೆ. ಈ ಗ್ರಾಮೋದ್ಯೋಗಸ್ಥರ ಮ್ಯಾನುಯೆಲ್ ಬರೆದವರು ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕು ಪೈಕಿ ಉತ್ತಂಗಿ ಗ್ರಾಮದಲ್ಲಿ ಚಿಕ್ಕಗೌಡ್ರು ಚನ್ನವೀರನಗೌಡನ ಬರಹವಿದೆ..." ಎಂದು ನಮೂದಿಸಲಾಗಿದೆ.

೨. **ಗ್ರಾಮ ಮ್ಯಾನ್ಯುಯೆಲ್‌ಗಳ ಉಗಮ:** ಮನುಷ್ಯ ಜೀವನದ ಆರಂಭದ ಬದುಕಿನಲ್ಲಿ ತನ್ನ ಸುತ್ತಲಿನ ಪರಿಸರ, ಸಮುದಾಯ ಹಾಗೂ ಸಮಾಜಗಳ ನಡುವೆ ಸಾಂಘಿಕವಾದ ಜೀವನ ಪದ್ಧತಿ ರೂಢಿಯಲ್ಲಿತ್ತು. ಹೀಗಾಗಿ ಆ ಕುರಿತು ಹಸ್ತಪ್ರತಿಗಳು ಮಾಹಿತಿ ನೀಡುತ್ತವೆ. ಕನ್ನಡ ವಿಶ್ವವಿದ್ಯಾಲಯದ ಸಂಗ್ರಹದಲ್ಲಿರುವ "ಸಮಾಜಶಾಸ್ತ್ರ ಅಥವಾ ಸಾಂಘಿಕಶಾಸ್ತ್ರ" ಹೆಸರಿನ ಪ್ರತಿಯಲ್ಲಿ ಗೃಹನಿರ್ಮಾಣ, ಸಹಕಾರ ಸಂಘಗಳ ಸ್ಥಾಪನೆ, ಕೈತೋಟ ನಿರ್ಮಾಣ, ಶರೀರಶಾಸ್ತ್ರ, ಶಾಲಾ ಆವರಣ, ವಾತಾವರಣ, ಸರೀಸೃಪಗಳು, ದನಕರು, ಕುರಿಗಳು ಹೀಗೆ ಈ ಎಲ್ಲ ಸಂಗತಿಯನ್ನು ನಿರೂಪಿಸುತ್ತವೆ. ಸಂದರ್ಭದಲ್ಲಿ ಗ್ರಾಮ ಒಕ್ಕೂಟ ಮಾದರಿಯ ಬದುಕನ್ನು ರೂಪಿಸಿದ ಸಂದರ್ಭದಲ್ಲಿ ಇಂಥ ವಿಧಾನಗಳನ್ನು ಅನುಷ್ಠಾನಗೊಳಿಸಿದರು. ಬ್ರಿಟಿಷ್ ಆಡಳಿತದ ಆಗಮ ಅದರಲ್ಲೂ ವಸಾಹತುಶಾಹಿ ಸಂದರ್ಭದಲ್ಲಿ ಮೆಕೆಂಝಿ ಅಂಥವರು ಕೈಫಿಯತ್ತುಗಳನ್ನು ಬರೆಸಿ ಸಂಗ್ರಹಿಸುವಾಗ ಭಾರತೀಯ ನ್ಯಾಯಪದ್ಧತಿ, ಪುರಾತತ್ವ ಅವಶೇಷಗಳ ಸಂರಕ್ಷಣಾ ವಿಧಾನ, ಅಪರಾಧ-ದಂಡನೆ ಇತ್ಯಾದಿ ಸಾಂಪ್ರದಾಯಿಕ ವಿಧಾನಗಳಿಗೆ ಕಾನೂನಿನ ಚೌಕಟ್ಟನ್ನು ನೀಡುವ ಪ್ರಯತ್ನವಾಗಿ ರೂಪಿಸಿದ ಕಾನೂನು ಮತ್ತು ಅದರ ಆದೇಶ, ಷರತ್ತುಗಳು ಹಾಗೂ ನಿರ್ಬಂಧಗಳು ಇತ್ಯಾದಿ ಅಂಶಗಳನ್ನು ಪ್ರಸ್ತಾಪಿಸುವ ಉದ್ದೇಶದಿಂದ ಗ್ರಾಮ ಮ್ಯಾನುಯೆಲ್‌ದಂತಹ ದಾಖಲೆಗಳು ಉಗಮಗೊಂಡಿರಬೇಕು. ಉದಾಹರಣೆಗೆ: ಸ್ಟ್ಯಾಂಪ ಆ್ಯಕ್ಟನ್ನು ಕುರಿತು ಪ್ರಸ್ತಾಪಿಸುವ ಮ್ಯಾನುಯೆಲ್‌ನಲ್ಲಿ "೧೮೮೯ನೇ ಸಂವತ್ಸರದ ೨ನೇ ನಂಬರ್ ಇಂಡಿಯನ್ ಆ್ಯಕ್ಟ್, ಇದು ೧೯೨೨ನೇ ಸಂವತ್ಸರದ ೮ನೇ ನಂಬರ್ ಮದರಾಸು ಆ್ಯಕ್ಟಿನಿಂದ ವಿಶೇಷ ಸವರಣಗಳು ಮಾಡಲ್ಪಟ್ಟಿದೆ" ಎಂಬ ಉಲ್ಲೇಖಗಳಿಂದ ಇಂಥ ಗ್ರಾಮ ಮ್ಯಾನುಯೆಲ್‌ಗಳ ಉಗಮವನ್ನು ೧೯ನೇ ಶತಮಾನದ ಆದಿಭಾಗದಲ್ಲಿ ಎಂದು ನಿರ್ಣಯಿಸಬಹುದು.

೩. **ಗ್ರಾಮ ಮ್ಯಾನುಯೆಲ್ ವಿಷಯ:** ಕುಟುಂಬದ ವ್ಯಕ್ತಿ ಸಮಾಜದ ಸದಸ್ಯನಾದಾಗ ಪ್ರತಿಯೊಬ್ಬ ಸದಸ್ಯನಿಗೂ ಸಾಮಾಜಿಕವಾದ ನೀತಿ ನಿರೂಪಣೆಗಳು ಅನ್ವಯಿಸುತ್ತವೆ. ಹೀಗಾಗಿ ಸಾಮಾಜಿಕ ಬದುಕಿನ ಒಳಿತು-ಕೆಡುಕು, ಲಾಭ-ನಷ್ಟ, ಉತ್ಪಾದನೆ-ವಿತರಣೆ, ವೆಚ್ಚ ಮತ್ತು ಆದಾಯ, ರಾಷ್ಟ್ರೀಯ ಸಂಪತ್ತು, ವೈಯಕ್ತಿಕ ಒಡೆತನ ಇತ್ಯಾದಿ ಹಕ್ಕುಬಾಧ್ಯತೆಗಳ ಕುರಿತು ಆಯೋಜಿಸಿದ "ಸಂವಿಧಾನಾತ್ಮಕಗಳೆಂದು ಗ್ರಾಮ ಮ್ಯಾನುಯೆಲ್‌ಗಳನ್ನು ಕರೆಯಬಹುದು. ಹೀಗಾಗಿ ಇಲ್ಲಿಯ ವಿಷಯ ವ್ಯಕ್ತಿಗಿಂತ ಸಮಷ್ಟಿ ಪ್ರಜ್ಞೆಯಿಂದ ಕೂಡಿರುವಂಥದ್ದು. ಗ್ರಾಮ ಮ್ಯಾನುಯೆಲ್‌ಗಳಲ್ಲಿ ರೂಪಿಸಿದ ವಿಧಿಗಳನ್ನು ಈ ಕೆಳಗಿನಂತೆ ಹೆಸರಿಸಬಹುದು.

* ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬

೧. ಗ್ರಾಮೋದ್ಯೋಗಸ್ಥರು– ಇವರು ನಿಯಮ, ಅರ್ಹತೆ, ಕೆಲಸ, ಅಧಿಕಾರ ಇತ್ಯಾದಿ

೨. ಗ್ರಾಮ ಕೋರ್ಟುಗಳ ಕಾನೂನು–ಸಾಮಾನ್ಯವಾಗಿ ಇಲ್ಲಿ ಸಿವಿಲ್ ಕೋರ್ಟ್‌ಗಳ ಚರ್ಚೆಯಾಗುತ್ತದೆ. ಕೋರ್ಟ್ ವಿಚಾರಿಸತಕ್ಕ ವ್ಯಾಜ್ಯಗಳು ಗ್ರಾಮ ಕೋರ್ಟ್‌ಗಳ ಆ್ಯಕ್ಟ್‌ಗಳಲ್ಲಿ ಮುಖ್ಯವಾಗಿ ಸ್ಟಾಂಪ್‌ಆ್ಯಕ್ಟ್, ಲಿಮಿಟೇಷನ್ಸ್ ಆ್ಯಕ್ಟ್, ರಿಜಿಸ್ಟ್ರೇಷನ್ ಆ್ಯಕ್ಟ್, ಕೋರ್ಟ್ ಫೀ ಆ್ಯಕ್ಟ್ ಇತ್ಯಾದಿಗಳು ವಿಶೇಷವಾಗಿ ಕಂಪ್ಲೇಂಟನ್ನು ಗ್ರಾಮ ಭಾಷೆಯಲ್ಲಿಯೇ ಬರೆಯಬೇಕೆಂಬುದು ಇಲ್ಲಿಯ ನಿಯಮ.

೩. ಪೋಲೀಸು ಮತ್ತು ಮೇಜಿಷ್ಟೀರಿಯಲ್: ಗ್ರಾಮದ ಮುಖಂಡ ಹಾಗು ಪೋಲೀಸರ ಸಂಬಂಧ ವರದಿ ಮಾಡಬೇಕಾದ ನೇರಗಳು ಇಲ್ಲಿ ನೇರವೆಂದರೆ ಅಪರಾಧ ಎಂದು ಅರ್ಥಎದೆ. ಈ ನೇರಗಳ ಪ್ರಕಾರಗಳು ಇತ್ಯಾದಿ ಚರ್ಚೆಯಾಗಿವೆ.

೪. ಶಿಸ್ತುವಸೂಲು: ಶಿಸ್ತು ಎಂದರೆ ತೆರಿಗೆ, ಕಂದಾಯ ಎಂದರ್ಥ. ಕೆಳದಿ ಶಿವಪ್ಪನಾಯಕನ ಶಿಸ್ತು ಜಗತ್ಪ್ರಸಿದ್ಧವಾಗಿರುವುದು. ಶಿಸ್ತುದಾರ ಮುಂದೆ "ಶಿರಾಸ್ಥದಾರ" ಆಗಿರಬೇಕು. ಈ ಶಿಸ್ತು ವಸೂಲಾತಿಯಲ್ಲಿ ಸಾಧಾರಣ ಪದ್ಧತಿ ವಸೂಲಾತಿ, ಬಲತ್ಕಾರ ಪದ್ಧತಿ ವಸೂಲಾತಿ ಎಂದು ಮ್ಯಾನುಯೆಲ್ ತಿಳಿಸುತ್ತದೆ.

೫. ಭೂಮಿ ಸಂಬಂಧವಾದ ಕಂದಾಯ ವ್ಯವಹಾರಗಳು: ಭಾರತ ಕೃಷಿ ರಾಷ್ಟ್ರ. ಹೀಗಾಗಿ ಇಲ್ಲಿಯ ಭೂಮಿ ವಿಷಯದಲ್ಲಿ ಹೆಚ್ಚು ಕಾಳಜಿ ವಹಿಸಿದಂತೆ ಭೂಮಿಗೆ ಸಂಬಂಧಿಸಿದಂತೆ ದರಕಾಸ್ತುಗಳು, ಕೌಲುಗಳು, ಅಪ್ಪಣೆಯಿಲ್ಲದೆ ಆಕ್ರಮಣಗಳು ಭೂಮಿ ಪಟ್ಟಗಳು, ಸರಹದ್ದು ಗುರುತುಗಳು ಇತ್ಯಾದಿ ಸಂಗತಿಗಳಿಂದ ಭೂ ಒಡೆತನ, ವ್ಯಕ್ತಿ, ಸರಕಾರಿ ಮತ್ತು ಇನಾಮು ಭೂಮಿಗಳ ಕಾಯಿದೆ, ಕಂದಾಯ ಕುರಿತು ಚರ್ಚಿಸಲಾಗಿದೆ. ವಿಶೇಷವಾಗಿ ಭೂಮಿಯಲ್ಲಿಯ ನಿಕ್ಷೇಪಗಳು, ಖನಿಜಗಳನ್ನು ಕುರಿತು ಮ್ಯಾನುಯಲ್ ಉಲ್ಲೇಖಿಸುತ್ತದೆ.

೬. ವಿವಿಧ ವಿಷಯಗಳು: ವಿವಿಧ ವಿಷಯಗಳಲ್ಲಿ ಜನನ–ಮರಣ ದಾಖಲೆಗಳು, ಮೈಲಿ ಹಾಕಿಸುವುದು ಸರಕಾರಿ ಕಟ್ಟೆ ಕೆಲಸಗಳು, ಪಶು ಜಾಡ್ಯಗಳು, ದನದ ದೊಡ್ಡಿಗಳು (ಪಶು ಬಂಧಿಖಾನೆ), ದುಷ್ಟ ಮೃಗಗಳು, ಸೀಡಿ ಹುಳುಗಳು, ಆಯುಧಗಳು, ಅಳತೆ ಮಾಪನಗಳೂ ಇತ್ಯಾದಿ ವಿಷಯಗಳನ್ನು ಈ ಪ್ರಕರಣದಲ್ಲಿ ಚರ್ಚಿಸಲಾಗಿದೆ.

೪. **ಗ್ರಾಮ ಮ್ಯಾನುಯೆಲ್ ಸ್ವರೂಪ:** ಈಗ ದೊರೆತಿರುವ ಗ್ರಾಮ ಮ್ಯಾನುಯೆಲ್‌ಗಳು ಪ್ರಶ್ನೋತ್ತರ ಶೈಲಿಯಲ್ಲಿವೆ. ಒಂದು ವಿಷಯಕ್ಕೆ ಪ್ರಶ್ನೆ ಹಾಕಿಕೊಳ್ಳುವುದು ಅದಕ್ಕೆ ಉತ್ತರವೆಂದು ನಮೂದಿಸಿ ಉತ್ತರ ಹೇಳುವುದು ಇಲ್ಲಿಯ ಸ್ವರೂಪ. ಪ್ರಾಯಶಃ ವ್ಯಕ್ತಿಗತವಾದ ಅಥವಾ ಸಾರ್ವತ್ರಿಕವಾದ ಕಾನೂನು, ಕಟ್ಟಳೆಗಳು, ವಿಧಿ ವಿಧಾನಗಳು ಶ್ರೀಸಾಮಾನ್ಯರಿಗೂ ತಿಳಿಯಲೆಂಬುದು ಇಲ್ಲಿಯ ಉದ್ದೇಶವಾಗಿರಬೇಕು. ಉದಾಹರಣೆಗೆ:

೧. ಗ್ರಾಮೋದ್ಯೋಗಸ್ಥರನ್ನು ನೇಮಿಸುವುದು, ತೊಲಗಿಸುವುದು ಯೀ ಮೊದಲಾದ ಚರ್ಯೆಗಳು ಯಾವ ಆ್ಯಕ್ಟನ್ನು ಹಿಡಿದು ಜರುಗಿಸಲ್ಪಡುವುದು.[೧]

ಉತ್ತರ: ೧೮೯೫ನೇ ಸಂವಸ್ಸರ ೨ನೇ ನಂಬರು ಮದರಾಸು ವಂಶ ಪಾರಂಪರ್ಯದ ಗ್ರಾಮ ನೌಕರರ ಆ್ಯಕ್ಟನ್ನು ಹಿಡಿದು ಜರುಗಿಸಲ್ಪಡಲಾಗುವುದು.

೨. ಒಬ್ಬ ದಿಕ್ಕಿಲ್ಲದ ಹಾದಿಕಾರನು ನಿಮ್ಮ ಗ್ರಾಮಕ್ಕೆ ಬಂದ ಮೇಲೆ ಬಹಳ ಪ್ರಾಣಾಪಾಯಕರವಾದ ಕಾಯಿಲೆಯಿಂದ ಬಿದ್ದಿರುವ ಸ್ಥಿತಿಯಲ್ಲಿ ನೀನೇನು ಮಾಡಬೇಕು ಮತ್ತು ಅಂಥವನ ಸಂರಕ್ಷಣೋಪಾಯದ ಖರ್ಚುಗಳಾಗಿ ಏನಾದರೂ ಹಣ ಬೇಕಾಗಿದ್ದರೆ ಅದು ಯಾರಿಂದ ಕೋರಲ್ಪಡುವುದು.[೨]

ಉತ್ತರ: ಆತನಿಗೆ ಏನಾದರೂ ವೈದ್ಯ ಚಿಕಿತ್ಸೆ ಮಾಡುವ ನಿಮಿತ್ತ ಕೂಡಲೇ ತಕ್ಕ ಯೇರ್ಪಾಟಿನಿಂದ ಸಮೀಪದಲ್ಲಿರುವ ಗೌರ್ನಮೆಂಟ್ ಮೆಡಿಕಲ್ ಆಫೀಸರರ ಹತ್ತಿರಕ್ಕಾಗಲೀ, ಔಷಧಶಾಲೆಗಾಗಲೀ ಕಳುಹಿಸಬೇಕು. ಆ ಸಂಗತಿ ಪ್ರದೇಶದ ಸಬ್ ರಿಜಿಸ್ಟ್ರೇಟರಿಗೆ ರೀಪೋರ್ಟ್ ಮಾಡಬೇಕು. ಅದಕ್ಕಾಗಿ ಏನಾದರೂ ಖರ್ಚುಗಳು ತಗಲಿದ್ದಾದರೆ ಅಂಥ ಹಣಕ್ಕಾಗಿ ಬಿಲ್ಲು ಮಾಡಿ ಕಳುಹಿಸಿದ್ದಾದರೆ ಸದರಿ ಹಣ ಮೇಜಿಸ್ಟ್ರೇಟರಿಂದ ಚೆಲ್ಲಿಸಲ್ಪಡುವುದು.

೩. ಬಾಕಿದಾರರೆಂದರೆ ಯಂಥವರು

ಉತ್ತರ: ವಾಯಿದೆ ದಿನವಾಗಲೀ ಯಿಲ್ಲವೇ ಆ ಒಳಗಾಗಲೀ ಸರಕಾರಕ್ಕೆ ಚೆಲ್ಲಿಸಬೇಕಾದ ಶಿಸ್ತನ್ನು ಚೆಲ್ಲಿಸದೆ ಬಾಕಿ ಇದ್ದವರು.

ಹೀಗೆ ಒಂದು ವಿಷಯದ ತಿಳುವಳಿಕೆಯನ್ನು ಪರಿಚಲನಗೊಳಿಸುವ ಗ್ರಾಮ: ಮ್ಯಾನ್ಯುಯಲ್‌ಗಳು ಗ್ರಾಮಾಧಿಕಾರ ವ್ಯಾಪ್ತಿಯನ್ನು ಆ ವ್ಯಾಪ್ತಿಯ ಹಿಂದಿರುವ ಸಾರ್ವಜನಿಕ ಹಿತಾಸಕ್ತಿಯನ್ನು ಮತ್ತು ನಮ್ಮ ಪ್ರಾಚೀನರ ಒಂದು ಕಾಲಘಟ್ಟದ ಆಡಳಿತ ರೀತಿ ನೀತಿಗಳನ್ನು ಪ್ರಸ್ತುತಪಡಿಸುವ ದಾಖಲೆಗಳೆನಿಸಿವೆ.

೫. ಗ್ರಾಮ ಮ್ಯಾನ್ಯೂಯಲ್‌ಗಳ ಭಾಷೆ: ಇವು ಇಂಗ್ಲಿಷ್–ಉರ್ದು ಮಿಶ್ರಿತ ಭಾಷೆಯಿಂದ ಕೂಡಿವೆ. ಜೊತೆಗೆ ಅಚ್ಚಗನ್ನಡ ಭಾಷಾ ಪ್ರೌಢಿಮೆಯನ್ನು ಇಲ್ಲಿ ಕಾಣಬಹುದು. ಉದಾಹರಣೆಗೆ ಆ್ಯಕ್ಟ್ (ಕಾನೂನು), ಜಪ್ತಿ (ವಶಪಡಿಸಿಕೊಳ್ಳು), ಮೇಜಿಸ್ಟ್ರೇಟ್, ದರಖಾಸ್ತು, ನೇರಗಳು(ಅಪರಾಧಗಳು), ಚೆಲ್ಲು (ನೀಡು, ಕೊಡು), ಸೊತ್ತು, ಪೊರಂಪೋಕು, ದೊಡ್ಡಿ (ದನ ಕೂಡು ಹಾಕುವ ಬಂಧಿಖಾನೆ), ಪೈಕಿ, ವಾರೆಂಟು, ಆರೆಷ್ಟು ಇತ್ಯಾದಿ ಪಟ್ಟಿಮಾಡಬಹುದು.

೬. ಗ್ರಾಮ ಮ್ಯಾನ್ಯೂಯಲ್‌ಗಳ ಮಹತ್ವ: ಇವು ನಮ್ಮ ಜೀವನ ಪದ್ಧತಿಯನ್ನು ನಿರೂಪಿಸುವ ದಾಖಲೆಗಳು. ಗ್ರಾಮಮೊತ್ತದ ಆಸ್ತಿ ಯಾವುದು? ಪುರಾತತ್ವ ಅವಶೇಷಗಳ ಮಹತ್ವಯೇನು? ಕೆರೆಕಟ್ಟೆಗಳಿಂದ ಆಗುವ ಪ್ರಯೋಜನವೇನು? ನೀರಾವರಿ ಪದ್ಧತಿಯಿಂದ ಅಭಿವೃದ್ಧಿ ಹೇಗೆ ಸಾಧ್ಯ? ಅಪರಾಧಗಳಾವುವು? ಅವುಗಳ ಮೇಲೆ ನಿಗದಿಪಡಿಸಿದ ತೆರಿಗೆ, ಅವು ರಾಷ್ಟ್ರೀಯ ಸಂಪತ್ತೆಂಬ ತಿಳುವಳಿಕೆ ಹಾಗೂ ಪಶುಗಳಿಗೆ ಬರುವ ರೋಗ, ಅದಕ್ಕೆ ಕೈಕೊಳ್ಳಬೇಕಾದ ಮುಂಜಾಗ್ರತಿ ಕ್ರಮಗಳು, ಸಸಿಗಳಿಗೆ–ಬೆಳೆಗಳಿಗೆ ಬೀಳುವ ಸೀಡಿ ರೋಗಗಳು, ಅವುಗಳ ನಿರ್ವಹಣೆಗೆ ಹಾಕಿಕೊಳ್ಳುವ ಯೋಜನೆಗಳು. ಹೀಗೆ ಇಲ್ಲಿಯ ವಿಷಯ ಒಂದು ಗ್ರಾಮದ ಒಟ್ಟು ಬದುಕಿನಲ್ಲಿ ಅನುಸರಿಸಬೇಕಾದ ನೀತಿ ನಿರೂಪಣೆಗಳನ್ನು ವಿವರಿಸುವುದರ ಮೂಲಕ ನಮ್ಮ ಪ್ರಾಚೀನರ ಜೀವನ ವಿಧಾನವನ್ನು ದಾಖಲಿಸುತ್ತವೆ. ಈ ಕಾರಣವಾಗಿ ಇವು ಚಾರಿತ್ರಿಕ ದಾಖಲೆಗಳು. ಇವುಗಳ ಸಂಗ್ರಹ ಹಾಗೂ ಅಧ್ಯಯನ ತೀವ್ರಗೊಳ್ಳಬೇಕಾಗಿದೆ.

ಆಧಾರಸೂಚಿ

೧. ಕನ್ನಡ ವಿಶ್ವವಿದ್ಯಾಲಯದ ಹಸ್ತಭಂಡಾರದ ಕಾಗದ ಪ್ರತಿ, ಕ್ರಸಂ. ೧೧೨೩, ಪುಟ ೧.

೨. – ಅದೇ – ಪುಟ ೯೩.

೩. – ಅದೇ – ಪುಟ ೧೦೦.

ಪೂರ್ವ-ಮಧ್ಯಯುಗೀನ ಕಾಲದ ವರ್ತಕ ಸಂಘಗಳು: ಒಂದು ಐತಿಹಾಸಿಕ ವಿಶ್ಲೇಷಣೆ

ಹನುಮನಾಯಕ*

ಪೀಠಿಕೆ: ವರ್ತಕ ಸಂಘಗಳು ಪ್ರಾಚೀನ ಮತ್ತು ಮಧ್ಯಯುಗೀನ ಕಾಲದ ಆರ್ಥಿಕ ಕ್ಷೇತ್ರದಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದವು. ಇವು ವ್ಯಾಪಾರ ಮತ್ತು ವಹಿವಾಟುಗಳ ಬೆಳವಣಿಗೆಯಲ್ಲಿ ತೊಡಗಿಸಿಕೊಳ್ಳುವುದರ ಜೊತೆಗೆ ಅಂದಿನ ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ಭಾಗವಹಿಸಿ ಸಮಾಜದ ಮತ್ತು ರಾಜ್ಯದ ಗಮನವನ್ನು ಸೆಳೆಯುವಲ್ಲಿ ಸಫಲವಾಗಿದ್ದವು. ಪೂರ್ವ ಮಧ್ಯಯುಗೀನ ಕಾಲದಲ್ಲಿ ನೀರಾವರಿ ಆಧಾರಿತ ಕೃಷಿಯ ಬೆಳವಣಿಗೆಯಿಂದಾಗಿ ಕೃಷಿ ಉತ್ಪನ್ನದಲ್ಲಿ ಗಣನೀಯ ಬದಲಾವಣೆಗಳುಂಟಾದವು. ಅವುಗಳಲ್ಲಿ ಪ್ರಮುಖವಾದದ್ದೆಂದರೆ ವಾಣಿಜ್ಯ ಬೆಳೆಗಳಾದ ಹತ್ತಿ, ಎಣ್ಣೆ ಬೀಜಗಳು, ಭತ್ತ, ಕಬ್ಬು ಇತ್ಯಾದಿ. ಇದರಿಂದ ಅಧಿಕ ಉತ್ಪಾದನೆಯುಂಟಾಗಿ ಅವುಗಳ ವಿಲೇವಾರಿಗೆ ಸಮಾಜದಲ್ಲಿ ವರ್ತಕಸಮಾಜ ಕ್ರಮೇಣವಾಗಿ ಅಸ್ತಿತ್ವಕ್ಕೆ ಬಂದಿತು. ಇವರು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಕೆಲವು ಸಂಘಟನೆಗಳನ್ನು ಸ್ಥಾಪಿಸಿಕೊಂಡರು. ಅವುಗಳಲ್ಲಿ ಪ್ರಮುಖವಾದುದೆಂದರೆ ಅಯ್ನೂರ್ವರು. ಕರ್ನಾಟಕ ಅಷ್ಟೇ ಏಕೆ ಇಡೀ ದಕ್ಷಿಣ ಭಾರತದ ವರ್ತಕ ಸಂಘಗಳಲ್ಲಿ ಅತ್ಯಂತ ಪ್ರಾಚೀನ ಮತ್ತು ಪ್ರಮುಖವಾದುದೆಂದರೆ ಅಯ್ಯಾವೊಳೆ ಅಯನೂರ್ವರು. ಇದು ಕ್ರಿ.ಶ. ೭೮೮ರಲ್ಲಿ ಈಗಿನ ಬಾಗಲಕೋಟೆ ಜಿಲ್ಲೆಯ ಅಯ್ಯಾವೊಳೆಯಲ್ಲಿ ಅಸ್ತಿತ್ವಕ್ಕೆ ಬಂದು ನಂತರದ ಕಾಲದಲ್ಲಿ ತನ್ನ ಚಟುವಟಿಕೆಗಳನ್ನು ಕರ್ನಾಟಕದಾದ್ಯಂತ ಹರಡಿತ್ತು. ದಕ್ಷಿಣ ಕರ್ನಾಟಕದಲ್ಲಿ ಇದರ ಉಲ್ಲೇಖವನ್ನು ಇಂದಿನ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿ ಪ್ರಥಮ ಬಾರಿಗೆ ನೋಡಬಹುದು. ಇಲ್ಲಿಯ ಒಂಬತ್ತು ಮತ್ತು ಹತ್ತನೆ ಶತಮಾನದ ಎರಡು ಶಾಸನಗಳು ಅಯನೂರ್ವರ ಬಗ್ಗೆ ಉಲ್ಲೇಖ ನೀಡುತ್ತವೆ. ಈ ಹಂತದಲ್ಲಿ ವರ್ತಕ ಸಂಘಗಳು ಆಳುವ ವರ್ಗದವರು ದಾನ ಮಾಡಿದ ವಸ್ತುಗಳನ್ನು ಕೇವಲ ಕಾಪಾಡುವ ಜವಾಬ್ದಾರಿಯನ್ನು ಹೊಂದಿದ್ದವು. ಆದರೆ ವರ್ತಕ ಸಂಘಗಳು ಈ ಸಮಯದಲ್ಲಿ ಎಲ್ಲಿಯೂ ಧಾರ್ಮಿಕ ಸಂಘ-ಸಂಸ್ಥೆಗಳಿಗೆ ದಾನ ಮಾಡಿದ ಉಲ್ಲೇಖ ಕಂಡುಬರುವುದಿಲ್ಲ. ನಂತರದ ಕಾಲದಲ್ಲಿ ವರ್ತಕ ಸಂಘಗಳು ಬೇರೆಯವರು ನೀಡಿದ ದಾನವನ್ನು ಕಾಪಾಡುವುದರ ಜೊತೆಗೆ ತಮ್ಮ ವ್ಯಾಪಾರ ವಹಿವಾಟನಿಂದ ಬಂದ ಲಾಭದ ಸ್ವಲ್ಪ ಭಾಗವನ್ನು ಧಾರ್ಮಿಕ ಸಂಘ ಸಂಸ್ಥೆಗಳಿಗೆ ದಾನ ಮಾಡುವುದು ಮತ್ತು ಅವುಗಳ ಸಂರಕ್ಷಣೆಯ ಕಾರ್ಯವನ್ನು ಸಹ ಕೈಗೆತ್ತಿಕೊಂಡಿದ್ದು ಕಂಡುಬರುತ್ತದೆ. ಆದ್ದರಿಂದ ಈ ಪ್ರಬಂಧದಲ್ಲಿ ಈಗಿನ ಕೊಡಗು ಜಿಲ್ಲೆಯಲ್ಲಿದ್ದ ವಿವಿಧ ರೀತಿಯ ವ್ಯಾಪಾರ ಸಂಘಗಳು, ಅವುಗಳು ವ್ಯಾಪಾರ ಮಾಡುತಿದ್ದ ವಸ್ತುಗಳು, ಅವರು ಕೈಗೊಂಡಿದ್ದ ಚಟುವಟಿಕೆಗಳು, ವಿಧಿಸಿಕೊಂಡಿದ್ದ ನೀತಿ ನಿಯಮಗಳು, ಹಾಗೂ ಅವು ರಾಜ್ಯ, ಸಮಾಜ, ಮತ್ತು ಆರ್ಥಿಕತೆಯ ಮೇಲೆ ಮಾಡಿದ ಪ್ರಭಾವವನ್ನು ಚರ್ಚಿಸಲಾಗುವುದು. ಇದನ್ನು ರಚಿಸಲು ಮಡಿಕೇರಿ (ಕೊಡಗು) ಜಿಲ್ಲೆಯ ಶಾಸನಗಳನ್ನು ಹೆಚ್ಚಾಗಿ ಬಳಸಿಕೊಳ್ಳಲಾಗಿದೆ.

ಕೊಡಗು ಕರ್ನಾಟಕ ರಾಜ್ಯದ ಅತ್ಯಂತ ಪ್ರಮುಖವಾದ ಭಾಗವಾಗಿದೆ. ಇದನ್ನು ಕೆಲವು ವಿದ್ವಾಂಸರು ಕಾಶ್ಮೀರಕ್ಕೂ ಮತ್ತು ಕೆಲವರು ಯೂರೋಪಿನ ಸ್ವಿಟ್ಜರ್ಲೆಂಡ್ ದೇಶಕ್ಕೆ ಹೋಲಿಸಿದ್ದಾರೆ. ಇಂತಹ ಹೋಲಿಕೆಗಳನ್ನು ಬಹುಶಃ ಅಲ್ಲಿಯ ಭೌಗೋಳಿಕ ಪರಿಸರವನ್ನು ಅವಲಂಬಿಸಿ ಮಾಡಿರಬಹುದು. ಕೊಡಗಿನ ವರ್ತಕ ಸಂಘಗಳನ್ನು ಕುರಿತು ಅದರಲ್ಲೂ ಪ್ರಾಚೀನ ಮತ್ತು ಮಧ್ಯಯುಗೀನ ಕಾಲಕ್ಕೆ ಸಂಬಂಧಿಸಿದಂತೆ ಇದುವರೆಗೂ ಯಾವುದೇ ಲೇಖನಗಳು ಬಂದಿಲ್ಲ.[೧] ಕೊಡಗು ಎಂದರೆ ನಂತರದ ಮಧ್ಯಯುಗೀನ ಕಾಲ ಅಂದರೆ ಹಾಲೇರಿ ವಂಶದವರು, ಹೈದರಾಲಿ ಮತ್ತು ಟಿಪ್ಪುವಿನ ಆಡಳಿತ ಹಾಗೂ ಬ್ರಿಟೀಷರ ವಸಾಹತುಶಾಹಿ ಆಡಳಿತಕ್ಕೆ ಸಂಬಂಧಿಸಿದಂತೆ ಹಲವಾರು ಲೇಖನಗಳು ಹೊರಬಂದಿವೆ. ಅದರಲ್ಲೂ ಕಾಫಿ ತೋಟಗಾರಿಕೆಗೆ ಸಂಬಂಧಿಸಿದಂತೆ ಕೆಲವು ಪಿಹೆಚ್.ಡಿ ಪ್ರಬಂಧಗಳು ಮತ್ತು ಸಂಶೋಧನಾ ಲೇಖನಗಳು ಇವೆ.[೨] ಈ ಲೇಖನವನ್ನು ರಚಿಸಲು ನಾನು ಪ್ರಾಥಮಿಕ ಆಕರಗಳಾದ

* ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು-೫೭೪೧೯೯.

ಎಪಿಗ್ರಾಫಿಯ ಕರ್ನಾಟಿಕ ಸಂಪುಟ ಒಂದರಲ್ಲಿ (೧) ಪ್ರಕಟವಾಗಿರುವ ಕೊಡಗಿನ ಶಾಸನಗಳನ್ನು ಪ್ರಮುಖವಾಗಿ ಆರಿಸಿಕೊಂಡಿದ್ದೇನೆ. ಇಲ್ಲಿ ವರ್ತಕಸಂಘಗಳ ಸಮಗ್ರ ಅಧ್ಯಯನ ಮಾಡುವ ಉದ್ದೇಶದಿಂದ ಅವುಗಳ ಜೊತೆಗೆ ನಿಕಟ ಸಂಪರ್ಕದಲ್ಲಿದ್ದ ಇತರ ಸಂಘಗಳು ಅಥವಾ ಶ್ರೇಣಿಗಳನ್ನು ಸಹ ಇಲ್ಲಿ ಆಯ್ದುಕೊಳ್ಳಲಾಗಿದೆ.

ಕೊಡಗು ಜಿಲ್ಲೆಯು ಹಾಸನ ಜಿಲ್ಲೆಯ ಸಕಲೇಶಪುರ ಮತ್ತು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಮತ್ತು ಅದೇ ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನಲ್ಲಿರುವ ಹವಾಮಾನ ಮತ್ತು ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ಇಡೀ ಕೊಡಗು ಜಿಲ್ಲೆಯಲ್ಲಿ ಕೇವಲ ೧೦೬ ಶಾಸನಗಳು ಎಫಿಗ್ರಾಫಿಯ ಕರ್ನಾಟಿಕ ಸಂಪುಟ ಒಂದರಲ್ಲಿ (೧) ಪ್ರಕಟವಾಗಿವೆ.[೩] ಆದರೆ ಅದೇ ಭೌಗೋಳಿಕ ಲಕ್ಷಣಗಳನ್ನು ಹೊಂದಿರುವ ಸಕಲೇಶಪುರ ತಾಲ್ಲೂಕು ಒಂದರಲ್ಲೇ ಸುಮಾರು ೬೯ ಶಾಸನಗಳು,[೪] ಚಿಕ್ಕಮಗಳೂರು ತಾಲ್ಲೂಕಿನಲ್ಲಿ ೨೨೦ ಶಾಸನಗಳು[೫] ಮೂಡಿಗೆರೆ ತಾಲ್ಲೂಕಿನಲ್ಲಿ ೧೧೪ ಶಾಸನಗಳು[೬] ಮತ್ತು ಶೃಂಗೇರಿ ತಾಲ್ಲೂಕಿನಲ್ಲಿ ೮೦ ಶಾಸನಗಳು[೭] ಕಂಡು ಬಂದಿವೆ. ಇವುಗಳಿಗೆ ಹೋಲಿಸಿದರೆ ಕೊಡಗು ಜಿಲ್ಲೆಯಲ್ಲಿ ಕಂಡುಬಂದಿರುವ ಶಾಸನಗಳ ಸಂಖ್ಯೆ ಅತ್ಯಲ್ಪ. ಇವುಗಳಲ್ಲಿ ವರ್ತಕಸಂಘಗಳಿಗೆ ಸಂಬಂಧಿಸಿದಂತೆ ಸೋಮವಾರಪೇಟೆ ತಾಲ್ಲೂಕಿನಲ್ಲಿ[೮] ೦೫, ಮಡಿಕೇರಿ ತಾಲ್ಲೂಕಿನಲ್ಲಿ[೯] ೦೩, ಹಾಗೂ ವಿರಾಜಪೇಟೆ ತಾಲ್ಲೂಕಿನಲ್ಲಿ ೦೨ ಶಾಸನಗಳು ಕಂಡು ಬಂದಿವೆ.[೧೦] ಆದರೆ ಇತ್ತೀಚೆಗೆ ಕೆಲವು ಸಂಶೋಧಕರು ಕೆಲವು ಹೊಸ ಶಾಸನಗಳನ್ನು ಶೋಧಿಸಿ ಇತಿಹಾಸ ದರ್ಶನದಲ್ಲಿ ಪ್ರಕಟಿಸಿದ್ದಾರೆ.[೧೧] ವಿರಾಜಪೇಟೆ ತಾಲ್ಲೂಕಿನ ಶಾಸನಗಳು ಕ್ರಿ.ಶ. ೯ನೆಯ ಶತಮಾನದಿಂದ ಕ್ರಿ.ಶ. ೧೦ನೇ ಶತಮಾನದ ವರೆಗೆ, ಸೋಮವಾರಪೇಟೆ ತಾಲ್ಲೂಕಿನ ಶಾಸನಗಳು ಕ್ರಿ.ಶ. ೧೧ರಿಂದ ೧೩ನೇ ಶತಮಾನದವರೆಗೂ, ಮತ್ತು ಮಡಿಕೇರಿ ತಾಲ್ಲೂಕಿನ ಶಾಸನಗಳು ಕ್ರಿ.ಶ. ೧೨ನೆಯ ಶತಮಾನದಿಂದ ಕ್ರಿ.ಶ. ೧೪ನೆಯ ಶತಮಾನದವರೆಗೂ ಬೆಳಕು ಚೆಲ್ಲುತ್ತವೆ. ಇದರಿಂದ ಈ ಮೂರು ತಾಲ್ಲೂಕುಗಳ ಪೈಕಿ ವಿರಾಜಪೇಟೆ ತಾಲ್ಲೂಕಿನ ಶಾಸನಗಳು ಅತ್ಯಂತ ಪ್ರಾಚೀನ ಕಾಲದವುಗಳಾಗಿ ಕಂಡುಬರುತ್ತವೆ.

ವರ್ತಕಸಂಘಗಳಿಗೆ ಸಂಬಂಧಿಸಿದಂತೆ ಕೊಡಗು ಜಿಲ್ಲೆಯ ಹತ್ತು ಶಾಸನಗಳ ಪೈಕಿ ಮೊತ್ತ ಮೊದಲ ಮತ್ತು ಅತ್ಯಂತ ಪ್ರಾಚೀನ ಶಾಸನವೆಂದರೆ ವಿರಾಜಪೇಟೆ ತಾಲ್ಲೂಕಿನ ಕ್ರಿ.ಶ. ೮೮೮ರ ಬಿಳಿಯೂರು ಶಾಸನ. ಈ ಶಾಸನವು ಗಂಗ ದೊರೆ ಕೊಂಗುಣಿವರ್ಮನು ಜೈನ ಬಸದಿಗೆ ೧೨ ಗ್ರಾಮಗಳನ್ನು ದಾನ ಮಾಡಿದ್ದು, ಆ ದಾನವನ್ನು ಅಲ್ಲಿಯ ಐನೂರ್ವರು, ಮಲೆ ಸಾಸಿರ್ವರು (೧೦೦೦), ಮತ್ತು ಐವರು ಡಾಮರಿಗರೊಡಗೂಡಿ ಕಾಪಾಡುವುದಾಗಿತ್ತು.[೧೨] ಕ್ರಿ.ಶ. ೯೭೮ರ ಪೆಗ್ಗೂರು ಶಾಸನವು ಪೆಗ್ಗದೂರಿನ ಜೈನ ಬಸದಿಯ ನಿರ್ವಹಣೆಗಾಗಿ ಎರಡು ಗ್ರಾಮಗಳಾದ ಪೆಗ್ಗದೂರು ಮತ್ತು ಪೋಸವದಗಗಳನ್ನು ಗುಣಸೇನಪಂಡಿತನ ಶಿಷ್ಯನಾದ ಅನಂತವೀರ್ಯನು ದಾನ ಮಾಡಿದ್ದು, ಅವುಗಳನ್ನು ಅಲ್ಲಿಯ ಐನೂರ್ವರು, ನಾಲ್ಕು ಮಲೆಪರು ಮತ್ತು ಐವರು ಡಾಮರಿಗರೊಡನೆ ಕಾಪಾಡುವುದಾಗಿತ್ತು.[೧೩] ಇಲ್ಲಿ ಗಮನಿಸಬಹುದಾದ ಬಹಳ ಮುಖ್ಯವಾದ ಅಂಶವೆಂದರೆ ಆಳುವ ವರ್ಗ ಮತ್ತು ಪುರೋಹಿತಶಾಹಿವರ್ಗ ಧಾರ್ಮಿಕ ಕೇಂದ್ರಗಳಿಗೆ ದಾನ ಮಾಡುವ ಶಕ್ತಿ ಮತ್ತು ಅಧಿಕಾರವನ್ನು ಹೊಂದಿತ್ತು. ವ್ಯಾಪಾರಿವರ್ಗ ಕೇವಲ ಅದನ್ನು ನೋಡಿಕೊಳ್ಳುವ ಅಥವಾ ಬೇರೆಯವರು ಅದನ್ನು ಹಾಳುಮಾಡದ ಹಾಗೆ ಕಾಪಾಡುವುದಾಗಿತ್ತು. ಬಹುಶಃ ಈ ಸಮಯದಲ್ಲಿ ವ್ಯಾಪಾರಿವರ್ಗವು ದಾನ ಮಾಡುವ ಸಾಮರ್ಥ್ಯ ಹೊಂದಿರಲಿಲ್ಲ ಅಥವಾ ಅವರಿಗೆ ದಾನ ಮಾಡುವ ಹಕ್ಕನ್ನು ಸಮಾಜದ ಉನ್ನತ ವರ್ಗದವರಾದ ಪುರೋಹಿತಶಾಹಿವರ್ಗ ಮತ್ತು ಆಳುವ ವರ್ಗ ನೀಡಿರಲಿಲ್ಲ. ಇದಕ್ಕಾಗಿಯೇ ಸಮಾಜದ ಮೇಲ್ವರ್ಗದವರು ವರ್ತಕರನ್ನು ಕೇವಲ ತಾವು ನೀಡಿದ ದಾನವನ್ನು ಕಾಪಾಡುವ ಕೆಲಸ ನೀಡಿ ಸಮಾಜದಲ್ಲಿ ಅಂತರವನ್ನು ಕಾಪಾಡಿಕೊಂಡು ಬಂದಿರುವುದನ್ನು ಇಲ್ಲಿ ಗಮನಿಸಬಹುದು.

ಆದರೆ ಕ್ರಿ.ಶ. ೧೧ನೆಯ ಶತಮಾನದಿಂದ ವರ್ತಕರ ಸಾಮಾಜಿಕ ಸ್ಥಾನಮಾನಗಳಲ್ಲಿ ಬದಲಾವಣೆಗಳು ಆದದ್ದನ್ನು ನಾವು ಸ್ಪಷ್ಟವಾಗಿ ಗಮನಿಸಬಹುದು. ಇದಕ್ಕೆ ಸಂಬಂಧಿಸಿದಂತೆ ಸೋಮವಾರಪೇಟೆ ತಾಲ್ಲೂಕಿನ ಶಾಸನಗಳು ಹೆಚ್ಚು ಬೆಳಕು ಚೆಲ್ಲುತ್ತವೆ. ಉದಾಹರಣೆಗೆ ಕ್ರಿ.ಶ. ೧೦೭೦ರ ಹೊಸಹಳ್ಳಿ ಶಾಸನವು ರಾಜವಲ್ಲಭ ಶೆಟ್ಟಿಯು ಸುಳಿಗೋಡಿನ ಗೌರಾಟಿ ಎಂಬ ಕೆರೆಯ ನಿರ್ವಹಣೆಗಾಗಿ ೪೦ ಗದ್ಯಾಣಗಳನ್ನು ನೀಡಿದ್ದನ್ನು ತಿಳಿಸುತ್ತದೆ.[೧೪] ಇದೇ ಶಾಸನವು ಈ ಕೆರೆಯ ಹಿಂಭಾಗದಲ್ಲಿ ರಾಜೇಂದ್ರಪೃಥ್ವೀ ಕೊಂಗಾಳ್ವನು ಹೊಸ ಹವಳ್ಳಿಯ ಶ್ರೀ ವೀರಸಿದ್ದೇಶ್ವರ ದೇವರಿಗೆ ಗದ್ದೆಯನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ.[೧೫] ಅದೇ ತಾಲ್ಲೂಕಿನ ಮತ್ತು ಅದೇ ಕಾಲದ ಮುಳ್ಳೂರಿನ ಶಾಸನವು ಬಾವಿಯನ್ನು ತೋಡಿಸಲು ನಖರಗಳು ದಾನ ಮಾಡಿದ್ದನ್ನು ತಿಳಿಸುತ್ತದೆ.[೧೬] ಅಲ್ಲಿಯ ಮತ್ತೊಂದು ಶಾಸನವು ಉತ್ತಮ ಚೋಳಶೆಟ್ಟಿಯು ಸತ್ತಿದ್ದನ್ನು ತಿಳಿಸುತ್ತದೆ.[೧೭] ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ; ೧) ಇಲ್ಲಿಯೂ ಸಹ ಆಳುವ ವರ್ಗ ಮತ್ತು ಪುರೋಹಿತಶಾಹಿವರ್ಗ ವ್ಯಾಪಾರಿ ವರ್ಗದವರು ದೇವಾಲಯಗಳ ನಿರ್ಮಾಣ ಮತ್ತು ಅವುಗಳ ನಿರ್ವಹಣೆಗೆ ದಾನ ಮಾಡುವುದನ್ನು ತಡೆಹಿಡಿದಿರು

ವುದು, ೨) ಸಾರ್ವಜನಿಕ ಕೆಲಸಗಳಾದ ಕೆರೆ ಕಟ್ಟಿಸುವುದು, ಕೆರೆ ಸಂರಕ್ಷಣೆ ಮಾಡುವುದು, ಬಾವಿ ತೋಡಿಸುವುದು ಮುಂತಾದ ಕೆಲಸಗಳಲ್ಲಿ ತೊಡಗಿಸಿಕೊಂಡಿರುವುದು, ೩) ಸಾರ್ವಜನಿಕ ಕೆಲಸಗಳಿಗೆ ಹಣದ ರೂಪದಲ್ಲಿ ದಾನ ಮಾಡಿರುವುದು, ೪) ವರ್ತಕಸಂಘಗಳ ಉಲ್ಲೇಖದ ಜೊತೆಗೆ ವರ್ತಕರ ಹೆಸರನ್ನು ಶಾಸನಗಳು ಉಲ್ಲೇಖಿಸಿರುವುದು, ೫) ವರ್ತಕರ ಹೆಸರುಗಳ ಹಿಂದೆ ಆಳುವ ವರ್ಗದವರ ಹೆಸರುಗಳಾದ ರಾಜವಲ್ಲಭ ಮತ್ತು ಉತ್ತಮಚೋಳ ಎಂಬ ಹೆಸರುಗಳನ್ನು ಇಟ್ಟುಕೊಂಡಿರುವುದು, ಹಾಗೂ ೬) ಅವರು ಸತ್ತಾಗ ಅವರ ಹೆಸರನ್ನು ಶಾಸನದ ರೂಪದಲ್ಲಿ ದಾಖಲಿಸುವುದು.

ಈ ಮೇಲಿನ ಅಂಶಗಳನ್ನು ಗಮನಿಸಿದರೆ ವರ್ತಕ ಸಮುದಾಯವು ಈ ಸಮಯದಲ್ಲಿ ಆರ್ಥಿಕವಾಗಿ ಸಬಲವಾಗಿದ್ದರೂ, ದೇವಾಲಯಗಳ ನಿರ್ಮಾಣ ಮತ್ತು ಅವುಗಳ ಸಂರಕ್ಷಣೆ ಮಾಡುವ ಅವಕಾಶವನ್ನು ನೀಡದೆ ಅವುಗಳಿಗೆ ನೆರವಾಗುವ ಅಂದರೆ ಪೂಜಾಕೆಲಸಗಳಿಗೆ ಅತ್ಯವಶ್ಯಕವಾದ ನೀರನ್ನು ಒದಗಿಸುವ ಸಾಧನಗಳಾದ ಕೆರೆ ಮತ್ತು ಬಾವಿಗಳನ್ನು ಕಟ್ಟಿಸುವ ಮತ್ತು ಅವುಗಳ ಸಂರಕ್ಷಣಾ ಕಾರ್ಯವನ್ನು ವಹಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇಂತಹ ಕಾರ್ಯಗಳ ಮೂಲಕ ವ್ಯಾಪಾರಿವರ್ಗವು ಕ್ರಮೇಣವಾಗಿ ಸಮಾಜದ ಏಣಿಯನ್ನು ಹತ್ತಲಾರಂಭಿಸಿದ್ದನ್ನು ಕಾಣಬಹುದು. ಏಕೆಂದರೆ ಪುರೋಹಿತಶಾಹಿವರ್ಗ ದೇವಾಲಯಗಳನ್ನು, (ಶೈವ ಅಥವಾ ಜೈನ ಪಂಥದವುಗಳಾಗಿರಬಹುದು) ತಮ್ಮ ಹಿಡಿತದಲ್ಲಿಟ್ಟುಕೊಂಡು ಅದರಲ್ಲೂ ಗರ್ಭಗುಡಿಗೆ ಬೇರೆ ಯಾರೂ ಪ್ರವೇಶ ಮಾಡದ ಹಾಗೆ ಮಾಡಿ ಅಂತರಾಳಕ್ಕೆ ಆಳುವ ವರ್ಗಕ್ಕೆ ಮಾತ್ರ ಪ್ರವೇಶ ನೀಡಿ ತಮ್ಮ ಹಿಡಿತವನ್ನು ದೇವಾಲಯದ ಮೇಲೆ ಸ್ಥಾಪಿಸಿದ್ದನ್ನು ಕಾಣಬಹುದು. ಮೂರನೆ ಭಾಗವಾದ ನವರಂಗಕ್ಕೆ ಕ್ರಮೇಣವಾಗಿ ವರ್ತಕರು ಮತ್ತು ಭೂಮಾಲೀಕರಿಗೆ ಪ್ರವೇಶ ನೀಡಿದ್ದನ್ನು ಗಮನಿಸಬಹುದು. ಇದಲ್ಲದೆ ಈ ಸಮಯದಲ್ಲಿ ವರ್ತಕ ಸಂಘವು ಆಳುವ ವರ್ಗ ಮತ್ತು ಪುರೋಹಿತಶಾಹೀವರ್ಗಕ್ಕೆ ಹತ್ತಿರವಾಗುವುದನ್ನು ಸಹ ಗಮನಿಸಬಹುದು. ಇಂತಹ ಬೆಳವಣಿಗೆಗಳು ಆಗಲು ಪ್ರಮುಖ ಕಾರಣಗಳೆಂದರೆ ಆರ್ಥಿಕ ಕ್ಷೇತ್ರದಲ್ಲಾದ ಗಮನಾರ್ಹ ಬದಲಾವಣೆಗಳು. ಅವುಗಳೆಂದರೆ ಕ್ರಿ.ಶ. ೧೦ನೆಯ ಶತಮಾನದ ನಂತರ ಪ್ರಪಂಚದಾದ್ಯಂತ ಕೃಷಿ ಕ್ಷೇತ್ರದಲ್ಲಿ ಆದಂತಹ ಬದಲಾವಣೆಗಳಿಂದಾಗಿ ವ್ಯಾಪಾರ ವಹಿವಾಟುಗಳು ಪುನಃಶ್ಚೇತನಗೊಂಡು ಆ ಮುಖಾಂತರ ಹಣದ ಬಳಕೆಯು ಹೆಚ್ಚಾಗಿ, ಮಾರುಕಟ್ಟೆ ವ್ಯವಸ್ಥೆ ಮತ್ತೆ ಅಸ್ತಿತ್ವಕ್ಕೆ ಬಂದಿತು.[೧೮] ಇದರ ಪರಿಣಾಮವಾಗಿ ಅಂತರರಾಷ್ಟ್ರೀಯ ವ್ಯಾಪಾರವು ಸಹ ಪುನರಾರಂಭಗೊಂಡು ಭಾರತದೊಡನೆ ಅದರಲ್ಲೂ ದಕ್ಷಿಣ ಭಾರತದೊಡನೆ ವ್ಯಾಪಾರ ಗಣನೀಯ ಪ್ರಮಾಣದಲ್ಲಿ ಆರಂಭವಾಯಿತು. ಕೊಡಗಿನ ದಕ್ಷಿಣ ಭಾಗವು ಕೇರಳ ರಾಜ್ಯದೊಡನೆ ಗಡಿಯನ್ನು ಹಂಚಿಕೊಂಡಿರುವುದರಿಂದ, ಹಾಗೂ ಅಲ್ಲಿಯ ಕರಾವಳಿ ತೀರ ಪ್ರದೇಶವು ಪಶ್ಚಿಮ ದೇಶದ ವರ್ತಕರಿಂದ ಭೇಟಿಯಾಗುತ್ತಿದ್ದುದರಿಂದ, ಬೆಲೆಬಾಳುವ ವಸ್ತುಗಳಾದ ಸಾಂಬಾರ ಪದಾರ್ಥಗಳು, ಕುದುರೆಗಳು ಮತ್ತಿತರ ವಸ್ತುಗಳು ಹೆಚ್ಚಾಗಿ ಆಯಾತ ಮತ್ತು ನಿರ್ಯಾತಕ್ಕೊಳಗಾಗಿದ್ದವು. ಇದರಿಂದಾಗಿ ವ್ಯಾಪಾರಿಗಳು ಹೆಚ್ಚು ಲಾಭಗಳಿಸಲಾರಂಭಿಸಿದಾಗ ಅವರೂ ಸಹ ಸಮಾಜದ ಇತರ ಪ್ರತಿಷ್ಠಿತ ವರ್ಗದವರೊಡನೆ ಕ್ರಮೇಣವಾಗಿ ಸ್ಪರ್ಧೆಗಿಳಿಯಲಾರಂಭಿಸಿದರು. ಈ ಸ್ಪರ್ಧೆ ನೇರವಾಗಿಲ್ಲದಿದ್ದರೂ ಪರೋಕ್ಷವಾಗಿ ಅಂದರೆ ಜನಹಿತ ಕಾರ್ಯಗಳಾದ ಕೆರೆ, ಕಾಲುವೆ ಮತ್ತು ಬಾವಿಗಳ ನಿರ್ಮಾಣ ಮತ್ತು ಅವುಗಳ ಸಂರಕ್ಷಣೆ ಮಾಡುವುದರ ಮೂಲಕ ಮೊದಲು ಜನರ ಆಕರ್ಷಣೆಗೆ ಒಳಗಾಗಿ ಕ್ರಮೇಣ ಆಳುವ ಮತ್ತು ಪುರೋಹಿತಶಾಹಿ ವರ್ಗದವರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದನ್ನು ಇಲ್ಲಿ ಸ್ಪಷ್ಟವಾಗಿ ಗಮನಿಸಬಹುದು.

ಕ್ರಿ.ಶ. ೧೨ನೆಯ ಶತಮಾನದಲ್ಲಿ ವರ್ತಕ ಸಮಾಜವು ನೇರವಾಗಿ ದೇವಾಲಯಗಳ ನಿರ್ಮಾಣ ಮತ್ತು ಅವುಗಳ ಸಂರಕ್ಷಣೆಯಲ್ಲಿ ಭಾಗಿಯಾಗಿದ್ದನ್ನು ಕಾಣಬಹುದು. ಇದಕ್ಕೆ ಸಂಬಂಧಿಸಿದಂತೆ ಕೆಲವು ಶಾಸನಗಳು ಬೆಳಕು ಚೆಲ್ಲುತ್ತವೆ. ಉದಾಹರಣೆಗೆ; ಕ್ರಿ.ಶ. ೧೨ನೆಯ ಶತಮಾನದ ಮಡಿಕೇರಿ ಶಾಸನವು ತಾತಂಗಿಯ ಪಟ್ಟಣದ ನಖರಂಗಳು ಶ್ರೀ ಶಾಂತಿನಾಥದೇವರ ಪ್ರತಿಮೆಯನ್ನು ಮಾಡಿಸಿ ಅದನ್ನು ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ.[೧೯] ಅದೇ ತಾಲ್ಲೂಕಿನ ಅಂಜನಗಿರಿಯ ಶಾಸನವು ಶಾಂತಿನಾಥ ಬಸದಿಯಲ್ಲಿ ನಡೆಯುವ ಆಹಾರ ದಾನಕ್ಕೆ ನಾನಾದೇಶಿಯ ಹಲರು ಮಾಡಿದ ದತ್ತಿಯನ್ನು ತಿಳಿಸುತ್ತದೆ.[೨೦] ಮೇಲಿನ ವಿವರಗಳು ವರ್ತಕ ಸಮಾಜವು ಕ್ರಿ.ಶ. ೧೨ನೆಯ ಶತಮಾನದಲ್ಲಿ ಸಮಯಕ್ಕೆ ಆರ್ಥಿಕವಾಗಿ ಬಲಿಷ್ಠರಾಗಿದ್ದು, ಧಾರ್ಮಿಕ ಕೇಂದ್ರಗಳ ಮೇಲೆ ತಮ್ಮ ಹಿಡಿತವನ್ನು ಅಥವಾ ಪ್ರಭಾವವನ್ನು ಹೊಂದಲು ಮಾಡಿದ ಪ್ರಯತ್ನಗಳನ್ನು ಸೂಚಿಸುತ್ತವೆ.

ಕ್ರಿ.ಶ. ೧೩ನೆಯ ಶತಮಾನದ ಸೋಮವಾರಪೇಟೆ ತಾಲ್ಲೂಕಿನ ಹೆರೂರು ಶಾಸನವು ಪಟ್ಟಣಸ್ವಾಮಿಯನ್ನು ಉಲ್ಲೇಖಿಸುತ್ತದೆ.[೨೧] ಅದೇ ಕಾಲದ ಮತ್ತು ಅದೇ ತಾಲ್ಲೂಕಿನ ಚೌಡ್ಲು ಶಾಸನವು ಹೆಣ್ಣುಮಕ್ಕಳನ್ನು ಆಸ್ತಿಗೆ ಹಕ್ಕುದಾರಳನ್ನಾಗಿ ಮಾಡುವ ಕಟ್ಟಳೆ/ಕಾನೂನನ್ನು ಹರಿಹರನು ಮಾಡಿದ್ದು, ಅದರ ಪ್ರಕಾರ ಹೆಣ್ಣುಮಕ್ಕಳು ಹಾಗೂ ಅವರ ಮಕ್ಕಳಿಗೇ ಅಲ್ಲದೆ ದಾಸಿಯರ ಮಕ್ಕಳಿಗೂ ಆಸ್ತಿಯಲ್ಲಿ ಪಾಲು ಕೊಡುವ

ದಾಗಿತ್ತು.[೨೨] ಈ ಕಟ್ಟಳೆಯನ್ನು ನಾಡಿನ ಎಲ್ಲಾ ಗೌಡರಿಗೂ (ಜಮೀನ್ದಾರರು) ಮತ್ತು ನಖರಗಳಿಗೂ ಶಾಸನ ಮಾಡಿ ನೀಡಲಾಗಿತ್ತು. ಇದರ ಉದ್ದೇಶ ತಳಹಂತದಲ್ಲಿ ಇವರು ರಾಜನ ಕಟ್ಟಳೆಗಳನ್ನು ಅನುಷ್ಠಾನಗೊಳಿಸುವುದಾಗಿತ್ತು. ಹದಿನಾಲ್ಕನೆ ಶತಮಾನದ ಮಡಿಕೇರಿ ತಾಲ್ಲೂಕಿನ ಭಾಗಮಂಡಲ ಮತ್ತು ಪಲ್ಲೂರು ಶಾಸನಗಳು ಹದಿನೆಂಟು ದೇಶದ ಸಾಸಿರ್ವರು ಮತ್ತು ವಳಂಚಿಯರ್ (ವರ್ತಕರು) ವಾಗಂಡ (ಭಾಗಮಂಡಲ) ದೇವಾಲಯವನ್ನು ಸಂರಕ್ಷಿಸುವುದಕ್ಕೆ ಕ್ರಮ ಕೈಗೊಂಡಿದ್ದನ್ನು ತಿಳಿಸುತ್ತವೆ.[೨೩]

ಈ ಮೇಲಿನ ವಿವರಣೆಗಳು ಕೊಡಗಿನಲ್ಲಿ ವರ್ತಕ ಸಮುದಾಯ ಮತ್ತು ಅವರ ಸಂಘಗಳಾದ ಐನೂರ್ವರು, ನಖರಂಗಳು, ಪಟ್ಟಣಶೆಟ್ಟಿ, ನಾನಾದೇಶಿಯರು, ಹಲರು ಮುಂತಾದ ವರ್ತಕ ಸಂಘಗಳು ಪೂರ್ವ ಮಧ್ಯಯುಗೀನ ಕಾಲದಲ್ಲಿ ಅಸ್ತಿತ್ವದಲ್ಲಿದ್ದು ಅವು ಅಂದಿನ ದೈನಂದಿನ ಜನಜೀವನದಲ್ಲಿ ಪಾಲ್ಗೊಂಡಿದ್ದನ್ನು ತಿಳಿಸುತ್ತವೆ. ಆದರೆ ಈ ವರ್ತಕ ಸಂಘಗಳಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು ಸಹ ಕಂಡುಬರುತ್ತವೆ. ಅವುಗಳೆಂದರೆ; ೧) ಅವರು ಯಾವ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದರು ಮತ್ತು ಮಾರುತ್ತಿದ್ದರು, ೨) ಅವರು ಬಳಸುತ್ತಿದ್ದ ವ್ಯಾಪಾರ ಮಾರ್ಗಗಳು ಯಾವುವು? ಮತ್ತು ೩) ಅವುಗಳ ಮೇಲೆ ಯಾವ ರೀತಿಯ ತೆರಿಗೆಯನ್ನು ವಿಧಿಸುತ್ತಿದ್ದುದರ ಬಗ್ಗೆ ಶಾಸನಗಳಲ್ಲಿ ಯಾವುದೇ ಮಾಹಿತಿಯಿಲ್ಲ. ಆದರೆ ಕರ್ನಾಟಕದ ಇತರ ಭಾಗದಲ್ಲಿ ದೊರಕಿರುವ ಶಾಸನಗಳು ವ್ಯಾಪಾರಿ ಸಂಘಗಳ ಬಗ್ಗೆ ವಿಪುಲ ಮಾಹಿತಿ ನೀಡುವುದರ ಜೊತೆಗೆ ಅವರು ವ್ಯಾಪಾರ ಮಾಡುತ್ತಿದ್ದ ವಸ್ತುಗಳು, ಬಳಸುತ್ತಿದ್ದ ವ್ಯಾಪಾರ ಮಾರ್ಗಗಳು, ಮತ್ತು ಅವುಗಳ ಮೇಲೆ ವಿಧಿಸುತ್ತಿದ್ದ ತೆರಿಗೆಗಳ ಬಗ್ಗೆ ವಿಪುಲ ಮಾಹಿತಿ ನೀಡುತ್ತವೆ. ಇಂತಹ ಸಮಸ್ಯೆಗಳನ್ನು ಪರಿಹರಿಸಲು ಪೂರ್ವ ಮಧ್ಯಯುಗೀನ ಕಾಲದ ಕೊಡಗಿನಲ್ಲಿ ಲಿಖಿತರೂಪದ ದಾಖಲೆಗಳ ಕೊರತೆ ಹೆಚ್ಚಾಗಿ ಕಂಡುಬರುತ್ತದೆ. ಈ ಸಮಸ್ಯೆಗಳನ್ನು ಬಗೆಹರಿಸಿಕೊಂಡರೆ ವರ್ತಕ ಸಮುದಾಯ ಮತ್ತು ಅವರ ಸಂಘಗಳ ಸಂಪೂರ್ಣ ಚಿತ್ರಣ ನೀಡಲು ಸಾಧ್ಯವಾಗುತ್ತದೆ.

ಆಧಾರಸೂಚಿ

೧. ಕೊಡಗಿನ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಕೆಲವೇ ಸಂಶೋಧಕರು ಕೆಲಸ ಮಾಡಿದ್ದಾರೆ. ಅವರಲ್ಲಿ ಎಂ.ಜಿ. ನಾಗರಾಜ್ ಪ್ರಮುಖರಾಗಿ ಕಂಡುಬರುತ್ತಾರೆ. ಅವರ ಪ್ರಮುಖ ಲೇಖನಗಳೆಂದರೆ 'ಕೊಡಗು ಜಿಲ್ಲೆಯ ಸುಗ್ಗಿ ಕಟ್ಟೆಗಳು', ಇತಿಹಾಸ ದರ್ಶನ, ಸಂಪುಟ ೩, ಸಂಚಿಕೆ ೧, (ಬೆಂಗಳೂರು, ೧೯೮೮), ಪುಟ ೬೭-೧೦೯, 'ಕೊಡಗು ಶ್ರೀರಂಗಪಟ್ಟಣ-ಒಂದು ಶೋಧ, ಇತಿಹಾಸ ದರ್ಶನ, ಸಂಪುಟ ೫, (ಬೆಂಗಳೂರು, ೧೯೯೦), ಪುಟ ೧೦೮-೧೧೫, 'ಹರಿಸೇವೆ ಮತ್ತು ಕೊಡಗಿನ ಹರಿಸೇವೆ ಕಲ್ಲುಗಳು-ಒಂದು ಟಿಪ್ಪಣಿ', ಇತಿಹಾಸ ದರ್ಶನ, ಸಂಪುಟ ೬, (ಬೆಂಗಳೂರು, ೧೯೯೧), ಪುಟ ೧೦೦-೧೦೪, 'ಕೊಡಗು ಜಿಲ್ಲೆಯ ವೀರಶೈವ ಮಠಗಳು', ಇತಿಹಾಸ ದರ್ಶನ, ಸಂಪುಟ ೭, (ಬೆಂಗಳೂರು, ೧೯೯೨), ಪುಟ ೧೫೯-೧೭೦, 'ಕೊಡಗಿನ ಕಲ್ ಬೋಟಗಳು (ಮೇಟ ಕಂಬಗಳು)', ಇತಿಹಾಸ ದರ್ಶನ, ಸಂಪುಟ ೮, (ಬೆಂಗಳೂರು, ೧೯೯೩), ಪುಟ ೧೫೦-೧೫೫, 'ಕೊಡಗಿನ ಎರಡನೆ ಲಿಂಗರಾಜೇಂದ್ರ ಒಡೆಯನ ಓಂಕಾರೇಶ್ವರ ದೇಗುಲದ ಅಪ್ರಕಟಿತ ನಿರೂಪ,' ಇತಿಹಾಸ ದರ್ಶನ, ಸಂಪುಟ ೧೫, (ಬೆಂಗಳೂರು, ೨೦೦೦), ಪುಟ ೧೦೫-೧೨೧, 'ಕೊಡಗಿನ ಐನ್ ಮನೆಗಳು ಮತ್ತು ಸಂಕೀರ್ಣ', ಇತಿಹಾಸ ದರ್ಶನ, ಸಂಪುಟ ೧೬, (ಬೆಂಗಳೂರು, ೨೦೦೧), ಪುಟ ೧೫೫-೧೬೯, 'ಕೊಡಗಿನ ಮನೆಪದಗಳು (ಮನೆತನಗಳ ಹೆಸರು)', ಇತಿಹಾಸ ದರ್ಶನ, ಸಂಪುಟ ೧೭, (ಬೆಂಗಳೂರು, ೨೦೦೨), ಪುಟ ೨೫೦-೨೬೫, 'ಕೊಡಗು, ಬೆಂಗಳೂರು, ಹಾಸನ ಜಿಲ್ಲೆಯ ಕೆಲವು ಅಪ್ರಕಟಿತ ನಿರೂಪಗಳು, ಶಾಸನಗಳು ಹಾಗೂ ಪ್ರಾಚ್ಯಾವಶೇಷಗಳು, ಇತಿಹಾಸ ದರ್ಶನ, ಸಂಪುಟ ೨೧, (ಬೆಂಗಳೂರು, ೨೦೦೬), ಪುಟ ೩೩೭-೩೫೨, '೨೦ನೇ ಶತಮಾನದ ಮೊದಲ ದಶಕಗಳ ಎರಡು ಕೃತಿಗಳು, ಗುತ್ತಲಿನ ಮಠಾದರ್ಶ ಮತ್ತು ಕೊಡಗಿನ ಪಟ್ಟೋಲೆ ಪಳಮೆ', ಇತಿಹಾಸ ದರ್ಶನ, ಸಂಪುಟ ೨೩, (ಬೆಂಗಳೂರು, ೨೦೦೮), ಪುಟ ೨೫೨-೨೬೪, 'ಕೊಡಗಿನ ಎರಡು ಅಪೂರ್ವ ಜೈನ ಮತ್ತು ಬೌದ್ಧ ಶಿಲಾ ಶಿಲ್ಪ ಫಲಕಗಳು', ಇತಿಹಾಸ ದರ್ಶನ, ಸಂಪುಟ ೧೧, (ಬೆಂಗಳೂರು, ೧೯೯೬), ಪುಟ ೭೭-೮೨, 'ಕೊಡಗಿನ ಆರಾಧನಾ ನೆಲೆಗಳು-ಆಚರಣೆಗಳು', ಇತಿಹಾಸ ದರ್ಶನ, ಸಂಪುಟ ೨೪, (ಬೆಂಗಳೂರು, ೨೦೦೯), ಪುಟ ೨೫೧-೨೬೪, 'ಕೊಡಗಿನ ಪನ್ನ (ಜಮೀನು)ಗಳು', ಇತಿಹಾಸ ದರ್ಶನ, ಸಂಪುಟ ೯, (ಬೆಂಗಳೂರು, ೧೯೯೪), ಪುಟ ೨೨೩-೨, 'ಕೊಡಗಿನ ಜನಾಲಯಗಳು ಮತ್ತು ಅನ್ವಯಿಕ ವಿಷಯಗಳು', ಇತಿಹಾಸ ದರ್ಶನ, ಸಂಪುಟ ೨೭, (ಬೆಂಗಳೂರು, ೨೦೧೨), ಪುಟ ೧೬೫-೧೫೪, ಮತ್ತು ಎಂ.ಜಿ. ಚಂದ್ರಕಾಂತ್ ಮತ್ತು ಎಂ.ಜಿ. ನಾಗರಾಜ್, 'ಕೊಡಗಿನ ದೇವರ ಕಾಡುಗಳು', ಇತಿಹಾಸ ದರ್ಶನ, ಸಂಪುಟಟ ೮, (ಬೆಂಗಳೂರು, ೧೯೯೩), ಪುಟ ೧೫೩-೧೬೩, 'ಕೊಡಗಿನ ನಾಗರಹೊಳೆಯ ಸಾಂಸ್ಕೃತಿಕ ಇತಿಹಾಸ ಮತ್ತು ಚಂಗಾಳ್ವರು, ಇತಿಹಾಸ ದರ್ಶನ, ಸಂಪುಟಟ ೧೨, (ಬೆಂಗಳೂರು, ೧೯೯೭), ಪುಟ ೧೪೦-೧೪೯, 'ಕೊಡಗಿನ ದೊಡ್ಡ ವೀರರಾಜೇಂದ್ರ ಒಡೆಯನ ಶಿಸ್ತು, ಹುಕುಂನಾಮ-ನಿರೂಪಗಳು, ಇತಿಹಾಸ ದರ್ಶನ, ಸಂಪುಟ ೧೩, (ಬೆಂಗಳೂರು, ೧೯೯೮), ಪುಟ ೨೫೮-೨೬೫, 'ಕೊಡಗು ಮತ್ತು ಕೆಳದಿ ಅರಸರ ಮಂಡಿಕ ಸಂಬಂಧಗಳು', ಇತಿಹಾಸ ದರ್ಶನ, ಸಂಪುಟ ೧೪, (ಬೆಂಗಳೂರು, ೧೯೯೯), ಪುಟ ೨೫೬-೨೬೭, 'ಕೊಡಗಿನ ಕಲ್ಪವೃಕ್ಷ', ಇತಿಹಾಸ ದರ್ಶನ, ಸಂಪುಟ ೧೯, (ಬೆಂಗಳೂರು, ೨೦೦೪), ಪುಟ ೨೯೩-೨೯೭, 'ಕೊಡಗಿನ ಕೊಂಗಾಳ್ವರು ಮತ್ತು ಜೈನಧರ್ಮ', ಇತಿಹಾಸ ದರ್ಶನ, ಸಂಪುಟ ೨೬, (ಬೆಂಗಳೂರು, ೨೦೧೧), ಪುಟ ೧೬೬-೧೭೬, ಮತ್ತು ಎಂ.ಎಂ. ಮೀನಾಕ್ಷಿ, ಕೊಡಗಿನ ಎರಡು ಅಪೂರ್ವ ಶಾಸನಗಳು, ಇತಿಹಾಸ ದರ್ಶನ, ಸಂಪುಟ ೪, (ಬೆಂಗಳೂರು, ೧೯೮೯), ಪುಟ ೨೦-೨೨, ಎಂ.ಜಿ. ನಾಗರಾಜ್, ಕೊಡಗಿನ ಪಾಲೇರಿ ರಾಜವಂಶ, ವಾಸ್ತುವಸ್ತು ಮತ್ತು ಸಂಗ್ರಹಾಲಯ

ನಿರ್ದೇಶನಾಲಯ, (ಹೊಸಪೇಟೆ, ೨೦೦೪), ಕೆಂಬಟ್ಟಿ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, (ಬೆಂಗಳೂರು, ೧೯೯೩), ಕೊಡಗಿನ ಕೈಮಡಗಳು,ಕನ್ನಡ ಸಾಹಿತ್ಯ ಪರಿಷತ್ತು, (ಬೆಂಗಳೂರು, ೨೦೦೪), ಕೊಡಗಿನ ಶಾಸನ ಸಂಪತ್ತು, ಕನಕಸಿರಿ, (ಬೆಂಗಳೂರು, ೧೯೯೯). ಈ ಮೇಲಿನ ಲೇಖನಗಳಲ್ಲಿ ಎಲ್ಲಿಯೂ ವರ್ತಕ ಸಮುದಾಯ ಮತ್ತು ಸಂಘಗಳಿಗೆ ಸಂಬಂಧಿಸಿದಂತೆ ಮಾಹಿತಿಯಿಲ್ಲ.

೨. ಕೆ.ಎಂ. ಲೋಕೇಶ್., ಕಾಫಿ ಪ್ಲಾಂಟೇಶನ್ ಇನ್ ಕಲೋನಿಯಲ್ ಕೂರ್ಗ್: ಎ ಸೋಷಿಯೋ ಎಕನಾಮಿಕ್ ಸ್ಟಡಿ (೧೮೩೪-೧೯೪೭), ಅಪ್ರಕಟಿತ ಪಿಹೆಚ್.ಡಿ. ಪ್ರಬಂಧ, ಕುವೆಂಪು ವಿಶ್ವವಿದ್ಯಾನಿಲಯ, ೧೯೯೩, ಟಿ.ಪಿ. ವಿಜಯ್., ಜಮ್ಮಾ ಟೆನ್ಯೂರ್ ಇನ್ ಕೂರ್ಗ್, ಅಪ್ರಕಟಿತ ಪಿಹೆಚ್.ಡಿ. ಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ, ೧೯೯೫, ಮತ್ತು ಇತರೆ ಕೃತಿಗಳು.

೩. ಬಿ.ಆರ್. ಗೋಪಾಲ್ (ಸಂ.) ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೧, (ಮೈಸೂರು, ೧೯೭೨), ಪುಟ ೧-೬೪.

೪. ಅದೇ., ಸಂಪುಟ. ೯, (ಮೈಸೂರು, ೧೯೯೦), ಪುಟ ೫೦೩-೫೪೨.

೫. ಎ.ವಿ. ನರಸಿಂಹಮೂರ್ತಿ (ಸಂ.) ಅದೇ., ಸಂಪುಟ ೧೧, (ಮೈಸೂರು, ೧೯೯೮), ಪುಟ ೦೩-೧೪೯.

೬ ಅದೇ., ಪುಟ ೧೫೦-೨೩೯.

೭. ಅದೇ., ಪುಟ ೨೪೧-೩೫೨.

೮. ಅದೇ., ಸಂಪುಟ ೧, ಸೋಮವಾರಪೇಟೆ ತಾಲ್ಲೂಕಿನ ಹೆರೂರು (೩೬), ಹೊಸಪಳ್ಳಿ (೪೫), ಚೌಡ್ಲು (೬೦), ಮುಳ್ಳೂರು (೭೯ ಮತ್ತು ೮೨).

೯. ಅದೇ., ಮಡಿಕೇರಿ ತಾಲ್ಲೂಕಿನ ಮಡಿಕೇರಿ (೬), ಅಂಜನಗಿರಿ (೧೯), ಭಾಗಮಂಡಲ (೨೧).

೧೦. ಅದೇ., ವಿರಾಜಪೇಟೆ ತಾಲ್ಲೂಕಿನ ಬಿಳಿಯೂರು (೯೬), ಮತ್ತು ಪೆಗ್ಗೂರು (೯೮).

೧೧. ಎಂ.ಜಿ. ನಾಗರಾಜ್, 'ಕೊಡಗು, ಬೆಂಗಳೂರು, ತುಮಕೂರು ಜಿಲ್ಲೆಯ ಕೆಲವು ಅಪ್ರಕಟಿತ ಶಾಸನಗಳು' ಇತಿಹಾಸ ದರ್ಶನ, ಸಂಪುಟ ೨೦, (ಬೆಂಗಳೂರು, ೨೦೦೫), ಪುಟಗಳು ೧೦೯-೧೨೯, ಈ ಲೇಖನದಲ್ಲಿ ಸೋಮವಾರಪೇಟೆ ತಾಲ್ಲೂಕಿನ ಮೂರು ಶಾಸನಗಳನ್ನು ದೊಡ್ಡಮಳತೆ ಗ್ರಾಮ (೧೧ನೇ ಶತಮಾನ), ಕುಸುಬೂರು ಗ್ರಾಮ (ಕ್ರಿ.ಶ. ೧೧೭೫), ಮತ್ತು ಕ್ರಿ.ಶ. ೧೧೪೭ರ ಚೌಡ್ಲು ಶಾಸನದ ಪಾಠವನ್ನು ನೀಡಿದ್ದಾರೆ. ಅದೇ., ಕೊಡಗಿನ ಕೊಂಗಾಳ್ವ ರಾಜಧಾನಿ ಮಾಲಂಬಿ ಮತ್ತು ಮಾದ್ರೆಯ ಹೊಸ ವೀರಶಾಸನಗಳು ಇನ್ ಇತಿಹಾಸ ದರ್ಶನ, ಸಂಪುಟ ೨೬, (ಬೆಂಗಳೂರು, ೨೦೧೧), ಪುಟ ೧೬೭-೧೭೬. ಈ ಲೇಖನದಲ್ಲಿ ಸೋಮವಾರಪೇಟೆ ತಾಲ್ಲೋಕಿನ ಮಾದ್ರೆಯಲ್ಲಿ ಕ್ರಿ.ಶ. ೧೧೨೮, ೧೧೩೫ ಮತ್ತು ೧೧೭೯ರ ಮೂರು ಶಾಸನಗಳ ಪಾಠ ನೀಡಿದ್ದಾರೆ. ಮತ್ತು ಎಂ.ಜಿ. ನಾಗರಾಜ್ ಹಾಗೂ ಎಂ.ಹೆಚ್. ಸಿದ್ದನಗೌಡ, 'ಬೆಂಗಳೂರು ಮತ್ತು ಕೊಡಗು ಜಿಲ್ಲೆಯ ಕೆಲವು ಅಪ್ರಕಟಿತ ಶಾಸನಗಳು' ಇತಿಹಾಸ ದರ್ಶನ, ಸಂಪುಟ ೧೪, (ಬೆಂಗಳೂರು, ೧೯೯೯), ಪುಟ ೩೮-೩೯. ಈ ಲೇಖನದಲ್ಲಿ ವಿರಾಜಪೇಟೆ ತಾಲ್ಲೂಕಿನ ಮಡಿಕೇರಿ ಬಳಿಯಲ್ಲಿ ಪೈಸೂಡ್ಲೂರಿನ ಕ್ರಿ.ಶ. ೭-೮ನೇ ಶತಮಾನದ ಶಾಸನ ಮತ್ತು ಸೋಮವಾರಪೇಟೆ ತಾಲ್ಲೂಕಿನ ಅಬ್ಬಿಮಠದ ಕ್ರಿ.ಶ. ೧೫ನೇ ಶತಮಾನದ ಶಾಸನದ ಪಾಠವನ್ನು ನೀಡಿದ್ದಾರೆ.

೧೨. ಎ.ಕ. ಸಂಪುಟ ೧, ಶಾಸನ ಸಂಖ್ಯೆ ೯೬, ಬಿಳಿಯೂರು.

೧೩. ಅದೇ., ಶಾಸನ ಸಂಖ್ಯೆ ೯೮ (೪).

೧೪. ಅದೇ., ಶಾಸನ ಸಂಖ್ಯೆ ೪೮.

೧೫. ಅದೇ.,

೧೬. ಅದೇ., ಶಾಸನ ಸಂಖ್ಯೆ ೭೯.

೧೭. ಅದೇ., ಶಾಸನ ಸಂಖ್ಯೆ ೮೨.

೧೮. ಹೆನ್ರಿ ಪಿರೆನ್ನೆ., ಎಕನಾಮಿಕ್ ಅಂಡ್ ಸೋಷಿಯಲ್ ಹಿಸ್ಟರಿ ಆಫ್ ಮೆಡಿವಲ್ ಯೂರೋಪ್, ಮರುಮುದ್ರಣ, (ಲಂಡನ್, ೧೯೭೮), ಪುಟ ೯೭-೧೦೩.

೧೯. ಅದೇ., ಶಾಸನ ಸಂಖ್ಯೆ. ೬.

೨೦. ಅದೇ., ಶಾಸನ ಸಂಖ್ಯೆ. ೧೯.

೨೧. ಅದೇ., ಶಾಸನ ಸಂಖ್ಯೆ. ೩೬.

೨೨. ಅದೇ., ಶಾಸನ ಸಂಖ್ಯೆ. ೬೦.

೨೩. ಅದೇ., ಶಾಸನ ಸಂಖ್ಯೆ. ೨೧.

೫೧

ದೇವಚಂದ್ರನ ರಾಜಾವಳೀ ಕಥೆಯಲ್ಲಿ ಶ್ರವಣಬೆಳಗೊಳ

ಡಾ. ನಳಿನಿ ವೆಂಕಟೇಶ್*

ದೇವಚಂದ್ರನ ಕಾಲ ದೇಶ ಹಾಗೂ ಕೃತಿಗಳ ಬಗೆಗೆ ಆತನ ಗ್ರಂಥಗಳಲ್ಲೇ ಸಾಕಷ್ಟು ಸಂಗತಿಗಳು ತಿಳಿದುಬರುತ್ತದೆ. ಸ್ಥಳ ಮಲೆಯೂರು, ಈತನ ತಾತ ದೇವಚಂದ್ರ, ತಂದೆ ದೇವಯ್ಯ, ತಾಯಿ ಕುಸುಮಾಜಮ್ಮ, ಚಂದಪಾರ್ಯ ಹಾಗೂ ಪದ್ಮರಾಜರು ಈತನ ಅಣ್ಣತಮ್ಮಂದಿರು. ದೇವಚಂದ್ರನ ಕಾಲ ಕ್ರಿ.ಶ. ೧೭೭೦–೧೮೪೧. ಈತನು ಪೂಜ್ಯಪಾದ ಚರಿತೆ, ಸುಮೇರು ಶತಕ, ಯಕ್ಷಗಾನ, ರಾಮಕಥಾವತಾರ, ಭಕ್ತಿಸಾರ, ಶತಕತ್ರಯ, ಶಾಸ್ತ್ರಸಾರ ಲಘುವೃತ್ತಿ, ಪ್ರವಚನ ಸಿದ್ಧಾಂತ, ದ್ರವ್ಯ ಸಂಗ್ರಹ, ರಾಜಾವಳೀ ಕಥಾಸಾರ ಇತ್ಯಾದಿ ಗ್ರಂಥಗಳನ್ನು ರಚಿಸಿದ್ದಾನೆ. ಕ್ರಿ.ಶ. ೧೮೦೪ರಲ್ಲಿ ಮೈಸೂರು ಸೀಮೆ ಪೈಮಾಸಿ ಮಾಡಲು ಬಂದ ಮೆಕಂಜಿ ಎಂಬ ಆಂಗ್ಲ ಸರದಾರನು ಲಕ್ಷ್ಮಣರಾಯನೆಂಬುವನ ಜೊತೆ ಕನಕಗಿರಿಗೆ ಬಂದನು. ಆತನು ದೇವಚಂದ್ರನನ್ನು ಕುರಿತು 'ಸ್ಥಳ ಪುರಾಣಮುಂಜಿ' ಎಂದು ಕೇಳಲು ತಾನು ರಚಿಸಿದ್ದ 'ಪೂಜ್ಯಪಾದ ಚರಿತೆ' ಯನ್ನು ಓದಿದನು. ಅದನ್ನು ಕೇಳಿದ ಮೆಕೆಂಜಿಯು ದೇವಚಂದ್ರನನ್ನು ಕರೆದುಕೊಂಡು ಆ ಪ್ರಾಂತ್ಯವನ್ನೆಲ್ಲ ಸುತ್ತಾಡಿದನು. ಕೊನೆಗೆ "ಕರ್ನಾಟಕ ದೇಶದೊಳು ನಡೆದ ಪ್ರಪಂಚಗಳನ್ನೆಲ್ಲ ಕ್ರೋಢೀಕರಿಸಿ ಬರೆದು ತಾನಿದ್ದಲ್ಲಿಗೆ ತಂದು ಕೊಡುವಂತೆ" ತಿಳಿಸಿದನು. ಈ ಎಲ್ಲ ಸಂಗತಿಗಳು ರಾಜಾವಳೀ ಕಥೆಯಲ್ಲಿ ಬಂದಿವೆ.

ರಾಜಾವಳೀ ಕಥೆಯಲ್ಲಿ ಹದಿಮೂರು ಅವತಾರಗಳಿವೆ. ಮೆಕೆಂಜಿ ಹೇಳಿದಂತೆ, ದೇವಚಂದ್ರನು 'ಹಿಂದಿನ ಪ್ರಪಂಚು' ಗಳನ್ನು ತನ್ನ ಗದ್ಯಕೃತಿಯಲ್ಲಿ ಹೇಳಿದ್ದಾನೆ. ಆದರೆ ಕೃತಿರಚನೆಗೆ ಏಕಸೂತ್ರತೆಯನ್ನು ತಂದುಕೊಳ್ಳಲಿಲ್ಲ. ಅವನ ಉದ್ದೇಶ ಜೈನಧರ್ಮವನ್ನು ಎತ್ತಿ ಹಿಡಿಯುವುದೇ ಆಗಿತ್ತು.

ದೇವಚಂದ್ರನ ಶೈಲಿ ಆಧುನಿಕ ಪೂರ್ವಕನ್ನಡದಲ್ಲಿದೆ. ಹೇಳಬೇಕಾದುದನ್ನು ನೇರವಾಗಿ ಸ್ಪಷ್ಟವಾಗಿ ಹೇಳುತ್ತಾನೆ. ತನ್ನ ವಿಚಾರಗಳನ್ನು ಪ್ರತಿಪಾದಿಸಲು ಸಂಸ್ಕೃತ, ಪ್ರಾಕೃತ ಹಾಗೂ ಕನ್ನಡ ಪದ್ಯಗಳನ್ನು ಬಳಸಿಕೊಳ್ಳುತ್ತಾನೆ. ಅಲ್ಲದೆ ಕನ್ನಡ ಗಾದೆ, ಸಂಸ್ಕೃತ ಸೂಕ್ತಿ, ದಾಖಲೆಗಳು, ಜೈನ ಜಾನಪದ ಕಥೆ, ಸ್ಥಳಪುರಾಣ, ಪುರಾಣಗಳು, ಚಾರಿತ್ರಿಕ ಘಟನೆಗಳನ್ನು ತನ್ನ ಆಶಯಕ್ಕೆ ತಕ್ಕಂತೆ ಪೋಣಿಸುತ್ತಾ ಹೋಗುತ್ತಾನೆ.

ರಾಜಾವಳೀ ಕಥೆಯಲ್ಲಿ ಶ್ರವಣಬೆಳಗೊಳದ ವಿಷಯವು ಮೊದಲು ಪ್ರಾರಂಭವಾಗುವುದು, ಉತ್ತರ ಭಾರತದಲ್ಲಿ ಹನ್ನೆರಡು ವರ್ಷ ಬರಗಾಲ ಬಂದು, ಭದ್ರಬಾಹು ಭಟಾರರು, ಚಂದ್ರಗುಪ್ತ ಹಾಗೂ ೧೨೦೦೦ ಶಿಷ್ಯರ ಜೊತೆ ಶ್ರವಣಬೆಳಗೊಳದ ಚಿಕ್ಕಬೆಟ್ಟಕ್ಕೆ ಬಂದ ವಿಷಯದಿಂದ. ಈ ಕಥೆಯು ವಡ್ಡಾರಾಧನೆಯಲ್ಲಿ ಉಲ್ಲೇಖಿಸಿದಂತೆಯೇ ಇದೆ. ಅದರಲ್ಲಿ ಹೆಚ್ಚೇನೂ ಬದಲಾವಣೆ ಇಲ್ಲ.

ಚಿಕ್ಕಬೆಟ್ಟದಲ್ಲಿ ಭದ್ರಬಾಹು ಭಟಾರರ ಗುಹೆ ಹಾಗೂ ಪಾದ ಚಿನ್ಹೆಗಳನ್ನು ಇಂದಿಗೂ ಕಾಣಬಹುದು. ಚಂದ್ರಗುಪ್ತನದೆಂದು ಹೇಳುವ ಕತ್ತಲೆ ಬಸದಿ ಸಹ ಇದೆ.

ಬೆಳ್ಗೊಳವೆಂದು ಹೆಸರು ಬಂದ ಕಾರಣವನ್ನು ದೇವಚಂದ್ರ ಹೀಗೆ ಹೇಳುತ್ತಾನೆ. ಪಾಟಲೀಪುರದ ಸಿಂಹಸೇನನ ಮಗ ಭಾಸ್ಕರರಾಜ (ಚಂದ್ರಗುಪ್ತನ ಮಗ ಸಿಂಹಸೇನ). ಭಾಸ್ಕರರಾಜನು ಗುರುವಂದನಾರ್ಥವಾಗಿ ಸೈನ್ಯ ಸಮೇತನಾಗಿ ಬಂದು ಭದ್ರಬಾಹುಸ್ವಾಮಿಗಳ ನಿಷಿಧಿ ಸ್ಥಾನವನ್ನು ಪೂಜಿಸಿದನು. ಗುರುಪಿತಾಮಹರಾದ ಚಂದ್ರಗುಪ್ತರಿಗೆ ನಮಸ್ಕರಿಸಿದನು. ಅಲ್ಲಿಯೇ ಬೀಡುಬಿಟ್ಟಿದ್ದು ಚೈತ್ಯಾಲಯಗಳನ್ನು ನಿರ್ಮಿಸಿ, ಆ ಗಿರಿಯ ಸಮೀಪದಲ್ಲಿ ಒಂದು ಪಟ್ಟಣ ವನ್ನು ನಿರ್ಮಿಸಿದನು. ಕೆಲವು ದಿನಗಳಲ್ಲಿಯೇ ಅದಕ್ಕೆ ಬೆಳ್ಗುಳವೆಂದು ಹೆಸರಾಯಿತು.

ದೇವಚಂದ್ರನು ಮೊದಲ ಬಾರಿಗೆ 'ಬೆಳ್ಗೊಳವೆಂಬ ಹೆಸರು ಬಂದುದನ್ನು ತಿಳಿಸುತ್ತಾನೆ. ಕ್ರಿ.ಶ. ೬–೭ನೇ ಶತಮಾನದಿಂದಲೇ ಬೆಳ್ಗೊಳ ಹೆಸರು ಶಾಸನೋಕ್ತವಾಗಿದೆಯೆಂದು ತಿಳಿಯುತ್ತದೆ. ಭದ್ರಬಾಹು ಭಟಾರರು ಹಾಗೂ ಚಂದ್ರಗುಪ್ತ ಚರಿಗೆಗೆ ಹೋಗುತ್ತಿದ್ದ ಊರು ಕ್ರಿ.ಪೂ. ೩ನೇ ಶತಮಾನದ ಹೊತ್ತಿಗೇ ಇದ್ದಿತು. ಅದೇ ಊರನ್ನೇ ಭಾಸ್ಕರರಾಜನು ನಿರ್ಮಿಸಿದ್ದೆಂದು ದೇವಚಂದ್ರನು ಹೇಳಿರಬಹುದು.

* # ೧೫. 'ಮನಸ್ವಿನಿ' ಸ್ನೇಹ ಕಾಲೋನಿ, ಚಿಕ್ಕಲ್ಲಸಂದ್ರ, ಬೆಂಗಳೂರು-೫೬೦೦೬೧

ಮುಂದೆ ದೇವಚಂದ್ರನು ಚಾವುಂಡರಾಯನು ಬಾಹುಬಲಿಯನ್ನು ಪ್ರತಿಷ್ಠಾಪಿಸಿದ ವಿಷಯವನ್ನು ನಿರೂಪಿಸುತ್ತಾನೆ. ಚಾವುಂಡರಾಯನು ತನ್ನ ತಾಯಿಯ ಅಪೇಕ್ಷೆಯಂತೆ ಬಾಹುಬಲಿಯನ್ನು ದರ್ಶಿಸಲು ಪೌದನಪುರಕ್ಕೆ ಹೊರಟಾಗ, ತಾಯಿ ಮಗನಿಗೆ ಸ್ವಪ್ನ ಬಿದ್ದು ಗೊಮ್ಮಟೇಶ್ವರನ ವಿಗ್ರಹ ನಿರ್ಮಾಣದ ಘಟನೆಯನ್ನು ದೇವಚಂದ್ರ ನಿರೂಪಿಸುತ್ತಾನೆ. ಮಸ್ತಕಾಭಿಷೇಕದ ಸಂದರ್ಭದಲ್ಲಿ ಬರುವ ಗುಳ್ಳಿಕಾಯಜ್ಜಿಯ ಪ್ರಸ್ತಾಪ ಮಾಡಿ, ಆಕೆ ಪುಟ್ಟ ಕಾಯಲ್ಲಿ ಅಭಿಷೇಕಿಸಿದ ಹಾಲು ಬೆಟ್ಟವನ್ನೆಲ್ಲಾ ಆವರಿಸಲು ಆ ಪುರಕ್ಕೆ ಬೆಳ್ಗೊಳ ಎಂದು ಹೆಸರಿಟ್ಟರಂತೆ.

ಮುಂದೆ ಬುಕ್ಕರಾಯನ ಶಾಸನದ ವಿಷಯಕ್ಕೆ ಬಂದಲ್ಲಿ, ಬೆಳುಗೊಳ ತೀರ್ಥವನ್ನು ವೈಷ್ಣವರಲ್ಲಿ ಕೆಲವರು ಕಲುಷಿತಗೊಳಿಸುತ್ತಿದ್ದರು. ಅದನ್ನು ಜೈನರು ತಡೆಯಲಾರದೇ ಹೋದರು. ಅವರ ಉಪಟಳ ಹೆಚ್ಚಾಗಿ ಬುಕ್ಕರಾಯನವರೆಗೂ ದೂರು ಹೋಯಿತು. ಆಗ ಬುಕ್ಕರಾಯನು ವೈಷ್ಣವರಿಗೂ ಜೈನರಿಗೂ ಸಂಧಾನ ಮಾಡಿ ನ್ಯಾಯ ತೀರ್ಮಾನವನ್ನು ಮಾಡಿದನೆಂಬ ವಿಷಯವನ್ನು ಈ ಶಾಸನ ತಿಳಿಸುತ್ತದೆ. ದೇವಚಂದ್ರನು ಶ್ರವಣಬೆಳಗೊಳದ ಶಾಸನದ ಪೂರ್ಣ ಪಾಠವನ್ನು ಕೊಟ್ಟಿದ್ದಾನೆ.

ಬುಕ್ಕರಾಯನ ಶಾಸನ ಮೂರು ಕಡೆ ಉಲ್ಲೇಖಗೊಂಡಿವೆ.

೧. ಕಲ್ಯ ಶಾಸನ
೨. ಶ್ರವಣಬೆಳಗೊಳದ ಭಂಡಾರ ಬಸ್ತಿಯ ಮುಂದಿರುವ ಶಾಸನ
೩. "ರಾಜಾವಳೀ ಕಥಾಸಾರ" ಗ್ರಂಥದಲ್ಲಿ ದೇವಚಂದ್ರನು ನಿರೂಪಿಸಿರುವ ಬುಕ್ಕರಾಯನ ಶಾಸನ.

ಮೂರು ಶಾಸನಗಳ ಪಾಠದಲ್ಲಿ ಸ್ವಲ್ಪ ವ್ಯತ್ಯಾಸಗಳಿರುವುದನ್ನು ಈ ಕೆಳಕಂಡಂತೆ ನೋಡಬಹುದು.

ಕಲ್ಯ	ಶ್ರವಣಬೆಳಗೊಳ	ರಾಜಾವಳೀ ಕಥೆ
ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ॥ ಪಾಸಂಡ ಸಾಗರ ಮಹಾವಡವಾ ಮುಖಾಗ್ನಿ ಶ್ರೀರಂಗರಾಜ ಚರಣಾಂಬುಜ ಮೂಲದಾಸಃ ಶ್ರೀ ವಿಷ್ಣುಲೋಕ ಮಣಿಮಂಟಪ ಮಾರ್ಗ ದಾಯೀ ರಾಮಾನುಜೋ ವಿಜಯತೇ ಯತಿ ರಾಜರಾಜ ಶಕವರ್ಷ ೧೨೯೦ನೆಯ ಕೀಲಕ ಸಂವತ್ಸರದ ಶ್ರಾವಣ ಶುದ್ಧ ೨ ಸೋ ದಲು ಶ್ರೀ ಮನ್ಮಹಾಮಂಡಳೇಶ್ವರಂ ಅರಿರಾಯ ವಿಭಾಡ ಭಾಷೆಗೆ ತಪ್ಪುವ ರಾಯರ ಗಂಡ ಶ್ರೀ ವೀರ ಬುಕ್ಕರಾಯನು ಪೃತುವೀ ರಾಜ್ಯವನಾಳುವ ಕಾಲದಲಿ ಜಇನರಿಗೆ ಭಕ್ತರಿಗೆ ಸಂವಾದವಾದಲ್ಲಿ ಆನೆಯಗೊಂದಿ ಹೊಸಪಟ್ಟಣ	ಶಕವರ್ಷ ೧೨೯೦ ಕೀಲಕ ಸಂವತ್ಸರದ ಭಾದ್ರಪದ ಶು ೧೦ ಬೃ ಸ್ವಸ್ತಿ	
ಪೆನುಗೊಂಡೆ ಕಳ್ಯಹ ವೊಳಗಾದ ಸಮಸ್ತ ನಾಡ ಜಇನರು ಬುಕ್ಕರಾಯಂಗೆ ಭಕ್ತರು ಅನ್ಯಾಯದಲು ಕೊಲ್ಲುವದನು ಬಿಂನಹಂ ಮಾಡಲಾಗಿ ಕೋವಿಲು ತಿರುಮಲೆ ಪೆರು . . ಕೋವಿಲು . . . ತಿರುನಾರಾಯಣಪುರ ಮುಖ್ಯವಾದ ಸಕಳಾಚಾರ್ಯ್ಯರು ಸಕಳಸಮಯಿಗಳು ಸಕಳ ಸಾತ್ವಿಕರು ಮೋಷ್ಟಿಕರು ತಿರಮಣಿ ತಿರುವಿಡಿ	. . . . ಸಮಸ್ತ ನಾಡ ಭವ್ಯ ಜನಂಗಳು ಆ ಬುಕ್ಕರಾಯಂಗೆ ಭಕ್ತರು ಮಾಡುವ ಅನ್ಯಾಯಂಗಳ ನೂ ಬಿಂನಹಂ ಮಾಡಲಾಗಿ	. . . . . . ಪಟ್ಟಣದೊಳಗಾದ ಸಮಸ್ತ ಭವ್ಯ ಜನರಿಗಳ್ ಬುಕ್ಕರಾಯಂಗೆ . . . . . .
ತಂದವರು ನಾಲ್ವತ್ತೆಂಟು ತಲೆಮಕ್ಕಳು ಸಾವಂತ ಬೋವರ್ಕ್ಕಳು ತಿರಿಕುಲ ಜಾಂಬವಕುಲವೊಳಗಾದ		ನಾಲ್ವತ್ತೆಂಟು ತಾತಯ್ಯಗಳು . . . . ಒಳಗಾದ ಹದಿನೆಂಟುನಾಡ ರಾಯನು ಶ್ರೀ ವೈಷ್ಣವರ ಕೈಯೊಳು
ಪದಿನೆಂಟುನಾಡಾ ಶ್ರೀವಇಷ್ಣವರ ಕಯ್ಯಲು ಮಹಾರಾಯನು ನಿಮ್ಮ ವಇಷ್ಣವ ದರುಸನದ ಮಜಿೂಕ್ಕೆವುವೆಂದು ಕೊಟ್ಟ ಸಂಮಂಥ ಪಂಚ ಬಸ್ತಿಗಳಲಿ ಕಳಸ ಜಗಳೆ ಜಗಟೆ ಮೊದಲಾದ	ಶ್ರೀವೈಷ್ಣವರ ಕೈಯ್ಯಲು ಮಹಾರಾಯನು ವೈಷ್ಣವ ದರ್ಶನಕ್ಕೆಉ ಜೈನದರ್ಶನಕ್ಕೆಉ ಭೇದವಿಲ್ಲವೆಂದು ರಾಜನು ವೈಷ್ಣವರ ಕೈಯ್ಯಲು ಜೈನರ ಕೈಪಿಡಿದುಕೊಟ್ಟು ಈ ಜೈನದರ್ಶನಕ್ಕೆ ಪೂರ್ವ ಮರಿಯಾದೆಯಲು ಪಂಚಮಹಾ	
ಪಂಚಮಹಾವಾದ್ಯಲು ಸಲುವುದು ಅನ್ಯರಿ(ಗೆ) ಬರಕೂಡದು ಜಇನ ಸಮಯಕೆ ಸಲುವುದೆಂದು ವ್ರಿದ್ಧಿಯಾದ ಶ್ರೀವಇಷ್ಣವ ಸಮಯ	ವಾದ್ಯಂಗಳೂ ಕಳಶಉ ಸಲುವುದು ಜೈನದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವ ಹಾನಿವೃದ್ಧಿಯಾಗಿ ಪಾಲಿಸುವರು	. . . . ಪಂಚಮಹಾವಾದ್ಯಂಗಳುಂ ಕಳಶ ಕನ್ನಡಿ ಶ್ವೇತಚ್ಛತ್ರ ಚಾಮರಂಗಳ್ ಮೊದಲಾದ ಬಿರುದುಗಳು ಸಲುವುವು.

ಈ ಮರ್ಯಾದೆ . . . . . ದೊಳಗುಳ ಬಸ್ತಿ ಶ್ರೀವೈಷ್ಣವ . . . . ನೆಟ್ಟು ಕೊಟ್ಟಿವು	ಈ ಮಂರ್ಯಾದೆಂಯಲು ಯಿಬ್ಬ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವ ನಟ್ಟು ಪಾಲಿಸುವರು.	
	ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವ ಸಮಯಲು ಜೈನದರ್ಶನವ ರಕ್ಷಿಸಿಕೊಂಡು ಬಹೆಲು	ಚಂದ್ರಾರ್ಕ್ಕ ಸ್ಥಾಯಿಯಾಗಿ ವೈಷ್ಣವ ಸಮಯದವರು ಶ್ರೀ ಜೈನದರ್ಶನದವರನತ್ಯಾದರದಿಂ ರಕ್ಷಿಸಿಕೊಂಡು ಬಹವು
	ವೈಷ್ಣವರೂ ಜೈನರೂ ವೊಂದು ಭೇದವಾಗಿ ಕಾಣಲಾಗದು	
	ಶ್ರೀ ತಿರುಮಲೆಯ ತಾತಯ್ಯಂಗಳು ಸಮಸ್ತ ರಾಜ್ಯದ ಭವ್ಯಜನಂಗಳ ಅನುಮತದಿಂದ ಬೆಳುಗುಳದ ತೀರ್ಥದಲ್ಲಿ ವೈಷ್ಣವ ಅಂಗರಕ್ಷೆ ಗೋಸುಕ ಸಮಸ್ತ ರಾಜ್ಯದೊಳಗುಳ್ಳಂತಹ ಜೈನರು ಬಾಗಿಲುಗಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ೧ ಹಣ ಕೊಟ್ಟು ಆ ಯತ್ತಿದ ಹೊನ್ನಿಂಗೆ ದೇವರ ಅಂಗರಕ್ಷೆಗೆ ಯಿಪ್ಪತ್ತಾಳನೂ ಸಂತವಿಟ್ಟು ಮಿಕ್ಕ ಹೊನ್ನಿಂಗೆ ಜೀರ್ನ್ನ ಜಿನಾಲಯುಂಗಳಿಗೆ ಸೊದೆಯನಿಕೂದುಯಿ ಮರಿಯಾದೆಯಲು ಚಂದ್ರರ್ಕ್ಕ ರುಳ್ಳಂನಂ ತಪ್ಪಲೀಯದೆ ವರ್ಷವರ್ಷಕ್ಕೆ ಕೊಟ್ಟ ಕೀರ್ತಿಯನೂ ಪುಂಣ್ಯವನೋ ಉಪಾರ್ಜಿಸಿಕೊಂಬುದು ಯಿ ಮಾಡಿದ ಕಟ್ಟಳೆಯನು ಆವನೊಬ್ಬನು ಮೀಱಿದವನು ರಾಜದ್ರೋಹಿ ಸಂಘ ಸಮುದಾಯಕ್ಕೆ ದ್ರೋಹಿ ತಪಸ್ವಿಯಾಗಲಿ ಗ್ರಾಮಿಣಿಯಾಗಲಿ ಯಿ ಧರ್ಮವ ಕೆಡ್ಸಿದರಾದಡೆ ಗಂಗೆಯ ತಡಿಯಲ್ಲಿ ಕಪಿಲೆಯನೂ ಬ್ರಾಹ್ಮಣನನೂ ಕೊಂದ ಪಾಪದಲ್ಲಿ ಹೋಹರು	. . . . . . ಅನುಮತಂಗಳಿಂದ ಬೆಳ್ಗುಳದ ತೀರ್ಥದಲ್ಲಿ ದವಿವರ ಅಂಗರಕ್ಷಣೆಗೋಸ್ಕರ ಸಮಸ್ತ ರಾಜ್ಯಂಗಳೊಳಗುಳ್ಳಂಥ ವೈಷ್ಣವರು ಜೈನರ್ಗೆ ಬಾಗಿಲುಗಟ್ಟಲೆಯಾಗಿ ಮನೆಗೆ ವರುಷ ೧ಕ್ಕೆ ಒಂದು ಹಣವಂ ಕೊಟ್ಟು ಆ ಯೆತ್ತಿಬಂದ ಹೊನ್ನಿಂಗೆ ದೇವರ ಅಂಗರಕ್ಷಣೆಗೆ ೨೦ ಆಳನ್ನು ಸಂತಪಿಟ್ಟು ಮಿಕ್ಕ ಹೊನ್ನಿಂಗೆ ಜೀರ್ಣ ಜಿನ ಚೈತ್ಯಾಲಯೋದ್ಧರಣಕ್ಕೆ ಸೋದೆಯನಿಕ್ಕುವುದು.
	ಶ್ಲೋಕ ॥ ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂಧರಾ ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ ॥	
	ಮೇಲ್ಭಾಗದಲ್ಲಿ	
	ಕಲ್ಲೆಹದ ಹರ್ವ್ವಿಸೆಟ್ಟಿಯ ಸುಪುತ್ರ ಬುಸುವಿಸೆಟ್ಟಿ ಬುಕ್ಕರಾಯರಿಗೆ ಬಿನ್ನಹಂ ಮಾಡಿ ತಿರುಮಲೆಯ ತಾತಯ್ಯಂಗಳ ಬಿಜಯಂಗೈಸಿ ತಂದು ಜೀರ್ನ್ನೋರ್ದ್ಧಾರವ ಮಾಡಿಸಿದರು ಉಭಯಸಮಯಲೂ ಕೂಡಿ ಬುಸುವಿಸೆಟ್ಟಿಯರಿಗೆ ಸಂಘ ನಾಯ್ಕ ಪಟ್ಟವ ಕಟ್ಟಿದರು.	ಕಲ್ಲೇಹದ ಹೆತ್ತಶೆಟ್ಟಿ ಮಗ ಬುಸುವ ಶೆಟ್ಟಿಗೆ ಉಭಯಸಮಯಗೂಡಿ ಸಂಘನಾಯಕ ಪಟ್ಟಮಂ ಕಟ್ಟಿದರು ಬುಕ್ಕರಾಯನ ಶಾಸನದ ಬಗೆಗೆ ಹಲವಾರು ವಿದ್ವಾಂಸರು ಚರ್ಚಿಸಿದ್ದಾರೆ. ಬೆಳುಗುಳದ ಭಂಡಾರ ಬಸದಿಯು ಬಲಗಡೆ ದಕ್ಷಿಣದೊಳುತ್ತರಾಭಿಮುಖವಾಗಿ ಸ್ಥಾಪಿಸಿದೆ.

ಬುಕ್ಕರಾಯನ ಶಾಸನವನ್ನು ಕುರಿತು ಎಂ.ಎಂ. ಕಲಬುರ್ಗಿಯವರು ಈ ರೀತಿ ಹೇಳುತ್ತಾರೆ. "ಬೆಂಗಳೂರು ಜಿಲ್ಲೆಯ ಮಾಗಡಿ ತಾಲೂಕಿನ ಕಲ್ಯ ಶಾಸನ ಹುಟ್ಟಿದ ೫ ವಾರಗಳ ಬಳಿಕ ಹಾಸನ ಜಿಲ್ಲೆಯ ಬೆಳ್ಗೊಳ ಶಾಸನ ಹುಟ್ಟಿದೆ." (ಮಾರ್ಗ ಸಂ. ೩, ಪು. ೩೬) ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ಅಲ್ಲೇ ಮುಂದಿನ ಪುಟ ೩೭ರಲ್ಲಿ "ಗಲಭೆಗೆ ಗುರಿಯಾದ ಬೆಳ್ಗೊಳ ಪ್ರದೇಶದಲ್ಲಿ ಶಾಸನ (ದಾಖಲೆ) ಸುರಕ್ಷಿತ ಉಳಿಯಲಾರದೆಂಬ ಭಯ ಕಾರಣವಾಗಿ, ಇವರ ಇನ್ನೊಂದು ಪ್ರತಿಯನ್ನು ಬುಸವಿಶೆಟ್ಟಿಯ ಗ್ರಾಮವಾದ ಕಲ್ಯದಲ್ಲಿ ನಿಲ್ಲಿಸಲಾಯಿತೆಂದು ಊಹಿಸಬಹುದಾಗಿದೆ" ಎನ್ನುತ್ತಾರೆ. ಇದಕ್ಕೆ ವ್ಯಾಖ್ಯಾನವೇನು ಬೇಡ ಅಲ್ಲವೇ?

ಕಲಬುರ್ಗಿಯವರು ದೇವಚಂದ್ರನು ರಾಜಾವಳೀ ಕಥೆಯಲ್ಲಿ ಕೊಡುವ ಶಾಸನಪಾಠವನ್ನು ಒಪ್ಪಿ ಸ್ವೀಕರಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಇವರ ಹೇಳಿಕೆ ಹೀಗಿದೆ: "ದೇವಚಂದ್ರ ಕೊಡುವ ಬೆಳ್ಗೊಳ ಶಾಸನಪಾಠಕ್ಕೂ ಎಪಿಗ್ರಾಫಿಯ ಕರ್ನಾಟಕ-೨ ಸಂಪುಟದಲ್ಲಿ ಪ್ರಕಟವಾಗಿರುವ

ಬೆಳ್ಗೊಳ ಶಾಸನಪಾಠಕ್ಕೂ ಅಲ್ಪಸ್ವಲ್ಪ ವ್ಯತ್ಯಾಸವಿದೆ. ಎಪಿಗ್ರಾಫಿಯ ಕರ್ನಾಟಿಕದಲ್ಲಿ ಬಿ.ಎಲ್.ರೈಸ್ ಅವರು " ಈ ಶಾಸನ ಹೊಸದಾಗಿ ಬರೆಯಿಸಿದ್ದಾರೆ" ಎಂದು ಸೂಚಿಸಿರುವುದರಿಂದ, ಈ ಕಾರಣದಿಂದಾಗಿ ಅಲ್ಲಲ್ಲಿ ಪಾಠವ್ಯತ್ಯಾಸವಾಗಿದೆ ಎಂದು ಊಹಿಸಬಹುದಾಗಿದೆ. ಕಲ್ಲೆಹದ ಪಾಠ ಬೆಳ್ಗೊಳದ ಪಾಠಕ್ಕಿಂತ ಸ್ವಲ್ಪ ಭಿನ್ನವಾಗಿರುವುದನ್ನು ಇಲ್ಲಿ ನೆನೆಯಬಹುದಾಗಿದೆ". (ಮಾರ್ಗ ಸಂ.೩. ಪು.೩೭) ಎಂದು ಹೇಳುವ ಅವರು, ಮೂರೂ ಶಾಸನಗಳಿಗಿರುವ ವ್ಯತ್ಯಾಸಗಳನ್ನು ಹೇಳುವುದಿಲ್ಲ.

ಬಿ.ಎಲ್.ರೈಸ್ ಅವರ ಹೇಳಿಕೆಯನ್ನು ಸ್ವೀಕರಿಸಿರುವ ಲೇಖಕರು ಹೊಸದಾಗಿ ಶಾಸನವನ್ನು ಯಾರು. ಯಾವಾಗ ಮತ್ತು ಏಕೆ ಹಾಕಿಸಿದರು ಎಂಬುದನ್ನು ಸೂಚಿಸುವುದಿಲ್ಲ.

ಅಲ್ಲೆ ಮುಂದೆ "ಜೈನರಿಗೆ ಪಂಚಮಹಾವಾದ್ಯಗಳುಂ ಕಳಸ ಕನ್ನಡಿ ಶ್ವೇತಚ್ಛತ್ರಚಾಮರಂಗಳ್ ಮೊದಲಾದ ಬಿರುದುಗಳು" ಸಲ್ಲುವುದಿಲ್ಲವೆಂದು ಶ್ರೀವೈಷ್ಣವರು ಕಾಲುಕೆದರಿ ಜಗಳ ತೆಗೆದು ಬೆಳ್ಗೊಳ ಸ್ಮಾರಕಗಳನ್ನು ನಾಶಪಡಿಸುತ್ತಿದ್ದುದನ್ನು ಬುಕ್ಕರಾಯ ತಡೆಹಿಡಿದು, ಈ ಗೌರವಗಳು ಜೈನರಿಗೂ ಸಲ್ಲುವವೆಂದು ತೀರ್ಪು ನೀಡಿದನು, ಮತ್ತು ರಾಜ್ಯದಲ್ಲಿಯ ಶ್ರೀವೈಷ್ಣವರು ಪ್ರತಿವರ್ಷ ಪ್ರತಿಯೊಂದು ಮನೆಗೆ ಬಂದು ಹಣವನ್ನು ಕೊಡಬೇಕು, ಆ ಹಣದಿಂದ ಜೈನ ಕಟ್ಟಡಗಳ ಜೀರ್ಣೋದ್ಧಾರ ಕಾರ್ಯ ಕೈಗೊಳ್ಳಬೇಕು. ಶ್ರೀವೈಷ್ಣವ ಮುಖಂಡರಾದ ತಿರುಮಲೆ ತಾತಯ್ಯನವರು ಈ ಕೆಲಸಗಳನ್ನು ನಡೆಸಿಕೊಡಬೇಕು. ಬುಸವಿಶೆಟ್ಟಿ ಮತ್ತು ತಾತಯ್ಯಗಳನ್ನು ಬೆಳ್ಗೊಳಕ್ಕೆ ಕರೆಯಿಸಿ, ಸ್ಮಾರಕಗಳನ್ನು ಜೀರ್ಣೋದ್ಧಾರ ಮಾಡಿಸಿದನು. ಈಗ ಬುಸವಿಶೆಟ್ಟಿಗೆ ಈ ಒಪ್ಪಂದದ ಸಮಿತಿಯ ಮುಖ್ಯಸ್ಥನನ್ನಾಗಿ ಮಾಡಲಾಯಿತು". (ಮಾರ್ಗ ಸಂ.೩. ಪು.೩೭) ಎನ್ನುತ್ತಾರೆ.

ಶ್ರವಣಬೆಳಗೊಳ ಶಾಸನದಲ್ಲಿ ". . . . . ವೈಷ್ಣವ ಅಂಗರಕ್ಷೆಗೋಸುಕ ಸಮಸ್ತ ರಾಜ್ಯದೊಳಗುಳ್ಳಂತಹ ಜೈನರು ಬಾಗಿಲುಗಟ್ಟಳೆಯಾಗಿ ಮನೆಮನೆಗೆ ವರ್ಷಕೆ ೧ ಹಣ ಕೊಟ್ಟು ಆ ಯೆತ್ತಿದ ಹೊನ್ನಿಂಗೆ . . . . ಸೋದೆಯಂನಿಕೂಡು" ಎಂಬ ನಿರೂಪಣೆಯಿದೆ. ಶ್ರವಣಬೆಳಗೊಳದ ಮೂಲಶಾಸನ ಇರುವಂತೆಯೇ, ೪೦೦ ವರ್ಷ ಈಚಿನವನಾದ ದೇವಚಂದ್ರನ ಶಾಸನ ಪಾಠವನ್ನು ಒಪ್ಪುವ ನಿರ್ಣಯಕ್ಕೆ ಕಲಬುರ್ಗಿಯವರಂತಹ ವಿದ್ವಾಂಸರು ಏಕೆ ಬಂದರು ಎಂಬುದು ಆಶ್ಚರ್ಯಕರವಾಗಿದೆ.

ಮತ್ತೂ ಮುಂದುವರಿದು "ಬೆಳ್ಗೊಳದ ಜೈನ ನಿರ್ಮಾಣಗಳು ೧೪ನೆಯ ಶತಮಾನದ ಹೊತ್ತಿಗೆ ಶ್ರೀವೈಷ್ಣವರ ತೀವ್ರ ಹಾನಿಗೆ ಗುರಿಯಾಗಿದ್ದುವೆಂದೂ ಆಮೇಲೆ ಜೀರ್ಣೋದ್ಧಾರಗೊಂಡಿವೆಯೆಂದೂ ವೇದ್ಯವಾಗುತ್ತದೆ." (ಮಾರ್ಗ ಸಂ. ೩. ಪು. ೩೭) ಎಂದು ಕಲಬುರ್ಗಿಯವರು ಹೇಳುತ್ತಾರೆ. ಮತ್ತು ಅವರದೇ ಅಭಿಪ್ರಾಯದಂತೆ "ಈ ಬಗೆಯ ಅರಕ್ಷಿತ ಸ್ಥಿತಿ ಬಹಳ ಹಿಂದಿನಿಂದಲೇ ಆರಂಭವಾಗಿರಬೇಕು. ಬಹುಶಃ ಈ ಕಾರಣಕ್ಕಾಗಿಯೇ ೧೧ನೆಯ ಶತಮಾನದಷ್ಟು ಪೂರ್ವದಲ್ಲಿ ಗಂಗರಾಜನು ಗೊಮ್ಮಟ ವಿಗ್ರಹಕ್ಕೆ ಕೋಟೆ ಸದೃಶ ಸುತ್ತಾಲಯವನ್ನು ಕಟ್ಟಿಸಿದನೆಂದು ಕಾಣುತ್ತದೆ. ಹೊರಗಿನಿಂದ ಮಾರಕಾಸ್ತ್ರ ಎಸೆದರೂ ವಿಗ್ರಹಕ್ಕೆ ಮುಟ್ಟದಷ್ಟು ಈ ಸುತ್ತಾಲಯ ವಿಸ್ತಾರವಾಗಿದೆಯೆಂಬುದನ್ನು ಇಲ್ಲಿ ಗಮನಿಸಬೇಕು" ಎಂದೂ ಹೇಳುತ್ತಾರೆ (ಮಾರ್ಗ ಸಂ.೩. ಪು. ೩೭-೩೮)

ಈ ಬಗೆಗೆ ಶಾಸನತಜ್ಞ ಡಾ. ದೇವರಕೊಂಡಾ ರೆಡ್ಡಿಯವರು ಹೀಗೆ ಅಭಿಪ್ರಾಯ "ಶ್ರವಣಬೆಳಗೊಳದಲ್ಲಿ ದೊಡ್ಡ ಬೆಟ್ಟದ ಮೇಲೆ ಗೊಮ್ಮಟೇಶ್ವರನ ಪ್ರತಿಷ್ಠಾಪನೆ ಯಾದುದೇ ೧೦ನೆಯ ಶತಮಾನದ ತೀರ ಕೊನೆಯ ದಶಕದಲ್ಲಿ ಆ ನಂತರವೇ ಮಿಕ್ಕ ಬಸದಿ ಇತ್ಯಾದಿ ಕಟ್ಟಡಗಳ ರಚನೆಯಾಗಿದೆ. ಆದರೆ ಕಲಬುರ್ಗಿಯವರ ಅಭಿಪ್ರಾಯದಂತೆ ೧೪ನೆಯ ಶತಮಾನದ ವೇಳೆಗೆ ಮೊದಲು ಕಟ್ಟಿದ ಕಟ್ಟಡವೆಲ್ಲ ವೈಷ್ಣವರಿಂದ ನಾಶ ಹೊಂದಿ, ಮರುನಿರ್ಮಾಣವು, ಆಗಿತ್ತೆಂಬುದು ಅಸಂಭವವೆಂದು ತೋರುತ್ತದೆ. ಹಾಗೆ ಅಲ್ಲಿ ನಾಶವಾಗಿರುವ ಗುರುತುಗಳೇನೂ ಕಾಣಬರುವುದಿಲ್ಲ" ಎಂದು ಹೇಳುತ್ತಾರೆ. (ಈ ಬಗೆಗೆ ಡಾ. ದೇವರಕೊಂಡಾರೆಡ್ಡಿಯವರೊಂದಿಗೆ ಮಾತನಾಡಿದಾಗ).

ಶ್ರವಣಬೆಳಗೊಳದಲ್ಲಿ ಸಾವುನೋವು ಸಂಭವಿಸದಿದ್ದರೂ, ಶ್ರೀವೈಷ್ಣವರು ಅನ್ಯಾಯದಿಂದ ಕಿರುಕುಳವನ್ನು ಕೊಡುತ್ತಿದ್ದಿರಬೇಕು. ದೇವಚಂದ್ರನು ಹೇಳುವಂತೆ "ಬೆಳ್ಗೊಳ ತೀರ್ಥಮಂ ವೈಷ್ಣವರ್ ಕೆಲಂಬರ್ ಕಿಡಿಸುತ್ತಿರಲ್ ಜೈನರ್ ನಿತ್ತರಿಸಲಾಗದೆ . . . . . ." (ರಾಜಾವಳೀ ಕಥಾಸಾರ ಪು.೧೮೯) ಕೆಲವರು ಶ್ರೀವೈಷ್ಣವರು ಕಲುಷಿತಗೊಳಿಸುತ್ತಿದ್ದರು ಅಥವಾ ಅಪವಿತ್ರಗೊಳಿಸುತ್ತಿದ್ದರೆಂದು ತೋರುತ್ತದೆ. ಇವುಗಳನ್ನು ತಪ್ಪಿಸುವ ಸಲುವಾಗಿ ಬುಕ್ಕರಾಯನು ಮೇಲಿನಂತೆ ವ್ಯವಸ್ಥೆ ಮಾಡಿರಬೇಕು.

ಡಾ. ಟಿ.ಎಸ್. ನರಸಿಂಹಮೂರ್ತಿಯವರ ಅಭಿಪ್ರಾಯ ಹೀಗಿವೆ.

"ಶಾಸನಗಳ ಪ್ರಕಾರ ಸಭೆಯಲ್ಲಿ ಇದ್ದವರೆಂದರೆ – ಆನೆಗೊಂದಿ, ಹೊಸಪಟ್ಟಣ, (ಇಂದಿನ ಹಂಪೆ), ಪೆನುಗೊಂಡೆ ಮತ್ತು ಕಲ್ಲೆಹ (ಇಂದಿನ ಕಲ್ಯ) ಪಟ್ಟಣಗಳ ಜೈನ ಪ್ರತಿನಿಧಿಗಳು ಮಾತ್ರ, ಆಶ್ಚರ್ಯವೆಂದರೆ ಶ್ರವಣಬೆಳಗೊಳದ ಪ್ರತಿನಿಧಿಗಳೂ ಇಲ್ಲಿ ಇದ್ದಂತಿಲ್ಲ. ಇಂತಿರುವಾಗ ಈ ನಾಲ್ಕು ಊರಿನ ಜನಪ್ರತಿನಿಧಿಗಳು ಹೀಗೆ ಸಮಸ್ತರಾಜ್ಯದ ಪ್ರತಿನಿಧಿಗಳಾಗುವುದು ಸಾಧ್ಯ? (ಅರವಂಟಿಗೆ ಸಂ. ೩ ಸಂ.) ಎಂದು ಹೇಳುತ್ತಾರೆ. ಆದರೆ ಶಾಸನದ ಪ್ರಾರಂಭದಲ್ಲಿಯೇ ". . . . ಆನೆಗೊಂದಿ ಹೊಸಪಟ್ಟಣ ಪೆನುಗೊಂಡೆ ಕಲ್ಲೆಹದ ಪಟ್ಟಣವೊಳಗಾದ ಸಮಸ್ತನಾದ ಭವ್ಯ ಜನಂಗಳು. . . . . ." ಎಂದಿದೆ. ಬುಕ್ಕರಾಯನಿಗೆ ದೂರು ಕೊಡಲು ಹೋದಾಗ 'ಸಮಸ್ತನಾಡ'

ಜನರಿದ್ದರು ಎಂಬ ವಿವರವಿದೆ. ಅದನ್ನು ಲೇಖಕರು ಗಮನಿಸಿದಂತೆ ತೋರುವುದಿಲ್ಲ.

ಅವರ ಮತ್ತೊಂದು ಅಭಿಪ್ರಾಯದಂತೆ "ಎರಡೂ ಶಾಸನಗಳು ಶ್ರೀ ರಾಮಾನುಜಾಚಾರ್ಯರ ಸ್ತುತಿಯಿಂದ ಪ್ರಾರಂಭವಾಗಿದೆ. ಜಿನಸ್ತುತಿ ಇಲ್ಲಿ ಇಲ್ಲ, ಇದ್ದಿದ್ದರೆ ವಿದ್ವಾಂಸರುಗಳು ಅಭಿಪ್ರಾಯಪಟ್ಟಿರುವಂತೆ ಧರ್ಮ ಸಮನ್ವಯತೆಗೆ ಮಹತ್ತ್ವವಾದ ಒಂದು ಕೊಡುಗೆ ಆಗುತ್ತಿತ್ತು. ಈ ಕೊರತೆಯ ಬಗ್ಗೆ ವಿದ್ವಾಂಸರು ಏನನ್ನು ಹೇಳದಿರುವ ಕಾರಣ ಅವರು ಇದುವರೆಗೂ ಗಮನ ಹರಿಸಲಿಲ್ಲ ಎಂದು ಕಾಣುತ್ತದೆ." (ಅರವಟ್ಟಿಗೆ ಸಂ. ೩ ಸಂ. ೧, ಪು. ೧೭) ಎನ್ನುತ್ತಾರೆ.

ಶ್ರವಣಬೆಳಗೊಳ ಶಾಸನ ಪಾಠದಲ್ಲಿರುವಂತೆ ರಾಜ್ಯದೊಳಗುಳ್ಳ ಎಲ್ಲ ಬಸಿದಿಗಳಲ್ಲಿ ಶ್ರೀವೈಷ್ಣವರು ಶಾಸನವನ್ನು ನೆಡಿಸಿರಬೇಕು ". . . . . ಯಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವ ನಟ್ಟು ಪಾಲಿಸುವರು" ಎಂದು ಸ್ಪಷ್ಟವಾಗಿದೆ. ಕಲ್ಯ ಶಾಸನದ ಕೊನೆಯ ಮೂರು ಸಾಲಿನಲ್ಲಿ "೫೪) ಶ್ರೀವಇಷ್ಣವ ೫೫) . . . . ೫೬) ನೆಟ್ಟು ಕೊಟ್ಟೆವು" ಎಂದಿದೆ. ಆದ್ದರಿಂದ ಎರಡೂ ಶಾಸನಗಳೂ ರಾಮಾನುಜಾಚಾರ್ಯರ ಸ್ತುತಿಯಿಂದ ಪ್ರಾರಂಭವಾಗಿರುವುದು ಸಹಜವಾಗಿದೆ. ಇಲ್ಲಿ ಜಿನಸ್ತುತಿಗೆ ಅವಕಾಶವಿಲ್ಲ. "ಕಲ್ಯದ ಶಾಸನ ಶಿಲೆಯ ಮೇಲ್ಭಾಗದಲ್ಲಿ ಮೇಲೆ ತೆಂಗಿನಕಾಯಿ ಮಾವಿನ ಎಲೆಗಳಿಂದ ಅಲಂಕೃತವಾಗಿರುವ ಕಳಶವನ್ನು ಕೆತ್ತಲಾಗಿದೆ. ಶ್ರವಣಬೆಳ್ಗೊಳದ ಭಂಡಾರ ಬಸದಿಯ ಅಂಗಳದಲ್ಲಿರುವ ಶಾಸನಶಿಲೆ ಮೇಲೆ ಶಂಖ ಚಕ್ರ ತಿರುನಾಮ ಚಿಹ್ನೆಗಳ ಜೊತೆಗೆ ಜೈನ ಲಾಂಛನಗಳನ್ನು ಕೆತ್ತಲಾಗಿವೆ ಯೆಂಬುದು ಗಮನಾರ್ಹ. ಇವು ಕಲ್ಯ ಶಾಸನ ಶಿಲೆಯ ಮೇಲಿಲ್ಲದಿರುವುದು ಗಮನಾರ್ಹ" (ಹೊಸತು ಹೊಸತು ಪು. ೨೩೪)

"ಎರಡೂ ಶಾಸನಗಳಲ್ಲಿ ವ್ಯಕ್ತವಾಗಿರುವ ಇನ್ನೊಂದು ಮುಖ್ಯ ವಿಷಯವೆಂದರೆ ಶ್ರೀವೈಷ್ಣವರ ಪರವಾಗಿ ನೆರೆದಿದ್ದ ಬೃಹತ್ ಶ್ರೀವೈಷ್ಣವ ಸಮೂಹ" (ಅರವಟ್ಟಿಗೆ ಸಂ.೩ ಸಂ.೧) ಶ್ರೀವೈಷ್ಣವರು ಎಂದರೆ ತಿರುಮಲೆ ತಾತಯ್ಯ ಮಾತ್ರವಲ್ಲ. 'ಅನ್ಯಾಯ ಮಾಡುವುದು', ಅನ್ಯಾಯದಿಂದ ಕೊಲ್ಲುವುದು' ಎಂಬುದು ವೈಷ್ಣವ ಸಮಾಜದ ಅನುಯಾಯಿಗಳಿಂದ ರಾಜ್ಯದ ಬೇರೆ ಬೇರೆ ಕಡೆ ನಡೆಯುತ್ತಿದ್ದಿತು. ಕಲ್ಯ ಶಾಸನದಲ್ಲಿ 'ಭಕ್ತರು' ಜೈನರನ್ನು ಅನ್ಯಾಯದಿಂದ ಕೊಲ್ಲುತ್ತಿದ್ದರು ಎಂಬ ಮಾತಿದೆ. "ಇಲ್ಲಿ ಭಕ್ತರು ಎಂಬ ಮಾತು ಶ್ರೀವೈಷ್ಣವ ಬ್ರಾಹ್ಮಣರ ಜೊತೆ ಆ ಬ್ರಾಹ್ಮಣರ ಶೂದ್ರ ಅನುಯಾಯಿಗಳನ್ನು ಒಳಗೊಳ್ಳುವಂತೆ ಕಾಣುತ್ತದೆ" (ಹೊಸತು ಹೊಸತು ಪು. ೨೩೫) ಆದ್ದರಿಂದ ನ್ಯಾಯತೀರ್ಮಾನ ಮಾಡುವಾಗ ಆ ಸಮುದಾಯದ ಎಲ್ಲರೂ ಹಾಜರಿರಬೇಕಾದುದು ಅಗತ್ಯವಾಗಿತ್ತು.

ಈ ಎರಡು ಶಾಸನಗಳನ್ನು ಅಧ್ಯಯನ ಮಾಡಿದಾಗ ಕೆಲವೊಂದು ಅಂಶಗಳನ್ನು ಗುರುತಿಸಬಹುದು. ಬುಕ್ಕರಾಯನಿಂದ ನ್ಯಾಯತೀರ್ಮಾನ ಆದ ತಕ್ಷಣ ಶ್ರೀವೈಷ್ಣವರೇ ಕಲ್ಯದಲ್ಲಿ ಶಾಸನವನ್ನು ಹಾಕಿಸಿದ್ದಾರೆ. ೫ ವಾರಗಳ ನಂತರ ಕಲ್ಯದ ಬಳಿಕ ಶ್ರವಣಬೆಳಗೊಳದಲ್ಲಿ ಮೊದಲ ಪ್ರಯೋಗವಾಗಿ ವಿಸ್ತೃತ ರೂಪದಲ್ಲಿ ಶಾಸನವನ್ನು ಹಾಕಿಸಿದ್ದಾರೆ. ಇಲ್ಲಿಯ ಸಮಸ್ಯೆಗಳಿಗೆ ಅನುಗುದಿಯಾಗಿ ಪ್ರಮುಖ ವಿಷಯದಲ್ಲಿ ವ್ಯತ್ಯಾಸವಿದೆ.

ಕಲ್ಯ ಶಾಸನದಲ್ಲಿ ಜೈನರು–'ಭಕ್ತರು ಅನ್ಯಾಯದಲು ಕೊಲ್ಲುವ', 'ಅನ್ಯಾಯಗಳನ್ನು ಮಾಡುವ'–ಸಂದರ್ಭ ಸನ್ನಿವೇಶಗಳನ್ನು ಎದುರಿಸುತ್ತಿದ್ದರು. ಬೇರೆ ನಾಡ ಜೈನರು ಬಂದಿಲ್ಲ ಒಂದು ಕಡೆ ತಾವು ಅನ್ಯಾಯವನ್ನು ಎದುರಿಸುತ್ತಿರುವುದರ ಬಗೆಗೆ ಬುಕ್ಕರಾಯನಿಗೆ ಅರಿಕೆ ಮಾಡಿಕೊಂಡರು. ಆದರೆ ನಿರ್ದಿಷ್ಟವಾಗಿ ಕಲ್ಯದಲ್ಲಿ ಹಾಗೂ ಶ್ರವಣಬೆಳಗೊಳದಲ್ಲಿ ಸಾವು ಸಂಭವಿಸಿದ ಬಗೆಗೆ ಈ ಶಾಸನಗಳಿಂದ ತಿಳಿದು ಬರುವುದಿಲ್ಲ.

ಕಲ್ಯ ಶಾಸನದಲ್ಲಿ "ನಿಂಮ ವಇಷ್ಣವ ದರುಸನದ ಮರೆವೊಕ್ಕೆವುವೆಂದು ಕೊಟ್ಟ ಸಂಬಂಧ" ಅಂದರೆ 'ಜೈನರು ವೈಷ್ಣವರ ಮೊರೆಹೋಗುತ್ತೇವೆ' ಎಂದು ಮಾತು ಕೊಟ್ಟರು. ಕಲ್ಯದಲ್ಲಿ ಇದ್ದ ಸಮಸ್ಯೆಯೆಂದರೆ ಪಂಚಮಹಾವಾದ್ಯ ಹಾಗೂ ಕಳಸದ ಬಗೆಗೆ. ಈ ಜಗಳದ ವಿಷಯವಾಗಿ ಡಾ. ದೇವರ ಕೊಂಡಾರೆಡ್ಡಿಯವರು "ಜೈನಮತದ ಪರಂಪರೆಯಲ್ಲಿ ಮುನಿಗಳಿಗೆ ಆಹಾರ ನೀಡುವುದೂ ಪ್ರಮುಖ ಕಾರ್ಯ. ಮುನಿಗಳನ್ನು ಊಟಕ್ಕೆ ಆಹ್ವಾನಿಸಬೇಕಾದಲ್ಲಿ ಕಳಶವನ್ನು ಹಿಡಿದಿರಬೇಕು. ಹಿಂದೂ ಧರ್ಮಿಯರಿಗೂ ಕಳಶ ಬಹು ಪ್ರಮುಖವಾದದ್ದು . . . . ಬಹುತೇಕ ಸಂದರ್ಭಗಳಲ್ಲಿ ಪಂಚವಾದ್ಯಗಳನ್ನು ಬಾಜಿಸುತ್ತಾ ಕಳಶದ ಸಮೇತ ಬಂದಾಗ ಜೈನೇತರರು ಹೆಚ್ಚಿಗೆ ಇದ್ದ ಊರುಗಳಲ್ಲಿ ಇದಕ್ಕೆ ಅಡ್ಡಿಪಡಿಸುತ್ತಾರೆ" (ಇತಿಹಾಸ ದರ್ಶನ. ಸಂ.೧೮. ಪು. ೨೦೦) ಎಂದು ಹೇಳುತ್ತಾರೆ.

ಈ ಶಾಸನದಲ್ಲಿ ". . . . ಕೊಟ್ಟ ಸಂಮಂಧ ಪಂಚಬಸ್ತಿಗಳಲಿ ಕಳಸ, ಜಗಳೆ, ಜಗಟೆ ಮೊದಲಾದ ಪಂಚಮಹಾವಾದ್ಯವು ಸಲುವುದು ಅನ್ಯರಿ(ಗೆ) ಬರಕೂಡದು ಜಇನ ಸಮಯಕೆ ಸಲುವುದು" ಎಂದಿದೆ. ಈ ಶಾಸನದ ವಿಷಯ ನಿರ್ದಿಷ್ಟವಾಗಿ ಕಲ್ಯಕ್ಕೇ ಸಂಬಂಧಿಸಿದ್ದೆಂದು ಹೇಳಲು ಪಂಚಬಸ್ತಿಗಳ ಉಲ್ಲೇಖ ಇರುವುದು". ಬಸದಿಗುಂಡಿ ಎಂಬ ಜಾಗ ಈಗ ಬರೀ ತಿಪ್ಪೆಗಳಿಂದ ತುಂಬಿರುವ ಒಂದು ತಗ್ಗು ಜಾಗವಾಗಿದ್ದರೂ ಒಂದು ಕಾಲಕ್ಕೆ ಅಲ್ಲಿ ಐದು ಬಸದಿಗಳಿದ್ದವು" ಎಂಬ ಚಿದಾನಂದಮೂರ್ತಿ ಅವರ ಮಾತೂ ಪೂರಕವಾಗಿದೆ (ಹೊಸತು ಹೊಸತು. ಪು. ೨೩೫). ಈ ಶಾಸನದಲ್ಲಿ ತಿರುಮಲೆ ತಾತಯ್ಯ ಮತ್ತು ಬುಸುವಿಸೆಟ್ಟಿಯರ ಉಲ್ಲೇಖ ಇಲ್ಲ. ನ್ಯಾಯನಿರ್ಣಯ ಆಗುವಾಗ ಅವರು ಇರಲಿಕ್ಕಿಲ್ಲ ಬೇಕು. ನ್ಯಾಯ ನಿರ್ಣಯ ಆದ ಕೂಡಲೇ ವೈಷ್ಣವರೇ ಈ ಶಾಸನವನ್ನು ಹಾಕಿಸಿದ್ದಾರೆ "ಶಾಸನವನ್ನು ಕಲ್ಯದಲ್ಲಿ ಮೊದಲು ಹಾಕಿಸಲು ನಿಯೋಗದ ನಾಯಕ ಕಲ್ಯದವನಾಗಿದ್ದುದೂ ಕಾರಣ" ಎಂದು ಚಿದಾನಂದಮೂರ್ತಿಯವರು ಹೇಳುತ್ತಾರೆ.

ಕಲ್ಯದ ಸಮಸ್ಯೆ ಒಂದು ರೀತಿಯದಾದರೆ ಶ್ರವಣಬೆಳಗೊಳದ ಸಮಸ್ಯೆ ಮತ್ತೊಂದು ರೀತಿಯದು. ಅಲ್ಲಿಯೂ

ಕಳಸ ಮತ್ತು ಪಂಚವಾದ್ಯಗಳ ಪೂರ್ವ ಮರ್ಯಾದೆಯ ಪ್ರಸ್ತಾಪವಿದ್ದರೂ, ಅದೂ ಸೇರಿದಂತೆ ಬಸದಿಗಳ ರಕ್ಷಣೆಯ ಅಗತ್ಯವೂ ಇತ್ತು. "ಸಮಸ್ತ ರಾಜ್ಯದ ಭವ್ಯ ಜನಂಗಳ ಅನುಮತದಿಂದ ಬೆಳುಗುಳದ ತೀರ್ಥ್ಥದಲಿ ವೈಷ್ಣವ ಅಂಗರಕ್ಷೆಗೋಸುಗ ಸಮಸ್ತ ರಾಜ್ಯದೊಳಗುಳ್ಳಂತಹ ಜೈನ(ರು) ಬಾಗಿಲುಗಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ೧ ಹಣ ಕೊಟ್ಟು ಆ ಯೆತ್ತಿದ ಹೊನ್ನಿಂಗೆ ದೇವರ ಅಂಗರಕ್ಷೆಗೆ ಯಿಪ್ಪತ್ತಾಳನೂ ಸಂತವಿಟ್ಟು ಮಿಕ್ಕ ಹೊನ್ನಿಂಗೆ ಜೀರ್ಣ್ನಜಿನಾಲಯಂಗಳಿಗೆ ಸೊದೆಯನಿಕೂದು" ಎಂದು ನಿರ್ಣಯವಾಯಿತು.

ಇಲ್ಲಿ ವೈಷ್ಣವ ಅಂಗರಕ್ಷೆಗೆ ಜೈನರೇ ಮನೆಗೊಂದು ಹಣವನ್ನು ಕೊಡುವಂತೆ ನಿರ್ಣಯವಾಗಿದೆ. ವೈಷ್ಣವರು ಜೈನರನ್ನು ಕೊಲ್ಲುತ್ತಿದ್ದರು, ಅನ್ಯಾಯ ಮಾಡುತ್ತಿದ್ದರು ಎಂದಾಗ, ದೇವಚಂದ್ರನ ಹೇಳಿಕೆಯಂತೆ ನಿಜವಾಗಿಯೂ ವೈಷ್ಣವರು ಹಣವನ್ನು ಕೊಡುತ್ತಿದ್ದರೆ? ಅವರು ಆರ್ಥಿಕವಾಗಿ ಅಷ್ಟು ಸಬಲರಾಗಿದ್ದರೆ? ಜೈನಧರ್ಮದವರೇ ಆದರೆ ಪ್ರಾಮಾಣಿಕತೆ, ಭಕ್ತಿ ಮತ್ತು ಪ್ರೀತಿಯಿಂದ ತಮ್ಮ ಧರ್ಮ ಮತ್ತು ದೇವಸ್ಥಾನಗಳನ್ನು ಉಳಿಸಿಕೊಳ್ಳಲು ಮನೆಗೊಂದು ಹಣವನ್ನು ಕೊಟ್ಟೇ ಕೊಡುತ್ತಾರೆ. ಶಾಸನತಜ್ಞ ಡಾ. ಕೆ,ಆರ್. ಗಣೇಶ್ ಅವರು "ಮೊದಲಿನಿಂದಲೂ ಜೈನರು ವ್ಯಾಪಾರ-ವ್ಯವಹಾರದಲ್ಲಿ ಇದ್ದವರಾದುದರಿಂದ ಅವರು ಆರ್ಥಿಕವಾಗಿ ಸಬಲರಾಗಿದ್ದರು" ಎಂದು ಹೇಳುತ್ತಾರೆ (ಅವರೊಡನೆ ಈ ಕುರಿತು ಚರ್ಚಿಸಿದಾಗ) ಇಲ್ಲಿ ನ್ಯಾಯ- ಅನ್ಯಾಯದ ಪ್ರಶ್ನೆಗಿಂತ ಅನುಕೂಲತೆಯನ್ನು ಗಮನಿಸಿದಂತೆ ಕಾಣುತ್ತದೆ. ಕಲ್ಯ ಶಾಸನದಲ್ಲಿ "ವೈಷ್ಣವರಿಗೆ ನಾವು ಮೊರೆಹೋಗುತ್ತೇವೆ" ಎಂದು ಜೈನರು ಹೇಳಿದರೆ ಶ್ರವಣಬೆಳಗೊಳ ಶಾಸನದಲ್ಲಿ ವೈಷ್ಣವರು "ವೈಷ್ಣವ ಸಮಯವು ಜೈನ ದರ್ಶನವ ರಕ್ಷಿಸಿಕೊಂಡು ಬಹವು" ಎಂದು ಒಪ್ಪಂದವನ್ನು ಮಾಡಿಕೊಂಡಿರುವುದನ್ನು ಶಾಸನಗಳು ಹೇಳುತ್ತವೆ. ಇಲ್ಲಿ ಮನೆಗೊಂದು ಹಣವನ್ನು ಯಾರು ಕೊಡುತ್ತಾರೆ ಎಂಬುದು ಮುಖ್ಯವಾಗದೆ ಕೊಲೆ ಹಾಗೂ ಅನ್ಯಾಯಗಳು ನಡೆಯಬಾರದು ಎಂಬ ವಿಷಯವೇ ಮುಖ್ಯವಾಗಿದೆ. ಜೈನರ ದೂರು ಕೂಡ ಅದೇ ಆಗಿತ್ತು ಎಂಬುದನ್ನು ಗಮನಿಸಬೇಕು. ಈ ಮೇರೆಗೆ "ತಪ್ಪದೆ ಕೆಲವು ವರ್ಷ ನಡೆಸಿ ಬಂದರು" ಎಂಬ ದೇವಚಂದ್ರನ ಮಾತು-ಅವನು ವೈಷ್ಣವರೇ ಮನೆಗೊಂದು ಹಣ ಕೊಟ್ಟರು ಎಂದು ಹೇಳಿದರೂ-ವ್ಯವಸ್ಥೆಯು ದೀರ್ಘಕಾಲ ನಡೆಯಲಿಲ್ಲವೆಂದು ದೇವಚಂದ್ರನೇ ಹೇಳುತ್ತಾನೆ.

ಈ ಹಿನ್ನೆಲೆಯಲ್ಲಿ ಚಿದಾನಂದಮೂರ್ತಿಯವರು ಹೇಳುವ "ಬುಕ್ಕನ ತೀರ್ಪು ಘರ್ಷಣೆಗಳ ಮೊನಚನ್ನು ಮೊಂಡು ಮಾಡಿರಬಹುದು. ಅನಾಹುತಗಳ ಪ್ರಮಾಣವನ್ನು ತಗ್ಗಿಸಿರಬಹುದು. ಆದರೆ ಘರ್ಷಣೆಗಳನ್ನು ಸಂಪೂರ್ಣವಾಗಿ ನಿಲ್ಲಿಸಿತೇ ಎಂಬುದು ಅನುಮಾನಾಸ್ಪದ" ಎಂಬ ಮಾತುಗಳು ಅರ್ಥಪೂರ್ಣವಾಗುತ್ತವೆ.

ಈ ಶಾಸನದ ವಿಷಯದ ಬಗ್ಗೆ ಹೇಳುವುದಾದರೆ, ಬುಕ್ಕರಾಯನು ಯಾವ ಸ್ಥಳಕ್ಕೆ ಬಂದಿದ್ದ, ಈ ನಿರ್ಣಯಗಳು ಎಲ್ಲಿ ಆದವು ಎಂಬುದು ಸ್ಪಷ್ಟವಾಗಿಲ್ಲ. ಕಲ್ಯ ಶಾಸನವನ್ನು ಶಕವರ್ಷ ೧೨೯೦ನೇ ಕೀಲಕ ಸಂವತ್ಸರದಲ್ಲಿ ಅಂದರೆ ಕ್ರಿ.ಶ. ೧೭, ೧೩೬೮ರಲ್ಲಿ ಹಾಕಿಸಲಾಗಿದೆ. ೫ ವಾರಗಳ ನಂತರ ಶ್ರವಣಬೆಳಗೊಳದಲ್ಲಿ ಶಾಸನವನ್ನು ಹಾಕಿಸಲಾಗಿದೆ. ಕಲ್ಯ ಶಾಸನವನ್ನು ವೈಷ್ಣವರು ಹಾಕಿಸುವ ಮೊದಲೇ ಜೈನರ ದೂರು ಹಾಗೂ ನ್ಯಾಯ ತೀರ್ಮಾನಗಳು ಆಗಿದ್ದವು. ಆದುದರಿಂದ ಶಾಸನದ ಕೊನೆಯ ಮಾತಾಗಿ ಬಂದಿರುವ "ಕಲ್ಲೆಹದ ಹಪ್ಪೆಸೆಟ್ಟಿಯ ಸುಪುತ್ರ ಬುಕ್ಕರಾಯಂಗೆ ಬಿಂನಹಂ ಮಾಡಿ ತಿರುಮಲೆಯ ತಾತಯ್ಯಂಗಳ ಬಿಜಯಂಗೈಸಿ ತಂದು ಜೀರ್ನ್ನದ್ಧಾರವ ಮಾಡಿಸಿದನು . . . . ." ಎಂಬ ಮಾತು ಕೂಡ, ನ್ಯಾಯ ನಿರ್ಣಯವಾದ ಸಮಯದಲ್ಲೇ ಬುಕ್ಕರಾಯನಿಗೆ ಬಿನ್ನಯಿಸಿ, ಜೀರ್ನ್ನೋದ್ಧಾರಕ್ಕೆ ಅಪ್ಪಣೆ ಪಡೆದುಕೊಂಡಾಗಿತ್ತು ಎಂಬುದು ತಿಳಿಯುತ್ತದೆ.

ಶ್ರವಣಬೆಳಗೊಳದಲ್ಲಿರುವ ಕಲ್ಯಾಣಿಯ ಬಗೆಗೆ ದೇವಚಂದ್ರನು ಈ ರೀತಿ ಹೇಳುತ್ತಾನೆ. ಚಿಕ್ಕದೇವರಾಜನ ಕಾಲದಲ್ಲಿದ್ದ ಜೈನ ಪಂಚಮನಾದ ಕಾಳಯ್ಯ ಸೆಟ್ಟಿಯ ಬಗೆಗಿನ ಒಂದು ಘಟನೆಯನ್ನು ನಿರೂಪಿಸಿದ್ದಾನೆ. ಅತನೇ ರಾಜನ ಹೆಸರಿನಲ್ಲಿ ಕಲ್ಯಾಣಿಯನ್ನು ಕಟ್ಟಿಸಿ, 'ಚಿಕದೇವರಾಯ ಕಲ್ಯಾಣಿ' ಎಂದು ಹೆಸರಿಟ್ಟನು ಎನ್ನುತ್ತಾನೆ (ರಾಜಾವಳೀ ಕಥಾಸಾರ. ಪು. ೩೩೩)

ಐತಿಹಾಸಿಕವಾಗಿ ಕ್ರಿ.ಶ. ೧೬೯೯ರ ಶಾಸನದಲ್ಲಿ (ಸಂ. ೩೫೧) ಕೊಳವನ್ನು 'ಚಿಗದೇವರಾಜ ಕಲ್ಯಾಣಿ' ಎಂದು ವರ್ಣಿಸಿರುವುದು ಗಮನಾರ್ಹ. (ಹೊಸತು ಹೊಸತು ಪು. ೧೫) ಆದ್ದರಿಂದ ದೇವಚಂದ್ರನು ನಿರೂಪಿಸಿರುವ ಕಥೆಯ ಸತ್ಯಾಸತ್ಯತೆ ಏನಿದ್ದರೂ, ಕಲ್ಯಾಣಿ ಮಾತ್ರ ಶಾಸನೋಕ್ತವಾಗಿದ್ದು, ಐತಿಹಾಸಿಕ ಸತ್ಯವಾಗಿದೆ.

ಆಕರ ಗ್ರಂಥಗಳು

೧. ರಾಜಾವಳೀ ಕಥಾಸಾರ – ಸಂ. ಎಚ್.ಜೆ. ಲಕ್ಕಪ್ಪಗೌಡ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

೨. ಹೊಸತು ಹೊಸತು – ಸಂಪ್ರಬಂಧ ಸಂಪುಟ. ಡಾ. ಎಂ. ಚಿದಾನಂದಮೂರ್ತಿ. ಕನ್ನಡ ವಿಶ್ವವಿದ್ಯಾಲಯ. ಹಂಪಿ.

೩. ಇತಿಹಾಸ ದರ್ಶನ ಸಂ. ೧೮/೨೦೦೩.

೪. ಸಾವನ್ನು ಸ್ವಾಗತಿಸಿ, ಷ. ಶೆಟ್ಟರ್. ಕನ್ನಡಕ್ಕೆ ಸದಾನಂದ ಕನವಳ್ಳಿ ಮತ್ತು ಷ. ಶೆಟ್ಟರ್.

೫. ಅರವಂಟಿಗೆ ಸಂ ೩, ಸಂ ೧.

೬ ಮಾರ್ಗ-೩. ಡಾ. ಎಂ.ಎಂ. ಕಲುಬುರ್ಗಿ.


೫೨

ಯಲ್ಲಟ್ಟಿ ಗುಡ್ಡದಲ್ಲಿ ಇತ್ತೀಚೆಗೆ ದೊರೆತ ಮೊಘಲರ ಕಾಲದ ನಾಣ್ಯಗಳು ಮತ್ತು ಅವುಗಳ ಇತಿಹಾಸ

ಡಾ. ಸಾವಿತ್ರಿಬಾಯಿ ನಿಂ. ಓಲೇಕಾರ*

ಕರ್ನಾಟಕ ಇತಿಹಾಸ ರಚನೆಯಲ್ಲಿ ನಾಣ್ಯಗಳ ಪಾತ್ರ ಮುಖ್ಯವಾದುದು. ಪ್ರಾಚ್ಯವಸ್ತುಗಳು, ಶಾಸನಗಳು, ಶಿಲ್ಪಗಳು ಹಾಗೂ ದೇವಾಲಯಗಳ ಜೊತೆ ಜೊತೆಯಲ್ಲಿ ನಾಣ್ಯಗಳು ಕರ್ನಾಟಕದ ಸಾಂಸ್ಕೃತಿಕ ಹಾಗೂ ಆರ್ಥಿಕ ಇತಿಹಾಸದ ಬಗ್ಗೆ ಬೆಳಕು ಚೆಲ್ಲಲು ತುಂಬಾ ಸಹಕಾರಿಯಾಗುತ್ತವೆ, ಎಂಬ ವಿಷಯ ಇಲ್ಲಿ ಗಮನಾರ್ಹವಾಗಿವೆ.[೧]

ಮೊಘಲರು ಕ್ರಿ.ಶ. ೧೫೨೬ರಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರೂ, ಕರ್ನಾಟಕ ರಾಜಕೀಯದಲ್ಲಿ ಅವರು ಅಷ್ಟೊಂದು ಆಸಕ್ತಿಯನ್ನು ತೋರಿಸಲಿಲ್ಲ. ೧೬೨೧ರಲ್ಲಿ ಮೊಘಲರಿಗೆ ಬಿಜಾಪೂರದ ಆದಿಲ್ ಶಾಹಿ ಸುಲ್ತಾನರು ಜಹಾಂಗೀರನಿಗೆ ಕಪ್ಪುಕಾಣಿಕೆಯನ್ನು ಕೊಡಲು ಒಪ್ಪಿಕೊಂಡನು. ಆದರೆ, ಇದನ್ನು ಸರಿಯಾಗಿ ಕೊಡಲಿಲ್ಲವಾದ ಕಾರಣದಿಂದ ಜಹಾಂಗೀರನು ಬಿಜಾಪೂರದ ಮೇಲೆ ೧೬೩೬ರಲ್ಲಿ ದಂಡೆತ್ತಿ ಬಂದು ಅವರನ್ನು ಸೋಲಿಸಿದನು. ನಂತರ ವರ್ಷಕ್ಕೆ ೩೦ ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿಕೊಂಡು ಬಿಜಾಪೂರದ ಸುಲ್ತಾನ ಜೊತೆಗೆ ಒಪ್ಪಂದವನ್ನು ಮಾಡಿಕೊಂಡನು. ನಂತರ ೧೬೩೭–೧೬೫೭ರವರೆಗೆ ಗೋಲ್ಕಂಡ ರಾಜ್ಯವನ್ನು ಮೀರ ಜುಮ್ಲುನೆಂಬುವನಿಗೆ ಜಹಗೀರಿಯಾಗಿ ಕೊಡಲಾಯಿತು. ೧೬೫೭ರಲ್ಲಿ ಔರಂಗಜೇಬನು ಮೀರ ಜುಮ್ಲುನೆಂಬುವವನ ಜೊತೆಗೂಡಿ ಬಿಜಾಪೂರದ ಮೇಲೆ ದಂಡಯಾತ್ರೆ ನಡೆಸಿದನು. ಬಿಜಾಪೂರದ ಸುಲ್ತಾನನು ಔರಂಗಜೇಬನನ್ನು ಚಕ್ರವರ್ತಿಯೆಂದು ಒಪ್ಪಿಕೊಂಡು ನಂತರ ಬೀದರ್, ಕಲ್ಯಾಣ, ಕೊಂಕಣ, ಮತ್ತಿತ್ತರ ಕೋಟೆಗಳನ್ನು ಮೊಘಲರಿಗೆ ಒಪ್ಪಿಸಿದನು. ಈ ಮಧ್ಯೆ ತನ್ನ ಇತರ ಕೆಲಸಗಳ ಸಲುವಾಗಿ ಔರಂಗಜೇಬನು ದೆಹಲಿಗೆ ತೆರಳಿದನು. ಆದರೆ, ಕ್ರಿ.ಶ. ೧೬೮೬ರ ಸಮಯಕ್ಕೆ ಉತ್ತರ ಕರ್ನಾಟಕದ ಅನೇಕ ಭಾಗಗಳು ಮೊಘಲರ ವಶದಲ್ಲಿದ್ದವು. ಇತ್ತ ಕಡೆ ಮೈಸೂರಿನ ಒಡೆಯರು ಮೊಘಲರನ್ನು ಎದುರಿಸುವಷ್ಟು ಸಮರ್ಥರಾಗಿಲ್ಲದೇ ಇದ್ದುದರಿಂದ ಬೆಂಗಳೂರು,



ಕೋಲಾರ, ತುಮಕೂರು, ಮುಂತಾದ ಜಿಲ್ಲೆಗಳ ಭಾಗಗಳು ಔರಂಗಜೇಬನ ವಶಕ್ಕೆ ಸೇರಿದವು. ಆದರೆ ಮರಾಠರು ಮೊಘಲರಿಗೆ ವಿರುದ್ಧವಾಗಿದ್ದುದರಿಂದ, ಮೊಘಲರು ಪೂರ್ಣವಾಗಿ ತಮ್ಮ ಪ್ರಾಬಲ್ಯವನ್ನು ಕರ್ನಾಟಕದಲ್ಲಿ ಸ್ಥಾಪಿಸಲು ವಿಫಲವಾದರು. ಇತ್ತ ಮೈಸೂರಿನ ಚಿಕ್ಕದೇವರಾಜ ಒಡೆಯರು ಔರಂಗಜೇಬನೊಡನೆ ಮೈತ್ರಿಭಾವದಿಂದ ಇದ್ದರು. ಅವನಿಂದ ಜಗದೇವ ಎಂಬ ಬಿರುದನ್ನು ಕೂಡ ಪಡೆದಿದ್ದರು. ಔರಂಗಜೇಬನ ಕೈಕೆಳಗಿದ್ದ, ಕರ್ನಾಟಕದ ಪ್ರದೇಶಗಳು ಸರಿಯಾದ ಆಡಳಿತಕ್ಕೋಸ್ಕರ ಒಬ್ಬ ಮೊಘಲ ಫೌಜುದಾರನನ್ನು ನಿಯಮಿಸಲಾಯಿತು. ಇವನು ಅರ್ಕಾಟಿನ ನವಾಬನ ಆಶ್ರಯದಲ್ಲಿ ಬಿಜಾಪೂರ, ಸಿರಾ, ಸವಣೂರುಗಳಲ್ಲಿ ಅನೇಕ ವಿಭಾಗಗಳನ್ನು ಹೊಂದಿದ್ದನು. ಮೊದಲನೇಯ ಫೌಜುದಾರ ಕಾಸಿಂ ಖಾನನ ಆಶ್ರಯದಲ್ಲಿ ಸಿರಾ ಪ್ರಾಂತವನ್ನು ೭ ಪರಗಣಗಳಾಗಿ ವಿಭಾಗಿಸಲಾಯಿತು. ಅವುಗಳು ಸಿರಾ, ಹೊಸಕೋಟೆ, ಬಸವಾಪಟ್ಟಣ, ಬೂದಿಹಾಳು, ಪೆನುಗೊಂಡ, ದೊಡ್ಡಬಳ್ಳಾಪುರ ಹಾಗೂ ಕೋಲಾರ. ಬಿಜಾಪೂರ ಪತನವಾದ ನಂತರ ಗವರ್ನರ ಆಗಿದ್ದ ಅಬ್ದುಲ್ ರಹುಷನಗೆ ಬಂಕಾಪುರ,

* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಅಜಂನಗರ ಹಾಗೂ ಬೆಳಗಾಂಗಳನ್ನು ಜಹಗೀರಿಯಾಗಿ ಕೊಡಲಾಯಿತು. ಅವನು ಸವಣೂರಿನಿಂದ ಆಳಲು ಆರಂಭಿಸಿದನು. ಕಂದಾಯವನ್ನು ವಸೂಲಿ ಮಾಡುವುದಕ್ಕಾಗಿ ಅವನು ಅಧಿಕಾರಿಗಳನ್ನು ನರಗುಂದ, ಶಿರಹಟ್ಟಿ, ಹಾವನೂರು, ಡಂಬಳ, ಮುಂತಾದ ಕಡೆಗಳಲ್ಲಿ ನಿಯಮಿಸಿದನು. ಔರಂಗಜೇಬನ ಮರಣದ ನಂತರ ಉತ್ತರ ಕರ್ನಾಟಕದ ಅನೇಕ ಭಾಗಗಳು ಮರಾಠರ ಕೈವಶವಾದವು.

ಕರ್ನಾಟಕದಲ್ಲಿ ಮೊಘಲರು ಪ್ರಬಲವಾಗಿದ್ದಾಗ ಅವರು ಅನೇಕ ಕಡೆಗಳಲ್ಲಿ ಟಂಕಸಾಲೆಗಳನ್ನು ಸ್ಥಾಪಿಸಿ, ಸ್ಥಳೀಯ ಅವಶ್ಯಕತೆಗೆ ತಕ್ಕಂತೆ ವಿವಿಧ ರೀತಿಯ ನಾಣ್ಯಗಳನ್ನು ಟಂಕಿಸಲು ಪ್ರಾರಂಭಿಸಿದರು. ಇದರ ಕುರುಹು ಆಗಿ ಕರ್ನಾಟಕದಲ್ಲಿ ಅನೇಕ ಮೊಘಲ್ ನಾಣ್ಯಗಳು ಭೂಮಿಯಲ್ಲಿ ದೊರೆತಿವೆ.[1]

ಅದೇ ರೀತಿಯಾಗಿ ಇತ್ತೀಚೆಗೆ ದೊರೆತ ಯಲ್ಲಟ್ಟಿ ಗುಡ್ಡದಲ್ಲಿ ಸಿಕ್ಕಂತಹ ಮೊಘಲರ ನಾಣ್ಯಗಳಲ್ಲಿ ಔರಂಗಜೇಬನ ಕಾಲದ ನಾಣ್ಯಗಳು ಮತ್ತು ಅವರ ವಂಶಸ್ಥರ ಹೆಸರಿರುವ ನಾಣ್ಯಗಳು ಈ ಪ್ರಬಂಧ ಬರೆಯಲು ಈ ನಾಣ್ಯಗಳು ಮೂಲ ಆಧಾರವಾಗಿವೆ.

ನಾಣ್ಯಗಳು ಸಿಕ್ಕ ನೆಲೆ

ಈ ನಾಣ್ಯಗಳು ದೊರೆತ ಸ್ಥಳವು ಬನಹಟ್ಟಿ ಸಮೀಪದ ಅಸ್ಕಿ ಗುಡ್ಡದ ಆಸಂಗಿ ಗ್ರಾಮದ ಸರ್ವೇ ನಂಬರ ೯೪ ರಲ್ಲಿದೆ. ಇದು ಕೆಂಪು ಶಿಲಾ ಮಣ್ಣಿನಿಂದ ಒಳಗೊಂಡ ಗುಡ್ಡವು ಸ್ವಲ್ಪ ಎತ್ತರದಲ್ಲಿದೆ. ನಾಣ್ಯಗಳನ್ನು ಇಟ್ಟಿದ್ದ ಮಣ್ಣಿನ ಕುಡಕಿ ಮಣ್ಣನ್ನು ಅಗೆಯುವಾಗ ತುಂಡು ತುಂಡಾಗಿ ಒಡೆದು ಹೋಗಿದೆ. ಆ ತುಂಡುಗಳನ್ನು ಮಣ್ಣಿನ ಜೊತೆಯಲ್ಲಿ ಹೋದವೆಂದು ಹೇಳಲಾಗಿದೆ. ಈ ಕುಡಕಿ ಸುಮಾರು ೧೫ ಸೆಂಟಿ ಮೀಟರ ಆಳದಲ್ಲಿ ಹುಗಿಯಲಾಗಿತ್ತು.


ನಾಣ್ಯಗಳ ಸ್ವರೂಪ

ಒಟ್ಟು ೧೭೨ ಬೆಳ್ಳಿನಾಣ್ಯಗಳ ತೂಕವು ೧ ಕೆ.ಜಿ. ೯೬೪ ಗ್ರಾಂ. ೨೭೦ ಮಿಲಿ ಗ್ರಾಂ. ಇವೆ. ಈ ನಾಣ್ಯಗಳ ಸ್ವರೂಪವನ್ನು ಗಮನಿಸಿದಾಗ ಅವುಗಳು ಸುಮಾರು ಮೊಟ್ಟೆ ಆಕಾರ ಮತ್ತು ವೃತ್ತಾಕಾರದಲ್ಲಿವೆ. ಇವುಗಳು ಭಿನ್ನ ವ್ಯಾಸ ಅಳತೆ ಮತ್ತು ದಪ್ಪವಾಗಿವೆ. ಕೆಲವು ನಾಣ್ಯಗಳ ಮೇಲೆ ಕೆಂಪು ಬಣ್ಣದ ಲೇಪನೆ ಇದೆ. ಎಲ್ಲಾ ನಾಣ್ಯದ ಎರಡು ಮುಖಗಳಲ್ಲಿ ಪರ್ಶಿಯನ್ ಬರವಣಿಗೆ ಇದೆ. ತಲಾ ಒಂದೊಂದು ನಾಣ್ಯದ ತೂಕವು ಸರಾಸರಿ ೧೦ ಗ್ರಾಂ. ಇವೆ. (೮೨ ಮಿಲಿ ಗ್ರಾಂ.ದಿಂದ ೧೧ ಗ್ರಾಂ ೫೮ ಮಿಲಿ ಗ್ರಾಂ.ನಲ್ಲಿವೆ.) ಒಟ್ಟಾರೆ ತೂಕದಲ್ಲಿ ಹೆಚ್ಚಾಗಿ ಒಂದೇ ಗ್ರಾಂ.ನ ವ್ಯತ್ಯಾಸವಿದೆ. ಬಹುತೇಕ ತಲಾ ಒಂದರ ತೂಕವು ಸುಮಾರು ೧ ತೊಲೆ ಇದೆ. ಮೊಘಲರ ನಾಣ್ಯಗಳ ಅಧ್ಯಯನದಿಂದ ಡಾ. ನರಸಿಂಹಮೂರ್ತಿ ಇವರು ಔರಂಗಜೇಬನ ಪತನದೊಂದಿಗೆ ಮೊಘಲರ ನಾಣ್ಯಗಳ (ಚಲಾವಣೆ ಕ್ರಮ) ಅವನತಿ ಹೊಂದಿದವೆಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಎಲ್ಲಾ ನಾಣ್ಯಗಳಲ್ಲಿ ಪರ್ಶಿಯನ್ ಬರವಣಿಗೆ ಇದೆ. ಇದಲ್ಲದೆ ನಾಣ್ಯಗಳ ಮೇಲೆ ಅಂಟಿಸಿದ ರಾಜನ ಹೆಸರು ಟಂಕಸಾಲೆಯ ಹೆಸರು, ಮತ್ತು ಅವನ ಆಳ್ವಿಕೆಯ ವರ್ಷವನ್ನು ಪ್ರಮುಖವಾಗಿ ಬರೆಯಲಾಗಿದೆ. ಇದರಲ್ಲಿ ಮೊಘಲ್ ಅರಸ ಔರಂಗಜೇಬನ ಕಾಲದ ಸುಮಾರು ೧೫೦ಕ್ಕೂ ಹೆಚ್ಚು ನಾಣ್ಯಗಳಿವೆ. ಕೆಲವು ನಾಣ್ಯಗಳಲ್ಲಿ ಔರಂಗಜೇಬನ ಹೆಸರನ್ನು ಎರಡು ಮುಖಗಳಲ್ಲಿ ಮುದ್ರಿಸಲಾಗಿದೆ. ಉದಾಹರಣೆ ಒಂದು ಮುಖದಲ್ಲಿ "ಔರಂಗಜೇಬನ ಬಾದಶಹ ಅಲ್ಲಂ ದಾಟೋ ಬದ್ರೇ ಮುನೀರ "(ಅಲಂಗೀರ್ ಬಾದಶಹಗಾಝೀ)" ಸಾಮ್ರಾಟ ಅಥವಾ ಜಗಜ್ಜೇತ ಎಂಬ ಬಿರುದನ್ನು ಹಾಕಿಕೊಂಡನು. ತನ್ನ ಮೊದಲನೆಯ ವರ್ಷ ೧೬೫೭ರಲ್ಲಿ ಮುನ್ನುಗ್ಗಲು ತನ್ನ ಹೆಸರು ಮತ್ತು ಅಬು-ಅಲ್ ರಝಫರ್ ಮುಹೀಉದ್ದೀನ್ ಮುಹಮ್ಮದ ಬಹಾದೂರಶಾಹ ಅಲಂಗೀರ್ ಔರಂಗಜೇಬ್ ಬಾದ್ಶಾಹ್ ಗಾಝೀ" ಎಂಬ ಬಿರುದನ್ನು ಧರಿಸಿದನು. ಮತ್ತು ಮೀರ್ ಅಬ್ದುಲ್ ಬಾದಶಾಹ್ ಬಾಯಿಯು ರಚಿಸಿದ (ಸಿಕ್ಕ್ ರಝಿದದರ ಜಹಾನ್ ಚುಮೇಹರ ಅಥವಾ ಬದ್ರ) ಮುನಿರ್‌ಶಾಹ್-ಔರಂಗ-ಜೇಬ-ಅಲಂಗೀರ್ (ಶಾಹ್ ಔರಂಗಜೇಬ ಅಲಂಗೀರ್‌ನು ಸೂರ್ಯ ಅಥವಾ ಚಂದ್ರನಂತೆ ಹೊಳೆಯುವ ಹಣವನ್ನು ಜಗತ್ತಿನಲ್ಲಿ ಹೊರಡಿಸಿದನು. (೨೯೧) ಈ ದ್ವಿಪದಿಯು ಬೇರೆ ಬೇರೆ ಟಂಕಸಾಲೆಗಳಲ್ಲಿ ಬೇರೆ ಬೇರೆ ವರ್ಷಗಳಲ್ಲಿ ನಾಣ್ಯಗಳ ಮೇಲೆ ಬಂದಿತು. ಹಿಮ್ಮಗ್ಗಲು ಔರಂಗಜೇಬನು ಒಂದು ಸೂತ್ರವನ್ನು ಬಳಸಿದನು ಅದು "ಸನ್ ಜುಸುಲ್ ಮೈಮುನತ್ ಮಾನೂಸ್ ಜರ್ಬ" ಇದರ ಅರ್ಥ ಹಾಗೂ ಅದರ ಜೊತೆಗೆ ಟಂಕಸಾಲೆಯು ಹೆಸರು ಇರುವದು.[2]

ಇಲ್ಲಿ ಹೇಳಿದ ಜುಲುಸ್ ೩೮ ಔರಂಗಜೇಬನ ಆಳ್ವಿಕೆಯ ೩೮ ವರ್ಷವನ್ನು ಸೂಚಿಸುತ್ತದೆ. ಹೀಗೆ ಇಲ್ಲಿನ ಅನೇಕ ನಾಣ್ಯಗಳಲ್ಲಿ ಔರಂಗಜೇಬನ ಆಳ್ವಿಕೆಯ ವರ್ಷ ೦೧. ೦೩. ೦೮, ೧೦, ೨೩, ೨೬, ೨೭, ೩೧, ೩೨, ೩೪, ೩೭, ೩೮. ೪೦ ಇತ್ಯಾದಿಯಾಗಿವೆ.

೧೬೩೪ರಲ್ಲಿ ಈತನನ್ನು ೧೦,೦೦೦ದ ಮನ್ಸಬ್ದಾರ್ ಎಂದು ನೇಮಿಸಲ್ಪಟ್ಟ ವರ್ಷವನ್ನು ನಾಣ್ಯಗಳಿಂದ ತಿಳಿದುಬರುತ್ತದೆ.[3]



ನಾಣ್ಯ ಸಂಖ್ಯೆ ೨೩೬ದಲ್ಲಿ ಸಖೀಲುಲ್-ಕುರಾನ್ ಉಲ್ಲೇಖವಿದೆ. ಇದರ ಅರ್ಥ ಇವನು ಸುನ್ನೀ ಸಂಪ್ರದಾಯದ ರಕ್ಷಕನಾಗಿದ್ದ, ಔರಂಗಜೇಬನು ಕುರಾನ್ ಪರಿಣಿತ. ನೀತಿ ನಿಯಮಗಳನ್ನು ತಪ್ಪದೇ ಪಾಲಿಸುವಂತೆ ತನ್ನ ಮುಸಲ್ಮಾನ ಪ್ರಜೆಗಳಿಗೆ ಆದೇಶವಿತ್ತನು. ಮತ್ತು ನಾಣ್ಯಗಳಲ್ಲಿ ಅಚ್ಚು ಹಾಕಿಸುತ್ತಿದ್ದನು.

ಔರಂಗಜೇಬನ ಪ್ರಾಂತ್ಯಗಳು

ಒಟ್ಟು ೨೧ ಪ್ರಾಂತ್ಯಗಳನ್ನು (ಸುಭೆಗಳನ್ನು) ಒಳಗೊಂಡಿತ್ತು.

೧. ಉತ್ತರ ಭಾರತದಲ್ಲಿ ೧೪ ಪ್ರಾಂತ್ಯಗಳು ಅದರಲ್ಲಿ ೨ ಪ್ರಾಂತ್ಯಗಳ ಹೆಸರಿರುವದು. ೧) ಗುಜರಾತ ೨) ಅಲಹಬಾದ.

೨. ಡೆಕ್ಕನ್‌ದಲ್ಲಿ ೬ ಪ್ರಾಂತ್ಯಗಳು. ಅದರಲ್ಲಿ ೧) ಔರಂಗಾಬಾದ, ೨) ಬಿಹಾರ್, ೩) ಬಿದರ, ೪) ಬಿಜಾಪೂರ, ೫) ಹೈದ್ರಬಾದ, ೬) ಖಾನದೇಶ.

ಇವೆಲ್ಲವು ಹಿಜರ ವರ್ಷ ಚಿನ್ನದ ಮಹಲ್ ಮತ್ತು ಔರಂಗಜೇಬನ ಬೆಳ್ಳಿಯ ನಾಣ್ಯಗಳಲ್ಲಿ ಅವನ ಆಳ್ವಿಕೆಯ ವರ್ಷವನ್ನು ಅಚ್ಚಾಗುತ್ತಿದ್ದವು ಎಂಬುದನ್ನು ಈ ಎಲ್ಲಾ ನಾಣ್ಯಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ.



ಆಧಾರಸೂಚಿ

೧. ಪರಮೇಶ್ವರಿಲಾಲ ಗುಪ್ತಾ., ಎ.ಎಮ್. ಅಣ್ಣಿಗೇರಿ 'ನಾಣ್ಯಗಳು' ಮಟ ಸಂಖ್ಯೆ ೧೪೩.
೨. ಎ.ವ್ಹಿ.ನರಸಿಂಹಮೂರ್ತಿ 'ಕರ್ನಾಟಕ ನಾಣ್ಯ ಪರಂಪರೆ' ಮಟ ಸಂಖ್ಯೆ ೨೬೩-೨೬೪.
೩. ಡಾ. ಎ.ವ್ಹಿ.ನರಸಿಂಹಮೂರ್ತಿ 'ಭಾರತೀಯ ನಾಣ್ಯ ಪರಂಪರೆ' ಮಟ ಸಂಖ್ಯೆ ೧೨೦.
೪. ಪರಮೇಶ್ವರಿಲಾಲ ಗುಪ್ತಾ, ಎ.ಎಮ್ ಅಣ್ಣಗೇರಿ 'ನಾಣ್ಯಗಳು' ಮಟ ಸಂಖ್ಯೆ ೧೫೮.

ಆಧಾರ ಗ್ರಂಥಗಳು

೧. ಎ.ಎಂ. ಅಣ್ಣಿಗೇರಿ, 'ಭಾರತದ ಪ್ರಾಚೀನ ನಾಣ್ಯಗಳು', ೧೯೮೭, (ಉಪನ್ಯಾಸ ಗ್ರಂಥಮಾಲೆ ೧೧೬).
೨. K D BRJPAL 'Indian Numismatic studies' Abhinan publications new Dehli-1976.
೩. ಎ.ವ್ಹಿ. ನರಸಿಂಹಮೂರ್ತಿ 'ಭಾರತೀಯ ನಾಣ್ಯ ಪರಂಪರೆ' ಮೈಸೂರು ವಿಶ್ವವಿದ್ಯಾಲಯ ಮೈಸೂರು. ೨೦೦೮.
೪. H. Nelson 'Coins of the Mughal Emperors', London, 1975.

ಮೈಸೂರು ಅರಸರ ನಾಣ್ಯಗಳ ಪತ್ತೆ

ಡಾ. ಶರಣಬಸಪ್ಪ ಕೋಲ್ಕಾರ*

ದಿನಾಂಕ: ೦೭/೧೧/೨೦೧೩ರ ವಿಜಯವಾಣಿ ಪತ್ರಿಕೆಯಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕಾರಟಗಿ ಗ್ರಾಮದಲ್ಲಿ ಚಿನ್ನದ ನಾಣ್ಯಗಳು ಪತ್ತೆಯಾದ ವರದಿ ಪ್ರಕಟವಾಗಿತ್ತು. ಅದರನ್ವಯ ನಾನು ಹಂಪಿಯ ಪ್ರಾಚ್ಯವಸ್ತು ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಗಂಗಾಧರರವರಿಗೆ ದೂರವಾಣಿ ಮೂಲಕ ವಿಷಯ ತಿಳಿಸಿದೆ. ಅವರು ನಾಣ್ಯಗಳನ್ನು ಪರಿಶೀಲಿಸಲು ಇಲಾಖೆಯ ಪುರಾತತ್ವ ಸಹಾಯಕ ಶ್ರೀ ಮಂಜನಾಯ್ಕ ಅವರನ್ನು ಕಳುಹಿಸಿಕೊಟ್ಟರು. ನಾನು ಮಂಜನಾಯ್ಕ ನಾಣ್ಯಗಳನ್ನು ಪರಿಶೀಲಿಸಲು ಅವುಗಳಿದ್ದ ಕಾರಟಗಿ ಪೋಲಿಸ್ ಠಾಣೆಗೆ ತೆರಳಿದೆವು. ಪೋಲಿಸರು ಆ ನಾಣ್ಯಗಳನ್ನು ಪಕ್ಕದ ಚಳ್ಳೂರು ಗ್ರಾಮದ ಕೆಲವು ವ್ಯಕ್ತಿಗಳಿಂದ ವಶಪಡಿಸಿಕೊಂಡ ಬಗ್ಗೆ ತಿಳಿಸಿದರು. ನಾಣ್ಯಗಳನ್ನು ಪರಿಶೀಲಿಸಲಾಗಿ ಅವು "ಪ್ರಾಚೀನ ಮೌಲ್ಯ" ಹೊಂದಿದ ನಾಣ್ಯಗಳು ಎಂಬುವುದಾಗಿ ತಿಳಿದು ಬಂತು. ನಾಣ್ಯಗಳು ದೊರೆತ ಸ್ಥಳದ ಆಧಾರ ಹಾಗೂ ನರಸಿಂಹ ಚಿತ್ರವನ್ನು ಅನುಲಕ್ಷಿಸಿ ಅವುಗಳು ವಿಜಯನಗರದ ವರಹಗಳೆಂದು ಮೊದಲ ನೋಟಕ್ಕೆ ನಂಬಲಾಯಿತ್ತು. ಆ ಬಗ್ಗೆ ಪ್ರತಿಕೆ ಹಾಗೂ ಟಿ.ವಿ. ಮಾಧ್ಯಮಗಳಲ್ಲೂ ಸಾಕಷ್ಟು ಚರ್ಚೆಯಾಯ್ತು. ಆದರ ಮುಂದುವರೆದ ನನ್ನ ಅಧ್ಯಯನದಲ್ಲಿ ಅವು ವಿಜಯನಗರದ ವರಹಗಳಲ್ಲ ಎಂಬುವುದು ಗಮನಕ್ಕೆ ಬಂದಿತು ಹಾಗಾಗಿ ಆ ನಾಣ್ಯಗಳ ಕಾಲ ಕರ್ತೃ ಮತ್ತು ಮಹತ್ವದ ಬಗೆಗೆ ಅಧ್ಯಯನ ನಡೆಸಿ ಅದನ್ನು ಈ ಪ್ರಬಂಧದಲ್ಲಿ ವಿವೇಚಿಸಲಾಗಿದೆ

ನಾಣ್ಯಗಳು ದೊರೆತ ಸ್ಥಳ

ನಾಣ್ಯಗಳು ದೊರೆತ ಸ್ಥಳದ ಬಗೆಗೆ ಎರಡು ಅಭಿಪ್ರಾಯಗಳಿವೆ. ಮೊದಲನೆಯದಾಗಿ ಯಾವ ವ್ಯಕ್ತಿಗಳಿಂದ ಪೋಲಿಸರು ನಾಣ್ಯಗಳನ್ನು ವಶಪಡಿಸಿಕೊಂಡಿದ್ದರೋ ಅವರ ಹೇಳಿಕೆಯ ಪ್ರಕಾರ ಅವು ಗಂಗಾವತಿ ತಾಲೂಕಿನ ಹುಳ್ಕಿಹಾಳ ಗ್ರಾಮದ ಹಳ್ಳದ ದಂಡೆಯಲ್ಲಿ ದೊರೆತೆಂಬುವುದು (ಉಸುಕು ತರಲು ತೆರಳಿದಾಗ ದೊರೆತವಂತೆ). ಅದರನ್ವಯ ನಾವು ಹುಳ್ಕಿಹಾಳ ಗ್ರಾಮ ಹಳ್ಳ ಹಾಗೂ ಸುತ್ತಲಿನ ಪ್ರದೇಶವನ್ನು ಸೂಕ್ಷ್ಮವಾಗಿ ಪರಿಶಿಲಿಸಿದೆವು. ಹಳ್ಳದ ಎರಡು ದಡಗಳಲ್ಲಿ ಹಳೆಯ ಊರಿನ ಅಥವಾ ಯಾವುದೇ ಸ್ಮಾರಕಗಳಿದ್ದ ಕುರುಹುಗಳಿಲಿಲ್ಲ ಮತ್ತು ಗ್ರಾಮದಲ್ಲೂ ಕೂಡಾ ಪ್ರಾಚೀನ ಸ್ಮಾರಕ, ಶಾಸನ, ಶಿಲ್ಪ ಮತ್ತಿತರ ಅವಶೇಷಗಳು ಕಂಡುಬರಲಿಲ್ಲ. ಹಾಗಾಗಿ ನಾಣ್ಯಗಳು ಇಲ್ಲಿ ದೊರೆತವೆಂಬುದು ನಂಬಲಸಾಧ್ಯವಾದ ಸಂಗತಿ ಎಂಬ ನಿರ್ಧಾರಕ್ಕೆ ಬರಲಾಯಿತು.

ಎರಡನೆಯದಾಗಿ ದಿನಾಂಕ ೧೨-೧೧-೨೦೧೩ ವಿಜಯವಾಣಿ ಪತ್ರಿಕೆಯಲ್ಲಿ ನಾಣ್ಯಗಳಿಗೆ ಸಂಬಂಧಿಸಿದಂತೆ ಮತ್ತೊಂದು ವರದಿ ಪ್ರಕಟವಾಯಿತು. ಅದರನ್ವಯ ಸದರಿ ವ್ಯಕ್ತಿಗಳು ಬೆಂಗಳೂರಿನಲ್ಲಿ ಕಟ್ಟಡ ಕಾಮಗಾರಿಗೆ ತೆರಳಿದ್ದರೆಂದು ಅಗ ಹಳೆಯ ಮನೆಯೊಂದರ ಬುನಾದಿ ತೋಡುತಿದ್ದಾಗ ನಾಣ್ಯಗಳಿದ್ದ ಕುಡಿಕೆ ದೊರೆಯಿತೆಂಬುದು ಈ ಸಂಗತಿಯ ಬಗೆಗೂ ಮತ್ತೊಮ್ಮೆ ಚಳ್ಳೂರು ಗ್ರಾಮಕ್ಕೆ ತೆರಳಿ ವಿವಿಧ ಮೂಲಗಳಿಂದ ಮಾಹಿತಿಯನ್ನು ಕಲೆ ಹಾಕಿದಾಗ ನಾಣ್ಯಗಳು ಬೆಂಗಳೂರಿನಲ್ಲಿ ದೊರೆತಿರುವುದು ದೃಢವಾಯಿತು.

ನಾಣ್ಯಗಳ ತಾಂತ್ರಿಕ ವಿವರ

ಮಣ್ಣಿನ ಮಡಕೆಯೊಂದರಲ್ಲಿ ದೊರೆತಿದ್ದ ಈ ನಾಣ್ಯಗಳು ಒಟ್ಟು ಸಂಖ್ಯೆಯಲ್ಲಿ ೩೭೯ ಇವೆ. ಪೋಲಿಸರ ಸೂಚನೆಯನ್ವಯ ನಾಣ್ಯಗಳನ್ನು ಪರಿಶೀಲಿಸಿದ ಸ್ಥಳೀಯ ಅಕ್ಕಸಾಲಿಗರು ದೃಢಪಡಿಸಿದಂತೆ ಇವೆಲ್ಲವು ಚಿನ್ನದ ನಾಣ್ಯಗಳು. ಪ್ರತಿಯೊಂದು ೦:೫ರಿಂದ ೦:೭ರವರಗೆ ವ್ಯಾಸವನ್ನು ಹೊಂದಿದ್ದು ಪ್ರತಿಯೊಂದು ಸಾಮಾನ್ಯವಾಗಿ ೫.೦೨ ಗ್ರೇನ್ ತೂಕ ಹೊಂದಿದ್ದು ಈ ನಾಣ್ಯಗಳಲ್ಲಿ ೩ರನ್ನು ಜಜ್ಜಲಾಗಿದ್ದು, ಬಿಲ್ಲೆಯಂತಾಗಿವೆ ೧ನ್ನು ಕರಗಿಸಲು ಪ್ರಯತ್ನಿಸಲಾಗಿದೆ. ಹೀಗಾಗಿ ಈ ನಾಲ್ಕು ನಾಣ್ಯಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ನಾಣ್ಯಗಳನ್ನು ಎರಕ ವಿಧಾನದಿಂದ ತಯಾರಿಸಲಾಗಿದೆ.

ನಾಣ್ಯಗಳ ಮೇಲಿನ ಚಿತ್ರ ಹಾಗೂ ಬರಹ

ಎಲ್ಲಾ ೩೭೯ ನಾಣ್ಯಗಳು ಒಂದೇ ರೀತಿಯ ಚಿತ್ರ ಹಾಗೂ ಬರಹಗಳನ್ನು ಹೊಂದಿವೆ ನಾಣ್ಯಗಳ ಮುಮ್ಮುಖದಲ್ಲಿ

* ಪ್ರಾಚಾರ್ಯರು, ಕೆ.ಎಸ್.ಸಿ. ಮಹಿಳಾ ಮಹಾವಿದ್ಯಾಲಯ, ಗಂಗಾವತಿ.

ಯೋಗಬಂಧ ಮುದ್ರೆಯ ನರಸಿಂಹನ ಚಿತ್ರವಿದೆ. ಇಲ್ಲಿ ನರಸಿಂಹನು ಕಾಲುಗಳನ್ನು ಪರಸ್ಪರ ವಕ್ರವಾಗಿಸಿಕೊಂಡು ಕುಳಿತ ಭಂಗಿಯಲ್ಲಿದ್ದಾನೆ (ಹಂಪಿಯ ಪ್ರಸಿದ್ಧ ಲಕ್ಷ್ಮೀನರಸಿಂಹ ವಿಗ್ರಹದಂತೆ) ಎರಡು ಮಂಡಿಗಳನ್ನು ಬಂಧಿಸಿದ ಅಷ್ಟಬಂಧ (ವಸ್ತ್ರ)ವಿದೆ. ಚತುರ್ಭುಜನಾದ ನರಸಿಂಹನ ಹಿಂದಿನ ಕೈಗಳಲ್ಲಿ ಶಂಖ ಚಕ್ರಗಳಿದ್ದರೆ, ಮುಂದಿನ ಕೈಗಳನ್ನು ಎತ್ತರಿಸಿರುವ ಮೊಣಕಾಲುಗಳ (ಮಂಡಿಗಳ) ಮೇಲೆ ಇರಿಸಲಾಗಿದೆ ಕೆಲವು ನಾಣ್ಯಗಳಲ್ಲಿ ಈ ಚಿತ್ರವು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ನಾಣ್ಯಗಳ ಹಿಮ್ಮುಖದಲ್ಲಿ ನಾಗರೀ ಲಿಪಿಯಲ್ಲಿ "ಶ್ರೀ ಕಂಠೀರವ" ಎನ್ನುವ ಮೂರು ಸಾಲುಗಳ ಬರವಣಿಗೆ ಇದೆ, ಕೆಲವು ನಾಣ್ಯಗಳಲ್ಲಿ ಈ ಬರಹ ಸ್ಪಷ್ಟವಾಗಿ ಗೋಚರಿಸುವುದಿಲ್ಲ.

ನಾಣ್ಯಗಳ ಕರ್ತೃ ಕಾಲ ಮತ್ತು ಹೆಸರಿನ ನಿರ್ಧಾರ

ನಾಣ್ಯಗಳ ತಾಂತ್ರಿಕ ಅಂಶಗಳಾದ ಲೋಹ, ಅಳತೆ, ಚಿತ್ರ, ಬರಹ ಮತ್ತು ಸ್ವರೂಪಗಳನ್ನು ದೊರೆತ ಸ್ಥಳ ಹಾಗೂ ಈ ಹಿಂದೆ ಶೋಧವಾದ ನಾಣ್ಯಗಳ ಅಧ್ಯಯನಗಳನ್ನು ಅನುಲಕ್ಷಿಸಿ ಪ್ರಸ್ತುತ ನಾಣ್ಯಗಳ ಕರ್ತೃ ಕಾಲ ಹಾಗೂ ಹೆಸರನ್ನು ನಿರ್ಧರಿಸಬಹುದಾಗಿದೆ. ಈವರೆಗೆ ಪ್ರಾಪ್ತವಾಗಿರುವ ಭಾರತದ ಪ್ರಾಚೀನ ನಾಣ್ಯಗಳ ಅಧ್ಯಯನದನ್ವಯ ಮೊದಲಿಗೆ ಗುಪ್ತ ಅರಸರ, ಹೊಯ್ಸಳ ಮನೆತನದ ಹಾಗೂ ವಿಜಯನಗರ ಅರಸರ ನಾಣ್ಯಗಳಲ್ಲಿ ಕೆಲವು ನಾಣ್ಯಗಳ ಮೇಲೂ ನರಸಿಂಹ, ಲಕ್ಷ್ಮೀನರಸಿಂಹನ ಚಿತ್ರಗಳಿವೆ. ಆದರೆ ಹಿಮ್ಮುಖದಲ್ಲಿ ಬೇರೆ ಬೇರೆ ಚಿತ್ರ ಬರಹಗಳಿವೆ. ಹಾಗಾಗಿ ಇವು ಆ ವಂಶಕ್ಕೆ ಸೇರಿದ ನಾಣ್ಯಗಳಲ್ಲವೆಂದು ನಿರ್ಧರಿಸಬಹುದು. ಇನ್ನು ಮೇಲಿನ ಅರಸರನ್ನು ಹೊರತುಪಡಿಸಿದರೆ ನರಸಿಂಹ ಚಿತ್ರದ ನಾಣ್ಯಗಳನ್ನು ಹೊರಡಿಸಿದವರೆಂದರೆ ಮೈಸೂರಿನ ಒಡೆಯರರು ಹಾಗಾಗಿ ಪ್ರಸ್ತುತ ನಾಣ್ಯಗಳು ಮೈಸೂರ ಒಡೆಯರವರ ನಾಣ್ಯಗಳೇ ಎಂಬುದವನ್ನು ಪರೀಶೀಲಿಸಬೇಕಾಗುತ್ತದೆ.

ಮೈಸೂರು ಅರಸರ ಕಂಠಿರವ ಪಣಗಳು

ಕರ್ನಾಟಕದ ನಾಣ್ಯ ಪರಂಪರೆಯಲ್ಲಿ ಮೈಸೂರು ಒಡೆಯರ ನಾಣ್ಯಗಳು ತಮ್ಮದೇ ಆದ ಸ್ಥಾನವನ್ನು ಹೊಂದಿವೆ. ಮೈಸೂರಿನಲ್ಲಿ ಹದಿನಾಲ್ಕನೆಯ ಶತಮಾನದಲ್ಲಿ ಅಧಿಕಾರಕ್ಕೆ ಬಂದು ವಿಜಯನಗರದ ಪತನಾನಂತರ ಪ್ರಾಬಲ್ಯಕ್ಕೆ ಬಂದ ಒಡೆಯರರು ಸುಮಾರು ಐದು ಶತಮಾನಕ್ಕೂ ದೀರ್ಘಕಾಲ ಆಳಿದ್ದಾರೆ. ಒಡೆಯರ ವಂಶದಲ್ಲಿ ಕ್ರಿ.ಶ. ೧೬೩೮ರಿಂದ ೧೬೬೦ರವರೆಗೆ ರಾಜ್ಯವಾಳಿದ ಕಂಠೀರವ ನರಸರಾಜ ಒಡೆಯರ ಅವರು ಮೊಟ್ಟ ಮೊದಲ ಬಾರಿಗೆ ನಾಣ್ಯಗಳನ್ನು ಟಂಕಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಕ್ರಿ.ಶ. ೧೬೪೩ರಲ್ಲಿ ಅವರು ಚಿನ್ನದ ವರಹ ಮತ್ತು ಹಣ ಎಂಬ ನಾಣ್ಯಗಳನ್ನು ಟಂಕಿಸಿದರು. ಇದರಲ್ಲಿ ಹಣ ಎಂಬ ಮೌಲ್ಯದ ನಾಣ್ಯ ಬಹಳ ಜನಾನುರಾಗಿಯಾಯಿತು. ಇವರ ನಂತರವೂ ಈ ಮೌಲ್ಯದ ನಾಣ್ಯ ಚಲಾವಣೆಯಲ್ಲಿದ್ದು ವ್ಯವಹಾರದಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದಿತ್ತು. ಇವುಗಳನ್ನು ಅಗಲ ಕಂಠೀರಾಯ ಹಣ ಎಂದು ಕರೆಯುತ್ತಿದ್ದರು. ಇವುಗಳ ತೂಕ ೫.೨ ಗ್ರೇನ್ ಮತ್ತು ಅಗಲ ೦.೨೫ ಅಂಗುಲ ಇದರ ಮುಮ್ಮುಖದಲ್ಲಿ ಶಂಖ ಚಕ್ರಧಾರಿಯಾದ ನರಸಿಂಹನ ಚಿತ್ರ ಮತ್ತು ಹಿಮ್ಮುಖದಲ್ಲಿ ನಾಗರಿ ಲಿಪಿಯಲ್ಲಿ ಶ್ರೀ ಕಂಠಿರವ ಎನ್ನುವ ಮೂರು ಸಾಲುಗಳ ಬರವಣಿಗೆ ಕಂಡುಬರುತ್ತದೆ. ಪ್ರಸ್ತುತ ದೊರೆತಿಸುವ ನಾಣ್ಯಗಳು ಇದೇ ರೀತಿಯಲ್ಲಿರುವುದರಿಂದ ಅವು ಮೈಸೂರು ಒಡೆಯರರಿಗೆ ಸೇರಿದ ಕಂಠೀರವ ಪಣಗಳೆಂದು ಸ್ಪಷ್ಟವಾಗಿ ನಿರ್ಧರಿಸಬಹುದು. ಹಾಗಾಗಿ ನಾಣ್ಯಗಳು ಕಾರಟಗಿ ಹತ್ತಿರದ ಹುಳ್ಕಿಹಾಳ ಗ್ರಾಮದಲ್ಲಿ ದೊರೆಯಲು ಸಾಧ್ಯವಿಲ್ಲ. ಏಕೆಂದರೆ ಈ ಪ್ರದೇಶ ಮೈಸೂರ ಒಡೆಯರರ ವ್ಯಾಪ್ತಿಯಲ್ಲಿರಲಿಲ್ಲ. ಆದರೆ ಬೆಂಗಳೂರು ಇದ್ದಿದ್ದರಿಂದ ಅವು ಬೆಂಗಳೂರಿನಲ್ಲಿ ದೊರೆತವೆಂಬ ಸುದ್ದಿಗೆ ಖಚಿತತೆಯನ್ನು ನೀಡಬಹುದು.

ಒಟ್ಟಿನಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ನಾಣ್ಯಗಳು ದೊರೆತಿರುವುದು ಕರ್ನಾಟಕದ ನಾಣ್ಯಶಾಸ್ತ್ರ ಅಧ್ಯಯನದ ಸಂದರ್ಭದಲ್ಲಿ ಮಹತ್ವದ ಸಂಗತಿಯಾಗಿದೆ ಕರ್ನಾಟಕದ ಪ್ರಾಚೀನ ನಾಣ್ಯ ಪದ್ಧತಿಯ ಹಾಗೂ ಮೈಸೂರ ಒಡೆಯರರ ಕಾಲದ ನಾಣ್ಯ ಪದ್ಧತಿಯ ಬಗ್ಗೆ ಮತ್ತಷ್ಟು ಮಾಹಿತಿಯನ್ನು ತಿಳಿಯಲು ಇವು ಸಹಾಯಕವಾಗಿವೆ ಎನ್ನಬಹುದು.

ಆಧಾರಸೂಚಿ

೧. ನರಸಿಂಹಮೂರ್ತಿ ಎ.ವಿ; ೨೦೦೮ ಭಾರತೀಯ ನಾಣ್ಯ ಪರಂಪರೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨. ದಿನಾಂಕ : ೦೭/೧೧/೨೦೧೩ ಹಾಗೂ ೧೨.೧೧.೨೦೧೩ರ ವಿಜಯವಾಣಿ ಪತ್ರಿಕೆಯ ವರದಿ.

೩. Girijapati, in Cions of Mysore Wodeyars.

೪. Narsimha Murthy A V., 1997. Coins and Currency System in Karnataka, Mysore.

ಚನ್ನಪಟ್ಟಣ ತಾಲ್ಲೂಕಿನ ವೈಶಿಷ್ಟ್ಯಪೂರ್ಣ ಸ್ಮಾರಕಶಿಲ್ಪಗಳು

ಮುರಳಿ ಕೆ.ವಿ.* ಮಂಜುನಾಥ ಎಂ.ಕೆ.**

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಲ್ಲಿ ದೊರೆತ ಅಪರೂಪ ಎನ್ನಬಹುದಾದ ಸ್ಮಾರಕಶಿಲ್ಪಗಳ ವಿಶ್ಲೇಷಣೆಯನ್ನು ಈ ಲೇಖನದಲ್ಲಿ ಮಾಡಲಾಗಿದೆ. ಯಾವುದು ಸ್ಮರಣೆಗೆ ಬರುವಂತೆ ಮಾಡಲ್ಪಡುತ್ತದೆಯೋ ಅದನ್ನು 'ಸ್ಮಾರಕ' ಎನ್ನಬಹುದಾಗಿದೆ. ವ್ಯಕ್ತಿಯು ಸತ್ತ ನಂತರ ಆತನ ಸ್ಮರಣೆಗಾಗಿ ನಿಗದಿಯಾದ ಸ್ಥಳದಲ್ಲಿ ನಿರ್ಮಿಸಲಾದ ಸಂಕೇತ ಅಥವಾ ಗುರುತಿನ ಸಾಧನಗಳನ್ನು 'ಸ್ಮಾರಕ'ಗಳೆಂದು ಕರೆಯಲಾಗಿದೆ. ಇಂತಹ ವೈಶಿಷ್ಟ್ಯಪೂರ್ಣವಾದ ಸ್ಮಾರಕ ಶಿಲ್ಪಗಳನ್ನು ಚನ್ನಪಟ್ಟಣ ತಾಲ್ಲೂಕಿನಲ್ಲಿ ಗುರುತಿಸಬಹುದು.

೧. ರೈತರ ಕಲಹದ ಚಿತ್ರಣವಿರುವ ಅಪರೂಪದ ಶಿಲ್ಪ

ಚನ್ನಪಟ್ಟಣ ತಾಲ್ಲೂಕಿನ ನೆಲಮಾಕನಹಳ್ಳಿ ಗ್ರಾಮದ ಬಸವೇಶ್ವರ ದೇವಾಲಯದ ಪಕ್ಕದಲ್ಲಿ ಕರ್ನಾಟಕದಲ್ಲಿಯೇ ಅಪರೂಪವೆನ್ನಬಹುದಾದ ರೈತರ ಕಲಹವನ್ನು ಚಿತ್ರಿಸಿರುವ ಶಿಲ್ಪವನ್ನು ಕಾಣಬಹುದು. ಎರಡು ಹಂತಗಳುಳ್ಳ ಈ ಶಿಲ್ಪವು ಸುಮಾರು ಎರಡುವರೆ ಅಡಿ ಉದ್ದ ಮತ್ತು ಎರಡು ಅಡಿ ಅಗಲವಾಗಿದೆ. ಮೊದಲ ಹಂತದಲ್ಲಿ ವ್ಯಕ್ತಿಯೊಬ್ಬ ಜೋಡಿ ಎತ್ತುಗಳನ್ನು ನೇಗಿಲಿನ ನೊಗಕ್ಕೆ ಕಟ್ಟಿಕೊಂಡು ಭೂಮಿಯನ್ನು ಉಳುಮೆ ಮಾಡುತಿದ್ದಾನೆ. ಈ ಸಮಯದಲ್ಲಿ ಹಿಂದಿನಿಂದ ಬಂದ ಶತ್ರುವು ಕತ್ತಿಯಿಂದ ರೈತನ ಬೆನ್ನಿಗೆ ಇರಿದಿದ್ದಾನೆ. ಇಲ್ಲಿ ಎತ್ತು ಗಳು ಹಾಗೂ ನೇಗಿಲಿನ ಚಿತ್ರಣವನ್ನು ಸೂಕ್ಷ್ಮವಾಗಿ ಚಿತ್ರಿಸ ಲಾಗಿದೆ. ಎರಡನೇ ಹಂತದಲ್ಲಿ ಕೈಮುಗಿದು ಪದ್ಮಾಸನದಲ್ಲಿ ಕುಳಿತಿರುವ ವ್ಯಕ್ತಿ ಹಾಗೂ ಪಕ್ಕದಲ್ಲಿ ಆತನ ಇಬ್ಬರು ಮಡದಿಯರು ಕೈಮುಗಿದು ಕುಳಿತಿದ್ದಾರೆ. ಈ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಶಿಲ್ಪಗಳಿವೆ. ವಿಜಯನಗರ ಕಾಲಘಟ್ಟಕ್ಕೆ ಸೇರಿದ ಈ ಶಿಲ್ಪವನ್ನು ಕೆಂಪು-ಕಪ್ಪು ಬಣ್ಣ ಮಿಶ್ರಿತ ಕಣಶಿಲೆಯಲ್ಲಿ ಸುಂದರವಾಗಿ ಕೊರೆಯಲಾಗಿದೆ.

ಈ ಶಿಲ್ಪವನ್ನು ಗಮನಿಸಿದಾಗ ರೈತನು ಯಾವುದೋ ಕಾರಣದಿಂದ ಶತ್ರುವಿನಿಂದ ಹತನಾಗಿದ್ದಾನೆ. ಈ ಕಲಹಕ್ಕೆ ಕಾರಣ ಸ್ಪಷ್ಟವಿಲ್ಲ. ಆದರೆ ಶತ್ರುವು ಪೂರ್ವನಿಯೋಜಿತವಾಗಿ ಬಂದು ರೈತ ಉಳುಮೆ ಮಾಡುವ ಸಂದರ್ಭದಲ್ಲಿ ಹಿಂಭಾಗದಿಂದ ಬಂದು ಕತ್ತಿಯಿಂದ ಚುಚ್ಚಿದ್ದಾನೆ. ಈ ಸಂದರ್ಭದಲ್ಲಿ ರೈತ ಗಾಬರಿಯಿಂದ ಹಿಂದೆ ತಿರುಗಿ ನೋಡುತ್ತಿರುವಂತೆ ನಿಂತಿದ್ದಾನೆ. ಆದರೂ ಆತನ ಕೈಗಳು ನೇಗಿಲಿನ ಮೇಲೆಯೇ ಇವೆ. ಮುಂದೆ ರೈತ ಮರಣವನ್ನಪ್ಪಿದ ಸಂದರ್ಭದಲ್ಲಿ ಆತನ ಇಬ್ಬರು ಮಡದಿಯರು ಆತನೊಂದಿಗೆ ಸಹಗಮನ ಮಾಡಿರುವುದನ್ನು ಕಾಣಬಹುದು. ಇಂತಹ ಪರಿಕಲ್ಪನೆಯ ಚಿತ್ರಣವಿರುವ ಶಿಲ್ಪವು ಅತಿ ಅಪರೂಪವಾದುದ್ದಾಗಿದೆ. ಬಹುಶಃ ಈ ಕಲಹದಲ್ಲಿ ಮಡಿದ ರೈತನಿಗಾಗಿ ಸ್ಮಾರಕ ಸ್ಥಾಪಿಸಿರುವುದನ್ನು ನೋಡಿದಾಗ, ಈತ ಪ್ರಮುಖ ವ್ಯಕ್ತಿಯಾಗಿದ್ದ ಎಂದು ನಿರ್ಧರಿಸಬಹುದು.

೨. ಮುಂಗಾಣಿಕೈಯಾಗಿ ಆತ್ಮಾರ್ಪಣೆ ಮಾಡಿಕೊಂಡಿರುವುದನ್ನು ತಿಳಿಸುವ ಶಾಸನಶಿಲ್ಪ

ಬೇವೂರು ಗ್ರಾಮದ ಸಿದ್ಧರಾಮೇಶ್ವರ ಬೆಟ್ಟದಲ್ಲಿರುವ ಶಾಸನವೊಂದರಲ್ಲಿ[೧] ಮಾರ್ಯೆಯನ್ ಎಂಬ ಸೈನ್ಯಾಧಿಕಾರಿಯು ಕ್ರಿ.ಶ. ೧೧೯೬ರಲ್ಲಿ ಹೊಯ್ಸಳ ದೊರೆ ಬಲ್ಲಾಳನಿಗೆ ಒಳಿತಾಗಲೆಂದು 'ಮುಂಗಾಣಿಕೈ'ಯಾಗಿ ಪ್ರತಿಜ್ಞೆ ಮಾಡಿದ ವಿವರವಿದೆ. ಶಾಸನೋಕ್ತ 'ಮುಂಗಾಣಿಕೈ' ಎಂಬ ಪದಕ್ಕೆ 'ಮೊದಲ ಕಾಣಿಕೆ' ಅಂದರೆ 'ಯುದ್ಧದ ಸಂದರ್ಭದಲ್ಲಿ ದೊರೆಗೆ ಜಯ ಸಿಗಲೆಂದು, ಯುದ್ಧಕ್ಕೆ ಮುನ್ನ ಆತ್ಮಾಹುತಿ ಮಾಡಿಕೊಳ್ಳುವುದು' ಎಂದು ಅರ್ಥೈಸಬಹುದು. ಇದರಿಂದ ಮಾರ್ಯೆಯನ್‌ನು ಮುಂಗಾಣಿಕೈಯಾಗಿ ಆತ್ಮಾಹುತಿ ಮಾಡಿಕೊಂಡಿದ್ದಾನೆ ಎನ್ನಬಹುದು. ಈ ಶಾಸನವು ತೃಟಿತವಾಗಿರುವುದರಿಂದ ವೀರನು ಆತ್ಮಾಹುತಿ ಮಾಡಿಕೊಂಡ ಬಗ್ಗೆ ಮಾಹಿತಿ ಸಿಗುವುದಿಲ್ಲ. ಆದರೆ ಶಾಸನಶಿಲ್ಪದಿಂದ ಇದನ್ನು ಸ್ಪಷ್ಟಪಡಿಸಬಹುದು. ಈ ಶಾಸನವನ್ನು ಸುಮಾರು ನಾಲ್ಕು ಅಡಿ ಉದ್ದ ಮತ್ತು ಎರಡು ಅಡಿ ಅಗಲವಾದ ಕಣಶಿಲೆಯ ಮೇಲೆ ಕೊರೆಯಲಾಗಿದೆ. ಶಾಸನದ ಮೇಲ್ಭಾಗದಲ್ಲಿ ಸುಮಾರು ಎರಡುವರೆ ಅಡಿ ಎತ್ತರದ ಉಬ್ಬುಶಿಲ್ಪದ ಚಿತ್ರಣವಿದ್ದರೆ, ಕೆಳಭಾಗ

* ಕೂಡ್ಲೂರು ಗ್ರಾಮ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.
** ಮಾಕಳಿ ಗ್ರಾಮ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಗ್ರಂಥಲಿಪಿಯ ತಮಿಳಿನ ಶಾಸನವನ್ನು ಕೊರೆಯಲಾಗಿದೆ. ಈ ಶಾಸನದ ಮಧ್ಯದಲ್ಲಿ ಬಲಭಾಗಕ್ಕೆ ಗೋವು ಮತ್ತು ಕರುವಿನ ಚಿತ್ರಣವನ್ನು ಮಾಡಲಾಗಿದೆ.

ಮೇಲ್ಭಾಗದಲ್ಲಿರುವ ಉಬ್ಬುಶಿಲ್ಪದ ಚಿತ್ರಣವು ಎರಡು ಹಂತವನ್ನು ಹೊಂದಿದೆ. ಮೊದಲ ಹಂತವನ್ನು ದೊಡ್ಡದಾಗಿ ಬಿಡಿಸಲಾಗಿದೆ. ಇಲ್ಲಿ ವೀರನು ಬಲಗಾಲಿನ ಮಂಡಿಯನ್ನು ನೆಲಕ್ಕೆ ಊರಿ ನಿಂತಿದ್ದು, ಬಲಗೈಯಲ್ಲಿ ಕತ್ತಿಯನ್ನು ಹಿಡಿದು ತನ್ನ ಕತ್ತಿನ ಭಾಗಕ್ಕೆ ಚುಚ್ಚಿಕೊಂಡಿದ್ದು, ಎಡಗೈಯಲ್ಲಿ ಕಠಾರಿ ಹಿಡಿದು ತಲೆಯ ಭಾಗಕ್ಕೆ ಚುಚ್ಚಿಕೊಂಡು ಆತ್ಮಾಹುತಿ ಮಾಡಿಕೊಳ್ಳುತ್ತಿದ್ದಾನೆ. ವೀರನು ಎಡಗಾಲಿನಲ್ಲಿ ದಪ್ಪನೆಯ ಬಳೆ ಧರಿಸಿದ್ದು, ಜನಿವಾರ, ಕೈಕಡಗ, ತೋಳ್ಬಂಧಿ, ಕೊರಳಲ್ಲಿ ಸರಗಳು, ನಡುಪಟ್ಟಿ ಮೊದಲಾದ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಈತನ ಹಿಂಭಾಗದಲ್ಲಿ ವ್ಯಕ್ತಿಯೊಬ್ಬ ರಾಜದಂಡ ಹಾಗೂ ರಾಜಧ್ವಜವನ್ನು ಹಿಡಿದಿದ್ದಾನೆ. ವೀರನ ಮುಂದೆ ಮೇಲ್ಭಾಗದಲ್ಲಿ ವ್ಯಕ್ತಿಯೊಬ್ಬ ಶ್ವೇತಛತ್ರಿಯನ್ನು ಹಿಡಿದಿದ್ದರೆ, ಕೆಳಭಾಗದಲ್ಲಿ ವೀರನ ಮಡದಿಯೂ ಸಹ ಆತ್ಮಾಹುತಿ ಮಾಡಿಕೊಂಡಿರುವುದನ್ನು ಕಾಣಬಹುದು. ಈಕೆಯು ಪದ್ಮಾಸನದಲ್ಲಿ ಕುಳಿತು ಬಲಗೈಯಲ್ಲಿ ಕತ್ತಿ ಹಿಡಿದು ತಲೆಯನ್ನು ಕತ್ತರಿಸಿಕೊಳ್ಳುವಂತೆ ಚಿತ್ರಿಸಲಾಗಿದೆ. ಈಕೆಯ ಪಕ್ಕದಲ್ಲಿ ಕಮಂಡಲವಿದೆ. ಈ ಹಂತದಲ್ಲಿ ವೀರನನ್ನು ದೊಡ್ಡದಾಗಿ ಬಿಡಿಸಿ, ಉಳಿದವರನ್ನು ಚಿಕ್ಕದಾಗಿ ಬಿಡಿಸಲಾಗಿದೆ. ಎರಡನೇ ಹಂತದಲ್ಲಿ ಶಿವಲಿಂಗದ ಮುಂದೆ ದಂಪತಿಗಳು ಕೈಮುಗಿದು ಕುಳಿತಿದ್ದು, ಜಟಾಧಾರಿ ಯತಿಯೊಬ್ಬ ಶಿವಲಿಂಗಕ್ಕೆ ಕೈ ಮುಗಿದು ನಿಂತಿರುವಂತೆ ಬಿಡಿಸಲಾಗಿದೆ. ಸುಂದರವಾಗಿ ಕಡೆದಿರುವ ಈ ಶಾಸನಶಿಲ್ಪ ಪ್ರಸ್ತುತದಲ್ಲಿ ಭಗ್ನಗೊಂಡು ವಿರೂಪವಾಗಿದೆ.

ಒಟ್ಟಿನಲ್ಲಿ ದೊರೆ ಇಮ್ಮಡಿ ಬಲ್ಲಾಳನಿಗಾಗಿ ಮಾರೈಯನ್‌ನು ಮುಂಗಾಣಿಕೈಯಾಗಿ ಪ್ರಾಣಾರ್ಪಣೆ ಮಾಡಿರುವುದು ಹೊಯ್ಸಳರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ವೇಳೆವಾಳಿ, ಲೆಂಕವಾಳಿ, ಗರುಡ ಪದ್ಧತಿಗಳಂತೆಯೇ ದೊರೆಗಾಗಿ 'ಮುಂಗಾಣಿಕೈ'ಯಾಗಿ ಪ್ರಮಾಣವನ್ನು ಸ್ವೀಕರಿಸಿ ಪ್ರಾಣಾರ್ಪಣೆ ಮಾಡಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿಯೇ ಅಪರೂಪವೆನಿಸುವ ಮುಂಗಾಣಿಕೈ ಪದ ಪ್ರಯೋಗವನ್ನು ಬೇವೂರಿನ ಶಾಸನದಲ್ಲಿ ಕಾಣಬಹುದು. ತಮಿಳಿನಲ್ಲಿರುವ ಈ ಶಾಸನದ ಅರ್ಧ ಭಾಗವನ್ನು ಬಿ.ಎಲ್. ರೈಸ್‌ರ ಕಾಲದಲ್ಲಿ ಓದಿದ್ದು, ಉಳಿದ ಅಪ್ರಕಟಿತ ಭಾಗ ಮತ್ತೊಂದು ಕಲ್ಲಿನಲ್ಲಿದ್ದು, ಕ್ಷೇತ್ರಕಾರ್ಯದ ಸಮಯದಲ್ಲಿ ಪತ್ತೆಯಾಯಿತು. ಸಾಕಷ್ಟು ಸವೆದಿರುವುದರಿಂದ ಈ ಶಾಸನವನ್ನು ಓದಲು ಸಾಧ್ಯವಾಗಿಲ್ಲ.

೩. ಆಂಜನೇಯನ ಚಿತ್ರಾವಿರುವ ಅಪರೂಪದ ಶಾಸನ ಶಿಲ್ಪಗಳು

ಭೈರಾಪಟ್ಣ ಗ್ರಾಮದ ಜನಾರ್ಧನಸ್ವಾಮಿ ದೇವಸ್ಥಾನದ ಹಿಂಭಾಗ ಕ್ರಿ.ಶ. ೧೫ನೇ ಶತಮಾನದ ಶಾಸನವೊಂದಿದೆ. ಸುಮಾರು ಆರು ಅಡಿ ಉದ್ದ ಹಾಗೂ ಮೂರುವರೆ ಅಡಿ ಅಗಲವಿರುವ ಕಣಶಿಲೆಯ ಫಲಕದ ಮೇಲೆ ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಸುಮಾರು ೪೫ ಸಾಲುಗಳ ಶಾಸನ ಪಾಠವನ್ನು ಕೊರೆಯಲಾಗಿದೆ. ಪ್ರಸ್ತುತದಲ್ಲಿ ಶಾಸನದ ಬಹು ಭಾಗ ತೃಟಿತವಾಗಿದೆ. ಈ ಕಲ್ಲಿನ ಹಿಂಭಾಗದಲ್ಲಿ ಉಬ್ಬುಶಿಲ್ಪದ ರಚನೆಯಿದ್ದು, ವಿಶಿಷ್ಟವಾದ ಚಿತ್ರಣವನ್ನು ಹೊಂದಿದೆ. ಇಲ್ಲಿ ದಕ್ಷಿಣಾಭಿಮುಖವಾಗಿ ನಿಂತಿರುವ ಆಂಜನೇಯನ ಶಿಲ್ಪವಿದ್ದು, ಬಲಗೈಯನ್ನು ಸೊಂಟದ ಮೇಲಿಟ್ಟು, ಎಡಗೈಯನ್ನು ಅಭಯಹಸ್ತವಾಗಿ ಮೇಲಕ್ಕೆತ್ತಿ, ವೀರಾವೇಶದಿಂದ ನಿಂತಿರುವಂತೆ ಬಿಡಿಸಲಾಗಿದೆ. ಕೈಗಳಲ್ಲಿ ತೋಳಿನಿಂದ ಮುಂಗೈಯವರೆಗೆ ಮಧ್ಯೆಮಧ್ಯೆದಲ್ಲಿ ಒಟ್ಟು ನಾಲ್ಕು ದಪ್ಪನೆಯ ಬಳೆಗಳಿವೆ. ಕರ್ಣಕುಂಡಲ, ಜಟಾಮುಡಿ, ಕೊರಳಲ್ಲಿ ಸರಗಳು, ಕಚ್ಚೆಯನ್ನು ಕಟ್ಟಿರುವ ಗಂಟುಗಳನ್ನೂ ಸೂಕ್ಷ್ಮವಾಗಿ ರಚಿಸಲಾಗಿದೆ. ಬಾಲವು ಉದ್ದವಾಗಿದ್ದು, ಮೇಲಿನಿಂದ ಮುಂಭಾಗದವರೆಗೆ ಬಂದಿದೆ. ಆಂಜನೇಯ ಶಿಲ್ಪದ ಸುತ್ತಲೂ ಚಿಕ್ಕದಾಗಿರುವ ಹಲವು ಶಿಲ್ಪಗಳ ಚಿತ್ರಣವಿದೆ. ಆಂಜನೇಯನ ತಲೆಯ ಮುಂಭಾಗದಲ್ಲಿ ಮಹಿಷಾಸುರ ಮರ್ದಿನಿಯ ಚಿತ್ರಣವಿದೆ. ಚಾಮುಂಡಿಯು ಮಹಿಷನನ್ನು ಎಡಗಾಲಿನಿಂದ ಮೆಟ್ಟಿನಿಂತು ಮುಂದಿನ ಎಡಗೈಯಲ್ಲಿ ರಾಕ್ಷಸನ ಜುಟ್ಟನ್ನು ಹಿಡಿದು ಬಲಗೈಯಲ್ಲಿ ಹಿಡಿದ ತ್ರಿಶೂಲದಿಂದ ಚುಚ್ಚುತ್ತಿರುವಂತೆ ನಿಂತಿದ್ದಾಳೆ. ದೇವಿಯ ಹಿಂಬದಿಯ ಕೈಗಳಲ್ಲಿ ಶಂಖ, ಚಕ್ರಗಳಿವೆ. ಈಕೆಯ ಹಿಂಭಾಗದಲ್ಲಿ ರುಂಡ, ಮುಂಡ ಬೇರೆಬೇರೆಯಾಗಿರುವ ಕೋಣದ ಚಿತ್ರಣವಿದೆ. ಇದರ ಕೆಳಭಾಗದಲ್ಲಿ ರಾಕ್ಷಸನ ತಲೆಯ ಚಿತ್ರಣವಿದೆ. ಅದರ ಕೆಳಭಾಗದಲ್ಲಿ ಗೋವಿನ ಶಿಲ್ಪವನ್ನು ಬಿಡಿಸಲಾಗಿದೆ. ಆಂಜನೇಯನ ಹಿಂಬದಿಯಲ್ಲಿ ಕೆಳಮುಖವಾಗಿರುವ ಖಡ್ಗ, ಜಾಗಟೆಯ ಚಿತ್ರಣವಿದ್ದರೆ, ಆಂಜನೇಯನ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ, ಶಂಖ, ಚಕ್ರ, ಗಾಣ, ನೇಗಿಲಿನ ಚಿತ್ರಣವನ್ನು ಕಾಣಬಹುದು. ಈ ಶಾಸನವು ಬಹುತೇಕ ತೃಟಿತವಾಗಿರು ವುದರಿಂದ ಈ ಶಾಸನಶಿಲ್ಪವನ್ನು ಯಾವ ಉದ್ದೇಶದಿಂದ ಕಂಡರಿಸಿದ್ದಾರೆಂಬುದು ಸ್ಪಷ್ಟವಾಗುವುದಿಲ್ಲ.

ಅದೇ ರೀತಿ ವಿಠಲೇನಹಳ್ಳಿ ಗ್ರಾಮದ ಮಾವಿನತೋಟವೊಂದರಲ್ಲಿರುವ ಹೊಯ್ಸಳರ ಕಾಲದ ಅಪ್ರಕಟಿತ ಶಾಸನವೊಂದು ವಿಶೇಷವಾಗಿದೆ. ಸುಮಾರು ಆರುವರೆ ಅಡಿ ಅಗಲ ಹಾಗೂ ಐದು ಅಡಿ ಉದ್ದವಾದ ಕಣಶಿಲೆಯ ಫಲಕದ

ಮೇಲೆ ಈ ಶಾಸನವನ್ನು ಕಂಡರಿಸಲಾಗಿದೆ. ಈ ಫಲಕದ ಮೇಲ್ಭಾಗ ತ್ರಿಕೋನಾಕಾರದಲ್ಲಿದ್ದು, ಸುಮಾರು ಮೂರುವರೆ ಅಡಿ ಎತ್ತರದಲ್ಲಿ ಉಬ್ಬುಶಿಲ್ಪದ ಪಟ್ಟಿಗೆಯಿದೆ. ಮಧ್ಯಭಾಗದಲ್ಲಿ ಆಂಜನೇಯನ ಶಿಲ್ಪವಿದೆ. ಆಂಜನೇಯನು ಎಡಗೈಯಲ್ಲಿ ಗದೆಯನ್ನು ಹಿಡಿದಿದ್ದು, ಬಲಗೈ ಅಭಯಹಸ್ತವಾಗಿದೆ. ಬಾಲವು ಮೇಲ್ಭಾಗದಿಂದ ಮುಂದಿನ ಭಾಗಕ್ಕೆ ಬಂದಿದೆ. ಆಂಜನೇಯನ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಶಿಲ್ಪಗಳಿವೆ. ಆಂಜನೇಯ ಶಿಲ್ಪದ ಮುಂಭಾಗದಲ್ಲಿ ಮೇಲ್ಮುಖವಾಗಿ ನಿಲ್ಲಿಸಿರುವ ಖಡ್ಗ, ಗಾಣದ ಶಿಲ್ಪಗಳಿದ್ದರೆ, ಹಿಂಬದಿಯಲ್ಲಿ ಹಿಕ್ಕಳ, ಕತ್ತರಿ, ಸುತ್ತಿಗೆಯ ಚಿತ್ರಣಗಳಿದ್ದು, ಅವುಗಳ ಕೆಳಭಾಗದಲ್ಲಿ ಕತ್ತೆಯೊಂದು ಮಹಿಳೆಯನ್ನು ಸಂಭೋಗಿಸುತ್ತಿರುವ ಚಿತ್ರಣವನ್ನು ಕಾಣಬಹುದು. ಈ ಶಾಸನಶಿಲ್ಪದ ಆಧಾರದಿಂದ ವಿಶ್ವಕರ್ಮರಿಗೆ ನೀಡಿರುವ ದಾನಶಾಸನವಾಗಿದೆ ಎಂಬುದು ಸ್ಪಷ್ಟ. ಆಂಜನೇಯ ದೇವರು ದಾನ ನೀಡಿದವರ ಅಥವಾ ದಾನ ಪಡೆದವರ ಮನೆದೇವರಾಗಿರಬೇಕು. ಕತ್ತೆಯ ಚಿತ್ರಣ ಶಾಪಾಶಯವನ್ನು ಸಂಕೇತಿಸುತ್ತದೆ. ಈ ಶಿಲ್ಪಪಟ್ಟಿಗೆಯ ಕೆಳಭಾಗದಲ್ಲಿ ಶಾಸನಪಾಠವಿದ್ದು, ಬಹುಪಾಲು ಪಾಠ ತೃಟಿತಗೊಂಡಿದ್ದು, ಓದಲು ಸಾಧ್ಯವಾಗಲಿಲ್ಲ.

೪. ಮಹಿಳೆಗಾಗಿ ನಿರ್ಮಿಸಿರುವ ಅಪರೂಪದ ಸ್ಮಾರಕ ಶಿಲ್ಪ

ಬೆಳಕೆರೆ ಗ್ರಾಮದಲ್ಲಿ ಹೊಯ್ಸಳರ ಕಾಲದ ಮಹಿಳೆಯೊಬ್ಬಳ ಸ್ಮರಣಾರ್ಥವಾಗಿ ನಿರ್ಮಿಸಿರುವ ಶಿಲ್ಪವು ವಿಶೇಷವಾಗಿದೆ. ಈ ಶಿಲ್ಪವು ಸುಮಾರು ನಾಲ್ಕು ಅಡಿ ಉದ್ದ ಮತ್ತು ಎರಡುವರೆ ಅಡಿ ಅಗಲವಾಗಿದ್ದು, ಮೂರು ಹಂತಗಳ ಚಿತ್ರಣವನ್ನು ಹೊಂದಿದೆ. ಮೊದಲನೇ ಹಂತದ ಮಧ್ಯಭಾಗದಲ್ಲಿ ಮಹಿಳೆಯೊಬ್ಬಳು ತಲೆಯ ಮೇಲೆ ಕುಂಭವನ್ನು ಹೊತ್ತುಕೊಂಡು ತನ್ನ ಎರಡೂ ಕೈಗಳಿಂದ ಹಿಡಿದು ನಿಂತಿದ್ದಾಳೆ. ಈಕೆಯ ಇಕ್ಕೆಲಗಳಲ್ಲಿ ವ್ಯಕ್ತಿಗಳಿಬ್ಬರು ಈಕೆಯ ಕಡೆಗೆ ದಾಳಿ ಮಾಡುವಂತೆ ಬರುತ್ತಿದ್ದಾರೆ. ಈಕೆಯ ಬಲಭಾಗದಲ್ಲಿ ನಿಂತ ವ್ಯಕ್ತಿ ಖಡ್ಗ, ಗುರಾಣಿ ಹಿಡಿದಿದ್ದರೆ, ಎಡಭಾಗದಲ್ಲಿರುವ ವ್ಯಕ್ತಿ ಚಂದ್ರಾಯುಧ ಮತ್ತು ಗುರಾಣಿಯನ್ನು ಹಿಡಿದಿದ್ದಾನೆ. ಈತನ ಹಿಂಬದಿಯಲ್ಲಿ ಈತನೆಡೆಗೆ ನೋಡುತ್ತಿರುವ ಕುದುರೆಯ ಚಿತ್ರಣವಿದೆ. ಬಹುಶಃ ಈತ ಕುದುರೆಯಿಂದ ಇಳಿದು ಬಂದು ಮಹಿಳೆಯ ಮೇಲೆ ಆಕ್ರಮಣ ಮಾಡಲು ಬಂದಿದ್ದಾನೆ ಎನ್ನಬಹುದು. ಎರಡನೇ ಹಂತದಲ್ಲಿ ಕಮಾನಿನಂತಿರುವ ಮಂಟಪದಲ್ಲಿ ಮಹಿಳೆಯು ಕೈಮುಗಿದು ಕುಳಿತಿದ್ದು, ಚಾಮರಧಾರಿಯರು ಎತ್ತಿಕೊಂಡು ಹೋಗುತ್ತಿದ್ದಾರೆ. ಮೂರನೇ ಹಂತದಲ್ಲಿ ನಂದಿ, ಶಿವಲಿಂಗಕ್ಕೆ ಯತಿಯೊಬ್ಬ ಪೂಜೆ ಮಾಡುತ್ತಿದ್ದು, ಪಕ್ಕದಲ್ಲಿ ಮಹಿಳೆಯು ಕೈಮುಗಿದು ಕುಳಿತಿದ್ದಾಳೆ. ಈ ಶಿಲ್ಪದ ಆಧಾರದಿಂದ ನೀರನ್ನು ಹೊತ್ತುತರಲು ಊರಿನ ಹೊರಗೆ ಹೊರಟ ಮಹಿಳೆಯ ಮೇಲೆ ಇಬ್ಬರು ವ್ಯಕ್ತಿಗಳು ದಾಳಿ ಮಾಡಿ ಹತ್ಯೆ ಮಾಡಿರಬಹುದು. ನಂತರದಲ್ಲಿ ಈಕೆಯ ಸ್ಮರಣಾರ್ಥ ಈ ಶಿಲ್ಪವನ್ನು ನಿರ್ಮಿಸಿದ್ದಾರೆ.

೫. ಅಪರೂಪದ ೯ ಹಾಗೂ ೧೧ ಜನ ಮಡದಿಯರು ಒಟ್ಟಿಗೆ ಸಹಗಮನ ಮಾಡಿದ ನಿದರ್ಶನವಿರುವ ವೀರಮಾಸ್ತಿಗಲ್ಲು ಶಿಲ್ಪಗಳು

ಕರ್ನಾಟಕದಲ್ಲಿ ಅಪರೂಪವೆನಿಸುವ ೯ ಹಾಗೂ ೧೧ ಮಂದಿ ಒಟ್ಟಿಗೆ ಸಹಗಮನ ಮಾಡಿದ ನಿದರ್ಶನವಿರುವ ವೀರಮಾಸ್ತಿಶಿಲ್ಪಗಳು ಚನ್ನಪಟ್ಟಣ ತಾಲ್ಲೂಕಿನಲ್ಲಿ ದೊರೆಯುತ್ತವೆ. ತಾಲ್ಲೂಕಿನ ಮಾಕಳಿ ಗ್ರಾಮಕ್ಕೆ ಹೊಂದಿಕೊಂಡಂತಿರುವ ಕೆ. ಜ್ಯಾಡರಹಳ್ಳಿ ಗ್ರಾಮದ ಆಂಜನೇಯ ದೇವಾಲಯದ ಪಕ್ಕದಲ್ಲಿರುವ ವೀರಮಾಸ್ತಿ ಶಿಲ್ಪವೊಂದು ವೀರನೊಬ್ಬನ ಒಂಬತ್ತು ಜನ ಮಡದಿಯರು ಸಾಮೂಹಿಕವಾಗಿ ಸಹಗಮನ ಮಾಡಿದ ನಿದರ್ಶನವಿರುವ ಅಪರೂಪದ ಶಿಲ್ಪವಾಗಿದೆ. ಈ ಶಿಲ್ಪವು ಸುಮಾರು ನಾಲ್ಕುವರೆ ಅಡಿ ಅಗಲ ಹಾಗೂ ನಾಲ್ಕು ಅಡಿ ಉದ್ದವಾಗಿದ್ದು, ಮೂರು ಹಂತಗಳ ರಚನೆಯನ್ನು ಹೊಂದಿದೆ. ಮೊದಲನೇ ಹಂತದಲ್ಲಿ ವೀರನು ಶತ್ರುಗಳೊಂದಿಗೆ ಹೋರಾಡುತ್ತಿರುವ ಚಿತ್ರಣವಿದೆ. ಎರಡನೇ ಹಂತದಲ್ಲಿ ಒಂಬತ್ತು ಜನ ಸತಿಯರು ಕೈಮುಗಿದು ಪದ್ಮಾಸನದಲ್ಲಿ ಕುಳಿತಿದ್ದಾರೆ. ಇಕ್ಕೆಲಗಳಲ್ಲಿ ಆನೆಯ ಮೇಲೆ ತಾವರೆಮೊಗ್ಗನ್ನು ಹಿಡಿದಿರುವ ಸ್ತ್ರೀಯರ ಚಿತ್ರಣವಿದೆ. ಮೂರನೇ ಹಂತದಲ್ಲಿ ನಂದಿ, ಶಿವಲಿಂಗದ ಶಿಲ್ಪಗಳ ಮಧ್ಯೆ ವ್ಯಕ್ತಿಯೊಬ್ಬ ಕೈಮುಗಿದು ನಿಂತಿದ್ದರೆ, ಶಿವಲಿಂಗದ ಬಲಬದಿಯಲ್ಲಿ ಒಂಬತ್ತು ಜನ ಸತಿಯರು ಕೈಮುಗಿದು ಪದ್ಮಾಸನದಲ್ಲಿ ಕುಳಿತಿರುವಂತೆ ಚಿತ್ರಿಸಿರುವುದನ್ನು ಕಾಣಬಹುದು.

ಅದೇ ರೀತಿ ಹನ್ನೊಂದು ಸ್ತ್ರೀಯರು ಸಾಮೂಹಿಕವಾಗಿ ಸಹಗಮನ ಮಾಡಿರುವ ಅಪರೂಪದ ವೀರಮಾಸ್ತಿಶಿಲ್ಪ ತಾಲ್ಲೂಕಿನ ಕದರಮಂಗಲ ಗ್ರಾಮದಲ್ಲಿದೆ. ಗ್ರಾಮದ ನರಸಿಂಹ ದೇವಾಲಯದ ಪಕ್ಕದಲ್ಲಿರುವ ಮಾಸ್ತಮ್ಮ ಗುಡಿಯಲ್ಲಿನ ವಿಜಯನಗರ ಕಾಲದ ಈ ಶಿಲ್ಪವು ನಾಲ್ಕು ಅಡಿ ಅಗಲ ಮತ್ತು ಮೂರು ಅಡಿ ಉದ್ದವಾಗಿದ್ದು, ಮೂರು ಹಂತಗಳ ಚಿತ್ರಣವನ್ನು ಹೊಂದಿದೆ. ಕೆಳಹಂತದಲ್ಲಿ ಏಳೆಂಟು ಜನ ಸೈನಿಕರು ಆಯುಧಧಾರಿಗಳಾಗಿ ನಿಂತಿದ್ದಾರೆ. ಇಲ್ಲಿ ಹೋರಾಟದ ಚಿತ್ರಣವಿಲ್ಲ. ಮಧ್ಯದ ಹಂತದಲ್ಲಿ ಹನ್ನೊಂದು ಜನ ಸತಿಯರು ಕೈಮುಗಿದು ಕುಳಿತಿದ್ದು, ಇವರನ್ನು ಚಾಮರಧಾರಿಯರು ಎತ್ತಿಕೊಂಡು ಹೋಗುತ್ತಿದ್ದಾರೆ. ಮೇಲಿನ ಹಂತದಲ್ಲಿ ನಂದಿ, ಶಿವಲಿಂಗದ ಮುಂದೆ ಹನ್ನೊಂದು ಜನ



ಮಹಿಳೆಯೊಬ್ಬಳ ಸ್ಮಾರಕ
ಬೆಳಕೆರೆ



ವೀರಮಾಸ್ತಿಶಿಲ್ಪ
ಕುಕ್ಕೂರುದೊಡ್ಡಿ



ವೀರಮಾಸ್ತಿಗಲ್ಲು
ಕದರಮಂಗಲ

ಸತಿಯರು ಕೈಮುಗಿದು ಕುಳಿತಿದ್ದು, ವ್ಯಕ್ತಿಯೊಬ್ಬ ಇವರಿಗೆ ಪೂಜೆ ಮಾಡುತ್ತಿದ್ದಾನೆ. ಮತ್ತೊಬ್ಬ ವ್ಯಕ್ತಿ ಶಿವಲಿಂಗಕ್ಕೆ ಪೂಜೆ ಮಾಡುತ್ತಿರುವ ಚಿತ್ರಣವನ್ನು ಕಾಣಬಹುದು. ಈ ಮಾಸ್ತಿ ಗುಡಿಯ ಬಲಬದಿಯ ಕಲ್ಲಿನಲ್ಲಿ ಕಂಬದಿಂದ ಹೊರಟ ಎತ್ತಿದ ಬಲತೋಳುಗ್ಯೆ ಚಿತ್ರಣವಿದ್ದು, ತೋಳುಗ್ಯೆಯ ಕೆಳಭಾಗದಲ್ಲಿ ವೀರನು ಪತ್ನಿಯ ಎಡಗೈಯನ್ನು ಹಿಡಿದು ಮೇಲಕ್ಕೆತ್ತಿ ನಿಂತಿರುವಂತೆ ಕಡೆಯಲಾಗಿದೆ.

ಈ ಬ್ಯಾಡರಹಳ್ಳಿ ಹಾಗೂ ಕದರಮಂಗಲ ಗ್ರಾಮಗಳು ಮಾಕಳಿ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಗ್ರಾಮಗಳಾಗಿವೆ. ಮಾಕಳಿ ಗ್ರಾಮವು ವಿಜಯನಗರ ಅರಸರ ಕಾಲದಲ್ಲಿ ಪಾಳೇಪಟ್ಟಿನ ಕೇಂದ್ರವಾಗಿತ್ತೆಂದು ಶಾಸನವೊಂದರಿಂದ[3] ತಿಳಿಯುತ್ತದೆ. ಕ್ರಿ.ಶ. ೧೪೪೧ರ ಈ ಶಾಸನದಿಂದ ವಿಜಯನಗರದ ದೊರೆ ಪ್ರತಾಪದೇವರಾಯನ ಕಾಲದಲ್ಲಿ ಗೋಪಿನಾಯಕನೆಂಬುವನಗೆ ಮಾಕಳಿ ಪ್ರದೇಶವನ್ನು ನಾಯಕತನಕ್ಕೆ ಪಡೆದಿದ್ದ ಎಂದು ತಿಳಿಯುತ್ತದೆ. ಈ ಪಾಳೇಗಾರರ ಕಾಲದಲ್ಲಿಯೇ ಬ್ಯಾಡರಹಳ್ಳಿ ಹಾಗೂ ಕದರಮಂಗಲಗಳಲ್ಲಿ ಗಂಡ ಮಡಿದ ನಂತರ ಆತನ ಮಡದಿಯರು ಒಟ್ಟಿಗೆ ಸಹಗಮನ ಮಾಡಿರುವ ಶಿಲ್ಪಗಳನ್ನು ನಿರ್ಮಾಣ ಮಾಡಿದ್ದಾರೆ ಎನ್ನಬಹುದು. ಇದರಿಂದಾಗಿ ಅಂದಿನ ಕಾಲದಲ್ಲಿ ಇದ್ದಂತಹ ಬಹುಪತ್ನಿತ್ವವನ್ನು ಗುರುತಿಸಬಹುದು.

೬. ಜಾನಪದ ಅಂಶಗಳಿಂದ ಕೂಡಿದ ವೀರಮಾಸ್ತಿಗಲ್ಲು

ಕುಕ್ಕೂರುದೊಡ್ಡಿ ಗ್ರಾಮದಲ್ಲಿನ ಕ್ರಿ.ಶ. ೧೬–೧೭ನೇ ಶತಮಾನದ ವೀರಮಾಸ್ತಿ ಶಿಲ್ಪವು ಜನಪದ ಅಂಶಗಳಿಂದ ಕೂಡಿದ ವಿಶಿಷ್ಟವಾದ ಶಿಲ್ಪವಾಗಿದೆ. ಸುಮಾರು ಐದು ಅಡಿ ಉದ್ದ ಮತ್ತು ಎರಡು ಅಡಿ ಅಗಲವಿರುವ ಈ ಶಿಲ್ಪವು ನಾಲ್ಕು ಹಂತಗಳಲ್ಲಿ ಚಿತ್ರಿತವಾಗಿದೆ. ಮೊದಲ ಹಂತದಲ್ಲಿ ಮಧ್ಯಭಾಗದಲ್ಲಿ ಹಂದಿಯ ಚಿತ್ರಣವಿದ್ದು, ಇದರ ಇಕ್ಕೆಲಗಳಲ್ಲಿ ಎರಡು ಕೋಳಿಗಳಿವೆ. ಬಲಭಾಗದ ಕೋಳಿಯ ಪಕ್ಕದಲ್ಲಿ ವೀರನೊಬ್ಬನು ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಕೊಡಲಿಯನ್ನು ಹಿಡಿದು ನಿಂತಿದ್ದರೆ, ಎಡಭಾಗದ ಕೋಳಿಯ ಪಕ್ಕದಲ್ಲಿ ವೀರನೊಬ್ಬನು ಖಡ್ಗ, ಗುರಾಣಿ ಹಿಡಿದು ನಿಂತಿದ್ದಾನೆ. ಎರಡನೇ ಹಂತದಲ್ಲಿ ಮಧ್ಯಭಾಗದಲ್ಲಿ ಕಂಬದಿಂದ ಹೊರಟ ಎತ್ತಿದ ಬಲತೋಳುಗ್ಯೆ ಚಿತ್ರಣವಿದ್ದು, ಇದರ ಬಲಭಾಗದಲ್ಲಿ ವ್ಯಕ್ತಿಯೊಬ್ಬ ಕುದುರೆ ಮೇಲೆ ಖಡ್ಗವಿಡಿದು ಕುಳಿತಿದ್ದರೆ, ಎಡಭಾಗದಲ್ಲಿ ಮತ್ತೊಬ್ಬ ವ್ಯಕ್ತಿಯು ಆನೆಯ ಮೇಲೆ ಖಡ್ಗವಿಡಿದು ಕುಳಿತಿದ್ದಾನೆ. ಮೂರನೇ ಹಂತದಲ್ಲಿ ಧ್ಯಾನಸ್ಥನಾಗಿ ಕುಳಿತಿರುವ ಶಿವನ ಚಿತ್ರಣವಿದೆ. ಶಿವನು ಚತುರ್ಭುಜಗಳನ್ನು ಹೊಂದಿದ್ದು, ಹಿಂಬದಿಯ ಕೈಗಳಲ್ಲಿ ತ್ರಿಶೂಲ, ಸರ್ಪವನ್ನು ಹಿಡಿದಿದ್ದರೆ, ಮುಂದಿನ ಕೈಗಳು ಧ್ಯಾನಮುದ್ರೆಯಲ್ಲಿವೆ. ಶಿವನಿಗೆ ಸುಂದರವಾದ ಕಿರೀಟವಿದೆ. ಶಿವನ ಇಕ್ಕೆಲಗಳಲ್ಲಿ ವ್ಯಕ್ತಿಗಳಿಬ್ಬರು ಕೈಮುಗಿದು ನಿಂತಿದ್ದಾರೆ. ಬಲಗಡೆ ನಿಂತಿರುವ ವ್ಯಕ್ತಿಯ ಪಕ್ಕದಲ್ಲಿ ಮತ್ತೊಬ್ಬ ವ್ಯಕ್ತಿಯು ಎರಡೂ ಕೈಗಳಲ್ಲಿ ಬೆತ್ತವೊಂದನ್ನು ಹಿಡಿದು ಮೇಲಕ್ಕೆತ್ತಿ ನಿಂತಿದ್ದಾನೆ. ನಾಲ್ಕನೇ ಹಂತದಲ್ಲಿ ಶಿವಲಿಂಗದ ಚಿತ್ರಣವಿದ್ದು, ಸರ್ಪವೊಂದು ಲಿಂಗಕ್ಕೆ ಸುತ್ತಿಕೊಂಡು ಮೇಲ್ಭಾಗದಲ್ಲಿ ಹೆಡೆ ಬಿಚ್ಚಿದೆ. ಶಿವಲಿಂಗದ ಇಕ್ಕೆಲಗಳಲ್ಲಿ ಎರಡು ಆನೆಗಳು ಸೊಂಡಲಿನಲ್ಲಿ ಹೂವಿನ ಹಾರವನ್ನು ಹಿಡಿದು ಲಿಂಗಕ್ಕೆ ಹಾಕುವಂತೆ ನಿಂತಿವೆ. ಈ ಶಿಲ್ಪವು ಕೆತ್ತನೆಯ ದೃಷ್ಟಿಯಿಂದ ಅಷ್ಟೇನೂ ಚೆನ್ನಾಗಿಲ್ಲದಿದ್ದರೂ, ಹಲವು ವಿಶಿಷ್ಟತೆಗಳಿಂದ ಗಮನ ಸೆಳೆಯುತ್ತದೆ.

ಆಧಾರಸೂಚಿ

೧. ಬಿ.ಎಲ್. ರೈಸ್ (ಸಂ), EC IX, ಚನ್ನಪಟ್ಟಣ ೭೨, ಬೇವೂರು, ಪು. ೧೪೬.

೨. EC IX ಅನುಬಂಧ ಸಂಪುಟ, ಚನ್ನಪಟ್ಟಣ ೨೦೩, ಭೈರಾಪಟ್ನ, ಪು. ೪೮.

೩. ಬಿ.ಎಲ್. ರೈಸ್ (ಸಂ), EC IX, ಚನ್ನಪಟ್ಟಣ ೧೪೯, ಮಾಕಳಿ, ಪು. ೩೪೬.

೫೫

ಶ್ರೀ ಕಾಳಹಸ್ತಿ ದೇವಾಲಯದ ಐತಿಹ್ಯವನ್ನು ತಿಳಿಸುವ ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿನ ಪ್ರಾಣಿಶಿಲ್ಪಗಳು


ಸಿ. ಧನುಂಜಯ*

ವಿಜಯನಗರ ಸಾಮ್ರಾಜ್ಯದ ಅರಸರು ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬಹಳ ವೈಭವಯುತವಾಗಿ ಆಳ್ವಿಕೆ ನಡೆಸಿ ಹಲವು ಸಾಂಸ್ಕೃತಿಕ ಸಾಧನೆಗಳನ್ನು ಮಾಡಿದರು. ಇಂದು ಹಂಪಿಯು ಕರ್ನಾಟಕದ ಒಂದು ಐತಿಹಾಸಿಕ ಸ್ಥಳವಾಗಿ, ಪ್ರವಾಸಿ ತಾಣವಾಗಿ ತನ್ನದೇ ಆದ ಮಹತ್ವವನ್ನು ಹೊಂದಿದ್ದು, ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಹಂಪಿಯು ಪ್ರಾಚೀನ ಕಾಲದಲ್ಲಿ ಪಂಪಾಪುರಕ್ಷೇತ್ರ, ಪಂಪಾತೀರ್ಥ, ಹಂಪಾತೀರ್ಥ, ಭಾಸ್ಕರತೀರ್ಥ ಎಂದು ಕರೆಯಲ್ಪಟ್ಟಿದೆ. ವಿರೂಪಾಕ್ಷನು ಪಂಪಾಪತಿಯಾದ ನಂತರ ಹಂಪೆಯು ವಿರೂಪಾಕ್ಷನ ಕ್ಷೇತ್ರವಾಗಿ ಗುರುತಿಸಲ್ಪಡುತ್ತಿದೆ. ಇಲ್ಲಿಯೇ ವಿಜಯನಗರ ಸಾಮ್ರಾಜ್ಯವನ್ನು ನಿರ್ಮಿಸಿದ ಹರಿಹರ-ಬುಕ್ಕರು ವಿರೂಪಾಕ್ಷನನ್ನು ಆದಿದೈವವನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು. ಅಂದಿನಿಂದ ಇಂದಿನವರೆಗೂ ವಿರೂಪಾಕ್ಷನ ಆರಾಧನೆಯು ನಿರಂತರವಾಗಿ ಸಾಗಿ ಬಂದಿದೆ. ಮೊದಲು ಸಣ್ಣ ಗುಡಿಯಂತಿದ್ದ ವಿರೂಪಾಕ್ಷ ದೇವಾಲಯವು ವಿಜಯನಗರ ಅರಸರ ಆಳ್ವಿಕೆಯಲ್ಲಿ ಅದರಲ್ಲೂ ಮುಖ್ಯವಾಗಿ ಕೃಷ್ಣದೇವರಾಯನ ಕಾಲದಲ್ಲಿ ಸಂಕೀರ್ಣವಾದ ದೇವಾಲಯವಾಗಿ ಮಾರ್ಪಟ್ಟಿತು. ಇಂದು ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ರಂಗಮಂಟಪ, ದೇವಿಯರ ಗರ್ಭಗೃಹಗಳಲ್ಲದೇ ಇನ್ನಿತರ ಪರಿವಾರ ದೇವಾಲಯಗಳು, ಕಲ್ಯಾಣಮಂಟಪಗಳು, ಪ್ರಕಾರಮಂಟಪಗಳು, ಮತ್ತು ರಾಯಗೋಪುರಗಳನ್ನು ಒಳಗೊಂಡ ಸಂಕೀರ್ಣವಾದ ದೇವಾಲಯವಾಗಿದೆ.

ಪ್ರಸ್ತುತ ಲೇಖನದ ವಿಷಯವು ಈ ದೇವಾಲಯದ ಅಂತರಾಳದ ಹೊರಭಾಗದ ದಕ್ಷಿಣ ಕಡೆಯ ಭಿತ್ತಿಯಲ್ಲಿನ ಶಿಲ್ಪಗಳನ್ನು ಕುರಿತದ್ದಾಗಿದೆ. ಈ ಶಿಲ್ಪದಲ್ಲಿ ಆನೆ, ಜೇಡರಹುಳು, ಹಾವು ಶಿವಲಿಂಗವನ್ನು ಪೂಜಿಸುತ್ತಿರುವ ಸನ್ನಿವೇಶವನ್ನು ಕಾಣಬಹುದು. ಈ ಶಿಲ್ಪಗಳು ಆಂಧ್ರ ಪ್ರದೇಶದ ಶ್ರೀ ಕಾಳಹಸ್ತಿ ದೇವಾಲಯದ ಐತಿಹ್ಯದ ವಿಷಯವನ್ನು ಒಳಗೊಂಡಿದುದಾಗಿವೆ. ಐತಿಹ್ಯವನ್ನು ತಿಳಿಸುವ ಮುನ್ನ ದೇವಾಲಯದ ಕುರಿತು ಪುಟ್ಟ ವಿವರಣೆಯನ್ನು ಹೇಳುವುದಾದರೆ, ಇದು ಭಾರತದ ಪುರಾತನ ದೇವಾಲಯಗಳಲ್ಲೊಂದು. ಶ್ರೀ ಕಾಳಹಸ್ತೀಶ್ವರ ದೇವಾಲಯವು ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಶ್ರೀ ಕಾಳಹಸ್ತಿಯಲ್ಲಿದೆ. ಇದು ದಕ್ಷಿಣ ಭಾರತದ ಪ್ರಸಿದ್ಧ ಶಿವ ದೇವಾಲಯಗಳಲ್ಲಿ ಒಂದಾಗಿದೆ. ಇದು ಪಂಚಭೂತ ಲಿಂಗಗಳಲ್ಲಿ ಒಂದಾಗಿದ್ದು ಇದೊಂದು ವಾಯುಲಿಂಗವಾಗಿದೆ. ಈ ದೇವಾಲಯವು ಸುಮಾರು ೫ನೇ ಶತಮಾನದಲ್ಲಿ ನಿರ್ಮಿತವಾಗಿದ್ದು, ನಂತರ ಇದರ ಅಭಿವೃದ್ಧಿಗೆ ಚೋಳ ರಾಜರು ಮತ್ತು ವಿಜಯನಗರ ಅರಸರ ಪಾತ್ರ ಮುಖ್ಯವಾಗಿರುವುದು ತಿಳಿದುಬರುತ್ತದೆ. ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯದ ಅರಸನಾದ ಶ್ರೀ ಕೃಷ್ಣದೇವ ರಾಯನು ೧೨೦ ಅಡಿ ಎತ್ತರದ ಗೋಪುರದ ಜೊತೆಗೆ ೧೦೦ ಕಂಬಗಳ ಮಂಟಪವನ್ನು ೧೫೧೬ರಲ್ಲಿ ನಿರ್ಮಿಸಿರುವುದು ಶಾಸನಗಳಿಂದ ತಿಳಿದು ಬರುತ್ತದೆ.

ಈ ದೇವಾಲಯದ ಐತಿಹ್ಯವೆಂದರೆ ಶಿವನ ಪರಮ ಭಕ್ತರಾಗಿರುವ ಜೇಡಹುಳು, ಆನೆ, ಹಾವು ಈ ಮೂರು ತನ್ನದೇ ಆದ ರೀತಿಯಲ್ಲಿ ಪೂಜಿಸುತ್ತಿರುತ್ತವೆ. ಇಲ್ಲಿ ಆನೆ ನದಿಯಿಂದ ನೀರನ್ನು ತಂದು ಲಿಂಗವನ್ನು ಸ್ವಚ್ಛಗೊಳಿಸಿ ಬಿಲ್ವಪತ್ರೆಗಳನ್ನಿಟ್ಟು ಶಿವಲಿಂಗವನ್ನು ಪೂಜಿಸುತ್ತದೆ. ಅದೇ ರೀತಿ ಜೇಡರಹುಳು ಶಿವಲಿಂಗಕ್ಕೆ ಧೂಳು ಮತ್ತು ಕಸದಿಂದ ಯಾವುದೇ ರೀತಿಯ ಹಾನಿಯಾಗಬಾರದೆಂದು ಬಲೆಯನ್ನು ಆಣೆದು ಲಿಂಗಕ್ಕೆ ಆಶ್ರಯ ನೀಡಿ ಪೂಜಿಸುತ್ತದೆ. ಅದೇ ರೀತಿ ಹಾವು ಸಹ ತನ್ನ ಮಣಿಯನ್ನು ಲಿಂಗದ ಮೇಲಿಟ್ಟು ಅಲಂಕರಿಸುವುದರ ಮೂಲಕ ಲಿಂಗವನ್ನು ಪೂಜಿಸುತ್ತದೆ. ಒಂದು ದಿನ ಜೇಡರಹುಳು ಮತ್ತು ಹಾವು ದಿನನಿತ್ಯದಂತೆ ಶಿವಲಿಂಗವನ್ನು ಪೂಜಿಸುತ್ತಿದ್ದಾಗ ಸ್ವಲ್ಪ ತಡವಾಗಿ ಬಂದ ಆನೆಯು ನದಿಯಿಂದ ತಂದ ನೀರನ್ನು ಲಿಂಗದ ಮೇಲೆ ಹಾಕಿತು. ಈ ಘಟನೆಯಿಂದ ಜೇಡ ಮತ್ತು ಹಾವು ನಮ್ಮ ಪೂಜೆಯು ಅಪವಿತ್ರವಾಯಿತೆಂದು ತಿಳಿದು

* ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿ.ವಿ. ಹಂಪಿ, ವಿದ್ಯಾರಣ್ಯ, ಬಳ್ಳಾರಿ





ಆನೆಯ ವಿರುದ್ಧ ದ್ವೇಷ ಸಾರಿದವು. ಹೀಗೆ ಈ ಮೂರರ ನಡುವೆ ಹೋರಾಟವಾಗಿ ಈ ಹೋರಾಟದಲ್ಲಿ ಮೂರು ಮರಣವನ್ನಪ್ಪಿದವು. ಈ ಸಂದರ್ಭದಲ್ಲಿ ಪ್ರತ್ಯಕ್ಷನಾದ ಶಿವನು ಅವುಗಳ ನಿಸ್ವಾರ್ಥ ಭಕ್ತಿಗೆ ಮೆಚ್ಚಿ ಮೋಕ್ಷವನ್ನು ನೀಡಿದನು. ಅಂದಿನಿಂದ ಈ ಮೂರು ಸಹ ತಮ್ಮದೇ ಆದ ಮಹತ್ವವನ್ನು ಪಡೆದು ಕೊಂಡವು. ಹಾಗಾಗಿ ಜೇಡನಿಂದ 'ಶ್ರೀ', ಸರ್ಪದಿಂದ 'ಕಾಳ', ಆನೆಯಿಂದ 'ಹಸ್ತಿ' ಎಂಬ ಪದಗಳು ಬಂದು ಈ ದೇವಾಲಯಕ್ಕೆ ಶ್ರೀಕಾಳಹಸ್ತೇಶ್ವರ ಎಂಬ ಹೆಸರು ಬಂದಿತು ಎಂಬ ವಿವರಣೆ ದೊರೆಯುತ್ತದೆ.

ಈ ಮೇಲಿನ ದಂತಕಥೆಯನ್ನು ಬಿಂಬಿಸುವ ಪ್ರಾಣಿಶಿಲ್ಪಗಳು ಹಂಪಿ ಪರಿಸರದ ಸ್ಮಾರಕಗಳಲ್ಲಿ ಹಲವಾರು ಕಂಡು ಬರುತ್ತವೆ. ಈ ಶಿಲ್ಪಗಳಲ್ಲಿ ಜೇಡ, ಆನೆ, ಹಾವು ಮೂರು ಸಹ ಸಂಕೀರ್ಣವಾಗಿ ಶಿವಲಿಂಗವನ್ನು ಪೂಜಿಸುತ್ತಿರುವ ಏಕೈಕ ಶಿಲ್ಪವೊಂದು ವಿರೂಪಾಕ್ಷ ದೇವಾಲಯದ ಅಂತರಾಳದ ಹೊರಭಾಗದ ದಕ್ಷಿಣ ಕಡೆಯ ಭಿತ್ತಿಯಲ್ಲಿ ಕಂಡುಬರುತ್ತವೆ. ಒಟ್ಟಾರೆಯಾಗಿ ಶ್ರೀಕಾಳಹಸ್ತೇಶ್ವರ ದೇವಾಲಯದ ದಂತಕಥೆಯನ್ನು ವಿವರಿಸುವ ಶಿಲ್ಪಗಳನ್ನು ಇಲ್ಲಿ ಕಾಣಬಹುದು.

ಶ್ರೀ ಕಾಳಹಸ್ತೇಶ್ವರ ದೇವಾಲಯವು ವಿಜಯನಗರ ಅರಸರ ಕಾಲದಲ್ಲಿ ಮುಖ್ಯವಾಗಿ ಕೃಷ್ಣದೇವರಾಯನ ಕಾಲದಲ್ಲಿ ಹಲವು ಬೆಳವಣಿಗೆ ಕಂಡಿತು. ಕ್ರಿ.ಶ. ೧೫೧೬ರಲ್ಲಿ ಶ್ರೀ ಕಾಳಹಸ್ತೇಶ್ವರ ದೇವಾಲಯದ ಮುಖ್ಯ ಗೋಪುರವನ್ನು ಮತ್ತು ೧೦೦ ಕಂಬಗಳ ಮಂಟಪವನ್ನು ಕೃಷ್ಣದೇವರಾಯನು ನಿರ್ಮಿಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಈ ಆಧಾರದ ಹಿನ್ನೆಲೆಯಲ್ಲಿ ಕೃಷ್ಣದೇವರಾಯನು ಈ ದೇವಾಲಯದ ಪ್ರಭಾವಕ್ಕೊಳಗಾಗಿರುವುದು ತಿಳಿದುಬರುತ್ತದೆ. ಮೇಲೆ ವಿವರಿಸಿರುವ ಶಿಲ್ಪಗಳ ಕಾಲಮಾನದ ಕುರಿತು ಗೊಂದಲವಿರುವುದು ತಿಳಿದುಬರುತ್ತದೆ. ಏಕೆಂದರೆ ಕ್ರಿ.ಶ. ೧೫೧೦ರ ಶಾಸನದ ಪ್ರಕಾರ ಕೃಷ್ಣದೇವರಾಯ ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ ವಿರೂಪಾಕ್ಷ ದೇವಾಲಯದ ರಂಗಮಂಟಪ ಮತ್ತು ಗೋಪುರವನ್ನು ನಿರ್ಮಿಸಿದುದು ತಿಳಿದುಬರುತ್ತದೆ. ಆದರೆ ಈ ದೇವಾಲಯದ ಗರ್ಭಗುಡಿ, ಅಂತರಾಳ ವಿಜಯನಗರ ಪೂರ್ವದಲ್ಲಿ ನಿರ್ಮಾಣವಾಗಿದೆಯೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟರು.

ಒಟ್ಟಾರೆ ಕೃಷ್ಣದೇವರಾಯನ ಕಾಲದಲ್ಲಿ ಈ ಐತಿಹ್ಯ ಅಥವಾ ದಂತಕಥೆಯು ಹೆಚ್ಚು ಪ್ರಸಿದ್ಧಿಯಾಗಿತ್ತೆಂಬುದನ್ನು ಇಲ್ಲಿನ ಶಿಲ್ಪಗಳಿಂದ ತಿಳಿಯಬಹುದು. ಜೊತೆಗೆ ವಿಶೇಷವೆಂದರೆ ಸರ್ಪದೋಷವಿರುವವರು ಅಂದರೇ ಮದುವೆಯಾಗದವರು, ಮಕ್ಕಳಿಲ್ಲದವರು ಮತ್ತು ಬಹಳ ಕಾಲದವರೆಗೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿರುವವರು ಹೀಗೆ ಹಲವು ಸಮಸ್ಯೆಗಳಿಂದ ನರಳುವ ಜನರು ಶ್ರೀ ಕಾಳಹಸ್ತಿಗೆ ಬಂದು ಪೂಜೆ ಮಾಡಿಸಿದರೆ ಆ ದೋಷ ಅಥವಾ ಸಮಸ್ಯೆಗಳು ಬಗೆಹರಿಯುತ್ತವೆ ಎಂಬ ನಂಬಿಕೆಯಿದೆ. ಈ ರೀತಿಯ ಪೂಜೆಯನ್ನು ಹಂಪಿಯ ವಿರೂಪಾಕ್ಷನಿಗೂ ಮಾಡಿದರೆ ಅಂತಹ ದೋಷಗಳು ನಿವಾರಣೆಯಾಗುತ್ತವೆ ಎಂಬುದನ್ನು ಜನರಿಗೆ ತಿಳಿಸುವ ಸಲುವಾಗಿ ಈ ದೇವಾಲಯದಲ್ಲಿ ಈ ರೀತಿಯ ಶಿಲ್ಪಗಳನ್ನು ಬಿಡಿಸಿರಬಹುದು. ಜೊತೆಗೆ ವಿರೂಪಾಕ್ಷ ದೇವಾಲಯವು ಸಹ ಶ್ರೀ ಕಾಳಹಸ್ತೇಶ್ವರ ದೇವಾಲಯದಷ್ಟೇ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಪಡೆದಿತ್ತು ಎಂಬುದನ್ನು ಈ ಶಿಲ್ಪಗಳ ಮುಖಾಂತರ ನಾವು ತಿಳಿಯಬಹುದು.

[ಈ ಲೇಖನ ಸಿದ್ಧಪಡಿಸಲು ನನಗೆ ಸಲಹೆ ಸೂಚನೆಗಳನ್ನು ನೀಡಿದ ನನ್ನ ಮಾರ್ಗದರ್ಶಕರು ಹಾಗೂ ಗುರುಗಳಾದ ಡಾ. ಸಿ.ಎಸ್. ವಾಸುದೇವನ್ ಅವರಿಗೆ ಮತ್ತು ಆರ್ಥಿಕವಾಗಿ ನನ್ನನ್ನು ಪ್ರೋತ್ಸಾಹಿಸಿದ ನನ್ನ ಪೂಜ್ಯನೀಯ ತಂದೆ ತಾಯಿಗೆ ಹಾಗೆಯೇ ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಗೆಳೆಯರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.]

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. Sri Kalhasti Kshetra Mahima - Printed By Sri Kalahasteswara Swamy Devasthanam –Srikalahasti.
೨. ಕನ್ನಡ ವಿಶ್ವವಿದ್ಯಾಲಯ ಶಾಸನ, ಸಂಪುಟ ೩, ಹಂಪಿ ಶಾಸನಗಳು, ಪುಟ ೧೮ ಶಾ.ಸಂ. ೩೪.
೩. ಅಂತರ್ಜಾಲದಿಂದ ಸಂಗ್ರಹಿಸಿದ ಮಾಹಿತಿ, (www.srikalahasti.org).

೫೩

ಹಂಪಿಯ ಶಿಲ್ಪಗಳಲ್ಲಿ ಮಹಾಭಾರತ ಉಲ್ಲೇಖಿತ ಪುರುಷಮೃಗ ಶಿಲ್ಪ

ಹೇಮಾವತಿ ಶಿ. ಮೆಣಸಗಿ*

ಕ್ರಿ.ಶ. ೧೪-೧೬ನೇ ಶತಮಾನದಲ್ಲಿ ದಕ್ಷಿಣ ಭಾರತದ ಇತಿಹಾಸದಲ್ಲಿ ಆಳ್ವಿಕೆ ನಡೆಸಿದ ಸುಪ್ರಸಿದ್ಧ ರಾಜಮನೆತನ ವೆನಿಸಿಕೊಂಡಿದ್ದುದು ವಿಜಯನಗರ ಸಾಮ್ರಾಜ್ಯ. ಇದರ ರಾಜಧಾನಿಯಾಗಿ ಮೆರೆದ ಹಂಪಿಯು ಪೂರ್ವಕಾಲದಲ್ಲಿ ಪುರಾಣ ಹಾಗೂ ಪ್ರಾಚೀನ ಮಹಾಕಾವ್ಯಗಳಲ್ಲಿ ಪ್ರಸಿದ್ಧ ಕ್ಷೇತ್ರವಾಗಿತ್ತೆಂದು ತಿಳಿದುಬರುತ್ತದೆ. ಅಲ್ಲದೆ ಇದು ಕಲೆ ಮತ್ತು ವಾಸ್ತುಶಿಲ್ಪಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ ಕ್ಷೇತ್ರವೂ ಹೌದು. ಮುಖ್ಯವಾಗಿ ಶೈವ ಕ್ಷೇತ್ರವೆನಿಸಿದ್ದರೂ ವೈಷ್ಣವ, ಜೈನ ಧರ್ಮಗಳ ಅಸ್ತಿತ್ವ ಇಲ್ಲಿ ಕಂಡುಬರುತ್ತದೆ. ಅಲ್ಲದೆ ರಾಮಾಯಣ ಮಹಾಭಾರತದಂತಹ ಪ್ರಾಚೀನ ಮಹಾಕಾವ್ಯ ಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದು ಇಲ್ಲಿನ ಶಿಲ್ಪಗಳ ಅಧ್ಯಯನದಿಂದ ತಿಳಿದುಬರುತ್ತದೆ. ವಿಶೇಷವಾಗಿ ರಾಮಾಯಣ ಕಾವ್ಯವನ್ನು ಸಂಪೂರ್ಣವಾಗಿ ಶಿಲ್ಪಗಳ ಕೆತ್ತನೆಯ ಮೂಲಕ ತೋರಿಸಿರುವ ಹಂಪಿಯಲ್ಲಿ ಮಹಾಭಾರತ ಕಾವ್ಯಕ್ಕೂ ಮಾನ್ಯತೆ ನೀಡಿರುವುದಕ್ಕೆ ಅಲ್ಲಲ್ಲಿ ದೊರೆಯುವ ಮಹಾಭಾರತದ ಸನ್ನಿವೇಶಗಳನ್ನು ಬಿಂಬಿಸುವ ಶಿಲ್ಪಗಳು ಸಾಕ್ಷಿಯಾಗಿವೆ. ಅಂತಹವುಗಳಲ್ಲಿ ಪುರುಷಮೃಗದ ಶಿಲ್ಪಗಳು ಸಹ ಸೇರುತ್ತವೆ. ಪುರುಷಮೃಗವು ಮಹಾಭಾರತದಲ್ಲಿ ಉಲ್ಲೇಖಿತವಾಗಿರುವ ದೇಹದ ಅರ್ಧಭಾಗ ಮನುಷ್ಯ ಹಾಗೂ ಅರ್ಧಭಾಗ ಪ್ರಾಣಿ ಅದರಲ್ಲೂ ವ್ಯಾಘ್ರರೂಪವನ್ನು ಹೊಂದಿರುವ ಶಿಲ್ಪವಾಗಿದೆ. ಆದ್ದರಿಂದ ಇದನ್ನು ವ್ಯಾಘ್ರಪಾದವೆಂತಲೂ ಕರೆಯಲಾಗಿದೆ. ಅಲ್ಲದೆ ಸದಾಕಾಲ ಶಿವನ ಪೂಜೆಯಲ್ಲಿ ತಲ್ಲೀನನಾಗಿರುವುದು ಇದರ ಪ್ರಮುಖ ಲಕ್ಷಣ. ಇಂತಹ ಪುರುಷಮೃಗದ ಶಿಲ್ಪಗಳು ಹಂಪಿಯಲ್ಲಿ ಹಲವು ಕಂಡುಬರುತ್ತವೆ. ಅಂತಹವುಗಳನ್ನು ಈ ಲೇಖನದ ಮೂಲಕ ಪರಿಚಯಿಸಲು ಪ್ರಯತ್ನಿಸಲಾಗಿದೆ.

ಪುರುಷಮೃಗವು ಶಿವನ ಅತಿಭಕ್ತ ಎಂದು ಗುರುತಿಸ ಲ್ಪಟ್ಟಿದೆ. ಇದೊಂದು ಪೌರಾಣಿಕ ಜೀವಿಯಾಗಿದ್ದು ಸಂಪ್ರದಾಯ, ಕಲೆ, ಆಚರಣೆ ಹಾಗೂ ದಂತಕಥೆಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಆದರೆ ಹೆಚ್ಚು ಪ್ರಸಿದ್ಧಿ ಪಡೆದುದು ಭಾರತದ ಪ್ರಾಚೀನ ಮಹಾಕಾವ್ಯವಾದ ಮಹಾಭಾರತದ ಹಿನ್ನೆಲೆಯಲ್ಲಿ. ಈ ಪ್ರಸಿದ್ಧ ಮಹಾಕಾವ್ಯದಲ್ಲಿ ಪಾಂಡುರಾಜನ ತನಯರಾದ ಪಂಚ ಪಾಂಡವರಲ್ಲಿ ಹಿರಿಯನಾದ ಯುಧಿಷ್ಠಿರನು ಅಥವಾ ಧರ್ಮರಾಯನು ನಾರದೋಪದೇಶದಿಂದ ರಾಜಸೂಯ ಯಾಗವನ್ನು ಕೈಗೊಳ್ಳುತ್ತಾನೆ. ಈ ಯಜ್ಞವನ್ನು ಕೈಗೊಂಡ ಸಂದರ್ಭದಲ್ಲಿ ಎಂಜಲಿನ ಶುದ್ಧತೆಗೆ ಚಿಂತಿಸಿದ ಧರ್ಮ ರಾಯನು ಶ್ರೀಕೃಷ್ಣನ ಸಲಹೆಯಂತೆ ಪುರುಷಮೃಗವನ್ನು ಕರೆತರಲು ಭೀಮನನ್ನು ಕಳುಹಿಸುತ್ತಾನೆ. ಹೇಮಾಚಲದ ದಕ್ಷಿಣಕ್ಕೆ ಮಾನಸಸರೋವರದ ತೀರದಲ್ಲಿನ ಅರಣ್ಯದಲ್ಲಿ ಶಿವಪೂಜೆಯಲ್ಲಿ ತೊಡಗಿರುವ ಪುರುಷಮೃಗವನ್ನು ಕರೆತರಲು ಭೀಮ ಹೊರಡುತ್ತಾನೆ. ದಾರಿ ಮಧ್ಯದಲ್ಲಿ ಪವನ ಸುತ ಆಂಜನೇಯನ ದರ್ಶನವಾಗುತ್ತದೆ. ಆಂಜನೇಯನು, ಭೀಮನು ಪುರುಷಮೃಗವನ್ನು ಕರೆದೊಯ್ಯಲು ಬಂದಿರುವ ಉದ್ದೇಶವನ್ನು ತಿಳಿದು ಅದು ಮನೋವೇಗದಲ್ಲಿ ಚಲಿಸುವ ಪ್ರಾಣಿ ಎಂದು ತಿಳಿಸಿ, ಅದನ್ನು ಕರೆತರುವ ಉಪಾಯವನ್ನು ಭೀಮನಿಗೆ ಹೇಳಿದನು ಹಾಗೂ ತನ್ನ ಬಾಲದಿಂದ ಒಂದಿಷ್ಟು ರೋಮಗಳನ್ನು ಕಿತ್ತು ಆತನ ಸಹಾಯಕ್ಕಾಗಿ ನೀಡುವನು. ಅದನ್ನು ಪಡೆದ ಭೀಮನು ಮುಂದೆಸಾಗಿ ಪುರುಷಮೃಗವನ್ನು ಭೇಟಿ ಮಾಡಿ ತಾನು ತನ್ನ ಅಣ್ಣನ ಆದೇಶದ ಮೇರೆಗೆ ತಮ್ಮನ್ನು ಕರೆದೊಯ್ಯಲು ಬಂದಿರುವೆನು ಎಂದು ತಿಳಿಸಿದನು. ಆಗ ಪುರುಷಮೃಗವು ಒಂದು ಷರತ್ತಿನ ಮೇರೆಗೆ ಆತನೊಂದಿಗೆ ಹೋಗಲೊಪ್ಪುತ್ತದೆ. ಅದರ ಪ್ರಕಾರ ಭೀಮನು ಮುಂದೆ ಮುಂದೆ ಓಡುವುದು ಹಿಂದೆ ಪುರುಷಮೃಗವು ಆತನನ್ನು ಬೆನ್ನಟ್ಟುವುದು, ಹಾಗೂ ಭೀಮನು ಕೈಗೆ ಸಿಕ್ಕಿದಲ್ಲಿ ಆತನನ್ನು ಹಿಡಿಯುವುದು ಎಂಬ ಷರತ್ತು ನಿರ್ಧರಿತವಾಯಿತು. ಇದಕ್ಕೊಪ್ಪಿದ ಭೀಮನು ಓಡಲಾರಂಭಿಸಿದನು. ಪುರುಷ ಮೃಗವೂ ಆತನನ್ನು ಬೆನ್ನಟ್ಟಿತು. ಅದು ಹತ್ತಿರ ಬಂದಾಗ ಭೀಮನು ಆಂಜನೇಯ ನೀಡಿದ ಒಂದು ರೋಮವನ್ನು ಭೂಮಿಗೆ ಹಾಕಲು ಅಲ್ಲಿ ಶಿವಲಿಂಗವು ಉದ್ಭವಿಸುತ್ತದೆ. ಅದನ್ನು ನೋಡಿದ ಶಿವಭಕ್ತನಾದ ಪುರುಷಮೃಗನು ಶಿವಪೂಜೆಯಲ್ಲಿ ತೊಡಗುವನು. ಈ ಸಮಯವನ್ನು ಉಪಯೋಗಿಸಿಕೊಂಡ ಭೀಮನು ಮುಂದೆ ಓಡಲು

* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಆರಂಭಿಸಿದನು. ಲಿಂಗಪೂಜೆ ಮುಗಿಸಿದ ಪುರುಷಮೃಗವು ಮತ್ತೆ ಭೀಮನನ್ನು ಬೆನ್ನಟ್ಟಲು ಭೀಮನು ಮತ್ತೆ ರೋಮ ವನ್ನೆಸೆಯಲು ಶಿವಲಿಂಗ ಉದ್ಭವಿಸುತ್ತದೆ. ಹಾಗೆಯೇ ಪುರುಷ ಮೃಗವು ಮತ್ತೆ ಲಿಂಗಪೂಜೆಯಲ್ಲಿ ತೊಡಗುತ್ತದೆ. ಹೀಗೆ ಮುಂದುವರಿದ ಪುರುಷಮೃಗ ಹಾಗೂ ಭೀಮರ ಓಟವು ಯಾಗದ ಸ್ಥಳದವರೆಗೂ ಮುಂದುವರೆಯಿತು. ಯಾಗ ಸ್ಥಳದ ದ್ವಾರದ ಬಳಿ ಬಂದಾಗ ಪುರುಷಮೃಗವು ಭೀಮನ ಕಾಲನ್ನು ಹಿಡಿದೆಳೆಯಿತು. ಆಗ ಭೀಮನ ಒಂದು ಕಾಲು ದ್ವಾರದ ಒಳಗೆ ಹಾಗೂ ಇನ್ನೊಂದು ಕಾಲು ಹೊರಗೆ ಇದ್ದುದರಿಂದ ಇಬ್ಬರಲ್ಲೂ ವಾದವು ಆರಂಭವಾಯಿತು. ಅಲ್ಲಿಗೆ ಬಂದ ಧರ್ಮರಾಯನು ನ್ಯಾಯವನ್ನು ನೀಡಲು, ಅದಕ್ಕೆ ಮೆಚ್ಚಿದ ಪುರುಷಮೃಗವು ಭೀಮನನ್ನು ಮನ್ನಿಸಿ ಅವರ ಕಾರ್ಯಗಳನ್ನು ಮುಂದುವರಿಸಲು ಒಪ್ಪಿತು. ಅದರಂತೆ ಪುರುಷಮೃಗವನ್ನು ಯಜ್ಞದ ಭೋಜನಶಾಲೆಯಲ್ಲಿ ಸ್ವರ್ಣ ಕಂಬದಲ್ಲಿ ಬಂಧಿಸಿಡ ಲಾಯಿತು. ಈ ವಿವರಣೆಯು ಕುಮಾರ ವ್ಯಾಸನ ಮಹಾ ಭಾರತ[೧]ದಲ್ಲಿ ಕಂಡುಬರುತ್ತದೆ.

ಪ್ರಮುಖವಾಗಿ ದಕ್ಷಿಣ ಭಾರತದ ಎಲ್ಲ ದೇವಾಲಯ ಗಳಲ್ಲಿ ಅದರಲ್ಲೂ ಮುಖ್ಯವಾಗಿ ಶೈವ ದೇವಾಲಯಗಳಲ್ಲಿ ಕಂಡುಬರುವ ಪುರುಷಮೃಗ ಶಿಲ್ಪಕ್ಕೆ ಮಹಾಭಾರತದ ಮೇಲಿನ ಕಥೆಯಲ್ಲದೆ ಇನ್ನೂ ಹಲವು ಬಗೆಯ ಹಿನ್ನೆಲೆಗಳನ್ನು ಹೇಳಲಾಗುತ್ತದೆ. ಅಂತಹವುಗಳಲ್ಲಿ ಈ ಮುಂದಿನ ಕಥೆಯೂ ಒಂದು. ಇಲ್ಲಿ ಮೇಲೆ ತಿಳಿಸಿದ ಮಹಾಭಾರತದ ಕಥೆಯೇ ಸ್ವಲ್ಪ ಭಿನ್ನ ಸ್ವರೂಪವನ್ನು ಹೊಂದಿದ್ದು, ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯಲ್ಲಿರುವ ೧೨ ಶಿವಾಲಯಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ದಿನಗಳಲ್ಲಿಯೂ ಆಚರಣೆಯ ರೂಪದಲ್ಲಿ ಅಸ್ತಿತ್ವದಲ್ಲಿರುವುದು ವಿಶೇಷ. ಈ ಕಥೆಯಲ್ಲಿ ಪುರುಷಮೃಗವು ಆಳವಾದ ಶಿವಪೂಜೆಯಲ್ಲಿ ತೊಡಗಿರುತ್ತದೆ. ಹಾಗೂ ವಿಷ್ಣು ಮತ್ತು ವಿಷ್ಣು ಭಕ್ತರನ್ನು ತಾತ್ಸಾರ ಭಾವದಿಂದ ಕಾಣುತ್ತಿರುತ್ತದೆ. ಹೀಗಿರುವಲ್ಲಿ ಪಾಂಡವರಲ್ಲಿ ಹಿರಿಯವನಾದ ಧರ್ಮರಾಯನು ರಾಜಾಸೂಯ ಯಾಗವನ್ನು ಕೈಗೊಂಡಿರು ತ್ತಾನೆ. ಈ ಸಂದರ್ಭದಲ್ಲಿ ಯಜ್ಞವನ್ನು ಪುರುಷಮೃಗದ ಹಾಲಿನ ಅವಶ್ಯಕತೆಯುಂಟಾಗುತ್ತದೆ. ಈ ಜವಾಬ್ದಾರಿಯನ್ನು ನಿರ್ವಹಿಸಲು ಭೀಮನು ಅತಿಯಾದ ನಂಬಿಕೆಯಿಂದ ಮುಂದೆ ಬರುತ್ತಾನೆ. ಆಗ ಶ್ರೀಕೃಷ್ಣನು ಶಿವ ಹಾಗೂ ವಿಷ್ಣುಗಳಿಬ್ಬರು ಒಂದೇ ಎಂಬುದನ್ನು ತಿಳಿಸಲು ಹಾಗೂ ಭೀಮನ ಅತಿಯಾದ ಸ್ವನಂಬಿಕೆಯನ್ನು ನಿಗ್ರಹಿಸಲು ಬಯಸಿ, ೧೨ ಶಿವಲಿಂಗ ಗಳನ್ನು ಭೀಮನಿಗೆ ಕೊಟ್ಟು ಅವಶ್ಯಕತೆ ಬಿದ್ದಲ್ಲಿ ಒಂದೊಂದೇ ಲಿಂಗವನ್ನು ಭೂಮಿಗೆ ಹಾಕುವಂತೆ ಹೇಳಿ ಕಳುಹಿಸುತ್ತಾನೆ. ಹಾಗೂ ಗೋವಿಂದ ಗೋಪಾಲ ಎಂಬ ಪದಗಳನ್ನು ಉಚ್ಚರಿಸಲು ತಿಳಿಸುತ್ತಾನೆ. ಭೀಮನು ಶಿವನ ಪೂಜೆಯಲ್ಲಿ ನಿರತನಾದ ಪುರುಷಮೃಗವಿದ್ದ ಅರಣ್ಯದೊಳಗೆ ಪ್ರವೇಶಿಸಿ ಪುರುಷಮೃಗದ ಹಾಲನ್ನು ಪಡೆಯಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಗೋವಿಂದ ಗೋಪಾಲ ಎಂದು ಉಚ್ಚರಿಸು ತ್ತಾನೆ. ಇದರಿಂದ ಶಿವಪೂಜೆಯಲ್ಲಿ ತೊಡಗಿರುವ ಪುರುಷ ಮೃಗಕ್ಕೆ ತೊಂದರೆಯುಂಟಾಗಿ ಲಿಂಗದಲ್ಲಿ ವಿಷ್ಣು ಇರುವಂತೆ ಭಾಸವಾಗಿ, ಕೋಪದಿಂದ ಭೀಮನನ್ನು ಹಿಡಿಯಲು ಮುಂದಾಗುತ್ತದೆ. ಆಗ ಭೀಮನು ಅದರಿಂದ ತಪ್ಪಿಸಿಕೊಳ್ಳಲು ಓಡಲಾರಂಭಿಸುತ್ತಾನೆ. ಅದು ಆತನ ಸಾಮೀಪ್ಯಕ್ಕೆ ಬಂದಾಗ ಕೃಷ್ಣನು ನೀಡಿದ ಶಿವಲಿಂಗವೊಂದನ್ನು ಭೂಮಿಗೆ ಚೆಲ್ಲುತ್ತಾನೆ. (ಕೆಲವೆಡೆ ರುದ್ರಾಕ್ಷಿಮಣಿಗಳನ್ನು ಚೆಲ್ಲಿ ಲಿಂಗರೂಪ ಪಡೆಯು ತ್ತದೆ ಎಂದು ಹೇಳಲಾಗಿದೆ). ಅದು ಶಿವಾಲಯವಾಗಿ ಪರಿವರ್ತನೆಯಾದಾಗ ಪುರುಷಮೃಗವು ಶಿವಪೂಜೆಯಲ್ಲಿ ತೊಡಗುತ್ತದೆ. ಆಗ ಮತ್ತೆ ಭೀಮನು ಅದರ ಹಾಲನ್ನು ಪಡೆಯಲು ಗೋವಿಂದ ಗೋಪಾಲ ಎಂದು ಹಾಡುತ್ತಾನೆ. ಆಗ ಪುರುಷಮೃಗವು ಮತ್ತೆ ಕುಪಿತನಾಗಿ ಭೀಮನನ್ನು ಹಿಡಿಯಲು ಆತನ ಹಿಂದೆ ಓಡುತ್ತದೆ. ಆಗ ಭೀಮನು ಮತ್ತೆ ಶಿವಲಿಂಗಗಳನ್ನು ಚೆಲ್ಲುತ್ತಾನೆ. ಹೀಗೆ ೧೨ ಲಿಂಗಗಳನ್ನು ಚೆಲ್ಲಿದಾಗ ಅಲ್ಲಿ ೧೨ ಶಿವಾಲಯಗಳು ನಿರ್ಮಾಣವಾಗುತ್ತವೆ. ಕೊನೆಯಲ್ಲಿ ಪುರುಷಮೃಗ ಭೀಮನನ್ನು ಹಿಡಿದಾಗ ಭೀಮನ ಒಂದು ಕಾಲು ಯಾಗಶಾಲೆಯ ದ್ವಾರದ ಒಳಗೆ ಹಾಗೂ ಇನ್ನೊಂದು ಹೊರಗೆ ಇರುತ್ತದೆ. ಭೀಮನು ತಾನು ಒಳಗೆ ಪ್ರವೇಶಿಸಿದಂತೆ ಎಂದು ವಾದಿಸಲು ಧರ್ಮರಾಯನು ಬಂದು ಭೀಮನ ಅರ್ಧದೇಹ ಒಳಗೆ ಇದ್ದು ಇನ್ನರ್ಧ ಹೊರಗೆ ಇರುವುದರಿಂದ ಹೊರಗೆ ಇರುವ ದೇಹಾರ್ಧ ಭಾಗವು ಪುರುಷಮೃಗಕ್ಕೆ ಸಲ್ಲುವುದೆಂದು ನ್ಯಾಯವನ್ನು ಹೇಳುತ್ತಾನೆ. ಈ ನ್ಯಾಯಕ್ಕೆ ಮೆಚ್ಚಿದ ಪುರುಷಮೃಗವು ಯಜ್ಞ ಪೂರ್ಣ ಗೊಳ್ಳಲು ತನ್ನ ಹಾಲನ್ನು ನೀಡುತ್ತದೆ. ಈ ೧೨ ಶಿವಾಲಯಗಳು ತಮಿಳುನಾಡಿನ ಕನ್ಯಾಕುಮಾರಿಯ ಸುತ್ತಮುತ್ತಲ ಸ್ಥಳಗಳಲ್ಲಿ ಕಂಡುಬರುತ್ತದೆ. ಹಾಗೂ ಈಗಲೂ ಶಿವರಾತ್ರಿಯಂದು ಅಲ್ಲಿನ ಜನ ಬರಿಗಾಲಿನಲ್ಲಿ ಕೈಯಲ್ಲೊಂದು ತಾಳೆ ಮರದ ಎಲೆ ಯೊಂದನ್ನು ಹಿಡಿದು, ಗೋಪಾಲ ಗೋವಿಂದ ಎಂದು ಹಾಡುತ್ತ ೭೫ ಕಿ.ಮೀ.ಗಳಷ್ಟು ಓಡಿ ಈ ಹನ್ನೆರಡು ಶಿವಾಲಯಗಳ ದರ್ಶನ ಪಡೆಯುತ್ತಾರೆ ಎಂದು ತಿಳಿದು ಬರುತ್ತದೆ. ಈ ಮೂಲಕ ಅವರು ಶಿವ ಮತ್ತು ವಿಷ್ಣುಗಳಿಬ್ಬರು ಒಂದೇ ಎಂಬ ಭಾವೈಕ್ಯತೆಯನ್ನು ಪ್ರದರ್ಶಿಸುತ್ತಾರೆ ಎಂದೂ ಸಹ ಹೇಳಲಾಗುತ್ತದೆ[೨].

ಹೀಗೆ ದಕ್ಷಿಣ ಭಾರತದಲ್ಲಿ ಕ್ರಿ.ಶ. ೬–೭ನೇ ಶತಮಾನ ದಲ್ಲೇ ಅಂದರೆ ಪಲ್ಲವರ ಕಾಲದಿಂದಲೇ ಕಂಡುಬರುವ ಪುರುಷಮೃಗ ಶಿಲ್ಪವು ಬೇರೆ ಬೇರೆ ಸ್ಥಳಗಳಲ್ಲಿ ಭಿನ್ನವಾಗಿ ಆರಾಧಿಸಲ್ಪಡುತ್ತಿರುವುದು ಕಂಡುಬರುತ್ತದೆ. ತಮಿಳುನಾಡಿನ

ಮಧುರೈ ಹತ್ತಿರವಿರುವ ತಿರುವಟವೂರಿನ ಶೈವ ದೇವಾಲಯದಲ್ಲಿ ಪುರುಷಮೃಗವು ರಕ್ಷಕದೇವರಾಗಿ ಆರಾಧಿಸಲ್ಪಡುತ್ತಿದೆ. ಅಲ್ಲದೆ ಈ ದೇವಾಲಯಕ್ಕೆ ಭೇಟಿ ನೀಡಿದ ಭಕ್ತರ ಪಾಪ ಹಾಗೂ ಭಯವು ನಿವಾರಣೆಯಾಗುತ್ತದೆಂಬ ಪ್ರತೀತಿ ಇದೆ. ಹಾಗೂ ಮಳೆಯ ಬರುವಿಕೆಗಾಗಿ ಪುರುಷಮೃಗವನ್ನು ಇಲ್ಲಿ ವಿಶೇಷವಾಗಿ ಪೂಜೆ ಮಾಡುವ ಆಚರಣೆ ಇಲ್ಲಿದೆ. ಹಾಗೆಯೇ ಭಾರತದಲ್ಲಿಯೇ ಪ್ರಖ್ಯಾತವಾದ ಚಿದಂಬರಂನ ಶಿವ–ನಟರಾಜ ದೇವಾಲಯದಲ್ಲಿಯೂ ಪುರುಷಮೃಗದ ಶಿಲ್ಪವಿದ್ದು ಅದರ ಆರಾಧನೆ ಮಾಡಲಾಗುತ್ತದೆ. ಈ ಸ್ಥಳದಲ್ಲಿ ವ್ಯಾಘ್ರಪಾದ ಮುನಿಯು ಶಿವನ ತಪಸ್ಸನ್ನು ಕೈಗೊಂಡು ದೇಹದ ಅರ್ಧಭಾಗ ಪ್ರಾಣಿರೂಪವನ್ನು ಪಡೆದುಕೊಂಡನೆಂಬ ಐತಿಹ್ಯ ಪ್ರಚಲಿತದಲ್ಲಿದೆ. ಹೀಗೆ ಪುರುಷಮೃಗದ ಆರಾಧನೆಯುಳ್ಳ ದೇವಾಲಯಗಳಲ್ಲಿ ಅರ್ಪಿಸುವ ಷೋಡಶ ಉಪಚಾರಗಳಲ್ಲಿ ಒಂದಾದ ಪುರುಷಮೃಗ ದೀಪಾರಾಧನೆಯ ಸೇವೆಯೂ ಇರುವುದು ತಿಳಿದುಬರುತ್ತದೆ. ಇದಲ್ಲದೆ ಕೆಲವು ಶಿವಾಲಯಗಳಲ್ಲಿ ಉತ್ಸವ ಮೂರ್ತಿಗಳ ವಾಹನವಾಗಿಯೂ ಪುರುಷ ಮೃಗನನ್ನು ಬಳಸಲ್ಪಡುವುದು ಕಂಡುಬರುತ್ತದೆ[೩].

ಈ ಮೇಲಿನ ದೀರ್ಘ ವಿವರಣೆಯಲ್ಲಿ ಉಲ್ಲೇಖಿಸಲಾದ ಪುರುಷಮೃಗದ ನಿರೂಪಣಾತ್ಮಕ ಶಿಲ್ಪವು ಹಂಪಿಯ ದೇವಾಲಯಗಳಲ್ಲಿ ಹಲವು ಕಂಡುಬರುತ್ತವೆ. ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಹಲವು ಪುರುಷಮೃಗ ಶಿಲ್ಪಗಳು ಕಂಡುಬಂದಿವೆ. ದೇವಾಲಯದ ನವರಂಗ ಭಾಗದಲ್ಲಿನ ಮೊದಲನೇ ಕಂಬದಲ್ಲಿಯೇ ಲಿಂಗಪೂಜೆಯಲ್ಲಿ ತೊಡಗಿರುವ ಪುರುಷಮೃಗ ಶಿಲ್ಪವನ್ನು ಕೆತ್ತಲಾಗಿದೆ. ಇಲ್ಲಿ ಪುರುಷಮೃಗನನ್ನು ಶಿವಭಕ್ತನಾಗಿ ಮತ್ತು ಪವಿತ್ರತೆಯ ಸಂಕೇತದಲ್ಲಿ ತೋರಿಸಲಾಗಿದೆ ಎಂದು ಹೇಳಬಹುದು. ಹಾಗೂ ಇದೇ ದೇವಾಲಯದ ಪೂರ್ವ, ದಕ್ಷಿಣ, ಉತ್ತರದ ಭಿತ್ತಿಗಳಲ್ಲಿಯೂ ಪುರುಷಮೃಗದ ನಿರೂಪಣಾತ್ಮಕ ಶಿಲ್ಪಗಳನ್ನು ಕಾಣಬಹುದು. ಇಲ್ಲಿ ಶಿಲ್ಪವನ್ನು ಮಹಾಭಾರತದ ಕಥೆಯನ್ನಾಧರಿಸಿ ಕೆತ್ತಲಾಗಿದೆ. ಪೂರ್ವ ದಿಕ್ಕಿಗಿರುವ ಪ್ರವೇಶದ್ವಾರದ ಬಲಕ್ಕೆ ಅಂದರೆ ನವರಂಗದ ಹೊರಭಿತ್ತಿಯಲ್ಲಿ ಈ ಶಿಲ್ಪವನ್ನು ಕೆತ್ತಿದ್ದು, ಇಲ್ಲಿ ಮುಂದೆ ಭೀಮನನ್ನು, ಮಧ್ಯದಲ್ಲಿ ಲಿಂಗವನ್ನು ಇದರ ಹಿಂದೆ ಪುರುಷ ಮೃಗವನ್ನು ಕೆತ್ತಲಾಗಿದೆ. ಭೀಮನೆಂದು ಗುರುತಿಸಲು ಆತನ ಬಲಗೈಯಲ್ಲಿ ಗದೆಯನ್ನು ತೋರಿಸಿರುವರು. ಹಾಗೂ ಎಡಗೈಯು ಆಂಜನೇಯ ನೀಡಿದ ರೋಮವನ್ನು ಎಸೆಯುತ್ತಿರುವನು ಎನ್ನುವಂತೆ ಕೆತ್ತಲಾಗಿದೆ. ಮತ್ತು ಆತನ ಮುಖವು ಹಿಂದಿರುವ ಪುರುಷಮೃಗವನ್ನು ನೋಡುತ್ತಿರುವಂತಿದೆ. ಈತನ ಹಿಂದೆ ಪೀಠ ಸಹಿತ ಲಿಂಗವಿದ್ದು, ಅದಕ್ಕೆ ಪುರುಷಮೃಗವು ಪೂಜೆ ಸಲ್ಲಿಸುತ್ತಿರುವಂತೆ ತೋರಿಸಲಾಗಿದೆ. ಇದರ ಎಡಗೈಯಲ್ಲಿ ಗಂಟೆ, ಬಲಗೈಯಲ್ಲಿ ಪುಷ್ಪವನ್ನಿಡಿದು ಲಿಂಗಕ್ಕೆ ಅರ್ಪಿಸುತ್ತಿರುವಂತೆ ಕೆತ್ತಲಾಗಿದೆ. ಹಾಗೂ ಇದರ ವ್ಯಾಘ್ರ ಪಾದಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಭೀಮನ ಮುಂದೆ ಒಬ್ಬ ವ್ಯಕ್ತಿಯು ಸಮಭಂಗದಲ್ಲಿ ನಿಂತಿದ್ದು ಅಂಜಲಿ ಮುದ್ರೆಯಲ್ಲಿರುವನು. ಈತನನ್ನು ಯುಧಿಷ್ಠಿರನೆಂದು ಹೇಳಬಹುದು. ಇದೇ ಲಕ್ಷಣಗಳನ್ನು ಒಳಗೊಂಡ ಶಿಲ್ಪಗಳು ಉತ್ತರ ಹಾಗೂ ದಕ್ಷಿಣದ ಭಿತ್ತಿಯಲ್ಲಿಯೂ ಕಂಡುಬರುತ್ತವೆ. ಆದರೆ ಇಲ್ಲಿ ಪುರುಷಮೃಗವು ಬಲಗೈಯಲ್ಲಿ ಧೂಪಾರತಿಯನ್ನು ಹಿಡಿದಿದ್ದು ಎಡಗೈಯಲ್ಲಿ ಗಂಟೆಯನ್ನು ತೋರಿಸಲಾಗಿದೆ. ಹಾಗೂ ಭೀಮನು ಓಡುತ್ತಿರುವ ಭಂಗಿಯಲ್ಲಿ ಕೆತ್ತಲಾಗಿದೆ. ಆದರೆ ಈ ಎರಡೂ ಭಿತ್ತಿಯಲ್ಲಿನ ಶಿಲ್ಪಗಳಲ್ಲಿ ಯುಧಿಷ್ಠಿರನನ್ನು ತೋರಿಸಲಾಗಿಲ್ಲ. ಇದೇ ಲಕ್ಷಣಗಳುಳ್ಳ ಶಿಲ್ಪಗಳು ವಿರೂಪಾಕ್ಷ ದೇವಾಲಯದ ನೂರು ಕಂಬಗಳ ಮಂಟಪದಲ್ಲಿ. ಹಾಗೂ ನೆಲಮನೆ ಶಿವದೇವಾಲಯ ಅಥವಾ ಪ್ರಸನ್ನ ವಿರೂಪಾಕ್ಷ ದೇವಾಲಯದ ಉತ್ಸವ ಮಂಟಪದ ಕಂಬವೊಂದರಲ್ಲಿಯೂ. ಹಾಗೂ ಪಾನಸುಪಾರಿ ಬಜಾರಿನಲ್ಲಿ ಶಿಥಿಲಾವಸ್ಥೆಯಲ್ಲಿರುವ ದೇವಾಲಯದ (ಉಮಾಮಹೇಶ್ವರ) ಮಂಟಪದ ಕಂಬದಲ್ಲಿಯೂ ಕಂಡುಬರುತ್ತವೆ.

ಈ ಮೇಲೆ ತಿಳಿಸಿದ ವಿವರಣೆಗಳು ಹಾಗೂ ಶಿಲ್ಪದ ಲಕ್ಷಣಗಳಿಂದ ತಿಳಿಯುವುದು ಪುರುಷಮೃಗವು ಶಿವನ ಅತಿಭಕ್ತನೆಂಬುದು. ಆದರೆ ಇದಕ್ಕೆ ಭಿನ್ನವಾಗಿ ವಿಷ್ಣುವಿನ ರೂಪಗಳಿಗೂ ಪುರುಷಮೃಗ ಆರಾಧಿಸುತ್ತಿರುವಂತೆ ಕೆತ್ತಲಾಗಿರುವ ಶಿಲ್ಪಗಳೂ ಹಂಪಿಯಲ್ಲಿ ದೊರೆಯುತ್ತವೆ. ಅಂತಹವುಗಳೆಂದರೆ, ಹಜಾರ ರಾಮ ದೇವಾಲಯದಲ್ಲಿ ಯೋಗಾನರಸಿಂಹನನ್ನು, ವಿಜಯ ವಿಠಲ ದೇವಾಲಯದಲ್ಲಿ ವಿಠಲನನ್ನು, ಆರಾಧಿಸುತ್ತಿರುವಂತೆ ಕೆತ್ತಿರುವ ಶಿಲ್ಪಗಳಿವೆ. ಹಾಗೆಯೇ ಕಡಲೆಕಾಳು ಗಣೇಶ ದೇವಾಲಯದ ಮಂಟಪದ ಕಂಬವೊಂದರಲ್ಲಿ ಗಣೇಶನನ್ನು ಆರಾಧಿಸುತ್ತಿರುವಂತೆ ಕೆತ್ತಲಾಗಿದೆ. ಪ್ರಾಯಶಃ ಈ ಶಿಲ್ಪಗಳಲ್ಲಿ ಪುರುಷಮೃಗನ ಪವಿತ್ರ ಸ್ಥಾನ ಬಿಂಬಿತವಾಗಿದೆ ಎನ್ನಬಹುದು.

ಒಟ್ಟಾರೆ ಮೇಲೆ ತಿಳಿಸಿದ ಸಾಹಿತ್ಯಿಕ ಹಾಗೂ ಶಿಲ್ಪಗಳ ವಿವರಣೆಗಳಿಂದ ತಿಳಿದುಬರುವ ಮುಖ್ಯ ಅಂಶಗಳೆಂದರೆ ಪುರುಷಮೃಗವೂ ಸಹ ಆರಾಧನಾ ದೇವತೆಯಾಗಿದ್ದು, ಇದು ಅತ್ಯಂತ ಪವಿತ್ರವಾದುದೆಂಬ ಕಲ್ಪನೆ ಇರುವುದು.

ಆಧಾರಸೂಚಿ

೧. Syamacharya V(Etd), The Karnataka Mahabharata by Kumaravyasa Mahakavi, volume 3, Sabhaparva, Published Under The Authority of The Government of His Highness The Maharaja of Mysore, sandhi 7th, p.120-131.

೨. http://www.sphinxofindia.rajadeekshithar.com.

೩. Ibid.

೫೭

ಹಳೇ ಆಲೂರಿನ ಅರ್ಕೇಶ್ವರ ದೇವಾಲಯದಲ್ಲಿನ ಶಿವನ ವಿಶಿಷ್ಟ ಶಿಲ್ಪ

ಸಿ.ಜಿ. ಉಮೇಶ*

ಆಲೂರು ಗ್ರಾಮವು ಚಾಮರಾಜನಗರ ಜಿಲ್ಲೆಯ ಅದೇ ತಾಲೂಕಿಗೆ ಸೇರಿದ ಗ್ರಾಮವಾಗಿದ್ದು ಜಿಲ್ಲಾ ಕೇಂದ್ರದಿಂದ ಈಶಾನ್ಯಕ್ಕೆ ೧೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಸುವರ್ಣವತಿ ನದಿಯ ಎಡದಂಡೆಯ ಮೇಲಿದ್ದು ಅಡಿಕೆ ಮತ್ತು ತೆಂಗಿನ ತೋಟಗಳಿಂದ ಸುತ್ತುವರೆದಿರುವ ಗ್ರಾಮ ವಾಗಿದೆ. ಈ ಗ್ರಾಮದಲ್ಲಿ ಗಂಗ, ಚೋಳ, ಹೊಯ್ಸಳ, ವಿಜಯ ನಗರ ರಾಜಮನೆತನಗಳ ಒಟ್ಟು ೧೨ ಶಾಸನಗಳು ದೊರೆತಿದ್ದು, ಅವುಗಳಲ್ಲಿ ಆಲೋರು ಎಂದು ಉಲ್ಲೇಖಿತವಾಗಿದೆ. ೧೧ನೇ ಶತಮಾನದ ಶಾಸನವೊಂದು ಈ ಗ್ರಾಮವನ್ನು ಐಯ್ಯಹೊಳೆ ಎಂದು ಉಲ್ಲೇಖಿಸುತ್ತದೆ. ಇಲ್ಲಿ ಹರಿಯುವ ಸುವರ್ಣವತಿ ನದಿಗೆ ಹೊನ್ನುಹೊಳೆ ಎಂದು ಸಹ ಕರೆಯುತ್ತಾರೆ. ಸುವರ್ಣವತಿ ನದಿಯ ಎಡದಂಡೆಯ ಮೇಲಿದ್ದ ಈ ಗ್ರಾಮವು ಈಗ ಅನತಿ ದೂರಕ್ಕೆ ಸ್ಥಳಾಂತರಗೊಂಡಿದೆ. ಆದರೆ ದೇವಾಲಯಗಳು ಅಲ್ಲಿಯೇ ಇರುವುದರಿಂದ ಈ ದೇವಾಲಯ ಗಳಿರುವ ಸ್ಥಳವನ್ನು ಹಳೇ ಆಲೂರು ಎಂದು ಕರೆಯಲಾಗು ತ್ತಿದೆ. ಕೆಲವು ಶಾಸನಗಳಲ್ಲಿ ಈ ಗ್ರಾಮವನ್ನು ಅಗ್ರಹಾರ ಮತ್ತು ಪ್ರಮುಖವಾದ ವ್ಯಾಪಾರದ ಸ್ಥಳವಾಗಿತ್ತು ಎಂದು ಉಲ್ಲೇಖಿಸುತ್ತವೆ.

ಪ್ರಸ್ತುತ ಹಳೆ ಆಲೂರಿನಲ್ಲಿ ೩ ಶೈವ ದೇವಾಲಯ ಗಳಿದ್ದು ಅವುಗಳಲ್ಲಿ ಈ ಅರ್ಕೇಶ್ವರ ದೇವಾಲಯವು ಪ್ರಮುಖ ವಾದುದಾಗಿದೆ. ಈ ದೇವಾಲಯವು ಗಂಗರ ಕಾಲದ ದೇವಾಲಯವಾಗಿದ್ದು ಪ್ರಾಯಶಃ ೧೦ನೇ ಶತಮಾನದ ಆದಿಭಾಗದಲ್ಲಿ ನಿರ್ಮಾಣವಾಗಿರಬಹುದು.

ಈ ಅರ್ಕೇಶ್ವರ ದೇವಾಲಯವು ಪೂರ್ವಾಭಿಮುಖ ವಾಗಿದ್ದು ಗರ್ಭಗೃಹ, ಅಂತರಾಳ, ನವರಂಗ, ನಂದಿಮಂಟಪ ಮತ್ತು ಪ್ರಾಕಾರವನ್ನು ಒಳಗೊಂಡಿದ್ದು, ವಾಸ್ತುಶಿಲ್ಪದ ದೃಷ್ಟಿಯಿಂದ ಅತ್ಯುನ್ನತವಾದ ಉಬ್ಬು ಕೆತ್ತನೆಯ ಕಥಾನಕ ಶಿಲ್ಪಗಳು, ಬಿಡಿಶಿಲ್ಪಗಳನ್ನು ಒಳಗೊಂಡಿವೆ. ಇಲ್ಲಿ ಪ್ರಮುಖ ವಾಗಿ ಸಪ್ತಮಾತೃಕ ಶಿಲ್ಪಗಳು, ಮಹಾಕಾಳ, ಮಹಿಷಮರ್ದಿನಿ, ನಾರಾಯಣ ಹಾಗೆಯೇ ಒಂದು ಶಿವನ ವಿಶಿಷ್ಟ ಶಿಲ್ಪವು ಕಂಡುಬರುತ್ತದೆ.

ನವರಂಗದಲ್ಲಿರುವ ಈ ಶಿವನ ಶಿಲ್ಪವನ್ನು ದಕ್ಷಿಣ ದಿಕ್ಕಿಗೆ ಮುಖ ಮಾಡಿರುವಂತೆ ಇಡಲಾಗಿದ್ದು, ಈ ಶಿಲ್ಪವನ್ನು ೧೯೩೭ರ ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್‌ನಲ್ಲಿ ಕಪಾಲಿಕಾ ಶಿವ ಎಂದು ಉಲ್ಲೇಖಿಸಲಾಗಿದೆ. ದೇವಾಲಯದ ವಿವರಣೆ ನಾಮಫಲಕದಲ್ಲಿ ಯೋಗದಕ್ಷಿಣಮೂರ್ತಿ ಎಂದು ಉಲ್ಲೇಖಿಸಲಾಗಿದೆ. ಆದರೆ ಯೋಗದಕ್ಷಿಣಮೂರ್ತಿಗೆ ಇರಬೇಕಾದ ಪ್ರತಿಮಾ ಲಕ್ಷಣಗಳಲ್ಲಿ ಅಕ್ಷಮಾಲೆಯನ್ನು ಬಿಟ್ಟು ಉಳಿದ ಯಾವ ಲಕ್ಷಣಗಳು ಈ ಶಿಲ್ಪದಲ್ಲಿ ಕಂಡುಬರುವುದಿಲ್ಲ. ಆದ್ದರಿಂದ ಈ ಶಿಲ್ಪವನ್ನು ಯೋಗದಕ್ಷಿಣಮೂರ್ತಿ ಎಂದು ಹೇಳಬರುವುದಿಲ್ಲ.

ಈ ಶಿವನ ಶಿಲ್ಪವು ೩ ಅಡಿ ಎತ್ತರವಾಗಿದ್ದು ಬೇರೆ ಯಾವುದೋ ಪಾಣಿಪೀಠದ ಮೇಲೆ ಕೂರಿಸಲಾಗಿದೆ. ನಂದಿ ಪೀಠದ ಮೇಲೆ ಅರ್ಧಪರ್ಯಂಕಾಸನದಲ್ಲಿದ್ದು, ಚತುರ್ಭುಜ ಗಳನ್ನು ಹೊಂದಿದೆ. ಬಲ ಮುಂದಿನ ಕೈಯಲ್ಲಿ ತ್ರಿಶೂಲವನ್ನು ಹಿಡಿದಿದ್ದು (ಊರ್ಧ್ವಮುಖ) ಬಲಹಿಂದಿನ ಕೈಯಲ್ಲಿ ಪರಶುವನ್ನು ಹಿಡಿದಿರುವನು. ಎಡ ಮುಂದಿನ ಕೈಯಲ್ಲಿ ಕಪಾಲವಿದ್ದು ಎಡಹಿಂದಿನ ಕೈಯಲ್ಲಿ ಅಕ್ಷಮಾಲೆಯನ್ನು ಹಿಡಿದಿದೆ. ಆದರೆ ಇತ್ತೀಚೆಗೆ ಎಡ ಮುಂದಿನ ಕೈಯಲ್ಲಿ ಕಪಾಲ ಇರುವ ಭಾಗದಲ್ಲಿ ಮೂಲ ಮೂರ್ತಿಗೆ ಸೇರಿರದ ಲಿಂಗವನ್ನು ಹೊಸದಾಗಿ ಸೇರಿಸಲಾಗಿದೆ. (ಈ ಲಿಂಗ ಮೂಲಮೂರ್ತಿಗೆ ಸಂಬಂಧಿಸಿದಲ್ಲ) ಜಟಾಮುಕುಟವನ್ನು ಹೊಂದಿರುವ ಶಿವನು ಎರಡು ಕಣ್ಣುಗಳನ್ನು ಮುಚ್ಚಿರುವನು. ಕರ್ಣಕುಂಡಲಗಳಿದ್ದು (ಕುಂಡಲಗಳು ಸ್ಪಷ್ಟವಾಗಿಲ್ಲ) ಕೊರಳಿನಲ್ಲಿ ಕಂಠಹಾರ ಮತ್ತು ಮುಕ್ತಹಾರ ಧರಿಸಿದ್ದಾನೆ. ಯಜ್ಞೋಪವೀತವನ್ನು ಹೊಂದಿದ್ದು ಚನ್ನವೀರ, ಉದರ ಬಂಧವನ್ನು ಧರಿಸಿದ್ದಾನೆ. ತೋಳುಬಂಧಿ ಅಥವಾ ಕೇಯೂರ ಕಟಕವನ್ನು ಹೊಂದಿದ್ದು (ಬಾಹು ವಲಯಗಳು) ಮುಂದಿನ

* ಸಂಶೋಧನಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು



ಹಳೇ ಆಲೂರಿನ ಅರ್ಕೇಶ್ವರ ದೇವಾಲಯದಲ್ಲಿರುವ ಶಿವನ ವಿಶಿಷ್ಟ ಶಿಲ್ಪ

ಎರಡು ಕೈಗಳಲ್ಲಿ ಕಟಕಗಳಿದ್ದು ಹಿಂದಿನ ಎರಡು ಕೈಗಳಲ್ಲಿ ತ್ರಿವಳಿ ಕಟಕ ಅಥವಾ ತ್ರಿವಲಯ ಕಟಕಗಳಿವೆ. ಹಾಗೆಯೇ ಎರಡು ಕಾಲುಗಳಲ್ಲಿ ಪಾದಕಟಕಗಳಿವೆ. ಶಿವನು ಮೊಣಕಾಲಿನ ವರೆಗೆ ವಸ್ತ್ರವನ್ನು ಧರಿಸಿದ್ದು ಎರಡು ಕಾಲುಗಳು ಸೇರಿಸಿದಂತೆ ಚಿತ್ರವಸ್ತ್ರವನ್ನು ಧರಿಸಿದ್ದಾನೆ.

ಈ ರೀತಿಯಾದ ಪ್ರತಿಮಾಲಕ್ಷಣಗಳನ್ನು ಹೊಂದಿರುವ ಈ ಶಿವನ ಶಿಲ್ಪವನ್ನು ಅಕ್ಷಮಾಲೆಯ ಆಧಾರದ ಮೇಲೆ ದಕ್ಷಿಣಮೂರ್ತಿ ಮತ್ತು ಸದಾಶಿವಮೂರ್ತಿಗಳ ಪ್ರತಿಮಾ ಲಕ್ಷಣಗಳೊಂದಿಗೆ ಹೋಲಿಕೆ ಮಾಡಿ ಅಧ್ಯಯನ ಮಾಡಿದಾಗ ಈ ಶಿಲ್ಪಗಳು ಹೊಂದಾಣಿಕೆಯಾಗಲಿಲ್ಲ. ಅಲ್ಲದೆ ಶಿವನ ಇತರೆ ಯಾವುದೇ ರೂಪಗಳಿಗೆ ಇರಬೇಕಾದ ಲಕ್ಷಣಗಳಿಗಿಂತ ಭಿನ್ನವಾಗಿರುವ ಲಕ್ಷಣಗಳನ್ನು ಈ ಶಿಲ್ಪವು ಹೊಂದಿವೆ. ಅಲ್ಲದೆ ವಿದ್ವಾಂಸರಾದ ಎಂ.ಎಸ್. ಕೃಷ್ಣಮೂರ್ತಿಯವರಿಗೆ ಈ ಶಿಲ್ಪವನ್ನು ತೋರಿಸಿದಾಗ ಈ ಶಿಲ್ಪದಲ್ಲಿರುವ ನಂದಿಯ ಪೀಠವು ವಿಶೇಷವಾದುದು ಎಂದು ಹೇಳಿದರು ಮತ್ತು ಎನ್.ಎಸ್. ರಂಗರಾಜು. ಶೆಲ್ವಪಿಳ್ಳೈ ಅಯ್ಯಂಗಾರ್‌ರವರು ಈ ಶಿಲ್ಪವನ್ನು ವಿಶಿಷ್ಟವಾದ ಶಿಲ್ಪವೆಂದು ಅಭಿಪ್ರಾಯಪಡುತ್ತಾರೆ.

ಈ ಎಲ್ಲಾ ಕಾರಣಗಳಿಂದ ಈ ಶಿಲ್ಪವನ್ನು ಶಿವನ ವಿಶಿಷ್ಟ ರೂಪಕ್ಕೆ ಸೇರಿಸಬಹುದು ಅಥವಾ ವಿಶಿಷ್ಟ ಶಿಲ್ಪವೆಂದು ಹೇಳಬಹುದು.

ಆಧಾರಸೂಚಿ

೧. ಸೂರ್ಯನಾಥ ಯು. ಕಾಮತ್, ಮೈಸೂರು ಜಿಲ್ಲಾ ಗ್ಯಾಸೆಟಿಯರ್, ೧೯೮೮.

೨. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೩ ಮತ್ತು ೪, ಕನ್ನಡ ವಿಷಯ ವಿಶ್ವಕೋಶ.

೩. ಇತಿಹಾಸ ಮತ್ತು ಪುರಾತತ್ವ, ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ೨೦೦೮.

೪. ರಾಮಚಂದ್ರರಾವ್. ಎಸ್.ಕೆ., ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ೧೯೮೫.

೫. ಮೈಸೂರು ನಾಗರಾಜ ಶರ್ಮ, ಹೊಯ್ಸಳ ಶಿಲ್ಪದಲ್ಲಿ ಶಿವ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೨೦೧೦.

೬. Soundara Rajan. K.V.- Glimpses of Indian Culture Architecture and Religion, Sundeep Prakashan, Delhi, 1981.

೭. Gopinatha Rao. T.A, Elements of Hindu Iconography. Volume-two part-1, Motilal Banarsidass publishers, Delhi,1993, p. 273-291.

೮. Mysore Archaeological Report-1937, 1945, 46.

೯. Sarma. I.K, The Temples of ganga of Karnataka, Delhi, 1992.

೧೦. Encyclopedia of Indian Temple Architecture South India (Upper Dravida Desa, Early Phase) Vol-1 Part II, Michal W. Master and Dhakky N.A, Delhi, 1986.

೩೮

ದೇವಗಿರಿ ನವಶೋಧಿತ ಜೈನ ವಿಗ್ರಹಗಳು

ಡಾ. ಎಸ್.ಕೆ. ಮೇಲಕಾರ*

ಹಾವೇರಿ ಜಿಲ್ಲೆಯ ಹಾವೇರಿ ತಾಲೂಕಿನ ದೇವಗಿರಿಯು ಹಾವೇರಿಯಿಂದ ೧೧ ಕಿ.ಮೀ. ದೂರದಲ್ಲಿರುವ ಗ್ರಾಮ. ಪ್ರಾಚೀನ ಶಾಸನಗಳಲ್ಲಿ ದೇವಿಂಗೆರೆ, ದೇವಗಿರಿ ಎಂದು ಉಲ್ಲೇಖಗೊಂಡಿದೆ. ಕದಂಬರ ಶಾಖೆಯೊಂದು ಇಲ್ಲಿಂದಲೇ ಆಳುತ್ತಿತ್ತೆಂದೂ, ದೇವಗಿರಿಯು ಕದಂಬರ ಕಾಲದಲ್ಲಿ ತ್ರಿಪರ್ವತವೆಂದೇ ಕರೆಯಲ್ಪಡುತ್ತಿತ್ತೆಂಬ ಅಭಿಪ್ರಾಯವಿದೆ. ಬನವಾಸಿ ಕದಂಬರ ಕಾಲದ ಮೂರು ತಾಮ್ರಶಾಸನ ಪಟಗಳು ದೇವಗಿರಿಯಲ್ಲಿಯೇ ಲಭಿಸಿರುವುದು ಈ ಗ್ರಾಮದ ಚರಿತ್ರೆ ರಚನೆಗೆ ಮಹತ್ವದ ದಾಖಲೆಯಾಗಿದೆ. ಅವುಗಳಲ್ಲಿ ಎರಡು ವಿಜಯಶ್ರೀ ಮೃಗೇಶವರ್ಮ (ಕ್ರಿ.ಶ. ೪೫೫) ಕಾಲದ್ದಾಗಿವೆ. ಇವು ಜಿನ ಶಾಸನಗಳಾಗಿರುವುದು ವಿಶೇಷವಾಗಿದೆ. ಇದರಲ್ಲಿ ಒಂದು ದೇವವರ್ಮನು ಪರ್ವತದ ಅರ್ಹತ್ಭಗವಂತ ಚೈತಾಲಯದ ಪೂಜೆ ದುರಸ್ತಿಗೆಂದು ಯುವರಾಜನು ಭೂಮಿಯನ್ನು ಕೊಟ್ಟಿದ್ದನ್ನು ತಿಳಿಸುತ್ತದೆ. ಮೃಗೇಶವರ್ಮನು ಬೃಹತ್ ಪೆರಲೂರ ಅರ್ಹತ (ಜಿನೇಂದ್ರ)ಗೆ ಭೂದಾನ ಮಾಡಿದ್ದನ್ನು ಇನ್ನೊಂದು ಶಾಸನ ತಿಳಿಸುತ್ತದೆ.

ಶಾಸನೋಕ್ತ ಕಾಳವಂಗ ಗ್ರಾಮವನ್ನು ಮೂರು ಭಾಗ ಮಾಡಿ ಜಿನೇಂದ್ರ, ಶ್ವೇತ ಪಂಥ ಮತ್ತು ನಿಗ್ರಂಥಿಗಳಿಗೆ ದಾನ ಕೊಟ್ಟ ಅಂಶವನ್ನು ಮೂರನೆಯ ತಾಮ್ರಪಟ ಶಾಸನ ತಿಳಿಸುತ್ತದೆ. ಕ್ರಿ.ಶ. ಒಂಬತ್ತನೇ ಶತಮಾನದ ರಾಷ್ಟ್ರಕೂಟರ ಶಿಲಾಶಾಸನವೊಂದು ಗೋವಿಂದಭಟ್ಟನು ಪೆರಲೂರನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಕದಂಬ ಶಾಸನದ ಬೃಹತ್ ಪುರದಮ್ಮನಕ್ಕು ಇರುವ ಸ್ಥಳದಲ್ಲಿ ಪಾರ್ಶ್ವನಾಥನ ಮುಕ್ಕಾದ ಮೂರ್ತಿಯಿದೆ. ಅದೇ ರೀತಿ ಊರಲ್ಲಿರುವ ಮಸೀದಿಯ ಹಿಂಬದಿಯಲ್ಲಿ ಹಾಗೂ ಖಾಸಗಿ ಹೊಲದಲ್ಲಿ ಮುಕ್ಕಾದ ಪದ್ಮಾಸೀನ ತೀರ್ಥಂಕರ ಮೂರ್ತಿಗಳಿವೆ. ಆದರೆ ಜೈನಬಸಿದಿಗಳು ಮಾತ್ರ ಉಳಿದಿರುವುದಿಲ್ಲ.

ಇತ್ತೀಚೆಗೆ ದೇವಗಿರಿ ಗ್ರಾಮದಲ್ಲಿ ಶ್ರೀ ಶಂಭಣ್ಣ ಭರಮಪ್ಪಾ ಸಂಗೂರ ಇವರ ಮನೆಯ ಪಾಯಾ (ಬುನಾದಿ) ತೆಗೆಯುವಾಗ ಎರಡು ಜೈನ ವಿಗ್ರಹಗಳು ಪತ್ತೆಯಾಗಿವೆ. ಆ ಮೂರ್ತಿಗಳು ಜೈನ ತೀರ್ಥಂಕರಗಳಾಗಿವೆ. ಒಂದು ದೊಡ್ಡ ಮೂರ್ತಿಯಾಗಿದ್ದು ಅದರ ಎತ್ತರ ೧೦೬ ಸೆಂ.ಮೀ. ಉದ್ದ ಅಗಲ ೬೪ ಸೆಂ.ಮೀ. ಇದ್ದಿರುತ್ತದೆ. ಈ ವಿಗ್ರಹದ ತೋರಣದ ಮೇಲಿನ ಭಾಗ ಮುರಿದು ಹೋಗಿದೆ. ಮುಖದ ಮೂಗು ಕಣ್ಣುಗಳನ್ನು ಹಾಗೂ ಕಿವಿಗಳನ್ನು ಪೂರ್ಣವಾಗಿ ಕೆತ್ತಿದಂತೆ ಕಾಣುವುದಿಲ್ಲ. ಸಮ ಭಂಗಿಯಲ್ಲಿ ಬೆತ್ತಲೆಯಲ್ಲಿ ನಿಂತ ಈತನನ್ನು ಸ್ಥಂಭಗಳ ಮಖರ ತೋರಣದ ಮಧ್ಯ ಖಂಡರಿಸಲಾಗಿದೆ. ಈ ಜಿನ ಬಿಂಬದ ಬದಿಗಳಲ್ಲಿ ಯಕ್ಷ-ಯಕ್ಷಿಣಿಯರನ್ನು ತೋರಿಸಲಾಗಿದೆ. ಸ್ಥಂಭಗಳ ಮೇಲೆ ನಿಂತ ಮಖರಗಳು ತಮ್ಮ ಬಾಯಿಂದ ತೋರಣ ಪಟ್ಟಿಗಳ ಅಲಂಕರಣಗಳಿವೆ. ಅದರ ಪೀಠವು ಅರ್ಧವೃತ್ತಾಕಾರದಲ್ಲಿದೆ.

ಮತ್ತೊಂದು ವಿಗ್ರಹವು ಕಿರಿದಾಗಿದೆ ಮತ್ತು ಪೂರ್ಣವಾಗಿ ಕೆತ್ತಲಾಗಿದೆ. ಕಾಲಿನ ಬೆರಳುಗಳು ಶೀತಲವಾಗಿವೆ. ಇಲ್ಲಿಯೂ ತೀರ್ಥಂಕರನ ಸ್ಥಂಭ, ಮುಖತೋರಣ, ಯಕ್ಷ-ಯಕ್ಷಿಣಿಯರು ದೊಡ್ಡ ತೀರ್ಥಂಕರ ಮೂರ್ತಿಯ ರಚನೆಯಂತಿದೆ. ತಲೆಯ ಮೇಲೆ ಮುಕ್ಕೊಡೆಯಿದೆ. ತಲೆಯ ಹಿಂಬದಿಯಲ್ಲಿ ವೃತ್ತಾಕಾರ ಪ್ರಭಾವಳಿ ಇದೆ. ಮಖರ ತೋರಣ ಬುಡದಲ್ಲಿ ಎದೆಯ ಬದಿಗಳಲ್ಲಿ ಕಾಲಗಳ ಬದಿಗಳಲ್ಲಿ ಮತ್ತು ಮಧ್ಯ ರಂಧ್ರಗಳಿವೆ. ಎದೆಯ ಮೇಲಿನ ಕುಚಭಾಗದ ತುಂಬುಗಳು ಹಾಗೂ ಹಣೆಯ ಮೇಲಿನ ಕೂದಲನ್ನು ಸ್ವಲ್ಪ ಕಿರು (ಅರ್ಧ) ವೃತ್ತದಲ್ಲಿ ಕೊರೆದು ಮಾಡಿರುವುದು ವಿಶೇಷವೆನಿಸಿವೆ ಹಾಗೂ ಹಣೆಯ ಉಂಗುರು ಗೂದಲಿನ ಅಲಂಕಾರ ಕಂಡುಬರುವುದಿಲ್ಲ. ಈ ಸಣ್ಣ ಜಿನ ಮೂರ್ತಿಯ ಎತ್ತರ ೭೩ ಸೆಂ.ಮೀ. ಇದ್ದು ಅಗಲ ೪೦ ಸೆಂ.ಮೀ. ಇರುತ್ತದೆ.

ಪ್ರಸ್ತುತ ಎರಡು ಮೂರ್ತಿಗಳು ೯೦ ಸೆಂ.ಮೀ. ಕೆಳಗಡೆ ನೆಲದಲ್ಲಿ ಪತ್ತೆಯಾಗಿವೆ. ಈ ಮೂರ್ತಿಗಳು ಇದ್ದ ಸ್ಥಳ ಕೆಂಪು ಹರಳ ಮಿಶ್ರಿತ ಮಣ್ಣನ್ನು ಬಳಸಿ ನೆಲವನ್ನು ನಿರ್ಮಿಸಿ ಇಟ್ಟ ಕುರುಹುಗಳಾಗಿವೆ. ಆ ನೆಲದ ಮೇಲೆ ೧೦ ಸೆಂ.ಮೀ. ಎತ್ತರದವರೆಗೆ ಸೋಸುಕರಿ ಮಣ್ಣನ್ನು ಹರಡಿ ಅದರ ಮೇಲೆ ದೊಡ್ಡ ಜಿನಮೂರ್ತಿಯನ್ನು ಮುಖ ಕೆಳಗಡೆ ಮಾಡಿ ಪೂರ್ವ

* ಕನ್ನಡ ಸಂಶೋಧನಾ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ



ಪಶ್ಚಿಮವಾಗಿ ಮಲಗಿಸಲಾಗಿತ್ತು. ಇನ್ನೊಂದು ಮೂರ್ತಿಯನ್ನು ಒಂದು ಮೀಟರ್ ಪೂರ್ವಕ್ಕೆ ಉತ್ತರ ದಕ್ಷಿಣವಾಗಿ ಮುಖವನ್ನು ಕೆಳಗಡೆ ಮಾಡಿ ಮಲಗಿಸಲಾಗಿತ್ತು. ಎರಡನೆಯ ಮೂರ್ತಿಯ ಬುಡದಲ್ಲಿ ನೆಲವನ್ನು ಗಾರೆ ಮತ್ತು ಕಲ್ಲಿನಿಂದ ನಿರ್ಮಿಸಲಾಗಿದೆ. ಎರಡು ನೆಲೆಗಳು ಒಂದೇ ಸಮತಟ್ಟಾ



ಗಿದ್ದರೂ ಹಾಕು ಮಣ್ಣಿನ ಲಕ್ಷಣ ಮಾತ್ರ ಭಿನ್ನವಾಗಿರುವುದು ಎದ್ದು ಕಾಣುತ್ತದೆ. ಈ ಓನ್ನೆಲೆಯಲ್ಲಿ ದೊಡ್ಡ ಜಿನವಿಗ್ರಹವು ಬಹುತೇಕ ಅಪೂರ್ಣಗೊಂಡಿದ್ದರಿಂದ ಹಾಗೂ ತೋರಣ ಭಾಗ ಮುರಿದಿದ್ದರಿಂದ ಅದನ್ನು ನೆಲದಲ್ಲಿ ಮಲಗಿಸಲಾಗಿದೆ.



ಸಣ್ಣ ಜಿನ ಮೂರ್ತಿ ಕಿರಿದಾಗಿದ್ದು ಅದರ ಕಾಲಿನ ಬೆರಳುಗಳು ಶಿಥಿಲವಾಗಿದ್ದರಿಂದ ಅದನ್ನು ಸಹ ಅದರ ಹತ್ತಿರ ಮಣ್ಣಲ್ಲಿ ಮಲಗಿಸಿ ಮುಚ್ಚಿದಂತಿದೆ. ಈ ಎರಡು ಮೂರ್ತಿಗಳ ಕಲಾ ಲಕ್ಷಣಗಳನ್ನು ಗಮನಿಸಲಾಗಿ ಇವುಗಳ ಕಾಲಮಾನವು ಸುಮಾರು ಕ್ರಿ.ಶ. ೧೨ನೇ ಶತಮಾನವೆಂದು ಗುರುತಿಸಲಾಗಿದೆ.

[ಈ ಮೂರ್ತಿ ಶಿಲ್ಪಗಳ ಅಧ್ಯಯನದಲ್ಲಿ ನಮ್ಮೊಂದಿಗೆ ಆಗಮಿಸಿ ಈ ಜಿನ ಮೂರ್ತಿಗಳ ಬಗ್ಗೆ ವಿವರಣೆ ಮಾಡಿದ ನನ್ನ ಗುರುಗಳಾದ ಡಾ. ಆರ್.ಎಂ. ಷಡಕ್ಷರಯ್ಯನವರಿಗೂ ಸ್ನೇಹಿತರಾದ ಡಾ. ಎಸ್.ಜಿ. ಚಲವಾದಿಯವರಿಗೂ ಹಾಗೂ ನನ್ನ ಅಧೀನದಲ್ಲಿ ಪಿಎಚ್.ಡಿ ಮಾಡುತ್ತಿರುವ ಸಂಶೋಧನಾ ವಿದ್ಯಾರ್ಥಿ ಭರಮಪ್ಪ ಭಾವಿ ಇವರಿಗೂ ಹಾಗೂ ಆ ಗ್ರಾಮದ ಜೈನ ಸಮಾಜದ ಬಂಧುಗಳಿಗೂ ಮತ್ತು ಮಾಧ್ಯಮದಲ್ಲಿ ಪ್ರಕಟಿಸಿದ ಸಂಶೋಧಕರ ಗಮನ ಸೆಳೆದ ಪತ್ರಿಕಾಬಂಧುಗಳಿಗೂ ಅನಂತ ಕೃತಜ್ಞತೆಗಳು.]

ಆಧಾರಸೂಚಿ

೧. ಸೂರ್ಯನಾಥ ಯು. ಕಾಮತ್, ೧೯೯೫, ಧಾರವಾಡ ಜಿಲ್ಲೆ ಪರಿಷ್ಕೃತ ಗ್ಯಾಸೆಟಿಯರ್, ಕ.ರಾ. ಗಾಸೆಟಿಯರ್ ಇಲಾಖೆ, ಬೆಂಗಳೂರು.

೨. ಡಾ. ಎಂ.ಎಂ. ಕಲಬುರ್ಗಿ ಧಾರವಾಡ ಜಿಲ್ಲೆಯ ಶಾಸನ ಸೂಚಿ, ಕ.ವಿ.ವಿ. ಧಾರವಾಡ.

೩. ಡಾ. ಆರ್. ಗೋಪಾಲ, ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು.

೫೯

ಹಂಪೆಯ ಕೃಷ್ಣದೇವಾಲಯದಲ್ಲಿರುವ ಅಪರೂಪದ ನೃತ್ಯ ಭೈರವಿ ಶಿಲ್ಪ

ಪದ್ಮಜಾ ದೇಸಾಯಿ*

ಪ್ರಸ್ತುತ ಪ್ರಬಂಧದ ಶೀರ್ಷಿಕೆಯು "ಹಂಪೆಯ ಕೃಷ್ಣ ದೇವಾಲಯದಲ್ಲಿರುವ ಅಪರೂಪದ ನೃತ್ಯ ಭೈರವಿ ಶಿಲ್ಪ" ಎಂಬುದಾಗಿದ್ದು ಈ ಶಿಲ್ಪವು ಶಾಕ್ತಾಗಮಗಳ ಹಿನ್ನೆಲೆಯಲ್ಲಿ ರಚನೆಯಾಗಿದೆಯೋ ಅಥವಾ ಆಗಮಗಳನ್ನು ಹೊರತುಪಡಿಸಿ ರಚನೆಯಾಗಿದೆಯೋ ಎಂಬುದನ್ನು ಈ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಗುರುತಿಸುವುದು ಮತ್ತು ಭರತನ ನಾಟ್ಯಶಾಸ್ತ್ರದಲ್ಲಿರುವ ಯಾವ ಕರಣಗಳನ್ನು ಬಳಸಿ ಈ ಶಿಲ್ಪವನ್ನು ಕೆತ್ತಿದ್ದಾನೆ ಎಂಬುದನ್ನು ಚರ್ಚಿಸುವುದು ಈ ಲೇಖನದ ಉದ್ದೇಶವಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಶಾಕ್ತದೇವತೆಗಳ ಆರಾಧನೆಯು ಸಾಮ್ರಾಜ್ಯದ ಆರಂಭ ಕಾಲದಿಂದ ಇತ್ತು ಎಂಬುದಕ್ಕೆ ಇಲ್ಲಿರುವ ಶಾಕ್ತ ದೇವಾಲಯಗಳೇ ಸಾಕ್ಷಿ ವಿಜಯನಗರದಲ್ಲಿ ಶೈವ ಮತ್ತು ಶಾಕ್ತ ಪಂಥಗಳು ಪ್ರಬಲತೆಯನ್ನು ಪಡೆದಿದ್ದವು. ಭೈರವನ ಆರಾಧನೆಯ ಜೊತೆಗೆ ಅವನ ಪತ್ನಿಯಾದ ಭೈರವಿಯ ಶಿಲ್ಪಗಳು ಹಂಪೆಯ ದೇವಾಲಯಗಳಲ್ಲಿ ಮತ್ತು ಕಂಭಗಳಲ್ಲಿ ಹೆಬ್ಬಂಡೆಯ ಮೇಲೆ ಕೆತ್ತಿರುವುದನ್ನು ಕಾಣುತ್ತೇವೆ.

ನೃತ್ಯ ಭೈರವಿ ಶಿಲ್ಪವು ಕೃಷ್ಣದೇವಾಲಯದ ಮಹಾ ಮಂಟಪದಲ್ಲಿರುವ ೩೬ ಕಂಭಗಳಲ್ಲಿ ೩೫ನೇ ಕಂಭದ ಕೆಳಭಾಗದಲ್ಲಿ ಪಶ್ಚಿಮಾಭಿಮುಖವಾಗಿರುವ ಈ ಉಬ್ಬುಶಿಲ್ಪವು ನೃತ್ಯ ಭಂಗಿಯಲ್ಲಿದೆ. ಈ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಗಮನಿಸಿದಾಗ, ಈ ಭೈರವಿ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು, ಕ್ರಮವಾಗಿ ಬಲಭಾಗದ ಎರಡು ಕೈಗಳು ಮತ್ತು ಎಡಭಾಗದಲ್ಲಿ ಎರಡು ಕೈಗಳು ಇವೆ. ಈ ದೇವಿ ಶಿಲ್ಪವು ವಿಶೇಷವಾದ ಆಯುಧಗಳನ್ನು ಹೊಂದಿ ನೃತ್ಯ ಭಂಗಿಯಲ್ಲಿದೆ.

ದೇವಿ ಶಿಲ್ಪದ ಆಯುಧಗಳ ವಿವರ ಈ ಕೆಳಗಿನಂತಿದೆ.

ಮೇಲಿನ ಬಲಗೈಯಲ್ಲಿ – ತ್ರಿಶೂಲ (ಅಧೋಮುಖವಾಗಿದೆ.) ಕೆಳಗಿನ ಬಲಗೈ – ಡೋಲಹಸ್ತವಾಗಿದೆ (ನೃತ್ಯಭಂಗಿಯಲ್ಲಿರುವ ಹಸ್ತಮುದ್ರೆ) ಮೇಲಿನ ಎಡಗೈಯಲ್ಲಿ – ಕಪಾಲವಿದೆ. ಕೆಳಗಿನ ಎಡಗೈಯು – ಡೋಲಹಸ್ತವಾಗಿದೆ. (ಕೆಳಗಿನ ಬಲಗೈ ಇರುವಂತೆ)

ದೇವಿಯ ಮೇಲಿನ ಎಡ ಬಲ ಎರಡು ಕೈಗಳಲ್ಲಿ ಆಯುಧಗಳು ಮತ್ತು ಕೆಳಗಿನ ಎಡ ಬಲ ಎರಡು ಕೈಗಳು ನೃತ್ಯ ಭಂಗಿಯಲ್ಲಿರುವ ಹಸ್ತಮುದ್ರೆಗಳನ್ನು ಶಿಲ್ಪಿಯು ನೃತ್ಯದ ಚಲನೆಯನ್ನು ಕೈಗಳಲ್ಲಿ ತೋರಿಸಿರುವುದು ಗಮನಾರ್ಹ.

ವಸ್ತ್ರ ಮತ್ತು ಆಭರಣಗಳು

ಈ ಭೈರವಿ ಶಿಲ್ಪವು ಧರಿಸಿರುವ ವಸ್ತ್ರ ಮತ್ತು ಆಭರಣಗಳು ವಿಶೇಷವಾಗಿವೆ. ದೇವಿಯ ತಲೆಯ ಮೇಲೆ ಜಟಾಮಕುಟ ಧರಿಸಿದ್ದಾಳೆ. ಆ ಕಿರೀಟದ ಸುತ್ತಲೂ ಜ್ವಾಲೆಯ ವೃತ್ತವಿದೆ. (ಅಗ್ನಿಕೇಶ) ಹಣೆಯ ಮೇಲೆ ಹಣೆಕಟ್ಟು ಇದೆ. ಕಿವಿಗಳಲ್ಲಿ ವೃತ್ತ ಕುಂಡಲಗಳಿವೆ. ಕೊರಳಲ್ಲಿ ಕಂಠಹಾರಗಳಿವೆ. ವಿಶೇಷವಾದ ಆರೋಪ್ಯಮಾಲಾವನ್ನು ಧರಿಸಿದ್ದಾಳೆ. ಈ ಹಾರವು ದೇವಿಯ ಎಡಭಾಗದ ಭುಜದಿಂದ ಎರಡು ಸ್ತನಗಳ ಪಕ್ಕದಿಂದ ಹಾಯ್ದು ಮೊಣಕಾಲಿನವರೆಗೆ ಇದೆ. ದೇವಿಯ ನಾಲ್ಕು ಕೈಗಳಲ್ಲಿ ಕಡಗಳು, ಕೇಯೂರ, ಭುಜಬಂಧ, ಕಾಲುಗಡಗಳು ಇವೆ. ದೇವಿಯ ಕಟಿಭಾಗವು ತೆಳುವಾಗಿದ್ದು, ಸೀರೆಯು ಕಟಿಭಾಗದಿಂದ ಮೊಣಕಾಲಿನ ಕೆಳಭಾಗದವರೆಗೆ ಇದೆ. ಸೀರೆಯ ಅಲಂಕೃತ ನೆರಿಗೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಈ ದೇವಿಯ ಮುಖದ ಹಾವಭಾವವು ರೌದ್ರತೆಯನ್ನು ಪ್ರತಿಬಿಂಬಿಸುತ್ತದೆ. ಕಣ್ಣುಗಳು ಅಗಲವಾಗಿವೆ. ದೇವಿಯ ಸ್ತನಗಳು ಆಕರ್ಷಕವಾಗಿವೆ. ಇವುಗಳು ದೇವಿಯ ತಾರುಣ್ಯವನ್ನು ಸೂಚಿಸುತ್ತವೆ. ದೇವಿಯು ಎರಡು ಕಾಲುಗಳನ್ನು ಅಗಲಿಸಿದ ರೀತಿಯಲ್ಲಿವೆ. ಈ ರೀತಿಯ ಭಂಗಿಯು ಮಂಡಲ ಸ್ಥಾನವನ್ನು ಸೂಚಿಸುತ್ತದೆ. ಶಿಲ್ಪವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಶಿಲ್ಪದ ಬಲಗಾಲು ಸಂಪೂರ್ಣವಾಗಿ ನೆಲದ ಮೇಲಿದೆ. ಆದರೆ ಎಡಗಾಲು ಸ್ವಲ್ಪ ಎತ್ತಿದೆ. ಮುಂಗಾಲಿನ

* w/o [illegible]



ಮೇಲೆ ನೃತ್ಯವನ್ನು ಮಾಡುತ್ತಿರುವಂತೆ ಕೆತ್ತಲಾಗಿದೆ. **ಭರತನ ನಾಟ್ಯಶಾಸ್ತ್ರದಲ್ಲಿರುವ ೧೦೮ ಕರಣಗಳಲ್ಲಿ ಮದಸ್ಖಲಿತ ಕರಣ, ಈ ಕರಣದಲ್ಲಿ ದೇವಿಯ ಹಸ್ತಗಳು ಡೋಲಹಸ್ತಗಳಾಗಿರುತ್ತವೆ. ಮೇಲಿನ ಕೈಗಳು ನಿಕುಟ್ಟಕ ಕರಣವನ್ನು ಸೂಚಿಸುತ್ತವೆ. ಎರಡು ಕಾಲುಗಳನ್ನು ಅಗಲಿಸಿರುವುದು. ಕಟಿಚ್ಛಿನ್ನ ಕರಣವನ್ನು ಸೂಚಿಸುತ್ತದೆ.** ಈ ಮೂರು ಕರಣಗಳನ್ನು ಬಳಸಿ ಶಿಲ್ಪಿಯು ಈ ಭೈರವಿಯ ಉಬ್ಬುಶಿಲ್ಪವನ್ನು ಕೆತ್ತಿದ್ದಾನೆ.

ಪ್ರತಿಮಾ ಶಾಸ್ತ್ರದ ವಿವರಗಳು

ಶಿವನ ಶಕ್ತಿಯು ಉಗ್ರರೂಪವೇ ಭೈರವಿ. ಈ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಕೆಲವು ಶೈವಾಗಮಗಳು ವಿವರಿಸುತ್ತವೆ. ಶೈವಾಗಮವಾದ **ಸುಪ್ರಭೇದಾಗಮವು** ದೇವಿಯ ಶಿಲ್ಪವು ದೊಡ್ಡ ಸ್ತನಗಳನ್ನು ಹೊಂದಿರಬೇಕು ಮತ್ತು ಅವು ಪ್ರಮಾಣ ಬದ್ಧವಾಗಿರಬೇಕು ಎಂದು ತಿಳಿಸುತ್ತದೆ. ಕೊರಳಲ್ಲಿ ಆಭರಣ ಗಳಿರಬೇಕು. ಶಿಲ್ಪವು ನಿಂತಭಂಗಿಯಲ್ಲಿರಬೇಕು. ದೇವಿಯ ಶಿಲ್ಪವು ಎರಡೇ ಕೈಗಳನ್ನು ಹೊಂದಿರಬೇಕು ಎಂದು ತಿಳಿಸುತ್ತದೆ. **ಪೂರ್ವಕಾರಣಾಗಮವು** ದೇವಿ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ವಿವರಿಸುತ್ತದೆ. ಅಂದರೆ ದೇವಿಯ ವಿವಿಧ ಆಯುಧಗಳನ್ನು ಹಿಡಿದು ದೇವಿಯ ಬೇರೆ ಬೇರೆ ರೂಪವನ್ನು ಹೊಂದುತ್ತಾಳೆ ಎಂದು ತಿಳಿಸುತ್ತದೆ. **ಉತ್ತರಕಾಮಿಕಾಗಮವು** ಸಾಮಾನ್ಯ ರೂಪವಾದ ದೇವಿಯು ಶಿವನ ಪತ್ನಿಯಾಗಿರುತ್ತಾಳೆ ಎಂದು ವಿವರಿಸುತ್ತದೆ.[೩]

ಪುರುಷ ದೇವತೆಗಳು ಹಿಡಿದಿರುವ ಆಯುಧಗಳನ್ನು ಅವರ ಪತ್ನಿಯರು ಅದೇ ವಿನ್ಯಾಸದಲ್ಲಿರುವ ಆಯುಧಗಳನ್ನು ಶಿಲ್ಪಿಯು ಸ್ತ್ರೀದೇವತೆಗಳಿಗೂ ಶಿಲ್ಪಿಯು ಕೆತ್ತಿರುತ್ತಾನೆ. ಈ ರೀತಿಯ ಆಯುಧ ವಿನ್ಯಾಸಗಳಿಂದ ಯಾವುದೇ ಮೂರ್ತಿ ಶಿಲ್ಪವನ್ನು ಗುರುತಿಸುವುದು ಸುಲಭವಾಗುವುದು.[೪]

ಆದರೆ ಈ ನೃತ್ಯ ಭಂಗಿಯಲ್ಲಿರುವ ಭೈರವಿಯ ಶಿಲ್ಪವು ಆಗಮರಹಿತ ಶಿಲ್ಪವಾಗಿದೆ. ಶಿಲ್ಪಿಯು ಆಗಮಗಳ ನಿಯಮ ಗಳನ್ನು ಅನುಸರಿಸದೇ ಈ ಶಿಲ್ಪವನ್ನು ಕೆತ್ತಿದ್ದಾನೆ ಎಂಬುದು ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಸೂಕ್ಷ್ಮವಾಗಿ ವೀಕ್ಷಿಸಿದಾಗ ತಿಳಿದುಬರುತ್ತದೆ. ಆದರೆ ಶಿಲ್ಪಿಯು ಆಗಮಗಳ ಶಾಸ್ತ್ರಗಳ ಜ್ಞಾನಕ್ಕಿಂತ, ನಾಟ್ಯಶಾಸ್ತ್ರದ ನಿಯಮಗಳನ್ನು ಬಹುವಾಗಿ ಕರಗತ ಮಾಡಿಕೊಂಡು ಈ ಶಿಲ್ಪವನ್ನು ಕೆತ್ತಿದ್ದಾನೆ.[೫]

ಉಪಸಂಹಾರ

ಒಟ್ಟಾರೆಯಾಗಿ ವಿಜಯನಗರದ ಅರಸರು ಶಕ್ತಿ ದೇವತೆಯ ಆರಾಧನೆಗೆ ಪ್ರಾಮುಖ್ಯತೆಯನ್ನು ನೀಡಿದ್ದರು. ಆದ್ದರಿಂದ ಹಂಪಿ ಪರಿಸರದಲ್ಲಿ ಇಂದಿಗೂ ಶಕ್ತಿದೇವತೆಯರ ದೇವಾಲಯಗಳು, ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಸರ್ವ ಧರ್ಮ ಸಮನ್ವಯಕರಾದ ವಿಜಯನಗರದ ಅರಸರು ಸಾಮ್ರಾಜ್ಯದ ರಕ್ಷಣೆಯ ಜೊತೆಗೆ ಪ್ರಜೆಗಳನ್ನು ಭೀಕರ ಪರಿಸ್ಥಿತಿ ಗಳಿಂದ ರಕ್ಷಿಸಲು ಸಾಮ್ರಾಜ್ಯದಲ್ಲಿ ಶಕ್ತಿದೇವತೆಯರ ಆರಾಧನೆಯ ಅರಿವನ್ನು ಪ್ರಜೆಗಳಿಗೆ ಮೂಡಿಸಲು ದೇವಾಲಯ ಗಳಲ್ಲಿ ಹೆಬ್ಬಂಡೆಯ ಮೇಲೆ ಶಕ್ತಿದೇವತೆಯರ ಶಿಲ್ಪವನ್ನು ತಮ್ಮ ಕಲಾಚಾತುರ್ಯದಿಂದ ನೃತ್ಯದ ಜ್ಞಾನವನ್ನು ಕರಗತ ಮಾಡಿಕೊಂಡು ಇಂತಹ ಶಿಲ್ಪವನ್ನು ಕೆತ್ತಿರುವುದು ಪ್ರಶಂಸನೀಯ.

ಆಧಾರಸೂಚಿ

೧. ಶಿವರಾಮಮೂರ್ತಿ ಸಿ. ಶಿವ ಇನ್ ಆರ್ಟ್, ಥಾಟ್ಸ್ ಆ್ಯಂಡ್ ಲಿಟರೇಚರ್, ೪೧–೪೩

೨. ರಾಮಚಂದ್ರರಾವ್ ಎಸ್.ಕೆ. 'ಮೂರ್ತಿಶಿಲ್ಪದ ನೆಲೆ–ಹಿನ್ನೆಲೆ', ಪುಟ ೬೬–೬೭.

೩. ಗೋಪಿನಾಥರಾವ್ ಟಿ.ಎ. 'ಎಲಿಮೆಂಟ್ಸ್ ಆಫ್ ಹಿಂದೂ ಐಕೋನೋಗ್ರಫಿ'. ಸಂ. ೧. ಭಾಗ ೨. ಪುಟ ೩೬೬–೩೬೭.

೪. ಅರುಂಧತಿ ಬ್ಯಾನರ್ಜಿ, 'ಇಮೇಜಸ್, ಅಟ್ರಿಬ್ಯುಟ್ಸ್ ಅಂಡ್ ಮೋಟಿಫ್ಸ್'. ಪುಟ ೧೨೮–೧೩೦.

೫. ನಂದಗೋಪಾಲ ಚೂಡಾಮಣಿ 'ಶಿಲೆ–ಕಲೆ', ಪುಟ ೭೬–೭೮.

೨೦

ರಾಮಾಯಣದ ಕಥಾ ನಿರೂಪಣೆ ಉಬ್ಬು ಶಿಲ್ಪವಿರುವ ಶಾಸನೋಕ್ತ ಆಂಜನೇಯ ವಿಗ್ರಹ

ಡಾ. ಬಿ. ನಂಜುಂಡಸ್ವಾಮಿ*

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ಶಿರಾ ಸನಿಹದಲ್ಲೆ ಇರುವ ಮುದಿಗೆರೆ ಗ್ರಾಮದಲ್ಲಿ ದಕ್ಷಿಣಾಭಿಮುಖವಾಗಿ ಬೃಹತ್ ಆಂಜನೇಯನ ಶಾಸನವಿದ್ದು ಶಾಸನದಲ್ಲಿ ಸುಮಾರು ಮುನ್ನೂರ ಮೂವತ್ತೈದು ವರ್ಷಗಳ ಹಿಂದೆ ಆಂಜನೇಯನ ವಿಗ್ರಹ ಪ್ರತಿಷ್ಠೆ ಮಾಡಿಸಿದ ವಿವರ ತಿಳಿದು ಬರುತ್ತದೆ. ಈ ಆಂಜನೇಯನನ್ನು ಲಕ್ಕೆಯನಾಯಕ ಪ್ರತಿಷ್ಠೆ ಮಾಡಿಸಿದ್ದು ಶಾಸನದಿಂದ ಸ್ಪಷ್ಟವಾಗುತ್ತದೆ. ಇಡೀ ಭರತಖಂಡದಲ್ಲೇ ಅಪರೂಪ ಎನಿಸುವ ಬೃಹತ್ ಆಂಜನೇಯನನ್ನು ಕೆತ್ತಲು ಶಿಲ್ಪಿ ಮೊದಲು ಒಂದು ಕಿರಿದಾದ ಪ್ರತಿಕೃತಿಯನ್ನು ನಿರ್ಮಿಸಿಕೊಂಡಿದ್ದಾನೆ. ಆ ವಿಗ್ರಹವನ್ನು ಆಂಜನೇಯನ ಪಕ್ಕಕ್ಕೆ ಪ್ರತಿಷ್ಠೆ ಮಾಡಿದ್ದು ಇದು ಸಹ ಅದಕ್ಕೂ ಪೂಜೆಗೊಳ್ಳುತ್ತಾ, ಅಂದಿನ ದಿನ ಪೂಜೆ ಮಾಡುತ್ತಾ ಬಂದಿರುವ ಒಂದು ಗುಂಡುಕಲ್ಲು ಇದ್ದು ಅದಕ್ಕೆ ನಾಮವನ್ನು ಹಾಕಿ ಅದನ್ನು ಚೆನ್ನಕೇಶವ ಎಂದು ಪೂಜಿಸಲಾಗುತ್ತಿದೆ. ಆಂಜನೇಯನ ಅಭಿಮುಖವಾಗಿ ಗರುಡಕಂಬವಿದೆ. ಈ ಹಿಂದೆ ಆಂಜನೇಯನಿಗೆ ಪಾಳೇಗಾರ ಕಾಲದ ಒರಟುಕಲ್ಲಿನ ದೇವಾಲಯವಿದ್ದು, ಅದು ಬಹಳ ಶಿಥಿಲಗೊಂಡಿದ್ದರಿಂದ ಅದನ್ನು ತೆಗೆದು ೨೦೦೯ರಲ್ಲಿ ಹೊಸದಾಗಿ ನಿರ್ಮಾಣ ಮಾಡಿದ್ದಾರೆ. ಆಂಜನೇಯನ ವಿಗ್ರಹವು ಸುಮಾರು ಹದಿನೆಂಟು ಅಡಿ ಎತ್ತರವಿದ್ದು, ವಿಗ್ರಹವನ್ನು ಬಹಳ ಮಾಟವಾಗಿ ಪ್ರಮಾಣ ಬದ್ಧವಾಗಿ ನಿರ್ಮಾಣ ಮಾಡಲಾಗಿದೆ.

ಆಂಜನೇಯ ವೀರಭಂಗಿಯಲ್ಲಿ ನಿಂತಿದ್ದು ಪಾದದಿಂದ–ಶಿರೋಭಾಗದವರೆಗೆ ರಾಮಾಯಣದ ಪ್ರಮುಖ ಘಟನೆಗಳನ್ನು ಬಿಡಿಸಲಾಗಿದೆ. ಕಳೆದ ಮೂರು ಶತಮಾನದಿಂದ ಭಕ್ತಾದಿಗಳು ಎಳ್ಳೆಣ್ಣೆಯನ್ನು ಹಚ್ಚುತ್ತಾ ಬಂದಿರುವುದಲ್ಲದೆ ಅಭಿಷೇಕಕ್ಕೆ ಹಾಲು–ಮೊಸರು–ತುಪ್ಪ–ಜೇನುತುಪ್ಪ–ಬಾಳೆಹಣ್ಣನ್ನು ಯಥೇಚ್ಚವಾಗಿ ಬಳಸಿರುವುದರಿಂದ ಆಂಜನೇಯನ ವಿಗ್ರಹಕ್ಕೆ ಪದರ ಪದರವಾಗಿ ಅಂಟುಕೊಂಡು ಇರುವುದರಿಂದ ಈ ಹಿಂದೆ ಇದ್ದ ಸೂಕ್ಷ್ಮವಾದ ಕೆತ್ತನೆ ನವಿರಾದ ಮುಖಭಾವಗಳು ನಷ್ಟವಾಗಿ ಹೋಗಿದೆ. ಭಾರತದೇಶದ ಅಮೂಲ್ಯವಾದ ಕಾವ್ಯಗಳು ಅಂದರೆ ರಾಮಾಯಣ–ಮಹಾಭಾರತ ಗ್ರಂಥಗಳು, ಗ್ರಂಥೋಕ್ತ ರಾಮಾಯಣ ಇಲ್ಲಿ ಶಿಲ್ಪಮಯಾಗಿ ಆಂಜನೇಯನ ಬೃಹತ್ ವಿಗ್ರಹದಲ್ಲಿ ದರ್ಶನ ಮಾಡಿಸಲು ಶಿಲ್ಪಿ ಪ್ರಯತ್ನ ಪಟ್ಟಿದ್ದಾನೆ. ಅಧ್ಯಯನದ ಅನುಕೂಲಕ್ಕೋಸ್ಕರ ಆಂಜನೇಯನ ಪಾದದಿಂದ ಉಬ್ಬುಶಿಲ್ಪದ ವಿವರಣೆ ನೀಡಲಾಗಿದೆ.

ಆಂಜನೇಯನ ಎಡಪಾದದಲ್ಲಿ ರಾಕ್ಷಸನನ್ನು ಅದುಮಿ ಹಿಡಿದಿರುವುದು ಅವನ ಕೈಯಲ್ಲಿ ಕತ್ತಿ ಮತ್ತು ಗುರಾಣಿ ಇದೆ. ಎಡಪಾದದ ಮೇಲೆ ಶ್ರೀರಾಮಲಕ್ಷ್ಮಣರು ಬಿಲ್ಲು ಬಾಣ ಹಿಡಿದು ನಿಂತಿರುವ ಉಬ್ಬುಶಿಲ್ಪವಿದೆ. ಅದರ ಮೇಲೆ ಕಪಿಸೈನ್ಯ ಸೇತುಬಂಧ ಕಟ್ಟುತ್ತಿರುವ ಉಬ್ಬು ಶಿಲ್ಪ, ಹನುಮಂತನ ಎಡ ಮತ್ತು ಬಲಕಾಲುಗಳಿಗೆ ಕಾಲಂದಿಗೆ, ಕಾಲುಕಡತವನ್ನು ಮಾಟವಾಗಿ ಶಿಲ್ಪಿ ಬಿಡಿಸಿದ್ದಾನೆ. ಆಂಜನೇಯ ಧರಿಸಿರುವ ವೈಜಯಂತಿ ಮಾಲೆ ಮೊಣಕಾಲಿಗೆ ತಾಕುತ್ತಾ ಇದೆ.

ಆಂಜನೇಯನ ಬಲಪಾದದ ಹತ್ತಿರ ಅಶೋಕವನದಲ್ಲಿ ಸೀತೆಗೆ ಕಾವಲು ಇದ್ದ ರಾಕ್ಷಸಿಯರಿಗೆ ಆಂಜನೇಯ ಕಪಿಚೇಷ್ಟೆ ಮಾಡುತ್ತಾ ಇರುವುದು. ಬಲಪಾದದಲ್ಲಿ ಉಂಗುಷ್ಠದಿಂದ ರಾಕ್ಷಸನನ್ನು ಅದುಮಿ ಹಿಡಿದಿರುವುದು ಅವನ ಕೈಯಲ್ಲಿ ಕತ್ತಿ ಗುರಾಣಿ ಹಿಡಿದಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಸಂನ್ಯಾಸಿ ರೂಪದ ರಾವಣನಿಗೆ ಸೀತೆ ಭಿಕ್ಷೆ ಹಾಕುತ್ತಾ ಇರುವುದು. ನೀಳವಾದ ಕೇಶರಾಶಿ ಸೀತೆಯ ಇಮ್ಮಡಿಗೆ ತಗಲುತ್ತಾ ಇರುವುದು ಸೀತೆ ಭಿಕ್ಷೆಯನ್ನು ಅಗಲವಾದ ಹಿಡಿಯಲ್ಲಿ ಪಾತ್ರೆಯಿಂದ ಹಾಕುತ್ತಿರುವುದನ್ನು ಶಿಲ್ಪಿ ಕೆತ್ತಿದ್ದಾನೆ. ಭಿಕ್ಷೆ ಸ್ವೀಕರಿಸುವ ರಾವಣನಿಗೆ ಹತ್ತು ತಲೆ ಕಾಣುತ್ತಾ ಇದೆ. ರಾವಣ ಮತ್ತು ಜಟಾಯು ಯುದ್ಧ ಮಾಡುತ್ತಾ ಇರುವುದು ಪುಷ್ಪಕ ವಿಮಾನ ಕಾಣುತ್ತಾ ಇದೆ.

ಆಂಜನೇಯನ ಕಲಿಪ್ರದೇಶದಲ್ಲಿ ಎರಡು ಪ್ರಮುಖ ಉಬ್ಬು ಶಿಲ್ಪಗಳು ಇದ್ದು ಪರ್ಣಕುಟೀರದಲ್ಲಿ ಸೀತೆ ಶ್ರೀರಾಮನಿಗೆ ಫಲಹಾರ ನೀಡುತ್ತಾ ಇರುವುದು, ಬಿಲ್ಲು ಬಾಣ ಸಮೇತ ಸಜ್ಜಾಗಿ ಪಕ್ಕದಲ್ಲಿ ನಿಂತಿರುವ ಲಕ್ಷಣ ಅದರ ಕೆಳಗೆ ಮಾಯಾ ಚಿನ್ನದ ಜಿಂಕೆಯನ್ನು ಘಾಟಿಯಾಡುತ್ತಿರುವ ಶ್ರೀರಾಮನ ಉಬ್ಬು ಶಿಲ್ಪವನ್ನು ನೋಡಬಹುದು.

* [illegible] ಆಯುರ್ವೇದ ಚಿಕಿತ್ಸಾಲಯ, ಟೂಡಾ ಶಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು - [illegible]

ಆಂಜನೇಯನ ಬಲಭಾಗ ಮತ್ಸ್ಯದ ಮೇಲೆ ಕುಳಿತಿರುವ ಯೋಗಿ, ಅದರ ಮೇಲಿನ ಉಬ್ಬುಶಿಲ್ಪ ಶ್ರೀರಾಮಚಂದ್ರ ದಶಕಂಠ ರಾವಣನಿಗೆ ಬಾಣಪ್ರಯೋಗ ಮಾಡುತ್ತಾ ಇರುವುದು. ದಶಕಂಠ ರಾವಣನ ಗಂಟಲು ಹತ್ತಿರ ಶ್ರೀರಾಮ ಪ್ರಯೋಗಿಸಿದ ಬಾಣ ಅದರ ಕೆಳಗೆ ರಾವಣನ ಛತ್ರಿ ಮುರಿದು ಬಿದ್ದಿರುವುದು.

ಆಂಜನೇಯನ ಬಾಲಕ್ಕೆ ಅಲಂಕಾರಿಕೆಯಾಗಿ ಮೂರು ಗುಚ್ಛಗಳನ್ನು ಕಟ್ಟಲಾಗಿದೆ. ಆನೆ ಸೊಂಡಿಲಲ್ಲಿ ರಥವನ್ನು ಹಿಡಿದಿದೆ ಕೆನೆಯುತ್ತಿರುವ ಕುದುರೆ ಎರಡು ಕಾಲು ಮೇಲೆ ಎತ್ತಿದೆ ಧ್ವಜ ಹಿಡಿದಿರುವ ಯೋಧ ಕಾಲನ್ನು ಸ್ವಲ್ಪ ಎತ್ತರವಾದ ಕಟ್ಟೆಯ ಮೇಲೆ ಇಟ್ಟಿದ್ದಾನೆ.

ವಿಗ್ರಹದ ಶಿರೋಭಾಗದಲ್ಲಿ ಚಂದ್ರ ಸೂರ್ಯರ ಉಬ್ಬುಶಿಲ್ಪ ಶ್ರೀರಾಮ ರಾವಣ ಹತ್ಯೆ ಮಾಡಿದ್ದರಿಂದ ಬ್ರಹ್ಮಹತ್ಯೆ ದೋಷ ದಿಂದ ಮುಕ್ತವಾಗಲು ಶಿವಲಿಂಗ ಅದರ ಅಭಿಮುಖವಾಗಿ ವೃಷಭವನ್ನು ಪ್ರತಿಷ್ಠೆ ಮಾಡಿ ಪೂಜಿಸುತ್ತಿರುವುದು. ಶಿವಲಿಂಗವನ್ನು ತರಲು ಕೈಲಾಸಕ್ಕೆ ಹಾರುತ್ತಿರುವ ಹನುಮಂತ, ಆಂಜನೇಯನ ಎಡಕೈಯಲ್ಲಿ ಕದಳಿವೃಕ್ಷ ಅರ್ಥಾತ್ ಬಾಳೇಗಿಡ ಫಲಸಮೇತ ಇರುವಂತಹುದು ಹಿಡಿದಿದ್ದಾನೆ. ಗಿಡದ ಶಿರೋಭಾಗದಲ್ಲಿ ಹಂಸಪಕ್ಷಿ ಕುಳಿತಿದ್ದು ಬಾಯಲ್ಲಿ ಬಳ್ಳಿಯನ್ನು ತಿನ್ನುತ್ತಾ ಇದೆ. ಎಡಭಾಗದ ಭುಜದ ಪಕ್ಕದಲ್ಲಿ ಋಷಿಯ ಉಬ್ಬುಶಿಲ್ಪವಿದೆ. ಅಭಯಹಸ್ತ ಎಡಕೈಯಲ್ಲಿ ಓಲೆಗರಿಗ್ರಂಥವನ್ನು ಇಟ್ಟುಕೊಂಡ ರೀತಿ ಕಂಡುಬರುತ್ತದೆ. ಈ ವಿಗ್ರಹ ವಾಲ್ಮೀಕಿ ಯದು ರಾಮಾಯಣ ರಚಿಸಿದ್ದು ವಾಲ್ಮೀಕಿ.

ಶಿಖೆ ಹಾಗೂ ಬಲಗೈ ಮಧ್ಯಭಾಗದಲ್ಲಿ ಸೀತೆ ಮುಖಾಲಂಕಾರವನ್ನು ದರ್ಪಣದಿಂದ ವೀಕ್ಷಿಸುತ್ತಿರುವುದು. ಪಕ್ಕದಲ್ಲಿ ಶ್ರೀರಾಮ ಬಿಲ್ಲು ಬಾಣ ಸಮೇತ ನಿಂತಿದ್ದಾನೆ.

ಇದರ ಬಲಭಾಗ ಅಶೋಕವನದ ಕಲ್ಪನೆ ಬರುವಂತೆ ಬೃಹತ್ ವೃಕ್ಷವನ್ನು ಬಿಡಿಸಿದ್ದಾನೆ ಅದರ ಮೇಲೆ ಆಂಜನೇಯ ಕುಳಿತಿರುವಂತಹುದು, ಆ ವೃಕ್ಷದ ಕೆಳಗೆ ಕುಳಿತಿರುವ ಸೀತೆ ಆಂಜನೆಯನಿಗೆ ನೀಡುತ್ತಾ ಇರುವ ಚೂಡಾಮಣಿ ಈ ದೃಶ್ಯದಲ್ಲಿ ಆಂಜನೇಯ ಎಷ್ಟು ವಿನಯಮೂರ್ತಿಯಾಗಿ ಚೂಡಾಮಣಿಯನ್ನು ಪಡೆಯುತ್ತಾ ಇದ್ದಾನೆ ಎಂಬುದನ್ನು ಉಬ್ಬು ಶಿಲ್ಪವನ್ನು ನೋಡಿಯೆ ನಿರ್ಧರಿಸಬೇಕು. ಈ ಉಬ್ಬು ಶಿಲ್ಪದ ಪಕ್ಕ ಒಂದು ಚೌಕಾಕಾರದ ಚೌಕಟ್ಟಿನಲ್ಲಿ ಗಣಪತಿಯ ಉಬ್ಬು ಶಿಲ್ಪವನ್ನು ಕೆತ್ತಿದ್ದಾನೆ.

ಆಂಜನೇಯ ಶಿರೋಭಾಗದಲ್ಲಿ ಬೃಹತ್ ಶಿಖೆಯನ್ನು ಅದನ್ನು ಮಾಟವಾಗಿ ಕಟ್ಟಲಾಗಿದೆ. ಧರಿಸಿರುವ ಆಭರಣಗಳು, ಕರ್ಣಕುಂಡಲ, ಕೈಗೆ ಧರಿಸಿರುವ ತೋಳುಬಂಧಿ, ಕಾಲುಕಡಗ, ಕಾಲಂದಿಗೆ, ವೈಜಯಂತಿ ಮಾಲೆ, ಕಟಿವಸ್ತ್ರ, ಕೌಪೀನ ಧರಿಸಿದ್ದಾನೆ.

ಆಂಜನೇಯನ ಬೆನ್ನಿನ ಮೇಲೆ ಇರುವ ಏಳು ಸಾಲಿನ ಶಾಸನವನ್ನು ಮೊದಲು ಶಾಸನ ಪಾಠವನ್ನು ಓದಿದವರು ತುಮಕೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರಾದ ಡಾ. ರಾಜಪ್ಪ ದಳವಾಯಿ ಅವರು ಓದಿದ್ದರು. ಆ ಶಾಸನ ಪಾಠವನ್ನು ಮತ್ತಷ್ಟು ಪರಿಷ್ಕರಣೆ ಮಾಡಿಕೊಟ್ಟವರು ಡಾ. ಡಿ.ವಿ. ಪರಮಶಿವಮೂರ್ತಿ ಅವರು.

೧. ಶ್ರೀ ಸಿದ್ಧಾರ್ಥಿ ಸಂವಚರದ ಚೆಯಿತ್ರ ಶು

೨. ದ್ಧ ಪಾಡ್ಯ ಸೊ ಶ್ರೀಮನು ಮಹಾ ಪ್ರಧಾಬಂ ಚಂ

೩. ನೆಯ ದಣ್ಣಾಯಕರ ಮಗ ಚಂ

೪. ನಪನು । ಮುದುಗೆಜೆಿಯ ಚೆಂನಪ

೫. ನು . . ನವರಿಗೆ . . ನಾ

೬. ಯಕರ ಮಗ ಲಖ್ಪೆಯ ನಾಯಕ ಶ್ರೀಮತು ಹ

೭. ನುಮಂತ ದೇವರ ಪ್ರತಿಷ್ಟೆಗೆಯ್ದ ॥ ಮಂ[ಗಳ]

ಈ ಶಾಸನದ ಸಂಪೂರ್ಣ ವಿಶ್ಲೇಷಣೆಗೆ ಇನ್ನಷ್ಟು ಬೇರೆ ಶಾಸನಗಳ ಮಾಹಿತಿ ಬೇಕಾಗುತ್ತದೆ. ಈ ಶಾಸನದ ಕಾಲ ಮಾರ್ಚ್ ೩೧, ೧೬೭೯ ಸೋಮವಾರ. ಈ ಹನುಮಂತ ದೇವರ ಪ್ರತಿಷ್ಠೆ ಮಾಡಿಸಿದವನು ಲಖ್ಪೆಯ ನಾಯಕ. ಅಂದಿನ ದಿನ ಆಡಳಿತ ವರ್ಗದವರ ಕಲ್ಪನೆ ಮೂಸೆಯಲ್ಲಿ ನೋಡಿ ಬಂದ ಈ ಬೃಹತ್ ಆಂಜನೇಯನ ವಿಗ್ರಹವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಖಂಡಿತ ಇನ್ನು ಕೆಲವು ರಾಮಾಯಣದ ಕಥೆಗಳು ಕಂಡುಬರಬಹುದು. ಈ ನಿಟ್ಟಿನಲ್ಲಿ ಯುವ ವಿದ್ವಾಂಸರು ಪ್ರಯತ್ನ ಪಡಬೇಕು ೨೦೧೦ರಲ್ಲಿ ವಾರ್ಷಿಕ ಪೂಜೆಯ ದಿನ ಆಯುರ್ವೇದ ಚಿಕಿತ್ಸೆ ಕೊಡಲು ನನ್ನನ್ನು ಮುದಿಗೆರೆಗೆ ಬಿ.ಆರ್. ಉಮೇಶ, ಆಡಿಟರ್ ಎನ್. ವಿಶ್ವನಾಥ, ಬಿಡದಿಯ ರಾಜೀವ್ ಕರೆದು ಕೊಂಡು ಹೋದರು. ಅಭಿಷೇಕ ಸಮಯದಲ್ಲಿ ನಿರಾಭರಣ ನಾಗಿ ನಿಂತ ಆಂಜನೇಯನ ಉಬ್ಬು ಶಿಲ್ಪವನ್ನು ಗಮನಿಸಿ ದಂಗಾಗಿ ಹೋದೆ. ೧-೬-೨೦೧೪ ರಂದು ತುಮಕೂರಿ ನಿಂದ ಬಿ.ಆರ್. ಉಮೇಶ್, ಡಾ. ಟಿ.ಕೆ. ಗಂಗಾಧರ, ಡಾ. ಡಿ.ವಿ. ಪರಮಶಿವಮೂರ್ತಿ, ಫೋಟೋಗ್ರಾಫರ್ ಸತೀಶ್ ದೀಕ್ಷಿತ್ ಹೋಗಿ ಆಂಜನೇಯನ ವಿವಿಧ ಭಂಗಿ ಭಾವಚಿತ್ರ ಗಳನ್ನು ತೆಗೆದುಕೊಂಡು ಶಾಸನವನ್ನು ಮತ್ತೆ ಪರಿಶೀಲಿಸಿ ಸೂಕ್ತ ಪಾಠವನ್ನು ನೀಡಿದವರು ಶಾಸನತಜ್ಞರಾದ ಡಾ. ಡಿ.ವಿ. ಪರಮಶಿವಮೂರ್ತಿರವರು. ಮುದಿಗೆರೆ ಗ್ರಾಮದ ನಿವೃತ್ತ ಸರ್ಕಾರಿ ನೌಕರರಾದ ಎಂ. ಶ್ರೀನಿವಾಸ್, ಪ್ರಗತಿಪರ ರೈತ ಎಂ.ಎನ್. ಮುರುಳಿ, ಅರ್ಚಕರಾದ ಶ್ರೀನಿವಾಸ್‌ರವರ ಸಹಕಾರಕ್ಕೆ ಧನ್ಯವಾದಗಳು. ಶಿರಾದಿಂದ ಐದು ಕಿಲೋಮೀಟರ್ ದೂರದ ಪಶ್ಚಿಮ ದಿಕ್ಕಿನಲ್ಲಿ ಮುದಿಗೆರೆ ಗ್ರಾಮವಿದೆ.

೭೧

ಮರಸೂರು ಮಡಿವಾಳದ ಗಂಗರ ಅಪೂರ್ವ ಚಾಮುಂಡಾ ಶಿಲ್ಪ

ಡಿ. ಸ್ಮಿತಾರೆಡ್ಡಿ*

ಆನೇಕಲ್ ತಾಲೂಕಿನ ಮರಸೂರು ಮಡಿವಾಳ ಗ್ರಾಮ, ಬೆಂಗಳೂರು ನಗರದಿಂದ ಸುಮಾರು ೨೫ ಕಿಲೋ ಮೀಟರುಗಳ ಅಂತರದಲ್ಲಿದೆ. ಮರಸೂರು ಮಡಿವಾಳದ ಪಕ್ಕದಲ್ಲಿಯೇ ಚಿಂತಲ ಮಡಿವಾಳ, ಸಮಂದೂರು ಮಡಿವಾಳ, ಬೆಂಗಳೂರಿನ ಬಳಿಯಿರುವ ಮಡಿವಾಳಗಳಿಂದ ಈ ಗ್ರಾಮವನ್ನು ಭಿನ್ನೀಕರಿಸುವ ಸಲುವಾಗಿ ಪಕ್ಕದ ಮರಸೂರು ಗ್ರಾಮದ ಹೆಸರಿನೊಂದಿಗೆ ಸೇರಿಸಿ 'ಮರಸೂರು ಮಡಿವಾಳ'ವೆಂದು ಕರೆಯಲಾಗುತ್ತದೆ. ಈ ಪ್ರದೇಶ 'ಗಂಗವಾಡಿ ತೊಂಭತ್ತಾರುಸಾವಿರ' ಪ್ರದೇಶದಲ್ಲಿ ಅಂತರ್ಗತವಾಗಿದ್ದ 'ಮೊರಸುನಾಡಿ'ನ ಭಾಗವಾಗಿತ್ತು. ಈ ಗ್ರಾಮದಲ್ಲಿ ಗಂಗರ ಕಾಲದ ಒಂದು ವೀರಗಲ್ಲು ದೊರೆತಿದೆ. ಅಲ್ಲದೆ ಈ ಪ್ರದೇಶದ ವ್ಯಾಪ್ತಿಯಲ್ಲಿ ಗಂಗರ ಹಲವಾರು ಶಾಸನ, ವೀರಗಲ್ಲುಗಳು ಲಭ್ಯವಾಗಿವೆ. ಗಂಗ ಎರೆಯಪ್ಪರಸನ ಅಧಿಕಾರಿ ನಾಗತ್ತರನ ಆಳ್ವಿಕೆಗೆ ಒಳಪಟ್ಟಿದ್ದ ಬೆಂಪೂರು ಪನ್ನೆರಡರ ಗ್ರಾಮವಾಗಿದ್ದ ಇಗ್ಗಲೂರಿನಿಂದ ನಾಲ್ಕು ಕಿಲೋಮೀಟರು ದೂರದಲ್ಲಿರುವ ಈ ಗ್ರಾಮ ಗಂಗರ ಆಳ್ವಿಕೆಗೆ ನೇರವಾಗಿ ಒಳಪಟ್ಟಿತ್ತು. ನಾಗತ್ತರನ ಸುಮಾರು ೧೨ ಶಾಸನಗಳು ಈ ಪ್ರದೇಶಗಳಲ್ಲೆಲ್ಲ ದೊರೆಯುತ್ತವೆ. ಮರಸೂರು ಮಡಿವಾಳದಲ್ಲಿ ಒಂದು ದೇವಾಲಯವಿದ್ದು ಇದರ ಅಧಿಷ್ಠಾನದಲ್ಲಿ ಚೋಳರ ತಮಿಳು ಶಾಸನಗಳಿವೆ. ಈ ಗ್ರಾಮ ಗಂಗರ ಕಾಲದಿಂದಲೂ ಪ್ರಮುಖ ಕೇಂದ್ರವಾಗಿತ್ತು, ಚೋಳರು ಗಂಗವಾಡಿಯನ್ನು ಆಕ್ರಮಿಸಿದ ನಂತರ ಅವರೂ ಈ ಗ್ರಾಮದಲ್ಲಿ ದೇವಾಲಯ ಕಟ್ಟಿಸಿರಬಹುದು. ಆದರೆ ಈಗ ದೇವಾಲಯ ಸಂಪೂರ್ಣವಾಗಿ ನವೀಕರಣಗೊಂಡಿದ್ದು ಮೂಲ ಚಹರೆಗಳನ್ನೇ ಕಳೆದುಕೊಂಡಿದೆ.

ಮರಸೂರು ಮಡಿವಾಳದ ಗ್ರಾಮಸ್ಥರು ಇತ್ತೀಚೆಗೆ ಕೆರೆಯಲ್ಲಿದ್ದ ಚಾಮುಂಡಾ ಶಿಲ್ಪವನ್ನು ಹೊರತೆಗೆದಿರುತ್ತಾರೆ. ಸುಮಾರು ೪೦ ವರ್ಷಗಳ ಹಿಂದೆ ಈ ಶಿಲ್ಪ ಬಂಡಿ ಮಾಂಕಾಳಮ್ಮ ಎಂಬ ಹೆಸರಿನಿಂದ ಪೂಜೆಗೊಳ್ಳುತ್ತಿತ್ತು. ಗ್ರಾಮದಲ್ಲಿ ಕೆಲವು ಅಮಂಗಲಗಳು ಕಾಣಿಸಿಕೊಂಡವೆಂಬ ಕಾರಣದಿಂದ ಕೆರೆಗೆ ಹಾಕಲಾಗಿತ್ತು. ಇತ್ತೀಚೆಗೆ ಗ್ರಾಮಸ್ಥರು ಮತ್ತೆ ದೇವತೆಯನ್ನು ಪ್ರತಿಷ್ಠಾಪನೆ ಮಾಡಬೇಕೆಂದು ಕೆರೆಯಲ್ಲಿ ಹೂಳೆತ್ತಿ ಈ ಶಿಲ್ಪವನ್ನು ಹೊರತೆಗೆದಿರುತ್ತಾರೆ. ಇದು ಸಪ್ತ ಮಾತೃಕೆಯರಲ್ಲಿ ಒಬ್ಬಳಾದ ಚಾಮುಂಡಾ ಅಥವಾ ಚಾಮುಂಡಿ ಶಿಲ್ಪವಾಗಿದ್ದು, ಗಂಗರ ಕಾಲದಲ್ಲಿ ದೊರೆತ ಸಪ್ತ ಮಾತೃಕ ಶಿಲ್ಪಗಳಲ್ಲಿಯೇ ಅತ್ಯಂತ ವಿಭಿನ್ನವಾದ ಸುಂದರ ಶಿಲ್ಪವಾಗಿದೆ. ಗಂಗರ ಕೊನೆಯ ಅವಧಿಯಲ್ಲಿ ರಚಿತವಾಗಿದ್ದು, ಇದರ ಮೇಲೆ ನೊಳಂಬರ ಶಿಲ್ಪಕಲೆಯ ಪ್ರಭಾವ ನಿಚ್ಚಳವಾಗಿದೆ.

ಮರಸೂರು ಮಡಿವಾಳದ ಚಾಮುಂಡಾ ಶಿಲ್ಪವು ಅಷ್ಟ ಭುಜಧಾರಣಿಯಾಗಿದ್ದು ಬಲಗೈಗಳಲ್ಲಿ ತ್ರಿಶೂಲ, ಖಡ್ಗ, ಕತ್ತಿ, ಡಮರುಗಳನ್ನು ಎಡಗೈಗಳಲ್ಲಿ ಕಪಾಲ, ಗುರಾಣಿ, ಪಾಶ ಮತ್ತು ಸರ್ಪಗಳನ್ನು ಹಿಡಿದಿದ್ದಾಳೆ. ಎಡಭಾಗದಲ್ಲಿ ಒಂದು ಉದ್ದವಾದ ಧ್ವಜಪತಾಕೆಯಿದ್ದು ಆದರ ತುದಿಯಲ್ಲಿ ನರಿಯ ಲಾಂಛನವಿದೆ. ಪೂರ್ವಕರಣಾಗಮದ ಪ್ರಕಾರ ಹಾಗೂ ಇತರೆ ಪುರಾಣಗಳ ಪ್ರಕಾರ ಸಾಮಾನ್ಯವಾಗಿ ಹದ್ದು ಧ್ವಜ ಲಾಂಛನವಾಗಿರುತ್ತದೆ. ಆದರೆ ಇಲ್ಲಿ ನರಿ ಇರುವುದು ವಿಶಿಷ್ಟ

ಕಪಾಲ ಮುಕುಟ ಧರಿಸಿದ್ದಾಳೆ. ಜ್ವಾಲೆಗಳಂತೆ ಸುತ್ತಲೂ ನಿಮಿರಿ ನಿಂತಿರುವ ಊರ್ಧ್ವಕೇಶವಿದೆ. ಹುಬ್ಬು ತಿದ್ದಿ ತೀಡಿದಂತಿದ್ದು ಭ್ರೂಮಧ್ಯದಲ್ಲಿ ತ್ರಿನೇತ್ರವಿದೆ. ಇಕ್ಕೆಲಗಳಲ್ಲಿ ಎರಡು ಕೋರೆದಾಡೆಗಳನ್ನು ಜಡಿಸಲಾಗಿದೆ. ಆದರೂ ಮುಖದಲ್ಲಿ ಸೌಮ್ಯಭಾವವಿದೆ. ಕಿವಿಗಳಲ್ಲಿ, ಬಲಗಿವಿಯಲ್ಲಿ ವ್ಯಾಘ್ರಕುಂಡಲವಿದ್ದರೆ, ಬಲಗಿವಿಯಲ್ಲಿ ಅಪರೂಪದ ಪ್ರೇತಕುಂಡಲವಿದೆ. ಮೇಲ್ನೋಟಕ್ಕೆ ನವಜಾತಶಿಶು ಕೈಕಾಲುಗಳನ್ನು ಮಡಿಚಿಕೊಂಡು ಕೆಳಮುಖವಾಗಿ ಜೋತುಬಿದ್ದಂತೆ ಕಾಣುತ್ತದೆ. ಕಂಠದಲ್ಲಿ ಮಾವಿನ ಕಾಯಿ ಆಕಾರದ ಚ್ಯೂತಫಲಹಾರವಿದ್ದರೆ, ಕುತ್ತಿಗೆಗೆ ಹೊಂದಿಕೊಂಡಂತೆ ಒಂದು ಕಂಠಿ ಇದೆ. ಎದೆಯ ಭಾಗದಲ್ಲಿ

* [illegible]

ನಾಗಕುಚಬಂಧವಿದೆ. ಕಾಪಾಲ ಯಜ್ಞೋಪವೀತ ಅಥವಾ ಶಿರೋಮಾಲೋಪವೀತವನ್ನು ಧರಿಸಿದ್ದು ಮತ್ತೊಂದು ವಸ್ತ್ರದಂತಹ ಯಜ್ಞೋಪವೀತವೂ ಇದೆ. ಎರಡು ಭುಜಗಳಲ್ಲಿ ಪುಷ್ಪಕೇಯೂರವಿದೆ. ಎರಡೂ ಕೈಗಳಲ್ಲೂ ಸುಂದರವಾದ ಸಮನಾದ ೩-೩- ಕಂಕಣಗಳನ್ನು ಬಿಡಿಸಲಾಗಿದೆ. ಕಟುಬಂಧವಾಗಿ ಸುಂದರವಾದ ಮಣಿಮೇಖಲಾಗಳನ್ನು ಬಿಡಿಸಲಾಗಿದೆ.

ಕಾಲುಗಳಲ್ಲಿ ವಲಯಗಳೊಂದಿಗೆ ನೂಪುರುಗಳೂ ಇವೆ. ಉಟ್ಟಿರುವ ವಸ್ತ್ರವನ್ನು ಅತ್ಯಂತ ನಾಜೂಕಾಗಿ ಬಿಡಿಸಲಾಗಿದೆ. ಕಾಲ ಬಳಿ ಒಬ್ಬ ವ್ಯಕ್ತಿ ಬಿದ್ದಿದ್ದು ಅವನಿಗೆ ತ್ರಿಶೂಲ ನಾಟಿದೆ. ಶಿಲ್ಪದ ಬಲಭಾಗದಲ್ಲಿ ನರಿಯನ್ನು ಬಿಡಿಸಲಾಗಿದೆ.

ಭಾರತದಲ್ಲಿ ಮಾತೃ ಆರಾಧನೆ ಯಾವಾಗಿನಿಂದ ಪ್ರಾರಂಭವಾಯಿತೆಂಬ ಬಗೆ ಸ್ಪಷ್ಟ ದಾಖಲೆಗಳಿಲ್ಲ. ಸಿಂಧೂ ನದಿ ನಾಗರಿಕತೆ ಅವಧಿಯಲ್ಲಿಯೇ ಮಾತೃ ಆರಾಧನೆ ಇತ್ತೆಂಬ ಬಗ್ಗೆ ಕುರುಹುಗಳು ಲಭ್ಯವಾಗಿದ್ದರೂ, ಗುಪ್ತರ ಅವಧಿಯಲ್ಲಿ ಮೊದಲ ಬಾರಿಗೆ ಸಪ್ತ ಮಾತೃಕೆಯರ ಟೆರ್ರಕೋಟ ಶಿಲ್ಪಗಳು ದೊರೆಯುತ್ತದೆ. ಕರ್ನಾಟಕದಲ್ಲಿ ಕದಂಬರ ಶಾಸನಗಳಲ್ಲಿ ಸಪ್ತ ಮಾತೃಕೆಯರ ಉಲ್ಲೇಖ ಬರುತ್ತದೆ. ಆದರೆ ಸಪ್ತ ಮಾತೃಕೆಯರ ಶಿಲ್ಪಗಳು ಇವರಲ್ಲಿ ಕಡಿಮೆ. ಗಂಗ ಹಾಗೂ ಬಾದಾಮಿ ಚಾಲುಕ್ಯರ ಆಳ್ವಿಕೆಯ ಪ್ರದೇಶದಲ್ಲಿ ಸಪ್ತ ಮಾತೃಕೆಯರ ಆರಾಧನೆ ಹೆಚ್ಚಾಗಿದೆ. ಸಾಮಾನ್ಯವಾಗಿ ಸಪ್ತ ಮಾತೃಕೆಯರು ಒಂದೇ ಫಲಕದಲ್ಲಿ ಪರಿವಾರ ದೇವತೆಗಳಾಗಿ ಕಾಣಿಸಿಕೊಳ್ಳುತ್ತಾರೆ. ಆದರೆ, ಗಂಗರ ಅವಧಿಯಲ್ಲಿ ಪರಿವಾರ ದೇವತೆಗಳಾಗಿ ಆರಾಧನೆಗೊಳ್ಳುವುದರ ಜೊತೆ ಜೊತೆಗೆ ಬಿಡಿ ಶಿಲ್ಪಗಳೂ ರಚನೆಯಾಗಿ ಪ್ರತ್ಯೇಕವಾಗಿ ಆರಾಧನೆಗೊಳ್ಳುತ್ತಿದ್ದುದು ಕಂಡುಬರುತ್ತದೆ. ಅದರಲ್ಲೂ ಚಾಮುಂಡಾ ಶಿಲ್ಪ ಹೆಚ್ಚಾಗಿ ಕಂಡುಬರುತ್ತದೆ. ಗಂಗರ ಕಾಲದ ಚಾಮುಂಡಾ ಶಿಲ್ಪಗಳು ಹುನಗುಂದ, ಗಣಿಗನೂರು, ವೈದ್ಯನಾಥಪುರ, ಹೆಬ್ಬಟ ಮುಂತಾದ ಕಡೆಗಳಲ್ಲಿ ಕಂಡುಬರುತ್ತದೆ. ಆದರೆ, ಬೆಂಗಳೂರಿನ ದಕ್ಷಿಣ ಭಾಗದಲ್ಲಿ ವಿರಳ. ಅದರಲ್ಲೂ ಒಂಟಿ ಶಿಲ್ಪಗಳು ವಿರಳಾತಿವಿರಳ.

ಈವರೆಗೆ ದೊರೆತ ಗಂಗರ ಕಾಲದ ಎಲ್ಲ ಚಾಮುಂಡಾ ಶಿಲ್ಪಗಳಿಗಿಂತ ಇದು ಭಿನ್ನವಾಗಿದೆ. ಶಿಲ್ಪರಚನಾ ದೃಷ್ಟಿಯಿಂದ ಹುನಗುಂದದ ಚಾಮುಂಡಾ ಶಿಲ್ಪವನ್ನು ಬಹುಮಟ್ಟಿಗೆ ಹೋಲುತ್ತದೆ. ಆದರೆ ಹುನಗುಂದದ ಶಿಲ್ಪವನ್ನು ಪೂರ್ವ ಕರಣಾಗಮನದ ಪ್ರಕಾರ ಕೆತ್ತಲ್ಪಟ್ಟಿದ್ದರೂ, ಗಂಗರಕಾಲದ ಇತರ ಶಿಲ್ಪಗಳಂತೆ ಕಲ್ಲಿನ ಅಳತೆಗೆ ತಕ್ಕಂತೆ ಕೆತ್ತಲಾಗಿದೆ. ಶಿಲ್ಪ ಅಂಗಸೌಷ್ಠವದಿಂದ ಕೂಡಿದ್ದರೂ, ಪ್ರಮಾಣಬದ್ಧತೆಯಿಲ್ಲ. ಇದೊಂದು ಉಬ್ಬುಶಿಲ್ಪದ ಮಾದರಿಯಲ್ಲಿ ರಚಿತವಾಗಿದೆ. ಆದರೆ, ಮರಸೂರು ಮಡಿವಾಳದ ಚಾಮುಂಡಾ ಶಿಲ್ಪವು ಇದೇ ಶಿಲ್ಪವನ್ನು ಮಾದರಿಯಾಗಿಟ್ಟುಕೊಂಡು ಒಬ್ಬ ನುರಿತ ಶಿಲ್ಪಿಯಿಂದ ಶಾಸ್ತ್ರಗ್ರಂಥಗಳನ್ನಾಧರಿಸಿ ಕೆತ್ತಲಾಗಿದೆ. ಇದು ಗಂಗರ ಕಾಲದ ಅತ್ಯುತ್ಕೃಷ್ಟ ಹಾಗೂ ಅಭೂತಪೂರ್ವ ಶಿಲ್ಪವಾಗಿದೆ. ಅತ್ಯರೂಪದ ಶಿಲ್ಪ ಲಕ್ಷಣಗಳನ್ನು ಒಳಗೊಂಡ ಅಪೂರ್ವ ಶಿಲ್ಪವಾಗಿದೆ ಮೂರ್ತಿಶಿಲ್ಪದ ದೃಷ್ಟಿಯಿಂದ ಮಾತ್ರವಲ್ಲದೆ ಶಿಲ್ಪಶಾಸ್ತ್ರದ ದೃಷ್ಟಿಯಿಂದಲೂ ಈ ಶಿಲ್ಪದ ಶೋಧ. ಗಂಗ ಮೂರ್ತಿ ಶಿಲ್ಪಕ್ಕೊಂದು ಅನನ್ಯ ಕೊಡುಗೆ ಯೆಂದರೆ ಉತ್ಪ್ರೇಕ್ಷೆಯೆನಿಸಲಾರದು.

[ಈ ಬಗ್ಗೆ ಮಾಹಿತಿ ನೀಡಿದ ಮರಸೂರು ಗ್ರಾಮದ ಶ್ರೀಮತಿ ಧನಲಕ್ಷ್ಮಮ್ಮನವರಿಗೆ ಕೃತಜ್ಞತೆಗಳು]

ಆಧಾರ ಗ್ರಂಥಗಳು

೧. ಗಂಗ ಶಿಲ್ಪಕಲೆ- ಡಾ॥ ದೇವರಕೊಂಡಾರೆಡ್ಡಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೨. ತಲಕಾಡಿನ ಗಂಗರ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನ- ಡಾ॥ ದೇವರಕೊಂಡಾರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತು.

೩. ಬೆಂಗಳೂರು ಜಿಲ್ಲಾ ಗಜೆಟಿಯರ್- ಡಾ॥ ಸೂರ್ಯನಾಥ ಯು.ಕಾಮತ್, ೧೯೮೯.

೪. Bengaluru Rural District Gazetteer, ed: Suryanath U. Kamath, 1989.

೫. Iconography of the Saptamatrikas-O.P. Mishra, Agramkala Prakashana, Delhi, 1989.

ಹೊಳಲ್ಕೆರೆ ಪಟ್ಟಣದ ವಿಶೇಷ ಶಿಲ್ಪಗಳು

ಬಿ.ಕೆ. ಲತಾ*

ಕರ್ನಾಟಕ ಇತಿಹಾಸದಲ್ಲಿ ಚಿತ್ರದುರ್ಗ ಜಿಲ್ಲೆಯ ಮಧ್ಯಭಾಗದಲ್ಲಿರುವ ಹೊಳಲ್ಕೆರೆ ಪಟ್ಟಣವು ಚಾರಿತ್ರಿಕವಾಗಿ, ಐತಿಹಾಸಿಕವಾಗಿ ಶ್ರೀಮಂತವಾಗಿರುವ ಪ್ರದೇಶವಾಗಿದ್ದು, ಅರೆಮಲೆನಾಡು ಎಂಬ ಹೆಸರು ಪಡೆದಿದೆ. ಚಿತ್ರದುರ್ಗ ಜಿಲ್ಲೆಯ ಒಂದು ತಾಲೂಕು ಕೇಂದ್ರ.

ಹೊಳಲ್ಕೆರೆ ತಾಲೂಕು ಪರಿಸರದ ಪ್ರಾಗೈತಿಹಾಸಿಕ ನೆಲೆಗಳನ್ನು ಗಮನಿಸಿದಾಗ ಆದಿ ಹಳೆಶಿಲಾಯುಗ ಸಂಸ್ಕೃತಿಯ ಕುರುಹುಗಳು ಗೋಚರಿಸಿವೆ. ಮುಖ್ಯವಾಗಿ ತಾಳ್ಯದಲ್ಲಿ ರಾಬರ್ಟ್ ಬ್ರೂಸ್‌ಫೂಟ್ ಅವರು ಹಳೆ ಶಿಲಾಯುಗದ ಮೂರು ಆಯುಧಗಳನ್ನು ಪತ್ತೆಹಚ್ಚಿದ್ದಾರೆ. ಹೊಳಲ್ಕೆರೆ ಪಟ್ಟಣದಲ್ಲಿ ವಿಶೇಷವಾಗಿ ಕೆಲವು ಪ್ರಮುಖ ಶಿಲ್ಪಗಳು ಇರುವುದು ಗಮನಿಸಬಹುದು.

ವೈಷ್ಣವ ಶಿಲ್ಪ

ಭಾರತೀಯ ಪ್ರಾಚೀನ ಧರ್ಮಗಳಲ್ಲಿ ವೈಷ್ಣವ ಧರ್ಮವೂ ಒಂದು ಇದರ ಪ್ರಾರಂಭದ ಉಲ್ಲೇಖಗಳನ್ನು ವೈದಿಕ ಸಾಹಿತ್ಯದಲ್ಲಿ ನೋಡಬಹುದು. ನಂತರ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಸಾಂಬ ಮತ್ತು ಅನಿರುದ್ಧರೆನ್ನುವ ಪಂಚವೀರರು ಇದರ ಅನುಯಾಯಿಗಳಾಗಿದ್ದರಿಂದ ಇವರ ಆರಾಧನೆಯನ್ನು ವೀರವಾದ ಎಂದು ಕರೆಯಲಾಗುತ್ತದೆ. ಈ ವಾದದ ಪ್ರಕಾರ ವಾಸುದೇವನೆ ಶ್ರೇಷ್ಠ. ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರು ಒಬ್ಬರಾದ ನಂತರ ಮತ್ತೊಬ್ಬರು ವಾಸುದೇವನಿಂದ ಆವಿರ್ಭವಿಸಿದವರು. ಹೊಳಲ್ಕೆರೆ ಪಟ್ಟಣದಲ್ಲಿ ಸಾಕಷ್ಟು ವೈಷ್ಣವ ಶಿಲ್ಪಗಳಿವೆ. ಅವುಗಳಲ್ಲಿ ಒಂದು ವಿಷ್ಣುಶಿಲ್ಪವು ತುಂಬ ವಿಶೇಷತೆಯಿಂದ ಕೂಡಿದೆ. ಪ್ರಸ್ತುತ ವೇಣುಗೋಪಾಲ ಸ್ವಾಮಿ ದೇವಾಲಯದ ಮುಖಮಂಟಪದಲ್ಲಿ ಇರುವ ಈ ಶಿಲ್ಪವು ಕಪ್ಪುಶಿಲೆಯಲ್ಲಿದ್ದು ಸ್ಥಾನಿಕ ಭಂಗಿಯಲ್ಲಿದೆ. ನಾಲ್ಕು ಅಡಿ ಎತ್ತರದ ಶಿಲ್ಪವು ಕೈಗಳಲ್ಲಿ ಕ್ರಮವಾಗಿ ಪದ್ಮ, ಚಕ್ರ, ಶಂಖ, ಗದಾಧಾರಿಯಾಗಿದ್ದು, ತಲೆಗೆ ಕಿರೀಟಮುಕುಟ ರತ್ನಪಟ್ಟಿಕೆಗಳಿಂದ ಅಲಂಕೃತಗೊಂಡಿದೆ. ಪತ್ರಕುಂಡಲ, ಕಂಠಹಾರ, ಮಣಿಸರ, ಯಜ್ಞೋಪವೀತ, ಕೇಯೂರ, ಕಟಿವಸ್ತ್ರ ಧಾರಿಯಾಗಿದ್ದು, ಕಾಲಿಗೆ ಕಾಲುಕಡಗಗಳನ್ನು ಧರಿಸಿದ್ದಾನೆ. ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ, ಭೂದೇವಿಯರು ಇದ್ದಾರೆ. ಅಲಂಕಾರಯುತ ಪ್ರಭಾವಳಿ ಇದ್ದು, ಮಧ್ಯದಲ್ಲಿ ಕೀರ್ತಿಮುಖವಿದೆ. ಈ ಶಿಲ್ಪದ ವಿಶೇಷತೆ ಎಂದರೆ ರುಂಡಭಾಗ ಪುರುಷ ಲಕ್ಷಣ ಹೊಂದಿದ್ದು ಮುಂಡಭಾಗವು ಸ್ತ್ರೀ ಶೈಲಿಯಲ್ಲಿದೆ ಕಿರೀಟದ ಮಧ್ಯೆ ಶಿವಲಿಂಗವಿದ್ದು ಸ್ಥಳೀಯರು ಇದನ್ನು ಚೆನ್ನಕೇಶವಮೂರ್ತಿ ಎನ್ನುವರು ಈ ಶಿಲ್ಪವು ಪಟ್ಟಣದ ಚೆನ್ನಕೇಶವ ದೇವಾಲಯದಲ್ಲಿದ್ದು, ನಂತರದ ದಿನಗಳಲ್ಲಿ ದೇವಾಲಯ ಹಾಳದ ಮೇಲೆ ಶಿಲ್ಪವನ್ನು ಇತ್ತೀಚಿಗೆ ವೇಣುಗೋಪಾಲ ದೇವಾಲಯಕ್ಕೆ ತಂದು ಇಡಲಾಗಿದೆ. ಇದು ವಿಷ್ಣು ಶಿಲ್ಪವಾಗಿದ್ದರೂ ಕಿರೀಟದಲ್ಲಿ ಶಿವಲಿಂಗವಿದೆ. ಇಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳಲ್ಲಿ ಧಾರ್ಮಿಕ ಸಾಮರಸ್ಯ ತರಲು ಈ ಶಿಲ್ಪವನ್ನು ಕೆತ್ತಿರಬಹುದು. ಈ ದೇವಾಲಯದ ಎದುರಿಗೆ ಜೈನ ಮಂದಿರವಿದೆ. ಹಿಂದೆ ಇಲ್ಲಿ ಈ ಮೂರು ಧರ್ಮಗಳು ಸಾಮರಸ್ಯದಿಂದ ಇದ್ದವು ಎನ್ನುವುದಕ್ಕೆ ಈ ಶಿಲ್ಪ ಸಾಕ್ಷಿಯಾಗಿದೆ.

ಆಂಜನೇಯ

ಭಾರತದಲ್ಲಿ ಆಂಜನೇಯನ ಗುಡಿ ಇಲ್ಲದ ಗ್ರಾಮ, ನಗರ, ಪಟ್ಟಣಗಳಿಲ್ಲವೆಂದೇ ಹೇಳಬಹುದು. ಇಂಥ ಸರ್ವಜನ ಪೂಜಾಭಾಜನನಾದ ಆಂಜನೇಯ ರಾಮಾಯಣದ ಮಹಾ ವೀರರಲ್ಲಿ ಒಬ್ಬ ಇವನು ಶೌರ್ಯ, ಸಾಹಸ, ಬುದ್ಧಿವಂತಿಕೆಯನ್ನು ಹೊಂದಿದವನು. ಇಂತಹ ಆಂಜನೇಯನ ಹುಟ್ಟಿದ ಬಗೆಗೆ ಅನೇಕ ಕಥೆಗಳಿವೆ. ಆಂಜನೇಯ ದೇವಾಲಯಗಳು ದೇಶದ್ಯಾಂತಲೂ ಸ್ಥಾಪಿತವಾದವು. ಇವುಗಳಲ್ಲಿ ಚಿಕ್ಕ ಗುಡಿಗಳಿರುವುದೆ ಅಧಿಕ. ಸಾಮಾನ್ಯವಾಗಿ ಈ ದೇವಾಲಯಗಳು ದಕ್ಷಿಣಾಭಿಮುಖವಾಗಿರುತ್ತವೆ. ಮೂರ್ತಿಯ ಮುಖ ಪೂರ್ವದಿಕ್ಕಿಗಿರುವುದೆ ಹೆಚ್ಚು. ಇದಕ್ಕೆ ಅಪವಾದವೆಂಬಂತೆ. ಇಲ್ಲಿ ಈಶಾನ್ಯಮುಖ ಆಂಜನೇಯನಿದ್ದಾನೆ. ಇದು ಕಪ್ಪುಶಿಲೆಯಲ್ಲಿ ಇದ್ದು. ಸುಮಾರು ಎರಡು ಅಡಿ ಎತ್ತರವನ್ನು ಹೊಂದಿದೆ.

* ಪಿಹೆಚ್ ಡಿ. ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ





ಮತ್ತೊಂದು ಆಂಜನೇಯನ ಮೂರ್ತಿಗೆ ಸ್ಥಳೀಯರು ವಿಶೇಷವಾಗಿ ನಂಬಿಕೆಯನ್ನು ಪ್ರಸ್ತುತ ಸಂದರ್ಭದಲ್ಲಿ ನಡೆಸಿ



ಕೊಂಡು ಬಂದಿದ್ದಾರೆ. ಇದಕ್ಕೆ ಗುಗ್ಗರಿ ಆಂಜನೇಯ ಎಂದು ಕರೆಯುತ್ತಾರೆ. ಏಕೆಂದರೆ ಹಸುಗೂಸು ತಾಯಿಯ ಎದೆಹಾಲು ಕುಡಿಯದಿದ್ದರೆ ತುಂಬ ಹಟ ಮಾಡಿದರೆ ಇದಕ್ಕೆ ಗುಗ್ಗರಿ ಸೇವೆ ಮಾಡುವರು. ದೇವಾಲಯದಲ್ಲಿ ಗುಗ್ಗರಿ ಬೇಯಿಸಿ ಭಕ್ತರಿಗೆ ಹಂಚುವರು ಮನೆಗೆ ಕೊಂಡೊಯ್ಯುವಂತಿಲ್ಲ. ಚಿಕ್ಕಮಕ್ಕಳಿಗೆ ದಡಾರ, ಸೀತಾಳ, ಅಮ್ಮ ಈ ರೀತಿಯಾದರೆ ಈ ದೇವರಿಗೆ ಗುಗ್ಗರಿ ಹರಕೆ ತೀರಿಸುತ್ತಾರೆ. ಎಲ್ಲ ರೀತಿಯ ದ್ವಿದಳ ಧಾನ್ಯ ತಂದು ಬೇಯಿಸಿ ಹರಕೆ ತೀರಿಸುತ್ತಾರೆ. ಇಂದಿಗೂ ಈ ಆಚರಣೆ ನಡೆಯುತ್ತಲಿದೆ.

[ಕ್ಷೇತ್ರಕಾರ್ಯದಲ್ಲಿ ಸಹಕಾರಿಸಿದ ಮಿತ್ರ ಮಂಜಣ್ಣ ಪಿ.ಬಿ. ಪಿಎಚ್.ಡಿ ಮಾರ್ಗದರ್ಶಕರಾಗಿ ಅಭ್ಯಾಸಕ್ಕೆ ಸ್ಫೂರ್ತಿ ತುಂಬುತ್ತಿರುವ ಗುರುಗಳಾದ ಡಾ. ಎಸ್.ವೈ. ಸೋಮಶೇಖರ್ ಅವರಿಗೂ ಕೃತಜ್ಞತೆಗಳು]

ಆಧಾರಸೂಚಿ

೧. ಪ್ರಭಾಕರ್ ಎಂ.ಎನ್., ೧೯೯೯, ದೇವಾಲಯ ವಾಸ್ತು ಚಂದ್ರಿಕೆ, ಪುಟ ೪.

೨. ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ–ಹಿನ್ನೆಲೆ, ಪುಟ ೧೨೦.

೩. ಅದೇ, ಪುಟ ೧೨೧.

೪. ಶಿವತಾರಕ್ ಕೆ.ಬಿ., ೨೦೦೬, ಕರ್ನಾಟಕ ಪುರಾತತ್ವ ನೆಲೆಗಳು, ಪುಟ ೩೧

೫. ಲತಾ ಜಿ.ಕೆ., ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ ಎಂ.ಫಿಲ್. ಅಪ್ರಕಟಿತ ನಿಬಂಧ. ೨೦೧೩. ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೩

ಹರಿಹರೇಶ್ವರನ ಎಡಭಾಗದ ಪೀಠದಲ್ಲಿರುವ ಮೂರ್ತಿ "ಪೋಲಾಳ್ವ ದಂಡನಾಥನದೇ?"

ಡಾ. ಹರಿಹರ ಶ್ರೀನಿವಾಸರಾವ್*

ಹರಿಹರೇಶ್ವರ ಮೂರ್ತಿಯ ಬಗೆಗೆ ಬರೆದಿರುವವರೆಲ್ಲಾ, ಎಡಭಾಗದ ಪೀಠದಲ್ಲಿರುವ ಒಂದು ಚಿಕ್ಕದಾದ ಮೂರ್ತಿಯನ್ನು ಋಷ್ಯಶೃಂಗಮುನಿಗಳದ್ದು ಎಂದೇ ಗುರ್ತಿಸಲು ಪ್ರಯತ್ನಿಸಿರುತ್ತಾರೆ. ಆದರೆ ಕೂಲಂಕಷವಾಗಿ ಪರಿಶೀಲಿಸಿದಾಗ, ಹರಿಹರದ ದೇವಾಲಯದ ಹೊರಗಡೆಯಲ್ಲಿಯೇ ಇರುವ, ಕರ್ನಾಟಕದ ಅತಿ ಎತ್ತರದ ಶಾಸನವೆಂದು ವಿದ್ವಾಂಸರಿಂದ ಪರಿಗಣಿತವಾಗಿರುವ, ದಾವಣಗೆರೆ ೨೫ನೇ ಸಂಖ್ಯೆಯ ಶಾಸನದಲ್ಲಿ ದೊರಕುವ ವಿವರಗಳಿಂದ ಅದು 'ಪೋಲಾಳ್ವ ದಂಡನಾಥ"ನದು ಎಂದು ತಿಳಿಯಬಹುದಾಗಿದೆ. ಈಗ ನಾವು ಕಾಣುತ್ತಿರುವ ಈ ಶಾಸನದಲ್ಲಿ, ಪೋಲಾಳ್ವ ದಂಡನಾಥನಿಗಿದ್ದ "ವಿಷ್ಣು ಭಕ್ತಿ ತಿಳಕ, ಅಚ್ಯುತ ಭಕ್ತಿಯುತ, ವೈಷ್ಣವ ಚಕ್ರವರ್ತಿ" ಮೊದಲಾದ ಬಿರುದುಗಳು, ಅವನ ಗುಣ ವಿಶೇಷಗಳೇ ಆಗಿದ್ದುವು ಎನ್ನುವುದನ್ನು ಶಿಲ್ಪವನ್ನಾಧರಿಸಿ ಮೊದಲ ಬಾರಿಗೆ ಪ್ರಸ್ತಾಪಿಸಲಾಗಿದೆ. ಎರಡನೆಯದಾಗಿ ರಾಜಪೋಷಾಕಿನಲ್ಲಿಯೇ ನಿಂತ ಭಂಗಿಯಲ್ಲಿರುವ ವಿಗ್ರಹ ಸಿಂಹ ಲಾಂಛನವಿರುವ ಪ್ರಭಾವಳಿ, ಹಣೆಯ ಮೇಲಿರುವ ಭಾಗವತ ವೈಷ್ಣವ ಸಂಪ್ರದಾಯದ ನಾಮ ಮುದ್ರೆ ಇತ್ಯಾದಿಗಳು ನನ್ನ ಈ ಸಂಶೋಧನೆಗೆ ಕಾರಣವೆನಿಸಿವೆ.

ಶಿಲ್ಪ ವಿವರ

ಹರಿಹರೇಶ್ವರನ ಪೀಠದ ಎಡಭಾಗದಲ್ಲಿರುವ ಮೂರ್ತಿಯ ಎತ್ತರ ಸು. ೨' ೨" ಅಗಲ ೧ ೧/೨'. ಸಿಂಹಲಾಂಛನದ ಪ್ರಭಾವಳಿ ಹೊಂದಿದೆ. ನಿಂತ ಭಂಗಿಯಲ್ಲಿರುವ ಈ ಮೂರ್ತಿಯ ಬಲಗೈಯಲ್ಲಿ ಅಕ್ಷಮಾಲೆ ಕಂಡುಬರುತ್ತಿದ್ದು ಎಡಗೈಯಲ್ಲಿ ಪುಸ್ತಕ ಹಿಡಿದಿದ್ದಾನೆ. ರಾಜ ಪೋಷಾಕಿನ ವಸ್ತ್ರಗಳನ್ನು ಧರಿಸಿರುವ ಈ ವ್ಯಕ್ತಿಯ ಸೊಂಟಪಟ್ಟಿ ಮತ್ತು ನೀಳವಾದ ಗುಂಡಿನ ಸರಗಳು ಮಂಡಿಯ ತನಕ ಇದ್ದು ಕಟಿ, ಮಂಡಿ ಮತ್ತು ಜಂಘೆಯ ಭಾಗಗಳು ಧೀರೋದಾತ್ತ ನಿಲುವನ್ನು ಪ್ರತಿನಿಧಿಸುತ್ತವೆ. ಕಟೀಭಾಗದಿಂದ ಮೇಲಿನ ವಿಶಾಲ ವಕ್ಷಸ್ಥಳವನ್ನು ರಾಜೋಚಿತ ನಿಲುವಂಗಿಯಿಂದ ಪೂರ್ತಿಯಾಗಿ ಮುಂಗೈ ತೋಳಿನವರೆಗೆ ಮುಚ್ಚಲಾಗಿದ್ದು, ತೋಳಬಂಧಿ ಮತ್ತು ಭುಜ, ಬಾಹುಬಂಧಿಗಳ ಪಟ್ಟಿಯನ್ನು ಸ್ಪಷ್ಟವಾಗಿ ಗುರುತಿಸಲು ಬರುತ್ತದೆ. ಎದೆಯ ಭಾಗವನ್ನು ತಕ್ಕಮಟ್ಟಿಗೆ ದೊಡ್ಡದೇ ಆದ, ಹಾರದಿಂದ ಅಲಂಕರಿಸಲಾಗಿದೆ. ಮುಗುಳ್ನಗೆ ಸೂಸುವ ಗಡ್ಡಧಾರಿಯ ಮುಖ, ಗಾಂಭೀರ್ಯತೆಯನ್ನು ಹೊಮ್ಮಿಸುವ ಗುಳಿ ಹೊಂದಿರುವ ನೀಳ್ಗೆನ್ನೆಗಳು, ಭಕ್ತಿರಸ ಹೊಮ್ಮಿಸುವ ಕಣ್ಣುಗಳು ಅವುಗಳ ಮೇಲಿರುವ ವಿಶಾಲ ಲಲಾಟ, ಹಣೆಯ ಮೇಲಿನ "ಯು" ಆಕಾರದ ನಾಮ ಭಾಗವತ ಸಂಪ್ರದಾಯದ ವಿಷ್ಣು ಭಕ್ತಿಯನ್ನು ಸಂಕೇತಿಸುತ್ತಿದೆ. ಹಿಂದಕ್ಕೆ ಬಾಚಿಕಟ್ಟಿದ ನೀಳವಾದ, ಚಪ್ಪಟೆ ಯಾಕಾರದಲ್ಲಿ ಹರಡಿರುವ ಕೂದಲಿನ ಮಧ್ಯದಲ್ಲಿ, ಈತ ರಾಜಯೋಗಿ ಎಂದು ತಿಳಿಯಬೇಕೆನ್ನುವ ಆಶಯ ಹೊಂದಿರುವ ಶಿಲ್ಪಿ ಬಂಗಾರದ ಕಿರೀಟವನ್ನೂ ಢಾಳಾಗಿ ಕಾಣುವಂತೆ ಮಾಡಿದ್ದಾನೆ. ವಿವರಗಳನ್ನು ಒಳಗೊಂಡಿರುವ ಪೋಲಾಳ್ವ ದಂಡನಾಥನನ್ನು ಶಿಲ್ಪಿ ಬಹಳ ಹತ್ತಿರದಿಂದ ಗಮನಿಸಿರಬೇಕೆಂಬ ಅನಿಸಿಕೆ ನನ್ನದು. ಏಕೆಂದರೆ ಮೇಲೆ ಹೇಳಿರುವಂತೆ, ದೇವಸ್ಥಾನ ಹೊರಗೇ ಇರುವ ೯೫ ವೃತ್ತಗಳಷ್ಟು ವಿಸ್ತಾರವಾದ ದೊಡ್ಡ ಶಾಸನದಲ್ಲಿಯ ದಂಡನಾಥನ ವಿವರಗಳು, ಮಾಗಳದಲ್ಲಿ ದೊರೆಯುವ, ಈತನೇ ದತ್ತಿ ನೀಡಿರುವ ಇತರ ದಾನ ಶಾಸನಗಳು, ಈತನ ವ್ಯಕ್ತಿತ್ವ, ಸಾಧನೆ, ಔನ್ನತ್ಯಗಳ ಬಗೆಗೆ ಏನು ಹೇಳುತ್ತವೆ ಎನ್ನುವುದನ್ನು ಈಗ ತಿಳಿಯೋಣ.

ಆಂಧ್ರಪ್ರದೇಶದಲ್ಲಿ ನಾರಾಯಣ ಪುರವೆನ್ನುವ ಪಟ್ಟಣ. ವೀರ, ಶೌರ್ಯಗಳಿಗೆ ಎಷ್ಟು ಹೆಸರುವಾಸಿಯಾಗಿತ್ತೋ ಅಷ್ಟೇ ಪ್ರಮಾಣದಲ್ಲಿ ಸಂಗೀತ ಸಾಹಿತ್ಯಗಳಿಗೂ ಆಶ್ರಯ ತಾಣವಾಗಿತ್ತು. ಈ ರಾಜಧಾನಿಯಲ್ಲಿ ಶ್ರೀಮಂತನೂ, ಔದಾರ್ಯಕ್ಕೂ ಹೆಸರುವಾಸಿಯಾದ ರಾಜನ ಹೆಸರೇ **"ಅತ್ತಿರಾಜ"**. ಈತನ ಹೆಂಡತಿ **"ನವಿಲಾಡೆಯಕ್ಕ"** ಬೇಡಿಬಂದವರಿಗೆ ಲಕ್ಷ್ಮಿ, ಆಕೆಯ ಪರಿವಾರದವರಿಗೆ ಬೇಡಿದ್ದನ್ನು ಯಾವ ಸಂಕೋಚವೂ

* "ಸಮರ್ಥ" ೭೫/೧೭, ವಿಕಾಸ್ ಹೈಸ್ಕೂಲ್ ಎದುರು, ೫ನೇ ಬ್ಲಾಕ್, ೩ನೇ ಫೇಸ್, ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦೦೮೫

ಇಲ್ಲದೇ ನೀಡುವ ಕಲ್ಪವೃಕ್ಷ. ಇಂತಹ ಅಪರೂಪದ ದಂಪತಿಗಳಿಗೆ ಮಗನಾಗಿ ಜನಿಸಿದವ "ಬಿರುದಚಮೂವರ ಮುರಾಂತಕನೆಂದು ಪ್ರಸಿದ್ಧನಾದ **'ಪೋಲಾಳ್ವ ದಂಡನಾಥ.'"** ಸ್ವ–ಸಾಮರ್ಥ್ಯ, ಶೌರ್ಯ ಮತ್ತು ಉದಾರ ಗುಣಗಳಿಂದ ಹೊಯ್ಸಳ ಸಾಮ್ರಾಜ್ಯಾಧಿಪತಿಯಾದ ವೀರ ಬಲ್ಲಾಳ, ಅವನ ಮಗ ವೀರನಾರಸಿಂಹ, ಮೊಮ್ಮಗ ವೀರ ಸೋಮೇಶ್ವರ ಈ ಮೂವರು ರಾಜರಿಗೂ ಪ್ರಧಾನ ಅಮಾತ್ಯನಾಗಿದ್ದವನು ಪೋಲಾಳ್ವ ದಂಡನಾಥ. ಈತನನ್ನು ಶಾಸನವು ಅನೇಕ ವಿಧಗಳಿಂದ ಹೊಗಳುತ್ತದೆ.

ದೊರೆಗಳಿಗೆ ಯದ್ಧದಲ್ಲಿ ಆಯುಧನಾಗಿಯೂ, ಕೊಡುಗೈ ದಾನಿಯಾಗಿದ್ದವ. ದೊರೆಗೆ ಆಪ್ತನಾಗಿದ್ದರಿಂದ ಆತನ ಎಲ್ಲ ಕಾರ್ಯಗಳ ಮಂತ್ರಾಲೋಚನೆಗಳಲ್ಲಿ ಪಾಲ್ಗೊಳ್ಳುತ್ತಿದ್ದ. ಶತ್ರು ಕೋಟೆಗಳನ್ನು ಗೆಲ್ಲಲು ಸದಾ ಎಚ್ಚರದ ಕಣ್ಣಿನಿಂದ ಇರುತ್ತಿದ್ದ. ಯುದ್ಧಕ್ಕೆ ನಿಂತನೆಂದರೆ ಶತ್ರುಗಳನ್ನು ಸದೆಬಡಿದು ಹಿಮ್ಮೆಟ್ಟಿಸಿ ತೊಲಗದವರೆಗೆ ಯಾವುದಕ್ಕೂ ಹೆದರದೆ ಯುದ್ಧ ಶಾಂತಿಗಳೆರಡರಲ್ಲೂ ಸಮದರ್ಶಿಯಾಗಿ ಇರುತ್ತಿದ್ದ. ಆದ್ದರಿಂದ ಈತನಿಗೆ "ತೊಲಗದ ಕಂಭ" ಎನ್ನುವ ಬಿರುದೇ ಬಂದಿದೆ. ರಾಜಾಸ್ಥಾನಕ್ಕೆ ರತ್ನ ದೀಪದಂತೆ ಬೆಳಕಾಗಿದ್ದವ. "ಕರುವಿಟ್ಟಂ ಸತ್ಯದಿಂ, ಕನ್ದೆರೆದ ಅಸಮ ಸಾಹಿತ್ಯದಿಂ ಬಣ್ಣವಿಟ್ಟಂ, ಸಿರಿಯಂ ಕೂರ್ತಾಯುವೊಯ್ದಂ"(ಲಕ್ಷ್ಮೀದೇವಿಯ ಆಯುಧಕ್ಕೆ, ಕೂರ್ತು=ಹರಿತವಾದ ಆಯುಧದ ಮಿಂಚಿನಂತೆ).

ಪರರ ಹಿತ ಚಿಂತನೆಯೇ ಆತನ ಚಾರಿತ್ರ್ಯ. ಲಾಭದ ಲೋಭ ವಿಲ್ಲದೆ, ಸಿರಿ ಸಂಪತ್ತು ಇದ್ದರೂ ಸೊಕ್ಕಿನ ಸೋಂಕು ಇಲ್ಲದವ. ಆಡಿದ ಮಾತಿಗೆ ಎರಡಿಲ್ಲದಂತೆ ನಡೆಯುತ್ತಿದ್ದ. ಇಂತಹ ಗುಣಗಳುಳ್ಳವನನ್ನು ಹೊಗಳುವುದೆಂದರೆ "ಹಾಲುಂಡ ಮೇಲೆ ಬೇರೆ ಊಟ ಬೇಕೇ?" ಎಂದು ಅಚ್ಚ ಕನ್ನಡ ಜನಪದ ನೆಲೆಯಿಂದಲೇ ನಮ್ಮನ್ನು ಪ್ರಶ್ನಿಸಿದ್ದಾನೆ ಶಾಸನಕಾರ ಕವಿ. ಸಾಮಾನ್ಯವಾಗಿ ಲಕ್ಷ್ಮಿ–ಸರಸ್ವತಿಯರು ಒಂದೇ ಕಡೆಗೆ ಸೇರುವ ವರಲ್ಲ. ಇಲ್ಲಿ ಲಕ್ಷ್ಮಿ ಎಂದರೆ ಸಂಪತ್ತು. ಸರಸ್ವತಿ ಎಂದರೆ ಒಳ್ಳೆಯ ಗುಣಗಳಾದ ಹೊಟ್ಟೆ ಕಿಚ್ಚಿಲ್ಲದ (ನಿಮಾತ್ಸರ್ಯ), ವಿದ್ಯಾ, ಬುದ್ಧಿ, ಮಾನವೀಯತೆಯಿಂದ ಪರರಿಗೆ ಸಹಾಯಕ ನಾಗಿರುವುದು ಎಂದು ಅರ್ಥ. ಆದರೆ ಈ ಮನುಷ್ಯನಲ್ಲಿ ಅವರಿಬ್ಬರೂ ತಮ್ಮ ತಮ್ಮಲ್ಲಿ ಸಹಜವಾಗಿಯೇ ಇರುವ ದ್ವೇಷ ಭಾವವನ್ನು ಮರೆತು ಈತನಲ್ಲಿ ಒಂದಾಗಿದ್ದಾರೆ. ಈ ಎಲ್ಲವುಗಳ ಜೊತೆಗೆ, ಇನ್ನೊಬ್ಬರಲ್ಲಿ ಸಾಮಾನ್ಯವಾಗಿ ಕಂಡು ಬರದೆ ಇರತಕ್ಕಂತಹ ಅಪರೂಪದ ಯೌವನ ಸೌಂದರ್ಯವೇ ಮೂರ್ತಿವೆತ್ತಂತೆ ಕಾಣುತ್ತಿದ್ದಾನೆ. ಇವನನ್ನು ಸೃಷ್ಟಿಸುವ ಮೊದಲು ಬ್ರಹ್ಮನು ಅದಾವ ದೇವರಿಗೆ ನೋಂತು (ಹರಕೆ ಹೊತ್ತು) ಸೃಷ್ಟಿಸಿದನೋ ತಿಳಿಯೆ. ಹೀಗಾಗಿ ಈತನ ಕೀರ್ತಿ "ಜಗಮಂ ಝುಂಪಿಸುತಿರ್ಪ್ಪಕೀರ್ತಿ ಮುಗಿಲಂ ಮುಟ್ಟಿರ್ಪುದು". ಇವುಗಳ ಜೊತೆಗೆ ಇಂಪಾದ ಸಂಗೀತ, ದಿವ್ಯ ಅಚ್ಚ್ಯುತ ಭಕ್ತಿಯೂ ಸೇರಿದೆ, ಈ ದಂಡಾಧಿಪನಲ್ಲಿ. ಈ ಮೇಲಿನ ಎಲ್ಲ ಗುಣಗಳನ್ನೂ ಒಟ್ಟಾಗಿಯೆ ಆತನ ಬಿರುದುಗಳ ಮೂಲಕ ಹೀಗೆ ಸಂಗ್ರಹಿಸಿ ಕೊಡಬಹುದಾಗಿದೆ. "ಈ ಮಹಾಪ್ರಧಾನಿ ಪದವಿಗಧಿನಾಥನಾಗಿ, ತೊಲಗದ ಕಂಬವೆಂಬ ಬಿರುದ, ಧ್ವಜಾಡಂಬರ, ವನವಲಂಬಿಸಿದ ಸಂಗೀತ ಸಾರ, ಕಾವ್ಯ ಕರ್ತಾರ, ಸಜ್ಜನಾಧಾರ, ಕೀರ್ತಿಭರ್ತಾರ, ಕವಿಜನಾಭರಣ, ಸೂಕ್ತಿ ಸುಧಾಕಿರಣ, ವಿತರಣ ವಿಲಾಸ, ಲಕ್ಷ್ಮೀನಿವಾಸ, ವೈಷ್ಣವ ಚಕ್ರವರ್ತಿ, ಜಗನ್ಮೋಹನ ಮೂರ್ತಿ. ಸತ್ಯ ಸ್ವಭಾವ, ಸಭೆಯೋಳ್ ಸಮಸ್ತ ಸಚಿವರ್ ಲೆಪ್ಪಗಳೆಂತೆಂಬವ ಇತ್ಯಾದಿ."

ಆಶ್ಚರ್ಯವೆಂದರೆ ಪೋಲಾಳ್ವ ಮತ್ತು ಆತನ ರಾಜರನ್ನು ಇಷ್ಟೊಂದು ಹೊಗಳುವ, ಅನೇಕ ಯದ್ಧಗಳಲ್ಲಿ ಗೆದ್ದ ಚಾರಿತ್ರಿಕ ಸಂಗತಿಗಳನ್ನು ಉತ್ಪ್ರೇಕ್ಷೆಯೆನ್ನುವಂತೆ ದಾಖಲಿಸಿ ರುವ ಈ ಶಾಸನ ಭಕ್ತಿಯೊಂದನ್ನು ಹೊರತುಪಡಿಸಿ, ಅದೂ ಬಿರುದಿನ ಮೂಲಕ, ಇಂತಹ ಮಹತ್ಕಾರ್ಯ ಕೈಕೊಳ್ಳಲು ಉಳಿದ ಯಾವ ಕಾರಣವನ್ನೂ ಕೊಡುವುದಿಲ್ಲ. (ಹರಿಹರೇಶ್ವರ ದೇವಸ್ಥಾನದ ಸುತ್ತಲೂ ಮತ್ತು ಒಳಗೆ ೨೧ ಶಾಸನಗಳಿವೆ. ಅವುಗಳಲ್ಲಿ ಕೆಲವೊಂದರಲ್ಲಿ ತಾವು ಯಾವ ಕಾರಣಕ್ಕಾಗಿ ದಾನ ಕೊಟ್ಟಿದ್ದೇವೆ ಎನ್ನುವುದನ್ನು ಸ್ಪಷ್ಟವಾಗಿಯೇ ತಿಳಿಸುತ್ತವೆ. ಉ.ದಾ. ಶಾ.ಸಂಖ್ಯೆ ೨೫ ಹರಿದ್ರಾನದಿಗೆ ಅಣೆಕಟ್ಟು ಕಟ್ಟುವಾಗ ನಡೆಸಿದ ವ್ಯವಹಾರ ನಿರ್ಣಯ ಇತ್ಯಾದಿ). ಇದೇ ಉದ್ದೇಶದಿಂದಲೇ, ನಾನು ಹರಿಹರನ ಪೀಠಭಾಗದ ಲಕ್ಷ್ಮೀದೇವಿಯ ಕೆಳಭಾಗದಲ್ಲಿ ಕಂಡುಬರುವ ಮೂರ್ತಿಯನ್ನು "ಪೋಲಾಳ್ವ ದಂಢನಾಥನದೆಂದೇ ಗುರುತಿಸುತ್ತಿದ್ದೇನೆ."

ಪೋಲಾಳ್ವನ ಮೇಲೆ ಹೇಳಿದ ಗುಣಗಳಲ್ಲಿ ಮೇಲ್ನೋಟಕ್ಕೆ ಅತಿಶಯವೆನಿಸಬಹುದಾದರೂ, ಇದೇ ೨೫ನೇ ನಂಬರಿನ ಶಾಸನದಲ್ಲಿ ಬರೆದಿರುವಂತೆ ಅವನಲ್ಲಿದ್ದ ಗುಣಗಳಿಗೆ ಪೂರಕವಾಗಿ "ಆತನು ಮಾಡಿದ್ದ ಇತರ ಕಾರ್ಯಗಳ ಬಗೆಗಿನ ವಿವರಗಳನ್ನು ಈಗ ನೋಡೋಣ." ಈಗಿನ ಹರಿಹರೇಶ್ವರ ದೇವಾಲಯ ಪುನರ್ ನಿರ್ಮಾಣವಾದ ತಾರೀಖು ಶಕವರ್ಷ ೧೧೪೫ (ಕ್ರಿ.ಶ. ೧೨೨೪)ನೆಯ ಸ್ವಭಾನು ಸಂವತ್ಸರದ ಮಾಘಶುದ್ಧ ಏಕಾದಶಿ ಬೃಹಸ್ಪತಿವಾರ. ದೇಗುಲ ನಿರ್ಮಾಣದ ಜೊತಗೆ ಇತರ ಇನ್ನಷ್ಟು ಕೆಲಸಗಳನ್ನೂ ಕೈಗೊಂಡಿದ್ದನ್ನು ಶಾಸನಗಳು ವಿವರಿಸುವ ರೀತಿ ಹೀಗಿದೆ. "ದೇವಾಲಯವನ್ನು ನಿರ್ಮಿಸುವುದರ ಜೊತೆಗೆ ಅದನ್ನು ನೂರಾ ಹದಿನೈದು ಬಂಗಾರದ ಕಲಶಗಳಿಂದ ಶೋಭಿಸುವಂತೆ ಮಾಡಿದ". ಈ ದೇವಾಲಯದ ಕಲಾಸೌಂದರ್ಯವನ್ನು ಜನರು ಅತಿಯಾಗಿ

ಕಣ್ಣೆತ್ತಿ ನೋಡಲು ಅಸಾಧ್ಯ ಎನ್ನುವಂತೆ, ದಂಡಾಧೀಶನು ಲೋಕವೇ ಆಶ್ಚರ್ಯ ಪಡುವಂತೆ ನಿರ್ಮಿಸಿದ. ದೇವಾಲಯ ಕಟ್ಟಿಸಿದುದು ಅಷ್ಟೇ ಅಲ್ಲದೇ, ಅದರ ನಿರ್ವಹಣೆಗಾಗಿ ಸಮರ್ಥರಾದ ನೂರಾ ನಾಲ್ವರು ಬ್ರಾಹ್ಮಣರನ್ನು ನೇಮಿಸಿದ. ಹರಿಹರಕ್ಕೆ ಸುಮಾರು ಆರು ಮೈಲುಗಳಷ್ಟು ದೂರವಿರುವ ಬಾನುವಳ್ಳಿಯಲ್ಲಿ, ಲಕ್ಷ್ಮೀನಾರಾಯಣ ದೇವಾಲಯವೊಂದನ್ನು ನಿರ್ಮಿಸಿ ಈ ನೂರಾನಾಲ್ವರು ಬ್ರಾಹ್ಮಣರಿಗೆ ಸರ್ವಮಾನ್ಯ ವಾಗಿ ದಾನ ಕೊಟ್ಟಿದ್ದಾನೆ.

ಈತ ಕೇವಲ ರಣರಂಗದಲ್ಲಿ ತೊಲಗದ ಕಂಭದಂತೆ ಇದ್ದ ವೀರ, ವಿಷ್ಣು ಭಕ್ತಿ ತಿಲಕ (೯೧ನೇ ಸಾಲು), ಗುರುಧರ್ಮ್ಮ ನಿರತ ನಷ್ಟೇ ಆಗಿರದೆ ಕಾವ್ಯ ರಚನಾಕಾರನೂ ಆಗಿದ್ದನೆಂದು ಇದೇ ಶಾಸನದಿಂದ ತಿಳಿದುಬರುತ್ತದೆ. ಪಂಪ, ಜನ್ನ ಇತ್ಯಾದಿ, ಪೂರ್ವ ಸೂರಿಗಳಂತೆ ದಂಡಾಧಿಕಾರಿಯಾಗಿದ್ದೂ ಕೂಡ, ಹರಿಯ ಅಪರಿಮಿತ ಭಕ್ತನಾಗಿದ್ದುದರ ಕನ್ನಡದಲ್ಲಿಯೇ ಹರಿಯನ್ನು ಕುರಿತಾದ ಒಂದು ಕಾವ್ಯವನ್ನೂ ರಚಿಸಿದ್ದಾನೆ. ಅದರ ಹೆಸರು "ಹರಿಚಾರಿತ್ರ್ಯ". ಈ ಕಾವ್ಯ "ಷಟ್ಪದ ಛಂದಸ್ಸಿನಲ್ಲಿ" ಇತ್ತೆಂದೂ ತಿಳಿದುಬರುತ್ತದೆ. ಆಂಧ್ರಪ್ರದೇಶದಲ್ಲಿ ಹುಟ್ಟಿ ಬೆಳೆದ ಸಹೃದಯ, ಸಂಗೀತ, ಸಾಹಿತ್ಯ ಭಕ್ತ ಕವಿಯೊಬ್ಬ ಕನ್ನಡದಲ್ಲಿ ಆಗಷ್ಟೇ ಉಗಮವಾಗುತ್ತಿದ್ದ, ಕನ್ನಡದ ವಿಶೇಷವೆಂದೇ ಮುಂದೆ ಪ್ರಸಿದ್ಧಿಗೆ ಬಂದ ಷಟ್ಪದ ಛಂದಸ್ಸಿನಲ್ಲಿ ಕೃತಿ ರಚನೆ ಮಾಡಿದ್ದ ಎನ್ನುವ ಹೊಸ ಬೆಳಕನ್ನು ಈ ಶಾನಸ ನಮಗೆ ಒದಗಿಸಿದೆ. ಆದರೆ ದುರದೃಷ್ಟವಶಾತ್ ಈ ಕಾವ್ಯ ನಮಗೆ ಈಗ ಲಭ್ಯವಿಲ್ಲ. ಮುಂದೆ ಸಂಶೋಧಿತವಾದರೆ ಶ್ರೀ ಎಚ್.ಎಮ್. ಶಂಕರ ನಾರಾಯಣರಾಯರು ಹೇಳುವಂತೆ "ಹರಿಹರನು ರಗಳೆಯನ್ನು ತನ್ನ ಭಾವವಾಹಿನಿಗೆ ಮಾಧ್ಯಮವನ್ನಾಗಿ ಮಾಡಿಕೊಂಡರೆ, ರಾಘವಾಂಕನು ಷಟ್ಪದಿಯನ್ನು ಆ ಕಾರ್ಯಕ್ಕೆ ಬಳಸಿ ಕೊಂಡನು. ಪೋಲಾಳ್ವನು ಇವರ ಸಮಕಾಲೀನ. ಚಂಪುವನ್ನು ಹಿಂದಿಟ್ಟು ಷಟ್ಪದಿಯಲ್ಲಿ ಕಾವ್ಯ ರಚನೆ ಮಾಡಿದ್ದು ಅವರ ಸಮಕಾಲೀನ ಪ್ರಜ್ಞೆ ಜಾಗೃತವಾಗಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿದೆ. ಎನ್ನುವ ಮಾತುಗಳು ಗಮನಾರ್ಹವಾಗಿವೆ (ಪುಟ ೬೫, ಹರಿಹರ ದೇವಾಲಯ ಚರಿತ್ರೆ, ಹೆಚ್.ಎಂ. ಶಂಕರ ನಾರಾಯಣರಾವ್, ೧೯೮೨). ಈ ಕುರಿತಾಗಿ ಅವರೇ ಟಿಪ್ಪಣಿಯಲ್ಲಿ ಕೊಟ್ಟಿರುವ ಇನ್ನಷ್ಟು ವಿವರಗಳನ್ನು ಕನ್ನಡ ಸಾಹಿತ್ಯದ ಸಂಶೋಧನಾ ದೃಷ್ಟಿಯಿಂದ ವಿಶೇಷ ಮಹತ್ವವನ್ನು ಪಡೆಯಬಹುದಾದ ಸೂಚನೆಗಳಿರುವುದರಿಂದ ಯಥಾವತ್ತಾಗಿ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

"ಪೋಲಾಳ್ವನು ಬ್ರಾಹ್ಮಣ ಕವಿಯೆಂದು ಡಾ. ಆರ್.ಸಿ. ಹಿರೇಮಠರು ಹೇಳುತ್ತಾರೆ. ಇದು ವಿಚಾರ ಮಾಡಬೇಕಾದ ಅಂಶ. ಇದು ಹೇಗೇ ಇರಲಿ; ರಾಘವಾಂಕನಿಗೂ ಇವನಿಗೂ ಪರಿಚಯವಿತ್ತೆಂಬುದು ಸ್ಪಷ್ಟವಾದ ವಿಷಯ. ರಾಘವಾಂಕನ ಕಾಲದ ವಿಷಯದಲ್ಲಿ ವಾದ ವಿವಾದಗಳಿವೆ. ಇದರಿಂದ ಷಟ್ಪದಿಯಲ್ಲಿ ಕಾವ್ಯವನ್ನು ಮೊದಲು ಬರೆದವನು ರಾಘವಾಂಕನೇ ಪೋಲಾಳ್ವನೇ ಎಂಬ ಅಂಶ ವಾದಗ್ರಸ್ತ ವಾಗುತ್ತದೆ. ಇದರಿಂದ ಒಂದು ಅಂಶವಂತೂ ಸ್ಪಷ್ಟ "ಷಟ್ಪದಿಯಲ್ಲಿ ಶೈವಕಾವ್ಯಗಳನ್ನು ಬರೆದವರಲ್ಲಿ ರಾಘವಾಂಕನು ಮೊದಲಿಗನಾದರೆ, ವೈಷ್ಣವ ಕಾವ್ಯಗಳನ್ನು ಬರೆದವರಲ್ಲಿ ಪೋಲಾಳ್ವನು ಮೊದಲಿಗನಾಗುತ್ತಾನೆ. ಅದು ಏನೇ ಇರಲಿ ತೆಲುಗು ಸಹೃದಯನೊಬ್ಬ, ಕನ್ನಡದಲ್ಲಿ ಕೆಲಸ ಮಾಡಿದ್ದು ಒಂದು ವಿಶೇಷ – ಅದೂ ತಮಗೆ ಒಗ್ಗದ ಷಟ್ಪದಿಯಲ್ಲಿ." (ಅದೇ ಪುಟ).

ನನ್ನ ಈ ಪುಟ್ಟ ಶೋಧನೆಯ ಅನಿಸಿಕೆಯ ಪ್ರಕಾರ, ಕನ್ನಡ ಷಟ್ಪದ ಛಂದಸ್ಸಿನ ಕಾವ್ಯ ಒಂದರ ಶಾಸನೋಕ್ತ ರಚನಾಕಾರ (ಕ್ರಿ.ಶ. ೧೨೨೪) ಅದೂ ತೆಲುಗು ಸೀಮೆಯಲ್ಲಿ ಹುಟ್ಟಿದ್ದ ಪೋಲಾಳ್ವನನ್ನು ಶಿಲ್ಪದಲ್ಲಿ ಗುರುತಿಸಿರುವುದು. ಮೇಲೆ ತಿಳಿಸಿರುವ ಮೂರ್ತಿಯಲ್ಲಿ ಎಡಗೈಯಲ್ಲಿ ಪುಸ್ತಕ ಹಿಡಿದಿರುವುದು. ಅದನ್ನು ಶಿಲ್ಪಿ ಚಿತ್ರಿಸಿರುವುದನ್ನೂ ಗಮನಿಸಿದರೆ ಪ್ರಾಯಶಃ "ಹರಿಚಾರಿತ್ರ" ಕಾವ್ಯ ಕವಿ ಇಳಿವಯಸ್ಸಿಗೆ ಬರುವ ಹೊತ್ತಿಗೇ ಸಾಕಷ್ಟು ಪ್ರಚಾರದಲ್ಲಿ ಇದ್ದಿರಬೇಕಾಗುತ್ತದೆ. ಪ್ರಾಯಶಃ ಕವಿಯು ಚಿಕ್ಕಂದಿನಲ್ಲೋ ಅಥವಾ ಪ್ರಾಯದಲ್ಲಿಯೋ ಬರೆದಿರಬೇಕು. ಈತನು ಕನ್ನಡ–ತೆಲುಗು ಪ್ರದೇಶದ ರಾಜ (ಹೊಯ್ಸಳ ಸಾಮ್ರಾಜ್ಯವು)ರಾಗಿದ್ದವರ, (ದಕ್ಷಿಣ ಭಾರತ ಮತ್ತು ಉತ್ತರದ ಗುಜರಾತ್ ಇತ್ಯಾದಿಗಳವರೆಗೆ ಹಬ್ಬಿತ್ತೆಂದು ಇದೇ ಶಾಸನದಲ್ಲಿದೆ) ಹಾಗೂ ಚಕ್ರವರ್ತಿಯ ನಿಕಟ ವರ್ತಿಯೂ ಆಗಿದ್ದುದರಿಂದ ಆಸ್ಥಾನಗಳಲ್ಲಿ ಅದರ ಕುರಿತಾದ ವಾಚನ, ವ್ಯಾಖ್ಯಾನಗಳು ಪ್ರಚಾರಗಳು ನಡೆದಿದ್ದಿರಬೇಕು. ಇಂಥ ಎಲ್ಲ ಸಂಗತಿಗಳೂ ಶಿಲ್ಪಿಯ ಮೇಲೆ ಪ್ರಭಾವ ಬೀರಿರಬಹುದಾದ ಸಾಧ್ಯತೆಗಳನ್ನು ಸೂಚನೆಗಳು ಈ ಸಮಕಾಲೀನ ಶಿಲ್ಪ ಮತ್ತು ಶಾಸನಗಳು ತಿಳಿಸುತ್ತವೆ. ಮುಂದೊಂದು ದಿನ ಈ ಕಾವ್ಯ ಕನ್ನಡಿಗರ ಕೈಸೇರಿ ಅನುವಾದಗೊಂಡು, ಅದರ ಭಕ್ತಿಯ ಬೆಳಕು ಮತ್ತು ಕನ್ನಡದ ಕಸ್ತೂರಿಯ ಕಂಪನ್ನು ಎಲ್ಲೆಡೆ ಪಸರಿಸುವಂತಾಗಲೀ ಎನ್ನುವದಷ್ಟೇ ಈಗಿನ ನನ್ನ ಸದಾಶಯ.

ಮಾಗಳದ ಶಾಸನದಲ್ಲಿ ಪೋಲಾಳ್ವ ದಂಡನಾಥನ ಉಲ್ಲೇಖ

ಈ ಶಾಸನ ರಂಗಾಪುರದಲ್ಲಿದೆ. ರಂಗಾಪುರವು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನಲ್ಲಿದೆ. ಮಾಗಳದಿಂದ ೨ ಕಿ.ಮೀ. ದೂರದಲ್ಲಿ ತುಂಗಭದ್ರಾನದಿಯ ಬಲದಂಡೆಯಲ್ಲಿ ಇರುವ, ನರಸಿಂಹ ದೇವರ ದೇವಾಲಯದ ಕೈ ಸಾಲೆಯ ಕಂಬದ, ಉತ್ತರ ಮುಖದಲ್ಲಿ ಈ ಶಾಸನವಿದೆ. ಹೊಯ್ಸಳ

ದೊರೆ ವೀರನರ ಸಿಂಹದೇವನು ಪಟ್ಟಕ್ಕೆ ಬಂದ ೫ನೆಯ ವರ್ಷದ ಪಾರ್ಥಿ ಸಂವತ್ಸರದ, ಕಾರ್ತೀಕ ಶುದ್ಧ ಉತ್ಥಾನ ದ್ವಾದಶೀ, ಗುರುವಾರ ಅಂದರೆ ಕ್ರಿ.ಶ. ೧೪–೧೦–೧೨೨೫ರಲ್ಲಿ ಈ ಶಾಸನವನ್ನು ಬರೆಸಿ ದಾನ ಕೊಟ್ಟಿರುತ್ತಾರೆ. (ಶಾ.ಸಂ. ೭೫: ಹಂಪಿ ವಿಶ್ವವಿದ್ಯಾಲಯದ ಬಳ್ಳಾರಿ ಜಿಲ್ಲೆ ಸಂಪುಟ ಸಂ. ಡಾ. ದೇವರ ಕೊಂಡಾರೆಡ್ಡಿ)

"ಪರಮ ಭಾಗವತಕುಲ ಲತಾವೃಂದಾ, ಮೋಹಾ ಸೌಂದರಾಯಮಾಗಿ ಪಾರಿಜಾತ।"(೫–೬ನೇ ಸಾಲುಗಳು) "ಶ್ರೀಪಾಲಿತರಾಷ್ಟ್ರ । ರಾಷ್ಟ್ರವಿಭೂಪ್ರಿಯ । ಸತ್ಪ್ರಿಯವಾಕ್ಯ ಲಕ್ಷ್ಮೀಲಲಿತ ಪ್ರತಾಪ । ತಪನ ಪ್ರಭೇತೇಜವಿರಾಜ । ರಾಜ ಸಂಮ್ಮೇಳನ ಮಂತ್ರಶಕ್ತ ಸಚಿವೋತ್ತಮನೆಂದು ಇಳೆಯಾಳ್ವಪ್ರಾ (ಇಳೆ ಆಳ್ವವಾ). ಪೋಲಾಳುವ ದಂಡನಾಥನಂ ಸಲೆ ಕೀರ್ತ್ತಿಸುವ (ರ್)ಿ ಬುಧ(ರ್)ರೂ(ಒ)ಲ್ದು ಸಂತತಂ ॥ (೧೦–೧೪ನೆ ಸಾಲುಗಳು)

"ಶ್ರೀಮನ್ಮಹಾಪ್ರಧಾನಿ ಪೋಲಾಳದಂಡನಾಯಕರು ಶ್ರೀಮನುಮಹಾಗ್ರಹಾರಂ ಮಾಂಗೋಳದ ಶ್ರೀನರಸಿಂಹ್ಯ ದೇವರ ನಂದಾದೀವಿಗೆಗೆ ಅಲ್ಲಿಯೋರೊಡೆಯ ಪ್ರಮುಖ ವಿಶೇಷಮಹಾಜನವಿನ್ಪೊರ್ವ್ವಮ್ರ್ಮುಖ್ಯವಾಗಿ ಘೈಸ್ಸಗೇರಿಯ ಮೊದಲು ತೆಂಕವಾಗಿಲ ಮನೆ ಗಾಣಂ ಸಹಿತ ಸರ್ಬ್ಬಾಬಾಧೆ ಪರಿಹಾರವಾಗಿ ಕೊಟ್ಟರು" (ಶಾಸನ ಸಾಲುಗಳು ೧೬–೨೦)

ಪೋಲಾಳ್ವದಂಡನಾಥನ ವ್ಯಕ್ತಿತ್ವವನ್ನು ವರ್ಣಿಸುವಾಗ, ಶಾಸನ ಕವಿಯು ಅವನಿಗೆ ಅನೇಕ ಗುಣವಾಚಕಗಳನ್ನು ಪುಂಖಾನು ಪುಂಖವಾಗಿ ಜೋಡಿಸಿ ಶಬ್ದಜಾಲವನ್ನೇ ಸೃಷ್ಟಿಸಿದ್ದಾನೆ ಎನ್ನಿಸಿ ದರೂ, ಇವು ಅವನ ವ್ಯಕ್ತಿತ್ವವನ್ನು ಹೇಗೆ ಬಿಂಬಿಸುತ್ತವೆ? ಎನ್ನುವ ಅಂಶವನ್ನು ಇಟ್ಟುಕೊಂಡು ಹೀಗೆ ವಿಶ್ಲೇಷಿಸಬಹು ದಾಗಿದೆ :

ಇಷ್ಟಾದರೂ ಅವನು ಇಲ್ಲಿ ಕೊಟ್ಟ ದಾನ ಮಾತ್ರಾ ಅಂತಹ ದೊಡ್ಡ ಮಟ್ಟದ್ದೆಂದು ಈ ಶಾಸನ ಓದಿದರೆ ಅನಿಸು ವುದಿಲ್ಲ. ಏಕೆಂದರೆ ಶ್ರೀನರಸಿಂಹ ದೇವರಿಗೆ ಅವನು ಕೊಟ್ಟಿರು ವುದು, ಕೇವಲ ನಂದಾದೀಪವನ್ನು ಹಚ್ಚಿ, ನಿರಂತರ ಸೇವೆ ಯನ್ನು ಮಾಡುವವರಿಗೆ. ಘೈಸ್ಸಗೇರಿ(?) ಗಿಂತ ಮುಂಚೆ ಬರುವ ಉತ್ತರ (ತೆಂಕಣ) ದಿಕ್ಕಿಗೆ ಬಾಗಿಲು ಇರುವ "ಒಂದು ಮನೆ ಮತ್ತು ಅದಕ್ಕೆ ಬೇಕಾಗುವ ಎಣ್ಣೆಯನ್ನು ತೆಗೆಯಲು ಒಂದು ಗಾಣಮಾತ್ರ". ಆದರೆ ಈ ದಾನವನ್ನು ಮಾಗಳದ ೨೦೦ ಮಹಾಜನರ ಸಮ್ಮುಖದಲ್ಲಿಯೇ ಕೊಟ್ಟನು ಎನ್ನುವ ಮಹತ್ವದ ವಿಷಯವನ್ನು ಉಲ್ಲೇಖಿಸುತ್ತಿದೆ. ಹೊಯಿಸಳ ರಾಜ್ಯದ ದಂಡಾಧಿಪನೊಬ್ಬ, ಈ ಸ್ಥಳಕ್ಕೆ ಭೇಟಿ ನೀಡಿ ನರಸಿಂಹ ಸ್ವಾಮಿಗೆ ಕಾಣಿಕೆ ನೀಡಿ ಸೇವೆ ಸಲ್ಲಿಸಿದ್ದ ಎನ್ನುವ ಅಂಶ ಇಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ.

ಹರಿಹರೇಶ್ವರ ದೇವಸ್ಥಾನದ ಎರಡನೇ ನವರಂಗದ ಗೋಡೆಯ ಮೇಲಿರುವ "ಮಹಾಪ್ರಧಾನ ಪೋಲಾಳ್ವ ದಂಡ ನಾಥಂ ಮಾಡಿಸಿದಂ ಮಂಗಳ ಮಹಾಶ್ರೀಶ್ರೀಶ್ರೀ" ಎನ್ನುವ ಶಾಸನ, ಮತ್ತು ದೇವಸ್ಥಾನದ ಹೊರಗಡೆ ಬಲಭಾಗದಲ್ಲಿ ದಕ್ಷಿಣ ದ್ವಾರದಲ್ಲಿ ಶ್ರೀ ಶಿವಾನಂದರ ಮಠಕ್ಕೆ ಹೋಗುವ ದಾರಿಯಲ್ಲಿರುವ, (ದಾವಣಗೆರೆ ೨೫ನೇ ಸಂಖ್ಯೆಯ ಶಾಸನ ಬಿ.ಎಲ್. ರೈಸ್ ಪ್ರತಿ) ಶಾಸನ ವಿವರಗಳನ್ನು–ಶಿಲ್ಪದಲ್ಲಿ ಕಾಣ ಬಹುದಾಗಿದೆ.

ಶಿಲ್ಪವು ಇದುವರೆಗೆ ತಿಳಿದಿರುವಂತೆ ಋಷ್ಯಶೃಂಗರ ದಾಗಿದ್ದರೆ, ಕಿರೀಟದ ಬದಲಾಗಿ ಕೂದಲಿನ ಮುಡಿ ಇರಬೇಕಾಗಿತ್ತು. ಹಣೆಯ ಮೇಲೆ ಭಸ್ಮದ ಗುರುತು, ಕೈಯಲ್ಲಿ ಇರಬೇಕಾಗಿತ್ತು.

ಬಲಗೈಯಲ್ಲಿ ಇರುವುದು ಅಕ್ಷಮಾಲೆ ಜಪದ ಸರವಲ್ಲ, ಎಡಗೈ ಅಥವಾ ಕಂಕುಳಲ್ಲಿ ಋಷಿ ಮುನಿಗಳಿಗೆ ಸಂಬಂಧಿಸಿ ದಂಥ ದಂಡ, ಕಮಂಡಲ ಮತ್ತು ಆಸನಗಳು ಇರಬೇಕಿತ್ತು (ಜಿಂಕೆ ಚರ್ಮ). ಆದರೆ ಇಲ್ಲಿ ಎಡಗೈಯಲ್ಲಿ ಪುಸ್ತಕವಿದೆ. ಪುಸ್ತಕವು ಜ್ಞಾನದ ಸಂಕೇತವಷ್ಟೇ ಅಲ್ಲ, ಇಲ್ಲಿ ವಿಶೇಷವಾಗಿ ಕವಿ ಎನ್ನುವುದನ್ನು ಸಾರುತ್ತಿದೆ. ಇನ್ನು ಬಲಗೈಯಲ್ಲಿರುವ ಅಕ್ಷಮಾಲೆ, ಗಡ್ಡಧಾರಿಯಾಗಿರುವುದರಿಂದ, ಶಾಸನಗಳು ಹೇಳುವಂತೆ ಈತ ತಪಸ್ವಿ ಹಾಗೂ ರಾಜಯೋಗಿ. ಪೋಲಾಳ್ವನು ಯುದ್ಧಕಲೆಯಲ್ಲಿ ಕಲಿಯಾಗಿರುವಂತೆ, ಶಾಂತಿ ಸಮಯದಲ್ಲಿ ಪರಮ ಭಾಗವತ ಭಕ್ತ ಕವಿಯೂ ಹೌದು. ಏಕೆಂದರೆ ಅವನು ಮೂವರು ಹೊಯ್ಸಳ ರಾಜರಿಗೆ, ಪ್ರಧಾನ ದಂಡನಾಯಕನೂ ಹೌದು. ಆತನ ಹಿಂದಿರುವ ಪ್ರಭಾವಳಿ ಯಲ್ಲಿ ಕಂಡರಿಸಲಾಗಿರುವ ಹೆಸರಿನ ಸಹಿತ ಉಲ್ಲೇಖವಿರುವ ಮಾಗಳದ ಶಾಸನವೂ ಆತನ ಔದಾರ್ಯ, ಕ್ಷಾತ್ರಗುಣಗಳನ್ನೂ ಉಲ್ಲೇಖಿಸುತ್ತಿವೆ. ಈತನದು "ಸುರಿಗಿರಪ ಧೈರ್ಯ". ಎಂದರೆ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಯುದ್ಧ ಮಾಡು ತ್ತಿದ್ದ ವೈರಿಯನ್ನು ಅಲ್ಲಿಯೆ ಸೊಂಟದಿಂದ ಬಳಸಿ ಇರಿದು ಕೊಲ್ಲುವಷ್ಟು ಪರಾಕ್ರಮಿ ಮತ್ತು ಈ ಒಂದು ವಿಶೇಷವಾದ ಯುದ್ಧದ ರೀತಿಯಲ್ಲಿ ಪರಿಣಿತನಾಗಿದ್ದವ.

ಮಹಾಪ್ರಧಾನಿ, ದಂಡನಾಥನೂ ಆಗಿದ್ದ ಪೋಲಾಳ್ವನ ಇನ್ನೂ ಅನೇಕ ಶಾಸನಗಳು ಕನ್ನಡದಷ್ಟೇ ಅಲ್ಲದೇ ತೆಲುಗು, ತಮಿಳಿನಲ್ಲಿ ಇರುವ ಸಾಧ್ಯತೆಗಳಿದ್ದು ಅವುಗಳ ಬಗೆಗೆ ಹೆಚ್ಚಿನ ಸಂಶೋಧನೆ ಮತ್ತು ವ್ಯಾಖ್ಯಾನಗಳಿಗೆ ಅವಕಾಶವಿದೆ. ಆಂಧ್ರಪ್ರದೇಶದ ಈತ ಹರಿಹರ ದೇವಸ್ಥಾನವನ್ನು ಅಷ್ಟೇ ಅಲ್ಲದೇ, ಬೇರೆ ಬೇರೆ ದೇವಸ್ಥಾನಗಳನ್ನು ಪುನರ್ ನಿರ್ಮಾಣ ಅಥವಾ ಹೊಸದಾಗಿಯೇ ನಿರ್ಮಿಸಿರುವ ಸಾಧ್ಯತೆಗಳಿವೆ. ಇದಕ್ಕೊಂದು ಉತ್ತಮ ಉದಾಹರಣೆ ಎಂದರೆ ಈತನೇ



ಹರಿಹರೇಶ್ವರ

ನಿರ್ಮಿಸಿರುವ ಬಾನುವಳ್ಳಿಯಲ್ಲಿರುವ ಲಕ್ಷೀನಾರಾಯಣ ದೇವಸ್ಥಾನ.

"ಈ ಮೇಲಿನ ಅಂಶಗಳಿಂದ ಇದುವರೆಗೆ ಅದೃಷ್ಟ ವಶಾತ್ ಋಷ್ಯಶೃಂಗರ ಹೆಸರಿನಲ್ಲಿ ಉಳಿದು ಬಂದಿರುವ, ಹರಿಹರೇಶ್ವರನ ಎಡಭಾಗದಲ್ಲಿಯ ಲಕ್ಷ್ಮೀದೇವಿಯ ವಿಗ್ರಹದ ಕೆಳಗೆ ಇರುವ ಮೂರ್ತಿಶಿಲ್ಪವು ನಿಸ್ಸಂದೇಹವಾಗಿ, ದೇವಸ್ಥಾನ ವನ್ನು ಅತ್ಯಂತ ಭವ್ಯವಾಗಿ ನಿರ್ಮಾಣ ಮಾಡಿರುವ ಭಾಗವತ ಸಂಪ್ರದಾಯದ(ಶ್ರೀ?) ವೈಷ್ಣವ ಪಂಥಕ್ಕೆ ಸೇರಿದ "ಪೋಲಾಳ್ವ ದಂಡನಾಥನದೇ ಆಗಿದೆ ಎನ್ನುವುದನ್ನು ಮೊದಲ ಬಾರಿಗೆ ಗುರುತಿಸಲಾಗಿದೆ".



ಪೋಲಾಳ್ವ ದಂಡನಾಥನ ವಿಗ್ರಹ

ಆಧಾರಸೂಚಿ

೧. ಬಿ.ಎಲ್. ರೈಸ್ ಅವರ ಎಪಿಗ್ರಾಫಿಯಾ ಕರ್ನಾಟಿಕಾ.
೨. ಹರಿಹರ ದೇವಾಲಯ ಚರಿತ್ರೆ, ಹೆಚ್.ಎಂ. ಶಂಕರ ನಾರಾಯಣರಾವ್, ೧೯೮೨.
೩. ಶಾ.ಸಂ. ೭೫. ಹಂಪಿ ವಿಶ್ವವಿದ್ಯಾಲಯದ ಬಳ್ಳಾರಿ ಜಿಲ್ಲೆ ಸಂಪುಟ. ಸಂ. ಡಾ. ದೇವರ ಕೊಂಡಾರೆಡ್ಡಿ.
೪. ಸ್ವ ಸಮೀಕ್ಷೆ.
೫. ಚಿತ್ರಗಳು ಶ್ರೀಮತಿ ಎಸ್. ಮಾಲತಿರಾವ್, ಬೆಂಗಳೂರು.

ಅಪರೂಪದ ಹಾಲಕನಹಾಳು ಶಂಕರನಾರಾಯಣ

ಸಂತೇಬೆನ್ನೂರು ಸುಮತೀಂದ್ರ ನಾಡಿಗ್*

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ೧೦ ಕಿ.ಮೀ. ದೂರದಲ್ಲಿ ಹಲಕನಹಾಳು ಎಂಬ ಗ್ರಾಮವಿದೆ. ಈ ಗ್ರಾಮದ ಸಮೀಪದಲ್ಲಿ ರಾಜ್ಯ ಹೆದ್ದಾರಿ-೭೬ ಹಾದು ಹೋಗಿದೆ ಇದೊಂದು ಪುನರ್ ನಿರ್ಮಿತ ವಸತಿ ಗ್ರಾಮವಾಗಿದ್ದು, ಗ್ರಾಮದ ದಕ್ಷಿಣಕ್ಕೆ ೧ ಕಿ.ಮೀ. ದೂರದಲ್ಲಿ ಹಳೆಯ ಗ್ರಾಮದ ಪಾಳು ನಿವೇಶನಗಳಿವೆ. ಅಲ್ಲಿ ಸುತ್ತಲೂ ಈಗ ತೆಂಗು, ಅಡಿಕೆ, ಬಾಳೆ ದಾಳಿಂಬೆ ಹುಣಸೆ ಮರ ತೋಟಗಳಿದ್ದು ಅದರ ಮಧ್ಯೆ ಆಸಂದಿಗಂಗರ ಕಾಲದ ಒಂದು ದ್ವಿಕುಟಾಚಲ ದೇವಸ್ಥಾನವಿದೆ. ಈಗ ಅದನ್ನು ಗ್ರಾಮಸ್ಥರು ಈಶ್ವರ ದೇವಸ್ಥಾನವೆಂದು ಕರೆಯುತ್ತಿದ್ದು, ಆ ದೇವಸ್ಥಾನ ಒಳಗಡೆ ಆಗ್ನೇಯ ದಿಕ್ಕಿನ ಗೋಡೆಗೆ ಲಗತ್ತಾಗಿ ೭೩ ಸಾಲಿರುವ ಒಂದು ಶಿಲಾಶಾಸನವಿದೆ. ಅದರಂತೆ ಶಾ.ಶ. ೧೧೩೬ನೇ ಶ್ರೀಮುಖ ಸಂವತ್ಸರದ ಫಾಲ್ಗುಣ ಶುದ್ಧ ೫ ಬೃಹಸ್ಪತಿವಾರ ಅಂದರೆ ಎಫಿಮರೀಸ್‌ನಂತೆ ದಿನಾಂಕ ೦೫-೦೨-೧೨೧೫ರಂದು ಉತ್ತರಾಯಣ ಸಂಕ್ರಾಂತಿ ಯಂದು ಹಾಲಕಾಳನಹಳ್ಳಿಯಲ್ಲಿ (ಅದರ ಪ್ರಾಚೀನ ಹೆಸರು) ಆ ದೇವಾಲಯವನ್ನು ಮುದಿಗೆರೆಯ ರಾಮಗೌಂಡ ಎಂಬುವನು ತನ್ನ ತಂದೆ ಬಿಲಿಗೊಂಡನ ನೆನಪಿನಲ್ಲಿ ಬಿಲ್ಲೇಶ್ವರ ದೇವರೆಂದು ಹೆಸರಿಸಿ ಲಿಂಗ ಪ್ರತಿಷ್ಠಾಪಿಸಿದನೆಂದು ತಿಳಿಸುತ್ತದೆ.

ಈ ರಾಮಗೊಂಡನು ಹೊಯ್ಸಳ ನಾರಸಿಂಹನ ಅಧೀನರಾಗಿ ಈ ಪ್ರಾಂತ್ಯವಾಳುತ್ತಿದ್ದ ಆಸಂಧಿ ಗಂಗರ ನಾಡ ಪ್ರಭುವಾಗಿದ್ದನೆಂದು ತಿಳಿಸುವ ಆ ಶಾಸನ ಪ್ರಾರಂಭದಲ್ಲಿ ಹೊಯ್ಸಳರ ಮತ್ತು ರಾಮಗೊಂಡನ ವಂಶಾವಳಿಯನ್ನು ಸವಿವರವಾಗಿ ಉಲ್ಲೇಖಿಸುತ್ತದೆ. ಮತ್ತು ಆ ದೇವಸ್ಥಾನ ಪ್ರತಿಷ್ಠಾಪಿಸಿ ಅದರ ಪೂಜಾ ಕೈಂಕರ್ಯ, ಅಂಗಭೋಗ, ರಂಗಭೋಗ ಇತ್ಯಾದಿಗಳಿಗೆ ಬ್ರಹ್ಮಪುರಿ ಮಾಧವಭಟ್ಟರು ಹಾಗೂ ದೇವಸ್ಥಾನ ಪ್ರತಿಷ್ಠಾಪಿಸಿದ ರಾಜಗುರು ಕ್ರಿಯಾಶಕ್ತಿ ದೇವರ್ಗೆ ಶಿವದೇವ ಭಟ್ಟೋಪಾಧ್ಯಾಯರು ಹಲವಾರು ಬೆದ್ದಲು, ಗದ್ದೆ, ಭೂಮಿದಾನ ಬಿಟ್ಟಿರುವುದನ್ನು ತಿಳಿಸುತ್ತದೆ.

ಪ್ರಸ್ತುತ ದೇವಸ್ಥಾನದ ಕಟ್ಟಡ ನೋಡಲು ಬಹಳ ಸಾಧಾರಣವಾಗಿದ್ದು ಸರಳ ವಾಸ್ತುವಿನಿಂದ ಕೂಡಿದೆ. ದೇವಸ್ಥಾನದ ಗೋಪುರ ಈಚೆಗೆ ನವೀಕರಿಸಿದಂತಿದ್ದು ಇದೊಂದು ದ್ವಿಕುಟಾಚಲವಾಗಿದೆ. ದಕ್ಷಿಣ ದಿಕ್ಕಿಗೆ ಮುಖ್ಯದ್ವಾರ ವಿರುವ ಈ ದೇವಸ್ಥಾನ ಪ್ರವೇಶದ ತಕ್ಷಣ ನವರಂಗವಿದೆ. ನವರಂಗದ ಎಡಭಾಗಕ್ಕೆ ಸುಕನಾಸಿ, ನಂತರ ಒಳಗೆ ಚಿಕ್ಕ ಗರ್ಭಗುಡಿ ಇದೆ. ಅಲ್ಲಿ ಪೂರ್ವಾಭಿಮುಖವಾಗಿ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ಗರ್ಭಗುಡಿಯ ಎದುರು ಬಸವಣ್ಣ ನಂದಿ, ಎಡಕ್ಕೆ ಗಣಪತಿ, ಬಲಕ್ಕೆ ಮಹಿಷಮರ್ಧಿನಿಯ ಸರ್ವಾಲಂಕೃತ ೫ ಅಡಿ ಎತ್ತರದ ಸುಂದರ ವಿಗ್ರಹಗಳಿವೆ.

ನವರಂಗದ ಪ್ರವೇಶದ ದ್ವಾರದ ಎದುರಿಗೆ ೨ ಅಡಿ ಪಾಣಿಪೀಠದ ಮೇಲೆ ಸುಂದರವೂ, ಆಕರ್ಷಕವೂ, ಅಪರೂಪವೂ ಆದ ಸಮಭಂಗಿಯಲ್ಲಿ ನಿಂತ ೪ ಅಡಿ ಎತ್ತರದ ಶಂಕರನಾರಾಯಣ ವಿಗ್ರಹವಿದೆ. ಇದೇ ಈ ದೇವಸ್ಥಾನದ ಕಲಾ ಸಂಪತ್ತು. ಈ ಶಂಕರನಾರಾಯಣ ವಿಗ್ರಹದಲ್ಲಿರಬೇಕಾದ ನಾಲ್ಕು ಕೈಗಳಲ್ಲಿ ಹಿಂದಿನ ಎರಡು ಕೈ ಮಾತ್ರ ಈಗ ಇದ್ದು ಮುಂದಿನ ಮುಂದಿನ ಎರಡು ಕೈ ಭಿನ್ನ ವಾಗಿವೆ. ಹಿಂದಿನ ಬಲಗೈಯಲ್ಲಿ ತ್ರಿಶೂಲವೂ ಶಿಲ್ಪದ ಶಿರೋಭಾಗದ ಜಟೆಯಲ್ಲಿ ಬಲಗಡೆ ಚಂದ್ರನ ಬಿಂಬವು ಶಿಲ್ಪದ ವಾಮಭಾಗದಲ್ಲಿ ಹಿಂದಿನ ಕೈನಲ್ಲಿ ಚಕ್ರವಿದೆ. ತಲೆಯ ಮೇಲೆ ಕಿರೀಟ ಹಣೆಯ ಬಲಭಾಗದಲ್ಲಿ ವಿಭೂತಿ ಚಿಹ್ನೆಯು, ಎಡಭಾಗದಲ್ಲಿ ನಾಮದ ಚಿಹ್ನೆಯು ಇವೆ. ವಿಗ್ರಹದ ಕಾಲುಬುಡದ ಬಲಭಾಗದಲ್ಲಿ ಪಾರ್ವತಿಯನ್ನು ಎಡಭಾಗದಲ್ಲಿ ಲಕ್ಷ್ಮೀಯ ಶಿಲ್ಪವನ್ನು ಬಿಡಿಸಲಾಗಿದೆ. ಶಂಕರನಾರಾಯಣ ವಿಗ್ರಹ ಸರ್ವಾಲಂಕಾರಕವಾಗಿದ್ದು, ಕಂಠಾಭರಣ ವೈಜಯಂತಿ ಮಾಲೆ, ಯಜ್ಞೋಪವೀತ, ಕರ್ಣಕುಂಡಲ, ತೋಳಬಂದಿ ಸೊಂಟ ಪಟ್ಟಿ ಮುಂತಾದ ಆಭರಣಗಳನ್ನು ಕುಶಲವಾಗಿ ಬಿಡಿಸಲಾಗಿದೆ. ವಿಗ್ರಹದ ಕೆಳಗಿನ ಪಾಣಿಪೀಠದಲ್ಲಿ ಬಲಕ್ಕೆ ನಂದಿ ಹಾಗೂ ಎಡಕ್ಕೆ ಗರುಡನ ಉಬ್ಬುಶಿಲ್ಪವನ್ನು ಬಿಡಿಸ ಲಾಗಿದೆ ಹೀಗೆ ಕಾಣುವ ಈ ಶಂಕರನಾರಾಯಣ ವಿಗ್ರಹ ಅಪರೂಪವಾಗಿದೆ.

ಈ ವಿಗ್ರಹದ ವಿಶೇಷತೆಯನ್ನು ಗಮನಿಸುವುದಾದರೆ ರಾಜ್ಯದ ಪ್ರಾಚೀನ ಹರಿಹರ ವಿಗ್ರಹಗಳಲ್ಲಿ ಇದು ಒಂದೆಂದು

* ಇತಿಹಾಸ ಸಂಶೋಧಕ ಮತ್ತು ಪತ್ರಕರ್ತ, ಸಂತೇಬೆನ್ನೂರು, ದಾವಣಗೆರೆ ಜಿಲ್ಲೆ-೫೭೭೫೫೨





ಗುರುತಿಸಬಹುದಾಗಿದೆ. ಇಲ್ಲಿಗೆ ಸುಮಾರು ೫೦ ಕಿ.ಮೀ ದೂರದ ಹರಿಹರ ಕ್ಷೇತ್ರದ ಹರಿಹರೇಶ್ವರ ದೇವಸ್ಥಾನವನ್ನು ಕ್ರಿ.ಶ. ೧೨೨೪ರಲ್ಲಿ ಹೊಯ್ಸಳ ಪೊಲಳ್ವ ನಿರ್ಮಿಸಿದನೆಂದು ದಾಖಲೆಗಳು ತಿಳಿಸುತ್ತಿದ್ದು ಈ ದೇವಸ್ಥಾನ ಅದಕ್ಕಿಂತ ೧೦ ವರ್ಷ ಪೂರ್ವದಲ್ಲಿಯೇ ನಿರ್ಮಾಣವಾಗಿದೆ. ಹರಿಹರ ದೇವಸ್ಥಾನ ತುಂಗಭದ್ರ ಹರಿದ್ರಾ ನದಿಯ ಸಂಗಮ ಕ್ಷೇತ್ರವಾಗಿದೆ. ಈ ಹರಿದ್ರಾನದಿ ಹರಿದು ಬರುವ ಹಳ್ಳದ ಬದಿಯಲ್ಲೇ ಹಲಕನ ಹಾಳಿನ ಈ ದೇವಸ್ಥಾನವಿದೆ. ಶಾಸನದಲ್ಲಿ ಇದನ್ನು ಹರಿಹರ ಎಂದು ಉಲ್ಲೇಖಿಸಲಾಗಿದ್ದರೂ ಬಲಭಾಗ ಶಂಕರ ರೂಪದಲ್ಲಿ ಎಡಭಾಗ ನಾರಾಯಣ (ವಿಷ್ಣು) ರೂಪದಿಂದಲೂ ಇರುವುದ ರಿಂದ ನಾನು ಇದನ್ನು ಶಂಕರ ನಾರಾಯಣ ವಿಗ್ರಹ ಎಂದು ಗುರುತಿಸಿ ಕರೆದಿದ್ದೇನೆ.

ವಿಷ್ಣು ಮೋಹಿನಿರೂಪವಾಗಿ ದೇವತೆಗಳಿಗೆ ಅಮೃತ ಹಂಚಿದ ವಿಷಯ ಎಲ್ಲರಿಗೂ ತಿಳಿದಿದೆ. ಹಾಗೆ ಎಡಗಡೆ ರೂಪ ಸ್ತ್ರೀಯೆಂದು ಕರೆಯಲಾಗುತ್ತದೆ. ಅರ್ಧನಾರೀಶ್ವರ ಪರಿಕಲ್ಪನೆಯಂತೆ ಶಂಕರನಾರಾಯಣ ಶಿಲ್ಪವೂ ರಚಿಸಲ್ಪಟಿದೆ. ಈಚಿನ ಕೆಲ ದೇವಸ್ಥಾನದ ಪಟ್ಟಿಗೆಯಲ್ಲಿ ಉಬ್ಬು ಶಿಲ್ಪದಲ್ಲಿ ಮೊದಲು ಹರಿಯ ರೂಪವೂ, ನಂತರ ಶಿವನ ರೂಪವೂ ಬಿಡಿಸಲಾಗಿದೆ. ಅವೆಲ್ಲಾ ಈಚೀನ ಕೃತಿಗಳೆನ್ನಬಹುದು. ಇದರಂತೆ ಈಗಲೂ ಮದುವೆಗಳಲ್ಲಿ ಮೊದಲು ಹೆಣ್ಣನ್ನು ಬಲಕ್ಕೆ ನಂತರ ಎಡಕ್ಕೆ ಕೂರಿಸಲಾಗುತ್ತದೆ.

ದೇವಸ್ಥಾನದ ಬಲಭಾಗಕ್ಕೆ ಚಿಕ್ಕದಾದ ಕಾಳಭೈರವನ ಗುಡಿ ಇದೆ. ಇದು ಸಹ ಸುಂದರ ವಿಗ್ರಹವಾಗಿದೆ. ನಗ್ನನಾಗಿ ರುವ ಈ ಭೈರವ ರುಂಡಮಾಲೆ ಧರಿಸಿದ್ದು, ಕೈಯಲ್ಲಿ ಹಾವು, ಪಾನಪಾತ್ರೆ ಹಿಡಿದುಕೊಂಡಿದ್ದು ನಾಯಿ ರುಂಡಮಾಲೆಯ ರಕ್ತವನ್ನು ಹೀರುವಂತೆ ಬಿಡಿಸಲಾಗಿದೆ. ಪಾಣಿಪೀಠದಲ್ಲಿ ಚೇಳಿನ ವಿಗ್ರಹವಿದೆ. ಹಾವನ್ನು ಜನಿವಾರದಂತೆ ಬಿಡಿಸಲಾಗಿದೆ. ಇವನನ್ನು ಕ್ಷೇತ್ರಪಾಲನೆಂದು ಪೂಜಿಸಲಾಗುತ್ತಿದೆ.

ಇಲ್ಲಿರುವ ಶಾಸನದಂತೆ ಇದೊಂದು ಬ್ರಹ್ಮಪುರಿ ಆಗಿತ್ತೆಂದು, ಈ ಶಾಸನದಲ್ಲಿ ರಾಜಗುರು ಕ್ರಿಯಾಶಕ್ತಿದೇವರ್ಗೆ ದತ್ತಿ ಬಿಟ್ಟಿರುವ ವಿಚಾರ ಪ್ರಸ್ತಾಪಿಸಿರುವುದರಿಂದ ಆ ಬಗ್ಗೆ ಇನ್ನಷ್ಟು ಮಾಹಿತಿ ಸಂಗ್ರಹಿಸಬೇಕಿದೆ. ಇದಲ್ಲದೆ ದೇವಸ್ಥಾನದ ಸುತ್ತ ಒಂದು ವೀರಗಲ್ಲು, ಮಾಸ್ತಿಕಲ್ಲು ಊರೊಳಗೆ ವ್ಯಾಸಾಂಜನೇಯ ದೇವಸ್ಥಾನ ಮುಂತಾದ ಪ್ರಾಚೀನ ಅವಶೇಷ ಗಳಿವೆ. ಹೀಗೆ ಪ್ರಕೃತಿ ಮಡಿಲಲ್ಲಿ ಇರುವ ಈ ದ್ವಿಕುಟಾಚಲ ಬಹು ಅಪರೂಪದ ವಾಸ್ತು ಶಿಲ್ಪ ಸಂಪತ್ತನ್ನು ಹೊಂದಿದ್ದು ಜನಮನದಿಂದ ದೂರವಿದೆ.

೧. ಈಶ್ವರಲಿಂಗದ ಮೇಲೆ ಎದುರಿನ ಕಿಂಡಿ ಮೂಲಕ ಸಂಕ್ರಾತಿಯಂದು ಸೂರ್ಯನ ಬೆಳಕು ಬೆಳಿಗ್ಗೆ ಬೀಳುವ ಹಾಗೆ ನಿರ್ಮಿಸಲಾಗಿದೆ.

೨. ದೇವಸ್ಥಾನದ ಹೊರಗಡೆ ಸಾಧಾರಣವಾಗಿದ್ದು ಪ್ರವೇಶದ್ವಾರ, ಗರ್ಭಗುಡಿ ಬಾಗಿಲ ಮೇಲೆ ಗಜಲಕ್ಷ್ಮೀಯ ಶಿಲ್ಪಗಳಿವೆ.

೩. ಶಾಸನದಲ್ಲಿ ಈ ದೇವಸ್ಥಾನವನ್ನು ಬಿಲ್ಲೇಶ್ವರ ದೇವಸ್ಥಾನ ಎಂದು ನಮೂದಿಸಿದ್ದು ರೈಸರು ಈ ದೇವಾಲಯ ಜಲ್ಲೇಶ್ವರ ದೇವಾಲಯ ಎಂದು ಕರೆದಿದ್ದಾರೆ. ಸ್ಥಳೀಯರು ಇದನ್ನು ಈಶ್ವರ ದೇವಸ್ಥಾನ ಎನ್ನುತ್ತಾರೆ.

೪. ಶಾಸನದಲ್ಲಿ ಇದನ್ನು ಹಾಲಕಾಳನಹಳ್ಳಿ ಎಂದು ಕರೆಯಲಾಗಿದ್ದು, ರೈಸರು ಇದನ್ನು ಅಲಕನಾಳು ಎಂದಿದ್ದಾರೆ, ಈಗ ಕಂದಾಯ ಇಲಾಖೆಯ ದಾಖಲೆಗಳಲ್ಲಿ ಹಲಕನಹಾಳು ಎಂದಿದೆ.

೫. ಶಾಸನದಲ್ಲಿ ಉಲ್ಲೇಖಿಸಿರುವ ಕ್ರಿಯಾಶಕ್ತಿ ಪಂಡಿತರ ಬಗ್ಗೆ ಇನ್ನಷ್ಟು ಮಾಹಿತಿ ಸಂಗ್ರಹಿಸಬೇಕಿದೆ.

ಇಲ್ಲಿರುವ ಶಾಸನದಿಂದ ಇದೊಂದು ಬ್ರಹ್ಮಪುರಿ ಆಗಿತ್ತೆಂದು ಗುರುತಿಸಬಹುದಾಗಿದೆ.

ಆಧಾರಸೂಚಿ

೧. ಎಫಿಗ್ರಾಫಿಯಾ ಆಫ್ ಕರ್ನಾಟಕ (ಸಂಪುಟ ೭, ಭಾಗ ೨) ಶಿವಮೊಗ್ಗ ಜಿಲ್ಲೆ. ಸಂ. ಬಿ.ಎಲ್.ರೈಸ್ ಮೈಸೂರು ಸರ್ಕಾರ ಬೆಂಗಳೂರು, ೧೯೦೨.

೨. ದಾವಣಗೆರೆ ಜಿಲ್ಲೆ : ಇತಿಹಾಸದ ಕೆಲವು ಹೆಜ್ಜೆಗಳು, ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ವಿಜಯ ಯುವಕ ಸಂಘ. ಸಂತೇಬೆನ್ನೂರು, ೨೦೧೦.

೩. ದಾವಣಗೆರೆ ಇದು ನಮ್ಮ ಜಿಲ್ಲೆ, ಟಿ. ಗಿರಿಜ, ನಿಹಾರಿಕ ಪ್ರಕಾಶನ. ದಾವಣಗೆರೆ –೨೦೦೧.

೬೫

ವಿಜಯಪುರದ ಆದಿಲ್‌ಷಾಹಿ ಹಸ್ತಪ್ರತಿ ಚಿತ್ರಕಲೆ

ಡಾ. ಹೆಚ್.ಈ. ಬಸವರಾಜಪ್ಪ*

ವಿಜಯಪುರದ ಆದಿಲ್‌ಷಾಹಿ ರಾಜ್ಯ ದಖನಿನಲ್ಲಿ ಅತಿ ಪ್ರಬಲವಾದ ಮುಸಲ್ಮಾನ ರಾಜ್ಯವಾಗಿ ಸುಮಾರು ಇನ್ನೂರು ವರ್ಷಗಳ ಕಾಲ ಆಡಳಿತ ನಡೆಸಿತ್ತು (೧೪೮೯–೧೬೮೬). ಯುಸುಫ್ ಅದಿಲ್‌ಷಾ ಸೇರಿದಂತೆ ಎಂಟು ಮಂದಿ ಸುಲ್ತಾನರು ಆಡಳಿತ ನಡೆಸಿದರು. ಈ ಆವಧಿಯಲ್ಲಿ ಬಿಜಾಪುರ ನಗರವನ್ನು ಸುಂದರವಾದ ಕಟ್ಟಡಗಳು; ಮಸೀದಿಗಳು, ಬಾವಿಗಳು ಹಾಗೂ ಕೋಟೆಗಳ ನಿರ್ಮಾಣದಿಂದ ಅಲಂಕೃತಗೊಳಿಸಿದರು. ವಿಜಯಪುರದ ಕಲಾ ಚೆಲುವನ್ನು ಪೋಷಿಸಿ ಬೆಳೆಸಿದ ಆದಿಲ್‌ಷಾಹಿ ಸುಲ್ತಾನರು ಕಲೆ ವಾಸ್ತುಶಿಲ್ಪ, ಚಿತ್ರಕಲೆ ಹಾಗೂ ಹಸ್ತಪ್ರತಿ ಚಿತ್ರಕಲೆಗೂ ತಮ್ಮದೇ ಕೊಡುಗೆ ನೀಡಿರುವುದನ್ನು ಇಲ್ಲಿ ವಿವೇಚಿಸಲಾಗಿದೆ.

ವಿಜಯಪುರ ಆದಿಲ್‌ಷಾಹಿ ವಾಸ್ತುಶಿಲ್ಪದಂತೆ ಆದಿಲ್‌ಷಾಹಿ ಹಸ್ತಪ್ರತಿ ಚಿತ್ರಕಲೆಯು ಕೂಡ ಅ ವಂಶದ ಸುಲ್ತಾನರೊಂದಿಗೆ ನಿಕಟ ಸಂಬಂಧ ಹೊಂದಿದೆ. ಭಾರತೀಯ ಸಂದರ್ಭದಲ್ಲಿ ಬೆಳೆದ ಬಿಜಾಪುರ ಹಸ್ತಪ್ರತಿ ಚಿತ್ರಕಲೆ ಅಪೂರ್ವವಾದ ಹಾಗೂ ವಿಶಿಷ್ಟ ವಿದ್ಯಮಾನದಿಂದ ಕಾಣುತ್ತದೆ. ವಿಜಯಪುರ ಹಸ್ತಪ್ರತಿ ಚಿತ್ರಕಲೆಯ ಗುರಿ ಮತ್ತು ಸೌಂದರ್ಯ ಮೀಮಾಂಸಾ ದೃಷ್ಟಿಕೋನದಲ್ಲಿ ಅದು ಪ್ರಮುಖವಾದ ಭಾರತೀಯ ವರ್ಣ ಚಿತ್ರಕಲೆಯ ನೈಜತೆಯಿಂದ ದೂರವಾದ ಹಾಗೂ ಧಾರ್ಮಿಕತೆಯಿಂದ ಕೂಡಿದ ಪೂರ್ತಿ ಲೌಕಿಕವೂ ಆಗಿದೆ. ವಿಜಯಪುರ ಹಸ್ತಪ್ರತಿಯು ಮೊದಲ ಇಬ್ರಾಹಿಮ್ ಮತ್ತು ಎರಡನೆಯ ಇಬ್ರಾಹಿಮ್‌ರ ಸೃಷ್ಟಿಯೆಂದರೆ ತಪ್ಪಾಗದು. ಅವರ ವಿಶಿಷ್ಟ ವ್ಯಕ್ತಿತ್ವ, ಕಲಾಪ್ರೇಮ ಇಲ್ಲದೇ ಹೋಗಿದ್ದರೆ ಬಹುಶಃ ಅದು ಉದಯಿಸುತ್ತಿರಲ್ಲಿಲ್ಲವೋ ಏನೋ. ಸುಲ್ತಾನ್ ೨ನೇ ಇಬ್ರಾಹಿಂ ವಿಜಯಪುರದ ವರ್ಣಚಿತ್ರಕಲೆಯಲ್ಲಿ ಅತಿ ಪ್ರಭಾವಿ ವ್ಯಕ್ತಿಯಾಗಿದ್ದಾನೆ. ಸುಲ್ತಾನ ಒಬ್ಬ ಕಲಾಪೋಷಕನಾಗಿದ್ದರಿಂದ ಇವನ ಅಶ್ರಯದಲ್ಲಿ ವಿವಿಧ ದೇಶಗಳ ಕಲಾವಿದರು ಆಶ್ರಯ ಪಡೆದಿದ್ದರು. ಇವರ ಕಾಲದಿಂದ ಬೆಳೆದುಬಂದ ವಿಜಯಪುರ ಚಿತ್ರಕಲೆ, ದಖನಿ ಚಿತ್ರಕಲೆಯಲ್ಲಿ ತನ್ನ ವಿಶಿಷ್ಟ ಲಕ್ಷಣಗಳಿಂದಾಗಿ "ವಿಜಯಪುರ ಶೈಲಿ" ಎಂದು ಗುರುತಿಸಿಕೊಂಡಿತ್ತು.

ವಿಜಯಪುರ ಹಸ್ತಪ್ರತಿ ಚಿತ್ರಕಲೆ ಕುರಿತಾದ ದಾಖಲೆಗಳು ಅಗಾಧವಾಗಿವೆ. ೨ನೇ ಇಬ್ರಾಮ್ ರಚಿಸಿದ ಕಿತಾಬೆ–ಇ–ನವರಸ್ ಆತನ ಆಸ್ಥಾನದಲ್ಲಿ ೩೦೦ಕ್ಕೂ ಹೆಚ್ಚು ಕವಿಗಳಿದ್ದರು. ಅಪೂರಿಯಂಥ ವಿಶ್ವವಿಖ್ಯಾತ ಕವಿ, 'ಫೆರಿಷ್ತಾ'ನಂಥ ಇತಿಹಾಸಕಾರ, ಈ ಕಾಲದ ಭಾವಚಿತ್ರ ಕಲಾವಿದರ ಹೆಸರುಗಳು ನಮಗೆ ತಿಳಿದಿವೆ. ಕಲಾವಿದರ ವ್ಯಕ್ತಿಚಿತ್ರಗಳೂ ಕೂಡ ಲಭ್ಯ ಇವೆ. ಈ ಕಲೆ ಭಾರತೀಯ, ಪರ್ಷಿಯನ್ ಹಾಗೂ ಐರೋಪ್ಯ ಕಲಾಶೈಲಿಗಳ ಸಮ್ಮಿಳಿತದಿಂದ ಸೃಜಿತಗೊಂಡ ಹೊಸ ಶೈಲಿ ಎಂದು ಕರೆಯಲು ಯೋಗ್ಯವಾಗಿದೆ. ಯುಸುಫ್‌ನ ಮಗ ಇಸ್ಮಾಯಿಲ್, ಇಸ್ಮಾಯಿಲ್ ಮಗ ಇಬ್ರಾಹಿಮ್, ೨ನೇ ಇಬ್ರಾಹಿಮ್ ಇನ್ನಿತರ ಸುಲ್ತಾನರು. ತಮ್ಮ ಘನತೆಯ ಬಗ್ಗೆ ಹೆಮ್ಮೆಪಡುವ ವ್ಯಕ್ತಿಯಾಗಿದ್ದರು. ತಮ್ಮ ಕುಲದ ಬಗ್ಗೆಯೂ ಹೆಮ್ಮೆ ಪಡುತ್ತಿದ್ದರು. ತಮ್ಮ ಪೂರ್ವಜರ ತಮ್ಮ ಸ್ವತಃ ವ್ಯಕ್ತಿತ್ವದ ಘನತೆಯನ್ನು ಪ್ರಜೆಗಳ ಮುಂದೆ ತೋರ್ಪಡಿಸಲು ಒಂದು ರೀತಿಯ ಜಾಹೀರಾತುಗಳಂತೆ ವರ್ತಿಸುವ ಚಿತ್ರಗಳನ್ನು ಕಲಾವಿದರು ರಚಿಸುವಂತೆ ಮಾಡಿದ್ದರು. ೨ನೇ ಇಬ್ರಾಹಿಂನ ಒಂದು ಕಲಾಕೃತಿ ಲಂಡನ್ನಿನ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿದೆ. ಸೆಂಟ್ ಪೀಟರ್ಸ್ ಚಿತ್ರಿಸಿದ ಇನ್‌ಸ್ಟಿಟ್ಯೂಟ್ ಆಫ್ ದಿ ಪೀಪಲ್ ಆಫ್ ಏಷಿಯಾ ಅಕಾಡಮಿ ಆಫ್ ಸೈನ್ಸ್ ವಿಭಾಗದ ಸಂಗ್ರಹಾಲಯದಲ್ಲಿರುವ ಪಿಯಸ್ಟ್ ಎಂದು ಕರೆಯಲ್ಪಡುವ ಚಿತ್ರ ಭಾರತೀಯ ಚಿತ್ರಕಲೆಯ ಒಂದು ಅತ್ಯುತ್ತಮ ಕಲಾಕೃತಿ ಎಂದು ಕರೆಯಲ್ಪಡುವ ಚಿತ್ರವಾಗಿದೆ. ಹೀಗೆ ಹಸ್ತಪ್ರತಿಗಳ ಮೇಲಿರುವ ಚಿತ್ರಗಳ ವಾಸ್ತುಲಕ್ಷಣಗಳು ಮತ್ತು ವಸ್ತುಗಳು ಭಿನ್ನವಾಗಿವೆ.

ಭಾರತೀಯ ರೀತಿಯಲ್ಲಿ ಪಾರ್ಶ್ವನೋಟವಾಗಿ ಚಿತ್ರಿಸುವುದು, ಹಸ್ತಪತಿ ಚಿತ್ರಗಳಲ್ಲಿ ಮೈಗೆ ದಟ್ಟ ಬಣ್ಣ ಬಳಿದಿರುವುದು ಇತ್ಯಾದಿಗಳು ಭಾರತೀಯ ಚಿತ್ರಕಲಾವಿದರೂ ಕೂಡ ಈ ಯೋಜನೆಯಲ್ಲಿ ಭಾಗವಹಿಸಿದ್ದರೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಈ ಚಿತ್ರಗಳ ಕಥಾವಸ್ತುಗಳು ಧಾರ್ಮಿಕ ಹಿನ್ನೆಲೆಯಿಂದ ಕೂಡಿರುತ್ತವೆ. ದಖನ್‌ನಲ್ಲಿ ಮುಸ್ಲಿಂ ವಾಸ್ತುಶಿಲ್ಪ ಶೈಲಿಯು

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕೆ.ಎಲ್.ಇ ಬಿ ಕೆ ಕಾಲೇಜ್, ಚಿಕ್ಕೋಡಿ

ಇರಾನ್ ಹಾಗೂ ಮಧ್ಯ ಏಷ್ಯಾಗಳಿಂದಲೂ ಪ್ರಭಾವಿತವಾಗಿತ್ತು. ಹಸ್ತಪ್ರತಿ ಚಿತ್ರಕಲೆಯು ಇವುಗಳಿಂದ ಪ್ರಭಾವಿತವಾಗಿ ಹೊಸ ಪಂಥವೊಂದು ಬೆಳೆಯಿತು. ಇದು ಪರ್ಷಿಯನ್ ಪರಂಪರೆಗಳ ಮುಂದುವರಿಕೆಯಾಗಿದೆ. ವಾಸ್ತವವಾಗಿ ಪರ್ಷಿಯದಲ್ಲಿ ಈ ಕಲಾಪ್ರಕಾರ ಆರಂಭದಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಅಂದರೆ ರಾಜಸ್ಥಾನದ ಸೂಕ್ಷ್ಮ ಹಸ್ತಪ್ರತಿ ಚಿತ್ರಕಲಾ ಪ್ರತಿಗಳು ಪರ್ಷಿಯನ್ ಕಲಾಕೃತಿಗಳಿಗಿಂತ ಹೆಚ್ಚು ವಾಸ್ತವಿಕವಾಗಿವೆ. ಮತ್ತು ಅಷ್ಟು ಶೈಲೀಕೃತವಲ್ಲ. ಬಿಜಾಪುರದ ಹಸ್ತಪ್ರತಿ ಚಿತ್ರಗಳು ಏಕ ಆಯಾಮದವು. ಗಾತ್ರವನ್ನು ಕುಂಚದ ಬೀಸಿನಿಂದಷ್ಟೆ ಸೂಚಿಸಲಾಗಿದೆ. ಕಣ್ಣೋಟದಲ್ಲಿ ಮೂರು ಸಮತಲಗಳಿವೆ. ಕೆಳಗಿನದು, ಮಧ್ಯದ್ದು ಹಾಗೂ ಮೇಲಿನದು. ಮಧ್ಯ ಸಮತಲ ದಲ್ಲಿನ ಆಕೃತಿಗಳಿಂದ ಹೆಚ್ಚು ದೊಡ್ಡವಾಗಿದ್ದವು. ೨ನೇ ಇಬ್ರಾಹಿಂ ಆದಿಲ್‌ಶಾಹನು ಬರೆದ ಕಿತಾಬ್-ಇ-ನವರಸ್ ಗ್ರಂಥ ವಿಮರ್ಶೆ ಮಾಡಿರುವ ಲಖನೌ ವಿಶ್ವವಿದ್ಯಾಲಯದ ಪ್ರೊ. ನಝೀರ್ ಅಹಮದ್ ಅವರು ಅಭಿಪ್ರಾಯಪಡುವಂತೆ ಇಬ್ರಾಹಿಮ್ ಆದಿಲ್‌ಶಾಹನ ಸ್ಮರಣೆಯು ಆತನ ಸಮಕಾಲೀನ ದಖನಿ ಕಲಾಶೈಲಿಯ ಪ್ರಾರಂಭಿಕ ಚಿತ್ರಗಳು ಕಿರುರೂಪದಲ್ಲಿ 'ನಜುಮ್-ಉಲ್-ಉಲೂಮ್'ದಲ್ಲಿ ಕ್ರಿ.ಶ. ೧೫೭೦ರಲ್ಲಿ ಕಾಣಿಸಿವೆ. ಈ ಕಾಗದದ ಹಸ್ತಪ್ರತಿಯು ಪರ್ಷಿಯನ್ ಮತ್ತು ತುರ್ಕಿಯ ಸೌಹಾರ್ದತೆಯನ್ನು ಸಾರುವ ಪ್ರಭಾವಗಳಿಂದ ಕೂಡಿದ ಚಿತ್ರಗಳಿಂದಿದ್ದು ಮೊದಲ ಇಬ್ರಾಹಿಂ ದೊರೆಯ ಕಾಲದಲ್ಲಿ ಸಮಿಶ್ರ ಶೈಲಿಯೊಂದು ಬಿಜಾಪುರದಲ್ಲಿ ಬೆಳೆಯ ಲಾರಂಭಿಸಿತು. ಈ ಶೈಲಿಯ ಲಕ್ಷಣವೆಂದರೆ ಹಸ್ತಪ್ರತಿಯೊಳಗಿನ ಉಜ್ವಲವಾದ ಭಾರತೀಯರ ಭಾವುಕತೆಗಳನ್ನು ಪರ್ಶಿಯಾ ದೇಶದ ಅಲಂಕಾರಿಕ ವರ್ಣಗಾರಿಕೆಯಿಂದ ಒಂದುಗೂಡಿಸಿ ದ್ದಾಗಿದೆ. ಇಮ್ಮಡಿ ಇಬ್ರಾಹಿಂನ ದೀರ್ಘ ಕಾಲದಾಡಳಿತದಲ್ಲೂ ವಿಜಯ ಪುರದ ದಖನಿ ಶೈಲಿಯ ಹಸ್ತಪ್ರತಿ ಚಿತ್ರಗಾರಿಕೆಯು ಜನರಿಂದ ಮೆಚ್ಚುಗೆಯನ್ನು ಗಳಿಸಿತು. ಇಬ್ರಾಹಿಂ ಸುಲ್ತಾನನ ಪ್ರೋತ್ಸಾಹ ಪ್ರೋಷಣೆಗಳಿಂದ ಬೆಳೆದ ಈ ದಖನಿ ಶೈಲಿಯು ಕೇವಲ ಭಾರತ, ಪರ್ಶಿಯಾ ದೇಶಗಳನ್ನಲ್ಲದೇ ಐರೋಪ್ಯ ಶೈಲಿ ಮೇಲೆ ಸಹ ಪ್ರಭಾವ ಬೀರಿತ್ತು. ಬಿಜಾಪುರದ ಆದಿಲ್‌ಶಾಹಿ ಕಾಲದ ಹಸ್ತಪ್ರತಿ ಚಿತ್ರಗಳಿರುವ ಗ್ರಂಥಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧) ನಜುಮ್-ಅಲ್-ಉಲೂಮ್ (೧೫೭೦) ಮೊದಲನೆ ಅಲಿ ಆದಿಲ್‌ಶಾಹನ ಕಾಲದಲ್ಲಿ ಕ್ರಿ.ಶ. ೧೫೭೦ರಲ್ಲಿ ಈ ಕೃತಿಯನ್ನು ರಚಿಸಲಾಗಿದೆ. ಈ ಕೃತಿಯಲ್ಲಿ ನಕ್ಷತ್ರ ಶಾಸ್ತ್ರದ ಜ್ಯೋತಿಷ್ಯ ಮಾಂತ್ರಿಕತೆಯ ವಿವರಗಳನ್ನು ನೀಡಲಾಗಿದೆ. ಈ ಕೃತಿಯಲ್ಲಿ ೮೭೬ ಕಿರು ರೂಪದ ಚಿತ್ರಗಳಿವೆ. ಈ ಚಿತ್ರಗಳ ಶೈಲಿಯನ್ನು ಗಮನಿಸಿದ ವಿದ್ವಾಂಸರು ಇದರ ಕಾಲಮಾನವನ್ನು ಗುರುತಿಸಿದ್ದಾರೆ. ಒಂದು ಹಸ್ತಪ್ರತಿ ಚಿತ್ರದಲ್ಲಿ ಮಗುವಿಗೆ ಮೊಲೆ ಹಾಲು ನೀಡುತ್ತಿರುವ ತಾಯಿಯ ಬದಿಯಲ್ಲಿ ಸೇವಕಿಯರು ಚಾಮರ ಮತ್ತು ಕೊಡೆ ಹಿಡಿದಿರುವರು ಇನ್ನೊಬ್ಬ ಸೇವಕಿ ರಾಣಿಯ ಪಾದ ಉಜ್ಜುತ್ತಿರುವಳು. ಈ ಚಿತ್ರಗಳು ಕಾಣುವಂತೆ ಪಾರ್ಶ್ವಮುಖದಲ್ಲಿದ್ದು ಭಾರತೀಯ ಉಡುಪುಗಳಲ್ಲಿ ಅಲಂಕೃತವಾಗಿರುವು ದನ್ನು ಕಾಣುತ್ತೇವೆ.

೨) ರತನ್ ಕಲಿಯಾ (೧೫೯೨) ಈ ಹಸ್ತಪ್ರತಿ ಚಿತ್ರವು ಎರಡನೇ ಇಬ್ರಾಹಿಂ ಆದಿಲ್‌ಶಾಹನ ಕಾಲದ ಹಸ್ತಪ್ರತಿ ಯಾಗಿದೆ. ಈಗಿದು ಬ್ರಿಟಿಷ್ ವಸ್ತುಸಂಗ್ರಹಾಲಯ ದಲ್ಲಿದೆ ಎಂದು ಜಗದೀಶ ಮಿಥಲ್ ಅವರು ಅಭಿಪ್ರಾಯಪಡುತ್ತಾರೆ. ಇದರಲ್ಲಿ ಅಂದಿನ ಸಾಮಾಜಿಕ ಬದುಕು, ಜನಜೀವನ, ಜನರ ರೀತಿನೀತಿ ಹಬ್ಬಗಳ ಅಚರಣೆ ಮತ್ತು ಸಾಮಾನ್ಯ ಕ್ರೀಡೆಗಳ ಬಗೆಗೆ ಇದರಲ್ಲಿ ವಿವರಣೆ ನೀಡಲಾಗಿದೆ.

೩) ನಿಜಮಾತ್ ನಾಮ (೧೫೯೫) ಅದಿಲ್‌ಶಾಹಿ ಎರಡನೇ ಇಬ್ರಾಹಿಂ ಆದಿಲ್‌ಶಾಹನ ಕಾಲದಲ್ಲೇ ರೂಪಗೊಂಡ ಈ ಹಸ್ತಪ್ರತಿಯು ಹೈದರಾಬಾದಿನ ಸಾಲಾರಜಂಗ್ ವಸ್ತುಸಂಗ್ರಹಾಲಯದಲ್ಲಿತ್ತು. ಈಗದು ದೆಹಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿದೆ. ಇದರಲ್ಲಿ ಅರಸರು ಮತ್ತು ಅಂತಃಪುರದ ಅನೇಕ ಜನರ ಚಿತ್ರಗಳಿವೆ. ಇದರಲ್ಲಿ ಎರಡನೆಯ ಇಬ್ರಾಹಿಂ ಸುಲ್ತಾನನ ಒಂಬತ್ತು ವರ್ಷದ ಚಿತ್ರವೂ ಇದರಲ್ಲಿದೆ. ಈ ದೊರೆಯ ಸಮಕಾಲೀನನಾದ ಫಾರಕ್ ಹುಸೇನನು ಅಂದಿನ ಅದ್ವಿತೀಯ ಚಿತ್ರಕಲಾವಿದ ನಾಗಿದ್ದನು.

೪) ಕಿತಾಬ್-ಇ-ನವರಸ್ (೧೫೫೮) ಇಮ್ಮಡಿ ಇಬ್ರಾಹಿಂನ ಸಂಗೀತ ಮತ್ತು ಧಾರ್ಮಿಕ ಸೌಹಾರ್ದತೆ ಯನ್ನು ಒಳಗೊಂಡ ಗ್ರಂಥವಾಗಿದೆ. ಇದರಲ್ಲಿ ರಾಗಮಾಲಾ ಚಿತ್ರಗಳು, ಸುಲ್ತಾನರ ಚಿತ್ರಗಳು, ಸಾಮಾನ್ಯ ಜನಜೀವನ, ಚಿತ್ರಗಳು ಇವೆ. ಆದಿಲ್‌ಶಾಹಿ ಸುಲ್ತಾನರ ಕೊಡುಗೆಯಾದ ಈ ಪುಸ್ತಕವನ್ನು ಕುರಿತು ಹಲವು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ನಡೆದಿದೆ. ಇದರಲ್ಲಿ ಹಿಂದೂ ದೇವತೆಗಳ ಸ್ತುತಿ, ಗುಲಬರ್ಗಾದ ಬಂದೇನವಾಜರ ಸ್ತುತಿ, ಇಬ್ರಾಹಿಂ ತಂಬೂರಿ ಸ್ತುತಿ, ಅತನ ಹೆಂಡತಿ ಚಾಂದ್ ಸುಲ್ತಾನಳ ಸ್ತುತಿ, ತಾಯಿ ಬಡೇಸಾಹೇಬಳ ಸ್ತುತಿ, ವಿರಹ ಶೃಂಗಾರ ಗೀತೆಗಳು ರಾಗಮಾಲಿಕೆ ಚಿತ್ರಗಳನ್ನು ಈ ಗ್ರಂಥವು ಒಳಗೊಂಡಿದೆ.

೫) ಖವ್ವರನಾಮ (೧೬೪೦) ಮಹಮ್ಮದ್ ಆದಿಲ್‌ಶಾಹಿ ಆಡಳಿತದಲ್ಲಿ ಕವಿ ರುಸ್ತುಂ ರಚಿಸಿದ ಈ ಗ್ರಂಥವು ಪರ್ಷಿಯಾ ಮಾದರಿಯ ಮೊತಿಫದ ಮತ್ತು ೧೭ನೇ ಶತಮಾನದ ದಖನಿ ಚಿತ್ರಗಳಿರುವ ಕೃತಿಯಾಗಿದೆ. ಈ ಕೃತಿಯಲ್ಲಿ ಮೊಗಲ್ ಶೈಲಿಯ ನೀಲಿ, ಕೆಂಪು, ಹಳದಿಯಂತಹ ಉಜ್ವಲ ವರ್ಣಗಳ ಬಳಕೆಯಾಗಿದ್ದು ಕಲಾವಿದರ ಕೈಚಳಕವು ಈ ಕೃತಿಯಲ್ಲಿದೆ. ಉತ್ತಮ ರೇಖಾಚಿತ್ರ ಸಂಯೋಜನೆಗಳಿಂದ ಚಿತ್ರ ಮನೋಹರ ವಾಗಿವೆ.

೬) ದಿವಾನ್-ಇ-ಉರ್ಫ (೧೬೩೬) ಈ ಹಸ್ತಪ್ರತಿಯು ಆಕೃತಿಯಲ್ಲಿ ಚಿಕ್ಕದಾಗಿದ್ದು ಈಗ ಅದು ಅಮೇರಿಕದ ಫಾಗ್ ಆರ್ಟ್ ವಸ್ತುಸಂಗ್ರಹಾಲಯದಲ್ಲಿದೆ. ಇದರಲ್ಲಿ ಆರು ಚಿತ್ರಗಳಿದ್ದು ಅದರಲ್ಲಿ ಮೂರು ಕಿರು ಚಿತ್ರಗಳಿವೆ. ಇದರಲ್ಲಿ ಮಹಮ್ಮದ್ ಆದಿಲ್ ಶಾಹನ ಮತ್ತು ಆತನೊಂದಿಗಿದ್ದ ನಂತರದ ತತ್ವಜ್ಞಾನಿಗಳ ಭಾವಚಿತ್ರಗಳು ಇದರಲ್ಲಿವೆ.

೭) ಜವಹೀರ್-ಅಲ್-ಮುಶಿಕತ್-ಇ-ಮಹಮ್ಮದಿ: ಇದು ಸಂಗೀತಶಾಸ್ತ್ರ ಆಧರಿಸಿದ ಗ್ರಂಥವಾಗಿದ್ದು, ಇದನ್ನು ಮಹಮದ್ ಆದಿಲ್ ಶಾಹನಿಗೆ ಅರ್ಪಿಸಲಾಗಿದೆ. ಈ ಗ್ರಂಥದಲ್ಲಿ ೨೧೪ ಪುಟಗಳಿದ್ದು ಅದರಲ್ಲಿ ೪೮ ಕಿರುರೂಪದ ಚಿತ್ರಗಳಿವೆ. ಸಂಪೂರ್ಣವಾಗಿ ಸಂಗೀತಕ್ಕೆ ಮೀಸಲಾದ ಈ ಗ್ರಂಥದಲ್ಲಿ ಮೂರು ಭಾಗಗಳಿದ್ದು. ಒಂದನೇ ಭಾಗದಲ್ಲಿ ಸರಸ್ವತಿಯ ವೀಣೆ ನುಡಿಸುವ ಕಿರುರೂಪದ ಚಿತ್ರದಿಂದ ಪ್ರಾರಂಭವಾಗುತ್ತದೆ. ಇದರಲ್ಲಿ ಏಳು ಸ್ವರಗಳಿವೆ. ಎರಡನೇ ಭಾಗದಲ್ಲಿ ರಾಗ-ರಾಗಿಣಿಯರ ೨೫ ಚಿತ್ರಗಳಿವೆ. ಈ ಚಿತ್ರಗಳಲ್ಲಿ ರಾಗಕ್ಕನುಗುಣವಾಗಿ ಪುರುಷರನ್ನು, ಸ್ತ್ರೀಯರನ್ನು ಪ್ರತಿಮಾಲಕ್ಷಣಗಳಿಗನುಸಾರವಾಗಿ ಚಿತ್ರಿಸಲಾಗಿದೆ. ಮೂರನೇ ಭಾಗದಲ್ಲಿ ೧೫ ಚಿತ್ರಗಳಿದ್ದು, ಇದರಲ್ಲಿ ಭರತನಾಟ್ಯ ಶಾಸ್ತ್ರ ೨೪ ಕರ್ಣಗಳು ಇದ್ದು ಹಾವ ಭಾವ, ಭಂಗಿ ಚಿತ್ರಗಳು ಇವೆ.

೮) ಸಂಗೀತ ರತ್ನಾಕರ: ಹೆಸರೇ ಸೂಚಿಸುವಂತೆ ಇದು ಸಂಗೀತ ಆಧಾರಿತ ಕೃತಿಯಾಗಿದ್ದು ಇದು ಮರಾಠಿ ಭಾಷೆಯಲ್ಲಿದೆ. ಇದನ್ನು ಬಿಜಾಪೂರದ ಅಲಿ ಆದಿಲ್ ಶಾಹನ ಕಾಲದ್ದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆಸ್ಥಾನದಲ್ಲಿಯ ನೃತ್ಯಗಾತಿಯರು, ಅಸ್ಥಾನದ ಸಭಾಸದಸ್ಯರು, ಆಸ್ಥಾನದ ಸರದಾರರು, ವಿವಿಧ ವೇಷ ಪೋಷಾಕುಗಳಲ್ಲಿ ಇರುವ ಚಿತ್ರಗಳಿವೆ. ಇದು ನಜುಮ್-ಉಲ್-ಉಲೂಮದ ಕೃತಿಯನ್ನೇ ಹೋಲುವುದರಿಂದ ಬಹುಶಃ ಈ ಕೃತಿಯು ಅದರ ಸಮಕಾಲೀನ ಕೃತಿಯಾಗಿರಬಹುದು. ಎಂದು ವಿದ್ವಾಂಸರು ಊಹಿಸಿದ್ದಾರೆ.

೯) ಮತನವಿ : ಇದು ಮುಶ್ರತಿ ಕವಿ ಬರೆದ ಕೃತಿಯಾಗಿದೆ. ಇದು ವರ್ಣಗಾರಿಕೆ ಮತ್ತು ಚಿತ್ರಗಾರಿಕೆಯಲ್ಲಿಯೂ ಉತ್ತಮ ಮಟ್ಟದ ಗ್ರಂಥವಾಗಿದೆ. ಚಿನ್ನ, ಕೆಂಪು, ನೀಲಿವರ್ಣಗಳಿರುವ ಕೆಲವು ಖುರಾಣದ ಹಸ್ತಪ್ರತಿಯ ಕೈಬರಹಗಳು ಇದರಲ್ಲಿವೆ. ಇವುಗಳಲ್ಲದೆ ಐತಿಹಾಸಿಕ ಮಹತ್ವವುಳ್ಳ ಗದ್ಯ, ಪದ್ಯಗಳು, ಶೃಂಗಾರ ಕಾವ್ಯಗಳು, ರಾಜಮುದ್ರೆ ಇರುವ ಸನದುಗಳು, ಫರಮಾನಗಳು ಈ ಗ್ರಂಥದಲ್ಲಿ ಇವೆ.

೧೦) ಜ್ಯೋತಿಷ್ಯ ಹಸ್ತಪ್ರತಿ: ಇದು ೨ನೇ ಇಬ್ರಾಹಿಂ ಸುಲ್ತಾನನ ಕಾಲದ್ದಾಗಿದ್ದು, ಇದರಲ್ಲಿ ಆದಿಲ್‌ಶಾಹಿ ಸುಲ್ತಾನರ ಭವಿಷ್ಯ ನಾಡಗೌಡ ಮನೆತನದ ಜ್ಯೋತಿಷ್ಯಿಗಳು ಸಂಸ್ಕೃತ ಹಾಗೂ ಮರಾಠಿ ಭಾಷೆಯಲ್ಲಿ ಇವೆ. ಇದರಲ್ಲಿ ೧೫ ಚಿತ್ರಗಳಿದ್ದು ಅವೆಲ್ಲವೂ ಜಾನಪದ ಶೈಲಿಯಲ್ಲಿವೆ ಅಲ್ಲದೆ ವಿವಿಧ ಮಾದರಿಯ ಜ್ಯೋತಿಷ್ಯಶಾಸ್ತ್ರದ ನಕ್ಷೆಗಳು, ಸವಾರರು ಇಲ್ಲದ ಆನೆ, ಒಂಟೆ, ಕುದುರೆ, ಪಲ್ಲಕ್ಕಿಗಳ ಚಿತ್ರಗಳಿವೆ. ಈ ಕೃತಿಯು ಎಲ್ಲೂ ಪ್ರಕಟವಾಗಿಲ್ಲ.

೧೧) ಮಧು ಮಾಲತಿ : ಈ ಗ್ರಂಥವು ಉರ್ದು ಭಾಷೆ ಯಲ್ಲಿದ್ದು ಇದರಲ್ಲಿ ೪೮ ಉತ್ತಮ ತರಗತಿಯ ದಕ್ಷಿಣ ಶೈಲಿಯ ಚಿತ್ರಗಳಿವೆ ಎಂದು ನಾರಾಯಣರಾವ್ ಕುಲಕರ್ಣಿಯವರು ಅಭಿಪ್ರಾಯಪಡುತ್ತಾರೆ. ಇದರಲ್ಲಿ ಸುಲ್ತಾನರು ಅವರ ರಾಣಿಯರ ಚಿತ್ರಗಳು ಇರುವಂತೆ ರಾಣಿ ಸೇವಕಿಯರ ಚಿತ್ರಗಳೂ ಕೂಡ ಅಮೋಘ ವಾಗಿವೆ. ಸುಲ್ತಾನರ ಕಣ್ಣುಗಳು; ಹಸ್ತಗಳು, ಉಡುಪು ಗಳು ಸ್ತ್ರೀಯರ ಆಭರಣಗಳು. ಅರಮನೆಯ ವಾಸ್ತು ವಿಧಾನವು ಇದರಲ್ಲಿದ್ದು ಇವುಗಳಿಗೆ ಹಿನ್ನೆಲೆಯಾಗಿ ಹೂದೋಟ. ಹೂಗುಚ್ಛ ಇಸ್ಲಾಂ ನಕ್ಷಾಚಿತ್ರಗಳಿವೆ.

೧೨) ಅಹಾ-ಇಬೂಲ್-ಮುಖಾಲಕತ್ : ಇದೊಂದು ಆದಿಲ್‌ಶಾಹಿ ಸುಲ್ತಾನರ ಮನೆತನದ ಹಸ್ತಪ್ರತಿ ಚಿತ್ರಕಲೆ ಯಾಗಿದ್ದು ಇದರಲ್ಲಿ ಇಸ್ಲಾಂ ಪ್ರಭಾವದ ಚಿತ್ರಗಳು, ನಿಸರ್ಗದ ದೃಶ್ಯಗಳು, ಅರಮನೆಗಳು, ಅಲ್ಲಲ್ಲಿ ಅಲಂಕಾರಕ್ಕಾಗಿ ಇಟ್ಟಿರುವಂತಹ ಹೂದಾನಿಗಳು ಮತ್ತು ಗುಲಾಬಿ ತೋಟಗಳು ಮತ್ತು ಪ್ರಶಾಂತವಾದ ಪ್ರಾರ್ಥನಾ ಮಂದಿರಗಳಿವೆ. ಕಲಾತ್ಮಕ ದೃಷ್ಟಿಯಿಂದ ಇದೂ ಕೂಡಾ ಆದಿಲ್‌ಶಾಹಿ ಮನೆತನದ ಘನತೆಯನ್ನು ತೋರಿಸುವ ಅಮೋಘ ಕೃತಿಯಾಗಿದೆ.





ನಿಜಮಾತ್ ನಾಮದಲ್ಲಿ ಇರುವ ಚಿತ್ರಗಳು





ಕಿತಾಬ್-ಇ-ನವರಸ್‌ದಲ್ಲಿರುವ ಚಿತ್ರಗಳು

ಒಟ್ಟಿನಲ್ಲಿ ವಿಜಯಪುರದ ಹಸ್ತಪ್ರತಿ ಚಿತ್ರಕಲೆಯಲ್ಲಿ ಸರಳ ರೇಖಾ ಲಾಲಿತ್ಯ ಅಲಂಕರಣದ ಕುಸುರಿಕೆಲಸ, ಸಾಮರಸ್ಯದ ಪ್ರಮಾಣ ಇವು ಎದ್ದುಕಾಣುತ್ತವೆ. ಹಸ್ತಪ್ರತಿ ಚಿತ್ರಗಳಲ್ಲಿ ನಿಸರ್ಗವು ಕಪ್ಪುಮಿಶ್ರಿತ ಹಸಿರು ವರ್ಣದಲ್ಲಿದೆ. ಅಲ್ಲಲ್ಲಿ ಕಾಣುವ ಹೂಗಳು ಚಿತ್ರಕ್ಕೆ ಆಕರ್ಷಣೆ ನೀಡಿವೆ. ಚಿತ್ರದಲ್ಲಿ ಕಾಣುವ ಬೆಟ್ಟಗಳು ಸಮುದ್ರದ ತೆರೆಗಳಂತೆ ಚಿತ್ರಿಸಲಾಗಿದೆ. ಇವು ಕವಿಯ ಕಲ್ಪನೆಯ ಲೋಕದಲ್ಲಿ ಕಾಣುವಂತೆ ಚಿತ್ರಿಸಲಾಗಿದೆ.

ಆಧಾರಸೂಚಿ

೧. Karamich : A Survey of the Paintings in the Deccan, Hyderabad, 193, P. 20-25.

2. Cousens Henry. Vijayapur and its Architectural Remains, Bombay, 1916, P. 175-179, 263.

3 Storey C.A: Persian Literature A Biographical Survey-4-volumes, London, 1937, P. 195, 205-210.

4 Barett D: Paintings of the Deccan XVI- XVII centuries, London, 1958. P. 195,196-205-206.

5. Brown E.G. History of Persian Literature, London.1950, P. 150-156.

೬. ಡಾ. ಎಸ್.ಕೆ. ಅರುಣಿ, ದಖನಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೧, ಪುಟ ಸಂಖ್ಯೆ ೪೦–೪೫.

೭. ಡಾ. ಪಿ.ಎಂ. ಬಾಗಾಯತ : ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ ಒಂದು ಅಧ್ಯಯನ, ಪಿಎಚ್‌ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫, ಪುಟ ಸಂಖ್ಯೆ ೬೪–೬೫.

೮. ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಆದಿಲ್‌ಶಾಹಿ ಆಸ್ಥಾನ ಸಾಹಿತ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೯. ಡಾ. ಎಚ್.ಎಸ್. ಚಿತಾರ, ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೧೦. ಸರಕಾರಿ ಪ್ರಾಚ್ಯ ವಸ್ತುಸಂಗ್ರಹಾಲಯ, ಗೋಲಗುಮ್ಮಟ ಆವರಣ, ವಿಜಯಪುರ.

ಔತ್ತರೇಯ ಸಂಪ್ರದಾಯ ಮತ್ತು ಕರ್ನಾಟಕದಲ್ಲಿ ಪಿರಿದುಂನಾಗರ ಶೈಲಿ

ಎಂ.ಎನ್. ಪ್ರಭಾಕರ್*

ಕರ್ನಾಟಕದಲ್ಲಿರುವ ಔತ್ತರೇಯ ಸಂಪ್ರದಾಯದ ದೇವಾಲಯಗಳ ಪರಿಚಯವಾದುದು ಕನ್ನಡದ ಶಾಸನಗಳಿಂದ. ಈ ಶಾಸನಗಳು ಗುರುತಿಸುವ ಶೈಲಿಗಳಲ್ಲಿ 'ಪಿರಿದುಂ ನಾಗರ' ಶೈಲಿಯೂ ಒಂದು. ಔತ್ತರೇಯ ಸಂಪ್ರದಾಯದಲ್ಲಿ ಕರ್ನಾಟಕದಲ್ಲಿ ಕಂಡುಬಂದ ನಾಗರ ಶೈಲಿಯ ಎಲ್ಲಾ ಪ್ರಬೇಧಗಳನ್ನೂ ಒಗ್ಗೂಡಿಸಿ "ಪಿರಿದುಂ ನಾಗರ" ಪದದ ಅಡಿಯಲ್ಲಿ ಶೈಲಿ ಸೂಚಕವಾಗಿ ಅಂದು ಬಳಸಿದರು ಎನ್ನಬಹುದು. ಅಂದು ಪಿರಿದುಂನಾಗರ ಶೈಲಿಯೊಂದಿಗೆ, ಭೂಮಿಜ, ದ್ರಾವಿಡ ಶೈಲಿಗಳೂ ಆಸ್ತಿತ್ವದಲ್ಲಿದ್ದವು. ಈ ಶೈಲಿಗಳನ್ನು ಶಿವಮೊಗ್ಗ ಜಿಲ್ಲೆಯ ಕುಬಟೂರು ಶಾಸನವು ಉಲ್ಲೇಖಿಸಿದೆ[1].

ಶಾಸನದ ವಿವರವು ಇಂತಿದೆ:

> **"ಕೈಲಾಸಾದ್ರಿಯ ವಿಶ್ವಕರ್ಮನೆ ಭವಂಗೊಲ್ದು**
> **ಸದ್ಭಕ್ತಿಯೊಳ್ ಕಂಡರಿಸಿಟ್ಟನೆಂಬಿನೆಗಳ್**
> **(ಅ)ನೇಕ ದ್ರಾವಿಡಂ ಭೂಮಿಜಂ ಪಿರಿದುಂ ನಾಗರಮೆಂಬ**
> **ಬಹುವಿಧದ ಭದ್ರೋಪೇತದಿಂದ ಕಣ್ಗೆವೆರೆದಿರೆ**
> **ಕೋಟೀಶ ಭವಾಲಯಂ ಸುಲಲಿತಂ ಸೌಮ್ಯ(ಂ)ಕರಂ**
> **ಸೌಷ್ಟವಂ."**

ಲಿಪಿಯನ್ನು ಆಧರಿಸಿ ಈ ಶಾಸನವನ್ನು ೧೨ನೆಯ ಶತಮಾನದ ಅಂತ್ಯಕ್ಕೆ ಕಾಲವನ್ನು ವಿದ್ವಾಂಸರು ನಿರ್ಧರಿಸಿದ್ದಾರೆ. ಶಾಸನವು ಕುಬಟೂರಿನ ಕೋಟೀಶ (ಕೈಟಭೇಶ್ವರ) ದೇವಾಲಯದ ಹೊರಭಿತ್ತಿಯ ಭದ್ರಭಾಗದಲ್ಲಿ ಅಲಂಕಾರಕ್ಕಾಗಿ ಕಂಡರಿಸಿದ ಅನೇಕ ದ್ರಾವಿಡ, ಭೂಮಿಜ, ಪಿರಿದುಂ ನಾಗರ ಶೈಲಿಗಳ ಶಿಖರ ಮಾದರಿಗಳನ್ನು ಉಲ್ಲೇಖಿಸಿದೆ. ಈ ಶಾಸನೋಲ್ಲೇಖವನ್ನು 'ಮಾನಸಾರ' ಗ್ರಂಥದ ಸಂಪಾದಕ ವಿದ್ವಾಂಸ ಪಿ.ಕೆ. ಆಚಾರ್ಯ, 'ಅಪರಾಜಿತಪೃಚ್ಛಾ' ಗ್ರಂಥದ ಸಂಪಾದಕ, ವಿದ್ವಾಂಸ ಪಿ.ಎ. ಮಂಕಡ್ ಮೊದಲಾದವರೂ ಗಮನಿಸಿದ್ದಾರೆ. ಪ್ರೊ. ಎಂ.ಎ. ಢಾಕೆಯವರ Indian Temple forms in Karnata, inscriptions and architecture, ಈ ಗ್ರಂಥದಲ್ಲಿಯೂ ದೀರ್ಘ ಚರ್ಚೆಗೆ ಒಳಗಾಗಿದೆ. ಢಾಕೆಯವರು ಶಾಸನದ ಇಂಗ್ಲೀಷ್ ಭಾಷಾಂತರವನ್ನು ಅವಲಂಬಿಸಿದ್ದು, 'ಪಿರಿದುಂನಾಗರ' ಶಬ್ದದಲ್ಲಿ ಪಿರಿದುಂ ಪದ ಅವರ ಗಮನಕ್ಕೆ ಬಾರದೆ ಮಹತ್ವವನ್ನು ಕಳೆದುಕೊಂಡಿದೆ. ಈ ಪದವನ್ನು 'greater nagara' ಎಂದು ಭಾಷಾಂತರಿಸಬಹುದು. ಪಿರಿದುಂ ನಾಗರ ಶೈಲಿಯ ಸೂಕ್ಷ್ಮ ವಿವರಗಳ ಆಳಕ್ಕೆ ಇಳಿಯುವ ಮುನ್ನ ದೇವಾಲಯಗಳ ಸಂಪ್ರದಾಯ, ಶೈಲಿಗಳ ಆರಂಭಿಕ ಹಂತವನ್ನು ಖಚಿತ ಪಡಿಸಿಕೊಳ್ಳಬೇಕು.

ಕರ್ನಾಟಕದಲ್ಲಿ ಔತ್ತರೇಯ ಮತ್ತು ದಾಕ್ಷಿಣಾತ್ಯ ಸಂಪ್ರದಾಯದ ದೇವಾಲಯಗಳು ಕ್ರಿ.ಶ. ಏಳನೆಯ ಶತಮಾನದ ಆರಂಭದಿಂದ ಜೊತೆಜೊತೆಯಾಗಿ ಕಾಣಿಸ ತೊಡಗಿದ್ದು ಹನ್ನೊಂದನೆಯ ಶತಮಾನದವರೆಗೆ ಮುಂದುವರೆದವು. ಈ ಕಾಲಾವಧಿಯಲ್ಲಿ ಔತ್ತರೇಯ ಸಂಪ್ರದಾಯದ ಪ್ರತಿನಿಧಿಯಾಗಿ ಕಳಿಂಗ ಶೈಲಿಯೂ, ಫಾಂಸನಾಕಾರವೂ ಪ್ರಕಟಗೊಂಡಿದ್ದವು. ತದನಂತರದ ಕಾಲದಲ್ಲಿ ದಾಕ್ಷಿಣಾತ್ಯ ಸಂಪ್ರದಾಯದ ಶಿಖರ ರಚನೆಗಳು ಕುಂಠಿತವಾಗತೊಡಗಿದವು. ಮುಂದೆ ರಚನೆಗೊಂಡ ದೇವಾಲಯಗಳು ವಿಸ್ತಾರವಾಗಿ ಬೆಳೆದವೇ ವಿನಃ ಶಿಲಾಶಿಖರಗಳು ಮಾಯವಾಗತೊಡಗಿದವು. ಔತ್ತರೇಯ ಸಂಪ್ರದಾಯದ ಪಿರಿದುಂನಾಗರ ಶೈಲಿ, ಔತ್ತರೇಯ ದ್ರಾವಿಡ, ಭೂಮಿಜ, ಫಾಂಸನಾರ ಶೈಲಿಗಳು ಕ್ರಿ.ಶ. ಹತ್ತನೆಯ ಶತಮಾನದ ಅಂತ್ಯದಿಂದ ೧೩–೧೪ನೆಯ ಶತಮಾನದವರೆಗೆ ಮುಂದುವರೆದವು. ಶಾಸನೋಲ್ಲೇಖದಲ್ಲಿರುವ ಶೈಲಿಗಳು ಕಲ್ಯಾಣದ ಚಾಲುಕ್ಯರ ನಾಡಿನಲ್ಲಿ ಹಾಗೂ ಹೊಯ್ಸಳರ ನಾಡಿನಲ್ಲಿ ವಿಜೃಂಭಿಸಿದವು. ಈ ದೇವಾಲಯಗಳ ಆರಂಭವನ್ನು ಕುಕ್ಕನೂರಿನ ಕಲ್ಲೇಶ್ವರದಿಂದ ಪ್ರಾರಂಭಿಸಿ, ಅಂತಿಮವಾಗಿ ಶೃಂಗೇರಿಯ ವಿದ್ಯಾಶಂಕರ ದೇವಾಲಯವನ್ನು ಹೆಸರಿಸಬಹುದು. ಈ ಅವಧಿಯ ಮಧ್ಯದಲ್ಲಿ ಪಿರಿದುಂನಾಗರ ಶೈಲಿಯ ಪೂರ್ಣ ಪ್ರಮಾಣದ ದೇವಾಲಯಗಳೂ, ಭಿತ್ತಿಭಾಗದಲ್ಲಿ ಅಲಂಕಾರಕ್ಕಾಗಿ ಶಿಖರ ಮಾದರಿಗಳೂ ರಚನೆಗೊಂಡಿವೆ. ಇವುಗಳನ್ನು ಆಧರಿಸಿ ಶೈಲಿಯ ಸೂಕ್ಷ್ಮಗಳನ್ನು ಗಮನಿಸ

---

* # ೬೨, ಬ್ಲಾಕ್ ೧೭, ಬ್ಯಾಂಕ್ ಕಾಲೋನಿ, ಶ್ರೀರಾಂಪುರ ಎರಡನೇ ಹಂತ, ಮೈಸೂರು-೫೭೦೦೨೩.

ವೇಶಾಗಿದೆ. ಔತ್ತರೇಯ ಮತ್ತು ದಾಕ್ಷಿಣಾತ್ಯ ಸಂಪ್ರದಾಯ ಗಳನ್ನು, ಶಿಖರದ ಆಕಾರ ಮತ್ತು ಸ್ವರೂಪವನ್ನು ಆಧರಿಸಿ ವರ್ಗೀಕರಿಸಿಕೊಳ್ಳಬೇಕು. ಇವೆರಡರ ತುಲನೆಯ ಬಗ್ಗೆ ಕಾಮಿಕಾಗಮ ಗ್ರಂಥದಲ್ಲಿ ಸ್ಪಷ್ಟ ವಿವರವಿದೆ. ಈ ವಿವರಗಳನ್ನು ಬಳಸಿ ಗುರುತಿಸಲು ಸಾಧ್ಯ. ಔತ್ತರೇಯ ಶಿಖರವನ್ನು ರೇಖಾ ಮಾದರಿಯೆಂದೂ. ದಾಕ್ಷಿಣಾತ್ಯ ಶಿಖರವನ್ನು ವಿಮಾನ ಮಾದರಿಯೆಂದೂ ಗುರುತಿಸಬಹುದು. ಇಂತಹ ಒಂದು ಪ್ರಯತ್ನವನ್ನು ಡಾ. ಕೆ.ವಿ. ಸೌಂದರರಾಜನ್‌ರವರು ಕ್ರಿ.ಶ. ೧೯೭೯ರಲ್ಲಿ ಮಾಡಿದ್ದಾರೆ. ಕಾಮಿಕಾಗಮದ ಪ್ರಕಾರ ಅಷ್ಟವರ್ಗದ ದೇವಾಲಯವನ್ನು ಔತ್ತರೇಯವೆಂದೂ, ಷಡ್ವರ್ಗದ ದೇವಾಲಯವನ್ನು ದಾಕ್ಷಿಣಾತ್ಯ ದೇವಾಲಯ ಎಂದೂ ಹೆಸರಿಸಬಹುದಾಗಿದೆ. ಈ ವಿವರಗಳು ಇಂತಿವೆ. ಇವೆರಡೂ ಒಂದೇ ಅಧ್ಯಾಯದಲ್ಲಿ ದಾಖಲಾಗಿದೆ[೨].

> **ಮೂಲಂ ಮಸೂರಕಂ ಜಂಘಾಕ ಪೋತಂ ಶಿಖರಂ ಗಲಂ**
> **ಊರ್ಧ್ವೇ ಚಾಮಲಸಾರೇಣಾಷ್ಟವರ್ಗಃ ಕುಂಭ ಶೂಲಯುಕ್**
> **ಮೂಲ (=ಭಿಟ್), ಮಸೂರಕ (=ಪೀಠ), ಜಂಘ (=ಭಿತ್ತಿ), ಕಪೋತ (=ಛಾದ್ಯ),**
> **ಶಿಖರ, ಗಲ, ಅಮಲಸಾರ, ಕಳಶ ಇವು ಅಷ್ಟವರ್ಗಗಳು.**

ಎಂಟು ವರ್ಗಗಳಲ್ಲಿ ಮೊದಲ ನಾಲ್ಕು ಅವಶ್ಯಕ ಭಾಗ ಗಳು, ಉಳಿದವು ಅಲಂಕಾರಿಕ ಭಾಗಗಳು. ಇಲ್ಲಿ ಶಿಖರದ ಸ್ಥಾನವನ್ನು ಪ್ರಮುಖವಾಗಿ ಗಮನಿಸಬೇಕು. ಶಿಖರವು ಕಪೋತ ಅಥವಾ ಛಾದ್ಯದ ಮೇಲೆ ರಚನೆಗೊಂಡಿದೆ. ಇದು ಹೆಚ್ಚು ಎತ್ತರವುಳ್ಳದ್ದು; ಹೆಚ್ಚು ಶೋಭಾಯಮಾನವಾದದ್ದು, ಶಿಖರದ ನಂತರ, ಗಲ, ಆಮಲಸಾರ, ಕಳಶಗಳಿವೆ.

> **ಜನ್ಮೋಪಪೀಠಾಧಿಷ್ಠಾನ ಸ್ತಂಭ ಪ್ರಸ್ತರಕಂಧರೈಃ**
> **ಶಿಖರ ಸ್ತೂಪಿಕಾಭ್ಯಾಂ ಷಡ್ವರ್ಗ ಸಹಿತಂ ನಯೇತ್.**

ಅಧಿಷ್ಠಾನ, ಪಾದ, ಪ್ರಸ್ತರ, ಕಂಠ, ಶಿಖರ, ಸ್ತೂಪಿ. ಇವು ಆರು ವರ್ಗಗಳು. ಮೊದಲ ಮೂರು ವರ್ಗಗಳು ಆವಶ್ಯಕ ಭಾಗಗಳು. ಉಳಿದವು ಅಲಂಕಾರಿಕ ಭಾಗಗಳು. ಷಡ್ವರ್ಗಗಳ ಎಣಿಕೆಯಲ್ಲಿ ಜನ್ಮ, ಉಪಪೀಠಗಳಿಗೆ ಸ್ಥಾನವಿಲ್ಲ; ಗೌಣ. ಇಲ್ಲಿ ಶಿಖರದ ಸ್ಥಾನ ಕಂಠದ ನಂತರವಿದೆ. ದೇವಾಲಯದ ಒಟ್ಟು ಎತ್ತರಕ್ಕೆ ಹೋಲಿಸಿದರೆ ಶಿಖರದ ಎತ್ತರ ಪ್ರಧಾನವಲ್ಲ. ಆದರೆ ಶೈಲಿಗಳನ್ನು ನಿರ್ಧರಿಸುವಲ್ಲಿ ಶಿಖರದ ಆಕಾರವೇ ಪ್ರಧಾನ. ಔತ್ತರೇಯ, ದಾಕ್ಷಿಣಾತ್ಯ ಸಂಪ್ರದಾಯದ ದೇವಾಲಯಗಳನ್ನು ಗುರುತಿಸುವಲ್ಲಿ ಬಳಸುವ ಪಾರಿಭಾಷಿಕ ಪದಗಳೂ ಭಿನ್ನ ಮೂಲದವು. ಔತ್ತರೇಯ ರೇಖಾಮಾದರಿ ಶಿಖರಗಳು ಮೂಲತಃ ಬಾಗಿದ ಆಕಾರವುಳ್ಳದ್ದು, ದಾಕ್ಷಿಣಾತ್ಯ ವಿಮಾನ ಮಾದರಿ ಶಿಖರಗಳು ಮೆಟ್ಟಿಲು ಮೆಟ್ಟಿಲಾಗಿ ಮೇಲೇರುವಂತಹದು. ಔತ್ತರೇಯ ಶಿಖರಗಳೂ ಬದಲಾದ ಶೈಲಿಯ ಮಧ್ಯಮದಿಂದ ಆಕಾರವೂ ಬದಲಾಗತೊಡಗಿತು. ಭೂಮಿಜ ಶೈಲಿ ಮೂಲತಃ ಬಾಗಿದ ಶಿಖರ ಹಾಗೂ ಆಮಲಸಾರವುಳ್ಳದ್ದು, ಹೊಯ್ಸಳರ ಕಾಲದಲ್ಲಿ ಬಳಸುವಿಕೆಯ ಬಳಕೆಯಿಂದ ಪ್ರಾದೇಶಿಕ ರೂಪ ಪಡೆದು ಪೂರ್ಣ ಪ್ರಮಾಣ ದಲ್ಲಿ ಮೆಟ್ಟಿಲು ಮೆಟ್ಟಿಲಾಗಿ ರಚನೆಗೊಂಡವು. ಔತ್ತರೇಯ ದ್ರಾವಿಡ ಶೈಲಿಯು ಮೂಲತಃ ಕರ್ನಾಟಕದಲ್ಲಿ ಅರಳಿದ ಶೈಲಿ. ಇದು ವಿಮಾನ ಮಾದರಿಯನ್ನು ಅನುಸರಿಸುತ್ತದೆ. ದಾಕ್ಷಿಣಾತ್ಯರಚನೆಗಳಲ್ಲಿ ಭೂಮಿ ರಚನೆ, ಪ್ರಸ್ತರದ ವಿಸ್ತರಣೆ ಎನಿಸಿದೆ. ಔತ್ತರೇಯ-ದ್ರಾವಿಡ ಶೈಲಿಯಲ್ಲಿ ಭೂಮಿರಚನೆ ಶಿಖರದ ಭಾಗವೆನಿಸಿದೆ. ಫಿರಿದುಂನಾಗರ ಶೈಲಿಯು ಬಾಗಿದ ಶಿಖರವುಳ್ಳದ್ದು. ಈ ಶೈಲಿಯ ರಚನೆಗಳನ್ನು ಏಕಶೃಂಗ, ಬಹುಶೃಂಗಗಳೆಂದು ವರ್ಗೀಕರಿಸಿಕೊಳ್ಳಬೇಕು. ಬಹುಶೃಂಗ ರಚನೆಗಳಲ್ಲಿ ಮೂಲಶೃಂಗವನ್ನು ಸುತ್ತುವರೆದಂತೆ ಉರುಶೃಂಗ, ಪ್ರತಿಶೃಂಗ, ಕರ್ಣಶೃಂಗಗಳು ಆವರಿಸಿವೆ. ಇವುಗಳ ಸಂಖ್ಯೆ, ಜೋಡಣೆಯನ್ನು ಆಧರಿಸಿ ಪ್ರಭೇಧಗಳನ್ನು ಹೆಸರಿಸಲಾಗುತ್ತದೆ. ಇವುಗಳನ್ನು ಸಾಂಧಾರ, ನಿರಂಧಾರ ಎಂದು ಮರು ವರ್ಗೀಕರಿಸಬೇಕು. ಕರ್ನಾಟಕದ ಮಟ್ಟಿಗೆ ಎಲ್ಲವೂ ನಿರಂಧಾರ ರಚನೆಗಳೇ. ಆದ್ದರಿಂದ ಸಾಂಧಾರ, ನಿರಂಧಾರಗಳ ವರ್ಗೀಕರಣ ಗೌಣ.

ಔತ್ತರೇಯ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಕೇವಲ ಬೆರಳೆಣಿಕೆಯಷ್ಟು ಗ್ರಂಥಗಳು ಲಭ್ಯ. ಸಮರಾಂಗಣ ಸೂತ್ರಧಾರ, ಅಪರಾಜಿತ ಪೃಚ್ಛಾ, ಪ್ರಾಸಾದಮಂಡನ್ನ ರಾಜಾವಲ್ಲಭಮಂಡನ, ವಾಸ್ತು ವಿದ್ಯಾ, ದೀಪಾರ್ಣವ ಮೊದಲಾದ ಗ್ರಂಥಗಳನ್ನು ಗುರುತಿಸಲಾಗಿದೆ. ಸದ್ಯಕ್ಕೆ ತಿಳಿದಿರುವಂತೆ ಸಮರಾಂಗಣ ಸೂತ್ರಧಾರ ಗ್ರಂಥವೇ ಅತಿ ಪ್ರಾಚೀನವಾದುದು. ಅಪರಾಜಿತ ಪೃಚ್ಛಾ ಗ್ರಂಥವು ಬಹುಶಃ ಸುಮಾರು ಒಂದು ನೂರು ವರ್ಷಗಳ ನಂತರ ರಚನೆಗೊಂಡಿರಬಹುದು.

ಸಮರಾಂಗಣ ಸೂತ್ರಧಾರ ಗ್ರಂಥದ ಕರ್ತೃ ಶಿಲಾಹಾರ ಮನೆತನದಲ್ಲಿ ಮಹಾಮಂಡಲೇಶ್ವರನೆನಿಸಿದ್ದ ಭೋಜದೇವ ನೆಂದು, ಇತ್ತೀಚೆಗೆ ತಿಳಿದು ಬಂದಿದೆ[೩]. ಇವನ ಕಾಲವನ್ನು ಹನ್ನೊಂದನೆಯ ಶತಮಾನದ ಅಂತ್ಯ ಎನ್ನಲಾಗಿದೆ. ಅಪರಾಜಿತ ಪೃಚ್ಛಾ ಗ್ರಂಥದ ಕರ್ತೃ ಭುವನದೇವ. ಇವನು ಯಾರೆಂದು ಈವರೆಗೆ ತಿಳಿಯದು. ಅಪರಾಜಿತ ಪೃಚ್ಛಾ ಗ್ರಂಥದ ಉಲ್ಲೇಖ, ಹೇಮಾದ್ರಿಪಂತನ ಚತುರ್ವರ್ಗ ಚಿಂತಾಮಣಿಯಲ್ಲಿದೆ ಎಂದು ವಿದ್ವಾಂಸ ಪಿ.ಎ. ಮಂಕಡ್ ತಿಳಿಸಿದ್ದಾರೆ. ಸೇವುಣ ಅಥವಾ ಯಾದವರ ರಾಮಚಂದ್ರ ಮತ್ತು ಮಹಾದೇವ, ಇವರ ಆಸ್ಥಾನದಲ್ಲಿ ಹೇಮಾದ್ರಿಪಂತನು ಸಚಿವ ಸ್ಥಾನವನ್ನಲಂಕರಿಸಿದ್ದ. ಅವನ ಕಾಲ ಕ್ರಿ.ಶ. ೧೧೬೦–೧೨೭೪. ಈ ಅವಧಿಗೆ ಮುಂಚೆ ಅಪರಾಜಿತ ಪೃಚ್ಛಾ ರಚನೆಗೊಂಡಿರಬೇಕು ಎಂದು

ವಿದ್ವಾಂಸರ ಅಭಿಪ್ರಾಯ[೪]. ಆದ್ದರಿಂದ ೧೩ನೆಯ ಶತಮಾನಕ್ಕೆ ಮುಂಚಿತವಾಗಿ ಅಪರಾಜಿತ ಪೃಚ್ಛಾದ ರಚನೆ ಎನ್ನಬಹುದು. 'ಪಿರಿದುಂನಾಗರ' ಎಂದು ಗುರುತಿಸುವ ಶಿಖರ ಮಾದರಿಗಳು ಕರ್ನಾಟಕದಲ್ಲಿ ಹನ್ನೊಂದನೆಯ ಶತಮಾನದ ಆರಂಭದಲ್ಲಿ ಅರಳಿನಿಂತಿವೆ ಎಂದು ಗಮನಿಸಬೇಕು. ಕ್ರಿ.ಶ. ೧೦೧೦ರ ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯದ ಭಿತ್ತಿಯಲ್ಲಿ ಈ ಮಾದರಿ ಇದೆ. ಈ ವೇಳೆಗಾಗಲೇ ಈ ಶೈಲಿಯು ಪ್ರಕಟಗೊಂಡಿತ್ತು ಎನ್ನುವುದು ಸ್ಪಷ್ಟ. ಸಮರಾಂಗಣ ಸೂತ್ರಧಾರಕ್ಕೆ ಮುನ್ನ ಮತ್ತೊಂದು ಪ್ರಾಚೀನ ಗ್ರಂಥವಿರಲೂ ಸಾಧ್ಯ! ಈ ಗ್ರಂಥ ಕರ್ನಾಟಕದಲ್ಲಿತ್ತು ಅಥವಾ ಈ ಗ್ರಂಥದ ಪರಿಚಯ ಕರ್ನಾಟಕದ ಶಿಲ್ಪಿಗಳಿಗಿತ್ತು ಎನ್ನಬಹುದು. ವಾಸ್ತುವಿದ್ಯಾ ಎಂಬ ಎರಡು ಗ್ರಂಥಗಳಿವೆ. ಒಂದು ದಾಕ್ಷಿಣಾತ್ಯ; ಮತ್ತೊಂದು ಔತ್ತರೇಯ. ದಾಕ್ಷಿಣಾತ್ಯ ಗ್ರಂಥವು ಪ್ರಕಟವಾಗಿದೆ. ಔತ್ತರೇಯ ಗ್ರಂಥವು ಭಾಗಶಃ ಪ್ರಕಟಗೊಂಡಿದೆ ಎಂದು ಪ್ರೊ. ಎಂ.ಎ. ಢಾಕೆ ತಿಳಿಸಿದ್ದಾರೆ[೫]. ಗ್ರಂಥವು ಪೂರ್ಣವಾಗಿ ಪ್ರಕಟಗೊಂಡಾಗ, ಅದರ ಪ್ರಾಚೀನತೆಯನ್ನು ಗುರುತಿಸಲು ಅವಕಾಶವಿದೆ. ಅಪರಾಜಿತ ಪೃಚ್ಛಾ ಗ್ರಂಥಕ್ಕೆ ಸಮರಾಂಗಣ ಸೂತ್ರಧಾರವು ಮೂಲ ಎನ್ನಲು ಸಾಧ್ಯ. ಕೆಲವು ಸಾಲುಗಳನ್ನು ಆನಾಮತ್ತಾಗಿ ಎತ್ತಿ ಬಳಸಿದೆ. ಕೆಲವೆಡೆ ಸರಳಗೊಳಿಸಲಾಗಿದೆ. ಸಮರಾಂಗಣ ಸೂತ್ರಧಾರ ಗ್ರಂಥದಲ್ಲಿ ವರ್ಗೀಕರಣವು ಸ್ಪಷ್ಟತೆಯಿಂದ ಕೂಡಿಲ್ಲ. ಅಪರಾಜಿತ ಪೃಚ್ಛಾ ಗ್ರಂಥದಲ್ಲಿಯೂ ವರ್ಗೀಕರಣವಿದೆ.

ಈ ವರ್ಗೀಕರಣವನ್ನು ಮುಂದಿನ ವಿದ್ವಾಂಸರುಗಳು ಅಂಗೀಕರಿಸಿದ್ದಾರೆ. ಅಪರಾಜಿತ ಪೃಚ್ಛಾ ಗ್ರಂಥದ ನಂತರ ಪ್ರಮುಖವಾಗಿ ಕೇಳಿಬರುವ ಗ್ರಂಥ ಸೂತ್ರಧಾರಮಂಡನನ "ಪ್ರಾಸಾದ ಮಂಡನ". ಈತ ವಿದ್ವಾಂಸನು ಹೌದು; ಸ್ಥಪತಿಯೂ ಹೌದು. ಚಿತ್ತೂರಿನಲ್ಲಿ ರಾಜ್ಯವಾಳುತ್ತಿದ್ದ ರಾಣಾ ಕುಂಭನ (ಕ್ರಿ.ಶ. ೧೪೩೩–೧೪೬೮) ಆಸ್ಥಾನದಲ್ಲಿದ್ದ. ಈತನ ಕಾಲವನ್ನು ೧೫ನೆ ಶತಮಾನದ ಮಧ್ಯಭಾಗಕ್ಕೆ ಗುರುತಿಸಬಹುದು[೬]. ಪ್ರಾಸಾದಮಂಡನ, ರೂಪಮಂಡನ, ರಾಜಾವಲ್ಲಭಮಂಡನ ಇವು ಇವನ ಪ್ರಮುಖ ಗ್ರಂಥಗಳು. ಇವನ ಕಾಲಕ್ಕಾಗಲೇ ದಕ್ಷಿಣ ಭಾರತದಲ್ಲಿ ಔತ್ತರೇಯ ಸಂಪ್ರದಾಯವು ಕ್ಷೀಣಿಸಿ, ಪಶ್ಚಿಮ ಭಾರತದಲ್ಲಿ ಹಲವು ಶೈಲಿಗಳು ಬೇರೂರಿ ವಿಜೃಂಭಿಸಿದ್ದವು. ಅಲ್ಲಿ ಅಮೃತ ಶಿಲೆಯ ರಚನೆಗಳೇ ಹೆಚ್ಚಾಗಿವೆ. ಮರಳುಗಲ್ಲಿನ ರಚನೆಗಳೂ ಉಂಟು. ಆದರೆ ವಿರಳ. ಈತ ಸ್ವತಃ ಸ್ಥಪತಿಯಾದ್ದರಿಂದ, ಇವನ ಗ್ರಂಥದಲ್ಲಿ ಪ್ರಯೋಗ ಶೀಲ ರಚನೆಗಳ ಬಗ್ಗೆ ಹೆಚ್ಚು ಗಮನ ಹರಿಸಿದ್ದಾನೆ. ಇತರ ವಿವರಗಳಿಗೆ ಹೆಚ್ಚು ಅವಕಾಶವಿಲ್ಲ. ಶೈಲಿಗಳನ್ನು ವಿವರಿಸುವಾಗ ಖಚಿತ ಮಾಹಿತಿಯನ್ನೊದಗಿಸಿದ್ದಾನೆ. ಅಪರಾಜಿತ ಪೃಚ್ಛಾ ಗ್ರಂಥವೇ ಇವನಿಗೆ ಮಾರ್ಗದರ್ಶಿಯಾಗಿದೆ.

ಔತ್ತರೇಯ ಸಂಪ್ರದಾಯದ ದೇವಾಲಯಗಳ ವರ್ಗೀಕರಣವನ್ನು ಅಪರಾಜಿತ ಪೃಚ್ಛಾ ಗ್ರಂಥವನ್ನು ಆಧರಿಸಿ ಆರಂಭಿಸಬೇಕು. ಈ ಗ್ರಂಥದ ಪ್ರಕಾರ ಒಟ್ಟು ಹದಿನಾಲ್ಕು ಶೈಲಿಗಳು. ನಾಗರ, ದ್ರಾವಿಡ, ಭೂಮಿಜ, ಫಾಂಸನಾಕಾರ, ಲತಿನ, ಸಾಂಧಾರ, ಮಿಶ್ರಕ, ವಿಮಾನನಾಗರ, ವರಾಟ, ವಿಮಾನ ಪುಷ್ಪಕ, ವಿಮಾನ, ವಲಭೀ, ಸಿಂಹಾವಲೋಕನ, ರಥಾರುಹ – ಇವು ಹದಿನಾಲ್ಕು ಶೈಲಿಗಳು[೭]. ಈ ಎಲ್ಲಾ ಶೈಲಿಗಳನ್ನು ಒಂದೆಡೆ ಕಾಣಲಾಗದು. ಕೆಲವು ಪ್ರಾದೇಶಿಕ ಶೈಲಿಗಳಾಗಿ ಮೆರೆದಿವೆ. ಕೆಲವು ಉಪಶೈಲಿಗಳು ಎನ್ನಿಸುವಂತೆ ಕಂಡಿವೆ. ಗ್ರಂಥದಲ್ಲಿರುವ ವಿವರಣೆಗಿಂತ ಪ್ರಾದೇಶಿಕ ಲಕ್ಷಣಗಳನ್ನು ಹೆಚ್ಚು ಮೈಗೂಡಿಸಿಕೊಂಡಿವೆ. ಬಳಸುವ ಶಿಲಾಮಾಧ್ಯಮ ಬದಲಾದಲ್ಲಿ ಶೈಲಿಯಲ್ಲಿನ ಅಲಂಕರಣ ಗುರುತಿಸಲಾಗದಷ್ಟು ಸಮಸ್ಯೆಯನ್ನು ಒಡ್ಡಿವೆ. 'ಸಾಂಧಾರ' ದೇವಾಲಯಗಳೆಂದರೆ ಪ್ರದಕ್ಷಿಣಾ ಪಥವುಳ್ಳದ್ದು. ಇದನ್ನು ಪ್ರತ್ಯೇಕ ಶೈಲಿ ಎನ್ನಲು ಅಸಾಧ್ಯ. ವರಾಟ, ವಿಮಾನ ಪುಷ್ಪಕ ಇವು ಉಪಶೈಲಿಗಳೆನ್ನಬಹುದು. 'ವಿಮಾನ' ಎಂಬ ಶೈಲಿಯನ್ನು ಪ್ರತ್ಯೇಕ ಗುರುತಿಸಲು ಸಾಧ್ಯವಾಗಿಲ್ಲ. ವಲಭೀ, ರಥಾರುಹ, ಸಿಂಹಾವಲೋಕನ ಇವು ಪ್ರಾದೇಶಿಕ ಶೈಲಿಗಳಾಗಿ ಇತರೆಡೆಗಳಲ್ಲಿ ಸೀಮಿತವಲಯದಲ್ಲಿ ಪ್ರಕಟಗೊಂಡಿರಲು ಸಾಧ್ಯ. ಇವುಗಳನ್ನು ಕುರಿತ ಅಧ್ಯಯನಗಳು ನಡೆಯಬೇಕಿದೆ. ಅಪರಾಜಿತ ಪೃಚ್ಛಾ ಗ್ರಂಥದಲ್ಲಿ ಲತಿನ, ವಿಮಾನನಾಗರ, ವಿಮಾನಪುಷ್ಪಕ, ದ್ರಾವಿಡ, ಭೂಮಿಜ, ಮಿಶ್ರಕ, ಫಾಂಸನಾಕಾರ ಶೈಲಿಗಳನ್ನು ಕುರಿತ ಪ್ರತ್ಯೇಕ ಅಧ್ಯಾಯಗಳಿವೆ. ಅದಲ್ಲದೆ ವೈರಾಜ್ಯ, ಶ್ರೀಧರ, ಪೂರ್ಣಭದ್ರ, ಭೂಧರ, ಸುರತರು ಮೊದಲಾದ ಪ್ರಭೇದಗಳನ್ನು ಕುರಿತ ಪ್ರತ್ಯೇಕ ಅಧ್ಯಾಯಗಳಿವೆ! ಉದಾಹರಣೆಗಳು ಎದುರಿಗಿಲ್ಲದೆ ಈ ಶೈಲಿ ಪ್ರಭೇಧಗಳನ್ನು ಗುರುತಿಸುವುದು ವಿವರಿಸುವುದು ಅಸಾಧ್ಯ. ಪ್ರಾದೇಶಿಕ ರೀತ್ಯಾ ಒಂದೆಡೆ ಮೂರು–ನಾಲ್ಕು ಶೈಲಿಗಳನ್ನು ಕಾಣಲು ಸಾಧ್ಯ. ಅಪರಾಜಿತ ಪೃಚ್ಛಾ ಗ್ರಂಥ ಮೂರು ಅಧ್ಯಾಯಗಳಲ್ಲಿ ವಿವರಿಸಿದ ಲತಿನ(ರುಚಕ), ಮಿಶ್ರಕ, ವಿಮಾನನಾಗರ(ಕೇಸರಿ) ಶೈಲಿಗಳನ್ನು ಸಮರಾಂಗಣ ಸೂತ್ರಧಾರ ಗ್ರಂಥಕಾರ ಒಂದೇ ಅಧ್ಯಾಯದಲ್ಲಿ ಒಗ್ಗೂಡಿಸಿ "ರುಚಕಾದಿ ೬೪ ಪ್ರಾಸಾದಕ"ಗಳೆಂದು ವಿವರಿಸುತ್ತಾನೆ! ಇಲ್ಲಿ ವರ್ಗೀಕರಣದ ಸ್ಪಷ್ಟ ಮಾಹಿತಿ ಇಲ್ಲ: ಏಕಶೃಂಗ, ಬಹುಶೃಂಗಗಳನ್ನು ಬೇರ್ಪಡಿಸಿಲ್ಲ; ನಿರಂಧಾರ, ಸಾಂಧಾರಗಳನ್ನೂ ಒಂದೇ ಶೀರ್ಷಿಕೆಯಡಿ ಹೇಳಲಾಗಿದೆ!

ಈ ದೇವಾಲಯಗಳನ್ನು ಸಾಮಾನ್ಯವಾಗಿ ಎರಡು ಹಂತಗಳಲ್ಲಿ ವಿವರಿಸಲಾಗುತ್ತದೆ. ಅವು ತಲಚ್ಛಂದ ಮತ್ತು ಊರ್ಧ್ವಚ್ಛಂದ ದೇವಾಲಯದ ತಲವಿನ್ಯಾಸವನ್ನು ವಿವರಿಸುವುದೇ ತಲಚ್ಛಂದ; ಏರುಗತಿಯನ್ನು ವಿವರಿಸುವುದು

ಊರ್ಧ್ವಚ್ಛಂದ. ಈ ವಿವರಗಳು ಪ್ರಧಾನವಾಗಿ ಗರ್ಭಗೃಹಕ್ಕೆ ಮಾತ್ರ ಸಂಬಂಧಿಸಿದ್ದು. ಗರ್ಭಗೃಹದ ಶಿಖರದ ಆಕಾರ, ಅಲಂಕಾರಗಳನ್ನನುಸರಿಸಿ ಶೈಲಿ, ಪ್ರಬೇಧಗಳು ನಿರ್ಧರಿಸಲ್ಪಡುತ್ತವೆ. ತಲಚ್ಛಂದದ ಆಕಾರವನ್ನು ಅನುಕರಿಸಿ ಊರ್ಧ್ವಗತಿಯಲ್ಲಿ ರಚನೆಯು ಆಮಲಸಾರ ಅಥವಾ ಕಳಶದವರೆಗೆ ಸಾಗುತ್ತದೆ.

ತಲಚ್ಛಂದವು ಜ್ಯಾಮಿತೀಯ ಆಕಾರ ಕ್ರಮವನ್ನು ಅನುಸರಿಸಿ ವಿವರಿಸಲ್ಪಡುತ್ತದೆ. ಮೊದಲಿಗೆ ಚತುರಶ್ರ ನಂತರ ವೃತ್ತ, ಚತುರಶ್ರಾಯತ, ವೃತ್ತಾಯತ, ಅಷ್ಟಾಶ್ರ, ಈ ಐದೂ ಮೂಲರೂಪಗಳು. ಔತ್ತರೇಯ ಗ್ರಂಥಗಳೆಲ್ಲವೂ ಚತುರಶ್ರದೊಂದಿಗೇ ವಿವರಣೆಗಳನ್ನು ಕೊಡಲು ಆರಂಭಿಸುತ್ತವೆ.

ವೈರಾಜ್ಯಂ ಚತುರಶ್ರಂ ಸ್ಯಾದ್ ವೃತ್ತಂ ಕೈಲಾಸ ಸಂಜ್ಞಿತಂ
ಚತುರಶ್ರಾಯತಾಕಾರಂ ವಿಮಾನಂ ಪುಷ್ಪಕಂ ಭವೇತ್
ವೃತ್ತಾಯತಂ ಮಣಿಕ ಮಷ್ಟಾಶ್ರಂ ತ್ರಿವಿಷ್ಟಪಂ
ಯೇ ಯತ್ರ ವಿಹಿತಾಭೇದಾಃ ಪೂರ್ವಂ ಕಮಲಯೋನಿನಾ

ವೈರಾಜ್ಯ=ಚತುರಶ್ರ, ಕೈಲಾಸ=ವೃತ್ತಾಕಾರ, ಪುಷ್ಪಕ=ಚತುರಶ್ರಾಯತ, ಮಣಿಕ=ವೃತ್ತಾಯತ ಮತ್ತು ತ್ರಿವಿಷ್ಟಪ=ಅಷ್ಟಾಶ್ರ

ಕೆಲವು ಗ್ರಂಥಗಳು ವೈರಾಜ್ಯದಿಂದ ಆರಂಭಿಸಿ ಆಲಯ ಸ್ವರೂಪವನ್ನು ವಿವರಿಸುತ್ತವೆ. ವೈರಾಜ, ರುಚಕ, ಲತಿನ ಇವೆಲ್ಲವೂ ಚತುರಶ್ರ ರಚನೆಗಳು. ಈ ಪದಗಳನ್ನು ನಿರ್ದಿಷ್ಟ ಅರ್ಥದೊಡನೆ ಬಳಸಬೇಕು.

ರುಚಕ ಎನ್ನುವುದು ಸಾಮಾನ್ಯವಾಗಿ ಚತುರಶ್ರವನ್ನು ಗುರುತಿಸಲು ಸಾರ್ವತ್ರಿಕವಾಗಿ ಬಳಸುವ ಪದ. ರುಚಕ ಸ್ತಂಭಗಳೆಂದರೆ, ಚತುರಶ್ರ ಸ್ತಂಭಗಳೆಂದೇ ಅರ್ಥ. ವೈರಾಜವು ಚತುರಶ್ರ ಮೂಲವನ್ನು ಗುರುತಿಸುವ ಪದ. "ರುಚಕೋತು ಚತುದ್ವಾರಂ ಸವೈರಾಜ್ಯಾಭಿಧಾನಕಃ"–ಎಂಬ ಉಕ್ತಿ ಇದೆ. ಆದರೆ ಎಲ್ಲಾ ವೈರಾಜ್ಯ ಪ್ರಾಸಾದಗಳಲ್ಲಿ ಚತುರ್ದ್ವಾರಗಳಿಲ್ಲ ಎಂದು ಗಮನಿಸಬೇಕು. ಲತಿನ ಚತುರಶ್ರಾಕಾರದ ಏಕಶೃಂಗ ರಚನೆಯನ್ನು ಗುರುತಿಸುವ ಪದ. 'ಶೃಂಗೇಣೈಕೇನ ಲತಿನಃ' –ಇದು ಶಾಸ್ತ್ರೋಕ್ತಿ[೧೦].

ಸಮರಾಂಗಣ ಸೂತ್ರಧಾರ ಗ್ರಂಥ ರುಚಕಾದಿ ಪ್ರಾಸಾದ ಲಕ್ಷಣ ಅಧ್ಯಾಯದಲ್ಲಿ ವೈರಾಜ್ಯಾದಿ ಐದು ಸ್ವರೂಪಗಳನ್ನೂ ವಿವರಿಸಿದೆ. ಅವುಗಳಲ್ಲಿ ಕ್ರಮವಾಗಿ ೨೪+೧೦+೧೦+೧೦+೧೦ ಪ್ರಬೇಧಗಳನ್ನು ಹೆಸರಿಸಿದೆ; ಒಟ್ಟು ೬೪ ಪ್ರಬೇಧಗಳನ್ನು ವಿವರಿಸಲಾಗಿದೆ. ಈ ಗ್ರಂಥಕಾರನಿಗೆ '೬೪' ಸಂಖ್ಯೆಯ ಮೇಲೆ ಮೋಹ ಹೆಚ್ಚು. ಹಲವು ಅಧ್ಯಾಯಗಳಲ್ಲಿ ೬೪ ಪ್ರಬೇಧಗಳನ್ನು ಹೆಸರಿಸಿದ್ದಾನೆ. ಅದೇ ರೀತಿ ಅಪರಾಜಿತ ಪೃಚ್ಛಾ ಗ್ರಂಥಕಾರನಿಗೆ '೨೫' ಸಂಖ್ಯೆಯ ಮೇಲೆ ಮೋಹ. ಅವನ ಪ್ರತಿಯೊಂದು ವಿವರಣೆಗಳಲ್ಲಿಯೂ ೨೫ ಪ್ರಬೇಧಗಳಿವೆ! ನಿರಂಧಾರ ದೇವಾಲಯಗಳನ್ನು ನಿರ್ದೇಶಿಸುವಾಗ ಭಿತ್ತಿ, ಸ್ತಂಭ, ಅಲಿಂದ, ಪಾಗ್ರೀವ ರಚನೆಗಳಿಗೆ ಹೆಚ್ಚು ಗಮನಹರಿಸಲಾಗಿದೆ. ಇವು ಸಭಾರಚನೆಯ ಮೂಲದವು. 'ರುಚಕಾದಿ ಚತುಷಷ್ಟಿಪ್ರಾಸಾದಕ' ಎಂಬ ಮತ್ತೊಂದು ಅಧ್ಯಾಯವಿದೆ.

ಶಿಖರೈರ್ವಿವಿಧಾಕಾರೈರೇಕೇನಾಂಡೇನ ಭೂಷಿತಃ
ಕೇಚಿದಂಡತ್ರಯೇಪೇತಾ ಕೇಚಿದ್ ಪಂಚಾಂಡಕಾನ್ವಿತಾ
ಇಷುಬೇಧೇನ ತೇ ಜ್ಞೇಯೋ ಪ್ರಾಸಾದಾಃ ಸರ್ವಕಾಮ್ಯದಃ[೧೧]

ಶಿಖರವು ವಿವಿಧ ಆಕಾರವುಳ್ಳದ್ದು; ಏಕಾಂಡ, ತ್ರಯೇಂಡ, ಪಂಚಾಂಡಕಗಳನ್ನು ಗುರುತಿಸಲಾಗಿದೆ. ಈ ಅಧ್ಯಾಯದಲ್ಲಿ ನಿರಂಧಾರ. ಸಾಂಧಾರ ರಚನೆಗಳೂ ಇವೆ. ಚತುರಶ್ರ, ರುಚಕದಿಂದ ೧೬ ಪ್ರಬೇಧ, ಚ್ಚತುರಶ್ರಾಯತ–ಭವ, ವಿಭವ ೨ ಪ್ರಬೇಧ, ವೃತ್ತ– ಪದ್ಮ, ಮಾಲಾಧರ, ೨ ಪ್ರಬೇಧ, ವೃತ್ತಾಯತ ವಲಯ, ಮಕರ ೨ ಪ್ರಬೇಧ; ಅಷ್ಟಾಶ್ರ–ವಜ್ರ, ಸ್ವಸ್ತಿಕ, ಶಂಕು ३ ಪ್ರಬೇಧ. ಒಟ್ಟು ೨೫ ಪ್ರಬೇಧಗಳು. ಈ ರುಚಕಾದಿಗಳು ನಿರಂಧಾರ ರಚನೆಗಳು. ಲತಿನಾದಿ ಏಕಶೃಂಗರಚನೆಗಳನ್ನು ಐವತ್ತು ಹಸ್ತಗಳವರೆಗೆ ರಚಿಸಲು ಅವಕಾಶವಿದೆ. ಸಾಮಾನ್ಯ ನಿಯಮದಂತೆ ಹತ್ತು ಹಸ್ತದವರೆಗೆ ನಿರಂಧಾರ ರಚನೆಗಳು.

ದಶಹಸ್ತಾದಧೋ ನಾಸ್ತಿ ಪ್ರಾಸಾದೋ ಭ್ರಮ ಸಂಯುತಃ
ಲತಿನೇತ್ವೇಕ ಹಸ್ತಾದಿ ಪಂಚಶತ ಹಸ್ತಕಾವಧಿ[೧೨]

ಈ ಅಧ್ಯಾಯದಲ್ಲಿ ರುಚಕಾದಿ ೨೫ ಪ್ರಬೇಧಗಳು, ಮಿಶ್ರಕದಲ್ಲಿ ೯ ಪ್ರಬೇಧಗಳು, 'ಲತಾ' ಮೊದಲಾದ ೫ ಪ್ರಬೇಧಗಳು ಮತ್ತು ಕೇಸರೀ ೨೫ ಪ್ರಬೇಧಗಳು–ಒಟ್ಟು ೬೪ ಪ್ರಬೇಧಗಳು. ಕೇಸರೀ ಮೊದಲಾದ ಪ್ರಬೇಧಗಳನ್ನು ಸಾಂಧಾರವೆಂದೇ ಸೂಚಿಸಲಾಗಿದೆ. ರುಚಕಾದಿ ದೇವಾಲಯಗಳ ಊರ್ಧ್ವ ಕ್ರಮದಲ್ಲಿ ಕಾಣುವ ಪ್ರತಿಯೊಂದು ಭಾಗಗಳಿಗೂ ಅಳತೆಯನ್ನು ಗುರುತಿಸಲಾಗಿದೆ. ಈ ಅಳತೆಯನ್ನು ಗುರುತಿಸುವುದು ಕಷ್ಟಸಾಧ್ಯ.

ಆರೋಹಣಕ್ರಮದಲ್ಲಿ ಇವುಗಳನ್ನು ಪೀಠ, ಜಂಘಾ, ಅಂತರಪತ್ರ, ವರಂಡಿಕಾ, ಶಿಖರ, ಗ್ರೀವ, ಆಮಲಸಾರ, ಪದ್ಮಶೀರ್ಷ, ಕಳಶ ಎಂದು ಸ್ತರಗಳನ್ನು ಗುರುತಿಸಬಹುದು. ಕೇಸರೀ ಪ್ರಬೇಧಗಳ ಕಡೆ ಈಗ ಹೆಚ್ಚು ಗಮನಹರಿಸಬೇಕು. ಇವೇ ಪಿರಿದುಂ ನಾಗರ ಶೈಲಿಯ ಜೀವಾಳವೆನಿಸಿವೆ. ಕರ್ನಾಟಕದಲ್ಲಿರುವ ಮಾದರಿಗಳ ರಚನೆಗಳ ಅಧ್ಯಯನಕ್ಕೆ ಇವು ಅತ್ಯಗತ್ಯ. ಸಮರಾಂಗಣ ಸೂತ್ರಧಾರ ಮತ್ತು ಅಪರಾಜಿತ ಪೃಚ್ಛಾ ಗ್ರಂಥಗಳ ಪ್ರಕಾರ, ಕೇಸರೀ ೨೫ ಪ್ರಬೇಧಗಳು ಸಾಂಧಾರದಡಿಯಲ್ಲಿ ಸೇರುತ್ತವೆ. ಆದರೆ ಸೂತ್ರಧಾರ ಮಂಡನನು ಸಾಂಧಾರ, ನಿರಂಧಾರ ಲಕ್ಷಣಗಳನ್ನು

ಶೈಲಿಗಳಿಂದ ಬೇರ್ಪಡಿಸಿ ವರ್ಗೀಕರಣವನ್ನು ಸರಳಗೊಳಿಸಿದ್ದಾನೆ. ಈ ಪ್ರಬೇಧಗಳನ್ನು 'ವಿಮಾನನಾಗರ' ಶೈಲಿಯ ಅಡಿಯಲ್ಲಿ ವಿವರಿಸಿದ್ದಾನೆ.

ಕೇಸರಿಪ್ರಮುಖಾಃ ಕರ್ಣೇ ವಿಮಾನಮುರುಶೃಂಗಕಂ
ತಥೈವ ಮೂಲ ಶಿಖರಂ ಪಂಚ ಭೂಮಿ ವಿಮಾನಕಂ
ವಿಮಾನನಾಗರಾ ಜಾತಿಸ್ತದಾ ಪ್ರಾಜ್ಞೈರುದಾಹೃತಾ
ಏವಂ ಶೃಂಗೋರು ಶೃಂಗಾಣಿ ಸಂಭವಂತಿ ಬಹೂನ್ಯಪಿ[೧೩]

ಕೇಸರಿಯ ೨೫ ಪ್ರಬೇಧಗಳ ವಿವರಗಳು ಮೂರು ಗ್ರಂಥಗಳಲ್ಲಿಯೂ ಸಮಾನವಾಗಿದೆ. ಇವು ಬಹುಶೃಂಗ ರಚನೆಗಳು. ಶೃಂಗಗಳ ಎಣಿಕೆಯೊಂದಿಗೆ ಈ ಪ್ರಬೇಧಗಳನ್ನು ಹೆಸರಿಸಿದೆ. ಕೇಸರಿ ಪ್ರಭೇದದಲ್ಲಿ ೫ ಶೃಂಗಗಳು; ನಾಲ್ಕು ಕರ್ಣಶೃಂಗ ಮತ್ತು ಒಂದು ಮೂಲ ಶೃಂಗ, ಒಟ್ಟು ಐದು ಶೃಂಗಗಳು, ಇದಕ್ಕೆ ಕೇಸರೀ ಎಂದು ಹೆಸರು.

ಆದ್ಯಃ ಪಂಚಾಂಡಕೋ ಜ್ಞೇಯಃ ಕೇಸರೀ ನಾಮ ನಾಮತಃ
ತಾವದಂತಂ ಚತುರ್ವೃದ್ಧಿರ್ಯಾವದೇಕೋತ್ತರಂ ಶತಂ[೧೪]

ಐದು ಶೃಂಗಗಳ ನಂತರ, ನಾಲ್ಕು ಶೃಂಗಗಳಂತೆ ಹೆಚ್ಚಿಸುತ್ತಾ ೨೫ನೆಯ ಮೇರು ಪ್ರಭೇದದಲ್ಲಿ ೧೦೧ ಶೃಂಗಗಳು. ಈ ಪ್ರಭೇದಗಳು ಕೆಳಕಂಡಂತೆ ಇವೆ. ಕಂಸದಲ್ಲಿ ಶೃಂಗಸಂಖ್ಯೆಯನ್ನು ನೀಡಲಾಗಿದೆ.

ಕೇಸರೀ (೫) ಸರ್ವತೋಭದ್ರೋ (೯) ನಂದನೋ (೧೩)
ನಂದಿಶಾಲಿಕಃ (೧೭)
ನಂದೀಶೋ (೨೧) ಮಂದರಶ್ಚೈವ (೨೫) ಶ್ರೀವೃಕ್ಷಾಶ್ಚಾ
(೨೯) ಮೃತೋದ್ಭವಃ (೩೩)
ಹಿಮವಾನ್ (೩೭) ಹೇಮಕೂಟಶ್ಚ (೪೧) ಕೈಲಾಸಃ
(೪೫) ಪೃಥಿವೀಜಯಃ (೪೯)
ಇಂದ್ರನೀಲೋ (೫೩) ಮಹಾನೀಲೋ (೫೭)
ಭೂಧರೋ (೬೧) ರತ್ನಕೂಟಕಃ (೬೫)
ವೈಢೂರ್ಯಃ (೬೯) ಪದ್ಮರಾಗಶ್ಚ (೭೩) ವಜ್ರಕೋ (೭೭)
ಮುಕುಟೋಜ್ವಲಃ (೮೧)
ಐರಾವತೋ (೮೫) ರಾಜಹಂಸೋ (೮೯) ಗರುಡೋ
(೯೩) ವೃಷಭಸ್ತಥಾ (೯೭)
ಮೇರುಃ (೧೦೧) ಪ್ರಾಸಾದರಾಜಃ ಸ್ಯಾದ್
ದೇವಾನಾಮಾಲಯೋ ಹಿಸಃ

ಸೂತ್ರಧಾರ ಮಂಡನನು ವಿಮಾನನಾಗರ ಶೈಲಿಯನ್ನು ಹೆಸರಿಸುವಾಗ ಮೂಲ ಶೃಂಗವು ಪಂಚಭೂಮಿ ವಿಮಾನವೆಂದಿದ್ದಾನೆ. ಕರ್ನಾಟಕದ ಬಹುಶೃಂಗ ರಚನೆಗಳಲ್ಲಿ ಪಂಚಭೂಮಿ ಅಪರೂಪ. ಮೂಲ ಶೃಂಗದ ಮೂಲೆಗಳಲ್ಲಿ ಕರ್ಣಾಮ್ಲವಿದ್ದಲ್ಲಿ ಭೂಮಿ ಎಣಿಕೆ ಸಾಧ್ಯ. ಲಕ್ಕುಂಡಿಯ ಶಿಖರ ಮಾದರಿಯಲ್ಲಿ ಭೂಮಿ ಆಮ್ಲಗಳಿವೆ. ಉತ್ತರ ಭಾರತದ ಬಹುಶೃಂಗರಚನೆಗಳಲ್ಲಿ ಭೂಮಿ ಆಮ್ಲಗಳನ್ನು ಹೆಚ್ಚು ಕಾಣಬಹುದು.

ಕರ್ನಾಟಕದಲ್ಲಿ 'ಪಿರಿದುಂನಾಗರ' ಶೈಲಿ ಅಡಿಯಲ್ಲಿ ಬರುವ ದೇವಾಲಯಗಳನ್ನು ಗುರುತಿಸಬೇಕು. ಅಪರಾಜಿತ ಪೃಚ್ಛಾ ಗ್ರಂಥದಲ್ಲಿರುವ ನಾಗರ, ಲತಿನ, ಸಾಂಧಾರ ವಿಮಾನ ನಾಗರ, ವಿಮಾನ ಪುಷ್ಪಕ ಶೈಲಿಗಳ ಪ್ರಬೇಧಗಳನ್ನೊಳಗೊಂಡಿದೆ. ಇದರೊಂದಿಗೆ ವೈರಾಜ್ಯಾದಿ ಪ್ರಭೇದಗಳನ್ನು ಗಮನಿಸಬೇಕು. ಗ್ರಂಥ ರೀತ್ಯಾ ಪ್ರತಿಯೊಂದರಲ್ಲಿಯೂ ೨೫ ಪ್ರಬೇಧಗಳು. ಆದರೆ ಕರ್ನಾಟಕದಲ್ಲಿರುವ ದೇವಾಲಯಗಳು ಬೆರಳೆಣಿಕೆಯಷ್ಟು. ಪೂರ್ಣ ಪ್ರಮಾಣದ ದೇವಾಲಯಗಳಲ್ಲಿ ಹಾನುಗಲ್ಲಿನ ಗಣಪತಿ ದೇವಾಲಯ ಬಹುಶೃಂಗವುಳ್ಳದ್ದು. ಹತ್ತರಗಿಯ ಶಿಖರೇಶ್ವರ, ಉಮಾಪುರದ ಶಾಹೇಶ್ವರ ಏಕಶೃಂಗ ರಚನೆ ಲತಿನ ಶೈಲಿ ಎನ್ನಲಾಗಿದೆ. ಶಿರೂರಿನ ಸಿದ್ಧೇಶ್ವರ ದೇವಾಲಯ ಏಕಶೃಂಗ ರಚನೆಯಾದರೂ ಕೊಂಚ ಭಿನ್ನತೆಯುಂಟು. ಇವೆಲ್ಲವೂ ನಿರಂಧಾರ ದೇವಾಲಯಗಳು. ಹಾನುಗಲ್ಲಿನ ಗಣಪತಿ ದೇವಾಲಯವನ್ನು ಗಮನಿಸಬೇಕು. ಈ ಶಿಖರದಲ್ಲಿ ಒಟ್ಟು ೨೫ ಶೃಂಗಗಳ ಜೋಡಣೆ ಇದೆ; ಆದ್ದರಿಂದ ಮಂದರ ಪ್ರಬೇಧ. ಕೇಸರಿ ಮೊದಲಾದ ಪ್ರಭೇದದಲ್ಲಿ ಆರನೆಯದು. "ಪಂಚವಿಂಶಾಂಡಕೋಪೇತಂ ಮಂದರಂ ಕಾರಯೇತ್ ಬುಧಃ"- ಇದು ಸಮರಾಂಗಣ ಸೂತ್ರಧಾರದ ವಿವರಣೆ.

ಕರ್ಣಭಾಗದಲ್ಲಿ ಒಂದರ ಮೇಲೊಂದರಂತೆ ಎರಡು ಕರ್ಣಶೃಂಗಗಳು. ಪ್ರತಿರಥದಲ್ಲಿ ಪ್ರತಿಶೃಂಗ ಒಂದು. ಭದ್ರಭಾಗದಲ್ಲಿ ಎರಡು ಉರು ಶೃಂಗಗಳು. ಮೂಲ ಶೃಂಗವೂ ಸೇರಿದಂತೆ ೨೫.

ಕರ್ಣೇ ದ್ವೇ ಭೆದ್ರಕೇ ದ್ವೇಚ ಚೈಕಂ ಪ್ರತಿರಥೇ ತಥಾ
ಸಘಂಟಾ ಕಲಶ ರೇಖಾ ರಥಿಕೋದ್ಗಮಭೂಷಿತಾಃ[೧೫]

ಶಿಖರ ರಚನೆ ಅಪರಾಜಿತ ಪೃಚ್ಛಾ ಗ್ರಂಥದಲ್ಲಿ ಉಲ್ಲೇಖಿಸಿದಂತೆಯೇ ಇದೆ. ಇದನ್ನು ಸಾಂಧಾರವೆನ್ನುವಂತೆ ವಿವರಿಸಲಾಗಿದೆ. ಆದರೆ ಇದು ನಮಗೆ ಗೌಣ. ಶಿಖರದ ನಂತರ, ಗಲ, ಆಮಲಸಾರ, ಕಳಶ, ಆಮಲಸಾರ ಮತ್ತು ಘಂಟಾ ಪದಗಳು ಪರ್ಯಾಯ ಪದಗಳೆನ್ನುವಂತೆ ಬಳಕೆಯಾಗುತ್ತವೆ. ಶಿಖರದ ಮುಂಭಾಗ, ಶಿಖರದ ಮೂಲದಲ್ಲಿ ರಥಿಕಾ, ಉದ್ಗಮ ಅಲಂಕಾರಗಳು. ಗವಾಕ್ಷಕ್ಕಾಗಿ ರಥಿಕಾ ಅವಕಾಶ ಒದಗಿಸುತ್ತದೆ. ಗವಾಕ್ಷ ಇರಬಹುದು, ಇಲ್ಲದಿರಬಹುದು; ರಥಿಕಾದ ಚೌಕಟ್ಟು ರೂಪುಗೊಳ್ಳುತ್ತದೆ. ಉದ್ಗಮವು ಮೇಲಿನ ಅಲಂಕಾರಿಕ ಭಾಗ.

ಹಾನುಗಲ್ಲಿನ ಗಣಪತಿಯ ದೇವಾಲಯವನ್ನು ಹೊರತುಪಡಿಸಿದರೆ, ಉಳಿದಂತೆ ಕೇಸರೀ ಮೊದಲಾದ ಬಹುಶೃಂಗ ಪ್ರಭೇದಗಳು ಜಂಘಾಭಾಗದಲ್ಲಿ ಶಿಖರಮಾದರಿಗಳು ಕರ್ನಾಟಕದಲ್ಲಿವೆ. ಅವುಗಳನ್ನು ಗುರುತಿಸಬೇಕು. ಇದರೊಂದಿಗೆ

ತಲಚ್ಛಂದದ ವಿವರಣೆಗಳಿವೆ. ಮೊದಲಿಗೆ ಕೇಸರೀ ಪ್ರಭೇದ.

> **ಕ್ಷೇತ್ರಾರ್ಧೇ ಚ ಭವೇತ್ ಭದ್ರಂ ಭದ್ರಾರ್ಧಂ ಕರ್ಣವಿಸ್ತರಃ**
> **ಕರ್ಣಸ್ಯಾರ್ಧ ಪ್ರಮಾಣೇನ ಕರ್ತವ್ಯೋ ಭದ್ರನಿರ್ಗಮಃ**
> **ಚತುಷ್ಕೋಣೇಷು ಖ್ಯಾತಾನಿ ಶ್ರೀವತ್ಸ ಶಿಖರಾಣಿ ಚ**
> **ರಥಿಕೋದ್ಗಮೇ ಚ ಪಂಚೈವ ಕೇಸರೀ ಗಿರಿಜಾಪ್ರಿಯಃ[೧೬]**

ಕೇಸರಿಯು ತ್ರಿರಥ ರಚನೆ: ಕರ್ಣ ೧ ಭಾಗ, ಭದ್ರ ೨ ಭಾಗ. ಕರ್ಣ ೧ ಭಾಗ. ಭದ್ರದ ಮುಂಚಾಚು ಮುಂದಕ್ಕಿದ್ದು ಇದನ್ನೂ ಮುಖಭದ್ರ, ಪ್ರತಿಭದ್ರವೆಂದು ವಿಭಾಗಿಸಬಹುದು. ಕರ್ಣಭಾಗದಲ್ಲಿ ಶೃಂಗಗಳು. ತಿಳವಳ್ಳಿಯ ಶಾಂತೇಶ್ವರ, ಹಾನುಗಲ್ಲಿನ ತಾರಕೇಶ್ವರ ದೇವಾಲಯಗಳ ಭಿತ್ತಿಯಲ್ಲಿ ಅಲಂಕರಣಗೊಂಡಿದ್ದನ್ನು ಕಾಣಬಹುದು. ಕೆಲವೆಡೆ ಸ್ತಂಭಗಳ ಕೆಳಗಿನ ಚಚ್ಚೌಕ ರಚನೆಯ ಮೂಲೆಗಳಲ್ಲಿ ಕೇಸರೀ ಶಿಖರಗಳುಳ್ಳ ಕುಂಭಸ್ತಂಭಗಳನ್ನು ಅಲಂಕಾರಕ್ಕೆ ಬಳಸಿದ್ದಾರೆ. ಹಾನುಗಲ್ಲಿನ ದೇವಾಲಯದ ಭಿತ್ತಿಯಲ್ಲಿ ಸರ್ವತೋಭದ್ರ ಮತ್ತು ನಂದನ ಪ್ರಭೇಧಗಳನ್ನೂ ಕಾಣಬಹುದು. ಇವು ಕ್ರಮವಾಗಿ ೯ ಮತ್ತು ೧೩ ಶೃಂಗಗಳನ್ನು ಹೊಂದಿವೆ. ಶಾಸ್ತ್ರಾರೀತ್ಯಾ ಸರ್ವತೋಭದ್ರದ ವಿವರಣೆ ಇಂತಿದೆ.

> **ಭದ್ರೇವೈತೂದ್ಗಮಾಃ ಪಂಚ ಕರ್ಣೇಷ್ವ ಶೃಂಗಾಣಿಚ**
> **ಶ್ರೀವತ್ಸ ಶಿಖರಂ ಕಾರ್ಯಂ ಘಂಟಾಕಲಶಸಂಯುತಂ[೧೭]**

ಉದ್ಗಮದಲ್ಲಿ ಐದು ಮಡಿಕೆಗಳು, ಕರ್ಣಭಾಗದಲ್ಲಿ ಒಂದರ ಮೇಲೊಂದರಂತೆ ಎರಡೆರಡು ಶೃಂಗಗಳು, ಮೂಲ ಶೃಂಗವು ಸೇರಿದಂತೆ ೯ ಶೃಂಗಗಳು. ಇದು ಗ್ರಾಂಥಿಕ ವಿವರಣೆ. ಆದರೆ ನಮ್ಮಲ್ಲಿ ಕಾಣುವ ವಿವರಗಳು ಕರ್ಣದಲ್ಲಿ ೧ ಶೃಂಗ ಮತ್ತು ಭದ್ರದಲ್ಲಿ ಒಂದು ಶೃಂಗ, ಮೂಲಶೃಂಗವೂ ಸೇರಿದಂತೆ ೯. ಕರ್ನಾಟಕದಲ್ಲಿರುವ ಉದಾಹರಣೆಗಳು ಕೊಂಚ ಭಿನ್ನ!

ನಂದನವು, ಸರ್ವತೋಭದ್ರದ ಮುಂದುವರಿಕೆ. "ಶ್ರೀವತ್ಸ ಭದ್ರಮಾರೂಢಂ ರಥಿಕೋದ್ಗಮಭೂಷಿತೇ" ಎಂದಿದೆ. ಶ್ರೀವತ್ಸ ಶೃಂಗವು ಜಲಾಂತರವನ್ನೊಳಗೊಂಡದ್ದು; ಕರ್ಣ ಭಾಗದಲ್ಲಿ ಒಂದರ ಮೇಲೊಂದು ಎರಡು ಶೃಂಗಗಳು, ಭದ್ರ ಭಾಗದಲ್ಲೊಂದು ಶೃಂಗ, ಮೂಲ ಶೃಂಗವೂ ಸೇರಿದಂತೆ ೧೩ ಶೃಂಗಗಳು. ಭಿತ್ತಿ ಭಾಗದಲ್ಲಿರುವ ಅಲಂಕಾರಿಕ ಶಿಖರಗಳಲ್ಲಿ ತಲಚ್ಛಂದ ನಿರ್ಣಯ ಸಾಧ್ಯವಾಗದು.

ಶೃಂಗ, ಉರುಶೃಂಗ, ಮೂಲಶೃಂಗಗಳೊಂದಿಗೆ ಪ್ರತ್ಯಂಗ ರಚನೆಯೂ ಗ್ರಂಥಗಳಲ್ಲಿದೆ. ಪ್ರತ್ಯಂಗ ರಚನೆಯನ್ನು ಭದ್ರಭಾಗದಲ್ಲಿ ಉರುಶೃಂಗದ ಎಡಬಲಭಾಗದಲ್ಲಿ ಸೂಚಿಸಲಾಗಿದೆ. ಪ್ರಭೇದಗಳ ಗುರುತಿಸುವಿಕೆಯಲ್ಲಿ ಇವುಗಳಿಗೆ ಸ್ಥಾನವುಂಟು. ಇವಲ್ಲದೆ ಶಿಖರದಲ್ಲಿ ರಥಿಕ, ಸಿಂಹಕರ್ಣ, ತಿಲಕ, ತವಂಗಗಳೆನ್ನುವ ಅಲಂಕರಣಗಳಿವೆ. ರಥಿಕ, ತಿಲಕಗಳನ್ನು ಇಲ್ಲಿಯ ಶಿಖರ ರಚನೆಯಲ್ಲಿ ಕಾಣಬಹುದು. ಎಣಿಕೆಯಲ್ಲಿ ಇವುಗಳನ್ನು ಗಮನಿಸಲಾಗದು. ಪ್ರತ್ಯಂಗ ರಚನೆಯೂ ಇಲ್ಲಿನ ದೇವಾಲಯಗಳಲ್ಲಿಲ್ಲ.

> **ರಥಿಕಾಂ ಸಿಂಹಕರ್ಣಂಚ ಭದ್ರೇ ಗವಾಕ್ಷಕಾನ್**
> **ಪ್ರತ್ಯಂಗೈಸ್ತಿಲಕಾಂಡ್ಯೈಶ್ಚ ಶೋಭಿತಂ ಸುರಮಂದಿರಂ[೧೮]**

ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯದ ಭಿತ್ತಿಯಲ್ಲಿ ನಂದಿಶಾಲಾ ಅಥವಾ ನಂದಿಶಾಲಿಕ ಪ್ರಭೇದದ ಮಾದರಿ ಇದೆ. ಭಿತ್ತಿಯ ಭದ್ರಭಾಗದ ಶೂರಸೇನದ ಅಡಿಯಲ್ಲಿ ಈ ಶಿಖರ ಮಾದರಿಯನ್ನು ಕಾಣಬಹುದು. ಈ ಪ್ರಬೇಧದಲ್ಲಿ ೧೭ ಶೃಂಗಗಳು. ಕರ್ಣಭಾಗದಲ್ಲಿ ಒಂದು, ಪ್ರತಿಭಾಗದಲ್ಲಿ ಒಂದು, ಭದ್ರಭಾಗದಲ್ಲಿ ಒಂದು, ಮೂಲ ಶೃಂಗವೂ ಸೇರಿದಂತೆ ಒಟ್ಟು ೧೭ ಶೃಂಗಗಳು. ಮೂಲಶೃಂಗ ಮತ್ತು ಉರುಶೃಂಗಗಳಲ್ಲಿ ಭೂಮಿ ಆಮ್ಲಗಳನ್ನು ಗುರುತಿಸಬಹುದು. ಕ್ರಮವಾಗಿ ಚತುರ್ಭೂಮಿ, ತ್ರಿಭೂಮಿಗಳೆನ್ನಬಹುದು. ಮುಂದಿನ, ನಂದೀಶ ಪ್ರಭೇದದಲ್ಲಿ ೨೧ ಶೃಂಗಗಳು. ಕರ್ಣಭಾಗದಲ್ಲಿ ಎರಡು, ಪ್ರತಿರಥದಲ್ಲಿ ಒಂದು, ಭದ್ರಭಾಗದಲ್ಲಿ ಒಂದು ಉರುಶೃಂಗ, ಮೂಲಶೃಂಗವೂ ಸೇರಿದಂತೆ ೨೧ ಶೃಂಗಗಳು, ಇಂತಹ ಒಂದು ಮಾದರಿ ಹಾನುಗಲ್ಲಿನ ತಾರಕೇಶ್ವರ ದೇವಾಲಯದ ಭಿತ್ತಿಯಲ್ಲಿದೆ.

> **ತ್ರಿಭಾಗಂ ಚ ಭವೇದ್ ಭದ್ರಂ ಭದ್ರಾರ್ಧಂ ಪ್ರರಥಸಸಥಾ**
> **ಕರ್ಣೇ ಶೃಂಗದ್ವಯಂ ಭದ್ರೇ ಏಕೈಕಂ ಪ್ರರಥೇ ತಥಾ[೧೯]**

೨೫ ಶೃಂಗಗಳ ಮಂದರ ಪ್ರಭೇದದ ಪೂರ್ಣ ಪ್ರಮಾಣದ ದೇವಾಲಯವನ್ನು ಗಮನಿಸಲಾಗಿದೆ. ಈ ಪ್ರಬೇಧದ ಕೆಲವು ರೂಪಗಳು ಕುಬಟೂರು ಮತ್ತು ತಿಳವಳ್ಳಿಯ ದೇವಾಲಯದ ಭಿತ್ತಿಯಗಳಲ್ಲಿವೆ.

ಕರ್ನಾಟಕದಲ್ಲಿ ಇಂದು ರಚನೆಗೊಳ್ಳುತ್ತಿರುವ ಅಮೃತ ಶಿಲಾರಚನೆಗಳಲ್ಲಿ ಮಂದರ ಪ್ರಬೇಧವು ವ್ಯಾಪಕವಾಗಿ ಬಳಕೆಯಾಗುತ್ತಿದೆ. ಹೆಚ್ಚಿನವು ಜೈನದೇವಾಲಯಗಳು. ಈ ಶೃಂಗಗಳೊಂದಿಗೆ "ತಿಲಕ" ಅಲಂಕರಣೆಯನ್ನೂ ಕಾಣಬಹುದು.

ಈವರೆಗೆ ೫, ೯, ೧೩, ೧೭, ೨೧, ೨೫ ಶೃಂಗಗಳ ಪ್ರಭೇದಗಳನ್ನು ಗುರುತಿಸಲಾಗಿದೆ. ಈ ಪ್ರಭೇದಗಳು ಹೆಚ್ಚು ಚಾಲನೆಯಲ್ಲಿತ್ತು ಎಂದು ಊಹಿಸಬಹುದು.

ಅಪರೂಪ ಎನ್ನುವಂತೆ ಇತರೆ ಪ್ರಭೇದಗಳೂ ಕಂಡಿವೆ. ಉದಾಹರಣೆಗೆ ೩೭ ಶೃಂಗಗಳ ಪ್ರಭೇದ ಮಾಳಗುಂದದ ಸಿದ್ಧೇಶ್ವರ ದೇವಾಲಯದ ಭಿತ್ತಿಯಲ್ಲಿದೆ. ೬೧ ಶೃಂಗಗಳ ಭೂಧರ ಪ್ರಭೇದದ ಎರಡು ಮಾದರಿಗಳು ಹಾನುಗಲ್ಲಿನ ತಾರಕೇಶ್ವರ ದೇವಾಲಯದಲ್ಲಿದೆ. ಬಹುಶೃಂಗದ ಮತ್ತಷ್ಟು ರಚನೆಗಳು ಇನ್ನಿತರ ದೇವಾಲಯಗಳಲ್ಲಿರುವ ಸಾಧ್ಯ.







ಕುಬಟರೂ ಸಮೀಪದ ನೇರಲಿಗೆ ದೇವಾಲಯದ ಭಿತ್ತಿಯಲ್ಲಿರುವ ಕೆಲವು ಮಾದರಿಗಳನ್ನು ಡಾ. ಜಗದೀಶ್ ಗುರುತಿಸಿದ್ದಾರೆ. ದೇಗಾವೆಯ ಕಮಲನಾರಾಯಣ ಬಸದಿ, ಬೆಳಗಾವಿಯ ಕಮಲಬಸದಿಯ ಭಿತ್ತಿಗಳಲ್ಲಿರುವ ಬಹುಶೃಂಗ ರಚನೆಗಳನ್ನು ಡಾ. ಸ್ಮಿತಾ ಸುರೇಬಾನ್‌ಕರ್ ಹೆಸರಿಸಿದ್ದಾರೆ. ಇವು ಹೆಚ್ಚಿನ ವಿಶ್ಲೇಷಣೆಗೆ ಒಳಗಾಗದೆ ಬೆಳಕಿಗೆ ಬಂದಿಲ್ಲವೆನ್ನಬಹುದು.

ತಲಚ್ಛಂದದ ಬಹುರೂಪಗಳನ್ನು ವಿವರಿಸುತ್ತಾ ಅಪರಾಜಿತ ಪೃಚ್ಛಾ ಗ್ರಂಥಕಾರನು ಏಕಶೃಂಗದಿಂದ ಆರಂಭಿಸಿ ಬಹುಶೃಂಗಗಳನ್ನೂ ವೈರಾಜ್ಯಾದಿ ಪ್ರಭೇದಗಳ ಅಡಿಯಲ್ಲಿ ಗುರುತಿಸುತ್ತಾನೆ. ಇವೂ ೨೫ ಪ್ರಭೇದಗಳು. ಸರಳ ಚತುರಶ್ರದಲ್ಲಿ ಒಂದು, ತ್ರಯಂಗದಲ್ಲಿ ಮೂರು, ಪಂಚಾಂಗದಲ್ಲಿ ಐದು, ಸಪ್ತಾಂಗದಲ್ಲಿ ಏಳು ಮತ್ತು ನವಾಂಗದಲ್ಲಿ ಒಂಬತ್ತು, ಒಟ್ಟು ೨೫ ಪ್ರಬೇಧಗಳು. ಇವು ನಿರಂಧಾರ ರಚನೆಗಳು.

ವೈರಾಜ್ಯಾದೀಂಸ್ತತೋ ವಕ್ಷೇ ಪ್ರಾಸಾದಾಃ ಪಂಚವಿಂಶತಿಃ
ಚತುರಶ್ರೋ ಭವೇದೇಕತ್ರಂಗ್ರಾಶ್ಚತ್ರಯ ಏವಚ
ಭವಂತಿ ಪಂಚ ಪಂಚಾಂಗಾಃ ಸಪ್ತಾಂಗಾನ್ ಸಪ್ತಕಾರಯೇತ್
ನವಾಂಗಾಶ್ಚ ನವಾಖ್ಯಾತಾಃ ಪ್ರಾಸಾದಾಃ ಪಂಚವಿಂಶತಿಃ[೨೦]

ನಾಲ್ಕು ದ್ವಾರಗಳಿರುವುದು ವೈರಾಜ್ಯದ ಸಾಮಾನ್ಯ ಸ್ವರೂಪವೆನಿಸಿದರೂ, ಒಂದು, ಎರಡು, ಮೂರು ದ್ವಾರಗಳಿಗೂ ಅವಕಾಶ ಕಲ್ಪಿಸಿದೆ.

ಏಕದ್ವಾರಂ ಚತುರ್ದ್ವಾರಂ ತ್ರಿದ್ವಾರಂ ಚ ತಥೈವ ಚ
ದ್ವಾರದ್ವಯಂ ಚ ಕರ್ತವ್ಯಂ ದೂಷಣಂ ನ ಕದಾಚನ[೨೧]

ವೈರಾಜ್ಯದ ನಂತರ ತ್ರಯಂಗದಲ್ಲಿ ನಂದನ, ಸಿಂಹ, ಶ್ರೀನಂದನ ಎಂದು ಮೂರು ಪ್ರಭೇದಗಳನ್ನು ಹೆಸರಿಸಲಾಗಿದೆ. ನಂದನದಲ್ಲಿ ಶೃಂಗ ರಚನೆಯನ್ನು ಗುರುತಿಸಿದ್ದು, ಕರ್ಣದಲ್ಲಿ ಒಂದು ಶೃಂಗ, ಭದ್ರಭಾಗದಲ್ಲಿ ಎರಡು ಉರುಮಂಜರಿ: "ಕರ್ಣೇಷ್ವೇಕ ಶೃಂಗಂ ಚ ಭದ್ರೇ ದ್ವೇ ಉರುಮಂಜರೀ"– ಎಂದು ಶಾಸ್ತ್ರ ಉಲ್ಲೇಖ. ರಥಿಕಾರಚನೆಯನ್ನು ಹೇಳಲಾಗಿದೆ.

ಸಿಂಹ ಪ್ರಬೇಧದಲ್ಲಿ "ಕರ್ಣಶೃಂಗೇ ಸಿಂಹಕರ್ಣಃ ಸಿಂಹ ನಾಮ ಸ ಉಚ್ಯತೇ"[೨೨] ಎಂದಿದೆ. ಕರ್ನಾಟಕದಲ್ಲಿ ಉದಾಹರಣೆಗಳಿಲ್ಲದೆ ಗುರುತಿಸಲು ಸಾಧ್ಯವಾಗಿಲ್ಲ. ಈ ಪ್ರಬೇಧಗಳು ಭಿತ್ತಿಯ ಮೇಲೆ ಪ್ರಕಟಗೊಂಡಿದೆಯೇ ಎಂಬ ಪ್ರಶ್ನೆ ಕಾಡುತ್ತದೆ. ಭಿತ್ತಿಯ ರಚನೆಗಳಲ್ಲಿ ನಿರಂಧಾರ, ಸಾಂಧಾರಗಳನ್ನು ಬೇರ್ಪಡಿಸುವುದು ಅಸಾಧ್ಯ. ತ್ರಯಂಗ, ಪಂಚಾಂಗ







ಗಳನ್ನೂ ವಿವರಿಸಲು ಸಾಧ್ಯವಾಗದು. ಆದ್ದರಿಂದ ವೈರಾಜ್ಯಾದಿ ಪ್ರಭೇದಗಳನ್ನು ತಿಳುವಳಿಕೆಗಾಗಿ ನೆನೆಯಬೇಕು.

ಏಕಶೃಂಗ ರಚನೆಗಳಲ್ಲಿ ಹತ್ತರಗಿಯ ಶಿಖರೇಶ್ವರ, ಉಮಾಪುರದ ಲಾಹೇಶ್ವರ ದೇವಾಲಯಗಳು ಪೂರ್ಣ ಪ್ರಮಾಣದ ಸರಳ ರಚನೆಗಳು. ರೇಖಾ ಶಿಖರಗಳಲ್ಲಿ ಅಲಂಕರಣವಿಲ್ಲ. ತಲ ರಚನೆಯಲ್ಲಿ ಭದ್ರ, ಪ್ರತಿರಥ, ಕರ್ಣ ಮೊದಲಾದ ಮಡಿಕೆಗಳಿದ್ದು ಅಮಲಸಾರದವರೆಗೆ ಏಕಪ್ರಕಾರವಾಗಿ ಸಾಗುತ್ತದೆ. ಉಮಾಪುರದ ಲಾಹೇಶ್ವರ ದೇವಾಲಯವನ್ನು ಸಂಪೂರ್ಣವಾಗಿ ಬಿಚ್ಚಿ ಜೋಡಿಸಿದ್ದಾರೆ. ಶಿಖರದ ಪೂರ್ಣರೂಪ ಕಾಣಲು ಸಾಧ್ಯ. ಈ ರೀತಿಯ ಸರಳ ಮಾದರಿಗಳನ್ನು ಕೆಲವೆಡೆ ಭಿತ್ತಿಯ ಅಲಂಕರಣದಲ್ಲಿಯೂ ಕಾಣಬಹುದು.

ಶಿರೂರಿನ ಸಿದ್ದೇಶ್ವರ ದೇವಾಲಯವು ಇವುಗಳಿಗಿಂತ ಕೊಂಚ ಭಿನ್ನವಾದ ಏಕಶೃಂಗ ರಚನೆ. ಶಿಖರ ಮುಖದಲ್ಲಿ ಜಾಲಂಧ್ರದಂತಹ ಅಲಂಕಾರವಿದೆ. ಕಳಿಂಗ ಶೈಲಿಯ ಬಾದಾಮಿ ಚಲುಕ್ಯರ ಕಾಲದ ದೇವಾಲಯಗಳ ಅಲಂಕರಣಕ್ಕೆ ಸಾಮ್ಯವಿದೆ. ಆದರೆ ಕರ್ಣಾಮಲಕ ರಚನೆಗಳಿಲ್ಲ. ಶಿಖರಮೂಲದಲ್ಲಿ ಕರ್ಣ, ಪ್ರತಿರಥ, ಭದ್ರಭಾಗದಲ್ಲಿ ಶೃಂಗಗಳ ಉಬ್ಬು ರಚನೆಗಳಿವೆ. ಇವು ಪೂರ್ಣ ಪ್ರಮಾಣದ ಬಹುಶೃಂಗ ರಚನೆಗೆ ಪ್ರೇರಣೆಯಾಯಿತೇ? ಹೆಚ್ಚಿನ ಉದಾಹರಣೆಗಳಿಲ್ಲದೆ ನಿರ್ಧರಿಸಲು ಸಾಧ್ಯವಾಗದು. ಶಿಖರದ ಮೇಲಿರುವ ಅಮಲಸಾರವು ಪೂರ್ಣ ಬೆಳವಣಿಗೆಯುಳ್ಳದ್ದು. ಕ್ರಿ.ಶ. ೧೦೪೮ರ ವೇಳೆಗೆ ಈ ದೇವಾಲಯ ರಚನೆಗೊಂಡಿತ್ತು ಎಂದು ಶಾಸನಗಳ ಮೂಲಕ ಗುರುತಿಸಬಹುದಾಗಿದೆ. ಈ ದೇವಾಲಯಗಳನ್ನು ಕೋಟಿಪುರದ ಶಾಸನ ಗುರುತಿಸುವ "ಪಿರಿದುಂನಾಗರ" ಶೈಲಿಯಡಿಯಲ್ಲಿ ಅಭ್ಯಸಿಸಬಹುದು.

ಆಧಾರಸೂಚಿ

೧. ಧಾಕಿ ಎಂ.ಎ. ಇಂಡಿಯನ್ ಟೆಂಪಲ್ ಫಾರಂಸ್. ಇನ್ ಕರ್ನಾಟ. ಇನ್ ಸ್ಕ್ರಿಪ್ಷನ್ ಅಂಡ್ ಆರ್ಕಿಟೆಕ್ಚರ್. ಅಭಿನವ್ ಪಬ್ಲಿಕೇಷನ್ಸ್. ನವದೆಹಲಿ. ೧೯೭೭ ಪುಟ ೩.

೨. ಸ್ವಾಮಿನಾಥ ಶಿವಾಚಾರ್ಯ (ಸಂ) ಕಾಮಿಕಾಗಮಂ (ಪೂರ್ವಭಾಗ). ದಕ್ಷಿಣಭಾರತ ಅರ್ಚಕ ಸಂಘ: ಮದ್ರಾಸ್. ೧೯೭೫. ಪುಟ ೧೩೫. ಪಟಲ ೪೯ ಶ್ಲೋಕ ೫, ೧೨-೧೩.

೩. ಪ್ರಭಾಕರ್ ಎಂ.ಎನ್. "ಕಿಂಗ್ ಭೋಜದೇವ ಆಫ್ ಸಮರಾಂಗಣ ಸೂತ್ರಧಾರ"- ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ. ಸಂಪುಟ ೧೦೫ ಸಂಖ್ಯೆ ೨, ಜೂನ್ ೨೦೧೪, ಪುಟ ೧-೮.

೪. ಮಂಕಡ್ ಪಿ.ಎ. ಅಪರಾಜಿತ ಪೃಚ್ಛಾ: ಗಾಯಕ್ವಾಡ್ ಓರಿಯಂಟಲ್ ಇನ್ಸ್ಟಿಟ್ಯೂಟ್. ಬರೋಡಾ. ೧೯೫೦. ಪುಟ ೯.

೫. ಧಾಕೆ, ಇಂಡಿಯನ್ ಟೆಂಪಲ್ ಫಾರಂಸ್, ಪುಟ ೪೮

೬. ಭಗವಾನ್ ದಾಸ್ ಜೈನ್. ಪ್ರಾಸಾದಮಂಡನ. ಜಯಪುರ ಸಿಟಿ. ೧೯೬೩. ಪುಟ ೧೩ (ಭೂಮಿಕಾ-ಅಗ್ರವಾಲ್ ವಿ.ಎಸ್.)

೭. ಮಂಕಡ್, ಅಪರಾಜಿತ ಪೃಚ್ಛಾ, ಪುಟ ೨೬೬, ಅ. ೧೦೬, ಶ್ಲೋಕ ೧೨-೧೬.

೮. ಅಗ್ರವಾಲ್ ವಿ.ಎಸ್. ಸಮರಾಂಗಣ ಸೂತ್ರಧಾರ. ಗಾಯಕ್‌ವಾಡ್ ಓರಿಯಂಟಲ್ ಇನ್ಸ್ಟಿಟ್ಯೂಟ್. ಬರೋಡಾ. ೧೯೬೬. ಪುಟ ೨೨೦. ಅ. ೪೯, ಶ್ಲೋಕ ೭-೮

೯. ಮಂಕಡ್, ಅಪರಾಜಿತಪೃಚ್ಛಾ, ಪುಟ ೪೬೨, ಅ. ೧೭೯, ಶ್ಲೋಕ ೪೦.

೧೦. ಭಗವಾನ್ ದಾಸ್, ಪ್ರಾಸಾದ ಮಂಡನ, ಪುಟ ೧೧೨, ಅ. ೬, ಶ್ಲೋಕ ೩೦.

೧೧. ಅಗ್ರವಾಲ್, ಸಮರಾಂಗಣ ಸೂತ್ರಧಾರ, ಪುಟ ೩೨೧, ಅ. ೫೬, ಶ್ಲೋಕ ೩-೪.

೧೨. ಮಂಕಡ್, ಅಪರಾಜಿತಪೃಚ್ಛಾ, ಪುಟ ೪೨೧, ಅ. ೧೬೭. ಶ್ಲೋಕ ೭.

೧೩. ಭಗವಾನ್ ದಾಸ್. ಪ್ರಾಸಾದ ಮಂಡನ, ಪುಟ ೧೧೩, ಅ. ೬ ಶ್ಲೋಕ ೩೩-೩೪.

೧೪. ಮಂಕಡ್, ಅಪರಾಜಿತಪೃಚ್ಛಾ, ಪುಟ ೩೮೮-೩೮೯, ಶ್ಲೋಕ ೨-೬.

೧೫. ಅದೇ, ಪುಟ ೩೮೯, ಶ್ಲೋಕ ೨೨.

೧೬. ಅದೇ, ಪುಟ ೩೮೮, ಶ್ಲೋಕ ೧೧-೧೨.

೧೭. ಅದೇ ಪುಟ ೩೮೯, ಶ್ಲೋಕ ೧೬.

೧೮. ಭಗವಾನ್‌ದಾಸ್, ಪ್ರಾಸಾದ ಮಂಡನ, ಪುಟ ೧೧೦, ಅ. ೬. ಶ್ಲೋಕ ೨೦.

೧೯. ಮಂಕಡ್, ಅಪರಾಜಿತಪೃಚ್ಛಾ, ಪುಟ ೩೮೯, ಶ್ಲೋಕ ೧೯.

೨೦. ಅದೇ, ಪುಟ ೩೮೦, ಅ. ೧೫೬, ಶ್ಲೋಕ ೧-೨.

೨೧. ಅದೇ, ಪುಟ ೩೮೧, ಅ. ೧೫೭, ಶ್ಲೋಕ ೨.

೨೨. ಅದೇ, ಪುಟ ೩೮೨, ಅ. ೧೫೭, ಶ್ಲೋಕ ೧೬.

ಚಿತ್ರದುರ್ಗ ಜಿಲ್ಲೆಯ ಪ್ರಾಚೀನ ಇಟ್ಟಿಗೆ ದೇವಾಲಯಗಳು

ಡಾ. ಎಸ್.ವೈ. ಸೋಮಶೇಖರ್*

ಭಾರತದ ಪ್ರಾಚೀನ ನಾಗರಿಕತೆಯಾದ ಸಿಂಧೂ ಬಯಲಿನ ಸಂಸ್ಕೃತಿಯ ಜನರು ಪ್ರಕೃತಿ ಆರಾಧಕರಾಗಿದ್ದು ಪಶುಪತಿ, ಮಾತೃದೇವತೆ ಮೊದಲಾದ ವಿಗ್ರಹಗಳನ್ನು ಪೂಜಿಸುತ್ತಿದ್ದರು. ಅಲ್ಲದೆ ಅಂದು ಶೈವಧರ್ಮ ಅಸ್ತಿತ್ವದಲ್ಲಿದ್ದುದೂ ಇತ್ತೀಚೆಗೆ ಕೈಗೊಂಡ ಉತ್ಖನನ ಹಾಗೂ ಸಂಶೋಧನೆಗಳಿಂದ ದೃಢವಾಗಿದೆ. ಉತ್ಖನನದಲ್ಲಿ ಕಂಡುಬಂದ ಲಿಂಗ, ಪಾಣವಟ್ಟ ಮೊದಲಾದವು ಸಿಂಧೂ ಸಂಸ್ಕೃತಿಯ ಧಾರ್ಮಿಕ ಚಟುವಟಿಕೆಗಳಿಗೆ ಮಹತ್ವದ ಆಕರಗಳಾಗಿವೆ. ವೇದ, ರಾಮಾಯಣ, ಮಹಾಭಾರತ ಮಹಾಕಾವ್ಯಗಳಲ್ಲಿ ದೇವರು ಮತ್ತು ದೇವಾಲಯಗಳ ಉಲ್ಲೇಖಗಳು ಯಥೇಚ್ಛವಾಗಿ ಕಂಡು ಬರುತ್ತವೆ. ಆದರೆ ಆ ಕಾಲದ ದೇಗುಲ ವಾಸ್ತುವನ್ನು ಗುರುತಿಸಲಾಗಿಲ್ಲ. ಭಾರತೀಯ ಚರಿತ್ರೆಯ ಮಟ್ಟಿಗೆ ಹೇಳುವುದಾದರೆ ದೇವಾಲಯ ವಾಸ್ತುರೂಪಗಳು ದೊರೆಯುವುದು ಬೌದ್ಧ ಮತ್ತು ಜೈನ ಧರ್ಮಗಳು ಅಸ್ತಿತ್ವಕ್ಕೆ ಬಂದ ಬಳಿಕವೇ. ಇದು ಚಿತ್ರದುರ್ಗ ಜಿಲ್ಲೆಗೂ ಅನ್ವಯವಾಗುತ್ತದೆ. ಆ ಕಾಲದಲ್ಲಿ ಕಟ್ಟಿದ ಸ್ತೂಪ, ಚೈತ್ಯಗಳ ಅವಶೇಷಗಳು ಅಂದಿನ ಧಾರ್ಮಿಕ ವಾಸ್ತುವಿಗೆ ಸಾಕ್ಷ್ಯಗಳಾಗಿದ್ದು ಬ್ರಹ್ಮಗಿರಿ ಉತ್ಖನನದಲ್ಲಿ ಕುದುರೆ ಲಾಳಾಕಾರದ ಇಟ್ಟಿಗೆಯ ಚೈತ್ಯವು ಬೆಳಕಿಗೆ ಬಂದಿರುವುದು ಗಮನಾರ್ಹ. ಅದೇ ರೀತಿ ಸನ್ನತಿ, ಬನವಾಸಿಗಳಲ್ಲೂ ಈ ಬಗೆಯ ಸ್ತೂಪ, ಚೈತ್ಯದ ಅವಶೇಷಗಳು ಕಂಡುಬಂದಿವೆ. ಎಂ.ಎಚ್. ಕೃಷ್ಣ ಅವರು ಕೈಗೊಂಡ ಚಂದ್ರವಳ್ಳಿ ಉತ್ಖನನದಲ್ಲಿ ಇಟ್ಟಿಗೆ ಗೋಡೆಗಳ ಭಾಗಗಳು, ಇಟ್ಟಿಗೆ ತುಂಡುಗಳನ್ನು ಹಾಕಿ ಬಡಿದು ಗಟ್ಟಿ ಮಾಡಿದ ನೆಲಗಳು ದೊರೆತಿವೆ.

ಅಂತೆಯೇ ಇದರ ನಂತರ ಕಾಲದ ನಿರ್ಮಿತಿಗಳೆಂದರೆ ಜಟಂಗಿ ಬೆಟ್ಟ ಪರಿಸರದ ಇಟ್ಟಿಗೆ ದೇವಾಲಯಗಳು. ಕ್ರಿಪೂ. ೭–೮ನೇ ಶತಮಾನಗಳ ಹೊತ್ತಿಗೆ ಈ ಪರಿಸರದಲ್ಲಿ ನಿರ್ಮಾಣವಾಗಿದ್ದುದು ಗೋಚರಿಸುತ್ತದೆ. ಇದಕ್ಕೆ ಜಟಂಗಿ ರಾಮೇಶ್ವರ ದೇವಾಲಯದ ಶಾಸನವು ಪ್ರಮುಖ ಸಾಕ್ಷ್ಯವಾಗಿದೆ. ಅದರಲ್ಲಿ ಹೇಳಿದಂತೆ ಈಗಿರುವ ದೇವಾಲಯ ಕ್ರಿ.ಶ. ೯೬೨ರಲ್ಲಿ ನಿರ್ಮಾಣವಾದದ್ದು. ಆದರೆ ಈ ಹಿಂದೆ ಅದೇ ದೇಗುಲವು ಇಟ್ಟಿಗೆಯ ರಚನೆಯನ್ನು ಹೊಂದಿತ್ತು. ಅದು ಶಿಥಿಲವಾದ ಕಾರಣ ಇಟ್ಟಿಗೆಯ ರಚನೆಗಳನ್ನು ತೆಗೆದುಹಾಕಿ ಅದೇ ಸ್ಥಳದಲ್ಲಿ ಕಲ್ಲಿನ ದೇಗುಲವನ್ನು ಕಟ್ಟಲಾಯಿತೆಂದು ಶಾಸನವು ಸ್ಪಷ್ಟಪಡಿಸುತ್ತದೆ. ಇದರಿಂದ ಚಿತ್ರದುರ್ಗ ಜಿಲ್ಲಾ ಪರಿಸರ ಕ್ರಿ.ಶ. ೭–೮ನೇ ಶತಮಾನದ ಹೊತ್ತಿಗೆ ದೇವಾಲಯಗಳ ಆಗರವಾಗಿದ್ದುದು ಸಂಶೋಧನೆಗಳಿಂದ ಬೆಳಕಿಗೆ ಬಂದಿದೆ.

ಇಟ್ಟಿಗೆ ಕಟ್ಟಡಗಳು

ಬ್ರಹ್ಮಗಿರಿಯಲ್ಲಿ ಅಶೋಕನ ಬಂಡೆಗಲ್ಲು ಶಾಸನದಿಂದ ಆಗ್ನೇಯಕ್ಕೆ ಸುಮಾರು ೨೦೦ ಮೀ. ದೂರದಲ್ಲಿ ಸುಮಾರು ೭ ಮೀ. ಉದ್ದ x ೪.೧೫ ಮೀ. ಅಗಲವಾದ ಇಟ್ಟಿಗೆ ಕಟ್ಟಡವು ಉತ್ಖನನದಲ್ಲಿ ಬೆಳಕಿಗೆ ಬಂದಿದೆ. ಇದು ಪೂರ್ವಾಭಿಮುಖವಾಗಿದ್ದು, ೫.೨೫ ಮೀ. x ೨.೭೫ ಮೀ. ನಷ್ಟು ವಿಸ್ತಾರವಾದ ಒಂದು ಪಡಸಾಲೆ ಇದರ ಹಿಂಭಾಗ ಪ್ರ.ಶ.ಪೂ. ೨–೧ನೇ ಶತಮಾನದ ಬೌದ್ಧ ಚೈತ್ಯಾಲಯದಂತೆ ಅರ್ಧವೃತ್ತಾಕಾರದಲ್ಲಿತ್ತು. ಇದನ್ನು ಬಹುಶಃ ಚಂದ್ರವಳ್ಳಿಯ ಕಟ್ಟಡಗಳಲ್ಲಿ ತೋರಿದ ಪದ್ಧತಿಯಂತೆ ಕಟ್ಟಿರಬೇಕೆಂಬುದು ಡಾ. ಅ. ಸುಂದರ ಅವರ ಅಭಿಮತ. ಈ ಕಟ್ಟಡದ ವಿನ್ಯಾಸ ಆ ಕಾಲದ ಬಂಡೆಗಲ್ಲುಗಳಲ್ಲಿ ಕೊರೆದು ಮಾಡಿದ ದೇವಾಲಯ/ಚೈತ್ಯಾಲಯಗಳಿಗೆ ಹೋಲುವುದರಿಂದಲೂ ಮತ್ತು ಜನವಸತಿಯ ಸ್ಥಳದಿಂದ ಸ್ವಲ್ಪ ದೂರದಲ್ಲಿ ಗುಡ್ಡದ ಇಳಿಜಾರಿನಲ್ಲಿದ್ದುದರಿಂದಲೂ ಇದು ಬಹುಶಃ ಒಂದು ದೇವಾಲಯ/ಚೈತ್ಯಾಲಯವೇ ಆಗಿರಬೇಕೆಂದೂ ಹೇಳಲಾಗಿದೆ. ಆದರೆ ಇದರ ಬಳಿ ಯಾವುದೇ ಧಾರ್ಮಿಕ ಸಂಬಂಧವಾದ ವಸ್ತು ಅವಶೇಷಗಳು ದೊರೆತಿಲ್ಲ.

ಇತಿಹಾಸ ಪ್ರಾರಂಭಕಾಲದ ಸಂಸ್ಕೃತಿಯು ಸುಮಾರು ಪ್ರ.ಶ.ಪೂ. ೪–೩ನೇ ಶತಮಾನದಿಂದ ಶುರುವಾಗಿದ್ದರೂ, ಇಟ್ಟಿಗೆಗಳಿಂದ ದೇವಾಲಯ ಮತ್ತು ಮನೆಗಳನ್ನು ಕಟ್ಟುವುದು ಸು.ಕ್ರಿ.ಶ.ಪೂ. ೨ನೇ ಶತಮಾನದಿಂದ ಆರಂಭವಾಗಿ ಕ್ರಿ.ಶ. ೧–೨ನೇ ಶತಮಾನಗಳಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿರಬೇಕೆಂದು ಡಾ. ಅ. ಸುಂದರ ಅವರು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯದ ಮೂಲಕ ಕಂಡುಬಂದಿರುವ ಕಲ್ಲು ಮತ್ತು ಇಟ್ಟಿಗೆಗಳನ್ನು ಬಳಸಿ ಕಟ್ಟಲಾದ

* ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬

ದೇವಾಲಯಗಳನ್ನು ಬೆಳಕಿಗೆ ತರುವ ಪ್ರಯತ್ನ ಪ್ರಸ್ತುತ ಪ್ರಬಂಧವಾಗಿದೆ. ಅವುಗಳನ್ನು ಈ ಕೆಳಗೆ ಕ್ರಮವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಭೋಗೇಶ್ವರ ದೇವಾಲಯ

ಭೋಗೇಶ್ವರ ದೇವಾಲಯವು ಇಸಾಮುದ್ರ ಗ್ರಾಮದ ಅತ್ಯಂತ ಪ್ರಾಚೀನ ದೇವಾಲಯವಾಗಿದೆ. ಇದು ಮೂಲತಃ ಇಟ್ಟಿಗೆಯದಾಗಿದ್ದು ಕಾಲಾನಂತರದಲ್ಲಿ ಜೀರ್ಣೋದ್ಧಾರಗೊಂಡಿದೆ. ಇದು ಶಾಸನದಲ್ಲಿ ಉಲ್ಲೇಖಗೊಂಡಂತೆ ಕ್ರಿ.ಶ. ೯೪೦ರ ಹೊತ್ತಿಗೆ ಜೀರ್ಣೋದ್ಧಾರವಾಗಿದ್ದುದನ್ನು ಗಮನಿಸಿದರೆ ಇದರ ಪ್ರಾಚೀನತೆಯನ್ನು ಬಹು ಹಿಂದಕ್ಕೆ ಕೊಂಡೊಯ್ಯಲು ಸಾಧ್ಯವಾಗುತ್ತದೆ.

ಭೋಗೇಶ್ವರ ದೇವಾಲಯವು ಗರ್ಭಗೃಹ, ಅರ್ಧಮಂಟಪ ಹಾಗೂ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಪೀಠದ ಮೇಲೆ ಪ್ರತಿಷ್ಠಾಪನ ಲಿಂಗವಿದೆ. ಮೂರು ಅಡಿಗಳೆತ್ತರದ ಈ ಲಿಂಗವನ್ನು ಕಪ್ಪುಶಿಲೆಯಲ್ಲಿ ಕಡೆದಿರುವರು. ನಂದಿಯ ಕೊರಳಲ್ಲಿ ಹಾಗೂ ಮೈಮೇಲೆ ಗಂಟೆಸರಗಳನ್ನು ಅಲಂಕರಿಸಿರುವರು. ಗರ್ಭಗೃಹದ ಬಾಗಿಲವಾಡವು ಸರಳವಾಗಿದೆ. ಆದರೆ ಅರ್ಧಮಂಟಪದ ಬಾಗಿಲವಾಡವು ವಿವಿಧ ಅಲಂಕರಣೆಗಳನ್ನು ಹೊಂದಿದೆ. ಇದರಲ್ಲಿ ಅರೆಗಂಬಗಳು, ಸಿಂಹಗಳ ಸಾಲು, ಚಾಮರಧಾರಿಯರು, ತ್ರಿಶೂಲ, ಸರ್ಪ, ಗದೆ ಹಾಗೂ ವರದಮುದ್ರೆಗಳನ್ನು ಹಿಡಿದು ನಿಂತಿರುವ ದ್ವಾರಪಾಲಕರು, ಕಮಂಡಲ ಮತ್ತು ಪದ್ಮಗಳನ್ನು ಹಿಡಿದ ಮಹಿಳೆಯರ ಉಬ್ಬುಶಿಲ್ಪಗಳಿವೆ. ಬಾಗಿಲವಾಡದ ಮೇಲ್ಭಾಗದಲ್ಲಿ ಶಾಲ, ಕೂಟ ಮತ್ತು ಪಂಜರಗಳ ಅಲಂಕರಣೆಯ ಹಾರವಿದ್ದು, ಗೂಡುಗಳನ್ನೂ ಚಿತ್ರಿಸಿರುವರು. ಹಾರದ ಕೆಳಗೆ ಭೂತಗಣಗಳನ್ನು ಕಡೆಯಲಾಗಿದೆ. ಸಭಾಮಂಟಪದಲ್ಲಿ ಆರು ಕಂಬಗಳಿವೆ. ಅವುಗಳಲ್ಲಿ ನಾಲ್ಕು ಕಂಬಗಳು ಚಚ್ಚೌಕ ಪೀಠದ ಮೇಲಿದ್ದು, ಕಂಬಗಳ ದಿಂಡುಗಳು ಚಚ್ಚೌಕ, ಅಷ್ಟ ಹಾಗೂ ಹದಿನಾರು ಮುಖಗಳಲ್ಲಿ ಕಡೆಯಲಾಗಿದೆ. ಮೇಲ್ಭಾಗದಲ್ಲಿ ವೃತ್ತಾಕಾರದ ಬೋದಿಗೆ ಹಾಗೂ ಚಚ್ಚೌಕ ಅಬ್ಯಾಕಸ್‌ಗಳಿವೆ. ಉಳಿದ ಎರಡು ಕಂಬಗಳು ಚಚ್ಚೌಕವಾಗಿವೆ. ದೇಗುಲದ ಮುಂಭಾಗದಲ್ಲಿ ಗಣೇಶ ಹಾಗೂ ಕ್ರಿ.ಶ. ೯೪೦ ಹಾಗೂ ೧೦೫೪ರ ಕಾಲದ ಶಾಸನಗಳಿರುವ ಶಿಲಾಶಾಸನವನ್ನು ನಿಲ್ಲಿಸಲಾಗಿದೆ. ಕ್ರಿ.ಶ. ೯೪೦ ಶಾಸನದಲ್ಲಿ ಭೋಗೇಶ್ವರನೆಂದೇ ಕರೆಯುವ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ ಬಗೆಗೆ ಮಾಹಿತಿಯಿದೆ.

ದೇವಾಲಯದ ಗರ್ಭಗೃಹವನ್ನು ಇಟ್ಟಿಗೆಗಳಿಂದ ಕಟ್ಟಲಾಗಿದೆ. ಇಲ್ಲಿ ಬಳಸಿದ ಇಟ್ಟಿಗೆಗಳು ೩೫ ಸೆಂ.ಮೀ. ಉದ್ದ, ೨೨ ಸೆಂ.ಮೀ. ಅಗಲ ಹಾಗೂ ೭ ಸೆಂ.ಮೀ. ದಪ್ಪವಾಗಿವೆ. ಭೋಗೇಶ್ವರ ದೇವಾಲಯವು ಕ್ರಿ.ಶ. ೯೪೦ರ ಹೊತ್ತಿಗೆ ನಿರ್ಮಾಣವಾಗಿತ್ತೆಂಬುದು ಶಾಸನದಿಂದ ತಿಳಿದು ಬರುತ್ತದೆ.

ಹುಲ್ಲೂರು: ಮಲ್ಲೇಶ್ವರ ದೇವಾಲಯ

ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಂಭಾಗದಲ್ಲಿ ಸುಮಾರು ಎಂಟು ಅಡಿ ಎತ್ತರದ ದೀಪಸ್ತಂಭ ಮತ್ತು ಆಂಜನೇಯ ದೇವಾಲಯದ ಬಳಿ ಸುಮಾರು ೨೫ ಅಡಿಗಳೆತ್ತರದ ಇನ್ನೊಂದು ದೀಪಸ್ತಂಭದಿಂದ ಕೂಡಿರುವ ಪ್ರಾಚೀನ ಇಟ್ಟಿಗೆಯನ್ನು ಬಳಸಿ ಕಟ್ಟಲಾದ ದೇವಾಲಯವಿದು. ಈ ದೇವಾಲಯಕ್ಕೆ ಬಳಸಲಾದ ಇಟ್ಟಿಗೆಗಳು ೨೫ ಸೆಂ.ಮೀ. ಉದ್ದ, ೧೮.೫ ಸೆಂ.ಮೀ. ಅಗಲ ಹಗೂ ಎಂಟು ಸೆಂ.ಮೀ. ದಪ್ಪವಾಗಿವೆ. ಗರ್ಭಗೃಹದಲ್ಲಿ ಮೂರು ಅಡಿ ಎತ್ತರ, ನಾಲ್ಕು ಅಡಿ ಉದ್ದ, ಮೂರು ಅಡಿ ಅಗಲವುಳ್ಳ ಪಾನವಟ್ಟದ ಮೇಲೆ ಅರ್ಧ ಅಡಿ ಎತ್ತರದ ಕಪ್ಪುಶಿಲೆಯ ನಯವಾದ ಪ್ರತಿಷ್ಠಾಪನಾ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿರುವರು. ಗರ್ಭಗೃಹದ ಬಾಗಿಲವಾಡವು ವಿವಿಧ ಶಾಖೆಗಳಿಂದ ಅಲಂಕೃತವಾಗಿದ್ದು, ಅವುಗಳಲ್ಲಿ ವಜ್ರ, ಲತೆ, ಸ್ತಂಭಶಾಖೆಗಳು ಮುಖ್ಯವಾಗಿವೆ. ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳದಲ್ಲಿ ಎರಡು ಚಿಕ್ಕ ಕಂಬಗಳು ಅವುಗಳ ಮೇಲೆ ತೋರಣವಿದೆ. ಕಂಬಗಳು ಚಚ್ಚೌಕ ಮತ್ತು ವೃತ್ತಾಕಾರವಾಗಿವೆ. ಇವುಗಳ ಮೇಲಿನ ತೋರಣದಲ್ಲಿ ವ್ಯಾಳ, ಹೂಮೊಗ್ಗು, ಕಿನ್ನರ ಶಿಲ್ಪಗಳ ರಚನೆಗಳಿವೆ. ಅಂತರಾಳದ ಎಡಬದಿಯಲ್ಲಿ ನಾಗಶಿಲ್ಪವನ್ನು ಕಾಣಬಹುದು.

ನವರಂಗದಲ್ಲಿ ನಾಲ್ಕು ಕಂಬಗಳು ಮತ್ತು ಒಂಭತ್ತು ಅಂಕಣಗಳುಳ್ಳ ನವರಂಗವಿದೆ. ಈ ಕಂಬಗಳನ್ನು ಬಹುಮುಖಗಳಲ್ಲಿ ಕಡೆದಿರುವರು. ಇವು ಪೀಠ, ದಿಂಡು, ವೃತ್ತಾಕಾರದ ದಿಂಬಿನಾಕಾರದ ಅಬ್ಯಾಕಸ್, ಫಲಕ ಮತ್ತು ಬೋದಿಗೆಗಳನ್ನು ಹೊಂದಿವೆ. ಈ ಕಂಬಗಳ ದಿಂಡುಗಳಲ್ಲಿ ಸಿಂಹ, ಪೂರ್ಣಕುಂಭ, ಮಾಲೆಗಳ ರಚನೆಗಳಿವೆ. ನವರಂಗದ ಮೇಲ್ಛಾವಣಿಯಲ್ಲಿ ಒಂಭತ್ತು ಪದ್ಮಗಳನ್ನು ಕೆತ್ತಿರುವರು. ನವರಂಗದಲ್ಲಿ ಶಿವಲಿಂಗಕ್ಕೆ ಎದುರಾಗಿ ಶಿವನ ವಾಹನವಾದ ಒಂದು ಅಡಿ ಎತ್ತರ ಹಾಗೂ ಒಂದೂವರೆ ಅಡಿ ಉದ್ದವಾದ ನಂದಿಯನ್ನು ಕಾಣಬಹುದು. ನವರಂಗದ ಎಡ ಮತ್ತು ಬಲಬದಿಯಲ್ಲಿ ಮಹಿಷಮರ್ಧಿನಿ, ಗಣೇಶ, ಶಿವಲಿಂಗ, ಭೈರವ, ನಟರಾಜ, ನರಸಿಂಹ ಶಿಲ್ಪಗಳಿವೆ. ಇವುಗಳಲ್ಲಿ ಮಹಿಷಮರ್ಧಿನಿಯ ಮೂರೂವರೆ ಅಡಿ ಎತ್ತರದ ಶಿಲ್ಪವನ್ನು ಮುಕ್ಕಾಲು ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಿರುವರು. ಎಂಟು ಕೈಗಳನ್ನು ಹೊಂದಿದ ದೇವಿಯು ತ್ರಿಭಂಗಿಯಲ್ಲಿ ನಿಂತಿದೆ.

ತನ್ನ ಬಲಗೈಗಳಲ್ಲಿ ಭರ್ಜಿ ಹಿಡಿದ ಮೇಲಿನ ಕೈ ಭಗ್ನವಾಗಿದ್ದು, ಉಳಿದ ಕೈಗಳಲ್ಲಿ ಕಟಕಮುದ್ರೆ, ಬಾಣ ಮತ್ತು ಖಡ್ಗಗಳನ್ನು ಹಿಡಿದಿದ್ದಾಳೆ. ಎಡಗೈ ಕಟಕ ಮುದ್ರೆ, ಬಿಲ್ಲು, ಗುರಾಣಿ ಹಾಗೂ ಮಹಿಷನನ್ನು ಹಿಡಿದು ಕೊಲ್ಲುತ್ತಿರುವಂತೆ ನಿಂತಿದ್ದಾಳೆ. ದೇವಿಯ ಕೆಳಗೆ ಕೋಣನ ಮೈ ಮತ್ತು ಮಹಿಷನ ಶಿರವನ್ನು ಹಾಗೂ ಬಲಭಾಗದಲ್ಲಿ ದೇವಿಯ ವಾಹನವಾದ ಸಿಂಹವನ್ನು ಚಿತ್ರಿಸಲಾಗಿದೆ. ಶಿಲ್ಪವನ್ನು ತುಂಬಾ ಆಳವಾಗಿ ಕಡೆದಿರುವು ದರಿಂದ ಸುಂದರವಾಗಿ ಮೂಡಿಬಂದಿದೆ. ಮಹಿಷ ಮರ್ಧಿನಿಯು ಕಿರೀಟ ಮುಕುಟಧಾರಿಯಾಗಿದ್ದು, ವಿವಿಧ ಆಭರಣ ಗಳಾದ ಹಾರ, ಕಂಠಹಾರ, ಕೈಬಳೆ, ತೋಳ್ಬಂದಿ, ಕರ್ಣ ಕುಂಡಲ, ಕಾಲ್ಕಡಗ, ನೂಪುರ, ನೆರಿಗೆಯುಳ್ಳ ಸೀರೆಗಳನ್ನು ಧರಿಸಿದ್ದಾಳೆ.

ಮಹಿಷಮರ್ಧಿನಿಯ ಬಲಭಾಗದಲ್ಲಿ ಗಣೇಶ ಶಿಲ್ಪವನ್ನು ಕಾಣಬಹುದು. ಒಂದೂವರೆ ಅಡಿ ಎತ್ತರದ ಗಣೇಶ ಸುಖಾಸೀನನಾಗಿ ಕುಳಿತಂತಿದ್ದು, ಅಗಲವಾದ ಕಿವಿಗಳು ಹಾಗೂ ಎರಡು ಕೈಗಳನ್ನು ಹೊಂದಿದೆ. ಎರಡು ಕೈಗಳಿರುವ ಗಣೇಶನ ಶಿಲ್ಪಗಳು ಅಪರೂಪವಾಗಿದ್ದು, ಇದು ಪ್ರಾಚೀನ ಶಿಲ್ಪವಾಗಿದೆ. ಎರಡು ಕೈಗಳಲ್ಲಿ ಬಲಗೈಯಲ್ಲಿ ಲೇಖನಿ ಮತ್ತು ಎಡಗೈಯಲ್ಲಿ ಮೋದಕಗಳಿವೆ.

ಗಣೇಶನ ಪಕ್ಕದಲ್ಲಿ ಶಿವಲಿಂಗವಿದೆ. ವಿಶಾಲವಾದ ಪಾನವಟ್ಟದ ಮೇಲೆ ಆಳೆತ್ತರ ಸೇರಿಸಂತಿರುವ ಶಿವಲಿಂಗ ವಿದು. ಶಿವಲಿಂಗದ ಬಳಿ ಭೈರವನ ಶಿಲ್ಪವನ್ನು ಕಾಣಬಹುದು. ತನ್ನ ನಾಲ್ಕು ಕೈಗಳಲ್ಲಿ ಡಮರು, ತ್ರಿಶೂಲ, ಖಡ್ಗ ಮತ್ತು ಪಾನಬಟ್ಟಲುಗಳಿವೆ. ಸುಖಾಸನದಲ್ಲಿರುವ ಭೈರವನು ಜಟಾಮುಕುಟಧಾರಿಯಾಗಿದ್ದು ವಿವಿಧ ಆಭರಣಗಳಿಂದ ಅಲಂಕೃತನಾಗಿದ್ದಾನೆ. ಕರ್ಣಕುಂಡಲ, ತೋಳ್ಬಂದಿ, ಕಂಠಹಾರ, ಹಾರ, ರುಂಡಮಾಲೆ, ಕಾಲ್ಕಡಗಗಳನ್ನು ಹೊಂದಿದ್ದಾನೆ. ಕೆಳಗೆ ನಾಯಿಯನ್ನು ಚಿತ್ರಿಸಲಾಗಿದೆ.

ನವರಂಗದ ಎಡಬದಿಯ ಗೋಡೆಯ ಕೂಡಿನಲ್ಲಿ ಜಟಾಮುಕುಟಧಾರಿಯಾದ ನಟರಾಜನ ಶಿಲ್ಪವಿದೆ. ನಾಟ್ಯ ಭಂಗಿಯಲ್ಲಿರುವ ನಟರಾಜನು ಎಂಟು ಕೈಗಳನ್ನು ಹೊಂದಿರುವನು. ಬಲ ಕೈಗಳಲ್ಲಿ ಡಮರು, ಪಾಶ, ಅಕ್ಷಮಾಲೆ, ಅಭಯಮುದ್ರೆ, ಎಡಗೈಗಳಲ್ಲಿ ತರ್ಜನಿಮುದ್ರೆ, ಸರ್ಪ, ಗಂಟೆ ಮತ್ತು ಗಜಹಸ್ತ ಭಂಗಿಯಲ್ಲಿವೆ. ವಿವಿಧ ಆಭರಣಗಳಿಂದ ಅಲಂಕೃತನಾಗಿದ್ದು, ಕರ್ಣಕುಂಡಲ, ಕಂಠಹಾರ, ತೋಳ್ಬಂದಿ, ಕೈಕಡಗ, ಕಾಲ್ಕಡಗ ಹಾಗೂ ದೋತಿಗಳನ್ನು ಧರಿಸಿದ್ದಾನೆ. ನಟರಾಜನ ಕೆಳಗೆ ವಾದ್ಯಗಾರರನ್ನು ಕಾಣಬಹುದು.

ಬಲಬದಿಯ ಗೋಡೆಯ ಕೂಡುವಿನಲ್ಲಿ ಒಂದೂವರೆ ಅಡಿ ಎತ್ತರದ ನರಸಿಂಹನ ಶಿಲ್ಪವಿದೆ. ಕಿರೀಟ ಮುಕುಟ ಧಾರಿಯಾದ ನರಸಿಂಹನು ಹಿರಣ್ಯಕಶಿಪುವನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಸಂಹಾರ ಮಾಡುತ್ತಿರುವನು. ಎಂಟು ಕೈಗಳನ್ನು ಹೊಂದಿರುವ ನರಸಿಂಹನು ಕೈಗಳಲ್ಲಿ ಆಯುಧ ದೇವತೆ, ಶಂಖ, ಹಿರಣ್ಯಕಶಿಪುವಿನ ಕರುಳನ್ನು ಎರಡು ಕೈಗಳಲ್ಲಿ ಮಾಲೆಯಾಗಿ ಹಿಡಿದಿದ್ದಾನೆ. ಎರಡು ಕೈಗಳಲ್ಲಿ ಹಿರಣ್ಯಕಶಿಪು ವನ್ನು ಹಿಡಿದಿರುವ, ಮತ್ತೆರಡು ಕೈಗಳಲ್ಲಿ ಅಸುರನ ಹೊಟ್ಟೆ ಯನ್ನು ಬಗಿಯುತ್ತಿರುವಂತೆ ತೋರಿಸಲಾಗಿದೆ.

ನವರಂಗದ ಬಾಗಿಲುವಾಡವನ್ನು ವಿವಿಧ ಶಾಖೆಗಳಿಂದ ಅಲಂಕರಿಸಲಾಗಿದ್ದು, ಅವುಗಳಲ್ಲಿ ವಜ್ರ, ಕಿನ್ನರ, ಸ್ತಂಭ ಮತ್ತು ಲತಾಶಾಖೆಗಳಿವೆ. ಕೆಳಭಾಗದಲ್ಲಿ ತ್ರಿಶೂಲ, ಸರ್ಪ, ಅಭಯ ಮತ್ತು ಕಟ್ಯವಲಂಬಿತ ಮುದ್ರೆಗಳಲ್ಲಿ ನಿಂತ ದ್ವಾರಪಾಲಕ ಶಿಲ್ಪಗಳು, ಕಮಂಡಲ, ಪದ್ಮ ಹಿಡಿದು ನಿಂತ ಮಹಿಳೆ ಹಾಗೂ ಪುರುಷ ಶಿಲ್ಪಗಳನ್ನು ಕಡೆದಿರುವರು. ಲಲಾಟದಲ್ಲಿ ಗಜಲಕ್ಷ್ಮಿ, ಅದರ ಮೇಲಿನ ಪಟ್ಟಿಕೆಯಲ್ಲಿ ಭಾರವಾಹಕ ಶಿಲ್ಪಗಳು, ಉತ್ತರಾಂಗದಲ್ಲಿ ಶಿಖರಗಳ ಅಲಂಕರಣೆಗಳನ್ನು ಕೆತ್ತಲಾಗಿದೆ.

ದೇವಾಲಯದ ಮುಂಭಾಗ ಬಲಬದಿಯಲ್ಲಿ ಚಿಕ್ಕದಾದ ಗರ್ಭಗೃಹವಿದೆ. ಇದು ಮೂಲತಃ ಗಣೇಶನ ದೇಗುಲವಾಗಿತ್ತು. ಆದರೆ ರಕ್ಷಣೆಯಿಲ್ಲದ ಕಾರಣ ಸದ್ಯ ಈ ವಿಗ್ರಹ ಹಾಗೂ ವೀರಭದ್ರ ಶಿಲ್ಪಗಳನ್ನು ಗ್ರಾಮದ ಒಳಗೆ ಕೊಂಡೊಯ್ದು ಇಡಲಾಗಿದೆ. ಮೂರುವರೆ ಅಡಿ ಎತ್ತರವಿರುವ ಈ ಶಿಲ್ಪವು ಸುಖಾಸನದಲ್ಲಿ ಕುಳಿತಿದೆ. ಗಣೇಶನು ನಾಲ್ಕು ಕೈಗಳನ್ನು ಹೊಂದಿದ್ದು ಬಲಗೈಗಳಲ್ಲಿ ಪರಶು, ಲೇಖನಿಗಳನ್ನು, ಎಡಗೈಗಳಲ್ಲಿ ಪದ್ಮ ಮತ್ತು ಮೋದಕವನ್ನು ಹಿಡಿದಿರುವನು.

ದೇವಾಲಯದ ಗೋಡೆಯನ್ನು ಇಟ್ಟಿಗೆ, ಬಂಡೆಗಲ್ಲು ಗಳಿಂದ ನಿರ್ಮಿಸಿ ಹೊರಬದಿಗೆ ಕಲ್ಲಿನ ಗೋಡೆಯನ್ನು ಓರೆಯಾಗಿಸಿ ಒಳಭಾಗದಲ್ಲಿ ಮಣ್ಣನ್ನು ತುಂಬಲಾಗಿತ್ತು. ಇತ್ತೀಚೆಗೆ ಓರೆಯಾಗಿಸಿದ ಭಾಗವನ್ನು ಸಂಪೂರ್ಣವಾಗಿ ತೆಗೆದಾಗ ಇಟ್ಟಿಗೆಯ ಸುಂದರವಾದ ಹೊರಗೋಡೆಯು ಗೋಚರಿಸಿತು. ಗರ್ಭಗೃಹದ ಮೇಲೆ ಯಾವುದೇ ಬಗೆಯ ಶಿಖರವಿರುವುದಿಲ್ಲ. ಇದರಿಂದ ಈ ದೇವಾಲಯದ ಗೋಡೆ ಯನ್ನು ಸಂಪೂರ್ಣವಾಗಿ ಇಟ್ಟಿಗೆ ಮತ್ತು ಕಲ್ಲಿನ ಕಂಬಗಳನ್ನು ಬಳಸಿ ಕಟ್ಟಿದ್ದುದು ಸ್ಪಷ್ಟವಾಯಿತು. ಆದರೆ ಸದ್ಯ ಪುರಾತತ್ವ ಇಲಾಖೆಯು ಇಟ್ಟಿಗೆಯ ಭಾಗವನ್ನು ತೆಗೆದು ದೇವಾಲಯ ವನ್ನು ಜೀರ್ಣೋದ್ಧಾರಗೊಳಿಸುತ್ತಿದೆ.

ಈ ದೇವಾಲಯದ ಕಾಲಮಾನವನ್ನು ಇಲ್ಲಿನ ದೇವಾಲಯ ಒಳಭಾಗದ ಕಂಬಗಳು, ತೋರಣ, ಶಿಲ್ಪಗಳ ಹಿನ್ನೆಲೆಯಲ್ಲಿ ಹಾಗೂ ಇದೇ ತಾಲೂಕು ಪರಿಸರದ ಇಸಾಮುದ್ರ ಗ್ರಾಮದ ಕಲ್ಲೇಶ್ವರ ಮತ್ತು ಭೋಗೇಶ್ವರ ದೇವಾಲಯಗಳ ವಾಸ್ತುಶೈಲಿ ಮತ್ತು ಅಲ್ಲಿನ ಶಾಸನಗಳ ಹಿನ್ನೆಲೆ

ಯಲ್ಲಿ ರಾಷ್ಟ್ರಕೂಟರ ಕಾಲ ಅಂದರೆ ಕ್ರಿ.ಶ. ೯-೧೧ನೇ ಶತಮಾನದ್ದೆಂದು ಗುರುತಿಸಬಹುದಾಗಿದೆ.

ಹುಲ್ಲೂರು: ಕಲ್ಲೇಶ್ವರ ದೇವಾಲಯ

ಕಾಳಮ್ಮ ದೇವಾಲಯದ ಬಲಭಾಗದಲ್ಲಿ ಸ್ವಲ್ಪ ಹಿಂದಕ್ಕೆ ಗರ್ಭಗೃಹ, ಅಂತರಾಳಗಳನ್ನು ಹೊಂದಿರುವ ಪ್ರಾಚೀನ ಇಟ್ಟಿಗೆಯನ್ನು ಬಳಸಿ ಕಟ್ಟಲಾದ ದೇವಾಲಯವಿದು. ಗರ್ಭಗೃಹದಲ್ಲಿ ಒಂದು ಅಡಿ ಎತ್ತರದ ಪಾನವಟ್ಟದ ಮೇಲೆ ಅರ್ಧ ಅಡಿ ಎತ್ತರದ ಶಿವಲಿಂಗವಿದೆ. ಶಿವಲಿಂಗಕ್ಕೆ ಎದುರಾಗಿ ನಂದಿಯಿದೆ. ನಂದಿಯು ಮೂರು ಅಡಿ ಉದ್ದ ಮತ್ತು ಎರಡು ಅಡಿ ಎತ್ತರವಿದೆ. ನಂದಿಯನ್ನು ಹಣೆಪಟ್ಟಿ, ಕೊರಳಲ್ಲಿ ದಂಡೆ ಮತ್ತು ಲೊಡಗ ಸರಗಳಿಂದ ಅಲಂಕರಿಸಲಾಗಿದೆ. ಗರ್ಭಗೃಹದ ಬಾಗಿಲುವಾಡದ ಎರಡೂ ಕಡೆ ಪದ್ಮ ಹಾಗೂ ಕಮಂಡಲ ಹಿಡಿದು ನಿಂತಿರುವ ಮಹಿಳೆಯರ ಉಬ್ಬು ಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಗೆತ್ತನೆಯಿದೆ. ಅಂತರಾಳದ ಬಲಭಾಗದಲ್ಲಿ ಏಳು ಹೆಡೆಯ ಸರ್ಪವಿದೆ.

ಒಟ್ಟಿನಲ್ಲಿ ಕಲ್ಲೇಶ್ವರ ದೇವಾಲಯವು ತುಂಬಾ ಶಿಥಿಲಗೊಂಡಿದೆ. ನವರಂಗ, ಶಿಖರ ಮೊದಲಾದ ಭಾಗಗಳು ಭಗ್ನವಾಗಿವೆ. ಗರ್ಭಗೃಹದ ಶಿವಲಿಂಗವನ್ನು ಅಗೆದು ನಿಧಿಯ ಆಸೆಯಿಂದ ತೆಗೆದುಹಾಕಿರುವುದು ವಿಪರ್ಯಾಸ. ಅಂತರಾಳದ ಬಾಗಿಲವಾಡವು ಬಿದ್ದುಹೋಗಿದ್ದು ಜೀರ್ಣೋದ್ಧಾರ ಕಾರ್ಯ ತ್ವರಿತವಾಗಿ ನಡೆಯಬೇಕಾಗಿದೆ.

ಮಳಲಿ : ಕಲ್ಲೇಶ್ವರ ದೇವಾಲಯ

ಹೊಸದುರ್ಗ ತಾಲೂಕಿನ ಉಳಿದುಬಂದಿರುವ ಪ್ರಾಚೀನ ದೇವಾಲಯವಿದು. ಗರ್ಭಗೃಹ, ಅಂತರಾಳಗಳಿರುವ ಪ್ರಾಚೀನ ಇಟ್ಟಿಗೆಯ ದೇವಾಲಯವಿದು. ಇಟ್ಟಿಗೆ ಮತ್ತು ಕಲ್ಲುಚಪ್ಪಡಿಗಳನ್ನು ಬಳಸಿ ಕಟ್ಟಲಾಗಿದೆ. ಇಟ್ಟಿಗೆಗಳು ಕ್ರಿ.ಶ. ಹತ್ತನೆಯ ಶತಮಾನದವಾಗಿವೆ. ಗರ್ಭಗೃಹದಲ್ಲಿ ಒಂದು ಅಡಿ ಎತ್ತರ, ಎರಡು ಅಡಿ ಅಗಲದ ವೃತ್ತಾಕಾರದ ಪಾಣಿಪೀಠದ ಮೇಲೆ ಅರ್ಧ ಅಡಿ ಎತ್ತರವಿರುವ ಶಿವಲಿಂಗವನ್ನು ಪ್ರತಿಷ್ಠಾಪಿಸಿರುವರು. ಶಿವಲಿಂಗದ ಮೇಲೆ ಸೋಮಸೂತ್ರವಿದೆ. ಶಿವಲಿಂಗದ ಮುಂಭಾಗದಲ್ಲಿ ಒಂದೂವರೆ ಅಡಿ ಎತ್ತರ ಹಾಗೂ ಎರಡು ಅಡಿ ಉದ್ದವಾದ ನಂದಿಯಿದ್ದು, ಇದನ್ನು ಗಂಟೆಸರ, ಭುಜಹಾರಗಳಿಂದ ಅಲಂಕರಿಸಿರುವರು. ಅಂತರಾಳದ ಎಡಭಾಗದಲ್ಲಿ ವಿಷ್ಣುವಿನ ಶಿಲ್ಪವನ್ನು ಇಡಲಾಗಿದೆ. ನಾಲ್ಕು ಕೈಗಳನ್ನು ಹೊಂದಿರುವ ಈ ಶಿಲ್ಪದಲ್ಲಿ ಶಂಖ, ಚಕ್ರ, ಅಭಯ ಮತ್ತು ಗದೆಗಳಿವೆ. ಇದರ ಬಳಿ ನಾಗಶಿಲ್ಪವಿದೆ. ಗರ್ಭಗೃಹದ ಬಾಗಿಲುವಾಡವು ಸರಳವಾಗಿದೆ.

ಈ ದೇವಾಲಯದ ಬಳಿ ಮೂರು ವೀರಗಲ್ಲುಗಳಿವೆ. ಇವುಗಳಲ್ಲಿ ಎರಡು ಶಾಸನೋಕ್ತ ವೀರಗಲ್ಲುಗಳಾಗಿವೆ. ಇವುಗಳಲ್ಲಿ ಒಂದನೆಯದು ಮೂರು ಪಂತಗಳಲ್ಲಿದೆ. ಎರಡನೆಯದು ತುರುಗೋಳ್ ವೀರಗಲ್ಲಾಗಿದೆ. ಇದರಲ್ಲಿ ತುರುಗಳನ್ನು ಸುತ್ತಲೂ ಕಡೆದಿರುವರು. ವೀರನು ಬಿಲ್ಲು-ಬಾಣಗಳನ್ನು ಹಿಡಿದು ಹೋರಾಡುತ್ತಿರುವಂತೆ ಚಿತ್ರಿಸಲಾಗಿದೆ. ಇಲ್ಲಿ ಅನೇಕ ಪ್ರಾಚೀನ ಅವಶೇಷಗಳಿವೆ. ಅವುಗಳಲ್ಲಿ ಹೊಯ್ಸಳ ಕಾಲದ ದೇವಾಲಯಗಳೂ ಸೇರಿವೆ.

ಮರಡಿ ದೇವಿಗೆರೆ: ಕೋಡಿ ಮಲ್ಲೇಶ್ವರ ದೇವಾಲಯ

ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ದೀಪಸ್ತಂಭಗಳಿರುವ ಪ್ರಾಚೀನ ದೇವಾಲಯವಿದು. ಇಟ್ಟಿಗೆ, ಕಲ್ಲುಚಪ್ಪಡಿಗಳನ್ನು ಬಳಸಿ ಕಟ್ಟಲಾದ ಈ ದೇವಾಲಯದ ಇಟ್ಟಿಗೆಯ ಭಾಗಗಳನ್ನು ತೆಗೆದುಹಾಕಿದ್ದಾರೆ. ಇಲ್ಲಿನ ಇಟ್ಟಿಗೆಗಳು ಗಾತ್ರದಲ್ಲಿ ೩೩ ಸೆಂ.ಮೀ ಉದ್ದ, ೨೦ ಸೆಂ.ಮೀ. ಅಗಲ, ಒಂಭತ್ತು ಸೆಂ.ಮೀ. ದಪ್ಪವಾಗಿವೆ ಗರ್ಭಗೃಹದಲ್ಲಿ ಎರಡು ಅಡಿ ಎತ್ತರ, ಮೂರು ಅಡಿ ಉದ್ದ, ಎರಡು ಅಡಿ ಅಗಲವಿರುವ ಪಾನವಟ್ಟದ ಮೇಲೆ ಅರ್ಧ ಅಡಿ ಎತ್ತರದ ಕಪ್ಪುಶಿಲೆಯ ಪ್ರತಿಷ್ಠಾಪನ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿರುವರು. ಹಿರಿಯೂರು ತಾಲೂಕಿನಲ್ಲಿ ಸದ್ಯ ಉಳಿದು ಬಂದಿರುವ ಪ್ರಾಚೀನ ದೇವಾಲಯವಿದು. ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅಂತರಾಳದಲ್ಲಿ ಎರಡು ಕಂಬಗಳಿವೆ. ಇವು ವೃತ್ತಾಕಾರವಾಗಿದ್ದು ಮೇಲೆ ಅಲಂಕರಣೆಯಿದೆ. ನವರಂಗದಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿಯನ್ನು ಪ್ರತಿಷ್ಠಾಪಿಸಿದ್ದಾರೆ. ನವರಂಗದಲ್ಲಿ ಬಹುಮುಖಗಳಲ್ಲಿ ಕಡೆಯಲಾದ ಕಂಬಗಳಿವೆ. ಕಂಬಗಳ ಮೇಲ್ಭಾಗದಲ್ಲಿ ವೃತ್ತಾಕಾರದ ಅಬ್ಯಾಕಸ್ ಮತ್ತು ಬೋದಿಗೆಗಳಿವೆ. ಕಂಬಗಳ ಎಂಟು ಪಾರ್ಶ್ವಗಳನ್ನು ಹೂಗಳ ಮಾಲೆಗಳಿಂದ ಚಿತ್ರಿಸಲಾಗಿದೆ. ಚಚ್ಚೌಕ ಭಾಗಗಳಲ್ಲಿ ಮುತ್ತಿನ ತೋರಣ ಹಾಗೂ ವಿವಿಧ ಶಿಲ್ಪಗಳ ಕೆತ್ತನೆಗಳಿವೆ. ಅವುಗಳಲ್ಲಿ ಶ್ರೀರಾಮನು ಬಾಣವನ್ನು ಏಳು ಮರಗಳನ್ನು ಸೀಳಿ ಹೋಗುವಂತೆ ಬಿಡುತ್ತಿರುವ, ವಾಲಿಸುಗ್ರೀವರ ಹೋರಾಟ, ರಾಮಲಕ್ಷ್ಮಣರು ಸಿಂಹಾಸನದಲ್ಲಿ ಕುಳಿತಿದ್ದು, ವಾಲಿ, ಸುಗ್ರೀವರು ಕೈಮುಗಿದು ಕುಳಿತ ಒಟ್ಟಿನಲ್ಲಿ ರಾಮಾಯಣದ ಹೆಚ್ಚು ದೃಶ್ಯಗಳನ್ನು ಈ ನಾಲ್ಕು ಕಂಬಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಇವುಗಳಲ್ಲದೆ ನಂದಿ ಸವಾರಿಯಲ್ಲಿರುವ ಉಮಾಮಹೇಶ್ವರ, ನಾಗ-ನಾಗಿಣಿಯರು, ಭೈರವ ಮೊದಲಾದ ಉಬ್ಬುರಚನೆಗಳಿವೆ. ನವರಂಗದ ಭುವನೇಶ್ವರಿಯಲ್ಲಿ ಪದ್ಮ, ವಾದ್ಯಗಾರರು, ನೃತ್ಯಗಾರ್ತಿ, ಗರುಡ ಉಬ್ಬುಶಿಲ್ಪಗಳಿವೆ. ನವರಂಗದ ಬಾಗಿಲುವಾಡದಲ್ಲಿ ನಾಲ್ಕು ಪಟ್ಟಿಕೆಗಳಿವೆ. ಅವುಗಳಲ್ಲಿ ವಜ್ರ,

ಹೂಬಳ್ಳಿ, ಸ್ತಂಭಶಾಖೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ, ಕೆಳಭಾಗದಲ್ಲಿ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಉಬ್ಬುಶಿಲ್ಪಗಳನ್ನು ಕೆತ್ತಿರುವರು.

ನವರಂಗದ ಎಡಗಡೆಯಲ್ಲಿ ಎರಡು ಮಹಿಷ ಮರ್ದಿನಿಯ ಶಿಲ್ಪಗಳಿವೆ. ಒಂದು ಶಿಲ್ಪವು ಒಂದೂವರೆ ಅಡಿ ಎತ್ತರವಾಗಿದ್ದು ನಾಲ್ಕು ಕೈಗಳನ್ನು ಹೊಂದಿದೆ. ಕರಂಡ ಮುಕುಟಧಾರಿಯಾದ ದೇವಿಯು ಬಲಗೈಗಳಲ್ಲಿ ಪಾಶ, ತ್ರಿಶೂಲಗಳು, ಎಡಗೈಗಳಲ್ಲಿ ಶಂಖ ಮತ್ತು ಮಹಿಷನನ್ನು ಹಿಡಿದಿದೆ. ಕೆಳಗೆ ಮಹಿಷನ ಕೋಣದ ರೂಪವನ್ನು ಕೊಲ್ಲುತ್ತಿರುವಂತೆ ಹಾಗೂ ದೇವಿಯ ವಾಹನ ಸಿಂಹವನ್ನು ಚಿತ್ರಿಸಲಾಗಿದೆ. ಎರಡನೆಯ ಮಹಿಷ ಮರ್ದಿನಿ ದೊಡ್ಡ ಶಿಲ್ಪದಲ್ಲಿ ಎಂಟು ಕೈಗಳಿವೆ. ಇವುಗಳಲ್ಲಿ ಪಾಶ, ಶಂಖ, ತ್ರಿಶೂಲಗಳಿವೆ. ಉಳಿದ ಕೈಗಳಲ್ಲಿ ಇರುವ ಆಯುಧಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಕೆಳಗೆ ಕೋಣ ಮತ್ತು ವಾಹನವಾದ ಸಿಂಹವನ್ನು ಚಿತ್ರಿಸಿರುವರು. ಇವುಗಳಲ್ಲದೆ ಸಪ್ತಮಾತೃಕೆಯರ ಪಟ್ಟಿಕೆ ಮತ್ತು ನಾಗಶಿಲ್ಪಗಳಿವೆ. ದೇವಾಲಯದ ಮೇಲೆ ದ್ವಿತಲ ಶಿಖರವಿದ್ದು, ಇದರಲ್ಲಿ ಗಾರೆ ಗಚ್ಚಿನ ಕೂಡುಗಳು ಮತ್ತು ನಂದಿಯ ಶಿಲ್ಪಗಳಿವೆ ಮೇಲ್ಭಾಗ ದಲ್ಲಿ ಗುಮ್ಮಟಾಕಾರದ ಶಿಖರವಿದ್ದು ಕಳಸವನ್ನು ಪ್ರತಿಷ್ಟಾಪಿಸಿದ್ದಾರೆ. ಈ ದೇವಾಲಯವನ್ನು ಕ್ರಿ.ಶ. ೧೦-೧೧ನೆಯ ಶತಮಾನದಲ್ಲಿ ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಅಧೀನದಲ್ಲಿ ಆಳ್ವಿಕೆ ಮಾಡಿದ ನೊಳಂಬ ಪಲ್ಲವರ ಕಾಲದಲ್ಲಿ ನಿರ್ಮಾಣವಾಗಿರುವುದನ್ನು ಲಕ್ಷಣಗಳಿಂದ ಹೇಳಬಹುದು. ದೇವಾಲಯದ ಹೊರಗೆ ಬಲಗಡೆ ಒಂದು ಚಿಕ್ಕ ಕಟ್ಟೆಯ ಮೇಲೆ ಹಸಿರುಮಿಶ್ರಿತ ಕಪ್ಪು ಶಿಲೆಯಲ್ಲಿ ಕಡೆಯಲಾದ ಸ್ಥಳೀಯವಾಗಿ ಈರಗಾರನೆಂದು ಕರೆಯುತ್ತಿರುವ ವೀರಗಲ್ಲಿದೆ. ಅಶ್ವಸವಾರಿಯಲ್ಲಿರುವ ವೀರನ ಸುಂದರ ಹಾಗೂ ಆಳವಾಗಿ ಕಡೆದ ಶಿಲ್ಪವಿದೆ. ಯೋಧನ ಕೈಗಳಲ್ಲಿ ಖಡ್ಗ ಮತ್ತು ಲಗಾಮು, ಪ್ರಭಾವಳಿಯಲ್ಲಿ ನಂದಿ. ಸೂರ್ಯ, ಚಂದ್ರರನ್ನು ಕಡೆದಿರುವರು. ಈ ದೇವಾಲಯದ ಉತ್ಸವಾಚರಣೆಗಳನ್ನು ಯುಗಾದಿ, ದಸರಾ ಹಬ್ಬಗಳಲ್ಲಿ ಆಚರಿಸುತ್ತಾರೆ. ಬಸವ ಜಯಂತಿಯಲ್ಲಿ ಆರು ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಮೊದಲ ದಿನ ಕಂಕಣಧಾರಣೆ, ಎರಡನೆಯ ದಿನ ಹುಸಿ, ಮೂರನೆಯ ದಿನ ಸಣ್ಣ ರಥೋತ್ಸವ, ನಾಲ್ಕನೆಯ ದಿನ ದೊಡ್ಡ ರಥೋತ್ಸವ, ಐದನೆಯ ದಿನ ಅಗ್ನಿಕೊಂಡ, ಆರನೆಯ ದಿನ ಕಂಕಣ ವಿಸರ್ಜನೆ ಹಾಗೂ ಪಲ್ಲಕ್ಕಿ ಉತ್ಸವಗಳು ಜರುಗುತ್ತವೆ. ಶಿವರಾತ್ರಿಯಲ್ಲಿ ಜಾಗರಣೆಯಿದ್ದು, ನೂರೊಂದು ಪೂಜೆ, ರುದ್ರಾಭಿಷೇಕಗಳು ನಡೆಯುತ್ತದೆ.

ಗಂಗಸಮುದ್ರ : ರಾಮೇಶ್ವರ ದೇವಾಲಯ

ಕ್ರಿ.ಶ. ಸು. ೯-೧೦ನೆಯ ಶತಮಾನಕ್ಕೆ ಸೇರಿದ ರಾಮಗಿರಿಯಿಂದ ಐದು ಕಿ.ಮೀ. ದೂರದಲ್ಲಿರುವ ಗಂಗಸಮುದ್ರ ಗ್ರಾಮದ ಕೆರೆಯ ಹಿಂಭಾಗದಲ್ಲಿ ಇಟ್ಟಿಗೆಯಲ್ಲಿ ಕಟ್ಟಲಾದ ಪ್ರಾಚೀನ ತ್ರಿಕೂಟ ದೇವಾಲಯವಿದು. ಮೂರು ಗರ್ಭಗೃಹಗಳುಳ್ಳ ಈ ದೇವಾಲಯದಲ್ಲಿ ಮುಖ್ಯ ಗರ್ಭಗೃಹಕ್ಕೆ ಅಂತರಾಳವಿದೆ. ನವರಂಗ ಹಾಗೂ ಎರಡು ದೀಪಸ್ತಂಭಗಳಿವೆ. ಪೂರ್ವಾಭಿಮುಖವಾಗಿರುವ ಮುಖ್ಯ ಗರ್ಭಗೃಹದಲ್ಲಿ ವಿಶಾಲವಾದ ಪಾಣಿಪೀಠದ ಮೇಲೆ ಮುಕ್ಕಾಲು ಅಡಿ ಎತ್ತರದ ಶಿವಲಿಂಗವನ್ನು ಪ್ರತಿಷ್ಟಾಪಿಸಿದ್ದಾರೆ. ಗರ್ಭಗೃಹದ ಬಾಗಿಲುವಾಡದಲ್ಲಿ ಸ್ತಂಭಶಾಖೆಯಿದ್ದು. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅಂತರಾಳದಲ್ಲಿ ಇನ್ನೊಂದು ಶಿವಲಿಂಗವಿದೆ. ಇದರ ಬಾಗಿಲುವಾಡದಲ್ಲಿ ಜಾಲಂಧ್ರಗಳನ್ನು ಬೆಳಕಿಗೆಂದು ಜೋಡಿಸಲಾಗಿದೆ. ಶಿವಲಿಂಗಕ್ಕೆ ಎದುರಾಗಿ ನವರಂಗದಲ್ಲಿ ಮೂರು ಅಡಿ ಉದ್ದ, ಎರಡು ಅಡಿ ಎತ್ತರವಿರುವ ಸುಂದರವಾಗಿ ಕಡೆದ ನಂದಿಯನ್ನು ಕೂಡಿಸಲಾಗಿದೆ. ನಂದಿಯನ್ನು ಹಣೆಪಟ್ಟಿ, ಗಂಟೆಸರ, ದಂಡೆಗಳಿಂದ ಅಲಂಕರಿಸಿರುವರು. ಮುಖ್ಯ ಗರ್ಭಗೃಹದ ಎಡಬದಿಯಲ್ಲಿ ದಕ್ಷಿಣಾಭಿಮುಖವಾಗಿರುವ ಗರ್ಭಗೃಹದಲ್ಲಿ ವಿಷ್ಣುವಿನ ಶಿಲ್ಪವನ್ನು ಪ್ರತಿಷ್ಟಾಪಿಸಲಾಗಿದೆ. ಮೂರೂವರೆ ಅಡಿ ಎತ್ತರದ ವಿಷ್ಣುವು ಅರ್ಧ ಅಡಿ ಎತ್ತರದ ಗರುಡಪೀಠದ ಮೇಲಿದೆ. ನಾಲ್ಕು ಕೈಗಳನ್ನು ಹೊಂದಿರುವ ಈ ಶಿಲ್ಪವು ಸಮಭಂಗಿಯಲ್ಲಿ ನಿಂತಿದ್ದು, ಮೇಲಿನ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖಗಳನ್ನು. ಕೆಳಗಿನ ಬಲಗೈ ಅಭಯಹಸ್ತಮುದ್ರೆಯಲ್ಲಿದ್ದರೆ, ಎಡಗೈಯಲ್ಲಿ ಫಲವನ್ನು ಹಿಡಿದಿದ್ದಾನೆ. ವಿಷ್ಣುವಿನ ಕೆಳಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯರಿದ್ದು, ತಮ್ಮ ಎರಡು ಕೈಗಳಲ್ಲಿ ಬಲಗೈಯಲ್ಲಿ ಪದ್ಮವನ್ನು ಎಡಗೈಯನ್ನು ವರದಹಸ್ತ ಮುದ್ರೆಯಲ್ಲಿಡಿದು ನಿಂತಿರುವರು. ಮುಖ್ಯ ಗರ್ಭಗೃಹದ ಎದುರಿಗೆ ಇರುವ ಗರ್ಭಗೃಹದಲ್ಲಿ ಈಗ ಯಾವುದೇ ಮೂರ್ತಿಗಳಿಲ್ಲ. ಆದರೆ ಸ್ಥಳೀಯರು ಹೇಳುವಂತೆ ಇದರಲ್ಲಿ ವೀರಭದ್ರ ಶಿಲ್ಪವಿದ್ದು, ಇದನ್ನು ಇಲ್ಲಿನ ರಾಮಗಿರಿ ಬೆಟ್ಟಕ್ಕೆ ಕೊಂಡೊಯ್ಯಲಾಗಿದೆಯೆಂದು ಹೇಳುತ್ತಾರೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಇವುಗಳನ್ನು ಚಚ್ಚೌಕ, ಅಷ್ಟಮುಖಗಳಲ್ಲಿ ಕಡೆಯಲಾಗಿದ್ದು, ಮೇಲೆ ಫಲಕ ಮತ್ತು ಬೋದಿಗೆಗಳಿವೆ. ನವರಂಗದಲ್ಲಿ ವಿಷ್ಣುವಿನ ಗರ್ಭಗೃಹದ ಬಲಬದಿ ಗೋಡೆಗೆ ಹೊಂದಿಕೊಂಡಂತೆ ಕಾರ್ತಿಕೇಯ ಹಾಗೂ ಗಣೇಶ ಶಿಲ್ಪಗಳಿವೆ. ಪ್ರವೇಶದ್ವಾರದ ಒಳಭಾಗದ ಎಡಕ್ಕೆ ಇನ್ನೊಂದು ವಿಷ್ಣು ಮತ್ತು ಸಪ್ತಮಾತೃಕೆಯರ ಪಟ್ಟಿಕೆಯಿದೆ. ಹೊರಭಾಗದಲ್ಲಿ ವೀರಗಲ್ಲನ್ನು ಕಾಣಬಹುದು. ಕಾರ್ತಿಕೇಯನು ನವಿಲಿನ ಮೇಲೆ ಕುಳಿತು ಸವಾರಿ ಮಾಡುತ್ತಿರುವನು. ಚತುರ್ಮುಖನಾದ ಕಾರ್ತಿಕೇಯ ಶಿಲ್ಪದಲ್ಲಿ ಮೂರು ಮುಖಗಳನ್ನು ತೋರಿಸಲಾಗಿದೆ. ನಾಲ್ಕು ಕೈಗಳನ್ನು ಹೊಂದಿರುವ ಇವನು ತನ್ನ ಮೇಲಿನ ಬಲಗೈಯಲ್ಲಿ ಅಂಕುಶ. ಎಡಗೈಯಲ್ಲಿ ಪಾಶ ಗಳನ್ನು,

ಹಿಡಿದಿರುವನು. ಕೆಳಗಿನ ಕೈಗಳಲ್ಲಿ ಬಲಗೈ ಅಭಯಹಸ್ತ ಮುದ್ರೆಯಲ್ಲಿದೆ. ಇವರ ಪಕ್ಕದಲ್ಲಿ ಸುಂದರವಾದ ಮೂರು ಅಡಿಗಳೆತ್ತರದ ಸೂಕ್ಷ್ಮ ಕೆತ್ತನೆಗಳುಳ್ಳ ಗಣೇಶ ಶಿಲ್ಪವಿದೆ. ಕರಂಡ ಮುಕುಟಧಾರಿಯಾದ ಗಣೇಶನು ಸುಖಾಸೀನನಾಗಿ ಕುಳಿತಿರುವನು. ಮೇಲೆ ಪ್ರಭಾವಳಿಯಿದೆ. ನಾಲ್ಕು ಕೈಗಳನ್ನು ಹೊಂದಿರುವ ಗಣೇಶನು ಮೇಲಿನ ಕೈಗಳಲ್ಲಿ ಅಂಕುಶ ಮತ್ತು ಪಾಶಗಳನ್ನು, ಕೆಳಗಿನ ಕೈಗಳಲ್ಲಿ ಲೇಖನಿ ಮತ್ತು ಮೋದಕಗಳನ್ನು ಹಿಡಿದಿದ್ದಾನೆ. ಗಣೇಶನ ಸೊಂಡಿಲು ಮೋದಕವನ್ನು ಸುರುಳಿಯಂತೆ ಸುತ್ತಿಕೊಂಡಿದೆ.

ಜಟಂಗಿ ರಾಮೇಶ್ವರ ದೇವಾಲಯ

ಜಟಂಗಿ ರಾಮೇಶ್ವರ ಬೆಟ್ಟದ ಮೇಲಿರುವ ಅತಿ ಮುಖ್ಯ ಸ್ಮಾರಕವೆಂದರೆ ರಾಮೇಶ್ವರ ದೇವಾಲಯ. ಇದನ್ನು ಜಟಂಗಿ ರಾಮೇಶ್ವರ ಎಂದೇ ಕರೆಯಲಾಗುತ್ತದೆ. ಈ ಜಟಂಗಿ ಬೆಟ್ಟದಲ್ಲಿರುವ ರಾಮೇಶ್ವರನನ್ನು ಶಾಸನಗಳು ಬಲ್ಲೊಗ್ಗಿತೀರ್ಥದ ಶ್ರೀರಾಮೇಶ್ವರ, ಬಲ್ಲೊಗ್ಗಿ ತೀರ್ಥಸ್ಥಾನದ ರಾಮೇಶ್ವರ, ಜಟಾಂಗಿ ರಾಮಯದೇವ, ಜಟಂಗೆ ರಾಮಯದೇವ, ಜೆಟೋಗಿ ರಾಮಯದೇವ ಎಂದು ಮುಂತಾಗಿ ಕರೆದಿವೆ. ಜಟಂಗಿ ಬೆಟ್ಟಕ್ಕೆ ಇರುವ ಪೌರಾಣಿಕತೆಯನ್ನು ರಾಮೇಶ್ವರ ದೇವಾಲಯಕ್ಕೂ ಅನ್ವಯಿಸಬಹುದು.

ಈ ದೇಗುಲವನ್ನು ರಾಮಾಯಣದವರೆಗೂ ಕೊಂಡೊಯ್ಯುವ ಜನ, ಸೀತಾಪಹರಣ ಪ್ರಸಂಗದ ಘಟನೆಯನ್ನು ಈ ಬೆಟ್ಟದ ಸ್ಥಳಗಳಿಗೂ ಅನ್ವಯಿಸಿ ದೃಷ್ಟಾಂತಸಹಿತ ವಿವರಿಸುತ್ತಾರೆ. ರಾಮೇಶ್ವರ ದೇವಾಲಯದ ಹಿಂಬದಿಯ ನಾಗರ ಪಡೆ ಗುಂಡಿನ ಮೇಲಿರುವ ಕ್ರಿ.ಶ. ೯೭೨ರ ಶಾಸನವು, "ಸೀತೆಯಂ ರಾವಣನುಯೆ ಜಟಾಯು ಕಾದಿ ಸತ್ತಲ್ಲಿ ರಾಮ ಪ್ರತಿಷ್ಠೆಯಪ್ಪಲ್ಲಿ ಉಣಂದೇಗುಲಮಂ ಮಾಡಿದಂದೆ ಯಿಟ್ಟಗೆಯ ದೇಗುಲಮ ಕಳೆದು ಕಳಶ ನಿರ್ಮಾಣಂ ಲಿಂಗಸಿವ ಜೀಯಬ್ಭಿಕ್ಷಾವೃತ್ತಿ ಯಿನ್ದಂ ಕಲ್ಲದೇಗುಲವುಂ ದೇಗುಲಂಗಳುಮಂ ಸಮಯಿಸಿ ಕೊಣ್ಡಗಳುಮಂ ಕಟ್ಟಿಸಿದರ್" (ಎಕ. ೧೧, ಮೊಕಾ. ೨೭) ಎಂದು ಹೇಳುತ್ತದೆ. ಕ್ರಿ.ಶ. ೯೭೨ಕ್ಕೂ ಮುಂಚೆಯೇ ಇಟ್ಟಿಗೆಯ ರಾಮೇಶ್ವರ ದೇವಾಲಯ ಇಲ್ಲಿದ್ದು, ಅದು ಈ ಹೊತ್ತಿಗೆ ಶಿಥಿಲಗೊಂಡ ಕಾರಣ ಅದನ್ನು ಕೆಡವಿ ಕಲ್ಲ ದೇಗುಲವಾಗಿ ನಿರ್ಮಿಸಲಾಯಿತೆಂಬುದು ಶಾಸನದಿಂದ ದೃಢಪಡುವ ಸಂಗತಿ. ರಾಮೇಶ್ವರ ದೇವಾಲಯದ ಜೊತೆಗೆ ಇತರ ದೇಗುಲಗಳು ನಿರ್ಮಾಣಗೊಂಡವೆಂಬುದು ಇದೇ ಶಾಸನದಿಂದ ತಿಳಿದು ಬರುತ್ತದೆ. ಈ ಎಲ್ಲ ದೇವಾಲಯಗಳನ್ನು ಕಟ್ಟಿಸಿದ ವ್ಯಕ್ತಿ ಲಿಂಗಸಿವಜೀಯ ಎಂಬ ಭಿಕ್ಷಾವೃತ್ತಿ ಯತಿಯೆಂಬುದು ಗಮನಾರ್ಹ.

ರಾಮೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗಗಳಿಂದ ಕೂಡಿದ ಹಾಗೂ ದೇಗುಲದ ಆವರಣದಲ್ಲಿ ವಿವಿಧ ಉಪದೇಗುಲಗಳು, ದೀಪಸ್ತಂಭ ಮತ್ತು ಮಹಾದ್ವಾರಗಳನ್ನು ಒಳಗೊಂಡ ವಿಸ್ತಾರ ದೇಗುಲವಾಗಿದೆ. ಚಚ್ಚೌಕ ತಳವಿನ್ಯಾಸದ ಮೇಲೆ ಕಟ್ಟಿದ ಗರ್ಭಗೃಹದಲ್ಲಿ ಒಂದು ಅಡಿ ಎತ್ತರದ ಪಾಣಿವಟ್ಟದ ಮೇಲೆ ಅರ್ಧ ಅಡಿ ಎತ್ತರದ ಶಿವಲಿಂಗವಿದೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ಪದ್ಮದ ಅಲಂಕರಣೆಯನ್ನು ಕಡೆದಿರುವರು. ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು, ದ್ವಾರಬಂಧದಲ್ಲಿ ಗಜಲಕ್ಷ್ಮಿಯ ಉಬ್ಬುಗೆತ್ತನೆಯನ್ನು ಕಾಣಬಹುದು. ಅಂತರಾಳದಲ್ಲಿ ಸುಕನಾಸಿಯ ಭಾರವನ್ನು ತಡೆಯಲೆಂದು ಎರಡು ಚಚ್ಚೌಕ ಕಂಬಗಳನ್ನು ನಿಲ್ಲಿಸಲಾಗಿದೆ. ಅಂತರಾಳದ ಮುಂಭಾಗದಲ್ಲಿ ನಾಲ್ಕು ಕಂಬಗಳು ಮತ್ತು ಒಂಬತ್ತು ಅಂಕಣಗಳನ್ನು ಹೊಂದಿದ ನವರಂಗವಿದೆ. ಇದರಲ್ಲಿ ರಾಮೇಶ್ವರಲಿಂಗಕ್ಕೆ ಎದುರಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗವು ನಂತರದ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ. ಇದಕ್ಕೆ ವಿಭಿನ್ನ ಶೈಲಿ ಮತ್ತು ಕಾಲದ ಕಂಬಗಳು ಬಳಕೆಗೊಂಡಿರುವುದು ಕಾರಣವಾಗಿದೆ. ಈ ಕಂಬಗಳಲ್ಲಿ ಕಲ್ಯಾಣ ಚಾಲುಕ್ಯ ಕಾಲದ ನಕ್ಷತ್ರಾಕಾರದ ಕಂಬಗಳೂ ಸೇರಿವೆ.

ಗರ್ಭಗೃಹದ ಮೇಲೆ ದ್ರಾವಿಡ ಮಾದರಿಯ ದ್ವಿತಲ ಶಿಖರವಿದೆ. ಶಿಖರದ ಮುಂಭಾಗದಲ್ಲಿ ಮುಂಚಾಚಿರುವ ಸುಕನಾಸಿಯಿದೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಅರೆಗಂಬ, ಕೂಡುಗಳಿದ್ದು, ಕಪೋತದ ಕೆಳಗೆ ಗಿಳಿಗಳ ಸಾಲನ್ನು ಸುತ್ತಲೂ ಕಾಣಬಹುದು. ಪ್ರಾಕೃತಿಕವಾಗಿ ಮಳೆಯಿಂದ ದೇಗುಲದ ಗೋಡೆಯನ್ನು ರಕ್ಷಿಸಲು ಮುಂಚಾಚಿದ ಕಪೋತವನ್ನು ರಚಿಸಲಾಗಿದೆ. ಕಪೋತದ ಮೇಲೆ ಶಾಲ-ಕೂಟ-ಪಂಜರಗಳುಳ್ಳ ಹಾರವಿದ್ದು, ದ್ವಿತಲ ಮತ್ತು ತ್ರಿತಲಗಳನ್ನು ಅರೆಗಂಬ, ಕೂಡುಗಳಿಂದ ಅಲಂಕರಿಸಿರುವರು. ಮೇಲ್ಭಾಗದಲ್ಲಿ ಮುಚ್ಚಿದ ಬೋಗುಣಿಯಾಕಾರದ ಶಿಖರವಿದ್ದು ಅದರ ಮೇಲೆ ಕಳಸವಿದೆ.

ಕ್ರಿ.ಶ. ೧೪೩೦ರಲ್ಲಿ ಎರಡನೆಯ ದೇವರಾಯ (ಪ್ರೌಢದೇವರಾಯ)ನು ಇಲ್ಲಿಯ ಪಾಚನಹಳ್ಳಿ ಸೀಮೆಗೆ ಬೇಟೆಗೆಂದು ಬಂದಾಗ ರಾಮದೇವರ ದರ್ಶನ ಪಡೆದು ಆ ದೇವರಿಗೆ ರಾಯದುರ್ಗ ಚಾವಡಿಯಿಂದ ಸಲುವ ಅಮೃತಪಡಿಯ ಕಟ್ಟಲೆಯಾದ ೨೦ ವರಾಹ ಹುಟ್ಟುವಳಿಯ ಒಂದು ಗ್ರಾಮ ಮತ್ತು ಹಾನೆಯನಾಡಿನ ಸಂಗೇಬೋವನ ಕಾಲುವೆಯ ಕೋರು ಸುವರ್ಣಾದಾಯ, ಆ ಕಾಲುವೆಯ ಚತುಸೀಮೆಗೆ ಸಲುವ ನಿಧಿನಿಕ್ಷೇಪ ಮೊದಲಾದ ಸರ್ವೋತ್ಪತ್ತಿಗಳನ್ನು ಬಿಡಲು ತನ್ನ ಅಧಿಕಾರಿಗಳಿಗೆ ತಿಳಿಸಿದ್ದನು. ಹೀಗೆ ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾದ ಶೈವಕ್ಷೇತ್ರವಾಗಿ ಮುಂದುವರಿದು

ಬಂದಿದೆ. ಜಟಂಗಿ ಬೆಟ್ಟದ ಮೇಲೆ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ವೀರಭದ್ರ, ಗಣೇಶ, ಮಹಿಶಮರ್ದಿನಿ, ಪರಶುರಾಮ ಮೊದಲಾದ ಪ್ರಾಚೀನ ದೇವಾಲಯಗಳಿವೆ.

ಜಟಂಗಿ ಜಂಭುಕೇಶ್ವರ ದೇವಾಲಯ

ಕ್ರಿ.ಶ. ಸು. ೯–೧೦ನೆಯ ಶತಮಾನದ ರಾಮೇಶ್ವರ ದೇವಾಲಯದ ಎಡಬದಿಯಲ್ಲಿರುವ ಇಟ್ಟಿಗೆಯ ದೇವಾಲಯವಿದು. ಪಶ್ಚಿಮಾಭಿಮುಖವಾಗಿರುವ ಈ ದೇವಾಲಯವನ್ನು ಕಲ್ಲುಚಪ್ಪಡಿ ಹಾಗೂ ಸುಟ್ಟ ಇಟ್ಟಿಗೆಗಳನ್ನು ಬಳಸಿ ಕಟ್ಟಿದ್ದಾರೆ. ಇವುಗಳನ್ನು ೩೦ ಸೆಂ.ಮೀ. ಉದ್ದ, ೨೫ ಸೆಂ.ಮೀ. ಅಗಲ ಹಾಗೂ ೧೫ ಸೆಂ.ಮೀ. ದಪ್ಪ ಗಾತ್ರದವಾಗಿವೆ. ದೇವಾಲಯವು ಸಂಪೂರ್ಣವಾಗಿ ಶಿಥಿಲವಾದ ಕಾರಣ ಇತ್ತೀಚೆಗೆ ಜೀರ್ಣೋದ್ಧಾರಗೊಳಿಸಿದ್ದಾರೆ. ಕಣಶಿಲೆಯ ಕಂಬಗಳು ಮತ್ತು ಬಾಗಿಲುವಾಡಗಳಿಗೆ ಕಲ್ಲುಚಪ್ಪಡಿಗಳನ್ನು ಬಳಸಿದ್ದಾರೆ. ಈ ದೇವಾಲಯವು ಕ್ರಿ.ಶ. ೯೬೨ರಲ್ಲಿ ಹೇಳುವ ಸಂಗತಿಗೆ ಸಾಕ್ಷ್ಯವಾಗಿದೆ. ಜಂಭುಕೇಶ್ವರ ದೇವಾಲಯಕ್ಕೆ ೧೦x೬x೧೨ ಮತ್ತು ೧೧x೭x೧೨ ಅಂಗುಲಗಳುಳ್ಳ ಇಟ್ಟಿಗೆಗಳನ್ನು ಬಳಸಲಾಗಿದೆ. ಗರ್ಭಗೃಹದ ಮೇಲ್ಭಾಗದ ಶಿಖರವು ಹಾಳಾಗಿದೆ. ಗರ್ಭಗೃಹದ ಬಾಗಿಲುವಾಡವು ಸರಳವಾಗಿದೆ.

ಜಟಂಗಿ ರಾಮೇಶ್ವರ ಗಣೇಶ ದೇವಾಲಯ

ರಾಮಸಾಗರ(ಜೀಯರಹಳ್ಳಿ)ದಿಂದ ಜಟಂಗಿ ರಾಮೇಶ್ವರ ಬೆಟ್ಟವೇರುವ ಸೋಪಾನಗಳಿಗೂ ಮುನ್ನ ಭಗ್ನಗೊಂಡ ಒಂದು ಪ್ರಾಚೀನ ಇಟ್ಟಿಗೆಯ ದೇವಾಲಯವಿದೆ. ಅದೇ ಗಣೇಶ ದೇವಾಲಯ. ಪೂರ್ವಾಭಿಮುಖವಾಗಿ ಕಟ್ಟಲಾದ ಈ ದೇವಾಲಯವು ಗರ್ಭಗೃಹ ಮತ್ತು ಸಭಾಮಂಟಪಗಳಿಂದ ಕೂಡಿದ್ದು ಗರ್ಭಗೃಹವು ಇಂದು ಶಿಥಿಲಾವಸ್ಥೆಯಲ್ಲಿದೆ. ಇದನ್ನು ೩೦ ಸೆಂ.ಮೀ. ಉದ್ದ, ೨೫ ಸೆಂ.ಮೀ. ಅಗಲ ಹಾಗೂ ೧೫ ಸೆಂ.ಮೀ. ದಪ್ಪ ಗಾತ್ರದ ಸುಟ್ಟ ಇಟ್ಟಿಗೆಗಳನ್ನು ಬಳಸಿ ಕಟ್ಟಲಾಗಿದೆ. ಇದಕ್ಕೆ ಕಲ್ಲಿನ ಕಂಬ ಮತ್ತು ಚಪ್ಪಡಿಗಳನ್ನು ಬಳಸಿರುವರು. ಈ ದೇಗುಲದಂತೆ ಇಟ್ಟಿಗೆಯಲ್ಲಿ ಕಟ್ಟಿದ ಚಿಕ್ಕಪುಟ್ಟ ಗುಡಿಗಳು ಜಟಂಗಿರಾಮೇಶ್ವರ ಬೆಟ್ಟದ ಮೇಲಿವೆ. ಮೂಲತಃ ಜಟಂಗಿರಾಮೇಶ್ವರ ದೇವಾಲಯವೂ ಕ್ರಿ.ಶ. ೯೬೨ರ ಪೂರ್ವದಲ್ಲಿ ಇಟ್ಟಿಗೆ ದೇಗುಲವೆಂಬುದು ಶಾಸನೋಕ್ತ ವಿಷಯ. ಈ ಹಿನ್ನೆಲೆಯಲ್ಲಿ ಈ ದೇಗುಲವು ಇದೇ ಅವಧಿಯಲ್ಲಿ ನಿರ್ಮಾಣವಾಗಿರುವ ಸಾಧ್ಯತೆಯಿದೆ.

ಗರ್ಭಗೃಹವು ಚಚ್ಚೌಕವಾಗಿದ್ದು ಸರಳ ಶೈಲಿಯ ನಾಲ್ಕು ಕಂಬಗಳಿಂದ ಮುಚ್ಚಿ ಇಟ್ಟಿಗೆಯಲ್ಲಿ ಶಿಖರವನ್ನು ನಿರ್ಮಿಸಿ ಮೇಲ್ಭಾಗದಲ್ಲಿ ಚಪ್ಪಡಿಗಳನ್ನು ಮುಚ್ಚಲಾಗಿದೆ. ಶಿಖರದ ಅಲಂಕರಣೆ ಸಂಪೂರ್ಣ ನಶಿಸಿದ್ದು ಪಿರಮಿಡ್ಡಿನಾಕಾರದಲ್ಲಿ ಜೋಡಿಸಿದ ಇಟ್ಟಿಗೆಗಳು ಮಾತ್ರ ಉಳಿದಿವೆ. ಗರ್ಭಗೃಹದ ನೆಲಹಾಸನ್ನು ಇಟ್ಟಿಗೆಗಳಿಂದ ದಮ್ಮಸ್ಸು ಮಾಡಿರುವರು. ಇತ್ತೀಚೆಗೆ ಈ ದೇಗುಲಕ್ಕೆ ರಕ್ಷಣೆಯಿಲ್ಲದೆ ಭಗ್ನಗೊಂಡು ಗರ್ಭಗೃಹವು ಹುತ್ತದಿಂದ ಆವರಿಸಿದೆ.

ಗರ್ಭಗೃಹದಲ್ಲಿ ಮೂರು ಅಡಿ ಎತ್ತರದ ಹಸಿರುಮಿಶಿತ ಕಪ್ಪುಶಿಲೆಯ ಗಣೇಶ ಶಿಲ್ಪವಿದೆ. ಈ ಶಿಲ್ಪದ ವೈಶಿಷ್ಟ್ಯವೆಂದರೆ ಎರಡು ಕೈಗಳನ್ನು ಮಾತ್ರ ಹೊಂದಿರುವುದು. ದಕ್ಷಿಣ ಭಾರತದಲ್ಲಿ ದೊರೆತ ಪ್ರಾಚೀನ ಗಣೇಶ ಶಿಲ್ಪಗಳೆಲ್ಲವೂ ಸಾಮಾನ್ಯವಾಗಿ ನಾಲ್ಕು ಕೈಗಳನ್ನು ಹೊಂದಿವೆ. ಆದರೆ ಇಲ್ಲಿನ ಗಣೇಶ ಎರಡು ಕೈಗಳನ್ನು ಹೊಂದಿದ್ದಾನೆ. ಇದೇ ರೀತಿ ಎರಡು ಕೈಗಳನ್ನು ಹೊಂದಿರುವ ಗಣೇಶ ಶಿಲ್ಪಗಳು ಬಾದಾಮಿಯ ಒಂದನೆಯ ಗುಹೆ, ಚೆನ್ನೈ ಎಗ್ಮೋರ್ ವಸ್ತುಸಂಗ್ರಹಾಲಯ ಮತ್ತು ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯಗಳಲ್ಲಿವೆ. ಈ ಬಗೆಯ ಎರಡು ಕೈಗಳುಳ್ಳ ಗಣೇಶ ಶಿಲ್ಪಗಳಿದ್ದರೂ ತುಂಬಾ ಅಪರೂಪವೇ ಸರಿ.

ಗಣೇಶನು ಸುಖಾಸೀನನಾಗಿ ಕುಳಿತಿದ್ದು ಕರಂಡ ಮುಕುಟಧಾರಿಯಾಗಿದ್ದಾನೆ. ಎಡಗೈಯಲ್ಲಿ ಮೋದಕ, ಬಲಗೈಯಲ್ಲಿ ಲೇಖನಿಗಳನ್ನು ಹಿಡಿದಿದ್ದು ಸರ್ಪವು ಹೊಟ್ಟೆಯನ್ನು ಸುತ್ತುವರಿದಿದೆ. ಸೊಂಡಿಲು ಮೋದಕವನ್ನು ಮೂಸುತ್ತಿದೆ. ವಿವಿಧ ಆಭರಣಗಳಿಂದ ಅಲಂಕೃತನಾದ ಗಣೇಶ ಕೈಬಳೆ, ಕಾಲ್ಕಡಗಗಳು ಕೊರಳಲ್ಲಿ ಕಂಠಹಾರಗಳನ್ನು ಧರಿಸಿರುವನು. ಈ ಶಿಲ್ಪದ ಲಕ್ಷಣಗಳನ್ನಾಧರಿಸಿ ವಿದ್ವಾಂಸರು ಕ್ರಿ.ಶ. ೧೦–೧೧ನೆಯ ಶತಮಾನದಲ್ಲಿ (MAR.,1930,P.27) ನೊಳಂಬರ ಕಾಲದಲ್ಲಿ ಪ್ರತಿಷ್ಠಾಪಿಸಲಾದ ಶಿಲ್ಪವಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಗಣೇಶ ಶಿಲ್ಪದ ಎಡಬದಿಯಲ್ಲಿ ಭೈರವನ ಚಿಕ್ಕ ಶಿಲ್ಪವೊಂದಿದೆ. ಭೈರವ ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ ಮತ್ತು ಅಕ್ಷಯ ಪಾತ್ರೆಗಳನ್ನು ಹಿಡಿದಿದ್ದಾನೆ. ಗರ್ಭಗೃಹದ ಮುಂಭಾಗದಲ್ಲಿ ಸಭಾಮಂಟಪದ ಅವಶೇಷಗಳಿವೆ. ಇಂದು ಇದು ಸಂಪೂರ್ಣವಾಗಿ ಬಿದ್ದುಹೋಗಿದ್ದು, ಇದನ್ನು ನೆಲಹಾಸಿನಿಂದ ಮಾತ್ರ ಗುರುತಿಸಬಹುದಾಗಿದೆ. ಇದರಿಂದ ಜಟಂಗಿ ಬೆಟ್ಟ ಪರಿಸರದಲ್ಲಿ ಪ್ರಾಚೀನಕಾಲದಲ್ಲಿ ಅಸ್ತಿತ್ವದಲ್ಲಿದ್ದ ಧಾರ್ಮಿಕ ಪರಂಪರೆಯ ಔನ್ನತ್ಯವನ್ನು ಗುರುತಿಸಬಹುದಾಗಿದೆ.

ಜಟಂಗಿ ರಾಮೇಶ್ವರ, ಜಟಾಯು ಸಮಾಧಿ

ಜಟಂಗಿ ಬೆಟ್ಟದಲ್ಲಿ ದೊಡ್ಡಬೆಟ್ಟವಿದೆ. ಈ ಬೆಟ್ಟದ ತುತ್ತತುದಿಯಲ್ಲಿ ರಾಮಾಯಣದ ಜಟಾಯು ಪಕ್ಷಿಯು ಸತ್ತ ಸ್ಥಳವೆಂದು ಇಂದಿಗೂ ಸ್ಥಳೀಯರು ಕರೆಯುತ್ತಿರುವ ದೇವಾಲಯವಿದೆ. ಆದರೆ ಈಗ ದೇವಾಲಯದ ತಳಹದಿ



ಭೋಗೇಶ್ವರ ದೇವಾಲಯ, ಇಸಾಮುದ್ರ



ಮಲ್ಲೇಶ್ವರ ದೇವಾಲಯ, ಹುಲ್ಲೂರು



ಕಲ್ಲೇಶ್ವರ ದೇವಾಲಯ, ಹುಲ್ಲೂರು



ಜಂಭುಕೇಶ್ವರ ದೇವಾಲಯ, ಜಟಂಗಿ ಬೆಟ್ಟ



ಕೋಡಿ ಮಲ್ಲೇಶ್ವರ
ದೇವಾಲಯ, ಮರಡಿ
ದೇವಿಗೆರೆ



ರಾಮೇಶ್ವರ
ದೇವಾಲಯ
ಗಂಗಸಮುದ್ರ



ರಾಮೇಶ್ವರ ದೇವಾಲಯ, ಜಟಂಗಿ ಬೆಟ್ಟ



ಕಲ್ಲೇಶ್ವರ ದೇವಾಲಯ, ಮಳಲಿ

ಮತ್ತು ಕಟ್ಟಿಗೆಯ ಅವಶೇಷಗಳು ಮಾತ್ರ ಉಳಿದುಬಂದಿವೆ. ಗರ್ಭಗೃಹ ಮಾತ್ರವಿದ್ದ ಈ ದೆಗುಲದಲ್ಲಿ ನುಣುಪಾದ ಬೆಣಚು ಕಲ್ಲಿನ ಲಿಂಗವಿದೆ.

ಜಟಂಗಿ ರಾಮೇಶ್ವರ, ಕಾಶೀ ಪುರಾಧೀಶ್ವರ

ಇದೇ ಬೆಟ್ಟದಲ್ಲಿರುವ ಇನ್ನೊಂದು ಪ್ರಾಚೀನ ದೇವಾಲಯ ವಿದೆ ಇದನ್ನು ಕಾಶೀಪುರಾಧೀಶ್ವರನೆಂದು ವರ್ಣದಲ್ಲಿ ಬರೆಯ ಲಾದ ಇಲ್ಲಿನ ಶಾಸನದಲ್ಲಿ ಕರೆಯಲಾಗಿದೆ. ಇದನ್ನು ಬೃಹತ್ ಬಂಡೆಗಲ್ಲುಗಳನ್ನು ಬಳಸಿ ನಿರ್ಮಿಸಿದ್ದು, ಅಲ್ಲಲ್ಲಿ ಇಟ್ಟಿಗೆ ಗಳನ್ನು ಬಳಸಿಕೊಳ್ಳಲಾಗಿದೆ. ಈ ಮೇಲಿನ ದೇವಾಲಯ ಗಳಲ್ಲದೆ ಶಾಸನಗಳಲ್ಲಿ ವ್ಯಕ್ತವಾದ ಹಾಗೂ ಇಂದು ಸಂಪೂರ್ಣ ವಾಗಿ ಜೀರ್ಣೋದ್ಧಾರಗೊಂಡಿರುವ ಆಯಕಲ್ಲಿನ ಈಶ್ವರ, ಚಿಕ್ಕ ಮಧುರೆಯ ಮಲ್ಲೇಶ್ವರ, ದೊಡ್ಡ ಸಿದ್ದವ್ವನಹಳ್ಳಿಯ ಈಶ್ವರ, ಚಂದ್ರವಳ್ಳಿಯ ಹುಲಿಗೊಂದಿ ಸಿದ್ದೇಶ್ವರ ದೇವಾಲಯ ಗಳು ರಾಷ್ಟ್ರಕೂಟ ಕಾಲದ ನಿರ್ಮಿತಿಗಳಾಗಿವೆ. ಇವುಗಳಲ್ಲಿ ಹೆಚ್ಚು ದೇವಾಲಯಗಳಿಗೆ ಇಟ್ಟಿಗೆಗಳನ್ನು ಬಳಸಿದ್ದುದು ಅಲ್ಲಿನ ಅವಶೇಷಗಳಿಂದ ಗುರುತಿಸಬಹುದಾಗಿದೆ.

ಒಟ್ಟಿನಲ್ಲಿ ಈ ಮೇಲಿನ ಎಲ್ಲ ದೇವಾಲಯಗಳ ಲಕ್ಷಣ ಗಳನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ:

೧. ಈ ದೇವಾಲಯಗಳಲ್ಲಿ ಬಳಸಲಾದ ಇಟ್ಟಿಗೆ, ರಚನೆ, ಶೈಲಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ರಾಷ್ಟ್ರಕೂಟರ ಆಳ್ವಿಕೆ ಮತ್ತು ಕಾಲದ ಹಿನ್ನೆಲೆಯಲ್ಲಿ ಕ್ರಿ.ಶ. ೯–೧೦ನೆಯ ಶತಮಾನದ ನಿರ್ಮಿತಿಗಳೆಂಬುದು ಸ್ಪಷ್ಟವಾಗುತ್ತದೆ.

೨. ಈ ದೇವಾಲಯಗಳ ಪ್ರಮುಖ ಲಕ್ಷಣವೆಂದರೆ ಒಳಭಾಗದಲ್ಲಿ ಕಲ್ಲಿನ ಚಪ್ಪಡಿ, ಕಂಬಗಳನ್ನು, ಹೊರಭಾಗದಲ್ಲಿ ಆಯತಾಕಾರದ ಸುಟ್ಟ ಇಟ್ಟಿಗೆಗಳನ್ನು ಬಳಸಿ ನಿರ್ಮಾಣ ಮಾಡಿರುವುದು.

೩. ಹೊರಭಾಗಕ್ಕೆ ಸುಟ್ಟ ಇಟ್ಟಿಗೆ ಬಳಸಿರುವುದರಿಂದ ಕಾಲಾನಂತರ ಹಾಳಾಗುತ್ತದೆಂಬುದನ್ನು ಅರಿತು ದೇವಾಲಯವನ್ನು ಕಲ್ಲು–ಮಣ್ಣುಗಳಿಂದ ಮುಚ್ಚ ಲಾಗಿದೆ. ಇದಕ್ಕೆ ಉದಾಹರಣೆಗಳೆಂದರೆ, ಇಸಾಮುದ್ರದ ಭೋಗೇಶ್ವರ, ಗಂಗಸಮುದ್ರದ ರಾಮೇಶ್ವರ, ಹುಲ್ಲೂರಿನ ಮಲ್ಲೇಶ್ವರ ದೇವಾಲಯಗಳು. ಸದ್ಯ ಮಲ್ಲೇಶ್ವರ ದೇವಾಲಯವು ಸಂಪೂರ್ಣ ಜೀರ್ಣೋದ್ಧಾರ ಗೊಂಡಿದೆ.

೪. ದೇವಾಲಯಗಳ ಒಳಭಾಗವು ರಾಷ್ಟ್ರಕೂಟ ಮತ್ತು ಸಮಕಾಲೀನ ಶೈಲಿಯನ್ನು ಪ್ರತಿನಿಧಿಸುತ್ತದೆ. ಕಂಬಗಳು, ಮೂರ್ತಿಶಿಲ್ಪಗಳು, ತೋರಣ, ಬಾಗಿಲುವಾಡಗಳಲ್ಲಿ ಅಳವಡಿಸಲಾಗಿರುವ ಲಕ್ಷಣಗಳು ಇದನ್ನು ಸಮರ್ಥಿ ಸುತ್ತವೆ.

೫. ಸದ್ಯ ಉಳಿದುಬಂದಿರುವ ಹಾಗೂ ಅಧ್ಯಯನಕ್ಕೆ ಒಳಪಡಿಸಲಾದ ಈ ಮೇಲಿನ ಎಲ್ಲ ಇಟ್ಟಿಗೆ ದೇವಾಲಯಗಳೂ ಶೈವ ಧರ್ಮಕ್ಕೆ ಸಂಬಂಧಿಸಿ ದವುಗಳೇ ಆಗಿರುವುದು ವಿಶೇಷ. ಈ ಅವಧಿಯಲ್ಲಿ ನಿರ್ಮಾಣವಾದ ಇಟ್ಟಿಗೆಯ ವೈಷ್ಣವ ದೇವಾಲಯಗಳ ರಚನೆಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡು ಬಂದಿರುವುದಿಲ್ಲ. ಆದುದರಿಂದ ಜಿಲ್ಲೆಯ ಪ್ರಾಚೀನ ಕಾಲ ಅದರಲ್ಲೂ ಮಧ್ಯಯುಗದ ಪ್ರಬಲ ಪ್ರಭಾವಿ ಧರ್ಮ ಶೈವವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

೬. ಕ್ರಿ.ಶ. ೯–೧೦ನೆಯ ಶತಮಾನದ ಈ ದೇವಾಲಯ ಗಳಿಗೆ ಬಳಸಲಾದ ಇಟ್ಟಿಗೆಗಳನ್ನು ಗಮನಿಸಿದರೆ ಇಟ್ಟಿಗೆಯ ತಯಾರಿಕೆ, ಅದಕ್ಕೆ ಬೇಕಾದ ಸಾಮಗ್ರಿಗಳಾದ ಮಣ್ಣು, ಸುಡಲು ಬೇಕಾದ ಕಟ್ಟಿಗೆ, ಶ್ರಮಿಕ ವರ್ಗ, ಅದರ ಪರಿಣತಿ ಮತ್ತು ಪರಿಶ್ರಮ, ದೇವಾಲಯ ರಚನಾ ತಂತ್ರ ಮೊದಲಾದವುಗಳನ್ನು ಅರಿಯಲು ಇವುಗಳಿಂದ ಸಾಧ್ಯವಾಗುತ್ತದೆ.

೭. ಇಲ್ಲಿ ಬಳಸಲಾದ ಇಟ್ಟಿಗೆಗಳನ್ನು ಗಮನಿಸಿದರೆ ಇಟ್ಟಿಗೆ ಸುಡಲು ಬಳಸಿದ ಸೌದೆ ಅಥವಾ ಕಟ್ಟಿಗೆಯ ನೆನಪಾಗು ತ್ತದೆ. ಒಂದು ವಾದದಂತೆ ಸಿಂಧೂ ಬಯಲಿನ ನಾಗರೀಕತೆಯು ಅವನತಿ ಹೊಂದಿದ್ದುದು ಅಲ್ಲಿ ಬಳಸ ಲಾದ ಇಟ್ಟಿಗೆ ಮತ್ತು ಇಟ್ಟಿಗೆಗಳನ್ನು ಸುಡಲು ಬಳಸ ಲಾದ ಕಟ್ಟಿಗೆಯೆಂಬುದಾಗಿದೆ. ಅಂದರೆ ಇಡೀ ಸಂಸ್ಕೃತಿಯ ಕೇಂದ್ರವಾದ ಇಟ್ಟಿಗೆಗೆ ಅವರು ಬಳಸಿದ ಕಟ್ಟಿಗೆ ಅಪಾರವಾದದ್ದು. ಇದರಿಂದ ಆ ಪರಿಸರದ ಬಹುಪಾಲು ಕಾಡು ನಾಶವಾಗಿ, ಪರಿಸರದ ಅಸಮ ತೋಲನದಿಂದ ಒಂದು ನಾಗರೀಕತೆ ಬರಡಾದದ್ದನ್ನು ಗುರುತಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಕ್ರಿ.ಶ. ೯– ೧೦ನೆಯ ಶತಮಾನ ಹಾಗೂ ಅದಕ್ಕೂ ಮುನ್ನ ಮತ್ತು ನಂತರದಲ್ಲಿ ಯಥೇಚ್ಚವಾಗಿ ಬಳಸಲಾದ ಸುಟ್ಟ ಇಟ್ಟಿಗೆಗಳಿಂದ ಅಂದಿನ ಪರಿಸರ ನಾಶದ ಚಿತ್ರಣವನ್ನು ಊಹಿಸಿಕೊಳ್ಳಬಹುದಾಗಿದೆ.

ಆಧಾರಸೂಚಿ

೧. ಸೋಮಶೇಖರ್, ಎಸ್.ವೈ.(ಸಂ.) ಬ್ರಹ್ಮಗಿರಿ, ೨೦೧೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೮

ಹುಬ್ಬಳ್ಳಿ ಪ್ರದೇಶದ ಶಾಸನೋಕ್ತ ದೇವಾಲಯಗಳು

ರೇಖಾಶ್ರೀ ವೀ. ಇಂದರಗಿ* ಡಾ. ಮಹೇಶಕುಮಾರ ಹ. ಪಾಟೀಲ**

ಕರ್ನಾಟಕದ ಶಾಸನಗಳಲ್ಲಿ ಈಗ ಉಳಿದು ಬಂದಿರುವ ದೇವಸ್ಥಾನಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದೆಂದರೆ ತಾಳಗುಂದದ ಪ್ರಣವೇಶ್ವರ ದೇವಾಲಯವಾಗಿದೆ.[1] ಇನ್ನು ಪ್ರಸ್ತುತ ಹುಬ್ಬಳ್ಳಿ ಪ್ರದೇಶಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕಾರೇಯ ಗಣದ ನೇಮಿಚಂದ್ರ ಸಿದ್ಧಾಂತದೇವರ ಮೂವರು ಶಿಷ್ಯಂದಿರು ನಿರ್ಮಿಸಿರುವ ಕ್ರಿ.ಶ. ೧೦೩೫ರ ನೂಲ್ವಿಯ ಬಸದಿಯ ಉಲ್ಲೇಖವೇ ಅತ್ಯಂತ ಪ್ರಾಚೀನವಾದುದಾಗಿದೆ.[2]

ಈ ಪ್ರದೇಶದಲ್ಲಿ ದೊರೆತಿರುವ ೧೦೩ ಶಾಸನಗಳಲ್ಲಿ ಸುಮಾರು ೨೪ ದೇವಾಲಯಗಳ ಹೆಸರಿದ್ದು, ಅವು ಬೇರೆ ಬೇರೆ ಧರ್ಮಗಳಿಗೆ ಸೇರಿದವುಗಳಾಗಿವೆ. ಅವುಗಳನ್ನು ಆಯಾ ಮತ-ಧರ್ಮಗಳ ಹಿನ್ನೆಲೆಯಲ್ಲಿ ಗುರುತಿಸುವುದಾದರೆ ಈ ಎಲ್ಲ ದೇವಾಲಯಗಳ ಒಂದು ಪಟ್ಟಿಯನ್ನು ಈ ಕೆಳಗಿನಂತೆ ನೋಡಬಹುದು.

ಶೈವ	ವೈಷ್ಣವ	ಜೈನ	ಬೌದ್ಧ	ಇತರೆ	ಒಟ್ಟು
೮	೫	೫	೧	೫	೨೪

ಈ ಮೇಲಿನ ಪಟ್ಟಿಯನ್ನು ಗಮನಿಸಿದಾಗ ಹುಬ್ಬಳ್ಳಿ ಪ್ರದೇಶದಲ್ಲಿ ಶೈವ ದೇವಾಲಯಗಳನ್ನು ಹೆಚ್ಚು ಪ್ರಮಾಣದಲ್ಲಿ ನಿರ್ಮಿಸಿರುವುದು ಕಾಣುತ್ತದೆ. ದೇವಾಲಯಗಳ ಸಂಖ್ಯೆ ಮತ್ತು ಅದರ ಭಕ್ತಾದಿಗಳು ಹೆಚ್ಚಿದಂತೆ ದೇವಾಲಯದ ಹರವು ಬೆಳೆಯಿತು. ನಮ್ಮ ಅಧ್ಯಯನ ಪ್ರದೇಶದಲ್ಲಿ ನಿರ್ಮಿಸಲಾದ ದೇವಾಲಯಗಳನ್ನು ಗಮನಿಸಿದಾಗ, ಹೆಚ್ಚಿನ ಸಂಖ್ಯೆಯಲ್ಲಿ ಏಕಕೂಟ ದೇವಾಲಯಗಳು ನಿರ್ಮಾಣಗೊಂಡಿರುವುದು ಕಂಡುಬರುತ್ತದೆ. ತ್ರಿಮೂರ್ತಿ ದೇವಾಲಯಗಳನ್ನು ತ್ರೈಪುರುಷ ದೇವಾಲಯಗಳೆಂದು ಕರೆಯುತ್ತಿದ್ದು, ಅಂತಹ ಒಂದು ದೇವಾಲಯ ನಿರ್ಮಾಣದ ಉಲ್ಲೇಖ ಕಲ್ಯಾಣದ ಚಾಲುಕ್ಯರ ಅರಸ ೬ನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದ ಕ್ರಿ.ಶ. ೧೦೮೨ರ ತಿರಗುಪ್ಪಿ ಶಾಸನದಲ್ಲಿ ಕಂಡುಬರುತ್ತದೆ.[3] ಜೊತೆಗೆ ಶಾಸನದಲ್ಲಿ ಕೇವಲ ಶ್ರೀ ವಿಷ್ಣುದೇವರು ಎಂಬ ಉಲ್ಲೇಖವಿದ್ದು ಉಳಿದ ಎರಡು ದೇವತೆಗಳ ಉಲ್ಲೇಖ ದೊರೆಯುವುದಿಲ್ಲ. ಕ್ರಿ.ಶ.೧೦೩೫ರ ನೂಲ್ವಿ ಗ್ರಾಮದ ಶಾಸನದಲ್ಲಿ ಕೋರುಗಣದ ಮೂವರು ವ್ಯಕ್ತಿಗಳು ಸೇರಿ ತೀರ್ಥಂಕರನ ಪ್ರತಿಮೆಯನ್ನು ಪ್ರತಿಷ್ಠಾಪಿಸಿದರೆಂಬ ವಿವರಗಳಿವೆ.[4] ಅದೇ ರೀತಿ ಕೋಳಿವಾಡದ ಕ್ರಿ.ಶ. ಸು. ೧೧ನೆಯ ಶತಮಾನದ ಶಾಸನವು ಸೋವರಾಶಿಯು ಕಲ್ಮೇಶ್ವರ ವಿಗ್ರಹವನ್ನು ಮಾಡಿಸಿದನೆಂದು ಹೇಳುತ್ತದೆ.[5] ಕ್ರಿ.ಶ. ೧೧೧೯ರ ಕಲ್ಯಾಣದ ಚಾಲುಕ್ಯ ತ್ರಿಭುವನಮಲ್ಲನ ಅಮರಗೊಳದ ಶಾಸನದಲ್ಲಿ ಮಹಾಪ್ರಧಾನ ಸೌದೊರೆ ಜಕ್ಕರಸನು ಕೇಶವದೇವರ ಸ್ಥಾಪನೆ ಮಾಡಿದ ವಿವರಗಳಿವೆ.[6] ಜೊತೆಗೆ ಈ ಪ್ರದೇಶದ ಕೋಳಿವಾಡದಲ್ಲಿ ಕಲ್ಮೇಶ್ವರ ದೇವಾಲಯದ ಹಿಂಭಾಗದಲ್ಲಿ ತಾರಾಭಗವತಿ ವಿಗ್ರಹವೊಂದು ದೊರೆತಿದ್ದು, ಅದರ ಪಾದಪೀಠದ ೨ ಸಾಲಿನ ಕ್ರಿ.ಶ. ೧೧-೧೨ನೆಯ ಶತಮಾನದ ಶಾಸನವು ತಾರಾಭಗವತಿ ಹಾಗೂ ಬುದ್ಧನನ್ನು ಸ್ತುತಿಸುತ್ತದೆ.[7] ಇದರಿಂದಾಗಿ ಬಹುಷಃ ಇಲ್ಲಿ ಬೌದ್ಧಧರ್ಮ ಅಸ್ತಿತ್ವದಲ್ಲಿರಬಹುದೆಂದು ಊಹಿಸಬಹುದು. ಇವುಗಳಲ್ಲದೇ ಕ್ರಿ.ಶ. ೧೬ನೆಯ ಶತಮಾನದ ಭೈರಿದೇವರಕೊಪ್ಪದ ಶಾಸನವು ಹನುಮಂತದೇವರನ್ನು ಉಲ್ಲೇಖಿಸಿದ್ದು,[8] ಅದೇ ಕಾಲದ ಕಟ್ನೂರದ ಮತ್ತೊಂದು ಶಾಸನ ಬುಡರಸಿಂಗಿಯ ಹನುಮಂತ ದೇವರನ್ನು ಹೆಸರಿಸುತ್ತದೆ.[9]

ದೇವಾಲಯಗಳು ಪ್ರಾಚೀನ ಹಾಗೂ ಮಧ್ಯಕಾಲೀನ ಜನರಲ್ಲಿ ಬೇರೂರಿದ ಜೀವನಶ್ರದ್ಧೆ ಮತ್ತು ನಿಷ್ಠೆಗಳ ಪ್ರತೀಕಗಳಾಗಿವೆ. ಅವು ಜನಜೀವನದ ಭಾಗವೇ ಆಗಿ ಅವರನ್ನು ತಿದ್ದುವ ಶಕ್ತಿಗಳಾಗಿರಬೇಕೆಂಬುದೇ ಅವುಗಳ ನಿರ್ಮಾಣದ ಹಿಂದಿರುವ ಮಹೋದ್ದೇಶವಾಗಿತ್ತು.[10] ಇದರಿಂದಾಗಿ ಅಂದಿನ ಕರ್ನಾಟಕದ ಪ್ರತಿಯೊಂದು ಊರಿಗೂ ದೇವಸ್ಥಾನವೇ ಕೇಂದ್ರ ಬಿಂದುವಾಗಿರುತ್ತಿತ್ತು. ಅದರ ಸುತ್ತಲೂ ಆ ಊರಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವು ರೂಪುಗೊಳ್ಳುತ್ತಿದ್ದ ಬಗೆಯನ್ನು ಕುರಿತು "ದೇವಸ್ಥಾನವು ಜನರ ದೈವಭಕ್ತಿಯ ಕೇಂದ್ರವಾಗಿದ್ದಂತೆ ವಿದ್ಯಾಕೇಂದ್ರವೂ ಅಗಿದ್ದಿತು. ಶಿಲ್ಪ, ಚಿತ್ರ, ಸಂಗೀತ, ನರ್ತನಾದಿ ಕುಶಲಕಲೆಗಳು ದೇವಸ್ಥಾನದ ಆಶ್ರಯದಲ್ಲಿ ವೃದ್ಧಿಸಿದವು. ದೇವಾಲಯವು ಜನರ ನ್ಯಾಯಾಲಯವೂ ಆಗಿದ್ದಿತು.

* ಅತಿಥಿ ಉಪನ್ಯಾಸಕರು, ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ರಾಜನಗರ, ಹುಬ್ಬಳ್ಳಿ
** ಅತಿಥಿ ಉಪನ್ಯಾಸಕರು, ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ರಾಜನಗರ, ಹುಬ್ಬಳ್ಳಿ

ದೇವಸ್ಥಾನ ಬಡವರಿಗೆ ಸತ್ರವಾಗಿದ್ದಿತು. ಶ್ರೀಮಂತರ ಐಶ್ವರ್ಯವು ಹರಿದು ಹೊರಗೆ ಬರಲು ಕಾರಣವಾಗಿದ್ದಿತು".[೧೧] ಹೀಗೆ ಬಹುಮುಖ ಚಟುವಟಿಕೆಗಳ ಆಗರಗಳಾದ ದೇವಸ್ಥಾನಗಳ ನಿರ್ಮಾಣ ಪ್ರಸ್ತುತ ನಮ್ಮ ಅಧ್ಯಯನ ಪ್ರದೇಶದಲ್ಲಿಯೂ ನಡೆದುಬಂದಿರುವುದು ಕಂಡುಬರುತ್ತದೆ. ಅದರಲ್ಲಿಯೂ ಮಧ್ಯಕಾಲೀನ ಅವಧಿಯಲ್ಲಿ ದೊಡ್ಡ ಪ್ರಮಾಣದಲ್ಲಿ ದೇವಸ್ಥಾನಗಳನ್ನು ನಿರ್ಮಿಸಿರುವುದು ಮೇಲೆ ಕೊಟ್ಟಿರುವ ಪಟ್ಟಿಯಿಂದ ತಿಳಿದುಬರುತ್ತದೆ.

ಜೀವನದಲ್ಲಿ ಒಂದಾದರೂ ಗುಡಿಯನ್ನು ಕಟ್ಟಿಸಬೇಕು ಇಲ್ಲವೇ ಗುಡಿಗಳಿಗೆ ದಾನವನ್ನಾದರೂ ನೀಡಬೇಕು ಎಂಬುದು ಆಗಿನವರ ಧಾರ್ಮಿಕ ಭಾವನೆಯಗಿತ್ತು.[೧೨] ಶಾಸನವೊಂದು ನ್ಯಾಯವಾದ ರೀತಿಯಲ್ಲಿ ಧನ ಸಂಪಾದನೆ ಮಾಡಬೇಕು, ಆ ಧನವನ್ನು ದಾನ ಮಾಡಬೇಕು ಅಥವಾ ಅದರ ಸಹಾಯದಿಂದ ದೇವಸ್ಥಾನವನ್ನು ನಿರ್ಮಿಸ ಬೇಕು. ಇವುಗಳಿಗೆ ಬಳಸದಿದ್ದರೆ ಅಂತಹ ಹಣವನ್ನು ಬೇರೆ ಯವರು ಅಪಹರಿಸಿಬಿಡಬಹುದು ಎಂದಿದೆ.[೧೩] ಇದು ಆ ಕಾಲದ ಅದರ್ಶವಾಗಿತ್ತು. ಕ್ರಿ.ಶ. ೧೧ನೆಯ ಶತಮಾನದ ಕೋಳಿವಾಡದ ಶಾಸನವು ಸೋವರಾಶಿ ಎಂಬುವವನು ಕೋಳಿವಾಡದ ಅಗ್ರಹಾರದ ೨೦೦ ಮಹಾಜನರು ಮತ್ತು ಊರೊಡೆಯರ ಧರ್ಮಾರ್ಥವಾಗಿ ಕಲ್ಮೇಶ್ವರ ವಿಗ್ರಹವನ್ನು ಮಾಡಿಸಿದನೆಂಬ ವಿಷಯ ದಾಖಲಿಸುತ್ತದೆ.[೧೪] ಇದಕ್ಕೆ ನಿದರ್ಶನವಾಗಿ ಪ್ರಸ್ತುತ ಹುಬ್ಬಳ್ಳಿ ಪ್ರದೇಶದಲ್ಲಿ ಅರಸರು ಮತ್ತು ಅವರ ಅಧಿಕಾರಿವರ್ಗದವರಲ್ಲದೇ ಸಾಮಾನ್ಯ ಜನತೆ ಸಹ ದೇವತಾ ಪ್ರತಿಷ್ಠೆ ಹಾಗೂ ದೇವಾಲಯ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗಿರುವುದು ಕಂಡುಬರುತ್ತದೆ. ನೂಲ್ವಿ ಗ್ರಾಮದ ಕ್ರಿ.ಶ. ೧೦೩೫ರ ಶಾಸನವೊಂದು ಕೋರುಗಣದ ಹಿಲೆಯ ಅಕಯ್ಯ, ಸದರ ಕೇತಯ್ಯ ಮತ್ತು ಬಯ್ಸರ ದೇವಯ್ಯರು ಸೇರಿ ಬಸದಿಯನ್ನು ಮಾಡಿಸಿ, ತೀರ್ಥಂಕರರ ಪ್ರತಿಮೆಯನ್ನು ಸ್ಥಾಪಿಸಿದರೆಂದು ತಿಳಿಸುತ್ತದೆ.[೧೫]

ಅದೇ ರೀತಿ ಸೇಡಂಬಿಯಲ್ಲಿ ಒಕ್ಕಲುಮಗ ಇಂದೆಯ ಹೊಲಿಮಯ್ಯ ಮೂಲಸ್ಥಾನ ದೇಗುಲ ನಿರ್ಮಿಸಿದ ವಿವರ ಕ್ರಿ.ಶ. ೧೦೬೨ರ ಶ್ಯಾಡಂಬಿ ಶಾಸನ ದಲ್ಲಿದೆ.[೧೬] ಹಾಗೂ ಶಿರಗುಪ್ಪಿಯಲ್ಲಿ ವಾಮಯ್ಯನೆಂಬುವವನು ಶ್ರೀವಿಷ್ಣುದೇವರು ಮತ್ತು ತ್ರೈಪುರುಷದೇವರ ದೇವಾಲಯ ವನ್ನು ನಿರ್ಮಿಸಿದನೆಂದು ಕ್ರಿ.ಶ. ೧೦೮೨ರ ಶಾಸನ ಹೇಳಿದೆ.[೧೭] ಹಲಸಿಗೆ ನಾಡಿನ ಉಣಕಲ್ಲ ಕಂಪಣದ ಹಳ್ಳಿ ಅಂಬರಗೊಳ ದಲ್ಲಿ ವಾಜಿಕುಲದ ಮಹಾಪ್ರಧಾನ ದೊರೆ ಜಕ್ಕರಸನು ಕೇಶವದೇವರನ್ನು ಸ್ಥಾಪಿಸಿದ ವಿಷಯ ಕ್ರಿ.ಶ. ೧೧೧೯ರ ಅಮರಗೊಳದ ಶಾಸನದಲ್ಲಿದೆ.[೧೮] ಹುಬ್ಬಳ್ಳಿಯ ಕ್ರಿ.ಶ. ೧೪-೧೫ನೆಯ ಶತಮಾನದ ಶಾಸನದಲ್ಲಿ ಅಜ್ಜಯ ದೇವರು ಶಾಂತಿನಾಥದೇವರ ಪ್ರತಿಮೆ ಹಾಗೂ ಚೈತ್ಯಾಲಯ ವನ್ನು ಮಾಡಿಸಿದರೆಂದು ಉಲ್ಲೇಖಿಸಲಾಗಿದೆ.[೧೯]

ದೇವರು ಮತ್ತು ದೇವಾಲಯಗಳನ್ನು ನಿರ್ಮಿಸಿದ ವ್ಯಕ್ತಿಯ ಅಥವಾ ಸಮಾಜದ ಒಂದು ವರ್ಗದ ಹೆಸರಿನಿಂದ ಸಾಮಾನ್ಯವಾಗಿ ಆ ದೇವಾಲಯ ಹಾಗೂ ದೇವರನ್ನು ಕರೆಯ ಲಾಗುತ್ತಿತ್ತು. ಅದಕ್ಕೆ ಕಾರಣ ದೇವಸ್ಥಾನವನ್ನು ಕಟ್ಟಿಸಿದವನ ಹೆಸರು ದೇವರಿಗೆ ಬಂದು, ಅದನ್ನು ಕಟ್ಟಿಸಿದವರು ದೇವರೇ ಆಗಿಬಿಡುತ್ತಾರೆಂಬುದು ಆ ಕಾಲದ ನಂಬಿಕೆಯಾಗಿತ್ತೆಂದು ಶಾಸನವೊಂದು ಹೇಳುತ್ತದೆ.[೨೦] ಹಾಗೆಯೇ ನಮ್ಮ ಅಧ್ಯಯನದ ಅವಧಿಯ ಕೆಲ ಶಾಸನಗಳಲ್ಲೂ ಅಂತಹ ಉದಾಹರಣೆಗಳು ದೊರೆಯುತ್ತವೆ. ಛಬ್ಬಿಯಲ್ಲಿ ದೋರನೆಂಬುವನು ನಿರ್ಮಿಸಿದ ಜಿನಾಲಯ ದೋರಜಿನಾಲಯ,[೨೧] ಎಲೆಯ ಬೋಜಂಗರ ಸಂಘದವರು ಕಟ್ಟಿಸಿದ ದೇಗುಲ ಬೋಜಂಗೇಶ್ವರ,[೨೨] ಕುಡಿಯರ ಕುಲದವರು ನಿರ್ಮಿಸಿದ ದೇವಾಲಯ ಕುಡಿಯೇಶ್ವರ[೨೩] ಹಾಗೂ ಕುರುಬ ಸೇಣಿಗರು ಮಾಡಿಸಿದ ದೇಗುಲ ಸೇಣಿಗೇಶ್ವರ[೨೪] ಹೀಗೆ ಈ ಪ್ರದೇಶದಲ್ಲಿ ಕಂಡುಬರುವ ಶಾಸನೋಲ್ಲೇಖಗಳು ಇದನ್ನು ಸಮರ್ಥಿಸುತ್ತವೆ.

ಕೆಲವೊಮ್ಮೆ ಒಂದೊಂದು ಗ್ರಾಮವೂ ತನ್ನದೇ ಆದ ಒಂದು ದೇವರ ದೇವಸ್ಥಾನವೊಂದನ್ನು ನಿರ್ಮಿಸಿಕೊಂಡ ಉದಾಹರಣೆಗಳು ನಮ್ಮ ಅಧ್ಯಯನ ಪ್ರದೇಶದ ಶಾಸನಗಳಲ್ಲಿ ದೊರೆಯುತ್ತವೆ. ಶ್ಯಾಡಂಬಿಯ ಗ್ರಾಮದ ದೇವತೆಯಾದ ಮೂಲಸ್ಥಾನ ದೇಗುಲ,[೨೫] ಬ್ಯಾಹಟ್ಟಿಯ ಗ್ರಾಮೇಶ್ವರ ದೇಗುಲ,[೨೬] ಹಾಗೂ ಕಟ್ನೂರ ಗ್ರಾಮದೇವತೆಯಾದ ಮೂಲಸ್ಥಾನ ದೇವರು.[೨೭] ಇದರಿಂದ ನಾವು ಮೇಲೆ ಹೇಳಿದ ವಿಷಯವು ಹುಬ್ಬಳ್ಳಿ ಪ್ರದೇಶಕ್ಕೂ ಸಂಬಂಧಿಸಿದ್ದು ಕಂಡುಬರುತ್ತದೆ.

ದೇವಸ್ಥಾನದ ನಿರ್ಮಾಣದ ನಂತರ ಅದರ ಉಸ್ತುವಾರಿ ಯನ್ನು ನೋಡಿಕೊಂಡು ಬರುವ ಕೆಲಸ ಸಣ್ಣದಾಗಿರಲಿಲ್ಲ. ಕಾಲಕಾಲಕ್ಕೆ ಅದರ ಜೀರ್ಣೋದ್ಧಾರ, ಪೂಜಾದಿಕ್ರಿಯೆಗಳು ಸಾಂಗವಾಗಿ ನಡೆದುಕೊಂಡು ಬರಲು ಆರ್ಥಿಕ ಸಹಾಯದ ಅಗತ್ಯ ಅತ್ಯವಶ್ಯಕವಾಗಿದ್ದಿತು. ದೇವಾಲಯ ಕಟ್ಟಿಸಿದ ವ್ಯಕ್ತಿಗಳು ಇದನ್ನರಿತು ಅದಕ್ಕೆ ಸಾಕಷ್ಟು ದಾನ-ದತ್ತಿಗಳನ್ನು ನೀಡು ತ್ತಿದ್ದರು.[೨೮] ಈ ಕ್ರಿಯೆ ಅಂದಿನ ಜನರ ಗಮನಸೆಳೆದು, ಇಂತಹ ದೇವಾಲಯಗಳಿಗೆ ತಮ್ಮ ಕೈಲಾದಷ್ಟು ಸಹಾಯ ನೀಡುವುದರ ಮೂಲಕ ತಮ್ಮ ಭಕ್ತಿಯನ್ನು ಪ್ರದರ್ಶಿಸಿ ತೃಪ್ತರಾಗುತ್ತಿದ್ದರು. ಕಾರಣ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಜನಜೀವನದಲ್ಲಿ ದಾನಗುಣ ಪ್ರಮುಖ ಪಾತ್ರವಹಿಸಿದೆ. ಒಬ್ಬ ವ್ಯಕ್ತಿ ತನ್ನ ಜೀವಿತದಲ್ಲಿ ವೈಯಕ್ತಿಕವಾಗಿ, ಕುಟುಂಬದ ಸದಸ್ಯನಾಗಿ, ಸಮುದಾಯದ ಜೀವಿಯಾಗಿ ದಾನ ಕ್ರಿಯೆಯಲ್ಲಿ

ಪಾಲ್ಗೊಂಡಿರುವ ವಿಷಯವನ್ನು ಈ ಪ್ರದೇಶದ ಹಲವು ಶಾಸನಗಳು ಉಲ್ಲೇಖಿಸುತ್ತವೆ.[೨೯]

ಹೀಗೆ ದೇವಾಲಯಗಳನ್ನು ಕಟ್ಟಸುವುದನ್ನು ಪ್ರೋತ್ಸಾಹಿಸುತ್ತಿದ್ದ ಈ ಪ್ರದೇಶದ ಅಂದಿನ ಅರಸರು, ರಾಣಿಯರು, ಸಾಮಂತರು, ಅಧಿಕಾರಿವರ್ಗ, ವರ್ತಕರು, ಸಾಮಾನ್ಯ ಜನರೂ ಸಹ ಯಾವುದೇ ಬೇಧ-ಭಾವವಿಲ್ಲದೇ ಸಾಮೂಹಿಕವಾಗಿಯೂ ಮತ್ತು ವೈಯಕ್ತಿಕವಾಗಿಯೂ ದಾನ-ದತ್ತಿಗಳನ್ನು ನೀಡಿದ್ದಾರೆ. ದೇವಾಲಯಗಳಿಗೆ ಬಿಡುವ ದಾನದ ವಸ್ತುಗಳಲ್ಲಿ ಭೂದಾನ,[೩೦] ಸುಂಕ ಮತ್ತು ಹಣದಾನ,[೩೧] ಎಲೆ-ಅಡಿಕೆ ಹಾಗೂ ಎಣ್ಣೆದಾನ,[೩೨] ನಿವೇಶನ ಮತ್ತು ಮನೆದಾನ,[೩೩] ವಿವಿಧ ಕಾಯಿಪಲ್ಲೆಗಳ ದಾನ,[೩೪] ಹೂದೋಟ,[೩೫] ಹೋರಿ ಮತ್ತು ಎತ್ತುಗಳು[೩೬] ಹಾಗೂ ಮೊದಲಾದವುಗಳು ಸೇರಿದ್ದವು. ಇದರಿಂದಾಗಿ ದೇವಾಲಯಗಳಲ್ಲಿ ವಿಪುಲವಾದ ಆಸ್ತಿಯ ಸಂಗ್ರಹವಿರುತ್ತಿತ್ತು. ಹೀಗೆ ಬಂದ ದತ್ತಿಗಳನ್ನು ರಕ್ಷಿಸಲು ಅನೇಕ ಜನ ಧರ್ಮದರ್ಶಿಗಳಿರುತ್ತಿದ್ದರು. ಬಿಟ್ಟಂತಹ ದಾನಗಳ ರಕ್ಷಣೆಯ ಭಾರವನ್ನು ಅರಸರು, ರಾಣಿಯರು, ಅಧಿಕಾರಿಗಳು, ಸಾಮಂತರು, ಗಾವುಂಡರು, ವ್ಯಾಪಾರಿಗಳು ಹಾಗೂ ಸಾಮಾನ್ಯ ಜನರು ಹೊತ್ತುಕೊಂಡು ಪಾಲಿಸುತ್ತಿದ್ದರು ಎಂಬುದನ್ನು ಹುಬ್ಬಳ್ಳಿ ಪ್ರದೇಶದ ಕ್ರಿ.ಶ. ೧೦೭೬ರ ಮಂಟೂರು ಶಾಸನ "ಈ ಧರ್ಮಮನರಸು ಗಾವುಣ್ಡುಮುಂ ಪ್ರತಿಪಾಳಿ ಸುವರ್" ಎಂದಿದ್ದರೆ,[೩೭] "ಈ ಧರ್ಮಮನರಸುಗಳುಂ ಗಾವುಂಡ ಗಳುಂ ಮರವತ್ತೊಕ್ಕಲುಂ ಸ್ವಧರ್ಮದಿಂ ಪ್ರತಿಪಾಳಿಸಿದರ್ಗೆ" ಎಂದು ಅಮರಗೋಳದ ಕ್ರಿ.ಶ. ೧೧೧೯ರ ಶಾಸನದಲ್ಲಿ ಹೇಳಲಾಗಿದೆ.[೩೮]

ದೇವಸ್ಥಾನಗಳ ನಿರ್ಮಾಣದ ನಂತರ ಅಲ್ಲಿನ ಚಟುವಟಿಕೆಗಳನ್ನು ಸಾಂಗವಾಗಿ, ಸ್ವತಂತ್ರವಾಗಿ ನಡೆಸಿಕೊಂಡು ಹೋಗಲು ದೇವಾಲಯಗಳನ್ನು ನೈಷ್ಠಿಕ ಸ್ಥಾನಗಳನ್ನಾಗಿ ಮಾಡಿಕೊಡಲಾಗುತ್ತಿತ್ತು.[೩೯] ಈ ನೈಷ್ಠಿಕ ಸ್ಥಾನಗಳಲ್ಲಿ ನೈಷ್ಠಿಕ ಬ್ರಹ್ಮಚಾರಿಗಳಿಗೆ ಮಾತ್ರ ಅವಕಾಶವಿತ್ತು. ಈ ಬ್ರಹ್ಮಚಾರಿಗಳು "ಯಮ ನಿಯಮ ಸ್ವಾಧ್ಯಾಯ ಧ್ಯಾನಧಾರಣ ಮೌನಾನುಷ್ಠಾಣ ಜಪ ಸಮಾಧಿ ಶೀಲಗುಣ ಸಂಪನರಪ್ಪ" ಎಂದು ಹುಬ್ಬಳ್ಳಿ ಪ್ರದೇಶದ ಸೂಳ್ಳಿ ಶಾಸನದಲ್ಲಿ ಕೊಂಡಾಡಲಾಗಿದ್ದರೆ,[೪೦] ಮಂಟೂರಿನ ಶಾಸನವು "ಪಥಿಕ . . . . ನ್ಯೂನದ್ಯನೇಕ ಜನ ಮನ್ಮಹಾದಾನ ವಿನೋದ . . . . ವದ್ದವಾಣಿ ವಲ್ಲಭ ಶ್ರೀಮನ್ಮಹಾದೇವ . . . . . ." ಎಂದು ಮುಂತಾಗಿ ಕರೆದಿದೆ.[೪೧] ಸಾಮಾನ್ಯವಾಗಿ ಈ ಸ್ಥಾನಪತಿ ಅಥವಾ ಸ್ಥಾನಾಚಾರ್ಯರುಗಳು ದೇವಾಲಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ದೇವಾಲಯಗಳಿಗೆ ದಾನ ಬಿಡುವುದಾಗಲೀ ಅಥವಾ ಇತರ ಯಾವುದೇ ಧಾರ್ಮಿಕ ಚಟುವಟಿಕೆಗಳನ್ನಾಗಲೀ ಕೈಕೊಳ್ಳಬೇಕಾದರೆ ಅದು ಸ್ಥಾನಾಚಾರ್ಯರ ಪಾದಪೂಜೆಯಿಂದ ಆರಂಭವಾಗಬೇಕಿತ್ತು. ಅದನ್ನು ಹುಬ್ಬಳ್ಳಿ ಪ್ರದೇಶದ ಸೂಳ್ಳಿಯ ಕ್ರಿ.ಶ. ೧೦೬೬ರ ಶಾಸನ 'ಕಾಲ್ತೊಳೆದು'[೪೨] ಎಂದು ಕರೆದಿದ್ದು, ಇದರಿಂದ ಮೇಲಿನ ವಿಷಯ ಸ್ಪಷ್ಟವಾಗುತ್ತದೆ. ಶಾಸನಗಳಲ್ಲಿ ಕಂಡುಬರುವ ಸ್ಥಾನಾಚಾರ್ಯರು ಇಂತಿದ್ದಾರೆ: ನೇಮಿಚಂದ್ರ ಸಿದ್ಧಾಂತದೇವ,[೪೩] ಬಾಹುಬಲಿ ಆಚಾರ್ಯ ಮತ್ತು ಕನಕನಂದಿ ಭಟ್ಟಾರ,[೪೪] ಚಂದ್ರಾಸಿ ಜೀಯ,[೪೫] ಸೋಮಪಂಡಿತದೇವ,[೪೬] ರುದ್ರಶಕ್ತಿಪಂಡಿತದೇವ,[೪೭] ಸಕಳೇಶ್ವರಾಚಾರ್ಯ,[೪೮] ಮುನಿಕೀರ್ತಿ ಮುನೀಂದ್ರ ಮತ್ತು ವೀರಣಂದಿಯತಿ,[೪೯] ದೇವರಾಸಿಪಂಡಿತ,[೫೦] ವಾಮದೇವ ಪಂಡಿತ ಮತ್ತು ವಾಗೇಶ್ವರ ಪಣ್ಡಿತ,[೫೧] ವೀರಭಟ್ಟಾರಕದೇವ ಆಚಾರ್ಯ[೫೨] ಮತ್ತು ವಿಜೇಯದೇವ ಆಚಾರ್ಯ.

ದೇವಾಲಯಗಳಿಗೆ ಹೊಂದಿಕೊಂಡು ಮಠಗಳಿರುತ್ತಿದ್ದವು. ಈ ಪ್ರದೇಶದ ಶಾಸನಗಳಲ್ಲಿ ಮಂಟೂರ ರುದ್ರಶಕ್ತಿ ಪಂಡಿತದೇವರಿಗೆ ಮಹಾಮಂಡಳಿಕ ಲಕ್ಷ್ಮರಸನು ಭೂದಾನ ನೀಡಿದಾಗ ಅರವಟ್ಟಿಗೆ ಮತ್ತು ಮಠದಲ್ಲಿನ ತಪೋಧನರು ಮತ್ತು ವಿದ್ಯಾರ್ಥಿಗಳಿಗೆ ಅನ್ನಗೆಯ್ಯಲು ಕೂಡ ದಾನ ನೀಡಿದ ವಿವರಗಳಿವೆ. ಜೊತೆಗೆ ಸೇಣಿಗೇಶ್ವರ ದೇವಾಲಯದಲ್ಲಿ ಎಲೆಯ ಪೂರ್ವಳ್ಳಿಯ ಇನ್ನೂರು ಮಹಾಜನರು "ಯಿಪ್ಪತ್ತೊಂದು ಕೈಯ ಅಗಲದೊಳಗೆ ಮಠ ಮನೆಯಾಗಿ ಮಾಡಿದಡಂ" ಎಂದು ಮಠವನ್ನು ನಿರ್ಮಿಸಿದ ಉಲ್ಲೇಖವಿದೆ.[೫೩] ಹೀಗೆ ದೇವಸ್ಥಾನಗಳಲ್ಲಿ ಮಠಗಳು ಪ್ರಮುಖ ವಿದ್ಯಾ ಕೇಂದ್ರಗಳಾಗಿದ್ದುದರಿಂದ ಅವು ಸ್ಥಾನಾಚಾರ್ಯ, ತಪೋಧನ, ವಿದ್ಯಾರ್ಥಿಗಳ ವಾಸಸ್ಥಾನಗಳಾಗಿದ್ದವು ಎಂದು ತಿಳಿದುಬರುತ್ತದೆ.

ದೇವಸ್ಥಾನಗಳಿಗೆ ಬಿಟ್ಟ ದಾನ-ದತ್ತಿಗಳಲ್ಲಿ ಅಂಗ-ರಂಗ ಭೋಗಗಳು ಒಂದಾಗಿದ್ದು, ಹುಬ್ಬಳ್ಳಿ ಪ್ರದೇಶದ ಶಾಸನಗಳಲ್ಲಿಯೂ ಅನೇಕ ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡುವಾಗ ಅಂಗ-ರಂಗಭೋಗಕ್ಕೆ, ಪಾತ್ರ-ಪಾವುಳಕ್ಕೆ ದಾನ-ದತ್ತಿಗಳನ್ನು ಬಿಡಲಾಗಿದೆ.[೫೪] ಇದರಿಂದಾಗಿ ಅಲ್ಲೆಲ್ಲ ರಂಗ ಚಟುವಟಿಕೆಗಳು ನಡೆಯುತ್ತಿದ್ದವೆಂದು ತಿಳಿದುಬರುತ್ತದೆ.

ಕೋಳಿವಾಡದ ಶಾಸನದಲ್ಲಿ ಸೂರಪ್ಪಯ್ಯನು ಶ್ರೀ ಮಾಧವ ಜನಾರ್ಧನಸ್ವಾಮಿಯ ಗುಡಿಯ ಪಾತ್ರಕ್ಕೆ ತಿರುಮಲ ಬೋವನ ಮಗಳು ಸೂರಿಯ ಮಾಣಿಕೆ ಎಂಬುವವಳನ್ನು ಪಾತ್ರವಾಗಿ ಸಮರ್ಪಿಸಿ, ಅವಳ ಉಪಜೀವನಕ್ಕಾಗಿ ವರ್ಷಕ್ಕೆ ೬ ವರಹ ಮತ್ತು ಮೇಟಿಗೆ ಒಮ್ಮನ ಧಾನ್ಯವನ್ನು ನೀಡಿದನೆಂದು ಉಲ್ಲೇಖಿಸಲಾಗಿದೆ.[೫೫] ಜೊತೆಗೆ ಕಟ್ನೂರಿನ ಶಾಸನದಲ್ಲಿ ಬುಡರಸಿಂಗಿಯ ಹನುಮಂತದೇವರ ಭೋಗಸ್ಥಳದ ಪಾತ್ರ ಭರಮರಾಸಿಗೆ ದಾನವಾಗಿ ಹೊಲವನ್ನು ಕೊಟ್ಟ ಉಲ್ಲೇಖವಿದೆ.[೫೬]

ಹೀಗೆ ಹುಬ್ಬಳ್ಳಿ ಪ್ರದೇಶದ ದೇವಾಲಯಗಳು ಯಾವುದೇ ರಾಜಕೀಯ ಸ್ಥಿತ್ಯಂತರಗಳಿಗೆ ಒಳಗಾಗದೇ, ಯಾವನೇ

ಅರಸನಿರಲಿ–ಹೋಗಲಿ ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿವೆ. ಅಲ್ಲದೇ ಇಲ್ಲಿನ ಅರಸರಿಂದ ಹಿಡಿದು ಜನಸಾಮಾನ್ಯರವರೆಗೂ ಎಲ್ಲರೂ ಕೂಡ ದೇವಾಲಯಗಳನ್ನು ರಕ್ಷಿಸುವುದು ತಮ್ಮ ಕರ್ತವ್ಯವೆಂದು ಬಗೆದಿದ್ದರು. ಈ ರೀತಿ ಒಟ್ಟಿನಲ್ಲಿ ಸಾಮಾಜಿಕವಾಗಿ ಮಹತ್ವದ ಪಾತ್ರವಹಿಸಿದ ದೇವಾಲಯಗಳು ಕ್ರಮೇಣ ಅಂದಿನ ಜನಾಂಗದ ಅವಿಭಾಜ್ಯ ಅಂಗಗಳಾಗಿದ್ದುದರ ಜೊತೆಗೆ ವಿವಿಧ ಪರಿಚಾರಕವರ್ಗವನ್ನು ಹೊಂದುವ ಮೂಲಕ ಅಂದಿನ ಕಾಲದಲ್ಲಿ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಿವೆ ಎಂದು ತಿಳಿದುಬರುತ್ತದೆ.

ಹುಬ್ಬಳ್ಳಿ ಪ್ರದೇಶದ ಶಾಸನೋಕ್ತ ದೇವಾಲಯಗಳು

ಅ.ನಂ.	ಅರಸ/ಮನೆತನ	ದೇವಾಲಯ	ಕಾಲ	ಸ್ಥಳ	ಆಕರ
		ಬೌದ್ಧ			
೧.	–	ತಾರಾ ಭಗವತಿ	ಕ್ರಿ.ಶ. ೧೨-	ಕೋಳಿವಾಡ	KI,V, No.107.
		ಇತರೆ			
೧.	ವಿಜಯಪಾಂಡ್ಯದೇವ (ನೊಳಂಬ)	ದೇವರು?	ಕ್ರಿ.ಶ.ಸು.೧೨ನೆಯ ಶತಮಾನ	ಭೈರಿದೇವರಕೊಪ್ಪ	ಗೋಗಿ ಹನುಮಾಕ್ಷಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ನಂ. ೨೫, ಪು. ೪೪-೨೫.
೨.	ಜಯಕೇಶಿದೇವ (ಗೋವೆ ಕದಂಬ)	ದೇವರು?	ಕ್ರಿ.ಶ. ೧೨೦೧	ಸೂಳ್ಳಿ	ARSIE, ೧೯೪೧-೪೨, No. 52.
೩.	ಕನ್ನರದೇವ (ಯಾದವ)	ದೇವರು?	ಕ್ರಿ.ಶ. ೧೨೪೪	ಹುಬ್ಬಳ್ಳಿ	SII, XV, No. ೧೭೯.
೪.	–	ಹನುಮಂತದೇವರು	ಕ್ರಿ.ಶ.ಸು.೧೬ನೆಯ ಶತಮಾನ	ಕಟ್ನೂರು	ARSIE, ೧೯೪೧-೪೨, No. ೪೪.
೫.	–	ಹನುಮಂತದೇವರು	ಕ್ರಿ.ಶ.ಸು.೧೬ನೆಯ ಶತಮಾನ	ಭೈರಿದೇವರಕೊಪ್ಪ	Ibid., No. ೧೩.
		ವೈಷ್ಣವ			
೧.	೬ನೆಯ ವಿಕ್ರಮಾದಿತ್ಯ	ಶ್ರೀ ವಿಷ್ಣುದೇವರು	ಕ್ರಿ.ಶ.೧೦೮೨	ಶಿರಗುಪ್ಪಿ	SII, XVIII, No. ೯೦.
೨.	೬ನೆಯ ವಿಕ್ರಮಾದಿತ್ಯ	ತ್ರೈಪುರುಷದೇವರು	ಕ್ರಿ.ಶ.೧೦೮೨	ಶಿರಗುಪ್ಪಿ	Ibid.
೩.	ತ್ರಿಭುವನಮಲ್ಲ	ಕೇಶವದೇವರು	ಕ್ರಿ.ಶ.೧೧೧೯	ಅಮರಗೊಳ	Gurav, R.N., The Kadambas of Goa and Their Inscriptions, No. ೧೭.
೪.	–	ಉಗುರೇಶ್ವರದ ಕೇಶವದೇವರು	ಕ್ರಿ.ಶ.ಸು. ೧೨ನೆಯ ಶತಮಾನ	ಉಣಕಲ್ಲು	
೫.	– ಜನಾರ್ಧನಸ್ವಾಮಿ	ಶ್ರೀಮಾಧವ	ಕ್ರಿ.ಶ.೧೫೬೩	ಕೋಳಿವಾಡ	
		ಜೈನ			
೧.	–	ಬಸದಿ	ಕ್ರಿ.ಶ.೧೦೩೫	ಸೂಳ್ಳಿ	
೨.	–	ದೋರ ಜಿನಾಲಯ	ಕ್ರಿ.ಶ.೧೦೬೧	ಛಬ್ಬಿ	

೩.	–	ಚೌಪ್ವೀಸ್ ತೀರ್ಥಂಕರರ ಬಸದಿ	ಕ್ರಿ.ಶ.ಸು.೧೧ನೆಯ ಶತ	ಬುದರಶಿಂಗಿ
೪.	–	ಚೈತ್ಯಾಲಯ(ಶಾಂತಿನಾಥ)	ಕ್ರಿ.ಶ.ಸು.೧೪–೧೫ನೆಯ ಶತ	ಹುಬ್ಬಳ್ಳಿ
೫.	–	ಅನಂತನಾಥ ಬಸದಿ	ಕ್ರಿ.ಶ.೧೮೬೩	ಹಳೇಹುಬ್ಬಳ್ಳಿ
		ಶೈವ		
೧.	ಜಯಕೇಶಿದೇವಗೋವೆ (ಕದಂಬ)	ಮೂಲಸ್ಥಾನ ದೇಗುಲ	ಕ್ರಿ.ಶ.೧೦೬೨	ಶ್ಯಾಡಂಬಿ
೨.	ಜಯಕೇಶಿದೇವಗೋವೆ (ಕದಂಬ)	ಬೋಜಂಗೇಶ್ವರ	ಕ್ರಿ.ಶ.೧೧೦೮	ಕುರಡಿಕೇರಿ
೩.	ತ್ರಿಭುವನಮಲ್ಲ	ಕುಡಿಯೇಶ್ವರ	ಕ್ರಿ.ಶ.೧೧೨೬	ಬುದರಶಿಂಗಿ
೪.	ಪೆರ್ಮಾಡಿದೇವಗೋವೆ (ಕದಂಬ)	ಗ್ರಾಮೇಶ್ವರ	ಕ್ರಿ.ಶ.೧೧೬೬	ಬ್ಯಾಹಟ್ಟಿ
೫.	ಜಯಕೇಶಿದೇವಗೋವೆ (ಕದಂಬ)	ಸೇಣಿಗೇಶ್ವರ	ಕ್ರಿ.ಶ.೧೧೯೮	ಹುಬ್ಬಳ್ಳಿ
೬.	–	ದೇವೇಶ್ವರ	ಕ್ರಿ.ಶ.ಸು.೧೨ನೆಯ ಶತಮಾನ	ಬ್ಯಾಹಟ್ಟಿ
೭.	ತ್ರಿಭುವನಮಲ್ಲ ಗೋವೆ ಕದಂಬ	ಮೂಲಸ್ಥಾನದೇವ	ಕ್ರಿ.ಶ.೧೨೪೨	ಕಟ್ನೂರ
೮.	–	ಮಲ್ಲಿಕಾರ್ಜುನ	ಕ್ರಿ.ಶ.ಸು.೧೭ನೆಯ ಶತಮಾನ	ದೇವರಗುಡಿಹಾಳ

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೧೭೬.
೨. ಗೋಗಿ ಹನುಮಾಕ್ಷಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ನಂ–೧೬, ಪು. ೭೨.
೩. SII, XIII, No. 90.
೪. ಗೋಗಿ ಹನುಮಾಕ್ಷಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ನಂ–೧೬, ಪು. ೭೨.
೫. KI, V, No. 91.
೬ ARSIE, 1941-42, No. 7.
೭. KI, V, No. 107.
೮. ARSIE, 1941-42, No. 13.
೯. Ibid., No. 44.
೧೦. ತಿಪ್ಪೇರುದ್ರಸ್ವಾಮಿ, ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೨೬೯.
೧೧. ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೦೩.
೧೨. ತಿಪ್ಪೇರುದ್ರಸ್ವಾಮಿ, ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೨೬೯.
೧೩. EC, XI, Dg.90.
೧೪. KI, V, No.91.
೧೫. ಗೋಗಿ ಹನುಮಾಕ್ಷಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ನಂ. ೧೬, ಪು. ೭೨.
೧೬. Gurav, R.N., The Kadambas of Goa and Their Inscriptions, No. 4.
೧೭. SII, XVIII, No. 90.
೧೮. ARSIE, 1941-42, No. 7.
೧೯. ಗೋಗಿ ಹನುಮಾಕ್ಷಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ನಂ–೪೨, ಪು. ೧೧೫.
೨೦. Ibid.
೨೧. ARSIE, 1941-42, No.15.
೨೨. ಗೋಗಿ ಹನುಮಾಕ್ಷಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ನಂ. ೪, ಪು. ೫೮–೬೧.
೨೩. Gurav, R.N., The Kadambas of Goa and Their Inscriptions, No. 21.
೨೪. Moraes., Kadamba kula, p.468-471.
೨೫. Gurav, R.N., The Kadambas of Goa and Their Inscriptions, No. 4.
೨೬. ARSIE, 1952-53, No. 73.
೨೭. Ibid., 1941-42, No. 41.
೨೮. SII, XVIII, No.90; Ibid., XV, No.179.

೨೯. ARSIE, 1941-42, No.51 & 52; Gurav, R.N., The Kadambas of Goa and Their Inscriptions, No.17.
೩೦. Ibid., 1952-53, No.73.
೩೧. ಗೋಗಿ ಹನುಮಾಕ್ಷಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ನಂ. ೪, ಪು. ೫೮–೬೧.
೩೨. Gurav, R.N., The Kadambas of Goa and Their Inscriptions, No.21.
೩೩. Moraes., Kadamba kula, p.468-471.
೩೪. ARSIE, 1941-42, No.52.
೩೫. ಗೋಗಿ ಹನುಮಾಕ್ಷಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ನಂ. ೨೫, ಪು. ೮೪–೮೫.
೩೬. SII, XV, No.179.
೩೭. ARSIE, 1946-47, No. 245.
೩೮. Ibid., 1941-42, No. 7.
೩೯. SII, XV, No. 32.
೪೦. ARSIE, 1941-42, No. 51.
೪೧. Ibid., 1946-47, No. 245.
೪೨. Gurav, R.N., The Kadambas of Goa and Their Inscriptions, No. 7.
೪೩. ಗೋಗಿ ಹನುಮಾಕ್ಷಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ನಂ. ೧೬, ಪು. ೭೨.
೪೪. ARSIE, 1941-42, No.15.
೪೫. Gurav, R.N., The Kadambas of Goa and Their Inscriptions, No.4.
೪೬ ARSIE, 1941-42, No.51.
೪೭. Ibid., 1946-47, No.245.
೪೮. Ibid., 1941-42, No.51 & 52.
೪೯. Gurav, R.N., The Kadambas of Goa and Their Inscriptions, No.23.
೫೦. ARSIE, 1941-42, No.7 & 52.
೫೧. Ibid., No.58.
೫೨. ಗೋಗಿ ಹನುಮಾಕ್ಷಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ನಂ. ೪೨, ಪು. ೧೧೫.
೫೩. Moraes., Kadamba kula, p.468-471.
೫೪. KI, V, No.123; SII, XVIII, No.90; Moraes., Kadamba kula, p.468-471.
೫೫. KI, V, No.123.
೫೬. ARSIE, 1941-42, No.44.

೩೯

ಹೆಮ್ಮವಾಡಿಗೆಯ ಶಾಸನೋಕ್ತ ಹಂಡೇಶ್ವರ ದೇವಸ್ಥಾನ

ಎಸ್.ಸಿ.ಪಾಟೀಲ*

ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ಒಂದು ಗ್ರಾಮ ಹೆಮ್ಮಡಗಿ. ಈ ಗ್ರಾಮದಲ್ಲಿರುವ ಈಗಿನ ಬಸವೇಶ್ವರ ದೇವಸ್ಥಾನವು ಕ್ರಿ.ಶ. ೧೧೮೨ರಲ್ಲಿ ಸ್ಥಾಪನೆಗೊಂಡ ದೇವಸ್ಥಾನವಾಗಿದ್ದು, ಇದು ಶಾಸನೋಕ್ತ ಹಂಡೇಶ್ವರ ದೇವಸ್ಥಾನವೆಂಬುದು ಶಾಸನದ ಉಲ್ಲೇಖಗಳಿಂದ ತಿಳಿದುಬರುತ್ತದೆ. ಪ್ರಸ್ತುತ ಲೇಖನ ಈ ವಿವರಗಳನ್ನು ಹೊಂದಿದೆ.

ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ವೀರ ಸೋಮೇಶ್ವರನ ಕಾಲದ ಶಾಸನವಿದು. ದಂಡನಾಯಕ ಬಮ್ಮರಸನು ಪರಮ ಮಾಹೇಶ್ವರನಾದುದರಿಂದ ಎಮ್ಮವಾಡಿಗೆಯ ಪ್ರಭು ಪಂದಿರಾಜ ಕಟ್ಟಿಸಿದ ಪಂದೇಶ್ವರದೇವರ ಸ್ಥಾನಪತಿಯಾದ ಚಾಮುಂಡರಾಸಿಪಂಡಿತ ಮತ್ತು ಅಮಿತರಾಸಿ ಪಂಡಿತರ ಕಾಲ್ತೊಳೆದು ಕಂನಡನೂರು ಮತ್ತು ಹಾಲಂಗೆರೆಗಳನ್ನು ಪುನರ್ಧಾರೆಯಾಗಿ ಮಾಡಿ ಅಲ್ಲಹುಲಿದೇವರಸರಿಗೆ, ಅವರು ಎಮ್ಮವಾಡಿಗೆಯ ಪ್ರಭು ಸೌಧೊರೆ ಭಾವರಸರಿಗೆ ದೇವರ ಪೂಜಾಕಾರ್ಯದಿಗಳಿಗಾಗಿ ನೀಡಿದ ವಿವರಗಳಿವೆ. ಭಾವರಸರು ಕೂಡ ನಿವೇಶನ ಮತ್ತು ಸುಂಕದತ್ತಿಗಳನ್ನು ನೀಡಿದ ಪ್ರಸ್ತಾಪವಿದೆ. ಪ್ರಸ್ತುತ ಶಾಸನದ ೨೪-೨೫ನೆಯ ಸಾಲುಗಳಲ್ಲಿ ಬರುವ "ಶ್ರೀಮಚ್ಚಾಳುಕ್ಯ ಪ್ರತಾಪ ಚಕ್ರವರ್ತ್ತಿ ತ್ರಿಭುವನಮಲ್ಲ ವೀರಸೋಮೇಶ್ವರದೇವ ವರ್ಷದ ಎರಡನೇ ಶೋಭಕ್ರಿತು ಸಂವತ್ಸರದ ಭಾದ್ರಪದ ಸುದ್ಧಾಷ್ಟಮಿ ಸೋಮವಾರದಂದುತ್ತರಾಯಣ ಸಂಕ್ರಾಂತಿ ಸೋಮಗ್ರಹಣ ನಿಮಿತ್ತದಿಂ" ಎನ್ನುವ ಮಿತಿಯು ಕ್ರಿ.ಶ. ೧೧೮೨ರ ಆಗಸ್ಟ್ ೯ಕ್ಕೆ ಸರಿಹೊಂದುತ್ತದೆ.

ಈ ಗ್ರಾಮವು ಸುರಪುರದಿಂದ ಪೂರ್ವಕ್ಕೆ ಸುಮಾರು ೫ ಮೈಲುಗಳ ಅಂತರದಲ್ಲಿದೆ. ಇತಿಹಾಸ ಪ್ರಸಿದ್ಧವಾದ ಈ ಪ್ರದೇಶವನ್ನು ಶಾಸನಗಳಲ್ಲಿ 'ಸಗರನಾಡು', 'ಸಗರ ಮುನ್ನೂರು' ಎಂದು ಕರೆದಿರುವುದನ್ನು ಕಾಣಬಹುದು. ಈ ಊರಿನ ಉತ್ತರಕ್ಕೆ ಭೀಮಾ ನದಿ ಮತ್ತು ದಕ್ಷಿಣಕ್ಕೆ ಕೃಷ್ಣಾ ನದಿಗಳಿದ್ದು, ಇವು ಈ ಪ್ರದೇಶದ ಭೌಗೋಳಿಕ ಮೇರೆಗಳಾಗಿವೆ.

ಈ ಗ್ರಾಮದ ಬಸವೇಶ್ವರಗುಡಿಯ ಮುಂದೆ ಪೂರ್ವಾಭಿಮುಖವಾಗಿ ನಿಲ್ಲಿಸಿದ ಕರಿಕಲ್ಲಿನಲ್ಲಿ ಶಾಸನವೊಂದನ್ನು ನಿಲ್ಲಿಸಲಾಗಿದೆ. ೫.೧/೨' x ೪' ಗಾತ್ರದ ಈ ಕಲ್ಲಿನ ಅರ್ಧದಷ್ಟು ಭಾಗ ಈಗ ನೆಲದಲ್ಲಿ ಹೂಳಿದ್ದು, ಮೇಲ್ಭಾಗದಲ್ಲಿ ಶಿವಲಿಂಗ, ಸೂರ್ಯ-ಚಂದ್ರ, ಆಕಳು-ಕರು, ಖಡ್ಗಗಳ ಚಿತ್ರಗಳಿದ್ದು, ತುಂಬ ದುಂಡಗಿನ ಸುಂದರ ಅಕ್ಷರಗಳಿವೆ.

ಶಾಸನದಲ್ಲಿ ಬರುವ ಕಲ್ಯಾಣ ಚಾಲುಕ್ಯ ವಂಶಾವಳಿ, ದಂಡನಾಯಕ ಬಮ್ಮರಸನ ವಂಶಾವಳಿ ಮತ್ತು ಎಮ್ಮವಾಡಗಿಯ ಪ್ರಭು ಭಾವರಸರ ವಂಶಾವಳಿ ಸುದೀರ್ಘವಾಗಿದ್ದು, ಇತಿಹಾಸ ದೃಷ್ಟಿಯಿಂದ ಈ ಶಾಸನವು ಮಹತ್ವಪೂರ್ಣವೆನಿಸುತ್ತವೆ.

ಶಾಸನದಲ್ಲಿ ಬರ್ಮದೇವ ದಂಡನಾಥ ಮತ್ತು ಅಲ್ಲಿಹುಲಿದೇವರಸರು ಜೊತೆಗೂಡಿ ಬಂದು ದೇವಪುರದಲ್ಲಿ ಬೀಡು ಬಿಟ್ಟಿರುವ ಸಮಯದಲ್ಲಿ ಎಮ್ಮವಾಡಿಗೆಯ ಹಂಡೇಶ್ವರ ದೇವರ ಮಹಿಮೆಯನ್ನು ತನ್ನ ಪ್ರಧಾನ ವರ್ಗದಿಂದ ಕೇಳಿ ತಿಳಿದು, ಅವರಿಬ್ಬರೂ ಎಮ್ಮವಾಡಿಗೆಗೆ ಬಂದು ಅಲ್ಲಿಯೂ ಶ್ರೀ ಮಹಾಲಿಂಗ ಮೂರ್ತಿಯಾದ ಹಂಡೇಶ್ವರ ದೇವರಿಗೆ, ತನ್ನ ಸಮಸ್ತ ಪ್ರಧಾನವರ್ಗದ ಬಿನ್ನಪದ ಮೇರೆಗೆ, ತಾನು ಮಾಹೇಶ್ವರನಾದುದರಿಂದ, ಧರ್ಮಾನುರಾಗಿಯಾಗಿ ಹಲವಾರು ದಾನಗಳನ್ನು ಕೊಡುವನು. ಈ ಶಾಸನದಲ್ಲಿ ಉಕ್ತನಾಗಿರುವ ಅಲ್ಲಿಹುಲಿ ದೇವರಸನನ್ನು ಕ್ರಿ.ಶ. ೧೧೮೯ರ ಕೊಲ್ಲೂರು ಶಾಸನದಲ್ಲಿಯೂ ಉಲ್ಲೇಖಿತನಾಗಿದ್ದಾನೆ. ಈತನು ಕೊಲ್ಲೂರು ಭಾಗದ ಮಹಾಮಂಡಳೇಶ್ವರನಾಗಿದ್ದನಲ್ಲದೆ ಪರಮ ಧಾರ್ಮಿಕನಾಗಿದ್ದರುದರಿಂದ ಕೊಲ್ಲೂರಿನ ರಾಮೇಶ್ವರ ದೇವಾಲಯಕ್ಕೆ ಹಲವಾರು ದತ್ತಿಗಳನ್ನು ಬಿಟ್ಟಿದ್ದಾನೆ. ಕೊಲ್ಲೂರು ಈತನ ಆಡಳಿತದ ಕೇಂದ್ರವಾಗಿದ್ದಿತು.[1]

ಚಾಳುಕ್ಯ ರಾಜ್ಯ ಸಮುದ್ಧರಣನಾದ ಬಮ್ಮರಸ ಮತ್ತು ಮಹಾಮಂಡಳೇಶ್ವರನಾದ ಅಲ್ಲಿಹುಲಿದೇವರಸ ಇಬ್ಬರೂ ಸೇರಿ ಸಮಸ್ತ ಪರಿವಾರ ಸಮೇತರಾಗಿ ಎಮ್ಮವಾಡಿಗೆಗೆ ಬಂದು ಎಮ್ಮವಾಡಿಗೆಯ ಶ್ರೀ ಮಹಾಲಿಂಗ ಹಂಡೇಶ್ವರ ದೇವರ ನೈವೇದ್ಯ, ಪೂಜೆ ಅಂಗಭೋಗ ರಂಗಭೋಗ ಮುಂತಾದ ಕಾರ್ಯಗಳಿಗಾಗಿ ಚಾಳುಕ್ಯ ನಾಲ್ಕನೆಯ ಸೋಮೇಶ್ವರನ ಆಳಿಕೆಯ ಎರಡನೆಯ ವರ್ಷದ ಶುಭಕೃತ

* ವಿಶೇಷಾಧಿಕಾರಿಗಳು, ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಟ್ಟಡ, ಶೇಷಾದ್ರಿಪುರಂ, ಬೆಂಗಳೂರು

ಸಂವತ್ಸರದ ಭಾದ್ರಪದ ಅಷ್ಟಮಿ ಸೋಮವಾರ ಉತ್ತರಾಯಣ ಸಂಕ್ರಾಂತಿಯ ಚಂದ್ರಗ್ರಹಣದಂದು ದಾನಕೊಡುವರು. ಎಮ್ಮವಾಡಿಗೆಯ ಪ್ರಭುವಾದ ಸೌದೊರೆ ಭಾವರಸನಿಗೆ ಹಸ್ತೋದಕದಿಂದ ಎರಡು ಊರುಗಳನ್ನು ಧಾರಾಪೂರ್ವಕವಾಗಿ ಕೊಡುವರು. ಈ ಎಮ್ಮವಾಡಿಗೆಯ ಪ್ರಭುವಾದ ಭಾವರಸನನ್ನು 'ಪ್ರಭುಸೋದರ' ಎಂದು ಸಂಬೋಧಿಸಿದ್ದನ್ನು ಗಮನಿಸಬೇಕು. ಹೀಗೆ ಅಲ್ಲಿಹುಲಿದೇವರಸ ಮತ್ತು ಕುಮಾರ ಬಮ್ಮದೇವರ ಇಬ್ಬರೂ ಕೂಡಿ ಹಂಡೇಶ್ವರ ದೇವರಿಗೆ ಸಂಕ್ರಾಂತಿಯ ಚಂದ್ರಗ್ರಹಣದಂದು ಬಿಟ್ಟ ದತ್ತಿಯ ವಿವರ ಕೆಳಗಿನಂತಿದೆ.

ಹಾಲಗೆರೆಯ ಚಂದಿಗದವನು ಹಂಡೇಶ್ವರ ದೇವರಿಗೆ ಎರಡೂರುಗಳನ್ನು ದತ್ತಿಬಿಡುವುದು ಅದನ್ನು ಈ ಸಮಯದಲ್ಲಿ ಅಲ್ಲಿಹುಲಿದೇವರ ಹಸ್ತದಿಂದ ಎಮ್ಮವಾಡಿಗೆಯ ಅಧಿಕಾರಿಯು, ಪ್ರಭುಸೋದರನೂ ಆದ ಭಾವರಸನಿಗೆ ಕೊಡಿಸುವರು. ಇದೇ ಸಮಯದಲ್ಲಿ ಎಮ್ಮವಾಡಿಗೆಯ ಜನರೆಲ್ಲಾ ಏಕಸ್ಥರಾಗಿ ತಾವೂ ಕೂಡಾ ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ದಾನಮಾಡಿದುದು ತಿಳಿದುಬರುತ್ತದೆ. ಅವರು ಕನ್ನಡ ನೂರು ಸೀಮೆಯಿಂದ ಪೂರ್ವಕ್ಕೆ ಮತ್ತು ಕೃಷ್ಣವೇಣೀ ನದಿಯ ಉತ್ತರಕ್ಕೆ ಆರು ಮತ್ತರು ಭೂಮಿಯನ್ನು ಕೊಡುವರು. ದೇವದೋಟವನ್ನು, ಇನ್ನೂರು ಕಂಬಗಳನ್ನು, ಒಂದು ದೇವಗಾಣವನ್ನು ಕೊಡುವರು. ಅಲ್ಲಿಯ ಸಮಸ್ತ ಪ್ರಜೆಗಳು ತಮ್ಮ ಸಿದ್ಧಾಯದ ಹೊಂಗೆಯ ಬೆಳೆಯನ್ನು ಕೊಡುವರು. ಮುಮ್ಮುರಿದಂಡ ಮುಖ್ಯವಾಗಿ ಸೂಸಗದ ಆರುಮನೆಗಳು, ಹೆಜ್ಜುಂಕ, ಬೆಳುಗೊಡೆ, ಒಡ್ಡರಾವುಳ, ಒಕ್ಕಲುದೆರೆ ಮುಂತಾದುದರ ಜೊತೆಗ ಎತ್ತು, ಕತ್ತೆ, ಕೋಣ, ಬಂಡಿ, ಭೈತ್ರ ಮುಂತಾದುವುಗಳನ್ನು ಕೊಡುವರು, ಹೇರಿಗೆ ನೂರು ಎಲೆಯಂತೆ ದೇವರಿಗೆ ಕೊಡುವರು. ಅದರಲ್ಲಿ ಪದ್ಮ ಹಸ್ತದಲಿಳೆದು ೧೨ ಕೈಯುಗಲ ನೀಳದ ಒಂದು ನಿವೇಶನವನ್ನು ಕೊಡುವರು. ಹೀಗೆ ಮೇಲಿನ ಎಲ್ಲ ದತ್ತಿ ದಾನಗಳನ್ನು ಧಾರಾಪೂರ್ವಕವಾಗಿ ಪಡೆದ ಎಮ್ಮವಾಡಿಗೆಯ ಪ್ರಭುವಾದ ಸೋದೊರೆ ಭಾವರಸನು ಆ ಎರಡೂರುಗಳನ್ನು ಹದಿನಾರು ಜನ ಬ್ರಾಹ್ಮಣರಿಗೆ ಸಮನಾಗಿ ಹಂಚಿಕೊಡುವನು. ಅನಂತರ ಹಂದಿಮರಸನ ಮಗನಾದ ಈ ಭಾವರಾಜನ ವಂಶಾವಳಿಯ ವರ್ಣನೆಯನ್ನು ವಿಸ್ತಾರವಾಗಿ ಮಾಡಿದ್ದಾನೆ.[೨]

"ಇವರ ವಂಶದ ಮೂಲಪುರುಷನು ವಶಿಷ್ಠ. ಆ ವಂಶದಲ್ಲಿ ಚಂದಿಮರಸನು ಜನಿಸುವನು. ಚಂದಿಮರಸನ ಹೆಂಡತಿ ಚಾಮಿಕಬ್ಬೆ. ಇವರಿಗೆ ನಾಗವರ್ಮನೆಂಬ ಮಗನು ಹುಟ್ಟುವನು. ಈ ನಾಗವರ್ಮನ ಪೆರ್ಮೆ, ಧೈರ್ಯ, ಸಂಯಮ ಶಕ್ತಿ, ಧರ್ಮಗುಣ ಮುಂತಾದುವುಗಳನ್ನು ಸುಂದರವಾಗಿ ವರ್ಣಿಸಲಾಗಿದೆ. ನಾಗವರ್ಮನ ಹೆಂಡತಿ ದೇಕವ್ವೆ. ಇವರಿಬ್ಬರಿಗೂ ಮಲ್ಲಿದೇವನೆಂಬ ಮಗನು ಜನಿಸುವನು. ಈ ಮಲ್ಲಿದೇವನ ಸತಿ ಬಾಚಿಕಬ್ಬೆ. ಇವರಿಬ್ಬರಿಗೂ ದೇವರಸ, ಬಮ್ಮರಾಜ ಮತ್ತು ಭಾವರಸ ಎಂಬ ಮೂರು ಜನ ಮಕ್ಕಳಾಗುವರು. ಭಾವರಸನ ಹೆಂಡತಿಯ ಹೆಸರು ಚಂದಲದೇವಿ, ಇವರಲ್ಲಿ ಮಲ್ಲಿದೇವ ಮತ್ತು ಪಂದಿರಾಜರೆಂಬ ಇಬ್ಬರು ಮಕ್ಕಳು ಜನಿಸುವರು. ಪಂದಿರಾಜನಿಗೆ ಚಾಮಲದೇವಿ ಎಂಬವಳು ಸತಿಯಾಗಿದ್ದಳು. ಇವರ ಉದರದಲ್ಲಿ ಭಾವರಾಜನೆಂಬ ಮಗನು ಜನಿಸಿದನು. ಈತನು ಗೋತ್ರ ಪವಿತ್ರನೂ, ಬುಧಜನ ಮಿತ್ರನೂ, ಸುಜನೈಕ ಬಾಂಧವನೂ ಆಗಿದ್ದು, ಭೂಮಿಯಲ್ಲಿ ಪೂಜ್ಯನಾಗಿ ಬಾಳಿ ಪ್ರಸಿದ್ಧಿ ಪಡೆದನು.

ಪಂದಿರಾಜನು 'ಹಂಡೇಶ್ವರ' ಎಂಬ ಹೆಸರಿನ ಶಿವಾಲಯವನ್ನು ಕಟ್ಟಿಸಿ ಪಂದೇಶ್ವರ ಎಂಬ ಹೆಸರಿನ ಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ. ಹಂಡೇಶ್ವರ ದೇವಸ್ಥಾನವನ್ನು ಕಟ್ಟಿಸಿದ ಹಂಡೆ ಅರಸನನ್ನು

ಈಶ್ವರ ಭಕ್ತಂ ಪರಮ ಮ
ಹೇಸ್ವರನೌದಾರ್ಯ್ಯತುಂಗನೂರ್ಜ್ಜಿತ ತೇಜಂ
ಸಾಸ್ವತಮೆನೆ ಮಾಡಿಸಿ ಪಂ
ದೇಸ್ವರಮಂ ಸುಪ್ರತಿಷ್ಠಿತಂ ಹಂದರಸಂ ॥ – ಎಂದು ವರ್ಣಿಸುತ್ತದೆ.

೬೩ ಸಾಲಿನ ಈ ಶಾಸನದಲ್ಲಿ ಸಾಲು ೨೩ರಲ್ಲಿ **ಹಂಡೇಸ್ವರ** ದೇವರು, ಸಾಲು ೨೮ರಲ್ಲಿ **ಹಂದೇಶ್ವರ** ದೇವರು, ಸಾಲು ೪೮ರಲ್ಲಿ **ಪಂದೇಶ್ವರ** ದೇವರ ದೇವಸ್ಥಾನ, ಸಾಲು ೪೯, ೫೦ರಲ್ಲಿ **ಪಂದಿರಾಜ ಹಂದೇಶ್ವರ ದೇವಸ್ಥಾನ** ಮಾಡಿದ ಕುರಿತು ಉಲ್ಲೇಖಿಸಿದೆ. ಈ ಶಾಸನದಲ್ಲಿ ಹಂದಿಯರಸರು, ಪಂದಿಯರಸರು, ಹಂದೇಶ್ವರ ದೇವಸ್ಥಾನ, ಪಂದೇಶ್ವರ ದೇವಸ್ಥಾನ, ಹಂಡೆಯರಸರು, ಹಂಡೇಸ್ವರ ದೇವಸ್ಥಾನ ಎಂಬ ಪದಗಳು ಮತ್ತು ಇವರು ಈಸ್ವರ ಭಕ್ತರಾಗಿದ್ದುದರಿಂದ ಶೈವ(ವೀರಶೈವ) ಪರಂಪರೆಯವರಾಗಿದ್ದುದು ಈ ಶಾಸನದಲ್ಲಿ ಸ್ಪಷ್ಟವಾಗಿ ಉಲ್ಲೇಖಿತಗೊಂಡಿರುವುದನ್ನು ಗಮನಿಸಬಹುದಾಗಿದೆ. ಇದರಿಂದ ಪಂದಿಯರಸರು, ಹಂದಿಯರಸರು, ಹಂಡೆಯರಸರು ಎಲ್ಲವೂ ಒಂದೇ ಸಮಾನಾರ್ಥವನ್ನು ಹೊಂದುವಂತಹ ಶಬ್ದಗಳಾಗಿವೆ.[೩] ಹೀಗಾಗಿ ಈ ದೇವಾಲಯವು ಮೂಲತಃ ಹಂಡೇಯರಸರ ಹಂಡೇಶ್ವರ ದೇವಾಲಯವೆಂಬುದು ಗೊತ್ತಾಗುತ್ತದೆ.

ಭಾವರಸನ ವಂಶಾವಳಿಯ ವಿವರ

ವಶಿಷ್ಠ

ಚಂದಿ(ಮ)ಅರಸ + ಚಾಮಿಕಬ್ಬೆ

ನಾಗವರ್ಮ + ದೇಕಬ್ಬೆ

ಮಲ್ಲಿದೇವ + ಬಾಚಿಕಬ್ಬೆ

ದೇವರಸ +

ಬಮ್ಮರಾಜ +

ಭಾವರಸ + ಚಂದಲದೇವಿ

ಮಲ್ಲಿದೇವ ಪಂದಿರಾಜ + ಚಾಮಲದೇವಿ

ಭಾವರಾಜ

ಒಟ್ಟಾರೆ ಎಮ್ಮವಾಡಿಗೆಯಲ್ಲಿ ಈಗಿರುವ ಬಸವೇಶ್ವರ ದೇವಸ್ಥಾನವು ಮೂಲತಃ ಶಾಸನೋಕ್ತ ಹಂಡೇಶ್ವರ ದೇವಸ್ಥಾನವೆಂಬುದು ಮೇಲಿನ ಶಾಸನ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ. ಯಾವುದೋ ಕಾಲಘಟ್ಟದಲ್ಲಿ ದೇವಸ್ಥಾನದ ಮುಂದೆ ಬಸವಣ್ಣನ (ನಂದಿ) ಮೂರ್ತಿ ಇರುವುದರಿಂದ ಬಹುಶಃ ಜನರು ಈ ದೇವಸ್ಥಾನವನ್ನು ಬಸವಣ್ಣನ ದೇವಸ್ಥಾನವೆಂದು, ಬಸವೇಶ್ವರ ದೇವಸ್ಥಾನವೆಂದು ಈ ದೇವಸ್ಥಾನವನ್ನು ಕರೆದುಕೊಂಡು ಬಂದಿರಲಾಗಿದೆ. ಈಗ ಬಸವೇಶ್ವರ ದೇವಸ್ಥಾನವೆಂದೇ ಕರೆಯಲಾಗುತ್ತಿದೆ. ಆದರೆ ಮೂಲತಃ ಇದು ಹಂಡೇಶ್ವರ ದೇವಸ್ಥಾನವೆಂಬುದು ಗಮನಾರ್ಹ ಸಂಗತಿ.

ಕಾಸರಗೋಡಿನ ಕಲಾವಿದ ಪುಣಿಚ್ಚತ್ತಾಯ ಅವರ ಕಲಾಗ್ರಾಮದ ಹತ್ತಿರದ ಬೆಟ್ಟದಲ್ಲಿ ಒಂದು ಮಹಾಲಿಂಗ ಮೂರ್ತಿ ದೇವಾಲಯವಿದೆ. ಇದರ ಪ್ರಜಾರಿಗಳು ಹಂಡೆಯವರಾಗಿದ್ದಾರೆ. ಇದರ ಕಾಲ ಕೂಡ ಹನ್ನೆರಡನೆಯ ಶತಮಾನದ್ದಾಗಿದ್ದು, ಆ ಕಾಲದಲ್ಲಿ ಪಂದಿರಾಜರು ಪಂದೇಶ್ವರ ದೇವಾಲಯದ ಅಥವಾ ಹಂಡೇಶ್ವರ ದೇವಾಲಯ ನಿರ್ಮಿಸಿರಬಹುದಾಗಿದೆ. ಈ ಪಂದಿ ಅರಸರು ಅಥವಾ ಹಂದಿ ಅರಸರು ಅನೇಕ ದೇವಾಲಯಗಳಿಗೆ ದಾನ ನೀಡಿದ ಶಾಸನಗಳು ಇವೆ. ಕರ್ನಾಟಕ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿ ಈ ಅರಸರಿಗೆ ಸೇರಿದ ೨೬ ಶಾಸನಗಳು ೧೫ ದಾನಪತ್ರಗಳು ಲಭ್ಯವಾಗಿರುವುದನ್ನು ಗಮನಿಸಬಹುದಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಎ. ಕೃಷ್ಣ (ಸಂ.) ಸಗರನಾಡು ದರ್ಶನ, ಪ್ರಿ. ಬಿ.ಆರ್. ಸುರುಪುರ ಅವರ ಲೇಖನ : ಎಮ್ಮಡಗಿಯ ಶಾಸನ, ಪುಟ ೧೧೬-೧೧೯.

೨. ಅದೇ.

೩. ಪೂಜ್ಯ ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಮಹಾಸ್ವಾಮಿಗಳು (ಸಂ.) ಬಸವಪಥ, ಸಂಪುಟ ೩೬, ಸಂಚಿಕೆ ೧, ಪುಟ ೬೩-೬೩.

೨೦

ಹುಣಸಿಹಡಗಲಿ ದೇವಾಲಯಗಳು

ರಮೇಶ ನಾಯಕ*

ಹುಣಸಿ ಹಡಗಲಿ ಗ್ರಾಮವು ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ತಾಲೂಕಿನಲ್ಲಿದೆ. ಇದು ತಾಲೂಕು ಕೇಂದ್ರದ ಪಶ್ಚಿಮಕ್ಕೆ ಸುಮಾರು ೨೦ ಕಿ.ಮೀ. ಅಂತರದಲ್ಲಿರುವುದು. ಈ ತಾಲೂಕು ಬಹುವಿಸ್ತಾರವನ್ನು ಪಡೆದಿದ್ದು ಅಲ್ಲಿರುವ ಬಹುತೇಕ ಗ್ರಾಮಗಳಲ್ಲಿ ಐತಿಹಾಸಿಕ ಮಹತ್ವದ ಕುರುಹುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ವಿಶೇಷವಾಗಿ ಈ ಪ್ರದೇಶದಲ್ಲಿ ಲಭ್ಯವಿರುವ ಜೈನ ಮತಪಂಥಕ್ಕೆ ಸೇರಿದ ಕೆಲವು ಸ್ಮಾರಕಗಳು, ಶಿಲ್ಪಗಳು ಹಾಗೂ ಶಾಸನಗಳು ಅಧ್ಯಯನ ದೃಷ್ಟಿಯಿಂದ ತುಂಬಾ ಉಪಯುಕ್ತಕಾರಿಯಾಗಿವೆ. ಈ ತಾಲೂಕಿನಲ್ಲಿರುವ ಹರಸೂರು, ಸಾವಳಗಿ, ಶ್ರೀನಿವಾಸ ಸರಡಗಿ, ಹಾಗರಗುಂಡಗಿ ಹಾಗೂ ಗುಲ್ಬರ್ಗಾ ನಗರದಲ್ಲಿ ಈ ಪರಂಪರೆಗೆ ಸಂಬಂಧಿಸಿದ ಶಿಲ್ಪಾವಶೇಷಗಳನ್ನು ಕಾಣಬಹುದು. ಅದರಂತೆ ಜೈನಮತ ಪಂಥಕ್ಕೆ ಸೇರಿದ ಎರಡು ಜಿನಾಲಯಗಳು, ಒಂದು ಶಾಸನ ಹಾಗೂ ಇನ್ನಿತರ ಪ್ರಾಚ್ಯಾವಶೇಷಗಳು ಹುಣಸಿಹಡಗಲಿ ಗ್ರಾಮದಲ್ಲಿ ಕಂಡುಬರುತ್ತವೆ. ಅವು ಈ ಪ್ರದೇಶದ ಐತಿಹಾಸಿಕ ಮಹತ್ವವನ್ನು ಪ್ರಚುರಪಡಿಸುವ ಮಹತ್ವದ ಕುರುಹುಗಳಾಗಿವೆ. ಅಲ್ಲದೇ ಇಲ್ಲಿ ಕಂಡುಬಂದಿರುವ ಶಾಸನವು ತುಂಬಾ ವಿಶೇಷ ವಿವರಗಳನ್ನು ನೀಡುವ ಬಹುಮುಖ್ಯ ಆಕರವಾಗಿದೆ. ಜೈನ ಮತಪಂಥದಲ್ಲಿರುವ ಗಣಗಚ್ಚಗಳ ಕುರಿತು ನೀಡುವ ಮಾಹಿತಿಗಳು ಇದರಲ್ಲಿವೆ. ಇಂಥ ಪ್ರಮುಖ ಸಾಕ್ಷ್ಯಾಧಾರಗಳನ್ನೆಲ್ಲ ಸಂಯೋಜಿಸಿಕೊಂಡು ಅವುಗಳ ಕುರಿತಿರುವ ಕೆಲವು ವಿಚಾರಗಳನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ದೇಗುಲ

ಈ ಗ್ರಾಮದಲ್ಲಿ ಪ್ರಸ್ತುತ ಪಾರ್ಶ್ವನಾಥ ಬಸದಿ ಮತ್ತು ಇದೇ ಬಸದಿಯ ಮುಂಭಾಗದಲ್ಲಿರುವ ದೇಗುಲವು ಇಲ್ಲಿರುವ ಪ್ರಮುಖ ಸ್ಮಾರಕಗಳಾಗಿವೆ. ಅವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವವು. ಈ ಎರಡೂ ಜಿನಾಲಯಗಳು ಗ್ರಾಮದ ಹೊರಭಾಗದಲ್ಲಿವೆ. ಅವುಗಳಲ್ಲಿ ದೇಗುಲವು ಪಶ್ಚಿಮಾಭಿಮುಖವಾಗಿದ್ದು, ಅತ್ಯಂತ ಕನಿಷ್ಠ ಸ್ಥಿತಿಯಲ್ಲಿರುವುದನ್ನು ಕಾಣುತ್ತೇವೆ. ಪಾರ್ಶ್ವನಾಥ ಬಸದಿಯ ಮುಂಭಾಗದಲ್ಲಿರುವ ಈ ದೇವಾಲಯವು ಅತ್ಯಂತ ಹೆಚ್ಚಿನ ಅನಾಧಾರಕ್ಕೆ ಒಳಗಾಗಿದೆ. ಹೀಗಾಗಿ ಅದರ ಕೆಲವು ಭಾಗಗಳು ದುರಸ್ತಿಗೆ ಒಳಗಾಗಿರುವುದನ್ನು ಕಾಣಬಹುದು. ಈ ಬಸದಿಯು ಕ್ರಿ.ಶ. ೧೧–೧೨ನೇ ಶತಮಾನದಲ್ಲಿ ನಿರ್ಮಾಣವಾಗಿದ್ದರೂ ಸುಮಾರು ೫೦೦ ವರ್ಷಗಳ ಹಿಂದೆ ಮತ್ತೆ ಅದನ್ನು ಜೀರ್ಣೋದ್ಧಾರ ಮಾಡಲಾಗಿದೆಯೆಂದು ಅಭಿಪ್ರಾಯಿಸಬಹುದು. ಎತ್ತರದ ಕಟ್ಟೆಯ ಮೇಲೆ ರಚನೆಯಾಗಿರುವ ಈ ದೇಗುಲ ನಿರ್ಮಾಣದಲ್ಲಿ ಕಪ್ಪುಶಿಲೆಯನ್ನು ಹೆಚ್ಚಾಗಿ ಬಳಕೆ ಮಾಡಲಾಗಿದೆ. ಅಲ್ಲದೇ ಇದೊಂದು ತ್ರಿಕೂಟ ರಚನೆ. ಆದರೆ ದೇಗುಲದ ಮೂರು ಗರ್ಭಗೃಹಗಳು ಹಾಳಾಗಿದ್ದು, ಅವುಗಳ ಅಂತರಾಳ ಭಾಗಗಳು ಮಾತ್ರ ಅಳಿದುಳಿದುಕೊಂಡಿವೆ. ಅವೆಲ್ಲವುಗಳನ್ನೊಳಗೊಂಡಂತೆ ವಿಶಾಲವಾದ ನವರಂಗವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಅವು ಚಿಕ್ಕದಾಗಿದ್ದು ಹಾಗೂ ಅಷ್ಟೇನೂ ನಯವಾಗಿ ರಚನೆಯಾಗಿರುವುದಿಲ್ಲ. ಇಲ್ಲಿರುವ ಚೌಕಾಕಾರದ ಕಂಬಗಳು ಫಲಕ ಹಾಗೂ ಬೋಧಿಗೆಗಳನ್ನು ಹೊಂದಿವೆ. ದೇವಾಲಯದ ಮುಂಭಾಗದಲ್ಲಿ ಪ್ರಾಚೀನ ದೇವಾಲಯದ ಬಾಗಿಲು ಚೌಕಟ್ಟು ಹಾಗೂ ಇತರೆ ಶಿಲ್ಪಾವಶೇಷಗಳು ಈವರೆಗೂ ಬಿದ್ದಿರುವುದನ್ನು ಕಾಣುತ್ತೇವೆ. ಶಿಖರವು ಸಹ ತ್ರುಟಿತಗೊಂಡಿರುವುದನ್ನು ಗಮನಿಸಬಹುದು.

ಪಾರ್ಶ್ವನಾಥ ಬಸದಿಯಲ್ಲಿರುವ ಶಾಸನದಲ್ಲಿ ಉಲ್ಲೇಖವಾಗಿರುವ ಶಾಂತಿನಾಥ ಬಸದಿಯು ಬಹುಶಃ ಇದೇ ಆಗಿರಬಹುದೆಂದು ಊಹಿಸಲು ಆಧಾರಗಳಿವೆ. ಆ ಕುರಿತು ಮುಂದಿನ ವಿವರಗಳಲ್ಲಿ ಚರ್ಚಿಸಲಾಗಿದೆ. ಅಲ್ಲದೇ ಈ ಗುಡಿಯಲ್ಲಿರುವ ಸಪ್ತಮಾತೃಕೆಯ ಶಿಲ್ಪಾವಶೇಷದ ಹಿನ್ನೆಲೆಯಲ್ಲಿ ಸ್ಥಳೀಯರು ಇದನ್ನು ಈಶ್ವರ ದೇವಾಲಯವೆಂತಲೂ ಕರೆಯುತ್ತಾರೆ.

ಇದೇ ಗ್ರಾಮದಲ್ಲಿ ಇನ್ನೊಂದು ದೇವಾಲಯವಿದೆ. ಅದನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಅದು ೧೨ನೇ

* ಸಹ ಪ್ರಾಧ್ಯಾಪಕ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩ ೨೭೬

ಶತಮಾನದಲ್ಲಿ ಆಗಿಹೋದ ವಿರಕ್ತಜಂಗಮ ಅಲ್ಲಮ ಪ್ರಭುವಿಗಾಗಿ ಕಟ್ಟಿಸಿದ್ದು. ಈ ಗುಡಿಯಲ್ಲಿ ೬೩ ಸಕಲ ಪುರಾತನರಿಗೆ ಸಂಬಂಧಿಸಿದ ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಅವರೆಲ್ಲರಿಗೂ ಚಿಕ್ಕ ಚಿಕ್ಕ ಗುಡಿಗಳನ್ನು ಕಟ್ಟಿ ಅವುಗಳಿಗೆ ತಕ್ಕುದಾದ ಶಿಖರಗಳನ್ನು ಸಹ ನಿರ್ಮಿಸಲಾಗಿದೆ. ವಿಶಾಲವಾದ ಪ್ರಾಂಗಣ ಹೊಂದಿರುವ ಈ ದೇವಾಲಯವನ್ನು ಪ್ರವೇಶಿಸಲು ಮೆಟ್ಟಿಲುಗಳ ಸಹಾಯ ಪಡೆಯಬೇಕಾಗುತ್ತದೆ.

ಪಾರ್ಶ್ವನಾಥ ಬಸದಿ

ಈ ದೇವಾಲಯವನ್ನು ಸ್ಥಳೀಯವಾಗಿ ಪದ್ಮಾವತಿ ಹೆಸರಿನಿಂದ ಕರೆಯಲಾಗುವುದು. ಅದು ಜೀರ್ಣೋದ್ಧಾರಗೊಂಡಿದೆ. ಆದರೆ ಮೂಲಭಾಗಗಳನ್ನು ಉಳಿಸಿಕೊಳ್ಳಲಾಗಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿರುವ ಈ ದೇವಾಲಯದ ನಿಜನಾಮ ಏನೆಂಬುದು ತಿಳಿದಿಲ್ಲ. ಕೆಲವು ವಿವರಗಳಲ್ಲಿ ಬಹುಶಃ ಇದು ಶಾಸನ ಉಲ್ಲೇಖಿತ ಪಾರ್ಶ್ವನಾಥನ ಬಸದಿಯಾಗಿರಬಹುದೆಂದು ಅಭಿಪ್ರಾಯಿಸಲಾಗಿದೆ (ಪಾಟೀಲ ಎಂ.ಬಿ. ಗುಲ್ಬರ್ಗಾ ಗ್ಯಾಜಿಟಿಯರ್, ಪುಟ ೮೦೧). ಪ್ರಾಯಶಃ ಇದೇ ಸರಿಯಾದ ಅಭಿಪ್ರಾಯವಾಗಿದೆ. ಆದರೆ ಪಾರ್ಶ್ವನಾಥ ತೀರ್ಥಂಕರರಿಗಿಂತ ಆತನ ಯಕ್ಷಿ ಪದ್ಮಾವತಿಯ ಬಗೆಗೆ ಜನರಲ್ಲಿ ಹೆಚ್ಚಿನ ಭಕ್ತಿ ಮೂಡಿದ್ದರಿಂದ ಆ ದೇವತೆಗೆ ಸಂಬಂಧಿಸಿದಂತೆ ಈ ಜಿನಾಲಯವು ಹೆಚ್ಚಿನ ಪ್ರಸಿದ್ಧಿ ಪಡೆದಿರುವಂತೆ ತೋರುವುದು. ಗರ್ಭಗೃಹದಲ್ಲಿ ಎತ್ತರ ನಿಲುವುಳ್ಳ ಪಾರ್ಶ್ವನಾಥನ ಶಿಲ್ಪವನ್ನಿಡಲಾಗಿದೆ. ಅಂತರಾಳವು ಬರಿದಾಗಿದೆ. ನವರಂಗದಲ್ಲಿ ನಾಲ್ಕು ಗಿಡ್ಡನೆಯ ಚೌಕಾಕಾರದ ಕಂಬಗಳಿವೆ. ಅವುಗಳಲ್ಲಿ ಪಟ್ಟಿಕೆಗಳನ್ನು ಕಂಡರಿಸಿದ್ದನ್ನು ಗಮನಿಸಬಹುದು. ಈ ಕಂಬಗಳಲ್ಲಿ ಫಲಕ ಹಾಗೂ ಬೋಧಿಗೆಗಳನ್ನು ಅಳವಡಿಸಲಾಗಿದೆ. ಅವು ಕಲ್ಯಾಣದ ಚಾಲುಕ್ಯ ಶೈಲಿಯನ್ನು ಪ್ರತಿನಿಧಿಸುತ್ತವೆ. ಛತ್ತಿನಲ್ಲಿ ಭುವನೇಶ್ವರಿ ಕೆತ್ತಲಾಗಿದೆ. ನವರಂಗದಲ್ಲಿ ಪ್ರಮುಖವಾಗಿ ಪದ್ಮಾವತಿ ಯಕ್ಷಿ, ಧರಣೇಂದ್ರ ಯಕ್ಷ ಹಾಗೂ ಶಾಂತಿನಾಥ ತೀರ್ಥಂಕರನ ಬಿಡಿ ಶಿಲ್ಪಗಳನ್ನು ಇಡಲಾಗಿದೆ. ನವರಂಗದ ಬಾಗಿಲವಾಡವು ಸಾದಾ ರಚನೆಯಿಂದ ಕೂಡಿರುವುದು. ಬಸದಿಯ ಹೊರಗೋಡೆಯು ಸರಳವಾಗಿದೆ. ಅದು ಹೇಳಿಕೊಳ್ಳುವಂಥ ಅಲಂಕರಣೆಗಳನ್ನು ಹೊಂದಿರುವುದಿಲ್ಲ. ಶಿಖರಭಾಗವು ಬಿದ್ದುಹೋಗಿರಬಹುದು. ಮೂಲತಃ ಇದು ಪಾರ್ಶ್ವನಾಥನಿಗೆ ಸಂಬಂಧಿಸಿದ ಬಸದಿ. ಇದು ಸ್ಥಳೀಯರ ಅರಾಧ್ಯದೈವವಾಗಿದೆ. ಪ್ರತಿವರ್ಷ ಎಳ್ಳು ಅಮಾವಾಸೆಯ ಎರಡು ದಿನ ಮೊದಲು ಈ ದೇವತೆಗೆ ಸಂಬಂಧಿಸಿದ ಜಾತ್ರೆ ವಿಜೃಂಭಣೆಯಿಂದ ಜರುಗುತ್ತದೆ (ಪೂರ್ವೋಕ್ತ, ಪುಟ. ೮೦೧). ಇಷ್ಟು ಸಂಗತಿಗಳು ಗ್ರಾಮದಲ್ಲಿ ಇಂದಿಗೂ ಕಂಡುಬರುವವು.

ಶಾಸನತಜ್ಞರಾದ ಶ್ರೀಯುತ ಸೀತಾರಾಮ ಜಾಗೀರದಾರ್ ಅವರು ಇಲ್ಲಿರುವ ಶಾಸನದಲ್ಲಿನ ಉಲ್ಲೇಖಗಳನ್ನು ಉದಾಹರಿಸುತ್ತ ಈ ಗ್ರಾಮದಲ್ಲಿ ಇನ್ನೊಂದು ಸ್ಮಾರಕವು ಇದ್ದಿರಬಹುದಾದ ಸಾಧ್ಯತೆಗಳನ್ನು ಪ್ರಕಟಪಡಿಸಿದ್ದಾರೆ (ಖಂಡೋಬಾ ಪಿ.ಕೆ. ಮತ್ತು ಸವದತ್ತಿಮಠ ಸಂಗಮೇಶ, ಜೈನ ಸಂಸ್ಕೃತಿ ಮತ್ತು ಸಿದ್ಧಾಂತಗಳು, ಪುಟ ೧೫೬). ಆದರೆ ಪ್ರಸ್ತುತ ಸಂದರ್ಭದಲ್ಲಿ ಅಂತಹ ಯಾವುದೇ ಕುರುಹುಗಳು ಕಂಡುಬರುವುದಿಲ್ಲ. ಬಹುಶಃ ಈಗಿರುವ ದೇಗುಲವಲ್ಲದೆ ಇನ್ನೊಂದು ಸ್ಮಾರಕವು ಸಹ ಇದ್ದಿರಬಹುದೆಂದು ಅವರು ಊಹಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಕಾಣಬಹುದು. ಆದರೆ ಪ್ರಸ್ತುತ ಸಂದರ್ಭದಲ್ಲಿ ಪಾರ್ಶ್ವನಾಥ ಮತ್ತು ಶಾಂತಿನಾಥ (ದೇಗುಲ) ಬಸದಿಗಳು ಮಾತ್ರ ಕಂಡುಬರುತ್ತವೆ. ಪಾಠಶಾಲೆ ಅಥವ ಪಟ್ಟಸಾಲೆ ಎಂಬ ಮೂರನೆಯ ಸ್ಮಾರಕವಿದ್ದಿರಬಹುದೆಂದು ಅವರು ಊಹಿಸುತ್ತಾರೆ. ಆದರೆ ಅದಕ್ಕೆ ಸ್ಪಷ್ಟವಾದ ಸಾಕ್ಷಿಗಳು ಕಂಡುಬಂದಿಲ್ಲ. ಬಹುಶಃ ಈಗಿರುವ ದೇಗುಲ ಅಥವಾ ಶಾಂತಿನಾಥ ಬಸದಿಯ ಪರಿಸರದಲ್ಲಿಯೇ ಆ ಪಾಠಶಾಲೆಯು ಇದ್ದಿರಬಹುದು. ಅದು ಆ ಜಿನಾಲಯಕ್ಕೆ ಪ್ರತಿಬದ್ಧವಾಗಿದೆ ಹೊರತು ಅದೊಂದು ಪ್ರತ್ಯೇಕ ಅಸ್ತಿತ್ವವುಳ್ಳ ಕಟ್ಟಡವಾಗಿರಲಾರದು. ಪ್ರಾಯಶಃ ಶಾಸನದಲ್ಲಿ ಉಲ್ಲೇಖಗೊಂಡ ಪಾಠಶಾಲೆಯು ಶಾಂತಿನಾಥ ಬಸದಿಯಲ್ಲಿಯೇ ಇದ್ದಿರಬಹುದೆಂದು ತೋರುತ್ತದೆ. ಹಾಗಾಗಿ ಅದೇ ವಿವರವು ಶಾಸನದಲ್ಲಿ ಉಲ್ಲೇಖಗೊಂಡಿದೆ. ಹಾಗಾಗಿ ಇಲ್ಲಿದ್ದ ಸ್ಮಾರಕಗಳು ಎರಡೇ ಹೊರತು ಮೂರಲ್ಲ ಎಂದು ಅಭಿಪ್ರಾಯಿಸಬಹುದು.

ದೇವಾಲಯದ ನವರಂಗದಲ್ಲಿ ಸುಂದರವಾದ ಶಾಸನ ಶಿಲ್ಪವೊಂದಿದೆ. ಅದು ಪ್ರಕಟಕೊಂಡಿದೆ (ಶಿವಾನಂದ ವ್ಹಿ, ಹೈದ್ರಾಬಾದ್–ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು, ಪುಟ ೫೮–೬೪). ಈ ಶಾಸನವು ಕಲ್ಯಾಣ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದಾಗಿದೆ. ಅದು ಈ ಪರಿಸರದಲ್ಲಿದ್ದ ದಾನ ಚಟುವಟಿಕೆಗಳ ಕುರಿತು ಮಹತ್ವದ ಮಾಹಿತಿ ನೀಡುವುದು. ಕ್ರಿ.ಶ. ೧೧೪೯ರ ತೇದಿವುಳ್ಳ ಈ ಶಾಸನವು ಅರಸನ ಪಿರಿಯರಸಿ ಚಂದಲದೇವಿಯು ಆಲಂದೆ–೧೦೦೦ದ ಭತ್ತಗ್ರಾಮುಗಳನ್ನು ಆಳುತ್ತಿದ್ದಾಗ ಮಹಾಮಂಡಳೇಶ್ವರ ಬಿಬ್ಬರಸನು ಗೊಂಕ–೧೨೦ನ್ನು ಆಳುತ್ತಿದ್ದಾಗ ಚೌಧರೆ ರಕ್ಕಸಯ್ಯ ನಾಯಕನು ಹಡಂಗಿಲೆಯಲ್ಲಿ ನಿರ್ಮಿಸಿದ ಪಾರ್ಶ್ವನಾಥ ದೇವರ ಬಸದಿ ಹಾಗೂ ಪಟ್ಟಸಾಲೆಯ

(ಪಾಠಶಾಲೆ) (ಪಟ್ಟ ಜಿನಾಲಯ) ಶಾಂತಿನಾಥ ದೇವರುಗಳ ಪ್ರಜಾವಿಧಿಗಳಿಗೆಂದು ನುಡಿದಂತೆ ಗಂಡನ ಗಡಿಂಬದಲ್ಲಿ ೧೨ ಮತ್ತರ ಹೊಲ, ತೋಟ, ಗಾಣ ಹಾಗೂ ಹತ್ತು ಮನೆಗಳನ್ನು ನೀಡಿರುವ ವಿವರವಿದೆ. ಅಲ್ಲದೇ ಮೂಲಸಂಘ ದೇಸಿಗಣ, ಪುಸ್ತಕಗಚ್ಛದ ಪಿರಿಯ ಸಮುದಾಯಕ್ಕೆ ಸೇರಿದ ಆಚಾರ್ಯರಿಗೆ ಮಹಾಪ್ರಧಾನ ಭೀವಣಯ್ಯಗಳ ಬೇಡಿಕೆಯಂತೆ ಆರನೆಯ ವಿಕ್ರಮಾದಿತ್ಯನು ಸೂರ್ಯಗ್ರಹಣದಂದು ಗೋದಾವರಿ ತೀರದ ಕೋಟಿತೀರ್ಥದಲ್ಲಿ ತುಲಾಪುರುಷ ದಾನಬಿಟ್ಟ ವಿಷಯವನ್ನು ಈ ಶಾಸನವು ಉಲ್ಲೇಖಿಸುತ್ತದೆ (ಪಾಟೀಲ ಎಂ.ಬಿ., ಗುಲ್ಬರ್ಗಾ ಗ್ಯಾಜಿಟಿಯರ್, ಪುಟ ೮೦೧).

ಕನ್ನಡ ನಾಡಿನ ಜೈನಾಚಾರ್ಯ ಪರಂಪರೆಯಲ್ಲಿ ಅತ್ಯಂತ ಪ್ರಾಚೀನವೂ ಮೂಲವೂ ಆದ ಸಂಘವನ್ನು ಮೂಲ ಸಂಘವೆಂದು ಕರೆಯಲಾಗುತ್ತದೆ. ಈ ಮೂಲಸಂಘದಲ್ಲಿ ಮುಖ್ಯವಾಗಿ ನಾಲ್ಕು ಶಾಖೆಗಳಿವೆ. ಸೇನ, ನಂದಿ, ದೇವ ಮತ್ತು ಸಿಂಹ. ಈ ಮೂಲ ಸಂಘವಲ್ಲದೇ ದ್ರಾವಿಡ ಸಂಘ, ನಂದಿ ಸಂಘ, ಯಾಪನೀಯ ಸಂಘ ಮುಂತಾದ ಇನ್ನಿತರ ಸಂಘಗಳು ಇವೆ (ಹಂಪನಾ, ಚಂದ್ರಕೊಡೆ, ಪುಟ ೨೨೯). ಸಂಘದ ನಂತರ ಗಣ, ಗಣದ ನಂತರ ಗಚ್ಛ, ಗಚ್ಛನ ನಂತರ ಅನ್ವಯ ಹಾಗೂ ಅನ್ವಯದ ನಂತರ ಬಳಿ ಅಥವಾ ಬಣ ಎಂಬ ವಿವರಗಳು ಸ್ಥೂಲವಾಗಿ ವಿಭಾಗಗೊಂಡಿವೆ. ಅಂಥ ಗಣಗಳಲ್ಲಿ ಮುಖ್ಯವಾಗಿ ಕಾಣೂರು ಗಣ, ಕಾರೇ ಗಣ ಮತ್ತು ದೇಶಿಗಣ ಮುಖ್ಯವಾದವು. ಕಾಣೂರು ಗಣವನ್ನು ಯಾಪನೀಯ ಸಂಘವು ಸೃಜಿಸಿ ಪೋಷಿಸಿತೆಂಬ ಅಭಿಪ್ರಾಯ ವುಳ್ಳ ಸಾಕಷ್ಟು ವಿವರಗಳು ದಾಖಲಾಗಿವೆ. ಯಾಪನೀಯ ಅನುಯಾಯಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಭೌತಿಕ (ದೇವಾಲಯ, ಬಸದಿ) ನಿರ್ಮಾಣಗಳನ್ನು ಕೈಗೊಂಡರು. ಅಲ್ಲದೇ ಸಾಹಿತ್ಯ ಕ್ಷೇತ್ರವನ್ನು ಸಹ ಉತ್ತುಂಗಕ್ಕೆ ಏರಿಸಿದರೆಂಬ ಅಭಿಪ್ರಾಯಗಳು ದಾಖಲಾಗಿವೆ. ಇಂಥ ಯಾಪನೀಯ ಸಂಘದೊಳಗೆ ಗಣ-ಗಚ್ಛ ವಿಭಜನೆಯು ಕಲ್ಯಾಣದ ಚಾಲುಕ್ಯರ ಆಡಳಿತದ ವೇಳೆಗಾಗಲೇ ಪ್ರಾರಂಭವಾಗಿತ್ತು. ಅಲ್ಲದೇ ಚಾಳುಕ್ಯರ ಆಳ್ವಿಕೆಯಲ್ಲಿಯೇ ಯಾಪನೀಯ ಸಂಘ ಸುವರ್ಣಯುಗದ ವ್ಯಾಪ್ತಿ ವೈಭವಗಳನ್ನು ಪಡೆಯಿತೆಂಬ ಪ್ರೊ. ಕಮಲಾ ಹಂಪನಾ ಅವರ ಹೇಳಿಕೆಯನ್ನು ಅಂದಿನ ಕಾಲದಲ್ಲಿ ಶಾಸನಗಳು ಪುಷ್ಟೀಕರಿಸುತ್ತವೆಂಬ ಅಭಿಪ್ರಾಯಗಳು ದಾಖಲಾಗಿವೆ (ಹಂಪನಾ, ಯಾಪನೀಯ ಸಂಘ, ಪುಟ ೩೨). ಈ ವಿಚಾರಾರ್ಹ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಪ್ರಸ್ತುತ ಶಾಸನವನ್ನು ಚರ್ಚಿಸುವ ಅವಶ್ಯಕತೆಯಿದೆ. ಕಾಣೂರು ಗಣದ ಚಟುವಟಿಕೆಗಳು ಕನ್ನಡ ನಾಡಿನಾದ್ಯಂತ ಕಂಡು ಬಂದಿದ್ದರೂ ವಿಶೇಷವಾಗಿ ಮಂಡ್ಯ, ಮೈಸೂರು ಹಾಗೂ ತುಮಕೂರು ಪ್ರದೇಶಗಳಲ್ಲಿ ಹೆಚ್ಚಾಗಿ ಅದರ ಉಲ್ಲೇಖಗಳು ನಮೂದುಗೊಂಡಿರುವುದನ್ನು ಗಮನಿಸಬಹುದು. ಅಲ್ಲದೇ ಮುಂಬೈ ಮತ್ತು ಹೈದ್ರಾಬಾದ್ ಕರ್ನಾಟಕದಲ್ಲಿಯೂ ಸಹ ಅದರ ಪಳೆಯುಳಿಕೆಯನ್ನು ಕಾಣಬಹುದು. ಮುಖ್ಯವಾಗಿ ಹುಣಸಿಹಡಗಲಿಯ ಶಾಸನವು ಯಾಪನೀಯ ಶ್ರೀಮೂಲ ಸಂಘದ ದೇಶಿಗಣ ಪುಸ್ತಕಗಚ್ಛದ ಪರಂಪರೆಯ ಮುನಿಗಳ ಬಗೆಗೆ ವಿವರಿಸುತ್ತದೆ. ದೇಶಿಗಣಕ್ಕೆ ಸಂಬಂಧಿಸಿದ ಪುಸ್ತಕಗಚ್ಛದ ಅನುಯಾಯಿಗಳು ಇಲ್ಲಿದ್ದರು ಎಂಬುದು ಮುಖ್ಯವಾದ ಸಂಗತಿ.

ಪ್ರಮುಖವಾದ ವಿಷಯವೆಂದರೆ ಹುಣಸಿಹಡಗಲಿಯು ತಿಂತ್ರಿಣೀಕ ಗಚ್ಛದ ಉದ್ಭೋದಕ ಸ್ಥಳವಾಗಿದೆ ಎಂಬುದು. ತಿಂತ್ರಿಣೀ ಎಂದರೆ ಹುಣಸೆ ಎಂಬರ್ಥವಿದೆ. ಸಂಸ್ಕೃತದ ತಿಂತ್ರಿಣೀಕವೇ ತಿಂತ್ರಿಣೀಕ ಗಚ್ಛವಾಯಿತೆಂಬ ಅಭಿಪ್ರಾಯವಿದೆ (ಪಿಂಡೋಬಾ ಪಿ.ಕೆ. ಮತ್ತು ಸಪದತ್ರಿಮಠ ಸಂಗಮೇಶ, ಜೈನ ಸಂಸ್ಕೃತಿ ಮತ್ತು ಸಿದ್ಧಾಂತಗಳು, ಪುಟ ೧೫೭). ಆದರೆ ಶಾಸನದಲ್ಲಿ ಮಾತ್ರ ಈ ಗ್ರಾಮವನ್ನು ಹಡಂಗಿಲೆ ಎಂದೆ ಕರೆಯಲಾಗಿದೆ. ಇದೇ ಗ್ರಾಮದಲ್ಲಿಯೇ ಕಾಣೂರು ಗಣಕ್ಕೆ ಸೇರಿದ ತಿಂತ್ರಿಣೀಕ ಗಚ್ಛವು ಹುಟ್ಟಿಕೊಂಡಿತೆಂದು ಹೇಳ ಬಹುದು. ಆವರೆಗೂ ಆ ಗ್ರಾಮವನ್ನು ಸಾಮಾನ್ಯವಾಗಿ ಶಾಸನಗಳಲ್ಲಿ ಹಡಂಗಿಲೆ ಎಂದೇ ಉಲ್ಲೇಖಿಸಲಾಗಿದೆ. ಬಹುಶಃ ಆ ನಂತರವೇ ಜನರೂಢಿಯಲ್ಲಿ ಈ ಗ್ರಾಮವು ಹುಣಸಿ (ತಿಂತ್ರಿಣಿಕ) ಎಂಬ ಹೆಸರನ್ನು ಪಡೆದು ಪುಣಸಿ ಹಡಗಲಿ ಆಯಿತೆಂದು ಅಭಿಪ್ರಾಯಿಸಬಹುದು. ಹಾಗಾಗಿ ಜೈನ ಮತಪಂಥದ ವಿವರಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಈ ಗ್ರಾಮ ನಿಷ್ಪತ್ತಿಯ ಸಂಗತಿಯು ತುಂಬಾ ಬಹುತ್ವದ ವಿಷಯವಾಗುತ್ತದೆ. ಇದಲ್ಲದೆ ತಗರಿಗಲ್‌ಗಚ್ಛ, ಮೇಷಪಾಷಣ ಗಚ್ಛ, ಚಂದ್ರಿಕಾವಾಟ ಗಚ್ಛವು ಇದೇ ಗಣಕ್ಕೆ ಸೇರಿದವುಗಳಾಗಿವೆ (ಹಂಪನಾ, ಚಂದ್ರಕೊಡೆ, ಪುಟ ೨೪೭). ಇಲ್ಲಿರುವ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದ ರಕ್ಕಸಯ್ಯ ನಾಯಕನು ತಿಂತ್ರಿಣೀಕ ಗಚ್ಛದ ಗುರುವಾಗಿದ್ದ ಅರ್ಹನಂದಿ ಬೆಟ್ಟದೇವನ ಶಿಷ್ಯನಾಗಿದ್ದ ಎಂಬುದು ತುಂಬಾ ಮುಖ್ಯವಾದ ಸಂಗತಿ. ಈ ಪ್ರಾಚೀನ ಗ್ರಾಮವು ಆ ಕಾಲದಲ್ಲಿ ಹೆಚ್ಚಿನ ಪ್ರಸಿದ್ಧಿ ಪಡೆದಿರುವುದರಲ್ಲಿ ಅತಿಶಯೋಕ್ತಿ ಇರಲಾರದು. ಗ್ರಾಮಕ್ಕೆ ಸಂಬಂಧಿಸಿದ ಇನ್ನು ಕೆಲವು ವಿಚಾರಗಳು ಈ ಶಾಸನದಲ್ಲಿ ವ್ಯಕ್ತವಾಗಿವೆ. (ಶಿವಾನಂದ, ಹೈದರಾಬಾದ್-ಕರ್ನಾಟಕ ಭಾಗದ ಕನ್ನಡ ಶಾಸನಗಳು, ಪುಟ ೬೧ ಮತ್ತು ಜೈನ ಸಂಸ್ಕೃತಿ ಮತ್ತು ಸಿದ್ಧಾಂತಗಳು, ಪುಟ ೧೫೯).

ಈ ತಿಂತ್ರಿಣೀಕ ಗಚ್ಛವು ನಾಡಿನ ಬೇರೆ ಬೇರೆ ಭಾಗ ಗಳಿಗೂ ವಿಸ್ತರಿಸಿಕೊಂಡದ್ದನ್ನು ಕಾಣಬಹುದು. ಕುಪಟೂರಿನ

ಬ್ರಹ್ಮ ಜಿನಾಲಯ ಹಾಗೂ ಉದ್ಧರೆಯಲ್ಲಿರುವ ಕನಕ ಜಿನಾಲಯವು ಕಾಣೂರು ಗಣದ ತಿಂತ್ರಿಣೀಕ ಗಚ್ಛದ ಗುರುಪರಂಪರೆಗೆ ಸೇರಿದ ಪ್ರಸಿದ್ಧ ಬಸದಿಗಳಾಗಿದ್ದವು ಎಂಬ ಅಭಿಪ್ರಾಯಗಳು ಉಲ್ಲೇಖಗೊಂಡಿವೆ (ಹಂಪನಾ, ಚಂದ್ರಕೊಡೆ, ಪುಟ ೨೪೬). ಹುಣಸಿ ಹಡಗಲಿಯ ಶಾಸನದಲ್ಲಿ ಈ ಗಚ್ಚಕ್ಕೆ ಸಂಬಂಧಿಸಿದ ಶಿಷ್ಯ-ಪ್ರಶಿಷ್ಯ ಹಾಗೂ ಗುರುಗಳ ಉಲ್ಲೇಖಗಳು ದಾಖಲಾಗಿದ್ದು, ಆ ಕುರಿತು ಇನ್ನೂ ಹೆಚ್ಚಿನ ಅಧ್ಯಯನಗಳ ಅವಶ್ಯಕತೆ ಇದೆ. ಈ ಗ್ರಾಮವು ಇಂಥ ಪ್ರಸಿದ್ಧಿಯನ್ನು ಪಡೆದಿದ್ದರಿಂದಲೇ ಬಹುಶಃ ಕಲ್ಯಾಣದ ಚಾಲುಕ್ಯರಲ್ಲಿಯೇ ಪ್ರಸಿದ್ಧ ಅರಸನಾಗಿ ಹೆಸರುವಾಸಿಯಾಗಿದ್ದ ಆರನೆಯ ವಿಕ್ರಮಾದಿತ್ಯ ಈ ಜಿನಾಲಯಕ್ಕೆ ಸಂಬಂಧಿಸಿದಂತೆ ದಾನ-ದತ್ತಿಗಳನ್ನು ನೀಡಿರಬಹುದೆಂದು ಊಹಿಸಬಹುದಾಗಿದೆ. ಈ ಗಚ್ಛವು ಕಾಣೂರು ಗಣಕ್ಕೆ ಪ್ರತಿಬದ್ಧವಾಗಿತ್ತು. ಅಲ್ಲದೇ ಇದು ಕುಂದ-ಕುಂದ ಅನ್ವಯಕ್ಕೆ ಒಳಪಟ್ಟಿತ್ತು. ಕಾಣೂರ ಗಣದ ಮುಖ್ಯ ಪ್ರವರ್ತಕರು ಯಾಪನೀಯ ಸಂಘದವರು. ಬಹುಶಃ ಹುಣಸಿ ಹಡಗಲಿಯಲ್ಲಿ ಯಾಪನೀಯ ಸಂಘದವರಿಂದಲೇ ಈ ಜಿನಾಲಯಗಳು ನಿರ್ಮಾಣವಾಗಿರಬಹುದು. ಅಲ್ಲದೆ ಈ ಗಚ್ಛಕ್ಕೆ ಸಂಬಂಧಿಸಿದ ಅನುಯಾಯಿಗಳಲ್ಲದೆ ದೇಶಿಗಣದ ಪುಸ್ತಕ ಗಚ್ಛದ ಚಟುವಟಿಕೆಗಳು ಹುಣಸಿಹಡಗಲಿಯಲ್ಲಿ ನಡೆದಿರುವ ಬಗೆಗೂ ಶಾಸನಗಳಲ್ಲಿ ವಿವರಗಳು ದಾಖಲಾಗಿವೆ.

ಶಾಸನದಲ್ಲಿ ಉಲ್ಲೇಖಿತ ಎರಡೂ ಬಸದಿಗಳು ಈ ಗ್ರಾಮದಲ್ಲಿವೆ. ಆದರೆ ಅವು ಬೇರೆಯ ಹೆಸರುಗಳಿಂದ ಉಲ್ಲೇಖಿಸಲ್ಪಡುತ್ತವೆ. ಅದರಲ್ಲಿ ಒಂದು ಸ್ವಲ್ಪಮಟ್ಟಿಗೆ ಸುಸ್ಥಿತಿಯಲ್ಲಿದ್ದರೆ ಇನ್ನೊಂದು ಕೊನೆ ಹಂತಕ್ಕೆ (ಅದನ್ನು ಸ್ಥಳೀಯರು ದೇಗುಲವೆಂದೇ ಕರೆಯುತ್ತಾರೆ) ತಲುಪಿದೆ. ಇಲ್ಲಿರುವ ಸ್ಮಾರಕಗಳು ಜೈನಪಂಥಕ್ಕೆ ಸಂಬಂಧಿಸಿದ ಮಹತ್ವದ ಹೊಳವುಗಳನ್ನು ನೀಡುವ ಪ್ರಮುಖ ಸಾಕ್ಷಿಗಳಾಗಿವೆಯೆಂದು ಅಭಿಪ್ರಾಯಿಸಬಹುದು.

ಆಧಾರಸೂಚಿ

೧. ಹೈದ್ರಾಬಾದು ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು (ಲೇ). ಡಾ. ಪಿ. ಶಿವಾನಂದ, ಕನ್ನಡ ಪೀಠ, ಬನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ, ೧೯೯೨.

೨. ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಗುಲ್ಬರ್ಗಾ ಜಿಲ್ಲೆ (ಪರಿಷ್ಕೃತ) (ಸಂ.) ಎಂ.ಬಿ. ಪಾಟೀಲ್, ಬೆಂಗಳೂರು, ೧೯೯೭.

೩. ಜೈನ ಸಂಸ್ಕೃತಿ ಮತ್ತು ಸಿದ್ಧಾಂತಗಳು, (ಸಂ.) ಡಾ. ಬಿ.ಕೆ. ಬಿಂಡೋಲು ಮತ್ತು ಡಾ. ಸಂಗಮೇಶ ಸವದತ್ತಿ ಮಠ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೬.

೪. ಚಂದ್ರಕೊಡೆ, (ಲೇ.) ಹಂಪ ನಾಗರಾಜಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೫. ಯಾಪನೀಯ ಸಂಘ, (ಲೇ.) ಹಂಪ ನಾಗರಾಜಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೬. ಗುಲಬರ್ಗಾ ಜಿಲ್ಲೆಯ ಜೈನ ಪರಂಪರೆ, (ಲೇ.) ಡಿ.ಎನ್. ಅಕ್ಕಿ ಗೋಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೭. ಕರ್ನಾಟಕ ದೇವಾಲಯ ಕೋಶ, ಗುಲಬರ್ಗಾ ಜಿಲ್ಲೆ, ಗುಲಬರ್ಗಾ ತಾಲೂಕು, (ಲೇ.) ರಮೇಶ ನಾಯಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, (ಅಪ್ರಕಟಿತ ಯೋಜನೆ).

೮. Jainism in South India and some Jain Epigraphs, (Written by: P.B.Desai, Jain Sanskriti Sanrakshk Sangh, Solapur-2001.

ಉಗನಿಯ ಭಗ್ನಗೊಂಡ ಅರ್ಕೇಶ್ವರ ದೇವಾಲಯ ಒಂದು ಅವಲೋಕನ

ಡಾ. ಸಿ.ಈ. ಲೋಕೇಶ* ಕುಮಾರಸ್ವಾಮಿ ಎಸ್.ಡಿ.**

ಅರಿಕುಠಾರ ಎಂಬ ಹೆಗ್ಗಳಿಕೆಗೆ ಹೆಸರಾದ ಚಾಮರಾಜ ನಗರ ಜಿಲ್ಲೆಯು ಐತಿಹಾಸಿಕವಾಗಿ ಹೆಚ್ಚಿನ ಮಹತ್ವದಿಂದ ಕೂಡಿದ್ದು, ಇಲ್ಲಿ ನಾಲ್ಕು ತಾಲೂಕುಗಳಿದ್ದು ಕೊಳ್ಳೇಗಾಲವೂ ಒಂದು ತಾಲೂಕು ಕೇಂದ್ರವಾಗಿದೆ. ಈ ಪ್ರದೇಶವು ೧೯೫೬ಕ್ಕೂ ಮುಂಚೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದು, ೧೯೫೬ರ ತರುವಾಯ ರಾಜ್ಯಗಳ ಪುನರ್ ವಿಂಗಡಣೆಯಾದ್ದರಿಂದ ಕರ್ನಾಟಕ ರಾಜ್ಯಕ್ಕೆ ಸೇರ್ಪಡೆಯಾಗಿದೆ.

ಕೊಳ್ಳೇಗಾಲ ತಾಲೂಕಿನ ಈಶಾನ್ಯ ಭಾಗಕ್ಕೆ 'ಉಗನಿಯ' ಎಂಬ ಗ್ರಾಮದಲ್ಲಿ ಅರ್ಕೇಶ್ವರ ದೇವಾಲಯವಿದ್ದು ಪ್ರಸ್ತುತ ಸಂಪೂರ್ಣವಾಗಿ ಭಗ್ನಗೊಂಡಿದೆ. ಅರ್ಕೇಶ್ವರ ದೇವಾಲಯವು ಗ್ರಾಮದ ಪೂರ್ವದಿಕ್ಕಿಗೆ ಕೆರೆಯ ಪಕ್ಕದಲ್ಲಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದೆ ಇದರ ವಾಸ್ತು ಲಕ್ಷಣ ಸರಳವಾಗಿದ್ದು ಗರ್ಭಗೃಹ, ಸುಕನಾಸಿ ಮತ್ತು ನವರಂಗ ವನ್ನು ಹೊಂದಿರುವ ಈ ದೇವಾಲಯವು ಯಾರ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ನಿಖರವಾಗಿ ತಿಳಿಯುವುದಿಲ್ಲ. ಆದರೆ ಇದರ ಕಲೆ ಮತ್ತು ವಾಸ್ತುಲಕ್ಷಣಗಳ ಆಧಾರದಿಂದ ಮೈಸೂರು ಒಡೆಯರ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದು. ದೇವಾಲಯದ ನಿರ್ಮಾಣ ಕಾರ್ಯಕ್ಕೆ ಗ್ರಾನೈಟ್ ಶಿಲೆ, ಇಟ್ಟಿಗೆ ಹಾಗೂ ಗಾರೆಯನ್ನು ಬಳಸಲಾಗಿದೆ. ಇಲ್ಲಿ ಒಟ್ಟು ೧೨ ಕಂಬಗಳಿದ್ದು ಇವುಗಳೆಲ್ಲವೂ ಚೌಕಕಾರವಾಗಿವೆ.

ಗರ್ಭಗುಡಿಯು ೮x೮ ಅಡಿ ಉದ್ದ ಮತ್ತು ಅಗಲ ವಾಗಿದ್ದು ಸರಳವಾಗಿದೆ. ಗರ್ಭಗುಡಿಯಲ್ಲಿ ಸುಮಾರು ೧ ಅಡಿ ಎತ್ತರವಿರುವ ಶಿವ ಲಿಂಗವಿದೆ. ಈ ಲಿಂಗವು ೧ ಅಡಿ ಪಾಣಿಪೀಠದ ಮೇಲಿದ್ದು ಪಾಣಿಪೀಠವು ಸರಳವಾಗಿದ್ದು ಯಾವುದೇ ಅಲಂಕಾರದಿಂದ ಕೂಡಿರುವುದಿಲ್ಲ. ಇದರ ಮೇಲ್ಭಾಗದಲ್ಲಿ ಭುವನೇಶ್ವರಿ ಇದ್ದು ಚೌಕಕಾರದಲ್ಲಿದೆ. ಇದು ಸರಳ ಹಾಗೂ ಸುಂದರವಾಗಿದ್ದು, ಭುವನೇಶ್ವರಿಯ ಮಧ್ಯಭಾಗದಲ್ಲಿ ಕಮಲದ ಪುಷ್ಪವು ಅರಳಿರುವ ರೀತಿಯಲ್ಲಿ ಕೆತ್ತನೆ ಮಾಡಲಾಗಿದೆ. ಗರ್ಭಗುಡಿಯ ಬಾಗಿಲು ಸರಳವಾಗಿದ್ದು ಯಾವುದೇ ಅಲಂಕಾರವಿಲ್ಲ. ಗರ್ಭಗುಡಿಯ ಲಲಾಟಬಿಂಬದಲ್ಲಿ ಶಿವಲಿಂಗದ ಉಬ್ಬುಶಿಲ್ಪವಿದೆ.

ಸುಕನಾಸಿಯು ಸಹ ಗರ್ಭಗುಡಿಯ ಅಳತೆಯಷ್ಟೇ ಉದ್ದ ಮತ್ತು ಅಗಲವಾಗಿದ್ದು ಸರಳವಾಗಿದೆ. ಇಲ್ಲಿ ಎಡಗೋಡೆಯ ಮೇಲೆ ಒಂದು ಶಿಲ್ಪವಿದೆ ಹಾಗೂ ನಂದಿಯ ಶಿಲ್ಪ ಮತ್ತು ಇದರ ಮುಂದೆ ಶಿವಲಿಂಗವಿದೆ. ಬಹುಶಃ ಮೂಲಲಿಂಗವನ್ನು ಇಲ್ಲಿಟ್ಟಿರಬಹುದು. ಆದರೆ ನಂದಿಯ ವಿಗ್ರಹ ಗರ್ಭಗುಡಿಯ ಲಿಂಗಕ್ಕೆ ನೇರವಾಗಿರದೆ ಸುಕನಾಸಿ ಯಲ್ಲಿ ಪಕ್ಕದಲ್ಲಿದೆ. ಈ ನಂದಿಯ ವಿಗ್ರಹವು ಸುಮಾರು ಎರಡು ಅಡಿ ಉದ್ದ ಮತ್ತು ಅಗಲವಿದೆ. ಸುಕನಾಸಿಯ ಲಲಾಟಬಿಂಬದಲ್ಲಿರುವ ಉಬ್ಬುಶಿಲ್ಪವು ವಿಶೇಷವಾಗಿದ್ದು, ಗೋವು ಶಿವಲಿಂಗಕ್ಕೆ ಹಾಲು ಸುರಿಸುತ್ತಿರುವ ರೀತಿಯಲ್ಲಿ ಕೆತ್ತನೆ ಮಾಡಲಾಗಿದೆ. ಬಾಗಿಲ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಈ ದ್ವಾರಪಾಲಕರು ಕೈಯಲ್ಲಿ ಡಮರು ಹಾಗೂ ಗದೆಯನ್ನು ಹಿಡಿದು ತ್ರಿಭಂಗಿಯಲ್ಲಿ ನಿಂತಿದ್ದಾರೆ.

ನವರಂಗದಲ್ಲಿ ಯಾವುದೇ ರೀತಿಯ ಶಿಲ್ಪಗಳು ಕಂಡು ಬರುವುದಿಲ್ಲ. ಇದು ಉತ್ತರ ಮತ್ತು ದಕ್ಷಿಣಾಭಿಮುಖವಾಗಿ ಸುಮಾರು ೩೦ ಅಡಿ ಮತ್ತು ೮ ಅಡಿ ಅಗಲವಾಗಿದೆ. ನವರಂಗದ ಬಾಗಿಲು ಸರಳವಾಗಿದ್ದು ಯಾವುದೇ ಮೂರ್ತಿ ಶಿಲ್ಪಗಳು ಕಾಣಬರುವುದಿಲ್ಲ. ನವರಂಗದ ಮುಖ್ಯದ್ವಾರದಿಂದ ಬಲಭಾಗ ಎಡಭಾಗಕ್ಕೆ ಎರಡೆರಡು ಕಂಬಗಳಿವೆ. ಈ ಕಂಬಗಳು ಚೌಕಕಾರವಾಗಿದ್ದು ಬೋದಿಗೆಯನ್ನು ಹೊಂದಿವೆ. ದ್ವಾರದ ಪಕ್ಕದಲ್ಲಿರುವ ಕಂಬಗಳಲ್ಲಿ ಉಬ್ಬುಶಿಲ್ಪಗಳಿವೆ. ದ್ವಾರದ ಎಡಭಾಗದ ಕಂಬದಲ್ಲಿ ಒಂದು ತಲೆ ಎರಡು ದೇಹವಿರುವ ಉಬ್ಬುಶಿಲ್ಪವಿದೆ. ಈ ರೀತಿಯ ಶಿಲ್ಪ ಮೇಲುಕೋಟೆ ಚೆಲುವ ನಾರಾಯಣ ದೇವಾಲಯದ ಪ್ರಾಕಾರ ಗೋಡೆಯ ಕಂಬದಲ್ಲಿನ ಶಿಲ್ಪವನ್ನು ಹೋಲುತ್ತದೆ.

ದೇವಾಲಯದ ಮುಂಭಾಗದ ಗೋಡೆಯು ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲಾಗಿದೆ. ಆದರೆ ಪ್ರಸ್ತುತ ಭಿತ್ತಿಯು

* ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಹಾರಾಜ ಕಾಲೇಜು, ಮೈಸೂರು-೫೭೦೦೦೫
** ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-೫೭೦೦೦೬

ಭಗ್ನಗೊಂಡಿದ್ದು ಬರೀ ಇಟ್ಟಿಗೆಗಳು ಕಾಣುತ್ತಿವೆ. ದೇವಾಲಯದ ಹೊರಭಾಗದಲ್ಲಿ ಅಧಿಷ್ಠಾನವು ಮಣ್ಣಿನಲ್ಲಿ ಸಂಪೂರ್ಣವಾಗಿ ಹೂತುಹೋಗಿದ್ದು ಇಟ್ಟಿಗೆಯಿಂದ ನಿರ್ಮಿತಗೊಂಡಿದೆ.

ಶಿಖರವು ಸಹ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿದ್ದು, ಅದು ಸಹ ಭಗ್ನಗೊಂಡು ಅದರ ಮೇಲ್ಭಾಗದಲ್ಲಿ ಹುಲ್ಲಿನ ರಾಶಿಯೇ ಬೆಳೆದು ನಿಂತಿದೆ. ಈ ಶಿಖರವು ದ್ರಾವಿಡ ಮಾದರಿಯ ಶಿಖರವಿದೆ. ದೇವಾಲಯದ ಮುಂಭಾಗಕ್ಕೆ ಹೊಂದಿಕೊಂಡಂತೆ ಮೇಲ್ಭಾಗದ ನಾಲ್ಕು ಮೂಲೆಗಳಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿರುವ ನಾಲ್ಕು ನಂದಿಯ ವಿಗ್ರಹಗಳು ಇವೆ. ಆ ವಿಗ್ರಹಗಳು ಸಹ ಭಗ್ನಗೊಂಡು ಅವಸಾನದ ಅಂಚಿನಲ್ಲಿವೆ. ಈ ಗ್ರಾಮದ ಆಳ್ವಿಕೆಗೆ ಸಂಬಂಧಿಸಿದಂತೆ ಒಂದು ಶಾಸನ ದೊರೆತಿದ್ದು ಇದರ ಕಾಲಮಾನ ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದಾಗಿದ್ದು ಇದು ತಮಿಳು ಲಿಪಿಯಲ್ಲಿದೆ.

ಒಟ್ಟಾರೆಯಾಗಿ ಈ ಮೇಲೆ ವಿವರಿಸಿದ ದೇವಾಲಯ ಶೈವಧರ್ಮವನ್ನು ಹೊರ ಜಗತ್ತಿಗೆ ಸಾರುವ ಹಿನ್ನೆಲೆಯಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳ ಪಾರಂಪರಿಕ ಕಟ್ಟಡವಾಗಿ ಕಲಾ ಮತ್ತು ವಾಸ್ತುಶಿಲ್ಪ ಕ್ಷೇತ್ರವನ್ನು ಉತ್ತೇಜಿಸುವ ಸಲುವಾಗಿ ನನ್ನ ಸಂಶೋಧನಾ ಕ್ಷೇತ್ರದ ಫಲವಾಗಿ ಕಂಡುಬಂದಿರುವುದೆ ಈ ಅರ್ಕೇಶ್ವರ ದೇವಾಲಯ.



ಆಧಾರಸೂಚಿ

೧. ಸಿ. ಹಯವದನರಾವ್, ಮೈಸೂರು ಜಿಲ್ಲಾ ಗ್ಯಾಸೆಟಿಯರ್, ಬೆಂಗಳೂರು, ೧೯೮೬.

೨. ಹಾ.ಮಾ. ನಾಯಕ, ಕನ್ನಡ ವಿಷಯ ವಿಶ್ವಕೋಶ, ಸಂಪುಟ ಸಂಖ್ಯೆ ೫, ಮೈಸೂರು ವಿಶ್ವವಿದ್ಯಾನಿಲಯ, ೧೯೭೯.

೩. ಹಾ.ಮಾ. ನಾಯಕ, ಎಪಿಗ್ರಾಫಿಯ ಕರ್ನಾಟಕ, ಸಂಪುಟ ಸಂಖ್ಯೆ ೪, ಮೈಸೂರು ವಿಶ್ವವಿದ್ಯಾನಿಲಯ, ೧೯೭೫.

೪. ಕೂ.ಸ. ಅಪರ್ಣ, ದೇವಾಲಯಗಳ ವಾಸ್ತುಶಿಲ್ಪ ಪರಿಚಯ, ಹಂಪಿ, ೧೯೯೯.

೫. ಚಾಮರಾಜನಗರ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಪುಟ, ಕೊಳ್ಳೇಗಾಲ ದರ್ಶಿನಿ, ೨೦೦೭.

೬ ಕ್ಷೇತ್ರಕಾರ್ಯದ ವರದಿಯನ್ನು ಆಧರಿಸಿ ಬರೆಯಲಾಗಿದೆ.

೭. ಫೋಟೋದಲ್ಲಿನ ಚಿತ್ರವನ್ನು ಗಮನಿಸುವುದು, ೧ರಿಂದ ೯ರವರೆಗೆ.

೭೨

ಮುಳಗುಂದ ನಾಡಿನ ದೇವಾಲಯಗಳು

ಬಿ. ಸುರೇಶ*

ಮುಳಗುಂದ ನಾಡು ಎಂದು ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಪ್ರದೇಶವು ಇಂದಿನ ಗದಗ ಜಿಲ್ಲೆಯಲ್ಲಿದೆ. ಜಿಲ್ಲೆಯ ದಕ್ಷಿಣಕ್ಕೆ ಗದಗ-ಹಾವೇರಿ ರಾಜ್ಯ ಹೆದ್ದಾರಿ ೬೩ರಲ್ಲಿ ಗದಗ ಪಟ್ಟಣದಿಂದ ಸು. ೧೮ ಕಿ.ಮೀ. ಅಂತರದಲ್ಲಿದೆ. ಇಂದು ಪಟ್ಟಣ ಪಂಚಾಯತಿ ಸ್ವರೂಪವನ್ನು ಹೊಂದಿರುವ ಈ ಪ್ರದೇಶವು ಪ್ರಾಚೀನ ಶಾಸನದಲ್ಲಿ ಮುಳಗುಂದ ಹನ್ನೆರಡು ಎಂದು ಉಲ್ಲೇಖಗೊಂಡಿದ್ದು ಕುರ್ತಕೋಟಿ, ಕಣವಿ, ಹರ್ತಿ, ಎಲೆಹೊಸುರು, ವೆಂಕಟಾಪುರ, ಎಲಿಶಿರೂರು, ಕಲ್ಲೂರು, ಯಳವತ್ತಿ, ಶಿರೂರು, ನೀಲಗುಂದ ಹಾಗೂ ಇನ್ನಿತರ ಗ್ರಾಮಗಳನ್ನು ಹೊಂದಿತ್ತು.

ಇಂದಿನ ಮುಳಗುಂದದ ಮೂಲ 'ಮೂಲಗುಂದ' ಎಂದು ಇದ್ದಿರಬಹುದು. ಮಲ್ಲಷೇಣನೆಂಬ ಕವಿಯು ಕ್ರಿ.ಶ. ೧೧೧ರಲ್ಲಿ ಈ ಪ್ರದೇಶವನ್ನು ಮೂಲಗುಂದ ಎಂದು ಹೆಸರಿಸಿದ್ದಾನೆ, ಮೂಲ>ಮೂಳ>ಮುಳ ಎಂದಾಗಿರಬಹುದು. ಗುಂದ ಎನ್ನುವುದರ ಮೂಲರೂಪ ಕುಂದವಿದ್ದಿರಬಹುದು. ಕನ್ನಡದಲ್ಲಿ ಕುಂದ ಎಂದರೆ, ಗುಡ್ಡ, ಚಿಕ್ಕಬೆಟ್ಟ ಎನ್ನುವ ಅರ್ಥಗಳಿವೆ. ಈ ಹಿನ್ನಲೆಯಲ್ಲಿ ಕುಂದ ಇದ್ದದ್ದು, ಗುಂದ ಆಗಿರಬಹುದು. ಈಗಲೂ ಈ ಪ್ರದೇಶದ ಭೌಗೋಳಿಕ ಹಿನ್ನೆಲೆ ಹಾಗೂ ಸ್ವರೂಪ ನೋಡಿದರೆ ಸುತ್ತಲೂ ಚಿಕ್ಕ-ಚಿಕ್ಕ ಬೋಳು-ಬೋಳಾದ ಬೆಟ್ಟ ಗುಡ್ಡಗಳಿಂದ ಕೂಡಿದೆ. ಹಾಗಾಗಿ ಈ ಪ್ರದೇಶಕ್ಕೆ ಭೌಗೋಳಿಕ ಹಿನ್ನಲೆಯಿಂದಲೇ ಮುಳಗುಂದ ಎನ್ನುವ ಹೆಸರು ಬಂದಿರಬಹುದು.

ಈ ಬೆಟ್ಟಗುಡ್ಡಗಳಲ್ಲಿ ಪ್ರಾಚೀನ ಕಾಲದಿಂದಲೂ ಹೆಚ್ಚು ಜೈನ ಮುನಿಗಳು ವಾಸಿಸುತ್ತಿದ್ದರು ಹಾಗಾಗಿ ಈ ಪ್ರದೇಶಕ್ಕೆ ಮುಳಗುಂದ ಎಂದು ಬಂದಿದೆ ಎಂದೂ ಸಹ ಕೆಲವರು ಅಭಿಪ್ರಾಯಪಡುತ್ತಾರೆ. "ಇಲ್ಲಿನ ಮುನಿಗಳ ಶಿಷ್ಯಮಂಡಳ ಈ ಊರಿನ ಸುತ್ತ-ಮುತ್ತಲ ಗ್ರಾಮಗಳಾದ ನೀರ್ಗುಂದ, ವಕ್ಕುಂದ, ನವಲಗುಂದ, ನರಗುಂದ, ಮುಂತಾದ ಊರುಗಳಿಗೆ ಹಬ್ಬಿಕೊಂಡಿರಬೇಕು" ಎಂದು ಜಿ.ಎಸ್. ಕುಲಕರ್ಣಿಯವರು ತಮ್ಮ ಮುಳಗುಂದದ ಪ್ರಾಚೀನತೆಯಲ್ಲಿ ಹೇಳಿರುವುದನ್ನ ಗಮನಿಸಿದರೆ ಪ್ರಾಯಶಃ (ಮಲ್ಲಶೇಣನ ಸಂಸ್ಕೃತ ಮಹಾಪುರಾಣದಲ್ಲಿ ತೀರ್ಥಶ್ವರೀ 'ಮೂಲಗುನ್ದನಾಮ್ನಿನಗರೇ' ಎಂಬ ಉಲ್ಲೇಖವಿದೆ) ಈ ಪ್ರದೇಶವು ಜೈನಮುನಿಗಳ ವಾಸಸ್ಥಾನವು ಆಗಿದ್ದಿರಬೇಕೆನ್ನಿಸುತ್ತದೆ. ಇದಕ್ಕೆ ಪೂರಕವಾಗಿ ಹೇಳುವುದಾದರೆ, ಇಂದಿಗೂ ಮುಳಗುಂದದಲ್ಲಿ ಹಲವಾರು ಜೈನ ಬಸದಿಗಳು, ಶಿಲ್ಪಗಳು ಹಾಗೂ ಇನ್ನಿತರ ಜೈನಧರ್ಮದ ಕುರುಹುಗಳಿರುವುದನ್ನು ನೋಡುತ್ತೇವೆ. ಪ್ರಸ್ತುತ ಲೇಖನದಲ್ಲಿ ಈ ಪ್ರದೇಶದಲ್ಲಿ ಕಂಡುಬರುವ ದೇವಾಲಯಗಳನ್ನು ಕುರಿತು ಚರ್ಚಿಸಲು ಪ್ರಯತ್ನಿಸಲಾಗಿದೆ.

ಮುಳಗುಂದ ನಾಡಿನ ಐತಿಹಾಸಿಕ ಹಿನ್ನೆಲೆಯನ್ನು ನೋಡುವುದಾದರೆ ಬಾದಾಮಿ ಚಾಲುಕ್ಯರ ಕಾಲದಿಂದಲೇ ಇಲ್ಲಿನ ರಾಜಕೀಯ ವ್ಯವಸ್ಥೆಯನ್ನು ಹೇಳುವ ಕುರುಹುಗಳು ದೊರಕುತ್ತವೆ. ಈ ಪ್ರದೇಶವು ಬದಾಮಿ ಚಾಲುಕ್ಯರ ನಿಯಂತ್ರಣದಲ್ಲಿತ್ತು ಎಂದು ಉಲ್ಲೇಖಿಸುವ ಶಿರಗುಪ್ಪಿಯ ಶಾಸನವನ್ನು ಈ ಪದ್ರೇಶದ ಐತಿಹಾಸಿಕ ಪ್ರಾಚೀನತೆಯನ್ನು ಹೇಳುವ ಮೊದಲ ಶಾಸನವೆಂದು ಹೇಳಬಹುದು. ಇದೇ ಕಾಲಮಾನದಲ್ಲಿ ರಚನೆಗೊಂಡಿರುವ ಮತ್ತೊಂದು ಶಾಸನವು ಕುರ್ತಕೋಟಿಯಲ್ಲಿದ್ದು ವಿಜಯಾದಿತ್ಯನಿಗಿದ್ದ ಸತ್ಯಾಶ್ರಯ, ಪೃಥ್ವೀವಲ್ಲಭ, ಮಹಾರಾಜಾಧಿರಾಜ ಮತ್ತಿತರ ಬಿರುದುಗಳನ್ನು ತಿಳಿಸುವುದರ ಜೊತೆಗೆ ಇಲ್ಲಿನ ಶಿವಾಲಯವು 'ಮುಪ್ಪಣ್ಣ'ನಿಂದ ನಿರ್ಮಾಣಗೊಂಡಿತೆನ್ನುವ ವಿವರವನ್ನು ನೀಡುತ್ತದೆ. ನೀಲಗುಂದ ಶಾಸನವು ರಾಷ್ಟ್ರಕೂಟ ಅರಸ ೧ನೇ ಕೃಷ್ಣನ ಮಗನಾದ ಧ್ರುವ ಹಾಗೂ ಶೀಲಭಟ್ಟಾರಿಕೆಯರನ್ನು ಉಲ್ಲೇಖಿಸುತ್ತಾ ಇವರ ಮಗನಾದ ೩ನೇ ಗೋವಿಂದನನ್ನು ಸಹ ಹೆಸರಿಸಿದೆ. ಚಿಂಚಲಿ, ಕಣವಿ ಹಾಗೂ ಮುಳಗುಂದದ ಶಾಸನಗಳು ಅಮೋಘವರ್ಷ ನೃಪತುಂಗನಿಗೆ ಸಂಬಂಧಿಸಿದ ಮಾಹಿತಿಗಳನ್ನು ಹಾಗೂ ಇನ್ನಿತರ ರಾಷ್ಟ್ರಕೂಟ ಅರಸರುಗಳ ವಿವರಗಳನ್ನು ನೀಡುತ್ತವೆ. ಇದೇ ಕಾಲಾವಧಿಯಲ್ಲಿ ರಚನೆಗೊಂಡಿರುವ ಕುರ್ತಕೋಟಿ ಶಾಸನವು ಇಲ್ಲಿನ ದೇವಾಲಯದ ಉಲ್ಲೇಖ ಹಾಗೂ ಅದರ ಸಾಂಸ್ಕೃತಿಕ ಮಹತ್ವವನ್ನು ತಿಳಿಸುತ್ತದೆ.

ಈ ಪ್ರದೇಶದಲ್ಲಿ ಕಲ್ಯಾಣದ ಚಾಲುಕ್ಯರ ಶಾಸನಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆತಿದ್ದು ಅವುಗಳಲ್ಲಿ ಮುಳಗುಂದದ

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಬಾಲೇನಹಳ್ಳಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ.

ಶಾಸನವು ಇಲ್ಲಿನ ದೇವೇಶ್ವರ (ಅನ್ನದಾನೇಶ್ವರ) ದೇವಾಲಯವನ್ನು ಕುರಿತು ವಿವರಿಸಿದರೆ ಮತ್ತೊಂದು ಶಾಸನವು ಶೋಭನೇಶ್ವರ ದೇವಾಲಯವನ್ನು ಕುರಿತು ವಿವರಣೆಯನ್ನು ನೀಡುತ್ತದೆ. ಇದೇ ರೀತಿ ಹರ್ತಿಯ ಶಾಸನವು ಹರ್ತಿಯಲ್ಲಿನ ಶೋಭನೇಶ್ವರ, ಮಾಗಡಿಯ ಲೋಕೇಶ್ವರ ದೇವಾಲಯಗಳ ನಿರ್ಮಾಣದ ಬಗ್ಗೆ ತಿಳಿಸುತ್ತವೆ.

ಕಲ್ಯಾಣದ ಚಾಲುಕ್ಯರ ನಂತರ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಕಲಚೂರಿಗಳು, ಹೊಯ್ಸಳರು ಹಾಗೂ ವಿಜಯ ನಗರ ಅರಸರುಗಳನ್ನು ಹೆಸರಿಸುವ ಶಾಸನಗಳು ಇಲ್ಲಿ ದೊರೆಯುತ್ತವೆ. ಆದರೆ ಈ ಪ್ರದೇಶದಲ್ಲಿ ನಿರ್ಮಾಣ ಗೊಂಡಿರುವ ದೇವಾಲಯಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ಕಲ್ಯಾಣದ ಚಾಲುಕ್ಯರು ಈ ಪ್ರದೇಶದಲ್ಲಿ ದೀರ್ಘಕಾಲ ಆಳ್ವಿಕೆ ನಡೆಸಿ ಅನೇಕ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಇಲ್ಲಿ ಕಂಡುಬರುವ ಬಹುತೇಕ ದೇವಾಲಯಗಳು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿಯೇ ಇದ್ದು ಬಹುತೇಕವು ಜೀರ್ಣೋದ್ಧಾರ ಗೊಂಡಿವೆ. ಇಲ್ಲಿರುವ ದೇವಾಲಯಗಳು ವಿಭಿನ್ನ ಧರ್ಮ, ಪಂಥಕ್ಕೆ ಸಂಬಂಧಿಸಿದ್ದು ಅವುಗಳಲ್ಲಿ ಹೆಚ್ಚಿನವು ಶೈವ ಧರ್ಮಕ್ಕೊ ಮತ್ತು ವಿರಳವಾಗಿ ಜೈನ, ವೈಷ್ಣವ ಧರ್ಮಕ್ಕೆ ಸೇರಿವೆ.

ಈ ಪ್ರದೇಶದಲ್ಲಿ ಕಂಡುಬರುವ ಪ್ರಾಚೀನತೆಯ ಶಾಸನೋಕ್ತ ದೇವಾಲಯವೆಂದರೆ ಕುರ್ತಕೋಟಿಯ ಶಿವಾಲಯ. ಆದರೆ ಇದು ಇಂದು ಸಂಪೂರ್ಣವಾಗಿ ಅಳಿವಿ ನಂಚಿನಲ್ಲಿದ್ದು ನಾಶವಾಗಿದೆ. 'ಮುಪ್ಪಣ್ಣ'ನು ಈ ಮಹಾ ದೇವಾಲಯ ನಿರ್ಮಿಸಿದ ಬಗ್ಗೆ ಇಲ್ಲಿನ ಶಾಸನವು ಮಾಹಿತಿ ನೀಡಿರುವುದನ್ನು ಗಮನಿಸಿದರೆ ಪ್ರಾಯಶಃ ಇಂದು ಸಂಪೂರ್ಣವಾಗಿ ನಾಶವಾಗಿರುವ ಇಲ್ಲಿನ ಶಿವಾಲಯವೇ ಅದಾಗಿರಬೇಕೆಂದು ಹೇಳಬೇಕಾಗುತ್ತದೆ. ಕಾರಣ ಈ ದೇವಾಲಯವನ್ನು ಹೊರತುಪಡಿಸಿದರೆ ಮತ್ತಾವ ದೇವಾಲಯ ಗಳು ಇಲ್ಲಿ ಇಂದು ಅಸ್ತಿತ್ವದಲ್ಲಿರುವುದಿಲ್ಲ.

ಚಾಲುಕ್ಯ ಅರಸ ೧ನೇ ಜಗದೇಕಮಲ್ಲನ ಮಹಾ ಸಾಮಂತ ನಾದ ಶೋಭರಸನು ಮುಳಗುಂದದಲ್ಲಿ ಶೋಭನೇಶ್ವರ ದೇವಾಲಯ ನಿರ್ಮಿಸಿದ ಬಗ್ಗೆ ಇಲ್ಲಿನ ಶಾಸನ ಮಾಹಿತಿ ನೀಡುತ್ತದೆ. ಹಾಗೆಯೇ ಈತನ ಮತ್ತೊಬ್ಬ ಮಹಾ ಸೇನಾಧಿಪತಿ ಯಾದ ಕೇಶವರಸನು ಮುಳಗುಂದದಲ್ಲಿ ಸ್ವಯಂಭೂ ದೇವಾಲಯ ನಿರ್ಮಿಸಿ ಭೂದಾನ ಮಾಡಿದ ಬಗ್ಗೆ ಮಾಹಿತಿ ನೀಡುತ್ತದೆ.

೧ನೇ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶವನ್ನು ಆಳುತ್ತಿದ್ದ ಬೆಳ್ವಾಳ ಸೋಯಿಮಯ್ಯನು ನಗರೇಶ್ವರ ದೇವಾಲಯಕ್ಕೆ ಭೂದಾನ ಮಾಡಿದ ವಿವರವನ್ನು ಇಲ್ಲಿನ ಶಾಸನವು ನೀಡುತ್ತದೆ (SII Vol-11, ಶಾ.ಸಂ. ೬೪, ಪು.ಸಂ. ೫೪) ಪ್ರಸ್ತುತ ದೇವಾಲಯವು ಕೆರೆಯ ಏರಿಯ ಮೇಲೆ ಪೂರ್ವಾಭಿಮುಖವಾಗಿದೆ.

ಹೊಯ್ಸಳ ವೀರಬಲ್ಲಾಳನ ಮಾಂಡಲಿಕ ಸೋಮಯ್ಯ ಮತ್ತು ನಾಗಯ್ಯರು ಈ ದೇವಾಲಯದ ಪೂಜಾಧಿ ಕಾರ್ಯಗಳು ನಿರಂತರವಾಗಿ ನಡೆಯುವಂತೆ ನೋಡಿ ಕೊಂಡರು ಎಂಬ ಮಾಹಿತಿಯು ಇಲ್ಲಿನ ಶಾಸನದಿಂದ ತಿಳಿಯ ಬಹುದು, (SII Vol-15, ಶಾ.ಸಂ. ೧೩೧, ಪು.ಸಂ. ೧೬೭–೧೨೦೨) ದೈವೇಶ್ವರ ಪಂಡಿತದೇವರು ಚಾಲುಕ್ಯರ ಕಾಲವಧಿಯಲ್ಲಿ ಈ ದೇವಾಲಯದ ಸ್ಥಾನಾಚಾರ್ಯರು. ಈ ದೇವಾಲಯಕ್ಕೆ ಅಂಟಿಕೊಂಡಂತೆ ನಗರೇಶ್ವರ ಮಠವಿದ್ದು ಇದು ಸಮಕಾಲಿನ ಶ್ರೇಷ್ಠ ವಿದ್ಯಾಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿತ್ತೆನ್ನುವ ವಿಷಯವನ್ನು ನಾವು ಶಾಸನದಿಂದ ತಿಳಿಯಬಹುದು.

ಹೊಯ್ಸಳರ ಕಾಲದಲ್ಲಿ ಮಲ್ಲಿಕಾರ್ಜುನ ದೇವರು ಎಂಬುವವರು ಸ್ಥಾನಾಚಾರ್ಯಗಳಾಗಿದ್ದರು. ಇವರು ಋಗ್ವೇದ ಪಂಡಿತರ ತರುವಾಯ ಈ ಹುದ್ದೆಗೆ ಬಂದಿರುವುದನ್ನು ಗಮನಿಸಿದರೆ ಪ್ರಸ್ತುತ ದೇವಾಲಯವು ಅಂದಿನ ಕಾಲದ ಪ್ರಸಿದ್ಧ ದೇವಾಲಯ ಗಳಲ್ಲಿ ಒಂದು ಎಂದು ಹೇಳಬಹುದು. ಮುಳಗುಂದದ ವಿದುರೇಶ್ವರ ದೇವರ ನಂದಾದೀವಿಗೆಗೆ ಇಲ್ಲಿನ ಅನೇಕ ಶೆಟ್ಟಿಗರು, ಐವತ್ತು ತೆಲ್ಲಿಗ ಕುಟುಂಬಗಳು ದಾನ ನೀಡಿದ ಮಾಹಿತಿಯನ್ನು ಇಲ್ಲಿನ ಮತ್ತೊಂದು ಶಾಸನವು ನೀಡುತ್ತದೆ. ೨ನೇ ಜಗದೇಕಮಲ್ಲನ ಅಧಿಕಾರಿಯಾಗಿದ್ದ ಮೇದಿಮಯ್ಯನು ಮುಳಗುಂದದ ಭೀಮೇಶ್ವರ ದೇವಾಲಯಕ್ಕೆ ದಾನ ನೀಡಿದ ವಿವರವನ್ನು ಇಲ್ಲಿನ ಮತ್ತೊಂದು ಶಾಸನ ನೀಡುತ್ತದೆ. (SII Vol-15, ಶಾ.ಸಂ. ೧೩೧, ಪು.ಸಂ. ೫೨–೧೧೪೫) ೩ನೇ ತೈಲಪನು ಮುಳಗುಂದದ ಪಾಳೇಶ್ವರ ದೇವಾಲಯದ ಮಂಟಪ ಮಾಡಿಸಿದ (SII Vol-15 ಶಾ.ಸಂ. ೧೦೩, ಪು.ಸಂ. ೧೦೧–೧೧೫೨) ಬಗ್ಗೆ ಇಲ್ಲಿನ ಶಾಸನವು ವಿವರ ನೀಡುತ್ತವೆ.

ಸಿದ್ದೇಶ್ವರ ದೇವಾಲಯ: ಸಿದ್ದೇಶ್ವರ ದೇವಾಲಯವು ಮುಳಗುಂದ ಪಟ್ಟಣದ ದಕ್ಷಿಣ ಭಾಗದಲ್ಲಿದ್ದು ಪಶ್ಚಿಮಾಭಿಮುಖ ವಾಗಿದೆ. ವಿಶಾಲವಾದ ಪ್ರಾಂಗಣದಲ್ಲಿ ನಿರ್ಮಾಣಗೊಂಡಿ ರುವ ಈ ದೇವಾಲಯವು ವಾಸ್ತುಶಿಲ್ಪ ದೃಷ್ಟಿಯಿಂದ ಗಮನ ಸೆಳೆಯುತ್ತದೆ. ಕ್ರಿ.ಶ. ೧೫ನೇ ಶತಮಾನದಲ್ಲಿ ರಚನೆಗೊಂಡಿರುವ ಇಲ್ಲಿನ ಶಾಸನವು ಸಿದ್ದಯ್ಯದೇವರ ಪೂಜೆಗಾಗಿ ಅರ್ಚಕ ಸಿದ್ದರಾಮಯ್ಯನಿಗೆ ಭೂದಾನ ಮಾಡಿದ ವಿವರವನ್ನು ಉಲ್ಲೇಖಿಸುತ್ತದೆ. ಈ ಅಂಶವನ್ನು ಗಮನಿಸಿದರೆ ದೇವಾಲಯವು ಇದಕ್ಕೂ ಪೂರ್ವದಲ್ಲಿಯೇ ನಿರ್ಮಾಣ

ಗೊಂಡಿರುವುದು ಸ್ಪಷ್ಟ ಹಾಗೂ ಇದರ ವಾಸ್ತುಶೈಲಿಯ ಆಧಾರದ ಮೇಲೆ ಹೇಳಿವುದಾದರೆ ಕ್ರಿ.ಶ. ೧೨-೧೩ನೇ ಶತಮಾನದಲ್ಲಿ ನಿರ್ಮಾಣಗೊಂಡಿರಬೇಕು.

ದೇವಾಲಯವು ತ್ರಿಕೂಟ ಶೈಲಿಯಲ್ಲಿದ್ದು ತಳವಿನ್ಯಾಸದಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳ, ನವರಂಗ, ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಪಶ್ಚಿಮಾಭಿಮುಖವಾಗಿರುವ ಗರ್ಭಗೃಹವೇ ಪ್ರಧಾನವಾಗಿದ್ದು ಮಧ್ಯದಲ್ಲಿ ಶಿವಲಿಂಗವಿದೆ. ಇದರ ಪ್ರವೇಶದ್ವಾರವು ಸಪ್ತಶಾಖೆಗಳಿಂದ ಕೂಡಿದ್ದು ಲತಾ ಸುರಳಿ, ವಜ್ರ, ಸ್ತಂಭ ಶಾಖೆಗಳು ಗಮನ ಸೆಳೆಯುತ್ತವೆ. ಪೇಧ್ಯದಲ್ಲಿ ಗಂಗಾ ಯಮುನೆಯರ ಶಿಲ್ಪಗಳು ಹಾಗೂ ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬು ಶಿಲ್ಪಗಳಿವೆ. ಗರ್ಭಗೃಹದ ಮುಂಭಾಗದಲ್ಲಿ ಮುಚ್ಚಿದ ಅಂತರಾಳವಿದೆ ಅಂತರಾಳದ ಪ್ರವೇಶದ್ವಾರವು ಸಹ ಗರ್ಭಗೃಹದ ಪ್ರವೇಶ ದ್ವಾರದ ರೀತಿಯಲ್ಲಿಯೇ ಅಲಂಕೃತಗೊಂಡಿದ್ದು ಇಕ್ಕೆಲಗಳಲ್ಲಿ ಜಾಲಂಧ್ರ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಉತ್ತರಾಂಗ ಭಾಗದಲ್ಲಿ ಸಮಭಂಗದಲ್ಲಿ ನಿಂತಿರುವ ಶಿವನ ಐದು ಉಬ್ಬುಶಿಲ್ಪಗಳನ್ನು ಖಂಡರಿಸಲಾಗಿದೆ.

ದಕ್ಷಿಣ ಹಾಗೂ ಉತ್ತರಾಭಿಮುಖವಾಗಿರುವ ಉಳಿದೆರಡು ಗರ್ಭಗೃಹಗಳು ಹಾಗೂ ಅಂತರಾಳ ಭಾಗಗಳು ಹೆಚ್ಚು ಕಡಿಮೆ ಇದೇ ರೀತಿಯಲ್ಲಿವೆ. ಈ ಗರ್ಭಗೃಹಗಳಲ್ಲೂ ಸಹ ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಅಂತರಾಳ ಪ್ರವೇಶ ದ್ವಾರದ ಉತ್ತರಾಂಗ ಭಾಗದಲ್ಲಿ ಸಮಭಂಗದಲ್ಲಿ ನಿಂತಿರುವ ೧೧ ಶಿವನ ಉಬ್ಬು ಶಿಲ್ಪಗಳನ್ನು ಖಂಡರಿಸಲಾಗಿದೆ.

ನವರಂಗ : ಮೂರು ಅಂತರಾಳಗಳಿಗೆ ಹೊಂದಿಕೊಂಡಂತೆ ಮಧ್ಯದಲ್ಲಿ ವಿಶಾಲವಾದ ನವರಂಗವಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಭಗಳಿವೆ. ಈ ಕಂಭಗಳು ಪೀಠ-ಪಾದ-ಬಳೆಗಳಾಕಾರದ ದಿಂಡು-ವೃತ್ತಾಕಾರದ ಬೋದಿಗೆಗಳನ್ನ ಹೊಂದಿವೆ. ನಾಲ್ಕು ಕಂಭಗಳಿಗೆ ಹೊಂದಿಕೊಂಡಂತೆ ನಾಟ್ಯ ವೇದಿಕೆ ಹಾಗೂ ಸರಳವಾದ ಭುವನೇಶ್ವರಿಯನ್ನು ನೋಡಬಹುದು.

ಸಭಾಮಂಟಪ : ನವರಂಗದ ಮುಂಭಾಗದಲ್ಲಿ ೩೨ ಕಂಬಗಳಿಂದ ಕೂಡಿದ ವಿಶಾಲವಾದ ಸಭಾಮಂಟಪವಿದೆ. ಇಲ್ಲಿರುವ ಕಂಬಗಳು ಸರಳವಾಗಿದ್ದು ಯಾವುದೇ ಶಿಲ್ಪಗಳಿರುವುದಿಲ್ಲ. ಇದರ ವಾಸ್ತು ರಚನೆಯನ್ನು ಗಮನಿಸಿದರೆ ನಂತರ ಕಾಲದಲ್ಲಿ ನಿರ್ಮಾಣಗೊಂಡಿರಬೇಕೆನಿಸುತ್ತದೆ. ಸಭಾಮಂಟಪವು ಮೂರು ಪ್ರವೇಶ ದ್ವಾರಗಳನ್ನು ಹೊಂದಿದೆ. ಪಶ್ಚಿಮಾಭಿಮುಖವಾಗಿರುವದೇ ಪ್ರಧಾನ ಪ್ರವೇಶದ್ವಾರವಾಗಿದ್ದು ನಿರಾಲಂಕಾರವಾಗಿದೆ. ಇದರ ಮುಂಭಾಗದಲ್ಲಿ ಚಿಕ್ಕದಾದ ಮುಖಮಂಟಪವನ್ನು ನೋಡಬಹುದು. ಮುಖಮಂಟಪದಲ್ಲಿ ಸುತ್ತಲೂ ಕಕ್ಷಾಸನವಿದೆ.

ಈಶ್ವರ ದೇವಾಲಯವು ಏರು ವಿನ್ಯಾಸದಲ್ಲಿ ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟಕುಮದ ಹಾಗೂ ಅಲಂಕೃತ ಪಟ್ಟಿಕೆಗಳನ್ನು ನೋಡಬಹುದು. ಈ ಅಲಂಕೃತ ಪಟ್ಟಿಕೆಗಳಲ್ಲಿ ಆಯುಧಗಳನ್ನು ಹಿಡಿದು ಸಾಗುತ್ತಿರುವ ಸೈನಿಕರ ದೃಶ್ಯಾವಳಿಗಳು, ಕುದುರೆ, ಒಂಟೆ, ಆನೆ ಹಾಗೂ ಇನ್ನಿತರ ಪ್ರಾಣಿಗಳ ಉಬ್ಬುಶಿಲ್ಪಗಳ ಪಟ್ಟಿಗಳಿವೆ. ಅಧಿಷ್ಠಾನದ ಮೇಲ್ಭಾಗದಲ್ಲಿ ಸರಳವಾದ ಭಿತ್ತಿ ಇದೆ. ಪ್ರತಿಯೊಂದು ಗರ್ಭಗೃಹಗಳ ಹಿಂಭಾಗದಲ್ಲಿ ಮೂರು ದಿಕ್ಕಿನಲ್ಲೂ ದೇವಕೋಷ್ಠಗಳಿವೆ. ಆದರೆ ಇಲ್ಲಿ ಯಾವುದೇ ಶಿಲ್ಪಗಳಿರುವದಿಲ್ಲ. ಈ ದೇವಕೋಷ್ಠಗಳು ಒಂದೇ ರೀತಿಯಲ್ಲಿದ್ದು ಸರಳ ಅಲಂಕರಣಗಳಿಂದ ಕೂಡಿದೆ ಮೇಲ್ಭಾಗದಲ್ಲಿ ಕಿರು ದ್ರಾವಿಡಶೈಲಿಯ ಶಿಖರಗಳನ್ನು ಅಳವಡಿಸಲಾಗಿದೆ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತ ಹಾಗೂ ಮೂರು ಗರ್ಭಗೃಹಗಳ ಮೇಲ್ಭಾಗದಲ್ಲೂ ಪ್ರತ್ಯೇಕವಾಗಿ ನಿರ್ಮಾಣಗೊಂಡಿರುವ ಕದಂಬ ನಾಗರ ಶೈಲಿಯ ಗೋಪುರ, ಗ್ರೀವ ಹಾಗೂ ಸ್ತೂಪಗಳನ್ನು ನೋಡಬಹುದು. ಸಭಾಮಂಟಪದ ಮುಖ್ಯ ಪ್ರವೇಶದ್ವಾರದ ಮೇಲ್ಭಾಗದಲ್ಲಿ ಸಮಭಂಗದಲ್ಲಿರುವ ಹನ್ನೆರಡು ಸ್ಥಾನಿಕ ಶಿವನ ಉಬ್ಬುಶಿಲ್ಪಗಳಿವೆ. ದೇವಾಲಯದ ಸುತ್ತಲೂ ವಿಶಾಲವಾದ ಪ್ರಾಂಗಣವಿದೆ.

ಅನ್ನದಾನೇಶ್ವರ ದೇವಾಲಯ: ಮುಳಗುಂದ ಪಟ್ಟಣಕ್ಕೆ ಹೊಂದಿಕೊಂಡಂತೆ ಇರುವ ಕೆರೆಯ ಏರಿಯ ಮೇಲೆ ಪ್ರಸ್ತುತ ದೇವಾಲಯವಿದೆ. ದೇವಾಲಯವು ಪೂರ್ವಾಭಿಮುಖವಾಗಿದ್ದು, ಇಲ್ಲಿರುವ ಶಾಸನಗಳಲ್ಲಿ ಸ್ವಯಂಭು ದೇವಾಲಯ, ಶ್ರೀಪಾಳೇಶ್ವರ ದೇವಾಲಯ ಎಂಬುದಾಗಿ ಉಲ್ಲೇಖಿತಗೊಂಡಿದೆ. ಕ್ರಿ.ಶ. ೧೨ನೇ ಶತಮಾನದಲ್ಲಿ ಸ್ಥಳೀಯವಾಗಿ ಆಳ್ವಿಕೆ ನಡೆಸುತ್ತಿದ್ದ, ಶ್ರೀಪಾಳರಸನೆಂಬ ದಂಡನಾಯಕನಿಂದ ಈ ದೇವಾಲಯ ನಿರ್ಮಾಣಗೊಂಡಿದ್ದರಿಂದ ಶ್ರೀ ಪಾಳರಸ ದೇವಾಲಯವೆಂದು ಇದಕ್ಕೆ ಹೆಸರು ಬಂದಿರಬಹುದು. ಪ್ರಸ್ತುತ ದೇವಾಲಯವನ್ನು ಶ್ರೀ ಅನ್ನದಾನೇಶ್ವರ ದೇವಾಲಯವೆಂದು ಕರೆಯಲಾಗುತ್ತದೆ. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಅನ್ನದಾನ ಮಠವಿದ್ದುದ್ದಾಗಿ ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಆದರೆ ಮಠದ ಅಸ್ತಿತ್ವದ ಬಗ್ಗೆ ಪ್ರಸ್ತುತ ಯಾವುದೇ ಕುರುಹುಗಳು ಇರುವುದಿಲ್ಲ.

ಸ್ವಯಂಭು ದೇವಾಲಯಕ್ಕೆ ಮುಳಗುಂದ ನಗರದ ಮಹಾಜನ ಪ್ರಮುಖರು ಪವಿತ್ರರಾಶಿ ಮುನಿಗಳ ಪಾದಪೂಜೆ ಮಾಡಿ ಭೂಮಿಯನ್ನು ದಾನವಾಗಿ ಕೊಟ್ಟಿರುವ ವಿವರವನ್ನು, ನಾಗರಸನೆಂಬ ಮತ್ತೊಬ್ಬ ಅಧಿಕಾರಿಯು ಈ ದೇವರ

ನಂದಾದೀಪಿಗೆಗಾಗಿ ಶ್ರೀ ಸೋಮೇಶ್ವರ ದೇವರ ಪಾದಪ್ರಕ್ಷಾಳನ ಮಾಡಿ ಭೂದಾನ ಮಾಡಿದ ವಿವರವನ್ನು, ಮಾಹಿದೇವನೆಂಬ ಮತ್ತೊಬ್ಬ ಅಧಿಕಾರಿಯು ಈ ದೇವಾಲಯಕ್ಕೆ ಅನೇಕ ವಸ್ತುಗಳನ್ನು ದಾನ ಬಿಟ್ಟ ವಿವರಗಳನ್ನು ಇಲ್ಲಿನ ಶಾಸನಗಳನ್ನು ತಿಳಿಸುತ್ತವೆ. ಈ ಅಂಶಗಳನ್ನು ಗಮನಿಸಿದರೆ ಪ್ರಸ್ತುತ ದೇವಾಲಯವು ಪ್ರಾಚೀನ ಕಾಲದಲ್ಲಿ ಸಾಂಸ್ಕೃತಿಕವಾಗಿ ತುಂಬಾ ಮಹತ್ವವಾದ ಸ್ಥಾನವನ್ನ ಹೊಂದಿದ್ದಿತು ಎಂದು ಹೇಳ ಬಹುದು.

ದೇವಾಲಯವು ದ್ವಿಕೂಟ ಶೈಲಿಯಲ್ಲಿದ್ದು ಪೂರ್ವಾಭಿ ಮುಖವಾಗಿದೆ. ತಳ ವಿನ್ಯಾಸದಲ್ಲಿ ಎರಡು ಗರ್ಭಗೃಹಗಳು, ಅಂತರಾಳ ಹಾಗೂ ನವರಂಗಗಳನ್ನ ಹೊಂದಿದೆ. ಪೂರ್ವಾಭಿ ಮುಖವಾಗಿರುವ ಗರ್ಭಗೃಹವೇ ಪ್ರಧಾನವಾಗಿದ್ದು ಮಧ್ಯದಲ್ಲಿ ಶಿವಲಿಂಗವಿದೆ. ಪ್ರವೇಶ ದ್ವಾರವು ಪಂಚಶಾಖೆಗಳಿಂದ ಅಲಂಕೃತಗೊಂಡಿದೆ. ಲಳಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪ ವಿದೆ ಇದರ ಮುಂಭಾಗದಲ್ಲಿ ಚಿಕ್ಕದಾದ ಅಂತರಾಳವಿದ್ದು ಇದರ ಪ್ರವೇಶ ದ್ವಾರವು ಗರ್ಭಗೃಹದ ಪ್ರವೇಶದ್ವಾರದ ಮಾದರಿಯಲ್ಲಿಯೇ ಇದೆ. ದಕ್ಷಿಣಾಭಿಮುಖವಾಗಿರುವ ಮತ್ತೊಂದು ಗರ್ಭಗೃಹವು ಸಂಪೂರ್ಣವಾಗಿ ಭಗ್ನಗೊಂಡಿದ್ದು ಜೀರ್ಣೋದ್ಧಾರಗೊಳ್ಳುತ್ತಿದೆ. ಇದರ ಮುಂಭಾಗದಲ್ಲಿ ಚಿಕ್ಕದಾದ ತೆರೆದ ಅಂತರಾಳವಿದೆ. ಈ ಎರಡು ಅಂತರಾಳಗಳಿಗೆ ಹೊಂದಿ ಕೊಂಡಂತೆ ನವರಂಗವಿದೆ. ನವರಂಗದ ಮಧ್ಯದಲ್ಲಿ ನಾಟ್ಯ ವೇದಿಕೆ ಇದ್ದು, ಇಲ್ಲಿ ನಾಲ್ಕು ಚಾಲುಕ್ಯ ಶೈಲಿಯ ಕಂಭಗಳನ್ನು ನೋಡಬಹುದು.

ಗರ್ಭಗೃಹದ ಭಿತ್ತಿಯು ಸರಳವಾಗಿದೆ ಭಿತ್ತಿಯ ಮೇಲ್ಭಾಗದಲ್ಲಿ ಕಪೋತ ಹಾಗೂ ವೇಸರ ಶೈಲಿಯ ದ್ವಿತಲ ವಿಮಾನವಿದೆ. ಇಲ್ಲಿ ಸರಸ್ವತಿ, ಲಕ್ಷ್ಮಿ, ಭೈರವ, ಹಾಗೂ ಇನ್ನಿತರ ಶಿಲ್ಪಗಳಿವೆ. ಕೇಂದ್ರೀಯ ಪುರಾತತ್ವ ಇಲಾಖೆಯವರು ದೇವಾಲಯದ ಜೀರ್ಣೋದ್ಧಾರ ಕಾರ್ಯ ಕೈಗೊಂಡಿರುವರು.

ನಗರೇಶ್ವರ ದೇವಾಲಯ: ಮುಳಗುಂದ ನಗರದ ಮಧ್ಯಭಾಗದಲ್ಲಿ ಈ ದೇವಾಲಯವಿರುವದರಿಂದ ಬಹುಶಃ ಇದಕ್ಕೆ ಈ ಹೆಸರು ಬಂದಿರಬಹುದು. ಇಲ್ಲಿರುವ ಶಾಸನವು ಬಲ್ಲಶೆಟ್ಟಿ, ಧರ್ಮಶೆಟ್ಟಿ, ಕೃತಯುಗಶೆಟ್ಟಿ ಹಾಗೂ ಮೊದಲಾದ ವರು ದೇವಾಲಯಕ್ಕೆ ದಾನ ನೀಡಿದ ವಿವರಗಳನ್ನು ತಿಳಿಸುತ್ತದೆ. ಮುಳಗುಂದವು ಸಾಂಸ್ಕೃತಿಕವಾಗಿ ಶ್ರೀಮಂತ ವಾಗಿದ್ದಂತೆ ಆರ್ಥಿಕ ಚಟುವಟಿಕೆಗಳ ಕೇಂದ್ರವು ಆಗಿದ್ದಿರಬೇಕು. ಇದೊಂದು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದರಿಂದಲೇ ಇಲ್ಲಿ ನೆಲೆಸಿದ್ದ ಶೆಟ್ಟಿಗಳು ದೇವಾಲಯಕ್ಕೆ ಉದಾರವಾದ ದಾನ ನೀಡಿರಬಹುದು.

ದೇವಾಲಯವು ತಳವಿನ್ಯಾಸದಲ್ಲಿ ಸರಳವಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಬೃಹತ್ ಶಿವಲಿಂಗವಿದೆ. ಇದರ ಪ್ರವೇಶ ದ್ವಾರವು ಪಂಚಶಾಖೆಗಳಿಂದ ಕೂಡಿದ್ದು ರತ್ನ ಹಾಗೂ ಸ್ತಂಭ ಶಾಖೆಗಳು ಗಮನ ಸೆಳೆಯುತ್ತವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮುಂಭಾಗದಲ್ಲಿ ಇಷ್ಟೇ ವಿಸ್ತೀರ್ಣದ ಅಂತರಾಳವಿದ್ದು, ಇದರ ಪ್ರವೇಶದ್ವಾರವು ಸಹ ಗರ್ಭಗೃಹ ಪ್ರವೇಶದ್ವಾರದ ಮಾದರಿಯಲ್ಲಿಯೇ ಇದ್ದು ಮಧ್ಯದಲ್ಲಿ ನಂದಿಯ ಶಿಲ್ಪವಿದೆ. ಇಕ್ಕೆಲಗಳಲ್ಲಿ ಜಾಲಂಧ್ರ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದರ ಮುಂಭಾಗದಲ್ಲಿ ನಾಲ್ಕು ಕಂಭಗಳ ಸರಳವಾದ ನವರಂಗವಿದೆ.

ಗರ್ಭಗೃಹದ ಭಿತ್ತಿಯು ಅತ್ಯಂತ ಸರಳವಾಗಿದ್ದು ಮೇಲ್ಭಾಗದಲ್ಲಿ ಕದಂಬನಾಗರ ಶೈಲಿಯ ಶಿಖರವಿದೆ. ಈ ದೇವಾಲಯವು ಸಹ ಇತ್ತೀಚಿಗೆ ಜೀರ್ಣೋದ್ಧಾರಗೊಂಡಿದೆ. ದೇವಾಲಯಕ್ಕೆ ಹೊಂದಿಕೊಂಡಂತೆ ಉತ್ತರಕ್ಕೆ ಚಿಕ್ಕದಾದ ಮತ್ತೊಂದು ಗುಡಿ ಇದೆ. ಇದನ್ನು ಸ್ಥಳೀಯರು ನಗರೇಶ್ವರ ಮಠ ಎಂದು ಕರೆಯುತ್ತಾರೆ.

ಜೈನ ಬಸದಿಗಳು: ಮುಳಗುಂದವು ಪ್ರಾಚೀನ ಕಾಲದಲ್ಲಿ ಜೈನಮುನಿಗಳ ಪ್ರಮುಖ ವಾಸಸ್ಥಾನವಾಗಿದ್ದಿತು ಎಂದು ಇಲ್ಲಿನ ಅನೇಕ ಶಾಸನಗಳು ನಿರೂಪಿಸುತ್ತವೆ. ಹಾಗಾಗಿ ಇದಕ್ಕೆ ಪೂರಕವೆಂಬಂತೆ ಇಂದಿಗೂ ಸಹ ಇಲ್ಲಿ ಅನೇಕ ಜೈನ ಬಸದಿಗಳಿರುವುದನ್ನು ನೋಡುತ್ತೇವೆ. ಅವುಗಳಲ್ಲಿ ಚಂದ್ರನಾಥ ಬಸದಿ, ಪಾರ್ಶ್ವನಾಥ ಬಸದಿಗಳು ಪ್ರಮುಖವು.

ಚಂದ್ರನಾಥ ಬಸದಿ: ಮುಳಗುಂದ ಪಟ್ಟಣದ ದಕ್ಷಿಣ ಮಧ್ಯಭಾಗದಲ್ಲಿ ಚಿಕ್ಕ ಬೆಟ್ಟವಿದೆ. ಇಲ್ಲಿ ಅನೇಕ ಜೈನ ಕುರುಹು ಗಳಿವೆ. ಅವುಗಳಲ್ಲಿ ಚಂದ್ರನಾಥ ಬಸದಿಯು ಪ್ರಮುಖ. ಇಲ್ಲಿರುವ ರಾಷ್ಟ್ರಕೂಟ ಅರಸ ಎರಡನೇ ಕೃಷ್ಣನ ಕಾಲಾವಧಿ ಯಲ್ಲಿ ರಚನೆಗೊಂಡಿರುವ ಶಾಸನವು ಮುಳಗುಂದದ ವೈಶ್ಯನಾದ ಚೀಕಾರ್ಯನು ಈ ಬಸದಿಯನ್ನು ಕಟ್ಟಿಸಿದನೆಂದು, ಈತನ ಮಗನಾದ ಅರಸಾರ್ಯನು ಪೂಜಾದಿಕಾರ್ಯಗಳು ನೆರವೇರಿಕೊಂಡು ಹೋಗುವಂತೆ ಮಾಡಿದನೆಂದು ಉಲ್ಲೇಖಿಸುತ್ತದೆ.

ಪ್ರಾರಂಭದಲ್ಲಿ ಏಕಕೂಟವಾಗಿದ್ದ ಈ ಬಸದಿಗೆ ಕ್ರಿ.ಶ. ೧೧-೧೨ನೇ ಶತಮಾನದಲ್ಲಿ ನವರಂಗದ ಇಕ್ಕೆಲಗಳಲ್ಲಿ ಚಿಕ್ಕದಾದ ಮತ್ತೆರಡು ಗರ್ಭಗೃಹಗಳನ್ನು ಸೇರಿಸಲಾಗಿದೆ. ಹಾಗಾಗಿ ಪ್ರಸ್ತುತ ಈ ಜಿನಾಲಯವು ತ್ರಿಕೂಟ ಶೈಲಿಯಲ್ಲಿದ್ದು ಯಾವುದೇ ಜಿನಮೂರ್ತಿಗಳಿರುವದಿಲ್ಲ. ಉತ್ತರಾಭಿಮುಖ ವಾಗಿರುವ ಮೂಲ ಗರ್ಭಗೃಹವೇ ಪ್ರಧಾನವಾಗಿದ್ದು ಪ್ರಸ್ತುತ ಯಾವುದೇ ಶಿಲ್ಪಗಳಿರುವದಿಲ್ಲ (ಮೂಲತಃ ಚಂದ್ರನಾಥ ತೀರ್ಥಂಕರರ ಶಿಲ್ಪವಿದ್ದಿರಬೇಕು). ಗರ್ಭಗೃಹದ ಪ್ರವೇಶ ದ್ವಾರವು ಸರಳ ಪಟ್ಟಿಕೆಗಳಿಂದ ಕೂಡಿದೆ. ಉಳಿದೆರಡು ಗರ್ಭ



ಚಂದ್ರನಾಥ ಬಸದಿ, ಮುಳಗುಂದ

ಗೃಹಗಳು ಸಹ ಇದೇ ಮಾದರಿಯಲ್ಲಿವೆ. ಮೂಲ ಗರ್ಭ ಗೃಹದ ಮುಂಭಾಗದಲ್ಲಿ ನವರಂಗ ಭಾಗವಿದೆ. ಮಧ್ಯದಲ್ಲಿ ನಾಲ್ಕು ಕಂಭಗಳಿಂದ ಕೂಡಿದ ನಾಟ್ಯವೇದಿಕೆ ಇದೆ. ಹಾಗೂ ಇದರ ಸುತ್ತಲೂ ಎಂಟು ಕಂಭಗಳಿವೆ. ಹಾಗಾಗಿ ಇದನ್ನು ಹಜಾರವೆಂದೂ ಕರೆಯಬಹುದು. ಮೂಲ ಗರ್ಭಗೃಹದ ಹಿಂಭಾಗದಲ್ಲಿ ಮೂರು ದಿಕ್ಕುಗಳಲ್ಲಿರುವ ಆನೆಯ ಶಿಲ್ಪಗಳು ಗಮನ ಸೆಳೆಯುತ್ತವೆ. ಎರಡು ಅಂತಸ್ತಿನ ಚಿಕ್ಕ ಮಂಟಪವನ್ನು ಹೊತ್ತು ಚಲಿಸುತ್ತಿರುವ ಆನೆಯು ತುಂಬಾ ಆಕರ್ಷಣೀಯ ವಾಗಿದೆ. ಪ್ರಾಯಶಃ ಇದು ತೀರ್ಥಂಕರರ ಪಂಚ ಕಲ್ಯಾಣೋತ್ಸವಗಳಲ್ಲಿ ಒಂದನ್ನು ನಿರೂಪಿಸುತ್ತಿರಬೇಕು.

ಪಾರ್ಶ್ವನಾಥ ಬಸದಿ: ಚಂದ್ರನಾಥ ಬಸದಿಯ ಪಕ್ಕದಲ್ಲಿಯೇ ಪ್ರಸ್ತುತ ಬಸದಿ ಇದ್ದು ಇದೂ ಸಹ ಉತ್ತರಾಭಿ ಮುಖವಾಗಿದೆ. ಇಲ್ಲಿರುವ ಶಾಸನವು ಇದನ್ನು ಸಿಡಿಲ ಶ್ರೀ ಜಿನಪಾರ್ಶ್ವನಾಥ ಮಹಾಚೈತ್ಯಾಲಯ ಎಂದು ಉಲ್ಲೇಖಿಸಿದೆ. ಕ್ರಿ.ಶ. ೫-೧೬ನೇ ಶತಮಾನದಲ್ಲಿ ದೇಶಿಗಣಾಗ್ರೇಸರವೆನಿಸಿದ ಸಹಸ್ರಕೀರ್ತಿಯು ಇದನ್ನು ಜೀರ್ಣೋದ್ಧಾರಗೊಳಿಸಿದನೆಂದು ಇಲ್ಲಿನ ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ.

ಗರ್ಭಗೃಹದಲ್ಲಿ ಮೂಲತಃ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವಿದ್ದಿರಬೇಕು. ಆದರೆ ಪ್ರಸ್ತುತ ಇಲ್ಲಿ ಯಾವುದೇ ಶಿಲ್ಪವಿರುವುದಿಲ್ಲ. ಗರ್ಭಗೃಹದ ಮುಂಭಾಗದಲ್ಲಿ ಸ್ವಲ್ಪ ವಿಶಾಲವಾದ ಅಂತರಾಳ ಭಾಗವಿದೆ. ಇದರ ಮುಂಭಾಗ ದಲ್ಲಿ ಮೂವತ್ತೆರಡು ಕಂಭಗಳ ವಿಶಾಲವಾದ ತೆರೆದ ಸಭಾಮಂಟಪವಿದೆ. ಇದರ ವಾಸ್ತುರಚನಾ ಶೈಲಿಯನ್ನು ನೋಡಿದರೆ ವಿಜಯನಗರ ಕಾಲದ್ದೆನಿಸುತ್ತದೆ. ಮಧ್ಯದ ನಾಲ್ಕು ಕಂಭಗಳಿಗೆ ಹೊಂದಿಕೊಂಡಂತೆ ಚಿಕ್ಕದಾದ ಭುವನೇಶ್ವರಿ ಇದೆ. ಇಲ್ಲಿರುವ ಕಂಭಗಳು ವಿಭಿನ್ನ ಶೈಲಿಯಲ್ಲಿದ್ದು ಸುತ್ತಲೂ ಕಕ್ಷಾಸನವಿದೆ.

ಹೀಗೆ ಈ ಮೇಲೆ ಚರ್ಚಿಸಿದ ದೇವಾಲಯಗಳಷ್ಟೇ ಅಲ್ಲದೇ ಇಲ್ಲಿ ಇನ್ನೂ ಅನೇಕ ದೇವಾಲಯಗಳಿದ್ದು ಅವುಗಳಲ್ಲಿ ಭೈರವೇಶ್ವರ, ಶೋಭನೇಶ್ವರ, ಬಸವೇಶ್ವರ, ಈಶ್ವರ, ಭೀಮೇಶ್ವರ, ಶ್ರೀರಾಮ, ವೀರನಾರಾಯಣ ಹಾಗೂ ಇನ್ನಿತರ ದೇವಾಲಯ ಗಳನ್ನು ಹೆಸರಿಸಬಹುದು. ಆದರೆ ಇವುಗಳು ವಾಸ್ತುಶೈಲಿ ದೃಷ್ಟಿಯಿಂದ ಅಷ್ಟೇನೂ ಆಕರ್ಷಣೀಯವಾಗಿರುವುದಿಲ್ಲ.

ಆಧಾರಸೂಚಿ

೧. ಎಫಿಗ್ರಾಫಿಯಾ ಇಂಡಿಕಾ, ಸಂಪುಟ ೬, ೧೩, ೧೬, ೨೬.

೨. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಪುಟ ೧ ಮತ್ತು ೨.

೩. ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲೆ ಶಾಸನಸೂಚಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫.

೪. ಹಿರೇಮಠ ಆರ್.ಸಿ. (ಸಂ) ಕನ್ನಡ ಶಾಸನ ಸಂಪದ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫.

೫. ರಿತ್ತಿ ಶ್ರೀನಿವಾಸ, ಮುಳಗುಂದ ನಾಡು, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೯.

೬. ಧನವಂತ ಹಾಜವಗೋಳ, ಮುಳಗುಂದ ನಾಡು ಒಂದು ಅಧ್ಯಯನ, ಮಹಾದೇವಿ ಪ್ರಕಾಶನ, ಧಾರವಾಡ ೨೦೦೪.

೭೩

ವಿಜಯನಗರ ಕಾಲದ ಚಿಕ್ಕರಾಂಪುರ ವೀರಭದ್ರೇಶ್ವರ ದೇವಾಲಯ

ಗೀತಾ.ಸಿ. ಪೊಲೀಸ ಪಾಟೀಲ್*

ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶ ವಿಜಯನಗರ ವಾಸ್ತುಕಲೆಯ ಶ್ರೀಮಂತ, ಮಾದರಿ ಪ್ರದೇಶವಾಗಿದೆ. ಹಂಪಿಯಲ್ಲಿ ಕೇವಲ ಭವ್ಯವಾದ ದೇವಾಲಯಗಳು ಅಷ್ಟೇ ಅಲ್ಲ ಪೌರ ಹಾಗೂ ರಕ್ಷಣಾ ವಾಸ್ತುಶಿಲ್ಪ ಕಟ್ಟಡಗಳು ಹಲವಾರಿದ್ದು ತಮ್ಮದೇ ಆದ ವೈಶಿಷ್ಟ್ಯತೆಯನ್ನು ಹೊಂದಿವೆ.

ಹಂಪಿಯ ನೆರೆ ಪ್ರದೇಶವಾದ ಆನೆಗೊಂದಿಯು ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿಯಾಗಿತ್ತು. ಹಂಪಿ ಹಾಗೂ ಆನೆಗೊಂದಿಯ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಲ್ಲಿ ವಿಜಯನಗರ ಕಾಲದ ವಾಸ್ತುಸ್ಮಾರಕಗಳು ಕಂಡು ಬರುತ್ತಿದ್ದು ಒಟ್ಟಾರೆ ಹಂಪಿಯ ಸಾಂಸ್ಕೃತಿಕ ವ್ಯಾಪ್ತಿಯನ್ನು ಸೂಚಿಸುತ್ತವೆ.

ಹಂಪಿ ಆನೆಗೊಂದಿ ಪರಿಸರದ ಸುತ್ತಮುತ್ತಲಿನ ಬೆಟ್ಟ ಗುಡ್ಡಗಳು, ಗ್ರಾಮಗಳಲ್ಲಿ ಅಲ್ಲಲ್ಲಿ ವಿಜಯನಗರ ಕಾಲದ ದೇವಾಲಯ, ಸ್ಮಾರಕಗಳಿದ್ದು ಇನ್ನೂ ಹಲವು ಅಜ್ಞಾತವಾಗಿಯೇ ಇವೆ. ಇಂಥ ಒಂದು ಅಜ್ಞಾತ ದೇವಾಲಯವೇ ಚಿಕ್ಕರಾಂಪುರ ಬಳಿಯ ವೀರಭದ್ರೇಶ್ವರ ದೇವಾಲಯ, ಈ ದೇವಾಲಯದ ಬಗೆಗೆ ಕೊಪ್ಪಳ ಜಿಲ್ಲಾ ದೇವಾಲಯ ಕೋಶದಲ್ಲಾಗಲಿ ಅಥವಾ ಇತರ ಗ್ರಂಥ, ಲೇಖನಗಳಲ್ಲಿ ವರದಿ ಅಥವಾ ಅಧ್ಯಯನದ ವಿವರಗಳಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಅಜ್ಞಾತವಾಗಿರುವ ಈ ದೇವಾಲಯದ ಬಗೆಗೆ ಬೆಳಕು ಚೀರುವುದೇ ನನ್ನ ಪ್ರಬಂಧದ ಉದ್ದೇಶವಾಗಿದೆ.

ಪ್ರಸ್ತುತ ವೀರಭದ್ರೇಶ್ವರ ದೇವಾಲಯವು ಆನೆಗೊಂದಿಯಿಂದ ಉತ್ತರಕ್ಕೆ ಸು. ೯ ಕಿ.ಮೀ. ದೂರದಲ್ಲಿದೆ. ಚಿಕ್ಕರಾಂಪುರ ಹಾಗೂ ರಾಂಪೂರ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಯ ಚಿಕ್ಕರಾಂಪೂರ ಕ್ರಾಸ್‌ದಿಂದ ೪ ಕಿ.ಮೀ. ಅಂತರದಲ್ಲಿ ರಸ್ತೆಯ ಬಲಬದಿಯಲ್ಲಿ ಈ ದೇವಾಲಯವಿದೆ. ದೇವಾಲಯದ ಹಿಂಬದಿಯಲ್ಲಿ ಎತ್ತರವಾದ ವ್ಯಾಪಕವಾಗಿರುವ ಬೆಟ್ಟಗಳಿವೆ. ದೇವಾಲಯದಲ್ಲಿ ಅಥವಾ ಸುತ್ತಮುತ್ತಲೂ ಯಾವುದೇ ಶಾಸನಗಳಿಲ್ಲ. ಆದರೆ ಗರ್ಭಗೃಹದಲ್ಲಿ ಸುಸ್ಥಿತಿಯಲ್ಲಿ ವೀರಭದ್ರನ ಶಿಲ್ಪವಿದೆ. ಹಾಗಾಗಿ ಇದು ವೀರಭದ್ರೇಶ್ವರ ದೇವಾಲಯವೆಂದು ನಿಸ್ಸಂದೇಹವಾಗಿ ನಿರ್ಧರಿಸಬಹುದು.

ದೇವಾಲಯವು ಪ್ರಸ್ತುತವಾಗಿ ಬಹುಮಟ್ಟಿಗೆ ಶಿಥಿಲವಾಗಿದೆ. ಗರ್ಭಗೃಹದ ಮೇಲಿನ ಗೋಪುರ ಪ್ರದಕ್ಷಿಣಾಪಥ ಅಂತರಾಳದ ಸಭಾಮಂಟಪದ ಛತ್ತು ಸಂಪೂರ್ಣ ನಾಶವಾಗಿವೆ.

ದೇವಾಲಯವು ಗರ್ಭಗೃಹ, ಗರ್ಭಗೃಹದ ಸುತ್ತಲೂ ಪ್ರದಕ್ಷಣಾ ಪಥ, ಮತ್ತು ಸಭಾಮಂಟಪಗಳನ್ನು ಹೊಂದಿದ್ದು, ಐದು ಅಂಕಣಗಳ ಉದ್ದ ಮೂರು ಅಂಕಣಗಳ ಅಗಲವನ್ನು ಹೊಂದಿದ್ದು, ಇಡೀ ದೇವಾಲಯದ ತಲವಿನ್ಯಾಸವು ಆಯತಾಕಾರದಲ್ಲಿದೆ. ದೇವಾಲಯವು ಪೂರ್ವಾಭಿಮುಖವಾಗಿದೆ.

ಮುಖಮಂಟಪವು ಆರು ಅಂಕಣಗಳನ್ನು ಹೊಂದಿದ್ದು ಮುಂಬದಿ ಹಾಗೂ ಮಧ್ಯದ ಎರಡೆರಡು ಕಂಬಗಳು ಸೇರಿ ಒಟ್ಟು ನಾಲ್ಕು ಕಂಬಗಳನ್ನು, ಆರು ಅರ್ಧಗಂಬಗಳನ್ನು, ಎರಡು ಮೂಲೆಗಂಬಗಳನ್ನು ಹೊಂದಿದೆ. ಪ್ರಸ್ತುತ ಮುಂದಿನ ಸಾಲಿನ ಉತ್ತರ ಬದಿಯ ಕಂಬ ಬಿದ್ದುಹೋಗಿದೆ.

ಮುಖ್ಯಮಂಟಪವು ಮುಂಬದಿಯಲ್ಲಿ ತೆರೆದಿದ್ದು, ಎರಡೂ ಬದಿಯಲ್ಲಿ ಕಂಬಗಳ ನಡುವೆ ಬೃಹತ್ ಅಳತೆ ಕಲ್ಲುಗಳಿಂದ ಭಿತ್ತಿಯನ್ನು ನಿರ್ಮಿಸಲಾಗಿದೆ. ಉತ್ತರ ಬದಿಯ ಹಾಗೂ ದಕ್ಷಿಣ ಬದಿಯ ಮೊದಲ ಅಂಕಣದ ಭಿತ್ತಿಯು ಅರ್ಧಮಾತ್ರ ಉಳಿದಿದ್ದು, ಇನ್ನರ್ಧ ನಾಶವಾಗಿವೆ.

ಕಂಬಗಳು, ಅರ್ಧಗಂಬಗಳು, ವಿಜಯನಗರದ ಒಂದು ಪ್ರಕಾರವಾದ ಏಕಕಾಂಡ ಕಂಬಗಳಾಗಿದ್ದು, ಮೇಲೆ, ಮಧ್ಯ ಹಾಗೂ ಕೆಳಗೆ ಅಸಮವಾದ ಚೌಕಭಾಗಗಳನ್ನು ಹೊಂದಿವೆ. ಇವುಗಳ ಮೇಲೆ ಬೋದುಗೆಗಳಿವೆ. ಕಂಬಗಳಾಗಲಿ, ಬೋದುಗೆಗಳಾಗಲಿ ಆಕರ್ಷಕವಾಗಿರದೆ ತೀರಾ ಸರಳ ಹಾಗೂ ಸಾಧಾರಣವಾಗಿವೆ. ಸಭಾಮಂಟಪದ ಮಧ್ಯದ ಎರಡು ಕಂಬಗಳ ಮಧ್ಯದ ಚೌಕಭಾಗದಲ್ಲಿ ನಿಂತ ಎತ್ತು (ನಂದಿ) ಹಾಗೂ

* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಹಾಗೂ ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಅದರ ಎದುರಿನ ಕಂಬದ ಮೇಲೆ ಶಿವಲಿಂಗದ ಉಬ್ಬು ಚಿತ್ರಗಳಿವೆ. ನಿಂತ ಎತ್ತಿನ ಚಿತ್ರವು ಬಲಗಾಲನ್ನು ಮೇಲಕ್ಕೆ ಎತ್ತಿದ್ದು ಮೈ ಮೇಲೆ ಸರದ ಅಲಂಕಾರಣೆಯನ್ನು ಹೊಂದಿದೆ, ಸಾಮಾನ್ಯವಾಗಿ ಶಿವಲಿಂಗದ ಎದುರಿಗೆ ಕುಳಿತ ಭಂಗಿಯ ನಂದಿಯ ಶಿಲ್ಪಗಳಿದ್ದರೆ ಇಲ್ಲಿ ನಿಂತಭಂಗಿಯಲ್ಲಿರುವುದು ಗಮನಾರ್ಹ. ಇದರ ವೈಶಿಷ್ಟ್ಯತೆಯನ್ನು ತಿಳಿಯಬೇಕಾಗಿದೆ.

ಸಭಾಮಂಟಪದ ಹಿಂಬದಿಯಲ್ಲಿ ಸಭಾಮಂಟಪದಷ್ಟೇ ಅಗಲವಾದ ಪ್ರದಕ್ಷಣಾ ಪಥವಿದೆ. ಸಾಮಾನ್ಯವಾಗಿ ವಿಜಯನಗರ ಕಾಲದ ವಿಜಯವಿಠ್ಠಲದಂತಹ ಭವ್ಯ ದೇವಾಲಯಗಳಲ್ಲಿ ಮಾತ್ರ ಪ್ರದಕ್ಷಿಣಾ ಪಥವಿರುತ್ತದೆ. ಇಂಥ ಚಿಕ್ಕ ದೇವಾಲಯಕ್ಕೂ ಪ್ರದಕ್ಷಣಾ ಪಥವನ್ನು ನಿರ್ಮಿಸಿರುವುದು ವಿಶೇಷವೆನಿಸುತ್ತದೆ. ಆದರೆ ಚಿಕ್ಕ ದೇವಾಲಯಕ್ಕೆ ಪ್ರದಕ್ಷಿಣಾ ಪಥ ಸಂಪೂರ್ಣ ನಾಶವಾಗಿದೆ.

ಪ್ರದಕ್ಷಿಣಾ ಪಥದ ದ್ವಾರಬಂದವು ಸರಳವಾಗಿದ್ದು, ಬಾಗಿಲು ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಚತುರ್ಭುಜಗಳನ್ನು ಹೊಂದಿರುವ ಇವರ ಹಿಂದಿನ ಕೈಗಳಲ್ಲಿ ತ್ರಿಶೂಲ, ಢಮರುಗಳಿದ್ದರೆ ಮುಂದಿನ ಒಂದು ಕೈಯಲ್ಲಿ ಗದೆ ಹಾಗೂ ಇನ್ನೊಂದು ಅಭಯ ಮುದ್ರೆಯಲ್ಲಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಬಿಂಬವಿದೆ.

ದೇವಾಲಯದ ಗರ್ಭಗೃಹವು ಒಂದು ಅಂಕಣದಲ್ಲಿದೆ. ಗರ್ಭಗೃಹದ ದ್ವಾರಬಂಧವು ಸರಳವಾಗಿದ್ದು, ಬಾಗಿಲ ಬದಿಯಲ್ಲಿ ಅಂಜಲಿಬದ್ಧ ಮುದ್ರೆಯಲ್ಲಿ ನಿಂತಿರುವ ವ್ಯಕ್ತಿಗಳ ಶಿಲ್ಪಗಳಿವೆ. ಅವರ ಶೈಲಿ, ಪೋಷಾಕನ್ನು ಗಮನಿಸಲಾಗಿ ಅವು ವಿಜಯನಗರ ಕಾಲದ ದೇವಾಲಯಗಳಲ್ಲಿ ಕಂಡು ಬರುವ ಅರಸರ ಶಿಲ್ಪಗಳನ್ನು ಹೋಲುತ್ತವೆ. ಈ ವ್ಯಕ್ತಿ ಶಿಲ್ಪಗಳ ಮೇಲ್ಭಾಗದಲ್ಲಿ ಎರಡೂ ಕಡೆ ನಂದಿಯ ಕಿರು ಶಿಲ್ಪಗಳಿವೆ. ಆದರೆ ಈ ವ್ಯಕ್ತಿಯ ಶಿಲ್ಪಗಳು ಅಷ್ಟು ಆಕರ್ಷಕ ಹಾಗೂ ಸ್ಪಷ್ಟತೆಗಳಿಂದ ಕೂಡಿಲ್ಲ. ಲಲಾಟದಲ್ಲಿ ಶಿವಲಿಂಗ ಹಾಗೂ ಅದರ ಮುಂದೆ ಕುಳಿತ ನಂದಿಯ ಶಿಲ್ಪಗಳಿದ್ದು ಇದು ಕೂಡಾ ವಿಶೇಷವಾಗಿದೆ.

ಗರ್ಭಗೃಹದ ಭಿತ್ತಿಯನ್ನು ಮಟ್ಟಸಗೊಳಿಸಿದ ಬೃಹತ್ ಅಳತೆ ಕಲ್ಲುಗಳಿಂದ ನಿರ್ಮಿಸಲಾಗಿದೆ. ಛತ್ತಿನಲ್ಲಿ ಶಿಲಾ ಹಲಗೆಗಳನ್ನು ಚೌಕ, ವಕ್ರವಾಗಿ ಜೋಡಿಸಿ ಮಧ್ಯದ ಕಲ್ಲಿನಲ್ಲಿ ಅರಳು ಕಮಲಾಕೃತಿಯನ್ನು ಬಿಡಿಸಲಾಗಿದೆ. ಛತ್ತು ಅಲ್ಲಲ್ಲಿ ಶಿಥಿಲವಾಗಿದೆ. ಗರ್ಭಗೃಹದ ಮೇಲಿನ ಗೋಪುರ ಸಂಪೂರ್ಣ ನಾಶವಾಗಿದೆ.

ಗರ್ಭಗೃಹದಲ್ಲಿ ಮೂರುವರೆ ಅಡಿ ಎತ್ತರದ ವೀರಭದ್ರನ ಶಿಲ್ಪವಿದ್ದು, ಕಣಶಿಲೆಯಲ್ಲಿ ಕೆತ್ತಲಾಗಿದೆ. ವೀರಭದ್ರನು ತ್ರಿಭಂಗಿಯಲ್ಲಿದ್ದು, ಚತುರ್ಭುಜಗಳನ್ನು ಹೊಂದಿದ್ದಾನೆ. ಹಿಂದಿನ ಕೈಗಳಲ್ಲಿ ಬಾಣ ಹಾಗೂ ಬಿಲ್ಲು, ಮುಂದಿನ ಕೈಗಳಲ್ಲಿ ಖಡ್ಗ ಹಾಗೂ ಖೇಟಕ್‌ಗಳಿವೆ. ತಲೆಯ ಮೇಲೆ ಕಿರೀಟ ಮುಕುಟ, ಕೊರಳಲ್ಲಿ ಮಣಿಸರ, ಬುಜಹಾರ, ತೋಳ್ಬಂದಿ, ಕೈಕಡಗ, ಕಟಿಬಂಧ, ಕಾಲಲ್ಲಿ ಸರ ಮುಂತಾದ ಆಭರಣಗಳಿವೆ. ಬಲಗಾಲ ಬದಿಯಲ್ಲಿ ಚಿಕ್ಕ ದಕ್ಷ (ಆಡಿನ ತಲೆ ಮನುಷ್ಯ ದೇಹ)ನ ಅಂಜಲಿಬದ್ಧ ಶಿಲ್ಪವಿದೆ. ಈ ಶಿಲ್ಪ ಹಂಪಿಯ ಉದ್ಭಾನ ವೀರಭದ್ರೇಶ್ವರ ಶಿಲ್ಪವನ್ನು ಹೋಲುತ್ತದೆ.

ಈ ದೇವಾಲಯದ ಬದಿಯಲ್ಲಿ ಎರಡು ಅಡಿ ಎತ್ತರದ ಗಣೇಶನ ಶಿಲ್ಪವಿದೆ. ಗಣೇಶನು ಸುಖಾಸೀನವಾಗಿದ್ದು, ಚತುರ್ಭುಜಗಳನ್ನು ಹೊಂದಿದ್ದಾನೆ. ಹಿಂದಿನ ಕೈಗಳಲ್ಲಿ ಪಾಶ, ಅಂಕುಶಗಳು ಮುಂದಿನ ಕೈಗಳಲ್ಲಿ ಮೋದಕ ಹಾಗೂ ಭಗ್ನ ದಂತಗಳಿವೆ. ತಲೆಯ ಮೇಲೆ ಕಿರೀಟ ಮುಕುಟ, ಕಿವಿಯಲ್ಲಿ ಪತ್ರಕುಂಡಲ, ಕೊರಳಲ್ಲಿ ಮಣಿಸರ, ಯಜ್ಞೋಪವೀತ, ಮುಂಗೈಗಳಲ್ಲಿ ಕಡಗಗಳಿವೆ. ನಾಗಬಂಧವೂ ಇದೆ.

ದೇವಾಲಯದ ವಾಸ್ತುವಿನ್ಯಾಸ ಹಾಗೂ ಶೈಲಿಯನ್ನು ಅನುಲಕ್ಷಿಸಿ ಮತ್ತು ಹಂಪಿ ಪರಿಸರದ ವಿಜಯನಗರ ಕಾಲದ ದೇವಾಲಯಗಳ ವಾಸ್ತು ಲಕ್ಷಣಗಳನ್ನು ಗಮನಿಸಿ ಇದು ಕೂಡಾ ವಿಜಯನಗರ ಶೈಲಿಯ ಹಾಗೂ ಕಾಲದ ದೇವಾಲಯವೆಂದು ನಿರ್ಧರಿಸಬಹುದು.

ಇನ್ನು ಇಲ್ಲಿಯ ಕಂಬದ ಮೇಲಿನ ಬಲಗಾಲನ್ನು ಮೇಲಕ್ಕೆತ್ತಿ ನಿಂತ ನಂದಿಯ ಶಿಲ್ಪವು ಸಂಗಮ ಮನೆತನದ ದೊರೆ ಮಲ್ಲಿಕಾರ್ಜುನನ ನಾಣ್ಯದ ಮೇಲಿನ ನಂದಿಯ ಚಿತ್ರವನ್ನು ಹೋಲುತ್ತದೆ. ಮಲ್ಲಿಕಾರ್ಜುನನು ಎರಡನೆಯ ದೇವರಾಯನ ಮಗನಾಗಿದ್ದು ಅವನ ನಂತರ ಅಂದರೆ ಕ್ರಿ.ಶ. ೧೪೪೬ರಲ್ಲಿ ಅಧಿಕಾರಕ್ಕೆ ಬಂದು ಕೆಲಕಾಲ ಆಡಳಿತ ನಡೆಸಿದನು. ಸಂಗಮ ದೊರೆಗಳು ಹೆಚ್ಚಾಗಿ ಶೈವಾನುಯಾಯಿಗಳಾಗಿದ್ದುದರ ಹಿನ್ನೆಲೆಯಲ್ಲಿ ಈ ದೇವಾಲಯ ಸಂಗಮರ ಕಾಲದ್ದಾಗಿರಬಹುದೆಂದು ತರ್ಕಿಸಬಹುದಾಗಿದೆ.

ಒಟ್ಟಿನಲ್ಲಿ ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾ ಪಥ, ದ್ವಾರಬಂದದ ಬದಿಯಲ್ಲಿ ಅರಸರ ಶಿಲ್ಪಗಳು, ಲಲಾಟದಲ್ಲಿ ನಂದಿಯ ಶಿಲ್ಪಗಳನ್ನು ಹೊಂದಿರುವ ಈ ದೇವಾಲಯ ಈ ಅಂಶಗಳಿಂದಾಗಿ ವಿಶೇಷವೆನಿಸುತ್ತದೆ.

೭೩

ಪರವಾಸು ದೇವಾಲಯದ ಇತಿಹಾಸ ಮತ್ತು ವಾಸ್ತುವೈಶಿಷ್ಟತೆ

ಮಂಜುಳ ಎ.ಸಿ.*

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕನ್ನು ಅನೇಕ ರಾಜಮನೆತನಗಳು ಆಳ್ವಿಕೆ ನಡೆಸಿದ್ದು ಅವರಲ್ಲಿ ಗಂಗರು, ಚೋಳರು, ಹೊಯ್ಸಳರು ವಿಜಯನಗರದ ಅರಸರು ಉಮ್ಮತ್ತೂರು ಪಾಳೆಯಗಾರರು ಪ್ರಮುಖರಾಗಿದ್ದಾರೆ. ಗುಂಡ್ಲುಪೇಟೆ ಪಟ್ಟಣವನ್ನು ಪ್ರಾಚೀನ ಕಾಲದಲ್ಲಿ ಪ್ರಸನ್ನ ವಿಜಯಪುರವೆಂದು ಕರೆಯುತ್ತಿದ್ದರು. ಪ್ರಸನ್ನ ವಿಜಯಪುರವು ಪ್ರಸ್ತುತ ಇರುವ ಗುಂಡ್ಲುಪೇಟೆ ಪಟ್ಟಣದಿಂದ ಪೂರ್ವಕ್ಕೆ ಒಂದು ಕಿ.ಮೀ. ದೂರದಲ್ಲಿತ್ತು. ಅಲ್ಲಿ ಹರಿಯುತ್ತಿದ್ದ ಗುಂಡ್ಲುನದಿಯಿಂದಾಗಿ ನಂತರದ ಕಾಲದಲ್ಲಿ ಗುಂಡ್ಲುಪೇಟೆ ಎಂಬ ಹೆಸರು ಬಂದಿತು ಹಾಗೂ ಆ ನದಿಗೆ ಕೌಂಡಿನ್ಯ ನದಿಯೆಂದು ಕೂಡ ಕರೆಯಲಾಗುತ್ತಿದೆ. ಕ್ರಿ.ಶ. ೧೬೭೩ ರಿಂದ ೧೭೦೪ರವರೆಗೆ ಆಳ್ವಿಕೆ ನಡೆಸಿದ ಮೈಸೂರಿನ ಒಡೆಯರಾದ ಚಿಕ್ಕದೇವರಾಜ ಒಡೆಯರು ಗುಂಡ್ಲುಪೇಟೆ ಪಟ್ಟಣದಲ್ಲಿ ಪರವಾಸು ದೇವಾಲಯವನ್ನು ಕಟ್ಟಿಸಿದರು. ಚಿಕ್ಕದೇವರಾಜ ಒಡೆಯರು ಬಾಲ್ಯದಲ್ಲಿ ಗುಂಡ್ಲುಪೇಟೆ ತಾಲ್ಲೋಕಿನ ಹಂಗಳ ಗ್ರಾಮದಲ್ಲಿ ನೆಲೆಸಿದ್ದು, ಅವರ ತಂದೆ ದೊಡ್ಡದೇವರಾಜ ಒಡೆಯರು ಹಂಗಳದಲ್ಲಿ ಮರಣ ಹೊಂದಿದರು. ತಂದೆಯವರ ಅಂತ್ಯಕ್ರಿಯೆಯನ್ನು ನಡೆಸಲು ಹತ್ತಿರದಲ್ಲಿ ಎಲ್ಲಿಯೂ ದೊಡ್ಡ ನದಿ ಇಲ್ಲದಿದ್ದದರಿಂದ ಪ್ರಸನ್ನ ವಿಜಯಪುರದ ಗುಂಡ್ಲುಪೇಟೆ ನದಿಯ ಎಡದಂಡೆಯ ಬಳಿ ಅಂತ್ಯಕ್ರಿಯೆಯನ್ನು ನೆರವೇರಿಸಿ ಹಂಗಳಕ್ಕೆ ಹಿಂತಿರುಗುತ್ತಾರೆ. ಕ್ರಿ.ಶ. ೧೬೭೩ ಫೆಬ್ರವರಿ ೨೮ರಂದು ರಾಜ್ಯಡಳಿತವನ್ನು ವಹಿಸಿಕೊಂಡ ನಂತರ ಚಿಕ್ಕದೇವರಾಜ ಒಡೆಯರು ಕ್ರಿ.ಶ. ೧೬೭೪ರಲ್ಲಿ ಅಂತ್ಯಕ್ರಿಯೆ ನಡೆದ ಸ್ಥಳದಲ್ಲಿ ಒಂದು ಅಗ್ರಹಾರವನ್ನು ಕಟ್ಟಿಸಿ ಬ್ರಾಹ್ಮಣರಿಗೆ ಮನೆಗಳನ್ನು ನಿರ್ಮಿಸಿ, ಆ ಅಗ್ರಹಾರವನ್ನು ತಮ್ಮ ತಂದೆಯ ಹೆಸರಿನಲ್ಲಿ **ದೇವನಗರಿ** ಎಂಬುದಾಗಿ ಕರೆದರು. ಅಲ್ಲಿನ ಕೋಟೆಯನ್ನು ಭದ್ರಪಡಿಸಿ ಹಾಗೂ ತಂದೆಯವರ ಸಮಾಧಿಯ ಮೇಲೆ ಪರವಾಸು ದೇವಾಲಯವನ್ನು ಕಟ್ಟಿಸಿದರು. ಈ ದೇವಾಲಯವನ್ನು ನಿರ್ಮಿಸಿದ ಬಗ್ಗೆ **ರಾಜಾವಳಿ ಕಥಾಸಾರದಲ್ಲಿ[1] "ಮತ್ತಂ ಗುಂಡಲದ ಬಳಿ ತಮ್ಮ ತಂದೆಯ ನಿಧಿಯೊಳೆ ಪರವಾಸು ದೇವಾಲಯಮಂ ಅತಿಶಯವೆನಲ್ಮಾಡಿಸಿ ಅನೇಕೋತ್ಸಹಂಗಳಿಗೆ ಉಪಾಸ್ತಿ ಮಂದ್ಯಂಗಳಂ ಕೊಟ್ಟು ದ್ವಿಶತಕ ಅಗ್ರಹಾರಮಂ ಕೊಟ್ಟು ಪೇಟೆಯಂ ಕಟ್ಟಿಸಿ ರಾಜ್ಯದೊಳೆಲ್ಲ ದೇವಾಲಯಕ್ಕಂ ಬ್ರಾಹ್ಮರಿಗಂ ಮಾನ್ಯಂಗಳಂ ನಡೆಸುತ್ತಾ ಮತಾಂತರಗಳನ್ನೆಲ್ಲಾ ವಿಚಾರಿಸಿ ತಿಳಿದ[2]"** ಎಂದಿದ್ದು ಚಿಕ್ಕದೇವರಾಜ ಒಡೆಯರು ಅಗ್ರಹಾರ ನಿರ್ಮಿಸಿ ದೇವಾಲಯ ಕಟ್ಟಿಸಿದ ಬಗ್ಗೆ ತಿಳಿಸುತ್ತದೆ.

ಈ ದೇವಾಲಯವು ಗುಂಡ್ಲುಪೇಟೆ ಪಟ್ಟಣದಿಂದ ಪೂರ್ವದಿಕ್ಕಿಗೆ ಸುಮಾರು ೧ ಕಿ.ಮೀ. ದೂರದಲ್ಲಿ ತೆರಕಣಾಂಬಿ ರಸ್ತೆಯಲ್ಲಿದೆ. ಈ ದೇವಾಲಯವನ್ನು ಕಣಶಿಲೆಯಿಂದ ಕಟ್ಟಿದ್ದು, ಇದನ್ನು ಕಲ್ಲು ಚಪ್ಪಡಿಗಳಿಂದ ನಿರ್ಮಿಸಲಾಗಿದೆ. ದೇವಾಲಯದ ಪ್ರವೇಶದ್ವಾರವು ಪಶ್ಚಿಮಾಭಿಮುಖವಾಗಿರುವುದು ಇಲ್ಲಿನ ವೈಶಿಷ್ಟ್ಯವಾಗಿದ್ದು ಪ್ರವೇಶದ್ವಾರದ ಬಳಿ ದ್ವಾರಪಾಲಕರ ಮೂರ್ತಿಗಳಿವೆ. ದೇವಾಲಯದ ಮುಂಭಾಗದಲ್ಲಿ ಮುಖ ಮಂಟಪ ಇದ್ದು, ಇಂದು ನಾಶವಾಗಿದೆ. ಈ ದೇವಾಲಯದ ಮುಖಮಂಟಪವನ್ನು ವಿಜಯನಾರಾಯಣ ಸ್ವಾಮಿ ದೇವಸ್ಥಾನಕ್ಕೆ ತಂದು ಇಲ್ಲಿ ನಿರ್ಮಿಸಿರುವುದಾಗಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ ಇಲ್ಲಿರುವ ಕಂಬದಲ್ಲಿ ಚಿಕ್ಕದೇವರಾಜ ಒಡೆಯರು ಕುಳಿತಿರುವ ಬಂಗಿಯ ಶಿಲ್ಪವಿದೆ. ದೇವಾಲಯವು ಸಾಕಷ್ಟು ವಿಶಾಲವಾಗಿದ್ದು ಚೌಕಾಕಾರದ ಗರ್ಭಗೃಹ ಸುಕನಾಸಿ, ಗರ್ಭಗೃಹದ ಸುತ್ತ ವೃತ್ತಾಕಾರದ ಪ್ರದಕ್ಷಿಣಾ ಪಥ ಮತ್ತು ನವರಂಗವನ್ನೊಳಗೊಂಡಿದೆ. ನವರಂಗವು ವಿಶಾಲವಾದ ಚೌಕಟ್ಟಾದ ೨೬ ಕಂಬಗಳನ್ನು ಹೊಂದಿದೆ[3]. ದೇವಾಲಯದ ಹೊರಭಾಗದ ಗೋಡೆಗಳ ಮೇಲೆ ಯಾವುದೇ ಅಲಂಕಾರವಿಲ್ಲದೆ ಸಾದಾವಾಗಿದ್ದು ಕೆಲವು ಅಲಂಕಾರಗಳನ್ನು ಮಾತ್ರ ಕಾಣಬಹುದು. ಆದರೆ ಒಳಭಾಗದ ನವರಂಗದ ಕಂಬಗಳ ಮೇಲೆ ವಿಷ್ಣುವಿನ ದಶಾವತಾರದ ಮೂರ್ತಿಗಳು, ಮಹಾಭಾರತ ಮತ್ತು ಭಾಗವತ ಕಥೆಗಳಿಗೆ ಸಂಬಂಧಪಟ್ಟ ಉಬ್ಬುಶಿಲ್ಪಗಳನ್ನು ಕಾಣಬಹುದು. ಇವಲ್ಲದೆ ಗಣೇಶ, ಹನುಮಂತ, ನಂದಿ, ಅಯ್ಯಪ್ಪ, ಲಕ್ಷ್ಮಿ, ನರಸಿಂಹ ಮುಂತಾದ ಉಬ್ಬುಶಿಲ್ಪಗಳನ್ನು ಬಹಳ ಸುಂದರವಾಗಿ ಕೆತ್ತಲಾಗಿದೆ.

* ಸಹಾಯಕ ಪ್ರಾಧ್ಯಾಪಕರು, ಮನೆ ನಂ ೮೭, ೧ನೇ ಕ್ರಾಸ್, ೧ನೇ ಹಂತ, ಗಾಯಿತ್ರಿಪುರಂ, ಮೈಸೂರು-೫೭೦೦೧೯



ಪರವಾಸು ದೇವಾಲಯದ ನೋಟ (೨೦೧೧ನೇ ಫೆಬ್ರವರಿ)



ನವೀಕರಣಗೊಂಡ ಪರವಾಸು ದೇವಾಲಯ

ದಕ್ಷಿಣಾಭಿಮುಖವಾದ ಕಂಬದ ಮೇಲೆ ಚಿಕ್ಕದೇವ ರಾಜರು ಆಸೀನರಾಗಿರುವ ಮತ್ತೊಂದು ಕಂಬದಲ್ಲಿ ಭಕ್ತವೈರಾಗಿ ಚಿಕ್ಕದೇವರಾಜರ ವಿಗ್ರಹದ ಕೆತ್ತನೆ ಇದೆ. ದೇವಾಲಯದ ಒಳಭಾಗದಲ್ಲಿ ಉತ್ತರ ಮತ್ತು ದಕ್ಷಿಣದ ಕಡೆಗೆ ಒಂದೊಂದು ಸಣ್ಣ ಕೋಣೆಗಳನ್ನು ಹೊಂದಿದೆ.

ದೇವಾಲಯದ ಗರ್ಭಗುಡಿಯ ದ್ವಾರದಲ್ಲಿ ದ್ವಾರಪಾಲಕರ ಶಿಲ್ಪ ಇದ್ದು ಚೌರಿಯನ್ನು ಹಿಡಿದಿರುವ ಸ್ತ್ರೀಯರು, ಗಂಗಾ–ಯಮುನೆಯರ ವಿಗ್ರಹಗಳು, ಗಜಲಕ್ಷ್ಮೀ ಮಕರ ಹೂಬಳ್ಳಿಗಳಿಂದ ದ್ವಾರವು ಅಲಂಕೃತವಾಗಿದೆ. ಈ ದೇವಾಲಯದ ಪರವಾಸುದೇವನ ವಿಗ್ರಹವು ವಿಜಯ ನಾರಾಯಣ ದೇವಾಲಯದಲ್ಲಿದ್ದು ಸುಂದರವಾಗಿದ್ದು, ಪರವಾಸುದೇವನ ವಿಗ್ರಹವು ಸುಮಾರು ೫ ಅಡಿ ಎತ್ತರವಿದ್ದು ತಲೆಯ ಮೇಲ್ಭಾಗದಲ್ಲಿ ಹೆಡೆಯನ್ನು ಬಿಚ್ಚಿರುವ ಆದಿಶೇಷನ ಸುರುಳಿಯ ಮೇಲೆ ಶಂಖಚಕ್ರಧಾರಿಯಾದ ವಾಸುದೇವ ಸುಖಾಸೀನನಾಗಿದ್ದಾನೆ. ಮುಡಿಯ ಮೇಲೆ ಒಂದು ಕೈ, ಎರಡನೆಯದರಲ್ಲಿ ಚಕ್ರ, ಮೂರನೆಯದರಲ್ಲಿ ಶಂಖವಿದ್ದು, ನಾಲ್ಕನೆಯ ಕೈಯನ್ನು ಆದಿಶೇಷನ ಮೇಲೆ ಊರಲಾಗಿದೆ. ಪರವಾಸುದೇವನ ತಲೆಯ ಮೇಲೆ ಏಳು ತಲೆಯ ಶೇಷನು ಹೆಡೆಬಿಚ್ಚಿ ಸ್ವಾಮಿಗೆ ಆಸರೆ ಮತ್ತು ಆಸನವಾಗಿಯೂ ಇರುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ಇಲ್ಲಿನ **ಪರವಾಸುದೇವನ ಉತ್ಸವಮೂತಿಯನ್ನು ಹಸ್ತಿನಾವತಿಯಿಂದ ಶಿವನಸಮುದ್ರಕ್ಕೆ ತಂದು ಅನಂತರ ಇಲ್ಲಿಗೆ ತರಲಾಯಿತೆಂದು ಪ್ರತೀತಿ ಇದೆ.** ಉತ್ಸವಮೂರ್ತಿಯ ಮೇಲೆ **"ಶ್ರೀ ದೊಡ್ಡದೇವರಾಜ ವರದ"** ಎಂದು ಶಾಸನವಿದ್ದು ಉತ್ಸವಮೂರ್ತಿ ಭಿನ್ನವಾಗಿದೆ".

ಈ ದೇವಾಲಯದ ಎಡಪಾರ್ಶ್ವದಲ್ಲಿ ಪರವಾಸುದೇವನ ದೇವಿಯಾದ ಕಮಲವಲ್ಲಿಯ ದೇವಾಲಯವಿದೆ. ಈ ದೇವಾಲಯದ ವಿಗ್ರಹವನ್ನು ಕೂಡ ಈಗ ವಿಜಯ ನಾರಾಯಣ ದೇವಾಲಯದಲ್ಲಿ ಇಡಲಾಗಿದೆ. ಪರವಾಸು ದೇವಾಲಯದ ಬಲಭಾಗದಲ್ಲಿ ಬಹುಶಃ ಸಪ್ತಮಾತೃಕೆಯ ಗುಡಿಯೊಂದು ಇದೆ.

ಪರವಾಸು ದೇವಾಲಯವು ಟಿಪ್ಪುಸುಲ್ತಾನನ ಆಳ್ವಿಕೆಯ ವರೆಗೂ ಉತ್ತಮ ಸ್ಥಿತಿಯಲ್ಲಿದ್ದು, ಅನಂತರ ರಕ್ಷಣೆ ಇಲ್ಲದೆ ಪಾಳು ಬಿದ್ದಿದ್ದು ದೇವಾಲಯದ ಪಕ್ಕದಲ್ಲಿ ರುದ್ರಭೂಮಿ ಯಾಗಿ ಬಳಕೆಯಾಗುತ್ತಿದೆ. ಪರವಾಸು ದೇವಾಲಯವು ಸಮಾಧಿಯ ಮೇಲೆ ನಿರ್ಮಿಸಿದ್ದರಿಂದಾಗಿ ಬಹುಶಃ ಅಗ್ರಹಾರದ ಜನರು ಅಲ್ಲಿಂದ ಸ್ಥಳಾಂತರಗೊಂಡಿರಬಹುದು. ೨೦೧೧ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಚಾಮರಾಜನಗರ ಜಿಲ್ಲಾಡಳಿತ, ತಾಲ್ಲೂಕಿನ ಆಡಳಿತ ವರ್ಗ, ಪುರಾತತ್ವ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆಯ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು ಸ್ವಚ್ಛತಾ ಕಾರ್ಯಕ್ರಮ ಕೈಗೊಂಡು ಇಂದು ಈ ದೇವಾಲಯವು ಪುರಾತತ್ವ ಇಲಾಖೆಗೆ ಸೇರಿದ್ದು ಈಗ ನವೀಕರಣಗೊಳ್ಳುತ್ತಿದೆ.

ಅಡಿಟಿಪ್ಪಣಿ

೧. ಸಿ. ಹಯವದನರಾವ್, History of mysore.Vol 1, ಪುಟ ಸಂಖ್ಯೆ ೩೭೫.

೨. ದೇವಚಂದ್ರ ಕವಿ ರಾಜಾವಳಿ ಕಥಾವಳಿ, ಪುಟ ಸಂಖ್ಯೆ ೨೮೨, (೧೭೭೦–೧೮೪೧).

೩. ಮೈಸೂರು ಅರ್ಕಿಯಾಲಾಜಿಕಲ್ ರಿಪೋರ್ಟ್ ೧೯೩೮, ಮೈಸೂರು, ಮೈಸೂರು ಸರ್ಕಾರ.

೪. A Sathyanarayana History of Wodeyars of Mysore (1610-1748).

೭೫

ಹಂಪೆಯ ಪರೋಕ್ಷವಿನಯ ದೇವಾಲಯ

ಶ್ರೀಶೈಲ ಮನಗುತ್ತಿ*

ಪ್ರಬಂಧದ ಶೀರ್ಷಿಕೆಯು **"ಹಂಪೆಯ ಪರೋಕ್ಷ ವಿನಯ ದೇವಾಲಯ"** ಎಂಬುದಾಗಿದ್ದು, ಈ ದೇವಾಲಯದ ವಾಸ್ತು ವಿಶೇಷತೆ ಮತ್ತು ಇಂತಹ ದೇವಾಲಯಗಳ ನಿರ್ಮಾಣಕ್ಕೆ ಕಾರಣಗಳೇನು? ಎಂಬುದನ್ನು ಅರಿಯುವ ಪ್ರಯತ್ನವನ್ನು ಮಾಡುವುದೇ ಈ ಪ್ರಬಂಧದ ಉದ್ದೇಶ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗಿಂತಲೂ ಪೂರ್ವದಲ್ಲಿ ಈ ಪ್ರದೇಶವನ್ನು ಹಲವು ರಾಜಮನೆತನಗಳ ಅರಸರು ಆಳ್ವಿಕೆಯನ್ನು ನಡೆಯಿಸಿದ್ದರು. ಆ ಮನೆತನಗಳಲ್ಲಿ ಮೊದಲಿಗೆ ಬದಾಮಿ ಚಾಲುಕ್ಯರು (ಕ್ರಿ.ಶ. ೫–೬ನೇ ಶತಮಾನ), ರಾಷ್ಟ್ರಕೂಟರು (ಕ್ರಿ.ಶ. ೭–೮ನೇ ಶತಮಾನ), ಕಲ್ಯಾಣ ಚಾಲುಕ್ಯರು (ಕ್ರಿ.ಶ. ೯–೧೧), ಹೊಯ್ಸಳರು (ಕ್ರಿ.ಶ. ೧೧–೧೩ ಶತಮಾನ) ದೇವಗಿರಿ ಯಾದವರು (ಕ್ರಿ.ಶ. ೧೩), ಮತ್ತು ಇತರ ಅರಸು ಮನೆತನದವರು ಆಳ್ವಿಕೆಯನ್ನು ನಡೆಸಿದವರಲ್ಲಿ ಕಂಪಲಿ ಅರಸರು ಮತ್ತು ಕುರುಗೋಡು ಅರಸರು ರಾಜ್ಯಭಾರವನ್ನು ಮಾಡಿದರು. ಆ ಮನೆತನದ ಅರಸರು ಹಾಕಿಸಿರುವ ಶಾಸನಗಳು ಮತ್ತು ದೇವಾಲಯಗಳು ಹಂಪೆಯಲ್ಲಿ ಇಂದಿಗೂ ಮೂಕಸಾಕ್ಷಿಗಳಾಗಿ ಗತವೈಭವದ ಇತಿಹಾಸವನ್ನು ಸಾರುತ್ತವೆ.

ಕ್ರಿ.ಶ. ೧೨೮೦ರ ವೇಳೆಗೆ ಮುಮ್ಮಡಿ ಸಿಂಗೇನಾಯಕನು ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಕಾಣಿಸಿಕೊಳ್ಳುತ್ತಾನೆ. ದರೋಜಿ ಮತ್ತು ಕಂಪಿಲಿ ಪ್ರದೇಶಗಳನ್ನು ಗೆದ್ದು ನಂತರದಲ್ಲಿ ಕುಮ್ಮಟದುರ್ಗವನ್ನು ವಶಪಡಿಸಿಕೊಳ್ಳುತ್ತಾನೆ. ಕುಮ್ಮಟದುರ್ಗವು ಕರ್ನಾಟಕದ ಪ್ರಾಚೀನ ಕೋಟೆಗಳಲ್ಲಿ ಒಂದಾಗಿದೆ. ಈ ಮಹತ್ವದ ದುರ್ಗವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ಪ್ರಾರಂಭಿಸುತ್ತಾನೆ. ಈ ರಾಜ್ಯವನ್ನು ಕಂಪಲಿ ಎಂದು ಗುರುತಿಸಲಾಗಿದೆ. ಕಂಪಲಿಯು ಈ ರಾಜ್ಯದ ಪ್ರಮುಖ ಪಟ್ಟಣವಾಗಿತ್ತು. ಕುಮ್ಮಟದುರ್ಗವು ಮುಮ್ಮಡಿ ಸಿಂಗೇನಾಯಕ ಮತ್ತು ಆತನ ಮಗ ಕಂಪಿಲದೇವನಿಗೆ ರಾಜಧಾನಿಯಾಗಿ ಅವರ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗೆ ಮಹತ್ವದ ಪಾತ್ರವನ್ನು ವಹಿಸಿತು. ಈ ಮನೆತನದ ಅರಸರನ್ನು ಕುಮ್ಮಟದ ನಾಯಕರೆಂದು ಕರೆಯಲಾಗಿದೆ. ಕಂಪಿಲನು ಹಂಪೆ ಮತ್ತು ಹೊಸಮಲೆದುರ್ಗವನ್ನು ತನ್ನ ಆಡಳಿತ ಪ್ರದೇಶಕ್ಕೆ ಒಳಪಡಿಸಿಕೊಂಡನು.

"ಹಂಪೆಯಲ್ಲಿ ಕುಮ್ಮಟದುರ್ಗದ ನಾಯಕರ ಆಳ್ವಿಕೆಯು ಇತ್ತು ಎಂಬುದಕ್ಕೆ ಹೇಮಕೂಟದ ಬೆಟ್ಟದ ಮೇಲಿರುವ ತ್ರಿಕೂಟ ದೇವಾಲಯದ ಶಾಸನವು ತಿಳಿಸುತ್ತದೆ. ಕುಮ್ಮಟದುರ್ಗವು ಹೊಸಪೇಟೆಯಿಂದ ಉತ್ತರಕ್ಕೆ ತುಂಗಭದ್ರೆಯ ಆಚೆಗಿರುವ ಈ ದುರ್ಗವನ್ನು ವಶಪಡಿಸಿಕೊಂಡು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ನಡೆಸಿದರು. ಈ ರಾಜ ಮನೆತನದಲ್ಲಿ ಮುಮ್ಮಡಿ ಸಿಂಗೇನಾಯಕನ ಮಗ ಕಂಪಿಲ ದೇವನು ಪ್ರಬಲ ಅರಸನಾಗಿದ್ದನು. ಇವನ ತನ್ನ ಆಳ್ವಿಕೆಯ ಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬದಲಾವಣೆಗಳನ್ನು ಮಾಡಿದನು".[೧]

"ಹಂಪೆಯ ಹೇಮಕೂಟದ ಮೇಲಿರುವ ಕದಂಬ ನಾಗರ ಶೈಲಿಯ ಶಿಖರವುಳ್ಳ ಸುಮಾರು ಮೂವತ್ತು ದೇವಾಲಯಗಳ ಸಮುಚ್ಚಯವನ್ನು ಕೆಲವು ವಿದ್ವಾಂಸರು ಜೈನ ದೇವಾಲಯಗಳು ಎಂದು ಗುರುತಿಸಿದ್ದರು. ಆದರೆ ಅಲ್ಲಿ ಜೈನಧರ್ಮವನ್ನು ಬಿಂಬಿಸುವ ಯಾವ ಕುರುಹಗಳಿಲ್ಲ. ಆ ಎಲ್ಲಾ ದೇವಾಲಯಗಳು ಹಿಂದೂ ದೇವಾಲಯಗಳು ಎಂದು ಧೃಢಪಟ್ಟಿವೆ".[೨]

ಮಧ್ಯಯುಗೀನ ಭಾರತದಲ್ಲಿದ್ದ ಮುಸ್ಲಿಂ ಧಾಳಿಗಳನ್ನು ಬದಿಗೊತ್ತಿ ಈ ಸಾಮ್ರಾಜ್ಯದಲ್ಲಿ ಅರಸರು ಕಲೆ ಮತ್ತು ವಾಸ್ತು–ಶಿಲ್ಪದ ಪೋಷಕರಾಗಿದ್ದರು ಎಂಬುವುದಕ್ಕೆ ಇಲ್ಲಿರುವ ಸ್ಮಾರಕಗಳು ಮೂಕಸಾಕ್ಷಿಗಳಾಗಿ ನಿಂತಿವೆ. ಕರ್ನಾಟಕದ ವಾಸ್ತು–ಶಿಲ್ಪದ ಬೆಳವಣಿಗೆಯ ಮೇಲೆ ಪ್ರಬಲ ವರ್ಚಸ್ಸನ್ನು ಬೀರಿತು. ಯಾವುದೇ ರಾಜವಂಶ ಹೊಸದಾಗಿ ರಾಜ್ಯ ಸ್ಥಾಪನೆ ಮಾಡಿದಾಗ ಮೊಟ್ಟ ಮೊದಲು ಕೈಗೊಂಡ ಕಾರ್ಯವೆಂದರೆ, ದೇವಾಲಯಗಳ ನಿರ್ಮಾಣ, ಇಲ್ಲವೆ ಭಗ್ನ ದೇವಾಲಯಗಳ ಪುನರ್‌ನಿರ್ಮಾಣ ಮತ್ತು ಆ ದೇವಾಲಯಗಳಿಗೆ ದಾನ–ದತ್ತಿಗಳನ್ನು ಕೊಡುವುದು. ದೇವಾಲಯ ಸಂಸ್ಕೃತಿಯನ್ನು ಪೋಷಿಸುವುದು ಅಂದಿನ ಅರಸರ ಪ್ರಮುಖ ಕಾರ್ಯವಾಗಿತ್ತು.

* ಬಿ ಆರ್ ಪಿ . ಅಂಕಲಗುಡಿ ಕ್ಷೇತ್ರ ಗ್ರಾಮ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ

"ಅರಸರು ಸಾಮಾನ್ಯ ಜನರಲ್ಲಿ ತಾವು ಧರ್ಮಭೀರುಗಳೆಂಬ ಭಾವನೆ ಒಡಮೂಡಿಸಿ, ತಮ್ಮ ರಾಜಕೀಯ ಚಟುವಟಿಕೆಗಳಿಗೆ ಜನಸಾಮಾನ್ಯರ ಬೆಂಬಲ ಪಡೆಯಲು ಮಾಡಿದ ಯುಕ್ತಿಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕುಮ್ಮಟದ ಅರಸರು ಇದಕ್ಕೆ ಹೊರತಾಗಿಲ್ಲ. ಈ ಬಗೆಯ ಪ್ರಯತ್ನ ಪರೋಕ್ಷವಾಗಿ ದೇವಾಲಯಗಳ ಮೇಲೆ ವಾಸ್ತು ಶೈಲಿಯ ಮೇಲೆ ಪ್ರಭಾವ ಬೀರಿದುದನ್ನು ಅಲ್ಲಗಳೆಯುವಂತಿಲ್ಲ. ಈ ಅರಸರು ಭಿನ್ನವಾದ ದೇವಾಲಯಗಳ ನಿರ್ಮಾಣಕ್ಕೆ ಪ್ರಚೋದನೆ ನೀಡಿದರು".[೩]

ಹಂಪೆಯ ಹೇಮಕೂಟ ಬೆಟ್ಟದ ಮೇಲಿರುವ ಕದಂಬ ನಾಗರ ಶೈಲಿಯಲ್ಲಿರುವ ದೇವಾಲಯಗಳೆಲ್ಲ ಬಹುಶಃ ಕ್ರಿ.ಶ. ೧೩೫೦ರ ಮೊದಲು ನಿರ್ಮಾಣಗೊಂಡವು. ಇವುಗಳಲ್ಲಿ ಕೆಲವು ಸಂಗಮ ಅರಸರ ಕಾಲಕ್ಕಿಂತ ಮುಂಚಿನವು.

ಹಂಪೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೇವಾಲಯಗಳು ನಿರ್ಮಾಣವಾದವು; ಅವುಗಳಲ್ಲಿ ಏಕಕೂಟ ದೇವಾಲಯಗಳು ಹೆಚ್ಚಾಗಿವೆ. ಆದರೆ ಇಲ್ಲಿ ತ್ರಿಕೂಟ ದೇವಾಲಯಗಳಿರುವುದು ಕಡಿಮೆ. ಹಂಪಿಯ ವಿರೂಪಾಕ್ಷ ದೇವಾಲಯದ ದಕ್ಷಿಣ ಭಾಗದಲ್ಲಿರುವ ಹೇಮಕೂಟ ದೇವಾಲಯಗಳ ಸಮುಚ್ಚಯದಲ್ಲಿ ಈ ತ್ರಿಕೂಟ ದೇವಾಲಯವಿದೆ. ಈ ದೇವಾಲಯವು ಉತ್ತರಾಭಿಮುಖವಾಗಿದ್ದು, ಮೂರು ಗರ್ಭಗೃಹಗಳನ್ನು ಹೊಂದಿದೆ. ಮೂರು ಗರ್ಭಗೃಹಗಳಲ್ಲಿ ಶಿವಲಿಂಗಗಳನ್ನು ಸ್ಥಾಪಿಸಲಾಗಿತ್ತು, ಎಂಬುದಕ್ಕೆ ಈ ದೇವಾಲಯದ ಶಾಸನವು ಆಧಾರವಾಗಿದೆ. ಮುಮ್ಮಡಿ ಸಿಂಗೇನಾಯಕನ ಮಗ ವೀರಕಂಪಿಲರಾಯನು ದೇವಾಲಯವನ್ನು ನಿರ್ಮಿಸಿ ಅದರಲ್ಲಿ ಮೂರು ಶಿವಲಿಂಗಗಳನ್ನು ತನ್ನ ತಾಯಿ ಮಾರನಾಯಕಿತಿ, ತಂದೆ ಸಿಂಗೇನಾಯಕ ಮತ್ತು ಅವನ ಬಂಧು (ಪೆರುಡಿನಾಯಕರ?) ಹೆಸರಿನಲ್ಲಿ ಪ್ರತಿಷ್ಠೆ ಮಾಡಿಸಿದನೆಂದು ತಿಳಿಸುತ್ತದೆ. ಇದು ಇಲ್ಲಿರುವ ಶಾಸನಾಧಾರದಿಂದ ದೃಢಪಡುತ್ತದೆ.

ದೇವಾಲಯದ ವಾಸ್ತು ವಿನ್ಯಾಸ

ಹೇಮಕೂಟದ ಬೆಟ್ಟದ ಮೇಲಿರುವ ಈ ದೇವಾಲಯವು ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ. ಈ ದೇವಾಲಯವು ತ್ರಿಕೂಟ ದೇವಾಲಯವಾಗಿದೆ.


ತಳವಿನ್ಯಾಸದಲ್ಲಿ ಮೂರು ಗರ್ಭಗೃಹಗಳು ಉತ್ತರ, ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿವೆ. ಮೂರು ಸುಕನಾಸಿಯನ್ನು ಒಂದೇ ನವರಂಗವನ್ನು ಮತ್ತು ಒಂದೇ ಪ್ರವೇಶ ಮಂಟಪವನ್ನು ಹೊಂದಿದೆ. ಮೂರು ಗರ್ಭಗೃಹಗಳಿಗೆ ಕದಂಬನಾಗರ ಶೈಲಿಯ ಶಿಖರಗಳಿವೆ. ದೇವಾಲಯದ ಗರ್ಭಗೃಹಗಳು ಖಾಲಿಯಾಗಿವೆ. ಈ ದೇವಾಲಯದಲ್ಲಿ ವ್ಯಕ್ತಿಗಳ ಹೆಸರಿನಲ್ಲಿ ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಆದರೆ ಹಿಂದೆ ನಡೆದ ಧಾಳಿಗಳಿಂದ ಯಾವ ಗರ್ಭಗೃಹದಲ್ಲಿ ಯಾವ ವ್ಯಕ್ತಿ ಲಿಂಗವಿತ್ತೆಂದು ಗುರುತಿಸುವುದು ಕಷ್ಟ. ಇಲ್ಲಿ ಸ್ಥಳೀಯವಾಗಿ ದೊರೆಯುವ ಬೆಣಚುಕಲ್ಲಿನಿಂದ ನಿರ್ಮಿಸಿದ ಈ ದೇವಾಲಯವು ಸರಳವಾದ ಅಧಿಷ್ಠಾನವನ್ನು ಹೊಂದಿದೆ. ಅಧಿಷ್ಠಾನದ ೬೪ ಪ್ರಕಾರಗಳಲ್ಲಿ ಈ ದೇವಾಲಯದ ಅಧಿಷ್ಠಾನವು ಕಪೋತಬಂಧ ಅಧಿಷ್ಠಾನ ವರ್ಗಕ್ಕೆ ಸೇರಿದೆ. ಅಲಂಕರಣೆಯಿಲ್ಲದ ಭಿತ್ತಿಭಾಗ ಗೋಡೆಯ ಮಧ್ಯದಲ್ಲಿ ಅಡ್ಡಪಟ್ಟಿಕೆಯಿದ್ದು ಅದರಲ್ಲಿ ಹೂವಿನ ಅಲಂಕರಣೆಯಿದೆ. ಕದಂಬನಾಗರ ಶೈಲಿಯ ಮೂರು ಶಿಖರಗಳಿವೆ.


ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. "ಸಂಗಮೇಶ್ವರ ದೇವರ ಪಾದಾರಾಧಕನಾದ ಮುಮ್ಮಡಿ ಸಿಂಗೇನಾಯಕನ ಮಗನಾದ ವೀರಕಂಪಿಲದೇವನು ತನ್ನ ರಾಜಧಾನಿಗಳಾದ ಹೊಸಮಲೆದುರ್ಗ ಮತ್ತು ಕುಮ್ಮಟದಿಂದ ಹಂಪೆ ಪ್ರದೇಶವನ್ನು ಆಳುತ್ತಿದ್ದನು. ಆ ಸಂದರ್ಭದಲ್ಲಿ ಈ ದೇವಾಲಯವನ್ನು ತನ್ನ ತಾಯಿ ಮಾರನಾಯಕಿತಿ, ತಂದೆ ಸಿಂಗೇನಾಯಕನ ಮತ್ತು ಪೆರುಡಿನಯಕನ ಹೆಸರಿನಲ್ಲಿ ಮೂರು ಲಿಂಗಗಳನ್ನು ಪ್ರತಿಷ್ಠೆ ಮಾಡಿ ಶಿವಾಲಯವನ್ನು ಕಟ್ಟಿಸಿದುದನ್ನು ಉಲ್ಲೇಖಿಸುತ್ತದೆ. ಮುಖ್ಯ ಅಂಶವೆಂದರೆ ವ್ಯಕ್ತಿನಾಮಗಳ ಮೇಲೆಯೇ ಪ್ರತಿಷ್ಠಾಪಿಸಿದ ಮೂರು ಲಿಂಗಗಳಾಗಿವೆ".[೪]

"ಸಮಾಧಿಗಳೇ ದೇವಾಲಯದ ಮೂಲ ಎಂಬ ಪ್ರಬಲವಾದ ವಾದ ಇದೆ. ಬೃಹತ್ ಶಿಲಾಯುಗ ಕಾಲದ ಸಮಾಧಿಗಳು (ಡಾಲಮೆನ್ಸ), ದೇವಾಲಯಗಳ ಮೂಲ ಎಂಬ ಅಭಿಪ್ರಾಯವನ್ನು ಶ್ರೀ ಎನ್. ವೆಂಕಟರಮಣಯ್ಯನವರು ಅಭಿಪ್ರಾಯಿಸಿದ್ದಾರೆ. ಈ ಅಭಿಪ್ರಾಯವು ಸಮಂಜಸವೆನಿಸುತ್ತದೆ. ಪ್ರಾಚ್ಯವಸ್ತು ಸರ್ವೇಕ್ಷಣ ಇಲಾಖೆಯ ದಕ್ಷಿಣ ವೃತ್ತದ ೧೯೧೫-೧೬ರ ವರದಿಯಲ್ಲಿ ಮೂರು ಶಾಸನಗಳ ವಿವರಣೆ ಇದೆ. ಅದರಲ್ಲಿ ಚೋಳರಾಜ ರಾಜಾದಿತ್ಯನು ತನ್ನ ತಂದೆಯನ್ನು ಹೂತಿದ್ದ ಸ್ಥಳದಲ್ಲಿ ಈಶ್ವರ ದೇವಾಲಯವನ್ನು ನಿರ್ಮಿಸಿದನೆಂದೂ, ಚೋಳರಾಜ ಒಂದನೆಯ ಆದಿತ್ಯನು ಪಳ್ಳಿಪಡೈ (ಸ್ಮಶಾನ)ನ ಮೇಲೆ ದೇವಾಲಯವೊಂದನ್ನು ನಿರ್ಮಾಣ ಮಾಡಿದನು. ಒಂದನೆಯ ರಾಜರಾಜನು ಪಳ್ಳಿಪಡೈಗಾಗಿ ಅರ್ಜುನೇಶ್ವರ ದೇವಾಲಯವನ್ನು ನಿರ್ಮಿಸಿದನು. ಈ ಅಂಶವನ್ನು ಗಮನಿಸಿದಾಗ ಹಂಪೆಯ ಈ ದೇವಾಲಯದಲ್ಲಿ ಸಮಾಧಿಗಳ ಮೇಲೆ ಈ ತ್ರಿಕೂಟ ದೇವಾಲಯವನ್ನು ನಿರ್ಮಿಸಿರುವುದು ಗಮನಾರ್ಹ ಸಂಗತಿ ಎಂಬುದು ಸುಸ್ಪಷ್ಟವಾಗುತ್ತದೆ".[೫]



ತ್ರಿಕೂಟ ದೇವಾಲಯದ ಸಾಮಾನ್ಯ ನೋಟ





ಪೂರ್ವಾಭಿಮುಖವಾಗಿರುವ ಗರ್ಭಗೃಹ

ಇಂಥಹ ದೇವಾಲಯಗಳ ನಿರ್ಮಾಣಕ್ಕೆ ಕಾರಣಗಳು

೧. ಈ ದೇವಾಲಯಗಳಿಗೆ ಪರೋಕ್ಷವಿನಯ ದೇವಾಲಯಗಳು ಎಂದು ಹೆಸರಿಸಿ ಅಮೂರ್ತವಾಗಿದ್ದ ದೇವರನ್ನು ತಮ್ಮ ಹಿರಿಯರಲ್ಲಿ ಕಾಣುವುದು.

೨. ತಾವು ಗಳಿಸಿದ ಸಂಪತ್ತು ಸದ್ವಿನಿಯೋಗವಾಗಬೇಕು. ಪುಣ್ಯಪ್ರಾಪ್ತಿಯಾಗಬೇಕು.

೩. ಹಿರಿಯರ ಹೆಸರಿನಲ್ಲಿರುವ ಸಮಾಧಿಗಳು ಚಿರಕಾಲ ಉಳಿಯಲಿ ಎಂದು ಸಮಾಧಿಗಳ ಮೇಲೆ ಕಲ್ಲಿನ ದೇವಾಲಯಗಳನ್ನು ನಿರ್ಮಿಸುವುದು.



ತ್ರಿಕೂಟ ದೇವಾಲಯದ ಪಾರ್ಶ್ವ ನೋಟ

೪. ಮಧ್ಯಯುಗೀನ ಕಾಲದಲ್ಲಿ ಇಂಥಹ ದೇವಾಲಯಗಳು ಸಾಕಷ್ಟು ಪ್ರಮಾಣದಲ್ಲಿ ರಚನೆಯಾದವು.

"ಪರೋಕ್ಷವಿನಯ ಎಂಬುದು ಕಣ್ಣಿಗೆ ಕಾಣದಿರುವ ವಸ್ತು ಅಥವಾ ವ್ಯಕ್ತಿಗೆ ಸಲ್ಲಿಸುವ ನಮ್ರತೆಯ ಕೃತಜ್ಞತೆ ಎಂದು ಅರ್ಥ. ವ್ಯಕ್ತಿಯೊಬ್ಬನ ಮರಣದ ನಂತರ ಸದ್ಗತಿ ದೊರೆಯಲೆಂಬ ಉದ್ದೇಶದಿಂದ ಪರೋಕ್ಷವಾಗಿ ಸಲ್ಲಿಸುವ ವಿನಯವಾಗಿದೆ. ಆ ವ್ಯಕ್ತಿಗಳ ಹೆಸರುಗಳು ಚಿರಕಾಲ ಉಳಿಯಲಿ ಎಂದು ಇಂಥಹ ದೇವಾಲಯವನ್ನು ನಿರ್ಮಿಸಿರುವುದು ಗಮನಾರ್ಹ".[೬]

ಒಟ್ಟಾರೆಯಾಗಿ ವಿಜಯನಗರದ ಪೂರ್ವ ಕಾಲದ ಈ ದೇವಾಲಯವು ವಿಶೇಷತೆಯಿಂದ ಕೂಡಿದೆ. ಇಂಥಹ ದೇವಾಲಯಗಳ ನಿರ್ಮಾಣ ಕಾರ್ಯವನ್ನು ಅರಸರ ಅಭಿರುಚಿ ಮತ್ತು ಶಿಲ್ಪಿಗಳ ಕೈಚಳಕ ಮೆಚ್ಚುವಂತಹದ್ದಾಗಿದೆ. ದೇವಾಲಯಗಳ ಅಭಿವೃದ್ಧಿಗೆ ಕಂಕಣಬದ್ಧರಾದ ಇವರು ಸಾಕಷ್ಟು ಸಂಖ್ಯೆಯಲ್ಲಿ ದೇವಾಲಯವನ್ನು ನಿರ್ಮಿಸಿದರು. ಹಂಪೆಯಲ್ಲಿ ಇಂಥಹ ದೇವಾಲಯ ನಿರ್ಮಾಣವಾಗಲು ಪ್ರಾಚೀನ ಕಾಲದಿಂದ ಬಂದ ಪೂರ್ವಜರ ಪೂಜೆಯೇ ಕಾರಣವಾಗಿದೆ. ಪರೋಕ್ಷವಿನಯ ಕ್ರಿಯೆಗೆ ಈ ದೇವಾಲಯ ನಿರ್ಮಾಣವಾಗಿರುವುದು ಗಮನಾರ್ಹ ಸಂಗತಿ.

ಅಡಿಟಿಪ್ಪಣಿ

೧. ಸಿ. ಮಹದೇವ, 'ಕುಮ್ಮಟ ದುರ್ಗದ ಅರಸರು', ಪುಟ ೨೨–೨೫.

೨. ಸಿ. ಮಹದೇವ, ಸುಬ್ಬಣ್ಣ ರೈ, ಮಾಧವ ಪೆರಾಜೆ, 'ಹೊಸಪೇಟೆ ತಾಲೂಕು ದರ್ಶನ', ಪುಟ ೨೩–೨೫.

೩. ಸಿ. ಮಹದೇವ ಮತ್ತು ಇತರರು, ಪೂರ್ವೋಕ್ತ, ಪುಟ ೨೭.

೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೩. ಹಂಪಿ, ಶಾಸನ ಸಂಖ್ಯೆ ೫೯.

೫. ಡಿ.ಜಿ. ಕುಲಕರ್ಣಿ, 'ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು', (ಪ್ರಕಟಿತ ಮಹಾಪ್ರಬಂಧ), ಪುಟ ೩೮–೪೦.

೬ ಡಿ.ಜಿ. ಕುಲಕರ್ಣಿ, ಪೂರ್ವೋಕ್ತ, ಪುಟ ೪೦–೪೧.

೭೬

ಕಂದಗಲ್ಲಿನ ಗುಹೆಯಂತಿರುವ ಕಲ್ಲೇಶ್ವರ ದೇವಸ್ಥಾನ

ಪಿ. ಬಸವರಾಜಪ್ಪ ಕಂದಗಲ್*

ಹಿಂದಿನ ಚಿತ್ರದುರ್ಗ ಜಿಲ್ಲೆಯಾಗಿದ್ದು, ಪ್ರಸ್ತುತ ದಾವಣಗೆರೆ ಜಿಲ್ಲೆಯಾಗಿರುತ್ತದೆ. ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿಯಲ್ಲಿ ಕಂದಗಲ್ ಗ್ರಾಮವಿದೆ ೧೦೦೦ಕ್ಕಿಂತ ಮಿಗಿಲಾಗಿ ಮನೆಗಳಿರುತ್ತವೆ. ಈ ಊರಿನಿಂದ ೩ ಫರ್ಲಾಂಗ್ ದೂರದಲ್ಲಿರುವ ಕಲ್ಲೇಶ್ವರ ದೇವಸ್ಥಾನವು ಮಣ್ಣಿನ ದಿಣ್ಣೆಯ ಮೇಲೆ ಕಟ್ಟಲ್ಪಟ್ಟಿರುತ್ತದೆ.

ಈ ದಿಣ್ಣೆಯ ಮೇಲೆ ಇರುವ ದೇವಸ್ಥಾನಕ್ಕೆ ಸೂರ್ಯ ಉದಯವಾಗುತ್ತಿದ್ದಂತೆಯೇ ಸೂರ್ಯನ ಕಿರಣಗಳು ಕಲ್ಲೇಶ್ವರನ ಪೀಠದ ಮೇಲೆ ಬೀಳುವಂತೆ ಕಟ್ಟಿರುತ್ತಾರೆ. ಈ ದೇವಸ್ಥಾನವು ಪೂರ್ವಭಾಗದ ತೆರೆದ ಬಾಗಿಲಿನಿಂದ ನಿರ್ಮಿತವಾಗಿರುತ್ತದೆ. ದೇವಸ್ಥಾನದ ಹೊರಭಾಗದಲ್ಲಿ ನಿಂತು ನೋಡಿದರೆ ೮ ಅಡಿ ಎತ್ತರವಿರುವ ಕಲ್ಲು ಜಪ್ಪಡೆಗಳನ್ನು ನೆಟ್ಟಿದ್ದು ಮೇಲ್ಹಾವಣಿಯಾಗಿ ಕಲ್ಲು ಚಪ್ಪಡಿಗಳನ್ನು ಹಾಕಿರುತ್ತಾರೆ. ಇದರ ಮೇಲ್ಭಾಗದಲ್ಲಿ ಮಣ್ಣನ್ನು ದಪ್ಪವಾಗಿ ಹಾಕಿರುತ್ತಾರೆ. ಈ ಕಾರಣದಿಂದ ಈ ದೇವಸ್ಥಾನವು ಸ್ವಲ್ಪ ದೂರದಿಂದ ನೋಡಿದರೆ ಗುಹೆಯಂತೆ ಗೋಚರಿಸುತ್ತದೆ. ದೇವಸ್ಥಾನವನ್ನು ಗುಹೆ ರೂಪದಲ್ಲಿ ಕಟ್ಟಿರುವ ಮುಂಭಾಗದಲ್ಲಿ ನಾಲ್ಕು ಅಡಿ ಎತ್ತರ ಒಂದುವರೆ ಅಗಲದ ಕಲ್ಲನ್ನು ನೆಟ್ಟಿರುತ್ತಾರೆ. ಆ ಕಲ್ಲಿನಲ್ಲಿ ಸೂರ್ಯಚಂದ್ರರಿದ್ದು, ಬಲಭಾಗದಲ್ಲಿ ಹಸು ಕರುವಿನೊಂದಿಗೆ ಇರುವುದನ್ನು ಕೆತ್ತಿರುತ್ತಾರೆ. ಅದರ ಕೆಳಭಾಗದಲ್ಲಿ ನಾಗವರ್ಮ ಎಂದು ಮಾತ್ರ ಕಾಣುತ್ತದೆ. ಗರ್ಭಗುಡಿಯ ದ್ವಾರಬಾಗಿಲಲ್ಲಿ ಒಂದಕ್ಕೊಂಡು ಎದುರಾಗಿ ಸೊಂಡಿಲನ್ನು ಎತ್ತಿ ನಮಸ್ಕರಿಸುವ ಎರಡು ಆನೆಗಳ ಕೆತ್ತನೆಯ ಕೆಲಸವಿರುತ್ತದೆ. ದೇವಸ್ಥಾನದ ಹಿಂಭಾಗದಲ್ಲಿ ಕಟ್ಟಿರುವ ಕೆರೆಯು ಇದರ ಸಮಕಾಲೀನವಾಗಿರುತ್ತದೆ. ಇದು ಕ್ರಿ.ಶ. ೯೨೦ರಲ್ಲಿ ಕಟ್ಟಲ್ಪಟ್ಟಿರುವುದಾಗಿ ತಿಳಿದು ಬಂದಿರುತ್ತದೆ. ಗರ್ಭಗುಡಿಯ ಮುಂಭಾಗದಲ್ಲಿ ಎಡಕ್ಕೆ ಬಲಕ್ಕೆ ಎರಡು ಕೋಣೆಗಳಿರುತ್ತವೆ. ಎಡಭಾಗದ ಕೋಣೆಯಲ್ಲಿ ನಾರಾಯಣಸ್ವಾಮಿ ವಿಗ್ರಹವನ್ನು ನಿಲ್ಲಿಸಿರುತ್ತಾರೆ. ಇದರ ಎತ್ತರ ೬ ಅಡಿ ಇದ್ದು, ಅಗಲ ೩ ೧/೨ ಅಡಿ ಇರುತ್ತದೆ. ನೋಡಲು ಈ ವಿಗ್ರಹವು ಬಲು ಸುಂದರವಾಗಿರುತ್ತೆದೆ. ಬಲಭಾಗದ ಕೋಣೆಯಲ್ಲಿ ವೀರಭದ್ರ



ದೇವರ ವಿಗ್ರಹವು ನಾಲ್ಕು ಅಡಿ ಎತ್ತರ ೩ ಅಡಿ ಉದ್ದವಿದ್ದು ವೀರಭದ್ರ ದೇವರಿರುತ್ತದೆ. ಗರ್ಭಗುಡಿಯ ಮುಂಭಾಗದಲ್ಲಿ ಈಶ್ವರ ಪೀಠಕ್ಕೆ ಎದುರಾಗಿ ಕಲ್ಲಿನಲ್ಲಿ ಕೆತ್ತಿದ ಬಸವಣ್ಣನ ವಿಗ್ರಹವಿರುತ್ತದೆ. ಈ ಎರಡು ಕೋಣೆಗಳ ನಡು ಅಂಕಣದಲ್ಲಿ ೭ ಜನ ಮಾತೃಕೆಯರು ಕಲ್ಲಿನಲ್ಲಿ ಕೆತ್ತಿದ ವಿಗ್ರಹಗಳಿರುತ್ತವೆ. ಈ ಪೀಠವು ೪ ಅಡಿ ಉದ್ದ ೩ ಅಡಿ ಅಗಲವಿರುತ್ತದೆ ಹಾಗೂ ೬ ಅಡಿ ಎತ್ತರದಲ್ಲಿರುತ್ತದೆ. ನೋಡಲು ಸೊಗಸಾಗಿ ಕಾಣುತ್ತದೆ. ಶಿವರಾತ್ರಿಯ ವೇಳೆಯಲ್ಲಿ ಕಂದಕಲ್ ಗ್ರಾಮದ ವಾಸಿಗಳು ಯಾವ ಜಾತಿ ಮತ, ಪಂಥಗಳ ಬೇಧವಿಲ್ಲದೆ ಕಲ್ಲೇಶ್ವರ ದೇವಸ್ಥಾನದಲ್ಲಿ ಮನರಂಜನೆಯಾಗುವಂತಹ ನಾಡಗೀತೆಗಳನ್ನು ಹಾಡಿ ಕೊಂಡು ಇಡೀ ರಾತ್ರಿ ಭಜನೆ ಮಾಡುತ್ತಿರುತ್ತಾರೆ. ಬೆಳಗ್ಗೆ ಆದ ನಂತರ ಕಲ್ಲೇಶ್ವರನಿಗೆ ಪೂಜೆ ಮಾಡಿಸಿ ಅನ್ನ ಸಂತರ್ಪಣೆ ಮಾಡುತ್ತಾರೆ. ಈ ರೀತಿಯಾಗಿ ಕಟ್ಟಿರುವ ಕಲ್ಲೇಶ್ವರ ದೇವಸ್ಥಾನವು ಪುರಾತನದಾಗಿರುತ್ತದೆ. ಆದರೆ, ೧೦೦೦ ವರ್ಷಗಳಿಗೂ ಹಳೆಯದಾಗಿರುತ್ತದೆ. ಈ ರೀತಿಯಾಗಿ ಈ ದೇವಸ್ಥಾನವು ಊರಿನಿಂದ ಹೊರಗೆ ಕಟ್ಟಿರುವುದು ಅಲ್ಲದೆ ಮಣ್ಣಿನಿಂದ ಮುಚ್ಚಲ್ಪಟ್ಟಿರುವುದು ಹಿಂದಿನ ಮುಸಲ್ಮಾನರ ಹಾವಳಿಗೆ ತುತ್ತಾಗದಂತೆ ಗುಹೆಯಂತೆ ಕಟ್ಟಿರುವುದಾಗಿ ತಿಳಿದುಬಂದಿರುತ್ತದೆ.

* ಜಯನಗರ, ಶಿವಮೊಗ್ಗ.

ಶಾಸ್ತ್ರೋಕ್ತ ಗ್ರಾಮ-ನಗರಗಳಲ್ಲಿ ಬೀದಿರಚನೆ

ಡಾ. ಕೂ.ಸ. ಅಪರ್ಣ*

ಮಯಮತ, ಮಾನಸಾರ ಮುಂತಾದ ಶಾಸ್ತ್ರಗ್ರಂಥಗಳು ಗ್ರಾಮ-ನಗರಗಳ ರಚನಾಕ್ರಮವನ್ನು ವಿವರಿಸುವಾಗ, ವಿವಿಧ ಆಧಾರಗಳಿಂದ, ವಿವಿಧ ಪ್ರಕಾರಗಳಾಗಿ ವಿಂಗಡಿಸಿದೆ. ಅವುಗಳಲ್ಲಿ ಬೀದಿಗಳೂ ಒಂದು. ಮಯಮತವು, ಬೀದಿಗಳ ಸಂಖ್ಯೆ ಮತ್ತು ರಚನಾಕ್ರಮದ ಆಧಾರದಿಂದಲೇ ಗ್ರಾಮಗಳನ್ನು ವಿವಿಧ ಪ್ರಕಾರಗಳಾಗಿ ವಿಂಗಡಿಸಿದ್ದರೆ, ಮಾನಸಾರವು ವಿವಿಧ ಪ್ರಕಾರದ ಗ್ರಾಮಗಳಲ್ಲಿ ಬೀದಿಗಳನ್ನು ಹೇಗೆ ರಚಿಸಬೇಕೆಂದು ಹೇಳಿದೆ. ಈ ಲೇಖನದಲ್ಲಿ, ಬೀದಿಗಳ ಬಗ್ಗೆ ಮಯಮತ ಮತ್ತು ಮನಸಾರ ಇತ್ಯಾದಿ ಗ್ರಂಥಗಳು ನೀಡಿರುವ ವಿವರಗಳನ್ನು ವಿಶ್ಲೇಷಿಸಲಾಗಿದೆ.

ಗ್ರಂಥಗಳಲ್ಲಿ, ವೀಥಿ, ಮಾರ್ಗ, ರಥ್ಯಾ, ಮಹಾಮಾರ್ಗ – ಈ ಶಬ್ದಗಳನ್ನು ಬಳಸಲಾಗಿದೆ. 'ವೀಥಿ' ಎಂದರೆ ಬೀದಿ ಎಂದೂ, 'ಮಾರ್ಗ' ಎಂದರೆ ರಸ್ತೆ ಎಂದೂ ಅರ್ಥ. ಬೀದಿ-ಚಿಕ್ಕದು, ರಸ್ತೆ-ದೊಡ್ಡದು[೧], 'ರಥ್ಯಾ' ಎಂಬುದನ್ನೂ ಮಾರ್ಗ[೨] ಎಂಬರ್ಥದಲ್ಲೇ ಬಳಸಿದೆ. 'ಮಹಾಮಾರ್ಗ' ಎಂಬುದು ದೊಡ್ಡ ರಸ್ತೆಗಳಿಗೆ ಅನ್ವಯಿಸುತ್ತದೆ. ಕೆಲವೊಮ್ಮೆ ವೀಥಿ ಮತ್ತು ಮಾರ್ಗಗಳನ್ನು ಸಮಾನಾರ್ಥಕವಾಗಿಯೂ ಬಳಸಿದಂತೆ ತೋರುತ್ತದೆ; ಸಂದರ್ಭಕ್ಕನುಸಾರವಾಗಿ ಅವುಗಳನ್ನು ಅರ್ಥೈಸಬೇಕಾಗುತ್ತದೆ. ತೀರ ಚಿಕ್ಕ ಬೀದಿಗಳಿಗೆ ಕ್ಷುದ್ರವೀಥಿ ಎಂದೂ ಹೆಸರಿದೆ. ಇದರೊಂದಿಗೆ, ರಸ್ತೆ ಬೀದಿಯ ಪಕ್ಕಗಳಲ್ಲಿರುವ ಪಾದಚಾರಿ ಮಾರ್ಗಕ್ಕೆ ಪಕ್ಷ' (Foot path) ಎಂದೂ ಮಾನಸಾರವು ಹೇಳಿದೆ. ಇದನ್ನು ದತ್ ಅವರು 'ಮನೆಗಳ ಸಾಲು' ಎಂದು ಅರ್ಥೈಸಿದ್ದಾರೆ. ಆದರೆ ಮಾನಸಾರದಲ್ಲಿ ನೀಡಿರುವ ನಕ್ಷೆಯಲ್ಲಿ 'Foot path' ಎಂದೇ ಇದೆ. ಮಯಮತವು, ನಗರ ಬೀದಿಗಳ ಬಗ್ಗೆ ಹೇಳುವಾಗ ಕುಟ್ಟಿಮ, ಗಲ ಈ ಶಬ್ದಗಳನ್ನು ಬಳಸಿದೆ. (ನೋಡಿ.ಅಟಿ.೨೬)

ಗ್ರಾಮದಲ್ಲಿರುವ ವಿವಿಧ ಮಾರ್ಗಗಳನ್ನು ಹೇಳುವಾಗ ಮಯಮತವು, ಗ್ರಾಮದ ಮಾರ್ಗಗಳ ಅಗಲವು ೧ರಿಂದ ೫ ದಂಡದವರೆಗೆ ಎಷ್ಟಾದರೂ ಇರಬಹುದು ಎಂದು ಹೇಳಿದೆಯಲ್ಲದೆ, ವಿವಿಧ ಮಾರ್ಗಗಳನ್ನು ಈ ಕೆಳಗಿನಂತೆ ಹೆಸರಿಸಿದೆ: ೬ ದಂಡ ಅಗಲವಾಗಿದ್ದು, ಪೂರ್ವ-ಪಶ್ಚಿಮವಾಗಿ ಹೋಗುವ ಬೀದಿಗೆ 'ಮಹಾಪಥ' ಎಂದು ಹೆಸರು. ಗ್ರಾಮದ ಮಧ್ಯ/ಕೇಂದ್ರದ ಸುತ್ತಲಿರುವುದು-ಬ್ರಹ್ಮವೀಥಿ (ಮತ್ತು ಇದೇ ಗ್ರಾಮದ ನಾಭಿ). ಗ್ರಾಮದ ದ್ವಾರದವರೆಗೂ ಹೋಗುವ ಬೀದಿಗೆ-'ರಾಜವೀಥಿ'[೩] ಎಂದು ಹೆಸರು; ಅದರ ಪಕ್ಕಗಳಲ್ಲಿರುವುದು-'ಕ್ಷುದ್ರವೀಥಿ'. ಈ ಎಲ್ಲಕ್ಕೂ 'ಕುಟ್ಟಿಮ' (Paved street) ಎಂದು ಹೆಸರು. ಗ್ರಾಮದ ಸುತ್ತಲಿರುವುದು-'ಮಂಗಳವೀಥಿ'[೪]; ಉತ್ಸವಗಳ ಸಂದರ್ಭದಲ್ಲಿ ಇಲ್ಲಿ ದೇವರ ಮೆರವಣಿಗೆ ಹೋಗುವುದರಿಂದ ಇದು ರಥಬೀದಿಯೂ (-ರಥವೀಥಿ/ರಥಮಾರ್ಗ) ಹೌದು. ಉಪದ್ವಾರ / ತಿರ್ಯಗ್‌ದ್ವಾರ (Secondary gates)ದೆಡೆಗೆ ಹೋಗುವ / ಆ ದ್ವಾರದಿಂದ ಕೂಡಿರುವ ಬೀದಿಗೆ 'ನಾರಾಚ' ಎಂದು ಹೆಸರು. ಉತ್ತರದೆಡೆಗೆ ಹೋಗುವ ಮಾರ್ಗಕ್ಕೆ ಕ್ಷುದ್ರ, ಅರ್ಗಲ, ಮತ್ತು ವಾಮನಪಥ[೫] ಎಂದು ಹೆಸರು (೯.೩೬-೩೯a)

ಮೊದಲೇ ಹೇಳಿದಂತೆ, ಮಯಮತವು ಹೇಳುವ ವಿವಿಧ ಪ್ರಕಾರಗಳಿಗೆ, ಮಾರ್ಗ (ಬೀದಿಗಳ ಸಂಖ್ಯೆ ಮತ್ತು ದಿಕ್ಕು ಪ್ರಮುಖವಾದ ಆಧಾರವಾಗಿದೆ. ಅದರಲ್ಲೂ, ಪೂರ್ವದಿಂದ ಪಶ್ಚಿಮಕ್ಕೆ ಹೋಗುವ ರಸ್ತೆಗಳ ಸಂಖ್ಯೆಯು ಇಲ್ಲಿ ಪ್ರಧಾನವಾಗುತ್ತದೆ. ಇದರಂತೆ, 'ದಂಡಕ' ಪ್ರಕಾರದ ಗ್ರಾಮದಲ್ಲಿ ಪೂರ್ವಕ್ಕೆ ಒಂದು ಬೀದಿ ಇದ್ದರೆ, 'ಪ್ರಸ್ತರ' ಪ್ರಕಾರದಲ್ಲಿ ೩ ಬೀದಿಗಳೂ, 'ಪ್ರಕೀರ್ಣಕ'ದಲ್ಲಿ ೪ ಬೀದಿಗಳೂ ಪೂರ್ವಕ್ಕಿರುತ್ತವೆ-ಇತ್ಯಾದಿಗಳನ್ನು ಹೇಳಬಹುದು.[೬] ಉತ್ತರದಿಂದ ಆರಂಭವಾಗುವ ಮಾರ್ಗಗಳ ಸಂಖ್ಯೆಗಳಲ್ಲಿ ಮಾತ್ರ ವ್ಯತ್ಯಾಸವಿದ್ದು, ಅದರ ಆಧಾರದ ಮೇಲೆ ಉಪಪ್ರಕಾರಗಳನ್ನು ಹೇಳಿದೆ.

ವಿವಿಧ ಗ್ರಂಥಗಳು ವಿವಿಧ ಪ್ರಕಾರದ ಗ್ರಾಮಗಳಿಗೆ[೭] ಹೇಳುವ ಬೀದಿಗಳ ರಚನಾವಿನ್ಯಾಸವನ್ನು ಇಲ್ಲಿ ಗಮನಿಸಬಹುದು:

೧. **ದಂಡಕ ಗ್ರಾಮ:** ಈ ಪ್ರಕಾರದ ಗ್ರಾಮವು ಆಯತಾಕಾರವಾಗಿರುತ್ತದೆ. ಇದರಲ್ಲಿ ಬೀದಿಗಳು ನೇರವಾಗಿರುತ್ತವೆ ಮತ್ತು ಸಮಾನಾಂತರವಾಗಿರುತ್ತವೆ. ಮಾನಸಾರದ ಪ್ರಕಾರ, ಈ ಪ್ರಕಾರದ ಗ್ರಾಮದಲ್ಲಿ ೩ರಿಂದ ೫ ರವರೆಗೆ ಎಷ್ಟಾದರೂ

---

* # ೧೩೭೩, ೧೭ನೇ ಮುಖ್ಯರಸ್ತೆ, ಬನಶಂಕರಿ ೧ನೇ ಘಟ್ಟ, ಬೆಂಗಳೂರು-೫೬೦೦೫೦

ರಸ್ತೆಗಳಿರಬಹುದು. ಮೂಲದಿಂದ ಕೊನೆಯವರೆಗೆ ಚಿಕ್ಕಬೀದಿ (ವೀಥಿ)ಗಳಿರಬಹುದು ಅಥವಾ ಇಲ್ಲದಿರಬಹುದು. ಅಂತಹುದೇ ಒಂದು ಬೀದಿಯು ಗ್ರಾಮದ ಮಧ್ಯದಿಂದ ನೇರವಾಗಿ ಹಾಯಬಹುದು ಅಥವಾ ಇಲ್ಲದಿರಬಹುದು. ಈ ರಸ್ತೆಯ ಅಗಲ ೧ರಿಂದ ೫ ದಂಡದವರೆಗೆ ಎಷ್ಟಾದರೂ ಇರಬಹುದು. ಇಲ್ಲಿ ಮಧ್ಯದ ರಸ್ತೆಯ (ಮಧ್ಯರಥ್ಯಾ) ಸುತ್ತ ಇರುವ ಇತರ ಬೀದಿಗಳು ಒಂದಕ್ಕೊಂದು ಸಮನಾಗಿರಬೇಕು. ಇತರ ಎಲ್ಲ ಬೀದಿಗಳೂ ಗ್ರಾಮದ ಒಳಗಿರುವ ರಸ್ತೆಗೆ ಸಮನಾಗಿರಬಹುದು ಮತ್ತು ಇಲ್ಲದಿರಬಹುದು. ಮೊದಲಿನಿಂದ ಕೊನೆಗೆ ಹೋಗುವ ರಸ್ತೆಗಳಿಗೆ, ಹೋಗಿ ಬರುವವರ ರಕ್ಷಣೆಗಾಗಿ ಒಂದೊಂದು ಪಾದಚಾರಿ ಮಾರ್ಗ(–'ಪಕ್ಷ') ಇರಬೇಕು. ಆದರೆ ಮುಖ್ಯವಾದ ಬೀದಿಗೆ ಎರಡು 'ಪಕ್ಷ' ಇರಬೇಕು (೯.೪೯–೫೫).

ಮಯಮತವು ಹೇಳುವಂತೆ, ದಂಡಕ ಗ್ರಾಮದಲ್ಲಿ ಒಂದು ಬೀದಿಯು ಉತ್ತರಕ್ಕೆ ಮತ್ತು ಇನ್ನೊಂದು ಪೂರ್ವಕ್ಕೆ ಇರಬೇಕು. ಎರಡೂ ಬೀದಿಗಳು ಸರಳರೇಖೆಯಲ್ಲಿದ್ದು, ಮಧ್ಯದಲ್ಲಿ ಒಂದನ್ನೊಂದು ಅಡ್ಡಲಾಗಿ ಸಮಕೋನದಲ್ಲಿ ಛೇದಿಸುತ್ತದೆ. ಒಂದೇ ರಸ್ತೆ ಇದ್ದು, ದಂಡಕದಂತೆ ನೇರವಾಗಿರುವುದನ್ನೂ 'ದಂಡಕ' ಎಂದೇ ಹೇಳಬಹುದಾಗಿದೆ (೯.೪೧–೪೨). 'ಮಂಡಕ'[೮] ಗ್ರಾಮದ ಬಗ್ಗೆ ಹೇಳುವಾಗ ವಿಶ್ವಕರ್ಮ ವಾಸ್ತುಶಾಸ್ತ್ರವು, ಮುಖ್ಯ ಬೀದಿಯು ಪೂರ್ವದಿಂದ ಪಶ್ಚಿಮದೆಡೆಗಿರುತ್ತದೆ ಎಂದು ಮಾತ್ರ ಹೇಳಿದೆ (೭.೧೦–೧೧).

೨. ಸರ್ವತೋಭದ್ರ ಗ್ರಾಮ: ಈ ಪ್ರಕಾರದ ಗ್ರಾಮವು ಚೌಕಾಕಾರವಾಗಿರುತ್ತದೆ. ಇದರ ವಾಸ್ತುಮಂಡಲವು ೬೪ ಪದಗಳ ಮಂಡೂಕ / 'ಚಂಡಿತ' ಅಥವಾ ೪೯ ಪದಗಳ 'ಸ್ಥಂಡಿಲ' ರೀತಿಯದಾಗಿರಬಹುದು[೯]. ಈ ಗ್ರಾಮದಲ್ಲಿ ರಸ್ತೆಗಳು (ರಥ್ಯಾ) ೧ ರಿಂದ ೫ ರವರೆಗೆ ಎಷ್ಟಾದರೂ ಇರಬಹುದು ಮತ್ತು ಸುತ್ತ ಒಂದು ಬೀದಿ ಇರಬಹುದು. ಇವುಗಳಲ್ಲಿ ಒಳಗಿನ ರಸ್ತೆಗೆ (ಅಂತರಥ್ಯಾ) ಒಂದು ಪಾದಚಾರಿ ಮಾರ್ಗ ಮತ್ತು ಹೊರಗಿನದಕ್ಕೆ (ಬಾಹ್ಯರಥ್ಯಾ) ಎರಡು ಪಾದಚಾರಿ ಮಾರ್ಗ ಇರಬೇಕು. ಗ್ರಾಮದ ಹೊರಭಾಗದಲ್ಲಿ (–ಪೈಶಾಚ ಭಾಗ) ಅದೇ ರೀತಿ ಬೀದಿಗಳನ್ನು ಮಾಡಬೇಕು. (–ವೀಥಿ) ಮತ್ತು ಇದು ಎಲ್ಲಾ 'ಪದ'ಗಳ ಮೂಲಕ ಹಾದು ಹೋಗಬೇಕು. ಆಯಾ ಬೀದಿಗಳಿಗೆ ಎರಡೂ ಕಡೆ 'ಪಕ್ಷ' ಇರಬೇಕು. ಇದು ನಂದ್ಯಾವರ್ತದ ಆಕಾರದಲ್ಲಿರಬೇಕು[೧೦]. ಅಥವಾ ಬೇಕಾಗಿದ್ದರೆ ಒಂದು ಮೂಲೆಯನ್ನು ಇನ್ನೊಂದಕ್ಕೆ ಸೇರಿಸಬಹುದು ಎಂಬ ಆಯ್ಕೆಯನ್ನೂ ಮಾನಸಾರ ನೀಡಿದೆ (೯.೬೬–೭೨).

೩. ನಂದ್ಯಾವರ್ತ ಗ್ರಾಮ: ಇದು ಚೌಕಾಕಾರ ಅಥವಾ ಆಯತಾಕಾರವಾಗಿರಬಹುದು. ಚೌಕಾಕಾರವಾಗಿದ್ದಲ್ಲಿ ಅದಕ್ಕೆ ಹೊಂದುವ ೬೪ ಪದಗಳ ಚಂಡಿತ / ಮಂಡೂಕ ನಕ್ಷೆಯನ್ನೋ ೪೯ ಪದಗಳ 'ಸ್ಥಂಡಿಲ' ನಕ್ಷೆಯನ್ನೋ ಬಳಸಬಹುದು[೧೧]; ಅದೇ ಆಯತಾಕಾರವಾಗಿದ್ದಲ್ಲಿ, ಅದಕ್ಕೆ ಹೊಂದುವ ೮೧ ಪದಗಳ 'ಪರಮಶಾಯಿಕಾ' ಮಂಡಲವನ್ನು ಬಳಸಬಹುದು ಎಂದು ಮಾನಸಾರದಲ್ಲಿದೆ. ಇದು ವೃತ್ತಾಕಾರವಾಗಿಯೂ ಇರಬಹುದೆಂಬ ಸೂಚನೆಯನ್ನು ದತ್ತ ಅವರು ಕಾಮಿಕಾಗಮದ ಓಸ್ಲೆಯಲ್ಲಿ ನೀಡಿದ್ದಾರೆ (ಉದ್ಧೃತ–ಪು.೨೧೯,೨೨೫). ನಂದ್ಯಾವರ್ತ ಗ್ರಾಮದಲ್ಲಿ, ಪೂರ್ವದ ರಸ್ತೆಯು (–ರಥ್ಯಾ / ಮಹಾಮಾರ್ಗ) ಉತ್ತರದಿಂದ ದಕ್ಷಿಣಕ್ಕೆ ಹೋಗಬೇಕು; ದಕ್ಷಿಣದ ರಸ್ತೆಯು (–ವೀಥಿ)[೧೨] ಪೂರ್ವದಿಂದ ಪಶ್ಚಿಮದೆಡೆಗೆ ಸಾಗಬೇಕು; ಉತ್ತರದ ಬೀದಿಯು ದಕ್ಷಿಣದಿಂದ ಹೊರಟು ಉತ್ತರಮುಖವಾಗಿ ಸಾಗಬೇಕು; ಉತ್ತರದ ಬೀದಿಯು ಪಶ್ಚಿಮದಿಂದ ಪೂರ್ವಮುಖವಾಗಿ ರಚಿಸಲ್ಪಡಬೇಕು[೧೩]. ಇವೆಲ್ಲವೂ 'ನಂದ್ಯಾವರ್ತ' (ಚಿತ್ರದ)ದ ಸುತ್ತಲಿರುವ ಬೀದಿಗಳು (–ನಂದ್ಯಾವರ್ತಾವೃತವೀಥೀ) ಒಳಗಿನ ಬೀದಿಗಳಿಗೆ (ಅಂತರ್ವೀಥೀ) ಮೂಲದಿಂದ ಕೊನೆಯವರೆಗೂ ಒಂದು ಒಂದು 'ಪಕ್ಷ' ಇರಬೇಕು; ಇನ್ನೂ ಎರಡು ಪಕ್ಕಗಳಲ್ಲಿ ಉಳಿದಿರುವ ಎರಡು ಬೀದಿಗಳು 'ಪಕ್ಷಮುಕ್ತ'ವಾಗಿರಬೇಕು (without-foot-path)[೧೪]. ಹೊರಗಿನ ರಸ್ತೆಗಳು ಹೆಚ್ಚು ಅಗಲವಾಗಿಯೂ ಉದ್ದವಾಗಿಯೂ ಇರಬೇಕು. ಅಲ್ಲಿ ೧, ೩, ೫, ಅಥವಾ ೭ ಬೀದಿಗಳಿರಬೇಕು. ಇದಕ್ಕೆ ಮೂಲದಿಂದಲೇ ಆರಂಭವಾಗಿ ಎರಡು 'ಪಕ್ಷ'ಗಳಿರಬೇಕು. ಇದರ ಬದಲಿಗೆ, ೧ ರಿಂದ ೫ ರವರೆಗೆ ಎಷ್ಟಾದರೂ ರಸ್ತೆ (–ಮಾರ್ಗ)ಗಳಿರಬಹುದು. ಇದರಿಂದ ಹೊರಟ ಮಾರ್ಗದಲ್ಲಿ (?ಈ 'ಮಾರ್ಗ'ದಲ್ಲಿ) 'ಪಕ್ಷ' ಇರಬಾರದು; ಬೀದಿಗಳಿಗೆ (–ವೀಥಿ) 'ಪಕ್ಷ' ಇರಬೇಕು; 'ಮಾರ್ಗ'ಗಳಿಗೆ ಇರಬಾರದು. ಮಹಾಮಾರ್ಗ ಮತ್ತು ವೀಥಿಗಳನ್ನು ಗಂಟುಗಂಟಾದ ಸುಣ್ಣಕಲ್ಲಿನಿಂದ ಗಟ್ಟಿಗೊಳಿಸಬೇಕು (–'ಕರ್ಕರೀಕೃತಂ')

ಈ ಮಹಾಮಾರ್ಗ ಮತ್ತು ಬೀದಿಗಳ ಮಧ್ಯೆ 'ಕ್ಷುದ್ರ ಮಾರ್ಗ'ಗಳನ್ನು ನೇರವಾಗಿ ಹಗ್ಗದಂತೆ ಮಾಡಬೇಕು[೧೫]. ಬೀದಿಯ ಅಗಲವು ೩ ರಿಂದ ೭, ೯ ಅಥವಾ ೧೨ – ಹೀಗೆ ಎಷ್ಟಾದರೂ ದಂಡ ಇರಬಹುದು. ಈ ಕೆಲವು ರಸ್ತೆಗಳು (–ರಥ್ಯಾ) ಬೇರೆಯದಕ್ಕಿಂತ ಅಗಲವಾಗಿರಬಹುದು ಅಥವಾ ಎಲ್ಲವೂ ಒಂದೇ ಅಗಲದಲ್ಲಿರಬಹುದು. 'ಮಹಾಮಾರ್ಗ'ವು ವಿಶಾಲವಾಗಿದ್ದು ೯ ದಂಡ ಅಗಲವಾಗಿರುವ ಬೀದಿಗಳಿಗೆ ಸಮವಾಗಿರಬೇಕು. 'ಮಹಾರಥ್ಯಾ' (ಮಾರ್ಗ) ದ ಅಗಲವು

(ಊರೊಳಗೆ) ಮಧ್ಯದಲ್ಲಿರುವ ಬೀದಿಯ (-ಮಧ್ಯವೀಥೀ) ಅಗಲದಷ್ಟೇ ಇರಬೇಕು. ಅಥವಾ ಬೀದಿಯ ೧/೮ನೇ ರಷ್ಟು ಕಡಿಮೆ ಇರಬೇಕು ಅಥವಾ ೩/೪ನೇ ರಷ್ಟು ಅಥವಾ ಅರ್ಧದಷ್ಟು ಇರಬಹುದು. ಅಥವಾ ಎಲ್ಲಾ ಬೀದಿಗಳು ಒಂದೇ ಸಮನಾಗಿರಬಹುದು. 'ಮಹಾಮಾರ್ಗ'ದ ವಿಸ್ತಾರವು ಎಲ್ಲಾ ಬೀದಿಗಳ ೩/೪ ನೇ ರಷ್ಟು ಅಥವಾ ಸಮವಾಗಿರಬಹುದು. ಮತ್ತು 'ಕ್ಷುದ್ರಮಾರ್ಗ'ದ ವಿಸ್ತಾರವು ಮಹಾಮಾರ್ಗದ ಮುಕ್ಕಾಲು ಅಥವಾ ಅರ್ಧಭಾಗದಷ್ಟಿರಬೇಕು. ಈ ವಿವರಗಳನ್ನು ಮನಸಾರವು ನೀಡಿದೆ. (೯-೯೨-೧೦೪) 'ಪೈಶಾಚ' ಭಾಗದಲ್ಲಿ ೨ ರಿಂದ[೧೬] ೭ರವರೆಗೆ ಎಷ್ಟಾದರೂ ಬೀದಿಗಳಿದ್ದು, ಅವುಗಳ ವಿಸ್ತಾರವು 'ರಥ್ಯಾ'ದಂತಿರಬೇಕು. (ಅದೇ ೧೧೦-೧೧) 'ನಂದ್ಯಾವರ್ತ' ಪ್ರಕಾರದ ಗ್ರಾಮದಲ್ಲಿ, ಪೂರ್ವ-ಪಶ್ಚಿಮವಾಗಿ ೫ ಬೀದಿಗಳಿರುತ್ತವೆಂದೂ, ಉತ್ತರದಿಂದ ಆರಂಭವಾಗಿ ೧೩ರಿಂದ ೧೭ರವರೆಗೆ ಎಷ್ಟಾದರೂ ಬೀದಿಗಳಿರುತ್ತವೆಂದೂ ಮಯಮತವು ಹೇಳಿದೆ. ಅಲ್ಲದೆ, ೪ ದಿಕ್ಕುಗಳಲ್ಲೂ ದ್ವಾರಗಳಿದ್ದು, ಇದರ ವಿನ್ಯಾಸವು ನಂದ್ಯಾವರ್ತದಂತೆ ತೋರುತ್ತದೆ. ಈ ದ್ವಾರಗಳು ನಂದ್ಯಾವರ್ತಕ್ಕೆ / ಆ ವಿನ್ಯಾಸಕ್ಕೆ ಹೊರಭಾಗದಲ್ಲಿರುತ್ತದೆ. ಬೀದಿಗಳು ಒಳಗಿರುತ್ತವೆ ಮತ್ತು ಅಲ್ಲಿ ಅನೇಕ ಅಡ್ಡರಸ್ತೆಗಳಿರುತ್ತವೆ. ಈ ಕಾರಣಗಳಿಂದ ಇದು ನಂದ್ಯಾವರ್ತದಂತೆ ತೋರುತ್ತದೆ - ಎಂದೂ ಅದೇ ಗ್ರಂಥವು ಹೇಳಿದೆ (೯.೪೮-೫೦ಅ) ಮಾನಸಾರದಷ್ಟು ವಿವಿಧ ರಸ್ತೆಗಳನ್ನೂ, ವಿವರಗಳನ್ನೂ ಮಯಮತ ನೀಡಿಲ್ಲ. ಆದರೆ ಮಾನಸಾರವು ಮಯಮತದಂತೆ ಒಟ್ಟು ಮಾರ್ಗಗಳ ಸಂಖ್ಯೆಯನ್ನು ಹೇಳಿಲ್ಲ.

೪. ಪದ್ಮಕ ಗ್ರಾಮ: ಇದು ಚೌಕಾಕಾರವಾಗಿರುವ ಗ್ರಾಮ. ಇದಕ್ಕೂ ಚಂಡಿತ / ಮಂಡೂಕ (೬೪ ಪದ) ಅಥವಾ ಸ್ಥಂಡಿಲ (೪೯ ಪದ) ನಕ್ಷೆಯನ್ನು ಬಳಸಬಹುದು. ಇದರ ಹೊರಸ್ವರೂಪ ಪದ್ಮದಂತಿರುವುದು. ಮಾನಸಾರದಂತೆ, ಹೊರಭಾಗದಲ್ಲಿರುವ ಮತ್ತು ಸುತ್ತಲಿರುವ ಎಲ್ಲ ರಸ್ತೆಗಳಿಗೆ (-ರಥ್ಯಾ) 'ಪಕ್ಷ'ವಿರಬೇಕು. ಈ ಗ್ರಾಮದಲ್ಲಿ ೪ ರಿಂದ-೮ ರವರೆಗೆ ಎಷ್ಟು ಬೀದಿಗಳಾದರೂ (-ವೀಥೀ) ಇರಬಹುದು. ಮಧ್ಯದಲ್ಲಿ ಅಡ್ಡವಾಗಿ ಯಾವ ಬೀದಿಗಳನ್ನೂ ಮಾಡಬಾರದು. ಉಳಿದದ್ದನ್ನು ಹಿಂದೆ ಹೇಳಿದಂತೆ ಮಾಡಬೇಕು (೯.೧೬೧-೨) ಈ ಬಗ್ಗೆ ದತ್ ಅವರು, ಅಷ್ಟದಳಪದ್ಮಾಕಾರದ ನಕ್ಷೆಯನ್ನು ನೀಡಿದ್ದಾರೆ. (ಪು.೨೨೬) ಮಯಮತದ ಪ್ರಕಾರ, ಈ ಗ್ರಾಮವು ೫ ರೀತಿಯದಾಗಿದೆ. ಇದರಲ್ಲಿ ಪೂರ್ವ-ಪಶ್ಚಿಮವಾಗಿ ೭ ಬೀದಿಗಳಿದ್ದು, ಉತ್ತರದಿಂದ ಆರಂಭವಾದ ಬೀದಿಗಳು ೩ರಿಂದ ೭ರವರೆಗೆ ಎಷ್ಟಾದರೂ ಇರಬಹುದು ಹಾಗೂ ೨೦ ಅಡ್ಡರಸ್ತೆಗಳು ಇರುತ್ತವೆ (೯.೫೧b-೫೨) ಕಾಮಿಕಾಗಮದ ಪ್ರಕಾರ, ಉತ್ತರದ ಬೀದಿಗಳು ೭ರಿಂದ ೨೯ ರವರೆಗೆ ಎಷ್ಟಾದರೂ ಇರಬಹುದು ಮತ್ತು ಅಡ್ಡರಸ್ತೆಗಳು ೭ ಇರಬೇಕು. ಬ್ರಹ್ಮಭಾಗದ ಸುತ್ತ ೪ ರಿಂದ ೮ ರವರೆಗೆ ಎಷ್ಟು ಬೀದಿಗಳಾದರೂ ಇರಬಹುದು (ಉದ್ಧೃತ, ದತ್-ಪು.೨೨೭) ಇವೆಲ್ಲವನ್ನೂ ಗಮನಿಸಿದರೆ, ಒಂದೊಂದು ಗ್ರಂಥಗಳೂ ಬೇರೆ ಬೇರೆ ರೀತಿಯಲ್ಲಿ ಹೇಳುವಂತೆ ತೋರುತ್ತದೆ. ಮಯಮತ ಮತ್ತು ಕಾಮಿಕಾಗಮಗಳು, ಅಡ್ಡರಸ್ತೆಗಳು ಇರಬೇಕೆಂದು ಹೇಳಿದರೆ, ಮಾನಸಾರವು, ಇರಬಾರದೆಂದು ಹೇಳಿದೆ. ಮಯಮತ ಮತ್ತು ಕಾಮಿಕಾಗಮಗಳಲ್ಲೇ, ಬೀದಿಗಳ ಸಂಖ್ಯೆಗಳನ್ನು ಹೇಳುವಲ್ಲಿ ವ್ಯತ್ಯಾಸವಿದೆ. ಈ ಬಗ್ಗೆ ದತ್ ಅವರು ಪದ್ಮಾಕಾರದ ನಕ್ಷೆಯಲ್ಲಿ ಬೀದಿಗಳನ್ನು ನೀಡಿದ್ದರೂ, ಆ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ[೧೭].

೫ ಸ್ವಸ್ತಕ ಗ್ರಾಮ: ಈ ಪ್ರಕಾರದ ಗ್ರಾಮವು ಚೌಕಾಕಾರವಾಗಿರುವುದು. ಇದಕ್ಕಾಗಿ 'ಪರಮಶಾಯಿಕಾ' ನಕ್ಷೆಯನ್ನು (೮೧ ಪದ) ೯ 'ಪದ'ಗಳ 'ಪೀಠ' ಮಂಡಲವನ್ನು ಬಳಸಬಹುದೆಂದೂ ಒಂದೆಡೆ ಇದೆ (ಮಾನ-೭.೩೦b, ಸುಯ-೯.೪೩). ಪೈಶಾಚ ಭಾಗದಲ್ಲಿ ಮತ್ತು ಅದರ ಸುತ್ತ ರಸ್ತೆಯನ್ನು (-'ರಥ್ಯಾ') ನಿರ್ಮಿಸಬೇಕು[೧೮]. ಗ್ರಾಮದ ವಿನ್ಯಾಸವು ಒಳಭಾಗದಲ್ಲಿ ಸ್ವಸ್ತಿಕಾಕಾರದಲ್ಲಿರಬೇಕು. ಗ್ರಾಮದ ಮಧ್ಯದಿಂದ ಪೂರ್ವ-ಪಶ್ಚಿಮವಾಗಿ ಒಂದು ರಸ್ತೆಯು ನೇರವಾಗಿ ಹೊರಟಿರಬೇಕು. ಅಂತೇ, ದಕ್ಷಿಣ-ಉತ್ತರವಾಗಿ ಹೊರಟ ರಸ್ತೆಯೂ ಅದೇ ಮಧ್ಯದಿಂದ ಅಡ್ಡವಾಗಿ ಹಾಯ್ದು ಹೋಗಬೇಕು. ಈ ಎರಡೂ ರಸ್ತೆಗಳನ್ನು ಮಧ್ಯದಲ್ಲಿ ಗಂಟುಗಂಟಾದ ಸುಣ್ಣಕಲ್ಲಿನಿಂದ ಗಟ್ಟಿಗೊಳಿಸಬೇಕು (-'ಕರ್ಕರೀಕೃತ') ಈ ವಿನ್ಯಾಸದಲ್ಲಿ ಪೂರ್ವಕ್ಕೆ ಹೋಗುವ ರಸ್ತೆಯು ಉತ್ತರದಿಂದ ಈಶಾನ್ಯದವರೆಗೆ ವಿಸ್ತರಿಸಿರುತ್ತದೆ. ದಕ್ಷಿಣಕ್ಕೆ ಹೋಗುವುದು- ಪೂರ್ವದಿಂದ ಆಗ್ನೇಯದವರೆಗೆ ವಿಸ್ತರಿಸಿರುತ್ತದೆ. ಅಂತೇ, ಪಶ್ಚಿಮಕ್ಕೆ ಹೋಗುವುದು - ದಕ್ಷಿಣದಿಂದ ನೈಋತ್ಯದವರೆಗೂ, ಉತ್ತರಕ್ಕೆ ಹೋಗುವುದು - ಪಶ್ಚಿಮದಿಂದ ವಾಯವ್ಯದವರೆಗೂ ವಿಸ್ತರಿಸಿರುತ್ತದೆ. ಇದರ ನಂತರ, ೪ ರಸ್ತೆಗಳ (-ರಥ್ಯಾ) ತುದಿಯನ್ನು ಸೇರಿಸುವಂತೆ ಸುತ್ತ ಒಂದು ಬೀದಿ(ವೀಥಿ) ಮಾಡಬೇಕು.

ಈ ಸ್ವಸ್ತಿಕ ಬೀದಿಯು ನೇಗಿಲ ಆಕಾರದಂತೆ ಇರುತ್ತದೆ. (ಗ್ರಾಮದ) ಮಧ್ಯದಲ್ಲಿ, ಮೂಲದಲ್ಲಿ ಎರಡು ಬೀದಿಗಳೂ, ತುದಿಯಲ್ಲಿ ಎರಡು ಬೀದಿಗಳೂ ಇರಬೇಕು. ೪ ದಿಕ್ಕುಗಳಲ್ಲಿ ನಾಲ್ಕು ಮೂಲೆಗಳಿದ್ದು, ಅವು ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮುಖವಾಗಿರಬೇಕು (-ಚತುರ್ಮುಖಂ). ಅಂದರೆ, ೪ ಕಡೆಯಿಂದ ಪ್ರವೇಶವಿರಬೇಕು. ಹಾಗೂ ಇದು ಹಿಂದೆ ಹೇಳಿದ ಮಧ್ಯಮಾರ್ಗದವರೆಗೆ (-ಮಧ್ಯರಥ್ಯಾಂತಂ) ವಿಸ್ತರಿಸಿರಬೇಕು.

ಮತ್ತು ನಾಲ್ಕು ಮೂಲೆಗಳಲ್ಲಿ ಕೊನೆಯಾಗಬೇಕು. ಈ ಎಲ್ಲ ವಿವರಗಳನ್ನೂ ಮಾನಸಾರವು ನೀಡಿದೆ. ಈ ನಂತರ ಮಾನಸಾರವು ನೀಡಿರುವ ವಿವರಗಳು ಅಸ್ಪಷ್ಟವಾಗಿದ್ದರೂ, ಆಚಾರ್ಯ ಅವರು ಹೇಳಿರುವಂತೆ ಅದರ ಸ್ವರೂಪವನ್ನು ಈ ಕೆಳಗಿನಂತೆ ಸಂಗ್ರಹಿಸಬಹುದಾಗಿದೆ: ಸ್ವಸ್ತಿಕ ಸ್ವರೂಪವು ಆಗ್ನೇಯಭಾಗದಲ್ಲಿ ರೂಪುಗೊಳ್ಳುವಲ್ಲಿ, ರಸ್ತೆಯು – ದಕ್ಷಿಣದಿಂದ ಉತ್ತರಕ್ಕೆ ಸಾಗಿ, ಕೇಂದ್ರದಿಂದ ಪೂರ್ವಕ್ಕೆ ಹಾಗೂ ಆಗ್ನೇಯದಿಂದ ದಕ್ಷಿಣಕ್ಕೆ ಸಾಗಬೇಕು. ಅದೇ ನೈಋತ್ಯ ಭಾಗದಲ್ಲಿ, ಕೇಂದ್ರದಿಂದ ದಕ್ಷಿಣಕ್ಕೆ ಒಂದು ರಸ್ತೆಯು ಇದ್ದು, ಅದು ನೈಋತ್ಯದೆಡೆಗೆ ಸಾಗಿ, ಪಶ್ಚಿಮದಲ್ಲಿ ಕೊನೆಯಾಗಬೇಕು. ಇನ್ನೊಂದೆಡೆ, ದಕ್ಷಿಣದಿಂದ ಉತ್ತರಕ್ಕೆ ಸೇರುವಂತೆ ಒಂದು ರಸ್ತೆಯು ಇದ್ದು, ಅದು ವಾಯವ್ಯ ಹಾಗೂ ಪಶ್ಚಿಮದೆಡೆಗೆ ಸಾಗಿ, ಉತ್ತರದಿಂದ ಕೇಂದ್ರದೆಡೆಗೆ ಹೋಗಬೇಕು. ಇದರಿಂದ ವಾಯವ್ಯ ದಿಕ್ಕಿನ ಸ್ವಸ್ತಿಕ ರೂಪವು ಉಂಟಾಗುತ್ತದೆ. ಕೊನೆಯದಾಗಿ, ಕೇಂದ್ರದಿಂದ ಪೂರ್ವ–ಪಶ್ಚಿಮವಾಗಿ ಒಂದು ರಸ್ತೆ ಇದ್ದು, ಅದು ಪೂರ್ವದಿಂದ ಈಶಾನ್ಯದೆಡೆಗೂ ಮತ್ತು ಉತ್ತರಕ್ಕೂ ಸಾಗಿ ಮತ್ತೆ ಕೇಂದ್ರದೆಡೆಗೆ ಸಾಗಬೇಕು. ಇದು ಈಶಾನ್ಯ ಭಾಗದ ರಚನೆ. ಸ್ವಸ್ತಿಕ ರೂಪವನ್ನು ಈ ರೀತಿಯ ರಚನೆಯಿಂದ ಪಡೆಯಬಹುದಾಗಿದೆ. ಅವಶ್ಯಕತೆಗೆ ತಕ್ಕಂತೆ ಇಲ್ಲಿ ಎಷ್ಟಾದರೂ ಬೀದಿಗಳಿರಬಹುದು. ಈ ಬೀದಿಗಳಿಗೆ ಎರಡು 'ಪಕ್ಷ'ಗಳಿರಬೇಕೆಂದು ಹೇಳಿರುವ ಮಾನಸಾರವು, ಮಧ್ಯದ ರಸ್ತೆ (–ಮಧ್ಯರಥ್ಯಾ)ಯನ್ನು ಯಾನಕ್ಕಾಗಿ ಮಾಡಿರುವುದರಿಂದ ಅದಕ್ಕೆ 'ಪಕ್ಷ' ಇರಬಾರದೆಂದೂ ಹೇಳಿದೆ. ಈ ಮಧ್ಯರಸ್ತೆಯ ವಿಸ್ತಾರವು ಎರಡು ತುದಿಗಳಲ್ಲಿ ಕಡಿಮೆ ಯಾಗಬೇಕು. ಹೊರಗಿನ ಬೀದಿಗಳಿಗೆ ಎರಡು 'ಪಕ್ಷ' ಇರಬೇಕು. ಆಲಯವಾಸ್ತು ಇರುವಲ್ಲಿ ಬೇರೆ ಬೀದಿಗಳಿಗೆ ಒಂದು 'ಪಕ್ಷ' ಮತ್ತು ಹೊರಗಿನ ಬೀದಿಗಳಿಗೆ ಎರಡು 'ಪಕ್ಷ' ಇರಬೇಕು. ಹೊರಗೆ 'ಪಕ್ಷ'ವು ರಕ್ಷಣೆಗಾಗಿ ಇರುತ್ತದೆ (ಮಾನ ೯.೧೬೪–೧೮೨).

ಮಯಮತವು ಹೇಳುವ ವಿವರಗಳನ್ನು ಇಲ್ಲಿ ಗಮನಿಸಬಹುದು. ಇದು ೯ 'ಪದ'ಗಳಿಂದ ಕೂಡಿದ್ದು 'ಪೀಠ' ರೀತಿಯ ಮಂಡಲ ಇರುತ್ತದೆಂದು ಹೇಳಿದೆ. ಇದರ ಸುತ್ತಲೂ ಬೀದಿ ಇರುತ್ತದೆ (–ಮಂಗಳವೀಥಿ). ಮುಂದೆ, ಮಾನಸಾರವು ಕೊನೆಯಲ್ಲಿ ನೀಡಿರುವ ವಿವರಗಳನ್ನು ಮಾತ್ರವೇ ನೀಡಿದ್ದರೂ ಮಯಮತವು ಸರಳವಾಗಿ ಹೇಳಿದೆ. ಅದರಂತೆ, ಒಂದು ಬೀದಿಯು ಈಶಾನ್ಯದಿಂದ ಆರಂಭವಾಗಿ ಪಶ್ಚಿಮದೆಡೆಗೆ ಹೋಗಿ, ದಕ್ಷಿಣದಲ್ಲಿ ಕೊನೆಯಾಗುತ್ತದೆ (⌐↓) ; ಇನ್ನೊಂದು ಬೀದಿಯು ಆಗ್ನೇಯದಿಂದ ಆರಂಭವಾಗಿ ಉತ್ತರಕ್ಕೆ ಹೋಗಿ ಪಶ್ಚಿಮದಲ್ಲಿ ಕೊನೆಯಾಗುತ್ತದೆ (⌊←). ಈ ಗ್ರಾಮವು ಸ್ವಸ್ತಿಕದಂತಿದ್ದು, ಅಲ್ಲಿ ೪ ಮುಖ್ಯ ಬೀದಿಗಳಿರುತ್ತವೆ (೯.೪೩–೪೫). ಹೀಗೆ, 'ಸ್ವಸ್ತಿಕ'ದಲ್ಲಿ ಬೀದಿಗಳ ವಿನ್ಯಾಸವನ್ನು ಮಯಮತವು ಮನಸಾರಕ್ಕಿಂತ ಭಿನ್ನವಾದ ರೀತಿಯಲ್ಲಿ ಹೇಳಿದೆ. ವಾಸ್ತುಮಂಡಲದ ಆಯ್ಕೆಯಲ್ಲೂ ಎರಡರಲ್ಲೂ ಭಿನ್ನತೆ ಇದೆ. ಅಲ್ಲದೆ, ಮಯಮತದಲ್ಲಿ ಯಾವುದೇ ಅಷ್ಟರಸ್ತೆಯನ್ನೂ ಹೇಳಿಲ್ಲ; ಆದರೆ, ಎಲ್ಲವನ್ನೂ ತುಂಬಾ ಸರಳವಾಗಿ ಹೇಳಿದೆ. ಸಂಕ್ಷಿಪ್ತವಾಗಿ ಹೇಳಿದೆ.

ದತ್ ಅವರು, ಸ್ವಸ್ತಿಕದ ಸ್ವರೂಪವನ್ನು ವಾಸ್ತುಮಂಡಲದ 'ಪದ'ಗಳ ಹಿನ್ನೆಲೆಯಲ್ಲಿ ಹೇಳಿದ್ದಾರೆ: ಬ್ರಹ್ಮ (ಕೇಂದ್ರ/ಮಧ್ಯ), ಸೋಮ (ಉತ್ತರ), ಈಶಾನ (ಈಶಾನ್ಯ) ಮತ್ತು ಆದಿತ್ಯ (ಪೂರ್ವ) ಈ ಪದಗಳ ಮೊದಲ ಚೌಕದಲ್ಲಿ (ಅಂದರೆ, ಉತ್ತರ–ಪೂರ್ವದ ನಡುವೆ) ಪಶ್ಚಿಮದಿಂದ ಪೂರ್ವದೆಡೆಗೆ ಸಮಾನಾಂತರ ಬೀದಿಗಳು ಇರುತ್ತವೆ; ಅದೇ, ಎರಡನೇ ಚೌಕದಲ್ಲಿ, ಬ್ರಹ್ಮ, ಆದಿತ್ಯ, ಅಗ್ನಿ (ಆಗ್ನೇಯ), ಯಮ (ದಕ್ಷಿಣ) ಈ ಪದಗಳ ನಡುವೆ (ಅಂದರೆ, ಪೂರ್ವ ಪಶ್ಚಿಮದ ನಡುವೆ) ಸಮಾನಾಂತರ ಬೀದಿಗಳು ಉತ್ತರದಿಂದ ದಕ್ಷಿಣದೆಡೆಗೆ ಸಾಗುತ್ತವೆ; ಮೂರನೇ ಚೌಕದಲ್ಲಿ, ಬ್ರಹ್ಮ, ಯಮ, ನರುತಿ (ನೈರುತ್ಯ) ಮತ್ತು ವರುಣ (ಪಶ್ಚಿಮ) ಪದಗಳಲ್ಲಿ (ಅಂದರೆ, ದಕ್ಷಿಣ ಮತ್ತು ಪಶ್ಚಿಮದ ನಡುವೆ) ಈ ಬೀದಿಗಳು ಪೂರ್ವ–ಪಶ್ಚಿಮವಾಗಿ ಸಾಗುತ್ತವೆ; ನಾಲ್ಕನೆಯ ಚೌಕದಲ್ಲಿ ಇದೇ ಸಮಾನಾಂತರ ಬೀದಿಗಳು ದಕ್ಷಿಣದಿಂದ ಉತ್ತರದೆಡೆಗೆ ಸಾಗುತ್ತಿದ್ದು, ಇವು ಬ್ರಹ್ಮ, ವರುಣ, ವಾಯು (ವಾಯುವ್ಯ) ಮತ್ತು ಸೋಮ ಈ ಪದಗಳಲ್ಲಿ (ಅಂದರೆ, ಪಶ್ಚಿಮ ಮತ್ತು ಉತ್ತರದ ನಡುವೆ) ಇರುತ್ತದೆ. ಮಾನಸಾರ ಹಾಗೂ ಆಚಾರ್ಯ ಅವರ ವಿವರಣೆಗಿಂತಲೂ ಈ ವಿವರಣೆ ಸ್ಪಷ್ಟವಾಗಿದೆ (See Dutt, p.231.).

೬. ಪ್ರಸ್ತರ ಗ್ರಾಮ: ಈ ಗ್ರಾಮದ ಆಕಾರವು ಚೌಕ ಅಥವಾ ಆಯತಾಕಾರವಾಗಿರುತ್ತದೆ ಹಾಗೂ ಪ್ರಸ್ತರ (couch) ಆಕೃತಿಯಲ್ಲಿರುತ್ತದೆ. ಈ ಪ್ರಕಾರದ ಗ್ರಾಮಕ್ಕೆ ಚಂಡಿತ (೬೪ ಪದ), ಸ್ಥಂಡಿಲ (೪೯ ಪದ), ಪರಮಶಾಯಿಕಾ (೮೧ ಪದ) ಅಥವಾ ಇನ್ನಾವುದೇ ಇಷ್ಟವಾದ ಮಂಡಲವನ್ನು ಬಳಸಬಹುದು. 'ಪ್ರಸ್ತರ' ಪದದ ಅರ್ಥ–ಹಾಸಿಗೆ / ಸುಪ್ಪತ್ತಿಗೆಯಂತಿರುವುದು ಅಥವಾ 'ಆಚ್ಛಾದನ'ದಂತಿರುವುದು. ಈ ಪ್ರಕಾರದ ಗ್ರಾಮದಲ್ಲಿ ಪೈಶಾಚ ಭಾಗದಲ್ಲಿ ದೊಡ್ಡ ಮಾರ್ಗ (ಮಹಾರಥ್ಯಾ) ಇದ್ದು ಅದಕ್ಕೆ ೨ ಪಾದಚಾರಿ ರಸ್ತೆ ('ಪಕ್ಷ') ಇರಬೇಕು. ಇದು ಊರಿನ ಸುತ್ತ ಇರಬೇಕು ಎಂದು ಮಾನಸಾರವು ಹೇಳಿದೆ. ಈ ನಂತರ, ಇದರ ಅಂತ್ಯದಲ್ಲಿ ಪೇಚಕ (೪ ಪದ), ಪೀಠ (೯ ಪದ) ಅಥವಾ ಮಹಾಪೀಠ (೧೬ ಪದ) ನಕ್ಷೆ ಇರಬೇಕೆಂದು ಹೇಳಿ ಅವುಗಳಿಗೆ ಕ್ರಮವಾಗಿ

ಎಲ್ಲ ದಿಕ್ಕಿನಲ್ಲೂ ೧, ೨, ೩ ಬೀದಿಗಳನ್ನು ಹೇಳಿರುವುದು ವಿಶೇಷವಾಗಿದೆ. 'ಮಹಾಮಾರ್ಗ'ವು ವಿಸ್ತಾರವಾಗಿರಬೇಕು; ಇದು (ಮಹಾವೀಥೀ) ೬ ರಿಂದ ೧೧ರವರೆಗೆ ಎಷ್ಟಾದರೂ 'ದಂಡ' ಇರಬಹುದು. ಹೀಗೆ ವಿವಿಧ 'ಪದ'ಗಳನ್ನು ಗುರುತಿಸಿಟ್ಟುಕೊಳ್ಳಬೇಕು. ಅಲ್ಲಿರುವ ಬೀದಿಗಳ ಕೊನೆಗಳು 'ಪದ'ಗಳ ಕೊನೆಯವರೆಗೆ ಮುಂದುವರಿದಿರಬೇಕು. ವರ್ತುಲಾಕಾರದ ರಸ್ತೆಯು ಪೈಶಾಚ ಭಾಗದ ಒಳಗೆ ಮತ್ತು ಸುತ್ತ ಇರಬೇಕು. (ಈ ರೀತಿ ಚಿತ್ರದಲ್ಲಿಲ್ಲ) ಈ ವರ್ತುಲ ರಸ್ತೆಯ ಒಳಭಾಗದಿಂದ ವಿಸ್ತೃತಗೊಂಡಂತೆ / ಮುಂದುವರಿದಂತೆ ೩, ೫ ಅಥವಾ ೭ ಮಾರ್ಗಗಳಿದ್ದು (ರಥ್ಯಾ), ಅವುಗಳಿಗೆ ೮ 'ಸಂಧಿ'ಗಳಿರಬೇಕು. ಹಾಗೂ ಅವು ಪೂರ್ವದಿಂದ ಪಶ್ಚಿಮದೆಡೆಗೆ ಹೋಗಬೇಕು; ೧ ರಿಂದ ೪ ರವರೆಗೆ (ಎಷ್ಟಾದರೂ) 'ತಿರ್ಯಜ್ಮಾರ್ಗ' ಇರಬೇಕು. ೪ ಕೋಷ್ಠ / ಪದಗಳಿಂದ ಕೂಡಿದ 'ಪೇಚಕ' ರಚನೆ ಇದ್ದಲ್ಲಿ, ಅಲ್ಲಿ ೮ ಸಂಧಿ ಅಥವಾ ೮ ಅಡ್ಡರಸ್ತೆಗಳು ಇರುತ್ತವೆ. ೯ ಪದಗಳ 'ಪೀಠ' ರಚನೆ ಇದ್ದಲ್ಲಿ, ಅಲ್ಲಿ ೧೬ ಸಂಧಿ ಅಥವಾ ೧೬ ಅಡ್ಡರಸ್ತೆಗಳಿರುತ್ತವೆ. ಅದೇ, ೧೬ ಪದಗಳ 'ಮಹಾಪೀಠ' ರಚನೆ ಇದ್ದಲ್ಲಿ ಅಲ್ಲಿ ೨೫ ಅಡ್ಡರಸ್ತೆಗಳಿರುತ್ತವೆ. ಇದಲ್ಲದೆ, ದೈವಭಾಗದ ಒಳಗೆ, ೪ ಪದಗಳ ಪೇಚಕ ಅಥವಾ ೯ ಪದಗಳ 'ಪೀಠ' ಮಂಡಲಗಳನ್ನು ಮಾಡಬೇಕು. ಈ 'ಪದ'ಗಳ ಪಶ್ಚಿಮ ಭಾಗವು ಪ್ರಸ್ತರ ಗ್ರಾಮದ ಆಕೃತಿಯಲ್ಲಿರಬೇಕು[೧೯]. ಇದು ಪ್ರಸ್ತರ ಗ್ರಾಮದ ಬೀದಿಗಳ ಬಗ್ಗೆ ಮಾನಸಾರದ ವಿವರಣೆ (೯.೨೦೮–೨೨೧)

ಪ್ರಸ್ತರ ಗ್ರಾಮವು ೫ ರೀತಿಯಲ್ಲಿರುವುದೆಂದು ಮಯಮತವು ಹೇಳಿದೆ. ಇದರಲ್ಲಿ, ಪೂರ್ವದಿಂದ ಪಶ್ಚಿಮಕ್ಕೆ ಹೋಗುವ ೩ ಬೀದಿಗಳಿದ್ದು, ಉತ್ತರದಿಂದ ಆರಂಭವಾಗುವ ಬೀದಿಗಳು ೩ರಿಂದ ೫ರವರೆಗೆ ಎಷ್ಟಾದರೂ ಇರಬಹುದೆಂದು ಹೇಳಿದೆ(೯.೪೬) ಇದು ಮಾನಸಾರಕ್ಕಿಂತ ಭಿನ್ನರೀತಿಯಲ್ಲಿ ಹೇಳಿದೆ. ಅಲ್ಲದೆ, ಮಾನಸಾರವು ೩ ರೀತಿಯ ಮಂಡಲಗಳಲ್ಲಿ ಆಯ್ಕೆಯನ್ನು ಸೂಚಿಸಿದರೆ, ಮಯಮತದಲ್ಲಿ ಆ ಬಗ್ಗೆ ಹೇಳಿಲ್ಲ. ಮಯಮತದ ವಿವರಣೆ ಸಂಕ್ಷಿಪ್ತವಾಗಿದ್ದು, ಕೆಲಮಟ್ಟಿಗೆ ಚಿಕ್ಕ ಗ್ರಾಮವನ್ನು ಹೇಳುತ್ತಿದೆ ಎನಿಸಬಹುದಾದರೂ, ಗ್ರಾಮದ ಸ್ವರೂಪ ಮತ್ತು ಅರ್ಥಕ್ಕೆ ಯಾವುದೇ ಭಂಗ ಬಂದಂತಿಲ್ಲ. ವಿಶ್ವಕರ್ಮ ವಾಸ್ತುಶಾಸ್ತ್ರ ಕೂಡಾ ಮಯಮತದ ರೀತಿಯಲ್ಲೇ ಹೇಳಿದೆ. ಇದರಂತೆ, ಪೂರ್ವದಿಂದ ಪಶ್ಚಿಮದೆಡೆಗೆ ೪ ಬೀದಿಗಳೂ, ದಕ್ಷಿಣದಿಂದ ಉತ್ತರದೆಡೆಗೆ ೪ ಬೀದಿಗಳೂ ಇರಬೇಕು (೭೧೨–೧೫)[೨೦]. ಮಾನಸಾರದ ವಿವರಗಳು ಅಸ್ಪಷ್ಟವಾಗಿದೆ ಯೆಂದು ಹೇಳಿರುವ ದತ್ ಅವರು, ಇದರಲ್ಲಿ ರಸ್ತೆಗಳ ಯೋಜನೆಯು 'Chess Board' ನಂತಿರುವುದೆಂದಿದ್ದಾರೆ (ಪು. ೨೩೬).

೭. ಕಾರ್ಮುಕ ಗ್ರಾಮ: ಇದು ಚೌಕಾಕಾರ ಅಥವಾ ಆಯತಾಕಾರವಾಗಿರಬಹುದು. ಇದರ ವಿನ್ಯಾಸವು ಬಿಲ್ಲಿನಂತಿದ್ದು, ಅರ್ಧವೃತ್ತಾಕಾರದಲ್ಲಿರುವುದೆಂದೂ ಹೇಳಲಾಗಿದೆ. ಈ ಪ್ರಕಾರದ ಗ್ರಾಮದಲ್ಲಿ, ಪ್ರಧಾನ ಬೀದಿಗಳ ಆದಿಯಲ್ಲಿ ಒಂದು ಸಂಧಿಸ್ಥಾನ (Junction) ಇರಬೇಕು. ಮೂಲೆ/'ಪದ'ಗಳಿಗೆ ಸೂಕ್ತವಾಗಿರುವಂತೆ ಸ್ಥಪತಿಯು, ಪಶ್ಚಿಮ ಮತ್ತು ಉತ್ತರವನ್ನು ಸಂಪರ್ಕಿಸುವಂತೆ ಒಂದು ರಸ್ತೆಯನ್ನೂ, ದಕ್ಷಿಣ ಮತ್ತು ಪೂರ್ವವನ್ನು ಸಂಪರ್ಕಿಸುವಂತೆ ಮತ್ತೊಂದು ರಸ್ತೆಯನ್ನೂ ಮಾಡಬೇಕು. ಹಾಗೂ ಒಂದನ್ನು ಉತ್ತರ ಮತ್ತು ಪೂರ್ವದ ಮಧ್ಯೆ ಹಾಗೂ ಮತ್ತೊಂದನ್ನು ದಕ್ಷಿಣ ಮತ್ತು ಪಶ್ಚಿಮದ ಮಧ್ಯೆ ಮಾಡಬೇಕು. ಹೊರಭಾಗದಲ್ಲಿ ಒಂದೊಂದು ಜೊತೆ ಬೀದಿಗಳು (ವೀಥೀ) ಬಿಲ್ಲಿನಂತೆ (Arrow–ಕಾರ್ಮುಕ) ಕಾಣಬೇಕು. ಅಲ್ಲಿ ಪ್ರತೀ 'ಪದ'ಗಳಲ್ಲಿ ಅಲ್ಲಿ ಪ್ರತೀ 'ಪದ'ಗಳಲ್ಲಿ ೧ರಿಂದ ೫ ರವರೆಗೆ (ಎಷ್ಟಾದರೂ) ಬೀದಿಗಳನ್ನು ಮಾಡಬೇಕು. ಎಲ್ಲಾ ದೊಡ್ಡ ರಸ್ತೆಗಳಿಗೆ (ರಥ್ಯಾ) 'ಪಕ್ಷ' ಇರಬೇಕು ಮತ್ತು ಅಡ್ಡರಸ್ತೆಗಳು (ತಿಯಾಜ್ಮಾರ್ಗ) ಎಷ್ಟಾದರೂ ಇರಬಹುದು (೯.೨೩೦–೩೩).

ಮಾನಸಾರವು ಹೇಳುವ ಪ್ರಧಾನ ಬೀದಿಗಳಲ್ಲಿ, ದತ್ ಅವರು ಎರಡನ್ನು ರಥವೀದಿ ಎಂದೂ, ಒಂದನ್ನು ಪ್ರಧಾನ ಬೀದಿ ಎಂದೂ ಹೇಳಿದ್ದಾರೆ. ಅಲ್ಲದೆ, ಗ್ರಾಮ/ಬಿಲ್ಲಿನಾಕಾರವು ಪಶ್ಚಿಮ ಅಥವಾ ಉತ್ತರಕ್ಕೆ ಮುಖ ಮಾಡಿದ್ದಾಗ ಸಾಗುವ ರಸ್ತೆಗಳ ಕ್ರಮವನ್ನು ಹೇಳಿದ್ದಾರೆ; ಗ್ರಾಮವು ಪಶ್ಚಿಮಕ್ಕೆ ಮುಖ ಮಾಡಿದ್ದರೆ ರಥಬೀದಿಯು ಅರ್ಧವೃತ್ತಕ್ಕೆ ಹೊಂದಿಕೊಂಡಂತೆ ದಕ್ಷಿಣದಿಂದ ಪ್ರಧಾನ (ನೇರ) ಬೀದಿಯು ಉತ್ತರದಿಂದ ದಕ್ಷಿಣಕ್ಕೆ ಸಾಗುತ್ತದೆ. ಅದೇ, ಗ್ರಾಮವು ಉತ್ತರಕ್ಕೆ ಮುಖ ಮಾಡಿದ್ದರೆ, ರಥಬೀದಿಗಳಲ್ಲಿ ಒಂದು ದಕ್ಷಿಣದಿಂದ ಪೂರ್ವಕ್ಕೆ ಮತ್ತು ಇನ್ನೊಂದು (ಉತ್ತರದಿಂದ ಪೂರ್ವಕ್ಕೆ ಬದಲಾಗಿ) ಪಶ್ಚಿಮದಿಂದ ದಕ್ಷಿಣಕ್ಕೆ ಸಾಗುತ್ತದೆ[೨೧]. ಹೀಗೆ ೩ ಬೀದಿಗಳು ಬಿಲ್ಲಿನಾಕಾರವನ್ನು ತರುತ್ತವೆ ಎಂದೂ ವಿವರಿಸಿದ್ದಾರೆ. ಅಲ್ಲದೆ, ಅಡ್ಡರಸ್ತೆಗಳು ೧ರಿಂದ ೫ರವರೆಗೆ ಎಷ್ಟಾದರೂ ಇರಬಹುದೆಂದೂ, ಕೇಂದ್ರದಿಂದ ಹೊರಡುವ ತ್ರಿಜ್ಯ ರಸ್ತೆಗಳು (Radial Roads) ಎಷ್ಟಾದರೂ ಇರಬಹುದೆಂದೂ ಅವರು ಹೇಳಿದ್ದಾರೆ. (ಪು. ೨೩೯).

೮. ಚತುರ್ಮುಖ ಗ್ರಾಮ: ಇದು ಚೌಕ ಅಥವಾ ಆಯತಾಕಾರವಾಗಿರುವ ಗ್ರಾಮ. ಮಾನಸಾರದ ಪ್ರಕಾರ, ದೊಡ್ಡರಸ್ತೆಯನ್ನು (ಮಹಾವೀಥೀ) ಊರಿನ ಸುತ್ತ ಮಾಡಬೇಕು. ಇದಕ್ಕೆ ೨ 'ಪಕ್ಷ' ಇರಬೇಕು. ಗ್ರಾಮನಕ್ಷೆಯ ಬ್ರಹ್ಮಭಾಗದಿಂದ ಆರಂಭವಾದ ಬೀದಿಗಳು (–ವೀಥೀ) ೪ ದಿಕ್ಕಿನೆಡೆಗೆ ಸಾಗಬೇಕು. ೪ ದ್ವಾರಗಳನ್ನು, ಈ ೪ ಬೀದಿಗಳ

ಮುಖ್ಯಭಾಗದಲ್ಲಿ ಮಾಡಬೇಕು (–ಮಹಾದ್ವಾರ). ಪ್ರತೀ ಪಕ್ಕದಲ್ಲೂ ಒಂದು ಮಹಾದ್ವಾರ ಮತ್ತು ಉಪದ್ವಾರಗಳನ್ನು ಪ್ರತೀ ಮೂಲೆಗಳಲ್ಲಿ ಮಾಡಬೇಕು. ಈ ದ್ವಾರಗಳನ್ನು ಸಂಪರ್ಕಿಸುವ ೪ ಚಿಕ್ಕಬೀದಿಗಳನ್ನು (–ಕ್ಷುದ್ರವೀಥೀ) ಇಷ್ಟಬಂದಂತೆ ಮಾಡಬಹುದು (೯.೨೩೮–೪೧).

ದತ್ ಅವರು, ೪ ಅಡ್ಡರಸ್ತೆಗಳ ಬಗ್ಗೆ ಹೇಳಿದ್ದಾರೆ (ಪು. ೨೪೦). ಮಾನಸಾರದ ಪಠ್ಯದಲ್ಲಿ ಈ ರೀತಿ ಇಲ್ಲವಾದರೂ, ಆಚಾರ್ಯ ಅವರು ನೀಡಿರುವ ನಕ್ಷೆಯಲ್ಲಿದೆ. ಚತುರ್ಮುಖ ಗ್ರಾಮದ ಬಗ್ಗೆ ವಿಶ್ವಕರ್ಮ ವಾಸ್ತುಶಾಸ್ತ್ರವು ಹೇಳುವ ಪ್ರಕಾರ, ದಕ್ಷಿಣದಲ್ಲಿ 'ಪುಣ್ಯವೀಥಿ' ಇರುವುದು ಅಲ್ಲದೆ, ಪ್ರತೀ ದಿಕ್ಕಿನಲ್ಲಿ ೪ ದಿಕ್ಕುಗಳಲ್ಲಿ ೪ ದ್ವಾರಗಳೂ, ಸುತ್ತ ಲಘುವಪ್ರವೂ ಇರುವುದು (೭.೨೨–೨೪). ಇದು ಮಾನಸಾರಕ್ಕಿಂತ ಭಿನ್ನ ರೀತಿಯಲ್ಲಿ ಹೇಳಿರುವಂತಿದೆ.

೯. ಪ್ರಕೀರ್ಣಕ ಗ್ರಾಮ: 'ಪ್ರಕೀರ್ಣಕ'ವೆಂದರೆ, ಚಾಮರ ಎಂದು ಅರ್ಥ. ಮಯಮತದ ಪ್ರಕಾರ[೨೨] ಇದು ಐದು ರೀತಿಯದಾಗಿದೆ. ಇದರಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹೋಗುವ ೪ ಬೀದಿಗಳಿರುತ್ತವೆ ಮತ್ತು ೮ರಿಂದ ೧೨ರವರೆಗೆ ಎಷ್ಟಾದರೂ ಬೀದಿಗಳಿರಬಹುದು (೯.೪೭) ಕಾಮಿಕಾಗಮವೂ ಕೂಡಾ ಮಯಮತದಂತೆ ೫ ರೀತಿಯನ್ನು ಹೇಳಿದೆ; ಅಲ್ಲದೆ, ಉತ್ತರದ ಬೀದಿಗಳು ೪ರಿಂದ ೧೭ರವರೆಗೆ ಎಷ್ಟಾದರೂ ಇರಬಹುದು ಎಂದೂ ಹೇಳಿದೆ (ಉದ್ಧೃತ – Dutt, ಪು. ೨೪೨).

೧೦. ಪರಗ ಗ್ರಾಮ: ಮಯಮತದ ಪ್ರಕಾರ ಇದರಲ್ಲಿ ೧೮ ರಿಂದ ೨೭ ರವರೆಗೆ ಎಷ್ಟಾದರೂ ಬೀದಿಗಳು ಉತ್ತರದಿಂದ ಇದ್ದು, ೬ ಬೀದಿಗಳು ಪೂರ್ವದಿಂದ ಇರುತ್ತವೆ. (೯.೫೦b–೫೧a). ವಿಶ್ವಕರ್ಮ ವಾಸ್ತುಶಾಸ್ತ್ರದ ಪ್ರಕಾರ, ಈ ಗ್ರಾಮದಲ್ಲಿ ದಕ್ಷಿಣದಲ್ಲಿ ಪೇಟೆ ಬೀದಿಯು ಇರಬೇಕು. ಅಲ್ಲದೆ, ಒಂದು ಮುಖ್ಯ ಬೀದಿ ಮಾತ್ರ ಇರಬೇಕೆಂದು ಇದರಲ್ಲಿದ್ದು, ಬಹುಶಃ ಇದೇ ಆ ಪೇಟೆ ಬೀದಿಯಾಗಿರಬಹುದು (೭.೧೯–೨೧). ಕಾಮಿಕಾಗಮವು, ೬ರಿಂದ ೨೩ರವರೆಗೆ ಉತ್ತರದ ಬೀದಿಗಳು ಎಷ್ಟಾದರೂ ಇರಬಹುದೆಂದು ಹೇಳಿದೆ ಮತ್ತು ಪೂರ್ವಕ್ಕೆ ಮುಖ ಮಾಡಿರುವ ೬ ಅಡ್ಡರಸ್ತೆಗಳನ್ನು ಹೇಳಿದೆ (qtd. Dutt, ಪು.೨೪೨) ಮೂರು ಗ್ರಂಥಗಳೂ ಭಿನ್ನವಾಗಿಯೇ ಹೇಳಿರುವುದನ್ನಿಲ್ಲಿ ಗಮನಿಸಬಹುದು.

೧೧. ಶ್ರೀ ಪ್ರತಿಷ್ಠ ಗ್ರಾಮ: ಮಯಮತದ ಪ್ರಕಾರ, ಇದರಲ್ಲಿ ೮ ಬೀದಿಗಳಿದ್ದು, ಅವು ಪೂರ್ವದಿಂದ ಆರಂಭವಾಗುತ್ತದೆ. ಹಾಗೂ ೨೮ರಿಂದ ೩೨ರವರೆಗೆ ಎಷ್ಟಾದರೂ ಬೀದಿಗಳು ಉತ್ತರದಿಂದ ಆರಂಭವಾಗುತ್ತವೆ (೯.೫೧b–೫೨) ಇದರಂತೇ, ಕಾಮಿಕಾಗಮವು ಪೂರ್ವದಿಂದ ಪಶ್ಚಿಮಕ್ಕೆ ಅಷ್ಟೇ ಸಂಖ್ಯೆಯ ಬೀದಿಗಳನ್ನು ಹೇಳಿದ್ದರೂ, ಉತ್ತರದ ಬೀದಿಗಳು ೮ರಿಂದ ೩೬ರವರೆಗೆ ಎಷ್ಟಾದರೂ ಇರಬಹುದೆಂದು ಹೇಳಿದೆ (qtd. Dutt, ಪು. ೨೪೩).

ಇನ್ನೂ ಕೆಲವು ಪ್ರಕಾರದ ಗ್ರಾಮಗಳ ಬೀದಿಗಳ ಬಗ್ಗೆ ಕಾಮಿಕಾಗಮದಲ್ಲಿ ಆ ಬಗ್ಗೆ ವಿವರಗಳನ್ನು ದತ್ ಅವರು ನೀಡಿದ್ದಾರೆ. ಅದರಂತೆ, ಕುಂಭಕಂ ಪ್ರಕಾರದ ಗ್ರಾಮದಲ್ಲಿ ತುಂಬಾ ಬೀದಿಗಳಿರುತ್ತವೆ. ಮತ್ತು ಅವು ಸುತ್ತು ರಚನೆಗೆ ಸಮಾನಾಂತರವಾಗಿರುತ್ತವೆ. ಅಂದರೆ, ಇದು ವರ್ತುಲಾಕಾರವಾಗಿದ್ದು, ಬಹುಕೋನಗಳಿಂದ ಕೂಡಿರುತ್ತದೆ. ಶ್ರೀವತ್ಸ ಮತ್ತು ವೈದಿಕ ಪ್ರಕಾರಗಳಲ್ಲಿ ಬೀದಿಯ ಸಂಖ್ಯೆಗಳಿಗೆ ಮಿತಿಯೇ ಇಲ್ಲ. ಆದರೆ, ವೈದಿಕ ರೀತಿಯಲ್ಲಿ ಎರಡೂ ಕಡೆ ಮನೆಗಳಿರಲೇಬೇಕು[೨೩]. ಸಂಪತ್ಕರ ಗ್ರಾಮದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ೫ ಬೀದಿಗಳಿದ್ದು, ಅವು ೨೧ ಅಡ್ಡಬೀದಿಗಳಿಂದ ಕೂಡಿರುತ್ತದೆ. (qtd. Dutt, ಪು.೨೪೨) ಇಷ್ಟೇ ಅಲ್ಲದೆ, ಕೈಲಾಸ, ನಿತ್ಯಮಂಗಲ, ವಿಶ್ವೇಶ, ದೇವರಾಟ್, ಮಂಗಲ, ವಿಶ್ವಕರ್ಮ, ಪೂರ್ವಮುಖ, ಬಾಹ್ಯಲೀಕ–ಈ ಗ್ರಾಮ ಪ್ರಕಾರಗಳಲ್ಲಿರುವ ಬೀದಿಗಳ ಬಗ್ಗೆ ವಿಶ್ವಕರ್ಮ ವಾಸ್ತು ಶಾಸ್ತ್ರದಲ್ಲಿದೆ[೨೪]. ಈ ಗ್ರಾಮ ಪ್ರಕಾರಗಳು ಬೇರೆ ಗ್ರಂಥಗಳಲ್ಲಿಲ್ಲ.

ಮಯಮತ ಮತ್ತು ಕಾಮಿಕಾಗಮಗಳು ಹೇಳುವ ಬೀದಿಗಳಲ್ಲಿ ಪೂರ್ವದ ಬೀದಿಗಳಿಗಿಂತ ಉತ್ತರದ ಬೀದಿಗಳ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತದೆ. ಈ ಬಗ್ಗೆ ಹೇಳುತ್ತಾ ದತ್ ಅವರು, ಗ್ರಾಮಗಳು ಪೂರ್ವದಿಂದ ಪಶ್ಚಿಮಕ್ಕೆ ದೀರ್ಘವಾಗಿರುತ್ತಿದ್ದವು. ಇದರಿಂದ ಗಾಳಿಯು ಧೂಳನ್ನು ಎಬ್ಬಿಸುವುದಿಲ್ಲ; ಹೀಗಿದ್ದಾಗ ಕಟ್ಟಡಗಳೂ ಕೂಡಾ ಗಾಳಿಗೆ ತೆರೆದುಕೊಂಡಿರುತ್ತವೆ ಎಂದು ಹೇಳಿದ್ದಾರೆ (ಪು.೨೪೪).

ಗ್ರಾಮಗಳಲ್ಲದೆ, ವಿವಿಧ ಪ್ರಕಾರದ ನಗರಗಳನ್ನು ವಿವರಿಸುವ ಗ್ರಂಥಗಳೂ, ಎಲ್ಲಾ ನಗರಗಳಿಗೆ ಅನ್ವಯವಾಗುವಂತೆ ಮಾರ್ಗಗಳ ಬಗ್ಗೆಯೂ ವಿವರಿಸಿವೆ; (ವಿವಿಧ ಪ್ರಕಾರಗಳಿಗೆ ವಿಭಿನ್ನ ರೀತಿಯ ವಿನ್ಯಾಸವನ್ನು ಹೇಳಿಲ್ಲ). ಅದರಂತೆ, ಮಾರ್ಗಗಳು ಪೂರ್ವದಿಂದ ಪಶ್ಚಿಮಕ್ಕೆ ಹಾಗೂ ದಕ್ಷಿಣದಿಂದ ಉತ್ತರಕ್ಕೆ ಹೋಗಬೇಕು. ಅವು ಸಮ ಅಥವಾ ಬೆಸಸಂಖ್ಯೆಯಲ್ಲಿರಬಹುದು ಮತ್ತು ಮಧ್ಯೆ ಅವುಗಳನ್ನು ಒಂದೊಂದರಂತೆ ಹೆಚ್ಚಿಸುತ್ತಾ ಅವು ೧ರಿಂದ ೧೨ರವರೆಗೆ ಎಷ್ಟಾದರೂ ಇರಬಹುದೆಂದು ಮಾನಸಾರವು ಹೇಳಿದೆ (೧೦.೫೨–೫೩). ಈ ಮಾರ್ಗಗಳ ಅಗಲವು ೧ ದಂಡದಿಂದ ೭ ದಂಡದವರೆಗಿರಬಹುದಾಗಿದ್ದು, ಮಧ್ಯೆ ೧/೨ ದಂಡ ಹೆಚ್ಚಿಸುತ್ತಾ ೧೩ ರೀತಿಯ ವಿಸ್ತಾರವನ್ನು ಪಡೆಯಬಹುದಾಗಿದೆ (೧೦.೧೭)

ಕೌಟಿಲ್ಯನ ಅರ್ಥ ಶಾಸ್ತ್ರದಲ್ಲೂ ಒಂದೆಡೆ ಈ ಬಗ್ಗೆ ವಿವರವಿದೆ; ಉಪಬೀದಿಗಳು ೪ ದಂಡ ಅಗಲವುಳ್ಳವುಗಳು;

ರಾಜಮಾರ್ಗ, ದ್ರೋಣ–ಮುಖಮಾರ್ಗ, ಸ್ಥಾನೀಯ, ರಾಷ್ಟ್ರವಿವೀತ ಮಾರ್ಗಗಳು, ಕ್ರಯ–ವಿಕ್ರಯವೇ ಪ್ರಧಾನವಾಗಿರುವ ಪಟ್ಟಣಗಳಿಗೆ ಹೋಗುವ ಮಾರ್ಗ. ಶತ್ರುಗಳು ಮುತ್ತಿಗೆ ಹಾಕಿದಾಗ ಕೋಟೆಯ ಮೇಲೇ ಸುತ್ತಲೂ ತಿರುಗಾಡಲು ಕಲ್ಪಿಸಿದ ವ್ಯೂಹಪಥವೆಂಬ ಸೈನ್ಯದ ಮಾರ್ಗ, ಸ್ಮಶಾನ ದಾರಿ, ಗ್ರಾಮದ ದಾರಿ – ಇವು ೮ ದಂಡ ಅಗಲವುಳ್ಳವುಗಳು. ಸೇತುಪಥ ಮತ್ತು ವನಪಥಗಳು ೪ ದಂಡ, ಹಸ್ತಿಪಥ–ಕ್ಷೇತ್ರ– ಪಥಗಳು ಎರಡು ದಂಡ, ರಥಪಥವು ೫ ಅರತ್ನಿಯೂ ಅಗಲವುಳ್ಳವುಗಳು. ಪಶುಪಥವು ೪ ಅರತ್ನಿಯೂ, ಕ್ಷುದ್ರ ಪಶುಗಳಾದ ಆಡು–ಕುದುರೆಗಳ ದಾರಿಯೂ, ಮನುಷ್ಯರ ದಾರಿಯೂ ಎರಡು ಅರತ್ನಿ ಅಗಲವಾಗಿರುವುದು (ಅರತ್ನಿಯೆಂದರೆ, ಕಿರುಬೆರಳನ್ನು ಬಿಟ್ಟ ಮುಷ್ಟಿಯಷ್ಟುಳ್ಳ ಮೊಳ ಎಂದು ಹೇಳಲಾಗಿದೆ) (II. ೪ (ಕ) ಪು. ೯೮–೯೯) ಇದರಂತೆ ಹೆಚ್ಚು ಅಗಲವಾದ ಮಾರ್ಗವೆಂದರೆ ೮ ದಂಡ ಆಗಿದ್ದು, ಅದರಲ್ಲೇ ಹೇಳಿರುವಂತೆ ಇಂಥ ಮಾರ್ಗಗಳ ಉದ್ದೇಶ ಪ್ರಮುಖವಾದದ್ದು ಹಾಗೂ ಅಷ್ಟು ಅಗಲವು ಅವಶ್ಯಕವಾದದ್ದೇ ಆಗಿದೆ.

ಮಾರ್ಗಗಳ ಬಗ್ಗೆ ಮಯಮತವು ಕೆಲವು ನಿಯಮಗಳನ್ನು ಹೇಳಿದೆ: ಪುರ / ಪಟ್ಟಣಗಳ ಮಾರ್ಗ ರಚನೆಯಲ್ಲಿ ಮೊದಲು ಮಾಡಬೇಕಾದ ಮಾರ್ಗವೆಂದರೆ, 'ಮಂಗಳವೀಥೀ' ಅಥವಾ ಬ್ರಹ್ಮವೀಥಿ ಎಂದೂ ಅದನ್ನು ಈಶಾನ್ಯ ದಿಕ್ಕಿನಿಂದ ಆರಂಭಿಸಬೇಕು ಎಂದೂ ಸಂಪಾದಕರು ಹೇಳಿದ್ದಾರೆ. (ಪು.೯೩, ಅಡಿಟಿಪ್ಪಣಿ ೮) ಮಾರ್ಗಗಳನ್ನು ಇಷ್ಟಬಂದಂತೆ ವಿನ್ಯಾಸಗೊಳಿಸಬಹುದಾದರೂ ಅವುಗಳನ್ನು ಉತ್ತರ ಅಥವಾ ಪೂರ್ವದಿಂದ ಆರಂಭಿಸಬೇಕೆಂದೂ, ನಿಯಮಗಳ ಪ್ರಕಾರ ಮಾಡಬೇಕು (೧೦.೧೭). ಮಾರ್ಗ ಛೇದವನ್ನು (Interruption) ಮಾಡಬಾರದು ಹಾಗೂ ನಗರದ 'ಪದಮಧ್ಯ'ದಲ್ಲಿ ಅಡ್ಡರಸ್ತೆಗಳನ್ನು ಮಾಡಬಾರದು (೧೦.೨೬) ಇಲ್ಲಿ ಹೇಳದೇ ಇರುವುದನ್ನು ಗ್ರಾಮಗಳ ಸಂದರ್ಭದಲ್ಲಿ ಹೇಳಿರುವಂತೆ ಮಾಡಬೇಕು (೧೦.೯೧).

ಮಯಮತದಲ್ಲಿ, ಮಾರ್ಗಗಳ ಸಂಖ್ಯೆ ಮತ್ತು ಅವುಗಳ ದಿಕ್ಕುಗಳ ಆಧಾರದ ಮೇಲೆ ಆ ನಗರ ವಿನ್ಯಾಸಕ್ಕೆ ಬೇರೆ ಬೇರೆ ಹೆಸರುಗಳನ್ನು ನೀಡಲಾಗಿದೆ[೨೫] (೧೦.೫೨–೭೫) ಅದರಂತೆ,

೧. ಒಂದೇ ಒಂದು ನೇರವಾದ ಬೀದಿ ಇದ್ದರೆ, ಅದಕ್ಕೆ 'ದಂಡಕವಿನ್ಯಾಸ' ಎಂದು ಹೆಸರು.

೨. ಅದೇ ನೇರವಾದ ಬೀದಿಗೆ ಮಧ್ಯದಲ್ಲಿ ಉತ್ತರದಿಂದ ಮತ್ತೊಂದು ಬೀದಿಯು ಅಡ್ಡವಾಗಿ ಇದ್ದರೆ, ಅದು 'ಕರ್ತರೀದಂಡವಿನ್ಯಾಸ' ಎಂದು ಹೆಸರು.

೩. 'ಕುಟ್ಟಿಮ'[೨೬]ಯುಕ್ತವಾದ ಎರಡು ಬೀದಿಗಳಿದ್ದು, ಅವು ಪೂರ್ವದಿಂದ ಆರಂಭವಾಗಿದ್ದರೆ, ಅದು ಬಾಹುದಂಡಕ ವಿನ್ಯಾಸ[೨೭].

೪. ನಾಲ್ಕು ದಿಕ್ಕುಗಳಲ್ಲೂ ದ್ವಾರಗಳಿದ್ದು, ಮುಖ್ಯ ಬೀದಿಯ ಪಕ್ಕಗಳಲ್ಲಿ ಅನೇಕ ಕುಟ್ಟಿಮಗಳಿದ್ದರೆ, ಅದು ಕುಟಿಕಾಮುಖದಂಡಕ

೫. ೩ ಬೀದಿಗಳು ಪೂರ್ವಕ್ಕೂ, ೩ ಬೀದಿಗಳು ಉತ್ತರಕ್ಕೂ ಇದ್ದರೆ, ಅದು 'ಕಲಕಾಬಂಧದಂಡಕ'.

೬. ಮೂರು ಬೀದಿಗಳು ಪೂರ್ವಕ್ಕೂ, ೩ ಬೀದಿಗಳು ಉತ್ತರಕ್ಕೂ[೨೮] ಇದ್ದು, ಅವುಗಳು ಅನೇಕ ಕುಟ್ಟಿಮ ಮಾರ್ಗ (Alleys)ಗಳಿಂದ ಬೇರ್ಪಟ್ಟಿದ್ದರೆ, ಅದು ವೇದಿಭದ್ರವಿನ್ಯಾಸ.

೭. ಸ್ವಸ್ತಿಕ ವಿನ್ಯಾಸವು ಆ ಹೆಸರಿನ ಗ್ರಾಮದಂತೇ (೯.೪೩–೪೬) ಇರಬೇಕು. ಅದರಲ್ಲಿ ಪೂರ್ವಕ್ಕೆ ೬ ಬೀದಿಗಳೂ, ಉತ್ತರಕ್ಕೆ ೬ ಬೀದಿಗಳೂ ಇದ್ದು, ಮುಖ್ಯಬೀದಿಗಳು ಸ್ವಸ್ತಿಕದಂತೇ ಇರುತ್ತವೆ.

೮. ನಾಲ್ಕು ಬೀದಿಗಳು ಉತ್ತರದೆಡೆಗಿದ್ದು, ಒಂದು ಮಾರ್ಗವು ಬ್ರಹ್ಮಮಾರ್ಗಗಳಿದ್ದರೆ (Paved Street) ಅದಕ್ಕೆ 'ಭದ್ರಕವಿನ್ಯಾಸ' ಎಂದು ಹೆಸರು.

೯. ಪೂರ್ವಕ್ಕೆ ಮತ್ತು ಉತ್ತರಕ್ಕೆ ೫ ಮಾರ್ಗಗಳಿದ್ದು, ಬಹು ಕುಟ್ಟಿಮ ಯುಕ್ತವಾಗಿದ್ದರೆ (Alleys) ಅದು ಭದ್ರಮುಖವಿನ್ಯಾಸ.

೧೦. ಅದೇ ರೀತಿಯಾಗಿದ್ದು, ಪೂರ್ವಕ್ಕೆ ಮತ್ತು ಉತ್ತರಕ್ಕೆ ೬ ಮಾರ್ಗಗಳಿದ್ದರೆ, ಅದು ಭದ್ರಕಲ್ಯಾಣ.

೧೧. ಪೂರ್ವದಿಂದ ಪಶ್ಚಿಮಕ್ಕೆ ಹಾಗೂ ಉತ್ತರದಿಂದ ದಕ್ಷಿಣಕ್ಕೆ ೭ ಮಾರ್ಗಗಳು ಹೊರಟಿದ್ದರೆ, ಅದಕ್ಕೆ ಮಹಾಭದ್ರ ಎಂದು ಹೆಸರು.

೧೨. ಪೂರ್ವಕ್ಕೆ ಮತ್ತು ಉತ್ತರಕ್ಕೆ ೮ ಮಾರ್ಗಗಳಿದ್ದು, ಇತರ ೧೨ ಮಾರ್ಗಗಳಿದ್ದು, ಅನೇಕ ಕುರುಡು ಗಲ್ಲಿಗಳೂ, ಕುಟ್ಟಿಮಗಳೂ (cut-de-sacs and alleys) ಇದ್ದರೆ, ಅದು ವಸ್ತುಸುಭದ್ರ.

೧೩. ಪೂರ್ವಕ್ಕೆ ಮತ್ತು ಉತ್ತರಕ್ಕೆ ೯ ಮಾರ್ಗಗಳಿದ್ದು, ದ್ವಾರೋಪದ್ವಾರಗಳಿಂದ ಕೂಡಿದ್ದು, ಕುಟ್ಟಿಮ ಮಾರ್ಗಗಳೂ, ಕುರುಡುಗಲ್ಲಿಗಳೂ (Posterns(?) alleys and cut-de-sacs) ಇದ್ದು, ಅರಮನೆಯೂ ಇದ್ದರೆ, ಅದು ಜಯಾಂಗ.

೧೪. ಯಾವ ನಗರದಲ್ಲಿ ಪೂರ್ವದಿಂದ ಮತ್ತು ಉತ್ತರದಿಂದ ೧೦ ಮಾರ್ಗಗಳು ಹೊರಟಿದ್ದು, ಅರಮನೆ ಹಾಗೂ

ಯುಕ್ತ ರೀತಿಯಲ್ಲಿ ವ್ಯವಸ್ಥೆಗೊಂಡಿರುವ ಅನೇಕ ಕುಟ್ಟಿಮಗಳೂ (alleys) ಇರುವುದೋ, ಅದಕ್ಕೆ 'ವಿಜಯ' ಎಂದು ಹೆಸರು.

೧೫. ಸರ್ವತೋಭದ್ರ ನಗರ ವಿನ್ಯಾಸದಲ್ಲಿ ಪೂರ್ವದಿಂದ ಮತ್ತು ಉತ್ತರದಿಂದ ೧೧ ಮಾರ್ಗಗಳಿರಬೇಕು; ಇಷ್ಟವಾದಲ್ಲಿ / ಅನುಕೂಲವಿದ್ದಲ್ಲಿ ರಾಜನ ಅರಮನೆ ಇರಬೇಕು; ಅದು ಬ್ರಹ್ಮಸ್ಥಾನದಿಂದ ಪಶ್ಚಿಮಕ್ಕಿದ್ದು, ಅದರ ಮುಂದೆ ವಿಶಾಲ ಸ್ಥಳ ಇರಬೇಕು. ಮಧ್ಯದ ಬ್ರಹ್ಮಸ್ಥಾನದಿಂದ ಉತ್ತರಕ್ಕೆ ಮತ್ತು ಪೂರ್ವಕ್ಕೆ ಹೋಗುವುದು ರಾಜವೀಥಿ. ಇದರ ಅಕ್ಕಪಕ್ಕ ಮಾಲಿಕಾಪಂಕ್ತಿ (ಕಟ್ಟಡಗಳ/ಗುಡಿಗಳ ಸಾಲು) ಇರಬೇಕು. ಅಲ್ಲಿಂದ ಮುಂದೆ ಅದರ ಎರಡೂ ಕಡೆ ವಣಿಕರ ವಸತಿಯೂ, ಅದರ ದಕ್ಷಿಣಕ್ಕೆ ನೇಯ್ಗೆಯವರೂ, ಉತ್ತರಕ್ಕೆ ಕುಂಬಾರರೂ ಅದರ ಪಕ್ಕ ಕೆಳವರ್ಗದವರ ವಸತಿಯೂ (–ಜಾತ್ಯಂತರಗೃಹ) ಇರಬೇಕು. ಇದು ಸರ್ವತೋಭದ್ರನಗರ ವಿನ್ಯಾಸ[೯]. ಹೀಗೆ 'ನಗರ'ಗಳ ಸಂದರ್ಭದಲ್ಲಿ (ಗ್ರಾಮಗಳಷ್ಟು ಸುದೀರ್ಘವಲ್ಲದಿದ್ದರೂ) ಕೆಲವು ವಿವರಗಳನ್ನು ಸಂಗ್ರಹಿಸಬಹುದಾಗಿದೆ.

ಒಟ್ಟಾರೆ ಎಲ್ಲವನ್ನು ಗಮನಿಸಿದರೆ, ಗ್ರಂಥದಲ್ಲಿ ಬೀದಿಗಳ ವಿವರಗಳು ವಿಶದವಾಗಿರುವುದು ಕಂಡುಬರುತ್ತದೆ. ಕೆಲವೆಡೆ ಸ್ವಲ್ಪ ಅಸ್ಪಷ್ಟತೆ ಇದೆ. ಗ್ರಾಮಕ್ಕೆ ಸಂಬಂಧಿಸಿದಂತೆ ಮಾನಸಾರದ ವಿವರಗಳು ಹೆಚ್ಚಾಗಿವೆ. ಹಾಗೂ ಕೆಲವೆಡೆ ಸಂಕೀರ್ಣವಾಗಿವೆ. ಮಯಮತವು, ಎಲ್ಲವನ್ನೂ ಸರಳವಾಗಿ, ಸಂಕ್ಷಿಪ್ತವಾಗಿ ಹೇಳಿದೆ. ಅನೇಕ ವೇಳೆ ಮಯಮತ ಮತ್ತು ಕಾಮಿಕಾಗಮಗಳ ವಿವರಗಳು, ಕೆಲವೊಮ್ಮೆ ವಿಶ್ವಕರ್ಮ ವಾಸ್ತುಶಾಸ್ತ್ರದ ವಿವರಗಳು ಹೊಂದಾಣಿಕೆಯಾಗುತ್ತವೆ; ಹೇಳುವ ಕ್ರಮವೂ ಒಂದೇ ರೀತಿಯಾಗಿವೆ. ಗ್ರಾಮ ಅಥವಾ ನಗರದಲ್ಲಿ ದೊರೆಯುವ ಒಟ್ಟು ಎಲ್ಲ ಪ್ರಕಾರಗಳನ್ನು ಮೇಲಿನ ಯಾವ ಗ್ರಂಥಗಳು ನೀಡಿವೆ; ಈ ಹಿನ್ನೆಲೆಯಲ್ಲಿ, ಒಂದೇ ಪ್ರಕಾರಕ್ಕೆ ಸಣ್ಣಪುಟ್ಟ ವ್ಯತ್ಯಾಸಗಳೊಂದಿಗೆ ಭಿನ್ನ ಭಿನ್ನ ರೀತಿಯ ವಿನ್ಯಾಸಗಳಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. 'ನಗರ'ದ ಬೀದಿಗಳ ವಿನ್ಯಾಸದ ಬಗ್ಗೆ ಗ್ರಂಥಗಳ ವಿವರ ಕಡಿಮೆ ಇದೆ. ಮಯಮತವು, ಗ್ರಾಮ ಮತ್ತು ನಗರ ಎರಡಕ್ಕೂ ವಿವಿಧ ಪ್ರಕಾರಗಳನ್ನು ಗುರುತಿಸುವಲ್ಲಿ ಪೂರ್ವದಿಕ್ಕಿನ ಬೀದಿಗಳ ಸಂಖ್ಯೆಯನ್ನೇ ಪ್ರಮುಖವಾಗಿ ಪರಿಗಣಿಸಿದೆ. ಹೀಗಿರುವಾಗ, ಯಾವುದೇ ಗ್ರಾಮ–ನಗರಗಳು ಯಾವ ಪ್ರಕಾರದ್ದೆಂದು ಗುರುತಿಸಬೇಕಾದಲ್ಲಿ, ಅದರ ವಿನ್ಯಾಸವನ್ನು ಗುರುತಿಸುವುದರ ಜೊತೆಗೆ, ಯಾವ ಗ್ರಂಥದ ವಿವರಣೆಯನ್ನು ಹೋಲುತ್ತಿದೆ ಎಂಬುದನ್ನೂ ಗಮನಿಸಿಕೊಂಡು, ಆ ಗ್ರಂಥದ ಹಿನ್ನೆಲೆಯಲ್ಲಿ ಗ್ರಾಮ/ನಗರ ಪ್ರಕಾರವನ್ನು ಹೇಳಬೇಕಾಗುತ್ತದೆ.

ಅಡಿಟಿಪ್ಪಣಿ

೧. ದತ್ ಅವರು, Road = having discontinuous, rows of houses / irregularly loned with house ಎಂದೂ ಹೇಳಿದ್ದಾರೆ (Town Planning in Ancient India, p.218).

೨. ಪಿ.ಕೆ. ಆಚಾರ್ಯ ಅವರು 'Carraige Roads' ಇದನ್ನು ಎಂದು ಅನುವಾದಿಸಿದ್ದಾರೆ.

೩. ಕಾಮಿಕಾಗಮದ ಪ್ರಕಾರ ರಾಜವೀಥಿ ಮತ್ತು ಮಂಗಳವೀಥಿ–ಎರಡೂ ಒಂದೇ – I ೨೫.೨ (ಉದ್ಧೃತ–ಅಟಿ.೨೧. ಮಯಮತ, ಪು.೬೭)

೪. ಅದೇ. ಪುರ/ಪಟ್ಟಣದ ಸುತ್ತ ಇರುವ ಬೀದಿಗೆ 'ಜನವೀಥಿ' ಎಂದು ಹೆಸರು. ಇವೆರಡನ್ನೂ ರಥಬೀದಿ (–ರಥ್ಯಾ) ಎಂದೇ ಹೇಳಬಹುದು ಆದರೆ. ಇದು ಎಲ್ಲ ಬೀದಿಗಳಿಗೂ ಅನ್ವಯಿಸುತ್ತದೆಂದೂ ಮಯಮತದಲ್ಲಿದೆ. (೯.೩೯b) ಈಶಾನ ಶಿವಗುರುದೇವ ಪದ್ಧತಿಯಲ್ಲೂ ಇದೇ ರೀತಿ ಹೇಳಿದ್ದು, ಖೇಟಕಾದಿ ಗ್ರಾಮಗಳಲ್ಲಿ ಇದನ್ನು 'ರಥ್ಯಾ' ಎನ್ನುವರೆಂದೂ ಆದರಲ್ಲಿದೆ – ಕ್ರಿಯಾ. ೨೫–೫೦–ಉದ್ಧೃತ ಅಟಿ.೨೪, ಮಯಮತ, ಪು.೬೭)

೫. ಇವುಗಳಲ್ಲಿ 'ನಾರಾಚ'ವು ಮುಖ್ಯಮಾರ್ಗಕ್ಕೂ ಸಂಪರ್ಕವನ್ನುಂಟುಮಾಡುತ್ತದೆ; 'ಅರ್ಗಲ'ವು ಕೊನೆಯಾಗುವ ಮಾರ್ಗ (Dead End Street) 'ಕ್ಷುದ್ರ' ಮತ್ತು 'ವಾಮನಪಥ'ಗಳು ಹೆಸರೇ ಹೇಳುವಂತೆ ಚಿಕ್ಕ ಮಾರ್ಗಗಳು (ಅಟಿ.೨೩, ಮಯಮತ, ಪು.೬೭). ಕಾಮಿಕಾಗಮದ ಪ್ರಕಾರ ಪೂರ್ವಕ್ಕೆ ಹೋಗುವ ಬೀದಿಗೆ 'ನಾರಾಚ' ಎಂದು ಹೆಸರು. (ಉದ್ಧೃತ)

೬. ಗ್ರಾಮ ಮಾತ್ರವಲ್ಲದೆ, ನಗರಗಳ ವಿವಿಧ ಪ್ರಕಾರಗಳಿಗೂ ಮಯಮತವು ಪೂರ್ವದ ಬೀದಿಯನ್ನೇ ಆಧಾರವಾಗಿಟ್ಟುಕೊಂಡಿದೆ.

೭. ವಿವರಗಳಿಗೆ ನೋಡಿ: ಅಪರ್ಣ, ಕೂ.ಸ. – 'ಗ್ರಾಮಗಳ ವಿವಿಧ ಪ್ರಕಾರಗಳು' ಇತಿಹಾಸ ದರ್ಶನ, ಸಂ. ೨೮, ೨೦೧೩, ಪು.೨೩೨–೩೯.

೮. ಹೆಸರಿನ ಸಾಮ್ಯದ ದೃಷ್ಟಿಯಿಂದ ಇದು ಬಹುಶಃ 'ದಂಡಕ' ಗ್ರಾಮವಿರಬಹುದೆನಿಸುತ್ತದೆ.

೯. ವಾಸ್ತುಮಂಡಲದ ಮೇಲಿರುವ ದೇವತೆಗಳನ್ನು, ಅವರುಗಳಿರುವ ದಿಕ್ಕು, ಸ್ಥಾನ ಹಾಗೂ ಸ್ಥಳಾವಕಾಶವನ್ನು ಬಿಂಬಿಸಲೆಂದು ಭೂಮಿಯ ಮೇಲೆ ಬರೆಯುವ ನಕ್ಷೆಯೇ ವಾಸ್ತುಮಂಡಲ. ಈ ಉದ್ದೇಶದಿಂದ ನಕ್ಷೆಯಲ್ಲಿ ವಿಂಗಡಿಸಿರುವ ಚೌಕಗಳೇ 'ಪದ' (Plot)ಗಳು. ವಿವರಗಳಿಗೆ ನೋಡಿ: ಅಪರ್ಣ, ಕೂ.ಸ. 'ಪದವಿನ್ಯಾಸ ಅಥವಾ ವಾಸ್ತುಮಂಡಲ' (ಸಂ) ನಾಗರಾಜ್ ಎಂ.ಜಿ. ಮತ್ತು ಕೃಷ್ಣಮೂರ್ತಿ. ಪಿ.ವಿ., ಇತಿಹಾಸ ದರ್ಶನ, ಸಂ.೨೨, ೨೦೦೭, ಪು.೩೨–೪೦.

೧೦. ಇದು ನಂದ್ಯಾವರ್ತದಂತಿರಬೇಕೆಂದು ಏಕೆ ಹೇಳಿದಿಯೋ ಗೊತ್ತಿಲ್ಲ.

೧೧. ದತ್ತ್ ಅವರು, ಮಂಡೂಕ/ಚಂಡಿತ ಮತ್ತು ಸ್ಥಂಡಿಲ – ಈ ಎರಡೂ ರೀತಿಯ ಮಂಡಲದಲ್ಲಿ ನಂದ್ಯಾವರ್ತದ ಬೇರೆಬೇರೆ ನಕ್ಷೆಯನ್ನು ನೀಡಿದ್ದಾರೆ.

೧೨. ಇಲ್ಲಿ 'ವೀಥಿ' ಅಂತ ಇದ್ದರೂ, ಅದು ರಸ್ತೆಗೂ ಅನ್ವಯವಾಗುವಂತಿದೆ (–ರಥ್ಯಾ)

೧೩. ಎಷ್ಟು ಸಂಖ್ಯೆಯ ಬೀದಿಗಳಿರುತ್ತವೆಂದು ಮಾನಸಾರವು ಹೇಳಿಲ್ಲ.

೧೪. ಈ ಎರಡು ಬೀದಿಗಳಿಗೆ ಎರಡು 'ಪಕ್ಷ' ಇರಬೇಕೆಂದು ಆಚಾರ್ಯ ಅವರು ಅನುವಾದಿಸಿದ್ದಾರೆ.

೧೫. ಪಠ್ಯದಲ್ಲಿ 'ಮಧ್ಯೇ ಪಾಂತು (ಧ್ವ ವಿಷಾಂ) ಯಥಾರಜ್ಜು: ಕ್ಷುದ್ರಮಾರ್ಗಂ ಪ್ರಯೋಜಯೇತ್' ಎಂದಿರುವುದಕ್ಕೆ ದತ್ತ್ ಅವರು, 'ಚಿಕ್ಕ ರಸ್ತೆಗಳನ್ನು ೬/೭ ರಜ್ಜುಗಳ ಅಂತರದಲ್ಲಿ ಮಾಡಬೇಕೆಂದು' ಹೇಳಿದ್ದಾರೆ. (Dutt, op.cit, p.217-21) ಅವರಿಗೆ ದೊರೆತಿರುವ ಪಾಠ ಬೇರೆ ಇರಬಹುದು.

೧೬. 'ಪ್ರಾಚೀ ಚ ದ್ವಿರಥ್ಯಾ ವಾ' ಎಂದಿರುವುದಕ್ಕೆ ದತ್ತ್ ಅವರು ೧ರಿಂದ ೭ ರವರೆಗೆ ಎಂದು ಗುರುತಿಸಿದ್ದಾರೆ (Ibid p.221) ಇದು ಅವರಿಗೆ ದೊರೆತ ಭಿನ್ನ ಪಾಠವಿರಬಹುದು.

೧೭. ಅವರು, If my interpretation is incorrect then there is a town plan consisting of oblique stree' ಎಂದಿದ್ದಾರೆ (Ibid, p.226)

೧೮. ಇದನ್ನು ಮಯಮತವು 'ಮಂಗಳವೀಥಿ' ಎಂದಿದೆ (ಅಟಿ–೯.೪೩)

೧೯. ಮಾನಸಾರದ ಪಠ್ಯದಲ್ಲಿ 'ಪ್ರತ್ಯಗ್ರಾಮಾಕೃತಿ' ಎಂದಿರುವುದರ ಬದಲು, 'ಪ್ರಸ್ತರಗ್ರಾಮಾಕೃತಿ' ಎಂದಿರಬೇಕೆನಿಸುತ್ತದೆ.

೨೦. ಮಧ್ಯದಿಂದ ಹೊರಟ ಬೀದಿಗೆ 'ಮಧ್ಯವೀಥಿ' ಎಂದು ಹೆಸರೆಂದೂ ಇದರಲ್ಲಿದೆ.

೨೧. ಮಾನಸಾರದಲ್ಲಿ ಈ ರೀತಿ ವಿವರಣೆ ಇದ್ದಂತಿಲ್ಲ. ದತ್ತ್ ಅವರು ಕೊಡುವ ಪಾಠದಲ್ಲಿ ವ್ಯತ್ಯಾಸವಿರುವಂತಿದೆ. ಮಾನಸಾರವು, ಉತ್ತರಕ್ಕೆ ಮುಖ ಮಾಡಿರುವ ನಕ್ಷೆಯನ್ನು ನೀಡಿದ್ದರೂ, ಈ ರೀತಿ ವಿನ್ಯಾಸ ಹೇಳಿಲ್ಲ.

೨೨. ಈ ಗ್ರಾಮ ಪ್ರಕಾರ ಮತ್ತು ಮುಂದೆ ಹೇಳುವ ಯಾವ ಗ್ರಾಮ ಪ್ರಕಾರಗಳನ್ನೂ ಮಾನಸಾರವು ಹೇಳಿಲ್ಲ.

೨೩. ಇಲ್ಲಿ ಮನೆಗಳೆಂದಿರುವುದು, ಬಹುಶಃ ಪಾದಚಾರಿ ಮಾರ್ಗವೇ ಇರಬೇಕು.

೨೪. ವಿವರಗಳಿಗೆ ನೋಡಿ: ಅಪರ್ಣ, ಕೂ.ಸ. 'ವಿಶ್ವಕರ್ಮ ವಾಸ್ತುಶಾಸ್ತ್ರದಲ್ಲಿ ಗ್ರಾಮಪ್ರಕಾರಗಳು' (ಲೇಖನ), ಅನಂತಕೃಷ್ಣಚರಿತ, ಪು.೩೯೦–೯೮.

೨೫. ಈ ರೀತಿಯ ವಿಂಗಡಣೆ ಮಾನಸಾರದಲ್ಲಿಲ್ಲ.

೨೬. ಬೀದಿಗಳ ಸಂದರ್ಭದಲ್ಲಿ 'ಕುಟ್ಟಿಮ' 'ಗಲಿ' ಪದಗಳನ್ನು ಹೆಚ್ಚಾಗಿ ಬಳಸಿದೆ. ಕುಟ್ಟಿಮ ಎಂದರೆ small street, Alleys, Paved Street ಎಂದು ಅನುವಾದಿಸಲಾಗಿದೆ. ಇದರ ಅರ್ಥ ಕಾಲುದಾರಿ, ತೋಟ / ಉದ್ಯಾನದ ಕಾಲುದಾರಿ. 'ಗಲಿ' ಎಂದರೆ, Cul-de-Sacs ಅಥವಾ ಗಲ್ಲಿ ಕುರುಡುಗಲ್ಲಿ ಎಂದು ಅರ್ಥ.

೨೭. ಇದರ ಶ್ಲೋಕದಲ್ಲಿ ವ್ಯತ್ಯಾಸವಾಗಿರುವಂತಿದೆ. ಸಂಪಾದಕರ ಅನುವಾದದ ಪ್ರಕಾರ ಇಲ್ಲಿ ವಿವರಣೆ ನೀಡಲಾಗಿದೆ.

೨೮. ಉತ್ತರದ ಬೀದಿಗಳನ್ನು ಅನುವಾದದಲ್ಲಿ ಬಿಟ್ಟಿದ್ದಾರೆ.

೨೯. ೧೬ ಪ್ರಕಾರದ ನಗರ ವಿನ್ಯಾಸವನ್ನು ವಿವರಿಸಿರುವುದಾಗಿ ಪಠ್ಯದಲ್ಲಿ ಹೇಳಿದ್ದರೂ (೧೦.೭೩), ಅದರಲ್ಲಿ ೧೫ ರೀತಿ ಮಾತ್ರವೇ ಇದೆ.

ಗ್ರಂಥಋಣ

೧. Archarya, P.K. (Ed.& Tr.): 'Manasara' series, Vol. (Sans), III, IV, V & VII, Munshiram Manoharlal Publishers Pvt Ltd., New Delhi, 1995, 1994,1995 & 1993 - resp.

೨. Bruno Dagens (Ed. & Tr.) - 'Mayamata' (Sans): An Indian Treatise on Housing Architecture and Iconography, Indira Gandhi National Centre for the Arts, New Delhi, 1985.

೩. Shri Krishna 'Jagnu' and B.L.Sharma (Tr.Hindi) Visvakarma's Visvakarma Vastusastram', Parimal Publications, Delhi., 2010.

೪. Dutt, B.B., Town Planning in Ancient India, Isha Books, Delhi, 1925, Reprint 2009.

೫. ಕೃಷ್ಣಭಟ್ಟ, ಕೆ. (ಅನು)–ಕೌಟಿಲ್ಯನ ಅರ್ಥಶಾಸ್ತ್ರ, ಸಮಾಜ ಪುಸ್ತಕಾಲಯ, ಧಾರವಾಡ, ೨೦೦೦

೬. ಗಣಪತಿ ಭಟ್ ವರ್ಗಾಸಾರ(ಸಂ), ಎ.ಕೆ. ಶಾಸ್ತ್ರಿ ಅಭಿನಂದನಾ ಗ್ರಂಥ, ಅಕ್ಷಯ ಪ್ರಕಾಶನ, ಬೆಂಗಳೂರು–೧೯, ೨೦೧೪

೭. 'ಇತಿಹಾಸ ದರ್ಶನ' ಲೇಖನಗಳು, ಅಡಿಟಿಪ್ಪಣಿಯಲ್ಲಿರುವಂತೆ.

೮. ಸಂಸ್ಕೃತ–ಕನ್ನಡ ಶಬ್ದಕೋಶ, ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ.

೯. English-Kannada Dictionary

ಪ್ರಸಿದ್ಧ ಶಿಲ್ಪಿಯರಾದ ಜಕ್ಕಣ್ಣಾಚಾರಿ, ಡಂಕಣ್ಣಚಾರಿಯವರ ಐತಿಹ್ಯದ ಉಗಮ ಮತ್ತು ವಿಕಾಸ: ಒಂದು ಚಿಂತನೆ

ಡಾ. ಕೆ.ಎಸ್. ಕುಮಾರಸ್ವಾಮಿ*

ಪ್ರಸಿದ್ಧ ಶಿಲ್ಪಿಗಳಾದ ಜಕ್ಕಣ್ಣಚಾರಿ ಮತ್ತು ಡಂಕಣ್ಣಾಚಾರಿಯರ ಐತಿಹಾಸಿಕ ಅಸ್ತಿತ್ವದ ಬಗ್ಗೆ ಬರೆಯುವ ಮುನ್ನ 'ಐತಿಹ್ಯ' ಎಂಬ ಪರಿಭಾಷೆಯನ್ನು ಅರ್ಥ ಮಾಡಿಕೊಳ್ಳುವುದು ಸೂಕ್ತ. ಒಂದು ಐತಿಹ್ಯದ ಪೂರ್ಣ ಐತಿಹಾಸಿಕ ಅಲ್ಲ, ಪೂರ್ಣ ಜನಪದೀಯವೂ ಅಲ್ಲ. ಅವೆರಡರ ಲಕ್ಷಣವನ್ನು ಒಳಗೊಂಡು, ಅವೆರಡರ ನಡುವೆ ನಿಲ್ಲುತ್ತದೆ. ಐತಿಹ್ಯದ ಕೇಂದ್ರದಲ್ಲಿ ಸೂಕ್ಷ್ಮವಾಗಿ ಬೀಜಸ್ಯರೂಪದಲ್ಲಿ ಐತಿಹಾಸಿಕ ಸತ್ಯವಿರುತ್ತದೆ. ಈ ಬೀಜಸ್ವರೂಪದ ಐತಿಹಾಸಿಕ ಸತ್ಯಾಂಶವು ಕ್ರಮೇಣ ಅನೇಕ ಶತಮಾನಗಳ ಅವಧಿಯಲ್ಲಿ ಹಾಗೂ ನೂರಾರು ಮೈಲಿಗಳ ಬೇರೆ ಬೇರೆ ಪ್ರದೇಶಗಳಲ್ಲೂ ಪ್ರಯಾಣ ಮಾಡಿ ಹಾಗೂ ಪ್ರಚಾರವನ್ನು ಪಡೆಯುತ್ತಾ ತನ್ನ ಸುತ್ತ ರಂಜನೆಯ ಸಿಹಿಯಾದ ಕಲ್ಪಿತ ಕಥೆಯನ್ನು ತುಂಬಿಕೊಳ್ಳುತ್ತಾ ಬಾಯಿಂದ ಬಾಯಿಗೆ, ಕೈಯಿಂದ ಕೈಗೆ ಬೆಳೆಯುತ್ತಾ ಹೋಗುತ್ತದೆ. ಬೀಜದ ಸುತ್ತ ಸಿಹಿಯಾದ ಹಣ್ಣು ತುಂಬಿಕೊಳ್ಳುತಂತೆ. ಈ ಪ್ರಕ್ರಿಯೆಯು ನಡೆಯುತ್ತದೆ ಮತ್ತು ಇಂಥ ಜನತದ ಕಥೆಯು ಸಾಂಕೇತಿಕವಾಗಿರುತ್ತದೆ ಮತ್ತು ಅದು ಒಂದು ರೂಪಕವಾಗಿರುತ್ತದೆ. ಈ ಸಾಂಕೇತಿಕತೆಯನ್ನು ಹಾಗೂ ರೂಪಕಗಳನ್ನು ಎಚ್ಚರಿಕೆಯಿಂದ ಉತ್ಖನನ ಮಾಡಿದಾಗ ಅದರ ಆಳದಲ್ಲಿ ಅಂತರ್ಗತವಾಗಿರುವ ವಾಸ್ತವದ ಬಳಕೆಗೆ ಬರುತ್ತದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಪ್ರಸಿದ್ಧ ಶಿಲ್ಪದ್ವಯರಾದ ಜಕ್ಕಣ್ಣಾಚಾರಿ ಮತ್ತು ಡಂಕಣ್ಣಾಚಾರಿಯರನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ.

ಈ ಐತಿಹ್ಯವು ಮೂರು ಹಂತಗಳಲ್ಲಿ ಬೆಳೆಯುತ್ತದೆ. ಇದಕ್ಕೆ ಸು. ೧೨೪೧ ವರ್ಷಾಧಿಯ ಇತಿಹಾಸವಿದೆ. ಮತ್ತು ಸಂ. ೮೦೦ ಚ. ಮೈಲಿಗಳ ವಿಸ್ತೀರ್ಣದಲ್ಲಿ ವಿಸ್ತರಿಸುತ್ತದೆ. ಮೊದಲನೆಯದಾಗಿ ಇದು ಕ್ರಿ.ಶ. ೭೩೩ರಲ್ಲೂ ಪಟ್ಟದಕಲ್ಲಿನ ವಿರೂಪಾಕ್ಷ ದೇವಸ್ಥಾನದ ಪ್ರಧಾನ ಶಿಲ್ಪಿಗಳಾದ ಅನಿವಾರಿತಾಚಾರಿ ಮತ್ತು ಸರ್ವಸಿದ್ಧಿ ಆಚಾರಿ ಎಂಬ ಸಹೋದ್ಯೋಗಿಗಳಿಂದ ಇದು ಮೊಳಕೆಯೊಡೆಯುತ್ತದೆ. ಎರಡನೆಯದಾಗಿ ಕ್ರಿ.ಶ. ೧೧೧೭ರಲ್ಲೂ ಬೇಲೂರಿನ ಚನ್ನಕೇಶವ ಗುಡಿಯ ಮುಖ್ಯಶಿಲ್ಪಿಗಳಾದ ದಾಸೋಜ ಮತ್ತು ಚಾಮಾ ಎಂಬ ತಂದೆ-ಮಗನ ನಡುವೆ ಬೆಳೆಯುತ್ತದೆ. ಮೂರನೆಯದಾಗಿ ಬಹುಶಃ ಕ್ರಿ.ಶ. ೧೪೩೨ರಲ್ಲೂ ಕಾರ್ಕಳದ ಗೊಮ್ಮಟೇಶ್ವರನ ವಿಗ್ರಹದ ನಿರ್ಮಾಣದ ಹಂತದಲ್ಲೂ ಶಂಬನಾರಾಯಣ ಆಚಾರಿ ಮತ್ತು "ಕಲ್ಕುಡ-ಕಲ್ಲುರ್ಟಿ" ಎಂಬ ಶುದ್ಧ ಜಾನಪದ ಕಥೆಯಾಗಿ ರೂಪಾಂತರಗೊಂಡಿರುತ್ತದೆ.

ಈಗ ಈ ಬಗ್ಗೆ ಸ್ವಲ್ಪ ವಿವರವಾಗಿ ನೋಡೋಣ. ಪಟ್ಟದಕಲ್ಲಿನಲ್ಲಿ ದುಡಿದ ರೂವಾರಿಯಾದ ಅನಿವಾರಿತಾಚಾರಿ ಮತ್ತು ಸರ್ವಸಿದ್ಧಿ ಆಚಾರಿದ್ವಯರು ಸಾಮಾನ್ಯ ಶಿಲ್ಪಿಗಳಲ್ಲ. ಅವರ ಸ್ಥಾನಮಾನಗಳನ್ನು ನೋಡಿದರೆ ಅವರ ಬದುಕು ಒಂದು ಕತೆಯಾಗಿ ಹೋಗುವಷ್ಟು ಶ್ರೇಷ್ಠವಾಗಿತ್ತು. ಚಾಲುಕ್ಯ ಚಕ್ರವರ್ತಿ ಇಮ್ಮಡಿ ವಿಕ್ರಮಾದಿತ್ಯನು ಮತ್ತು ಅವನ ಮಹಾರಾಣಿ ಲೋಕಮಹಾದೇವಿಯರು ಈ ಶಿಲ್ಪಿಗಳಿಗೆ "ಪರ್ಜೆಜಪ್ರು" ಎಂಬ ಪಟ್ಟವನ್ನು ಕಟ್ಟುತ್ತಾರೆ. "ತ್ರಿಭುವನಾಚಾರಿ" ಎಂಬ ಬಿರುದನ್ನಿತ್ತು ಗೌರವಿಸುತ್ತಾರೆ. "ಮಣಿಮುಕುಟ ಚೂಡಾಮಣಿ" ಎಂದು ಶ್ಲಾಘಿಸುತ್ತಾರೆ. ಪಟ್ಟದಕಲ್ಲಿನ ದಕ್ಷಿಣ ದಿಕ್ಕಿನಲ್ಲಿರುವ ದೂರದ ಕಂಚಿನಗರದಿಂದ ಇವರನ್ನು ಮಹಾರಾಜನು ಕರೆದುಕೊಂಡು ಬರುವಷ್ಟು ಬೆಲೆಯುಳ್ಳ ಶಿಲ್ಪಿಗಳಾಗಿದ್ದರು. ಹೀಗಾಗಿ ಇವರು ಜನಮಾನಸದಲ್ಲಿ "ಲಿವಿಂಗ್ ಲೆಜೆಂಡ್" ಆಗಿ ನೆಲೆ ನಿಂತಿರುತ್ತಾರೆ. ಮತ್ತು ಇವರ ಬಗ್ಗೆ ಇಲ್ಲಿಯ ಎರಡು ಶಾಸನಗಳು ಇವರನ್ನು "ತೆಂಕಣ ದೆಸೆಯಾ ಸೂತ್ರಧಾರಿ" ಎಂದು ಕರೆದಿದೆ. ವಿದ್ವಾಂಸರಾದ ಶ್ರೀ ಅಣ್ಣಿಗೇರಿಯವರ ಈ ಶಿಲ್ಪಿಗಳು ಕಂಚಿಯಿಂದ ಬಂದವರು ಎಂಬ ಅಭಿಪ್ರಾಯವನ್ನು ನಾನು ಇತ್ತೀಚೆಗೆ ಅದೇ ಕಾಂಚಿವರಂದಲ್ಲೂ ಇದೇ ೮ನೇ ಶತಮಾನದ ಒಂದು ಕನ್ನಡ ಶಾಸನದಲ್ಲೂ ಅದನ್ನು 'ಅನಿವಾರಿತ' ಎಂಬುದನ್ನು ಕೊರೆದಿರುವುದಾಗಿ ಹೇಳಿರುವುದನ್ನು ಗುರುತಿಸಿದ್ದೇನೆ. ಹೀಗಾಗಿ ಇವರು ತೆಂಕಣ ದೆಸೆಯ ಸೂತ್ರಧಾರಿ – ಎಂದಿರುವುದು – ಪಟ್ಟದಕಲ್ಲಿಗೆ ದಕ್ಷಿಣ ದಿಕ್ಕಿನಲ್ಲಿರುವ ತಮಿಳುನಾಡಿನ ಕಂಚಿನಗರದಿಂದ ಬಂದವರು

* ಪ್ರೊಫೆಸರ್, 'ಕಾಳಕೀರ್ತಿ', ಚರ್ಚ್ ಮುಖ್ಯರಸ್ತೆ, ಕೇಶವಪುರ ಬಡಾವಣೆ, ಭದ್ರಾವತಿ-೫೭೭೩೦೧

ಎಂಬುದು ದೃಢಪಟ್ಟಿದೆ. ಉತ್ತರದ ಅಣ್ಣೀಗೇರಿ ನಗರದ ಮೂಲದವನಾದ ಪಂಪಮಹಾಕವಿಯು ಕೂಡ ಒಂದು ಕಡೆ ತನಗೆ ದಕ್ಷಿಣದಿಕ್ಕಿನದಾದ ಬನವಾಸಿಯನ್ನು ನೆನೆದು "ತೆಂಕನಾಡ ಮರೆಯಲ್ಕೆ ಇನ್ನೇಂ ಮನಂ ಬರ್ಕುಮೇ" ಎಂದು ಪ್ರಲಾಪಿಸುತ್ತಾನೆ. ಅಂದರೆ ಕ್ರಿ.ಶ. ೮–೧೦ನೇ ಶತಮಾನದ ಉತ್ತರ ಕರ್ನಾಟಕದ ಜನರು ಕಂಚಿ, ಬನವಾಸಿ ಆಸುಪಾಸಿನ ಪ್ರದೇಶವನ್ನು "ತೆಂಕಣದೆಸೆ", 'ತೆಂಕನಾಡು' ಎಂದೇ ಗುರುತಿಸುತ್ತಿದ್ದರು. ತೆಂಕಣ ಎಂದರೆ ದಕ್ಷಿಣ ಎಂದು ಅರ್ಥ. ತೆಂಕಣ/ತೆಂಕನಾ(ಡು) > ದೆಂಕಣ > ದಕ್ಕಣ > ಜಕ್ಕಣ ಎಂದೂ; ಮತ್ತು ಅದೇ ತೆಂಕಣ ಪದದಿಂದಲೇ > ಡಂಕಣ ಎಂಬ ಪದಗಳೂ ರೂಪುಗೊಂಡಿವೆ. ಹೀಗೆ ಜಕ್ಕಣ ಮತ್ತು ಅವರ ಮಗ ಡಂಕಣ ಎಂಬ ಇಬ್ಬರು ಶಿಲ್ಪಿಗಳ ಹೆಸರುಗಳು 'ದಕ್ಷಿಣ' ಎಂಬ ಸಂಸ್ಕೃತಮೂಲ ಪದದಿಂದ ಅಥವಾ ಅದರ ತದ್ಭವವಾದ ತೆಂಕಣ ಎಂಬ ಕನ್ನಡಮೂಲ ಪದದಿಂದ ನಿಷ್ಪನ್ನಗೊಂಡಿದೆ. ಹೀಗಾಗಿ ಈ ಇಬ್ಬರು ಜನಪದ ಪ್ರಖ್ಯಾತ ಶಿಲ್ಪಿಗಳ ಹೆಸರುಗಳು ಮೂಲತಃ ಒಂದೇ ಅರ್ಥವನ್ನೊಳಗೊಂಡಿದೆ ಹಾಗೂ ಒಂದೇ ಮೂಲದಿಂದ ಹುಟ್ಟಿ ಬಂದಿದೆ. ಹೀಗೆ ರೂಪಗೊಂಡ ಈ ಎರಡೂ ಪದಗಳ ಮೇಲೆ ಅದೇ ಅನಿವಾರಿತಚಾರಿ ಮತ್ತು ಸರ್ವಸಿದ್ಧಿಂ ಆಚಾರಿಗಳ ಹೆಸರುಗಳ ಮೇಲೆ ಹತ್ತಿರುವ 'ಆಚಾರಿ' ಎಂಬ ಉಪನಾಮವು ಹತ್ತಿ ಜಕ್ಕಣ್ಣಾಚಾರಿ ಮತ್ತು ಡಂಕಣಾಚಾರಿ ಎಂಬ ನಾಮಧೇಯಗಳು ಸಾಧಿತವಾಗಿದೆ.

ಈ ಶಿಲ್ಪಿಗಳು ತಾವು ಆ ದೇವಸ್ಥಾನವನ್ನು "ದ್ರಾವಿಡ ಶೈಲಿ"ಯಲ್ಲಿ ನಿರ್ಮಿಸಿರುವುದಾಗಿ ಶಾಸನಗಳಲ್ಲಿ ಹೇಳಿ ಕೊಂಡಿರುವುದು ಕೂಡ ಗಮನಾರ್ಹ. ಭಾರತೀಯ ವಾಸ್ತುಶಿಲ್ಪ ಶೈಲಿಯಲ್ಲೂ ವೇಸರ, ನಾಗರ ಮತ್ತು ದ್ರಾವಿಡ ಎಂಬ ಮೂರು ಶೈಲಿಗಳಿದ್ದು, ಇವುಗಳಲ್ಲೂ ದ್ರಾವಿಡ ಶೈಲಿಯು ದಕ್ಷಿಣ ಭಾರತೀಯ ವಾಸ್ತುಶಿಲ್ಪ ಶೈಲಿಯಾಗಿರುತ್ತದೆ. ತಮಿಳು ನಾಡನ್ನು ನಮ್ಮ ಪ್ರಾಚೀನ ಪುರಾಣದಲ್ಲಿ ದ್ರಾವಿಡ ದೇಶ ಎಂದು ಕರೆದಿರುವುದನ್ನು ಮರೆಯಬಾರದು. ಈ ಎಲ್ಲ ಅಂಶಗಳ ಆಧಾರದ ಮೇಲೆ ಜಕ್ಕಣಾಚಾರಿ, ಡಂಕಣಾಚಾರಿಯರ ಐತಿಹ್ಯದ ಮೂಲವನ್ನು ಪಟ್ಟದಕಲ್ಲಿನಲ್ಲೂ ಕ್ರಿ.ಶ. ೧೨೪೧ ವರ್ಷಗಳಷ್ಟು ಪ್ರಾಚೀನವಾದ ಅನಿವಾರಿತಾಚಾರಿ ಮತ್ತು ಸರ್ವಸಿದ್ಧಿಂ ಆಚಾರಿ ಮತ್ತು ಅವರ ಗುಂಡನ ಶಿಲ್ಪಾಚಾರಿಯರಿಂದ ಮೊಳಕೆಯೊಡೆದಿದೆ ಎಂದು ಯೋಚಿಸುವುದು ಸತ್ಯಕ್ಕೆ ಹೆಚ್ಚು ಹತ್ತಿರವಾಗುತ್ತದೆ. ಈ ಮೊದಲ ಹಂತದಲ್ಲೂ ಇದು ಶುದ್ಧ ಐತಿಹಾಸಿಕ ವಾಸ್ತವವಾಗಿದೆ.

ಎರಡನೆಯ ಹಂತದಲ್ಲೂ ಈ ಇತಿಹಾಸವು ಸು. ೫೦೦ ವರ್ಷಗಳ ಹೊರಳುರುಳಿನಲ್ಲೂ ಸು. ೫೦೦ ಮೈಲಿ ಪ್ರದೇಶವನ್ನು ಕ್ರಮಿಸಿ ಒಂದಷ್ಟು ರಂಜಕತೆ ಸೇರಿಕೊಂಡು ಕ್ರಿ.ಶ. ೧೧೧೭ರಲ್ಲಿ, ಬೇಲೂರಿಗೆ ಬಂದಿತು. ಇಲ್ಲಿಯೂ ಹೊಯ್ಸಳರ ಬಿಟ್ಟಿದೇವರಸನ ಆಶ್ರಯದಲ್ಲಿ ಚನ್ನಕೇಶವ ದೇವಾಲಯದ ನಿರ್ಮಾಣದಲ್ಲಿ ದುಡಿದ ಶಿಲ್ಪಿಗಳಲ್ಲಿ ಸಾಕಷ್ಟು ಪ್ರಸಿದ್ಧನಾದ ದಾಸೋಜ ಮತ್ತು ಚಾವಣ ಎಂಬ ಐತಿಹಾಸಿಕ ಶಿಲ್ಪಿಗಳಲ್ಲಿ ಈ ಐತಿಹ್ಯವು ಮತ್ತೊಂದಿಷ್ಟು ರಂಗುಪಡೆದಿತು. ಇವರಿಬ್ಬರಿಂದ ೯ ಸುಂದರ ಶಿಲಾಬಾಲಿಕೆಯರು ಸೃಷ್ಟಿಯಾಗು ತ್ತಾರೆ. ಇವು ತುಂಬ ಮೋಹಕವಾದ ಕೃತಿಗಳು. ಇವರಿಗೆ "ವಿದ್ಯಾವಂತ ರೂವಾರಿ", 'ಸರಸ್ವತೀ ಗಣದಾಸಿ' ಎಂಬ ಶಾಸನೋಕ್ತ ವಿಶೇಷಣಗಳಿವೆ. ಶಾಸನಗಳು, 'ಬಿರುದರೂವಾರಿ ಗೊಂದಲ ಬಡಿವ' ಎಂದೂ 'ಬಿರುದ ರೂವಾರಿ ಮದನ ಮಹೇಶ' ಎಂದೂ ಬಿರುದುಗಳನ್ನು ಹೊಂದಿದ್ದರೆಂದೂ ಹೇಳುತ್ತದೆ. ಇದರಿಂದ ಈ ದಾಸೋಜ ಮತ್ತು ಚಾವಣರು ಪಟ್ಟದಕಲ್ಲಿನ ಆ ಇಬ್ಬರಂತೆಯೇ ಪ್ರಖ್ಯಾತರಾಗಿದ್ದರೆಂದೂ, ಬಿರುದಾಂಕಿತರಾಗಿದ್ದರೆಂದೂ ತಿಳಿಯುತ್ತದೆ. ಇವರು ತಂದೆ ಮತ್ತು ಮಗ, ಮತ್ತು ಐತಿಹಾಸಿಕ ವ್ಯಕ್ತಿಗಳೇ ಆಗಿದ್ದಾರೆ. ಹೀಗಾಗಿ ಜನಪದೀಯ ಜಕ್ಕಣ್ಣಾಚಾರಿ ಮತ್ತು ಡಂಕಣ್ಣಾಚಾರಿಗೆ ತಂದೆ ಮತ್ತು ಮಗನ ಸಂಬಂಧವು–ತಂದೆ ಮತ್ತು ಮಕ್ಕಳಿಗಿದ್ದ ಈ ದಾಸೋಜ ಮತ್ತು ಚಾವಣರ ದೆಸೆಯಿಂದ ಉಂಟಾ ಯಿತು, (ಪಟ್ಟದಕಲ್ಲಿನ ಆ ಶಿಲ್ಪದ್ವಯರು ಕೇವಲ ಸಹೋದ್ಯೋಗಿ ಯಾಗಿದ್ದರು. ಮತ್ತು ಅನೇಕ ಶಿಲಾಶಾಸನಗಳಲ್ಲೂ ಈ ರೀತಿ ತಂದೆ–ಮಕ್ಕಳು ಶಿಲ್ಪಿಕಾ ಕೆಲಸ ಮಾಡಿರುವ ಉದಾಹರಣೆ ಗಳುಂಟು.)

ಪಟ್ಟದಕಲ್ಲಿನ ಆ ಶಿಲ್ಪದ್ವಯರು ಅಲ್ಲಿಯೇ ದಕ್ಷಿಣ ಕಂಚಿ ಯಿಂದ ವಲಸೆ ಹೋದಂತೆಯೇ ಇಲ್ಲೂ ಈ ಬೇಲೂರಿನಲ್ಲೂ ದಾಸೋಜ ಮತ್ತು ಚಾವಣರು ಬೇಲೂರಿಗೆ ಬನವಾಸಿಯಿಂದ ವಲಸೆ ಬರುತ್ತಾರೆ. ಬನವಾಸಿ ಇವರ ಸ್ವಂತ ಊರು. ಪಂಪ ಮಹಾಕವಿಯೂ ಬನವಾಸಿಯನ್ನು "ತೆಂಕನಾಡು" (=ದಕ್ಷಿಣ ದೇಶ) ಎಂದೇ ಕರೆದಿದ್ದಾನೆ. ಬೇಲೂರಿಗೆ ಬನವಾಸಿಯು ದಕ್ಷಿಣದಿಕ್ಕಿನದ್ದಲ್ಲವಾದರೂ ಆಗಿನ ಕಾಲದಲ್ಲಿ ಬನವಾಸಿಯು 'ತೆಂಕನಾಡು'/'ತೆಂಕಣದೆಸೆ' ಎಂದೇ ಪ್ರಖ್ಯಾತವಾಗಿತ್ತು. ಪಟ್ಟದ ಕಲ್ಲಿನ ಆ ಶಿಲ್ಪದ್ವಯರು ತೆಂಕಣದೇಸೆಯದಾಗಿದ್ದ ಕಂಚಿಯಿಂದ ಬಂದವರಾಗಿದ್ದಂತೆಯೇ ಇಲ್ಲೂ ಈ ಬೇಲೂರಿನ ಶಿಲ್ಪದ್ವಯರು ಮಹಾಕವಿ ಪಂಪನ ಮರೆಯಲಾಗದ ತೆಂಕನಾಡು ಎಂದು ಪ್ರಸಿದ್ಧರಾಗಿದ್ದ ಬನವಾಸಿಯಿಂದ ಬಂದವರಾಗಿದ್ದಾರೆ. ಇದೆಲ್ಲವೂ ಶುದ್ಧ ಐತಿಹಾಸಿಕ ಅಂಶ. ಜಕ್ಕಣ್ಣಾಚಾರಿಯ ಕಥೆ ಯಲ್ಲಿಯೂ ಈತ ವಲಸೆ ಬಂದುದಾಗಿ ಹೇಳಲಾಗಿದೆ. ಆದರೆ ವಲಸೆ ಬಂದದ್ದು ತುಮಕೂರು ಜಿಲ್ಲೆಯ ಕೈದಾಳ ಎಂಬ ಊರಿನಿಂದ ಎಂದು ಕಥೆಯಲ್ಲೂ ಹೇಳಲಾಗಿದೆ. ಹೀಗೆ,

ಕೈದಾಳ ಎಂಬ ಊರು, ಕಪ್ಪೆಚನ್ನಿಗರಾಯ ವಿಗ್ರಹಗಳ ಸುತ್ತ–ರಂಜಕನಾದ ಜನಪದ ಕತೆಯು ರಚನೆಗೊಂಡಿತು.

ಪಟ್ಟದಕಲ್ಲಿನ ಮೊದಲ ಹಂತದಲ್ಲೂ ಶೇಕಡ ತೊಂಬತ್ತು ಭಾಗ ಇತಿಹಾಸವಿದೆ; ಆದರೆ ಸು. ೫೦೦ ವರ್ಷಗಳ ನಂತರ ಹಾಗೂ ಸು. ೫೦೦ ಮೈಲಿ ಕ್ರಮಿಸಿ ಬೇಲೂರಿಗೆ ಬರುವ ಹೊತ್ತಿಗೆ ಐತಿಹಾಸಿಕತೆಯು ಶೇಕಡ ೫೦ ಭಾಗಕ್ಕೆ ಇಳಿದು ಕಲ್ಪಕತೆಯ ಪ್ರಮಾಣ ಹೆಚ್ಚಾಯಿತು.

ಮೂರನೆಯ ಹಂತದಲ್ಲೂ ಈ ಐತಿಹ್ಯವು ಬೇಲೂರನ್ನು ದಾಟಿ ಸು. ೫೦೦ ವರ್ಷಗಳ ನಂತರ ಪುನಃ ಸು. ೫೦೦ ಮೈಲಿ ಕ್ರಮಿಸಿ ಕ್ರಿ.ಶ. ೧೪೩೨ರಲ್ಲೂ ಕಾರ್ಕಳದ ಗೊಮ್ಮಟೇಶ್ವರನ ವಿಗ್ರಹದ ಸುತ್ತ ಶಂಭುನಾರಾಯಣ ಆಚಾರಿ ಮತ್ತು ಮಗ ಬೀರು ಆಚಾರಿ ಎಂಬ ಶುದ್ಧ ಕಲ್ಪಿತ ಶಿಲ್ಪಿಗಳ ಕತೆಯಾಗಿ ರೂಪಾಂತರಗೊಂಡಿತು. ಈ ಮೂರನೇ ಹಂತದಲ್ಲೂ 'ಕಲ್ಕುಡ–ಕಲ್ಲುರ್ಟಿ ಎಂಬ ಶುದ್ಧ ಜಾನಪದ ಕತೆಯಾಯಿತು ಇದಕ್ಕೆ ಶಾಸನಾಧಾರವಿಲ್ಲ. ಆದರೆ 'ಕಾರ್ಕಳದ ಗೊಮ್ಮಟೇಶ್ವರ ಚರಿತೆ' ಮತ್ತು ಶ್ರೀ ಸೇನಾನಿ ರಾಜಮಲ್ಲ ಸಂಪಾದಿತ "ಭೂತಾರಾಧನೆಯ ಕತೆಗಳು" ಎಂಬ ಜನಪದ ಕೃತಿಯಲ್ಲೂ ಈ ಕತೆಯು ಉಪಲಬ್ಧವಿದೆ. ಶಂಭು ನಾರಾಯಣ ಅಚ್ಚವ ತಂದೆ, ಬೀರು ಅಚ್ಚವ ಅವರ ಮಗ ಶಿಲ್ಪಿಗಳಾದ ಇವರು ಕೂಡ ಬೇಲೂರು, ಕಾರ್ಕಳಗಳಿಗೆ ವಲಸೆ ಬರುತ್ತಾರೆ. ಇವರ ಹೆಸರಿನ ಮೇಲೆ ಕೂಡ 'ಆಚಾರಿ'ಯು ತುಳು ಭಾಷೆಯಲ್ಲೂ 'ಅಚ್ಚವ' ಆಗಿರುತ್ತೆ.

ಪಟ್ಟದಕಲ್ಲಿನ 'ತೆಂಕಣದೆಸೆ' ಎಂಬ ಪದ, ಪಂಪನ 'ತೆಂಕನಾಡು' ಎಂಬ ಪದ, ದ್ರಾವಿಡ ಶೈಲಿ–ಎಂಬ ಮಾತು, ಜಕ್ಕಣಾಚಾರಿ ಮತ್ತು ಡಂಕಣಾಚಾರಿ–ಎಂಬ ವ್ಯಕ್ತಿ ವಾಚಕಗಳು ಇವೆಲ್ಲವೂ ದಕ್ಷಿಣ ಭಾರತೀಯ ಶಿಲ್ಪಿಗಳ ಸಮಾಜವನ್ನು, ದ್ರಾವಿಡ ಶಿಲ್ಪ ಶೈಲಿಯನ್ನು ಪ್ರತಿನಿಧಿಸುತ್ತಿದೆ. ಜಕ್ಕಣಾಚಾರಿಯನ್ನು ಒಬ್ಬ ವ್ಯಕ್ತಿ ಎನ್ನುವುದಕ್ಕಿಂತ ಅವನು ದಕ್ಷಿಣ ಭಾರತದ ಶಿಲ್ಪಿ ಸಮಾಜದ ಪ್ರತಿನಿಧಿಕ ವ್ಯಕ್ತಿತ್ವ–ಎಂದು ತಿಳಿಯುವುದು ಸೂಕ್ತ.

ಪರಾಮರ್ಶ:– ನನ್ನ 'ಬೃಹತ್ ಕರ್ನಾಟಕದ ಶಿಲ್ಪಾಚಾರಿಯರ ಚರಿತೆ, ಎಂಬ ಕೃತಿಯನ್ನು ಪರಿಶೀಲಿಸಬಹುದು.

['ಕೈದಾಳ' – ಎಂಬ ತುಮಕೂರಿನ ಹತ್ತಿರದ ಊರಿನ ಹೆಸರನ್ನು ಜಕ್ಕಣಾಚಾರಿಯ ತುಂಡಾದ ಕೈ ಮತ್ತೆ ಚಿಗುರಿತು, ದಳವಡಿಯಿತು ಎಂದು ಅರ್ಥೈಸುವುದು ಅವೈಜ್ಞಾನಿಕವಾಗುತ್ತದೆ. ಏಕೆಂದರೆ ಈ ಊರಿನ ಹೆಸರುಗಳು ನಾಲ್ಕೈದು ಬೇರೆ ಬೇರೆ ಕಡೆ ಸಿಗುತ್ತದೆ. ಉದಾ. ಚನ್ನಗಿರಿ ಮತ್ತು ದಾವಣಗೆರೆಯ ನಡುವಿನ ರಸ್ತೆಯಲ್ಲೂ ಒಂದು ಕೇದಾಳು ಎಂಬ ಹೆಸರಿನ ಊರಿದೆ. ಮತ್ತು ಬಹುಶಃ ಆ ಪದವನ್ನು ಕೈದು+ಹಾಳು ಎಂದು ಬಿಡಿಸುವುದು ಸೂಕ್ತ. ಕೈದು=ಆಯುಧ/ಖಡ್ಗ; ಹಾಳು=ದಾನವಾಗಿ ಕೊಟ್ಟ ಜಮೀನು ಎಂದು ಅರ್ಥ ಅಂದರೆ ಹಿಂದೆ ಆ ಗ್ರಾಮಕ್ಕಾಗಿ ಶತ್ರುವಿನೊಂದಿಗೆ ಹೋರಾಡಿ ಸತ್ತ ವೀರನ ಖಡ್ಗಕ್ಕೆ ರಾಜನಿಂದ ದಾನವಾಗಿ ಕೊಡಲ್ಪಟ್ಟ ಭೂಮಿ/ಗ್ರಾಮ ಎಂದು ತಿಳಿಯುವುದು ಸೂಕ್ತ.]

ಮತ್ಸೇಂದ್ರನಾಥ, ಅವಲೋಕಿತೇಶ್ವರ, ಮಂಜುನಾಥ ಇವರುಗಳು ಸಮನ್ವಯ ಹಾಗೂ ಕಾಲಮಾನದ ಸಮೀಕ್ಷೆ

ಸಿದ್ದರಗಿರಿ ಒ.ಎಲ್. ಚಂದ್ರೇಗೌಡ*

ಈ ಸಮೀಕ್ಷೆಗೆ ಮಂಗಳೂರು ಕದ್ರಿಯಲ್ಲಿರುವ ದೇವಳವನ್ನು ಮುಂದಿಟ್ಟುಕೊಂಡು ಹೊರಟರೆ ಕದ್ರಿ ಮಂಜುನಾಥ ದೇವಾಲಯದ ಕ್ಷೇತ್ರ ದರ್ಶನದಲ್ಲಿ ಕಂಡುಬರುವ ಅಂಶಗಳೆಂದರೆ ಈ ದೇವಾಲಯವು ಪೂರ್ವಾಭಿಮುಖ ವಾಗಿದೆ. ನಾವುಗಳು ಪಶ್ಚಿಮಕ್ಕೆ ಮುಖ ಮಾಡಿಕೊಂಡು ದೇವಾಲಯವನ್ನು ಪ್ರವೇಶಿಸಿ ಗರ್ಭಗುಡಿಯೊಳಗಿರುವ ಮಂಜುನಾಥನಿಗೆ ನಮಸ್ಕರಿಸಿ ಗರ್ಭಗುಡಿಯನ್ನು ಪ್ರದಕ್ಷಿಣೆ ಹಾಕಲು ಹೊರಟರೆ ನಮಗೆ ಮೊದಲು ಗೋಚರಿಸುವ ವಿಗ್ರಹವೆಂದರೆ ಗರ್ಭಗುಡಿಯ ಆಗ್ನೇಯ ಮೂಲೆಯಲ್ಲಿ ಪೂರ್ವಾಭಿಮುಖವಾಗಿ ಹೊರಜಗತ್ತಿಗೆ ಗೋಚರಿಸುವಂತೆ ಚರಸ್ಥಿತಿಯಲ್ಲಿ ಇಟ್ಟಿರುವ ಸುಮಾರು ೫' ಅಡಿ ಎತ್ತರದ ಮೂರು ಮುಖದ ಆರು ಬಾಹುಗಳುಳ್ಳ ಪದ್ಮಾಸನದಲ್ಲಿ ಮಂಡಿರುವ ಸುಂದರವಾದ ಪಂಚಲೋಹದಿಂದ ನಿರ್ಮಿಸಿರುವ ವಿಗ್ರಹವಿದೆ.

ಈ ವಿಗ್ರಹದ ಮೂರು ಶಿರಸ್ಸಿನ ಜಟಾಮುಕುಟಗಳು ಕೊನೆಯಲ್ಲಿ ಒಂದೇ ಮುಕುಟವಾಗಿ ನಿರ್ಮಾಣವಾಗಿದೆ. ಎದೆಯ ಮೇಲೆ ರುದ್ರಾಕ್ಷಿಮಾಲೆ ಕಂಡುಬರುತ್ತದೆ. ಜಟಾಮುಕುಟದಲ್ಲಿ ಧ್ಯಾನೀಬುದ್ಧನು ಪದ್ಮಾಸನದಲ್ಲಿ ಕುಳಿತ ಭಂಗಿಯ ಚಿತ್ರವಿದೆ. ಮಕರ ಕರ್ಣಕುಂಡಲಗಳಿಂದ ಭೂಶಿತವಾಗಿದೆ. ಪಲ್ಲಕ್ಕಿಯಾಕಾರದ ಪ್ರಭಾವಳಿ ಇದೆ.

ಈ ಪ್ರಭಾವಳಿಯ ಬುಡದ ಎರಡೂ ಕಡೆಯ ಸಿಂಹದ ಮುಖದ ಚಿಹ್ನೆಯಿದೆ. ಈ ಚಿಹ್ನೆಯ ಹಿಂಬದಿಯಲ್ಲಿ ಒಂದು ಕೈಯಲ್ಲಿ ತಾವರೆ ಮೊಗ್ಗನ್ನು ಹಿಡಿದುಕೊಂಡು ಇನ್ನೊಂದು ಹಸ್ತವನ್ನು ಯಾವುದೋ ಮುದ್ರೆ ಪ್ರದರ್ಶಿಸುತ್ತಾ ನಿಂತ ಭಂಗಿಯ ಎರಡು ಸ್ತ್ರೀದೇವತಾ ವಿಗ್ರಹದಿಂದ ಭೂಷಿತವಾಗಿದೆ.

ಈ ಪಲ್ಲಕ್ಕಿಯಾಕಾರದ ಪ್ರಭಾವಳಿಯ ಶಿರೋಭಾಗ ದಲ್ಲೂ ಧ್ಯಾನಿಬುದ್ಧನ ಚಿತ್ರವಿದೆ. ಸ್ಪಷ್ಟವಾಗಿ ಗೋಚರಿಸುವ ಉಪವೀತವಿದೆ. ಈ ಉಪವೀತದಲ್ಲಿ ಶೃಂಗಿಯಾಕಾರದ ಚಿಹ್ನೆಯಿದೆ.

ತೋಳುಗಳಲ್ಲಿ ಮಣಿಕಟ್ಟಿನಲ್ಲಿ ವಿವಿಧ ಆಭರಣಗಳನ್ನು ಧರಿಸಿ ಸುಲಭಾಸನ ಭಂಗಿಯಲ್ಲಿ ಕುಳಿತಿರುವ ಈ ಅವಲೋಕಿತೇಶ್ವರ ಬುದ್ಧನ ಬಲಭುಜದ ಮುಂಗೈ ಹಸ್ತದ ಮಧ್ಯದಲ್ಲಿ ಇಷ್ಟಲಿಂಗವಿದೆ.

ಇನ್ನುಳಿದ ಐದು ಹಸ್ತಗಳಲ್ಲಿ ವಿವಿಧ ಭಂಗಿಯ ಮುದ್ರೆಯನ್ನು ಪ್ರದರ್ಶಿಸುತ್ತಾ ಇರುವ ಲೋಕೇಶ್ವರ ವಿಗ್ರಹವನ್ನು ಕ್ರಿ.ಶ. ೯೬೮ರಲ್ಲಿ ಕರಾವಳಿ ಕನ್ನಡ ನಾಡನ್ನು ಆಳುತ್ತಿದ್ದ ಅರಸು ಕುಂದವರ್ಮನು ಮಕರ ಮಾಸದ ರೋಹಿಣಿ ನಕ್ಷತ್ರದ ಕನ್ಯಾಲಗ್ನದಲ್ಲಿ ಪ್ರತಿಷ್ಠಾಪಿಸಿದನೆಂಬುದಾಗಿ ಪ್ರತಿಮೆಯ ಪಾಣಿಪೀಠದಲ್ಲಿನ ಶಾಸನದಲ್ಲಿ ಸ್ತುತೀಕರಿಸಿದೆ.

ಈ ಲೋಕೇಶ್ವರ ಯಾನೆ ಅವಲೋಕಿತೇಶ್ವರನನ್ನು; ಮಹಾಯಾನಿ ಲೋಕದ ಬುದ್ಧಾನುಯಾಯಿಗಳಿಗೆ ಆಧ್ಯಾತ್ಮಲೋಕದ ಶಿಕ್ಷಣ ಕೊಡಲೆಂದು ತಥಾಗತನು ಪಂಚ ಧ್ಯಾನೀಬುದ್ಧರನ್ನು ಕಳುಹಿಸಿದನೆಂಬುದಾಗಿ ಗುಹ್ಯ ಸಮಾಜ ತಂತ್ರಗಳಲ್ಲಿ ಹಾಗೂ ಮಂಜುಶ್ರೀ ಕಲ್ಪದ ತಂತ್ರಗಳಲ್ಲಿ ಸ್ತುತೀಕರಿಸಿದೆ.

ಈ ಪಂಚ ಧ್ಯಾನೀಬುದ್ಧರು ಹಾಗೂ ಅವರುಗಳು ಮೂಲಮಂತ್ರಗಳು, ಮಂಡಲಗಳು ಶಕ್ತಿವರ್ಣನೆ ದೊರೆಯುತ್ತದೆ. ಇವರುಗಳನ್ನು ಪಂಚ ಕುಲೇಶ್ವರರುಗಳೆಂದು ವರ್ಣಿಸಲಾಗಿದೆ. ಈ ಬೋಧಿಸತ್ವರಿಗೆ ಬುದ್ಧಧರ್ಮದ ಮಹಾಯಾನ, ವಜ್ರಾಯಾನ, ಮಂತ್ರಾಯಾನ, ಕಾಲಚಕ್ರಯಾನ, ಸಹಜಯಾನ ಮುಂತಾದ ಯಾನಗಳಲ್ಲಿ ಬೋಧಿಸತ್ವನಷ್ಟೇ ಪ್ರಾಮುಖ್ಯತೆ ಇದೆ. ಕರುಣೆಯಿಂದ ತನ್ನಂತೆಯೇ ಮನುಷ್ಯರಾದ ಎಲ್ಲರ ಹಿತಕ್ಕಾಗಿ ತನ್ನ ಮಹಾನಿರ್ಮಾಣವನ್ನೇ ತ್ಯಾಗ ಮಾಡಿ ನಾಲ್ಕನೇ ಬಾರಿಯೂ ಅವಿರ್ಭವಿಸಿದ. (ಅವತಾರವೆತ್ತಿ ಬಂದ) ತದಾತ್ಮ ಬೋಧಿಸತ್ವನೇ ಈ ಅವಲೋಕಿತೇಶ್ವರ ಪದ್ಮಪಾಣಿ ಬುದ್ಧ ಎಂದು ಗುಹ್ಯ ಸಮಾಜ ತಂತ್ರಗಳಲ್ಲಿ ಉಲ್ಲೇಖಿಸಿದೆ.

ಬುದ್ಧಗಯೆಯಲ್ಲಿನ ಬೋಧಿವೃಕ್ಷದ ಪ್ರಾಕಾರದಲ್ಲಿ ದಕ್ಷಿಣೋತ್ತರ ಮೇರುಗಳಲ್ಲಿ ಅವಲೋಕಿತೇಶ್ವರ ಬೋಧಿಸತ್ವನ

* ಸಿದ್ದರಗಿರಿ ಎಸ್ಟೇಟ್, ಗಾಗರ, ಜಾಗರ ಅಂಚೆ, ಚಿಕ್ಕಮಗಳೂರು ಜಿಲ್ಲೆ.

ಎರಡು ಪ್ರತಿಮೆಗಳನ್ನು ಸ್ಥಾಪಿಸಿದ್ದಾರೆ. ಈ ಪ್ರತಿಮೆಗಳು ಭೂಮಿಗಿಳಿದು ಅದೃಶ್ಯವಾದಾಗ ಬುದ್ಧಧರ್ಮವು ಅಳಿದು ಹೋಗುತ್ತದೆ ಎಂಬ ಪ್ರತೀತಿ ಬುದ್ಧ ಧರ್ಮೀಯರಲ್ಲಿದೆ.

ಸದ್ಧರ್ಮ ಪುಂಡರೀಕ ಕಾರಂಡ ವ್ಯೂಹ ಮತ್ತು ಗುಹ್ಯ ಸಮಾಜತಂತ್ರ ಹಾಗೂ ಮಂಜುಶ್ರೀ ಕಲ್ಪಗಳೆಂಬ ಬುದ್ಧಗ್ರಂಥ ಗಳಲ್ಲಿ ಅವಲೋಕಿತೇಶ್ವರ ಬೋಧಿಸತ್ವನ ಬಲ, ಗುಣಲಕ್ಷಣ ಗಳನ್ನು ವರ್ಣಿಸುತ್ತಾ ಮತ್ಸೇಂದ್ರನಾಥನನ್ನು ಬೋಧಿಸತ್ವದ ನಾಲ್ಕನೇ ಅವತಾರವಾದ ಲೋಕೇಶ್ವರ ಪದ್ಮಪಾಣಿ ಬುದ್ಧನೊಂದಿಗೆ ಸಮೀಕರಿಸಿಕೊಂಡಿರುವರು. ಇದನ್ನು ನಾಥ ಸಂಪ್ರದಾಯದ ಅನುಯಾಯಿಗಳೂ ಸಹ ಅಂಗೀಕರಿಸಿ ಕೊಂಡಿದ್ದಾರೆ.

ವಜ್ರಯಾನಿ ಮುಂತಾದ ಯಾನಿಗಳು ಈ ಬೋಧಿಸತ್ವ ನನ್ನು ಮಂಗಳದೇವತೆಯೆಂದು ಪೂಜಾರ್ಹನೆಂದು ದೈವೀಕರಿಸಿಕೊಂಡು ಮಂಡಲಗಳು ಮೂಲಮಂತ್ರಗಳಿಂದ ಮಂಜುಶ್ರೀ ಕಲ್ಪದಲ್ಲಿ ನಾನಾ ಬಿರುದುಗಳನ್ನು ಕೊಟ್ಟು ದೈವೀಕರಿಸಿ ನಾನಾ ಶ್ಲೋಕಗಳಿಂದ ಹೊಗಳುತ್ತಾ ಇವನನ್ನು ಅವಲೋಕಿತೇಶ್ವರ, ಮಾಯಾಮಚ್ಚೇಂದ್ರನಾಥ, ಮಂಜೇನಾಥ, ಮಂಜೇಶ್ವರ, ಮಂಜುನಾಥೇಶ್ವರ ಎಂಬುದಾಗಿ ಸ್ತುತೀಕರಿಸಿ ಕೊಂಡ ಪ್ರತಿಮಾರೂಪವೇ ಕದ್ರಿ ದೇವಳದ ಆಗ್ನೇಯ ದಿಕ್ಕಿನಲ್ಲಿ ನಮ್ಮಗಳಿಗೆ ಗೋಚರಿಸುವಂತೆ ಇಟ್ಟಿರುವ ವಿಗ್ರಹರೂಪ. ಈ ವಿಗ್ರಹವೂ ಇಲ್ಲಿ ಬರುವ ಕಾರಣವನ್ನು ಅರಸಲು ಹೊರಟರೆ ನಾಥ ಸಂಪ್ರದಾಯದ ಹಾದಿಯನ್ನು ಸವೆಸಲೇ ಬೇಕಾಗುತ್ತದೆ.

ಈ ಅವಲೋಕಿತೇಶ್ವರನನ್ನು ಮಂಜುನಾಥ ಎಂದು ಪೂಜಿಸಿ ಜಾತ್ರಾ ಮಹೋತ್ಸವ ಆಚರಿಸುವಂತಹ ನಾಥ ಸಂಪ್ರದಾಯದ ಹೆಸರಾಂತ ಗೋರಕ ಪೀಠಗಳಲ್ಲಿ ಒಂದಾದ ಮಂಗಳೂರು ಕದ್ರಿಯ ಗೋರಕಪೀಠಕ್ಕೆ ನಿಯಮದಂತೆ ದ್ವಾದಶಾವರ್ಷಗಳ ಪರ್ಯಂತ ಪೀಠಾಧಿಪತಿಗಳಾಗಿ ಸೇವೆ ಸಲ್ಲಿಸಲು ವಾಡಿಕೆಯಂತೆ ತ್ರೈಂಬಕೇಶ್ವರದಲ್ಲಿ ದ್ವಾದಶಾ ವರ್ಷ ಗಳಿಗೊಮ್ಮೆ ನಾಥ ಸಂಪ್ರದಾಯವು ನಿಯಮದಂತೆ ನಡೆಯುವ ಕುಂಭಮೇಳ ಸಂದರ್ಭದಲ್ಲಿ ನೆರೆದ ಗೋರಕ ಪಂಗಡದ ಯತಿಗಳ ಸಮೂಹದಲ್ಲಿ ಒಬ್ಬರನ್ನು ಆಯ್ಕೆ ಮಾಡುತ್ತಾರೆ. ಹೀಗೆ ಆಯ್ಕೆ ಮಾಡಿದ ಯತಿಯನ್ನು ರಾಜ ಎಂಬ ಬಿರುದನ್ನು ಮತ್ತು ಅಧಿಕಾರಪತ್ರವನ್ನು ಹಾಗೂ ಪಾತ್ರ ದೇವತೆಯೊಡನೆ ನಾಗಚತುರ್ಥಿಯ ಶುಭದಿನದಂದು ತ್ರೈಂಬಕೇಶ್ವರದಿಂದ ಮೆರವಣಿಗೆಯೊಂದಿಗೆ ಕಳುಹಿಸಿಕೊಡುತ್ತಾರೆ.

ಹೀಗೆ ಹೊರಟ ನೂರಾರು ಜನರಿಂದ ಕೂಡಿದ ಕುಂಡಲಧಾರಿ ಯತಿಗಳ ಮೆರವಣಿಗೆ ನಿಯಮಬದ್ಧ ಕ್ಷೇತ್ರ ಗಳನ್ನು ಸಂದರ್ಶಿಸುತ್ತಾ ಅಳಿದುಳಿದಂತಹ ಮತ್ಸೇಂದ್ರ ಗೋರಕರಿಂದ ಪ್ರತಿಷ್ಠಾಪಿತವಾದ ಪುರಾತನ ಭೈರವಾಲಯ ಗಳಿಗೆ ನಿಯಮಬದ್ಧ ಪೂಜೆ ಸಲ್ಲಿಸುವ ಸಲುವಾಗಿಯೇ ನಾಥಯತಿಗಳನ್ನು ನೇಮಿಸುತ್ತಾ ಸುಮಾರು ೧೬೬೦ ಕಿ.ಮೀ. ದೂರವನ್ನು ೬ ತಿಂಗಳು ೧೨ ದಿವಸ ಪರ್ಯಂತ ಪಾದಯಾತ್ರೆಗಳಿಂದ ಪರ್ಯಾಟನೆ ಮಾಡುತ್ತಾ ಮಂಗಳೂರು ಕದ್ರಿ ಕ್ಷೇತ್ರಕ್ಕೆ ಮಹಾಶಿವರಾತ್ರಿಗಿಂತಲೂ ೧೨ ದಿವಸ ಮೊದಲು ಬಂದು ತಲುಪಬೇಕೆಂಬ ನಿಯಮಕ್ಕನುಗುಣವಾಗಿ ಬಂದು ತಲುಪುತ್ತಾರೆ.

ಕದ್ರಿಜೋಗಿಮಠದಲ್ಲಿ ಈಗ್ಗೇ ೧೨ ವರ್ಷಗಳ ಹಿಂದೆ ಬಂದು ಸೇವೆ ಸಲ್ಲಿಸುತ್ತಾ ಇದ್ದಂತಹ ರಾಜಗುರುಗಳ ಕೈಗೆ ಅಧಿಕಾರ ಹಸ್ತಾಂತರ ಪತ್ರ ತಲುಪಿಸಿ ಮಹಾಶಿವರಾತ್ರಿಯ ಶುಭದಿನದಂದು ಪೀಠಾರೋಹಣ ಮಾಡುತ್ತಾರೆ.

ನಿರ್ಗತ ಪೀಠಾಧಿಪತಿಗಳು ನಿಯಮದಂತೆ ಪುರಾತನ ಕಾಲದಲ್ಲಿ ಸಮುದ್ರ ಜಲಸಮಾಧಿಯಾಗುತ್ತಿದ್ದರಂತೆ. ಆದರೆ ಇತ್ತೀಚಿನ ಶತಮಾನಗಳಿಂದೀಚೆಗೆ ಸಾಂಕೇತಿಕವಾಗಿ ಸಮುದ್ರದಲ್ಲಿ ಮುಳುಗು ಹಾಕಿ ಯಾರ ಕಣ್ಣಿಗೂ ಕಾಣದಂತೆ ತಮ್ಮ ಮೂಲ ಸ್ವಸ್ಥಾನ ಮಠಕ್ಕೆ ಮರಳುತ್ತಾರೆ. ಆದರೆ ಇವರು ಇನ್ನು ಯಾವ ಕುಂಭಮೇಳದಲ್ಲಿ ಪಾಲ್ಗೊಳ್ಳುವಂತಿಲ್ಲ.

ಹೀಗೆ ಪೀಠಾರೋಹಣ ಮಾಡಿದ ಯತಿರಾಜರು ಇಲ್ಲಿಂದಲೇ ಪುತ್ತೂರು ತಾಲ್ಲೂಕು ಸುಳ್ಯದಲ್ಲಿರುವ ನಾಥ ಸಂಪ್ರದಾಯದ ಮಠಕ್ಕೆ ಬೇರೊಬ್ಬ ಯತಿಗಳನ್ನು ಭೈರವಾರಾಧನೆಗೆ ನೇಮಿಸುತ್ತಾರೆ.

ಈ ಕದ್ರಿಪೀಠದ ರಾಜಗುರುಗಳು ಮಹಾರಾಷ್ಟ್ರದ ನಾಸಿಕ್‌ನಿಂದ ವಿಟ್ಲ ಮಠದವರೆಗೆ ನೇಮಿಸಿದ ಎಲ್ಲಾ ಶಾಖಾ ಮಠದ ಯೋಗಿಗಳು ಕದ್ರಿಯ ಯೋಗಿಮಹಾರಾಜ ಎಂಬ ಬಿರುದಾಂಕಿತ ಯತಿಗಳಿಗೆ ವಾರ್ಷಿಕವಾಗಿ ನಿರ್ದಿಷ್ಟ ಕಾಣಿಕೆ ಯನ್ನು ಕೊಡುವ ವಾಡಿಕೆ ಇದೆ.

ಹೀಗೆ ಬಂದಂತ ಉತ್ತರ ದೇಶದ ಕಡೆಯವರಾದ ಆಗಿನ ಕಾಲದ ಪೀಠಾಧೀಶರಾದ ಯೋಗಿರಾಜರುಗಳಲ್ಲೊಬ್ಬರು ಲೋಕೇಶ್ವರನೇ ಮಂಜುನಾಥ ಎಂಬ ಅವರ ವಾಡಿಕೆಯ ನಂಬಿಕೆಯ ಮೇರೆಗೆ ತಮ್ಮ ಆಳ್ವಿಕೆಯಲ್ಲಿದ್ದ ಮಂಜುನಾಥನ ಲಿಂಗರೂಪವನ್ನು ತೆಗೆದು ದೇವಳದ ಪಕ್ಕದಲ್ಲಿರುವ ಕೊಳದಲ್ಲಿ ಜಲಸಮಾಧಿ ಮಾಡಿ, ಈಗ ದೇವಳದ ಬಲಭಾಗದಲ್ಲಿ ಇಟ್ಟಿರುವ SII VD ನಂ. ೧೯೧ ಪು.೮೭ ಎಂಬುದಾಗಿ ಪ್ರಾಚ್ಯ ಇಲಾಖೆಗೆ ಸೇರಿರುವ ಸುಂದರವಾದ ಅವಲೋಕಿತೇಶ್ವರ ಲೋಹದ ಪ್ರತಿಮೆಯನ್ನು ತುಳುನಾಡನ್ನು ಆಳುತ್ತಿದ್ದ ಆಲೂಪ ಅರಸನಿಂದ ನಿರ್ಮಾಣ ಮಾಡಿಸಿಕೊಂಡು ಮಂಜುನಾಥನ ಲಿಂಗವಿದ್ದಲ್ಲಿ ಪ್ರತಿಷ್ಠಾಪಿಸಿ ಪೂಜಾ ಕೈಂಕರ್ಯ ನಡೆಸಿದಂತೆ ತೋರುತ್ತದೆ.

ಈ ಲೋಕೇಶ್ವರ ಯಾನೆ ಅವಲೋಕಿತೇಶ್ವರನ ಪ್ರತಿಮೆಯ ನಿರ್ಮಾಣ ಮಾಡಿಸಿದಂತ ರಾಜ ಕುಂದವರ್ಮನು ಪ್ರತಿಮೆಯ ಪೀಠದಲ್ಲಿನ ಶಾಸನದಲ್ಲಿ ಬಾಲಚಂದ್ರ ಶಿಖಾಮಣಿ ಎಂಬಿತ್ಯಾದಿ ಈಶ್ವರ ಪಾದಾರವಿಂದಗಳಲ್ಲಿ ಭ್ರಮರ ನಂತಿರುವನು ಎಂದು ವರ್ಣಿಸಿರುವುದನ್ನು ಅವಲೋಕಿಸಿದರೆ ಈ ಕುಂದವರ್ಮ ಮಹಾರಾಜನು ಶಿವನ ಪರಮಭಕ್ತ ಎಂದಾಯಿತು. ಆದುದರಿಂದ ಇವನು ಯಾವುದೇ ಕಾರಣಕ್ಕೂ ಬುದ್ಧ ಸಂಬಂಧಿಯಾದ ವಿಗ್ರಹವನ್ನು ನಿರ್ಮಿಸಿ ಸರ್ವಥಾ ಪ್ರತಿಷ್ಠಾಪಿಸಿರಲಾರ. ಇದೂ ಅಲ್ಲದೆ ಸುಮಾರು ೧೦ನೇ ಶತಮಾನದಲ್ಲಿ ಪಶ್ಚಿಮ ಕರಾವಳಿಯ ನಾಡಿನಾದ್ಯಂತ ಯಾವ ಬುದ್ಧಶಾಖೆಗಳು ಜೀವಂತವಾಗಿರುವ ಬಗ್ಗೆ ಯಾವ ಕುರುಹೂ ಚರಿತ್ರೆಯಲ್ಲಿ ಇಲ್ಲಿಯವರೆಗೂ ಯಾವ ಸಂಶೋಧಕನಿಗೂ ಸಿಕ್ಕಿಲ್ಲ.

ಇನ್ನು ನಾವು ಪ್ರದಕ್ಷಿಣೆಯನ್ನು ಮುಂದುವರೆಸಿ ದೇವಾಲಯದ ದಕ್ಷಿಣ ದಿಕ್ಕಿಗೆ ಬಂದರೆ ದೇವಾಲಯದ ಹೊರಗೋಡೆಯಲ್ಲಿ ಗುಡಿಯಾಕಾರದ ಪ್ರದೇಶದಲ್ಲಿ ಮತ್ಸ್ಯೇಂದ್ರಕೌಲವೆಂಬ ತತ್ವ ಸಿದ್ಧಾಂತದ ಪ್ರವರ್ತಕ ಜಗತ್ಪ್ರಸಿದ್ಧ ಪಾಶುಪತಾಚಾರ್ಯ ಗೋರಕನಾಥನ ದೀಕ್ಷಾಗುರುಗಳು ಆದಂತಹ ನಾಥ ಸಂಪ್ರದಾಯದ ಆದ್ಯ ಪ್ರವರ್ತಕರಾದ ಮತ್ಸ್ಯೇಂದ್ರನಾಥನ ಆಸನಾರೂಢ ಧ್ಯಾನಾಸಕ್ತ ಸಹಜರೂಪದ ವಿಗ್ರಹವಿದೆ.

ಈ ವಿಗ್ರಹದ ಪೀಠದಲ್ಲಿರುವ ಮತ್ಸ್ಯದ (ಮೀನಿನ) ಲಾಂಛನವೂ ಸಂಶೋಧಕರಿಗೆ ಹಾಗೂ ಭಕ್ತರಿಗೆ ಮರೆಮಾಚಲು ಒಂದಲ್ಲ ಎರಡಲ್ಲಾ ಮೂರು ಗಣೇಶನ ವಿಗ್ರಹಗಳನ್ನು ಜೋಡಿಸಿಟ್ಟ ಪರಿಯನ್ನು ನೋಡಿ ಇಡೀ ಕ್ಷೇತ್ರದ ಚಾರಿತ್ರಿಕ ಸತ್ಯತೆಯನ್ನು ಮರೆಮಾಚುವಂತಹ ಹೇಯ ಪ್ರಯತ್ನದ ಕುಟಿಲತೆಯ ವಿಶ್ವರೂಪದ ಮೊದಲ ದರ್ಶನ ವಾದಂತಾಯಿತು.

ಮತ್ಸ್ಯೇಂದ್ರನಾಥ: ಇವನು ನಾಥ ಸಂಪ್ರದಾಯದ ಆದ್ಯ ಪ್ರವರ್ತಕ. ಭಾರತೀಯ ತತ್ವಶಾಸ್ತ್ರದ ಪ್ರಮುಖ ಮಗ್ಗಲಾಗಿರುವ ಮತ್ಸ್ಯೇಂದ್ರಕೌಲವೆಂದೇ ಪ್ರಖ್ಯಾತಗೊಂಡಿರುವಂತ ಕೌಲಸಿದ್ಧಾಂತದ ಪ್ರತಿಪಾದಕ. ಲಕುಲೀಶ ಪಾಶುಪತಾ ಚಾರ್ಯನೆಂದೇ ಪ್ರಖ್ಯಾತನಾದ ಗೋರಕನಾಥನ ದೀಕ್ಷಾಗುರು.

ಭಾರತದಲ್ಲಿ ತಂತ್ರಶಾಸ್ತ್ರಗಳ ವಿಕಾಸಕ್ಕೆ ಬಹುಮುಖ್ಯವಾದ ವಿವರಣವನ್ನು ಪ್ರಪ್ರಥಮವಾಗಿ ಒದಗಿಸಿಕೊಟ್ಟವನೇ ಮತ್ಸ್ಯೇಂದ್ರನಾಥನೆಂಬ ಯೋಗಿ.

ಇವನು ಒಬ್ಬ ಮಾನವ ಉಪದೇಶಕನಾಗಿದ್ದನೆಂದು, ನೇಪಾಳದ ರಾಜಭಂಡಾರದಲ್ಲಿ ಸುರಕ್ಷಿತವಾಗಿರುವಂತಹ ಹಸ್ತಪ್ರತಿಯ ರೂಪದಲ್ಲಿರುವ ಪಿಂಗಳಮತವೆಂಬ ತಾಂತ್ರಿಕ ತಾಡಾ ಗ್ರಂಥದಲ್ಲಿ ಉಲ್ಲೇಖವಿದೆ. (ಬಂಗಾಳ ಚರಿತಾ ಲೇ. ಪಿ.ಸಿ.ಬಾಗ್‌ಚಿ)

ಮಾಹಾತ್ರಮಂಜರಿ ಎಂಬ ಕಾಶ್ಮೀರೀ ಶೈವ ಪರಂಪರೆಯ ಗ್ರಂಥದಲ್ಲಿ ಮತ್ಸ್ಯೇಂದ್ರ ಮತ್ತು ಇವನ ಶಿಷ್ಯ ಗೋರಕನಾಥನ ಸಾಧನಾ ಉಲ್ಲೇಖದ ಸ್ಮರಣೆ ಇದೆ.

ಅಭಿನವಗುಪ್ತ ರಚಿಸಿರುವ ತಂತ್ರಲೋಕವೆಂಬ ಕೃತಿಯಲ್ಲಿಯೂ ಮತ್ಸ್ಯೇಂದ್ರ ಗೋರಕನನ್ನು ಸ್ಮರಿಸಿದ್ದಾನೆ.

ಮಹಾಕಾಲ ಯೋಗಸೂತ್ರ, ಕಲ್ಪದ್ರುಮ ತಂತ್ರ, ರಾಜಗುಹ್ಯತಂತ್ರ, ಭಾರದ್ವಜ ಸಂಹಿತೆ, ಪತಂಜಲಿ ಮುಂತಾದವರ ಕೋಶಗಳಲ್ಲಿ ಉಲ್ಲೇಖಗಳನ್ನು ಕಾಣುವ ನಾಥ ಸಂಪ್ರದಾಯವನ್ನು ಕೂರ್ಮಪುರಾಣವು ವೇದಗಳ ಗುಣಹೀನ ಆಚರಣೆಗಳೆಂದೂ ಹೀಗೆಳೆದಿದೆ. ಹೀಗೆಯೇ ವಾಯುಪುರಾಣವು ಅವೈದಿಕ ವರ್ಗಕ್ಕೆ ಸೇರಿದ್ದೆಂದು ಸಾರಿ ಬಹಿಷ್ಕರಿಸಿದೆ. ಹೀಗೆಯೇ ವರಹ ಪುರಾಣವೂ ಇನ್ನೂ ಬಹಳ ಕಟುವಾಗಿಯೇ ಟೀಕಿಸಿ ಹೀಗೆಳೆದು ಬಹಿಷ್ಕರಿಸುವ ಮೂಲಕ ನಾಥಸಂಪ್ರದಾಯದ ಆದ್ಯ ಪ್ರವರ್ತಕ ಮತ್ಸ್ಯೇಂದ್ರನಾಥನ ಇರುವನ್ನು ದೃಢೀಕರಿಸಿವೆ.

ಇವನ ಕಾಲಮಾನವನ್ನು ಕ್ರಿಸ್ತ ಶಕಾರಂಬದೆತ್ತರಕ್ಕೆ ಕೊಂಡುಹೋಗಲು ಇ.ಪಿ.ಇಂಡಿಕಾ ೪೦೫ರಿಂದ ೪೦೬ರ ವರೆಗಿನ ಪುಟಗಳಲ್ಲಿ ಉಲ್ಲೇಖಿಸಿರುವ ಇಂಡೋನೇಷ್ಯಾ ಮತ್ತು ಜಾವಾ ದ್ವೀಪದಲ್ಲಿನ ಎರಡು ಶಾಸನಗಳ ಆಧಾರರೀತ್ಯಾ.

WHT EHEAD CATALOGUE OF COINS IN THA PANJAB MUSEM, ಪುಟ ೧೮೩–೧೮೪ರಲ್ಲಿನ ಸುರಕ್ಷಿತ ವಾಗಿರುವ ಕ್ರಿ.ಶ. ಮೊದಲನೇ ಶತಮಾನದ ಕುಶಾನರ ವಂಶಸ್ಥನಾದ ಕಾನಿಷ್ಕನ ಆಳ್ವಿಕೆ ಕಾಲದ ನಾಣ್ಯದ ಮೇಲಿರುವ ಚಿಹ್ನೆಯ ಆಧಾರ (ಶ್ರೀ ಆರ್.ಸಿ. ಮಜುಂದಾರ್)

JOURNAL OF THE BOMBAY BRANCH OF THA ROYAL ASLATIC SOCIETY ZZII P.151 ರಲ್ಲಿನ ಉಲ್ಲೇಖದ ಆಧಾರ.

ARCHEOLOGICAL SURVER OF INDIA ANNUAL REPORT P.179 ರಲ್ಲಿನ ಉಲ್ಲೇಖ.

KRCM HINDOE JAYANESHL GERSCHIE DINS P.N. 88 ಫಾಹಿಯಾನ್ (ಕ್ರಿ.ಶ. ೩೯೪ರಿಂದ ೪೧೪)ರವರ ಉಲ್ಲೇಖದ ಕುರುಹುಗಳ ಆಧಾರರೀತ್ಯಾ ಇವರ ಕಾಲವನ್ನು ನಿಖರವಾಗಿ ಕ್ರಿಸ್ತಶಕಾರಂಭವೆಂದು ದೃಢಪಟ್ಟಿದೆ.

ಇವನ ಹುಟ್ಟು ಮತ್ತು ಬೆಳವಣಿಗೆಯ ಮೂಲದ ಬಗ್ಗೆ ಚರಿತ್ರೆಗೆ ಆಕಾರವಾಗಬಹುದಾದ ದಾಖಲೆಗಳು ಕಾಲಗತಿ

ಯಲ್ಲಿ ಮುಳುಗಿ ಹೋಗಿದೆ. ಆದುದರಿಂದ ಸಹಜವಾಗಿಯೇ ಎಲ್ಲಾ ಅತೀಂದ್ರಿಯ ಶಕ್ತಿಗಳ ಪ್ರತಿಪಾದಕ ಮಹಾಯೋಗಿಗಳ ಜೀವನಗಾಥೆಯ ಮೇಲೆ ರೂಪಿತವಾಗಿರುವಂತೆ ಸಹಜ ಪ್ರಕ್ರಿಯೆಯಂತೆಯೇ ಮತ್ಸ್ಯೇಂದ್ರನಾಥರ ಜನನದಾರಭ್ಯ ಜೀವನ ಪಥದ ಮೇಲೆಯೂ ಹಲವಾರು ಕಥನಗಳು ಜನಪದ ಮುಖ ದಲ್ಲಿ ರೂಪುಗೊಂಡು ಪ್ರಚಲಿತವಾಗಿದೆ.

ವಿದೇಶಿ ಚರಿತ್ರಕಾರ ಆಲ್-ಬುರಾನಿ ತನ್ನ ಕುತುಬ್-ಉಲ್-ಹಿಂದ್‌ನಲ್ಲಿ ಉಲ್ಲೇಖಿಸಿರುವಂತೆ ಭಾರತದಲ್ಲಿ ಚರಿತೆ ಕೇಳಿದರೆ ಪುರಾಣ ಹೇಳುತ್ತಾರೆ ಎಂಬ ಅನುಭವ ಯುಕ್ತಿಯಂತೆ ನಮ್ಮ ಜನನಾಡಿಯೂ ಪುರಾಣವೇ ಚರಿತ್ರೆ ಎಂದು ನಂಬುವ ವಾಡಿಕೆ ಮನೋಭೂಮಿಕೆಯಿಂದಾಗಿ ಮತ್ಸ್ಯೇಂದ್ರನಾಥ ಹುಟ್ಟಿನ ಮೇಲೆಯೂ ಪೂರಕವಾಗಿದೆ.

ಹಾಗೇ ನಾವು ಪ್ರದಕ್ಷಿಣೆಯನ್ನು ಮುಂದುವರೆಸಿ ದೇವಾಲಯದ ಹಿಂಬದಿ ಅಂದರೆ ಪಶ್ಚಿಮ ದಿಕ್ಕಿನ ಹೊರ ಗೋಡೆಯಲ್ಲಿ ಗುಡಿಯಾಕಾರದ ಪ್ರದೇಶದಲ್ಲಿ ನಾಥ ಸಂಪ್ರದಾಯದ ಅಗ್ರಮಾನ್ಯ ತಿಲಕಸ್ವರೂಪ ಗೋರಕನಾಥನ ವಿಗ್ರಹವಿದೆ.

ಈ ವಿಗ್ರಹವು ಗುಡಿಯಾಕಾರದ ಗೂಡಿಗಿಂತಲೂ ಎತ್ತರವಾದ ಅಂದರೆ ೫ ಅಡಿಗಳಷ್ಟು ಎತ್ತರದ ವಿಗ್ರಹ ವಾಗಿರುವುದರಿಂದ ಈ ಗೂಡಿನಲ್ಲಿದ್ದ ದಂಡಧಾರಿಯಾದ ಗೋರಕನಾಥನ ವಿಗ್ರಹವನ್ನು ಯಾವುದೋ ಚಾರಿತ್ರಿಕ ದಾಖಲೆಯನ್ನು ಮರೆಮಾಚುವ ಸಲುವಾಗಿ ಬದಲಿಸಿ ಹೊರಗೆಲ್ಲೋ ಇದ್ದ ಈ ಗೋರಕನಾಥನ ವಿಗ್ರಹವನ್ನು ತಂದು ಗೂಡಿನೊಳಗೆ ಸ್ಥಾಪಿಸಿಲು ಸ್ಥಳಾವಕಾಶ ಸಾಲದೆ ಗೂಡಿನ ಹೊರಗೆ ನಿಲ್ಲಿಸಿದಂತೆ ತೋರುತ್ತದೆ.

ಈ ಯುಗಪುರುಷ ಪಾಶುಪತಾಚಾರ್ಯನ ಕಾಲಮಾನ ಹಾಗೂ ಜೀವನ ಸಾಧನೆಯ ಬಗ್ಗೆ ಗೋರಕನಾಥ ಯಾನೆ ಲಕುಲೀಶನ ಕಾಲಮಾನದ ಐತಿಹಾಸಿಕ ಸಾಕ್ಷಾಧಾರಗಳು (ಇತಿಹಾಸ ದರ್ಶನ ಸಂಪುಟ ೨೬, ಪು.೬೨-೬೪, ಲೇಖಕ ಸಿದ್ದರಗಿರಿ ಚಂದ್ರೇಗೌಡ) ನೋಡಿ.

ಇನ್ನು ನಮ್ಮ ಪ್ರದರ್ಶನವನ್ನು ಮುಂದುವರಿಸಿ ದೇವಾಲಯದ ಗರ್ಭಗುಡಿಯ ಉತ್ತರಕ್ಕೆ ಬಂದರೆ ಗರ್ಭಗುಡಿಯ ಹೊರಗೋಡೆಯಲ್ಲಿರುವ ಗುಡಿಯಾಕಾರದ ಗೂಡಿನಲ್ಲಿ ಚತುರ್ಭುಜದಿಂದ ಭೂಷಿತನಾದ ದೈವೀಸ್ವರೂಪವು ಎಡಬಲ ಮುಂಗೈಗಳು ಅಭಯ ಮತ್ತು ವರದಹಸ್ತ ಮುದ್ರೆ ಯಲ್ಲೂ ಬಲಹಿಂಗೈಯಲ್ಲಿ ಜಪಸರವನ್ನು, ಎಡಹಿಂಗೈಯಲ್ಲಿ ಅಮೃತ ಕಲಶವನ್ನು ಹಿಡಿದಿರುವಂತಹ ಕರ್ಣಕುಂಡಲ ಧಾರಿಯು ನಿರಾಭರಣ ಭೂಷಿತವೂ ಜಟಾಮುಕುಟಧಾರಿ ಯಾದ ನಿರ್ವಾಲಂಕಾರದಿಂದ ಭೂಶಿತನೂ ಆದಂಥ ನಾಥಸಂಪ್ರದಾಯದ ಪಂಚಸಿದ್ದರಲ್ಲೊಬ್ಬರಾದ ಚೌರಂಗಿ ಸಿದ್ದರದ್ದೆಂದು ಕರೆಯಲ್ಪಡುವ ದೈವರೂಪಿ ವಿಗ್ರಹವಿದೆ.

ಚತುರ್ಬಾಹುಗಳಿಂದ ಭೂಷಿತವಾಗಿರುವಂತ ಇದು ಚೌರಂಗಿ ಸಿದ್ಧರನ್ನು ದೈವೀಕರಿಸಿದ ನಂತರದ ವಿಗ್ರಹ ವಿರಬಹುದು. ಈ ಚೌರಂಗಿನಾಥ ಮಹಾಸಿದ್ಧರನ್ನು ಪ್ರಖ್ಯಾತ ವಾದ ಸಬರ ತಂತ್ರದ ರಕ್ಷಾಕವಚದ ನವನಾಥ ಸ್ತುತಿಯಲ್ಲಿ ಹಾಗೂ ಕೆಲವು ಪ್ರಯೋಗಗಳಲ್ಲಿ ನವನಾಥ ಸ್ವರೂಪವನ್ನು ಈ ಪರಿಯಲ್ಲಿ ವಿವರಿಸಿದೆ: (೧) ಓಂಕಾರೋ ಆದಿನಾಥ – (ಅಪಾಂಶರೂಪ) ಅಂದರೆ ನಿರಾಕಾರ ಪರಬ್ರ್ಮ ಸ್ವರೂಪ (೨) ಉದಯನಾಥ ಪಾರ್ವತಿ – (ಪರಾಶಕ್ತಿಯ ಸ್ವರೂಪ) (೩) ಸತ್ಯನಾಥ್ ಬ್ರಹ್ಮ – (ಬ್ರಹ್ಮಸ್ವರೂಪ) (೪) ಸಂತೋಷ್ ನಾಥ್ ವಿಷ್ಣು – (ವಿಷ್ಣುಸ್ವರೂಪ) (೫) ಜ್ಞಾನ್ ಪರೂಪ್ ಸಿದ್ ಚೋರಂಗಿನಾಥ – (ಅಟಾರಾ ಬಾರ ವನಸ್ಪತೀಕ ಸ್ವರೂಪ) (೬) ಮಾಯಾರೂಪಿ ದಾದಾ ಮಚ್ಛೇಂದ್ರನಾಥ್ – (ಮಾಯಾ ರೂಪಿ ಸಕಲ ಮಂತ್ರತಂತ್ರ ಸಿದ್ಧ ಸ್ವರೂಪಿಗಳ ವಾದ) (೭) ಘಟೇ ಪಿಂಡೇ ನಿರಂತರೇ ಶ್ರೀ ಶಂಭೂ ಯತೀ ಗೋರಕನಾಥ್-(ಶಂಭೂ ಯತಿ ಸ್ವರೂಪ) ಎಂದು ಸ್ತುತೀಕರಿಸಿದೆ.

ಈ ಅಟಾರಾ ಬಾರ ವನಸ್ಪತೀ ಕ ಸ್ವರೂಪನಾದ ಈ ಜ್ಞಾನ್ ಫರೂಖ್ ಸಿದ್ದ ಚೌರಂಗಿನಾಥ್ ಮಹಾಸಿದ್ಧರನ್ನು ದೇಶದ ದಕ್ಷಿಣ ಪಥದಲ್ಲಿ ವೈದ್ಯನಾಥೇಶ್ವರ ಎಂದು ಉತ್ತರ ಪಥದಲ್ಲಿ ವೈದ್ಯನಾಥೇಶ್ವರನೆಂದು ದೇವಾಲಯಗಳಲ್ಲಿ ವಿಶೇಷ ವಾಗಿ ಲಿಂಗರೂಪದಲ್ಲಿ ದೈವೀಕರಿಸಿಕೊಂಡು ಆರಾಧಿಸುತ್ತಾರೆ.

೫೪ ಶಕ್ತಿಪೀಠಗಳಲ್ಲಿ ಒಂದಾದ ವೈದ್ಯನಾಥದಲ್ಲಿರುವ ದೇವೀ ಜಯದುರ್ಗಾ ದೇವಳದಲ್ಲಿ ದೇವಿಯ ಬಲಪಕ್ಕದಲ್ಲಿ ಕುಳಿತ ಭಂಗಿಯಲ್ಲಿ ಭೈರವ ವೈದ್ಯನಾಥನ ಸಣ್ಣ ವಿಗ್ರಹವಿದೆ.

ಈ ಭೈರವ ವೈದ್ಯನಾಥ್ ಸ್ವರೂಪವನ್ನು ಕರಾವಳಿಯ ಕನ್ನಡ ನಾಡಿನ ನಾಡವರು ಮತ್ತು ಬಿಲ್ಲವ ಜನಾಂಗ ದಾದಿಯಾಗಿ ಎಲ್ಲಾ ಮೂಲನಿವಾಸಿಗಳು ಭೈರವ ವೈದ್ಯನಾಥ ನನ್ನು ಮೂಲ ಚಾವಡಿಯ ದೈವ, ಮಾಗಡಿಯ ಚಾವಡಿಯ ದೈವ ಹಾಗೆ ಸೀಮೆಯ ಚಾವಡಿಯ ದೈವವೆಂಬ ಪ್ರಧಾನ ದೈವಸ್ಥಾನವನ್ನು ಕೊಟ್ಟು ನಿಯಮ ನಿಷ್ಠೆಯಿಂದ ಆರಾಧಿಸು ತ್ತಾರೆ. (ತುಳುವರ ಮೂಲತಾನ ಆದಿ ಆಲಡೆ ಪರಂಪರೆ ಮತ್ತು ಪರಿವರ್ತನೆ, ಲೇಖಕಿ ಡಾ. ಇಂದಿರಾ ಹೆಗ್ಗಡೆ).

ಈ ನಾಥ ಪರಂಪರೆಯ ಪಂಚಸಿದ್ಧರಲ್ಲೊಬ್ಬರಾದ ಅಟಾರಾ ಬಾರ್ ವನಸ್ಪತೀಕ ಸ್ವರೂಪನಾಥ ಜ್ಞಾನ ಫರೂಕ್ ಎಂಬ ವಿಶೇಷಣಗಳಿಂದ ಭೂಷಿತರಾದ ಚೋರಂಗಿನಾಥ

ಮಹಾಸಿದ್ಧರನ್ನೇ ಆಯುರ್ವೇದಾದಿ ರಸ ಸಿದ್ಧೌಷಧದ ಮೂಲಪುರುಷರೆಂದು. ಆ ಆಯುರ್ವೇದ ರಸಸಾರ ಸಾಧನೆಯ ಮುಖೇನ ಕಬ್ಬಿಣದಿಂದಾದಿಯಾಗಿ ಯಾವುದೇ ಲೋಹವನ್ನು ಚೂರ್ಣ ಮತ್ತು ಭಸ್ಮೀಕರಿಸುವ ಓಪಾದಿಯಲ್ಲಿಯೇ ಕಬ್ಬಿಣದಿಂದಾದಿಯಾಗಿ ಯಾವುದೇ ಲೋಹಗಳನ್ನು ಸಹ ಸುವರ್ಣಗೊಳಿಸುವ ವಿದ್ಯೆಯೂ ಸಹ ಈ ಜ್ಞಾನಫರೂಕ್ ಸಿದ್ಧ ಚೋರಂಗಿನಾಥ್ ಮಹಾಸಿದ್ದರಿಂದ ಶಿಷ್ಯರಿಗೆ ದಕ್ಕಿದ್ದಿತೆಂದು ಆಯುರ್ವೇದ ರಸಸಾರ ವಿದ್ಯೆಯನ್ನು ಕರಗತ ಮಾಡಿಕೊಂಡ ಸಿದ್ಧರುಗಳು ಮುಪ್ಪು ಮತ್ತು ರೋಗಗಳನ್ನು ನಿವಾರಿಸುವ ನೈಪುಣ್ಯತೆ ಗಳಿಸಿದರೆಂದು VIZING ARM ARM AND KASHMIR SERIES OF TEXTS AND STADIES ಎಂಬ ಗ್ರಂಥದಲ್ಲಿ ಆಧಾರ ಸಹಿತ ನಮೂದಿಸಿದೆ.

ಹೀಗೆಯೇ ಮುಂದುವರಿದು ನೋಡಿದರೆ ಚೌರಂಗಿ ಸಿದ್ಧರ ವಿಗ್ರಹವಿರುವ ಗೂಡಿನ ಸಮೀಪದಲ್ಲಿ ಚರಸ್ಥಿತಿಯಲ್ಲಿ ಇಟ್ಟಿರುವ ಎರಡು ಪಂಚಲೋಹದ ವಿಗ್ರಹಗಳಿವೆ. ಇದರಲ್ಲಿ ಒಂದು ಸುಮಾರು ೩ ಅಡಿ ಎತ್ತರದ ಜಠಾಮುಕುಟ ಚತುರ್ಬಾಹುಗಳಲ್ಲಿನ ವಿಗ್ರಹದ ದ್ವಿಬಾಹುಗಳ ಕರಗಳಲ್ಲಿ ಮುದ್ರೆಗಳನ್ನು ಸೂಚಿಸುತ್ತಾ ಜಠಾಮುಕುಟದಲ್ಲಿ ಧ್ಯಾನೀಬುದ್ಧನ ವಿಗ್ರಹದಿಂದ ಭೂಷಿತನಾಗಿ ವಜ್ರಾಯಾನಗಳಿಂದಾದಿಯಾಗಿ ಬೌದ್ಧಯಾನಗಳಲ್ಲಿ ಪೂಜಿಸಲ್ಪಡುವ ವಿಗ್ರಹವೆಂದು ಯಾವ ಸಂಶಯವೂ ಇಲ್ಲವೆಂದೂ ಹೇಳಬಹುದು. ಈ ವಿಗ್ರಹದ ಪೀಠದ ಸುತ್ತ ಭಕ್ತರ ಮನೆಯ ದೇವರ ಕೋಣೆಯಲ್ಲಿ ಸೇರಿಸಿಟ್ಟುಕೊಂಡು ಮನೆಯಲ್ಲಿ ಈ ಗುಜರಿ ವಸ್ತುಗಳನ್ನು ಇಟ್ಟುಕೊಳ್ಳಲಾಗದೆ ಹೊರಗಡೆ ಬೇಕಾಬಿಟ್ಟಿ ಬಿಸಾಡಲು ಮನಸ್ಸಿಲ್ಲದೆ ದೇವಾಲಯದಲ್ಲಿ ಇಟ್ಟುಹೋದ ದೇವರುಗಳ ರೂಪದಲ್ಲಿ ಗುಜರಿಯನ್ನು ಸುತ್ತ ನಾಶಿಪಾಕಿ ಸಂಶೋಧನೆಗೆ ತೊಡಕನ್ನುಂಟು ಮಾಡಿದ್ದಾರೆ.

ಇದರ ಪಕ್ಕದಲ್ಲಿರುವ ವಿಗ್ರಹವು ಮೇಲ್ನೋಟಕ್ಕೆ ಗೌತಮ ಬುದ್ಧನ ಮೂರ್ತಿಸ್ವರೂಪವನ್ನು ಹೋಲುವ ಜಟಾಮುಕುಟ ಧಾರಿಯಾದ ಸುಮಾರು ೩ ಅಡಿ ಎತ್ತರದ ಪದ್ಮಾಸನ ರೂಢನಾಗಿ ಎರಡು ಕರಗಳಲ್ಲಿ ವ್ಯಾಖ್ಯಾನಮುದ್ರೆಯನ್ನು ಪ್ರದರ್ಶಿಸುತ್ತ ಯಜ್ಞೋಪವೀತವನ್ನು ಧಾರಣೆ ಮಾಡಿಕೊಂಡು ಪಾಣಿಪೀಠದ ಮುಂಭಾಗದಲ್ಲಿ ಮೂರು ಗರುಡರೂಪದ ಉಬ್ಬುಚಿತ್ರವಿರುವ ಮೂರ್ತಿಯಿದೆ. ಇದು ಗೌತಮ ಬುದ್ಧನ ಶಿಲ್ಪವಂತೂ ಅಲ್ಲ. ಕಾರಣ ಬುದ್ಧನ ಯಾವುದೇ ಮೂರ್ತಿ ಶಿಲ್ಪವಲ್ಲೂ ಯಜ್ಞೋಪವೀತದ ಗುರುತಿಲ್ಲ ಹಾಗೇ ಪಾಣಿಪೀಠದಲ್ಲಿ ಗರುಡನ ಚಿಹ್ನೆಗಳಿರಲು ಸಾಧ್ಯವೇ ಇಲ್ಲ. ಆದುದರಿಂದ ಇದು ಪಂಚಧ್ಯಾನಿಬುದ್ಧರಲ್ಲೊಬ್ಬರ ಶಿಲ್ಪವಿರಬಹುದು. ಈ ವಿಗ್ರಹದ ಬಗ್ಗೆಯೂ ಸಹ ಇನ್ನೂ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

ಮಂಜುನಾಥೇಶ್ವರ: ಮಂಜುನಾಥನೆಂಬ ಹೆಸರು ಈಶ್ವರ ಸಹಸ್ರನಾಮಾವಳಿಯ ಪಟ್ಟಿಯಲ್ಲಿ ಉಲ್ಲೇಖಿಪಿಲ್ಲ. ಹಾಗೇ ಶಿವನಿಗೇನು ಈ ಹೆಸರನ್ನು ಸನಾತನ ಹಿಂದೂ ಮತ್ತು ಜೈನ ಧರ್ಮದ ಯಾವುದೇ ದೇವತೆಗಳಿಗೆ ಉಲ್ಲೇಖ ಮಾಡಿರುವುದು ಯಾವ ಕೋಶದಲ್ಲಿಯೂ ಕಾಣುವುದಿಲ್ಲ. ಆದುದರಿಂದ ಪೌರಾಣಿಕ ದೇವತೆಯಲ್ಲ.

ಆದರೆ ಬುದ್ಧಗ್ರಂಥಗಳಾದ ಮಂಜುಶ್ರೀಕಲ್ಪ ಮತ್ತು ಗುಹ್ಯಸಮಾಜ ತಂತ್ರ ಹಾಗೂ ನೇಪಾಳದ ಅಮೃತಾನಂದರ ಕಲ್ಯಾಣ ಪಂಚವಿಂಶತಿಕ ಎಂಬ ಸಂಸ್ಕೃತ ಸ್ತೋತ್ರದ ೨೧ನೇ ಶಗ್ದರೆಯಲ್ಲಿ ಪಂಚಬೋಧಿಸತ್ವರಲ್ಲಿ ಒಬ್ಬನಾದ ಅವಲೋಕಿತೇಶ್ವರ ಬೋದಿಸತ್ವನಿಗೆ ಲೋಕೇಶ್ವರ, ಮಂಜುನಾಥೇಶ್ವರ, ಮಂಜುಘೋಷ, ಮಂಜೇಶ ಮತ್ತು ಮಂಜುಶ್ರೀ ಎಂಬ ಹೆಸರಿರುವುದನ್ನು ಉಲ್ಲೇಖಿಸಿರುವುದರಿಂದ ಇವನು ಬುದ್ಧಯಾನಗಳಲ್ಲಿ ಕಂಡುಬರುವಂತಹ ಧಾರ್ಮಿಕ ಮಹಾಪುರುಷ ಎಂಬುದರಲ್ಲಿ ಎರಡನೇ ಮಾತಿಲ್ಲ.

ಕದ್ರಿಯ ಮಂಜುನಾಥ ದೇವಳದಲ್ಲಿಯ ದೇವಸಾನಿಧ್ಯಕ್ಕೆ ಕದ್ರಿಯಲ್ಲಿಯೇ ಇರುವ ಒಂದು ಶಾಸನದಲ್ಲಿ ಮಂಜೀನಾಥ ದೇವರು ಎಂದು ಇನ್ನೊಂದರಲ್ಲಿ ಮಂಜೇಶ್ವರದೇವರು ಎಂಬ ಹೆಸರಿನ ಉಲ್ಲೇಖವಿದೆ. SII VII.NO.221 PAGE NO.111.

ಈ ಮೇಲ್ಕಂಡ ಶಾಸನಾಧಾರ ರೀತ್ಯ ಕದ್ರಿ ದೇವಳದಲ್ಲಿರುವ ದೇವಸಾನಿಧ್ಯಕ್ಕೆ ಮಂಜಿನಾಥ, ಮಂಜೇಶ್ವರ, ಮಂಜುನಾಥೇಶ್ವರ ಎಂಬ ಹೆಸರುಗಳಿಂದ ಕರೆಯಲ್ಪಡುತ್ತವೆ ಎಂದಂತಾಯಿತು. ಈ ದೇವಾಲಯದ ಜೀರ್ಣೋದ್ಧಾರವು (ಪುನನಿರ್ಮಾಣ) ಸುಮಾರು ೯-೧೦ನೇ ಶತಮಾನದಷ್ಟು ಹಿಂದೇ ಆದಂತೆ ತೋರುತ್ತದೆ. ಇನ್ಯಾವುದೇ ಹೆಚ್ಚಿನ ಸಂಶೋಧನೆಗೆ ಒಳಪ್ರವೇಶಿಸಲು ಅವಕಾಶ ಇಲ್ಲ. ಹಾಗೆಯೇ ದೇವಳದ ಸುತ್ತ ಭದ್ರವಾದ ಮರದ ಬೇಲಿಯನ್ನು ಹಾಕಿರುವುದರಿಂದ ಇಣಕಿ ನೋಡಲು ಸಾಧ್ಯವಾಗುವುದಿಲ್ಲ.

ಮಂಜುನಾಥ ದೇವಾಲಯದ ಉತ್ಸವಮೂರ್ತಿ: ದೇವಾಲಯದಲ್ಲಿ ಈಗ ಎರಡು ಉತ್ಸವಮೂರ್ತಿ ಇದ್ದು ಇದನ್ನು ಸ್ಥಳೀಯವಾಗಿ ಬಲಿವಿಗ್ರಹವೆಂದು ಸಹ ಸಂಬೋಧಿಸಿ ಕರೆಯುತ್ತಾರೆ. ಇದರಲ್ಲಿ ಒಂದನ್ನು ದೀಪಾವಳಿಯ ನಂತರ ಪ್ರತಿದಿನ ಹೊರಗೆ ಹೊರಡಿಸಿ ದೇವಸ್ಥಾನದ ಸುತ್ತ ಭಕ್ತರಿಗೆ ದರ್ಶನ ಕೊಡುವ ವಿಗ್ರಹ. ಇನ್ನೊಂದು ಪುರಾತನವಾದ ಬಂಗಾರದ ಉತ್ಸವಮೂರ್ತಿ. ಈ ವಿಗ್ರಹವನ್ನು ಪ್ರತಿವರ್ಷದ ಜನವರಿ ತಿಂಗಳಿನಲ್ಲಿ ಮಕರಸಂಕ್ರಾಂತಿಯ ದಿನದಿಂದ ೮ ದಿವಸಗಳ ಪರ್ಯಂತ ನಡೆಯುವ ಜಾತ್ರೆಯಲ್ಲಿ ರಥೋತ್ಸವದ ದಿನದಂದು ಬ್ರಹ್ಮ ರಥದಲ್ಲಿ ಕುಳ್ಳಿರಿಸಿಕೊಂಡು ರಥವನ್ನು ಎಳೆದು ಸಂತೋಷದಿಂದ ವಿಜೃಂಭಿಸುವ ವಿಗ್ರಹ.



ಗೋರಕ್ಷನಾಥ

ಈ ಪುರಾತನವಾದ ಚಿನ್ನದ ವಿಗ್ರಹವು ಸುಮಾರು ೧೦ ಇಂಚು ಎತ್ತರದ ಚತುರ್ಬಾಹುಗಳಿಂದ ಭೂಷಿತವಾಗಿದೆ. ಎಡ-ಬಲ ಮುಂಗೈಗಳು ವರದ, ಅಭಯಮುದ್ರೆಯನ್ನು, ಬಲಹಿಂಗೈ ಅಕ್ಷಯಮಾಲೆಯನ್ನು, ಎಡಹಿಂಗೈ ಅಮೃತ ಕಲಶವನ್ನು ಧಾರಣೆ ಮಾಡಿಕೊಂಡಿರುವುದಲ್ಲದೆ ಜಠಾಮುಕುಟದಲ್ಲಿ ಧ್ಯಾನಿಬುದ್ಧನ ಚಿತ್ರವಿದೆ. ಇದು ಇತರೆ ಸದಾಶಿವನ ಬಿಂಬದಂತಿಲ್ಲ. ಹಾಗೆಯೇ ದೇವಳದಲ್ಲಿರುವ ಲೋಕೇಶ್ವರ-ಅವಲೋಕಿತೇಶ್ವ ಬುದ್ಧನ ಪ್ರತಿಮೆಯಂತೆಯೂ ಇಲ್ಲ.



ಚೌರಂಗಿನಾಥ

ವಿಶೇಷವೆಂದರೆ ಈ ಪುರಾತನ ಚಿನ್ನದ ಉತ್ಸವ ಮೂರ್ತಿಗೂ ಹಾಗೆಯೇ ದೇವಾಲಯದ ಉತ್ತರದಿಕ್ಕಿನ ಹೊರಮೈ ಗೋಡೆಯ ಗುಡಿಯೋಪಾದಿಯ ಗೂಡಿನಲ್ಲಿರುವ ಚೌರಂಗಿ ಸಿದ್ದರೆಂದು ವಾಡಿಕೆಯಂತೆ ಕರೆಯುವ ವಿಗ್ರಹಕ್ಕೂ ಸಂಪೂರ್ಣ ಹೋಲಿಕೆಯಿದೆ. ಈ ಎರಡೂ ವಿಗ್ರಹಗಳ ಎಡಬಲ ಮುಂಗೈಗಳು ವರದ ಮತ್ತು ಅಭಯಮುದ್ರೆಯಿಂದ ಭೂಷಿತವಾಗಿದೆ. ಹಾಗೆಯೇ ಎರಡು ವಿಗ್ರಹಗಳ ಬಲ ಹಿಂಗೈಗಳಲ್ಲಿ ಅಕ್ಷಯ ಮಾಲೆಗಳಿವೆ. ಹಾಗೆಯೇ ಎರಡು ವಿಗ್ರಹ ಗಳ ಎಡಹಿಂಗೈಗಳಲ್ಲಿಯೂ ಅಮೃತ ಕಲಶವಿದೆ. ಎರಡು ವಿಗ್ರಹಗಳು ಕುಳಿತ ಭಂಗಿಯಲ್ಲಿಯೇ ಇವೆ. ಎರಡು ವಿಗ್ರಹದ ಶಿರೋಭಾಗದಲ್ಲಿ ನಾಗಹೆಡೆಯಿಂದ ಭೂಷಿತವಾಗಿದೆ. ಒಂದೇ ಒಂದು ವ್ಯತ್ಯಾಸವೆಂದರೆ ಉತ್ಸವಮೂರ್ತಿ ಚಿನ್ನದ ೧೦ ಇಂಚು ಎತ್ತರದ ಚಿಕ್ಕ ಮೂರ್ತಿ. ಹೊರಮೈ ಗೋಡೆಯ ಗೂಡಿನಲ್ಲಿರುವ ಚೋರಂಗಿನಾಥ ಸಿದ್ದರದ್ದೆನ್ನುವ ವಿಗ್ರಹವು ಸುಮಾರು ೩ ಅಡಿ ಎತ್ತರದ ದೊಡ್ಡ ಶಿಲಾವಿಗ್ರಹ, ಇಷ್ಟು ಮಾತ್ರ ವ್ಯತ್ಯಾಸವಿದೆ. ಉಳಿದ ಎಲ್ಲಾ ವಿಷಯದಲ್ಲೂ ಸ್ವಾಮ್ಯ ವಿರುವುದರಿಂದ ಇನ್ನು ಹೆಚ್ಚಿನ ಸಂಶೋಧನೆ ಅಗತ್ಯವಿದೆ.

ಮತ್ಸೇಂದ್ರ-ಅವಲೋಕಿತೇಶ್ವರ-ಮಂಜುನಾಥೇಶ್ವರ ಇವರುಗಳ ಸಮೀಕರಣ

ಮಹಾಯಾನ, ವಜ್ರಾಯಾನ ಮುಂತಾದ ಬುದ್ಧಾನುಯಾನಗಳ ಧಾರ್ಮಿಕ ನಂಬಿಕೆಯ ಆಧಾರರೀತ್ಯಾ ನಾಥ ಸಂಪ್ರದಾಯದ ಆದ್ಯಪ್ರವರ್ತಕ ಮತ್ಸೇಂದ್ರನಾಥನನ್ನು ಬೋಧಿಸತ್ವನ ನಾಲ್ಕನೇ ಅವತಾರವಾದ ಅವಲೋಕಿತೇಶ್ವರ ಪದ್ಮಪಾಣಿ ಬುದ್ದನೊಂದಿಗೆ ಸಮೀಕರಿಸಿರುವರು.

ಈ ಸಮೀಕರಣದ ಚಾರಿತ್ರಿಕ ಆಕಾರಕ್ಕೆ ಹಿಮೋತ್ಪರ್ವತದ ತಪ್ಪಲಿನ ನೇಪಾಳ ದೇಶದಲ್ಲಿ ಪ್ರತಿ ವರ್ಷವೂ ಚೈತ್ರಮಾಸದ ಪ್ರಥಮದಿನದಂದು ನಡೆಯುವ ಮತ್ಸೇಂದ್ರಜಾತ್ರೆಯನ್ನು ಬುದ್ಧ ಜನಸಮೂಹ ಮತ್ತು ಹಿಂದು ಸಮೂಹಗಳು ಒಟ್ಟಿಗೆ ಸೇರಿ ಮತ್ಸೇಂದ್ರನಾಥನ ಪ್ರತಿಮೆಗೆ ಅಭಿಷೇಕಾದಿಗಳನ್ನು ಮಾಡಿ ಪೂಜಿಸಿ ಜಾತ್ರಾಮಹೋತ್ಸವವನ್ನು ವಿಜೃಂಭಣೆಯಿಂದ ಧಾರ್ಮಿಕ ಹಬ್ಬವಾಗಿ ಇಂದಿಗೂ ಆಚರಿಸುತ್ತಾ ಬಂದಿರುವುದು ಸಾಕ್ಷಿಯಾಗಿದೆ (WRITH HISTORY OF NAPAL, page No.24).

ಇದೇ ರೀತಿಯ ಧಾರ್ಮಿಕ ಆಚರಣೆಯನ್ನು ಚೀನಾ ದೇಶದ ಟಿಬೆಟ್ ಪ್ರಾಂತ್ಯದಲ್ಲಿಯೂ ಕಾಣಬಹುದು. ಅಲ್ಲಿಯೂ ಕೂಡ ಬೋಧಿಸತ್ವದ ನಾಲ್ಕನೇ ಅವತಾರವೆಂದು ನಂಬಿರುವ ಅವಲೋಕಿತೇಶ್ವರ ಪದ್ಮಪಾಣಿ ಬುದ್ಧನೊಂದಿಗೆ ಮತ್ಸೇಂದ್ರನಾಥನ ಸಮೀಕರಿಸಿ ಪೂಜಿಸಿ ಜಾತ್ರಾಮಹೋತ್ಸವವನ್ನು ಆಚರಿಸುತ್ತಾರೆ (BELL HISTORY OF TEBET).

ಮೇಲಿನ ಬುದ್ಧಧರ್ಮದ ವಜ್ರಯಾನ, ಮಂತ್ರಯಾನಾದಿ ಗ್ರಂಥಗಳಲ್ಲಿ ಮಂಜುಶ್ರೀಕಲ್ಪ ಮತ್ತು ಗುಹ್ಯ ತಂತ್ರಾಧಾರ ಹಾಗೂ ಅಮೃತಾನಂದ ಕಲ್ಯಾಣ ಪಂಚಮಿಂಕ್ಷಾಲಿಕ ಎಂಬ ಸಂಸ್ಕೃತ ಬುದ್ಧಧರ್ಮ ಗ್ರಂಥದ ಆಧಾರವನ್ನು ಮನ್ನಿಸಿ ಲೋಕೇಶ್ವರನೇ ಮಂಜುನಾಥನೆಂದು ನಂಬಿದಂತಹ ಆಚರಣಾ ಜನನಾಡಿಯನ್ನು ಮನ್ನಿಸಿ ಮತ್ಸೇಂದ್ರನಾಥನೇ ಅವಲೋಕಿತೇಶ್ವರ. ಈ ಲೋಕೇಶ್ವರನೇ ಮಂಜುನಾಥ ಎಂಬುದನ್ನು ಯಾವ ಸಂಶಯವೂ ಇಲ್ಲದೆ ದೃಢಪಡುತ್ತದೆ.

೮೦

ಶ್ರೀ ಸುರೇಂದ್ರತೀರ್ಥರ ಮಠ ಮತ್ತು ಬೃಂದಾವನ ಹಂಪೆಯಲ್ಲಿ ಇತ್ತೇ?!

ಯೋಗೀಂದ್ರಕುಮಾರ*

ಭಾರತ ದೇಶವು ಸಾವಿರಾರು ಸಾಧು ಸಂತರಿಗೆ ಜನ್ಮ ನೀಡಿದೆ. ಇದರಿಂದಾಗಿ ಭಾರತವು ಭೂಮಂಡಲಕ್ಕೆ ಗುರುವಾಗಿ ಗುರುತಿಸಿಕೊಂಡಿತ್ತು ಎಂದು ಇತಿಹಾಸದಿಂದ ತಿಳಿದು ಬರುತ್ತದೆ.

ಇದೇ ಸಾಧು ಸಂತರ ಸಾಲಿನಲ್ಲಿ ಬಂದಂತವರು ಶ್ರೀಮಧ್ವಾಚಾರ್ಯರು ಇವರ ಪರಂಪರೆಯು ಇಂದಿಗು ಅವಿಚ್ಛನ್ನವಾಗಿ ನಡೆದುಕೊಂಡು ಬರುತ್ತಿದೆ. ಈ ಪರಂಪರೆಯು ಹಲವಾರು ಹೆಸರಿನಿಂದ ಪ್ರಸಿದ್ದವಾಗಿದೆ. ಅದೆ ದಕ್ಷಿಣಾದಿಮಠ, ರಾಘವೇಂದ್ರಸ್ವಾಮಿ ಮಠ, ಸುಮತೀಂದ್ರಮಠ, ವಿಜಯೀಂದ್ರ ಮಠ, ನಂಜನಗೂಡುಮಠ.

ಶ್ರೀ ರಾಘವೇಂದ್ರಸ್ವಾಮಿಗಳವರ ಮಠದ ಪರಂಪರೆ ಯಲ್ಲಿ ಬಂದಂತಹ ಯತಿಗಳಾದ ಶ್ರೀ ಸುರೇಂದ್ರತೀರ್ಥರ ಮಠದ ಬಗ್ಗೆ ಹಾಗೂ ಬೃಂದಾವನದ ಬಗ್ಗೆ ಕರ್ನಾಟಕದ ಇತಿಹಾಸಕ್ಕೆ ಹಾಗು ಪುಣ್ಯಕ್ಷೇತ್ರಕ್ಕೆ ಪ್ರಸಿದ್ದವಾದ ಹಂಪಿಯಲ್ಲಿ ಸಾಕಷ್ಟು ಕುರುಹುಗಳಿವೆ. ಸುರೇಂದ್ರತೀರ್ಥರ ಮಠದ ಬಗ್ಗೆ ಸಾಕಷ್ಟು ದಾಖಲೆ ಸಿಕ್ಕರೂ ಬೃಂದಾವನದ ಬಗ್ಗೆ ಸಿಗುವುದಿಲ್ಲ. ಸುರೇಂದ್ರತೀರ್ಥರ ಮಠದ ಬಗ್ಗೆ ತಾಮ್ರಶಾಸನ ಹಾಗೂ ಇನ್ನಿತರ ಆಕರಗಳನ್ನು ಆಧಾರವಾಗಿ ಇಟ್ಟುಕೊಂಡು ಈ ಪ್ರಬಂಧವನ್ನು ಮಂಡಿಸಲಾಗಿದೆ. ಹಾಗೂ ಬೃಂದಾವನದ ಬಗ್ಗೆ ಕ್ಷೇತ್ರಕಾರ್ಯ ಕೈಗೊಂಡು ಮಾಹಿತಿ ಸಂಗ್ರಹಿಸಲಾಗಿದೆ.

ಸುರೇಂದ್ರತೀರ್ಥರ ಇತಿಹಾಸ ಮತ್ತು ಕಾಲ

ಸುರೇಂದ್ರತೀರ್ಥರ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಸುರೇಂದ್ರತೀರ್ಥರ ಪೂರ್ವಾಶ್ರಮ ಹೆಸರು ವೆಂಕಣ್ಣ ಕೃಷ್ಣಾಚಾರ್ಯರು. ಇವರು ಶ್ರೀ ರಘುನಂದನತೀರ್ಥರಲ್ಲಿ ಆಶ್ರಮ ಪಡೆದರು. ಇವರ ಪೀಠಾಧಿಪತಿಯ ಕಾಲ ಕ್ರಿ.ಶ. ೧೫೦೪ರಿಂದ ೧೫೭೫. ಸುಮಾರು ೭೦ ವರುಷಗಳ ಕಾಲ ಸಂಸ್ಥಾನವನ್ನು ಆಳಿದರು.[೧] ಇವರ ಪೀಠದ ಕಾಲ ಹಾಗೂ ಜೀವಿತಾವಧಿ ಕಾಲ ಸ್ವಲ್ಪ ಮಟ್ಟಿಗೆ ಸಂಶಯಗಳಿವೆ.

ಸುರೇಂದ್ರತೀರ್ಥರ ಜೀವನದಲ್ಲಿ ಮುಖ್ಯ ಘಟನೆಗಳು ಹೀಗಿವೆ

೧. ಸುರೇಂದ್ರತೀರ್ಥರ ಜನನ – ಕ್ರಿ.ಶ.೧೪೭೭

೨. ಸನ್ಯಾಸ ಸ್ವೀಕಾರ – ಕ್ರಿ.ಶ.೧೫೦೪

೩. ವಿಜಯನಗರಕ್ಕೆ ಪ್ರಥಮ ಭೇಟಿ – ೧೫೧೩

೪. ವಿಜಯನಗರಕ್ಕೆ ಎರಡನೇ ಭಾರಿ ಭೇಟಿ ಮಾಡಿ ಶ್ರೀ ವಿಷ್ಣುತೀರ್ಥರನ್ನು ಸ್ವೀಕಾರ ಮಾಡಿದ್ದು ಕ್ರಿ.ಶ. ೧೫೩೦.

೫. ಶ್ರೀ ಸುಧೀಂದ್ರರಿಗೆ ಆಶ್ರಮ ಪ್ರಧಾನ ಹಾಗೂ ನಿರ್ಯಾಣ ಕ್ರಿ.ಶ. ೧೫೭೫[೨] ಸದ್ಯದ ಪರಿಸ್ಥಿತಿಯಲ್ಲಿ ಈ ಕಾಲವನ್ನು ಅವಲಂಬಿತವಾಗಬೇಕಾಗಿದೆ. ಆದರೆ ಶ್ರೀ ಸುರೇಂದ್ರ ತೀರ್ಥರ ಜೀವಿತದ ವರ್ಷದ ಮೇಲೆ ೧ ಶಾಸನ ಬೆಳಕು ಚೆಲ್ಲುತ್ತದೆ.

ಹಂಪಿಯಲ್ಲಿ ಸುರೇಂದ್ರತೀರ್ಥರ ಮಠ

ಹಂಪಿಯಲ್ಲಿ ಸುರೇಂದ್ರತೀರ್ಥರ ಮಠ ಇತ್ತು ಎಂಬು ದಕ್ಕೆ ಹಲವಾರು ದಾಖಲೆಗಳಿವೆ ಎನ್ನಬಹುದು. ಮೊದಲಿಗೆ ಕಲ್ಲಿನ ಕಟ್ಟಡ ವಿನ್ಯಾಸದ ಬಗ್ಗೆ ಹೇಳುವುದಾದರೆ, ದೇವಾಲಯದ ಯಾವುದೇ ಲಕ್ಷಣಗಳಿಲ್ಲ. ಈ ಮಠವು ತುಂಗಭದ್ರ ನದಿಯ ಹಾಗೂ ವಿಠ್ಠಲನ ದೇವಾಲಯದ ಮಧ್ಯದಲ್ಲಿದೆ. ಇದರ ಮುಖ್ಯದ್ವಾರವು ತುಂಗಭದ್ರ ನದಿಗೆ ಮುಖ ಮಾಡಿದೆ. ಮುಖ್ಯ ದ್ವಾರದ ಮೂಲಕ ಪ್ರವೇಶ ಮಾಡಿದರೆ ಮೊದಲು ಸಿಗುವುದು ಒಂದು ಪುಟ್ಟ ಗುಡಿ. ಇದು ಕಲ್ಲಿನ ಚಪ್ಪಡಿಯಿಂದ ಕೂಡಿದ್ದು, ಗುಡಿಯ ದ್ವಾರಕ್ಕೆ ಅಕ್ಕಪಕ್ಕ ಜಯವಿಜಯರ ಉಬ್ಬು ಶಿಲ್ಪವಿದೆ. ದ್ವಾರದ ಮೇಲೆ ಗಜಲಕ್ಷ್ಮೀಯ ಶಿಲ್ಪವಿದೆ. ಈ ಗುಡಿಯು ವೈಷ್ಣವರಿಗೆ ಸಂಬಂಧಪಟ್ಟದೆಂದು ಹೇಳಬಹುದು. ಈ ಗುಡಿಯ ಬಲಭಾಗಕ್ಕೆ ಮುಂದೆ ಹೋದರೆ ಅಲ್ಲಿ ಬಾಗಿಲಿಲ್ಲದ ತೆರೆದ ಕೋಣೆ ಇದೆ. ಇದರ ಸುತ್ತಲು ಗಾಳಿಯಾಡಲು ಜಾಲರಂಧ್ರ ಗಳಿವೆ. ಈ ಕೋಣೆಯ ಮಧ್ಯದಲ್ಲಿ ೨ ೩ ಅಡಿ ಎತ್ತರದ

* # ೯೯೯, ದೊಡ್ಡಮನೆ, ವಕ್ಕಲಗೇರಿ, ನಂಜನಗೂಡು.

ಕಲ್ಲಿನ ಕಟ್ಟೆ ಇದೆ. ಅದರೆ ಮಧ್ಯ ಮಾತ್ರ ಮಣ್ಣಿನಿಂದ ಕೂಡಿದೆ. ಜಗುಲಿಯ ಮೇಲೆ ನಾಲ್ಕು ಕಂಬದ ಮಂಟಪವಿದೆ. ಕಂಬದ ಮೇಲೆ ಕಾಳಿಂಗಮರ್ಧನ ಕೃಷ್ಣ, ನರಸಿಂಹ ಹಾಗೂ ಸಿಂಹದ ಚಿತ್ರವಿದೆ. ಪಶ್ಚಿಮದ ಕಡೆಗೆ ಬಾಗಲುವಾಡವಿದೆ. ಈ ಒಂದು ಪುಟ್ಟಗುಡಿ ಹಾಗೂ ಒಂದು ಕಲ್ಲಿನ ಕೋಣೆಯನ್ನು ಒಳಗೊಂಡಂತೆ ಸುತ್ತಲು ವಿಸ್ತಾರವಾದ ಹಲವು ಕಂಬಗಳಿಂದ ಕೂಡಿದ ಹಾಗೂ ಜಗುಲಿಯಿಂದ ಕೂಡಿದ ಪ್ರಕಾರವಿದೆ. ಕಂಬಗಳ ಮೇಲೆ ಬಿಸಿಲು, ಮಳೆಯ ರಕ್ಷಣೆಗೆ ಚಪ್ಪಡಿಯನ್ನು ಹಾಕಲಾಗಿದೆ. ಕಲ್ಲಿನ ಕೋಣೆಯ ಎದುರಿನ ಕಂಬಗಳ ಸಾಲಿನಲ್ಲಿ ಒಂದು ಕಂಬದ ಮೇಲೆ ಒಬ್ಬ ಯತಿ ವ್ಯಾಸಪೀಠ ಸಹಿತ ಎಡಗೈಯಲ್ಲಿ ತಾಳೆಪತ್ರ ಹಿಡಿದ ಚಿತ್ರವಿದೆ. ಪಕ್ಕದಲ್ಲಿ ಒಬ್ಬ ಭಕ್ತನ ಉಬ್ಬುಶಿಲ್ಪವಿದೆ. ಎಡಭಾಗದ ಮತ್ತೊಂದು ಕಂಬದಲ್ಲಿ ಇನ್ನೊಬ್ಬ ಯತಿ ಕೈ ಮುಗಿದು ಕುಳಿತ ಚಿತ್ರ ಹಾಗೂ ಅದೇ ಕಂಬದ ಬಲಭಾಗದಲ್ಲಿ ದಾಸರ ಚಿತ್ರವಿದೆ. ತಾಳೆಯೋಲೆ ಹಿಡಿದ ಯತಿಯು ಸುರೇಂದ್ರತೀರ್ಥರು ಹಾಗೂ ಪಕ್ಕದಲ್ಲಿ ನಿಂತಿರುವುದು ಮಠವನ್ನು ಕಟ್ಟಿಸಿಕೊಟ್ಟ ಭಕ್ತನ ಚಿತ್ರವಿರ ಬಹುದು. ಹಾಗೂ ಪಕ್ಕದ ಕಂಬದಲ್ಲಿ ಸುರೇಂದ್ರರ ಶಿಷ್ಯರಾದ ಶ್ರೀ ವಿಜಯೀಂದ್ರತೀರ್ಥರು ಇರಬಹುದು. ಮತ್ತೊಂದು ದಾಸರ ಚಿತ್ರವಿರಬಹುದು. ಒಟ್ಟಾರೆಯಾಗಿ ಈ ಕಟ್ಟಡದ ವಿನ್ಯಾಸ ಹಾಗೂ ಶಿಲ್ಪವನ್ನು ಗಮನಿಸಿದಾಗ ಇದು ಒಂದು ಮಠವೇ ಆಗಿದೆ ಎಂಬುದರಲ್ಲಿ ಸಂದೇಹವಿಲ್ಲ ಎನ್ನಬಹುದು.

ಈ ಸುರೇಂದ್ರತೀರ್ಥರ ಮಠ ಎಂಬುದಕ್ಕೆ ಹಲವಾರು ದಾಖಲೆಗಳನ್ನು ಕೊಡಬಹುದು. ೧೫೬೫ರಲ್ಲಿ ವಿಜಯ ನಗರದ ಅರವೀಡು ವಂಶದ ರಾಮರಾಯನು ವಿಜಯ ವಿಠ್ಠಲನ ದೇವಾಲಯದ ಬಳಿ ಇದ್ದ ಮಠದಲ್ಲಿ ಶ್ರೀರಾಮ ವಿಠ್ಠಲನ ಅಭಿಷೇಕದ ಸಮಯದಲ್ಲಿ ಸುರೇಂದ್ರರಿಗೆ ಹಲವು ಭೂದಾನಗಳನ್ನು ನೀಡಿದ್ದಾನೆ.[೩] ಈ ದಾಖಲೆಯ ತಾಮ್ರ ಶಾಸನವಾಗಿದ್ದು ಈ ತಾಮ್ರಶಾಸನದಲ್ಲಿ "ವಿಜಯವಿಠ್ಠಲಸ್ಯ ಸ್ಥಿತೆ ಮಠೇ" ಎಂದು ಹೇಳುತ್ತಾ ಶ್ರೀ ಸುರೇಂದ್ರರಿಗೆ ದಾನ ವಾಗಿ ನೀಡಿದ್ದಾನೆ.

ಸುರೇಂದ್ರಮಠಕ್ಕೆ ಮತ್ತೊಂದು ತಾಮ್ರಶಾಸನವಿದ್ದು, ಅದೇ ರಾಜ ನೀಡಿದ್ದಾಗಿದೆ. ಈ ಶಾಸನದಲ್ಲಿ ಹಲವು ಗ್ರಾಮಗಳನ್ನು ನೀಡಿದ ವಿವರವಿದೆ. ಇದರಲ್ಲಿಯೂ ಸಹಿತ "ವಿಜಯವಿಠ್ಠಲಸ್ಯಮಠ ಸ್ಥಿತೆ" ಎಂಬ ವಾಕ್ಯವಿದೆ. ಆದರೆ ಪ್ರಾಯಶಃ ಈ ತಾಮ್ರಶಾಸನವು ೩ ಹಲಗೆಯಿಂದ ಕೂಡಿರಬೇಕು. ಮೊದಲ ಎರಡು ಹಲಗೆಗಳು ದೊರೆತಿಲ್ಲ.[೪] ಆದ್ದರಿಂದ ಇದರಲ್ಲಿ ಕಾಲ ನಿರ್ದೇಶನ ಮಾಡುವುದು ಕಷ್ಟ, ಕೊನೆಯ ಹಲಗೆಯು ೩೨ ಸಾಲುಗಳಿಂದ ಕೂಡಿದೆ. ಎರಡು ಶಾಸನದ ಕೊನೆಯಲ್ಲಿ ವಿರೂಪಾಕ್ಷ ಎಂಬ ಒಪ್ಪವಿದೆ.

ವಸುಂಧರ ಫಿಲಿಯೋಜ ಅವರು ಕೂಡ ತಮ್ಮ ಗ್ರಂಥ ದಲ್ಲಿ ಅಳಿದುಳಿದ ಹಂಪಿಯಲ್ಲಿ ಈ ಮಠದ ಕುರಿತು ದಾಖಲಿಸು ತ್ತಾರೆ. ಇವರು ಕೂಡ ಶ್ರೀ ಸುರೇಂದ್ರರ ವಾಸಸ್ಥಾನ ಹಾಗೂ ಮಠವಿರಬೇಕೆಂದು ಅಭಿಪ್ರಾಯಪಡುತ್ತಾರೆ.[೫] ಹಂಪಿಯಲ್ಲಿ ಸುರೇಂದ್ರರು ಇದನ್ನು ರಾಜ ಎಸ್. ಗುರುರಾಜಾಚಾರ್ಯರು ತಮ್ಮ ಗ್ರಂಥವಾದ 'ಕಲಿಯುಗ ಕಲ್ಪತರು'ವಿನಲ್ಲಿ ದಾಖಲಿಸು ತ್ತಾರೆ.[೬] ಶ್ರೀ ಸುರೇಂದ್ರರನ್ನು ವ್ಯಾಸತೀರ್ಥರು ಹಂಪಿಯ ಆನೆಗೊಂದಿಗೆ ಬರಮಾಡಿಕೊಂಡರು ಎಂದು ವಿಜಯೀಂದ್ರ ವಿಜಯ ಗ್ರಂಥದಲ್ಲಿ ವಾದಿರಾಜರ ಶಿಷ್ಯರಾದ ಮಧ್ವಕವಿಯು ದಾಖಲಿಸುತ್ತಾರೆ.[೭] ಹಾಗೂ ಹಂಪಿಯಲ್ಲಿ ಸುರೇಂದ್ರರು ಶ್ರೀರಾಮನ ಪೂಜೆ ಮಾಡುವಾಗ ಪುರಂದರದಾಸರು ಹಾಡಿನ ಮೂಲಕ ದಾಖಲಿಸುತ್ತಾರೆ.[೮] ಈ ಎಲ್ಲಾ ದಾಖಲೆಗಳ ಪೂರಕ ವಾಗಿ ಬಹು ಮುಖ್ಯವಾದ ದಾಖಲೆ ಎಂದರೆ ಸುರೇಂದ್ರ ತೀರ್ಥರ ಮಠದ ಮುಖ್ಯದ್ವಾರದ ಎಡಜಗುಲಿಯ ಕಲ್ಲಿನ ಮೇಲೆ "ಸುರೇಂದ್ರ ವಡೆಯರ್"[೯] ಎಂಬ ಬರಹವಿದೆ. ಇದನ್ನು ವಸುಂಧರ ಫಿಲಿಯೋಜ ಹಾಗೂ ಡಾ॥ ಗೋಪಾಲ ಕೃಷ್ಣರವರು ದಾಖಲಿಸುತ್ತಾರೆ.[೧೦] ಇಷ್ಟೆಲ್ಲಾ ಕಾರಣಗಳಿಂದ ಶ್ರೀ ಸುರೇಂದ್ರತೀರ್ಥರ ಮಠವೆ ಆಗಿದೆ ಎಂದು ಹೇಳಬಹುದು.

ಅದೇ ಮಠದಲ್ಲಿರುವ ಸುರೇಂದ್ರತೀರ್ಥರ ಬೃಂದಾವನ

ಪಾರಂಪರಿಕ ದಾಖಲೆಯ ಪ್ರಕಾರ ಸುರೇಂದ್ರತೀರ್ಥ ಬೃಂದಾವನ ತಮಿಳುನಾಡಿನ ಮಧುರೈನಲ್ಲಿ ಎಂದು ಹೇಳುತ್ತಾರೆ. ಇದಕ್ಕೆ ಪೂರಕವಾದ ಪ್ರಬಲವಾದ ಯಾವುದೇ ದಾಖಲೆ ಇಲ್ಲ. ಅಷ್ಟೇ ಏಕೆ ಸುರೇಂದ್ರತೀರ್ಥರು ತಮಿಳುನಾಡು ಸಂಚಾರ ಮಾಡಿದ ದಾಖಲೆ ಇಲ್ಲ ಎನ್ನಬಹುದು. ಅವರು ಸಾಕಷ್ಟು ಕಾಲ ಹಂಪಿಯಲ್ಲಿ ಕಳೆದಿರಬೇಕು. ಇವರ ನಿರ್ಯಾಣದ ಕಾಲವನ್ನು ನಿರ್ಧಾರ ಮಾಡುವದು ಕಷ್ಟಕರ. ಆದರೆ ಇವರ ನಿರ್ಯಾಣವು ಆನೆಗೊಂದಿಯಲ್ಲಿ ಆಗಿದೆ.[೧೧] ಇವರು ಬೃಂದಾವನಸ್ಥರಾಗಿರುವುದು ಹಂಪೆಯಲ್ಲಿಯೆ ಎಂದು ಕಾರಣ ಕೊಡಬಹುದು. ತಮ್ಮ ಗುರುಗಳಾದ ಶ್ರೀ ರಘುನಂದ ತೀರ್ಥರು ಬೃಂದಾವನ ಕೂಡ ಹಂಪಿಯಲ್ಲಿ ಆಗಿದೆ. ಹಾಗೂ ಸುರೇಂದ್ರರ ಬೃಂದಾವನವಿರುವ ಸ್ಥಳ ಮಠದಕಲ್ಲಿನ ಕೋಣೆಯೊಳಗಿನ ಮಂಟಪದ ಒಳಗೆ ಇರುವ ಸಾಧ್ಯತೆಗಳಿವೆ. ಈ ಮಂಟಪದ ಮುಖವು ಶ್ರೀ ರಘುನಂದನರ ಬೃಂದಾವನದ ದಿಕ್ಕಿನ ಕಡೆಗೆ ಮುಖ ಮಾಡಿದೆ ಮತ್ತು ಸುರೇಂದ್ರತೀರ್ಥರ ಬೃಂದಾವನದ ಎದುರಿಗೆ ಇರುವ ಕಲ್ಲುಕಂಬದ ಸಾಲು ಮಂಟಪದಲ್ಲಿ ಇರುವ ಶ್ರೀ ವಿಜಯೀಂದ್ರತೀರ್ಥ ಶಿಲ್ಪ ಎನ್ನಬಹುದಾದ ಶಿಲ್ಪವು ತಮ್ಮ ಗುರುಗಳಾದ ಶ್ರೀ ಸುರೇಂದ್ರ ತೀರ್ಥರಿಗೆ ಕೈ ಮುಗಿಯುತ್ತಿದೆ.[೧೨] ಮತ್ತು ತಮ್ಮ ಪೂರ್ವಿಕ ಬೃಂದಾವನವು ಹಂಪಿ ಮತ್ತು ಆನೆಗೊಂದಿಯಲ್ಲಿ




ಮಠದ ಮುಖ್ಯದ್ವಾರ



ಕಂಬದ ಮೇಲಿನ ಯತಿಯ ಉಬ್ಬು ಶಿಲ್ಪಗಳು







ಸುರೇಂದ್ರ ಒಡೆಯರ್ ಎಂಬ ಬರಹ

ಇದ್ದುದರಿಂದ ಇವರ ಬೃಂದಾವನವು ಮಠದೊಳಗೆ ಆಗಿರಬೇಕು ಎನ್ನಬಹುದು.[೧೩]

ಈ ಹಿಂದೆ ಹೇಳಿದಂತೆ ಮಠದ ಕಲ್ಲಿನ ಕೋಣೆಯೊಳಗಿನ ಮಂಟಪದ ಮೇಲೆ ಕೃಷ್ಣ ಹಾಗೂ ನರಸಿಂಹನ ಉಬ್ಬುಶಿಲ್ಪದಿಂದ ಕೂಡಿದ ನಾಲ್ಕು ಕಂಬದ ಮಂಟಪವಿದೆ. ಮಂಟಪದ ಮಧ್ಯದ ಒಳಗೆ ಮಣ್ಣಿನಿಂದ ಕೂಡಿದೆ. ರಾಯರ ಮಠದ ಇನ್ನಿತರ ಕೆಲವು ಬೃಂದಾವನಗಳನ್ನು ಗಮನಿಸಿದರೆ ಮಂಟಪದ ಒಳಗೆ ಬೃಂದಾವನ ಮಾಡುವ ಶೈಲಿಯೇ ಹೆಚ್ಚು ಎಂದು ಹೇಳಬಹುದು. ಇಷ್ಟೆಲ್ಲಾ ಕಾರಣಗಳಿಂದ ಸುರೇಂದ್ರ ಬೃಂದಾವನ ಅದೇ ಮಠದೊಳಗಿದೆ ಎಂದು ಹೇಳಬಹುದು.



ಮಠ ಮತ್ತು ಬೃಂದಾವನ

ಅಡಿಟಿಪ್ಪಣಿ

೧. ಗುರುಚರಿತೆ ಪಾಲಿ ವೇದವ್ಯಾಸಚಾರ್ಯ, ಪ್ರಕಾಶಕರು ಹೆಚ್.ಕೆ. ವೇದವ್ಯಾಸಚಾರ್ಯ, ಪರಿಮಳ ಪ್ರಕಾಶನ, ಮೈಸೂರು ೧೯೯೯. ಪು. ೧೨೯.
೨. ಅಜೇಯ ವಿಜಯೀಂದ್ರರು ರಾಜ ಎಸ್. ಗುರುರಾಜಾಚಾರ್ಯ, ಪರಿಮಳ ಸಂಶೋಧನಾ ಮಂದಿರ, ಪುಟ ಪ್ರಸ್ತಾವನೆ.
೩. ಮಾಧ್ವಮಠಗಳ ಶಾಸನಗಳು, ಸಂಪುಟ ೧, ಪುಟ ೧೩, ಪ್ರಕಾಶನ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ, ಮಂತ್ರಾಲಯ.
೪. ಮಾಧ್ವಮಠಗಳ ಶಾಸನಗಳು, ಸಂಪುಟ ೧, ಪುಟ ೧೯, ಪ್ರಕಾಶನ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ, ಮಂತ್ರಾಲಯ.
೫. ಅಳಿದುಳಿದ ಹಂಪೆ, ಪುಟ ೮೯, ಪ್ರೇಮಸಾಯಿ ಪ್ರಕಾಶನ, ೧೯೯೨.
೬. ಕಲಿಯುಗ ಕಲ್ಪತರು, ರಾಜ ಎಸ್. ಗುರುರಾಜಾಚಾರ್ಯ, ಬೆಂಗಳೂರು.
೭. ವಿಜಯೀಂದ್ರ ವಿಜಯ, ಮಧ್ವಕವಿ ಪ್ರಕಾಶನ, ಮಂತ್ರಾಲಯ ಮಠ ೧, ಪುಟ ೧೦.
೮. ಅಜೇಯ ವಿಜಯೀಂದ್ರರು, ರಾಜಾ ಎಸ್. ಗುರುರಾಜಾಚಾರ್ಯರು, ಪುಟ ೪.
೯. ಮಠದ ಚಿತ್ರ. ೧೦. ಗುರು ಸಾರ್ವಭೌಮ ಮಾಸಪತ್ರಿಕೆ, ಮಂತ್ರಾಲಯ ಡಾ. ಗೋಪಾಲಕೃಷ್ಣ ರಾವ್, ಎಮ್.ಜಿ. ಮಂಜುನಾಥ್.
೧೧. ವಿಜಯೀಂದ್ರ ವಿಜಯ ಪುಟ ೬೨. ೧೨. ಕಂಬದ ಉಬ್ಬುಶಿಲ್ಪದ ಚಿತ್ರ. ೧೩. ಬೃಂದಾವನವಿರುವ ಚಿತ್ರ.

ಸಿರುಗುಪ್ಪ ಪ್ರದೇಶದ ಜೈನಧರ್ಮ: ಒಂದು ಅವಲೋಕನ

ಡಾ. ಕೆ. ಮಹೇಶ್* ಡಾ. ಸಂಜೀವ್‌ಕುಮಾರ್ ಟಿ. ತಾಂಡ್ಲೆ**

ಜೈನಧರ್ಮವು ಕರ್ನಾಟಕಕ್ಕೆ ಕ್ರಿ.ಪೂ. ೩೦೦ ವರ್ಷಗಳ ಹಿಂದೆ ಜೈನಮುನಿ ಶೃತಕೇವಲಿನ್ ಭದ್ರಬಾಹು ಅವರು ತಮ್ಮ ಶಿಷ್ಯವೃಂದದೊಡನೆ ಉತ್ತರ ಭಾರತದಿಂದ ವಲಸೆ ಬಂದು ಶ್ರವಣಬೆಳ್ಗೊಳದಲ್ಲಿ ನೆಲಸಿದಂದಿನಿಂದ ಕ್ರಮೇಣ ಜೈನಧರ್ಮ ಈ ಪ್ರದೇಶದಲ್ಲಿ ಹರಡಿ ಅಭಿವೃದ್ಧಿಯಾಗುತ್ತ ಬಂದಿದೆ. ಕಾಲಕ್ರಮೇಣ ದಕ್ಷಿಣಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ತನ್ನ ಬಲವಾದ ಅಸ್ತಿತ್ವವನ್ನು ಸ್ಥಾಪಿಸಿತು. ಮುಂದೆ ಕರ್ನಾಟಕದಲ್ಲೆಲ್ಲ ಜಿನಾಲಯಗಳನ್ನು ಮತ್ತು ಜಿನಮೂರ್ತಿಗಳನ್ನು ನಿರ್ಮಿಸಲಾಯಿತು. ಇಂದಿಗೂ ನಾಡಿನಾದ್ಯಂತ ಸಾವಿರಾರು ಪ್ರಾಚೀನ ಜೈನಬಸದಿಗಳು ಜಿನಮೂರ್ತಿಗಳು ಉಳಿದಿವೆ. ಕರ್ನಾಟಕದ ಪ್ರಮುಖ ಜೈನಕೇಂದ್ರಗಳೆಂದರೆ, ಶ್ರವಣಬೆಳ್ಗೊಳ, ಹುಂಚ, ಗೇರುಸೊಪ್ಪೆ, ಜೀಳಗಿ, ಹಾಡುವಳ್ಳಿ, ಹಲಸಿ, ಹಂಪಿ, ಲಕ್ಕುಂಡಿ, ಮೂಡಬಿದಿರೆ, ಕಾರ್ಕಳ, ವೇಣೂರು, ಬನವಾಸಿ, ಐಹೊಳೆ, ಸನ್ನತಿ ಮೊದಲಾದ ಸ್ಥಳಗಳು ಇಂದಿಗೂ ಜೈನಧರ್ಮದ ಕೇಂದ್ರಗಳಾಗಿವೆ. ಶ್ರವಣಬೆಳ್ಗೊಳದಲ್ಲಿರುವ ಸು. ೮ನೇ ಶತಮಾನದ ವಿಮಾನ ಮಾದರಿಯ ಚಂದ್ರಗುಪ್ತ ಬಸದಿಯೆ ಮೊದಲ ಪ್ರಾಚೀನ ಜೈನಬಸದಿಯಾಗಿದೆ.[1] ಇನ್ನೂ ಜೈನಶಿಲ್ಪ ವಿಷಯಕ್ಕೆ ಬಂದಾಗ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲೂಕಿನಲ್ಲಿ ಸಿಕ್ಕಿರುವ ಫಲಕವು ಅತ್ಯಂತ ಗಮನಾರ್ಹವಾದುದು. ಈ ಫಲಕದಲ್ಲಿ ಇಬ್ಬರು ಬೋಳು ತಲೆಯ ನಗ್ನಯತಿಗಳು ಹೋಗುತ್ತಿದ್ದು, ಒಬ್ಬರ ಎಡಗೈಯಲ್ಲಿ ಪಿಂಛವಿದೆ. ಹಿಂದೆ ಒಂದು ಕುದುರೆ ನಿಂತಿದೆ. ಈ ಫಲಕದ ಶೈಲಿಯಿಂದ ಕಾಲಮಾನವನ್ನು ಗುರುತಿಸಬಹುದಾದರೆ ಸು. ೨ನೇ ಶತಮಾನದೆಂದು, ಕರ್ನಾಟಕದಲ್ಲಿ ಇದೇ ಅತ್ಯಂತ ಪ್ರಾಚೀನ ಜೈನಶಿಲ್ಪವಾಗಿದೆ ಎಂದು ಡಾ. ಅ. ಸುಂದರ ಅವರ ಅಭಿಪ್ರಾಯವಾಗಿದೆ.[2]

ಅನಂತರ ಕಾಲಾವಧಿಯಲ್ಲಿ ಕರ್ನಾಟಕವನ್ನಾಳಿದ ಅನೇಕ ರಾಜಮನೆತನಗಳಲ್ಲಿ ಆದಿಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರ ಮನೆತನದ ಅವಧಿಯಲ್ಲಿಯು ಜೈನಧರ್ಮ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬೆಳೆಯಿತು. ಮುಖ್ಯವಾಗಿ ಕಲ್ಯಾಣ ಚಾಲುಕ್ಯರ ಅವಧಿಯಲ್ಲಿ ಅವರ ಸಾಮಂತ ಮನೆತನವಾದ ನೊಳಂಬರು ತಮ್ಮ ಪ್ರದೇಶದಲ್ಲಿ ಜೈನಧರ್ಮಕ್ಕೆ ಆಶ್ರಯವನ್ನು ನೀಡಿದರು.

ನೊಳಂಬರ ಆಡಳಿತ ವ್ಯಾಪ್ತಿಗೆ ಒಳಪಟ್ಟ ಪ್ರದೇಶವಾದ ಬಳ್ಳಕುಂದೆ ೩೦೦ ನಾಡಿನಲ್ಲಿ ಜೈನಧರ್ಮ ಅಸ್ತಿತ್ವದಲ್ಲಿತ್ತು. ಅಂದು ಅರಸರ ಬೆಂಬಲ ಮತ್ತು ಸಮಾಜದ ಆಶ್ರಯವನ್ನು ಪಡೆದುಕೊಂಡಿದ್ದಿತು. ಜೈನಧರ್ಮದ ಕೊಡುಗೆಯಿಂದ ಈ ಪ್ರದೇಶದಲ್ಲಿ ದೇವಾಲಯಗಳು ಕಂಡುಬರುತ್ತವೆ. ಇದಕ್ಕೆ ಪೂರಕವಾಗಿ ಶಾಸನಗಳು, ಶಿಲ್ಪಗಳು ಮತ್ತು ನಿಶಿಧಿಕಲ್ಲುಗಳು ನಮಗೆ ಸಿಗುತ್ತವೆ. ಬಳ್ಳಕುಂದೆಯು ಕ್ರಿ.ಶ. ೧೦೧೦ರ ವೇಳೆಗೆ ಅದು ಮೂರುನೂರ ಹಳ್ಳಿಗಳನ್ನು ಒಳಗೊಂಡ ವಿಭಾಗವಾಗಿ ಮಾರ್ಪಟ್ಟಿತು. ಇಲ್ಲಿಂದ ಈ ನಾಡು ಮುಂದಿನ ಐವತ್ತು ವರ್ಷಗಳ ಅವಧಿಯಲ್ಲಿ ಬಳ್ಳಕಂದೆ-೩೦೦ ನಾಡೆಂದು ಪ್ರಸಿದ್ಧಿಯನ್ನು ಪಡೆಯಿತು. ಈ ಬಳ್ಳಕುಂದೆ-೩೦೦ ನಾಡಿನ ವ್ಯಾಪ್ತಿಗೆ ಒಳಪಟ್ಟ ತೆಕ್ಕೆಕಲ್ಲು-೧೨ರೊಳಗಣ ಪ್ರದೇಶವಾದ ಇಂದಿನ ಸಿರುಗುಪ್ಪದ ಸುತ್ತಮುತ್ತಲು ಜೈನಧರ್ಮದ ಕುರುಹುಗಳು ಸಿಗುತ್ತವೆ. ಈ ಕುರುಹುಗಳಲ್ಲಿ ಬಹಳಷ್ಟು ನಶಿಸಿದ್ದು ಕೆಲವು ಧಾರ್ಮಿಕ ಪರಿವರ್ತನೆಗೆ ಒಳಪಟ್ಟಿರುವುದನ್ನು ನಾವು ಇಂದಿಗೂ ಕಾಣಬಹುದು. ಈ ಅಂಶವನ್ನು ಆಧರಿಸಿ ಸಿರುಗುಪ್ಪ ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಜೈನಧರ್ಮದ ಕುರಿತಾದ ಒಂದು ಅವಲೋಕನವನ್ನು ಮಾಡಲು ಪ್ರಯತ್ನಿಸಲಾಗಿದೆ.

ಸಿರುಗುಪ್ಪ ತಾಲೂಕಿನ ಪರಿಮಿತಿಯಲ್ಲಿ ಅದು ಬಳ್ಳಕುಂದೆ, ಸಿರುಗುಪ್ಪ (ಸಿರಿಕುಪ್ಪೆ) ರಾರಾವಿ, ರಾವಿಹಾಳು, ಸಿರಿಗೆರೆ, ತೆಕ್ಕಲಕೋಟೆ, ಕುರುಗೋಡು ಗ್ರಾಮಗಳಲ್ಲಿ ಹಾಗೂ ಆಂಧ್ರಪ್ರದೇಶದ ಗಡಿಭಾಗಗಳಲ್ಲೂ ಕೂಡಾ ಜೈನಧರ್ಮ ನೆಲೆನಿಂತಿರುವುದು ಕಂಡುಬರುತ್ತದೆ. ಮೊದಲಿಗೆ ಶಾಸನಗಳನ್ನು ಪರಿಶೀಲಿಸೋಣ.

---

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸ.ಪ್ರ.ದ. ಕಾಲೇಜು, ಮರಿಯಮ್ಮನಹಳ್ಳಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
** ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸ.ಪ್ರ.ದ. ಕಾಲೇಜು, ಮನ್ನಾಳ, ಬೀದರ್ ತಾಲ್ಲೂ, ಬೀದರ್ ಜಿಲ್ಲೆ.

ಶಾಸನಗಳು:

* ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಬಲ್ಲಕುಂದೆ ಗ್ರಾಮದ ಕೆಲವರು ಜೈನ ಬಸದಿಗೆ ದಾನ ನೀಡಿರುವುದು ಕ್ರಿ.ಶ. ೧೦೦೮ ಶಾಸನದಿಂದ ತಿಳಿದುಬರುತ್ತದೆ. "ನೊಳಂಬ ರಾಜ ಚಿತ್ರವಡಂಗ ಘಟೆಯಂಕಕಾರನ ನಿಯೋಗಿಯಾದ ಶ್ರೀಧರಾರ್ಯನು ಬಲ್ಲಕುನ್ದ ವಸತೌಕೃತ ಜೈನಬಿಂಬವನ್ನು ಮಾಡಿಸಿ ಪಂಚನಿವರ್ತನ ಭೂಮಿಯನ್ನು ದಾನವಾಗಿ ಬಿಡುತ್ತಾನೆ.[೩] ಈ ಶಾಸನದಲ್ಲಿ ಶ್ರೀಧರಾರ್ಯನನ್ನು "ಜಿನಾಯ ವಿದಿತಾ ಜಿನಪಾದ ಭಕ್ತಃ" ಎಂದು ಕರೆದಿರುವುದು ವಿಶೇಷವಾಗಿದೆ. ಇವನು ಬ್ರಾಹ್ಮಣಕುಲಕ್ಕೆ ಸೇರಿದ್ದರೂ ಜಿನಪಾದ ಭಕ್ತನೆಂದು ಕರೆದಿರುವುದು ವಿಶೇಷ. ಅಲ್ಲದೆ, ಶ್ರೀಧರಾರ್ಯನು ಮಾಚಿಣಾರ್ಯನ ಪುತ್ರನಾಗಿದ್ದು ಇವನ ಹೆಸರಿನ ಜೊತೆಗೆ ಜಕ್ಕಿಮಾರ್ಯ, ಗೋವಿಂದಾರ್ಯ, ಶ್ರೀ ಸಿಂಹವಾರ್ಯ ಶ್ರೇಷ್ಠಿಗಳ ಹೆಸರು ಗಳನ್ನು ದಾಖಲಿಸಿದೆ.[೪] ಅಲ್ಲಿನ ಕ್ರಿ.ಶ. ೧೧ನೇ ಶತಮಾನದ ಇನ್ನೊಂದು ಶಾಸನದಲ್ಲಿ ಕೃತದೇವ ಮತ್ತು ಕರಿಊರು (ಕರೂರು) ಕನ್ದರಿಕರು ಸಂಯುಕ್ತವಾಗಿ ಬಲ್ಲಕುಂದೆಯ ಬಸದಿಗೆ ದಾನ ಬಿಟ್ಟ ಉಲ್ಲೇಖ ಅಲ್ಲಿಯ ಇನ್ನೊಂದು ಶಾಸನದಲ್ಲಿದೆ.[೫]
* ಕ್ರಿ.ಶ. ೧೧ನೇ ಶತಮಾನದ ಮತ್ತೊಂದು ಶಾಸನದಲ್ಲಿ "ಜಿನ ಪಾದಪಂಕಜ ರಜೋ"ವೆನಿಸಿದ ಕೇಸರಿ ಮಹಾಧರ್ಮಪ್ರಭು ತನ್ನ ಪತ್ನಿ ಸಮೇತವಾಗಿ ಜೈನರಿಗೆ ದತ್ತಿ ಬಿಟ್ಟದ್ದನ್ನು ಉಲ್ಲೇಖಿಸಲಾಗಿದೆ.[೬]
* ಇಂದು ಆದೋನಿ ತಾಲೂಕಿಗೆ ಒಳಪಟ್ಟ ಚೆನ್ನತುಂಬಳ ಗ್ರಾಮದಲ್ಲಿ ಕಾಲದ ಉಲ್ಲೇಖವಿಲ್ಲದ ಶಾಸನದಲ್ಲಿ ರಾಮಶೆಟ್ಟಿ ಎಂಬುವವನು ಪದ್ಮಪ್ರಭಾದಲ್ಲಿಯ ಮೂಲ ಸಂಘದ ಮೂಲದರಿಸ್ವಾಮಿ, ದೇಸಿಗಣ, ಪೊಸ್ತಕಗಚ್ಛ ಮತ್ತು ಕುಂದಕುಂದಾನ್ವಯ ಎಂದು ಉಲ್ಲೇಖಿಸಿದ್ದು, ದಾನ ಬಿಟ್ಟದ್ದನ್ನು ಹೇಳುತ್ತದೆ.[೭] ಅಲ್ಲದೆ ಇದೇ ಗ್ರಾಮದಲ್ಲಿ ಜೈನ ಬಸದಿಯನ್ನು ಕಾಣಬಹುದು. ಕುಂದಕುಂದಾನ್ವಯದ ಉಲ್ಲೇಖ ಈ ಸಂಘದ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಭಾಗದಲ್ಲಿ ನೆಲೆಸಿರಬಹುದೆಂದು ತಿಳಿಯಬಹುದಾಗಿದೆ. ಈ ಹೆಸರಿನ ಉಲ್ಲೇಖವು ಈ ಪ್ರದೇಶದ ಸುತ್ತಮುತ್ತಲಿನ ಶಾಸನಗಳಲ್ಲಿಯೂ ಸಿಗುತ್ತದೆ.
* ರಾರಾವಿಯಲ್ಲಿ ಸಿಗುವ ಕ್ರಿ.ಶ. ೧೧೨೧ರ ಶಾಸನದಲ್ಲಿ ಕಂಪಿಲೆಯ ಸೋದರರಾದ ತಿಪ್ಪಿಸೆಟ್ಟಿ, ಮಾರಿಸೆಟ್ಟಿ, ಕೊಪಿಸೆಟ್ಟಿಯರು ರಾರಾವಿಯಲ್ಲಿ ಮೂಲಸ್ಥಾನ ದೇವಾಲಯ, ಕಮ್ಮಟೇಶ್ವರ ದೇವಾಲಯ, ಎರಡು ಮುಟಿದ ಸಭಾಮಂಟಪ, ಒಂದು ಕೆರೆ, ಮಹಾಜನಗಳಿಗೆ ಮನೆ ಮತ್ತು ಬಸದಿಯನ್ನು ಕಟ್ಟಿಸಿದ ಉಲ್ಲೇಖ ಕಂಡುಬರುತ್ತದೆ.[೮]
* ಬಲ್ಲಕುಂದೆಯ ಉಪ್ಪಿನಬಾವಿ ಬಳಿಯ ವೀರಗಲ್ಲು ಶಾಸನದಲ್ಲಿ ಕ್ರಿ.ಶ. ೯೬೭ರ ಉಲ್ಲೇಖವಿದ್ದು, ಈ ಪತ್ರದಲ್ಲಿ ನನ್ನಿನೊಳಂಬನ ಮಾತಿನಂತೆ ಜಿನಮಯ್ಯನು ಸನ್ಯಸನ ತಾಗಿ ಸ್ವರ್ಗಸ್ಥನಾದ ಬಗ್ಗೆ ತಿಳಿಸುತ್ತದೆ.[೯] ಇಲ್ಲಿ ಉಲ್ಲೇಖಗೊಂಡ ಜಿನಮಯ್ಯ ಎಂಬ ಹೆಸರು ಕಂಡುಬರುವುದರಿಂದ ಈತ ಜೈನನಾಗಿರಬೇಕು.

ಈ ಅಂಶಗಳ ಆಧಾರದ ಮೇಲೆ ಸಿರುಗುಪ್ಪ ಪ್ರದೇಶದ ಬಲ್ಲಕುಂದೆ ಗ್ರಾಮದಲ್ಲಿ ಜಿನಬಸದಿಗಳನ್ನು ಕಟ್ಟಿಸಿದ ಮತ್ತು ಜಿನಪ್ರತಿಮೆಗಳನ್ನು ಮಾಡಿಸಿದ ಉಲ್ಲೇಖಗಳು ಸಿಗುವುದರಿಂದ ಅಂದಿನ ಕಾಲದಲ್ಲಿ ಈ ಪ್ರದೇಶವು ಜೈನ ಧರ್ಮದ ಪ್ರಮುಖ ಕೇಂದ್ರವಾಗಿರಬೇಕು. ಇಲ್ಲಿನ ಜನರ ಜಿನಭಕ್ತಿ, ನಿಷ್ಠೆ, ಶ್ರದ್ಧೆ ತಿಳಿಯಲು ಸಾಧ್ಯವಾಗುವುದಲ್ಲದೆ ಜೊತೆಗೆ ಅಂದಿನ ಜೈನ ಸಮಾಜವನ್ನು ಅರಿಯಲು ಸಹಾಯಕವಾಗಿವೆ.

ಬಲ್ಲಕುಂದೆಯಲ್ಲಿ ಒಂದು ಜೈನ ಬಸದಿ ಇತ್ತು ಎನ್ನುವುದಕ್ಕೆ ಆಧಾರಗಳಿಂದ ಗುರುತಿಸಬಹುದಾಗಿದೆ. ರಾಷ್ಟ್ರಕೂಟರು ಇವರ ನಂತರ ಕಲ್ಯಾಣ ಚಾಲುಕ್ಯರು ಈ ಭಾಗದಲ್ಲಿ ಆಳ್ವಿಕೆ ಮಾಡಿದರು. ಇವರ ಅವಧಿಯಲ್ಲಿ ನೊಳಂಬರು ಮತ್ತು ಸಿಂಧರು ಬಲ್ಲಕುಂದೆ-೩೦೦ನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು. ಈ ಗ್ರಾಮದ ಪ್ರದೇಶಗಳಲ್ಲಿ ಇಂದಿಗೂ ಹಾಳಾಗಿರುವ ಜಿನಮೂರ್ತಿಗಳನ್ನು ನೋಡಬಹುದು. ಹಾಗೆಯೇ ಬಲ್ಲಕುಂದೆಯ ಕ್ರಿ.ಶ. ೧೦೦೮ ಶಾಸನದಲ್ಲಿ ನೊಳಂಬಾಧಿರಾಜನು ಆಳುತ್ತಿದ್ದಾಗ ಅವನ ನಿಯೋಗಿ ಕೌಶಿಕಗೋತ್ರದ ಮಾಚಿಣಾರ್ಯನು ಬಲ್ಲಕುಂದೆತೀರ್ಥದಲ್ಲಿ ದೇವಾಲಯವನ್ನು ಕಟ್ಟಿಸಿ ಶಿಲಾಬಿಂಬವನ್ನು (ಜೈನ ಬಸದಿ) ಸ್ಥಾಪಿಸುತ್ತಾನೆ. ಇದರ ಪೂಜಾರ್ಥಕ್ಕಾಗಿ ಭೂದಾನ ಮಾಡಿ, ಅದನ್ನು ಬಲ್ಲಕುಂದೆಯ ವ್ಯಾಪಾರಿಗಳು ಕಾಯಬೇಕೆಂದು ಉಲ್ಲೇಖಿಸುತ್ತದೆ.[೧೦]

೧೧ನೇ ಶತಮಾನದ ಸಿಂಧರ ಶಾಸನದಲ್ಲಿ ಸಿಂಧ ರಾಜನು ಬಲ್ಲಕುಂದೆ ವಿಷಯವನ್ನು ಆಳುತ್ತಿದ್ದಾಗ ಅವನ ಪತ್ನಿ ಕುನ್ದಷ್ಟೆ ಈ ಬಸದಿಗೆ ಕೆಲವು ದಾನಗಳನ್ನು ಮಾಡುತ್ತಾಳೆ. ಅಲ್ಲದೆ, ಈ ಗ್ರಾಮದಲ್ಲಿ ಕುನ್ದಕುನ್ದಾನ್ವಯದ ನಂದಿ ಸಂಘದ ದೇಸಿಗಣದ ವೀರಮುನೀಂದ್ರನು ಇರುವುದನ್ನು ತಿಳಿಸುತ್ತದೆ.[೧೧] ಹೀಗೆ ಈ ಗ್ರಾಮವು ಪ್ರಮುಖ ಜೈನಕೇಂದ್ರವಾಗಿ ಇಲ್ಲಿ ಜಿನಬಸದಿ ಇದ್ದುದು ಸ್ಪಷ್ಟವಾಗುತ್ತದೆ.

ರಾರಾವಿಯ ಕ್ರಿ.ಶ. ೧೧೨೧ರ ಶಾಸನದಲ್ಲಿ ಕಂಪಿಲಿಯ ಸೋದರರಾದ ತಿಪ್ಪಿಸೆಟ್ಟಿ, ಮಾರಿಸೆಟ್ಟಿ, ಸೋವಿಸೆಟ್ಟಿಯರು ರಾರಾವಿ ಅಗ್ರಹಾರದಲ್ಲಿನ ಮೂಲಸ್ಥಾನ ದೇವಾಲಯ, ಕಮ್ಮಟೇಶ್ವರ ದೇವಾಲಯ, ಸಭಾಮಂಟಪ, ಒಂದು ಕೆರೆ, ಮಹಾಜನಗಳಿಗೆ ಮನೆ ಮತ್ತು ಜೈನಬಸದಿ ನಿರ್ಮಾಣದ ಬಗ್ಗೆ ಉಲ್ಲೇಖಿಸುತ್ತದೆ.[೧೨] ಬಹುಶಃ ಇಲ್ಲಿಯೂ ಒಂದು ಜೈನಬಸದಿ ಇತ್ತು ಎನ್ನುವುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ.

ಕುರುಗೋಡಿನ ತ್ರಿಕೂಟ ದೇವಸ್ಥಾನದಿಂದ ಉತ್ತರಕ್ಕೆ ಸುಮಾರು ೧೦೦ ಮೀಟರ್ ದೂರದಲ್ಲಿ ದಕ್ಷಿಣಕ್ಕೆ ಮುಖವಾಗಿ ಘನಲಿಂಗೇಶ್ವರ ದೇವಸ್ಥಾನವಿದೆ. ಇದು ತೆರೆದ ಮುಖಮಂಟಪ, ಮುಚ್ಚಿದ ಸಭಾಮಂಟಪ, ಸುಕನಾಸಿ ಮತ್ತು ಗರ್ಭಗೃಹಗಳನ್ನೊಳಗೊಂಡಿದೆ. ಗರ್ಭಗೃಹದಲ್ಲಿ ಪೀಠದ ಮೇಲೆ ಶಿವಲಿಂಗವಿದ್ದು, ಇದನ್ನು ಘನಲಿಂಗೇಶ್ವರನೆಂದು ಕರೆಯಲಾಗುತ್ತದೆ. ಆದರೆ ಇದನ್ನು ಸೂಕ್ಷ್ಮವಾಗಿ ಪರೀಶೀಲಿಸಿದಾಗ ಇದು ಇತರೆ ಶೈವ ದೇವಾಲಯದಂತಿರದೆ ವಿಭಿನ್ನವಾಗಿದೆ. ಇದರ ಮುಂದಿನ ದ್ವಾರದ ದ್ವಾರಬಂಧದ ಇಕ್ಕೆಡೆಗಳಲ್ಲಿ ಪೂರ್ಣಕುಂಭಗಳ ಚಿಹ್ನೆಗಳಿದ್ದು, ದ್ವಾರಬಂಧದ ಮೇಲೆ ಲಲಾಟ ಬಿಂಬದಲ್ಲಿ ಸಾಮಾನ್ಯವಾಗಿ ಗಜಲಕ್ಷ್ಮಿ ಇರುವ ಸ್ಥಳದಲ್ಲಿ ಮುಕ್ಕೊಡೆಯ ಕೆಳಗಡೆ ಕುಳಿತ ಭಂಗಿಯ ಜಿನಮೂರ್ತಿ ಇದ್ದು, ತದನಂತರದಲ್ಲಿ ಅದನ್ನು ಅಳಿಸಿ ಶಿವಲಿಂಗದ ಆಕೃತಿಯನ್ನು ರಚಿಸಲಾಗಿದೆ. ಇದೇ ರೀತಿಯ ಚಿಹ್ನೆಗಳು ಸುಕನಾಸಿ ದ್ವಾರಬಂಧಗಳಲ್ಲಿಯೂ ಇವೆ. ಗರ್ಭಗೃಹದಲ್ಲಿ ೫"೧/೨" x ೨" x ೨" ಅಡಿ ಅಳತೆಯ ಆಯತಾಕಾರದ ಪೀಠವಿದ್ದು, ಅದರ ಮುಂಭಾಗದ ಮಧ್ಯದಲ್ಲಿ ನಿಂತ ಭಂಗಿಯ ಒಂದು ಸಿಂಹ ಮತ್ತು ಅದರ ಎಡಬಲಗಳಲ್ಲಿಯೂ ವಿರುದ್ಧ ದಿಕ್ಕಿಗೆ ಮುಖಮಾಡಿ ನಿಂತಿರುವ ಎರಡು ಸಿಂಹಗಲ ಉಬ್ಬುಶಿಲ್ಪವಿದ್ದು, ಇದೊಂದು ಸಿಂಹಪೀಠವಾಗಿದೆ. ಸಾಮಾನ್ಯವಾಗಿ ಶಿವಲಿಂಗಕ್ಕೆ ಸಿಂಹ ಪೀಠವಿರುವುದಿಲ್ಲ. ಇದು ಜಿನಮೂರ್ತಿಗೆ ಇದ್ದ ಪೀಠವಾಗಿದೆ.

ಈ ದೇವಸ್ಥಾನದ ಮಹಾದ್ವಾರದ ಎಡಭಾಗದ ಗೋಡೆಯ ಮೇಲೆ ಶಕವರ್ಷ ೧೪೬೭(೧೫೪೫)ರ ಶಿಲಾಶಾಸನವಿದ್ದು, ಅದರಲ್ಲಿ "ಕುರುಗೋಡು ಬಸ್ತಿಯ ಜಿನದೇವರಿಗೆ ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರ ಸದಾಶಿವ ಮಹಾರಾಯರು ಪೃಥ್ವಿರಾಜ್ಯ ಗೈಯುತ್ತಿರಲು, ಶ್ರೀಮಾನ್ ಮಹಾಮಂಡಲೇಶ್ವರ ಕೊಟಗಾರ ರಾಮರಾಜ ಒಡೆಯರ ಮೊಮ್ಮಕ್ಕಳು ಅಳಿಯ ಲಿಂಗರಾಜ ದೇವ ಮತ್ತು ರಾಮರಾಜಯ್ಯಗಳು ಅಮೃತಪಡಿ ನೈವೇದ್ಯಕ್ಕೆ ಭೂಮಿ ದತ್ತಿ ಬಿಟ್ಟಿರುವ ವಿಷಯವಿದೆ.[೧೩] ಮೇಲಿನ ಎಲ್ಲಾ ಅಂಶಗಳಿಂದ ಇದೊಂದು ಜೈನಬಸದಿ ಎಂದು ದೃಢಪಡುತ್ತದೆ.

ಮೇಲಿನ ವಾಸ್ತವಗಳಿಂದ ಸಿರಿಗೆರೆಯಲ್ಲಿ ಜೈನ ಧರ್ಮವು ಅಸ್ತಿತ್ವದಲ್ಲಿತ್ತು ಎಂದು ತಿಳಿಯುತ್ತದೆ.

ಸಿರಿಗೆರೆ ಗ್ರಾಮದ ಮಧ್ಯದಲ್ಲಿ ವೀರಭದ್ರ ದೇವಾಲಯವು ಪೂರ್ವಾಭಿಮುಖವಾಗಿದೆ. ಮುಖಮಂಟಪಕ್ಕೆ ಹೊಂದಿಕೊಂಡು ಸುತ್ತಲೂ ಗೋಡೆಯಿಂದ ಆವೃತ್ತವಾಗಿರುವ ಮೂರು ಅಂಕಣದ ಸಭಾಮಂಟಪವಿದ್ದು, ಅದರ ಮಧ್ಯದಲ್ಲಿ ಒಂದು ಅಡಿ ಎತ್ತರದ ರಂಗಮಂಟಪವಿದೆ. ಸಭಾಮಂಟಪಕ್ಕೆ ಹೊಂದಿಕೊಂಡು ತೆರೆದ ಸುಕನಾಸಿ ಮತ್ತು ೧೦x೧೦ ಅಳತೆಯ ಗರ್ಭಗೃಹವಿದೆ. ಗರ್ಭಗೃಹದ ಮಧ್ಯದಲ್ಲಿ ೬ ಉದ್ದ ೨.೫ ಅಗಲ ಮತ್ತು ೩ ಅಡಿ ಎತ್ತರದ ಆಯಾತಕಾರದ ಪೀಠವಿದ್ದು, ಅದರ ಮುಂಭಾಗದಲ್ಲಿ ಮುಂದಕ್ಕೆ ಮುಖ ಮಾಡಿರುವ ಎರಡು ಸಿಂಹಗಳ ಮತ್ತು ಅವುಗಳ ಪಕ್ಕದಲ್ಲಿ ವಿರುದ್ಧ ದಿಕ್ಕಿಗೆ ಮುಖ ಮಾಡಿರುವ ಎರಡು ಆನೆಗಳ ಉಬ್ಬುಶಿಲ್ಪಗಳಿವೆ. ಇಂಥ ಪೀಠ ತೀರ್ಥಂಕರರಿಗೆ ಇರುವ ಜೈನ ಪೀಠವಾಗಿದೆ. ನಂತರ ಈ ಪೀಠದ ಮೇಲಿರುವ ತೀರ್ಥಂಕರ ಮೂರ್ತಿಯನ್ನು ತೆಗೆದು ಆ ಸ್ಥಾನದಲ್ಲಿ ವೀರಭದ್ರ ಮೂರ್ತಿಯನ್ನು ಸ್ಥಾಪಿಸಲಾಗಿದೆ.

ಶಿಲ್ಪಗಳು

ಕುರುಗೋಡುನಿಂದ ಮುಷ್ಟಗಟ್ಟ ರಸ್ತೆಯ ಬಲಗಡೆ, ಸಂಗಮೇಶ್ವರ ದೇವಸ್ಥಾನದ ಎದುರುಗಡೆ ಗುಡ್ಡದಲ್ಲಿ ಗವಿ ವೀರಭದ್ರನ ಗುಹಾಂತರ ದೇವಾಲಯವಿದೆ. ಈ ದೇವಸ್ಥಾನಕ್ಕೆ ಗುಡ್ಡ ಹತ್ತಿ ಹೋಗುವ ಮಾರ್ಗದ ಬಲಗಡೆ ಇರುವ ಒಂದು ಗುಂಡಿಗೆ ಮೂರು ಮೂರ್ತಿಗಳನ್ನು ಕೆತ್ತಲಾಗಿದೆ. ಇವು ಒಂದರ ಪಕ್ಕದಲ್ಲಿ ಒಂದು ಇದ್ದು, ಕುಳಿತ ಭಂಗಿಯಲ್ಲಿ ಸುಮಾರು ೧ ಅಡಿ ಎತ್ತರವಾಗಿವೆ. ಇವುಗಳು ಜೈನರು ಸಲ್ಲೇಖನ ವ್ರತವನ್ನು ಆಚರಿಸಿ, ದೇಹ ತ್ಯಾಗ ಮಾಡಿದ ಸ್ಮಾರಕವಾಗಿ ಕೆತ್ತಿದವುಗಳಂತೆ ಕಂಡುಬರುತ್ತವೆ. ಈ ಕಲ್ಲನ್ನು ನಿಷಿಧಿಕಲ್ಲು ಎಂದು ಕರೆಯಲಾಗುತ್ತದೆ ಹಾಗೂ, ತೆಕ್ಕಕಲ್ಲು ೧೨ರ ವ್ಯಾಪ್ತಿಗೆ ಒಳಪಟ್ಟ ಸಿರುಗುಪ್ಪೆಯ ಗಾಂಧಮ್ಮ ದೇವಾಲಯದ ಎದುರಿಗಿರುವ ಹನುಮಂತ ದೇವಾಲಯದ ಮುಂದಿನ ರಸ್ತೆಯ ಪಕ್ಕದಲ್ಲಿ ನೀರು ಬತ್ತಿದ ಒಂದು ಹಳೆಯ ಬಾವಿ ಇದ್ದು, ಇದರ ಒಳಗಡೆಯ ಕಟ್ಟಡದ ಪೂರ್ವ ಮತ್ತು ಉತ್ತರ ಅಭಿಮುಖವಾಗಿ ಎರಡು ಜೈನ ಶಿಲ್ಪಗಳನ್ನು ಕಾಣಬಹುದು. ಇವೆರಡು ಒಂದೆ ತರನಾದ ಜೈನ ಮೂರ್ತಿಗಳಾಗಿವೆ. ಈ ಮೂರ್ತಿಗಳು ಮಹಾವೀರನದಾಗಿದ್ದು, ಪದ್ಮಾಸನದಲ್ಲಿ ಕುಳಿತಿರುವ ಭಂಗಿಯಲ್ಲಿವೆ. ಮೂರ್ತಿಯ ಸುತ್ತಲೂ ಪ್ರಭಾವಳಿ ಬಳ್ಳಿಗಳು ಇವೆ. ಈ ಮೂರ್ತಿಗಳು ಸು. ೨ ಅಡಿ ಎತ್ತರವಾಗಿದ್ದು, ಈಗ ಕಲ್ಲುಗಳು ಸವೆದು ಹೋಗಿ ಮುಖಗಳು ಸರಿಯಾಗಿ ಕಂಡುಬರುವುದಿಲ್ಲ. ಇದನ್ನು ನಂತರದ ಕಾಲದಲ್ಲಿ ಬೇರೆ

ಕಡೆಯಿಂದ ತಂದು ಕಟ್ಟಿರುವ ಸಾಧ್ಯತೆಯಿದೆ. ಅದೇ ರೀತಿಯಾಗಿ, ಇಲ್ಲಿರುವ ಸ್ವಯಂಭು ಕೇತಲೇಶ್ವರ ದೇವಾಲಯದ ರಕ್ಷಣಾಗೋಡೆಯನ್ನು ಕ್ರಿ.ಶ. ೧೬೨೭ರಲ್ಲಿ ಮಲಿಕ್ ಅಬ್ದುಲ್ಲನು ಕಟ್ಟಿಸಿದ ಮಾಹಿತಿ ಇರುವ ಶಾಸನ ನಮಗೆ ಸಿಗುತ್ತದೆ. ಇವನಿಂದ ನಿರ್ಮಿತವಾದ ಬಾವಿ ಮತ್ತು ರಕ್ಷಣಾಗೋಡೆಯಲ್ಲಿ ಜಿನಮೂರ್ತಿ ಇರುವುದು ಕಂಡುಬರುತ್ತದೆ. ಈ ಮೂರ್ತಿಯು ತುಂಗಭದ್ರ ನದಿಯ ಕಡೆ ಮುಖಮಾಡಿದ್ದು, ೨, ೧/೨ ಅಡಿ ಎತ್ತರ ೧, ೧/೨ ಅಡಿ ಅಗಲವಿದೆ. ಇದು ಇಂದು ಭಗ್ನಗೊಂಡು ಮುಖದ ಮೇಲಿನ ಕಲ್ಲುಚಕ್ಕೆಯು ಉದುರಿ ಹೋಗಿದೆ. ಈ ಮೂರ್ತಿಯ ಸುತ್ತ ಪ್ರಭಾವಳಿ ಹಾಗೂ ಬಳ್ಳಿಗಳನ್ನು ಬಿಟ್ಟರೆ ಇತರೆ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಈ ಮೂರ್ತಿಗಳನ್ನು ಕೂಡಾ ಬೇರೆ ಭಾಗಗಳಿಂದ ತಂದು ಕಟ್ಟಲಾಗಿದೆ.

ಇನ್ನೂ ರಾವಿಹಾಳು ಗ್ರಾಮದ ಆಂಜನೇಯ ದೇವಾಲಯದ ಪೌಳಿಯ ಒಳಗೆ ತೆರೆದ ರೀತಿಯಲ್ಲಿ ಇರುವ ಜೈನ ಮೂರ್ತಿಯು ಕಂಡುಬರುತ್ತದೆ. ಈ ಮೂರ್ತಿಯು ಸುಮಾರು ೪ ಅಡಿ ಎತ್ತರವಾಗಿದ್ದು, ಎರಡು ಹಂತಗಳನ್ನು ಹೊಂದಿದೆ. ಮೇಲಿನ ಹಂತದಲ್ಲಿ ವರ್ಧಮಾನ ಮಹಾವೀರನು ಪದ್ಮಾಸನ ಭಂಗಿಯಲ್ಲಿ ಕುಳಿತು ಧ್ಯಾನಸ್ಥ ಸ್ಥಿತಿಯಲ್ಲಿರುವುದನ್ನು ಕಾಣ ಬಹುದು. ಮೂರ್ತಿಯ ತಲೆಯ ಮೇಲೆ ಮುಕ್ಕೊಡೆಯಿದ್ದು, ಎರಡು ಪಕ್ಕದಲ್ಲಿ ಯಕ್ಷಿಯರು ಚಾಮರಧಾರಿಗಳಾಗಿ ನಿಂತಿದ್ದಾರೆ. ಕೆಳಹಂತದಲ್ಲಿಯೂ ಕೂಡಾ ಧ್ಯಾನಸ್ಥ ಸ್ಥಿತಿಯಲ್ಲಿರುವ ಒಬ್ಬ ಜೈನಯತಿಯ ಕುಳಿತ ಶಿಲ್ಪವಿದ್ದು, ಇಲ್ಲಿಯೂ ಕೂಡಾ ಸ್ತ್ರೀ ಚಾಮರಧಾರಿಯು ನಿಂತಿದ್ದಾಳೆ. ಈ ಮೂರ್ತಿಯನ್ನು ಯಾರು, ಯಾವಾಗ ಪ್ರತಿಷ್ಠಾಪನೆ ಮಾಡಿದ್ದಾರೆ ಎಂದು ತಿಳಿದು ಬರುವುದಿಲ್ಲ. ಮೂರ್ತಿಯನ್ನು ಧಾರ್ಮಿಕ ಪರಿವರ್ತನೆಯ ಕಾಲದಲ್ಲಿ ಯಾವುದಾದರು ಬಸದಿಯಿಂದ ತಂದು ನಿಲ್ಲಿಸಿರುವ ಸಾಧ್ಯತೆ ತಳ್ಳಿಹಾಕುವಂತಿಲ್ಲ. ಬಲ್ಲಕುಂದೆಯಲ್ಲಿ ಭಗ್ನಗೊಂಡಿರುವ ಅನೇಕ ಜೈನಶಿಲ್ಪಗಳು ದೊರೆತಿವೆ. ಈ ಶಿಲ್ಪಗಳನ್ನು ಬಳಪದಕಲ್ಲಿನಲ್ಲಿ ಕೆತ್ತಲಾಗಿದ್ದು, ಅವುಗಳು ಸುಮಾರು ೨ರಿಂದ ೨. ೧/೨ ಅಡಿ ಎತ್ತರವಾಗಿವೆ. ಮೂರ್ತಿಗಳ ಹಿಂಭಾಗದಲ್ಲಿ ಎಡಬಲಕ್ಕೆ ಚಾಮರಧಾರಿ ಸ್ತ್ರೀಯರ ಶಿಲ್ಪಗಳಿದ್ದು, ಅವುಗಳು ತೀರ್ಥಂಕರನ ಯಕ್ಷಿಯರಾಗಿದ್ದಾರೆ. ಸಿರುಗುಪ್ಪ ಪ್ರದೇಶದಲ್ಲಿ ಸಿಗುವ ಬಹುತೇಕ ಜೈನ ಶಿಲ್ಪಗಳು ಒಂದಲ್ಲ ಒಂದು ರೀತಿಯಲ್ಲಿ ತ್ರುಟಿತಗೊಂಡು ಅನ್ಯರ ದಾಳಿಗೆ ತುತ್ತಾಗಿರುವುದನ್ನು ಕಾಣಬಹುದು.

ಧಾರ್ಮಿಕ ಪರಿವರ್ತನೆ

ಕರ್ನಾಟಕದ ಚರಿತ್ರೆಯಲ್ಲಿ ಧಾರ್ಮಿಕ ಪರಿವರ್ತನೆಯ ಬಗ್ಗೆ ಹೇರಳವಾಗಿ ಮಾಹಿತಿ ಸಿಗುತ್ತದೆ. ಅಳರಸರ ಧಾರ್ಮಿಕ ನೀತಿಗಳಿಗೆ ಅನುಸಾರವಾಗಿ ಆ ಸಾಮ್ರಾಜ್ಯಗಳಲ್ಲಿ ಕೆಲವು ಪಂಥಗಳು ಸಮಾಜದಲ್ಲಿ ಹೆಚ್ಚು ಮನ್ನಣೆ ಗಳಿಸಿರುವುದನ್ನು ನೋಡಬಹುದು. ಪ್ರಾಚೀನ ಕಾಲದ ಅನೇಕ ಸ್ಮಾರಕಗಳು ಇಂದು ಅವುಗಳ ಮೂಲಸ್ಥಿತಿಯಲ್ಲಿ ಉಳಿದಿಲ್ಲ. ಅವುಗಳು ಧಾರ್ಮಿಕ ಪರಿವರ್ತನೆಯ ಸಂದರ್ಭದಲ್ಲಿ, ಬದಲಾವಣೆಗೆ ಒಳಪಟ್ಟು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಕಣ್ಮರೆಯಾಗಿರುವುದನ್ನು ಕಾಣುತ್ತೇವೆ. ಆದರೂ, ಅವುಗಳ ಅಸ್ತಿತ್ವದ ಕುರುಹುಗಳು ಶಾಸನಗಳ, ಮೂರ್ತಿಗಳ ಮತ್ತು ದೇವಾಲಯಗಳ ರೂಪದಲ್ಲಿ ಇಂದಿಗೂ ಉಳಿದುಕೊಂಡು ಬಂದುದನ್ನು ಕಾಣುತ್ತೇವೆ. ಈ ತರದ ಪರಿವರ್ತನೆಗಳು ಕ್ರಿ.ಶ. ೧೧ ಮತ್ತು ೧೨ ಶತಮಾನದ ನಂತರ ಕಾಲಾವಧಿಯಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ಉದಾಹರಣೆಗೆ, ಬಲ್ಲಕುಂದೆ ೩೦೦ರ ಈ ಪ್ರದೇಶದ ವ್ಯಾಪ್ತಿಗೆ ಒಳಪಟ್ಟ ಬಲ್ಲಕುಂದೆ, ಸಿರಿಗೆರೆ ಮತ್ತು ಕುರುಗೋಡಿನ ಜೈನಬಸದಿಗಳು ಧರ್ಮಪರಿವರ್ತನೆಗೆ ಒಳಪಟ್ಟು ಇಂದು ಅವುಗಳು ಶಿವ, ವೀರಭದ್ರನ ದೇವಾಲಯಗಳಾಗಿ ಮಾರ್ಪಟ್ಟಿರುವುದನ್ನು ನೋಡಬಹುದು. ಈ ದೇವಾಲಯಗಳು ಯಥಾಸ್ಥಿತಿಯಲ್ಲಿದ್ದು, ಗರ್ಭಗೃಹದ ಮೂರ್ತಿಯನ್ನು ಮಾತ್ರ ಬದಲಾವಣೆ ಮಾಡಲಾಗಿದೆ. ಈ ತರಹದ ಬದಲಾವಣೆಗೆ ಒಳಪಟ್ಟ ಅನೇಕ ಬಸದಿಗಳು ನಾಡಿನಾದ್ಯಂತ ಸಿಗುತ್ತವೆ.

ಕ್ರಿಸ್ತಪೂರ್ವಕ್ಕೂ ಮೊದಲುಗೊಂಡು ವಿಜಯನಗರ ಅರಸರವರೆಗೂ ರಾಜಾಶ್ರಯದಲ್ಲಿ ಮುನ್ನಡೆದು ಬಂದ ಜೈನಧರ್ಮ ೧೧ನೇ ಶತಮಾನ ಹಾಗೂ ೧೨ನೆಯ ಶತಮಾನದಲ್ಲಿ ತಲೆ ಎತ್ತಿದ ವೀರಶೈವ, ವೈಷ್ಣವ ಧರ್ಮಗಳ ಪ್ರಭಾವದ ಮುಂದೆ ಜೈನಧರ್ಮದ ಬೇರುಗಳೇ ಅಲುಗಾಡಿದವು. ಸನ್ಯಾಸ ಪ್ರಧಾನವಾದ ಜೈನಧರ್ಮಕ್ಕಿಂತ ಸಂಸಾರ ಪ್ರಧಾನವಾದ ವೀರಶೈವ ಧರ್ಮದತ್ತ ಜನರ ಒಲವು ಅರಿಯ ತೊಡಗಿತು. ಇಂಥಹ ಪರಿಸ್ಥಿತಿಯಲ್ಲಿ ಜೈನಧರ್ಮವು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದೇ ಕಠಿಣವಾಯಿತು. ಇಂಥಹ ಸಂದರ್ಭದಲ್ಲಿ ಜೈನರು ಮತಾಂತರ ಹೊಂದುವುದಕ್ಕೆ ತೊಡಗಿದಾಗಿನ ಸ್ಥಿತಿಯನ್ನು, ಕೋಗಳಿಯ ಕ್ರಿ.ಶ. ೧೦೫೫ರ ಶಾಸನ "ತೊಲಗದೆ ಜೈನಮಾರ್ಗದೊಳೆ ನಿಶ್ಚಳರಪ್ಪುದು" ಎಂದು ತನ್ನ ಧರ್ಮೀಯರಿಗೆ ಮನವಿ ಮಾಡಿಕೊಳ್ಳುವ ಅಂಶ ಶಾಸನದಿಂದ ತಿಳಿಯುತ್ತದೆ.[೧೬]

ಹೀಗೆ ಸಿರುಗುಪ್ಪ ಪ್ರದೇಶದ ಜೈನಕೇಂದ್ರಗಳ ಅವಶೇಷಗಳನ್ನು ಮೂಲವಾಗಿರಿಸಿಕೊಂಡು ಜೈನಧರ್ಮೀಯರ ಸಾಂಸ್ಕೃತಿಕ ಚಟುವಟಿಕೆಗಳನ್ನು ಅರಿಯಲು ಸಾಧ್ಯವಾಗುತ್ತದೆ. ಅನ್ಯಧರ್ಮೀಯರ ದೇವಾಲಯ, ಶಾಸನಗಳಿಗೆ ಹೋಲಿಸಿದರೆ ಜೈನಧರ್ಮದ ಕುರಿತಾಗಿ ಕಂಡುಬರುವ ಶಾಸನಗಳು,

ಬಸದಿಗಳು ಮತ್ತು ಮೂರ್ತಿಗಳು ಕಡಿಮೆಯೆಂದೇ ಹೇಳಬಹುದು ಇದ್ದರೂ, ಅವುಗಳು ಅನ್ಯಧರ್ಮೀಯರ ಪ್ರಭಾವ-ಪರಿವರ್ತನೆಗೆ ಒಳಗಾಗಿರುವುದನ್ನು ನಾವು ಇಂದು ಕಾಣಬಹುದು.

ಅಡಿಟಿಪ್ಪಣಿ

೧. ಡಾ. ಶಿವಾನಂದ ಗಾಳಿ ಮತ್ತು ಇತರರು, ಜಿನವಾಣಿ, ಪುಟ ೧.

೨. ಡಾ. ಶಿವಾನಂದ ಗಾಳಿ ಮತ್ತು ಇತರರು, ಜಿನವಾಣಿ, ಪುಟ ೨.

೩. ಎ.ಆರ್. ನಂ. ೮೬/೭೭–೭೮.೯೪೮ ಬಲ್ಲಕುಂದೆ, ಸಿರುಗುಪ್ಪ ತಾ, ಬಳ್ಳಾರಿ ಜಿಲ್ಲೆ.

೪. ಕವಿವಿ ಶಾಸನ ಸಂ. ೧. ಸಿರುಗುಪ್ಪ–ತಾ. ಶಾಸನ ಸಂಖ್ಯೆ ೨೭. ಪುಟ ೧೦೯.

೫. ಎ.ಆರ್. ನಂ. ೬೦/೮೫–೮೬. ೧೧ನೇ ಶತಮಾನ ಬಲ್ಲಕುಂದೆ, ಸಿರುಗುಪ್ಪ ತಾ, ಬಳ್ಳಾರಿ ಜಿಲ್ಲೆ.

೬. ಎ.ಆರ್. ನಂ. ೮೮/೭೭–೭೮. ೧೧ನೇ ಶತಮಾನ ಬಲ್ಲಕುಂದೆ, ಸಿರುಗುಪ್ಪ ತಾ, ಬಳ್ಳಾರಿ ಜಿಲ್ಲೆ.

೭. ಮಹಾದೇವನ್ ಜಿ.ಸಿ. ಆಂಧ್ರಪ್ರದೇಶದ ಕನ್ನಡ ಶಾಸನಗಳು. ಶಾಸನ ಸಂಖ್ಯೆ ೪೯೮. ಪುಟ ೧೪೬.

೮. ಕವಿವಿ ಶಾಸನ ಸಂ. ೧, ಸಿರುಗುಪ್ಪ ತಾ, ಶಾಸನ ಸಂಖ್ಯೆ ೧೩, ಪುಟ ೧೦೦.

೯. ಕವಿವಿ ಶಾಸನ ಸಂ. ೧, ಸಿರುಗುಪ್ಪ ತಾ, ಶಾಸನ ಸಂಖ್ಯೆ ೨೯, ಪುಟ ೧೧೦.

೧೦. ಕವಿವಿ ಶಾಸನ ಸಂ. ೧, ಸಿರುಗುಪ್ಪ ತಾ, ಶಾಸನ ಸಂಖ್ಯೆ ೨೭, ಪುಟ ೧೦೯.

೧೧. ಕವಿವಿ ಶಾಸನ ಸಂ. ೧, ಸಿರುಗುಪ್ಪ ತಾ, ಶಾಸನ ಸಂಖ್ಯೆ ೩೫, ಪುಟ ೧೧೪.

೧೨. ಕವಿವಿ ಶಾಸನ ಸಂ. ೧, ಸಿರುಗುಪ್ಪ ತಾ. ಶಾಸನ ಸಂಖ್ಯೆ ೧೩, ಪುಟ ೧೦೦.

೧೩. ಕವಿವಿ ಶಾಸನ ಸಂ. ೧, ಬಳ್ಳಾರಿ ತಾ, ಕುರುಗೋಡು, ಶಾಸನ ಸಂಖ್ಯೆ ೧೫, ಪುಟ ೨೦.

೧೪, ಕವಿವಿ ಶಾಸನ ಸಂ. ೧, ಸಿರುಗುಪ್ಪ ತಾ. ಶಾಸನ ಸಂಖ್ಯೆ ೩, ಪುಟ ೯೪.

೧೫. ಡಾ. ಚೆನ್ನಬಸವಯ್ಯ ಹಿರೇಮಠ್: ಕುರುಗೋಡು ಸಿಂದರು ಒಂದು ಅಧ್ಯಯನ, ಪುಟ ೨೪೬.

೧೬. ಕವಿವಿ ಶಾಸನ ಸಂ–೧, ಹಗರಿಬೊಮ್ಮನಹಳ್ಳಿ ತಾ. ಕೋಗಳಿ, ಶಾಸನ ಸಂಖ್ಯೆ ೧೫, ಪುಟ ೨೬೭.

ಆಧಾರಸೂಚಿ

೧. ಡಾ. ಚೆನ್ನಬಸವಯ್ಯ ಹಿರೇಮಠ್: ಕುರುಗೋಡು ಸಿಂದರು–ಒಂದು ಅಧ್ಯಯನ, ಸಂಗಣ್ಣನವರು ಆಗಮಿ ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ, ೧೯೯೯.

೨. ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ, ಸಂ. ಡಾ. ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೮.

೩. ಸುರೇಶ್ ಕೆ.ಎಂ., ಬಳ್ಳಾರಿ ಜಿಲ್ಲೆಯ ದೇವಾಲಯ ಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦.

೪. ಮುಕ್ಕೊಡೆ: ಸಂಪಾದಕರು ಡಾ. ಸಿ.ಎಸ್. ವಾಸುದೇವನ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧.

೫. ಕುರುಗೋಡು: ಸಂಪಾದಕ ಪ್ರೊ. ಬಾಲಸುಬ್ರಹ್ಮಣ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೪.

೬ ಕುರುಗೋಡಿನ ಸಾಂಸ್ಕೃತಿಕ ಇತಿಹಾಸ: ವೈ. ಹನುಮಂತರೆಡ್ಡಿ, ಜ್ಞಾನಪ್ರಸಾರ ವಾಚನ ಪ್ರಕಾಶನ, ಬಳ್ಳಾರಿ, ೨೦೦೩.

೭. ಜೈನಸಂಸ್ಕೃತಿ ಮತ್ತು ಸಿದ್ಧಾಂತಗಳು: ಸಂ. ಡಾ. ಪಿ.ಕೆ. ಖಂಡೋಬಾ, ಡಾ. ಸಂಗಮೇಶ ಸವದತ್ತಿಮಠ, ಪ್ರಸಾರಾಂಗ, ಗುವಿವಿ., ಗುಲ್ಬರ್ಗಾ, ೧೯೯೬.

೮. ಜಿನವಾಣಿ: ಸಂಪಾದಕರು ಡಾ. ಶಿವಾನಂದಗಾಳಿ ಮತ್ತು ಇತರರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೭.

೯. ಜೈನಧರ್ಮ: ಸಂಪಾದಕರು. ಡಾ. ಕಮಲಾ ಹಂಪನಾ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೭.

೮೨

ಕರ್ನಾಟಕದಲ್ಲಿ ರಂಗನಾಥ ಸಂಪ್ರದಾಯ

ಅಶ್ವಿನಿ ಬಸಪ್ಪ ಕರೀಕಟ್ಟಿ*

ಸಂಪ್ರದಾಯವು ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಜೀವನ ನಡವಳಿಕೆಗಳಿಗೆ ಸಂಬಂಧಿಸಿದುದು. ಜನರ ಆಚರಣೆಗಳು, ಆಚರಣೆಗಳಿಗೆ ಸಂಬಂಧಿಸಿದ ನಂಬಿಕೆಗಳ ಮೊತ್ತವನ್ನು ಸಂಪ್ರದಾಯ ಎಂದು ಹೇಳಬಹುದು. ಅದರಲ್ಲಿ ಅವರ ಉಡುಪು, ಊಟ, ಆಟ, ಮಾಟ ಮಂತ್ರಗಳು ಸೇರುತ್ತವೆ. ಒಂದು ಜನಸಮೂಹದಲ್ಲಿ ಪಾರಂಪರಿಕವಾಗಿ ನಡೆದು ಬಂದಿರುವ ಒಟ್ಟು ನಡವಳಿಕೆಗಳೇ ಸಂಪ್ರದಾಯ. ಅಂದರೆ ಸಂಪ್ರದಾಯ ಎಲ್ಲವನ್ನು ಒಳಗೊಂಡಿದೆ.

ಕರ್ನಾಟಕದಲ್ಲಿ ವಿವಿಧ ಚಾರಿತ್ರಿಕ ಕಾಲಘಟ್ಟಗಳ ಸಂದರ್ಭದಲ್ಲಿ ಬೇರೆ-ಬೇರೆ ಪಂಥಗಳು, ಸಂಪ್ರದಾಯಗಳು ಹುಟ್ಟಿ ನಾಡಿನ ಉದ್ದಗಲಕ್ಕೂ ವ್ಯಾಪಿಸಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಮೈಲಾರ, ಬೀರಪ್ಪ, ಮಂಟೇಸ್ವಾಮಿ, ಮಲೆ ಮಾದೇಶ್ವರ ಮುಂತಾದವು ಮುಖ್ಯವಾಗಿವೆ. ಇವುಗಳಂತೆಯೇ ರಂಗನಾಥ ಸಂಪ್ರದಾಯವೆಂಬ ಪರಂಪರೆಯು ಶಿಷ್ಟ ಮತ್ತು ಪರಿಶಿಷ್ಟ (ಜನಪದ) ನೆಲೆಯಲ್ಲಿ ಅಸ್ತಿತ್ವವನ್ನು ಪಡೆದು ನೆಲೆಗೊಂಡಿದ್ದು ತನ್ನದೇ ಆದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಪಡೆದುಕೊಂಡಿರುವುದು ಗಮನಾರ್ಹ. ಆದರೆ ಈ ಸಂಪ್ರದಾಯ ಕುರಿತಂತೆ ವ್ಯಾಪಕವಾಗಿ ಸಂಶೋಧನಾತ್ಮಕ ಅಧ್ಯಯನಗಳು ಹೆಚ್ಚು ನಡೆದಿಲ್ಲವೆಂದು ಹೇಳಬಹುದು.

ಮುಖ್ಯವಾಗಿ ಕರ್ನಾಟಕದ ಜಿಲ್ಲೆಗಳಾದ ಬಾಗಲಕೋಟೆ, ರಾಯಚೂರು, ಕೊಪ್ಪಳ, ಬಳ್ಳಾರಿ, ಹಾವೇರಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಹಾಸನ, ಚಿಕ್ಕ ಮಗಳೂರು, ತುಮಕೂರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಧಾರವಾಡ ಹೀಗೆ ೨೦ ಜಿಲ್ಲೆಗಳಲ್ಲಿ ರಂಗನಾಥಸ್ವಾಮಿ ದೇವಾಲಯಗಳು ಕಂಡುಬರುತ್ತಿದ್ದು ಸುಮಾರು ೪೦೦ಕ್ಕೂ ಹೆಚ್ಚಿವೆ. ಅಲ್ಲದೆ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲೂ ದೇವಾಲಯಗಳು ಕಂಡುಬರುತ್ತವೆ. ಇದರಲ್ಲಿ ಶಿಷ್ಟ ಮತ್ತು ಪರಿಶಿಷ್ಟ (ಜನಪದ) ಸಂಪ್ರದಾಯಕ್ಕೆ ಸೇರಿದ ಎರಡೂ ರೀತಿಯ ದೇವಾಲಯಗಳು ಕಂಡು ಬರುತ್ತವೆ.

ಪ್ರಸ್ತುತ ಲೇಖನವು ಕರ್ನಾಟಕದಲ್ಲಿ ರಂಗನಾಥ ಸಂಪ್ರದಾಯವನ್ನು ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ವಿವರಿಸುವುದಾಗಿದೆ. ಈ ಸಂಪ್ರದಾಯದ ಅಸ್ತಿತ್ವ, ಭೌಗೋಳಿಕತೆ, ಮೌಖಿಕ ಆಕರಗಳು, ಶಾಸನಗಳು, ಇತಿಹಾಸ, ದೇವಾಲಯಗಳು, ಮೂರ್ತಿಶಿಲ್ಪಗಳು, ನಂಬಿಕೆ ಮತ್ತು ಆಚರಣೆಗಳನ್ನು ಕುರಿತಾದ ಅಂದರೆ ಒಟ್ಟು ಸಂಪ್ರದಾಯದ ಪರಿಚಯಾತ್ಮಕ ವಿವರಣೆಯಾಗಿದ್ದು ಈ ನಿಟ್ಟಿನಲ್ಲಿ ಲೇಖನವು ಸಾಗಿಬಂದಿದೆ. ಇದು ಪರಿಚಯಾತ್ಮಕ ಲೇಖನವಾಗಿರುವುದರಿಂದ ವಿವರವಾದ ಮಾಹಿತಿಯನ್ನು ನೀಡಲಾಗಿಲ್ಲ. ಈ ಲೇಖನವು ಹೊಸ ಬಗೆಯ ಅಧ್ಯಯನವಾಗಿದ್ದು, ಸಂಪೂರ್ಣವಾಗಿ ಕ್ಷೇತ್ರಕಾರ್ಯವನ್ನು ಅವಲಂಬಿಸಿದೆ. ಜೊತೆಗೆ ಪುರಾತತ್ವ ಮತ್ತು ಸಾಹಿತ್ಯಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ.

ರಂಗನಾಥನು ಶಿಷ್ಟ ಮತ್ತು ಪರಿಶಿಷ್ಟ (ಜನಪದ) ನೆಲೆಯಲ್ಲಿ ಪ್ರಸಿದ್ಧತೆಯನ್ನು ಪಡೆದ ದೈವ. ಅಲ್ಲದೆ ಪಶುಪಾಲಕ ಮತ್ತು ಬೇಟೆಯಾಡುವ ಸಮುದಾಯಗಳ ಕುಲದೈವ, ಮನೆದೈವ, ಇಷ್ಟದೈವವಾಗಿದ್ದಾನೆ. ಈತನ ಕುರಿತ ವಿಭಿನ್ನ ನಿರೂಪಣೆಗಳು, ಪುರಾಣಗಳು, ಐತಿಹ್ಯಗಳು, ಶಾಸನಗಳು, ಪೂಜಾವಿಧಿಗಳು, ಆಚರಣೆ ಮತ್ತು ನಂಬಿಕೆಗಳು ಅಸ್ತಿತ್ವದಲ್ಲಿವೆ. ಈತನ ಮೂರ್ತಿರೂಪಗಳು ಬೇರೆ-ಬೇರೆ ಪ್ರಕಾರಗಳಲ್ಲಿದ್ದು ಗವಿ ರಂಗನಾಥ, ಬೆಟ್ಟದ ರಂಗನಾಥ, ಬಂಡೆರಂಗನಾಥ, ಹೀಗೆ ಬೇರೆ-ಬೇರೆ ಹೆಸರುಗಳಿಂದ (ನಾಮಗಳಿಂದ) ಗುರುತಿಸಲ್ಪಟ್ಟಿವೆ.

ರಂಗನಾಥನ ಶಿಲ್ಪದ ಕುರಿತು ಹೇಳುವುದಾದರೆ ಸ್ಥೂಲವಾಗಿ ಎರಡು ಪ್ರಕಾರದ ವಿಚಾರಗಳು ಸ್ಪಷ್ಟಗೊಳ್ಳುತ್ತವೆ. ಮೊದಲಿಗೆ ರಂಗನಾಥನು ವಿಷ್ಣುವಿನ ರೂಪ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ವೈಷ್ಣವ ಧರ್ಮವು ಪ್ರಚಲಿತದಲ್ಲಿದೆ. ವೈದಿಕ ಪರಂಪರೆಯ ದೇವತೆಗಳ ಅರ್ಚಾಮೂರ್ತಿಗಳಲ್ಲಿ ಶಯನಭಂಗಿಯಲ್ಲಿ ಕಾಣಸಿಗುವುದು ವಿಷ್ಣುವಿನ ಮೂರ್ತಿಗಳು ಮಾತ್ರ. ವಿಷ್ಣುವಿನ ಶಯನ ಭಂಗಿಯಮೂರ್ತಿಯನ್ನು ಜಲಶಾಯಿ, ಶೇಷಶಾಯಿ, ರಂಗನಾಥ, ಅನಂತಪದ್ಮನಾಭ, ಅನಂತಶಯನ ಮೂರ್ತಿ ಮುಂತಾದ ಹೆಸರುಗಳಿಂದ

* ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪೂಜಿಸುತ್ತಾರೆ (ಶ್ರೀರಂಗಪಟ್ಟಣ, ಶಿವನಸಮುದ್ರ, ಶ್ರೀರಂಗಂ). ಪುರಾಣಗಳು ತಿಳಿಸುವಂತೆ ವಿಷ್ಣುವಿನ ಪೂರ್ಣ ರೂಪದ ಶಕ್ತಿಯು ಅನಂತಶಯನ ರೂಪದಲ್ಲಿ ಶಾಶ್ವತವಾಗಿರುತ್ತದೆ ಎಂದು ಇದೆ. ಪರಮಶ್ರೇಷ್ಠವಾದ ಈ ಸ್ವರೂಪದ ಬಿಂಬವನ್ನು ಪೂಜಿಸುವುದರಿಂದ ಪರಮಪದವನ್ನು ಪಡೆಯುವರೆಂಬ ಪ್ರತೀತಿ ಇದೆ. ಈ ನಿಟ್ಟಿನಲ್ಲಿ ಭಾರತೀಯ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಅನೇಕ ಕಡೆ ಅನಂತಶಯನ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಉದಾಹರಣೆಗೆ: ಉದಯಗಿರಿ (ದೆಯೋಗರ ಕ್ರಿ.ಶ. ೫೦೦), ಬದೌಲಿ (ಕ್ರಿ.ಶ. ೮೫೦). ದಕ್ಷಿಣ ಭಾರತದಲ್ಲಿ ಐಹೊಳೆ (ಕ್ರಿ.ಶ. ೫೨೫), ಬಾದಾಮಿ (೧ ಮತ್ತು ೨ನೇ ಗುಹೆ ಕ್ರಿ.ಶ. ೫೭೫), ಮತ್ತೊಂದು ಬಾದಾಮಿಯಲ್ಲಿ (ಕ್ರಿ.ಶ. ೮೦೦), ಎಲ್ಲೋರಾ (೧೫ ಮತ್ತು ೨೭ ಗುಹೆ ಕ್ರಿ.ಶ. ೭೫೦, ಕ್ರಿ.ಶ. ೭೦೦) ಪುಣೆಯ ಹತ್ತಿರ ಪಾತಳೇಶ್ವರ ಗುಹೆ (ಕ್ರಿ.ಶ. ೮೦೦), ಮಹಾಬಲಿಪುರಂ (ಅನಂತಶಾಯಿ ಗುಹೆ ಕ್ರಿ.ಶ. ೬೫೦), ನಾಮಕ್ಕಲ್ (ಕ್ರಿ.ಶ. ೭೪೫), ಶ್ರೀರಂಗಪಟ್ಟಣ (ಕ್ರಿ.ಶ. ೧೨ನೇ ಶ.), ಶ್ರೀರಂಗ (ಕ್ರಿ.ಶ. ೬೫೦), ಶಿವನಸಮುದ್ರ

ಎರಡನೆಯದಾಗಿ ಕಂಡುಬರುವ ರಂಗನಾಥನ ಮೂರ್ತಿಶಿಲ್ಪಗಳೆಂದರೆ ಕರ್ನಾಟಕದ ಬೆಟ್ಟ-ಗುಡ್ಡಗಳಲ್ಲಿ ಕಂಡುಬರುವ ಪಶುಪಾಲಕ ಸಮುದಾಯದ ರಂಗಪ್ಪ ಎಂದು ಕರೆಯುವ ಗುಡ್ಡಗಾಡಿನ ದೇವತೆ. ಇಲ್ಲಿ ಮುಖ್ಯವಾಗಿ ಇವನನ್ನು ಗವಿರಂಗಪ್ಪ, ಬೇಟೆರಂಗಪ್ಪ, ಬೇಟೆರಾಯ ಎಂತಲೂ ವಿವಿಧ ಬಗೆಯ ಹೆಸರುಗಳಿಂದ ಕರೆಯುತ್ತಾರೆ. ಇಲ್ಲಿ ಮುಖ್ಯವಾಗಿ ಕಂಡುಬರುವ ಮೂರ್ತಿಪ್ರಕಾರಗಳೆಂದರೆ ಚತುರ್ಭುಜನಾದ ವಿಷ್ಣು ಮೇಲಿನ ಎರಡು ಕೈಗಳಲ್ಲಿ ಶಂಖ-ಚಕ್ರಧಾರಿಯಾಗಿ, ಕೆಳಗಿನ ಎರಡು ಕೈಗಳಲ್ಲಿ ಬಿಲ್ಲು-ಬಾಣ ಹಿಡಿದಿರುವಂತಹ ಶಿಲ್ಪಗಳು, ಹುಟ್ಟು ಬಂಡೆಕಲ್ಲು, ಉದ್ಭವಮೂರ್ತಿ. ಕಂಬದ ರೂಪದಲ್ಲಿರುವ ಶಿಲ್ಪಗಳು, ಗವಿ, ಕಲ್ಲಾಸರೆ, ಬೆಟ್ಟ-ಗುಡ್ಡ, ನದಿ-ಹಳ್ಳ-ಕೊಳ್ಳ, ಬಯಲಿನಲ್ಲಿ, ನಿರ್ಗಮವಾದ ಪರಿಸರದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ದೇವಾಲಯಗಳು ಮುಖ್ಯವಾಗಿ ಪ್ರಾಚೀನ ಕಾಲದಿಂದಲೂ ಪಶುಪಾಲಕ, ಬೇಟೆಯಾಡುವ ಸಮುದಾಯಗಳ ನಡುವೆ ನೆಲೆಗೊಂಡಿದ್ದು, ಇಂದಿಗೂ ಇವು ಜೀವಂತ ಆರಾಧನಾ ಎಡೆಗಳಾಗಿವೆ. ಅಲ್ಲದೆ ಅನೇಕ ನೆಲೆಗಳೂ ಪ್ರಾಗಿತಿಹಾಸ ಕಾಲಘಟ್ಟಕ್ಕೆ ಸೇರಿದವುಗಳಾಗಿದ್ದು, ಅನೇಕ ಪ್ರಾಚ್ಯಾವಶೇಷಗಳು ಕಂಡುಬಂದಿವೆ.

ಇನ್ನು ದೇವಸ್ಥಾನಕ್ಕೆ ಸಂಬಂಧಪಟ್ಟ ಶಾಸನಗಳ ಬಗ್ಗೆ ಹೇಳುವುದಾದರೆ ಕರ್ನಾಟಕ ಮತ್ತು ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡಿನಲ್ಲಿಯೂ ಅನೇಕ ಶಾಸನಗಳು ಕಂಡುಬರುತ್ತವೆ. ಶಿಷ್ಟ ಸಂಪ್ರದಾಯದ ಶ್ರೀರಂಗಪಟ್ಟಣ, ಶಿವನಸಮುದ್ರ, ಶ್ರೀರಂಗಂ ಅಂದರೆ ಆದಿರಂಗ, ಮಧ್ಯರಂಗ, ಅಂತ್ಯರಂಗ ಎಂದು ಹೇಳಲಾಗುವ ಈ ದೇವಸ್ಥಾನಗಳಿಗೆ ಸಂಬಂಧಿಸಿದಂತೆ ನಮಗೆ ೮-೯ನೇ ಶತಮಾನದಿಂದಲೇ ಶಾಸನಗಳು ದೊರೆಯುತ್ತವೆ. ಅಲ್ಲದೆ ಎಪಿಗ್ರಾಫಿಯಾ ಕರ್ನಾಟಿಕ ಹಾಗೂ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಶಾಸನ ಸಂಪುಟಗಳಾದ ಬಳ್ಳಾರಿ ಜಿಲ್ಲೆಯ ಶಾಸನಗಳು, ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ-೧, ರಾಯಚೂರು ಜಿಲ್ಲೆ, ಕೊಪ್ಪಳ ಜಿಲ್ಲೆಯ ಶಾಸನ ಸಂಪುಟಗಳಲ್ಲಿ ಅನೇಕ ಶಾಸನಗಳು ಕಂಡುಬರುತ್ತಿದ್ದು ಅವು ೧೨ನೇ ಶತಮಾನದಿಂದ ಪ್ರಾರಂಭವಾಗಿ ಹೆಚ್ಚಾಗಿ ೧೪, ೧೫ನೇ ಶತಮಾನದವರೆಗೂ ಹಾಗೇ ೧೭-೧೮ನೇ ಶತಮಾನದವರೆಗೂ ಮುಂದುವರೆದ ಶಾಸನಗಳು ಕಂಡುಬರುತ್ತವೆ. ಈ ಶಾಸನಗಳಲ್ಲಿ ರಂಗನಾಥ ಸ್ವಾಮಿ ದೇವಾಲಯ ನಿರ್ಮಾಣ, ಮಂಟಪ, ಉತ್ಸವಮೂರ್ತಿ, ನೀರಿನ ಹೊಂಡಗಳ ನಿರ್ಮಾಣದ ಬಗೆ ಹಾಗೂ ಧೂಪದೀಪ ನೈವೇದ್ಯಕ್ಕೆ, ಒಂದು ಹೊತ್ತಿನ ನೈವೇದ್ಯಕ್ಕೆ ಹಾಗೂ ದೇವಾಲಯಕ್ಕೆ ನೀಡಿದ ಅನೇಕ ದಾನಗಳ ವಿಷಯಕ್ಕೆ ಸಂಬಂಧಿಸಿದವುಗಳಾಗಿವೆ.

ಮುಂದುವರೆದು ದೇವಸ್ಥಾನಗಳ ಬಗ್ಗೆ ಹೇಳುವುದಾದರೆ ಕೆಲವು ದೇವಾಲಯಗಳು ಪ್ರಾಚೀನವಾಗಿದ್ದು, ವಿದ್ವಾಂಸರ ಜೊತೆ ಚರ್ಚಿಸಿ ಕಾಲಮಾನವನ್ನು ಸ್ಪಷ್ಟಪಡಿಸಬೇಕಾಗಿದೆ. ಹೆಚ್ಚಿನ ದೇವಾಲಯಗಳು ವಾಸ್ತುಶಿಲ್ಪ ಶೈಲಿಯಿಂದ ವಿಜಯ ನಗರ ಹಾಗೂ ವಿಜಯನಗರೋತ್ತರ ಕಾಲಘಟ್ಟದ ಪಾಳೆ ಗಾರರಿಗೆ ಸಂಬಂಧಿಸಿದ ದೇವಾಲಯಗಳಾಗಿವೆ. ಮುಖ್ಯವಾಗಿ ದೇವಾಲಯಗಳಲ್ಲಿ ಸ್ವತಂತ್ರ ದೇವಾಲಯಗಳ ಜೊತೆಗೆ ಗುಹೆಯನ್ನು, ಕಲ್ಲುಬಂಡೆಗಳನ್ನು ಆಶ್ರಯಿಸಿ ನಿರ್ಮಿಸಿದ ದೇವಾಲಯಗಳು ಕಂಡುಬರುತ್ತವೆ. ಗರ್ಭಗೃಹ, ಸಭಾ ಮಂಟಪ, ಮುಖಮಂಟಪ, ದೇವಸ್ಥಾನದ ಮುಂಭಾಗದಲ್ಲಿ ಉಯ್ಯಾಲೆ ಕಂಬ, ಪುಷ್ಕರಣಿಗಳು ಇನ್ನಿತರ ಮಂಟಪಗಳು ಕಂಡುಬರುತ್ತವೆ. ಶಿಖರ ಭಾಗವು ಸರಳ ರಚನೆಯಾಗಿದ್ದು ಗಾರೆ, ಗ್ರಾನೈಟನ್ನು ಬಳಸಿ ನಿರ್ಮಿಸಲಾಗಿದೆ. ಅಲ್ಲದೆ ಅನೇಕ ದೇವಾಲಯಗಳು ಜೀರ್ಣೋದ್ಧಾರಗೊಂಡಿವೆ.

ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಅನೇಕ ಐತಿಹ್ಯ, ನಂಬಿಕೆ ಮತ್ತು ಆಚರಣೆಗಳು ಕಂಡುಬರುತ್ತಿದ್ದು, ಜನರ ಜೀವನದಲ್ಲಿ ಪ್ರಮುಖ ಪಾತ್ರವಹಿಸಿವೆ. ವರ್ಷಪೂರ್ತಿ ರಂಗನಾಥಸ್ವಾಮಿಯ ಆರಾಧನೆ ನಡೆಯುತ್ತದೆ. ಆಚರಣೆ ಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಈ ಎಲ್ಲ ಪ್ರಮುಖ ಆಚರಣೆಗಳನ್ನೂ ಕರ್ನಾಟಕದ ಜನತೆ ಅದರಲ್ಲೂ ರಂಗನಾಥನ ಆರಾಧಕರು ಯಾವುದೇ ಜಾತಿ, ಮತ, ಪಂಥಗಳ ಬೇಧವಿಲ್ಲದೇ ಎಲ್ಲ ವರ್ಗದವರು ವರ್ಷವಿಡಿ ಮತ್ತು ಜಾತ್ರೆಯ ಸಮಯದಲ್ಲಿ ಎಲ್ಲ ವಿ ಧಿ-ವಿಧಾನಗಳಿಗೆ ಅನುಗುಣವಾಗಿ



ಬೆಳೆಗೆರೆ ರಂಗನಾಥದೇವಸ್ಥಾನ ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ



ಕೊಣಚಗಲ್ ರಂಗನಾಥ ಜಗಲೂರ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ



ಬೆಳಗುತ್ತಿ ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ



ರಂಗನಾಥದೇವ ಬಾದಾಮಿ, ಬಾಗಲಕೋಟ ಜಿಲ್ಲೆ



ರೌಡಕುಂದೆ ಬಂಡೆ ರಂಗನಾಥ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ



ಬಿಲ್ಲೇನಹಳ್ಳಿ ಬಂಡೆರಂಗನಾಥ ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ

ಆಚರಿಸುತ್ತಾ ಬರುತ್ತಿದ್ದಾರೆ. ರಂಗನಾಥಸ್ವಾಮಿಗೆ ಸಂಬಂಧಿಸಿದ ಗುಂಟಿಕೆಸೇವೆ, ದೊಡ್ಡಎಡೆಸೇವೆ, ಅನ್ನದಕೋಟೆ ಆಚರಣೆ, ಗುಂಡಿನ ಸೇವೆ, ಗಂಡಸಾರತಿಸೇವೆ, ಬಿಲ್ಲುಗೂಡ ಸೇವೆ, ಹೂ ಅಪ್ಪಣೆ ಕೇಳುವುದು, ಮುಳ್ಳುಪವಾಡ ಸೇವೆ, ನೂರೊಂದೆಡೆಸೇವೆ, ಹೆಜ್ಜೆನಡೆ ಸೇವೆ, ಬಾಯಿಬೀಗ ಸೇವೆ, ಪಂಜಿನ ಸೇವೆ, ಇವೆಲ್ಲವೂ ವಿಶೇಷ ಆಚರಣೆಗಳಾಗಿದ್ದು ರಂಗನಾಥಸ್ವಾಮಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಇತಿಹಾಸ, ಪರಂಪರೆ, ಸಂಪ್ರದಾಯವನ್ನು ಕಟ್ಟಿಕೊಡಲು ಬಹುಮುಖ್ಯ ಆಕರಗಳಾಗಿವೆ.

ಸಿರಿ ಉಪಾಸನೆಯ ಪ್ರಾಚೀನ ಐತಿಹಾಸಿಕ ಕ್ಷೇತ್ರ: ಶಂಭುಕಲ್ಲು ಉದ್ಯಾವರ

ಡಾ. ಇಂದಿರಾ ಹೆಗ್ಗಡೆ*

ಉಡುಪಿ ಜಿಲ್ಲೆಯ ಉದ್ಯಾವರ ಆಳುಪರಸರ ಆರಂಭಕಾಲದ ರಾಜಧಾನಿ. ಇವರ ಆದಿದೈವ ಶಂಭುಕಲ್ಲು (ತುಳು ಚೆಂಬುಕಲ್ಲ್) ಬೆಟ್ಟದ ಮೇಲೆ ಇರುವ ಶಂಭುಲಿಂಗ ದೇವಸ್ಥಾನ.

ಹಲವು ಕಾಲ ಪಾಳು ಬಿದ್ದಿರುವ ಈ ಕ್ಷೇತ್ರದಲ್ಲಿ ದೊರೆತ ೭ನೆಯ ಶತಮಾನದ ಕೊನೆಯ ಕಾಲದ ಶಾಸನದಲ್ಲಿ ಗಜಪೃಷ್ಠಾಕಾರದ ಗರ್ಭಗುಡಿಯ ದೇವಸ್ಥಾನದ ಉಲ್ಲೇಖ ಇದೆ. ಇಡಿಯ ತುಳುನಾಡಿಗೆ ಇದು ಅತ್ಯಂತ ಪ್ರಾಚೀನ ದೇವಸ್ಥಾನ ಎನ್ನುತ್ತಾರೆ ಶಾಸನತಜ್ಞ ಮತ್ತು ಇತಿಹಾಸಕಾರ ಡಾ. ಪಿ.ಎನ್. ನರಸಿಂಹಮೂರ್ತಿಯವರು. ಪಾದೆಕಲ್ಲಿನ ಬೆಟ್ಟದ ಶಂಭುಗುಡಿ ಇದ್ದ ಕಾರಣ "ಶಂಬು ಕಲ್ಲು" ಎಂದು ಹೆಸರಾಗಿದೆ.

ಆರಂಭ ಕಾಲದ ಆಳುಪರಸರಿಗೆ ಸಂಬಂಧಿಸಿದ ಈ ಕ್ಷೇತ್ರದಲ್ಲಿ ತುಳು ಜನಪದರ ಕೃಷಿ ಪೋಷಕ ದೈವಗಳಾದ 'ಅವಳಿಸಿರಿ' ಗುಡಿ ಮತ್ತು ಪರಿವಾರ ದೈವಗಳು ಇವೆ. ಹೀಗಾಗಿ ತುಳು ನೆಲಮೂಲದ ಉಪಾಸನ ಶಕ್ತಿಗಳಾದ ಅವಳಿಸಿರಿಗಳ ಉಪಾಸನೆಯು ಸುಮಾರು ಏಳನೆಯ ಶತಮಾನಕ್ಕೂ ಪೂರ್ವ ಕಾಲದಲ್ಲೂ ಇತ್ತು ಎನ್ನುವುದಕ್ಕೆ ಈ ಗುಡಿಯು ಆಧಾರವಾಗುತ್ತದೆ.

ಈ ಕ್ಷೇತ್ರ ಅನೇಕ ವರ್ಷಗಳ ಕಾಲ ಪಾಳು ಬಿದ್ದಿದ್ದರೂ ಶಿವನ ಗುಡಿಯ ಬಲಕ್ಕೆ ಸಿರಿಗುಡಿ ಹಾಗೂ ಪರಿವಾರ ದೈವಗಳು ಉಳಿದು ಬಂದಿವೆ. ಆದರೆ ಅದು ಮರೆಯಲ್ಲಿದೆ. ಸಾರ್ವಜನಿಕರಿಗೆ ಸಿರಿ ಗುಡಿ ಇರುವುದು ಗೊತ್ತಿಲ್ಲ. ವರ್ಷಕ್ಕೆ ಒಮ್ಮೆ ಪಗ್ಗು ಹುಣ್ಣಿಮೆಯಂದು ಉದ್ಯಾವರ ಪಟೇಲರ ಮನೆಯವರು ಇಲ್ಲಿ ಸಮಾರಾಧನೆ ನಡೆಸುತ್ತಾರೆ.

ಸಿರಿಗುಡಿಗೂ ಶಂಭುಕಲ್ಲು ಮಹಾದೇವರ ಗರ್ಭ ಗುಡಿಗೂ ನಡುವೆ ಇನ್ನೊಂದು ದೇವಸ್ಥಾನ ಇದೆ. ಅದರ ಹೆಸರು ಶ್ರೀಶಂಭು ಶೈಲೇಶ್ವರ. ಶಂಭುಶಿವನ ಗಜಪೃಷ್ಠಾಕಾರದ ಗುಡಿಯ ೨೦ ಅಡಿ ಎಡಕ್ಕೆ ಇರುವ ಶಂಭು ಶೈಲೇಶ್ವರ ದೇವಸ್ಥಾನ ಅನಂತರ ಕಾಲದ್ದು ಎನ್ನುವುದು ಸಂಶೋಧಕರ ಅಭಿಪ್ರಾಯ.

ಹಿಂದೆ ಶಂಭು ಶೈಲೇಶ್ವರ ದೇವಸ್ಥಾನಕ್ಕೆ ಸುತ್ತ ಪೌಳಿ ಇರಲಿಲ್ಲ.

"ಶಂಭು ಶೈಲೇಶ್ವರ ಗುಡಿಯ ಬಲ ಭಾಗದ ಮೂಲೆಯಲ್ಲಿ ಹೆಂಚಿನ ಪುಟ್ಟ ಗುಡಿ ಇತ್ತು. ಅದರೊಳಗೆ ಎರಡು ಲೋಹದ ಸಿರಿ ಶಿಲ್ಪಗಳು ಇದ್ದುವು. ಒಂದು ಮರದ ಕೋಳಿಯ ಶಿಲ್ಪ ಇತ್ತು. ಮೂಲತಃ ಎರಡು ಪುಟ್ಟ ಸಿರಿ ಶಿಲ್ಪಗಳು ಮರದ್ದೇ ಇತ್ತು. ಮುಂದಿನ ಕಾಲಘಟ್ಟದಲ್ಲಿ ಮರದ ಶಿಲ್ಪದ ಆಳತೆಯಷ್ಟೇ ಪುಟ್ಟ ಲೋಹ ಶಿಲ್ಪಗಳ ರಚನೆ ಮಾಡಲಾಯಿತು. ಹಾಳಾಗಿರುವ ಮರದ ಕೋಳಿಯ ಶಿಲ್ಪ ಮೂಲದ್ದೇ ಎನ್ನುತ್ತಾರೆ." (ಕೋಳಿಯು ಕುಮಾರನನ್ನು ಪ್ರತಿನಿಧಿಸುತ್ತದೆ.)

ಕೆಲ ವರ್ಷಗಳ ಹಿಂದೆ ಶೈಲೇಶ್ವರ ದೇವಾಲಯಕ್ಕೆ ಪೌಳಿ ನಿರ್ಮಿಸಿದ್ದಾರೆ. ಆಗ ಸಿರಿಗಳ ಗುಡಿಯನ್ನು ಪೌಳಿಯ ಹೊರಗೆ ಸ್ಥಳಾಂತರಿಸಲಾಗಿದೆ. ಅಂದರೆ ಹಳೆಯ ಸಿರಿಗುಡಿಯನ್ನು ಕೆಡವಿ ಬಲ ಮೂಲೆಯಲ್ಲಿಯೇ ಹಳೆಯ ಮಾದರಿಯ ಹೊಸ ಗುಡಿಯನ್ನು ಪೌಳಿಯ ಹೊರಗೆ ಕಟ್ಟಲಾಗಿದೆ. ಅರ್ಚಕ ಗಣಪತಿ ಆಚಾರ್ ಅವರ ಪ್ರಕಾರ ಶಿಲ್ಪಗಳನ್ನು ಆಗಲೂ ಬದಲಾಯಿಸಲಿಲ್ಲ.

ಸಿರಿಯ ಗುಡಿಯ ಶಿಲಾ ಶಿಖರದ ಮುಂಭಾಗದ (ಪೂರ್ವಕ್ಕೆ) ತಳಭಾಗದಲ್ಲಿ ಕಾಡು ಇದೆ. ಇದು ನಾಗಬ್ರಹ್ಮ ಕ್ಷೇತ್ರ. ಇಲ್ಲಿ ನಿಲುವುಗಲ್ಲು ಇದೆ. ಆ ನಿಲುವುಗಲ್ಲನ್ನು ತೋರಿಸಿ ತುಳುವರ 'ಬ್ರಹ್ಮ' ಅರ್ಚಕರು ಪರಿಚಯಿಸುತ್ತಾರೆ. (ಅನೇಕ ನಾಗಬ್ರಹ್ಮ ಕ್ಷೇತ್ರಗಳಲ್ಲಿ ಹೆಚ್ಚಾಗಿ ಸ್ತೂಪ ಅಥವಾ ಮುಡಿಂಜ, ನಿಲುವುಗಲ್ಲುಗಳು ನಾಗಬ್ರಹ್ಮನನ್ನು ಪ್ರತಿನಿಧಿಸುತ್ತದೆ) ನಾಗಬನ ಜೀರ್ಣೋದ್ಧಾರ ಆದಾಗ (ಕಾಡು ಕಡಿಯದೆ) ಆ ಮೂಲ ನಿಲುವುಗಲ್ಲನ್ನು ಇದ್ದಲ್ಲಿಯೇ ಉಳಿಸಿ ನಾಗಬ್ರಹ್ಮನ ಸಂಕೇತವಾಗಿ ಪಾಣಿಪೀಠದ ಲಿಂಗವನ್ನು ನಾಗಶಿಲ್ಪಗಳ ಬಳಿ ಪ್ರತ್ಯೇಕ 'ಗುಂಡ' ಕಟ್ಟಿ ಸ್ಥಾಪಿಸಲಾಗಿದೆ. ಬ್ರಹ್ಮ ಕ್ಷೇತ್ರದಲ್ಲಿ ಇರುವ

* ನಂ. ೬, ಕೃಷ್ಣಾ ರೆಸಿಡೆನ್ಸಿ, ೩ನೆಯ ಅಡ್ಡರಸ್ತೆ, ಅಮರಜ್ಯೋತಿನಗರ, ಬೆಂಗಳೂರು-೫೬೦೦೪೦.

ಹಳೆಯ ಕೆರೆ ಬತ್ತಿದರೂ ಸತ್ತಿಲ್ಲ. ನಾಗ ಬನದ ಬಳಿ ಇದ್ದ ಕಂಬುಲ ಗದ್ದೆ ಈಗ ಪರಧರ್ಮಿಯರ ಪಾಲಾಗಿದೆ.

ಈ ಬ್ರಹ್ಮಕ್ಷೇತ್ರ ಸ್ಥಳೀಯರ ಮೂಲಸ್ಥಾನ ಕ್ಷೇತ್ರ. ಈ ಕ್ಷೇತ್ರದಲ್ಲಿ ನಾಗಬ್ರಹ್ಮನ ಉಪಾಸನೆ ಅಬ್ರಾಹ್ಮಣ ವರ್ಗದವರಿಂದ ಈಗಲೂ ನಡೆಯುತ್ತದೆ. ಸಿರಿಕ್ಷೇತ್ರ ಇದ್ದಲ್ಲಿ ನಾಗಬ್ರಹ್ಮ ಕ್ಷೇತ್ರ ಇರುತ್ತದೆ.

ಸಿರಿಗಳಲ್ಲಿ ವೈವಿಧ್ಯತೆ

ನನ್ನ ಕ್ಷೇತ್ರ ಕಾರ್ಯದಲ್ಲಿ ಪ್ರಧಾನವಾಗಿ ಎರಡು ಬಗೆಯಲ್ಲಿ ಉಪಾಸನೆಗೊಳ್ಳುವ ಭಿನ್ನ ಜೋಡಿ ಸಿರಿಗಳು ಕಂಡು ಬಂದಿದೆ.

೧. ತುಳುನಾಡ ಸಿರಿಪಾಡ್ದನದಲ್ಲಿ ಬರುವ ಸಿರಿಬಳಗ ಇದು ಪರೋಕ್ಷವಾಗಿ ಕೃಷಿ ಸಂಸ್ಕೃತಿಗೆ ಸಂಬಂಧಿಸಿದೆ. ಈ 'ಅವಳಿ ಸಿರಿ'ಗಳಿಗೆ ಮಾನವರಂತೆ ಕುಟುಂಬ ಇದೆ. ಇವರಿಗ ಒಬ್ಬ ತಮೆರಿ (ತವರ ರಕ್ಷಕ) ಇದ್ದಾನೆ. ಉಲ್ಲಾಯ (ನಾಗಬೆರ್ಮೆ) ಇದ್ದಾನೆ. ಈ ಸಿರಿ ಉಪಾಸನೆಯು ವೈದಿಕ ಪದ್ಧತಿಗೆ ವಾಲುತ್ತಾ ಸಾಗುತ್ತಿದೆ. ಆದರೂ ಇಲ್ಲಿಯೂ ಕುಮಾರನನ್ನು ಉಂಡು ಮಾಡುವ ಸಂದರ್ಭದಲ್ಲಿ ಕುಂಭದ ಒಳಗೆ ಭತ್ತ ಅಥವಾ ಅಕ್ಕಿ ಹಾಕಿ ನುರು ಸುರುವುತ್ತಾರೆ. ಇಲ್ಲಿಯ ಕಥಾನಾಯಕಿಯ ಜನನದಲ್ಲೂ ಜೊತೆಗೆ ನೂರಾರು ದೈವಗಳು ಹುಟ್ಟುತ್ತವೆ.

ಇಲ್ಲಿ ಗರ್ಭಗುಡಿಯ ಒಳಗೆ ಹಾಗೂ ಕೆಲವೊಂದು ಕಡೆ ಶಿವನ ಜೊತೆಗೆ ಪಾಡ್ದನ ಸಿರಿ ಕುಟುಂಬದ ಸಿರಿಯ ಮೊಮ್ಮಕ್ಕಳಾದ ಅವಳಿಗಳು ಪೂಜೆ ಪಡೆಯುವುದು ಗಮನಿಸ ಬೇಕಾದ ಅಂಶ.

೨. ನೇರವಾಗಿ ಕೃಷಿಗೆ ಸಂಬಂಧಿಸಿದ ಜೋಡಿ ಸಿರಿಗಳು. ಇವುಗಳಿಗೆ ಮಾನವರಂತೆ ಕುಟುಂಬ ಇಲ್ಲ. ತಮೆರಿ (ತವರಿನ ಪುರುಷ ಯಜಮಾನ) ಇಲ್ಲ. ಅಥವಾ ಯಜಮಾನ ದೈವ (ಉಲ್ಲಾಯ ಅಥವಾ ನಾಗ ಬೆರ್ಮೆ) ಇಲ್ಲ.

ನಂಬಿಕೆಯ ಪ್ರಕಾರ ಕೃಷಿ ಸಂಸ್ಕೃತಿಯ ಸಿರಿಪರಿವಾರ ಅತಿಕಾರ ಹೆಸರಿನ ಭತ್ತದ ತಳಿಯ ಜೊತೆಗೆ ತುಳುನಾಡಿಗೆ ಬಂದಿದೆ. ಅವುಗಳ ಜೊತೆ ಸಾವಿರಾರು ಭೂತಗಳು ನೂರೊಂದು ಗಂಡಗಣಗಳು ಬಂದಿವೆ. ಈ ನಂಬಿಕೆಯನ್ನು ಪುಷ್ಟೀಕರಿಸುವ ಆಚರಣೆ, ಉಪಾಸನೆ ಈಗಲೂ ಮುಂದು ವರಿದಿದೆ. ಇದು ಗಮನಿಸಬೇಕಾದ ಅಂಶ.

ಜೋಡಿ ಸಿರಿಗಳ ಉಪಾಸನೆ ಅಂದರೆ ಸಿರಿಗಳಿಗೂ ಕೋಲ ಆಗಬೇಕು. ಜೊತೆಗೆ ಈ ಭೂಮಿಯಲ್ಲಿಯ ಎಲ್ಲಾ ದೈವಗಳಿಗೆ ಕೋಲ ಆಗುತ್ತದೆ. ದೇವರುಗಳಿಗೂ ಉಪಾಸನೆ ಆಗಬೇಕು. ಆದರೆ ಎಲ್ಲ ಆಚರಣೆಗಳು ನಲಿಕೆ ಜನಾಂಗದವರಿಂದ ಮಾತ್ರ ಆಗುವಂತಹುದು. ಆದರೆ ಎಲ್ಲಾ ದೈವಗಳಿಗೆ ಮೇಲಿನ ಸ್ತರದಲ್ಲಿ ಜೋಡಿ ಸಿರಿಗಳು ಇರುತ್ತಾರೆ.

ಉಪಾನೆಯ ಸಂದರ್ಭದಲ್ಲಿ ಅತಿಕಾರೆ ಎಂಬ ಪವಿತ್ರ ಬೆಳೆಯ ಭತ್ತದ ಬೀಜವನ್ನು ಎರಡು ಹೆಡಿಗೆಗಳಲ್ಲಿ ತುಂಬಿಸಿ ಅದಕ್ಕೆ ಕಾಯಿ ಒಡೆದು ಪಿಂಗಾರ ಊರಿ ಅರಮನೆ ಅಥವಾ ಬೀಡಿನ ಚಾವಡಿಯಲ್ಲಿ ಇಟ್ಟು ಪೂಜಿಸುತ್ತಾರೆ. ಎಲ್ಲಾ ದೈವಪಾತ್ರಿಗಳು ಅರಮನೆಯ ಮುಂದೆ ಬಂದು ಚಾವಡಿಯಲ್ಲಿಯ "ಅವಳಿ ಹೆಡಿಗೆ"ಗಳನ್ನು ಪೂಜಿಸಿ ಮರಳುತ್ತವೆ. ಇವು ಜೋಡಿ ಸಿರಿಗಳನ್ನು ಪ್ರತಿನಿಧಿಸುತ್ತವೆ. ಗುಡಿಯ ಒಳಗೆ ಎರಡು ಕುಂಭಗಳಿವೆ.

ಸಿರಿ ಉಪಾಸನೆಯ ಪ್ರಾದೇಶಿಕ ವ್ಯಾಪ್ತಿ

ಉಡುಪಿ ತಾಲೂಕಿನ ದಕ್ಷಿಣ ಭಾಗಗಳು, ಕಾರ್ಕಳ ತಾಲೂಕು ಜೋಡಿಸಿರಿಗಳ ಉಪಾಸನೆ ನಡೆಯುತ್ತಿತ್ತು.

ಮೇಲೆ ತಿಳಿಸಿದ ಪ್ರದೇಶಗಳಲ್ಲದೆ, ಮಂಗಳೂರು ತಾಲೂಕಿನ ಕಡೆ ಸುರತ್ಕಲ್ ಬಳಿ ನಾಲ್ಕು ಕ್ಷೇತ್ರದಲ್ಲಿ ಸಿರಿ ಕುಟುಂಬ ಬಳಗದ ಉಪಾಸನೆ ಇದೆ. ಬೆಳ್ತಂಗಡಿ ತಾಲೂಕಿನಲ್ಲಿ ಒಂದೆರಡು ಕಡೆ 'ಕುಟುಂಬ ಸಿರಿ' ಉಪಾಸನೆ ನಡೆಯುತ್ತಿದೆ. ಬೆಳ್ತಂಗಡಿ ತಾಲೂಕಿನಲ್ಲಿ ೧೯ನೆಯ ಶತಮಾನದಲ್ಲಿ ಸಿರಿ ಉಪಾಸನೆ ಪ್ರಾರಂಭವಾಯಿತು ಎಂಬ ಮಾಹಿತಿ ಬಂದಿದೆ. (ನೋಡಿ ಇಂದಿರಾ ಹೆಗ್ಗಡೆ: ತುಳುವರ ಮೂಲತಾನ ಆದಿ ಆಲಡೆ ಪರಂಪರೆ ಮತ್ತು ಪರಿವರ್ತನೆ ೨೦೧೨)

ನೀರಾವರಿ ಆಧಾರಿತ ಭೂಮಿ ಇರುವ ಪ್ರದೇಶಗಳಲ್ಲಿ ಮಾತ್ರ ಸಿರಿ ಉಪಾಸನೆ ಕಂಡುಬರುತ್ತಿದೆ. ಭತ್ತ ಬೆಳೆಯುವ ಫಲವತ್ತಾದ ಕಂಬುಲ ಗದ್ದೆ ಇರುವ ಪಾಳೆಯಗಾರರ ಭೂಮಿಯಲ್ಲಿ ಸಿರಿ ಉಪಾಸನೆ ಕಂಡುಬಂದಿದೆ.

ಕೃಷಿ ಸಂಸ್ಕೃತಿಯ ಸಿರಿ ಬಳಗದ ಉಪಾಸನೆ 'ಕಂಬುಲದ ಬೆಳೆಯ ಕೊಯ್ಲಿ'ನ ಸಂದರ್ಭದಲ್ಲಿ (ಅಥವಾ ಬಾಕಿಮಾರು) ಆಗಬೇಕು. ಬಾಕಿಮಾರು ಅಥವಾ ಕಂಬುಲ ಗದ್ದೆಯ ಕೊಯ್ಲಿನ ಸಂದರ್ಭದಲ್ಲಿ ಅವಳಿ ಸಿರಿಗಳ ಉಪಾಸನೆಯ ಅಂಗವಾಗಿ ದೆಯ್ಯೊಲೆ ನಲಿಕೆ ನಲಿಯುತ್ತಿತ್ತು.

ಕಂಬುಲ ಗದ್ದೆಯ ಉಳುಮೆ ಆಗುವಾಗ ದೆಯ್ಯೊಲೆ ನಲಿಕೆ ನಡೆಯುತ್ತಿತ್ತು. ಈ ದೆಯ್ಯೊಲೆ ನಲಿಕೆ 'ಕುಟುಂಬ ಸಿರಿ ಬಳಗ'ದಿಂದ ಆಗುತ್ತದೆ. ಇಲ್ಲಿ ಪಾತ್ರಿಗಳು ನಾಗಬ್ರಹ್ಮ ಸಿರಿ ಆಲಡೆಯ ಕ್ಷೇತ್ರದ ಸಿರಿ ಪಾತ್ರಿಗಳಂತೆ ದರ್ಶನ ನಿಲ್ಲುತ್ತಾರೆ.

ತುಳುನಾಡ ಸಿರಿ ಪಾಡ್ದನದ ಸಿರಿ ಬಳಗದ ಉಪಾಸನೆಯು ಹೆಚ್ಚಿನ ಕಡೆ ಜನಪದ ಪದ್ಧತಿಯಿಂದ ವೈದಿಕ ಪದ್ಧತಿಗೆ ಪರಿವರ್ತನೆ ಆದರೂ ಹೆಚ್ಚಿನ ಮೂಲ ಆಚರಣೆಗಳನ್ನು ಉಳಿಸಿಕೊಂಡು ಪ್ರಸಿದ್ಧಿ ಹೊಂದಿವೆ. ಭತ್ತದ

ವ್ಯವಸಾಯ ಉಪೇಕ್ಷೆಗೆ ಒಳಗಾದ ಮೇಲೆ ಅತಿಕಾರೆ ಭತ್ತದ ಜೊತೆ ಬಂದ ಸಿರಿಪರಿವಾರದ ದೆಯ್ಯೊಲೆ ನಲಿಕೆ ಬಹಳ ಅಪರೂಪವಾಗಿದೆ.

ಶಾಸನಗಳಲ್ಲಿ ಸಿರಿ ಉಪಾಸನೆಯ ಉಲ್ಲೇಖ

ಪುತ್ತಿಗೆಯ ವರದಯ್ಯ ಚೌಟರು ಕ್ರಿ.ಶ. ೧೧೮೦ರಲ್ಲಿ ದೈವಂತಿ ಗುಡಿ ಕಟ್ಟಿಸಿದ್ದ ಬಗ್ಗೆ, ಅಲ್ಲಿ ೩ ದಿನದ ದೆಯ್ಯೊಲೆ ನಲಿಕೆ ಆಗುತ್ತಿದ್ದ ಬಗ್ಗೆ ಉಲ್ಲೇಖ ಇದೆ. (ಶ್ರೀ ಕ್ಷೇತ್ರ ಪುತ್ತಿಗೆ) ದೆಯ್ಯಂತಿ ಎನ್ನುವುದು ಕೃಷಿ ಉಪಾಸನೆಯ ಸಿರಿಗಳು. ಪುತ್ತಿಗೆಯ ಚವಟರ ದೈಯಂತಿ ಗುಡ್ಡದ ಬಳಿ ಕ್ಷೇತ್ರಕಾರ್ಯ ಮಾಡಿದ್ದೇನೆ. ದೆಯ್ಯಂತಿ ಶಿಲ್ಪವನ್ನೂ ನೋಡಿದ್ದೇನೆ. ಇವು ಕೃಷಿಪೋಷಕ ಆಚರಣೆಯ ಸಿರಿಗಳು.

ಕ್ರಿ.ಶ. ೧೪೪೩ರ ಕಾರ್ಕಳ ತಾಲೂಕಿನ ಉದ್ಯಾವರ ಶಾಸನದ "ವೀರಭದ್ರ ವಿನಾಯಕ ದೇವರಿಗೂ ನಿಂಚಿತಾ ಬಲಿಪೂಜೆಯ ಕೊಂಬ ನಂದಳಿಕೆಯ ದೈವಗಳಿಗೂ" (SII. VII. No.295) ಎಂಬ ಮಾಹಿತಿ ನಂದಳಿಕೆಯ ಸಿರಿ ಆಲಡೆ ದೈವಗಳನ್ನು ಕುರಿತಾಗಿದೆ. ಆಗಿನ್ನೂ ನಂದಳಿಕೆಯಲ್ಲಿ ಮಹಾಲಿಂಗೇಶ್ವರ ಲಿಂಗ ಸ್ಥಾಪನೆ ಆಗಿರಲಿಲ್ಲ. (ಇಂದಿರಾ ಹೆಗ್ಗಡೆ : ತುಳುವರ ಮೂಲತಾನ ಆದಿ ಆಲಡೆ ಪರಂಪರೆ ಮತ್ತು ಪರಿವರ್ತನೆ. ಪುಟ ೧೨೯ ನವಕರ್ನಾಟಕ ೨೦೧೨) ನಂದಳಿಕೆಯ ದೈವಂಗಳು "ನಾಗಬ್ರಹ್ಮ ಮತ್ತು ಸಿರಿ ಪರಿವಾರ ಗಳು".

ಕ್ರಿ.ಶ. ೧೪೯೯ರ ಉಡುಪಿ ತಾಲೂಕಿನ ಕಾಪು ಶಾಸನ- ನಂದಳಿಕೆಯ ದೈವಂಗಳ (SII. VII. No.273) ಶಾಪಾಶಯ ಹೊಂದಿದೆ. ನಂದಳಿಕೆಯ ಮೂಲ ಗರ್ಭಗುಡಿಯಲ್ಲಿ ಅಬ್ಬಗ- ದಾರಗರ ಅವಳಿ ಶಿಲ್ಪಗಳು ದೈವಗಳು ಉಪಾಸನೆಗೊಳ್ಳುತ್ತಿವೆ.

ನಂದಳಿಕೆ ಹೆಗ್ಗಡೆಯವರಿಗೂ ಚೌಟರಿಗೂ ಆದ ಕರಾರಿನಲ್ಲಿ (ಶಕ ೧೪೫೦) ನಂದಳಿಕೆಯ ದೈವಗಳ ಪ್ರಸ್ತಾಪ ಮಾತ್ರ ಬರುತ್ತದೆ.

ಶಾಸನ ೨.

ಪಿ.ಎನ್. ನರಸಿಂಹಮೂರ್ತಿಯವರು ೨೦೦೩ರಲ್ಲಿ ಸುರತ್ಕಲ್ ಬಳಿಯ ತೋಕೂರಿನಲ್ಲಿ ಪತ್ತೆ ಶಾಸನ. ಇದು ಸುಮಾರು ೭ನೆಯ ಶತಮಾನಕ್ಕೆ ಸೇರಿರಬಹುದಾದ ಶಾಸನ ಎಂದು ಅಂದಾಜಿಸಲಾಗಿದೆ. ಈ ಶಾಸನದಲ್ಲಿ 'ಅಯ್ದು (೫) ಒಕ್ಕಲ 'ಕೆಯಿ"ಯನ್ನು ನಾಯ್ಗ ಎಳ ಅರಸ ಶ್ರೀ ಕಾಯತ್ತೂರ (ಈಗಿನ ತೋಕೂರ) ದೇಗುಲದಲ್ಲಿ ಬೇಸಗೆಯ ಹುಣ್ಣಿಮೆಗೆ (ನಡೆಯುವ ಸಮಾರಾಧನೆಗೆ) ಉಣ್ಣುವ ವ್ಯವಸ್ಥೆಗೆ ಎರಡು ಖಂಡುಗ 'ಕೆಯ್' (ತುಳು ಕೆಯಿ) ನೀಡುವ ಉಲ್ಲೇಖ ಇದೆ. ಇಲ್ಲಿಯ 'ನಾಯ್ಗ(ನಾಯಕ)ಎಳೆ ಅರಸ 'ಕೊಳ್ಮೆತರಾ, ಕವಡರಾ, ತಣ್ವಯಲಣರುಂ ತೋಕರಣ್ವರಂ' ಎಂಬ ಐದು ಒಕ್ಕಲ ಕೆಯ್ಯ (ಭತ್ತದ) ಧನದಲ್ಲಿ ಎರಡು ಖಂಡುಗ ಭತ್ತವನ್ನು ಬೇಸಗೆಯ ಹುಣ್ಣಿಮೆಯಲ್ಲಿ ಉಣ್ಣುವ ವ್ಯವಸ್ಥೆಗೆ ಮೀಸಲಿಡ ಬೇಕೆಂದು ಆದೇಶ ಮಾಡಿದ ಶಾಸನ.

ಈ ಶಾಸನ ದೊರೆತುದು ಜಾರಂದಾಯ ಗುಡಿಯ ಮರುನಿರ್ಮಾಣ ಕಾಲದಲ್ಲಿ ಧ್ವಜಸ್ಥಂಭದ ಅಡಿ ಶಾಸನ ಕಲ್ಲು ದೊರೆತಿದೆ. ಶಾಸನದ ಜೊತೆಗೆ ಹೆಡೆಯ ಸರ್ಪಚಿತ್ರ ಇದ್ದು ಹೆಡೆಯ ಬಳಿ ಸೂರ್ಯ ಚಂದ್ರರ ಚಿತ್ರ ಇದೆ. ತೋಕೂರಿನಲ್ಲಾಗಲೀ, ಈ ಶಾಸನದ ದೊರೆತ ಸ್ಥಳದ ಸಮೀಪ ವಾಗಲೀ ಯಾವುದೇ ವೈದಿಕ ಸಂಪ್ರದಾಯದ ದೇವಸ್ಥಾನ ಇಲ್ಲ. ಜಾರಂದಾಯ, ಜುಮಾದಿ ಮತ್ತು ಉಲ್ಲಾಯ ಶಕ್ತಿಗಳಿವೆ. ಈ ಭಾಗದಲ್ಲಿ ಕ್ಷೇತ್ರಕಾರ್ಯ ಮಾಡಿದಾಗ ಈ ಶಾಸನ ದೊರಕಿದ ಸ್ಥಳದ ಸಮೀಪದ ಗುಡ್ಡವನ್ನು 'ಅರಂತಗುಡ್ಡೆ' ಎಂದು ಕರೆಯುವ ಮಾಹಿತಿ ದೊರಕಿತು. ತುಳುಭಾಷೆಯಲ್ಲಿ 'ಅರಂತ ಗುಡ್ಡೆ' ಅಂದರೆ ಅರಮನೆಯ ಗುಡ್ಡ ಎಂಬ ಅರ್ಥ. ಅರಂತ ಗುಡ್ಡೆ ಮತ್ತು ಜಾರಂದಾಯ ಗುಡ್ಡೆಗಳ ನಡುವೆ 'ಪಂಚ ದೈವಗಳ' ಕ್ಷೇತ್ರ ಇತ್ತು. ಈ ಕ್ಷೇತ್ರದಲ್ಲಿ ಅವಳಿ ಸಿರಿಗಳ ಎರಡು ಶಿಲಾ ಸಂಕೇತಗಳು ಇದ್ದವು. ಇದರ ಅರ್ಚಕ 'ಮುಕ್ಕಾಲ್ದಿ' (ಬಂಟ ಅರ್ಚಕ). ಈ ಗುಡ್ಡದ ಶಿಖರದಲ್ಲಿ ಎರಡು ಸಿರಿಗಳ ಉಪಾಸನೆ ಬಂಟ ಅರ್ಚಕರಿಂದ ನಡೆಯುತ್ತಿತ್ತು. ಇಲ್ಲಿಯ ನೇಮದ ಸಂದರ್ಭದಲ್ಲಿ ಈ ಸಿರಿಗಳ ಕಲ್ಲುಗಳ ಮುಂದೆ ನೈವೇದ್ಯ ಬಡಿಸುತ್ತಿದ್ದರು. ಎಮ್.ಆರ್.ಪಿ.ಎಲ್. ಈ ಸ್ಥಳವನ್ನು ಆಕ್ರಮಿಸಿ ಗುಡ್ಡವನ್ನು ನೆಲಸಮ ಮಾಡಲಾಗಿದೆ. ಆದರೆ ಈ ಮೊದಲೇ ಈ ಗುಡ್ಡದಲ್ಲಿ ಸಿರಿಗಳ ಉಪಾಸನೆ ನಿಂತಿತ್ತು. ಕುಟುಂಬದ ಬಂಟ ಅರ್ಚಕರು (ಮುಕ್ಕಾಲ್ದಿ) ನಿಧನರಾದ ಮೇಲೆ ಸಿರಿಗಳ ಅರ್ಚನೆಯ, ಉಪಾಸನೆಯ ಹೊಣೆ ಹೊತ್ತುಕೊಳ್ಳಲು ಯಾರೂ ಸಿದ್ಧರಾಗಿರಲಿಲ್ಲ ಎನ್ನುವುದು ಶಿಲೆಯಲ್ಲಿ ನಂಬಿದ ಸಿರಿ ಶಕ್ತಿಗಳ ಅವಸಾನದ ಬಗ್ಗೆ ದೊರೆತ ಮಾಹಿತಿ. ಶಾಸನ ಗಳಲ್ಲಿ ಐದು ಖಂಡುಗ ಭತ್ತವನ್ನು ಬೇಸಗೆಯ ಹುಣ್ಣಿಮೆಯ ಉಪಾಸನೆಗೆ ಮೀಸಲಿಟ್ಟದ್ದು.

ತೋಕೂರು ಮಾಗಣೆಯ ಪಾಳೆಯಗಾರಿಕೆಯಲ್ಲಿ ಪಟ್ಟ ಆದ ವ್ಯಕ್ತಿಯನ್ನು 'ಆಳುವ' ಎಂಬ ಆ ಮನೆತನದ ಪರಂಪರೆಯ ಹೆಸರಿನಲ್ಲಿ ಕರೆಯುವ ರೂಢಿ ಈಗಲೂ ಮುಂದುವರೆದಿದೆ.

೩. ಉಡುಪಿಯ ತಾಲೂಕಿನ ಎರ್ಮಾಳ್ ಪಾದೆ ಬೆಟ್ಟು ಸಿರಿ ಆಲಡೆಯ ಬಳಿ (ಉಪಾಸನಾ ಕ್ಷೇತ್ರ) ಮಣ್ಣಿನಡಿ ನನಗೆ ದೊರೆತ ಸಿರಿ ಶಿಲ್ಪವು ಸುಮಾರು ೧೫ ಶತಮಾನಕ್ಕೆ ಸೇರಿದೆ ಎಂದು ಖ್ಯಾತ ಪುರಾತತ್ವ ತಜ್ಞ ಅ. ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ.

ಶಂಭುಕಲ್ಲು ಗುಡ್ಡದ ಮಹತ್ವ: ಈ ಶಿಖರ ಕ್ಷೇತ್ರದ ಸಿರಿಗಳ ಗುಡಿಯು ಐತಿಹಾಸಿಕ ಮಹತ್ವದ್ದು. ಏಳನೆಯ ಶತಮಾನಕ್ಕೂ ಪೂರ್ವದಿಂದಲೂ ಇಲ್ಲಿ ಸಿರಿ ಉಪಾಸನೆ ನಡೆಯುತ್ತಿತ್ತು ಎನ್ನುವುದಕ್ಕೆ ಈ ಗುಡಿ ಹಾಗೂ ಇಲ್ಲಿರುವ ಸಿರಿ ಶಿಲ್ಪ ಹಾಗೂ ಕೋಳಿಯ ಶಿಲ್ಪಗಳು ದೃಷ್ಟಾಂತವಾಗುತ್ತವೆ. ಸಿರಿಗಳಿಗೆ ಐತಿಹಾಸಿಕ ಮಹತ್ವ ಇರುವುದರಿಂದಲೇ ಪಾಳು ಬಿದ್ದ ಕ್ಷೇತ್ರವನ್ನು ಜೀರ್ಣೋದ್ಧಾರ ಮಾಡುವಾಗ ಸಿರಿಗುಡಿಯನ್ನು ಇದ್ದಂತೆ ಇರಗೊಟ್ಟಿದ್ದಾರೆ. ಹೀಗಾಗಿ ಉಪಾಸನಾ ಆಚರಣೆ ಇಲ್ಲದಿದ್ದರೂ ಸಿರಿಗಳ ಗುಡಿ, ಸಿರಿಗಳ ಶಿಲ್ಪ ಉಳಿದು ಬಂದಿವೆ. ಸಂಪೂರ್ಣ ವೈದಿಕಮಯವಾಗಿರುವ ಈ ಕ್ಷೇತ್ರದಲ್ಲಿ ಜನಪದರ ಶೂದ್ರ ಸಿರಿ ಶಿಲ್ಪಗಳನ್ನು, ಭೂತ/ದೈವಗಳನ್ನು ಪ್ರತಿಷ್ಠಾಪಿಸುವ ಸಂಭವ ಇಲ್ಲ. ಅವುಗಳ ಅಗತ್ಯವೂ ವೈದಿಕ ಉಪಾಸನೆಗೆ ಅಗತ್ಯ ಇಲ್ಲ. ಯಾವುದೇ ವೈದಿಕ ಕ್ಷೇತ್ರಕ್ಕೆ ಜನಪದ ದೈವಗಳು ಅನಂತರ ಸೇರ್ಪಡೆಯಾಗುವ ಸಾಧ್ಯತೆ ತೀರಾ ಕಡಿಮೆ. ಆದರೆ ಜನಪದ ಕ್ಷೇತ್ರಕ್ಕೆ ವೈದಿಕ/ಶಿಷ್ಟ ದೇವರ ಪ್ರವೇಶ ಆಗುತ್ತಲೇ ಇದೆ.

ಉಪಸಂಹಾರ

ಹೀಗೆ ಉದ್ಯಾವರ ಮತ್ತು ತೋಕೂರು ಕ್ಷೇತ್ರಗಳು ಸಿರಿ ಉಪಾಸನೆಯ ಕ್ಷೇತ್ರವಾಗಿ ೭ನೆಯ ಶತಮಾನಕ್ಕೂ ಪೂರ್ವದಿಂದಲೇ ಪ್ರಸಿದ್ಧಿ ಹೊಂದಿದ ಕ್ಷೇತ್ರ. ಸಿರಿ ಉಪಾಸನೆಯ ಪ್ರಾಚೀನತೆಯನ್ನು ಐತಿಹಾಸಿಕವಾಗಿ ನಾವು ೭/೮ ಶತಮಾನಗಳಾಚೆ ಆಚೆ ಕೊಂಡುಹೋಗಬಹುದು.

೮೪

ಚಿತ್ರದುರ್ಗ ಜಿಲ್ಲೆಯಲ್ಲಿ ನರಸಿಂಹಸ್ವಾಮಿ ಆರಾಧನೆ

ಡಾ. ಎನ್. ಶಕುಂತಲ*

ಐತಿಹಾಸಿಕವಾಗಿ ಪ್ರಸಿದ್ಧಿಯಾಗಿರುವ ಚಿತ್ರದುರ್ಗ ಜಿಲ್ಲೆಯು ಪ್ರಾಗೈತಿಹಾಸಿಕ ಕಾಲದಿಂದಲೂ ತನ್ನ ಸ್ಥಾನವನ್ನು ಗುರುತಿಸಿ ಕೊಂಡು ಬಂದಿದೆ. ಮೌರ್ಯರಿಂದ ಮೈಸೂರು ಒಡೆಯರ ಕಾಲದವರೆಗೂ ಆಳ್ವಿಕೆಗೆ ಒಳಪಟ್ಟು ಕರ್ನಾಟಕ ಹಾಗೂ ಭಾರತದ ಇತಿಹಾಸದಲ್ಲಿ ಒಂದು ಮಹತ್ವದ ಪಾತ್ರವನ್ನು ವಹಿಸಿದೆ. ಅದರಲ್ಲೂ ಆದಿಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವಶಿಲಾಯುಗ, ಶಿಲಾತಾಮ್ರಯುಗ, ಬೃಹತ್ ಶಿಲಾಯುಗ ಸಂಸ್ಕೃತಿಗಳ ನೆಲವೀಡಾಗಿರುವ ಚಿತ್ರದುರ್ಗ ಜಿಲ್ಲೆಯು ಕರ್ನಾಟಕದ ಮಹತ್ವದ ಐತಿಹಾಸಿಕ ತಾಣವಾಗಿದೆ. ಜಿಲ್ಲೆಯಾದ್ಯಂತ ಇದೂವರೆಗೂ ದೊರೆತಿರುವ ಸುಮಾರು ಐವತ್ತಕ್ಕೂ ಹೆಚ್ಚಿನ ಪುರಾತತ್ವ ನೆಲೆಗಳು ಕರ್ನಾಟಕದ ಪುರಾತತ್ವ ಅಧ್ಯಯನದ ಮೇಲೆ ಹೊಸ ಬೆಳಕನ್ನು ಚೆಲ್ಲಿವೆ. ಹರಪ್ಪಾ, ಮಹೊಂಜೋದಾರೋ, ಚೀನಾ ಹಾಗು ರೋಮನ್ ಸಂಸ್ಕೃತಿಗಳ ಸಮಕಾಲೀನ ಸಂಸ್ಕೃತಿಯೊಂದು ಚಿತ್ರದುರ್ಗ ದಲ್ಲಿರುವ ಚಂದ್ರವಳ್ಳಿಯಲ್ಲಿ ಇತ್ತೆಂದು ಅಲ್ಲಿ ನಡೆದ ಭೂಸಂಶೋಧನೆಗಳಿಂದ ತಿಳಿದುಬಂದಿದೆ. ಅಲ್ಲದೇ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ ನೆಲೆಗಳಲ್ಲಿ ನಡೆದಿರುವ ಉತ್ಖನನಗಳಿಂದ ಇಲ್ಲಿನ ಪ್ರಾಗಿತಿಹಾಸದ ಮಹತ್ವ ತಿಳಿದುಬರುವುದಲ್ಲದೇ, ಕರ್ನಾಟಕದ ಪ್ರಾಗಿತಿಹಾಸದ ಹಲವು ಸಮಸ್ಯೆಗಳನ್ನು ಬಿಡಿಸಲು ಒಂದು ನಿರ್ದಿಷ್ಟ ನೆಲೆಗಟ್ಟನ್ನು ಒದಗಿಸಿಕೊಟ್ಟಿರುವುದರಿಂದ ಅವುಗಳ ಕಾಲಮಾನವನ್ನು ನಿರ್ಧರಿಸಲು ಸಹಕಾರಿಯಾಗಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಧಾರ್ಮಿಕವಾಗಿಯೂ ಪ್ರಾಚೀನ ಕಾಲದಿಂದಲೂ ಅನೇಕ ಸಂಚಲನಗಳು, ಬೆಳವಣಿಗೆಗಳು, ಬದಲಾವಣೆಗಳು, ಸ್ಥಿತ್ಯಂತರಗಳು ಕಂಡುಬಂದಿವೆ. ಇಲ್ಲಿ ವಿವಿಧ ಧರ್ಮಗಳು ಸಂಸ್ಕೃತಿಗಳು ಬಾಳಿ ಬೆಳಗಿದ್ದುದಕ್ಕೆ ಇತಿಹಾಸದಲ್ಲಿ ವಿಪುಲವಾದ ಸಾಕ್ಷಿಗಳಿವೆ. ಜಿಲ್ಲೆಯಲ್ಲಿ ಪ್ರಾಚೀನ ಮಾನವ ಶಿಲಾಯುಗದಿಂದ ಆಧುನಿಕ ಯುಗದವರೆಗೂ ತನ್ನ ನಂಬಿಕೆ, ಕಲ್ಪನೆಗಳಿಗನುಸಾರವಾಗಿ ಧಾರ್ಮಿಕ ಜೀವನವನ್ನು ನಡೆಸುತ್ತಾ ಬಂದಿದ್ದಾನೆ. ಚಿತ್ರದುರ್ಗದಲ್ಲಿ ಷಣ್ಮತಗಳು(ಶೈವ, ವೀರಶೈವ, ವೈಷ್ಣವ, ಸೌರ, ಸಾಕ್ತ, ಗಾಣಪತ್ಯ) ಪ್ರಚಲಿತವಾಗಿದ್ದು ಅವುಗಳಿಗೆ ಸಂಬಂಧಪಟ್ಟಂತೆ ವಿವಿಧ ಪೋಷಕರೂ ಇದ್ದುದು ತಿಳಿದುಬರುತ್ತದೆ. ಪ್ರಧಾನ ವಾಹಿನಿಗಳಾದ ಶೈವ, ವೈಷ್ಣವ ಮತಗಳಲ್ಲದೇ, ಸೌರ, ಶಾಕ್ತ, ಗಾಣಪತ್ಯ ಮೊದಲಾದ ಪಂಥಗಳೂ ರೂಢಿಯಲ್ಲಿದ್ದವು. ಜಿಲ್ಲೆಯ ವಿವಿಧ ಭಾಗಗಳಲ್ಲಿ ಶೈವ, ವೀರಶೈವ, ವೈಷ್ಣವ, ಧರ್ಮಗಳು ಪ್ರಾಧಾನ್ಯತೆ ಪಡೆದಿದ್ದುದು ಕಂಡುಬರುತ್ತದೆ. ಹನ್ನೊಂದು-ಹನ್ನೆರಡನೆಯ ಶತಮಾನದಲ್ಲಿ ರಾಮಾನುಜಾ ಚಾರ್ಯರ ಧಾರ್ಮಿಕ ಪ್ರಭಾವನೆಯ ಪರಿಣಾಮವಾಗಿ ವೈಷ್ಣವ ಪಂಥವೂ ಪ್ರಾಬಲ್ಯವನ್ನು ಪಡೆದುಕೊಂಡಿದ್ದು ಸರ್ವವಿಧಿತ.

ವಿಷ್ಣು ಪ್ರಧಾನವಾಗಿ ವೈಷ್ಣವ ಮತ ಬೆಳೆದು ಬಂದಿತು. ವಿಷ್ಣುವನ್ನು ಇಪ್ಪತ್ನಾಲ್ಕು ರೂಪಗಳಲ್ಲಿ ಆರಾಧಿಸುವ ಪರಂಪರೆ ಯಿದೆ. ಅವನ ಬೇರೆ ಬೇರೆ ರೂಪದ ಶಿಲ್ಪಗಳನ್ನು ಚರಿತ್ರೆ ಯುದ್ದಕ್ಕೂ ಕಾಣಬಹುದು. ಇಂತಹ ವಿಷ್ಣುವಿನ ಹತ್ತು ಅವತಾರಗಳಲ್ಲಿ ನಾಲ್ಕನೆಯ ಅವತಾರವೇ ನರಸಿಂಹಾವತಾರ. ನರಸಿಂಹನ ಆರಾಧನೆ ಸಾವಿರಾರು ವರ್ಷಗಳಷ್ಟು ಪ್ರಾಚೀನ ವಾದದ್ದು. ಐದನೆಯ ಶತಮಾನದಿಂದ ಕರ್ನಾಟಕದಲ್ಲಿ ನರಸಿಂಹನ ಆರಾಧನೆ ರೂಢಿಯಲ್ಲಿದ್ದುದಕ್ಕೆ ಆಧಾರಗಳಾಗಿವೆ. ಆರು ಮತ್ತು ಏಳನೆಯ ಶತಮಾನಕ್ಕೆ ಕರ್ನಾಟಕದ ಅನೇಕ ಭಾಗಗಳಲ್ಲಿ ನರಸಿಂಹ ದೇವಾಲಯ ಗಳು, ಕೆಲವು ದೇವಾಲಯಗಳ ಕಂಭ ಹಾಗೂ ಭಿತ್ತಿಗಳಲ್ಲಿ ನರಸಿಂಹನ ಮೂರ್ತಿಗಳನ್ನು ಕಾಣಬಹುದಾಗಿದೆ. ಕರ್ನಾಟಕ ದಾದ್ಯಂತ ಕಂಡುಬಂದಿರುವ ನರಸಿಂಹ ಶಿಲ್ಪಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ಬನವಾಸಿ ಕದಂಬರ ಕಾಲಘಟ್ಟದಲ್ಲಿ ನಿರ್ಮಾಣವಾಗಿರುವ ನರಸಿಂಹನ ಶಿಲ್ಪಗಳೇ ಅತ್ಯಂತ ಪ್ರಾಚೀನ ನರಸಿಂಹನ ಶಿಲ್ಪಗಳೆಂದು ಗುರುತಿಸಬಹುದಾಗಿದೆ. ಕದಂಬರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿರುವ ನರಸಿಂಹನ ಶಿಲ್ಪಗಳು ದ್ವಿಬಾಹು ನರಸಿಂಹನ ಶಿಲ್ಪಗಳೆಂಬುದು ಗಮನಾರ್ಹ. ಬನವಾಸಿಯ ಮಧುಕೇಶ್ವರ ದೇವಾಲಯದ ಆವರಣದ ಮಂಟಪದಲ್ಲಿರುವ ನರಸಿಂಹ, ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿರುವ ಶಿಲ್ಪ, ಬೆಳಗಾಂನ ಹಲಸಿಯ ನರಸಿಂಹ ಶಿಲ್ಪಗಳು ದ್ವಿಬಾಹು

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ

ಶಿಲ್ಪಗಳಾಗಿವೆ. ಇವರ ನಂತರದಲ್ಲಿ ಅಧಿಕಾರಕ್ಕೆ ಬಂದ ಬಾದಾಮಿ ಚಾಲುಕ್ಯರು ಸಹ ವೈಧಿಕ ಧರ್ಮಾವಲಂಬಿಗಳಾಗಿದ್ದು, ಆ ವಂಶದ ಸ್ಥಾಪಕನಾದ ಜಯಸಿಂಹನ ಹೆಸರಿನಿಂದಲೇ ಅವರು ನರಸಿಂಹನ ಆರಾಧಕರಾಗಿದ್ದರೆಂದು ತಿಳಿಯಬಹುದಾಗಿದೆ. ಮಂಗಳೇಶ ನಿರ್ಮಿಸಿರುವ ಬಾದಾಮಿಯ ಮೂರನೆಯ ಗುಹಾಂತರ ದೇವಾಲಯದಲ್ಲಿ ಬೃಹದಾಕಾರದ ನರಸಿಂಹನ ಶಿಲ್ಪವಿದೆ. ಹಾಗೆಯೇ ಅಲ್ಲಿನ ಐಹೊಳೆಯ ದುರ್ಗಾ ದೇವಾಲಯ, ಪಟ್ಟದಕಲ್ಲಿನ ಲೋಕೇಶ್ವರ ದೇವಾಲಯಗಳಲ್ಲಿ ಅನೇಕ ನರಸಿಂಹನ ಶಿಲ್ಪಗಳಿರುವುದನ್ನು ಗಮನಿಸಬಹುದು.

ಹೊಯ್ಸಳರ ಕಾಲದಲ್ಲಿ ಪ್ರಮುಖವಾಗಿ ತಮಿಳು ನಾಡಿನಿಂದ ಬಂದ ಶ್ರೀ ರಾಮಾನುಜಾಚಾರ್ಯರು ವಿಷ್ಣುವರ್ಧನನಲ್ಲಿ ಆಶ್ರಯ ಪಡೆದಿದ್ದರಿಂದ ವಿಷ್ಣುವರ್ಧನ ವೈಷ್ಣವ ಧರ್ಮಕ್ಕೆ ಮತಾಂತರ ಹೊಂದಿದ್ದಲ್ಲದೇ ತನ್ನ ಮಗನಿಗೆ ವಿಜಯನಾರಸಿಂಹ ಎಂದು ಹೆಸರಿಟ್ಟನು. ಜೊತೆಗೆ ಪಂಚ ನಾರಾಯಣ ದೇವಾಲಯಗಳನ್ನು ನಿರ್ಮಿಸಿರುವುದು ವೈಷ್ಣವ ಧರ್ಮದಲ್ಲಿ ಅವನಿಗಿದ್ದ ಒಲವನ್ನು ತೋರಿಸುತ್ತದೆ. ರಾಮಾನುಜಾಚಾರ್ಯರು ಕರ್ನಾಟಕದಲ್ಲಿ ವೈಷ್ಣವ ಧರ್ಮ ಪ್ರಸಾರ ಕಾರ್ಯ ಕೈಗೊಂಡಿದ್ದರ ಫಲವಾಗಿ ರಾಜ್ಯಾದ್ಯಂತ ನಿರ್ಮಾಣಗೊಂಡ ನೂರಾರು ವಿಷ್ಣುದೇವಾಲಯಗಳಲ್ಲಿ ನರಸಿಂಹಸ್ವಾಮಿ ದೇವಾಲಯಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ.

ಹೊಯ್ಸಳರ ವಂಶದಲ್ಲಿ ಒಂದನೆಯ ನರಸಿಂಹ, ಎರಡನೆಯ ನರಸಿಂಹ, ಮೂರನೆಯ ನರಸಿಂಹ ಎಂಬ ಅರಸರು ಗಳಿದ್ದುದನ್ನು ನೋಡಿದರೆ ಇವರು ಶ್ರೀಮನ್ಮಹಾವಿಷ್ಣುವಿನ ಅವತಾರವಾದ ನರಸಿಂಹಸ್ವಾಮಿಯ ಭಕ್ತರಾಗಿದ್ದುದನ್ನು ಸಾಕ್ಷೀಭೂತಿಕರಿಸುತ್ತವೆ. ಹೊಯ್ಸಳರ ನಂತರದಲ್ಲಿ ಅಧಿಕಾರಕ್ಕೆ ಬಂದ ವಿಜಯನಗರ ಅರಸರ ಕಾಲದಲ್ಲೂ ಈ ಪರಂಪರೆ ಮುಂದುವರೆದಿರುವುದನ್ನು ಅವರ ಕಾಲದಲ್ಲಿ ನಿರ್ಮಾಣ ವಾಗಿರುವ ಉಗ್ರನರಸಿಂಹ, ಯೋಗನರಸಿಂಹ, ಲಕ್ಷ್ಮೀ ನರಸಿಂಹನ ದೇವಾಲಯಗಳು ನಿರ್ಮಾಣವಾಗಿರುವುದನ್ನು ಕಾಣಬಹುದು. ಚಿತ್ರದುರ್ಗ ಜಿಲ್ಲೆಯಲ್ಲೂ ನರಸಿಂಹನ ಆರಾಧನೆ ಇತ್ತೆಂಬುದು ಇಲ್ಲಿನ ಕೆಲವು ನರಸಿಂಹಸ್ವಾಮಿ ದೇವಾಲಯಗಳಿಂದ ತಿಳಿದುಬಂದಿದೆ.

ಸಾಮಾನ್ಯವಾಗಿ ವಿಷ್ಣುವನ್ನು ನರಸಿಂಹನ ಅವತಾರದಲ್ಲಿ ಹೆಚ್ಚಾಗಿ ಆರಾಧಿಸುವುದು ಕಂಡುಬರುತ್ತದೆ. ಹೀಗೆ ನರಸಿಂಹನ ಆರಾಧನೆ ಜನಪ್ರಿಯವಾಗಿ ಎಲ್ಲಾ ಕಡೆ ಹರಡುತ್ತಿದ್ದಂತೆ ಆಂಧ್ರದ ಅಹೋಬಲ ಕ್ಷೇತ್ರದ ನರಸಿಂಹ ದೇವಾಲಯ ಜನಪ್ರಿಯವಾದ ಧಾರ್ಮಿಕ ಕ್ಷೇತ್ರವಾಗಿದ್ದು ಅದರ ಪ್ರಭಾವ ಆಂಧ್ರಕ್ಕೆ ಮಾತ್ರ ಸೀಮಿತವಾಗಿರದೆ ನೆರೆಯ ಕರ್ನಾಟಕದ ಮೇಲೂ ದಟ್ಟವಾಗಿ ಬೇರಿದ್ದುದು ಕಂಡುಬರುತ್ತದೆ. ಅದರಲ್ಲೂ ಆಂಧ್ರದ ಗಡಿಭಾಗದಲ್ಲಿರುವ ಚಿತ್ರದುರ್ಗಕ್ಕೆ ಅಹೋಬಲ ಆರಾಧನೆಯ ಪದ್ಧತಿ ಬೇಗ ಹರಡಿತ್ತೆಂದು ಹೇಳಬಹುದಾಗಿದೆ.

ಚಿತ್ರದುರ್ಗ ತಾಲ್ಲೂಕಿನ ಓಬಣ್ಣನ ಹಳ್ಳಿಯ ಓಬಳದೇವರ ಗುಡ್ಡದಲ್ಲಿನ ಓಬಳ ನರಸಿಂಹಸ್ವಾಮಿ ದೇವಾಲಯ, ತಮ್ಮಟಗಲ್ಲಿನ ನರಸಿಂಹಸ್ವಾಮಿ ದೇವಾಲಯ, ಚಳ್ಳಕೆರೆ ತಾಲ್ಲೂಕಿನ ಚೌಳೂರು ಗ್ರಾಮದ ಅಹೋಬಲ ನರಸಿಂಹಸ್ವಾಮಿ ದೇವಾಲಯ, ದೇವರಮರಿ ಕುಂಟೆಯ ಓಬಳನರಸಿಂಹಸ್ವಾಮಿ ದೇವಾಲಯ, ಹೊಳಲ್ಕೆರೆಯ ತೇಕಲವಟ್ಟಿಯ ನರಸಿಂಹಸ್ವಾಮಿ ದೇವಾಲಯ, ಹೊರಕೆರೆದೇವರಪುರದ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ, ಹೊಸದುರ್ಗ ತಾಲ್ಲೂಕಿನ ಜಾನಕಲ್ಲಿನ ಲಕ್ಷ್ಮೀನರಸಿಂಹಸ್ವಾಮಿ ವಿಗ್ರಹ (ಕ್ರಿ.ಶ. ೧೩೦೧ರಲ್ಲಿ ಹೊಯ್ಸಳರ ಮೂರನೆಯ ಬಲ್ಲಾಳನು ಆಳುತ್ತಿರುವಾಗ ನಿರ್ಮಿಸಿದ ದೇವಾಲಯವಿದ್ದಿರ ಬಹುದು), ದೊಡ್ಡ ತೇಕಲವಟ್ಟಿಯ ನರಸಿಂಹಸ್ವಾಮಿ ಗುಡಿ, ದಾವಣಗೆರೆ ತಾಲ್ಲೂಕಿನ ಮಾಯಕೊಂಡದ ಅಹೋಬಲ ನರಸಿಂಹಸ್ವಾಮಿ ದೇವಾಲಯ, ನೀರ್ಥಡಿಯ ಅಹೋಬಲ ನರಸಿಂಹ ದೇವಾಲಯ, ಇಲ್ಲಿನ ಮುಖ ಮಂಟಪದ ಕಂಬಗಳ ನಾಲ್ಕು ಮುಖಗಳಲ್ಲಿರುವ ನರಸಿಂಹ, ಲಕ್ಷ್ಮೀನರಸಿಂಹ, ಸಭಾಮಂಟಪದ ದಕ್ಷಿಣ ದಿಕ್ಕಿನ ಮಂಟಪದ ಘನಾಕೃತಿಯ ಕಂಬಗಳಲ್ಲಿರುವ ನರಸಿಂಹ ಶಿಲ್ಪ, ಉತ್ತರ ಪ್ರವೇಶಮಂಟಪದ ಘನಾಕೃತಿಯ ಕಂಬಗಳ ಮೇಲಿರುವ ಲಕ್ಷ್ಮೀನರಸಿಂಹ ಹಾಗೂ ಲಕ್ಷ್ಮೀಯ ಶಿಲ್ಪಗಳು, ಪ್ರವೇಶ ಮಂಟಪದ ಶಿಲಾ ತೋರಣದಲ್ಲಿರುವ ರಾಮಾನುಜಾ ಚಾರ್ಯರ ಶಿಲ್ಪ, ಚಿತ್ರದುರ್ಗದ ಚನ್ನಕೇಶವ ಮತ್ತು ವೆಂಕಟರಮಣ ದೇವಾಲಯ ಗಳ ಸಭಾಮಂಟಪದ ಕಂಬಗಳಲ್ಲಿನ ನರಸಿಂಹನ ಶಿಲ್ಪ, ಹೊಳಲ್ಕೆರೆಯ ವೇಣುಗೋಪಾಲಸ್ವಾಮಿ ದೇವಾಲಯದ ಮಹಾರಂಗಮಂಟಪದ ನರಸಿಂಹನ ಶಿಲ್ಪಗಳು, ತಾಳ್ಯದ ಆಂಜನೇಯಸ್ವಾಮಿ ದೇವಾಲಯದ ಅಂತರಾಳದ ಕಂಬದ ಮೇಲಿನ ನರಸಿಂಹ ಮತ್ತು ರಾಮಾನುಜಾಚಾರ್ಯರ ಶಿಲ್ಪಗಳು, ಹೊರಕೆರೆ ದೇವರಪುರದ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಮಹಾರಂಗಮಂಟಪ ಹಾಗೂ ಮಹಾದ್ವಾರ ಮಂಟಪದ ಕಂಬಗಳಲ್ಲಿರುವ ಲಕ್ಷ್ಮೀ ನರಸಿಂಹ, ರಾಮಾನು ಜಾಚಾರ್ಯರ ಶಿಲ್ಪಗಳು ಮತ್ತು ಗರ್ಭಗೃಹದ ಮಧ್ಯದಲ್ಲಿರುವ ಲಕ್ಷ್ಮೀನರಸಿಂಹನ ಶಿಲ್ಪ, ಜಗಲೂರು ತಾಲ್ಲೂಕಿನ ಕೊರಟ ಗೆರೆಯ ಬೆಟ್ಟದ ಮೇಲಿನ ಓಬಳದೇವರ ಗುಡಿ, ಹಿರಿಯೂರು ತಾಲ್ಲೂಕಿನ ಹರ್ತಿಕೋಟೆಯ ಪೂರ್ವಾಭಿಮುಖವಾಗಿರುವ ಅಹೋಬಲ ನರಸಿಂಹಸ್ವಾಮಿ ದೇವಾಲಯ, ಹುಲಿತೊಟ್ಟಿಲಿನ ಕದಿರೆ ನರಸಿಂಹಸ್ವಾಮಿ ದೇವಾಲಯ, ಹೀಗೆ ಇನ್ನೂ ಅನೇಕ ಕಡೆಗಳಲ್ಲಿ ಕಂಡುಬರುವ ನರಸಿಂಹಸ್ವಾಮಿಯ ದೇವಾಲಯ

ಗಳು, ಉಬ್ಬುಶಿಲ್ಪಗಳು, ವಿಗ್ರಹಗಳು ಚಿತ್ರದುರ್ಗ ಜಿಲ್ಲೆಯಲ್ಲಿ ನರಸಿಂಹಸ್ವಾಮಿಯ ಆರಾಧನೆ ಇತ್ತೆಂದು ಸಾಬೀತು ಪಡಿಸುತ್ತವೆ.

ಆದರೆ ಇಲ್ಲಿ ನಾನು ಪ್ರಮುಖವಾಗಿ ಚಿತ್ರದುರ್ಗ ಪಾಳೆಯಗಾರರ ಕಾಲದ ಬಂಜಗೊಂಡನಹಳ್ಳಿಯ ಕಂಬದ ನರಸಿಂಹಸ್ವಾಮಿ ದೇವಾಲಯವನ್ನು ಮಾತ್ರ ಪ್ರಾತಿನಿಧಿಕವಾಗಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಉಳಿದ ದೇವಾಲಯಗಳ ಮಾಹಿತಿಯನ್ನು ಸಂಗ್ರಹಿಸಿದ್ದೇನೆ. ವಿಜಯನಗರ ಕಾಲಾವಧಿಯಲ್ಲಿ ಬೆಳೆದು ಬಂದ ಅಧೀನ ಪಾಳೇಯಪಟ್ಟೇ ಈ ಪಾಳೇಯಗಾರರು. ಹಾಗಾಗಿ ಇವರ ಮೇಲೆ ತಮ್ಮ ರಾಜರ ಪ್ರಭಾವ ಇದ್ದೇ ಇರುತ್ತದೆ. ಆದ್ದರಿಂದಲೇ ಚಿತ್ರದುರ್ಗ ಪಾಳೇಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪವನ್ನು ವಿಜಯನಗರದ ಮುಂದುವರಿಕೆಯಾಗಿ ಕರ್ನಾಟಕ ವಾಸ್ತುಶಿಲ್ಪ ಕ್ಷೇತ್ರದಲ್ಲಿ ಗುರುತಿಸಬಹುದಾಗಿದೆ. ಇವರ ಕಾಲದ ವಾಸ್ತುಸ್ಮಾರಕಗಳನ್ನು ಪ್ರಮುಖವಾಗಿ ಲೌಕಿಕ ಮತ್ತು ಧಾರ್ಮಿಕ ವಾಸ್ತುಶಿಲ್ಪಗಳೆಂದು ವಿಭಾಗಿಸಲಾಗಿದೆ. ಲೌಕಿಕ ವಾಸ್ತುಶಿಲ್ಪದಲ್ಲಿ ಅರಮನೆಗಳು, ಗರಡಿಮನೆಗಳು, ಕೋಟೆ–ಬುರುಜುಗಳು, ಬತೇರಿಗಳು, ಹೊಂಡಗಳು(ಪುಷ್ಕರಣಿಗಳು) ಕಂಡುಬಂದರೆ, ಧಾರ್ಮಿಕ ವಾಸ್ತುಶಿಲ್ಪದಲ್ಲಿ ದೇವಾಲಯಗಳು, ಮಠಗಳು ಕಂಡುಬರುತ್ತವೆ. ದೇವಾಲಯಗಳನ್ನು ಮತ್ತೆ ಗುಹಾದೇವಾಲಯಗಳು ಮತ್ತು ರಾಚನಿಕ(ಕಟ್ಟಡ) ದೇವಾಲಯಗಳೆಂದು ವಿಭಾಗಿಸಲಾಗಿದೆ. ದೇವಾಲಯಗಳಲ್ಲಿ ಶೈವ, ವೈಷ್ಣವ, ಶಾಕ್ತ ಹಾಗೂ ಆಂಜನೇಯನ ದೇವಾಲಯಗಳನ್ನು ಕಾಣಬಹುದಾಗಿದೆ. ಆದರೆ ಇವರು ಮೂಲತಃ ವೈಷ್ಣವ ಮತದವರಾಗಿದ್ದರಿಂದ ಆ ಪಂಥದ ದೇವಾಲಯಗಳೇ ಹೆಚ್ಚಾಗಿವೆ.

ಚಿತ್ರದುರ್ಗ ಪಾಳೇಯಗಾರರು ಪ್ರಮುಖವಾಗಿ ತಮ್ಮ ಮನೆಯ ದೇವರಾದ ಓಬಳದೇವರು ಅಂದರೆ ಅಹೋಬಲ ನರಸಿಂಹಸ್ವಾಮಿಯ ಆರಾಧಕರಾಗಿದ್ದರು. ಅಹೋಬಲ ಎಂದರೆ ಆಂಧ್ರಪ್ರದೇಶದ ನಂದಿಹಾಲ್ ಹತ್ತಿರದ ಅಹೋಬಲಂ ಎಂಬ ಗ್ರಾಮದಲ್ಲಿ ನರಸಿಂಹನ ಒಂಭತ್ತು ವಿಧದ ರೂಪಗಳ ಅಂದರೆ ಶ್ರೀಜ್ವಾಲಾ ನರಸಿಂಹ (ಕುಜ), ಪಾವನ ನರಸಿಂಹ (ಬುಧ), ಲಕ್ಷ್ಮೀನರಸಿಂಹ (ಸೂರ್ಯ), ಕಾರಂಜಿ ನರಸಿಂಹ (ಚಂದ್ರ), ಚಿತ್ರವಟಿ ನರಸಿಂಹ (ಕೇತು), ಯೋಗಾ ನರಸಿಂಹ (ಶನಿ), ಕಲ್ಯಾಣ ನರಸಿಂಹಸ್ವಾಮಿ, ವರಹಾ ನರಸಿಂಹಸ್ವಾಮಿ (ರಾಹು), ಅಹೋಬಲ ನರಸಿಂಹಸ್ವಾಮಿ (ಗುರು), ಮಾಲೋಲ ನರಸಿಂಹಸ್ವಾಮಿ (ಶುಕ್ರ) ಶಿಲ್ಪಗಳನ್ನು ಅಳವಡಿಸಲಾಗಿದೆ. ಅದರಲ್ಲಿ ಅಹೋಬಲ ನರಸಿಂಹ ಶ್ರೇಷ್ಠವಾಗಿದೆ. ಇದೊಂದು ಪುಣ್ಯಕ್ಷೇತ್ರವಾಗಿದ್ದು, ಸುಮಾರು ಐದುನೂರು ಎಕರೆ ಪ್ರದೇಶದಲ್ಲಿ ದೇವಸ್ಥಾನ ನಿರ್ಮಾಣವಾಗಿದೆ. ಇದೇ ರೀತಿಯ ಒಂಭತ್ತು ವಿಧದ ನರಸಿಂಹನ ಶಿಲ್ಪಗಳನ್ನು ಚಿತ್ರದುರ್ಗ ನಗರದ ಪೇಟೆ ಆಂಜನೇಯ ದೇವಸ್ಥಾನದ ಹತ್ತಿರದ ಹಳೆಯ ಮಾರ್ಕೆಟ್ ಹತ್ತಿರವಿರುವ ಯೋಗಾನರಸಿಂಹಸ್ವಾಮಿಯ ದೇವಾಲಯದಲ್ಲೂ ಅಳವಡಿಸಲಾಗಿದೆ. ಹಾಗೆಯೇ ಓಬಳಸ್ವಾಮಿ, ಓಬಳದೇವರು, ಕಂಪಳ (ಶ್ರೀಕೃಷ್ಣ ಸಂಹಾರದ ನಂತರ ಬೇಡರನ್ನು ಕುರಿತು "ಇನ್ನು ಮುಂದೆ ಬೇಟೆಯಾಡುವುದು, ಪ್ರಾಣಿಹಿಂಸೆ ಮಾಡುವುದನ್ನು ನಿಲ್ಲಿಸಿ. ಒಬ್ಬರ ಮನಸ್ಸನ್ನು ನೋಯಿಸುವುದು ಬಿಟ್ಟು ನಿಮ್ಮ ಕೈ, ಬಾಯಿ ಭದ್ರವಾಗಿಟ್ಟುಕೊಂಡು ಮಾನವ ಕುಲಕ್ಕೆ ಒಳಿತನ್ನು ಮಾಡುತ್ತಾ ಗೋವುಗಳನ್ನು ಮೇಯಿಸಿಕೊಂಡು ನಿಮ್ಮ ಜೀವನ ಸಾಗಿಸಿಕೊಂಡು ಹೋಗಿ" ಎಂದು ಹೇಳಿ ಬೇಡರಿಗೆ ತನ್ನಲ್ಲಿದ್ದ ಹನ್ನೆರಡು ಸಾಲಿಗ್ರಾಮಗಳು, ಕೊಳಲು, ಮುತ್ತಿನ ಗೆಜ್ಜೆ (ಮುತ್ತಿನ ಕಾಲ್ಪೆಂಡಿ) ತನ್ನ ಆಭರಣಗಳನ್ನು ನೀಡುತ್ತಾರೆ. ಅವುಗಳನ್ನು ತಮ್ಮ ಪೆಟ್ಟಿಗೆಗಳಲ್ಲಿ ಹಾಕಿಕೊಂಡು ದೇವರು ಎಂದು ಪೂಜಿಸಿಕೊಂಡು ತಿರುಪತಿಯಿಂದ ಶ್ರೀಶೈಲ, ಕಂಪಿಲಿ, ಆನೆಗೊಂದಿ, ಎಕ್ಕೆಗೊಂದಿ ಮೂಲಕ ಮೊಳಕಾಲ್ಮೂರು ತಾಲ್ಲೂಕಿನ ಕಂಪಳ ದೇವರಹಟ್ಟಿಗೆ ಬಂದು ನೆಲೆಸಿದರೆಂದು ಪ್ರತೀತಿಯಿದೆ), ದೇವರು, ಅಹೋಬಲ ಎಂಬ ಹೆಸರಿನ ದೇವಾಲಯಗಳನ್ನು ಹೆಚ್ಚಾಗಿ ನಿರ್ಮಿಸಿದ್ದಾರೆ. (ಇದರಿಂದ ಇವರು ಮೂಲತಃ ಆಂಧ್ರಪ್ರದೇಶದ ಅಹೋಬಲಂ ಪ್ರದೇಶದವರೆಂದು ಅಭಿಪ್ರಾಯಪಡಲಾಗಿದೆ.)

ಬಂಜಗೊಂಡನಹಳ್ಳಿಯ ಕಂಬದ ನರಸಿಂಹಸ್ವಾಮಿ ದೇವಾಲಯ

ಚಿತ್ರದುರ್ಗದಿಂದ ಹದಿನೈದು ಕಿ.ಮೀ. ದೂರದಲ್ಲಿ ಚಿತ್ರದುರ್ಗ–ಹೊಳಲ್ಕೆರೆ ಮಾರ್ಗದಲ್ಲಿ ಬರುವ ಹೊಳಲ್ಕೆರೆ ತಾಲ್ಲೂಕಿನ ಬಂಜಗೊಂಡನಹಳ್ಳಿ (ಬಿ.ಜಿ. ಹಳ್ಳಿ)ಯ ಗ್ರಾಮದಲ್ಲಿ ಸುಮಾರು ಏಳೆಂಟು ಅಡಿಯ ಕಂಬದಲ್ಲಿ ಉದ್ಭವಗೊಂಡ ಕಂಬದ ನರಸಿಂಹಸ್ವಾಮಿಯ ದೇವಾಲಯ ಇವರ ನಿರ್ಮಾಣದ ವಿಶಿಷ್ಟ ದೇವಾಲಯವಾಗಿದೆ. ದೇವಾಲಯವು ಸುಸ್ಥಿತಿಯಲ್ಲಿದ್ದು, ಗರ್ಭಗೃಹ, ಅಂತರಾಳ, ಸಭಾಮಂಟಪಗಳನ್ನು ಹೊಂದಿದ್ದು ಸಾಧಾರಣ ಮಟ್ಟದಲ್ಲಿದೆ. ಗರ್ಭಗುಡಿಯಲ್ಲಿ ಐದರಿಂದ–ಆರು ಅಡಿ ಎತ್ತರದ ಕಂಬದಲ್ಲಿ ಒಡಮೂಡಿರುವ ಶ್ರೀನರಸಿಂಹನ ಶಿಲ್ಪವಿದೆ. ಆದರೆ ಅದರ ಮುಂಭಾಗದಲ್ಲಿ ಆಂಜನೇಯ ಸ್ವಾಮಿಯನ್ನು ಪ್ರತಿಷ್ಠಾಪಿಸಿದ್ದಾರೆ. ಇದು ಬಹುಶಃ ಇತ್ತೀಚಿನ ಅಳವಡಿಕೆಯಾಗಿರಬಹುದು. ನರಸಿಂಹಸ್ವಾಮಿಯನ್ನು ನೇರವಾಗಿ ನೋಡಬಾರದೆಂದು ಆಂಜನೇಯಸ್ವಾಮಿಯನ್ನು ಪ್ರತಿಷ್ಠಾಪಿಸಲಾಗಿದೆ ಇದೇ ರೀತಿ ಗರಗ ಕಾವಲಿನ ಕಂಬದ ನರಸಿಂಹಸ್ವಾಮಿ ಹಾಗೂ ಕಬ್ಬಳದ ಕಂಬದ ನರಸಿಂಹಸ್ವಾಮಿ ದೇವಾಲಯಗಳಲ್ಲೂ ಆಂಜನೇಯ

ಸ್ವಾಮಿಯನ್ನು ಪ್ರತಿಷ್ಠಾಪಿಸಲಾಗಿದೆ. ಇದು ಶಿಲ್ಪದಲ್ಲಿ ಯಾವುದೇ ವಿಶೇಷ ಕೆತ್ತನೆಗಳನ್ನು ಕಾಣಲು ಸಾಧ್ಯವಿಲ್ಲ. ಉಳಿದಂತೆ ಗರ್ಭಗುಡಿ ಸರಳವಾಗಿದ್ದು, ಯಾವುದೇ ಅಲಂಕಾರಿಕ ರಚನೆಗಳು ಕಂಡುಬರುವುದಿಲ್ಲ. ಗರ್ಭಗೃಹದ ನಂತರದ ಅಂಕಣವಾದ ಅಂತರಾಳ ಅಥವಾ ಸುಖನಾಸಿಯು ಕೂಡ ಸರಳವಾಗಿದೆ. ಇದರ ದ್ವಾರಬಂಧದ ಇಕ್ಕೆಲಗಳಲ್ಲಿರುವ ವೈಷ್ಣವ ದ್ವಾರಪಾಲಕರ ಶಿಲ್ಪಗಳು ಇದೊಂದು ಮೂಲತಃ ವೈಷ್ಣವ ದೇವಾಲಯವೆಂಬುದನ್ನು ಸಾಬೀತುಪಡಿಸುತ್ತವೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ.

ದೇವಾಲಯದ ಬಹುಮುಖ್ಯವಾದ ಭಾಗವೆಂದರೆ ಸಭಾಮಂಟಪ ಅಥವಾ ನವರಂಗ. ಸಭಾಮಂಟಪವು ಮೂರು ಸಾಲಿನಲ್ಲಿ ಒಂಭತ್ತು ಅಂಕಣಗಳಿಂದ ಕೂಡಿದ್ದು, ಮಧ್ಯದಲ್ಲಿ ಆರು ಸ್ವತಂತ್ರ ಕಂಬಗಳು, ಎರಡು ಮೂಲೆಗಂಬಗಳು, ಎಂಟು ಅರ್ಧಗಂಬಗಳ ಮೇಲ್ಭಾಗದಲ್ಲಿ ವಿಜಯನಗರ ಶೈಲಿಯ ಕಂಬಗಳ ಪ್ರಮುಖ ಲಕ್ಷಣವಾದ ಪುಷ್ಪಬೋದುಗೆಗಳಿವೆ. ಕಂಬಗಳ ಕಾಂಡಭಾಗದಲ್ಲಿ ಆಂಜನೇಯ, ಕಮಲ, ಬಳ್ಳಿಯಾಕಾರದ ಕೆತ್ತನೆ, ನವಿಲು, ನೃತ್ಯಗಾರ್ತಿಯರು, ಗಣಪ, ಕುಳಿತ ಸಿಂಹ, ಲಿಂಗಕ್ಕೆ ಹಾಲೆರೆಯುತ್ತಿರುವ ನಾಲ್ಕು ಮುಖದ ಹಸು, ಯತಿ, ಪಾಳೇಯಗಾರ ಮುಂತಾದ ಉಬ್ಬುಶಿಲ್ಪಗಳ ಕೆತ್ತನೆಯನ್ನು ಕಾಣಬಹುದಾಗಿದೆ. ಸಭಾಮಂಟಪದ ಮೇಲ್ಛಾವಣಿಯನ್ನು ಸಂಪೂರ್ಣವಾಗಿ ಒಂದು ಅಳತೆಯ ದೊಡ್ಡ ಕಲ್ಲುಗಳಿಂದ ನಿರ್ಮಿಸಲಾಗಿದೆ. ಮಧ್ಯದ ಅಂಕಣದ ಛತ್ತಿನಲ್ಲಿ ಸಾಧಾರಣ ವಾದ ನಕ್ಷತ್ರಾಕಾರದ ಭುವನೇಶ್ವರಿಯಿದೆ.

ದೇವಾಲಯದ ಹೊರಭಾಗದಲ್ಲಿ ನೋಡಿದರೆ ಅಧಿಷ್ಠಾನವೇ ಕಾಣಿಸುವುದಿಲ್ಲ. ಬಹುಶಃ ಹೂತು ಹೋಗಿರಬಹುದೆಂದು ಸಭಾಮಂಟಪದ ಮುಂದಿನ ಭಾಗದಲ್ಲಿ ಅಲ್ಪಸ್ವಲ್ಪ ಕಾಣುವ ಅಧಿಷ್ಠಾನದ ಭಾಗದಿಂದ ತಿಳಿಯಬಹುದಾಗಿದೆ. ಗರ್ಭಗೃಹದ ಮೇಲೆ ಇತ್ತೀಚಿನ ಸಾಧಾರಣ ಶಿಖರವಿದೆ. ಅಂತರಾಳದ ಭಿತ್ತಿಯಲ್ಲಿ ನಾಗರಹಾವಿನ ಉಬ್ಬುಶಿಲ್ಪವಿದೆ. ಸಾಮಾನ್ಯವಾಗಿ ಪಾಳೇಯಗಾರರ ಕಾಲದ ಎಲ್ಲಾ ದೇವಾಲಯಗಳಲ್ಲಿ ಕಂಡುಬರುವ ಸಾಮಾನ್ಯ ಉಬ್ಬುಶಿಲ್ಪವೆಂದರೆ ಈ ನಾಗರಹಾವಿನ ಶಿಲ್ಪವಾಗಿದೆ. ಸಭಾಮಂಟಪದ ಮೇಲೆ ಮುಂಭಾಗದಲ್ಲಿ ಏಳೆಂಟು ಅಡಿಯ ಸ್ಥಾನಕ (ನಿಂತ) ಆಂಜನೇಯನ ಇತ್ತೀಚಿನ ಮೂರ್ತಿಯನ್ನು ನಿಲ್ಲಿಸಲಾಗಿದೆ. ಅದರ ಇಕ್ಕೆಲಗಳಲ್ಲಿರುವ ಕೂಟಗಳಲ್ಲಿ ಶಿಲ್ಪಗಳನ್ನು ಅಳವಡಿಸಿದ್ದಾರೆ. ಕೂಟಗಳ ಇಕ್ಕೆಲಗಳಲ್ಲಿ ಎರಡು ಶಿಲ್ಪಗಳನ್ನು ಅಳವಡಿಸಲಾಗಿದೆ. ಸಭಾಮಂಟಪದ ಮಾಡಿನ ಸುತ್ತಲೂ ಕಂಗೂರಾಕೃತಿಗಳ ಅಲಂಕರಣೆಯಿದೆ. ಗೊಲ್ಲ ಜನಾಂಗದವರು ಪೂಜೆ ಮಾಡುತ್ತಿದ್ದಾರೆ. ಶ್ರಾವಣಮಾಸದಲ್ಲಿ ಪ್ರತಿ ಶನಿವಾರ ವಿಶೇಷ ಪೂಜೆಯನ್ನು ಮಾಡುತ್ತಾರಂತೆ.

ಉಪಸಂಹಾರ: ನರಸಿಂಹನಿಗೆ ಎಪ್ಪತ್ತಕ್ಕೂ ಹೆಚ್ಚು ರೂಪಗಳಿವೆ, ಅವುಗಳಲ್ಲಿ ಉಗ್ರ, ಘೋರ, ಅಟ್ಟಹಾಸ, ಆವೇಶ, ಮೊದಲಾದ ರೂಪಗಳನ್ನು ಧಾರಣಯೋಗ ಮುದ್ರೆಗಳಲ್ಲಿಯೂ ಲಕ್ಷ್ಮೀಸಹಿತನಾಗಿಯೂ ಈ ಪ್ರದೇಶ ಅರ್ಚಿಸಲಾಗುತ್ತದೆ. ವಿವಿಧ ವರ್ಗ ಅಂತಸ್ತು, ಪಂಥ, ಪಂಗಡಗಳ ಜನರು ಆರಾಧ್ಯದೇವ ನರಸಿಂಹನನ್ನು ತಮ್ಮದೇ ಆದ ರೀತಿಯಲ್ಲಿ ಅರ್ಚಿಸಿಕೊಂಡು ಬಂದಿದ್ದಾರೆ. ರಾಜಮನೆತನ ದವರು, ಪಾಳೇಯಗಾರರು ಅದ್ದೂರಿಯಿಂದ ಆಡಂಬರದ ಅಭಿಷೇಕ ಅರ್ಚನೆಗಳನ್ನು ಮಾಡಿಸಿದರೆ, ವೈದಿಕರು ಹೋಮ, ಯಜ್ಞ, ಜಪತಪಾದಿಗಳ ಆಚರಣೆಯಿಂದ ಆರಾಧಿಸುತ್ತಾರೆ. ಕೆಳಜಾತಿಯವರು ಶೂದ್ರರು ಹಣ್ಣು, ಕಾಯಿ ಕೆಲವೊಮ್ಮೆ ಬಲಿಯ ಮೂಲಕ ಸ್ವಾಮಿ ನರಸಿಂಹನಿಗೆ ತಮ್ಮ ಭಕ್ತಿಯನ್ನು ಅರ್ಪಿಸುತ್ತಾ ಬಂದಿದ್ದಾರೆ. ತಮ್ಮ ಆರಾಧ್ಯದೈವನನ್ನು ವಿವಿಧ ರೂಪದಲ್ಲಿಯೂ ಅವನ ಭಕ್ತರು ಕಾಣಲು ಕೈಮುಗಿಯುತ್ತಾ ಕೃತಾರ್ಥರಾಗಲು ಪ್ರಯತ್ನಿಸಿದ್ದಾರೆ, ನರಸಿಂಹನನ್ನು ಕಂಬದ ಮೂಲಕ, ಬಂಡೆ ಹುತ್ತ ಮರಗಳ ರೂಪದಲ್ಲಿಯೂ ಪೂಜಿಸುವುದೂ ರೂಢಿಯಲ್ಲಿದೆ. ಜಾತ್ರೆ, ಉತ್ಸವ, ತೇರು, ವಿಶೇಷ ಪೂಜೆಗಳ ಮೂಲಕ ನರಸಿಂಹ ದೇವರನ್ನು ಆರಾಧಿಸುತ್ತಾ ಬಂದಿದ್ದಾರೆ. ಈ ದೇವಾಲಯಗಳು ಜನಜೀವನದ ಅವಿಭಾಜ್ಯ ಅಂಗವಾಗಿ ಬೆರೆತುಹೋಗಿವೆ. ದಿನದ ಜಂಜಾಟದಿಂದ ಜಡವಾದ ಮನಸ್ಸಿಗೆ ಶಾಂತಿ ಸಮಾಧಾನಗಳನ್ನು ಒದಗಿಸುವ ಸಾಧನಗಳಾಗಿವೆ.

ಆಧಾರಸೂಚಿ

೧. ಜಯಣ್ಣ, ೧೯೭೯, 'ಚಿತ್ರದುರ್ಗದಲ್ಲಿ ಭೂಸಂಶೋಧನೆ'. ಐತಿಹಾಸಿಕ ಚಿತ್ರದುರ್ಗ. ಲಕ್ಷ್ಮಣ್ ತೆಲಗಾವಿ. ಕೆ. ವೆಂಕಟಾಚಾರ್ (ಸಂ). ಜಿಲ್ಲಾ ಇತಿಹಾಸ ಸಂಶೋಧನಾ ಮಂಡಲಿ, ಚಿತ್ರದುರ್ಗ.

೨. ಪುಟ್ಟಣ್ಣ ಎಂ.ಎಸ್. ೧೯೨೪, 'ಚಿತ್ರದುರ್ಗದ ಪಾಳೆಯಗಾರರು'.

೩. ಲಕ್ಷ್ಮಣ್ ತೆಲಗಾವಿ. ೧೯೭೯. 'ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ'. ಐತಿಹಾಸಿಕ ಚಿತ್ರದುರ್ಗ.

೪. ಪ್ರಭಾಕರ್ ಎಂ.ಎನ್.. ೧೯೮೭. 'ವಾಸ್ತುಶಿಲ್ಪ' ಕೆಲವು ಟಿಪ್ಪಣಿಗಳು, ಹರತಿಕಿ. ಲಕ್ಷ್ಮಣ್ ತೆಲಗಾವಿ (ಸಂ).

೫. ಸಿಂದಗಿ ರಾಜಶೇಖರ., ೧೯೮೮, 'ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ'.

೬ ಸಾಲತೊರೆ ಆರ್.ಎಸ್., ೧೯೮೨, 'ವಿಜಯನಗರ ಆರ್ಟ್'.

೮೫

ಆಂಧ್ರಪ್ರದೇಶದಲ್ಲಿ ಸರೂರ ಸಂಪ್ರದಾಯದ ನೆಲೆಗಳು

ಸಣ್ಣಪಾಲಯ್ಯ ಎಸ್.ಎಂ.*

ಬುಡಕಟ್ಟು ಸಮುದಾಯಗಳು ಬದುಕಿನ ಅವಲಂಬನೆಗಾಗಿ ಬೇರೆ ಬೇರೆ ಕುಲಕಸುಬನ್ನು ರೂಢಿಸಿಕೊಂಡಿವೆ. ತಮ್ಮದೇ ಆದ ಆಚಾರ–ವಿಚಾರಗಳನ್ನು ಸಂಪ್ರದಾಯಗಳನ್ನು ಪಾಲಿಸಿಕೊಂಡು ಕಾಲ, ಪ್ರದೇಶ, ಪರಿಸರಕ್ಕೆ ತಕ್ಕಂತೆ ಪೋಷಿಸಿಕೊಂಡು ಬಂದಿವೆ. ಬುಡಕಟ್ಟು ಸಮುದಾಯಗಳು ರಕ್ತಗತವಾಗಿ ತಮ್ಮದೇ ಆದ ಸಂಸ್ಕೃತಿಯ ಅಂತಃಸತ್ವವನ್ನು ಒಡಲಲ್ಲಿ ಸಂರಕ್ಷಿಸಿಕೊಂಡಿವೆ. ಅಂತಹ ಸಮುದಾಯಗಳಲ್ಲಿ ಕುರುಬ ಸಮುದಾಯವೂ ಒಂದಾಗಿದೆ.

ಇಂತಹ ಸಮುದಾಯಗಳಲ್ಲಿ ದೈವಸ್ವರೂಪಕ್ಕೆ ಪಾತ್ರರಾದ ಸಾಂಸ್ಕೃತಿಕ ನಾಯಕರು ಜನ್ಮ ತಾಳಿದ್ದಾರೆ. ಕುರುಬರ ಧಾರ್ಮಿಕ ನಾಯಕರಲ್ಲಿ ರೇವಣಸಿದ್ಧ, ಶಾಂತಮುತ್ತಯ್ಯ, ಸಿದ್ಧರಾಮ, ಹಾಗೂ ಅಮೋಘಸಿದ್ಧ ಪ್ರಮುಖರೆನಿಸುತ್ತಾರೆ. ಕುರುಬರಿಗೆ ಸಂಸ್ಕೃತಿಯ ದೃಷ್ಟಿಯಿಂದ ಸ್ಥಳ, ನೆಲೆ, ಕ್ಷೇತ್ರ ಪೀಠ ಪವಿತ್ರವಾದದ್ದು. ಸರೂರು ಸಾಂಸ್ಕೃತಿಕವಾಗಿ ಭೌಗೋಳಿಕ ಕೇಂದ್ರವಾಗಿ ಮಾರ್ಪಟ್ಟಿದೆ. ಹಾಲುಮತ ಸಮಾಜಕ್ಕೆ ಶಾಂತಮುತ್ತಯ್ಯನವರು ಮೂಲ ಗುರುಗಳಾಗಿದ್ದಾರೆ.

ಇಲ್ಲಿ ರೇವಣಸಿದ್ಧೇಶ್ವರನ (ಏಳುಗುಡಿ) ದೇವಸ್ಥಾನವಿದೆ. ಅದರ ಪಕ್ಕದಲ್ಲಿ ಶಾಂತಮುತ್ತಯ್ಯನ ಸ್ಮಾರಕವಾಗಿ ಗದ್ದುಗೆ ಇದೆ. ಅದನ್ನು ಗಿರಿ, ಐಕ್ಯವಾದ ಸ್ಥಳ, ಗದ್ದುಗೆ ಎಂಬ ನಾನಾ ಹೆಸರುಗಳಿಂದ ಕರೆಯುತ್ತಾರೆ. ಬಹುಮುಖ್ಯವಾಗಿ ಕುರುಬ ಸಮಾಜದವರಿದ್ದು ಒಡೆಯರ ಒಡೆತನ ಹೆಚ್ಚಾಗಿರು ವುದನ್ನು ಈಗಲೂ ಕಾಣಬಹುದು. ನಂಬಿಕೆ, ಆಚರಣೆ ಸಂಪ್ರದಾಯ ಇವುಗಳನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿರುವುದು ಗಮನಾರ್ಹವಾಗಿದೆ. ನಂಬಿಕೆಗಳಿಗಿಂತಲೂ ಸಂಪ್ರದಾಯಕ್ಕೆ ತನ್ನದೇ ಆದ ಪರಂಪರೆಯೂ ಹಾಗೂ ಭೌಗೋಳಿಕ ವ್ಯಾಪ್ತಿಯೂ ಇದೆ. ಸರೂರ ಸಂಪ್ರದಾಯವನ್ನು ಮೂಲವಾಗಿಟ್ಟುಕೊಂಡು ಆಂಧ್ರದಲ್ಲಿಯೂ ಇದರ ಸಂಪ್ರದಾಯದ ನೆಲೆಗಳು ಕಂಡುಬರುತ್ತವೆ. ಅವರು ಧಾರ್ಮಿಕವಾಗಿ ಆಚರಿಸುವಂತಹ ಎಲ್ಲಾ ಕಾರ್ಯಗಳನ್ನು ಕಾಲಕ್ಕೆ ಅನುಗುಣವಾಗಿ ಆಚರಣೆಗಳನ್ನು ಮಾಡಿಕೊಂಡು ಬಂದಿದ್ದಾರೆ. ಅಲ್ಲಿನ ಜನರು ಸರೂರಿನ ಸಂಪ್ರದಾಯದವರು ಎಂದು ಹೇಳಿಕೊಳ್ಳುತ್ತಾರೆ. ಆದರೆ ಸರೂರಿನಲ್ಲಿ ಆಚರಿಸುವಂತಹ ಎಲ್ಲಾ ಸಂಪ್ರದಾಯಗಳನ್ನು ಅಳವಡಿಸಿಕೊಳ್ಳದೆ ಕೆಲವು ಪದ್ಧತಿಗಳನ್ನು ರೂಢಿಸಿಕೊಂಡು ಬರುತ್ತಿದ್ದಾರೆ. ಉದಾಹರಣೆಗೆ, ಸರೂರಿನಲ್ಲಿ ರೇವಣ ಸಿದ್ಧನ ಜಾತ್ರೆಯನ್ನು ಶ್ರಾವಣಮಾಸ ಮತ್ತು ಶಿವರಾತ್ರಿಯಲ್ಲಿ ಆಚರಿಸುತ್ತಾರೆ. ಇದು ಸೀರ್ಪಿ ಕೊಟ್ಟಾಲಿನಲ್ಲಿ ಯುಗಾದಿ ಮತ್ತು ವಿಜಯದಶಮಿ ಸಂದರ್ಭದಲ್ಲಿ ಮಾಡುತ್ತಾರೆ. ಈ ಪಲ್ಲಕ್ಕಿ ಉತ್ಸವ, ಜಾತ್ರೆ–ಕುಂಭಮೇಳಗಳ ಮೆರವಣಿಗೆಗಳನ್ನು ಎರಡೂ ಕಡೆ ಮಾಡುವುದು ಕಂಡುಬರುತ್ತದೆ. ಆದರೆ ಸಿರ್ಪಿಕೊಟ್ಟಾಲಿನ ವಿಶೇಷತೆಯೇನೆಂದರೆ ರೇವಣಸಿದ್ಧನ ಜೊತೆಗೆ ವೀರ ಮಾಳಮ್ಮನ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಸಂಪ್ರದಾಯಬದ್ಧವಾಗಿ ಗಂಗೆಯ ಪೂಜೆಯನ್ನು ಮಾಡಿಕೊಂಡು ದೇವಾಲಯಕ್ಕೆ ಕರೆತರುವುದು ಇಲ್ಲಿಯ ಪದ್ಧತಿಯಾಗಿದೆ. ಅದೇ ರೀತಿ ಓಬಳಾಪುರಂ ಹಾಗೂ ಕುಂದುರ್ಪಿ ಮಂಡಲದಲ್ಲಿ ಬರುವ ಲಕ್ಷ್ಮಂಪಲ್ಲಿಯಲ್ಲಿಯೂ ವಿಜಯದಶಮಿಯಂದು ರೇವಣಸಿದ್ಧನ ಪಲ್ಲಕ್ಕಿ ಉತ್ಸವ ನಡೆಯುತ್ತದೆ.

ಕರ್ನೂಲ್ ಜಿಲ್ಲೆಯ ಆಲೂರು ಮಂಡಲದಲ್ಲಿ ಚಿಂತಕುಂಟ ಎಂಬ ಊರಿದೆ. ಇಲ್ಲಿ ಪ್ರತೀ ವರ್ಷ ರೇವಣ ಸಿದ್ಧನ ಜಾತ್ರೆ–ಪಲ್ಲಕ್ಕಿ ಇದನ್ನು ಅಲ್ಲಿಯ ಜನರು 'ದೊಡ್ಡದ್ಯಾವ್ರು' ಎಂದು ಕರೆಯುತ್ತಾರೆ. ಆ ಒಂದು ಜಾತ್ರೆಯನ್ನು ಸಾಂಸ್ಕೃತಿಕವಾಗಿ ಮೂರು ದಿನಗಳ ಕಾಲ ಮಾಡುತ್ತಾರೆ. ಇಲ್ಲಿಯ ಸಂಪ್ರದಾಯದ ವಿಶೇಷವೆಂದರೆ ಬಂದಂತಹ ಎಲ್ಲಾ ದೇವರುಗಳು ಒಮ್ಮೆಯೇ ಗಂಗಾಸ್ನಾನಕ್ಕೆ ಹೋಗುತ್ತವೆ. ಪೂಜೆ ಪುನಸ್ಕಾರಗಳಾದ ನಂತರ ಆ ಮಠದ ಗುರು ಒಡೆಯರ ಸಮ್ಮುಖದಲ್ಲಿ ಪಟ್ಟದ ಪೂಜಾರಿಯನ್ನು ನೇಮಕ ಮಾಡುತ್ತಾರೆ. ಹೀಗೆ ಈ ಎಲ್ಲಾ ಕಾರ್ಯಗಳ ಜೊತೆಗೆ ದಾಸೋಹ ಕಾರ್ಯವನ್ನು ನೆರವೇರಿಸಿಕೊಡುತ್ತಾರೆ. ಇದು ಈ ಊರಿನ ವಿಶಿಷ್ಟತೆಯನ್ನು ತೋರಿಸುತ್ತದೆ. ಆದರೆ ಸರೂರಿನಲ್ಲಿ ರೇವಣ ಸಿದ್ಧನ ಜಾತ್ರೆ ಉತ್ಸವ ನಡೆದ ಸಂದರ್ಭದಲ್ಲಿ ಹಲವಾರು ಸಂಪ್ರದಾಯದ ಆಚರಣೆಗಳನ್ನು ಮಾಡುತ್ತಾರೆ. ಅವು ಕೆಂಡದ ಮೇಲೆ ರೊಟ್ಟಿ ಸುಡುವುದು, ದೀಡನಮಸ್ಕಾರ ಹಾಕುವುದು,

* S/o ಮುತ್ತಯ್ಯ ಎಸ್., ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಹೇಳಿಕೆ ಹೇಳಿದ ನಂತರ ರವೆಉಂಡಿಯ ಪದ್ಧತಿ ಹೀಗೆ ಸಾಂಸ್ಕೃತಿಕ ಪ್ರತೀಕವಾಗಿ ಅನೇಕ ಪದ್ಧತಿಗಳನ್ನು ಆಚರಿಸುತ್ತಾರೆ. ಆದರೆ ಆಂಧ್ರ ಪರಿಸರದಲ್ಲಿ ಸಿಕ್ಕಂತಹ ಸರೂರು ಸಂಪ್ರದಾಯದ ನೆಲೆಗಳಲ್ಲಿ ಈ ರೀತಿಯಾದ ಸಂಪ್ರದಾಯದ ಆಚರಣೆಗಳು ಕಂಡುಬರುವುದು ಕಡಿಮೆ ಸಾಧ್ಯ. ಆದರೆ ಇವುಗಳಲ್ಲಿ ಕೆಲವನ್ನು ರೂಢಿಸಿಕೊಂಡು, ಇನ್ನು ಕೆಲವನ್ನು ಅಳವಡಿಸಿಕೊಂಡು ಬರುತ್ತಿರುವ ಸಂಗತಿಗಳನ್ನು ಕಾಣ ಬಹುದು. ಇವರು ಧಾರ್ಮಿಕವಾಗಿ ಯಾವುದೇ ಆಚರಣೆ ಗಳನ್ನು ಮಾಡಿದರೂ ಗುರು ಒಡೆಯರ, ಒಡೆತನದಲ್ಲಿ ಮಾಡು ತ್ತಾರೆ. ಈ ಗುರು ಒಡೆಯರು ಮೂಲತಃ ಸರೂರು ಪೀಠಕ್ಕೆ ಸಂಬಂಧವಿರುವುದು ಕಂಡುಬರುತ್ತದೆ. ಇಲ್ಲಿ ಬೀರಪ್ಪ ದೇವರನ್ನು ರಾಮಪ್ಪ ಎಂದು ಕರೆದರೆ ರೇವಣಸಿದ್ಧನನ್ನು ಕಾರಪ್ಪ ಎಂದು ಕರೆಯುತ್ತಾರೆ. ಹೀಗೆ ಅಲ್ಲಿನ ಪ್ರಾದೇಶಿಕ ರೂಢಿಗೆ ಅನುಗುಣವಾಗಿ ನಾಮಗಳನ್ನು ಕರೆಯುತ್ತಾರೆ. ಒಟ್ಟಾರೆ ಈ ಎಲ್ಲಾ ಆಚರಣೆಗಳನ್ನು ಗಮನಿಸಿದಾಗ ಸರೂರು ಮತ್ತು ಆಂಧ್ರದಲ್ಲಿ ಆಚರಿಸುವ ಸಂಪ್ರದಾಯಗಳಿಗೆ ಸಾಮ್ಯತೆ ಇರುವುದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ತನ್ನ ಸಂಪ್ರದಾಯ ಇಲ್ಲವೆ ಸಂಸ್ಕೃತಿಯನ್ನು ಸಾಂಸ್ಕೃತೀಕರಣ ಗೊಳಿಸುವ ಉದ್ದೇಶದಿಂದ ಅಥವಾ ಈ ಮೂಲ ಧಾರ್ಮಿಕ ಪೀಠದಿಂದ ಪ್ರತಿಯೊಂದು ಪೂಜೆ ಪುನಸ್ಕಾರಗಳು ನಡೆಯ ಬೇಕಾಗಿತ್ತು. ಆದರೆ ಹಾಲುಮತ ಸಮಾಜವು ವಿಸ್ತರಿಸಿದಂತೆ, ಗುರುಪರಂಪರೆ ಅಪಾರ ಸಂಖ್ಯೆಯಲ್ಲಿ ವಿಸ್ತರಿಸಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಶಾಖಮಠಗಳನ್ನು ಸ್ಥಾಪಿಸಿಕೊಳ್ಳಲು ಅನುವು ಮಾಡಿಕೊಡ ಲಾಯಿತು. ಅವುಗಳಿಗೆ ತಮ್ಮದೇ ಆದ ಶಾಖೆಯವರನ್ನು ಪೀಠಾಧಿಪತಿಗಳನ್ನಾಗಿ ನೇಮಿಸಲಾಯಿತು. ಹೀಗೆ ಸರೂರಿನ ಹಾಲುಮತ ಪರಂಪರೆಯು ಕರ್ನಾಟಕದಲ್ಲಿ ಅಲ್ಲದೇ ತಮಿಳುನಾಡು, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿಯೂ ಇದರ ಪರಂಪರೆಯ ನೆಲೆಗಳು ಕಂಡುಬರುತ್ತವೆ.

ಸರೂರು ಸಂಪ್ರದಾಯವನ್ನು ರೂಢಿಸಿಕೊಂಡು ಬಂದ ನೆಲೆಗಳು ಮಧ್ಯಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಪ್ರಮುಖವಾಗಿ ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ತುಮಕೂರು ಇತ್ಯಾದಿ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕರ್ನಾಟಕ ಗಡಿನಾಡಿನಲ್ಲಿ ವಾಸವಾಗಿರುವ ಹಾಲುಮತ ಸಮುದಾಯಗಳನ್ನು ಗುರುತಿಸುವುದು ಬಹುಮುಖ್ಯ ವೆನಿಸುತ್ತದೆ. ಆಂಧ್ರಪ್ರದೇಶಕ್ಕೆ ಹೊಂದಿಕೊಂಡಂತೆ ಬಳ್ಳಾರಿ ಸಮೀಪದ ಸಿಂದ್ವಾಳ, ಓಬಳಾಪುರಂ ಅದೇ ರೀತಿ ಬ್ರಹ್ಮಸಮುದ್ರಂ ಮಂಡಲಕ್ಕೆ ಸೇರಿದ ವೇಮುನಪಲ್ಲಿ ಹಾಗೆಯೇ ಸೀರ್ಪಿಕೊಟ್ಟಾಲು, ರುದ್ರಂಪಲ್ಲಿ, ಎನುಮಲದೊಡ್ಡಿ, ತುಮುಗುಂಟ, ಲಕ್ಷ್ಮಂಪಲ್ಲಿ ಚಾವಾಲ, ಕರ್ತನಪರ್ತಿ ಯಾಪಲಪರ್ತಿ, ರಾಯದುರ್ಗಂ, ಕಪ್ಪನಹಳ್ಳಿ, ನಾಟಪಲ್ಲಿ, ಕೋನಾಪುರಂ, ಗೊಚ್ಚಿ ರೆಡ್ಡಿಹಳ್ಳಿ ಆಲೂರು ಮಂಡಲದ ಚಿಂತಕುಂಟ, ಹಾಲಹರವಿ, ಬೊಮ್ಮನಹಾಳು ಮಂಡಲದ ಗೋವಿಂದವಾಡ ಹೀಗೆ ಅನೇಕ ಊರುಗಳಲ್ಲಿ ಸರೂರಿನ ಪರಂಪರೆಯವರೂ ಎಂದು ಹೇಳಿಕೊಂಡು ತಮ್ಮ ತಮ್ಮ ಧಾರ್ಮಿಕ ಆಚರಣೆಗಳನ್ನು ಆಚರಿಸಿಕೊಂಡು ಬರುತ್ತಿರು ವುದನ್ನು ಈಗಲೂ ನೋಡಬಹುದು.

ಸೀರ್ಪಿಕೊಟ್ಟಾಲು:

ಕುರುಬರ ಸಾಂಸ್ಕೃತಿಕ ಬದುಕನ್ನು ರೂಢಿಸಿಕೊಂಡು ಬರುತ್ತಿರುವ ನೆಲೆಯಾಗಿದೆ. ಇದು ಬೆಳಗುಪ್ಪ ಮಂಡಲಕ್ಕೆ ಸೇರಿದೆ. ಕಲ್ಯಾಣ ದುರ್ಗದಿಂದ ೩೫ ಕಿ.ಮೀ. ದೂರದಲ್ಲಿದೆ. ಊರಿಂದ ಒಂದು ಫರ್ಲಾಂಗ್ ದೂರದಲ್ಲಿ ರೇವಣಸಿದ್ಧನ ದೇವಾಲಯವಿದೆ. ಸುಮಾರು ಮೂರು ಶತಮಾನಗಳಷ್ಟು ಹಳೆಯ ದೇವಾಲಯವಾಗಿದೆ. ಇದರ ಮುಂದೆ ೫ ಅಡಿಯಷ್ಟು ಎತ್ತರದ ದೀಪಸ್ತಂಭವಿದೆ. ಕರ್ತನಪರ್ತಿಯ ಶಾಂತಮುತ್ತಯ್ಯ ಒಡೆಯರು ಹೇಳುವಂತೆ ಹಂಪಿಯಿಂದ ಶಿವಲಿಂಗ ಮತ್ತು ನಂದಿ ವಿಗ್ರಹಗಳನ್ನು ಮಾಡಿಸಿ ತಿರುಗು ಮಡುವಿನ ಹತ್ತಿರ ಪೂಜಿಸಿ ಜೀವಕಾಳು ತುಂಬಿಸಿಕೊಂಡು ಬಂದು ಪ್ರತಿಷ್ಠಾಪಿಸಿ ದ್ದೇವೆಂದು ಹೇಳಿದರು. ಇಲ್ಲಿ ಪ್ರತಿ ಹುಣ್ಣಿಮೆ ಅಮವಾಸ್ಯೆ ವಿಶೇಷ ದಿನಗಳಲ್ಲಿ ಪೂಜೆ ನಡೆಯುತ್ತದೆ. ನಾವು ಶಾಂತ ಮುತ್ತಯ್ಯನ ಪರಂಪರೆಯವರು ಎಂದು ಹೇಳಿಕೊಳ್ಳುತ್ತಾರೆ.

ಗೋವಿಂದವಾಡ

ಇದು ಅನಂತಪುರ ಜಿಲ್ಲೆಯ ಬೊಮ್ಮನಹಾಳು ಮಂಡಲಕ್ಕೆ ಸೇರಿದೆ. ಇಲ್ಲಿ ರೇವಣಸಿದ್ದೇಶ್ವರ ಮಠವಿದೆ. ಇದನ್ನು ಸುಮಾರು ನೂರು-ನೂರೈವತ್ತು ವರ್ಷಗಳ ಹಿಂದೆ ಕಟ್ಟಿಸಿರಬಹುದಾಗಿದೆ. ಮಠದ ಒಳಗಡೆ ಇರುವ ಗರ್ಭಗುಡಿ ಯಲ್ಲಿ ಶಿವಲಿಂಗದಿಂದ ಉದ್ಭವವಾದ ರೇವಣ ಸಿದ್ದೇಶ್ವರನ ಪ್ರತಿಮೆ ಇದೆ. ಅದು ಸುಮಾರು ಮೂರರಿಂದ ನಾಲ್ಕು ಅಡಿ ಎತ್ತರವಾಗಿದೆ. ಆದ್ದರಿಂದ ಭಕ್ತಾದಿಗಳಿಗೋಸ್ಕರ ಈ ಮಠವನ್ನು ಕಟ್ಟಿಸಿದ್ದಾರೆ ಎಂದು ಹೇಳುತ್ತಾರೆ. ತಂದೆಯಾದ ಪಂಪಾಪತಿ ಒಡೆಯರು ಆ ಮಠವನ್ನು ಅಂದಿನಿಂದ ಪ್ರಸ್ತುತ ದವರೆಗೂ ಅದರ ಧಾರ್ಮಿಕ ಪರಂಪರೆಯನ್ನು ರೂಢಿಸಿ ಕೊಂಡು ಬಂದಿದ್ದಾರೆ.

ಬಿಜಾಪುರದಲ್ಲಿ ಬರುವ ಸರೂರಿನ ಒಡೆಯರು ನಾವು ಮೂಲತಃ ಅಣ್ಣ ತಮ್ಮಂದಿರು ಆದರೆ ಕಾಲಾಂತರವಾಗಿ ತಮ್ಮ ತಂದೆಯವರು ಆಂಧ್ರದಲ್ಲಿ ಬಂದು ನೆಲೆಸಿರುವುದರಿಂದ ಆ ಕಡೆ ಹೋಗುವುದನ್ನು ಬಿಟ್ಟಿದ್ದೇವೆ. ಆದರೆ ಗುರು ಪರಂಪರೆ

ಯನ್ನು ಬಿಟ್ಟಿಲ್ಲ. ಇಲ್ಲಿನ ಕುರುಬರ ೧೫೦ ಗ್ರಾಮಗಳಿಗೆ ಒಡೆಯರು ನಾವು ಎಂದು ಹೇಳಿಕೊಳ್ಳುತ್ತಾರೆ.

ಹಾಲಹರವಿ

ಇದು ಕರ್ನೂಲ್ ಜಿಲ್ಲೆಯ ಆಲೂರು ಮಂಡಲದಲ್ಲಿ ಬರುತ್ತದೆ. ಇಲ್ಲಿ ಕುರುಬರಿಗೆ ಸಂಬಂಧಿಸಿದಂತೆ ಹೊಸದಾಗಿ ಕಟ್ಟಿಸಿರುವ ಬೀರಪ್ಪನ ದೇವಸ್ಥಾನವಿದೆ. ಜೊತೆಗೆ ರೇವಣಸಿದ್ಧ ಎಂದು ಹೇಳಿ ಹಳೆಯ ಮನೆಯಲ್ಲಿ ಲಿಂಗದಾಕಾರವಾದ ಒಂದು ಪ್ರತಿಮೆ ಇದೆ. ಅದನ್ನು ರೇವಣಸಿದ್ಧನ ಕಲ್ಲು ಎಂದು ಹೇಳುತ್ತಾರೆ.

ಚಿಂತಕುಂಟ

ಇದು ಕರ್ನೂಲ್ ಜಿಲ್ಲೆಯ ಆಲೂರು ಮಂಡಲದಲ್ಲಿ ಬರುತ್ತದೆ. ಇಲ್ಲಿ ಶ್ರೀ ರಾಮಪ್ಪನ ದೇವಸ್ಥಾನವಿದೆ. ಇದನ್ನು ಬೀರಪ್ಪ ಎಂದು ಕರೆಯುತ್ತಾರೆ. ಅದೇ ರೀತಿ ಶ್ರೀ ಗುರುಸಿದ್ಧ ಲಿಂಗೇಶ್ವರ ಸ್ವಾಮಿಯ ದೇವಸ್ಥಾನವಿದೆ. ಇದನ್ನು ರೇವಣಸಿದ್ಧ, ಕಾರಪ್ಪನ ದೇವರು ಎಂದು ಕರೆಯುವ ವಾಡಿಕೆಯಿದೆ. ಈ ಮಠಕ್ಕೆ ಭಕ್ತಾದಿಗಳು ಕೊಟ್ಟಿರುವ ೧೦ ಎಕರೆ ಭೂಮಿಯಿದೆ. ಪ್ರಸ್ತುತ ಮಠದ ಸಂಪ್ರದಾಯದ ಕಾರ್ಯಗಳಿಗೆ ಅನುಗುಣವಾಗಿ ಗೊಸ್ಬಾಳ, ನೇಮ್ಕಲ್ ಸಂಗಾಲ ಮತ್ತು ಪೆದ್ದಹುಲ್ತಿ ಇವು ಪ್ರಮುಖವಾಗಿ ಕಾರ್ಯನಿರ್ವಹಿಸಿಕೊಂಡು ಬರುತ್ತಿರುವುದನ್ನು ಈಗಲೂ ನೋಡಬಹುದು. ಈ ಮಠದ ವ್ಯಾಪ್ತಿಗೆ ಒಳಗೊಂಡಿರುವ ೧೨ ಜಗಲಿಯ ದೇವರುಗಳಿಗೆ ಇವರು ಗುರುಗಳಾಗಿದ್ದಾರೆ. ಹಂಪಿ-ಹುಣ್ಣಿಮೆಯಲ್ಲಿ ಎಲ್ಲಾ ದೇವರುಗಳು ಬಂದು ಮೂರು ದಿನಗಳು ಅಲ್ಲಿದ್ದು, ಸಂಪ್ರದಾಯ ಬದ್ಧವಾಗಿ ಆಚರಿಸುವ ಎಲ್ಲಾ ಕಾರ್ಯಗಳನ್ನು ಮುಗಿಸಿಕೊಂಡು ಹೋಗುತ್ತಾರೆ.

ಕರ್ತನಪರ್ತಿ

ಕಲ್ಯಾಣ ಮಂಡಲದಿಂದ ಸುಮಾರು ೧೨ ಕಿ.ಮೀ. ದೂರದಲ್ಲಿದೆ. ಇಲ್ಲಿ ಹೊಸದಾಗಿ ಕಟ್ಟಿಸಿರುವ ರೇವಣಸಿದ್ದೇಶ್ವರ ದೇವಸ್ಥಾನವಿದೆ. ಇದರಲ್ಲಿ ರೇವಣಸಿದ್ದೇಶ್ವರನ ಕಂಚಿನ ಪ್ರತಿಮೆ ಇದೆ. ಪ್ರತಿ ಹುಣ್ಣಿಮೆ ಅಮವಾಸ್ಯೆಯಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಜಾತ್ರೆ-ಉತ್ಸವ ಪ್ರಮುಖವಾಗಿ ದಸರ ಸಮಯದಲ್ಲಿ ನಡೆಯುತ್ತದೆ. ಇಲ್ಲಿ ಹೆಚ್ಚಾಗಿ ಕುರುಬ ಸಮುದಾಯದವರಿದ್ದು, ಸರೂರ ಗುರುಪೀಠಕ್ಕೆ ಸಂಬಂಧ ವಿರುವವರು ದೇವಸ್ಥಾನದ ಪೂಜಾರಿಗಳಾಗಿದ್ದಾರೆ. ಊರಲ್ಲಿ ಇತರೆ, ಮಾಳಮ್ಮ ಕೆಂಚಲಿಂಗೇಶ್ವರನ ಗುಡಿಗಳಿರುವುದು ಕಂಡುಬರುತ್ತವೆ.

ರಾಯದುರ್ಗಂ

ಹಾಲುಮತ ಸಮುದಾಯಕ್ಕೆ ಸೇರಿದ ಬೀರಪ್ಪ (ವೀರಭದ್ರ) ಮತ್ತು ರೇವಣಸಿದ್ಧನ ದೇವಾಲಯಗಳಿವೆ. ರೇವಣಸಿದ್ಧನ ದೇವಾಲಯವು ಪ್ರಾಚೀನ ಗುಡಿಯಾಗಿದ್ದು, ರೇವಣಸಿದ್ಧನ ಮೂರ್ತಿಯನ್ನು ಹೊಂದಿರುವ ಗರ್ಭಗುಡಿಯಿದೆ. ದೇವಾಲಯದ ಮುಂದೆ ಗರುಡ ಗಂಬವಿದೆ. ಹಾಗೂ ಒಂದು ನಂದಿ ವಿಗ್ರಹವಿದೆ. ಇಲ್ಲಿ ಯಾವುದೇ ಜಾತ್ರೆ-ಉತ್ಸವಗಳು ನಡೆಯುತ್ತಿಲ್ಲ. ಇವರ ಮೂಲತಃ ಸರೂರಿಗೆ ಸಂಬಂಧಿಸಿದ ಒಡೆಯರು ಎಂದು ಹೇಳಿಕೊಳ್ಳುತ್ತಾರೆ. ರಾಯದುರ್ಗ ಮಂಡಲದ ರೇಕಲಗುಂಟ, ಹಿಂದೂಪುರಂ ಮಂಡಲದಲ್ಲಿ ಕಾಲಿಪಲ್ಲಿ, ಮಡಕಸಿರಾ ಮಂಡಲದಲ್ಲಿ ತಿರುಮಲದೇವುಡಪಲ್ಲಿ, ಗೌಡಪಲ್ಲಿ ಹೀಗೆ ಹಲವು ಪ್ರದೇಶಗಳಲ್ಲಿ ಇದರ ಪರಂಪರೆಯನ್ನು ಕಾಣಬಹುದು.

ಲಕ್ಷ್ಮಂಪಲ್ಲಿ

ಇದು ಕುಂದುರ್ಪಿ ಮಂಡಲದಿಂದ ಸುಮಾರು ೧೦ ಕಿ.ಮೀ. ಅಂತರದಲ್ಲಿದೆ. ಇಲ್ಲಿ ದೇವಾಲಯವು ಸುಮಾರು ೨-೩ ಶತಮಾನಗಳಷ್ಟು ಹಳೆಯದಾಗಿದ್ದು, ಗರ್ಭಗುಡಿಯಲ್ಲಿ ಉದ್ಭವಲಿಂಗವಿದೆ. ಅಲ್ಲಿಯ ಒಡೆಯರಾದ ಚಿಕ್ಕಣ ಒಡೆಯರ ಹೇಳುವಂತೆ ಇತ್ತೀಚೆಗೆ ಲಿಂಗದ ಮೇಲೆ ಹುತ್ತ ಬೆಳೆದಿದೆ. ಅದನ್ನು ಕೆಡವಿದಂತೆಲ್ಲ ಬೆಳದೇ ಬೆಳೆಯುತ್ತದೆ. ಆದ್ದರಿಂದ ಗರ್ಭಗುಡಿಯಿಂದ ಹೊರಗೆ ಬೀರಪ್ಪ ಮತ್ತು ರೇವಣಸಿದ್ಧನನ್ನು ಆರಾಧಿಸುತ್ತಿದ್ದು. ಯುಗಾದಿ ಸಮಯದಲ್ಲಿ ಬೀರಪ್ಪನ ಜಾತ್ರೆ ನಡೆಯುತ್ತದೆ. ವಿಜಯದಶಮಿಯಲ್ಲಿ ರೇವಣಸಿದ್ದೇಶ್ವರನ ಪಲ್ಲಕ್ಕಿ ಉತ್ಸವ ನಡೆಯುತ್ತದೆ.

ಓಬಳಾಪುರಂ

ಇದು ಬಳ್ಳಾರಿಯಿಂದ ೨೦ ಕಿ.ಮೀ. ಅಂತರದಲ್ಲಿದ್ದು ಮೊಳಕಾಲ್ಮೂರುಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುತ್ತದೆ. ಇಲ್ಲಿ ಸರೂರಿಗೆ ಸಂಬಂಧಿಸಿದ ಕೆಲವು ಒಡೆಯರ ಮನೆಗಳಿದ್ದು ಹೆಚ್ಚಾಗಿ ಕುರುಬರ ಮನೆಗಳು ಕಂಡುಬರುತ್ತವೆ. ಹೊಸದಾಗಿ ಕಟ್ಟಿಸಿದ ರೇವಣಸಿದ್ಧೇಶ್ವರ ಮಠವಿದೆ. ವಿಜಯದಶಮಿಯಲ್ಲಿ ಪಲ್ಲಕ್ಕಿ ಉತ್ಸವ ಹುಣ್ಣಿಮೆ ಅಮವಾಸ್ಯೆಗೆ ವಿಶೇಷ ಪೂಜೆ ನಡೆಯುತ್ತದೆ. ಇವರು ಮೂಲತಃ ಸರೂರಿಗೆ ಸಂಬಂಧಿಸಿದ ವಿಚಾರಗಳನ್ನು ಹೇಳುತ್ತಾರೆ.

ಸಿಂದ್ವಾಳ

ಬಳ್ಳಾರಿ ಜಿಲ್ಲೆಯ ಗಡಿಭಾಗದಲ್ಲಿ ಬರುವ ಗ್ರಾಮವಾಗಿದೆ. ಇಲ್ಲಿಯ ರೇವಣಸಿದ್ದೇಶ್ವರ ಮಠವು ಪುರಾತನ



ಸೀರ್ಜಿಕೊಟ್ಯಾಲ



ಲಕ್ಷ್ಮಿಂಪಲ್ಲಿ

ವಾದುದು ಪ್ರಮುಖವಾಗಿ ಇಲ್ಲಿಯ ಜನರು ಸಿಂದ್ವಾಳ, ಗೋವಿಂದವಾಡ, ರೇಕರಕುಂಟೆ, ಓಬಳಾಪುರಂ ಮುಂತಾದ ಮಠಗಳಿಗೆ ನಡೆಮುಕೊಳ್ಳುತ್ತಾರೆ. ಈ ಎಲ್ಲಾ ಮಠಗಳು ಸರೂರಿನ ಮೂಲ ಪೀಠಕ್ಕೆ ಸಂಬಂಧವಿರುವ ಸಂಗತಿಗಳು ತಿಳಿಮುಬರುತ್ತವೆ.

ಕೊಪ್ಪಳ ದೊಡ್ಡಿಯಲ್ಲಿರುವ ಸಿಂದ್ವಾಳದ ಒಡೆಯರಾದ ಸಿದ್ಧಲಿಂಗಯ್ಯಸ್ವಾಮಿ ಹೇಳುವಂತೆ 'ಸರೂರ ರೇವಣಸಿದ್ಧ ಮೊದಲು ಸಿಪ್ಪಿಗಿರಿಗೆ ಬಂದು ಸಿಂಧು ಅನಿಸಿ ಅಲ್ಲಿಂದ ಕರ್ನಾಟಕದಾದ್ಯಂತ ಸಂಚರಿಸಿದ ಎನ್ನುವ ಮಾತು ಆಂಧ್ರವು ಕೂಡ ರೇವಣಸಿದ್ಧೇಶ್ವರನ ಕಾರ್ಯಕ್ಷೇತ್ರವಾಗಿತ್ತು ಎಂಬುದಕ್ಕೆ ಸಾಕ್ಷಿಯಂತಿದೆ.

ಒಟ್ಟಾರೆ, ಕ್ಷೇತ್ರಕಾರ್ಯದ ಮೂಲಕ ಈ ಎಲ್ಲಾ ಸ್ಥಳಗಳನ್ನು ನೋಡಿದಾಗ ಸರೂರಿನ ಸಂಪ್ರದಾಯದ ಬಿಂಬ ಎಲ್ಲಾ ಕಡೆಯಲ್ಲಿಯೂ ಹರಡಿರುವ ಸಂಗತಿಗಳು ತಿಳಿದು ಬರುತ್ತವೆ.

ಆಧಾರಸೂಚಿ

೧. ಬಿರಾದಾರ ಬಿ.ಜಿ., ಕುರುಬರ ಗುರು ಒಡೆಯರು ಸಾಂಸ್ಕೃತಿಕ ಅಧ್ಯಯನ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೧.
೨. ರಾಜಶ್ರೀ ಪಾಟೀಲ, ಹಾಲುಮತ ಗುರು ಸರೂರ ಶಾಂತಮುತ್ತಯ್ಯ' ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೧.
೩. ಹಳ್ಳಿಕೇರಿ ಎಫ್.ಟಿ. (ಸಂ) ಕುರುಬರ ಗುರು ಒಡೆಯರು, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೭.
೪. ಹಳ್ಳಿಕೇರಿ ಎಫ್.ಟಿ. (ಸಂ) ಹಾಲುಮತ ವ್ಯಾಸಂಗ-೩ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.
೫. ಹಳ್ಳಿಕೇರಿ ಎಫ್.ಟಿ. (ಸಂ) ರೇವಣಸಿದ್ಧ ಪರಂಪರೆ (ಹಾಲುಮತ ವ್ಯಾಸಂಗ-೪) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧
೬. ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯ ಬಳಕೆ.

೮೩

ಕೆಸ್ತೂರಿನ ವೀರಭದ್ರ ಮತ್ತು ಚೊಕ್ಕನಾಥೇಶ್ವರ ದೇವಾಲಯಗಳ ಕ್ಷೇತ್ರ ಅಧ್ಯಯನ

ಮಮತಾರಾಣಿ*

ವೀರಭದ್ರ ದೇವಾಲಯ: ತುಮಕೂರು ತಾಲ್ಲೂಕಿನ ಕೆಸ್ತೂರಿನ ವೀರಭದ್ರ ದೇವಾಲಯವು ವಿಜಯನಗರ ಕಾಲದ್ದಾಗಿದ್ದು, ಇದು ವಾಸ್ತು ಮತ್ತು ಮೂರ್ತಿಶಿಲ್ಪಗಳ ದೃಷ್ಟಿಯಿಂದ ಕ್ರಿ.ಶ. ಸು. ೧೫ನೇ ಶತಮಾನಕ್ಕೆ ಸೇರುತ್ತದೆ.

ಉತ್ತರಾಭಿಮುಖವಾಗಿರುವ ಈ ದೇವಾಲಯಕ್ಕೆ ಎರಡು ಪ್ರವೇಶದ್ವಾರಗಳಿವೆ. ಉತ್ತರ ದಿಕ್ಕಿನ ದ್ವಾರವು ಸರಳ ಕೆತ್ತನೆಗಳಿಂದ ಕೂಡಿದ್ದು, ಪಶ್ಚಿಮ ದಿಕ್ಕಿನ ದ್ವಾರದ ತೆರೆದ ಮುಖಮಂಟಪದಲ್ಲಿ ಕಿರು ಜೋಡಿ ಕಂಬಗಳಿವೆ ಎಡಬದಿಯಲ್ಲಿ ಬ್ರಹ್ಮ ಮತ್ತು ತುಂಬುರರ ಮಧ್ಯದಲ್ಲಿ ದಕ್ಷಸಂಹಾರ ಮತ್ತು ನಾರದರ ಶಿಲ್ಪಗಳನ್ನು ಕಡೆದಿದ್ದಾರೆ. ದೇಗುಲದ ದ್ವಾರದಲ್ಲಿ ಶೈವ ದ್ವಾರಪಾಲಕರಿದ್ದು, ದ್ವಾರಬಂಧದಲ್ಲಿ ಲತಾಪಟ್ಟಿಕೆ ಇದೆ. ದ್ವಾರಬಂಧದ ಮೇಲ್ಭಾಗದಲ್ಲಿ ನಡುವೆ ವ್ಯಾಳವಿದೆ.

ಸುಖನಾಸಿ ಮತ್ತು ಗರ್ಭಗೃಹದ ದ್ವಾರದಲ್ಲಿರುವ ಕಂಬಗಳಲ್ಲಿ ತ್ರಿಮೂರ್ತಿಗಳ ಕೆತ್ತನೆಯಿದೆ. ದೇವಾಲಯದ ಒಳಗಿನ ಪಾರ್ಶ್ವಕಂಬಗಳಲ್ಲಿ ಪುರುಷ, ಸ್ತ್ರೀ-ಪುರುಷ ಶ್ಲೇಷಶಿಲ್ಪಗಳಿವೆ. ಇವು ನಗ್ನ ಪ್ರೇತ ಶಿಲ್ಪಗಳು. ಈ ಶಿಲ್ಪಗಳು ಒಂದು ಭಾಗದಲ್ಲಿ ಕಂಬವನ್ನು ಹೊತ್ತ ಹಾಗೆ ಮತ್ತೊಂದು ಭಾಗದಲ್ಲಿ ನೃತ್ಯ ಮಾಡುತ್ತಿರುವಂತಿವೆ. ಪೂರ್ವ ಮತ್ತು ಪಶ್ಚಿಮಕ್ಕೆ ವ್ಯಾಳ ಸ್ತಂಭಗಳಿವೆ. ಸ್ತಂಭಗಳಲ್ಲಿ ಶಿವಲಿಂಗ, ಕಮಲ, ಕಳಸ, ಮೀನು, ದಕ್ಷ, ಹಂಸ, ಇತ್ಯಾದಿ ಚಿತ್ರಗಳ ಕೆತ್ತನೆಯಿದೆ.

ಈ ಸ್ತಂಭಗಳಿಗೆ ಬೋದಿಗೆಯ ಆಧಾರವಿದೆ. ನವರಂಗದ ಭುವನೇಶ್ವರಿಯಲ್ಲಿ ಪದ್ಮರೇಖೆಗಳ ಕೆತ್ತನೆ ಇದೆ. ಭುವನೇಶ್ವರಿಯ ಮಧ್ಯಭಾಗದಲ್ಲಿ ಪದ್ಮವಿದೆ. ಗರ್ಭಗೃಹದ ದ್ವಾರಬಂಧದಲ್ಲಿ ಕೈಮುಗಿದು ನಿಂತಿರುವ ದ್ವಾರ/ಪಾಲಕರಿದ್ದಾರೆ.

ಇಲ್ಲಿನ ವೀರಭದ್ರ ಶಿಲ್ಪವು ಆಗಮೋಕ್ತವಾಗಿದ್ದು, ೪ಳಿ ಅಡಿ ಎತ್ತರವಿದೆ. ಇದು ಸಮಭಂಗಿಯಲ್ಲಿ ನಕ್ಷತ್ರಾಕಾರದ ಪಾಣಿಪೀಠದ ಮೇಲೆ ನಿಂತಿದೆ. ವೀರಭದ್ರನು ಚತುರ್ಭುಜಗಳನ್ನು ಹೊಂದಿದ್ದು, ಎಡಗೈಯಲ್ಲಿ ಬಿಲ್ಲು, ಹಲಗೆ, ಬಲಗೈಯಲ್ಲಿ ಕತ್ತಿ ಮತ್ತು ಬಾಣಗಳನ್ನು ಹಿಡಿದಿದ್ದಾನೆ. ಶಿರದಲ್ಲಿ ಕರಂಡ ಮಕುಟ ಧರಿಸಿದ್ದಾನೆ. ಎಡಭುಜದಿಂದ ಬಲ ಮಂಡಿಯವರೆಗೂ ರುಂಡಮಾಲೆ ಇದೆ. ನಡುಬಂಧದ ಬಲಭಾಗಕ್ಕೆ ಕಿಗ್ಗಠಾರಿ ಇದ್ದು, ಅದರ ಹಿಡಿ ಆಕರ್ಷಕವಾಗಿದೆ. ವೀರಭದ್ರನ ಮುಖದಲ್ಲಿ ಸೌಮ್ಯಭಾವವಿದ್ದು, ಮಂದಸ್ಮಿತನಾದರೂ ಕೋರೆ ಹಲ್ಲುಗಳಿವೆ.

ಇಲ್ಲಿನ ಆಚರಣೆಯಲ್ಲಿನ ವಿಶೇಷವೆಂದರೆ, ವೀರಭದ್ರನ ಜಾತ್ರೆಯ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಗುಗ್ಗಳ ಮತ್ತು ದಕ್ಷಿಣ ಕರ್ನಾಟಕದ ಕೊಂಡ ಹಾಯುವ ಪದ್ಧತಿ ಎರಡೂ ಇವೆ. ಇದು ಸಮನ್ವಯತೆಯ ಸಂಕೇತ ಎನ್ನಬಹುದು. ದಕ್ಷಿಣದಲ್ಲಿ ವೀರಭದ್ರನಿಗೆ ಗುಗ್ಗಳ ಮತ್ತು ಪುರವಂತ ನೃತ್ಯ ಪದ್ಧತಿಯಿಲ್ಲ. ಅದರ ಬದಲು ವೀರಗಾಸೆ ನೃತ್ಯ ಮತ್ತು ಕೊಂಡ ಹಾಯುವ ಪದ್ಧತಿಯಿದೆ. ಉತ್ತರ ಕರ್ನಾಟಕದ ಭಕ್ತರು ಅಥವಾ ಅಲ್ಲಿನ ಅಧಿಕಾರಿಗಳೋ ಇಲ್ಲಿಗೆ ಬಂದು ತಮ್ಮ ಆರಾಧನೆಯ ಭಾಗವಾದ ಈ ಆಚರಣೆಯನ್ನು ಇಲ್ಲಿ ಜಾರಿಗೊಳಿಸಿರುವ ಸಾಧ್ಯತೆಗಳಿವೆ. ಈಗಲೂ ಈ ವಿಶಿಷ್ಟ ಆಚರಣೆಗಳು ಕೆಸ್ತೂರಿನ ಸುತ್ತಮುತ್ತಲಿನ ಜನಪದರಲ್ಲಿ ರೂಢಿಯಲ್ಲಿವೆ.

ಇಲ್ಲಿನ ವೀರಭದ್ರ ಜಾತ್ರೆಯಲ್ಲಿ ಗುಗ್ಗಳ ಸೇವೆಗೆ ೨೧, ೪೮ ಅಥವಾ ೫೧ರಂತೆ ಗಡಿಗೆಗಳನ್ನು ಸಿದ್ಧಗೊಳಿಸಿ ಅದರಲ್ಲಿ ಕೊಬ್ಬರಿ ಬಟ್ಟಲು ಇಟ್ಟು ಅದರಲ್ಲಿ ಹತ್ತಿಯ ಬೀಜ ಕರಿ ಎಳ್ಳು ಹಾಕಿ ಬತ್ತಿ ಮತ್ತು ಕರ್ಪೂರದಿಂದ ಗುಗ್ಗಳವನ್ನು ಹಚ್ಚುತ್ತಾರೆ. ಕೊಬ್ಬರಿ, ಎಳ್ಳು ಮತ್ತು ಹತ್ತಿಯ ಬೀಜದಲ್ಲಿರುವ ಎಣ್ಣೆಯಿಂದಲೇ ಅದು ಉರಿಯುತ್ತಾ ಹೋಗುತ್ತದೆ. ಈ ಗುಗ್ಗಳದ ಕೊಡಗಳನ್ನು ಸುಮಂಗಲಿಯರು ತಲೆಯ ಮೇಲೆ ಹೊತ್ತು ಉತ್ಸವಮೂರ್ತಿಯೊಂದಿಗೆ ಕೊಂಡ ಹಾಯ್ದು ದೇವಾಲಯಕ್ಕೆ ಮೂರು ಪ್ರದಕ್ಷಿಣೆ ಹಾಕುತ್ತಾರೆ, ಆದ್ದರಿಂದ ಇಲ್ಲಿ ಉತ್ತರ ಮತ್ತು ದಕ್ಷಿಣದ ವೀರಭದ್ರ ಸಂಪ್ರದಾಯವನ್ನು ಸಮನ್ವಯಗೊಳಿಸಿಕೊಂಡಿದ್ದಾರೆ ಎಂದು ಹೇಳಬಹುದು.

* # ೧೧೮, ತವನಿಧಿ, ಸ.ಪ. ಪೂರ್ವ ಕಾಲೇಜು ರಸ್ತೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-೫೬೨೧೨೩.

ಚೊಕ್ಕನಾಥೇಶ್ವರ ದೇವಾಲಯ

ಈ ದೇವಾಲಯದ ಆವರಣದಲ್ಲಿಯೇ ಚೊಕ್ಕನಾಥೇಶ್ವರ ದೇಗುಲವಿದ್ದು ಆ ಪ್ರಾಂತ್ಯದ ನಂದಿ, ಹೆಂಜೇರು (ಹೇಮಾವತಿ) ನೊಳಂಬರ ಆಳ್ವಿಕೆಗೆ ಒಳಪಟ್ಟಿದ್ದು ಆ ಮಾರ್ಗದಲ್ಲಿ ಸಂಚರಿಸುತ್ತಿದ್ದ ನೊಳಂಬರು ಈ ದೇವಾಲಯವನ್ನು ನಿರ್ಮಿಸಿರಬೇಕು ಎಂದು ಊಹಿಸಬಹುದು. ಇದು ಒಂದು ತ್ರೈಪುರುಷಾರಾಧನೆಯ ಸ್ಥಳವಾಗಿದ್ದ ಸಾಧ್ಯತೆ ಇದೆ. ಈ ದೇವಾಲಯ ಸಂಕೀರ್ಣದಲ್ಲಿ ೩ ಲಿಂಗಗಳಿರುವುದು ಒಂದು ವಿಶೇಷ.

ಚೊಕ್ಕನಾಥೇಶ್ವರ ದೇವಾಲಯದ ಗರ್ಭಗೃಹದಲ್ಲಿ ಈಗ ಒಂದು ಲಿಂಗ ಮತ್ತು ಅದರ ಎದುರಿಗೆ ಎರಡು ಬಸವ ಮೂರ್ತಿಗಳಿವೆ. ಅದೇ ಪ್ರಾಕಾರದಲ್ಲಿ ಇನ್ನೂ ಎರಡು ಪ್ರತ್ಯೇಕ ಲಿಂಗಗಳಿವೆ. ಇದು ಹಿಂದೆ ಈ ದೇವಾಲಯ ತ್ರೈಪುರುಷ ದೇವಾಲಯವಾಗಿದ್ದ ಸೂಚನೆ ನೀಡುತ್ತದೆ. ಅಲ್ಲದೆ ಇದೇ ದೇವಾಲಯದಲ್ಲಿ ಸಪ್ತಮಾತೃಕೆಯರು, ಗಣಪತಿ, ನಗ್ನವೀರಭದ್ರ, ನಾಗರಕಲ್ಲು, ಮಹಿಷಮರ್ಧಿನಿ ಮತ್ತು ದುರ್ಗಿಯ ಮೂರ್ತಿಗಳಿವೆ. ಈ ದೇವಾಲಯವು ಕಾಲದಿಂದ ಕಾಲಕ್ಕೆ ಹಲವು ಮಾರ್ಪಾಡುಗಳನ್ನು ಕಂಡಿದೆ. ಈ ದೇವಾಲಯದ ವಿಮಾನವು ಗಾರೆಯ ಗಚ್ಚಿನಿಂದಾದ ಸುಂದರ ನಿರ್ಮಾಣ. ಅದರ ಸುಖನಾಸಿಯ ಭಾಗದ ವಿನ್ಯಾಸವು ವಿಶಿಷ್ಟವಾಗಿದೆ, ವಾಸ್ತು ಮತ್ತು ಮೂರ್ತಿಶಿಲ್ಪಗಳ ದೃಷ್ಟಿಯಿಂದ ಇದೊಂದು ಸುಂದರ ಶಿವ ದೇವಾಲಯ ವೆನ್ನಬಹುದು ಕಾಲದ ದೃಷ್ಟಿಯಿಂದ ಇದು ಕ್ರಿ.ಶ. ಸು. ೧೨ನೇ ಶತಮಾನಕ್ಕೆ ಸೇರುತ್ತದೆ. ಅದು ಈ ಭಾಗದಲ್ಲಿ ನೊಳಂಬರು ಪ್ರಬಲರಾಗಿದ ಕಾಲ.

ಈ ದೇವಾಲಯವು ಗರ್ಭಗೃಹ, ಸುಖನಾಸಿ ಮತ್ತು ನವರಂಗಗಳನ್ನು ಹೊಂದಿದ್ದು, ನವರಂಗದಲ್ಲಿ ರುದ್ರಕಾಂತ ಮಾದರಿಯ ಗಿಡ್ಡಕಂಬಗಳ ಮೇಲೆ ಸರಳ ಬೋದಿಗೆಗಳಿವೆ, ಭುವನೇಶ್ವರಿಯಲ್ಲಿ ಪದ್ಮವಿನ್ಯಾಸವಿದ್ದು, ಮಧ್ಯದಲ್ಲಿ ಯಾವುದೇ ಅಲಂಕರಣವಿಲ್ಲ. ನವರಂಗದ ಬಲಬದಿಯಲ್ಲಿ ಸಪ್ತಮಾತೃಕೆಯರು, ನಗ್ನ ಭೈರವಮೂರ್ತಿ, ಗಣೇಶಮೂರ್ತಿಗಳಿದ್ದು ಎಡಬದಿಯಲ್ಲಿ ಮಹಿಷಮರ್ದಿನಿ ಮತ್ತು ದುರ್ಗಿಯ ವಿಗ್ರಹಗಳಿವೆ.

ಗರ್ಭಗೃಹದಲ್ಲಿ ಪೂಜೆಗೊಳ್ಳುತ್ತಿರುವ ಲಿಂಗವನ್ನು ಚೊಕ್ಕನಾಥೇಶ್ವರನೆಂದೂ ಕರೆಯಲಾಗುತ್ತದೆ. ಚೊಕ್ಕನಾಥನ ಎದುರಿನ ನವರಂಗದಲ್ಲಿ ೨ ಬಸವಗಳಿವೆ. ಇದಲ್ಲದೆ ದೇವಾಲಯದ ಪ್ರಾಕಾರದಲ್ಲಿ ಇನ್ನೂ ಎರಡು ಲಿಂಗಗಳಿವೆ. ದೇವಾಲಯದ ಆವರಣದಲ್ಲಿ ಒಟ್ಟು ಮೂರು ಲಿಂಗಗಳನ್ನು ಕಾಣಬಹುದು ಈ ಮೂರು ಲಿಂಗಗಳಲ್ಲಿ ಎರಡು ಲಿಂಗಗಳಿಗೆ ಬ್ರಹ್ಮರೇಖೆಯಿದ್ದು ಮತ್ತೊಂದು ಲಿಂಗದಲ್ಲಿ ಬ್ರಹ್ಮರೇಖೆಗಳಿಲ್ಲ. ಇಲ್ಲಿನ ಬಸವ ಮೂರ್ತಿಗಳಲ್ಲಿ ಒಂದು ನೊಳಂಬರ ಕಾಲದ ಸರಳ ಕೆತ್ತನೆಯ ಮುಗ್ಧ ಬಸವನಂತಿದೆ, ಇನ್ನೊಂದು ಸ್ವಲ್ಪ ಅಲಂಕರಣಗೊಂಡಿರುವ ಬಸವ. ಇಲ್ಲಿನ ಒಂದು ಬಸವ ಮೂರ್ತಿ ಛಿನ್ನವಾಗಿದ್ದರಿಂದ (ನಿಧಿ ಶೋಧಕರ ದಾಳಿಯಿಂದ) ಅದನ್ನು ದೇವಾಲಯದ ಅಡಿಪಾಯಕ್ಕೆ ಹಾಕಿದೆವೆಂದು ಊರಿನ ಹಿರಿಯರ ಹೇಳಿಕೆ. ಉಳಿದ ೨ ಲಿಂಗಗಳಲ್ಲಿ ಒಂದು ಚೊಕ್ಕನಾಥೇಶ್ವರನ ಗುಡಿಯ ಮೇಲ್ಭಾಗದಲ್ಲಿ ಇದ್ದು, ಇನ್ನೊಂದು ಚೊಕ್ಕನಾಥನ ದೇವಾಲಯದ ಎದುರಿನ ಆವರಣದಲ್ಲಿದೆ.

ಲಿಂಗಗಳಲ್ಲಿ ೩ ವಿಧಗಳಿವೆ. 'ಸ್ಥೂಲಲಿಂಗಂ ವಿಮಾನ ಸ್ಯಾತ್, ಸೂಕ್ಷ್ಮಲಿಂಗಂ ಸದಾಶಿವಃ ಬಲಿಪೀಠಂ ಭದ್ರಲಿಂಗಂ, ಲಿಂಗಂ ತ್ರಿವಿಧ ಮುಚ್ಯತೆ' ಎಂಬ ಮಾತಿದೆ. ಈ ಮಾತಿನ ಪ್ರಕಾರ,

೧. ದೇವಾಲಯದ ಮೇಲ್ಭಾಗದಲ್ಲಿರುವುದು ಸ್ಥೂಲಲಿಂಗ. ಇದು ಆಕಾಶಲಿಂಗ ಆಕಾಶಗಾಮಿಗಳಾಗಿ ಸಂಚರಿಸುವ ದೇವತೆಗಳಿಗೆ ಸಂಬಂಧಿಸಿದ್ದು.

೨. ದೇವಾಲಯದ ಗರ್ಭಗುಡಿಯಲ್ಲಿರುವುದು ಸೂಕ್ಷ್ಮಲಿಂಗ. ಇದು ಊರಿನ ಜನರಿಗೆ ಸಂಬಂಧಿಸಿದ್ದು.

೩. ದೇವಾಲಯದ ಮುಂದಿರುವುದು ಭದ್ರಲಿಂಗ. ಇದು ಧ್ವಜಸ್ತಂಭ ಮತ್ತು ಬಲಿಪಿಠಕ್ಕೆ ಸಂಬಂಧಿಸಿದ್ದು ಎಂಬ ಹೇಳಿಕೆ ಇದೆ.

ಹಲವು ವೈಶಿಷ್ಟ್ಯಗಳ ಕೆಸ್ತೂರಿನ ವೀರಭದ್ರ ಮತ್ತು ಚೊಕ್ಕನಾಥೇಶ್ವರ ದೇವಾಲಯಗಳು ನೊಳಂಬರ ಕಾಲದ ನಿರ್ಮಾಣ ಎನ್ನಬಹುದು. ಇತಿಹಾಸ ಕುರುಹುನ್ನು ಕಾಣಬಹುದು.

ಆಧಾರಸೂಚಿ

೧. ಎಸ್.ಕೆ. ರಾಮಚಂದ್ರರಾವ್ ಮೂರ್ತಿಶಿಲ್ಪ ನೆಲೆ, ಹಿನ್ನೆಲೆ, ಪುಟ ೧೧೦.
೨. ಡಾ. ಹೆಚ್.ಎಸ್. ಗೋಪಾಲರಾವ್ ಅವರ ಹೇಳಿಕೆ.
೩. ಹೆಚ್.ಜಿ. ಗೋಪಾಲಕೃಷ್ಣ ಶಾಸ್ತ್ರಿಗಳ ಹೇಳಿಕೆ.
೪. ಕಲ್ಪಸಿರಿ, ಕನ್ನಡ, ಸಾಹಿತ್ಯ ಪರಿಷತ್, ಸಂ. ಡಾ. ಜಿ. ನಂಜುಂಡ ಸ್ವಾಮಿ.

೮೭

ಬಾದಾಮಿ ಚಾಲುಕ್ಯರ ಸಂಸ್ಕೃತ ಭಾಷೆ, ಸಾಹಿತ್ಯ ಮತ್ತು ವಿಜ್ಜಿಕೆಯ ಕೌಮುದಿಮಹೋತ್ಸವ

ಡಾ. ಸಂತೋಷ ಸು. ಹಾನಗಲ್ಲ*

ಕಾಲಿದಾಸನು ಸಂಸ್ಕೃತ ಕಾವ್ಯದ ಅತ್ಯುತನ್ನತ ಶಿಖರವೆಂದು ಡಾ. ಕೆ. ಕೃಷ್ಣಮೂರ್ತಿಯವರು ವರ್ಣಿಸಿದ್ದಾರೆ. 'ಕಾಲಿದಾಸನ ಕಲೆಯಲ್ಲಿ ಇಂಗ್ಲೀಷ್‌ನಲ್ಲಿಲ್ಲದ ಸೂಕ್ಷ್ಮವೂ ನಯವೂ ಆದ ರಸಸ್ಪರ್ಶವಿದೆ' ಎಂದು ಮಹರ್ಷಿ ಅರವಿಂದರು ಹೇಳಿದ್ದಾರೆ. ಇಂತಹ ಚಿರಪರಿಚಿತನಾದ ಕವಿಯ ಕಾಲ ದೇಶ ಮೊದಲಾದವುಗಳ ಬಗೆಗೆ ನಿಶ್ಚಿತತೆ ಇಲ್ಲ. ಆದರೇ ಐಹೊಳೆಯ ಶಾಸನದಲ್ಲಿ ಆತನ ಹೊಗಳಿಕೆ ಇದೆ. ಆದ್ದರಿಂದ ಆತ ಏಳನೇಯ ಶತಮಾನಕ್ಕೆ ಮೊದಲೇ ಇದ್ದಿರಬೇಕು.

ಭಾರವಿ ಈತನ ಕಾಲವೂ ಖಚಿತವಿಲ್ಲ. ಐಹೊಳೆ ಶಾಸನದಲ್ಲಿ ಈತನದೂ ಹೆಸರು ಉಲ್ಲೇಖವಿದೆ. ಆದ್ದರಿಂದ ಈತನು ೭ನೇ ಶತಮಾನಕ್ಕಿಂತ ಮೊದಲಿನಿಂದ ಪಲ್ಲವ ಸಿಂಹವಿಷ್ಣು, ಚಾಲುಕ್ಯರ ವಿಷ್ಣುವರ್ಧನ ಮತ್ತು ಗಂಗರ ದುರ್ವಿನೀತ ಈ ಅರಸರ ಆಸ್ಥಾನಗಳಲ್ಲಿ ಈತ ಕೆಲಕಾಲ ಇದ್ದನೆಂದು ಪ್ರತೀತಿ ಇದೆ. ಭಾರವಿಯು ಕ್ರಿ.ಶ. ೫೫೮–೬೦೦ರ ಅವಧಿಯಲ್ಲಿದ್ದನೆಂದೂ ಸಂಶೋಧಕರು ಊಹಿಸಿ ರುವರು. ದುರ್ವಿನೀತನು ಭಾರವಿಯ 'ಕಿರಾತಾರ್ಜುನೀಯ'ದ ಹತ್ತು ಸರ್ಗಗಳಿಗೆ ಟೀಕೆ ಬರೆದಿರುವನು.

ಕಾಲಿದಾಸನು ತನ್ನ ಪೂರ್ವದಲ್ಲಿ ಭಾಸ, ಸೌಮಿಲ್ಲ ಮತ್ತು ಕವಿಪುತ್ರ ಮೊದಲಾದ ಶ್ರೇಷ್ಠ ನಾಟಕಕಾರರಿದ್ದರೆಂದು ಹೇಳಿರುವನು. ಭಾಸನ ಕಾಲ ೩ನೇ ಶತಮಾನ. ಈಗ ದೊರೆತಿರುವ ಭಾಸನ ನಾಟಕಗಳು ಹದಿನಾಲ್ಕು. ಬಾಣ ಉತ್ತರಾಪಥದ ಚಕ್ರವರ್ತಿಯಾದ ಹರ್ಷವರ್ಧನನ ಆಸ್ಥಾನ ಕವಿಯಾದ ಬಾಣನು ಸರ್ವ ಶ್ರೇಷ್ಠನಾದ ಗದ್ಯ ಕವಿ. ಈತನು ಕ್ರಿ.ಶ. ೬೦೬–೬೪೭ರಲ್ಲಿದ್ದನೆಂದು ತಿಳಿದಿದೆ. 'ಹರ್ಷಚರಿತೆ' ಮತ್ತು 'ಕಾದಂಬರಿ' ಇವನ ಉತ್ಕರ್ಷ ಕೃತಿಗಳು. ೩ನೇ ಶತಮಾನಕ್ಕೆ ಮೊದಲೇ ರಚಿತವಾದ ವಿಷ್ಣುಶರ್ಮನು ಬರೆದ ಪಂಚತಂತ್ರವು ಜಗತ್ತಿನ ಹಲವಾರು ಭಾಷೆಗೆ ಅನುವಾದ ಗೊಂಡಿದೆ. ರಾಜನೀತಿ ಮತ್ತು ಸದಾಚಾರಗಳ ನಿರೂಪಣೆಯೇ ಇಲ್ಲಿ ಪ್ರಮುಖವಾಗಿರುವುದರಿಂದ ಜನಪ್ರಿಯವಾಗಿದೆ.

ಬಾದಾಮಿ ಚಾಲುಕ್ಯರ ಕಾಲದ ಸಂಸ್ಕೃತ ಭಾಷೆ ಮತ್ತು ಸಾಹಿತ್ಯದ ಮೇಲೆ ಈ ಮೊದಲು ಬದುಕಿ ಪ್ರಸಿದ್ದರಾದ ಕಾಲಿದಾಸ ಮತ್ತು ಭಾರವಿಯರ ಸಾಹಿತ್ಯ ಪ್ರಭಾವ ಅಥವಾ ಅವರ ಅನುಕರಣೆ, ಹೋಲಿಕೆ ಅಪಾರವಾಗಿತ್ತೆಂದು ಈ ಕೆಲ ಮೇಲಿನ ಸಂಗತಿಗಳಿಂದ ಸ್ಪಷ್ಟಪಡಿಸಬಹುದು. ಎರಡನೆಯ ಪುಲಕೇಶಿಯ ಐಹೊಳೆಯ ಶಾಸನ ಕ್ರಿ.ಶ. ೬೩೪ರ ಸಂಸ್ಕೃತ ಭಾಷೆಯನ್ನು ಹೊಂದಿದ್ದು, ಅನೇಕ ಛಂದಸ್ಸಿನಲ್ಲಿ ಕೆತ್ತಲ್ಪಟ್ಟಿದೆ. ಇಂದ್ರವಜ್ರಾ, ವಸಂತ ತಿಲಕ, ಮಾಲಿನಿ, ಹರಿಣಿ, ಮಂದಾಕ್ರಾಂತಾ, ಸ್ರಗ್ಧರಾ ಹೀಗೆ ಅನೇಕ ಛಂದಸ್ಸುಗಳಿವೆ. ಈ ಛಂದೋಜೋಡನೆ ಶಬ್ದಾರ್ಥ ಜೋಡಣೆಯೊಂದಿಗೆ ಅತ್ಯಂತ ಸಮರ್ಥವಾಗಿ ಬಂದಿದೆ.

ರವಿಕೀರ್ತಿಯಿಂದ ರಚನೆಗೊಂಡ ಈ ಶಾಸನವು ೨ನೇ ಪುಲಿಕೇಶಿಯ ಚಾಲುಕ್ಯ ಮನೆತನದ ವರ್ಣನೆಯೇ ಆಗಿದೆ. ಈ ಶಾಸನವು ಕೇವಲ ಶಿಲಾಶಾಸನ ಮಾತ್ರವಾಗಿರದೇ ಮಹತ್ವದ ಸಾಹಿತ್ಯಿಕ ಮೂಲಾಧಾರವೂ ಆಗಿದೆ. ಪಂಡಿತೋತ್ತಮನಾದ ರವಿಕೀರ್ತಿಯು ಈ ಶಾಸನದ ೩೭ನೆಯ ಪದ್ಯದಲ್ಲಿ 'ಕಾಲಿದಾಸ' 'ಭಾರವಿ'ಯರ ಮಟ್ಟವನ್ನು ತಲುಪಲು ಪ್ರಯತ್ನಿಸುವದಾಗಿ ಹೇಳಿಕೊಳ್ಳುವುದಲ್ಲದೆ ಅಲಂಕಾರ ಪ್ರಯೋಗದಲ್ಲಿ ಅದರಲ್ಲಿಯೂ ಉತ್ಪ್ರೇಕ್ಷೆಯಲ್ಲಿ ತನ್ನ ಸಾಮರ್ಥ್ಯವನ್ನು ಪ್ರಯೋಗಿಸಿದ್ದಾನೆ. ತಾನು ದಾಕ್ಷಿಣಾತ್ಯದವನೆಂದು ಸಿದ್ಧಮಾಡಿ ತೋರಿಸಿದ್ದಾನೆ.

ಈ ಕಾಲದಲ್ಲಿ ಕಾಲಿದಾಸನ 'ರಘುವಂಶ'ದ ಖ್ಯಾತಿಯು ಭಾರತದ ಎಲ್ಲೆಡೆ ಹರಡಿದ್ದು ರವಿಕೀರ್ತಿಯೂ ಅದನ್ನು ಚೆನ್ನಾಗಿ ಬಲ್ಲವನಾಗಿದ್ದನೆಂಬುದಕ್ಕೆ ಈ ಶಾಸನದಲ್ಲಿ ಉಲ್ಲೇಖಿತ ಅನೇಕ ವಿಷಯಗಳೇ ಸಾಕ್ಷಿಯಾಗಿವೆ. ರಘುವಂಶದಲ್ಲಿ ನಿಮಿಷು ವಿಷಯ ಸ್ನೇಹಃ ದಹಾಂತ ಮುಪೋಷಿವಾನ್..॥ ೪೫೫ ೧. ಈ ಶ್ಲೋಕದ ನೇರವಾದ ಪ್ರಯೋಗ, ಬೋಧಗಯಾ ಶಾಸನದಲ್ಲಿ ದೊರೆಯುತ್ತದೆ. ಅದರಂತೆಯೇ ಕ್ರಿಯಾಂಬಂಧುದ ಮಧ್ವರಾಣಾಮ್ ಜಭ್ರಮಾಧ್ವತ್‌ಸ್ತದ್ ಭ್ರನೇತ್ರಃ ಈ ಶ್ಲೋಕವು ನಾಗಾರ್ಜುನ ಶಿಲಾಶಾಸನದಲ್ಲಿ ಇಡಿಯಾಗಿಯೇ ಸ್ವೀಕರಿಸ ಲ್ಪಟ್ಟಿದೆ. ಅಲ್ಲದೇ ತೇಜಸ್ಸಿನ ವರ್ಣನೆಯನ್ನು ಮಾಡುತ್ತ ರವಿಯು ಪಶ್ಚಿಮದೆಡೆ ಗಮನಿಸಿದರೆ, ಅವನ ತೇಜಸ್ಸು ಕಡಿಮೆ ಆಗಲಿಲ್ಲವೆಂದು ನಾಯಕನ ತೇಜಸ್ಸಿಗೆ ಯೋಚಿಸಿದ್ದಾನೆ. ಶಿಲಾಶಾಸನದಲ್ಲಿ ಸತ್ಯಾಶ್ರಯ ಪುಲಕೇಶಿಯ ದಿಗ್ವಿಜಯವನ್ನು ವರ್ಣಿಸುವಾಗ ರಘು ದಿಗ್ವಿಜಯದ ವರ್ಣನೆಯ ಅನುಕರಣೆ

* ಉಪನಿರ್ದೇಶಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಮಾಡಿದ್ದು ಕಂಡುಬರುತ್ತದೆ. ಒಂದು-ಮೂರು ಪದ್ಯದಲ್ಲಿ ಜಿನೇಂದ್ರನ ವರ್ಣನೆ ಇದ್ದು, ನಂತರ ಚಾಲುಕ್ಯವಂಶದ ವರ್ಣನೆಯೊಂದಿಗೆ ಸತ್ಯಾಶ್ರಯ (ಪುಲಕೇಶಿ) ಪರಾಕ್ರಮದ ವರ್ಣನೆಯಿದೆ. ತಾಳಗುಂದದ ಕದಂಬ ಶಾಸನದಲ್ಲಿ 'ಕುಬ್ಜ'ನು ಈಶ್ವರನನ್ನು ವರ್ಣಿಸುತ್ತ ಕಾಕುಸ್ಥವರ್ಮನ ವರ್ಣನೆಯಲ್ಲಿ ಕಿರಾತಾರ್ಜುನೀಯದ ಐದನೆಯ ಸರ್ಗದಲ್ಲಿ ಬರುವಂತೆಯೇ ಬಂದದ್ದು ಕಾಣುವುದು.

ರವಿಕೀರ್ತಿಯ ಶಿಲಾಶಾಸನದಲ್ಲಿ ಆರನೇಯ ಶ್ಲೋಕದಲ್ಲಿ ಅರ್ಥವು ದೇವತೆಗಳನ್ನು ಅನಿಮಿಷಃ ಶಿಷ್ಯಾನುಭಾವೇ ಜಗದೇಕನಾಥ ಅಂದರೇ ಅವರು ತಮ್ಮ ಕಣ್ಣರೆಪ್ಪೆಗಳನ್ನು ಪಿಳಿಕಿಸದೇ ಇರುವುದು. ಅದರಂತೆ ರಾಜನು ನಿದ್ರಿಸುವಾಗ ತನ್ನ ತೇಜಸ್ಸಿನಿಂದ ಕಂಗೊಳಿಸುವ ದೇವತೆಯಂತೆ ಕಂಡನು ಎಂಬುವ ವರ್ಣನೆಯು ಶಾಸನದಲ್ಲಿದೆ. ವಪುಃಪ್ರಕರ್ಷೀವ ಜಯದ್ಗುರು ರಘು...ಎಂಬಲ್ಲಿ ಪ್ರಕರ್ಷಿಣ ಬಿಡಂಬತೇಜ್ವರಃ ಕಾಳಿದಾಸನು ಹೇಳಿದ್ದಾನೆ. ಭಾರವಿಯ ಕಿರಾತಾರ್ಜುನೀಯ ದಲ್ಲಿ ಇದೇ ಅರ್ಥವನ್ನು ಕೊಡುವ ಪ್ರಸ್ನಾದ ಲಕ್ಷ್ಮೀದಧೇತ ಸ್ನಮುಗ್ರಾವಪುಃ ಪ್ರಕರ್ಷಣ ಜಗತಿಗೇನ ॥ ಎಂಬುದು ಬಂದಿರುವುದರಿಂದ ಈ ಮಹಾಕವಿಗಳ ಪ್ರಭಾವ ಈ ಶಾಸನ ಕರ್ತೃವಿನ ಮೇಲೆ ಆದದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಇದರಂತೆ ಇದೇ ಶ್ಲೋಕದಲ್ಲಿ ಜಗದೇಕನಾಥ ಎಂಬ ಶಬ್ದವನ್ನು ಅದೇ ಅರ್ಥದಿಂದ, ಅದೇ ಛಂದಸ್ಸಿನಲ್ಲಿ ಅನುಕರಣೆ ಮಾಡಿದ್ದು ದೊರುಯುತ್ತದೆ.

ಅನೇಕ ವರ್ಣನೆಯಲ್ಲಿಯೂ ರಘುವಂಶದ ವರ್ಣನೆ ಯನ್ನೇ ಹೋಲುವ ಶ್ಲೋಕಗಳು ಈ ಶಾಸನದಲ್ಲಿ ದೊರೆಯು ತ್ತವೆ. 'ಕಾಂತಿ'ಯು ಚಂದ್ರನ ಹೆಂಡತಿಯು ವಾತಾಪುರಿ ನಗರವು ಈಗ ತಾನೇ ವಿವಾಹವಾದ ಕಾಂತಿಗೆ ಸಮಾನವಾಗಿ ನವವಧುವಾಗಿ ಕಪಿಗೆ ಕಂಡಳು. ಇದು ರಘುವಂಶದಲ್ಲಿ ವಾತಾಪಿಪುರಿವಧೂ ವರತಾಮ್ ಸ್ಪಷ್ಟವಾಗಿ ವ್ಯಕ್ತವಾಗಿದೆ. ಅದರಂತೆ ಸೂರ್ಯೋದಯವಾದೊಡನೆ ಕತ್ತಲೆಯು ಮಾಯ ವಾಗುವಂತೆ ಪುಲಕೇಶಿಯು ರಾಜ್ಯಭಾರ ಪಡೆದಾಗ ಕತ್ತಲೆ ಯೆಂಬ ವೈರಿಗಳು ಮಾಯವಾದರು ಅಸ್ಮಿತ ಪ್ರಭಾತಮ್ ಈ ವರ್ಣನೆಯು ರಘುವಂಶದಲ್ಲಿ ಕಾಳಿದಾಸನಿಂದ ಅನೇಕ ರೀತಿಯಿಂದ ವರ್ಣಿಸಲ್ಪಟ್ಟಿದೆ. ಕುಮಾರಸಂಭವ ಶಾಸನದ ಹದಿನೆಂಟನೆಯ ಪದ್ಯದಲ್ಲಿ 'ವರದಾ' ನದಿಯನ್ನು ವರ್ಣಿಸಿದ ರವಿಕೀರ್ತಿಯ ಶೈಲಿಯು ಕಾಳಿದಾಸ ಮತ್ತು ಭಾರವಿಯ ಶೈಲಿಯಂತಿದೆ.

ಬಿಡಿ ಪದ್ಯಗಳನ್ನು ಬರೆದ ಮೂವತ್ತೆರಡು ಜನ ಕವಿಯತ್ರಿ ಯರಲ್ಲದೆ ಪೂರ್ಣಕೃತಿಗಳನ್ನು ಬರೆದ ನಾಲ್ವರು ಕವಿಯತ್ರಿ ಯರಿರುವರು. ಇವರಲ್ಲಿ 'ಕೌಮುದಿ ಮಹೋತ್ಸವ'ವೆಂಬ ನಾಟಕವನ್ನು ಬರೆದ ವಿಜ್ಜಿಕ ಅಥವಾ ವಿಜಯಾಂಬಿಕೆ ಬೇರೆ ಯಾರೂ ಅಲ್ಲ ಕರ್ನಾಟಕದವಳು. ಅಷ್ಟಾಗಿ ಬಾದಾಮಿ ಚಾಲುಕ್ಯ ದೊರೆಯಾದ ೨ನೇ ಪುಲಕೇಶಿಯ ಸೊಸೆ.

'ಸರಸ್ವತೀವ ಕರ್ಣಾಟೀ ವಿಜಯಾಂಕಾ ಜಯತ್ಯಸೌ ।
ಯಾ ವೈದರ್ಭಗಿರಾವಸ್ ಬಾಸಃ ಕಾಲಿದಾಸಾದ
ನಂತರಮ್ ॥

"ಕಾಲಿದಾಸನ ನಂತರ ವೈದರ್ಭೀ ರೀತಿಯಲ್ಲಿ ಬರೆಯುವ ವಿಜಯಾಂಬಿಕೆಯು ಸರಸ್ವತಿಯಂತೆ ವಿರಾಜಿಸುವಳು" ಎಂದು ೧೦ನೇ ಶತಕದ ರಾಜಶೇಖರನು ಇವಳನ್ನು ಹೊಗಳುವನು. ಇದರಿಂದ ಇವಳು ಕರ್ನಾಟಕ ದೇಶದವಳೂ, ರಾಜಶೇಖರ ನಿಗಿಂತ ಪ್ರಾಚೀನಳೂ ವೈದರ್ಭೀ ರೀತಿಯಲ್ಲಿ ಬರೆಯು ವುದರಲ್ಲಿ ನಿಪುಣಳೂ ಎಂದು ತಿಳಿದು ಬರುತ್ತದೆ.

ನೀಲೋತ್ಪಲದಲಶ್ಯಾಮಾವ್ ವಿಜ್ಜಿಕಾಮ್ ಮಾಮ
ಜಾನತಾ ।
ವೃಥೈವ ದಂಡಿನಾ ಪ್ರೋಕ್ತಾ ಸರ್ವ ಶುಕ್ಲಾ ಸರಸ್ವತೀ ॥

"ನೀಲುಕಮಲದ ದಳಗಳಂತೆ ಕಪ್ಪಾಗಿರುವ ವಿಜ್ಜಿಕೆ ಯನ್ನರಿಯದೆ ದಂಡಿಯು ಸರಸ್ವತಿ ಬೆಳ್ಳಗಿರುವಳೆಂದು ಹೇಳಿರುವನು" ಎಂಬ ಒಂದು ಪದ್ಯವು ವಿಜ್ಜಿಕೆಯು ಬರೆದ ಪದ್ಯವೆಂದು ಪ್ರಸಿದ್ಧವಿದೆ. ರಾಜಶೇಖರನ ಪದ್ಯದಲ್ಲಿಯು ಈ ಪದ್ಯದಲ್ಲಿಯೂ ವಿಜಯಾಂಬಿಕೆ ಹಾಗೂ ವಿಜ್ಜಿಕೆಯರನ್ನು ಸರಸ್ವತಿಗೆ ಹೋಲಿಸಿರುವುದನ್ನು ನೋಡಿದರೆ ಇವೆರಡು ಒಬ್ಬಳೇ ಕವಯಿತ್ರಿಯ ಹೆಸರಿರಬೇಕೆಂದು ಸ್ಪಷ್ಟವಾಗುವುದು.

ವಿಜ್ಜಿಕೆಯವೆಂದು, ಪ್ರಸಿದ್ಧವಾದ ಪದ್ಯಗಳಲ್ಲಿ ಒಂದು ಪದ್ಯವು ಭಾರವಿಯ ೬ನೇ ಶತಕ ಒಂದು ಪದ್ಯದ ಅನುಕರಣೆಯಂತಿದೆ. ವಿಜ್ಜಿಕೆಯ ಪದ್ಯಗಳನ್ನು ಮುಕುಲಭಟ್ಟ (೯ನೇ ಶತಕ) ಮುಮ್ಮಟ, ಭೋಜ (೧೧ನೇ ಶತಕ). ವಿಶ್ವನಾಥ (೧೩ನೇ ಶತಕ) ಮೊದಲಾದವರು ಉಲ್ಲೇಖಿಸಿ ರುವರು. ಆದ್ದರಿಂದ ಇವಳ ಕಾಲವನ್ನು ೭ನೇ ರಿಂದ ೧೦ನೇ ಶತಮಾನಗಳ ಮಧ್ಯವಿರಬಹುದೆಂದು ಸ್ಪಷ್ಟ.

ವಿರಸಾಪಿ ಕೃತಿಃ ಪ್ರಪತ್ಸ್ಯತೇ
ಮಧು ನಿಷ್ಯಂದಮಯೀಮ್ ದಶಾಂತರಾಮ್ ।
ಯದಿ ನಾಮ ಸತಾಮನುಗ್ರಹಃ
ಶಿಶಿರಃ ಪ್ರಾಪ್ಯ ರವೇರಿವಾತಪಮ್ ॥

ವಿಜ್ಜಿಕೆಯ ಕೃತಿಯ ಕೌಮುದಿ ಮಹೋತ್ಸವದಲ್ಲಿ- ವಿರಸ ವಾಗಿದ್ದರೂ ಸಹೃದಯ ವಾಚಕರ ಅನುಗ್ರಹವಿದ್ದರೆ ಚಳಿಗಾಲದಲ್ಲಿಯ ಬಿಸಿಲಿನಂತೆ ಸುಖಕರವಾಗಿಯೇ ಪರಿಣಮಿ ಸುವುದು ಎಂದು ವಿನಯದಿಂದಲೇ ಕವಿಯಿತ್ರಿ ವಿಜ್ಜಿಕೆ ನಾಟಕ ವನ್ನು ಪ್ರಾರಂಭಿಸುತ್ತಾಳೆ. ಇವಳ ಪದ್ಯವನ್ನು ನಾಟಕವನ್ನು ಓದಿದಾಗ "ಯಾ ವೈದರ್ಭಗಿರಾವಸ್ ವಾಸಃ ಕಾಲಿದಾಸಾ ದನಂತರವಸ್" ಎಂದು ರಾಜಶೇಖರನು ಇವಳನ್ನು ಹೊಗಳಿದ್ದು ಸರಿಯೆಂದು ಹೇಳಬಹುದು.

ಹೀಗೆ ಬಾದಾಮಿ ಚಾಲುಕ್ಯರ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ಹಾಗೂ ವಿಜ್ಜಿಕೆಯು ಕೌಮುದಿ ಮಹೋತ್ಸವವನ್ನು ಸಂಕ್ಷಿಪ್ತವಾಗಿ ನೋಡಬಹುದು.

ವಿಜಯನಗರ ಅರಸರ ಕಾಲದ ಮಂಡ್ಯ ಜಿಲ್ಲೆಯ ಪಾಳೇಯಗಾರರು ಒಂದು ಅಧ್ಯಯನ

ಟಿ. ರಾಜು*

ಪಾಳೇಯಗಾರರು ಎಂದರೆ ಒಂದು ನಿರ್ದಿಷ್ಟ ಪ್ರದೇಶದ ಆಡಳಿತಗಾರರು ಎಂದು ಅರ್ಥಬರುತ್ತದೆ ಮತ್ತು ಸಾಮಂತ, ಮಾಂಡಲೀಕ ಹಾಗೂ ಸ್ಥಾನಿಕಪ್ರಭು ಎಂಬುದಾಗಿಯೂ ಅರ್ಥೈಯಿಸಬಹುದಾಗಿದೆ. ಪಾಳೇಯಗಾರರಿಗೆ ಒಂದು ನಿರ್ದಿಷ್ಟ ಪ್ರದೇಶವು ಅವನ ಸಾಧನೆಯಿಂದ ಹಾಗೂ ವಂಶಪಾರಂಪರೆಯಿಂದ ದೊರೆಯ ಬಹುದು. ಪಾಳೇಯಗಾರ ಕರ್ತವ್ಯವೆಂದರೆ ತಮ್ಮ ಅಧೀನಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಪ್ರಜೆಗಳಿಂದ ಕಂದಾಯವನ್ನು ವಸೂಲಿ ಮಾಡಿ ತನ್ನ ದೊರೆ ಅಥವಾ ಅರಸರಿಗೆ ವಾರ್ಷಿಕವಾಗಿ ಕಪ್ಪಕಾಣಿಕೆಯ ರೂಪದಲ್ಲಿ ಸಲ್ಲಿಸುವುದು. ಕಾನೂನು, ಶಾಂತಿಪಾಲನೆ ಹಾಗೂ ಯುದ್ಧದ ಕಾಲದಲ್ಲಿ ತಮ್ಮ ಅರಸರಿಗೆ ಬೆಂಬಲಿಗರಾಗಿ ನಿಂತು ಹೋರಾಡುವುದು ಅವರ ಕರ್ತವ್ಯಗಳಾಗಿದ್ದವು. ಅವರು ತಮ್ಮ ತಮ್ಮ ಸ್ಥಳಗಳಲ್ಲಿ ಅನಭಿಷಿಕ್ತ ಸಾರ್ವಭೌಮರಂತೆ ವರ್ತಿಸುತ್ತಿದ್ದು ಸಮಕಾಲೀನ ರಾಜಕೀಯದಲ್ಲಿ ಮಹತ್ತರವಾದ ಪಾತ್ರ ವಹಿಸುತ್ತಿದ್ದರು.

ಪ್ರಸ್ತುತ ಲೇಖನದಲ್ಲಿ ವಿಜಯನಗರ ಅರಸರ ಕಾಲದಲ್ಲಿ ಮಂಡ್ಯ ಜಿಲ್ಲೆಯ ಪಾಳೇಯಗಾರರು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಪ್ರಮುಖ ಶಾಸನಗಳನ್ನು ಪರಿಶೀಲಿಸಲಾಗಿದೆ. ವಿಜಯನಗರ ಅರಸರ ವಿವರಣೆ ಇರುವ ಕೆಲವು ಸ್ಥಾನಿಕ ಪ್ರಭುಗಳ ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ದೊರೆತಿವೆ. ಆದ್ದರಿಂದ ವಿಜಯನಗರದ ಅರಸರ ಉಲ್ಲೇಖಿಸಿರುವ ಶಾಸನಗಳಲ್ಲಿ ಕಂಡುಬರುವವರನ್ನು ಮಾತ್ರ ವಿಜಯನಗರದ ಅರಸರ ಸಾಮಂತರೆಂದು ಕರೆಯಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಕಂಡುಬರುವ ಕೆಲವು ಪಾಳೇಯಗಾರರ ವಿವರಣೆಯು ಈ ಕೆಳಕಂಡಂತಿದೆ.

ಕುರುವಂಕನಾಡು: ಶ್ರೀರಂಗಪಟ್ಟಣ ಪ್ರದೇಶಕ್ಕೆ ಸೇರಿದ ಕುರುವಂಕನಾಡು ಅಸ್ತಿತ್ವದಲ್ಲಿರುತ್ತದೆ ಎಂಬುದನ್ನು ೧೫೩೮ರ ಶ್ರೀರಂಗಪಟ್ಟಣ ಶಾಸನದಿಂದ ತಿಳಿದುಬರುತ್ತದೆ. ಅಹೋಬಲ ದೇವನ ಮಗ ಕೃಷ್ಣರಾಯನಾಯಕನು ಈ ಪ್ರದೇಶವನ್ನು ಆಳುತ್ತಿದ್ದನು. ಕೃಷ್ಣದೇವರಾಯ ಮಹಾರಾಜರ ಆಳ್ವಿಕೆಯ ಕಾಲದಲ್ಲಿ ಈ ಪಾಳೇಯಪಟ್ಟು ಅಸ್ತಿತ್ವದಲ್ಲಿತ್ತು. ವಿಜಯನಗರ ಅರಸರ ಪುಣ್ಯಾರ್ಥವಾಗಿ ಅರಸರ ಅಪ್ಪಣೆ ಪಡೆದು ಶ್ರೀರಂಗ ನಾಥಸ್ವಾಮಿ ದೇವರಿಗೆ ಪ್ರತಿನಿತ್ಯ ನೈವೇದ್ಯ, ಪೂಜೆ ಮತ್ತು ಪುಷ್ಪಾಲಂಕಾರಕ್ಕಾಗಿ ಕುರುವಂಶನಾಡಿಗೆ ಸೇರಿದ ಬೀರಶೆಟ್ಟರ ಹಳ್ಳಿ ಗ್ರಾಮವನ್ನು ದತ್ತು ನೀಡಿದರು ಎಂಬ ವಿವರಣೆ ಇವೆ.

ಹರಿಗಲ: ಪಾಂಡವಪುರದ ೧೨೫, ೧೨೭, ೧೩೮ನೇ ಶಾಸನಗಳು ಹರಿಗಲ ನಾಡುಗೆ ಸಂಬಂಧಿಸಿದಂತೆ ಇರುತ್ತವೆ. ಮೇಲಿನ ಶಾಸನಗಳಲ್ಲಿ ವಿಜಯನಗರ ಅರಸು ಅಚ್ಚುತರಾಯನ ಬಗ್ಗೆ ಉಲ್ಲೇಖಿಸಿರುವುದರಿಂದ ಹರಿಗಲ ಸಾಮಂತರು ವಿಜಯನಗರ ಸಾಮ್ರಾಜ್ಯಕ್ಕೆ ಅಧೀನರಾಗಿದ್ದರು ಎಂಬುದು ತಿಳಿದುಬರುತ್ತದೆ. ಪೆರಿರಾಜ ಎಂಬುವನು ಹರಿಗಲದ ಪಾಳೇಯಗಾರನಾಗಿದ್ದು, ಮೇಲುಕೋಟೆ ದೇವಾಲಯಕ್ಕೆ ಸೇರಿದ ಹೊಸಕೆರೆ, ಹಾಗೂ ಕೃಷ್ಣದೇವ ಕೆರೆಗಳನ್ನು ದುರಸ್ತಿಗೊಳಿಸಿದನು. ೧೨೫ ಮತ್ತು ೧೨೭ನೇ ಶಾಸನಗಳು ತಿರುಮಲರಾಜನನ್ನು ಕುರಿತು ವಿವರಿಸುತ್ತವೆ. ಇವನು ನಾಗಮಂಡಲ ಪ್ರಾಂತ್ಯಕ್ಕೆ ಸೇರಿದ ಶೆಲ್ಲಪಿಳ್ಳೆರಾಯ ದೇವರಿಗೆ ಕ್ರಿ.ಶ. ೧೫೩೯ರಲ್ಲಿ ದತ್ತಿ ಕೊಟ್ಟನು ಎಂಬ ವಿಚಾರಗಳು ಮೇಲಿನ ಶಾಸನಗಳಿಂದ ತಿಳಿದುಬರುತ್ತದೆ.

ದೇವಲಾಪುರ: ವಿಜಯನಗರದ ಅರಸರ ಕಾಲದಲ್ಲಿ ನಾಗಮಂಗಲ ತಾಲ್ಲೂಕಿನ ದೇವಲಾಪುರ ಒಂದು ಮಂಡಲ ಆಗಿದ್ದು, ಮಲೆನಾಯಕನಹಳ್ಳಿ, ಮುತ್ತಂದ್ರ ಕುಡುಗುಬಾಳು ಹಾಗೂ ದ್ಯಾವಲಾಪುರ ಪ್ರದೇಶಗಳು ಸೇರಿ ಒಂದು ಮಂಡಲ ಆಗಿ ರೂಪುಗೊಂಡು ಒಬ್ಬ ಸ್ಥಾನಿಕ ಪ್ರಭುವಿನ ಆಳಿಕೆಕ್ಕೆ ಒಳಪಟ್ಟಿತ್ತು. ನಾಗಮಂಗಲದ ಕ್ರಿ.ಶ. ೧೫೫೫ರ ೧೬೬ನೇ ಶಾಸನಗಳಿಂದ ನಾಗೇಯನಾಯಕನು ದೇವಲಾಪುರದ ಪಾಳೇಯಗಾರನಾಗಿದ್ದನು ಎಂಬುವಾಗಿ ತಿಳಿದು ಬರುತ್ತದೆ. ಇವನು ತೆಪ್ಪದ ಮುದ್ದನಾಯಕನ ಮಗ ನಾಗೇಯನಾಯಕನು ಮಲೆನಾಯಕನ ಹಳ್ಳಿಯಲ್ಲಿರುವ ತಿರುಮಲದೇವರ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಮಹಾವಿದ್ಯಾಲಯ, ಮಂಡ್ಯ

[illegible] ಮುದ್ದಮುದ್ರ ಎಂಬ ಗ್ರಾಮವನ್ನು ದತ್ತಿಯಾಗಿ ನೀಡಿದ್ದನು ಎಂಬ ವಿವರಗಳಿದೆ. "ಮೂವರು ರಾಯರ ಗಂಡ" "ಗಂಡಭೇರುಂಡ" ಎಂಬ ಬಿರುದುಗಳು ನಾಗೇಯನಾಯಕ ನಾಗಿದ್ದು ವಿಜಯನಗರ ಅರಸರ ಕಾಲದಲ್ಲಿ ಪ್ರಸಿದ್ಧ ಪಾಳೇಯ ಗಾರನಾಗಿ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆಗಳನ್ನು ಮಾಡಿರುತ್ತಾನೆ.

ನಾಗಮಂಗಲ: ನಾಗಮಂಗಲ ಪ್ರಾಂತ್ಯ ಅತ್ಯಂತ ಪ್ರಸಿದ್ಧವಾದ ಪ್ರದೇಶವಾಗಿದ್ದು, ಇಲ್ಲಿನ ಸಾಮಂತರು ತಮ್ಮನ್ನು ಪ್ರಭುಗಳೆಂದು ಘೋಷಿಸಿಕೊಂಡಿದ್ದರು. ಇಲ್ಲಿನ ಸಾಮಂತರು ವಿಜಯನಗರಕ್ಕೆ ಸಾಮಂತರಾಗಿದ್ದರು. ಇವರ ವಂಶಾವಳಿ ಸಿಂಗಣ್ಣ ದಂಡನಾಯಕ ಇವನು ವಿಜಯನಗರದ ಎರಡನೇ ಪ್ರೌಢದೇವರಾಯನ ಕಾಲದಲ್ಲಿ ಮಂತ್ರಿಯಾಗಿದ್ದು ಹಾಗೂ ನಾಗಮಂಗಲದ ಪ್ರಭುವಾಗಿದ್ದು, ಅಂದಿನ ರಾಜಕೀಯದಲ್ಲಿ ಪ್ರಭಾವಶಾಲಿ ಅಧಿಕಾರಿಯಾಗಿದ್ದನು. ಇವನು ಅನೇಕ ಸತ್ಕಾರ್ಯ ಗಳನ್ನು ಕೈಗೊಂಡಿದ್ದನು. ಮೇಲುಕೋಟೆ ದೇವಾಲಯವನ್ನು ಪುನರ್ ನಿರ್ಮಾಣ ಮಾಡಿದನು. ಶ್ರೀರಂಗಪಟ್ಟಣ ಕೋಟೆ ಯನ್ನು ಸ್ವ-ಹಿತಶಕ್ತಿಯಿಂದ ನಿರ್ಮಿಸಿದನು.

ನಾಗಮಂಗಲದ ಮತ್ತೊಬ್ಬ ಸ್ಥಾನಿಕಪ್ರಭು ದೇವರಾಜನು ಕಾವೇರಿ ನದಿಗೆ ಅಡ್ಡವಾಗಿ ಅಣೆಕಟ್ಟು ನಿರ್ಮಿಸಿ ಕಾಲುವೆಯನ್ನು ನಿರ್ಮಿಸಿದ ವಿವರಣೆಯು ಪಾಂಡವಪುರದ ೧೪೬೭ರ ೧೯ನೇ ಶಾಸನದಿಂದ ತಿಳಿದುಬರುತ್ತದೆ. ಈ ಸಂಬಂಧವಾಗಿ ಪಾಂಡವ ಪುರ ತಾಲ್ಲೂಕಿನ ಹರವು ಗ್ರಾಮದ ಪ್ರಜೆಗಳು ಆ ಕಾಲುವೆ ಯನ್ನು ತಮ್ಮ ಗ್ರಾಮದ ಎಲ್ಲೆಯವರಿಗೂ ವಿಸ್ತರಿಸಬೇಕೆಂದು ಕೇಳಿಕೊಂಡರು. ದೇವರಾಜನು ಜನರ ಬೇಡಿಕೆಯನ್ನು ನೆರವೇರಿಸಿದನು. ಅದಕ್ಕಾಗಿ ಹರವು ಗ್ರಮದ ಯದುವಣ್ಣ ಎಂಬುವನು ದೇವರಾಜನಿಗೆ ಹೊಸಹಳ್ಳಿ ಹಾಗೂ ಚಿಕ್ಕಮಳಲಿ, ಕೆಂದನಹಾಳು ಎಂಬ ಗ್ರಾಮಗಳ ಅರ್ಧ ಭಾಗವನ್ನು ೪೦೦ ಹೊನ್ನುಗಳಿಗೆ ದೇವರಾಜನಿಗೆ ಮಾರಿದನು. ದೇವರಾಜನು ಹೊಸಗಳ್ಳಿ ಗ್ರಾಮವನ್ನು ೨೦೮ ವೃತ್ತಗಳನ್ನಾಗಿ ವಿಂಗಡಿಸಿ ಅವುಗಳಲ್ಲಿ ೮ ವೃತ್ತಗಳನ್ನು ಶ್ರೀರಾಮಚಂದ್ರ ದೇವರಿಗೆ, ೨೦೦ ವೃತ್ತಿಗಳನ್ನು ಬ್ರಾಹ್ಮಣರಿಗೆ, ತನ್ನ ತಾಯಿ ಸೀತಮ್ಮನ ಪುಣ್ಯಾರ್ಥವಾಗಿ ದಾನಮಾಡಿದನು. ಕ್ರಿ.ಶ. ೧೪೫೫ರಲ್ಲಿ ಹೊಸಹಳ್ಳಿ ಗ್ರಾಮವನ್ನು ದೇವರಾಜನು ತನ್ನ ತಾಯಿಯ ಹೆಸರಿನಲ್ಲಿ ಸೀತಾಪುರ ಎಂದು ಪುನರ್ ನಾಮಕರಣ ಮಾಡಿದನು. ವಿಜಯನಗರ ಸಾಮ್ರಾಜ್ಯವು ಅವನತಿ ಹೊಂದಿದ ತರುವಾಯ ನಾಗಮಂಗಲದ ಅರಸರು ಸ್ವತಂತ್ರರಾಗಿ ನಿಲ್ಲಲಿಲ್ಲ. ೧೬ನೇ ಶತಮಾನದ ಅಂತ್ಯದಲ್ಲಿ ನಾಗಮಂಗಲ ಚನ್ನಪಟ್ಟಣದ ಜಗದೇವರಾಯನ ವಶ ವಾಯಿತು. ಕ್ರಿ.ಶ. ೧೬೩೦ರಲ್ಲಿ ಮೈಸೂರು ಅರಸರ ರಾಜ್ಯದಲ್ಲಿ ವಿಲೀನವಾಯಿತು.

ಮೊಡವನ ಕೋಡಿ: ಕೃಷ್ಣರಾಜಪೇಟೆ ತಾಲ್ಲೂಕಿನ ಈ ಪಾಳೇಯ ಪಟ್ಟುಪಿನ ಬಗ್ಗೆ ಕ್ರಿ.ಶ. ೧೨೦೦ರ ೧೧೧ನೇ ಶಾಸನದಿಂದ ವಿವರಣೆ ತಿಳಿದುಬರುತ್ತದೆ. ಮಲ್ಲಿಯಣ್ಣ ಎಂಬುವನು ಮೊಡವನಕೋಡಿಯ ಪಾಳೆಯಗಾರನಾಗಿದ್ದನು. ಇವನ ತಂದೆ ಬೆಟ್ಟಗಾವುಂಡ, ತಾಯಿ ದಂಬಿಗಾವುಂಡಿ ಈಕೆಯನ್ನು 'ಧರ್ಮದ ಮೇರು ಪಾರ್ವತಿಗೌರಿ' ಎಂದು ಪ್ರಶಂಸಿಸಲಾಗಿತ್ತು. ಮಲ್ಲಿಯಣ್ಣನು ಸತ್ಯಸಂದನಾಗಿದ್ದು, ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಇವನು ವಿಜಯನಗರ ಅರಸರ ಕಾಲದಲ್ಲಿ ಪ್ರಸಿದ್ಧ ಪಾಳೆಯಗಾರನಾಗಿದ್ದು ಅರಸರಿಗೆ ಪ್ರೀತಿ ಪಾತ್ರನಾಗಿ ಹೆಸರು ಗಳಿಸಿದ್ದನು.

ತೆಂಗಿನ ಘಟ್ಟ: ಕೃಷ್ಣರಾಜಪೇಟೆ ತಾಲ್ಲೂಕಿನ ತೆಂಗಿನ ಘಟ್ಟವು ವಿಜಯನಗರ ಅರಸರ ಕಾಲದಲ್ಲಿ ಒಂದು ಪಾಳೇಯ ಗಾರರ ಪ್ರಾಂತ್ಯವಾಗಿತ್ತು. ೪೩ನೇ ಶಾಸನದಲ್ಲಿ ಕಾಳಯ್ಯ ಎಂಬ ಸಾಮಂತನ ಬಗ್ಗೆ ವಿವರಣೆ ಇದೆ. ಇವನು ತೆಂಗಿನ ಘಟ್ಟದ ಪಾಳೇಯಗಾರನಾಗಿದ್ದು ವಿಶೇಷ ಸತ್ಕಾರ್ಯಗಳಿಗೆ ಹೆಸರುವಾಸಿಯಾಗಿದ್ದನು. ಇವನಿಗೆ ಕಲಿಯುಗ ಮಾರ್ತಂಡ, ಪರನಾರೀದೂರ, ರಣರಂಗಧೀರ ಎಂಬ ಬಿರುದುಗಳಿದ್ದವು.

ಗುತ್ತಲು: ಮಂಡ್ಯ ತಾಲ್ಲೂಕಿನ ಗುತ್ತಲು ಎಂಬಲ್ಲಿ ಶಿವಾಜಿನಾಯಕ ಎಂಬ ಪಾಳೇಯಗಾರನಿದ್ದ ಎಂಬ ವಿಷಯ ವನ್ನು ೧೬೫೪ರ ಮಂಡ್ಯದ ೬೩ನೇ ಶಾಸನವು ತಿಳಿಸುತ್ತದೆ. ಗುತ್ತಲು ಗ್ರಾಮಕ್ಕೆ ಇನ್ನೊಂದು ಹೆಸರು ಅರ್ಕಗುಪ್ತಿಪುರ ಇಲ್ಲಿನ ಪ್ರಸಿದ್ದ ದೇವಸ್ಥಾನ ಅರ್ಕೇಶ್ವರ ದೇವಾಲಯಕ್ಕೆ ಪೂಜಿಸುವ ಹಕ್ಕಿನ ಬಗ್ಗೆ ಬ್ರಾಹ್ಮಣರು ಮತ್ತು ಕೆಂಪು ಅರ್ಕ ಒಡೆಯರ ನಡುವೆ ವಿವಾದ ಏರ್ಪಟ್ಟಿತು. ಈ ಬಗ್ಗೆ ಶಿವಾಜಿ ನಾಯಕನಿಗೆ ದೂರು ಹೋಯಿತು. ಆಗ ಅಮುಲ್ದಾರು, ಶಾನುಭೋಗ ಮತ್ತು ಇತರೆ ಮುಖ್ಯಸ್ಥರನ್ನು ಸೇರಿಸಿ ಸಮಾಲೋಚನೆ ನಡೆಸಿ ಒಂದು ತೀರ್ಮಾನಕ್ಕೆ ಬರಲಾಯಿತು. ಅಂದರೆ ಕಾದ ತುಪ್ಪದಲ್ಲಿ ಕೈ ಹಾಕುವಂತೆ ತೀರ್ಪು ನೀಡಲಾಯಿತು. ಅದರಂತೆ ಕೆಂಪು ಅರ್ಕಒಡೆಯನು ಮೂರು ಬಾರಿ ಕಾದ ತುಪ್ಪದಲ್ಲಿ ಕೈ ಹಾಕಿದನು. ಪರಿಣಾಮವಾಗಿ ದೇವಸ್ಥಾನದ ಆಸ್ತಿ, ಪೂಜಿಸುವ ಹಕ್ಕು ಕೆಂಪು ಅರ್ಕಒಡೆಯನಿಗೆ ಸೇರಿತು ಎಂಬ ವಿಚಾರವು ಶಾಸನದಲ್ಲಿ ಉಲ್ಲೇಖವಾಗಿದೆ.

ಹೊಂದಲಗೆ: ಮದ್ದೂರು ತಾಲ್ಲೂಕಿನ ಹೊಂದಲಗೆರೆ ಎಂಬಲ್ಲಿ ಸಂಕರಬನಾಯಕ ಎಂಬುವನು ಪಾಳೇಯ ಗಾರನಾಗಿದ್ದನು. ಇವನು ಕ್ರಿ.ಶ. ೧೫ನೇ ಶತಮಾನದಲ್ಲಿ ಸ್ಥಾನಿಕ ಪ್ರಭುವಾಗಿದ್ದು, ವಿಜಯನಗರ ಅರಸರ ಅಧೀನ ನಾಗಿದ್ದನು. ಈತನ ಆದೇಶದ ಮೇರೆಗೆ ಗ್ರಾಮದ ಸಮಸ್ತ ಜನರು ಎಲ್ಲರೂ ಸೇರಿ ಎಣ್ಣೆಗಾಣ ಮಾಡಿಸಿದ ವಿವರಣೆ ಯನ್ನು ಮದ್ದೂರಿನ ೬೩ನೇ ಶಾಸನ ತಿಳಿಸುತ್ತದೆ.

ಬೆಳಕವಾಡಿ: ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಸೀಮೆ ಪ್ರಾಂತ್ಯವು ವಿಜಯನಗರ ಅರಸರ ಕಾಲದ ಪಾಳೇಯ ಪಟ್ಟುವಾಗಿತ್ತು. ಕ್ರಿ.ಶ. ೧೫೫೩ರ ಬೆಳಕವಾಡಿಯ ೯೫ನೇ ಶಾಸನದಿಂದ ತಿಳಿದು ಬರುತ್ತದೆ. ಬೆಳಕವಾಡಿಯನ್ನು ದಬಗ ಗವುಡಯ್ಯನು ಐಯನಮಲ್ಲ ಒಡೆಯನಿಂದ ಪಡೆದು ಚಂದ್ರಶೇಖರ ಒಡೆಯರಿಗೆ ಪಲ್ಲಕ್ಕಿ ಉಂಬಳಿಯಾಗಿ ನೀಡಿದನು. ಚಂದ್ರಶೇಖರ ಒಡೆಯನು ಧಾರ್ಮಿಕ ವ್ಯಕ್ತಿಯಾಗಿದ್ದು, ರಾಜಕೀಯ ವ್ಯಕ್ತಿಯೂ ಆಗಿದ್ದು ಬೆಳಕವಾಡಿ ಸೀಮೆಯಲ್ಲಿ ಆಳ್ವಿಕೆ ನಡೆಸಿದನು.

ಮಂಡ್ಯ ಜಿಲ್ಲೆಯ ಶಾಸನಗಳ ಅಧ್ಯಯನದಿಂದ ಸುಮಾರು ೬೦ಕ್ಕೂ ಹೆಚ್ಚು ಪಾಳೇಯಗಾರರು ಕಂಡು ಬಂದಿದ್ದು, ಅವರಲ್ಲಿ ಮೇಲೆ ಕಾಣಿಸಿದ ಪಾಳೇಯಗಾರರು ವಿಜಯನಗರ ಅರಸರ ಕಾಲದಲ್ಲಿ ಸ್ಥಾನಿಕ ಪ್ರಭುಗಳಾಗಿದ್ದರು. ಇದರಲ್ಲಿ ಕೆಲವರು ಸಾಮಂತ ಅರಸರ ಸ್ಥಾನಮಾನಗಳನ್ನು ಹೊಂದಿದ್ದು, ಸ್ವಾಯತ್ತ ಅಧಿಕಾರವನ್ನು ಪಡೆದಿದ್ದರು. ಪಾಳೇಯಗಾರರು ಮಾಡಿದ ಸಾಧನೆಗಳು, ಶೌರ್ಯಗಳನ್ನು ಮರೆಯುವಂತಿಲ್ಲ. ಅವರು ತಮ್ಮ ಆಶ್ರಯದಾತ ಅರಸರ ಒಳಿತಿಗಾಗಿ, ಶ್ರೇಯಸ್ಸಿಗಾಗಿ ತ್ಯಾಗ ಬಲಿದಾನ ಮಾಡಿದ ಘಟನೆಗಳು ಸ್ಮರಣೀಯವಾಗಿರುತ್ತದೆ. ಕೆಲವು ಪಾಳೇಯಗಾರರು ದಂಡನಾಯಕರಾಗಿ, ಪ್ರಧಾನಿಗಳಾಗಿ ತಮ್ಮ ತಮ್ಮ ರಾಜರ ರಕ್ಷಣೆ ಹಾಗೂ ಅಭಿವೃದ್ದಿಗಾಗಿ ಶ್ರಮಿಸಿದ್ದಾರೆ. ಶಿಕ್ಷಣ, ಸಾಹಿತ್ಯ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಇವರ ಕೊಡುಗೆ ಅಪಾರವಾದುದ್ದು. ಹೀಗೆ ಮಂಡ್ಯ ಜಿಲ್ಲೆ ಅಂದಿನಿಂದಲೂ ಮಹಾನ್ ವ್ಯಕ್ತಿಗಳನ್ನು ಹೊಂದಿದ್ದು, ಸ್ಥಳೀಯ ಆಡಳಿತ ಅಭಿವೃದ್ಧಿ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೆ ಪೂರಕವಾಗಿರುವುದು ಗಮನಾರ್ಹವಾದ ಅಂಶವಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಸಕ್ಕರೆ ಸೀಮೆ, ಕೆ. ಅನಂತರಾಮು.

೨. ಎಪಿಗ್ರಾಫಿಯಾ ಕರ್ನಾಟಕ, ಪಾಂಡವಪುರ, ನಾಗಮಂಗಲ, ಕೆ.ಆರ್. ಪೇಟೆ, (ಮಂಡ್ಯ ಜಿಲ್ಲೆ) ಮಂಡ್ಯ, ಮದ್ದೂರು, ಮಳವಳ್ಳಿ ಸಂಪುಟಗಳು.

೩. ಸಿಂಗಾರ, ಶ್ರೀ ಕೆ. ಸಿಂಗಾರಿಗೌಡರ ಅಭಿನಂದನಾ ಗ್ರಂಥ.

೪. ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಆರ್. ಗೋಪಾಲ್.

೮೯

ಕೊಡಗಿನ ಕೆಲ ಸ್ಥಳೀಯ ನಾಯಕರು–ಒಂದು ಅಧ್ಯಯನ

ಡಾ. ಎನ್.ಸಿ. ಸುಜಾತ*

ವಿಜಯನಗರದ ಅರಸರ ಆಳ್ವಿಕೆ ಕೊನೆಗೊಳ್ಳುತ್ತಿದಂತೆ ದಕ್ಷಿಣ ಭಾರತದದ್ಯಾಂತ ಉದಯಿಸಿದ ಹಲವಾರು ಪುಟ್ಟ ರಾಜಮನೆ ತನಗಳು, ಪಾಳೇಯಗಳು ತಮ್ಮ ಸೀಮಿತ ಸಂಪನ್ಮೂಲ ಗಳಲ್ಲಿಯೇ ತಮ್ಮ ರಾಜಕೀಯ ಚಾಕಚಕ್ಯತೆ, ಪ್ರತಿಭೆ ಮೆರೆಯ ಬಲ್ಲವರಾದರು. ವಿಜಯನಗರದೋತ್ತರ ಕಾಲ ಪಾಳೇಯಗಾರರ ಕಾಲವೆಂದು ಹೆಸರಾಗಿರುವುದು ತಪ್ಪಲ್ಲ. ಈ ಅವಧಿಯ ಪಾಳೆಪಟ್ಟುಗಳು ಸಣ್ಣ ಸಣ್ಣ ಆಡಳಿತ ಘಟಕಗಳು ಬೆಳಕಿಗೆ ಬಂದವು[೧]. ಇಂಥಹ ಘಟಕಗಳಲ್ಲಿ ಕರ್ನಾಟಕದ ದಕ್ಷಿಣ ಭಾಗದಲ್ಲಿ ಕೆಲವು ಕಾಲ ಪ್ರಮುಖ ರಾಜಮನೆತನಗಳ ಅಧೀನರಾಗಿ, ಮತ್ತೆ ಕೆಲವು ಕಾಲ ಸ್ವತಂತ್ರರಾಗಿ ಆಳಿದ ನಾಯಕರು ಗಮನ ಸೆಳೆಯುತ್ತಾರೆ[೨]. ಇದುವರೆಗೂ ಈ ನಾಯಕರ ಸಾಧನೆಗಳನ್ನು ಅಧ್ಯಯನಕ್ಕೊಳಪಡಿಸುವ ಪ್ರಯತ್ನ ವಾಗಿಲ್ಲ. ಈ ಪುಟ್ಟ ಲೇಖನದಲ್ಲಿ ಅಂಥಹ ಪ್ರಯತ್ನವೊಂದನ್ನು ಮಾಡಲಾಗಿದೆ.

ತಾಳೀಕೋಟೆ ಯುದ್ಧಾನಂತರ ಛಿದ್ರಗೊಂಡ ವಿಜಯ ನಗರದ ಅವಶೇಷದ ಮೇಲೆ ಹಲವು ಪ್ರಬಲ ಹಾಗೂ ಕೆಲವು ಪುಟ್ಟ ಪಾಳೇಯಪಟ್ಟುಗಳು ಸ್ಥಾಪನೆಗೊಂಡಿದ್ದು, ಸ್ವಲ್ಪಮಟ್ಟಿಗೆ ಅಂದು ಉಂಟಾಗಿದ್ದ ರಾಜಕೀಯ ನಿರ್ವಾತ ಸ್ಥಿತಿಯನ್ನು ತುಂಬುವ ಪ್ರಯತ್ನ ಮಾಡಿದ್ದ ನಾಯಕರಲ್ಲಿ ಕೊಡಗಿನ ನಾಯಕರು ಒಬ್ಬರು. ಕರ್ನಾಟಕ ಗೆಸೆಟಿಯರ್ ಇಂತಹ ಹಲವು ನಾಯಕರನ್ನು ಗುರುತಿಸಿದ್ದು, ಅವರುಗಳು ಸ್ವಲ್ಪ ಮಟ್ಟಿಗಾದರೂ ರಾಜಕೀಯ ಆಕಾಂಕ್ಷೆಯನ್ನು ಉಳಿಸಿಕೊಳ್ಳಲು ಮಾಡಿದ ದಿಟ್ಟ ಪ್ರಯತ್ನಗಳ ಕಡೆ ಗಮನ ಹರಿಸುವಂತಾಗುತ್ತದೆ. ಇಂಥಹ ನಾಯಕರ ಅಸ್ತಿತ್ವವನ್ನು ಕುರಿತು ಇತಿಹಾಸಕಾರ ಬರ್ಟನ್ ಸ್ಟೈನ್ ಸಂಧ್ಯಾಂತರ ರಾಜ್ಯ (ಸೆಗ್ಮೆಂಟರಿ ಸ್ಟೇಟ್) ಅನಿಸಿಕೆ ಹೋಲುತ್ತದೆ. ಅಂದರೆ ಈ ವಿಭಜಿತ ರಾಜ್ಯ ವ್ಯವಸ್ಥೆಯಲ್ಲಿ ಸರ್ಕಾರವು ಕೇಂದ್ರೀಕೃತ ವ್ಯವಸ್ಥೆ ಆಗಿರದೆ ಕೆಲವು ಸ್ವತಂತ್ರ ಘಟಕಗಳು ಆಡಳಿತವನ್ನು ನಿರ್ವಹಿಸುತ್ತಿದ್ದವು. ಇದು ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ಪ್ರಚಲಿತವಿದ್ದಂತೆ ಕಾಣುತ್ತದೆ.

ಕೊಡಗು ಮೈಸೂರು ಜಿಲ್ಲೆಯ ನೈರುತ್ಯ ಮೂಲೆಯಲ್ಲಿರುವ, ಬೆಟ್ಟಗುಡ್ಡಗಳಿಂದ ಆವರಿಸಿದ ಸುಂದರ ಪ್ರದೇಶ (ಸ್ವತಂತ್ರಪೂರ್ವದಲ್ಲಿ ಅದು ಬ್ರಿಟಿಷರ ಅಧೀನವಾಗಿದ್ದು, ಸ್ವಾತಂತ್ರ್ಯಾನಂತರ ಕೆಲವು ದಿನಗಳ ಕಾಲ ಸ್ವತಂತ್ರ ರಾಜ್ಯವಾಗಿತ್ತು) ಕಾವೇರಿ ನದಿಯ ಪ್ರಭಾವದಿಂದ ಸದಾ ಹಚ್ಚಹಸಿರಿನ ಕಾಡುಗಳಿಂದ, ಸಂಪದ್ಭರಿತವಾದ ಪ್ರದೇಶ. ಐತಿಹಾಸಿಕ ಕಾಲದ ಸಾಮ್ರಾಜ್ಯಗಳ, ಪ್ರಬಲ ರಾಜ್ಯಗಳ ಉತ್ತುಂಗದ ಕಾಲದಲ್ಲಿ ಕದಂಬ ಗಂಗರ, ಚೋಳರ, ಚಂಗಾಳ್ವರ, ಹೊಯ್ಸಳರ ಹಾಗೂ ವಿಜಯನಗರದರಸರ ಸ್ವಾಧೀನಕ್ಕೊಳಪಟ್ಟಿತ್ತು.[೩]

ದಕ್ಷಿಣ ಕನ್ನಡವನ್ನು ಕೇಂದ್ರವಾಗಿರಿಸಿಕೊಂಡಿದ್ದ ಚಂಗಾಳ್ವರ ಪ್ರಭಾವ ಸ್ವಲ್ಪ ಹೆಚ್ಚಾಗಿ ಕಂಡುಬಂದಿರುವುದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಈ ಮನೆತನ ಹಲವಾರು ಶತಮಾನಗಳ ಕಾಲ ಕೊಡಗಿನ ಮೇಲೆ ತಮ್ಮ ಪ್ರಭಾವ ಉಳಿಸಿಕೊಂಡಿತ್ತು[೪].

ಹದಿನೇಳನೆ ಶತಮಾನದ ಹೊತ್ತಿಗೆ ಕೊಡಗಿನಲ್ಲಿ ಹಾಲೇರಿ ಮನೆತನದವರು ಆಳ್ವಿಕೆ ನಡೆಸ್ಮತ್ತಿದ್ದರು. ಅಲ್ಲಿಯ ವರೆಗೂ ಇದೇ ಪರಿಸ್ಥಿತಿ ಮುಂದುವರೆದಿತ್ತು. ಈ ಅವಧಿಯಲ್ಲಿ ಕೊಡಗನ್ನಾಳುತ್ತಿದ್ದ ಅನೇಕ ಸ್ಥಳೀಯ ನಾಯಕರು ತಮ್ಮ ನೆರೆಯ ಪ್ರಬಲ ರಾಜರುಗಳಿಗೆ ಅಧೀನರಾದರೂ ತಮ್ಮ ಪ್ರದೇಶಗಳಲ್ಲಿನ ಆಡಳಿತದ ಜವಾಬ್ದಾರಿಯನ್ನು ತಾವೇ ಹೊತ್ತಿದ್ದರು[೫]. ಪರ್ಶಿಯನ್ ಇತಿಹಾಸಕಾರ ಫೆರಿಶ್ತಾ ತನ್ನ ಕೃತಿಯಲ್ಲಿ ಬರೆದಿರುವಂತೆ "ಈ ಕಾಲದಲ್ಲಿ (ಹದಿನಾರನೇ ಶತಮಾನದಲ್ಲಿ) ಕೊಡಗನ್ನು ಹಲವು ನಾಯಕರು ಆಳುತ್ತಿದ್ದರು ಎಂದೂ; ಅವರುಗಳು ವಿಜಯನಗರದರಸರಿಗೆ ಅಧೀನ ರಾಗಿದ್ದರು ಎಂದು ಬರೆದಿದ್ದಾನೆ.[೬] ಪ್ರಾಯಶಃ ಕೊಡಗಿನ ಭೂಗೋಳಿಕ ಅಂಶಗಳು ಮತ್ತು ಐತಿಹಾಸಿಕ ಅಂಶಗಳು ಈ ನಾಯಕರು ಬಹುಕಾಲದವರೆಗೆ ಆ ಪ್ರದೇಶದ ಮೇಲೆ ತಮ್ಮ ಪ್ರಭಾವ ಹೊಂದಿರಲು ಸಹಕಾರಿಯಾಗಿದ್ದವು.[೭] ಅದರಂತೆ ಪ್ರತಿಯೊಂದು ನಗರ ಅಥವಾ ಪ್ರಮುಖ ವ್ಯಾಪಾರಿ ಕೇಂದ್ರಗಳು ಒಂದೊಂದು ಸ್ವತಂತ್ರ ರಾಜ್ಯ ಘಟಕಗಳಾಗಿದ್ದವು.

ಕೊಡಗನ್ನಾಳಿದ ಈ ನಾಯಕರಲ್ಲಿ ಪ್ರಮುಖರಾದವರೆಂದರೆ ನಂಜರಾಜನಾಯಕ, ಚಿಟ್ಟಿಯಪ್ಪನಾಯಕ, ಅಯ್ಯ

* ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ, ಕ.ರಾ.ಮು.ವಿ., ಮೈಸೂರು

ಕೊಂಗಿ ನಾಯಕ, ಕೆಂಗಳನಾಯಕ, ಹೊಂಬಾಳೆನಾಯಕ, ಮಾಚಂಗನಾಯಕ, ಅಚ್ಚುನಾಯಕ, ಕೊಳ್ಳೆಕೊಂಗಿನಾಯಕ, ನೂರಂಬಡನಾಯಕ, ಮುಕ್ಕಾಟಿನಾಯಕ ಮತ್ತು ಉತ್ತನಾಯಕ. ಇವರುಗಳಲ್ಲಿ ಹಲವರ ಸಾಧನೆಗಳು ಜನಪದದ ಕಥೆಗಳಲ್ಲಿ, ಹಾಡುಗಳಲ್ಲಿ ಜನಮನದ ನೆನಪಿನಲ್ಲಿ ಉಳಿದು ಕೊಂಡಿವೆ.[೮]

ಈ ನಾಯಕರಲ್ಲಿ ಉನ್ನತ ಮಟ್ಟದ ಸಾಧನೆಗೈದವ ನೆಂದರೆ ಅಚ್ಚುನಾಯಕ. ಇವನನ್ನು ಕುರಿತು ಕರ್ನಾಟಕ ಗೆಸೆಟಿಯರ್ ಹೇಳುವುದೇನೆಂದರೆ "ಕಿಗ್ಗಟ್ಟುನಾಡು ಅಥವಾ ಹುದಿಕೇರಿ ಊರ ಪರಿಸರದ ಅಂಜಿಗೇರಿ ನಾಡ್‌ನಲ್ಲಿ ಅಚ್ಚು ನಾಯಕ ಎಂಬ ಪಾಳೇಯಗಾರನ ಹೆಸರು ಕೇಳಿಬರುತ್ತದೆ."[೯]

ಇವರಂತೆಯೆ ಪ್ರಸಿದ್ಧರಾದ ನಾಯಕರೆಂದರೆ ಹಾಲೇರಿ ನಾಡ್‌ನ ಸೋಮಶೇಖರನಾಯಕ, ಸಿದ್ಧಾಪುರನಾಡ್‌ನ ಚೆನ್ನಯ್ಯನಾಯಕ, ತಾವೂನಾಡ್ ಕರ್ಣಬಾಹುನಾಯಕ, ಮತ್ತು ಯೆಡೆನಾಲ್ಕನಾಡ್‌ನ ಮುಕ್ಕಾಟಿನಾಯಕ.[೧೦]

ಈ ನಾಯಕರ ಆಳ್ವಿಕೆ ಭಾರತದ ಉಳಿದ ರಾಜ್ಯ ವ್ಯವಸ್ಥೆಗಿಂತಲೂ ಭಿನ್ನವಾಗಿರಲಿಲ್ಲ. ತಮ್ಮ ಪ್ರಭಾವ ಉಳಿಸಿಕೊಳ್ಳಲು ಹಾಗೂ ತಮ್ಮ ಶತೃಗಳನ್ನು ಮಣಿಸಲು ಇವರುಗಳು ಸದಾ ಪರಸ್ಪರ ವೈರತ್ವವನ್ನು ಹೊಂದಿರುತ್ತಿದ್ದರು. ಇಂಥಹ ಹಲವಾರು ಘಟನೆಗಳು ಕೊಡಗಿನ ಜಾನಪದದಲ್ಲಿ ಕಥೆಗಳ ರೂಪದಲ್ಲಿ ಉಳಿದುಕೊಂಡಿವೆ.[೧೧]

ಸ್ವಲ್ಪಮಟ್ಟಿಗೆ ಐತಿಹಾಸಿಕವೆನ್ನಬಹುದಾದ ಅಂಥಹ ಒಂದು ಘಟನೆ ಕಿಗ್ಗಟ್ಟುನಾಡ್‌ನ ಅಚ್ಚುನಾಯಕನಿಗೆ ಸಂಬಂಧಿಸಿದೆ. ಇದು ಕಿಗ್ಗಟ್ಟು ಮನೆತನಕ್ಕೂ ಹತ್ತುಗಟ್ಟುನಾಡ್ ನವರಿಗೂ ಇದ್ದ ಬದ್ಧವೈರತ್ವವನ್ನು ಪ್ರತಿಬಿಂಬಿಸುತ್ತದೆ. ಕಿಗ್ಗಟ್ಟು ನಾಡ್‌ನ ಅಚ್ಚುನಾಯಕನ ತಂದೆ ಚಿಟ್ಟಿಯಪ್ಪನಾಯಕನಿಗೂ ಅವನ ನೆರೆಯ ನಾಯಕರಿಗೂ ಆಗಾಗ ಘರ್ಷಣೆಗಳಾಗು ತ್ತಿದ್ದವು. ಅಂತಹದರಲ್ಲಿ ಒಮ್ಮೆ ಹುಲಿಭೇಟೆಗೆ ಸಂಬಂಧಿಸಿದಂತೆ ಚಿಟ್ಟಿಯಪ್ಪ ನಾಯಕನಿಗೂ ಹತ್ತುಗಟ್ಟು ನಾಡ್‌ನ ಮುಕ್ಕಾಟ ನಾಯಕನಿಗೂ ವೈಷಮ್ಯವೇರ್ಪಟ್ಟಿತು. ಇದರಿಂದ ಪ್ರೇರಿತರಾದ ಮುಕ್ಕಾಟಿನಾಯಕ ತನ್ನ ಪಡೆಯೊಂದಿಗೆ ಹೋಗಿ ಚಿಟ್ಟಿಯಪ್ಪ ನಾಯಕ ಅರಮನೆಗೆ ಮುತ್ತಿಗೆ ಹಾಕಿ ಅವನನ್ನು ಕೊಂದು ಅರಮನೆಯನ್ನು ಸುಟ್ಟುಹಾಕಿದರು.

ಈ ದುರ್ಘಟನೆಯಲ್ಲಿ ಚಿಟ್ಟಿನಾಯಕನ ಆಳು ಐಯ್ಯವ್ವ ಎಂಬಾಕೆ ಚಿಟ್ಟಿನಾಯಕನ ಎರಡು ವರ್ಷದ ಗಂಡುಮಗು ವೊಂದನ್ನು ರಕ್ಷಿಸಿ ಯಾರಿಗೂ ತಿಳಿಯದಂತೆ ಸಲಹಿದಳು. ಈ ಮಗುವೆ ಅಚ್ಚುನಾಯಕ. ಅಚ್ಚುನಾಯಕನಿಗೆ ಏಳು ವರ್ಷ ವಾದಾಗ ಸುಂದರವಾಗಿಯೂ, ದೃಢಕಾಯನಾಗಿಯೂ ಇದ್ದು ಸ್ಥಳೀಯ ಪ್ರಮುಖ ನಂಜುಂಡರಸನ ಕಣ್ಣಿಗೆ ಬಿದ್ದನು. ಆ ಹುಡುಗನ ಪೂರ್ವಾಪರವನ್ನು ತಿಳಿದ ನಂಜುಂಡರಸ ತನ್ನ ಅರಮನೆಯಲ್ಲಿ ಆಶ್ರಯ ನೀಡಿದನು. ಈ ಮಗು ಬಿಲ್ಲು ವಿದ್ಯೆಯಲ್ಲು ನಿಪುಣನಾಗಿ ಬಾಣಗಳನ್ನು ಗುರಿ ತಪ್ಪದೆ ಹೊಡೆಯುತ್ತಿದ್ದನು. ನಂತರ ಉತ್ತಮ ತರಬೇತಿ ಪಡೆದು ಕೋವಿಯಿಂದ ಗುರಿಗೆ ಸರಿಯಾಗಿ ಗುಂಡು ಹಾರಿಸಲು, ಕುದುರೆ ಸವಾರಿ, ಕತ್ತಿ ವರಸೆ, ಭರ್ಜಿಕಾಳಗಗಳಲ್ಲಿ ನಿಷ್ಣಾತ ನಾದನು.[೧೨]

ವಯಸ್ಕನಾದ ಮೇಲೆ ತನ್ನ ಪೂರ್ವಜರ ನಾಡನ್ನು ಮರಳಿ ಪಡೆದು ಆಡಳಿತವನ್ನು ನಡೆಸಲು ತೀರ್ಮಾನಿಸಿದನು. ತನ್ನನು ಪೋಷಿಸಿದ ನಂಜುಂಡರಸನ ಸಹಾಯ ಪಡೆದು ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಅಂಜಿಗೇರಿ ನಾಡಿನ ಮೇಲೆ ದಂಡೆತ್ತಿ ಹೋದನು. ಅವನಿಗೆ ಹೆದರಿದ ಮಾಚುಂಗಳ ನಾಯಕ ಮತ್ತು ಮುಕ್ಕಾಟಿನಾಯಕ ಕೇರಳದ ವೈನಾಡಿಗೆ ಓಡಿಹೋದರು. ತನ್ನ ರಾಜ್ಯವನ್ನು ಶತೃಗಳ ವಶದಿಂದ ಬಿಡಿಸಿಕೊಂಡ ಅಚ್ಚುನಾಯಕನನ್ನು-ಅಂಜೀಗೇರಿನಾಡಿನ ವಂಶದ ಕುಡಿಯನ್ನು ಆದರದಿಂದ ಬರಮಾಡಿಕೊಂಡರು. ಅಲ್ಲದೆ ಅವನ ಶತೃಗಳಾದ ಮಾಚುಂಗಳ ಹಾಗೂ ಮುಕ್ಕಾಟಿ ಗಳ ನಾಡುಗಳು ಸಹಾ ಅಚ್ಚುನಾಯಕನ ವಶವಾದವು.[೧೩]

ಅಚ್ಚುನಾಯಕ ತನ್ನ ನಾಡಿನಲ್ಲಿ ದೊಡ್ಡದಾದ ಅರಮನೆ ಯನ್ನು ನಿರ್ಮಿಸಿದನು. ಅದರ ಹತ್ತಿರ ದೇವಾಲಯವೊಂದನ್ನು ಕಟ್ಟಿಸಿ ತನಗೆ ಸಹಾಯ ಮಾಡಿದ ನಂಜುಂಡರಸನ ಮೂರ್ತಿ ಯೊಂದನ್ನು ನಿಲ್ಲಿಸಿದನು. ಊರಿನ ಜನರಿಗಾಗಿ ಸಮೀಪದಲ್ಲಿ ಕೆರೆಯೊಂದನ್ನು ನಿರ್ಮಿಸಿದನು. ತನ್ನ ಜನಾಭಿವೃದ್ಧಿ ಕಾರ್ಯಗಳಿಂದ ಜನಪ್ರಿಯನಾಗಿದ್ದನು.[೧೪]

ಈ ವೇಳೆಗಾಗಲೆ ಕೊಡಗಿನಲ್ಲಿ ತಮ್ಮ ಆಳ್ವಿಕೆ ಆರಂಭಿಸಿದ ಹಾಲೇರಿ ಅರಸರು ಕ್ರಮೇಣವಾಗಿ ಈ ಎಲ್ಲಾ ನಾಡುಗಳನ್ನು ಆಕ್ರಮಿಸಿಕೊಳ್ಳಲಾರಂಭಿಸಿದರು. ಕ್ರಿ.ಶ. ೧೬೦೦ರಲ್ಲಿ ಜಂಗಮನ ವೇಷದಲ್ಲಿ ಬಂದ ಚಿಕ್ಕವೀರರಾಜನು ಹಂತಹಂತ ವಾಗಿ ತನ್ನ ಅಧಿಕಾರವನ್ನು ಸ್ಥಾಪಿಸಿಕೊಳ್ಳುತ್ತಾ ಹಾಲೇರಿ ಮನೆತನದ ಆಳ್ವಿಕೆಗೆ ಅಡಿಪಾಯ ಹಾಕಿದನು. ಹಾಲೇರಿ ಮನೆತನದವರು ಕ್ರಿ.ಶ. ೧೮೩೪ರವರೆಗೆ ಕೊಡಗನ್ನು ಆಳಿ ಕೊಡಗಿಗೆ ಪ್ರಮುಖ ಅಸ್ತಿತ್ವವನ್ನು ತಂದುಕೊಟ್ಟರು.

ಚಿಕ್ಕವೀರನ ನಂತರ ಬಂದ ಹಾಲೇರಿಗಳ ಪ್ರಮುಖ ರಾಜರುಗಳೆಂದರೆ ವೀರರಾಜ, ಅಪ್ಪಾಜಿರಾಜ, ಹಾಗೂ ಮುದ್ದುರಾಜ. ಹದಿನೇಳನೇ ಶತಮಾನದ ಅಂತ್ಯದಲ್ಲಿ ಕೊಡಗಿನ ರಾಜನಾದವನು ದೊಡ್ಡವೀರಪ್ಪ. ಇವನು ಹಾಲೇರಿಗಳ ನಾಲ್ಕನೆಯ ಅರಸ. ಇವನು ತನ್ನ ರಾಜ್ಯವನ್ನು ವಿಸ್ತರಿಸುತ್ತಾ ಇದುವರೆಗೂ ಸ್ವತಂತ್ರರಾಗಿದ್ದ ಆಳಿಸುತ್ತಿದ್ದ ನಾಡುಗಳನ್ನು ಗೆದ್ದುಕೊಂಡನು. ಅವುಗಳೆಂದರೆ ಕಿಗ್ಗಟ್ಟುನಾಡ್‌ನ ಅಚ್ಚುನಾಯಕ ಮತ್ತು ಕಡಿಯತ್ತುನಾಡ್‌ನ ಕೊಳ್ಳೆ ಕೊಂಗಿನಾಯಕರ ನಾಡುಗಳು. ಇದರಿಂದಾಗಿ ಅವರ ರಾಜ್ಯಗಳು ದೊಡ್ಡವೀರಪ್ಪನ ರಾಜ್ಯದಲ್ಲಿ ವಿಲೀನವಾದವು. ಕೊಡಗನ್ನು ಸಂಪೂರ್ಣವಾಗಿ ವಶಪಡಿಸಿಕೊಂಡ

ದೊಡ್ಡವೀರಪ್ಪ ತನ್ನ ರಾಜ್ಯವನ್ನು ಆಡಳಿತದ ಅನುಕೂಲತೆಗಾಗಿ ಇಪ್ಪತ್ತೆಂಟು ನಾಡುಗಳನ್ನಾಗಿ ವಿಂಗಡಿಸಿದನು.[೧೩]

ಕೊಡಗಿನ ಇತಿಹಾಸದಲ್ಲಿ ಕಂಡುಬರುವ ಮತ್ತೊಬ್ಬ ನಾಯಕನೆಂದರೆ ಬೆಪ್ಪುನಾಡಿನ ಉತ್ತಪ್ಪನಾಯಕ. ಇವನು ಬೆಪ್ಪುನಾಡ್‌ನ ತಕ್ಕನಾಡ್ (ಸ್ಥಳೀಯ ನಾಯಕ)ನ ಆಡಳಿತವನ್ನು ನಿರ್ವಹಿಸುತ್ತಿದ್ದಾಗ. ಹಾಲೇರಿ ಮನೆತನದ ಕೊಡಗಿನ ರಾಜ ಮುದ್ದುರಾಜ ಇವನ ಆಕರ್ಷಕ ವ್ಯಕ್ತಿತ್ವವನ್ನು ಗಮನಿಸಿ ತನ್ನ ಮಗಳಾದ ನೀಲಮ್ಮಾಜಿಯನ್ನು ಇವನಿಗೆ ವಿವಾಹ ಮಾಡಿಕೊಟ್ಟು ಉತ್ತಪ್ಪನನ್ನು ಬೆಪ್ಪನಾಡಿನ ನಾಯಕನನ್ನನಾಗಿ ಮಾಡಿದನು.

ಉತ್ತಪ್ಪನನ್ನು ನಾಯಕನನ್ನಾಗಿ ಮಾಡುವುದರ ಮೂಲಕ ಮುದ್ದುರಾಜ ಕೊಡಗಿನ ರಕ್ಷಣೆಗಾಗಿ ಸೂಕ್ತ ಕ್ರಮ ಕೈಗೊಂಡಿದ್ದ ನೆಂದು ಹೇಳಬಹುದು. ಆದರೆ ಬೆಪ್ಪುನಾಡಿನ ಜನತೆ ಅವನನ್ನು ತಮ್ಮ ರಾಜನಾಗಿ ಸ್ವೀಕರಿಸಲಿಲ್ಲ. ಉತ್ತಪ್ಪ ನಾಯಕನೂ ಸಹಾ ತನ್ನ ಶತೃಗಳ ಮಾರಣಹೋಮ ಮಾಡಿ ಕಗ್ಗೊಲೆಗೆ ಕಾರಣನಾದನು. ನಂತರ ಹಾಲೇರಿ ಅರಸ ದೊಡ್ಡವೀರಪ್ಪನನ್ನು ವಿರೋಧಿಸಿದನು. ಉತ್ತಪ್ಪನಾಯಕನು ಅಲ್ಲಿಗೆ ಸುಮ್ಮನಾಗದೆ ತನ್ನ ರಾಜನನ್ನು ಪದಚ್ಯುತಿಗೊಳಿಸಲು. ಹಾಗೂ ತಾನೇ ಕೊಡಗಿನ ರಾಜನಾಗಲು ಪ್ರಯತ್ನಿಸಿದನು.[೧೪] ಉತ್ತಪ್ಪ ನಾಯಕನ ಪ್ರಯತ್ನದಲ್ಲಿ ಅವನು ಒಬ್ಬಂಟಿಯಾಗಿರಲಿಲ್ಲ. ಕೊಡವರ ಪ್ರಮುಖ ನಾಯಕರಾದ ಅಚ್ಚುನಾಯಕ ಮತ್ತು ಕೊಳ್ಳೆ ಕೊಂಗಿನಾಯಕರ ನೆರವು ಅವನಿಗಿತ್ತು. ಅವರು ಒಂದುಗೂಡಿ ದೊಡ್ಡವೀರಪ್ಪನನನ್ನು ಪದಚ್ಯುತಿ ಮಾಡಲು ನಡೆದ ಪ್ರಯತ್ನಗಳು ವಿಫಲವಾದವು.

ನಾಲ್ಕುನಾಡ್‌ನ ಪೊನ್ನಪ್ಪ. ಪೊನ್ನಪ್ಪ ಹಾಲೇರಿ ಅರಸ ದೊಡ್ಡವೀರಪ್ಪನ ಸರ್ವಕಾರ್ಯಗಾರನಾಗಿದ್ದನು (ಆಡಳಿತ ವರ್ಗದ ಮುಖ್ಯಸ್ಥ). ಪೊನ್ನಪ್ಪನು ಇದುವರೆಗೂ ಸ್ವತಂತ್ರ ರಾಗಿದ್ದ ದಕ್ಷಿಣದ ನಾಯಕರನ್ನು ಗೆದ್ದುಕೊಳ್ಳುವಂತೆ ತನ್ನ ಅರಸನ್ನನು ಪ್ರೇರೇಪಿಸಿದನು. ದೊಡ್ಡವೀರಪ್ಪನು ಪೊನ್ನಪ್ಪನನ್ನು ಕೊಳ್ಳೆಕೊಂಗಿ ನಾಯಕನ ವಿರುದ್ಧ ದಂಡೆತ್ತಿ ಹೋಗಲು ತನ್ನ ಸೈನ್ಯದೊಡನೆ ಕಳುಹಿಸಿದನು. ಪೊನ್ನಪ್ಪನಾಯಕ ಅಷ್ಟಕ್ಕೆ ಸುಮ್ಮನಾಗದೆ ಬೆಪ್ಪುನಾಡಿನ ಉತ್ತಪ್ಪನಾಯಕ ಹಾಗು ಕಿಗ್ಗಟ್ಟು ನಾಡಿನ ಅಚ್ಚುನಾಯಕರನ್ನು ಸೋಲಿಸಿ ಅವರ ಪ್ರಾಂತಗಳನ್ನು ಕೊಡಗಿನ ರಾಜ್ಯಕ್ಕೆ ಸೇರಿಸಿ ತನ್ನ ರಾಜನ ಪ್ರತಿಷ್ಠೆಯನ್ನು ಹೆಚ್ಚಿಸಿದನು. ಪೊನ್ನಪ್ಪನ ಈ ಪ್ರಯತ್ನಗಳಿಂದ ಹಾಲೇರಿ ಮನೆತನದ ನೇತೃತ್ವದಲ್ಲಿ ಕೊಡಗಿನ ಏಕತೆಯಾಗಿ ಅದು ದಕ್ಷಿಣದ ಪ್ರಮುಖ ಭಾಗಗಳಲ್ಲಿ ಒಂದಾಗಿ ಪರಿಗಣಿಸಲ್ಪಡಲು ಸಾಧ್ಯವಾಯಿತು. ಹಾಲೇರಿ ಮನೆತನದವರು ತಮ್ಮ ರಾಜಕೀಯ ಶಕ್ತಿಯ ಪ್ರದರ್ಶನದಲ್ಲಿ ಸಫಲರಾಗಿ ಹಲವು ಶತಮಾನಗಳಿಂದಲೂ ಪ್ರಬಲ ಆಡಳಿತಗಾರರಾಗಿ, ತಮ್ಮ ವಿಶಿಷ್ಟ ರೀತಿನೀತಿಗಳಿಂದ, ಶೌರ್ಯಸಾಹಸಗಳಿಂದ ಕೊಡಗಿನ ಇತಿಹಾಸಕ್ಕೆ ಮೆರಗು ನೀಡಿದ್ದ ಕೊಡಗಿನ ನಾಯಕರು ಕಣ್ಮರೆ ಯಾದರು. ಆದರೆ ಅವರ ಸಾಧನೆಗಳು, ವಿಶಿಷ್ಟತೆಗಳು, ಜನಾನುರಾಗಿ ಕಾರ್ಯಗಳು ಬಹುಕಾಲ ಜನಮನದ ನೆನಪಿನಲ್ಲಿ ಉಳಿಯುವಂತಾಗಿರುವದೇ ಅವರ ಶ್ರೇಷ್ಠತೆಗೆ ಕಾರಣ.

ಸುಮಾರು ಐದಾರು ಶತಮಾನಗಳ ಕಾಲ ಕೊಡಗಿನ ಬೆಳವಣಿಗೆಗಳ ಪ್ರೇರಕರಾಗಿದ್ದ ನಾಯಕರು ಕೊಡವ ಭಾಷೆ 'ಕೊಡವ ತಕ್ಕ್' ತನ್ನ ವಿಶಿಷ್ಟತೆಯನ್ನು ಉಳಿಸಿಕೊಳ್ಳಲು ಪ್ರೋತ್ಸಾಹಿಸಿದರು. ಕೊಡವರು ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಸಾಹಿತ್ಯ ಹಾಗೂ ಸಾಮಾಜಿಕ ಕಟ್ಟಲೆಗಳನ್ನು ಹೊಂದಿರುವ ದಲ್ಲದೆ, ದಕ್ಷಿಣ ಭಾರತದ ಬೇರೆ ಪ್ರಾಂತಗಳಿಗಿಂತ ವೈಶಿಷ್ಟ ಪೂರ್ಣವಾದ ಅಂಶಗಳನ್ನು ಅವರು ಇಂದಿಗೂ ಉಳಿಸಿ ಕೊಳ್ಳುವಂತಹ ಉತ್ತಮ ನಾಯಕತ್ವವನ್ನು, ಅಪೂರ್ವವಾದ ಕೊಡುಗೆಗಳನ್ನು ನೀಡಿದ್ದಾರೆ. ಈ ನಾಯಕರಿಲ್ಲದಿದ್ದರೆ ಕೊಡಗು ಕರ್ನಾಟಕದ ಬೇರೆ ಪ್ರದೇಶಗಳಂತೆಯೆ ಆಗಿಬಿಡುತ್ತಿತ್ತು.

ಅಡಿಟಿಪ್ಪಣಿ

೧. ಸೂರ್ಯನಾಥ ಕಾಮತ್ ಯು. ಸಂ ಭಾರತದ ಗೆಸೆಟಿಯರ್, ಕರ್ನಾಟಕ ರಾಜ್ಯ, ಕೊಡಗು ಜಿಲ್ಲೆ., ಭಾರತ ಸರ್ಕಾರ ೧೯೯೩, ಪುಟ ೮೨.
೨. ಎಂ.ಪಿ. ಕಾರ್ಯಪ್ಪ ಮತ್ತು ಪೊನ್ನಮ್ಮ ಕಾರ್ಯಪ್ಪ 'ದ ಕೂರ್ಗ್ಸ್ ಅಂಡ್ ದೇರ್ ಆರಿಜನ್ಸ್', ಗೀತಾ ಬುಕ್ ಹೌಸ್, ಮೈಸೂರು, ಪುಟ ೪೫.
೩. ಬಿ.ಎಲ್. ರೈಸ್ ಇಂಪೀರಿಯಲ್ ಗೆಸೆಟಿಯರ್ ಆಫ್ ಇಂಡಿಯಾ, ಮೈಸೂರ್ ಅಂಡ್ ಕೂರ್ಗ್, ೧೮೭೮, ಸಂಪುಟ ೩, ಪುಟ ೯೩.
೪. ಐ.ಎಮ್. ಮುತ್ತಣ್ಣ, 'ಎ ಟೈನಿ ಮಾಡೆಲ್ ಸ್ಟೇಟ್ ಆಫ್ ಸೌತ್ ಇಂಡಿಯಾ', ೧೯೫೩, ೨೪.
೫. ಎಂ.ಪಿ. ಕಾರ್ಯಪ್ಪ ಮತ್ತು ಪೊನ್ನಮ್ಮ ಕಾರ್ಯಪ್ಪ 'ದ ಕೂರ್ಗ್ಸ್ ಅಂಡ್ ದೇರ್ ಆರಿಜನ್ಸ್', ಗೀತಾ ಬುಕ್ ಹೌಸ್, ಮೈಸೂರು, ಪುಟ ೪೫.
೬ ಐ.ಎಮ್. ಮುತ್ತಣ್ಣ, ಮೇಲ್ಕಾಣಿಸಿದ ಪುಟ ೨೬. ೭.ಎಂ.ಪಿ. ಕಾರ್ಯಪ್ಪ ಮತ್ತು ಪೊನ್ನಮ್ಮ ಕಾರ್ಯಪ್ಪ, ಮೇಲ್ಕಾಣಿಸಿದ ಪುಟ ೪೦.
೮. ಅದೇ ಪುಟ ೪೫.
೯. ಸೂರ್ಯನಾಥ ಕಾಮತ್ ಯು. ಸಂ. ಭಾರತದ ಗೆಸೆಟಿಯರ್, ಕರ್ನಾಟಕ ರಾಜ್ಯ, ಕೊಡಗು ಜಿಲ್ಲೆ., ಭಾರತ ಸರ್ಕಾರ ೧೯೯೩. ಪುಟ ೮೭.
೧೦. ಐ.ಎಮ್. ಮುತ್ತಣ್ಣ, 'ಎ ಟೈನಿ ಮಾಡೆಲ್ ಸ್ಟೇಟ್ ಆಫ್ ಸೌತ್ ಇಂಡಿಯಾ', ೧೯೫೩. ಪುಟ ೨೬.
೧೧. ಕೊಡಗಿನವರಾದ ಅಜ್ಜಿಕುಟ್ಟೀರ ದೇವಯ್ಯಂವರು ಮನೆತನದವರು ನನಗೆ ಹೇಳಿದಂತೆ.
೧೨. ಕೊಡಗಿನವರಾದ ಅಜ್ಜಿಕುಟ್ಟೀರ ಗಣಪತಿಯವರು ನನಗೆ ಹೇಳಿದಂತೆ.
೧೩. ಪಾರ್ವತಿಯವರು ನನಗೆ ಹೇಳಿದಂತೆ
೧೪. ಗಣಪತಿ ಬಿ.ಡಿ. ಕೊಡವಾಸ್, ದೇರ್ ಕಸ್ಟಮ್ಸ್ ಅಂಡ್ ಕಲ್ಚರ್.

೬೦

ಗಂಗ ಶ್ರೀಪುರುಷನ ಕಾಲದ ಕೆರೆಗಳು

ಡಾ. ಎಚ್.ಎಸ್. ಉಷಾರಾಣಿ*

ತಲಕಾಡಿನ ಗಂಗರು ಶ್ರೀಪುರುಷನ ಆಳ್ವಿಕೆಯ (೭೨೫–೮೮) ವೇಳೆಗೆ ತಮ್ಮ ಅಧಿಕಾರ ಪರಾಕಾಷ್ಠೆ ತಲುಪಿದ್ದರು. ಅಂದಿನ ಕೃಷಿಕ ಸಮಾಜಕ್ಕೆ ಅಗತ್ಯವಿದ್ದ ನೀರಾವರಿ ಸೌಲಭ್ಯ ಕಲ್ಪಿಸುವಲ್ಲಿ ಉತ್ಸುಕರಾಗಿಯೇ ಇದ್ದರು. ಈ ದಿಸೆಯಲ್ಲಿ ಶ್ರೀಪುರುಷನ ಕಾಲಘಟ್ಟದಲ್ಲಿದ್ದ ಜಲಮೂಲ, ಜಲತಂತ್ರಗಾರಿಕೆ ಕುರಿತು ಪ್ರಸ್ತುತ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಗಂಗರ ಶಾಸನಗಳಲ್ಲಿ ಜಲಮೂಲಕ್ಕೆ ಸಂಬಂಧಿಸಿದಂತೆ ಹಳ್ಳ, ಪಳ್ಳ, ಕೊಲ್ಲಿ, ಸಮುದ್ರ, ದೊಣೆ, ತಟಾಕ, ವಾಪಿ, ಕೂಪ, ನದಿ, ಕೊಳ ಮತ್ತು ತೂಬು, ಪದಗಳು ಬಳಸಲ್ಪಟ್ಟಿವೆ.

ಶ್ರೀಪುರುಷನ ಶಾಸನಗಳಲ್ಲಿ ಹಲವು ಕೆರೆಗಳು ಪ್ರಸ್ತಾಪಿಸಲ್ಪಟ್ಟಿವೆ. ಉದಾಹರಣೆಗೆ ತೇದಿ ಇಲ್ಲದ ಶ್ರೀಪುರುಷನ ಮೈಸೂರು ಜಿಲ್ಲೆಯ ಸರಗೂರು ತಾಮ್ರಶಾಸನ[1] ಮಹಾ ಜನರಿಗಿತ್ತ ಪೆರ್ವಟ್ಟಿಯಾರ್ ಸೀಮೆಯ ವಿವರ ನೀಡುವಲ್ಲಿ ನಾಲ್ಕು ದಿಕ್ಕುಗಳಲ್ಲಿದ್ದ ಜಲಮೂಲವನ್ನು ದಾಖಲಿಸಿದೆ. ಅದು ಹೀಗಿದೆ: ಮೂಡಯ್ತಾಡಿಲ (ಪೂರ್ವದಲ್ಲಿ) ಪೆರ್ನಳ್ಳಮೆ, ತೆಂಕಯ್ಯಕ (ಉತ್ತರ) ಗೂರ್ತ್ತಿ ಗೂಡಿಲ ಪಳ್ಳಮೇ, ಪಡುವಾಯ್ (ಪಶ್ಚಿಮ) ಪೆರ್ಗೊಲ್ಲಿಯೇ (ಕೋಡಿ), ಬಡಗಾಯ್ (ದಕ್ಷಿಣ) ಪೆರ್ವಳ್ಳಮೇ, ಎಂದು ದೊಡ್ಡ ಹಳ್ಳ ಕೋಡಿ, ತಿರುವುಗಳನ್ನು ಹೇಳಲಾಗಿದೆ. ಅದೇ ರೀತಿ ಮರ್ದೂರ ಸೀಮಾ ವಿವರದಲ್ಲೂ ತೆಂಕಾಯ್ (ಉತ್ತರ) ಮಣಿಯಾಲ ಕೊಲ್ಲಿಯ ಪಳ್ಳಮೇ, ಪಡುವಾಯ್, (ಪಶ್ಚಿಮ) ಪೆರ್ಗೊಲ್ಲಿ, ಎಂದು ನಿರ್ದಿಷ್ಟ ದಿಕ್ಕುಗಳಲ್ಲಿರುವ ನೀರಿನ ಸೌಕರ್ಯ ತಿಳಿಸಲಾಗಿದೆ. ಇದರಿಂದ ಕೆರೆಗಳ ನಿರ್ಮಾಣ ಸಂದರ್ಭ ದಲ್ಲಿ ನೀರಿನ ಹಂಚಿಕೆ, ಪ್ರವಾಹ ಬಂದಾಗ ಆ ನೀರನ್ನು ತಡೆಗಟ್ಟಿ ಅಥವಾ ಬೇರೆ ಕಡೆಗೆ ತಿರುಗಿಸಿ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದ ರೀತಿಯನ್ನು ಬಣ್ಣಿಸಲಾಗಿದೆಯೆಂದು ಅರ್ಥೈಸಬಹುದು.

ತೇದಿ ಇಲ್ಲದ ಶ್ರೀಪುರುಷನ ಮತ್ತೊಂದು ಶಿಲಾಶಾಸನ[2] ಅಂದು ಅಸ್ತಿತ್ವದಲ್ಲಿದ್ದ ಕೆಂಗೆರೆಯನ್ನು ಹೇಳಿದೆ. ಶಕವರುಷ ೬೯೩ರ ಶ್ರೀಪುರುಷನ ಸೇಲಂ ಶಾಸನ[3] ಪ್ರದುಕುಂದ ವಿಷಯ ದಲ್ಲಿ ಕೊಮರಮಂಗಲ ಗ್ರಾಮದ ಪೂರ್ವಕ್ಕೆ ಕೆರೆಯ ಕೆಳಗೆ ೨ ಖಂಡುಂಗ ವ್ರಿಹಿಕ್ಷೇತ್ರ ಮತ್ತು ಗ್ರಾಮದ ಪಶ್ಚಿಮಕ್ಕೆ ತಟಾಕದ ಕೆಳಗೆ ವ್ರಿಹಿಕ್ಷೇತ್ರ ಹಾಗೂ ೨ ಖಂಡುಂಗ ಎಲೆಬಳ್ಳಿ, ಬಾಳೆ ತೋಟ, ಸಾಸಿವೆ, ಮತ್ತು ನವಣೆ ಬೆಳೆಗೆ ಯೋಗ್ಯವಾದ ಭೂಮಿಯನ್ನು ಪ್ರವಚನ ಚರಣದ ಹಾರೀತಿ ಗೋತ್ರದ ಬ್ರಾಹ್ಮಣ ನೀಲಕಂಠಶರ್ಮ ಎಂಬಾತನಿಗೆ ದತ್ತಿ ನೀಡಲಾಗಿತ್ತು. ಉಲ್ಲೇಖಿತ ಶಾಸನ ಆಹಾರ ಧಾನ್ಯಗಳ ಜೊತೆಗೆ ವಿವಿಧ ರೀತಿಯ ಆರ್ಥಿಕ ಬೆಳೆಗಳನ್ನು ಬೆಳೆಯಲು ನೀರಿನ ಮೂಲವನ್ನು ಸೂಚಿಸಿ ದಂತಿದೆ.

ಬಂಜರು ಮತ್ತು ಅರಣ್ಯಭೂಮಿಯನ್ನು ಕೃಷಿಗೆ ಒಳಪಡಿಸಲು ಕೆರೆ ಕಟ್ಟಿಸಿ, ವಿವಿಧ ರೀತಿಯ ತೂಬುಗಳನ್ನು ರಚಿಸಿ ಹೂಳೆತ್ತುವ ಹಾಗೂ ಕೋಡಿ ಭದ್ರಪಡಿಸುವ ಮತ್ತು ಕಾಲುವೆ, ಬಾವಿ, ತೋಡಿಸುವ ಕಾರ್ಯದಲ್ಲಿ ತೊಡಗಿರು ತ್ತಿದ್ದರು. ಉದಾಹರಣೆಗೆ ಶ್ರೀಪುರುಷ ಮೂರನೇ ವರ್ಷದ ನಂದಿ ತಾಮ್ರಶಾಸನ[4] ಆನೆಯ ಕೂಪ, ಕಪ್ಪೂರ ಬಾವಿ ಮತ್ತು ಕಲ್ಕೆರೆ ತಟಾಕವನ್ನು ಉಲ್ಲೇಖಿಸುತ್ತದೆ. ಈ ಶಾಸನವು ಅರಣ್ಯ ಭೂಮಿ ದಾನವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ.

ತೇದಿ ಇಲ್ಲದ ಕೋಲಾರ ಜಿಲ್ಲೆಯ ಬಿಸನಹಳ್ಳಿ ಶಾಸನ[5] ಶ್ರೀಪುರುಷನ ಮಗ ದುಗ್ಗಮಾರ ಕಂಪಿಲಿ ವಿರುದ್ಧ ನಡೆದ ಹೋರಾಟದಲ್ಲಿ ಮಡಿದ ಪಾಂಡಪ್ಪನಿಗೆ ಅಂದರೆ ಆತನ ಕುಟುಂಬದವರಿಗೆ ಸಾಂತನೂರು ಗ್ರಾಮದಲ್ಲಿ ಒಂದು ತೂಬು ಭತ್ತಭೂಮಿ ಮತ್ತು ಗೃಹ ನಿವೇಶನವನ್ನು ಪಾಲ್‌ಗಲ್‌ಚು ದಾನವಾಗಿ ನೀಡಿದ್ದನ್ನು ದಾಖಲಿಸಿದೆ.

ಕೋಲಾರ ಜಿಲ್ಲೆಯ ಅರಳೆಕೋಟೆ ಶಾಸನ[6] ಪ್ರಕಾರ ದುಗ್ಗಮಾರನ ಆಳ್ವಿಕೆಯಲ್ಲಿ ವಡಿಪ್ಪೆನಿ ಮಣಿ ಎಂಬಾತ ೧೦ ಖಂಡುಗ ಭತ್ತ ಭೂಮಿಯನ್ನು ದಾನವಾಗಿ ನೀಡಿದ್ದ.

ಕೋಲಾರ ಜಿಲ್ಲೆಯ ಹಳೆಕೊಪ್ಪ ಶಾಸನ[7] ಪ್ರಕಾರ ಶ್ರೀಪುರುಷನ ಕಾಲದಲ್ಲಿ ನಂಗಲಿಸೆಟ್ಟಿ ಎಂಬಾತ ಪಟ್ಟದ ಕೆರೆಯ ಕೆಳಗೆ ೧ ಕೊಳಗ ಭೂಮಿಯನ್ನು ದೇವಭೋಗವಾಗಿ ನೀಡಿದ್ದನ್ನು ಹೇಳಲಾಗಿದೆ.

ಈತನ ಶ್ರೀನಿವಾಸಪುರ ತಾಲ್ಲೂಕಿನ ಕಲ್ಲೂರು ಶಾಸನ[8] ತುರುಕಾಳಗದಲ್ಲಿ ಮಡಿದ ಪೆರನ್ ಕೋವರ್‌ಗೆ ಹತ್ತು ತೂಮು ಭತ್ತ ಭೂಮಿಯನ್ನು ನೆತ್ತರು ಕೊಡುಗೆಯಾಗಿ ನೀಡಿದ್ದನು ತಿಳಿಸುತ್ತದೆ. ಶ್ರೀಪುರುಷನ ಕೋಲಾರ ತಾಲ್ಲೂಕಿನ ಹೊಳಲಿ ಶಾಸನ[9] ಒಂದು ಖಂಡುಗ ಭತ್ತ ಭೂಮಿಯನ್ನು ಕೆರೆಯ

* # ೪೩೩, 'ಇ' ಬ್ಲಾಕ್, ಜಯಪ್ರಕಾಶ್‌ನಗರ, ಮೈಸೂರು-೫೭೦೦೦೮.

ಕೆರೆಗೆ ದಾನ ನೀಡಿದ್ದನ್ನು ಹೇಳಿದೆ. ಉಲ್ಲೇಖಿತ ಶಾಸನಗಳು ಕೋಣಾರ ಪರ್ವಿಯಲ್ಲಿರುವ ಕೆರೆಗಳ ಬಗ್ಗೆ ಮಾಹಿತಿ ನೀಡುತ್ತದೆ. ಆದರೆ ಹೆಚ್ಚು ವಿವರಗಳಿಲ್ಲ.

ಶ್ರೀಪುರುಷ ಮಾನ್ಯಪುರದ ನೆಲೆವೀಡಿನಲ್ಲಿದ್ದಾಗ ನಿರ್ಗುಂದ ರಾಜನ ಪತ್ನಿ (ಸಗರ ವಂಶಸ್ಥಳು) ಲೋಕತಿಲಕ ಜಿನಾಲಯ ಕಟ್ಟಿಸಿದಳು. ಹಾಗಾಗಿ ನಿರ್ಗುಂದದ ಬಾಣ ಯುವರಾಜ ಪೃಥ್ವಿಯ ವಿಜ್ಞಾಪನೆಯ ಮೇರೆಗೆ ಉಲ್ಲೇಖಿತ ಜಿನಾಲಯದ ದುರಸ್ತಿ ವಿಸ್ತರಣೆ ದೇವರ ಆರಾಧನೆಗೆಂದು ನಿರ್ಗುಂದ ವಿಷಯದ ಪೊನ್ನಾಳಿ ಗ್ರಾಮವನ್ನು ದತ್ತಿ ಬಿಡಲಾಗಿತ್ತು. ಈ ಗ್ರಾಮದ ಸೀಮಾ ವಿವರವನ್ನು ಪರಿಶೀಲಿಸಿದಾಗ ನಾಲ್ಕು ದಿಕ್ಕುಗಳಲ್ಲೂ ಜಲಮೂಲವಿದ್ದುದು ಗೋಚರಿಸುತ್ತದೆ. ಅದು ಹೀಗಿದೆ; ಉತ್ತರದಲ್ಲಿ ಸಾಮಗೆರೆ, ಈಶಾನ್ಯದಲ್ಲಿ ಕಲಂಬರ್ಟಿಗಟ್ಟು, ಪೂರ್ವದಲ್ಲಿ ಬೆಳಿಬೆಲ, ಆಗ್ನೇಯದಲ್ಲಿ ಪಣ್ಯಂಗೆರೆ, ದಕ್ಷಿಣದಲ್ಲಿ ಬೆಳಗಲಿಗೆರೆ, ನೈರುತ್ಯದಲ್ಲಿ ಬೆಳಗಲ್ ಮೊರಡಿ ಒಳಗೆರೆ, ಪಶ್ಚಿಮದಲ್ಲಿ ಪೊಸ್ಕಪಿ ತಾಳ್ತುವಾಯರ್ ಕೆರೆ ಎಂದು ಮಂಡ್ಯ ಜಿಲ್ಲೆಯ ದೇವರಹಳ್ಳಿ ಶಾಸನ ತಿಳಿಸುತ್ತದೆ. ಮಂಡ್ಯ ಜಿಲ್ಲೆಯ ಹುಲ್ಲೇನಹಳ್ಳಿ ಶಾಸನ ಮತ್ತೊಬ್ಬ ಬಾಣರ ಪ್ರಮುಖ ಶ್ರೀಪುರುಷ ರಾಜನಿಗೆ ಬಿನ್ನಹ ಮಾಡಿ ಕೋವಲಪೆಟ್ಟು ಗ್ರಾಮವನ್ನು, ಗಾರ್ಗ್ಯಗೋತ್ರದ ಜನಾರ್ಧನ ಕೌಶಿಕಗೋತ್ರದ ಕೇಶವಭಟ್ಟ ಮತ್ತು ಕಾಶ್ಯಪ ಗೋತ್ರದ ನಾಗಶರ್ಮನಿಗೆ ಬ್ರಹ್ಮದೇಯವಾಗಿ ದತ್ತಿ ನೀಡಿದ ಉಲ್ಲೇಖವಿದೆ. ಗ್ರಾಮದ ಸೀಮಾ ವಿವರದಲ್ಲೂ ನಾಲ್ಕು ದಿಕ್ಕುಗಳಲ್ಲೂ ಜಲಮೂಲ ಹರಡಿದೆ. ಅಂದರೆ ಪೂರ್ವದಲ್ಲಿ – ಬಿಳಿಗೆರೆ ಪಾದರಿ ಮತ್ತು ಹುಣಸೆ ಮರದವರೆಗೆ, ದಕ್ಷಿಣದಲ್ಲಿ ಬೆದಿರಕೆರೆ ಮೊದಲ ಮಡುಕೊಳ, ಪಶ್ಚಿಮದಲ್ಲಿ ವೆಲ್‌ಗೊಳ ಕಾಲುವೆ, ಉತ್ತರದಲ್ಲಿ – ಕಡವಿಗೆರೆ ಮಂಜಲ್‌ತೊಣೆ, ಎಂದು ತಿಳಿಸಲಾಗಿದೆ ಮಂಡ್ಯ ಜಿಲ್ಲೆಯ ಉಲ್ಲೇಖಿತ ಎರಡು ಶಾಸನಗಳಿಂದ ಕೆರೆ ಕಟ್ಟಿಸುವ ತಾಂತ್ರಿಕತೆಯನ್ನು ಎತ್ತಿ ಹಿಡಿದಿರುವುದು ಗೋಚರಿಸುತ್ತದೆ. ಒಂದರ ಕೆಳಗೆ ಮತ್ತೊಂದು ಕೆರೆ ಕಟ್ಟಿಸುತ್ತಿದ್ದರು. ಇದರಿಂದ ಒಂದು ಕೆರೆಗೆ ನೀರು ತುಂಬಿದಾಗ ಅದು ವ್ಯರ್ಥವಾಗದಂತೆ ಮತ್ತೊಂದು ಕೆರೆಗೆ ಹರಿಯುವಂತೆ ವ್ಯವಸ್ಥೆ ಮಾಡಲಾಗಿತ್ತು.

ಹೀಗಿದ್ದಾಗ್ಯೂ ಜನಸಂಖ್ಯೆ ಹೆಚ್ಚಿ, ಆಹಾರ ಪೂರೈಕೆಗಾಗಿ ಅಗತ್ಯ ಕೃಷಿ ವಿಸ್ತರಣೆ ನೀರಾವರಿ ಸೌಲಭ್ಯವನ್ನು ಹೆಚ್ಚಿಸುವಂತೆ ಮಾಡಿತ್ತು. ಹಾಗಾಗಿ ಹೊಸ ಕೆರೆಗಳ ರಚನೆ ಅನಿವಾರ್ಯವಾಗಿತ್ತು. ಈ ದಿಸೆಯಲ್ಲಿ ರಚಿಸಲ್ಪಟ್ಟ ಕೆರೆಗಳನ್ನು ಈ ಕೆಳಕಂಡಂತೆ ಉದಾಹರಿಸಬಹುದು:

ಕ್ರಿ.ಶ. ೭೧೦ರ ಶ್ರೀಪುರುಷನ ಹಲ್ಲೂರು ಶಾಸನ ಅಡಪ್ಪಾರ ಎಂಬಾತ ಕಟ್ಟಿಸಿದ ಕೆರೆ ಮತ್ತು ಹಲ್ಲೂರು ಗ್ರಾಮ ದತ್ತಿ ಬಿಟ್ಟಿದ್ದನ್ನು ಹೇಳುತ್ತದೆ. ಇದರಿಂದ ಕೆರೆ ಕಟ್ಟುವುದು ಮಾತ್ರವಲ್ಲದೇ ಅದರ ನಿರ್ವಹಣೆಗೆ ಅಧ್ಯ ಗಮನ ಕೊಡಲಾಗಿತ್ತು. ಆರ್ಥಿಕ ವ್ಯವಸ್ಥೆಯ ಬಲವರ್ಧನೆಗೆ ಮಹಿಳೆಯರು ಸ್ಪಂದಿಸಿದ್ದರೆಂದು ಪಾವಗಡ ಶಾಸನದಿಂದ ತಿಳಿಯುತ್ತದೆ. ಕೆರೆ ಕಟ್ಟಿಸಿ ದೋರ್ ಆಕಳತಿಗಳ್ ಅವರ ಮಕ್ಕಳ್ ಅಲ್ಲಗನು ದಾರೆಗನು ಸುಪುತ್ರರ್‌ಗಳ್ ಎಂದು ಕೆರೆ ಕಟ್ಟಿಸಿದ ಆಕಳತಿ ಮತ್ತು ಆಕೆಯ ಮಕ್ಕಳನ್ನು ಹೆಸರಿಸಲಾಗಿದೆ. ಅಲ್ಲದೆ ಅಕ್ಕಳಿ ಸಮುದ್ರದ ನಿರ್ವಹಣೆಗೆ ನಾಲ್ಕು ಖಂಡುಗ ಹೊಲದ ಮಣ್ಣನ್ನು ಕೌಂಡಿನ್ಯ ಗೋತ್ರದ ದೇವದತ್ತನಿಗೆ ನೀಡಿದಳೆಂದು ಅದೇ ಶಾಸನದಲ್ಲಿ ಉಲ್ಲೇಖವಿದೆ.

ಶ್ರೀಪುರುಷನ ಪುರಿಗಾಲಿ ಶಾಸನ ಗ್ರಾಮವೊಂದರ ಮೇಲೆ ದಾಳಿ ನಡೆದ ಸಂದರ್ಭದಲ್ಲಿ ಅತ್ತಿಗಾಲದ ಚವುಡತ್ತರ ಹೋರಾಡಿದನೆಂದೂ, ಸ್ಥಳೀಯ ಗ್ರಾಮಸಭೆಯವರು ಅಥವಾ ಪನ್ನಿರ್‌ವರ್ (ಹನ್ನೆರಡು ಮಂದಿ) ಕೊಂಗಣಿ ಕೆರೆ ಕಟ್ಟಿಸಿದರೆಂದು ತಿಳಿಸುತ್ತದೆ.

ಶಾಸನೋಕ್ತ ಮಾಹಿತಿಗಳಿಂದ ಜಲಸಂಗ್ರಹಕ್ಕಾಗಿ ಬಳಸುತ್ತಿದ್ದ ವಿಧಾನಗಳನ್ನು ಸೂಕ್ಷ್ಮವಾಗಿ ಗ್ರಹಿಸಬಹುದು. ನಿಗಧಿತ ಮರಗಳಾದ ಆಲ, ಮತ್ತಿ, ನೀಲಗಿರಿ, ತೆಂಗು, ಇತ್ಯಾದಿ ಮರಗಳನ್ನು ನೆಡುತ್ತಿದ್ದರು. ಬೇರು ಭೂಮಿಯಲ್ಲಿ ಹೆಚ್ಚು ಆಳ ಮತ್ತು ಉದ್ದ ಅಗಲಕ್ಕೆ ಹರಡುತ್ತಿದುದ್ದರಿಂದ ಹೆಚ್ಚು ನೀರನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗುತ್ತಿತ್ತು. ಹೀಗಾಗಿ ಭೂಮಿಯಲ್ಲಿ ತೇವಾಂಶ ಹೆಚ್ಚು ಕಾಲ ಇರುತ್ತಿತ್ತು. ಅವು ಮಣ್ಣಿನ ಕಣಗಳು ಸವೆದು ಹೋಗದಂತೆ ತಡೆಯುತ್ತಿದ್ದವು. ಅಂತಹ ಪರಿಸರದಲ್ಲಿ ಹೆಚ್ಚು ಕೆರೆಗಳ ರಚನೆ ಸಾಧ್ಯವಾಗಿತ್ತೆಂದು ನಿರ್ಧರಿಸಬಹುದು.

ಆಧಾರಸೂಚಿ

೧. ಎ.ಕ. (ಪ.ಆ) ಸಂ. ೩, ಹೆಗ್ಗಡದೇವನ ಕೋಟೆ, ೯೦.
೨. ಅದೇ, ನಂಜನಗೂಡು, ೧೪೯.
೩. K.V.Ramesh Inscriptions of the Weston Gangas No. 47.
೪. K.V.Ramesh (3) No. 41.
೫. K.V.Ramesh (3) No. 55.
೬ K.V.Ramesh (3) No. 54.
೭. K.V.Ramesh (3) No. 59.
೮. K.V.Ramesh (3) No. 62.
೯. K.V.Ramesh (3) No. 26.
೧೦. ಎ.ಕ. (ಪ.ಆ) ಸಂ. ೭, ನಾಗಮಂಗಲ ೧೪೯, ಹಿರಗುಂದ, ಚಿತ್ರದುರ್ಗ, ಹೊಸದುರ್ಗ ತಾಲ್ಲೂಕಿನಿಂದ ೧೧ ಕಿ.ಮೀ. ದೂರದಲ್ಲಿದೆ. ಗಂಗರಾಜ್ಯಕ್ಕೆ ಸೇರಿದ ನಾಡು ಕರ್ನಾಟಕ ಗೆಜೆಟಿಯರ್, ಭಾಗ ೩, ಪುಟ ೬೩೭, ನಿರ್ಗುಂದದ ಗೊರವರ ಉಲ್ಲೇಖ, ಎ.ಕ. ೪, ಚಾಮರಾಜನಗರ, ಶಾಸನ ಸಂಖ್ಯೆ ೧೧೪.
೧೧. ಎ.ಕ. (ಪ.ಆ) ಸಂ. ೭, ಮಂಡ್ಯ ೧೪.
೧೨. MAR 1918, P-42.

ಇಂಗಳೇಶ್ವರ ಗ್ರಾಮದಲ್ಲಿನ ಕಲ್ಯಾಣ ಚಾಳುಕ್ಯರ ಕಾಲದ ಕೋಟೆ

ಮಂಜುನಾಥ ಎಸ್. ಪಾಟೀಲ್*

ಇಂಗಳೇಶ್ವರ, ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಈಶಾನ್ಯ ದಿಕ್ಕಿನಲ್ಲಿ ೧೦ ಕಿ.ಮೀ. ದೂರದಲ್ಲಿದೆ. ಶಾಸನಗಳಲ್ಲಿ **'ಅಗ್ರಹಾರ ಇಂಗಳೇಶ್ವರ'**, **'ವಿಂಗಳೇಶ್ವರ'**, **'ಯಿಂಗಳೇಶ್ವರ'**, ಎಂದು ಉಲ್ಲೇಖಗಳಿವೆ. ಕೆಲವು ಪ್ರಾಚೀನ ಕಾವ್ಯಗಳಲ್ಲಿ ಈ ಊರಿನ ಪ್ರಸ್ತಾಪವಿದೆ. ಸೋಮನಾಥಕವಿಯ ಬಸವ ಪುರಾಣದಲ್ಲಿ **'ಹಿಂಗಳೇಶ್ವರ ಬಾಗವಾಟಿ'**, ಭೀಮಕವಿಯ ಬಸವ ಪುರಾಣದಲ್ಲಿ **'ಇಂಗಳೇಶ್ವರ ಬಾಗೇವಾಡಿ'**, ಚಾಮರಸನ ಪ್ರಭುಲಿಂಗಲೀಲೆಯಲ್ಲಿ **'ಲಿಂಗಳೇಶ್ವರ ಬಾಗೇವಾಡಿ'**, ಸಿಂಗಿರಾಜನ ಬಸವಚರಿತೆಯಲ್ಲಿ **'ಇಂಗಳೇಶ್ವರ ಬಾಗೇವಾಡಿ'**, ಎಂದು ಉಲ್ಲೇಖಿಸಲಾಗಿದೆ[೧]. ಹೂವಿನ ಹಿಪ್ಪರಗಿಯ ಕ್ರಿ.ಶ. ೮೬೨ರ ಶಾಸನವು **ಇಂಗಳೇಶ್ವರ. ಬಾಗೇವಾಡಿ** ಎಂದು ಈ ಎರಡೂ ಊರುಗಳು ಪ್ರತ್ಯೇಕವಾಗಿರುವಂತೆ ಉಲ್ಲೇಖಿಸುತ್ತದೆ[೨]. ಆದರೆ ಕವಿಗಳು ತಮ್ಮ ಕಾವ್ಯಗಳಲ್ಲಿ ಬಾಗೇವಾಡಿಯನ್ನು ಗುರುತಿಸಲು ಇಂಗಳೇಶ್ವರ ಹೆಸರನ್ನು ಬಳಸಿಕೊಂಡಂತೆ ಕಾಣುತ್ತದೆ. ಕ್ಯಾಂಪಬೆಲ್ ರಚಿಸಿದ ಬಾಂಬೆ ಪ್ರೆಸಿಡೆನ್ಸಿ ಗ್ಯಾಜೆಟೀಯರ್‌ನಲ್ಲಿರುವ ಐತಿಹ್ಯದಿಂದ ತಿಳಿದು ಬರುವ ಇನ್ನೊಂದು ಮಾಹಿತಿಯೆಂದರೆ, ಈ ಗ್ರಾಮದ ಸಂಸ್ಥಾಪಕನು ತಿಂಗಳಿಗೆ ಒಂದು ಸಲ ಗ್ರಾಮದ ಜನರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಿ ಶಿವನ ದರ್ಶನ ಮಾಡಿಸುತ್ತಿದ್ದನು. ಆದ್ದರಿಂದ ಈ ಊರಿಗೆ ತಿಂಗಳೇಶ್ವರ ಎಂದು ಕರೆಯಲಾಯಿತು. ನಂತರ ಕಾಲಘಟ್ಟದಲ್ಲಿ ಇಂಗಳೇಶ್ವರವಾಗಿ ಮಾರ್ಪಾಡಾಯಿತು ಎಂಬುದು ಪ್ರತೀತಿ.

ಬಸವನ ಬಾಗೇವಾಡಿ ಪರಿಸರದಲ್ಲಿ ಮುತ್ತಗೆ ಮೂವತ್ತು, ಹೆಬ್ಬಾಳ ಪನ್ನೆರಡು, ಸೋಗಿಲು ಪನ್ನೆರಡು, ಮುಂಬಾಡ, ಕೆಂಪನಕುಳಿ ಆರುಂಬಾಡ ಎಂಬ ಕೆಲವು ಆಡಳಿತ ವಿಭಾಗಗಳಿದ್ದು, ಅವುಗಳಲ್ಲಿ ಇಂಗಳೇಶ್ವರ ಯಾವ ವಿಭಾಗಕ್ಕೆ ಸೇರಿತ್ತೆಂಬುದು ಸ್ಪಷ್ಟವಾಗುವುದಿಲ್ಲ. ಈ ಊರನ್ನು ಶಾಸನಗಳು ಯಾವುದೇ ಅಂಕಿ ಸಂಖ್ಯೆಗಳಿಂದ ಗುರುತಿಸಿಲ್ಲ. ಬದಲಾಗಿ ಇಂಗಳೇಶ್ವರದ ಕ್ರಿ.ಶ. ೧೧೨೮ರ ಶಾಸನ **'ಶ್ರೀಮದುತ್ತಮದಗ್ರಹಾರ ವಿಂಗಳೇಶ್ವರ'**[೩], ಕ್ರಿ.ಶ. ೧೨೬೫ರ ಶಾಸನ "ತದ್ದವಾಡಿ ಸಾಸಿರದಾದಿ [ಬ]ಣಂಜು ಪಟ್ಟಣಂ ಸಿರಿಗೆ ನಿವಾಸ ದೇಸಿಯ ತಮರ್ಮ್ಮನೆ ದಕ್ಷಿಣ ವಾರಣಾಸಿ ಸೌಂದರ[ಸುರ] [ಸ್ಯೆ]ಳ ಸಾಸನ[ಗ್ರಿ]ಹಂ ನೆಗಳುತ್ತಮದಗ್ರಹಾರ ಶೇಖರ ಸಮೆಯಕ್ಕೆ ಸೋಭಿಪ ಸಿಖಾಮಣಿ ಡಿಸು **ವಿಂಗಳೇಸ್ವರಂ**"[೪] ಎಂದು ಈ ಊರನ್ನು ಉಲ್ಲೇಖಿಸುತ್ತವೆ. ಇದು ಪ್ರಮುಖ ಅಗ್ರಹಾರವಾಗಿ, ಬಣಂಜು ಪಟ್ಟಣವಾಗಿರುವ ವಿವರ ದಾಖಲಾಗಿದೆ.

ಕ್ರಿ.ಶ. ೧೧೨೮ರ ಚಾಳುಕ್ಯ ಮೂರನೆಯ ಸೋಮೇಶ್ವರನ ಕಾಲದ ಶಾಸನವು ಮಹಾಮಂಡಳೇಶ್ವರ ಕಳಚುರಿವಂಶದ ಪೆರ್ಮಾಡಿರಾಯನು ತರ್ದವಾಡಿ ಸಾಸಿರವನ್ನಾಳುತ್ತಿರುವಾಗ ಮನೆವೆರ್ಗ್ಗಡೆ, ದಂಡನಾಯಕ ಸಾಯಿಪಯ್ಯ ಎಂಬುವವನ ಶ್ರೀಕರಣನಾದ ನೀಲಕಂಠನಾಯಕನು ಅಗ್ರಹಾರದ ಇಂಗಳೇಶ್ವರದಲ್ಲಿ ಮಾಡಿಸಿದ ತ್ರಿಕೂಟ ನೀಲಕಂಠೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ[೫]. ಕ್ರಿ.ಶ. ೧೧೬೪ರ ಶಾಸನ ರಾಯಮುರಾರಿ ಸೋವಿದೇವನ ಕಾಲದಲ್ಲಿ ಇವನ ಸಾಮಂತನಾಗಿ ಸಹವಾಸಿ ವಂಶದ ಅಂಮಣ ದಂಡನಾಯಕನಿರುತ್ತಾನೆ. ಅವನ ಮಗ ಸೋವಿದೇವ ದಂಡಾದೀಪ, ಚಂದ್ರವಂಶದ ಇವನು ಇಂಗಳೇಶ್ವರಪುರವನ್ನು ಕರ್ನಾಟಕದ ಕಾಶಿಪುರವಾಗಿ ಪರಿವರ್ತಿಸಿದನಂತೆ[೬] ಈ ಶಾಸನಗಳು ಇಂಗಳೇಶ್ವರದಲ್ಲಿ ದಂಡನಾಯಕರ ಆಳ್ವಿಕೆಯನ್ನು ದೃಢಪಡಿಸುತ್ತವೆ. ಅಲ್ಲದೆ. ಕ್ರಿ.ಶ. ೧೧೬೪ರ ಶಾಸನ **ಇಂಗಳೇಶ್ವರಪುರ** ಎಂದು ಉಲ್ಲೇಖಿಸುತ್ತದೆ. ಪುರ ಅಂದರೆ ಕೋಟೆ, ದುರ್ಗ[೭] ಎಂಬ ಅರ್ಥವನ್ನು ಕೊಡುವುದರಿಂದ ಕ್ರಿ.ಶ. ೧೨ನೇ ಶತಮಾನಕ್ಕಿಂತಲೂ ಮೊದಲೆ ಈ ಊರಿನಲ್ಲಿ ಕೋಟೆ ಇತ್ತು ಎಂಬುದು ತಿಳಿದುಬರುತ್ತದೆ.

ಊರ ಸುತ್ತಲೂ ಕೋಟೆ ಇದ್ದು, ಉತ್ತರ ಮತ್ತು ಪಶ್ಚಿಮ ಭಾಗದ ಭಾಗಶಃ ಕೋಟೆ ಗೋಡೆ ಉಳಿದುಕೊಂಡಿದ್ದು ಇನ್ನುಳಿದ ಭಾಗ ನಾಶಹೊಂದಿದ್ದು ಅಲ್ಲಲ್ಲಿ ಕೋಟೆಯ ಅವಶೇಷಗಳು ಮಾತ್ರ ಕಂಡುಬರುತ್ತವೆ. ಈ

* ಮು/ಪೋ. ಚಿಕ್ಕಸಿಂದಗಿ, ಸಿಂದಗಿ ತಾಲ್ಲೂಕು, ವಿಜಾಪುರ ಜಿಲ್ಲೆ-೫೮೬೧೨೮.



ಊರಿನ ಪಂಚಾಯತಿ ಹಿಂದಿರುವ ಕೋಟೆಗೋಡೆ

ಕೋಟೆಯನ್ನು ಎರಡು ಹಂತಗಳಲ್ಲಿ ಕಟ್ಟಲಾಗಿದೆ. ಕೋಟೆಯ ತಳಭಾಗವನ್ನು ನೋಡಿದರೆ ಮೊದಲು ಮಣ್ಣಿನಿಂದ ಗೋಡೆಯನ್ನು ನಿರ್ಮಿಸಿದ್ದು ಅನಂತರ ಕಾಲಘಟ್ಟದಲ್ಲಿ ದಪ್ಪವಾದ ಗುಂಡುಕಲ್ಲು, ಕಲ್ಲುಚಿಪ್ಪು, ಮಣ್ಣನ್ನು ಬಳಸಿ ಪುನರ್‌ನಿರ್ಮಾಣ ಮಾಡಿದ್ದು ಕಂಡುಬರುತ್ತದೆ. ಕೋಟೆಯ ಗೋಡೆಯು ತಳದಲ್ಲಿ ೧.೮೦ ಮೀ. ನಷ್ಟು ದಪ್ಪವಾಗಿದ್ದು ಮೇಲೆ ಹೋದಂತೆ ಕಿರಿದಾಗಿದೆ. ಇದು ಸುಮಾರು ೨ ರಿಂದ ೩.೫೦ ಮೀ. ಎತ್ತರದವರೆಗೆ ಉಳಿದುಕೊಂಡಿದೆ. ಆರು ವೃತ್ತಾಕಾರದ ಕೊತ್ತಳಗಳು ಇದ್ದವು ಎಂದು ಹೇಳುತ್ತಾರೆ. ಆದರೆ ಇಂದು ಉತ್ತರ ದಿಕ್ಕಿಗೆ ಇರುವ ಕೋಟೆಗೋಡೆಗೆ ಹೊಂದಿಕೊಂಡು ಅರ್ಧವೃತ್ತಾಕಾರದ ಒಂದು ಕೊತ್ತಳವಿದ್ದು ೨ ಮೀ. ಎತ್ತರ ಮಾತ್ರ ಉಳಿದುಕೊಂಡಿದೆ. ಉತ್ತರಕ್ಕೆ ಅಭಿಮುಖವಾಗಿ ಕೋಟೆಯ ದ್ವಾರಬಾಗಿಲು ಇದ್ದು ಆಧುನಿಕವಾಗಿ ಪುನರ್‌ನಿರ್ಮಾಣಗೊಂಡಿದೆ. ಈ ಕೋಟೆಯ ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಕಂದಕವಿದ್ದು ಇಂದು ಅವು ಊರಿನ ಕೊಳಚೆ ನೀರು ಹರಿದು ಹೋಗುವ ಕಾಲುವೆಯಾಗಿ ಮಾರ್ಪಟ್ಟಿವೆ.

ಕಲ್ಯಾಣ ಚಾಳುಕ್ಯರ ಅವಧಿಯ ವೇಳೆಗಾಗಲೆ ಕೋಟೆಯ ನಿರ್ಮಾಣದ ರಚನೆಯಲ್ಲಿ ಹಾಗೂ ಯುದ್ಧ ತಂತ್ರಗಾರಿಕೆಯಲ್ಲಿ ಆದ ಬದಲಾವಣೆಗಳಿಂದ ಮಣ್ಣಿನ ಕೋಟೆಗಳ ಬದಲಾಗಿ ದಪ್ಪದಾದ ಕಲ್ಲು, ಕಲ್ಲು ಚಿಪ್ಪು, ಮಣ್ಣನ್ನು ಬಳಸಿಕೊಂಡು ಎತ್ತರವಾದ ಕೋಟೆಗಳನ್ನು ನಿರ್ಮಿಸಲಾಗಿದೆ. ಈ ಕೋಟೆಯ ಒಳಗೆ ಕಲ್ಯಾಣ ಚಾಳುಕ್ಯರ ಕಾಲದ ಸೋಭಾಸದೇವರ ಗುಡಿ, ಸೋಮನಾಥ ದೇವಾಲಯ, ನಾರಾಯಣ ದೇವಾಲಯಗಳು, ಬಸವಣ್ಣನು ಜನಿಸಿದ ಮನೆ (ಇಂದು ಪುನರ್‌ನಿರ್ಮಾಣಗೊಂಡಿದೆ), ಅಲ್ಲದೆ ಕಲ್ಯಾಣ ಚಾಳುಕ್ಯ, ಕಳಚೂರಿ, ಯಾದವರಿಗೆ ಸಂಬಂಧಿಸಿದ ಶಾಸನ, ನಿಷಿಧಿಗಲ್ಲು, ವೀರಗಲ್ಲು, ಅನೇಕ ಶಿಲ್ಪಗಳು ಕಂಡುಬರುತ್ತವೆ. ಜೊತೆಗೆ ಇದೊಂದು ಪ್ರಮುಖ ಬಣಂಜು ಪಟ್ಟಣವಾಗಿದೆ. ಒಟ್ಟಾರೆಯಾಗಿ ಕೋಟೆಯ ವಾಸ್ತುಶೈಲಿ ಮತ್ತು ಪುರಾತತ್ವೀಯ ಅವಶೇಷಗಳ ಹಿನ್ನೆಲೆಯಲ್ಲಿ ಕೋಟೆಯು ಕಲ್ಯಾಣ ಚಾಳುಕ್ಯರ ಅವಧಿಯಲ್ಲಿ ನಿರ್ಮಾಣವಾದದ್ದು ಎಂದು ಸ್ಪಷ್ಟಪಡಿಸಬಹುದು. ಪ್ರಸ್ತುತ ಕೋಟೆಗೋಡೆಯನ್ನು ಕೆಡವಿ ಅದರ ಕಲ್ಲು ಮತ್ತು ಮಣ್ಣನ್ನು ಉಪಯೋಗಿಸಿ ಕೋಟೆ ಇದ್ದ ಸ್ಥಳದಲ್ಲಿಯೆ ಮನೆಗಳನ್ನು ನಿರ್ಮಿಸುತ್ತಿದ್ದಾರೆ. ಕೆಲವೇ ದಿನಗಳಲ್ಲಿ ಅಳಿದುಳಿದ ಕೋಟೆಯು ಸಹ ಸಂಪೂರ್ಣವಾಗಿ ನಾಶ ಹೊಂದುವ ಸ್ಥಿತಿಯಲ್ಲಿದೆ.



ಉತ್ತರ ಭಾಗದಲ್ಲಿ ಕಂಡುಬರುವ ಕೋಟೆಗೋಡೆ

ಆಧಾರಸೂಚಿ

೧. ವಾಸುದೇವ ಬಡಿಗೇರ. (ಸಂ.), ೨೦೧೦, ಬಸವನ ಬಾಗೇವಾಡಿ, ಪುಟ ೩೨.

೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧೦, ಸಂಖ್ಯೆ ೬೩, ಪುಟ ೪೯೨.

೩. ಅದೇ, ಸಂಖ್ಯೆ ೦೧, ಪುಟ ೩೮೭.

೪. ಅದೇ, ಸಂಖ್ಯೆ ೧೨, ಪುಟ ೪೦೨.

೫. ಅದೇ, ಸಂಖ್ಯೆ ೦೧, ಪುಟ ೩೮೫.

೬. ಅದೇ, ಸಂಖ್ಯೆ ೦೩, ಪುಟ ೩೯೮.

೭. ಕನ್ನಡ ನಿಘಂಟು ಸಂಪುಟ ೬, ೧೯೯೦, ಕನ್ನಡ ಸಾಹಿತ್ಯ ಪರಿಷತ್ತು, ಪುಟ ೫೪೬೦.

ಗ್ರಂಥಋಣ

೧. ಚನಬಸಪ್ಪ ಎಸ್. ಪಾಟೀಲ, ೧೯೯೯, ಕರ್ನಾಟಕ ಕೋಟೆಗಳು ಸಂಪುಟ. ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಸುಂಕಂ ಗೋವರ್ಧನ, ೨೦೧೨, ಕನ್ನಡ ನಾಡಿನ ಪ್ರಮುಖ ಕೋಟೆಗಳು, ಬೆಂಗಳೂರು.

೩. ವಾಸುದೇವ ಬಡಿಗೇರ, ೨೦೧೦, ಕರ್ನಾಟಕ ದೇವಾಲಯ ಕೋಶ : ವಿಜಾಪುರ ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. Joshi S. K., 1985, Defence Architecture in Early Karnataka, Sandeep Prakashan, Delhi.

೮೨

ಬಾಗಲಕೋಟೆಯ ಮುಳುಗಡೆಯ ಕಟ್ಟಡಗಳು

ಡಾ. ಡಿ.ಜಿ. ಕುಲಕರ್ಣಿ*

ಕೃಷ್ಣಾ ಮೇಲ್ದಂಡೆ ಯೋಜನೆಯ ಜಲಾನಯನ ಪ್ರದೇಶದಲ್ಲಿ ನೂರಾರು ಗ್ರಾಮಗಳು ಮುಳುಗಡೆಯಾದವು. ಆಲಮಟ್ಟಿ ಆಣೆಕಟ್ಟೆಯ ಹಿನ್ನೀರಿನಲ್ಲಿ ೨೦೧ ಗ್ರಾಮಗಳ ಜೊತೆಗೆ ಜಿಲ್ಲಾ ಕೇಂದ್ರವಾದ ಬಾಗಲಕೋಟೆ ನಗರವೂ ಸಹ ಬಾಧೆಗೊಳಗಾಯಿತು. ನೂರಾರು ಮನೆಗಳು, ದೇವಾಲಯಗಳು, ಕಟ್ಟಡಗಳು, ಶಾಲೆಗಳು, ಮಠಗಳು ಮುಳುಗಡೆಯಾಗಿ ಸ್ಥಳಾಂತರಗೊಂಡವು. ಈ ಹಿನ್ನಲೆಯಲ್ಲಿ ಬಾಗಲಕೋಟೆ ನಗರದಲ್ಲಿ ಮುಳುಗಡೆಯಾದ ಸ್ವಾತಂತ್ರಪೂರ್ವ ಕಟ್ಟಡಗಳಲ್ಲಿ ಕೆಲವು ಪೂರ್ತಿ ಕೃಷ್ಣಾರ್ಪಣವಾದರೆ ಇನ್ನು ಕೆಲವು ಬಣ್ಣ ಕಳೆದುಕೊಂಡು ಹಂದಿ ನಾಯಿಗಳ ಬೀಡಾಗಿ ತಮ್ಮ ಗತವೈಭವವನ್ನು ಸಾರುತ್ತಾ ನಿಂತಿವೆ. ಅವುಗಳಲ್ಲಿ ಪ್ರಮುಖವಾಗಿ ಸ್ವಾತಂತ್ರ ಸೇನಾನಿ ಡಾ॥ ಹರ್ಡೀಕರರು ಸ್ಥಾಪಿಸಿರುವ ಸೇವಾದಳ ಕಟ್ಟಡ, ನಗರವನ, ಸರ್ವೋದಯ ವಾಚನಾಲಯ, ಶ್ರೀಮತಿ ತಿಜಾಬಾಯಿ ಬಚರಾಜ ಸುರಾನಾ ಸ್ಥಾಪಿಸಿದ ಹೆರಿಗೆ ಆಸ್ಪತ್ರೆ ಕಟ್ಟಡಗಳಾಗಿವೆ.

ಸೇವಾದಳ ಕಟ್ಟಡ: ಡಾ. ಹರ್ಡೀಕರರು ೧೯೨೩ರಲ್ಲಿ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾಗಿ ಜೈಲು ಸೇರಿದರು. ಅವರೊಂದಿಗೆ ೨೦೦ ಜನರೂ ಬಂಧಿತರಾದರು. ಜೈಲಿನಲ್ಲಿ ಹದಗೆಟ್ಟಿದ್ದ ವ್ಯವಸ್ಥೆಗೆ ಹೆದರಿ ಅಲ್ಲಿಯ ಕಷ್ಟವನ್ನು ಸಹಿಸಲಾಗದೆ ಹಲವು ಯುವಕರು ಸರಕಾರಕ್ಕೆ ಕ್ಷಮಾಪಣಾ ಪತ್ರವನ್ನು ಬರೆದು ಬಿಡುಗಡೆ ಹೊಂದಿದರು. ಇದನ್ನು ಕಂಡ ಹರ್ಡೀಕರರು ಯುವಕರಲ್ಲಿ ಉತ್ಸಾಹಕ್ಕೆ ಸರಿಸಮಾನವಾಗಿ ದೃಢ ನಿರ್ಧಾರ, ಕಷ್ಟ ಸಹಿಷ್ಣುತೆ, ಶಿಸ್ತು, ಸಂಯಮ, ಧ್ಯೇಯ ಸಾಧನೆಯ ಬಗ್ಗೆ ಸರಿಯಾದ ಕಲ್ಪನೆ ಹಾಗೂ ಜ್ಞಾನ ಇಲ್ಲವೆಂಬುದನ್ನು ಮನಗಂಡರು. ಇದನ್ನು ತುಂಬಲು ತಾವು ಬಿಗಡೆಯಾದ ನಂತರ ಸಮರ್ಥ ಸಂಘಟನೆಯೊಂದನ್ನು ಕಟ್ಟಬೇಕೆಂದು ನಾಯಕರೊಂದಿಗೆ ಚರ್ಚಿಸಿದರು. ಅದರಂತೆ ಕಾರ್ಯಪ್ರವೃತ್ತರಾಗಿ ಕಾಕಿನಾಡ ಅಧಿವೇಶನದ ಕಾಲಕ್ಕಾಗಲೇ ಅಖಿಲ ಭಾರತ ಸ್ವಯಂಸೇವಕ ಸಮ್ಮೇಳನ ವೊಂದನ್ನು ಸೇರಿಸುವಲ್ಲಿ ಯಶಸ್ವಿಯಾದರು. ೧೯೨೪ರಲ್ಲಿ ಕಾಂಗ್ರೆಸ್ಸ್ ಅಧಿವೇಶನ ಕರ್ನಾಟಕದ ಬೆಳಗಾವಿಯಲ್ಲಿ ಸೇರಲು ಏರ್ಪಾಡಾದಾಗ ಅದರ ಸಮಗ್ರ ಹೊಣೆಗಾರಿಕೆಯನ್ನು ಹಿಂದುಸ್ತಾನಿ ಸೇವಾದಳವೇ ವಹಿಸಿಕೊಂಡಿತು ಎಂಬುದು ಗಮನಾರ್ಹ. ಬಾಗಲಕೋಟ ಜಿಲ್ಲೆಯ ಶೀತಿಮನಿಯಲ್ಲಿ ಪ್ರಥಮ ಶಿಬಿರವನ್ನು ಏರ್ಪಡಿಸಿದರು. ತರಬೇತು ನೀಡಿ ಸಜ್ಜು ಮಾಡಿದರು. ಅಧಿವೇಶನದಲ್ಲಿ ಅತ್ಯಂತ ಸಮರ್ಪಕ ಕಾರ್ಯ ನಿರ್ವಹಿಸಿದ ಹಿಂದುಸ್ತಾನಿ ಸೇವಾದಳವನ್ನು ಕಾಂಗ್ರೆಸ್ ನಾಯಕರು ಮುಕ್ತ ಕಂಠದಿಂದ ಹೊಗಳಿದರು.

ಹಿಂದುಸ್ತಾನಿ ಸೇವಾದಳವು ಕರ್ನಾಟಕದಲ್ಲಿ ಮಾತ್ರವಲ್ಲ ಬಂಗಾಲ–ಮದ್ರಾಸ ಮೊದಲಾದ ೬–೭ ಪ್ರಾಂತಗಳಲ್ಲಿ ಸಂಘಟಿತವಾಗಿತ್ತು. 'ಈ ಸಂಘಟನೆಯನ್ನು ಬೇಗನೆ ಪ್ರತಿಬಂಧಿಸದಿದ್ದರೆ ನಮಗೆ ಉಳಿಗಾಲವಿಲ್ಲವೆಂದು ಸರಕಾರ ಭಾವಿಸತೊಡಗಿತ್ತು. ಇಷ್ಟು ಶಕ್ತಿಯುತವಾಗಿ ಬೆಳೆದ ಹಿಂದುಸ್ತಾನಿ ಸೇವಾದಳಕ್ಕೆ ಒಂದು ಶಾಶ್ವತ ನೆಲೆ ನಿರ್ಮಿಸಬೇಕೆಂದು ಹರ್ಡೀಕರರು ಬಾಗಲಕೋಟೆಯಲ್ಲಿ ಒಂದು ಕೇಂದ್ರ ಅಕಾಡೆಮಿಯನ್ನು ಸ್ಥಾಪಿಸಿದರು. ಬಿಂದೂರಾವ್ ನರಗುಂದ ಎರಡು ಎಕರೆ ಜಮೀನನ್ನು ನೀಡಿದರು. ಕಟ್ಟಡ ನಿರ್ಮಾಣಕ್ಕೆ ಯಲಿಮುರ್ಗಾರಾವ್, ಜಯರಾವ್, ರಾಮಣ್ಣ ನಾಯಕ, ಕಿರೇಸೂರ, ಜೋರಾಪೂರ, ಮುರಗಯ್ಯ ಜಂಗೀನ ಮುಂತಾದವರು ಆರ್ಥಿಕ ಸಹಾಯ ನೀಡಿದರು. ಈ ಭವನದ ಶಂಕುಸ್ಥಾಪನೆಯನ್ನು ಹೈದರಾಬಾದಿನ ವಾಮನರಾವ್ ನಾಯಕರು ೧೯೩೭ ನವ್ಹೆಂಬರ ೫ರಂದು ನೆರವೇರಿಸಿದರು. ೧೯೩೮ ಅಗಸ್ಟ ಒಂದರಂದು ಹೈದರಾಬಾದಿನ ರಾಜಾಧರ್ಮ ರಾಜ ಬಹದ್ದೂರ್ ಅವರು ಕಟ್ಟಡ ಉದ್ಘಾಟನೆ ಮಾಡಿದರು. ೧೯೩೧ರಲ್ಲಿ ಜವಾಹರಲಾಲ್ ನೆಹರು ಸೇವಾದಳ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿದ್ದರು. ದೇಶದ ಬೇರೆ ಬೇರೆ ಭಾಗಗಳಿಂದ ಬಂದ ಸ್ವಯಂಸೇವಕರಿಗೆ ಇಲ್ಲಿ ತರಬೇತು ಪಡೆದಿದ್ದರು ಎಂಬುದು ಗಮನಾರ್ಹ. ಮುಂದೆ ಸರಕಾರ ಸೇವಾದಳ ಸಂಘಟನೆಯ ಮೇಲೆ ನಿರ್ಬಂಧ ಹೇರಿದ್ದರಿಂದ ಈ ಕಟ್ಟಡಕ್ಕೂ ಬೀಗ ಮುದ್ರೆಯನ್ನು ಹಾಕಿತು. ೧೯೪೦ರಲ್ಲಿ ಹಿಂದೂಸ್ತಾನಿ ಸೇವಾದಳವನ್ನು ಅಧಿಕೃತವಾಗಿ ವಿಸರ್ಜಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಮತ್ತೆ ೧೯೪೬ರಲ್ಲಿ

* ಸಂಯೋಜಕರು, ಸ್ನಾತಕೋತ್ತರ ಇತಿಹಾಸ ವಿಭಾಗ, ಶ್ರೀ ಎಸ್ ಆರ್ ಎನ್ ಕಲಾ & ಎಂ ಬಿ ಎಸ್ ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ

ರಾಜಕೀಯ ಸಾಧನೆಗಳ ಹಾಗೆ ಬಂದು ಸೇವಾದಳದ ಮೇಲಿನ ನಿರ್ಬಂಧವನ್ನು ತೆಗೆದುಹಾಕಲಾಯಿತು. ಆದರೆ ಸೇವಾದಳ ಮೊದಲಿನಂತೆ ಕಾರ್ಯ ನಿರ್ವಹಿಸಲು ಆಗಲಿಲ್ಲ. ಇಂತಹ ಐತಿಹಾಸಿಕ ಕಟ್ಟಡ ಈ ಮೊದಲು ಬಾಲಕೋಟೆಯ ಕಾಲದಲ್ಲಿದ್ದ ಮೇಲಿತ್ತು. ಹಿನ್ನೀರಿನಲ್ಲಿ ಮುಳುಗಿ ಈಗ ನವನಗರದ ೬೩/a ವೃಂದಾವನ ಸೆಕ್ಟರ್‌ನಲ್ಲಿ ಮೂಲ ಕಟ್ಟಡವನ್ನೇ ಹೋಲುವಂತೆ ಅದೇ ಮಾದರಿಯಲ್ಲಿ ರೂಪುಗೊಂಡಿದೆ. ಕಟ್ಟಡ ನಿರ್ಮಾಣದಲ್ಲಿ ೭೦% ಮೂಲ ಕಟ್ಟಡದ ವಸ್ತುಗಳನ್ನೇ ಬಳಸಿಕೊಳ್ಳಲಾಗಿದೆ.

ಸರ್ವೋದಯ ವಾಚನಾಲಯ: ಸರ್ವೋದಯ ವಾಚನಾಲಯ ಎಂದು ಕರೆಯಲ್ಪಡುತ್ತಿರುವ ಈ ಕಟ್ಟಡದ ಮೂಲ ಹೆಸರು N.G ಲೈಬ್ರರಿ ಎಂದಿತ್ತು. ಅಂದಿನ ವೈಸರಾಯ್ ಆಗಿದ್ದ ಲಾರ್ಡ್ ಹಾರ್ಡಿಂಜನು ೨-೧೧-೧೯೨೩ರಂದು ವಿಜಾಪೂರಕ್ಕೆ ಬಂದ ಸಂದರ್ಭದಲ್ಲಿ ಬಾಗಲಕೋಟೆಗೆ ಭೇಟಿಕೊಟ್ಟು ಆ ನೆನಪಿಗಾಗಿ ಈ ಕಟ್ಟಡಕ್ಕೆ 'The Hardinge Institute Bagalkot' ಎಂದು ಮರುನಾಮಕರಣ ಮಾಡ ಲಾಯಿತು. ಈ ಕಟ್ಟಡಕ್ಕೆ ಸಂಬಂಧಿಸಿದ ಮೂಲದಾಖಲೆಯನ್ನು ಪರಿಶೀಲಿಸಿದಾಗ ಈ ಸಂಸ್ಥೆಯು ಯಾವುದೇ ಜಾತಿ, ಮತ, ಪಕ್ಷಕ್ಕೆ ಸೇರಿರದೆ ಗ್ರಂಥಾಲಯ, ವಾಚನಾಲಯ, ವಿಶೇಷ ಉಪನ್ಯಾಸಗಳಿಗಾಗಿ ಹಾಗೂ ಮನೋರಂಜನೆಗಾಗಿ ಒಳಾಂಗಣ ಆಟ ಮತ್ತು ಕ್ರೀಡೆಗಳಿಗಾಗಿ ಬಳಸಲಾಗುತ್ತಿತ್ತು. ಈ ಸಂಸ್ಥೆಗೆ ವ್ಯವಸ್ಥಿತವಾದ ಆಡಳಿತ ಮಂಡಳಿ ಇತ್ತೆಂದು ಅದರ ಮೂಲ ದಾಖಲೆಯಿಂದ ತಿಳಿದುಬರುತ್ತದೆ. (ಸಹಾಯಕ ಆಯುಕ್ತಕರು ಹಿಂ.ಧಾ.ಸಂ. ಮತ್ತು ಧಾ.ದ. ಇಲಾಖೆ ಬೆಳಗಾವಿ) ಗಾಂಧೀಜಿಯವರ ಪ್ರಭಾವದಿಂದ ಈ ಕಟ್ಟಡಕ್ಕೆ 'ಸರ್ವೋದಯ ವಾಚನಾಲಯ' ಎಂದು ಮರುನಾಮಕರಣ ಮಾಡಲಾಯಿತು. ಈಗ ಈ ಕಟ್ಟಡವು ಹಿನ್ನೀರಿನ ಬಾಧೆಗೆ ಒಳಗಾಗಿದ್ದರೂ ಕಟ್ಟಡ ಸ್ಥಳಾಂತರವಾಗಿಲ್ಲ. ಪ್ರಸ್ತುತ ಕಾರ್ಯದರ್ಶಿಗಳಾಗಿರುವ ನಗರದ ಶ್ರೀ ಶ್ರೀನಿವಾಸ ಛಬ್ಬಿ ಅವರು ಈ ಸ್ಥಳಾಂತರ ಮತ್ತು ಮರು ಕಟ್ಟಡಕ್ಕಾಗಿ ವಿಶೇಷ ಪ್ರಯತ್ನ ನಡೆಸಿದ್ದಾರೆ.

ನಗರವನ: ಸ್ವತಂತ್ರಪೂರ್ವದಲ್ಲಿ ಬಾಗಲಕೋಟೆಯಲ್ಲಿ ಸಾರ್ವಜನಿಕ ಏಕೈಕ ಮನೋರಂಜನಾ ಸ್ಥಳವೆಂದರೆ ೧೯೨೫ ರಲ್ಲಿ ನಿರ್ಮಾಣವಾದ 'ನಗರವನ' ಎಂಬ ನಗರಸಭೆಯ ಉದ್ಯಾನವನವಾಗಿತ್ತು. ಸುಮಾರು ೩ ಎಕರೆ ವಿಶಾಲ ಸ್ಥಳದಲ್ಲಿ ಈ ಉದ್ಯಾನವನವನ್ನು ನಿರ್ಮಿಸಲಾಗಿತ್ತು. ಬಾಗಲಕೋಟೆ ನಗರದ ಕುಡಿಯುವ ನೀರಿನ ಸರಬರಾಜಿಗಾಗಿ ಬಾವಿಯನ್ನು ತೋಡಿ ೭೦೦ ಗ್ಯಾಲನ್ ಜಲ ಸಂಗ್ರಹಣ ವ್ಯವಸ್ಥೆಯನ್ನು ಮಾಡಲಾಗಿತ್ತು. ಈಗ ಈ ಬಾವಿ ಹಾಳುಬಿದ್ದಿದೆ. ಉದ್ಯಾನವನದ ತುಂಬ ಅಲ್ಲಲ್ಲಿ ವಿಶೇಷ ಸಂದರ್ಭಗಳಲ್ಲಿ ಗಿಡಗಳನ್ನು ನೆಟ್ಟಿದ್ದು ಅವುಗಳ ಕಟ್ಟೆಯ ಮೇಲೆ ಮರದ ಜಾತಿ ಹಾಗೂ ಮರ ನೆಟ್ಟ ದಿನಾಂಕವನ್ನು ದಾಖಲಿಸಿರುವುದು ಗಮನಾರ್ಹ. ಈಗ ಮರಗಳು ಹೆಮ್ಮರಗಳಾಗಿ ನಿಂತಿವೆ. ಇಲ್ಲಿನ ಇನ್ನೊಂದು ವಿಶೇಷ ಕಟ್ಟಡವೆಂದರೆ 'ರೇಡಿಯೋ ಹೌಸ್' ರೇಡಿಯೋಗಳು ಅಪರೂಪವಾಗಿದ್ದ ಕಾಲದಲ್ಲಿ ಸಾರ್ವಜನಿಕರು ರೇಡಿಯೋ ಕೇಳಲೆಂದೇ ಈ ಕಟ್ಟಡವನ್ನು ನಿರ್ಮಿಸಲಾಗಿತ್ತು ರೇಡಿಯೋ ಧ್ವನಿ ಎಲ್ಲ ದಿಕ್ಕುಗಳಿಗೂ ಪಸರಿಸಲೆಂದು ೫×೫ ವಿಸ್ತೀರ್ಣದ ಕಿರು ಕಟ್ಟಡಕ್ಕೆ ಆರು ಕಿಟಕಿಗಳು ಮತ್ತು ಎರಡು ಬಾಗಿಲುಗಳನ್ನು ಇಟ್ಟಿರುವುದು ವಿಶೇಷ. ಈ ಕಟ್ಟಡದ ಎದಿರುಗೆ ೪ ಅಡಿ ಎತ್ತರದ ವೇದಿಕೆ ಇದ್ದು ಉದಯೋನ್ಮುಖ ಕಲಾಕಾರರು ತಮ್ಮ ಕಲೆಯನ್ನು ಅಭಿವ್ಯಕ್ತಿ ಪಡಿಸಲು ಬಳಕೆಯಾಗುತ್ತಿತ್ತು. ಈ ರೇಡಿಯೋ ಹೌಸ್ ೧೯೪೦ ಜೂನ್ ೧೧ರಂದು ಶ್ರೀ ಗುರುರಾವ್ ಬೇವೂರ್ ICS ಇವರು ಉದ್ಘಾಟಿಸಿದರು. ಇಲ್ಲಿನ ಫಲಕದಿಂದ ತಿಳಿದು ಬರುತ್ತದೆ. ಒಂದು ಕಾಲಕ್ಕೆ ಮನೋರಂಜನಾ ಸ್ಥಳವೆಂದು ಗುರುತಿಸಿಕೊಂಡಿದ್ದ ಈ ಉದ್ಯಾನವನವು ಇಂದು ಹಿನ್ನೀರಿನ ಬಾಧೆಗೆ ಒಳಗಾಗಿ ಹಂದಿ-ನಾಯಿಗಳ ಬೀಡಾಗಿ ರೋಗರುಜಿನಗಳ ಹುಟ್ಟಿಗೆ ಕಾರಣವಾದಂತಾಗಿದೆ.

ತಿಜಾಬಾಯಿ ಬಚರಾಜ್ ಸುರಾನಾ ಹೆರಿಗೆ ಆಸ್ಪತ್ರೆ : ಬಾಗಲಕೋಟೆಯ ಸಮಾಜ ಸೇವಕಿಯೆಂದು ಗುರುತಿಸಿ ಕೊಂಡ ತಿಜಾಬಾಯಿ ಅವರು ವ್ಯಾಪಾರಿ ಕುಟುಂಬಕ್ಕೆ ಸೇರಿ ದವರು. ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡವರು. ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಬಾಗಲಕೋಟೆಯ ಸುತ್ತಮುತ್ತಲೂ ಎಲ್ಲಿಯೂ ಸುರಕ್ಷಿತವಾದ ಹೆರಿಗೆ ಆಸ್ಪತ್ರೆಗಳು ಇರಲಿಲ್ಲ. ಇದನ್ನು ಮನಗಂಡ ತಿಜಾಬಾಯಿ ಸುರಕ್ಷಿತ ಹೆರಿಗೆಗಾಗಿ ತಮ್ಮ ಸ್ವಂತ ಸ್ಥಳ ಹಾಗೂ ಹಣದಿಂದ ಆಸ್ಪತ್ರೆಯನ್ನು ನಿರ್ಮಿಸಿದರು. ಈ ಕಟ್ಟಡವನ್ನು ಅಂದಿನ ಬಾಂಬೆ ಸರಕಾರದ ಗವರ್ನರ್ ಶ್ರೀ ಡೆವಿಡ್ ಜಾನ್ ಕೊಲವಿಲ್ಲೆ ಉದ್ಘಾಟಿಸಿವರು. ಇದು ೧೫ ಹಾಸಿಗೆಯ ವ್ಯವಸ್ಥಿತ ಆಸ್ಪತ್ರೆಯಾಗಿತ್ತು. ಈ ವಿಷಯವನ್ನು ಹೇಳುವ ಫಲಕ ಆಂಗ್ಲ ಭಾಷೆಯಲ್ಲಿ ಇನ್ನೂ ಹಳೆ ಕಟ್ಟಡದ ಮೇಲೆಯೂ ಇದೆ. ಮುಂದೆ ಇದು ಬಾಗಲಕೋಟೆ ನಗರ ಸಭೆಗೆ ಹಸ್ತಾಂತರ ಗೊಂಡಿತು. ಇಂದು ಈ ಕಟ್ಟಡ ಹಿನ್ನೀರಿನ ಬಾಧೆಗೆ ಒಳಗಾಗಿ ಬಾಗಲಕೋಟೆ ಎಕ್ಸಟೆನ್‌ಶನ್ ಏರಿಯಾದಲ್ಲಿ ಮರುನಿರ್ಮಾಣ ಗೊಂಡಿದೆ. ಕರ್ನಾಟಕ ಸರಕಾರದ ಆರೋಗ್ಯ ಇಲಾಖೆಯ ಅಡಿಯಲ್ಲಿ ೫೦ ಹಾಸಿಗೆಯ ವ್ಯವಸ್ಥಿತ ಹೆರಿಗೆ ಆಸ್ಪತ್ರೆಯಾಗಿ ಕಾರ್ಯ ನಿರ್ವಹಿಸುತ್ತದೆ. ಈ ಹೊಸ ಕಟ್ಟಡದ ಪ್ರವೇಶ ಭಾಗದಲ್ಲಿ ತಿಜಾಬಾಯಿಯ ಭವ್ಯ ಭಾವಚಿತ್ರವನ್ನು ಇಡಲಾಗಿದೆ.

[ಈ ಲೇಖನವನ್ನು ಸಿದ್ಧಪಡಿಸಲು ಶ್ರೀ ಶ್ರೀನಿವಾಸ ಛಪ್ಪಿ, ಪ್ರೊ. ಪ್ರಸನ್ನ ಜೋಶಿ, ಶ್ರೀಮತಿ ಸುರೇಖಾ ಕುಲಕರ್ಣಿ ಹಾಗೂ ಬಚರಾಜ್ ಸುರಾನಾ ಕುಟುಂಬ ವರ್ಗದವರು ಸಹಾಯ ಸಹಕಾರ ನೀಡಿದ್ದಾರೆ. ಅವರಿಗೆ ಧನ್ಯವಾದಗಳು.]



ಸೇವಾದಳದ ಮೂಲ ಕಟ್ಟಡ



ಬಾಗಲಕೋಟೆ ನವನಗರದಲ್ಲಿ ನಿರ್ಮಾಣಗೊಂಡ ನೂತನ ಸೇವಾದಳದ ಕಟ್ಟಡ



ನಗರವನದಲ್ಲಿರುವ ರೇಡಿಯೋ ಹೌಸ್



ಸೇವಾದಳದ ತರಬೇತಿಯಲ್ಲಿರುವ ಸ್ವಯಂ ಸೇವಕರು



ನಗರವನದಲ್ಲಿರುವ ನೀರಿನ ಸಂಗ್ರಹಣೆ



ತಿಜಾಬಾಯಿ ಹೆರಿಗೆ ಆಸ್ಪತ್ರೆ ಮೂಲ ಕಟ್ಟಡ



ಸರ್ವೋದಯ ವಾಚನಾಲಯದ ಕಟ್ಟಡ

ಆಧಾರಸೂಚಿ

೧. 'ಸ್ವಾತಂತ್ರ್ಯ ಸೇನಾನಿ ಡಾ. ಹರ್ಡೀಕರ' ಲೇ. ಸುರೇಂದ್ರ ದಾನಿ. ಡಾ. ನಾ.ಸು. ಹರ್ಡೀಕರ ಜನ್ಮಶತಾಬ್ಧಿ ಪ್ರಕಟಣೆ, ಭಾರತ ಸೇವಾದಲ, ವಿಜಾಪುರ ಜಿಲ್ಲಾ ಸಮಿತಿ, ಬಾಗಲಕೋಟೆ.

೨. 'ಮುಳುಗಡೆ ಗ್ರಾಮಗಳಲ್ಲಿನ ಶಾಸನಗಳ ಅಧ್ಯಯನ' ಸಂ. ಡಾ. ದೇವರಕೊಂಡಾರೆಡ್ಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಕರ್ನಾಟಕ ರಾಜ್ಯ ಗೆಜೆಟಿಯರ್, ವಿಜಾಪುರ ಜಿಲ್ಲೆ.

೪. ಬಾಗಲಕೋಟೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (ಸಂ). ಡಾ. ಆರ್. ಗೋಪಾಲ್ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೧೧.

೫. ನಗರಸಭೆ ಕಡತಗಳು.

೬ ಸಹಾಯಕ ಆಯುಕ್ತರು, ಹಿಂ.ಧಾ.ಸಂ. ಮತ್ತು ದ.ಧ. ಇಲಾಖೆ, ಬೆಳಗಾವಿ, ಮೂಲ ದಾಖಲೆಗಳು.

ದಾವಣಗೆರೆಯ ಜಿಲ್ಲೆಯ ಬಾವಿಗಳು ಒಂದು ಅಧ್ಯಯನ: (ಕ್ರಿ.ಶ. ೧೩೩೬-೧೮೦೦)

ಡಾ. ಎನ್.ಜಿ. ಸಂತೋಷ್* ರಮೇಶ್ ಎಚ್.**

ದಾವಣಗೆರೆ ಜಿಲ್ಲೆಯ ಪ್ರದೇಶದ ಬೇಸಾಯವು ಮಳೆಯ ಮೇಲೆ ಅವಲಂಬಿತವಾಗಿತ್ತು. ನದಿಗಳು, ಹಳ್ಳಿಗಳು, ಕೇವಲ ಮಳೆಗಾಲದಲ್ಲಿ ಹರಿಯುತ್ತಿದ್ದವು. ಇದರಿಂದಾಗಿ ನೀರಾವರಿ ಕಾರ್ಯಗಳಿಗೆ ಅಂದಿನವರು ವಿವಿಧ ಕ್ರಮಗಳನ್ನು ಕೈಗೊಂಡಿದ್ದರು. ನದಿ, ಕೆರೆ, ನೀರಾವರಿ ವಿಧಾನದಿಂದ ನೀರಾವರಿ ಕಾರ್ಯಗಳ ಅವಶ್ಯಕತೆ ನಿವಾರಿಸಲಾಗುತ್ತಿದ್ದಿಲ್ಲ. ಕೆರೆಗಳನ್ನು ಕಟ್ಟಲು ಸಾಧ್ಯವಿಲ್ಲದ ಸ್ಥಳಗಳಲ್ಲಿ ಅಂತರ್ಜಲ ಮೂಲಗಳನ್ನು ಅವಲಂಬಿಸಬೇಕಾಯಿತು. ಇದಕ್ಕಾಗಿ ಬಾವಿಗಳನ್ನು ಅಗೆದು ಬೇಸಾಯಕ್ಕೆ ಬಳಸಿಕೊಂಡರು. ಬಾವಿಗಳು ಸಹ ನೀರಾವರಿಗೆ ಅನುಕೂಲವಾಗಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ ರಾಜರು, ಶ್ರೀಮಂತರು ಮತ್ತು ಗ್ರಾಮಸ್ಥರು ಕೆಲವೊಮ್ಮೆ ಸಾಮಾನ್ಯರು ಬಾವಿಗಳನ್ನು ಕಟ್ಟಿಸುವುದು ಶ್ರೇಯಸ್ಕರವೆಂದು ನಂಬಿದ್ದರು. ಕಟ್ಟಿಸಿದ ಬಾವಿಗಳನ್ನು ಯಾರೇ ಆಗಲಿ ನಾಶಪಡಿಸುವುದು ಅತ್ಯಂತ ಪಾಪಕರವೆಂಬ ಭಾವನೆ ಇದ್ದಿತು. ಕ್ರಿ.ಶ. ೧೬೪೪ರಲ್ಲಿ ವಿಜಯನಗರದಲ್ಲಿ ವೆಂಕಟಪತಿ ರಾಯರ ಆಳ್ವಿಕೆಯ ಕಾಲದಲ್ಲಿ ಬಾಗಳಿ ಓಬಯ್ಯ ದೇವನಾಯಕನ ಕುಮಾರ ಮಹಾನಾಯಕಚಾರ್ಯ ಬಸವಯ್ಯನ ಕಾಲದಲ್ಲಿ ಯಾತಬಾವಿ ಮತ್ತು ಕಲ್ಲದೋಣೆ ಮಾಡಿಸಿದನು[೧]. ಹರಪನಹಳ್ಳಿ ಬಸವಪ್ಪನಾಯಕನ ತಳವಾರನೊಬ್ಬ ಹೊಲದಲ್ಲಿ ಬಾವಿ ತೆಗೆದುದಕ್ಕೆ ಭೂದಾನ ನೀಡಿದ್ದರು[೨]. ಬಾವಿಹಾಳ ಹನುಮವೆಂಕಟಪ್ಪನ ಮಗ ಬಯಿರಣ್ಣನು ಚಂಚೋಜ ಎಂಬುವನಿಂದ ಬಾವಿಯನ್ನು ತೆಗೆಸಿ, ಅವನಿಗೆ ಭೂಮಿಯನ್ನು ನೀಡಲಾಗಿತ್ತು[೩]. ಇದರಿಂದ ಚಂಚೋಜನು ಬಾವಿಗಳ ನಿರ್ಮಾಣಕಾರ್ಯದಲ್ಲಿ ಪರಿಣಿತಿ ಹೊಂದಿದ್ದನೆಂದು ತೋರುತ್ತದೆ. ಜಗಳೂರು ಉಜ್ಜಪ್ಪ ವಡೇರ ಹಳ್ಳಿಯ ಶಾಸನವು ಪುಜ್ಜಯಿನಿಯ ತೆಲಗು ಬಾಳ ಉಜ್ಜಪ್ಪ ದೇವರ ಮೊಮ್ಮಗ ಸಿದ್ದಪ್ಪ ತೆಗೆಸಿದ ಬಾವಿಯ ಪ್ರತೀಕವಾಗಿ ಗೌಡಮಾನ್ಯದೊಳಗೆ ಅರ್ಧಮಾನ್ಯವನ್ನು ಕೊಡಲಾಯಿತು[೪]. ಬಾವಿಗಳನ್ನು ತೋಡಿದವರಿಗೆ ಕಟ್ಟಿಸಿದವರಿಗೆ ಭೂಮಿಯನ್ನು ಇಲ್ಲವೆ ಹಣವನ್ನು ನೀಡುತ್ತಿದ್ದರೆಂದು ತಿಳಿಯುತ್ತದೆ.

ನೀರಾವರಿಗೆಂದೇ ನಿರ್ಮಿಸಿದ ಬಾವಿಗಳು ಊರಿನಿಂದ ಹೊರಗಡೆಯ ಪ್ರದೇಶಗಳಾದ ಹೊಲ, ತೋಟ, ಗದ್ದೆಗಳಲ್ಲಿರುತ್ತಿದ್ದವು, ಸಾಮಾನ್ಯವಾಗಿ ಈ ಬಾವಿಗಳನ್ನು ಖಾಸಗಿ ಜನರು ಕಟ್ಟಿಸುತ್ತಿದ್ದರು. ಮತ್ತು ಪಾಲಿಸುತ್ತಿದ್ದರು[೫]. ದಾವಣಗೆರೆ ತಾಲ್ಲೂಕು ಹಳೇ ಬಾತಿಯಲ್ಲಿ ಷಾವಳಿ ಚಿಸ್ತಿಯವರು, ವ್ಯವಸಾಯಕ್ಕಾಗಿ ಮತ್ತು ಕುಡಿಯುವ ನೀರಿಗಾಗಿ ಕ್ರಿ.ಶ. ೧೭೮೨ರಲ್ಲಿ ಬಾವಿಯನ್ನು ಕಟ್ಟಿಸಿದರು. ಇದು ಇಸ್ಲಾಮಿಕ್ ಶೈಲಿಯಲ್ಲಿದೆ. ಒಂದು ಕಡೆ ಏತದ ವ್ಯವಸ್ಥೆಯನ್ನು, ಇನ್ನೊಂದು ಕಡೆ ಮೆಟ್ಟಿಲುಗಳನ್ನು ಹೊಂದಿದೆ[೬]. ಇತ್ತೀಚಿನವರೆಗೂ ಏತದ ವ್ಯವಸ್ಥೆಯಿಂದ ನೀರಿನ ಸೌಕರ್ಯವನ್ನು ಬಳಸಿಕೊಳ್ಳಲಾಗಿದ್ದಿತು. ಯಾತ ಬಾವಿಯಿಂದ ಕೇಶವ ದೇವರ ೧೩೦ ಮರಕ್ಕೆ ದೇವರ ಬಾವಿಯಿಂದ ನೀರನೆತ್ತಿಯೂಡುವರು ಎಂದು ಉಲ್ಲೇಖವಿದೆ[೭]. ಈ ಮೇಲಿನ ಅಂಶಗಳಿಂದ ತೋಟ, ಗದ್ದೆಗಳಲ್ಲಿ ಬಾವಿಗಳಿದ್ದು, ಏತಗಳಿಂದ ನೀರು ಹಾಯಿಸಲಾಗುತ್ತಿದ್ದುದು ತಿಳಿಯುತ್ತದೆ.

ಏತ ನೀರಾವರಿಯಲ್ಲಿ ಬಾವಿಯ ನೀರಿನ ಮಟ್ಟದಿಂದ ಬೇಸಾಯವಾಗಬೇಕಾದ ಜಮೀನಿನ ಮಟ್ಟಕ್ಕೆ ಕಪಿಲೆ ಎಂಬ ಚರ್ಮದ ಚೀಲದ ಮೂಲಕ ನೀರನ್ನು ಎತ್ತಲಾಗುತ್ತಿತ್ತು. ಸ್ವತಃ ಕೈಯಾರ ನೀರತ್ತಿ ಅಥವಾ ಪ್ರಾಣಿಗಳ ಸಹಾಯದಿಂದ ಎಳೆಸಿ ನೀರನ್ನು ಜಮೀನಿಗೆ ಹರಿಸಿಕೊಳ್ಳಲಾಗುತ್ತಿತ್ತು[೮]. ಹರಪನಹಳ್ಳಿ ಸಂಸ್ಥಾನದ ತೋಟವೊಂದರಲ್ಲಿ ಇಬ್ಬರು ಹೊಲ ಉಳುತ್ತಿದ್ದರು. ಮಕ್ಕಳಿಬ್ಬರು ಇವರಿಗೆ ಬುತ್ತಿಯನ್ನು ತಂದು, ಬಾವಿಯ ಬಳಿ ನೆರಳಿನಲ್ಲಿಟ್ಟು ಆಟವಾಡುತ್ತಿದ್ದರು. ಹಸಿದ ಯಾರೋ ಇಬ್ಬರು ತೋಟದ ಮಧ್ಯೆ ಹಾದು ಹೋಗುವಾಗ ಬುತ್ತಿಯನ್ನು ನೋಡಿ, ಮಕ್ಕಳನ್ನು ಎದುರಿಸಿ ಬುತ್ತಿಯನ್ನು ಕಸಿದು ಊಟ ಮಾಡಿ ಕುಡಿಯಲು ನೀರಿಗಾಗಿ ಅವರಲ್ಲಿ ಒಬ್ಬನು ಕಪ್ಪಲಿಯಿಂದ ನೀರು ಮೇಲಕ್ಕೆ ಬರುವಂತೆ ತನ್ನ

* ಉಪನ್ಯಾಸಕರು, ಇತಿಹಾಸ ವಿಭಾಗ, ಶಾಂತಲಾ ಮಹಿಳಾ ಪ್ರಥಮ ದರ್ಜೆ ಕಾಲೇಜು, ಬೇಲೂರು, ಹಾಸನ ಜಿಲ್ಲೆ
** ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹೆಗಲು ಹಚ್ಚಿ ಕಪ್ಪಲಿ ಎಳೆದನು. ಆಗ ನೀರು ಮೇಲೆ ಬಂದುದನ್ನು ಕಂಡು, ಹೊಡೆಯಲು ಬಂದ ಆ ಮಕ್ಕಳ ಪೋಷಕರು ಕಂಡು ಬೆರಗಾದರು. ಏತದ ವರ್ಣನೆಯನ್ನು ಚಿದಾನಂದ ಮೂರ್ತಿಯವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಗ್ರಂಥದಲ್ಲಿ ಶಾಸನದಲ್ಲಿರುವಂತೆ ತಿಳಿಸಿರುತ್ತಾರೆ. ಮೇಲುಗಡೆ ಚಕ್ರವು ತಿರುಗುತ್ತಿರುತ್ತದೆ. ಯಂತ್ರಕ್ಕೆ ಎತ್ತುಗಳನ್ನು ಹೂಡಿರುತ್ತಾರೆ. ನೀರನ್ನು ಹೊತ್ತು ಮೇಲಕ್ಕೆ ಕುಂಬಗಳು ಬರುತ್ತಿದ್ದರೆ, ನೀರನ್ನು ಸುರಿದು ಬರಿದಾದ ಕುಂಬಗಳ ಒಂದು ಸಾಲು ಕೆಳಕ್ಕೆ ಇಳಿಯುತ್ತಿರುತ್ತದೆ. ಪ್ರಾಚೀನ ಕಾಲದಲ್ಲಿಯೇ ತಾಂತ್ರಿಕ ವಿಧಾನಗಳಿಂದ ಬಾವಿಯಿಂದ ನೀರನ್ನು ಮೇಲೆತ್ತಿ ಸಾಗುವಳಿಗೆ ಬೇಕಾದ ನೀರನ್ನು ಪಡೆದುಕೊಂಡು ನೀರಾವರಿ ಅನುಕೂಲವನ್ನು ವಿಜಯನಗರ ಮತ್ತು ವಿಜಯನಗರೋತ್ತರವೂ ಈ ವ್ಯವಸ್ಥೆಯೇ ಮುಂದುವರಿದಿರುವುದು ತಿಳಿಯುತ್ತದೆ.

ಕುಡಿಯುವ ನೀರಿಗಾಗಿ ಕಟ್ಟಿಸಿದ ಬಾವಿಗಳು, ಜನವಸತಿ ಪ್ರದೇಶದಲ್ಲಿ, ದೇವಾಲಯದ ಪಕ್ಕದಲ್ಲಿ ನಿರ್ಮಿಸುತ್ತಿದ್ದರು. ನೀರು ಶುದ್ಧವಿರಲು ಮತ್ತು ನೀರಿಗೆ ಸುತ್ತಲ ಮಣ್ಣು ಕುಸಿಯದಂತೆ ಸುತ್ತಲೂ ಕಲ್ಲುಗಳಿಂದ ಕಟ್ಟುತ್ತಿದ್ದರು. ಅಬ್ದುಲ್ ರಜಾಕ್ ಹೇಳುವಂತೆ ಇಂತಹ ಬಾವಿಗಳು ಪ್ರತಿಷ್ಠಿತರ ನಿವಾಸದ ಹತ್ತಿರ ಇರುತ್ತಿದ್ದವು. ಇಂತಹ ಬಾವಿಗಳು ಕುಡಿಯುವ ನೀರನ್ನು ತುಂಬುವುದಕ್ಕಾಗಿ ಇಳಿದು ಹತ್ತಲು ಮೆಟ್ಟಿಲು ವ್ಯವಸ್ಥೆ ಇರುತ್ತವೆ. ಹಳೇ ಬಾತಿಯಲ್ಲಿ ಷಾವಳಿ ಚಿಸ್ತಿಯವರು ಕುಡಿಯುವ ನೀರಿಗಾಗಿ ಹೊಂಡವನ್ನು ನಿರ್ಮಿಸಿದ್ದರು. ಈ ಹೊಂಡಕ್ಕೆ ಒಂದು ಕಡೆ ಪಾವಟಿಕೆಗಳಿಂದ ಕೂಡಿದ್ದು ನಾಲ್ಕು ಕಡೆಗಳಲ್ಲಿಯೂ ಮೆಟ್ಟಿಲುಗಳಿರುವುದು ಕಂಡು ಬರುತ್ತದೆ. ಹರಪ್ಪನಹಳ್ಳಿ ದಾದೆನಾಯಕನ ಪತ್ನಿ ಹೊನ್ನಮ್ಮಳು ಮರಣ ಹೊಂದಿದಾಗ, ಈಕೆಯ ಹೆಸರಿನಲ್ಲಿ ಉಚ್ಚಂಗಿದುರ್ಗದ ಬೆಟ್ಟದ ಮೇಲೆ ಹೊನ್ನೆಹುಡೇವು ಎಂಬ ಹೊಂಡವನ್ನು ನಿರ್ಮಿಸಿದನು. ಮಳೆ ಬಿದ್ದ ಸಮಯದಲ್ಲಿ ಇಲ್ಲಿ ನೀರು ಸಂಗ್ರಹವಾಗುತ್ತದೆ. ಇಂದಿಗೂ ಸುಸ್ಥಿತಿಯಲ್ಲಿದ್ದು ಬಳಕೆಯಲ್ಲಿದೆ.

ಹರಪನಹಳ್ಳಿಯ ಮೊದಲ ವೀರಬಸಪ್ಪನಾಯಕ ಮರಣ ಹೊಂದಿದಾಗ ಅವನ ಸಮಾಧಿಯ ಮೇಲೆ ಮಠವನ್ನು ಪಕ್ಕದಲ್ಲಿ ಪಾವಟಿಕೆಯ ಬಾವಿಯನ್ನು ನಿರ್ಮಿಸಿದರು. ಈ ಬಾವಿ ಈಗಿನ ಕುಂಬಾರ ಕೇರಿಯಲ್ಲಿದೆ. ಹರಪನಹಳ್ಳಿಯ ಎರಡನೇ ವೀರಬಸಪ್ಪನಾಯಕನ ಮಂತ್ರಿ ಹಂಪರಸಪ್ಪನು ಹರಪನಹಳ್ಳಿ ಪಟ್ಟಣದ ನಾಲ್ಕು ದಿಕ್ಕಿನಲ್ಲಿ ಪಟ್ಟಣದ ಜನತೆಗೆ ಮತ್ತು ಪ್ರಯಾಣಿಕರ ಕುಡಿಯುವ ನೀರಿನ ಅನುಕೂಲಕ್ಕಾಗಿ ನಾಲ್ಕು ಕಡೆಯ ಪಾವಟಿಕೆಗಳ ಬಾವಿಯನ್ನು ನಿರ್ಮಿಸಿದನು. ಈಗಲೂ ಈ ಬಾವಿಗಳಿಗೆ ಹಂಪರಸಪ್ಪನ ಬಾವಿಗಳೆಂದು ಕರೆಯುವರು.

ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳಲ್ಲಿ ಬಾವಿಯಲ್ಲಿ ನೀರು ಇಲ್ಲದೆ. ಹೆಣ್ಣುಮಕ್ಕಳು ನೀರು ತರುವ ಹಾರ್ದಿಕ ದೃಶ್ಯವನ್ನು ಹೀಗೆ ಬಣ್ಣಿಸಿದ್ದಾಳೆ: ವಗೆಯಾಗಿ ದ್ರವಗುಂದಿ ಇರುವ ಬಾವಿಯ ನೀರ ಮೊಗೆ ಮೊಗೆದು ಪಾತ್ರಿಯಲಿ ನಾರಿಯರು ಹಗಲೆಲ್ಲ ತರುತಿಹರು ಯೋಜನೆಯ ಮಾಡುತ್ತ ಬೇಗದಿಂದಲಿ ತರಿಸೋ ವೃಷ್ಟಿಯನು ಹರಿಯೆ / ಪುಂಗನೂರಿನ ರಾಜಕುಮಾರನಿಗೆ ಕಣ್ಣು ಕಾಣಿಸದಂತಾದಾಗ ಆತನು ದೈವಸಂತಳಾದ ಹೆಳವನಕಟ್ಟೆಯ ಗಿರಿಯಮ್ಮಳ ಬಳಿಗೆ ಬರಲು, ಆಕೆ ತನ್ನ ದೈವಶಕ್ತಿಯಿಂದ ಅವನ ಕಣ್ಣು ಬರಿಸಿದಳಂತೆ. ಈ ಉಪಕಾರಕ್ಕಾಗಿ ಪುಂಗನೂರಿನ ರಾಜಕುಮಾರ ಹೆಳವನಕಟ್ಟೆ ಗಿರಿಯಮ್ಮಳ ನೆಚ್ಚಿನ ದೈವ ರಂಗನಾಥ ದೇವಸ್ಥಾನದ ಮುಂದೆ ಒಂದು ಪುಷ್ಕರಣಿಯನ್ನು ಕಟ್ಟಿಸಿ ಹೂದೋಟ ಮಾಡಿಸಿದನೆಂದು ತಿಳಿಯುತ್ತದೆ. ಈಗಲೂ ಈ ಬಾವಿಯನ್ನು ದೇವಸ್ಥಾನದ ಮುಂಭಾಗದಲ್ಲಿ ನೋಡಬಹುದು.

ಧಾರ್ಮಿಕ ಕಾರ್ಯಗಳಿಗೆ ಕಟ್ಟಿದ ಬಾವಿಗಳು ಜನವಸತಿ ಪ್ರದೇಶದಲ್ಲಿರುತ್ತಿದ್ದವು. ಇವುಗಳ ರಚನೆ ಇತರ ಬಾವಿಗಳಿಗಿಂತ ಭಿನ್ನವಾಗಿವೆ. ಈ ಬಾವಿಗಳು ದೇವತಾ ಮೂರ್ತಿಗಳಿಂದ, ಮಂಟಪಗಳಿಂದ ನಾಲ್ಕು ಬದಿಗಳಲ್ಲಿ ಪಾವಟಿಕೆಗಳಿಂದ ಒಳಗೊಂಡಿರುತ್ತಿತ್ತು. ಸಂತೆಬೆನ್ನೂರ ಕೆಂಗಪ್ಪನಾಯಕರು ಕ್ರಿ.ಶ. ೧೫೫೮ರಲ್ಲಿ ರಾಮತೀರ್ಥ ಎಂಬ ಬಾವಿಯನ್ನು ಸಂತೆಬೆನ್ನೂರಿನಲ್ಲಿ ಕಟ್ಟಿಸಿದನು. ಈ ಕೊಳವು ನಾಲ್ಕು ದಿಕ್ಕಿಗೂ ಮೆಟ್ಟಿಲುಗಳು, ಎಂಟು ದಿಕ್ಕಿಗೂ ಮಂಟಪಗಳು, ಮಧ್ಯೆ ವಸಂತ ಮಂಟಪವನ್ನು ಕೆಂಪು ಗ್ರಾನೈಟ್ ಕಲ್ಲಿನಲ್ಲಿ ಕಟ್ಟಲಾಗಿದೆ.

ಕೆರೆ, ಬಾವಿಗಳೆಲ್ಲಾ ಬರಸಂಭವ ಪ್ರದೇಶದಲ್ಲಿವೆ. ಆದ್ದರಿಂದಲೇ ನಮ್ಮ ಪೂರ್ವಜರು ಅಂತರ್ಜಲದ ಮಹತ್ವವನ್ನು ಅರಿತು ಕೆರೆ, ಬಾವಿ, ಕಾಲುವೆಗಳನ್ನು ತೋಡಿಸಿ ನೀರಾವರಿ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದುದು ಸ್ಪಷ್ಟ.

ಅಡಿಟಿಪ್ಪಣಿ

೧. SII IX Pt.II, No. 595, ಹರಪನಹಳ್ಳಿ ತಾಲ್ಲೂಕು, ಮೈದೂರು, ೧೯೨.
೨. ಕುಂ.ಬಾ. ಸದಾಶಿವಪ್ಪ, ಹರಪನಹಳ್ಳಿ ನಾಯಕರ ಇತಿಹಾಸ ದರ್ಶನ, ಪೂರ್ವೋಕ್ತ, ಪುಟ ೧೨೪.
೩. ಜಗಳೂರು, ೨೨.
೪. ಜಗಳೂರು, ೨೦.
೫. ಸಿ.ಟಿ.ಎಂ. ಕೊಟ್ರಯ್ಯ, ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ, ಪೂರ್ವೋಕ್ತ, ಪುಟ ೧೦೪.
೬. ಟಿ. ಗಿರಿಜಾ, ದಾವಣಗೆರೆ ಇದು ನಮ್ಮ ಜಿಲ್ಲೆ, ನಿಹಾರಿಕಾ ಪ್ರಕಾಶನ, ದಾವಣಗೆರೆ, ೨೦೦೧, ಪುಟ ೩೨೮.
೭. SII IX Pt.II, No.595, ಮೈದೂರು, ೧೯೨.
೮. ಕ.ವಿ.ವಿ.ಶಾ.ಸಂ. ೧, ಹರಪನಹಳ್ಳಿ, ಬಾಗಳಿ, ೧೮೪.
೯. ಸಂ. ಕೆ.ಎಸ್. ಶಿವಣ್ಣ, ಕರ್ನಾಟಕ ಚರಿತ್ರೆ, ಸಂಪುಟ ೩, ಪ್ರಸಾರಾಂಗ, ಕ.ವಿ.ವಿ. ಹಂಪಿ, ೧೯೯೭, ಪುಟ ೧೬೨.
೧೦. ಭಾರತಿ ತಳವಂಡಿ, ಬಾಗಳಿ ಶಾಸನಗಳು ಮತ್ತು ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ ಪ್ರಬಂಧ, ಪುಟ ೪೯.
೧೧. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. ೪೫೦–೧೧೫೦) ಮೈಸೂರು, ೧೯೭೯, ಪುಟ ೩೬೨–೩೬೩.
೧೨. ಇಂಪೀರಿಯಲ್ ಗೆಜಟೀರಿಯರ್ ಆಫ್ ಇಂಡಿಯಾ, ಸಂಪುಟ ೩, ಪುಟ ೩೧೮.
೧೩. ಜಿ. ಸೂರ್ಯನಾರಾಯಣ ರಾವ್ (ಅನು) ಮರೆಯಲಾಗದ ಮಹಾ ಸಾಮ್ರಾಜ್ಯ, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೦, ಪುಟ ೩೩೨.
೧೪. ಟಿ. ಗಿರಿಜಾ, ಪೂರ್ವೋಕ್ತ, ಪುಟ ೩೮೮.
೧೫. ಕುಂಬಾಸ, ಹರಪನಹಳ್ಳಿ ಪಾಳೇಗಾರರ ಇತಿಹಾಸ ದರ್ಶನ, ಪೂರ್ವೋಕ್ತ, ಪುಟ ೩೦.
೧೬. ಅದೇ, ಪುಟ ೪೬.
೧೭. ಅದೇ, ಪುಟ ೮೦.
೧೮. ಸಂ. ಓ. ಇಂದೂಬಾಯಿ, ಪದ್ಯ ೨, ಪುಟ ೨೬–೨೭.
೧೯. ಎನ್. ಬಸವಾರಾಧ್ಯ, ಚಂದ್ರಹಾಸನ ಕಥೆ, ಪುಟ ೨೧.
೨೦. ಸಂ. ಎಂ.ಎಂ. ಕಲಬುರ್ಗಿ, ಕರ್ನಾಟಕದ ಕೈಫಿಯತ್ತುಗಳು, ಪೂರ್ವೋಕ್ತ, ಪುಟ ೨೫.

೬೪

ಮುಚಖಂಡಿಯ ಐತಿಹಾಸಿಕ ಸೇತುವೆ

ಡಾ. ಸುಮಂಗಲಾ ಮೇಟಿ*

ಉತ್ತರ ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ನೆಲೆಗಳಲ್ಲಿ ಬಾಗಲಕೋಟೆಗೆ ವಿಶೇಷ ಸ್ಥಾನವಿದೆ. ಬಾಗಲಕೋಟೆಯಿಂದ ಪಶ್ಚಿಮಕ್ಕೆ ೬ ಕಿ.ಮೀ. ದೂರದಲ್ಲಿರುವ ಮುಚಖಂಡಿ ಗ್ರಾಮ ವಿಶಿಷ್ಟ ಧಾರ್ಮಿಕ ನೆಲೆಯಾಗಿದೆ. ವೀರಭದ್ರ ಇಲ್ಲಿಯ ಕೇಂದ್ರ ದೈವ.

ಮುಚಖಂಡಿಯ ಐತಿಹಾಸಿಕ ಚಹರೆಗೆ ಪ್ರತೀಕವಾದದ್ದು ವಿಶಾಲವಾದ ಸೇತುವೆ. ದೇವಸ್ಥಾನದ ಪೂರ್ವ ಭಾಗದಲ್ಲಿರುವ ದೊಡ್ಡ ತೆಂಗಿನ ಕೊಬ್ಬರಿ ಇಟ್ಟಂತೆ ಇರುವ ಗುಡ್ಡ, ಈ ಗುಡ್ಡದ ಮೇಲಿರುವ ಮಾಲಗಂಬವನ್ನು ಹತ್ತಿದರೆ ಬಾಗಲ ಕೋಟೆ ಹಾಗೂ ಸುತ್ತಮುತ್ತಲಿನ ಊರುಗಳು ಕಾಣುವವು. ದೇವಸ್ಥಾನದ ಪಶ್ಚಿಮ ದಿಕ್ಕಿನಲ್ಲಿ ಕೊಬ್ಬರಿ ಗುಡ್ಡದಷ್ಟೇ ಎತ್ತರ ದಲ್ಲಿರುವ ಗುಡ್ಡ ಮಳಿಯಪಯ್ಯನ ಗುಡ್ಡ. ಈ ಗುಡ್ಡದ ತುದಿಯಲ್ಲಿ ಮಳಿಯಪಯ್ಯನ ಗುದ್ದುಗೆ ಇದೆ.

ಸು. ೧೫೦ ಎಕರೆಗಿಂತ ಹೆಚ್ಚು ವಿಸ್ತಾರವಾಗಿ ಸು. ೮ ಕಿ.ಮೀ. ಅಂತರದಲ್ಲಿ ಘಟಪ್ರಭಾ ನದಿಯನ್ನು ಸೇರುವ ಕೆರೆಯ ಉತ್ತರಾಭಿಮುಖವಾಗಿ ಪೂರ್ವದ ಕೊಬ್ಬರಿಗುಡ್ಡ ಹಾಗೂ ಪಶ್ಚಿಮದ ಮಳಿಯಪಯ್ಯನ ಗುಡ್ಡಗಳನ್ನು ಜೋಡಿಸಿದ ಭವ್ಯ ಸೇತುವೆಯು ಕ್ರಿ.ಶ. ೧೮೮೨ರಲ್ಲಿ ನಮಾರ್ಣವಾಗಿದೆ. ಈ ಸೇತುವೆಯ ವೈಶಿಷ್ಟ್ಯವೆಂದರೆ ಇದರ ತಳಪಾಯ ಅಗಲವಾಗಿದ್ದು, ಇದರ ಒಳಮೈ ಒಂದೇ ಸಮನಾದ ಗೋಡೆಯನ್ನು ಹೊಂದಿ ಎತ್ತರ ಹೋದಂತೆ ಅಳತೆ ಕಡಿಮೆಯಾಗಿ ನಿರ್ಮಾಣ ಗೊಂಡಿದೆ. ಈ ಸೇತುವೆಯು ೧೦° ಆಕಾರದ ತಿರುವಿನಲ್ಲಿದೆ. ಅಂದರೆ ಅಮವಾಸ್ಯೆಯಾದ ಮೂರು ದಿನಕ್ಕೆ ಕಾಣುವ ಚಂದ್ರನಂತಿದೆ. ಇದರ ರಚನೆಯ ಮಾದರಿಯು ವೈಜ್ಞಾನಿಕ ವಾಗಿದ್ದು, ನೀರಿನ ರಭಸವನ್ನು ತಡೆಹಿಡಿಯಲು ಸಹಾಯಕ ವಾಗುತ್ತದೆ. ಅಲ್ಲದೆ ಕೆರೆಯ ತೂಬನ್ನು ವೈಜ್ಞಾನಿಕವಾಗಿ ರಚಿಸಲಾಗಿದೆ. ಈ ಸೇತುವೆಯು ಸ್ಥಳೀಯ ಕೆಂಪುಕಲ್ಲಿನಿಂದ ನಿರ್ಮಾಣವಾಗಿದ್ದು, ಸಂಪೂರ್ಣ ಗೋಡೆಯು ಬೂಚ ಗಡಾಯಿ ಕಲ್ಲಿನಿಂದ ನಿರ್ಮಾಣವಾಗಿದ್ದು. ಇದರ ಮಧ್ಯದಲ್ಲಿ ೧೮೮೨ ಎಂಬ ಇಸ್ವಿಯು ಅತೀ ದೂರದಿಂದಲೂ ಕಾಣುವ ರೀತಿಯಲ್ಲಿದೆ. ಕಟ್ಟಡದ ನಿರ್ಮಾಣದಲ್ಲಿ ಬೂಚಗಡಾಯಿ ಕಲ್ಲನ್ನೆ ಗೋಡೆಯ ಎರಡು ಇಂಚು ಹೊರ ಹಾಯಿಸಿ, ಇಸ್ವಿಯು ಎದ್ದು ಕಾಣುವಂತೆ ಅಳವಡಿಸಿದ್ದಾರೆ.

ಈ ಸೇತುವೆಯನ್ನು ಕಟ್ಟವದರ ಮೂಲಕ ನೀರು ನಿಲ್ಲಿಸಿ, ಅದನ್ನು ಕಾಲುವೆಗಳ ಮೂಲಕ ಹರಿಸಿ, ನೀರಾವರಿ ವ್ಯವಸ್ಥೆಗೆ ಅನುವು ಮಾಡಲಾಗಿದೆ. ಸು. ೧೩೨ ವರ್ಷಗಳ ಅಮೋಘ ಇತಿಹಾಸವನ್ನು ಹೊಂದಿರುವ ಮುಚಖಂಡಿ ಕೆರೆಯು ಮುಚಖಂಡಿ, ಗದ್ದನಕೇರಿ, ಬಾಗಲಕೋಟೆ, ಸೀಮಿಕೇರಿ ಸೇರಿದಂತೆ ಹಲವಾರು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸುವ ಉದ್ದೇಶದಿಂದ ಬ್ರಿಟೀಷರು ಈ ಸೇತುವೆಯನ್ನು ನಿರ್ಮಾಣ ಮಾಡಿದ್ದಾರೆಂಬ ಮಾಹಿತಿ ದೊರೆಯುವದು. ಆದರೆ ಈ ಸೇತುವೆಯನ್ನು ನಿರ್ಮಿಸಿದವರು ಯಾರೆಂಬ ಮಾಹಿತಿ ದೊರೆಯುವದಿಲ್ಲ. ಆದರೆ ಕ್ರಿ.ಶ. ೧೮೮೨ರಲ್ಲಿ ಬಾಗಲಕೋಟೆಯು ಮುಧೋಳ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತು. ವೆಂಕಟರಾವ್ ಘೋರ್ಪಡೆ ರಾಜನಾಗಿದ್ದನು. ಕೃಷ್ಣರಾಯ ಎಂಬುವರು ಡಿಸ್ಟ್ರಿಕ್ಟ ಕಮೀಶನರ ಆಗಿದ್ದರು. ಆ ಕಾಲಕ್ಕೆ ಬ್ರಿಟೀಷ್ ಲೆಫ್ಟಿನೆಂಟ ಕರ್ನಲ್‌ನಾಗಿ ಸಟೆನ್ಸರ ಇದ್ದರೆಂಬ ಮಾಹಿತಿ ದೊರೆಯುವದೇ ಹೊರತಾಗಿ ಈ ಸೇತುವೆಯನ್ನು ನಿರ್ಮಿಸಿದವರ ಬಗೆಗೆ ದಾಖಲೆಗಳು ದೊರೆತಿಲ್ಲ.

ಡಿ.ಸಿ. ಕೃಷ್ಣರಾಯ ಎಂಬುವರು ಘೋರ್ಪಡೆಯವರ ಮಾರ್ಗದರ್ಶನದಲ್ಲಿ ಬರಗಾಲದಿಂದ ತತ್ತರಿಸುತ್ತಿರುವ ಜನರ ಕಷ್ಟ ಪರಿಹಾರಕ್ಕಾಗಿ ಈ ಪ್ರದೇಶದ ಜನರಿಗಾಗಿ ಮುಚಖಂಡಿಯ ಸೇತುವೆ ನಿರ್ಮಿಸಿರುವದಾಗಿ ಜನರ ಹೇಳಿಕೆಗಳು ಸರಿಯೆನಿಸುತ್ತವೆ. ಇನ್ನು ಅಧಿಕೃತ ದಾಖಲೆಗಳು ಸಿಕ್ಕಿಲ್ಲ. ಸದ್ಯಕ್ಕೆ ಕೃಷ್ಣರಾಯರೇ ಈ ಸೇತುವೆಯನ್ನು ನಿರ್ಮಿಸಿರ ಬಹುದೆಂದು ಊಹಿಸಬಹುದಾಗಿದೆ.

* ಅಧ್ಯಾಪಕರು, ಬಿ.ವಿ.ವಿ. ಬಸವೇಶ್ವರ ಕಲಾ ಮಹಾವಿದ್ಯಾಲಯ, ಕನ್ನಡ ಸ್ನಾತಕೋತ್ತರ ವಿಭಾಗ, ಬಾಗಲಕೋಟೆ.

ದೇವರಕಾಡು ಮತ್ತು ಕೊಡಗು

ಕ್ಯಾಪ್ಟನ್ ರಾಘವ*

'**ಕೊಡಗು**' ಎನ್ನುವ ಪ್ರದೇಶ ಬ್ರಿಟಿಷರು ಆಡಳಿತ ವಹಿಸಿಕೊಳ್ಳುವವರೆಗೂ ಒಂದೇ ರೀತಿಯ ಭೂಪ್ರದೇಶವನ್ನು ಹೊಂದಿರಲಿಲ್ಲ. ಬೇರೆ ಬೇರೆ ಕಾಲಘಟ್ಟದಲ್ಲಿ ಕೊಡಗು ಬೇರೆ ಬೇರೆ ರೀತಿಯ ಭೌಗೋಳಿಕ ಅಸ್ತಿತ್ವವನ್ನು ಹಾಗೂ ರಾಜಕೀಯ ಹಿನ್ನೆಲೆಯನ್ನು ಹೊಂದಿತ್ತು. ಪ್ರಾಚೀನ ಕಾಲದಿಂದ ಬ್ರಿಟಿಷರವರೆಗೆ ಕೊಡಗಿನ ಬೇರೆ ಬೇರೆ ಭೂಭಾಗಗಳು ಗಂಗ, ಚೋಳ, ಕದಂಬ, ಹೊಯ್ಸಳ, ಚಾಲುಕ್ಯ ಹಾಗೂ ವಿಜಯನಗರ ಅರಸರು ಮತ್ತು ಅನೇಕ ಸಾಮಂತ ಅರಸರ ಆಳ್ವಿಕೆಗೆ ಒಳಪಟ್ಟಿತು. ಕೊಂಗಾಳ್ವ ಮತ್ತು ಚಂಗಾಳ್ವರು ಕೂಡಾ ಕೊಡಗನ್ನು ಆಳಿದ್ದರು. ಇವರ ಕಾಲದಲ್ಲಿ ಈಗಿನ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಕೊಡಗಿನ ಭೂಪಟದಲ್ಲಿತ್ತು. ಲಿಂಗಾಯಿತ ಅರಸರ ಕಾಲದಲ್ಲಿ ಕೊಡಗಿಗೆ ಈಗಿನ ಸೋಮವಾರಪೇಟೆ (ಏಳು ಸಾವಿರ ಸೀಮೆ ಪ್ರದೇಶಗಳು) ಸೇರಿತು. ೧೮ನೇ ಶತಮಾನದ ಅಂತ್ಯದಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಕೊಡಗನ್ನು ಆಳಿದರು. ಕ್ರಿ.ಶ. ೧೮೩೪ಕ್ಕಿಂತ ಮೊದಲು ಕೊಡಗು ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ-ಪುತ್ತೂರಿನವರೆಗೆ ಚಾಚಿತ್ತು.

ಕ್ರಿ.ಶ. ೧೮೩೪ರಲ್ಲಿ ಬ್ರಿಟಿಷರು ಕೊಡಗನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡರು. ೧೯೪೭ರಲ್ಲಿ ಈ ಪ್ರದೇಶ ಬ್ರಿಟಿಷರ ಅಧಿಕಾರದಿಂದ ಮುಕ್ತವಾದರೂ ೧೯೫೬ರವರೆಗೂ ಕೊಡಗು ಕರ್ನಾಟಕ ರಾಜ್ಯದೊಳಗೆ ಸೇರದೆ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಂಡಿತ್ತು. ೧೯೨೪ರಿಂದ ೧೯೪೭ರ ವರೆಗೂ ಕೊಡಗಿನಲ್ಲಿ ಶಾಸನಸಭೆ ಸ್ಥಳೀಯರ ಪ್ರತಿನಿಧಿತ್ವದೊಂದಿಗೆ ಬ್ರಿಟಿಷರ ಕೃಪೆಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ೧೯೪೭ರಿಂದ ೧೯೫೦ರವರೆಗೆ ಅದೇ ವ್ಯವಸ್ಥೆ ಭಾರತ ಸರ್ಕಾರದ ಪ್ರತಿನಿಧಿಯೊಬ್ಬನ ಮೂಲಕ ಮುಂದುವರೆಯಿತು. ೧೯೫೦ರಿಂದ ೧೯೫೬ರವರೆಗೆ ಕೊಡಗು ಪ್ರಾಂತ್ಯದ ಆಡಳಿತ ನಿರ್ವಹಿಸಲು ಒಬ್ಬ ಮುಖ್ಯಮಂತ್ರಿಯನ್ನು ಹಾಗೂ ಸಚಿವ ಸಂಪುಟವನ್ನು ಚುನಾಯಿಸಿ ಪ್ರತ್ಯೇಕ ರಾಜ್ಯವಾಗಿ ಕಾರ್ಯ ನಿರ್ವಹಿಸಲು ಕಾರಣವಾಯಿತು. ೧೯೫೬ರ ನವೆಂಬರ್ ೧ರಂದು ಕೊಡಗು ಮೈಸೂರು (ಕರ್ನಾಟಕ)ದೊಂದಿಗೆ ವಿಲೀನಗೊಂಡಿತು. ಆರ್ಥಿಕವಾಗಿ ಬೆಳೆಯಲು ಕಾರಣವಾದ ಕಾಫಿ ಬೆಳೆಯ ಜೊತೆಗೆ, ಕೊಡಗು ಹೇರಳವಾದ ಅರಣ್ಯ ಸಂಪತ್ತಿಗೆ ಹೆಸರುವಾಸಿಯಾಗಿದೆ. ಇದರ ಜೊತೆಗೆ ಕೊಡಗು ಬಹುಮುಖ್ಯವಾದ "ದೇವರಕಾಡು" ಅರಣ್ಯಕ್ಕೆ ಪ್ರಸಿದ್ಧಿಯಾಗಿದೆ. ಕೊಡಗಿನಲ್ಲಿ ೨೫೫೦೦ ಹೆಕ್ಟೇರ್ ಪ್ರದೇಶವನ್ನು ಒಳಗೊಂಡ ೧೨೧೪ ದೇವರಕಾಡುಗಳಿವೆ. ಈ ದೇವರಕಾಡು ಎಂಬ ಸಂಪ್ರದಾಯಗಳು ಅರಣ್ಯ ಸಂರಕ್ಷಣೆಯಲ್ಲಿ, ಕೊಡಗಿನ ಜನತೆಯು ವಹಿಸಿದ ಆಸಕ್ತಿ, ಪರಿಸರ ಕಾಳಜಿ, ಸಾಮಾಜಿಕ ಕಳಕಳಿಯನ್ನು ತೋರ್ಪಡಿಸುತ್ತದೆ. ಈ ಪ್ರಬಂಧದಲ್ಲಿ ದೇವರ ಕಾಡಿನ ಉಗಮ, ಬೆಳವಣಿಗೆ, ಬೆಳವಣಿಗೆಯಲ್ಲಿ ಸಮುದಾಯಗಳ ಪಾತ್ರ, ಆಚರಣೆಗಳು, ಸಾಮಾಜಿಕ ಪರಿವರ್ತನೆಯಲ್ಲಿ ದೇವರಕಾಡಿನ ಪಾತ್ರದ ಕುರಿತು ಚರ್ಚಿಸಲಾಗಿದೆ.

ದೇವರಕಾಡಿನ ಉಗಮ

ಪುರಾತನ ಕಾಲದಿಂದಲೂ ಪ್ರಕೃತಿಯ ಪೂಜೆ ಅಸ್ತಿತ್ವದಲ್ಲಿದೆ. ಮಾನವ ಕಾಡುಗಳಲ್ಲಿ ವಾಸಿಸುತ್ತಿದ್ದರಿಂದ ಆತನಿಗೆ ಬೇಕಾದ ಆಹಾರ, ನೀರು ಮತ್ತು ಜೀವನೋಪಾಯವನ್ನು ಪ್ರಕೃತಿ ಒದಗಿಸಿದೆ. ಆದ್ದರಿಂದ ಮಾನವ ಕಾಡು, ಪ್ರಕೃತಿಯನ್ನು ಭಕ್ತಿ ಭಾವದಿಂದ ಆರಾಧಿಸಲು ಆರಂಭಿಸಿದ. ವಿಶ್ವದ ವಿವಿಧ ಭಾಗಗಳಲ್ಲಿ, ವಿವಿಧ ಹೆಸರುಗಳಿಂದ ಪ್ರಕೃತಿ ಪೂಜೆಯ ಸಂಪ್ರದಾಯವು ಇಂದಿಗೂ ಅಸ್ತಿತ್ವದಲ್ಲಿದೆ.

ಪ್ರತಿ ಗ್ರಾಮದ ನಿವಾಸಿಗಳು ಕಾಡುಗಳನ್ನು ಪಾವಿತ್ರತೆಯ ದೃಷ್ಟಿಯಿಂದ ಹಾಗೂ ಅರಣ್ಯ ಸಂರಕ್ಷಣೆಯ ದೃಷ್ಟಿಯಿಂದಲೂ ಪೂಜಿಸಲಾರಂಭಿಸಿದರು. ಹಾಗೆಯೇ ಮರಗಳಿಗೆ ಮತ್ತು ಪ್ರಾಣಿಗಳಿಗೆ ಪವಿತ್ರ ಹೆಸರುಗಳನ್ನಿಡುವ ಮತ್ತು ಅವುಗಳ ಆರಾಧನೆ ಮಾಡುವ ಸಂಪ್ರದಾಯ ಪ್ರಾರಂಭಿಸಿದರು. ಅದು ಕ್ರಮೇಣ ಜನರಲ್ಲಿ ನಂಬಿಕೆ ಮತ್ತು ಭಯವನ್ನುಂಟು ಮಾಡಿತು. ಜೊತೆಗೆ ಆಲದ ಮರ, ಅಶ್ವಥ ಮರಗಳನ್ನು ಮತ್ತು ಪ್ರಾಣಿ ಪಕ್ಷಿಗಳನ್ನು ರಕ್ಷಿಸಲು ಆರಂಭಿಸಿದರು. ವರ್ಷಗಳು ಕಳೆದಂತೆ ಪೂಜಾವಿಧಾನಗಳಲ್ಲಿ ಬದಲಾವಣೆಗಳಾದವು. ಕಲ್ಲಿನ ರೂಪದಲ್ಲಿ "ಪ್ರಕೃತಿ ದೇವರು" ಎಂದು ಪೂಜಿಸಲು

* ಸಹ ಪ್ರಾಧ್ಯಾಪಕರು ಮತ್ತು ಇತಿಹಾಸ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ, ಕೊಡಗು ಜಿಲ್ಲೆ-೫೭೧೨೦೧

ಆರಂಭಿಸಿದ ಮತ್ತು ಇವುಗಳನ್ನು ಪವಿತ್ರ ಮರದ ಬುಡದಲ್ಲಿಟ್ಟು ಪೂಜಿಸಲು ಆರಂಭಿಸಲಾಯಿತು. ನಾಗರಿಕತೆ ಬೆಳೆದಂತೆ ಬಲಿಪೀಠ, ದೇವಾಲಯಗಳು ಮತ್ತು ಕಲ್ಲಿನ ದೇವರ ರೂಪಕ್ಕೆ ಸುತ್ತ ಬೇಲಿ ಆರಂಭಗೊಂಡವು.

ಪ್ರಾಚೀನ ಕಾಲದಲ್ಲೂ ಅರಣ್ಯಗಳು ವಿಶಾಲವಾಗಿದ್ದವು. ನಮ್ಮ ಹಿರಿಯರು (ಪೂರ್ವಜರು) ಕೆಲವೊಂದು ಅರಣ್ಯ ಪ್ರದೇಶವನ್ನು ಪ್ರತಿಯೊಂದು ಗ್ರಾಮದಲ್ಲಿ ಗುರುತಿಸಿ, ಅದನ್ನು 'ಪವಿತ್ರ' ಅರಣ್ಯವೆಂದು ಕರೆದು, ಮರ ಕಡಿಯುವುದಕ್ಕೆ, ಕಟ್ಟಿಗೆ ಸಂಗ್ರಹಿಸಲು ಮತ್ತು ದನ ಮೇಯಿಸಲು ನಿಷೇಧವನ್ನು ಹೇರಿದರು. ದೇವರ ಹೆಸರಿನಲ್ಲಿ ಪ್ರಕೃತಿ ವಿರುದ್ಧ ಹೋಗುವ ಮತ್ತು ರಕ್ಷಿತಾ ಅರಣ್ಯದ ಪ್ರದೇಶದ ಕುರಿತು ಜನರಲ್ಲಿ ಭಯಭಕ್ತಿಯನ್ನು ತುಂಬಲಾಯಿತು. ಆರಂಭಿಕ ವರ್ಷಗಳಲ್ಲಿ ಒಂದು ನಿರ್ದಿಷ್ಟ ಗ್ರಾಮದ ಜನರು ಪವಿತ್ರ ದೇವಾಲಯಗಳಲ್ಲಿ ವಾರ್ಷಿಕವಾಗಿ, ನಂತರ ಮಾಸಿಕವಾಗಿ ಮತ್ತು ಸಾಪ್ತಾಹಿಕವಾಗಿ ಪೂಜೆಗೆ ಸೇರಲು ಆರಂಭಿಸಿದರು. ಕೆಲವು ಸ್ಥಳಗಳಲ್ಲಿ ಇದು ದೈನಂದಿನ ಚಟುವಟಿಕೆಯಾಯಿತು. ಈ ಪವಿತ್ರ ಕಾಡುಗಳು ಮತ್ತು ದೇವಾಲಯಗಳ ನಿರ್ವಹಣೆ ಉದ್ದೇಶಕ್ಕಾಗಿ ರಚಿಸಿದ ಟ್ರಸ್ಟ್ ನಡೆಸಿತು. ಆದರೆ ಕಾಲಕ್ರಮೇಣ ಕೆಲವೊಂದು ಸ್ಥಳಗಳಲ್ಲಿ "ಪ್ರಕೃತಿ ದೇವರು" ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ಆದರೆ ಕೊಡಗಿನಲ್ಲಿ ಹಿರಿಯರ (ಪೂರ್ವಜರ) ಮುಂದಾಲೋಚನೆಯಿಂದಾಗಿ "ದೇವರಕಾಡು" ಎಂಬ ಪವಿತ್ರ ಅರಣ್ಯಗಳು ಇಂದಿಗೂ ಇದೆ.

ಆರಂಭದಲ್ಲಿ ಕೊಡಗಿನ ಅರಣ್ಯವು ಅರಣ್ಯ ಸಂರಕ್ಷಣಾ ಇಲಾಖೆಯೆಂದು ಕರೆಯಲಾಗುತ್ತಿದ್ದ ಅರಣ್ಯ ಇಲಾಖೆಯು ೧೮೬೫ರಿಂದ ೧೮೭೬ ಅರಣ್ಯ ಸಹಾಯಕ ಸಂರಕ್ಷಣಾಧಿಕಾರಿ ಉಸ್ತುವಾರಿಯಲ್ಲಿತ್ತು. ಈತ ಮೈಸೂರು ಸಂರಕ್ಷಣಾಧಿಕಾರಿಯ ಅಧೀನದಲ್ಲಿದ್ದನು. ನಂತರ ೧೮೭೮ರಲ್ಲಿ ಕೊಡಗಿನ ಅರಣ್ಯ ಗಳನ್ನು ಪ್ರತ್ಯೇಕ ವಿಭಾಗ ಮಾಡಿ ಸ್ವತಂತ್ರ ಸಂರಕ್ಷಣಾಧಿ ಕಾರಿಯನ್ನು ಹೊಂದುವಂತಾಯಿತು. ಅರಣ್ಯ ಪ್ರದೇಶಗಳ ಕಾಯ್ದಿರಿಸುವಿಕೆ (ಮೀಸಲಾತಿ) ೧೮೭೦ರಲ್ಲಿ ಆರಂಭ ವಾಯಿತು. ೧೮೭೫-೭೬ರಲ್ಲಿ ೩೦೮ ಚ. ಮೈಲಿಗಳಷ್ಟು ಪ್ರದೇಶವನ್ನು ಸಮೀಕ್ಷೆ ಮಾಡಿ ಕಾಯ್ದಿರಿಸಲಾಯಿತು. ೧೯೦೫ರಲ್ಲಿ ದೇವರಕಾಡು ಅರಣ್ಯ ಪ್ರದೇಶವನ್ನು ಕಂದಾಯ ಇಲಾಖೆಗೆ ವಹಿಸಲಾಯಿತು. ೧೯೮೫ರಲ್ಲಿ ದೇವರ ಕಾಡುಗಳನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಯಿತು. "ದೇವರ ಕಾಡುಗಳನ್ನು ಕಾಯ್ದಿರಿಸಿದ ಅರಣ್ಯ"ಗಳೆಂದು ಘೋಷಿಸಲಾಯಿತು. ಕೊಡಗು ಜಿಲ್ಲೆಯ ಪ್ರತಿ ಗ್ರಾಮದಲ್ಲಿ ಕನಿಷ್ಠ ಒಂದು ದೇವರಕಾಡನ್ನು ಹೊಂದಿದೆ. ಹತ್ತು ಮತ್ತು ಹೆಚ್ಚು ದೇವರಕಾಡು ಹೊಂದಿರುವ ೨೪ ಗ್ರಾಮಗಳು ಇವೆ.

ಕೊಡಗು ಜಿಲ್ಲೆ–ತಾಲ್ಲೂಕುವಾರು ಪ್ರಸ್ತುತ ದೇವರಕಾಡು ಸಂಖ್ಯೆ

ತಾಲ್ಲೂಕು	ಸಂಖ್ಯೆ	ಶೇಕಡಾ	ವಿಸ್ತೀರ್ಣ (ಹೆಕ್ಟೇರ್)	ಶೇಕಡಾ
ಮಡಿಕೇರಿ	೩೦೬	೨೫.೨೧	೫೫೪.೨೩	೨೦.೯೫
ವೀರಾಜಪೇಟೆ	೫೦೮	೪೧.೮೫	೮೭೨.೧೩	೪೧.೮೫
ಸೋಮವಾರಪೇಟೆ	೪೦೦	೩೨.೯೫	೧೧೪೪.೦೦	೪೪.೮೫
ಒಟ್ಟು ದೇವರಕಾಡು	೧೨೧೪		೨೫೫೦.೪೫	

ಮಾಹಿತಿ ಅರಣ್ಯ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ.

ಅರಣ್ಯ ಇಲಾಖೆಯ ಸಹಕಾರದೊಂದಿಗೆ ಚಂದ್ರಶೇಖರ್ ಮತ್ತು ನಾಗರಾಜ್ ದೇವರ ಕಾಡಿನ ಮೇಲೆ ಅಧ್ಯಯನ ನಡೆಸಿ ಈ ಕೆಳಗಿನಂತೆ ವರ್ಗೀಕರಿಸಿದರು.

೧. **ಬಸದಿ ಕಾಡು**: ಇವುಗಳನ್ನು ಜಿನಕಾಡು ಅಥವಾ ಜೈನ ಬಸದಿ ಕಾಡು ಎಂದು ಕರೆಯಲಾಗುತ್ತದೆ.

೨. **ಖಾಸಗಿಯಾಗಿ ನಿರ್ವಹಿಸಿದ ದೇವರಕಾಡು**: ಕೆಲವು ಕುಟುಂಬಗಳು ತಮ್ಮ ಖಾಸಗಿ ಅರಣ್ಯ ಪ್ರದೇಶಗಳನ್ನು ದೇವರಕಾಡುಗಳಾಗಿ ಬೆಳೆಸಲು ದಾನವಾಗಿ ನೀಡಿದ ಅರಣ್ಯಗಳು. ಉದಾ: ಬಲಮುರಿಯ ಭದ್ರಕಾಳಿ ದೇವರಕಾಡು, ನೆಮ್ಮಲೆಯ ಮುತ್ತಪ್ಪ ದೇವರಕಾಡು, ಕೊಟ್ಟಂಗೇರಿಯ ಮಾಚಂಗಲ ದೇವರಕಾಡು, ಇತ್ಯಾದಿ.

೩. **ಪೈಸಾರಿ ದೇವರಕಾಡು**: ಕೊಡಗಿನ ಹೆಚ್ಚಿನ ದೇವರ ಕಾಡುಗಳು ಸರ್ಕಾರದ ಅಧೀನದಲ್ಲಿದ್ದರೂ, ಕೆಲವೇ ಗ್ರಾಮ ಸಮುದಾಯಗಳು ಇದರ ನಿರ್ವಹಣೆಯನ್ನು ಸರ್ಕಾರದೊಂದಿಗೆ ಕೈಜೋಡಿಸಿವೆ.

೪. **ಪವಿತ್ರ ಕಟ್ಟೆ**: ಕೆಲವೊಂದು ಗ್ರಾಮಗಳಲ್ಲಿ ಈ ರೀತಿಯ ದೇವರಕಾಡುಗಳನ್ನು ಕಾಣಬಹುದು. ಇವುಗಳು ಆಯಾ ಕುಟುಂಬಗಳ ಆಚರಣೆಗಳು, ಸಮುದಾಯ ಕಾರ್ಯಕ್ರಮಗಳು ಮತ್ತು ಪ್ರದಕ್ಷಣೆಗೆ ಬಳಸುವ ಸ್ಥಳಗಳು. ಉದಾ: ಬೇವಿನ ಮರದ ಕಟ್ಟೆ, ಅಶ್ವತ್ಥ ಮರದ ಕಟ್ಟೆ, ಇತ್ಯಾದಿ. ಉದಾ: ಹೆಗ್ಗಳ ಗ್ರಾಮದ ಪೀಲಿಯಾಟ್‌ಮಂಡು, ಕುಂದ ಗ್ರಾಮದ ಕೈಮುಡಿಕ ಮಂದು.

೫. **ಹೊಲೆ ಕಾಡು**: ಪರಿಶಿಷ್ಟ ಜಾತಿಗೆ ಸೇರಿದ ದೇವರಕಾಡು. ಕೊಡಗಿನ ಕೆಂಬಟ್ಟ ಸಮುದಾಯದವರು (ಮೂಲ ನಿವಾಸಿಗಳು), ಮಾರಂಗಿ ಮತ್ತು ಕುಕ್ಕಾ ಸಮುದಾಯ ದವರು ಬೆಳೆಸಿದ ದೇವರಕಾಡುಗಳು. "ಪೊನ್ನಂಗಾಲ ತಮ್ಮೆ" ಇವರು ಆರಾಧಿಸುವ ಮುಖ್ಯ ದೇವತೆ. ಉದಾ: ಯುವಕಪಾಡಿ, ಮಡಿಕೇರಿ ತಾಲ್ಲೂಕು.

೬. **ಕೈಮಡ ಅಥವಾ ಕಾರೋಣ ಕಾಡು**: ಕೊಡಗಿನಲ್ಲಿ ಪೂರ್ವಜರನ್ನು ಗುರುಕಾರೋಣರೆಂದು ಕರೆಯಲಾಗು

ತ್ತದೆ. ಇವರನ್ನು ಪೂಜಿಸುವುದಕ್ಕಾಗಿ ಪ್ರತ್ಯೇಕ ಸ್ಥಳಗಳಲ್ಲಿ ಕುಟುಂಬದ ಪ್ರತ್ಯೇಕ ರಚನೆಗಳನ್ನು ನಿರ್ಮಿಸಲಾಗಿದೆ. ಇದರ ಸುತ್ತ ಕಾಡುಗಳನ್ನು ಬೆಳೆಸಲಾಗಿದೆ. ಇವುಗಳನ್ನು ಕೈಮಾಡ ಕಾಡು ಎನ್ನಲಾಗುತ್ತದೆ. ಉದಾ: ಮಾಚಂಗಡ ಕುಟುಂಬ ಕಾರೋಣ ಕಾಡು, ಕೊಟ್ಟಂಗೇರಿ, ಐರಿ ಬೆಳ್ಳಿಪ್ಪಣ್ಣ ಕಾರೋಣ ಕಾಡು, ಕೈಕೇರಿ, ಬಾಡಗರಕೇರಿ ಮತ್ತು ಮುಗುಟಗೇರಿ ಕಾರೋಣ ಕಾಡು, ತೆರಾಲು. ಕಾರೋಣ ಕಾಡು ವಿರಾಜಪೇಟೆ.

೭. **ಸುಗ್ಗಿ ದೇವರ ಬನ**: ಸುಗ್ಗಿ ದೇವತೆಗಳನ್ನು ಅಥವಾ ಗ್ರಾಮ ದೇವತೆಗಳನ್ನು ಆರಾಧಿಸುವ ನಿಟ್ಟಿನಲ್ಲಿ ನಿರ್ವಹಿಸಿದ ದೇವರಕಾಡುಗಳು. ಹೆದ್ದೇವರು, (ನಾಗರಹಾವು ಸಂಕೇತಿಸುವ), ಬೀರೇದೇವರು, ಭದ್ರಕಾಳಿ ದೇವರುಗಳನ್ನು ಆರಾಧಿಸಲಾಗುತ್ತದೆ. ಉದಾ: ಸುಗ್ಗಿದೇವರ ಬನ ಹಾನಗಲ್, ಕುಮಾರಹಳ್ಳಿ, ಗರ್ವಾಲೆ, ಚೌಡ್ಲು, ಕುಂದಳ್ಳಿ, ಇತ್ಯಾದಿ.

೮. **ಮಠದ ಕಾಡು**: ವೀರಶೈವ ಧಾರ್ಮಿಕ ಪಂಥದ ಪೂಜಾ ಉದ್ದೇಶಕ್ಕಾಗಿ ಮಠಗಳಲ್ಲಿರುವ ದೇವರಕಾಡುಗಳು. ಇಲ್ಲಿ ಪೂಜಾ ಸಂತರ ಸಮಾಧಿಗಳು ಕೂಡಾ ಇವೆ. ಉದಾ: ಸೋಮವಾರಪೇಟೆಯ ಬಾಚಳ್ಳಿ, ಸುಂಟಿ ಕೊಪ್ಪ, ಕೊಡ್ಲಿಪೇಟೆ, ಶನಿವಾರಸಂತೆ ಮಠಗಳಲ್ಲಿನ ದೇವರ ಕಾಡುಗಳು. ಚೌಡಮ್ಮ ದೇವತೆಯನ್ನು ಪೂಜಿಸಲಾಗುತ್ತದೆ.

೯. **ಪಳ್ಳಿ (ದೇವರ)ಕಾಡು**: ಪಳ್ಳಿ ಎಂದರೆ ಮಸೀದಿ ಎಂದರ್ಥ. ಕೊಡಗಿನ ಜಮ್ಮ ಮಸೀದಿಗಳು ಕಾಡು ಗಳನ್ನು ಹೊಂದಿವೆ. ಇವುಗಳಿಗೂ ದೇವರಕಾಡಿನ ನಿಯಮಗಳು ಅನ್ವಯಿಸುತ್ತವೆ. ಉದಾ: ಕೆದಮುಳ್ಳೂರಿನ ಮಾಪಿಳ್ಳೆ ಪಳ್ಳಿ ಕಾಡು, ಎಮ್ಮೆಮಾಡು, ಮೈತಾಡಿ ಪಳ್ಳಿ, ಕಕ್ಕಬ್ಬೆ ಪಳ್ಳಿ ಕಾಡು, ಇತ್ಯಾದಿ.

೧೦. **ಇನ್ನಿತರ ದೇವರ ಕಾಡುಗಳು**: ಕೊಡಗಿನಲ್ಲಿ ಕೆಲವೊಂದು ದೇವತೆಗಳಿಗೆ ಪ್ರತ್ಯೇಕ ಕಾಡುಗಳನ್ನು, ರಕ್ಷಿಸಿಕೊಂಡು ಬರಲಾಗಿದೆ. ಉದಾ: ಪುಲಿ ಚಾವುಂಡಿ, ಪುಂಜರ್ಲಿ, ಕುಟ್ಟಿಚಾತ, ಮಹಾಸತಿ, ನಾಗಬನ, ಇತ್ಯಾದಿ.

ಅರಣ್ಯ ಕಾನೂನುಗಳು ಮತ್ತು ದೇವರ ಕಾಡುಗಳು

೧೦೮೬೫ ಏಕರೆ ಪ್ರದೇಶದಲ್ಲಿದ್ದ ಕೊಡಗಿನ ೮೭೩ ದೇವರಕಾಡುಗಳ ಎಣಿಕೆ, ನೊಂದಣಿ, ಗಡಿಗಳನ್ನು ಗುರುತಿಸುವ ಕೆಲಸವನ್ನು ೧೮೭೩ರಲ್ಲಿ ಮಾಡಲಾಯಿತು. ೧೮೯೯ ರಲ್ಲಿ ಕೊಡಗಿನ ಮುಖ್ಯ ಆಯುಕ್ತರಾದ ಲೆಫ್ಟಿನೆಂಟ್ ಕರ್ನಲ್ ಡೋನಾಲ್ಡ್ ರಾಬರ್ಟ್ಸನ್ ದೇವರ ಕಾಡಿನ ಮಹತ್ವವನ್ನು ಬ್ರಿಟಿಷ ಭಾರತ ಸರಕಾರದ ಕಂದಾಯ ಮತ್ತು ಕೃಷಿ ಇಲಾಖೆಗೆ ವಿವರಿಸಿದ ಪರಿಣಾಮವಾಗಿ ೧೮೯೯ ರಕ್ಷಿತಾರಣ್ಯದ ಸಂರಕ್ಷಣೆಗೆ (ದೇವರ ಕಾಡುಗಳನ್ನು ಹೊಂದಿರುವ) ನಿಯಮಗಳನ್ನು ರಚಿಸಲಾಯಿತು. ಇವುಗಳನ್ನು ಕೊಡಗು ಅರಣ್ಯ ಮ್ಯಾನುವೆಲ್ – ೧೮೯೯ರಲ್ಲಿ ಉಲ್ಲೇಖಿಸಲಾಗಿದೆ

೧. ಎಲ್ಲಾ ದೇವರ ಕಾಡುಗಳನ್ನು ಪವಿತ್ರ ಕಾಡುಗಳೆಂದು ಗುರುತಿಸಲಾಗಿದೆ.

೨. ದೇವರಕಾಡಿನಲ್ಲಿ ಮರ ಕಡಿಯುವ, ರೆಂಬೆಗಳನ್ನು ಕಡಿಯುವ ಮತ್ತು ಸುಡುವ ಕಾರ್ಯಕ್ಕೆ ನಿಷೇಧಿಸ ಲಾಗಿದೆ.

೩. ಕಮಿಷನರ ವಿಶೇಷ ಅನುಮತಿ ಇಲ್ಲದೆ ದೇವರಕಾಡಿನ ಉತ್ಪನ್ನಗಳನ್ನು, ರೆಂಬೆಗಳನ್ನು, ಮರಗಳನ್ನು, ಉಪಯೋಗಿಸುವಂತಿಲ್ಲ. ಆದರೆ ದೇವಾಲಯಗಳಿಗೆ ಬೇಕಾದ ಮರ, ಒಣಗಿದ ಎಲೆ ಮತ್ತು ಬಳ್ಳಿಗಳನ್ನು ಪಡೆಯುವ ಕೆಲಸವನ್ನು ಗ್ರಾಮಸ್ಥರು ಮುಂದುವರಿಸ ಬಹುದು.

೪. ದೇವರಕಾಡಿನಲ್ಲಿ ಯಾವುದೇ ರೀತಿಯ ಕೃಷಿಯನ್ನು ಮಾಡುವ ಹಾಗಿಲ್ಲ ಎಂಬ ನಿಯಮಗಳನ್ನು ಜಾರಿಗೆ ತಂದು ದೇವರಕಾಡು ರಕ್ಷಣಾರಣ್ಯದ ರಕ್ಷಣೆಯನ್ನು ಬ್ರಿಟಿಷರು ಮಾಡಿದರು.

ಬ್ರಿಟಿಷ ಸರಕಾರ ೧೯೦೫ರಲ್ಲಿ ದೇವರಕಾಡುಗಳ ನಿರ್ವಹಣೆಯನ್ನು ಕಂದಾಯ ಇಲಾಖೆಗೆ ವಹಿಸಲಾಯಿತು. ಇದರಿಂದಾಗಿ ೧೮೯೯ರಲ್ಲಿ ೧೦,೮೬೫ ಎಕರೆಯಷ್ಟು ಇದ್ದ ದೇವರಕಾಡು ೧೫,೫೦೬ ಎಕರೆಗೆ ಹೆಚ್ಚಿಸಲ್ಪಟ್ಟಿತು. ಅಲ್ಲಿಂದ ಸುಮಾರು ೮೦ ವರ್ಷಗಳ ಕಾಲ ದೇವರಕಾಡು ಕಂದಾಯ ಇಲಾಖೆಯ ನಿರ್ವಹಣೆಯಲ್ಲಿತ್ತು ಹಾಗೂ ದೇವರಕಾಡನ್ನು ಪೈಸಾರಿ ಎಂದು ಕಂದಾಯ ಇಲಾಖೆ ಗುರುತಿಸಿತ್ತು. ನಂತರ ೧೯೮೫ರಲ್ಲಿ ದೇವರಕಾಡನ್ನು ಅರಣ್ಯ ಇಲಾಖೆಯ ನಿರ್ವಹಣೆಗೆ ಪುನಃ ನೀಡಲಾಯಿತು. ಜೊತೆಗೆ ಅದನ್ನು "ಕಾಯ್ದಿರಿಸಿದ ಅಥವಾ ಮೀಸಲು ಅರಣ್ಯ" ಎಂದು ಘೋಷಿಸ ಲಾಯಿತು.

ಅರಣ್ಯ ಇಲಾಖೆಯು ೧೯೮೫ರಲ್ಲಿ ಕೊಡಗು ಜಿಲ್ಲೆಯ ದೇವರಕಾಡಿನ ಸಮೀಕ್ಷೆಯನ್ನು ಮಾಡಿತು. ೧೫,೫೦೬ ಎಕರೆಯಷ್ಟು ಇದ್ದ ದೇವರಕಾಡು ೧೯೮೫ರಲ್ಲಿ ೬೮೯೯.೬೧ ಎಕರೆಗೆ ಇಳಿಯಿತು. ಇದು ಕಂದಾಯ ಇಲಾಖೆಯ ನಿರ್ವಹಣೆಯ ಕಾಲದಲ್ಲಿ ದೇವರಕಾಡಿನ ಅತಿಕ್ರಮಣ ತೋರ್ಪಡಿಸುತ್ತದೆ.

ದೇವರಕಾಡಿನ ದೇವತೆಗಳ ಪರಿವರ್ತನೆ

ದೇವರಕಾಡಿನ ದೇವತೆಗಳಾದ ಅಯ್ಯಪ್ಪ, ಭದ್ರಕಾಳಿ ಮತ್ತು ಭಗವತಿ ದೇವತೆಗಳಿಗೆ ಮಂದಿರಗಳು ಮತ್ತು

ದೇವಾಲಯಗಳನ್ನು ನಿರ್ಮಿಸಲಾಯಿತು. ಪ್ರಾರಂಭದಲ್ಲಿ ಪ್ರಾಣಿಗಳ ಬಲಿ ನೀಡುತ್ತಿದ್ದ ಭಕ್ತರು, ನಂತರ ಹಾಲು ಮತ್ತು ಹಣ್ಣುಗಳನ್ನು ಅರ್ಪಣೆ ಮಾಡುವುದರ ಮೂಲಕ ದೇವತೆಗಳ ಪರಿವರ್ತನೆ ಮಾಡಲಾಯಿತು. ಇಂತಹ ದೇವಾಲಯಗಳನ್ನು ರಸ್ತೆಗೆ ಸಮೀಪದಲ್ಲಿ ಭಕ್ತರನ್ನು ಆಕರ್ಷಿಸಲು ಅವರಿಗೆ ಕಾಣುವಂತೆ ನಿರ್ಮಿಸಲಾಯಿತು. ಅಲ್ಲದೆ ಪ್ರಾಣಿ ಬಲಿ, ರಕ್ತ ತ್ಯಾಗಕ್ಕೆ ಹೆಸರಾದ ಚಾವುಂಡಿ ಮತ್ತು ನಾಗನ ಕಲ್ಲು ಇರುವ ದೇವಾಲಯಗಳಿಂದ ಬಹುದೂರ ಇರುವಂತೆ ನೋಡಿ ಕೊಳ್ಳಲಾಯಿತು. ವಾರ್ಷಿಕ ಪೂಜಾದಿನಗಳಲ್ಲಿ ಚಾವುಂಡಿ ಮತ್ತು ನಾಗದೇವತೆಗಳಿಗೆ ಪ್ರಾಣಿ ಬಲಿ ನೀಡುವ ಅವಕಾಶ ವಿದ್ದರೂ ಇಂಥ ಸಂಧರ್ಭಗಳಲ್ಲಿ ಸಸ್ಯಹಾರಿ ದೇವತೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡಲಾಯಿತು. ಬುಡಕಟ್ಟು ಜನರು ಮತ್ತು ಕೆಳಜಾತಿಯವರು ಮಾತ್ರ ಚಾವುಂಡಿ ಮತ್ತು ನಾಗಾರಾಧನೆ ಮಾಡಬಹುದು ಮತ್ತು ಪ್ರಾಣಿಬಲಿ ನೀಡಬಹುದು ಎಂಬ ಪದ್ಧತಿಯನ್ನು ಆಚರಣೆಗೆ ತರುವುದರ ಮೂಲಕ ದೇವರಕಾಡಿನ ದೇವತೆಗಳ ಪರಿವರ್ತನೆ ಪ್ರಾರಂಭಿಸ ಲಾಯಿತು.

ಕೊಡಗಿನ ಪ್ರಬಲ ಸಮುದಾಯವಾದ ಕೊಡವರು, ಮೂಲತಃ ಮಾಂಸಹಾರಿಗಳಾದ್ದಾರೆ. ಆದರೆ, ಸಾರ್ವಜನಿಕ ಉತ್ಸವಗಳಲ್ಲಿ ಸಾಮಾಜಿಕ ಗೌರವ, ಘನತೆಗಾಗಿ ಹಾಲು ಮತ್ತು ಹಣ್ಣಿನ ಅರ್ಪಣೆ ಮಾಡುವುದರ ಮೂಲಕ ದೇವರ ಕಾಡಿನ ದೇವತೆಗಳ ಪರಿವರ್ತನೆಗೆ ಪರೋಕ್ಷ ಬೆಂಬಲ ನೀಡಿದರು ಎಂದರೆ ತಪ್ಪಾಗಲಾರದು. ಉದಾ: ಮಡಿಕೇರಿ ಯಿಂದ ಸುಮಾರು ೯ ಕಿ.ಮೀ. ದೂರದಲ್ಲಿ ಮಡಿಕೇರಿ–ಮೈಸೂರು ರಸ್ತೆ ಬದಿಯಲ್ಲಿರುವ 'ಭದ್ರಕಾಳಿ ದೇವರಕಾಡು' ಇಲ್ಲಿ ಭದ್ರಕಾಳಿಯ ದೇವಾಲಯ ಮುಖ್ಯ ದೇವಾಲಯ ವಾಗಿದ್ದು, ಮುಖ್ಯ ದೇವತೆಯಾದ ಭದ್ರಕಾಳಿಯನ್ನು ಸಸ್ಯಹಾರಿ ದೇವತೆಯಾಗಿ ಪರಿವರ್ತಿಸಲಾಗಿದೆ ಹಾಗೂ ಹಾಲು ಮತ್ತು ಹಣ್ಣು ಅರ್ಪಣೆಯನ್ನು ವಾರ್ಷಿಕ ಪೂಜೆಯಲ್ಲಿ ಮಾಡಲಾಗು ತ್ತದೆ. ಆದರೆ, ಈ ದೇವಾಲಯಕ್ಕಿಂತ ಬಲು ದೂರದಲ್ಲಿ ಚಾವುಂಡಿ ದೇವತೆಗೆ ಕುರಿ, ಕೋಳಿ ಮತ್ತು ಹಂದಿಯನ್ನು ಬಲಿ ಕೊಡಲಾಗುತ್ತದೆ. ಭದ್ರಕಾಳಿಯ ಪ್ರಾಮುಖ್ಯತೆಯನ್ನು ತೋರಿಸುವ ಉದ್ದೇಶದಿಂದ ರಸ್ತೆ ಬದಿಯಲ್ಲಿ ಹುಂಡಿಯನ್ನು ಮತ್ತು ಮೂರ್ತಿಯನ್ನು ಇಡಲಾಗಿದೆ. ಇದಲ್ಲದೆ ಮುಖ್ಯ ದೇವಾಲಯದ ಹಿಂದುಗಡೆ ಭದ್ರಕಾಳಿಯ ಮೂಲಸ್ಥಾನವಿದ್ದು, ಅಲ್ಲಿ ಕುರುಬರು ಪೂಜಿಸುವ ಪದ್ದತಿ ಇದೆ. ಭದ್ರಕಾಳಿ ದೇವತೆಯು ದೇವಾಲಯ ಪ್ರವೇಶಿಸಿದ ನಂತರ ಸಸ್ಯಾಹಾರಿ ದೇವತೆಯಾಗಿ ಸಮಾಜದ ಮೇಲ್ವರ್ಗ ಪೂಜಿಸುವ ದೇವತೆ ಯಾಗಿ ಪರಿವರ್ತನೆಗೊಂಡಿತು.

ದೇವರಕಾಡಿನ ದೇವ ಮತ್ತು ದೇವತೆಗಳು

ಕೊಡಗು ಜಿಲ್ಲೆಯ ಎಲ್ಲಾ ಮೂರು ತಾಲ್ಲೂಕುಗಳಲ್ಲಿ ಭಿನ್ನ ದೇವತೆಗಳು ಮತ್ತು ಬೇರೆ ಬೇರೆ ಪೂಜಾ ವಿಧಾನಗಳಿವೆ. ದೇವರಕಾಡುಗಳಲ್ಲಿ ಬಹಳಷ್ಟು ದೇವರಕಾಡುಗಳು ಅಯ್ಯಪ್ಪ ದೇವರಿಗೂ, ಭಗವತಿಗೂ, ಭದ್ರಕಾಳಿಗೂ, ಕೆಲವು ಮಾದೇವ ನಿಗೂ, ಚಾಮುಂಡಿ ದೇವತೆಗೂ, ಇನ್ನು ಕೆಲವು ಬುಡಕಟ್ಟು ದೇವತೆಗಳಿಗೂ, ಮಾರಮ್ಮ ದೇವತೆಗೂ ಸ್ಥಾನ ನೀಡಲಾಗಿದೆ. ವಿರಾಜಪೇಟೆ ದೇವರಕಾಡುಗಳಲ್ಲಿ ಕೇರಳದ ಪ್ರಭಾವ ಕಂಡುಬಂದರೆ, ಮಡಿಕೇರಿ ದೇವರಕಾಡುಗಳಲ್ಲಿ ಕೇರಳ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪ್ರಭಾವ ಕಂಡುಬರುತ್ತದೆ. ಮಡಿಕೇರಿಯ ಸಂಪಾಜೆ ಮತ್ತು ತೋಡಿಕಾನ 'ನಾಗಬನ'ಗಳು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ವೆ ಸಾಮಾನ್ಯವಾಗಿದೆ. ಸೋಮವಾರ ಪೇಟೆ ತಾಲ್ಲೂಕಿನ ದೇವರಕಾಡುಗಳಲ್ಲಿ ಮೈಸೂರು ಮತ್ತು ಹಾಸನ ಪ್ರಭಾವ ಕಾಣಬಹುದು. ಈ ದೇವರಕಾಡುಗಳಲ್ಲಿ, ನಂಜುಂಡೇಶ್ವರ, ಮಹಾಲಿಂಗೇಶ್ವರ, ಕೆಂಚಮ್ಮ, ಕುಂತಿಯಮ್ಮ ನಂತಹ ದೇವ ದೇವತೆಗಳಿಗೆ ಪೂಜೆ ಸಲ್ಲಿಸಲಾಗುತ್ತದೆ.

ದೇವರಕಾಡು ಸಂಪ್ರದಾಯ ಮತ್ತು ಸಮುದಾಯಗಳು

ಕೊಡಗಿನ ಮೂಲ ನಿವಾಸಿಗಳಾದ ಕೊಡವ, ಹೆಗ್ಗಡೆ, ಐರಿ, ಕೋಯವ, ಕುಂಬಾರ, ಕುಡಿಯ, ಮಲೆಯ, ಗೊಲ್ಲ, ಕಣಿಯ, ಪಣಿಯ, ಮೇದ, ಮಡಿವಾಳ, ಕೆಂಬಟ್ಟಿ, ಗೌಡ, ಕುರುಬ, ಯರವ, ಜಮ್ಮ ಮಾಪಿಳ್ಳೆ, ಲಿಂಗಾಯಿತ, ಬ್ರಾಹ್ಮಣ, ಇತ್ಯಾದಿ ದೇವರಕಾಡಿನ ಪೂಜೆಗಳಲ್ಲಿ ಭಾಗವಹಿಸಿದ್ದಾರೆ.

ದೇವರಕಾಡಿನಲ್ಲಿರುವ ದೇವಾಲಯಗಳ ಆಚರಣೆಗಳು ಸಂಪ್ರದಾಯದ ಭಾಗವಾಗಿದ್ದು, ವಿವಿಧತೆಯ ನಡುವೆ ಐಕ್ಯತೆ ಯನ್ನು ಸಂಕೇತಿಸುತ್ತದೆ. ಸ್ವಲ್ಪ ಮಟ್ಟಿಗೆ ಕೋಮುಸೌಹಾರ್ದತೆ ಯನ್ನು ಕೂಡಾ ಸಂಕೇತಿಸುತ್ತದೆ. ದೇವರಕಾಡಿನ ಆಚರಣೆ ಗಳನ್ನು ನಿರ್ವಹಿಸಲು ಪ್ರತಿ ಗ್ರಾಮದ ಜನರು ಒಟ್ಟಿಗೆ ಸೇರಿ ಸಮಿತಿ ಮಾಡಿ ದೇವಾಲಯದ ನಿರ್ವಹಣೆ ಆಚರಣೆಗಳನ್ನು ನಿರ್ವಹಿಸುತ್ತಾರೆ. ಸಮಿತಿಯ ಅಧ್ಯಕ್ಷ, ಖಜಾಂಜಿ ಮತ್ತು ಕೆಲವು ಸಂಪ್ರದಾಯದ ಸ್ಥಾನಗಳನ್ನು ಕೆಲವು ಕುಟುಂಬಗಳ ವ್ಯಕ್ತಿಗಳಿಗೆ ಮಾತ್ರ ನೀಡಲಾಗುತ್ತದೆ. ನೃತ್ಯ ಮತ್ತು ಹಾಡು ಇಲ್ಲದ ದೇವರಕಾಡಿನ ಹಬ್ಬ ಸಂಪೂರ್ಣವಾಗುವುದಿಲ್ಲ. ದೇವರಕಾಡು ಸಂಪ್ರದಾಯವು ಹಳ್ಳಿಗರಲ್ಲಿ ಐಕ್ಯತೆಯನ್ನು ಮೂಡಿಸುವಲ್ಲಿ ಪ್ರಮುಖವಾಗಿದೆ ಎಂದರೆ ತಪ್ಪಾಗಲಾರದು. ಎಲ್ಲಿ ಏಕತೆ ಇಲ್ಲ, ಅಲ್ಲಿ ದೇವರಕಾಡು ಸಂಪ್ರದಾಯ ಪ್ರಾಮುಖ್ಯತೆ ಕಳೆದುಕೊಳ್ಳುತ್ತದೆ.

ರಾಜಕೀಯ, ಸಾಮಾಜಿಕ ಕಾರಣಗಳಲ್ಲದೆ, ಆಂಗ್ಲರು ರೂಪಿಸಿದ ಕಾಫಿ ಬೆಳೆದು ಪಡೆವ ಉತ್ಪನ್ನದ ಆರ್ಥಿಕ ಕಾರಣ

ಗಳಿಂದಾಗಿ ದೇವರಕಾಡುಗಳು ಆಕ್ರಮಣಗೊಂಡಿದ್ದರೂ, ಅನೇಕ ಕಡೆ ಇಂದು ಆಯಾ ಗ್ರಾಮೀಣರೇ ಪರಿಸರ ನಿರ್ವಹಣೆಯ ಕಲ್ಪನೆಯಿಂದಾಗಿ ಅದನ್ನು ತೆರವು ಮಾಡಿಸುವ ಸಾಮೂಹಿಕ ಪ್ರಯತ್ನಗಳನ್ನು ಮಾಡಲಾಗುತ್ತದೆ. ಹಾಗಾಗಿ, ದೇವರಕಾಡುಗಳು ಇರುವಷ್ಟರಲ್ಲಿ ಉಳಿದುಕೊಳ್ಳುವ ಸಂದರ್ಭ ಸಂತೋಷಕರವೆನಿಸುತ್ತದೆ.

ಮೊದಲಿಗೆ ಒಂದೊಂದು ಊರಿನ ಒಂದೊಂದು ಕುಲವು ದೇವರಿಗೆಂದು ಕಾಡು ನೆಲೆ ಬಿಟ್ಟುಕೊಡುತ್ತಿದ್ದರು. ದೇವರಲ್ಲಿದ್ದ ನಂಬಿಕೆಯ ಕಾರಣ, ಆ ಹೆಸರಿನಲ್ಲಿ ಪರಿಸರ ನಿರ್ವಹಣೆಗೆ ಕಾರಣವಾಗುತ್ತಿದ್ದರು. ಆಧುನಿಕ ರೂಪದಲ್ಲಿ ಅದು ಇಂದಿನ ವ್ಯವಸ್ಥೆಗೆ ಅಂದರೆ (ರಿಸರ್ವ್ ಫಾರೆಸ್ಟ್ ರಕ್ಷಿತಾರಣ್ಯ) ಅನುಗುಣ ರೂಪ ಪಡೆದಿದೆ. ಆದರೆ "ರಕ್ಷಿತಾ ದೇವರಕಾಡು", "ರಕ್ಷಿತ ಪವಿತ್ರ ವನ" ಎಂಬ ಹೆಸರಿನಲ್ಲಿ ಉಳಿದರೆ, ಸಮಾಜದ ಐಕ್ಯತೆಯ ಪ್ರತೀಕವಾಗಬಹುದು.

ಆಧಾರಸೂಚಿ

೧. ಸೂರ್ಯನಾಥ ಕಾಮತ್, *ಕರ್ನಾಟಕ ರಾಜ್ಯ ಗೆಜ್ಜೆಟಿಯರ್, ಕೊಡಗು ಜಿಲ್ಲೆ*, ೧೯೯೩.

೨. ಕೆ. ಪ್ರಭಾಕರ ಆಚಾರ್, *ಪಶ್ಚಿಮಘಟ್ಟ–ಪಶ್ಚಿಮ ಕರಾವಳಿಯ ಜೀವವೈವಿಧ್ಯ ಒಂದು ಅವಲೋಕನ*, ದಿಗಂತ ಮುದ್ರಣ, ಮಂಗಳೂರು, ೨೦೦೪.

೩. ರಿಕ್ಟರ್ ಜಿ. *ಗೆಜ್ಜೆಟಿಯರ್ ಆಫ್ ಕೂರ್ಗ್*, ೧೮೭೦.

೪. ಜಿ.ಯ್.ಸಿನ್ಹಾ, *ಬ್ರಿಟಿಷ್ ಇಂಡಿಯಾಸ್ ಫಾರೆಸ್ಟ್‌ರಿ ಆಂಡ್ ಮೊರ್ಡನ್ ಎನ್‌ವಾನಮೆಂಟಲಿಸಮ್.*

೫. ಅಜ್ಜಂಪುರ ಕೃಷ್ಣಸ್ವಾಮಿ, ಅರಣ್ಯಶಾಸ್ತ್ರ ಸರ್ವನಾಭ ಮುದ್ರಣ, ಬೆಂಗಳೂರು, ೧೯೯೮.

೬ ರಾಮಸ್ವಾಮಿ.ಎಸ್.ಎನ್., *ಕರ್ನಾಟಕ ಅರಣ್ಯ ವೃಕ್ಷಗಳು*, ಪ್ರಸಾರಾಂಗ ಮೈಸೂರು, ೧೯೬೯.

೭. ಐ.ಎಮ್. ಮುತ್ತಣ್ಣ, *ಎ ಟೈನಿ ಸ್ಟೇಟ್ ಆಫ್ ಸೌತ್ ಇಂಡಿಯಾ*, ೧೯೫೩.

೮. ನಂಜುಂಡಯ್ಯ. ಸಿ., *ಫಾರೆಸ್ಟ್ ಎನ್‌ವಾಯಿರ್‌ನಮೆಂಟ್ ಆಂಡ್ ಲೋಕಲ್ ಕಮ್ಯುನಿಟಿ – ಎ ಕೇಸ್ ಸ್ಟಡಿ ಆಫ್ ಕೂರ್ಗ್*, ಮೈಸೂರು ವಿಶ್ವವಿದ್ಯಾನಿಲಯ, ೨೦೦೪.

೯. ಕೆ.ಪಿ. ಮೋಹನ್, *ಕೊಡಗಿನಲ್ಲಿ ಅರಣ್ಯ ಆಡಳಿತ ಒಂದು ಅಧ್ಯಯನ ೧೮೦೦–೧೯೪೭* (ಅಪ್ರಕಟಿತ ಮಹಾಪ್ರಬಂಧ), ಮಂಗಳೂರು ವಿಶ್ವವಿದ್ಯಾನಿಲಯ, ೨೦೧೦.

೧೦. ರಾಮಚಂದ್ರ ಗುಹ ಮತ್ತು ಮಾಧವ ಗಾಡ್ಗೀಳ್, *ದಿಸ್ ಫಿಸುರ್ಸ್‌ಲ್ಯಾಂಡ್ ಆನ್ ಇಕೊಲಾಜಿಕಲ್ ಹಿಸ್ಟರಿ ಆಫ್ ಇಂಡಿಯಾ*, ೧೯೯೨.

೧೧. ಮಾಧವ ಗಾಡ್ಗೀಳ್ ಮತ್ತು ರಾಮಚಂದ್ರ, *ಸ್ಟೇಟ್ ಫಾರೆಸ್ಟರ್ ಅಚಿಡ್ ಸೋಷಿಯಲ್ ಕನ್‌ಪ್ಲಿಟ್ ಬ್ರಿಟಿಷ್ ಇಂಡಿಯಾ*, ೧೯೮೯.

೧೨. ವಿಯಜ.ಟಿ.ಪಿ., ಆಧುನಿಕ ಕೊಡಗು, ೨೦೦೦.

೧೩. ಎಸ್. ರಾಘವೇಂದ್ರ ಮತ್ತು ಡಾ. ಸಿ.ಜಿ. ಕುಶಾಲಪ್ಪ, *ದೇವರಕಾಡು (ಪವಿತ್ರ ಅರಣ್ಯ) ಆಫ್ ಕೊಡಗು – ಎ ಲಿವಿಂಗ್ ಟ್ರೆಡಿಷನ್ ಆಫ್ ಕಮ್ಯುನಿಟಿ ಲಿಂಕಡ್ ಕನ್ಸ್‌ರ್ವೇಷನ್.*

೧೪. ಎಂ.ಜಿ. ನಾಗರಾಜ್, ಕೊಡಗಿನ ಹಾಲೇರಿ ರಾಜವಂಶ ಭಾಗ ೧, ಪ್ರಕಾಶಕ, ಪ್ರಾಚೀನ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ. ಪುಟ ಸಂಖ್ಯೆ ೩೨೪ರಿಂದ ೩೨೮.

೧೫. ಎಂ.ಜಿ. ನಾಗರಾಜ್, ಹಾಲೇರಿ ವಂಶ ಭಾಗ ೨, ೨೦೦೪.

೧೬. ಎಂ.ಎನ್. ಶ್ರೀನಿವಾಸ, *ರಿಲಿಜನ್ ಏಂಡ್ ಸೊಸೈಟಿ ಅಮಂಗ್ ಕೂರ್ಗ್ಸ್ ಆಫ್ ಸೌತ್ ಇಂಡಿಯಾ*, ೧೯೫೨.

೧೭. ಭಗವತ್ ಎಸ್.ಎ. ಮತ್ತು ಸಿ.ಜಿ. ಕುಶಾಲಪ್ಪ, *ಸೆಕ್ರೇಡ್ ಗ್ರೋವ್ಸ್ ಆಫ್ ಕೊಡಗು*, ೨೦೦೪.

೬೩

ಬೆಟ್ಟದ ಮಲ್ಲೇನಹಳ್ಳಿಯ ವೀರಗಾರರ ನೆತ್ತು ಹಾಗು ಎಚ್.ಎನ್. ಕಾವಲಿನ ಪ್ರಾಚೀನ ದೇವಾಲಯದ ಅವಶೇಷಗಳು

ಮುಹಮ್ಮದ್ ಕಲೀಂಉಲ್ಲ*

ನಾಗಮಂಗಲ ತಾಲ್ಲೂಕು ಮಂಡ್ಯ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದು ಪ್ರಮುಖವಾದ ತಾಲ್ಲೂಕು. ಕರ್ನಾಟಕವನ್ನಾಳಿದ ಪ್ರಮುಖ ರಾಜವಂಶಗಳಾದ ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ದೊರೆಗಳು ಹಾಗು ಹೈದರ್ ಮತ್ತು ಟಿಪ್ಪುಸುಲ್ತಾನರು ಈ ಪ್ರದೇಶವನ್ನಾಳಿದ್ದಾರೆ. ಇದರ ಕುರುಹಾಗಿ ಸುಮಾರು ೧೮೫ ಶಾಸನಗಳು ಹಾಗೂ ಅನೇಕ ಸ್ಮಾರಕಗಳು ತಾಲ್ಲೂಕಿನಾದ್ಯಂತ ಹರಡಿಕೊಂಡಿವೆ. ಇದಲ್ಲದೆ ಅಸಂಖ್ಯಾತ ವೀರಗಲ್ಲುಗಳು ಹಾಗೂ ಮಾಸ್ತಿಕಲ್ಲುಗಳು ಈ ಪ್ರದೇಶದ ಕಲಿತನದ ಪರಿಚಯ ವನ್ನು ಮಾಡಿಕೊಡುತ್ತವೆ.

ಬೆಟ್ಟದಮಲ್ಲೇನಹಳ್ಳಿ ಗ್ರಾಮ ನಾಗಮಂಗಲ ಪಟ್ಟಣದ ಪಶ್ಚಿಮಕ್ಕಿರುವ ಒಂದು ಪುಟ್ಟ ಗ್ರಾಮ. ಸುಮಾರು ಎರಡು ಕಿಲೋಮೀಟರ್ ದೂರದಲ್ಲಿದೆ. ಉತ್ತರಕ್ಕೆ ಸಿಂಗರಸನ ಕೆರೆಯಿದೆ. ದಕ್ಷಿಣಕ್ಕೆ ನಾಗಮಂಗಲದ ಸೂಳೆಕೆರೆಯ ದರ್ಶನ ವಾಗುತ್ತದೆ. ದಕ್ಷಿಣದ ಗುಡ್ಡದ ಪಾದದಲ್ಲಿ ಜಡೆಮುನೇಶ್ವರಸ್ವಾಮಿ ದೇವಾಲಯ ಹಾಗು ಅದೇ ಗುಡ್ಡದ ಮೇಲೆ ಮುಸ್ಲಿಮರ ದರ್ಗ ಒಂದಿದೆ. ಬೆಟ್ಟದಮಲ್ಲೇನಹಳ್ಳಿ ಗ್ರಾಮದ ಪೂರ್ವಕ್ಕೆ ಒಂದು ಗುಡ್ಡ ಹಾಗು ಪಶ್ಚಿಮಕ್ಕೆ ಒಂದು ಪುಟ್ಟ ಕೆರೆಯಿದೆ. ಗುಡ್ಡದ ಮೇಲೆ ಎರಡು ದೇವಾಲಯಗಳಿವೆ. ಇದರಲ್ಲಿ ಒಂದು ಶ್ರೀ ಬೇಟೆರಾಯಸ್ವಾಮಿ ಮತ್ತೊಂದು ಮಾರುತಿ ದೇವಾಲಯ.

ಊರಿನ ಕೆರೆಯ ಬಳಿ ಹಿಪ್ಪೆ ಮರಗಳ ಕೆಳಗೆ ಅಸಂಖ್ಯಾತ ವೀರಗಲ್ಲುಗಳಿವೆ. ವೀರಗಲ್ಲುಗಳಲ್ಲಿ ಕೆಲವು ಮಾತ್ರ ಯುದ್ಧದಲ್ಲಿ ಮಡಿದ ವೀರರ ನೆನಪಿಗೆ ನೆಟ್ಟ ಸ್ಮಾರಕಗಳಾಗಿವೆ. ಉಳಿದವು ವೀರರ ನೆತ್ತುಗಳು. ಡಾ. ಶೇಷಶಾಸ್ತ್ರಿಯವರು ತಮ್ಮ ಕರ್ನಾಟಕದ ವೀರಗಲ್ಲುಗಳು ಎಂಬ ಕೃತಿಯಲ್ಲಿ ವೀರಗಾರರ ನೆತ್ತುಗಳ ಬಗ್ಗೆ ವಿವರಣೆ ನೀಡಿದ್ದಾರೆ. ಅವಿವಾಹಿತ ಯುವಕರು ಮರಣ ಹೊಂದಿದಾಗ ಅವರ ನೆನಪಿಗೆ ನೆಡುವ ವೀರಗಲ್ಲುಗಳಿಗೆ ಹೋಲುವಂತಹ ಕಲ್ಲುಗಳ ಸಮೂಹಕ್ಕೆ ವೀರಗಾರರನೆತ್ತು ಎನ್ನುತ್ತಾರೆ. ಡಾ. ಶೇಷಶಾಸ್ತ್ರಿಯವರು ಈ ಸಂಪ್ರದಾಯ ಕೋಲಾರ ಜಿಲ್ಲೆಯ ಕುರುಬ ಸಮಾಜದಲ್ಲಿ ಕಂಡುಬಂದಿದೆ ಎನ್ನುತ್ತಾರೆ. ಆದರೆ ಬೆಟ್ಟದಮಲ್ಲೇನಹಳ್ಳಿ ಗ್ರಾಮದಲ್ಲಿ ಈ ಸಂಪ್ರದಾಯವನ್ನು ಒಕ್ಕಲಿಗ ಜನಾಂಗದವರು ಪಾಲಿಸಿಕೊಂಡು ಬಂದಿದ್ದಾರೆ. ಹಾಗಾಗಿ ಇಲ್ಲಿರುವ ವೀರಗಲ್ಲುಗಳು ಒಕ್ಕಲಿಗ ಜನಾಂಗದವರಿಗೆ ಸೇರಿದ ಸ್ಮಾರಕಗಳಾಗಿವೆ. ಸತ್ತವ್ಯಕ್ತಿಗಳ ಸ್ಮಾರಕಗಳನ್ನು ನಿರ್ಮಿಸುವುದು. ಅವರಿಗಾಗಿ ಗುಡಿಗಳನ್ನು ನಿರ್ಮಿಸಿ ಆರಾಧಿಸುವುದು. ಅವರಲ್ಲಿ ಪವಾಡಗಳನ್ನು ಕಾಣು ವುದು ಸಾಮಾನ್ಯವಾಗಿದೆ. ಭೂತ ಪ್ರೇತಗಳ ಬಗ್ಗೆ ಜನರಿಗಿರುವ ಭಯದಿಂದಾಗಿ ಸತ್ತವ್ಯಕ್ತಿಯ ಶಿಲೆಯನ್ನು ಹಾಕಿಸಿ ವೀರನ ಆತ್ಮವನ್ನು ಅದರಲ್ಲಿ ಆವಾಹನೆ ಮಾಡಿ ಆತನ ಆತ್ಮವು ಆ ಶಿಲೆಯಲ್ಲಿ ಬಂಧನದಲ್ಲಿದೆ ಎಂದು ನಂಬಿ ಅದಕ್ಕೆ ಪೂಜೆ ಸಲ್ಲಿಸುವ, ಎಡೆ ಇಡುವ ಹಾಗು ವಾರ್ಷಿಕ ಜಾತ್ರೆಗಳನ್ನು ನಡೆಸುವ ಪದ್ಧತಿ ಈಗಲೂ ಜೀವಂತವಾಗಿದೆ. ಇಂತಹ ಕಲ್ಲು ಗಳೇ ಕೆಲವು ಕಡೆ ಗ್ರಾಮ ದೇವತೆಗಳಾಗಿ ಪರಿಗಣಿಸಲ್ಪಡುತ್ತಿವೆ.

ಹೀಗೆ ಬಾಳಿನಲ್ಲಿ ಅನೇಕ ಆಸೆ ಆಕಾಂಕ್ಷೆಗಳನ್ನಿಟ್ಟುಕೊಂಡು ಸತ್ತ ಅವಿವಾಹಿತ ಯುವಕರು ಎಲ್ಲಿ ತಮ್ಮನ್ನು ಕಾಡುತ್ತಾರೋ ಎಂಬ ಭಯದಿಂದಾಗಿ ಈ ವೀರಗಲ್ಲುಗಳನ್ನು ಪ್ರತಿಷ್ಠಾಪಿಸುವ ಸಂಪ್ರದಾಯ ಈ ಗ್ರಾಮದಲ್ಲಿ ಕಂಡುಬಂದಿದೆ. ಇಲ್ಲಿ ವಾಸಿಸುವ ಜನಾಂಗವಾದ ಒಕ್ಕಲಿಗರು ಈ ಸಂಪ್ರದಾಯವನ್ನು ಇಲ್ಲಿ ಪಾಲಿಸಿಕೊಂಡು ಬಂದಿದ್ದರೆ. ಆದರೆ ಮೇಲುಕೋಟೆಯ ಸಮೀಪದ ಕಟ್ಟಿಗೆರೆ ಎಂಬ ಗ್ರಾಮದ ಪರಿಶಿಷ್ಟ ಜನಾಂಗದವ ರಲ್ಲಿಯೂ ಈ ಸಂಪ್ರದಾಯ ಕಂಡುಬಂದಿದೆ.

ಬೆಟ್ಟದ ಮಲ್ಲೇನಹಳ್ಳಿಯ ಗ್ರಾಮದ ಹಿರಿಯರ ಪ್ರಕಾರ ಈ ಗ್ರಾಮದಲ್ಲಿ ಹಿಂದೆ ಹಕ್ಕಿಕಾರ ಒಕ್ಕಲಿಗರು ಎಂಬ ಪಂಗಡ ದವರಿದ್ದರು. ಅವರು ಈ ಊರಿನ ಮೂಲನಿವಾಸಿಗಳು. ಆದರೆ ಆ ಪಂಗಡದವರು ಈಗ ಈ ಊರಿನಲ್ಲಿ ಯಾರೂ ಇಲ್ಲ. ಅವರೆಲ್ಲ ಈಗ ತುಮಕೂರು ಜಿಲ್ಲೆಯ ಮಾಯಸಂದ್ರ, ಗುಬ್ಬಿ ಹಾಗು ತಿಪಟೂರು ಮುಂತಾದ ಕಡೆ ವಲಸೆ ಹೋಗಿ ದ್ದಾರೆ. ಈಗ ಈ ಊರಲ್ಲಿ ಒಕ್ಕಲಿಗರಲ್ಲಿ ನಾಲ್ಕು ಪಂಗಡದ ಜನ ಇದ್ದಾರೆ.

* ಎಂ.ಜಿ. ಕೊಪ್ಪಲ್ ಕ್ರಾಸ್, ಮಂಡ್ಯ ರಸ್ತೆ, ನಾಗಮಂಗಲ-೫೭೧೪೩೨.

೧. ಪಟೇಲ್ ಕಾರೇಗೌಡರ ವಂಶ

೨. ಕುಳ್ಳೇಗೌಡರ ವಂಶ

೩. ಹಲಗೇಗೌಡರ ವಂಶ

೪. ಕಲ್ಲೇಗೌಡರ ಹನುಮೇಗೌಡರ ವಂಶ

ಈ ಮೇಲ್ಕಂಡ ನಾಲ್ಕು ತೆಂಡೆಗಳಲ್ಲಿ ಕ್ರಮವಾಗಿ ಮೂರು ತೆಂಡೆಯ ಮೂಲದವರು ಸಹೋದರರು. ಹಾಗಾಗಿ ಈ ಮೂರು ತೆಂಡೆಗಳಲ್ಲಿ ಪರಸ್ಪರ ವೈವಾಹಿಕ ಸಂಬಂಧಗಳಿಲ್ಲ. ಕುತೂಹಲದ ಸಂಗತಿ ಎಂದರೆ ಈ ಮೂರು ತೆಂಡೆಯ ವೀರಗಲ್ಲುಗಳು ಪ್ರತ್ಯೇಕವಾದ ಒಂದು ನಿರ್ದಿಷ್ಟ ಪ್ರದೇಶದಲ್ಲಿವೆ. ಹಾಗು ಇವುಗಳಿಗೆ ಎಡೆಯನ್ನು ಆಯಾ ತೆಂಡೆಯವರು ಮಾತ್ರ ಹಾಕುತ್ತಾರೆ. ಕಲ್ಲೇಗೌಡರ ಹನುಮೇಗೌಡರ ವಂಶಸ್ಥರು ಈ ಊರಿಗೆ ನಂತರ ಬಂದವರು. ಈ ವಂಶಸ್ಥರೊಡನೆ ಬೇರೆ ಮೂರು ತಂಡದವರು ವೈವಾಹಿಕ ಸಂಬಂಧವನ್ನು ಇಟ್ಟು ಕೊಂಡಿದ್ದಾರೆ. ಆದರೆ ಹನುಮೇಗೌಡರ ವಂಶದವರ ಯಾವುದೇ ವೀರಗಲ್ಲುಗಳಿಲ್ಲ.

ಅನೇಕ ವೀರಗಲ್ಲುಗಳು ನಾಶವಾಗಿವೆ. ಬಹುತೇಕ ವೀರಗಲ್ಲುಗಳು ನೆಲದಲ್ಲಿ ಹುದುಗಿಹೋಗಿವೆ.

ಸಾಮಾನ್ಯವಾಗಿ ವೀರಗಲ್ಲುಗಳಲ್ಲಿರುವ ಎಲ್ಲಾ ಲಕ್ಷಣ ಗಳು ಇಲ್ಲಿಯ ವೀರಗಲ್ಲುಗಳಲ್ಲಿವೆ. ಪ್ರತಿ ಕಲ್ಲುಗಳಲ್ಲೂ ಮೂರು ಹಂತಗಳಿದ್ದು ಕೆಳಹಂತದಲ್ಲಿ ಮೂರು ವ್ಯಕ್ತಿಗಳು ನಿಂತಿರುವ ಭಂಗಿ ಇದೆ. ಮಧ್ಯದ ಹಂತದಲ್ಲಿ ಪುಷ್ಪಕವಿಮಾನ ಹಾಗು ಅಪ್ಸರೆಯರನ್ನು ಕೆತ್ತಲಾಗಿದೆ. ಮೇಲಿನ ಹಂತದಲ್ಲಿ ನಂದಿ, ಶಿವಲಿಂಗ ಹಾಗು ಲಿಂಗವನ್ನು ಪೂಜಿಸುತ್ತಿರುವ ವ್ಯಕ್ತಿ ಮತ್ತು ಲಿಂಗದ ಎದುರಿನಲ್ಲಿ ಇಬ್ಬರು-ಮೂವರು ವ್ಯಕ್ತಿಗಳು ಕೈ ಜೋಡಿಸಿಕೊಂಡು ಕುಳಿತಿರುವಂತೆ ಕೆತ್ತಲಾಗಿದೆ.

ಈ ವೀರಗಲ್ಲುಗಳಿಗೆ ಇಲ್ಲಿಯ ಜನ ಯುಗಾದಿ ಹಾಗು ಮಹಾನವಮಿ ಹಬ್ಬದ ಸಂದರ್ಭದಲ್ಲಿ ಎಡೆಇಟ್ಟು ಆರತಿ ಬೆಳಗುತ್ತಾರೆ. ಈ ಹಬ್ಬವನ್ನು ವಡೆಕಜ್ಜಾಯದ ಹಬ್ಬ ಎಂದು ಕರೆಯುತ್ತಾರೆ. ಯುಗಾದಿ ಹಬ್ಬದಲ್ಲಿ ಒಬ್ಬಟ್ಟು, ಚಿತ್ರಾನ್ನದ ಎಡೆಯನ್ನು ಈ ಕಲ್ಲುಗಳಿಗಿಡುತ್ತಾರೆ.

ಇದೇ ಪ್ರದೇಶದಲ್ಲಿ ಬಹುಶಃ ಹೊಯ್ಸಳರ ಕಾಲದೆಂದು ಅಂದಾಜು ಮಾಡಬಹುದಾದ ಮೂರು ವೀರಗಲ್ಲುಗಳಿವೆ. ಇವು ತುಂಬ ಸುಂದರವಾಗಿದ್ದು ಸಿಂಹಲಲಾಟವನ್ನು ಹೊಂದಿವೆ. ಆದರೆ ಇವುಗಳಲ್ಲಿ ಸಾಮಾನ್ಯವಾಗಿ ವೀರಗಲ್ಲುಗಳಲ್ಲಿ ಇರುವಂತೆ ಸ್ವರ್ಗಾರೋಹಣದ ದೃಶ್ಯವನ್ನು ಕೆತ್ತಲಾಗಿಲ್ಲ. ಮಧ್ಯದ ಮತ್ತು ಕೆಳಗಿನ ಪಟ್ಟಿಗಳಲ್ಲೂ ಯುದ್ಧದ ಸನ್ನಿವೇಶವನ್ನು ಕೆತ್ತಲಾಗಿದೆ. ಈ ವೀರಗಲ್ಲುಗಳಿಗೆ ಈ ಗ್ರಾಮದ ಮೂಲನಿವಾಸಿ ಗಳೆಂದು ಹೇಳಲಾದ ಹಳ್ಳಿಕಾರ ಒಕ್ಕಲಿಗರು ವರ್ಷಕ್ಕೊಮ್ಮೆ ಬಂದು ಎಡೆ ಇಡುತ್ತಾರೆ. ಇವರಿಗೆ ಬೆಟ್ಟದ ಮೇಲಿರುವ ಬ್ಯಾಟರಾಯಸ್ವಾಮಿಯೇ ಮನೆ ದೇವರು. ಹಾಗಾಗಿ ಮನೆದೇವರ ದರ್ಶನಕ್ಕೆ ಬರುವ ಇವರು ಈ ವೀರಗಲ್ಲುಗಳಿಗೆ ಎಡೆಇಟ್ಟು ಹೋಗುತ್ತಾರೆ.

ಕದ್ಲಿಗೆರೆ ಗ್ರಾಮದಲ್ಲಿ ಮೂಗುಮಾರಮ್ಮ ದೇವಾಲಯದ ಬಳಿ ಬೇವಿನ ಮರದ ಕೆಳಗೆ ಬಹಳಷ್ಟು ವೀರಗಲ್ಲುಗಳಿದ್ದವು. ಇಲ್ಲಿಯ ವೀರಗಲ್ಲುಗಳೂ ಸಹ ವೀರಗಾರರ ನೆತ್ತುಗಳಾಗಿದ್ದವು. ಸ್ಥಳೀಯ ನಾಗರಾಜುರವರು ಈ ಸ್ಮಾರಕಗಳ ಬಗ್ಗೆ ವಿವರಣೆ ನೀಡುತ್ತಾ ಮದುವೆ ಆಗದೆ ನಿಧನ ಹೊಂದಿದ ಯುವಕರ ಸ್ಮರಣಾರ್ಥ ನೆಡುವ ಕಲ್ಲುಗಳೆಂದೂ, ಇವುಗಳನ್ನು ವೀರಗಲ್ಲು ಅಥವ ವೀರಮಕ್ಕಳ ಕಲ್ಲು ಎಂದು ಕರೆಯುತ್ತಾರೆ ಎಂಬ ವಿಷಯ ತಿಳಿಸಿದರು. ಈ ವೀರಗಲ್ಲುಗಳು ಪರಿಶಿಷ್ಟ ಜನಾಂಗಕ್ಕೆ ಸೇರಿದ ಸ್ಮಾರಕಗಳಾಗಿವೆ. ಈ ಊರಿನಲ್ಲಿ ಪರಿಶಿಷ್ಟ ಜನಾಂಗಕ್ಕೆ ಸೇರಿದವರಲ್ಲಿ ಮೂರು ಪಂಗಡಗಳಿವೆ,

೧. ತಿಪ್ಪನ ನರಸಿಂಹಯ್ಯನ ಪಂಗಡ.

೨. ಸಿಂಗಯ್ಯನ ದಾಸಯ್ಯನ ಪಂಗಡ.

೩. ನಡಕ್ಲಹಟ್ಟಿ ಪಂಗಡ.

ಮೇಲ್ಕಂಡ ಮೂರೂ ತೆಂಡೆಯವರು ನಿರ್ದಿಷ್ಟವಾಗಿ ಪ್ರತ್ಯೇಕವಾಗಿರುವ ತಮ್ಮ ತಮ್ಮ ತೆಂಡೆಯ ವೀರಗಲ್ಲುಗಳಿಗೆ ಮಹಾನವಮಿ, ಯುಗಾದಿ ಹಾಗು ಏಕಾದಶಿ ಹಬ್ಬಗಳಂದು ಎಡೆ ಇಡುತ್ತಾರೆ. ಮಹಾನವಮಿಯಂದು ಮಾಂಸಾಹಾರದ ಎಡೆಯಾದರೆ ಉಳಿದಂತೆ ಸಿಹಿ ಊಟದ ಎಡೆ. ಪರಿಶಿಷ್ಟ ಜಾತಿಯ ಸುಮಾರು ಎಪ್ಪತ್ತು ವರ್ಷದ ಶ್ರೀ ಸಣ್ಣಪ್ಪನವರ ಪ್ರಕಾರ ಈ ಆಚರಣೆ ಇವರ ಜನಾಂಗದಲ್ಲಿ ಮಾತ್ರ ಈ ಊರಿನಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇಂದಿನ ದಿನಗಳಲ್ಲಿ ಈ ಸಂಪ್ರದಾಯವನ್ನು ಇವರೂ ಸಹ ಕೈಬಿಟ್ಟಿದ್ದಾರೆ. ಆದರೆ ಎಡೆ ಇಡುವುದನ್ನು ಮಾತ್ರ ಮುಂದು ವರಿಸಿಕೊಂಡು ಬಂದಿದ್ದಾರೆ. ಈ ಗ್ರಾಮದ ಬೇರೆ ಜನಾಂಗ ದಲ್ಲಿ ಈ ಪದ್ಧತಿ ಇಲ್ಲ.

ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿಯ ಎಚ್.ಎನ್. ಕಾವಲು ಅರಣ್ಯದ ಮಧ್ಯದಲ್ಲಿರುವ ಪ್ರಾಚೀನ ದೇವಾಲಯದ ಅವಶೇಷಗಳು

ಈ ಕಾಡುಪ್ರದೇಶವು ವಿಜಯನಗರದ ಅರಸರ ಕಾಲ ದಲ್ಲಿ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಅವರ ಕಾಲದಲ್ಲಿ ನಿರ್ಮಿತವಾದ ಸುಮಾರು ಏಳು ದೇವಾಲಯಗಳು ಇಲ್ಲಿಯ ಪರಿಸರದಲ್ಲಿವೆ. ಈ ದೇವಾಲಯಗಳು ನಿರ್ಮಾಣದಲ್ಲಿ ಒಂದಕ್ಕೊಂದು ಹೋಲುತ್ತವೆ. ಇದಲ್ಲದೆ ಸಮೀಪದ ದೇವರ ಹಕ್ಕಿ ಗ್ರಾಮದಲ್ಲಿ [illegible] ಕಂಬಗಳ ತಪಸೀರಾಯ ಸ್ವಾ

ದೇವಾಲಯವಿದೆ. ದೇವಲಾಪುರದ ಲಕ್ಷ್ಮೀಕಾಂತ ದೇವಾಲಯವೂ ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ನಿರ್ಮಾಣಗೊಂಡ ದೇವಾಲಯವಾಗಿದೆ. ದೇವಲಾಪುರದ ಕೆರೆಯಲ್ಲಿ ಕೋಡಿತಿರುಮಲಸ್ವಾಮಿ ದೇವಾಲಯವಿದ್ದು ಅದನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯಗಳಲ್ಲಿ ವಿಜಯನಗರದ ಆಳರಸರ ಕಾಲದ ಶಾಸನಗಳೂ ಇವೆ. ದೇವಲಾಪುರದ ಲಕ್ಷ್ಮೀಕಾಂತ ದೇವಾಲಯದಲ್ಲಿ ಸಾಳುವ ನರಸಿಂಗ ದೇವನ ಆಳ್ವಿಕೆಯನ್ನು ಧೃಡಪಡಿಸುವ ಕ್ರಿ.ಶ. ೧೪೭೨ರ ಶಾಸನವಿದೆ. ಹಾಗೆಯೇ ದೇವರಹಳ್ಳಿಯ ತಪಸೀರಾಯಸ್ವಾಮಿ ದೇವಾಲಯದಲ್ಲಿ ವಿಜಯನಗರದ ಅಚ್ಯುತರಾಯನ ಆಳ್ವಿಕೆಯ ಕಾಲದ ಕ್ರಿ.ಶ. ೧೫೩೭ರ ಶಾಸನವಿದೆ. ದೇವರಮಾದಹಳ್ಳಿ ಗ್ರಾಮದಲ್ಲಿ ಕ್ರಿ.ಶ. ೧೫೫೭ ಹಾಗು ದೊಂದೆಮಾದಹಳ್ಳಿ ಗ್ರಾಮದಲ್ಲಿ ಕ್ರಿ.ಶ. ೧೫೨೧ರ ಶಾಸನವಿದೆ. ಇವೆಲ್ಲ ಶಾಸನಗಳಿಂದ ಈ ಪ್ರದೇಶವು ವಿಜಯನಗರದ ಅರಸರ ಆಳ್ವಿಕೆಯ ಪ್ರಭಾವಕ್ಕೆ ಒಳಪಟ್ಟ ಪ್ರದೇಶವೆಂದು ಇದರಿಂದ ತಿಳಿದುಬರುತ್ತದೆ. ಇವೆಲ್ಲ ವೈಷ್ಣವ ದೇವಾಲಯಗಳು.

ದೇವಾಲಯದ ವಿವರ: ಈ ದೇವಾಲಯವು ಸುಮಾರು ಹತ್ತು ಅಡಿ ಎತ್ತರದ ವೇದಿಕೆಯ ಮೇಲಿದೆ. ದೇವಾಲಯ ಅತ್ಯಂತ ಶಿಥಿಲಾವಸ್ಥೆಯಲ್ಲಿದೆ. ಇದರ ಶಿಖರ ಬಹುತೇಕ ಜೀರ್ಣವಾಗಿದೆ. ಗರ್ಭಗುಡಿಯಲ್ಲಿ ಯಾವುದೇ ವಿಗ್ರಹವಿಲ್ಲ. ದೇವಾಲಯದ ನವರಂಗದ ಕಂಬಗಳಲ್ಲಿರುವ ಶಿಲ್ಪಗಳಿಂದಾಗಿ ಇದೊಂದು ವೈಷ್ಣವ ದೇವಾಲಯವೆಂದು ನಿರ್ಧರಿಸಬಹುದು. ಇದೇ ಪರಿಸರದಲ್ಲಿ ಈ ದೇವಾಲಯವನ್ನು ಹೋಲುವ ವಿಜಯನಗರದ ಆಳ್ವಿಕೆಯ ಕಾಲದಲ್ಲಿ ನಿರ್ಮಿಸಲ್ಪಟ್ಟಿರುವ ಬಹಳಷ್ಟು ದೇವಾಲಯಗಳಿವೆ. ಹಾಗಾಗಿ ಈ ದೇವಾಲಯವೂ ಅದೇ ಸಂದರ್ಭದಲ್ಲಿ ನಿರ್ಮಾಣವಾಗಿರುವ ದೇವಾಲಯವೆಂದು ಊಹಿಸಬಹುದು.

ನವರಂಗದ ಎರಡು ಗೋಡೆಗಳ ಮೇಲೂ ಪೆಂಗೋಲಿನ್ ಪ್ರಾಣಿಯ ಚಿತ್ರವನ್ನು ಕೆತ್ತಿದ್ದಾರೆ.

ದೇವಾಲಯದ ಕಂಬಗಳಲ್ಲಿರುವ ಉಬ್ಬುಶಿಲ್ಪಗಳ ವಿವರ

ನಾಗನಾಗಿನಿ, ಕಾಳಿಂಗ ಮರ್ಧನ, ಗಣಪತಿ, ಪುಷ್ಪದ ಕೆತ್ತನೆ, ಹಸುವು ತನ್ನ ಕಾಲನ್ನು ಸರಿಸಿ ತನ್ನ ಕರುವಿಗೆ ಹಾಲುಣಿಸುತ್ತಿರುವ ಚಿತ್ರ. ವ್ಯಕ್ತಿಯೊಬ್ಬ ಕೈಜೋಡಿಸಿಕೊಂಡು ನಿಂತಿದ್ದಾನೆ. ಇವನ ಕಂಕುಳಿನಲ್ಲಿ ಕತ್ತಿ ಇದೆ. ಈತ ಕಾವಲುಗಾರನಿರಬಹುದು. ಈತನು ಧರಿಸಿರುವ ಆಭರಣಗಳು ಮತ್ತು ವಸ್ತ್ರಗಳು ಗಮನ ಸೆಳೆಯುತ್ತವೆ. ಉಗ್ರನರಸಿಂಹ. ಮತ್ಸ್ಯ ನಾರಾಯಣ.

ವ್ಯಕ್ತಿಯೊಬ್ಬ ಕೈ ಜೋಡಿಸಿಕೊಂಡು ನಿಂತಿದ್ದಾನೆ. ಈತನ ಉಡುಪು ಅಚ್ಚುಕಟ್ಟಾಗಿದೆ. ಟೋಪಿ ಧರಿಸಿದ್ದಾನೆ. ಜಿಲ್ಲನ್ನು ಧರಿಸಿದ್ದಾನೆ. ಕುಳಿತ ಭಂಗಿಯಲ್ಲಿ ವ್ಯಕ್ತಿಯೊಬ್ಬನನ್ನು ಕೆತ್ತಲಾಗಿದೆ. ಈತ ಮೀನಿನ ಪೀಠದಲ್ಲಿ ಕುಳಿತಿದ್ದಾನೆ. ಈ ಶಿಲ್ಪದಲ್ಲಿ ಮೀನಿನಿಂದ ಹೊರಟ ಹೂಬಳ್ಳಿ ಮೋಹಕವಾಗಿದೆ. ಗಡ್ಡ ಹಾಗು ಮೀಸೆಧಾರಿಯಾದ ವ್ಯಕ್ತಿಯೊಬ್ಬ ನಿಂತಿದ್ದಾನೆ. ಆತ ಎಡಗೈಯಲ್ಲಿ ಸಂಚಿಯೊಂದನ್ನು ನೇತುಹಾಕಿಕೊಂಡಿದ್ದಾನೆ. ಆತ ತಟ್ಟೆಯಾಕಾರದ ಒಂದು ವಸ್ತುವನ್ನು ಹಿಡಿದುಕೊಂಡಿದ್ದಾನೆ. ಅದು ದಮಡಿ ಇರಬಹುದು. ಆಭರಣವನ್ನು ಧರಿಸಿದ್ದಾನೆ. ತಲೆಗೂದಲನ್ನು ಬಟ್ಟೆಯಿಂದ ಕಟ್ಟಿದ್ದಾನೆ. ಬಟ್ಟೆಯ ಗಂಟು ಗಮನ ಸೆಳೆಯುತ್ತದೆ. ವ್ಯಕ್ತಿಯೊಬ್ಬ ಕೋಲೊಂದನ್ನು ಹಿಡಿದುಕೊಂಡು ನಿಂತಿದ್ದಾನೆ. ಈತ ಮಳೆಯಿಂದ ರಕ್ಷಣೆ ಪಡೆಯಲು ಕವದಿಯನ್ನು ಹೊದ್ದುಕೊಂಡಿದ್ದಾನೆ. ಈತ ಕಾವಲುಗಾರನಿರಬಹುದು. ಬಾಲಕೃಷ್ಣ, ಬೆಣ್ಣೆಯನ್ನು ಸವಿಯುತ್ತಿದ್ದಾನೆ. ದ್ವಾರಪಾಲಕರು, ನೃತ್ಯಗಾರ್ತಿಯರು. ಮಾರುತಿ ಶಿಲ್ಪಗಳಿವೆ.

ಆಕರಗ್ರಂಥ

೧. ಕರ್ನಾಟಕದ ವೀರಗಲ್ಲುಗಳು, ಲೇ. ಡಾ. ಆರ್. ಶೇಷಶಾಸ್ತ್ರಿ.

ರಾಮಘಡ ಬೆಟ್ಟದಲ್ಲಿ ಬ್ರಿಟಿಷರ ಸ್ಮಾರಕಗಳು

ಸಣ್ಣಪಾಲಯ್ಯ ಬಿ.ಪಿ.*

ಸೊಂಡೂರು ಬಳ್ಳಾರಿ ಜಿಲ್ಲೆಯಿಂದ ನೈರುತ್ಯಕ್ಕೆ ೪೯ ಕಿ.ಮೀ. ದೂರದಲ್ಲಿದೆ. ಈ ತಾಲೂಕಿನಲ್ಲಿ ಮನ ತಣಿಸುವಂತಹ ಕುಮಾರಸ್ವಾಮಿ ಬೆಟ್ಟ, ಜಂಬುನಾಥ ಬೆಟ್ಟ ಹಾಗೂ ರಾಮಘಡ ಬೆಟ್ಟ ಇತ್ಯಾದಿ ಬೆಟ್ಟ-ಗುಡ್ಡಗಳು, ನೀರಿನ ಝರಿಗಳು, ಸಮೃದ್ಧವಾದ ಅರಣ್ಯ ಸಂಪತ್ತು, ಸ್ಮಾರಕಗಳು ಹಾಗೂ ಐತಿಹಾಸಿಕ ಸ್ಥಳಗಳ ಮಹಿಮೆಯಿಂದ ಬಳ್ಳಾರಿ ಜಿಲ್ಲೆಯ ಪ್ರದೇಶದಲ್ಲಿ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರು ಹೇರಳವಾಗಿ ದೊರೆಯುವುದರಿಂದ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ.

ಹೊಸಪೇಟೆಯಿಂದ ಸೊಂಡೂರಿಗೆ ಹೋಗುವ ಮಾರ್ಗ ಮಧ್ಯೆ ೧೬ ಕಿ.ಮೀ. ದೂರದಲ್ಲಿರುವ ರಾಮಘಡ ಬೆಟ್ಟವು ಅರಣ್ಯ ಪ್ರದೇಶದಿಂದ ಕೂಡಿದೆ. ಇದು ಸಮುದ್ರ ಮಟ್ಟದಿಂದ ೩೨೫೦ ಅಡಿ ಎತ್ತರದಲ್ಲಿರುವ ಬೆಟ್ಟವು ಹಿಂದಿನ ಕಾಲದಿಂದಲೂ ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಹಾಗೂ ಉತ್ತಮ ಹವಾಗುಣವನ್ನು ಹೊಂದಿರುವ ಪ್ರದೇಶವಾಗಿದೆ.

ಮೊದಲನೆಯ ಚಾರಿತ್ರಿಕ ಕಾಲಘಟ್ಟವೆಂದರೆ ೧೩ ಮತ್ತು ೧೪ನೆಯ ಶತಮಾನ. ರಾಮಘಡ ಬೆಟ್ಟದಲ್ಲಿ ಭದ್ರವಾದ ಗಿರಿದುರ್ಗವನ್ನು ನಿರ್ಮಿಸಿ ಅದನ್ನು ಹೊಸಮಲೆದುರ್ಗವೆಂದು ಕರೆದು, ತನ್ನ ಎರಡನೆಯ ರಾಜಧಾನಿಯನ್ನಾಗಿ ಮಾಡಿಕೊಂಡವರು ಕುಮ್ಮಟದುರ್ಗದ ಪ್ರಭು ಕಂಪಿಲರಾಯ. ಕಂಪಿಲರಾಯನ ಮಗನಾದ ಪರಮವೀರ ಕುಮಾರರಾಮನ ಹೆಸರು ಈ ಪ್ರದೇಶದಲ್ಲಿ ಇಂದಿಗೂ ಸ್ಥಿರವಾಗಿದೆ. ಏಕೆಂದರೆ ಕ್ರಿ.ಶ. ೧೩ನೆಯ ಶತಮಾನದಲ್ಲಿ ದಕ್ಷಿಣ ಭಾರತದ ರಾಜಕೀಯ ಸ್ಥಿತಿಗತಿಗಳು ಸ್ಪರ್ಧಾತ್ಮಕವಾಗಿದ್ದವು. ಸೇವುಣ, ಕಾಕತೀಯ ಹಾಗೂ ಹೊಯ್ಸಳರ ಮಧ್ಯೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿತ್ತು. ಸೇವುಣರು, ಕಾಕತೀಯರು ಮತ್ತು ಹೊಯ್ಸಳರನ್ನು ಬಗ್ಗುಬಡಿದು ರಾಜ್ಯ ಕಟ್ಟಿದ ಶ್ರೇಯಸ್ಸು ಕಂಪಿಲರಾಯ ಮತ್ತು ಕುಮಾರರಾಮನಿಗೆ ಸಲ್ಲುತ್ತದೆ.

ಹೊಸಮಲೆಯ ರಾಮನಾಥವೊಡೆಯನ (ಕುಮಾರರಾಮ) ನೆನಪಿಗೆ ರಾಮಘಡದಲ್ಲಿ ಕಟ್ಟಿಸಿದ ಕೋಟೆ ಹಾಗೂ ರಾಮನಾಥ ದೇವಾಲಯದಿಂದಾಗಿ ಈ ಪ್ರದೇಶಕ್ಕೆ ಹೊಸಮಲೆದುರ್ಗ ಎಂದು ಕರೆಯಲ್ಪಟ್ಟಿತು. ನಂತರ ಅದನ್ನು ಸೊಂಡೂರಿನ ಅರಸರಾಗಿದ್ದ ಘೋರ್ಪಡೆಯವರು 'ರಾಮಘಡ' ಎಂದು ಕರೆದರು. ಅದೇ ರೀತಿ ಬ್ರಿಟಿಷರು ಕೂಡ ರಾಮಘಡ ಎಂದು ಪ್ರಸ್ತಾಪಿಸಿದ್ದಾರೆ. ಆದರೆ, ಸ್ಥಳೀಯರು ಮಾತ್ರ ರಾಮನ ಮಲೆಗುಡ್ಡ ಎಂದೇ ಕರೆಯುತ್ತಾರೆ.

ಎರಡನೆಯ ಚಾರಿತ್ರಿಕ ಕಾಲಘಟ್ಟವೆಂದರೆ ೧೯ ಮತ್ತು ೨೦ನೆಯ ಶತಮಾನ. ಕ್ರಿ.ಶ. ೧೮೦೦ರಲ್ಲಿ ಇಡೀ ಬಳ್ಳಾರಿ ಪ್ರದೇಶವು ಈಸ್ಟ್ ಇಂಡಿಯಾ ಕಂಪನಿಯ ನೇರ ಆಳ್ವಿಕೆಗೆ ಒಳಪಟ್ಟು, ಮದ್ರಾಸ್ ಪ್ರಾಂತ್ಯಕ್ಕೆ ಸೇರ್ಪಡೆಗೊಂಡ ನಂತರ ಬಳ್ಳಾರಿ ಜಿಲ್ಲಾ ಪ್ರಥಮ ಕಲೆಕ್ಟರಾದ ಸರ್ ಥಾಮಸ್ ಮನ್ರೋ ಮತ್ತು ಸೇನಾ ತುಕಡಿಯ ಮುಖ್ಯಸ್ಥನಾಗಿದ್ದ ಡುಗ್ಲಾಡ್ ಕಾಂಪ್ಬೆಲ್‌ನು ನಾಯಕತ್ವ ವಹಿಸಿಕೊಂಡ ಸಂದರ್ಭದಲ್ಲಿ ರಾಮಘಡವು ಸಮೃದ್ಧವಾದ ಅರಣ್ಯ ಸಂಪತ್ತಿನಿಂದ, ನೀರಿನ ಝರಿಗಳಿಂದ, ಕಣ್ಣಿಗೆ ರಸದೌತಣ ನೀಡುವ ಅಪರೂಪದ ಅವಿಸ್ಮರಣೀಯ ತಾಣವಾಗಿತ್ತು. ಇದರಿಂದ ಆ ಕಾಲಘಟ್ಟದಲ್ಲಿ ಹೆಚ್ಚು ಚಾರಣ ಪ್ರಿಯರನ್ನು ಕೈಬೀಸಿ ಕರೆಯುವಂತಿತ್ತು. ಇಂತಹ ಸದಾವಕಾಶವನ್ನು ಥಾಮಸ್ ಮನ್ರೋ ಮತ್ತು ಡುಗ್ಲಾಡ್ ಕಾಂಪ್ಬೆಲ್ ತಮ್ಮ ಆಡಳಿತದ ಅನುಕೂಲಕ್ಕಾಗಿ, ಸೇನಾ ತುಕಡಿಯ ಬೇಸಿಗೆ ವಸತಿಗಾಗಿ ಹಾಗೂ ನಿಸರ್ಗಧಾಮವನ್ನಾಗಿ ಕ್ರಿ.ಶ. ೧೮೧೭ರಿಂದ ೧೯೪೦ರವರೆಗೆ ಬಳಸಿಕೊಂಡಿರುವುದು ಅಲ್ಲಿನ ಅವರ ಸ್ಮಾರಕಗಳಿಂದ ತಿಳಿದು ಬರುತ್ತದೆ.

೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಈ ಪ್ರದೇಶವನ್ನು ಬ್ರಿಟಿಷ್‌ರು ಘೋರ್ಪಡೆಯವರಿಗೆ ನೀಡಿದ್ದರು. ಘೋರ್ಪಡೆಯ ವಂಶಸ್ಥರು ಇತ್ತೀಚೆಗೆ ರಾಮಘಡ ಬೆಟ್ಟದಲ್ಲಿ ಅದಿರು ಹೇರಳವಾಗಿ ದೊರೆಯುವುದರಿಂದ ಐ.ಬಿ.ಎಂ. ಮತ್ತು ಸ್ಮಾಯೋರ್ ಮೈನಿಂಗ್ ಕಂಪನಿಯವರಿಗೆ ಮಾರಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ. ಈ ಮೈನಿಂಗ್ ಪ್ರಭಾವ ಒಂದು ಕಡೆಯಾದರೆ ಮತ್ತೊಂದು ಕಡೆ ಕಿಡಿಗೇಡಿಗಳಿಂದ ಹಾಗೂ ಪ್ರಕೃತಿ ವಿಕೋಪದಿಂದ ಬ್ರಿಟಿಷರ ಸ್ಮಾರಕ

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ-೨೬

ಗಳು ವಿನಾಶದ ಅಂಚಿನಲ್ಲಿವೆ. ಇವುಗಳಿಗೆ ಯಾವುದೇ ರಕ್ಷಣೆ ಇಲ್ಲದ ಕಾರಣ ಮುಂದಿನ ದಿನಗಳಲ್ಲಿ ಹೆಸರಿಲ್ಲದಂತೆ ನಾಶವಾಗುವುದರಲ್ಲಿ ಸಂದೇಹವಿಲ್ಲ.

ಅವಸಾನದ ಅಂಚಿನಲ್ಲಿರುವ ಬ್ರಿಟಿಷರ ಸ್ಮಾರಕಗಳು

ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಇಲ್ಲಿನ ಸ್ಥಿತಿಗತಿಯನ್ನು ಅರಿತು ಏಕರೀತಿಯ ಆಡಳಿತವಿಲ್ಲದ ರಾಜಕೀಯ ವ್ಯವಸ್ಥೆಯಲ್ಲಿ ಪ್ರವೇಶಿಸಿ, ಸ್ಥಳೀಯ ಅರಸರನ್ನು ಸೋಲಿಸಿ, ಇಡೀ ಭಾರತವನ್ನು ತನ್ನ ಕಪಿಮುಷ್ಟಿಯಲ್ಲಿಟ್ಟು ಕೊಳ್ಳಬೇಕೆಂಬ ಉದ್ದೇಶದಿಂದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳು ರಾಜ್ಯ ವಿಸ್ತರಣೆ ಮಾಡುವ ಕಾರ್ಯ ದಲ್ಲಿಯೇ ತೀವ್ರ ನಿರತರಾಗಿದ್ದರು. ಇಂತಹ ಸಂದಿಗ್ಧ ರಾಜಕೀಯ ಪರಿಸ್ಥಿತಿಯಲ್ಲಿ ತಮ್ಮ ಆಡಳಿತದ ಅನುಕೂಲಕ್ಕಾಗಿ ಮತ್ತು ರಕ್ಷಣೆಯ ದೃಷ್ಟಿಯಿಂದ ತಮ್ಮ ತಾಯ್ನಾಡಿನಲ್ಲಿ ಪ್ರಚಲಿತ ದಲ್ಲಿದ್ದ ಡೋರಿಕ್, ಅಯೋನಿಕ್, ಕಾರಿಂತಿಯನ್ ಮತ್ತು ಗೋಥಿಕ್ ಶೈಲಿಯಲ್ಲಿ ಆಡಳಿತ ಕಛೇರಿಗಳು, ವಾಸದ ಬಂಗಲೆ ಗಳು, ಪ್ರವಾಸಿ ಮಂದಿರಗಳು, ಚರ್ಚ್ ಕಟ್ಟಡಗಳು ಹಾಗೂ ರಕ್ಷಣಾ ಕಟ್ಟಡಗಳನ್ನು ಬಹಳ ಸರಳವಾಗಿ, ಸುಭದ್ರವಾಗಿ, ಹೆಚ್ಚು ಆಕರ್ಷಕವಾಗಿ ನಿರ್ಮಿಸಿಕೊಂಡಿದ್ದರು. ರಾಮಘಡ ಬೆಟ್ಟದಲ್ಲಿ ಬ್ರಿಟಿಷರು ೨೧ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದರು ಎಂದು ಬಳ್ಳಾರಿ ಜಿಲ್ಲಾ ಅರಣ್ಯ ವಲಯಾಧಿಕಾರಿಗಳಿಂದ ಮಾಹಿತಿಯನ್ನು ಪಡೆಯಲಾಯಿತು. ಆದರೆ, ನಾನು ಕ್ಷೇತ್ರ ಕಾರ್ಯದಲ್ಲಿ ಗಮನಿಸಿದ ಹಾಗೂ ಸ್ಥಳೀಯರಿಂದ ಪಡೆದ ಮಾಹಿತಿಯ ಪ್ರಕಾರ ೧೫ ಕಟ್ಟಡಗಳು ಮಾತ್ರ ಕಂಡು ಬರುತ್ತವೆ. ೬ ಕಟ್ಟಡಗಳು ನೆಲಸಮವಾಗಿವೆ. ೫ ಕಟ್ಟಡಗಳಲ್ಲಿ ಬೇರೆ ಪ್ರದೇಶದಿಂದ ಬಂದ ವಲಸಿಗರು ವಾಸಿಸುತ್ತಿದ್ದಾರೆ. ಉಳಿದ ಕಟ್ಟಡಗಳು ಪಾಳು ಬಿದ್ದಿವೆ. ಬೆಟ್ಟದ ನೈರುತ್ಯ ಭಾಗದಲ್ಲಿ ಕ್ರೈಸ್ತ ಧರ್ಮದ ಕ್ಯಾಥೋಲಿಕ್ ಪಂಥದವರು ಸಮಾಧಿಗಳನ್ನು ಸಂರಕ್ಷಣೆ ಮಾಡಿರುವುದು ವಿಶೇಷ.

ಶಿಥಿಲಾವಸ್ಥೆ ತಲುಪಿರುವ ಬ್ರಿಟಿಷರ ಸ್ಮಾರಕಗಳೆಂದರೆ

೧. ಅರಮನೆ (ಪ್ಯಾಲೆಸ್), ೨. ಬ್ಯಾರಾಕ್ಸ್ ಬಂಗಲೆ, ೩. ಹೂಗನ್ ಬಂಗಲೆ, ೪. ಬೆಲ್ಲಾವಿಠ್ ಬಂಗಲೆ, ೫. ಬ್ಲಾನೆರಿ ಕ್ಯಾಸೆಲ್ ಬಂಗಲೆ, ೬. ಮದರ್ಸ್ ಬಂಗಲೆ. ೭. ಅಧಿಕಾರಿಗಳ ವಿಶ್ರಾಂತಿ ಗೃಹಗಳು (೩), ೮. ರಫನ್ ಬಂಗಲೆ, ೯. ಪೋಸ್ಟ್ ಆಫೀಸ್, ೧೦. ಪೊಲೀಸ್ ಇಲಾಖೆ, ೧೧. ಕ್ಯಾಥೋಲಿಕ್ ಚರ್ಚ್ ಕಟ್ಟಡ, ೧೨. ಅರಣ್ಯ ಇಲಾಖೆ.

ಇವು ಕಲಾವಿದ ಹಾಗೂ ಒಳಾಂಲಕಾರ ತಜ್ಞನೊಬ್ಬನ ಕಟ್ಟಡಗಳ ನಿರ್ಮಾಣಕ್ಕೆ ಪ್ರತಿಬಿಂಬಿಸುತ್ತವೆಯಲ್ಲದೆ, ಪರಿಣಾಮ ಕಾರಿ ಮತ್ತು ಉದ್ದೇಶಪೂರ್ವಕ ಕಟ್ಟಡಗಳ ನಿರ್ಮಾಣಕ್ಕೆ ಅವಶ್ಯಕವೆನಿಸಿರುವ ದೃಷ್ಟಿ ವೈಶಾಲ್ಯವನ್ನು ಹೊಂದಿದ ವಾಸ್ತುಶಿಲ್ಪಿಯ ಕಾಣ್ಕೆಯನ್ನು ಪ್ರತಿಬಿಂಬಿಸುವುದಿಲ್ಲ. ಆದರೂ, ವಿಶೇಷ ಹಾಗೂ ಹೊಸ ರೀತಿಯ ಮತ್ತು ಸ್ಥಳೀಯ ವಾಸ್ತುಶಿಲ್ಪಗಳ ಪ್ರತಿಫಲನವಷ್ಟೇ ಅಲ್ಲದೇ, ಅದೇ ಕಾಲದಲ್ಲಿ ಜಿದ್ದಂತಹ ಯುರೋಪಿಯನ್ ಪ್ರಭಾವದ ಗುಣಲಕ್ಷಣಗಳನ್ನು ಕೂಡ ಇಲ್ಲಿ ಗುರುತಿಸಬಹುದು.

ರಾಮಘಡ ಬೆಟ್ಟದಲ್ಲಿರುವ ಬ್ರಿಟಿಷರ ಸ್ಮಾರಕಗಳು ನಿರ್ಲಕ್ಷ್ಯಕ್ಕೊಳಪಟ್ಟಿವೆ. ಕೆಲವಂತೂ ಶಿಥಿಲಾವಸ್ಥೆ ತಲುಪಿವೆ. ಇವುಗಳನ್ನು ನಾನು ಕ್ಷೇತ್ರಕಾರ್ಯದಲ್ಲಿ ಸೂಕ್ಷ್ಮವಾಗಿ ಅವಲೋಕಿಸುವಂತಹ ಸಂದರ್ಭದಲ್ಲಿ ಬೆಟ್ಟದ ಮಧ್ಯಭಾಗ ದಲ್ಲಿರುವ ಬ್ಯಾರಕ್ಸ್ ಬಂಗಲೆಯ ತಳಭಾಗದಲ್ಲಿ ಸುರಂಗ ಮಾರ್ಗವಿದೆ.

ಬ್ಯಾರಕ್ಸ್ ಬಂಗಲೆ

ಬ್ಯಾರಕ್ಸ್ ಬಂಗಲೆಯು ಬೆಟ್ಟದ ನೈರುತ್ಯ ಭಾಗದಲ್ಲಿದೆ. ಇದು ದಕ್ಷಿಣ-ಉತ್ತರಾಭಿಮುಖವಾಗಿರುವ ಕಟ್ಟಡವು ಎರಡು ಅಂತಸ್ತಿನ ದೊಡ್ಡ ಬಂಗಲೆಯಾಗಿದೆ. ಇದರ ಉದ್ದ ೧೪೪ ಅಡಿ, ಅಗಲ ೪೨ ಅಡಿ, ಎತ್ತರ ೨೫ ಅಡಿಯನ್ನು ಹೊಂದಿದ್ದು, ಇವರಲ್ಲಿ ೧೦ ಮನೆಗಳಿದ್ದು, ಪ್ರತಿಯೊಂದು ಮನೆಯಲ್ಲಿ ಚಿಕ್ಕ ಚಿಕ್ಕ ಕೊಠಡಿಗಳಿವೆ. ಇಡೀ ಕಟ್ಟಡವು ೩ ಅಡಿ ಎತ್ತರದ ಬೆಸ್‌ಮೆಂಟ್ ಮೇಲೆ ನಿಂತಿದ್ದು, ಕಟ್ಟಡದ ಕಿಟಕಿ ಮತ್ತು ಬಾಗಿಲುಗಳ ಮೇಲೆ ಎಲೆ ಮೊನಚಿನಂತಹ ಚೂಪಾದ ಕಮಾನುಗಳಿಂದ ಕೂಡಿದೆ. ಇವುಗಳಿಂದ ಒಳಾಂಗಣಕ್ಕೆ ಸಾಕಷ್ಟು ಗಾಳಿ, ಬೆಳಕು ಪ್ರವೇಶಿಸುವಂತೆ ಆಯೋಜಿಸಿ ರುವುದನ್ನು ಗುರುತಿಸಲಾಗಿದೆ. ಈ ಬಂಗಲೆಯಲ್ಲಿರುವ ೧೦ ಮನೆಗಳ ಹಿಂಭಾಗ ಮತ್ತು ಮುಂಭಾಗದಲ್ಲಿ ಹಜಾರವಿದೆ. ಉತ್ತರ ದಿಕ್ಕಿನ ಹಜಾರವು ೧೦ ಕಮಾನುಗಳಿಂದ ಕೂಡಿದ್ದು, ದಕ್ಷಿಣದ ಹಜಾರದಲ್ಲಿ ಮೇಲ್ಛಾವಣಿಗೆ ಆಧಾರವಾಗಿರುವ ತಡೆಗೋಡೆಯನ್ನು ಕಟ್ಟಲ್ಪಟ್ಟಿದೆ. ಪ್ರತಿ ಮನೆಯ ಹಿಂಭಾಗ ಮತ್ತು ಮುಂಭಾಗದ ಬಾಗಿಲುಗಳಿಗೆ ಮೆಟ್ಟಿಲುಗಳನ್ನು ಆಕರ್ಷಕವಾಗಿ ಕಟ್ಟಿರುವುದು ವಿಶೇಷ.

ಈ ಕಟ್ಟಡಕ್ಕೆ ಇಟ್ಟಿಗೆ, ಕಲ್ಲು, ಸಿಮೆಂಟ್, ಜಲ್ಲಿಕಲ್ಲಿನ ಗಾರೆ, ಕಬ್ಬಿಣ, ಮಂಗಳೂರುಹೆಂಚು ಮತ್ತು ಮರದ ತೀರು ಗಳನ್ನು ಬಳಸಿದ್ದಾರೆ. ಮೇಲಿನ ಎಲ್ಲಾ ಲಕ್ಷಣಗಳನ್ನು ಗಮನಿಸಿ ದಾಗ ಈ ಕಟ್ಟಡವನ್ನು ಯುರೋಪಿಯನ್ ಮಾದರಿಯಲ್ಲಿ ಕಟ್ಟಿರುವುದನ್ನು ಗುರುತಿಸಲಾಗಿದೆ. ಇಲ್ಲಿ ಸೈನಿಕರು ವಾಸ ವಾಗಿದ್ದರು ಎಂಬ ಅಭಿಪ್ರಾಯವನ್ನು ಸ್ಥಳೀಯರಿಂದ ಪಡೆದು ಕೊಳ್ಳಲಾಯಿತು.

ಆದರೆ, ಸೆಪ್ಟೆಂಬರ್ ೨೦೧೪ರ ತಿಂಗಳಲ್ಲಿ ಕ್ಷೇತ್ರ ಕಾರ್ಯಕ್ಕೆ ಹೋದಾಗ ಕಟ್ಟಡದ ಕೆಲವು ಭಾಗಗಳನ್ನು ಹಾಳು ಮಾಡಿರುವುದನ್ನು ಗಮನಿಸಲಾಯಿತು. ಇದಕ್ಕೆ ಮೂಲಕಾರಣ ಅಲ್ಲಿರುವ ಮೈನಿಂಗ್ ಕಾರ್ಮಿಕರು ಮತ್ತು ಸ್ಥಳೀಯರು ಕಟ್ಟಡವನ್ನು ಒಡೆದು ಅದರಲ್ಲಿರುವ ಕಬ್ಬಿಣದ ಅವಶೇಷಗಳನ್ನು ಮತ್ತು ಮರದ ತೀರುಗಳನ್ನು ಸ್ಥಳಾಂತರಿಸಿದ್ದಾರೆ. ಮುಂದಿನ

ದಿನಗಳಲ್ಲಿ ಈ ಕಟ್ಟಡವು ಆ ಸ್ಥಳದಲ್ಲಿತ್ತು ಎಂಬುದಕ್ಕೆ ಯಾವುದೇ ಆಧಾರ ಇಲ್ಲ ಎನ್ನುವ ಸಂಕಷ್ಟಕ್ಕೆ ಈಡಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಸುರಂಗ ಮಾರ್ಗ: ಬ್ಯಾರಕ್ಸ್ ಬಂಗಲೆಯನ್ನು ಸೂಕ್ಷ್ಮವಾಗಿ ಸುತ್ತಲೂ ವೀಕ್ಷಿಸುತ್ತಿರುವ ಸಂದರ್ಭದಲ್ಲಿ ಗೋಚರಿಸಿರುವುದೇ ಈ ಸುರಂಗ ಮಾರ್ಗ. ಇತ್ತೀಚೆಗೆ ಕಿಡಿಗೇಡಿಗಳು ಕಟ್ಟಡವನ್ನು ಹಾಳು ಮಾಡಿರುವುದರಿಂದ ಜೊತೆಗೆ ಈ ಪ್ರದೇಶದಲ್ಲಿ ಪ್ರಾಯಶಃ ಹೆಚ್ಚು ಮಳೆ ಬಂದಿರುವುದರಿಂದ ಇದು ಕುಸಿದು ಬಿದ್ದಿರಬಹುದು. ಅದೇನೆ ಇರಲಿ ನನಗೆ ಕ್ಷೇತ್ರಕಾರ್ಯದಲ್ಲಿ ಈ ಸುರಂಗ ಮಾರ್ಗವನ್ನು ಪತ್ತೆಹಚ್ಚಿರುವುದು ಬಹಳ ವಿಶೇಷ. ಇದರ ಬಗ್ಗೆ ಯಾರು ಕೂಡ ಉಲ್ಲೇಖ ಮಾಡಿಲ್ಲ ಎಂದು ದೃಢವಾಗಿ ಹೇಳಲು ಬಯಸುತ್ತೇನೆ.

ಈ ಸುರಂಗ ಮಾರ್ಗವು ಬ್ಯಾರಕ್ಸ್ ಬಂಗಲೆಯ ದಕ್ಷಿಣ ದಿಕ್ಕಿನಲ್ಲಿ ಅಂದರೆ, ಕಟ್ಟಡದ ಹಿಂಭಾಗದಲ್ಲಿ ನೈರುತ್ಯ ದಿಕ್ಕಿನಿಂದ ಪ್ರಾರಂಭಗೊಂಡು, ಈಶಾನ್ಯ ದಿಕ್ಕಿನ ಕಡೆಗೆ ಮುಂದುವರಿದಿದ್ದು, ಕಟ್ಟಡದ ಉತ್ತರ ದಿಕ್ಕಿನ ಅಂದರೆ ಮುಂಭಾಗದಲ್ಲಿ ಕುಸಿದು ಬಿದ್ದಿದೆ. ದೂರ ನಿಂತು ನೋಡಿದರೆ ಇದು ಕಾಣುವುದಿಲ್ಲ. ಬಹಳ ಹತ್ತಿರದಿಂದ ನೋಡಿದರೆ ಮಾತ್ರ ಗೋಚರಿಸುತ್ತದೆ. ಇದರ ಪ್ರಾರಂಭ ಸಿಕ್ಕಿದೆ. ಆದರೆ ಎಲ್ಲಿಗೆ ಮುಕ್ತಾಯಗೊಂಡಿದೆ ಎಂದು ನಿಖರವಾಗಿ ಹೇಳುವುದು ಕಷ್ಟ. ಇದು ಸುರಂಗ ಮಾರ್ಗವೇ? ಅಥವಾ ಒಳಚರಂಡಿಯೇ? ಎನ್ನುವಂತಹ ಪ್ರಶ್ನೆ ಉದ್ಭವವಾಗುತ್ತದೆ. ನಾನು ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಹಾಗೂ ನನ್ನ ಪಿಎಚ್.ಡಿ. ಅಧ್ಯಯನದ ಮಾರ್ಗದರ್ಶಕರಾದ ಡಾ. ಸಿ. ಮಹದೇವ ಅವರೊಡನೆ ಚರ್ಚಿಸಿದ ಪ್ರಕಾರ ಒಳಚರಂಡಿ ವ್ಯವಸ್ಥೆಗೆ ಮ್ಯಾನ್ಯಹೋಲ್‌ಗಳನ್ನು ಅಳವಡಿಸಲಾಗುತ್ತದೆ. ಇಂತಹ ಮ್ಯಾನ್ಯಹೋಲ್‌ಗಳು ಈ ಪ್ರದೇಶದಲ್ಲಿ ಕಂಡುಬಂದಿಲ್ಲದಿರುವುದರಿಂದ ಇದು ಸುರಂಗಮಾರ್ಗವೇ ಹೊರತು ಒಳಚರಂಡಿ ಅಲ್ಲ ಎಂದು ನಿರ್ಣಯಿಸಲಾಗಿದೆ. ಇದನ್ನು ಬ್ರಿಟಿಷರು ತಮ್ಮ ರಕ್ಷಣೆಯ ದೃಷ್ಟಿಯಿಂದ ರಹಸ್ಯ ಮಾರ್ಗವನ್ನಾಗಿ ಮಾಡಿಕೊಂಡಿದ್ದರು. ಸುರಂಗಮಾರ್ಗವು ವೃತ್ತ ಅಥವಾ ಕುದುರೆಯ ಲಾಳದ ಆಕಾರದಲ್ಲಿದೆ. ಇದಕ್ಕೆ ಸುಟ್ಟ ಇಟ್ಟಿಗೆ, ಸಿಮೆಂಟ್, ಕಪ್ಪು ಮತ್ತು ಕೆಂಪು ಮಿಶ್ರಿತ ಕಲ್ಲನ್ನು ಬಳಸಿ ರಚಿಸಿರುವರು.

ಬ್ರಿಟಿಷರ ಸಮಾಧಿಗಳು

ಬೆಟ್ಟದ ನೈರುತ್ಯ ದಿಕ್ಕಿನಲ್ಲಿ ಬ್ರಿಟಿಷ್‌ರ ಸಮಾಧಿಗಳು ಇವೆ. ಇವು ಬ್ರಿಟಿಷ್ ಅಧಿಕಾರಿಗಳ ಮತ್ತು ಕ್ರೈಸ್ತರ ಸಮಾಧಿಗಳಾಗಿವೆ. ಇವುಗಳಲ್ಲಿ ಎಂಟು ಸಮಾಧಿಗಳ ಮೇಲೆ ಕೆತ್ತಿರುವ ಶಿಲಾ ಫಲಕಗಳಿಂದ ನಮಗೆ ಸ್ಪಷ್ಟವಾದ ಮಾಹಿತಿ ಸಿಗುತ್ತದೆ. ಇತರೆ ಸಮಾಧಿಗಳು ನಶಿಸಿ ಹೋಗಿವೆ. ಶಿಲಾಫಲಕಗಳಿಂದ



ಸುರಂಗ ಮಾರ್ಗ ರಾಮಘಡ

ದೊರೆಯುವ ಮಾಹಿತಿಯ ಪ್ರಕಾರ ಕ್ರಿ.ಶ. ೧೮೫೫ರಿಂದ ಪ್ರಾರಂಭವಾಗಿ ೧೯೬೪ರವರೆಗಿನ ಕಾಲಾವಧಿಯ ಸಮಾಧಿಗಳನ್ನು ಗಮನಿಸಲಾಗಿದೆ. ಇವುಗಳ ರಕ್ಷಣೆಗಾಗಿ ಸುತ್ತಲೂ ಕಾಂಪೌಂಡನ್ನು ಅಲ್ಲಿ ಕ್ಯಾಥೋಲಿಕ್ ಪಂಗಡದವರು ಕಟ್ಟಿಸಿದ್ದಾರೆ. ಪ್ರಸ್ತುತ ದಿನಗಳಲ್ಲಿ ಇವು ಕೂಡ ಹಾಳಾಗುವ ಸ್ಥಿತಿಯಲ್ಲಿರುವುದರಿಂದ ಮುಂಬರುವ ದಿನಗಳಲ್ಲಿ ಹೆಸರಿಲ್ಲದಂತೆ ನಾಶವಾಗುವುದರಲ್ಲಿ ಸಂದೇಹವಿಲ್ಲ.

ರಾಮಘಡ ಬೆಟ್ಟವು ಈ ಹಿಂದೆ ಸಮೃದ್ಧವಾದ ಅರಣ್ಯ ಸಂಪತ್ತು ಮತ್ತು ಖನಿಜ ಸಂಪತ್ತಿನಿಂದ ಕೂಡಿದ ಪ್ರದೇಶವಾಗಿತ್ತು. ಆದರೆ, ಇಂದು ಜಾಗತೀಕರಣದ ಹಿನ್ನೆಲೆಯಲ್ಲಿ ಹಣದಾಸೆಗೆ ಬಲಿಯಾದ ಮಾನವ ತನ್ನ ಸುತ್ತಮುತ್ತ ದೊರೆಯುವ ಅದಿರನ್ನು ಹೊರ ತೆಗೆಯುವ ಮತ್ತು ಹೊರ ದೇಶಗಳಿಗೆ ಮಾರಾಟ ಮಾಡುವ ದುಷ್ಕೃತ್ಯದಲ್ಲಿ ತೊಡಗಿರುವುದರಿಂದ ಬ್ರಿಟಿಷರ ಸ್ಮಾರಕಗಳಿಗೆ ದೊಡ್ಡ ಪೆಟ್ಟುಬಿದ್ದಿದೆ.

ಆಧಾರಸೂಚಿ

೧. ಕಲಬುರ್ಗಿ ಎಂ.ಎಂ. (ಸಂ.), ೨೦೦೦, **ಹೊಸ ಕುಮಾರರಾಮನ ಸಾಂಗತ್ಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨. ಗಿರಿಜಾ, ೨೦೧೧, **ಸೊಂಡೂರು ತಾಲ್ಲೂಕು : ಒಂದು ಚಾರಿತ್ರಿಕ ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೩. ಚನ್ನಬಸಪ್ಪ ಎಸ್. ಪಾಟೀಲ, ೧೯೯೯, **ಕರ್ನಾಟಕದ ಕೋಟೆಗಳು, ಸಂಪುಟ ೧**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೪. ಮಹದೇವ ಸಿ., ೨೦೦೯, **ಕುಮ್ಮಟದುರ್ಗದ ಅರಸರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೫. ಕ್ಷೇತ್ರಕಾರ್ಯ.
೬ Kelshell J.S., 1872, **Manual of the Bellary District**, Madras.

೬೮

ಕಲ್ಲಾಪುರ ಗ್ರಾಮದ ಪ್ರಾಚ್ಯಾವಶೇಷಗಳು

ಸುರೇಶ ಕ. ಹಾನಗಲ್ಲ*

ಕಲ್ಲಾಪುರ ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನ ಒಂದು ಚಿಕ್ಕ ಹಳ್ಳಿ. ಇದು ಕೇಂದ್ರ ಸ್ಥಳದಿಂದ ವಾಯ್ಯುವ್ಯಕ್ಕೆ ೧೯ ಕಿ.ಮೀ. ಅಂತರದಲ್ಲಿದೆ.

ಅತ್ಯಂತ ಕಡಿಮೆ ಜನವಸತಿ ಹೊಂದಿರುವ ಈ ಗ್ರಾಮದಲ್ಲಿ ಎರಡು ಕಲ್ಲಿನಲ್ಲಿ 'ಕಲ್ಲಾಪೂರ' ಎಂಬ ಹೆಸರನ್ನು ಕಾಣುತ್ತೇವೆ. ಇದರಲ್ಲಿ ಒಂದು ಕಲ್ಲಿನ ಬರಹ ವಿಜಯನಗರದ ನಂತರದ ಕಾಲವೆಂದು ತಿಳಿದುಬರುತ್ತದೆ. ಅವುಗಳಲ್ಲಿ ಈಗ ಒಂದನ್ನು ಬಸ್‌ನಿಲ್ದಾಣದ ಎಡಭಾಗದಲ್ಲಿ, ಮತ್ತೊಂದು ಚರಂಡಿಯ ಪಕ್ಕದಲ್ಲಿ ಕಾಣಬರುತ್ತದೆ.

ಈ ಗ್ರಾಮದಲ್ಲಿ ಕಲ್ಮೇಶ್ವರ ದೇವಾಲಯವು ಇದೆ. ಇದು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಮತ್ತು ಮಂಟಪ ವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ನಕ್ಷತ್ರಾಕಾರದ ಶಿವಲಿಂಗವಿದ್ದು, ವಿಶಾಲವಾದ ಜಲಹರಿಯನ್ನು ಮತ್ತು ಮಧ್ಯಭಾಗದಲ್ಲಿ ರುದ್ರಭಾಗವನ್ನು ಒಳಗೊಂಡಿದೆ. ಇನ್ನು ಈ ದೇವಾಲಯದ ಎಡಭಾಗದಲ್ಲಿ ಶಾಸನವಿದ್ದು, ಅದು ಸಂಪೂರ್ಣ ತೃಟಿತವಾಗಿದ್ದಲ್ಲದೇ ಕೇವಲ ಶಿಲ್ಪಮಾತ್ರ ಕಂಡುಬರುತ್ತದೆ. ಈ ಶಿಲ್ಪವು ಮಂಟಪದಲ್ಲಿ ಶಿವಲಿಂಗವನ್ನು ಸ್ಥಾಪಿಸಿ, ಪೂಜೆ ಮಾಡುತ್ತಿರುವ ಭಕ್ತನ ಶಿಲ್ಪವಿದೆ. ಇಲ್ಲಿ ಮಂಟಪಗಳಲ್ಲಿ ದೇವಾಲಯಗಳಿರುವಂತೆ ಗೋಪುರವನ್ನು ಚಿತ್ರಿಸಲಾಗಿದ್ದು, ಮಂಟಪದ ಎಡಬದಿಗಳಲ್ಲಿ ನಂದಿ ಹಾಗೂ ಹಸುವಿನ ಶಿಲ್ಪವಿದೆ. ಜೊತೆಗೆ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರನನ್ನು ಚಿತ್ರಿಸಲಾಗಿದೆ.

ದೇವಾಲಯದ ಬಲಭಾಗದಲ್ಲಿ ಒಂದು ವೀರಗಲ್ಲು ಇದೆ. ಇದು ಸಂಪೂರ್ಣವಾಗಿ ತೃಟಿತವಾಗಿದ್ದು ಕೇವಲ ಎರಡು ಹಂತಗಳು ಗೋಚರಿಸುತ್ತದೆ. ಕೆಳಹಂತದಲ್ಲಿ ವೀರರು ತಮ್ಮ ಶತ್ರು ಸೈನ್ಯವನ್ನು ಕೊಂದಿರುವ ಮತ್ತು ಅವರು ಕೆಳಗೆ ಬಿದ್ದಿರುವ ದೃಶ್ಯವಿದೆ. ಹಾಗೆಯೇ ಮೇಲಿನ ಹಂತದಲ್ಲಿ ವೀರರು ಹೋರಾಡುತ್ತಿರುವಂತಹ ದೃಶ್ಯಗಳು ಇವೆ. ಇದು ಸಂಪೂರ್ಣ ವಾಗಿ ತುಂಡಾಗಿವೆ.

ಇದೇ ರೀತಿ ಈ ಶಿಲ್ಪದ ಪಕ್ಕದಲ್ಲಿ ತುಂಡಾದ ಗೋಗ್ರಹಣ ಶಿಲ್ಪವು ಕಂಡುಬರುತ್ತದೆ. ಅವುಗಳಲ್ಲಿ ಒಂದು ಮಹಾಸತಿಯ



ಶಿಲ್ಪವು ನಾಲ್ಕು ಹಂತವನ್ನು ಹೊಂದಿದ್ದು, ಮೊದಲನೆಯ ಭಾಗವು ಭೂಮಿಯಲ್ಲಿ ಹೂತುಹೋಗಿದೆ. ಇನ್ನು ಎರಡನೆಯ ಹಂತದಲ್ಲಿ ಬಲಭಾಗದಲ್ಲಿ ವೀರನು ಯುದ್ಧಕ್ಕೆ ಹೊರಡಲು ಸನ್ನದ್ಧನಾಗಿದ್ದು, ಕೈಯಲ್ಲಿ ಕತ್ತಿಯನ್ನು, ಕಚ್ಚೆಯನ್ನು ಧರಿಸಿ ಕೊಂಡಿದ್ದಾನೆ. ಹಾಗೂ ತನ್ನ ಕೇಶವನ್ನು ಕಟ್ಟಿಕೊಂಡಿದಾನೆ.

ಇವನ ಎದುರಿಗೆ ಮಹಾಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿದ್ದು, ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ. ಕೇದಿಗೆ ಗರಿಗಳಿಂದ ಅಲಂಕರಿಸಿದ ಕೇಶಗಂಟನ್ನು ಕಾಣುತ್ತೇವೆ. ಬೈತಲೆಮಣಿ, ಓಲೆ, ಕುಂಡಲಿ, ಬಳೆ, ಕಂಠಿಹಾರ, ತೋಳ ಬಂಧಿ, ಮುತ್ತಿನ ಸರ, ಕಟಿಸೂತ್ರ, ಛನ್ನವೀರ, ಕಾಲ್ಗಡಗ, ಗೆಜ್ಜೆ ಮುಂತಾದ ಆಭರಣಗಳನ್ನು ಧರಿಸಿದ್ದಾಳೆ. ಧರಿಸಿರುವ ಸೀರೆಯು ಪಾದದ ಬಳಿ ಕಮಲದ ಹೂವಿನಂತೆ ಇದೆ. ಅದೇ ರೀತಿ ಮೇಲಿನ ಹಂತದ ಪಟ್ಟಿಕೆಯಲ್ಲಿ ಮಂಟಪದಲ್ಲಿ ಶಿವಲಿಂಗ ವಿದ್ದು, ಅದರ ಬಲಭಾಗದಲ್ಲಿ ಆಭರಣಗಳಿಂದ ಕೂಡಿದ ಒಬ್ಬ ಸ್ತ್ರೀಯು ಶಿವಲಿಂಗಕ್ಕೆ ಪೂಜೆಯನ್ನು ಮಾಡುತ್ತಿರು ವಂತೆಯೂ, ಎಡಭಾಗದಲ್ಲಿ ಪೀಠದ ಮೇಲೆ ನಂದಿಯ

* ಸಂಶೋಧಕರು, ಕೋಳಿವಾಡ ಪೋಸ್ಟ್, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ.











ಕಲ್ಮೇಶ್ವರ ದೇವಾಲಯದಲ್ಲಿರುವ ಶಿವಲಿಂಗ

ಶಿಲ್ಪ ಇದೆ. ಅದೇ ರೀತಿ ಕೊನೆಯ ಪಟ್ಟಿಕೆಯಲ್ಲಿ ಕಂಬವನ್ನು ಹೋಲುವ ಮತ್ತು ಸೂರ್ಯ, ಚಂದ್ರನನ್ನು ಕೆತ್ತಿರುವುದು ಬಹಳ ವಿಶೇಷವಾಗಿದೆ. ಇದರ ಎಡಭಾಗದಲ್ಲಿ ಮತ್ತೊಂದು ವೀರಮಾಸ್ತಿಕಲ್ಲು ಇದ್ದು, ಇದು ಕೇವಲ ಎರಡು ಹಂತವನ್ನು ಹೊಂದಿದ್ದಲ್ಲದೇ ಮೇಲೆ ಹೇಳಿದ ಎಲ್ಲ ರೀತಿಯ ಲಕ್ಷಣಗಳು ಕಂಡುಬರುತ್ತದೆ.

ಇದೇ ದೇವಾಲಯದ ಹಿಂಭಾಗದ ಗದ್ದೆ ಯಲ್ಲಿ ಒಂದು ಲಿಂಗಮುದ್ರೆಕಲ್ಲು ಕಂಡುಬರುತ್ತದೆ. ಈ ಕಲ್ಲಿನಲ್ಲಿ ಸೂರ್ಯ–ಚಂದ್ರನನ್ನು ಚಿಕ್ಕದಾಗಿ ಗುರುತಿಸಿದ್ದಾರೆ. ಮಧ್ಯದಲ್ಲಿ ಈಶ್ವರನನ್ನು ದೊಡ್ಡ ಪ್ರಮಾಣದಲ್ಲಿ ಚಿತ್ರಿಸಿದ್ದಾರೆ. ಜೊತೆಗೆ ಈ ಲಿಂಗದ ಕೆಳಭಾಗದಲ್ಲಿ 'ಶ್ವರ' ಶಬ್ದವಿದೆ. ಬಹುಶಃ ಕಲ್ಮೇಶ್ವರ ದೇವರ ಹೆಸರಿರಬಹುದು.

ಅದೇ ರೀತಿ ಈ ಗ್ರಾಮಕ್ಕೆ ಹೊಂದಿಕೊಂಡಂತೆ ಸಿದ್ದಾಪೂರ ಗ್ರಾಮವಿದ್ದು ಅಲ್ಲಿ ತೃಟಿತವಾದ ವಿಷ್ಣುವಿನ ಮತ್ತು ಸಪ್ತಮಾತೃಕೆಯರ ಶಿಲ್ಪಗಳು, ಹಾಗೂ ಮಹಾಸತಿಯ ಶಿಲ್ಪವು ಇದೆ.

[ಸಂಶೋಧನಾ ಕಾರ್ಯದಲ್ಲಿ ಸಹಕರಿಸಿದ ಗ್ರಾಮದ ವಿದ್ಯಾರ್ಥಿ ಮಂಜುನಾಥ, ಮೂರ್ತಿಶಿಲ್ಪದ ವಿವರಣೆ ನೀಡಲು ಸಹಕರಿಸಿದ, ಮಾರ್ಗದರ್ಶಕರಾದ ಡಾ. ಕೆ.ಜಿ. ಭಟ್‌ಸೂರಿ ಇವರಿಗೂ ಕೃತಜ್ಞತೆಗಳು.]

ಗಂಡಸಿ ಕೆರೆ ಪರಿಸರದಲ್ಲಿರುವ ಸ್ಮಾರಕ ಅವಶೇಷಗಳು

ಪದ್ಮ ಬಿ.ಎಸ್.*

ಅರಸೀಕೆರೆ ತಾಲ್ಲೂಕಿಗೆ ಸೇರಿದ ಒಂದು ಹೋಬಳಿ ಗಂಡಸಿ, ಕ್ರಿ.ಶ. ೧೩೨೪ರ ಶಾಸನದಲ್ಲಿ ಅಗ್ರಹಾರ ಬಲ್ಲಾಳಪುರವಾದ ಹಿರಿಯ ಗಂಡಸಿ ಎಂದು ಉಲ್ಲೇಖವಾಗಿದೆ[೧]. ಗ್ರಾಮದಲ್ಲಿ ಮಳೆ ಆಶ್ರಿತವಾದ ದೊಡ್ಡಕೆರೆ ಇದ್ದು, ೪೧.೬೨ ಎಂ.ಸಿ.ಎಫ್.ಟಿ. ರಷ್ಟು ನೀರಿನ ಸಂಗ್ರಹಣ ಸಾಮರ್ಥ್ಯವನ್ನು ಹೊಂದಿದೆ. ಕೆರೆಯ ಜಲಾಯನಯನ ಪ್ರದೇಶ ೭೦.೮೧ ಹೆಕ್ಟೇರ್ ಮತ್ತು ಅಚ್ಚುಕಟ್ಟು ಪ್ರದೇಶ. ೯೩.೨೬ ಹೆಕ್ಟೇರ್‌ಗಳು. ಏರಿಯು ಪೂರ್ವ ಪಶ್ಚಿಮಾಭಿಮುಖವಾಗಿ ೧೨೯೦ ಮೀ ಉದ್ದ ಮತ್ತು ೫ ಮೀ. ಅಗಲವಿದೆ. ಅದರ ಮೇಲ್ಭಾಗದಲ್ಲಿ ವಾಹನ ಗಳು ಚಲಿಸಲು ರಸ್ತೆ ಮಾಡಲಾಗಿದೆ. ಕೆರೆಯು ಎರಡು ತೂಬು ಎರಡು ಕೋಡಿಯನ್ನು ಹೊಂದಿದೆ. ಏರಿಯ ಪಶ್ಚಿಮದ ಕೆರೆ ಅಂಗಳದಲ್ಲಿ ಹನುಮಂತನ ದೇವಾಲಯ ಮತ್ತು ಶಾಸನ ಕಲ್ಲುಗಳಿವೆ. ಕೆರೆಯ ರಚನೆಯನ್ನು ಕುರಿತಂತೆ ಎರಡನೆ ಹರಿಹರನ ಕಾಲಕ್ಕೆ ಸೇರಿದ ಗಂಡಸಿಯ ಕ್ರಿ.ಶ. ೧೪೦೩ರ ಶಾಸನವು[೨] ಬಾಯಣ್ಣನೆಂಬಾತನು ತನ್ನ ತಾಯಿಯ ಹೆಸರಿನಲ್ಲಿ ಮಂಗಾಪುರವೆಂಬ ಗ್ರಾಮವನ್ನು ರಚಿಸಿ ಅಲ್ಲಿ ಮಂಗಸಮುದ್ರವೆಂಬ ಕೆರೆಯನ್ನು ಕಟ್ಟಿಸಿದ ಆ ಕೆರೆಯ ದಕ್ಷಿಣ ಭಾಗದಲ್ಲಿ ಕೋಡಿಯನ್ನು ನಿರ್ಮಿಸಿ ಅಗ್ರಹಾರವಾದ ಹಿರಿಯ ಗಂಡಸಿ ಗ್ರಾಮವನ್ನು ಜೀರ್ಣೋದ್ಧಾರ ಮಾಡಿ ಹಿರಿಯ ಕೆರೆಗೆ ನಿರ್ಮಿಸಿದ ಕಾಲುವೆಗೆ ರಕ್ಷಣಾರ್ಥವಾಗಿ ಹನುಮಂತ ದೇವರ ಪ್ರತಿಷ್ಠೆ ಮಾಡಿಸಿದ ವಿಷಯವನ್ನು ತಿಳಿಸಿದೆ. ಗ್ರಾಮಕ್ಕೆ ಪೂರ್ವ ಕೆರೆಯ ಏರಿಯ ಮೇಲೆ ಸುಮಾರು ೧೦ನೇ ಶತಮಾನದ ಈಶ್ವರ ದೇವಾಲಯದ ಕಂಬಗಳ ಅವಶೇಷಗಳಿವೆ. ಈ ದಿನಗಳಲ್ಲಿ ಪಾಳುಬಿದ್ದ ಮಂಟಪದಂತೆ ಕಾಣುತ್ತದೆ. ಸ್ಥಳೀಯರು ಕೂಡ ಮಂಟಪವೆಂದೇ ಹೇಳುತ್ತಾರೆ.

ಇಲ್ಲಿನ ಕಂಬಗಳು ಕುಳ್ಳಾಗಿದ್ದು, ವಿವಿಧ ಭಾಗಗಳಿಂದ ಕೂಡಿವೆ. ಕಂಬಗಳಲ್ಲಿ ಪಿಂಡಿ ಭಾಗವು ಮಣ್ಣಿನಿಂದ ಮುಚ್ಚಿದ್ದು, ಅದರ ಮೇಲೆ ದುಂಡಾದ ಶಲಾಕ, ಎಡಗಟ್ಟು, ಕೂಡ (ಕುಂಭ) ಮುಚ್ಚಳ ಮತ್ತು ಬೋದಿಗೆಗಳಿವೆ. ಇವುಗಳ ರಚನಾ ವಿನ್ಯಾಸವು ಗಂಗರ ಕಲಾಶೈಲಿಯನ್ನು ಹೋಲುತ್ತವೆ. ಇದೇ ಮಾದರಿಯ ಕಂಬಗಳು ತಿಪಟೂರಿನ ಕೆರೆಕೋಡಿಯಲ್ಲಿರುವ ಕಲ್ಲೇಶ್ವರ ದೇವಾಲಯದಲ್ಲಿ ನೋಡಬಹುದು. ಗಂಡಸಿಯ ಪಾಳು ಈಶ್ವರನ ದೇವಾಲಯದ ಪಕ್ಕದಲ್ಲಿ ಸುಮಾರು ೨೫ ಮೀ. ಉದ್ದ ಕೋಡಿ ಇದೆ. ಅದರ ಹಾಸು ಬಂಡೆಗಳಲ್ಲಿನ ಮೇಲೆ ಗಳಿಯಗಡಿಬವನ್ನು ನಿಖರ ಅಳತೆಗಳೊಂದಿಗೆ ಹೇಳುವ ಕ್ರಿ.ಶ. ೧೨೩೦ರ ಶಾಸನವಿದೆ[೩]. ಈ ದೇವಾಲಯದ ಹಿಂಭಾಗದ ಕೆರೆಯ ಅಂಗಳದಲ್ಲಿ ಒಂದು ಚಿಕ್ಕ ಕಟ್ಟೆ ಇದೆ. ಅಲ್ಲಿನ ಸ್ಥಳೀಯರು ಈ ಕೆರೆಯು ನಿರ್ಮಾಣವಾಗುವುದಕ್ಕಿಂತ ಮೊದಲೆ ಈ ಕಟ್ಟೆ ಇದ್ದುದಾಗಿ ತಿಳಿಸುತ್ತಾರೆ. ಕೆರೆ ಪಕ್ಕದಲ್ಲಿ ದೇವಾಲಯಗಳು ಇರುವುದು ಸಾಮಾನ್ಯವಾಗಿದೆ. ಬಹುಶಃ ನಮ್ಮ ಪೂರ್ವಿಕರು ಪ್ರಾಣಿ ಪಕ್ಷಿಗಳಿಗೆ ಅಥವಾ ಧಾರ್ಮಿಕವಾಗಿ ದೇವಾಲಯ ಕಟ್ಟುವ ಸಂದರ್ಭದಲ್ಲಿ ಈ ಕಟ್ಟೆಯನ್ನು ತೆಗೆಸಿರಬೇಕು. ನಂತರ ಬಂದ ರಾಜರುಗಳು ನೀರಾವರಿಗೆ ಹೆಚ್ಚಿನ ಮಹತ್ವ ನೀಡಿ ದೊಡ್ಡ ಕೆರೆಯನ್ನು ಕಟ್ಟಿಸಿರಬಹುದು. ಕೆರೆಯು ನೀರಾವರಿ ರಕ್ಷಣೆಗೆ ಸೇರಿದ್ದು. ಪ್ರಸ್ತುತ ದಿನಗಳಲ್ಲಿ ಜನರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ.

ಕೆರೆ ಪರಿಸರದಲ್ಲಿರುವ ಪ್ರಾಚ್ಯ ಅವಶೇಷಗಳು ಕಾಲಗರ್ಭದಲ್ಲಿ ಹುದುಗಿ ಕಣ್ಮರೆಯಾಗುವ ಮುನ್ನ ಅವುಗಳ ಇತಿಹಾಸವನ್ನು ಅರಿಯುವುದು ಅತ್ಯಗತ್ಯ.

[ಡಾ. ಸಿ. ಮಹದೇವ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕನ್ನಡ ವಿ.ವಿ. ಹಂಪಿ. ಇವರು ಈ ಲೇಖನ ಬರೆಯಲು ಸೂಕ್ತ ಸಲಹೆ ಸೂಚನೆ ನೀಡಿದ್ದಾರೆ.]

ಅಡಿಟಿಪ್ಪಣಿ

೧. ಇ.ಸಿ.೧೧, ೧೯೯೭, ಶಾ.ಸಂ. ೧೯೭ (V ಅ.ಕೆ. ೧೫೮) ಗಂಡಸಿ ಅರಸೀಕೆರೆ (ತಾ) ಪುಟ ೨೫೨.

೨. ಅದೇ. ಶಾ.ಸಂ. ೧೯೮ (V ಅ.ಕೆ. ೧೫೯) ಗಂಡಸಿ, ಅರಸೀಕೆರೆ (ತಾ), ಪುಟ ೨೫೩.

೩. ಅದೇ. ಶಾ.ಸಂ. ೨೦೦, (V ಅ.ಕೆ. ೧೬೧) ಗಂಡಸಿ ಅರಸೀಕೆರೆ (ತಾ) ಪುಟ ೨೫೪.

* ಪಿ.ಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೦೦

ಭಂಟನೂರಿನ ಪ್ರಾಚ್ಯಾವಶೇಷಗಳು

ಶಿವಪ್ಪ ನ. ನೀರಲಗಿ*

ಇಂದಿನ ಯಾದಗಿರಿ ಹಾಗೂ ಬಿಜಾಪೂರ ಜಿಲ್ಲೆಗಳ ಸರಹದ್ದಿನಲ್ಲಿರುವ ಊರೇ ಭಂಟನೂರು. ಈ ಊರಿನಲ್ಲಿ ಪಶ್ಚಿಮವಾಹಿನಿಯಾಗಿ ಹರಿಯುವ ಹಳ್ಳವಿದೆ. ಮುದ್ದೇಬಿಹಾಳ ತಾಲೂಕಿನ, ತಾಳಿಕೋಟೆಯಿಂದ ಈಶಾನ್ಯಕ್ಕೆ ಸುಮಾರು ೧೨ ಕಿ.ಮೀ.ಗಳ ಅಂತರದಲ್ಲಿರುವ ಈ ಊರಿನಲ್ಲಿ ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಸುಂದರವಾದ ವೀರಗಲ್ಲು ಹಾಗೂ ಮಾಸ್ತಿ ಕಲ್ಲುಗಳು ದೊರಕಿದೆ. ಈ ಊರಿನಲ್ಲಿ ನೂತನ ಶಿಲಾಯುಗದ, ಶಿಲಾತಾಮ್ರಯುಗದ ಹಾಗೂ ಅನೇಕ ಐತಿಹಾಸಿಕ ಅವಶೇಷಗಳು ದೊರಕಿವೆ. ಈ ಊರಿನ ಪಶ್ಚಿಮದಲ್ಲಿರುವ ಹೊಲವೊಂದನ್ನು 'ಮಾನ್ಯದಡವಿ' ಎಂದು ಕರೆದಿರುವುದರಿಂದ ವೀರನೊಬ್ಬನಿಗೆ ಭೂಮಿಯನ್ನು ಅವನ ವೀರಾವೇಶದ ಹೋರಾಟಕ್ಕೆ ಬಾಳ್ಗಳಾಚಾಗಿ ದಾನ ಕೊಟ್ಟಿರುವುದಕ್ಕೆ ಸಾಕ್ಷಿಯಾಗಿದೆ. ಈ ಊರು ನಿಜಾಮ ಕರ್ನಾಟಕದ ಗಡಿ ಗ್ರಾಮವಾಗಿದ್ದು, ಈ ಊರಿನಿಂದಲೇ ನಿಜಾಮ ಸರ್ಕಾರದ ಸೈನಿಕರಿಗೆ ಹೆಂಡದ ಸರಬರಾಜಾಗುತ್ತಿತ್ತು.

ಕ್ರಿ.ಶ. ೧೧೮೯-೯೦ರ ದೇವಗಿರಿ ಯಾದವರ ಭಿಲ್ಲಮನ ಆಳ್ವಿಕೆಯ ಮಹಾಪ್ರಧಾನ ದೇಶಿಯ ದಂಡನಾಯಕ, ಹಿರಿಯ ಹೆಗ್ಗಡೆ ನನ್ನರಸ ಹಾಗೂ ಲಕ್ಷ್ಮೀದೇವನಾಯಕರು ಪೀರಾಪೂರದಲ್ಲಿ ಪ್ರತಿಷ್ಠಾಪಿಸಿದ ಈಶಪೇಶ್ವರ (ಸಂಗಮೇಶ್ವರ) ಹಾಗೂ ಸಿರಿಯಮೇಶ್ವರ (ಲಕ್ಷ್ಮೀ) ದೇವಾಲಯಕ್ಕೆ, ಮಹಾಮಂಡಲೇಶ್ವರ ವಿರೂಪದೇವರಸನ ಅನುಮತಿಯಿಂದ ಈ ದೇವಾಲಯದ ಯತಿ ಪದ್ಮಜೀಯನಿಗೆ ಭೂಮಿ ಮತ್ತು ನಿವೇಶನಗಳನ್ನು ದಾನ ಮಾಡಿದರು (SII XV P. 147). ದೇವಾಲಯಕ್ಕೆ ಜಮೀನು ದತ್ತಿ ಬಿಟ್ಟು, ಚಕ್ಕುಬಂದಿ ಹೇಳುವಾಗ ಪಡುವಣಕ್ಕೆ 'ಬಂದನೂರು' ಸೀಮೆಯವರೆಗೆ ಎಂದು ಹೇಳಿರುವಂಥ ಇದೊಂದು ಶಾಸನೋಕ್ತ ಗ್ರಾಮವಾಗಿದೆ. ಅಲ್ಲದೆ ಈ ಶಾಸನದಲ್ಲಿ ಶಾಸನ ಕವಿಯು ಬಂದನೂರು ಎಂದಿರುವದರಿಂದ ಲಿಪಿಕಾರನ ತಪ್ಪಿನಿಂದ ಬಂದನೂರಾಯಿತೆ ಅಥವಾ ಈ ಊರಿನ ವೀರರು ರಣಾಂಗದಲ್ಲಿ ಹೋರಾಡಿ ವೀರ ಸ್ವರ್ಗವನಪ್ಪಿರುದರಿಂದ ಅವರ ವೀರತನದ ದೇಸೆಯಿಂದಾಗಿ ಭಂಟನೂರಾಯಿತೆ ಎಂಬುದು ವಿಚಾರಯೋಗ್ಯವಾಗಿದೆ. ಅಲ್ಲದೆ ಈ ಊರಿನ ಹೆಸರು ವೀರಾಪೂರವಾಗಿದ್ದು, ನಿಜಾಮ ಸರಕಾರದಲ್ಲಿ ಪೀರಾಪೂರ ಆಗಿರಬಹುದಾಗಿದೆ. ಇವೆಲ್ಲವುಗಳನ್ನು ಅವಲೋಕಿಸಿದಾಗ ಇದೊಂದು ಐತಿಹಾಸಿಕ ಗ್ರಾಮವೆಂಬುವುದು ನಮಗೆ ತಿಳಿದುಬರುವುದು.

ಕೆಂಪು ಬಣ್ಣದ ಮಡಿಕೆ ಚೂರುಗಳು: ಈ ನೆಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕೆಂಪು ಬಣ್ಣದ ಮಡಿಕೆ ಚೂರುಗಳು ಸಿಕ್ಕಿದ್ದು, ಇವು ಕ್ರಿ.ಪೂ. ೯-೮ನೇ ಶತಮಾನಕ್ಕೆ ಸೇರಿದವುಗಳಾಗಿದ್ದು ಇವು ನೂತನ ಶಿಲಾಯುಗದ ಲಕ್ಷಣಗಳನ್ನು ಹೊಂದಿವೆ. ಪ್ರಾಣಿಗಳ ಹಾಗೂ ಮನುಷ್ಯರ ಎಲುಬುಗಳು ದೊರಕಿದ್ದು, ದವಡೆ ಸೆಟ್ಟುಗಳು, ಜಂಕೆಯ ಕೊಂಬು, ಜೋಡಿ ಹೆಣದ ಅಸ್ತಿ ಪಂಜರಗಳು, ಬೆಂಕಿ ಕಲ್ಲಿನ ಸಣ್ಣ ಸಣ್ಣ ಆಯುಧಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿವೆ. ಇವು ನೂತನ ಶಿಲಾಯುಗಕ್ಕೆ ಸೇರಿದವುಗಳೆಂದು ಇತಿಹಾಸ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಕೆಂಪು ಬಣ್ಣದ ದಪ್ಪ ಮಡಿಕೆ ಚೂರುಗಳು: ಈ ನೆಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದಪ್ಪ ಹಾಗೂ ನಯಾಗೊಳಿಸಿದ ಕೆಂಪು ಮಡಿಕೆ ಚೂರುಗಳು ಸಿಕಿದ್ದು, ಇವು ಇತಿಹಾಸ ಆರಂಭ ಕಾಲದ ಶಾತವಾಹನರ ಅವಧಿಗೆ ಸೇರಿದವುಗಳಾಗಿದ್ದು, (Sapine Postures) ಬೌದ್ಧ ಧರ್ಮದ ಇರುವಿಕೆಯನ್ನು ಸ್ಥಿರಪಡಿಸುತ್ತವೆ.

ಕಪ್ಪು ಬಣ್ಣದ ಮಡಿಕೆ ಚೂರುಗಳು: ಈ ಕಪ್ಪು ಬಣ್ಣದ ನಯಗೊಳಿಸಿದ ಅಲಂಕಾರಿಕ (Grafiti) ಮಡಿಕೆ ಚೂರುಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿದ್ದು ಇವು ಬೃಹತ್ ಶಿಲಾಯುಗ ಸಂಸ್ಕೃತಿಗೆ (Megalithic) ಸೇರಿದವುಗಳಾಗಿದ್ದು, ಹಿರಿಯರಿಗೆ ಶವಸಂಸ್ಕಾರ ಮಾಡುವಾಗ ಇವುಗಳನ್ನು ಬಳಸಲಾಗಿದೆ. ಇದರೊಂದಿಗೆ ಬೂದಿಮಿಶ್ರಿತ ಇದ್ದಿಲು ಸಹ ದೊರಕಿದೆ.

ವೀರಗಲ್ಲುಗಳು: ಕುದುರೆ ಸವಾರನ ವೀರಗಲ್ಲು: ತನ್ನೆರಡು ಮುಂಗಾಲುಗಳನೆತ್ತಿ ಕಾಲ್ಕೆಳಗೆ ಹೆಣವನ್ನು ತುಳಿದುಕೊಂಡು ನಿಂತ ಕುದುರೆ. ಆ ಕುದುರೆ ಮೇಲೆ ಕುಳಿತ ವೀರ ತನ್ನ ಎಡಗೈಯಲ್ಲಿ ಕುದುರೆ ಲಗಾಮು ಹಿಡಿದುಕೊಂಡು

* [illegible]

ಬಲಗೈಯಲ್ಲಿ ಖಡ್ಗವನ್ನು ಎತ್ತಿ ಹಿಡಿದಿದ್ದಾನೆ. ಕುದುರೆಯ ವೇಗದ ರಭಸಕ್ಕೆ ವೀರನ ವೀರ ಮುಡಿಯು ಗಾಳಿಗೆ ಹಿಂದೆ ನೆಗೆದಿದೆ. ಇದು ವೀರನ ಹೋರಾಟದ ವೀರಾವೇಶದ ಗತಿಶೀಲತೆಯನ್ನು ತೋರಿಸುತ್ತದೆ. ಕುದುರೆ ಹಾಗೂ ವೀರ ಇಬ್ಬರು ಅಜಾನುಭಾವರಾಗಿದ್ದಾರೆ. ಈ ವೀರಗಲ್ಲನ್ನು ಕಪ್ಪು ಕಣಶಿಲೆಯಲ್ಲಿ ಕೆತ್ತಲಾಗಿದೆ. ಇದು ವೀರಗಲ್ಲಿನ ಮೊದಲನೆ ಹಂತವಾದರೆ ಎರಡನೆ ಹಂತದಲ್ಲಿ ವೀರನು ಪದ್ಮಾಸನದಲ್ಲಿ ಕುಳಿತ್ತಿದ್ದು, ವಿವಸ್ತ್ರನಾಗಿದ್ದಾನೆ. ವೀರನ ತಲೆಯ ಮೇಲೆ ಕುಲಾಯಿ ತರಹದ (Wig Type) ವಸ್ತ್ರವಿದ್ದು, ಎದುರುಗಡೆ ಸ್ತ್ರೀಯೋರ್ವಳು ವೀರನಿಗೆ ಚೌರಿಯನ್ನು ಬೀಸುತ್ತಿದ್ದಾಳೆ. ಇವೆಲ್ಲ ಲಕ್ಷಣಗಳನ್ನು ಅವಲೋಕಿಸಿದಾಗ ಈ ವೀರಗಲ್ಲು ಜೈನಧರ್ಮಿಯನಿಗೆ ಸಂಬಂಧಿಸಿದ್ದೆಂದು ತಿಳಿದು ಬರುವುದು. ಇನ್ನೊಂದು ವೀರಗಲ್ಲು ಶೈವ ಸಂಪ್ರದಾಯಕ್ಕೆ ಸೇರಿದ್ದು, ಈ ವೀರಗಲ್ಲಿನ ಮೊದಲಿನ ಹಂತವು ಒಡೆದು ಹೋಗಿದೆ. ಎರಡನೆ ಹಂತದಲ್ಲಿ ವೀರ ಮರಣಮನ್ನಪಿದ ವೀರನನ್ನು ಇಬ್ಬರು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯುತ್ತಿದ್ದಾರೆ. ಶಿಲ್ಪಿಯು ವೀರನ ಅವಯವಗಳನ್ನು ಕುಸ್ತಿಯ ಪೈಲ್ವಾನನಂತೆ ಅತ್ಯಂತ ಸುಂದರವಾಗಿ ಹಾಗೂ ಪ್ರಮಾಣಬದ್ಧವಾಗಿ ಕೆತ್ತಿದ್ದಾನೆ. ಮೂರನೇ ಹಂತದಲ್ಲಿ ವೀರನು ಶಿವಲಿಂಗದ ಮುಂದೆ ಪದ್ಮಾಸನದಲ್ಲಿ ಪವಡಿಸಿದ್ದಾನೆ. ಇನ್ನೊಂದು ವೀರಗಲ್ಲಿನಲ್ಲಿರುವ ವೀರನು, ಬಿಲ್ಲು ಬಾಣಗಳಿಂದ ತನ್ನ ವೈರಿಯ ಮೇಲೆ ದಾಳಿ ನಡೆಸಿದ್ದಾನೆ. ಎದುರಾಳಿ ವೀರನು ಸಹ ತನ್ನ ಪ್ರತಿಸ್ಪರ್ಧಿಯ ಮೇಲೆ ಭರ್ಚಿಯಿಂದ ದಾಳಿಮಾಡಿದಂತೆ ಶಿಲ್ಪಿಯು ವೀರಗಲ್ಲನ್ನು ಕಂಡರಿಸಿದ್ದಾನೆ.

ಮಾಸ್ತಿಗಲ್ಲು: ಊರಿನ ದಕ್ಷಿಣಕ್ಕೆ ಸ್ವಲ್ಪ ಎತ್ತರದ ಗುತ್ತಿ ಎಂದು ಕರೆಯುವ ದಿಣ್ಣೆಯ ಮೇಲೆ ಮಾಸ್ತಿಯ ಪಾದುಕೆಗಳಿವೆ. ಸ್ಥಳಿಯರು ಇದನ್ನು "ಮಾಸ್ತ್ಯಮ್ಮನೆಂದು" ಕರೆಯುತ್ತಾರೆ. ಮಾಸ್ತಿಯ ಪಾದುಕೆಗಳನ್ನು ಕಪ್ಪು ಕಣ ಶಿಲೆಯಲ್ಲಿ ಕೆತ್ತಲಾಗಿದೆ. ಈ ಮಾಸ್ತಿಗೆ ಗುಡಿಯನ್ನು ಸಹ ಕಟ್ಟಲಾಗಿದ್ದು, ರಣಾಂಗಣದಲ್ಲಿ ವೀರ ಮರಣಹೊಂದಿದ ವೀರನ ಹೆಂಡತಿಯು ಸತಿಹೋದ ಮಾಸ್ತಿಗಲ್ಲು ಇದಾಗಿದ್ದು, ಇತ್ತಿಚೀನವರೆಗೆ ಈ ಗುತ್ತಿಯ ಮೇಲೆ ಕಣದಾಕಾರದ ಅಗ್ನಿಕುಂಡವಿದ್ದು, ಇದನ್ನು ಕಲ್ಲಿನಿಂದ ಮುಚ್ಚಲಾಗಿತ್ತು. ಬಹುದಿನಗಳ ಹಿಂದೆ ಜೆತ್ತಲೆ ಜೈನಯತಿ ಯೊಬ್ಬನು ನೆಲದೊಳಗೆ ಗುಹೆ ಮಾಡಿಕೊಂಡು ಇಲ್ಲಿ ವಾಸ ವಾಗಿದ್ದನೆಂದು ಈ ಊರಿನ ದಿಟ್ಟ ಶ್ರೀ ಮಲ್ಲಪ್ಪ ಬ್ಯಾಕೋಡ ಇವರ ಹೇಳಿಕೆಯಾಗಿದೆ.

ದ್ವಿಬಾಹು ಗಣೇಶನ ವಿಗ್ರಹ: ಕಪ್ಪು ಕಣಶಿಲೆಯಲ್ಲಿ ಕೆತ್ತಿರುವ ಈ ವಿಗ್ರಹವು ಅತ್ಯಂತ ಸುಂದರವಾಗಿದೆ. ಗಣೇಶನ ತಲೆಯ ಮೇಲೆ ಕರಂಡ ಮುಕುಟವಿದೆ. ಗಣೇಶನು ಚೌಕಾಕಾರದ ದೊಡ್ಡವಾದ ಕಿವಿಗಳನ್ನು ಹೊಂದಿದ್ದಾನೆ. ಒಂದು ಕೈಯು ಅಭಯಹಸ್ತ ಮತ್ತೊಂದು ಕೈಯಿಂದ ತನ್ನ ಸೊಂಡಿಲನ್ನು ಎತ್ತಿ ಹಿಡಿದಂತೆ ಶಿಲ್ಪಿಯು ಮೂರ್ತಿಯನ್ನು ಕೆತ್ತಿದ್ದಾನೆ. ಈ ಗಣೇಶ ಮೂರ್ತಿಯ ವಿಶೇಷತೆಯೇನೆಂದರೆ, ಹೊಟ್ಟೆಗೆ ಸರ್ಪವನ್ನು ಸುತ್ತಿರುವುದು. ವಿಶೇಷವಾಗಿ ಬದಾಮಿ ಚಾಲುಕ್ಯರು ಹಾಗೂ ರಾಷ್ಟ್ರಕೂಟರ ಕಾಲದ ಗಣೇಶ ವಿಗ್ರಹಗಳು ಹೊಟ್ಟೆಗೆ ಸರ್ಪ ಸುತ್ತಿದ್ದ ವಿಗ್ರಹಗಳನ್ನು ಶಿಲ್ಪಿಗಳು ಕೆತ್ತುತ್ತಿದ್ದರಿಂದ ಈ ಗಣೇಶ ವಿಗ್ರಹವು ಸಹ ಬದಾಮಿ ಚಾಲುಕ್ಯ ಅಥವಾ ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದಾಗಿದೆಯೆಂದು ಹೇಳಬಹುದು.

ಮಕರಗಳು: ಭಂಟನೂರಿನ ಅಗಸಿ ಬಾಗಿಲಿಗೆ ಹಾಳಾದ ದೇಗುಲಗಳ ಅವಶೇಷಗಳನ್ನು ಬಳಸಿ ಅಗಸೆಯನ್ನು ನಿರ್ಮಿಸ ಲಾಗಿದೆ. ಹಿಂದೆ ಸುಮಾರು ಮಕರ ಅಥವ ಯಾಳಿಗಳ ಶಿಲ್ಪಗಳು ಈ ಅಗಸೆ ದ್ವಾರದಲ್ಲಿದ್ದು, ಈಗ ಎರಡು ಮಾತ್ರ ಉಳಿದಿವೆ. ಆನೆಯ ದೇಹ ಕಿರಿದಾದ ಕಾಲುಗಳು, ತೆರೆದ ಮೊಸಳೆಯ ಬಾಯಿಯೊಳಗೆ ತನ್ನ ನಾಲಿಗೆಯನ್ನು ಹೊರಚಾಚಿದ, ಕುತ್ತಿಗೆಗೆ ಎರಡಂಚಿನ ಗೆಜ್ಜೆ ಸರವನ್ನು ಸುಂದರವಾಗಿ ಕೆತ್ತಲಾಗಿದೆ. ಮಕರದ ಬಾಲವನ್ನು ಶಿಲ್ಪಿಯು ಅತ್ಯಂತ ಅಲಂಕಾರಿಕವಾಗಿ ಕೆತ್ತಿದ್ದಾನೆ ಮಕರವು ತನ್ನ ಬಾಯಿಂದ ಹೂ ಮಾಲೆಯನ್ನು ಹಿಡಿದಿದೆ. ಮಕರದ ಮೇಲ್ಗಡೆ ಗಂಧರ್ವ ದಂಪತಿಗಳ ಯಾನ ದೃಶ್ಯವಿದೆ. ಗಂಧರ್ವವನು ತನ್ನ ತಲೆಯ ಮೇಲೆ ಕರಂಡ ಮುಕುಟವನ್ನು ಧರಿಸಿದ್ದಾನೆ.

ನಾಗರಶಿಲ್ಪ: ಕಪ್ಪು ಕಣಶಿಲೆಯಿಂದ ನಿರ್ಮಿಸಿದ ಯುಗಳ ನಾಗರ ಶಿಲ್ಪವು ಎರಡು ಇದ್ದು, ಅದರಲ್ಲಿಲ್ಲೊಂದು ಐದು ಹೆಡೆಗಳಿಂದ ಕೂಡಿದ್ದು, ಅತ್ಯಂತ ಸುಂದರವಾಗಿದೆ. ಇನ್ನೊಂದು ಶಿಲ್ಪವು ಒಂದು ಹೆಡೆಯಿಂದ ಕೂಡಿದೆ.

ವಿಷ್ಣುಶಿಲ್ಪ: ಪದ್ಮಾಸನದಲ್ಲಿರುವ ವರಹ ಅವತಾರದ ವಿಷ್ಣುವಿನ ಮೂರ್ತಿಯ ಮೇಲ್ಗಡೆ ಸೂರ್ಯ ಚಂದ್ರರಿದ್ದಾರೆ. ಕರಂಡ ಮುಕುಟವನ್ನು ಧರಿಸಿದ ಚತುರ್ಭುಜ ಶಿಲ್ಪವು. ಒಂದು ಕೈಯಲ್ಲಿ ಶಂಖ ಇನ್ನೊಂದು ಕೈಯಲ್ಲಿ ಚಕ್ರವನ್ನು ಹಿಡಿದಿದೆ. ವಿಷ್ಣು ಶಿಲ್ಪದ ಒಂದು ಕೈಯು ವರದ ಹಸ್ತವಾಗಿದ್ದರೆ, ಇನ್ನೊಂದು ಕೈಯು ಅಭಯ ಹಸ್ತವಾಗಿದೆ. ಶಿಲ್ಪದ ಕೆಳಗಡೆ ಖಡ್ಗ, ಕರು ಹಾಗೂ ಹಸುವನ್ನು ಕೆತ್ತಲಾಗಿದೆ. ವಿಷ್ಣುವಿನ ಕೊರಳಲ್ಲಿ ಕಂಠಾಭರಣವಿದೆ. ಇದೊಂದು ಅಪರೂಪದ ಹಾಗೂ ವಿಶಿಷ್ಟವಾದ ಶಿಲ್ಪವಾಗಿದೆ.

ಹಾಳಾದ ಕೋಟೆ ಹಾಗೂ ದೇಗುಲದ ಅವಶೇಷಗಳು: ಹಳೇ ಊರಿನ ಸುತ್ತಲೂ ಅಲ್ಲಲ್ಲಿ ಹಾಳಾದ ಕೋಟೆಯ ಅವಶೇಷಗಳಿವೆ. ಕೊತ್ತಲವೆಂದು ಕರೆಯುವ ಊರಿನ ಮಧ್ಯದಲ್ಲೊಂದು ಲಕ್ಷ್ಮೀಗುಡಿ ಇದೆ. ಇಲ್ಲಿ ದೇಗುಲದ



ಘಾವನೇಶ್ವರಿಯ ಅವಶೇಷವಿದೆ. ಬಹುಶಃ ಇಲ್ಲಿ ಪ್ರಾಚೀನ ಕಾಲದ ದೇಗುಲ ಇರಬಹುದಾಗಿದೆ. ಚಂದ್ರರೆಡ್ಡಿ ನಾವದಗಿ ಇವರ ಮನೆಯ ಪಕ್ಕದಲ್ಲೊಂದು ಲಕ್ಷ್ಮೀ ಗುಡಿ ಇದೆ. ಊರಿನ ಉತ್ತರಕ್ಕೆ ಶ್ರೀ ಹನುಮಗೌಡ ಹೆಗರಡ್ಡಿ ಇವರ ಮನೆಯ ಮುಂದೆ ಒಂದು ಲಕ್ಷ್ಮೀ ಗುಡಿ ಹಾಗೂ ಕಿರಿದಾದ ಹುಡೆಯಿದೆ. ಅದೇ ರೀತಿಯಾಗಿ ಊರಿನ ಪಶ್ಚಿಮದಲ್ಲಿ ಹಳೆತೋಟ ಎಂಬಲ್ಲಿ ಕೂಡಾ ಹಾಳಾದ ಕೋಟೆ ಬಾಗಿಲು ಹಾಗೂ ಲಕ್ಷ್ಮೀ ಗುಡಿಯಿತ್ತೆಂದು ಈ ಊರಿನ ಹಿರಿಯರ ಅಭಿಪ್ರಾಯ ವಾಗಿದೆ. ಊರ ಹೊರಗಡೆ ಇರುವ ಶ್ರೀ ಗಂಗಯ್ಯ ಶಿವಯ್ಯ ಹೊರಗಿನಮಠ ಇವರ ಮನೆಯ ಪಕ್ಕದಲ್ಲಿ ಹಾಳಾದ ಕೋಟೆಯ ಅವಶೇಷವಿದೆ. ಬಹುಶಃ ಈ ಮಠವು ಹಿಂದಿನ ಕಾಲದಲ್ಲಿ ಕೋಟೆಯ ಹೊರಗಡೆ ಇರಬಹುದು. ಈ ಮಠದಲ್ಲಿರುವ ಸಮಾಧಿಯೊಂದರ ಮೇಲೆ ಶ್ರೀ ರಾಚಯ್ಯ ಶಿವಯೋಗಿ ಇವರ ಮರಣ ಶಾಸನವಿದ್ದು, ಸನ್ ೧೮೨೫ರ ಮೆ॥ ಸೋಮವಾರದಂದು ಎಂಬ ಸು॥ ೨೦೦ ವರ್ಷದ ಬರಹವಿದೆ. ಸುಂದರವಾಗಿ ಕೆತ್ತಿದ ಹಾಳಾದ ದೇಗುಲದ ಸ್ಥಂಬಗಳು, ಶಿಲ್ಪಗಳು ಊರ ತುಂಬಾ ಚದುರಿವೆ. ಕೆಲವರು ಈ ಅವಶೇಷಳನ್ನು ಊರಿನ ತೋಟಪಟ್ಟಿ ಹಾಗೂ ಪರಸಿ ಗಳಿಗೆ ಬಳಸಿಕೊಂಡಿದ್ದಾರೆ.

ಕುದುರೆ ಸ್ಮಾರಕ: ಇತ್ತಿಚೆಗೆ ಮನೆಯ ಬುನಾದಿ ಹೊಡೆಯುವಾಗ ಸಿಕ್ಕಿರುವ ಕಲ್ಲಿನಲ್ಲಿ ಮೇಲ್ಗಡೆ ಸೂರ್ಯ ಚಂದ್ರ, ಮಧ್ಯದಲ್ಲಿ ಶಿವಲಿಂಗ ಹಾಗೂ ಕೊನೆಯಲ್ಲಿ ಕುದುರೆ ಮತ್ತು ಮರಿ ಇರುವುದರಿಂದ ಇದೊಂದು ಕುದುರೆ ಸ್ಮಾರಕವಾಗಿರಬಹುದಾಗಿದೆ. ಇದೊಂದು ಅಪರೂಪದ ಹಾಗೂ ವಿಶಿಷ್ಟವಾದ ಶಿಲ್ಪವಾಗಿದೆ.

ವೀರಾಂಜನೆಯ ಗುಡಿ: ಈ ಊರಿನ ವೀರಾಂಜನೇಯ ಗುಡಿಯ ಪೌಳಿಯ ಹೊರಭಾಗದಲ್ಲಿ 'ಸನ್ ೧೯೩೦ ಫಸಲಿ' ಎಂದು ಬರೆದಿರುವ ಲಿಪಿ ಇದ್ದು, ಇದು ಕ್ರಿ.ಶ. ೧೯೨೯-೩೦ಕ್ಕೆ ಸಮಾನಾಗುತ್ತದೆ. ಈ ವರ್ಷದಲ್ಲಿ ಈ ಫೌಳಿಯನ್ನು ನಿರ್ಮಿಸಿರಬಹುದಾಗಿದೆ. ವೀರಾಂಜನೆಯ ಗುಡಿಯ ಮುಂದೆ ಸುಮಾರು ೨೦-೩೦ ಅಡಿ ಎತ್ತರದ ಸುಂದರವಾದ ಮಾಲಗಂಬವಿದೆ. ವೀರಾಂಜನೇಯ ದೇವಾಲಯದ ಮುಖ್ಯದ್ವಾರವು ಹಿಂದು – ಮುಸ್ಲಿಂ (Indo Sarsanic Style) ಶೈಲಿಯಲ್ಲಿರುವುದರಿಂದ ಇದು ನಿಜಾಮ ಸರ್ಕಾರದಲ್ಲಿ ರಚನೆಯಾಗಿರಬಹುದಾಗಿದೆ.

ಈ ಭಂಟನೂರಿನ ಅವಶೇಷಗಳು ಶಿಲಾಯುಗಕ್ಕೆ ಸೇರಿದವುಗಳೆಂದು ನಿರ್ಣಯಿಸುವಲ್ಲಿ, ಆದಿಮಾನವನ ಗೋರಿಗಳು, ನಿಲುವುಗಲ್ಲುಗಳು, ಅವನು ಬೇಟೆಗೆ ಬಳಸುವ ಆಯುಧಗಳ ಲಭ್ಯತೆಯ ಕೊರತೆಯಿಂದಾಗಿ ಅನುಮಾನಗಳೇರ್ಪಟ್ಟಿರುವುದರಿಂದ, ಈ ೨೫-೩೦ ಎಕರೆ ಪ್ರದೇಶದಲ್ಲಿ ಯಾವ ಘಟನೆಯಿಂದ ಮಾನವನ ತಲೆಬುರಡೆ, ಜೋಡಿಹೆಣದ ಅಸ್ಥಿಪಂಜರಗಳಿರಬಹುದೆಂಬುದನ್ನು ವಿಚಾರಿಸಲಾಗಿ, ೧೮೭೭-೭೮ರವರೆಗೆ ಬಿದ್ದ ಭೀಕರ ಬರಗಾಲವನ್ನು ಜನಪದಿಗರು ಡೂಗಿಬರವೆಂದು ಕರೆದಿದ್ದಾರೆ. ಕ್ರಿ.ಶ. ೧೮೯೭-೯೮, ೧೯೦೩ ಹಾಗೂ ೧೯೦೫-೦೮ರಲ್ಲಿ ಕರ್ನಾಟಕದ ಬಹು ಭಾಗದಲ್ಲಿ (ಮೈಸೂರು, ಬೆಂಗಳೂರು, ಹುಬ್ಬಳ್ಳಿ ಮತ್ತು ಧಾರವಾಡ) ಪ್ಲೇಗ್ ಮಹಾಮಾರಿಯ ಹಾವಳಿಯಿಂದಾಗಿ ಈ ಭಾಗದಲ್ಲಿ ಸು॥ ೨೦ ಮಿಲಿಯನ್ ಜನ ಸತ್ತರೆ, ೧೮೮೮ ಹಾಗೂ ೧೯೯೯-೧೨, ಕಾಲರಾದಿಂದಲು ಕರ್ನಾಟಕದಲ್ಲಿ ಸಾಕಷ್ಟು ಜನರು ಅಸುನೀಗಿದರು. ಕ್ರಿ.ಶ. ೧೯೪೫ರಲ್ಲಿ ಸಂಭವಿಸಿದ 'ಅಲಾಬ್ ದಣಿವು'ವಿನಿಂದಾಗಿ ಸಾವಿರಾರು ಜನರು ಅಸುನೀಗಿದರು. ಅಥವಾ ಯಾವುದಾದರು ಮಹಾಯುದ್ಧ, ಪ್ರಕೃತಿ ವಿಕೋಪ ಘಟಿಸಿ ಇಷ್ಟೊಂದು ಸಂಖ್ಯೆಯ ಜನರು ಅಸುನೀಗಿದರೆಂಬುದು ಕೂಡಾ ವಿಚಾರಯೋಗ್ಯವಾಗಿದ್ದು, ಇದನ್ನು ಕುರಿತು ಇನ್ನೂ ಸಂಶೋಧನೆಯ ಅಗತ್ಯವಿದೆ.

[ಈ ಲೇಖನವನ್ನು ತಯಾರಿಸುವಲ್ಲಿ ಸಲಹೆ ಸೂಚನೆಗಳನ್ನಿತ್ತ ಹಿರಿಯರಾದ ಡಾ. ಅ. ಸುಂದರ, ಡಾ. ಎಸ್.ಕೆ. ಜೋಶಿ ಧಾರವಾಡ, ಡಾ. ದೇವರಕೊಂಡಾರೆಡ್ಡಿ ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಸ್ಥಳೀಯರಾದ ಶ್ರೀ ಬಸವಂತರಾಯ ದ ಹೆಗರೆಡ್ಡಿ, ಕು. ನಿಂಗರಾಜು ನೀರಲಗಿ, ಶ್ರೀ ಮರಿಯಪ್ಪ ಆಲ್ಯಾಳ, ಹಾಗೂ ಶ್ರೀ ಚಂದ್ರಶೇಖರ ಜಿ ಅನೇಸೂರ ಭಂಟನೂರು, ಇವರೆಲ್ಲರಿಗೂ ಲೇಖಕರ ಕೃತಜ್ಞತೆಗಳು]

ಆಧಾರಸೂಚಿ

೧. ಪ್ರಾಚ್ಯ ವಸ್ತು ಸಂಶೋಧನೆ. ಡಾ. ಅ ಸುಂದರ.

೨. ಪುರಾತತ್ವ ಶೋಧನೆ. ಡಾ. ಎಸ್. ನೀಲಕಂಠ ಶಾಸ್ತ್ರೀ.

೩. ಬಿಜಾಪೂರ ಜಿಲ್ಲೆಯ ಗ್ಯಾಜೆಟಿಯರ್. ಡಾ. ಆರ್. ಮುನಿಸ್ವಾಮಿ.

ದೇವನಹಳ್ಳಿ ತಾಲ್ಲೂಕು ನಲ್ಲೂರುಕೋಟೆ ಪ್ರದೇಶದ ಪ್ರಾಚ್ಯಾವಶೇಷಗಳು: ನಾಡವ್ಯಾಪ್ತಿ

ಆದಪ್ಪ ಪಾಸೋಡಿ*

ನಲ್ಲೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ಇದು ದೇವನಹಳ್ಳಿಯಿಂದ ದಕ್ಷಿಣಕ್ಕೆ ೯ ಕಿ.ಮೀ ಹಾಗೂ ಬೆಂಗಳೂರು ನಗರದಿಂದ ಈಶಾನ್ಯ ದಿಕ್ಕಿಗೆ ೪೬ ಕಿ.ಮೀ. ದೂರದಲ್ಲಿದೆ. ದೇವನಹಳ್ಳಿ–ಸೂಲಿಬೆಲೆ ಮಾರ್ಗ ಅಥವಾ ಬೂದಿಗೆರೆ–ದೇವನಹಳ್ಳಿ ಮಾರ್ಗಗಳ ಮೂಲಕ ನಲ್ಲೂರನ್ನು ತಲುಪಬಹುದು. ಶಾಸನಗಳಲ್ಲಿ ನಲ್ಲೂರಪಾರು, ನಲ್ಲೂರನಾಡು, ನಲ್ಲೂರಸೀಮೆ, ನಲ್ಲೂರು ರಾಜ್ಯ ಹಾಗೂ ನಲ್ಲೂರು ಹೋಬಳಿ ಎಂದು ಉಲ್ಲೇಖಿಸಲ್ಪಟ್ಟಿದೆ. ಹಾಳುಬಿದ್ದ ನಲ್ಲೂರು ಪಟ್ಟಣದ ಪ್ರದೇಶವನ್ನು 'ನಲ್ಲೂರುಕೋಟೆ' ಎಂದು ಗುರುತಿಸಲಾಗುತ್ತದೆ. ಅಲ್ಲಿಂದ ದಕ್ಷಿಣಕ್ಕೆ ಸುಮಾರು ಒಂದು ಕಿ.ಮೀ. ದೂರದ ಜನವಸತಿಯು ನಲ್ಲೂರು ಗ್ರಾಮವಾಗಿರುತ್ತದೆ. ಬೆಟ್ಟಕೋಟೆ ಹಾಗೂ ಸುತ್ತಮುತ್ತಲಿನಲ್ಲಿ ಬಿದ್ದ ಮಳೆ ನೀರು ಉಕ್ಕಿ ಹರಿದಾಗ ನಲ್ಲೂರಿನ ಸ್ವಲ್ಪ ಜನ ದೂರದಲ್ಲಿರುವ ಎತ್ತರದ ಸ್ಥಳಕ್ಕೆ ಹೋಗಿದ್ದರಿಂದ ಹಳೆನಲ್ಲೂರು–ಹೊಸನಲ್ಲೂರು ಗ್ರಾಮಗಳಾದವೆಂದು ಸ್ಥಳೀಯ ಹಿರಿಯರಾದ ನಾಗಣ್ಣನವರ ಭೈರಪ್ಪನವರು ವಿವರಿಸುತ್ತಾರೆ. ನೆಲೆಗೊಂದು ಹಿನ್ನೆಲೆ ಎಂಬ ಪರಿಕಲ್ಪನೆಯಲ್ಲಿ ಚರ್ಚಿಸುವುದಾದರೆ ಈ ಸ್ಥಳನಾಮವು ನಲ್ + ಊರು > ನಲೂರು ಅಥವಾ ನಲ್ಲೂರು ಎಂದಾಗಿರುತ್ತದೆ. 'ನಲ್' ಎಂದರೆ ಒಳ್ಳೆಯ, ಉತ್ತಮವಾದ, ಶ್ರೇಷ್ಠವಾದ, ಮನಸೆಳೆಯುವ ಎಂಬ ಅರ್ಥ ಬರುತ್ತದೆ[1]. ಇದಕ್ಕೆ ಪೂರಕವೆಂಬಂತೆ ಶಿಡ್ಲಘಟ್ಟ ತಾಲ್ಲೂಕು, ಜಂಗಮಕೋಟೆ ಹೋಬಳಿಯ ಸುಗಟೂರು ಗ್ರಾಮಕ್ಕೆ ಉತ್ತರ ಭೈರಣ್ಣನ ಹೊಲದಲ್ಲಿರುವ ಕ್ರಿ.ಶ. ೧೧೨೦ರ ಶಾಸನದಲ್ಲಿ 'ಅತ್ರೇಯರ ಮುಖಂಡನಾದ ಹೆಸರುವಾಸಿ ಉದಯ ಮಾರ್ತಂಡ ಬ್ರಹ್ಮಮಾರಾಯನ್ ಅಲಿಯಾಸ್ ಕುವಳೈಯ ತಂತ್ರಿಯು ನಲ್ಲೂರಿನ ಅಧಿಪತಿಯಾಗಿದ್ದ ಹಾಗೂ ಅವನು ಅರುಮೋಳಿ ದೇವಚತುರ್ವೇದಿಮಂಗಲಂನಲ್ಲಿ ನೆಲೆಸಿದ್ದನು. ನಲ್ಲೂರು ಹಲವರಿಂದ ಪ್ರಶಂಸೆಗೊಳಪಟ್ಟ ಪಟ್ಟಣವಾಗಿತ್ತು' ಎನ್ನಲಾಗಿದೆ. ನಿಗರಿಲಿ ಚೋಳಮಂಡಲದ ಕೈವಾರನಾಡು ವ್ಯಾಪ್ತಿಯಲ್ಲಿದ್ದ ಸುಗಟೂರೇ ಅಂದು ಅರುಮೋಳಿದೇವ ಚತುರ್ವೇದಿ ಮಂಗಲಂ ಎಂದು ಕರೆಯಲ್ಪಡುತ್ತಿತ್ತು[2].

ನಲ್ಲೂರು ಕೋಟೆ ಪ್ರದೇಶ ಮತ್ತು ಅಲ್ಲಿಯ ಹೊಯ್ಸಳ ಶಿಲ್ಪಗಳು:

ಸುಮಾರು ೫೦ ರಿಂದ ೬೦ ಎಕರೆ ಪ್ರದೇಶವನ್ನು ಸ್ಥಳೀಯರು 'ನಲ್ಲೂರು ಕೋಟೆ' ಎಂದು ಕರೆಯುತ್ತಾರೆ. ಕೋಟೆಯ ಕಲ್ಲುಗಳು–ಇಟ್ಟಿಗೆಗಳು ಕಾಣುವುದಿಲ್ಲ. ಬದಲಾಗಿ ಇಡೀ ಪ್ರದೇಶಕ್ಕೆ ಅಂಡಾಕಾರದಲ್ಲಿ ತಗ್ಗು ತೋಡಿ, ಅದರ ಮಣ್ಣಿನಿಂದ ಒಳಬದಿಯಲ್ಲಿ ಒಡ್ಡು (ಏರಿ) ಕಟ್ಟಿ, ನೆತ್ತಿಯ ಮೇಲೆ ಕತ್ತಾಳೆ (ಘೂತರಕ್ಷೆ), ಶೀಗೆ ಮತ್ತು ಬಕ್ಕಪಾಡ ಪೊದೆಗಳನ್ನು ಬೆಳೆಸುತ್ತಿದ್ದರಂತೆ.

ಮುಳ್ಳು–ಪೊದೆಗಳಿಂದ ಕೂಡಿದ ಬೇಲಿಯು ರಕ್ಷಾವರಣದಂತೆ ರಕ್ಷಣೆ ನೀಡುತ್ತಿತ್ತು. ಇಂಥ ಮಣ್ಣಿನ ಕೋಟೆಗಳು ೧೨ನೇ ಶತಮಾನದ ಮೂರನೇ ಚಾಲುಕ್ಯ ಸೋಮೇಶ್ವರನ 'ಅಭಿಲಷಿತಾರ್ಥ ಚಿಂತಾಮಣಿ' ಮತ್ತು ೧೭ನೇ ಶತಮಾನದ ಕೆಳದಿಯ ಬಸವರಾಜನ 'ಶಿವತತ್ವರತ್ನಾಕರ' ಕೃತಿಗಳಲ್ಲಿ 'ಮೃತ್ತಿಕಾಮಯಮ್' ಎಂದು ಉಲ್ಲೇಖಿಸ ಲ್ಪಟ್ಟಿರುತ್ತವೆ. ಬೂದಿಗೆರೆ–ದೇವನಹಳ್ಳಿ ಹೆದ್ದಾರಿಯು ನಲ್ಲೂರು ಕೋಟೆ ಪ್ರದೇಶವನ್ನು ದಕ್ಷಿಣೋತ್ತರವಾಗಿ ಛೇದಿಸುತ್ತದೆ. ಈ ರಸ್ತೆಯ ಪೂರ್ವದಲ್ಲಿ ವೀರಗಾರ ಗುಡಿ, ಬಸವಣ್ಣನ ಗುಡಿ, ರಾಗಿಮರದ ಕುಂಟೆ, ಕೋಣನಕುಂಟೆ, ಗಜೇಗೌಡನ ಕುಂಟೆ, ರಾಮಣ್ಣನ ಕುಂಟೆಗಳಿರುತ್ತವೆ. ರಸ್ತೆಯ ಪಶ್ಚಿಮ ದಿಕ್ಕಿನಲ್ಲಿ ಹೊಯ್ಸಳರ ಕಾಲದ ಭೈರವ ಮತ್ತು ದೇವತೆ ಶಿಲ್ಪಗಳು, ವಿಜಯನಗರೋತ್ತರ ಶೈಲಿಯ ಚನ್ನರಾಯಸ್ವಾಮಿ ದೇವಾಲಯ, ದೇವಾಲಯದ ಮುಂದೆ ಪಶ್ಚಿಮಕ್ಕೆ ಹುಣಸೆ ಮರಗಳ ನಡುವೆ ಅಲ್ಲಲ್ಲಿ ಗಮನ ಸೆಳೆಯುವ ಮೃತ್ಪಾತ್ರೆಗಳು ಹರಡಿರುವ ಮಣ್ಣಿನ ದಿಬ್ಬಗಳು, ಇತ್ತೀಚೆಗೆ ಕಟ್ಟಿಸಲಾದ ಗಂಗಮ್ಮನ ಗುಡಿ, ಗುಡಿಯ ಬಲಭಾಗದಲ್ಲಿ ಶಿಪ್ಪಣ್ಣನ ಕುಂಟೆಯೆಂದು ಹೇಳಲಾಗುವ ಆಲದ ಮರ ಮತ್ತು ಕುಂಟೆ ಇರುತ್ತವೆ.

* ಆಂಗ್ಲ ಭಾಷಾ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಅಗರ, ಸರ್ಜಾಪುರ ರಸ್ತೆ, ಬೆಂಗಳೂರು–೫೬೦೧೦೨.

ಭೈರವ ಶಿಲ್ಪ: ಗಂಗಮ್ಮ ದೇವಾಲಯದ ಮುಂದೆ ಬಲಭಾಗದ ಅರಳಿಕಟ್ಟೆಗೆ ನಿಲ್ಲಿಸಿರುವ ಮೂರು ಶಿಲ್ಪಗಳಲ್ಲಿ ಭೈರವ ಶಿಲ್ಪವೂ ಒಂದಾಗಿದೆ. ಗಟ್ಟಿಯಾದ ಕಪ್ಪು ಶಿಲೆಯಲ್ಲಿ ಮಾಡಲಾದ ಭೈರವ ಶಿಲ್ಪದ ಎಡ ಮತ್ತು ಕೆಳಗಿನ ಭಾಗಗಳು ತ್ರುಟಿತಗೊಂಡಿರುತ್ತವೆ. ಸಮಭಂಗಿಯಲ್ಲಿ ನಿಂತಿರುವ ಭೈರವನಿಗೆ ಉಡುಪು ತೋರಿಸಿರುವುದಿಲ್ಲ, ಎರಡೆಳೆಯ ಕಟಿಸೂತ್ರವಿದೆ. ಮೊದಲನೆ ಬಲಗೈಯಲ್ಲಿ ತ್ರಿಶೂಲ, ಎರಡನೇ ಬಲಗೈಯಲ್ಲಿ ಡಮರುಗ, ಮೊದಲನೇ ಎಡಗೈಯಲ್ಲಿ ಕಪಾಲ ಇದ್ದು, ಎರಡನೇ ಎಡಗೈ ತ್ರುಟಿತಗೊಂಡಿದೆ. ಎಡಭುಜದಿಂದ ಬಲಕ್ಕೆ ಇಳಿಬಿದ್ದಿರುವ ಯಜ್ಞೋಪವೀತ, ಕಿವಿಯಲ್ಲಿ ದುಂಡನೆಯ ಓಲೆ, ತಲೆ ಮೇಲೆ ಕರಂಡಕ ಹಾಗೂ ಕಂಠಹಾರ ಗಳಿವೆ. ತಲೆಯ ಹಿಂಭಾಗದಲ್ಲಿ ಕಿರೀಟದಂತೆ ಕಾಣುವ ಅರ್ಧ ವರ್ತುಲಾಕಾರದ ಅಗ್ನಿ ಜ್ವಾಲೆಯನ್ನು ಕಂಡರಿಸಲಾಗಿದೆ. ಎಡಭುಜದಿಂದ ಎದೆ ಹಾಗೂ ಎಡತೊಡೆ–ಮೊಣಕಾಲಿನ ವರೆಗೂ ರುಂಡಮಾಲೆ ಧರಿಸಿದ್ದು, ಭೈರವನ ವಾಹನವಾದ ನಾಯಿಯನ್ನು ಹಿನ್ನೆಲೆಯಾಗಿ ತೋರಿಸಲಾಗಿದೆ. ಇಂಥ ಭೈರವ ಶಿಲ್ಪಗಳು ಪೂರ್ವ ಬೆಂಗಳೂರಿನ ದೊಡ್ಡಕನ್ನೆಲ್ಲಿ–ಚಿಕ್ಕನಾಯಕನ ಹಳ್ಳಿ ರಸ್ತೆಯ ಸೋಮೇಶ್ವರ ದೇವಾಲಯ, ಗುಂಜೂರಿನ ಸೋಮೇಶ್ವರ ದೇವಾಲಯ ಹಾಗೂ ಕಸವನಹಳ್ಳಿಯ ಆಂಜನೇಯ ದೇವಾಲಯದ ಮುಂದೆ ಇರುವ ಮಂಟಪದಲ್ಲಿ ಕಂಡು ಬಂದಿರುತ್ತವೆ. ಆಗಮಿಕ ಮೂಲಗಳ ಪ್ರಕಾರ ೬೪ ಭೈರವ ರಿದ್ದು, ಇವರನ್ನು ಎಂಟು ಗುಂಪುಗಳಲ್ಲಿ ವರ್ಗೀಕರಿಸಿ, ಪ್ರತಿ ಯೊಂದು ಗುಂಪಿನ ನಾಯಕರನ್ನು ಅಸಿತಾಂಗ, ರುರು, ಕಂಡ, ಕ್ರೋಧ, ಉನ್ಮತ್ತ, ಕಾಪಾಲ, ಭೀಷಣ ಮತ್ತು ಸಂಹಾರ ಭೈರವರೆಂದು ಹೇಳಲಾಗುತ್ತದೆ[೫].

ದೇವತೆ ಶಿಲ್ಪ: ಗಟ್ಟಿಯಾದ ಕರಿಕಲ್ಲಿನಲ್ಲಿ ಮಾಡಲಾದ ದೇವತೆಯ ಶಿಲ್ಪವೊಂದು ಕೋಟೆ ಪ್ರದೇಶದ ಚೆನ್ನರಾಯಸ್ವಾಮಿ ದೇವಾಲಯದಲ್ಲಿ ಇಡಲಾಗಿದೆ. ಪೀಠದ ಮೇಲೆ ಎಡಗಾಲನ್ನು ಮಡಿಚಿ, ಬಲಗಾಲು ಇಳಿಬಿಟ್ಟು ಕುಳಿತ ದೇವತೆಯ ಕೈಗಳು ತ್ರುಟಿತವಾಗಿರುತ್ತವೆ. ಪಾದಗಳಿಗೆ ಬಳೆಯಾಕಾರದ ಆಭರಣ, ಕಾಲ್ಕಡಗ, ಮೂರು ಎಳೆಗಳ ಕಟಿಸೂತ್ರ, ಏಳು ಕಂಠಹಾರ, ತೋಳ್ಬಂದಿಗಳನ್ನು ತೊಡಿಸಲಾಗಿದೆ. ಸ್ತನಗಳ ಕೆಳಗೆ ಮತ್ತು ಹೊಟ್ಟೆಯ ಇಕ್ಕೆಲಗಳಲ್ಲಿ ಮಣಿಹಾರವನ್ನು ಕಂಡರಿಸಿದ ಶಿಲ್ಪಿ ಕಾಲಿನ ಪಾದಗಳನ್ನು ತೋರಿಸುವಲ್ಲಿ ಕೊಂಚ ಎಡವಿದ್ದಾನೆ. ಮುಂಡದಿಂದ ಬೇರ್ಪಟ್ಟು ದೂರದಲ್ಲಿ ಬಿದ್ದಿರುವ ರುಂಡವನ್ನು ಜೋಡಿಸಿ ನೋಡಿದಾಗ ತಲೆ ಮೇಲೆ ಕರಂಡಕವಿರುವುದು ತಿಳಿಯಿತು. ಮುಖ ಹಾಗೂ ಕೈಗಳು ಹಾಳಾಗಿರುವುದರಿಂದ ಯಾವ ದೇವತೆ(ಯಕ್ಷಿಣಿ?)ಯ ಶಿಲ್ಪವೆಂಬುದು ಸ್ಪಷ್ಟವಾಗುವು ದಿಲ್ಲ.

ಭೈರವ ಮತ್ತು ದೇವತೆಯ ತ್ರುಟಿತ ಶಿಲ್ಪಗಳೆರಡೂ ಗಟ್ಟಿಯಾದ ಕಪ್ಪು (ಬೆಸಾಲ್ಟ್) ಶಿಲೆಯಲ್ಲಿ ಕೆತ್ತಲ್ಪಟ್ಟಿದ್ದು, ಶಿಲ್ಪ ಲಕ್ಷಣಗಳಿಗನುಸಾರವಾಗಿ ಹೊಯ್ಸಳ ಅವಧಿಯವುಗಳಾಗಿ ರುತ್ತವೆ.

ಬಸವಣ್ಣನ ಗುಡಿ: ನಲ್ಲೂರುಕೋಟೆ ಪ್ರದೇಶದ ಆಗ್ನೇಯ ದಿಕ್ಕಿಗೆ ಬಸವಣ್ಣನ ಗುಡಿಯಿದೆ. ಇದು ಪೂರ್ವಾಭಿಮುಖ ವಾಗಿದ್ದು, ಮುಖಮಂಟಪ–ಗರ್ಭಗೃಹಗಳನ್ನು ಹೊಂದಿರು ತ್ತದೆ. ಮುಖಮಂಟಪದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಗೋಡೆಗೆ ಒಂದೊಂದು ಕಂಬ ಮಾದರಿ ಇದ್ದು, ಕಂಬ ಮಾದರಿಯಲ್ಲಿ ಕಂಠ, ಮುಚ್ಚಳ, ಬೋದಿಗೆಗಳನ್ನು ತೋರಿಸಲಾಗಿದೆ. ಮುಖಮಂಟಪದ ಪ್ರವೇಶದ್ವಾರವು ೪'೮" ಅಗಲವಾಗಿದೆ, ಗೋಡೆಗಳು ೨'೬" ದಪ್ಪವಾಗಿರುತ್ತವೆ. ಮುಖಮಂಟಪದ ಒಳಗಿನ ವಿಸ್ತೀರ್ಣವು ೮'೪" ರಷ್ಟಿದ್ದು, ಛತ್ತಿನಲ್ಲಿ ಮೂರು ಚಪ್ಪಡಿ ಕಲ್ಲುಗಳನ್ನು ಹೊದಿಸಲಾಗಿದೆ. ಮಧ್ಯದ ಕಲ್ಲುಚಪ್ಪಡಿ ಮೇಲೆ ಅರಳಿದ ಕಮಲವನ್ನು ಕಂಡರಿಸಲಾಗಿದ್ದು, ಹೊರವೃತ್ತದಲ್ಲಿ ೧೪ ದಳಗಳು, ಒಳವೃತ್ತದಲ್ಲಿ ೮ ದಳಗಳನ್ನು ತೋರಿಸಲಾಗಿದೆ. ಕಮಲದ ನಡುವೆ ಚಿಕ್ಕದಾಗಿ ಎರಡು ವೃತ್ತಾಕಾರದ ರೇಖೆ ಎಳೆದು ಸಂಪೂರ್ಣಗೊಳಿಸಲಾಗಿದೆ.

ಮುಖಮಂಟಪದಿಂದ ಗರ್ಭಗೃಹಕ್ಕೆ ೩'೨" ಅಗಲ ವಾದ ಪ್ರವೇಶಾವಕಾಶವಿದೆ. ಈ ಪ್ರವೇಶದ್ವಾರದ ಮೆಲ್ಭಾಗ ದಲ್ಲಿರುವ ಕಲ್ಲುಚಪ್ಪಡಿಗಳಿಗೆ ಎರಡೂ ಕಡೆ ಬಾಗಿಲು ಸುಳಿಕೆ ಗಳನ್ನು ಕೂಡಿಸಲು ಆಳವಾಗಿ ಕೊರೆದಿರುವ ಗುರುತು ಗಳಿರುತ್ತವೆ. ಗರ್ಭಗೃಹದೊಳಗಿನ ವಿಸ್ತೀರ್ಣ ೯'೧" x ೯'೧" ಇದ್ದು, ಹೊರಗೋಡೆಯ ಉದ್ದಕ್ಕೂ ವಿಸ್ತೀರ್ಣ ೧೩'೧೦" x ೧೩'೧೦" ಆಗಿರುತ್ತದೆ. ಎಲ್ಲ ನಾಲ್ಕೂ ಗೋಡೆಗಳು ೨'೬" ದಪ್ಪ ಇರುತ್ತವೆ. ಗರ್ಭಗೃಹದ ಛತ್ತಿನಲ್ಲಿ ಎರಡು ಸ್ತರಗಳ ಕತ್ತರಿಗಲ್ಲುಗಳನ್ನು ಹಾಕಿ, ಮಧ್ಯದಲ್ಲಿರುವ ಕಲ್ಲು ಚಪ್ಪಡಿ ಮೇಲೆ ಎರಡು ವೃತ್ತ ಎಳೆಯಲಾಗಿದೆ. ಅದರಲ್ಲಿ ೧೬ ದಳಗಳ ಅರಳಿದ ಕಮಲ; ಎರಡು ವೃತ್ತಾಕಾರದ ಗೆರೆಗಳು ಮತ್ತೆ ೧೬ ದಳಗಳು, ಎಂಟು ದಳಗಳು, ಮಧ್ಯದಲ್ಲಿ ರೇಖಾವೃತ್ತ ಬಿಡಿಸಿ ಪೂರ್ಣಗೊಳಿಸಲಾಗಿದೆ. ಗರ್ಭಗೃಹದಲ್ಲಿ ಈ ಹಿಂದೆ ಶಿವಲಿಂಗವಿತ್ತಂತೆ, ಸದ್ಯ ಇರುವುದಿಲ್ಲ. ಎದುರಿನಿಂದ ನೋಡಿದರೆ ಅಧಿಷ್ಠಾನದಿಂದ ಮೇಲ್ಛವಣಿಯವರೆಗೆ ನಾಲ್ಕು ಸ್ತರಗಳಲ್ಲಿ ಆಯತಾಕಾರದ ಕಲ್ಲುಗಳನ್ನಿಟ್ಟು ಕಟ್ಟಿದ ನಿರ್ಮಿತಿ ಇದಾಗಿದೆ. ಗರ್ಭಗೃಹದ ಅಗಲಕ್ಕಿಂತ ಮುಖಮಂಟಪದ ಅಗಲವು ಒಂಭತ್ತು ಅಂಗುಲದಷ್ಟು ಕಡಿಮೆಯಿರುತ್ತದೆ. ಹಾಗಾಗಿ ಗರ್ಭಗೃಹದ ಹೊರಗೋಡೆ ಮುಖಮಂಟಪದ ಹೊರ ಗೋಡೆಗಿಂತ ಸ್ವಲ್ಪ ದೊಡ್ಡದಾಗಿ ಕಾಣಿಸುತ್ತದೆ. ಗರ್ಭಗೃಹದ

ಅಧಿಷ್ಠಾನದಿಂದ ಹಿಂದಿನ ಭಿತ್ತಿಯ ಎತ್ತರ ೬'೩" ಇದ್ದು, ಹಿಂಭಾಗದ ಭಿತ್ತಿಯಲ್ಲಿ ೨ ಪೂರ್ಣ ಕಂಬ ಮಾದರಿ, ೨ ಮೂಲೆಗಂಬ ಮಾದರಿ, ಭಿತ್ತಿಯ ಎಡಗೋಡೆಯಲ್ಲಿ ೨ ಮೂಲೆಗಂಬ, ೨ ಪೂರ್ಣಕಂಬ ಮಾದರಿಗಳನ್ನು ತೋರಿಸಲಾಗಿದೆ. ಭಿತ್ತಿಯ ಬಲಗೋಡೆ ಪೂರ್ಣ ಶಿಥಿಲವಾಗಿದೆ. ಎಡಭಿತ್ತಿಯಲ್ಲಿ ೨ ದೇವಕೋಷ್ಠ ಮಾದರಿಗಳಿದ್ದು, ಬಲಭಿತ್ತಿಯಲ್ಲೂ ಅವು ಪುನರಾವರ್ತನೆಯಾಗಿದ್ದಿರಬಹುದು. ದೇವಕೋಷ್ಠಗಳ ಇಕ್ಕೆಲಗಳಲ್ಲಿ ಅರ್ಧಕಂಬ ಮಾದರಿಗಳು, ಅವುಗಳ ಮೇಲಿನ ಶಿಲಾಫಲಕದ ಮೇಲೆ ವ್ಯಾಳಿ(ಸಿಂಹಮುಖಿ)ಯ ಉಬ್ಬುಶಿಲ್ಪ, ಈ ವ್ಯಾಳಿಯ ಬಾಯಿಯಿಂದ ನಾಲಗೆಯು ಸೀಳಿಕೊಂಡು ಹೊರಬಂದು ಇಬ್ಭಾಗವಾಗಿರುವುದನ್ನು ಅಲಂಕಾರಿಕವಾಗಿ ಚಿತ್ರಿಸಲಾಗಿದೆ. ಗುಡಿಯ ಶಿಖರ ಬಿದ್ದು ಹೋಗಿರುವ ಸಾಧ್ಯತೆ ಇದೆ.

ಚೆನ್ನರಾಯಸ್ವಾಮಿ ದೇವಾಲಯ: ನಲ್ಲೂರು ಕೋಟೆ ಪ್ರದೇಶದ ಮಧ್ಯಭಾಗದಲ್ಲಿ ಪಶ್ಚಿಮಾಭಿಮುಖವಾಗಿ ಚೆನ್ನರಾಯಸ್ವಾಮಿ ದೇವಾಲಯವಿದೆ. ಇದು ವಿಜಯನಗರೋತ್ತರ ವಾಸ್ತುಶೈಲಿಯಲ್ಲಿ ನಿರ್ಮಿಸಲ್ಪಟ್ಟಿದೆ ಎಂದು ದಾಖಲಾಗಿರುತ್ತದೆ[1]. ನಲ್ಲೂರು ರಾಮಸ್ವಾಮಿ ದೇವಸ್ಥಾನದ ಮುಂದಿನ ಗರುಡಗಂಬದ ಬಳಿ ಇರುವ ಕ್ರಿ.ಶ. ೧೩೮೬ರ ಶಾಸನದಲ್ಲಿ '*ಮಹಾಸಾಮಂತಾಧಿಪತಿ ಸೋಂಣಯನಾಯಕರ ಕುಮಾರ ಚಿಕ ಅಂಕಿಯನಾಯಕರು ತಿರುಮಲೆನಾಥ ದೇವರಿಗೆ ಪ್ರೀತ್ಯರ್ತ್ತವಾಗೆ ಯಿದಿರುಗಾಂತು ಪ್ರತಿಷ್ಟೆಯ ಮಾಡಿದ ದೀಪಮಾಲೆಯ ಕಂಭ*' ಎಂಬ ಮಾಹಿತಿ ಇದೆ. ಇದೇ ಸ್ಥಳದಲ್ಲಿರುವ ಕ್ರಿ.ಶ. ೧೪೦೧ರ ಶಾಸನದಲ್ಲಿ '*ತಿರುಮಲೆನಾತನ ಶ್ರೀಪಾದಕೆ ನಿಂಮ ಭ್ರಿತ್ಯರ ಭ್ರಿತ್ಯರ ಭ್ರಿತ್ಯರು ಪೆರುಮಾಳಸೆಟಿಯ ಮಗ ಮಾರಪನು ಮಾಡಿದ ತೊತ್ತುಗೆಲಸ*' ಎನ್ನಲಾಗಿದೆ. ಈ ಎರಡೂ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ತಿರುಮಲನಾಥನೇ ಚೆನ್ನರಾಯಸ್ವಾಮಿಯಾಗಿರಬಹುದೇ? ಎಂಬ ಸಂಶಯ ಮೂಡುತ್ತದೆ. ತಿರುಮಲೆನಾಥ (ವೆಂಕಟೇಶ)ನ ಎದುರಿಗೆ ದೀಪಮಾಲೆ ಕಂಬ ಮತ್ತಿತರ ಶಿಲ್ಪಸೇವೆಯ ಬಗ್ಗೆ ಶಾಸನಗಳು ಹೇಳುತ್ತವೆಯೇ ಹೊರತು ದೇವಾಲಯದ ನಿರ್ಮಾಣ ಕಾಲವಲ್ಲ. ಅಂದರೆ ಹೊಯ್ಸಳರ ಆಡಳಿತಾವಧಿಯ ಕೊನೆಯ ಭಾಗ ಅಥವಾ ವಿಜಯನಗರ ಅರಸರ ಆರಂಭಿಕ ಕಾಲಘಟ್ಟದಲ್ಲಿ ನಿರ್ಮಾಣವಾದ ದೇವಾಲಯವಿದಾಗಿದೆ ಎಂಬ ಸುಳಿವು ಈ ಶಾಸನಗಳಿಂದ ಸಿಗುತ್ತದೆ. ೨೬'೯"x೧೪'೭" ವಿಸ್ತೀರ್ಣವುಳ್ಳ ಈ ದೇವಾಲಯದಲ್ಲಿ ಗರ್ಭಗೃಹ ಮತ್ತು ಮುಖಮಂಟಪಗಳಿವೆ. ಗರ್ಭಗೃಹವು ೧೪'೭"x೧೪'೭" ವಿಸ್ತೀರ್ಣದಲ್ಲಿದ್ದರೆ, ಮುಖಮಂಟಪದ ವಿಸ್ತೀರ್ಣ ೧೨'೨"x೧೪'೧" ಆಗಿರುತ್ತದೆ.

ಗರ್ಭಗೃಹದ ಭಿತ್ತಿಯ ಮೇಲೆ ಪ್ರಸ್ತರದ ಭಾಗ ಅಸ್ತಿತ್ವದಲ್ಲಿದ್ದು ಮುಖಮಂಟಪದ ಭಿತ್ತಿಯ ಮೇಲಿರುವ ಪ್ರಸ್ತರ ಬಿದ್ದು ಹೋಗಿರುತ್ತದೆ. ಬೋದಿಗೆಗಳ ತುಂಡು ಕಲ್ಲುಗಳು ಅಲ್ಲಲ್ಲಿ ಬಿದ್ದಿರುವುದನ್ನು ನೋಡಬಹುದಾಗಿದೆ. ಗೋಡೆಯು ಒಂದು ಸ್ತರದಲ್ಲಿ ೨೨ ಅಂಗುಲ ಇನ್ನೊಂದು ಸ್ತರದಲ್ಲಿ ೨೬ ಅಂಗುಲ ಎತ್ತರದ ಆಯತಾಕಾರದ ಬಿಳಿ ಗ್ರಾನೈಟ್ ಕಲ್ಲುಗಳನ್ನು ಬಳಸಿ ಕಟ್ಟಲಾಗಿದೆ. ಕಲ್ಲು ಗೋಡೆಯ ಮಧ್ಯದಲ್ಲಿ ಅಲ್ಲಲ್ಲಿ ಸುಟ್ಟ ಇಟ್ಟಿಗೆಗಳನ್ನು ಬಳಸಿದ್ದಾರೆ. ಹೀಗೆ ಬಳಸಿರುವ ಇಟ್ಟಿಗೆಗಳು ೧೦ ಅಂಗುಲ ಉದ್ದ, ೬ ಅಂಗುಲ ಅಗಲ ಹಾಗೂ ೨.೫ ಅಂಗುಲ ದಪ್ಪವಾಗಿರುತ್ತವೆ. ದೇವಾಲಯದ ಎಡಭಿತ್ತಿ, ಹಿಂಭಿತ್ತಿಗಳು ಸುಸ್ಥಿತಿಯಲ್ಲಿದ್ದು, ಬಲಭಿತ್ತಿಯು ಶಿಥಿಲವಾಗಿದೆ. ಎಡ-ಬಲ-ಹಿಂಬದಿ ಭಿತ್ತಿಗಳ ಮೇಲೆ ಸುಂದರವಾದ ಶಿಲ್ಪಗಳನ್ನು ಕಂಡರಿಸಲಾಗಿದೆ. ಮುಖಮಂಟಪದ ಪ್ರವೇಶ ದ್ವಾರದ ಇಕ್ಕೆಲಗಳಲ್ಲಿ ಎರಡು ಅರ್ಧಕಂಬ ಮಾದರಿ, ಎರಡು ಮೂಲೆಗಂಬ ಮಾದರಿಗಳಿರುತ್ತವೆ. ಈ ಕಂಬ ಮಾದರಿಗಳ ಮೇಲೆ ಕಂಠ, ಮುಚ್ಚಳ, ಕಂಠ, ಬೋದಿಗೆಗಳನ್ನು ತೋರಿಸಲಾಗಿದ್ದು, ಭಿತ್ತಿ ಮಾತ್ರ ನಿರಾಲಂಕಾರವಾಗಿದೆ. ಮುಖಮಂಟಪದ ಎಡಭಿತ್ತಿಯಲ್ಲಿ ಒಂದು ಮೂಲೆಗಂಬ, ಒಂದು ಅರ್ಧ ಕಂಬ, ಒಂದು ದೇವಕೋಷ್ಠ, ಎರಡು ಅರ್ಧ ಕಂಬ ಮಾದರಿಗಳಿರುತ್ತವೆ.

ಗರ್ಭಗೃಹದ ಬಲಭಿತ್ತಿಯ ಮೇಲಿರುವ ಮೊದಲನೆಯ ಶಿಲ್ಪದಲ್ಲಿ ವ್ಯಕ್ತಿ (ಕೃಷ್ಣ?)ಯು ಬಲಪಾದವನ್ನು ಬಲಕ್ಕೆ ೪೫° ಡಿಗ್ರಿ ಹಾಗೂ ಎಡಪಾದವನ್ನು ಎಡಕ್ಕೆ ೪೫° ಡಿಗ್ರಿಯಷ್ಟು ತಿರುಗಿಸಿ ಇಟ್ಟಿದ್ದಾನೆ. ಪಾದಗಳಿಗೆ ಬಳೆಯಾಕಾರದ ಆಭರಣ, ಕಾಲ್ಕಡಗ, ಸೊಂಟಕ್ಕೆ ಗೆಜ್ಜೆ, ಉದರಬಂಧ, ಕಂಠಹಾರ, ಕೈಕಡಗ, ತೋಳ್ಬಂದಿಗಳಿರುತ್ತವೆ. ತಲೆ ಮೇಲಿನ ಜಡೆಯು ಕಿವಿಗಳ ಮೇಲೆ ಇಳಿಬಿದ್ದಿರುತ್ತದೆ. ತಲೆಗೂದಲಿನ ಕೊನೆಯಲ್ಲಿ ಕಟ್ಟಿದ್ದ ಮಣಿಸರದ ಅಂಚುಗಳು ಎರಡೂ ಭುಜಗಳ ಮೇಲೆ ಇಳಿಬಿದ್ದಿವೆ. ಕೈಗಳ ಕಿರುಬೆರಳುಗಳನ್ನು ಗದ್ದದ ಮೇಲಿಟ್ಟು, ತೋರುಬೆರಳುಗಳನ್ನು ಕರ್ಣಕುಂಡಲಕ್ಕೆ ಸ್ಪರ್ಶಿಸಿರುತ್ತಾನೆ. ಎರಡನೆಯ ಉಬ್ಬುಶಿಲ್ಪದಲ್ಲಿ ಎಡಗಾಲು ಮಡಿಚಿ, ಬಲಗಾಲನ್ನು ಕೆಳಗೆ ಇಳಿಬಿಟ್ಟು ಕುಳಿತ ವ್ಯಕ್ತಿ (ಬಾಲಕೃಷ್ಣ?) ಯು ತನ್ನ ಎಡಗೈಯಲ್ಲಿ ಹಿಡಿದುಕೊಂಡಿದ್ದ ಪಾತ್ರೆಯಿಂದ ಬೆಣ್ಣೆ ತಿನ್ನುತ್ತಿದ್ದಾನೆ. ಪಾತ್ರೆಯು ತ್ರುಟಿತವಾಗಿದೆ. ಕಾಲ್ಕಡಗ, ಸೊಂಟಕ್ಕೆ ಡಾಬು, ತೋಳ್ಬಂದಿ, ಕೈಕಡಗ, ಕರ್ಣಕುಂಡಲ, ಕೇಶರಾಶಿಯನ್ನು ತೋರಿಸಲಾಗಿದೆ. ಶರೀರದ ಅವಯವಗಳು ಬಾಲಕೃಷ್ಣನನ್ನು ಹೋಲುತ್ತಿದ್ದರೆ, ಮುಖ ಮಾತ್ರ ಈ ಶಿಲ್ಪದಲ್ಲಿ ವಯಸ್ಕನಂತೆ ಕಂಡು ಬರುತ್ತದೆ. ಮುಂದಿನ ಶಿಲ್ಪದಲ್ಲಿರುವ ವ್ಯಕ್ತಿ (ಕೃಷ್ಣ?) ಯು ನಾಟ್ಯಭಂಗಿಯಲ್ಲಿದ್ದು, ಎಡಗಾಲು ಮಾತ್ರ ನೆಲದ ಮೇಲೆ ಇಟ್ಟಿದ್ದಾನೆ.

ಬಲಗಾಲು ಮೇಲೆತ್ತಿ ಮೊಣಕಾಲನ್ನು ಬಲಕ್ಕೆ ಮುಂಚಾಚಿರುವುದಿದೆ. ಸೊಂಟಕ್ಕೆ ಕಟ್ಟಿದ ಚಲ್ಲಣಕ್ಕೆ ತಲೆಕೆಳಗಾಗಿರುವ ತ್ರಿಶೂಲದ ಚಿತ್ರವಿದೆ. ಪಾದಗಳಿಗೆ ಬಳೆಯಾಕಾರದ ಆಭರಣ. ಕಾಲ್ಕಡಗ ಉದರಬಂದ, ಕಂಠಹಾರ, ತೋಳ್ಬಂದಿ, ಕೈಕಡಗ, ಕರ್ಣಕುಂಡಲ. ಹೆಚ್ಚಿನ ಕೇಶರಾಶಿಯನ್ನು ತೋರಿಸಿರುವ ಶಿಲ್ಪಿ ಬಾಲಕೃಷ್ಣನ ಹಸನ್ಮುಖಿ ತೋರಿಸಲು ಯಶಸ್ವಿಯಾಗಿರುತ್ತಾನೆ. ಯತಿ ಮತ್ತು ಕೋತಿಯ ಉಬ್ಬುಶಿಲ್ಪದಲ್ಲಿ ಶಿಲ್ಪಿ ಕೈಚಳಕ ತೋರಿಸಿದ್ದಾನೆ.

ಚೆನ್ನರಾಯಸ್ವಾಮಿ ದೇವಾಲಯದ ಭಿತ್ತಿಯ ಮೇಲಿರುವ ಈ ಶಿಲ್ಪಗಳು, ಕ್ರಿ.ಶ.೧೬೫೦ ರಲ್ಲಿ ಪದಿನಾಡು ದೊರೆ ಸಿಂಗೆದೇಪನು ಕಟ್ಟಿಸಿದ ಯಳಂದೂರಿನ ಗೌರೀಶ್ವರ ದೇವಾಲಯದಲ್ಲಿರುವ ಶಿಲ್ಪಗಳನ್ನು ಹೋಲುತ್ತವೆ[೫].

ಮಣ್ಣಿನ ದಿಬ್ಬಗಳು: ನಲ್ಲೂರುಕೋಟೆ ಪ್ರದೇಶದ ಹುಣಸೆ ತೋಪಿನಲ್ಲಿ ಆಯತಾಕಾರದ ಕೆಲವೊಮ್ಮೆ ಚೌಕಾಕಾರದ ಮಣ್ಣಿನ ದಿಬ್ಬಗಳು (Mounds) ಕಾಣಿಸುತ್ತವೆ. ದಿಬ್ಬದ ಕೆಂಪು ಮರಳು ಮಿಶ್ರಿತ ಮಣ್ಣಿನಲ್ಲಿ ಅಸಂಖ್ಯಾತ ಮಡಕೆ ಚೂರುಗಳು ಕಂಡು ಬರುತ್ತವೆ. ಇವುಗಳಲ್ಲಿ ಮಡಕೆಯ ಕಂಠಭಾಗಗಳೇ ಹೆಚ್ಚಿನ ಸಂಖ್ಯೆಯಲ್ಲಿರುತ್ತವೆ. ಹೆಚ್ಚಿನ ಮಡಕೆ ತುಣುಕುಗಳು ಸ್ಥಳೀಯ ಮಣ್ಣಿನ ಬಣ್ಣ ಹೊಂದಿದ್ದು ಅಲ್ಲೊಂದು ಇಲ್ಲೊಂದು ಕಪ್ಪು ಬಣ್ಣದ ಕಂಠಗಳೂ ಕಾಣಸಿಗುತ್ತವೆ. ಮಡಕೆಗಳನ್ನು ತಯಾರು ಮಾಡುವಾಗ ಕಂಠದಡಿಗೆ ಸುತ್ತಲೂ ಅಲಂಕಾರಿಕ ಗೆರೆ ಎಳೆದಿರುವುದನ್ನು ಗುರುತಿಸಬಹುದಾಗಿದೆ. ಇದೇ ದಿಬ್ಬಗಳ ಮೇಲ್ಮಣ್ಣನ್ನು ಐದಾರು ಅಂಗುಲಗಳಷ್ಟು ಆಳವಾಗಿ ಅಗೆದರೆ ಅರ್ಧ ಅಂಗುಲ ದಪ್ಪ-ಎರಡು ಅಂಗುಲ ಅಗಲವಿರುವ ಕೆಂಪು ಬಣ್ಣದ ಹೆಂಚಿನ ತುಣುಕುಗಳು ಹೇರಳವಾಗಿ ಲಭ್ಯವಾಗುತ್ತವೆ. ಇವುಗಳ ಉದ್ದವನ್ನು ನಿಖರವಾಗಿ ಹೇಳಲಾಗುವುದಿಲ್ಲ. ಏಕೆಂದರೆ ಕೆಲವು ೨ ಅಂಗುಲ, ಇನ್ನು ಕೆಲವು ೨.೫ ಅಂಗುಲ ಹಾಗೂ ಒಮ್ಮೊಮ್ಮೆ ೩, ೩.೫ ಅಂಗುಲದವರೆಗೂ ಮುರಿದುಕೊಂಡಿರುತ್ತವೆ. ಎಲ್ಲ ಹೆಂಚುಗಳ ಉದ್ದನೆಯ ಒಂದು ಕೊನೆ ಮುರಿದು ಹೋಗಿದ್ದು ಇನ್ನೊಂದು ತುದಿಯಲ್ಲಿ ಅರ್ಧ ವರ್ತುಲಾಕಾರದ, ಕೆಲವೊಮ್ಮೆ ಬಾಣದ ಮೊನೆಯಂತೆ ಚೂಪಾಗಿರುವುದನ್ನು ಕಾಣುತ್ತೇವೆ. ನಲ್ಲೂರುಕೋಟೆ ಪ್ರದೇಶದ ದಿಬ್ಬಗಳಲ್ಲಿ ದೊರೆತ ಈ ಮಡಕೆ ಚೂರು ಮತ್ತು ಹೆಂಚಿನ ಒಡೆದು ಹೋದ ಭಾಗಗಳನ್ನು ಗಮನಿಸಿದ ಡಾ.ಅ.ಸುಂದರ ಅವರು ಸುಮಾರು ಕ್ರಿ.ಶ. ೧೩ನೇ ಶತಮಾನದಿಂದ ೧೫ನೇ ಶತಮಾನದವರೆಗಿನ ಅವಧಿಯ ಅವಶೇಷಗಳು ಮಿಶ್ರಣ ಗೊಂಡಂತೆ ಕಾಣುತ್ತದೆ ಎಂದಿದ್ದಾರೆ.

ತೋಪಿನ ವಾಯವ್ಯ ಮೂಲೆಯಲ್ಲಿ ಒಂದೆಡೆ ಎರಡು ದೊಡ್ಡ ಕಲ್ಲು ಚಪ್ಪಡಿಗಳನ್ನು ತೆಗೆದು ಹಾಕಿ ನೆಲದಲ್ಲಿ ಸುಮಾರು ಎಂಟು ಅಡಿ ಆಳ ತೋಡಿದ ಗುಂಡಿಯೊಂದಿದೆ. ಈ ಗುಂಡಿಯಲ್ಲಿ ಉತ್ತರ ದಿಕ್ಕಿಗೆ ಎರಡು ವೃತ್ತಾಕಾರದ ಟೊಳ್ಳುಗಳು ಕಾಣಿಸುತ್ತವೆ. ಎರಡೂ ಟೊಳ್ಳು ಭಾಗಗಳ ಮಧ್ಯದಲ್ಲಿ ಸುಮಾರು ಒಂದು ಅಂಗುಲದಷ್ಟು ದಪ್ಪ ಗಾರೆ ಪದರು ಇದೆ. ಗಾರೆ ಪದರಿನ ಮೇಲೆ ಮತ್ತು ಕೆಳಗಿರುವ ವೃತ್ತಾಕಾರದ ಟೊಳ್ಳುಗಳು ಮಡಕೆಗಳನ್ನು ಹೂತಿಟ್ಟಿದ್ದ ಜಾಗಗಳೆಂದು ಸ್ಪಷ್ಟವಾಗುತ್ತದೆ. ನಿಧಿಚೋರರು ಇಂಥ ಜಾಗಗಳನ್ನು ಹಾಳು ಮಾಡುತ್ತಿದ್ದಾರೆ. ಎಡಪಾದದ ಹತ್ತಿರ ಒಂದು ಅಡಿ ಎತ್ತರದ ನಲ್ಲೂರು ರಾಜನ ಶಿಲ್ಪವನ್ನು ಪ್ರತಿಷ್ಠಾಪಿಸಿರುವುದನ್ನು ಕಾಣಬಹುದು. ಸ್ಥಳೀಯರು ಈ ಶಿಲ್ಪದಲ್ಲಿರುವ ವ್ಯಕ್ತಿಯನ್ನು 'ನಲ್ಲೂರನ್ನು ಆಳಿದ ಚೋಳರಾಜ' ಎಂದು ಹೇಳುತ್ತಾರೆ. ನಲ್ಲೂರುನಾಡಿನ ಆಡಳಿತ ನಡೆಸಿದ ಕೊನೆಯ ಪಾಳೆಯಗಾರ ಚೌಡರಾಯನೇ ಅಪಭ್ರಂಶಗೊಂಡು ಚೋಳರಾಜನೆಂದಾಗಿರುವ ಸಾಧ್ಯತೆಗಳುಂಟು.

ಗಂಗಮ್ಮನ ಗುಡಿ ಹಾಗೂ ಗರ್ಭಗೃಹದಲ್ಲಿರುವ ಮೃದು ಕಪ್ಪುಕಲ್ಲಿನ ಮೂರ್ತಿಶಿಲ್ಪಗಳ ನಿರ್ಮಿತಿಯ ಕಾಲ ಇತ್ತೀಚಿನ ೧೯೯೯ ಆಗಿದ್ದು, ಪ್ರತಿಷ್ಠಾಪಿಸಲ್ಪಟ್ಟಿರುವ ಚೋಳರಾಜನೇ ಚೌಡರಾಯ ಎಂದು ಹೇಗೆ ಹೇಳುವುದು? ಇಲ್ಲಿಯೂ ನಲ್ಲೂರಿನ ಜನರು ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿರುವುದಕ್ಕೆ ಸ್ಪಷ್ಟ ಸುಳಿವು ದೊರಕುತ್ತದೆ. ಗಂಗಮ್ಮನ ಗುಡಿಯ ಮುಂದೆ ಬಲಭಾಗದ ಅರಳಿಕಟ್ಟೆಗೆ ನಲ್ಲಿಸಿರುವ ಮೂರು ಶಿಲ್ಪಗಳ ಪೈಕಿ, ಭೈರವನ ಬಲಕ್ಕೆ ಇರುವ ಗಟ್ಟಿಯಾದ ಬಿಳಿ ಕಲ್ಲುಚಪ್ಪಡಿ (ದ್ವಾರಬಂಧದ ತೋಳು?) ಯನ್ನು ಸೂಕ್ಷ್ಮವಾಗಿ ಪರಾಮರ್ಶಿಸಿದರೆ, ಎಡಗಾಲು ಮಡಚಿ, ಬಲಗಾಲು ಇಳಿಬಿಟ್ಟು ಆಸೀನಳಾಗಿರುವ ದೇವತೆ; ದೇವತೆಯ ಎಡಪಾದದ ಹತ್ತಿರ ಪ್ರತಿಷ್ಠಿತ ವ್ಯಕ್ತಿಯ ಉಬ್ಬುಶಿಲ್ಪವಿರುವುದು ಕಂಡು ಬರುತ್ತದೆ. ಇದು ಸುಮಾರು ೧೫ನೇ ಶತಮಾನದ ಶಿಲ್ಪವಾಗಿದ್ದು, ಗಂಗಮ್ಮನ ಗುಡಿಯ ಪುನರ್ನಿರ್ಮಾಣ ಸಂದರ್ಭದಲ್ಲಿ ಅಂದರೆ ೧೯೯೯ರಲ್ಲಿ ಗಟ್ಟಿ ಬಿಳಿಕಲ್ಲಿನಲ್ಲಿದ್ದ ಚೋಳರಾಜನ ಉಬ್ಬುಶಿಲ್ಪವನ್ನು ಮೂರ್ತಿಶಿಲ್ಪವನ್ನಾಗಿ ಪುನರ್ ಪ್ರತಿಷ್ಠಾಪಿಸಿದರೆಂದು ತೋರುತ್ತದೆ.

ನಲ್ಲೂರು ದೇವರ ಕಾಡು: ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಗೆ ಒಳಪಡುವ ನಲ್ಲೂರು ಅಮಾನಿ ಗ್ರಾಮದ ಸರ್ವೆ ನಂಬರು ಒಂದರಲ್ಲಿ ದೇವರಕಾಡು, ದೇವರಬನ ಎಂದು ಕರೆಯಲಾಗುವ ಹುಣಸೆತೋಪು ನಲ್ಲೂರು ಗ್ರಾಮದ ಉತ್ತರಕ್ಕೆ ೧ ಕಿ.ಮೀ. ದೂರದಲ್ಲಿದೆ. ೫೩.೦೭ ಎಕರೆ ಪ್ರದೇಶದಲ್ಲಿ ಸುಮಾರು ೩೦೦ ಹುಣಸೆ ಮರಗಳಿರುತ್ತವೆ. ೧೫೫ ನೆಯ ಸಂಖ್ಯೆಯ ಹುಣಸೆ ಮರವು ೪೧೧೦ ವರ್ಷಗಳಷ್ಟು ಹಳೆಯದೆಂದು ಕಾರ್ಬನ್ ಡೇಟಿಂಗ್‌ನಿಂದ ಸ್ಪಷ್ಟವಾಗಿದೆ[೬].

ನಲ್ಲೂರಿನ ಪ್ರಾಚೀನತೆ, ನಲ್ಲೂರನಾಡಿನ ಪಾಳೆಯಗಾರರು ಮತ್ತು ನಾಡಿನಲ್ಲಿ ಅಂತರ್ಗತವಾಗಿದ್ದ ಪ್ರದೇಶಗಳು

ಕರ್ನಾಟಕ ಸರ್ಕಾರದ ಜೀವವೈವಿಧ್ಯ ಮಂಡಳಿಯ ಫಲಕದಲ್ಲಿರುವ 'ಚೋಳ ವಂಶದ ರಾಜರ ಕಾಲದಲ್ಲಿ ನಲ್ಲೂರು ಹುಣಸೆತೋಪು ರೂಪುಗೊಂಡಿರಬಹುದು' ಎಂಬ ವಾಕ್ಯವನ್ನು ಅವಲೋಕಿಸುವುದಾದರೆ, ದೇವನಹಳ್ಳಿ ಮತ್ತು ಸುತ್ತಲಿನ ಹೊಸಕೋಟೆ, ಚಿಂತಾಮಣಿ, ಶಿಡ್ಲಘಟ್ಟ ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕುಗಳಲ್ಲಿ ಬರುವ ಚೋಳರಸರ ಉಲ್ಲೇಖಗಳನ್ನು ಚರ್ಚಿಸಬೇಕಾಗುತ್ತದೆ. ಶಿಡ್ಲಘಟ್ಟ ತಾಲ್ಲೂಕಿನ ನಂದನಹೊಸಹಳ್ಳಿ ಕಾಶೀ ವಿಶ್ವೇಶ್ವರಸ್ವಾಮಿ ದೇವಸ್ಥಾನದ ಗರ್ಭಗುಡಿಯ ಛಾವಣಿಗೆ ಹಾಸಿರುವ ಕ್ರಿ.ಶ.೧೧೧೩ ರ ಶಾಸನದಲ್ಲಿ 'ಶ್ರೀಮದ್ ದಂಡನಾಯಕ ಮಚಿಮಯ್ಯನಪ್ಪ ರಾಜರಾಜ ಬ್ರಹ್ಮ ಮಾರಾಯ . . . ಯರ್ಪ್ಪ ಸಾಸಿರಮಂ ವಲ್ಲೂರ ಬೀಡಿನಲೆ[೭] ಸುಖ ಸಂಕಥಾ ವಿನೋದದಿಂ...' ಎಂಬ ಉಲ್ಲೇಖ ಬಂದಿದೆ. ಅದರಂತೆ ಚಿಂತಾಮಣಿ ತಾಲ್ಲೂಕು ಮಜರೆ ದಿಗುವನಹಳ್ಳಿಯ ಸೋಮೇಶ್ವರ ದೇವಸ್ಥಾನಕ್ಕೆ ಪಶ್ಚಿಮದಲ್ಲಿರುವ ಕ್ರಿ.ಶ.೧೦೪೭ರ ಶಾಸನದಲ್ಲಿರುವ 'ರಾಜೇಂದ್ರ ಚೋಳ ಬ್ರಹ್ಮಮಾರಾಯಮಂ ರಾಮರಾಜವಾಡಿ ಏಳುಸಾಸಿರವನಾಳುತ್ತ ವಲ್ಲೂರ ಬೀಡಿನಲಿ[೮] ಸುಖಸಂಘಾತ ವಿನೋದದಿಂ ಆಳುತ್ತಿರೆ' ಎಂಬ ಸಾಲುಗಳಲ್ಲಿರುವ 'ವಲ್ಲೂರಬೀಡು' ನಲ್ಲೂರಬೀಡು ಎಂಬುದರ ಇನ್ನೊಂದು ರೂಪವಾಗಿರಬಹುದೇ? ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನಲ್ಲಿ ವಲ್ಲೂರು (ವಳ್ಳೂರು) ಗ್ರಾಮವಿದೆ. ಅದು ಕ್ರಿ.ಶ.೧೫೫೮ ರಿಂದೀಚೆಗೆ ಚಾರಿತ್ರಿಕ ಹಿನ್ನೆಲೆಯುಳ್ಳ ಊರಾಗಿದೆ ಮತ್ತು ದೇವನಹಳ್ಳಿಯಿಂದ ದೂರದಲ್ಲಿದೆ. ಇನ್ನು ಬೇಲೂರಿನ ಕ್ರಿ.ಶ.೧೧೧೭ರ ಶಾಸನದಲ್ಲಿ ಹೊಯ್ಸಳ ವಿಷ್ಣುವರ್ಧನನ ಸಾಧನೆಗಳು ಮತ್ತು ಸಾಮ್ರಾಜ್ಯದ ಪೂರ್ವ ಮೇರೆಯನ್ನು ಹೇಳುವ ಸಂದರ್ಭದಲ್ಲಿ 'ಉರರೀಕೃತ ಕೋಳಾಳಪುರನುಂ, ಉಲ್ಲಂಘಿತ ವಲ್ಲೂರನುಂ ಉದ್ಘಾಟಿತ ನಂಗಲಿಪುರನುಂ' ಎಂದು ಹೇಳಲಾಗಿದೆ. ಕೋಳಾಳಪುರ, ವಲ್ಲೂರು, ನಂಗಲಿಪುರ–ಈ ಸ್ಥಳನಾಮಗಳು ಕ್ರಮವಾಗಿ ಇಂದಿನ ಕೋಲಾರ, ನಲ್ಲೂರು (ದೇವನಹಳ್ಳಿ ತಾಲ್ಲೂಕು) ಮತ್ತು ನಂಗಲಿ (ಮುಳುಬಾಗಿಲು ತಾಲ್ಲೂಕು) ಗ್ರಾಮಗಳೇ ಆಗಿರುತ್ತವೆ. ಈ ಮೂರೂ ಶಾಸನಗಳಲ್ಲಿರುವ ವಲ್ಲೂರು ಬೀಡು ಅಥವಾ ವಲ್ಲೂರು ಎಂಬ ಸ್ಥಳನಾಮಗಳು ದೇವನಹಳ್ಳಿ ತಾಲ್ಲೂಕಿನ ನಲ್ಲೂರನ್ನು ಸಂಬೋಧಿಸುತ್ತವೆಯಾದರೂ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ವಲ್ಲೂರು > ನಲ್ಲೂರು ಆಗುವುದಿಲ್ಲವೆಂಬ ಅನಿಸಿಕೆಯಾಗಿದೆ.

ಇಮ್ಮಡಿ ಬಲ್ಲಾಳನ ಮಗ ಇಮ್ಮಡಿ ನರಸಿಂಹನು ದೋರಸಮುದ್ರದಿಂದ ಕಾಂಚೀಪುರಕ್ಕೆ ಚೋಳರು ಮತ್ತು ಪಾಂಡ್ಯರ ಮೇಲೆ ಯುದ್ಧಕ್ಕೆ ಹೋಗಬೇಕಾದಾಗ ನಲ್ಲೂರು ಕೊಪ್ಪವಲ್ಲಿ[೧೦] ತಂಗಿದ್ದು, ಅಲ್ಲಿಂದಲೇ ರಾಜ್ಯಭಾರ ಮಾಡಿದನೆಂದೂ ಚನ್ನರಾಯಪಟ್ಟಣ ತಾಲ್ಲೂಕಿನ ನವಿಲೆಯ ಕ್ರಿ.ಶ. ೧೨೧೮ರ ಶಾಸನದಲ್ಲಿ ಸುಳಿವು ಸಿಗುತ್ತದೆ. ಶಾಸನೋಕ್ತ 'ನಲ್ಲೂರುಕೊಪ್ಪ' ದೇವನಹಳ್ಳಿ ತಾಲ್ಲೂಕಿನ ನಲ್ಲೂರಾಗಿದೆ. ಏಕೆಂದರೆ ಮಗರರಾಜ್ಯದ ಮೇಲಿನ ತನ್ನ ವಿಜಯೋತ್ಸವದ ಆಚರಣೆಗಾಗಿ ಹೊಯ್ಸಳದೊರೆಯು ಚೂಡವಾಡಿಕೊಪ್ಪದಲ್ಲಿ ತನ್ನ ಜನರಿಗೆ ಔತಣಕೂಟ ಏರ್ಪಡಿಸಿದ್ದನಲ್ಲದೆ, ಕೆಂಬಾಳು ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ 'ವೀರನರಸಿಂಹಪುರ'ವೆಂದು ಹೆಸರಿಸಿದನು. ಚೂಡವಾಡಿಕೊಪ್ಪ, ಕೆಂಬಾಳು ಗ್ರಾಮಗಳು (ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು) ದೇವನಹಳ್ಳಿ ತಾಲ್ಲೂಕಿನ ನಲ್ಲೂರಿಗೆ ಹತ್ತಿರದಲ್ಲಿರುತ್ತವೆ.

ದೇವನಹಳ್ಳಿ ತಾಲ್ಲೂಕು ಜಾಲಿ ಹೋಬಳಿ ಸುರಧೇನುಪುರದ ಸುರಧೇಶ್ವರ ದೇವಸ್ಥಾನದಲ್ಲಿರುವ ಕ್ರಿ.ಶ.೧೩೩೧ರ ಹೊಯ್ಸಳ ದೊರೆ ರಾಮನಾಥನ ಶಾಸನವಿದ್ದು, ಇದರಲ್ಲಿ ದೇವದಾನ, ದೇವರ ಮೆರವಣಿಗೆ 'ತಿರುವಳ್ಳಿಯಾಟ್ಟಂ', ಮಾದಪ್ಪುರಂ ಎಂಬ ವಿಧಿ ವಿಧಾನಗಳು ಇಳೈಪಕ್ಕನಾಡು ಹಾಗೂ ಜನವರನಾಥ ನಲ್ಲೂರುಪಾರು[೧೧] ವ್ಯಾಪ್ತಿಯಲ್ಲಿ ನಡೆಯುತ್ತಿದ್ದವು. ಇಲ್ಲಿ ಉಕ್ತವಾಗಿರುವ 'ನಲ್ಲೂರ ಪಾರು' ನಲ್ಲೂರ ಸೀಮೆ, ನಲ್ಲೂರಪಟ್ಟು ಎಂಬರ್ಥ ಕೊಡುತ್ತದೆ. ನಲ್ಲೂರಸೀಮೆಗೆ 'ಜನವರನಾಥ' ಎಂಬ ಪೂರ್ವಪ್ರತ್ಯಯ ಸ್ಥಳವನ್ನು ಖಚಿತವಾಗಿ ಗುರುತಿಸುವುದಕ್ಕಾಗಿ ಸೇರಿಸಲ್ಪಟ್ಟಿದ್ದು, ಬಹುಶಃ ಅದು ಜನವರನಾಥ ದೇವರಿಂದಾಗಿ 'ಜನವರನಾಥ ನಲ್ಲೂರಪಾರು' ಆಗಿರುವ ಸಾಧ್ಯತೆಯಿದೆ. ೧೩ನೇ ಶತಮಾನದ ಉತ್ತರಾರ್ಧದಲ್ಲಿ ಒಂದು ಸೀಮೆ ಅಥವಾ ಪಟ್ಟು ಆಗಿದ್ದ ನಲ್ಲೂರು ಐವತ್ತು ವರ್ಷಗಳ ನಂತರ ನಾಡಾಗಿ[೧೨] ಮಾರ್ಪಟ್ಟಿರುವ ಸಂಗತಿ ಬೂದಿಗೆರೆ ಹೋಬಳಿಯ ಬಂಡೆಕೊಡಿಗೇನಹಳ್ಳಿ ರಂಗಸ್ವಾಮಿ ದೇವಾಲಯದಲ್ಲಿರುವ ಕ್ರಿ.ಶ. ೧೩೩೮ರ ಶಾಸನದಿಂದ ತಿಳಿದುಬರುತ್ತದೆ. ಮಹಾ ಸಾಮಂತಾಧಿಪತಿ ಮಂಚಯನಾಯಕನ ಮಗ ಗುಣ್ಣಯ ನಾಯಕನು, ನಂದದೇವಣ್ಣನ ಮಗ ಬಯಿರೇದೇವನಿಗೆ ಹಿರಿಯ ಕೆರೆಯ ತೆಂಕಣಕೋಡಿಯ ಹೊಲ, ಪಡುವಲು ಜೇಗೂರ ಹೊಲ, ಗದ್ದೆ, ಸೋಮಾವಂಮನ ಕೆರೆಯನ್ನು ಸರ್ವಮಾನ್ಯ ಕೊಡಗೆಯಾಗಿ ಯಲಹಕ್ಕ ನಾಡವರು ಮತ್ತು ನಲ್ಲೂರ ನಾಡವರ ಮುಂದಿಟ್ಟು ಕೊಡುತ್ತಾನೆ. ನಲ್ಲೂರ ನಾಡವರು ಯಲಹಕ್ಕ ನಾಡವರಷ್ಟೇ ಪ್ರಬಲ ಮತ್ತು ಪ್ರಮುಖರಾಗಿದ್ದರೆಂಬುದು ಶಾಸನೋಕ್ತ ಸಾಲಿನಿಂದ

ವೇದ್ಯವಾಗುತ್ತದೆ. ಯಲಹಕ್ಕ ನಾಡವರಾಗಲಿ, ನಲ್ಲೂರ ನಾಡವರಾಗಲಿ ಜನಸಾಮಾನ್ಯರಿಗೆ ತೀರ ಹತ್ತಿರದಲ್ಲಿದ್ದು, ಪ್ರಭಾವೀ ರಾಜಕೀಯ ಶಕ್ತಿಯಾಗಿ ಮೂಡಿ ಬಂದಿರುವು ದರಿಂದಲೇ ಮಹಾಸಾಮಂತಾಧಿಪತಿಯ ಮಗನೊಬ್ಬನು ಅವರ ಸಮ್ಮುಖದಲ್ಲಿ ಕೊಡುಗೆಯನ್ನು ಕೊಡುತ್ತಾನೆ.

ಸಾಮಾನ್ಯವಾಗಿ ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಅವರ ಪರಂಪರೆಯನ್ನು ಚಿಕ್ಕ ಮನೆತನ ಗಳು (ನಾಡವರು/ನಾಡಪ್ರಭುಗಳು/ಪಾಳೆಯಗಾರರು) ಮುಂದುವರೆಸಿಕೊಂಡು ಬಂದವು; ಆದರೆ ಇಲ್ಲಿ ಸಂಗಮ ವಂಶದ ಒಂದನೆಯ ಹರಿಹರನು ಕ್ರಿ.ಶ. ೧೩೩೬ ರಲ್ಲಿ ಪಟ್ಟಕ್ಕೆ ಬಂದ ಎರಡು ವರ್ಷಗಳಲ್ಲಿ ಅಂದರೆ ಕ್ರಿ.ಶ. ೧೩೩೮ ರಲ್ಲೇ ನಲ್ಲೂರ ನಾಡವರು ಮತ್ತು ಯಲಹಕ್ಕ ನಾಡವರು ಉಲ್ಲೇಖಿಸಲ್ಪಡುತ್ತಾರೆ. ಇದರಿಂದ ತಿಳಿದುಬರುವುದೇನೆಂದರೆ– ವಿಜಯನಗರ ಸಾಮ್ರಾಜ್ಯವು ಒಂದು ಖಂಡಾಂತರ ರಾಜ್ಯವಾಗಿತ್ತು; ಅದು ಅನೇಕ ನಾಡುಗಳಿಂದ ಕೂಡಿದ್ದಾಗಿತ್ತು. ಜಪಾನಿನ ಇತಿಹಾಸಕಾರರಾದ ಖರಾಷಿಮಾರವರ 'ವಿಜಯ ನಗರ ಸಾಮ್ರಾಜ್ಯವು, ಕೇಂದ್ರೀಕೃತ ಮತ್ತು ವಿಕೇಂದ್ರೀಕೃತಗಳ ಎರಡೂ ಅಂಶಗಳನ್ನು ಸಮನ್ವಯ ಮಾಡಿಕೊಂಡಿತ್ತು' ಎಂಬ ಅಭಿಪ್ರಾಯವನ್ನು ಇಲ್ಲಿ ಅನ್ವಯಿಸಿಕೊಳ್ಳಬೇಕಾಗುತ್ತದೆ. ನಲ್ಲೂರ ನಾಡವರು, ಯಲಹಂಕ ನಾಡವರು, ವಿಜಯನಗರದ ಅರಸರು ಮತ್ತು ಜನತೆಯ ಮಧ್ಯವರ್ತಿಗಳಾಗಿದ್ದರು. ಅವರು ತಮ್ಮ ನಿರ್ದಿಷ್ಟ ಪ್ರದೇಶದ ಆಡಳಿತವನ್ನು ನಡೆಸುತ್ತ ಸಾರ್ವಭೌಮನಿಗೆ ನಿಷ್ಠರಾಗಿದ್ದರು. ತಮ್ಮ ತಮ್ಮ ಪ್ರದೇಶಗಳ ರಕ್ಷಣೆಗೆ ನಿರ್ದಿಷ್ಟಪಡಿಸಿದ ಸೇನಾಬಲವನ್ನಿಟ್ಟುಕೊಂಡು ಅಗತ್ಯಬಿದ್ದಾಗ ಅದನ್ನು ಸಾರ್ವಭೌಮನ ಸೇವೆಗೆ ಉಪಯೋಗಿಸುತ್ತಿದ್ದರೆಂದು ತಿಳಿದುಬರುತ್ತದೆ.

ನಲ್ಲೂರಿನ ರಾಮಸ್ವಾಮಿ ದೇವಸ್ಥಾನದ ಮುಂದಿರುವ ಕ್ರಿ.ಶ. ೧೩೮೬ರ ಶಾಸನವು ಮಹಾಸಾಮಂತಾಧಿಪತಿ ಸೋಣಯನಾಯಕರ ಕುಮಾರ ಚಿಕ್ಕ ಅಂಕಿಯನಾಯಕರು ತಿರುಮಲೆನಾಥದೇವರಿಗೆ ದೀಪಮಾಲೆ ಕಂಬವನ್ನು ಪ್ರತಿಷ್ಠಾಪಿಸಿದ ಬಗ್ಗೆ ವಿವರಿಸುತ್ತದಲ್ಲದೆ ತಿರುಮಲೆಲನಾಥ ದೇವರ ಭೃತ್ಯರ ಭೃತ್ಯರ ಭೃತ್ಯರಾಗಿದ್ದಂತಹ ಚಿಕ್ಕ ಅಂಕಿಯನಾಯಕರು ಮಾಡಿದ ಸೇವೆ ಎನ್ನಲಾಗಿದೆ[೧೩]. ಜಾಲ ಹೋಬಳಿ ಚಿಕ್ಕಜಾಲದ ಕೇಶವ ದೇವಾಲಯದ ಹೊರಪ್ರಾಕಾರ ದಲ್ಲಿರುವ ಕ್ರಿ.ಶ. ೧೪೧೨ರ ಶಾಸನವು ಜಾಲವಾದ ಶ್ರೀ ವಿಷ್ಣುವರ್ಧನ ಚತುರ್ವೇದಿಮಂಗಲದ ಶ್ರೀ ಚನ್ನಕೇಶವನಾಥ ದೇವರಿಗೆ ಉಷಾಕಾಲದ ಉಪಹಾರಕ್ಕೆ ಶ್ರೀ ಮನ್ಮಹಾ ಸಾಮಂತಾಧಿಪತಿ ಚಲವಲಿಕದ ಚಲುಂಡಿಯನಾಯಂಕರ ಕುಮಾರ ಚಲುಂಡೆಯನಾಯಕರು ನಲ್ಲೂರನಾಡ ಮುತ್ತುಗದ ಹಳ್ಳಿಯಲು ಕ್ಷೇತ್ರಪಾಲನೆಯ ಮಾಡುವಂತಾಗಿ ಕೊಟ್ಟ ಧರ್ಮಶಾಸನದ ಕ್ರಮವೆಂತೆಂದರೆ ಆ ಕೆರೆಯ ಕೆಳಗೆ ಕೊಟ್ಟ ಗದ್ದೆ ಅಯಿಗಂಡುಗ, ಆ ಚತುಸೀಮೆಯೊಳಗೆ ಕೋಡಿಹೊಲ ಮೂಘಂಡುಗ, ಅಂತು ಉಭಯಂ ಎಂಟು ಖಂಡುಗವನೂ ಕೇಶವನಾಥದೇವರ ಪ್ರೀತ್ಯರ್ಥವಾಗಿ ಬಿಟ್ಟ ಧರ್ಮಶಾಸನ ವಾಗಿದೆ[೧೪]. ನಲ್ಲೂರನಾಡಿನ ಮುತ್ತುಗದಹಳ್ಳಿಯಲ್ಲಿ ಕ್ಷೇತ್ರಪಾಲನೆ ಮಾಡುತ್ತಿದ್ದ ಚಲುಂಡೆಯನಾಯಕನೇ ಆಡಳಿತಾನುಭವ ಪಡೆದ ಮೇಲೆ ನಲ್ಲೂರನಾಡಪ್ರಭು ವಾಗಿರಬೇಕು. ಕ್ರಿ.ಶ. ಸುಮಾರು ೧೫ನೇ ಶತಮಾನದಲ್ಲಿ ದುರಂತ ಅಂತ್ಯ ಕಂಡ ಚೌಡರಾಯನಿಗೆ ಚಲುಂಡೆಯ ನಾಯಕನೆಂದೂ ಕರೆಯು ತ್ತಿದ್ದಿರಬೇಕು. ಇವನ ತಂದೆಯ ಹೆಸರಾದ 'ಚಲವಲಿಕದ ಚಲುಂಡಿಯನಾಯಂಕ' ಅಂಕಿತನಾಮದಲ್ಲಿ 'ಚಲವಲಿಕ' ವಿಶೇಷಣವಾಗಿದ್ದು, ಅದು 'ಛಲದಂಕ' ಅಥವಾ 'ಯಲಹಂಕ' ಎಂಬಂತೆ ಉಪಯೋಗಿಸಲ್ಪಟ್ಟಿರಬೇಕು. ನಲ್ಲೂರಿನ ಇತಿಹಾಸ ವನ್ನು ಪರಾಮರ್ಶಿಸುವಾಗ ಶಾಸನೇತರ ಮೂಲವನ್ನೂ ಪರಿಗಣಿಸಬೇಕಾಗುತ್ತದೆ. ಅದೇನೆಂದರೆ–ವಿಜಯನಗರ ಸಂಗಮ ಮನೆತನದ ಇಮ್ಮಡಿ ಪ್ರೌಢದೇವರಾಯನ ಆಸ್ಥಾನದಲ್ಲಿ ಪ್ರಧಾನ ಮತ್ತು ಸೇನಾದಂಡನಾಯಕನಾಗಿದ್ದ ಲಕ್ಕಣ್ಣ ದಂಡೇಶನು (೧೪೦೦–೧೪೭೦) ತನ್ನ 'ಶಿವತತ್ವ ಚಿಂತಾಮಣಿ' ಕೃತಿಯ ಪದ್ಯ ೯೩ರಲ್ಲಿ ಕೂಲಿ ಕಾಯಕದಲ್ಲಿ ತೊಡಗಿಸಿಕೊಂಡಿದ್ದ 'ನಲ್ಲೂರ ಕೂಲಿಯಯ್ಯ'ನನ್ನು ಉಲ್ಲೇಖಿಸಿದ್ದಾನೆ. ಇದೇ ಕೃತಿಯಲ್ಲಿ ಶರಣರ ಹೆಸರು ಮತ್ತು ಸ್ಥಳಗಳನ್ನು ತಿಳಿಸಿರುವ ಪದ್ಯವೊಂದರಲ್ಲಿ 'ಕಿತ್ತನೆಲ್ಲಿಯ ಶೀಲವಂತ ತಿಮ್ಮಣ್ಣ, ಸಾರಿಕೆಯ ಸಿದ್ಧರಾಮಯ್ಯ, ಬೆಂಗಳೂರ ಶರಣ ಮಲ್ಲಣ್ಣ, ನೆಲ್ಲಮಂಗಲದ ಪೆಮ್ಮಣ್ಣ, ಕನ್ನೆಲ್ಲಿಯೊಳಗ ವ್ರತಿಕ ಮೆಣಸಿನಕಾಯಕದ ಪುಟ್ಟಣ್ಣಯ್ಯನುನ್ನತನು, ಗೆಜ್ಜೆಯ ತಿಪ್ಪಣ್ಣಯ್ಯ, ಶಿವನಸಮುದ್ರ ಹಿತನುಂ ನಮಶಿವಾಯ ಯ್ಯನೊಳಗಾದವರ ಚರಣಾಂಬುಜಕ್ಕೆ ಶರಣು' ಎಂದಿದ್ದಾನೆ. ಸಾರಿಕೆ (ಸಾರಕ್ಕಿ) ಕನ್ನೆಲ್ಲಿ (ದೊಡ್ಡಕನ್ನೆಲ್ಲಿ) ಗ್ರಾಮಗಳು ಬೆಂಗಳೂರಿನಲ್ಲಿದ್ದು, ಕಿತ್ತನೆಲ್ಲಿ (ಕುಕ್ಕಲನಾಡಿನ ರಾಜಧಾನಿ), ನೆಲ್ಲಮಂಗಲ (ನೆಲಮಂಗಲ) ಹಾಗೂ ಶಿವನಸಮುದ್ರ (ಹೆಸರುಘಟ್ಟದ ಪ್ರತಿನಾಮಧೇಯ) ಗ್ರಾಮಗಳು ಬೆಂಗಳೂರಿನ ಆಸುಪಾಸಿನಲ್ಲಿವೆ. ಕಾವ್ಯದಲ್ಲಿ ಉಲ್ಲೇಖಗೊಂಡ 'ನಲ್ಲೂರಿನ ಕೂಲಿಯಯ್ಯ' ದೇವನಹಳ್ಳಿ ತಾಲ್ಲೂಕು ನಲ್ಲೂರು ಗ್ರಾಮದವನೆಂದು ಗುರುತಿಸಬೇಕಾಗುತ್ತದೆ.

ಶ್ರೀ ಕೃಷ್ಣದೇವರಾಯನ ಆಡಳಿತಾವಧಿಯಲ್ಲಿ ಕೃಷ್ಣಮನಾಯಕನು ದೊರೆಯಿಂದ ನಲ್ಲೂರಸೀಮೆಯ ಪ್ರಭುತ್ವವನ್ನು ಪಡೆದು ಸೀಮೆಯೊಳಗಿನ ಮುಂಡಬೇಲಿ ಸ್ಥಳಕ್ಕೆ

ಸಲ್ಲುವ ವೊಡಹಳ್ಳಿಯನ್ನು ದೀಪಾರಾಧನೆ, ಅಂಗರಂಗ ಚಟುವಟಿಕೆಗಳಿಗಾಗಿ ಹೊಸಬಣನಾಯಕನಗೆ ಕೊಡುತ್ತಾನೆಂಬ ವಿಷಯ ಕ್ರಿ.ಶ. ೧೫೨೨ರ ಸುಗಟೂರು ಶಾಸನದಲ್ಲಿ ಬಂದಿದೆ[೧೫]. ಚೌಡರಾಯನ ಅವಸಾನದ ನಂತರವೂ ನಲ್ಲೂರುನಾಡು ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಕೃಷ್ಣಮನಾಯಕನು ದೊರೆ ಕೃಷ್ಣದೇವರಾಯನಿಂದ ನಲ್ಲೂರು ಸೀಮೆಯ ಅಮರನಾಯಕತನವನ್ನು ಪಡೆದಿರುವುದೇ ಸಾಕ್ಷಿಯಾಗಿದೆ. ಇನ್ನು ಕೃಷ್ಣಮನಾಯಕನ ತಂದೆ ಕಾರಿಮಂಗಲದ ಚಿಕ್ಕಣ ನಾಯಕನೆಂಬುದಾಗಿ ಕ್ರಿ.ಶ. ೧೫೪೮ರ ಬೌರಿಂಗಪೇಟೆ ತಾಲ್ಲೂಕಿನ ಮುಗುಳಬೆಲೆ ಶಾಸನದಲ್ಲಿದ್ದರೆ, ಕ್ರಿ.ಶ. ೧೫೫೩ರ ಮುಳುಬಾಗಿಲು ತಾಲ್ಲೂಕು ಪದ್ಮಗಟ್ಟದ ಹನುಮನಕೆರೆ ಶಾಸನವು ಮುಳುವಾಗಿಲ ತುಳುವ ಗುಮಣನಾಯಕನ ಮಗ ಕೃಷ್ಣಂನಾಯಕನೆಂದು ಉಲ್ಲೇಖಿಸುತ್ತದೆ. ವಿಜಯನಗರದ ಅರಸ ತುಳುವ ವಂಶದ ಶ್ರೀ ಕೃಷ್ಣದೇವರಾಯನು ತನ್ನ ಪ್ರಾಂತ್ಯಗಳಲ್ಲಿ ಬಹುತೇಕವಾಗಿ ತುಳುವ ಅಧಿಕಾರಿಗಳನ್ನು ನೇಮಿಸುತ್ತಿದ್ದುದರಿಂದ ನಲ್ಲೂರಿನ ಪಾಳೆಯಗಾರಿಕೆ ಪಡೆದ ಕೃಷ್ಣಮನಾಯಕನು ಮುಳುವಾಗಿಲ ತುಳುವ ಗುಮಣ ನಾಯಕನ ಮಗನಾಗಿದ್ದನೆಂಬ ನಿರ್ಣಯಕ್ಕೆ ಬರುವುದು ಸೂಕ್ತವೆನಿಸುತ್ತದೆ. ಅಂದರೆ ಮಹಾಸಾಮಂತಾಧಿಪತಿ ಸೊಣ್ಣೆಯನಾಯಕನಿಂದ ಹಿಡಿದು ಚಲುಂಡೆಯನಾಯಕ (ಚೌಡರಾಯ?) ನವರೆಗೆ ಎಲ್ಲರೂ ಮಹಾಸಾಮಂತಾಧಿಪತಿ ಮಂಜೆಯನಾಯಕನ ಸಂತತಿಯವರಾದರೆ, ಕೃಷ್ಣಮನಾಯಕ ಮಾತ್ರ ಮುಳುವಾಗಿಲ ತುಳುವ ಮನೆತನದವನಾಗಿರುತ್ತಾನೆ.

ನಲ್ಲೂರುನಾಡಿನ ನಾಯಕರ ವಂಶಾವಳಿ

ಮಹಾಸಾಮಂತಾಧಿಪತಿ ಮಂಜೆಯನಾಯಕ್ಕರ್

(ಅತ್ತಿಗಾನಹಳ್ಳಿ ಶಾಸನ ಕ್ರಿ.ಶ.೧೩೪೧)

ಅಂಕೆಯನಾಯಕ್ಕರ್[೧೬]

ಮಹಾಸಾಮಂತಾಧಿಪತಿ ಶ್ರೀಪತಿನಾಯಕ್ಕರ್

(ಗುಡಿಹಳ್ಳಿ ಶಾಸನ ಕ್ರಿ.ಶ.೧೩೪೬)

(ಅತ್ತಿಗಾನಹಳ್ಳಿ ಶಾಸನ ಕ್ರಿ.ಶ.೧೩೪೧) (ರಾಯಪ್ಪಳ್ಳಿಯ ವಳಗೆರೆ ಶಾಸನ ಕ್ರಿ.ಶ.೧೩೬೦)

ಅಂಕೆಯನಾಯಕ್ಕರ್[೧೭]

ಮಹಾಸಾಮಂತಾಧಿಪತಿ ಸೊಣ್ಣೆಯನಾಯಕ[೧೮]

ವಿಟ್ಟಪ್ಪನ್

(ಅತ್ತಿಗಾನಹಳ್ಳಿ ಶಾಸನ ಕ್ರಿ.ಶ.೧೩೪೧)

(ನಲ್ಲೂರು ಶಾಸನ ಕ್ರಿ.ಶ.೧೩೮೬)

(ಅತ್ತಿಗಾನಹಳ್ಳಿ ಶಾಸನ ಕ್ರಿ.ಶ.೧೩೪೧)

ಚಿಕ್ಕಅಂಕಿಯನಾಯಕ[೧೯]

(ನಲ್ಲೂರು ಶಾಸನ ಕ್ರಿ.ಶ.೧೩೮೬)

ಮಹಾಸಾಮಂತಾಧಿಪತಿ ಚಲವಲಿಕದ ಚಲುಂಡಿಯನಾಯಂಕ

(ಚಿಕ್ಕಜಾಲ ಶಾಸನ ಕ್ರಿ.ಶ.೧೪೧೨)

ಚಲುಂಡೆಯನಾಯಕ[೨೦] (ಚೌಡರಾಯ?)

(ಚಿಕ್ಕಜಾಲ ಶಾಸನ ಕ್ರಿ.ಶ.೧೪೧೨)

ಕೃಷ್ಣಮನಾಯಕ[೨೧]

(ಸುಗಟೂರು ಶಾಸನ – ಕ್ರಿ.ಶ.೧೫೨೨)

ಮಹಾಸಾಮಂತಾಧಿಪತಿ ಸೊಣ್ಣೆಯನಾಯಕ, ಚಿಕ್ಕಅಂಕಿಯನಾಯಕ, ಮಹಾಸಾಮಂತಾಧಿಪತಿ ಚಲವಲಿಕದ ಚಲುಂಡಿಯನಾಯಕ, ಚಲುಂಡೆಯನಾಯಕ (ಚೌಡರಾಯ?) ಮತ್ತು ಕೃಷ್ಣಮನಾಯಕರು ಮಾತ್ರ ನಲ್ಲೂರುನಾಡಿನ ಆಳ್ವಿಕೆ ನಡೆಸಿದ್ದಾರೆ. ನಲ್ಲೂರು ನಾಯಕರ ವಂಶಾವಳಿಗೆ ಸಂಬಂಧಿಸಿದ ಇತರ ನಾಡುಗಳ ಮಹಾ ಸಾಮಂತಾಧಿಪತಿಗಳ ಹೆಸರುಗಳನ್ನೂ ಇಲ್ಲಿ ಮಾಹಿತಿಗಾಗಿ ಕೊಡಲಾಗಿದೆ. ಆಧಾರ ಒದಗಿಸುವ ಶಾಸನದ ಊರು ಮತ್ತು ಕಾಲಮಾನಗಳನ್ನು ಆವರಣದಲ್ಲಿ ನಮೂದಿಸಿದೆ.

ಹೊಸಕೋಟೆ ತಾಲ್ಲೂಕು ನಂದಗುಡಿ ಹೋಬಳಿ ನಾರಾಪುರ ಗ್ರಾಮಕ್ಕೆ ದಕ್ಷಿಣ ದಾಸಪ್ಪನ ಹೊಲದ ಬದುವಿನಲ್ಲಿ ಬಿದ್ದಿರುವ ಕಲ್ಲಿನಲ್ಲಿ 'ಸೊಂಣಯನಾಯ್ಕರ ಕೊಮಾರ ಹಿರಿಯಪನು ಚಲುಂಡೆಯನಾಯ್ಕರು ಪುರುಗಣನು ಜಿಮೆಯನಾಯ್ಕರು' ಎಂಬ ಶಾಸನೋಕ್ತವನ್ನು ಅವಲೋಕಿಸಿದಾಗ ನಲ್ಲೂರ ನಾಡನಾಳಿದ ನಾಯಕರ ಹೆಸರುಗಳನ್ನು ಈ ಕೆಳಗಿನಂತೆಯೂ ತೋರಿಸಬಹುದಾಗಿದೆ.

ಗಂಡರ ಗೂಳಿ ಮಂಜೆಯನಾಯಕ

ಮಹಾಸಾಮಂತಾಧಿಪತಿ ಸೀಪತಿನಾಯಕ

ಮಹಾಸಾಮಂತಾಧಿಪತಿ ಸೊಣ್ಣಯನಾಯಕ

ಅಂಕಿಯನಾಯಕ

ಚಿಕ್ಕಅಂಕಿಯನಾಯಕ

ಹಿರಿಯಪ

ಚಲುಂಡೆಯನಾಯಕ

ಪುರುಗಣ

ಜಿಮೆಯನಾಯಕ

ದೇವನಹಳ್ಳಿ ತಾಲ್ಲೂಕು, ಬೂದಿಗೆರೆ ಹೋಬಳಿ, ಗಂಗವಾರದ ಸೋಮೇಶ್ವರ ದೇವಸ್ಥಾನದ ಒಳಬಾಗಿಲಿನ ಎಡಗೋಡೆ ಮೇಲಿರುವ ಕ್ರಿ.ಶ. ೧೩೬೧ (?) ರ

ಶಾಸನವೊಂದರಲ್ಲಿ 'ನಲ್ಲೂರ ನಾಡಾಳುವ ಅರಸು ತಂಗಿದ್ದ ಪಾಳ್ಯ' ಎನ್ನಲಾಗಿದೆ[೨೨]. ನಲ್ಲೂರನಾಡಪ್ರಭು (ಮಹಾ ಸಾಮಂತಾಧಿಪತಿ ಸೊಣ್ಣಯನಾಯಕ?) ಗಂಗವಾರಕ್ಕೆ ಭೇಟಿ ಕೊಟ್ಟು ತಂಗಿದ್ದನ್ನು ಇಲ್ಲಿ ದಾಖಲಿಸಲಾಗಿದೆ. ದೇವಾಲಯದ ಮೂರು ಜನ ಅರ್ಚಕರು ಸೇರಿ ಬಿಟ್ಟು ಬರೆಸಿದ ಈ ಶಾಸನದಲ್ಲಿ 'ತಾನು ಬಹಾಗ ಬಂದ ಜಾತಿ ಹುದುಗು, ಅಗಸ ಮನೆಯ ಜಾತಿ ಹುದುಗು, ಮಿಕ್ಕಜಾತಿ ಹೋರಗು' ಎಂಬ ಸಾಲು ಇದೆ. ಜಾತೀಯತೆ ಆಚರಣೆಯಲ್ಲಿರುವ ಅಂದಿನ ಕಾಲದಲ್ಲಿ ಬಹುಶಃ ನಲ್ಲೂರನಾಡಿನ ಅರಸನು ಜಾತ್ಯಾತೀತತೆಯ ಕರೆ ಕೊಟ್ಟಿರುವಂತಿದೆ. ಯಾರೂ ತಮ್ಮ ಜಾತಿಯನ್ನು ತೋರ್ಪಡಿಸಬಾರದು, ಅದನ್ನು ಹುದುಗಿಟ್ಟುಕೊಳ್ಳಬೇಕು. ತನ್ನೊಂದಿಗೆ ಗಂಗವಾರ ಪುರಪ್ರವೇಶಿಸಿದವರು ಅಗಸ ಜಾತಿಯವರು. ಅವರೂ ತಮ್ಮ ಜಾತಿಯನ್ನು ಹುದುಗಬೇಕು ಮಿಕ್ಕ ಯಾವುದೇ ಜಾತೀಯತೆ ಭಾವನೆಗಳನ್ನು ತನ್ನ ನಾಡಿನಿಂದ ದೂರವಿಟ್ಟಿರಬೇಕೆಂದು ಹಂಬಲಿಸುತ್ತಾನೆ. ಅರಸನು ತಾನು ದೇವರಿಗೆ ಕೊಡುವ ಯಾವುದೇ ಬಗೆಯ ಕಾಣಿಕೆಯು ಆದಿಯಿಂದಸಾಗಿ ಮುಂದುವರೆದು ಅಂತಿಮ ಕಾಣಿಕೆಯಾದ ಎಲೆ-ಅಡಿಕೆಗೆ ಸಮಾಪ್ತಿಗೊಳ್ಳಬೇಕೆಂದು ಹೇಳಲಾಗಿದೆ.

ಚನ್ನರಾಯಪಟ್ಟಣ ಹೋಬಳಿ ಧರ್ಮಪುರದ ತಿರುಮಲದೇವರ ಗುಡಿಗೆ ಉತ್ತರ ತೋಟೀ ಇನಾಮತಿ ಹೊಲದಲ್ಲಿರುವ ಕ್ರಿ.ಶ. ೧೪೪೭ರ ಶಾಸನದಲ್ಲಿ ವಿರುಪಾಕ್ಷ ದೇವರಾಯ ಮಹಾರಾಯರು ನಲ್ಲೂರನಾಡಿಗೆ ಸಲ್ಲುವ ಧರ್ಮನಪುರ ಗ್ರಾಮವನ್ನು ದಾನ ಕೊಟ್ಟಿರುವ ಸಂಗತಿಯಿದೆ[೨೩]. ಅದರಂತೆ ಹೊಸಕೋಟೆ ತಾಲ್ಲೂಕು ನಂದಗುಡಿ ಹೋಬಳಿ ವೊಡ್ಡರಹಳ್ಳಿ ಗ್ರಾಮಕ್ಕೆ ನೈರುತ್ಯ ಲಕ್ಷ್ಮೀನಾರಾಯಣ ದೇವಾಲಯದ ಈಶಾನ್ಯದಲ್ಲಿ ಕ್ರಿ.ಶ. ೧೫೩೦ ರ ಶಾಸನವಿದೆ. ಇದರಲ್ಲಿ ಅಚ್ಯುತರಾಯ ಮಹಾರಾಯರು ಪೃಥ್ವಿರಾಜ್ಯಂಗೆಯುತಿರಲು, ಮುಳುವಾಗಿಲು ಸಾಳುವ ಕಂಚಣನಾಯಕರ ಕುಮಾರ ವೀರಪ್ಪನಾಯಕ – ದಾಸಪ್ಪನಾಯಕರು ಒಟ್ಟಾಗಿ, ನಲ್ಲೂರು ರಾಜ್ಯಕ್ಕೆ ಸಲ್ಲುವ ನಂದುಗುಳಿ ಸ್ಥಳದ ವೊಡ್ಡರಹಳ್ಳಿಯನ್ನು ಆಶ್ವಲಾಯನಸೂತ್ರದ ಋಕುಶಾಖಾಧ್ಯಾಯಿಗಳಾದ ಚತುರ್ವೇದಿಮಂಗಲದಲ್ಲಿರುವ ಕೃಷ್ಣಭಟ್ಟರ ಮಕ್ಕಳು ಸೋಮನಾಥ ದೀಕ್ಷಿತರಿಗೆ ಹಿರಣ್ಯೋದಕ ದಾನವಾಗಿ ಕೊಟ್ಟರೆಂದು ಹೇಳಲಾಗಿದೆ[೨೪].

ಶಿಡ್ಲಘಟ್ಟ ತಾಲ್ಲೂಕು ಜಂಗಮಕೋಟೆ ಹೋಬಳಿ, ಚೊಕ್ಕೊಂಡಹಳ್ಳಿ ಬಸವಣ್ಣ ಗುಡಿಯ ಮುಂಭಾಗದಲ್ಲಿರುವ ಕ್ರಿ.ಶ.೧೫೩೦ರ ಶಾಸನವು ತುಳುವ ವಂಶದ ಅಚ್ಯುತರಾಯನ ಕಾಲದ್ದಾಗಿದೆ. ಕಾಸ್ಯಪಗೋತ್ರದ ಸೂರ್ಯವಂಶೋದ್ಭೂತರಾದ ಶ್ರೀ ತಿವುಡಬೇಹಾರ ಮಹಾಪಾತ್ರೆ, ಶ್ರೀ ಸೋಮಶೀಲದೇವು ರಾಹುತ್ತರಾಯ ಮಹಾಪಾತ್ರೆಯರು ವಡಿಗಪಳ್ಳಿಯ ಸೋಮೇಶ್ವರ ದೇವರ ಅಮೃತಪಡಿಗೆ ಕೊಟ್ಟ ಭೂದಾನದ ಬಗ್ಗೆ ತಿಳಿಸುತ್ತದೆ. ಅಚ್ಯುತದೇವರಾಯ ಮಹಾರಾಯರು ಉಂಬಳಿಯಾಗಿ ಪಾಲಿಸಿದ ಗ್ರಾಮ ನಲ್ಲೂರ ಸೀಮೆಯೊಳಗಣ ಮುಂಡಿಬೆಲೆ ಸ್ಥಳದ ಚೊಕ್ಕನಹಳ್ಳಿಯಾಗಿರುತ್ತದೆ[೨೫]. ಇದೇ ತಾಲ್ಲೂಕಿನ ಬಸವಾಪಟ್ಟಣಕ್ಕೆ ಪೂರ್ವದ ಪೊದೆಯಲ್ಲಿರುವ ಕ್ರಿ.ಶ. ೧೫೩೧ರ ಶಾಸನವು ಅಚ್ಯುತರಾಯ ಮಹಾರಾಯರು ರಾಉತ್ತರಾಯ ಮಹಾಪಾತ್ರೆಯರಿಗೆ ಉಂಬಳಿಯಾಗಿ ಕೊಟ್ಟ ನಲ್ಲೂರ ಸೀಮೆಯ ಮುಂಡಬೆಲೆ ಸ್ಥಳದ ಬಸವಾಪಟ್ಟಣವನ್ನು ಉಲ್ಲೇಖಿಸುತ್ತದೆ[೨೬]. ಮಹಾಪಾತ್ರೆ ಅಯ್ಯನವರು ಇದನ್ನು ವೇಲೂರ ಭೈರಪ್ಪಗೌಡನ ಮಗ ತಿಮ್ಮಪ್ಪನಿಗೆ ವಾರದ ಸಂತೆ ನಡೆಸುವುದಕ್ಕಾಗಿ ಕೊಡುತ್ತಾರೆ. ಶ್ರೀ ತಿಲ್ಲಡಾ ಬೆಸಕಾರ ಶ್ರೀ ಸೋಮಶಿಲಾದೇವಿ ರಾಉತ್ತರಾಯ ಮಹಾಪಾತ್ರೆ ಅರಸುಗಳು ಚಾಮರಾಜನಗರ ಜಿಲ್ಲೆ ತೆರಕಣಾಂಬೆಯಲ್ಲಿ ತಿರುಮಲೆದೇವರ ಅಮೃತಪಡಿ, ಮಾಸಪಡಿಗೆ ಎಣ್ಣೆಗಂಬದ ಹತ್ತಿರದ ತಿಮ್ಮಪ್ಪನಪುರವನ್ನು ಹಾಗೂ ಎಣ್ಣೆಗಂಬದ ಭೂಮಿಯನ್ನು ಕೊಡುತ್ತಾರೆ; ಮುಂದುವರೆದು ಗುಂಡ್ಲುಪೇಟೆ ತಾಲ್ಲೂಕಿನ ಲೊಕ್ಕೆರೆಯ ಶಾಸನವು ಈ ಮಹಾಪಾತ್ರೆಯರ ಕಾರ್ಯಕರ್ತನಾಗಿದ್ದ ಮಹಾಮಂಡಲೇಶ್ವರ ಕೊಂಡಯ್ಯದೇವ ಚೋಳ ಮಹಾ ಅರಸನು ತೆರುಕಣಾಂಬಿಯ ಭೂಲಪ್ಪನಾಯಕನ ಮಗ ಕೇಶವಯ್ಯನಿಗೆ ೩೫ ವರಹಗಳ ಭೂಮಿಯನ್ನು ಕೊಡುಗೆಯಾಗಿ ನೀಡುತ್ತಾನೆ. ವಿಜಯನಗರದ ಅರಸರ ಪ್ರೀತಿಪಾತ್ರರಾಗಿದ್ದ ಮಹಾಪಾತ್ರೆಯರು ನಲ್ಲೂರಸೀಮೆ ಹಾಗೂ ತೆರುಕಣಾಂಬೆ ಮೂಡಣಸೀಮೆಗಳೆರಡರಲ್ಲಿ ಉಲ್ಲೇಖಿಸಲ್ಪಡುತ್ತಾರೆ.

ಗಂಜಿಗುಂಟೆ (ಈಗ ಚಿಕ್ಕಬಳ್ಳಾಪುರ) ಹೋಬಳಿಯಲ್ಲಿರುವ ಕುಂದಲಗುರಿಕೆ ಗ್ರಾಮದ ಬಸವನ ಗುಡಿಯ ಹಿಂದಿನ ಬಂಡೆಯ ಮೇಲಿರುವ ಕ್ರಿ.ಶ.೧೫೩೨ ರ ಶಾಸನದಲ್ಲಿ ನಲ್ಲೂರನಾಡಿಗೆ ಸಲ್ಲುವ ಮಳಲೂರ ಸ್ಥಳದ ಕುಂದಲ ಗುರುಕಿಯ ಗ್ರಾಮಗಳಿಗೆ ಯಾರೊಬ್ಬರು ಮದುವೆ ಮಾಡಿದರೂ ಸುಂಕವಿಲ್ಲವೆಂದು ನಾಡಗವುಂಡಪಗಳ ಮುಂದಿಟ್ಟು ಧರ್ಮಶಾಸನವನ್ನು ಹಾಕಿಸಿದವರು ಕೃಷ್ಣದೇವರಾಯ ಮಹಾರಾಯರ ನಿರೂಪವಿಡಿದ ಕೃಷ್ಣಮನಾಯಕರು[೨೭], ಸುಮಾರು ಕ್ರಿ.ಶ. ೧೩೮೦ ರಿಂದ ಮೂರು ಶತಮಾನಗಳಿಗಿಂತಲೂ ಹೆಚ್ಚು ಕಾಲ 'ನಾಡು' ಎನಿಸಿದ್ದ ನಲ್ಲೂರಿನ ಪ್ರದೇಶಗಳು ಕ್ರಿ.ಶ. ೧೬೯೭ರಲ್ಲಿ ಆವತಿನಾಡಪ್ರಭುವಾದ ಗೋಪಾಲಗೌಡರ ಆಡಳಿತಾವಧಿಯಲ್ಲಿ ದೇವಣಪುರದ ರಾಜ್ಯಕ್ಕೆ ಸೇರ್ಪಡೆಗೊಳ್ಳುತ್ತವೆ. ಆಗಲೇ ನಲ್ಲೂರನಾಡಿನ

ಬೇಗೂರು ಗೋಪಾಲಸಾಗರವೆಂಬ ಪ್ರತಿನಾಮದೊಂದಿಗೆ ೨೫ ವೃತ್ತಿಗಳ (ವಿದ್ಯಾದಾನದ ವೃತ್ತಿಗಳು) ಸರ್ವಮಾನ್ಯ ಅಗ್ರಹಾರವಾಗಿ ಮದನಗೋಪಾಲಸ್ವಾಮಿ ದೇವರಿಗೆ ಬಿಟ್ಟುಕೊಡಲ್ಪಡುತ್ತದೆ. ಒಂದು ಊರನ್ನು ಅಗ್ರಹಾರವಾಗಿ ಮಾಡಿ (ಅಗ್ರಹಾರೀ ಕೃತ್ಯ) ದಾನವಾಗಿ ಕೊಟ್ಟರೆ ಪುಣ್ಯ ಬರುತ್ತದೆಂದು ರಾಜರು ನಂಬಿದ್ದರು; ಕ್ರಿ.ಶ.೧೮೯೮ ನೇ ಇಸ್ವಿಯ ಹೊತ್ತಿಗೆ ನಲ್ಲೂರುನಾಡು ಹೋಬಳಿಯ ಸ್ಥಾನಕ್ಕೆ ಇಳಿಯಿತು. ಆ ನಾಡಿನ ಚಿಕ್ಕೋಹಳ್ಳಿ ಸಿಂಗೋಹಳ್ಳಿಗಳೂ ಅವತಿನಾಡಿಗೊಳಪಟ್ಟವು.

ಒಟ್ಟಾರೆಯಾಗಿ ಇಂದಿನ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿಯ ನಲ್ಲೂರನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡ ನಲ್ಲೂರನಾಡ ನಾಯಕರು, ಚನ್ನರಾಯಪಟ್ಟಣ ಹೋಬಳಿಯ ಧರ್ಮನಪುರ, ಬೂದಿಗೆರೆ ಹೋಬಳಿಯ ಗಂಗವಾರ, ಚಿಕ್ಕೋಹಳ್ಳಿ, ಸಿಂಗೋಹಳ್ಳಿ; ಜಾಲದ ಹೋಬಳಿಯ ಮುತ್ತುಗದಹಳ್ಳಿ, ಬೇಗೂರು; ಶಿಡ್ಲಘಟ್ಟ ತಾಲ್ಲೂಕು ಜಂಗಮಕೋಟೆ ಹೋಬಳಿಯ ಮುಂಡಬೇಲಿ, ವೊಡಹಳ್ಳಿ, ಬಸವಾಪಟ್ಟಣ, ಚೊಕ್ಕೊಂಡಹಳ್ಳಿ; ಚಿಕ್ಕಬಳ್ಳಾಪುರ ಹೋಬಳಿಯ ಮಳೂರು, ಕುಂದಲಗುರುಕಿ ಹಾಗೂ ಹೊಸಕೋಟೆ ತಾಲ್ಲೂಕು ನಂದಗುಡಿ ಹೋಬಳಿಯ ವೊಡ್ಡರಹಳ್ಳಿ ಗ್ರಾಮಗಳನ್ನು ತಮ್ಮ ವ್ಯಾಪ್ತಿಗೆ ಒಳಪಡಿಸಿಕೊಂಡಿದ್ದರು. ಹಾಗಾಗಿ ನಲ್ಲೂರು ಪಟ್ಟಣದ ಸುತ್ತಲಿನ ಸುಮಾರು ೬೦ ಕಿ.ಮೀ. ಫಾಸಲೆಯಲ್ಲಿ ಸಮಕಾಲೀನ ಸುಗಟೂರು ಮತ್ತು ಅವತಿನಾಡವರ ಶಾಸನಗಳು ಅಲಭ್ಯವಾಗುತ್ತವೆ.

[ನಲ್ಲೂರಿನ ಕ್ಷೇತ್ರಕಾರ್ಯದಲ್ಲಿ ಜೊತೆಗಿದ್ದು ಸಹಕರಿಸಿದ ಅಲಸೂರು ಜೋಗುಪಾಳ್ಯದ ಶ್ರೀ ತಾಯಪ್ಪನವರಿಗೆ ಹಾಗೂ ಮಿಥಿಕ್ ಸೊಸೈಟಿಯ ಗ್ರಂಥಾಲಯ ಸಿಬ್ಬಂದಿಗೆ ಧನ್ಯವಾದಗಳು.]

ಅಡಿಟಿಪ್ಪಣಿ

೧. ಕನ್ನಡ ನಿಘಂಟು ಸಂ.೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೭೯, ಪುಟ ೪೩೯೦

೨. ಎಪಿಗ್ರಫಿಯಾ ಕರ್ನಾಟಕ ಸಂ.೧೦, ಕೋಲಾರ ಜಿಲ್ಲೆ, ಶಿಡ್ಲಘಟ್ಟ ತಾ. ಶಾಸನ ಸಂಖ್ಯೆ ೧೬

೩. The development of Hindu Iconography: Jitendranath Banerji: Munshiram Manoharlal Publishers Pvt. Ltd., 2002. Page 465.

೪. ಕರ್ನಾಟಕ ಸ್ಟೇಟ್ ಗೆಜೆಟಿಯರ್, ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್, ಸಂ.ಸೂರ್ಯನಾಥ್. ಯು. ಕಾಮತ್ ೧೯೮೯, ಪುಟ ೮೪೪.

೫. ಶ್ರೀ ಎಂ.ಎಸ್.ಪ್ರಭಾಕರ್‌ರವರು ಪ್ರಬಂಧ ಮಂಡನೆ ಸಂದರ್ಭದಲ್ಲಿ ತಿಳಿಸಿರುವ ಅಂಶ.

೬. ಕರ್ನಾಟಕ ರಾಜ್ಯ – ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೊಳಪಡುವ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಪ್ರಕಟಣಾ ಫಲಕದಿಂದ ಪಡೆದ ಮಾಹಿತಿ.

೭. ಎಪಿಗ್ರಫಿಯಾ ಕರ್ನಾಟಕ (ಬಿ.ಎಲ್.ರೈಸ್) ಸಂಪುಟ ೧೦, ಶಿಡ್ಲಘಟ್ಟ ೭೩.

೮. –ಅದೇ– ಚಿಂತಾಮಣಿ ೩೦

೯. ಎಪಿಗ್ರಫಿಯಾ ಕರ್ನಾಟಕ, ಮೈಸೂರು ವಿ.ವಿ. ಆವೃತ್ತಿ, ಸಂಪುಟ ೯, ಬೇಲೂರು ೧೬.

೧೦. –ಅದೇ– ಸಂಪುಟ ೧೦, ಚನ್ನರಾಯಪಟ್ಟಣ ೬೩.

೧೧. ಎಫಿಗ್ರಫಿಯಾ ಕರ್ನಾಟಕ, ಬಿ.ಎಲ್.ರೈಸ್ ಸಂಪುಟ ೯ ದೇವನಹಳ್ಳಿ ೪೫.

೧೨. –ಅದೇ– ದೇವನಹಳ್ಳಿ ೭೨.

೧೩. –ಅದೇ– ದೇವನಹಳ್ಳಿ ೪೦.

೧೪. –ಅದೇ– ದೇವನಹಳ್ಳಿ ೫೯.

೧೫. –ಅದೇ– ಸಂಪುಟ ೧೦ ಶಿಡ್ಲಘಟ್ಟ ೧೦.

೧೬. –ಅದೇ– ಶಿಡ್ಲಘಟ್ಟ ೬೭.

೧೭. –ಅದೇ– ಶಿಡ್ಲಘಟ್ಟ ೨೬.

೧೮. –ಅದೇ– ಚಿಂತಾಮಣಿ ೭೫.

೧೯. –ಅದೇ– ಸಂಪುಟ ೯ ದೇವನಹಳ್ಳಿ ೪೦.

೨೦. –ಅದೇ– ದೇವನಹಳ್ಳಿ ೫೯.

೨೧. –ಅದೇ– ಸಂಪುಟ ೧೦ ಶಿಡ್ಲಘಟ್ಟ ೧೦.

೨೨. –ಅದೇ– ಸಂಪುಟ ೯ ದೇವನಹಳ್ಳಿ ೭೩.

೨೩. –ಅದೇ– ದೇವನಹಳ್ಳಿ ೩೮.

೨೪. –ಅದೇ– ಹೊಸಕೋಟೆ ೨೮. ೨೫.–ಅದೇ– ಶಿಡ್ಲಘಟ್ಟ ೧೮.

೨೬ –ಅದೇ– ಶಿಡ್ಲಘಟ್ಟ ೨೨. ೨೭. –ಅದೇ– ಶಿಡ್ಲಘಟ್ಟ ೭೯.

೧೦೨

ಹಿರಿಯೂರು ಪ್ರದೇಶದ ಕೆಲವು ವಿಶಿಷ್ಟ ಅವಶೇಷಗಳು

ಬಿ. ಕೃಷ್ಣಪ್ಪ*

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನಲ್ಲಿ ವಿಶಿಷ್ಟ ಹಾಗೂ ಮಹತ್ವವನ್ನುಳ್ಳ ಅವಶೇಷಗಳನ್ನು ಕಾಣಬಹುದು. ಈ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಯಿಂದ ಕೂಡಿದ್ದು, ಇತಿಹಾಸ ಕಾಲದಲ್ಲಿ ಅನೇಕ ರಾಜಮನೆತನಗಳು ಆಳ್ವಿಕೆ ನಡೆಸಿವೆ. ತಾಲೂಕಿನಾದ್ಯಂತ ಶಾಸನೋಕ್ತ ಸ್ಮಾರಕ ಶಿಲ್ಪಗಳಿಗಿಂತ ಹೆಚ್ಚಾಗಿ ಶಾಸನೋಕ್ತವಲ್ಲದ ಸ್ಮಾರಕ ಶಿಲ್ಪಗಳು ಕಂಡುಬರುತ್ತವೆ.

ಹಿರಿಯೂರು ತಾಲೂಕಿನ ಧರ್ಮಪುರ ಹೋಬಳಿಯ ಕಣಜನಹಳ್ಳಿ–ಸೂಗೂರು ಮಧ್ಯದಲ್ಲಿ ದೊರೆತ ವೀರಗಲ್ಲುಗಳು, ವೀರ ಮಾಸ್ತಿ ಕಲ್ಲು ಹಾಗೂ ಐಮಂಗಲ ಹೋಬಳಿಯ ಮದಕರಿನಾಯಕನ ಕೋಟೆ (ಎಂ.ಡಿ. ಕೋಟೆ) ಪರಿಸರದಲ್ಲಿ ಪತ್ತೆಯಾದ ಮಾಸ್ತಿ ಕಲ್ಲು, ಶಿವಲಿಂಗ, ವೀರಗಾರರ ಗುಡಿ ಮತ್ತು ಬಂಡ್ಲೋರಹಟ್ಟಿ ಪರಿಸರದಲ್ಲಿ ಕಂಡುಬಂದ ಮಹಾಸತಿಕಲ್ಲು ಹಾಗೂ ಇತರೆ ಅವಶೇಷಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಕಣಜನಹಳ್ಳಿ

ಕ್ರಿ.ಶ. ೧೫–೧೬ನೇ ಶತಮಾನದಲ್ಲಿ ಈ ಗ್ರಾಮವು ನಿಡುಗಲ್ಲು ಸಂಸ್ಥಾನಕ್ಕೆ ಸೇರಿದ್ದು, ಆಯಕಟ್ಟಿನ ಸ್ಥಳವಾಗಿತ್ತು. ನಿಡುಗಲ್ಲಿಗೂ ಕಡೆಪುಡೆ ಸೇನಾ ಠಾಣ್ಯಕ್ಕೂ ಮಧ್ಯೆ ಈ ಗ್ರಾಮವಿದ್ದುದರಿಂದ ನಡುವಲಹುಡೆ ಎನ್ನುತ್ತಿದ್ದರು. ನಿಡುಗಲ್ಲಿನಿಂದ ಸೊಂಡೂರು ಸಂಸ್ಥಾನಕ್ಕೆ ಸೇನೆ ಮುಂತಾದವು ಈ ಮಾರ್ಗದಲ್ಲಿಯೇ ಸಂಚರಿಸುತ್ತಿದ್ದಾಗ ಮತ್ತು ಆಪತ್ಕಾಲದಲ್ಲಿ ದವಸ ಧಾನ್ಯಗಳನ್ನು ಸಂಗ್ರಹಿಸಿಡಲು ಈ ಹಳ್ಳಿಯನ್ನು ನಿಡುಗಲ್ ರತ್ನಗಿರಿ ಪಾಳೆಯಗಾರರು ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಹಾಗೂ ವಸೂಲಾದ ಕಂದಾಯ, ಪೊಗದಿ ಮುಂತಾದವುಗಳನ್ನೂ ಸಹ ಈ ಊರಿನ ಸುತ್ತಮುತ್ತ ಇರುವ ನೂರಾರು ಹಗೇವುಗಳಲ್ಲಿ ಸಂರಕ್ಷಿಸಿ ಇಡುತ್ತಿದ್ದು ದರಿಂದ ಈ ಊರಿಗೆ 'ಕಣಜನಹಳ್ಳಿ' ಎಂದಿದ್ದು ಸೂಕ್ತವಾಗಿದೆ. ಈ ಗ್ರಾಮದ ಹೆಬ್ಬಾಗಿಲಿನಲ್ಲಿ ಅನೇಕ ಶಾಸನೋಕ್ತ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳನ್ನು ಕಾಣಬಹುದು.

ಧರ್ಮಪುರ ಹೋಬಳಿಯ ಗಡಿ ಭಾಗದಲ್ಲಿರುವ ಕಣಜನಹಳ್ಳಿ ಗ್ರಾಮದಿಂದ ಪಶ್ಚಿಮಕ್ಕಿರುವ ಸೂಗೂರು ರಸ್ತೆಯಿಂದ ಎರಡು ಕಿ.ಮೀ. ದೂರ ಕ್ರಮಿಸಿ ನಂತರ ಎಡಭಾಗಕ್ಕೆ ತಿರುಗಿ ಮುಕ್ಕಾಲು ಕಿ.ಮೀ. ದೂರದಲ್ಲಿರುವ ಗುಡೇಲಿಂಗಜ್ಜರ ಮಗ ಪರಮೇಶ್ವರಪ್ಪನವರ ಹೊಲದಲ್ಲಿ ವೀರಗಲ್ಲು ಮತ್ತು ವೀರ ಮಾಸ್ತಿಕಲ್ಲು ಪತ್ತೆಯಾಗಿದೆ. ಈ ಸ್ಥಳದಲ್ಲಿ ಒಟ್ಟು ಮೂರು ಸ್ಮಾರಕಗಳಿದ್ದು ಮಧ್ಯದಲ್ಲಿರುವ ಸ್ಮಾರಕವು ಅಸ್ಪಷ್ಟವಾಗಿದೆ.

ಮೊದಲ ಸ್ಮಾರಕವಾದ ವೀರಗಲ್ಲು ಎರಡು ಭಾಗಗಳನ್ನು ಹೊಂದಿದ್ದು, ಕಪ್ಪು ಬಣ್ಣದ ಬಳಪದಕಲ್ಲನ್ನು ಬಳಸಲಾಗಿದೆ. ಇದರ ಎತ್ತರ ನಾಲ್ಕು ಅಡಿ ಎರಡು ಇಂಚು, ಅಗಲ ಎರಡು ಅಡಿ ಮತ್ತು ದಪ್ಪ ನಾಲ್ಕು ಇಂಚು ಇದೆ. ಮೊದಲ ಭಾಗದಲ್ಲಿ ವೀರನು ಬಿಲ್ಲಿಗೆ ಬಾಣವನ್ನು ಹೂಡಿ ಎಡಗಾಲನ್ನು ಮುಂದಿಟ್ಟು ಯುದ್ಧ ಸನ್ನದ್ಧನಾಗಿದ್ದಾನೆ. ಬೆನ್ನಿಗೆ ಬಾಣಗಳಿರುವ ಬತ್ತಳಿಕೆಯನ್ನು ಕಟ್ಟಿಕೊಂಡಿದ್ದಾನೆ. ತಲೆಯ ಹಿಂದೆ ವೀರಮುಡಿಯನ್ನು ಕಟ್ಟಿದ್ದಾನೆ. ಕೊರಳಿಗೆ ಆಭರಣ ಧರಿಸಿದ್ದಾನೆ. ಸೊಂಟಕ್ಕೆ ವೀರಗಚ್ಚೆಯನ್ನು ಹಾಕಿದ್ದಾನೆ. ವೀರನ ಬಲಭಾಗದಲ್ಲಿ ಸ್ತ್ರೀಯು ಚಾಮರವನ್ನು ಹಿಡಿದಿದ್ದಾಳೆ. ತಲೆಯ ಬಲಭಾಗದಲ್ಲಿ ತುರುಬಿದೆ. ಆಭರಣ ಧರಿಸಿದ್ದಾಳೆ. ನೆರಿಗೆಯುಳ್ಳ ಸೀರೆಯನ್ನು ಧರಿಸಿದ್ದಾಳೆ.

ಎರಡನೇ ಭಾಗದಲ್ಲಿ ವೀರನು ಕುದುರೆ ಮೇಲೆ ಕುಳಿತು ಶತ್ರುಪಕ್ಷದವರೊಡನೆ ಹೋರಾಟ ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ವೀರನು ತನ್ನ ಕುದುರೆಯ ಕಡಿವಾಣವನ್ನು ಎಡಗೈಯಲ್ಲಿ ಹಿಡಿದು ಬಲಗೈಯಲ್ಲಿ ಭರ್ಜಿಯನ್ನು ಬೀಸುತ್ತಿರುವಂತೆಯೂ, ಅವನ ಕುದುರೆ ತನ್ನ ಹಿಂಗಾಲುಗಳನ್ನು ಆಧರಿಸಿ ನಿಂತು ಮುಂಗಾಲುಗಳನ್ನು ಮೇಲಕ್ಕೆತ್ತಿ ಮಡಿಸಿಕೊಂಡು ತನಗೆ ಎದುರಾದ ಕುದುರೆಗಳನ್ನು ಎದುರಿಸುತ್ತಿರುವಂತೆಯೂ ಬಿಡಿಸಲಾಗಿದೆ. ಈ ವೀರನ ಬಲಭಾಗದಲ್ಲಿ ವಸ್ತ್ರಾಭರಣಗಳಿಂದ ಅಲಂಕೃತಗೊಂಡ ಸ್ತ್ರೀಯು ಎಡಗೈಯಲ್ಲಿ ಕತ್ತಿಯನ್ನು ಹೆಗಲ ಮೇಲೆ ಹಿಡಿದಿದ್ದಾಳೆ. ಬಲಗೈಯನ್ನು ಕೆಳಗೆ ಇಳಿಬಿಟ್ಟಿದ್ದಾಳೆ. ತಲೆಯ ಮೇಲೆ ಬಲಗಡೆ ತುರುಬನ್ನು ಕಟ್ಟಿದ್ದಾಳೆ.

* ಸಂಶೋಧನಾ ವಿದ್ಯಾರ್ಥಿ ಮತ್ತು ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು, ಚಿತ್ರದುರ್ಗ–೫೭೭೫೦೧



ವೀರಗಲ್ಲು, ಕಣಜನಹಳ್ಳಿ

ಈ ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರಿದ್ದು, ಇಲ್ಲಿನ ವಿಶೇಷವೆಂದರೆ ಸರ್ಪವು ಮೇಲಕ್ಕೆ ಎಡೆಬಿಚ್ಚಿ ನಿಂತಿದೆ. ಇದು ವೀರನ ಶೌರ್ಯವನ್ನು ಸಂಕೇತಿಸುತ್ತ, ಹೆಡೆಬಿಚ್ಚಿದ ಸರ್ಪದಂತೆ ಶತ್ರುವಿನ ಮೇಲೆರಗಿರುವುದನ್ನು ಸೂಚಿಸುತ್ತದೆ.[೧] ಅಥವಾ ಹಾವು ಗ್ರಹಣದ ಸಂಕೇತವಾಗಿದ್ದು ಸೂರ್ಯಗ್ರಹಣದ ದಿವಸ ವೀರಮರಣ ಹೊಂದಿರಬಹುದು.[೨]

ವೀರ ಮಹಾಸತಿಕಲ್ಲು

ಇದೇ ಸ್ಥಳದಲ್ಲಿ ವೀರಸತಿಕಲ್ಲು ಪತ್ತೆಯಾಗಿದೆ. ಇದು ಕಪ್ಪು ಶಿಲೆಯದಾಗಿದ್ದು ಇದರ ಉದ್ದ ಎರಡು ಅಡಿ ಎಂಟು ಇಂಚು, ಅಗಲ ಎರಡು ಅಡಿ ಮತ್ತು ದಪ್ಪ ನಾಲ್ಕು ಇಂಚು ಇದೆ. ಇದರ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರಿದ್ದಾರೆ. ವೀರನು ಬಲಭಾಗದಲ್ಲಿದ್ದು ಬಲಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ಎಡಗೈಯಲ್ಲಿ ಬತ್ತಳಿಕೆಯಿಂದ ಬಾಣ ತೆಗೆಯುತ್ತಿದ್ದಾನೆ. ಸೊಂಟಕ್ಕೆ ಕತ್ತಿ ಸಿಕ್ಕಿಸಿಕೊಂಡಿದ್ದಾನೆ. ಕಿವಿಗೆ, ಕೊರಳಿಗೆ ಮತ್ತು ಸೊಂಟಕ್ಕೆ ಆಭರಣ ಧರಿಸಿದ್ದಾನೆ. ಇವನು ಎಡಗೈ ಯೋಧನಾಗಿರುವುದು ವಿಶೇಷವಾಗಿದೆ. ವೀರನ ಎಡಗಡೆಗೆ ಸತಿಯು ವಸ್ತ್ರಾಭರಣಗಳಿಂದ ಅಲಂಕೃತಗೊಂಡಿದ್ದು, ತಲೆಯ ಮುಡಿಯಿಂದ ಎಣೆದ ಜಡೆಯು ಕೆಳಗೆ ಚಾಚಿದೆ. ಸತಿಯು ಎರಡು ಕೈಗಳನ್ನು ಮೇಲಕ್ಕೆ ಎತ್ತಿದ್ದಾಳೆ. ಈ ಸ್ಮಾರಕವು ಕ್ರಿ.ಶ. ಸು. ೧೫–೧೬ನೇ ಶತಮಾನಕ್ಕೆ ಸೇರಿದ್ದವೆಂದು ಹೇಳಬಹುದು.

ಹಿರಿಯೂರು ತಾಲೂಕಿನ ಐಮಂಗಲ ಸಮೀಪವಿರುವ ವದ್ದೀಕೆರೆ, ಮರಡಿಹಳ್ಳಿ, ಬಸಪ್ಪನಮಾಳಿಗೆ, ಬಂಡ್ಲೋರಹಟ್ಟಿ, ಗೊಲ್ಲನಕಟ್ಟೆ ಮತ್ತು ಮದಕರಿನಾಯಕನ ಕೋಟೆ ಕೆರೆಗೆ ಹೊಂದಿಕೊಂಡಂತೆ ಇರುವ ಪ್ರದೇಶದ ಬಯಲು ನಡುಗಡ್ಡೆಯಲ್ಲಿ ನೊಳಂಬರು ಆಳಿದ್ದಾಗಿ ತಿಳಿದುಬರುತ್ತದೆ. ಹಾಳಾದ ಜಾಗದಲ್ಲಿ ಭಗ್ನವಾಗಿರುವ ಸ್ಮಾರಕಗಳು, ಅವಶೇಷಗಳು ಕಾಣಸಿಗುತ್ತವೆ.


ವೀರ ಮಾಸ್ತಿಕಲ್ಲು: ಮದಕರಿನಾಯಕನ ಕೋಟೆ ಗ್ರಾಮದ ದಕ್ಷಿಣಕ್ಕೆ ವದ್ದೀಕೆರೆ ರಸ್ತೆಯಲ್ಲಿರುವ ಕೆರೆಯಂಗಳದಲ್ಲಿ ಸುಮಾರು ಒಂದು ಕಿ.ಮೀ. ದೂರದಲ್ಲಿ ಪತ್ತೆಯಾಗಿರುವ ಮಾಸ್ತಿಕಲ್ಲು ಕಪ್ಪುಶಿಲೆಯದಾಗಿದ್ದು, ಸ್ಮಾರಕವು ನೆಲಕ್ಕೆ ಮಲಗಿರುವ ಸ್ಥಿತಿಯಲ್ಲಿದೆ. ಉದ್ದ ಎರಡು ಅಡಿ ಆರು ಇಂಚು, ಅಗಲ ಒಂದು ಅಡಿ ಹನ್ನೊಂದು ಇಂಚು ಇದ್ದು, ಶಿಲೆಯ ದಪ್ಪ ನಾಲ್ಕು ಇಂಚು ಇದೆ. ಸ್ಮಾರಕವು ಯುದ್ಧದಲ್ಲಿ ಮರಣ ಹೊಂದಿದ ಪತಿಯೊಂದಿಗೆ ಎರಡು ಕೈ ಮೇಲೆತ್ತಿರುವ ಮಹಾಸತಿಕಲ್ಲು ಇದಾಗಿದೆ. ಸ್ಮಾರಕದ ಮೇಲೆ ಸೂರ್ಯ-ಚಂದ್ರರಿದ್ದಾರೆ. ಸ್ತ್ರೀಯು ವಸ್ತ್ರಧಾರಿಯಾಗಿದ್ದು, ಕಿವಿಯೋಲೆ ಧರಿಸಿದ್ದಾಳೆ. ತಲೆಗೆ ತುರುಬು ಕಟ್ಟಿದ್ದಾಳೆ. ವೀರನು ಎಡಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ.

ಎಂ.ಡಿ.ಕೋಟೆ ಪೂರ್ವಕ್ಕೆ ಒಂದು ಕಿ.ಮೀ. ದೂರದಲ್ಲಿ ತಿಮ್ಮಣ್ಣನವರ ಪಾಳುಬಿದ್ದ ಜಮೀನಿನಲ್ಲಿ ಲಿಂಗ ಪ್ರತಿಮೆಯಿದ್ದು ವರ್ಷಕ್ಕೊಮ್ಮೆ ಪೂಜಿಸಲ್ಪಡುತ್ತಿದೆ. ಇದು ಕಪ್ಪುಶಿಲೆಯಿಂದಿದ್ದು, ವೃತ್ತಾಕಾರವಾದ ಪಾಣಿಬಟ್ಟಲು ಮಧ್ಯದಲ್ಲಿ ಅಂಡಾಕೃತಿಯ ಲಿಂಗವನ್ನು ಜೋಡಿಸಲಾಗಿದೆ. ಇದು ಚಂದ್ರವಳ್ಳಿಯಲ್ಲಿರುವ ಶಿವಲಿಂಗವನ್ನು ಹೋಲುವುದರಿಂದ ಆ ಕಾಲದ್ದಿರಬಹುದಾಗಿದೆ.

ವೀರಗಾರರ ಗುಡಿ : ಕರ್ನಾಟಕದಲ್ಲಿ ದೇವಾಲಯ, ದೇವಸ್ಥಾನ, ಗುಡಿ ಎಂಬ ಪದಗಳನ್ನು ದೈವ ಅಥವಾ ದೇವರುಗಳು ಇರುವ ಕಟ್ಟಡವನ್ನು ನಿರ್ದೇಶಿಸುವಲ್ಲಿ ಪ್ರಯೋಗಿಸುತ್ತೇವೆ. ವೀರರ ಗುಡಿಗಳು ಕೋಲಾರ, ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಚಿತ್ರದುರ್ಗ, ಹಾಸನ ಮುಂತಾದ ಕಡೆಗಳಲ್ಲಿ ಬಹುಸಂಖ್ಯೆಯಲ್ಲಿರುವುದನ್ನು ಗಮನಿಸಬಹುದು. ವೀರಗಾರರ ಗುಡಿಗಳು ಅನೇಕ ಸಂಖ್ಯೆಯಲ್ಲಿ ಒಂದೇ ಸ್ಥಳದಲ್ಲಿ ಇದ್ದರೆ ಅದನ್ನು ಕೋಲಾರ ಜಿಲ್ಲೆಯಲ್ಲಿ "ವೀರಗಾರರ ನೆತ್ತು" ಎಂಬುದಾಗಿ ಕರೆಯುತ್ತಾರೆ. ಈ ವೀರಗಾರರ ಗುಡಿಗಳನ್ನು ವಿಶೇಷವಾಗಿ ಕುರುಬ, ನಾಯಕ ಅಥವಾ ಬೇಡ ಜನಾಂಗದವರು ಪೂಜಿಸುತ್ತಾರೆ.[೩] ಸಾಮಾನ್ಯವಾಗಿ ಇವು



ಮಾಸ್ತಿಗಲ್ಲು, ಎಂ.ಡಿ.ಕೋಟೆ



ವೀರಗಾರರ ಗುಡಿ, ಎಂ.ಡಿ. ಕೋಟೆ

ಊರಿನ ಹೊರಭಾಗದಲ್ಲಿ ಕೆರೆಯ ಬಳಿಯೋ, ಹೊಲಗಳಲ್ಲಿಯೋ ಇರುತ್ತವೆ.

ಎಂ.ಡಿ. ಕೋಟೆಯ ದಕ್ಷಿಣಕ್ಕಿರುವ ಕೆರೆಯಂಗಳ ದಂಚಿನಲ್ಲಿ ಸುಮಾರು ಎರಡು ಕಿ.ಮೀ. ದೂರದಲ್ಲಿ ವೀರಗಾರರ ಗುಡಿ ಪತ್ತೆಯಾಗಿದೆ. ನಾಲ್ಕು ಮೂಲೆಗಳಲ್ಲಿ ಐದು ಅಡಿ ಎತ್ತರದ ನಾಲ್ಕು ಬಿಳಿ ಕಲ್ಲುಕಂಬ ಗಳನ್ನು ನೆಡಸಲಾಗಿದೆ. ಇದರ ಮಧ್ಯದ ವಿಸ್ತೀರ್ಣ ಆರು ಅಡಿ ಉದ್ದ ಮತ್ತು ಅರು ಅಡಿ ಅಗಲ ಇದೆ. ಇದರ ಮೇಲೆ ಎರಡು ಅಡ್ಡಪಟ್ಟಿ ಕಲ್ಲುಚಪ್ಪಡಿಗಳನ್ನು ಹಾಸಲಾಗಿದೆ. ಅದರ ಮೇಲೆ ಮೂರು ಹಾಸು ಬಂಡೆಗಳನ್ನು ಹಾಕಲಾಗಿದೆ. ಈ ಗುಡಿಯು ತೆರೆದ ಮಂಟಪವನ್ನು ಹೊಂದಿದ್ದು ಇದರೊಳಗೆ ಐದು ಅಂಡಾಕೃತಿಯ ಕಪ್ಪುಶಿಲೆಯ ಲಿಂಗಗಳನ್ನು ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸಲಾಗಿದೆ.

ಈ ಸ್ಮಾರಕವನ್ನು ಸ್ಥಳೀಯರು ಬಾಳಮಲ್ಲಪ್ಪನ ಗುಡಿ ಎಂದು ಹೆಸರಿಸುತ್ತಾರೆ. ಶಿಲೆಗಳು ಲಿಂಗಾಕೃತಿಯಲ್ಲಿರುವುದರಿಂದಲೂ ಮತ್ತು ಶೈವಧರ್ಮದ ಪ್ರಭಾವದಿಂದಾಗಿ ಬೆಳೆದು ಬಂದ ವೀರರು ಸತ್ತಮೇಲೆ ಲಿಂಗವಾಗುತ್ತಾರೆ ಎಂಬ ಕಲ್ಪನೆ ಒಂದೆಡೆಗೆ ಬೆಳೆದು ಬಂದುದರಿಂದಲೂ ಇದನ್ನು 'ಬಾಳಮಲ್ಲಪ್ಪ ಗುಡಿ', 'ಬಾಳಮಲ್ಲೇಶ್ವರ ಗುಡಿ' ಎಂದು ಕರೆಯಲ್ಪಟ್ಟಿರಬೇಕು. ವಿಶೇಷವೆಂದರೆ ಇದನ್ನು ಲಿಂಗಾಯತ ಪಂಥದವರು ಪ್ರತಿ ವರ್ಷವೂ ಪೂಜೆ ಮಾಡಿಕೊಂಡ ಬರುತ್ತಿದ್ದಾರೆ. ಇಲ್ಲಿ ಐದು ಜನ ವೀರರ ನೆನಪಿಗಾಗಿ ನಿರ್ಮಾಣ ಮಾಡಿರುವುದು ಸ್ಪಷ್ಟವಾಗುತ್ತದೆ.

ಈ ಗುಡಿಯ ಮೇಲ್ಭಾಗದಲ್ಲಿರುವ ಮೂರು ಹಾಸು ಚಪ್ಪಡಿಗಲ್ಲುಗಳಲ್ಲಿ ಪಶ್ಚಿಮಕ್ಕಿರುವ ಕಲ್ಲಿನ ಮೇಲೆ ೨೬ ಕುಳಿಗಳಿವೆ. ಶಿಲೋಪಕರಣಗಳ ಮೊನೆಗಳನ್ನು ಮಸೆದು ಹರಿತಗೊಳಿಸಿದ ಕಾರಣವಾಗಿ ಈ ಮೇಲ್ಛಾವಣಿ ಚಪ್ಪಡಿಯ ಕುಳಿಭರಿತವಾಗಿರುವ ಸಾಧ್ಯತೆ ಇದೆಯಾದರೂ ಎರಡು ಸಾಲುಗಳಲ್ಲಿ ನೇರವಾಗಿ ಒಂದೇ ರೀತಿಯ ಆಳದ ಕುಳಿಗಳಿರುವುದು ವಿಶೇಷವಾಗಿದೆ. ಇದು ಕ್ರಿ.ಶ. ಸು. ೧೬–೧೭ನೇ ಶತಮಾನಕ್ಕೆ ಸೇರಿದ್ದಾಗಿರಬಹುದು.[೪] ಹಾಗೆಯೇ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬಳ್ಳಾರಿ, ಕರ್ನೂಲ್ ಮತ್ತು ಹೈದರಾಬಾದ್ ಪ್ರಾಂತ್ಯದಲ್ಲಿ ಇಂತಹ ಕುಳಿಗಳು ಕಂಡುಬಂದಿವೆಯಾದರೂ ಎಂ.ಡಿ. ಕೋಟೆಯಲ್ಲಿರುವ ಕುಳಿಗಳ ಆಕೃತಿಯಲ್ಲಿ ವ್ಯತ್ಯಾಸವಿದೆ.

ವೀರಸತಿಕಲ್ಲು: ಬಂಡ್ಲೋರಹಟ್ಟಿಯಿಂದ ಪೂರ್ವಕ್ಕೆ ಎರಡುವರೆ ಕಿ.ಮೀ. ದೂರದಲ್ಲಿ ನೊಳಬಿಪಟ್ಟಣಕ್ಕೆ ಹೊಂದಿಕೊಂಡಂತೆ ಪೂರ್ವಾಭಿಮುಖವಾಗಿ ಈ ವೀರಸತಿಕಲ್ಲು ಸಿದ್ದಪ್ಪ ರೆಡ್ಡಿಯವರ ಹೊಲದಲ್ಲಿ ನೆಡಲಾಗಿದೆ. ಈ ಸ್ಮಾರಕವು ಕಪ್ಪು ಒರಟುಶಿಲೆಯಿಂದ ಕೂಡಿದ್ದು, ಇದರ ಉದ್ದ ಮೂರು ಅಡಿ ಒಂಭತ್ತು ಇಂಚು, ಅಗಲ ಎರಡು ಅಡಿ ನಾಲ್ಕು ಇಂಚಿದ್ದು, ದಪ್ಪ ಐದು ಇಂಚು ಇದೆ. ಈ ಸ್ಮಾರಕವು ಮೂರು ಹಂತಗಳನ್ನು ಹೊಂದಿದೆ.

ವೀರನ ಜೊತೆ ಅವನ ಇಬ್ಬರು ಸತಿಯರನ್ನು ಚಿತ್ರಿಸಲಾಗಿದೆ. ವೀರನು ಸೊಂಟಪಟ್ಟಿಗೆ ಕತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ ಮತ್ತು ತನ್ನ ಎಡಗೈಯನ್ನು ಚಿಕ್ಕಮಗುವಿನ ಮೇಲಿಟ್ಟು ಸಂತೈಸುತ್ತಿರುವುದು ವಿಶೇಷತೆ ಎನಿಸಿದೆ.

ಎರಡನೇ ಹಂತದಲ್ಲಿ ಹೋರಾಟದಲ್ಲಿ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದನ್ನು ಕಾಣಬಹುದು.

ಮೂರನೇ ಹಂತದಲ್ಲಿ ವೀರನು ಸತಿಯರೊಂದಿಗೆ ಸ್ವರ್ಗದಲ್ಲಿರುವಂತೆ ಶಿಲ್ಪವನ್ನು ಕೊರೆಯಲಾಗಿದೆ. ನಂದಿ ಮತ್ತು ಶಿವಲಿಂಗವನ್ನು ಕಾಣಬಹುದಾಗಿದೆ.

ಈ ಸ್ಮಾರಕ ಶಿಲ್ಪಗಳನ್ನು ಅಧ್ಯಯನ ಮಾಡಿದಾಗ ಈ ಭಾಗಗಳಲ್ಲಿ ಯೋಧರು-ಜನ, ಶೌರ್ಯಪರಾಕ್ರಮಕ್ಕೆ



ವೀರಸತಿಗಲ್ಲು, ಬಂಡ್ಲೋರಹಟ್ಟಿ

ಹೆಸರಾಗಿದ್ದು, ಗ್ರಾಮದ ರಕ್ಷಣೆ, ತುರುಗಳ ರಕ್ಷಣೆ, ಸ್ತ್ರೀಯರ ರಕ್ಷಣೆಗಾಗಿ ಹೋರಾಡಿ ವೀರ ಮರಣ ಹೊಂದಿರುವುದು ಸ್ಪಷ್ಟವಾಗುತ್ತದೆ.[೫]

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕು ಪ್ರದೇಶವು ಐತಿಹಾಸಿಕವಾಗಿ ಶ್ರೀಮಂತವಾಗಿದೆ. ಹಾಗೆಯೇ ಮೇಲೆ ಚರ್ಚಿಸಿದ ಅಪರೂಪದ ಸ್ಮಾರಕ ಶಿಲ್ಪಗಳ ಜೊತೆಗೆ ಇನ್ನು ಸಾಕಷ್ಟು ಸಂಖ್ಯೆಯ ಶಿಲ್ಪಗಳನ್ನು ಇಲ್ಲಿ ನೋಡಬಹುದು. ತಾಲೂಕಿನಲ್ಲಿರುವ ತಾಳವಟ್ಟ, ಹರತಿಕೋಟೆ, ಯರಬಳ್ಳಿ, ಸಿಡ್ಲಯ್ಯನಕೋಟೆ, ಚಿಲ್ಲಹಳ್ಳಿ, ಧರ್ಮಪುರ, ಬಬ್ಬೂರು, ದೇಪಿಗೆರೆ, ಜವನಗೊಂಡನಹಳ್ಳಿ, ತವಂದಿ, ಟಿ. ಓಬೇನಹಳ್ಳಿ, ಬಿದರಕೆರೆ, ಕಂದಿಕೆರೆ, ಉಡುವಳ್ಳಿ, ಹಿರಿಯೂರು, ಐಮಂಗಲ, ಗುಯಿಲಾಳು, ಮೇಟಿಕುರ್ಕೆ, ವದ್ದಿಕೆರೆ, ಮಸ್ಕಲ್ ಮೊದಲಾದ ಗ್ರಾಮಗಳಲ್ಲಿ ಸ್ಮಾರಕ ಶಿಲ್ಪಗಳು ಕಂಡುಬರುತ್ತವೆ. ಇವುಗಳಲ್ಲಿ ಕೆಲವೇ ಕೆಲವು ರಕ್ಷಿತ ಶಿಲ್ಪಗಳನ್ನು ಹೊರತುಪಡಿಸಿದರೆ, ಉಳಿದವುಗಳಿಗೆ ಸಂರಕ್ಷಣೆಯ ಅವಶ್ಯಕತೆಯಿದೆ. ಸ್ಥಳೀಯ ಜನರಿಗೆ ಇವುಗಳ ಮಹತ್ವ ತಿಳಿಯದಿರುವುದೇ ಅವುಗಳ ಈ ಸ್ಥಿತಿಗೆ ಕಾರಣ. ಅವುಗಳು ಕೇವಲ ನಿರ್ಜೀವ ವಸ್ತುಗಳಾಗಿರದೆ, ಅವುಗಳಿಗೆ ಜೀವವಿದೆ ಎನ್ನುವುದನ್ನು ತಿಳಿಯಹೇಳಬೇಕಿದೆ. ಅವುಗಳು ಸಮಕಾಲೀನ ಸಮಾಜ, ಸಂಸ್ಕೃತಿ ಮತ್ತು ಜನಾಂಗೀಯ ವಿವರಗಳನ್ನು ನೀಡುವ ಪ್ರಮುಖ ಆಕರಗಳಾಗಿದ್ದು, ಅವುಗಳಿರುವುದರಿಂದಲೇ ಈ ಪ್ರದೇಶ ಐತಿಹಾಸಿಕ ಮಹತ್ವವಿದೆ ಎನ್ನುವ ಅರಿವನ್ನು ಮೂಡಿಸುವ ಅಗತ್ಯವಿದೆ.[೬] ಈ ತಾಲೂಕು ವ್ಯಾಪ್ತಿಯೊಳಗೆ ಸಮರ್ಪಕವಾಗಿ ಕ್ಷೇತ್ರ ಕಾರ್ಯ ನಡೆಸಿದರೆ ಇನ್ನೂ ಪೂರಕ ಪುರಾವೆಗಳು ಲಭ್ಯವಾಗಬಹುದು.

[**ಕೃತಜ್ಞತೆ** : ಹಿರಿಯೂರು ತಾಲೂಕಿನ ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಸ್ಥಳೀಯರಾದ ಕಣಜನಹಳ್ಳಿಯ ಮಂಜುನಾಥ್, ಎಂ.ಡಿ. ಕೋಟೆಯ ನನ್ನ ವಿದ್ಯಾರ್ಥಿನಿ ಕು॥ ಜ್ಯೋತಿ. ಇವರ ತಂದೆ ಮಂಜಣ್ಣ, ಸಂಶೋಧನೆಗೆ ಅವಕಾಶ ಮಾಡಿಕೊಟ್ಟು ಸೂಕ್ತ ಮಾರ್ಗದರ್ಶನ ನೀಡುತ್ತಿರುವ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಕೆ. ಪ್ರಭುರವರಿಗೆ, ಸಲಹೆ ನೀಡಿದ ಎಲ್ಲಾ ಗುರುಗಳಿಗೆ ಮತ್ತು ಸ್ನೇಹಿತರುಗಳಿಗೆ ಹೃದಯ ಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.]

ಆಧಾರಸೂಚಿ

೧. ಜಯಮ್ಮ ಜಿ., 'ಚಳ್ಳಕೆರೆ ತಾಲೂಕಿನ ಸ್ಮಾರಕ ಶಿಲ್ಪಗಳು', ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾದೆಮಿ, ಸಂಪುಟ ೨೬, ಬೆಂಗಳೂರು ೨೦೧೧, ಪುಟ ೨೩೨.

೨. ಸುರೇಶ್ ಬಿ., 'ಹಿರಿಯೂರು ತಾಲೂಕಿನ ಸ್ಮಾರಕ ಶಿಲ್ಪಗಳು', ಇತಿಹಾಸ ದರ್ಶನ, ಸಂಪುಟ ೨೭, ಬೆಂಗಳೂರು, ೨೦೧೨, ಪುಟ ೧೨೫.

೩. ಗುಡ್ಡದೇಶ್ವರಪ್ಪ ಹೆಚ್., 'ಚಿತ್ರದುರ್ಗ ತಾಲೂಕು ಹೆಗ್ಗೆರೆ ಗ್ರಾಮದ ನವಶೋಧಿತ ವೀರಗಲ್ಲು ಹಾಗೂ ಮಾಸ್ತಿಗಲ್ಲುಗಳು', ಇತಿಹಾಸ ದರ್ಶನ, ಸಂಪುಟ ೨೮, ಬೆಂಗಳೂರು, ೨೦೧೩, ಪುಟ ೧೪೩.

೪. ಗಿರಿಜ ಟಿ., 'ಚಿತ್ರದುರ್ಗ ಜಿಲ್ಲಾ ದರ್ಶಿನಿ', ರೇಖಾ ಪ್ರಕಾಶನ, ದಾವಣಗೆರೆ, ೧೯೯೧.

೫. ಭರಂಪುರ ಕಣುಮಪ್ಪ, 'ಬೇಚಿರಾಕ್ ಗ್ರಾಮ ಕುಂಬಾರಗಟ್ಟೆ ಸಂಸ್ಕೃತಿ', ಡಾ. ಅಂಬೇಡ್ಕರ್ ಯುವಕ ಸಂಘ, ಭರಂಪುರ, ೨೦೧೦, ಪುಟ ೯.

೬. ಪರಮಶಿವಮೂರ್ತಿ ಡಿ.ವಿ., 'ಕನ್ನಡ ಶಾಸನಶಿಲ್ಪ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪುಟ ೨೫೨.

ಹಳೇಬೀಡು ಮತ್ತು ಹೊಸಕೋಟೆ ಗ್ರಾಮಗಳ ಪುರಾತತ್ವ ಮತ್ತು ಐತಿಹಾಸಿಕ ಕುರುಹುಗಳು

ಡಾ. ಎಸ್.ಕೆ. ದೇವೇಗೌಡ* ಪ್ರವೀಣ್‌ಕುಮಾರ್ ಕೆ.**

ಪಾಂಡವಪುರ ತಾಲ್ಲೂಕಿನಲ್ಲಿ ಶಿಲಾಯುಗ ಸಂಸ್ಕೃತಿಯಿಂದ ಆಧುನಿಕ ಕಾಲದ ಸಂಸ್ಕೃತಿಯವರೆಗಿನ ಹಲವಾರು ಮಾಹಿತಿಗಳು ಸಂಶೋಧನೆಗಳು ಇತ್ತೀಚಿನ ದಿನಗಳಲ್ಲಿ ಸಂಶೋಧನೆಗಳಿಂದ ಬೆಳಕಿಗೆ ಬರುತ್ತಿವೆ. ಅಂತೆಯೇ ತಾಲ್ಲೂಕಿನ ಹಳೇಬೀಡು ಮತ್ತು ಹೊಸಕೋಟೆ ಗ್ರಾಮಗಳು ಪುರಾತತ್ವೀಯ ಮತ್ತು ಚಾರಿತ್ರಿಕವಾಗಿ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡ ಪ್ರಾಚೀನ ನೆಲೆಗಳಾಗಿದ್ದು, ರಾಜಕೀಯವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಅಭಿವೃದ್ಧಿಯನ್ನು ಹೊಂದಿರುವ ಗ್ರಾಮಗಳಾಗಿವೆ.

ಹಳೇಬೀಡಿನಲ್ಲಿ ಕಂಭೇಶ್ವರ ದೇವಾಲಯ ಮತ್ತು ಚನ್ನಕೇಶವ ದೇವಾಲಯ ಭೈರವನ ದೇವಾಲಯ (ನಾಶ ಹೊಂದಿದೆ), ಹೊಸಕೋಟೆಯಲ್ಲಿ ನಿಷ್ಕಾಮೇಶ್ವರ ದೇವಾಲಯ, ಅನಂತ ಪದ್ಮನಾಭ ಚಾವಡಿ, ಚಿಕ್ಕ ಭೈರವನಗುಡಿ ಪ್ರಮುಖವಾಗಿ ಕಂಡುಬರುವುದಲ್ಲದೇ, ಪ್ರಾಚೀನ ವಸತಿ ನೆಲೆಯಲ್ಲಿ ಮಡಿಕೆ ಚೂರುಗಳು, ಇಟ್ಟಿಗೆ ಚೂರುಗಳು ಸಿಕ್ಕಿದ್ದು ಮತ್ತಷ್ಟು ಹೊಸ ವಿಚಾರಗಳನ್ನು ಕಲೆಹಾಕುವುದರಲ್ಲಿ ಸಹಾಯಕವಾಗಿವೆ.

ಪ್ರಸ್ತುತ ಅಧ್ಯಯನದಲ್ಲಿ ಹಳೇಬೀಡು ಮತ್ತು ಹೊಸಕೋಟೆ ಗ್ರಾಮಗಳ ಸ್ಥಳಪುರಾಣವನ್ನು ಅವಲೋಕಿಸಿದಾಗ ಹಳೇಬೀಡು ಗ್ರಾಮದ ಬಗ್ಗೆ ತಿಳಿದು ಬರುವ ಐತಿಹ್ಯದ ಪ್ರಕಾರ ಲೋಕಪಾವನಿ ನದಿ ದಂಡೆಯ ಮೇಲಿರುವ **ಹೊನ್ನೆಮಡು** ಎಂಬಲ್ಲಿ 'ಅಚ್ಯುತರಾಯ ಮತ್ತು ಭುಜಂಗರಾಯ' ಎಂಬ ಸಹೋದರ ಪಾಳೆಗಾರರಿದ್ದರು. ಅವರಿಬ್ಬರ ನಡುವೆ ವೈಮನಸ್ಸು ಉಂಟಾಗಿ ಅಚ್ಯುತರಾಯ ಊರು ಬಿಟ್ಟು ಬೇರೆ ಸ್ಥಳದಲ್ಲಿ ತನ್ನ ಪರಿವಾರದೊಂದಿಗೆ ತಾತ್ಕಾಲಿಕವಾಗಿ ಬೀಡುಬಿಟ್ಟನು. ನಂತರ ಸೂಕ್ತವಾದ ಮತ್ತೊಂದು ಸ್ಥಳವನ್ನು ಆರಿಸಿಕೊಂಡು ಅಲ್ಲಿ ಹೊಸದಾದ ಕೋಟೆಯೊಂದನ್ನು ನಿರ್ಮಿಸಿಕೊಂಡು ಅಲ್ಲಿಯೇ ನೆಲೆನಿಂತನು. ತಾತ್ಕಾಲಿಕವಾಗಿ ಬೀಡುಬಿಟ್ಟಿದ್ದ ಸ್ಥಳ ಕ್ರಮೇಣ **'ಹಳೇಯಬೀಡು'** ಎಂತಲೂ ಹೊಸದಾಗಿ ನಿರ್ಮಿಸಿದ ಕೋಟೆಯ ಊರು **ಹೊಸಕೋಟೆ**ಯಾಗಿದೆ.

ಹೊಸಕೋಟೆ ಗ್ರಾಮದಲ್ಲಿರುವ ಹೊಯ್ಸಳರ ಕಾಲದ ನಿಷ್ಕಾಮೇಶ್ವರ ದೇವಾಲಯದ ಗರ್ಭಗುಡಿಯ ಉತ್ತರ ಗೋಡೆಯ ಶಾಸನವೊಂದರಲ್ಲಿ **ಯಾದವಪುರ** ಮತ್ತು **ಕನ್‌ನ[ಯ]ನ್ನಳ್ಳಿ** (ಕನ್ನಪಳ್ಳಿ) ಎಂಬ ಹೆಸರುಗಳ ಉಲ್ಲೇಖವಿದೆ.

ಹಳೇಬೀಡು ಮತ್ತು ಹೊಸಕೋಟೆ ಗ್ರಾಮಗಳು ಹೊಯ್ಸಳರು, ವಿಜಯನಗರ ಅರಸರು ಮತ್ತು ಮೈಸೂರು ಒಡೆಯರ ಕಾಲದಿಂದಲೂ ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಏಳು-ಬೀಳುಗಳನ್ನು ಕಂಡಿದೆ. ಈ ಗ್ರಾಮಗಳ ಸ್ಥಳಪುರಾಣವು ರಾಜಕೀಯ ಚರಿತ್ರೆಯಲ್ಲಿ ಬೆರೆತಿರುವುದರಿಂದ ಇಲ್ಲಿನ ರಾಜಕೀಯ ಅಂಶಗಳು ಲಭ್ಯವಾಗುವುದು ಹೊಯ್ಸಳರ ಕಾಲದಿಂದ ಮಾತ್ರ, ಅದಕ್ಕಿಂತ ಹಿಂದೆ ಯಾವುದೇ ರಾಜಮನೆತನದ ಆಳ್ವಿಕೆಗೆ ಒಳಪಟ್ಟಿರುವುದು ಕಂಡುಬರುವುದಿಲ್ಲ. ಆಳ್ವಿಕೆಗೆ ಒಳಪಟ್ಟಿದ್ದರು ಸಹ ಯಾವುದೇ ಆಧಾರಗಳು ಇದುವರೆಗೂ ಸಿಕ್ಕಿಲ್ಲ. ಪ್ರಮುಖವಾಗಿ ಈ ಎರಡು ಗ್ರಾಮಗಳು ಹೊಯ್ಸಳ ವಿಷ್ಣುವರ್ಧನ, ಎರಡನೇ ಬಲ್ಲಾಳ, ಮೂರನೇ ನರಸಿಂಹ ಮತ್ತು ಮೂರನೇ ಬಲ್ಲಾಳನ ಆಳ್ವಿಕೆಗೆ ಒಳಪಟ್ಟಿದ್ದ ನೆಲೆಗಳಾಗಿವೆ. ಜೊತೆಗೆ ವಿಜಯನಗರ ಅರಸರ ಕಾಲದಲ್ಲಿ ಕೆಲವು ಅಭಿವೃದ್ಧಿ ಕಾರ್ಯಗಳು ನಡೆದಿವೆ.

ವಿಷ್ಣುವರ್ಧನನಿಗೆ ಸಂಬಂಧಿಸಿದ ಒಟ್ಟು ಆರು ಶಾಸನಗಳು ತಾಲ್ಲೂಕಿನಲ್ಲಿ ದೊರೆಯುತ್ತವೆ. ಅವುಗಳಲ್ಲಿ ಹೊಸಕೋಟೆಯ ಶಾಸನವೊಂದರಲ್ಲಿ ಶಿವಯೋಗಿ ಧರ್ಮಪುರಿ ಭಟ್ಟನಿಗೆ ವಿಷ್ಣುವರ್ಧನ ಮತ್ತು ಅವನ ತಾಯಿ ತುಳುವಲದೇವಿ ದಾನ ನೀಡಿದ ವಿಷಯ ನೀಡುತ್ತದೆ. ವಿಷ್ಣುವರ್ಧನನು ತಲಕಾಡನ್ನು ಗೆದ್ದ ಮೇಲೆ **'ತಲಕಾಡುಗೊಂಡ'** ಎಂಬ ಬಿರುದನ್ನು ಪಡೆದ ನಂತರದ ಕಾಲಘಟ್ಟದಲ್ಲಿ ಈ ಎಲ್ಲಾ ಪ್ರದೇಶಗಳಲ್ಲಿಯು ನೇರವಾಗಿ ತನ್ನ ಗಾವುಂಡರ ಮೂಲಕ

* ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ.

** ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.

ಧಾರ್ಮಿಕ ಕಾರ್ಯ ಮಾಡಿಸಿದ್ದಾನೆ. ಒಟ್ಟಿನಲ್ಲಿ ಈ ಭಾಗದಲ್ಲಿ ವಿಷ್ಣುವರ್ಧನನ ಕಾಲಕ್ಕೆ ಹಾಗೂ ಆತನಿಗೆ ಸಂಬಂಧಿಸಿದ ಶಾಸನಗಳಿಂದ ತಿಳಿದು ಬರುವ ಅಂಶವೇನೆಂದರೆ ಈ ಶಾಸನಗಳಲ್ಲಿ ಹೆಚ್ಚು ಶೈವಧರ್ಮಕ್ಕೆ ಸೇರಿದ ದಾನಶಾಸನಗಳಾಗಿವೆ. ವಿಷ್ಣುವರ್ಧನ ಹಾಗೂ ಆತನ ತಾಯಿ ಗಾವುಂಡರ, ದಂಡನಾಯಕರ ಮೂಲಕ ಈ ಭಾಗದಲ್ಲಿ ದಾನಕಾರ್ಯಗಳನ್ನು ಮಾಡಿರುವುದು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.

ಹೊಸಕೋಟೆಯಲ್ಲಿರುವ ನಿಷ್ಕಾಮೇಶ್ವರ ದೇವಾಲಯದಲ್ಲಿನ ಮೂರು ಶಾಸನಗಳು ತಮಿಳು ಶಾಸನಗಳಾಗಿದ್ದು ದೇವಾಲಯದ ಅರ್ಚನ ವೃತ್ತಿಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿವೆ. ಈ ಮೂರು ಶಾಸನಗಳನ್ನು ಹೊಯ್ಸಳ ಮೂರನೇ ನರಸಿಂಹನ ಆಳ್ವಿಕೆ ಕಾಲದಲ್ಲಿ ಬರೆಯಿಸಲಾಗಿದ್ದು, ದೇವಾಲಯದ ಸ್ಥಾನಪತಿ ನಿಕ್ಕೇಶ್ವರ ಎಂದು ತಿಳಿದು ಬರುತ್ತದೆ. ಈ ನಿಕ್ಕೇಶ್ವರನ ಹೆಸರಿನಲ್ಲಿ ದೇವಾಲಯ ನಿರ್ಮಾಣವಾಗಿರುವಂತೆ ಕಂಡುಬರುತ್ತದೆ. ಮುಂದೆ ಈ ದೇವಾಲಯವು ನಿಷ್ಕಾಮೆಶ್ವರ ಎಂದು ಕರೆಸಿಕೊಂಡು ಪ್ರಸಿದ್ಧಿಯನ್ನು ಪಡೆದಿರುವ ಅಂಶಗಳು ತಿಳಿದುಬರುತ್ತವೆ.

೩ನೇ ಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯವು ಸಾಕಷ್ಟು ಅಭಿವೃದ್ಧಿಯಾದರೂ ಅವುಗಳೆಲ್ಲಾ ದೆಹಲಿ ಸುಲ್ತಾನರ ದಾಳಿಗೆ ಸಿಲುಕಿ ನಾಶವಾದವು. ಕ್ರಿ.ಶ. ೧೩೫೮ರಲ್ಲಿ ನಿರ್ಮಾಣವಾದದ್ದೆಂದು ಹೇಳಬಹುದಾದ ತೊಣ್ಣೂರಿನ ದರ್ಗಾವು ಮುಸ್ಲಿಂ ದಳಪತಿಯಾದ ಸಾಲಾರ್ ಮಸೂದನ ಗೋರಿಯಾಗಿದೆ. ಬಲ್ಲಾಳನು ದೋರಸಮುದ್ರದಿಂದ ತೊಣ್ಣೂರಿಗೆ ಬಂದಾಗ ಮುಸ್ಲಿಂರ ದಾಳಿಯು ಈ ಭಾಗದಲ್ಲಿಯು ನಡೆದಿದೆ. ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಸಾಮ್ರಾಜ್ಯವು ಕ್ಷೀಣಿಸುವುದರ ಜೊತೆಗೆ ಮಂಡ್ಯ ಜಿಲ್ಲೆಯಲ್ಲಿಯೂ ಮುಸ್ಲಿಂರ ದಾಳಿಗೆ ಸಿಕ್ಕಿ ಅನೇಕ ದೇವಾಲಯಗಳು ನಾಶವೊಂದಿವೆ. ಹೊಸಕೋಟೆಯು ಕೂಡ ದಾಳಿಗೆ ಸಿಕ್ಕಿ ನಾಶವೊಂದಿರುವುದನ್ನು ಇಲ್ಲಿನ ಕೋಟೆಯ ಅವಶೇಷಗಳು ಹಾಗೂ ತುರುಕರ ತೋಟ ಎಂದು ಕರೆಯುವ ಸ್ಥಳವು ಮುಸಲ್ಮಾನರ ದಾಳಿಯನ್ನು ಸೂಚಿಸುತ್ತವೆ.

ತಾಲ್ಲೂಕಿನ ಹಳೇಬೀಡು ಗ್ರಾಮದಲ್ಲಿ ೩ನೇ ಬಲ್ಲಾಳನ ಆಳ್ವಿಕೆಗೆ ಸಂಬಂಧಿಸಿದ ಶಾಸನದಲ್ಲಿ ಮಹಾಪ್ರಧಾನ ಪಿರಿಯ ಕೊಟ್ಟರವ ಹೆಗ್ಗಡೆಯ ಮಗ ಮಂಚಯನಾಯಕನು ಹಳೆಯಬೀಡನ್ನು ಆಳುತ್ತಿದ್ದುದಕ್ಕೆ ದಾಖಲೆಯಿದೆ. ಈತ ಇಲ್ಲಿ ಭೈರವ ದೇವರ ದೇವಾಲಯವನ್ನು ಕಟ್ಟಿಸಿ ಮೂಲ ವಿಗ್ರಹವನ್ನು ಪ್ರತಿಷ್ಠಾಪಿಸಿದ ಬಗ್ಗೆ ಶಾಸನವೊಂದರಲ್ಲಿ ದಾಖಲೆಯಿದೆ. ಈ ಭೈರವನ ದೇವಾಲಯವಿರುವ ಸ್ಥಳದ ಸುತ್ತಮುತ್ತ ಆ ಕಾಲಘಟ್ಟದವು ಎಂದೇ ಗುರುತಿಸಬಹುದಾದ ಇಟ್ಟಿಗೆ ಚೂರುಗಳು, ಮಡಿಕೆ ಚೂರುಗಳು ಸಿಕ್ಕಿವೆ.

ಹಳೇಬೀಡು ಗ್ರಾಮದಲ್ಲಿ ವಿಜಯನಗರ ಅರಸರ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ ಎರಡು ಶಾಸನಗಳಲ್ಲಿ ಒಂದು ಶಾಸನ ಗ್ರಾಮದ ಕಂಭೇಶ್ವರ ದೇವಾಲಯದ ಜೀರ್ಣೋದ್ಧಾರ ಕೈಗೊಂಡುದರ ಬಗ್ಗೆ ಉಲ್ಲೇಖಿಸುತ್ತದೆ. ದೇವಸ್ಥಾನದ ತಳಪಾದಿಯ ದಿಂಡುಗಲ್ಲಿನ ಶಾಸನವು ಕ್ರಿ.ಶ. ೧೫೩೮ರ ತುಳುವ ವಂಶದ ಅಚ್ಯುತರಾಯನ ಕಾಲಕ್ಕೆ ಸಂಬಂಧಿಸಿದ್ದು, ಸು. ೨೦೦ ವರ್ಷಗಳ ಕಾಲ ಪೂಜೆ ಇಲ್ಲದೇ ಪಾಳು ಬಿದ್ದಿದ್ದ ಕಂಭೇಶ್ವರ ದೇವಾಲಯಕ್ಕೆ ದತ್ತಿ ಬಿಟ್ಟು ಮಂಜಯಪ್ಪ ಹಾಗೂ ಪ್ರಮುಖರುಗಳು ಸೇರಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ ದೇವತಾರ್ಚನೆಯನ್ನು ಪುನಾರಾರಂಭಿಸಿದ ವಿಚಾರವನ್ನು ತಿಳಿಸುತ್ತದೆ. ಇದೇ ಗ್ರಾಮದ ಊರ ಬಾಗಿಲಲ್ಲಿ ನೆಟ್ಟ ಶಿಲಾಶಾಸನವು ಕ್ರಿ.ಶ. ೧೫೮೪ರಲ್ಲಿ ಶ್ರೀರಂಗಪಟ್ಟಣಕ್ಕೆ ಸೇರಿದ (ವಿಜಯನಗರ ಕಾಲ) ಹಳೇಬೀಡು ಗ್ರಾಮವನ್ನು, ಅದಕ್ಕೆ ಸಲ್ಲುವ ಚೀಕನಹಳ್ಳಿ, ಬೋರಯನಹಳ್ಳಿ, ಜುಂಜಾಪುರ, ಬಂಕನಹಳ್ಳಿ ಮತ್ತು ಹೊಸಹಳ್ಳಿಪುರವನ್ನು ಅಗ್ರಹಾರದ ಮಹಾಜನಗಳಿಗೆ ವಿಶ್ವೇಶ್ವರ ನರಸಿಂಹನ ಮುಖಂಡತ್ವದಲ್ಲಿ ದಳವಾಯಿ ಟಿ. ವೆಂಕಟಪ್ಪ ನಾಯಕರು ದಾನವಾಗಿ ನೀಡಿದ ಬಗ್ಗೆ ಹಾಗೂ ಹಳೆಯಬೀಡಿಗೆ ಪ್ರತಿನಾಮಧೇಯವಾಗಿ ತಿಮ್ಮಸಮುದ್ರವನ್ನು ಈ ಐದು ಗ್ರಾಮಗಳು ಸುಖದಲ್ಲಿ ಅನುಭವಿಸಿಕೊಂಡು ಹೋಗುವುದು ಎಂದು ಈ ಶಾಸನದಲ್ಲಿ ಉಲ್ಲೇಖವಾಗಿದೆ. ಈ ಶಾಸನದ ಪ್ರಕಾರ ಹೊಯ್ಸಳರ ಕಾಲದಲ್ಲಿ ಈ ಗ್ರಾಮಕ್ಕೆ **ಹಳೆಯಬೀಡು** ಎಂಬ ಹೆಸರಿನ ಉಲ್ಲೇಖವಿದ್ದು, ವಿಜಯನಗರ ಕಾಲದ ಶಾಸನದಲ್ಲಿ **ತಿಮ್ಮಸಮುದ್ರ** ಎಂದು ಮರುನಾಮಕರಣವಾಗಿರುವುದನ್ನು ಕಾಣಬಹುದು. ಆದರೆ ಪ್ರಸ್ತುತ ದಿನಗಳಲ್ಲಿಯು ಹಳೇಬೀಡು ಎಂಬ ಮೂಲ ಹೆಸರಿನಿಂದಲೇ ಕರೆಯಲ್ಪಡುತ್ತಿದೆ.

ಹಳೇಬೀಡು ಕಂಭೇಶ್ವರ ದೇವಾಲಯದ ಹಿಂಭಾಗದ ಹೊಲದಲ್ಲಿ ಕೆಂಪು ಬಣ್ಣದ ಮಡಿಕೆ ಚೂರುಗಳನ್ನು ಪತ್ತೆಹಚ್ಚಲಾಯಿತು. ಊರಿನ ಸುತ್ತಮುತ್ತ ಇದೇ ಬಣ್ಣದ ಮಡಿಕೆ ಚೂರುಗಳು ಅಲ್ಲಲ್ಲಿ ಕಂಡುಬಂದವು. ಇಟ್ಟಿಗೆಯ ಚೂರುಗಳು ಕೂಡ ಕಂಡುಬಂದವು. ಹೊಸಕೋಟೆಯ **ಕೋಟೆಯ ಮಾಳ**ದಲ್ಲಿ ಹೇರಳವಾಗಿ ಕಪ್ಪು ಮತ್ತು ಕೆಂಪು ಬಣ್ಣದ ಮಡಿಕೆ ಚೂರುಗಳು ಲಭ್ಯವಿದ್ದು, ಎಲ್ಲವೂ ಕೃಷಿ ಮಾಡುವ ಸಂದರ್ಭದಲ್ಲಿ ಹಾಳಾಗಿವೆ. ಒಡೆದು ಹೋಗಿರುವ ದೀಪದ ಚೂರುಗಳು ಕೂಡ ದೊರೆತಿವೆ. ಹಾಗೂ ಅಂದಿನ ಮಾನವ ಮನೆ ಕಟ್ಟುವಾಗ ಅಡಿಪಾಯಕ್ಕೆ ಬಳಸಿದ ಕಲ್ಲುಗಳ ಸಾಲೊಂದು ಕಂಡುಬಂದಿತು. ವೃತ್ತಾಕಾರದ ಕಲ್ಲುಗುಂಡುಗಳು ಸಿಕ್ಕಿವೆ. ಹೀಗಾಗಿ ಈ ಪ್ರದೇಶವು ಜನವಸತಿಯ ನೆಲೆಯಾಗಿತ್ತು

ವಿಷಯವನ್ನು ಸೂಚಿಸುತ್ತದೆ. ಹಾಗೂ ತಡಿಕೆ ಮನೆಗಳ ಕುರುಹುಗಳ ಬಗ್ಗೆ ಸ್ಥಳೀಯರಿಂದ ಮಾಹಿತಿಗಳು ದೊರೆಯುತ್ತವೆ.

ಮಡಿಕೆ ಚೂರುಗಳ ಲಕ್ಷಣಗಳು

* ಹೊರಭಾಗದಲ್ಲಿ ಮಂದಕೆಂಪು ಬಣ್ಣದ ಮಡಿಕೆ ಚೂರುಗಳು.
* ನೀರಿನ ಹೂಜಿಗಳಿಗೆ ಬಳಸುತ್ತಿದ್ದ ರಂಧ್ರವಿರುವ ಮಣ್ಣಿನ ಬಿಲ್ಲೆ.
* ತೆಳ್ಳನೆಯ ಕೆಂಪು ಮತ್ತು ಕಪ್ಪು ಬಣ್ಣದ ಭಾಗಗಳು
* ಮಡಿಕೆಯ ಬಾಯಿಯ ಭಾಗದಲ್ಲಿ ಸುತ್ತ ಗೆರೆಗಳಿಂದ ಮಾಡಿದ ಅಲಂಕಾರ
* ಹೊರಭಾಗ ಕಪ್ಪು, ಒಳಬಾಗ ಮಂದ ಕೆಂಪು ಬಣ್ಣದ ಮಡಿಕೆಯ ಕತ್ತಿನ ಭಾಗಗಳು,
* ಮಂದ ಕೆಂಪುಬಣ್ಣದ ಮೇಲೆ ಕೆಂಪು ಬಣ್ಣ ಲೇಪನ ಮಾಡಿರುವ ಮಡಿಕೆ ಚೂರುಗಳು.
* ಬೆರಳಿನ ತುದಿಯಿಂದ ಒತ್ತಿ ಅಲಂಕರಿಸಿರುವ ಚಿಕ್ಕ ಗೆರೆಗಳನ್ನು ಕೆಳಮುಖವಾಗಿ ಅಲಂಕರಿಸಿರುವ ಮಡಿಕೆಯ ವಿವಿಧ ಭಾಗಗಳು.

ಹಳೇಬೀಡು ಗ್ರಾಮದಲ್ಲಿ ಸುಟ್ಟ ಇಟ್ಟಿಗೆಗಳು ಸಿಕ್ಕಿದ್ದು, ೯.೦೫"x೬.೪೫"x೨" ಅಳತೆಯನ್ನು ಹೊಂದಿವೆ. ಬಳಪದ ಕಲ್ಲಿನಿಂದ ಮಾಡಿದ ವೃತ್ತಾಕಾರದ ವಸ್ತುಗಳು ಕೂಡ ಸಿಕ್ಕಿವೆ. ಗಂಗರ ಕಾಲದ ಮುಂದುವರೆದ ಲಕ್ಷಣಗಳನ್ನು ಹೊಂದಿರುವ ಮಡಿಕೆಗಳು ಮತ್ತು ಇಟ್ಟಿಗೆಗಳು ವಿಜಯನಗರ ಕಾಲದವರೆಗೂ ಬದಲಾವಣೆ ಹೊಂದಿರಬಹುದಾದ ಅಂಶಗಳನ್ನು ಸೂಚಿಸುತ್ತವೆ. ಈ ಅವಶೇಷಗಳ ಮಡಿಕೆಯ ವಿವಿಧ ಭಾಗಗಳನ್ನು ಅವಲೋಕಿಸಿದಾಗ ಕೈಯಿಂದ ಒತ್ತಿ ಮಾಡಿದ ಮಡಿಕೆಯ ಚೂರುಗಳು ಕಂಡುಬಂದಿವೆ. ಈ ಅಂಶಗಳಿಂದ ಈ ಪ್ರದೇಶವು ನವಶಿಲಾಯುಗ ಸಂಸ್ಕೃತಿಯ ನಲೆಯಾಗಿತ್ತು ಎಂದು ಊಹಿಸಬಹುದಾಗಿದೆ. ಹಾಗೂ ೯-೧೭ನೇ ಶತಮಾನದ ಸಂಸ್ಕೃತಿಯ ಮಡಿಕೆ ಚೂರುಗಳ ಅವಶೇಷಗಳು ಯಥೇಚ್ಚವಾಗಿ ಕಂಡುಬರುತ್ತವೆ.

ಹೊಸಕೋಟೆಯ ನಿಷ್ಕಾಮೇಶ್ವರ ದೇವಾಲಯದ ಎದುರಿಗೆ ಈಗಿರುವ ಜಮೀನು ಭಾಗದಲ್ಲಿ ಹಿಂದೆ ಹೊಯ್ಸಳರ ಕಾಲದಲ್ಲಿ ನಿಕೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಬೃಂದಾವನವಾಗಿತ್ತೆಂದು ತಿಳಿದುಬರುತ್ತದೆ. ಬೃಂದಾವನದ ಮುಂದೆ ಕೋಟೆಯ ಹೆಬ್ಬಾಗಿಲ ಬಳಿ ಅಳಿವಿನಂಚಿನಲ್ಲಿರುವ ಭೈರವನ ಗುಡಿ ಇದ್ದು, ಮುಚ್ಚಿಹೋಗಿದ್ದ ಈ ಮೂರ್ತಿಶಿಲ್ಪಗಳನ್ನು ಹೊರತೆಗೆಯಲಾಗಿದೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿದ್ದ ಕೋಟೆಯ ದ್ವಾರದ ಬಾಗಿಲ ಬಳಿ (ಈಗ ಕೋಟೆ ನಾಶವಾಗಿದೆ) ಚಿಕ್ಕದಾದ ಈ ಗುಡಿಯೊಳಗೆ ಒಂದೇ ತೆರನಾದ ಎರಡು ಭೈರವನ ಶಿಲ್ಪಗಳಿದ್ದು ನೋಡಲು ಸುಂದರವಾಗಿದ್ದು ಸ್ವಲ್ಪ ಭಾಗಗಳು ನಾಶವೊಂದಿವೆ. ತ್ರಿಭಂಗಿಯಲ್ಲಿ ಶಿಲ್ಪಗಳನ್ನು ಕೆತ್ತಲಾಗಿದ್ದು ಜಟಾಬಂಧದಲ್ಲಿ ಚಂದ್ರ ಮತ್ತು ರುಂಡದ ಅಲಂಕಾರವಿದೆ. ಸುರುಳಿಗೂದಲಿನ ತಲೆಯ ಮೇಲೆ ನಾಗಚಿಹ್ನೆ, ಮೈಮೇಲೆ ಪದಕದ ಹಾರ, ರುದ್ರಾಕ್ಷಿಮಾಲೆ, ಉರ ಹಾರಗಳು, ನಾಗ ಉದರ ಬಂಧವಿದೆ. ರುಂಡಮಾಲೆಯನ್ನು ಧರಿಸಿರುವ ಭೈರವನ ತೋಳುಗಳಲ್ಲಿ ನಾಗವಲಯವೂ ಮತ್ತು ನಾಲ್ಕು ಕೈಗಳಲ್ಲೂ ದಪ್ಪದಾದ ಒಂದೊಂದು ಕಡಗಗಳಿವೆ. ಶಿಲ್ಪವು ಚತರ್ಭುಜದಿಂದ ಕೂಡಿದ್ದು ಬಲ ಕೈಗಳಲ್ಲಿ ಖಡ್ಗ ಮತ್ತು ರುಂಡದ ಅಲಂಕಾರವಿರುವ ಶೂಲವನ್ನು ಹಿಡಿದಿವೆ. ಇದರಲ್ಲಿ ಒಂದು ಶಿಲ್ಪದ ಕೈ ನಾಶವಾಗಿದೆ. ಎಡಗೈಗಳಲ್ಲಿ ಡಮರು, ಕಪಾಲ ಮತ್ತು ರುಂಡಗಳಿದ್ದು ಆ ರುಂಡವನ್ನು ನಾಯಿಯೊಂದು ಕಚ್ಚಿ ತಿನ್ನುತ್ತಿದೆ. ಈ ಎರಡು ಶಿಲ್ಪಗಳನ್ನು ನಗ್ನದೇಹಿಯಾಗಿ ಬಿಡಿಸಲಾಗಿದ್ದು, ಭೈರವನ ಕಟಿಯಲ್ಲಿ ಸುಂದರವಾದ ಕಟೀಸೂತ್ರವಿದೆ. ಎರಡು ಕಾಲುಗಳನ್ನು ಸುತ್ತಿಕೊಂಡಂತೆ ಮಂಡಿಯ ಬಳಿ ಹೆಡೆ ಬಿಚ್ಚಿದ ಸರ್ಪವನ್ನು ಬಿಡಿಸಲಾಗಿದೆ. ಪಾದಗಳಲ್ಲಿ ದಪ್ಪದಾದ ಕಡಗಗಳಿದ್ದು ಭೈರವನ ಎರಡೂ ಪಕ್ಕದಲ್ಲೂ ಭೂತಗಳು ವಾದ್ಯನುಡಿಸುತ್ತಾ ನರ್ತಿಸುತ್ತಿರುವಂತೆ ಬಿಡಿಸಲಾಗಿದೆ. ಕೋಟೆ ಹೆಬ್ಬಾಗಿಲು ಇದ್ದ ಸ್ಥಳದಲ್ಲಿ ಈ ಶಿಲ್ಪಗಳಿರುವುದರಿಂದ ಇವು ದ್ವಾರಶಿಲ್ಪಗಳಾಗಿದ್ದವೆಂದು ಊಹಿಸಬಹುದಾಗಿದೆ. ಈ ಶಿಲ್ಪಗಳ ಅಲಂಕಾರಿಕ ಲಕ್ಷಣಗಳನ್ನು ಗಮನಿಸಿದಾಗ ಹೊಯ್ಸಳರ ಕಾಲದವೆಂದು ಹೇಳಬಹುದು.

ಹೊಸಕೋಟೆಯ ಸುತ್ತಮುತ್ತ ಇರುವ ಕೆಲವು ವಿಶಿಷ್ಟ ಹೆಸರಿನ ಪ್ರದೇಶಗಳು ಕುತೂಹಲಕಾರಿಯಾದ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ಪ್ರದೇಶಗಳಾಗಿವೆ.

ದಂಡಿನ ಬೋರೆ: ಹೊಯ್ಸಳರ ಕಾಲದಲ್ಲಿ ಈ ಪ್ರದೇಶವನ್ನು ಆಳುತ್ತಿದ್ದ ಮಹಾಪ್ರಧಾನ ದಂಡನಾಯಕರುಗಳ ನೇತೃತ್ವದ ಸೈನಿಕರ ತುಕಡಿಯಾಗಿದ್ದಂತೆ ತೋರುತ್ತದೆ.

ತಲೆಬುರುಡೆಹಳ್ಳ: ಹೊಸಕೋಟೆಯಲ್ಲಿ ಮುಸಲ್ಮಾನರ ಧಾಳಿಯಿಂದ ನಡೆದ ಯುದ್ಧಗಳಿಂದ ಮಡಿದ ಸೈನಿಕರ ಸಮಾಧಿ ಸ್ಥಳವಾಗಿದ್ದಂತೆ ಕಂಡುಬರುತ್ತದೆ. ಈ ಪ್ರದೇಶದಲ್ಲಿ ಮಾನವರ ತಲೆಬುರುಡೆಗಳು ಯಥೇಚ್ಚವಾಗಿ ಕಂಡುಬಂದು ಈ ಪ್ರದೇಶಕ್ಕೆ ತಲೆಬುರುಡೆಹಳ್ಳ ಎಂಬ ಹೆಸರು ಬಂದಿರಬಹುದಾದ ಅಂಶಗಳನ್ನು ಸೂಚಿಸುತ್ತದೆ.

ತುರುಕರ ತೋಟ: ಮೂರನೇ ಬಲ್ಲಾಳನ ಕಾಲದಲ್ಲಿ ನಡೆದ ಮುಸ್ಲಿಂ ದಾಳಿಯ ಸೂಚಕವಾದ ಈ ಪ್ರದೇಶವು



ಮಣ್ಣಿನಿಂದ ಹೊರ ತೆಗೆದ ಭೈರವನ ಶಿಲ್ಪಗಳು ಮತ್ತು ಗುಡಿ



ಮುಸ್ಲಿಂ ಸೈನ್ಯವು ಬೀಡು ಬಿಟ್ಟಿದ್ದ ಸ್ಥಳವಾಗಿದೆ. ಇಲ್ಲಿಯೇ ಉಳಿದ ಕೆಲವು ಮುಸ್ಲಿಂರು ಕಾಲನಂತರ ತೊಣ್ಣೂರು, ಅಮೃತಿಗೆ ಹೋಗಿ ನೆಲೆಸಿರುವುದು ಕಂಡುಬರುತ್ತದೆ.

ಬೂದಿಮಾಳ: ಇಲ್ಲಿ ಹೊಯ್ಸಳರ ಕಾಲದಲ್ಲಿ ಸೈನ್ಯಕ್ಕೆ ಬೇಕಾದ ಆಯಧಗಳನ್ನು ತಯಾರಿಸುವ ಕಾರ್ಖಾನೆ ಇದ್ದುದ್ದನ್ನು ಸೂಚಿಸುತ್ತದೆ. ಕುಲುಮೆಯ ಬೂದಿಕಿಟ್ಟದ ಅವಶೇಷಗಳು ಕಂಡುಬಂದಿವೆ. ಬತೇರಿಯು ಇದ್ದ ಸ್ಥಳದಲ್ಲಿ ಜಿನಾಲಯವಿದ್ದು ಎರಡು ಜಿನ ಮೂರ್ತಿಗಳಿದ್ದುದಕ್ಕೆ ಸ್ಥಳೀಯರಿಂದ ಮಾಹಿತಿ ಸಿಗುತ್ತದೆ. ಆದರೆ ಇಂದು ಈ ಜಿನಾಲಯವು ಶಿಥಿಲಾವಸ್ಥೆಯಲ್ಲಿದೆ. ಇದರಿಂದ ಇಲ್ಲಿ ಜೈನರ ಪ್ರಭಾವ ಇತ್ತು ಎಂಬುದನ್ನು ಸೂಚಿಸುತ್ತದೆ.

ಕೋಟೆಮಾಳ: ನಿಷ್ಕಾಮೇಶ್ವರ ದೇವಾಲಯವನ್ನು ಹೊಂದಿಕೊಂಡಂತೆ ಕೋಟೆ ಇದ್ದುದಕ್ಕೆ ಕೋಟೆಯ ಅವಶೇಷಗಳು ಇಂದಿಗೂ ಕಂಡುಬರುತ್ತವೆ. ಕೋಟೆಯನ್ನು ನೋಡಿದ್ದಂತಹ ಊರಿನ ಹಿರಿಯ ವಯಸ್ಸಿನವರು ಈ ಕೋಟೆಯು ತುಂಬಾ ಎತ್ತರವಾಗಿದ್ದಿತು ಎಂದು ಹೇಳುತ್ತಾರೆ.

ಒಟ್ಟಾರೆಯಾಗಿ ಹಳೇಬೀಡು ಮತ್ತು ಹೊಸಕೋಟೆ ಗ್ರಾಮಗಳು ಪ್ರಾಚೀನ ಪರಂಪರೆಯ ಮಹತ್ವಪೂರ್ಣವಾದ ನೆಲೆಗಳಾಗಿದ್ದು ಇಲ್ಲಿ ದೊರೆತಂತಹ ಮಡಿಕೆ ಚೂರುಗಳ ಲಕ್ಷಣಗಳನ್ನು ಗಮನಿಸಿದಾಗ ಈ ಕೆಲವು ನವಶಿಲಾಯುಗ ಸಂಸ್ಕೃತಿಯ ಅಂಶಗಳನ್ನು ಹೋಲುತ್ತವೆ. ಈ ಎರಡು ಗ್ರಾಮಗಳು ಲೋಕಪಾವನಿ ನದಿಯ ಅನತಿ ದೂರದಲ್ಲಿರುವುದರಿಂದ ಈ ಪ್ರದೇಶಗಳು ನವಶಿಲಾಯುಗದಿಂದಲೇ ಜನವಸತಿಯ ನೆಲೆಗಳಾಗಿದ್ದವು ಎಂಬ ಅಂಶಗಳನ್ನು ಇಲ್ಲಿನ ಭೌಗೋಳಿಕ ಪರಿಸರದಿಂದಲೂ ತಿಳಿಯಬಹುದಾಗಿದೆ.

ಆಧಾರಸೂಚಿ

೧. **ಇತಿಹಾಸ ಮತ್ತು ಪುರಾತತ್ವ ವಿಶ್ವಕೋಶ**, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೯.

೨. **ಮಂಡ್ಯ ಜಿಲ್ಲಾ ಗ್ಯಾಸೆಟಿಯರ್**, ಬೆಂಗಳೂರು, ೨೦೦೩.

೩. ಕೆ. ಅನಂತರಾಮು, **ಸಕ್ಕರೆ ಸೀಮೆ**, ೧೯೮೨.

೪. ಡಾ. ಎಚ್.ಎಂ. ನಾಗರಾಜು, **ಯದುಗಿರಿಯ ನಾಡು**, ಮೈಸೂರು.

೫. **ಹೊಯ್ಸಳ ಶಿಲ್ಪಕಲೆ**, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ೨೦೦೬.

೬. ಎಸ್.ಜಿ. ರಾಮದಾಸರೆಡ್ಡಿ, **ಲೋಕಪಾವನಿ, ನದಿ ತೀರದ ಸಾಂಸ್ಕೃತಿಕ ಅಧ್ಯಯನ**, ೨೦೧೧.

೭. **ಎಪಿಗ್ರಾಫಿಯ ಆಫ್ ಕರ್ನಾಟಕ**, ಸಂಪುಟ ೬, ಶಾಸನಗಳ ಸಂಖ್ಯೆ ೨೩೫–೨೭೯ ಮತ್ತು ೨೩೧–೨೩೫ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ, ಮೈಸೂರು.

೮. ಡಾ. ಎನ್.ಎಸ್. ರಂಗರಾಜು, **ಹೊಯ್ಸಳ ಟೆಂಪಲ್ ಇನ್ ಮಂಡ್ಯ & ತುಮಕೂರ್**, ೧೯೯೮.

೯. ಡಾ. ಎಂ. ಚಿದಾನಂದ ಮೂರ್ತಿ, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ೧೯೯೭.

೧೦. ಹರವು ದೇವೇಗೌಡ, **ಪಾಂಡವಪುರ ತಾಲ್ಲೂಕು ದರ್ಶನ**, ಪಾಂಡವಪುರ, ೨೦೦೪.

೧೧. ಡಾ. ಪಿ. ಶೋಭಾ, **ಮಂಡ್ಯ ಜಿಲ್ಲೆಯ ಹೊಯ್ಸಳ ದೇವಾಲಯಗಳು**, ದೇಸಿ ಪುಸ್ತಕ ಪ್ರಕಾಶನ, ೨೦೧೧.

೧೨. ಡಾ. ಎಚ್. ತಿಪ್ಪೇರುದ್ರ ಸ್ವಾಮಿ, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ ಪ್ರಕಾಶನ, ೨೦೦೩.

೧೩. ಡಾ. ಆರ್. ಗೋಪಾಲ್, **ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ೨೦೦೮.

೧೪. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್, ೧೯೧೩, ೩೧, ೩೨, ೪೪.

೧೫. ತೈಲೂರು ವೆಂಕಟಕೃಷ್ಣ, **ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ**.

೧೦೪

ಗುಂಬಳ್ಳಿಯ ಪ್ರಾಚ್ಯಾವಶೇಷಗಳು

ಅನಿಲ್ ಎಲ್.* ಡಾ. ಜಿ. ಕರಿಯಪ್ಪ**

ಗುಂಬಳ್ಳಿಯು ಯಳಂದೂರು ತಾಲೂಕಿನ ಒಂದು ಚಿಕ್ಕಗ್ರಾಮ. ಯಳಂದೂರಿನಿಂದ ಸುಮಾರು ೮ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಕಾಲದಿಂದಲೂ ಈ ಗ್ರಾಮವು ತನ್ನದೇ ಆದ ಮಹತ್ವವನ್ನು ಹೊಂದಿದೆ. ಇಲ್ಲಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು ಹಾಗೂ ಮೈಸೂರು ಒಡೆಯರು ಮುಂತಾದ ರಾಜಮನೆತನಗಳು ಆಳ್ವಿಕೆಯನ್ನು ನಡೆಸಿದ್ದಾರೆ. ಐತಿಹಾಸಿಕವಾಗಿ ಈ ಗ್ರಾಮವನ್ನು ಶಾಸನಗಳಲ್ಲಿ ಗುಂಬಹಳ್ಳಿ, ಗುಂಬೆಹಳಿ, ಗುಮ್ಮ್‌ಪಳ್ಳಿ, ಗುಮ್ಬಹಳ್ಳಿ, ಗುಬ್ಬೆಯಗಳಿ, ಗುಬ್ಬೆಹಳ್ಳಿಯ ಎಂದು ಉಲ್ಲೇಖಿಸಲಾಗಿದೆ. ಗುಂಬಳ್ಳಿಯಲ್ಲಿ ಒಟ್ಟು ೧೨ ಶಾಸನಗಳಿದ್ದು ಗ್ರಾಮದ ವೈಶಿಷ್ಟ್ಯವನ್ನು ತಿಳಿಸುವಲ್ಲಿ ಪ್ರಮುಖವಾಗಿದೆ. ಕನ್ನಡ ಮತ್ತು ತಮಿಳು ಲಿಪಿ-ಭಾಷೆಯಲ್ಲಿರುವ ಶಾಸನಗಳು ಈ ಗ್ರಾಮದ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಇತಿಹಾಸವನ್ನು ಬಿಂಬಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಗುಂಬಳ್ಳಿಯ ಗ್ರಾಮದಲ್ಲಿ ಪ್ರಾಚೀನ ಕಾಲದ ಪ್ರಾಚ್ಯಾವಶೇಷಗಳಾದ ವೀರಗಲ್ಲು, ಮಾಸ್ತಿಕಲ್ಲು ಮತ್ತು ಸ್ಮಾರಕಶಿಲ್ಪಗಳು ಹಾಗೂ ಭಗ್ನಗೊಂಡಿರುವ ಶಿವಕಾರೇಶ್ವರ ಬಾಣೇಶ್ವರ ದೇವಾಲಯದ ಬಗ್ಗೆ ಸಂಶೋಧನಾತ್ಮಕವಾಗಿ ತಿಳಿಸುವುದು ಈ ಲೇಖನದ ಉದ್ದೇಶವಾಗಿದೆ.

ಶಿವಕಾರೇಶ್ವರ ಬಾಣೇಶ್ವರ ದೇವಾಲಯ

ಗುಂಬಳ್ಳಿ ಮತ್ತು ಯರಗಂಬಳ್ಳಿಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಶಿವಕಾರೇಶ್ವರ ಬಾಣೇಶ್ವರ ದೇವಾಲಯವಿದ್ದು ಈ ದೇವಾಲಯವು ಚೋಳರ ಕಾಲದಲ್ಲಿ ನಿರ್ಮಾಣವಾಗಿದೆ. ದೇವಾಲಯವನ್ನು ಗ್ರಾನೈಟ್ ಶಿಲೆಯನ್ನು ಬಳಸಿ ಕಟ್ಟಲಾಗಿದೆ. ಪ್ರಸ್ತುತ ದೇವಾಲಯವು ಗರ್ಭಗುಡಿ ಮತ್ತು ನವರಂಗ ಹೊಂದಿದ್ದು ಒಟ್ಟು ಆರು ಅರೆಕಂಬಗಳಿಂದ ಕೂಡಿದೆ. ದೇವಾಲಯದ ಗರ್ಭಗುಡಿಯಲ್ಲಿ ಇರಬೇಕಾದ ಶಿವಲಿಂಗವು ದೇವಾಲಯದ ಮುಂಭಾಗದಲ್ಲಿ ಬಿದ್ದಿದೆ. ದೇವಾಲಯದ ದ್ವಾರವು ಸರಳವಾಗಿದ್ದು ಯಾವುದೇ ರೀತಿಯ ಶಿಲ್ಪಗಳು ಕಾಣಬರುವುದಿಲ್ಲ. ಬಾಗಿಲ ಇಕ್ಕೆಲಗಳಲ್ಲಿ ಶಾಸನಗಳಿದ್ದು ಪ್ರಸ್ತುತ ಈ ಶಾಸನಗಳಿಗೆ ಸುಣ್ಣವನ್ನು ಲೇಪಿಸಿ ಮುಚ್ಚಲಾಗಿದೆ. ದೇವಾಲಯದ ಅಧಿಷ್ಠಾನ ಸರಳವಾಗಿದ್ದು, ಮಧ್ಯದಲ್ಲಿ ಜಗತಿ, ಕುಮುದ, ಭಿತ್ತಿ, ಅರೆಕಂಬಗಳು, ದೇವಕೋಷ್ಠ, ಕಪೋತಗಳನ್ನು ಒಳಗೊಂಡಿದೆ. ದೇವಾಲಯದ ಉತ್ತರಭಾಗ ಮತ್ತು ದಕ್ಷಿಣ ಭಾಗ ಸಂಪೂರ್ಣವಾಗಿ ಭಗ್ನಗೊಂಡಿದ್ದು ಅವಸಾನದ ಅಂಚಿನಲ್ಲಿದೆ. ದೇವಾಲಯದ ಉತ್ತರ ಭಾಗದಲ್ಲಿ ೯ ಅರೆಕಂಬಗಳಿದ್ದು ಒಂದು ದೇವಕೋಷ್ಠವನ್ನು ಹೊಂದಿದೆ. ದಕ್ಷಿಣ ಭಾಗದಲ್ಲಿ ಅರೆಕಂಬಗಳು ಮತ್ತು ದೇವಾಲಯದ ಗೋಡೆಗಳು ಸಂಪೂರ್ಣವಾಗಿ ಭಗ್ನಗೊಂಡಿದ್ದು, ದೇವಾಲಯದ ಮೇಲ್ಭಾಗ ದಲ್ಲಿ ಗಿಡ ಮರಗಳು ಬೆಳೆದುಕೊಂಡಿವೆ. ಗರ್ಭಗೃಹದ ಭಿತ್ತಿಯಲ್ಲಿ ೬ ಅರೆಕಂಬಗಳು ಒಂದು ದೇವಕೋಷ್ಠಕವಿದೆ. ದೇವಾಲಯದ ಮುಂಭಾಗದಲ್ಲಿ ಒಂದು ವೀರಗಲ್ಲು ಬಿದ್ದಿದ್ದು, ಈ ವೀರಗಲ್ಲು ಶಿಲ್ಪವು ಕಪ್ಪು ಗ್ರಾನೈಟ್ ಶಿಲೆಯದ್ದಾಗಿದೆ. ೨.೫ ಅಡಿ ಎತ್ತರ ೨ ಅಡಿ ಅಗಲ, ೫ ಇಂಚು ದಪ್ಪನಾಗಿದ್ದು ೨ ಪಟ್ಟಿಕೆಯಿಂದ ಕೂಡಿದೆ. ೩ ಜನ ವ್ಯಕ್ತಿಗಳು ಹೋರಾಡಿ ಹಾಗೆಯೇ ಹಾರವಾಗಿರುವುದನ್ನು ಕಾಣುತ್ತೇವೆ. ಎರಡನೆ ಪಟ್ಟಿಕೆಯಲ್ಲಿ ಇಬ್ಬರು ವ್ಯಕ್ತಿಗಳು ಯುದ್ಧದಲ್ಲಿ ಹೋರಾಡಿ ತಮ್ಮ ಕೈಗಳಲ್ಲಿ ಆಯುಧಗಳನ್ನು ಹಿಡಿದು ಪ್ರದರ್ಶನಕ್ಕೆ ನಿಂತಿರುವ ಹಾಗೇ ಚಿತ್ರದಲ್ಲಿ ಮೂಡಿಬಂದಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಉಬ್ಬುಶಿಲ್ಪದ ಕೆತ್ತನೆ ಇದೆ.

ವಾಲಬ್ಬೆಯ ಶಿಲ್ಪ: ದೇವಾಲಯದ ಮುಂಭಾಗದಲ್ಲಿ ಶಾಸನ ಉಲ್ಲೇಖಿತ ವಾಲಬ್ಬೆಯ ಶಿಲ್ಪವಿದ್ದು ವಾಲಬ್ಬೆಯ ಶಿಲ್ಪದ ಎಡಭಾಗದಲ್ಲಿ ಗಣೇಶ, ಬಲಭಾಗದಲ್ಲಿ ಕಾರ್ತಿಕೇಯರ ಶಿಲ್ಪಗಳಿವೆ. ಶಿಲ್ಪದ ಮೇಲೆ ಸುಮಾರು ೧೦-೧೧ನೇ ಶತಮಾನದ ಶಾಸನವಿದ್ದು ಈ ಶಿಲ್ಪವನ್ನು ಆ ಪ್ರಾಂತ್ಯದ ನಾಗತಿಯಮ್ಮ ಎಂಬುವಳ ಮಗನಾದ ಮಲ್ಲಯ್ಯ ಈ ವಾಲಬ್ಬೆಯ ಶಿಲ್ಪವನ್ನು ಮಾಡಿಸಿದನು ಎನ್ನುವ ವಿಷಯವನ್ನು ತಿಳಿಸುವುದರ ಜೊತೆಗೆ ಆ ಶಿಲ್ಪವನ್ನು ಕೆತ್ತಿಸಿದ ಶಿಲ್ಪಿಯು ಎಂಬುವಾಗಿ ಶಾಸನವು ತಿಳಿಸುತ್ತದೆ.

* ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
** ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ವೀರಗಲ್ಲುಗಳು

ವೀರಗಲ್ಲು ೧: ಈ ವೀರಗಲ್ಲು ಸುಮಾರು ೩ ಅಡಿ ಎತ್ತರ, ೨ ಅಡಿ ಅಗಲ ೪ ಇಂಚು ದಪ್ಪನಾಗಿದ್ದು ಗ್ರಾನೈಟ್ ಶಿಲೆಯಾಗಿದ್ದು ಮೂರು ಪಟ್ಟಿಕೆಗಳನ್ನು ಹೊಂದಿದೆ. ಮೊದಲನೇ ಪಟ್ಟಿಕೆಯಲ್ಲಿ ಮೂರು ಜನ ವ್ಯಕ್ತಿಗಳು ಕತ್ತಿ, ಗುರಾಣಿ, ಭರ್ಜಿಯನ್ನು ಹಿಡಿದು ಹೋರಾಟ ಮಾಡುತ್ತಿರುವ ದೃಶ್ಯ ಮೂಡಿಬಂದಿದ್ದು, ಎರಡನೇ ಪಟ್ಟಿಕೆಯಲ್ಲಿ ಇಬ್ಬರು ಚಾಮರಧಾರಿಣಿ ದೇವಕನ್ಯೆಯರು ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೆ ಪಟ್ಟಿಕೆಯಲ್ಲಿ ಪಲ್ಲಕ್ಕಿಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು ಬಲಭಾಗದಲ್ಲಿ ಒಬ್ಬ ಭಕ್ತನು ಕೈಮುಗಿದು ಕುಳಿತಿದ್ದು ಎಡಭಾಗದಲ್ಲಿ ಯತಿಯು ಶಿವಲಿಂಗಕ್ಕೆ ಪೂಜೆಯನ್ನು ಸಲ್ಲಿಸುತ್ತಿರುವುದು ಇದರ ಪಕ್ಕದಲ್ಲಿ ಪೀಠದ ಮೇಲೆ ನಂದಿಯ ಉಬ್ಬು ಶಿಲ್ಪ ಕೆತ್ತನೆಯನ್ನು ಕಂಡರಿಸಲಾಗಿದೆ.

ವೀರಗಲ್ಲು ೨: ಈ ವೀರಗಲ್ಲು ೨ ಅಡಿ ಎತ್ತರ, ೨ ಅಡಿ ಅಗಲ, ೫ ಇಂಚು ದಪ್ಪನಾಗಿದ್ದು ಮೂರು ಜನ ವ್ಯಕ್ತಿಗಳು ಯುದ್ಧಕ್ಕೆ ಸನ್ನದ್ಧರಾಗಿ ಕೈಗಳಲ್ಲಿ ಆಯುಧಗಳನ್ನು ಹಿಡಿದು ನಿಂತಿರುವ ದೃಶ್ಯ. ಎರಡನೆಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ಇಬ್ಬರು ದೇವಕನ್ಯೆಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವುದು ೩ನೇ ಪಟ್ಟಿಕೆಯ ವಿಮಾನದಲ್ಲಿ ಶಿವಲಿಂಗವಿದ್ದು ಬಲಭಾಗದಲ್ಲಿ ಭಕ್ತನು ನಿಂತು ಕೈಮುಗಿಯುತ್ತಿರುವುದು ಇದರ ಪಕ್ಕದಲ್ಲಿ ಮತ್ತೊಬ್ಬ ವ್ಯಕ್ತಿಯು ಕೈಮುಗಿದು ಕುಳಿತಿರುವುದು ಶಿವಲಿಂಗದ ಪಕ್ಕದಲ್ಲಿ ನಂದಿಯನ್ನು ಕೆತ್ತನೆ ಮಾಡಲಾಗಿದೆ.

ಶಾಸನೋಕ್ತ ವೀರಗಲ್ಲು ೧: ಇದು ೩ ಅಡಿ ಎತ್ತರ, ೨.೫ ಅಡಿ ಅಗಲ, ೪ ಇಂಚು ದಪ್ಪನಾಗಿದ್ದು ಗ್ರಾನೈಟ್ ಶಿಲೆಯಾಗಿದೆ. ಮೂರು ಪಟ್ಟಿಕೆಗಳನ್ನು ಒಳಗೊಂಡಿದ್ದು ಒಂದನೇ ಪಟ್ಟಿಕೆಯಲ್ಲಿ ಇಬ್ಬರು ವೀರರು ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯ. ಎರಡನೆಯ ಪಟ್ಟಿಕೆಯಲ್ಲಿ ಇಬ್ಬರು ದೇವಕನ್ಯೆಯರು ಚಾಮರಧಾರಿಣಿಯಾಗಿ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಭಕ್ತನು ಕೈ ಮುಗಿದು ಕುಳಿತಿರುವುದು ಎಡ ಮತ್ತು ಬಲಭಾಗದಲ್ಲಿ ಇಬ್ಬರು ಚಾಮರಧಾರಿಣಿ ದೇವಕನ್ಯೆಯರು ನಿಂತಿದ್ದು ಇವರ ಎಡಭಾಗದಲ್ಲಿ ನಂದಿಶಿಲ್ಪ ಮತ್ತು ಶಿವಲಿಂಗವಿದೆ. ಇದರ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಇದರ ಕಾಲಮಾನ ಕ್ರಿ.ಶ. ೧೧೧೯ರಿಂದ ೧೨೦೦ರಲ್ಲಿ ಗುಂಬಳ್ಳಿ ಗ್ರಾಮದ ಶಾಸನದಲ್ಲಿ ಹೊಯ್ಸಳರ ಕಾಲದ ವೀರಬಲ್ಲಾಳದೇವನ ಕಾಲಕ್ಕೆ ಸಂಬಂಧಿಸಿದ್ದು, ಗುಂಬಳ್ಳಿಯ ಕೆತ್ತಪ್ರೋವನ್ ಮಗನಾದ ಮಂಚ್ಚಪೋವನ್ ಎಂಬುವವನು ತುರುಪರಿವಲ್‌ಕ್ಕಾದಿ ಮತ್ತು ಮಾರಪೋವನ್ ಎಂಬುವರ ನಡುವಿನ ಯುದ್ಧದ ಸನ್ನಿವೇಶವನ್ನು ಈ ಶಾಸನ ತಿಳಿಸುತ್ತದೆ.

ಶಾಸನೋಕ್ತ ವೀರಗಲ್ಲು ೨: ಇದು ೩ ಅಡಿ ಎತ್ತರ ೨.೫ ಅಡಿ ಅಗಲ, ೪ ಇಂಚು ದಪ್ಪನಾಗಿದ್ದು, ಗ್ರಾನೈಟ್ ಶಿಲೆಯಾಗಿದೆ. ಮೊದಲನೆ ಪಟ್ಟಿಕೆಯಲ್ಲಿ ೩ ಜನ ವ್ಯಕ್ತಿಗಳು ಯುದ್ಧದಲ್ಲಿ ಮಡಿದು ಹಾರವಾಗಿರುವ ದೃಶ್ಯ ಕಂಡುಬಂದಿದ್ದು, ೨ನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಪಕ್ಕದಲ್ಲಿ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ಇಬ್ಬರು ಚಾಮರಧಾರಿಣಿ ಸ್ತ್ರೀಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಪಕ್ಕದಲ್ಲಿ ಭಕ್ತರು ಕೈಮುಗಿದು ಕುಳಿತಿರುವುದು ಅದರ ಪಕ್ಕದಲ್ಲಿ ಸೂರ್ಯ ಮತ್ತು ಚಂದ್ರ ಉಬ್ಬುಶಿಲ್ಪದ ಕೆತ್ತನೆಯನ್ನು ಕಾಣಬಹುದಾಗಿದೆ. ತೇದಿರಹಿತ ಶಾಸನವು ತಮಿಳು ಲಿಪಿಯಲ್ಲಿದ್ದು ವಾಚ್ಚಿಗಾವುಂಡನ ಮಗನಾದ ಶಾತಗಾವುಂಡನು ವಾಣಿಗ ಪಳ್ಳಿಯ ಪೆರಿಗನಾ ಮಗನಾದ ಕುಳ್ಯೆಗನ್‌ನನ್ನು ಕೊಂದು ಹಾಕಿದ ವಿಷಯವನ್ನು ಈ ಶಾಸನ ಪ್ರಸ್ತುತಪಡಿಸುತ್ತದೆ.

ಸ್ಮಾರಕ ಶಿಲ್ಪಗಳು

ಈ ಶಿಲ್ಪವು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು, ಯೋಧನನ್ನು ಸುಂದರವಾಗಿ ಕೆತ್ತಲಾಗಿದೆ. ಇದರಿಂದ ಯೋಧ ಸ್ಥಳೀಯ ಪ್ರಾಂತ್ಯದವನೇ ಇರಬಹುದು ಎಂದು ಹೇಳಿದರೆ ತಪ್ಪಾಗಲಾರದು. ಈತನು ಒಬ್ಬ ಜಟ್ಟಿಯ ರೀತಿಯಲ್ಲಿ ಪಂಚೆಯನ್ನು (ವಸ್ತ್ರ) ಕಚ್ಚೆಯಂತೆ ಕಟ್ಟಿರುವುದು ಸುಂದರವಾಗಿ ಮೂಡಿಬಂದಿದೆ ಹಾಗೂ ಈತನು ಕಂಠದಲ್ಲಿ ಸರಗಳನ್ನು ಮಾಲೆಯಾಗಿ ಧರಿಸಿರುತ್ತಾರೆ ಮತ್ತು ಕೈಗಳಿಗೆ ತೋಳುಬಂಧಿಯನ್ನು ಧರಿಸಿದ್ದು, ಹಾಗೂ ತುಂಬಿದ ಅಗಲವಾದ ದಪ್ಪನೆಯ ಮುಖ ಹೊಂದಿದ್ದು ಸುಂದರವಾದ ಆಕರ್ಷಕ ಕಣ್ಣುಗಳು ಸೊಗಸಾಗಿ ಈ ಶಿಲ್ಪಕಲೆಯಲ್ಲಿ ಮೂಡಿ ಬಂದಿರುವುದನ್ನು ಕಾಣಬಹುದಾಗಿದೆ. ಈತನ ಕಂಠದಲ್ಲಿ ವಿಶೇಷವಾದ ಕಂಠಾಭರಣಗಳನ್ನು ಧರಿಸಿರುತ್ತಾನೆ. ಈತನ ೨ ಕೈಗಳಲ್ಲಿಯು ಸಹ ಆಯುಧವನ್ನು ಹಿಡಿದಿರುತ್ತಾನೆ. ಇದರಿಂದ ಈ ಶಿಲ್ಪಕಲೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಯುದ್ಧದಲ್ಲಿ ಹೋರಾಡಿದ ದೃಶ್ಯ ಚಿತ್ರದಲ್ಲಿ ಮೂಡಿಬಂದಿದೆ ಹಾಗೂ ಇಕ್ಕೆಲಗಳಲ್ಲಿ ಇಬ್ಬರು ಸೇವಕಿಯರಿದ್ದಾರೆ. ಇದರಿಂದ ಈ ಶಿಲ್ಪಕಲೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಯುದ್ಧದಲ್ಲಿ ಹೋರಾಡಿದ ದೃಶ್ಯದಂತೆ ಮೂಡಿಬಂದಿದೆ ಎಂದು ಹೇಳಬಹುದು.

ಕುದುರೆ ಮೇಲೆ ಕುಳಿತ ರಾಜ:

ಈ ಶಿಲ್ಪವು ಸುಂದರವಾಗಿದ್ದು ಕುದುರೆಯ ಮೇಲೆ ರಾಜನು ಕುಳಿತಿರುವ ದೃಶ್ಯವು ಉಬ್ಬುಶಿಲ್ಪ ರಚನಾ

ಶೈಲಿಯಲ್ಲಿದೆ ಎನ್ನಬಹುದು. ರಾಜ ಕುದುರೆಯ ಮೇಲೆ ಕುಳಿತಿದ್ದು ಎಡಗೈಯಲ್ಲಿ ಲಗಾಮು ಹಿಡಿದು ಬಲಗೈಯಲ್ಲಿ ಭರ್ಜಿ ಹಿಡಿದಿದ್ದು ವೀರಾವೇಶದಿಂದ ಹೋರಾಟಕ್ಕೆ ಹೊರಡುತ್ತಿರುವ ದೃಶ್ಯ ವಿಶೇಷವಾಗಿ ಮೂಡಿಬಂದಿದೆ. ವೀರನ ಕರ್ಣಕುಂಡಲವು ಸುಂದರವಾಗಿದೆ. ಅಲ್ಲದೇ ದುಂಡನೆಯ ಮಾದರಿಯ ಕೇಶಾಲಂಕಾರವನ್ನು ಹೊಂದಿದ್ದು ಇದರಿಂದ ಇವನನ್ನು ಒಬ್ಬ ಸಾಮಾನ್ಯ ಮನುಷ್ಯನ ಬದಲಿಗೆ ಸೈನ್ಯಕ್ಕೆ ಸೇರಿದ ಒಬ್ಬ ಉತ್ತಮವಾದಂತಹ ಪದವಿಯನ್ನು ಹೊಂದಿದ ವ್ಯಕ್ತಿ ಎಂದು ಗುರುತಿಸಬಹುದು ಹಾಗೂ ವಿಶೇಷವಾಗಿ ಗಮನಿಸಿದರೆ ರಾಜನು ಉತ್ತಮವಾದ ಶರೀರವನ್ನು ಹೊಂದಿದ್ದು ರಣರಂಗದಲ್ಲಿ ವೀರಾವೇಶದಿಂದ ಹೋರಾಡುವ ಮಾದರಿಯ ಶಿಲ್ಪದಲ್ಲಿ ಮೂಡಿಬಂದಿದೆ.

ವೀರಗಲ್ಲು:–೧, ಈ ಚಿತ್ರದಲ್ಲಿ ನಿರೂಪಗೊಂಡಂತೆ ಸುಮಾರು ೧ ಅಡಿ ಎತ್ತರ, ೧ ಅಡಿ ಅಗಲ, ೩ ಇಂಚು ದಪ್ಪನಾಗಿದ್ದು ವೀರನು ಯುದ್ಧದಲ್ಲಿ ಹೋರಾಡಿ ಹಾರವಾಗಿರುವ ದೃಶ್ಯ ಕಂಡುಬಂದಿದ್ದು, ಎರಡು ಕೈಗಳಲ್ಲಿ ಈಟಿ ಮತ್ತು ಭರ್ಜಿಯನ್ನು ಹಿಡಿದುಕೊಂಡಿದ್ದು ಇಕ್ಕೆಲಗಳಲ್ಲಿ ಇಬ್ಬರು ಸೇವಕಿಯರು ಇರುವುದನ್ನು ಕಾಣಬಹುದು.

ಸ್ಮಾರಕ ಶಿಲ್ಪ:–೨, ಈ ಶಿಲ್ಪದಲ್ಲಿ ಕುಳಿತಿರುವ ವ್ಯಕ್ತಿಯು ಒಂದು ದೇವತಾ ಮೂರ್ತಿಯ ಶಿಲ್ಪವಾಗಿದ್ದು ೨ ಕೈಗಳಲ್ಲೂ ತ್ರಿಶೂಲ ಮತ್ತು ಡಮರುಗವನ್ನು ಹಿಡಿದಿದ್ದು, ಬಲಗಾಲನ್ನು ಕೆಳಗೆ ಇಳಿಬಿಟ್ಟಂತೆ ಕುಳಿತಿದ್ದಾನೆ.

ವೀರಗಲ್ಲು

ಈ ಶಿಲ್ಪವು ಆಕರ್ಷಕವಾಗಿದ್ದು ಕುದುರೆಯ ಮೇಲೆ ರಾಜನು ಕುಳಿತಿರುವ ದೃಶ್ಯವು ಉಬ್ಬುಶಿಲ್ಪದ ರಚನಾ ಶೈಲಿಯಲ್ಲಿದೆ ಎನ್ನಬಹುದು. ರಾಜನು ಕುದುರೆಯ ಮೇಲೆ ಕುಳಿತಿದ್ದು ಎಡಗೈಯಲ್ಲಿ ಲಗಾಮು ಹಿಡಿದು ಬಲಗೈಯಲ್ಲಿ ಭರ್ಜಿ ಹಿಡಿದು ವೀರಾವೇಶದಿಂದ ಹೋರಾಟಕ್ಕೆ ಹೊರಡುತ್ತಿರುವ ದೃಶ್ಯ ವಿಶೇಷವಾಗಿ ಮೂಡಿಬಂದಿದೆ. ದುಂಡನೆಯ ಮಾದರಿಯಲ್ಲಿ ಕೇಶಾಲಂಕಾರವನ್ನು ಹೊಂದಿದ್ದಾನೆ. ಇವನನ್ನು ಸೈನ್ಯಕ್ಕೆ ಸೇರಿದ ಒಬ್ಬ ವ್ಯಕ್ತಿ ಎಂದು ಗುರುತಿಸಬಹುದು.

ಸ್ಮಾರಕ ಶಿಲ್ಪ:

ಇದು ಗ್ರಾನೈಟ್ ವೀರಗಲ್ಲಾಗಿದ್ದು ವೀರನು ಯುದ್ಧಕ್ಕೆ ಸನ್ನದ್ಧನಾಗಿ ಎಡಗೈಯಲ್ಲಿ ತ್ರಿಶೂಲವನ್ನು ಬಲಗೈಯಲ್ಲಿ ಭರ್ಜಿಯನ್ನು ಹಿಡಿದಿದ್ದು ಹೋರಾಟಕ್ಕೆ ಸನ್ನದ್ಧನಾಗಿ ನಿಂತಿದ್ದು ಈತನು ಬಲಭಾಗದಲ್ಲಿ ಸ್ತ್ರೀಯ ಶಿಲ್ಪ ಇರುವುದನ್ನು ಕಾಣಬಹುದು.

ರಾವಳೇಶ್ವರ ಶಿಲ್ಪ: ಈ ಚಿತ್ರದಲ್ಲಿ ಮೂಡಿ ಬಂದಿರುವ ೩ ತಲೆ ಶಿಲ್ಪವನ್ನು ಕಂಡರಿಸಲಾಗಿದೆ. ಇದನ್ನು ರಾವಳೇಶ್ವರ ಶಿಲ್ಪವೆಂದು ಪರಿಗಣಿಸಲಾಗಿದೆ. ಈತನು ಚತುರ್ಭುಜಧಾರಿಯಾಗಿದ್ದು ಕೈಗಳಲ್ಲಿ ತ್ರಿಶೂಲ, ಡಮರುಗ, ಪಾಶವನ್ನು ಹಿಡಿದಿದ್ದು ಅತ್ಯಂತ ಮನಮೋಹಕವಾಗಿದೆ.

ಶಿವನ ಶಿಲ್ಪ: ಈ ಶಿಲ್ಪವು ಶಿವನ ಶಿಲ್ಪವಾಗಿದ್ದು ಶಿವನು ಚತುರ್ಭುಜಧಾರಿಯಾಗಿದ್ದು ಸಮಭಂಗಿಯಲ್ಲಿ ಕುಳಿತಿದ್ದು ೨ ಕೈಗಳಲ್ಲಿ ಡಮರುಗ, ತ್ರಿಶೂಲ, ಮತ್ತೆರಡು ಕೈಗಳಲ್ಲಿ ಮಡಿಕೆಯಲ್ಲಿ ಗಂಗೆಯನ್ನು ಕೆಳಗಡೆ ಸುರಿಸುತ್ತಿರುವುದು ಕಂಡು ಬಂದಿದ್ದು ಇದೊಂದು ಶೈವ ಪರಂಪರೆಯನ್ನು ಸಾರುತ್ತದೆಂದು ಹೇಳಬಹುದು.

ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಈ ಪ್ರಾಂತ್ಯದಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಪಾರಂಪರಿಕವಾಗಿ, ಧಾರ್ಮಿಕ ಸಾಮರಸ್ಯದ ನಿಲುವಿಗೆ ಒಳಪಟ್ಟ ಸಾಕಷ್ಟು ಅಂಶಗಳು ಸಂಶೋಧನಾತ್ಮಕ ಅಧ್ಯಯನದ ದೃಷ್ಟಿಯಿಂದ ಹೆಚ್ಚಿನ ಮಹತ್ವವನ್ನು ಹೊಂದಿದೆ. ಹೀಗಾಗಿ ಹೆಚ್ಚಿನ ಸಂಶೋಧನೆಯ ಅವಶ್ಯಕತೆ ಇದೆ ಎಂಬುದನ್ನು ತಿಳಿಯಪಡಿಸುತ್ತೇನೆ.

ಆಧಾರಸೂಚಿ

೧. ಸಿ. ಹಯವದನರಾವ್, ಮೈಸೂರು ಗ್ಯಾಸೆಟಿಯರ್, ೧೯೭೫.
೨. ಕನ್ನಡ ವಿಷಯ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೩. ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೯.
೪. ಡಿ.ವಿ. ಪರಮಶಿವ ಮೂರ್ತಿ, ಕನ್ನಡ ಶಾಸನಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೯.
೫. ಆರ್. ಶೇಷಶಾಸ್ತ್ರಿ, ಕರ್ನಾಟಕ ವೀರಗಲ್ಲು, ಬೆಂಗಳೂರು, ೨೦೧೧.
೬. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೪, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೫.
೭. ಕ್ಷೇತ್ರಕಾರ್ಯದ ಮಾಹಿತಿ ಆಧರಿಸಿ ರಚಿಸಲಾಗಿದೆ.
೮. ಫೋಟೋಗಳನ್ನು ಗಮನಿಸಿ.

೧೦೫

ಹೆಡತಲೆ ಗ್ರಾಮದಲ್ಲಿನ ವೀರಗಲ್ಲುಗಳು ಮತ್ತು ಮೂರ್ತಿಶಿಲ್ಪಗಳು: ಒಂದು ಅವಲೋಕನ

ಡಾ. ಜಿ. ಕರಿಯಪ್ಪ* ನಿಂಗನಾಯ್ಕ ಸಿ.**

ಇಂದು ಸಾಂಸ್ಕೃತಿಕ ನಗರ ಎಂಬ ಹೆಗ್ಗಳಿಕೆ ಪಾತ್ರವಾಗಿರುವ ಮೈಸೂರು ಜಿಲ್ಲಾ ಕೇಂದ್ರ ಮತ್ತು ಪಟ್ಟಣವಾಗಿದೆ. ಇದು ಸಾಂಸ್ಕೃತಿಕವಾಗಿ ಮತ್ತು ಸಂಪತ್ಭರಿತವಾದಂತ ಕೇಂದ್ರವಾಗಿ ಇಂದು ಹೊರಹೊಮ್ಮುತ್ತಿದೆ ಎಂದರೆ ತಪ್ಪಾಗಲಾರದು. ಈ ಜಿಲ್ಲೆಗೆ ಸೇರಿರುವ ತಾಲೂಕುಗಳಲ್ಲಿ ನಂಜನಗೂಡು ತಾಲೂಕು ಒಂದಾಗಿದೆ. ಇದನ್ನು ಈಗ ದಕ್ಷಿಣಕಾಶಿ ಎಂಬುದಾಗಿ ಕರೆಯಲಾಗುತ್ತಿದೆ. ಈ ತಾಲೂಕಿಗೆ ಸೇರಿರುವ ಹೆಡತಲೆ ಗ್ರಾಮವು ನಂಜನಗೂಡಿನಿಂದ ದಕ್ಷಿಣಕ್ಕೆ ಸುಮಾರು ೧೪ ಕಿಲೋಮೀಟರ್ ದೂರದಲ್ಲಿದೆ. ಇದು ತನ್ನದೇ ಆದಂತಹ ಧಾರ್ಮಿಕ ಮತ್ತು ಐತಿಹಾಸಿಕ ಮಹತ್ವವನ್ನು ಹೊಂದಿರುವ ಗ್ರಾಮವಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಇಲ್ಲಿರುವ ದೇವಾಲಯಗಳು ಮತ್ತು ವೀರಗಲ್ಲುಗಳು ಇಂದು ಸಾಕ್ಷಿಯಾಗಿ ಉಳಿದಿವೆ.

ಈ ಗ್ರಾಮವು ಹಿಂದೆ ಆಳ್ವಿಕೆ ಮಾಡಿದಂತಹ ರಾಜಮನೆತನಗಳಾದ ಗಂಗರು, ಚೋಳರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಹಾಗೂ ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿತ್ತೆಂಬುದು ನಮಗೆ ತಿಳಿದು ಬರುತ್ತದೆ. (ಶಾಸನಾಧಾರಗಳಿಂದ) ಇದಕ್ಕೆ ಮೊದಲು "ವಾಮಶಿರೋನಗರ" ಎಂಬ ಸಂಸ್ಕೃತ ನಾಮಧೇಯ ಈ ಹೆಡತಲೆಗೆ ಇದೆ. ಇಲ್ಲಿರುವ ನಗರೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಕ್ರಿ.ಶ. ೧೨೭೭ರಲ್ಲಿ ಬರೆಸಲಾಗಿರುವ ಕಟ್ಟವಾಡಿ ಶಾಸನದಲ್ಲಿ ಎಡತಲೆ ಎಂಬುದಾಗಿ ಉಲ್ಲೇಖಿಸಿರುವುದು ಕಾಣಬರುತ್ತದೆ. ಅಲ್ಲದೆ ಎಡತಲೆ ಎಂಬ ಹೆಸರು ಬರಲು ಕಾರಣವೇನೆಂದರೆ ಇಲ್ಲಿ ಹರಿಯುವಂತಹ ಗುಂಡ್ಲುನದಿಯು ಈ ಗ್ರಾಮದ ಎಡಭಾಗಕ್ಕೆ ತಿರುಗಿ ಹರಿಯುವುದರಿಂದಾಗಿ ಇದಕ್ಕೆ ಎಡತೊರೆ ಎಂಬ ಹೆಸರು ಬಂದಿತ್ತೆಂದು ಮುಂದೆ ಇದೇ ನಾಮಾಂಕಿತವು ಕಾಲಕಳೆದಂತೆಲ್ಲಾ ಎಡತೊರೆ ಹೋಗಿ ಎಡತಲೆ ಎಂಬುದಾಗಿ ಕರೆಯಲ್ಪಟ್ಟಂತೆ ಕಾಣಬರುತ್ತದೆ. ಅಲ್ಲದೆ ಇದೊಂದು ಪಾಳೆಪಟ್ಟಿನ ಸ್ಥಳವಾಗಿದ್ದರಿಂದ ಹಿಂದೆ ಒಬ್ಬ ಮಹಾಭಕ್ತನು ದೇವರಿಗೆ ತನ್ನ ತಲೆಯನ್ನೇ ಕತ್ತರಿಸಿ ದೇವರಿಗೆ ಎಡೆಯನ್ನಾಗಿ ಇಟ್ಟನಂತೆ. ಇದರಿಂದಾಗಿ ಈ ಗ್ರಾಮಕ್ಕೆ ಎಡತಲೆ ಎಂಬ ಹೆಸರು ಬಂದಿತ್ತೆಂದು ಸ್ಥಳೀಯರು ವಿವರಿಸುತ್ತಾರೆ. ಈ ಗ್ರಾಮವು ವೀರಪುರುಷರಿಗೆ ಹೆಸರುವಾಸಿಯಾಗಿದ್ದ ಸ್ಥಳವಾಗಿತ್ತೆಂಬುದಕ್ಕೆ ಇಲ್ಲಿ ಲಭ್ಯವಾಗಿರುವ ವೀರಗಲ್ಲುಗಳೇ ಸಾಕ್ಷಿಯಾಗಿವೆ. ಈ ಗ್ರಾಮದಲ್ಲಿರುವ ಬಾಣಂತಿ ಮಾರಮ್ಮ ದೇವತೆಯ ದೇವಾಲಯದ ಎಡಭಾಗದಲ್ಲಿ ನಿಲ್ಲಿಸಿರುವ ವೀರಗಲ್ಲುಗಳು ಮತ್ತು ರಾವಳೇಶ್ವರನ ಶಿಲ್ಪಗಳು ಸಾಕ್ಷ್ಯಾಧಾರವಾಗಿ ಇಂದಿಗೂ ಇಲ್ಲಿ ನಿಂತಿವೆ. ಅವುಗಳನ್ನು ಈ ಕೆಳಗೆ ಒಂದೊಂದಾಗಿ ವಿವರಿಸಲಾಗಿದೆ.

೧ನೇ ವೀರಗಲ್ಲು: ಈ ವೀರಗಲ್ಲನ್ನು ಕಣಶಿಲೆಯಲ್ಲಿ ರಚಿಸಲಾಗಿದೆ. ಇದು ಸುಮಾರು ೪ ಅಡಿಗಳ ಎತ್ತರವಾಗಿದ್ದು ೩ ಅಡಿಗಳ ಅಗಲ ಮತ್ತು ೪ ಇಂಚು ದಪ್ಪನಾಗಿದೆ. ಇದರಲ್ಲಿ ಮೂರು ಹಂತಗಳಲ್ಲಿ ಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ. ಕೆಳಹಂತದಲ್ಲಿ ಇಬ್ಬರು ವೀರಪುರುಷರು ಕತ್ತಿ ಗುರಾಣಿಯನ್ನು ಹಿಡಿದು ಹೋರಾಡುತ್ತಿರುವ ದೃಶ್ಯವಿದ್ದರೆ, ಎರಡನೆ ಹಂತದಲ್ಲಿ ಹೋರಾಡಿ ವೀರಮರಣವನ್ನಪ್ಪಿದ ಪುರುಷನನ್ನು ಇಬ್ಬರು ದೇವಕನ್ಯೆಯರು ಒಂದು ಕೈಯಲ್ಲಿ ಚಾಮರವನ್ನು ಹಿಡಿದು ಕೊಂಡು ಮತ್ತೊಂದು ಕೈಯಲ್ಲಿ ವೀರಪುರುಷನನ್ನು ಹಿಡಿದು ಕೊಂಡು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ಮೂರನೆ ಹಂತದಲ್ಲಿ ಪದ್ಮಾಸನದಲ್ಲಿ ಕೈಮುಗಿದು ಕುಳಿತಿರುವ ವೀರಪುರುಷ ಅವನ ಎಡಭಾಗದಲ್ಲಿ ಒಂಟಿಕಾಲಿನಲ್ಲಿ ನಿಂತು ಕೊಳಲನ್ನು ನುಡಿಸುತ್ತಿರುವ ಕೃಷ್ಣನ ಶಿಲ್ಪ ಕೊಳಲಿನ ನಾದವನ್ನೆ ಆಲಿಸುತ್ತಾ ತಲೆಯನ್ನು ಮೇಲಕ್ಕೆತ್ತಿ ಆಲಿಸುತ್ತಿರುವ ಗೋವು ನಿಂತಿರುವಂತೆ ಬಹಳ ಸುಂದರವಾಗಿ ಕೆತ್ತನೆ ಮಾಡಿ ನಿಲ್ಲಿಸಲಾಗಿದೆ.

೨ನೇ ವೀರಗಲ್ಲು: ಈ ವೀರಗಲ್ಲನ್ನು ಕಣಶಿಲೆಯಲ್ಲಿ ಶಿಲ್ಪಗಳನ್ನು ರಚಿಸಿ ನಿಲ್ಲಿಸಲಾಗಿದೆ. ಇದರಲ್ಲಿಯೂ ಮೂರು ಹಂತಗಳಿದ್ದು ಸುಮಾರು ೪ ಅಡಿ ಎತ್ತರ ೩ ಅಡಿಗಳ

* ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
** ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ಅಗಲ ಮತ್ತು ಐದು ಇಂಚು ದಪ್ಪನಾಗಿರುವ ಕಲ್ಲಿನ ಚಪ್ಪಡಿಯ ಮೇಲೆ ಕೆತ್ತನೆ ಮಾಡಲಾಗಿದೆ. ಇದರಲ್ಲಿರುವ ಮೂರು ಹಂತಗಳಲ್ಲಿ ಕೆಳಭಾಗದ ಹಂತದಲ್ಲಿ ಇಬ್ಬರು ವೀರರು ಭರ್ಜಿಗಳನ್ನಿಡಿದು ಹೋರಾಟದಲ್ಲಿ ತೊಡಗಿರುವಂತೆ ಚಿತ್ರಿಸಲಾಗಿದೆ. ಮಧ್ಯದ ಹಂತದಲ್ಲಿ ಇಬ್ಬರು ಚಾಮರಧಾರರು ವೀರಪುರುಷನ ಕೈ ಹಿಡಿದು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ಮೂರನೇ ಹಂತದಲ್ಲಿ ಶಿವಲಿಂಗ ನಂದಿ ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಪುರೋಹಿತ ಮತ್ತು ಪದ್ಮಾಸನದಲ್ಲಿ ಕೈಮುಗಿದು ದೇವರ ಧ್ಯಾನದಲ್ಲಿ ತೊಡಗಿರುವ ವೀರಪುರುಷನ ಶಿಲ್ಪವನ್ನು ಬಿಡಿಸಲಾಗಿದೆ.

೩ನೇ ವೀರಗಲ್ಲು: ಇದನ್ನು ಸುಮಾರು ೩ ಅಡಿ ಎತ್ತರ ಮತ್ತು ೪ ಅಡಿಗಳ ಅಗಲ ಹಾಗು ಅರ್ಧ ಅಡಿ ದಪ್ಪವಿರುವ ಕಣಶಿಲೆಯ (ಗ್ರಾನೈಟ್)ಲ್ಲಿ ರಚಿಸಲಾಗಿದೆ. ಈ ವೀರಗಲ್ಲಿನಲ್ಲಿ ಸ್ತ್ರೀ ಮತ್ತು ಪುರುಷನ ಶಿಲ್ಪವನ್ನು ಕೆತ್ತನೆ ಮಾಡಲಾಗಿದೆ. ಪುರುಷನು ಬಲಗೈಯನ್ನು ಮೇಲಕ್ಕೆ ಎತ್ತಿದ್ದಾನೆ. ಎಡಗೈಯಲ್ಲಿ ಹಿಡಿದುಕೊಂಡಿರುವ ವಸ್ತು ಸ್ಪಷ್ಟವಾಗಿ ಕಾಣಬರುವುದಿಲ್ಲ. ತಲೆಯ ಕೂದಲನ್ನು ತುರುಬಿನಂತೆ ಕಟ್ಟಿಕೊಂಡಿದ್ದಾನೆ. ಈ ವೀರಪುರುಷನ ಬಲಭಾಗದಲ್ಲಿ ಸ್ತ್ರೀಯೋರ್ವಳು ನಿಂತಿದ್ದಾಳೆ ಬಹುಶಃ ಅವನ ಪತ್ನಿ ಇರಬಹುದೆಂದು ಊಹಿಸಲಾಗಿದೆ. ಈ ಸ್ತ್ರೀಯು ತನ್ನ ಎರಡು ಕೈಗಳನ್ನು ಕೆಳಗೆ ಇಳಿಸಿದ್ದಾಳೆ ತಲೆಯ ಕೂದಲನ್ನು ತುರುಬಿನಂತೆ ಕಟ್ಟಿಕೊಂಡಿದ್ದಾಳೆ.

೪ನೇ ವೀರಗಲ್ಲು: ಈ ವೀರಗಲ್ಲನ್ನು ಸುಮಾರು ೪ ಅಡಿಗಳ ಎತ್ತರ ಮೇಲ್ಭಾಗ ೩ ಅಡಿ ಅಗಲ ಕೆಳಭಾಗ ೨ ಅಡಿ ಅಗಲವಿರುವ ಮತ್ತು ಅರ್ಧ ಅಡಿ ದಪ್ಪವಿರುವ ಕಲ್ಲಿನಲ್ಲಿ ರಚಿಸಲಾಗಿದೆ. ಇದರಲ್ಲಿ ಮೂರು ಜನರ ಸ್ತ್ರೀಯರ ಶಿಲ್ಪಗಳನ್ನು ಬಿಡಿಸಲಾಗಿದೆ. ಮಧ್ಯದಲ್ಲಿರುವ ಸ್ತ್ರೀಯು ತನ್ನ ಎರಡೂ ಕೈಗಳನ್ನು ಕೆಳಗಿಳಿಸಿದ್ದಾಳೆ. ಕೈಗಳಲ್ಲಿ ಹಿಡಿದುಕೊಂಡಿರುವ ವಸ್ತುಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಬಲಭಾಗದಲ್ಲಿರುವ ಪುರುಷನು ಮಧ್ಯದ ಮಹಿಳೆಯ ತಲೆಯ ಮೇಲೆ ಎಡಗೈಯನ್ನಿಟ್ಟು ಆಶೀರ್ವದಿಸುವಂತಿದ್ದರೆ ಬಲಗೈಯಲ್ಲಿ ದಂಡವನ್ನು ಹಿಡಿದುಕೊಂಡಿದ್ದಾನೆ. ತಲೆಯ ಕೂದಲನ್ನು ತುರುಬಿನಂತೆ ಕಟ್ಟಲಾಗಿದೆ. ಎಡಭಾಗದಲ್ಲಿ ನಿಂತಿರುವ ಸ್ತ್ರೀಯು ಮಧ್ಯದ ಸ್ತ್ರೀಗೆ ಸಮಾಧಾನ (ಸಾಂತ್ವನ) ಹೇಳುತ್ತಿರುವಂತೆ ರಚಿಸಲಾಗಿದೆ. ಈ ಮಹಿಳೆಯು ತಲೆಯ ಕೂದಲನ್ನು ತುರುಬಿನಂತೆ ಕಟ್ಟಿಕೊಂಡಿದ್ದಾಳೆ, ಎಡಗೈ ತೋಳಿನ ಭಾಗ ಮಾತ್ರ ಕಾಣಬರುತ್ತದೆ. ಬಲಗೈಯನ್ನು ಮಧ್ಯದ ಮಹಿಳೆಯ ತಲೆಯ ಮೇಲಿರಿಸಿದ್ದಾಳೆ.

೫ನೇ ವೀರಗಲ್ಲು: ಈ ವೀರಗಲ್ಲನ್ನು ೫ ಅಡಿ ಅಗಲ ಮತ್ತು ೩ ಅಡಿಗಳ ಎತ್ತರವಿರುವ ಬೆಣಚು ಕಲ್ಲಿನಲ್ಲಿ ರಚಿಸಿ ನಿಲ್ಲಿಸಲಾಗಿದೆ. ಕಲ್ಲಿನ ಅರ್ಧಭಾಗ ಭೂಮಿಯಲ್ಲಿ ಊತು ಹೋಗಿದೆ. ಇದರಲ್ಲಿ ಸ್ತ್ರೀ ಮತ್ತು ಪುರುಷನ ಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ. ಪುರುಷನು ಎಡಗೈ ಮೇಲಕ್ಕೆ ಎತ್ತಿಕೊಂಡಿದ್ದಾನೆ. ಬಲಗೈನ್ನು ಅರ್ಧಭಾಗ ಮೇಲಕ್ಕೆ ಎತ್ತಿ ಹಿಡಿದುಕೊಂಡಿದ್ದಾಳೆ. ಇವನ ಎಡಭಾಗದಲ್ಲಿ ನಿಂತಿರುವ ಸ್ತ್ರೀಯು ಪುರುಷನನ್ನು ನೋಡುತ್ತಿರುವಂತೆ ರಚಿಸಲಾಗಿದ್ದು ಈ ಮಹಿಳೆಯು ತನ್ನ ಕೂದಲನ್ನು ತುರುಬಿನಂತೆ ಕಟ್ಟಿಕೊಂಡಿದ್ದಾಳೆ ತನ್ನ ಎರಡೂ ಕೈಗಳನ್ನು ಕೆಳಗೆ ಇಳಿಸಿದ್ದಾಳೆ.

೬ನೇ ವೀರಗಲ್ಲು: ಇದು ಸುಮಾರು ಎರಡುವರೆ ಅಡಿ ಎತ್ತರ ಎರಡು ಅಡಿಗಳ ಕಣ ಶಿಲೆಯಲ್ಲಿ ರಚಿಸಿ ನಿಲ್ಲಿಸಲಾಗಿದೆ. ಇದರ ಅರ್ಧಭಾಗ ಭೂಮಿಯಲ್ಲಿ ಊತುಹೋಗಿದೆ. ಇದರಲ್ಲಿ ವೀರಪುರುಷನೋರ್ವನು ತನ್ನ ಬಲಗೈಯಲ್ಲಿ ಈಟಿಯನ್ನು ಹಿಡಿದುಕೊಂಡು ಮೇಲಕ್ಕೆ ಎತ್ತಿಹಿಡಿದಿದ್ದಾನೆ. ಎಡಗೈಯಲ್ಲಿ ಶತ್ರುವಿನ ಕುತ್ತಿಗೆಯನ್ನು ಹಿಡಿದುಕೊಂಡು ಕೆಳಗೆ ಜಗ್ಗಿಸಿ ಬೀಳಿಸುತ್ತಿದ್ದಾನೆ. ಶತ್ರು ಪುರುಷನು ತನ್ನ ಎಡಗೈಯನ್ನು ಇಳಿಬಿಟ್ಟು ಬಲಗೈ ಮೇಲಕ್ಕೆ ಎತ್ತಿಕೊಂಡು ಬೀಳುತ್ತಿರುವಂತೆ ರಚಿಸಲಾಗಿದೆ.

೭ನೇ ವೀರಗಲ್ಲು: ಈ ವೀರಗಲ್ಲನ್ನು ಬೆಣಚುಕಲ್ಲಿನಲ್ಲಿ ರಚಿಸಲಾಗಿದೆ. ಇದು ೩ ಅಡಿಗಳ ಎತ್ತರ ಒಂದುವರೆ ಅಡಿಯ ಅಗಲವಾಗಿದೆ. ಇದರಲ್ಲಿ ವೀರಪುರುಷನು ಬಲಗೈಯಲ್ಲಿ ಕತ್ತಿಯನ್ನು ಹಿಡಿದು ತನ್ನ ಭುಜದ ಮೇಲೆ ಇರಿಸಿಕೊಂಡಿದ್ದಾನೆ. ಕಚ್ಚೆ ಪಂಚೆಯನ್ನು ಮೇಲಕ್ಕೆತ್ತಿ ಕಟ್ಟಿದ್ದಾನೆ ಎನ್ನುವಂತೆ ಬಹಳ ಸುಂದರವಾಗಿ ರಚಿಸಲಾಗಿದೆ. ಇದರ ಬಲಭಾಗದಲ್ಲಿ ಸುಮಾರು ಒಂದುವರೆ ಅಡಿ ಎತ್ತರವಿರುವ ಚಿಕ್ಕದೊಂದು ವೀರಗಲ್ಲನ್ನು ಇರಿಸಲಾಗಿದೆ. ಇದರಲ್ಲಿ ಸ್ತ್ರೀ ಮತ್ತು ಪುರುಷರ ಶಿಲ್ಪಗಳನ್ನು ಬಿಡಿಸಲಾಗಿದೆ. ಪುರುಷನು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ. ಎಡಗೈಯಲ್ಲಿ ಯಾವುದೋ ರುಂಡದಂತಿರುವ ವಸ್ತುವನ್ನು ಹಿಡಿದಿದ್ದಾನೆ. ಇವನ ಎಡಭಾಗದಲ್ಲಿ ನಿಂತಿರುವ ಸ್ತ್ರೀಯು ತಲೆಯ ಕೂದಲನ್ನು ತುರುಬಿನಂತೆ ಕಟ್ಟಿಕೊಂಡಿದ್ದಾಳೆ. ಬಲಗೈಯನ್ನು ಸೊಂಟದ ಮೇಲೆ ಇರಿಸಿಕೊಂಡಿದ್ದಾಳೆ ಎಡಗೈ ಅರ್ಧ ಮಾತ್ರ ಗೋಚರಿಸುತ್ತಿದೆ.

೮ನೇ ವೀರಗಲ್ಲು: ಸುಮಾರು ನಾಲ್ಕುವರೆ ಅಡಿ ಎತ್ತರ ೩ ಅಡಿಗಳ ಅಗಲವಾಗಿರುವ ಬೆಣಚುಕಲ್ಲಿನಲ್ಲಿ ರಚಿಸಲಾಗಿದೆ. ಇದರಲ್ಲಿ ಮೂರು ಶಿಲ್ಪಗಳು ಕಾಣಬರುತ್ತವೆ. ಒಬ್ಬ ಪುರುಷನು ಕೆಳಗೆ ಬಿದ್ದಿದ್ದಾನೆ. ಮತ್ತೊಬ್ಬ ಪುರುಷನು ಎದುರಾಳಿಗೆ ಇರಿಯಲು ಎಡಗೈಯಲ್ಲಿ ಭರ್ಜಿಯನ್ನು ಹಿಡಿದು ಮೇಲಕ್ಕೆತ್ತಿ ಶತ್ರುವಿನ ಕುತ್ತಿಗೆಯ ಹತ್ತಿರ ತಂದಿದ್ದಾನೆ. ಬಲಗೈಯಲ್ಲಿ ಕತ್ತಿ ಹಿಡಿದು ಕೆಳಗೆ ಇರಿಸಿದ್ದಾನೆ. ತಲೆಯ ಕೂದಲನ್ನು ತುರುಬಿನಂತೆ ಕಟ್ಟಿಕೊಂಡಿದ್ದಾನೆ. ಮತ್ತೊಬ್ಬನು ಹೆದರಿಕೊಂಡು ನಿಂತಿದ್ದಾನೆ.

ಕೈಯಲ್ಲಿ ಯಾವುದೋ ಒಂದು ದಂಡವನ್ನು ಹಿಡಿದು ಕೆಳಗೆ ಇಳಿಸಿದ್ದಾನೆ. ಎಡಗೈಯನ್ನು ಬಲತೋಳಿನ ಮೇಲೆ ಇರಿಸಿದ್ದಾನೆ. ಇವನೂ ತಲೆಯ ಕೂದಲನ್ನು ತುರುಬಿನಂತೆ ಕಟ್ಟಿದ್ದಾನೆ.

ರಾವಳೇಶ್ವರನ ಶಿಲ್ಪಗಳು

೧. ಈ ರಾವಳೇಶ್ವರನ ಶಿಲ್ಪವನ್ನು ಸುಮಾರು ೩ ಅಡಿ ಎತ್ತರ ಎರಡುವರೆ ಅಡಿ ಅಗಲವಿರುವ ಬೆಣಚುಕಲ್ಲಿನಲ್ಲಿ ರಚಿಸಲಾಗಿದೆ. ಇದರಲ್ಲಿರುವ ರಾವಳೇಶ್ವರನಿಗೆ ಮೂರು ತಲೆ, ಎರಡು ಕೈಗಳು ಕೈಗಳಲ್ಲಿ ತ್ರಿಶೂಲ ಮತ್ತು ಡಮರು ಹಿಡಿದು ಸುಖಾಸನದಲ್ಲಿ ಕುಳಿತಿರುವಂತೆ ಕೆತ್ತನೆ ಮಾಡಿ ನಿಲ್ಲಿಸಲಾಗಿದೆ.

೨. ಇದನ್ನು ಒಂದು ಕಲ್ಲು ಚಪ್ಪಡಿ ಮೇಲೆ ರಚಿಸಲಾಗಿದೆ. ಇದರಲ್ಲಿ ಐದು ತಲೆಗಳು ಸಾಲಾಗಿವೆ. ಬಲಗೈಯನ್ನು ಮೇಲಕ್ಕೆ ಎತ್ತಿ ಹಿಡಿದಿದ್ದಾನೆ. ಎಡಗೈಯನ್ನು ಕೆಳಗಿಳಿಸಿದ್ದಾನೆ.

೩. ಇದನ್ನು ಎರಡುವರೆ ಅಡಿ ಎತ್ತರ ೪ ಅಡಿಗಳ ಅಗಲವಿರುವ ಕಲ್ಲಿನಲ್ಲಿ ರಚಿಸಲಾಗಿದೆ. ಇದರಲ್ಲಿ ಮೂರು ತಲೆಗಳು ಎರಡು ಕೈಯನ್ನು ಹೊಂದಿದೆ. ಬಲಗೈಯನ್ನು ಮೇಲಕ್ಕೆ ಎತ್ತಿ ಹಿಡಿದ್ದಾನೆ, ಎಡಗೈಯನ್ನು ಮೇಲಕ್ಕೆ ಎತ್ತಿಕೊಂಡಿದ್ದಾನೆ. ರಾಜನ ರೀತಿಯ ವಸ್ತ್ರವನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದಾನೆ.

ಆಧಾರಸೂಚಿ

೧. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈ.ವಿ.ವಿ. ಮೈಸೂರು, ೨೦೦೫.

೨. ಎಪಿಗ್ರಾಫಿಯಾ, ಕರ್ನಾಟಿಕ, ಸಂಪುಟ ೩, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೨೦೦೬, ಪ್ರಸಾರಾಂಗ, ಮೈ.ವಿ.ವಿ. ಮೈಸೂರು.

೪. ಶೇಷಶಾಸ್ತ್ರಿ, ಆರ್., ಕರ್ನಾಟಕದ ವೀರಗಲ್ಲುಗಳು, ಧಾರವಾಡ ೧೯೮೨.

೫. ಪರಮಶಿವಮೂರ್ತಿ. ಡಿ.ವಿ., ಕನ್ನಡ ಶಾಸನಶಿಲ್ಪ, ೧೯೯೯, ಹಂಪಿ.

೧೦೬

ಕಾವಲುವಾಡದ ಪ್ರಾಚ್ಯಾವಶೇಷಗಳು ಅಥವಾ ಕಾವಲುವಾಡದ ಕಲೆ ವಾಸ್ತುಶಿಲ್ಪಗಳು

ಪ್ರೊ. ಕೆ.ಸಿ. ಮಲ್ಲಿಗವಾಡ*

ಸಹ್ಯಾದ್ರಿ ಬೆಟ್ಟಗಳ ಸಾಲಿನಲ್ಲಿ ಮಲೆನಾಡಿನ ಸೆರಗಿನ ಕಾರವಾರ ಜಿಲ್ಲೆ ಹಳಿಯಾಳ ತಾಲೂಕಿನ ಕೊನೆಯ ಹಳ್ಳಿ ಕಾವಲುವಾಡ. ಇಂದು ಇದು ಕಾಲವಾಡವೆಂದು ಕರೆಯಲ್ಪಡು ತ್ತದೆ. ಇದು ಹಳಿಯಾಳ ಕಲಘಲಗಿ ಹೆದ್ದಾರಿಯಲ್ಲಿದ್ದು, ತಾಲ್ಲೂಕಿನಿಂದ ಪೂರ್ವಕ್ಕೆ ಸುಮಾರು ೨೫ ಕಿ.ಮೀ. ಅಂತರದಲ್ಲಿದೆ. ಸುತ್ತಲೂ ಅರಣ್ಯದಿಂದಾವೃತವಾಗಿದ್ದು ಬೆಟ್ಟಗಳ ಮಧ್ಯಭಾಗದಲ್ಲಿ ಗ್ರಾಮ ಪ್ರಚಲಿತವಿದೆ.

ಇಲ್ಲಿ ಕಲ್ಯಾಣ ಚಾಲುಕ್ಯರು, ಗೋವೆಯ ಕದಂಬರು, ಕೊಂಕಣದ ಅರಸರು, ನಾಯಕರು ಆಳಿಕೆ ನಡೆಸಿದ ಕುರುಹು ಗಳಿವೆ. ಪ್ರಮುಖವಾಗಿ ಸೋಮೇಶ್ವರ ದೇವಸ್ಥಾನ, ವೀರಗಲ್ಲು ಗಳು, ಶಿವಲಿಂಗ, ಸ್ಥಾವರಲಿಂಗ, ನಂದಿ, ಗಣೇಶ, ಕೋಡಿ ಬಸವಣ್ಣ, ಹನುಮಂತದೇವರು, ನಾಗರೇಖೆ, ತೊಗರಿಕೊಪ್ಪ, ಪೂಜಾಹೊಂಡ, ದ್ಯಾಮವ್ವ, ಗಣಪತಿಗುಡಿ ಮೊದಲಾದವು.

ಗ್ರಾಮದ ಹೊರವಲಯದಲ್ಲಿರುವ ಶ್ರೀ ಸೋಮೇಶ್ವರ ದೇವರು ಭಕ್ತರ ಆರಾಧ್ಯದೇವರು, ಇದೊಂದು ಪವಾಡಪುರುಷ ದೇವರೆಂದೇ ಖ್ಯಾತಿ ಪಡೆದಿದೆ. ಇದರ ಸುತ್ತಲೂ ಪ್ರಮುಖ ಐತಿಹಾಸಿಕ ಕುರುಹುಗಳು ಕೇಂದ್ರೀಕೃತವಾಗಿರುತ್ತವೆ. ವಿಶಾಲ ವಾದ ಪ್ರದೇಶದಲ್ಲಿ ನಿರ್ಮಾಣವಾಗಿರುವ ಶ್ರೀ ಸೋಮೇಶ್ವರ ದೇವಸ್ಥಾನವು ಉತ್ತರಾಭಿಮುಖವಾಗಿದೆ. ಜೀರ್ಣೋದ್ಧಾರ ನಡೆಯುತ್ತಿದ್ದು ಇಲ್ಲಿ ಪ್ರವೇಶದ್ವಾರ, ಸಭಾಮಂಟಪ, ಪ್ರದಕ್ಷಿಣೆ ಪಥ, ನವರಂಗ, ಗರ್ಭಗೃಹ ಸುತ್ತಲೂ ಪ್ರಾಂಗಣಗಳಿದ್ದು ಗರ್ಭಗೃಹದಲ್ಲಿ ಅತ್ಯಾಕರ್ಷಕವಾದ ಶಿವಲಿಂಗವಿದ್ದು, ಎದುರಿನ ಭಾಗದಲ್ಲಿ ಬೃಹದಾಕಾರವಾದ ನಂದಿ ವಿಗ್ರಹ ಸ್ಥಾಪನೆ ಯಾಗಿದೆ. ಮೂಲದೇವರಾದ ಶ್ರೀ ಸೋಮೇಶ್ವರ ಲಿಂಗ ಹಾಗೂ ನಂದಿವಿಗ್ರಹಗಳ ತೃಟಿತವಾಗಿದ್ದರಿಂದ, ಬೇರೆ ಬೃಹತ್ ನಂದಿ ಹಾಗೂ ಶಿವಲಿಂಗವನ್ನು ಪ್ರತಿಷ್ಠಾಪಿಸಿರುವುದು ಇಲ್ಲಿನ ವಿಶೇಷತೆ. ಮೊದಲಿದ್ದ ನಂದಿ, ಈಶ್ವರ ಲಿಂಗಗಳನ್ನು ದೇವಾಲಯದ ಮಧ್ಯಭಾಗದಲ್ಲಿ ಪ್ರತ್ಯೇಕವಾಗಿ ಪ್ರತಿಷ್ಠಾಪನೆಗೈದಿದ್ದಾರೆ.

ಶ್ರೀ ಸೋಮೇಶ್ವರ ದೇಗುಲ ಅಪೂರ್ಣವಾಗಿದ್ದು ೨೪ ಕಂಬಗಳ ಶಿಲಾಮಂಟಪವಾಗಿದೆ. ಮುಂದಿನ ಭಾಗದಲ್ಲಿ ಭಕ್ತರು ಕೆಂಪು ಹೆಂಚಿನ ಛಾವಣಿ ನಿರ್ಮಿಸಿದ್ದಾರೆ. ಸುಮಾರು ೭೯ ಉದ್ದ ೨೦ ಅಗಲವಾಗಿರುವ ದೇವಸ್ಥಾನವು ಗರ್ಭಗೃಹದ ಮೇಲ್ಭಾಗದ ಛತ್ತಿನಲ್ಲಿ ಶಿಖರ ನಿರ್ಮಿಸಿದ್ದಾರೆ. ಪ್ರವೇಶದ್ವಾರ ಅಷ್ಟೊಂದು ಅಲಂಕಾರವಾಗಿರದೇ ಸಭಾಮಂಟಪ ೪ ಕಂಬ ಗಳಿಂದ ನಿರ್ಮಾಣವಾಗಿದೆ. ಬೃಹದಾಕಾರದ, ವೃತ್ತಾಕಾರದ ಕಪ್ಪುಶಿಲೆಯಿಂದ ನಿರ್ಮಿಸಿದ ಕಂಬಗಳು ಗಗ್ಗರಿ, ಸುರಳಿಗೆತ್ತನೆ, ಲತೆ, ಪುಷ್ಪಗಳಿಂದ ಕೆತ್ತಲ್ಪಟ್ಟಿವೆ. ಬೋದಿಗೆಗಳು, ತೊಲೆಯ ಮೇಲೆ ಹೇರಲ್ಪಟ್ಟ ಕುದುರೆ ಮುಖದ ಅಲಂಕಾರದೊಂದಿಗೆ ಕಂಗೊಳಿಸುತ್ತಿವೆ. ಸುತ್ತಲೂ ಪ್ರದಕ್ಷಿಣಾ ಪಥವಿದೆ. ಇಲ್ಲಿ ತೃಟಿತ ಸಾಲು ಭಂಜಿಕೆಯರ ವಿಗ್ರಹಗಳನ್ನು, ಗಣಪತಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಎಡಭಾಗದಲ್ಲಿ ಮಹಿಷಾಸುರ ಮರ್ಧಿನ ವಿಗ್ರಹವನ್ನು ನಿಲ್ಲಿಸಲಾಗಿದೆ.

ದೇವಾಲಯದ ಗರ್ಭಗೃಹದಲ್ಲಿ ಶ್ರೀ ಸೋಮೇಶ್ವರ ಲಿಂಗವಿದ್ದು ಸುಮಾರು ೩.೨ ಅಡಿ ಇದೆ. ಈಗ ಭಕ್ತರು ಬೆಳ್ಳಿಯಿಂದ ತಯಾರಿಸಿದ ಮುಖವಾಡವನ್ನು ವಿಗ್ರಹದ ಮೇಲೆ ಅಳವಡಿಸಿದ್ದಾರೆ. ಸುಮಾರು ೧೦ ಉದ್ದಗಲದ ಗರ್ಭಗೃಹ ಯಾವದೇ ಅಲಂಕಾರ ಹೊಂದಿಲ್ಲ. ಮೇಲ್ಛತ್ತಿನಲ್ಲಿ ಸುಂದರ ವಾಗಿ ತಾವರೆ ಹೂ ಬಿಡಿಸಿರುವ ಕೆತ್ತನೆ ಇದೆ. ಗೋಪುರ ಅಂಡಾಕಾರವಾಗಿ ಸುಮಾರು ೧೦ ಅಡಿ ಎತ್ತರವಾಗಿ ನಿರ್ಮಾಣ ವಾಗಿದೆ. ಸರಳಗೆತ್ತನೆಯಲ್ಲಿ ಶಿಖರವು ಅಲಂಕಾರಗೊಂಡಿದೆ.

ತೃಟಿತ ಗಣೇಶ

ಕಪ್ಪು ಮಿಶ್ರಿತ ಬಳಪದ ಕಲ್ಲಿನಲ್ಲಿ ಸುಂದರವಾಗಿ ಕೊರೆಯ ಲ್ಪಟ್ಟಿವೆ. ಚತುರ್ಭುಜ, ಬಲಗೈಲಿ ಅಭಯಹಸ್ತ ತ್ರಿಶೂಲ, ಎಡಗೈಲಿ, ಬ್ರಹ್ಮಲೇಖ, ಬೆಣ್ಣೆಉಂಡಿ, ಧರಿಸಿದ್ದಾನೆ. ಕರ್ಣ ಕುಂಡಲ ಎಡಮುರಿ, ತಲೆ ಮೇಲೆ ಕಿರೀಟ ಕಾಲಲ್ಲಿ ಸರಪಳಿ ಗೆಜ್ಜೆ ಇದೆ. ಆರಾಮಾಸನದಲ್ಲಿ ಕೂರಿಸಲಾಗಿದೆ.

* ನಿವೃತ್ತ ಪ್ರಾಚಾರ್ಯರು, ಜಿ.ಇ.ಸಿ ಜಿ.ಕೆ. ಹಿರೇಗೌಡರ ಪದವಿಪೂರ್ವ ಕಾಲೇಜು, ರೊಟ್ಟಿಗವಾಡ, ಕುಂದಗೋಳ, ಧಾರವಾಡ.

ಸಪ್ತಮಾತೃಕೆಯರ ವಿಗ್ರಹ

ಚಾಲುಕ್ಯ ಶೈಲಿಯಲ್ಲಿರುವ ವಿಗ್ರಹಗಳು ತೃಟಿತವಾಗಿವೆ. ಕೆಳಭಾಗದಲ್ಲಿ ವಾಹನಗಳಾದ ನಂದಿ, ಗಜ, ನವಿಲು, ವರಾಹ ಗಳು ಇವೆ. ಲಕ್ಷ್ಮಿ, ಸರಸ್ವತಿ, ಗಿರಿಜೆ, ಪಾರ್ವತಿ ವಿಗ್ರಹಗಳು ತಮ್ಮ ಕಳೆಯನ್ನು ಕಳೆದುಕೊಂಡಿವೆ. ಸುಮಾರು ೩×೬ ಅಳತೆ ಕಲ್ಲಿದೆ.

ನಿಂತ ಭೈರವ

ತೃಟಿತವಾಗಿವೆ. ಚತುರ್ಭುಜ ೨×೧ ½ ಅಳತೆ, ಬಲಗೈಲಿ ಡಮರುಗ, ಖಡ್ಗ, ಎಡಗೈಯಲ್ಲಿ ತ್ರಶೂಲ, ಕೆಳಭಾಗದಲ್ಲಿ ಸೇವಕಿಯರು ಸೇವೆಗೆ ಅಣಿಯಾಗಿದ್ದಾರೆ. ಪೀಠದ ಮೇಲೆ ವೃಚ್ಛಿಕವಿದ್ದು, ತಲೆ ಜಟಾಧಾರಿಯಾಗಿದ್ದು, ಕರ್ಣಕುಂಡಲವಿದೆ. ಸುತ್ತಲೂ ಪ್ರಭಾವಳಿ ಸುಂದರವಾಗಿ ಅಲಂಕಾರಿಕವಾಗಿದೆ.

ಬೃಹದಾಕಾರವಾದ ನಂದಿ

ಇದು ಅತ್ಯಾಕರ್ಷಕವಾದ ವಿಗ್ರಹ. ಕಪ್ಪು ಮಿಶ್ರಿತ ಬಳಪದ ಕಲ್ಲಿನಲ್ಲಿ ಕೆತ್ತಲ್ಪಟ್ಟಿದು. ಶಿಲ್ಪಿಯ ಕೈ ಚಳಕದಿಂದ ಸುಂದರವಾಗಿ ಅಲಂಕೃತಗೊಂಡಿವೆ. ಮಲಗಿದ ಭಂಗಿಯಲ್ಲಿರುವ ನಂದಿ ವಿಗ್ರಹ ೬ ಅಡಿ ಉದ್ದ ೨ ಅಡಿ ೫ ಅಂಗುಲ ಎತ್ತರವಾಗಿದೆ. ಎಡಗಾಲು ಮುಂದೆ ಮಾಡಿ ಬಲಗಾಲು ಮಡಿಚಿ, ಹಿಂಗಾಲು ಮಡಿಸಿದ್ದಾನೆ. ಕೊರಳಲ್ಲಿ ಗೆಜ್ಜೆಸರ, ಗಂಟೆ, ಸರಪಳಿ, ಗುಮರಿ, ತತಿಮಲ್ಲಿ ಹಣೆಕಟ್ಟು, ಇಣೆ, ಶಿರಗಂಗೆದೊಗಲು ಬೆನ್ನಿನ ಮೇಲೆ ಜೂಲ ಧರಿಸಿ ಸುತ್ತಲೂ ಜಲಹರಿ ಇದೆ. ಇಂದು ದೇಗುಲದ ಆವರಣದ ಹೊರವಲಯದಲ್ಲಿದೆ.

ಶಿವಲಿಂಗ

ದೇವಾಲಯದ ಹೊರ ಆವರಣದಲ್ಲಿದ್ದು ಕಮಲ ದಾಕಾರವಾದ ಪೀಠದ ಮೇಲೆ ಪ್ರತಿಷ್ಠಾಪನೆಗೊಂಡಿದ್ದಾನೆ. ೩ ಅಡಿ ಎತ್ತರ ವೃತ್ತಾಕಾರವಾಗಿದ್ದು ಪೀಠ ಬಾಣ ಜಲಹರಿ ಇದೆ. ಗರ್ಭಗೃಹದ ಬಾಗಿಲವಾಡೆಗಳು ಸುಂದರವಾಗಿ ಅಲಂಕೃತವಾಗಿವೆ. ಚೇಕಲ್ಲಿನ ಎಡಬಲಗಳಲ್ಲಿ ಸುರಳಿ ಕೆತ್ತನೆ ಲತೆ, ಕುಂಜಗಳನ್ನು ಸರಳಗೈಯಲ್ಲಿ ಬಿಡಿಸಲಾಗಿದೆ. ಬಾಗಿಲ ಹಣೆಪಟ್ಟಿಯ ಮಧ್ಯ ಗಜಲಕ್ಷ್ಮಿ ವಿಗ್ರಹವಿದೆ.

ಮಹಿಷಾಸುರ ಮರ್ಧಿನಿ

ಇಂದು ದೇವಸ್ಥಾನದ ಹೊರಭಾಗದ ಕೃತ್ರಿಮ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿರುವ ಮಹಿಷಮರ್ದಿನಿ ವಿಗ್ರಹ ಚಿತ್ತಾಕರ್ಷಕವಾಗಿದೆ. ವೀರಾವೇಶದಿಂದ ಶುಂಬ, ವಿಶುಂಬ ರನ್ನು ವಧೆ ಮಾಡಲು ತ್ರಿಶೂಲ ಹಿಡಿದ ಖಡ್ಗ, ಡಾಲು, ಕತ್ತಿ, ಪಾಶಗಳಿಂದ ವೈರಿಯ ಮರ್ದನ ಮಾಡುತ್ತಿರುವ ಸಂದರ್ಭದಲ್ಲಿ ವೈರಿಯ ವಾಹನ ಮಹಿಷ (ಕೋಣನ ತಲೆಯನ್ನು ಸಿಂಹವು ಕಚ್ಚಿ ರಕ್ತಮಯವಾದ ಸಂದರ್ಭವು ವಿಗ್ರಹಕ್ಕೆ ವಿಶೇಷ ಮೆರಗು ತರುವಂತಿದೆ. ಅಷ್ಟಭುಜ ಇದ್ದು ಕೆಳಗಡೆ, ವೈರಿಗಳು ತಮ್ಮ ಸಾಹಸ ಮೆರೆಯುತ್ತಿದ್ದಾರೆ, ಕೆಳಗೆ ಬಿದ್ದ ವೈರಿಯ ಶಿರಚ್ಛೇದ ಮಾಡಿ ಸ್ವರ್ಗಕ್ಕೆ ಕಳಿಸುತ್ತಿರುವ ಮನಮೋಹಕ ಚಿತ್ರವಾಗಿದೆ. ವಿಗ್ರಹದ ಶ್ರೀದೇವಿ ಬಲಗೈಯಲ್ಲಿದ್ದು ತ್ರಿಶೂಲದಿಂದ ವೈರಿಗೆ ತಿವಿಯುತ್ತಿರುವ ಇದು ಕಲ್ಯಾಣ ಚಾಲುಕ್ಯರ ಕಾಲದ್ದಾಗಿದ್ದೂ ಮೇಲ್ಭಾಗದಲ್ಲಿ ಪ್ರಭಾವಳಿಯಲ್ಲಿ ಚಿತ್ತಾಕರ್ಷಕ ಕುಶಲ, ಕಲಾಕುಸುರಿನ ಕೆತ್ತನೆ ಬಿಡಿಸಿದ್ದಾರೆ. ಕೊರಳಲ್ಲಿ ಕಂಠಹಾರ, ಕೇಶರಾಶಿ, ಕರ್ಣಕುಂಡಲ, ಕಿರೀಟ, ಎದೆಪಟ್ಟಿ, ನಡಪಟ್ಟಿ, ಕೈಕಟ್ಟು, ಕೈಬಳೆ, ಮೊದಲಾದವುಗಳಿಂದ ವಿಗ್ರಹ ಅಲಂಕಾರ ಗೊಂಡಿದೆ.

ಆಶೀನ ಭೈರವ

ದೇವಾಲಯದ ಹೊರವಲಯದಲ್ಲಿರುವ ಆಶೀನ ಭೈರವ ವಿಗ್ರಹ ೧ ಅಡಿ ಎತ್ತರ, ೧ ಅಡಿ ಅಗಲವಿದ್ದು, ದ್ವಿಭುಜ. ಬಲಗೈಲಿ ಪಾಶ, ಎಡಗೈಲಿ ತ್ರಿಶೂಲ. ಕಿವಿಯಲ್ಲಿ ಕರ್ಣಕುಂಡಲ. ಕಂಠಹಾರ ಎದೆಗವಚ, ಸುತ್ತಲೂ ಪ್ರಭಾವಳಿ ಇದೆ. ಬಲಗಾಲು ಮುಂದೆ ಮಾಡಿ ಎಡಗಾಲು ಮಡಿಸಿ ಆರಾಮಾಸನದಲ್ಲಿ ತೊಡೆಮೇಲೆ ಕೈಯೂರಿ ಕುಳಿತಿದ್ದಾನೆ.

ಭೂತನಾಥ ಕಲ್ಲು

ಇದೊಂದು ಭಕ್ತರಿಗೆ ಅಚ್ಚರಿಯನ್ನುಂಟು ಮಾಡು ವಂಥಹ ಶಿಲೆ. ಬಾದಾಮಿಯಲ್ಲಿರುವ ಭೂತನಾಥ (ಭೂತೇಶ್ವರ) ದೇವಾಲಯದಲ್ಲಿದ್ದ ವಿಗ್ರಹದಂತೆ ಸುಮಾರು ೩×೨ ಅಳತೆಯ ಕಲ್ಲಿನಲ್ಲಿ ಚಿಕ್ಕ ಚಿಕ್ಕ ಗೆರೆಗಳನ್ನು ಕೊರೆದು ಭೂತದಾಕಾರದ ವಿಗ್ರಹ ವಿಗ್ರಹವನ್ನು ನಿರ್ಮಿಸಿ ಭೂತ, ಪಿಶಾಚಿಗಳ ಭಯದಿಂದ ಮುಕ್ತರಾಗಲು ಈ ಶಿಲೆ ಹೊರಡಿಸ ಲಾಗಿದೆ.

ವೀರಗಲ್ಲುಗಳು

ಕಾವಲುವಾಡ ವೈರಿ ಪಡೆಗಳನ್ನು ದೂರದಿಂದಲೇ ವೀಕ್ಷಿಸುವ ವೀಕ್ಷಣಾ ಸ್ಥಳ. ಗೋವಾ ಕದಂಬರ ಹಾಗು ಕಲ್ಯಾಣದ ಚಾಲುಕ್ಯರ ಕಾಲದ ಆಡಳಿತದ ಗಡಿಭಾಗ ಇದಾಗಿದೆ. ದೊಡ್ಡ ಗುಡ್ಡದ ಪಶ್ಚಿಮಕ್ಕೆ ಕದಂಬರು ಗುಡ್ಡದ ಪೂರ್ವಕ್ಕೆ ಕಲ್ಯಾಣದ ಚಾಲುಕ್ಯರು ಆಳಿಕೆ ನಡೆಸಿದ ದ್ಯೋತಕವಾಗಿದೆ. ಕ್ರಿ.ಶ. ೧೨ನೇ ಶತಮಾನದ ಅಂತ್ಯ ಭಾಗದಲ್ಲಿ ಆಳಿಕೆ ನಡೆಸು ತ್ತಿದ್ದು ಅರಸ ಹೋರಾಟದ ವಿಜಯ ದ್ಯೋತಕವಾಗಿ ಇಲ್ಲಿ ಹಲವಾರು ವೀರಗಲ್ಲುಗಳನ್ನು ಹೊರಡಿಸಲಾಗಿದೆ. ಒಟ್ಟು ೪ ಬೃಹದಾಕಾರವಾದ ವೀರಗಲ್ಲುಗಳಿವೆ.

ಅರಳಿಮರದ ಕೆಳಗೆ ಕಟ್ಟೆಯ ಗೋಡೆಗೆ ಆನಿಸಿ ನಿಲ್ಲಿಸಲಾಗಿದೆ. ಪಶ್ಚಿಮಾಭಿಮುಖವಾಗಿರುವ ಶಿಲೆ ಮಹತ್ವಪೂರ್ಣವಾಗಿದೆ. ಇದು ೩ ಪಟ್ಟಿಕೆಗಳನ್ನು ಹೊಂದಿದೆ. ಮಧ್ಯದ ೨ ಚಿಕ್ಕ ಪಟ್ಟಿಕೆಯಲ್ಲಿ ೨-೩ ಸಾಲುಗಳ ಶಾಸನವಿರುವುದು ಅಸ್ಪಷ್ಟವಾಗಿದೆ. ಕೆಳಭಾಗದ ವೀರನು ಹಾಗು ವೈರಿಗಳ ನಡುವೆ ನಡೆದ ಹೋರಾಟದ ಚಿತ್ರಣವಿದೆ. ವೀರ ಏಕಾಂಗಿಯಾಗಿದ್ದು, ಕೈಯಲ್ಲಿ ಖಡ್ಗ, ಎಡಗೈಲಿ ಡಾಲು ಹಿಡಿದಿದ್ದಾನೆ. ಎದುರಿಗಿರುವ ವೈರಿ ಸೈನಿಕರನ್ನು ಹೊಡೆದುರುಳಿಸಲು ಬಲಗೈ ಖಡ್ಗದಿಂದ ವೈರಿಯ ಅಶ್ವ ಮುಖಕ್ಕೆ ತಿವಿದಿದ್ದಾನೆ. ವೈರಿ ಪಡೆಯಲ್ಲಿ ೭ ಜನ ಸೈನಿಕರ ಚಿತ್ರಣವಿದ್ದು, ಅವರು ತಮ್ಮ ಕೈಯಲ್ಲಿ ಕಪಾರಿ, ಬಿಲ್ಲು, ಬಾಣ, ಕತ್ತಿ, ಗುರಾಣಿ ಹಿಡಿದು ವೀರನನ್ನು ಹೊಡೆದುರುಳಿಸಲು ಸೆಣಸುತ್ತಿದ್ದಾರೆ. ವೀರನ ಪಾದದ ಅಡಿಯಲ್ಲಿ ವೈರಿಯ ಹೆಣಗಳು ಕಂಡುಬರುತ್ತಿವೆ. ವೀರನ ಹಿಂದೆ ಅಂಗರಕ್ಷಕನಿದ್ದಾನೆ. ೨ನೇ ಪಟ್ಟಿಕೆಯಲ್ಲಿ ಸ್ವರ್ಗಾರೋಹಣ ಗೈಯ್ಯುತ್ತಿರುವುದು ತಿಳಿಯುತ್ತದೆ. ದೇವಲೋಕದಿಂದ ದೇವಕನ್ನಿಕೆಯರು ವೀರ ಕುಳಿತ ಪಲ್ಲಕ್ಕಿಯನ್ನು ಹೊತ್ತೊಯ್ಯುತ್ತಿರುವ ಹೈಮಾಲಡ ಹಿಡಿದು, ಛತ್ರಿ ಚಾಮರ, ಬಾಳೆ ಮಂಟಪಗಳಿಂದಲಂಕೃತವಾಗಿರುವ ದೃಶ್ಯ ಚಿತ್ತಾಕರ್ಷಕವಾಗಿದೆ. ಎಡಬಲಗಳಲ್ಲಿ ೨ ಜನ ಒಟ್ಟು ೬ ಜನ ಸೇವಕಿಯರು ಸ್ವರ್ಗಕ್ಕೆ ಕರೆದೊಯ್ಯುವ ಚಿತ್ರಣವಿದೆ. ವೀರನು ಪಲ್ಲಕ್ಕಿಯಲ್ಲಿ ಕುಳಿತಿದ್ದಾನೆ. ೩ನೇ ಪಟ್ಟಿಕೆಯಲ್ಲಿ ವೀರನು ಸ್ವರ್ಗದಲ್ಲಿದ್ದು, ಮಧ್ಯಭಾಗದಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಯತಿ ಇದ್ದು ಬಲಕ್ಕೆ ನಂದಿ, ಎಡಕ್ಕೆ ಗೋವುಗಳಿದ್ದು, ಮೇಲೆ ಸೂರ್ಯ ಚಂದ್ರರನ್ನು ಕೊರೆದಿದ್ದಾರೆ.

೨ನೇ ವೀರಗಲ್ಲು

ಪಟ್ಟಿಕೆಯಲ್ಲಿರುವ ಶಾಸನಗಳ ಸಾಲಿನಲ್ಲಿ ಗೋವಾ ಕದಂಬರ ಅರಸ ಗೋವಲದೇವನು ಚಾಲುಕ್ಯ ಅರಸ ೩ನೇ ಸೋಮೇಶ್ವರನ ಮಾಂಡಲೀಕ ಜನ್ನರಸನ ಗೋವು (ತರು) ಗಳನ್ನು ಕದ್ಯೊಯ್ಯುವಾಗ ಮಾಂಡಲೀಕ ಜನ್ನನು ಸಾಹಸದಿಂದ ವೈರಿಗಳ ಜೊತೆ ಹೋರಾಡಿ ಅವರನ್ನು ಹಿಮ್ಮೆಟ್ಟಿಸಿ ಗೋವುಗಳನ್ನು ರಕ್ಷಿಸಿದ ಸ್ಮರಣಾರ್ಥ ಈ ಶಾಸನವನ್ನು ಕೊರೆಯಿಸಿರುವದು ಸಾಕ್ಷಿಯಾಗುತ್ತದೆ. ಈ ಶಿಲೆಯಲ್ಲಿ ೩ ಪಟ್ಟಿಕೆಗಳಿದ್ದು, ವೀರನು ಏಕಾಂಗಿಯಾಗಿ ಹೋರಾಡುತ್ತಿದ್ದಾನೆ. ತನ್ನ ಬಲಗೈಯಲ್ಲಿ ಗುರಾಣಿ ಹಿಡಿದು ವೈರಿಯ ಅಶ್ವದ ಮುಖಕ್ಕೆ ಹೊಡೆದಿದ್ದಾನೆ. ಎಡಗೈಯಲ್ಲಿ ಡಾಲು ಹಿಡಿದು ಎದೆಗವಚ, ಭುಜಗವಚ, ನಡಪಟ್ಟಿ, ಖಡ್ಗಕವಚ ತೊಟ್ಟು ಭುಜಬಲದ ಪರಾಕ್ರಮ ತೋರಿಸುತ್ತಿದ್ದಾನೆ. ವೈರಿಯ ಬೆನ್ನಿಗೆ ಖಡ್ಗದಿಂದ ತಿವಿದ ಕಾರಣ ವೈರಿ ಪಡೆಯಿಂದ ಗೋವುಗಳನ್ನು ರಕ್ಷಿಸಿರುವ ಭಯಾನಕ ದೃಶ್ಯವನ್ನು ಶಿಲ್ಪಿ ಅಚ್ಚುಕಟ್ಟಾಗಿ ಕೊರೆದಿದ್ದಾನೆ. ವೀರನೊಂದಿಗೆ ವೈರಿ ಪಡೆಯಲ್ಲಿ ಆರು ಜನ ಸೈನಿಕರು, ಖಡ್ಗ, ಬಿಲ್ಲು ಬಾಣ, ಗುರಾಣಿಗಳಿಂದ ಹೋರಾಡುತ್ತಿರುವದು ಮನಮೋಹಕ, ಇದೇ ಪಟ್ಟಿಕೆಯಲ್ಲಿ ವೀರನ ಹಿಂಭಾಗದಲ್ಲಿ ಒಂದೇ ಸಾಲಿನಲ್ಲಿ ಆಕಳುಗಳು ನಿಂತ ಭಂಗಿಯಲ್ಲಿ ಚಿತ್ರಿಸಿರುವದು ಗಮನಾರ್ಹ. ಮೇಲಿನ ಭಾಗದಲ್ಲಿ ಚಿಕ್ಕ ೪ ಸಾಲಿನ ಶಾಸನವು ಅಸ್ಪಷ್ಟವಾಗಿವೆ. ೩ನೇ ಪಟ್ಟಿಕೆಯಲ್ಲಿ ಸಾಮಾನ್ಯವಾಗಿ ಎಲ್ಲ ವೀರಗಲ್ಲಿನಲ್ಲಿರುವಂತೆ ದೇವಕನ್ನಿಕೆಯರು ವೀರನನ್ನು ಚಿಕ್ಕ ಮಂಟಪದಲ್ಲಿ ಕುಳ್ಳರಿಸಿ ಎಡಬಲದಲ್ಲಿ ಕೈಗಳಿಂದ ಹಿಡಿದು ಮೇಲಕ್ಕೆ ಕರೆದೊಯ್ಯುತ್ತಿದ್ದಾರೆ. ೩ನೇ ಪಟ್ಟಿಕೆಯಲ್ಲಿ ಸ್ವರ್ಗದ ಸನ್ನಿವೇಶವಿದೆ. ಇಲ್ಲಿ ಯತಿವರರು ಶಿವಲಿಂಗವನ್ನು ಪೂಜಿಸುತ್ತಿದ್ದಾರೆ. ಎದುರುಗಡೆ ವೀರನು ತಪಸ್ಸನ್ನಾಚರಿಸುತ್ತಿರುವದು ಕಂಡುಬರುತ್ತಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರನ ಚಿತ್ರ ಬಿಡಿಸಲಾಗಿದೆ.

೩ನೇ ವೀರಗಲ್ಲು

ವೀರನು ೭ ಜನ ವೈರಿಸೈನಿಕರೊಡನೆ ವೀರಾವೇಶದಿಂದ ಹೋರಾಡುತ್ತಿರುವ ಸನ್ನಿವೇಶ ಕೊರೆಯಲಾಗಿದೆ. ವೀರನು ಒಬ್ಬ ಯೋಧನನ್ನು ಹೊಡೆದು ಕಾಲು ಬುಡದಲ್ಲಿ ತುಳಿದು ಮುಂದಿನ ಯೋಧರನ್ನು ಚಂಡಾಡಲು ಸನ್ನದ್ಧನಾಗಿರುವದು ಕಂಡುಬರುತ್ತದೆ. ವೀರಾವೇಶದಿಂದ ಹೋರಾಡುವಾಗ ಅವನ ಕೂದಲು ಜಡೆಗಳು ಗಂಟು ಗಂಟಾಗಿರುವಂತೆ ಭಾಸವಾಗುತ್ತದೆ. ಚಿರಛಿದ್ರವಾದ ಜಡೆ ಅವನ ಕ್ರೂರತನಕ್ಕೆ ಸಾಕ್ಷಿಯಾಗಿದೆ. ಮೊದಲಿನ ಕಲ್ಲಿನಲ್ಲಿದ್ದಂತೆ, ಕೈಯಲ್ಲಿ ಖಡ್ಗ, ಡಾಲು ಹಿಡಿದು ವೈರಿಯನ್ನು ಖಡ್ಗದಿಂದ ತಿವಿದು ಎಡೆಯಿಂದ ರಕ್ತ ಸುರಿಯುವಂತೆ ಮಾಡಿದ್ದಾನೆ. ಈ ಕಲ್ಲಿನಲ್ಲಿ ಅರ್ಧಭಾಗ ವೀರ, ವೈರಿಯ ಸನ್ನಿವೇಶ ಅರ್ಧಭಾಗ ಸಾಲು ಆರು ಗೋವುಗಳ ಚಿತ್ರಣವನ್ನು ಕೊರೆಯಲಾಗಿದೆ. ಇದೂ ಕೂಡಾ ತರುಗಳನ್ನು ಕದ್ದೊಯ್ಯುವ ಸನ್ನಿವೇಶದ ಚಿತ್ರ

೩ನೇ ಪಟ್ಟಿಕೆಯಲ್ಲಿ ವೀರನು ಸ್ವರ್ಗಾರೋಹಣಗೈಯ್ಯುತ್ತಿರುವ ಚಿತ್ರಣ, ವೀರ ಪಲ್ಲಕ್ಕಿಯಲ್ಲಿ ಕುಳಿತಿದ್ದು ಭೂಲೋಕದಿಂದ ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಎಡಬಲಗಳಲ್ಲಿ ದೇವಕನ್ನಿಕೆಯರು, ನಾಲ್ಕುಜನ ಮಹಿಳೆಯರು ಚಾಮರ, ಖಡ್ಗ, ಹೂಮಾಲೆ ಹಿಡಿದು ನಿಂತಿದ್ದಾರೆ.

ವೀರ ಸ್ವರ್ಗಲೋಕ ಪ್ರವೇಶಿಸಿ ತಪಸ್ಸುಗೈಯ್ಯುತ್ತಿದ್ದಾನೆ, ಮಧ್ಯದಲ್ಲಿ ಪೂಜಾರಿ ಶಿವಲಿಂಗ ಪೂಜಿಸುತ್ತಿದ್ದಾನೆ. ಎಡಗೈಯಲ್ಲಿ ಘಂಟೆ. ಹಿಡಿದು ಬಲಗೈಯಿಂದ ಭಸ್ಮಧಾರಣೆ ಮಾಡುತ್ತಿದ್ದಾನೆ. ಎಡಭಾಗದಲ್ಲಿ ನಂದಿವಿಗ್ರಹವಿದ್ದು ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಬಿಡಿಸಲಾಗಿದೆ.

೪ನೇ ವೀರಗಲ್ಲು

ಶ್ರೀ ಸೋಮೇಶ್ವರ ದೇವರ ಪೂಜಾ ಹೊಂಡದ ದಂಡೆಯ ಮೇಲೆ ನೆಲೆ ನಿಂತಿದೆ. ೫x೩ ಅಗಲ, ೮ ಅಂಗುಲ ದಪ್ಪ ಅಳತೆಯ ಕಪ್ಪು ಶಿಲೆಯ ವೀರಗಲ್ಲು, ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ಇದನ್ನು ಬಿಡಿಸಲಾಗಿದೆ.

ವೀರನ ಜೊತೆ ಆರು ಜನ ಯೋಧರು ಕುದುರೆ ಮೇಲೆ ಕುಳಿತು ಎದುರಿಗಿದ್ದ ವೈರಿ ಪಡೆಯ ನಾಲ್ಕು ಜನರನ್ನು ಹೊಡೆದುರುಳಿಸುತ್ತಿರುವ ಚಿತ್ರಣ ಇಲ್ಲಿದೆ.

೩ನೇ ಪಟ್ಟಿಕೆ ವೀರ ಸ್ವರ್ಗಾರೋಹಣಗೈಯ್ಯುತ್ತಿದ್ದಾನೆ. ಶೂರನು ಮಂಟಪದಲ್ಲಿ ಕುಳಿತು ಮಗ್ನನಾಗಿದ್ದಾನೆ, ಎಂಟು ಜನ ನರ್ತಕಿಯರು ವಾದ್ಯಮೇಳದೊಂದಿಗೆ ವೀರನನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿದ್ದಾರೆ.

ಇಲ್ಲಿರುವ ೨ ಚಿಕ್ಕ ಪಟ್ಟಿಕೆಯಲ್ಲಿ ಶಿಲಾಶಾಸನಗಳ ಸಾಲುಗಳಲ್ಲಿ ಬೈಯ್ಯಪ್ಪ ಶೆಟ್ಟಿ ಎಂಬುವನು ಮಂಡಲಿಕ ಜನ್ನಪ್ಪನ ಸ್ಮರಣಾರ್ಥ ಹೊರಡಿಸಿರುವ ಈ ವೀರಗಲ್ಲುಗಳು ಈ ಭಾಗದ ಜನರ ಸಾಹಸ ಗಾಥೆಯನ್ನು ಸಾರುತ್ತವೆ.

೩ನೇ ಪಟ್ಟಿಕೆ ಇದು ಭಿನ್ನವಾಗಿದ್ದು, ವೀರ ಮಧ್ಯಭಾಗದಲ್ಲಿ ಕುಳಿತ ಭಂಗಿಯಲ್ಲಿದ್ದು ಯತಿಯೋರ್ವನು ಶಿವಲಿಂಗವನ್ನು ಪೂಜಿಸುತ್ತಿದ್ದಾನೆ. ಎಡಭಾಗದಲ್ಲಿ ಮಲಗಿದ ಭಂಗಿಯಲ್ಲಿರುವ ನಂದಿ ವಿಗ್ರಹವಿದೆ. ಕಲ್ಲಿನ ಎಡಭಾಗದ ಅಂಚಿನಲ್ಲಿ ಗೋವು ಗೋಮಾತೆ ಕರುವಿಗೆ ಹಾಲುಣಿಸುತ್ತಿದೆ. ವೀರ, ಯತಿಗಳಿಬ್ಬರೂ ಧ್ಯಾನಾಸಕ್ತರಾಗಿದ್ದಂತೆ ಕಂಡುಬರುತ್ತದೆ. ಕಲ್ಲಿನ ಎಡಬಲಗಳಲ್ಲಿ ಸೂರ್ಯ, ಅರ್ಧ ಚಂದ್ರನ ಚಿತ್ರಗಳನ್ನು ಕೆತ್ತಲಾಗಿದೆ.

ಶ್ರೀ ಸೋಮೇಶ್ವರ ದೇವಾಲಯದ ಎದುರಿನ ಎಡಭಾಗದಲ್ಲಿ ಹೊಂಡ ನಿರ್ಮಾಣವಾಗಿದ್ದು ಆಳವಾಗಿರುವ ಈ ಹೊಂಡ ಸದಾ ಕಾಲವೂ ನೀರಿನಿಂದಾವೃತವಾಗಿರುತ್ತದೆ.

ಕೋಡಿ ಬಸವಣ್ಣ

ಕಾವಲುವಾಡದ ಪಕ್ಕದಲ್ಲಿರುವ ಚೇಚರಾಕ್ ಹಳ್ಳಿ ತೊಗರಿಕೊಪ್ಪ. ಇಲ್ಲೊಂದು ಕೆರೆ ದಂಡೆ ಮೇಲೆ ಬಸವಣ್ಣ ದೇವಸ್ಥಾನವಿದೆ. ಇದಕ್ಕೆ ಕೋಡಿ ಬಸವಣ್ಣನೆಂದು ಕರೆಯಲಾಗಿದೆ. ಇಲ್ಲಿ ಈಶ್ವರ ನಂದಿ ಗಣಪತಿ ವಿಗ್ರಹಗಳಿದ್ದು ಭಕ್ತರು ಇತ್ತೀಚೆಗೆ ದೇವಾಲಯ ನಿರ್ಮಿಸಿದ್ದಾರೆ.

[ಲೇಖನ ತಯಾರಿಸಲು ಸಹಕರಿಸಿದವರು: ಡಾ. ಶ್ರೀನಿವಾಸ ರಿತ್ತಿ, ಡಾ. ರಾಜೇಂದ್ರಪ್ಪ, ಶ್ರೀಮತಿ ಹನುಮಾಕ್ಷಿ, ಶ್ರೀಮತಿ ಆಕ್ಷೀ., ಮಂಜುನಾಥ ಕಡ್ಲಿ, ರುದ್ರಮ್ಮ ಕಡ್ಲಿ, ಹನುಮಂತಪ್ಪ ಮತ್ತು ಚನ್ನವೀರಪ್ಪ, ಚ. ಮಲ್ಲಿಗವಾಡ, ಶರಣು ಮಡಿವಾಳದ ಪೂಜ್ಯ ದಯಾನಂದ ಸ್ವಾಮಿಗಳು ಸಿದ್ದಾರೂಡ ಮಠ


ಶ್ರೀ ಸೋಮಣ್ಣ ಹಾನಗಲ್ (ಅರ್ಚಕ) ಗಂಗಾಧರ ಪುಟ್ಟಿ, ವಿನಾಯಕ ಬಿ. ಹಾನಗಲ್ ಡಾ. ಪಕ್ಕೀರೇಶ, ಫ. ನಿಗದಿ, ಡಾ. ಮಾದೇಶ ತಡಸ, ಸೋಮಲಿಂಗ ಹ್ಯಂದರಿ, ಸೋಮಲಿಂಗ ಮಿಸಾಳು, ಪುಂಡಲೀಕ ನಾರ್ವೇಕರ, ಮಂಜು ಪಾಟೀಲ, ಶ್ರೀ ಶಿವಯೋಗಿ ಹಿರೇಮಠ, ಶಿದ್ದಲಿಂಗೇಶ್ವರ ಹಾನಗಲ ಇವರಿಗೆ ಕೃತಜ್ಞತೆಗಳು.]

ಚಿತ್ರದುರ್ಗ ತಾಲ್ಲೂಕು ಇಸಾಮುದ್ರ ಗ್ರಾಮದ ಪ್ರಾಚ್ಯಾವಶೇಷಗಳು

ಡಾ. ಹೆಚ್. ಗುಡ್ಡದೇಶ್ವರಪ್ಪ*

ಚಿತ್ರದುರ್ಗ ತಾಲ್ಲೂಕಿನ ಇಸಾಮುದ್ರ ಗ್ರಾಮವು ಬೆಂಗಳೂರು–ಪೂನ ರಾಷ್ಟ್ರೀಯ ಹೆದ್ದಾರಿ–೪ರ ಚಿತ್ರದುರ್ಗ ಜಿಲ್ಲಾ ಕೇಂದ್ರದಿಂದ ೩೦ ಕಿ.ಮೀ ಅಂತರದಲ್ಲಿರುವ ಭರಮಸಾಗರದ ಪೂರ್ವಕ್ಕೆ ೪ ಕಿ.ಮೀ ದೂರದಲ್ಲಿದ್ದು, ಈ ರಸ್ತೆಯು ಜಗಳೂರನ್ನು ಸೇರುತ್ತದೆ.

ಇಸಾಮುದ್ರ ಗ್ರಾಮವು ಐತಿಹಾಸಿಕವಾಗಿ ಅತ್ಯಂತ ಪ್ರಸಿದ್ಧವಾದ ಸ್ಥಳವಾಗಿದೆ. ಇಲ್ಲಿ ಕಲ್ಯಾಣ ಚಾಲುಕ್ಯರ, ರಾಷ್ಟ್ರಕೂಟರ ಶಾಸನಗಳು ದೊರೆತಿದ್ದು, ಕಲ್ಯಾಣ ಚಾಲುಕ್ಯರ ರಾಷ್ಟ್ರಕೂಟರ, ವಿಜಯನಗರ ಹಾಗೂ ಚಿತ್ರದುರ್ಗ ಪಾಳೆಯಗಾರರ ಕಾಲದ ಅನೇಕ ಸ್ಮಾರಕಗಳನ್ನು ಕಾಣಬಹುದು. ಈ ಗ್ರಾಮವನ್ನು ಪ್ರಾಚೀನ ಕಾಲದಿಂದ ಹಲವು ಹೆಸರುಗಳಿಂದ ಕರೆಯಲಾಗಿದೆ. ವಿಷಸಮುದ್ರ, ವಿಷಯಮುದ್ರ, ಇಸಮುದ್ರ ಮುಂದೆ ಇಸಾಮುದ್ರವೆಂದು ಕರೆದಿರುವುದನ್ನು ಗಮನಿಸಬಹುದು. ವಾಸ್ತವಿಕವಾಗಿ ಗಮನಸಿದಾಗ ಈ ಗ್ರಾಮಕ್ಕೆ ಹೊಂದಿಕೊಂಡಂತೆ ಹಿರಿದಾದ ಕರೆಯಿರುವುದರಿಂದಾಗಿ ಸಮುದ್ರವೆಂಬ ಹೆಸರು ಹಾಗೂ ಈ ಕೆರೆಯು ತುಂಬಿದಾಗ ನೀರು ನೀಲಿ ಬಣ್ಣದಿಂದ ಸಮುದ್ರದಂತೆ ಕಾಣುತ್ತಿದ್ದರಿಂದಾಗಿ (ಇಸ–ವಿಷ) ಇಸಾಮುದ್ರ ಎಂಬ ಹೆಸರು ಬಂದಿರುವ ಸಾಧ್ಯತೆಗಳು ಹೆಚ್ಚು. ಸ್ಥಳೀಯರ ಪ್ರಕಾರ ಚಿತ್ರದುರ್ಗ ಪಾಳೆಯಗಾರರು ರಹಸ್ಯ ಮಾತುಕತೆಗಳನ್ನು ಇಲ್ಲಿ ನಡೆಸುತ್ತಿದ್ದರು. ಗುಪ್ತ ವಿಷಯಗಳನ್ನು ಸಮುದ್ರದಂತಿರುವ ಕೆರೆಯ ಹತ್ತಿರ ಚರ್ಚಿಸುತ್ತಿದ್ದರಿಂದಾಗಿ ವಿಷಯ ಸಮುದ್ರವೆಂದೂ ಕ್ರಮೇಣ ಇಸಾಮುದ್ರವೆಂದಾಯಿತು. ಇದಕ್ಕೆ ಪೂರಕ ದಾಖಲೆಗಳಿಲ್ಲ.



ಕಲ್ಲೇಶ್ವರ ದೇವಾಲಯದ ವಿಹಂಗಮ ನೋಟ

ಇಸಾಮುದ್ರ ಗ್ರಾಮ ಚಾರಿತ್ರಿಕ ಹಾಗೂ ಸಾಂಸ್ಕೃತಿಕವಾಗಿ ಪ್ರಸಿದ್ಧವಾಗಿದೆ. ಹಲವು ದೇವಾಲಯಗಳು, ವೀರಗಲ್ಲು, ಮಾಸ್ತಿಗಲ್ಲುಗಳು, ಐತಿಹಾಸಿಕ ಕೆರೆ, ಕಲ್ಯಾಣ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ಕಾಲದ ಶಾಸನಗಳು ಇಲ್ಲಿ ಗತವೈಭವವನ್ನು ಸಾರುತ್ತವೆ.

ದೇವಾಲಯಗಳು

ಇಸಾಮುದ್ರ ಗ್ರಾಮದ ಸುತ್ತ ಹಲವು ದೇವಾಲಯಗಳಿವೆ. ನೂರೊಂದು ದೇವಾಲಯಗಳ ಗ್ರಾಮ ಎಂದು ಕರೆಯಲಾಗಿದ್ದರೂ ಸಹ ಇಂದು ಇರುವ ದೇವಾಲಯಗಳು ಕೆಲವು ಮಾತ್ರ.

ಜೋಗೇಶ್ವರ ದೇವಾಲಯ

ಈ ದೇವಾಲಯವು ಇಸಾಮುದ್ರ ಗ್ರಾಮದ ಈಶಾನ್ಯ ದಿಕ್ಕಿನಲ್ಲಿದೆ. ಇದು ಪ್ರಾಚೀನ ದೇವಾಲಯವಾಗಿದೆ. ಇದರ ಮುಂದೆ ಇರುವ ಶಾಸನವೊಂದು ಕ್ರಿ.ಶ.೯೪೧ರ ಕಾಲಮಾನದಾಗಿದ್ದು ೩೨ ಸಾಲುಗಳಿಂದ ಕೂಡಿದೆ. ಹಳೆಗನ್ನಡ ಲಿಪಿಯಲ್ಲಿದೆ. ಶಾಸನದಲ್ಲಿ ಉಲ್ಲೇಖಿಸಿರುವಂತೆ, ರಾಷ್ಟ್ರಕೂಟರ ಅರಸ ಅಕಾಲವರ್ಷದೇವನು ರಾಜ್ಯವಾಳುತ್ತಿದ್ದಾಗ ಇವನ ಸಾಮಂತ ಕನ್ನಯ್ಯದೇವನು ಕದಂಬಾಳಿಗೆ ೧೦೦೦ ನಾಡನ್ನು ಆಳುತ್ತಿದ್ದನು. ಈತನು ಜೋಗೇಶ್ವರ ದೇವರ ಭಕ್ತನಾಗಿದ್ದು, ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದನು. ಅಂದು ಈ ದೇವಾಲಯ ಶೈಕ್ಷಣಿಕ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ಶಾಸನದಲ್ಲಿ ಮಹತ್ವದ ಉಲ್ಲೇಖವಿದೆ. ವಿದ್ಯೆ ಕಲಿಸುವ ಗುರುಗಳಿಗೆ ಮತ್ತು ಕಲಿಯುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಕೆರೆಯ ಬಳಿಯ ಗದ್ದೆ ಹಾಗೂ ಮುನ್ನೂರು ಬಳ್ಳಿಯ (ಎಲೆ) ಎಲೆ ತೋಟವೊಂದನ್ನು ಭೂದಾನ ಮಾಡಿದ ಬಗ್ಗೆ ಉಲ್ಲೇಖಿಸಲಾಗಿದೆ. ಹಾಗಾಗಿ ಈ ದೇವಾಲಯವು ೧೦ನೇ ಶತಮಾನಕ್ಕಿಂತ ಹಿಂದೆಯೇ ನಿರ್ಮಾಣವಾಗಿರುವುದು ಖಚಿತವಾಗುತ್ತದೆ.

* ಮುಖ್ಯಸ್ಥರು, ಸ್ನಾತಕೋತ್ತರ ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-೫೭೭೫೦೧

ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಆಕರ್ಷಕ ಬಾಗಿಲುವಾಡವಿದೆ. ಸುಖನಾಸಿ, ನವರಂಗ ತೆರೆದ ಮಂಟಪವಿದ್ದು, ಗರ್ಭಗುಡಿಯಲ್ಲಿ ಮೂರು ಅಡಿ ಎತ್ತರದ ಕಪ್ಪು ಶಿಲೆಯ ಲಿಂಗವಿದೆ. ನವರಂಗದಲ್ಲಿ ೧೮ ಸ್ತಂಭಗಳಿವೆ. ೪ ಪೂರ್ಣ ಕಂಭಗಳು, ಬಿತ್ತಿಯಲ್ಲಿ ೧೪ ಆರೆಗಂಭಗಳಿವೆ. ಸ್ತಂಭಗಳು ಆಕರ್ಷಕವಾಗಿದ್ದು, ಪೀಠದಲ್ಲಿ ಚೌಕಾಕಾರ ನಂತರ ದುಂಡಾಗಿದ್ದು ಇದರ ಮೇಲೆ ಬೋದಿಗಳಿವೆ. ಪ್ರವೇಶದ್ವಾರದ ಬಲಭಾಗದಲ್ಲಿ ಗಣೇಶ ಮತ್ತು ಲಿಂಗ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ದೇವಾಲಯದ ಸುತ್ತಲೂ ಮಣ್ಣಿನಿಂದ ಆವೃತವಾಗಿರುವರಿಂದ ಗರ್ಭಗೃಹದ ಹೊರಭಾಗದ ಚಿತ್ರಣ ಸಿಗುವುದಿಲ್ಲ.

ಕಲ್ಲೇಶ್ವರ ದೇವಾಲಯ

ಕಲ್ಲೇಶ್ವರ ದೇವಾಲಯವು ಇಸಾಮುದ್ರ ಗ್ರಾಮದ ಈಶಾನ್ಯ ದಿಕ್ಕಿನಲ್ಲಿದೆ. ಇದು ತ್ರಿಕೂಟ ದೇವಾಲಯವಾಗಿದೆ. ದೇವಾಲಯದಲ್ಲಿ ಮೂರು ಗರ್ಭಗೃಹಗಳಿದ್ದು ಒಂಭತ್ತು ಅಂಕಣದ ನವರಂಗಕ್ಕೆ ಹೊಂದಿಕೊಂಡಿವೆ. ಈ ದೇವಾಲಯಕ್ಕೆ ಎರಡು ದ್ವಾರಗಳಿದ್ದು ಒಂದು ಪೂರ್ವಾಭಿಮಖ ಮತ್ತೊಂದು ದಕ್ಷಿಣಾಭಿಮುಖವಾಗಿದೆ. ಗರ್ಭಗೃಹದ ಲಲಾಟದಲ್ಲಿ ಗಜಶಿಲ್ಪವಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಲಿಂಗವಿದೆ. ಈ ಗರ್ಭಗೃಹದ ಬಾಗಿಲುವಾಡದ ಎರಡು ಬದಿಯಲ್ಲಿ ಶೈವದ್ವಾರಪಾಲಕರಿದ್ದಾರೆ. ನಕ್ಷತ್ರಾಕಾರದ ತಳವಿನ್ಯಾಸ, ಬಿತ್ತಿ ಅದರ ಮೇಲೆ ಕಪೋತವಿದೆ. ಅದರ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ ಕೈಪಿಡಿಯಿದೆ. ಈ ದೇವಾಲಯದ ಆವರಣದಲ್ಲಿ ಶಾಸನವಿದ್ದು ರಾಷ್ಟ್ರಕೂಟರ ವಂಶಾವಳಿಯನ್ನು ಮತ್ತು ದಾನದ ಬಗ್ಗೆ ವಿವರಿಸುತ್ತದೆ. ಈ ಶಾಸನದ ಕಾಲ ಕ್ರಿ.ಶ. ೯೩೮.

ಹನುಮಂತ ದೇವರ ಗುಡಿ

ಈ ಗುಡಿಯು ಗ್ರಾಮದ ಈಶಾನ್ಯ ದಿಕ್ಕಿಗಿದ್ದು, ದಕ್ಷಿಣಾಭಿಮುಖವಾಗಿದೆ. ಈ ಗುಡಿಯನ್ನು ಗ್ರಾನೈಟ್ ಕಲ್ಲಿನಿಂದ ಕಟ್ಟಿದ್ದು, ಗರ್ಭಗುಡಿಯಲ್ಲಿ ೬ ೧/೨ ಅಡಿ ಎತ್ತರದ ಆಂಜನೇಯ ಸ್ವಾಮಿಯ ಉಬ್ಬುಶಿಲ್ಪವಿದೆ. ದ್ವಾರಬಾಗಿಲಿನ ಎಡಬಲಭಾಗದಲ್ಲಿ ದ್ವಾರಪಾಲಕರಿದ್ದು ಕೈಯಲ್ಲಿ ಶಂಖ, ಚಕ್ರ, ಗದಾ ಹಿಡಿದಿದ್ದಾರೆ.

ಸಿದ್ದೇಶ್ವರ ದೇವಾಲಯ

ಇಸಾಮುದ್ರ ಗ್ರಾಮದ ಸಿದ್ದೇಶ್ವರ ದೇವರು ಅಕ್ಕಪಕ್ಕದ ಗ್ರಾಮಗಳ ಆರಾಧ್ಯ ದೈವ, ಈ ದೇವಾಲಯದಲ್ಲಿ ಮೂರು ಗರ್ಭಗೃಹಗಳಿದ್ದು, ವಿಶಾಲವಾದ ಸಭಾಮಂಟಪವಿದೆ. ಮುಖ್ಯ ಗರ್ಭಗೃಹದಲ್ಲಿ ಶಿವಲಿಂಗವಿದೆ. ಎದುರಿಗೆ ನಂದಿಯಿದೆ. ಬಲಭಾಗದ ಗರ್ಭಗೃಹದಲ್ಲಿ ವೀರಭದ್ರ ವಿಗ್ರಹವಿದೆ. ಎಡಬದಿಯ ಗರ್ಭಗೃಹದಲ್ಲಿ ಭೈರವ ವಿಗ್ರಹವಿದೆ.

ವೀರಗಲ್ಲು

ಹಾಲಸ್ವಾಮಿ ದೇವಾಲಯದ ಪ್ರವೇಶದ್ವಾರದ ಬಲಕ್ಕೆ ತಿರುಗಿದರೆ ವೀರಗಲ್ಲು ಇದೆ. ಬಳಪದ ಕಲ್ಲಿನಲ್ಲಿರುವ ಇದು ೪ ಅಡಿ ಎತ್ತರ, ೨ ಅಡಿ ಅಗಲವಿದೆ. ಇದರಲ್ಲಿ ಪುರುಷನು ಕುದುರೆಯ ಮೇಲೆ ಕುಳಿತು ಎಡಗೈಯಲ್ಲಿ ಲಗಾಮು ಹಿಡಿದು ಬಲಗೈಯಲ್ಲಿ ಖಡ್ಗವನ್ನು ಎತ್ತಿ ಹಿಡಿದಿದ್ದಾನೆ. ಕುದುರೆಯು ಮುಂಗಾಲನ್ನು ಮೇಲಕ್ಕೆ ಎತ್ತಿದ್ದು ಹಿಂಗಾಲ ಮೇಲೆ ನಿಂತಿದೆ. ಅದರ ಎದುರಿಗೆ ಯೋಧನೊಬ್ಬನು ಕುದುರೆಯ ಕಾಲ್ತುಳಿತಕ್ಕೆ ಸಿಕ್ಕು ಅಸುನೀಗಿದ್ದಾನೆ.

ಮೈಲಾರಲಿಂಗೇಶ್ವರ ದೇವಾಲಯ

ಈ ದೇವಾಲಯಕ್ಕೆ ಗರ್ಭಗುಡಿ ಮಾತ್ರವಿದೆ. ಇದರಲ್ಲಿ ಭೈರವನ ಮೂರ್ತಿಯಿದೆ. ಮುಂಭಾಗದಲ್ಲಿ ಶಿಭಾರವಿದೆ.

ಮಹಾಸತಿಗಲ್ಲು

ಮೈಲಾರ ಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿ ಮಹಾಸತಿಕಲ್ಲು ಇದೆ. ೩ ೧/೨ ಅಡಿ ಎತ್ತರ, ೨ ಅಡಿ ಅಗಲದ ಕಪ್ಪು ಶಿಲೆಯಲ್ಲಿರುವ ಮಹಾಸತಿಯ ಬಲಗೈ ಅಭಯ ಮುದ್ರೆಯಲ್ಲಿ, ಎಡಗೈಯಲ್ಲಿ ನಿಂಬೆಹಣ್ಣನ್ನು ಹಿಡಿದಿದ್ದಾಳೆ. ವೀರಯೋಧನು ಯುದ್ದದಲ್ಲಿ ಮಡಿದಿದ್ದು ಜೊತೆ ಪತ್ನಿಯು ಸಹಗಮನ ಆಚರಿಸಿರುವುದು ಇದರಿಂದ ತಿಳಿಯುತ್ತದೆ.

ಇಸಾಮುದ್ರ ಗ್ರಾಮದಲ್ಲಿ ಶಾಸನಗಳು, ದೇವಾಲಯಗಳು, ವೀರಗಲ್ಲು ಮಹಾಸತಿಗಲ್ಲು, ಕೆರೆ, ಇನ್ನು ಹಲವು ಐತಿಹಾಸಿಕ ಪುರಾವೆಗಳು ಕಂಡುಬಂದಿವೆ. ಇದು ಪುರಾತನ ಗ್ರಾಮವಾಗಿದ್ದು ಪುರಾತತ್ವ ಇಲಾಖೆಯ ನಿರ್ಲಕ್ಷ್ಯದಿಂದಾಗಿ ಹಲವು ಐತಿಹಾಸಿಕ ಸ್ಮಾರಕಗಳು ವಿನಾಶದ ಹಂತದಲ್ಲಿದ್ದು ಸ್ಥಳೀಯರು, ಪುರಾತತ್ವ ಇಲಾಖೆಯ ಅಧಿಕಾರಿಗಳು, ಜನಪ್ರತಿನಿಧಿಗಳು ಸ್ಮಾರಕಗಳನ್ನು ಸಂರಕ್ಷಿಸುವತ್ತ ಗಮನಹರಿಸಿ, ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಮುಂದಾದಲ್ಲಿ ಕಲೆ ಮತ್ತು ಐತಿಹಾಸಿಕ ಕೇಂದ್ರ ಇಸಾಮುದ್ರವನ್ನು ಅಧ್ಯಯನ ಮಾಡುವ ಇತಿಹಾಸಕರ್ತರಿಗೆ ಅವಕಾಶ ಮಾಡಿದಂತಾಗುತ್ತದೆ.

೧೦೮

ಕಲ್ಲಾಪೂರ ಗ್ರಾಮದ ಪ್ರಾಚ್ಯಾವಶೇಷಗಳು

ಸುರೇಶ ಕ. ಹಾನಗಲ್ಲ*

ಧಾರವಾಡ ಜಿಲ್ಲೆ ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದ ಪ್ರದೇಶವಾಗಿದೆ. ಈ ಜಿಲ್ಲೆಯು ಮಲೆನಾಡು, ಅರೆಮಲೆನಾಡು ಮತ್ತು ಬಯಲನಾಡು ಭೂ ಪ್ರದೇಶಗಳಿಂದ ಕೂಡಿದೆ. ಈ ಜಿಲ್ಲೆಯು ಸುದೀರ್ಘವಾದ ಪ್ರಾಗೈತಿಹಾಸಿಕ ಪರಂಪರೆಯುಳ್ಳ ಕಾಲಘಟ್ಟದಿಂದ ಹಿಡಿದು ಹಲವಾರು ರಾಜ ಮನೆತನಗಳು ಆಳಿ–ಅಳಿದು ಹೋಗಿರುವುದನ್ನು ಕಾಣುತ್ತೇವೆ. ಈ ಎಲ್ಲಾ ರಾಜ ಮನೆತನಗಳ ಆಳ್ವಿಕೆಗೆ ಸಂಬಂಧಿಸಿದಂತೆ ಶಾಸನಗಳು, ದೇವಾಲಯಗಳು ಮತ್ತು ಮೂರ್ತಿಶಿಲ್ಪ, ಇತರೆ ಪ್ರಾಚ್ಯಾವಷೇಶಗಳು ಪ್ರತಿಯೊಂದು ಗ್ರಾಮದಲ್ಲಿ ಕಾಣಸಿಗುತ್ತವೆ. ಅಂತವುಗಳಲ್ಲಿ ಧಾರವಾಡ ಜಿಲ್ಲೆಯ ಕಲ್ಲಾಪೂರ ಗ್ರಾಮದಲ್ಲಿ ಒಂದಾಗಿದೆ.

ಕಲ್ಲಾಪುರ ಗ್ರಾಮ ಧಾರವಾಡ ಜಿಲ್ಲೆಯ ಧಾರವಾಡ ತಾಲೂಕಿನ ಒಂದು ಚಿಕ್ಕ ಹಳ್ಳಿ. ಇದು ಕೇಂದ್ರಸ್ಥಳದಿಂದ ವಾಯುವ್ಯಕ್ಕೆ ೧೯ ಕಿ.ಮೀ. ಅಂತರದಲ್ಲಿದೆ. ಧಾರವಾಡ ತಾಲೂಕಿನ ಪ್ರತಿಯೊಂದು ಗ್ರಾಮಗಳಿಗೂ ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಕಂಡುಬಂದ ಮೂರ್ತಿಶಿಲ್ಪ, ಶಾಸನಶಿಲ್ಪ ಮತ್ತು ಸ್ಮಾರಕಗಳು ಕುರಿತು ಮಾಹಿತಿಯನ್ನು ನೀಡುವುದು ಈ ಲೇಖನದ ಉದ್ದೇಶ ವಾಗಿದೆ.

ಅತ್ಯಂತ ಕಡಿಮೆ ಜನವಸತಿ ಹೊಂದಿರುವ ಈ ಗ್ರಾಮದಲ್ಲಿ ಎರಡು ಕಲ್ಲಿನಲ್ಲಿ 'ಕಲ್ಲಾಪೂರ' ಎಂಬ ಹೆಸರನ್ನು ಕಾಣುತ್ತೇವೆ. ಇದರಲ್ಲಿ ಒಂದು ಕಲ್ಲಿನ ಬರಹ ವಿಜಯನಗರದ ನಂತರದ ಕಾಲವೆಂದು ತಿಳಿದುಬರುತ್ತದೆ. ಅವುಗಳನ್ನು ನಾವು ಈಗ ಒಂದನ್ನು ಬಸ್‌ನಿಲ್ದಾಣದ ಎಡಭಾಗದಲ್ಲಿ, ಮತ್ತೊಂದು ಚರಂಡಿಯ ಪಕ್ಕದಲ್ಲಿ ಬಿದ್ದಿರುತ್ತದೆ.

ಈ ಗ್ರಾಮದಲ್ಲಿ ಕಲ್ಮೇಶ್ವರ ದೇವಾಲಯವು ಇದೆ. ಇದು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಮತ್ತು ಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ನಕ್ಷತ್ರಾಕಾರದ ಶಿವಲಿಂಗವಿದ್ದು, ವಿಶಾಲವಾದ ಜಲಹರಿಯನ್ನು ಮತ್ತು ಮಧ್ಯಭಾಗದಲ್ಲಿ ರುದ್ರಭಾಗವನ್ನು ಒಳಗೊಂಡಿದೆ. ಇನ್ನು ಈ ದೇವಾಲಯದ ಎಡಭಾಗದಲ್ಲಿ ಶಾಸನವಿದ್ದು, ಅದು ಸಂಪೂರ್ಣ ತೃಟಿತ ವಾಗಿದ್ದಲ್ಲದೇ ಕೇವಲ ಶಿಲ್ಪಮಾತ್ರ ಕಂಡುಬರುತ್ತದೆ. ಈ ಶಿಲ್ಪವು ಮಂಟಪದಲ್ಲಿ ಶಿವಲಿಂಗವನ್ನು ಸ್ಥಾಪಿಸಿ, ಪೂಜೆ ಮಾಡು ತ್ತಿರುವ ಭಕ್ತನ ಶಿಲ್ಪವಿದೆ. ಇಲ್ಲಿ ಮಂಟಪಗಳಲ್ಲಿ ದೇವಾಲಯ ಗಳಿರುವಂತೆ ಗೋಪುರವನ್ನು ಚಿತ್ರಿಸಲಾಗಿದ್ದು, ಮಂಟಪದ ಎಡಬದಿಗಳಲ್ಲಿ ನಂದಿ ಹಾಗೂ ಹಸುವಿನ ಶಿಲ್ಪವಿದೆ. ಜೊತೆಗೆ ಮೇಲ್ಭಾದಲ್ಲಿ ಸೂರ್ಯ ಮತ್ತು ಚಂದ್ರನನ್ನು ಚಿತ್ರಿಸಲಾಗಿದೆ.

ದೇವಾಲಯದ ಬಲಭಾಗದಲ್ಲಿ ಒಂದು ವೀರಗಲ್ಲು ಇದೆ. ಇದು ಸಂಪೂರ್ಣವಾಗಿ ತೃಟಿತವಾಗಿದ್ದು ಕೇವಲ ಎರಡು ಹಂತಗಳು ಗೋಚರಿಸುತ್ತದೆ. ಕೆಳಹಂತದಲ್ಲಿ ವೀರರು ತಮ್ಮ ಶತ್ರು ಸೈನ್ಯವನ್ನು ಕೊಂದಿರುವ ಮತ್ತು ಅವರು ಕೆಳಗೆ ಬಿದ್ದಿರುವ ದೃಶ್ಯವಿದೆ. ಹಾಗೆಯೇ ಮೇಲಿನ ಹಂತದಲ್ಲಿ ವೀರರು ಹೋರಾಡು ತ್ತಿರುವಂತಹ ದೃಶ್ಯಗಳು ಇವೆ. ಇದು ಸಂಪೂರ್ಣವಾಗಿ ತುಂಡಾಗಿವೆ.

ಇದೇ ರೀತಿ ಈ ಶಿಲ್ಪದ ಪಕ್ಕದಲ್ಲಿ ತುಂಡಾದ ಗೋಗ್ರಹಣ ಶಿಲ್ಪವು ಕಂಡುಬರುತ್ತದೆ. ಅವುಗಳಲ್ಲಿ ಒಂದು ಮಹಾಸತಿಯ ಶಿಲ್ಪವು ನಾಲ್ಕು ಹಂತವನ್ನು ಹೊಂದಿದ್ದು, ಮೊದಲನೆಯ ಭಾಗವು ಭೂಮಿಯಲ್ಲಿ ಹೂತುಹೋಗಿದೆ. ಇನ್ನು ಎರಡನೆಯ ಹಂತದಲ್ಲಿ ಬಲಭಾಗದಲ್ಲಿ ವೀರನು ಯುದ್ಧಕ್ಕೆ ಹೊರಡಲು ಸನ್ನದ್ದನಾಗಿದ್ದು, ಕೈಯಲ್ಲಿ ಕತ್ತಿಯನ್ನು, ಕಠೆಯನ್ನು ಧರಿಸಿ ಕೊಂಡಿದ್ದಾನೆ. ಹಾಗೂ ತನ್ನ ಕೇಶವನ್ನು ಕಟ್ಟಿಕೊಂಡಿದಾನೆ.

ಇವನ ಎದುರಿಗೆ ಮಹಾಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿದ್ದು, ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿದ್ದಾಳೆ. ಕೇದಿಗೆ ಗರಿಗಳಿಂದ ಅಲಂಕರಿಸಿದ ಕೇಶಗಂಟನ್ನು ಕಾಣುತ್ತೇವೆ. ಬೈತಾಲೆಮಣಿ, ಓಲೆ, ಕುಂಡಲಿ, ಬಳೆ, ಕಂಠಿಹಾರ, ತೋಳಬಂಧಿ, ಮುತ್ತಿನಸರ, ಕಟಿಸೂತ್ರ, ಛನ್ನವೀರ, ಕಾಲ್ಗಡಗ, ಗೆಜ್ಜೆ ಮುಂತಾದ ಆಭರಣಗಳನ್ನು ಧರಿಸಿದ್ದಾಳೆ. ಧರಿಸಿರುವ ಸೀರೆಯು ಪಾದದ ಬಳಿ ಕಮಲದ ಹೂವಿನಂತೆ ಇದೆ. ಅದೇ ರೀತಿ ಮೇಲಿನ ಹಂತದ ಪಟ್ಟಿಕೆಯಲ್ಲಿ ಮಂಟಪದಲ್ಲಿ ಶಿವಲಿಂಗವಿದ್ದು, ಅದರ ಬಲಭಾಗದಲ್ಲಿ ಆಭರಣಗಳಿಂದ ಕೂಡಿದ ಒಬ್ಬ ಸ್ತ್ರೀಯು ಶಿವಲಿಂಗಕ್ಕೆ ಪೂಜೆಯನ್ನು ಮಾಡುತ್ತಿರುವಂತೆಯೂ.

* ಸಂಶೋದಕರು. ಕೋಳಿವಾಡ ಪೋಸ್ಟ್, ಹುಬ್ಬಳ್ಳಿ ತಾಲ್ಲೂಕು. ಧಾರವಾಡ ಜಿಲ್ಲೆ



ಕಲ್ಮೇಶ್ವರ ದೇವಾಲಯದಲ್ಲಿರುವ ಶಿವಲಿಂಗ

ಎಡಭಾಗದಲ್ಲಿ ಪೀಠದ ಮೇಲೆ ನಂದಿಯ ಶಿಲ್ಪ ಇದೆ. ಅದೇ ರೀತಿ ಕೊನೆಯ ಪಟ್ಟಿಕೆಯಲ್ಲಿ ಕಂಬವನ್ನು ಹೋಲುವ ಮತ್ತು ಸೂರ್ಯ, ಚಂದ್ರನನ್ನು ಕೆತ್ತಿರುವುದು ಬಹಳ ವಿಶೇಷವಾಗಿದೆ. ಇದರ ಎಡಭಾಗದಲ್ಲಿ ಮತ್ತೊಂದು ವೀರಮಾಸ್ತಿಕಲ್ಲು ಇದ್ದು, ಇದು ಕೇವಲ ಎರಡು ಹಂತವನ್ನು ಹೊಂದಿದ್ದಲ್ಲದೇ ಮೇಲೆ ಹೇಳಿದ ಎಲ್ಲ ರೀತಿಯ ಲಕ್ಷಣಗಳು ಕಂಡುಬರುತ್ತದೆ.

ಹಾಗೆಯೇ ಇದೇ ದೇವಾಲಯದ ಹಿಂಭಾಗದ ಗದ್ದೆಯಲ್ಲಿ ಒಂದು ಲಿಂಗಮುದ್ರೆಕಲ್ಲು ಕಂಡುಬರುತ್ತದೆ. ಈ ಕಲ್ಲಿನಲ್ಲಿ ಸೂರ್ಯ-ಚಂದ್ರನನ್ನು ಚಿಕ್ಕದಾಗಿ ಗುರುತಿಸಿದ್ದಾರೆ. ಮಧ್ಯದಲ್ಲಿ ಈಶ್ವರನನ್ನು ದೊಡ್ಡ ಪ್ರಮಾಣದಲ್ಲಿ ಚಿತ್ರಿಸಿದ್ದಾರೆ. ಜೊತೆಗೆ ಈ ಲಿಂಗವ ಕೆಳಭಾಗದಲ್ಲಿ 'ಶ್ವರ' ಶಬ್ದವಿದೆ. ಬಹುಶಃ ಕಲ್ಮೇಶ್ವರ ದೇವರ ಹೆಸರಿರಬಹುದು.





ಒಟ್ಟಾರೆ ಈ ಗ್ರಾಮದಲ್ಲಿ ಇಷ್ಟೊಂದು ಮಹತ್ವಪೂರ್ಣವಾದ ಸ್ಮಾರಕಗಳು ದೊರೆಯುತ್ತಿದ್ದು, ಜೊತೆಗೆ ಶಾಸನವಿರುವುದು ನಮಗೆ ಗೊತ್ತಾಗುತ್ತದೆ. ಆದರೆ ಅದು ದೇವಾಲಯದ ಕೆಳಭಾಗದಲ್ಲಿ ಹುದುಗಿರುವ ಸಾಧ್ಯತೆಯನ್ನು ಸ್ಥಳೀಯರು ಹೇಳುತ್ತಾರೆ. ಈ ಶಾಸನ ದೊರೆತ ಪಕ್ಷದಲ್ಲಿ ಇನ್ನು ಹೆಚ್ಚಿನ ಮಾಹಿತಿಯು ದೊರಕುತ್ತದೆ. ಅದೇ ರೀತಿ ಈ ಗ್ರಾಮಕ್ಕೆ ಹೊಂದಿಕೊಂಡಂತೆ ಸಿದ್ದಾಪೂರ ಗ್ರಾಮವಿದ್ದು ಅಲ್ಲಿ ತ್ರುಟಿತವಾದ ವಿಷ್ಣುವಿನ ಮತ್ತು ಸಪ್ತಮಾತೃಕೆಯರ ಶಿಲ್ಪಗಳು, ಹಾಗೂ ಮಹಾಸತಿಯ ಶಿಲ್ಪವು ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತಿವೆ.

(ಸಂಶೋಧನಾ ಕಾರ್ಯದಲ್ಲಿ ಸಹಕರಿಸಿದ ಗ್ರಾಮದ ವಿದ್ಯಾರ್ಥಿ ಮಂಜುನಾಥ, ಮೂರ್ತಿಶಿಲ್ಪದ ವಿವರಣೆ ನೀಡಲು ಸಹಕರಿಸಿದ, ಮಾರ್ಗದರ್ಶಕರಾದ ಡಾ. ಕೆ.ಜಿ. ಭಟ್‌ಸೂರಿ ಇವರಿಗೂ ಕೃತಜ್ಞತೆಗಳು.)

೧೦೮

ಸಾಲಾರಜಂಗ ಆಳ್ವಿಕೆಯಲ್ಲಿ ಕೊಪ್ಪಳ ಜಹಗೀರ ಪ್ರದೇಶ: ಚಾರಿತ್ರಿಕ ವಿಶ್ಲೇಷಣೆ

ತಿಪ್ಪಣ್ಣ*

ಭಾರತವು ಬಹುಸಂಸ್ಕೃತಿಯ ನಾಡಾಗಿದ್ದು, ಬ್ರಿಟಿಶರು ಭಾರತವನ್ನು ಅರ್ಥೈಸಿಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ಭಾರತದ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳದೆ, ಅವರು ಇಲ್ಲಿ ಯಾವುದೇ ವ್ಯಾಪಾರ ವಹಿವಾಟು ಮತ್ತು ರಾಜ್ಯ ಆಡಳಿತ ನಡೆಸುವುದು ಕಷ್ಟದ ವಿಷಯವಾಗಿತ್ತು. ಇದನ್ನರಿತ ವಸಾಹತುಶಾಹಿ ಆಡಳಿತಗಾರರು ಇಲ್ಲಿನ ಚರಿತ್ರೆಯನ್ನು ಸಾಮ್ರಾಜ್ಯಶಾಹಿ ಧೋರಣೆಯಿಂದ ಭಾರತದ ಚರಿತ್ರೆಯನ್ನು ಕಟ್ಟುವ ಪ್ರಯತ್ನ ಮಾಡಿದರು. ಅವರಲ್ಲಿ ಪ್ರಮುಖರೆಂದರೆ ವಿ.ಎಸ್. ಸ್ಮಿತ್, ಜೇಮ್ಸ್ ಮಿಲ್, ಲೇನಪೂಲ್ ಮುಂತಾದ ಸಾಮ್ರಾಜ್ಯಶಾಹಿ ಚರಿತ್ರೆಕಾರರು ಭಾರತೀಯರು ಸ್ವಯಂ ಆಡಳಿತ ಅನುಭವವಿಲ್ಲದವರು ಎಂಬುದಾಗಿ ಹೇಳಿ ಬ್ರಿಟಿಶ್ ಆಡಳಿತವನ್ನು ಎತ್ತಿಹಿಡಿಯುವ ಅಥವಾ ಬಲಪಡಿಸುವ ಕೆಲಸವನ್ನು ಮಾಡಿದರು. ಈ ಹಿನ್ನೆಲೆಯನ್ನು ಇಟ್ಟುಕೊಂಡು ಭಾರತದ ಚರಿತ್ರೆಯನ್ನು ಅನುಲಕ್ಷಿಸಿ ನೂರಾರು ಕೃತಿಗಳು ರಚನೆಗೊಂಡವು. ಭಾರತದ ಚರಿತ್ರೆಯನ್ನು ಹಿಂದೂ, ಮುಸ್ಲಿಂ ಎಂಬುದಾಗಿ ವಿಂಗಡಣೆ ಮಾಡಿ ಕೋಮುವಾದಿ ಮನೋಭಾವನೆಗಳು ಮೂಡುವ ಕೆಲಸವನ್ನು ಸಾಮ್ರಾಜ್ಯಶಾಹಿ ಚರಿತ್ರೆಕಾರರು ವ್ಯವಸ್ಥಿತವಾಗಿ ಮಾಡಿದರು. ವಸಾಹತುಶಾಹಿ ಆಳ್ವಿಕೆಗೆ ಈ ರೀತಿಯ ಚರಿತ್ರೆಯ ನಿರ್ಮಾಣದ ಅವಶ್ಯಕತೆ ಇತ್ತು.[೧] ಇಷ್ಟಲ್ಲದೆ ಇವರು ಮಧ್ಯಕಾಲೀನ ಚರಿತ್ರೆಯನ್ನು ಅದರಲ್ಲೂ ವಿಶೇಷವಾಗಿ ಮುಸ್ಲಿಂ ಆಳ್ವಿಕೆ ಇರುವ ಕಾಲವನ್ನು ಅಂಧಕಾರಯುಗ ಎಂದು ಬಿಂಬಿಸುವಂತೆ ಮಾಡಿ ಮುಸ್ಲಿಂ ಆಳ್ವಿಕೆಯನ್ನು ಕತ್ತಲೆಯುಗಕ್ಕೆ ಹೋಲಿಸಿದರು. ಈ ಸಾಮ್ರಾಜ್ಯಶಾಹಿ ಚರಿತ್ರೆಕಾರರನ್ನು ವಿರೋಧಿಸುವ ನೆಪದಲ್ಲಿ ಅವರ ಹಲವಾರು ಅಭಿಪ್ರಾಯಗಳನ್ನು ತಮ್ಮ ಸಿದ್ಧಾಂತದೊಳಗೆ ಸೇರಿಸಿಕೊಂಡರು. ಅಷ್ಟೆ ಅಲ್ಲದೆ, ಹಿಂದೂ, ಮುಸ್ಲಿಂ ಎನ್ನುವ ವರ್ಗೀಕರಣವನ್ನು ರಾಷ್ಟ್ರೀಯವಾದಿ ಚರಿತ್ರೆಕಾರರು ಒಪ್ಪಿಕೊಂಡು ಚರಿತ್ರೆ ನಿರ್ಮಿಸಿ, ಪ್ರಭುತ್ವದ ಹಿನ್ನೆಲೆಯಿಂದ ಚರಿತ್ರೆಯನ್ನು ನೋಡುವ ಅಧ್ಯಯನ ವಿಧಾನವನ್ನು ರಾಷ್ಟ್ರೀಯವಾದಿ ಚರಿತ್ರೆಕಾರರು ಅಳವಡಿಸಿಕೊಂಡಿದ್ದರು. ಈ ರೀತಿ ಏಕಮುಖವಾಗಿ ಸಾಗುತ್ತಿದ್ದ ಭಾರತದ ಚರಿತ್ರೆ ಬರವಣಿಗೆಯ ದಿಕ್ಕನ್ನು ಬದಲಾಯಿಸಿದವರಲ್ಲಿ ಡಿ.ಡಿ. ಕೊಸಾಂಬಿ, ಆರ್.ಎಸ್. ಶರ್ಮಾ, ರೊಮಿಲಾ ಥಾಪರ್, ಡಿ.ಎನ್. ಝಾ, ಇರ್ಫಾನ್ ಹಬೀಬ್, ಬಿಪನ್‌ಚಂದ್ರ ಮುಂತಾದವರು ಪ್ರಮುಖರು. ಇವರು ರಾಜಕೀಯದಿಂದ ದೂರವಾದ ಚರಿತ್ರೆಯತ್ತ ಒಲವನ್ನು ತೋರಿಸಿದರು. ಜನರ ಅಧ್ಯಯನ ನಿಜವಾದ ಅರ್ಥದಲ್ಲಿ ಆರಂಭಗೊಂಡಿರುವುದು ಇವರ ಬರವಣಿಗೆಗಳಿಂದ. ರಾಜ್ಯದ ಚರಿತ್ರೆಯೆಂದರೆ ಅದು ಅರಸ ಚರಿತ್ರೆ, ಮೇಲ್ವರ್ಗದ ಜನರ ಚರಿತ್ರೆ ಎನ್ನುವ ಪೂರ್ವಗ್ರಹಪೀಡಿತ ಸಿದ್ಧಾಂತಗಳನ್ನು ಒಡೆಯುವುದರಲ್ಲಿ ಇವರ ಬರವಣಿಗೆಗಳು ಯಶಸ್ವಿಯಾದವು. ಈ ಮೇಲಿನ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿಜಾಮನ ಆಡಳಿತದ ಅವಧಿಯಲ್ಲಿನ ಜಹಗೀರ ಪ್ರದೇಶಗಳಲ್ಲಿ ಒಂದಾದ ಕೊಪ್ಪಳ ಜಹಗೀರ ಪ್ರದೇಶ ಕುರಿತು ಚರ್ಚಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.[೨]

ಹೈದರಾಬಾದ್ ಸಂಸ್ಥಾನವು ಸ್ಥಾಪನೆಯಾಗುವ ಪೂರ್ವದಲ್ಲಿ ಈ ಪ್ರದೇಶವು ಮೊಗಲರ ಅಧೀನದಲ್ಲಿತ್ತು. ಔರಂಗಜೇಬನ ಮರಣದ ನಂತರ ಅಧಿಕಾರಕ್ಕೆ ಬಂದ ಬಹುತೇಕ ಸುಲ್ತಾನರು ಅಸಮರ್ಥರಾಗಿದ್ದರು. ಈ ಅಸಮರ್ಥತೆಯ ಉಪಯೋಗವನ್ನು ಪಡೆದುಕೊಂಡು ಮೊಗಲರ ಆಡಳಿತದಲ್ಲಿದ್ದ ಸುಬೇದಾರರು ಸ್ವತಂತ್ರವನ್ನು ಘೋಷಿಸಿಕೊಂಡರು. ಅಂತಹ ಸುಬೇದಾರರಲ್ಲಿ ಒಬ್ಬನಾದ ದಕ್ಷಿಣ ಭಾರತದ ಸುಬೇದಾರ ಕಮುರೋದ್ದಿನ್‌ನು ಹೈದರಾಬಾದ್ ಪ್ರದೇಶವನ್ನು ಕೇಂದ್ರಬಿಂದುವಾಗಿ ಮಾಡಿಕೊಂಡು ಆಳ್ವಿಕೆಯನ್ನು ಪ್ರಾರಂಭಿಸಿದನು. ಹೀಗೆ ಆಳ್ವಿಕೆಯನ್ನು ಪ್ರಾರಂಭಿಸಿದ ಕಮುರೋದ್ದಿನ್‌ನು ಪ್ರಾರಂಭದಲ್ಲಿ ಮೊಗಲರ ಸಾಮಂತನಾಗಿ ಮೊಗಲರ ಆಡಳಿತ ಪದ್ಧತಿಯನ್ನು ತನ್ನ ಸಂಸ್ಥಾನಕ್ಕೆ ಹೊಂದಾಣಿಕೆಯಾಗುವ ರೀತಿಯಲ್ಲಿ ಜಾರಿಗೆ ತರುವ ಮುಖಾಂತರ ಸಂಪೂರ್ಣವಾಗಿ ಸ್ವತಂತ್ರವನ್ನು ಘೋಷಿಸಿಕೊಂಡನು.[೩] ಹೀಗೆ ಹೈದರಾಬಾದ್ ಸಂಸ್ಥಾನವು ಸ್ವಾತಂತ್ರ್ಯಪೂರ್ವದಲ್ಲಿ ಒಟ್ಟು ಏಳು ಜನ ನಿಜಾಮರ ಆಳ್ವಿಕೆಗೆ ಒಳಪಟ್ಟು[೪] ನಿಜಾಮ್ ಅರಸರು

* ಪಿಎಚ್ ಡಿ ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬.

ಆಡಳಿತವನ್ನು ಗಟ್ಟಿಗೊಳಿಸಲು ಸಂಸ್ಥಾನದ ಕೆಲವು ಪ್ರದೇಶವನ್ನು ಜಹಗೀರ ನೀಡುವುದನ್ನು ರೂಢಿಸಿಕೊಂಡರು. ಅಂತಹ ಜಹಗೀರಲ್ಲಿ ಕೊಪ್ಪಳ ಜಹಗೀರ ಕೂಡ ಒಂದು. ನಿಜಾಮ್ ತನ್ನ ಆಪ್ತನಾದ ಹಾಗೂ ದೂರದ ಸಂಬಂಧಿಯಾದ ಸಾಲಾರ ಜಂಗನಿಗೆ ಕೊಪ್ಪಳ ಜಹಗೀರ ವಹಿಸಿದನು. ಹೀಗೆ ಕೊಪ್ಪಳ ಜಹಗೀರ ಪ್ರದೇಶದ ಮುಖ್ಯಸ್ಥನಾಗಿ ಮಾಡಿರುವ ಪ್ರಮುಖ ಸಾಧನೆಗಳು ಈ ಕೆಳಗಿನಂತಿವೆ.[೫]

ಆಡಳಿತ: ಕೊಪ್ಪಳ ಪ್ರದೇಶವನ್ನು ಜಹಗೀರ ಎಂದು ಪಡೆದ ಸಾಲಾರಜಂಗ ಇದಕ್ಕೊಂದು ಜಿಲ್ಲೆಯ ಸ್ಥಾನಮಾನ ನೀಡಿ ಆಡಳಿತ ನಡೆಸುತ್ತಿದ್ದರಿಂದ ಇದು ಸರಕಾರದ ಜಹಗೀರ ಪ್ರದೇಶವಾಯಿತು. ಆಡಳಿತದ ಅನುಕೂಲಕ್ಕಾಗಿ ಅಧಿಕಾರ ವಿಕೇಂದ್ರೀಕರಣ ಮಾಡಿ ಅಮಲ್ದಾರ, ಆದಾಲತ್, ತಾಲೂಕದಾರ್, ತಹಶೀಲ್, ತಾಲಿಮಾತ್ ಎಂಬ ಅಧಿಕಾರಿ ವರ್ಗವನ್ನು ನೇಮಿಸಿ ಇವರ ಮೂಲಕ ಜಹಗೀರ ಪ್ರದೇಶದ ಆಡಳಿತ ದಕ್ಷತೆಯನ್ನು ಹೆಚ್ಚಿಸಿದರು. ಜಹಗೀರ ಪ್ರದೇಶದ ಆಡಳಿತದ ಕೊನೆಯ ಘಟಕ ಗ್ರಾಮಾಡಳಿತ. ಗ್ರಾಮಾಡಳಿತದಲ್ಲಿ ಪಟ್ಟವಾರಿ, ಪೊಲೀಸ್ ಪಾಟೀಲ್, ಮಾಲಿ ಪಾಟೀಲ್ ಎಂಬ ಸ್ಥಳೀಯರ ಸಹಾಯದಿಂದ ಗ್ರಾಮೀಣ ಮಟ್ಟದಲ್ಲಿ ತೆರಿಗೆ ವಸೂಲಿ ಮಾಡುವುದು, ನ್ಯಾಯದಾನ ಮಾಡುವುದು ಮತ್ತು ಆಡಳಿತಕ್ಕೆ ಅನುಕೂಲವಾಗುವ ವಾತಾವರಣವನ್ನು ನಿರ್ಮಿಸಿ ಜಹಗೀರ ಪ್ರದೇಶದ ಆಡಳಿತವನ್ನು ಗಟ್ಟಿಗೊಳಿಸುವುದಾಗಿತ್ತು. ಗ್ರಾಮೀಣ ಮಟ್ಟದ ಈ ಅಧಿಕಾರಿಗಳು ಜಹಗೀರದಾರರಿಂದ ಪಡೆದ ಅಧಿಕಾರವನ್ನು ಚಲಾಯಿಸಿ ಗ್ರಾಮಗಳ ಮಟ್ಟದಲ್ಲಿ ಮರಿ ಜಹಗೀರದಾರರಂತೆ ಪ್ರಬಲವಾಗಿ ಹೊರಹೊಮ್ಮಿದರು.[೬]

ಆಡಳಿತ ಭಾಷೆ: ಕೊಪ್ಪಳ ಪ್ರದೇಶವು ಬಿಜಾಪುರದ ಆದಿಲ್‌ಶಾಹಿ ಸುಲ್ತಾನರ ಕಾಲದಲ್ಲಿ ಪರ್ಶಿಯನ್ ನಂತರ ಹೈದರಾಬಾದ್ ನಿಜಾಮ ಕಾಲದಲ್ಲಿ ಉರ್ದು ಹೀಗೆ ಆಡಳಿತ ಭಾಷೆಗಳಿದ್ದವು. ಆದರೆ ಸಾಲಾರಜಂಗ ಜಹಗೀರ ಪಡೆದುಕೊಂಡ ಮೇಲೆ ಈ ಪ್ರದೇಶದಲ್ಲಿ ಆಡಳಿತ ಭಾಷೆಯಾಗಿ ಉರ್ದು ಇದ್ದರೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಕನ್ನಡಕ್ಕೆ ಮನ್ನಣೆ ಇರುವುದು ಕಂಡುಬರುತ್ತದೆ.[೭]

ಶಿಕ್ಷಣ: ಕೊಪ್ಪಳ ಜಹಗೀರ ಪ್ರದೇಶದ ಜಿಲ್ಲೆ ರಚನೆಯಾಗಿ ೨೮ ವರ್ಷಗಳ ನಂತರ ೧೮೯೯ರಲ್ಲಿ ಅಂದಿನ ಜಹಗೀರ ಸರಕಾರವು, ಕೊಪ್ಪಳ ನಗರ ಪ್ರದೇಶ ಗುಲ್ಜಾರ ಹೌಜಿನ ಮುಂಭಾಗದಲ್ಲಿ ತಹತಾನಿಯಾ ಎಂಬ ಉರ್ದು ಮಾಧ್ಯಮ ಶಾಲೆಯನ್ನು ತೆರೆಯಿತು. ೧೮೯೦ರಲ್ಲಿ ಇದೇ ಶಾಲೆಯಲ್ಲಿ ಕನ್ನಡ ತರಗತಿಗಳನ್ನು ನಡೆಸಲು ಸರಕಾರ ಅನುವು ಮಾಡಿ ಕೊಟ್ಟಿತು.[೮] ಕೊಪ್ಪಳದಲ್ಲಿನ ಉರ್ದು ಶಾಲೆಯು ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಹೈಸ್ಕೂಲ್ ಆಗಿತ್ತು. ಕನ್ನಡ ಮಾಧ್ಯಮದಲ್ಲಿ ಬೋಧಿಸುತ್ತಿದ್ದ ಕನ್ನಡ ಶಿಕ್ಷಕ ಸೀನಪ್ಪ ಮಂಗಲಗಿ ಅವರು ಪ್ರಾಂಶುಪಾಲರ ಗಮನ ಸೆಳೆಯುವ ಹಾಗೆ ಕನ್ನಡ ಕಲಿಸಲು ಪ್ರಯತ್ನಿಸಿದರು. ಹಾಗೇ ಜಹಗೀರ ಪ್ರದೇಶದ ವಿವಿಧ ಗ್ರಾಮಗಳಲ್ಲಿ ಸರಕಾರದ ನೆರವು ಇಲ್ಲದೆ ಗಾಂವಠಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಸ್ಥಳೀಯ ಮಕ್ಕಳಿಗೆ ಅಕ್ಷರ ಜ್ಞಾನ ನೀಡುವ ಕಾರ್ಯದಲ್ಲಿ ಮುಖ್ಯ ಪಾತ್ರ ನಿರ್ವಹಿಸಿದವು.[೯]

ಕಂದಾಯ ಆಡಳಿತ: ಕಂದಾಯ ಆಡಳಿತ ನಿಜಾಮ್ ಸರಕಾರದ ನಿಯಮ ಗಳಂತೆ ತೆರಿಗೆಯನ್ನು ವಿಧಿಸುತ್ತಿದ್ದರು. ಅಧೀನ ಅಧಿಕಾರಿಗಳ ಮೂಲಕ ಕಂದಾಯ ಜಹಗೀರ ಪ್ರದೇಶದಿಂದ ೧೨ ಲಕ್ಷ ವಾರ್ಷಿಕ ವರಮಾನವಾಗಿ ತೆರಿಗೆಯನ್ನು ಸಂಗ್ರಹಿಸುತ್ತಿದ್ದರು. ಗ್ರಾಮೀಣ ಮಟ್ಟದಿಂದ ಪೊಲೀಸ್ ಪಾಟೀಲ್, ಮಾಲಿ ಪಾಟೀಲ್ ಅವರು ಮೇಲಾಧಿಕಾರಿಗಳ ಆದೇಶದಂತೆ ತೆರಿಗೆ ಯನ್ನು ವಸೂಲಿ ಮಾಡುತ್ತಿದ್ದರು. ಬರಗಾಲದ ಸಂದರ್ಭದಲ್ಲಿ ತೆರಿಗೆ ಪಾವತಿಸಲು ಆಗದ ಸಮಯದಲ್ಲಿ ಸ್ಥಳೀಯ ಅಧಿಕಾರಿಗಳು ತಾವೇ ತೆರಿಗೆ ನೀಡಿ ರೈತರ ಭೂಮಿಯನ್ನು ವಶಪಡಿಸಿಕೊಂಡು ಪ್ರಬಲ ಭೂಮಾಲೀಕರಾಗಿದ್ದರು.[೧೦]

ಸಾರಿಗೆ: ೧೮೮೪ರಲ್ಲಿ ಬ್ರಿಟಿಶ್ ಸರಕಾರವು ಧಾರವಾಡದಿಂದ ಬಳ್ಳಾರಿಯವರೆಗೆ ರೈಲ್ವೆ ಮಾರ್ಗವನ್ನು ವಿಸ್ತರಿಸಿತು. ಇದರಿಂದ ಕೊಪ್ಪಳ ಪ್ರದೇಶಕ್ಕೆ ರೈಲ್ವೆ ಸಂಚರಿಸಲು ಅನುಕೂಲವಾಯಿತು. ಕೊಪ್ಪಳದಿಂದ ರಸ್ತೆ ಮೂಲಕ ಹೈದರಾಬಾದ್‌ಗೆ ಹೋಗಲು ಅನೇಕ ರಾಜ್ಯ ರಸ್ತೆಗಳನ್ನು ನಿರ್ಮಿಸಿದರು. ಹಾಗೇ ಹಳ್ಳಿಗಳಿಂದ ಕೊಪ್ಪಳ ಬರುವುದಕ್ಕೆ ಗ್ರಾಮ ರಸ್ತೆಗಳು ನಿರ್ಮಿಸಿದರು. ರಾಜ್ಯ ರಸ್ತೆಗಳ ಮಧ್ಯ ನದಿಗಳಿಗೆ ಸೇತುವೆ ನಿರ್ಮಾಣ ಮಾಡದೆ ಇದ್ದುದರಿಂದ ಮಳೆಗಾಲದಲ್ಲಿ ಪ್ರಯಾಣ ಕಷ್ಟಕರ ವಾಗಿತ್ತು.[೧೧]

ಕಟ್ಟಡಗಳು: ಸಾಲಾರಜಂಗ ತನ್ನ ಜಹಗೀರ ಪ್ರದೇಶಕ್ಕೆ ದಕ್ಷ ಮತ್ತು ಪ್ರಾಮಾಣಿಕತೆಗೆ ಹೆಸರು ಪಡೆದ ಗಾಮಜಿ ನರಸಿಂಹರಾಯನು ಅಮಲ್ದಾರನ್ನಾಗಿ ನೇಮಿಸಿದನು. ನರಸಿಂಹರಾಯನು ಜಹಗೀರ ಆದಾಯ ಹೆಚ್ಚಿಸುವುದರ ಜೊತೆಗೆ ಕೊಪ್ಪಳದ ಬೆಳವಣಿಗೆಯತ್ತ ಗಮನಹರಿಸಿ ಚೌಬೀದಿಯನ್ನು ಸ್ವಚ್ಛತೆ ಮಾಡಿ ಅನೇಕ ಕಟ್ಟಡಗಳನ್ನು ಕಟ್ಟಿಸಿದನು. ಹಾಗೆ ವ್ಯಾಪಾರಿ ಮಳಿಗೆಗಳನ್ನು ಕಟ್ಟಿಸಿ ಅದಕ್ಕೆ 'ಮುಕ್ತಾರ ಗಂಜ' ಎಂದು ನಾಮಕರಣ ಮಾಡಿದನು. ಇದರಿಂದ ಈ ಪ್ರದೇಶದಲ್ಲಿ ವ್ಯಾಪಾರಕ್ಕೆ ಅನುಕೂಲವಾಯಿತು. ವ್ಯಾಪಾರದಲ್ಲಿ ಅಭಿರುಚಿ ಯುಳ್ಳವರು ಇಲ್ಲಿಗೆ ಬಂದು ನೆಲೆಸಿದರು.[೧೨] ಸಾಲಾರಜಂಗ ಹೈದರಾಬಾದ್‌ದಿಂದ ಕೊಪ್ಪಳಕ್ಕೆ

ಆಗಮಿಸಿದಾಗ ಸ್ಥಳೀಯ ಮಹಮ್ಮದಿಯರ ಬೇಡಿಕೆಯನ್ನು ಮನ್ನಿಸಿ ಕಲ್ಲು ಮಣ್ಣಿನಿಂದ ಕಟ್ಟಿದ ಮಜಿದನ್ನು ಗಚ್ಚು ಕಲ್ಲುಗಳಿಂದ ಅದೇ ಸ್ಥಳದಲ್ಲಿ ಕಟ್ಟಲು ಹಣ ಮಂಜೂರಾತಿ ನೀಡಿದನು. ಆ ಮಜಿದನ್ನು 'ಯೂಸೂಫಿಯಾ ಮಜೀದ್' ಎಂದು ಕರೆಯುತ್ತಾರೆ.[೧೩]

ಉನ್ನತ ಶಿಕ್ಷಣ ಪಡೆದಿದ್ದ ಸಾಲಾರಜಂಗ ಅವರು ಆಧುನಿಕತೆಯ, ಪಾಶ್ಚಾತ್ಯ ನಾಗರಿಕತೆಗೆ ಮಾರುಹೋದವರಾಗಿದ್ದರು. ಸದಾ ವಿದೇಶಗಳ ಸಂಚಾರ, ಅಲ್ಲಿಯ ವಿವಿಧ ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡಿ ಅಲ್ಲಿನ ಚಿತ್ರಕಲೆ, ಶಿಲ್ಪ ಮನರಂಜನೆಯ ವಸ್ತುಗಳಿಂದ ಆಕರ್ಷಿತರಾಗಿ ಅತಿಹೆಚ್ಚು ವಿದೇಶ ಪ್ರಯಾಣದಲ್ಲಿಯೇ ಕಾಲ ಕಳೆಯುತ್ತಿದ್ದರು. ತಮ್ಮ ಜಹಗೀರ ಪ್ರದೇಶಕ್ಕೆ ವರ್ಷದಲ್ಲಿ ಅತಿ ಕಡಿಮೆ ದಿನಗಳು ಮಾತ್ರ ಭೇಟಿ ಕೊಡುತ್ತಿದ್ದರೆಂದು ಬಲವಾದ ಆರೋಪವಿದೆ. ಹಾಗೇ ಜಹಗೀರ ಪ್ರದೇಶವು ಬರಗಾಲದಿಂದ ತತ್ತರಿಸುವ ಸಮಯದಲ್ಲಿ ಕೂಡ ಭೇಟಿ ನೀಡಿದ ನಿದರ್ಶನಗಳಿವೆ ಎಂಬ ಆರೋಪಗಳು ಕಂಡುಬರುತ್ತವೆ.[೧೪]

ಉಪಸಂಹಾರ: ಕೊಪ್ಪಳ ಜಹಗೀರ ಪ್ರದೇಶವು ನಿಜಾಮನ ಆಪ್ತರಾದ ಸಾಲಾರಜಂಗ ಅಧೀನಕ್ಕೆ ಒಳಗಾದ ಪ್ರದೇಶವಾಗಿದೆ. ಈ ಪ್ರದೇಶವು ಕೊಪ್ಪಳ ಮತ್ತು ಯಲಬುರ್ಗ ವನ್ನು ಒಂದುಗೂಡಿಸಿ ಕೊಪ್ಪಳ ಜಿಲ್ಲಾ ಸ್ಥಾನಮಾನ ಪಡೆಯುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಜಹಗೀರ ಪ್ರದೇಶದ ಕಂದಾಯವನ್ನು ವಸೂಲಿ ಮಾಡಲು ಗ್ರಾಮೀಣ ಮಟ್ಟದಿಂದ ಕೇಂದ್ರದವರೆಗೆ ಅಧಿಕಾರವನ್ನು ಹಂಚಿ ಅಧಿಕಾರ ವಿಕೇಂದ್ರೀಕರಣ ಮೂಲಕ ಆಡಳಿತ ಕೈಗೊಂಡು ಆದಾಯವನ್ನು ಹೆಚ್ಚಿಸಿದರು. ಕೊಪ್ಪಳದ ನಿವಾಸಿಯಾದ ಅಂಗಡಿ ಸಂಗಣ್ಣ ಎಂಬ ವ್ಯಕ್ತಿ ಸಾಲಾರ ಜಂಗನ ಮನಸ್ಸು ಗೆದ್ದು ಈ ಪ್ರದೇಶದಲ್ಲಿ ಸಾಲಾರಜಂಗ ಶುಗರ್ ಫ್ಯಾಕ್ಟರಿ (ಸಕ್ಕರೆ ಕಾರ್ಖಾನೆ) ಸ್ಥಾಪನೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದನು. ಸಾಲಾರಜಂಗರು ವಿದೇಶಿ ಪ್ರವಾಸದಲ್ಲಿ ಹೆಚ್ಚಿನ ಕಾಲ ಕಳೆಯುವುದರಿಂದ ಜಹಗೀರ ಪ್ರದೇಶದ ಜನರ ಮನಸ್ಸಿಗೆ ವಿರೋಧಿಗಳಾದರು. ಬರಗಾಲದ ಸಂದರ್ಭದಲ್ಲಿ ಜನರ ಬಗ್ಗೆ ಅನುಕಂಪ ತೋರಿಸಿ ಸಹಾಯ ಮಾಡದೆ ಆ ಜಹಗೀರು ಪ್ರದೇಶಗಳಿಂದ ದೂರ ಉಳಿದರು. ಜಹಗೀರು ಪ್ರದೇಶಗಳನ್ನು ತೆರಿಗೆಯ ವಿಚಾರದಲ್ಲಿ ಆಯಾ ಜಹಗೀರು ಮಟ್ಟದ ಅಧಿಕಾರಿಗಳ ಸ್ವಂತ ವಿವೇಚನೆ ಬಿಟ್ಟದ್ದ ರಿಂದಾಗಿ ಈ ಅವಗಡಗಳು ಸಂಭವಿಸಿದವು. ಇದರ ಲಾಭ ವನ್ನು ಪಡೆದ ಅಧಿಕಾರಿ ವರ್ಗಗಳು ಜನಸಾಮಾನ್ಯರಿಂದ ಹೆಚ್ಚಿನ ತೆರಿಗೆಯನ್ನು ವಸೂಲಿ ಮಾಡಲು ಅನೇಕ ಅಮಾನುಷ ಕ್ರಮಗಳನ್ನು ಕೈಗೊಂಡರು. ಇದರಿಂದಾಗಿ ಜನಸಾಮಾನ್ಯರು ಸಾಲರಜಂಗರನ್ನು ದೋಷಿಸಲು ಆರಂಭಿಸಿದರು. ಜಹಂಗೀರ ಪ್ರದೇಶವು ಮುಂದೆ ಹೈದರಾಬಾದ್ ನಿಜಾಮ ಆಡಳಿತದಿಂದ ಬಿಡುಗಡೆಯಾದ ಬಳಿಕ ಅಂದಿನ ಕೊಪ್ಪಳ ಜಿಲ್ಲೆಯ ತಾಲೂಕುಗಳನ್ನು ರಾಯಚೂರು ಜಿಲ್ಲೆಗೆ ವರ್ಗಾಯಿಸಲಾಯಿತು. ಹೀಗಾಗಿ ಕೋರ್ಟು, ಕಛೇರಿ, ಶಿಕ್ಷಣ, ವ್ಯಾಪಾರ, ವ್ಯವಹಾರ ಮುಂತಾದ ಕಾರಣಗಳಿಗಾಗಿ ಈ ಭಾಗದ ಜನರು ರಾಯಚೂರು, ಗುಲಬರ್ಗಾದಂಥ ನಗರಗಳಿಗೆ ಹೋಗುವುದು ಅನಿವಾರ್ಯವಾಯಿತು. ಹೀಗಾಗಿ ಕೊಪ್ಪಳ ಪ್ರದೇಶವು ಕರ್ನಾಟಕದ ಅಭಿವೃದ್ಧಿ ವಿಚಾರದಲ್ಲಿ ಬಹಳಷ್ಟು ಹಿಂದುಳಿದಿದೆ ಎಂದರೆ ತಪ್ಪಾಗಲಾರದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಮೋಹನ್‌ಕೃಷ್ಣ ರೈ ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ಸಂಖ್ಯೆ ೪.

೨. ಅದೇ ಪುಟ ಸಂಖ್ಯೆ ೬.

೩. Nayeem M.A., 1984, Mughal Administration of Deccean Under Nizamul Mulk Asaf Jah, Ashwini Publication, Bombay, P.No. 24.

೪. ಮಹಾಬಲೇಶ್ವರಪ್ಪ ಬಿ.ಸಿ., ೧೯೯೭, ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಪುಟ ಸಂಖ್ಯೆ ೧೨.

೫. ಅಶ್ವಥ್ ಡಿ.ಎಸ್., ೧೯೯೯, ವಿಮೋಚನೆ ಕೊಪ್ಪಳ ಜಿಲ್ಲೆಯ ಹೈದರಾಬಾದ್ ವಿಮೋಚನಾ ಹೋರಾಟದ ಕಥೆ, ಜಿಲ್ಲಾ ಆಡಳಿತ ಕೊಪ್ಪಳ, ಪುಟ ಸಂಖ್ಯೆ ೧೪೧.

೬. ಅದೇ., ಪುಟ ಸಂಖ್ಯೆ ೧೪೨.

೭. ಪಾಟೀಲ್ ವಿ.ಎ. (ಸಂ), ೧೯೯೮, ಕೊಪ್ಪಳ : ಸಾಂಸ್ಕೃತಿಕ ಪರಂಪರೆ, ಹರಿಹರ ಪ್ರಕಾಶನ, ಕೊಪ್ಪಳ, ಪುಟ ಸಂಖ್ಯೆ [illegible].

೮. Ahmed Ali (Edit), 1940, The Salar Jung's of Hydrabad, Hyadrabad. P.No. 254.

೯. ಅಶ್ವಥ್ ಡಿ.ಎಸ್., ಪೂರ್ವೋಕ್ತ, ಪುಟ ಸಂಖ್ಯೆ ೧೪೨.

೧೦. Ahmed Ali (Edit), ಪೂರ್ವೋಕ್ತ, ಪುಟ ಸಂಖ್ಯೆ [illegible].

೧೧. ಪಾಟೀಲ ವಿ.ಎ., ಪೂರ್ವೋಕ್ತ, ಪುಟ ಸಂಖ್ಯೆ [illegible].

೧೨. Ahmed Ali (Edit), ಪೂರ್ವೋಕ್ತ, ಪುಟ ಸಂಖ್ಯೆ [illegible].

೧೩. ಅದೇ., ಪುಟ ಸಂಖ್ಯೆ [illegible].

೧೪. ಅಶ್ವಥ್ ಡಿ.ಎಸ್., ಪೂರ್ವೋಕ್ತ, ಪುಟ ಸಂಖ್ಯೆ [illegible].

೧೧೦

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳುವಳಿ: ಒಂದು ಚಾರಿತ್ರಿಕ ಅಧ್ಯಯನ

ಡಾ. ಎಸ್. ಶಿವರಾಮು*

ಭಾರತೀಯ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆಯೆಂಬುದು ಅಳಿಸಲಾಗದ ಪದ್ಧತಿಯಾಗಿ ಬೇರೂರಿತ್ತು. ಮಹಾತ್ಮಗಾಂಧಿಜೀ ಹಾಗೂ ಸ್ವಾಮಿವಿವೇಕಾನಂದರಿಂದ ಪ್ರಭಾವಿತರಾಗಿದ್ದ ಮೈಸೂರು ಮಹಾರಾಜರು ಅಸ್ಪೃಶ್ಯತಾ ನಿರ್ಮೂಲನೆಗೆ ಹಲವು ಕ್ರಿಯಾತ್ಮಕ ಯೋಜನೆಯನ್ನು ಜಾರಿಗೊಳಿಸಿದ್ದರು. ಇದೇ ಕಾಲಘಟ್ಟದಲ್ಲಿ ಭಾರತದಾದ್ಯಂತ ಹಲವು ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣಾ ಚಟುವಟಿಕೆಗಳು ನಡೆಯುತ್ತಿದ್ದವು. ಬ್ರಹ್ಮಸಮಾಜ, ಆರ್ಯಸಮಾಜ, ಪ್ರಾರ್ಥನಾಸಮಾಜ ಮತ್ತು ರಾಮಕೃಷ್ಣ ಮಿಷನ್ ಮುಂತಾದವುಗಳು ಜಾತಿಪದ್ಧತಿಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದವು. ಈ ಎಲ್ಲರ ಪರಿಶ್ರಮ ಹಾಗೂ ದೂರದೃಷ್ಟಿಯ ಫಲವಾಗಿ ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ಸ್ಥಿತಿಗತಿ ಸುಧಾರಣೆಗೆ ಹಲವು ಪ್ರಯತ್ನಗಳು ನಡೆದವು. ಅಸ್ಪೃಶ್ಯರ ಉದ್ಧಾರ ಶಿಕ್ಷಣದಿಂದಲೇ ಸಾಧ್ಯ. ಇವರ ಶೋಚನೀಯ ಸುಧಾರಣೆ ಸಾಧ್ಯವೆಂದರಿತು ಅಸ್ಪೃಶ್ಯರಿಗಾಗಿ ವಿಶೇಷವಾಗಿ ಎರಡು ಶಾಲೆಗಳನ್ನು ತೆರೆದರು. ಮೈಸೂರು ಸರ್ಕಾರವು ರಾಜ್ಯದ ವತಿಯಿಂದ ನಡೆಯುತ್ತಿರುವ ಎಲ್ಲಾ ಶಾಲೆಗಳಿಗೂ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಮುಕ್ತ ಅವಕಾಶ ನೀಡಿ ಶಾಲಾ ಪ್ರವೇಶಾತಿ ನೀಡಬೇಕೆಂದು ಆಜ್ಞೆ ಮಾಡಿತು.[೧] ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಪಾಠ ಹೇಳಲು ಯಾರು ಮುಂದೆ ಬಾರದಿದ್ದಾಗ ಗೋಪಾಲಸ್ವಾಮಿ ಅಯ್ಯರ್, ತಲಕಾಡು ರಂಗೇಗೌಡರು ಅಸ್ಪೃಶ್ಯರಿಗೆ ಪಾಠ ಹೇಳಲು ಮುಂದೆ ಬಂದರು. ಆ ವೇಳೆಯಲ್ಲಿ ಅಸ್ಪೃಶ್ಯ ವರ್ಗದಿಂದಲೇ ಹುಟ್ಟಿಬಂದ ಮುರುಗೇಶಪಿಳ್ಳೈ ಎಂಬ ನಾಯಕರು ಆದಿದ್ರಾವಿಡ ಅಭಿವೃದ್ಧಿ ಸಂಘ ಎಂಬ ಸಂಸ್ಥೆಯನ್ನು ಕಟ್ಟಿ ಅದರ ಮೂಲಕ ಈ ಜನಾಂಗದ ಸ್ಥಿತಿಗತಿಯನ್ನು ಸುಧಾರಿಸಲು ಯತ್ನಿಸಿದರು.[೨]

ಮಹಾತ್ಮ ಗಾಂಧೀಜಿಯವರು ೧೯೩೪ ಮತ್ತು ೧೯೩೬ರಲ್ಲಿ ಎರಡು ಬಾರಿ ಕರ್ನಾಟಕಕ್ಕೆ ಬಂದು ಅಸ್ಪೃಶ್ಯತಾ ವಿರೋಧಿ ಆಂದೋಲನಕ್ಕೆ ಚಾಲನೆ ನೀಡಿದರು. ಹಿಂದೂ ದೇವಾಲಯಗಳಿಗೆ ಅಸ್ಪೃಶ್ಯರಿಗೆ ಪ್ರವೇಶವಿಲ್ಲದಿರುವುದನ್ನು ಗಾಂಧೀಜಿ ಟೀಕಿಸಿದರು. ಅಲ್ಲದೇ ತಮ್ಮ ಅನುಯಾಯಿಗಳೊಡನೆ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ಕಲ್ಪಿಸಲು ಚಳುವಳಿಯನ್ನು ಹಮ್ಮಿಕೊಂಡರು. ಇದರ ಫಲವಾಗಿ ಮೈಸೂರು ಸಂಸ್ಥಾನದಲ್ಲಿ ದೇವಾಲಯ ಪ್ರವೇಶ ಚಳುವಳಿ ಆರಂಭವಾಯಿತು. ಇದರ ಮೂಲಕ ಅಸ್ಪೃಶ್ಯರ ಸಾಮಾಜಿಕ ಹಾಗೂ ಧಾರ್ಮಿಕ ಬದಲಾವಣೆಯ ಪ್ರಕ್ರಿಯೆ ಹೇಗೆ ಆರಂಭಗೊಂಡಿತೆಂಬುದನ್ನು ತಿಳಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳುವಳಿಯಲ್ಲಿ ತಗಡೂರು ರಾಮ ಚಂದ್ರರಾಯರ ಪ್ರಯತ್ನ ಅವಿಸ್ಮರಣೀಯವಾದದ್ದು. ಇವರು ೧೯೩೨ರ ಡಿಸೆಂಬರ್ ೪ರಂದು ಮೈಸೂರು ಜಿಲ್ಲೆಯ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಅಸ್ಪೃಶ್ಯರಿಗೆ ಪ್ರವೇಶಾವಕಾಶವನ್ನು ದೊರಕಿಸಿ ಕೊಡುವುದಾಗಿ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದರು. ತಾವು ಪ್ರಕಟಿಸಿದ ದಿನದಂದು ರಾಮಚಂದ್ರರಾಯರು ಹಲವು ಅಸ್ಪೃಶ್ಯರೊಡಗೂಡಿ ಶ್ರೀಕಂಠೇಶ್ವರ ದೇವಾಲಯಕ್ಕೆ ಒಳಪ್ರವೇಶಿಸುವ ಮುನ್ನ ದೇವಾಲಯದ ಹೊರಪ್ರದಕ್ಷಿಣೆ ಮಾಡುತ್ತಿದ್ದಂತಹ ಸಮಯದಲ್ಲಿ ಹಲವು ಸವರ್ಣಿಯರು ಅವರ ಮೇಲೆ ಸಗಣಿಯನ್ನು ಮತ್ತು ಕಲ್ಲುಗಳನ್ನು ಎರಚಿ ಹೊಡೆದು ಹಿಂಸೆಗೀಡು ಮಾಡಿದರು. ಇದರಿಂದ ರಾಮಚಂದ್ರರಾಯರ ತಲೆಗೆ ಅಪಾರ ಪೆಟ್ಟು ಬಿದ್ದು ರಕ್ತಸ್ರಾವವಾಗತೊಡಗಿತು. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ನೀಡಲಾಯಿತು.[೩] ಅಂದು ರಾಮಚಂದ್ರರಾಯರು ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ದೊರಕಿಸಿ ಕೊಡಲು ನಡೆಸಿದ ಪ್ರಯತ್ನವು ವಿರೋಧಿಗಳ ದುಷ್ಕೃತ್ಯದಿಂದ ವಿಫಲಗೊಂಡರೂ ಸಹ ಅವರು ಅಸ್ಪೃಶ್ಯರಿಗೆ ದೇವಾಲಯ ಪ್ರವೇಶಾವಕಾಶ ಮಾಡಿಕೊಡಲು ನಡೆಸಿದ ಹೋರಾಟ ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೀಡಾಯಿತು.

* ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರು ಜಿಲ್ಲೆ-೫೭೧೩೦೧.

ನ್ಯಾಯವಿಧಾಯಕ ಸಭೆಯ ಸದಸ್ಯರು ಹರಿಜನ ದೇವಾಲಯ ಪ್ರವೇಶವನ್ನು ಒಪ್ಪಿಕೊಂಡರೂ ಮೈಸೂರಿಗೆ ಮಹಾರಾಜರು ತಮ್ಮ ನಿಲುವನ್ನು ಸ್ಪಷ್ಟಪಡಿಸದ ಕಾರಣ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶಾವಕಾಶಕ್ಕೆ ಅನುಮತಿ ದೊರೆಯಲಿಲ್ಲ.

ಮೈಸೂರು ಸರ್ಕಾರದ ಈ ನಿಲುವಿನಿಂದ ಬೇಸರ ಗೊಂಡ ರಾಮಚಂದ್ರರಾಯರು ಅಸ್ಪೃಶ್ಯರಿಗಾಗಿಯೇ ತಗಡೂರಿನಲ್ಲಿ ೧೩-೧೦-೧೯೩೩ರಂದು ಪ್ರತ್ಯೇಕ ಗಣಪತಿ ದೇವಾಲಯವೊಂದನ್ನು ಕಟ್ಟಿಸಿ ಅವರು ತಮ್ಮ ಪೂಜಾ ಕೈಂಕರ್ಯಗಳನ್ನು ನಡೆಸಿಕೊಂಡು ಹೋಗಲು ಅವಕಾಶ ಮಾಡಿ ಕೊಟ್ಟರು.[೪] ಮಹಾತ್ಮ ಗಾಂಧೀಜಿ ತಮ್ಮ ಸಂಗಡಿಗ ರೊಂದಿಗೆ ಪರಿಶಿಷ್ಟ ಜನಾಂಗದವರ ಏಳಿಗೆಗಾಗಿ ೧೯೩೪ರಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡಿದ್ದರು. ೧೯೩೪ರ ಜನವರಿ ೫ರಂದು ಸಂಸ್ಥಾನದ ತಗಡೂರು ಹಾಗೂ ಬದನವಾಳು ಗ್ರಾಮಗಳಲ್ಲಿನ ಖಾದಿ ಸಂಸ್ಥೆಗಳಿಗೂ ಭೇಟಿ ನೀಡಿದ್ದರು. ಅದೇ ದಿನ ನಂಜನಗೂಡಿಗೂ ಭೇಟಿ ನೀಡಿದ್ದರು. ನಂಜನಗೂಡಿನ ಪುರನಿವಾಸಿಗಳು ಮಾನಪತ್ರ ವನ್ನು ಭಕ್ತಿಪೂರ್ವಕವಾಗಿ ಅರ್ಪಿಸಿದ ನಂತರ ಮಕ್ಕಳೂ, ಮಹಿಳೆಯರೂ ಸೇರಿದಂತೆ ಇನ್ನೂ ಅನೇಕರು ಚಿನ್ನ ಹಾಗೂ ಬೆಳ್ಳಿಯ ಒಡವೆಗಳನ್ನು ಮತ್ತು ಇತರೆ ವಸ್ತುಗಳನ್ನು ಕಾಣಿಕೆ ಯಾಗಿ ಅರ್ಪಿಸಿದರು. ಚಂದ್ರಸಿಂಗ್ ಎಂಬ ಬಡವನೊಬ್ಬ ನಾಲ್ಕು ಆಣೆ ಎರಡು ಕಾಸನ್ನು ಕಾಣಿಕೆಯಾಗಿ ನೀಡಿದನು. ತರುವಾಯ ಮಹಾತ್ಮರು ಅಲ್ಲಿಯ ಜನರನ್ನುದ್ದೇಶಿಸಿ ಹೀಗೆ ಮಾತನಾಡಿದರು. "ಈ ಕ್ಷೇತ್ರವು ಪುಣ್ಯಸ್ಥಳವಾಗಿದೆ. ದೊಡ್ಡ ದೇವಾಲಯವಿದೆ ಎಂಬುದು ನನಗೆ ಗೊತ್ತು. ಈ ದೇವಸ್ಥಾನ ದಲ್ಲಿ ನಮ್ಮೆಗಳೆಲ್ಲರಿಗೂ, ಅಸ್ಪೃಶ್ಯರಿಗೂ, ಸಕಲರಿಗೂ ಭಾಗ ದೊರೆಯುತ್ತದೆ ಎಂದು ತಿಳಿದಿದೆ. ಇದು ಈಗ ಸಾಧ್ಯವಿಲ್ಲ ದಿದ್ದರೂ ಜನರ ಭಾವನೆ ಹೆಚ್ಚುವವರೆಗೂ ಸಾಧ್ಯವಿಲ್ಲ. ಪರಿಶಿಷ್ಟ ಜನಾಂಗದ ಜನರಿಗೆ ದೇವಸ್ಥಾನದ ಬಾಗಿಲು ತೆಗೆಯ ಬಾರದೆಂದು ಯಾವ ವೇದವೂ ಹೇಳುವುದಿಲ್ಲ. ಅವರಿಗೇ ದೇವಾಲಯದೊಳಕ್ಕೆ ಹೋಗಬೇಕು ಎಂಬ ಅಪೇಕ್ಷೆ ಇಲ್ಲದಿರು ವಾಗ ಒಳಕ್ಕೆ ಹೋಗಿ ಎಂದು ಹೇಳುವುದು ಸರಿಯಿಲ್ಲವೆಂದು ಕೆಲವರು ಅಭಿಪ್ರಾಯಪಡುವರು. ಇದು ಸರಿಯಾದುದಲ್ಲ. ತನ್ನ ಮಗನಿಗೆ ಹೋಗು ಎಂದು ಪ್ರೇರೇಪಿಸುವುದೇ ತಂದೆಯ ಮುಖ್ಯ ಕರ್ತವ್ಯ. ಜೀವನದ ಯಾವ ಭಾಗದಲ್ಲಿಯೂ ನಮಗೆ ಇರುವ ಹಕ್ಕು ಪರಿಶಿಷ್ಟ ಜನರಿಗೂ ಇರುತ್ತದೆ. ಆದ್ದರಿಂದ ಮಹಾಜನರಲ್ಲಿ ನನ್ನ ಪ್ರಾರ್ಥನೆ ಏನೆಂದರೆ ದೇವಾಲಯ ದೊಳಕ್ಕೆ ಹೋಗಲು ಅವರಿಗೆ ಅವಕಾಶ ಮಾಡಿಕೊಡಿ. ಈ ಕಾರ್ಯವನ್ನು ಮಾನವಂತರೂ, ಗೌರವಸ್ಥರೂ ಮಾಡಬೇಕು. ನೀವು ಹೇಳಿರುವಂತೆ ಆತ್ಮಯಜ್ಞದ ಕಾರ್ಯಕ್ಕೆ ನಿರ್ಬಂಧ ಮಾಡುವುದು ಒಳ್ಳೆಯದಲ್ಲ. ಜನರ ಅಭಿಪ್ರಾಯವನ್ನು ಬದಲಾಯಿಸಿ ನಾವೆಲ್ಲರೂ ಪರಿಶುದ್ಧರಾಗಬೇಕೆಂಬುದೇ ನನ್ನ ಮಹತ್ತಾದ ಆಕಾಂಕ್ಷೆಯಾಗಿದೆ. ಕೊನೆಯಲ್ಲಿ ಮಹಾತ್ಮರು ಪರಿಶಿಷ್ಟ ಜಾತಿಯ ಜನರನ್ನು ದೇವಸ್ಥಾನದ ಒಳಕ್ಕೆ ಬಿಡುವ ಏರ್ಪಾಟು ಆಗಬೇಕೆಂದು, ಆ ಜನಗಳನ್ನು ಸವರ್ಣೀಯರು ಸಂಪೂರ್ಣವಾಗಿ ಸಂಪರ್ಕಕ್ಕೆ ತಂದುಕೊಳ್ಳದೆ ಹೋದರೆ ಹಿಂದೂ ಧರ್ಮವೇ ನಾಶ ಹೊಂದುವುದೆಂದೂ ಎಚ್ಚರಿಕೆ ನೀಡಿದರು." ಗಾಂಧೀಜಿಯವರ ಈ ಕರೆಯಿಂದ ಸ್ಫೂರ್ತಿ ಗೊಂಡ ಮೈಸೂರು ಸಂಸ್ಥಾನದ ಜನರು ಅಸ್ಪೃಶ್ಯರ ದೇವಾಲಯ ಚಳುವಳಿಯನ್ನು ಮತ್ತಷ್ಟು ಚುರುಕುಗೊಳಿಸಿದರು. ಈ ಪ್ರಯತ್ನ ಗಳು ಮೈಸೂರು ಸಂಸ್ಥಾನದಾದ್ಯಂತ ನಿರಂತರವಾಗಿ ನಡೆಯಲು ಗಾಂಧೀಜಿಯವರ ಸ್ಫೂರ್ತಿಯೇ ಕಾರಣವೆನ್ನ ಬಹುದು.[೫]

ಮೈಸೂರು ಸಂಸ್ಥಾನದ ಬೆಂಗಳೂರಿನ ಬಸವನಗುಡಿ ದೇವಾಲಯಕ್ಕೆ ಹರಿಜನರಿಗೆ ಪ್ರವೇಶಾವಕಾಶ ಮಾಡಿಕೊಡಲು ೧೩-೧೦-೧೯೩೩ರಂದು ಕೆ.ಟಿ. ಭಾಷ್ಯಂ ಪಿ.ಆರ್. ರಾಮಯ್ಯ, ವೆಂಕಟಪತಯ್ಯ, ಮತ್ತು ಟಿ.ಟಿ. ಶರ್ಮ ಮುಂತಾದವರು ಯತ್ನಿಸಿ ಯಶಸ್ವಿಯಾದರು. ಈ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳುವಳಿಯಲ್ಲಿ ಸಕಲೇಶಪುರದ ಡಾ. ಎಸ್.ಚಲುವರಾಯ ಎಂಬುವವರು ಸಹಭಾಗಿಯಾಗಿದ್ದರು.

ಅಸ್ಪೃಶ್ಯರ ದೇವಾಲಯ ಪ್ರವೇಶ ಚಳುವಳಿಯಲ್ಲಿ ಚಿತ್ರದುರ್ಗ ಜಿಲ್ಲಾ ಹೊಳಲ್ಕೆರೆ ತಾಲ್ಲೂಕು, ಚಿಕ್ಕಜಾಜೂರಿನ ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ಸಿದ್ದಪ್ಪನವರ ಪಾತ್ರ ಹಿರಿದಾಗಿದ್ದು, ಇವರು ೧೯೪೭ರಲ್ಲಿ ತಮ್ಮ ತಾಲ್ಲೂಕಿನಾದ್ಯಂತ ಹರಿಜನರಿಗೆ ದೇವಾಲಯ ಪ್ರವೇಶಾವಕಾಶವನ್ನು ದೊರಕಿಸಿ ಕೊಡುವ ದೃಷ್ಟಿಯಿಂದ ಅಖಿಲ ಮೈಸೂರು ಹರಿಜನ ದೇವಾಲಯ ಪ್ರವೇಶ ಸಮಿತಿಯ ಕಾರ್ಯನಿರ್ವಹಣಾಧಿಕಾರಿ ಸಭೆಯು ಪಿ.ಸುಬ್ಬರಾಮಯ್ಯಶೆಟ್ಟರ ನೇತೃತ್ವದಲ್ಲಿ ೧೦. ಜನವರಿ ೧೯೪೪ರಂದು ಮೈಸೂರಿನಲ್ಲಿ ಜರುಗಿತು. ಈ ಸಭೆಯಲ್ಲಿ ಕೈಗೊಂಡ ನಿರ್ಣಯವೆಂದರೆ ಸಮಿತಿಯ ಸದಸ್ಯರು ಸಂಸ್ಥಾನದ ಎಲ್ಲಾ ೦೮ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಹರಿಜನರಿಗೆ ಮೈಸೂರು ಸಂಸ್ಥಾನದಾದ್ಯಂತ ಇರುವ ದೇವಾಲಯಗಳಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡುವ ವಿಚಾರದಲ್ಲಿ ಸಾರ್ವಜನಿಕಾಭಿಪ್ರಾಯವನ್ನು ಸಂಗ್ರಹಿಸಬೇಕೆಂದು ತೀರ್ಮಾನಿಸಲಾಯಿತು.[೬] ದಿನಾಂಕ ೨೫-೧೦-೧೯೪೫ ರಂದು ಕೆ.ಚಂಗಲರಾಯರೆಡ್ಡಿ, ಗುರುವಾರೆಡ್ಡಿ, ಎಂ.ಸಿ. ಮಲ್ಲಪ್ಪ ಶ್ರೀಮತಿ ರಾಜೀವಬಾಯಿ, ಶಿವರಾಂ ಮತ್ತು ಶ್ರೀಮತಿ ದ್ವಾರಕಾಬಾಯಿ ಕಡಾಂಬಿ ಇವರುಗಳು ಅಸ್ಪೃಶ್ಯರಿಗೆ ಪ್ರವೇಶದ ಅವಕಾಶವಿಲ್ಲದಿರುವ ದೇವಾಲಯಗಳಿಗೆ ತಾವು ಸಹ ಪ್ರವೇಶ

ಮಾಡುವುದಿಲ್ಲವೆಂದು ಪ್ರತಿಜ್ಞೆ ಕೈಗೊಂಡಿದ್ದರು.[೯] ೧೯೪೬ರ ಜುಲೈ ಮೂರನೇ ವಾರದಲ್ಲಿ ತುಮಕೂರು ಜಿಲ್ಲಾ ಶಿವಗಂಗೆಯಲ್ಲಿರುವ ದೇವಾಲಯಗಳಿಗೆ ಹರಿಜನರು ಪ್ರವೇಶಿಸುವ ಅಧಿಕಾರವನ್ನು ಕೊಡುವುದಾಗಿ ಅಲ್ಲಿನ ಧರ್ಮದರ್ಶಿಗಳು ಘೋಷಣೆಯೊಂದನ್ನು ಹೊರಡಿಸಿದ್ದರು.[೧೦]

ಮೈಸೂರು ಸಂಸ್ಥಾನ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳುವಳಿಯಲ್ಲೇ ಅತ್ಯಂತ ಮುಖ್ಯವಾದದ್ದು. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯಕ್ಕೆ ಪ್ರವೇಶಾವಕಾಶ ದೊರಕಿಸಿದ್ದು, ೦೨-೦೨-೧೯೪೭ ರಂದು ಅಂದಿನ ಮೈಸೂರು ಸಂಸ್ಥಾನದ ಮಂತ್ರಿಗಳಾಗಿದ್ದ ಕೋಟಿರೆಡ್ಡಿಯವರು ಶ್ರೀರಂಗನಾಥಸ್ವಾಮಿ ದೇವಾಲಯ ಪ್ರವೇಶ ಚಳುವಳಿಯ ನಾಯಕತ್ವ ವಹಿಸಿದ್ದರು. ಈ ದೇವಾಲಯ ಪ್ರವೇಶ ಚಳುವಳಿಯಲ್ಲಿ ಸುಮಾರು ೧೦,೦೦೦ಕ್ಕಿಂತಲೂ ಹೆಚ್ಚು ಜನ ಭಾಗವಹಿಸಿದ್ದು, ಮೈಸೂರು ಸಂಸ್ಥಾನದ ಅಸ್ಪೃಶ್ಯರ ದೇವಾಲಯಗಳ ಪ್ರವೇಶ ಚಳುವಳಿಯಲ್ಲಿ ಅತ್ಯಂತ ಸ್ಮರಣೀಯವಾದ ಘಟನೆಯನ್ನಬಹುದು.[೧೧] ಮೈಸೂರು ಸಂಸ್ಥಾನದಾದ್ಯಂತ ಇರುವ ಯಾವ ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶಾವಕಾಶವಿಲ್ಲವೋ ಅಂತಹ ದೇವಾಲಯಗಳಿಗೆ, ಸರ್ಕಾರದ ಯಾವ ಮಂತ್ರಿಗಳೂ ಪ್ರವೇಶ ಮಾಡುವುದಿಲ್ಲವೆಂದು ಸಂಕಲ್ಪ ಮಾಡಿರುವ ವಿಚಾರವನ್ನು ದಿನಾಂಕ ೩-೧೧-೧೯೪೭ರಂದು ಹಾಸನದಲ್ಲಿ ಹೆಚ್.ಸಿ. ದಾಸಪ್ಪನವರು ಬೃಹತ್ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣವೊಂದರಲ್ಲಿ ತಿಳಿಸಿದರು.[೧೨] ೧೯೪೭ರ ಡಿಸೆಂಬರ್‌ನಲ್ಲಿ ಅಂದಿನ ಶಿಕ್ಷಣ ಮಂತ್ರಿಯಾಗಿದ್ದ ಚನ್ನಿಗರಾಮಯ್ಯನವರ ನೇತೃತ್ವದಲ್ಲಿ ಹರಿಜನರಿಗೆ ತುಮಕೂರು ಜಿಲ್ಲಾ ತಾವರೆಕೆರೆ ಈಶ್ವರ ದೇವಸ್ಥಾನ, ಬಂಡೆರಂಗನಾಥ ದೇವಸ್ಥಾನಗಳಿಗೆ ಪ್ರವೇಶಾವಕಾಶವನ್ನು ದೊರಕಿಸಿ ಕೊಡಲಾಯಿತು. ಈ ದೇವಾಲಯಗಳಿಗೆ ಹರಿಜನರ ಪ್ರವೇಶಾವಕಾಶಕ್ಕೆ ಆ ಊರಿನ ಸವರ್ಣೀಯ ಜನಗಳ ಪ್ರೇರಣೆಯಿದ್ದಿದ್ದು ಅತ್ಯಂತ ಗಮನಾರ್ಹ ಅಂಶವಾಗಿದೆ.[೧೩]

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ಗ್ರಾಮದ ಬಿ.ಆರ್. ಶಾಮಐತಾಳ್‌ರು ೧೯೪೮ರಲ್ಲಿ ತೀರ್ಥಹಳ್ಳಿಯ ರಾಮೇಶ್ವರ ಹಾಗೂ ಇನ್ನಿತರ ದೇವಾಲಯಗಳಿಗೆ ಹರಿಜನರಿಗೆ ಪ್ರವೇಶಾವಕಾಶವನ್ನು ಮಾಡಿಸುವಲ್ಲಿ ಚಳುವಳಿಯನ್ನು ನಡೆಸಿದರು. ಅನಂತರ ಅಲ್ಲಿನ ಹರಿಜನರುಗಳಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಟ್ಟರು.[೧೪]

ದಿನಾಂಕ ೧೭-೦೧-೧೯೪೮ ರಂದು ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು ಚುಂಚನಕಟ್ಟೆ ದೇವಾಲಯಕ್ಕೆ ಹರಿಜನರಿಗೆ ಪ್ರವೇಶಾವಕಾಶವನ್ನು ಮಾಡಿಕೊಡಲಾಯಿತು. ಹೆಚ್.ಸಿ.ದಾಸಪ್ಪನವರು ಅಲ್ಲಿನ ಸವರ್ಣೀಯ ಮುಖಂಡರೊಡನೆ ಮಾತುಕತೆ ನಡೆಸಿ ಅವರುಗಳು ಇದೇ ರೀತಿ ಹರಿಜನರೊಡನೆ ಬೆರೆತು ಇನ್ನುಳಿದ ದೇವಾಲಯಗಳಿಗೂ ಹರಿಜನರಿಗೆ ಪ್ರವೇಶಾವಕಾಶ ಕಲ್ಪಿಸಿ ಕೊಡಬೇಕೆಂದು ಅಲ್ಲಿನ ಸವರ್ಣೀಯರಿಗೆ ತಿಳಿಸಿದರು. ನೇರಳೆಮಾದಯ್ಯ, ಸರ್ದಾರ್ ಕೆ.ಬಸವರಾಜ್ ಅರಸ್, ಎಂ.ಎಲ್. ನಂಜೇರಾಜೇ ಅರಸ್ ಮತ್ತು ಮೈಸೂರು ಜಿಲ್ಲಾಧಿಕಾರಿಗಳು ಹರಿಜನರೊಡಗೂಡಿ ಆ ದೇವಾಲಯಕ್ಕೆ ಪ್ರವೇಶಿಸಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿದರು.[೧೫]

ಮೈಸೂರು ಸಂಸ್ಥಾನದ ಹಲವು ಕಾಂಗ್ರೆಸ್ ನಾಯಕರುಗಳ ಹೋರಾಟದ ಫಲವಾಗಿ ೧೯೪೮ರ ಜನವರಿ ತಿಂಗಳಲ್ಲಿ ಶಾಸನಸಭೆಯಲ್ಲಿ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶಾವಕಾಶದ ಮಸೂದೆಗೆ ಅಂಗೀಕಾರ ದೊರೆಯಿತು. ಅನಂತರ ಅದು ಮಹಾರಾಜರಿಂದ ಅಂಗೀಕೃತವಾಗಿ ದಿನಾಂಕ: ೧೧-೨-೧೯೪೮ರ ಬುಧವಾರದಂದು ಶಾಸನರೂಪದಲ್ಲಿ ಜಾರಿಗೆ ಬಂದಿತು.[೧೬] ಇದೇ ಸಮಯದಲ್ಲಿ ಅಂದರೆ ದಿನಾಂಕ ೧೮-೦೨-೧೯೪೮ರಂದು ಮೈಸೂರಿನ ಮಂಡಿಮೊಹಲ್ಲಾದಲ್ಲಿರುವ ವೆಂಕಟರಮಣಸ್ವಾಮಿ ದೇವಾಲಯಕ್ಕೆ ಹರಿಜನರಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡಲಾಯಿತು. ಈ ಸಂದರ್ಭದಲ್ಲಿ ಎಸ್. ರಂಗರಾಮಯ್ಯ ಪಾಲಹಳ್ಳಿ ಸೀತಾರಾಮಯ್ಯ ಎನ್.ಎಸ್. ಹಿರಣ್ಣಯ್ಯ, ಕೆ. ಪುಟ್ಟಸ್ವಾಮಿ, ಕೆ. ಸಿದ್ದಯ್ಯ ಮತ್ತು ಎಂ.ಎನ್. ಜೋಯಿಸರುಗಳು ಹಾಜರಿದ್ದು ಹರಿಜನರಿಗೆ ಮೈಸೂರು ಸಂಸ್ಥಾನದಾದ್ಯಂತ ಈ ರೀತಿ ದೇವಾಲಯಗಳಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡಲು ಶ್ರಮಿಸಿದ ಕಾಂಗ್ರೆಸ್ ನಾಯಕರುಗಳ ಶ್ರಮವನ್ನು ಪ್ರಶಂಸಿಸಿದರಲ್ಲದೇ ತಮ್ಮಗುಂಟಾದ ಅಪರಿಮಿತ ಸಂತಸವನ್ನು ವ್ಯಕ್ತಪಡಿಸಿದ್ದರು.[೧೭]

ದಿನಾಂಕ ೧೦-೩-೧೯೪೮ರ ಬುಧವಾರದಂದು ಬೆಂಗಳೂರು ಜಿಲ್ಲೆ ನೆಲಮಂಗಲದಲ್ಲಿರುವ ಕಾಶಿವಿಶ್ವನಾಥಸ್ವಾಮಿ ದೇವಾಲಯಕ್ಕೆ ಹರಿಜನರಿಗೆ ಪ್ರವೇಶಾವಕಾಶವನ್ನು ಮಾಡಿಕೊಡಲಾಯಿತು. ದಿನಾಂಕ ೨೫-೩-೧೯೪೮ರ ಗುರುವಾರ ಮೈಸೂರು ಜಿಲ್ಲೆ, ತಿರುಮಕೂಡಲು ನರಸೀಪುರದಲ್ಲಿ ನಡೆದ ಶ್ರೀಗುಂಜಾ ನರಸಿಂಹದೇವರ ರಥೋತ್ಸವ ಸಂದರ್ಭದಲ್ಲಿ ಹರಿಜನರುಗಳಿಗೆ ಈ ದೇವಾಲಯಕ್ಕೆ ಪ್ರವೇಶಾವಕಾಶವನ್ನು ದೊರಕಿಸಿಕೊಡಲಾಯಿತು. ಈ ಸಂದರ್ಭದಲ್ಲಿ ಎಸ್.ಎಂ. ಸಿದ್ದಯ್ಯ ಮತ್ತು ಎನ್. ರಾಚಯ್ಯನವರುಗಳು ಭಾಗವಹಿಸಿದ್ದರು.[೧೮]

ದಿನಾಂಕ ೧೩-೦೯-೧೯೪೫ರಂದು ಮೈಸೂರು ಸಂಸ್ಥಾನದ ಹರಿಜನ ದೇವಾಲಯ ಪ್ರವೇಶ ಸಮಿತಿಯ ಸಭೆಯೂ ಅಧ್ಯಕ್ಷರಾದ ಪಿ.ಆರ್. ರಾಮಯ್ಯನವರ ಅಧ್ಯಕ್ಷತೆ

ಯಲ್ಲಿ ಮೈಸೂರಿನಲ್ಲಿ ಜರುಗಿತು. ಈ ಸಭೆಯಲ್ಲಿ ಕೈಗೊಂಡ ನಿರ್ಣಯವೆಂದರೆ ದಿನಾಂಕ ೩೧-೧೨-೧೯೪೫ರ ಒಳಗಾಗಿ ಸಮಿತಿಯು ಮೈಸೂರು ಸಂಸ್ಥಾನದಲ್ಲೆಲ್ಲಾ ಪ್ರಚಾರ ನಡೆಸಿ ಹರಿಜನರಿಗೆ ದೇವಾಲಯಗಳಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡುವುದು. ಆ ಮೂಲಕ ಹರಿಜನರಿಗೆ ದೇವಾಲಯಗಳಿಗೆ ಪ್ರವೇಶಕ್ಕೆ ಸಹಕಾರಿಯಾಗುವ ಕಾನೂನುಗಳನ್ನು ಮೈಸೂರು ಸಂಸ್ಥಾನದಾದ್ಯಂತ ಜಾರಿಗೆ ತರಬೇಕೆಂದು ಸರ್ಕಾರವನ್ನು ಆಗ್ರಹಪಡಿಸುವ ನಿರ್ಣಯವೊಂದನ್ನು ಪಾಸು ಮಾಡಿತು. ಈ ಸಭೆಯಲ್ಲಿ ಪಾಮಡಿ ಸುಬ್ಬರಾಮಶೆಟ್ಟಿ. ಸ್ವಾಮಿ ವಿಶ್ವಾನಂದಜಿ ಎಚ್.ಸಿ. ದಾಸಪ್ಪ. ಶ್ರೀಮತಿ ಯಶೋಧರಮ್ಮ ದಾಸಪ್ಪ ಮತ್ತು ಕೆ. ಪಟ್ಟಾಭಿರಾಮನ್ ಇವರುಗಳು ಭಾಗವಹಿಸಿದ್ದರು.[೧೯]

೧೯೪೭ರ ಜನವರಿ ತಿಂಗಳ ಕೊನೆಯ ವಾರದಲ್ಲಿ ಬೆಂಗಳೂರು ದಂಡುಪ್ರದೇಶದಲ್ಲಿನ ಎಲ್ಲಾ ದೇವಾಲಯಗಳು ಹರಿಜನರಿಗೆ ಪ್ರವೇಶಾವಕಾಶಕ್ಕಾಗಿ ತೆರೆಯಲ್ಪಟ್ಟವು. ಹಾಗೆಯೇ ಮುಜರಾಯಿ ಇಲಾಖೆಗೆ ಸೇರಿದ ಆಂಜನೇಯಸ್ವಾಮಿ ಸೋಮೇಶ್ವರ ಮತ್ತು ಸುಬ್ರಮಣ್ಯಸ್ವಾಮಿ ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶಾವಕಾಶವನ್ನು ದೊರಕಿಸಿಕೊಡಲಾಯಿತು.[೨೦] ೪-೪-೧೯೪೮ರಂದು ಮೈಸೂರು ಜಿಲ್ಲೆ ಗುಂಡ್ಲುಪೇಟೆಯ ಹಿಮವದ್ಗೋಪಾಲಸ್ವಾಮಿ ಬೆಟ್ಟದ ರಥೋತ್ಸವ ನಡೆಯಿತು. ಈ ಸಮಯದಲ್ಲಿ ಅಲ್ಲಿನ ಕಾಂಗ್ರೆಸ್ ಮುಖಂಡರಾಗಿದ್ದ ಜಿ.ಎಲ್. ಚಿಕ್ಕಸಿದ್ದಪ್ಪನವರು ವೈ.ಜಿ. ಶ್ರೀಕಂಠಚಾರ್ಯರವರುಗಳು ಅಲ್ಲಿನ ಸ್ಥಳೀಯ ಸವರ್ಣೀಯ ಜನಗಳ ಸಹಕಾರದಿಂದ ಹರಿಜನರುಗಳನ್ನು ದೇವಾಲಯದ ಪ್ರವೇಶಾವಕಾಶವನ್ನು ದೊರಕಿಸಿಕೊಟ್ಟರು. ಸರಕಾರವು ಹರಿಜನರುಗಳನ್ನು ದೇವಾಲಯಗಳಿಗೆ ಮುಕ್ತವಾಗಿ ಪ್ರವೇಶವನ್ನು ಮಾಡುವ ಶಾಸನವನ್ನು ಜಾರಿಗೆ ತಂದಿದ್ದರೂ ಸಹ ಸವರ್ಣೀಯರುಗಳು ಅವರುಗಳಿಗೆ ದೇವಾಲಯವನ್ನು ಪ್ರವೇಶ ಮಾಡಲು ನಿರಾಕರಿಸುತ್ತಿದ್ದುದರಿಂದ ಮೈಸೂರು ಸಂಸ್ಥಾನದ ಬಹುತೇಕ ಭಾಗಗಳಲ್ಲಿ ಈ ರೀತಿಯಾಗಿ ಸವರ್ಣೀಯರ ಮನವೊಲಿಸಿ ಹರಿಜನರಿಗೆ ದೇವಾಲಯಗಳ ಮುಕ್ತ ಪ್ರವೇಶಾವಕಾಶವನ್ನು ಮಾಡಿಸುವಲ್ಲಿ ಅಂದಿನ ಕಾಂಗ್ರೆಸ್ ಕಾರ್ಯಕರ್ತರುಗಳು ಈ ರೀತಿ ಅಪಾರವಾಗಿ ಶ್ರಮಿಸಿದ್ದಾರೆ.[೨೧] ಆದರೆ ಈ ಮೇಲ್ಕಂಡ ಘಟನೆಗೆ ವ್ಯತಿರಿಕ್ತವಾಗಿ ದಿನಾಂಕ ೨೩-೦೪-೧೯೪೮ರಂದು ಯಳಂದೂರು ತಾಲ್ಲೂಕಿನ ಪ್ರಸಿದ್ಧ ಪುರಾತನ ದೇವಾಲಯವಾದ ಬಿಳಿಗಿರಿ ರಂಗನಾಥ ದೇವಾಲಯಕ್ಕೆ ಪ್ರವೇಶವನ್ನು ಹರಿಜನರಿಗೆ ಸವರ್ಣೀಯರ ಯಾವ ನಿರ್ಬಂಧವು ಇಲ್ಲದೆ ಮಾಡಿಕೊಡಲಾಯಿತು. ಈ ಸಮಯದಲ್ಲಿ ದೇವಾಲಯವನ್ನು ಪ್ರವೇಶ ಮಾಡಿದ ಹರಿಜನರು ಇನ್ನಿತರ ಸವರ್ಣೀಯರ ಜೊತೆ ದೇವರ ತೀರ್ಥಪ್ರಸಾದವನ್ನು ಸ್ವೀಕರಿಸಿ ಸಂತೋಷ ವ್ಯಕ್ತಪಡಿಸಿದರು.[೨೨] ದಿನಾಂಕ ೧೪-೦೫-೧೯೪೮ರ ಬೆಳಗ್ಗೆ ಅಂದಿನ ಮುಜರಾಯಿ ಸಚಿವರಾಗಿದ್ದ ಪಾಮಡಿ ಸುಬ್ಬರಾಮಶೆಟ್ಟರ ಮುಖಂಡತ್ವದಲ್ಲಿ ಮೈಸೂರು ಜಿಲ್ಲೆಯ ಸೋಸಲೆಯ ಹೊನ್ನಾದೇವಿ ಮತ್ತು ವೀರಭದ್ರೇಶ್ವರ ದೇವಾಲಯಗಳಿಗೆ ಸಾವಿರಕ್ಕಿಂತಲೂ ಹೆಚ್ಚು ಹರಿಜನರು ಪ್ರವೇಶಿಸಿ ಆ ದೇವರುಗಳಿಗೆ ಪೂಜೆ ಪುನಸ್ಕಾರಗಳನ್ನು ಮಾಡಿದರು.[೨೩]

ಹೀಗೆ ಹರಿಜನರಿಗೆ ಮೈಸೂರು ಸಂಸ್ಥಾನದಾದ್ಯಂತ ದೇವಾಲಯಗಳಿಗೆ ಪ್ರವೇಶಾವಕಾಶ ದೊರೆಯುತ್ತಿರುವುದನ್ನು ಮನಗಂಡ ಅಲ್ಲಿನ ಸವರ್ಣೀಯರು ಹರಿಜನರೊಡನೆ ಬೆರೆತು ಅವರುಗಳಿಂದ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಅವರ ಜೊತೆ ತಮ್ಮ ಭ್ರಾತೃತ್ವವನ್ನು ಮೆರೆದರು.

ಅಡಿಟಿಪ್ಪಣಿ

೧. ಹಯವದನರಾವ್.ಸಿ., ಮೈಸೂರು ಗೆಜೆಟಿಯರ್, ಪುಟ ೫೮೭.
೨. Chandra Shekar.S.-Dimensions of Socio-Political Change in Mysore 1918-1940, P. 87.
೩. ಜೋಯಿಸ್ ಎಂ.ಎನ್., ಕರ್ಮಯೋಗಿ (ತಗಡೂರು ರಾಮಚಂದ್ರರಾಯರ ಆತ್ಮಕಥನ ಮತ್ತು ಅಭಿನಂದನ ಗ್ರಂಥ) ಪುಟ ೧೦೦-೧೧೧.
೪. ಅದೇ ಪುಟ ೧೦೨-೧೦೩.
೫. ವೇಮಗಲ್ ಸೋಮಶೇಖರ್, ನಂಜನಗೂಡಿನಲ್ಲಿ ಮಹಾತ್ಮಾ ಗಾಂಧೀಜಿ, ಜನಪದ ಮಾಸಿಕ ಸಂಚಿಕೆ, ೭ ಅಕ್ಟೋಬರ್ ೨೦೧೧.
೬ ಸೂರ್ಯನಾಥಕಾಮತ್ (ಸಂ). ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ. ೨, ಪುಟ ೭೬೦.
೭. ಅದೇ., ಪುಟ ೫೪೬. ೮.ಸಾಧ್ವಿ ಪತ್ರಿಕೆ, ಮೈಸೂರು ದಿನಾಂಕ: ೧೧-೦೧-೧೯೪೪. ೯. ಸಾಧ್ವಿ ೨೬.೧೦.೧೯೪೫.
೧೦. ಸಾಧ್ವಿ ಪತ್ರಿಕೆ, ೨೧.೦೭.೧೯೪೬. ೧೧. ಸಾಧ್ವಿ ೦೨.೦೨.೧೯೪೭. ೧೨. ಸಾಧ್ವಿ ೦೫.೧೧.೧೯೪೭.
೧೩. ಸೂರ್ಯನಾಥ ಕಾಮತ್ (ಸಂ). ಮೇಲೆ ಉದ್ಧರಿಸಿದ ಗ್ರಂಥ, ಪುಟ ೪೭೮. ೧೪. ಅದೇ., ಪುಟ ೬೧೨.
೧೫. ಸಾಧ್ವಿ ಪತ್ರಿಕೆ ೧೮.೦೧.೧೯೪೮. ೧೬.ಸಾಧ್ವಿ ಪತ್ರಿಕೆ ೧೮.೦೨.೧೯೪೮. ೧೭. ಅದೇ., ೧೬.೦೩.೧೯೪೮.
೧೮. ಅದೇ., ೨೭.೦೩.೧೯೪೮. ೧೯.ಅದೇ., ೧೪.೦೯.೧೯೪೫. ೨೦. ಅದೇ., ೦೫.೦೨.೧೯೪೭.
೨೧. ಅದೇ., ೦೭.೦೪.೧೯೪೮. ೨೨.ಅದೇ., ೦೧.೦೫.೧೯೪೮. ೨೩. ಅದೇ., ೧೫.೦೫.೧೯೪೮.

ಬೂದನೂರು: ಒಂದು ಚಾರಿತ್ರಿಕ ಅಧ್ಯಯನ

ಡಾ. ಬಿ.ಎಸ್. ಪುಟ್ಟಸ್ವಾಮಿ*

ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿರುವ ಬೂದನೂರು, ಮಂಡ್ಯ ಜಿಲ್ಲೆ, ಮಂಡ್ಯ ತಾಲೂಕಿನ ಒಂದು ಸಾಮಾನ್ಯ ಗ್ರಾಮ. ಮಂಡ್ಯ ಜಿಲ್ಲೆಯಲ್ಲಿರುವ ಹಿತಕರ ವಾಯುಗುಣ, ಸಮೃದ್ಧ ನೀರಾವರಿ ಜಾಲದ ನಡುವೆ ಕಂಗೊಳಿಸುತ್ತಿರುವ ಈ ಹಳ್ಳಿ, ಸಮೃದ್ಧ ಚಾರಿತ್ರಿಕ ದಾಖಲೆಗಳನ್ನು, ಸ್ಮಾರಕಗಳನ್ನು ಹೊಂದಿದ್ದು, ಪ್ರಾಚೀನ ದೇವಾಲಯಗಳು, ಸ್ಮಾರಕಗಳು, ಕಟ್ಟಡಗಳು, ಕೆರೆ-ಕಟ್ಟೆ, ಕಲ್ಯಾಣಿ, ಕಾಲುವೆಗಳು ಸಂಶೋಧನೆಗೆ ಉಪಯುಕ್ತ ಆಕರಗಳಾಗಿವೆ.



ಅನಂತಪದ್ಮನಾಭ ದೇವಾಲಯ

ಬೂದನೂರಿನ ಮೂಲಸ್ಥಳ ಹ್ಯಾಡರಹಳ್ಳಿ. ಇಲ್ಲಿಂದ ಯಾವುದೊ ಸಾಂಕ್ರಮಿಕ ರೋಗ ಬಂದು ಇಡೀ ಊರಿನ ಜನ ಗ್ರಾಮವನ್ನು ತೊರೆದು ದಕ್ಷಿಣಾಭಿಮುಖವಾಗಿ ಎರಡು ಮೈಲು ದೂರಕ್ಕೆ ಬಂದು ನೆಲೆಸಿದರು. ಮೂಲ ಗ್ರಾಮ ಹ್ಯಾಡ್ರಳ್ಳಿ ಈಗ ಬೇಚ-ರಾಕ್ ಗ್ರಾಮವಾಗಿದ್ದು ಹಲವಾರು ಪ್ರಾಚೀನ ಅವಶೇಷಗಳು ಗದ್ದೆಗಳಲ್ಲಿ ಅನಾಥವಾಗಿ ಬಿದ್ದಿವೆ. ಹ್ಯಾಡರಹಳ್ಳಿ ಗ್ರಾಮ ತೊರೆದು ವಲಸೆ ಬಂದ ಜನರು ಬೂದನೂರು ಎಂಬ ಗ್ರಾಮದಲ್ಲಿ ನೆಲೆ ನಿಂತರು. ಕಾಲಾನಂತರದಲ್ಲಿ ಕೆಲವು ಕುಟುಂಬಗಳು ಬೂದನೂರಿನಿಂದ ಒಂದು ಮೈಲು ಪಶ್ಚಿಮಕ್ಕೆ ಹೋಗಿ ನೆಲೆಸಿದರು. ಅಂದಿನಿಂದ ಹಳೇ ಊರನ್ನು ಹಳೇಬೂದನೂರು ಎಂತಲೂ, ಹೊಸದಾಗಿ ಕಟ್ಟಿದ ಗ್ರಾಮಕ್ಕೆ ಹೊಸಬೂದನೂರು ಎಂತಲೂ ಕರೆಯಲಾಗಿದೆ. ಮಧ್ಯೆ ಕೆರೆಯಿದ್ದು ಪೂರ್ವ-ಪಶ್ಚಿಮಕ್ಕೆ ಊರುಗಳಿವೆ. ಬೂದನೂರಿನಲ್ಲಿ ಕರ್ನಾಟಕದ ಪ್ರಥಮ ರಾಜವಂಶವಾದ ಗಂಗರ ಕಾಲದಿಂದ ಸತತವಾಗಿ ಜನಜೀವನ ಸಾಗಿ ಬಂದಿದ್ದನ್ನು ಇಲ್ಲಿನ ಶಾಸನಗಳು ತಿಳಿಸುತ್ತವೆ.

೧೦-೧೧ನೇ ಶತಮಾನದ ಶಾಸನದಲ್ಲಿ ಗಂಗರ ಸತ್ಯವಾಕ್ಯ ಗೋವಿಂದನ ಹೆಸರು ಪ್ರಸ್ತಾಪವಿರುವುದರಿಂದ ಈ ಗ್ರಾಮ ಆತನ ವ್ಯಾಪ್ತಿಗೆ ಸೇರಿತ್ತು. ಗಂಗವಂಶದ ಗೋವಿಂದ ೨ನೇ ಬೂತುಗನ ಮೊಮ್ಮಗ ಎಂಬ ಅಭಿಪ್ರಾಯ ಸತ್ಯವಾದರೆ ಆತನ ತಾತನ ಕಾಲದಲ್ಲೇ ಈ ಊರಿಗೆ ಬೂತುಗನ ಊರು ಎಂಬ ಹೆಸರು ಬಂದಿರಬೇಕು. ಬೂತುಗಊರು-ಬೂತುಗನೂರು-ಬೂತನೂರು-**ಬೂದನೂರು** ಎಂದಾಗಿರಬೇಕು.

ಒಂದು ಐತಿಹ್ಯದ ಪ್ರಕಾರ ಹೆಬ್ಬಳದಮ್ಮ ದೇವತೆಯ ಶಾಪದಿಂದ ಇಡಿ ಊರೇ ಸುಟ್ಟು ಬೂದಿಯಾಗಿತ್ತು. ಹಾಳುಬಿದ್ದ ಊರಿನಲ್ಲಿ ಬೂದಿಗುಡ್ಡ (Ash Mound)ಗಳಿದ್ದು ಮಾನವನ ನೆಲೆವೀಡಾಗಿರುವ ಸಾಧ್ಯತೆಗಳಿವೆ. ಹಾಳುಬಿದ್ದು ಬೂದಿಯಿಂದ ಆವೃತ್ತವಾಗಿದ್ದ ಊರಿನಲ್ಲಿ ಕಾಲಾನಂತರ ಚನ್ನಪ್ಪ ಮತ್ತು ಸಿದ್ದಪ್ಪ ಎಂಬ ಸಹೋದರರು ಇಲ್ಲಿ ಬಂದು ನೆಲಸಿ ಊರು ಪುನರ್ ನಿರ್ಮಾಣಕ್ಕೆ ಕಾರಣರಾದರು. ಬೂದಿ ಸ್ಥಳದಲ್ಲೇ ತಲೆ ಎತ್ತಿದ ಊರಿಗೆ ಬೂದಿಊರು ಎಂದು ಕರೆಯಲಾಗಿ ಬೂದಿಊರು-ಬೂದಿಯೂರು-**ಬೂದನೂರು** ಎಂದಾಗಿರ ಬಹುದು.

ಗಂಗರ ನಂತರ ದೀರ್ಘಕಾಲ ಆಳಿದ ಚೋಳರ ಹಳೇಬೂದನೂರು ಶಾಸನದಲ್ಲಿ ರಕ್ಕಸಗಂಗನು ಕ್ರಿ.ಶ. ೧೦೦೪ರಲ್ಲಿ ರಾಜೇಂದ್ರನ ಮಾಂಡಲಿಕನಾಗಿದ್ದನೆಂದು ಉಲ್ಲೇಖಿಸಲಾಗಿದೆ. ಆಗ ಮಂಡ್ಯವು ಚೋಳರ ಮುಡಿಗೊಂಡ ಚೋಳ ಮಂಡಲಕ್ಕೆ ಸೇರಿದ್ದು ರಾಜೇಂದ್ರಚೋಳ ವಳನಾಡಿನಲ್ಲಿ ಇತ್ತು.

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಹೊಯ್ಸಳರದು ಸಿಂಹಪಾಲು. ಹೊಯ್ಸಳ ವಂಶದ ಸುಮಾರು ೨೪೬ ಶಾಸನಗಳು ಇಲ್ಲಿಯವರೆಗೂ ವರದಿಯಾಗಿವೆ. ಇವರ ಶಾಸನಗಳು ಹೊಯ್ಸಳ ರಾಜ್ಯದ ಕುತೂಹಲಕರ ಸಂಗತಿಗಳನ್ನು ತಿಳಿಸುವುದಲ್ಲದೆ ಕನ್ನಡ, ತಮಿಳು ಹಾಗು ಸಂಸ್ಕೃತ ಮಿಶ್ರ

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿ.ವಿ ಪುರಂ ಕಲಾ ಕಾಲೇಜು, ಕೆ ಆರ್ ರಸ್ತೆ, ಬೆಂಗಳೂರು-೫೬೦೦೦೪

[illegible] ವಾಗಿ ಅವರ [illegible] ಬಗ್ಗೆ ಪ್ರಚಲಿತವಿರುವ ಪಾರಂಪರಿಕ ಕಥೆಯನ್ನು ತಿಳಿಸುವ ಹಲವು ಶಾಸನಗಳಿವೆ. (ಎ.ಕ. ಸಂ–VI). ಹೊಯ್ಸಳರ ಆಡಳಿತಕ್ಕೆ ಸಂಬಂಧಪಟ್ಟಂತೆ ಕ್ರಿ.ಶ. ೧೧ನೇ ಶತಮಾನದ ಮಧ್ಯಭಾಗಗಳಲ್ಲಿಯೇ ಅವರು ಚೋಳರ ಆಡಳಿತವನ್ನು ಮಂಡ್ಯ ಜಿಲ್ಲೆಯ ಕೆಲವು ಭಾಗಗಳಲ್ಲಿ ವಿರೋಧಿಸಿ ಅಲ್ಲಿ ತಳವೂರಿದ ವಿಚಾರವನ್ನು ಸೂಚಿಸುತ್ತವೆ. ಆ ಸಮಯದಲ್ಲಿ ಅವರು ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿದ್ದರು. ವಿನಯಾದಿತ್ಯನ ಕ್ರಿ.ಶ. ೧೦೪೮–೯೯ರ ತೊಣಚಿಯ ಶಾಸನ ಹಾಗು ಎರೆಯಂಗನ ಕ್ರಿ.ಶ. ೧೦೫೨ರ ಹಳೇ ಬೂದನೂರಿನ ಶಾಸನಗಳು ಇವುಗಳ ಪೈಕಿ ಉಲ್ಲೇಖವಿದೆ. (ಎ.ಕ. ಸಂ–VI).

ಬೂದನೂರಿನ ಕೆರೆಯ ಪೂರ್ವ ಹಾಗು ಪಶ್ಚಿಮದಲ್ಲಿರುವ ಎರಡು ಊರುಗಳು ಐತಿಹಾಸಿಕ ದಾಖಲೆಗಳ ಪ್ರಕಾರ ಈ ಗ್ರಾಮದ ಹೆಸರು ಬೂದನೂರು. ಈ ಎರಡು ಬೂದನೂರಿನ ಎಲ್ಲೆಯಲ್ಲಿ ಒಟ್ಟು ಒಂಬತ್ತು ಶಾಸನ ಗಳು ಎಪಿಗ್ರಾಫಿಯ ಕರ್ನಾಟಿಕ ಸಂಪುಟ ೭ರಲ್ಲಿ ದಾಖಲಾಗಿವೆ. ಇಲ್ಲಿದ್ದ ಶಾಸನಗಳೆಲ್ಲವೂ ಕಣ್ಮರೆಯಾಗಿವೆ. ಹಳೇಬೂದನೂರಿನ ಸೋಮೇಶ್ವರ ದೇವಾಲಯ ಪಕ್ಕದಲ್ಲಿ ಮಂಟಪಗಳು, ವೀರಗಲ್ಲುಗಳು, ಹಾಗು ಮೂಲ ಗರ್ಭಗುಡಿ ಸುಮಾರು ಮೂವತ್ತು ವರ್ಷಗಳ ಹಿಂದೆ ನೋಡಲು ಲಭ್ಯವಿದ್ದವು. ಗರ್ಭಗುಡಿಯನ್ನು ಮಾತ್ರ ಉಳಿಸಿ ಉಳಿದೆಲ್ಲಾ ಭಾಗವನ್ನು ಕೆಡವಿ ಜೀರ್ಣೋದ್ಧಾರ ಕಾರ್ಯ ಕೈಗೊಂಡಾಗ ಎಲ್ಲಾ ಪ್ರಾಚೀನ ಶಿಲಾಮಂಟಪಗಳು, ಕಂಬಗಳು, ಬೋದಿಗೆ, ಸಣ್ಣಪುಟ್ಟ ಭಗ್ನಗೊಂಡ ವಿಗ್ರಹಗಳು ಇತರೆ ಎಲ್ಲಾ ವಸ್ತುಗಳನ್ನು ಪಕ್ಕದ ಹಳದಲ್ಲಿ ಬಿದ್ದಿವೆ.

ಕ್ರಿ.ಶ. ೧೦೫೨ರಲ್ಲಿ ಶ್ರೀಹೊಯ್ಸಳ ಎರೆಗಂಗದೇವನ ಶಾಸನ ಅಸ್ಪಷ್ಟವಾಗಿದೆ. ಈ ವೀರಗಲ್ಲು ಶಾಸನ ಭಗ್ನಗೊಂಡಿದ್ದು ಹೊಯ್ಸಳ ಮಂಡಳೇಶ್ವರ ಎರೆಯಂಗನು ನಂದನ ಸಂವತ್ಸರದಲ್ಲಿ ಆಳುತ್ತಿದ್ದಾಗ ವೀರನೊಬ್ಬ ಮರಣ ಹೊಂದಿದ ಬಗ್ಗೆ ಉಲ್ಲೇಖವಿದೆ. ಅದಿಪನನ್ನು ವಿನಯಾದಿತ್ಯನ ಮಗ ಹೊಯ್ಸಳ ಎರೆಯಂಗನೆಂದು ಗುರುತಿಸಲಾಗಿದೆ. ಈ ಶಾಸನ ಉಲ್ಲೇಖವೇ ಎರೆಯಂಗನ ಪ್ರಥಮ ಉಲ್ಲೇಖವೂ ಆಗಿರುತ್ತದೆ. **ವಿಲಿಯಂ ಕೊಯಿಲ್ಹೊ** ಅವರ ಹೊಯ್ಸಳ ವಂಶ ಗ್ರಂಥದಲ್ಲಿ ಕ್ರಿ.ಶ. ೧೦೪೪ರ ಹೊತ್ತಿಗೆ ವಿನಯಾದಿತ್ಯನು ತನ್ನ ಮಗನೊಡಗೂಡಿ ಗಂಗವಾಡಿಯನ್ನು ಆಳುತ್ತಿದ್ದನೆಂದು ಉಲ್ಲೇಖವಿದೆ. ಆದರೆ ಕೊಯಿಲ್ಹೊ ಅವರು ಉಲ್ಲೇಖಿಸಿರುವ ಶಾಸನದ ಕಾಲ ಕ್ರಿ.ಶ. ೧೦೬೩ ಎಂದು ಖಚಿತಪಡಿಸಲಾಗಿದೆ.

ಕೆರೆ–ಕಟ್ಟೆಗಳಿಗೆ ಸಂಬಂಧಪಟ್ಟ ಶಾಸನ

ಮಂಡ್ಯ ತಾಲೂಕು ಹಳೇಬೂದನೂರಿನ ಕ್ರಿ.ಶ. ೯೭೫ರ ಶಾಸನದಲ್ಲಿ ಗಂಗ ಸತ್ಯವಾಕ್ಯ ಗೋವಿಂದರ ಹಾಗು ರಕ್ಕಸಗಂಗ (ಕ್ರಿ.ಶ. ೯೮೫–೧೦೨೪)ರನ್ನು ಹೆಸರಿಸುತ್ತಾ ಸೋವರಾಸಿ ಭಟಾರರು ಬೂದನೂರಿನಲ್ಲಿ ನಿರ್ಮಿಸಿದ ಕೆರೆಯ ನಿರ್ವಹಣೆಗೆಂದು ಬೂದನೂರಿನ ಗೌಡರು ಭೂಮಿಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. (ಮಂಡ್ಯ ಜಿಲ್ಲಾ ಗೆಜೆಟಿಯರ್, ಪುಟ ೮೪) ಗಂಗರ ಕಾಲದಲ್ಲಿ ನಿರ್ಮಾಣವಾಗಿರುವ ಬೂದನೂರು ಕೆರೆ ಕಂದಾಯ ದಾಖಲಾತಿಗಳ ಪ್ರಕಾರ ಸುಮಾರು ೨೫೦ ಎಕರೆ ವಿಸ್ತೀರ್ಣದಲ್ಲಿದೆ. ಸೋವರಾಸಿ ಭಟಾರಕ ನಿರ್ಮಿಸಿದ ಈ ಕೆರೆಗೆ ದಾನ ನೀಡಿದ ಬೂದನೂರು ಗೌಡನಾದ ಚಾಮಯ್ಯ ಮತ್ತು ಜಯಮ್ಮ ಎಂಬುವವರ ಹೆಸರುಗಳ ಉಲ್ಲೇಖವಿದೆ. ಶ್ರೇಣೀಕೃತ ಕೆರೆ ಪದ್ಧತಿಯಂತೆ ಈ ಕೆರೆಗೆ ಬೆಳುಂಡಗೆರೆ, ಉಮ್ಮಡಹಳ್ಳಿ ಕೆರೆಯ ಹೆಚ್ಚುವರಿ ನೀರು ಹಾಗು ಹ್ಯಾದ್ರಳ್ಳಿ ಚೊಕ್ಕನ ಗುಂಡಿ ಹಳ್ಳದ ನೀರು ಹರಿದು ಬರುತ್ತದೆ. ಸಂಗ್ರಹವಾದ ನೀರಿನ ನಿರ್ವಹಣೆಗೆಂದು ನೀರುಗಂಟಿಗಳಿರುತ್ತಿದ್ದು ಬೇಸಾಯಕ್ಕೆ, ಜಾನುವಾರುಗಳಿಗೆ ಉಪಯೋಗವಾಗುತ್ತಿದ್ದು ಈ ಕೆರೆಯಲ್ಲಿ ಎರಡು ತೂಬುಗಳಿದ್ದು, ಪೂರ್ವದ ಕಡೆ ಹಳೇಬೂದನೂರು ಅಚ್ಚುಕಟ್ಟು ಪ್ರದೇಶಕ್ಕೂ, ಪಶ್ಚಿಮದ ಕಡೆ ಹೊಸಬೂದನೂರು ಅಚ್ಚುಕಟ್ಟು ಪ್ರದೇಶಕ್ಕೂ ಇಂದಿಗೂ ನೀರಾವರಿ ಸೌಲಭ್ಯವಾಗುತ್ತಿದೆ. ಕೆರೆಯ ಮಧ್ಯ ಭಾಗದಲ್ಲಿ ಕೋಡಿ ಇದ್ದು ಮಳೆಗಾಲದಲ್ಲಿ ಹಾಗು ಹೆಚ್ಚುವರಿ ನೀರು ಕೋಡಿಬಿದ್ದು ಎರಡು ಕಿ.ಮೀ. ಅಂತರದಲ್ಲಿರುವ ಬೇಲೂರು ಕೆರೆಗೆ ಸೇರುತ್ತದೆ.

ಕೆರೆಯ ಜೊತೆಗೆ ಕೈತೋಟ ಹಾಗು ಸೊಪ್ಪು–ತರಕಾರಿ ಬೆಳೆಯಲು ಬೂದನೂರಿನಲ್ಲಿ ಪ್ರಾಚೀನ ಕಾಲದ ಐದು ಕಟ್ಟೆಗಳಿವೆ. ಅವುಗಳೆಂದರೆ ಕೀರೇಮಡಿಕಟ್ಟೆ, ಅಜ್ಜಿಕಟ್ಟೆ, ಮೂರು ಎಕರೆ ವಿಸ್ತಾರದ ಬೋರೆಕಟ್ಟೆ, ಚಾಮಯ್ಯನಕಟ್ಟೆ, ಸಿಹಿನೀರಿನ ಕಟ್ಟೆ. ಸಿರಿವಂತರಿಂದಲೊ ಅಥವಾ ಗ್ರಾಮ ಸಮುದಾಯದಿಂದಲೋ ನಿರ್ಮಿಸಲ್ಪಟ್ಟಿರುವ ಈ ಕಟ್ಟೆಗಳು ಗ್ರಾಮೀಣ ಪರಿಸರದಲ್ಲಿ ತಮ್ಮದೇ ಅದ ಮಹತ್ವವನ್ನು ಹೊಂದಿದ್ದವು. ಊರಿನ ಮಧ್ಯೆ ಹಾಗು ಊರಿನ ಹೊರವಲಯದಲ್ಲಿದ್ದ ಈ ಕಟ್ಟೆಗಳು ಕಾಲ ಕ್ರಮೇಣ ಬತ್ತಿ ಹೋಗಿ ಕೆಲವು ಒತ್ತುವರಿಯಾಗಿ ಅಳಿದುಳಿದವು ಹಾಳು ಹಳ್ಳದಂತಿವೆ. ಸೋಮೇಶ್ವರ ದೇವಾಲಯದ ಹಿಂಭಾಗದಲ್ಲಿ ಒಂದು ಸುಂದರವಾದ ಕಲ್ಯಾಣಿ ೧೫ ಸಾಲುಗಳ ಮೆಟ್ಟಿಲುಗಳನ್ನುಳ್ಳ, ಇಳಿಜಾರಿನಿಂದ ಚೌಕಕಾರವಾಗಿ ಕೂಡಿದ್ದು, ಅಲ್ಲಲ್ಲಿ ಕಲ್ಲಿನ ಮೇಲೆ ಒರಟಾದ ಉಬ್ಬುಶಿಲ್ಪಗಳಿದ್ದು ೨೦ ಅಡಿ ಆಳವಿದ್ದು ದೇಗುಲದ ಪೂಜಾ



ಕಾರ್ಯಕ್ಕೆ ಹಾಗು ಪವಿತ್ರ ಕಾರ್ಯಕ್ರಮಗಳಿಗೆ ಇಲ್ಲಿನ ಕೊಳದ ನೀರನ್ನು ಬಳಸುತ್ತಿದ್ದರು. ಇಂದು ಈ ಕಲ್ಯಾಣಿ ಗಿಡ ಗೆಂಟೆಗಳು ಬೆಳೆದುಕೊಂಡು ಗುರುತಿಸುವುದು ಕಷ್ಟವಾಗಿದೆ.

ಹ್ಯಾಡರಹಳ್ಳಿ ಸ್ಮಾರಕಗಳು

ಬೂದನೂರಿನ ಉತ್ತರದ ಕಡೆ ಮೂರು ಕಿ.ಮೀ. ದೂರದಲ್ಲಿರುವ ಬೇಚ-ರಾಕ್ ಗ್ರಾಮ ಹ್ಯಾಡರಹಳ್ಳಿ. ಹೊಯ್ಸಳರ ಕಾಲಕ್ಕೆ ಸೇರಿರಬಹುದಾದ ವೀರಗಲ್ಲು, ಮಾಸ್ತಿಗಲ್ಲು, ಗುಡಿ ಅಥವಾ ಮಂಟಪಗಳಿಗೆ ಬಳಸಲಾಗಿದ್ದ ಚಪ್ಪಡಿಕಲ್ಲು, ಕಂಬಗಳು, ಭಗ್ನಗೊಂಡ ಉಬ್ಬುಶಿಲ್ಪಗಳು, ಬೃಹತಾದ ರುಬ್ಬು (ಒಳ್)ಕಲ್ಲು, ಗುಂಡುಕಲ್ಲು, ಜೋದಿಗೆಗಳು, ನಾಗರಕಲ್ಲುಗಳು ಇನ್ನೂ ಮುಂತಾದ ಶಿಲಾಸ್ಮಾರಕಗಳು ಅನಾಥವಾಗಿ ಬಿದ್ದಿವೆ. ಹ್ಯಾಡ್ರಳ್ಳಿ ನಿರ್ವಸತಿ ಗ್ರಾಮವಾಗಿದ್ದು ಇದರ ವ್ಯಾಪ್ತಿಗೆ ಬರುವ ಭೂಪ್ರದೇಶದಲ್ಲಿ ಸಂಪೂರ್ಣ ಗದ್ದೆಗಳಿದ್ದು, ಕೆಲವು ಕಡೆ ಗದ್ದೆಗಳ ಬದುಗಳಿಗೆ ಶಿಲಾ ಸ್ಮಾರಕಗಳನ್ನು ಬಳಸಿಕೊಂಡಿರುವುದು ದುರಾದೃಷ್ಟದ ಸಂಗತಿ. ಇಂದಿಗೂ ಸಹ ಗದ್ದೆಯ ಕೆಲವು ಸ್ಥಳಗಳಲ್ಲಿ ಹಾಗು ಹುತ್ತಗಳಿರುವ ಕಡೆ ಬೂದನೂರಿನ ಜನತೆ ಶಿವರಾತ್ರಿಯ ನಂತರ ಹಾಗು ಯುಗಾದಿಯ ಮುನ್ನ ದಿನಗಳಲ್ಲಿ ಪ್ರಾಚೀನ ಪರಂಪರೆಯ "ಮುನೇಶ್ವರನ ಪೂಜೆ" ಮಾಡುವ ಪದ್ಧತಿ ಕಂಡುಬರುತ್ತದೆ.



ಬನಶಂಕರಿ ದೇವಾಲಯ

ಬೂದನೂರು ಹಾಗು ಹ್ಯಾಡ್ರಳ್ಳಿ ನಡುವೆ ನಿರ್ವಸತಿ ನೀರಾವರಿ ಭೂಪ್ರದೇಶದಲ್ಲಿ ಬನಶಂಕರಮ್ಮ ಗುಡಿ ಇದೆ. ಹೆಬ್ಬಳದಮ್ಮ, ಬನಶಂಕರಮ್ಮ, ಕಬ್ಬಾಳಮ್ಮ ಎಂಬೆಲ್ಲಾ ಹೆಸರುಗಳಿಂದಲೂ ಕರೆಯಲ್ಪಟ್ಟಿದೆ. ಗಂಗರ ಕಾಲದಲ್ಲಿ ನಿರ್ಮಿಸಿರಬಹುದಾದ ಈ ದೇವಾಲಯ, ಗರ್ಭಗುಡಿ ಮಾತ್ರ ಇದ್ದು ನಾಲ್ಕು ಶಿಲಾಕಂಬಗಳಿದ್ದು, ಆರು ಅಡಿ ಎತ್ತರವಾಗಿದ್ದು ಮೇಲ್ಛಾವಣೆಯು ಕಲ್ಲಿನಿಂದ ಮುಚ್ಚಲ್ಪಟ್ಟಿದ್ದು ಒಂದೂವರೆ ಅಂಕಣದ ದೇಗುಲ ಇದಾಗಿದೆ. ಗರ್ಭಗುಡಿಯ ಒಳಭಾಗದಲ್ಲಿ ಸಾಲಂಕೃತವಾಗಿ ಸಪ್ತಮಾತೃಕೆಯರ (ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಿ) ವಿಗ್ರಹಗಳ ಉಬ್ಬು ಶಿಲಾಶಿಲ್ಪವು ಎರಡುವರೆ ಅಡಿ ಎತ್ತರ, ಏಳು ಅಡಿ ಅಗಲವಾಗಿರುವ ಕಲ್ಲಿನಿಂದ ಕೆತ್ತಲ್ಪಟ್ಟಿದೆ. ಗರ್ಭಗುಡಿಯ ಹೊರಭಾಗದಲ್ಲಿ ೫ ಅಡಿ ಎತ್ತರದ ಮಂಟಪ, ದೇಗುಲ ಮುಂದೆ ಆರು ಅಡಿ ಎತ್ತರದ ಸ್ತಂಭ, ನಡುವೆ ಐದು ಅಡಿ ಎತ್ತರದ ಶಿಲಾ ಹೆಬ್ಬಾಗಿಲು ಇರುವುದನ್ನು ನೋಡಿದರೆ ಇಲ್ಲಿ ಪೂರ್ಣ ಪ್ರಮಾಣದ ದೇವಾಲಯವಿದ್ದಂತೆ ತೋರುತ್ತದೆ. ವಿಶೇಷ ದಿನಗಳಲ್ಲಿ ಪೂಜೆ ನಡೆಯುತ್ತಿದ್ದು, ನಿರ್ವಹಣೆ ಇಲ್ಲದಾಗಿದೆ.

ಹಳೇಬೂದನೂರಿನ ಸೋಮೇಶ್ವರ ದೇವಾಲಯ ಚೋಳರ ಕಾಲಕ್ಕೆ ಸೇರಿದ್ದು, ದೇಗುಲದ ಗರ್ಭಗೃಹದಲ್ಲಿ ಬೃಹದಾಕಾರವಾದ ಶಿವಲಿಂಗವಿದೆ. ಮಂಟಪಾಕಾರವಾಗಿರುವ ಗರ್ಭಗುಡಿಯ ಮೇಲ್ಛಾವಣೆ ಕಲ್ಲಿನ ಹೊದಿಕೆಯಿಂದ ಕೂಡಿದ್ದು, ಪ್ರಾಂಗಣದಲ್ಲಿ ನಾಲ್ಕು ಶಿಲಾಕಂಭಗಳಿದ್ದು, ಗೋಡೆಯ ಅಂಚಿನಲ್ಲಿ ಗಣಪತಿ, ಮಾತೃಕೆ ವಿಗ್ರಹಗಳಿವೆ. ನಂದಿ ವಿಗ್ರಹ, ದೇಗುಲದ ಮುಂದೆ ೧೫ ಅಡಿ ಎತ್ತರದ ಕಂಬವಿದೆ. ಗಚ್ಚುಗಾರೆ ಬಳಸಿ ನಿರ್ಮಿಸಿರುವ ಗೋಪುರವಿದ್ದು, ಬಲಕ್ಕೆ ೧೦ ಅಡಿ ಎತ್ತರದ ಕಲ್ಲಿನ ಮಂಟಪ ಇತ್ತು. ನಾಗರ ಕಲ್ಲಿನ ವಿಗ್ರಹಗಳಿದ್ದು ಪ್ರತಿ ಶಿವರಾತ್ರಿ ಮುನ್ನ ಬರುವ ಸೋಮವಾರದಂದು ನಾಗರಹಬ್ಬ ಆಚರಿಸಲಾಗುತ್ತಿದೆ. ಮಂಡ್ಯ ಜಿಲ್ಲೆಯಲ್ಲಿಯೇ ಅಪರೂಪ ವೆನಿಸಿದ ನಾಗರಪಂಚಮಿ ತನ್ನದೇ ಆದ ಹಲವು ವಿಶೇಷತೆಗಳನ್ನು ಹೊಂದಿದೆ.

ಹೊಸ ಬೂದನೂರು

ಗಂಗರ ಕಾಲದಲ್ಲಿ ಸೋಮರಾಸಿ ಭಟಾರಕ ನಿರ್ಮಿಸಿರುವ ಕೆರೆಯ ಪಶ್ಚಿಮದ ಕಡೆ ಹೊಸದಾಗಿ ನಿರ್ಮಾಣಗೊಂಡಿರುವ ಊರನ್ನು ಹೊಸಬೂದನೂರು ಎಂದು ಕರೆಯುಲಾಗಿದೆ. ಹೊಯ್ಸಳರ ಕಾಲದಲ್ಲಿ ಹೊಸ ಬೂದನೂರನ್ನು 'ಪದುಮನಾಭಪುರ' ಎಂದು ಕರೆಯಲಾಗಿದೆ.

ಈ ಸ್ಥಳ ಶೈವ-ವೈಷ್ಣವ ಧಾರ್ಮಿಕ ಕೇಂದ್ರವಾಗಿ ರೂಪುಗೊಂಡಿತು. ಅನಂತಪದ್ಮನಾಭ ಹಾಗು ಕಾಶಿ ವಿಶ್ವೇಶ್ವರ ದೇವಾಲಯಗಳು ಹೊಯ್ಸಳ ಶೈಲಿಯ ವಿನ್ಯಾಸದಲ್ಲಿ ನಿರ್ಮಿಸಲಾಗಿವೆ. ಅನಂತಪದ್ಮನಾಭ ದೇವಾಲಯ ದಲ್ಲಿ ಹೊಯ್ಸಳ ಮೂರನೇ ನರಸಿಂಹನ (ಕ್ರಿ.ಶ. ೧೨೭೬) ಕಾಲದ ಶಾಸನ ಇದೆ. ಹೊಯ್ಸಳರ ದೊರೆ ೩ನೇ ಬಲ್ಲಾಳನು ಬೂದನೂರನ್ನು ಅಗ್ರಹಾರವನ್ನಾಗಿ ಮಾಡಿದನು. ೧೪ನೇ ಶತಮಾನದ ವೀರಗಲ್ಲುಗಳಿವೆ. ಶ್ರೀರಂಗಪಟ್ಟಣ, ವಿಜಯನಗರ ಕಾಲದಲ್ಲಿ ಒಂದು ಪ್ರಾಂತವಾದ ಮೇಲೆ ಅದರ ಅಧೀನಕ್ಕೆ ಬೂದನೂರು ಒಳಪಟ್ಟಿತು. ತದನಂತರ ಮೈಸೂರು ಒಡೆಯರು ಹಾಗು ಹೈದರ್, ಟಿಪ್ಪು ಆಳ್ವಿಕೆಗೆ ಒಳಪಟ್ಟಿತು. ಇವರ ಕಾಲದಲ್ಲಿ ಮುಸ್ಲಿಮರು ಇಲ್ಲಿ ವಾಸವಾಗಿದ್ದು ಅದಕ್ಕೆ ಸಾಕ್ಷಿ ಎಂಬಂತೆ ಅವರು ವಾಸವಿದ್ದ ರಸ್ತೆಯನ್ನು ತುರ್ಕರ ಕೇರಿ ಎಂದು ಈಗಲೂ ಕರೆಯವ ವಾಡಿಕೆ ಇದೆ.

ಅನಂತ ಪದ್ಮನಾಭದೇವಾಲಯ

ಹೊಸ ಬೂದನೂರಿನ ಹೊಯ್ಸಳರ ಕಾಲದ ಅನಂತಪದ್ಮನಾಭ ದೇವಾಲಯ ಒಂದು ಗರ್ಭಗೃಹವುಳ್ಳ ಏಕಕೂಟ ದೇವಾಲಯವಾದ ಇದರಲ್ಲಿ ಒಂದು ಸುಖನಾಸಿ, ಒಂದು ನವರಂಗ ಮತ್ತು ಒಂದು ಮುಖಮಂಟಪವಿದ್ದು ಸಂಪೂರ್ಣವಾಗಿ ಸೋಪುಗಲ್ಲಿನಿಂದ ಕಟ್ಟಲಾಗಿದೆ. ಗರ್ಭಗೃಹವು ಒಳಗಡೆಯಿಂದ ಒಂದು ಚೌಕಾಕಾರದ ಭಾಗದಂತೆ ಕಂಡರೂ ಹೊರಗಡೆಯಿಂದ ಅದು ಯಥಾ ಪ್ರಕಾರ ಹೊಯ್ಸಳ ಶೈಲಿಯ ನಕ್ಷತ್ರಾಕಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ಆರು ಅಡಿ ಎತ್ತರದ ಸುಂದರ ಹಾಗೂ ಆಕರ್ಷಕವಾಗಿ ಕೆತ್ತಿರುವ ಅನಂತಪದ್ಮನಾಗಿರುವ ವಿಷ್ಣುವಿನ ವಿಗ್ರಹವಿದ್ದು ನಾಲ್ಕು ಕೈಗಳನ್ನು ಹೊಂದಿದ್ದು ಈ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳು ಕಂಡುಬರುತ್ತವೆ. ಮೂರ್ತಿಯನ್ನು ಒಂದು ಪೀಠದ ಮೇಲೆ ನಿಲ್ಲಿಸಿದ್ದು ಅದರ ಸುತ್ತಲೂ ಇರುವ ತೋರಣದಲ್ಲಿ ಉಬ್ಬು ಕೆತ್ತನೆಯ



ಶಿಲ್ಪಗಳಾಗಿ ದಶಾವತಾರವನ್ನು ಕೆತ್ತಲಾಗಿದ್ದು ವಿಷ್ಣುವಿನ ತಲೆಯ ಬರುವಂತೆ ಸಿಂಹ ಮುಖವನ್ನು ಸಹ ಕೆತ್ತಲಾಗಿದೆ. ಗರ್ಭಗೃಹ ಮತ್ತೊಂದು ಆಕರ್ಷಣೆ ಎಂದರೆ ಇದರ ಬಾಗಿಲುವಾಡಗಳು, ಅಲ್ಲಿಯೂ ಸಹ ಉಬ್ಬು ಕೆತ್ತನೆಯ ಅಲಂಕಾರಕ ತೋರಣಗಳನ್ನು ಕೆತ್ತಲಾಗಿದ್ದು, ಲಲಾಟಬಿಂಬದಲ್ಲಿ ಲಕ್ಷ್ಮಿಯ ಶಿಲ್ಪವಿದ್ದು ಕೆಳಭಾಗದಲ್ಲಿ ದ್ವಾರಪಾಲಕರನ್ನು ಕೆತ್ತಲಾಗಿದೆ. ಇದರ ಭುವನೇಶ್ವರಿಯನ್ನು ಸಹ ಕಮಲದ ಹೂವಿನ ರೀತಿಯಲ್ಲಿ ಕೆತ್ತಲಾಗಿದೆ. ಗರ್ಭಗೃಹದ ಉತ್ತರ ಮತ್ತು ದಕ್ಷಿಣದ ಗೋಡೆಗಳಲ್ಲಿ ಜಾಲಾಂದ್ರಗಳನ್ನು ಅಳವಡಿಸಲಾಗಿದೆ.

ಗರ್ಭಗೃಹದ ಮುಂಭಾಗದಲ್ಲಿ ಚೌಕಾಕಾರದ ಸುಖನಾಸಿ ಇದ್ದು ಇದರ ಬಾಗಿಲುವಾಡಗಳನ್ನು ಸಹ ಗರ್ಭಗೃಹದ ಮಾದರಿಯಲ್ಲೇ ಅಲಂಕರಿಸಲಾಗಿದ್ದು ದ್ವಾರಪಾಲಕರನ್ನು ಸಹ ಹೊಂದಿದೆ. ಇದರ ಭುವನೇಶ್ವರಿ ಸಹ ಕಮಲದ ಹೂವಿನ ಕೆತ್ತನೆಯನ್ನು ಹೊಂದಿದ್ದು ಹದಿನಾರು ಪಟ್ಟಿಕೆಗಳನ್ನು ಹೊಂದಿದೆ.

ಸುಖನಾಸಿಯ ಮುಂಭಾಗದಲ್ಲಿ ವಿಶಾಲವಾದ ಚೌಕಾಕಾರ ನವರಂಗವಿದ್ದು ಮಧ್ಯಭಾಗದಲ್ಲಿ ತಿರುಗುರಾಟೆ ಸಹಾಯದಿಂದ ತಯಾರಿಸಿದ ಸುಂದರವಾದ ಆಕರ್ಷಕವಾಗಿರುವ ಸೋಪುಗಲ್ಲಿನ ನಾಲ್ಕು ಕಂಬಗಳನ್ನು ಹೊಂದಿದ್ದು ಹೊಯ್ಸಳದ ದೇವಾಲಯಗಳ ಸಾಮಾನ್ಯ ಗುಣಲಕ್ಷಣಗಲ್ಲಿ ಇದು ಒಂದಾಗಿದೆ. ಈ ನಾಲ್ಕು ಕಂಬಗಳ ಮಧ್ಯಭಾಗವನ್ನು ಸ್ವಲ್ಪ ಎತ್ತರವಾಗಿ ಕಲ್ಲುಗಳಿಂದ ನಿರ್ಮಿಸಿದ್ದಾರೆ. ಇದನ್ನು ರಂಗಸ್ಥಳ ಎಂದು ಸಹ ಕರೆಯುತ್ತಾರೆ. ನವರಂಗದ ಮೇಲ್ಚಾವಣಿಯು ಒಂಬತ್ತು ಅಂಕಣಗಳಿಂದ ಕೂಡಿದ್ದು ಒಂಭತ್ತು ಭುವನೇಶ್ವರಿಗಳನ್ನು ಕೆತ್ತಲಾಗಿದೆ. ಈ ಭುವನೇಶ್ವರಿಗಳೇ ಬಹಳ ಆಕರ್ಷಣೆಯುಳ್ಳ ಕೆತ್ತನೆಗಳಾಗಿ ಉಳಿದುಕೊಂಡಿದೆ. ಇವುಗಳಲ್ಲಿ ಮಧ್ಯದ ಅಂಕಣದಲ್ಲಿರುವ ಭುವನೇಶ್ವರಿಯು ದೊಡ್ಡದಾಗಿದ್ದು ಬಹಳ ಆಕರ್ಷಕವಾಗಿದೆ. ಇದರ ಹೊರಭಾಗ ಚೌಕಾಕಾರವಾಗಿದ್ದು, ಒಳಭಾಗದಲ್ಲಿ ಒಂದು ರೀತಿಯ ಛತ್ರಿಯ ರೀತಿಯಲ್ಲಿ ಒಟ್ಟಾಗಿ ಕಾಣುವ ಗೋಳಾಕೃತಿಯನ್ನು ಹೊಂದಿದೆ. ಉಳಿದ ಎಂಟು ಭುವನೇಶ್ವರಿಗಳು ಸ್ವಲ್ಪ ಹೆಚ್ಚು ಕಡಿಮೆ ಒಂದೇ ಅಳತೆಯಲ್ಲಿದ್ದು ಮತ್ತು ಒಂದೇ ರೀತಿಯ ಕೆತ್ತನೆಯನ್ನು ಹೊಂದಿದ್ದು ಅವುಗಳು ಸಹ ಆಕರ್ಷಕವಾಗಿವೆ. ದೇವಾಲಯದ ಹೊರಗೋಡೆಯಲ್ಲಿ ಯಾವುದೇ ಶಿಲ್ಪಗಳಿಲ್ಲದಿದ್ದರೂ ಅಲಂಕಾರಿಕ ಕಂಬಗಳು ಹಾಗೂ ಅವುಗಳ ಮೇಲೆ ಸಣ್ಣ ಅಲಂಕಾರಿಕ ಚಜ್ಜಗಳು ಕಂಡುಬಂದಿವೆಯಲ್ಲದೆ ಅಡ್ಡಪಟ್ಟಿ ಕೆತ್ತನೆಗಳಾಗಲಿ ಅಥವಾ ಇತರೆ ಅಲಂಕಾರಿಕ ಕೆತ್ತನೆಗಳಾಗಲಿ ಕಂಡುಬರುವುದಿಲ್ಲ.

ಅನಂತಪದ್ಮನಾಭ ದೇವಾಲಯದ ಮುಖ್ಯ ಆಕರ್ಷಣೆ ಎಂದರೆ ಗರ್ಭಗೃಹದ ಮೇಲೆ ಕಂಡು ಬರುವ ಶಿಖರ.

ಇದು ಯಾವುದೇ ಹಾನಿಗೊಳಗಾಗದೆ ಸುಂದರವಾಗಿದ್ದು ಇತರೆ ಹೊಯ್ಸಳ ದೇವಾಲಯಗಳ ಶಿಖರದಂತೆಯೇ ಪಿರಮಿಡ್ ಮಾದರಿಯ ವೇಸರ ಶೈಲಿಯ ಶಿಖರ, ಸ್ತೂಪಿ ಹಾಗೂ ಕಳಸಗಳು ಕಂಡುಬರುತ್ತದೆ.

ಕಾಶಿ ವಿಶ್ವೇಶ್ವರ ದೇವಾಲಯ

ಹೊಸಬೂದನೂರಿನಲ್ಲಿರುವ ಹೊಯ್ಸಳರ ಕಾಲದ ಸೋಪುಗಲ್ಲಿನಿಂದ ಕಟ್ಟಲ್ಪಟ್ಟಿರುವ ಶಿವ ದೇವಾಲಯ. ಇದರ ಸುತ್ತಲೂ ಜಗತಿ ಇದ್ದು ಏಕಕೂಟ ದೇವಾಲಯವಾಗಿದೆ. ಒಂದು ಗರ್ಭಗೃಹ, ಒಂದು ಸುಖನಾಸಿ, ಒಂದು ನವರಂಗ ಮತ್ತು ಒಂದು ಮುಖಮಂಟಪವನ್ನು ಹೊಂದಿದೆ. ದೇವಾಲಯದ ಹೊರಗೋಡೆಯಲ್ಲಿ ಯಾವುದೇ ಅಡ್ಡಪಟ್ಟಿಕೆಗಳು ಅಲಂಕಾರಕ ಶಿಲ್ಪಗಳು ಕಂಡುಬಾರದಿದ್ದರೂ ಅಲ್ಲಲ್ಲಿ ಅಲಂಕಾರಕ ಸಣ್ಣ ಕಂಬಗಳು ಅವುಗಳ ಮೇಲೆ ಕಂಡುಬರುವ ಸಣ್ಣ ಚಜ್ಜಗಳು ಅವುಗಳಿಂದ ಉಂಟಾಗುವ ದೇವಕೋಷ್ಠಗಳು ಮಾತ್ರ ಕಂಡುಬರುತ್ತದೆ. ಗರ್ಭಗೃಹದ ಮೇಲ್ಭಾಗದಲ್ಲಿ ವಿಷ್ಣು ದೇವಾಲಯವನ್ನು ಹೋಲುವಂತಹ ಅದೇ ಮಾದರಿಯ ಶಿಖರ ಕಂಡುಬರುತ್ತದೆ. ಹಿಂದೆ ಇದೇ ಗರ್ಭಗೃಹ ಶಿಖರ ಇತ್ಯಾದಿಗಳು ನೆಲಕ್ಕೆ ಉರುಳಿ ಹೋಗಿದ್ದವು.

ಗರ್ಭಗೃಹ ಚೌಕಾಕಾರವಾಗಿದ್ದು ಮಧ್ಯಭಾಗದಲ್ಲಿ ಒಂದು ಪಾಣಿಪೀಠದ ಮೇಲೆ ಶಿವಲಿಂಗವಿದೆ. ಗರ್ಭಗೃಹದ ದ್ವಾರಬಂಧಗಳು ಅನಂತಪದ್ಮನಾಭ ದೇವಾಲಯದ ದ್ವಾರಬಂಧಗಳಿಗೆ ಹೋಲಿಕೆಯಾಗುತ್ತದೆ. ಇವರ ಲಲಾಟಬಿಂಬದಲ್ಲಿ ನೃತ್ಯ ಮಾಡುತ್ತಿರುವ ಶಿವ ಹಾಗೂ ವಾದ್ಯಕಾರರ ಸಮೂಹ ಕಂಡುಬರುತ್ತವೆ. ಮೇಲ್ಚಾವಣಿಯಲ್ಲಿ ಅಷ್ಟೇನೂ ಆಕರ್ಷಕವಾಗಿರದ ಭುವನೇಶ್ವರಿಯನ್ನು ಕೆತ್ತಲಾಗಿದೆ. ಗರ್ಭಗೃಹಗದ ಪೂರ್ವಭಾಗದ ಗೋಡೆಯಲ್ಲಿಮೂರು ದೇವಕೋಷ್ಠಗಳಿದ್ದು ಈಗ ಅದರಲ್ಲಿ ಏನೂ ಕಂಡುಬರುವುದಿಲ್ಲ.





ಸುಖನಾಸಿಯೂ ಸಹ ಚೌಕಾಕರವಾಗಿದ್ದು ದ್ವಾರಬಂಧಗಳು ಗರ್ಭಗೃಹದ ದ್ವಾರ ಶಾಖೆಗಳಂತೆಯೇ ಕಂಡುಬರುತ್ತದೆ. ದ್ವಾರ ಶಾಖೆಗಳ ಕೆಳಭಾಗದಲ್ಲಿ ಗರ್ಭಗೃಹದ ದ್ವಾರಪಾಲಕರು ಕಂಡುಬರುತ್ತಾರೆ. ಈ ದ್ವಾರದ ಲಲಾಟಬಿಂಬದಲ್ಲಿ ಉಮಾ ಮಹೇಶ್ವರಿಯ ಶಿಲ್ಪ ಕಂಡುಬರುತ್ತದೆ. ಭುವನೇಶ್ವರಿ ಸರಳ ಹಾಗೂ ಸುಂದರವಾಗಿದ್ದು ಒಂಭತ್ತು ಅಂಕಣಗಳ ಪಟ್ಟಿಕೆಗಳನ್ನು ಹೊಂದಿರುವ ಚೌಕಾಕಾರದ ಕೆತ್ತನೆಯಾಗಿದೆ.

ಕಾಶಿ ವಿಶ್ವೇಶ್ವರ ದೇವಾಲಯದ ನವರಂಗ ಸಹ ಒಂಭತ್ತು ಅಂಕಣಗಳಿಂದ ಕೂಡಿದ ಚೌಕಾಕಾರದ ಭಾಗವಾಗಿದ್ದು ಮಧ್ಯಬಾಗದಲ್ಲಿ ತಿರುಗು ರಾಟೆಗಳ ಸಹಾಯದಿಂದ ತಿರುಗಿಸಿ ತಯಾರಿಸಿದ ಸೋಪುಗಲ್ಲಿನ ನಾಲ್ಕು ಸುಂದರ ಕಂಬಗಳಿದ್ದು ಅವುಗಳ ಮಧ್ಯಭಾಗದಲ್ಲಿ ನಂದಿಶಿಲ್ಪವಿದೆ. ಈ ನಂದಿಶಿಲ್ಪವನ್ನು ಇತರೆ ಹೊಯ್ಸಳ ಶಿಲ್ಪಗಳಂತೆ ಅಲಂಕಾರಕ ಆಭರಣಗಳ ಕೆತ್ತನೆಯಿಂದ ಸುಂದರವಾಗಿ ಕೆತ್ತಲಾಗಿದ್ದು ಸ್ವಾಭಾವಿಕವಾಗಿ ಇರುವ ನಂದಿಯಂತೆ ಕಾಣುತ್ತದೆ. ಆದರೆ ನವರಂಗದ ದ್ವಾರಬಂಧಗಳನ್ನು ಪೂರ್ಣಗೊಳಿಸದಿರುವುದು ಕಂಡುಬರುತ್ತದೆ. ಇದರ ಲಲಾಟಬಿಂಬದಲ್ಲಿ ಸುಂದರವಾದ ತಾಂಡವೇಶ್ವರ ಶಿಲ್ಪದೊಡನೆ ನೃತ್ಯಗಾರರ ಹಾಗೂ ಸಂಗೀತಗಾರರ ಉಬ್ಬು ಕೆತ್ತನೆ ಶಿಲ್ಪಗಳು ಕಂಡುಬರುತ್ತವೆ. ಅನಂತ ಪದ್ಮನಾಭ ದೇವಾಲಯದಲ್ಲಿರುವಂತೆ ಇಲ್ಲಿಯೂ ಸಹ ಮಧ್ಯದ ನಾಲ್ಕು ಕಂಬಗಳ ಮೇಲಿನ ಅಂಕಣದ ಭುವನೇಶ್ವರಿ ದೊಡ್ಡದಾಗಿದ್ದು ಆಕರ್ಷಕವಾಗಿ ಕೆತ್ತಲಾಗಿದೆ. ಉಳಿದ ಭುವನೇಶ್ವರಿಗಳೂ ಸಹ ಸುಂದರ ಹಾಗೂ ಅಲಂಕಾರಕವಾಗಿದೆ. ನವರಂಗದ ಪಶ್ಚಿಮ ಭಾಗದ ಗೋಡೆಯಲ್ಲಿ ಐದು ದೇವಕೋಷ್ಠಗಳಿದ್ದು, ಅವುಗಳಲ್ಲಿ ಗಣೇಶ. ಸಪ್ತಮಾತೃಕೆ. ಕುಮಾರ, ಸೂರ್ಯ ಹಾಗೂ ವಿಷ್ಣುವಿನ ಶಿಲ್ಪಗಳಿವೆ. ಈ ಶಿಲ್ಪಗಳೆಲ್ಲವೂ ಹೊಯ್ಸಳರ ಕಾಲದ್ದೇ ಆಗಿದ್ದು ಉತ್ತಮ ಆಭರಣಗಳನ್ನು ಕೆತ್ತಿ ಸುಂದರವಾಗಿ ಅಲಂಕರಿಸಿ ಆಕರ್ಷಕವಾಗಿ ಕೆತ್ತಲಾಗಿದೆ. ಗಣೇಶ ಶಿಲ್ಪದ ಹೊಟ್ಟೆ, ಕಿರೀಟ. ಕುಮಾರ ಶಿಲ್ಪ ಮತ್ತು ನವಿಲು ವಿಗ್ರಹದ ಅಲಂಕಾರ, ಸಮಭಂಗದಲ್ಲಿ ನಿಂತಿರುವ ಸೂರ್ಯ ಅದರ ರಥ ಮತ್ತು ಏಳು ಕುದುರೆಗಳು

ಅತ್ಯಂತ ಆಕರ್ಷಕವಾಗಿರುವ ಕೆತ್ತನೆಗಳಾಗಿವೆ. ಈ ಪ್ರತಿಯೊಂದು ಶಿಲ್ಪಗಳನ್ನು ಗರ್ಭಗೃಹದ ಶಿಲ್ಪ ಹಾಗೂ ನಂದಿಯ ಜೋಡಿಯನ್ನು ಜನರು ಬೇರೊಂದು ಕಡೆ ಸ್ಥಳಾಂತರಿಸಿ ಇಟ್ಟಿದ್ದುದರಿಂದ ಅವುಗಳು ಹಾಗೆಯೇ ಉಳಿದುಕೊಂಡಿವೆ.

ಈ ದೇವಾಲಯದ ಮುಖಮಂಟಪ ಸಹ ಸಂಪೂರ್ಣವಾಗಿ ಬಿದ್ದುಹೋಗಿದ್ದು ಈಗ ಅದರ ಸಂರಕ್ಷಣಾ ಕಾರ್ಯದ ಕೆಲಸ ಕೊನೆಯ ಹಂತಕ್ಕೆ ಬಂದು ನಿಂತಿದೆ. ಇದು ಸುಂದರವಾಗಿದ್ದು ಇತರೆ ಹೊಯ್ಸಳ ದೇವಾಲಯಗಳ ಮುಖಮಂಟಪದಂತೆ ನಾಲ್ಕು ಕಂಬಗಳಿಂದ ಕೂಡಿದ್ದು, ಮೇಲ್ಛಾವಣಿಯಲ್ಲಿ ಒಂದು ಸುಂದರವಾಗಿ ಕೆತ್ತಿರುವ ಭುವನೇಶ್ವರಿಯನ್ನು ಅಳವಡಿಸಲಾಗಿದ್ದು, ಅದರ ಮಧ್ಯದಲ್ಲಿ ಬಾಳೆಗೊನೆಯ ಮೊಗ್ಗಿನಂತಹ ಕೆತ್ತನೆ ಇರುವುದು ಕಂಡುಬರುತ್ತದೆ. ಈ ದೇವಾಲಯದ ಜೀರ್ಣೋದ್ಧಾರ ಇತ್ತೀಚೆಗೆ ಪೂರ್ಣಗೊಂಡಿದ್ದು ಒಂದು ಉತ್ತಮ ಕಲಾಕೃತಿಯಾಗಿ ಆಕರ್ಷಕವಾಗಿ ಹೊಸ ಬೂದನೂರಿನ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಉತ್ತಮ ಸಾಕ್ಷಿಯಾಗಿ ಉಳಿದುಕೊಂಡಿದೆ.

ಹಳೇ ಬೂದನೂರು ಅಥವಾ ಹೊಸಬೂದನೂರಿನಲ್ಲಾಗಲಿ ಅಥವಾ ಈ ದೇವಾಲಯದ ಯಾವ ಗೋಡೆಗಳಲ್ಲೂ ಶಾಸನಗಳು ಕಂಡುಬಾರದೆ ಇರುವುದರಿಂದ ಈ ಎರಡೂ ದೇವಾಲಯಗಳನ್ನು ಯಾರ ಕಾಲದಲ್ಲಿ ಕಟ್ಟಲಾಯಿತು? ಎಂದು ಹೇಳುವುದು ಬಹಳ ಕಷ್ಟದ ಕೆಲಸ. ಆದರೂ ಅನಂತ ಪದ್ಮನಾಭ ದೇವಾಲಯದ ಒಳಭಾಗದಲ್ಲಿ ಇಟ್ಟಿರುವ ಒಂದು ದೊಡ್ಡ ಹೊಯ್ಸಳರ ಕಾಲದ ಶಾಸನವು ಮೂರನೇ ನರಸಿಂಹನ ಕಾಲದ್ದಾಗಿದ್ದು ಇದರ ಕಾಲ ಕ್ರಿ.ಶ. ೧೨೭೬ ಡಿಸೆಂಬರ್ ತಿಂಗಳ ೭ನೇ ತಾರೀಖು ಎಂದು ನಮೂದಾಗಿದ್ದು ಈ ದೇವಾಲಯಗಳನ್ನು ಕಟ್ಟಿಸಿದ ಯಾವುದೇ ಮಾಹಿತಿಯನ್ನು ಹೊಂದಿರುವುದಿಲ್ಲ. ಆದರೆ ದೇವಾಲಯಕ್ಕೆ ನೀಡಿದ ಕೆಲವು ಕಾಣಿಕೆಗಳ ಬಗ್ಗೆ ಅದರಲ್ಲಿ ಸ್ಪಷ್ಟ ಉಲ್ಲೇಖಗಳಿವೆ. ಅಂದ ಮೇಲೆ ಈ ದೇವಾಲಯಗಳನ್ನು ಕ್ರಿ.ಶ. ೧೨೭೬ಕ್ಕೂ ಮೊದಲು ಕಟ್ಟಿರಲೇಬೇಕು. ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಹಾಗೂ ಅವುಗಳ ಶೈಲಿಯಿಂದ ಈ ಎರಡೂ ದೇವಾಲಯಗಳನ್ನು ಸುಮಾರು ಕ್ರಿ.ಶ. ೧೨೬೦ರ ಆಸುಪಾಸಿನಲ್ಲಿ ಕಟ್ಟಿರುವ ಸಾಧ್ಯತೆ ಇದೆ ಎಂದು ಹೇಳಬಹುದಾದರೂ ಅದೇ ನಿಖರವಾದ ಕಾಲ ಎಂದು ಆಧಾರಗಳಿಲ್ಲದೆ ನಿರ್ಧರಿಸುವುದು ಸುಲಭದ ಕೆಲಸವಲ್ಲ.

ಆಧಾರಸೂಚಿ

೧. ಬಿ.ಎಲ್.ರೈಸ್. (ಸಂ). ಎಪಿಗ್ರಾಫಿಯ ಕರ್ನಾಟಿಕ ಸಂ. VII ೧೯೭೯.

೨. ಮಂಡ್ಯ ಜಿಲ್ಲಾ ಗೆಜಟಿಯರ್.

೧೧೨

ಗರ್ಗೇಶ್ವರಿ ಗ್ರಾಮದಲ್ಲಿ ದೊರೆತ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ತಾಮ್ರ ನಾಣ್ಯಗಳು

ಬಿ.ಎಸ್. ಗುರುಪ್ರಸಾದ್*

ಕನ್ನಡ ನಾಡಿನ ರಾಜಕೀಯ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿಯೂ ಗಣನೀಯ ಸ್ಥಾನ ಪಡೆದಿರುವ ಮೈಸೂರಿನ ಅರಸರೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು. ಮು.ಕೃ.ಒ. ಅವರು ೧೭೯೪ರಲ್ಲಿ ಶ್ರೀರಂಗಪಟ್ಟಣದಲ್ಲಿ ಜನಿಸಿದರು. ಆಗ ಮೈಸೂರು ಸಂಸ್ಥಾನವನ್ನು "ಮೈಸೂರು ಹುಲಿ" ಟಿಪ್ಪುಸುಲ್ತಾನನು ಆಳುತ್ತಿದ್ದನು. ಇವರ ತಂದೆ ಖಾಸಾ ಚಾಮರಾಜ ಒಡೆಯರ್ ಅವರು ೧೭೯೯ರಲ್ಲಿ ಟಿಪ್ಪುವಿನ ಆಳ್ವಿಕೆ ಕೊನೆಗೊಂಡಾಗ ಮು.ಕೃ.ಒರವರು, ಜೂನ್ ೩೦, ೧೭೯೯ರಲ್ಲಿ ರಾಜಪಟ್ಟವನ್ನು ಪಡೆದರು. ಆಗ ಅವರ ವಯಸ್ಸು ಐದು ವರ್ಷ. ಇವರ ಪೋಷಣೆಯ ಜವಾಬ್ದಾರಿಯನ್ನು ಅಜ್ಜಿ ಲಕ್ಷ್ಮಮ್ಮಣ್ಣಿಯವರೇ ವಹಿಸಿಕೊಂಡರು. ೧೮೧೧ರಲ್ಲಿ ಮು.ಕೃ.ಒ ತಮ್ಮ ಹದಿನೇಳನೆ ವರ್ಷದ ಪ್ರಾಯದಲ್ಲಿ ರಾಜ್ಯಭಾರದ ಅಧಿಕಾರವನ್ನು ವಹಿಸಿಕೊಂಡಾಗ, ಅಲ್ಲಿಯವರೆಗೂ ಒಡೆಯರರಿಗೆ ದಿವಾನ್ ಪೂರ್ಣಯ್ಯನವರೇ ಸೂಕ್ತ ವಿದ್ಯಾಭ್ಯಾಸ ಮತ್ತು ರಾಜ್ಯಾಡಳಿತ ನಿರ್ವಹಣೆಗೆ ಅಗತ್ಯವಾದ ರೆಸಿಡೆಂಟ್ ಕರ್ನಲ್ ಕ್ಲೋಸ್‌ನ ಆಳ್ವಿಕೆಯ ಸಮಯ ೧೮೩೧ರಲ್ಲಿ ಬ್ರಿಟೀಷ್ ಸರ್ಕಾರ ತನ್ನ ಕುದುತಿನ ನಡತೆಯಿಂದಾಗಿ ಮೈಸೂರು ಸಂಸ್ಥಾನವನ್ನು ಒಡೆಯರ ವಂಶದಿಂದ ಕಸಿದುಕೊಂಡು ಆಡಳಿತವನ್ನು ಕೃಷ್ಣರಾಜರಿಂದ ಕೈತಪ್ಪಿಸಿತು. ತಮ್ಮ ತಪ್ಪಿನ ಅರಿವಾಗಿ, ಬ್ರಿಟಿಷರು ಮರಳಿ ಕೃಷ್ಣರಾಜರಿಗೆ ರಾಜ್ಯಬಾರವನ್ನು ಮೂವತ್ತಾರು ವರ್ಷದ ಬಳಿಕ ವಹಿಸಿಕೊಟ್ಟರು. ಈ ಮೂವತ್ತಾರು ವರ್ಷಗಳಲ್ಲಿ ಬ್ರಿಟಿಷ್ ಸರ್ಕಾರದೊಂದಿಗೆ ತಾಳ್ಮೆಯಿಂದ ದೀರ್ಘ ಪತ್ರ ವ್ಯವಹಾರ, ರಾಜಕೀಯ ಜೀವನದ ಅನುಭವಗಳಿಂದ ಬೇಸತ್ತು, ಮನಸ್ಸಿಗೆ ನೆಮ್ಮದಿಯನ್ನು ಪಡೆದುಕೊಟ್ಟರು. ಒಡೆಯರವರು ಸಾಹಿತ್ಯ, ಕಲೆಗಳಲ್ಲಿ ತೊಡಗಿಸಿಕೊಂಡಿರಬಹುದಾದ ಆ ಸಾಧ್ಯತೆಗೆ ಅವರ ಸಾಹಿತ್ಯ ಕೃತಿಗಳೇ ಸಾಕ್ಷಿ.

೧೮೬೮ ಮಾರ್ಚ್ ೨೭ರಂದು ಮು.ಕೃ. ಒಡೆಯರವರು ತೀರಿಕೊಂಡರು. ಟಿ. ನರಸೀಪುರ ತಾಲ್ಲೂಕು, ಗರ್ಗೇಶ್ವರಿ ಶ್ರೀ ಕೃಷ್ಣರಾಜ ಒಡೆಯರ ಆಳ್ವಿಕೆಯ ಸಮಯದಲ್ಲಿ ಅಮಲ್ದಾರ ರಾಗಿದ್ದ ದಿವಂಗತ ನಾರಾಯಣಪ್ಪನವರ ಮನೆಯಲ್ಲಿ ಅವರ ಸಂಗ್ರಹದಲ್ಲಿದ್ದ ಮು.ಕೃ.ಒ. ಹದಿನಾಲ್ಕು ತಾಮ್ರದ ನಾಣ್ಯಗಳ ಪರಿಚಯವೇ ಈ ಲೇಖನದ ವಸ್ತು. ಪ್ರಸ್ತುತ ಹದಿನಾಲ್ಕು ಈ ನಾಣ್ಯಗಳು ನಾರಾಯಣಪ್ಪನವರ ಪ್ರಪೌತ್ರರಾದ ಶ್ರೀ ಶ್ರೀನಿವಾಸರವರ ಬಳಿ ಇವೆ.

ನಾಣ್ಯಗಳ ಸ್ವರೂಪ : ಒಂದು ಬಟ್ಟೆಯ ಕೈಚೀಲದಲ್ಲಿ ಹದಿನಾಲ್ಕು ತಾಮ್ರದ ನಾಣ್ಯಗಳನ್ನು ಸಂಗ್ರಹಿಸಿದ್ದು ಈಗ ಅವುಗಳು ಅಲ್ಲಿಂನಲ್ಲಿವೆ. ಎಲ್ಲವೂ ದ್ವಿಮುದ್ರಾ ವಿಧಾನದ ನಾಣ್ಯಗಳು ಮತ್ತು ಎಲ್ಲವೂ ವೃತ್ತಾಕಾರದ ನಾಣ್ಯಗಳು. ಅವುಗಳ ವ್ಯಾಸ ೦.೭೫ ಸೆಂ.ಮೀ.ನಿಂದ ೨.೯೦ ಸೆಂ.ಮೀ.ವರೆಗೆ ಇವೆ. ಅವುಗಳ ತೂಕ ಐದು ಗ್ರಾಂನಿಂದ ಆರಂಭವಾಗಿ ೨೦ ಗ್ರಾಂವರೆಗೆ ಇವೆ. ನಾಣ್ಯದ ಸುತ್ತಲೂ ಚುಕ್ಕೆಗಳಿಂದ ಮಾಡಿದ ವೃತ್ತವಿದೆ. ವೃತ್ತದ ಒಳಗೆ ಚಿತ್ರಗಳು (Art Motiff) ಮತ್ತು ಎರಡು ಮೂರು ಭಾಷೆಯ ಬರಹಗಳಿವೆ.

ಬಳಸಿರುವ ಚಿತ್ರಗಳು : ಅಲಂಕೃತ ಮತ್ತು ಅಲಂಕೃತವಲ್ಲದ ಆನೆ, ಸಿಂಹ, [ಶಾರ್ದೂಲ], ಗಂಡಭೇರುಂಡ, ಸೂರ್ಯ, ಚಂದ್ರ.

ಬಳಸಿರುವ ಭಾಷೆ : ಮೂರು ಭಾಷೆಯಲ್ಲಿದೆ. ಕನ್ನಡ, ಇಂಗ್ಲೀಷ್ ಮತ್ತು ಪರ್ಶಿಯನ್.

ಬಳಸಿರುವ ಲಿಪಿಗಳು : ಕನ್ನಡ, ರೋಮನ್, ಪರ್ಶಿಯನ್.

ಬಳಸಿರುವ ಸಂಖ್ಯೆಗಳು : ಕನ್ನಡ ಮತ್ತು ರೋಮನ್ ಸಂಖ್ಯೆಗಳ ಬಳಕೆಯಾಗಿದೆ.

ಈ ಎಲ್ಲಾ ನಾಣ್ಯಗಳ ಮುಮ್ಮುಖ ಚಿತ್ರ ಮತ್ತು ಹಿಮ್ಮುಖ ಚಿತ್ರವನ್ನು ಅಳತೆಯ ಅವರೋಹಣದ ಕ್ರಮದಲ್ಲಿ ಚಿತ್ರ ೧ ಮತ್ತು ಚಿತ್ರ ೨ರಲ್ಲಿ ನೋಡಬಹುದು.

* # ೩೧, ೩೩ನೇ 'ಎ' ಕ್ರಾಸ್, ೮ನೇ ಬ್ಲಾಕ್, ಜಯನಗರ, ಬೆಂಗಳೂರು-೫೬೦೦೪೧.

ತಾಮ್ರದ ನಾಣ್ಯದ ವಿವರಗಳು

ನಾಣ್ಯದ ಕ್ರಸಂ.	ಅಳತೆ ಅಗಲ	ತೂಕ ಗ್ರಾಂ	ನಾಣ್ಯದ ಮೌಲ್ಯ ಮುಮ್ಮುಖ ಬರಹ ಚಿತ್ರದಲ್ಲಿ	ಹಿಮ್ಮುಖ ವಿವರ	ಭಾಷೆ	ಲಿಪಿ	ಅಚ್ಚಾದ ಇಸವಿ	ಇತರೆ ಅಂಶಗಳು
೧.	೨.೯. ಸೆ.ಮೀ.	೨೦ ಗ್ರಾಂ	ಸೂರ್ಯ-ಶ್ರೀ ಚಂದ್ರ ಚಾಮುಂಡಿ ಉಗ್ರರೂಪದ ಸಿಂಹ	ಮಯಿಲಿ ಕಾಸು ೨೫ xxv CASH ಜರ್ಬ-ಇ-ಮಹಿಸೂರ್ ನಾಣ್ಯದ ಮಧ್ಯದಲ್ಲಿ ಚಿಕ್ಕ ವೃತ್ತದಲ್ಲಿ ಕೃಷ್ಣ ಎಂಬ ಬರಹ	ಕನ್ನಡ ಇಂಗ್ಲೀಷ್ ಪರ್ಶಿಯನ್	ಕನ್ನಡ ರೋಮನ್ ಪರ್ಶಿಯನ್	ಇಸವಿ ಅಚ್ಚಾಗಿಲ್ಲ	ಮೌಲ್ಯ ೨೫ ಕಾಸು
೨.	೨.೯ ಸೆ.ಮೀ.	೨೦ ಗ್ರಾಂ	– " –	– " –	– " –	– " –	ಇಸವಿ ಅಚ್ಚಾಗಿಲ್ಲ	ಮೌಲ್ಯ ೨೫ ಕಾಸು 25 cash
೩.	೨.೬	೧೮ ಗ್ರಾಂ	– " –	Milay xx CASH ಮಯಿಲಿ ಕಾಸು ೨೦ ಕೃಷ್ಣ ಜರ್ಬ ಇ ಮಹಿಸೂರ್	– " –	– " –	೧೮೩೪	ಮೌಲ್ಯ ೨೦ ಕಾಸು Cash 20
೪.	೨.೬ ಸೆ.ಮೀ.	೧೮ ಗ್ರಾಂ	ಸೂರ್ಯ ಚಂದ್ರ ಆನೆ ದೊಡ್ಡ ಶ್ರೀ ಬರಹ	ಮಯಿಲಿಕಾ ಸುಯಿಪತು XX CASH	ಕನ್ನಡ ಇಂಗ್ಲೀಷ್	ಕನ್ನಡ ಮತ್ತು ರೋಮನ್	ಇಸವಿ ಇಲ್ಲ	ಮೌಲ್ಯ ೨೦ ಕಾಸು
೫.	೨.೬ ಸೆ.ಮೀ.	೧೮ ಗ್ರಾಂ	ಸೂರ್ಯ ಶ್ರೀಚಂದ್ರ ಚಾಮುಂಡಿ ಉಗ್ರ ರೂಪದ ಸಿಂಹ ೧೮೪೦	Milay CASH ಕೃಷ್ಣ ಜರ್ಬ ಒ ಮಹಿಸೂರ್ ಮೈಲಿ ಕಾಸು	ಕನ್ನಡ ಇಂಗ್ಲಿಷ್ ಪರ್ಶಿಯನ್	ಕನ್ನಡ ರೋಮನ್ ಪರ್ಶಿಯನ್	೧೮೪೦	ಮೌಲ್ಯದ ಭಾಗ ಸವೆದಿದೆ
೬	೨.೩ ಸೆ.ಮೀ.	೧೮ ಗ್ರಾಂ	ಸೂರ್ಯ-ಶ್ರೀಚಂದ್ರ ಚಾಮುಂಡಿ ಸಿಂಹ [ಆಕ್ರಮಣಕಾರಿ] ೧೮೩೪	Moily CASH XX ಕೃಷ್ಣ ಜರ್ಬ-ಇ-ಮಹಿಸೂರ್	ಕನ್ನಡ ಇಂಗ್ಲೀಷ್ ಪರ್ಶಿಯನ್	ಕನ್ನಡ ರೋಮನ್ ಪರ್ಶಿಯನ್	೧೮೩೪	ಹಿಮ್ಮುಖವು ಹೆಚ್ಚು ಹೆಚ್ಚು ಸವೆದಿದೆ ೨೦ ಕಾಸಿನ ನಾಣ್ಯ

೭.	೨ ಸೆ.ಮೀ.	೧೨ ಗ್ರಾಂ	ನಾಣ್ಯ ತನ್ನ ವೃತ್ತಾಕಾರವನ್ನು ಕಳೆದುಕೊಂಡು ಸವೆದಿದೆ.					
೮.	೨.೩ ಸೆ.ಮೀ.	೧೫ ಗ್ರಾಂ	ಸೂರ್ಯ-ಶ್ರೀಚಂದ್ರ ಸಿಂಹ ೧೮೪೨	ಕೃಷ್ಣ ಜರ್ಬ ಇ ಮಹಿಸೂರ್	ಕನ್ನಡ ಪರ್ಶಿಯನ್ ರೋಮನ್	ಕನ್ನಡ ಪರ್ಶಿಯನ್ ರೋಮನ್ ಸಂಖ್ಯೆ	೧೮೪೨	ಮೌಲ್ಯ ನಮೂದಿಸಿಲ್ಲ
೯.	೨.೩ ಸೆ.ಮೀ.	೧೫ ಗ್ರಾಂ	ಸೂರ್ಯ-ಶ್ರೀಚಂದ್ರ [ಆಕ್ರಮಣಕಾರಿ] ಸಿಂಹ ೧೮೪೦	ಕೃಷ್ಣ ಜರ್ಬ ಇ ಮಹಿಸೂರ್	ಕನ್ನಡ ಪರ್ಶಿಯನ್ ರೋಮನ್	ಕನ್ನಡ ಪರ್ಶಿಯನ್ ರೋಮನ್ ಸಂಖ್ಯೆ	೧೮೪೦	ಮೌಲ್ಯ ಅಸ್ಪಷ್ಟ
೧೦.	೨.೧ ಸೆ.ಮೀ.	೧೩ ಗ್ರಾಂ	ಸೂರ್ಯ-ಶ್ರೀಚಂದ್ರ ಸಿಂಹ ೧೮೪೦	– " –	– " –	– " –	೧೮೪೦	ಮೌಲ್ಯ ಅಸ್ಪಷ್ಟ
೧೧.	೧ ಸೆ.ಮೀ.	೬ ಗ್ರಾಂ	ಅಲಂಕಾರವಿಲ್ಲದ ಬಲಕ್ಕೆ ಚಲಿಸುತ್ತಿರುವ ಆನೆ	ಪರ್ಶಿಯನ್ ಬರಹವಿದೆ (ಅಸ್ಪಷ್ಟ)	ಕನ್ನಡ ಮತ್ತು ಪರ್ಶಿಯನ್	ಕನ್ನಡ ಮತ್ತು ಪರ್ಶಿಯನ್	ಇಸವಿ ಸವೆದಿದೆ	ಮೌಲ್ಯ ಅಸ್ಪಷ್ಟ
೧೨.	೧.೬ ಸೆ.ಮೀ.	೧೦ ಗ್ರಾಂ	ಚುಕ್ಕೆಗಳ ವೃತ್ತದ ಮಧ್ಯೆ ಸಂಖ್ಯೆ ೧೨	ಅಡ್ಡ ಹಾಗೂ ಉದ್ದುದ್ದದ ಎರಡು ಗೆರೆಗಳಿವೆ	ಕನ್ನಡ	ಕನ್ನಡ ಸಂಖ್ಯೆ	ಇಲ್ಲ	ಮು.ಕ್ರಿ. ಒಡೆಯರ್ ಅವರು ಪಟ್ಟಕ್ಕೆ ಬಂದ ಸಂವತ್ಸರದಿಂದ ೧೨ ವರ್ಷ ಕಳೆದುದನ್ನು ಸೂಚಿಸಬಹುದೆಂಬ ಅಭಿಪ್ರಾಯವಿದೆ.
೧೩.	೦.೭೫ ಸೆ.ಮೀ.	೫ ಗ್ರಾಂ	ಚುಕ್ಕೆಯ ವೃತ್ತಾಕಾರದ ಮಧ್ಯೆ ಸೂರ್ಯ-ಚಂದ್ರ ಶ್ರೀ ಸಿಂಹ ೧೮೩೮	ಜರ್ಬ-ಇ-ಮಹಿಸೂರ್	ಕನ್ನಡ ಪರ್ಶಿಯನ್	ಕನ್ನಡ ಪರ್ಶಿಯನ್	೧೮೩೮	ಮೌಲ್ಯ ನಮೂದಿಸಿಲ್ಲ
೧೪.	೧ ಸೆ.ಮೀ.	೫ ಗ್ರಾಂ	ಚುಕ್ಕೆಯ ವೃತ್ತಾಕಾರದ ಮಧ್ಯೆ ಶ್ರೀ ೧೮೪೦	ಪರ್ಶಿಯನ್ ಬರಹ ಅಸ್ಪಷ್ಟ	ಕನ್ನಡ ಪರ್ಶಿಯನ್	– " –	ಇಲ್ಲ	– " –



ನಾಣ್ಯಗಳ ಮುಂಭಾಗ
(ಚಿತ್ರ ೧)



ನಾಣ್ಯಗಳ ಹಿಂಭಾಗ
(ಚಿತ್ರ ೨)

ಮುಮ್ಮಡಿ ಕೃಷ್ಣರಾಜ ಒಡೆಯರ್ ಬಂಗಾರ ಮತ್ತು ಬೆಳ್ಳಿ ನಾಣ್ಯಗಳಲ್ಲದೆ, [ಕೃಷ್ಣರಾಜ ವರಹ] ಅನೇಕ ನಮೂನೆಯ ತಾಮ್ರದ ನಾಣ್ಯಗಳನ್ನು ಮತ್ತು ಕನ್ನಡದ ಸಂಖ್ಯೆವುಳ್ಳ ತಾಮ್ರದ ನಾಣ್ಯಗಳನ್ನು ಟಂಕಿಸಿದ ಮೊದಲಿಗರು. ಮಯಿಲಿ ಕಾಸನ್ನು [Token Cash] ಬಳಕೆಗೆ ತಂದರು. ಇದರಲ್ಲಿ ಮಯಿಲಿ ಕಾಸು ಕನ್ನಡದಲ್ಲಿಯೂ ಮತ್ತು ಇಂಗ್ಲೀಷ್‌ನಲ್ಲಿಯೂ ಮುದ್ರಿಸಲ್ಪಟ್ಟಿದೆ. ಮು.ಕೃ.ಒರವರ ಹೆಚ್ಚಿನ ನಾಣ್ಯಗಳಲ್ಲಿ ಸೂರ್ಯ ಚಂದ್ರರನ್ನು ಮುದ್ರಿಸಿರುವುದನ್ನು ಕಾಣಬಹುದು. ೧೮೩೩ರವರೆಗೆ ಮೈಸೂರಿನ ಟಂಕಶಾಲೆಯಲ್ಲಿ ಅಚ್ಚಾಗುತ್ತಿದ್ದ ನಾಣ್ಯಗಳು, ನಂತರ ಮೈಸೂರಿನಿಂದ ಬೆಂಗಳೂರಿಗೆ ವರ್ಗವಾಯಿತು.

ಈ ಸಂಗ್ರಹಕಾರರಲ್ಲಿ ಬರಹವಿಲ್ಲದ ಕೆಲವು ನಾಣ್ಯಗಳೂ ಇವೆ. ಅವುಗಳು ಮು.ಕೃ.ಒಗೆ ಸೇರಿದ್ದೆಂದು ಖಚಿತತೆಯಿಂದ ಹೇಳಲಾಗುವುದಿಲ್ಲ. ನಾಣ್ಯಗಳು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸಾಧನಗಳಾಗಿದ್ದವು ಎಂಬುದನ್ನು ಗಮನಿಸಬೇಕಾದ ಅಂಶ. ಪ್ರಾಚೀನ ನಾಣ್ಯಗಳು ನಮ್ಮ ರಾಷ್ಟ್ರದ ಅವಶೇಷಗಳು. ಇತಿಹಾಸ ರಚನೆಗೆ ನಾಣ್ಯಗಳು ಆಕರ ತವನಿಧಿಗಳು.

ಗ್ರಂಥಋಣ

೧. "ಮುಮ್ಮಡಿ ಕೃಷ್ಣರಾಜ ಒಡೆಯರು". ಕನ್ನಡ ಅಧ್ಯಯನ ಸಂಸ್ಥೆ, ಪ್ರಕಟಣೆ, ೪, ಮೈಸೂರು ವಿಶ್ವವಿದ್ಯಾನಿಲಯ, ೧೯೭೦.

೨. ಭಾರತೀಯ ನಾಣ್ಯ ಪರಂಪರೆ, ಡಾ. ಎಂ.ವಿ. ನರಸಿಂಹಮೂರ್ತಿ, ಪ್ರಸಾರಾಂಗ, ಮೈ.ವಿ.ವಿ., ೨೦೦೪.

೩. Album of Indian Coins, ICHR.

೪. Coinage of Wodyar's of Mysore, by Sri Girijapath.

೧೧೩

ಕನ್ನಡ ಗಾದೆಗಳಲ್ಲಿ ನಂದರ ನಾಣ್ಯ

ಡಾ. ಸಿ. ಮಹದೇವ*

ಕರ್ನಾಟಕವನ್ನಾಳಿದ ಪ್ರಾಚೀನ ಅರಸರಲ್ಲಿ ನಂದರು ಮೊದಲಿಗರು. ಪುರಾಣ ಮತ್ತು ಶಾಸನಗಳು ನಂದರು ಕರ್ನಾಟಕವನ್ನಾಳಿದರೆಂಬ ಸಂಗತಿಗಳನ್ನು ಉಲ್ಲೇಖಿಸುತ್ತವೆ. ಅಂದರೆ ಮೌರ್ಯರಿಗಿಂತಲೂ ಮೊದಲೇ ನಂದರು ಕರ್ನಾಟಕವನ್ನಾಳಿದರೆಂಬುದು ಗಮನಾರ್ಹ ಸಂಗತಿ. ನಂದರನ್ನು ಕುರಿತು ನಂತರದ ಮಹಾವಂಶ, ಬೃಹತ್ಕಥೆ ಮತ್ತು ಮುದ್ರಾರಾಕ್ಷಸದ ಕಥೆಗಳಲ್ಲಿ ಪ್ರಸ್ತಾಪಿಸಲಾಗಿದೆ. ಚಂದ್ರಗುಪ್ತ ಮೌರ್ಯನು ನಂದರನ್ನು ಸೋಲಿಸಿದ ಪರಿಣಾಮವಾಗಿ ಸಾಮ್ರಾಜ್ಯದ ಭಾಗವಾಗಿದ್ದ ಕರ್ನಾಟಕದ ಭಾಗಗಳು ಮೌರ್ಯರ ಸ್ವಾಧೀನಕ್ಕೆ ಬಂದಿರಬಹುದು. ಮೌರ್ಯರ ಆಳ್ವಿಕೆಯನ್ನು ಕುರಿತು ಅಶೋಕನ ಶಾಸನಗಳು ಅಧಿಕೃತ ದಾಖಲೆಗಳೆನಿಸಿವೆ. ಕರ್ನಾಟಕದ ಬ್ರಹ್ಮಗಿರಿ, ಕೊಪ್ಪಳ, ಮಸ್ಕಿ, ಸನ್ನತಿ ಸ್ಥಳಗಳಲ್ಲಿ ದೊರೆತಿರುವ ಅಶೋಕನ ಶಾಸನಗಳು ಕರ್ನಾಟಕದ ಮೊದಲ ಶಿಲಾಲೇಖನಗಳಾಗಿದ್ದು, ಅಲ್ಲಿಂದಲೇ ಕರ್ನಾಟಕ ಚರಿತ್ರೆ ಯುಗವನ್ನು ಇತಿಹಾಸಕಾರರು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಏಕೆಂದರೆ ಮೌರ್ಯರ ವಸ್ತು ಅವಶೇಷಗಳು ಈವರೆಗೂ ದೊರೆತಿಲ್ಲ. ಆದರೆ ಅವರ ಉಲ್ಲೇಖಗಳು ಪುರಾಣಗಳಲ್ಲಿ ಮತ್ತು ನಂತರ ಕಾಲದ ಶಾಸನಗಳಲ್ಲಿ ಪ್ರಸ್ತಾಪ ಆಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಪ್ರದೇಶವು ಮೌರ್ಯರಿಗಿಂತ ಮೊದಲು ನಂದರ ಆಳ್ವಿಕೆಗೆ ಒಳಪಟ್ಟಿತ್ತೆಂಬ ಸಂಗತಿಯನ್ನು ನಂಬಬಹುದು. ತುಂಬಾ ಪ್ರಾಚೀನ ಚಾರಿತ್ರಿಕ ಸಂಗತಿಗಳು ಪುರಾಣದ ವಸ್ತುಗಳಾಗಿ ರೂಪಾಂತರ ಹೊಂದುವುದು ಸಾಮಾನ್ಯ ಸಂಗತಿ. ಅದರಂತೆ ಪ್ರಾಚೀನ ಕರ್ನಾಟಕದ ಭೂಭಾಗವನ್ನಾಳಿದ ನಂದರು ಸಹಜವಾಗಿಯೇ ನಂತರದ ಕಾಲದಲ್ಲಿ ರಚನೆಗೊಂಡ ಪುರಾಣದ ಭಾಗವಾಗಿ ಸೇರಿಹೋಗಿದ್ದಾರೆ. ನಂತರದ ಕಾಲದ ಶಾಸನಗಳು ಸಹ ಹಿಂದೆ ಆಗಿಹೋದ ಅರಸುಮನೆತನಗಳ ಸ್ಮರಣೆಯನ್ನು ಮಾಡಿವೆ. ಈ ಹೇಳಿಕೆಗಳನ್ನು ಅಲ್ಲಗಳೆಯಲಾಗದು. ಅದರಂತೆ ಕುಂತಳ ಅಥವಾ ಕರ್ನಾಟಕವನ್ನು ಹಿಂದೆ ನಂದರು ಆಳಿದರೆಂಬ ಶಾಸನಗಳಲ್ಲಿನ ಉಲ್ಲೇಖಗಳನ್ನು ಇಲ್ಲಿ ಮಾನ್ಯ ಮಾಡಲೇಬೇಕು. ಈ ರೀತಿ ಕರ್ನಾಟಕವು ಮೌರ್ಯರಿಗಿಂತ ಮೊದಲು ನಂದರ ಆಳ್ವಿಕೆಯಲ್ಲಿತ್ತೆಂಬುದು ಸುಸ್ಪಷ್ಟ.

ಕರ್ನಾಟಕದಲ್ಲಿ ಸಾಮಾನ್ಯವಾಗಿ ಮೌರ್ಯರ ಆಳ್ವಿಕೆಯೊಂದಿಗೆ ಅವರ ಆಡಳಿತ, ಸಮಾಜ, ಆರ್ಥಿಕ ಸ್ಥಿತಿಗತಿ, ಧಾರ್ಮಿಕ ಸ್ಥಿತಿಗತಿ, ಕಲೆ ಮತ್ತು ವಾಸ್ತುಶಿಲ್ಪ ಹೇಳುವುದರ ಜೊತೆಗೆ ಅವರ ಕಾಲದ ನಾಣ್ಯಪದ್ಧತಿಯನ್ನು ಸಹ ಗುರುತಿಸಿ ವಿವರಿಸುವ ಕೆಲಸವನ್ನು ಇತಿಹಾಸ ಮತ್ತು ಪುರಾತತ್ವಜ್ಞರು ಯಶಸ್ವಿಯಾಗಿ ಮಾಡಿದ್ದಾರೆ. ಆದರೆ ನಂದರ ಆಳ್ವಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಪ್ರದೇಶದ ಯಾವುದೇ ಕ್ಷೇತ್ರಗಳ ಚರಿತ್ರೆ ರಚನೆಯಾಗಿಲ್ಲ. ಆದರೂ ಪುರಾಣ ಮತ್ತು ಶಾಸನಗಳ ಹೇಳಿಕೆಯನ್ನು ಆಧರಿಸಿ ಸಕಾರಾತ್ಮಕವಾದ ಕೆಲವೊಂದು ಊಹೆಗಳನ್ನು ಮಾಡಬಹುದಾಗಿದೆ. ಅಂದರೆ ಮೌರ್ಯರಿಗಿಂತ ಮೊದಲೇ ಕರ್ನಾಟಕದಲ್ಲಿ ಆಡಳಿತ ವ್ಯವಸ್ಥೆ ಇದ್ದು, ಉಳಿದಂತೆ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಕಲೆ ಮತ್ತಿತರ ವ್ಯವಸ್ಥೆಗಳು ಚಾಲ್ತಿಯಲ್ಲಿದ್ದವು ಎನ್ನಬಹುದು. ಅವುಗಳಲ್ಲಿ ನಾಣ್ಯ ಪದ್ಧತಿಯು ಸಹ ಸೇರಿತ್ತು. ಆದರೆ ನಂದರ ಯಾವುದೇ ನಾಣ್ಯಗಳು ನಮಗೆ ದೊರೆತಿಲ್ಲ. ಏಕೆಂದರೆ ಅವರ ನಾಣ್ಯಪದ್ಧತಿಯ ಸ್ವರೂಪ, ಲಕ್ಷಣ, ಮಾಧ್ಯಮ, ಮೌಲ್ಯ ಇದಾವುದರ ಆಂಶಿಕವಾದ ಕುರುಹುಗಳು ನಮಗೆ ದೊರೆತಿಲ್ಲದಿರುವುದು.

ಇತ್ತೀಚೆಗೆ ಹಳೇ ಮೈಸೂರು ಭಾಗದಲ್ಲಿ ಅಪರೂಪಕ್ಕೆ ಪ್ರಚಲಿತವಿರುವ ಜನಪದರ ಗಾದೆಯೊಂದು ನನ್ನ ಗಮನ ಸೆಳೆಯಿತು. ಅದೇನೆಂದರೆ ನಂದರ ನಾಣ್ಯವನ್ನು ನಾಯಿ ತಿಂದವು ಎಂಬುದು. ಅದರರ್ಥವನ್ನು ವಿಚಾರಿಸಿದಾಗ ನಂದರು ಆರ್ಥಿಕವಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿ ಚರ್ಮದ ತುಂಡುಗಳನ್ನು ನಾಣ್ಯಗಳಾಗಿ ಚಲಾವಣೆ ತಂದರೆಂದು, ಅಂತಹ ನಾಣ್ಯಗಳನ್ನು ನಾಯಿಗಳು ತಿಂದವೆಂದು ಅರ್ಥೈಸಿದರು. ಅಂದರೆ ನಂದರು ಹೊರಡಿಸಿದ ಚರ್ಮದ ನಾಣ್ಯಗಳು ನಾಯಿಗಳು ತಿನ್ನುವುದಕ್ಕೆ ಯೋಗ್ಯವಾಗಿದ್ದವು ಎನ್ನುವ ರೀತಿಯಲ್ಲಿ ಜನಪದರು ಅವರ ನಾಣ್ಯ ಪದ್ಧತಿಯನ್ನು ಹಾಗೂ ಅವರ ಆರ್ಥಿಕ ದುಸ್ಥಿತಿಯನ್ನು ವ್ಯಂಗ್ಯವಾಗಿ ಅಥವಾ ಲೇವಡಿ ಮಾಡುವ ರೀತಿಯಲ್ಲಿ ಪ್ರಸ್ತುತ ಗಾದೆಯನ್ನು ಹುಟ್ಟುಹಾಕಿದ್ದಾರೆ. ಈ ರೀತಿಯ ಗಾದೆ ತಲತಲಾಂತರದಿಂದ ಮೌಖಿಕವಾಗಿ ಉಳಿದುಬಂದಿದೆ. ಗಾದೆಯ ಹುಟ್ಟು ಅಥವಾ ಬಳಕೆಯ ಸಂದರ್ಭ ಯಾವುದೇ

* ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬.

ಇರಲಿ, ಅದು ಮುಖ್ಯವಲ್ಲ. ಇಲ್ಲಿ ಮುಖ್ಯವಾಗಿರುವುದು ಗಾದೆಯ ವಸ್ತು. ಅಂದರೆ ನಂದರ ನಾಣ್ಯಗಳನ್ನು ನಾಯಿ ತಿಂದವು ಎಂಬುದು ಇಲ್ಲಿ ಮುಖ್ಯ ವಿಷಯ.

ಕನ್ನಡದಲ್ಲಿ ಗಾದೆಗಳನ್ನು ಕುರಿತು ಗಾದೆಯೊಂದಿದೆ. ಅದೇನೆಂದರೆ ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ ಎಂಬುದು. ಅಂದರೆ ಜನರಿಗೆ ಗಾದೆಗಳ ಮೇಲೆ ಅಷ್ಟೊಂದು ನಂಬಿಕೆ. ಜನಪದರು ತಮ್ಮ ಜೀವನಾನುಭವದ ಹಿನ್ನೆಲೆಯಲ್ಲಿ ಸಾಂದರ್ಭಿಕವಾಗಿ ಲಯಬದ್ಧವಾಗಿ ಹೇಳಿದ ಮಾತುಗಳೇ ಗಾದೆಗಳು. ಗಾದೆಗಳು ಸಮಾಜದ ಎಲ್ಲ ವರ್ಗಗಳ ನಡವಳಿಕೆಗಳನ್ನು ಕುರಿತು ಸಂತೋಷ, ದುಃಖ, ಪ್ರಶಂಸೆ, ವ್ಯಂಗ್ಯ, ಲೇವಡಿ, ತಿರಸ್ಕಾರ, ಪ್ರತಿಭಟನೆ, ಪ್ರೀತಿ, ಗೌರವ ಇತ್ಯಾದಿ ಮನೋನೆಲೆಗಳಲ್ಲಿ ಹೊರಹೊಮ್ಮಿವೆ.

ಇಂತಹ ಒಂದು ಮನೋನೆಲೆಯಲ್ಲಿ ಪ್ರಸ್ತುತ "ನಂದರ ನಾಣ್ಯಗಳನ್ನು ನಾಯಿ ತಿಂದವು" ಎಂಬ ಗಾದೆ ಹೊರಟಿರಬಹುದು. ಪ್ರಸ್ತುತ ಮೌಖಿಕ ಆಕರವು ನಂದರು ಕರ್ನಾಟಕವನ್ನಾಳಿದರು ಎಂಬ ಪುರಾಣ ಮತ್ತು ಶಾಸನದ ಹೇಳಿಕೆಗಳನ್ನು ಬೆಂಬಲಿಸುತ್ತದೆ. ಜೊತೆಗೆ ನಂದರು ಕರ್ನಾಟಕದಲ್ಲಿ ನಾಣ್ಯಪದ್ಧತಿಯೊಂದನ್ನು ಜಾರಿಗೊಳಿಸಿದ್ದರೆಂಬುದು ಬಹು ಮುಖ್ಯವಾದ ವಿಷಯ. ಇದು ಆ ಕಾಲದ ಆರ್ಥಿಕ ಸ್ಥಿತಿಗತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಎಲ್ಲ ಪ್ರಶ್ನೆಗಳಿಗೆ ಚರಿತ್ರೆಯಲ್ಲಿ ಉತ್ತರ ದೊರೆಯುವುದಿಲ್ಲ. ಕೆಲವು ಉತ್ತರಗಳನ್ನು ಜೀವಂತ ಸಮಾಜದ ಮೌಖಿಕ ಪರಂಪರೆಯಿಂದ ಪಡೆಯಬೇಕಾಗುತ್ತದೆ. ಈ ಮೇಲಿನ ಗಾದೆಯಿಂದಾಗಿ ಕರ್ನಾಟಕದ ಜನಪದರು, ಪ್ರಾಚೀನ ನಂದರ ಆಳ್ವಿಕೆ ಹಾಗೂ ಅವರ ಆಡಳಿತದ ವೈಫಲ್ಯಗಳ ಚಿತ್ರಣವನ್ನು ತಮ್ಮ ಅಮೂಲ್ಯವಾದ ಮೌಖಿಕ ಪರಂಪರೆಯಲ್ಲಿ ಸಂರಕ್ಷಿಸಿಕೊಂಡು ಬಂದಿರುವುದು ವೇದ್ಯವಾಗುವುದು. ಪ್ರಾಚೀನ ಕರ್ನಾಟಕದಲ್ಲಿ ನಂದರು ಚರ್ಮದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದರೆಂಬುದು ಚಾರಿತ್ರಿಕ ಸತ್ಯ.

ಈ ಮೇಲಿನ ಗಾದೆ ದಕ್ಷಿಣ ಕನ್ನಡದಲ್ಲಿ ಸ್ವಲ್ಪ ರೂಪಾಂತರ ಹೊಂದಿ ಚಾಲ್ತಿಯಲ್ಲಿದೆ. ಅದೇನೆಂದರೆ "ನಂದರ ಬದುಕನ್ನು ನರಿನಾಯಿ ತಿಂದವು ಎಂಬುದು. ಅಂದರೆ ನಂದರ ಸಂಪತ್ತನ್ನು ನರಿನಾಯಿಗಳು ತಿಂದುಹೋದವು ಎಂದರ್ಥ ಮಾಡುತ್ತಾರೆ. ನಂದರ ಸಂಪತ್ತು ಬೇರೆಯವರ ಪಾಲಾಯಿತು ಎಂಬ ಅರ್ಥವನ್ನು ಸಹ ನಾವು ಮಾಡಿಕೊಳ್ಳಬಹುದು. ಆದರೆ ಹಳೇ ಮೈಸೂರು ಪ್ರದೇಶದ ಗಾದೆಯು ನೇರವಾಗಿ ನಂದರ ನಾಣ್ಯಗಳನ್ನು ನಾಯಿ ತಿಂದವು ಎನ್ನುತ್ತದೆ. ಅವರು ಹೊರಡಿಸಿದ ಚರ್ಮದ ನಾಣ್ಯ ಪದ್ಧತಿಯನ್ನು ವಿವರಿಸುತ್ತದೆ. ಹಾಗಾಗಿ ದಕ್ಷಿಣ ಕನ್ನಡದ ನಂದರ ಕುರಿತ ಗಾದೆ ಇನ್ನೊಂದು ಅರ್ಥಸ್ವರೂಪ ಗಾದೆಯಾಗುತ್ತದೆ. ಈಗಿನ ನಂದಾವರ ಸ್ಥಳನಾಮವು ನಂದರಿಂದ ಬಂದಿತ್ತೆನ್ನಲಾಗಿದೆ. ಅಂದರೆ ಕರಾವಳಿ ಭಾಗವು ಸೇರಿದಂತೆ ಕರ್ನಾಟಕ ನಂದರ ಆಡಳಿತ ವ್ಯವಸ್ಥೆಗೆ ಒಳಗಾಗಿತ್ತು ಎಂಬುದು ಸ್ಪಷ್ಟವಾಗುವುದು. ಇಲ್ಲಿ ಇನ್ನೊಂದು ಆಲೋಚನೆಗೂ ಅವಕಾಶವಿದೆ. ಅದೇನೆಂದರೆ ನಂದ ವಂಶೀಯರು ಕಾಲಾಂತರದಲ್ಲಿ ದಕ್ಷಿಣಕ್ಕೆ ವಲಸೆ ಬಂದು ಈಗಿನ ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಪ್ರದೇಶಗಳಲ್ಲಿ ನೆಲೆನಿಂತು ಸಣ್ಣಪುಟ್ಟ ಪ್ರದೇಶಗಳನ್ನು ಆಳುತ್ತಿದ್ದಿರಬಹುದು. ಈ ನಿಟ್ಟಿನಲ್ಲಿ ಮತ್ತಷ್ಟೂ ಆಕರಗಳು ಶೋಧಗೊಂಡರೆ ನಂದರ ಆಳ್ವಿಕೆಗೆ ಸಂಬಂಧಿಸಿದಂತೆ ಅಮೂಲ್ಯ ಮಾಹಿತಿಗಳು ದೊರೆಯಬಹುದು. ಜಾನಪದ ಸಾಹಿತ್ಯ ಪ್ರಕಾರಗಳಾದ ಕಥೆ, ಕಾವ್ಯ, ಐತಿಹ್ಯಗಳಂತೆ ಗಾದೆಗಳು ಸಹ ಚರಿತ್ರೆ ಅಧ್ಯಯನ ಸಂದರ್ಭದಲ್ಲಿ ಉಪಯುಕ್ತ ಆಕರಗಳಾಗಿರುವುದು ಗಮನಾರ್ಹ.

ಮೈಸೂರು ರಾಜ್ಯ ಮತ್ತು ಮಲಬಾರ್ ನಡುವಣ ಸಂಬಂಧಗಳು

ಡಾ. ನಿರ್ಮಲ್ ರಾಜ್*

ಮೈಸೂರು ರಾಜ್ಯ ಹಾಗೂ ಮಲಬಾರ್ ತೀರ ಪ್ರದೇಶಗಳ ನಡುವಣ ಸಂಬಂಧವು ಚಾರಿತ್ರಿಕವಾಗಿ ಬಹಳ ಮಹತ್ವದ ಸಂಗತಿಯಾಗಿದೆ. ಮೈಸೂರು ಒಡೆಯರು ದಕ್ಷಿಣ ಕರ್ನಾಟಕ ಮಾತ್ರವಲ್ಲದೆ ನೆರೆಯ ತಮಿಳುನಾಡು ಹಾಗೂ ಕೇರಳ ರಾಜ್ಯಗಳಿಗೆ ಸೇರಿದ ಕೆಲವು ಪ್ರದೇಶಗಳ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದರು. ಕೇರಳದ ವೈನಾಡು ಪ್ರದೇಶದ ವರೆಗೂ ವ್ಯಾಪಿಸಿದ್ದ ಮೈಸೂರು ರಾಜ್ಯದ ಅಧಿಕಾರವು ಮುಂದೆ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್‌ರವರ ಕಾಲದಲ್ಲಿ ಪಶ್ಚಿಮ ಕರಾವಳಿಯಾದ್ಯಂತ ವಿಶೇಷವಾಗಿ ಮಲಬಾರ್, ಮಂಗಳೂರು ಮುಂತಾದ ಪ್ರದೇಶಗಳವರೆಗೂ ವ್ಯಾಪಿಸಿದ್ದುದು ಅತ್ಯಂತ ಗಮನಾರ್ಹ. ಇದರಿಂದ ಮೈಸೂರು ರಾಜ್ಯದ ರಾಜಕೀಯ ಪರಮಾಧಿಕಾರವು ಸ್ಥಾಪನೆಯಾಗುವುದರೊಂದಿಗೆ ವಾಣಿಜ್ಯ ವ್ಯಾಪಾರ ಮುಂತಾದ ಆರ್ಥಿಕ ಚಟುವಟಿಕೆಗಳು ಸಹ ತೀವ್ರಗೊಂಡು ವಿಶೇಷವಾಗಿ ಸಮಾಜ ಸುಧಾರಣೆಗೆ ಕಿಡಿ ಹಚ್ಚಿತು. ಇದು ಸಹಜವಾಗಿ ವಸಾಹತುಷಾಹಿ ಬ್ರಿಟಿಷರು ಹಾಗೂ ಮೈಸೂರು ರಾಜ್ಯದ ನಡುವಣ ಸಂಘರ್ಷಕ್ಕೆ ನಾಂದಿಯಾಯಿತು. ವಸಾಹತುಷಾಹಿಯ ದಕ್ಷಿಣ ಭಾರತದ ವಿಸ್ತರಣಾ ನೀತಿಯು ಅನೇಕ ಯುದ್ಧಗಳಿಗೆ ಕಾರಣವಾಗಿ ಅವುಗಳಲ್ಲಿ ನಾಲ್ಕು ಆಂಗ್ಲೋ ಮೈಸೂರು ಯುದ್ಧಗಳು ಪ್ರಮುಖವಾಗಿವೆ. ಎರಡನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಪಶ್ಚಿಮ ಕರಾವಳಿಯ ಆಕ್ರಮಣವು ಇಂಗ್ಲೀಷರು ಮತ್ತು ಮೈಸೂರು ರಾಜ್ಯದ ಪ್ರತಿಷ್ಠೆಯಾಗಿದ್ದು ಅಂತಿಮವಾಗಿ **'೧೭೮೪ರ ಮಂಗಳೂರು ಐತಿಹಾಸಿಕ ಒಪ್ಪಂದ'**ದೊಂದಿಗೆ ನಿರ್ಣಾಯಕ ಹಂತವನ್ನು ತಲುಪಿತು. ಈ ಹಿನ್ನಲೆಯಲ್ಲಿ ಮೈಸೂರು ರಾಜ್ಯ ಮತ್ತು ಮಲಬಾರ್ ನಡುವಣ ಸಂಬಂಧಗಳನ್ನು ಕುರಿತು ಚರ್ಚಿಸಲಾಗಿದೆ. ಹದಿನೆಂಟನೇ ಶತಮಾನದ ಉತ್ತರಾರ್ಧ ಭಾರತದ ರಾಜಕೀಯ ಪರಿಸ್ಥಿತಿಯು ಅತ್ಯಂತ ಗಂಭೀರವಾಗಿತ್ತು. ಮೊಗಲರು ಹಾಗೂ ಮರಾಠರು ಅವನತಿಯತ್ತ ಸಾಗಿದ್ದುದರಿಂದ ಐರೋಪ್ಯರು ರಾಜಕೀಯ ಪ್ರವರ್ಧಮಾನಕ್ಕೆ ಬರುವಂತಾಯಿತು. ಇಂತಹ ಸನ್ನಿವೇಶದಲ್ಲಿ ಅನೇಕ ದೇಶೀಯ ರಾಜಮನೆತನಗಳು ಬಲಿಷ್ಠವಾಗತೊಡಗಿದವು. ಅವುಗಳಲ್ಲಿ ಮೈಸೂರು ರಾಜ್ಯವು ಪ್ರಮುಖವಾಗಿದೆ. ಹೈದರಾಲಿ ಮತ್ತು ಟಿಪ್ಪುರವರ ಅಧಿಕಾರ ವ್ಯಾಪ್ತಿಗೊಳಪಟ್ಟು ತನ್ನ ಅಧಿಕಾರವನ್ನು ಕರ್ನಾಟಕ ಮಾತ್ರವಲ್ಲದೆ ದಕ್ಷಿಣ ಭಾರತದಾದ್ಯಂತ ವಿಶೇಷವಾಗಿ ಮಲಬಾರ್ ಪ್ರದೇಶವನ್ನೊಳಗೊಂಡಂತೆ ಪಶ್ಚಿಮ ಕರಾವಳಿಯ ಬಹುಭಾಗಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸುವುದರಲ್ಲಿ ಮೈಸೂರು ರಾಜ್ಯವು ಯಶಸ್ವಿಯಾಯಿತೆಂಬುದಿಲ್ಲಿ ಗಮನಾರ್ಹ.

ಮೈಸೂರು ಒಡೆಯರ ದೌರ್ಬಲ್ಯಗಳನ್ನು ಸದುಪಯೋಗಪಡಿಸಿಕೊಂಡ ಹೈದರಾಲಿಯು ಕರ್ನಾಟಕ ಯುದ್ಧಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ತನ್ನ ರಾಜಕೀಯ ಔನ್ನತ್ಯವನ್ನು ಮುಂದುವರೆಸಿಕೊಂಡು ಬಂದನಲ್ಲದೆ ಮೈಸೂರು ರಾಜ್ಯದ ಪರಮಾಧಿಕಾರಿಯಾಗಿ ಅರ್ಥಾತ್ ಸರ್ವಾಧಿಕಾರಿಯಾಗಿ ರೂಪುಗೊಂಡನು. ಜೊತೆಗೆ ಚಿತ್ರದುರ್ಗ, ಕೆಳದಿ, ಶಿರಾ ಮುಂತಾದ ಪ್ರಮುಖ ಸ್ಥಳೀಯ ಅರಸು ಮನೆತನಗಳನ್ನು ಅಳಿಸಿ ಮೈಸೂರು ರಾಜ್ಯವನ್ನು ಸಾಕಷ್ಟು ವಿಸ್ತರಿಸಿದನಲ್ಲದೆ ಮಲಬಾರ್ ತೀರಪ್ರದೇಶಗಳತ್ತ ತನ್ನ ಗಮನ ಹರಿಸಿದನು. ಹಿಂದೂ ಮಹಾಸಾಗರದ ಮೇಲೆ ತನ್ನ ಅಧಿಪತ್ಯ ಸ್ಥಾಪನೆಗಾಗಿ ರಾಜಾಅಲಿಯನ್ನು ಮಿಲಿಟರಿ ಗೌರ್ನರ್ ಆಗಿ ಮತ್ತು ಮಾದಣ್ಣನನ್ನು ಆಡಳಿತಾಧಿಕಾರಿಯಾಗಿ ನೇಮಿಸುವುದರೊಂದಿಗೆ ಮೈಸೂರು ರಾಜ್ಯ ಮತ್ತು ಮಲಬಾರ್ ತೀರಪ್ರದೇಶಗಳ ನಡುವಣ ರಾಜತಾಂತ್ರಿಕ ಹಾಗೂ ವಾಣಿಜ್ಯ ವ್ಯಾಪಾರ ಸಂಬಂಧಗಳನ್ನು ಅಧಿಕೃತವಾಗಿ ಪ್ರಾರಂಭಿಸಿದನು. ಮುಂದೆ ತನ್ನ ತಂದೆಯ ನೀತಿಯನ್ನೇ ಮುಂದುವರೆಸಿದ ಟಿಪ್ಪು ಕಾಲದಲ್ಲಿ ಮೈಸೂರು ರಾಜ್ಯ ಹಾಗೂ ಮಲಬಾರ್ ತೀರ ಪ್ರದೇಶಗಳ ನಡುವಣ ಸಂಬಂಧಗಳು ವ್ಯಾಪಕವಾಗಿ ವಿಸ್ತರಿಸಿದುದಲ್ಲದೆ ವಿದೇಶಗಳಾದ ಟರ್ಕಿ, ಪರ್ಷಿಯಾ, ಅರೇಬಿಯಾ, ಅಫ್ಘಾನಿಸ್ತಾನ, ಸಿರಿಯಾ, ಈಜಿಪ್ಟ್ ಮೊದಲಾದವುಗಳೊಡನೆ ಸಂಬಂಧಗಳನ್ನು ಬೆಳೆಸಲು ನಿರ್ಣಾಯಕ ಪಾತ್ರ ವಹಿಸಿತ್ತು.

ವಿಶಾಲ ರಾಜ್ಯ ನಿರ್ಮಾಣದ ಗುರಿಹೊಂದಿದ್ದ ಹೈದರನಿಗೆ ರಾಜಕೀಯವಾಗಿ ಭಾರತದಾದ್ಯಂತ ತಮ್ಮ ಅಧಿಕಾರ ಸ್ಥಾಪಿಸಲು ತೀವ್ರ ಸೈನಿಕ ಕಾರ್ಯಾಚರಣೆಗಳನ್ನು ನಡೆಸಿ

* ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು-೫೭೪೧೯೯.

ಯಶಸ್ವಿಯಾಗುತ್ತಿದ್ದ ಇಂಗ್ಲಿಷರು ಪ್ರಮುಖ ಅಡೆತಡೆಯಾದರು. ವ್ಯಾಪಾರದ ಚಟುವಟಿಕೆಗಳನ್ನು ತೀವ್ರವಾಗಿ ವ್ಯಾಪಕಗೊಳಿಸುತ್ತಾ ಆಧುನಿಕ ವಿಶೇಷವಾಗಿ ನೌಕಾಬಲದ ಸಾಮರ್ಥ್ಯದೊಂದಿಗೆ ಮುನ್ನುಗ್ಗುತ್ತಿದ್ದ ಇಂಗ್ಲಿಷರ ಸೈನಿಕ ಕಾರ್ಯಾಚರಣೆಗಳ ಬಗ್ಗೆ ಸ್ವತಃ ಕರ್ನಾಟಕ ಯುದ್ಧಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಅನುಭವ ಗಳಿಸಿದ್ದನು. ಇದರಿಂದ ಎಚ್ಚರಗೊಂಡ ಹೈದರ್‌ನಿಗೆ ಬೃಹತ್ ಸೈನ್ಯ ಮಾತ್ರವಲ್ಲ ನೌಕಾಪಡೆಯ ನಿರ್ಮಾಣದ ಅವಶ್ಯಕತೆ ಉಂಟಾಯಿತು. ಅದಕ್ಕಾಗಿ ಅನಿವಾರ್ಯವಾಗಿ ಅವನು ಆರ್ಥಿಕವಾಗಿ ಸಂಪದ್ಭರಿತವಾಗಿದ್ದ ಮಲಬಾರ್ ತೀರಪ್ರದೇಶಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಲು ನಿರ್ಧರಿಸಿದನು. ಇದಕ್ಕೆ ಈಗಾಗಲೇ ಅವನು ವಶಪಡಿಸಿಕೊಂಡಿದ್ದ ಕೆಳದಿ ರಾಜ್ಯವು ಮತ್ತಷ್ಟು ಉತ್ತೇಜನ ನೀಡಿತು. ಶಕ್ತಿ ಹಾಗೂ ಯುಕ್ತಿಗಳೆರಡರ ಮಹತ್ವವನ್ನರಿತಿದ್ದ ಹೈದರನು ಸೈನಿಕ ಕಾರ್ಯಾಚರಣೆಯೊಂದಿಗೆ ಪಶ್ಚಿಮ ಕರಾವಳಿ ಪ್ರದೇಶದಾದ್ಯಂತ ಈಗಾಗಲೇ ತಮ್ಮ ವ್ಯಾಪಾರ ವಾಣಿಜ್ಯ ವ್ಯವಹಾರಿಕ ಸಂಪರ್ಕವನ್ನೊಂದಿದ್ದ ಅರಬ್ ಮತ್ತು ಟರ್ಕರೊಂದಿಗೆ ಸ್ನೇಹ ಸಂಬಂಧವನ್ನು ಬೆಳೆಸಿಕೊಂಡನು. ಅಲ್ಲದೆ ಸುಲ್ತಾನ್ ಬತ್ತೇರಿ, ಪಾಲಕ್ಕಾಡು, ತಿರುವಾಂಕೂರ್, ಕೊಡಗು, ಬೇಕಲ್, ಕೊಚ್ಚಿ, ಕ್ಯಾಲಿಕಟ್, ತೆಲ್ಲಿಚೇರಿ ಮೊದಲಾದ ಪ್ರದೇಶಗಳನ್ನು ಒಂದೊಂದಾಗಿ ವಶಪಡಿಸಿಕೊಳ್ಳುತ್ತಾ ಮಲಬಾರ್ ತೀರಪ್ರದೇಶದವರೆಗೂ ತನ್ನ ಅಧಿಕಾರವನ್ನು ಸ್ಥಾಪಿಸುವುದರಲ್ಲಿ ಹೈದರಾಲಿಯು ಯಶಸ್ವಿಯಾದನು.

ಹೈದರಾಲಿಯು ಮಲಬಾರ್ ತೀರಪ್ರದೇಶಗಳತ್ತ ಗಮನಹರಿಸುವ ಸಂದರ್ಭವು ಅವನು ದಿಂಡಿಗಲ್ಲಿನ ಫೌಜುದಾರನಾಗಿದ್ದ ಸಂದರ್ಭದಲ್ಲಿಯೇ ಒದಗಿಬಂತು. ಪಾಲಕ್ಕಾಡ್ (೧೭೫೬-೫೭) ರಾಜ ಕೋಮಿ ಅಚ್ಚನ್‌ನ ಕೋರಿಕೆಯ ಮೇರೆಗೆ ಹೈದರ್ ಅಲಿಯು ಕ್ಯಾಲಿಕಟ್ ರಾಜನ ವಿರುದ್ಧ ಸೂಕ್ತಕ್ರಮ ಕೈಗೊಳ್ಳಲು ಸಜ್ಜುಗೊಂಡನು. ಅದಕ್ಕಾಗಿ ಮಖ್ದೂಮ್ ಅಲಿಯ ನೇತೃತ್ವದಲ್ಲಿ ಬೃಹತ್ ಸೈನ್ಯವನ್ನು ಕಳುಹಿಸಿ ಕ್ಯಾಲಿಕಟ್ ರಾಜ ಜಾಮೋರಿನ್‌ನನ್ನು ಸೋಲಿಸಲಾಯಿತು. ಈ ನಡುವೆ ೧೭೬೭-೬೯ರಲ್ಲಿ ಸಂಭವಿಸಿದ ಆಂಗ್ಲರೊಂದಿಗಿನ ಮೊದಲನೇ ಮೈಸೂರು ಯುದ್ಧದಲ್ಲಿ ಏಕಪಕ್ಷೀಯ ವಿಜಯ ಸಾಧಿಸುವುದರೊಂದಿಗೆ ಅಧಿಕಾರದ ಉತ್ತುಂಗ ಶಿಖರಕ್ಕೇರಿದನಾದರೂ ಮರಾಠರ ಆಕ್ರಮಣಗಳಿಂದ ಸ್ವಲ್ಪ ಮಟ್ಟಿಗೆ ಹೈದರಾಲಿಯು ಸೈನಿಕ ಕಾರ್ಯಾಚರಣೆಗೆ ತಾತ್ಕಾಲಿಕ ತಡೆಯುಂಟಾಯಿತು. ಆದಾಗ್ಯೂ ರಾಜ್ಯ ವಿಸ್ತರಣಾ ನೀತಿಯನ್ನು ಪ್ರಧಾನವಾಗಿ ಕರಾವಳಿ ತೀರ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ನಿಟ್ಟಿನಲ್ಲಿ ಮುಂದುವರೆಸಿ ಚಿರಕ್ಕಲ್ (ಕೊಳತ್ತುನಾಡ್), ಕೊಟ್ಟಾಯಂ, ಕಾಡತನಾಡ್, ವಲ್ಲುವನಾಡ್, ಮೊದಲಾದುವುಗಳನ್ನು ವಶಪಡಿಸಿಕೊಂಡ ತರುವಾಯ ತನ್ನ ಅಧಿಕಾರ ಸ್ಥಾಪನೆಗಾಗಿ ಫರೂಕಾಬಾದನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.

೧೭೭೩ರ ವೇಳೆಗೆ ಹೈದರಾಲಿಯು ತನ್ನ ಗುರಿ ಮುಟ್ಟುವುದರಲ್ಲಿ ಯಶಸ್ವಿಯಾದನು. ಮುಂದೆ ತಿರುವಾಂಕೂರ್‌ನ ಮೇಲೆ ನಡೆಸಿದ ಆಕ್ರಮಣದಿಂದಾಗಿ ಈ ಘಟನೆಯು ಎರಡನೇ ಆಂಗ್ಲೋ ಮೈಸೂರು ಯುದ್ಧಕ್ಕೆ ನಾಂದಿಯಾಯಿತು. ಆ ಮೂಲಕ ಇಂಗ್ಲಿಷರ ಮೇಲೆ ನಿರ್ಣಾಯಕ ವಿಜಯಗಳಿಸಿದ ಹೈದರ್ ವಿಶೇಷವಾಗಿ ಟಿಪ್ಪು ಪಶ್ಚಿಮ ಕರಾವಳಿಯಾದ್ಯಂತ ತನ್ನ ಪರಮಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಇಂಗ್ಲಿಷರ ಪ್ರಮುಖ ನೌಕಾಧಿಪತಿಗಳೂ, ದಂಡನಾಯಕರೂ ಆದ ಕರ್ನಲ್ ಬೈಲಿ ಮತ್ತು ಜನರಲ್ ಮ್ಯಾಥ್ಯೂಸ್‌ರವರನ್ನು ಸಂಪೂರ್ಣವಾಗಿ ಹತ್ತಿಕ್ಕಿದನು. ಇದರಿಂದ ಮೈಸೂರು ಹಾಗೂ ಇಂಗ್ಲಿಷರ ನಡುವೆ ಐತಿಹಾಸಿಕ ಪ್ರಸಿದ್ಧ ಮಂಗಳೂರು ಒಪ್ಪಂದವು ೧೭೮೪ರಲ್ಲಿ ಸಂಭವಿಸಿ ಪ್ರಮುಖ ಬಂದರು ಪ್ರದೇಶಗಳಾದ ಮಲಬಾರ್, ಹೊನ್ನಾವರ, ಕಾಪೂ, ಭಟ್ಕಳ, ಮಲ್ಪೆ ಮುಂತಾದ ತೀರಪ್ರದೇಶಗಳು ಮೈಸೂರು ರಾಜ್ಯಕ್ಕೆ ಸೇರಲ್ಪಟ್ಟವು. ಇದು ಸಹಜವಾಗಿ ಇಂಗ್ಲಿಷರು ಮತ್ತು ಟಿಪ್ಪು ನಡುವಣ ಬದ್ಧ ದ್ವೇಷಕ್ಕೆ ಬೀಜಾಂಕುರವಾಯಿತು.

ಐತಿಹಾಸಿಕ ಮಂಗಳೂರು ಒಪ್ಪಂದದಿಂದಾಗಿ ಕಡಲ ಪ್ರದೇಶಗಳ ಮೇಲೆ ಅಧಿಕಾರ ಸ್ಥಾಪಿಸಿದ ಟಿಪ್ಪು ಬಲಾಢ್ಯ ನೌಕಾಪಡೆಯನ್ನು ನಿರ್ಮಿಸಲು ಹಾತೊರೆದನಲ್ಲದೆ ಸೈನಿಕ ಕಾರ್ಯಾಚರಣೆಗಳ ದೃಷ್ಟಿಯಿಂದ ಸುಲ್ತಾನ್ ಬತ್ತೇರಿ, ಕಲ್ಲಿಕೋಟೆ ಮುಂತಾದ ಕಡೆಗಳಲ್ಲಿ ಮದ್ದುಗುಂಡು, ಶಸ್ತ್ರಾಸ್ತ್ರಗಳು ಹಾಗೂ ಸೈನಿಕರ ಜಮಾವಣೆಗಾಗಿ ಮದ್ದಿನಮನೆ ಹಾಗೂ ಬೇಕಲ್‌ನಲ್ಲಿ ಉತ್ತಮ ದರ್ಜೆಯ ಕೋಟೆಯೊಂದನ್ನು ಕಟ್ಟಿಸಿದನು. ಅದು ಇಂದಿಗೂ ಉತ್ತಮ ಸ್ಥಿತಿಯಲ್ಲಿರುವುದು ಗಮನಾರ್ಹ. ಮಲಬಾರ್ ತೀರಪ್ರದೇಶದ ಸೇರ್ಪಡೆಯಿಂದಾಗಿ ಮೈಸೂರು ರಾಜ್ಯದ ರಾಜಕೀಯ ಪರಮಾಧಿಕಾರದ ಬೆಳವಣಿಗೆಯೊಂದಿಗೆ ವಾಣಿಜ್ಯ ವ್ಯಾಪಾರ ಚಟುವಟಿಕೆಗಳು ಸಹ ಬಹಳ ಬಿರುಸುಗೊಂಡವು. ಸೈನಿಕ ಹಾಗೂ ವಾಣಿಜ್ಯ ಉದ್ದೇಶಗಳಿಗಾಗಿ ಬಂದರು ಪ್ರದೇಶಗಳ ಅಭಿವೃದ್ಧಿಯೊಂದಿಗೆ ಯುದ್ಧ ನೌಕೆಗಳ ನಿರ್ಮಾಣ ಕಾರ್ಯವು ಸಹ ತೀವ್ರಗೊಂಡಿತು. ಅರಬ್ ಹಾಗೂ ಟರ್ಕಿ ವ್ಯಾಪಾರಗಾರರ ಒಡನಾಟದಿಂದಾಗಿ ಮೈಸೂರು ರಾಜ್ಯದ ವಾಣಿಜ್ಯ ವ್ಯಾಪಾರ ಚಟುವಟಿಕೆಗಳು ಅಧಿಕಗೊಂಡವು. ಫ್ರೆಂಚರ ಸಹಾಯ ಸಹಕಾರದೊಂದಿಗೆ ಟಿಪ್ಪು ಆಫ್ಘಾನಿಸ್ಥಾನ, ಪರ್ಷಿಯಾ, ಟರ್ಕಿ, ಮಸ್ಕತ್, ಅರಬ್ಬಿಯಾ, ಈಜಿಪ್ಟ್, ಸಿರಿಯಾ ಮೊದಲಾದ ಏಷ್ಯಾದ ರಾಷ್ಟ್ರಗಳಲ್ಲದೆ ಫ್ರಾನ್ಸ್ ಮುಂತಾದ ಯುರೋಪಿನ ರಾಷ್ಟ್ರಗಳೊಂದಿಗೆ

ರಾಜತಾಂತ್ರಿಕ ಮತ್ತು ವ್ಯಾಪಾರ ವಾಣಿಜ್ಯ ಸಂಪರ್ಕಗಳು ಏರ್ಪಟ್ಟವು. ಇದು ಸಹಜವಾಗಿ ಇಂಗ್ಲಿಷರ ರೋಷದ್ವೇಷಗಳನ್ನು ಅಧಿಕಗೊಳಿಸಿ ಈ ಹಿಂದೆ ಎರಡನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಸಂಭವಿಸಿದ ಹಾನಿ ಹಾಗೂ ಅನುಮಾನಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ಕಾತರಿಸುತ್ತಿದ್ದ ಇಂಗ್ಲಿಷರು ಲಾರ್ಡ್ ಕಾರ್ನ್‌ವಾಲೀಸನ ಕಾಲದಲ್ಲಿ ಮೈಸೂರು ರಾಜ್ಯದ ವಿರುದ್ಧ ಯುದ್ಧ ಘೋಷಿಸಲು ಟಿಪ್ಪುವಿನ ಪಶ್ಚಿಮ ಕರಾವಳಿಯ ಕಾರ್ಯಾಚರಣೆಗಳೊಂದಿಗೆ ಮಾಹೆ ದ್ವೀಪವನ್ನು ವಶಪಡಿಸಿಕೊಂಡಿದ್ದು ನೆಪ ಮಾತ್ರವಾಯಿತೆಂಬುದುದಿಲ್ಲಿ ಉಲ್ಲೇಖಾರ್ಹ.

ಒಟ್ಟಾರೆ ಮೈಸೂರು ರಾಜ್ಯ ಹಾಗೂ ಮಲಬಾರ್ ತೀರಪ್ರದೇಶಗಳ ನಡುವಣ ಸಂಪರ್ಕ ಸಂಬಂಧಗಳು ಭಾರತದ ಇತಿಹಾಸದಲ್ಲಿ ಪ್ರಮುಖ ಹಂತವೆನ್ನಬಹುದು. ರಾಜ್ಯ ವಿಸ್ತರಣಾ ನೀತಿಯೊಂದಿಗೆ ವಾಣಿಜ್ಯ ವ್ಯಾಪಾರ ಚಟುವಟಿಕೆಗಳನ್ನು ವೃದ್ಧಿಸಿಕೊಂಡ ಹೈದರ್ ಅಲಿ ಹಾಗೂ ಟಿಪ್ಪು ಫ್ರೆಂಚರು ಮಾತ್ರವಲ್ಲದೆ ಪಶ್ಚಿಮ ಏಷ್ಯಾದ ಅನೇಕ ರಾಷ್ಟ್ರಗಳೊಂದಿಗೆ ಅತ್ಯುತ್ತಮ ರಾಜತಾಂತ್ರಿಕ ಮತ್ತು ವಾಣಿಜ್ಯ ವ್ಯಾಪಾರ ಸಂಬಂಧಗಳನ್ನೇರ್ಪಡಿಸಲು ವರದಾನವಾಯಿತು. ಸಾಮಾಜಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಟಿಪ್ಪು ಕೈಗೊಂಡ ಅನೇಕ ಆಡಳಿತಾತ್ಮಕ ಸುಧಾರಣೆಗಳು ಮಲಬಾರ್ ಪ್ರಾಂತ್ಯದ ಸಮಾಜ ಸುಧಾರಣೆಗೆ ಪ್ರೇರಣೆಯಾಯಿತು. ಇದರಿಂದ ಊಳಿಗಮಾನ್ಯ ವ್ಯವಸ್ಥೆಯೊಂದಿಗೆ ಜಾತೀಯತೆ, ಜೀತಗಾರಿಕೆ, ಅರೆನಗ್ನತೆಯಂತಹ ಸ್ತ್ರೀಯರ ಶೋಷಣೆ ಮುಂತಾದ ಹಾವಳಿಗಳು ಸಾಕಷ್ಟು ಸುಧಾರಣೆಗೊಂಡವು. ಅಂತಿಮವಾಗಿ ಮೈಸೂರು ರಾಜ್ಯದ ಪತನ ಮತ್ತು ದಕ್ಷಿಣ ಭಾರತದಲ್ಲಿ ಬ್ರಿಟಿಷ್ ವಸಾಹತು ವಿಸ್ತರಣಾ ಪ್ರಕ್ರಿಯೆಗೆ ಅತ್ಯುತ್ತಮ ಚಲನೆ ಲಭ್ಯವಾಯಿತೆಂದು ಅಭಿಪ್ರಾಯಪಡಬಹುದು.

ಆಧಾರಸೂಚಿ

೧. ವಿಲಿಯಮ್ ಲೋಗನ್, ಮಲಬಾರ್ ಮ್ಯಾನುಯೆಲ್.

೨. ಫ್ರಾನ್ಸಿಸ್ ಬುಕಾನನ್, ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್, ಕೆನರಾ ಅಂಡ್ ಮಲಬಾರ್.

೩. ರವಿವರ್ಮ: ಟಿಪ್ಪುಸುಲ್ತಾನ್, ಏಸ್ ನ್ನೋನ್ ಇನ್ ಕೇರಳ.

೪. ಮೊಹಿಬ್ಬುಲ್ ಹಸನ್, ಹಿಸ್ಟರಿ ಆಫ್ ಟಿಪ್ಪುಸುಲ್ತಾನ್.

೫. ಕರೀಂ ಸಿ.ಕೆ., ಕೇರಳ ಅಂಡರ್ ಹೈದರ್ ಅಲಿ ಅಂಡ್ ಟಿಪ್ಪುಸುಲ್ತಾನ್.

ದಕ್ಷಿಣ ಕನ್ನಡ ಜಿಲ್ಲೆಯ ಕೆಳದಿ ಕಾಲದ ಚಾರಿತ್ರಿಕ, ಸಾಂಸ್ಕೃತಿಕ ನೆಲೆಗಳು

ಸುಜಾತ*

ಕೆಳದಿ ಆಡಳಿತ ವಿಭಾಗ ಅಥವಾ ಘಟಕಗಳು ಕೆಳದಿ ಸಾಮ್ರಾಜ್ಯದ ವಿಸ್ತಾರವನ್ನು ತಿಳಿಸುತ್ತವೆ. ಪಶ್ಚಿಮಘಟ್ಟಗಳು ಕೆಳದಿ ರಾಜ್ಯವನ್ನು ಪಶ್ಚಿಮ ಕರಾವಳಿ ಪ್ರದೇಶ ಹಾಗೂ ಪಶ್ಚಿಮಘಟ್ಟದ ಪೂರ್ವಕ್ಕೆ ಇರುವ ಒಳಪ್ರದೇಶಗಳಾಗಿ ವಿಂಗಡಿಸುತ್ತವೆ. ಕೆಳದಿ ಶಾಸನಗಳು ಘಟ್ಟದ ಮೇಲಿನ ಹಾಗೂ ಘಟ್ಟದ ಕೆಳಗಣ ಎಂಬುದಾಗಿ ಭೌಗೋಳಿಕ ವಿಂಗಡನೆಯನ್ನು ಗುರುತಿಸುತ್ತವೆ. ಎಂದರೆ ನೈಸರ್ಗಿಕ ಭೂಲಕ್ಷಣಗಳು ಒಂದು ರಾಜ್ಯದ ಗಡಿಯಾಗಿ ಅದರ ಬಾಹುಳ್ಯವನ್ನು ತಿಳಿಸುವುದು ಆ ಕಾಲಘಟ್ಟದಲ್ಲಿ ಭೂಮೇಲ್ಮೈ ಲಕ್ಷಣವು ಪಡೆದುಕೊಂಡ ಮಹತ್ವವನ್ನು ತಿಳಿಸುತ್ತದೆ.

ಕೆಳದಿ ರಾಜ್ಯದ ಭೌಗೋಳಿಕ ಘಟಕಗಳೆಂದರೆ ಕಂಪಣ, ಮಾಗಣೆ, ನಾಡು, ಹೋಬಳಿ, ಸೀಮೆ ಮೊದಲಾದವು ಹೋಬಳಿಗಳು ಪಾಳು ಎಂಬ ಸಣ್ಣ ವಿಭಾಗಗಳಿಂದ ರಚಿಸಲ್ಪಟ್ಟವು. ವಂತೆ, ಮಂಡಲ, ನಾಡು, ಸ್ಥಳ, ವಳಿತ ಮೊದಲಾದ ದೊಡ್ಡ ವಿಭಾಗಗಳು ರಾಜ್ಯ ಪದಕ್ಕೆ ಸಂವಾದಿಯಾಗಿಯೂ ಬಳಸಲ್ಪಡುತ್ತಿತ್ತು.[೧] ಅಲ್ಲದೆ ಗ್ರಾಮ, ಅಗ್ರಹಾರಗಳು ಪ್ರಮುಖ ಮೂಲ ಭೌಗೋಳಿಕ ಘಟಕಗಳು.

ಪೆಟ್ರೊ ಡೆಲ್ಲಾವೆಲ್ಲಿಯು ಹೇಳಿರುವಂತೆ ಸದಾಶಿವ ನಾಯಕನು ಕಾರ್ನಾಡ್ (ಮುಲ್ಕಿ ಹತ್ತಿರ) ಅರಸು ಮನೆತನವನ್ನು, ವಾಮಂಜೂರಿನ ಅರಸು ಮನೆತನವನ್ನು, ಕದಿರೆ ಅರಸುವನ್ನು, ಮೂಡಬಿದರೆ, ವೇಣೂರು, ಅಜಿಲ ಅರಸು ಮನೆತನವನ್ನು, ಯೆರ್ಮಾಳು, ಕಾಪು, ಕಟ್ಪಾಡಿ, ನಿಡಂಬೂರು, ಮುದ್ರಾಡಿ, ಪಣಂಬೂರು, ಹೆಬ್ರಿ ಮೊದಲಾದ ಇತರೆ ಬಲ್ಲಾಳ ಹೆಗ್ಗಡೆಗಳನ್ನು ಸೋಲಿಸಿದನು.[೨]

ಅಲ್ಲದೆ ಕೆಳದಿ ವೆಂಕಟಪ್ಪ ನಾಯಕ ವಶಪಡಿಸಿಕೊಂಡ ಪ್ರದೇಶಗಳು ಆ ಕಾಲಘಟ್ಟದ ಚಾರಿತ್ರಿಕ ನೆಲೆಗಳಾಗಿವೆ. ಅವುಗಳೆಂದರೆ ಸುರಾಲರ ಹಾಗೂ ತೊಳಹರ ಸೀಮೆಗಳಾದ ನಲವತ್ತುನಾಡು, ಕೆಲನಾಡು, ಶಂಕರನಾರಾಯಣ, ಬೈಂದೂರು, ಹಳ್ಳಿಗೆರೆ, ಮೂಲಿಕೆ, ಕೊಡೆಯಾಲ, ಮೂಡಬಿದರೆ, ಉಳ್ಳಾಲ, ಕುಂಬಳೆ, ಕಾಸರಗೋಡು, ಪುದುವೆಟ್ಟು, ಬೆಳ್ಳರೆ, ಕಾಂತಮಂಗಲ, ಬಂದ್ಯಡ್ಕ, ಕಡಂಕುಳಿ, ಕೊಲ್ಲೂರಬಾಚಿ, ಶಿಶಿಲ, ಚಂದ್ರಗಿರಿ, ಕಿದುಟು, ಮೂಡಗೂಡೆಯಾಲ, ಫಣಿಯಾಲ ಮೊದಲಾದವು.[೩]

ಮಂಗಳೂರು: ಕೆಳದಿ ಅರಸರು ಮಂಗಳೂರನ್ನು ಪ್ರಾಂತ್ಯವಾಗಿ ಪ್ರಾದೇಶಿಕ ಘಟಕವಾಗಿ ವಿಭಾಗಿಸಿದ್ದರು. ಕ್ರಿ.ಶ. ೧೫೫೪ರಲ್ಲಿ ಸದಾಶಿವ ನಾಯಕನು ಮಂಗಳೂರಿನ ರಾಜ್ಯಪಾಲನಾದನು. ಕ್ರಿ.ಶ. ೧೫೬೩ರಲ್ಲಿ ಮಂಗಳೂರು ಇವನ ನೇರ ಆಳ್ವಿಕೆಗೆ ಒಳಗಾಯಿತು. (ಶಾಸ್ತ್ರಿ.ಬಿ.ಪು.೭) ಕ್ರಿ.ಶ. ೧೬೧೭ರ ವೆಂಕಟಪ್ಪನಿಗೆ ಸೇರಿದ ಶಾಸನವೊಂದು ಮಂಗಳೂರನ್ನು ಕೊಡಿಯಾಲಬೈಲು ಎಂದು ಉಲ್ಲೇಖಿಸುತ್ತದೆ. ಕ್ರಿ.ಶ. ೧೬೧೯ರಲ್ಲಿ ವೆಂಕಟಪ್ಪ ನಾಯಕನು ಮಂಗಳೂರಿನಲ್ಲಿ ಕೋಟೆಯನ್ನು ಕಟ್ಟಿಸಿದನು ಎನ್ನಲಾಗಿದೆ.[೪] ಅಲ್ಲದೆ ಎರಡನೇ ಬಸಪ್ಪನು ಮಂಗಳೂರಿನಲ್ಲಿ ಶಿವರಾಜೇಂದ್ರಗಿರಿ ಎಂಬ ಕೋಟೆಯನ್ನು ಕಟ್ಟಿಸಿದನು.[೬]

ಕಾಪು: ಕಾಪು ಉಡುಪಿ ತಾಲೂಕಿನಲ್ಲಿದೆ. ಕಾಪು (ಮನೋಹರಘಡ)ನಲ್ಲಿ ಕೆಳದಿ ಎರಡನೇ ಬಸಪ್ಪನು ಕೋಟೆಯನ್ನು ಕಟ್ಟಿಸಿದನು. ಕಾಪು ಕೆಳದಿ ಕಾಲದಲ್ಲಿ ಒಂದು ನಗರ ಪ್ರದೇಶವಾಗಿತ್ತು. ಕ್ರಿ.ಶ. ೧೫೪೩ರ ಶಾಸನವೊಂದು ಕಾಪಿನಗರ, ಕಾಪಿನರಾಜ್ಯ (ಕ್ಷೇತ್ರ) ಸೀಮೆ ಎಂದು ಉಲ್ಲೇಖಿಸಿದೆ.[೭]

ಬಾರ್ಕೂರು: ಕೆಳದಿ ಅರಸರು ಬಾರ್ಕೂರನ್ನು ಪ್ರಾಂತ್ಯವಾಗಿ ಬಾರಕೂರು ರಾಜ್ಯವೆಂದು ಪ್ರಾದೇಶಿಕ ಘಟಕವಾಗಿ ವಿಭಾಗಿಸಿದ್ದರು. ಬಾರಕೂರು ಸಂಸ್ಥಾನವನ್ನು ವೆಂಕಟಪ್ಪ ನಾಯಕನು ಸ್ವಾಧೀನಪಡಿಸಿಕೊಂಡು ಬಾರಕೂರು, ಕಲ್ಯಾಣಪುರ, ಮಲ್ಲಿಕಾರ್ಜುನಗಿರಿ ಹಾಗೂ ಕಂಡ್ಲೂರುಗಳಲ್ಲಿ ಕೋಟೆಯನ್ನು ನಿರ್ಮಾಣ ಮಾಡಿಸಿದನು.[೮]

ಸುಲಿಯ (ಸುಳ್ಯ): ಕೆಳದಿ ಕಾಲದಲ್ಲಿ (ಶಿವಪ್ಪನಾಯಕ) ದಕ್ಷಿಣ ಕನ್ನಡದ ಸುಲಿಯ(ಸುಳ್ಯ)ದ ಹಲವು ಭಾಗಗಳನ್ನು

* ಸಂಶೋಧನಾ ವಿದ್ಯಾರ್ಥಿನಿ. ಇತಿಹಾಸ ವಿಭಾಗ. ಮಂಗಳೂರು ವಿಶ್ವವಿದ್ಯಾನಿಲಯ. ಮಂಗಳಗಂಗೋತ್ರಿ

ಕೊಡಗಿನ ರಾಜನಿಗೆ ಉಂಬಳಿಯಾಗಿ ನೀಡಿ ಅದು 'ಅಮೃತಮಾಗಣಿ' ಎಂಬ ಹೆಸರು ಪಡೆದು ನಂತರ 'ಅಮರ ಮಾಗಣೆ' ಎಂದು ಕರೆಯಲ್ಪಟ್ಟಿತು.[೧೦]

ಕಡಬ: ಮಂಗಳೂರು ರಾಜ್ಯದ ಕಡಬವು ಕೆಳದಿ ಕಾಲದಲ್ಲಿ ಒಂದು ಸೀಮೆಯಾಗಿದ್ದು, ಅಲ್ಲಿನ ಬಲ್ಪೆ ಗ್ರಾಮದ ಉಲ್ಲೇಖವು ಕೆಳದಿ ಶಾಸನದಲ್ಲಿ ಕಂಡುಬರುತ್ತದೆ.[೧೧]

ಹೊಸಂಗಡಿ: ಹೊಸಂಗಡಿಯು ಕುಂದಾಪುರ ತಾಲೂಕಿನಲ್ಲಿದೆ. ಶಿವಪ್ಪನಾಯಕನು ಹೊನ್ನೆಯ ಕಂಬಳಿಯವರು ಆಳುವ ಸೀಮೆಯ ಪ್ರಜೆ ಪರಿವಾರದವರನ್ನು ಸೇರಿಕೊಂಡು ಹೊಸಂಗಡಿ ಸ್ಥಳದಲ್ಲಿ ಕೋಟೆಯನ್ನು ನಿರ್ಮಿಸಿದನು.

ಕಾರ್ಕಳ: ವಿಜಯನಗರ ಪತನಾನಂತರ ಹುಟ್ಟಿಕೊಂಡ ಸ್ವತಂತ್ರ ಸಾಮಂತ ಮನೆತನವಿದು. ಕಾರ್ಕಳ ಭಾಗವನ್ನು ಘಟ್ಟದ ಕೆಳಗಿನ ಭೂಮಿ ಎಂದು ಹೇಳಲಾಗಿದೆ. ವೆಂಕಟಪ್ಪ ನಾಯಕನ ಕಾಲದಲ್ಲಿ ಈ ಪ್ರದೇಶವು ಭೈರರಸ ಒಡೆಯರನ್ನು ನಿಗ್ರಹಿಸಿ, ಕೊಪ್ಪ, ಬೆಳ್ಳಾರೆ, ಕಾರ್ಕಳ, ಕಳಸ ಮತ್ತು ಬಾಂಡ್ಯದ ಕೋಟೆ ಹಾಗೂ ಭೂಮಿಯನ್ನು ವಶಪಡಿಸಿಕೊಂಡನು.

ಬಸರೂರು: ಬಸರೂರನ್ನು ವಸುಪುರ ಎನ್ನಲಾಗಿದೆ. ವೆಂಕಟಪ್ಪ ನಾಯಕನು ವಸುಪ್ಯರ (ಬಸರೂರು)ವನ್ನು ಸಾಧಿಸಿದನು. ಅಲ್ಲದೆ ಬಸರೂರನ್ನು ಸಾಧಿಸಿ ಮಹಾಲಿಂಗೇಶ್ವರ ದೇವರ ಪೂಜೆಗೆ ಲೋಪವಾಗದಂತೆ ಕಟ್ಟುಪಾಡು ಮಾಡಿ ತೆರಳಿದನು.[೧೨]

ಸಿದ್ಧಾಪುರ: ಸಿದ್ಧಾಪುರವು ಕುಂದಾಪುರ ತಾಲೂಕಿನಲ್ಲಿದ್ದು ಎರಡನೇ ಬಸಪ್ಪನಾಯಕನು ಸಿದ್ಧಾಪುರ ಸಮೀಪದಲ್ಲಿ ಮಂತ್ರರಾಜಪುರ ಅಗ್ರಹಾರವನ್ನು, ಅಲ್ಲಿಯ ಸಿದ್ದೇಶ್ವರನಿಗೆ ಪ್ರತಿವರ್ಷ ರಥೋತ್ಸವವನ್ನು ನಡೆಸುವಂತೆ ಉಂಬಳಿಯನ್ನೂ, ಅಲ್ಲಿ ಮಠವನ್ನು ನಿರ್ಮಾಣ ಮಾಡಿದನು. ಗುರು ನಂಜುಂಡ ಸ್ವಾಮಿಗಳಿಗೆ ಆ ಮಠವನ್ನು ಧಾರೆಯೆರೆದನು.[೧೩]

ಕೊಂಡಾಡಿ: ಕೊಂಡಾಡಿಯು ಉಡುಪಿ ತಾಲೂಕಿನ ಹಿರಿಯಡ್ಕದಿಂದ ೨ ಕಿ.ಮೀ. ದೂರ ಬೊಮ್ಮರಬೆಟ್ಟು ಗ್ರಾಮದಲ್ಲಿದೆ. ಕೆಳದಿ ಶಿವಪ್ಪನಾಯಕನು ಇಲ್ಲಿ ಜಂಗಮ ಮಠವೊಂದನ್ನು ಸ್ಥಾಪಿಸಿದನು. ಈ ಮಠದಲ್ಲಿ ಸಿದ್ದಲಿಂಗೇಶ್ವರ ಗುಡಿ ಇದೆ. ಹಿರಿಯಡ್ಕ ವೀರಭದ್ರ ದೇಗುಲದ ಜಾತ್ರೆ ಸಂದರ್ಭ ವೀರಶೈವರು ಶಿವಮೊಗ್ಗ ಜಿಲ್ಲೆಯಿಂದ ಇಲ್ಲಿಗೂ ಭೇಟಿ ನೀಡುತ್ತಾರೆ.[೧೪]

ಕಾಸರಗೋಡು: ಕೆಳದಿ ಕಾಲದಲ್ಲಿ ಕಾಸರಗೋಡಿನಲ್ಲಿ ಜಂಗಮ ಮಠವಿದ್ದು ಕಾಸರಗೋಡಿನಲ್ಲಿ ಸದಾಶಿವ ನಾಯಕನು ವಿಜಯನಗರ ಕೃಷ್ಣದೇವರಾಯನ ಅಪ್ಪಣೆಯಂತೆ ತುಳುನಾಡನ್ನು ನಿಗ್ರಹಿಸಿ ಸದೆಬಡಿದ ನೆನಪಿಗಾಗಿ ಕಾಸರಗೋಡಿನಲ್ಲಿ ಸ್ತಂಭವನ್ನು ನೆಡಿಸಿದನು. ಹೀಗೆ ಸೊಕ್ಕಿದ್ದ ತುಳುವರನ್ನು ಅವರ ಪ್ರಾಂತ್ಯಗಳನ್ನು ಸ್ವಾಧೀನಪಡಿಸಿಕೊಂಡನು.[೧೫] ಅಲ್ಲದೆ ಇದೊಂದು ಪುರಾತನ ಮಾಯಿಲ ಕೋಟೆಯಿದ್ದ ಸ್ಥಳವಾಗಿತ್ತು.[೧೬]

ಗುರುಪುರ: ಗುರುಪುರವು ಮಂಗಳೂರು ತಾಲೂಕಿನಲ್ಲಿದೆ. ಕೆಳದಿ ಅರಸರು ವೀರಶೈವರಾಗಿದ್ದು ಕೆಳದಿ ಕಾಲದಲ್ಲಿ ಸುಮಾರು ೧೦೨ಕ್ಕೂ ಅಧಿಕ ಮಠಗಳ ಸ್ಥಾಪನೆಯಾಗಿದ್ದಿತು. ಮಠಗಳನ್ನು ಉತ್ತರ ಭಾಗ ಹಾಗೂ ದಕ್ಷಿಣ ಭಾಗಗಳೆಂದು ವಿಭಾಗಿಸಲಾಗಿತ್ತು. ಉತ್ತರ ಭಾಗದಲ್ಲಿದ್ದ ೩೨ ಮಠಗಳಿಗೆ ಗುರುಪುರ ಮಠವು ಪ್ರಧಾನ ಮಠವಾಗಿದ್ದಿತು.[೧೭]

ಮುಲ್ಕಿ: ಮುಲ್ಕಿಯು ಮೂಡಬಿದಿರೆ ಸಮೀಪವಿದೆ. ಮೂಲಿಕೆಯ ಸಾವಂತರು ಪಾಳೆಯಗಾರರಾಗಿದ್ದು ಮೂಲಿಕೆಯ ಸಮೀಪ ಸೀಮಂತೂರಿನಿಂದ ಆಳ್ವಿಕೆ ನಡೆಸುತ್ತಿದ್ದರು.[೧೮] ಮುಲ್ಕಿ ಕಾರ್ನಾಡಿನ ರಾಣಿಯನ್ನು ವೆಂಕಟಪ್ಪ ನಾಯಕನು ತನ್ನ ವಶದಲ್ಲಿಟ್ಟುಕೊಂಡ ಕುರಿತು ಹೇಳಲಾಗಿದೆ.[೧೯]

ಮಲ್ಪೆ: ಮಲ್ಪೆಯಲ್ಲಿ ಕೆಳದಿ ಎರಡನೇ ಬಸಪ್ಪನು (ದರಿಯಾಬಾದ್) ಕೋಟೆಯನ್ನು, ಅರಮನೆಯನ್ನು ಕಟ್ಟಿಸಿದನು.

ಬಂಟ್ವಾಳ: ಕೆಳದಿ ಅರಸರು ಸಂಭೂರು, ನಾವೂರು, ಸರ್ಪಾಡಿ ಕಡೆ ಅಗ್ರಹಾರಗಳನ್ನು ಕಟ್ಟಿಸಿದರು.[೨೦]

ಕಲ್ಯಾಣಪುರ: ಕೆಳದಿ ಎರಡನೇ ಬಸಪ್ಪನು ಕಲ್ಯಾಣಪುರ ತೊನಸೆಯಲ್ಲಿ ಕೋಟೆಯನ್ನು ಕಟ್ಟಿಸಿದನು.

ಬೆಣ್ಣೆಗೆರೆ: ಕೆಳದಿ ಎರಡನೇ ಬಸಪ್ಪನು ಬೆಣ್ಣೆಗೆರೆಯಲ್ಲಿ ಕೋಟೆಯನ್ನು ಕಟ್ಟಿಸಿದನು.[೨೧]

ವಾಮಂಜೂರು: ಮಂಗಳೂರು ಸಮೀಪದ ವಾಮಂಜೂರು ಒಂದು ಚಾರಿತ್ರಿಕ ನೆಲೆಯಾಗಿದ್ದು, ಕೆಳದಿ ವೆಂಕಟಪ್ಪನು ಈ ಪ್ರದೇಶವನ್ನು ತನ್ನ ಹತೋಟಿಗೆ ತಂದುಕೊಂಡನು ಎನ್ನಲಾಗಿದೆ.[೨೨]

ಮೂಡಬಿದರೆ: ಮೂಡಬಿದರೆಯು ಕೆಳದಿ ನಾಯಕರ ಕಾಲದಲ್ಲಿ ಜೈನಕೇಂದ್ರವಾಗಿ ಚಾರಿತ್ರಿಕ ಮಹತ್ವವನ್ನು ಪಡೆದಿತ್ತು. ಇಲ್ಲಿನ ಜಿನ ಬಸದಿಯು ಹಿರಿಯ ವೆಂಕಟಪ್ಪನ ಕಾಲದಲ್ಲಿ (೧೫೮೩–೧೬೩೦) ಜೀರ್ಣೋದ್ಧಾರವಾಯಿತು.[೨೩]

ಕೊಲ್ಲೂರು: ಕೆಳದಿ ಕಾಲದಲ್ಲಿಯೂ ಕೊಲ್ಲೂರು ಒಂದು ಶಕ್ತಿ ಆರಾಧನಾ ಕೇಂದ್ರವಾಗಿ ಉನ್ನತಿಯ ಮಟ್ಟಕ್ಕೆ ಮುಂದುವರಿಯಿತು.[೨೪] ಕೊಲ್ಲೂರು ಮೂಕಾಂಬಿಕಾ ದೇವಾಲಯಕ್ಕೆ ಕ್ರಿ.ಶ. ೧೫೪೫ರಲ್ಲಿ ವೆಂಕಟಪ್ಪನಾಯಕನ ಧರ್ಮಪತ್ನಿ ವೀರಮ್ಮಾಜಿಯು ಶಿವರಾತ್ರಿಯಂದು ಮಾಡಿದ ದಾನವನ್ನು

ಕುರಿತು ಶಾಸನವು ಉಲ್ಲೇಖಿಸುತ್ತದೆ.[೨೫] ಸೋಮಶೇಖರ ನಾಯಕನು ಕೊಲ್ಲೂರಿಗೆ ಹೋಗಿ ಮೂಕಾಂಬಿಕೆಯನ್ನು ಪೂಜಿಸಿ, ಬ್ರಾಹ್ಮಣ ಭೋಜನವನ್ನು ಏರ್ಪಡಿಸಿದ್ದಲ್ಲದೆ ಸಾವಿರಾರು ಸುಮಂಗಲಿಯರಿಗೆ ಕುಪ್ಪಸಗಳನ್ನು ಕೊಟ್ಟನು, ಅಲ್ಲಿ ರಥೋತ್ಸವವನ್ನು ಮಾಡಿಸಿದನು. ಹಾಗೂ ರಂಗಪೂಜೆ ಲಕ್ಷದೀಪ ಪೂಜೆ ಮೊದಲಾದವನ್ನು ಭಕ್ತಿಯಿಂದ ಮಾಡಿಸಿದನು.[೨೬] ವೆಂಕಟಪ್ಪ ನಾಯಕನು ಈ ದೇವಾಲಯವನ್ನು ಶಿಲಾಮಯಗೊಳಿಸಿದನು. ಚೆನ್ನಾಮಾಜಿಯೂ ಮೂಕಾಂಬಿಕಾ ದೇವಿಗೆ ವಜ್ರದ ಓಲೆ ಮಾಡಿಸಿರುವುದಾಗಿ ಪ್ರತೀತಿ ಇದೆ. ವೀರಭದ್ರ ನಾಯಕನು ಒಂಭತ್ತು ಗ್ರಾಮಗಳನ್ನು ದೇವಿಯ ನಿತ್ಯ ಪೂಜೆಗೆ ದಾನ ನೀಡಿರುವ ಬಗ್ಗೆ ಹೇಳಲಾಗಿದೆ. ವೆಂಕಟಪ್ಪ ನಾಯಕನ ಪತ್ನಿ ವೀರಮ್ಮಾಜಿಯು ದೇವಿಗೆ ಕಂಚಿನ ವಿಗ್ರಹವನ್ನು ಮಾಡಿಸಿಕೊಟ್ಟ ಬಗ್ಗೆ ಶಾಸನವು ತಿಳಿಸುತ್ತದೆ. ಒಟ್ಟಿನಲ್ಲಿ ಕೊಲ್ಲೂರು ಕೆಳದಿ ಕಾಲದಲ್ಲಿ ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು.[೨೭]

ಗಂಗೊಳ್ಳಿ: ಗಂಗೊಳ್ಳಿಯ ಗುಹೇಶ್ವರ ದೇವಾಲಯದ ಪ್ರಸ್ತಾಪ ಹಾಗೂ ದೊಡ್ಡ ಸಂಕಣ್ಣನಾಯಕನಿಂದ ಈ ದೇವಾಲಯಕ್ಕೆ ಹಣದ ದಾನ ಪಡೆದಿದ್ದನ್ನು ಪೋರ್ಚುಗೀಸ್ ದಾಖಲೆಯು ತಿಳಿಸುತ್ತದೆ.[೨೮] ಗಂಗೊಳ್ಳಿ ದ್ವೀಪವು ಕೆಳದಿ ವೀರಭದ್ರನ ಕಾಲದಲ್ಲಿ ಪೋರ್ಚುಗೀಸರ ವಶವಾಯಿತು.[೨೯] ಗಂಗೊಳ್ಳಿ ದ್ವೀಪವು ಪೋರ್ಚುಗೀಸರ ಹಾಗೂ ಕೆಳದಿ ಅರಸರ ಚಟುವಟಿಕೆಯ ಕೇಂದ್ರವಾಗಿತ್ತು.[೩೦] ಅಲ್ಲದೆ ಅಲ್ಲಿನ ಎರಡು ದೇವಾಲಯ ಕುರಿತು ಹೇಳಲಾಗಿದೆ.[೩೧] ಕೆಳದಿ ಕಾಲದಲ್ಲಿ ಗಂಗೊಳ್ಳಿಯ ವೆಂಕಟರಮಣ ದೇವಾಲಯಗಳು ಜೀರ್ಣೋದ್ಧಾರಗೊಂಡವು.[೩೨]

ಉಡುಪಿ: ಕೆಳದಿ ಕಾಲದಲ್ಲಿ ಉಡುಪಿಯು ವೈಷ್ಣವ ಧರ್ಮಕ್ಕೆ ಕೇಂದ್ರವಾಗಿತ್ತು. ರಾಮರಾಜ ನಾಯಕ ಹಾಗೂ ವೀರಭದ್ರ ನಾಯಕರು ಉಡುಪಿಯ ದ್ವೈತ ಮಠ ಹಾಗೂ ಕೃಷ್ಣ ದೇವಾಲಯಕ್ಕೆ ಜೀರ್ಣೋದ್ಧಾರ ಪುನರ್ ಪ್ರತಿಷ್ಠಾಪನೆಗಾಗಿ ದಾನ ದತ್ತಿ ನೀಡಿದರು.[೩೩] ಕೆಳದಿ ಕಾಲದಲ್ಲಿ ಪುರಂದರ ದಾಸರು, ಕನಕದಾಸರು, ರಾಘವೇಂದ್ರ ಯತಿಗಳು ಉಡುಪಿಗೆ (ಮತ್ತು ಸುಬ್ರಹ್ಮಣ್ಯ) ದರ್ಶನವಿತ್ತರು.[೩೪]

ಬಡಗ ಕಜೆಕಾರು: ಇಲ್ಲಿ ಕ್ರಿ.ಶ. ೧೫೬೭ರ ದೊಡ್ಡ ಸಂಕಣ್ಣನ ಆಳ್ವಿಕೆಯ ಶಾಸನವು ದೊರೆತಿದೆ. ಶಾಸನದಲ್ಲಿ ಉಲ್ಲೇಖಿಸಲಾದ ದೊಡ್ಡ ಸಂಕಣ್ಣನಾಯಕನು ಸದಾಶಿವ ನಾಯಕನೆಂದು ಬಾ.ರಾ. ಗೋಪಾಲ ಅವರು ಅಭಿಪ್ರಾಯ ಪಟ್ಟಿದ್ದಾರೆ. ಇದು ಸದಾಶಿವ ನಾಯಕನ ರಾಜ್ಯ ವಿಸ್ತಾರವನ್ನು ತಿಳಿಸುತ್ತದೆ. ಎಂದರೆ ಕ್ರಿ.ಶ. ೧೫೬೭ರ ಪುತ್ತೂರು ತಾಲೂಕಿನ ಅರಿಗುಡಿಯ ಶಾಸನವು ಕೆಳದಿಯ ಪ್ರಭು ಸದಾಶಿವ ನಾಯಕ ಎಂದಿದೆ.[೩೫]

ನಂದಾವರ: ನಂದಾವರ ಕೋಟೆಯ ಪ್ರಸ್ತಾಪವು ವೆಂಕಟಪ್ಪನ ಕಾಲದಲ್ಲಿ ಕಂಡುಬರುತ್ತದೆ. ಅಲ್ಲದೆ ನಂದಾವರ ಪ್ರದೇಶವು ೨೪೦೦ ಪ್ರತಾಪ ಮತ್ತು ೮ ಹಣವುಳ್ಳ ಉತ್ಪತ್ತಿಯುಳ್ಳ ಪ್ರದೇಶ ಎಂದು ಹೇಳಲಾಗಿದೆ.[೩೬]

ಸಜಪು: ಸಜಪು ಇದು ೭೬೪ ಪ್ರತಾಪ ಮತ್ತು ೮ ಹಣಗಳ ಉತ್ಪತ್ತಿಯುಳ್ಳ ಪ್ರದೇಶ ಎಂದು ಹೇಳಲಾಗಿದೆ.[೩೭]

ಬೆಲ್ವಿರ್: ಈ ಪ್ರದೇಶವು ೪೭೩ ಪ್ರತಾಪ ಮತ್ತು ೨ ಹಣ ಉತ್ಪತ್ತಿಯುಳ್ಳ ಪ್ರದೇಶ ಎಂದು ಹೇಳಲಾಗಿದೆ. ಈ ಪ್ರದೇಶಗಳನ್ನು ಬಂಗ ರಾಜನಿಗೆ ವೆಂಕಟಪ್ಪನು ಕೊಡಬೇಕೆಂದು ಪೋರ್ಚುಗೀಸ್/ವೆಂಕಟಪ್ಪರ ಸಂಧಾನದಲ್ಲಿ ಹೇಳಲಾಗಿದೆ.[೩೮] ಇವು ಆರ್ಥಿಕ ಭೂವಲಯಗಳಾಗಿ ಕಂಡು ಬಂದಿವೆ.

ಗಂಗೊಳ್ಳಿ: ಬಸರೂರಿನ ವ್ಯಾಪಾರಸ್ಥರಿಂದ ಗಂಗೊಳ್ಳಿ ದ್ವೀಪವನ್ನು ಕೆಳದಿ ವೆಂಕಟಪ್ಪನು ವಶಪಡಿಸಿಕೊಂಡಿದ್ದನು. ಆದರೆ ವೆಂಕಟಪ್ಪನ ಮರಣಾನಂತರ ಗಂಗೊಳ್ಳಿ ದ್ವೀಪವು ವೆಂಕಟಪ್ಪನ ಮೊಮ್ಮಗ ವೀರಭದ್ರನ ಕಾಲದಲ್ಲಿ ಬಸರೂರಿನ ವ್ಯಾಪಾರಸ್ಥರಿಂದ ದಂಗೆಯೆದ್ದು ಪೋರ್ಚುಗೀಸರಿಗೆ ಒಪ್ಪಿಸಲಾಯಿತು.[೩೯]

ಗಂಗೊಳ್ಳಿ: ಗಂಗೊಳ್ಳಿಯಲ್ಲಿ ಪೋರ್ಚುಗೀಸರೂ, ವೆಂಕಟಪ್ಪನಾಯಕನೂ ಎದುರುಬದುರಾಗಿ ಕೋಟೆಗಳನ್ನು ಕಟ್ಟಿದ್ದರು. ಅದನ್ನು ವೀರಭದ್ರನ ಕಾಲದಲ್ಲಿ ಕೆಡವಲಾಯಿತು.[೪೦] ಗಂಗೊಳ್ಳಿಯಲ್ಲಿ ಕ್ರಿ.ಶ. ೧೬೩೨ರ ಕಾಲಾವಧಿಯಲ್ಲಿ ಗಂಗೊಳ್ಳಿಯಲ್ಲಿ ವೀರಭದ್ರನು ಪೋರ್ಚುಗೀಸರ ಕೋಟೆಯ ಎದುರು ಒಂದು ಗುಂಡೆಸೆತದ ದೂರದಲ್ಲಿ ತಾನೊಂದು ಕೋಟೆ ಕಟ್ಟಿಸಿದನು.[೪೧]

ಕುಂದಾಪುರ: ಕುಂದಾಪುರ ಕೋಟೆಯು ಚಿಕ್ಕದು ಹಾಗೂ ಉತ್ತಮ ವಿಧಾನದಲ್ಲಿ ಕಟ್ಟಲ್ಪಟ್ಟಿದೆ. ಬಸರೂರಿಗೆ ಹೋಗುವ ಅಥವಾ ಬರುವ ಎಲ್ಲಾ ಸಾಮಾನುಗಳು ನದಿಯ ಮೂಲಕ ಕುಂದಾಪುರ ಕೋಟೆಯ ಬಳಿ ಸಾಗುತ್ತಿದ್ದರಿಂದ ಕುಂದಾಪುರದ ಕೋಟೆಯು ಬಸರೂರಿನ ಮಹಾದ್ವಾರವೆಂದು ಹೇಳಲಾಗಿದೆ.[೪೨] ಕ್ರಿ.ಶ. ೧೬೫೨ ಜೂನ್ ತಿಂಗಳಲ್ಲಿ ಶಿವಪ್ಪ ನಾಯಕನು ಕುಂದಾಪುರದ ಪೋರ್ಚುಗೀಸರ ಕೋಟೆಯನ್ನು ತನ್ನ ವಶ ಮಾಡಿಕೊಂಡನು.[೪೩]

ಕೆಳದಿ ಆಳ್ವಿಕೆಯು ದಕ್ಷಿಣಕನ್ನಡ ಜಿಲ್ಲೆಯಲ್ಲಿ ತನ್ನದೇ ಆದ ಸಾಂಸ್ಕೃತಿಕ ಚಹರೆಯನ್ನು ಬಿತ್ತಿದ್ದು, ಈ ಮೊದಲಾದ ಪ್ರದೇಶಗಳು ಕೆಳದಿ ಚಾರಿತ್ರಿಕ ಕಾಲಘಟ್ಟದ ಚಾರಿತ್ರಿಕ, ಸಾಂಸ್ಕೃತಿಕ ನೆಲೆಗಳಾಗಿ ಮಹತ್ವವನ್ನು ಪಡೆದುಕೊಂಡಿವೆ. ಒಟ್ಟಿನಲ್ಲಿ ರಾಜರಿಂದ ವಶಕ್ಕೊಳಗಾದ ನೆಲೆಗಳು ಚಾರಿತ್ರಿಕ ನೆಲೆಗಳಾಗಿಯೂ ಮತ್ತು ಪ್ರಾದೇಶಿಕ ನೆಲೆಗಳು ರಾಜ್ಯದ

ಆಡಳಿತ ದೃಷ್ಟಿಯಿಂದಲೂ, ಹಾಗೂ ಇತರೆ ಚಾರಿತ್ರಿಕ / ಸಾಂಸ್ಕೃತಿಕ ನೆಲೆಗಳನ್ನು ಕುರಿತು ಈ ಲೇಖನದಲ್ಲಿ ಬೆಳಕು ಚೆಲ್ಲಲಾಗಿದೆ.

[ಕೃತಜ್ಞತೆಗಳು: ಈ ಪ್ರಬಂಧವನ್ನು ರಚಿಸಲು ಸಲಹೆಯನ್ನು ನೀಡಿರುವ ನನ್ನ ಗುರುಗಳಾದ ಹನುಮಾನಾಯಕ ಇವರಿಗೆ ನಾನು ಆಭಾರಿಯಾಗಿರುತ್ತೇನೆ.]

ಆಧಾರಸೂಚಿ

೧. ರಮೇಶ ಕೆ.ವಿ., "ನೋಟ್ಸ್ ಆನ್ ದಿ ಟೆರಿಟೋರಿಯಲ್ ಹಿಸ್ಟರಿ ಆಫ್ ಕೆಳದಿ ಕಿಂಗ್ಡಮ್", ಜಿ.ಎಸ್. ದೀಕ್ಷಿತ್, ಸ್ಟಡೀಸ್ ಇನ್ ಕೆಳದಿ ಹಿಸ್ಟರಿ, ದಿ ಮಿಥಿಕ್ ಸೊಸೈಟಿ, ಬೆಂಗಳೂರು, ೧೯೮೧, ಪುಟ ೮೩–೮೪.

೨. ಕಾಮತ್ ಸೂರ್ಯನಾಥ್, ಕೆಳದಿ ರೂಲ್ ಓವರ್ ಸೌತ್ ಕೆನರಾ, ದೀಕ್ಷಿತ್. ಜಿ.ಎಸ್. (ಸಂ), ಸ್ಟಡೀಸ್ ಇನ್ ಕೆಳದಿ ಹಿಸ್ಟರಿ, ದಿ ಮಿಥಿಕ್ ಸೊಸೈಟಿ, ಬೆಂಗಳೂರು, ೧೯೮೧, ಪು. ೯೦.

೩. ಆರ್. ಶಾಮಶಾಸ್ತ್ರಿ (ಸಂ), "ಕೆಳದಿನೃಪ ವಿಜಯಂ", ಮೈಸೂರು ವಿಶ್ವವಿದ್ಯಾನಿಲಯ, ೧೯೭೩, ಪುಟ ೧೨೨–೧೨೪.

೪. ಚಿಟ್ನೀಸ್ ಕೆ.ಎನ್., ಕೆಳದಿಯ ರಾಜ್ಯಭಾರ ಪದ್ಧತಿ, ಕೆಳದಿ ಐತಿಹಾಸಿಕ ನಿಬಂಧಗಳು, ಕೆಳದಿ, ೧೯೮೯. ಪುಟ ೭೫.

೫. ಶಾಸ್ತ್ರಿ ಬಿ.ಎಸ್. ಕೆಳದಿ ಅರಸರು ಹಾಗೂ ಪೋರ್ಚುಗೀಸರು, ಧಾರವಾಡ, ೧೯೭೨, ಪುಟ ೧೮.

೬ ಆರ್. ಶಾಮಶಾಸ್ತ್ರಿ (ಸಂ), "ಕೆಳದಿನೃಪ ವಿಜಯಂ", ಮೈಸೂರು ವಿಶ್ವವಿದ್ಯಾನಿಲಯ, ೧೯೭೩, ಪುಟ ೨೮೪–೨೮೫.

೭. ವೆಂಕಟೇಶ ಜೋಯಿಸ (ಸಂ.), ಕೆಳದಿ ಅರಸರ ಶಾಸನ ಸಂಪುಟ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೧. ಸಂಖ್ಯೆ ೫೩.

೮. ಚಿಟ್ನೀಸ್ ಕೆ.ಎನ್. ಕೆಳದಿಯ ರಾಜ್ಯಭಾರ ಪದ್ಧತಿ, ಕೆಳದಿ ಐತಿಹಾಸಿಕ ನಿಬಂಧಗಳು, ಕೆಳದಿ, ೧೯೮೯.

೯. ಬೇಕಲ ರಾಮನಾಯಕ, ದಕ್ಷಿಣ ಕನ್ನಡದಲ್ಲಿ ಇಕ್ಕೇರಿ ನಾಯಕರ ಆಳಿಕೆ, ಸೇಡಿಯಾಪು ಕೃಷ್ಣ ಭಟ್ಟ, ಖಿ.ಕೆ. ನಾರಾಯಣ ಕಯ್ಯಾರ ಕಿಂಞಣ್ಣ ರೈ, ಕೆ. ಶ್ರೀನಿವಾಸ ಶರ್ಮ (ಸಂ), ತೆಂಕನಾಡು, ೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕಾಸರಗೋಡು, ೧೯೪೭, ಪುಟ ೮೫.

೧೦. ಅದೇ, ಪುಟ ೭೨.

೧೧. ವೆಂಕಟೇಶ ಜೋಯಿಸ (ಸಂ.), ಕೆಳದಿ ಅರಸರ ಶಾಸನ ಸಂಪುಟ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೧. ಸಂಖ್ಯೆ ೪೩,೪೪,೪೮,೪೯, ಆರ್. ಶಾಮಶಾಸ್ತ್ರಿ (ಸಂ), "ಕೆಳದಿನೃಪ ವಿಜಯಂ", ಮೈಸೂರು ವಿಶ್ವವಿದ್ಯಾನಿಲಯ, ೧೯೭೩, ಪುಟ ೭೭–೭೮

೧೨. ಆರ್. ಶಾಮಶಾಸ್ತ್ರಿ (ಸಂ), "ಕೆಳದಿನೃಪ ವಿಜಯಂ", ಮೈಸೂರು ವಿಶ್ವವಿದ್ಯಾನಿಲಯ, ೧೯೭೩, ಪುಟ ೧೨೨–೧೨೪.

೧೩. ಆರ್. ಶಾಮಶಾಸ್ತ್ರಿ (ಸಂ), "ಕೆಳದಿನೃಪ ವಿಜಯಂ", ಮೈಸೂರು ವಿಶ್ವವಿದ್ಯಾನಿಲಯ, ೧೯೭೩, ಪುಟ. ೨೮೪–೨೮೫.

೧೪. ನಾರಾಯಣ ನಾಯಕ್.ಕೆ., ಕೊಂಡಾಡಿಯ ಜಂಗಮ ಮಠ, ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಸಂಪುಟ ೨೦, ೨೦೦೫, ಪುಟ ೩೧೫–೩೧೬.

೧೫. ಆರ್. ಶಾಮಶಾಸ್ತ್ರಿ (ಸಂ), "ಕೆಳದಿನೃಪ ವಿಜಯಂ", ಮೈಸೂರು ವಿಶ್ವವಿದ್ಯಾನಿಲಯ, ೧೯೭೩.

೧೬. ಬೇಕಲ ರಾಮನಾಯಕರು, ದಕ್ಷಿಣ ಕನ್ನಡದಲ್ಲಿ ಇಕ್ಕೇರಿ ನಾಯಕರ ಆಳಿಕೆ, ಸೇಡಿಯಾಪು ಕೃಷ್ಣಭಟ್ಟ, ಖಿ.ಕೆ. ನಾರಾಯಣ ಕಯ್ಯಾರ ಕಿಂಞಣ್ಣ ರೈ, ಕೆ. ಶ್ರೀನಿವಾಸ ಶರ್ಮ, ತೆಂಕನಾಡು, ೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕಾಸರಗೋಡು, ೧೯೪೭.

೧೭. ಆರ್. ಶಾಮಶಾಸ್ತ್ರಿ (ಸಂ), "ಕೆಳದಿನೃಪ ವಿಜಯಂ", ಮೈಸೂರು ವಿಶ್ವವಿದ್ಯಾನಿಲಯ, ೧೯೭೩, ಪುಟ ೭೯.

೧೮. ಜಿಲಾನಿ, ಎಸ್.ಎ., ಕರ್ನಾಟಕ ರಾಜ್ಯ ಗೆಸೆಟಿಯರ್, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ ಸರ್ಕಾರ, ೨೦೦೭.

೧೯. ಜಿ.ಎಸ್. ದೀಕ್ಷಿತ್, ಸ್ಟಡೀಸ್ ಇನ್ ಕೆಳದಿ ಹಿಸ್ಟರಿ, ದಿ ಮಿಥಿಕ್ ಸೊಸೈಟಿ, ಬೆಂಗಳೂರು, ೧೯೮೧, ಪುಟ ೯೦.

೨೦. ಸೂರ್ಯನಾಥ ಕಾಮತ್, ದಕ್ಷಿಣ ಕನ್ನಡದ ಮೇಲೆ ಕೆಳದಿ ಪ್ರಭುತ್ವ, ದೀಕ್ಷಿತ್.ಜಿ.ಎಸ್. (ಸಂ), ಕೆಳದಿ ಐತಿಹಾಸಿಕ ನಿಬಂಧಗಳು, ಕೆಳದಿ, ೧೯೮೯, ಪುಟ ೯೩.

೨೧. ಆರ್. ಶಾಮಶಾಸ್ತ್ರಿ (ಸಂ), "ಕೆಳದಿನೃಪ ವಿಜಯಂ", ಮೈಸೂರು ವಿಶ್ವವಿದ್ಯಾನಿಲಯ, ೧೯೭೩.

೨೨. ಜಿ.ಎಸ್. ದೀಕ್ಷಿತ್, ಸ್ಟಡೀಸ್ ಇನ್ ಕೆಳದಿ ಹಿಸ್ಟರಿ, ದಿ ಮಿಥಿಕ್ ಸೊಸೈಟಿ, ಬೆಂಗಳೂರು, ೧೯೮೧, ಪುಟ ೯೦.

೨೩. ವೆಂಕಟೇಶ ಜೋಯಿಸ (ಸಂ.), ಕೆಳದಿ ಅರಸರ ಶಾಸನ ಸಂಪುಟ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೧.

೨೪. SII, IX part II, No. 47.

೨೫. ವೆಂಕಟೇಶ ಜೋಯಿಸ (ಸಂ.), ಕೆಳದಿ ಅರಸರ ಶಾಸನ ಸಂಪುಟ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೧.

೨೬. ಆರ್. ಶಾಮಶಾಸ್ತ್ರಿ (ಸಂ), "ಕೆಳದಿನೃಪ ವಿಜಯಂ", ಮೈಸೂರು ವಿಶ್ವವಿದ್ಯಾನಿಲಯ, ೧೯೭೩, ಪುಟ. ೨೭೦–೨೭೨.

೨೭. ವೆಂಕಟೇಶ ಜೋಯಿಸ (ಸಂ.), ಕೆಳದಿ ಅರಸರ ಶಾಸನ ಸಂಪುಟ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೧.

೨೮. ವೆಂಕಟೇಶ ಜೋಯಿಸ್ ಕೆ.ಜಿ., ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬, ಪುಟ ೮೦.

೨೯. ಶಾಸ್ತ್ರಿ.ಬಿ.ಎಸ್. ಕೆಳದಿ ಅರಸರು ಹಾಗೂ ಪೋರ್ಚುಗೀಸರು, ಧಾರವಾಡ, ೧೯೭೨, ಪುಟ ೫೦–೫೩.

೩೦. ಅದೇ, ಪುಟ ೮೦.   ೩೧. ಅದೇ, ಪುಟ ೫೪.

೩೨. ಕೆ.ಜಿ. ವಸಂತ ಮಾಧವ, ರಿಲಿಜಿಯನ್, ಕೋಸ್ಟಲ್ ಕರ್ನಾಟಕ (೧೫೦೦–೧೭೬೩), ವಿಜಯ ಕಾಲೇಜು, ಮುಲ್ಕಿ, ಪುಟ ೮೨.

೩೩. ವೆಂಕಟೇಶ ಜೋಯಿಸ (ಸಂ.), ಕೆಳದಿ ಅರಸರ ಶಾಸನ ಸಂಪುಟ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೧, ಪುಟ ೬೮.

೩೪. ಅದೇ, ೬೮.

೩೫. ಬಾ.ರಾ. ಗೋಪಾಲ, 'ಕೆಳದಿಯ ಮೊದಲಿನ ನಾಯಕರ ವಂಶಾವಳಿ ಕುರಿತು ಒಂದು ಟಿಪ್ಪಣಿ', ಜಿ.ಎಸ್. ದೀಕ್ಷಿತ್ (ಸಂ), ಕೆಳದಿ ಐತಿಹಾಸಿಕ ನಿಬಂಧಗಳು, ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಸಂಸ್ಥೆ, ಕೆಳದಿ, ೧೯೮೯.

೩೬. ಅದೇ, ಪುಟ ೨೭.   ೩೭. ಅದೇ, ಪುಟ ೨೭.   ೩೮. ಅದೇ, ಪುಟ ೨೭.

೩೯. ಶಾಸ್ತ್ರಿ.ಬಿ.ಎಸ್. ಕೆಳದಿ ಅರಸರು ಹಾಗೂ ಪೋರ್ಚುಗೀಸರು, ಧಾರವಾಡ, ೧೯೭೨. ಪುಟ ೪೭–೫೮.

೪೦. ಅದೇ, ಪುಟ ೫೩.   ೪೧. ಅದೇ, ಪುಟ ೫೮–೬೦.   ೪೨. ಅದೇ. ಪುಟ ೬೯.   ೪೩. ಅದೇ, ಪುಟ ೮೯–೯೦.

ದಕ್ಷಿಣ ಕನ್ನಡದಲ್ಲಿ ರಾಷ್ಟ್ರೀಯ ಸಂಗ್ರಾಮ ಮತ್ತು ಗಾಂಧೀಜಿಯ ಚಿಂತನೆಗಳು: ಒಂದು ಅವಲೋಕನ

ಎಂ.ಜಿ. ಪ್ರಮೋದ್*

ಭಾರತದಲ್ಲಿ ರಾಷ್ಟ್ರೀಯ ಸಂಗ್ರಾಮವು ೨೦ನೇ ಶತಮಾನದ ಮೊದಲಾರ್ಧದಲ್ಲಿ ಗಾಂಧೀಜಿಯವರ ನಾಯಕತ್ವದಲ್ಲಿ ನಡೆದುದು; ಗಾಂಧೀಜಿಯವರ ಚಿಂತನೆಗಳು ಜನಮಾನಸದಲ್ಲಿ ನೆಲೆಸಿದುದು ಅಭೂತಪೂರ್ವವಾದ ಜನಸ್ಪಂದನೆಗೆ - ಬದಲಾವಣೆಗೆ ಕಾರಣವಾದುದು ಮತ್ತು ದೇಶದಲ್ಲಾದ ಸ್ವಾತಂತ್ರ್ಯ ಸಂಗ್ರಾಮದ ಹಾಗೂ ಗಾಂಧೀಜಿಯವರ ಚಿಂತನೆಗಳ ಪ್ರತಿಧ್ವನಿ ದಕ್ಷಿಣ ಕನ್ನಡಕ್ಕೂ ತಲುಪಿ ದಕ್ಷಿಣ ಕನ್ನಡವೂ ಪೂರಕ ಪ್ರತಿಸ್ಪಂದನವನ್ನು ನೀಡಿ ವಸಾಹತುಶಾಹಿಯ ವಿರೋಧಿ ಹೋರಾಟಕ್ಕೆ ದನಿಗೂಡಿಸಿದುದು ಅಲ್ಲಗಳೆಯಲು ಸಾಧ್ಯವಾಗದ ಅಂಶವಾಗಿದೆ.

ಇಲ್ಲಿ ಪ್ರಸ್ತಾಪಿಸಿರುವ ದಕ್ಷಿಣ ಕನ್ನಡವು ಕರಾವಳಿ ಕರ್ನಾಟಕದ ಭಾಗವಾಗಿರುವ, ಅವಿಭಜಿತ ದಕ್ಷಿಣ ಕನ್ನಡ ಎಂದು ಗುರುತಿಸಲ್ಪಡುವ, ಪ್ರಸ್ತುತ ೧೯೯೭ರಲ್ಲಿ ಆದಂತಹ ಪುನರ್‌ವಿಂಗಡಣೆಯ ನಂತರದ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೇರಳ ರಾಜ್ಯದ ಕಾಸರಗೋಡನ್ನು ಒಳಗೊಂಡಿದ್ದಂತಹ[೧] ಪ್ರದೇಶದ ಮೇಲೆ ಆದಂತಹ ಗಾಂಧೀಜಿಯವರ ಚಿಂತನೆಗಳ ಪ್ರಭಾವಗಳ ಕುರಿತ ಅವಲೋಕನವಾಗಿದೆ.

ದಕ್ಷಿಣ ಕನ್ನಡದಲ್ಲಿ ಆರಂಭಿಕ ವಸಾಹತುಶಾಹೀ ವಿರೋಧೀ ಹೋರಾಟವು ೧೬ನೇ ಶತಮಾನದಲ್ಲಿ ವ್ಯಾಪಾರಕ್ಕಾಗಿ ಬಂದ ಪೋರ್ಚುಗೀಸರು ದಕ್ಷಿಣ ಕನ್ನಡಕ್ಕೂ ಆಗಮಿಸಿ ಅಧಿಪತ್ಯ ವಹಿಸಿಕೊಳ್ಳಲು ಮುಂದಾದಾಗ, ಪೋರ್ಚುಗೀಸರ ಶಕ್ತಿಗೆದುರಾಗಿ ನಿಂತ ಉಳ್ಳಾಲದ ಅಬ್ಬಕ್ಕನ ಹೋರಾಟ, ಪರಕೀಯರ ಆಳ್ವಿಕೆಯನ್ನು ವಿರೋಧಿಸಿದ ಮುಂದಿನ ಹೋರಾಟಗಳಿಗೆ ತಳಹದಿಯನ್ನೂ ಸ್ಫೂರ್ತಿಯನ್ನೂ ಒದಗಿಸಿತು.[೨]

ಹೈದರಾಲಿ, ಟಿಪ್ಪು ಸುಲ್ತಾನರ ಅವನತಿಯು ದಕ್ಷಿಣ ಕನ್ನಡವು ಬ್ರಿಟೀಷರ ನೇರ ಅಧಿಪತ್ಯಕ್ಕೊಳಪಡಲು ಕಾರಣವಾಯಿತು.[೩,೪]

ತದನಂತರದಲ್ಲಿ ಬ್ರಿಟೀಷ್ ಅಧೀನದಲ್ಲಿ ಕೆನರಾ ಎಂದು ಗುರುತಿಸಲ್ಪಟ್ಟು ಮದ್ರಾಸ್ ಪ್ರಾಂತ್ಯದ ಆಳ್ವಿಕೆಗೆ ಒಳಪಟ್ಟುದು ೧೮೫೨ರಲ್ಲಿ ಕೆನರಾ ಪ್ರದೇಶವು ಉತ್ತರ ಮತ್ತು ದಕ್ಷಿಣ ಎಂದು ಎರಡಾಗಿ ವಿಭಜನೆಗೊಂಡು ಉತ್ತರದ ಭಾಗವು ಮುಂಬೈ ಪ್ರಾಂತ್ಯಕ್ಕೆ ಸೇರ್ಪಡೆಯಾಗಿ ದಕ್ಷಿಣವು ಮದರಾಸು ಅಧೀನತೆಯಲ್ಲೇ ಮುಂದುವರಿದು ವಸಾಹತುಶಾಹಿಯ ಹಿಡಿತಕ್ಕೊಳಪಟ್ಟು[೫] ಹಲವಾರು ಬದಲಾವಣೆಗಳಿಗೆ, ಪ್ರತಿಸ್ಪಂದನಕ್ಕೆ, ದಕ್ಷಿಣ ಕನ್ನಡವು ಸಾಕ್ಷಿಯಾಯಿತು.

೧೮೧೦-೧೧ರಲ್ಲಿ ರೈತರು ಸಾಮೂಹಿಕವಾಗಿ ಸಂಘಟಿತರಾಗಿ ಭೂಕಂದಾಯ ಮತ್ತು ತೆರಿಗೆಗಳ ಪಾವತಿಯನ್ನು ನಿಲ್ಲಿಸಿ ಪ್ರತಿರೋಧವನ್ನು ತೋರಿಸಿದ್ದುದು, ದಕ್ಷಿಣ ಕನ್ನಡದಲ್ಲಿ ರೈತರ ಆರಂಭಿಕ ಪ್ರತಿರೋಧವಾದರೆ,[೬] ರೈತರು ಮಗದೊಮ್ಮೆ ೧೮೩೦-೩೧ರಲ್ಲಿ ಹೋರಾಟಕ್ಕಿಳಿದುದು ವಸಾಹತುಷಾಹಿ ವ್ಯವಸ್ಥೆಯ ಪ್ರಬಲ ಪ್ರತಿಭಟನೆಯೇ ಆಗಿದೆ. ಈ ಸಂದರ್ಭದಲ್ಲಿ ರೈತರು ಅಲ್ಲಲ್ಲಿ ಕೂಟಗಳನ್ನು ರಚಿಸಿ ಕೊಂಡು ಹೋರಾಟವನ್ನು ಮಾಡಿದ್ದು, ಕಾಸರಗೋಡಿನಿಂದ ಕುಂದಾಪುರದವರೆಗೂ, ಮಂಗಳೂರಿನಿಂದ ಬಂಟ್ವಾಳ, ಚಾರ್ಮಾಡಿಯವರೆಗೂ ಕಂದಾಯ ನಿರಾಕರಣೆಯ ಹೋರಾಟಕ್ಕೆ ರೈತರು ಮುಂದಾದುದು ಗಮನಾರ್ಹ ಅಂಶವಾಗಿದೆ.[೭]

೧೮೩೭ರಲ್ಲಿ ದಕ್ಷಿಣ ಕನ್ನಡ ಪ್ರದೇಶವಾದ ಪುತ್ತೂರು, ಅಮರಸುಳ್ಯಗಳಲ್ಲಿ ಜನರು ಪುನಃ ದಂಗೆ ಎದ್ದುದು ದಾಖಲೆಗಳಲ್ಲಿ ಕೆನರಾ ಬಂಡಾಯ ಎಂದು ಗುರುತಿಸಲ್ಪಟ್ಟಿತು. ಕಲ್ಯಾಣಸ್ವಾಮಿ, ಅಪರಂಪರ, ಬೂದಿಬಸಪ್ಪ ಎಂದೆಲ್ಲಾ ಕರೆಯಿಸಿಕೊಳ್ಳುವವರು ಈ ಬಂಡಾಯದ ನಾಯಕರಾಗಿದ್ದರು. ಬಂಟ್ವಾಳ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಬ್ರಿಟೀಷ್ ಖಜಾನೆ, ಸಂಗ್ರಹಗಾರಗಳು ಹೋರಾಟಗಾರರ ಗುರಿಯಾದವು. ಇದು ಮುಂದೆ ದಕ್ಷಿಣ ಕನ್ನಡ, ಕೊಡಗು ಪ್ರದೇಶಗಳಿಗೆಲ್ಲಾ ವಿಸ್ತರಿಸಲ್ಪಟ್ಟು ಬ್ರಿಟೀಷರಿಗೆ ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸಿತು. ಈ ಹೋರಾಟಗಳು ದಕ್ಷಿಣ ಕನ್ನಡದಲ್ಲಿ ಗಾಂಧೀ ಪೂರ್ವ ಕಾಲದ ಪ್ರತಿರೋಧಗಳಾಗಿವೆ.[೮]

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ

೧೯ನೇ ಶತಮಾನದಿಂದಲೇ ಭಾರತದಲ್ಲಿ ಆಧುನಿಕತೆಯ ಕುರುಹುಗಳು ಮತ್ತು ಸಾಮ್ರಾಜ್ಯಶಾಹೀ ಶಕ್ತಿಗಳ ವಿರುದ್ಧದ ರಾಷ್ಟ್ರೀಯತೆಯ ಚಳುವಳಿಗಳ ಉಗಮಕ್ಕೆ ಕಾರಣವಾಯಿತು.[೮] ದಕ್ಷಿಣ ಕನ್ನಡದಲ್ಲಿ ಈ ಕಾಲಘಟ್ಟದಲ್ಲಿ ಮಿಶನರಿ ಚಟುವಟಿಕೆಗಳು, ಶಿಕ್ಷಣ ಮಾಧ್ಯಮದ ಬೆಳವಣಿಗೆ, ಪತ್ರಿಕಾ ರಂಗದ ಬೆಳವಣಿಗೆ, ಆಡಳಿತ ವ್ಯವಸ್ಥೆ ಹಾಗೂ ಸಂಪರ್ಕ ವ್ಯವಸ್ಥೆಯ ಬೆಳವಣಿಗೆಗಳು, ಆರ್ಯಸಮಾಜ, ಬ್ರಹ್ಮ ಸಮಾಜ ಮೊದಲಾದವುಗಳು ದಕ್ಷಿಣ ಕನ್ನಡದಲ್ಲಿ ವಸಾಹತುಷಾಹೀ ವ್ಯವಸ್ಥೆಯ ಪ್ರಶ್ನೆಗೆ ಮಾತ್ರವಲ್ಲದೆ ರಾಷ್ಟ್ರೀಯತೆಯ ಬೆಳವಣಿಗೆಗೆ, ಗಾಂಧೀ ಚಿಂತನೆಯ ಪ್ರಸಾರಕ್ಕೆ ಕಾರಣವಾದುದು ಗಮನಾರ್ಹವಾದ ಅಂಶವಾಗಿದೆ.[೯]

೧೯೧೯ರಿಂದ ಆರಂಭಿಸಿ ಸ್ವತಂತ್ರ್ಯ ದೊರೆಯುವವರೆಗೂ ಗಾಂಧೀಜಿಯವರ ಹೋರಾಟದ ಪ್ರತಿಧ್ವನಿಯನ್ನು ದಕ್ಷಿಣ ಕನ್ನಡದಲ್ಲಿಯೂ ಗುರುತಿಸಬಹುದು. ೧೯೧೯ರಲ್ಲಿ ಸತ್ಯಾಗ್ರಹ ಪ್ರತಿಜ್ಞೆಗೆ ಸಹಿ ಹಾಕಿದ ಮೊದಲ ದಕ್ಷಿಣ ಭಾರತೀಯ ಎನಿಸಿಕೊಂಡ ಕಾರ್ನಾಡ್ ಸದಾಶಿವರಾವ್[೧೦] ನಂತರದಲ್ಲಿ ತಮ್ಮನ್ನು ಪೂರ್ತಿಯಾಗಿ ಸ್ವಾತಂತ್ರ್ಯ ಹೋರಾಟಕ್ಕೆ ತೊಡಗಿಸಿಕೊಂಡು ತಮ್ಮ ಜೀವನವನ್ನು ಗಾಂಧೀಜಿಯವರ ಜೀವನದಂತೆ ಸರಳತೆಗೆ ಮಾರ್ಪಡುಗೊಳಿಸಿಕೊಂಡರು. ಗಾಂಧೀಜಿಯವರ ಪ್ರಭಾವದಿಂದಲೇ ಮಂಗಳೂರು ಹಾಗೂ ಉಡುಪಿಗಳಲ್ಲಿ ಅಸಹಕಾರ ಮತ್ತು ಉಪ್ಪಿನ ಸತ್ಯಾಗ್ರಹಗಳು ನಡೆದವು.

ಗಾಂಧೀಜಿಯವರ ಸಾಬರ್ಮತಿ ಆಶ್ರಮದಿಂದ ಪ್ರಭಾವಿತಗೊಂಡು ಮಂಗಳೂರಿನ ಕದ್ರಿ ಬೆಟ್ಟದಲ್ಲಿ 'ಸಾಧಕಾಶ್ರಮ'ವನ್ನು ಸ್ಥಾಪಿಸಿದ ಕಾರ್ನಾಡರು ತಮ್ಮ ಜೀವನವನ್ನು ಪೂರ್ತಿಯಾಗಿ ಖಾದಿ ಮತ್ತು ಸಮಾಜಕ್ಕಾಗಿ ಮುಡಿಪಾಗಿಟ್ಟರು.

೧೯೧೪ರಲ್ಲಿ ಕುದ್ಮುಲ್ ರಂಗರಾವ್ ಸ್ಥಾಪಿಸಿದ್ದ 'ದಿ ಡಿಪ್ರೆಸ್ಡ್ ಕ್ಲಾಸಸ್ ಮಿಷನ್'ನ[೧೧] ನೇತೃತ್ವ ವಹಿಸಿ ಸಮಾಜ ಸುಧಾರಣೆಯಲ್ಲಿ ಕ್ರಾಂತಿಯನ್ನೇ ನಿರ್ಮಿಸಿದರು. ಸ್ವತಃ ಮೇಲ್ವರ್ಗದವರಾಗಿ, ಆ ಕಾಲದಲ್ಲಿ ಜಾತ್ರೆ ನಡೆಯುವ ಸಂದರ್ಭದಲ್ಲಿ ತಮ್ಮ ಮನೆಗೇ ಅಸ್ಪೃಶ್ಯ ವರ್ಗದವರನ್ನು ಕರೆದು ಅವರ ಮಧ್ಯೆ ಕುಳಿತು ಊಟ ಮಾಡಿ ತಮ್ಮ ಸಮಾಜದವರ ಮನವೊಲಿಕೆಗೆ ಪ್ರಯತ್ನಿಸಿದ್ದರು. ಮಂಗಳೂರಿನಲ್ಲಿ ನಡೆಯುತ್ತಿದ್ದ ಪ್ರಾಣಿಬಲಿಯ ವಿರುದ್ಧದ ಚಳವಳಿಯಲ್ಲೂ ತಮ್ಮನ್ನು ತೊಡಗಿಸಿಕೊಂಡವರು ಸದಾಶಿವರಾಯರು.

ತಮ್ಮ ಸ್ವಂತ ಖರ್ಚಿನಲ್ಲಿ ದೇರೇಬೈಲಿನಲ್ಲಿ ೨ ಕಾಲೊನಿ, ಉಡುಪಿಯಲ್ಲಿ ಸ್ವಚ್ಛ ಕೇರಿ ಹಾಗೂ ಹಿಂದುಳಿದವರ ವಿದ್ಯಾಭ್ಯಾಸಕ್ಕಾಗಿ ಮತ್ತು ಸ್ವಾವಲಂಬಿ ಬದುಕಿಗೆ ಪೂರಕವಾಗುವಂತಹ ಶಿಕ್ಷಣವನ್ನು ಒದಗಿಸುವ ಸಲುವಾಗಿ ತಿಲಕ ವಿದ್ಯಾಲಯವನ್ನೂ ಸ್ಥಾಪಿಸಿದ್ದರು. ಇಲ್ಲಿ ಪ್ರವೇಶ ಪಡೆದ ಎಲ್ಲ ವಿದ್ಯಾರ್ಥಿಗಳಿಗೂ ಮಧ್ಯಾಹ್ನ ಊಟ, ಖಾದಿ ವಸ್ತ್ರ ನೀಡಲಾಗುತ್ತಿತ್ತು. ಮುಂದೆ ಜಿಲ್ಲೆಯಾದ್ಯಂತ ೨೧ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಿ ತಮ್ಮ ಸ್ವಂತ ಬಲದಿಂದ ಮುನ್ನಡೆಸಿದಂತಹ ಧೀಮಂತ ವ್ಯಕ್ತಿ ಕಾರ್ನಾಡರಾಗಿದ್ದಾರೆ.[೧೨]

೧೯೨೦ ಆಗಸ್ಟ್ ೧೯ ಗಾಂಧೀಜಿ ಮಂಗಳೂರಿಗೆ ಭೇಟಿ ಇತ್ತ ಮಹತ್ವದ ಕ್ಷಣ.[೧೩] ಈ ಸಂದರ್ಭದಲ್ಲಿ ಕಾರ್ನಾಡ್ ಸದಾಶಿವರಾವ್ ಮುಂದಾಗಿ ಗಾಂಧೀಜಿಯನ್ನು ಸ್ವಾಗತಿಸಿದ್ದರು. ಅಹಿಂಸಾತ್ಮಕ ಅಸಹಕಾರ ಚಳವಳಿಯೊಂದಿಗೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಧನ ಸಂಗ್ರಹಣೆಗೂ ಗಾಂಧೀಜೀ ಮುಂದಾಗಿದ್ದರು. ಕಾರ್ನಾಡರು ತಮ್ಮ ಪತ್ನಿ ಶಾಂತಾರಿಂದ ವಜ್ರದ ಓಲೆ, ಮೂಗುತಿ ಮೊದಲಾದವುಗಳನ್ನು ಗಾಂಧೀಜಿಗೆ ಕೊಡಿಸಿದ್ದರು. ತಮ್ಮ ಪುಟ್ಟ ಮಕ್ಕಳ ಕೈ ಬಳೆಗಳನ್ನು ಅವರಿಂದಲೇ ಗಾಂಧೀಜಿಯವರಿಗೆ ಕೊಡಿಸಿದ್ದು ಒಂದು ಐತಿಹಾಸಿಕ ಘಟನೆಯಾಗಿದೆ.

ಗಾಂಧೀಜಿ ಭೇಟಿಯ ತರುವಾಯ ಕಾರ್ನಾಡರ ಮನೆಯಲ್ಲಿಯೇ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ಆರಂಭವಾಯಿತು. ಕಾರ್ನಾಡರ ಪತ್ನಿ ಶಾಂತಾಬಾಯಿ 'ಮಹಿಳಾ ಸಭಾ' ಸ್ಥಾಪಿಸಿ ಮಹಿಳೆಯರ ಏಳಿಗೆ ಹಾಗೂ ಶಿಕ್ಷಣಕ್ಕಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಎಲ್ಲಾ ಸಂಸ್ಥೆಗಳು ಕೂಡಾ ರಾಷ್ಟ್ರೀಯತೆಯನ್ನೇ ಪೋಷಿಸುತ್ತಿದ್ದವು.

೧೯೩೦ ಕಾನೂನು ಭಂಗ ಚಳುವಳಿಯ ವರ್ಷ. ಉಪ್ಪಿನ ಸತ್ಯಾಗ್ರಹ ಮಂಗಳೂರಿನಲ್ಲೂ ಜರುಗಿತು. ಜನರು ರಣೋತ್ಸಾಹದಿಂದ ಚಳವಳಿಯಲ್ಲಿ ಭಾಗಿಯಾಗುತ್ತಿದ್ದರು. ಏಪ್ರಿಲ್ ೨೦ರಂದು ಈ ಚಳವಳಿಯ ನಾಯಕತ್ವ ವಹಿಸಿದ ಕಾರಣದಿಂದಾಗಿ ಕಾರ್ನಾಡರನ್ನು ಬಂಧಿಸಿ ತಿರುಚನಾಪಳ್ಳಿ ಹಾಗೂ ವೆಲ್ಲೂರುಗಳಲ್ಲಿ ಕಾರಾಗೃಹ ಶಿಕ್ಷೆಗೆ ಒಳಪಡಿಸಲಾಯಿತು. ೧೯೩೦ರ ಜಯಕರ್ನಾಟಕ ಪತ್ರಿಕೆ ಕಾರ್ನಾಡರ ಹೋರಾಟಗಳ ಬಗ್ಗೆ ಲೇಖನ ಪ್ರಕಟಿಸಿತ್ತು.[೧೪]

ಕಾರ್ನಾಡರ ಬಂಧನದ ಸಂದರ್ಭದಲ್ಲಿ ಸಾಲ ಕೊಟ್ಟವರು ಮರುಪಾವತಿಯ ಕಾರಣ ಮುಂದಿಟ್ಟು ಅವರ ಪಿತ್ರಾರ್ಜಿತ ಆಸ್ತಿಯನ್ನೂ, ಮನೆಯನ್ನೂ ವಶಕ್ಕೆ ಪಡೆದುಕೊಂಡರು. ೧೯೩೧ರಲ್ಲಿ ಸದಾಶಿವರಾಯರು ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದಂತಹ ಸಂದರ್ಭದಲ್ಲಿ ತನ್ನ ಮನೆಯನ್ನೇ ಕಳೆದುಕೊಂಡಿದ್ದರು. ಇಂತಹ ಪರಿಸ್ಥಿತಿಯಲ್ಲೂ ಅವರ ತಾಯಿ, 'ತನ್ನ ಮಗ ಮಾಡಿದ ಸಾಲ ದೇಶಕ್ಕಾಗಿ, ಆತನ ಜೀವನ ಆದರ್ಶಪ್ರಾಯವಾದುದು ಮತ್ತು ಗೌರವಯುತವಾದುದು. ತಲೆ ತಗ್ಗಿಸುವಂತಹುದಲ್ಲ. ನನಗೆ ಇದಕ್ಕಾಗಿ ವಿಷಾದವಿಲ್ಲ. ಕೊನೆಗೆ ಸಾಯುವ ಕಾಲಕ್ಕೆ

ಉಳಿಯುವುದು ನಾವು ಸಂಪಾದಿಸಿದ ಒಳ್ಳೆಯತನ ಮಾತ್ರ, ಅದೇ ಜಗದ ದೊಡ್ಡ ಆಸ್ತಿ' ಎಂಬುದಾಗಿ ಸಂತೋಷದಿಂದ ಹೆಮ್ಮೆಯ ಮಾತುಗಳನ್ನು ಉದ್ಗರಿಸಿದ್ದು ಮಾನಸಿಕವಾಗಿ ಜರ್ಜರಿತರಾದ ಕಾರ್ನಾಡರಿಗೆ ಧೈರ್ಯ ತಂದುಕೊಡುತ್ತದೆ.

ಒಂದು ಬಾರಿ ಕಾರ್ನಾಡರಿಗೆ ಎರಡು ಟೆಲಿಗ್ರಾಮ್ ಒಟ್ಟಿಗೇ ಬಂದಿತ್ತು. ಗಾಂಧೀಜಿ ಬಂಧನವಾದ ಸುದ್ದಿ ಒಂದಾದರೆ, ಇನ್ನೊಂದು ಮದ್ರಾಸ್‌ನಿಂದ ತನ್ನ ಮಗನ ಮರಣ ವಾರ್ತೆಯನ್ನು ಹೊತ್ತು ತಂದಿತ್ತು. ಅದನ್ನು ಸುಮ್ಮನೇ ಮುಚ್ಚಿಟ್ಟ ಕಾರ್ನಾಡರು, ಗಾಂಧೀಜಿಯ ಬಂಧನವನ್ನು ವಿರೋಧಿಸಿ ಸಭೆ, ಮೆರವಣಿಗೆ ಮತ್ತು ಕರಪತ್ರ ಹಂಚುವಂತಹ ವ್ಯವಸ್ಥೆ ಮೊದಲು ಮಾಡಿದ್ದಂತಹ ಮಹಾನ್ ದೇಶಪ್ರೇಮಿಯಾಗಿದ್ದರು.

೧೯೩೨ರಲ್ಲಿ ಕರನಿರಾಕರಣೆ ಚಳವಳಿಗಾಗಿ ಮತ್ತು ೧೯೩೪ರಲ್ಲಿ ಗಾಂಧೀಜಿಯವರ ಸೂಚನೆಯಂತೆ ವೈಯಕ್ತಿಕ ಸತ್ಯಾಗ್ರಹ ಮಾಡಿ ಪುನಃ ಸದಾಶಿವರಾಯರು ಬಂಧಿತರಾದರು. ಗಾಂಧೀಜಿ ಸತ್ಯಾಗ್ರಹಕ್ಕಾಗಿ ಆಯ್ಕೆಮಾಡಿದ ಕೆಲವೇ ಜನರಲ್ಲಿ ಇವರೂ ಒಬ್ಬರಾಗಿದ್ದರು.

ಬಂಧನದ ಸಂದರ್ಭ ಕಾರ್ನಾಡರ ಕೈ-ಕಾಲುಗಳಿಗೆ ಬೇಡಿ ಹಾಕಿ ತುಂಬಾ ಕೆಟ್ಟದ್ದಾಗಿ ತಿರುಚನಾಪಳ್ಳಿ ಸೆರೆಮನೆಗೆ ಸಾಗಿಸಿದ್ದು ಹಾಗೂ ಇದನ್ನು ಕ್ರಿಶ್ಚ್ಯನ್ ಸಮುದಾಯದವರೊಬ್ಬರು ಏಸುವನ್ನು ಶಿಲುಬೆಗೆ ಸಿಕ್ಕಿಸಿ ಬೆಟ್ಟಕ್ಕೆ ನಡೆಸಿಕೊಂಡು ಹೋದಷ್ಟೇ ಕ್ರೂರವಾಗಿತ್ತು ಎಂದು ಕಯ್ಯಾರ ಕಿಞ್ಞಣ್ಣ ರೈ ಅವರು ಉಲ್ಲೇಖಿಸಿದ್ದಾರೆ.[೧೫]

ಸೆರೆಮನೆಯಲ್ಲಿ ಆರೋಗ್ಯ ಸ್ಥಿತಿ ಬಹಳಷ್ಟು ಕ್ಷೀಣಿಸುತ್ತಾ ಸಾಗುತ್ತದೆ. ಸರಕಾರ ಕೂಡಾ ಆರೋಗ್ಯ ಸ್ಥಿತಿ ಪರಿಗಣಿಸಿ ಅವಧಿಗೆ ಮೊದಲೇ ಸದಾಶಿವರಾಯರನ್ನು ಬಿಡುಗಡೆಗೊಳಿಸುತ್ತದೆ. ಆರ್ಥಿಕ ಸ್ಥಿತಿ ಕೂಡಾ ಬಹಳಷ್ಟು ಶೋಚನೀಯವಾಗಿದ್ದ ಕಾರಣದಿಂದ, ಮುಂದೆ ರಾಜ್ಯ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿ ಅದರಿಂದ ಬರುವ ವೇತನದಿಂದ ಸಂಸಾರ ಸಾಗಿಸುವ ಆಲೋಚನೆ ಮಾಡಿದ್ದರು. ಆದರೆ ಅವಕಾಶ ಸಿಗದೆ ತಪ್ಪಿ ಹೋದುದಕ್ಕೆ ಬಹಳಷ್ಟು ನೊಂದರೂ ಪಕ್ಷಕ್ಕಾಗಿ ಪ್ರಚಾರದಲ್ಲಿ ಭಾಗಿಯಾಗುವಂತಹ ವಿಶಾಲ ಹೃದಯ ಕಾರ್ನಾಡರದಾಗಿತ್ತು.

೧೯೩೬ರ ಡಿಸೆಂಬರ್‌ನಲ್ಲಿ ಕಾರ್ನಾಡರಿಗಾದ ಅನ್ಯಾಯವನ್ನು ಕುರಿತಾಗಿ ಚರ್ಚಿಸಲು ಫೈಜಪುರ ಕಾಂಗ್ರೆಸ್ ಅಧಿವೇಶನಕ್ಕೆ ಬರಲು ಸರ್ದಾರ್ ಪಟೇಲರು ಕರೆಕಳುಹಿಸಿದ್ದರು. ಆದರೆ ಅಲ್ಲಿನ ವಿಪರೀತ ಮಳೆಯಲ್ಲಿ ಸಾಮಾನ್ಯ ಪ್ರೇಕ್ಷಕನಂತೆ ಭಾಗಿಯಾದ ಕಾರ್ನಾಡರು ಜ್ವರಕ್ಕೆ ತುತ್ತಾಗಿ ತನ್ನ ಔಷದೋಪಚಾರಕ್ಕೇ ಹಣ ಹೊಂದಿಸಲು ಪರದಾಡಿದರು. ಸಂಕೋಚ ಸ್ವಭಾವದ ಸದಾಶಿವರಾಯರು ಮುಂದೆ ಯಲ್ಲೇ ಅಜರಾಮರವಾದುದು ಬಹಳ ಖೇದಕರ ಸಂಗತಿಯಾಗಿದೆ.[೧೬]

ಗಾಂಧೀಜಿಯವರು ಸದಾಶಿವರಾಯರ ಅಮ್ಮನನ್ನು ಉದ್ದೇಶಿಸಿ, 'ಅಂತಹ ಮಗನನ್ನು ಹೆತ್ತ ನೀವು ನಿಜಕ್ಕೂ ಭಾಗ್ಯವಂತರು' ಎಂದು ಶ್ಲಾಘಿಸಿದ್ದು, ಶಿವರಾಮ ಕಾರಂತರು ೧೯೪೭ರಲ್ಲಿ ಬರೆದ 'ಔದಾರ್ಯದ ಉರುಳಲ್ಲಿ'[೧೭] ಕಾದಂಬರಿ ಪೂರ್ತಿಯಾಗಿ ಸದಾಶಿವರಾಯರ ಚಿತ್ರಣವನ್ನು ಒಳಗೊಂಡಿರುವುದು ಮಾತ್ರವಲ್ಲದೆ 'ಧರ್ಮಜ' ಎಂದು ಕರೆದುದು ಸದಾಶಿವರಾಯರ ಬಗ್ಗೆ ಇದ್ದ ಅಭಿಮಾನ, ಪ್ರೀತಿ, ಗೌರವ, ಅಭಿಮಾನವನ್ನು ಸೂಚಿಸುತ್ತದೆ.

೧೯೨೦-೨೧ರಲ್ಲಿ ಗಾಂಧೀಜೀಯವರ ಭಾಷಣದಿಂದ ಪ್ರಭಾವಿಸಲ್ಪಟ್ಟ ಇನ್ನೊಬ್ಬ ವ್ಯಕ್ತಿ ಎಸ್.ಎಸ್. ಕಿಲ್ಲೆಯವರು ಹೋರಾಟ ಎಂಬುದು ಹುಟ್ಟೂರಿನಿಂದಲೇ ಆರಂಭಗೊಳ್ಳಲಿ ಎಂಬ ಕಾರಣದಿಂದಾಗಿ ಅಂಚೆ ಇಲಾಖೆಯ ಕೆಲಸ ತ್ಯಜಿಸಿ ಊರಿಗೆ ಬಂದು ಕಾರ್ನಾಡ್ ಸದಾಶಿವರಾವ್ ಜೊತೆಗೂಡಿ ಜಿಲ್ಲೆಯಲ್ಲಿ ಗಾಂಧೀಚಿಂತನೆಗಳನ್ನು ಕಾರ್ಯಗತಗೊಳಿಸ ತೊಡಗಿದರು. ತಾವೇ ಮುಂಚೂಣಿಯಲ್ಲಿ ನಿಂತು 'ನಾಗಸೇನೆ' ಎಂಬ ಹೆಸರಿನ ಸ್ವಯಂಸೇವಕ ದಳ ಸ್ಥಾಪಿಸಿದರು.

೧೯೩೦ ಗಾಂಧೀಜೀ ಉಪ್ಪಿನ ಸತ್ಯಾಗ್ರಹಕ್ಕೆ ಕರೆ ಕೊಟ್ಟ ಕಾಲ. ಈ ಸತ್ಯಾಗ್ರಹದಲ್ಲಿ ಭಾಗವಹಿಸಿದವರಲ್ಲಿ ನಾರಾಯಣ ಕಿಲ್ಲೆಯವರೂ ಸೇರಿದ್ದು ನಂತರ ಬಂಧಿತರಾಗಿ ವೆಲ್ಲೂರಿನಲ್ಲಿ ಸೆರೆಮನೆವಾಸವನ್ನೂ ಅನುಭವಿಸಿದರು. ಈ ಸೆರೆವಾಸ ಕಿಲ್ಲೆಯವರಿಗೆ ಕಾರ್ನಾಡ್ ಸದಾಶಿವರಾವ್, ಪೊಳಲಿ ಶೀನಪ್ಪ ಹೆಗ್ಡೆ, ಎಸ್.ಯು. ಫಣಿಯಾಡಿ ಮೊದಲಾದ ಸ್ವಾತಂತ್ರ್ಯ ಹೋರಾಟಗಾರರ ಸಾಮೀಪ್ಯತೆಯನ್ನು ಮತ್ತಷ್ಟು ಒದಗಿಸಿತು. ಈ ಸೆರೆವಾಸದಲ್ಲೇ ಕಿಲ್ಲೆಯವರಿಂದ 'ಕಾನಿಗೆ' ಎಂಬ ಹೆಸರಿನ ತುಳು ಕವನ ಸಂಕಲನವು ರಚಿಸಲ್ಪಟ್ಟಿತು.

೧೯೩೨ರಲ್ಲಿ ಮತ್ತೊಮ್ಮೆ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಮಧುರೈಯಲ್ಲಿ ಸೆರೆಮನೆ ವಾಸ ಅನುಭವಿಸಿದರು. ಈ ಹಂತದಲ್ಲೂ ಹಲವಾರು ಕವನಗಳನ್ನು ರಚಿಸುವ ಮೂಲಕ ಸೆರೆಮನೆ ವಾಸದಲ್ಲಿ ದೇಶಪ್ರೇಮ ಬಿಂಬಿಸುವ ಸಾಹಿತ್ಯ ರಚನೆಯೆಡೆ ಸಾಗಿದರು.

ಗಾಂಧೀಜೀ ೧೯೩೪ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸವನ್ನು ಕೈಗೊಂಡಿದ್ದರು. ಈ ಸಂದರ್ಭದಲ್ಲಿ ಮಂಗಳೂರು, ಪುತ್ತೂರು ಸೇರಿದಂತೆ ಹಲವೆಡೆ ಭಾಷಣವನ್ನೂ ಮಾಡಿ ಅಸ್ಪೃಶ್ಯತಾ ವಿರೋಧೀ ಕರೆಯನ್ನೂ ನೀಡಿದ್ದರು.[೧೮]

ಈ ಹಂತದಲ್ಲಿ ರಾಷ್ಟ್ರಪಿತರ ಭಾಷಣವನ್ನು ಸ್ಥಳೀಯ ಪ್ರಾದೇಶಿಕ ಭಾಷೆಗೆ ತರ್ಜುಮೆ ಮಾಡುವ ಕಾರ್ಯದಲ್ಲಿ ಪೂರ್ಣವಾಗಿ ತೊಡಗಿಸಿಕೊಂಡವರು ಕಿಲ್ಲೆಯವರು. ತದನಂತರ ಹರಿಜನ ಕಾರ್ಯದಲ್ಲೂ ತಮ್ಮನ್ನು ತೊಡಗಿಸಿ, ಹರಿಜನ ಸೇವಾಸಂಘದ ಕಾರ್ಯದರ್ಶಿಯಾಗಿ, ಪ್ರಚಾರಕರಾಗಿ ದುಡಿದಿದ್ದರು.

ಕಿಲ್ಲೆಯವರು ಮೂರ್ತಿಪೂಜೆಯನ್ನು ಬೆಂಬಲಿಸುತ್ತಿದ್ದರು. ಧಾರ್ಮಿಕ ಕಾರಣದಿಂದಾದರೂ ಜನರ ಒಟ್ಟು ಸೇರುವಿಕೆ ಹಾಗೂ ಈ ಜನರನ್ನು ಸ್ವಾತಂತ್ರ್ಯ ಹೋರಾಟಕ್ಕೆ, ತಮ್ಮ ಚಿಂತನೆಯ ಪ್ರಚಾರಕ್ಕೆ ಬಳಸಿಕೊಳ್ಳುವುದು ಇದರ ಹಿಂದಿನ ಉದ್ದೇಶವಾಗಿತ್ತು. ಮದ್ರಾಸ್ ಸರಕಾರ ಮದ್ಯಪಾನದ ವಿರುದ್ಧ ಜಾಗೃತಿಕಾರ್ಯ ಕೈಗೊಂಡಂತಹ ಸಂದರ್ಭದಲ್ಲಿ ಸಮಾಜ ಸುಧಾರಣೆಯಲ್ಲೂ ತಮ್ಮನ್ನು ತೊಡಗಿಸಿಕೊಂಡರು. ಜಿಲ್ಲೆಯ ಜನರಲ್ಲಿ ಭಾಷಣದ ಮೂಲಕ ಮದ್ಯಪಾನದ ದುಷ್ಪರಿಣಾಮಗಳನ್ನು ವಿವರಿಸುತ್ತಿದ್ದರು. ಗಾಂಧೀಜಿಯವರ ಆಶಯವಾದ ಪಾನ ನಿಷೇಧ ಚಳವಳಿಯನ್ನು ಸಮಾಜದ ಅತೀ ಕನಿಷ್ಠ ಮಟ್ಟದಲ್ಲಿ ಜೀವನ ನಿರ್ವಹಿಸುವವರ ಬಳಿಗೂ ಕೊಂಡುಹೋದ ಖ್ಯಾತಿ ಕಿಲ್ಲೆಯವರಿಗೆ ಸಲ್ಲುತ್ತದೆ.

ಗಾಂಧೀಜೀಯವರಿಂದ ಪ್ರಭಾವಿತಗೊಂಡು 'ಸರ್ವೋದಯ' ಹೆಸರಿನ ಪತ್ರಿಕೆಯನ್ನೂ ಕಿಲ್ಲೆ ಆರಂಭಿಸಿದ್ದರು. ಈ ಪತ್ರಿಕೆ ಹರಿಜನರ ಉದ್ಧಾರ ಸೇರಿದಂತೆ ಸಮಾನತಾ ತತ್ವ ಅಳವಡಿಸಿಕೊಂಡಿತ್ತು. ಗ್ರಾಮದ ಬೆಳವಣಿಗೆಗೆ, ಹಳ್ಳಿಯ ಅಭಿವೃದ್ಧಿಗೆ ಕಿಲ್ಲೆಯವರು ಹೆಚ್ಚು ಬೆಂಬಲಿಸುತ್ತಿದ್ದರು.

ಗಾಂಧೀಜಿಯವರು ೧೯೩೪ರಲ್ಲಿ ದಕ್ಷಿಣ ಕನ್ನಡಕ್ಕೆ ಬಂದಾಗ ತಮ್ಮ ಪತ್ನಿ, ಮಕ್ಕಳಿಂದ ಬಂಗಾರದ ಆಭರಣಗಳನ್ನು ಕೊಡಿಸಿದಂತಹ ವ್ಯಕ್ತಿಗಳ ಸಾಲಿಗೆ ಎಸ್.ಯು. ಫಣಿಯಾಡಿಯವರು ಕೂಡಾ ಸೇರುತ್ತಾರೆ. ಗಾಂಧೀಜಿಯವರ ಕನಸಾದ ಸಮಾಜ ಸುಧಾರಣೆ, ಖಾದಿ, ಹರಿಜನೋದ್ಧಾರ, ಪಾನ ನಿಷೇಧ ಇತ್ಯಾದಿಗಳನ್ನು ಬೆಂಬಲಿಸಿ ತಮ್ಮಿಂದ, ತಮ್ಮ ಕುಟುಂಬದಿಂದಲೇ ಬದಲಾವಣೆಯನ್ನು ಆರಂಭಿಸಿದವರು ಫಣಿಯಾಡಿಯವರು. ವಿಧವಾ ಪದ್ಧತಿ ಆಚರಣೆಗೆ ವಿರೋಧ ವ್ಯಕ್ತಪಡಿಸಿದ ತನ್ನ ಅತ್ತಿಗೆಗೆ ಪೂರ್ಣ ಬೆಂಬಲ ಸೂಚಿಸಿದ್ದರು.[೧೯]

೧೮೮೮ರಲ್ಲಿ ೩೦೦ ಮುಡಿ ಅಕ್ಕಿ (೧ ಮುಡಿ–೪೦ ಕೆ.ಜಿ.) ಗೇಣಿಯಾಗಿ ಬರುತ್ತಿದ್ದ ಆಗರ್ಭ ಶ್ರೀಮಂತ, ಮೇಲ್ವರ್ಗದ ಶಾನುಭೋಗ ಕುಟುಂಬದಲ್ಲಿ ಜನಿಸಿ, ೧೯೧೮ರಲ್ಲಿ ವಂಶಪಾರಂಪರ್ಯ ಸುಮಾರು ೨ ಲಕ್ಷ ಸಂಪತ್ತಿನ ಒಡೆಯರಾಗಿದ್ದು, ಕೊನೆಗೆ ತನ್ನ ಸರ್ವಸ್ವವನ್ನೂ ಸ್ವಾತಂತ್ರ್ಯ ಹೋರಾಟ ಮತ್ತು ಸಮಾಜಸೇವೆಗೆ ಮುಡಿಪಾಗಿಟ್ಟು, ಮುಂಬಯಿಯಲ್ಲಿ ಅನಾರೋಗ್ಯದ ಸಂದರ್ಭದಲ್ಲಿ ಬಿಡಿಗಾಸೂ ಇಲ್ಲದಂತಹ ಪರಿಸ್ಥಿತಿ ನಿರ್ಮಿಸಿಕೊಂಡಿದ್ದಂತಹ ಮಹಾನ್ ತ್ಯಾಗಿ, ದೇಶಭಕ್ತ ಕಾರ್ನಾಡು ಸದಾಶಿವರಾಯರು, ಸ್ಥಳೀಯ ವಿಚಾರಧಾರೆಗಳು, ಗ್ರಾಮ–ಸಮಾಜಗಳ ಅಭಿವೃದ್ಧಿಗಳ ಮೂಲಕ ಗಾಂಧೀ ಹೋರಾಟವನ್ನು ಪ್ರತಿಧ್ವನಿಸಿದ ಕಿಲ್ಲೆ, ಫಣಿಯಾಡಿಯವರು ಅಥವಾ ಆರ್ಯಸಮಾಜ, ಬ್ರಹ್ಮಸಮಾಜ ಥಿಯೋಸಾಫಿಕಲ್ ಸೊಸೈಟಿ ಮೊದಲಾದವುಗಳೊಂದಿಗೆ ಹೋರಾಟಗಳು; ಬದಲಾವಣೆಗಳು ರೂಪುಗೊಂಡುದು ದಕ್ಷಿಣ ಕನ್ನಡದ ಪರಿಪಕ್ವತೆಯನ್ನು ಪ್ರತಿಬಿಂಬಿಸುತ್ತವೆ. ಅಮ್ಮೆಂಬಳ ಬಾಳಪ್ಪ, ತಿಂಗಳಾಯರ್ ಸಹೋದರರು ಕಮಲಾದೇವಿ ಚಟ್ಟೋಪಾಧ್ಯಾಯ, ಎಚ್.ವಿ. ಕಾಮತ್, ಕೆ.ಆರ್. ಕಾರಂತ, ಎ.ಬಿ. ಶೆಟ್ಟಿ, ಶ್ರೀನಿವಾಸ ಮಲ್ಯ, ಕೆ.ಕೆ. ಶೆಟ್ಟಿ, ನಾಗಪ್ಪ ಆಳ್ವ, ಶಂಕರ ಆಳ್ವ ಸೇರಿದಂತೆ ಹಲವಾರು ದೇಶಭಕ್ತರು ಗಾಂಧೀಜಿಯ ಚಿಂತನೆಗಳಿಂದ ಪ್ರಭಾವಿತಗೊಂಡು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡುದುದರೊಂದಿಗೆ ಹಲವಾರು ಸ್ಥಳೀಯ ವಿಚಾರಧಾರೆಗಳೂ ಸೇರಿದುದು ಸ್ವಾತಂತ್ರ್ಯ ಹೋರಾಟವಾಗಿ ಹೊರಹೊಮ್ಮಿದೆ.

ದಕ್ಷಿಣ ಕನ್ನಡದಲ್ಲಿ ವಸಾಹತುಶಾಹೀ ನೇರ ಹೋರಾಟ; ಅಂದರೆ ಭಾರತದ ರಾಷ್ಟ್ರೀಯ ಕಾಂಗ್ರೆಸ್, ಗಾಂಧೀಜಿಯವರ ಚಿಂತನೆಗಳಿಂದ ಕೂಡಿದ ಹೋರಾಟಕ್ಕೆ ನೇರ ಬೆಂಬಲ ಒಂದೆಡೆಯಾದರೆ, ತುಳು ಭಾಷೆ, ಸಮಾಜ, ಸಂಸ್ಕೃತಿ, ಅಥವಾ ಗಡಿ ವಿಚಾರಗಳಂತಹ ಸ್ಥಳೀಯ ವಿಷಯಗಳನ್ನು ಮುಂದಿಟ್ಟುಕೊಂಡು ನಡೆಸಿದ ಹೋರಾಟಗಳು ಕೂಡಾ ಬ್ರಿಟೀಷ್ ವಿರೋಧೀ ಹೋರಾಟಗಳೆಂದೇ ನಾವು ಪರಿಗಣಿಸಬೇಕಾಗಿದೆ. ಕಮ್ಯುನಿಷ್ಟ್ ಪ್ರಭಾವಿತ ಹೋರಾಟಗಳು ಕೂಡಾ ದಕ್ಷಿಣ ಕನ್ನಡದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದವು. ಇಲ್ಲಿ ಕಯ್ಯಾರ ಕಿಞ್ಞಣ್ಣರೈ ಸೇರಿದಂತೆ ಹಲವರ ಬರಹಗಳು ಹಾಗೂ ಸ್ವದೇಶಾಭಿಮಾನ, ಕಂಠೀರವ, ತಿಲಕಸಂದೇಶ ಪತ್ರಿಕೆಗಳ, ಸಾಹಿತ್ಯಗಳು ಕೂಡಾ ರಾಷ್ಟ್ರೀಯತೆಯ ಪ್ರಭಾವಕ್ಕೊಳಗಾಗಿದ್ದವು.

ದಕ್ಷಿಣ ಕನ್ನಡದಲ್ಲಿ ಗಾಂಧೀಜಿಯವರ ಚಿಂತನೆಗಳ ಪ್ರಭಾವ ಒಂದೆಡೆಯಾದರೆ, ಸ್ವತಃ ಗಾಂಧೀಜಿಯೇ ಸಾಮಾಜಿಕ – ದಲಿತೋದ್ಧಾರಕ ಕಾರ್ಯಗಳಲ್ಲಿ 'ನನ್ನ ಗುರುಗಳು' ಎಂದು ಸಂಬೋಧಿಸಿದ ಕುದ್ಮಲ್ ರಂಗರಾಯರ ಗಾಂಧೀಪೂರ್ವ ಸಾಮಾಜಿಕ ಸುಧಾರಣಾ ಚಳುವಳಿಗಳು ಗಾಂಧೀಜಿಗೇ ಪ್ರೇರೇಪಣೆಯಾದವೇ ಎಂಬುದು ಚಿಂತನಾರ್ಹ ಅಂಶವಾಗಿದೆ.[೨೦]

ದಕ್ಷಿಣ ಕನ್ನಡದಲ್ಲಿ ರಾಷ್ಟ್ರೀಯ ಸಂಗ್ರಾಮಕ್ಕೆ ದೊರೆತ ಸ್ಪಂದನೆ ಮತ್ತು ಗಾಂಧೀಜಿಯ ಚಿಂತನೆಗಳ ಪ್ರಭಾವದ ಕುರಿತಾಗಿ ಅವಲೋಕನ ನಡೆಸುವುದು ಉದ್ದೇಶವಾಗಿದೆ.

ಈ ಅಧ್ಯಯನಕ್ಕೆ ಪ್ರಾಥಮಿಕ ದಾಖಲೆಗಳಾದ ಆಡಳಿತಾತ್ಮಕ ನಿರ್ಣಯಗಳು, ಸರಕಾರಿ ಪತ್ರಗಳು, ಪತ್ರಿಕೆಗಳ ಬರಹಗಳು, ನ್ಯಾಯಾಂಗೀಯ ದಾಖಲೆಗಳು, ಬಾಸೆಲ್ ಮಿಷನ್ ರಿಪೋರ್ಟುಗಳು, ಈಗಾಗಲೇ ಬರೆಯಲ್ಪಟ್ಟ ಅಧಿಕೃತ ಬರವಣಿಗೆಗಳು ಹಾಗೂ ಆ ಕಾಲಘಟ್ಟದ ಚಿತ್ರಗಳು, ಚಿತ್ರಿಸಿದ ವಿವಿಧ ಲೇಖನಗಳು, ಕತೆಗಳು, ರೂಪಕಗಳು ಪ್ರಮುಖ ಆಕರಗಳಾಗಿವೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. K.V. Ramesh, *A History of South Kanara (From Earliest To Vijayanagara)*, Dharwar 1970.
Ganapati Rao Aigal, *Dakshna Kannada Jilleya Prachina Itihasa*, Rastrakavi Govinda Pai Samshodana Kendra Udupi, 1923. (Re- print, 2004).
N. Shyam Bhat, Souhth *Kanara: Colonial Administration and Regional Response*, Ph.D. thesis, Mangalore University 1987.

೨. B.S. Shastri, 'Dakshina Kannada Karavaliyalli Portugeesaru' in *Sudarshana*, Adyanadka Krishna Bhat (Ed.), Vijaya College Trust, Mulki, 1977.
Rajarama Tolpady, Dakshina Kannada Charitre, Samskruti, Rajakarana in *Aruhu Kuruhu*, vol.20, 2014

೩. John Sturrock and Harlord Stuart, *South Canara.*, Govt. Press Madras, 1894, 1895 (Re Print2003)
Abhishankar (Ed.), *South Kanara District*, Govt. Press Bangalore, 1973.
B. Sheik Ali, *Tippu Sulthan: A Study in Diplomacy and Confrontation*, Dept. of Kannada and Culture, Bangalore, 2006.

೪. K. Mohan Krishna Rai, *Kenarada Vibhajane, Hattirajakiyada visleshane*, Director, Prasaranga, Kannada University, Hampi, 2010.

೫. B.V. Kakkillaya, Chaluvliya nenpuglu, *Poli; Canara200,* Mangalore, 2000.

೬. N. Shyam Bhat, Op.Cit,
Director, *Karnatakadalli Swatantrya Sangrama,* Mysore Govt. Publication, 1957.

೭. N. Shyam Bhat, Op. Cit,
Peter Wilson Prabhakar, *Swatantrya Samgrama Ennurara Nenepu; Vittada Kranti*, Rani Abbakka Tulu Adyayana Kendra, Bantwal, 2002.
Prabhakara Neerumarga, *Mangalore Kranti*, Himavati prakashana neerumarga, 2006.
Prabhakara Shishila, *Nadi eradara naduve,* Vasanta prakashana Bangalore, 2009.

೮. Bipan Chandra (Ed), *Freedom Struggle*, New Delhi.

೯. M.G. Pramod, 'Science and Technology in Colonial South Kanara' presented a paper in *Kannada Vijnana Sammela*, Mysore , 15- 17 Sep.2014.

೧೦. Suryanatha Kamath, (Ed.) Swatantrya Sangramada Smrutigaalu, Mysore, 1974.
B. Surendra Rao *Bunts in History and Culture*, Rastrakavi Govinda Pai Samshodana Kendra, Udupi, 2010.

೧೧. P Kamalaksha, *Dalitoddaraka Kudmal Rangarao*, Mangalore, 1986.
Dayananda Naik, *The Dalit movement in Dakshinakannada and Mysore Districts- A Comparative Analysis*, un published PhD Thesis, Mangalore University.
Vinayanetra d Mangalore, 'Dalitara Seveyalli Kudmal Rangarayaru' in *Vijayakarnataka* kannada news paper, July 7, 2013

೧೨. B. Surendra Rao, Op.Cit.

೧೩. N.R.Phatak, Mahatma Gandhi, (Part III), Govt. press, Bombay, 1965.

೧೪. Udupi Govinda Rayaru, 'The Depressed Classes Mission' in *Jayakarnataka* Magazine, Vol. 9, Issue 2, Chalukya Vikrama Varsha 855.

೧೫. Suryanatha Kamath (Ed.) Op.Cit.

೧೬. P K. Narayan, *Dakshina Kannadadalli Swatntrya Horata*, Karnadu Sadashva Rao Trust, Mangalore, 1982

೧೭. Shivrama Karanta, *OudaryadaUrulali*, *I.B.*H Prakashana, Bangalore, 1947 (Re print2008).

೧೮. Kayyara Kinnanna Rai, *Desha Premi- Vagmi- N.S Kille,Karnataka Tulu Sahitya Academy, 1996*

೧೯. *S.U.* Muralidhara Upadya Hiriyadka, *Phaniyadi*, Prasaranga Mangalore, 1997.

೨೦. Kamalaksha, *Dalitoddaraka Kudmal Rangarao*, Mangalore, 1986.
M S Shekhar, *Kudmal Rangarao*, Prasaranga, *Mysore, 2009.*

ಮೈಸೂರು ಜಿಲ್ಲೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳ ಅಧ್ಯಯನ

ಸೋಮಣ್ಣ ಆರ್.*

ಕರ್ನಾಟಕದ ಸಾಂಸ್ಕೃತಿಕ ನಗರ ಎಂದೇ ಖ್ಯಾತಿ ಪಡೆದಿರುವ ಮೈಸೂರು ಜಿಲ್ಲೆಯ ಇತಿಹಾಸ ಪರಂಪರೆ ಪ್ರಾಚೀನವೂ, ಶ್ರೀಮಂತವೂ ಆಗಿದೆ. ಇಂತಹ ಜಿಲ್ಲೆಯೂ ನೈಸರ್ಗಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕವಾಗಿ ತುಂಬಾ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಜಿಲ್ಲೆಯಲ್ಲಿ ಕಾವೇರಿ, ಕಪಿಲಾ, ಲಕ್ಷ್ಮಣತೀರ್ಥ, ಸುವರ್ಣಾವತಿ ಹಾಗೂ ಉಪನದಿಗಳು ಹರಿಯುತ್ತಿದ್ದು[೧] ಈ ನದಿಗಳ ನಡುವೆ ಪೂರ್ವದ ಘಟ್ಟಗಳು ಮತ್ತು ಪಶ್ಚಿಮಘಟ್ಟಗಳು ಸಂಧಿಸುವ ಬೆಟ್ಟಪ್ರದೇಶಗಳಾದ ಮಲೈ ಮಹದೇಶ್ವರನ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಬೆಟ್ಟದಪುರ ಹಾಗೂ ಚಾಮುಂಡಿ ಬೆಟ್ಟ ಒಳಗೊಂಡಂತೆ ಫಲವತ್ತಾದ ಮೈದಾನ ಪ್ರದೇಶದಿಂದ ಕೂಡಿದೆ.[೨] ಜಿಲ್ಲೆಯಲ್ಲಿ ಮೈಸೂರು, ಟಿ.ನರಸೀಪುರ, ನಂಜನಗೂಡು, ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆ ಒಳಗೊಂಡಂತೆ ಒಟ್ಟು ೧೧ ತಾಲ್ಲೂಕುಗಳಿಂದ ಕೂಡಿದ್ದು, ಈ ಪ್ರದೇಶಗಳು ಸಾಂಸ್ಕೃತಿಕವಾಗಿ ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಹತ್ವ ಪಡೆದಿರುವುದು ಅಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳಿಂದ ಎಂಬುದನ್ನು ಸ್ಪಷ್ಟವಾಗಿ ತಿಳಿಯಬಹುದು. ಆದ್ದರಿಂದಲೇ ಕರ್ನಾಟಕದ ಪ್ರಮುಖ ರಾಜಮನೆತನಗಳಾದ ತಲಕಾಡಿನ ಗಂಗರು, ಪುನ್ನಾಟದ ಅರಸರು ಹಾಗೂ ಬಾದಾಮಿಯ ಚಾಲುಕ್ಯರು ಕ್ರಿ.ಶ. ೪ನೇ ಶತಮಾನದಿಂದ ೧೦ನೇ ಶತಮಾನದವರೆಗೆ ಮೈಸೂರು ಜಿಲ್ಲೆಯಾದ್ಯಂತ ಆಳ್ವಿಕೆ ನಡೆಸಿ ಬಿಟ್ಟು ಹೋಗಿರುವ ಸಾಂಸ್ಕೃತಿಕ ಕುರುಹುಗಳಾದ ಶಾಸನಗಳು, ನಾಣ್ಯಗಳು, ಸ್ಮಾರಕಗಳು, ವಿದೇಶಿ ಪ್ರವಾಸಿಗಳ ಗ್ರಂಥಗಳು ಮತ್ತು ಪತ್ರಾಗಾರದಲ್ಲಿ ದೊರೆಯುವ ದಾಖಲೆಗಳು ಮತ್ತು ಮಠಮಾನ್ಯಗಳಲ್ಲಿ ಸಂಗ್ರಹವಾಗಿರುವ ಪತ್ರಗಳು ಉಪಯುಕ್ತವಾಗಿದೆ.[೩]

ಮೈಸೂರು ಪ್ರಾಂತ್ಯಕ್ಕೆ ಇತಿಹಾಸ ಪ್ರಾರಂಭಕಾಲದಲ್ಲಿ ಅಶೋಕನು ತನ್ನ ಆಳ್ವಿಕೆಯ ಕಾಲದಲ್ಲಿ ಮಹಿಷಮಂಡಲಕ್ಕೆ ಧರ್ಮಬೋಧಕರನ್ನು ಕಳುಹಿಸಿದ್ದನೆಂದು ಬೌದ್ಧ ಸಾಹಿತ್ಯಗ್ರಂಥ ದೀಪವಂಶದಲ್ಲಿ ಉಲ್ಲೇಖಗೊಂಡಿದೆ.[೪] ಆ ಮಹಿಷಮಂಡಲವೇ ಇಂದಿನ ಮೈಸೂರು ಎಂದು ಇತಿಹಾಸ ಅಧ್ಯಯನದಿಂದ ತಿಳಿದುಬರುತ್ತದೆ. ಹಾಗೆಯೇ ಕ್ರಿ.ಶ. ೧೫೦ರಲ್ಲಿ ಪ್ರಸಿದ್ಧ ಗ್ರೀಕ್ ಭೂಗೋಳತಜ್ಞನಾದ ಟಾಲೆಮಿಯು ತನ್ನ ಗ್ರಂಥ ಭೂವಿವರಣೆಯಲ್ಲಿ ಹೆಸರಿಸಿದಂತೆ ಪೌನ್ನಟ ಅಥವಾ ಪುನ್ನಾಟ ಎಂಬುದು ಈ ಜಿಲ್ಲೆಯ ಪಶ್ಚಿಮ ಭಾಗವೆಂದು ಗುರುತಿಸಲಾಗಿದೆ.[೫] ಪ್ರಾಚೀನ ತಮಿಳು ಸಾಹಿತ್ಯ ಕೃತಿಗಳಲ್ಲಿ ಎರುಮೈನಾಟ್ಟು-ನಾಡು[೬] ಎಂದು ಹೆಸರಿಸಲಾಗಿರುವುದನ್ನು ಸ್ಪಷ್ಟಪಡಿಸಬಹುದಾಗಿದೆ.

ತಲಕಾಡಿನ ಗಂಗರು

ಮೈಸೂರು ಜಿಲ್ಲೆಯ ಇತಿಹಾಸ ಸ್ಪಷ್ಟವಾಗಿ ಪ್ರಾರಂಭವಾಗುವುದು ಗಂಗರ ಆಳ್ವಿಕೆಯ ಕಾಲದಿಂದ. ಆದ್ದರಿಂದ ತಲಕಾಡಿನ ಗಂಗರು ಕರ್ನಾಟಕವನ್ನು ಆಳಿದ ಮೊದಲ ಅರಸುಮನೆತನ ಎಂದು ಕರೆಯಬಹುದು. ಇವರು ಕ್ರಿ.ಶ. ೪ನೆಯ ಶತಮಾನದಲ್ಲಿ ಅಧಿಕಾರಕ್ಕೆ ಬಂದು ಹತ್ತನೇ ಶತಮಾನದ ಅಂತ್ಯದವರೆಗೂ ಸು. ೬೫೦ ವರ್ಷಗಳ ದೀರ್ಘ ಕಾಲ ಆಳ್ವಿಕೆ ನಡೆಸಿದರು. ಇವರ ಆಡಳಿತದ ಪ್ರಮುಖ ನೆಲೆ ಮೈಸೂರು ಜಿಲ್ಲೆಯೇ ಆಗಿತ್ತು. ಗಂಗರ ರಾಜಧಾನಿ ತಲಕಾಡು ಪ್ರಮುಖ ಐತಿಹಾಸಿಕ ತಾಣವಾಗಿ ರೂಪುಗೊಂಡಿತು.[೭] ಗಂಗ ಅರಸ ಅವನೀತನ (೪೬೯–೫೨೯) ಆಳ್ವಿಕೆ ಕಾಲದಲ್ಲಿ ರಾಜ್ಯದ ರಾಜಧಾನಿಯನ್ನು ಕೋಲಾರದಿಂದ ತಲಕಾಡಿಗೆ ವರ್ಗಾಯಿಸಿಕೊಂಡ ನಂತರದಲ್ಲಿ ಮೈಸೂರು ಪ್ರದೇಶವು ಪೂರ್ಣವಾಗಿ ಗಂಗರಸರ ಆಳ್ವಿಕೆಗೆ ಒಳಪಟ್ಟಿತ್ತು. ಮುಂದೆ ಗಂಗವಾಡಿ ೯೬,೦೦೦ ಪ್ರಾಂತ್ಯದ ಒಂದು ಪ್ರಮುಖ ಭಾಗವಾಗಿ ಮುಂದುವರಿಯಿತು[೮] ಎಂಬುದನ್ನು ಅನೇಕ ಶಾಸನಗಳಿಂದ ತಿಳಿಯಬಹುದು. ದುರ್ವಿನೀತ, ಶಿವಮಾರ–II, ರಾಚಮಲ್ಲ,

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ೫೭೪೧೯೯

ಎರೆಗಂಗ, ಶಿವಮಾರ, ಬೂತುಗ, ರಾಚಮಲ್ಲ-II ಬೂತುಗ-II ಮತ್ತು ರಾಚಮಲ್ಲ-IV ಇವರ ಆಳ್ವಿಕೆಯ ಕಾಲದಲ್ಲಿ ಮೈಸೂರು ಜಿಲ್ಲೆಯಾದ್ಯಂತ ಅನೇಕ ಧಾರ್ಮಿಕಕೇಂದ್ರಗಳ ಸ್ಥಾಪನೆ, ದೇವಾಲಯಗಳ ನಿರ್ಮಾಣ, ಆಡಳಿತ ಕೇಂದ್ರಗಳ ಬೆಳವಣಿಗೆ ಹಾಗೂ ಅಗ್ರಹಾರ ಕೇಂದ್ರಗಳ ಸ್ಥಾಪನೆಯಿಂದಾಗಿ ತಲಕಾಡು, ಬಿಜಯಪುರ, ತಡಿಮಾಲಂಗಿ, ಹೆಮ್ಮಿಗೆ, ನರಸಮಂಗಲ, ನಂಜನಗೂಡು, ಸುತ್ತೂರು, ನಗರ್ಲೆ[೯] ಇನ್ನೂ ಮುಂತಾದ ಸಾಂಸ್ಕೃತಿಕ ನೆಲೆಗಳು ಬೆಳವಣಿಗೆ ಹೊಂದಿದವು.

ಪುನ್ನಾಟದ ಅರಸರು

ಮೈಸೂರಿನ ದಕ್ಷಿಣ ಭಾಗದಲ್ಲಿ ಕಂಡುಬರುವ ಪುನ್ನಾಟವು ಅತೀ ಪ್ರಾಚೀನ ರಾಜ್ಯವಾಗಿದ್ದು[೧೦] ಗಂಗರ ಆಳ್ವಿಕೆಗೂ ಮೊದಲು ಇಂದಿನ ಮೈಸೂರು ಜಿಲ್ಲೆಯ ಬಹುಭಾಗ ಅಂದರೆ ಕಾವೇರಿ, ಕಪಿಲಾ ನದಿಗಳ ನಡುವಿನ ಪ್ರದೇಶವನ್ನು ಪುಂರಾಷ್ಟ್ರ, ಪುನ್ನಾಟ, ಪುನ್ನಾಡು ಎಂದು ಕರೆಯಲಾಗಿದೆ.[೧೧] ಕ್ರಿ.ಶ. ೪ನೇ ಶತಮಾನದಿಂದ ೬ನೇ ಶತಮಾನದವರೆಗೆ[೧೨] ಹೆಗ್ಗಡದೇವನಕೋಟೆ ತಾಲೂಕು ಪ್ರದೇಶವು ಪುನ್ನಾಟದ ಅರಸರ ಆಳ್ವಿಕೆಗೆ ಒಳಪಟ್ಟಿದ್ದು, ಈ ಪ್ರದೇಶವನ್ನು ಪುನ್ನಾಟ-೬೦೦೦ ಎಂದು ಸಹ ಕರೆಯಲಾಗುತ್ತಿತ್ತು. ಸು. ೧೫೦ ವರ್ಷಗಳ ಕಾಲ ಸ್ಥಳೀಯ ಪುನ್ನಾಟ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಕೀರ್ತಿಪುರ ಅವರ ರಾಜಧಾನಿಯಾಗಿತ್ತೆಂದು ಹೇಳಲಾಗಿದೆ.[೧೩]

ಗ್ರೀಕ್ ಭೂಗೋಳಶಾಸ್ತ್ರಜ್ಞ ಟಾಲೆಮಿ ಕ್ರಿ.ಶ. ೧೫೦ರಲ್ಲಿ ಪೌನ್ನಾಟದ ಬಗ್ಗೆ ತನ್ನ ಗ್ರಂಥ ಭೂವಿವರಣೆಯಲ್ಲಿ ಈ ಪ್ರದೇಶದಲ್ಲಿ ದೊರೆಯುತ್ತಿದ್ದ ರತ್ನಗಂಬಳಿ, ಮಾಣಿಕ್ಯ, ಚಿನ್ನ, ಬೆಳ್ಳಿ, ಮುತ್ತು-ಹವಳಗಳನ್ನು ಇಲ್ಲಿಂದ ಗ್ರೀಕ್, ರೋಮ್ ದೇಶಗಳಿಗೆ ಕೊಂಡೊಯ್ಯಲಾಗುತ್ತಿತ್ತು. ಆದ್ದರಿಂದ ರೋಮ್ ನಾಣ್ಯಗಳು ಈ ಪ್ರದೇಶದಲ್ಲಿ ದೊರೆತಿರುವುದರಿಂದ ಟಾಲೆಮಿಯು ಉಲ್ಲೇಖಿಸಿರುವ ಪೌನ್ನಾಟ-ಪುಂರಾಷ್ಟ್ರ, ಪುನ್ನಾಡು ಎಂದು ಕರೆದಿರುವುದು ಸ್ಪಷ್ಟಪಡಿಸುತ್ತದೆ.[೧೪]

ಪುನ್ನಾಟ ಅರಸರ ಮೂಲಪುರುಷ ತಾಮ್ರಕಶ್ಯಪನ ನಂತರದಲ್ಲಿ ಆಳ್ವಿಕೆ ನಡೆಸಿದ ವಿಷ್ಣುದಾಸ, ರಾಷ್ಟ್ರವರ್ಮ, ಪೃಥ್ವಿಪತಿ, ಒಂದನೇ ಸ್ಕಂದವರ್ಮ, ನಾಗದತ್ತ, ಭುಜಂಗ, ಅವನ ಮಗ ಇಮ್ಮಡಿ ಸ್ಕಂದವರ್ಮನ ನಂತರ ಕ್ರಿ.ಶ. ೫೫೧ರಲ್ಲಿ ೨ನೇ ಸ್ಕಂದವರ್ಮನ ನಿಧನ ಹೊಂದಿದರಿಂದ ಪುನ್ನಾಟ ರಾಜ್ಯವು ಅವನ ಮೊಮ್ಮಗನಾದ ದುರ್ವಿನೀತನ ಆಳ್ವಿಕೆಗೆ ಒಳಪಟ್ಟಿತು.[೧೫] ಇವರೊಂದಿಗೆ ಪುನ್ನಾಟದ ಅರಸರ ಆಳ್ವಿಕೆಯಲ್ಲಿ ಈ ಪ್ರದೇಶದಲ್ಲಿ ಅನೇಕ ಸಾಂಸ್ಕೃತಿಕ ನೆಲೆಗಳನ್ನು ಹೆಸರಿಸಬಹುದಾಗಿದೆ. ಅವುಗಳಲ್ಲಿ ಕಿತ್ತೂರು ಅಥವಾ ಕೀರ್ತಿಪುರ, ಕಟ್ಟೆಮಾಳಗವಾಳ್ಳಿ, ಮಾದಾಪುರ, ಹಿರೇಗಂಡ ಹಾಗೂ ಹೆಬ್ಬಲಗುಪ್ಪೆ ಮುಂತಾದವು[೧೬] ಕಂಡುಬರುತ್ತವೆ.

ವರುಣದ ಚಾಲುಕ್ಯರು

ಮೈಸೂರು ತಾಲ್ಲೂಕಿನ ವರುಣ ಗ್ರಾಮವು ಒಂದು ಐತಿಹಾಸಿಕ ಸ್ಥಳವಾಗಿದ್ದು[೧೭], ರಾಷ್ಟ್ರಕೂಟ ಮತ್ತು ಗಂಗರ ಸಾಮಂತರಾಗಿ ಆಳ್ವಿಕೆ ನಡೆಸಿದರು. ವರುಣ ಚಾಲುಕ್ಯರು ತಮ್ಮ ಆಡಳಿತದ ಕೇಂದ್ರವಾಗಿ ಮಾಡಿಕೊಂಡು ಕ್ರಿ.ಶ. ೯-೧೦ನೇ ಶತಮಾನಗಳಲ್ಲಿ ಆಳ್ವಿಕೆ ನಡೆಸಿದರು.[೧೮] ವರುಣ ಪ್ರದೇಶದಲ್ಲಿ ದೊರೆತಿರುವ ಹಲವಾರು ಶಾಸನಗಳಲ್ಲಿ ಈ ವಂಶದ ಪಿಟ್ಟಿಪ್ಪೆ, ಗೊಗ್ಗಿ ಮತ್ತು ಗವಿಲಬ್ಬರಸಿ ಮೂರು ಮಂದಿ ರಾಣಿಯರನ್ನೂ ಕುರಿತು ಸಹ ಪ್ರಸ್ತಾಪಿಸಿದೆ.[೧೯] ದುರ್ಗ ಈ ವಂಶದ ಮೊದಲ ರಾಜನೆಂದು ಡಾ. ಬಾ.ರಾ. ಗೋಪಾಲ್ ಗುರುತಿಸಿದ್ದಾರೆ.[೨೦] ಆನಂತರದಲ್ಲಿ ವರುಣ ಚಾಲುಕ್ಯರ ದೊರೆಯಾಗಿ ನರಸಿಂಗ ಮತ್ತು ಅವನ ಮಡದಿ ಗವಿಲಬ್ಬರಸಿ ಸಹ ಆಳ್ವಿಕೆ ನಡೆಸಿರುತ್ತಾರೆ.[೨೧] ವರುಣ ವ್ಯಾಪ್ತಿಯಲ್ಲಿ ಅನೇಕ ಸಾಂಸ್ಕೃತಿಕ ನೆಲೆಗಳಾದ ವರಕೋಡು, ಮಣಲವಾಡಿ, ಕುಕ್ಕರಹಳ್ಳಿಗಳನ್ನು ಹೆಸರಿಸಬಹುದಾಗಿದೆ.

ಸಾಂಸ್ಕೃತಿಕ ನೆಲೆಗಳು

ತಡಿಮಾಲಂಗಿ

ಇತಿಹಾಸ ಪ್ರಸಿದ್ಧ ಸ್ಥಳವಾದ ತಡಿಮಾಲಂಗಿಯು ತಾಲೂಕು ಕೇಂದ್ರ ಟಿ. ನರಸೀಪುರದಿಂದ ೧೮ ಕಿ.ಮೀ. ಆಗ್ನೇಯಕ್ಕೆ ಮಾದಾಪುರ, ಕಲಿಯೂರು ರಸ್ತೆ ಮಾರ್ಗವಾಗಿ ಕಂಡುಬರುತ್ತದೆ. ಕಾವೇರಿ ನದಿ ಬಲದಂಡೆಯ ಮೇಲಿರುವ ತಡಿಮಾಲಂಗಿ ಹಿಂದೆ ಗಂಗರ ಕಾಲದಲ್ಲಿ ಪ್ರಮುಖ ಊರಾಗಿದ್ದಿತು.[೨೨] ಇಂತಹ ಧಾರ್ಮಿಕ ಹಿನ್ನೆಲೆಯನ್ನು ಹೊಂದಿರುವ ತಡಿಮಾಲಂಗಿ ಗಂಗ ಆಳ್ವಿಕೆಯ ಕಾಲದಲ್ಲಿ ಒಂದು ಮುಖ್ಯ ವಿದ್ಯಾಕೇಂದ್ರವಾಗಿ ಸ್ಥಾಪನೆಗೊಂಡಿತ್ತು ಎಂಬುದು ಅಲ್ಲಿ ದೊರೆತಿರುವ ಶಾಸನಗಳಲ್ಲಿ ಉಲ್ಲೇಖವಿದೆ.

ಅಲ್ಲಿ ಸ್ಥಾಪನೆಗೊಂಡಿರುವ ಜನಾರ್ಧನ ದೇವಾಲಯವು ಮೂಲತಃ ಗಂಗರ ಕಾಲದ ರಚನೆಯಾಗಿದೆ[೨೩] ಎಂಬುದನ್ನು ತಿಳಿಯಬಹುದು.

ತಿ. ನರಸೀಪುರ

ಟಿ. ನರಸೀಪುರ ಶಿಲಾಯುಗದ ಮಾನವನ ನೆಲೆಯಾಗಿದ್ದು, ಒಂದು ಧಾರ್ಮಿಕ ಪುಣ್ಯಕ್ಷೇತ್ರವಾಗಿ ಮಹತ್ವವನ್ನು ಪಡೆದಿರುತ್ತದೆ.[೨೪] ಈ ಸಾಂಸ್ಕೃತಿಕ ವಲಯಕ್ಕೆ ತಿರುಮಕೂಡಲು ನರಸೀಪುರವೆಂದು ಹೆಸರು ಬಂದಿರುವುದರಲ್ಲಿ ಧಾರ್ಮಿಕ ಹಿನ್ನೆಲೆಯೂ ಅಡಕವಾಗಿದೆ. ತಿರುಮಕೂಡಲಿಗೆ ಸಂಸ್ಕೃತದಲ್ಲಿ

ತ್ರಿಮಕುಟ ಎಂಬ ಅರ್ಥವಿದೆ. ಕಾವೇರಿ, ಕಪಿಲಾ ಹಾಗೂ ಸ್ಫಟಿಕ ಸರೋವರಗಳು ಸಂಗಮವಾಗುವುದರಿಂದ ಹಾಗೂ ತ್ರಿಪುರಾಸುರನ ಸಂಹಾರವಾದಾಗ ಅವನ ಶಿರಸ್ಸು ಈ ಸಂಗಮದಲ್ಲಿ ಬಿದ್ದ ಕಾರಣದಿಂದಲೂ ಈ ಕ್ಷೇತ್ರಕ್ಕೆ 'ತ್ರಿಮಕುಟ' ಎಂದು ಹೆಸರು ಬಂದಿದೆ. ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರರ ಮೂರು ಕಿರೀಟಗಳು ಇಲ್ಲಿ ಕೂಡಿರುವುದರಿಂದ ಇಲ್ಲಿಗೆ ತ್ರಿಮುಟ ಕ್ಷೇತ್ರ ಎಂಬ ಹೆಸರು ಬಂದಿದೆ ಎಂಬುದಾಗಿ ಸ್ಥಳ ಪುರಾಣದಿಂದ ತಿಳಿದುಬರುತ್ತದೆ.

ತಲಕಾಡಿನ ಗಂಗರು ತಿ. ನರಸೀಪುರ ಸಾಂಸ್ಕೃತಿಕ ವಲಯಕ್ಕೆ ನೀಡಿರುವ ಕೊಡುಗೆಗಳ ಬಗ್ಗೆ ಇಲ್ಲಿ ದೊರೆತಿರುವ ಗಂಗರ ಶಾಸನಗಳು ಹಾಗೂ ಸ್ಮಾರಕಗಳು ಮಾಹಿತಿಯನ್ನು ನೀಡಿರುತ್ತವೆ. ಗಂಗರು ತಿ. ನರಸೀಪುರ ಹಾಗೂ ಸುತ್ತಮುತ್ತಲ ಜಲಾನಯನ ಪ್ರದೇಶದಲ್ಲಿ ಶೈವರು ಮತ್ತು ಜೈನರಿಗೆ ಧಾರಾಳವಾಗಿ ದಾನ ನೀಡಿ ಆ ವರ್ಗಗಳ ಬೆಂಬಲ ಹಾಗೂ ನಿಷ್ಠೆಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಆರ್ಥಿಕವಾಗಿ ಕೃಷಿ, ವ್ಯಾಪಾರ ವಹಿವಾಟುಗಳು ಅಭಿವೃದ್ಧಿ ಹೊಂದಿದವು. ಅದಕ್ಕೆ ಆಧಾರವಾಗಿ ಇಲ್ಲಿಯ ಶಾಸನಗಳಲ್ಲಿ ಕಂಡುಬರುವ ಕೆರೆಗಳ ನಿರ್ಮಾಣ, ನೀರಾವರಿ ವ್ಯವಸ್ಥೆ, ಪಟ್ಟಣಸ್ವಾಮಿಗಳ ಸ್ಥಳೀಯ ಅಧಿಕಾರ ಹೆಚ್ಚು ಅಭಿವೃದ್ಧಿಗೊಂಡವು.

ತಿ. ನರಸಿಪುರ ದೇವಾಲಯಗಳು ಮತ್ತು ದೇವಾಲಯ ಸಂಕೀರ್ಣಗಳು ಧಾರ್ಮಿಕ ಸಹಿಷ್ಣುತೆಯ ಪ್ರತೀಕಗಳಾಗಿವೆ. ಆದುದರಿಂದಲೇ ಈ ಕ್ಷೇತ್ರಕ್ಕೆ ದಕ್ಷಿಣಕಾಶಿ, ದಕ್ಷಿಣಗಯ, ದಕ್ಷಿಣ ಪ್ರಯಾಗ ಎಂಬ ಅನ್ವರ್ಥ ನಾಮಗಳು ಬಂದವು. ಈ ವಲಯದ ಶೈವ ಮತ್ತು ವೈಷ್ಣವ ದೇವಾಲಯಗಳು ಧಾರ್ಮಿಕ ಸಹಿಷ್ಣುತೆಯ ಸಂಕೀರ್ಣವಾಗಿದ್ದು ಕಾವೇರಿ ನದಿಯ ದಡದಲ್ಲಿ ಅಗಸ್ತ್ಯೇಶ್ವರ, ಹನುಮಂತೇಶ್ವರ, ಭಿಕ್ಷೇಶ್ವರ, ಮಾರ್ಕಂಡೇಶ್ವರ, ಆನಂದೇಶ್ವರ ದೇವಾಲಯಗಳು ಹಾಗೂ ಕಪಿಲಾ ನದಿ ದಡದ ಮೇಲೆ ಶ್ರೀ ಗುಂಜಾನರಸಿಂಹ ಸ್ವಾಮಿ ದೇವಾಲಯ, ಮೂಲಸ್ಥಾನೇಶ್ವರ, ಬ್ರಹ್ಮೇಶ್ವರ, ಬಳೇಶ್ವರ ಸ್ವಾಮಿ ದೇವಾಲಯಗಳು ಸಾಂಸ್ಕೃತಿಕ ನೆಲೆಯಾಗಿ ತಿ. ನರಸೀಪುರವನ್ನು ಗುರುತಿಸಲು ಸಹಕಾರಿಯಾಗಿದೆ.

ಸೋಸಲೆ

ತಿ. ನರಸೀಪುರ ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ಅಂತರದಲ್ಲಿ ಕಾವೇರಿ ನದಿ ಎಡದಂಡೆಯ ಮೇಲೆ ಸೋಸಲೆ ಗ್ರಾಮ ಸ್ಥಾಪನೆಗೊಂಡಿದ್ದು, ಇದೊಂದು ಗಂಗರ ಕಾಲದ ಪುರಾತನ ನೆಲೆಯಾಗಿದ್ದು ಪ್ರಾರಂಭದಲ್ಲಿ ಬಡಗೆರೆ-೩೦೦ ನಾಡಿನಲ್ಲಿದ್ದು, ಸು. ೮-೯ನೆಯ ಶತಮಾನಕ್ಕೆ ಸೇರಿದ ಗಂಗ ಶಾಸನವಿಲ್ಲಿದೆ. ಸೋಸಲೆ ಒಂದು ಧಾರ್ಮಿಕ ಸ್ಥಳವಾಗಿದ್ದು, ಮಧ್ವಾಚಾರ್ಯರ ಶಿಷ್ಯಪರಂಪರೆಗೆ ಸೇರಿದ ವ್ಯಾಸತೀರ್ಥರಿಂದ ಸ್ಥಾಪನೆಗೊಂಡ ವ್ಯಾಸರಾಯರ ಮಠ ಇಲ್ಲಿರುವುದರಿಂದ ಇದು ಪ್ರಸಿದ್ಧಿ ಪಡೆದ ಧಾರ್ಮಿಕ ಸ್ಥಳವಾಗಿದೆ.

ಸೋಸಲೆಯಲ್ಲಿ ಇತಿಹಾಸ ಪ್ರಸಿದ್ಧವಾದ ಹೊನ್ನಾದೇವಿ, ವೀರಭದ್ರ, ಕೊಳಲು ಗೋಪಾಲಕೃಷ್ಣ, ಕೋಟೆಗಣಪತಿ, ಚಂಡಿಕೇಶ್ವರ ಮುಂತಾದ ದೇವಾಲಯಗಳಿವೆ. ಇವುಗಳಲ್ಲಿ ಹೊನ್ನಾದೇವಿ ಗುಡಿಯು ಗಂಗರ ಕಾಲದ್ದಾಗಿದೆ ಎಂಬುದು ತಿಳಿದುಬರುತ್ತದೆ.

ಬನ್ನೂರು

ಕರ್ನಾಟಕದ ಇತಿಹಾಸಪ್ರಸಿದ್ಧ ಸ್ಥಳವಾಗಿರುವ ಬನ್ನೂರು ಕಾವೇರಿ ನದಿಯಿಂದ ೧ ಕಿ.ಮೀ. ದೂರದಲ್ಲಿ ಎಡದಂಡೆಯ ಮೇಲೆ ಸ್ಥಾಪಿತಗೊಂಡಿದ್ದು, ಕ್ರಿ.ಶ. ೮-೯ನೆಯ ಶತಮಾನಕ್ಕೆ ಸೇರಿದ ಶಾಸನಗಳಲ್ಲಿ ಬನ್ನಿಯೂರು ಎಂದು, ಗಂಗರ ದೊರೆ ಶ್ರೀಪುರುಷನು ತನ್ನ ಆಡಳಿತವನ್ನು ೮ನೇ ಶತಮಾನದ ಮಧ್ಯದಲ್ಲಿ ನಡೆಸಿರುವನು.

ಬನ್ನೂರಿನ ಪ್ರಾಚೀನ ದೇವಾಲಯಗಳಲ್ಲಿ ಹನುಮಂತೇಶ್ವರ ಗುಡಿಯೇ ಪ್ರಮುಖವಾಗಿದ್ದು, ಈ ದೇವಾಲಯದ ನವರಂಗ ಹಾಗೂ ಮುಖಮಂಟಪಗಳಲ್ಲಿರುವ ದುಂಡಾಕಾರದ ಕಂಬಗಳು ಗಂಗರ ಕಾಲವನ್ನು ಸೂಚಿಸುತ್ತವೆ.

ಮೂಗೂರು

ಐತಿಹಾಸಿಕ ನಗರ ಪಟ್ಟಣಗಳಲ್ಲಿ ಒಂದಾಗಿದ್ದು, ಪ್ರಾಚೀನ ಶಾಸನಗಳಲ್ಲಿ ಮೊಗೂರು, ಮೊಗೆಯೂರು, ಮೂಗೂರು ಎಂದು ತಿಳಿಸಲಾಗಿದೆ. ಇದರಿಂದ ಮೂಗೂರು ಪ್ರಾಚೀನ ಕಾಲದಿಂದ ಅಸ್ತಿತ್ವದಲ್ಲಿದ್ದ ಇತಿಹಾಸ ಪ್ರಸಿದ್ಧ ಸ್ಥಳ ಎಂದು ತಿಳಿದುಬರುತ್ತದೆ. ಇದು ಗಂಗರ ಕಾಲದಲ್ಲಿ ಪ್ರಮುಖ ಜೈನಕೇಂದ್ರವಾಗಿತ್ತು. ಊರಿನ ಪಶ್ಚಿಮಕ್ಕೆ ಜೈನ ಬಸದಿಯೊಂದಿದ್ದು ೧೧ನೇ ಶತಮಾನಕ್ಕೆ ಸೇರಬಹುದಾದ ಕಟ್ಟಡವಾಗಿದೆ.

ವಿಜಯಪುರ

ಈ ಗ್ರಾಮ ಪಂಚಲಿಂಗ ಕ್ಷೇತ್ರಗಳಲ್ಲಿ ಒಂದಾಗಿದ್ದು ತಲಕಾಡಿನಿಂದ ೪ ಕಿ.ಮೀ. ಪೂರ್ವಕ್ಕೆ ಕಾವೇರಿ ನದಿಯ ಎಡದಂಡೆಯ ಮೇಲೆ ಸ್ಥಾಪಿತಗೊಂಡಿದೆ. ವಿಜಯಪುರವು ಗಂಗರ ಕಾಲದ ಅರ್ಕೇಶ್ವರ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಪ್ರಾಚೀನ ಗಂಗ, ಚೋಳ, ಶಾಸನಗಳಲ್ಲಿ ಕಿರುಪೆರ್ನ್ನಗರ, ಕಿರುವೆನ್ನಾಗರ, ಕಿರುನಾಗರ ಎಂದೇ ಕರೆದಿದ್ದು

ಕಾಣಬಹುದಾಗಿದೆ. ದೇವಾಲಯದ ವಶಕ್ಕೆ ಬಾಗಿಲನ್ನು ಕೊಟ್ಟಿರುವ ಸ್ಥಳದಲ್ಲಿ ೯ನೇ ಶತಮಾನದ ಶಾಸನವೊಂದು ಕಾಣಬರುತ್ತದೆ. ಕೋಟೆಯ ಇನ್ನೊಂದು ಭಾಗದಲ್ಲಿ ಭೂಮಿಯಲ್ಲಿ ಅರ್ಧ ಹೂತು ಹೋಗಿರುವ ಎರಡು ಜೈನ ಬಿಂಬಗಳು ಇರುವುದಾಗಿ ತಿಳಿದುಬರುತ್ತದೆ.[೩೭]

ಹೀಗೆ ಐತಿಹಾಸಿಕ ಸ್ಥಳವಾಗಿರುವ ವಿಜಯಪುರವು ಗಂಗರ ಕಾಲದ ತಲಕಾಡಿನ ಪಂಚಲಿಂಗ ದೇವಾಲಯಗಳಲ್ಲಿ ಒಂದೆಂದೂ ತಿಳಿಯಬಹುದು.

ಆಲುಗೋಡು

ಆಲೂಗೋಡು ಗಂಗರ ಕಾಲದ ದೇವಾಲಯ ಕಂಡು ಬರುವ ಒಂದು ಪ್ರಾಚೀನ ಐತಿಹಾಸಿಕ ಸ್ಥಳವಾಗಿದೆ. ಈ ಗ್ರಾಮದಲ್ಲಿ ಅನೇಕ ಶಾಸನಗಳು ದೊರೆತಿದ್ದು, ಗಂಗ ಶ್ರೀಪುರುಷನ ಶಾಸನವೇ ಪ್ರಾಚೀನವಾಗಿದೆ.[೩೮]

ಹೆಮ್ಮಿಗೆ

ಇದು ಹಿಂದೆ ಮಧ್ಯ ಹಳೆಯ ಶಿಲಾಯುಗ ಹಾಗೂ ನೂತನ ಶಿಲಾಯುಗ ಸಂಸ್ಕೃತಿಯ ಜನರ ವಸತಿ ನೆಲೆಯಾಗಿತ್ತು. ಕಾವೇರಿ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳ[೩೯] ಆದುದರಿಂದ ಈ ಗ್ರಾಮಕ್ಕೆ ಪ್ರಾಚೀನ ಇತಿಹಾಸವಿದೆ. ಸು. ೮–೯ನೆಯ ಶತಮಾನದ ಗಂಗ ಶಾಸನವೊಂದರಲ್ಲಿ ಇದನ್ನು 'ಪೆಮೊಗೆ' ಎಂದು ಕರೆಯಲಾಗಿದೆ.[೪೦]

ಹೆಮ್ಮಿಗೆಯಲ್ಲಿ ದೊರೆತ ಆ ಕಾಲದ ಗಂಗರ ವಾಸ್ತುಶಿಲ್ಪ ಮಾದರಿಯನ್ನು ಹೋಲುವ ಸೂರ್ಯನ ವಿಗ್ರಹ, ಕಂಬಗಳು ಅವರ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತದೆ.

ತಲಕಾಡು

ಕರ್ನಾಟಕದ ಇತಿಹಾಸದಲ್ಲಿ ಚಾರಿತ್ರಿಕ ಹಾಗೂ ಧಾರ್ಮಿಕ ಕ್ಷೇತ್ರವಾಗಿ ಪ್ರಸಿದ್ಧಿಯನ್ನು ಪಡೆದ ತಲಕಾಡು, ಕಾವೇರಿ ನದಿಯ ಎಡದಂಡೆಯ ಮೇಲೆ ಸ್ಥಾಪನೆಗೊಂಡಿದ್ದು, ಗಂಗರ ರಾಜಧಾನಿಯಾಗಿ ಕ್ರಿ.ಶ. ೪ನೇ ಶತಮಾನದಿಂದ ಏಳಿಗೆಗೆ ಬಂದಿತು.[೪೧] ಗಂಗ ವಂಶದ ಮೂರನೆ ದೊರೆಯಾದ ಹರಿವರ್ಮನ ಕಾಲದಲ್ಲಿಯೇ ರಾಜಧಾನಿಯನ್ನು ತಲವನಪುರಕ್ಕೆ ವರ್ಗಾಯಿಸಿ ಸು. ೬೫೦ ವರ್ಷಗಳ ದೀರ್ಘಕಾಲ ಆಳ್ವಿಕೆ ನಡೆಸಿದರು ಎಂಬುದನ್ನು ಇತಿಹಾಸದಲ್ಲಿ ತಿಳಿಯಬಹುದು.[೪೨]

ಕ್ರಿ.ಶ. ೮೫೭ರ ನೀತಿಮಾರ್ಗನ ತಲಕಾಡು ಶಾಸನದಲ್ಲಿ ತಲಕಾಡನ್ನು ಮಹಾನಗರ ಎಂದು ಕರೆಯಲಾಗಿದೆ.[೪೩] ಗಂಗರು ತಮ್ಮ ಆಡಳಿತ ಕಾಲದಲ್ಲಿ ಜೈನಧರ್ಮಕ್ಕೆ ನೀಡಿದ ಪ್ರೋತ್ಸಾಹದಿಂದ ಕ್ರಿ.ಶ. ೬ನೇ ಶತಮಾನದಲ್ಲಿ ತಲಕಾಡಿನಲ್ಲಿ 'ವಿಜಯ ಜಿನಾಲಯ' ಸ್ಥಾಪನೆಗೊಂಡಿದ್ದ ಬಗ್ಗೆ ಸ್ಪಷ್ಟಪಡಿಸಲು ಉತ್ಖನನ ಸಮಯದಲ್ಲಿ ಜೈನ ಬಸದಿಯೊಂದು ಪತ್ತೆಯಾಗಿದೆ.[೪೪] ಈ ಬಸದಿಯನ್ನು ಇಟ್ಟಿಗೆ, ಗಾರೆ ಮತ್ತು ಮರ ಉಪಯೋಗಿಸಿ ನಿರ್ಮಿಸಲಾಗಿತ್ತು. ನಂತರದಲ್ಲಿ ಬಸದಿ ಅಗ್ನಿ ಅನಾಹುತಕ್ಕೆ ಒಳಗಾಗಿ ನಾಶವಾಗಿರಬಹುದೆಂದು ಉತ್ಖನನದಲ್ಲಿ ದೊರೆತಿರುವ ಅವಶೇಷಗಳಿಂದ ಸ್ಪಷ್ಟಪಡಿಸಲಾಗಿದೆ.[೪೫] ಹಾಗೆಯೇ ತಲಕಾಡು ಶೈವ ಧರ್ಮೀಯರಿಗೆ ಪುಣ್ಯಕ್ಷೇತ್ರವಾಗಿ ಪ್ರಸಿದ್ಧಿ ಪಡೆಯಲು ಅಲ್ಲಿ ನಿರ್ಮಾಣಗೊಂಡಿರುವ ವೈದ್ಯನಾಥೇಶ್ವರ, ಪಾತಾಳೇಶ್ವರ ಹಾಗೂ ಮರಳೇಶ್ವರ ದೇವಾಲಯಗಳು ಕರ್ನಾಟಕದ ಇತಿಹಾಸದಲ್ಲಿ ತಲಕಾಡನ್ನು[೪೬] ಒಂದು ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಯಾಗಿ ಗುರುತಿಸಬಹುದಾಗಿದೆ.

ವರುಣ

ಚಾರಿತ್ರಿಕ ನೆಲೆಯಾದ ವರುಣ ಗ್ರಾಮವು ಟಿ. ನರಸೀಪುರ ಮುಖ್ಯ ರಸ್ತೆಯ ಮಾರ್ಗದಲ್ಲಿ ಮೈಸೂರಿನಿಂದ ೧೦ ಕಿ.ಮೀ. ದೂರದಲ್ಲಿದೆ.[೪೭] ಕ್ರಿ.ಶ. ೯–೧೦ನೆಯ ಶತಮಾನಗಳಲ್ಲಿ ವರುಣ ಗ್ರಾಮವು ಚಾಲುಕ್ಯರಿಗೆ ಸೇರಿದ್ದ ಒಂದು ಕಿರು ಸಾಮಂತ ಶಾಖೆಯ ನೆಲೆಯಾಗಿತ್ತು.[೪೮] ವರುಣವನ್ನೂ ಆಡಳಿತದ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು, ರಾಷ್ಟ್ರಕೂಟ ಅಥವಾ ಗಂಗರ ಸಾಮಂತರಾಗಿ ವರುಣ ಚಾಲುಕ್ಯರು ಆಳ್ವಿಕೆ ನಡೆಸಿದ್ದು[೪೯] ಶಾಸನಗಳಿಂದ ತಿಳಿದುಬರುತ್ತದೆ.

ವರುಣ ಚಾರಿತ್ರಿಕ ನೆಲೆಯು ಗಂಗರ ಕಾಲದಿಂದಲೂ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದ್ದಿತು. ವರುಣ ಗ್ರಾಮದಲ್ಲಿ ಹಲವು ದೇವಾಲಯಗಳು, ಶಾಸನಗಳು ಹಾಗೂ ಬಿಡಿ ಶಿಲ್ಪಗಳನ್ನೂ ಕಾಣಬಹುದು.

ಮಹಾಲಿಂಗೇಶ್ವರ ಗುಡಿ ಮುಖ್ಯವಾಗಿದ್ದು (ಶಾಸನಗಳಲ್ಲಿ ಭೂತೇಶ್ವರ) ವರುಣದ ಶಾಸನದಲ್ಲಿ ಚಾಲುಕ್ಯ ರಾಣಿ ಗೊಗ್ಗಿಯು ಭೂತೇಶ್ವರ ದೇವಾಲಯಕ್ಕೆ ಅರಗಡುಪಳ್ಳಿಯನ್ನು ದತ್ತಿ ಬಿಟ್ಟ ಉಲ್ಲೇಖವಿದೆ.[೫೦]

ವರಕೋಡು

ವರಕೋಡು ತಾಲೂಕು ಕೇಂದ್ರ ಮೈಸೂರಿನಿಂದ ೧೦ ಕಿ.ಮೀ. ದೂರದಲ್ಲಿರುವ ಇದು ಮೈಸುನಾಡು ೭೦ರ ಪ್ರದೇಶದಲ್ಲಿದ್ದ ಪ್ರಮುಖ ಸ್ಥಳ.[೫೧] ಗಂಗರ ಆಳ್ವಿಕೆಯ ಸಮಯದಲ್ಲಿ ಜೈನಧರ್ಮೀಯ ಕೇಂದ್ರವಾಗಿತ್ತು ಎಂಬುದು ಇಲ್ಲಿ ದೊರೆತಿರುವ ನಿಶಿಧಿ ಶಾಸನಗಳಿಂದ ತಿಳಿಯಬಹುದು.[೫೨]

ವಾಜಮಂಗಲ

ಮೈಸೂರಿನಿಂದ ೧೦ ಕಿ.ಮೀ. ವರುಣ ಮತ್ತು ವರಕೋಡುಗಳ ಹತ್ತಿರದಲ್ಲಿದ್ದು ಪ್ರಾಚೀನ ಶಾಸನಗಳಲ್ಲಿ 'ಓಜಮಂಗಲ' ಎಂದು ಉಲ್ಲೇಖಗೊಂಡಿದ್ದು ಇಲ್ಲಿಯ ಸೋಮೇಶ್ವರ ದೇವಾಲಯವು ತ್ರಿಕೂಟವಾಗಿದ್ದು, ಇಟ್ಟಿಗೆಯ ರಚನೆಯಿಂದ ಕೂಡಿದ್ದು, ಗಂಗರ ಕಾಲದ ಕಂಬಗಳನ್ನು ಹೊಂದಿದೆ.[೫೩] ಅಲ್ಲದೆ ಗರ್ಭಗೃಹದ ದ್ವಾರಪಾಲಕರು ಗಂಗ ಶಿಲ್ಪ ಲಕ್ಷಣವನ್ನೂ ಹೊಂದಿದೆ. ಸಪ್ತಮಾತೃಕಾ, ಉಮಾ ಮಹೇಶ್ವರ ಹಾಗೂ ಸೂರ್ಯ ಶಿಲ್ಪಗಳಿರುವುದರಿಂದ ಇದು ಗಂಗರ ಕಾಲದ ಸಾಂಸ್ಕೃತಿಕ ನೆಲೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.[೫೪]

ನರಸಮಂಗಲ

ಗಂಗರ ಆಳ್ವಿಕೆಯ ಕಾಲದಲ್ಲಿ ಪ್ರಮುಖ ಐತಿಹಾಸಿಕ ನೆಲೆಯಾದ ಚಾಮರಾಜನಗರ ಜಿಲ್ಲೆ ಕೇಂದ್ರಸ್ಥಾನದಿಂದ ಆಗ್ನೇಯಕ್ಕೆ ಸು. ೨೪ ಕಿ.ಮೀ. ದೂರದಲ್ಲಿರುವ ಗ್ರಾಮ ನರಸಮಂಗಲ.[೫೫] ಈ ಸ್ಥಳ ಕ್ರಿ.ಶ. ೮೦೦ರಲ್ಲಿ ಗಂಗರ ಆಳ್ವಿಕೆಯಲ್ಲಿ ನಿರ್ಮಾಣಗೊಂಡ ರಾಮಲಿಂಗೇಶ್ವರ ದೇವಾಲಯದಿಂದ ಪ್ರಸಿದ್ಧವಾಗಿದೆ. ಈ ದೇವಾಲಯವು ವಿಶಾಲವಾದ ಗರ್ಭಗೃಹ, ಕಿರಿದಾದ ಸುಕನಾಸಿ, ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ವಿಮಾನವನ್ನು ಒಳಗೊಂಡಿದೆ. ಈ ದೇವಾಲಯವನ್ನು ಕುರಿತು ಮೊಟ್ಟ ಮೊದಲಿಗೆ ೧೯೩೮ರಲ್ಲಿ ಎಂ.ಹೆಚ್. ಕೃಷ್ಣ ಪ್ರಕಟಪಡಿಸಿದ್ದಾರೆ.[೫೬]

ಅಗರ

ಯಳಂದೂರು ತಾಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದ್ದು ಕೊಳ್ಳೇಗಾಲ ಮುಖ್ಯ ರಸ್ತೆಯಲ್ಲಿ ಕಂಡುಬರುತ್ತದೆ. ಈ ಗ್ರಾಮದಲ್ಲಿ ಪ್ರಾಚೀನವಾದ ರಾಮೇಶ್ವರ ದೇವಾಲಯವಿದೆ. ಗಂಗರ ಶೈಲಿಯ ಕಂಬಗಳನ್ನು ಇಲ್ಲಿರುವ ಚಂಡಿಕೇಶ್ವರನ ಮಂಟಪದಲ್ಲಿ ಕಾಣಬಹುದಾಗಿದೆ.[೫೭]

ಈ ಗ್ರಾಮದ ಕೆರೆಯ ತೂಬಿನ ಬಳಿ ಶ್ರೀಪುರುಷನ ಕಾಲದ ಶಾಸನ ದೊರೆತಿದ್ದು ಶ್ರೀಪುರುಷನ ಪತ್ನಿ ವಿನೆತ್ತಿ ನಿಮ್ಮಡಿಯ ಉಲ್ಲೇಖವಿರುವುದು[೫೮] ಕಂಡುಬಂದಿದೆ. ಆದುದರಿಂದ ಅಗರ ಒಂದು ಚಾರಿತ್ರಿಕ ನೆಲೆಯಾಗಿದೆ.

ಮದ್ದೂರು

ಸುವರ್ಣಾವತಿ ನದಿ ದಂಡೆಯ ಎಡಭಾಗದಲ್ಲಿರುವ ಮದ್ದೂರು, ತಾಲೂಕುಕೇಂದ್ರ ಯಳಂದೂರಿನಿಂದ ೬ ಕಿ.ಮೀ. ದೂರದಲ್ಲಿದೆ. ೧೦ನೇ ಶತಮಾನದಲ್ಲಿ ಪಿರಿಯ ಮಾರ್ದೂರು ಎಂದು ಕರೆಯಲಾಗುತ್ತಿತ್ತು.[೫೯]

ಕ್ರಿ.ಶ. ೯೮೨ ಗಂಗರ ಆಳ್ವಿಕೆಯ ಕಾಲದಲ್ಲಿ ದೇಶೇಶ್ವರ ದೇವಾಲಯವನ್ನು ನಿರ್ಮಿಸಲಾಗಿರುವುದು.[೬೦] ಹೀಗೆ ಮದ್ದೂರು ಪ್ರಾಚೀನ ಕಾಲದ ಸಾಂಸ್ಕೃತಿಕ ನೆಲೆ ಎಂದು ಹೇಳಬಹುದು.

ಸುತ್ತೂರು

ಈ ಗ್ರಾಮವು ನಂಜನಗೂಡು ತಾಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದ್ದು ಕಪಿಲಾ ನದಿಯ ದಂಡೆಯಲ್ಲಿದ್ದು ನಾರಾಯಣ ಸ್ವಾಮಿ ದೇವಾಲಯವು ಗಂಗರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣಗೊಂಡಿದೆ.[೬೧]

ನಗರ್ಲೆ

ನಂಜನಗೂಡಿನಿಂದ ೧೫ ಕಿ.ಮೀ. ದೂರದಲ್ಲಿರುವ ನಗರ್ಲೆ ಗ್ರಾಮವು ಗಂಗರ ಕಾಲದಿಂದ ಪ್ರಸಿದ್ಧಿ ಪಡೆದಿದೆ. ನಾರಾಯಣಸ್ವಾಮಿ ಗುಡಿ ಮುಂದಿರುವ ಕ್ರಿ.ಶ. ೯೭೧ರ ಶಾಸನ ಪೆರ್ಮನಡಿಯ ಮನೆಮಗಳು ನೀಲಬ್ಬೆಯ ಮಗ ರಾಚಮ್ಮನು ಈ ಕಂಬವನ್ನೂ ನಿಲ್ಲಿಸಿ ಅದಕ್ಕೆ ಅಬ್ಬೆಯ ಎಂದು ಹೆಸರಿಟ್ಟಿದ್ದಾನೆ. ಸೋಮೇಶ್ವರ ಗುಡಿ ಹಾಗೂ ಮರ್ಗಾನ ಪರಮೇಶ್ವರ ಗುಡಿಗಳು ಗಂಗರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣಗೊಂಡಿದ್ದವು.[೬೨]

ಚಿಕ್ಕ ಹನಸೋಗೆ

ಕೃಷ್ಣರಾಜನಗರ ತಾಲ್ಲೂಕು ಕೇಂದ್ರದಿಂದ ೨೭ ಕಿ.ಮೀ. ದೂರದಲ್ಲಿರುವ ಚಿಕ್ಕ ಹನಸೋಗೆ ಪ್ರಮುಖ ಜೈನಕ್ಷೇತ್ರವಾಗಿತ್ತು.[೬೩] ಇಲ್ಲಿ ದೊರೆತಿರುವ ಕ್ರಿ.ಶ. ೧೦ನೇ ಶತಮಾನದ ಶಾಸನವೊಂದರಲ್ಲಿ ಈ ಊರನ್ನು 'ಪನಸೋಗೆ' ಎಂದು ಉಲ್ಲೇಖಿಸಲಾಗಿದೆ. ಜೈನ ಮುನಿಪರಂಪರೆಯಲ್ಲಿ ಹನಸೋಗೆಯು ಪ್ರಭಾವಿ ಕೇಂದ್ರವಾಗಿದ್ದಿತು.[೬೪]

ಉಪಸಂಹಾರ

ಹೀಗೆ ಮೈಸೂರು ಜಿಲ್ಲೆಯಲ್ಲಿ ಕ್ರಿ.ಶ. ೪ನೇ ಶತಮಾನದಿಂದ ೧೦ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ ತಲಕಾಡಿನ ಗಂಗರು, ವರುಣದ ಚಾಲುಕ್ಯ ಮತ್ತು ಪುನ್ನಾಟದ ಅರಸರು ತಮ್ಮ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಅನೇಕ ಧಾರ್ಮಿಕ ಸ್ಥಳಗಳು, ದೇವಾಲಯಗಳ ನಿರ್ಮಾಣ, ರಾಜಧಾನಿ ಪಟ್ಟಣಗಳು, ಅಗ್ರಹಾರಗಳ ಸ್ಥಾಪನೆ, ವ್ಯಾಪಾರ ಕೇಂದ್ರಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದು, ಜಿಲ್ಲೆಯಲ್ಲಿ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ನೆಲೆಗಳಾಗಿ ತಲಕಾಡು, ತಡಿಮಾಲಂಗಿ, ಸೋಸಲೆ, ಮೂಗೂರು, ನರಸೀಪುರ, ಆಲಗೂಡು, ಬನ್ನೂರು, ವರುಣ, ವಾಜಮಂಗಲ, ವರಕೋಡು, ಚಿಕ್ಕಹನಸೋಗೆ, ಸಾಲಿಗ್ರಾಮ, ಸುತ್ತೂರು, ನಗರ್ಲೆ, ನರಸಮಂಗಲ, ಅಗರ, ಮದ್ದೂರು ಇನ್ನೂ

[illegible] ಮೈಸೂರು ಕರ್ನಾಟಕ ಸಾಂಸ್ಕೃತಿಕ ನಗರ ಎಂಬ ಖ್ಯಾತಿ [illegible] ಪಡೆದುಕೊಂಡಿದೆ.

[ಕೃತಜ್ಞತೆ: ಈ ಪ್ರಬಂಧವನ್ನು ರಚನೆ ಮಾಡುವಲ್ಲಿ [illegible] ಮಾರ್ಗದರ್ಶಕರಾಗಿರುವ ಪ್ರೊ. ಹನುಮನಾಯಕರವರಿಗೆ ನಾನು ಆಭಾರಿಯಾಗಿರುತ್ತೇನೆ.]

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. **Karnataka State Gazetteer**, Mysore District, Suryanath U. Kamath (C. Editor), Govt. of Karnataka publication, Bangalore, 1988, Page No. 1.

೨. **Mysore Gazetteer**, Vol. 5, C. Hayavadana Rao (editor) B.R. Publishing Corporation, Delhi, 1928, Page No. 561

೩. ಕೆ.ಎಸ್. ಶಿವಣ್ಣ, **ಮೈಸೂರು ಐತಿಹಾಸಿಕ ಪರಂಪರೆ, ಮೈಸೂರು ದರ್ಶನ**, ಜಿ.ಎಸ್.ಭಟ್ಟ ಮತ್ತು ಜಾನಗೆರೆ ವೆಂಕಟರಾಮಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು, ೨೦೧೦, ಪುಟ ಸಂಖ್ಯೆ ೧೧.

೪. **Karnataka State Gazetteer**, Mysore District, Suryanath U. Kamath (C.E). Govt. of Karnataka publication, Bangalore 1988, Page No. 2.

೫. **ಅದೇ**, ಪುಟ ೨.

೬. **ಅದೇ**, ಪುಟ ೨.

೭. ಡಾ. ಎಸ್.ಎಸ್. ಶಿವರುದ್ರಪ್ಪಸ್ವಾಮಿ, **ಮೈಸೂರು ಜಿಲ್ಲೆಯ ಗಂಗರ ಶಾಸನಗಳು**, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೨೦೧೦, ಪುಟ ೬೦.

೮. ಡಾ. ಎ.ವಿ. ಕೃಷ್ಣಮೂರ್ತಿ, **ಮೈಸೂರು ಜಿಲ್ಲಾ ಪ್ರದೇಶದ ಪ್ರಾಚೀನ ಆಡಳಿತ ಘಟಕಗಳು**, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೨೦೧೦, ಪುಟ ೧೮೧.

೯. **Karnataka State Gazetteer**, Mysore District, Suryanath U. Kamath (C. Editor), Govt. of Karnataka publication, Bangalore, 1988, Page No. 51-57.

೧೦. R.R. Diwakar, **Karnataka through the ages**, The Govt. of Mysore, Bangalore, 1968, Page No. 144.

೧೧. ಡಾ. ಎ.ವಿ. ಕೃಷ್ಣಮೂರ್ತಿ, **ಮೈಸೂರು ಜಿಲ್ಲಾ ಪ್ರದೇಶದ ಪ್ರಾಚೀನ ಆಡಳಿತ ಘಟಕಗಳು**, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ ೧೮೧.

೧೨. **Karnataka State Gazetteer**, Mysore District, Suryanath U. Kamath (C. Editor), Govt. of Karnataka publication, Bangalore, 1988, Page No. 59.

೧೩. **ಹೆಗ್ಗಡದೇವನಕೋಟೆ ತಾಲೂಕು ಗ್ಯಾಜೆಟಿಯರ್**, ಕರ್ನಾಟಕ ಸರ್ಕಾರ, ಬೆಂಗಳೂರು ೨೦೧೧, ಪುಟ ೧೧.

೧೪. **Karnataka State Gazetteer**, Mysore District, Suryanath U. Kamath (C. Editor), Govt. of Karnataka publication, Bangalore, 1988, Page No. 59.

೧೫. **ಎ.ಕ. ಸಂ. ೪**, ಯಳಂದೂರು ೧೬೭.

೧೬. **ಹೆಗ್ಗಡದೇವನಕೋಟೆ ತಾಲೂಕು ಗ್ಯಾಜೆಟಿಯರ್**, ಕರ್ನಾಟಕ ಸರ್ಕಾರ, ಬೆಂಗಳೂರು ೨೦೧೧, ಪುಟಗಳು ೧೪೯–೧೬೧.

೧೭. ಕೆ.ಎಸ್. ಶಿವಣ್ಣ, **ಮೈಸೂರು ಐತಿಹಾಸಿಕ ಪರಂಪರೆ**, ಇನ್ ಮೈಸೂರು ದರ್ಶನ, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು, ೨೦೧೦, ಪುಟ ೧೫.

೧೮. **Karnataka State Gazetteer**, Mysore District, Suryanath U. Kamath (C. Editor), Govt. of Karnataka publication, Bangalore, 1988, Page No. 63.

೧೯. ಡಾ. ಕೋ.ವೆಂ. ರಾಮಕೃಷ್ಣೇಗೌಡ, **ಕರ್ನಾಟಕ ಕಾವೇರಿ ಸಂಸ್ಕೃತಿ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧, ಪುಟ ೪೧.

೨೦. **Karnataka State Gazetteer**, Mysore District, Suryanath U. Kamath (C. Editor), Govt. of Karnataka publication, Bangalore, 1988, Page No-63.

೨೧. **ಎ.ಕ. ಸಂ. ೫**, ಮೈಸೂರು ೧೨೯.

೨೨. **ತಿ. ನರಸೀಪುರ ತಾಲೂಕು ಗ್ಯಾಸೆಟಿಯರ್**, ಕರ್ನಾಟಕ ಸರ್ಕಾರ, ಬೆಂಗಳೂರು ೨೦೧೧, ಪುಟ ೨೦೯.

೨೩. **ಅದೇ**, ಪುಟ ೨೧೦.

೨೪. **Karnataka State Gazetteer**, Mysore District, Suryanath U. Kamath (C. Editor), Govt. of Karnataka publication, Bangalore, 1988, pp. No. 924.

೨೫. ಡಾ. ನಿರ್ಮಲರಾಜು, **ತಿರುಮಕೂಡಲು ನರಸೀಪುರದ ಇತಿಹಾಸ ಮತ್ತು ವಾಸ್ತುಶಿಲ್ಪ**, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು, ೨೦೧೦, ಪುಟ ೪೪೭–೪೪೮.

೨೬. **ಅದೇ**, ಪುಟ ೪೪೬. ೨೭. **ಅದೇ**, ಪುಟ ೪೪೮.

೨೮. **ತಿ. ನರಸೀಪುರ ತಾಲೂಕು ಗ್ಯಾಸೆಟಿಯರ್**, ಕರ್ನಾಟಕ ಗ್ಯಾಸೆಟಿಯರ್ [illegible], ಬೆಂಗಳೂರು, ೨೦೧೧, ಪುಟ [illegible].

೨೯. **ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್**, ಮೈಸೂರು ಡಿಸ್ಟ್ರಿಕ್, ಗೌರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೮೮, ಪುಟ ೯೧೬.

೩೦. **ಅದೇ,** ಪುಟ ೯೧೭.

೩೧. **ಎಪಿಗ್ರಾಫಿಯ ಕರ್ನಾಟಕ**, ಸಂಪುಟ ೫, ಶಾಸನ ಸಂಖ್ಯೆ ೭.

೩೨. **ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್**, ಮೈಸೂರು ಡಿಸ್ಟ್ರಿಕ್, ಗೌರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೮೮, ಪುಟ ೮೩೬.

೩೩. **ಅದೇ,** ಪುಟ ೨೨೩.

೩೪. ರಾಜೇಗೌಡ ಹ.ಕ., **ಮೂಗುರು ತಿಬ್ಬಾದೇವಿ; ಒಂದು ಅಧ್ಯಯನ**, ಜಾನಪದ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೭, ಪು. ೧೮೧.

೩೫. ಡಾ. ದೇವರಕೊಂಡಾರೆಡ್ಡಿ, **ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೪, ಪುಟ ೧೮೭.

೩೬. **ತಿ. ನರಸೀಪುರ ತಾಲೂಕು ಗ್ಯಾಸೆಟಿಯರ್**, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, ೨೦೧೧, ಪುಟ ೨೨೭.

೩೭. ಡಾ. ದೇವರಕೊಂಡಾರೆಡ್ಡಿ, **ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ ೧೯೪.

೩೮. **ತಿ. ನರಸೀಪುರ ತಾಲೂಕು ಗ್ಯಾಸೆಟಿಯರ್**, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, ೨೦೧೧, ಪುಟ ೨೦೧.

೩೯. **ಅದೇ,** ಪುಟ ೨೩೪.

೪೦. **ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್**, ಮೈಸೂರು ಡಿಸ್ಟ್ರಿಕ್, ಗೌರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೮೮, ಪುಟ ೮೫೭.

೪೧. **Karnataka State Gazetteer,** Mysore District, Suryanath U. Kamath (C. Editor), Govt. of Karnataka publication, Bangalore, 2011, Page No. 920.

೪೨. ಡಾ. ಬಿ.ಆರ್. ಭಾರತಿ, **ತಲಕಾಡು ಐತಿಹ್ಯ ಪುರಾಣ ಮತ್ತು ಇತಿಹಾಸ**, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೧೦, ಪುಟ ೪೩೬.

೪೩. K.V. Ramesh, **Inscription of Western Ganga,** No-134, Page No. 401.

೪೪. ಡಾ. ಬಿ.ಆರ್. ಭಾರತಿ, **ತಲಕಾಡು ಐತಿಹ್ಯ ಪುರಾಣ ಮತ್ತು ಇತಿಹಾಸ**, ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೧೦, ಪುಟ ೪೪೦.

೪೫. ಅದೇ, ಪುಟ ೪೩೯.

೪೬. ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪುಟ ೪೭೨.

೪೭. **Karnataka State Gazetteer**, Mysore District, Suryanath U. Kamath (C. Editor), Govt. of Karnataka publication, Bangalore, 1988, P. 930.

೪೮. ಕೆ.ಎಸ್. ಶಿವಣ್ಣ, **ಮೈಸೂರು ಐತಿಹಾಸಿಕ ಪರಂಪರೆ**, ಮೈಸೂರು ದರ್ಶನ, ಜಿ.ಎಸ್. ಭಟ್ಟ ಮತ್ತು ಬೇನಹಳ್ಳಿ ಸಿದ್ಧಲಿಂಗಪ್ಪ (ಸಂಪಾದಕರು), ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲೆ, ೨೦೧೧, ಪುಟ ೧೫.

೪೯. ಡಾ. ಕೋ.ವೆಂ. ರಾಮಕೃಷ್ಣೇಗೌಡ, **ಕರ್ನಾಟಕ ಕಾವೇರಿ ಸಂಸ್ಕೃತಿ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧, ಪುಟ ೪೧.

೫೦. **ಎ.ಕ. ೫,** ಮೈಸೂರು, ೧೬೯.

೫೧. **Karnataka State Gazetteer**, Mysore District, Suryanath U. Kamath (C. Editor), Govt. of Karnataka publication, Bangalore, 1988, p. 929.

೫೨. **ಎ.ಕ. ೫,** ಮೈಸೂರು, ೧೨೯.

೫೩. **ಮೈಸೂರು ತಾಲ್ಲೂಕು ಗ್ಯಾಜೇಟಿಯರ್,** ಕರ್ನಾಟಕ ಸರ್ಕಾರ, ಬೆಂಗಳೂರು, ೨೦೧೧, ಪುಟ ೨೩೨.

೫೪. ಅದೇ, ಪುಟ ೨೩೩.

೫೫. **Karnataka State Gazetteer,** Mysore District, Suryanath U. Kamath (C Editor), Govt of Karnataka publication, Bangalore, 1988, P. 903.

೫೬. **M.A.R.** 1937, Page No 28.

೫೭. **ಎ.ಕ. V**, ಯಳಂದೂರು, ೧೩೮.

೫೮. ಡಾ. ದೇವರಕೊಂಡಾರೆಡ್ಡಿ, **ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೪.

೫೯. **Karnataka State Gazetteer,** Mysore District, Suryanath U. Kamath (C Editor), Govt of Karnataka publication, Bangalore, 1988, P. 878.

೬೦. **M.A.R.** 1938, Page No. 27.

೬೧. **ಕೃಷ್ಣರಾಜನಗರ ತಾಲೂಕು ಗ್ಯಾಜೇಟಿಯರ್,** ಕರ್ನಾಟಕ ಸರ್ಕಾರ, ಬೆಂಗಳೂರು, ೨೦೧೧, ಪುಟ ೧೭೧.

೬೨. **M.A.R.** 1944, Page No. 19.

೬೩. **ನಂಜನಗೂಡು ತಾಲೂಕು ಗ್ಯಾಜೇಟಿಯರ್,** ಕರ್ನಾಟಕ ಸರ್ಕಾರ, ಬೆಂಗಳೂರು, ೨೦೧೧, ಪುಟ ೧೮೭.

೬೪. **Karnataka State Gazetteer,** Mysore District, Suryanath U. Kamath (C. Editor), Govt. of Karnataka publication, Bangalore, 1988, P. 845.

ಅಸಹಕಾರ ಚಳುವಳಿಯ ಹುಟ್ಟು ಮತ್ತು ಸೌತ್ ಕೆನರಾದಲ್ಲಿ ಇದರ ಪ್ರತಿಫಲನ: ಸ್ವದೇಶಾಭಿಮಾನಿ ಪತ್ರಿಕೆಯನ್ನು ಅನುಲಕ್ಷಿಸಿ

ಸೀತಾರಾಮು ಪಿ.*

ಭಾರತದಲ್ಲಿ ಬ್ರಿಟೀಷರ ಆಡಳಿತದೊಂದಿಗೆ ಅನೇಕ ಬದಲಾವಣೆಗಳು ಆಗುತ್ತವೆ. ಇದು ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ ಹೀಗೆ ಅನೇಕ ಕ್ಷೇತ್ರಗಳಲ್ಲಿ ಬದಲಾವಣೆಗಳನ್ನುಂಟುಮಾಡುತ್ತವೆ. ಇವುಗಳಲ್ಲಿ ಮುದ್ರಣ ಕ್ಷೇತ್ರಕ್ಕೆ ಬ್ರಿಟೀಷರ ಕೊಡುಗೆಯು ಒಂದು. ಭಾರತದಲ್ಲಿ ಜೇಮ್ಸ್ ಅಗಸ್ಟಸ್ ಹಿಕ್ಕಿ, 'ಬೆಂಗಾಲ್ ಗೆಜೆಟ್' ಎಂಬ ಪತ್ರಿಕೆಯನ್ನು ೧೭೮೦ ಜನವರಿ ೨೯ರಂದು ಹೊರತರುತ್ತಾನೆ.[೧] ಅನಂತರದ ಹಂತಗಳಲ್ಲಿ ರಾಜರಾಮ್ ಮೋಹನ್‌ರಾಯ್‌ರಂಥಹವರಿಂದ ಮೊದಲಿಗೆ ಭಾರತೀಯ ಭಾಷೆಯಲ್ಲಿ ಜ್ಞಾನ ಜ್ಯೋತಿ ಪತ್ರಿಕೆಯು ಹೊರಬರುತ್ತದೆ. ಮುಂದೆ ವಿವಿಧ ಉದ್ದೇಶ ಗಳನ್ನಿಟ್ಟುಕೊಂಡು ಬೇರೆ ಬೇರೆ ಪತ್ರಿಕೆಗಳು ಹುಟ್ಟಿಕೊಳ್ಳುತ್ತವೆ. ಈ ಪತ್ರಿಕೆಗಳು ದೇಶದಲ್ಲಿ ಜಾಗೃತಿಯನ್ನುಂಟು ಮಾಡುವುದ ರೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಇದರಂತೆ ಸೌತ್ ಕೆನರಾದಲ್ಲಿ 'ಮಂಗಳೂರು ಸಮಾಚಾರ' ಎಂಬ ಪತ್ರಿಕೆ ೧೮೪೩ರಲ್ಲಿ ಮೊಗ್ಲಿಂಗ್‌ನ ನೇತೃತ್ವ ದಲ್ಲಿ ಕನ್ನಡದಲ್ಲಿ ಮೊದಲ ಪತ್ರಿಕೆಯಾಗಿ ಹೊರಬರುತ್ತದೆ.[೨] ರಾಜಕೀಯ ವಿಷಯಗಳನ್ನು ಮತ್ತು ಸ್ವಾತಂತ್ರ್ಯ ಹೋರಾಟ ಗಳನ್ನು ಪ್ರತಿನಿಧಿಸುವ ಪತ್ರಿಕೆಗಳು ೨೦ನೇ ಶತಮಾನದಲ್ಲಿ ಸೌತ್ ಕೆನರಾದಲ್ಲಿ ಹೆಚ್ಚಿನ ಮಟ್ಟದಲ್ಲಿ ಹುಟ್ಟಿಕೊಳ್ಳುತ್ತವೆ. ಸ್ವದೇಶಾಭಿಮಾನಿ, ನವಯುಗ, ನವಭಾರತ, ರಾಷ್ಟ್ರಬಂಧು, ಸತ್ಯಾಗ್ರಹಿ ಇತ್ಯಾದಿಗಳು ಸ್ವಾತಂತ್ರ್ಯಪೂರ್ವ ಪತ್ರಿಕೆಗಳಲ್ಲಿ ಪ್ರಮುಖವಾದವು. ಇವುಗಳಲ್ಲಿ ಸ್ವದೇಶಾಭಿಮಾನಿ ಪತ್ರಿಕೆಯು ೧೯೦೭ರಲ್ಲಿ ಬಿ. ಶ್ರೀನಿವಾಸ್ ಕಾಮತ್ ಸಂಪಾದಕತ್ವದಲ್ಲಿ ಹೊರಬರುತ್ತದೆ.[೩] ಇವುಗಳ ಹೆಸರೇ ಸೂಚಿಸುವಂತೆ, ಇವುಗಳು ರಾಷ್ಟ್ರೀಯತೆಯನ್ನು ಪ್ರಬಲವಾಗಿ ಪ್ರತಿನಿಧಿಸುತ್ತಿತ್ತು. ಈ ಪತ್ರಿಕೆಗಳು ಸಮಕಾಲೀನ ವಿಚಾರಗಳನ್ನು ಬಹಳ ದಿಟ್ಟವಾಗಿ ವಿಮರ್ಶೆ ಮಾಡುತ್ತಾ ಸುದ್ದಿಗಳನ್ನು ಬಿತ್ತರಿಸುತ್ತಿತ್ತು.

ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಬ್ರಿಟಿಷರ ಆಡಳಿತದ ವಿರುದ್ಧ ಹೋರಾಟದಲ್ಲಿ ೧೯೨೦ರಿಂದ ೧೯೨೨ರವರೆಗೆ ನಡೆಯುವ ಅಸಹಕಾರ ಚಳುವಳಿಯು ಒಂದು. ಈ ರಾಷ್ಟ್ರೀಯ ಚಳುವಳಿಯೊಂದಿಗೆ ಖಿಲಾಫತ್ ಚಳುವಳಿಯು ಸೇರಿ, ರೌಲಟ್ ಕಾಯಿದೆಯ ವಿರುದ್ಧದ ರಾಷ್ಟ್ರೀಯ ಪ್ರತಿಭಟನೆಯು ಭಾರತೀಯರೆಲ್ಲರನ್ನು ತಲುಪಿ, ಈ ವಿಚಾರದಲ್ಲಿ ಹಿಂದೂಗಳು ಮತ್ತು ಮುಸಲ್ಮಾನರಿಬ್ಬರನ್ನೂ ಒಗ್ಗೂಡಿಸಿತ್ತು.[೪] ಈ ಅಸಹಕಾರ ಚಳುವಳಿಯ ಕಲ್ಪನೆ ಗಾಂಧೀಜಿಯಿಂದ ಹುಟ್ಟಿಕೊಂಡು ಮುಂದೆ ದಿನಾಂಕ ೪–೯–೧೯೨೦ರಂದು ಕಲ್ಕತ್ತದಲ್ಲಿ ನಡೆದ ಕಾಂಗ್ರೆಸಿನ ಜಾದಾ ರಾಷ್ಟ್ರೀಯ ವಿಶೇಷ ಸಭೆಯಲ್ಲಿ ಅಸಹಕಾರ ಚಳುವಳಿಗೆ ಮಾನ್ಯತೆ ದೊರಕಿ, ವ್ಯಕ್ತಿಗತ ತತ್ವ ರಾಷ್ಟ್ರತತ್ವವಾಗುತ್ತದೆ. ಇದರ ಹಿನ್ನೆಲೆಯಾಗಿ ಹಲವಾರು ತಿಂಗಳುಗಳಿಂದಲೇ ಗಾಂಧೀಜಿಯು ಅದರ ಪ್ರಚಾರದಲ್ಲಿ ತೊಡಗಿರುತ್ತಾರೆ. ಈ ತತ್ವಕ್ಕೆ ಪರ ವಿರೋಧ ಅಭಿಪ್ರಾಯಗಳು ಅನೇಕ ಬರುತ್ತವೆ. ಇದಕ್ಕೆ ಸೌತ್ ಕೆನರಾವು ಹೊರತಲ್ಲ. ಅಸಹಕಾರದ ಕುರಿತು ಪರ ವಿರೋಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪತ್ರಿಕೆಗಳು ಪ್ರಮುಖ ವೇದಿಕೆಯಾಗುತ್ತದೆ. ಸೌತ್ ಕೆನರಾದಲ್ಲಿ ಸ್ವದೇಶಾಭಿ ಮಾನಿ ಪತ್ರಿಕೆಯು, ಅಸಹಕಾರ ಚಳುವಳಿಯ ಕುರಿತು ಪ್ರಾರಂಭಿಕ ಹಂತದಲ್ಲಿ ಬಹುವಾಗಿ ಪರ ನಿಲುವುಗಳನ್ನು ವ್ಯಕ್ತಪಡಿಸುತ್ತಲೇ ಮುಕ್ತ ಮತ್ತು ದಿಟ್ಟ ವಿಮರ್ಶೆಯನ್ನು ಮಾಡುತ್ತದೆ. ಗಾಂಧೀಜಿಯವರು ಈ ಅಸಹಕಾರ ತತ್ವದ ಪ್ರಚಾರದ ನಿಮಿತ್ತ ದೇಶದ ನಾನಾ ಕಡೆ ಭೇಟಿಯನ್ನು ಕೊಡುತ್ತಾರೆ. ಹಾಗೆಯೇ ಮಂಗಳೂರಿಗೆ ೧೯ ಆಗಸ್ಟ್ ೧೯೨೦ರಂದು ಭೇಟಿಯನ್ನು ಕೊಡುತ್ತಾರೆ. ಪತ್ರಿಕೆಯು ಈ ಕುರಿತು, ಈಗಾಗಲೇ ೧೩ ಆಗಸ್ಟ್ ೧೯೨೦ರ ಸಂಚಿಕೆಯಲ್ಲಿ ಪ್ರಕಟಣೆಯನ್ನು ಕೊಟ್ಟಿರುವಂತೆ ಅದರಂತೆ ಮಹಾತ್ಮ ಗಾಂಧಿಯವರು ಶೌಕತ್ ಆಲಿ ಮತ್ತು ಯಾಕುಬ ಹುಸೇನರೊಂದಿಗೆ ಅದೇ ದಿನಾಂಕದಂದು ತಲುಪುತ್ತಾರೆ. ಈ ಒಂದು ಭೇಟಿಯ ಮುಖಾಂತರ, ಮಂಗಳೂರಿನಲ್ಲಿ ಅಸಹಕಾರ ಚಳುವಳಿಯ ಹೋರಾಟದ ಆರಂಭದೊಂದಿಗೆ,

* ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಕೊಣಾಜೆ–೫೭೪೧೯೯

ಸ್ವಾತಂತ್ರ್ಯ ಚಳುವಳಿಯ ಕಾವು ಏರುತ್ತದೆ. ಗಾಂಧೀಜಿಯವರನ್ನು ಸ್ವಾಗತಿಸಲು, ಭೇಟಿಯಾಗಲು ಗಾಂಧೀಜಿಯವರ ಭೇಟಿಯ ಬಗ್ಗೆ ತಿಳಿದ ಚಿಕ್ಕ ಅವಧಿಯಲ್ಲಿ ಅಂತಹ ಮಳೆಗಾಲದಲ್ಲೂ ಜನಸಮುದಾಯ ನೆರೆದಿರುತ್ತದೆ. ಸ್ವದೇಶಾಭಿಮಾನಿ ಪತ್ರಿಕೆ, "ವಸಂತ ಋತುವಿನಲ್ಲಿ ವನಗಳು ಅರಳಿ ಹೋಗುವಂತೆ ನಿನ್ನೆ ದಿನ ಈ ಪಟ್ಟಣದೊಳಗಿನ ಭಾಗವು ಜನಸಮುದಾಯದಿಂದ ಅರಳಿರುವಂತೆ ಕಾಣುತ್ತಿತ್ತು"[೫] ಎಂಬುದಾಗಿ ವರ್ಣಿಸುತ್ತದೆ. ಇದನ್ನು, ಇದರ ಪ್ರತ್ಯಕ್ಷದರ್ಶಿ ಡಾ. ಎನ್. ನಾರಾಯಣ ಭಟ್‌ರವರು "೧೯೨೦ರಲ್ಲಿ ಗಾಂಧೀಜಿ ಮಂಗಳೂರಿಗೆ ಬರುವಾಗ ಹಾದಿಯಲ್ಲಿ ಕಾಸರಗೋಡು ರೈಲು ನಿಲ್ದಾಣದಲ್ಲಿ ಐದು ನಿಮಿಷ ರೈಲು ನಿಂತಾಗ ಅಲ್ಲಿ ನೆರೆದ ಅಪಾರ ಜನಸಮುದಾಯವನ್ನು ಉದ್ದೇಶಿಸಿ ಭಾಷಣ ಮಾಡಿದ್ದರು. ಆಗ ಅಲ್ಲಿ ಹೈಸ್ಕೂಲು ವಿದ್ಯಾರ್ಥಿಯಾಗಿದ್ದ ನಾನು ಅಲ್ಲಿ ಗಾಂಧೀಜಿಯವರನ್ನು ಕಂಡಿದ್ದೆ. ಆ ಭಾಷಣ ಮತ್ತು ಮಂಗಳೂರಲ್ಲಿ ಅವರು ಮಾಡಿದ ಭಾಷಣದ ವರದಿಗಳನ್ನು ಪತ್ರಿಕೆಗಳಲ್ಲಿ ಓದಿ ನಾನು ರಾಷ್ಟ್ರೀಯ ಚಳವಳಿಯ ಕಡೆ ಆಕರ್ಷಿತನಾದೆ"[೬] ಎನ್ನುತ್ತಾರೆ. ಸೌತ್ ಕೆನರಾದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ ಸದಾಶಿವ ಕಾರ್ನಾಡರಂತಹ ಅನೇಕ ನಾಯಕರು ಅಸಹಕಾರ ಚಳುವಳಿಯನ್ನು ಸ್ವೀಕರಿಸುವ ನಿಟ್ಟಿನಲ್ಲಿ ಭಾಗವಹಿಸುತ್ತಾರೆ. ಇವುಗಳೆಲ್ಲಾ ಗಾಂಧೀಜಿಯವರ ಪ್ರಭಾವ ಮತ್ತು ಜನರು ಗಾಂಧೀಜಿಯವರಲ್ಲಿ ನಂಬಿಕೆಯನ್ನಿಟ್ಟಿರುವುದನ್ನು ಸೂಚಿಸುತ್ತದೆ. ಮಹಾತ್ಮಾ ಗಾಂಧಿಯವರು ಮೌಲನಾ ಶೌಕತ್ ಅಲಿಯವರೊಡನೆ ಮಂಗಳೂರಿಗೆ ಭೇಟಿ ಕೊಟ್ಟು ಸತ್ಯಾಗ್ರಹಕ್ಕೆ ಕರೆಕೊಟ್ಟ ನಂತರ ಈ ಜಿಲ್ಲೆಯಲ್ಲಿ ಕಾಂಗ್ರೆಸ್ಸಿನ ಕೆಲಸಗಳು ಸಂಘಟಿತವಾಗಿ ನಡೆಯತೊಡಗಿದವು.[೭]

ಖಿಲಾಫತ್ ಮತ್ತು ಪಂಜಾಬಿನ ಜಲಿಯಾನ್‌ವಾಲಾಬಾಗ್ ಹತ್ಯಾಕಾಂಡ ಪ್ರಕರಣವನ್ನು ಇವೆರಡು ನಮ್ಮ ಜನಾಂಗಗಳಿಗೆ ಉಂಟಾದ ದೊಡ್ಡ ಹುಣ್ಣುಗಳು. ಇವುಗಳನ್ನು ಖಂಡಿಸಿ ಅಸಹಕಾರತೆಯನ್ನು ಗಾಂಧೀಜಿ ಕೈಗೊಂಡಿರುತ್ತಾರೆ. ಸ್ವದೇಶಾಭಿಮಾನಿ ಪತ್ರಿಕೆಯು ಗಾಂಧೀಜಿಯವರು ಮಂಗಳೂರಿನಲ್ಲಿ ಅಸಹಕಾರಿ ತತ್ವದ ಬಗ್ಗೆ ಮಾಡಿದ ಉಪದೇಶವನ್ನು ಬರೆದು ಅದರ ವಿಮರ್ಶೆಯನ್ನು ಕೂಡ ಮಾಡುತ್ತದೆ. "ಅಸಹಕಾರತೆಯು ತತ್ವವು ತಾತ್ವಿಕ ದೃಷ್ಟಿಯಿಂದ ನಿರಾಕ್ಷೇಪಕರವಾದ್ದು, ಸನಮತೀರಾದು." ಎನ್ನುವುದರ ಜತೆಗೆ "ವ್ಯವಹಾರಿಕ ದೃಷ್ಟಿಯಿಂದ ವಿಚಾರ ಮಾಡಿಯೆ ಅದನ್ನೂ ಮುಂದುವರಿಸುವುದು ಪ್ರಶಸ್ತವಾಗಿದೆ. ತತ್ವ ದೃಷ್ಟಿಗೂ ವ್ಯವಹಾರ ಭೂಮಿಗೂ ಜೊತೆ ಜೀಳುವ ಸಂಗತಿಗಳ ಜನತೆಯ ಆಚಾರಕ್ಕೆ ತಂದುಕೊಡುವುದು ಮುಖಂಡರ ಕರ್ತವ್ಯ."[೮] ಎಂದು ಬರೆಯುತ್ತದೆ. ಯಾಕೆಂದರೆ ಸರಕಾರದ ಕಡೆಯಿಂದ ದೊರಕಿದ ಬಹುಮಾನದ ಪದವಿಗಳನ್ನು ಮತ್ತು ಪದಕ ಮುಂತಾದವುಗಳನ್ನು ಹಿಂತಿರುಗಿಸೋದು, ಮುಂದಿನ ಕೌನ್ಸಿಲು ಚುನಾವಣೆಗೆ ಯಾರೂ ಉಮೇದುವಾರರಾಗಿ ಯಾರೂ ನಿಲ್ಲದೆ ಇರೋದು. ವಿದ್ಯಾರ್ಥಿಗಳು ಸರಕಾರಿ ಶಾಲಾ ಕಾಲೇಜನ್ನು ಬಹಿಷ್ಕರಿಸಿ ತಮ್ಮದೇ ರಾಷ್ಟ್ರೀಯ ಶಾಲೆಗಳಲ್ಲಿ ಶಿಕ್ಷಣವನ್ನು ಪಡೆಯೋದು. ವಕೀಲರು ಕೋರ್ಟುಗಳನ್ನು ಬಹಿಷ್ಕರಿಸೋದು ತುಂಬಾ ಕಷ್ಟಕರವಾದದ್ದು. ಹಾಗಾಗಿ ವ್ಯವಹಾರಿಕವಾಗಿಯೇ ವಿಚಾರ ಮಾಡಬೇಕಾಗುತ್ತದೆ ಅಂತ ಪತ್ರಿಕೆ ಹೇಳುತ್ತದೆ. ಗಾಂಧೀಜಿಯವರ ಅಸಹಕಾರಿ ತತ್ವ ಜಾರಿಯಾಗೋದು ಅದು ಕಾಂಗ್ರೆಸ್ ರಾಷ್ಟ್ರೀಯ ಸಭೆಯಲ್ಲಿ ಅಂಗೀಕಾರವಾದ ಮೇಲೇನೆ. ಅದಕ್ಕಿಂತ ಮುಂಚೆ ಸಬ್‌ಜಕ್ಟ್ ಕಮಿಟಿಯಲ್ಲೂ, ಕಾಂಗ್ರೆಸ್ ಕೇಂಪಿನಲ್ಲೂ, ಮುಖಂಡರ ಖಾಸಗಿ ಕೊನ್‌ಫರೆನ್ಸಿನಲ್ಲೂ ಪಾಸಾಗಿ ಆಮೇಲೆ ಅದು ರಾಷ್ಟ್ರೀಯ ಸಭೆಗೆ ಬರೋದು. ಇಂಥ ರಾಷ್ಟ್ರೀಯ ಸಭೆ ೪ ಸೆಪ್ಟೆಂಬರ್ ೧೯೨೦ರಂದು ಕಲ್ಕತ್ತೆಯಲ್ಲಿ ನಡೆಯಲಿಕ್ಕಿರುವುದು. ಪತ್ರಿಕೆಯು ಆ ಬಗ್ಗೆಯು ಅರಿವಿದ್ದು ಅಲ್ಲಿ ಯಾವ ನಿರ್ಣಯವಾಗುತ್ತದೋ ಅದನ್ನು ಅನುಸರಿಸಬೇಕು ಎನ್ನುವುದರ ಜತೆಗೆ, "ಎಲ್ಲ ಜನತೆಯು ಶಾಂತ ಮನಸ್ಸಿನಿಂದ ಮತ್ತು ದೂರದೃಷ್ಟಿಯಿಂದ ಹಾಗೂ ಸ್ವದೇಶದ ಪ್ರಗತಿಯ ಯೋಗವನ್ನು ಬೇಗನೆ ಸಾಧಿಸುವ ಸುಬುದ್ಧಿಯಿಂದ ಆಲೋಚಿಸುವುದು ಅವಶ್ಯಕವಾಗಿದೆ"[೯] ಅಂತ ವಿಶ್ಲೇಷಿಸಿ, ಅಸಹಕಾರಿತೆ ತತ್ವವನ್ನು ಅನುಸರಿಸಲು ಕರೆಯನ್ನು ಕೊಡುತ್ತದೆ.

ಸ್ವದೇಶಾಭಿಮಾನಿ ಪತ್ರಿಕೆಯು ಶೌಕತಾಲೀಯವರ ಭಾಷಣವನ್ನು ಕೂಡ ಪ್ರಕಟಿಸುತ್ತದೆ. ಆದರೆ ಎಲ್ಲೂ ಅವರ ಮಾತನ್ನು ವಿಶ್ಲೇಷಣೆ ಮಾಡಲು ಹೋಗುವುದಿಲ್ಲ. ಗಾಂಧೀಯವರು ಈ ಚಳುವಳಿಯನ್ನು ಬೆಂಬಲಿಸಿ ಅಸಹಕಾರ ಚಳುವಳಿಯನ್ನು ಕೈಗೊಳ್ಳುವ ಕಾರಣ ಪತ್ರಿಕೆಯು ಇದಕ್ಕು ಸಹಮತ ವ್ಯಕ್ತಪಡಿಸಿದೆ ಎಂಬುದಾಗಿ ಹೇಳಬಹುದು. ಶೌಕತಾಲಿಯವರು ಮಂಗಳೂರಿನಲ್ಲಿ ಬ್ರಿಟಿಷರಿಂದ ತಮಗಾದ ಅನ್ಯಾಯವನ್ನು ಎಳೆ ಎಳೆಯಾಗಿ ಬಿಚ್ಚಿಡಲು ಭಾಷಣ ಮಾಡುತ್ತಾ, ಮುಸಲ್ಮಾನರೆಲ್ಲಾ ಧರ್ಮರಕ್ಷಣೆಗಾಗಿ ಅಸಹಕಾರಿತ್ವವನ್ನು ಅಗತ್ಯವಾಗಿ ಅವಲಂಬಿಸಬೇಕಾಗಿಯೂ, ಹಿಂದು ಮುಸ್ಲಿಂ ಐಕ್ಯವನ್ನು ಕಾಪಾಡಬೇಕು ಎಂಬುದಾಗಿಯೂ ಭಿನ್ನಯಿಸಿಕೊಳ್ಳುತ್ತಾರೆ.

ಪತ್ರಿಕೆಯು ಅಸಹಕಾರ ತತ್ವಕ್ಕೆ ಬೆಂಬಲವನ್ನು ಕೊಟ್ಟು, "ಅಸಹಕಾರಿತ್ವದ ಚಳವಳಿಯು ಎಷ್ಟರ ಮಟ್ಟಿಗೆ ಮುಂದುವರಿದೀತು?"[೧೦] ಎಂಬ ಸಂಶಯವನ್ನು ವ್ಯಕ್ತಪಡಿಸುತ್ತದೆ. ಯಾಕೆಂದರೆ ಗಾಂಧೀಜಿಯವರು ಅಹಿಂಸಾವಾದಿಗಳು.

ಅಧಿಕಾರಿಗಳ ಮನಸ್ಸನ್ನು ನೋಯಿಸಲು ಸಿದ್ಧರಿಲ್ಲ. ಅಂಥ ಸಂದರ್ಭವು ಬಂದರೆ ಚಳುವಳಿಯನ್ನು ಹಿಂತೆಗೆದು ಕೊಳ್ಳುತ್ತಾರೆ. ಪತ್ರಿಕೆಯ ಈ ಒಂದು ದೂರದೃಷ್ಟಿಯ ವಿಶ್ಲೇಷಣೆ ಮುಂದೆ ೧೯೨೨ರಲ್ಲಿ ನಿಜವಾಗುತ್ತದೆ. ೧೯೨೨ರಲ್ಲಿ ಚೌರಚೌರಿ ಎಂಬಲ್ಲಿ ಅಸಹಕಾರ ಚಳುವಳಿಯಲ್ಲಿ ನಿರತರಾದವರು, ಪೋಲೀಸ್ ಠಾಣೆಗೆ ಬೆಂಕಿಯನ್ನಿಟ್ಟು ೨೧ ಪೊಲೀಸರ ಸಾವಿಗೆ ಕಾರಣರಾಗುತ್ತಾರೆ. ಕೂಡಲೇ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಹಿಂದಕ್ಕೆ ಪಡೆಯುತ್ತಾರೆ. ಗಾಂಧೀಜಿಯವರು, ಈಗಾಗಲೇ ತಮ್ಮ ಮನಸ್ಸಿನ ಇಚ್ಛೆಯಂತೆ, ಸರಕಾರದೊಡನೆ ಇದ್ದ ತಮ್ಮ ಸಹಕಾರ್ಯವನ್ನು ಕಡಿದಿದ್ದಾರೆ ಮತ್ತು ಅವರು ರಾಷ್ಟ್ರೀಯ ಸಭೆಯ ನಿರ್ಣಯದ ಮೇಲೆ ಅಷ್ಟೊಂದು ಭಾರವನ್ನು ಇಟ್ಟಿಲ್ಲ ಅನ್ನೋದು ಗಾಂಧೀಜಿಯವರ ವಿಚಾರ ಅಂದಾಗ ಪತ್ರಿಕೆಯು "ಆದರೆ ಇದು ಬರೆ ಒಬ್ಬ ಗಾಂಧಿಗಳ ಪ್ರಶ್ನೆಯಲ್ಲ, ಇಡೀ ದೇಶದ ಹಿತ ಸಂಬಂಧಕ್ಕೆ ಸಂಬಂಧಿಸಿದ ವಿಷಯವು"[೧೧] ಅಂತ ಹೇಳಿ ಅದು ಇಡೀ ದೇಶದಿಂದ ಅಂಗೀಕರಿಸಲ್ಪಡಲಿ ಅಂತ ಹಾರೈಸುತ್ತದೆ.

ಅಸಹಕಾರತೆಯ ಚಳವಳವನ್ನು ಪ್ರಚಾರಗೊಳಿಸಲು ಮಹಾತ್ಮ ಗಾಂಧಿಗಳು ಮಂಗಳೂರಿಗೆ ಬಂದವರ ಫಲವೆಂಬಂತೆ ಕೆನರಾ ಹೈಸ್ಕೂಲಿನ ಉಪಾಧ್ಯಾಯರಾದ ಮ। ರಾ। ಭೋಜರಾಯರು ತಮ್ಮ ಶಾಲಾ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟಾಗ ಪತ್ರಿಕೆಯು "…..ಬೇರೆಯವರ ಪ್ರತೀಕ್ಷೆಯನ್ನು ಮಾಡದೆ ಮ। ರಾ। ಭೋಜರಾಯರು ಅಸಹಕಾರಿತೆಯ ತತ್ವದ ಶಂಕುಸ್ಥಾಪನೆಯನ್ನು ಮೊದಲಾಗಿ ಮಾಡಿದರು…"[೧೨] ಅಂತ ಬರೆಯುವುದರ ಜತೆಗೆ ಅವರ ಮಾರ್ಗದರ್ಶನದಲ್ಲಿ ಇತರ ಸಮರ್ಥ ಶಿಕ್ಷಕರೊಂದಿಗೆ ರಾಷ್ಟ್ರೀಯ ಶಿಕ್ಷಣವನ್ನು ಜನತೆಗೆ ಕೊಟ್ಟರೆ ಒಳಿತೆಂದು ಸಂದೇಶವನ್ನು ಪತ್ರಿಕೆಯು ಕೊಡುತ್ತದೆ. ಮುಂದೆ ಭೋಜರಾಯರು ನಿರಂತರ ಚಳುವಳಿಯ ಪ್ರಚಾರದಲ್ಲಿ ತೊಡಗಿಕೊಂಡಿರುತ್ತಾರೆ.[೧೩]

ಈಗಾಗಲೇ ಶೌಕತ್ ಆಲಿಯವರು ಮಂಗಳೂರಿನಲ್ಲಿ ಮಾಡಿದ ಭಾಷಣದಲ್ಲಿ, "ಹಿಂದೂ ಮುಸಲ್ಮಾನರಲ್ಲಿ ಐಕ್ಯವನ್ನು ಬೆಳೆಸುವ ಧ್ಯೇಯದಿಂದಲೂ ಇದರಿಂದ ಹಿಂದೂಗಳಿಗೆ ಬಾಧಿಸುವ ಗೋವಧೆ ಮುಂತಾದ್ದನ್ನು ಮುಸಲ್ಮಾನರು ಮಾಡಬಾರದು"[೧೪] ಎಂಬ ಸಂದೇಶದೊಂದಿಗೆ ಅಸಹಕಾರ ಚಳುವಳಿಯನ್ನು ಯಶಸ್ಸಿಗೆ ಮನವಿ ಮಾಡಿಕೊಂಡಿದ್ದರು. ಇದಕ್ಕೆ ಪೂರಕವೆಂಬಂತೆ, ಮೈಸೂರು ಪಟ್ಟಣದಲ್ಲಿ ತಮ್ಮ ಕ್ಷೇತ್ರದಲ್ಲಿ ಮಹಮ್ಮದೀಯರು ಸಭೆ ಸೇರಿ ತಮ್ಮ ಸಹೋದರರಾದ ಹಿಂದೂಗಳಿಗೆ ಮನೋವ್ಯಥೆಯನ್ನುಂಟು ಮಾಡತಕ್ಕ ಗೋವಧೆಯನ್ನು ಇನ್ನು ಮುಂದೆ ತಮ್ಮ ಹಬ್ಬಗಳ ಕಾಲದಲ್ಲಿ ಮಾಡಕೂಡದೆಂದು ಶಪಥ ಪೂರ್ವಕವಾಗಿ ನಿರ್ಣಯ ಮಾಡಿಕೊಳ್ಳುತ್ತಾರೆ.[೧೫] ಇಂತಹ ಮಾಹಿತಿಯನ್ನು ಕಲೆ ಹಾಕಿ ಪತ್ರಿಕೆಯು ಹಿಂದೂ ಮುಸ್ಲಿಂರಲ್ಲಿ ಐಕ್ಯತೆಯನ್ನು ಬೆಳೆಸುವ ಪ್ರಯತ್ನವನ್ನು ಮಾಡುತ್ತದೆ.

ಇದೇ ಸಮಯದಲ್ಲಿ, ಕಲಕತ್ತೆಯಲ್ಲಿ ೧೯೨೦ ಸಪ್ಟೆಂಬರ್ ನೆರವೇರಲಿಕ್ಕಿರುವ ಜಾಥಾ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಮಂಗಳೂರಿನಿಂದ ಯು.ಎಸ್. ಕಿಣಿ, ಯು. ಶ್ರೀಧರ ಕಿಣಿ, ಕಾರ್ನಾಡ ಸದಾಶಿವರಾವ್, ಅರೆಬೈಲು ಭೋಜರಾವ್ ಮತ್ತು ಮಹಮ್ಮದ್ ಪುತ್ತೂರು ಸಾಹೇಬರು ಹೋಗಲು ನೇಮಕಗೊಳ್ಳುತ್ತಾರೆ. ೧೯೨೦ರಲ್ಲಿ ಡಿಸೆಂಬರ್‌ನಲ್ಲಿ ನಾಗಪುರ ಕಾಂಗ್ರೆಸ್ ಅಧಿವೇಶನದಿಂದ ಹಿಂತಿರುಗಿದ ಸದಾಶಿವ ಕಾರ್ನಾಡರು ತಕ್ಷಣ ತಮ್ಮ ಮನೆಯಲ್ಲಿ ಕೆಲವು ಹಿತೈಷಿಗಳೊಂದಿಗೆ ಸಮಾಲೋಚನೆ ಮಾಡಿ "ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ" ಯನ್ನು ಸ್ಥಾಪಿಸಿದರು.[೧೬]

ವೈಸರಾಯರು ಕೌನ್ಸಿಲಿನ ಅಧಿವೇಶನದಲ್ಲಿ ಅಸಹಕಾರಿತೆಯ ಚಳವಳವನ್ನು ಮೂರ್ಖತ್ವದ ಯೋಚನೆಯು, ಇದರಿಂದ ದೇಶದಲ್ಲಿ ಅಸ್ವಾಸ್ಥತೆಯು ಹಬ್ಬುವುದು. ಶಾಂತ ಪಕ್ಷದವರು ಇದನ್ನು ನಿಷೇಧಿಸಬೇಕು ಅಂತ ಹೇಳಿದಾಗ, ಈಗಾಗಲೇ ಮದ್ರಾಸ್, ಮುಂಬಯಿ, ಕಲಕತ್ತ, ಅಲಹಾಬಾದ್ ಮುಂತಾದ ಕಡೆಗಳಲ್ಲಿಯೂ ಶಾಂತಪಕ್ಷದವರು 'ಲಿಬರಲ್ ಲೀಗಿನ' ಹೆಸರಿನ ಕೆಳಗೆ ಜಾಹೀರ ಪತ್ರಕಗಳನ್ನು ಹೊರಡಿಸಿ ಗಾಂಧಿಗಳ ಅಸಹಕಾರಿತೆಯನ್ನು ನಿಷೇಧಿಸಿದ್ದವರು, ಪುನಃ ಇದನ್ನೇ ಕೌನ್ಸಿಲಿನಲ್ಲಿ ದ್ವಿರುಕ್ತಿ ಮಾಡುತ್ತಾರೆ. ಪತ್ರಿಕೆಯು ಅಸಹಕಾರಿತೆಯ ನಿಷೇಧವನ್ನು ಪುನಃ ಪ್ರದರ್ಶಿಸಬೇಕಾದ ಆಗತ್ಯವಿದ್ದಿಲ್ಲ ಎನ್ನುತ್ತದೆ. ಇವರ ಉದ್ದೇಶವು ವೈಸರಾಯರನ್ನು ಮೆಚ್ಚಿಸುವುದು ಆಗಿತ್ತು. ಆದರೆ ಅಸಹಕಾರತೆಯನ್ನು ಪ್ರಯೋಗಿಸುವುದು ಅನಿವಾರ್ಯವಾಗಿದೆ. ಸರ್ದಾರ್ ವಲ್ಲಭ ಬಾಯಿ ಪಟೇಲರು, ಖಿಲಾಫತ್ ಪ್ರಶ್ನೆ, ಪಂಜಾಬಿ ಪ್ರಕರಣ ಈ ಎರಡು ಸಂಗತಿಗಳಾಗಿ ಮಾತ್ರ ಸಹಕಾರಿತ್ವವನ್ನು ಕೈಗೊಳ್ಳುವುದು ಅಷ್ಟೂ ಪ್ರಶಸ್ತವಲ್ಲ. ಸ್ವಯಂ ನಿರ್ಣಯದ ತತ್ವಕ್ಕನು ಸಾರವಾಗಿ ಹಿಂದಿ ಸ್ವರಾಜ್ಯ ಪಡೆಯುವ ಉದ್ದೇಶದಿಂದ ಇದನ್ನು ಆಚರಿಸುವುದು ಯೋಗ್ಯವಾಗಿದೆ ಎಂದು ಅಭಿಮತ ವ್ಯಕ್ತಪಡಿಸಿದಾಗ, ಪತ್ರಿಕೆಯು ಈ ಅಭಿಪ್ರಾಯವು ಸಮರ್ಪಕ ವೆಂದು ಹೇಳುತ್ತದೆ. ನಾಮದಾರ ಪಟೇಲರು ಅಥವಾ ಇತರ ರಾಷ್ಟ್ರೀಯರು ಅಸಹಕಾರಿತೆಯಲ್ಲಿ ಕೆಲವು ವೈಗುಣ್ಯಗಳನ್ನು ಈ ಮೇರೆಗೆ ತೋರಿಸುತ್ತಾರಾದರೂ ಮೇಲಿನ ಶಾಂತಪಕ್ಷದವ ರಂತೆ ಈ ತತ್ವವನ್ನೇ ನಿಷೇಧಿಸುವುದಿಲ್ಲ.

ಸೆಪ್ಟೆಂಬರ್ ೪, ೧೯೨೦ ರಂದು ಕಲ್ಕತೆಯಲ್ಲಿ ಜಾಥಾ ರಾಷ್ಟ್ರೀಯ ಸಭೆಯು ಪ್ರಾರಂಭವಾಗುತ್ತದೆ. ಈ ಸಭೆಯಲ್ಲಿ ಯಾರೂ ಎಲ್ಲಿಯೂ ಕೂಡ ಅಸಹಕಾರ ತತ್ತ್ವವನ್ನು ಹೇರಿಕೆ ಮಾಡೋದಿಲ್ಲ. ಈ ಸಭೆಯ ಅಧ್ಯಕ್ಷರಾಗಿದ್ದ ಲಾಲಾ ಲಜಪತ ರಾಯರು ಅಸಹಕಾರಿತೆಯ ಬಗ್ಗೆ ಒಲವನ್ನು ಹೊಂದಿದ್ದರು. ಆದರೆ ತಮ್ಮ ಅಧ್ಯಕ್ಷೀಯ ಸ್ಥಾನದಿಂದ ಅಸಹಕಾರಿತೆಯ ಪುರಸ್ಕಾರವನ್ನು ಮಾಡೋದಿಲ್ಲ. ಪತ್ರಿಕೆಯು, "ಲಜಪತ ರಾಯರು ಈ ವಿಷಯವನ್ನು ರಾಷ್ಟ್ರೀಯ ಸಭೆಯ ನಿರ್ಣಯಕ್ಕೆ ಬಿಟ್ಟುಕೊಟ್ಟಿದ್ದರಿಂದ ಅವರ ವಿನಯವು ಮಾತ್ರ ವ್ಯಕ್ತವಾಗುತ್ತ ದೆಂದಲ್ಲ, ಜನತೆಯ ನಿಜವಾದ ಮುಖಂಡನಾಗಬೇಕಾದರೆ ಅವನಲ್ಲಿ ಲೋಕಮತಾನುವರ್ತಿತ್ವವೆಂಬ ಯಾವ ಗುಣವು ಇರಬೇಕಾದ್ದೋ ಅದು ಲಜಪತರಾಯರಲ್ಲಿ ನೆಲೆಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ"[೧೭] ಎಂದು ಬರೆಯುತ್ತವೆ. ಯಾಕೆಂದರೆ, ಸಹಕಾರಿತೆಯ ಕಾರ್ಯಕ್ರಮದ ಬಗ್ಗೆ ಪ್ರಾರಂಭದಿಂದಲೂ ಪರ ವಿರೋಧ ಅಭಿಪ್ರಾಯಗಳು ಇರುವ ಕಾರಣ ಅದನ್ನು ಸರಿಪಡಿಸದೆ ಸಭೆಯಲ್ಲಿ ಠರಾವುವನ್ನು ತರುವುದು ಸೂಕ್ತವಾಗಿಲ್ಲ ಅನ್ನೋದು ಅಧ್ಯಕ್ಷರ ನಿಲುವಾಗಿತ್ತು.

ಮಂಗಳೂರಿನ ದೇಶೀಯ ಬಾಲಿಕಾ ಪಾಠಶಾಲೆಯ ವಸಂತ ಮಂದಿರದಲ್ಲಿ ದಿನಾಂಕ: ೨೪-೧೦-೧೯೨೦ರಂದು ಅಸಹಕಾರ ತತ್ವದ ಬಗ್ಗೆ ಚರ್ಚಿಸಲು ಸಭೆ ಸೇರಲಾಗುತ್ತದೆ. ಈ ಸಭೆಯಲ್ಲಿ ಶ್ರೀಯುತ ಎಮ್.ಎಸ್. ಮಾಧವರಾಯರು, ಅಸಹಕಾರ ತತ್ತ್ವವನ್ನು ಆಚರಿಸುವುದು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಯಾಕೆಂದರೆ ಖಿಲಾಪತ್ತಿನ ಕುರಿತು ಅಥವಾ ಜಲಿಯನ್‌ವಾಲದ ಕೊಲೆಯ ಬಗ್ಗೆ ನಿಜವಾದ ದುಃಖವ ಭಾವವು ಇಲ್ಲಿಯ ಜನರಿಗೆ ಇಲ್ಲವಂತೆ. ಈ ಅಭಿಪ್ರಾಯವನ್ನು ವಿರೋಧಿಸಿ, ಸಭಿಕರೊಬ್ಬರು ಸ್ವದೇಶಾಭಿಮಾನಿ ಪತ್ರಿಕೆಗೆ ಪತ್ರವನ್ನು ಬರೆದು "ಯಾರು ಖಿಲಾಫತಿನ ಅಥವಾ ಜಲಿಯನ್ ವಾಲದ ಕೊಲೆಯನ್ನು ಕುರಿತು ಓದಿ ಸರಿಯಾಗಿ ತಿಳಿದು ಕೊಂಡಿರುವನೋ ಅವನ ಹೃದಯದಲ್ಲಿ ದುಃಖವಿಲ್ಲವೆಂದರೆ ನಾನು ಒಪ್ಪುವುದಿಲ್ಲ. ಹಳ್ಳಿಪಳ್ಳಿಗಳಲ್ಲಿ ಕೆಲವರಿಗೆ ಗೊತ್ತಿಲ್ಲದಿರ ಬಹುದು. ವಿದ್ಯೆಯಿಲ್ಲದ ಈ ಹಳ್ಳಿಯ ಜನರು ಆಂಗ್ಲವಿದ್ಯೆ ಯನ್ನು ಪಡೆದ ತಮ್ಮ ಧರ್ಮಾಚಾರಗಳನ್ನು ಬಿಟ್ಟ ಪೌರುಷ ಹೀನರಾದ ವಿದ್ಯಾವಂತರೆನ್ನಿಸಿಕೊಳ್ಳುವ ಜನರಿಗಿಂತ ಹತ್ತು ಪಾಲು ಹೆಚ್ಚಾಗಿ ದುಃಖ ಪಡದೆ ಇರುವುದಿಲ್ಲ. ಬಹುಮಾನದ ಪದವಿಗಳನ್ನು ಬಿರುದುಗಳನ್ನು ಬಿಡದೆ ಇರಬಹುದು. ಕೌನ್ಸಿಲು ಗಳಿಗೆ ಉಮೇದ್ವರರಾಗಿ ಎಷ್ಟೋ ಮಂದಿ ನಿಲ್ಲಬಹುದು. ವಕೀಲರು ಕೆಲಸವನ್ನು ಬಿಡದಿರಬಹುದು, ಆದರೆ ಮಹಾತ್ಮ ಗಾಂಧಿಯವರು ಇವರನ್ನೆಲ್ಲ ನಂಬಿಕೊಂಡಿಲ್ಲವೆಂದು ಸ್ಪಷ್ಟವಾಗಿ ಹೇಳಿರುವರು. ವಿದ್ಯೆಯಿಲ್ಲದ ಆ ರೈತರ ಮುಂದೆ ವಿಷಯಗಳನ್ನು ಇರಿಸಿ ಅವರಿಗೆ ಸತ್ಯಾಗ್ರಹವನ್ನು ಬೋಧಿಸಿ ದರೆ ಅವರೀಗ ಅಸಹಕಾರಕ್ಕೆ ಜಯವನ್ನು ಹೊಂದಿಸಿ ಕೊಡುವವರೆಂಬುದಕ್ಕೆ ಸಂಶಯವಿಲ್ಲ. ಶ್ರೀಯುತ ಮಾಧವ ರಾಯರಂತಹ ವಿದ್ಯಾವಂತರಿಗೆ ನನ್ನದೊಂದು ವಿಜ್ಞಾಪನೆ. ಜನಾಂಗಕ್ಕೆ ಬಂದ ಸಂಕಷ್ಟಗಳನ್ನು ಕುರಿತು ವಿದ್ಯೆಯಿಲ್ಲದ ಆ ಹೆಚ್ಚಿನ ಜನರ ಮುಂದೆ ಸರಿಯಾಗಿ ಇರಿಸುವುದು ವಿದ್ಯಾ ವಂತರ ಕರ್ತವ್ಯ. ವೃಥಾ ಅಸಹಕಾರವು ನಿಷ್ಫಲವಾಗುವುದೆಂದು ಹೇಳುತ್ತಲಿರುವುದರಿಂದ ಪ್ರಯೋಜನವಿಲ್ಲ"[೧೮] ಎಂದು ಬರೆಯುವುದರ ಮೂಲಕ ನಾಯಕರುಗಳ ವಿರುದ್ಧ ಸಾಮಾನ್ಯ ಸಭಿಕನು ಅಭಿಪ್ರಾಯ ವ್ಯಕ್ತಪಡಿಸಿ ಅಸಹಕಾರ ತತ್ವಕ್ಕೆ ಬೆಂಬಲ ವನ್ನು ವ್ಯಕ್ತಪಡಿಸುತ್ತಾನೆ. ೧೯೨೦ರಲ್ಲಿ ಮಹಾತ್ಮಾ ಗಾಂಧಿ ಮಂಗಳೂರಿಗೆ ಭೇಟಿ ಕೊಟ್ಟದ್ದರ ಪ್ರತ್ಯಕ್ಷದರ್ಶಿ, ಡಾ॥ ಎಂ.ಜಿ. ಹೈದರ್‌ರವರು "೧೯೨೦ರಲ್ಲಿ ಮಹಾತ್ಮಾ ಗಾಂಧಿ, ಶೌಕತ್ ಅಲಿಯವರು ಬಂದು, ಮಂಗಳೂರು ಕೇಂದ್ರ ನೆಹರೂ ಮೈದಾನಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡು ತ್ತಾರೆಂದು ಕೇಳಿದ ದಕ್ಷಿಣ ಕನ್ನಡದ ಜನ ಜಾತಿ, ಮತ, ಪಂಥಗಳನ್ನು ಮರೆತು, ಸ್ವಾತಂತ್ರ್ಯ ಸಂಗ್ರಾಮ ಪ್ರಥಮ ಸೇವೆಯಾದುದರಿಂದ, ಜಿಲ್ಲೆಯ ಮೂಲೆ ಮೂಲೆಗಳಿಂದ ಬಂದು ಪ್ರಚಂಡ ಸಂಖ್ಯೆಯಲ್ಲಿ ಬಂದು ಭಾಗವಹಿಸುತ್ತಾರೆ"[೧೯] ಎಂಬುದಾಗಿ ನೆನಪಿಸಿಕೊಳ್ಳುತ್ತಾರೆ. '೧೯೨೦ರಲ್ಲಿ ಗಾಂಧೀಜಿ ಮತ್ತು ಶೌಕತ್ ಆಲಿ ಮಂಗಳೂರಿಗೆ ಬಂದಾಗ ಅವರ ಭಾಷಣ ಕೇಳಿ ನಾನು ಕಾಂಗ್ರೆಸ್ ಮೆಂಬರ್ ಆದೆ' ಎಂಬುದಾಗಿ ಸ್ವಾತಂತ್ರ್ಯ ಯೋಧ ಜಿ. ದೇವಪ್ಪ ಆಳ್ವ ನೆನಪಿಸಿಕೊಳ್ಳುತ್ತಾರೆ.[೨೦] ಇವರು ಮುಂದೆ ನಿರಂತರವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡು ಜೈಲುವಾಸವನ್ನು ಕೂಡ ಅನುಭವಿ ಸಿರುತ್ತಾರೆ. ಈ ರೀತಿಯಾಗಿ ಗಾಂಧೀಜಿಯವರ ಕಲ್ಪನೆಯು ಜನರ ಚಳುವಳಿಯಾಗಿ ಪರಿವರ್ತಿತವಾಗುತ್ತದೆ.

ಕಲ್ಕತ್ತೆಯ ಸ್ಪೆಷಲ್ ಕಾಂಗ್ರೆಸಿನಲ್ಲಿ ಮಹಾತ್ಮಾಗಾಂಧಿಗಳ ಅಸಹಕಾರಿತೆಯ ಠರಾವು ಪಾಸಾಗುತ್ತದೆ. ಈ ಠರಾವು ಪಾಸಾಗೋದಕ್ಕೆ ಮುಂಚೆ, ಸೂಚನೆ, ಉಪಸೂಚನೆ, ವಿರೋಧ ಗಳು ಕಂಡುಬಂದು, ಗಾಂಧೀಜಿಯು ಕೆಲವು ಬದಲಾವಣೆ ಗಳೊಂದಿಗೆ ಠರಾವನ್ನು ಆ ಉಪಸೂಚನೆಗಳನ್ನು ಅಳವಡಿಸಿ ಕೊಳ್ಳುತ್ತಾರೆ. ಉದಾಹರಣೆಗೆ ವಿದೇಶಿ ವಸ್ತುಗಳ ಬಹಿಷ್ಕಾರ ವನ್ನು ಅಳವಡಿಸಿಕೊಳ್ಳುತ್ತಾರೆ. ತೆರಿಗೆಯನ್ನು ಕೊಡುವುದನ್ನು ನಿಲ್ಲಿಸಬೇಕು ಅನ್ನೋದು ಇನ್ನೊಂದು ಉಪಸೂಚನೆಯಾಗಿತ್ತು. ಗಾಂಧೀಜಿಯವರ ಠರಾವು ಮತ್ತು ಉಪಸೂಚನೆಗಳ ಮೇಲೆ ಮತಗಳನ್ನು ಕೇಳಿದಾಗ ಮೂಲ ಠರಾವು ಬಹುಮತದಿಂದ ಪಾಸಾಗುತ್ತದೆ. ೫೮೧೪ ಪ್ರತಿನಿಧಿಗಳಲ್ಲಿ ೨೭೭೩ ಜನರು ಮತ ಕೊಟ್ಟವರು. ಇವರಲ್ಲಿ ಗಾಂಧಿಗಳ ಕಡೆಗೆ ೧,೮೨೬

ಜನರು ಮತ್ತು ಮಾರಿ ಕಡೆಗೆ ೨೮೯ ಜನರು ಹಾಕಿರುವು, "ಕೌನ್ಸಿಲಿನಲ್ಲಿ ಈ ಮೇಲೆ ಅಸಹಕಾರಿತೆಯು ಪಾಸಾದದ್ದು ವೈಸರಾಯರಿಗೆ ಸಮರ್ಪಕವಾದ ಪ್ರತ್ಯುತ್ತರವೆ"[೨೧] ಬರೆಯುವುದರೊಂದಿಗೆ, ಹೊಸ ತರಾವಿನಲ್ಲಿ ಮೆಲ್ಲಮೆಲ್ಲನೆ ವಕೀಲರು ಕೋರ್ಟ್‌ಗಳನ್ನು, ವಿದ್ಯಾರ್ಥಿಗಳು ಸರಕಾರಿ ಶಾಲಾ ಕಾಲೇಜನ್ನು ಬಿಡೋದು ಎಂಬುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತದೆ. ಇದರಿಂದಾಗಿ ವಕೀಲಿಯ ಕೆಲಸವನ್ನು ಬಿಡಲು ಹಿಂದೇಟು ಹಾಕುವವನಿಗೆ 'ಸಾವಕಾಶ'ದ ಪರದೆಯೊಳಗೆ ಅಡಗಲು ಅವಕಾಶ ಮಾಡಿಕೊಡು ವಂತಾಗುತ್ತದೆ. ಹಾಗಿದ್ದರೂ ಸೇಲಮಿನ ಮ। ರಾ। ವಿಜಯ ರಾಘವಚಾರ್ಯ ಹಾಗೂ ವಿ.ಪಿ. ಮಾಧವರಾಯರಂಥ ರಾಷ್ಟ್ರೀಯ ಪಕ್ಷದವರೂ ಕೌನ್ಸಿಲುಗಳ ತಮ್ಮ ಉಮೇದು ವಾರಿಕೆಗೆ ರಾಜೀನಾಮೆ ಕೊಡುತ್ತಾರೆ. ಹಾಗೆಯೇ ಮಂಗಳೂರಿ ನಲ್ಲಿ ಮಹಮ್ಮದೀಯರ ಪರವಾಗಿ ಮದರಾಸ ನ್ಯಾಯ ವಿಧಾಯಕ ಸಭೆಗೆ ಉಮೇದ್ವಾರರಾಗಿದ್ದ ಮ. ಮಹಮದ್ ಪುತ್ತೂರು ಸಾಹೇಬರು ಉಮೇದ್ವಾರಿಕೆಯನ್ನು ಹಿಂದಗೆಯು ತ್ತಾರೆ.[೨೨]

ಆದರೆ ರಾಷ್ಟ್ರೀಯ ಪಕ್ಷದವರು ಮ। ರಾ। ಕಸ್ತೂರಿ ರಂಗ ಐಯ್ಯಂಗಾರ್ ಸತ್ಯಮೂರ್ತಿ ಮೊದಲಾದವರಿಗೆ ಅಸಹಕಾರಿ ತತ್ವತಃ ಮಾನ್ಯವಿದ್ದರೂ ಕೌನ್ಸಲು ಬಹಿಷ್ಕಾರವು ಇವರಿಗೆ ಆತ್ಮ ಘಾತುಕವೆಂದು ತೋರುತ್ತದೆ. ಇದಕ್ಕೆ ಪತ್ರಿಕೆಯೇ ಕಾರಣಗಳನ್ನು ಹೇಳುವಂತೆ, "ಅಸಹಕಾರಿತೆಯು ಎಷ್ಟೊ ತೀವ್ರವಾದ ಉಪಾಯವಾದರೂ, ಸ್ವರಾಜ್ಯದಷ್ಟು ಉಚ್ಚತಮ ವಾದ ಧ್ಯೇಯವಲ್ಲ ಮತ್ತು ಅಂಥ ಧ್ಯೇಯವನ್ನು ಸಾಧಿಸಲು ಕೌನ್ಸಿಲಿನಲ್ಲಿ ಪ್ರವೇಶಿಸಿ ನೋಕರಶಾಹಿಯ ಕೋಟೆಯ ಮೇಲೆ ಗುಂಡುಗಳನ್ನು ಹೊಡೆಯಲು ಹೊರಟ ರಾಷ್ಟ್ರೀಯರು ಅಸಹಕಾರಿ ತತ್ವವನ್ನು, ಸಂದರ್ಭಾನುಸಾರವಾಗಿ ರಾಷ್ಟ್ರೀಯ ಸಭೆಯನ್ನೂ ಕೂಡ ಉಲ್ಲಂಘಿಸಿ ಮುಂದೆ ಹೋದದ್ದಾದರೆ ಅವರು ಈ ಅಸಹಕಾರಿಗಳಿಗಿಂತ ಯಾವ ತರದಿಂದಲೂ ಕಡಿಮೆಯಲ್ಲ"[೨೩] ಎಂಬುದಾಗಿ ಬರೆದು ರಾಷ್ಟ್ರೀಯ ಹೋರಾಟ ಯಾವ ನೆಲೆಯಲ್ಲಾದರೂ ಸರಿ ಅನ್ಯೋನ್ಯ ಮುಕ್ತತೆ ಯನ್ನು ತೋರಿಸುತ್ತದೆ.

ಕಾರ್ನಾಡು ಸದಾಶಿವರಾವ್‌ರವರು, ೧೯೧೭ ಆಗಸ್ಟ್ ೨೬ರಂದು ಮಹಾತ್ಮಾ ಗಾಂಧೀಜಿಯವರಿಗೆ ಕಳಕಳಿಯ ಪತ್ರ ಬರೆದು, ಈ ದೇಶದ ಸ್ವಾತಂತ್ರ್ಯ ಹೋರಾಟದ ನಾಯಕ ರಾಗಬೇಕೆಂದು, ಮಂಗಳೂರಿಗೆ ಪತ್ನಿಯೊಂದಿಗೆ ಭೇಟಿ ಕೊಟ್ಟು ಭಾರತದ ಒಂದು ಮೂಲೆಯಲ್ಲಿ ಸಾವು ಪ್ರಯತ್ನಿಸುವ ಭಾರತಮಾತೆಯ ಸೇವೆಯ ಕಾರ್ಯಗಳಿಗೆ ಮಾರ್ಗದರ್ಶನ ಮಾಡಬೇಕೆಂದು ಕೇಳಿಕೊಳ್ಳುತ್ತಾರೆ.[೨೪] ಅದರಂತೆ ಗಾಂಧೀಜಿ ಸೌತ್ ಕೆನರಾಕ್ಕೆ ಭೇಟಿಕೊಟ್ಟು ಹೋರಾಟಕ್ಕೆ ಸ್ಫೂರ್ತಿಯನ್ನು ತುಂಬುತ್ತಾರೆ. ಇವರ 'ಅಸಹಕಾರ' ಚಳುವಳಿಯು ಪರ ವಿರೋಧದಿಂದ ಚರ್ಚೆಗೊಳಗಾಗುತ್ತದೆ. ಒಟ್ಟಿನಲ್ಲಿ ಗಾಂಧೀಜಿ ಯವರ ವ್ಯಕ್ತಿಗತ ತತ್ವವು ಜಾದಾ ರಾಷ್ಟ್ರೀಯ ವಿಶೇಷ ಅಧಿವೇಶನದಲ್ಲಿ ೧೯೨೦ರಲ್ಲಿ ಬಹುಮತದಿಂದ ಮಾನ್ಯತೆ ಯನ್ನು ಪಡೆದು, ರಾಷ್ಟ್ರೀಯ ತತ್ವವಾಗಿ ರಾಷ್ಟ್ರ ಸ್ವತ್ತಾಗಿ ಅಂಗೀಕಾರವಾಗುತ್ತದೆ. ಈ ರೀತಿಯಾಗಿ, ಗಾಂಧೀಜಿಯಿಂದ ಹುಟ್ಟಲ್ಪಟ್ಟ ಅಸಹಕಾರ ಚಳುವಳಿಯ ಕಲ್ಪನೆಯು ಹೇಗೆ ರಾಷ್ಟ್ರೀಯ ನೆಲೆಯಲ್ಲಿ ಪರ ವಿರೋಧ ಅಭಿಪ್ರಾಯಗಳನ್ನು ಎದುರಿಸಿತೋ ಹಾಗೆಯೇ ಸೌತ್ ಕೆನರಾದಲ್ಲೂ ಪ್ರಾರಂಭಿಕ ಹಂತದಲ್ಲಿ ಪರವಿರೋಧ ಚರ್ಚೆಯೊಂದಿಗೆ ಬೆಳೆದು ಅಂಗೀಕಾರವಾಗುವುದರೊಂದಿಗೆ ಮುಂದಿನ ಹೋರಾಟಕ್ಕೆ ಸಜ್ಜಾಗುತ್ತದೆ. ಹೀಗೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಹೋರಾಟಗಾರರಾದ ಕಾರ್ನಾಡ ಸದಾಶಿವರಾವ್, ಅರಬೈಲು ಭೋಜರಾವ್, ಯಂ. ಮಾಧವರಾವ್, ಕೆ.ರಾಮಕೃಷ್ಣ ಕಾರಂತ, ಯು. ಶಾಂತರಾಮರಾವ್, ಹಿರಿಯಡ್ಕ ರಾಮರಾಯ ಮಲ್ಯ, ಎಚ್.ಕೆ. ತಿಂಗಳಾಯ, ಎಚ್.ನಾರಾಯಣ ರಾವ್, ಉಡುಪಿ ಗೋವಿಂದರಾವ್, ಶೇಷಭಟ್ಟಭಿಡೆ, ಕಡೆಂಗೋಡ್ಲು ಶಂಕರ ಭಟ್ಟ, ಮೂಡಬಿದಿರೆ ಉಮೇಶರಾವ್, ಬೋಳಾರ ಭೋಜರಾವ್, ಕೆ.ಆರ್. ಆಚಾರ್, ಡಿ.ಕೆ. ಭಾರದ್ವಾಜ, ಖಂಡಿಗೆ ಕೃಷ್ಣಭಟ್ಟ, ಎ.ಎಸ್. ಕುಡ್ವ, ವಕೀಲ ಪಾಂಡುರಂಗರಾವ್ ಮೊದಲಾದವರ ಭಾಗವಹಿಸುವಿಕೆಯೊಂದಿಗೆ ೧೯೨೨ ರವರೆಗೆ ಅಸಹಕಾರ ಚಳುವಳಿಯು ಮುಂದುವರಿಯುತ್ತದೆ. ಸೌತ್ ಕೆನರಾದಲ್ಲಿ ಮಂಗಳೂರು ಮತ್ತು ಉಡುಪಿ ಎರಡೂ ಉಭಯ ಕೇಂದ್ರಗಳು ರಾಷ್ಟ್ರೀಯ ಚಟುವಟಿಕೆಗಳ ಕ್ಷೇತ್ರವಾಗಿದ್ದು ಕೊಂಡು ಈ ನಿಟ್ಟಿನಲ್ಲಿ ಮುಂದೆ ಅಸಹಕಾರ ಹೋರಾಟವು ೧೯೨೨ರವರೆಗೆ ಮುಂದುವರಿಯುತ್ತದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ನಾಡಿಗ ಕೃಷ್ಣಮೂರ್ತಿ, ಭಾರತೀಯ ಪತ್ರಿಕೋದ್ಯಮ, ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೬, ಪು.
೨. ಕಾಮತ್ ಸೂರ್ಯನಾಥ್, ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೮೨, ಪುಟ ೯೨೦.
೩. ಅದೇ, ಪುಟ ೯೬೧.
೪. ಬಿಪಿನ್‌ಚಂದ್ರ, ಆಧುನಿಕ ಭಾರತದ ಇತಿಹಾಸ, ನವಕರ್ನಾಟಕ ಪ್ರಕಾಶನ, ೨೦೧೨, ಪುಟ ೩೦೮.
೫. ಸ್ವದೇಶಾಭಿಮಾನಿ, ೨೦ ಆಗಸ್ಟ್ ೧೯೨೦, ಪುಸ್ತಕ ೧೪, ನಂ. ೩೪, ಪುಟ ೭.
೬. ಡಾ॥ ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು (ಸಂ.), ಗೀತಾ ಬುಕ್ ಹೌಸ್, ಮೈಸೂರು ೧೯೭೪, ಪುಟ ೪೪೦.
೭. ನಾರಾಯಣ ಪಿ.ಕೆ., ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ, ಕೆ.ಎಸ್. ರಾವ್ ಸ್ಮಾರಕ ಟ್ರಸ್ಟ್, ಮಂಗಳೂರು ೧೯೮೩, ಪುಟ ೭೮.
೮. ಸ್ವದೇಶಾಭಿಮಾನಿ, ಮಹಾತ್ಮಗಾಂಧಿಗಳ ಸಂದೇಶ, ಪುಸ್ತಕ ೧೪, ಸಂಚಿಕೆ ೩೪, ೨೦ ಆಗಸ್ಟ್ ೧೯೨೦, ಪುಟ ೬.
೯. ಅದೇ, ಪುಟ ೬.
೧೦. ಸ್ವದೇಶಾಭಿಮಾನಿ, ಪುಸ್ತಕ ೧೪, ಸಂಚಿಕೆ ೩೫, ೨೭ ಆಗಸ್ಟ್ ೧೯೨೦, ಪುಟ ೬.
೧೧. ಸ್ವದೇಶಾಭಿಮಾನಿ, ಪುಸ್ತಕ ೧೪, ಸಂಚಿಕೆ ೩೫, ೨೭ ಆಗಸ್ಟ್ ೧೯೨೦, ಪುಟ ೬.
೧೨. ಸ್ವದೇಶಾಭಿಮಾನಿ, ಪುಸ್ತಕ ೧೪, ಸಂಚಿಕೆ ೩೫, ೨೭ ಆಗಸ್ಟ್ ೧೯೨೦, ಮಂಗಳೂರು, ಪುಟ ೭.
೧೩. ಜಿಲಾನಿ ಎಸ್.ಎ., ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಸರ್ಕಾರ, ೨೦೦೭, ಪು. ೧೧೧.
೧೪. ಸ್ವದೇಶಾಭಿಮಾನಿ, ಪುಸ್ತಕ ೧೪, ಸಂಚಿಕೆ ೩೪, ಮಂಗಳೂರು, ೨೦ ಆಗಸ್ಟ್ ೧೯೨೦, ಪುಟ ೮.
೧೫. ಸ್ವದೇಶಾಭಿಮಾನಿ, ಪುಸ್ತಕ ೧೪, ಸಂಚಿಕೆ ೩೬, ಮಂಗಳೂರು, ೩ ಸೆಪ್ಟಂಬರ್ ೧೯೨೦, ಪುಟ ೫.
೧೬. ಅದೇ, ಪು. ೧೧೦.
೧೭. ಸ್ವದೇಶಾಭಿಮಾನಿ, ಪುಸ್ತಕ ೧೪, ಸಂಚಿಕೆ ೩೭, ಮಂಗಳೂರು, ೧೦ ಸೆಪ್ಟಂಬರ್ ೧೯೨೦, ಪುಟ ೬.
೧೮. ಸ್ವದೇಶಾಭಿಮಾನಿ, ಪತ್ರವ್ಯವಹಾರ, ೧೪, ಸಂಚಿಕೆ ೩೭, ಪುಸ್ತಕ ಮಂಗಳೂರು, ೧೦ ಸೆಪ್ಟಂಬರ್ ೧೯೨೦, ಪುಟ ೯.
೧೯. ಸೂರ್ಯನಾಥ್ ಕಾಮತ್ (ಸಂ.) ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಗೀತಾ ಬುಕ್ ಹೌಸ್, ಮೈಸೂರು, ೧೯೭೪, ಪುಟ ೪೨೨.
೨೦. ಸೂರ್ಯನಾಥ್ ಕಾಮತ್ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಗೀತಾ ಬುಕ್ ಹೌಸ್, ಮೈಸೂರು, ೧೯೭೪, ಪುಟ ೪೯೩.
೨೧. ಸ್ವದೇಶಾಭಿಮಾನಿ, ಅಸಹಕಾರಿತೆಯ ಧ್ವಜವು ನೆಟ್ಟಿತು, ಪುಸ್ತಕ ೧೪, ಸಂಚಿಕೆ ೩೮, ೧೭ ಸೆಪ್ಟಂಬರ್ ೧೯೨೦, ಮಂಗಳೂರು, ಪುಟ ೬.
೨೨. ಸ್ವದೇಶಾಭಿಮಾನಿ, ಪುಸ್ತಕ ೧೪, ಸಂಚಿಕೆ ೩೯, ೨೪ ಸೆಪ್ಟಂಬರ್ ೧೯೨೦, ಪುಟ ೭.
೨೩. ಸ್ವದೇಶಾಭಿಮಾನಿ, ಪುಸ್ತಕ ೧೪, ಸಂಚಿಕೆ ೩೮, ೧೭ ಸೆಪ್ಟಂಬರ್ ೧೯೨೦, ಪುಟ ೭.
೨೪. ನಾರಾಯಣ ಪಿ.ಕೆ., ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ, ಪುಟ ೧೨೨.

ಪರಾಮರ್ಶನ ಗ್ರಂಥಗಳು

೧. ಡಾ॥ ಸೂರ್ಯನಾಥ ಕಾಮತ್ (ಸಂ.) ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಗೀತಾ ಬುಕ್ ಹೌಸ್, ಮೈಸೂರು, ೧೯೭೪.
೨. ಗೋವಿಂದ ಮೂರ್ತಿ ದೇಸಾಯಿ (ಸಂ.) ಅಸಹಕಾರ ಆಂದೋಲನ, In ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು, ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು, ೨೦೧೧.
೩. ಶೇಖರ್ ಬಂದೋಪಾಧ್ಯಾಯ, ಫ್ರಮ್ ಪ್ಲಾಸಿ ಟು ಪಾರ್ಟಿಷನ್, ಓರಿಯಂಟ್ ಲಾಂಗ್‌ಮನ್, ಹೈದರಾಬಾದ್, ೨೦೦೪.
೪. ಕೃಷ್ಣಮೂರ್ತಿ ನಾಡಿಗ, ಭಾರತೀಯ ಪತ್ರಿಕೋದ್ಯಮ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೬.
೫. ಸ್ವದೇಶಾಭಿಮಾನ ಪತ್ರಿಕೆ, ಪುಸ್ತಕ ೧೪, ಸಂಚಿಕೆಗಳು ೩೪, ೩೫, ೩೬, ೩೭, ೩೮, ಮಂಗಳೂರು, ೧೯೨೦.
೬. ಎಸ್.ಎ. ಜಿಲಾನ (ಸಂ.), ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್, ಬೆಂಗಳೂರು, ೨೦೦೭.
೭. ಕಕ್ಕಿಲಾಯ ವಿ.ವಿ. (ಸಂ.), ಚಳುವಳಿಯ ನೆನಪುಗಳು, In ಪ್ರೊಲಿ. ೩.೩. ಅಫೀಸ್, ಮಂಗಳೂರು, ೨೦೦೦.
೮. ಡಾ॥ ಸೂರ್ಯನಾಥ ಕಾಮತು (ಸಂ.), ಕರ್ನಾಟಕ ಸ್ಟೇಟ್ ಗ್ಯಾಸೆಟಿಯರ್, ಕರ್ನಾಟಕ ಸರಕಾರ ಪಬ್ಲಿಕೇಷನ್, ಬೆಂಗಳೂರು, ೧೯೮೨.
೯. ಸುಮಿತ್ ಸರ್ಕಾರ್ (ಸಂ.), ಪ್ರಿಮಿಟಿವ್ ರೆಬೆಲಿಯನ್ ಆಂಡ್ ಮೋಡರ್ನ್ ನ್ಯಾಷನಲಿಸಮ್: ಎ ನೋಟ್ ಆನ್ ಫೋರೆಸ್ಟ್ ಸತ್ಯಾಗ್ರಹ ಇನ್ ದಿ ನಾನ್ ಕೋಪರೇಶನ್ ಆ್ಯಂಡ್ ಸಿವಿಲ್ ಡಿಸ್ ಒಬಿಡಿಯನ್ಸ್, ಇನ್ ನ್ಯಾಷನಲ್ ಆ್ಯಂಡ್ ಲೆಫ್ಟ್ ಮೂವ್‌ಮೆಂಟ್ಸ್ ಇನ್ ಇಂಡಿಯಾ, ವಿಕಾಸ್ ಪಬ್ಲಿಷರ್ಸ್, ನ್ಯೂ ದೆಹಲಿ, ೧೯೮೦.
೧೦. ಶ್ರೀನಿವಾಸ್ ಮೂರ್ತಿ ಎ.ಪಿ., ಹಿಸ್ಟರಿ ಆಫ್ ಇಂಡಿಯಾಸ್ ಫ್ರೀಡಂ ಮೂವ್‌ಮೆಂಟ್ (೧೮೫೭–೧೯೪೭) ಎಸ್. ಚಂದ್ ಆ್ಯಂಡ್ ಕಂಪೆನಿ (ಪಿವಿಟಿ), ನ್ಯೂ ದೆಹಲಿ, ೧೯೮೭.
೧೧. ನಾರಾಯಣ ಪಿ.ಕೆ., ದಕ್ಷಿಣ ಕನ್ನಡದಲ್ಲಿ ಸ್ವಾತಂತ್ರ್ಯ ಹೋರಾಟ, ಕೆ.ಎಸ್.ರಾವ್ ಸ್ಮಾರಕ ಟ್ರಸ್ಟ್, ಮಂಗಳೂರು ೧೯೮೩.

ಸ್ವಾತಂತ್ರ್ಯ ಚಳುವಳಿಯಲ್ಲಿ ಹಾವೇರಿ ಜಿಲ್ಲೆಯ ಪಾತ್ರ

ಮಹಾಂತೇಶ ಕುತನಿ*

"ನಮ್ಮ ಸ್ವಾತಂತ್ರ್ಯ ಯುದ್ಧದಷ್ಟೂ ಪವಿತ್ರವಾದದ್ದು ಜಗತ್ತಿನ ಇತಿಹಾಸದಲ್ಲಿ ಬೇರೊಂದಿಲ್ಲ. ಈ ಯುದ್ಧದೊಳಗಿನ ಪ್ರತಿಯೊಬ್ಬ ಯೋಧನು ತನ್ನ ಮುಂದಾಳು ತಾನೇ ಆಗಿದ್ದಾನೆ."

–ಮಹಾತ್ಮ ಗಾಂಧೀಜಿ

ಭಾರತದ ಸ್ವಾತಂತ್ರ್ಯ ಚಳುವಳಿಯು ಸುದೀರ್ಘವಾದದ್ದು. ಹಾಗೂ ಇದು ಭಾರತದ ಇತಿಹಾಸದಲ್ಲಿ ಮಾತ್ರವಲ್ಲದೇ ಜಗತ್ತಿನ ಇತಿಹಾಸದಲ್ಲಿಯೇ ಪ್ರಮುಖವಾಗಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿಯವರ ಪ್ರವೇಶವಾದ ನಂತರ ದೇಶದುದ್ದಗಲಕ್ಕೂ ಹೋರಾಟವು ತೀವ್ರವಾಯಿತು. ಮಹಾತ್ಮ ಗಾಂಧೀಜಿಯವರ ಕರೆಗೆ ಓಗೊಟ್ಟು ಅವರ ಎಲ್ಲಾ ಚಳುವಳಿಗಳಲ್ಲಿ ಹಾವೇರಿ ಜಿಲ್ಲೆಯ ಜನ ಸ್ಪಂದಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮದೇ ಆದ ವಿಶಿಷ್ಟವಾದ ಛಾಪೂ ಮೂಡಿಸಿದ್ದಾರೆ.

ಹಾವೇರಿಯು ೧೯೯೭ ಆಗಸ್ಟ್ ೨೪ರಂದು ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದಿತು. ಮೊದಲು ಧಾರವಾಡ ಜಿಲ್ಲೆಯ ಒಂದು ತಾಲ್ಲೂಕು ಆಗಿತ್ತು. ಸವಣೂರು, ಶಿಗ್ಗಾಂವ, ಬ್ಯಾಡಗಿ, ಹಿರೇಕೆರೂರ, ರಾಣೆಬೆನ್ನೂರು, ಹಾವೇರಿ, ಹಾನಗಲ್ ತಾಲ್ಲೂಕುಗಳನ್ನು ಒಳಗೊಂಡಿದೆ. ಹಾವೇರಿಯು ಪ್ರಾಚೀನ ಶಾಸನಗಳಲ್ಲಿ, ನಳಪುರಿ, ಪಾವರಿ, ಹಾವರಿ, ಹಾವೇರಿ, ಎಂದು ಉಲ್ಲೇಖಗೊಂಡಿದೆ. ಕಲ್ಯಾಣ ಚಾಲುಕ್ಯ, ಕಳಚೂರಿ, ಹೊಯ್ಸಳರು, ಸೇವಣರು, ವಿಜಯನಗರದ ಅರಸರು, ಮರಾಠ ಪೇಶ್ವೆಗಳು, ಸವಣೂರ ನವಾಬರ ಆಳ್ವಿಕೆಗೆ ಈ ಪ್ರದೇಶವು ಒಳಪಟ್ಟಿತ್ತು.[೧] ಕರ್ನಾಟಕದಲ್ಲಿ ರಾಷ್ಟ್ರೀಯ ಜಾಗೃತಿ ಲೋಕಮಾನ್ಯ ಬಾಲಗಂಗಾಧರ ತಿಲಕರ ಪ್ರಭಾವದಿಂದ ಪ್ರಾರಂಭವಾಯಿತು ಎಂದು ಹೇಳಬಹುದು. ಆದು ಪ್ರಬಲ ಹಾಗೂ ವ್ಯಾಪಕವಾಗಿದ್ದದು ಮಹಾತ್ಮ ಗಾಂಧೀಜಿಯವರಿಂದ, ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ರಚನೆಯ ಫಲವಾಗಿ ೧೯೨೦ರ ನಂತರ ಕಾಂಗ್ರೆಸ್ ಚಟುವಟಿಕೆಗಳಾದ ಖಾದಿ ಕಾರ್ಯಕ್ರಮ, ಅಸ್ಪೃಶ್ಯತಾ ನಿವಾರಣೆ, ಪಾನ ನಿರೋಧ ಚಳುವಳಿ, ರೈತರು ಮತ್ತು ಕೂಲಿಕಾರರ ಉತ್ತೇಜನಕ್ಕಾಗಿ ಗ್ರಾಮೋದ್ಯೋಗ ಕಾರ್ಯಕ್ರಮಗಳು, ರಾಷ್ಟ್ರೀಯ ಸೇವಾ ಭಾವನೆಯನ್ನು ಜಾಗೃತಿಗೊಳಿಸಲು ಹಾಗೂ ಮುಂಬರುವ ಕಠಿಣ ಹೋರಾಟಗಳಿಗೆ ಜನರನ್ನು ಅಣಿಗೊಳಿಸಲು ಇವು ಸಹಾಯಕವಾದವು.[೨] ೧೯೦೭ರಲ್ಲಿ ಇಂದಿನ ಹಾವೇರಿ ಜಿಲ್ಲೆಯ ಅಗಡಿ ಗ್ರಾಮದಿಂದ ಗಳಗನಾಥರ ಸಂಪಾದಕತ್ವದಲ್ಲಿ ಆರಂಭವಾದ **"ಸದ್ಬೋಧ ಚಂದ್ರಿಕೆ"** ಮಾಸಿಕ ಪತ್ರಿಕೆಯು ಒಂದು ಗಣ್ಯ ರಾಷ್ಟ್ರೀಯ ಪತ್ರಿಕೆಯಾಗಿದ್ದು, ಗಳಗನಾಥರ ಲೇಖನಗಳು ಹಳ್ಳಿಯ ಜನರಿಗೆ ಪ್ರೇರಣೆ ನೀಡಿದವು. ೧೯೨೦ರಲ್ಲಿ ವಿ.ಬಿ. ಪುರಾಣಿಕರು ಹುಬ್ಬಳ್ಳಿಯಿಂದ ಆರಂಭಿಸಿದ **'ಲೋಕಮತ'** ಪತ್ರಿಕೆ ಹಾಗೂ ಹಾವೇರಿಯ ಪಾಲಯ್ಯನವರು **'ಬಸವರಾಜ'** ಎಂಬ ದಿನಪತ್ರಿಕೆಯೊಂದನ್ನು ಹೊರಡಿಸಿ ಕಾಂಗ್ರೆಸ್ ತತ್ವಗಳನ್ನು ಹಳ್ಳಿಹಳ್ಳಿಗೂ ತಲುಪಿಸಿದರು. ಅಲ್ಲದೇ ಹರ್ಡೇಕರ್ ಮಂಜಪ್ಪನವರ **"ಧನುರ್ಧಾರಿ"** (೧೯೦೪), ಬಿಂದೂರಾವ ಮುತಾಲಿಕ ದೇಸಾಯಿ ಅವರ **"ಕನ್ನಡ ಕೇಸರಿ"** (೧೯೦೬) ಎಲ್.ಎಸ್. ಪಾಟೀಲರ **"ತರುಣ ಕರ್ನಾಟಕ"** (೧೯೨೦) ಪತ್ರಿಕೆಗಳು ಜನರನ್ನು ಪ್ರೇರಣೆಗೊಳಿಸಿದವು.[೩] ೧೯೨೩ರ ನವೆಂಬರ್‌ನಲ್ಲಿ ಹಾವೇರಿಯಲ್ಲಿ ಧಾರವಾಡ ಜಿಲ್ಲಾ ರಾಷ್ಟ್ರೀಯ ಪರಿಷತ್ತು ಸಭೆ ನಡೆಯಿತು. ಖಾದಿ ಪ್ರದರ್ಶನ, ರಾಷ್ಟ್ರೀಯ ಪದ್ಯಗಳನ್ನು ಹಾಡುವ ಸ್ಪರ್ಧೆ, ದನಗಳ ಪರಿಸೆ (ಜಾತ್ರೆ)ಯನ್ನು ಕೂಡ ನಡೆಯಿತು. ಪ್ರಾಂತೀಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಚಕ್ರವರ್ತಿ ರಾಜಗೋಪಾಲಚಾರಿ, ಗಂಗಾಧರ ರಾವ್ ದೇಶಪಾಂಡೆ, ಕಾರ್ನಾಡ ಸದಾಶಿವರಾವ್, ರಂಗನಾಥ ದಿವಾಕರ, ದ.ಪ. ಕರಮಕರ, ಮುದ್ದರಾವ್ ಕಬ್ಬೂರ, ನಾರಾಯಣರಾವ್ ಕಬ್ಬೂರ, ಕಡಪ ರಾಘವೇಂದ್ರರಾವ್, ಗದಗಿನ ಅನಂತರಾವ್ ಜಾಲಿಹಾಳ ಮೊದಲಾದ ಮುಖಂಡರು ಭಾಗವಹಿಸಿದ್ದರು. ಡಾ. ನಾ.ಸು. ಹರ್ಡಿಕರರು ತಮ್ಮ ಸ್ವಯಂಸೇವಕರಿಂದ ಪರಿಷತ್ತಿನ ವ್ಯವಸ್ಥೆಯನ್ನು ಮಾಡಿದರು. ಈ ಪರಿಷತ್ತಿಗೆ ಹೊಸರಿತ್ತಿಯ ಗುದ್ಲೆಪ್ಪ ಹಳ್ಳಿಕೇರಿ, ಕರ್ಜಗಿಯ ಪರಮಣ್ಣ ಹೊಸಮನಿ ಹಾಗೂ ತಾಲ್ಲೂಕಿನ ಅನೇಕ ಕಾರ್ಯಕರ್ತರು ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಿದರು.[೪]

* ಚರಿತ್ರೆ ಸಂಶೋಧನಾ ವಿದ್ಯಾರ್ಥಿ, ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ (ರಿ) ಮಂಡ್ಯ

ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕದಲ್ಲಿ ನಡೆದ ಹಾಗೂ ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆಯನ್ನು ವಹಿಸಿದ ಏಕೈಕ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವನ್ನು ೧೯೨೪ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಯಶಸ್ವಿಯಾಗಿ ನಡೆಯಿತು. ಈ ಅಧಿವೇಶನದಲ್ಲಿ ಗುದ್ಲೇಪ್ಪ ಹಳ್ಳಿಕೇರಿ ನೇತೃತ್ವದಲ್ಲಿ ಜಿಲ್ಲೆಯ ಅನೇಕ ಕಾಂಗ್ರೆಸ್ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಿದ್ದರು. ಈ ಅಧಿವೇಶನದ ಪ್ರಭಾವದಿಂದ ಅಹಿಂಸೆ, ವಿದೇಶಿ ವಸ್ತುಗಳ ಬಹಿಷ್ಕಾರ, ಅಸಹಕಾರ ಚಳುವಳಿಯನ್ನು ಬೆಂಬಲಿಸುವುದಕ್ಕೆ ಸಹಾಯಕವಾಯಿತು. ಆಲೂರು ವೆಂಕಟರಾಯರು ಧಾರವಾಡದಲ್ಲಿ **'ಕರ್ನಾಟಕ ನೂತನ ವಿದ್ಯಾಲಯ'** ಎಂಬ ರಾಷ್ಟ್ರೀಯ ಶಾಲೆ ಆರಂಭಿಸಿದ ಸಂದರ್ಭದಲ್ಲಿ ಹಾನಗಲ್ಲು, ಅಗಡಿ ಹಾಗೂ ಹಾವೇರಿಯಲ್ಲಿ ಮುಖನಲಾಲ್ ಗುಪ್ತ ಅವರ ಪ್ರಯತ್ನದಿಂದ ರಾಷ್ಟ್ರೀಯ ಶಾಲೆಗಳು ಆರಂಭವಾದವು.[೬] ೧೯೨೭ರಲ್ಲಿ ಗುದ್ಲೆಪ್ಪ ಹಳ್ಳಿಕೇರಿರವರ **'ಭಾರತೀಯ ತರುಣ ಸಂಘ'** ಸ್ಥಾಪಿಸಿದ್ದು, ೧೯೨೮ರಲ್ಲಿ ಕರ್ನಾಟಕ ಯುತ್ ಲೀಗ್ ಸ್ಥಾಪಿಸಿದರು. ಈ ಸಂಸ್ಥೆಗಳ ಮೂಲಕ ಕಾಂಗ್ರೆಸ್ ತತ್ವಗಳನ್ನು ಜನರಿಗೆ ತಲುಪಿಸಲು ಸಹಾಯಕವಾದವು.[೭] ೧೯೨೮ ಫೆಬ್ರವರಿ ೩ರಂದು ಭಾರತಕ್ಕೆ ಭೇಟಿ ನೀಡಿದ ಸೈಮನ್ ಕಮೀಷನ್ ಆಯೋಗವನ್ನು ಬಹಿಷ್ಕರಿಸುವ ಹೋರಾಟವು ದೇಶದುದ್ದಗಲಕ್ಕೂ ನಡೆದಾಗ ಹಾವೇರಿ, ಹೊಸರಿತ್ತಿ, ಗುತ್ತಲ, ಅಗಡಿ, ದೇವಗಿರಿಗಳಲ್ಲೂ ಚಳುವಳಿ ನಡೆದವು.[೮] ೧೯೨೮ರ ನವೆಂಬರ್‌ನಲ್ಲಿ ಕೆ.ಎಫ್. ಪಾಟೀಲ ಹಾಗೂ ಗುದ್ಲೆಪ್ಪ ಹಳ್ಳಿಕೇರಿ ನೆರವಿನಿಂದ ಮೈಲಾರ ಮಹಾದೇವಪ್ಪನವರು ಭಾರತೀಯ ತರುಣ ಸಂಘದ ಪ್ರತಿನಿಧಿಯಾಗಿ ಗಾಂಧೀಜಿಯವರ ಸಬರಮತಿ ಆಶ್ರಮದಲ್ಲಿ ವಿಶೇಷ ತರಬೇತಿ ಪಡೆದುಕೊಂಡು ಬಂದರು.[೯] ಮುಂದೆ ೧೯೩೦ರಲ್ಲಿ ಮಹಾತ್ಮ ಗಾಂಧೀಜಿಯವರ ದಂಡಿ ಸತ್ಯಾಗ್ರಹಕ್ಕಾಗಿ ದೇಶದ ವಿವಿಧ ಪ್ರದೇಶಕ್ಕೆ ಸೇರಿದ ೭೯ ಜನ ತರಬೇತಿ ಪಡೆದವರೊಂದಿಗೆ **ದಂಡಿ ಸತ್ಯಾಗ್ರಹ** ಆರಂಭಿಸಿದರು. ಇವರಲ್ಲಿ ಅತ್ಯಂತ ಕಿರಿಯ ವಯಸ್ಸಿನವರಾದ ಮೈಲಾರ ಮಹಾದೇವಪ್ಪನವರು ಏಕೈಕ ಕನ್ನಡದ ಪ್ರತಿನಿಧಿಯಾಗಿ ಭಾಗವಹಿಸಿದ್ದು, ಕನ್ನಡನಾಡಿನ ಮತ್ತು ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಚಿರಸ್ಮರಣೀಯವಾಗಿದೆ.[೧೦]

ಗುಜರಾತಿನ ಬಾರ್ಡೋಲಿಯಲ್ಲಿ ನಡೆದ ಕರ ನಿರಾಕರಣಾ ಚಳುವಳಿಯು ಯಶಸ್ವಿಯಾದ ನಂತರ ಇದರ ಪ್ರಭಾವವು ಕರ್ನಾಟಕಕ್ಕೂ ಹಬ್ಬಿತು. ಕರ್ನಾಟಕದಲ್ಲಿ ಈ ಚಳುವಳಿಯನ್ನು ನಡೆಸಲು ನಾಲ್ಕು ತಾಲ್ಲೂಕುಗಳನ್ನು ಆಯ್ದುಕೊಳ್ಳಲಾಗಿತ್ತು. ಅವುಗಳಲ್ಲಿ ಅಂಕೋಲಾ, ಶಿರಸಿ, ಸಿದ್ದಾಪುರ, (ಉತ್ತರ ಕನ್ನಡ ಜಿಲ್ಲೆ) ಹಿರೇಕೆರೂರು (ಹಾವೇರಿ ಜಿಲ್ಲೆ) ತಾಲ್ಲೂಕು ಸಹ ಒಂದು. ೧೯೩೦ರ ಫೆಬ್ರವರಿಯಲ್ಲಿ ವೀರನಗೌಡ ಪಾಟೀಲ, ತಿ.ರು. ನೇಸ್ವಿ, ಕೆ.ಎಫ್. ಪಾಟೀಲ, ಗುದ್ಲೆಪ್ಪ ಹಳ್ಳಿಕೇರಿ, ಜಯಾಚಾರ್ಯ, ಚನ್ನಬಸವಯ್ಯ, ಹುಕ್ಕೇರಿಕರ ರಾಮರಾಯ, ವೀರಭದ್ರಪ್ಪ, ಸೂಡಂಬಿಯ ಸಿದ್ದಲಿಂಗಪ್ಪ ಪಾಟೀಲರವರು ತಾಲ್ಲೂಕಿನಲ್ಲಿ ಸಂಚರಿಸಿ ಕರನಿರಾಕರಣೆಯ ಸಂಘಟನೆ ಮಾಡಿದರು. ಇಡೀ ತಾಲ್ಲೂಕನ್ನು ೧೧-೧೨ ಹಳ್ಳಿಗಳ ಒಂದು ಗುಂಪಿನಂತೆ ೧೬ ಕೇಂದ್ರಗಳಲ್ಲಿ ವಿಂಗಡಿಸಿ ಪ್ರತಿಯೊಂದು ಕೇಂದ್ರಕ್ಕೆ ಸಂಚಾಲಕರನ್ನು ಹಾಗೂ ಎರಡು ದಿನಕ್ಕೊಮ್ಮೆ ಕರಪತ್ರಗಳನ್ನು ಹೊರಡಿಸಿ ಜನ ಜಾಗೃತಿ ಉಂಟುಮಾಡಿದರು. ೧೯೩೧ ಜನವರಿ ೨೫ರಂದು ಹುಬ್ಬಳ್ಳಿಯ ಪ್ರಸಿದ್ಧ ವಕೀಲರಾದ ಶ್ರೀ ಪಾವಟೆಯವರ ಅಧ್ಯಕ್ಷತೆಯಲ್ಲಿ ಹಿರೇಕೆರೂರ ತಾಲ್ಲೂಕು ಪರಿಷತ್ತು ನಡೆಸಿದರು. ಅಂದಿನ ಸಭೆಯಲ್ಲಿ ಮೂರು ಸಾವಿರ ರೈತರು ಭಾಗವಹಿಸಿದ್ದರು. ರಂಗನಾಥ ದಿವಾಕರ ಭಾಷಣ ಮಾಡಿ ರೈತರ ಹಕ್ಕುಬಾಧ್ಯತೆಗಳು, ಸ್ಥಿತಿಗಳ ಬಗ್ಗೆ ತಿಳಿಸಿ, ಸತ್ಯನಿಷ್ಠೆ, ಸಹನಶೀಲತೆ, ಸ್ವಾವಲಂಬನದಿಂದ ಕರನಿರಾಕರಣೆ ಆಚರಿಸಲು ತಿಳಿಸಿದರು. ಅದರಂತೆ ರೈತರು ಧೈರ್ಯದಿಂದ ಕರನಿರಾಕರಣೆ ಆಚರಿಸಿದರು.[೧೧]

ದೇಶದಲ್ಲಿ ೧೯೩೨ ಜನವರಿ ಒಂದರಿಂದ ಪ್ರಾರಂಭವಾದ ಕಾನೂನುಭಂಗ ಚಳುವಳಿ ದೇಶವನ್ನೇ ವ್ಯಾಪಿಸಿದಾಗ ಹಾವೇರಿ ಜಿಲ್ಲೆಯ ಅನೇಕ ಪ್ರದೇಶಗಳಲ್ಲಿ ಕಾನೂನು ಭಂಗ ಚಳುವಳಿ ಯಶಸ್ವಿಯಾಗಿ ನಡೆಯಿತು. ಅದರಲ್ಲಿ ಪ್ರಮುಖವಾಗಿ ಹಂಸಭಾವಿಯ ಆಂಗ್ಲೋ ವರ್ನಾಕ್ಯುಲರ್ ಶಾಲೆಯ ೧೪೦ ವಿದ್ಯಾರ್ಥಿಗಳು ೨೯ನೇ ಜನವರಿ ೧೯೩೨ ರಂದು ಈಚಲುಮರ ಕಡಿದು ಕಾನೂನುಭಂಗ ಮಾಡಿದರು. ಇದರಲ್ಲಿ ರಾಮನಾಥ ಮಲ್ಲಪ್ಪ ಬಲವಾಡಿ (ಸಾವಳಗಿ), ಮಲ್ಲೇಶಪ್ಪ ಬಸಪ್ಪ ಬಣಕಾರ (ಚಿಕ್ಕೊಣತಿ), ಚಿಕ್ಕವೀರಪ್ಪ ರುದ್ರಪ್ಪ ದಾನಣ್ಣವರ್, ಚಿದಾನಂದ ವೀರಯ್ಯ ಹಿರೇಮಠ, ಗಂಗನಗೌಡ ಹನುಮಂತಗೌಡ ಪಾಟೀಲ (ತಡಕನಹಳ್ಳಿ), ಚನ್ನಬಸಪ್ಪ ಲಿಂಗಪ್ಪ ಕುಳೇನೂರು (ಮೋಟೆಬೆನ್ನೂರು), ಸಣ್ಣಲಿಂಗಪ್ಪ ಸಣ್ಣಗೌಡ ಮೈಲಾರ (ಕಾಕೋಳ) ಬಸಲಿಂಗಪ್ಪ ಮುರಡೆಪ್ಪಗೌಡ ಪಾಟೀಲ (ತುರಬಗುಡ್ಡ) ಈ ಒಂಭತ್ತು ವಿದ್ಯಾರ್ಥಿಗಳಿಗೆ ಮೂರು ವರ್ಷಗಳವರೆಗೆ ಜೈಲುವಾಸದ ಶಿಕ್ಷೆಯಾಯಿತು. ಚನ್ನಬಸಯ್ಯ ವೀ. ಸೂಳಿಕೇರಿಮಠರು ಕೇವಲ ೧೪ ವರ್ಷದ ಚಿಕ್ಕ ವಯಸ್ಸಿನವರಾದ್ದರಿಂದ ಆತನಿಗೆ ೧೫ ಛಡಿ ಏಟುಗಳ ಶಿಕ್ಷೆಯನ್ನು ನೀಡಲಾಯಿತು.[೧೨]

ದಿನಾಂಕ: ೧೨-೦೧-೧೯೩೨ರಂದು ಹೊಸರಿತ್ತಿಯಲ್ಲಿ ಸತ್ಯಾಗ್ರಹಿಗಳು ಉಪ್ಪಿನ ಕಾಯಿದೆ ಭಂಗ ಚಳುವಳಿಯನ್ನು ಕೈಗೊಂಡರು. ಇದನ್ನು ತಡೆಯಲು ಜಿಲ್ಲೆಯ ಡೆಪ್ಯೂಟಿ

ಟೋಪಿಯಿಂದೇಟಿನ ಮತ್ತು ಫೌಜುದಾರರು ಬಿದ್ದು ಬಂದರು ಹಾಗೂ ಎರಡು ಮೋಟಾರ್ ವಾಹನ ಭರ್ತಿ ಪೊಲೀಸರನ್ನು ಕರೆಸಿಕೊಂಡು, ಸತ್ಯಾಗ್ರಹಿಗಳಿಗೆ ಪೊಲೀಸರು ಎಚ್ಚರಿಕೆ ನೀಡಿದರು. ಮೆರವಣಿಗೆಯನ್ನು ಆರಂಭಿಸಿದರೆ ಲಾಠೀ ಚಾರ್ಜ್ ಮಾಡಲಾಗುವುದು ಇಷ್ಟಕ್ಕೂ ಚಳುವಳಿ ಮಾಡಿದರೆ ಗೋಲಿಬಾರು ಮಾಡಲಾಗುವುದೆಂದು ಡಂಗೂರ ಸಾರಿ ತಿಳಿಸಿದರು. ಇದಕ್ಕೆ ಪ್ರತಿಯಾಗಿ ಸತ್ಯಾಗ್ರಹಿಗಳಾದ ಶಿವಯ್ಯ ಆರಾಧ್ಯಮಠ ಮತ್ತು ಚನ್ನಬಸಪ್ಪ ಬೆನ್ನೂರ ಇದು ಸುಳ್ಳು ಸುದ್ದಿ, ಸುಳ್ಳು ಟಪಾಲಿಗೆ ಯಾರೂ ಗಮನ ನೀಡಬಾರದೆಂದು ಪ್ರತಿ ಡಂಗೂರ ಸಾರಿಸಿದರು. ಈ ಸಂದರ್ಭದಲ್ಲಿ ಪೊಲೀಸರು ಚಳುವಳಿಗಾರರ ಜಾಗಟೆಯನ್ನು ಕಸಿದುಕೊಂಡು. ಈ ರೀತಿ ಡಂಗೂರ ಸಾರುವುದು ಅಪರಾಧವೆಂದು ಸತ್ಯಾಗ್ರಹಿಗಳನ್ನು ಬಂಧಿಸಿದರು. ಇವರ ತರುವಾಯ ಇಬ್ಬಿಬ್ಬರಂತೆ ಬಾಲಕರು ಡಂಗೂರ ಸಾರಿದ್ದರಿಂದ ೧೧ ಜನರನ್ನು ಪೊಲೀಸರು ಬಂಧಿಸಿದರು. ಸತ್ಯಾಗ್ರಹಿಗಳು ಸಂಜೆಯ ೫ ಗಂಟೆಗೆ ಮಠದ ಆವರಣದಲ್ಲಿ ಸಭೆ ಸೇರಿ ಸ್ವತಂತ್ರ್ಯವಾಗಿ ಉಪ್ಪನ್ನು ಮಾರಾಟ ಮಾಡಿದರು. ಉಪ್ಪನ್ನು ಮಾರಾಟ ಮಾಡಿದ ಇಬ್ಬರು ಸತ್ಯಾಗ್ರಹಿಗಳನ್ನು ಬಂಧಿಸಿದರು.[೧೩]

ದಿನಾಂಕ: ೧೭-೧-೧೯೩೧ ರಂದು ಹಾವೇರಿಯಲ್ಲಿ ಸೊಲ್ಲಾಪುರದ ಹುತಾತ್ಮರ ಸಲುವಾಗಿ ಗಾಂಧೀಜಿಯವರ ತತ್ವಗಳಲ್ಲಿ ಒಂದಾದ ಹರತಾಳ ಆಚರಿಸಲ್ಪಟ್ಟಿತು. ಸಾಯಂಕಾಲ ೪ ಘಂಟೆಗೆ ಮೆರವಣಿಗೆ ಹೊರಟಾಗ ಪೊಲೀಸರು ಹಾಜರಿದ್ದು, ಮೆರವಣಿಗೆಯನ್ನು ತಡೆದರು. ಜನರು ಪುನಃ ಮೆರವಣಿಗೆಯನ್ನು ಮತ್ತು ಸಭೆಯನ್ನು ಆರಂಭಿಸಿದಾಗ ಪೊಲೀಸರು ದೀಪಗಳನ್ನು ನಂದಿಸಿ ಲಾಠೀ ಪ್ರಹಾರ ಮಾಡಿದರು. ಹತ್ತು ಜನರಿಗೆ ಗಾಯವಾಗಿ, ೧೨ ಜನರನ್ನು ಬಂಧಿಸಲಾಯಿತು.[೧೪] ಹಿರೇಕೆರೂರು ತಾಲ್ಲೂಕಿನ ಸಾಗವಂದ ಗ್ರಾಮದ ಹತ್ತಿರ ಹಾರಿಕಟ್ಟೆ ಜಂಗಲ್ (ಅರಣ್ಯ) ಪ್ರದೇಶವು ಬ್ರಿಟೀಷ್ ಸರ್ಕಾರದಿಂದ ನಿಷೇಧಿತ ಅರಣ್ಯ ಪ್ರದೇಶವಾಗಿತ್ತು. ೧೮ನೇ ಜನವರಿ ೧೯೩೨ರಂದು ಚಳುವಳಿಕಾರರು ಮೆಣಸಿನಹಾಳ ತಿಮ್ಮನಗೌಡರ ನೇತೃತ್ವದಲ್ಲಿ ಗಿಡ ಮರಗಳನ್ನು ಕಡಿದು ಕಾನೂನು ಭಂಗ ಚಳುವಳಿಯನ್ನು ಯಶಸ್ವಿಯಾಗಿ ಮಾಡಿದರು.[೧೫]

ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಸ್ಫೂರ್ತಿ ಸೆಲೆಯಾಗಿದ್ದ ಕೆ.ಎಫ್. ಪಾಟೀಲರನ್ನು ದಿನಾಂಕ: ೧೬ನೇ ಮಾರ್ಚ್ ೧೯೩೨ರಂದು ಹಂಸಭಾವಿಗೆ ಗುಪ್ತವಾಗಿ ಚಳುವಳಿಯ ಮುಂದುವರಿಸುವ ಪತ್ರವನ್ನು ಸಾಗಿಸುತ್ತಿದ್ದರಿಂದ ಬ್ಯಾಡಗಿಯಲ್ಲಿ ಪೊಲೀಸರು ಬಂಧಿಸಿದರು.[೧೬] ಭಾರತೀಯ ತರುಣ ಸಂಘದ ಸ್ಥಾಪಕರಾದ ಹಳ್ಳಿಕೇರಿ ಗುದ್ಲೆಪ್ಪರನ್ನು ಬಂಧಿಸಲು ಪೊಲೀಸರು ಬೇರೆ ಬೇರೆ ವೇಷದಿಂದ ಪ್ರಯತ್ನಿಸಿ ವಿಫಲರಾದರು. ಈ ಸಂಘದ ಸದಸ್ಯರಾದ ಮುದ್ದಣ್ಣನವರನ್ನು ಸಹ ಬಂಧಿಸುವಲ್ಲಿ ವಿಫಲರಾಗಿದ್ದರು. ಇವರನ್ನು ಬಂಧಿಸಲು ಪೊಲೀಸರು ಚಮತ್ಕಾರಿಗಳಾಗಿ ತಿರುಗಾಡುತ್ತಿರುವುದು ಇವರ ದೃಷ್ಟಿಗೆ ಬಿದ್ದುದ್ದು ಆ ಪ್ರಯತ್ನದಲ್ಲಿ ಕೂಡ ವಿಫಲರಾಗಿದ್ದರು. ಇದೇ ಸಂಘದ ಸದಸ್ಯರಾದ ವೆಂಕಟೇಶ್ ಮಾಗಡಿಯವರನ್ನು ವಾರಂಟಿನ ಮೂಲಕ ಅಂಕೋಲೆಗೆ ಕರೆದುಕೊಂಡು ಹೋಗಿ ೧೩ ತಿಂಗಳ ಶಿಕ್ಷೆ ನೀಡಲಾಯಿತು.[೧೭] ಹೊಸರಿತ್ತಿಯ ಗಾಂಧಿ ಆಶ್ರಮವಾಸಿಗಳಾಗಿದ್ದು, ರಮಾನಂದ ಮನ್ನಂಗಿ, ಶಿವಾನಂದ ಎಲಿರವರು ಗುದ್ಲಪ್ಪ ಹಳ್ಳಿಕೇರಿರವರ ಮಾರ್ಗದರ್ಶನದಂತೆ ನಲವತ್ತು ಸ್ವಯಂ ಸೇವಕರೊಂದಿಗೆ ಬ್ಯಾಡಗಿ, ರಾಣಿಬೆನ್ನೂರುಗಳಲ್ಲಿ ಮತ ಪ್ರದರ್ಶನ ಮಾಡಿ ವಿದೇಶಿ ಬಟ್ಟೆಗಳ ಬಹಿಷ್ಕಾರ ಚಳುವಳಿ ಯಶಸ್ವಿಯಾಗಿ ನಡೆಸಿದರು.[೧೮]

ದಿನಾಂಕ: ೪ನೇ ಮೇ ೧೯೩೨ರಂದು ಹೊಸರಿತ್ತಿಯಲ್ಲಿ ಸತ್ಯಾಗ್ರಹಿಗಳು ಧ್ವಜಾರೋಹಣ ಕಾರ್ಯಕ್ರಮ ಯಶಸ್ವಿಯಾಗಿ ಆಚರಿಸಿ ಗೋಡೆ ಬರಹಗಳ ಮೂಲಕ ವಿದೇಶಿ ವಸ್ತ್ರಗಳ ಬಹಿಷ್ಕಾರ ಬಗ್ಗೆ ಜಾಗೃತಿ ಮೂಡಿಸಿದರು.[೧೯] ಸರ್ಕಾರಿ ಅರಣ್ಯಕ್ಕೆ ಮೇಯಲು ಹೋಗುವ ಜಾನುವಾರುಗಳ ಬಾಲಕ್ಕೆ ವಾರ್ಷಿಕ ತೆರಿಗೆ ಎರಡಾಣೆಯಂತೆ ನಿಗದಿ ಮಾಡಲಾಗಿತ್ತು. ಆದರೆ ಜನರು ತೆರಿಗೆಯನ್ನು ಕೊಡದೆ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದು **'ಹುಲಬನ್ನಿ ಸತ್ಯಾಗ್ರಹ'** ವೆಂದು ಪ್ರಸಿದ್ಧವಾಯಿತು. ಸರ್ಕಾರದವರು ಜಾನುವಾರುಗಳನ್ನು ಹಿಡಿದುಕೊಂಡು ಕೊಂಡವಾಡಕ್ಕೆ ಹಾಕಿದರೂ ಜನರು ಹೆದರಲಿಲ್ಲ. ಬಂಕಾಪುರ, ಶಿಗ್ಗಾಂವಿ, ಹಾವೇರಿ, ಆಲದಕಟ್ಟಿ, ಕಬ್ಬೂರ, ಸಂಗೂರ, ನಾಗನೂರ, ಬೆಂಚಹಳ್ಳಿ, ಹಾನಗಲ್ಲ, ಬೊಮ್ಮನಹಳ್ಳಿ ಜನರೂ ತೆರಿಗೆಯನ್ನು ನೀಡದೆ ಸತ್ಯಾಗ್ರಹವನ್ನು ಮಾಡಿದರು.[೨೦] ೧೯೩೪ರಲ್ಲಿ ಹರಿಜನ ನಿಧಿಗಾಗಿ ಮಹಾತ್ಮ ಗಾಂಧೀಜಿಯವರು ಪ್ರವಾಸ ಕೈಗೊಂಡಾಗ ಹಾವೇರಿ, ಬ್ಯಾಡಗಿ, ಮೋಟೆಬೆನ್ನೂರು, ರಾಣಿಬೆನ್ನೂರುಗಳಿಗೆ ಭೇಟಿ ನೀಡಿ ಹರಿಜನ ನಿಧಿ ಸಂಗ್ರಹಿಸಿದರು.[೨೧] ೧೯೩೭ರಲ್ಲಿ ಪ್ರಾಂತಿಕ ವಿಧಾನಮಂಡಲಗಳ ಚುನಾವಣೆಗಳು ದೇಶದ್ಯಾಂತ ನಡೆದವು. ಈ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಧ್ಯೇಯೋದ್ದೇಶಗಳನ್ನು ಹಳ್ಳಿಹಳ್ಳಿಗಳಿಗೂ ತಿಳಿಸುವ ಸಂದರ್ಭದಲ್ಲಿ ಡಾ. ನಾ.ಸು. ಹರ್ಡೀಕರರು ಕರ್ನಾಟಕದ ಜವಾಬ್ದಾರಿ ಹೊತ್ತುಕೊಂಡಿದ್ದರು. ಜವಹಾರ್‌ಲಾಲ್ ನೆಹರು, ಕಮಲಾದೇವಿ ಚಟ್ಟೋಪಾಧ್ಯಾಯ ಹಾವೇರಿಗೆ ಕರೆಸುವಲ್ಲಿ ಅಂದಿನ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿದ್ದ ಸಿದ್ದಪ್ಪ ಹೊಸಮನಿ ಯಶಸ್ವಿಯಾದರು[೨೨]. ೧೯೩೯ರಲ್ಲಿ ಸುಭಾಷ್ ಚಂದ್ರಬೋಸ್ "ಫಾರ್ವಡ ಬ್ಲಾಕ್" ಪಕ್ಷವನ್ನು ಸ್ಥಾಪಿಸಿದರು. ಭಾರತದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಇದರ

ಶಾಖೆ, ಉಪಶಾಖೆಗಳು ಆರಂಭಗೊಂಡವು, ಕರ್ನಾಟಕ ಪ್ರಾಂತಕ್ಕೆ ಹೊಸಮನಿ ಸಿದ್ದಪ್ಪನವರು ಕರ್ನಾಟಕ ಪ್ರಾಂತಕ್ಕೆ ಫಾರ್ವಡ್ ಬ್ಲಾಕ್ ಪಕ್ಷದ ಅಧ್ಯಕ್ಷರಾಗಿದ್ದರು. ಸುಭಾಷ್‌ಚಂದ್ರ ಬೋಸರು ಕರ್ನಾಟಕಕ್ಕೆ ಭೇಟಿ ನೀಡಿದಾಗ ಸಿದ್ದಪ್ಪ ಹೊಸಮನಿರವರು ಸುಭಾಷ್‌ಚಂದ್ರ ಬೋಸರನ್ನು ಹಾವೇರಿಗೆ ಕರೆದುಕೊಂಡು ಬಂದು ಹೋರಾಟದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು.[೨೩]

೧೯೩೮ರಲ್ಲಿ ಸವಣೂರು ಸಂಸ್ಥಾನದಲ್ಲಿ ಜನರು ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಪ್ರಜಾಸಂಘದ ಕಾರ್ಯದರ್ಶಿಯವರ ನೇತೃತ್ವದಲ್ಲಿ ಹೋರಾಟ ಮಾಡಿದರು. ನವಾಬರನ್ನು ಭೇಟಿ ಮಾಡಿ ಜವಾಬ್ದಾರಿ ಸರ್ಕಾರದ ಸ್ಥಾಪನೆ, ಪ್ರಜೆಗಳ ನಾಗರೀಕ ಸ್ವಾತಂತ್ರ್ಯ, ಕಂದಾಯ ಪುನರ್ ವಿಮರ್ಶೆ, ರೈತರ ಪರಿಹಾರ, ಈ ಎಲ್ಲಾ ಪ್ರಜೆಗಳ ಕೋರಿಕೆಯನ್ನು ಅರಿಕೆ ಮಾಡಿದರು.[೨೪] ೧೯೩೯ ಅಕ್ಟೋಬರ್‌ನಲ್ಲಿ ಮೈಸೂರು ಕಾಂಗ್ರೆಸ್ ಚಳುವಳಿಗೆ ಬೆಂಬಲ ನೀಡಲು ಹಾಗೂ ಬಹಳ ದಿವಸ ಯಶಸ್ವಿಯಾಗಿ ನಡೆಯಲು ಧಾರವಾಡ ಜಿಲ್ಲಾ ಶಾಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಕೆ.ಎಫ್. ಪಾಟೀಲ ಇವರ ಬ್ಯಾಡಗಿಯ ಮನೆಯಲ್ಲಿ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ರಾಣೆಬೆನ್ನೂರು, ಬ್ಯಾಡಗಿ, ಹಿರೇಕೆರೂರು ತಾಲ್ಲೂಕುಗಳ ಕಾರ್ಯಕರ್ತರು ಭಾಗವಹಿಸಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ಬಂಧಿಸಲ್ಪಟ್ಟಿರುವ ಶ್ರೀಮತಿ ಬಳ್ಳಾರಿ ಸಿದ್ದಮ್ಮ ಮತ್ತು ನಾಗರತ್ನಮ್ಮ ಹಿರೇಮಠ ಇವರನ್ನು ಅಭಿನಂದಿಸಿ ಮೈಸೂರು ಸರ್ಕಾರದ ನೀತಿಯನ್ನು ಖಂಡಿಸಿದರು.[೨೫]

೧೯೪೨ರಲ್ಲಿ **'ಚಲೇಜಾವ್ ಚಳುವಳಿ' (ಭಾರತ ಬಿಟ್ಟು ತೊಲಗಿ)**ಯನ್ನ ಮಹಾತ್ಮ ಗಾಂಧೀಜಿಯವರು ಆರಂಭಿಸಿದರು. ಗಾಂಧೀಜಿಯವರನ್ನು ಹಾಗೂ ಪ್ರಮುಖ ಮುಖಂಡರನ್ನು ಬ್ರಿಟೀಷರು ಬಂಧಿಸಿದಾಗ ಚಳುವಳಿ ಹಿಂಸಾರೂಪ ತಾಳಿತು. ಈ ಸಂದರ್ಭದಲ್ಲಿ ಹಾವೇರಿಯಲ್ಲಿ ಪ್ರಮುಖವಾಗಿ ಮೈಲಾರ ಮಹಾದೇವಪ್ಪ ಹಾಗೂ ಅವರ ಗುಂಪಿನವರು ಹೋರಾಟಗಳನ್ನು ಮಾಡಿದರು. ದಿನಾಂಕ: ೨೨-೧೧-೧೯೪೨ ರಂದು ಮೈಲಾರ ಮಹಾದೇವಪ್ಪ ಹಾಗೂ ಶಿಗ್ಲಿಯ ಬಸವಕುಮಾರ, ಫಕ್ಕೀರಪ್ಪ ತಾವರೆ, ವೆಂಕಣ್ಣವಾಯಿ, ವಿಲ್ಲಪ್ಪ ಬಾರ್ಕಿ, ಕನವಳ್ಳಿ ಭೀಮಣ್ಣ, ಜಟ್ಟೆಯಪ್ಪನವರು ಸವಣೂರು ರೈಲು ಸ್ಟೇಷನ್ ಸುಟ್ಟು ಭಸ್ಮ ಮಾಡಿದರು.[೨೬] ಇದೇ ರೀತಿ ಬ್ಯಾಡಗಿ ರೈಲು ಸ್ಟೇಷನ್ ಸುಡಲಾಯಿತು.

ಹಾವೇರಿ ತಾಲ್ಲೂಕುಗಳು ಪ್ರಮುಖ ಗ್ರಾಮಗಳ ಚಾವಡಿ ಮತ್ತು ದಪ್ತರ್ ಸುಟ್ಟು ಭಸ್ಮ ಮಾಡಿದರು. ಅವುಗಳೆಂದರೆ

ದಿನಾಂಕ	**ಗ್ರಾಮ**
೨೯-೧೦-೧೯೪೨	ಯಲಗಚ್ಛ
೧೫-೧೧-೧೯೪೨	ಹಾವನೂರು
೨೭-೧೧-೧೯೪೨	ಕನವಳ್ಳಿ
೧೩-೦೧-೧೯೪೩	ನೆಗಳೂರು
೧೪-೦೧-೧೯೪೩	ಕರ್ಜಗಿ
೧೪-೦೧-೧೯೪೩	ಹತ್ತಿಮತ್ತೂರು (ಸವಣೂರು ತಾ॥)

ಅಲ್ಲದೇ ಸವಣೂರು ಸ್ಟೇಷನ್‌ನಿಂದ ಬರುವ ಟಪಾಲುಗಳನ್ನು ಹಾಗೂ ಕರ್ಜಗಿ ಗ್ರಾಮದಲ್ಲಿ ಪೋಸ್ಟ್ ಬ್ಯಾಗ್‌ಗಳನ್ನು ಲೂಟಿ ಮಾಡಿದರು. ರಾಣೆಬೆನ್ನೂರು ತಾಲ್ಲೂಕು ಹೊನ್ನತ್ತಿ ಗ್ರಾಮದ ಹಪ್ತ ವಸೂಲಿಯನ್ನು ಮಾಡಿದರು.[೨೭] ಹಾವೇರಿ ತಾಲ್ಲೂಕು, ಹೊಸರಿತ್ತಿ ಗ್ರಾಮದ ೧೯೪೩ರ ಏಪ್ರಿಲ್ ೧ರಂದು ವೀರಭದ್ರ ದೇವಸ್ಥಾನದಲ್ಲಿ ಸರ್ಕಾರದವರು ಸ್ಥಾಪಿಸಿದ್ದ ಕರವಸೂಲಿಯ ಕಛೇರಿಯ ಹಪ್ತ ಲೂಟಿ ಸಂದರ್ಭದಲ್ಲಿ ಪೋಲೀಸಿನವರು ನಡೆಸಿದ ಗೋಲಿಬಾರ್‌ನ ಗುಂಡಿನೇಟಿಗೆ ಮೈಲಾರ ಮಹಾದೇವಪ್ಪ, ಹಿರೇಮಠದ ವೀರಯ್ಯ, ಮಡಿವಾಳ ತಿರಕಪ್ಪ ಎಂಬುವವರು ಪ್ರಾಣತ್ಯಾಗ ಮಾಡಿದರು.[೨೮] ಹೊಸರಿತ್ತಿಯ ದುರ್ಘಟನೆಯ ನಂತರ ಮೈಲಾರ ಮಹಾದೇವಪ್ಪ ಪತ್ನಿಯಾದ ಸಿದ್ದಮ್ಮರವರು ಗಾಂಧೀ ತತ್ವಗಳ ಮೂಲಕ ಹೋರಾಟವನ್ನು ಮುಂದುವರಿಸಿದರು. ಹಾವೇರಿ ತಾಲ್ಲೂಕು ಕೊರಡೂರ ಗ್ರಾಮದಲ್ಲಿ ಮೈಲಾರ ಮಹದೇವಪ್ಪನವರು ಸ್ಥಾಪಿಸಿದ ಆಶ್ರಮದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಸಾಯುವವರೆಗೂ ಉಪವಾಸ ವ್ರತವನ್ನು ಆರಂಭಿಸಿದರು.

ಭಾರತ ದೇಶದ ಪ್ರತಿಯೊಂದು ಪ್ರದೇಶವು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮದೇ ಆದ ಕೊಡುಗೆಗಳನ್ನು ನೀಡಿವೆ. ಅದರಂತೆ ಹಾವೇರಿ ಜಿಲ್ಲೆಯ ತಾಲ್ಲೂಕುಗಳಾದ ಹಾವೇರಿ, ಶಿಗ್ಗಾಂವ, ಸವಣೂರು, ಹಾನಗಲ್ಲ, ಹಿರೇಕೆರೂರು, ಬ್ಯಾಡಗಿ, ರಾಣೆಬೆನ್ನೂರಿನ ಶ್ರೀಸಾಮಾನ್ಯರು, ವಿದ್ಯಾರ್ಥಿಗಳು, ರೈತರು, ಮಹಿಳೆಯರು, ಪ್ರಮುಖ ಮುಖಂಡರು ಸೇರಿದಂತೆ ಪ್ರತಿಯೊಬ್ಬರು ಹೋರಾಟದಲ್ಲಿ ಭಾಗವಹಿಸಿದ್ದುದು ಸ್ವಾತಂತ್ರ್ಯ ಚಳುವಳಿಯಲ್ಲಿ ಸ್ಮರಣೀಯವಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಎಂ.ವಾಯ್. ಸಾವಂತ, ಉತ್ತರ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೨೦೦೪, ಪುಟ ೦೧.

೨. ಲಿಂಗರಾಜ ಕಮ್ಮಾರ (ಸಂ.)-'ಹೊನ್ನಾಗಿರಿ'-೨ನೇ ಹಾವೇರಿ ಜಿಲ್ಲಾ ಉತ್ಸವ ಸ್ಮರಣ ಸಂಚಿಕೆ, ಹಾವೇರಿ ಜಿಲ್ಲಾ ಉತ್ಸವ ಸಮಿತಿ, ರಾಣಿಬೆನ್ನೂರು, ೨೦೦೭, ಪುಟ ೦೬.

೩. ಬಸವರಾಜ. ಕೆ.ಆರ್., ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ಧಾರವಾಡ, ೧೯೮೪ ಪುಟ ೩೫೨.

೪. ಎಂ.ವಾಯ್. ಸಾವಂತ, ಪೂರ್ವೋಕ್ತ, ಪುಟ ೦೭.

೫. ಸಿದ್ದಲಿಂಗೇಶ ಸಂ.ಹಂಡಿಗಿ., ಗುದ್ಲೆಪ್ಪ ಹಳ್ಳಿಕೇರಿ ರಾಜಕೀಯ ಜೀವನ ಮತ್ತು ಸಾಧನೆ-ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮, ಪುಟ ೨೮.

೬. ಅದೇ, ಪುಟ ಸಂಖ್ಯೆ ೧೩.

೭. ಪಟ್ಟಣಶೆಟ್ಟಿ ಸಿದ್ದಲಿಂಗಯ್ಯ, ಹಳ್ಳಿಕೇರಿ ಗುದ್ಲೆಪ್ಪ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೨೦೦೦, ಪುಟ ೩೨.

೮. ಎಂ.ವಾಯ್. ಸಾವಂತ, ಪೂರ್ವೋಕ್ತ, ಪುಟ ೧೭.

೯. Halalppa.G.S. (Ed). History of Freedom Movement in Karnataka, Vol-II Bangalore, Governement of Mysore, 1964 Page 310.

೧೦. ಸಿದ್ದಲಿಂಗೇಶ ಸಂ. ಹಂಡಿಗಿ, ಪೂರ್ವೋಕ್ತ, ಪುಟ ೧೪೪.

೧೧. ರಂಗನಾಥ ದಿವಾಕರ (ಸಂ.), ಕರ ನಿರಾಕರಣೆಯ ವೀರಕಥೆ ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ, ೧೯೫೫, ಪುಟ ೭೨.

೧೨. ಭೋಜರಾಜ ಪಾಟೀಲ, ಹಿರೇಕೆರೂರು ತಾಲ್ಲೂಕು ದರ್ಶನ, ಐಬಿಎಚ್ ಪ್ರಕಾಶನ, ೧೯೮೭, ಬೆಂಗಳೂರು, ಪುಟ ೧೬.

೧೩. ಸಾಪ್ತಾಹಿಕ ವಿಜಯ ಪತ್ರಿಕೆ, ಧಾರವಾಡ, ದಿನಾಂಕ ೧೯ನೇ ಜನವರಿ ೧೯೩೨, ಮಂಗಳವಾರ, ಸಂಚಿಕೆ ೦೩.

೧೪. ಸತ್ಯಾಗ್ರಹ-ಸಿರಸಿ ಕರಪತ್ರ, ಸಂಚಿಕೆ ೧೭೪, ದಿ. ೧೮-೦೧-೧೯೩೧ ರವಿವಾರ.

೧೫. ಲಿಂಗರಾಜ ಕಮ್ಮಾರ (ಸಂ.), ಪೂರ್ವೋಕ್ತ, ಪುಟ ೩೫.

೧೬. ಸಾಪ್ತಾಹಿಕ ವಿಜಯ ಪತ್ರಿಕೆ, ಧಾರವಾಡ, ದಿನಾಂಕ ೨೯ನೇ ಮಾರ್ಚ್ ೧೯೩೨, ಪುಟ ೦೬.

೧೭. ಅದೇ, ಪುಟ ೦೬.

೧೮. ಸಿದ್ದಲಿಂಗೇಶ ಸಂ. ಹಂಡಿಗಿ, ಪೂರ್ವೋಕ್ತ, ಪುಟ ೪೮.

೧೯. ಸಾಪ್ತಾಹಿಕ ವಿಜಯ, ೧೦ನೇ ಮೇ ೧೯೩೨, ಪುಟ ೦೪.

೨೦. ಸಿದ್ದಲಿಂಗೇಶ ಸಂ. ಹಂಡಿಗಿ., ಪೂರ್ವೋಕ್ತ, ಪುಟ ೫೧.

೨೧. ಸಿದ್ದವ್ವನಹಳ್ಳಿ ಕೃಷ್ಣಶರ್ಮ (ಸಂ.) ಗಾಂಧೀ ಮತ್ತು ಕರ್ನಾಟಕ, ಗಾಂಧಿ ಶತಮಾನೋತ್ಸವ, ಗಾಂಧೀ ಸ್ಮಾರಕ ನಿಧಿ, ಬೆಂಗಳೂರು ೧೯೬೯, ಪುಟ ೨೭೫.

೨೨. ಗೋವಿಂದಮೂರ್ತಿ ದೇಸಾಯಿ-ಸಿದ್ದಪ್ಪ ಹೊಸಮನಿ, ಕನ್ನಡನಾಡು ಮತ್ತು ಕನ್ನಡಿಗರ ಪರಂಪರೆ ೩೭೬, ಐಬಿಎಚ್ ಪ್ರಕಾಶನ, ೧೯೭೮ ಬೆಂಗಳೂರು, ಪುಟ ೩೬.

೨೩. ಅದೇ, ಪುಟ ೩೮.

೨೪. 'ಸಾಧ್ವಿ' ರಾಜಧಾನಿಯ ರಾಷ್ಟ್ರೀಯ ವಾರಪತ್ರಿಕೆ, ೨೨ನೇ ಆಗಸ್ಟ್ ೧೯೩೮, ಸಂಪುಟ ೦೩, ಸಂಚಿಕೆ ೨೫, ಪುಟ ೦೯.

೨೫. ಸಾಧ್ವಿ-೨ನೇ ಅಕ್ಟೋಬರ್, ೧೯೩೯, ಸಂಪುಟ ೦೪, ಸಂಚಿಕೆ ೩೨, ಪುಟ ೦೭.

೨೬. ಆರ್.ಬಿ. ಹೊನಕೇರಿ, ಶಿಗ್ಲಿ-ಶಿಗ್ಲಿಯ ಬಸವಕುಮಾರ-(ವೀರಶೈವ ಪುಣ್ಯಪುರುಷ ಸಾಹಿತ್ಯ ರತ್ನಮಾಲೆ, ೧೭೪), ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೨೦೦೨, ಪುಟ ೩೪.

೨೭. ಸಿ.ಟಿ. ಕಿರಿಮನಿ-ಹುತಾತ್ಮ ಮೈಲಾರ ಮಹಾದೇವಪ್ಪನವರು, (ವೀರಶೈವ ಪುಣ್ಯಪುರುಷ ಸಾಹಿತ್ಯ ರತ್ನಮಾಲೆ ೧೭೨), ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ ೧೯೭೯, ಪುಟ ೫೦.

೨೮. ಬಿ. ಷೇಕ್ ಅಲಿ (ಸಂ.) ಕರ್ನಾಟಕ ಚರಿತ್ರೆ, ಸಂಪುಟ ೦೭, (೧೯೦೦-೧೯೫೬) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ ೨೦೦.

೧೨೦

ಆಧುನಿಕ ಕೊಡಗಿನ ಇತಿಹಾಸ ಕಥನ

ಅವಿನಾಶ್.ವಿ.*

ನಮ್ಮ ಇತಿಹಾಸವನ್ನು ನಮ್ಮವರ ದೃಷ್ಟಿಯಲ್ಲೇ ತಿಳಿಯಲು ಹೆಚ್ಚಿನ ಸಾಹಿತ್ಯ ಲಭ್ಯವಿಲ್ಲದೆ. ನಮ್ಮ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಯೂ ಸಂಶೋಧನೆಯ ಮೇಲೆ ಆಧಾರವಾಗಿಲ್ಲ, ಬದಲಿಗೆ ಯೂರೋಪಿನವರ ಕಥೆಗಳನ್ನು ಆಧರಿಸಿವೆ.[೧] ಸಮಕಾಲೀನ ಬರಹಗಾರರು ಚರಿತ್ರೆಯನ್ನು ತಮ್ಮದೇ ಭಿನ್ನ ಶೈಲಿಯ ಮೂಲಕ "ಸಿದ್ಧಾಂತ", "ಚಿಂತನೆ", "ಅನ್ವೇಷಣೆ", "ವಿಶ್ಲೇಷಣೆ" ಮತ್ತು "ಸಂಶೋಧನೆ"ಯಂಥ ತೆರೆಯ ಮರೆಗೆ ಸರಿದಿರುವ ಇತಿಹಾಸವನ್ನು ಮರು ನಿರ್ಮಾಣದ ಪ್ರಕ್ರಿಯೆಯ ಮೂಲಕ ಚರ್ಚೆಗೆ ಒಳಪಡಿಸಿದ್ದಾರೆ. ಹೀಗಿರುವಾಗ ಇತಿಹಾಸ ಕಥನ ಎಂದರೇನು? ಅದರ ಅವಶ್ಯಕತೆಯೇನು? ಎಂದು ಅವಲೋಕಿಸಿದಾಗ ಇತಿಹಾಸದ ಕಲಿಕೆಯಲ್ಲಿ ಇತಿಹಾಸ ಕಥನದ ಪಾತ್ರ ಬಹುಮುಖ್ಯವಾಗಿ ಗೋಚರಿಸುತ್ತದೆ.[೨] ಪಾಶ್ಚಿಮಾತ್ಯ ವಿದ್ವಾಂಸರು ಮತ್ತು ಚಿಂತಕರು ಭಾರತೀಯ ಕಲೆ, ಸಂಸ್ಕೃತಿ ಮತ್ತು ಸೌಂದರ್ಯ ಪ್ರಜ್ಞೆಯನ್ನು ತಪ್ಪಾಗಿ ಗ್ರಹಿಸಿ, ನಮ್ಮ ಪುರಾಣ ಮತ್ತು ಸಂಸ್ಕೃತಿಯಲ್ಲಿನ ಅನೇಕ ಅತಿಮಾನುಷ ವಿಚಾರಗಳ ಬಗ್ಗೆ ಪ್ರಶ್ನೆಗಳನ್ನೆತ್ತುತ್ತಿದ್ದ ಕಾಲದಲ್ಲಿ, ಭಾರತದ ಇತಿಹಾಸವನ್ನು ರಾಷ್ಟ್ರೀಯವಾದಿ ಇತಿಹಾಸಕಾರು "ಸಮರ್ಥನೆ"ಯ ಮೂಲಕ ಒಂದು ಹೊಸ ದೃಷ್ಟಿಕೋನದಿಂದ ಚರ್ಚಿಸತೊಡಗಿದರು. ಪಾಶ್ಚಿಮಾತ್ಯ ಚಿಂತಕರು ಬುದ್ಧಿವಂತರಾಗಿದ್ದರೂ ಅವರ ಜ್ಞಾನ ಗ್ರೀಕ್ ಮತ್ತು ಲ್ಯಾಟಿನ್ ಮೂಲದ್ದಾಗಿತ್ತು. ಹೀಗಾಗಿ ಆ ಜ್ಞಾನ ಮೂಲಗಳಿಂದ ಹೊರತಾದ ಸಂಸ್ಕೃತಿಗಳನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ.[೩] ಈ ಹಂತದಲ್ಲಿ ಭಾರತೀಯ ಲೇಖಕರು ನಮ್ಮ ಇತಿಹಾಸ ಮತ್ತು ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವ ವಿಧಾನಗಳನ್ನು ತಿಳಿಸಲು ಪ್ರಯತ್ನಿಸಿದರು. ಇದು ಕೇವಲ ಪಾಶ್ಚಾತ್ಯರಿಗೆ ಮಾತ್ರವಲ್ಲದೆ, ನಮ್ಮವರಿಗೂ ತಿಳಿಸುವ ಪ್ರಯತ್ನವನ್ನು ೧೯ನೇ ಶತಮಾನದ ಕೊನೆಯಲ್ಲಿ ಹಾಗೆಯೇ ೨೦ನೇ ಶತಮಾನದ ಆರಂಭದಲ್ಲಿ ಕಾಣಬಹುದಾಗಿದೆ. ಇತಿಹಾಸ ಕಥನವು ಗತಕಾಲದ ಇತಿಹಾಸದ ಘನತೆ ಹಾಗೆಯೇ ಬರವಣಿಗೆಗಳ ವೈವಿಧ್ಯತೆಯನ್ನು ಪ್ರತಿನಿಧಿಸುವ ಶಾಸ್ತ್ರವಾಗಿದೆ. ಇದು ಒಂದು ನಿರ್ದಿಷ್ಟ ವಿಷಯಕ್ಕೆ ಕುರಿತಂತೆ ಇತಿಹಾಸಕಾರನ ವಿವಿಧ ಚಿಂತನೆಗಳ ವಿನ್ಯಾಸವಾಗಿದೆ. ಇದರಲ್ಲಿ ಲೇಖಕನ ಅಭಿರುಚಿ, ಚಿಂತನೆಗಳು ಮತ್ತು ರಚನೆಯ ಲೋಪದೋಷಗಳನ್ನು ತಿಳಿಸುವ ಮೂಲಕ ಇತಿಹಾಸದ ಕಲಿಕೆಯಲ್ಲಿ ಕೈಗೊಳ್ಳಬೇಕಾದ ಇತಿಹಾಸದ ಶಿಸ್ತನ್ನು ವಿವರಿಸುವುದನ್ನು ಕಾಣಬಹುದು.[೪]

ಕೊಡಗಿನ ಇತಿಹಾಸವನ್ನು ಅದರ ಇತಿಹಾಸ ಕಥನದಿಂದ ನೋಡುವ ಒಂದು ಸಣ್ಣ ಪ್ರಯತ್ನವೇ ಈ ಲೇಖನದ ಮುಖ್ಯ ಆಶಯವಾಗಿದೆ. ಇತಿಹಾಸ ಮತ್ತು ಇತಿಹಾಸ ಕಥನವನ್ನು ಒಂದೇ ವಾಕ್ಯದಲ್ಲಿ ಬೆಸೆದು ವಿವರಿಸುವುದು ಕಷ್ಟಸಾಧ್ಯ. ಆದರಿಂದಲೇ ಹೊಸ ಚಿಗುರು ಮತ್ತು ಹಳೇ ಬೇರನ್ನು ಒಟ್ಟುಗೂಡಿಸಿಕೊಂಡ ಈ ಲೇಖನದಲ್ಲಿ ಪುಟ್ಟ ಪ್ರಾಂತ್ಯದ ಕುರಿತು ಸಾಮ್ರಾಜ್ಯಶಾಹಿ, ಮತ್ತು ದೇಶಿಯ ಬರವಣಿಗೆಯಲ್ಲಿನ ವಿಭಿನ್ನತೆಯನ್ನು ಗುರುತಿಸುವುದರೊಂದಿಗೆ ಇತಿಹಾಸವನ್ನು ಅದರ ಇತಿಹಾಸದಿಂದ ಪುನರ್ ನಿರ್ಮಿಸುವ ಹಂಬಲವೇ ಈ ಲೇಖನದ ಮುಖ್ಯ ಗುರಿಯಾಗಿದೆ. ಕೊಡಗಿನ ಇತಿಹಾಸ ಕಥನವನ್ನು ಕೆದಕುತ್ತಾ ಹೋದರೆ, ಕೊಡಗು ಮತ್ತು ಅದರ ಸಾಂಸ್ಕೃತಿಕ ಅನನ್ಯತೆ, ಪ್ರತ್ಯೇಕತೆಯ ಪರ/ವಿರೋಧಾಭಾಸಗಳು, ಪ್ರಭುತ್ವ ಮತ್ತು ಯಜಮಾನಿಕೆ ಸಂಸ್ಕೃತಿಯಿಂದ ಇತಿಹಾಸವನ್ನು ತನ್ನ ಎಡೆಗೆ ಆಕರ್ಷಿಸುವ ವೈವಿಧ್ಯತೆಯಿಂದ ಕೂಡಿದೆ. ಬ್ರಿಟಿಷ್ ಆಳರಸರು, ಭಾರತದ ಇತಿಹಾಸದಲ್ಲಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಲು, ಒಂದು ಶಿಸ್ತುಬದ್ಧವಾದ ಅಧ್ಯಯನದಿಂದ ಅದರ ಇತಿಹಾಸ ತಿಳಿಯಬಯಸಿರುತ್ತಾರೆ. ಸಾಮ್ರಾಜ್ಯಶಾಹಿ ಇತಿಹಾಸ ಕಥನವು ತಮ್ಮ ಆಡಳಿತದ ಸಾಮರ್ಥನೆ ಮಾತ್ರವಲ್ಲದೆ, ಅಧಿಕಾರದ ಅನಿವಾರ್ಯತೆ ಮತ್ತು ಬದಲಾವಣೆಯ ಯಶಸ್ಸಿನ ವಿವರಣೆಯೊಂದಿಗೆ, ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಭುತ್ವದ ಪರಿಕಲ್ಪನೆಯನ್ನು ತನ್ನ ವಸಾಹತುವಿನಲ್ಲಿ ರೂಪಿಸುವ ಮೂಲಕ ವಸಾಹತುಕರಣದ ಇತಿಹಾಸವನ್ನು ನಿರೂಪಿಸಿದಾರೆ.

ಯೂರೋಪಿಯನ್ ಬರವಣಿಗೆಗಳು ಕೊಡಗನ್ನು ವಿಶೇಷ, ಪ್ರತ್ಯೇಕ ಮತ್ತು ಅನನ್ಯತೆಯಿಂದ ಚಿತ್ರಿಸಿದ್ದು, ಅವು ಯೂರೋಪಿಯನ್ನ ಆಡಳಿತದ ವಿಭಿನ್ನತೆ ಮತ್ತು ನಿರಂಕುಶ

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು

ಆಡಳಿತ ಪರಿಭಾವನೆಯನ್ನು ಸೃಷ್ಟಿಸಿವೆ. ಕೊಡಗಿನ ರಾಜನನ್ನು ಕ್ರೂರಿಯಾಗಿ ಮತ್ತು ಅಸಹಾಯಕ ಎನ್ನುವ ಮಾಹಿತಿಗಳು ಮ್ಲೋಗಿಂಗ್ ಮತ್ತು ರಿಕ್ಟರ್ ಬರವಣಿಗೆಗಳಲ್ಲಿ ವ್ಯಕ್ತವಾದರೆ. ಅಸಹಾಯಕ ರಾಜನಿಂದ ತೆರವಾದ ಸ್ಥಾನವನ್ನು, ಬ್ರಿಟಿಷರು ಕೊಡಗು ಪ್ರವೇಶಿಸಿದ್ದಾಗ ಜನರು ಸ್ವಾಗತಿಸಿದ್ದರು ಎಂದು ತಮ್ಮ ಪ್ರಭುತ್ವವನ್ನು ಸಮರ್ಥಿಸಿಕೊಳ್ಳುವ ವರದಿಗಳನ್ನು ಕಾಣಬಹುದು[೫]. ಯೂರೋಪಿಯನ್ನ ಬರವಣಿಗೆಗಳು ಬದಲಾಗದ ಅಥವಾ ಸ್ಥಿರವಾದ ಸಂವಾದಗಳಿಂದ ಅಮೂಲ್ಯವಾದರೂ ಅವು ಸಾಮ್ರಾಜ್ಯಶಾಹಿ ನಿಲುವುಗಳನ್ನು ದಾಟಿ ಬರುತ್ತಿರಲಿಲ್ಲ. ಇದರಿಂದಾಗಿ ಅವರ ಕೃತಿಗಳು ಬ್ರಿಟಿಷ್ ವಸಾಹತುಶಾಹಿ ಆಡಳಿತಕ್ಕೆ ಹೊಂದಿಕೊಂಡಂತೆ ಇರುವುದನ್ನು ಕಾಣಬಹುದು. ಯೂರೋಪಿಯನ್ನರ ಬರವಣಿಗೆಗಳಲ್ಲಿ ಬ್ರಿಟಿಷರು ಕೊಡಗನ್ನು ಸಂಶೋಧಿಸಿ ವಶಪಡಿಸಿಕೊಂಡಿದು, ಆ ಪ್ರಾಂತ್ಯದ ಜನರ, ಸಂಸ್ಕೃತಿಯ ರಕ್ಷಣೆಯ ಜೊತೆಗೆ ಅವರ ಅದೃಷ್ಟ ಎಂದು ವ್ಯಕ್ತಪಡಿಸುತ್ತಾರೆ. ಇದರೊಂದಿಗೆ ತಮ್ಮ ಆಡಳಿತಕ್ಕೆ ಜನರು ಒಮ್ಮತದಿಂದ ಬೆಂಬಲಿಸಿದ್ದರು ಎಂದು ಪುಷ್ಟೀಕರಿಸುತ್ತಾರೆ.[೬] ಬ್ರಿಟಿಷರು ಕೊಡಗನ್ನು ರಾಜಕೀಯ ಮತ್ತು ಮಿಲಿಟರಿ ಉದ್ದೇಶಕ್ಕಾಗಿ ವಶಪಡಿಸಿಕೊಳ್ಳಲಿಲ್ಲ ಬದಲಿಗೆ ಈ ಪ್ರಾಂತ್ಯವನ್ನು ದುರುದ್ದೇಶಕ್ಕೆ, ಎಳೆಯುವ ಒಂದು ಯೋಜಿತ ಸಹಭಾಗಿತ್ವ ಅವರದ್ದಾಗಿತ್ತು. ಜೊತೆಗೆ ಈ ಪುಟ್ಟ ಪ್ರಾಂತ್ಯದಲ್ಲಿ ನೆಲೆಸುವುದರೊಂದಿಗೆ ವಸಾಹತು ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಲು ಪ್ರಯತ್ನಿಸಿದ್ದರು. ಆದ್ದರಿಂದಲೇ ಜಮ್ಮ ಪರವಾನಿಗೆ, ಮಾರ್ಷಲ್ ಪರಂಪರೆ, ಮುಖ್ಯವಾಗಿ ಬಂದೂಕು ಪರವಾನಿಗೆ ನೀಡುವುದರೊಂದಿಗೆ ಅವರ ಪ್ರತಿ ಯೋಜನೆಗಳಿಗೆ ಅನುಕೂಲವಾಗಿ ಕೊಡವರನ್ನು ಬಳಸಿಕೊಂಡರೇ ವಿನಹಃ ರಕ್ಷಿಸುವ ಉದ್ದೇಶದಿಂದಲ್ಲ ಎಂದು ಪ್ರೊ. ಬಿ. ಸುರೇಂದ್ರ ರಾವ್‌ರವರ ಲೇಖನಗಳು ಧೃಡೀಕರಿಸುತ್ತದೆ.[೭]

ಕೊಡಗು ಆಶ್ಚರ್ಯಕರವಾದ ಕಣಿವೆ, ಬೆಟ್ಟಗುಡ್ಡಗಳು, ಮತ್ತು ದುರ್ಗಮ ಅರಣ್ಯಗಳಿಂದ ಕೂಡಿದೆ ಎಂದು ಹೇಳುವಾಗಲೇ ಲೇಖನಿಯು ನಡುಗುತ್ತದೆ. ಕೊಡಗಿನ ಇತಿಹಾಸವನ್ನು ಅವಲೋಕಿಸಿದಾಗ ಕೊಡಗು ನಿರ್ದಿಷ್ಟವಾದ ಗಡಿಯನ್ನು ಹೊಂದಿರದೆ, ಚಕ್ರವರ್ತಿಗಳ ಸಾಮಂತ ರಾಜ್ಯವಾಗಿ, ನಂತರ ಹಾಲೇರಿ ಆಳ್ವಿಕೆಯಲ್ಲಿ ತನ್ನ ಇರುವಿಕೆಯ ಇತಿಹಾಸವನ್ನು ಕಾಯ್ದುಕೊಂಡಿತ್ತು. ೧೮ನೇ ಶತಮಾನದಲ್ಲಿ ಹೈದರಾಲಿ ವ್ಯಾಪಾರ ಮತ್ತು ಸೈನ್ಯ ಕಾರ್ಯಾಚರಣೆಗೆ ಕೊಡಗು, ಅವನ ಭಾವನೆಗಳಿಗೆ ಸ್ಪಂದಿಸುವ ರೀತಿಯಲ್ಲಿ ಕಾಣತೊಡಗಿತ್ತು. ಮುಂದೆ ಟಿಪ್ಪುವಿನ ಆಳ್ವಿಕೆಯಲ್ಲಿಯೂ ಕೊಡಗು ಆಡಳಿತದ ಒಂದು ಕೇಂದ್ರ ಬಿಂದುವಾಗಿತ್ತು. ಮಲಬಾರ್‌ನ ನಾಯರ್‌ಗಳ ಪ್ರತಿರೋಧವನ್ನು ಅಡಗಿಸಲು ಕೊಡಗಿನ ಮಾರ್ಗವನ್ನು ಹೆಚ್ಚು ಅವಲಂಬಿತವಾಗಿದ್ದನು. ಅದರಿಂದ ಕೊಡಗಿನ ಜನರು ತನಗೆ ವಿಧೇಯರಾಗಿರುವಂತೆ ಮತ್ತು ಅವಿಧೇಯತೆಯನ್ನು ತೋರಿದವರ ವಿರುದ್ಧ ರಾಜಕೀಯ ಮಾರ್ಗದಲ್ಲಿ ಮಣಿಸುವ ಮೂಲಕ ಶಿಕ್ಷಿಸುತ್ತಿದ್ದನು. ನಂತರ ಆಂಗ್ಲ-ಮೈಸೂರು ಯುದ್ಧದಲ್ಲಿ ಕಾರನ್‌ವಾಲಿಸ ಕೊಡಗನ್ನು ತನ್ನ ಪ್ರತಿಷ್ಠೆಯಾಗಿ ಪರಿಗಣಿಸಿದ್ದನು. ಪುಟ್ಟ ಪ್ರಾಂತ್ಯವಾದ ಕೊಡಗು ಪುಟ್ಟ ವಿಷಯಗಳ ಆಸಕ್ತಿದಾಯಕ ಅಂಶಗಳಿಂದ ಸಂಶೋಧಕರಿಗೆ ಸಂಶೋಧನೆಯ ನೆಚ್ಚಿನ ವಿಷಯವಾಗಿದೆ. ವಿಭಿನ್ನ ಭಾಷೆ, ಆ ಭಾಷೆಗೊಂದು ವಿಭಿನ್ನ ಆಚರಣೆ ಕಾಲದಿಂದ ಕಾಲಕ್ಕೆ ವೃದ್ಧಿಸುವುದರೊಂದಿಗೆ ಸಮಕಾಲೀನ ಕರ್ನಾಟಕದ ವಿವಿಧ ಜಿಲ್ಲೆಯಲ್ಲಿ ಕೊಡಗು ತನ್ನನೂ ವಿವಿಧ ಹೆಸರುಗಳಿಂದ ಕರೆಸಿಕೊಳ್ಳುವುದರೊಂದಿಗೆ ಜನಮನದಲ್ಲಿ ನೆಲೆನಿಂತಿದೆ.[೮]

೧೮ನೇ ಶತಮಾನದಲ್ಲಿ ದೊಡ್ಡ ವೀರರಾಜ ಬರೆಸಿದ ನೆನ್ನಲಾದ ರಾಜೇಂದ್ರನಾಮೆ ಕಟ್ಟುಕಥೆಗಳು ಮತ್ತು ಅವಾಸ್ತವಿಕ ಅಂಶಗಳಿಂದ ಕೂಡಿದ್ದು. ಈ ಗ್ರಂಥವು ಹಾಲೇರಿ ಮನೆತನದ ೧೭೫ ವರ್ಷಗಳ ಚರಿತ್ರೆಯನ್ನು ತಿಳಿಸುವುದರೊಂದಿಗೆ ಕೊಡಗಿನ ಇತಿಹಾಸದಲ್ಲಿ ಹಾಲೇರಿ ರಾಜವಂಶದ ಪಾಲನ್ನು ಪೂರ್ವಾಗ್ರಹಗಳಿಂದ ತುಂಬುತ್ತದೆ. ಬ್ರಿಟಿಷ್ ಆಡಳಿತದಲ್ಲಿ ಈ ಗ್ರಂಥವನ್ನು ರಾಬರ್ಟ್ ಅಬರ್‌ಕ್ರಾಂಬಿ ಇಂಗ್ಲೀಷ್‌ಗೆ ತರ್ಜುಮೆ ಮಾಡಿದ ಎಂದು ನಂಬಲಾಗಿದೆ. ೧೭೯೩ರಲ್ಲಿ ರಾಬರ್ಟ್ ಅಬರ್‌ಕ್ರಾಂಬಿಯು ಕಂಪನಿ ಸರಕಾರಕ್ಕೆ ವಾರ್ಷಿಕ ೨೪,೦೦೦ ಕಪ್ಪ ಸಲ್ಲಿಸುವ ಕರಾರಿನ ಮೂಲಕ ಮುಸ್ಲಿಂ ಆಳ್ವಿಕೆಯಿಂದ ಹಿಂದೂ ಆಳ್ವಿಕೆಗೆ ಕೊಡಗು ಒಳಗಾಯಿತು. ಬ್ರಿಟಿಷ್ ಅಧಿಕಾರಿ ಮತ್ತು ಕೊಡಗಿನ ರಾಜ ದೊಡ್ಡವೀರರಾಜನ ನಡುವೆ ನಡೆದಿರುವ ಪತ್ರವ್ಯವಹಾರಗಳು ಕೊಡಗು ಮತ್ತು ಬ್ರಿಟಿಷ್ ಆಳ್ವಿಕೆಯ ಸಂಬಂಧಗಳನ್ನು ತಿಳಿಸುತ್ತದೆ.[೯] ಬ್ರಿಟಿಷ್ ಮತ್ತು ಕೊಡಗಿನ ಸಂಬಂಧವನ್ನು ಚಿಕ್ಕ ವೀರರಾಜನ ಆಳ್ವಿಕೆಯಲ್ಲಿ ವಿಭಿನ್ನ ಎನ್ನುವಂತೆ ಗೋಚರಿಸುತ್ತದೆ. ಬ್ರಿಟಿಷ್ ದಾಖಲೆಗಳು, ಸಾಹಿತ್ಯ ಹಾಗೂ ಮೌಖಿಕ ಇತಿಹಾಸದೊಂದಿಗೆ ಅವಲೋಕಿಸಿದಾಗ ಚಿಕ್ಕವೀರರಾಜ ತನ್ನವರಿಂದಲೇ ಮೋಸಕ್ಕೆ ಬಲಿಯಾದ. ಅದೃಷ್ಟ ಹೀನ ಎನ್ನುವ ಅಂಶಗಳು ಒಂದೆಡೆಯಾದರೇ, ದರ್ಪಿಷ್ಟ, ಪ್ರಜಾಕಂಟಕ, ಕಾಮಪಿಶಾಚಿಯಿಂದಾಗಿ ಬ್ರಿಟಿಷರ ಆಗಮನ ಸ್ವಾಗತಾರ್ಹ ಎಂದು ಉಲ್ಲೇಖಿಸುವುದು ಮತ್ತೊಂದು ಬಗೆಯಾಗಿದೆ. ಒಟ್ಟಿನಲ್ಲಿ ಕೊಡಗಿನ ಕೊನೆಯ ದೊರೆ ಚಿಕ್ಕವೀರರಾಜನ ಆಡಳಿತದ ಕುರಿತು ವಿಭಿನ್ನ ದೃಷ್ಟಿಗಳಿಂದ ಒಮ್ಮತ ಅಭಿಪ್ರಾಯವಿಲ್ಲದೆ ಇರುವುದು ಕೊಡಗಿನ ಇತಿಹಾಸಕ್ಕೆ ಒಂದು ಪ್ರಶ್ನೆಯಾಗಿಯೇ ಉಳಿದಿದೆ.[೧೦]

೧೯ನೇ ಶತಮಾನದ ದಕ್ಷಿಣ ಭಾರತದ ಇತಿಹಾಸಕ್ಕೆ ಪಾಶ್ಚಿಮಾತ್ಯ ಮಿಷನರಿಗಳು ಮತ್ತು ಆಡಳಿತಾಧಿಕಾರಿಗಳು ದಕ್ಷಿಣ ಭಾರತದ ವಿವಿಧ ಸಾಮ್ರಾಜ್ಯದ ಇತಿಹಾಸ, ಸಂಸ್ಕೃತಿ ಮತ್ತು ಸಾಮಾಜಿಕ ಸ್ತರವಿನ್ಯಾಸವನ್ನು ತಿಳಿಯಲು ಆಧಾರಗಳ ಶೋಧನೆಯಲ್ಲಿ ನಿರತರಾದರು. ಈ ಕಾರ್ಯದ ಅಭ್ಯುದಯಕ್ಕೆ ಸಾಮ್ರಾಜ್ಯಶಾಹಿ ಅಧಿಕಾರಿಗಳ ಕೊಡುಗೆ ಅತ್ಯಮೂಲ್ಯವಾಗಿದೆ. ದಕ್ಷಿಣದ ವಿವಿಧ ಭಾಗದಲ್ಲಿ ದೊರೆತ ವಿವಿಧ ಶಾಸನಗಳ ಅಧ್ಯಾಯದೊಂದಿಗೆ ಪ್ರಾರಂಭಿಸಿದ ಶಾಸನತಜ್ಞರು ಇತಿಹಾಸ ವನ್ನು ಅದರ ತಳದಿಂದ ತಿಳಿಯಲು ಪ್ರಾರಂಭಿಸಿದ್ದರು. ಹೀಗೆ ಪ್ರಾರಂಭಿಸಿ ಯಶಸ್ಸು ಸಾಧಿಸಿದ ಪ್ರಮುಖ ಐರೋಪ್ಯರು ಗಳೆಂದರೆ ರಾಬರ್ಟ್ ಸಿವಿಲ್, ಬಿ. ಲೀವಿಸ್ ರೈಸ್, ಜೆ.ಎಫ್. ಫೀಟ್ಸ್ ಮೋಗ್ಲಿಂಗ್, ಮೆಕೆಂಜಿ ಮತ್ತು ಕ್ಯಾ. ಕೋಲ್‌ರವರು ಕೊಡಗಿನ ಪೂರ್ವ ಇತಿಹಾಸಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿರುತ್ತಾರೆ. ಕೊಡಗಿನಲ್ಲಿ ಪ್ರಮುಖ ಶಾಸನ ಮತ್ತು ಕಲ್ಲಿನ ಕೆತ್ತನೆಯಲ್ಲಿನ ಸಾಂಸ್ಕೃತಿಕ ವಿವರಣೆಯನ್ನು ತಿಳಿಯಲು ಚರ್ಚೆ, ಸಂವಾದ ಮತ್ತು ಪ್ರಕಟಣೆಗಳಿಂದ ಇತಿಹಾಸ ಪುನರ್ ನಿರ್ಮಾಣದಲ್ಲಿ ತೊಡಗಿದ್ದರು. ಇತಿಹಾಸವನ್ನು ಅದರ ಇತಿಹಾಸ ದಿಂದ ತಿಳಿಯಲು ಪೂರ್ವ ಇತಿಹಾಸಕ್ಕೆ ಸಂಬಂಧಿಸಿದ್ದಂತೆ ೧೮೫೬ರಲ್ಲಿ ಡಾ. ಮೋಗ್ಲಿಂಗ್ ಮೆಗಲಿಥಿಕ್ ಸಮಾಧಿಗಳನ್ನು ಬೆಪ್ಪುನಾಡಿನಲ್ಲಿ ಮೊದಲ ಬಾರಿಗೆ ಶೋಧಿಸಿದನು. ಇದರಿಂದ ಆಕರ್ಷಿತನಾದ ಕ್ಯಾ. ಕೋಲ್ ನಂತರ ಪ್ರಮುಖ ಸಂಶೋಧನೆ ಯನ್ನು ಕೈಗೊಂಡನು, ಆದರೆ ಹೆಚ್ಚು ಕ್ರಿಯಾಶೀಲತೆಯನ್ನು ಬಿ. ಲೀವಿಸ್. ರೈಸ್‌ರವರ Mysore And Coorg–vol.3 (೧೮೭೮)ನಲ್ಲಿ ಕಂಡುಬರುತ್ತದೆ. ರಾಜ ವೀರರಾಜೇಂದ್ರನ ರಾಜೇಂದ್ರನಾಮೆ ಪೂರ್ವಾಗ್ರಹದಿಂದ ಕೂಡಿದ್ದು, ಹಾಲೇರಿ ಆಡಳಿತದ ಕುರಿತಂತೆ ಬೆಳಕು ಚೆಲ್ಲುವ ಒಂದು ಪ್ರಮುಖ ಐತಿಹಾಸಿಕ ದಾಖಲೆಯಾಗಿದೆ. ಮಾರ್ಕ್ ವಿಲ್ಕ್ಸ್‌ನ ಹಿಸ್ಟರಿ ಆಫ್ ಮೈಸೂರು, ೧೮ನೇ ಶತಮಾನದ ರಾಜಕೀಯ ಹೋರಾಟ ಮತ್ತು ಮುಸ್ಲಿಂ ಆಡಳಿತದಲ್ಲಿ ಕೊಡಗಿನ ಕುರಿತಂತೆ ವಸಾಹತು ಅವಲಂಬಿತ ಮಾಹಿತಿಯನ್ನು ಕಾಣಬಹುದು. ಲಿಂಗರಾಜೇಂದ್ರ ಒಡೆಯನ ಐತಿಹಾಸಿಕ ಹುಕುಂನಾಮ ರಾಜರ ಆಳುವಿಕೆಯಲ್ಲಿನ ಸಾಮಾಜಿಕ ಭದ್ರತೆ ಮತ್ತು ಆರ್ಥಿಕಾಭಿವೃದ್ಧಿಯಲ್ಲಿ ಜಮ್ಮ ರೈತರು, ಪಾಲಿಸಬೇಕಾದ ಕರ್ತವ್ಯಗಳು, ಕಂದಾಯ ಸಂಗ್ರಹಣೆಯ ಶಿಸ್ತು ಪರಿಕಲ್ಪನೆ ಯನ್ನು ನೀಡಿದೆ. ೧೮೧೭ರಲ್ಲಿ ರಚನೆಗೊಂಡ ಕಾನರ್‌ನ. ಕೊಡಗು ಸರ್ವೆ ಒಂದು ಅತ್ಯುತ್ತಮವಾದ ಗ್ರಂಥವಾಗಿದ್ದು. ಈ ಪುಸ್ತಕವು ೧೮ನೇ ಶತಮಾನದ ಸಾಮಾಜಿಕ ಬದಲಾವಣೆ, ಹಾಗೆಯೇ ಕೊಡಗಿನ ಭೌಗೋಳಿಕ ಮತ್ತು ಸಾಮಾಜಿಕ ಅಂಶಗಳ ಮೇಲೆ ಮಾಹಿತಿ ನೀಡುವುದರೊಂದಿಗೆ, ಕೊಡಗಿನ ಕಂದಾಯ ವ್ಯವಸ್ಥೆಯನ್ನು ನೆರೆಯ ರಾಜ್ಯಗಳೊಂದಿಗೆ ಹೋಲಿಸಿ, ಕೊಡಗಿನ ಕಂದಾಯ ವ್ಯವಸೆಯು ಶಿಸ್ತು ಮತ್ತು ಸಮತೋಲನದಿಂದ ಕೂಡಿದೆ ಎಂದು ತಿಳಿಸುತ್ತಾನೆ. ಕ್ಯಾ. ಡೆನಿಸ್ ಮಹೋನ್ನಿ ರಾಜನ ನ್ಯಾಯಾಲಯದಲ್ಲಿ ಇದ್ದ ಮೊದಲ ಬ್ರಿಟಿಷ್ ರಾಜಪ್ರತಿನಿಧಿ ಹಾಗು ಕೊಡಗಿನ ಮೊದಲ ಇತಿಹಾಸಕಾರನಾಗಿದ್ದಾನೆ. ಲೇ. ಕರ್ನಲ್ ಫ್ರೇಸರ್ ಇವನು ಗವರ್ನರ್ ಜನರಲ್ ಆಫ್ ಇಂಡಿಯದಲ್ಲಿ ಕೊಡಗಿನ ರಾಜಕೀಯ ಪ್ರತಿನಿಧಿಯಾಗಿದನು. ೧೮೩೪ರ ಬ್ರಿಟಿಷ್ ಆಕ್ರಮಣಕ್ಕೆ ಮೂಲ ಸೂತ್ರಧಾರನಾಗಿದ್ದು, ಕೊಡಗಿನಲ್ಲಿ ಬ್ರಿಟಿಷ್ ಆಡಳಿತದ ಬುನಾದಿಗೆ ಭದ್ರ ಅಡಿಪಾಯವನ್ನು ಒದಗಿಸಿದವನು. ಕೊಡಗಿನ ಸೂಪರಿಂಟೆಂಡೆಂಟ್ ಜಿ.ಎಂ. ಮಾರ್ಟಿನ್ ೧೮೫೫–೫೯ರಲ್ಲಿ, ಕಾಫಿಯ ಸುಧಾರಣೆಗೆ ಮತ್ತು ಸಂರಕ್ಷಣೆಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದು, ಕೊಡಗಿನ ಭೌಗೋಳಿಕ ವಾತಾವರಣವು ಕಾಫಿ ಬೆಳವಣಿಗೆ ಹೆಚ್ಚಿನ ಸಹಕಾರಿಯಾಗಿದೆ ಎಂದು ಮಾಹಿತಿ ನೀಡುತ್ತಾರೆ. ವಿಲಿಯಂ ಜಫರ್‌ಸನ್ ಕಂಪನಿ ಆಡಳಿತದಲ್ಲಿ ಕೊಡಗಿನಲ್ಲಿ ಸರ್ಜನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ೧೮೫೫ರಲ್ಲಿ ರಚನೆಗೊಂಡ ಮೋಗ್ಲಿಂಗ್‌ನ ಕೂರ್ಗ್ ಮೆಮ್ಸ್ ಮಿಷನರಿಗಳ ಮುಖಾಂತರ ಕೊಡಗಿನ ಪರಿಸರ ಹಾಗೂ ಅದರಲ್ಲಿ ವಾಸಿಸುವ ಅನಾಗರಿಕರನ್ನು ನಾಗರಿಕತೆಗೆ ಕರೆದ್ಯೊಯಲು ಹಾಗೂ ನಾಗರಿಕರನ್ನಾಗಿಸಲು ಕ್ರೈಸ್ತ ಧರ್ಮದ ಪಾಲನೆಯಿಂದ ಸಾಧ್ಯ. ಆದ್ದರಿಂದ ಕೊಡಗಿಗೆ ಹೊಸ ಆಡಳಿತ ಅನಿವಾರ್ಯ ಎಂದು ತಿಳಿಸುತ್ತಾರೆ. ರಿಕ್ಟರ್ ಕೊಡಗಿಗೆ ಬೆಸಲ್ ಮಿಷನ್‌ನ ಪ್ರವರ್ಧಕನಾಗಿ ಆಗಮಿಸಿ ಇವೇಂಜಲಿಕಲ್ ವಿಚಾರಗಳನ್ನು ಪ್ರಚಾರ ಪಡಿಸುವುದ ರೊಂದಿಗೆ ಶಿಕ್ಷಣದ ಪ್ರಸಾರಕ್ಕೆ ಶ್ರಮಿಸಿದ್ದಾನೆ. ಅದರೊಂದಿಗೆ ಅವನು ಬರೆದ ಗಜೆಟಿಯರ್ ಆಫ್ ಕೂರ್ಗ್ (೧೮೭೦). ಕೊಡಗಿನ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳಿಂದ ಕೊಡಗಿನ ಇತಿಹಾಸಕ್ಕೆ ಗಣನೀಯವಾದ ಕೊಡುಗೆಯಾಗಿದೆ. ರೋಬರ್ಟ್ ಇಲಿಯಟ್ ಎಕ್ಸ್‌ಪೀರಿ ಯನ್ಸ್‌ಸಸ್ ಆಫ್ ಎ ಪ್ಲಾಂಟರ್ ಇನ್ ದ ಜಂಗಲ್ಸ್ ಆಫ್ ಕೂರ್ಗ್, (೧೮೭೧) ಮತ್ತು ಗೋಲ್ಡ್, ಸ್ಪೋರ್ಟ್ ಆಂಡ್ ಕಾಫಿ. ಪ್ಲಾಂಟಿಂಗ್ ಇನ್ ಮೈಸೂರು ಆಫ್ ಕೂರ್ಗ್ (೧೮೯೪). ಈ ಎರಡು ಗ್ರಂಥಗಳು ಕೊಡಗಿನ ತೋಟಗಾರಿಕೆ ಗಳಿಗೆ ಸಂಬಂಧಿಸಿದ್ದಂತೆ ಕಂಡುಬರುವ ಪ್ರಮುಖ ಗ್ರಂಥ ಗಳಾಗಿವೆ. ೧೮೭೦ರಲ್ಲಿ ಲೀವಿಸ್ ರೈಸ್ ಬರೆದ ಕೂರ್ಗ್ ಗೆಜೆಟಿಯರ್, ೧೮೭೮ರಲ್ಲಿ ಬೇಡಲ್ ಪೊವೆಲ್‌ನ ದ ಲ್ಯಾಂಡ್ ಸಿಸ್ಟಮ್ಸ್ ಆಫ್ ಬ್ರಿಟಿಷ್ ಇಂಡಿಯ, ಬಹಳ ವಿಭಿನ್ನತೆಯನ್ನು ಮತ್ತು ಪ್ರತ್ಯೇಕತೆಯನ್ನು ಬಿಂಬಿಸುವುದರೊಂದಿಗೆ ಕೊಡಗಿನ ಕುರಿತಂತೆ ಸಾಮ್ರಾಜ್ಯಶಾಹಿ ಚಿತ್ರಣವನ್ನು ಹೊರ ಹಾಕುತ್ತದೆ.

ಹಾಗೆಯೇ ಕೂರ್ಗ್ ಇಸ್ ನೋಟ್ ದ ಪ್ರೊಡಕ್ಟ್ ಆಫ್ ದ ಕಾನ್‌ಕ್ವೆಸ್ಟ್; ಬಟ್ ಇಟ್ ವಾಸ್ ಕಾನ್‌ಕ್ವೆಸ್ಟ್ ಇಟ್ಸ್‌ಸೆಲ್ಫ್ ಎಂದು ಕೋಲ್‌ನ ಕೂರ್ಗ್ ಸಿವಿಲ್ ಲಾ ವಸಾಹತು ಆಡಳಿತದ ಸಮರ್ಥನೆಯ ಪ್ರತಿರೂಪದಂತೆಯಿದ್ದರು, ಸಾಂಪ್ರದಾಯಿಕ ಕೊಡಗಿನ ಸಮಾಜದ ಕುರಿತು ಮಾಹಿತಿ ನೀಡುತ್ತದೆ.

ದೇಶಿಯ ಬರವಣಿಗೆಗಳು ಕೊಡಗಿನ ಇತಿಹಾಸದ ಕುರಿತಂತೆ ವಸಾಹತು ಬರವಣಿಗೆಯಿಂದ ಆಕರ್ಷಿತರಾಗಿ ತಮ್ಮ ಇತಿಹಾಸ, ಸಂಸ್ಕೃತಿ ಪದ್ಧತಿಗಳನ್ನು ರಾಷ್ಟ್ರೀಯ ಪುನರೋದ್ಭಾವದಿಂದ ಚಿತ್ರೀಕರಿಸುತ್ತಾರೆ. ಎಲ್.ಎ. ಕೃಷ್ಣ ಅಯ್ಯರ್‌ರವರ ದಿ ಕೂರ್ಗ್ ಟ್ರೈಬ್ಸ್ ಆಂಡ್ ಕಾಸ್ಟ್ ಕೃತಿಯು ಕೊಡಗಿನ ವಿವಿಧ ಬುಡಕಟ್ಟು ಜನರ ವಿವರಣೆ, ಆಚರಣೆ ಮತ್ತು ಅರಣ್ಯವಾಸಿಗಳ ವಿವಿಧ ಪದ್ಧತಿಯನ್ನು ವಿವರಿಸುತ್ತದೆ. ಎಂ.ಎನ್. ಶ್ರೀನಿವಾಸರವರ ದಿ ರಿಲಿಜನ್ ಅಂಡ್ ಸ್ಟೊಸಾಯಿಟಿ ಎಮಾಂಗ್ ದಿ ಕೂರ್ಗ್ಸ್ ಆಫ್ ಸೌತ್ ಇಂಡಿಯಾ (೧೯೫೨) ಕೃತಿಯೂ ಗುಡ್ಡಗಾಡು ಜನಾಂಗದವರಾದ ಕೊಡಗರು ಬ್ರಾಹ್ಮಣ ಹಾಗೂ ಶೈವ ಸಂಸ್ಕೃತಿಯ ಪ್ರಭಾವದಿಂದಾಗಿ ತಮ್ಮ ರೀತಿ ನೀತಿಗಳನ್ನು ಜೀವನ ಶೈಲಿಗಳನ್ನು ಸಾಮಾಜಿಕ ಪದ್ಧತಿಗಳನ್ನು ಹಬ್ಬ ಹರಿದಿನಗಳನ್ನು, ಧಾರ್ಮಿಕ ಆಚರಣೆ ಮತ್ತು ವಿಧಿಗಳನ್ನು ಬದಲಿಸಿಕೊಂಡ ಪ್ರಕ್ರಿಯೆಯನ್ನು ಎಂ.ಎನ್. ಶ್ರೀನಿವಾಸ್ ಸಂಸ್ಕೃತಾನುಸರಣ ಎಂದು ವಿವರಿಸಿದ್ದಾರೆ. ಕೆ.ಕೆ. ಸುಬ್ಬಯ್ಯರವರ ಆರ್ಕೊಲೊಜಿ ಆಫ್ ಕೂರ್ಗ್ ಪೂರ್ವ ಇತಿಹಾಸದ ಸಂಸ್ಕೃತಿಯ ಅನಾವರಣದಲ್ಲಿ ಮೆಗಾಲಿತಿಕ್ ಕಾಲದ ಸಂಸ್ಕೃತಿ, ರಾಜಕೀಯ, ಇತಿಹಾಸ ಮತ್ತು ಅವರ ಆಚಾರ, ವಿಚಾರಗಳನ್ನು ಪುರಾತನ ದಾಖಲೆಗಳಿಂದ ವಿವರಿಸಿದ್ದಾರೆ. ಪಂದ್ಯಂಡ ಮುತ್ತಣ್ಣರವರ ಕೂರ್ಗ್ ಎಂಡ್ ದಿ ಕೂರ್ಗ್ಸ್ ಕೊಡಗಿನ ಕೊಡವರ ಸಂಸ್ಕೃತಿಯನ್ನು ವೈಭವೀಕರಿಸುವುದರೊಂದಿಗೆ ಕೊಡವತನವನ್ನು ಒಂದೆಡೆ ಎಳೆಯುವ ಅಂಶಗಳಿಂದ ಕೂಡಿದೆ.

ಸ್ಥಳೀಯ ಬರಹಗಾರರು ಕೊಡಗಿನ ಇತಿಹಾಸದೊಡನೆ ಕೊಡವ ಸಂಸ್ಕೃತಿ ಮತ್ತು ಅವರ ಆಚರಣೆಯನ್ನು ವೈಭವೀಕೃತ ಇತಿಹಾಸದಿಂದ ತಮ್ಮ ಪ್ರಮುಖ್ಯತೆಯನ್ನು ಉಜ್ವಲಗೊಳಿಸುವ ಪ್ರಕ್ರಿಯೆಯನ್ನು ೧೯ನೇ ಶತಮಾನದ ಆದಿಭಾಗದಲ್ಲಿ ಕಾಣಬಹುದಾಗಿದೆ. ಬಿ.ಡಿ. ಗಣಪತಿರವರ ಕೊಡವಾಸ್ ದೆಯರ್ ಕಸ್ಟಮ್ ಆಂಡ್ ಕಲ್ಚರ್ ಮತ್ತು ಕೊಡವರು. ಎಮ್.ಪಿ. ಕಾರ್ಯಪ್ಪ ಮತ್ತು ಪೊನ್ನಮ್ಮನವರ ದಿ ಕೂರ್ಗ್ಸ್ ಆಂಡ್ ದೆಯರ್ ಒರಿಜಿಸ್ ಕೊಡವರ ಜೀವನ ಶೈಲಿ, ಸಂಪ್ರದಾಯ ಶ್ರೇಷ್ಠ ಜನಾಂಗ ಮತ್ತು ಜಮ್ಮ ಒಡೆತನದ ಕುರಿತಂತೆ ವೈಭವೀಕೃತ ಬರವಣಿಗೆಗಳಿಂದ ವೈಭವೀಕರಿಸುವ ಸಾಂಪ್ರದಾಯವನ್ನು ಕಾಣಬಹುದಾಗಿದೆ. ಐ.ಎಮ್. ಮುತ್ತಣ್ಣನವರ ಎ ಟ್ರೈಬಿ ಮೋಡಲ್ ಸ್ಟೇಟ್ ಆಫ್ ಸೌತ್ ಇಂಡಿಯಾ. ಕೃತಿಯು ಬ್ರಿಟಿಷ್ ಆಡಳಿತದ ಕುರಿತು ಬೆಳಕು ಚೆಲ್ಲುವುದರೊಂದಿಗೆ ಬ್ರಿಟಿಷ್ ಆಡಳಿತದಲ್ಲಿನ ಬದಲಾದ ಬೆಳವಣಿಗೆಯನ್ನು ಪುಷ್ಟೀಕರಿಸಿ. ಜೊತೆಗೆ ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆಯಿಂದಾಗಿ ಕೊಡಗಿನ ಸಾಮಾಜಿಕ ಸಾಂಪ್ರದಾಯ ಮತ್ತು ಮಾಧ್ಯಮ ವರ್ಗದ ಉದಯದೊಂದಿಗೆ ಕೊಡಗಿನ ಒಕ್ಕ ಅವಿಭಕ್ತ ಕುಟುಂಬಗಳು ಹೊಂದಿದ ಸಾಮಾಜಿಕ ಬದಲಾವಣೆಯ ಕುರಿತು ಮಾಹಿತಿ ನೀಡುತ್ತದೆ. ಡಾ. ಪಿ. ಎಸ್. ರಾಮಾನುಜಂರವರ ಕೊಡವರು ಕೃತಿಯೂ ಕೊಡವರ ಮೂಲದ ಕುರಿತು ವಿವರಿಸುವುದರೊಂದಿಗೆ ಅವರ ಜೀವನ ಪದ್ಧತಿಯನ್ನು ವಿಶ್ಲೇಷಿಸಿದ್ದಾರೆ. ಡಿ.ಎನ್. ಕೃಷ್ಣಯ್ಯನವರ ಕೊಡಗಿನ ಇತಿಹಾಸದ ಕುರಿತು ವಿಸ್ತೃತವಾದ ಅಧ್ಯಯನ್ನು ಒಳಗೊಂಡಿದ್ದು, ಇದು ಅಪೂರ್ವವಾದ ಕೃತಿಯಲ್ಲದಿದ್ದರೂ ಪೂರ್ವಗ್ರಹ ಕೊರತೆಯನ್ನು ದೂರ ಮಾಡಿದೆ. ಸೂರ್ಯನಾಥ ಕಾಮತ್‌ರವರ ಕೊಡಗು ಜಿಲ್ಲಾ ಗೆಸೆಟಿಯರ್ ಕೊಡಗಿನಲ್ಲಿ ಬ್ರಿಟಿಷ್ ಆಳ್ವಿಕೆ ಮತ್ತು ಬದಲಾದ ಬದಲಾವಣೆಯನ್ನು ವಿವರಿಸುತ್ತಾರೆ. ಕೆ.ಎಂ. ಲೋಕೇಶ್‌ರವರ, ಕಾಫಿ ಪ್ಲಾಂಟೇಷನ್ ಇನ್ ಕೂರ್ಗ್ ಅಂಡರ್ ದ ಕೊಲೋನಿಯಲ್ ರೂಲ್ ೧೮೫೪–೧೯೪೭ (ಎ–ಸೋಶಿಯೋ–ಎಕೊನೋಮಿಕ್ ಸ್ಟಡಿ) (೧೯೯೩)[೧೧] ಅಪ್ರಕಟಿತ ಮಹಾಪ್ರಬಂಧವು ಕಾಫಿ ಪ್ಲಾಂಟೇಷನ್ ಮತ್ತು ಅದರ ಜನಪ್ರಿಯತೆಯಿಂದಾಗಿ, ಕಾಫಿ ಕೊಡಗಿನ ಆರ್ಥಿಕತೆಯನ್ನೇ ಬದಲಾಯಿಸಿತು, ಸ್ಥಳೀಯರು ಕಾಫಿಯ ಉತ್ಪಾದನೆಗೆ ತಮ್ಮ ಬಾಣೆ ಭೂಮಿಯನ್ನು ಹೆಚ್ಚು ಉಪಯೋಗಿಸತೊಡಗಿದ್ದರು. ಆದರೆ ಬಾಣೆ ಭೂಮಿಯು ಕೇವಲ ಮರ ಮುಟುಗಳು, ದನಕರುಗಳ ಮೇವಿಗಾಗಿ ಬಳಸಲಾಗುತ್ತಿತ್ತು. ಆದರೆ ಕಾಫಿಯ ಬೆಳವಣಿಗೆಯಿಂದ ಸ್ಥಳೀಯರು ಹೆಚ್ಚು ಬಾಣೆ ಭೂಮಿಯನ್ನು ಸಾಗು ರೈತರಿಂದ ಪಡೆದು ಜಮ್ಮ ಭೂಮಿಯಾಗಿ ಪರಿವರ್ತಿಸಿ ಕಂದಾಯ ನೀಡಲು ನಿರಾಕರಿಸಿದರು. ಇದರಿಂದ ಕಾಫಿಯ ಬೆಳವಣಿಗೆಯನ್ನು ಅರಿತ ಬ್ರಿಟಿಷ್ ಆಡಳಿತಾಧಿಕಾರಿಗಳು ಕಾಯಿದೆ ಹಾಗೂ ಕಾನೂನುಗಳನ್ನು ರೂಪಿಸಿದ್ದರು. ಇದು ಬ್ರಿಟಿಷ್ ಆಡಳಿತದಿಂದ ಪ್ರಾರಂಭಿಸಿ ಸ್ವಾತಂತ್ರ್ಯ ನಂತರವೂ ಹೆಚ್ಚು ಚರ್ಚೆಗೆ ಒಳಗಾಗಿರುವುದನ್ನು ಕಾಣಬಹುದು. ಇವರು ಎಮ್.ಎನ್. ಶ್ರೀನಿವಾಸ್‌ರವರ Coffee change the face of Coorg ಎನ್ನುವುದನ್ನು ಕಾಣಬಹುದು. ವಸಾಹತು ಆಳ್ವಿಕೆಯು ಕಾಫಿ ಸಂಸ್ಕೃತಿಯನ್ನು ಪರಿಚಯಿಸುವುದರೊಂದಿಗೆ ಕೊಡಗಿನ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಬದಲಾವಣೆ ಮಾತ್ರವಲ್ಲದೆ, ಭೂಕಂದಾಯ ಮತ್ತು ಭೂಮಾಲೀಕರ ಬೆಳವಣಿಗೆಗೆ ಸಹಕಾರಿಯಿತ್ತು ಎಂದು ತಿಳಿಸುತ್ತಾರೆ. ಕೊಡಗಿನ ಸಮಾಜ

ವ್ಯವಸ್ಥೆಗೆ ಹೊಂದಿಕೊಂಡಿದ್ದ ಗುಲಾಮ ಪದ್ಧತಿಯ ನಿಷೇಧವು (೧೮೪೩). ಆರಂಭದ ಕೊಡಗಿನ ಸಮಾಜದ ಮೇಲೆ ಯಾವುದೇ ರೀತಿಯ ಪರಿಣಾಮವನ್ನು ಬೀರುವುದಿಲ್ಲ ಎನ್ನುವುದರೊಂದಿಗೆ. ಆದರೆ ನಿರಂತರವಾದ ಕಾಫಿ ಬೆಳವಣಿಗೆಯಿಂದಾಗಿ ಕೊಡಗಿನ ತೋಟಗಳಲ್ಲಿ ದುಡಿಯಲು ಕಾರ್ಮಿಕರ ಸಮಸ್ಯೆ ಉಂಟಾದಾಗ, ನೆರೆಯ ಜಿಲ್ಲೆಗಳಿಂದ ಕಾರ್ಮಿಕರ ಆಗಮನ ಪ್ರಾರಂಭಗೊಳ್ಳತೊಡಗಿತ್ತು. ಇದರಿಂದ ಕೊಡಗಿನ ಸಂಪ್ರದಾಯ ಸಮಾಜ ವ್ಯವಸ್ಥೆ ಮತ್ತು ಅವರ ಸಂಸ್ಕೃತಿಯ ಮೇಲೆ ಪರಿಣಾಮ ಬೀರತೊಡಗಿತು. ಹಾಗೆಯೇ ಹೊಸ ಅರ್ಥವ್ಯವಸ್ಥೆಯೂ ಕೊಡಗಿನ ಸಮಾಜದಲ್ಲಿ ಉಗಮವಾಗಲು ಸಾಧ್ಯವಾಯಿತು ಎಂದು ಮುಕ್ತವಾಗಿ ತಿಳಿಸಿದಾರೆ. ಟಿ.ಪಿ.ವಿಜಯ್‌ರವರ ಜಮ್ಮ ಸಿಸ್ಟ್‌ಂ ಇನ್ ಕೊಡಗು: ಇಟ್ಸ್ ಸೋಶಿಯೋ ಎಕಾನಾಮಿಕ್ ಟ್ರೈಮೇಷ್ಸನ್ (೧೮೦೦-೧೯೮೦), (೧೯೯೩) ಈ ಅಪ್ರಕಟಿತ ಮಹಾಪ್ರಬಂಧವು ಕೊಡಗಿನ ಭೂಮಾಲೀಕ ವರ್ಗ ಮತ್ತು ಕೃಷಿಕೂಲಿಕಾರರ ಸಂಬಂಧವನ್ನು ಜಮ್ಮ ಭೂ ಹಿಡುವಳಿಯ ಅಧ್ಯಯನ ದೊಂದಿಗೆ, ಕೊಡಗಿನ ಶ್ರೇಣೀಕೃತ ಸಮಾಜದ ವರ್ಣ ವ್ಯವಸ್ಥೆ ಮತ್ತು ಅಸಮಾನತೆಯನ್ನು ವಿವರಿಸುವುದರೊಂದಿಗೆ ಮೇಲು ವರ್ಗದ ಪ್ರಾಬಲ್ಯದ ಇತಿಹಾಸದಿಂದ, ಇತಿಹಾಸ ವಂಚಿತ ಶೋಷಿತ ವರ್ಗದ ಇತಿಹಾಸವನ್ನು ಕಟ್ಟುವ ಪ್ರಯತ್ನವನ್ನು ಕಾಣಬಹುದು. ಜಮ್ಮ ಭೂಕಂದಾಯವು ಕೊಡವರ ಪ್ರತಿಷ್ಠೆ ಮತ್ತು ಅವರ ಅನನ್ಯತೆಯ ಸಂಕೇತ ಎನ್ನುವುದನ್ನು ಪ್ರಶ್ನಿಸುತ್ತಾ ಪ್ರಾರಂಭಿಸಿ. ಏಕಭಾಷಿಕ ಸಂಸ್ಕೃತಿಯ ವಿಸ್ತರಣೆ ಮತ್ತು ತಮ್ಮ ಪ್ರಬಲ್ಯತೆಗಾಗಿ ಪ್ರತ್ಯೇಕ ರಾಜ್ಯದ ಸ್ಥಾನಮಾನ ನೀಡುವು ದರಿಂದ ಬಹು ಸಂಖ್ಯಾತ ಕೊಡಗರ ಅಸ್ತಿತ್ವಕ್ಕೆ ಧಕ್ಕೆಯಾಗುವು ದೆನ್ನುವ ವಾದವನ್ನು ಚರ್ಚೆಯಾ ಮೂಲಕ ವ್ಯಕ್ತಪಡಿಸಿದ್ದಾರೆ. ಅವರ ಕೃತಿಯಾ ಜಮ್ಮ ಭೂಕಂದಾಯದ ಕುರಿತು ಕೇಂದ್ರೀಕೃತ ಚರ್ಚೆಯಾಗಿದೆ. ಭೂಮಾಲೀಕರು ಜಮ್ಮ ಭೂಮಿಯನ್ನು ಪ್ರತಿಷ್ಠೆಯ ಸಂಕೇತ ಎನ್ನುವುದನ್ನು ಪ್ರಶ್ನಿಸುತ್ತಾ ರಾಜರ ಆಳ್ವಿಕೆಯಲ್ಲಿ ರಾಜ ಜನರ ಸೇವೆಗೆ ಮೆಚ್ಚಿ ನೀಡಿದ ಭೂಮಿ ಜಮ್ಮ ಭೂಮಿ. ಹಾಗೆಯೇ ರಾಜರು ತಮ್ಮ ಆಳ್ವಿಕೆಯ ಸಂದರ್ಭ ದಲ್ಲಿ ಯಾವುದೇ ರೀತಿಯ ವಿಶೇಷವಾದ ವರ್ಗವನ್ನು ನಿರ್ಮಿಸದೆ ಅಥವಾ ಪ್ರತಿಷ್ಠ ಭೂ ಮಾಲೀಕರಾನಾಗಿಸದೆ, ಒಂದು ನಿರ್ದಿಷ್ಟವಾದ ಭೂ ಕಂದಾಯವನ್ನು ನಿಗಧಿ ಪಡಿಸಿರುತ್ತಾನೆ. ಬ್ರಿಟಿಷ್ ಆಳ್ವಿಕೆಯಲ್ಲಿ ರಾಜನ ಆಡಳಿತದ ಅಂಶಗಳನ್ನು ಮುಂದುವರಿಸಿರುವುದನ್ನು ಕಾಣಬಹುದು. ಕೊಡವ ಸಮುದಾಯ ಅಥವಾ ಜಮ್ಮ ಭೂಮಾಲೀಕರು ಪ್ರಬಲಶಾಲಿ ಸಮುದಾಯವಾಗಿ ಬ್ರಿಟಿಷ ಆಡಳಿತದಲ್ಲಿ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಹೊಂದುವ ವರ್ಗವಾಗಿ ಮಾರ್ಪಟ್ಟಿರು ತ್ತದೆ. ಹಿಟ್ಟಿ ಬಿಟ್ಟಿ ಚಾಕ್ರಿಯನ್ನು ಮಾಡಲು ಅಸಹ್ಯಪಟ್ಟು ಕೊಳ್ಳುತ್ತಿದ್ದ ಮಾರ್ಷಲ್ ವರ್ಗದ ಹರಿಕಾರರು ೨೦ನೇ ಶತಮಾನದ ಎರಡನೆಯ ದಶಕದಲ್ಲಿನ ರಾಜಕೀಯ ಬದಲಾಣೆ ಯಿಂದಾಗಿ ತಮ್ಮ ಐಡೆಂಟಿಟಿಗಾಗಿ ಪ್ರತಿಷ್ಠಿತ ಅವಕಾಶಗಳನ್ನು ಹುಡುಕತೊಡಗಿದರು. ಜಮ್ಮ ಭೂಸ್ವಾಮಿತ್ವವನ್ನು ಉತ್ಕೃಷ್ಟ ಜನಾಂಗ ದ ಮಿಲಿಟರಿ ಸೇವೆಗಾಗಿ ನೀಡಲ್ಪಟ್ಟ ಮಾನ್ಯತೆ ಎಂದು ಹೇಳತೊಡಗಿದರು. ಆದರೆ ಜಿಟ್ಟಿ ಎನ್ನುವ ಅಂಶದಿಂದ ಮನನೊಂದ ಕೊಡಗಿನ ಸ್ಥಳೀಯ ಕೊಡವರು "ಜಿಟ್ಟಿ ಎನ್ನುವುದು ಅನಾಗರಿಕವಾದದ್ದು ಮತ್ತು ಆಧುನಿಕ ಸಂಸ್ಕೃತಿಗೆ ಅಸಹ್ಯವಾದದ್ದು" ಎನ್ನುವ ಜನ ಸಾಮಾನ್ಯರ ಅಭಿಪ್ರಾಯವನ್ನು ವಿವರಿಸುತ್ತಾರೆ.[೧೨] ಕೆ.ಸಿ. ಮೋಹನ್‌ರವರ ಕೊಡಗಿನಲ್ಲಿ ವಸಾಹತು ಶಾಹಿ ಅರಣ್ಯ ಆಡಳಿತ (೧೮೩೪-೧೯೪೭), (೨೦೧೦) ಈ ಅಪ್ರಕಟಿತ ಪ್ರಬಂಧವೂ ವಸಾಹತುಶಾಹಿ ಆಡಳಿತದಲ್ಲಿ ತಮ್ಮ ಅವಲಂಬನೆಯ ಆಡಳಿತಕ್ಕೆ ಪೂರಕವಾಗು ವಂತೆ ವಿವಿಧ ಕಾನೂನು ಮತ್ತು ಕಾಯಿದೆಗಳಿಂದ ತಮ್ಮ ಆಳ್ವಿಕೆಯನ್ನು ಭದ್ರಗೊಳಿಸಿದ್ದರು. ಬ್ರಿಟಿಷ್ ಆಡಳಿತದಲ್ಲಿ ಅರಣ್ಯ ಒಂದು ಅತ್ಯಾಮೂಲ್ಯವಾದ ಆದಾಯದ ಭಾಗವಾಗುವುದ ರೊಂದಿಗೆ, ಹಡಗುಗಳನ್ನು ನಿರ್ಮಿಸಲು, ರೈಲ್ವೆಗಳ ನಿರ್ಮಾಣ ಮತ್ತು ಯುದ್ಧ ಸಲಕರಣೆಗಳನ್ನು ನಿರ್ಮಿಸಲು ಉತ್ತಮ ತಳಿಯ ಮರದ ಅವಶ್ಯಕತೆಯಿದ್ದು, ಅವರ ಅಭಿಲಾಶೆಗೆ ಹೊಂದುವಂತಹ ಮರಗಳು ಕೊಡಗಿನಲ್ಲಿದ್ದವು. ಇದರಿಂದ ಅವುಗಳ ಮೇಲಿನ ವಸಾಹತು ನಿಯಂತ್ರಣವನ್ನು ಈ ಪ್ರಬಂಧವು ವಿವರಿಸುತ್ತದೆ. ಕೊಡಗಿನ ಜನರು ರಾಜ ಮಹಾರಾಜರ ಆಡಳಿತದಲ್ಲಿ ಅರಣ್ಯದೊಂದಿಗೆ ಅನನ್ಯವಾದ ಸಂಪರ್ಕವನ್ನು ಹೊಂದಿದರು. ಆದರೆ ವಸಾಹತುಶಾಹಿ ಆಡಳಿತದಲ್ಲಿ ವಿಭಿನ್ನವಾದ ಸನ್ನಿವೇಶಗಳಿಂದ ಕೊಡಗಿನ ಇತಿಹಾಸವನ್ನು ನೋಡಬಹುದು. ಕೊಡಗಿನಲ್ಲಿ ವಾಣಿಜ್ಯ ಬೆಳವಣಿಗೆ ಹೆಚ್ಚಿನ ಮಹತ್ವವನ್ನು ಬ್ರಿಟಿಷ್ ಆಳ್ವಿಕೆಯಲ್ಲಿ ಕಾಣಬಹುದು. ಇದರ ಫಲವಾಗಿ ಬೆಲೆ ಬಾಳುವ ಮರಗಳನ್ನು ಬೆಳೆಸುವ ಆಲೋಚನೆಗಳು ಆರಂಭವಾದವು. ಇದರೊಂದಿಗೆ ಕೊಡಗಿನ ಸಮಾಜದಲ್ಲಿ ಹೊಸ ಭೂಮಾಲೀಕ ವರ್ಗಗಳ ಉದಯದೊಂದಿಗೆ ವರ್ಗ ವ್ಯವಸ್ಥೆಯಲ್ಲಿನ ರೂಪುರೇಷೆಗಳ ಬದಲಾವಣೆಯನ್ನು ಕಾಣಲು ಸಾಧ್ಯವಾಯಿತು. ಕೊಡಗಿನಲ್ಲಿ ಅಭಿಭಕ್ತ ಕುಟುಂಬಗಳು ವಿಭಜನೆಯೊಂದುವ ಸನ್ನಿವೇಶಗಳು ನಿರ್ಮಾಣವಾದವು, ಮುಖ್ಯವಾಗಿ ಕೊಡಗಿನ ಯುವ ಜನರು ವೈಯಕ್ತಿಕ ಹೆಸರಿನಲ್ಲಿ ಆಸ್ತಿ ನೋಂದಣಿ ಮಾಡಿಕೊಳ್ಳುವ ಮೂಲಕ ಸಂಪ್ರದಾಯ ಕೊಡಗಿನ ಸಮಾಜದ ಪರಿವರ್ತನೆ ಯನ್ನು ಕಾಣಲು ಸಾಧ್ಯವಾಯಿತು. ಸ್ಥಳೀಯರು ಅರಣ್ಯ ಭೂಮಿಯಲ್ಲಿ ಅತಿಕ್ರಮಣ ಮತ್ತು ಅವರ ಮಾಲೀಕತ್ವದ

ಲಕ್ಷಣವನ್ನು ಮನಗಂಡ ಸರ್ಕಾರ ಅರಣ್ಯ ಪ್ರದೇಶಗಳ ಮೇಲೆ ಬೀಗಿ ಓಡಿತ ಮತ್ತು ಕಾನೂನುಗಳ ಮುಖ್ಯ ಅರಣ್ಯಗಳ ಹತೋಟಿ ಸಾಧಿಸುವ ಸಂಚಲನೆಯೊಂದಿಗೆ, ಒಂದು ವ್ಯವಸ್ಥಿತವಾದ ಯೋಜನೆಗಳ ಮೂಲಕ ಭದ್ರಗೊಳಿಸಿದರು. ಕೊಡಗಿನ ಬುಡಕಟ್ಟು ಸಮುದಾಯವು ಅರಣ್ಯ ಅವಲಂಬಿತ ರಾಗಿದ್ದರು, ವಸಾಹತು ಆಡಳಿತದಲ್ಲಿ ಯಾವುದೇ ರೀತಿಯ ಸಮಸ್ಯೆಗೆ ಒಳಾಗಿರುವುದಿಲ್ಲ. ಕಾರಣ ಅವರ ಮೂಲ ಕಸುಬು ಕುಮರಿ ಕೃಷಿಯಲ್ಲಿ ತೊಡಗುವುದಕ್ಕೆ ಅನುಮತಿ ನೀಡಲಾಗಿತ್ತು. ಮುಖ್ಯವಾಗಿ ಕೊಡಗಿನ ಅರಣ್ಯ ಆಡಳಿತದ ವಿರುದ್ಧ ಯಾವುದೇ ಸಮುದಾಯವು ಧ್ವನಿಯೆತ್ತಿರುವ ಮಾಹಿತಿ ಕಂಡು ಬರುವುದಿಲ್ಲ. ಕೊಡಗಿನ ಜನರ ಸಂಪರ್ಕ ಮತ್ತು ವಿಶ್ವಾಸಕ್ಕೆ ಸ್ಥಳೀಯರ ಜಾನುವಾರುಗಳು ಅರಣ್ಯ ಪ್ರವೇಶಿಸಲು ಇಂತಿಷ್ಟು ಬಾಡಿಗೆಯ ಮೂಲಕ ನಿಯಂತ್ರಣ ಸಾಧಿಸಿರುವುದನ್ನು ಕಾಣಾಬಹುದು. ಪ್ಲಾಂಟೇಷನ್‌ಗಳ ಅಭಿವೃದ್ಧಿಯಿಂದಾಗಿ ಸ್ಥಳೀಯರು ಮತ್ತು ಯೂರೋಪಿಯನ್ನ ಪ್ಲಾಂಟರುಗಳು ಸರ್ಕಾರದ ಮೇಲೆ ಒತ್ತಡ ಹೇರಲು ಪ್ರಾರಂಭಿಸಿದರು. ಇದನ್ನು ಅರಿತ ಸರ್ಕಾರ ಅರಣ್ಯ ನೀತಿಗಳ ಅನುಷ್ಠಾನ ಜಾರಿಗೊಂಡರೂ ಅವು ವಸಾಹತುಶಾಹಿಯ ಅವಲಂಬನೆಗೆ ಅನುಗುಣವಾಗಿತ್ತು ಎಂದು ಗೋಚರಿಸುತ್ತದೆ. ಪ್ರಥಮ ಮತ್ತು ದ್ವಿತೀಯ ಜಾಗತಿಕ ಮಹಾಯುದ್ಧ ಸಂದರ್ಭದಲ್ಲಿ ಕೊಡಗಿನ ಮಿಲಿಯಾಗಟ್ಟಲೇ ಮರಗಳು ವಿದೇಶಕ್ಕೆ ರವಾನೆಯಾದವೂ. ಒಟ್ಟಾರೆಯಾಗಿ ಕೊಡಗಿನ ವಸಾಹತು ಅರಣ್ಯ ಆಡಳಿತವೂ ವಸಾಹತು ಬೇಡಿಕೆಯ ಪ್ರತಿರೂಪದಂತೆಯಿತು ಎಂದು ತಿಳಿಸುತ್ತಾರೆ.[೧೩] ನಮ್ಮ ರಾಜಕೀಯ ಇತಿಹಾಸದ ಪಾರುಪತ್ಯದಲ್ಲಿ ಎಂ.ಜಿ. ನಾಗರಾಜ್‌ರವರ ಕೊಡಗಿನ ಹಾಲೇರಿ ರಾಜವಂಶವೂ ಗ್ರಂಥವೂ ಸಮಗ್ರ ಸಾಂಸ್ಕೃತಿಕ ಅಧ್ಯಯದೊಂದಿಗೆ ಕೊಡಗಿನ ಇತಿಹಾಸದ ಮೇಲೆ ಬೆಳಕು ಚಲ್ಲುವ ಶಾಸನಗಳು, ಸ್ಮಾರಕಗಳು, ನಾಣ್ಯಗಳು, ಬ್ರಿಟಿಷ್ ದಾಖಲೆಗಳಲ್ಲಿ ಕಂಡು ಬರುವ ಐತಿಹಾಸಿಕ ಸಾಮಾಜಿಕ ವಿವರಣೆಯೊಂದಿಗೆ, ಮೌಖಿಕ ಇತಿಹಾಸದಲ್ಲಿ ಕೇಂದ್ರಿಕೃತವಾಗಿರುವ ಕೊಡಗಿನ ಇತಿಹಾಸದ, ಇತಿಹಾಸವನ್ನು ಪೀಳಿಗೆಯಿಂದ ಪೀಳಿಗೆಗೆ ನಿರ್ಮಿಸಿರುವ ಅವರ ಪ್ರಯತ್ನ ಅಪಾರವಾಗಿದೆ. ಕೊಡವರು ಕದಂಬ ಮೂಲಕ್ಕೆ ಸೇರಿದವರು ಎನ್ನುವುದರ ಕುರಿತಂತೆ ಶಾಸನಗಳಲ್ಲಿ ಅಭಿವ್ಯಕ್ತ ವಾಗಿರುವ ಅಂಶಗಳನ್ನು ದಾಖಲೊಂದಿಗೆ ಚರ್ಚಿಸಿದ್ದಾರೆ.

ಕೊಡಗಿನ ಇತಿಹಾಸದಲ್ಲಿ ಹಾಲೇರಿ ಅರಸರ ಆಳ್ವಿಕೆಯನ್ನು ಮಾತ್ರ ಕಾಣಲು ಸಾಧ್ಯವಾಗಿದೆ ಎನ್ನುವ ಪ್ರಶ್ನೆಗೆ [illegible] ಲೇಖಕರು ಹಾಲೇರಿ ವಂಶದ ರಾಜರನ್ನು ಗುರುತಿಸಿ ಪೂರ್ಣ ಶೋಧ ಮತ್ತು ಚಿಂತನೆಗೆ ಮುಂದಾಗಲಿಲ್ಲ ಎಂದು ಜರಿಯುತ್ತಾರೆ. ಇದರಿಂದ ಚಿಕ್ಕ ವೀರರಾಜೇಂದ್ರ ಒಂದು ದ್ವಂದ್ವಗಳ ಗೂಡಾಗಿ ಕಾಣಿಸಿಕೊಂಡಿದ್ದಾನೆ. ಕೊಡಗಿನ ಇತಿಹಾಸ ಪ್ರಸಿದ್ಧ ಓಂಕಾರೇಶ್ವರ ದೇಗುಲದ ವಾಸ್ತು ಶೈಲಿಯನ್ನು ಆದಿಲ್‌ಶಾಹಿ ಶೈಲಿಗೆ ತಾಳೆ ಮಾಡಿರುವುದನ್ನು ಪ್ರಶ್ನಿಸಿ ಆ ದೇಗುಲ ವಾಸ್ತುವಿನಲ್ಲಿ ಒಡೆಯನು ಮಾಡಿದ ಒಂದು ಹೊಸ ಪ್ರಯೋಗವಾಗಿ ಹಿಂದೂ–ಮುಸ್ಲಿಂ ಶೈಲಿಗಳ ಸಂಯುಕ್ತವಾದ ರೂಪವೆಂದಿದ್ದಾರೆ. ಜಮ್ಮ ಭೂ ಹಿಡುವಳಿಯು ಸೇವೆಗೆ ದೊರೆತ ಪ್ರತಿಫಲ ಎಂದು ಭೂದಾನ ದತ್ತಿಗಳು, ಶಿಲಾ ಮತ್ತು ತಾಮ್ರಶಾಸನಗಳಲ್ಲಿ ಕಾಣಬಹುದು. ಅದು ಪಾರಂಪರ್ಯ ವಾಗಿದ್ದು, ಆದರೆ ಅವುಗಳನ್ನು ಮಾರಬಾರದು, ವಿಭಾಗಿಸ ಬಾರದು, ಪರಭಾರೆ ಮಾಡಬಾರದು, ಎಂದು ಶಾಸನಗಳಲ್ಲಿ ಕಾಣಬರುವುದಿಲ್ಲ. ಜಮ್ಮ ಎಂಬ ಶಬ್ದ 'ಹುಟ್ಟಿನಿಂದ ಬರುವ ಹಕ್ಕು' ಎನ್ನುವುದು ಹಾಲೇರಿ ಅರಸರ ಶಾಸನಗಳು ಕಾಣುವು ದಿಲ್ಲ ಎಂದು ತಿಳಿಸಿದ್ದಾರೆ. ಆದರೆ ಹಾಲೇರಿ ಅರಸರು ಸೇವೆಗೆ ಪ್ರತಿಯಾಗಿ ಅರ್ಧದಷ್ಟು ನೀಡಬೇಕು ಎಂಬುವುದನ್ನು ವಂಶಪಾರಂಪರ್ಯವಾಗಿ ಉಳಿಸಿಕೊಂಡು ಹೋಗಬೇಕೆಂದು ತಿಳಿಸಿರುವುದು ದಾಖಲಾಗಿದೆ ಎಂದು ತಿಳಿಸುತ್ತಾರೆ. ಜಮ್ಮ ಇತಿಹಾಸಕ್ಕೆ ಒಂದು ಪರಂಪರೆಯಾಗಿದ್ದು, ಮುಖ್ಯವಾಗಿ ಕೊಡಗಿನ ಸಂಸ್ಕೃತಿ ಉಳಿಯಲೂ ಅದೂ ಕಾರಣವಾಗಿದೆ ಎಂದು ತಿಳಿಸುತ್ತಾರೆ. ಪಿ.ಟಿ. ಜೋಪಣ್ಣ ರೈಸ್ ಅಂಡ್ ಫಾಲ್ ಆಫ್ ದಿ ಕೂರ್ಗ್ ಸ್ಟೇಟ್ (೨೦೦೯) ಡೆತ್ಸ್ ಲೈನ್ ಕೂರ್ಗ್ (೨೦೧೦) ಕೊಡಗು ಸಿ ರಾಜ್ಯದಿಂದ ಮೈಸೂರು ರಾಜ್ಯದಲ್ಲಿನ ವಿಲೀನಗೊಂಡ ರಾಜಕೀಯ ಅಂಶಗಳಿಂದ ಕೊಡಗಿನ ಸಂಸ್ಕೃತಿ ಮತ್ತು ಬ್ರಿಟಿಷ್ ಆಳ್ವಿಕೆಯಲ್ಲಿನ ಕೊಡಗನ್ನು ವಿವರಿಸುತ್ತಾರೆ.[೧೪] ಹೀಗೆ ಕೊಡಗು ಪುಟ್ಟವಾದ ಪ್ರಾಂತ್ಯ ವಾದರೂ, ವಿಸ್ತಾರವಾದ ಇತಿಹಾಸ ಕಥನದ ಚರ್ಚೆ ಗಳೊಂದಿಗೆ ಆಸಕ್ತಿದಾಯಕವಾದ ಅಂಶಗಳಿಂದ ಸಂಶೋಧ ನೆಗೆ ಮಹತ್ತರವಾದ ಕ್ಷೇತ್ರವಾಗಿ ಕಂಡುಕೊಂಡಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ರಾಬ್ ಕೋಲ್, ಎ ಮ್ಯಾನ್ಯುಯಲ್ ಆಫ್ ಕೂರ್ಗ್ ಸಿವಿಲ್ ಲಾ, ಬೆಂಗಳೂರು, ೧೯೪೭

೨. ಷೇಕ್ ಅಲಿ., ಹಿಸ್ಟರಿ ಇಟ್ಸ್ ಥಿಯರೀ ಆಯಂಡ್ ಮೆಥಡ್ಸ್, ಮದ್ರಾಸ್, ೧೯೭೮.

೩. ರೇಶ್ಮಾ.ಜಿ.ಭಟ್., ಚಿಂತನ ಬಯಲು, ಸಂಪುಟ.೨, ಮಂಗಳೂರು, ೨೦೧೩. (ಪುಟ ೧೩, ೧೫, ೧೬).

೪. Suryanath U. Kamath., *Historigraphy of Karnataka* , Mythic Society, Bangalore.1991.

೫. Bari S.A., History Historians and Historiography In South India, Shivamoga, 1992. pp. 01-15

೬. Suryanath U. Kamath., *Historigraphy of Karnataka*.

೭. The office of the Chief-Commissioners' of Coorg, *Historical Summary of the British Rule in Coorg During the past Seventy years*, Mercara, Dated 14th August 1922. old records (Madikeri record room).

೮. Ibid., p.17.

೯. Proceedings of the Indian History Congress, Golden Jubilee Session, Gorakhpur University, *Arms and Honour: The Case of a Little Imperialist Bluff in Coorg*, 1989. *The Missionary Writings on Coorg*, Calcutta 51th Session, 1990. *Conquest through Knowledge: A Case of the 19th Century Colonial Coorg*, 58th Bangalore, 1997.

೧೦. ರಿಕ್ಟರ್. ಜಿ., ಮ್ಯಾನ್ಯುವಲ್ ಆಫ್ ಕೂರ್ಗ್. ಎ ಗ್ಯಾಸೆಟಿಯರ್. ೧೮೭೦. ಸೂರ್ಯನಾಥ ಕಾಮತ್. ಕರ್ನಾಟಕ ರಾಜ್ಯ ಗೆಜೆಟಿಯರ್. ಕೊಡಗು ರಾಜ್ಯ ಗೆಜೆಟಿಯರ್, ಬೆಂಗಳೂರು, ೧೯೯೩. Lewis Rice., Mysore and Coorg, A Gazetteer Compiled for the Government of India, Vol. 3, 1878.

೧೧. Ibid., p.540

೧೨. ಡಿ.ಎನ್. ಕೃಷ್ಣಯ್ಯ., ಕೊಡಗಿನ ಇತಿಹಾಸ, ಮೈಸೂರು, ೧೯೭೪. ಪುರುಷೋತ್ತಮ ಬಿಳಿಮಲೆ, ಲಿಂಗರಾಜೇಂದ್ರನ ಹುಕುಂನಾಮೆ, ಒಂದು ಅಧ್ಯಯನ, ಮಾನವಿಕ ಕರ್ನಾಟಕ, ಸಂಪುಟ ೧೬ ಮೈಸೂರು, ೧೯೮೭. ಶ್ರೀನಿವಾಸ, ಚಿಕ್ಕವೀರರಾಜೇಂದ್ರ, ಬೆಂಗಳೂರು, ೧೯೮೪. ಬಿ.ಆರ್. ಭಾರತಿ., ಕೈದಾಳ ಡಾ. ಕೆ.ಆರ್. ಗಣೇಶ್ ಅಭಿನಂದನಾ ಗ್ರಂಥ, "ಕೊಡಗಿನಲ್ಲಿ ಕನ್ನಡ ಶಾಸನಗಳ ಭಾಷೆ ಸಾಹಿತ್ಯ ಸಾಂಸ್ಕೃತಿಕ ಪರಂಪರೆ" ಡಾ. ಎಂ.ಜಿ. ನಾಗರಾಜ್, ಬೆಂಗಳೂರು ೨೦೧೨, ಪುಟ. ೧೮೬-೧೯೯. ನಾಗರಾಜು. ಎಂ.ಜಿ., ಕೊಡಗಿನ ಹಾಲೇರಿ ರಾಜವಂಶವು, ಪ್ರಾಚ್ಯ ವಸ್ತು ಸಂಗ್ರಹಾಲಯ, ಹೊಸಪೇಟೆ, ೨೦೦೪.

೧೩. ಕೆ.ಎಂ.ಲೋಕೇಶ್, ಕಾಫಿ ಪ್ಲಾಂಟೇಷನ್ ಇನ್ ಕೂರ್ಗ್ ಅಂಡರ್ ದ ಕೊಲೋನಿಯಲ್ ರೂಲ್ – ೧೮೩೪ – ೧೯೪೭ (ಎ-ಸೋಶಿಯೋ-ಎಕೋನೋಮಿಕ್ ಸ್ಟಡಿ) ಅಪ್ರಕಟಿತ ಪಿ.ಹೆಚ್.ಡಿ ಥೀಸಿಸ್ ಡಿಪಾರ್ಟ್‌ಮೆಂಟ್ ಆಫ್ ಸ್ಟಡೀಸ್ ಇನ್ ಹಿಸ್ಟರಿ ಅಂಡ್ ಆರ್ಕಿಯೋಲೊಜಿ, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನ ಸಹ್ಯಾದ್ರಿ, ಮೇ ೧೯೯೩. ಪ್ರೊ.ಸುರೇಂದ್ರ ರಾವ್ ಮತ್ತು ಕೆ.ಎಮ್.ಲೋಕೇಶ್‌ರವರ 'ಕೂರ್ಗ್ ಇನ್‌ವೇಂಡ್ಸ್" ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು. (೧೯೯೮) ೧೯ನೇ ಶತಮಾನದ ಯೂರೋಪಿಯನ್ನ ಬರವಣಿಗೆಗಳಲ್ಲಿ ಕೊಡಗಿನ ಕುರಿತಂತೆ ಈ ಕೃತಿಯಲ್ಲಿ ಪಾಶ್ಚಿಮಾತ್ಯ ಮಿಷನರಿಗಳು, ಕೊಡಗಿನ ಭೂಗೋಳಿಕತೆ, ಎಕಾನಾಮಿ/ಕಾಫಿ, ಸೋಸೈಟಿ ಮತ್ತು ಕೂರ್ಗ್‌ನ ಆಡಳಿತಗಾರರನ್ನು ವಿವರಿಸುತ್ತದೆ. ಸ್ವಾತಂತ್ರ್ಯ ಪೂರ್ವ ಕೊಡಗಿನ ಆಡಳಿತ ರಂಗದಲ್ಲಿ ಗಣನೀಯ ಪಾತ್ರ ವಹಿಸಿ ಕೊಡಗಿನ ಜನಾಂಗಗಳಲ್ಲಿ ಕಂಡು ಬರುವ ವಿವಿಧ ಆಚಾರಣೆಗಳನ್ನು ತಿಳಿಸುವ ಅಂಶಗಳನ್ನು ಡಾ. ಕೆ. ಎಂ. ಲೋಕೇಶ್‌ರವರು ರೆವರೆಂಡ್ ಜಿ. ರಿಕ್ಟರ್‌ರವರ *Castes and Tribes found in the Province of Coorg* ಕೃತಿಯನ್ನು ಕನ್ನಡಕ್ಕೆ ಅನುವಾದಿಸಿ ಕೊಡವ ಭಾಷೆಯನ್ನಾಡುವ ಜಾತಿ, ಪಂಗಡ, ಬುಡಕಟ್ಟುಗಳ ಸಾಂಸ್ಕೃತಿಕ ವಿಭಿನ್ನತೆಗಳು ಅವರ ಇತಿಹಾಸ, ಭಾಷೆ, ಸಾಮಾಜಿಕ ಚೌಕಟ್ಟು ಅರ್ಥವ್ಯವಸ್ಥೆ, ಕಲೆ, ಸಾಹಿತ್ಯ, ಹಾಡು ಪರಿಸರ, ನಾಗರಿಕತೆಯ ಕುರಿತಂತೆ ಅನುವಾದಿಸಿ ಬ್ರಿಟಿಷ್ ಅಧಿಕಾರಿಯ ಅಭಿರುಚಿಯನ್ನು ತಿಳಿಸಿರುತ್ತಾರೆ. ಡಾ. ಕೋಡೀರ ಲೋಕೇಶ್ ಪೊನ್ನಪ್ಪ., ಅಧ್ಯಕ್ಷರ ಭಾಷಣ, ೪ನೇ ಕನ್ನಡ ಸಾಹಿತ್ಯ ಸಮ್ಮೇಳನ, ಅಮ್ಮತ್ತಿ, ಕೊಡಗು ಜಿಲ್ಲೆ, ೨೦೧೧.

೧೪. ಟಿ.ಪಿ. ವಿಜಯ್, ಐಮ್ಮ ಟೆನೆರ್ ಇನ್ ಕೊಡಗು-ಈಟ್ಸ್ ಸಿಸ್ಟಮ್ ಸೋಶಿಯೋ ಎಕಾನಾಮಿಕ್ ಡೈಮೆನ್ಷನ್ಸ್ ೧೮೦೦-೧೯೮೦ (ಅಪ್ರಕಟಿತ ಮಹಾಪ್ರಬಂಧ), ಮಂಗಳೂರು ವಿಶ್ವವಿದ್ಯಾನಿಲಯ, ೧೯೯೩. **ಪ್ರತ್ಯೇಕ ಕೊಡಗು ರಾಜ್ಯ ಮೂಲನಿವಾಸಿಗಳು ಮತ್ತು ವಲಸೆಗಾರರು**, (೧೯೯೮). ಈ ಕೃತಿಯೂ ಏಕರೂಪಿ ಜನಾಂಗದವರ ಪ್ರತ್ಯೇಕ ರಾಜ್ಯ ಹೋರಾಟದ ಕೂಗನ್ನು ಸ್ವಾತಂತ್ರ್ಯ ನಂತರದಲ್ಲಿ ಕಂಡುಬಂದಿದೆ ಎಂದು ತಿಳಿಸುತ್ತಾರೆ. ಅವರ **ಆಧುನಿಕ ಕೊಡಗು** (೨೦೦೦) ಕೊಡಗಿನ ಚರಿತ್ರೆಯ ವಿವಿಧ ಆಯಾಮಗಳ ಬಗ್ಗೆ ಚರ್ಚಿಸುತ್ತದೆ. ಈ ಕೃತಿಯು ಮುಖ್ಯವಾಗಿ ಭೂ ಹಿಡುವಳಿಗೆ ಸಂಬಂಧಿಸಿದ ಕೃತಿಯಾಗಿದೆ.

೧೨೧

ವಸಾಹತುಶಾಹಿ ಕೊಡಗು ಹಾಗೂ ಜಾರ್ಜ್ ರಿಕ್ಟರ್‌ನ ಕೊಡಗು ಗೆಸೆಟಿಯರ್: ಒಂದು ವಿಮರ್ಶಾತ್ಮಕ ಅವಲೋಕನ

ಡಾ. ಮೀನಾಕ್ಷಿ ಎಂ.ಎಂ.*

ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ೧೮ನೇ ಶತಮಾನದಲ್ಲಿ ಒಂದು ಭೌಗೋಳಿಕ, ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿ ರಾಜ್ಯವನ್ನಾಳಬೇಕಾದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಯ್ತು. ಇಂತಹ ಗುರುತರ ಹೊಣೆಗಾರಿಕೆಯನ್ನು ನಿರ್ವಹಿಸಲು ವಿಶಾಲ ಆಡಳಿತಾತ್ಮಕ ಚೌಕಟ್ಟನ್ನು ನಿರ್ಮಿಸಲು ಅದು ಪ್ರಾರಂಭಿಸಿತು. ಸ್ಥಳೀಯ ಪ್ರದೇಶಗಳ ಇತಿಹಾಸ, ಸಂಸ್ಕೃತಿ ಭಾಷೆ, ಜನಸಂಖ್ಯೆ, ಧರ್ಮಗಳು, ಜಾತಿ ಪಂಗಡಗಳು, ಅವರ ಕಾನೂನುಗಳು, ಪದ್ಧತಿಗಳು ಇತ್ಯಾದಿಗಳನ್ನು ಆಡಳಿತದ ಅನುಕೂಲಕ್ಕಾಗಿ ತಿಳಿದುಕೊಳ್ಳಬೇಕಾದ ಅನಿವಾರ್ಯತೆ ಕಂಪನಿಗೆ ಉಂಟಾದಾಗ, ಅದು ಜಿಲ್ಲೆಗಳ, ಪ್ರಾಂತ್ಯಗಳ ಕುರಿತು ವಿಸ್ತಾರವಾದ ಗೆಸೆಟಿಯರ್‌ಗಳನ್ನು ಹೊರತರಲು ಪ್ರಾರಂಭಿಸಿದರು. ಹೀಗಾಗಿ ೧೮ನೇ ಹಾಗೂ ಹೆಚ್ಚಾಗಿ ೧೯ನೇ ಶತಮಾನಗಳಲ್ಲಿ ಪ್ರತಿ ಜಿಲ್ಲೆ/ಪ್ರಾಂತ್ಯದ ಕುರಿತು, ಅಷ್ಟೇ ಏಕೆ, ಬ್ರಿಟಿಷ್ ಇಂಡಿಯಾದ ಕುರಿತು ಗೆಸಿಟಿಯರ್‌ಗಳು ಬ್ರಿಟಿಷ್ ಆಡಳಿತಾಧಿಕಾರಿಗಳಿಂದ ಸೃಷ್ಟಿಯಾಗಲು ಪ್ರಾರಂಭವಾದವು. ಹೀಗೆ ಮೂಡಿಬಂದ ಗೆಸೆಟಿಯರ್‌ಗಳು ಕೇವಲ ಮಾಹಿತಿ ಕೈಪಿಡಿ ಅಥವಾ ಮಾರ್ಗದರ್ಶಿಗಳಾಗಿರಲಿಲ್ಲ. ಅವುಗಳು ಭಾರತೀಯರ ಕುರಿತು ಬ್ರಿಟಿಷರು ಸೃಷ್ಟಿ ಮಾಡಿದ ಜ್ಞಾನವಾಗಿದ್ದು ಅದೇ ಭಾರತ/ಭಾರತೀಯರ ಕುರಿತು ವಸ್ತುನಿಷ್ಠ ಮತ್ತು ಅಧಿಕೃತ ಮಾಹಿತಿ/ಜ್ಞಾನ ಎಂಬುದಾಗಿ ಬಿಂಬಿಸಲಾಯಿತು. ಇದನ್ನೇ ಆಧುನಿಕ ಇತಿಹಾಸಕಾರರು "ಕಲೋನಿಯಲ್ ನಾಲೆಜ್ಡ್" ಎಂದು ಕರೆಯುತ್ತಾರೆ. ಈ ಜ್ಞಾನವು ಭಾರತೀಯರು ಹಿಂದೆ ಹೀಗಿದ್ದರು ಹಾಗೂ ವಸಾಹತುಶಾಹಿ ಕಾಲದಲ್ಲಿ ಹೀಗಿದ್ದಾರೆ ಎಂಬುವುದನ್ನು ತಮ್ಮದೇ ರೀತಿಯಲ್ಲಿ ತಿಳಿಸಿಕೊಡುತ್ತಾ ಭಾರತೀಯರ ಕುರಿತು ಕೆಲವು 'ಇಮೇಜ್' ಅಥವ 'ಮಾದರಿ'ಗಳನ್ನು ಸೃಷ್ಟಿಸುವುದನ್ನು ಕಾಣುತ್ತೇವೆ.

ರೆ. ಜಾರ್ಜ್ ರಿಕ್ಟರ್, ಬಾಸೆಲ್ ಮಿಷನ್‌ನ ಪಾದ್ರಿಯಾಗಿದ್ದು ಮ್ಯೋಗ್ಲಿಂಗ್‌ನ ಅನುಯಾಯಿಯಾಗಿ ಕೊಡಗಿನಲ್ಲಿ ಹಲವಾರು ವರ್ಷಗಳ ಕಾಲ ನೆಲೆಸಿ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದವನು. ೧೮೭೦ರಲ್ಲಿ ಇವನು ಬರೆದ 'ಕೂರ್ಗ್ ಗಸೆಟಿಯರ್' ಬಹಳ ಪ್ರಭಾವಶಾಲಿಯಾದ ಪುಸ್ತಕವಾಗಿ ನಂತರ ಬಂದ ಕೊಡಗಿನ ಕುರಿತು ಆಂಗ್ಲ ಹಾಗೂ ಸ್ಥಳೀಯರ ಬರಹಗಳ ಮೇಲೆ ಅಪಾರ ಪ್ರಭಾವವನ್ನು ಬೀರಿತು. ಅವನ ಗಸೆಟಿಯರ್ ಹೀಗೆ ಕೊಡಗು, ಕೊಡವ ಹಾಗೂ ಕೊಡಗರ ಕುರಿತು ನೀಡುವ ಮಾಹಿತಿ/ಜ್ಞಾನವನ್ನು ಹಾಗೂ ಅವುಗಳ ಪರಿಣಾಮಗಳನ್ನು ಇಲ್ಲಿ ವಿಮರ್ಶಾತ್ಮಕವಾಗಿ ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.

ರೆ। ರಿಕ್ಟರನು ಕ್ರಿ.ಶ. ೧೮೭೯ರಲ್ಲಿ ಜರ್ಮನಿಯಲ್ಲಿ ಹುಟ್ಟಿ ತನ್ನ ಶಾಲಾ ಶಿಕ್ಷಣದ ನಂತರ ೨೦ರ ಹರೆಯದಲ್ಲಿ ಬಾಸೆಲ್ ಮಿಷನ್ ಹೌಸ್‌ನ್ನು ಸೇರಿ ಕ್ರೈಸ್ತ ಮತ ಪ್ರಚಾರಕ ಹಾಗೂ ಶಿಕ್ಷಕನಾಗಿ ತರಬೇತಿಯನ್ನು ಪಡೆದನು. ಇದರ ನಂತರ ಇಂಗ್ಲಿಷ್ ಭಾಷೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಲು ಹಾಗೂ ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯನ್ನು ಪರಿಚಯಿಸಿಕೊಳ್ಳಲು ಇಂಗ್ಲೆಂಡಿಗೆ ತೆರಳಿದನು. ೧೮೫೫ರಲ್ಲಿ ಬಾಸೆಲ್ ಮಿಷನ್ನಿನ ಸದಸ್ಯನಾಗಿ ಕೇರಳದ ಕಣ್ಣೂರಿಗೆ ಬಂದ ರಿಕ್ಟರ್ ಹರ್ಮನ್ ಗುಂಡರ್ಟ್‌ನೊಂದಿಗೆ ಕೆಲ ಸಮಯ ಕಾರ್ಯ ನಿರ್ವಹಿಸಿ, ಅದೇ ವರ್ಷ ಮಂಗಳೂರಿಗೆ ಬಂದು ಬಾಸೆಲ್ ಮಿಷನ್ ಇಂಗ್ಲಿಷ್ ಸ್ಕೂಲಿನಲ್ಲಿ ಬೋಧಿಸಲು ಪ್ರಾರಂಭಿಸಿದನು.[೧] ಅಲ್ಲಿ ಯಾವುದೋ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಅವನು ಸಿಕ್ಕಿ ಬಿದ್ದು ಮುಂದುವರಿಯಲಾಗದೇ ಇದ್ದಾಗ, ರೆ. ಹರ್ಮನ್ ಮ್ಯೋಗ್ಲಿಂಗ್‌ನು ೧೮೫೭ರಲ್ಲಿ ಅವನನ್ನು ಕೊಡಗಿನ ಮಡಿಕೇರಿಗೆ ಬರಮಾಡಿಕೊಳ್ಳುತ್ತಾನೆ.[೨] ಕೊಡಗಿನಲ್ಲಿ ಅವನು ಆರಂಭದಲ್ಲಿ, ವಿರಾಜಪೇಟೆಯ ಬಳಿ ಸೃಷ್ಟಿಯಾದ ಮೊದಲ ಪ್ರೊಟೆಸ್ಟಾಂಟ್ ಮಿಷನ್ ಆನಂದಪುರ (ಸಿಟಿ ಆಫ್ ಜಾಯ್) ಎಂಬಲ್ಲಿ ಕ್ರೈಸ್ತ ಪಂಥಕ್ಕೆ ಮತಾಂತರ ಹೊಂದಿದವರೊಂದಿಗೆ ಕಾರ್ಯ ನಿರ್ವಹಿಸತೊಡಗಿದನು. ಮುಂದೆ ಅದೇ ವರ್ಷ ಮಡಿಕೇರಿ ಇಂಗ್ಲಿಷ್ ಶಾಲೆಯ ಹೆಡ್

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು–೫೭೫೦೦೧

ಮಾಸ್ಟರ್ ಆಗಿ ಅಧಿಕಾರ ವಹಿಸಿಕೊಂಡನು. ಸ್ವಲ್ಪ ಸಮಯದ ನಂತರ ಇಡೀ ಕೊಡಗು ಜಿಲ್ಲೆಯ ಇನ್ಸ್‌ಪೆಕ್ಟರ್ ಆಫ್ ಸ್ಕೂಲ್ಸ್ ಆಗಿ ಸರ್ಕಾರದಿಂದ ನೇಮಿಸಲ್ಪಟ್ಟನು. ಈ ಹುದ್ದೆಯಲ್ಲಿ ಕೊಡಗಿನಾದ್ಯಂತ ಪ್ರವಾಸ ಮಾಡಬೇಕಾದ ಅವಶ್ಯಕತೆ ಯಿದ್ದುದರಿಂದ, ರಿಕ್ಟರ್‌ನಿಗೆ ಕೊಡಗಿನ ಹಲವು ಪ್ರದೇಶಗಳು, ಜನಗಳು, ಬುಡಕಟ್ಟುಗಳು, ಅರಣ್ಯವಾಸಿಗಳು ಹಾಗೂ ಅವರೆಲ್ಲರ ಸಂಸ್ಕೃತಿಗಳ ಪರಿಚಯವಾಗತೊಡಗಿತು. ಆಲ್‌ಬ್ರೆಕ್ಟ್ ಫ್ರೆಂಜ್ ಹೇಳುವಂತೆ ರಿಕ್ಟರನು ಜನರ, ಮುಖ್ಯವಾಗಿ ಕೊಡವ ಜನಾಂಗದ ಆತ್ಮಬಲವನ್ನು ವೃದ್ಧಿಸುವುದರಲ್ಲಿ ಮಹತ್ತರ ಪಾತ್ರ ವಹಿಸಿದುದಲ್ಲದೆ, ವಸಾಹತುಷಾಹಿ ಆಡಳಿತದ ಹೇರಿಕೆ ಯೊಂದಿಗೆ ಬಂದ 'ಪಾಶ್ಚಿಮಾತ್ಯ' ಜೀವನ ಶೈಲಿಯನ್ನು ನಿಧಾನವಾಗಿ ಒಪ್ಪಿಕೊಳ್ಳಲು ಕೂಡ ಪ್ರೋತ್ಸಾಹ ನೀಡಿದನು: ಆದರೆ ಅದೇ ವೇಳೆ ಅವರು ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಕೂಡ ಗಮನ ಹರಿಸುವಂತೆ ಅವರನ್ನು ಎಚ್ಚರಿಸಿದನು. ಇಡೀ ಜಿಲ್ಲೆಯನ್ನು ಪ್ರೊಟೆಸ್ಟಂಟ್ ಪಂಥಕ್ಕೆ ಪರಿವರ್ತನೆಗೊಳಿಸಬೇಕೆಂಬ ಬಾಸೆಲ್ ಮಿಷನ್‌ನ ಇರಾದೆ ಯನ್ನು ರಿಕ್ಟರ್ ಒಪ್ಪಿಕೊಳ್ಳಲಿಲ್ಲ ಎಂದು ಆಲ್‌ಬ್ರೆಕ್ಟ್ ಫ್ರೆಂಜ್ ಬರೆಯುತ್ತಾನೆ.[೩]

ಸರ್ಕಾರಿ ಉದ್ಯೋಗಿಯಾಗಿ ಆಯ್ಕೆಗೊಂಡ ರಿಕ್ಟರ್ ನನ್ನು ಬಾಸೆಲ್ ಮಿಷನ್ ೧೮೬೩ರಲ್ಲಿ ಉಚ್ಚಾಟನೆ ಮಾಡಿತು. ಹೀಗಾಗಿ ಮುಂದೆ ಶೈಕ್ಷಣಿಕ ಕಾರ್ಯಗಳಲ್ಲಿ ರಿಕ್ಟರ್‌ನು ಹೆಚ್ಚಿನ ಆಸಕ್ತಿಯನ್ನು ವಹಿಸಲು ಪ್ರಾರಂಭಿಸಿದನು. ಕೊಡಗಿನಲ್ಲಿ ೧೮೫೫ರಿಂದ ೧೮೯೬ವರೆಗೆ ಕಾರ್ಯ ನಿರ್ವಹಿಸಿ ತನ್ನ ಹುಟ್ಟೂರು ಜರ್ಮನಿಗೆ ಹಿಂದಿರುಗಿದನು.[೪]

ರಿಕ್ಟರನು ಕೊಡಗಿನಲ್ಲಿ ಸುಮಾರು ೪೧ ವರ್ಷಗಳ ಕಾಲ ವಾಸಿಸಿ ಶಿಕ್ಷಕ, ಇನ್ಸ್‌ಪೆಕ್ಟರ್ ಆಫ್ ಸ್ಕೂಲ್ಸ್, ಇತಿಹಾಸಕಾರ, ಭೂಗೋಳ ಶಾಸ್ತ್ರಜ್ಞ, ಜನಾಂಗೀಯ ಶಾಸ್ತ್ರಜ್ಞ, ಸಾಹಿತಿ, ತೋಟಗಾರಿಕಾ ತಜ್ಞ ಹೀಗೆ ವಿವಿಧ ಸಾಮರ್ಥ್ಯಗಳಲ್ಲಿ ಕಾರ್ಯ ನಿರ್ವಹಿಸಿದನು. ಅವನು ೧೮೭೦ರಲ್ಲಿ ಕೊಡಗಿನ ಕುರಿತು 'ಗಸೆಟಿಯರ್ ಆಫ್ ಕೂರ್ಗ್, ನ್ಯಾಚುರಲ್ ಫೀಚರ್ಸ್ ಆಫ್ ದಿ ಕಂಟ್ರಿ ಆಂಡ್ ದಿ ಸೋಶಿಯಲ್ ಆಂಡ್ ಪೊಲಿಟಿಕಲ್ ಕಂಡಿಷನ್ಸ್ ಆಫ್ ಇಟ್ಸ್ ಇನ್ಹ್ಯಾಬಿಟೆಂಟ್ಸ್' ಎಂಬ ಕೃತಿಯನ್ನು ರಚಿಸಿದನು.

ಕೊಡಗಿಗೆ ಸಂಬಂಧಿಸಿದಂತೆ ೧೯ನೇ ಶತಮಾನದಲ್ಲಿ, ಆದಿಭಾಗದಿಂದ ಆ ಶತಮಾನದ ಕೊನೆಯವರೆಗೆ ಹಲವು ಬರವಣಿಗೆಗಳು ಹೊರಬಂದವು. ಸ್ಥಳೀಯ ಬರಹಗಳಲ್ಲಿ ಮುಖ್ಯವಾದುದೆಂದರೆ ದೊಡ್ಡ ವೀರರಾಜೇಂದ್ರನ ಕಾಲದಲ್ಲಿ ಬರೆಯಲ್ಪಟ್ಟ "ರಾಜೇಂದ್ರನಾಮ" (೧೮೦೭). ವಿದೇಶಿ ಪ್ರವಾಸಿಗರು ಸರ್ವೇಕ್ಷಣಕಾರರು, ಆಡಳಿತಾಧಿಕಾರಿಗಳು ಕೂಡ ಕೊಡಗಿನ ಕುರಿತು ಬರೆದು ಅಪಾರ ಮಾಹಿತಿಯನ್ನು ಮತ್ತು ಜ್ಞಾನವನ್ನು ಸೃಷ್ಟಿಸಿದರು. ಈ ಬರವಣಿಗೆಗಳೆಂದರೆ ಲೆಫ್ಟಿನೆಂಟ್ ಕೊನೂರ್‌ನ 'ಮೆಮ್ವಾ ಆಫ್ ದಿ ಕೊಡಗು, ಸರ್ವೆ' (೧೮೧೫–೧೭), ಹರ್ಮನ್ ಮ್ಯೊಗ್ಲಿಂಗ್‌ನ 'ಕೂರ್ಗ್ ಮೆಮ್ವಾ' (೧೮೫೫), ರಿಕ್ಟರನ 'ಕೂರ್ಗ್ ಗಸೆಟಿಯರ್' (೧೮೭೦).

ಅವನದೇ ಇನ್ನೊಂದು ಕೃತಿ 'ಎಥ್ನೋಗ್ರಾಫಿಕಲ್ ಕೆಂಪೆಂಡಿಯಮ್ ಆಫ್ ಕಾಸ್ಟ್ಸ್ ಆಂಡ್ ಟ್ರೈಬ್ಸ್ ಫೌಂಡ್ ಇನ್ ಕೂರ್ಗ್ (೧೮೮೭). ಲೆವಿಸ್ ರೈಸನ 'ಗಸೆಟಿಯರ್ ಆಫ್ ಮೈಸೂರು' (೧೮೭೭) ಇದರಲ್ಲಿ ಮೂರು ಸಂಪುಟ ವಿದ್ದು, ಮೂರನೇ ಸಂಪುಟ ಕೊಡಗಿಗೆ ಸಂಬಂಧಿಸಿದೆ. ಈ ಎಲ್ಲಾ ಐರೋಪ್ಯ ಬರವಣಿಗೆಗಳು ಸಾಕಷ್ಟು ಭಿನ್ನತೆ ಹಾಗೂ ವೈಯಕ್ತಿಕತೆಯನ್ನು ಹೊಂದಿದ್ದು, ಅದೇ ವೇಳೆಯಲ್ಲಿ ಕೊಡಗಿನ ಕುರಿತು ಕೆಲವು ನಿರ್ದಿಷ್ಟ ಪ್ರತಿಮೆಗಳನ್ನು ಸೃಷ್ಟಿಸಿದ್ದು ಅವುಗಳು ಇಂದಿಗೂ ಉಳಿದುಕೊಂಡಿವೆ.

ರಿಕ್ಟರನು ತನ್ನ 'ಕೂರ್ಗ್ ಗಸೆಟಿಯರ್'ನ ಮುನ್ನುಡಿ ಯಲ್ಲಿ ಈ ರೀತಿ ಹೇಳುತ್ತಾನೆ: 'ಈ ಕೈಪಿಡಿಯು, ಕಳೆದ ೩೬ ವರ್ಷಗಳಿಂದ ಬ್ರಿಟಿಷ್ ಸರ್ಕಾರದ ಹತೋಟಿಯಲ್ಲಿರುವ ಆಸಕ್ತಿ ಕುದುರಿಸುವ ಕೊಡಗು ಪ್ರಾಂತ್ಯದ ಗತಚರಿತ್ರೆ ಮತ್ತು ವರ್ತಮಾನದ ಪ್ರಾಕೃತಿಕ ಹಾಗೂ ರಾಜಕೀಯ ಸ್ಥಾನದ ಕುರಿತು ವಸ್ತುನಿಷ್ಠವಾದ ವಿವರಣೆಯನ್ನು ನೀಡುವ ಗುರಿಯನ್ನು ಹೊಂದಿದೆ' ಎಂದು.[೫] ತಾನು ಕೊಡುವ ಮಾಹಿತಿಯು ನಂಬಲರ್ಹ ವಾದುದು ಎಂಬುವುದಕ್ಕೆ ಇನ್ನೊಂದು ಖಾತರಿಯೆಂದರೆ ತಾನು ೧೫ ವರ್ಷಗಳ ಕಾಲ ಕೊಡಗರ ನಡುವೆ ವಾಸಿಸಿರು ವುದು ಮತ್ತು ಸರ್ಕಾರಿ ಸ್ಥಳೀಯ ಭಾಷಾ ಶಾಲೆಗಳ ಇನ್ಸ್‌ಪೆಕ್ಟರ್ ನಾಗಿ ಕೊಡಗಿನ ಪ್ರತಿಯೊಂದು ಭಾಗದಲ್ಲಿ ಅವರೊಡನೆ ಪರಿಚಯ ಹೊಂದಿರುವುದು ಎಂದು ಹೇಳುತ್ತೇನೆ. ಲೆಫ್ಟಿನೆಂಟ್ ಕೊನೊರ್ ಹಾಗೂ ಹರ್ಮನ್ ಮ್ಯೊಗ್ಲಿಂಗ್‌ರ ಬರವಣಿಗೆ ಗಳಿಂದ ಹಲವು ಅಂಶಗಳನ್ನು ಎತ್ತಿಕೊಂಡ ರಿಕ್ಟರ್‌ನಿಗೆ ಅವರ ಕೃತಿಗಳು ಕೊಡಗಿನ ಕುರಿತು ಸ್ಪಷ್ಟ ಹಾಗೂ ಸಮಗ್ರ ಒಳನೋಟಗಳನ್ನು ನೀಡುತ್ತವೆ.

ರಿಕ್ಟರನು ತನ್ನ ಗಸೆಟಿಯರ್‌ನಲ್ಲಿ ನಾಲ್ಕು ಭಾಗಗಳನ್ನು ಮಾಡಿ, ಮೊದಲ ಭಾಗದಲ್ಲಿ ಕೊಡಗು ದೇಶ ಮತ್ತು ಅದರ ಸ್ವಾಭಾವಿಕ ಉತ್ಪನ್ನಗಳು, ಎರಡನೆಯದರಲ್ಲಿ ಕೊಡಗಿನ ಜನರು, ಮೂರನೆಯದರಲ್ಲಿ ಕೊಡಗಿನ ಇತಿಹಾಸ ಮತ್ತು ಭಾಗ ನಾಲ್ಕರಲ್ಲಿ ಬ್ರಿಟಿಷ್ ಸರ್ಕಾರದ ಉಸ್ತುವಾರಿಯಲ್ಲಿ ಕೊಡಗು ಎಂದು ಅಧ್ಯಯನ ಮಾಡುತ್ತಾನೆ.

ರಿಕ್ಟರನು ತನ್ನ ಕೃತಿಯನ್ನು ಕೊಡಗು ಜಿಲ್ಲೆಯ "ಜೀವನ ಚರಿತ್ರೆ"ಯಾಗಿ ನಮ್ಮ ಮುಂದೆ ಇಡುತ್ತಾ, ಅದರಲ್ಲಿ ಆಡಳಿತಗಾರನಿಗೆ ಬೇಕಾದ ಮಾಹಿತಿಯನ್ನು ಮಾತ್ರ

ಒಡಮೂಡುವಂತೆ. ಕೆಲವು ಸಂದರ್ಭಗಳಲ್ಲಿ ಕೊಡವ ಜನಾಂಗ, ಇತರ ಜಾತಿ ಬುಡಕಟ್ಟು ಪಂಗಡಗಳ ಕುರಿತು ಕೆಲವು ತಾತ್ಸಾರಪೂರಕ ಒಳನೋಟಗಳನ್ನು ನೀಡುತ್ತಾನೆ. ಅಲ್ಲದೆ ಕೊಡವರು ವಿಶೇಷವಾಗಿ ಅವನ ಗಮನ ಸೆಳೆಯುತ್ತಾರೆ ಮತ್ತು ಪುಸ್ತಕದುದ್ದಕ್ಕೂ ಅವರ ಕುರಿತು ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾ, ಅವರ ಮೂಲ ಇತಿಹಾಸ, ಅವರ ಸಾಮಾಜಿಕ, ಧಾರ್ಮಿಕ ಪದ್ಧತಿಗಳು, ಇತಿಹಾಸದುದ್ದಕ್ಕೂ ಅವರು ರಾಜ್ಯರಕ್ಷಣೆಯಲ್ಲಿ ತೋರಿದ, ವಹಿಸಿದ ಪಾತ್ರ ಮತ್ತು ಅವರ ವೀರ ಪರಂಪರೆ ಕೊಡವ ಮಹಿಳೆ "ಕೊಡಗಿತಿ"ಯು ಸಾಮಾಜಿಕ ಸಾಂಸ್ಕೃತಿಕ ಲೋಕದಲ್ಲಿ ವಹಿಸುವ ಪಾತ್ರ, ವಸಾಹತುಷಾಹಿ ಪೂರ್ವಕಾಲದಲ್ಲಿ ಕೊಡವ ಹಾಗೂ ಕೊಡಗರ ಪರಿಸ್ಥಿತಿ, ರಾಜಮನೆತನ–ಮುಖ್ಯವಾಗಿ ಹಾಲೇರಿ ವಂಶ ಹಾಗೂ ಕೊಡವರ ನಡುವಿನ ಸಂಬಂಧ, ಜಮ್ಮ ಹಾಗೂ ಇತರ ಭೂಹಿಡುವಳಿ ವ್ಯವಸ್ಥೆಗಳು ಮತ್ತು ಕೊಡವರು, ಬ್ರಿಟಿಷರ ಆಗಮನ, ಅವರ ಕಾರ್ಯಸೂಚಿಗಳು ಮತ್ತು ಆಶಯಗಳು, ಕೊಡಗರ ಮುಖ್ಯವಾಗಿ ಕೊಡವರ ಸಮಾಜದ ಮೇಲೆ ಬ್ರಿಟಿಷ್ ನೀತಿಗಳ, ಕೆಲವು ಸಂದರ್ಭಗಳಲ್ಲಿ ಸುಧಾರಣೆಗಳ ಪ್ರಭಾವ, ಕಾಫಿ ಬೆಳಗಾರಿಕೆಯ ಪ್ರಾರಂಭ, ಪಾಶ್ಚಿಮಾತ್ಯ ಮಾದರಿಯ ಶಿಕ್ಷಣದ ಜಾರಿ, ಇವುಗಳ ಪ್ರಭಾವ, ಕೊಡವರು ಮತ್ತು ಮಿಷನರಿ ಆಶೋತ್ತರಗಳು ಮತ್ತು ಅವರ ಕಾರ್ಯಸೂಚಿಗಳು, ಇತ್ಯಾದಿಗಳನ್ನು ಬಹಳ ಆಸಕ್ತಿ ಹಾಗೂ ಸಂಶೋಧನಾತ್ಮಕ ಒಳನೋಟಗಳಿಂದ ಚರ್ಚಿಸುತ್ತಾನೆ.

ರಿಕ್ಟರ್ ನೀಡುವ ಒಂದು ಪ್ರಮುಖ ಚಿತ್ರವೆಂದರೆ ಬ್ರಿಟಿಷರು ಕೊಡಗನ್ನು ವಶಪಡಿಸಿಕೊಂಡಿರುವುದು ಮಾತ್ರವಲ್ಲ ಅದರ ಇತಿಹಾಸವನ್ನು ಕೂಡ ಎನ್ನುವುದು. ಕೊಡಗಿನ ನಿಜ ಇತಿಹಾಸ ಪ್ರಾರಂಭವಾಗುವುದೇ ಬ್ರಿಟಿಷ್ ಆಳ್ವಿಕೆಯು ಹೇರಲ್ಪಟ್ಟ ಕ್ಷಣದಿಂದ. ರಿಕ್ಟರನು ಬ್ರಿಟಿಷ್‌ಪೂರ್ವ ಆಳ್ವಿಕೆಯನ್ನು ಒಂದು 'ಕತ್ತಲ ಯುಗ'ವಾಗಿ ಚಿತ್ರಿಸುತ್ತಾ ಕ್ರೂರ ದರ್ಪಿಷ್ಟ ರಾಜಪ್ರಭುತ್ವದಲ್ಲಿ ನೆರಳುತ್ತಾ, ವಿಮೋಚನೆಗಾಗಿ ಸದಾ ಕಾಯುತ್ತಿದ್ದ ಪ್ರಾಂತ್ಯವಾಗಿ ಕೊಡಗನ್ನು ವರ್ಣಿಸುತ್ತಾನೆ. ಕೊಡಗಿನ ಹಾಲೇರಿ ರಾಜರ ಆಳ್ವಿಕೆ ಮತ್ತು ಅದರ ಹಿಂದಿನ ಆಳ್ವಿಕೆಯಲ್ಲಿ ಕೊಡಗು 'ಪ್ರಗತಿ' ಎಂಬ ಅಂಶವನ್ನು ಕಾಣದೆ ಎಲ್ಲಾ ಕ್ಷೇತ್ರಗಳಲ್ಲಿ ಹಿಂದುಳಿದು, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕವಾಗಿ ಅಕ್ಕಪಕ್ಕದ ನಾಡುಗಳ ವಿವೇಚನಾಹೀನ ಪದ್ಧತಿಗಳನ್ನು ಮೈಗೂಡಿಸಿಕೊಂಡು ಮುಂದುವರಿಯತ್ತೆಂದು ರಿಕ್ಟರ್ ಬರೆಯುತ್ತಾನೆ. 'ರಾಜೇಂದ್ರನಾಮೆ'ಯನ್ನು ಒಂದು ಆಕರವಾಗಿ ಹೊಗಳಿದರೂ ರಿಕ್ಟರನು ಅದರಲ್ಲಿ ದೊಡ್ಡ ವೀರರಾಜನು ಉದ್ದೇಶಪೂರ್ವಕವಾಗಿ ಕೆಲವು ಸಂಗತಿಗಳನ್ನು ಮರೆಮಾಚಿ ಎಲ್ಲಾ ಸತ್ಯಗಳನ್ನು ಹೇಳುವುದಿಲ್ಲವೆಂದು ಆರೋಪಿಸುತ್ತಾನೆ. ಕೊಡಗರ ಮೇಲೆ ಲಿಂಗಾಯತ ರಾಜಪ್ರಭುತ್ವದ ಹೇರಿಕೆ, ಕೊಡವರು, ಮೈಸೂರು ಸೇರಿ ಅಕ್ಕಪಕ್ಕದ ನಾಡುಗಳ ಮೇಲೆ ನಡೆಸುತ್ತಿದ್ದ ದಾಳಿಕೋರ ದಾಳಿಗಳು ಹಾಗೂ ಅವನು ನಡೆಸುತ್ತಿದ್ದ ಹಿಂಸಾತ್ಮಕ ಕ್ರೂರಕೃತ್ಯಗಳು, ಇವುಗಳನ್ನು ಮರೆಮಾಚಿದ್ದಾನೆ ಎಂದು ರಿಕ್ಟರ್ ಹೇಳುತ್ತಾನೆ. ರಾಜೇಂದ್ರನಾಮೆಯನ್ನು ರಾಜನು ಇಂಗ್ಲಿಷರನ್ನು ಮೆಚ್ಚಿಸಲೋಸುಗ ಬರೆದಿದ್ದು ನಂತರ ರಾಬರ್ಟ್ ಅಬರ್‌ಕ್ರಾಂಬಿಯಿಂದ ಅದನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿಸಿದುದಾಗಿ ಹೇಳುತ್ತಾನೆ.

ಮೈಸೂರಿನ ನಿರಂಕುಶ ಮುಸ್ಲಿಂ ಸರ್ವಾಧಿಕಾರಿಗಳ ಕಾಲದಲ್ಲಿ ೧೭೬೦–೧೭೯೯ ಕೊಡಗಿನ ಅರ್ಧದಷ್ಟು ಜನರು ಒಂದೋ ನಾಶವಾದರು ಇಲ್ಲವೇ ಕೊಂಡೊಯ್ಯಲ್ಪಟ್ಟರೆಂದು ಅಭಿಪ್ರಾಯ ಪಡುವ ಅವನು ರಾಜರ ಕಾಲದಲ್ಲಿ ಕೊಡವ ಬುಡಕಟ್ಟು ಕೇವಲ ೫೦೦೦ದಿಂದ ೬೦೦೦ದಷ್ಟು ಸಶಸ್ತ್ರ ಗಂಡಸರನ್ನು ಹೊಂದಿದ್ದು, ಬ್ರಿಟಿಷ್ ಸರ್ಕಾರದ ದೀರ್ಘಕಾಲದ ಅವಧಿಯಲ್ಲಿ ಶಾಂತಿ ಮತ್ತು ಸಂಪತ್ತಿನಿಂದಾಗಿ ಅದು ವೃದ್ಧಿಯಾಗಿ ಇಂದು ಸುಮಾರು ೩೦,೦೦೦ ಆಗಿದೆ ಎಂದು ಹೆಮ್ಮೆಪಡುತ್ತಾನೆ. ೧೮೦೭ ಮತ್ತು ೧೮೦೮ರ ನಡುವೆ ದೊಡ್ಡ ವೀರರಾಜೇಂದ್ರನು ಸುಮಾರು ೩೦೦ ಕೊಡವ ಸೈನಿಕರನ್ನು ತನ್ನ ವಿರುದ್ಧ ಪಿತೂರಿ ಮಾಡಿದ್ದರೆಂಬ ಸಂಶಯದ ಮೇಲೆ ತನ್ನ ಅಂಗರಕ್ಷಕರಾಗಿದ್ದ ಆಫ್ರಿಕಾದ ಸಿದ್ದಿಗಳಿಂದ ಅವರನ್ನು ಘೋರವಾಗಿ ಹತ್ಯೆ ಮಾಡಿದನೆಂದು ಬರೆಯುತ್ತಾ ರಾಜರ ನಿರಂಕುಶ ಪ್ರಭುತ್ವಕ್ಕೆ ಉದಾಹರಣೆಯನ್ನು ನೀಡುತ್ತಾನೆ.

ಎರಡನೇ ಮುಖ್ಯವಾದ ಅಂಶವನ್ನು ಅವನು ಎತ್ತಿ ತೋರಿಸುವುದೆಂದರೆ ಕೊಡಗು ಒಂದು 'ವಿಶಿಷ್ಟ'ವಾದ ಪ್ರತ್ಯೇಕವಾದ ಪ್ರಾಂತ್ಯವಾಗಿದ್ದು, ಕೊಡವ ಜನಾಂಗವು ಕೂಡ ತನ್ನದೇ ಆದ ವೀರ ಪರಂಪರೆ, ಜಮ್ಮ ಹಿಡುವಳಿ ವ್ಯವಸ್ಥೆ ಇವುಗಳಿಂದಾಗಿ ಭಿನ್ನವಾದ, ವಿಶಿಷ್ಟ ಜನಾಂಗೀಯ ಹಾಗೂ ಸಾಂಸ್ಕೃತಿಕ ಪಂಗಡ ಎನ್ನುವುದು. ಹಿಂದೂ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅವರು ಶೂದ್ರರು ಎಂದು ಹೇಳುತ್ತಾ ಅವರು ಜಾತಿವ್ಯವಸ್ಥೆಯನ್ನು ಪೂರ್ಣವಾಗಿ ತಿರಸ್ಕರಿಸಿದ್ದು ಅವರಿಗೆ ಹೆಮ್ಮೆಯ ವಿಚಾರವಾಗಿದೆ ಎಂದು ಹೇಳುತ್ತಾನೆ.

ಜಮ್ಮ ಹಿಡುವಳಿಯು ಪ್ರತಿಷ್ಠಿತ ಭೂಹಿಡುವಳಿಯಾಗಿದ್ದು ಕೊಡವರಿಗೆ ಅವರ ಸೈನಿಕ ಪರಂಪರೆಗೆ ಅದು ಹೇಗೆ ಸಂಬಂಧಿಸಿದೆ ಮತ್ತು ಬ್ರಿಟಿಷ್ ಸರ್ಕಾರ ಅದನ್ನು ಹೇಗೆ ಪುರಸ್ಕರಿಸುತ್ತಾ ಬಂದಿದೆ ಎಂಬುವುದನ್ನು ಚರ್ಚಿಸುತ್ತಾನೆ. ಜಮ್ಮ ರೈತರು ಬದಲಾದ ಸನ್ನಿವೇಶದಲ್ಲಿ ರಾಜರ ಕಾಲದಲ್ಲಿ ಸಲ್ಲಿಸುತ್ತಿದ್ದ ಕೆಲವು ಪುಕ್ಕಟೆ ಚಾಕರಿಗಳನ್ನು ಮಾಡಲು

ನಿರಾಕರಿಸುವ ಸಂದರ್ಭದಲ್ಲಿ ರಿಕ್ಟರನು ಆ ಕುರಿತು ಸರ್ಕಾರಕ್ಕೆ 'ಕೊಡವರ ಆತ್ಮಗೌರವಕ್ಕೆ' ಧಕ್ಕೆಯಾಗದ ರೀತಿಯಲ್ಲಿ ಹಿಟ್ಟಿಬಿಟ್ಟಿಯ ಸಮಸ್ಯೆಯನ್ನು ಪರಿಹರಿಸಬೇಕೆಂದು ಸಲಹೆ ನೀಡುತ್ತಾನೆ.[೬]

ರಿಕ್ಟರ್ ಮತ್ತು ಅವನ ಹಿಂದಿನ ಮಿಷನರಿಗಳು ಕೊಡವರ ಕುರಿತು 'ಇವಾಂಜಿಕಲ್' (ಮತ ಬದಲಾವಣೆ) ಭರವಸೆಗಳನ್ನಿಟ್ಟುಕೊಂಡಿದ್ದರು. ಮಲಯಾಳ ಹಾಗೂ ಇತರ ಕಡೆಗಳಿಂದ ಕೊಡಗಿನ ಸಮಾಜ ವ್ಯವಸ್ಥೆಯನ್ನು ಪ್ರವೇಶಿಸಿ ಕೊಡವರನ್ನು ಮೂಢನಂಬಿಕೆ, ಮಾಟತಂತ್ರಗಳ ದಾಸರನ್ನಾಗಿ ಮಾಡಿರುವ ದುಷ್ಟಪದ್ಧತಿಗಳಿಂದ ಅವರನ್ನು ವಿಮೋಚನೆಗೊಳಿಸಿ ಪ್ರಗತಿಯತ್ತ ಕೊಂಡೊಯ್ಯಲು ಕ್ರೈಸ್ತ ಧರ್ಮದ ತತ್ವಗಳನ್ನು ಅವರು ಒಪ್ಪಿಕೊಳ್ಳುವಂತೆ ಮಾಡುವುದೇ ಮಾರ್ಗವೆಂದು ನಂಬಿದ್ದರು ಮತ್ತು ಕೊಡಗಿನಂತಹ ಹುಲುಸಾದ ಪ್ರಾಂತ್ಯವು ಸಿಗಲಾರದೆಂದು ರಿಕ್ಟನು ಕೂಡ ನಂಬಿದ್ದನು. ಕೊಡವರು ಕ್ರೈಸ್ತ ಪಂಥದ ಸತ್ಯವನ್ನು ಒಪ್ಪಿಕೊಂಡಾಗ, ಸತ್ಯವೇದದ ಸತ್‌ಪ್ರಭಾವಕ್ಕೆ ತಮ್ಮನ್ನು ತೆರೆದುಕೊಂಡಾಗ ಅವರು ಜೀವನೋನ್ನತಿಯನ್ನು ಸಾಧಿಸಿ, ದೈಹಿಕವಾಗಿ, ನೈತಿಕವಾಗಿ ಹಾಗೂ ಬೌದ್ಧಿಕವಾಗಿ ಇಂದಿನ ಐರೋಪ್ಯ ಆಡಳಿತಗಾರ ಮಟ್ಟಕ್ಕೆ ಬರಬಹುದು ಎಂದು ಆಶಯವನ್ನು ವ್ಯಕ್ತಪಡಿಸುತ್ತಾನೆ. ಕೊಡವರು ಇನ್ನೂ ಕ್ರೈಸ್ತ ಪಂಥದ ಪ್ರಭಾವದಿಂದ ದೂರ ಉಳಿದಿರುವುದಕ್ಕೆ ನಿರಾಶೆ ವ್ಯಕ್ತಪಡಿಸುತ್ತಾನೆ.[೭]

ರಿಕ್ಟರ್ ತನ್ನ ಗಸೆಟಿಯರ್‌ನಲ್ಲಿ ಕೊಡಗರು ಬ್ರಿಟಿಷ್‌ರು ಬರುವವರೆಗೂ ವಿದ್ಯೆರಹಿತ ಜನಾಂಗ ಆಗಿಯೇ ಉಳಿದಿದ್ದು, ರಾಜರು ತಾವೇ ಸ್ವತಃ ಅವಿದ್ಯಾವಂತರಾಗಿದ್ದುದರಿಂದ ಜನರ ಬೌದ್ಧಿಕ ಉನ್ನತಿಗಾಗಿ ಏನನ್ನೂ ಮಾಡಲಿಲ್ಲ; ಅಷ್ಟೇ ಅಲ್ಲ ಬ್ರಿಟಿಷರು ಕೂಡ ತಮ್ಮ ಮೊದಲ ೨೦ ವರ್ಷಗಳ ಕಾಲ ಅವಧಿಯಲ್ಲಿ ಶಿಕ್ಷಣದಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಿಲ್ಲವೆಂದು ಟೀಕಿಸುತ್ತಾನೆ. ಈಗಾಗಿ ಇಂಗ್ಲಿಷ್ ಅಕ್ಷರವನ್ನು ಬರೆಯ ಬಲ್ಲ, ಅಥವಾ ಸ್ವಲ್ಪಮಟ್ಟಿಗೆ ಕನ್ನಡದಿಂದ ಇಂಗ್ಲಿಷ್‌ಗೆ ತರ್ಜುಮ ಮಾಡಬಲ್ಲ ಒಬ್ಬನೇ ಒಬ್ಬ ಕೊಡಗನನ್ನು ನಾನೆಂದು ಕಾಣುವುದಿಲ್ಲ ಎಂದು ಬೇಸರ ವ್ಯಕ್ತಪಡಿಸುತ್ತಾನೆ.[೮] ಶಿಕ್ಷಣದ ಅವಗಣನೆಯಿಂದಾಗಿ ಕೊಡಗರು ಅಜ್ಞಾನಿಗಳಾಗಿ, ಮೂಢನಂಬಿಕೆ ಅಜ್ಞಾನಗಳ ಸುಳಿಯಲ್ಲಿ ಸಿಲುಕಿದ್ದಾರೆ. ಮಾಟತಂತ್ರಗಳು ಮೋಸಗಾರಿಕೆ, ಸುಳ್ಳುಗಾರಿಕೆ, ಪಿತೂರಿಗಳು ದೇಶ ತುಂಬಾ ತುಂಬಿ ಹೋಗಿದ್ದು, ಕಣಿಯರು, ಫಣಿಕರು, ಮಲೆಯರು ಹಾಗೂ ಬಣ್ಣರು ಕೊಡಗರ ಅಜ್ಞಾನವನ್ನು ಉಪಯೋಗಿಸಿ ಕೊಂಡು ಹೊಟ್ಟೆ ಹೊರೆಯುತ್ತಿದ್ದಾರೆಂದು ಹೇಳುತ್ತಾ, ಪಾಶ್ಚಿಮಾತ್ಯ ಶಿಕ್ಷಣವನ್ನು ಹರಡಲು ಆಗ್ರಹ ಮಾಡುತ್ತಾನೆ. ರಿಕ್ಟರನು ಶಿಕ್ಷಣವನ್ನು ಪಸರಿಸಲು ಪ್ರೋತ್ಸಾಹ ನೀಡಿದರೂ ಉನ್ನತ ಶಿಕ್ಷಣಕ್ಕೆ ಕೊಡವರು ಇನ್ನೂ ಅರ್ಹರಾಗಿಲ್ಲ ಎಂಬ ಮಾತನ್ನು ತಾನು ಕೊಡಗು ಬಿಡುವವರೆಗೂ ವಾದಿಸುವುದನ್ನು ದಾಖಲೆಗಳಲ್ಲಿ ಕಾಣಬಹುದು.

ರಿಕ್ಟರ್ ಸೃಷ್ಟಿ ಮಾಡಿದ ಇನ್ನೊಂದು ಮಾದರಿಯು ೧೮೩೭ರ ಕೊಡಗು ದಂಗೆಗೆ ಸಂಬಂಧಿಸಿದೆ. ಹೆಚ್ಚು ಚರ್ಚಿತವಾಗಿರುವ ಈ ದಂಗೆಯನ್ನು ರಿಕ್ಟರನು 'ಕೂರ್ಗ್ ರೆಬೆಲಿಯನ್' ಎಂದು ಕರೆಯುತ್ತಾ ಅದು ನಿಜವಾಗಿ ಪಶ್ಚಿಮ ಘಟ್ಟದ ಪಶ್ಚಿಮ ಇಳಿಜಾರಿನಲ್ಲಿ ತಮ್ಮ ಹಲವಾರು ಪದ್ಧತಿಗಳಲ್ಲಿ ಕೊಡವರನ್ನು ಹೋಲುವ ಗೌಡ ಸಮುದಾಯದಿಂದ ಉಂಟಾದ ಕೃತ್ಯ – altogether a Gowda affair ಎಂದು ಅಭಿಪ್ರಾಯಪಡುತ್ತಾನೆ. ಹೀಗೆ ಹೇಳುತ್ತಾ ಇದರಲ್ಲಿ ಕೊಡವರ ಪಾತ್ರವು ಕನಿಷ್ಠವಾಗಿದ್ದು, ಅವರು ಬ್ರಿಟಿಷರಿಗೆ ವಿಧೇಯರಾಗಿಯೇ ಉಳಿದಿದ್ದರು ಎಂದೂ ವಾದಿಸುತ್ತಾನೆ. ದಿವಾನ್ ಬೋಪು ಕುರಿತು ದಿವಾನ್ ಪೊನ್ನಪ್ಪನು ಲೀಹಾರ್ಡಿಗೆ ಸಂಶಯ ಬರುವಂತೆ ಮಾಡಿದ್ದನ್ನು ಟೀಕಿಸುತ್ತಾ, ದಿವಾನ್ ಬೋಪು ನಿರಪರಾಧಿ, ಮುಗ್ಧ ಎಂದು ಅಭಿಪ್ರಾಯಪಡುತ್ತಾನೆ. ಕೊಡಗಿನಲ್ಲಿ ದಂಗೆಯಾಗದಂತೆ ಬೋಪು ಕ್ರಮ ಕೈಗೊಂಡ ಕುರಿತು ಸಂತೋಷಪಡುತ್ತಾನೆ. ಈ ದಂಗೆಯ ನಂತರ ಕೊಡಗಿನಲ್ಲಿ ಎಂದೂ ಶಾಂತಿ ಕದಡಲ್ಪಡಲಿಲ್ಲ ಎಂಬ ಮಾತನ್ನು ತಪ್ಪದೇ ಹೇಳುತ್ತಾನೆ.[೯]

ಕೊಡವರ ಜನಾಂಗದ ಕುರಿತು ಆಸಕ್ತಿದಾಯಕ ಮಾಹಿತಿಯನ್ನು ಅವನು ನೀಡುತ್ತಾ ಸಾಗುತ್ತಾನೆ. ಕೊಡಗರಲ್ಲಿ ಬಹು ಪತಿತ್ವ (ಪೊಲ್ಯಾಯಾಂಡ್ರಿ) ಅಥವಾ ಅವನೇ ಹೇಳುವನಂತೆ Communism of women in one house ಇತ್ತೆಂಬುವುದನ್ನು ರಿಕ್ಟರ್ ತೀವ್ರವಾಗಿ ಅಲ್ಲಗಳೆಯುತ್ತಾ ಕರ್ನಲ್ ವಿಲ್ಕ್ಸ್ ಅಥವಾ ಕೊನೂರನು ಹೇಳುವ ಮಾತನ್ನು ತಿರಸ್ಕರಿಸುತ್ತಾನೆ.

ಕೊಡವರು ಒಳ್ಳೆಯ ಭೋಜನವನ್ನು ಬಯಸುತ್ತಾರೆ. ಹಾಗೆಯೇ ಸೇಂದಿಯನ್ನು ಕೂಡ ಆಸ್ವಾದಿಸುತ್ತಾರೆ; ಸೇಂದಿ, ರೈಸ್–ಬ್ರ್ಯಾಂಡಿ (ಭತ್ತದ ಸರಾಯಿ) ಹಾಗೂ ಅರಾಕು ಅವರ ಸಾಮಾನ್ಯ ಪೇಯಗಳಾಗಿದ್ದು ಇತ್ತೀಚಿನ ದಿನಗಳಲ್ಲಿ ಐರೋಪ್ಯ ಮದ್ಯಗಳನ್ನು ಕೂಡ ದಿನದ ಎಲ್ಲಾ ಸಮಯದಲ್ಲಿ ಅನುಭವಿಸುತ್ತಾರೆಂದು ಮರುಕಪಡುತ್ತಾನೆ.

ಕೊಡವ ಅತಿಥ್ಯದ ಕುರಿತು ಅತೀವ ಸಂತೋಷ ವ್ಯಕ್ತಪಡಿಸುತ್ತಾ, ಐರೋಪ್ಯನೊಬ್ಬನ/ಳ ಭೇಟಿಯನ್ನು ವಿಶೇಷವಾಗಿ ಆಚರಿಸಲಾಗುತ್ತಿದೆ ಎನ್ನುತ್ತಾನೆ. ಕೊಡವರು ನೀಡಿದ ಅತಿಥ್ಯವನ್ನು – ತಿಂಡಿ ಯಾ ಹಾಲು ಅಥವ ಕಿತ್ತಳೆ ಇವನ್ನು ಸೇವಿಸದೆ ಹೊರಹೋದಲ್ಲಿ ಕೊಡವ ಪದ್ಧತಿಗೆ ಅವಮಾನವೆಂದು ಕೊಡಗರು ಭಾವಿಸುತ್ತಾರೆ ಎಂದು ರಿಕ್ಟರ್ ಹೇಳುತ್ತಾನೆ.

ಕೊಡವ ಮಹಿಳೆ–ಕೊಡಗಿಯ ಕುರಿತು ಅಭಿಮಾನದ ಮಾತನ್ನು ಹೇಳುತ್ತಾ, ಅವರು ತುಂಬಾ ಸ್ಪುರದ್ರೂಪಿಗಳೆಂದು ವರ್ಣಿಸುತ್ತಾ, ಎಲೆ–ಅಡಿಕೆ ತಿನ್ನಲು ಪ್ರಾರಂಭಿಸಿದ ನಂತರ (ಇದು ಸಾಮಾನ್ಯವಾಗಿ ಮದುವೆ ನಂತರ ಪ್ರಾರಂಭವಾಗುತ್ತದೆ) ತಮ್ಮ ಸಹಜ ಲಕ್ಷಣಗಳನ್ನು ಹಾಳು ಮಾಡಿಕೊಳ್ಳುತ್ತಾರೆ; ಇದರಿಂದಾಗಿ ಅವರ ಸುಂದರವಾದ ದಂತಪಂಕ್ತಿಯು ಕೂಡ ಕಪ್ಪಗಾಗುತ್ತಿವೆ ಎಂದು ದುಃಖಿಸುತ್ತಾನೆ.[೧೦]

ಉಪಸಂಹಾರದಲ್ಲಿ ನಾವಿಷ್ಟು ಹೇಳಬಹುದು; ರಿಕ್ಟರನು ಒಬ್ಬ ಸಾಮ್ರಾಜ್ಯಷಾಹಿ ಬರಹಗಾರನಾಗಿ ಕೊಡಗನ್ನು ಅಧ್ಯಯನ ಮಾಡಿ ಪಶ್ಚಿಮದೊಂದಿಗೆ ಅದನ್ನು ಹೋಲಿಸುತ್ತಾ ತನ್ನ ಅನಿಸಿಕೆಯನ್ನು ಬರೆದಿಡುತ್ತಾನೆ. ಬ್ರಿಟಿಷ್ ಆಡಳಿತವು ಕೊಡಗನ್ನು ವಶಪಡಿಸಿಕೊಂಡಿದ್ದರೂ, ಹೊಸ ಕೊಡಗನ್ನು ಸೃಷ್ಟಿಸುವ ಅಗತ್ಯವಿದೆ. ಕೊಡವರು, ಕೊಡಗರ ಕುರಿತು ಅಭಿಮಾನದ ಮಾತು ಹೇಳುತ್ತಾ ಇವರು ಮತ್ತು ಇವರ ನಾಡು ವಿಶಿಷ್ಟವಾಗಿದ್ದು ಅವುಗಳನ್ನು ಸಾಮ್ರಾಜ್ಯಷಾಹಿಗಳು ಜಾಗರೂಕತೆಯಿಂದ ಪೋಷಿಸುವ, ಅವರ ಕೆಲವು ಸವಲತ್ತುಗಳನ್ನು ಸಂರಕ್ಷಿಸುವ ಅವಶ್ಯಕತೆಯನ್ನು ಒತ್ತಿಹೇಳುತ್ತಾನೆ. ಹೀಗಾಗಿ ಅವನ ಗಸೆಟಿಯರ್ ಕೊಡಗು/ಕೊಡವರ ಕುರಿತು ಕೆಲವು 'ಪ್ರತಿಮೆ'ಗಳನ್ನು ಸೃಷ್ಟಿಸಿರುವುದು ಮಾತ್ರವಲ್ಲ ಅವುಗಳು ಇಂದಿಗೂ ಬರಹಗಾರರ ಮೇಲೆ ಅಪಾರ ಪ್ರಭಾವ ಬೀರುತ್ತಿದೆ ಎನ್ನಬಹುದು.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಜಿ. ರಿಕ್ಟರ್, ಗಸೆಟಿಯರ್ ಆಫ್ ಕೂರ್ಗ್, ನ್ಯಾಚುರಲ್ ಫೀಚರ್ಸ್ ಆಫ್ ದ ಕಂಟ್ರಿ ಅಂಡ್ ದ ಸೋಷಿಯಲ್ ಅಂಡ್ ಪೊಲಿಟಿಕಲ್ ಕಂಡಿಷನ್ ಆಫ್ ಇಟ್ಸ್ ಇನ್ ಹ್ಯಾಬಿಟೆಂಟ್ಸ್, (೧೮೭೦), ಪುನಃ ೯.

೨. ಆಲ್ಬ್ರೆಕ್ಟ್ ಫ್ರೆಂಜ್, ಜಾರ್ಜ್ ರಿಕ್ಟರ್ , ವೀರಾಜಪೇಟೆ, ೨೦೧೪, ಪುಟ ೧೨.

೩. ಹರ್ಮನ್ ಗುಂಡಾರ್ಟ್, ಹರ್ಮನ್ ಮ್ಯೋಗ್ಲಿಂಗ್, ಕೊಟ್ಟಾಯಂ, ೧೯೯೭, ಪುಟ ೧೭೬.

೪. ಅದೇ, ಪುಟ ೨೧.

೫. ಅದೇ, ಪುಟ ೨೨.

೬ ಜಿ. ರಿಕ್ಟರ್, ಗಸೆಟಿಯರ್ ಆಫ್ ಕೂರ್ಗ್, ಪುಟ ೪–೫.

೭. ಜಿ. ರಿಕ್ಟರ್, ಗಸೆಟಿಯರ್ ಆಫ್ ಕೂರ್ಗ್, ಪುಟ ೪೦೫.

೮. ಜಿ. ರಿಕ್ಟರ್, ಗಸೆಟಿಯರ್ ಆಫ್ ಕೂರ್ಗ್, ಪುಟ ೧೨೭.

೯. ಅದೇ, ಪುಟ ೪೩೫.

೧೦. ಅದೇ, ಪುಟ ೩೬೩.

೧೧. ಜಿ. ರಿಕ್ಟರ್, ಗಸೆಟಿಯರ್ ಆಫ್ ಕೂರ್ಗ್, ಪುಟ ೧೨೪.

ಸೊಂಡೂರು ಸಂಸ್ಥಾನಿಕರ ಮೂಲ ಮತ್ತು ಬೆಳವಣಿಗೆ

ಬೋಜ್ಯಾನಾಯ್ಕ ಎಲ್.ಎಚ್.*

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಪೂರ್ವದಲ್ಲಿ ಸಂಡೂರಿಗೆ ಸಮೀಪವಿರುವ ಹೊಸಮಲೆದುರ್ಗ (ರಾಮನ ದುರ್ಗ, ರಾಮಘಡ)ವು ಕಂಪಿಲರಾಯ ಮತ್ತು ಆತನ ಮಗ ಕುಮಾರರಾಮನ ಆಳ್ವಿಕೆಗೆ ಒಳಪಟ್ಟಿತ್ತು. ದೆಹಲಿ ಸುಲ್ತಾನನೊಂದಿಗೆ ನಡೆದ ಯುದ್ಧದಲ್ಲಿ ಕುಮಾರರಾಮ ತನ್ನ ಪ್ರಾಣವನ್ನು ಕೊಡುತ್ತಾನೆ. ಜೊತೆಗೆ ಕಂಪಿಲರಾಯನು ಮರಣಿಸಿದನು. ಇದರಿಂದ ಕಂಪಿಲರಾಯನ ರಾಜ್ಯ ಪತನ ಹೊಂದಿತು. ಮುಂದೆ ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ನಂತರ ಸಂಡೂರು ಪ್ರದೇಶವು ಇವರ ಆಳ್ವಿಕೆಗೆ ಒಳಪಟ್ಟಿತು. ವಿಜಯನಗರ ಸಾಮ್ರಾಜ್ಯ ಪತನಾನಂತರ ಪಾಳೆಯಗಾರರು ಮತ್ತು ವಿಜಾಪುರ ಸುಲ್ತಾನರು ನಂತರ ಶಿವಾಜಿಯ ಆಳ್ವಿಕೆಗೆ ಒಳಪಟ್ಟಿತು.

ಸಂಡೂರು ಸಂಸ್ಥಾನವು ಘೋರ್ಪಡೆರಾಜ ಮನೆತನದ ಸಂಸ್ಥಾನವಾಗಿ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಸಂಡೂರು ಸಂಸ್ಥಾನದ ಮೂಲಪುರುಷ ಸಿದ್ದೋಜಿರಾವ್ ಘೋರ್ಪಡೆಯಾಗಿದ್ದು. ಈತನಿಗಿಂತಲೂ ಹಿಂದೆ ಘೋರ್ಪಡೆ ವಂಶಸ್ಥರ ಇತಿಹಾಸವು ವ್ಯಾಪಕವಾದ ವಿಸ್ತಾರವನ್ನು ಪಡೆದಿದೆ. ಇತಿಹಾಸದ ಆಧಾರಗಳಿಂದ ಇವರ ಮೂಲಪುರುಷ ರಾಜಸ್ಥಾನದಲ್ಲಿ ಆಳುತ್ತಿದ್ದ ಸಿಸೋಡಿಯಾ ವಂಶದ ಸುಜನ್ ಸಿಂಗ್ ಎಂದು ಗುರುತಿಸಲಾಗಿದೆ. ೧೩೩೩ರಲ್ಲಿ ದೆಹಲಿಯ ಸುಲ್ತಾನನಾದ ಅಲ್ಲಾವುದ್ದೀನ್ ಖಿಲ್ಜಿಯು ಚಿತ್ತೂರನ್ನು ಆಕ್ರಮಿಸಿಕೊಂಡಾಗ ಅಲ್ಲಿಂದ ದಕ್ಷಿಣದ ಕಡೆಗೆ ವಲಸೆ ಬಂದರು. ದೇಶಾದ್ಯಂತ ನಿರ್ಮಾಣವಾಗಿರುವ ಸಂಕ್ಷೋಭೆಯ ವಾತಾವರಣದ ಭದ್ರವಾದ ಸೈನಿಕ ಆಡಳಿತ ವನ್ನು ಸ್ಥಾಪಿಸುವುದು ಈತನ ಉದ್ದೇಶವಾಗಿತ್ತು. ಆದರೆ ತನ್ನ ಮಹತ್ವಾಕಾಂಕ್ಷೆ ಈಡೇರುವ ಮೊದಲೇ ೧೩೫೦ರಲ್ಲಿ ನಿಧನನಾದನು. ಈತನ ತಲೆಮಾರಿನವರು ಆಗ ದಕ್ಷಿಣದಲ್ಲಿ ತಲೆ ಎತ್ತಿದ ಬಹಮನಿ ಸುಲ್ತಾನರ ಆಶ್ರಯದಲ್ಲಿ ಸೇನಾಪತಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಮನೆತನದ ೮ನೇ ಉತ್ತರಾಧಿಕಾರಿಯಾಗಿ ೪-೫ ತಲೆಮಾರುಗಳ ನಂತರ ಇಂದ್ರಸೇನ ಎಂಬುವವನು ಬೆಳಕಿಗೆ ಬರುತ್ತಾನೆ. ಇವನ ಮಕ್ಕಳಾದ ಕರ್ಣಸಿಂಗ್‌ನು ಘೋರ್ಪಡೆ ಎಂಬ, ಶುಭಕೃಷ್ಣನು ಜೋಂಸ್ಲೇ ಎಂಬ ಉಪನಾಮದೊಂದಿಗೆ ಕರೆಯಲ್ಪಟ್ಟಿದ್ದಾರೆ. ಆದರೆ ಜೋಂಸ್ಲೇ ಎಂಬ ಉಪನಾಮವನ್ನು ಯಾವಾಗ ಮತ್ತು ಹೇಗೆ ಗಳಿಸಿಕೊಂಡರು ಎಂಬದು ಮಾತ್ರ ಇಂದಿಗೂ ತಿಳಿಯ ದಾಗಿದೆ. ಶುಭಕೃಷ್ಣನ ಉತ್ತರಾಧಿಕಾರಿಗಳೆಲ್ಲರನ್ನು ಜೋಂಸ್ಲೇ ಗಳೆಂದು ಜೊತೆಗೆ ಶಿವಾಜಿಯ ಪೂರ್ವಿಕರೆಂದು ಗುರುತಿಸ ಲಾಗುತ್ತದೆ. ಘೋರ್ಪಡೆ ಎಂಬುದು ಈ ವಂಶಸ್ಥರ ಉಪನಾಮವಾಗಿದ್ದು, ಉಪನಾಮ ಇವರಿಗೆ ಬರಲು ಒಂದು ಕುತೂಹಲಕಾರಿಯಾದ ಕಥೆಯೊಂದಿದೆ. ಸುಮಾರು ಕ್ರಿ.ಶ. ೧೪೭೦ ಕಾಲಾವಧಿಯಲ್ಲಿ ಪಶ್ಚಿಮಘಟ್ಟಗಳ ಅಭೇದ್ಯವಾದ ಕೋಟೆಯೊಂದನ್ನು ಇವರ ಪೂರ್ವಿಕರು ಬಹಳ ಜಾಣಾಕ್ಷತನದಿಂದ ವಶಪಡಿಸಿಕೊಂಡಿದ್ದರು. ಇಲ್ಲಿ ಇವರಿಗೆ ಸಹಾಯ ಮಾಡಿದ್ದು ದೊಡ್ಡ ಉಡಗಳು, ಬಿರುಕು ಅಥವಾ ರಂಧ್ರಗಳಲ್ಲಿ ಬಲವಾಗಿ ಕಚ್ಚಿಕೊಂಡು ಧೃಢವಾಗಿ ನಿಲ್ಲುತ್ತದೆ. ಹಾಗಾಗಿ ಅದರ ನಡುವಿಗೆ ಹಗ್ಗವನ್ನು ಕಟ್ಟಿ ಅದರ ಸಹಾಯದಿಂದ ಮನುಷ್ಯರು ಮೇಲೇರಿ ದುರ್ಗಮ ಪ್ರದೇಶಗಳನ್ನು ತಲುಪುತ್ತಿದ್ದರು. ಉಡಗಳನ್ನು ಮರಾಠಿಯಲ್ಲಿ ಘೋರ್ಪಡ್ ಎಂದು ಕರೆಯುತ್ತಾರೆ. ಕರಣ್ ಸಿಂಗ್ ಮತ್ತು ಭೀಮಸಿಂಗರು ಉಡದ ಸಹಾಯದಿಂದ ಅಭೇದ್ಯ ಕೋಟೆಯನ್ನು ಪ್ರವೇಶಿಸಿ ಬಾಗಿಲನ್ನು ತೆರೆದು ತಮ್ಮ ಸೈನ್ಯ ಒಳಬರಲು ಅವಕಾಶ ಮಾಡಿಕೊಟ್ಟು ವಿಜಯಕ್ಕೆ ಕಾರಣಕರ್ತರಾದರು. ಆ ಪ್ರಯತ್ನದಲ್ಲಿ ತಂದೆ ಕರಣ್‌ಸಿಂಗ್ ಮಡಿದನು. ಮಗನಾದ ಭೀಮಸಿಂಗ್‌ನಿಗೆ ಬಹಮನಿ ಸುಲ್ತಾನನು ೧೪೭೦ರಲ್ಲಿ ಸನ್ನದನ್ನು ನೀಡಿ ರಾಜಾಘೋರ್ಪಡೆ ಬಹದ್ದೂರ್ ಎಂಬ ಪದವಿಯನ್ನಿತ್ತು ಮುಧೋಳದೊಡನೆ ಸುತ್ತಲಿನ ೮೪ ಹಳ್ಳಿಗಳನ್ನು ಜಹಗೀರಾಗಿ ಗೌರವಿಸಿದ. ಹೀಗಾಗಿ ಇವರ ವಂಶ ಘೋರ್ಪಡೆ ವಂಶ ಎಂದೇ ಪ್ರಸಿದ್ಧವಾಯಿತು. ಸಂಡೂರು ಸಂಸ್ಥಾನದ ಪೂರ್ವದಲ್ಲಿ ಬೇಡ ದೊರೆಗಳು ಈ ಪ್ರದೇಶವನ್ನು ಆಳ್ವಿಕೆ ನಡೆಸಿರುವುದು ತಿಳಿದುಬರುತ್ತದೆ. ೧೭೧೩ರಲ್ಲಿ ಮರಾಠ ಸೇನಾಪತಿ ಸಿದ್ದೋಜಿ ಘೋರ್ಪಡೆ ಜರಿಮಲೆ ನಾಯಕರನ್ನು ಓಡಿಸಿ ತನ್ನ ಅಧಿಕಾರವನ್ನು ಸ್ಥಾಪಿಸಿದನು. ನಂತರ ಪಾಳೆಯಗಾರರು

* ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭೨೮ರಲ್ಲಿ ಮತ್ತೆ ದಾಳಿ ಇಟ್ಟಾಗ ಅದನ್ನು ಮೆಟ್ಟಿ ನಿಂತು ಮತ್ತೊಮ್ಮೆ ಆ ಪಾಳೆಯಗಾರರನ್ನು ಸೋಲಿಸಿದನು. ಜರಿಮಲೆ ಪಾಳೆಯಗಾರರ ದೌರ್ಬಲ್ಯದಿಂದಾಗಿ ಅರಾಜಕ ವ್ಯವಸ್ಥೆ ನೆಲೆಸಿತ್ತು. ಚಿತ್ರದುರ್ಗ ಮತ್ತು ಹರಪನಹಳ್ಳಿ ಪಾಳೆಯಗಾರರು ಜರಿಮಲೆಯನ್ನು ಕ್ರಮೇಣ ವಶಪಡಿಸಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಮರಾಠರ ಸೇನಾನಿ ಸಿದ್ದೋಜಿರಾವ್ ಘೋರ್ಪಡೆ(೧೭೨೬-೪೨) ಕ್ರಿ.ಶ. ೧೭೨೮ರಲ್ಲಿ ಸಂಡೂರು ಪ್ರದೇಶವನ್ನು ಕಷ್ಟವಿಲ್ಲದ ಜರಿಮಲೆ ಪಾಳೆಗಾರರಿಂದ ಗೆದ್ದುಕೊಂಡನು. ಹೀಗೆ ಸಂಡೂರು ಸಂಸ್ಥಾನದ ಮೂಲಪುರುಷನೆಂದು ಬಹಿರ್ಜಿ ಹಿಂದೂರಾಯನ ಮಗ ಸಿದ್ದೋಜಿರಾವ್ ಘೋರ್ಪಡೆಯವರನ್ನು ಗುರುತಿಸ ಲಾಗುತ್ತದೆ.

ಶಾಹಿ ಮನೆತನಗಳ ಒಳಜಗಳ ಪೇಶ್ವೆಗಳ ರಾಜ್ಯ ವಿಸ್ತಾರದ ದಾಹ, ಮೈಸೂರಿನ ಹೈದರಾಲಿಯ ಮಹತ್ವಾಕಾಂಕ್ಷೆ ಇವುಗಳಿಂದಾಗಿ ಇಡೀ ದಕ್ಷಿಣ ಭಾರತ ಗೊಂದಲಮಯ ಸ್ಥಿತಿಯಲ್ಲಿತ್ತು. ಜನಸಾಮಾನ್ಯರಿಗೆ ನೆಮ್ಮದಿ ಇರಲಿಲ್ಲ. ಯುದ್ದದ ಭೀತಿ ವ್ಯಾಪಕವಾಗಿತ್ತು. ಈ ಸಮಯದಲ್ಲಿ ಸಿದ್ದೋಜಿರವ್ ಸೊಂಡೂರನ್ನು ಸಮರ್ಪಕವಾಗಿ ಮುನ್ನಡೆಸುತ್ತಿದ್ದ. ಆದರೆ ಸಿದ್ದೋಜಿರಾವ್ ೧೭೩೧ರಲ್ಲಿ ಮರಣ ಹೊಂದಿದನು.

ಈತನಿಗೆ ೪ ಜನ ಹೆಂಡತಿಯರು ಇವರಿಗೆ ದೌಲತರಾವ್, ಭುಜಂಗರಾವ್ ಗೋಪಾಲ್‌ರಾವ್, ಮುರಾರಿರಾವ್ ಎಂಬ ಮಕ್ಕಳಾದರು. ಭುಜಂಗರಾವ್ ಬಾಲ್ಯದಲ್ಲಿ ಮರಣ ಹೊಂದಿದ ಗೋಪಾಲರಾವ್ ಅಸಮರ್ಥನಾಗಿದ್ದ. ಆ ಕಾರಣದಿಂದ ಮುರಾರಿರಾವ್ ಸೋಂಡೂರಿನ ವಾರುಸುದಾರನಾದ. ಇನ್ನೊಬ್ಬ ತಮ್ಮ ದೌಲತರಾವ್ ಧಾರವಾಡದ ಬಳಿ ಇರುವ ಗಜೇಂದ್ರಗಡ ಸಂಸ್ಥಾನದ ಜಹಗೀರುದಾರನಾದ.

ಸೊಂಡೂರು ಮತ್ತು ಗುತ್ತಿ ಪ್ರದೇಶಗಳನ್ನಾಳಿದ ಘೋರ್ಪಡೆ ವಂಶದಲ್ಲಿಯೇ ಅತ್ಯಂತ ಶಕ್ತಿಶಾಲಿ, ಧೀಮಂತ, ಧೀರೋದತ್ತ ಅಧಿಪತಿ ಎಂದರೆ ಮುರಾರಿರಾವ್. ಇವನು ಅಧಿಕಾರಕ್ಕೆ ಬಂದಾಗ ೩೨ ವರ್ಷ ವಯಸ್ಸಾಗಿತ್ತು . ಇವನು ಗುತ್ತಿಯ ಆಳರಸ ಎಂದೇ ಪ್ರಸಿದ್ದನಾಗಿದ್ದು, ಮರಾಠರಿಗೆ ಯಾವಾಗಲೂ ಸಹಾಯಹಸ್ತ ನೀಡುತ್ತಿದ್ದನು ತಂದೆಯ ನಾಯಕತ್ವದಲ್ಲಿ ಅನೇಕ ಯುದ್ಧಗಳಲ್ಲಿ ಹೋರಾಡಿದ್ದ. ಎಲ್ಲಕಿಂತ ಹೆಚ್ಚಾಗಿ ವಿರೋಚಿತ ಕ್ಷೇತ್ರವನ್ನು ಅಸ್ಸೀಮ ಸ್ವಾತಂತ್ರಪ್ರಿಯತೆಯನ್ನು ರೂಢಿಸಿಕೊಂಡಿದ್ದರು.

ಗುತ್ತಿಯ ಮುರಾರಿರಾಯರ ಅಧಿಕಾರದ ಕೇಂದ್ರಸ್ಥಾನವಾಗಿತ್ತು. ಇವರು ನಿಯಂತ್ರಿಸುತಿದ್ದ ಪ್ರದೇಶ ಧಾರವಾಡ ಜಿಲ್ಲೆಯ ಗಜೇಂದ್ರಗಡದಿಂದ ಕೊಪ್ಪಳದವರೆಗೆ ಸುಮಾರು ೨೫೦ ಕಿ.ಮೀ.ವರೆಗೆ ಹಬ್ಬಿತು. ಈ ವ್ಯಾಪ್ತಿಯ ಪ್ರದೇಶವನ್ನು ತಮ್ಮ ಕಿರಿಯ ಸಹೋದರ ದೌಲತರಾವ್ ಅವರಿಗೆ ವಹಿಸಿದ್ದರು. ಇದರ ಜೊತೆಗೆ ತಂದೆಯಾದ ಸಿದ್ದೋಜಿ ವಶಪಡಿಸಿಕೊಂಡಿದ್ದ. ರಾಯಚೂರು ಜಿಲ್ಲೆಯ ಕೋಟೆಯೂ ಸೇರಿತ್ತು. ಬಳ್ಳಾರಿ ಜಿಲ್ಲೆಯ ಸೊಂಡೂರು ಮತ್ತು ಅನಂತಪುರ ಜಿಲ್ಲೆಯ ಗುತ್ತಿಯು ಇದಕ್ಕೆ ಸೇರಿತ್ತು.

ದಕ್ಷಿಣದ ಚಂದಾಸಾಹೇಬನ ವಿರುದ್ಧವಾಗಿ ಮರಾಠರ ಪರಾವಾಗಿ ಮುರಾರಿರಾವ್ ಹೋರಾಡಿ ಅರ್ಕಾಟ್ ಮತ್ತು ತಿರುಚಿಗಳನ್ನು ಗೆದ್ದುಕೊಟ್ಟನು. ಮುರಾರಿರಾಯನೆ ತಿರುಚಿಯ ರಾಜಪ್ರತಿನಿಧಿಯಾಗಿ ೧೭೭೪ರವರೆಗಿದ್ದ. ಈ ಸಮಯದಲ್ಲಿ ದೇವಾಲಯಗಳಿಗೆ ಜಾಗೀರು ನೀಡಿದ. ಮತ್ತೊಮ್ಮೆ ನಿಜಾಮ್ ಉಲ್ ಮಲ್ಕ್ ತಿರುಚಿಗೆ ಮುತ್ತಿಗೆ ಹಾಕಿದಾಗ ಮರಾಠರ ನೆರವು ಬಾರದ್ದರಿಂದ ತಿರುಚಿಯನ್ನು ಬಿಟ್ಟುಕೊಟ್ಟುಗುತ್ತಿ ಪೆನುಕೊಂಡಗಳಿಗೆ ಸೀಮಿತ ಮಾಡಿಕೊಂಡ.

ಕರ್ನಾಟಕದ ಪಾಳೆಯಗಾರರನ್ನೆಲ್ಲಾ ವಶಪಡಿಸಿಕೊಂಡು ಮೆರೆಯುತ್ತಿದ್ದ. ಹೈದರಾಲಿಗೆ ಗುತ್ತಿಯ ಮುರಾರಿರಾಯ ಮಣಿಯಲಿಲ್ಲ. ಹೈದರಾಲಿ ಕರ್ನಾಟಕದ ಹಲವಾರು ಪಾಳೆಯಗಾರರನ್ನು ಆಕ್ರಮಣ ಮಾಡಿದ್ದ. ಆಕ್ರಮಣಕ್ಕೊಳಗಾಗಿದ್ದ ಪಾಳೆಯಗಾರರಿಗೆ ನೆರವು ನೀಡಲು ಮುರಾರಿರಾವ್ ನಿರ್ಧರಿಸಿದ. ಯುದ್ದರಂಗದಲ್ಲಿ ಮುರಾರಿರಾಯನು ಹೊಂಚು ಹಾಕುತ್ತಿದ್ದ. ಮುರಾರಿರಾವ್ ಚಿಕ್ಕಬಳ್ಳಾಪುರದ ಆಕ್ರಮಣವನ್ನು ತಡೆಗಟ್ಟಲು ೨೫೦೦ ದಳಗಳೊಂದಿಗೆ ಶಿವರಾವ್ ಘೋರ್ಪಡೆ ಮತ್ತು ಖಂಡೇರಾವ್ ಘೋರ್ಪಡೆ ಅವರುಗಳನ್ನು ಕಳುಹಿಸಿಕೊಟ್ಟರು. ಈ ಹೋರಾಟದಲ್ಲಿ ಇವರು ಸೋಲನ್ನು ಅನುಭವಿಸಿದರು. ಮುರಾರಿರಾವ್ ಇಂಥದ್ದೇ ಇನ್ನೊಂದು ಪ್ರಯತ್ನ ಮಾಡಿದರು. ಆದರೆ ಮತ್ತೆ ಸೋತು ಹೋದರು. ಮುಂದೆ ಹೈದರಾಲಿ ಮತ್ತು ಮುರಾರಿರಾವ್ ಇಬ್ಬರು ಶಾಂತಿ ಒಪ್ಪಂದ ಮಾಡಿಕೊಂಡರು.

ಮುರಾರಿರಾವ್ ತನ್ನ ಸೈನ್ಯದೊಂದಿಗೆ ಎರಡು ತಿಂಗಳುಗಳ ಕಾಲ ಹೈದರನ ಆಕ್ರಮಣವನ್ನು ಎದುರಿಸಿದ. ಕೊನೆಗೆ ಸೋತು ಸೆರೆಯಾದ ಮುರಾರಿರಾವ್ ಅವರನ್ನು ೧೭೭೭ರಲ್ಲಿ ಕಬ್ಬಾಳದುರ್ಗದಲ್ಲಿ ಗಲ್ಲಿಗೇರಿಸಲಾಯಿತು. ಒಂದು ಮೂಲದ ಪ್ರಕಾರ ಮುರಾರಿರಾಯನು ೧೭೭೭ ಮಧ್ಯಭಾಗ ಅಥವಾ ಕಡೆಯ ಭಾಗದವರೆಗೂ ಅವರು ಬದುಕಿದ್ದಿರಬಹುದಾದರು ಅವರ ದರ್ಶನ ಮಾತ್ರ ಯಾರೊಬ್ಬರಿಗೂ ಲಭ್ಯವಾಗಲಿಲ್ಲ. ಮರಾಠ ದಂಡನಾಯಕ ಹರೋಘಂತ್ ಫಡ್ಕೆ. ಮುರಾರಿರಾವ್ ಘೋರ್ಪಡೆ ಮತ್ತಿತರ ಬಿಡುಗಡೆಗಾಗಿ ಹೈದರಾಲಿಗೆ ದೊಡ್ಡ ಮೊತ್ತದ ಆಮಿಷವನ್ನು ತೋರಿಸಿದ. ಆದರೆ ಹೈದರಾಲಿ ಈ ಪ್ರಸ್ತಾಪವನ್ನು ತುಂಬಾ ಒರಟಾಗಿ ತಿರಸ್ಕರಿಸಿದ. ಪಟವರ್ಧನರುಗಳನ್ನು ಬೇಕಾದರೆ ಬಿಡುತ್ತೇನೆ. ಮುರಾರಿರಾವ್ ಅವನನ್ನು ಬಿಡುವುದಿಲ್ಲ ಎಂದು ತಿರಸ್ಕರಿಸಿದ. ಹೀಗೆ ಸುಮಾರು ೫೦

ವರ್ಷಗಳ ಕಾಲ ಸಂಕೀರ್ಣ ರಾಜಕೀಯ ಸಂಘರ್ಷಗಳ ನಡುವೆ ಧೀರನಾಗಿ ಸ್ವತಂತ್ರವಾಗಿ ಉಳಿದಿದ್ದ ವೀರನ ಅಂತ್ಯ ದುರಂತವಾಯಿತು. ಘೋರ್ಪಡೆಯವರ ಗುತ್ತಿ ಹೈದರಾಲಿಯ ವಶವಾಗಿ ಚರಿತ್ರೆಯಲ್ಲಿ ಸೇರಿಹೋಯಿತು.

ಮುರಾರಿರಾಯನಿಗೆ ಮಕ್ಕಳಿಲ್ಲದಿದ್ದರಿಂದ ಗೋಪಾಲ ರಾವ್‌ರ ಮಗ ಶಿವರಾಯನ್ನು ದತ್ತು ತಗೆದುಕೊಂಡನು. ಹೈದರಾಲಿ ಸೊಂಡೂರನ್ನು ಪಡೆದ ನಂತರ ಗುತ್ತಿಯನ್ನು ೧೭೭೯ರಲ್ಲಿ ಆಕ್ರಮಿಸಿದನು. ಹೈದರನು ಎರಡನೇ ಆಂಗ್ಲೊ ಮೈಸೂರು ಯುದ್ಧ ಬ್ರಿಟಿಷರ ವಿರುದ್ಧ ಮಾಡುವಾಗ ೧೭೮೨ರ ಡಿಸೆಂಬರ್ ೭ರಂದು ಮರಣ ಹೊಂದಿದನು. ಮುಂದೆ ಟಿಪ್ಪು ತಂದೆ ಹೈದರಾಲಿಯ ನೀತಿಯನ್ನೆ ಅನುಸರಿಸಿದನು. ೧೭೮೫ರಲ್ಲಿ ಟಿಪ್ಪು ಸೊಂಡೂರಿಗೆ ಬಂದನು. ಶಿವರಾವ ವಿರುದ್ಧ ಯುದ್ಧ ಮಾಡಿ ಶಿವರಾಯನನ್ನು ಕೊಲೆ ಮಾಡುತ್ತಾನೆ. ಟಿಪ್ಪು ಈ ಪ್ರದೇಶಗಳನ್ನು ವಶಪಡಿಸಿಕೊಂಡು ಬಳ್ಳಾರಿ ಮತ್ತು ಸೊಂಡೂರಿನ ಕೃಷ್ಣನಗರದಲ್ಲಿ ಕೋಟೆಗಳನ್ನು ಕಟ್ಟಿಸಿದ. ಆದರೆ ಟಿಪ್ಪು ಆಡಳಿತ ಸೊಂಡೂರಿಗೆ ಕೆಲವೇ ದಿನಗಳಿಗೆ ಸೀಮಿತವಾಗಿತ್ತು. ಏಕೆಂದರೆ ಶಿವರಾವನ ಸಹೋದರ ವೆಂಕಟರಾವ್ ಟಿಪ್ಪುವಿನ ವಿರುದ್ಧ ಹೋರಾಡಿ ಮತ್ತೆ ಸೊಂಡೂರನ್ನು ವಶಪಡಿಸಿಕೊಳ್ಳುತ್ತಾನೆ. ಟಿಪ್ಪು ಮುಂದೆ ಶ್ರೀರಂಗಪಟ್ಟಣ ಅವನತಿ ಆಗುವವರೆಗೆ ಸೊಂಡೂರನ್ನು ಗೆಲ್ಲಲು ಆಗಲ್ಲಿಲ್ಲ.

ಅಪ್ರಾಪ್ತ ವಯಸ್ಸಿನ ಸಿದ್ಧೋಜಿರಾವ್ ಅಧಿಕಾರಕ್ಕೆ ಬರುತ್ತಾನೆ. ಆದರೆ ಆತನು ಕೇವಲ ೧೫ನೇ ವಯಸ್ಸಿನಲ್ಲಿ ಮರಣ ಹೊಂದುತ್ತಾನೆ. ಮತ್ತೊಮ್ಮೆ ಧಾರವಾಡದಿಂದಲೆ ಖಂಡೆರಾಯನ ಮಗ ೨ನೇ ಶಿವರಾಯನನ್ನು ಸೊಂಡೂರಿಗೆ ದತ್ತು ತೆಗೆದುಕೊಳ್ಳಲಾಯಿತು. ೨ನೇ ಶಿವರಾಯ ಮತ್ತು ವೆಂಕಟರಾಯ ಸೇರಿ ಸೊಂಡೂರನ್ನು ಪ್ರಬಲಗೊಳಿಸಿದರು. ಮರಾಠರ ಪೇಶ್ವೆಯಾದ ೨ನೇ ಬಾಜಿರಾಯ ಸೊಂಡೂರನ್ನು ಆಕ್ರಮಿಸಲು ಪ್ರಯತ್ನಿಸಿದ. ಆದರೆ ಅದು ಸಫಲವಾಗಲಿಲ್ಲ. ೧೮೧೭ರಲ್ಲಿ ಇಂಗ್ಲಿಷರ ಸಹಾಯದೊಂದಿಗೆ ಮತ್ತೊಮ್ಮೆ ಸೊಂಡೂರಿನ ಮೇಲೆ ಬಾಜಿರಾಯ ಆಕ್ರಮಣ ಮಾಡುತ್ತಾನೆ. ಆದರೆ ಸೊಂಡೂರನ್ನು ಆಕ್ರಮಿಸಿಕೊಂಡರು. ಇಂಗ್ಲಿಷರಿಗೆ ಪೇಶ್ವೆಯರಿಗೆ ಆದ ಬೆಸ್ಸಿನ ಒಪ್ಪಂದದಂತೆ ಇಂಗ್ಲಿಷರ ಅಧಿಕಾರಿಯಾದ ಥಾಮಸ್ ಮನ್ರೊ ಸೊಂಡೂರನ್ನು ವಶಪಡಿಸಿಕೊಂಡ. ನಂತರ ೬ ತಿಂಗಳಲ್ಲಿ ೧೮೧೮ರಲ್ಲಿ ಶಿವರಾಯನಿಗೆ ಮರಳಿ ನೀಡಿದರು. ಈ ಅವಧಿಯಲ್ಲಿ ಶಿವರಾಯನಿಗೆ ೧೦೦೦ ಪೌಂಡ್‌ಗೆ ಸಮನಾದ ಭೂಮಿ ಮತ್ತು ಅನುಕಂಪದ ಹಣ ನೀಡಿದರು. ಶಿವರಾಯನು ಸೊಂಡೂರನ್ನು ಮೊದಲಿನ ಸ್ಥಿತಿಗೆ ತರಲು ಪ್ರಯತ್ನಿಸುತ್ತಾನೆ. ೨೨ ವರ್ಷಗಳ ಕಾಲ ಆಳ್ವಿಕೆ ನಡೆಸಿದ ೨ನೇ ಶಿವರಾಯನು ೧೮೪೦ರಲ್ಲಿ ಮರಣ ಹೊಂದಿದನು. ಶಿವರಾಯನಿಗೆ ಮಕ್ಕಳು ಇರಲಿಲ್ಲ. ಆದ್ದರಿಂದ ಭುಜಂಗರಾಯನ ಮಗ ವೆಂಕಟರಾಯ ಅಧಿಕಾರ ವಹಿಸಿಕೊಂಡರು. ವೆಂಕಟರಾಯ ಸುಮಾರು ೨೧ ವರ್ಷಗಳ ಕಾಲ ಆಳ್ವಿಕೆ ನಡೆಸಿದನು. ಇವನ ಕಾಲದಲ್ಲಿ ರಾಮದುರ್ಗದಲ್ಲಿ ಐಂದು ಆರೋಗ್ಯಧಾಮ ಪ್ರಾರಂಭವಾಯಿತು.

ವೆಂಕಟರಾಯ ೧೮೬೧ರಲ್ಲಿ ಮರಣ ಹೊಂದಿದಾಗ ಆತನ ಮಗ ಷಣ್ಮೂಖರಾಯ ಅಧಿಕಾರ ವಹಿಸಿಕೊಂಡ. ಈತನು ಇಂಗ್ಲಿಷ ಸರ್ಕಾರದಿಂದ ರಾಜಾ ಎಂಬ ಬಿರುದು ಪಡೆದುಕೊಂಡ. ಜಾನ್ ಮ್ಯಾಕ್‌ಕಾಟ್ಸ್ ಎಂಬಾತ ಮಾರ್ಗದರ್ಶಕ ಹಾಗೂ ಏಜೆಂಟ್ ಆಗಿ ನೇಮಿಸಲ್ಪಟ್ಟ. ಕಾರಣವೇನೆಂದರೆ ಶಿವಷಣ್ಮುಖರಾಯ ಅಪ್ರಬುದ್ಧನಾಗಿದ್ದನು. ಹೀಗೆ ಇಂಗ್ಲಿಷ ಪ್ರಭುತ್ವದ ಅಂಕಿತದಲ್ಲಿಯೆ ಮುಂದಿನ ಸೊಂಡೂರಿನ ಚರಿತ್ರೆ ಸಾಗಿತ್ತು. ಶಿವಷಣ್ಮುಖರಾಯ ೧೮೭೮ರಲ್ಲಿ ಮರಣ ಹೊಂದಿದ ನಂತರ ಆತನ ತಮ್ಮ ವಿಠಲರಾವ್ ಅಧಿಕಾರ ವಹಿಸಿಕೊಂಡ. ಈತನು ೧೮ ವರ್ಷಗಳ ಕಾಲ ಆಡಳಿತ ನಡೆಸಿ ೧೮೯೨ರಲ್ಲಿ ನಿಧನ ಹೊಂದಿದನು. ಆತನ ನಂತರ ೧೮೯೬ರಲ್ಲಿ ರಾಮಚಂದ್ರ ವಿಠಲರಾವನ ಮಗ ವೆಂಕಟರಾವ ನಿಧನನಾದ. ಈತನು ಅಪ್ರಾಪ್ತ ವಯಸ್ಕನಾಗಿದ್ದರಿಂದ ಇಂಗ್ಲಿಷ ಏಜೆಂಟನಾಗಿ ಜೆ.ಜಿ. ಪಿರ್ತ ಮತ್ತು ದಿವಾನರಾಗಿ ಆತನ ಚಿಕ್ಕಪ್ಪ ಮಾಲೊಜಿರಾವ ಅಧಿಕಾರ ವಹಿಸಿಕೊಂಡರು. ಅದರಂತೆ ಸೊಂಡೂರಿನ ಆಡಳಿತ ಗವರ್ನರ್ ಜನರಲ್ ಆಡಳಿತಕ್ಕೂ ಬೆಂಗಳೂರಿನಲ್ಲಿದ್ದ ಬ್ರಿಟಿಷ್ ರೆಸಿಡೆಂಟಿನ ಆಳ್ವಿಕೆಗೆ ಒಳಗಾಯಿತು. ವೆಂಕಟರಾವ್ ದಕ್ಷ, ಪ್ರಾಮಾಣಿಕ ಹಾಗು ರಾಜನ ಗುಣಲಕ್ಷಣಗಳನ್ನು ರೂಢಿಸಿಕೊಂಡಿರಲಿಲ್ಲ. ಆದುದರಿಂದ ಶ್ರೀ ಯಶವಂತರಾವ್ ಹಿಂದೂರಾವ್ ಘೋರ್ಪಡೆ ಅಧಿಕಾರಕ್ಕೆ ಬಂದರು. ಯಶವಂತರಾವ್ ಹಿಂದೂರಾವ್ ಘೋರ್ಪಡೆ ಯವರು ೧೯೨೮ರಿಂದ ೧೯೪೮ರವರೆಗೆ ಸಂಡೂರು ಸಂಸ್ಥಾನವನ್ನು ಆಳ್ವಿಕೆ ಮಾಡಿದ್ದಾರೆ. ಇವರು ೧೯೨೮ ಜೂನ್ ೨೦ರಂದು ಸಂಡೂರಿನ ಸಂಸ್ಥಾನದ ರಾಜರಾಗಿ ಅಧಿಕಾರ ವಹಿಸಿಕೊಂಡರು. ಗ್ವಾಲಿಯರ್ ಪ್ರಮುಖರಾದ ರಾಜ ರಾಜೇಂದ್ರ ಶ್ರೀ ಎಂ.ಎಸ್. ಶಿತೋಲೆಯವರ ಮಗಳು ಸುಶೀಲಾದೇವಿ ಯವರನ್ನು ೧೯೨೯ರಲ್ಲಿ ಮದುವೆಯಾದರು. ಯಶವಂತ ರಾವ್‌ರವರು ೧೯೩೦ರಲ್ಲಿ ಸೊಂಡೂರಿನ ಸಂಪೂರ್ಣ ಅಧಿಕಾರವನ್ನು ಪಡೆದರು.

ಸೊಂಡೂರು ಘೋರ್ಪಡೆ ವಂಶದವರು. ರಾಜ ಕುಟುಂಬದವರಾದ ಬರೋಡ, ಜಾತ್, ದೇವಾಸ್ ಅವರೊಂದಿಗೆ ವೈವಾಹಿಕ ಸಂಬಂಧವನ್ನು ಮಾಡಿಕೊಂಡಿ

[illegible] ಯಶವಂತರಾವ್ ಹಿಂದೂರಾವ್ ಘೋರ್ಪಡೆಯವರು ಅವರ ಆಳ್ವಿಕೆಯ ಕಾಲಾವಧಿಯಲ್ಲಿ ಆಡಳಿತದಲ್ಲಿ ಹಲವಾರು ಸುಧಾರಣೆಗಳನ್ನು ಮಾಡಿದರು. ಅವರ ಕಾಲದಲ್ಲಿ ಪ್ರಜಾಪ್ರಭುತ್ವ ಮಾದರಿಯ ಪ್ರಜಾಮಂಡಳಿ ರಚನೆಯಾಯಿತು. ಕೆಳಮನೆ ಮತ್ತು ಮೇಲ್ಮನೆಗಳು ರಚನೆಯಾಯಿತು. ೧೯೩೭ರಲ್ಲಿ ರಾಜಾ ಒಂದು ಪ್ರೊಕ್ಲಾಮೆಷನ್ ಹೊರಡಿಸಿದರು. ಅದರ ಪ್ರಕಾರ ಹರಿಜನರಿಗೆ ಸಮಾನವಾಗಿ ಅವರಿಗೆ ದೇವಸ್ಥಾನಗಳಲ್ಲಿ ಮುಕ್ತಪ್ರವೇಶ ಅವಕಾಶವನ್ನು ಮಾಡಿಕೊಡಲಾಯಿತು. ಆದ್ದರಿಂದ ಈ ಪ್ರದೇಶದಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲಾಯಿತು. ಇದರಿಂದ ಆಕರ್ಷಿತರಾದ ಮಹಾತ್ಮ ಗಾಂಧಿಜೀಯವರು ೧೯೩೪ರಲ್ಲಿ ಸೊಂಡೂರಿಗೆ ಭೇಟಿ ನೀಡಿ ತಮ್ಮ ಹರಿಜನ ಪತ್ರಿಕೆಯಲ್ಲಿ ಈ ರೀತಿ ಬರೆದರು. ದಕ್ಷಿಣ ಭಾರತದ ಚಿಕ್ಕ ಸಂಸ್ಥಾನವಾದ ಸೊಂಡೂರು ಸಂಸ್ಥಾನ ಹರಿಜನರಿಗೆ ಗುಡಿಗಳ ಬಾಗಿಲು ತೆರೆದಿದೆ. ಇದರಿಂದ ಸ್ವರ್ಗವೇನು ಕೆಳಗೆ ಬೀಳಲಿಲ್ಲ ಎಂದು ಬರೆದರು. ಇದರಿಂದ ಹರಿಜನೋದ್ಧಾರದ ಪ್ರತೀಕವಾಗಿ ಸೊಂಡೂರು ಸಂಸ್ಥಾನ ಯಶವಂತರಾಯರಿಂದ ಭಾರತದ ಭೂಪಟದಲ್ಲಿ ಮಿಂಚಿದರು. ೧೯೩೭ರಲ್ಲಿ ಸೊಂಡೂರು ಸಂಸ್ಥಾನದಲ್ಲಿ ನ್ಯಾಯಾಂಗ ವ್ಯವಸ್ಥೆಯನ್ನು ಜಾರಿಗೆ ತಂದರು. ೧೯೩೭ರಲ್ಲಿ ಸೊಂಡೂರು ಚೀಫ್‌ಕೋರ್ಟ್ ಕಾಯಿದೆ ಅಡಿಯಲ್ಲಿ ಸ್ವತಂತ್ರ ನ್ಯಾಯಾಲಯ ಮತ್ತು ಮುಖ್ಯ ನ್ಯಾಯಾಲಯವನ್ನು ಸ್ಥಾಪಿಸಿದರು. ಈ ನ್ಯಾಯಾಂಗಕ್ಕೆ ಸಂಬಂಧಿಸಿದಂತೆ ಮದ್ರಾಸ್ ಸರ್ಕಾರದವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಇದರಿಂದ ಬಳ್ಳಾರಿ ಜಿಲ್ಲಾ ನ್ಯಾಯಾಧೀಶರನ್ನು ಸೊಂಡೂರು ಚೀಫ್‌ಕೋರ್ಟಿನ ನ್ಯಾಯಾಧೀಶನಾಗಿ ನೇಮಕ ಮಾಡಿದರು. ಸಂವಿಧಾನದ ಕಾಯಿದೆ ಪ್ರಕಾರ ಸೊಂಡೂರು ಸಂಸ್ಥಾನದಲ್ಲಿ ಯಶವಂತರಾಯರ ಕಾಲದಲ್ಲಿ ಸಮಾನತೆಯ ಹಕ್ಕು ಜಾತಿ ಲಿಂಗ ವಯಸ್ಕರ ಹಕ್ಕುಗಳು ಸಮಾನವಾಗಿ ಕಾಣುತ್ತಿದ್ದರು. ಯಾವುದೇ ರೀತಿಯ ಶೋಷಣೆಗಳು ಅವರ ಕಾಲದಲ್ಲಿ ನಡೆಯುತ್ತಿರಲಿಲ್ಲ.

ಒಟ್ಟಾರೆ ಅವರ ಕಾಲದಲ್ಲಿ ಕಂಡುಬರುವ ಬೆರಳಣಿಕೆಯಷ್ಟು ಕಲೆ ಮತ್ತು ವಾಸ್ತುಶಿಲ್ಪವನ್ನು ಕಾಣಬಹುದು. ಬ್ರಿಟಿಷರ ಸಹಾಯದಿಂದ ಅರಮನೆಯನ್ನು ಹಾಗೂ ಹೈದರಾಲಿ ಮತ್ತು ಟಿಪ್ಪು ಕಟ್ಟಿಸಿದ ಕೃಷ್ಣಾನಗರ ಕೋಟೆ ಈ ಕಾಲದಲ್ಲಿ ಕಂಡುಬರುವ ಪ್ರಮುಖ ಕಲೆ ಮತ್ತು ವಾಸ್ತುಶಿಲ್ಪ. ಅದು ಅಲ್ಲದೆ ಅವರೆ ಸ್ವತಃ ಕೆಲವು ಸಣ್ಣಪುಟ್ಟ ದೇವಸ್ಥಾನಗಳನ್ನು ಕಟ್ಟಿಸಿರುವುದು ಕಂಡುಬರುತ್ತದೆ. ಜೊತೆಗೆ ಕುಮಾರಸ್ವಾಮಿ ದೇವಸ್ಥಾನಕ್ಕೆ ದತ್ತಿ ಕೊಟ್ಟಿರುವುದು ಮತ್ತು ಆ ದೇವಾಲಯವನ್ನು ಜೀರ್ಣೋದ್ಧಾರ ಮಾಡಿರುವುದು ಕಂಡುಬರುತ್ತದೆ. ಸಂಸ್ಥಾನಿಕರ ಪ್ರಮುಖ ಹೆಸರಿನಲ್ಲಿರುವ ಕೆಲವು ಗ್ರಾಮಗಳು ಇವತ್ತಿಗೂ ಕಂಡುಬರುತ್ತದೆ. ಇಂತಹ ಇವರ ವ್ಯವಸ್ಥೆಯ ಮೂಲಭೂತ ವಿಷಯಗಳ ಚರ್ಚೆಯನ್ನು ಇಲ್ಲಿ ಕಾಣಬಹುದು.

ಆಧಾರಸೂಚಿ

೧. ಅರುಣ ಜೋಳದ ಕೂಡ್ಲಿಗಿ. ೨೦೦೭. ಸೊಂಡೂರು: ಭೂ ಹೋರಾಟ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ.

೨. ಕಲಬುರ್ಗಿ ಎಂ.ಎಂ.. ೧೯೯೪. ಕರ್ನಾಟಕದ ಕೈಫಿಯತ್ತುಗಳು. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ.

೩. ಕೃಷ್ಣರಾವ್ ಎಂ.ವಿ.. ೧೯೭೦. ಕರ್ನಾಟಕ ಇತಿಹಾಸ ದರ್ಶನ. ಕರ್ನಾಟಕ ಸಹಕಾರಿ ಪ್ರಕಾಶನ. ಬೆಂಗಳೂರು.

೪. ಜಗದೀಶ್ ಕೆರೆನಹಳ್ಳಿ (ಸಂ), ೨೦೧೧, ಸ್ಕಂದ ಸಿರಿ, ಕನ್ನಡ ಸಾಹಿತ್ಯ ಪರಿಷತ್ತು, ಸೊಂಡೂರು.

೫. ನಾಗಯ್ಯ ಜೆ.ಎಂ.. ನೆನಪಿನ ಸಂಚಿಕೆ. ಸೊಂಡೂರು ಕೆಲವು ಐತಿಹಾಸಿಕ ಘಟನೆಗಳು. ಪ್ರಭು ಪ್ರಕಾಶನ.

೬. ಭಾರತಿ ಕಾಸರಗೋಡು (ಅನು).. ೨೦೧೧. ಸಾಹಸದ ಒಂದು ಶಿಮಾರೇಖೆ. ಅಭಿನವ ಪ್ರಕಾಶನ. ಬೆಂಗಳೂರು.

೭. ವಿರೂಪಾಕ್ಷ ಪೂಜಾರಹಳ್ಳಿ, ೧೯೯೫. ಬಳ್ಳಾರಿ ಜಿಲ್ಲೆಯ ಕಲೆಕ್ಟರ್‌ಗಳ ಆಳ್ವಿಕೆ (೧೮೦೦-೧೯೪೭). ಎಂ.ಫಿಲ್. ಪ್ರೌಢ ಪ್ರಬಂಧ ಅಪ್ರಕಟಿತ. ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ವೃಷಭೇಂದ್ರಾಚಾರ್ (ಪ್ರ.ಸಂ.). ೨೦೦೪. ಲೋಹಾದ್ರಿಯ ಮಡಿಲು ಸ್ಮರಣ ಸಂಚಿಕೆ. ಕನ್ನಡ ಸಾಹಿತ್ಯ ಪರಿಷತ್ತು. ಸೊಂಡೂರು.

೯. ಸೂರ್ಯನಾಥ ಯು.ಕಾಮತ್ (ಮು.ಸಂ.). ಕರ್ನಾಟಕ ರಾಜ್ಯ ಗ್ಯಾಸೆಟಿಯರ್. ಕರ್ನಾಟಕ ಸರಕಾರ. ಬೆಂಗಳೂರು.

೧೦. Francis W., (Ed.,), 1904, Madras Disrict Gazetteer, Bellary District, Madras.

11. Kelshall J. 1872, Madrass District Gazetteer, Bellary, Vol-v, Madras.

12 Maclean C.D. (Ed..). 1987. Mannual of the administration. Madras. Presidency vol-I. Assian Education Service. New Delhi.

13 Ghorpade M.Y.. 1992. The Ghorpade Registance. Murari Rao Ghorpade and 18th Century Deccan. Ravinay. Bangalore.

ಖಾದಿ ಶಂಕರಪ್ಪ-೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಶಿವಮೊಗ್ಗ ಜಿಲ್ಲೆಯ ರೈತರ ಪ್ರೇರಕ

ಡಾ. ಎಸ್. ದಯಾನಂದ ಕುಮಾರ್*

೧೯೪೨ರಲ್ಲಿ ಕರ್ನಾಟಕದಲ್ಲಿ ಆರಂಭವಾದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾರತದ ಇತರ ಪ್ರಾಂತ್ಯಗಳಂತೆ ಶಿವಮೊಗ್ಗ ಜಿಲ್ಲೆಯ ಪಾತ್ರವು ಹಿರಿದಾದುದಾಗಿದ್ದು ಈ ಜಿಲ್ಲೆಯ ಕಾಂಗ್ರೆಸ್ ನಾಯಕರು, ರೈತರು, ವಿದ್ಯಾರ್ಥಿಗಳು, ಕಾರ್ಮಿಕರು, ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು ಮುಂತಾದವರು ಸಕ್ರಿಯವಾಗಿ ಆದರೆ ಅಹಿಂಸಾತ್ಮಕವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಅಂತಹ ಮಹನೀಯರಲ್ಲಿ ಶಿವಮೊಗ್ಗದ **ಖಾದಿ ಶಂಕರಪ್ಪನವರು**[೧] ಒಬ್ಬರಾಗಿದ್ದು ಇವರು ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಖಾದಿ ಪ್ರಚಾರ ಮತ್ತು ಮಾರಾಟ, ಮದ್ಯ ಮಾರಾಟ ನಿಷೇಧ, ಮದ್ಯಪಾನ ವಿರೋಧಿ ಪ್ರಚಾರ, ಲೈಸೆನ್ಸ್ ಇಲ್ಲದೇ ಕಟ್ಟಿಗೆ(ಸೌದೆ) ನಾಟಾವನ್ನು ಅರಣ್ಯದಿಂದ ತರುವುದು. ಹುಲ್ಲು, ಬನ್ನಿ, ತೆರಿಗೆ ನೀಡಲು ವಿರೋಧ ವಿದ್ಯಾಭ್ಯಾಸಕ್ಕಾಗಿ ನಗರಗಳಿಗೆ ಹೋಗಿದ್ದ ರೈತರ ಮಕ್ಕಳು ಶಾಲೆ ಕಾಲೇಜು ಬಹಿಷ್ಕರಿಸಿ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಚಳುವಳಿ ಪ್ರಚಾರ ಮಾಡುವಂತೆ ಹುರಿದುಂಬಿಸುವುದು. ರೈತರು ವಿದ್ಯಾರ್ಥಿಗಳು, ಕಾರ್ಮಿಕರು, ವ್ಯಾಪಾರಿಗಳು ಮುಂತಾದವರನ್ನು ಸಂಘಟಿಸಿ ತಮ್ಮದೇ ಆದ ರೀತಿಯಲ್ಲಿ ಸ್ವಾತಂತ್ರ್ಯ ದೇವತೆಯ ಸೇವೆಗೈದು ಸಫಲರಾದರು.

ಖಾದಿ ಶಂಕರಪ್ಪನವರು ಸ್ವಾತಂತ್ರ್ಯ ಚಟುವಟಿಕೆಯಲ್ಲಿನ ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ಪ್ರತಿ ದಿನವೂ ತಮ್ಮ ದಿನಚರಿ ಪುಸ್ತಕದಲ್ಲಿ[೨] (ಡೈರಿಯಲ್ಲಿ) ನಮೂದಿಸುತ್ತಿದ್ದು ಆ ದಿನಚರಿ ಪುಸ್ತಕವನ್ನು ಮುಖ್ಯವಾಗಿ ಬಳಸಿಕೊಂಡು ಈ ಲೇಖನ ಬರೆಯಲಾಗಿದ್ದು ಸ್ಥಳಾಭಾವದ ಕಾರ್ಯದಿಂದ ಅವರ ಸ್ವಾತಂತ್ರ್ಯ ಚಳುವಳಿಯನ್ನು **೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಶಿವಮೊಗ್ಗ ಜಿಲ್ಲೆಯ ರೈತರ ಪ್ರೇರಕ** ಎಂಬ ಶೀರ್ಷಿಕೆಯಡಿ ರೈತರೊಂದಿಗೆ ಅವರು ಬ್ರಿಟೀಷರ ವಿರುದ್ಧ ನಡೆಸಿದ ಹೋರಾಟಕ್ಕೆ ಸೀಮಿತಗೊಳಿಸಿಕೊಳ್ಳಲಾಗಿದೆ.[೩]

ರೈತರೇ ಎಚ್ಚರಾಗಿರಿ, ನಿಮ್ಮ ಹಿತ ನೀವೇ ಸಾಧಿಸಿಕೊಳ್ಳಬೇಕು, ಮಹಾತ್ಮ ಗಾಂಧಿಯವರ ಸಂದೇಶದಂತೆ ಅಹಿಂಸಾತತ್ವದ ಮೇಲೆ ಕೆಲಸ ಮಾಡಿ

ಹಣದ ಆಸೆಯನ್ನು ನಿಮ್ಮ ಮನಸ್ಸಿನಿಂದ ತೆಗೆಯಿರಿ. ನೀವು ಬೆಳೆದ ವಸ್ತುಗಳನ್ನು ಮಾರಾಟ ಮಾಡಿ, ನೋಟು ನಾಣ್ಯಗಳನ್ನು ಮಾತ್ರ ಪಡೆಯುವುದನ್ನು ನೋಡಬೇಡಿ, ನಿಮಗೆ ಬೇಕಾಗುವ ಆಹಾರ ವಸ್ತುಗಳನ್ನೆಲ್ಲಾ ಬೆಳೆಯಬೇಕು, ಹೊರಗಡೆಯಿಂದ ಯಾವ ಸಾಮಾನುಗಳನ್ನು ಅಪೇಕ್ಷಿಸಬಾರದು. ಸೀಮೆ ಎಣ್ಣೆ ಉಪಯೋಗ ಬಿಟ್ಟುಬಿಡಿ ಬರೀ ಔಡಲ ಬೀಜಗಳನ್ನು ಬೆಳೆದು ಉರಿಸುವುದಕ್ಕೆ ಬೇಕಾಗುವ ಎಣ್ಣೆಗಳನ್ನು ತಯಾರು ಮಾಡಿ ಹಳೆಯ ಗಾಣಗಳನ್ನು ಕೆಲಸಕ್ಕೆ ತನ್ನಿ.[೪]

ಈ ಮೂಲಕ ರೈತರು ಸ್ವದೇಶ ವಸ್ತುಗಳನ್ನು ಬಳಸಲು ವಿದೇಶಿ ವಸ್ತುಗಳನ್ನು ತಿರಸ್ಕರಿಸಲು ಮನವೊಲಿಸಿ ರೈತರ ಬದುಕನ್ನು ಸ್ವಾವಲಂಬಿಯಾಗಿಸಲು ಅದೇ ವೇಳಿ ಆಂಗ್ಲರನ್ನು ಅಸಹಾಯಕರನ್ನಾಗಿಸುವ ತಂತ್ರವಾಗಿದ್ದಿತು.

ಚರಕದಿಂದ ನೂಲು ತೆಗೆದು ಬಟ್ಟೆ ಮಾಡಿಸಿಕೊಳ್ಳಬೇಕು, ಮಿಲ್ಲುಗಳು ನಿಲ್ಲುತ್ತವೆ. ಬಟ್ಟೆ ಸಿಗುವುದಿಲ್ಲ. ಹೊರಗಡೆ ವ್ಯಾಪಾರ ಖಂಡಿತಾ ಬಂದಾಗುವುದು. ಮುಂದಿನ ಆಲೋಚನೆ ಇಡಿ ಮಹಾತ್ಮಗಾಂಧಿ ಹೇಳಿರುವುದೆಲ್ಲ ಪರಮೇಶ್ವರನ ವಾಕ್ಯಗಳು.[೫]

ಪ್ರಪಂಚದ ದೃಷ್ಟಿಯಿಂದ ಮಾತನಾಡುವುದಾಗಿದೆ. ಚೈನಾ ದೇಶ ನೋಡಿ ಆರು ವರ್ಷಗಳಿಂದ ಯುದ್ಧ ಹೂಡಿದೆ ಸೋಲಲಿಲ್ಲ ತನಗೆ ಬೇಕಾದ ಎಲ್ಲಾ ವಸ್ತುಗಳನ್ನು ಹಳ್ಳಿಯಿಂದ ತಯಾರಿಸಿಕೊಳ್ಳುತ್ತಿದೆ. ನಾವು ಸ್ವಸಂಪೂರ್ಣರಾಗಬೇಕು. ಸರ್ಕಾರವನ್ನೂ ದೂಡಬೇಕು.

ಇದು ಸಹಜವಾಗಿಯೇ ಆಂಗ್ಲರ ಕೈಗಾರಿಕೆಗಳನ್ನು ಬಂದು ಮಾಡುವಂತೆ ಮಾಡುವುದರ ಮೂಲಕ ಅವರ ವ್ಯಾಪಾರವನ್ನು ನಿರ್ನಾಮ ಮಾಡುವುದರ ಜೊತೆಗೆ ದೇಶೀಯ

* ಪ್ರಾಧ್ಯಾಪಕರು, ಚೀಕನಹಳ್ಳಿ, ಜ್ಯೋತಿನಗರ ಅಂಚೆ, ಚಿಕ್ಕಮಗಳೂರು ಜಿಲ್ಲೆ-೫೭೭೧೦೨.

ಕೈಗಾರಿಕೆಗಳ ಅಭಿವೃದ್ಧಿ ಇದರ ಮೂಲಕ ಗ್ರಾಮೀಣರಿಗೆ ಉದ್ಯೋಗ ಅವರ ವಸ್ತುಗಳಿಗೆ ಬೇಡಿಕೆ ತರುವುದು ಚರಖಾ ಮಹತ್ವ ಪ್ರಚುರಪಡಿಸುವುದಾಗಿತ್ತು.

ಕೋರ್ಟ್ ವ್ಯವಹಾರಗಳನ್ನು ನಿಲ್ಲಿಸಿ, ಎಲ್ಲಾ ಕೇಸುಗಳನ್ನು ವಾಪಸ್ ಪಡೆದು ರಾಜಿಯಾಗಬೇಕು. ಪಂಚಾಯ್ತಿಗಳನ್ನು ಸ್ಥಾಪಿಸಬೇಕು. ನಿಮ್ಮ ಆಡಳಿತವನ್ನು ನೀವೇ ನೋಡಿಕೊಳ್ಳಬೇಕು. ಹಳ್ಳಿಯ ಚಿಂತನೆ ನಿಮ್ಮದೇ ಸರ್ಕಾರ ನಾಶವಾಯಿತೆಂದು ಸ್ವತಂತ್ರವಾಗಿ ಹೊರಡುವ ಎಲ್ಲಾ ಕೆಲಸಗಳನ್ನು ಮಾಡಿ ಪಟ್ಟಣದಿಂದ ಯಾವ ವ್ಯವಹಾರವೂ ಬೇಡ ಹೊಸ ಸಾಲಗಳನ್ನು ಪಡೆಯಬೇಡಿ, ಹಿಂದಿನ ಸಾಲಗಳನ್ನು ಹೆಚ್ಚು ಕಮ್ಮಿ ಮಾಡಿ (ಹೇಗಾದರೂ ಪ್ರಯತ್ನಿಸಿ) ತೀರ್ಮಾನ ಮಾಡಿಬಿಡಿ. ಪಟ್ಟಣದವರಿಗೆ ಮಾತ್ರ ಸ್ವಲ್ಪ ದವಸವನ್ನು ಕೊಡಿ, ಹೆಚ್ಚಿಗೆ ವ್ಯಾಪಾರವನ್ನು ಬಿಡಿ. ನಿಮ್ಮ ಎಲ್ಲಾ ಖರ್ಚುಗಳನ್ನು ಕಮ್ಮಿಮಾಡಿ ಒಂದು ವರ್ಷ ಕಾಲ ಕಾಂಗ್ರೆಸ್ ಚಳುವಳಿಗೆ ಬೆಂಬಲ ಕೊಡಿ. ಸ್ವರಾಜ್ಯ ಖಂಡಿತಾ ದೊರೆಯುವುದು. ರೈತರ ಸರ್ಕಾರ ಸ್ಥಾಪನೆಯಾಗುವುದು.[೮]

ವಿದೇಶಿ ವಸ್ತುಗಳನ್ನು ಬಳಸದಿರುವುದು, ಚರಕದಿಂದ ಬಟ್ಟೆ ನೇಯಿಸುವುದು, ಸ್ವಾವಲಂಬಿ ಜೀವನವನ್ನು ಹಳ್ಳಿಗರಿಗೆ ರೂಪಿಸುವುದರ ಜೊತೆಗೆ ಹಳ್ಳಿಗಳನ್ನು ಗಾಂಧಿ ಕಂಡ ಗ್ರಾಮ ರಾಜ್ಯ, ಸ್ವರಾಜ್ಯ ಸ್ಥಾಪನೆ, ಗ್ರಾಮೀಣ ಋಣಭಾರ ತಗ್ಗಿಸಿ ರೈತರನ್ನು ಋಣ ಮುಕ್ತರನ್ನಾಗಿ ಮಾಡಿ, ಆಂಗ್ಲರಿಗೆ ಭಾರತದಿಂದ ಆಹಾರ ರಫ್ತು ಮಾಡಲು ಸಾಧ್ಯವಾಗದಂತೆ ಅಸಹಕಾರ ವೇರ್ಪಡಿಸುವುದಾಗಿತ್ತು.[೯]

ಹಳ್ಳಿಗಳಲ್ಲಿರುವ ಪಾರ್ಟಿಗಳು ಒಂದಾಗಬೇಕು ದೇಶ ಕಲ್ಯಾಣವಾಗಬೇಕು

ಖಾದಿ ಶಂಕರಪ್ಪನವರು ಸ್ವಾತಂತ್ರ್ಯ ಚಳುವಳಿ ಯಶಸ್ವಿಯಾಗಬೇಕಾದರೆ ಹಳ್ಳಿಗಳಲ್ಲಿದ್ದಂತ ಜಾತಿಗಳ ವದುವಿನ ಭೇದ ಭಾವ, ಅಸಮಾಧಾನ, ತಾರತಮ್ಯಗಳನ್ನು ಮೊದಲು ಹೋಗಲಾಡಿಸಬೇಕೆಂಬ ಸೂಕ್ಷ್ಮವನ್ನೂ ಅರಿತವರಾಗಿದ್ದರು. ಕಾರಣ ಭಾರತೀಯರು ಆಂಗ್ಲರ ಅಧೀನವಾಗಲು ಭಾರತೀಯರಲ್ಲಿದ್ದಂತ ಧರ್ಮ ಹಾಗೂ ಜಾತಿ ಭೇದಗಳು ಪ್ರಮುಖ ಕಾರಣಗಳಲ್ಲಿ ಒಂದು ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಈ ಕಾರಣದಿಂದಲೇ ಖಾದಿ ಶಂಕರಪ್ಪನವರು "ಹಳ್ಳಿಯ ರೈತ ಬಾಂಧವರೇ ನಿಮ್ಮ ಹಳ್ಳಿಯ ವಿಚಾರಗಳನ್ನು ಕೇಳಿದರೆ ಬಹಳ ದುಃಖವಾಗುತ್ತದೆ. ಹಿಂದೆ ಬಸವೇಶ್ವರನು ಎಲ್ಲರನ್ನು ಒಂದುಗೂಡಿಸುತ್ತೇನೆಂದು ವೀರಶೈವ ಮತವನ್ನು ಸ್ಥಾಪಿಸಿದನು. ಅವನ ಇಷ್ಟದಂತೆ ಈಗ ವರ್ತಿಸದೇ ಭಿನ್ನ ಭಿನ್ನ ಪಂಗಡಗಳನ್ನು ಮಾಡಿಕೊಂಡಿರುವಿರಿ. ಆದರೂ ಪರವಾಗಿಲ್ಲ, ನಿಮ್ಮ ನಿಮ್ಮ ಮನೆವಾರ್ತೆಗಳನ್ನು ಮಾತನಾಡುವುದಕ್ಕೆ ನಿಮಗೆ ಯಾವ ಅಧಿಕಾರವೂ ಇಲ್ಲ ಮತ್ತು ನಿಮ್ಮ ಸ್ವಾತಂತ್ರ್ಯವಿಲ್ಲ"[೧೦]

ನಮ್ಮಲ್ಲಿರುವ ಧನ ಧಾನ್ಯಗಳನ್ನು ಹೊರಗೆ ತರಬಾರದು. ದೇಶದ ಹಿತಚಿಂತನೆಯಾಗಬೇಕು. ನಮ್ಮೆಲ್ಲರ ರಕ್ಷಣೆಯಾಗಬೇಕು. ಎಲ್ಲರೂ ಸುಖವನ್ನು ಗಳಿಸಬೇಕು. ಎಲ್ಲರೂ ಒಂದೇ ಎಂದು ತಿಳಿಯಬೇಕು. ಹಿಂದೆ ಅನೇಕ ವೇಳೆಗಳಲ್ಲಿ ಸಣ್ಣ ಸಣ್ಣ ಕಾರಣಗಳಿಗಾಗಿ ಅಥವಾ ಸ್ವಾರ್ಥ ಸಾಧಕರ ಮೂಲಕವಾಗಲೀ, ಬೇರೆ ಬೇರೆ ಪಂಗಡಗಳನ್ನು ಮಾಡಿಕೊಂಡಿರಿ. ಉರಿಯುವ ಬೆಂಕಿಗೆ ತುಪ್ಪ ಹೊಯ್ಯುವ, ವಕೀಲರು, ಲಾಯರುಗಳು, ಹಳ್ಳಿಯವರನ್ನೂ ಉದ್ಧರಿಸುತ್ತೀವೇನೋ ಎಂದು ತಿಳಿದು ಇರುವೆಗಳಂತೆ ಒಂದೊಂದು ಪಾರ್ಟಿಯ ವಕಾಲತ್ತನ್ನು ವಹಿಸಿ ಕೋರ್ಟ್‌ಗೆ ಎಳೆಯುತ್ತಾರೆ.[೧೧]

ಹೀಗೆ ಹಳ್ಳಿಗಳಲ್ಲಿನ ಸಣ್ಣ ಪುಟ್ಟ ಜಾತಿಭೇದಗಳು ಸ್ವಾತಂತ್ರ ಗಳಿಕೆಗೆ ದೊಡ್ಡ ಅಡ್ಡಿಯಾಗುತ್ತದೆಂಬುದನ್ನು ಅರಿತಿದ್ದ ಖಾದಿ ಶಂಕರಪ್ಪನವರು ಇಂತಹವುಗಳಿಂದ ಹೊರಬರಬೇಕೆಂದು ಇಂತಹ ಹಳ್ಳಿಗಳ ಸಣ್ಣ ಕಲಹಗಳನ್ನು ದುರುಪಯೋಗ ಪಡಿಸಿಕೊಂಡು ವಕೀಲರು, ಅಧಿಕಾರಿಗಳು ಹೇಗೆ ಸ್ವಾರ್ಥ ಸಾಧನೆ ಲಾಭ ಮಾಡಿಕೊಳ್ಳುತ್ತಾರೆಂಬ ಬಗ್ಗೆ ವಿವರಿಸಿ ಅಂತಹವುಗಳಿಂದ ದೂರವಿರಬೇಕೆಂದು ವಿವರಿಸುತ್ತಾರೆ.

ಅಲ್ಲದೆ "ಒಂದೇ ಮಾತಿನಲ್ಲಿ ತೀರ್ಮಾನ ಮಾಡಿ ಹಳ್ಳಿಯವರನ್ನೂ ಸರಿಪಡಿಸಬೇಕೆಂಬ ಭಾವನೆಯೇ ಇರುವುದಿಲ್ಲ. ವಕೀಲರು ಮತ್ತು ಲಾಯರುಗಳಿಂದ ದೇಶ ಹಾಳಾಗುತ್ತಿದೆ. ಇವರ ಮಾತುಗಳನ್ನು ನಂಬಿದವರ ಸಂಸಾರಗಳು ಹಾಳಾಗಿರುವುದು ನಿದರ್ಶನವೇ ಸರಿ. ನೀವು ಎಲ್ಲಾ ವಿಚಾರಗಳನ್ನೂ ತಿಳಿದಿರುವಿರಿ ನಿಮ್ಮ ಊರಿನಲ್ಲಿ ಪಾರ್ಟಿಗಳು ಏತಕ್ಕಾಗಬೇಕು, ಹಣವೇಕೆ ಹಾಳು ಮಾಡಬೇಕು, ನ್ಯಾಯ ಸಿಗದೆ ಇರುವ ಕೋರ್ಟ್‌ಗಳಿಗೆ ಏತಕ್ಕೆ ಹೋಗಬೇಕು. ನೀವು ತಿಳುವಳಿಕೆ ಕಮ್ಮಿ ಇಟ್ಟುಕೊಂಡು ಲಾಯರುಗಳಿಂದ ಹಾಳಾಗುತ್ತೀರಿ".[೧೨]

'ನ್ಯಾಯಾಲಯಗಳಲ್ಲಿ ಗೆದ್ದವರು ಸೋತಂತೆ, ಸೋತವರು ಸತ್ತಂತೆ (ಹಾಳಾದಂತೆ)' ಎಂಬ ಮಾತಿನ ಅಂತರಾಳವನ್ನು ಖಾದಿ ಶಂಕರಪ್ಪನವರು "ಹಳ್ಳಿಗಳಲ್ಲಿ ಎರಡು ಪಂಗಡಗಳಿವೆಯೆಂದರೆ, ಪೋಲೀಸರು ಸುಖವಾಗಿರುವರು. ಲಾಯರು ಶ್ರೀಮಂತರಾದವರು, ಪಟ್ಟಣದವರು ನಿಮ್ಮ ಮಾಲುಗಳನ್ನು ಕೊಳ್ಳುವರು. ನಿಮ್ಮ ಮನೆ, ಬಂಗಾರದ ವಡವೆಗಳು ಖರ್ಚಾಗುವುದು, ಮಕ್ಕಳ ವಿದ್ಯಾಭ್ಯಾಸವಿಲ್ಲ, ಆರೋಗ್ಯವಿಲ್ಲ, ಮನೆ ಜಮೀನುಗಳನ್ನು ಕಳೆದುಕೊಂಡು ಕೂಲಿ ಕೆಲಸ ಹುಡುಕುತ್ತಾ, ಕೂಲಿ ಸಿಗದೆ ಭಿಕ್ಷೆ ಬೇಡುತ್ತಾ ಹಾಳಾಗಿ

ಹೋಗಿರುವ ಸಂಸಾರಗಳು ಅನೇಕ ಇವೆ. ಅವರನ್ನು ನೋಡಿಯಾದರೂ ಪಾಠ ಕಲಿಯದೆ, ಮತಭೇದಗಳನ್ನು ಮಾಡಿಕೊಂಡು, ಇನ್ನೊಬ್ಬ ದಾರಿ ಹೋದನು ನಿಮ್ಮ ಊರಿನಲ್ಲಿ ನೆಲಸುವಂತೆ ಮಾಡಿಕೊಳ್ಳುತ್ತೀರಿ" ಎಂದು ತಿಳಿಸುತ್ತಾರೆ.[೧೧]

'ನಮ್ಮ ಅಣ್ಣ ತಮ್ಮಂದಿರಾದ ಅಧಿಕಾರಿಗಳು ಹಳ್ಳಿಯವರು ಬೆಳೆದ ದವಸ, ಅಕ್ಕಿ, ರಾಗಿ, ಜೋಳ, ಹಾಲು, ಮೊಸರು, ಬೆಣ್ಣೆ, ತುಪ್ಪ, ತರಕಾರಿ ಎಲ್ಲಾ ಪಡೆದು ನಾವು ಅವರ ದಾಸರು ಎಂದು ತಿಳಿದಿದ್ದಾರೆ. ಅಹಿಂಸಾ ಯುದ್ಧವನ್ನು ಹೂಡುತ್ತೇವೆ, ಅಧಿಕಾರಿಗಳಿಗೆ ಯಾವ ಪದಾರ್ಥವನ್ನು ಕೊಡದೆ ಬಹಿಷ್ಕರಿಸಿ.'[೧೨] ಈ ರೀತಿ ಹಳ್ಳಿಯವರಿಂದ ಪುಕ್ಕಟೆಯಾಗಿ ಆಹಾರ ಧಾನ್ಯ, ತರಕಾರಿ, ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಪಡೆಯುವುದು. ಎತ್ತು, ಗಾಡಿ ರೈತರಿಂದ ಬಿಟ್ಟಿ ಸೇವೆ ಪಡೆದ ನಂತರವೂ ಸ್ವಲ್ಪವೂ ಕೃತಜ್ಞತೆ ಇಲ್ಲದೆ ಇಂತಹ ಅಮಾಯಕ ರೈತರನ್ನು ತಮ್ಮ ಗುಲಾಮರಂತೆ ಅಧಿಕಾರಿಗಳು ನಡೆಸಿಕೊಳ್ಳುತ್ತಿದ್ದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಒಂದು ಸಾಮಾನ್ಯ ರೂಢಿಯಾಗಿದ್ದು ಅದರಿಂದ ಅಧಿಕಾರಿಗಳು ಮತ್ತು ಪೋಲೀಸರು ಲಾಭ ಮಾಡಿಕೊಳ್ಳುತ್ತಿದ್ದುದಲ್ಲದೆ ತಮ್ಮ ದರ್ಪ ತೋರಿಸುತ್ತಿದ್ದರು.[೧೩]

ಒಂದು ವರ್ಷಕಾಲ ಬಹಿಷ್ಕರಿಸಿ ನೀವು ಬೆಳೆಯುವ ವಸ್ತುಗಳನ್ನು ನೀವೆ ಉಪಯೋಗಿಸಿ, ಸೀಮೆಎಣ್ಣೆ ಕೊಳ್ಳುವುದನ್ನು ಬಿಡಿ ಮನೆಯಲ್ಲಿ ಹರಳೆಣ್ಣೆ ದೀಪಗಳನ್ನು ಇಡಿ, ಭೂಮಿಯಲ್ಲಿ ಉಪ್ಪು ಸಿಗುವುದಾದರೆ ತೆಗೆಯಿರಿ. ಬೇರೆ ಯಾವ ಪದಾರ್ಥಗಳನ್ನು ಪಟ್ಟಣಗಳಿಂದ ಕೊಳ್ಳುವುದು ಬೇಡ. ನಿಮ್ಮ ಕಾರ್ಯಸಿದ್ಧಿಯಾಗುವುದು ರೈತರ ಸರ್ಕಾರ ಸ್ಥಾಪನೆಯಾಗುವುದು ಈ ಗುಲಾಮಗಿರಿ ಸರ್ಕಾರದಿಂದ ಎಂದಿದ್ದರೂ ಗುಲಾಮಗಿರಿ ತಪ್ಪುವುದಿಲ್ಲ.[೧೪]

ಹೀಗೆ ವಿದೇಶದಿಂದ ಆಮದಾದ ಸೀಮೆಎಣ್ಣೆ, ಬಟ್ಟೆ ಇತ್ಯಾದಿ ವಸ್ತುಗಳ ಬಳಕೆ ನಿಷೇಧ, ಸ್ಥಳೀಯ ವಸ್ತುಗಳ ತಯಾರಿಕೆ, ಬಳಕೆ ಆದ್ಯತೆ ನೀಡುವುದರ ಮೂಲಕ ಸ್ವಾವಲಂಬನೆ ಬದುಕು ರೂಪಿಸಿಕೊಳ್ಳಬೇಕೆಂದು ಪ್ರೇರೇಪಿಸಿದರು. ಅಲ್ಲದೆ "ಸರ್ಕಾರಕ್ಕೆ ಬುದ್ಧಿ ಕಲಿಸಬೇಕಾದರೆ ಮಹಾತ್ಮ ಗಾಂಧಿಯವರು ಹೊರಗೆ ಬರಬೇಕಾದರೆ, ರಾಷ್ಟ್ರೀಯ ಸರ್ಕಾರ ಸ್ಥಾಪನೆಯಾಗಬೇಕಾದರೆ ನಿಮ್ಮ ಸಹಾಯಬೇಕಾಗಿದೆ. ಇಡೀ ಹಿಂದೂಸ್ತಾನದಲ್ಲಿ ನಿಮ್ಮ ಕಾರ್ಯಕ್ಕೆ ಮೆಚ್ಚುಗೆ ದೊರೆಯುತ್ತದೆ. ನಿಮ್ಮ ಮಕ್ಕಳು ಮರಿಗಳು ಮೆಚ್ಚುವ ಕಾಲ ಬರುತ್ತದೆ"[೧೫]

ಹೀಗೆ ದೇಶಾದ್ಯಂತ ಬ್ರಿಟೀಷ್ ಆಡಳಿತಕ್ಕೆ ಅಸಹಕಾರ, ಅಸಮ್ಮತೆ, ಅತಂತ್ರ ಉಂಟುಮಾಡಿ ಗಾಂಧಿಯವರ ಬಿಡುಗಡೆಗೆ ಒತ್ತಾಯ ಹೇರುವುದು ಹಾಗೂ ಬ್ರಿಟಿಷ್ ಆಡಳಿತವನ್ನು ಭಾರತದಿಂದ ಕೊನೆಗೊಳಿಸುವುದಾಗಿತ್ತು. ಅಲ್ಲದೆ ಕರ ನಿರಾಕರಣೆಗೂ ಕರೆ ನೀಡಿದರು.

ಕರ ನಿರಾಕರಣೆ

"ಸರ್ಕಾರಕ್ಕೆ ಹುಲ್ಲು ಬನ್ನಿ ಕೊಡಬೇಡಿ. ಕಟ್ಟಿಗೆಗೆ ಲೈಸೆನ್ಸ್ ಪಡೆಯಬೇಡಿರಿ. ನಾಟಾಗಳನ್ನು ಕಡಿದು ತನ್ನಿ ನಮ್ಮ ಕಾಡು ನಮ್ಮ ಜಮೀನು ನಾವು ಸ್ವತಂತ್ರರಿದ್ದೇವೆ. ಹೆದರಬೇಡಿ, ರೈತರೇ ನಿಮ್ಮ ಹಳ್ಳಿಯಲ್ಲಿ ನೀವು ಸ್ವತಂತ್ರರು. ಯಾವ ಅಧಿಕಾರಿಯನ್ನು ಒಪ್ಪಬೇಡಿ. ಯಾವ ಸರ್ಕಾರಿ ಅಧಿಕಾರಿಯು ನಿಮ್ಮ ಹಳ್ಳಿಯಲ್ಲಿ ಪ್ರವೇಶಿಸುವುದಕ್ಕೆ ಅಧಿಕಾರವಿಲ್ಲ. ಬಂದರೆ ಓಡಿಸಿರಿ ಎಲ್ಲರೂ ಒಗ್ಗಟ್ಟಿನಿಂದಿರಿ. ಸ್ವತಂತ್ರ ಪಂಚಾಯ್ತಿಗಳನ್ನು ಸ್ಥಾಪಿಸಿರಿ. ಟ್ರಜರಿಯಲ್ಲಿರುವ ಹಣವನ್ನು ತನ್ನಿ, ನಿಮ್ಮ ಹಳ್ಳಿ ಕೆಲಸಗಳಿಗೆ ಉಪಯೋಗಿಸಿರಿ. ಇನ್ನೂ ಮುಂದೆ ನಿಮ್ಮ ಮನೆ ಕಂದಾಯದ ಹಣವನ್ನು ಟ್ರಜರಿಗೆ ಪಾವತಿ ಮಾಡದೇ ನೀವೇ ನಿಮ್ಮ ಪಂಚಾಯ್ತಿಯಿಂದ ಉಪಯೋಗಿಸಿರಿ. ನಿಮ್ಮ ಪಂಚಾಯ್ತಿ ಯಜಮಾನನನ್ನು ಹಳ್ಳಿಯ ಯಜಮಾನನೆಂದು ಎಲ್ಲರೂ ಅವನ ಮಾತನ್ನು ಕೇಳಿಕೊಂಡು ಸೈನಿಕರಂತೆ ಹಳ್ಳಿಯನ್ನು ರಕ್ಷಿಸಿಕೊಳ್ಳಬೇಕು."[೧೬]

ತನ್ಮೂಲಕ ಆಂಗ್ಲರಿಗೆ ಎಲ್ಲ ರೀತಿಯಲ್ಲೂ ವಿರೋಧ ವ್ಯಕ್ತಪಡಿಸಿ ಅವರ ಆಡಳಿತಯಂತ್ರ ಕುಸಿಯುವಂತೆ ಮಾಡುವುದು, ಆರ್ಥಿಕ ನಷ್ಟ ಉಂಟುಮಾಡುವುದು, ಹಳ್ಳಿಗಳಲ್ಲಿ ಸ್ಥಳೀಯ ಅಥವಾ ಸ್ವಯಂ ಆಡಳಿತ ಏರ್ಪಡಿಸಿಕೊಂಡು ಗಾಂಧಿಸ್ವರಾಜ್ಯದ ಕನಸು ನನಸು ಮಾಡುವುದಾಗಿತ್ತು. ಕಾರಣ ಬ್ರಿಟಿಷ್ ಆಡಳಿತ ಹೆಚ್ಚು ಕಡಿಮೆ ನಗರಗಳ ಕಡೆ ಹೆಚ್ಚು ಗಮನ ನೀಡಿದ್ದು ಹಳ್ಳಿಗಳನ್ನು ಕೇವಲ ತೆರಿಗೆ ವಸೂಲಿ ಕೇಂದ್ರಗಳಾಗಿ ಮಾಡಿಕೊಂಡಿದ್ದರು. ಸೈನ್ಯ, ಅಧಿಕಾರಿಗಳು ಪಟ್ಟಣಗಳನ್ನೂ ರಕ್ಷಣೆ ಮಾಡುತ್ತಾರೆಯೇ ವಿನಃ ನಮ್ಮ ಹಳ್ಳಿಯನ್ನು ನಾವೇ ರಕ್ಷಿಸಿಕೊಳ್ಳಬೇಕು. ಸಿದ್ಧರಾಗಿರಿ."[೧೭]

ಇದಲ್ಲದೆ ಈ ಸ್ವಾತಂತ್ರ್ಯ ಚಳುವಳಿಯಲ್ಲಿ ನಗರಗಳಿಗೆ ವಿದ್ಯಾಭ್ಯಾಸಕ್ಕಾಗಿ ತೆರಳಿದ್ದ ರೈತರ ಮಕ್ಕಳು ಸಹಾ ಭಾಗವಹಿಸಬೇಕೆಂಬ ಮಹದಾಸೆಯಿಂದ ಹಳ್ಳಿ ವಿದ್ಯಾರ್ಥಿಗಳ ಕುರಿತು ಬರೆದರು.

"ಹಳ್ಳಿಯಲ್ಲಿರುವ ವಿದ್ಯಾರ್ಥಿಗಳಿಗೆ ಮಹಾತ್ಮ ಗಾಂಧಿಯವರು ಚಳುವಳಿ ಪ್ರಾರಂಭಿಸಿದ ಮೇಲೆ ಹೈಸ್ಕೂಲ್ ಕಾಲೇಜುಗಳನ್ನು ಬಿಟ್ಟು ನಿಮ್ಮ ಮನೆಗೆ ಬಂದು ಸೇರಿದಿರಿ. ನಿಮ್ಮ ಕೆಲಸವೇನು. ಮುಂದೇನು ಮಾಡಬೇಕೆಂಬುದನ್ನು ಮರೆತು ಬಿಟ್ಟಿರಿ. ನೀವು ನಿಮ್ಮ ಹಳ್ಳಿಗಳಲ್ಲಿ ಕೆಲಸ ಮಾಡುವುದಿಲ್ಲ. ಹೊರಗೆ ಬನ್ನಿ ನಾವು ಕಳುಹಿಸುವ ಮತ್ತು ಪತ್ರಿಕೆಗಳಲ್ಲಿ

ಇರುವ ಭಾಗಗಳನ್ನು, ಹಳ್ಳಿಗಳಲ್ಲಿ ಪ್ರಚಾರಪಡಿಸಿ, ವೀರ ಸ್ವೀಕರಿಸಿ ಕೆಲಸ ಮಾಡಬೇಕು. ತಿಳುವಳಿಕೆ ಇಲ್ಲದ ನಿಮ್ಮ ತಂದೆ ತಾಯಿಗಳು, ಅಣ್ಣ ತಮ್ಮಂದಿರಿಗೆ ಎಲ್ಲ ವಿಷಯಗಳನ್ನು ತಿಳಿಸಬೇಕು. ಶಾಲೆಗೆ ಹೋಗಿ ಪ್ರತಿನಿತ್ಯ ಮಾಡುವ ಕೆಲಸಗಳನ್ನು ಬಿಟ್ಟು, ಅದೇ ವೇಳೆಯನ್ನು ಈಗ ರಾಜಕೀಯ ಕೆಲಸಗಳಿಗೆ ಉಪಯೋಗಿಸಬೇಕಲ್ಲವೆ, ನಿಮ್ಮ ಕರ್ತವ್ಯವನ್ನು ಮರೆತು ಕುಳಿತಿರುವಿರಿ. ೮, ೧೦, ಹಳ್ಳಿಗಳನ್ನು ಸೇರಿಸಿ ಒಂದು ಗ್ರೂಪನ್ನು ಮಾಡಿ ಅಲ್ಲಿ, ಅಲ್ಲಿ ಕೇಂದ್ರ ಹಳ್ಳಿಯಲ್ಲಿ ಒಂದು ಕಛೇರಿಯನ್ನು ಮಾಡಿ, ಅದರ ಮುಖೇನ ಎಲ್ಲಾ ಕೆಲಸಗಳನ್ನು ನಡೆಯಿಸಬೇಕು. ಪ್ರತಿ ಹಳ್ಳಿಯಲ್ಲಿಯು ವಾರಕ್ಕೊಂದು ದಿನ ಸಭೆ ನಡೆಯಬೇಕು. ಪ್ರತಿ ಹಳ್ಳಿಯಲ್ಲಿಯು ವಾರಕ್ಕೊಂದು ದಿನ ಸಭೆ ನಡೆಯುವಂತೆ ಏರ್ಪಾಡಿದೆ. ನಿಮ್ಮ ಕೇಂದ್ರ ಹಳ್ಳಿಯಲ್ಲಿ ವಾರಕ್ಕೊಂದು ದಿನ ಸಭೆ ಸೇರಿಸಿ ಹಳ್ಳಿಯ ಜನರನ್ನು ಜಾಗ್ರತಿಕರನ್ನಾಗಿ ಮಾಡಿ ಸರ್ಕಾರಕ್ಕೆ ಹೆದರ ಬಾರದು, ಗುಲಾಮರಾಗಬಾರದು, ಸ್ವತಂತ್ರರಾಗಬೇಕು."[೧೮]

ಸ್ವಾತಂತ್ರ್ಯ ಕರೆಗೆ ಓಗೊಟ್ಟು ವಿದ್ಯಾರ್ಥಿಗಳು ಶಾಲಾ ಕಾಲೇಜು ಬಹಿಷ್ಕರಿಸಿ ತಮ್ಮ ಹಳ್ಳಿಗಳಿಗೆ ಹಿಂತಿರುಗಿ ಹೋರಾಟದ ಕಡೆಗೆ ಹೆಚ್ಚು ಗಮನ ನೀಡದಿದ್ದಾಗ ಖಾದಿ ಶಂಕರಪ್ಪನವರು ವಿದ್ಯಾರ್ಥಿಗಳನ್ನು ಈ ಮೇಲಿನಂತೆ ಎಚ್ಚರಿಸಿದರು.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಶಂಕರಪ್ಪನವರು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಖಾದಿ ಬಟ್ಟೆಯನ್ನು ತಲೆಯ ಮೇಲೆ ಹೊತ್ತು ಹಳ್ಳಿ ಹಳ್ಳಿಗಳಲ್ಲಿ ಖಾದಿ ಪ್ರಚಾರ ಮತ್ತು ಮಾರಾಟವನ್ನು ಕೈಗೊಳ್ಳುತ್ತಿದ್ದರಿಂದ ಅವರನ್ನು **"ಖಾದಿ ಶಂಕರಪ್ಪ"** ಎಂದು ಕರೆಯಲಾಗುತ್ತದೆ.

೨. ಖಾದಿ ಶಂಕರಪ್ಪನವರನ್ನು ನಾನು ನನ್ನ ಶೋಧನೆ ಕಾರ್ಯದಲ್ಲಿ ಭೇಟಿಯಾದೆ. ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರ ಬಗ್ಗೆ, ಹೋರಾಟದ ಕಾರ್ಯಕ್ರಮಗಳ ಬಗ್ಗೆ ಪ್ರತಿ ದಿನವೂ ದಿನಚರಿ ಬರೆಯುತ್ತಿದ್ದು ಅದನ್ನು ಮತ್ತು ಇತರ ದಾಖಲೆಗಳನ್ನು ಅವರು ಉದಾರತೆಯಿಂದ ನನಗೆ ನೀಡಿರುತ್ತಾರೆ. ಇದಲ್ಲದೆ ಇನ್ನೂ ಅನೇಕ ದಾಖಲೆಗಳನ್ನು ಅವರು ಕರ್ನಾಟಕ ರಾಜ್ಯ ಪತ್ರಾಗಾರ ವಿಭಾಗ, ಬೆಂಗಳೂರು ಇಲ್ಲಿಗೆ ನೀಡಿದ್ದು ಅದನ್ನು ಖಾದಿ ಶಂಕರಪ್ಪನವರ ಖಾಸಗಿ ಸಂಗ್ರಹಗಳನ್ನು ಕಡತ ಸಂಖ್ಯೆ ೨೩೭ರಲ್ಲಿ ಸಂಗ್ರಹಿಸಲಾಗಿದೆ.

೩. ಖಾದಿ ಶಂಕರಪ್ಪನವರು ತಮ್ಮ ಹೋರಾಟವನ್ನೂ ಹಳ್ಳಿಗಳಿಗೆ ಮಾತ್ರ ಸೀಮಿತಗೊಳಿಸದೆ ನಗರಗಳಲ್ಲಿಯೂ ಚಳುವಳಿಯನ್ನು ಸಂಘಟಿಸಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ.

೪. ಖಾದಿ ಶಂಕರಪ್ಪನವರ ದಿನಚರಿ, ಪುಟ ಸಂಖ್ಯೆ ೧೪ ಇನ್ನೂ ಮುಂದೆ **ಖಾಶದಿ** ಎಂದು ನಮೂದಿಸಲಾಗುತ್ತದೆ.

೫. ಮೇಲಿನದೇ.

೬. ಮೇಲಿನದೇ, ಪುಟ ೧೫.

೭. ಗಾಂಧೀಜಿಯವರ ಮೂಲ ಆಶಯವಾಗಿದ್ದ, ಗ್ರಾಮಗಳು ತಮ್ಮ ಆಡಳಿತವನ್ನು ತಾವೇ ನಡೆಸಿಕೊಳ್ಳುವುದರ ಮೂಲಕ ಗ್ರಾಮ ರಾಜ್ಯ, ಸ್ವರಾಜ್ಯ, ರಾಮ ರಾಜ್ಯದ ಕನಸನ್ನು ನನಸು ಮಾಡುವುದಾಗಿತ್ತು.

೮. *ಖಾಶದಿ., ಪುಟ ಸಂಖ್ಯೆ ೧೯, ಖಂಡಿಕೆ ೨.*

೯. *ಅದೇ., ಖಂಡಿಕೆ ೩.*

೧೦. *ಅದೇ., ಪುಟ. ೨೦, ಖಂಡಿಕೆ ೧.*

೧೧. *ಮೇಲಿನದೇ., ಖಂಡಿಕೆ. ೨.*

೧೨. *ಮೇಲಿನದೇ, ಪುಟಸಂಖ್ಯೆ. ೨೨, ಖಂಡಿಕೆ.೧.*

೧೩. Dayananda Kumar. S. '***Peasant Movements in Malnad Region 1999-1881, Chikkamagaluru, Hassan and Shimoga Districts.*** Unpublished Ph.D Thesis, Kuvempu University. pp 405-448.

೧೪. *ಖಾಶದಿ, ಪುಟ ೨೨, ಖಂಡಿಕೆ ೨.*

೧೫. *ಮೇಲಿನದೇ. ಪುಟ ೨೫. ಖಂಡಿಕೆ ೨.* Collection of private papers of Khadi Shankarappa Fie No-237. Karnataka State Archives. Bangalore. ಶಿವಮೊಗ್ಗ ಜಿಲ್ಲಾ ವರದಿ. ೧೯೪೨. ಆಗಸ್ಟ್ ನಂತರ. ಪುಟ ಸಂಖ್ಯೆ–೦೧. ಪ್ಯಾರಾ–೦೧. ೧೯೪೨ ಆಗಸ್ಟ್ ೦೮ರಂದು ಗಾಂಧೀಜಿಯವರು ಭಾರತ ಬಿಟ್ಟು ತೊಲಗಿ ಚಳುವಳಿ ಆರಂಭಿಸಿದ ನಂತರ ೦೯ನೇ ಆಗಸ್ಟ್ ೧೯೪೨ರಂದು ಗಾಂಧೀಜಿ ಹಾಗೂ ಇತರರನ್ನೂ ಬಂಧಿಸಿದ್ದರಿಂದ ಶಿವಮೊಗ್ಗ ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳು. ಕೂಲಿಕಾರರು. ಹರತಾಳ. ಮುಷ್ಕರ. ಬಹಿರಂಗ ಸಭೆಗಳನ್ನು ನಡೆಸಿದರು.

೧೬. *ಖಾಶದಿ, ಪುಟ ಸಂಖ್ಯೆ ೨೯, ಖಂಡಿಕೆ ೧.*

೧೭. *ಮೇಲಿನದೇ, ಖಂಡಿಕೆ ೨.*

೧೮. ಮೇಲಿನದೇ., ಪುಟಸಂಖ್ಯೆ ೩೧. ಅಲ್ಲದೆ ಶಿವಮೊಗ್ಗ, ತೀರ್ಥಹಳ್ಳಿ, ಸಾಗರ, ನ್ಯಾಮತಿ ಆಯನೂರು ಈ ಸ್ಥಳಗಳಲ್ಲಿ ವಿದ್ಯಾರ್ಥಿಗಳು ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. Collection of private papers of Khadi Shankarappa Fie No-237. Karnataka State Archives. Bangalore ಶಿವಮೊಗ್ಗ ಜಿಲ್ಲಾ ವರದಿ ೧೯೪೨. ಆಗಸ್ಟ್ ನಂತರ. ಪುಟ ೦೧. ಪ್ಯಾರಾ ೦೧.

೧೨೪

ಶಿಕ್ಷಣಕ್ಕಾಗಿ ಬದುಕನ್ನು ಸವೆದ ಮಂಗಳೂರಿನ ಅಪರೂಪದ ದಂಪತಿಗಳು

ಬೆನೆಗಲ್ ಸಂಜೀವರಾವ್ (೧೮೮೪-೧೯೬೪) ಮತ್ತು ಬೆನೆಗಲ್ ಪದ್ಮಾಬಾಯಿ (೧೮೯೨-೧೯೭೪)

ಸುಷಮಾ ಅರೂರ್*

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧವು ಭಾರತದ ಆಧುನಿಕ ಇತಿಹಾಸದಲ್ಲಿಯ ಒಂದು ಸ್ಥಿತ್ಯಂತರದ ಕಾಲವೆನ್ನಬಹುದು. ಬ್ರಿಟೀಶರು ಆಂಗ್ಲ ಶಿಕ್ಷಣವನ್ನು ಪ್ರಾರಂಭಿಸಿದ ಮೇಲೆ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಸಮಾಜ ಸುಧಾರಕರು ಮತ್ತು ಆಂಗ್ಲ ಆಡಳಿತಗಾರರು ಬಹಳಷ್ಟು ಬದಲಾವಣೆಗಳನ್ನು ತರಲು ಪ್ರಯತ್ನಿಸಿದರು.

ಪುನಃಶ್ಚೇತನದ ಗಾಳಿ ಎಲ್ಲ ಕಡೆ ಬೀಸಿತು. ಪರದೇಶದವರಾಗಿದ್ದರೂ, ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎನ್ನಿಬೆಸಂಟರು ಭಾರತದಲ್ಲಿ ಸ್ತ್ರೀಶಿಕ್ಷಣ ಪುರಸ್ಕೃತರಾಗಿದ್ದರು. ಅವರ ವಿಚಾರಗಳು ಭಾರತವಾದ್ಯಂತ ಪಸರಿಸಿದ್ದವು. ಇಂತಹ ಬದಲಾವಣೆಗೆ ದಕ್ಷಿಣ ಕನ್ನಡ ಜಿಲ್ಲೆ ಹೊರತಾಗಿರಲಿಲ್ಲ.

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಮಂಗಳೂರಿನಲ್ಲಿ ಹುಟ್ಟಿ, ಬೆಳೆದು ಆ ಕಾಲದ ಲಾಭ ಪಡೆದ ಬೆನೆಗಲ್ ಕುಟುಂಬದಲ್ಲಿಯ ನರಸಿಂಗರಾವ್ ಮತ್ತು ರಾಮರಾವ್ ಇವರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಯಶಸ್ವಿಯಾಗಿ ಕೆಲಸ ಮಾಡಿರುವ ವಿಷಯ ಬಹಳಷ್ಟು ಜನರಿಗೆ ಗೊತ್ತಿರಲು ಸಾಕು. ಆದರೆ, ಅವರ ಹಿರಿಯ ಮತ್ತು ಕಿರಿಯ ಸಹೋದರರಾದ ಸಂಜೀವರಾವ್, ಮತ್ತು ಶಿವರಾವ್ ಇವರು ಭಾರತದ ಜನತೆಗೆ ಅಪರಿಚಿತರಾಗಿದ್ದಾರೆ. ಹಿರಿಯ ಸಹೋದರ, ಸಂಜೀವರಾವ್ ಇವರು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಕಿರಿಯರಾದ ಶಿವರಾವ್ ಇವರು ಬರವಣಿಗೆ ಹಾಗೂ ಟ್ರೇಡ್ ಯೂನಿಯನ್ ಚಳುವಳಿಗಳಲ್ಲಿ ಸಕ್ರಿಯ ಸಾಧನೆಗಳನ್ನು ಮಾಡಿದ್ದಾರೆ. ಕನ್ನಡ ಜನತೆಗೆ ಅಪರಿಚಿತರಾದ ಸಂಜೀವರಾವ್ ಮತ್ತು ಬೆನೆಗಲ್ ಪದ್ಮಾಬಾಯಿ ಅವರ ಜೀವನ ಮತ್ತು ಸಾಧನೆಗಳನ್ನು ಈ ವರ್ಷದ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನದಲ್ಲಿ ಮಂಡಿಸುವ ಇದೊಂದು ಕಿರುಪ್ರಯತ್ನ.

ಬೆನೆಗಲ್ ಸಂಜೀವರಾವ್ ಇವರು ಬೆನೆಗಲ್ ರಾಘವೇಂದ್ರರಾವ್ ಮತ್ತು ರಾಧಾಬಾಯಿಯವರ ಹಿರಿಯ ಪುತ್ರರು. ಮಂಗಳೂರಿನಲ್ಲಿ ೧೮೮೪ರಲ್ಲಿ ಇವರ ಜನ್ಮವಾಯಿತು. ಬಾಲ್ಯದಿಂದಲೇ ಅವರು ಬುದ್ಧಿಶಾಲಿ ಮತ್ತು ಸೂಕ್ಷ್ಮ ಸ್ವಭಾವದವರಾಗಿದ್ದರಂತೆ. ಪುಸ್ತಕಗಳೇ ಅವರ ಬಾಲ ಸಂಗಾತಿಗಳು. ಅವುಗಳ ಮಧ್ಯದಲ್ಲಿಯೇ ಅವರ ಮನಸ್ಸು ಹಿಗ್ಗುತ್ತಿತ್ತು. ಎನ್ನಿ ಬೆಸೆಂಟ್ ಮತ್ತು ಥಿಯೋಸೊಫಿಕಲ್ ಸೊಸಾಯಿಟಿಯ ತತ್ತ್ವಗಳನ್ನೇ ತಮ್ಮ ಜೀವನದುದ್ದಕ್ಕೂ ಅನುಸರಿಸಿಕೊಂಡು ಬಂದರು.

ಇನ್ನೂ ತರುಣರಾಗಿದ್ದಾಗಲೇ ಅವರ ಮನಸ್ಸು ಆಧ್ಯಾತ್ಮದತ್ತ ಹೋಗಿತ್ತು. ಸದಾ ಯೋಚನೆಯಲ್ಲಿ ಮಗ್ನನಾದ ಮಗನ ಸ್ಥಿತಿಯನ್ನು ನೋಡಿ ತಂದೆ-ತಾಯಿಗಳು ಮಂಗಳೂರಿನ ಪ್ರಸಿದ್ಧ ವಕೀಲರ ಕುಟುಂಬದ ಗೊಲ್ಲರಕೇರಿ ಕೃಷ್ಣರಾವ್ ಮತ್ತು ಅವರ ಮೊದಲ ಹೆಂಡತಿ ಚಂದ್ರಾವತಿಯವರ ಮಗಳು ಪದ್ಮಾಬಾಯಿಯವರ ಜೊತೆ ಮದುವೆ ಮಾಡಿದರು.

ಮದುವೆಯಾದ ಕೂಡಲೇ ಕೇಂಬ್ರಿಜಿನ ಸೇಂಟ ಜೋನ್ ಕಾಲೇಜಿನ ಸ್ಕೊಲರಶಿಪ್ ಸಿಕ್ಕು ಸಂಜೀವರಾವ್ ಇಂಗ್ಲಂಡಿಗೆ ಹೊರಟುಹೋದರು. ಇಲ್ಲಿ ಅವರು ಇಂಗ್ಲಂಡಿನ ಹುರುಪಿನ ಸಾಹಿತ್ಯ, ಮತ್ತು ವಿಕಸಿತ ಬೌದ್ಧಿಕ, ಮತ್ತು ಸಾಂಸ್ಕೃತಿಕ ಜೀವನದಿಂದ ಪ್ರಭಾವಿತರಾದರೂ ಇಲ್ಲಿಯ ಅಸಾಂಪ್ರದಾಯಿಕ ಮತ್ತು ಮುಕ್ತ ವಾತಾವರಣದಲ್ಲಿ ತಲೆ ಹಾಕದೆ ತನ್ನ ಓದನ್ನು ಮುಂದುವರೆಸಿ ಗಣಿತ ಶಾಸ್ತ್ರದ ಪರೀಕ್ಷೆಯಲ್ಲಿ (ಡಬಲ್ ಟ್ರಿಪೋಸ) ತೇರ್ಗಡೆಯಾದರು. ಡಿಗ್ರಿ ಆದ ಮೇಲೆ ಆಯ.ಸಿ.ಎಸ್.ನ್ನು ಕಡ್ಡಾಯವಾಗಿ ಮಾಡಬೇಕಿತ್ತು. ಆದರೆ ಆಯ್.ಸಿ.ಎಸ್. ಪರೀಕ್ಷೆಯಲ್ಲಿ ಒಳ್ಳೆಯ ಗುಣಗಳನ್ನು ತೆಗೆದುಕೊಂಡರೂ ಕೂಡ ಕುದುರೆ ಸವಾರಿಯಲ್ಲಿ ಅಯಶಸ್ವಿಯಾದ ಕಾರಣ ತೇರ್ಗಡೆಯಾಗಲಿಲ್ಲ. ಇದರಿಂದ ಇವರ ಮನೆಯವರಿಗೆ ಆಘಾತವಾಯಿತೇ ಹೊರತು, ಪ್ರಾಪಂಚಿಕರಲ್ಲದ ಸಂಜೀವರಾವ್‌ರು

* # ೩೦೪, ೮ನೇ ಮುಖ್ಯರಸ್ತೆ, ೧೨ನೇ ಅಡ್ಡರಸ್ತೆ, ಸದಾಶಿವನಗರ, ಬೆಂಗಳೂರು-೫೬೦೦೮೦

ತಾವೊಬ್ಬ ಒಳ್ಳೆ ಶಿಕ್ಷಕರು ಎಂದು ಗುರ್ತಿಸಲ್ಪಟ್ಟರು.

[illegible] ಸಂಜೀವರಾಯರು ಎರಡು ದಶಕದ ಹಿಂದೆ ಎನ್ನಿಬೆಸಂಟರು ಸ್ಥಾಪಿಸಿದ್ದ ಸೆಂಟ್ರಲ್ ಹಿಂದು ಕಾಲೇಜನ್ನು ಸೇರಿಕೊಂಡರಂತೆ. ೧೯೧೬ರಲ್ಲಿ ಈ ಸಂಸ್ಥೆಯನ್ನು ಬನಾರಸ್ ಹಿಂದು ವಿಶ್ವವಿದ್ಯಾಲಯಕ್ಕೆ ಸೇರ್ಪಡೆ ಮಾಡಲಾಯಿತು. ಈ ಸಂಸ್ಥೆಯವರು ಸಂಜೀವರಾಯರನ್ನು ಗಣಿತದ ಪ್ರಾಧ್ಯಾಪಕರ ಹುದ್ದೆಗೆ ಆಮಂತ್ರಿಸಿದರು. ಇಲ್ಲಿಯೇ ಅವರು ಎನ್ನಿಬೆಸೆಂಟರ ಸಂಪರ್ಕದಲ್ಲಿ ಬಂದರು. ಭಾರತದ ಜನರ ಸ್ಥಿತಿಯನ್ನು ಸುಧಾರಿಸಲು ಶಿಕ್ಷಣವೇ ಸರಿಯಾದ ಮಾಧ್ಯಮ ಎಂದೆನಿಸಿ ಅವರಿಗೆ ಈ ಕೆಲಸ ಬಹಳ ನೆಮ್ಮದಿ ತಂದಿತು. ಇಲ್ಲಿಯೇ ಅವರು ಥಿಯೊಸೊಫಕಲ್ ಸೊಸಾಯಟಿ ಸೂತ್ರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು.

ಚಿಕ್ಕವರಿದ್ದಾಗಿನಿಂದ ಈವರೆಗೂ ಅದುಮಿದ್ದ ತನ್ನ ಅಂತರಾತ್ಮದ ಧ್ವನಿಯನ್ನವರು ಈಗ ಆಲಿಸಿಕೊಂಡು ಹೋಗಲು ಅನುಕೂಲ ಪರಿಸ್ಥಿತಿ ತನ್ನಷ್ಟಕ್ಕೆ ತಾನೇ ಒದಗಿ ಬಂದಿತೆಂದು ವಿದ್ಯಾರ್ಜನೆ, ಮತ್ತು ಸಮಾಜ ಕಲ್ಯಾಣವೇ ಪರಮೇಶ್ವರನ ಸೇವೆ ಎಂದು ಕೆಲಸದಲ್ಲಿ ತೊಡಗಿಸಿಕೊಂಡರು. ಎನ್ನಿಬೆಸಂಟರ ಸಾಂಗತ್ಯದಿಂದ ಜನ್ಮ ಸಾರ್ಥಕವಾಯಿತೆಂದು ಅವರಿಗೆ ಅನಿಸಿತು. ಅವರನ್ನು, ಅಮ್ಮ ಎಂದೇ ಸಂಬೋಧಿಸುತ್ತಿದ್ದರು. ಅವರಂತೆಯೇ ಎಲ್ಲರಲ್ಲಿ ಅಪಾರ ನಂಬಿಕೆ ಇಟ್ಟುಕೊಂಡಿದ್ದರು. ಥಿಯೊಸೊಫಿಕಲ್ ಸೊಸಾಯ್ಟಿಯ ಸಿದ್ಧಾಂತಗಳ ಪ್ರಕಾರ ಅವರು ಶಿಸ್ತಿನ ಸಾಂಘಿಕ ಜೀವನ, ಅಂದರೆ ಬಹಳ ಮಟ್ಟಿಗೆ ಬಡತನದ ಜೀವನವನ್ನೇ ನಡೆಸಿದರು ಎಂದು ಹೇಳಬಹುದು. ಅವರ ಪತ್ನಿ ಪದ್ಮಾಬಾಯಿ ಅವರ ಜೊತೆಗೆ ಇದ್ದು ತಮ್ಮ ಶಿಕ್ಷಣವನ್ನು ಮುಂದುವರೆಸಿದ್ದರು.

ಶಿಕ್ಷಣೋಪಾಸಕರು

೧೯೧೩ರಲ್ಲಿ ಸಂಜೀವರಾಯರು ಶ್ರೀಲಂಕೆಯ ಜಾಫ್ನಾದಲ್ಲಿಯ ಹಿಂದು ಕಾಲೇಜಿನ ಮುಖ್ಯೋಧ್ಯಾಪಕರಾಗಿ ಒಂದು ವರ್ಷ ಕೆಲಸ ಮಾಡಿದರು. ಹತ್ತು ತಿಂಗಳಿನಲ್ಲಿ ಸಂಜೀವರಾಯರು ಜಾಫನಾದಲ್ಲಿಯ ಹಿಂದು ಕಾಲೇಜಿನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದರಷ್ಟೇ ಅಲ್ಲ, ವಿದ್ಯಾರ್ಥಿಗಳು ಮತ್ತು ಅವರ ಪಾಲಕರ ಸಹಾಯದಿಂದ ಸೇತುವೆಗಳನ್ನು ಕಟ್ಟಿಸಿದರು. ಅವರು ಸಂಸ್ಥೆಯನ್ನು ಬಿಟ್ಟು ಹೋಗುವಾಗ ಅಲ್ಲಿಯ ಸ್ಥಳೀಯ ಜನತೆ ತುಂಬ ಪ್ರೀತ್ಯಾದರದಿಂದ ಅವರನ್ನು ಬೀಳ್ಕೊಟ್ಟರು.

ಅಲಹಾಬಾದಿನಲ್ಲಿ

ಅಲಹಾಬಾದಿನ ಕಾಯಸ್ಥ ಪಾಠಶಾಲೆಯು ಸಂಜೀವರಾಯರ ನಂತರದ ಕರ್ಮಭೂಮಿ ಆಯಿತು. ೧೯೧೮ರಲ್ಲಿ ಈ ಪಾಠಶಾಲೆಯನ್ನು ಪದವಿ ಕಾಲೇಜಿನ ದರ್ಜೆಗೆ ಏರಿಸಲ್ಪಟ್ಟಿತ್ತು. ಹೀಗಾಗಿ ಸಂಸ್ಥೆಯ ಹಣಕಾಸಿನ ವ್ಯವಸ್ಥೆ, ಮತ್ತು ಕಾಲೇಜಿನ ಸಿಬ್ಬಂದಿ ವರ್ಗದವರ ವ್ಯವಸ್ಥೆಗೆ ಕುಶಲನಾದ ಆಡಳಿತಗಾರನು ಬೇಕಾಗಿದ್ದನು. ಸಂಜೀವರಾಯರ ಯೋಗ್ಯ ನಿರ್ದೇಶನದಲ್ಲಿ ಸಂಸ್ಥೆಯು ಉತ್ತರೋತ್ತರ ಏಳಿಗೆಯಾಯಿತು. ಸಂಜೀವರಾಯರು, ರವೀಂದ್ರನಾಥ ಟಾಗೋರ್, ಗಾಂಧೀಜಿ, ಹಾಗೂ ಅನೇಕ ಮುಂದಾಳುಗಳನ್ನು ಸಂಸ್ಥೆಗೆ ಬರಮಾಡಿಕೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿಸಿದರು. ನಾಲ್ಕು ವರ್ಷ ಸೇವೆ ಸಲ್ಲಿಸಿ, ಸಂಸ್ಥೆಯನ್ನು ಬಿಡುವ ಪ್ರಸಂಗ ಬಂದಾಗ ಮೋತಿಲಾಲ್ ಮತ್ತು ಜವಾಹರಲಾಲ್ ನೆಹರು ಇವರು ಅಲಹಾಬಾದಿನ ತಮ್ಮ ಭವ್ಯ ಮನೆಯ ಮುಂದಿನ ಪ್ರಶಸ್ತ ಉದ್ಯಾನದಲ್ಲಿ ಅವರ ಸೇವೆಯನ್ನು ಮೆಚ್ಚಿ ಸಂಜೀವರಾಯರ ಅಭಿನಂದನಾರ್ಥ ಸಮಾರಂಭ ಇಟ್ಟುಕೊಂಡಿದ್ದು ಅವರ ಘನತೆಯನ್ನು ಪ್ರದರ್ಶಿಸುತ್ತದೆ. ಅದೇ ದಿನ ಅವರು ಹೊರಟು ನಿಂತಾಗ ಕಾಲೇಜಿನ ವಿದ್ಯಾರ್ಥಿಗಳ ಜನಸ್ತೋಮ ಸ್ಟೇಶನ್ನಿನಲ್ಲಿ ತುಂಬಿ ಗಾಡಿಯು ಎಷ್ಟೋ ಹೊತ್ತು ಸ್ಥಗಿತವಾಗಿತ್ತು. ಹೀಗೆ ಸಂಜೀವರಾಯರು ವಿದ್ಯಾರ್ಥಿಗಳ ಅಪಾರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು.

ಟಿಳಕ ಮತ್ತು ಎನ್ನಿಬೆಸಂಟ ಇವರಿರ್ವರು ಉಗ್ರಗಾಮಿ ರಾಷ್ಟ್ರೀಯತೆಯ ಪುರೋಗಾಮಿಗಳಾಗಿದ್ದು, ಸ್ವದೇಶಿ, ಸ್ವರಾಜ್ಯ ಮತ್ತು ರಾಷ್ಟ್ರೀಯ ಶಿಕ್ಷಣ ಇವುಗಳ ಪುರಸ್ಕೃತರಾಗಿದ್ದರು. ಶಿಕ್ಷಣ ಕ್ಷೇತ್ರದಲ್ಲಿ ಎನ್ನಿಬೆಸಂಟರು ಆದಾಗಲೇ ತುಂಬ ಪ್ರಗತಿ ಸಾಧಿಸಿದ್ದರು. ಯುರೋಪಿಯನ್ ಅಭ್ಯಾಸ ಕ್ರಮವನ್ನು ಭಾರತೀಯ ವಿದ್ಯಾರ್ಥಿಗಳ ಮೇಲೆ ಹೇರಿದ್ದು ಸರಿಬರದೇ, ರಾಷ್ಟ್ರೀಯ ಶಿಕ್ಷಣ ಕ್ರಮವನ್ನು ಅಳವಡಿಸಿ ಭಾರತೀಯ ಶಾಲೆಗಳನ್ನು ಪ್ರಾರಂಭಿಸುವ ನಿರ್ಧಾರವನ್ನು ಇವರೀರ್ವರು ಮಾಡಿದರು. ಅದರ ಪ್ರಕಾರ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ, ರವೀಂದ್ರನಾಥ ಟಾಗೋರ್‌ರನ್ನು ಕುಲಪತಿಗಳಾಗಿ, ಎನ್ನಿಬೆಸಂಟರು ಉಪಕುಲಪತಿಗಳಾಗಿ ಮತ್ತು ಜಿ.ಎಸ್. ಅರುಂಡೇಲರು ರಿಜಿಸ್ಟ್ರಾರ್ ಆಗಿ ನೇಮಿಸಲ್ಪಟ್ಟರು. ಈ ಸಂಸ್ಥೆ ಭಾರತದ ಕೆಲ ಆಯ್ದ ಕೇಂದ್ರಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಿತು.

ಮಂಗಳೂರಿನಲ್ಲಿ

೧೯೧೭ರಲ್ಲಿ ಈ ಸಂಸ್ಥೆಯ ರಾಷ್ಟ್ರೀಯ ಸಮ್ಮೇಳನವನ್ನು ಮಂಗಳೂರಿನಲ್ಲಿ ಏರ್ಪಡಿಸಿದಾಗ ಅಲ್ಲಿ ಶಾಲೆಯ ಅಗತ್ಯ ಕಂಡುಬಂದು, ಎನ್ನಿಬೆಸಂಟರ ಬಲಗೈಯಂತಿದ್ದ ಬೆನೆಗಲ್ ಸಂಜೀವರಾವ್ ಮುಂದಾಳುತನದಲ್ಲಿ ಶಾಲೆಯನ್ನು ಪ್ರಾರಂಭಿಸುವ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಪ್ರಸಿದ್ಧ

ಸಮಾಜ ಸುಧಾರಕಿ ಮತ್ತು ಕುಶಲ ಕೈಗಾರಿಕೆಗಳಿಗೆ ಪುನರುಜ್ಜೀವನ ಕೊಟ್ಟ ಕಮಲಾದೇವಿ ಚಟ್ಟೋಪಾಧ್ಯಾಯರ ತಂದೆ ಅನಂತಯ್ಯ ಧಾರೇಶ್ವರರು ಶಾಲೆಗೆ ತಮ್ಮ ಪ್ರಶಸ್ತವಾದ ಪೂರ್ವಾರ್ಜಿತ ಮನೆಯನ್ನು ಸಂಸ್ಥೆಗೆ ಸ್ವಸಂತೋಷದಿಂದ ಕೊಟ್ಟರು. ಸಂಜೀವರಾಯರು ಶಾಲೆಯನ್ನು ಪ್ರಾರಂಭಿಸಲು ಬೇಕಾಗುವ ಎಲ್ಲ ಪೂರ್ವ ಸಿದ್ಧತೆಯನ್ನು ಕೂಲಂಕಷವಾಗಿ ಮಾಡಿದರು ಮತ್ತು ಅದಕ್ಕೆ ಬೇಕಾಗುವ ಹಣವನ್ನು ಕೂಡಿಸಿ, ಒಂದು ವರ್ಷದಲ್ಲಿ ಬಾಲಿಕಾ ಶಿಕ್ಷಣ ಸಭೆಯನ್ನು ೧೯೧೮ರಲ್ಲಿ ಸ್ಥಾಪಿಸಿದರು. ನಂತರ ಶಾಲೆಯನ್ನು ಮಂಗಳೂರಿನ ಕೊಡ್ಯಾಳಬೈಲಿಗೆ ಸ್ಥಳಾಂತರಿಸಲಾಯಿತು.

ಬನಾರಸಿನಲ್ಲಿ

ಎನ್ನಿಬೆಸಂಟರ ಪರಮ ಶಿಷ್ಯ (ಸಾಕುಮಗ) ಪ್ರಸಿದ್ಧ ದಾರ್ಶನಿಕ ಮತ್ತು ಶಿಕ್ಷಣ ತಜ್ಞ ಜಿಡ್ಡು ಕೃಷ್ಣಮೂರ್ತಿಯವರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವದನ್ನು ಯೋಜಿಸಿದಾಗ ಮೊಟ್ಟಮೊದಲು ಎನ್ನಿಬೆಸಂಟರ ನಿಕಟರಾದ ಸಂಜೀವರಾವ್ ಅವರನ್ನೇ ಕರೆಕಳಿಸಿದರು. ಯಾವದೇ ಮೂಲ ಸೌಕರ್ಯಗಳು ಇಲ್ಲದೇ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸುವದರಲ್ಲಿ ಬೆನೆಗಲ್ ಸಂಜೀವರಾಯರು ನುರಿತವರಾಗಿದ್ದನ್ನು ಅವರು ಕಂಡುಕೊಂಡಿದ್ದರು. ಬನಾರಸ್ಸಿನಲ್ಲಿ ಗಂಗಾ ನದಿ ತೀರದ ಮೇಲಿರುವ ೪೦೦ ಎಕರೆ ಜಮೀನನನ್ನು ಕೊಂಡು ಕೊಳ್ಳುವದೆಂದು ನಿರ್ಧಾರವಾಯಿತು. ಈ ಜಾಗವು ಭೂಸೇನೆ, ಭಾರತ ಸರಕಾರ ಮತ್ತು ವಿವಿಧ ಜಮೀನದಾರರಲ್ಲಿ ಹಂಚಿ ಹೋಗಿತ್ತು. ಗೌತಮಬುದ್ಧನು ಸಾರಾನಾಥದಿಂದ ರಾಜಘಾಟಕ್ಕೆ ಓಡಾಡಿದ ಈ ಪುಣ್ಯಭೂಮಿಯ ಮೇಲೆ ಶಾಲೆಯನ್ನು ಕಟ್ಟುವ ಮಹದಾಸೆ ಕೃಷ್ಣಮೂರ್ತಿಯವರಿಗೆ ಇತ್ತು. ಹೀಗಾಗಿ ಇದೇ ಜಾಗ ಬೇಕೆಂದು ಒತ್ತಾಯ ಮಾಡಿದರು. ಇದು ಬಹು ಕಷ್ಟದ ಕೆಲಸವಿದ್ದರೂ ಕೂಡ ಚಾಣಾಕ್ಷತೆಯಿಂದ ಪಟ್ಟು ಹಿಡಿದು ಕೆಲಸ ಸಾಧಿಸಬೇಕಾಗಿತ್ತು. ಸಂಜೀವರಾಯರು ಈ ಕಠಿಣ ಹೊಣೆಯನ್ನು ಯಶಸ್ವಿಯಾಗಿ ಮಾಡಿ ತೋರಿಸಿದರು.

ಶಾಲೆಯ ಇಮಾರತ್ತು ಮೇಲೆ ಬರುವವರೆಗೂ ಸಂಜೀವರಾಯರು ಅದಕ್ಕೆ ಬೇಕಾದ ಹಣವನ್ನು ಜೋಡಿಸುವದರಲ್ಲಿ ತೊಡಗಿದರು. ಭಾಷೆ ಕೊಟ್ಟವರ ಮನೆ ಬಾಗಿಲಿಗೆ ಒಂದಲ್ಲ ಹತ್ತು ಹದಿನಾರು ಸಲ ಹೋಗಿ ಗಂಟಗಟ್ಟಲೆ, ಕಾದ ಮೇಲೆ ೨೫೦ ರೂಪಾಯಿಗಳು ಸಿಗುವದು ದುಸ್ತರವಾಗುತ್ತಿತ್ತು. ಶಿಕ್ಷಣದ ಪ್ರಸಾರಕ್ಕಾಗಿ ಎಷ್ಟೇ ಕಷ್ಟ ಬಂದರೂ ಸಹಿಸುವ ಶಕ್ತಿ ಅವರಲ್ಲಿತ್ತು. ಈ ಯೋಗ್ಯ ಧ್ಯೇಯಕ್ಕಾಗಿ ಅವರು ಏಳು ವರ್ಷ ಸತತ ದುಡಿದು ಶಾಲೆಯ ಕಟ್ಟಡವನ್ನು ಕಟ್ಟಿಸಿದರು. ೧೯೩೩ರಲ್ಲಿ ರಾಜಘಾಟ ಗಂಡು ಹುಡುಗರ, ಹೆಣ್ಣು ಹುಡುಗಿಯರ ಶಾಲೆ, ಹೆಣ್ಣು ಮಕ್ಕಳ ಕಾಲೇಜು, ಕೃಷಿ ಶಾಲೆ ಸ್ಥಳೀಯರಿಗೆ ಉಪಯೋಗವಾಗಲು ಆಸ್ಪತ್ರೆ ಮತ್ತು ಫಾರ್ಮು ಪ್ರಾರಂಭವಾಯಿತು. ಈ ಭಗೀರಥ ಕೆಲಸವನ್ನು ಸಂಜೀವರಾಯರೇ ಮಾಡಿ ಮುಗಿಸಿದರು. ಈ ಸಂಸ್ಥೆಯು ಮೊದಲು ರಿಶಿ ವ್ಯಾಲಿ ಟ್ರಸ್ಟ ಕೆಳಗೆ ಈಗ ಭಾರತದಲ್ಲಿ ೬ ಶಾಲೆಗಳು, ಕ್ಯಾಲಿಫೋರ್ನಿಯಾದಲ್ಲಿ ಒಂದು, ಮತ್ತು ಇಂಗ್ಲೆಂಡಿನ ಬ್ರೋಕೆವೊಡ್ ಪಾರ್ಕಿನಲ್ಲೊಂದು ಸ್ಥಾಪಿಸಲ್ಪಟ್ಟಿವೆ.

ಕೃಷ್ಣಮೂರ್ತಿಯವರು ಥಿಯೋಸೋಫಿಕಲ್ ಸೊಸಾಯ್ಟಿಯಿಂದ ಬೇರ್ಪಟ್ಟ ಮೇಲೆ ಭಾರತದಲ್ಲಿಯ ಎಲ್ಲ ಕಾರಭಾರವು ರಿಶಿ ವ್ಯಾಲಿ ಟ್ರಸ್ಟ್ ಮೂಲಕ ನಡೆಸುವದೆಂದು ನಿರ್ಧಾರವಾಯಿತು. ಈ ಟ್ರಸ್ಟಿನ ಆಡಳಿತ ಮಂಡಳಿಯ ಅಧ್ಯಕ್ಷರು ಕೃಷ್ಣಮೂರ್ತಿಯವರೇ ಆಗಿದ್ದರು. ಎನ್ನಿಬೆಸಂಟ, ಪದ್ಮಾಬಾಯಿ ಮತ್ತು ಸಂಜೀವರಾಯರು ಕಾರ್ಯಕಾರಿ ಮಂಡಳಿಯ ಪ್ರಮುಖ ಸದಸ್ಯರಾಗಿದ್ದರು. ಟ್ರಸ್ಟಿನ ಕೆಲಸವನ್ನು ಮೂರು ವಿಭಾಗದಲ್ಲಿ ವಿಭಜಿಸಲ್ಪಟ್ಟಿತ್ತು. ಬೆನೆಗಲ್ ಪದ್ಮಾಬಾಯಿ ಪ್ರಚಾರಕಾರ್ಯದ ಕಾರ್ಯದರ್ಶಿಗಳು. ಶಿಕ್ಷಣ ಕ್ಷೇತ್ರದಲ್ಲಿ ಸುಬ್ಬರಾವರು ಮತ್ತು ಹಣಕಾಸಿನ ವ್ಯವಹಾರವು ಬೆನೆಗಲ್ ಸಂಜೀವರಾಯರ ಹೊಣೆಯಾಗಿತ್ತು.

೧೯೩೩ರಲ್ಲಿ ಎನ್ನಿಬೆಸಂಟರು ಅಡ್ಯಾರಿನಲ್ಲಿ ಹಾಸಿಗೆ ಹಿಡಿದು ಅಂತ್ಯಾವಸ್ಥೆಯಲ್ಲಿ ಇದ್ದಾಗ ಸಂಜೀವರಾಯರು ಬನಾರಸಿನಿಂದ ಧಾವಿಸಿ ಬಂದದ್ದು. ತಮ್ಮ ಕೈಯನ್ನು ಸಂಜೀವರಾಯರ ಕೈಯಲ್ಲಿ ಇಟ್ಟು ಕೃಷ್ಣಮೂರ್ತಿಯ ಕೈ ಬಿಡಬೇಡವೆಂದು ಪ್ರಮಾಣ ತೆಗೆದುಕೊಂಡ ಮೇಲೆಯೇ ಎನ್ನಿಬೆಸಂಟರ ಜೀವ ಇಹಲೋಕಕ್ಕೆ ಹೊಯಿತಂತೆ.

ಸಂಜೀವರಾಯರ ಶೈಕ್ಷಣಿಕ ಕ್ಷೇತ್ರದಲ್ಲಿಯ ಕೌಶಲ್ಯವನ್ನು ಅರಿತ ಬನಾರಸದಲ್ಲಿಯ ಕ್ವೀನ್ಸ್ ಕಾಲೇಜಿನ ಟ್ರಸ್ಟಿಗಳು ತಮ್ಮ ಕಾಲೇಜಿನ ಪ್ರಾಂಶುಪಾಲರಾಗಿ ನೇಮಿಸಿದರು. ಎನ್ನಿಬೆಸಂಟರ ರಾಷ್ಟ್ರೀಯ ಶಿಕ್ಷಣವನ್ನು ಅಳವಡಿಸಿಕೊಂಡು ಅಲ್ಲಿಯ ಶಿಕ್ಷಣ ಕ್ರಮವನ್ನೇ ಬದಲಿಸಿ, ಭಾರತೀಯ ಸಾಹಿತ್ಯ, ಮಹಾ ಕವಿಗಳ ಕಾವ್ಯ, ಮತ್ತು ಸ್ಥಳೀಯ ಇತಿಹಾಸ ಇಂತಹ ಹೊಸ ಪಠ್ಯಕ್ರಮವನ್ನು ಪರಿಚಯಿಸಿದರು.

ಮದುವೆ ಆಗಿ ಇಪ್ಪತ್ತೆರಡು ವರ್ಷಗಳ ನಂತರ ಸಂಜೀವರಾಯರು ಬನಾರಸದಲ್ಲಿ ತಮ್ಮದೇ ಒಂದು ಮನೆಯಲ್ಲಿ ಹೆಂಡತಿಯೊಡನೆ ಮೊದಲ ಬಾರಿಗೆ ಸಂಸಾರ ಮಾಡಿದರೆಂದು ತಮ್ಮ ದಿನಚರಿಯಲ್ಲಿ ಬರೆಯುತ್ತಾರೆ. ಬನಾರಸಿನ ಇವರ ಮನೆ ಯುವ ಪೀಳಿಗೆಯವರ ಬೀಡಾಗಿತ್ತು. ದಕ್ಷಿಣ ಕನ್ನಡದಿಂದ ಶಿಕ್ಷಣ ಕೋರಿ ಬಂದ ವಿದ್ಯಾರ್ಥಿಗಳಾಗಲೀ, ಕೆಲಸ ಹುಡುಕಿಕೊಂಡು ಬಂದವರಾಗಲೀ, ಸಂಬಂಧಿಕರಾಗಲೀ, ಎಲ್ಲರಿಗೂ ಅವರ ಮನೆಯಲ್ಲಿ ಆದರದ ಸ್ವಾಗತವಿತ್ತು.

೧೯೩೫ರಲ್ಲಿ ಅವರು ತಮ್ಮ ೫೫ನೆಯ ವಯಸ್ಸಿನಲ್ಲಿ ಕುಟುಂಬದ ನೆಲೆಯಾದ ಮಂಗಳೂರಿಗೆ ಹಿಂದಿರುಗಿದರು. ಶಿಕ್ಷಣ ಕ್ಷೇತ್ರ ಅವರನ್ನು ಮತ್ತೆ ಕೈ ಬೀಸಿ ಕರೆಯಿತು. ಅವರು ಗಣಪತಿ ಮಾಧ್ಯಮಿಕ ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಇಷ್ಟು ವರ್ಷ ಶಿಕ್ಷಕರಾಗಿ ಮತ್ತು ಆಡಳಿತಾಧಿಕಾರಿಯಾಗಿ ಅವರು ಸಲ್ಲಿಸಿದ ಸೇವೆಯ ಅನುಭವ ಮಂಗಳೂರಿನ ಗಣಪತಿ ಶಾಲೆಗೆ ಮತ್ತು ಅವರೇ ಕಷ್ಟಪಟ್ಟು ಪ್ರಾರಂಭಿಸಿದ ಬೆಸೆಂಟ್ ಶಾಲೆಗೆ (ಬಾಲಿಕಾ ಶಿಕ್ಷಣ ಸಂಸ್ಥೆ) ಹೆಚ್ಚಾಗಿಯೇ ಅನ್ವಯಿಸುತ್ತದೆನ್ನಬಹುದು.

ಸಂಜೀವರಾಯರು ನಿರ್ಮಿಸಿದ ಶೈಕ್ಷಣಿಕ ಸಂಸ್ಥೆಗಳು ಈವರೆಗೂ ಚಾಲನೆಯಲ್ಲಿವೆ. ಕೃಷ್ಣಮೂರ್ತಿ ಫೌಂಡೇಶನ್ ಅವರ ಬನಾರಸಿನ ಶಾಲೆ ಅಂತರಾಷ್ಟ್ರೀಯ ಮಟ್ಟದ್ದು. ಬೆನಗಲ್ ದಂಪತಿಗಳಿಬ್ಬರೂ ರಿಶಿ ವೆಲ್ಲಿ ಟ್ರಸ್ಟಿನ ಕಾರ್ಯಕಾರಿ ಮಂಡಳಿಯ ಮುಖ್ಯ ಸದಸ್ಯರಾಗಿದ್ದರು. ಆದರೆ ಅವರ ಹೆಸರು ಎಲ್ಲೂ ಕಾಣುವುದಿಲ್ಲ. ಅವರಿಗೆ ಅದು ಬೇಕೂ ಇರಲಿಲ್ಲ. ಕಾಯಕವೇ ಕೈಲಾಸವೆಂದು ಎಲೆಮರೆಯ ಹೂವಿನಂತೆ ಕೆಲಸ ಮಾಡಿದ್ದಾರೆ.

ಪದ್ಮಾಬಾಯಿ

ಪದ್ಮಾಬಾಯಿ ೧೮೯೨ರಲ್ಲಿ ಮಂಗಳೂರಿನ ಪ್ರಸಿದ್ಧ ವಕೀಲರ ಕುಟುಂಬದಲ್ಲಿ ಹುಟ್ಟಿದರು. ತಂದೆ ಗೊಲ್ಲರಕೇರಿ ಕೃಷ್ಣರಾವ್ ಮತ್ತು ಅವರ ಮೊದಲ ಹೆಂಡತಿ ಚಂದ್ರಾವತಿಯವರ ಮಗಳು. ಪದ್ಮಾಬಾಯಿಯವರ ಬಾಲ್ಯ ಕದ್ರಿಯಲ್ಲಿಯ ಅವರ ವಿಶಾಲವಾದ ಕಾನಂದರಾಮಕಿ ಮನೆಯಲ್ಲಿ ಕಳೆಯಿತು. ತಂದೆಯವರು ಹೆಂಡತಿ ಸತ್ತ ಮೇಲೆ ಪುನರ್ವಿವಾಹ ಮಾಡಿಕೊಂಡರು. ಮನೆ ತುಂಬ ಮಕ್ಕಳಲ್ಲಿ ಪದ್ಮಾ ಹಿರಿಯರು.

ಹನ್ನೊಂದನೆಯ ವಯಸ್ಸಿನಲ್ಲಿ ಅವರ ವಿವಾಹ ಬೆನೆಗಲ್ ಕುಟುಂಬದ ಹಿರಿಯ ಮಗ ಸಂಜೀವರಾವರ ಜೊತೆ ಆಯಿತು. ಮದುವೆಯ ನಂತರ ಸಂಜೀವರಾಯರು ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಹೀಗಾಗಿ ಪದ್ಮಾಬಾಯಿ ತಂದೆಯ ಮನೆಯಲ್ಲಿಯೇ ೬ ವರ್ಷ ಉಳಿದರು.

ಪದ್ಮಾಬಾಯಿಯವರು ಸಂಜೀವರಾಯರಿಗೆ ತಕ್ಕ ಬಾಳಸಂಗಾತಿಯಾಗಿದ್ದರು. ಪ್ರಾಪಂಚಿಕರಲ್ಲದ ರಾಯರಿಗೆ ತನ್ನ ಮತ್ತು ತನ್ನ ದೇವರ ನಡುವೆ ಬಂದ ಒಂದು ದೊಡ್ಡ ಅಡಚಣೆ ಎಂದು ಅನಿಸಿತ್ತು. ಆದರೆ ಸಮಯ ಸರಿದ ಹಾಗೆ, ಪದ್ಮಾಬಾಯಿ ಓದು ಕಲಿತರು. ಪತಿಯ ವಿಚಾರ ಸರಣಿಯಲ್ಲಿಯೇ ಬೆಳೆದು ಮುಂದೆ ಸ್ವತಂತ್ರವಾಗಿ ತಮ್ಮ ಜೀವನೋದ್ದೇಶದಲ್ಲಿ ಯಶಸ್ವಿಯಾಗಿ, ತಮ್ಮ ವ್ಯಕ್ತಿತ್ವವನ್ನು ಬಳಸಿ ಬೆಳೆಸಿಕೊಂಡರು. ಸಂಜೀವರಾಯರ ಎಲ್ಲ ಕಾರ್ಯಕಲಾಪಗಳಲ್ಲಿ ಅವರು ಸಹಭಾಗಿಯಾಗಿದ್ದರು.

ಸಂಜೀವರಾಯರು ತಮ್ಮ ವಿದ್ಯಾಭ್ಯಾಸವನ್ನು ಕೇಂಬ್ರಿಜ್‌ನಲ್ಲಿ ಮುಗಿಸಿ ೧೯೦೯ರಲ್ಲಿ ಭಾರತಕ್ಕೆ ಮರಳಿದರು. ಎನ್ನಿಬೆಸೆಂಟರು ಬನಾರಸಿನಲ್ಲಿ ಪ್ರಾರಂಭಿಸಿದ ಸೆಂಟ್ರಲ್ ಹಿಂದು ಕಾಲೇಜಿನಲ್ಲಿ ಗಣಿತದ ಶಿಕ್ಷಕರಾಗಿ ಅವರು ಸೇರಿಕೊಂಡರು. ಹದಿನೇಳು ವರ್ಷದ ಪದ್ಮಾಬಾಯಿ ಪತಿಯೊಡನೆ ಸಂಸಾರ ಮಾಡಲು ಬನಾರಸಿಗೆ ಹೊರಟು ಬಂದರು. ಆದರೆ ಥಿಯೋಸೊಫಿಯ ತತ್ವದ ಪ್ರಕಾರ ಇಲ್ಲಿ ಸಾಂಘಿಕ ಜೀವನ ಬದುಕಬೇಕಾಗಿತ್ತು. ವೈಯಕ್ತಿಕ ಇರುವಿಕೆಗೆ ಅವಕಾಶ ಇರಲಿಲ್ಲ. ಇಂತಹ ಸಾಮುದಾಯಿಕ ವಾತಾವರಣದಲ್ಲಿ ಪ್ರಜ್ಞಾಶಾಲಿ ಸಂವಾದಗಳು ಇಲ್ಲಿಯ ವೈಶಿಷ್ಟ್ಯವಾಗಿದ್ದವು. ಮಕ್ಕಳಿಗೆ ತಮ್ಮ ವಿಚಾರಗಳನ್ನು ಮಂಡಿಸುವ ಸ್ವಾತಂತ್ರ್ಯವಿತ್ತು. ಪದ್ಮಾಬಾಯಿ ಕೂಡ ಥಿಯೋಸೊಫಿಯಾದ ವಿಚಾರಧಾರೆಗೆ ಒಳಗಾಗಿದ್ದರು. ಹೀಗೆ ಪತಿ–ಪತ್ನಿಯರು ಎನ್ನಿಬೆಸಂಟರ ವರ್ಚಸ್ಸಿನಲ್ಲಿ ಬೆಳೆಯುತ್ತ ಹೋದರು.

೧೯೧೩ರಲ್ಲಿ ಎನ್ನಿಬೆಸೆಂಟರು ಥಿಯೋಸೊಫಿಕಲ್ ಸೊಸಾಯ್ಟಿಯ ಹೆಣ್ಣು ಮಕ್ಕಳ ಶಾಲೆಯನ್ನು ಬನಾರಸದಲ್ಲಿ ಪ್ರಾರಂಭಿಸಿದ್ದರು. ಇದೇ ಸಮಯದಲ್ಲಿ ಪದ್ಮಾಬಾಯಿ ಬನಾರಸ್ ಹಿಂದು ವಿಶ್ವವಿದ್ಯಾಲಯದಿಂದ ಪದವೀಧರೆಯಾದರು. ಪದ್ಮಾಬಾಯಿಯವರ ಸಾಮರ್ಥ್ಯವನ್ನು ಗುರುತಿಸಿದ ಎನ್ನಿಬೆಸಂಟರು ಅವರನ್ನೇ ತಮ್ಮ ಶಾಲೆಯ ಆಡಳಿತಗಾರರೆಂದು ನೇಮಿಸಿದರು. ಅವರು ದಕ್ಷತೆಯಿಂದ ಸುಗಮವಾಗಿ ನಿರ್ವಹಿಸಿದರು. ನಿಗದಿತ ವಿಷಯಗಳ ಜೊತೆಗೆ ಸಂಗೀತ ಮತ್ತು ನೃತ್ಯವನ್ನೂ ಪಠ್ಯಕ್ರಮದಲ್ಲಿ ಸೇರಿಸಿ, ವಿದ್ಯಾರ್ಥಿಗಳಿಗೆ ಈ ವಿಷಯಗಳಲ್ಲಿ ತರಬೇತಿ ಕೊಡುವ ವ್ಯವಸ್ಥೆ ಮಾಡಿದರು. ಶಿಶು ವಿಹಾರದ ವಿಭಾಗವನ್ನು ಪ್ರತ್ಯೇಕ ಕಟ್ಟಡದಲ್ಲಿ ಪ್ರಾರಂಭಿಸಲಾಯಿತು. ಓರ್ವ ಯಶಸ್ವಿ ಆಡಳಿತಗಾತಿಯೆಂದು ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಮನ್ನಣೆಯಿತ್ತು. ಅಷ್ಟೇ ಅಲ್ಲ, ಇಡೀ ಉತ್ತರ ಪ್ರದೇಶದಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ಇವರ ಹೆಸರು ಮುಂದಿತ್ತು. ಮಾದರಿ ಶಾಲೆಯೆಂದೆನಿಸಿದ ಈ ಶಾಲೆಗೆ ನಿರಂತರವಾಗಿ ಅನೇಕ ಖ್ಯಾತ ಮತ್ತು ಆಗಿನ ರಾಜಕೀಯ ಪುಢಾರಿಗಳು, ಬರಹಗಾರರು, ಕಲೋಪಾಸಕರು ಸ್ವತಃ ಕಲಾಕಾರರು ಇವರೆಲ್ಲ ಈ ಶಾಲೆಗೆ ಆಗಮಿಸುತ್ತಿದ್ದರು. ಇವರಲ್ಲಿ ರವೀಂದ್ರನಾಥ ಟಾಗೋರರು ಪ್ರಮುಖರು.

ಸಂಜೀವರಾಯರು ಜಿಡ್ಡು ಕೃಷ್ಣಮೂರ್ತಿಗೆ ಸಮೀಪದವರಾಗಿದ್ದರು, ಆದರೆ ಅವರ ಪತ್ನಿ ಪದ್ಮಾಬಾಯಿ ಇನ್ನೂ ನಿಕಟವಾಗಿದ್ದರು ಎನ್ನುವುದಕ್ಕೆ ಅವರ ಪತ್ರ ಲೇಖನಗಳು ಸಾಕ್ಷಿಯಾಗಿವೆ. ಸಹೋದರ ನಿತ್ಯಾನಂದರ ಸಾವಿನ ನಂತರ ಹತಾಶರಾಗಿದ್ದ ಕೃಷ್ಣಮೂರ್ತಿಯವರನ್ನು ಸಾಂತ್ವಯಿಸುವ

ಕೆಲವು ಪತ್ರಗಳಿಂದ ಪದ್ಮಾಬಾಯಿಯವರ ಭಾವುಕ ಮನಸ್ಸಿನ ಅರಿವಾಗುತ್ತದೆ. ಅಕ್ಕಕಿ, ಪದ್ಮಬಾಯಿಕಿ ಎಂದು ಸಂಬೋಧಿಸಿದ ಮರು ಪತ್ರಗಳು ಇವರಿಬ್ಬರ ಬಂಧುತ್ವದ ಸಂಬಂಧವನ್ನು ತೋರಿಸುತ್ತವೆ.

ಪ್ರತಿಯೊಂದು ಕೆಲಸವನ್ನು ಪರಿಪೂರ್ಣತೆಯಿಂದ ಮಾಡುವ ಪದ್ಮಾಬಾಯಿ ವಿದ್ಯಾರ್ಥಿನಿಯರಲ್ಲಿ ಕೂಡ ಇದನ್ನು ನಿರೀಕ್ಷಿಸುತ್ತಿದ್ದರು. ಎಲ್ಲವೂ ಸರಿಯಾದ ಜಾಗದಲ್ಲಿರಬೇಕೆಂಬ ಒತ್ತಾಸೆ ಅವರದಾಗಿತ್ತು. ಅವರ ಕಠಾಕಡಿಯ ಮತ್ತು ಶಿಸ್ತಿನ ಸ್ವಭಾವದ ಪರಿಚಯ ಎಲ್ಲರಿಗಿತ್ತು. ಆದರೆ ಅವರ ಮೃದು ಸ್ವಭಾವವನ್ನು ಕೂಡಾ ಅವರ ಸಹವಾಸದಲ್ಲಿ ಬಂದ ವಿದ್ಯಾರ್ಥಿಗಳು ಅರಿತಿದ್ದರು. ಸಂಜೀವರಾವ್ ದಂಪತಿಗಳು ತಮಗೆ ಮಕ್ಕಳು ಬೇಡವೆಂದು ನಿರ್ಧರಿಸಿದ್ದರೂ ಕೂಡ ಅವರಿಗೆ ತಮ್ಮ ತಂಗಿಯರ ಮಕ್ಕಳು, ಮೈದುನನ ಮಗಳ ಮೇಲೆ ಮಮತೆ ಇತ್ತು ಮತ್ತು ಅವರ ಶಿಕ್ಷಣಕ್ಕೆಲ್ಲ ಅವರು ಸಹಾಯ ಮಾಡಿದ್ದಾರೆ. ತವರುಮನೆಯಲ್ಲಿ ಕೂಡ ಅವರು ಹಿರಿಯಕ್ಕ, ಇವರ ನಂತರ ಹುಟ್ಟಿದ ತಮ್ಮ ತಂಗಿಯಂದಿರು ಅನೇಕ. ಹೀಗಾಗಿ ಅವರನ್ನು ನಿಯಂತ್ರಣದಲ್ಲಿಡಲು ಕಠಿಣ ಮುಖವಾಡ ಅನಿವಾರ್ಯವಾಗಿರಬೇಕು. ಕೈಮಗ್ಗದ ಸೀರೆಗಳನ್ನು ಉಡುವ ಪದ್ಮಾ ನಿಯಮಿತವಾಗಿ ಚರಖಾದಿಂದ ನೂಲು ತೆಗೆದು ಖಾದಿ ಕೇಂದ್ರಕ್ಕೆ ಕಳಿಸಿಕೊಡುತ್ತಿದ್ದರು.

ಸಂಜೀವರಾಯರ ಮರಣದ ನಂತರ, ಪದ್ಮಾಬಾಯಿ ೮೦ ವರ್ಷ ತುಂಬುಜೀವನ ಬಾಳಿ ೧೯೭೪ರಲ್ಲಿ ಕಲಕತ್ತಾದ ತಮ್ಮ ತಂಗಿ ಮಗಳನ್ನು ಭೇಟಿ ಮಾಡಲು ಹೋದಾಗ ಅಲ್ಲಿಯೇ ನಿಧನರಾದರು.

ಈ ಅಪರೂಪದ ದಂಪತಿಗಳು ತಮ್ಮ ಆಯುಷ್ಯದ ಕೊನೆಯವರೆಗೂ ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ಮಹಿಳಾ ಶಿಕ್ಷಣಕ್ಕೆ ಅಮೂಲ್ಯವಾದ ಕೊಡುಗೆ ನೀಡಿದ್ದಾರೆ. ಇವರ ಕರ್ಮಭೂಮಿಯೂ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಈಗಿನ ಉತ್ತರಪ್ರದೇಶ, ತಮಿಳುನಾಡು ಕೂಡ ಆಗಿತ್ತು. ಆದರೆ ಇವರ ಬಗ್ಗೆ ಬಹಳ ಜನಕ್ಕೆ ಗೊತ್ತಿಲ್ಲ. ಪುಪುಲ್ ಜಯಕರ್ ಬರೆದ ಜೆ. ಕೃಷ್ಣಮೂರ್ತಿಯವರ ಜೀವನ ಚರಿತ್ರೆಯಲ್ಲಿ ಪದ್ಮಾಬಾಯಿ ಬೆನೆಗಲ್ ಅವರ ಉಲ್ಲೇಖ ಒಂದೆರಡು ಸಲ ಬರುತ್ತದೆ. ಮೇರಿ ಲ್ಯೂಟೆನ್ಸ್ ಅವರ ಹೊತ್ತಿಗೆಯಲ್ಲಿ, ಪದ್ಮಾಬಾಯಿ ಮತ್ತು ಜೆ. ಕೃಷ್ಣಮೂರ್ತಿಯವರ ಮಧ್ಯ ಇದ್ದ ಮಧುರ ಬಾಂಧವ್ಯದ ಸಂಬಂಧ ಎದ್ದು ಕಾಣುತ್ತದೆ.

ಎನ್ನಿಬೆಸಂಟ ಮತ್ತು ಬಾಲಗಂಗಾಧರ ಟಿಳಕರ ನೇತೃತ್ವದಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಉಗಮವಾಗಿ ಭಾರತದ ಎಲ್ಲೆಡೆ ಶಾಲೆಗಳ ನಿರ್ಮಾಣ ಮತ್ತು ಭಾರತೀಯ ವಿದ್ಯಾರ್ಥಿಗಳಿಗೆ ತಕ್ಕದಾದ ಪಠ್ಯಕ್ರಮ ರಚನೆ ಮತ್ತು ಬಾಲಿಕಾ ಶಿಕ್ಷಣ ಸಭೆಗಳನ್ನು ಆರಂಭಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಮಂಗಳೂರು ಇದಕ್ಕೆ ಅಪವಾದವಿರಲಿಲ್ಲ. ಮಂಗಳೂರಿನ ಬಾಲಿಕಾ ಶಿಕ್ಷಣ ಸಭೆಯ ಹೆಸರನ್ನು ಬದಲಿಸಿ ಶಾಲೆಯ ಕರ್ತೃವಿನ ಹೆಸರಿನಲ್ಲಿ ಬೆಸಂಟ ಬಾಲಿಕೆಯರ ಶಾಲೆಯೆಂದು ಕರೆಯಲ್ಪಟ್ಟಿತು.

ಸಮಾಜಸುಧಾರಕರಾದ ಕುದುಮುಲ್ ರಂಗರಾವ್, ಕರ್ನಾಡ ಸದಾಶಿವರಾವ್ ಇವರುಗಳ ಪ್ರಭಾವದಿಂದ ಪ್ರೇರಿತರಾದ ಮಂಗಳೂರಿನ ಅಕ್ಕಪಕ್ಕದ ಊರುಗಳಿಂದ ಪಾಲಕರು ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಬೆಸಂಟ ಬಾಲಿಕಾ ಶಾಲೆಗೆ ಕಳಿಸುತ್ತಿದ್ದರು. ಹೀಗೆ ಶಾಲೆಯ ಹೆಸರು ಜನಪ್ರಿಯವಾದ ಹಾಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತ ಹೋಯಿತು. ವಿದ್ಯಾರ್ಥಿಗಳಿಗೆ ಅಷ್ಟೇ ಅಲ್ಲ ಶಿಕ್ಷಕರಿಗೆ ಕೂಡ ವಸತಿ ಸೌಕರ್ಯದ ಅವಶ್ಯಕತೆಯನ್ನು ಕಂಡು ಪದ್ಮಾರಾವ್ ಅವರು ಮಂಗಳೂರಿಗೆ ೧೯೩೪ರಲ್ಲಿ ವಾಪಸಾದರು. ಅವರು ಕಟ್ಟಡ ಕಟ್ಟುವ ಹೊಣೆಗಾರಿಕೆಯನ್ನು ತುಂಬ ಚೆನ್ನಾಗಿ ನಿಭಾಯಿಸಿದ್ದಕ್ಕೆ ಪದ್ಮವಿಹಾರಕಿ ವಸತಿ ಗೃಹ ನಿರ್ಮಿಸಲ್ಪಟ್ಟಿತು.

ಎನ್ನಿಬೆಸಂಟರ ಇಲ್ಲವೇ ಕೃಷ್ಣಮೂರ್ತಿಯವರ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ಮತ್ತು ಅವುಗಳ ಆಡಳಿತವನ್ನು ಸಂಭಾಳಿಸಲು ಸಂಜೀವರಾಯರು ಬೇರೆ ಬೇರೆ ಊರುಗಳಿಗೆ ಸ್ಥಳಾಂತರಿಸುತ್ತಿದ್ದರು. ಆಗ ಪದ್ಮಾಬಾಯಿಯವರು ಬನಾರಸ ಇಲ್ಲವೇ ಮಂಗಳೂರಿನ ಬೆಸಂಟ ಶಾಲೆಗಳ ಜವಾಬ್ದಾರಿಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಿದ್ದಾರೆ. ಉದ್ದೇಶ ಪೂರ್ವಕವಾಗಿ ಪತಿ–ಪತ್ನಿಯರು ತಮಗೆ ಮಕ್ಕಳು ಬೇಡ ವೆಂದು ನಿರ್ಧರಿಸಿದ್ದರು. ಅವರ ಜೀವನದಲ್ಲಿ ಅವರಿಬ್ಬರೂ ಜೊತೆಯಾಗಿ ಇದ್ದದ್ದು ಬಹಳ ಕಡಿಮೆ. ಶಿಕ್ಷಣಪ್ರಸಾರಕ್ಕಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟವರು ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು.

ಹೈದ್ರಾಬಾದ್-ಕರ್ನಾಟಕ ವಿಮೋಚನಾ ಹೋರಾಟದಲ್ಲಿ ಜಗನ್ನಾಥ ಚಂಡ್ರಕಿಯವರ ಪಾತ್ರ

ಡಾ. ಕಾವ್ಯಶ್ರೀ.ಜಿ.* ಕಂಚಿಕೆರೆ ಷಮಿವುಲ್ಲಾ**

ಈಗಿನ ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡಿರುವ ಪ್ರದೇಶವನ್ನು ಹೈದ್ರಾಬಾದ ಕರ್ನಾಟಕ ಪ್ರದೇಶ ಎಂದು ಗುರುತಿಸಲಾಗುತ್ತಿದೆ. ಸ್ವಾತಂತ್ರ್ಯ ಪಡೆಯುವ ಸಂದರ್ಭದಲ್ಲಿ ಕನ್ನಡ ಮಾತನಾಡುವ ಪ್ರದೇಶಗಳಾದ ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ಹೈದ್ರಾಬಾದ ನಿಜಾಮ ಸಂಸ್ಥಾನದ ವ್ಯಾಪ್ತಿಗೆ ಸೇರಿದ್ದರಿಂದ ನಿಜಾಂ ಕರ್ನಾಟಕ ಅಥವಾ ಹೈದ್ರಾಬಾದ ಕರ್ನಾಟಕ ಎಂದು ಕರೆಯಿಸಿಕೊಂಡಿದ್ದವು.

ಈ ಪ್ರದೇಶಗಳು ಮೊದಲು ಟಿಪ್ಪುವಿನ ಹಿಡಿತದಲ್ಲಿದ್ದವು. ೧೭೯೯ರಲ್ಲಿ ಟಿಪ್ಪುವು ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ಸೋತಾಗ ಬ್ರಿಟಿಷರು ಮತ್ತು ಹೈದ್ರಾಬಾದಿನ ಎರಡನೇ ನಿಜಾಮನಾದ ನವಾಬ ನಿಜಾಮ ಅಲಿಖಾನ ಬಹಾದ್ದೂರ ನಡುವಿನ ಮೈತ್ರಿಯನ್ವಯ ಈ ಜಿಲ್ಲೆಗಳು ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟವು. ಅದರ ನಂತರ ೧೯೪೮ ರವರೆಗೆ ಏಳು ನಿಜಾಮರು ಇಲ್ಲಿ ತಮ್ಮ ಪ್ರಭುತ್ವ ಸಾಧಿಸಿದರು.

ಭಾರತದಲ್ಲಿ ಬ್ರಿಟಿಷರ ವಿರುದ್ಧ ವಿವಿಧ ರೀತಿಯಲ್ಲಿ ಹೋರಾಟಗಳು ನಡೆಯುತ್ತಿದ್ದರೂ ಇಡೀ ಹೈದ್ರಾಬಾದ ಸಂಸ್ಥಾನದಲ್ಲಿ ಅಂತಹ ಹೋರಾಟಗಳು ನಡೆಯಲಿಲ್ಲ. ಆದಾಗ್ಯೂ ೧೮೫೭ರ ದಂಗೆಯ ವೇಳೆ ನಿಜಾಮನ ಏಳು ಜನ ಮುಸ್ಲಿಂ ಅಧಿಕಾರಿಗಳು ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸುವುದು ಅಗತ್ಯವೆಂದು ಹೇಳಿದ್ದರು. ಆಗಿನ ನಿಜಾಮನಾಗಿದ್ದ ನವಾಬ ಅಪಜಾಲುದ್ದೌಲಾ ಮತ್ತು ದಿವಾನ ಸರ್ ಸಾಲಾರಜಂಗ ಬ್ರಿಟಿಷರ ಪರ ಇದ್ದುದ್ದರಿಂದ ಅದಕ್ಕೆ ಅವಕಾಶ ಸಿಗಲಿಲ್ಲ.

ಇನ್ನು ಕೊನೆಯ ನಿಜಾಮನಾದ ನವಾಬ ಮೀರ್ ಉಸ್ಮಾನ ಅಲಿಖಾನ ಬಹಾದ್ದೂರ (೧೯೧೧-೧೯೪೮) ಅಧಿಕಾರಕ್ಕೆ ಬಂದಾಗ ಇಲ್ಲಿಯ ಚಿತ್ರಣವೇ ಬದಲಾಗಿ ಹೋಯಿತು. ಈ ಹಿಂದಿನ ನಿಜಾಮರು ರಾಜಕೀಯವನ್ನು ರಾಜಕೀಯದಿಂದ ಮಾತ್ರ ಮಾಡುತ್ತಿದ್ದರೆ ೭ನೇ ನಿಜಾಮ ಕಾಸಿಂ ರಜ್ವಿ ಎಂಬಾತನ ಕಪಿಮುಷ್ಠಿಗೆ ಸಿಕ್ಕು ರಾಜಕೀಯಕ್ಕೆ ಧರ್ಮದ ಲೇಪನವನ್ನು ಕೊಟ್ಟಿದ್ದರಿಂದ ಸಂಸ್ಥಾನದಲ್ಲಿ ರಾಜಕೀಯ ತಲ್ಲಣವುಂಟಾಯಿತು.

ನಿಜಾಮನೇನೋ ಆರಂಭದಲ್ಲಿ ಧಾರ್ಮಿಕ ಮದಾಂಧನಾಗಿರಲಿಲ್ಲ. ಆತನು ಹಲವಾರು ಸುಧಾರಣೆಗಳನ್ನು ಜಾರಿಗೆ ತಂದವನಾಗಿದ್ದ. ಈತನು ಪಟ್ಟಕ್ಕೆ ಬಂದ ೨೫ನೇ ವರ್ಷಾಚರಣೆ ಸಂದರ್ಭದಲ್ಲಿ ಗುಲ್ಬರ್ಗಾ ಮತ್ತು ಬೀದರ್ ಮಧ್ಯೆ ರಾಜಮಾರ್ಗ ನಿರ್ಮಿಸಿದ. ಈ ಮಾರ್ಗದಲ್ಲಿ ಬೆಣ್ಣೆತೊರಾ ನದಿಗೆ ಬೃಹತ್ ಕರಿಕಲ್ಲಿನ ಸೇತುವೆ ಕಟ್ಟಿಸಿದ. ಗುಲ್ಬರ್ಗಾ ಮತ್ತು ರಾಯಚೂರು ಮಧ್ಯೆ ನೇರ ಮಾರ್ಗವನ್ನು ರಚಿಸಿದ. ರಸ್ತೆಯುದ್ದಕ್ಕೂ ನೆರಳು ಮತ್ತು ಫಲ ಎರಡನ್ನೂ ಕೊಡಬಹುದಾದ ಮಾವು, ಹುಣಸೆ ಸಾಲು ಮರಗಳನ್ನು ನೆಡಿಸಿದ್ದ. ಮಧ್ಯೆ ಪ್ರಯಾಣಿಕರಿಗೆ ದಣಿವಾರಿಸಿಕೊಳ್ಳಲು ಬಾವಿಗಳನ್ನು ನಿರ್ಮಿಸಿದ್ದ. ಗುಲ್ಬರ್ಗಾ-ರಾಯಚೂರು ಜಿಲ್ಲೆಗಳನ್ನು ಬೇರ್ಪಡಿಸುವ ಗಡಿಯಲ್ಲಿರುವ ಕೃಷ್ಣಾ ನದಿಗೆ ದೊಡ್ಡ ಸೇತುವೆಯೊಂದನ್ನು ನಿರ್ಮಿಸಿದ. ಇವುಗಳನ್ನು ಈಗಲೂ ಕಾಣಬಹುದು.

ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ವ್ಯಾಪಾರ ಅಭಿವೃದ್ಧಿಗಾಗಿ ಸಗಟು ವ್ಯಾಪಾರದ ಸ್ಥಳಗಳನ್ನು (ಗಂಜ್ ಅಥವಾ ಅಡತಿ) ನಿರ್ಮಿಸಿದ್ದ. ರೈಲು ನಿಲ್ದಾಣದಿಂದ ಗಂಜ್‌ವರೆಗೆ ಸಿಮೆಂಟ್ ರಸ್ತೆಯನ್ನು ನಿರ್ಮಿಸಿದ್ದ. ರಾಜಧಾನಿ ಹೈದ್ರಾಬಾದಿಗೆ ಹೋಗಲು ಸುಸಜ್ಜಿತವಾದ ರಸ್ತೆ ನಿರ್ಮಿಸಿದ್ದ ಎಂಬುದನ್ನು ಮರೆಯುವಂತಿಲ್ಲ.

ಹೀಗಾಗಿ ಜನರು ಕೂಡ ನಿಜಾಮನನ್ನು ಆದರದಿಂದಲೇ ಕಾಣುತ್ತಿದ್ದರು. ಆದರೆ ನಿಜಾಮ ಬ್ರಿಟಿಷರ ಗುಲಾಮನಾದಾಗ ಜನರು ಬಿಟಿಷರ ವಿರುದ್ಧ ಹೋರಾಟಕ್ಕಿಳಿದರು.

* ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ-೫೭೭೦೦೪
** ಅರಸಿಕೆರೆ ಅಂಚೆ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಇದು ನಿಜಾಮನ ವಿರುದ್ಧವೇ ನಡೆದ ಹೋರಾಟ ಎಂಬಂತೆ ಆತನಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ದ್ವೇಷದ ಬೀಜವನ್ನು ಬಿತ್ತಲಾಯಿತು. ಇದೇ ವೇಳೆಗೆ 'ಮಜ್ಲಿಸ್-ಎ-ಇತ್ತೆಹಾದ್-ಉಲ್-ಮುಸಲ್ಮೀನ್' (ಇದನ್ನು ಸಂಕ್ಷಿಪ್ತವಾಗಿ 'ಇತ್ತೆಹಾದ್' ಎಂದು ಸಂಬೋಧಿಸಲಾಗುತ್ತದೆ) ಸಂಘಟನೆಯ ನೇತೃತ್ವವನ್ನು ವಹಿಸಿಕೊಂಡ ಕಾಸಿಂ ರಜ್ವಿಯು ನಿಜಾಮನಲ್ಲಿ ಧರ್ಮದ ವಿಷಬೀಜವನ್ನು ಬಿತ್ತತೊಡಗಿದ. ಸಾರ್ವಜನಿಕರನ್ನು ನಿಜಾಮರಿಂದ ದೂರ ಮಾಡಿ ರಜಾಕಾರರನ್ನು ಹುರಿದುಂಬಿಸಿ ಇಡೀ ಹೈದ್ರಾಬಾದ್ ಪ್ರಾಂತ್ಯದಲ್ಲಿ ದ್ವೇಷಮಯ ವಾತಾವರಣ ವಿರುವಂತೆ ಮಾಡಿದ. ಇದರಿಂದ ಹೈದ್ರಾಬಾದ್ ಕರ್ನಾಟಕ ಕೂಡ ಹೊರತಾಗಿರಲಿಲ್ಲ.[೧]

ಅತ್ತ ಬ್ರಿಟಿಷ್ ಭಾರತದಲ್ಲಿ ಭಾರತವು ಸ್ವತಂತ್ರ ದೇಶವಾಗಿ ಹೊರ ಹೊಮ್ಮಬೇಕೆಂದು ಭಾರತೀಯರು ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದರೆ ಇತ್ತ ಹೈದ್ರಾಬಾದ ಸಂಸ್ಥಾನದಲ್ಲಿ ರಾಜಕೀಯ ಸ್ವಾತಂತ್ರ್ಯ ಕಳೆದುಕೊಂಡಿದ್ದ ಜನತೆ ನಿಸ್ತೇಜ ರಾಗಿದ್ದರು. ಏಕೆಂದರೆ ಇಲ್ಲಿಯ ರಾಷ್ಟ್ರಪ್ರೇಮಿಗಳು ಒಂದೆಡೆ ನಿಜಾಮ ಸರಕಾರದ ದಮನಕಾರಿ ನೀತಿಗಳಿಂದ ತುಳಿಯಲ್ಪಟ್ಟಿದ್ದರೆ ಇನ್ನೊಂದೆಡೆ ರಜಾಕಾರರೆಂಬ ದುಷ್ಟ ಶಕ್ತಿಗಳ ಆಕ್ರಮಣ ಮತ್ತು ಅವರ ದೌರ್ಜನ್ಯಕ್ಕೊಳಗಾಗಿದ್ದರು.

ಇಂತಹ ಸಮಯದಲ್ಲಿ ಹೈದ್ರಾಬಾದ್ ಸಂಸ್ಥಾನದಾದ್ಯಂತ ೧೯೩೮ರಲ್ಲಿ 'ವಂದೇ ಮಾತರಂ' ಚಳುವಳಿ ನಡೆಯಿತು. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಅನೇಕ ವಿದ್ಯಾರ್ಥಿಗಳು, ಸ್ವಾತಂತ್ರ್ಯ ಹೋರಾಟಗಾರರು ಈ ಚಳುವಳಿಯಲ್ಲಿ ಭಾಗವಹಿಸಿದರು. ಅಲ್ಲದೆ ನಂತರ 'ಒಕ್ಕೂಟ ಸೇರಿರಿ' ಚಳುವಳಿಯ ಮೂಲಕ ಹೈದ್ರಾಬಾದ ಕರ್ನಾಟಕ ವಿಮೋಚನಾ ಚಳುವಳಿ ತಾರಕಕ್ಕೇರಲು ಕಾರಣರಾದರು. ಅದರಲ್ಲಿ ಜಗನ್ನಾಥರಾವ ಚಂದ್ರಕಿಯವರು ವಹಿಸಿದ ಪಾತ್ರವನ್ನು ಈ ಪ್ರಬಂಧದ ಮೂಲಕ ವಿವರಿಸಲು ಪ್ರಯತ್ನಿಸಲಾಗಿದೆ.

ಜಗನ್ನಾಥರಾವ್ ಚಂದ್ರಕಿಯವರು ಈಗಿನ ಯಾದಗಿರಿ ಜಿಲ್ಲೆಯ ಪುಟ್ಟಗ್ರಾಮ ಚಂಡ್ರಕಿಯಲ್ಲಿ (ಮೊದಲು ಗುಲಬರ್ಗಾ ಜಿಲ್ಲೆಗೆ ಸೇರಿತ್ತು) ೧೯೧೬ರ ಆಗಷ್ಟ ೧೬ರಂದು ಕುಲಕರ್ಣಿಯಾಗಿ ಕೆಲಸ ಮಾಡುತ್ತಿದ್ದ ವೆಂಕಟರಾವ್ ಮತ್ತು ರುಕ್ಮಿಣಿಬಾಯಿಯವರ ಮಗನಾಗಿ ಜನಿಸಿದರು. ಇವರು ಹುಟ್ಟಿದ ದಿನ ಜಗನ್ನಾಥರಾಯರ ಆರಾಧನೆ ಇದ್ದ ಕಾರಣವೇ ಇವರಿಗೆ ಜಗನ್ನಾಥ ಎಂದು ನಾಮಕರಣ ಮಾಡಲಾಯಿತು[೨]

ಮಾತೃಭಾಷೆ ಕನ್ನಡ, ಆಂಧ್ರದ ಗಡಿಹಳ್ಳಿಯಾಗಿದ್ದರಿಂದ ತೆಲುಗು, ಕಡ್ಡಾಯ ಕಲಿಕಾ ಮಾಧ್ಯಮವಾಗಿದ್ದ ಉರ್ದು ಭಾಷೆಗಳನ್ನು ಯಾವ ಭೇದ-ಭಾವ ಇಲ್ಲದೇ ಕಲಿತರು. ಚಂದ್ರಕಿಯವರು ತಮ್ಮ ಹುಟ್ಟೂರು ಹಾಗೂ ಯಾದಗಿರಿಯಲ್ಲಿ ಓದಿದರು. ೧೯೩೭ರಲ್ಲಿ ಇಂಟರ.ಮಿಡಿಯೇಟ ಅಭ್ಯಾಸಕ್ಕೆ ಹೈದ್ರಾಬಾದಿಗೆ ಹೋಗಿ ಅಲ್ಲಿ ಯಾದಗಿರಿಯ ಇಮಾರತಿ ಭೀಮಸೇನರಾವ್ ಅವರ ಪರಿಚಯದವರ ಮನೆಯಲ್ಲಿದ್ದು ಓದುತ್ತಾರೆ. ಹೈದ್ರಾಬಾದಿನ ಸಿಟಿ ಕಾಲೇಜಿನಲ್ಲಿ ಇವರು ಪ್ರವೇಶ ಪಡೆಯುತ್ತಾರೆ.

ನಿಜಾಮನ ಮಕ್ಕಳೇ ಸಹಪಾಠಿಗಳು

ಚಂದ್ರಿಕಿಯವರ ಅದೃಷ್ಟವೋ, ದುರಾದೃಷ್ಟವೋ ಹೈದ್ರಾಬಾದಿನ ನಿಜಾಮ ಮೀರ್ ಉಸ್ಮಾನ ಅಲಿಖಾನ ಬಹಾದ್ದೂರರ ಮಕ್ಕಳು ಹಾಗೂ ಸಂಸ್ಥಾನದ ಹಿರಿಯ ಅಧಿಕಾರಿಗಳ ಮಕ್ಕಳು ಜಗನ್ನಾಥರಿಗೆ ಸಹಪಾಠಿಗಳಾಗಿದ್ದರು. ಅಷ್ಟೇ ಅಲ್ಲದೇ ನಿಜಾಮನ ಮಕ್ಕಳೇ ಇವರ ಬೆಂಚ್‌ಮೇಟ್‌ಗಳೂ ಆಗಿದ್ದರು. ಇವರೆಲ್ಲ ಕೊನೆಯ ಬೆಂಚಿನಲ್ಲಿ ಕೂಡುತ್ತಿದ್ದರು. ನಿಜಾಮನ ಮಕ್ಕಳು ಏನೇ ಕಿತಾಪತಿ ಮಾಡಿದರೂ ಶಿಕ್ಷೆ ಜಗನ್ನಾಥರಿಗೂ ಇರುತ್ತಿತ್ತು. ನಂತರ ಇವರು ಪಿಯುಸಿ ವಿಜ್ಞಾನ ಓದಿದರೂ ನಾಗಪುರ ವಿಶ್ವವಿದ್ಯಾಲಯದಲ್ಲಿ ಪ್ರವೇಶದ ದಾಖಲಿ ಸಿಗದೇ ಹೋಗಿದ್ದರಿಂದ ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಬಿ.ಎ. ಸೇರಿ ಗಣಿತ ವಿಷಯ ಆಯ್ಕೆ ಮಾಡಿಕೊಂಡರು.[೩]

ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗ ನಾಗಪುರದಲ್ಲಿ ೧೨ ಹೈಸ್ಕೂಲ್ ಮಕ್ಕಳು ರಾಷ್ಟ್ರಧ್ವಜಾರೋಹಣ ಮಾಡಲು ಹೋಗಿ ಗುಂಡಿಗೆ ಬಲಿಯಾದ ವಿಷಯವನ್ನು ಪತ್ರಿಕೆಯಲ್ಲಿ ಓದಿದ ಚಂದ್ರಿಕಿಯವರಿಗೆ ತಳಮಳವುಂಟು ಮಾಡಿತು. ಪುಟ್ಟ ಮಕ್ಕಳ ಬಲಿದಾನದಿಂದ ಪ್ರಭಾವಿತರಾದ ಚಂದ್ರಕಿಯವರು ತಾವೂ ದೇಶದ ಸ್ವಾತಂತ್ರ್ಯಕ್ಕಾಗಿ ನಿಜಾಮ ಸಂಸ್ಥಾನದ ಜನರ ವಿಮೋಚನೆಗಾಗಿ ಹೋರಾಡಬೇಕೆಂಬ ದೃಢ ನಿಲುವು ತಳೆದರು.

ಬ್ರಿಟಿಷ್ ಭಾರತದಲ್ಲಿ ವಂದೇಮಾತರಂ ಚಳುವಳಿ ಬಂಗಾಳ ವಿಭಜನೆ ವಿರೋಧಿಸಿ ೩೦ ವರ್ಷದ ಹಿಂದೆಯೇ ನಡೆದಿದ್ದರೆ ಹೈದ್ರಾಬಾದ ಸಂಸ್ಥಾನದಲ್ಲಿ 'ವಂದೇಮಾತರಂ' ೧೯೩೮ರಲ್ಲಿ ವಿಶಿಷ್ಟ ರೂಪದಲ್ಲಿ ಆರಂಭವಾಗಿ ಹೈದ್ರಾಬಾದ್ ವಿಮೋಚನೆಗೆ ತನ್ಮೂಲಕ ಹೈದ್ರಾಬಾದ್ ಕರ್ನಾಟಕದ ವಿಮೋಚನೆಗೆ ಎರವಾಯಿತು.

ಚಂದ್ರಕಿಯವರು ಉಸ್ಮಾನಿಯಾ ವಿ.ವಿ.ಯಲ್ಲಿ ಎರಡನೇ ಬಿ.ಎ. ಓದುತ್ತಿದ್ದಾಗ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯ ಜವಾಬ್ದಾರಿಯನ್ನು ಇವರಿಗೇ ವಹಿಸಲಾಗಿತ್ತು. ಅಲ್ಲಿ ಪ್ರಾರ್ಥನಾ ಕೋಣೆಗೆ ಶೇರ್ವಾನಿ ಧರಿಸಿಕೊಂಡು ಬರಬೇಕೆಂಬ ನಿಯಮವಿತ್ತು. ಇದು ಹಾಸ್ಟೆಲಿನಲ್ಲಿದ್ದ ಹಿಂದೂ ವಿದ್ಯಾರ್ಥಿಗಳಿಗೆ ಮುಜುಗರವೆನಿಸುತ್ತಿತ್ತು. ಅದಕ್ಕಾಗಿ ಅದನ್ನು

ರಾಷ್ಟ್ರಪ್ರೇಮದ ಹಾಡು ಹಾಡಬೇಕೆಂದು ವಿದ್ಯಾರ್ಥಿಗಳು ತೀರ್ಮಾನಿಸಿದರು. ಪ್ರತಿ ದಿನ ಪ್ರಾರ್ಥನಾ ಸಮಯದಲ್ಲಿ ಇದ್ದ ವಂದೇಮಾತರಂ ಹಾಡಬೇಕೆಂಬ ಬಯಕೆ ವಿದ್ಯಾರ್ಥಿಗಳದಾಗಿತ್ತು.

ಈ ಸಂದರ್ಭದಲ್ಲಿ ಚಂದ್ರಕಿಯವರು ವಂದೇಮಾತರಂ ಚಳವಳಿಯ ಸಂಘಟನೆಯ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಹೋರಾಟದ ಯೋಜನೆ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಇವರ ನಾಯಕತ್ವದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳ ತಂಡದವರು ವಿಶ್ವವಿದ್ಯಾಲಯದ ಮುಂದೆ ಎರಡು ಬೇಡಿಕೆಗಳನ್ನಿಟ್ಟರು. ಮೊದಲನೆಯದು ಶೇರವಾನಿ ಧರಿಸುವ ಕಡ್ಡಾಯ ನಿಯಮವನ್ನು ರದ್ದು ಮಾಡಬೇಕೆನ್ನುವುದು. ಎರಡನೆಯ ಬೇಡಿಕೆ ರಾಷ್ಟ್ರಪ್ರೇಮದ ಸಂಕೇತವಾಗಿದ್ದ ವಂದೇಮಾತರಂ ಗೀತೆಯನ್ನು ಎರಡು ಪ್ರಾರ್ಥನಾ ಕೊಠಡಿಗಳಲ್ಲಿ ಹಾಡಲು ಅನುಮತಿ ಕೊಡಬೇಕೆನ್ನುವುದಾಗಿತ್ತು.[೪]

ವಿದ್ಯಾರ್ಥಿಗಳ ಬೇಡಿಕೆಯಿಂದ ಗಂಭೀರವಾದ ವಿಶ್ವವಿದ್ಯಾಲಯ ಇದನ್ನು ಸ್ವಾತಂತ್ರ್ಯ ಚಳವಳಿಯ ಮುನ್ಸೂಚನೆ ಎಂದು ಬಗೆದು ಹಾಸ್ಟೆಲ್ ಮುಚ್ಚುವ ಎಚ್ಚರಿಕೆ ನೀಡಿತು. ಆದರೆ ವಿದ್ಯಾರ್ಥಿಗಳು ಹೆದರದೆ ತಮ್ಮ ಕೋಣೆಗಳಲ್ಲಿ 'ವಂದೇ ಮಾತರಂ' ಹಾಡಲಾರಂಭಿಸಿದರು. ಇದರಿಂದ ಕುಪಿತರಾದ ವಿಶ್ವವಿದ್ಯಾಲಯದ ಅಧಿಕಾರಿಗಳು ರಾತ್ರಿ ಎರಡು ಗಂಟೆ ಸುಮಾರಿಗೆ ವಿದ್ಯಾರ್ಥಿಗಳನ್ನು ಹೊರದಬ್ಬಿ ಕೀಲಿ ಹಾಕಿದರು.

ತ್ರಿಶಂಕು ಸ್ಥಿತಿಗೆ ಬಂದು ನಿಂತ ವಿದ್ಯಾರ್ಥಿಗಳಿಗೆ ಸಮಾಧಾನ ಹೇಳಿದ ಚಂದ್ರಕಿಯವರು ನಾಗಪುರ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಮನವಿ ಸಲ್ಲಿಸಿದರು. ಇಲ್ಲಿಂದ ಹೊರದೂಡಲ್ಪಟ್ಟ ಎಲ್ಲ ವಿದ್ಯಾರ್ಥಿಗಳಿಗೆ ನಾಗಪುರ ವಿಶ್ವವಿದ್ಯಾಲಯದ ಕುಲಪತಿಗಳಾದ ಕೇದಾರ ಎನ್ನುವವರು ಓದುವ ಅವಕಾಶ ಒದಗಿಸಿ ಬೇಸಿಗೆಯಲ್ಲಿಯೂ ತರಗತಿಗಳನ್ನು ನಡೆಸಿದರು. ವಿದ್ಯಾರ್ಥಿಗಳನ್ನು ಹೊರಹಾಕಿ ಚಳವಳಿ ಹತ್ತಿಕ್ಕಬೇಕೆಂಬ ವಿಶ್ವವಿದ್ಯಾಲಯದ ತಂತ್ರವೇ ಲಯವಾಗಿ ಹೋಯಿತು. ಮತ್ತೆ ಆ ಎಲ್ಲ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಪ್ರವೇಶ ದೊರೆಯಿತು.[೫] ವಂದೇಮಾತರಂ ಹೋರಾಟದ ಸ್ಫೂರ್ತಿ ಎರಡು ವರ್ಷಗಳ ವರೆಗೆ ಇದ್ದು ಹೈದ್ರಾಬಾದ್ ಕರ್ನಾಟಕದ ಕಾಲೇಜುಗಳಲ್ಲಿಯೂ ಮುಂದುವರೆಯಿತು. ಹೋರಾಟದಲ್ಲಿಯೇ ಬಿ.ಎ., ಎಲ್.ಎಲ್.ಬಿ. ಮುಗಿಸಿದ ಚಂದ್ರಕಿಯವರು ಯಾದಗಿರಿಗೆ ವಾಪಾಸಾಗಿ ೧೯೪೧–೪೨ರಲ್ಲಿ ವಕೀಲಿ ವೃತ್ತಿ ಆರಂಭಿಸಿದರು.[೬]

ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಜೈಲು

ಇದೇ ವೇಳೆಗೆ ಮಹಾತ್ಮಾ ಗಾಂಧಿಜಿಯವರು 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂದು ಎಚ್ಚರಿಸಿ 'ಕರೋ ಯಾ ಮರೋ' (ಮಾಡು ಇಲ್ಲವೇ ಮಡಿ) ಎಂದು ಭಾರತೀಯರಿಗೆ ಕರೆಯಿತ್ತಿದ್ದರು. ಚಂದ್ರಕಿಯವರು ವಕೀಲಿ ವೃತ್ತಿಯಲ್ಲಿದ್ದರೂ ಇವರ ಒಲವೆಲ್ಲಾ ಅವರ ಸ್ವಾತಂತ್ರ್ಯ ಹೋರಾಟಕ್ಕೆ ಮೀಸಲಾಗಿದ್ದುದರಿಂದ ಸ್ವಾತಂತ್ರ್ಯ ಚಳವಳಿಗೆ ಮತ್ತೆ ಧುಮುಕಿದರು. ಹೈದರಾಬಾದಿನಿಂದ ಓದು ಮುಗಿಸಿ ಬರುವಾಗಲೇ ಇವರ ಮೇಲೆ ಪೊಲೀಸರ ಕಣ್ಣು ಬಿದ್ದಿತ್ತು. ನಿಜಾಮ ಸರ್ಕಾರ ಆರ್ಯ ಸಮಾಜ ಸಂಘಟನೆಯನ್ನು ವಿರೋಧಿಸುತ್ತಿತ್ತು. ಅಲ್ಲದೇ ದಸರಾದಂತಹ ಮೆರವಣಿಗೆಗಳನ್ನೂ ನಿಷೇಧಿಸಿತ್ತು.

ಚಂದ್ರಕಿಯವರು ಗಣೇಶ ಉತ್ಸವ, ದಸರಾದಂತಹ ಕಾರ್ಯಕ್ರಮಗಳ ಮೂಲಕ ಯುವಕರನ್ನು ಸಂಘಟಿಸುತ್ತಿದ್ದರು. ಹೀಗಾಗಿ ಸರಕಾರವು ೧೯೪೨ರಲ್ಲಿ ಇವರನ್ನು ಎರಡು ತಿಂಗಳ ಕಾಲ ಯಾದಗಿರಿಯ ಜೈಲಿನಲ್ಲಿರಿಸಿತು. ಆಮೇಲೆ ೧೫ ದಿನಗಳ ಕಾಲ ಕಲಬುರ್ಗಿಯ ಜೈಲಿನಲ್ಲಿ ವಿಚಾರಣಾಧೀನ ಕೈದಿಯನ್ನಾಗಿರಿಸಿತು. ಇವರ ಮೇಲೆ ಇದ್ದ ಆರೋಪಗಳೆಂದರೆ ದಸರಾ ಸಮಯದಲ್ಲಿ ಆರ್ಯಸಮಾಜ ಸಂಘಟಿಸಿದ್ದು ಮತ್ತು ಸರ್ಕಾರದ ವಿರುದ್ಧ ದಸರಾ ಮೆರವಣಿಗೆಯನ್ನು ನಡೆಸಿದ್ದು. ಆರ್ಯ ಸಮಾಜದವರು ಆ ದಿನ ತ್ರಿರಂಗಿ ಧ್ವಜ ಹಾರಿಸಿದ್ದರು. ಅದರ ಫೋಟೋ ಚಂದ್ರಕಿಯವರ ವಕೀಲರಿಗೆ ಲಭ್ಯವಾಗಿತ್ತು. ಅದರಲ್ಲಿ ಎಲ್ಲಿಯೂ ಚಂದ್ರಕಿಯವರು ಕಾಣುತ್ತಿರಲಿಲ್ಲ. ನ್ಯಾಯಾಧೀಶರಿಗೆ ವಕೀಲರು ಆ ಫೋಟೋ ತೋರಿಸಿ ತನ್ನ ಕಕ್ಷಿದಾರನ ಮೇಲೆ ಸುಳ್ಳು ಆರೋಪ ಹೊರಿಸಲಾಗಿದೆ ಎಂದು ವಾದಿಸಿದರು. ಆರೋಪ ಸಾಬೀತಾಗದೆ ನ್ಯಾಯಾಲಯವು ಅವರನ್ನು ಬಿಡುಗಡೆಗೊಳಿಸಿತು.[೭]

ಕಲಬುರ್ಗಿ ಜೈಲಿನಲ್ಲಿದ್ದಾಗ ಧರ್ಮವೀರ ನೆಲೋಗಿ (ಇವರು ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಧರ್ಮಸಿಂಗ್ ಅವರ ಅಣ್ಣ) ಅವರ ಪರಿಚಯವಾಗಿತ್ತು. ಧರ್ಮವೀರರೂ ಸ್ವಾತಂತ್ರ್ಯ ಹೋರಾಟಗಾರರು. ಬಿಡುಗಡೆಯಾದ ನಂತರ ಚಂದ್ರಕಿಯವರು ಮತ್ತು ಧರ್ಮವೀರ ಅವರಿಬ್ಬರೂ ಹಳ್ಳಿ ಹಳ್ಳಿಗಳಿಗೆ ಹೋಗಿ ಸಭೆ ಸಮಾರಂಭಗಳನ್ನು ನಡೆಸಿ ಭಾಷಣ ಮಾಡಿ ಯುವಜನತೆ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸುವಂತೆ ಕರೆಯಿತ್ತರು. ಅವರು ಚಿತಾಪುರ, ಚಿಂಚೋಳಿಗಳಿಗೂ ಹೋಗುತ್ತಿದ್ದರು.[೮]

ಮತ್ತೊಮ್ಮೆ ಬಂಧನ (೧೯೪೬)

ಜಗನ್ನಾಥ ಚಂದ್ರಕಿಯವರು ಕರ್ನಾಟಕ ಪರಿಷತ್ತಿನ ಸದಸ್ಯರೂ ಆಗಿದ್ದರು. ೧೯೪೬ರಲ್ಲಿ ಯಾದಗಿರಿಯಲ್ಲಿ ನಡೆದ ಪರಿಷತ್ತಿನ ಸಮ್ಮೇಳನದಲ್ಲಿ ಇವರು ಸ್ವಾಗತಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದರು. ಇವರ ಚಟುವಟಿಕೆಗಳನ್ನು ಕಂಡ ಪೊಲೀಸರು ಇವರನ್ನು ಬಂಧಿಸಿದರು. ಇವರಿಗೆ ಹದಿನಾರು ತಿಂಗಳ ಜೈಲು

ಶಿಕ್ಷೆಯಾಯಿತು. ಇವರನ್ನು ಪೊಲೀಸ್ ಕಾರ್ಯಾಚರಣೆಯ ನಂತರವೇ ಬಿಡುಗಡೆಗೊಳಿಸಲಾಯಿತು.[೯] ಹೈದ್ರಾಬಾದ್ ಕರ್ನಾಟಕದ ವಿಮೋಚನೆಯು ರಾಷ್ಟ್ರದ ಸ್ವಾತಂತ್ರ್ಯ ಹೋರಾಟಕ್ಕಿಂತ ಭಿನ್ನವಾದ ನೆಲೆಯಲ್ಲಿದ್ದುದು ಸತ್ಯ. ಇಲ್ಲಿ ಒಂದೆಡೆ ಸರಕಾರ, ಇನ್ನೊಂದೆಡೆ ಸರ್ಕಾರದಂತೆಯೇ ವರ್ತಿಸುತ್ತಿದ್ದ ರಜಾಕಾರರ ತಂಡದ ಕಿರುಕುಳಗಳ ಮಧ್ಯೆ ಸ್ವಾತಂತ್ರ್ಯ ಹೋರಾಟಗಾರರು ಹೋರಾಡಬೇಕಾದ ಸಂಕಷ್ಟ ಸ್ಥಿತಿ ದೇಶಪ್ರೇಮಿಗಳದ್ದಾಗಿತ್ತು. ಅದೆಲ್ಲವನ್ನು ಎದುರಿಸಿದ ಜಗನ್ನಾಥರಾವ್ ಚಂಡ್ರಿಕಿಯವರಂತಹ ಸಾವಿರಾರು ಹೋರಾಟಗಾರರು ತಮ್ಮ ಗುರಿಯನ್ನು ಸಾಧಿಸಿ ಹೈದ್ರಾಬಾದ್ ಕರ್ನಾಟಕವನ್ನು ವಿಮೋಚನೆಗೊಳಿಸಿದರು. ೧೯೪೮ರಿಂದ ೧೯೫೬ರವರೆಗೆ ಆಗಿನ ಹೈದ್ರಾಬಾದ್ ರಾಜ್ಯಕ್ಕೆ ಸೇರಿದ್ದ ಹೈದ್ರಾಬಾದ್ ಕರ್ನಾಟಕ ೧೯೫೬ ನವೆಂಬರ್ ೧ರಂದು ಕರ್ನಾಟಕ ಏಕೀಕರಣಗೊಂಡಾಗ ಕರ್ನಾಟಕ ರಾಜ್ಯಕ್ಕೆ ಸೇರಿತು.

[ಈ ಲೇಖನ ಸಿದ್ಧಪಡಿಸುವಾಗ ಹಲವು ಮಾಹಿತಿಗಳನ್ನೊದಗಿಸಿದ ಡಾ. ಪಿ.ನಾಗಭೂಷಣಗೌಡರಿಗೆ ಕೃತಜ್ಞತೆಗಳು.]

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಎಸ್.ಆರ್.ಮಣೂರು., **ಹೈದ್ರಾಬಾದ್ ಕರ್ನಾಟಕ ವಿಮೋಚನೆ**, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ, ೨೦೦೬, ಪುಟ ೧೨-೧೩. ರಜಾಕಾರರು ಎಂದರೆ 'ಮಜ್ಲಿಸ್-ಎ-ಇತ್ತೆಹಾದ್-ಉಲ್-ಮುಸಲ್ಮೀನ್' ಸಂಘಟನೆಯ ಸ್ವಯಂಸೇವಕರು. ಸಾಹಿತ್ಯಿಕವಾಗಿ 'ರಜಾಕಾರ' ಪದದ ಅರ್ಥ ದೇವರ ಸೇವೆಗೆ ತನ್ನನ್ನು ತಾನು ಅರ್ಪಿಸಿಕೊಂಡವನು ಎಂದು. ಆದರೆ ಹೈದ್ರಾಬಾದಿನಲ್ಲಿ ಅವರ ವರ್ತನೆ ಇದಕ್ಕೆ ವ್ಯತಿರಿಕ್ತವಾಗಿತ್ತು.

೨. ಡಾ. ಸ್ವಾಮಿರಾವ್ ಕುಲಕರ್ಣಿ., **ಜಗನ್ನಾಥರಾವ್ ಚಂಡ್ರಿಕಿ**, ಚೇತನ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್, ಮೈಸೂರು, ೨೦೦೬, ಪುಟ ೩.

೩. ಅದೇ. ಪುಟ ೭. ಬಿ.ಎ. ವಿದ್ಯಾರ್ಥಿಗಳು ಕೂಡ ಗಣಿತ ತೆಗೆದುಕೊಳ್ಳಬಹುದಾಗಿತ್ತು. ತೀರಾ ಇತ್ತೀಚಿನವರೆಗೂ ಕರ್ನಾಟಕ ವಿ.ವಿ.ಯಲ್ಲೂ ಈ ಅವಕಾಶವಿದ್ದುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

೪. ದೇಸಾಯಿ ವಿ.ಹೆಚ್., **ಫ್ರಮ್ ವಂದೇಮಾತರಂ ಟು ಜನಗಣಮನ**, ಭಾರತೀಯ ವಿದ್ಯಾಭವನ, ಮುಂಬೈ, ೧೯೯೦, ಪುಟ ೨.

೫. ಕೆ.ಎಂ.ಮುನ್ಷಿ, **ದಿ ಎಂಡ್ ಆಫ್ ಆ್ಯನ್ ಎರಾ**, ಭಾರತೀಯ ವಿದ್ಯಾಭವನ, ಮುಂಬೈ, ೧೯೯೦, ಪುಟ ೨೫-೨೬.

೬. ನಾಗಭೂಷಣಗೌಡ ಪಿ., **ಪ್ರಿನ್ಸ್ಲೀ ಸ್ಟೇಟ್ಸ್ ಆಫ್ ಮೈಸೂರ್ ಆ್ಯಂಡ್ ಹೈದ್ರಾಬಾದ್** (೧೯೩೯-೫೬) ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೦.

೭. ಡಾ. ಸೂರ್ಯನಾಥ ಯು. ಕಾಮತ(ಸಂ)., **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು** ತೃತೀಯ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ೯೨೦-೯೨೯.

೮. ಗೋಪಾಲರಾವ್ ಹೆಚ್.ಜಿ., **ಹೈದ್ರಾಬಾದ್ ಮುಕ್ತಿ ಸಂಘರ್ಷ**, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೨೦೦೧, ಪುಟ ೫೧.

೯. ಬಸವರಾಜ ಪೊಲೀಸ ಪಾಟೀಲ (ಸಂ.) **ಬಿಡುಗಡೆ**, ಅಮರ ಪ್ರಕಾಶನ, ಗುಲಬರ್ಗಾ, ೨೦೦೨, ಪುಟ ೩೧೧-೩೨೦. ಯಾದಗಿರಿಯಲ್ಲಿ ಕರ್ನಾಟಕ ಪರಿಷತ್ತಿನ ಸಮ್ಮೇಳನ ಶ್ರೀ ಕಕ್ಕೇರಿ ಹಣಮಂತರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ದಾವಣಗೆರೆ ಜಿಲ್ಲೆಯಲ್ಲಿನ ಸ್ವಾತಂತ್ರ್ಯ ಚಳವಳಿಯಲ್ಲಿ ಎನ್.ಎಂ. ಚಂದ್ರಶೇಖರಯ್ಯನವರ ಪಾತ್ರ

ಕೃಷ್ಣಮೂರ್ತಿ ಸಿ.ಎನ್.*

ಹರಿಹರ ತಾಲ್ಲೂಕಿನ ಕಮಲಾಪುರ ಗ್ರಾಮದ ಸ್ವಾತಂತ್ರ್ಯ ಹೋರಾಟದ ಪಿತಾಮಹನೆಂದೇ ಕರೆಯಲ್ಪಟ್ಟಿರುವ ಎನ್.ಎಂ. ಚಂದ್ರಶೇಖರಯ್ಯನವರು ಧೈರ್ಯ, ದೇಶಪ್ರೇಮ, ಸರಳತೆ, ಹೋರಾಟದ ಮನೋಭಾವ, ಸಮಾಜಸೇವೆಗೆ ಹೆಸರಾದವರು. ಇವರು ನಂದಿಗಾವಿ ಗ್ರಾಮದವರಾಗಿದ್ದು, ಹರಿಹರದ ತಾಲ್ಲೂಕಿನ ಎಲ್ಲಾ ಗ್ರಾಮಗಳೊಂದಿಗೆ ಇವರಿಗೆ ಸಂಬಂಧವಿತ್ತು. ಇವರು ರಾಷ್ಟ್ರೀಯ ನಾಯಕರಾದ ಎಸ್. ನಿಜಲಿಂಗಪ್ಪನವರ ಸಮಕಾಲೀನವರಾಗಿದ್ದು, ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಇವರು ಹೋರಾಟ ನಡೆಸಿದ್ದಾರೆ. ಎನ್.ಎಂ. ಚಂದ್ರಶೇಖರಯ್ಯನವರು ಬಸಯ್ಯ ಮತ್ತು ಚನ್ನಬಸಮ್ಮ ಎಂಬ ದಂಪತಿಗಳಿಗೆ ಹಿರಿಯ ಮಗನಾಗಿ ದಿನಾಂಕ: ೨೧/೦೬/೧೯೧೭ರಂದು ಜನಿಸಿದರು. ಇವರ ಪೂರ್ಣ ಹೆಸರು ನಂದಿಗಾವಿ ಮಠದ ಚಂದ್ರಶೇಖರಯ್ಯ, ಇವರಿಗೆ ಕೊಟ್ರಬಸಯ್ಯ, ಸದಾಶಿವಾನಂದಯ್ಯ, ಇಬ್ಬರು ಸಹೋದರರು ಮತ್ತು ಅನ್ನಪೂರ್ಣಮ್ಮ ಎಂಬ ಒಬ್ಬ ಸಹೋದರಿ ಇದ್ದಾರೆ.

ಎನ್.ಎಂ. ಚಂದ್ರಶೇಖರಯ್ಯನವರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ದೇಶಪ್ರೇಮ ರಾಷ್ಟ್ರಾಭಿಮಾನ, ರಾಷ್ಟ್ರೀಯ ನಾಯಕರ ಭಾಷಣಗಳಿಂದ ಮತ್ತು ಕೆಲವು ರಾಷ್ಟ್ರೀಯ ನಾಯಕರ ಪರಿಚಯದಿಂದ ಪ್ರೇರಣೆಗೊಂಡು, ಶಾಲಾ ಕಾಲೇಜು ತೊರೆದು ಚಳವಳಿಗೆ ಧುಮುಕಿದರು. ಆ ಕಾಲಕ್ಕೆ ಪ್ರೌಢಶಾಲೆ ಬಂದು ಮಾಡಿಸಿದ ಸಾಹಸಿಗರು ಎನ್.ಎಂ. ಚಂದ್ರಶೇಖರಯ್ಯನವರು. ಹರಿಹರ, ದಾವಣಗೆರೆ ಎರಡು ಕ್ಷೇತ್ರ ಪ್ರತಿನಿಧಿಸಿ ವಿದ್ಯಾರ್ಥಿಗಳ ತಂಡದ ನಾಯಕರಾಗಿ ಹೋರಾಡಿದವರು. ಹರಿಹರ ತಾಲ್ಲೂಕಿನಲ್ಲಿ ನೂರಾರು ಜನರ ಗುಂಪು ಕಟ್ಟಿದರು. ೩೧ ಜನ ಕಟ್ಟಾಳುಗಳೊಂದಿಗೆ ಸುಭಾಸ ಚಂದ್ರ ಬೋಸರ ತಂಡದ ಮುನ್ನಡೆ ಸಾಧಿಸಿದರು.

ಸುಭಾಷ್ ಚಂದ್ರಬೋಸ್ ಸಂಘ ಸ್ಥಾಪನೆ

ಸುಭಾಷ್ ಚಂದ್ರಬೋಸ್ರವರ ಪರಮ ಗುರಿಯಾದ “freedom is the song of my soul” (ಸ್ವಾತಂತ್ರ್ಯವೇ ನನ್ನೆದೆಯ ಹಾಡು) “give me blood I will regain your freedom back to you” (ನನಗೆ ರಕ್ತ ಕೊಡಿ, ನಿಮ್ಮ ನಾನು ಸ್ವಾತಂತ್ರ್ಯ ಕೊಡಿಸುತ್ತೇನೆ) ಎಂಬ ಘೋಷಣೆಯಂತೆ, ಸುಭಾಷರು ಭಾರತದಲ್ಲಿ ತಮ್ಮ ಪ್ರಭಾವವನ್ನು ಬೀರಿ ಅನೇಕ ಯುವಕರನ್ನು ತಮ್ಮ ಗಮನ ಸೆಳೆದಿದ್ದಾರೆ. ಅದೇ ರೀತಿಯಲ್ಲಿ ೧೯೪೨ರಲ್ಲಿ ಕರ್ನಾಟಕದ ಹಾವೇರಿ ಜಿಲ್ಲೆಗೆ ಕೆ.ಎಫ್. ಪಾಟೀಲ, ಮೈಲಾರ ಮಹಾದೇವಪ್ಪ, ಮೆಣಸಿನಹಾಳು ತಿಮ್ಮನಗೌಡರು, ಸಂಗೂರು ಕರಿಯಪ್ಪ ಇವರ ಮಾತಿಗೆ ಒಗ್ಗೊಟ್ಟು ಹಾವೇರಿ ಜಿಲ್ಲೆಯ ಬ್ಯಾಡಗಿ ನಗರಕ್ಕೆ “೦೧-೦೨-೧೯೪೨”ರಲ್ಲಿ ಆಗಮಿಸಿದ[೧] ಸಂದರ್ಭದಲ್ಲಿ ಆ ಭಾಗದ ಅನೇಕ ಯುವಕರ ಗುಂಪುಗಳು ಅವರನ್ನು ಭೇಟಿ ಮಾಡಿದ್ದಾರೆ. ನಂತರ ಸಂಜೆಯ ವೇಳೆಗೆ ರಾಣೇಬೆನ್ನೂರಿಗೆ ಬಂದ ಸಂದರ್ಭದಲ್ಲಿ ಎನ್.ಎಂ. ಚಂದ್ರಶೇಖರಯ್ಯನವರು. ಮೆಣಸಿನ ಹಾಳ ತಿಮ್ಮನಗೌಡರು ಮತ್ತು ಕೆ.ಎಫ್. ಪಾಟೀಲರ ಜೊತೆಯಲ್ಲಿ ಸುಭಾಷ್ ಚಂದ್ರಬೋಸ್‌ನವರನ್ನು ಭೇಟಿ ಮಾಡಿ ಅವರ ಮಾತುಗಳಿಂದ ಮತ್ತು ಸುತ್ತಮುತ್ತಲಿನ ಗ್ರಾಮಗಳಿಂದ ಯುವಕರನ್ನು ಗುಂಪು ಕಟ್ಟಿ ೩೧ ಜನ ಕಟ್ಟಾಳುಗಳಿಂದ ಸುಭಾಷ್ ಚಂದ್ರಬೋಸ್ ಸಂಘವನ್ನು ಸ್ಥಾಪಿಸಿದರು.[೨]

ಸುಭಾಷ್ ಚಂದ್ರ ಬೋಸ್ ಸಂಘದ ಉದ್ದೇಶಗಳು:

* ರಾಷ್ಟ್ರಾಭಿಮಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು.
* ಸಾರಾಯಿ ಅಂಗಡಿಗಳ ಧ್ವಂಸ.
* ಅಂಚೆ ಕಛೇರಿಗಳ ಮತ್ತು ಅಂಚೆ ಪೆಟ್ಟಿಗೆಗಳ ನಾಶ.
* ರಸ್ತೆ ಮತ್ತು ಸೇತುವೆಗಳನ್ನು ನಾಶಪಡಿಸುವುದು.
* ರೈಲು ತಡೆ ನಡೆಸುವುದು ಮತ್ತು ರೈಲು ಹಳಿಗಳನ್ನು ಕೀಳುವುದು.
* ಪೊಲೀಸ್ ಠಾಣೆಗೆ ಮತ್ತುಗೆ ಹಾಕಿ ಬಂದೂಕುಗಳನ್ನು ವಶಪಡಿಸಿಕೊಳ್ಳುವುದು.

* ಸಂಶೋಧನ ವಿದ್ಯಾರ್ಥಿ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

*   ವಿದೇಶಿ ವಸ್ತುಗಳನ್ನು ಸುಟ್ಟು ಹಾಕುವುದು.

*   ಸರ್ಕಾರಿ ಕಛೇರಿಗಳ ಮೇಲೆ ಧ್ವಜವನ್ನು ಹಾರಿಸುವುದು.

ಈ ಸಂಘದ ಪ್ರಮುಖ ಉದ್ದೇಶವಾಗಿದೆ. ಈ ಎಲ್ಲಾ ಉದ್ದೇಶಗಳಿಂದ ದಾವಣಗೆರೆ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯಲ್ಲಿ ಪಾತ್ರ ನಿರ್ವಹಿಸಿತು.

೧೯೩೯ರ ಅರಣ್ಯ ಸತ್ಯಾಗ್ರಹ

ಮೈಸೂರು ಸಂಸ್ಥಾನದ ಚಿತ್ರದುರ್ಗ ಜಿಲ್ಲೆಯ ತುರುವನೂರು ಎಂಬ ಗ್ರಾಮದಲ್ಲಿ ೧೪ ಸೆಪ್ಟಂಬರ್ ೧೯೩೯ರಂದು ಬಳ್ಳಾರಿ ಸಿದ್ದಮ್ಮ ಮತ್ತು ನಾಗರತ್ನಮ್ಮ ಹಿರೇಮಠ್,[೩] ಎಸ್. ನಿಜಲಿಂಗಪ್ಪ, ವಾಸುದೇವರಾವ್, ಚಿದಾನಂದಪ್ಪ, ಉಗ್ರಪ್ಪ, ಎನ್.ಎಂ. ಚಂದ್ರಶೇಖರಯ್ಯ, ಕೆ.ಹೆಚ್. ಪಾಟೀಲ್ ಮತ್ತು ಚಿತ್ರದುರ್ಗದ ಸ್ವಾತಂತ್ರ್ಯ ಹೋರಾಟದ ಸಂಘಟನೆಯ ಯೋಧರು ಭಾಗವಹಿಸಿದರು. ನಂತರ ಈ ಸತ್ಯಾಗ್ರಹ ಚಿತ್ರದುರ್ಗ ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಪ್ರಮುಖವಾಗಿ ದಾವಣಗೆರೆ, ಜಗಳೂರು, ಹರಿಹರ ತಾಲ್ಲೂಕಿನಲ್ಲಿ ಮತ್ತು ತಾಲ್ಲೂಕಿನ ಗ್ರಾಮಗಳಲ್ಲಿ ಹರಡಲಾಯಿತ್ತು. ಅದ್ದರಿಂದ ಜಗಳೂರಿನ ಭಾಗದ ಗ್ರಾಮಗಳಾದ ಅಸಗೋಡು, ಬಿಳಚೂಡು, ಕಣ್ಣಕೋಪ್ಪೆ, ಅಣಜಿ, ಅರಸಿಕೇರೆ, ಉಚ್ಚಂಗಿದುರ್ಗ, ಕನಕನ ಬಸಾಪುರ, ಕಂಚಿಕೆರೆ, ಬೇಡಿಗೆರೆ ಮತ್ತು ಹರಪನಹಳ್ಳಿಯ ಭಾಗದ ಗ್ರಾಮಗಳಾದ ಮಾಯಕೊಂಡ, ಹುಚ್ಚವ್ವನಹಳ್ಳಿ, ಹನುಮನಹಳ್ಳಿ, ಕೊಡಗನೂರು, ಬಾಡ, ಓಂಟಿಹಾಳ್, ತೊಗಲೇರಿ, ಗೂಪನಾಳು, ಬಾತಿ. ಹರಿಹರ ಭಾಗದ ಗ್ರಾಮಗಳಾದ ಸಾರಥಿ, ಕೊಂಡಜ್ಜಿ, ದಿಟ್ಟೂರು, ಬುಳ್ಳಾಪುರ, ಗುತ್ತೂರು, ನಂದಿಗಾವಿ, ಕಮಲಾಪುರ, ಇಂಗಳಗೊಂದಿ, ಎಳೆಹೊಳೆ, ಗೋವಿನಹಾಳ್, ಕೊಕ್ಕನೂರು, ಹಿಂಡಸಘಟ್ಟ ಗುಡ್ಡದ ತಿಮ್ಮನಕಟ್ಟೆ, ಕೂಮರನಹಳ್ಳಿ, ಹಾಲಿವಾಣ, ಕೊಪ್ಪ, ಮೇಲೆಬೆನ್ನೂರು. ಈ ಎಲ್ಲಾ ಗ್ರಾಮಗಳಲ್ಲಿ ಈಚಲು ಮರಗಳನ್ನು ಕಡಿಯುವುದು ಮತ್ತು ಅಲ್ಲಿ ಕಂಡುಬರುವಂತ ಬೆಲೆ ಬಾಳುವಂತ ಮರ ಮುಟ್ಟುಗಳನ್ನು ಬೆಂಕಿ ಹಚ್ಚಿ ಸುಡಲಾಗುತ್ತಿತ್ತು. ನಂತರ ಮುಂದೆ ಹೊನ್ನಾಳಿ ತಾಲ್ಲೂಕಿನಲ್ಲಿ ಕಂಡುಬರುವಂತ ಬೆಟ್ಟ ಗುಡ್ಡಗಳಲ್ಲಿಯು ಸಹ ಈಚಲು ಮರವನ್ನು ಬೆಂಕಿ ಹಾಕಿ ಸುಡುವ ಮೂಲಕ ಯಾವುದೇ ಬೆಲೆ ಬಾಳುವ ವಸ್ತುಗಳ ಮತ್ತು ಮದ್ಯಪಾನ ತಯಾರಿಸಬಲ್ಲಂತಹ ಮರಗಳನ್ನು ನಾಶ ಮಾಡಲಾಯಿತು. ಜಮೀನಿನಲ್ಲಿ ಮತ್ತು ಬರುವ ಬೆಳೆಗಳನ್ನು ನಾಶ ಪಡಿಸಲಾಯಿತು.

ಇಂಗಳಗೊಂದಿಯ ಗ್ರಾಮದಲ್ಲಿನ ಸಮಾವೇಶ

ಇಂಗಳಗೊಂದಿ ಹರಿಹರ ತಾಲ್ಲೂಕಿನ ನದಿ ಬಯಲಿನಲ್ಲಿರುವ ಒಂದು ಸಣ್ಣ ಗ್ರಾಮವಾಗಿದ್ದು, ಇದು ಬೇಡರ ಜನಾಂಗದ ಅಥವಾ ಬುಡಕಟ್ಟು ಜನಾಂಗದ ಗ್ರಾಮವಾಗಿದ್ದು, ಇಂಗಳಗೊಂದಿಯಲ್ಲಿ ಕ್ರಿ.ಶ. ೧೯೦೦ರಲ್ಲಿ ಬ್ರಿಟಿಷರು ಹೆಚ್.ಬಿ. ಪಟೇಲ್ ಎಂಬವರನ್ನು ಈ ಗ್ರಾಮದ ಕಂದಾಯ ವಸೂಲಿ ಮಾಡಲು ಪಟೇಲರನ್ನಾಗಿ ನೇಮಿಸಿದರು. ೧೯೨೦ರ ನಂತರ ಭಾರತದಲ್ಲಿ ಗಾಂಧಿಯುಗದಿಂದ ಪ್ರಾರಂಭವಾದ ಚಳವಳಿಗಳು ಈ ಗ್ರಾಮದಲ್ಲಿ ಪ್ರಭಾವ ಬೀರಲು ಪ್ರಾರಂಭಿಸಿದವು. ಆದರಿಂದ ಸಣ್ಣಪುಟ್ಟ ದಂಗೆಗಳು ಕಂಡು ಬರುತ್ತಿದವು, ೧೯೩೪ರ ನಂತರದಲ್ಲಿ ಗಾಂಧಿ ತತ್ವಗಳು ಪಾಲನೆಗೊಂಡವು ನಂತರದಲ್ಲಿ ೧೯೩೯ರಲ್ಲಿ ಸುಭಾಷ್ ಚಂದ್ರಬೋಸ್‌ರ ಅರಣ್ಯ ಸತ್ಯಾಗ್ರಹದಿಂದ ಪ್ರಭಾವಗೊಂಡು, ೧೯೪೦ರ ವೇಳೆಗೆ ರಾಷ್ಟ್ರಾಭಿಮಾನದಿಂದ ಕಂದಾಯ ಬಹಿಷ್ಕಾರ್ ಮಾಡಲು ಪ್ರಾರಂಭಿಸಿದರು. "ಅಗ್ರ ಬ್ರಿಟಿಷ್ ಸರ್ಕಾರಕ್ಕೆ ಕಂದಾಯ ನೀಡುವುದಿಲ್ಲ ಆದರೆ ಭಾರತೀಯರು ಸರ್ಕಾರವನ್ನು ಸ್ವಾತಂತ್ರ್ಯವಾಗಿ ನಡೆಸಿದರೆ ಮಾತ್ರ ಕಂದಾಯ ನೀಡುತ್ತೇವೆ." ಎಂದು ಇಂಗಳಗೊಂದಿಯ ಜನರು ಬಹಿಷ್ಕಾರ ಮಾಡಿದರು. ನಂತರ ೧೯೪೧ ಜನವರಿ ೧೪, ೧೫ರಂದು ಸಮಾವೇಶವನ್ನು ನಡೆಸಲಾಗಿದೆ. ಸಮಾವೇಶದ ಅಧ್ಯಕ್ಷತೆಯನ್ನು ಎನ್.ಎಂ. ಚಂದ್ರಶೇಖರಯ್ಯನವರು ವಹಿಸಿಕೊಂಡು. ಕೆ.ಹೆಚ್. ಪಾಟೀಲರು ಈ ಒಂದು ಸಮಾವೇಶದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು ಮತ್ತು ಈ ಸಮಾವೇಶಕ್ಕೆ ನಿಟ್ಟುವಳಿಯ ಬುಡಕಟ್ಟು ಕುಟುಂಬದ ಮಹಿಳೆ "ಹೊನ್ನಿನ ಹೊನ್ನಮ್ಮ" ಎಂಬುವರು ಮೆಣಸಿನಹಾಳು ತಿಮ್ಮನಗೌಡರ ಮಾತಿನಿಂದ ಸಮಾವೇಶಕ್ಕೆ ಬೇಕಾದ ಊಟದ ವ್ಯವಸ್ಥೆಯ ಖರ್ಚನ್ನು ನೋಡಿಕೊಂಡಿದರು ಎಂಬುದನ್ನು ಎನ್.ಎಂ. ಚಂದ್ರಶೇಖರಯ್ಯನವರು ಸ್ಮರಿಸುತ್ತಾರೆ.[೪] ಈ ಸಮಾವೇಶದಿಂದ ದಂಗೆ ಎದ್ದ ಜನರು ಬ್ರಿಟೀಷರ ವಿರುದ್ಧವಾಗಿ ಧಿಕ್ಕರಿಸಿ ತಾವು ಬೆಳೆದ ಬೆಳೆಯನ್ನು ಪಕ್ಕದ ಬಾಂಬೆ ಪ್ರೆಸಿಡೆನ್ಸಿಯ ರಾಣಿಬೆನ್ನೂರು ನಗರದಲ್ಲಿ ಮಾರಾಟ ಮಾಡುತ್ತಿದರು ಅದರಿಂದ "ಕರ್ನಾಟಕದಲ್ಲಿ ಬ್ರಿಟೀಷರ ಕಂದಾಯದ ವಿರುದ್ಧ ಬಂಡಾಯ ಎದ್ದ ಪ್ರಪ್ರಥಮವಾಗಿ ಸ್ವಾತಂತ್ರ್ಯ ಘೋಷಿಸಿಕೊಂಡ ಬುಡಕಟ್ಟು ಗ್ರಾಮ ಎಂದು ಕರೆಯಲಾಗಿದೆ". ನಂತರ ೧೯೪೩ ಡಿಸೆಂಬರ್ ೨೨ರಂದು ಈ ಗ್ರಾಮಕ್ಕೆ ಭೇಟಿ ನೀಡಿದ್ದ "ಎಂ. ವೆಂಕಟಸ್ವಾಮಿ" ಎಂಬ ಪೋಲೀಸ್ ಇನ್‌ಸ್ಪೆಕ್ಟರ್‌ನ ಈ ಜನರಿಗೆ ಕಾನೂನು ರೀತಿಯಲ್ಲಿ ಕ್ರಮಕೈಗೊಳ್ಳಲಾಗುವುದು' ಎಂದಾಗ ಅಲ್ಲಿನ ಜನರು ಮರುದಿನ ರಾತ್ರಿ ಸಂಪೂರ್ಣವಾಗಿ ತಂಬಾಕು ಜಮೀನಿಗೆ ಬೆಂಕಿ ಹಚ್ಚಿ ಬ್ರಿಟೀಷರ ವಿರುದ್ಧ ಧಿಕ್ಕಾರ ಹಾಕಿರುವುದು ರೋಚಕ ಕಥೆಯಾಗಿದೆ.

೧೯೪೧ರ ಮೈಸೂರು ಕಾಂಗ್ರೆಸ್ ಅಧಿವೇಶನ

೧೯೪೧ರ ಏಪ್ರಿಲ್ ೦೮ರಲ್ಲಿ ಹರಿಹರದ ಹರ್ಲಾಪುರದಲ್ಲಿ ೪ನೇ ಮೈಸೂರು ಕಾಂಗ್ರೆಸ್ ಅಧಿವೇಶನ ನಡೆಯಿತು.

ವಾದರ ಅಧ್ಯಕ್ಷತೆಯನ್ನು ಪಿ.ಜೆ. ಸಿದ್ದಪ್ಪ, ಕಾರ್ಯದರ್ಶಿಗಳಾದ ಕೆ.ಎ. ವೆಂಕಟರಾಮಯ್ಯನವರು ಮತ್ತು ಅಧಿವೇಶನದ ಉದ್ಘಾಟನೆಯನ್ನು ಡಾ. ಬಾಬು ರಾಜೇಂದ್ರ ಪ್ರಸಾದರು ನೆರವೇರಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಎಸ್. ನಿಜಲಿಂಗಪ್ಪನವರು, ಕೋಶಾಧ್ಯಕ್ಷರಾಗಿ ಕಾಸಲ ಶ್ರೀನಿವಾಸ ಶೆಟ್ಟರು. ಎಸ್. ಕಾರ್ಯದರ್ಶಿಗಳಾಗಿ ವಾಸುದೇವರಾವ್ ಉಪಾಧ್ಯಕ್ಷರಾಗಿ ಮಾಗನೂರು ಬಸಪ್ಪ ಮತ್ತು ಬಳ್ಳಾರಿ ಸಿದ್ದಮ್ಮನವರು, ಸ್ವಯಂಸೇವಕರ ದಳಪತಿಗಳಾಗಿ ಮೌನೇಶ್ವರಪ್ಪ, ಎಸ್.ವೀರಬಸಪ್ಪ ಹಾಗೂ ಸ್ವಯಂ ಸೇವಕ ಶಿಬಿರಾರ್ಥಿಗಳ ನಾಯಕರಾಗಿ ಹಾಗೂ ಸೇವಾದಳದ ಮುಖ್ಯಸ್ಥರು ಎನ್.ಎಂ. ಚಂದ್ರಶೇಖರಯ್ಯ, ಜಿ.ಎಸ್. ದೀಕ್ಷಿತ್, ಎಂ. ಮಾಧವನಾಯಕ, ಕೆ.ಟಿ. ಜಂಬಣ್ಣನವರು, ಅಣಜಿ ಮಠದ ಕೊಟ್ರಯ್ಯ, ಕುಂಬಾರ ಈರಪ್ಪ, ಬಿ.ಕೊಟ್ರಪ್ಪ, ಗೌಡ್ರ ಸಿದ್ದಪ್ಪ, ದಶರಥಶಾಸ್ತ್ರಿ, ಟಿ. ಜಯದೇವಪ್ಪ, ಹೆಚ್. ಸಿದ್ದವೀರಪ್ಪ, ಸಂಗನಗೌಡ್ರು, ಸಿ.ವಿ. ಕೃಷ್ಣಮೂರ್ತಿ ಅವರು ಅಧಿವೇಶನಕ್ಕೆ ಸಾವಿರಾರು ಈಚಲು ಮರದ ಚಾಪೆಯನ್ನು ಒದಗಿಸಿದ್ದರು. ಈ ಎಲ್ಲಾ ಸ್ವಯಂ ಸೇವಕರು ಉಪಸಮಿತಿಗಳನ್ನು ಮಾಡಿ ೧೯೩೮ರ ಕಾಂಗ್ರೆಸ್ ಅಧಿವೇಶನವನ್ನು ಯಶಸ್ವಿಗೊಳಿಸಲಾಗಿದೆ ಮತ್ತು ಈ ಅಧಿವೇಶನದ ಬಗ್ಗೆ ಇನ್ನು ಹೆಚ್ಚಿನ ಸಂಶೋಧನೆ ಅದಲ್ಲಿ ಅದರ ಸಂಪೂರ್ಣವಾದ ಮಾಹಿತಿಯನ್ನು ಸಂಗ್ರಹಿಸಬಹುದು.

೧೯೪೨ರ ಆಗಸ್ಟ ೦೮ರಂದು ಕಾಂಗ್ರೆಸ್ ಮುಂಬಯಿಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯನ್ನು ಕೂಡಿಸಿ, ಕ್ವಿಟ್ ಇಂಡಿಯಾ ಚಳವಳಿಯನ್ನು ಸಂಘಟಿಸಲು ನಿರ್ಧರಿಸಿತು. ಆದರೆ ಮಹಾತ್ಮಗಾಂಧೀಜಿ ಮತ್ತು ಚಳವಳಿಯ ಪ್ರಮುಖ ನಾಯಕರನ್ನು ಸರ್ಕಾರವು ಬಂಧಿಸಿದ್ದರಿಂದ ಮಹಾತ್ಮ ಗಾಂಧೀಜಿಯವರು "ಬ್ರಿಟೀಷರೇ ಭಾರತವನ್ನು ಬಿಟ್ಟು ತೊಲಗಿ" ಎಂದು ಕರೆ ಕೊಟ್ಟರು. ಆಗ ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯನ್ನು ಹರಿಹರದಲ್ಲಿ ಜನಸಾಮಾನ್ಯರು, ವಿದ್ಯಾರ್ಥಿಗಳು, ಕಾರ್ಮಿಕರುಗಳು, ರೈತರು ಪ್ರಮುಖವಾಗಿ ಪಾತ್ರವಹಿಸಿ ಹೋರಾಟವನ್ನಾರಂಭಿಸಿದರು, ಕ್ರಾಂತಿಕಾರಿಗಳಾಗಿದ್ದ ಎನ್.ಎಂ. ಚಂದ್ರಶೇಖರಯ್ಯ, ಜಿ. ಗೋವಿಂದಪ್ಪ, ಸಿದ್ದಪ್ಪ, ಚನ್ನವೀರಪ್ಪ, ಪಿ. ಬಸವನಗೌಡ್ರು, ಕೊಟಗಿ ಸಿದ್ದಲಿಂಗಪ್ಪ, ಕೆ.ಹೆಚ್. ಪಟೇಲರು ಮುಂತಾದವರು ಅನೇಕ ನಾಯಕರಿಂದ ಹರಿಹರದಲ್ಲಿ ಈ ಚಳವಳಿಯು ಅನೇಕ ವಿಧ್ವಂಸಕ ಕೃತ್ಯಗಳನ್ನು ಮತ್ತು ಹಿಂಸಾತ್ಮಕವಾಗಿ ಹೋರಾಟ ಮಾಡುತ್ತಾ ರೈಲು ಕಂಬಗಳನ್ನು ಕೀಳುವುದು, ನಿಲ್ದಾಣಗಳಿಗೆ ಬೆಂಕಿ ಹಚ್ಚುವುದು, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು, ಸರ್ಕಾರಿ ಕಛೇರಿಗಳಿಗೆ ಬೆಂಕಿ ಇಕ್ಕುವುದು, ಸರ್ಕಾರಿ ಅಧಿಕಾರಿಗಳು ಸಂಗ್ರಹಿಸಿದ ಕಂದಾಯದ ಹಣವನ್ನು ಲೂಟಿ ಮಾಡುವುದು, ಅಂಚೆ ಸೇವೆಗೆ ಅಡ್ಡಿ ಮಾಡುವುದು, ಶಾಲೆಗಳಿಗೆ ಹೋಗುವ ಹಾಗೆ ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟು ಚಳವಳಿಯಲ್ಲಿ ಪಾಲ್ಗೊಳ್ಳುವುದು, ಸರ್ಕಾರಿ ಕಛೇರಿಗಳ ಮೇಲೆ ಧ್ವಜಾರೋಹಣ ಮಾಡುವುದು, ಪೊಲೀಸರ ಮೇಲೆ ಹಲ್ಲೆ ಮುಂತಾದ ವಿಧ್ವಂಸಕ ಕೃತ್ಯಗಳನ್ನು ನಡೆಸಲಾಯಿತು ಈ ಚಳವಳಿಯನ್ನು ಹತ್ತಿಕ್ಕಲು ಚಳವಳಿಯ ಹೋರಾಟಗಾರರನ್ನು ಬಂಧಿಸಲಾಯಿತು ಮತ್ತು ಲಾಠಿ ಚಾರ್ಜ್ ನಡೆಸಲಾಯಿತು. ಈ ಸಂದರ್ಭದಲ್ಲಿ ಅನೇಕ ಜನರು ಗಾಯಗೊಂಡರು. ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಹೋರಾಟ ಮಾಡಿ ಹರಿಹರದಿಂದ ಪೊಲೀಸರಿಗೆ ಸಿಗದೆ ಎನ್.ಎಂ. ಚಂದ್ರಶೇಖರಯ್ಯನವರು ಪಲಾಯನಗೊಂಡರು.

ಹರಿಹರ ತಾಲ್ಲೂಕಿನಲ್ಲಿ ಎರಡು ಗುಂಪುಗಳಾಗಿ ಸ್ವಾತಂತ್ರ್ಯ ಹೋರಾಟವನ್ನು ಮಾಡಲಾಗಿದೆ.

* ಹರಿಹರ ನಗರದ ಗುಂಪು.
* ಹರಿಹರ ತಾಲ್ಲೂಕಿನ ಗ್ರಾಮೀಣ ಗುಂಪು.

ಹರಿಹರ ತಾಲ್ಲೂಕಿನ ಗ್ರಾಮಾಂತರದ ಗುಂಪಿನ ನಾಯಕತ್ವವನ್ನು ಎನ್.ಎಂ. ಚಂದ್ರಶೇಖರಯ್ಯನವರು ವಹಿಸಿಕೊಂಡಿದರು. ಇವರು ೧೯೪೨ರಲ್ಲಿ ಹರಿಹರ ತಾಲ್ಲೂಕು ಕಛೇರಿಯ ಮೇಲೆ ಹರಿಹರದ ಗ್ರಾಮಾಂತರ ಪ್ರದೇಶಗಳಾದ ಮಲೇಬೆನ್ನೂರು, ಕೊಕ್ಕನೂರು, ಕಮಲಾಪುರ, ಭಾನುವಳ್ಳಿ, ಹೊಳೆಸಿರಿಗೆರೆ, ಇಂಗಳಗೊಂದಿ, ಧೋಳೆಹೊಳೆ, ಬಿಳಸನೂರು, ನಂದಿಗಾವಿ, ರಾಜನಹಳ್ಳಿ ಇನ್ನು ಮುಂತಾದ ಗ್ರಾಮಗಳಿಂದ ಜನರನ್ನು ಸಂಘಟನೆ ಮಾಡಿಕೊಂಡು ಬಂದು ಹರಿಹರ ತಾಲ್ಲೂಕು ಕಛೇರಿಯ ಮೇಲೆ ಪೊಲೀಸ್ ದಸ್ತುಗಿರಿಯ ಕಣ್ಣು ತಪ್ಪಿಸಿ ಪೊಲೀಸರ ವಿರುದ್ಧ ಹೋರಾಟ ಮಾಡಿ ತಾಲ್ಲೂಕು ಕಛೇರಿಯ ಮೇಲೆ ಧ್ವಜಾರೋಹಣ ಮಾಡಿ ತಾಲ್ಲೂಕು ಕಛೇರಿಯ ಮುಂಭಾಗದಲ್ಲಿ ಕುಳಿತುಕೊಂಡು ಫೋಟೋ ತೆಗಿಸಿ ಕೊಂಡಿದ್ದಾರೆ. ತದನಂತರ ಹೋರಾಟದ ಕಾವು ಹೆಚ್ಚಾದಾಗ ಹರ್ಲಾಪುರದಿಂದ ಹೆಚ್ಚಿನ ಸೈನ್ಯವನ್ನು ತರಿಸಿ ಲಾಟಿ ಚಾರ್ಜ್ ಮಾಡಿದಾಗಿ ಅನೇಕ ಸತ್ಯಾಗ್ರಹಿಗಳನ್ನು ಬಂಧಿಸಿ ದಾವಣಗೆರೆಯ ವಿಶೇಷ ಜೈಲಿನಲ್ಲಿ ಬಂಧಿಸಿಡಲಾಗಿತ್ತು ಕೇಲವು ಸತ್ಯಾಗ್ರಹಿಗಳು ತಪ್ಪಿಸಿಕೊಂಡು ಫಲಾಯನಗೊಂಡರು.

ದಾವಣಗೆರೆ ಜಿಲ್ಲೆಯಲ್ಲಿ ಧ್ವಜಾಸತ್ಯಾಗ್ರಹ

ಮಲೇಬೆನ್ನೂರು ಹರಿಹರ ತಾಲ್ಲೂಕಿನ ಮೊದಲನೆ ದೊಡ್ಡ ಗ್ರಾಮವಾಗಿದೆ. ಇಲ್ಲಿ ಶಿವಮೊಗ್ಗ – ಹೊಸಪೇಟೆಯ ರಾಷ್ಟ್ರೀಯ ಹೆದ್ದಾರಿಯನ್ನು ಕಾಣಬಹುದು ೧೯೪೨ರ ವೇಳೆಗೆ ಈ ಗ್ರಾಮವು ಒಂದು ಸಣ್ಣ ನಗರವಾಗಿತ್ತು, ಇಲ್ಲಿ ಬ್ರಿಟೀಷರ ಕಾಲಕ್ಕಾಗಲೆ ಇಲ್ಲಿಯ ಬಸವೇಶ್ವರ ದೇವಾಲಯದಲ್ಲಿ ಒಂದು

ಪೊಲೀಸ್ ಠಾಣೆಯನ್ನು ನಿರ್ಮಿಸಲಾಗಿತ್ತು ಎಸ್.ಎಂ. ಚಂದ್ರಶೇಖರಯ್ಯನವರಿಗೆ ಜೆ.ಹೆಚ್. ಪಟೇಲ್‌ರ ತಂದೆ ಹಾಲನಗೌಡ ಪಟೇಲರು ಪತ್ರ ಬರೆದು ಕೂಲಂಬಿ ಪೊಲೀಸ್ ಠಾಣೆಯ ಮೇಲೆ ಧ್ವಜಾರೋಹಣ ಮಾಡಲು ತಿಳಿಸಿದರು. ಈ ಸಂದರ್ಭದಲ್ಲಿ ಇವರ ಸ್ಥಳ ಬದಲಾವಣೆ ಮತ್ತು ಕಾರ್ಯ ಚಟುವಟಿಕೆಗಳು ರಾತ್ರಿ ಸಮಯದಲ್ಲಿ ನಡೆಯುತ್ತಿದ್ದರಿಂದ ಎಸ್.ಎಂ. ಚಂದ್ರಶೇಖರಯ್ಯನವರು ತಮ್ಮ ೩೧ ಸದಸ್ಯರ ತಂಡದೊಂದಿಗೆ ಮಲೇಬೆನ್ನೂರಿಗೆ ಬಂದು ಅಲ್ಲಿನ ಪೊಲೀಸ್ ಠಾಣೆಯಲ್ಲಿ ಪೊಲೀಸ್‌ರ ನಿದ್ರೆ ಕೆಡಿಸಿ ಅಲ್ಲಿನ ಅಮಾಲ್ದಾರ್ ಮತ್ತು ದಫೇದಾರ್ ಹಾಗೂ ಪೊಲೀಸ್‌ರ ವಿರುದ್ಧ ಹೋರಾಟ ಮಾಡಿ ಠಾಣೆಯಿಂದ ೯ ಬಂದೂಕುಗಳನ್ನು ವಶಪಡಿಸಿಕೊಂಡು ಅವುಗಳನ್ನು ಹರಿಹರದ ಮೂಲಕವಾಗಿ ಹುಬ್ಬಳ್ಳಿಯ ಸತ್ಯಾಗ್ರಹಿಗಳ ಕ್ಯಾಂಪಿಗೆ ನೀಡಲಾಯಿತು. ನಂತರ ಕುಂದೂರು ಗ್ರಾಮದಲ್ಲಿ ರಾಷ್ಟ್ರಾಭಿಮಾನದ ಬಗ್ಗೆ ಪ್ರಭಾತಪೇರಿ ನಡೆಸಿ. ನಂತರ ಶ್ರೀ ಕುಂದೂರು ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಸಭೆ ನಡೆಸಿ ಅಲ್ಲಿನ ಬ್ರಾಹ್ಮಣರ ಅಗ್ರಹಾರದಲ್ಲಿ ಊಟವನ್ನು ಮುಗಿಸಿಕೊಂಡು ವಿಶ್ರಾಂತಿ ಪಡೆದರು ಈ ದಿನ ಸಂಜೆ ೫ ಗಂಟೆಗೆ ಕೂಲಂಬಿ ಪೊಲೀಸ್ ಠಾಣೆಯ ಮೇಲೆ ಎಸ್.ಎಂ. ಚಂದ್ರಶೇಖರಯ್ಯನವರು ಧ್ವಜಾರೋಹಣ ಮಾಡುತ್ತಾರೆ ಎಂದು ಹಾಲನಗೌಡರು ಗಾಳಿಸುದ್ದಿ ಹರಡಿದರು. ನಂತರ ೫.೩೦ಕ್ಕೆ ಎಸ್.ಎಂ. ಚಂದ್ರಶೇಖರಯ್ಯನವರು ತಮ್ಮ ತಂಡದ ಜೊತೆಯಲ್ಲಿ ಕೂಲಂಬಿಗೆ ಬಂದು ಅಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಪ್ರಾರಂಭಿಸಲು ಬಂದಾಗ ಅಲ್ಲಿಯ ಜನರು ದಂಗೆದ್ದು ಘರ್ಷಣೆ ಪ್ರಾರಂಭಗೊಂಡಾಗ ಎಸ್.ಎಂ. ಚಂದ್ರಶೇಖರಯ್ಯನವರು ಗಾಳಿಯಲ್ಲಿ ಬಂದೂಕಿನಿಂದ ಗುಂಡು ಹಾರಿಸಿ ಜನರನ್ನು ಶಾಂತಿಯುತರನ್ನಾಗಿ ಮಾಡಿ ಕೂಲಂಬಿ ಪೊಲೀಸ್ ಠಾಣೆಯ ಮೇಲೆ ಧ್ವಜಾರೋಹಣವನ್ನು ಮಾಡಿದರು. ನಂತರ ಹಾಲನಗೌಡರನ್ನು ಭೇಟಿ ಮಾಡಿದರು ಈ ವಿಷಯ ತಿಳಿದ ನಂತರ ಈ ಊರಿನ ಗ್ರಾಮಸ್ಥರು. ಜನರು ಸೇರಿ ಸ್ವಾತಂತ್ರ್ಯ ಯೋಧರನ್ನು ಊರ ತುಂಬ ಮೆರವಣಿಗೆ ಮಾಡಿ ನಂತರ ೭.೪೦ರ ವೇಳೆಗೆ ಕತ್ತಲಗೆರೆಗೆ ಕರೆ ತಂದು ಅಲ್ಲಿಯು ಸಹ ಮೆರವಣಿಗೆಯನ್ನು ಮಾಡಿ ಮುಂದೆ ಕಾರಿಗನೂರಿಗೆ ಕರೆ ತಂದು ಆ ಗ್ರಾಮದಲ್ಲೂ ಮೆರವಣಿಗೆಯನ್ನು ಮಾಡಿ ಅವರಿಗೆ ಊಟ ಮತ್ತು ಖರ್ಚು ವೆಚ್ಚಕ್ಕೆ ಬೇಕಾದ ಎಲ್ಲಾ ಸೌಕರ್ಯವನ್ನು ಮಾಡಿ ಈ ಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಇರುವದು ಸೂಕ್ತವಲ್ಲ ಎಂಬದು ತಿಳಿದು ಬಂದಾಗ ಹಾಲನಗೌಡರ ಆದೇಶದ ಮೇರಿಗೆ ಕಾರಿಗನೂರಿನ ಒಳ ಮಾರ್ಗದ ದಾರಿಯಲ್ಲಿ ತ್ಯಾವಣಿಗೆಗೆ ಕರೆತಂದು ಆ ಗ್ರಾಮದ ಕೆಳವರ್ಗದ ಅಥವಾ ಬುಡಕಟ್ಟು ಜನಾಂಗದ ಮನೆತನವಾದ ಗೋವಿಂದಪ್ಪನವರ ಮನೆಯಲ್ಲಿ ಆ ದಿನ ರಾತ್ರಿ ವಾಸ್ತವ ಹೂಡಿದರು[೧೧]. ಮರುದಿನ ಬೆಳಿಗ್ಗೆ ಅಲ್ಲಿಯೇ ಕಾಲಕಳೆದು ಮರುದಿನ ರಾತ್ರಿಯಲ್ಲಿ ಬಸವಪಟ್ಟಣದ ಬೆಟ್ಟದ ಮಾರ್ಗವಾಗಿ ಚಲಿಸಿ ಚನ್ನಗಿರಿಯನ್ನು ತಲುಪಿ ಮರುದಿನ ಬೆಳಿಗ್ಗೆ ೯ ಗಂಟೆಯ ಸಮಯಕ್ಕೆ ತಾಲ್ಲೂಕು ಕಛೇರಿಯ ಬಳಿ ಧ್ವಜಾರೋಹಣಕ್ಕೆ ಸಕಲ ಸಿದ್ಧತೆಯನ್ನು ಮಾಡಿಕೊಂಡು ೨ ಗುಂಪುಗಳಾಗಿ ವಿಭಾಗಗೊಂಡು ಒಂದು ಗುಂಪು ಪೊಲೀಸರನ್ನು ದಿಕ್ಕು ತಪ್ಪಿಸಲು ಇನ್ನೊಂದು ಗುಂಪು ತಾಲ್ಲೂಕು ಕಛೇರಿಯ ಮೇಲೆ ಧ್ವಜಾರೋಹಣವನ್ನು ಮಾಡಲು ಸಿದ್ಧತೆ ನಡೆಸಿ, ೧೦.೩೦ಕ್ಕೆ ಸರಿಯಾಗಿ ಧ್ವಜಾರೋಹಣವನ್ನು ಮಾಡಿ. ಅಲ್ಲಿದ ಮರಳಿ ಬರುವ ಸಂದರ್ಭದಲ್ಲಿ ಮಾರ್ಗ ಮಧ್ಯದಲ್ಲಿ ಶಾಂತಿಸಾಗರ ಕೆರೆಯ ಪಕ್ಕದಲ್ಲಿನ ಶ್ರೀ ಸಿದ್ದೇಶ್ವರ ದೇವಾಲಯದಲ್ಲಿ ವಿಶ್ರಾಂತಿ ಪಡೆದು ಸಂಜೆ ೭.೦೫ಕ್ಕೆ ಹೊರಡುವ ವೇಳೆಯಲ್ಲಿ ದಾವಣಗೆರೆಯಿಂದ ಒಂದು ಪೊಲೀಸ್ ತಂಡ ಬಂದು ಇವರ ಮೇಲೆ ದಾಳಿ ಮಾಡಿದಾಗ ಕೆಲವರು ತಪ್ಪಿಸಿಕೊಂಡು ಹೋಗಿದ್ದಾರೆ. ಆದರೆ ಪಿಸ್ತೂಲಿನ ಗುಂಡು ಕಾಲಿಗೆ ಬಿದ್ದಿದ್ದರಿಂದ ಎಸ್.ಎಂ. ಚಂದ್ರಶೇಖರಯ್ಯ ಮತ್ತು ನಾಲ್ಕು ಸ್ವಾತಂತ್ರ್ಯ ಯೋಧರು ಪೊಲೀಸ್‌ರಿಗೆ ಸೆರೆ ಸಿಕ್ಕು ದಾವಣಗೆರೆ ವಿಶೇಷ ಜೈಲಿಗೆ ಇವರನ್ನು ಕರೆ ತಂದು ಬಂಧಿಸಿ ಇವರಿಗೆ ಶಿಕ್ಷೆ ನೀಡಲಾಯಿತು.

ಮೈಸೂರು ಚಲೋ ಚಳವಳಿ

ದೇಶ ಸ್ವಾತಂತ್ರ್ಯಗೊಂಡರೂ ದೇಶಿಯ ಸಂಸ್ಥಾನಗಳಲ್ಲಿ ಇನ್ನೂ ಬ್ರಿಟಿಷರ ಗುಲಾಮರಂತಿದ್ದ ದೇಶೀಯ ಅರಸರೇ ರಾಜ್ಯವಾಳುತ್ತಿದ್ದರು. ಆದ್ದರಿಂದ ಮೈಸೂರು ಸಂಸ್ಥಾನದಲ್ಲಿ ಅದೇ ಪರಿಸ್ಥಿತಿಯಿಂದ ಮೈಸೂರಿನಲ್ಲಿ ಚಳವಳಿ ಆರಂಭವಾಯಿತು. ಆದ್ದರಿಂದ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ತಾವು ಬ್ರಿಟಿಷರಿಂದ ಸ್ವಾತಂತ್ರ್ಯಗೊಂಡು ಮೈಸೂರು ಸಂಸ್ಥಾನದವರ ಗುಲಾಮರಾಗಿರುತ್ತೇವೆ ಎಂಬ ಭಾವನೆ ಮೂಡಿತು. ಆದರೆ ಜವಾಬ್ದಾರಿ ಸರ್ಕಾರವು ಸ್ಥಾಪನೆಯಾಗಲಿಲ್ಲ. ಈ ಹಳೆಯ ಮೈಸೂರು ಪ್ರದೇಶದಲ್ಲಿ ಕಾಂಗ್ರೆಸ್ಸಿನ ಉತ್ಸಾಹದಿಂದ ಭಾರತ ಸ್ವಾತಂತ್ರ್ಯವಾದ ನಂತರ ಮೈಸೂರು ಸಂಸ್ಥಾನವು ಭಾರತದ ಒಕ್ಕೂಟದಲ್ಲಿ ಸೇರುವಂತೆ ಮಹಾರಾಜರ ಮೇಲೆ ಒತ್ತಾಯ ತರುವುದಕ್ಕೆ ಮೈಸೂರು ಕಾಂಗ್ರೆಸ್ 'ಮೈಸೂರು ಚಲೋ ಚಳವಳಿ' ಹೂಡಬೇಕಾಯಿತು. ಆಗ ಮೈಸೂರು ಕಾಂಗ್ರೆಸ್ ೧೯೪೭ರ ಸೆಪ್ಟೆಂಬರ್ ೧ರಂದು ಮೈಸೂರು ಚಲೋ ಚಳವಳಿಯನ್ನು ಕೈಗೊಂಡಿತು. ಆಗಿನ ಮೈಸೂರು ಸಂಸ್ಥಾನದ ದೌರ್ಜನ್ಯವನ್ನು ಎದುರಿಸಲು ಮೈಸೂರು ರಾಜ್ಯದ ಬೆಂಗಳೂರು. ಕೋಲಾರ. ಮಂಡ್ಯ. ಹಾಸನ, ಚಿತ್ರದುರ್ಗ, ತುಮಕೂರು. ದಾವಣಗೆರೆ ಮೊದಲಾದ ಕರ್ನಾಟಕದ ಇತರೆ

ಕಡೆಗಳಲ್ಲಿ ನಡೆದಂತೆ ಚಳವಳಿ ಹರತಾಳಗಳು ಪ್ರಾರಂಭವಾದವು. ಮೈಸೂರು ಸಂಸ್ಥಾನದ ಕೊನೆಯ ಪ್ರಾಂತ್ಯವಾಗಿದ್ದ ಹರಿಹರ ವಳ್ಳಿ ಮತ್ತು ಈ ತಾಲ್ಲೂಕಿನ ಗ್ರಾಮಗಳಾದ ಗುತ್ತೂರು, ಕೊಂಡಜ್ಜಿ, ಮಲೆಬೆನ್ನೂರು, ಕಮಾಲಪುರ, ಭಾನುವಳ್ಳಿ, ಹೊಳೆಸಿರಿಗೆರೆ, ಬಂಗಳಗೊಂಡಿ ಮುಂತಾದ ಗ್ರಾಮಗಳಿಗೆ ಈ ಚಳವಳಿಯ ಬಿಸಿ ತಟ್ಟಿತು.[೧೨] ಆದ್ದರಿಂದ ಹರಿಹರ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರಾದ ಎನ್.ಎಂ. ಚಂದ್ರಶೇಖರಯ್ಯ ಮತ್ತು ಅಣಜಿಮಠ ಕೊಟ್ರಯ್ಯನವರ ನಾಯಕತ್ವದಲ್ಲಿ ಗಾಂಜೀವೀರಪ್ಪ, ನಾರಾಯಣರಾವ್, ಜಿ. ಗೋವಿಂದಪ್ಪ, ಸಿದ್ದಪ್ಪ, ಕೆ.ಹೆಚ್. ಪಟೇಲರು, ಚನ್ನವೀರಪ್ಪ, ಪಿ. ಬಸವನಗೌಡ್ರು, ಬೋಂಗಾಳೆ ಕೃಷ್ಣರಾವ್, ಬೋಂಗಾಳೆ ಪುಂಡಲೀಕ್ ರಾವ್, ಕೊಟ್ರಪ್ಪ ಇನ್ನು ಮುಂತಾದ ಅನೇಕ ಹೋರಾಟಗಾರರು ಮೈಸೂರು ಚಲೋ ಚಳವಳಿಯಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಎಸ್. ನಿಜಲಿಂಗಪ್ಪನವರು "ಆರ್ಕಾಟ್ ಬಾಯ್ ಕಾಟ್, ತಂಬೂಚೆಟ್ಟಿ ಚಟ್ಟಕಟ್ಟಿ" ಎಂದು ಘೋಷಣೆ ಕೂಗಿದರು.[೧೩] ಆನಂತರ ಮೈಸೂರಿನಲ್ಲಿ ಅಕ್ಟೋಬರ್ ೯ರಂದು ಮಾತುಕತೆಗಳು ಪ್ರಾರಂಭವಾದವು. ಈ ಸಂದರ್ಭ ಶ್ರೀ ಜಯಚಾಮರಾಜ ಒಡೆಯರು, ಆಪ್ತ ಕಾರ್ಯದರ್ಶಿ ತಂಬೂಚೆಟ್ಟಿ ಮತ್ತು ದಿವಾನರಾದ ರಾಮಸ್ವಾಮಿ ಮೊದಲಿಯಾರ್ ಹಾಗೂ ಮೈಸೂರು ಕಾಂಗ್ರೆಸ್‌ನ ಜೊತೆ ಮಾತುಕತೆಗಳು ನಡೆದು ಕೆ.ಸಿ.ರೆಡ್ಡಿ ಮತ್ತು ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ಅಕ್ಟೋಬರ್ ೨೪ರಂದು ವಿಜಯ ದಶಮಿಯ ದಿನ ಸಂಸ್ಥಾನದಲ್ಲಿ ತಾತ್ಕಾಲಿಕ ಪ್ರಜಾ ಸರ್ಕಾರವು ಅಧಿಕಾರಕ್ಕೆ ಬಂದಿತು. ಶ್ರೀ ಜಯಚಾಮರಾಜ ಒಡೆಯರು ಮೈಸೂರು ರಾಜ್ಯದ ರಾಜ ಪ್ರಮುಖರಾದರು.

ಸ್ವತಂತ್ರ್ಯ ಭಾರತದಲ್ಲಿ ವಿಲೀನವಾಗಬೇಕೆಂಬ ಮೈಸೂರು ಸಂಸ್ಥಾನದ ಆಸೆ ಈಡೇರಿತು. ನಂತರ ಕನ್ನಡ ಮಾತನಾಡುವ ಜನರನ್ನೆಲ್ಲಾ ಒಂದೇ ಪ್ರಾಂತ್ಯದಡಿ ಸೇರಿಸಲು ಏಕೀಕರಣ ಚಳವಳಿ ನಡೆದು ೧೯೫೬ ನವೆಂಬರ್ ೧ರಂದು ಮೈಸೂರು ರಾಜ್ಯ ಏಕೀಕರಣವಾಯಿತು. ದಾವಣಗೆರೆ ಭಾಗದ ಎಸ್. ನಿಜಲಿಂಗಪ್ಪನವರು ಏಕೀಕೃತ ಕರ್ನಾಟಕದ ಮೊದಲ ಮುಖ್ಯಮಂತ್ರಿಯಾದರು. ೧೯೭೩ ನವೆಂಬರ ೧ರಂದು ರಾಜ್ಯಕ್ಕೆ 'ಕರ್ನಾಟಕ'ವೆಂದು ಮರುನಾಮಕರಣ ಮಾಡಲಾಯಿತು.

ಸಮಾರೋಪ: ಭಾರತದ ಸ್ವಾತಂತ್ರ್ಯ ಹೋರಾಟ ಅನೇಕ ಶಸ್ತ್ರಾಸ್ತ್ರ ಬಂಡಾಯಗಳಾದರೂ ಸ್ವಾತಂತ್ರ್ಯ ದೊರಕದೆ. ಅಹಿಂಸೆ, ಸತ್ಯಾಗ್ರಹಗಳಿಂದ ಮಹಾತ್ಮ ಗಾಂಧೀಜಿಯವರ ತತ್ವ ಸಿದ್ಧಾಂತಗಳಿಂದ ಭಾರತಕ್ಕೆ ಸ್ವಾತಂತ್ರ್ಯ ದೊರಕಿತು. ಅಂತಹ ತತ್ವ ಸಿದ್ಧಾಂತಗಳು ರಾಷ್ಟ್ರ ಮಟ್ಟದಲ್ಲಿ ಮಾತ್ರ ಸೀಮಿತವಾಗದೆ. ಗ್ರಾಮೀಣ ಪ್ರದೇಶಗಳಲ್ಲೂ ಸಹ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ನಡೆದು ಎನ್.ಎಂ. ಚಂದ್ರಶೇಖರಯ್ಯನಂತಹ ಅನೇಕ ಸ್ವಾತಂತ್ರ್ಯ ಯೋಧರು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ತಮ್ಮ ರಾಷ್ಟ್ರಭಕ್ತಿಯನ್ನು ಮೆರೆದಿದ್ದಾರೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ರೇಣುಕಾ ಎಸ್. ಸಂಕನಗೌಡ್ರು, (ಅ,ಪ್ರ) ಕೆ.ಎಫ್. ಪಾಟೀಲ್ ಬದುಕು– ಬರಹ, ಪುಟ ಸಂ. ೧೦೫.

೨. ಕೊಟಗಿ ಸಿದ್ದಲಿಂಗಪ್ಪ, ಹೋರಾಟದ ನೆನವು, ಪುಟ ಸಂ. ೫೧.

೩. ಪ.ಯಶೋಧ ರಾಜಶೇಖರಪ್ಪ, (ಪ್ರ.), ಸ್ವಾತಂತ್ರ್ಯ ಇತಿಹಾಸದ ಪುಟಗಳಲ್ಲಿ ಚಿತ್ರದುರ್ಗ ಜಿಲ್ಲೆ, ದವನಸಿರಿ, ಪುಟ ಸಂ. ೫೩.

೪. ಎನ್. ಎಂ. ಚಂದ್ರಶೇಖರಯ್ಯ, ಸಂದರ್ಶನ, ದಿನಾಂಕ: ೦೧/೧೨/೨೦೧೨.

೫. Mysore Government, Remarks on inspection Record, Date: 22/12/1943.

೬. ಡಾ. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ದ್ವಿತೀಯ ಸಂಪುಟ, ಪುಟ ಸಂ. ೫೧೬.

೭. ಡಾ. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ದ್ವಿತೀಯ ಸಂಪುಟ, ಪುಟ ಸಂ. ೫೭೬.

೮. ಕೊಟಗಿ ಸಿದ್ದಲಿಂಗಪ್ಪ, ಹೋರಾಟದ ನೆನವು, ಪುಟ ಸಂ. ೫೧.

೯. ಕೃಷ್ಣಮೂರ್ತಿ ಸಿ.ಎನ್. ಸ್ವಾತಂತ್ರ್ಯ ಚಳವಳಿಗೆ ಹರಿಹರ ತಾಲ್ಲೂಕಿನ ಕೊಡುಗೆ, ಪುಟ ಸಂ. ೪೨.

೧೦. ಕೊಟಗಿ ಸಿದ್ದಲಿಂಗಪ್ಪ, ಹೋರಾಟದ ನೆನವು, ಪುಟ ಸಂ. ೧೦೦.

೧೧. ಎನ್.ಎಂ. ಚಂದ್ರಶೇಖರಯ್ಯ, ಸಂದರ್ಶನ, ದಿನಾಂಕ: ೦೧/೧೨/೨೦೧೨.

೧೨. ಕೃಷ್ಣಮೂರ್ತಿ ಸಿ.ಎನ್. ಸ್ವಾತಂತ್ರ್ಯ ಚಳವಳಿಗೆ ಹರಿಹರ ತಾಲ್ಲೂಕಿನ ಕೊಡುಗೆ, ಪು.ಸಂ: ೪೪.

೧೩. ಡಾ. ಎಂ. ಕೃಷ್ಣಮೂರ್ತಿ ಮತ್ತು ಎಸ್. ರಾಜೇಂದ್ರಪ್ಪ, (ಸಂ). ಇತಿಹಾಸ ದರ್ಶನ ಸಂಪುಟ–೨೫, ಪುಟ ಸಂ. ೪೧೦.

ಸ್ವಾತಂತ್ರ್ಯ ಹೋರಾಟಗಾರ ಹರಪನಹಳ್ಳಿಯ ಹಿರೇಮಠ ವೀರಭದ್ರಯ್ಯನವರು

ಡಾ. ಪಿ. ನಾಗಭೂಷಣಗೌಡ* ಜಿ. ಶಾಂತವೀರೇಶ್**

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಹರಪನಹಳ್ಳಿ ತಾಲ್ಲೂಕಿನ ಪಾತ್ರ ಪ್ರಮುಖವಾಗಿದೆ. ಮುಂಡರಗಿ ಭೀಮರಾವ್, ಎಸ್. ನಿಜಲಿಂಗಪ್ಪ, ಇಜಾರಿ ವಸುಪಾಲಪ್ಪ, ಅರಸನಾಳು ಎ.ಜಿ.ಆರ್. ಕೊಟ್ರಗೌಡ, ಮುದೇನೂರು ಕೊಟ್ರಬಸಪ್ಪ, ಕೊಟ್ಟೂರಿನ ಗೂಳ್ಳಿ ಶರಣಪ್ಪನವರು, ಬಳ್ಳಾರಿಯ ಟೇಕೂರು ಸುಬ್ರಹ್ಮಣ್ಯಂ, ಟಿ. ಕೇಶವರಾವ್, ಹಿರೇಮಠ ವೀರಭದ್ರಯ್ಯ ಇನ್ನು ಮುಂತಾದವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ಹಿರೇಮಠ ವೀರಭದ್ರಯ್ಯನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಪ್ರಮುಖ ಪಾತ್ರವಹಿಸಿದರು.

೯೦ ವಸಂತಗಳನ್ನು ಪೂರೈಸಿರುವ ಹಿರೇಮಠ ವೀರಭದ್ರಯ್ಯನವರು ಇಂದಿನ ಸಂಡೂರು ತಾಲ್ಲೂಕಿನ ಚೋರನೂರು ಗ್ರಾಮದಲ್ಲಿ ಹಿರೇಮಠ ಚನ್ನಬಸಯ್ಯ ಮತ್ತು ದೇವಿರಮ್ಮನವರ ದ್ವಿತೀಯ ಪುತ್ರರಾಗಿ ೧೯೨೪ರಲ್ಲಿ ಜನಿಸಿದರು. ಇವರು ೩ನೇ ತರಗತಿಯನ್ನು ಚೋರನೂರಿನಲ್ಲಿ ಮಾಡಿದರು. ೧೯೩೨ರಲ್ಲಿ ೪ನೇ ತರಗತಿಯನ್ನು ಹರಪನಹಳ್ಳಿಯಲ್ಲಿ ಮುಗಿಸಿದರು. ನಂತರ ೧೯೩೩ರಿಂದ ೧೯೩೬ರವರೆಗೆ ೫ರಿಂದ ೭ನೇ ತರಗತಿವರೆಗೆ ಕೊಟ್ಟೂರಿನಲ್ಲಿ ಅಭ್ಯಾಸ ಮಾಡಿದರು. ಆಗ ಗಾಂಧೀಜಿಯವರು ಕೊಟ್ಟೂರಿಗೆ ಆಗಮಿಸಿದಾಗ ಅವರ ಭಾಷಣ ಮತ್ತು ಹರಿಜನೋದ್ಧಾರ ಕಾರ್ಯಕ್ರಮ, ಸರಳ ಜೀವನ ಮತ್ತು ದರ್ಶನದಿಂದ ವೀರಭದ್ರಯ್ಯನವರು ಪ್ರಭಾವಿತರಾದರು. ನಂತರ ಇವರು ಹರಪನಹಳ್ಳಿಯಲ್ಲಿ ವಿದ್ಯಾಭ್ಯಾಸ ಮುಂದುವರೆಸಿ ೧೯೪೦ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸಾದರು. ೧೯೪೦ರ ಜೂನ್ ತಿಂಗಳಲ್ಲಿ ವೀರಭದ್ರಯ್ಯನವರು ಅನಂತಪುರ ಕಾಲೇಜಿಗೆ ಸೇರಿದರು.

ತುಳಿತಕ್ಕೊಳಗಾದವರು, ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಕಾಳಜಿ ಇದ್ದುದರಿಂದ ವೀರಭದ್ರಯ್ಯನವರು ಚೋರನೂರು, ಕೂಡ್ಲಿಗಿ ಮತ್ತು ಕೆಲವು ಕಡೆ ಹರಿಜನ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ಸಾಹಿತ್ಯ ಕ್ಷೇತ್ರದಲ್ಲಿ, ಸಮಾಜಕ್ಷೇತ್ರ, ರಾಜಕೀಯ ಕ್ಷೇತ್ರ, ನ್ಯಾಯಶಾಸ್ತ್ರ, ಕೃಷಿಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇವರು ಕರ್ನಾಟಕದಲ್ಲಿ ಮೊದಲು ಪ್ರಾರಂಭವಾದ ಹರಪನಹಳ್ಳಿ ತಾಲ್ಲೂಕು ಗ್ರಾಮಾಂತರ ಗೃಹ ನಿರ್ಮಾಣ ಸಹಕಾರ ಸಂಘವನ್ನು ಸ್ಥಾಪಿಸಿದರು. **'ಪಾಟೀ ಸವಾಲು'** ಎನ್ನುವ ಕಾನೂನು ಗ್ರಂಥವನ್ನು ಬರೆದರು. ೧೯೯೪ರಲ್ಲಿ ಇವರು **"ಯಶಸ್ವಿ ವಕೀಲ"** ಮತ್ತು **"ಜಾಮೀನಿನ ವಿಧಿ ವಿಧಾನಗಳು"**, **"ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್ ಭಾರತ ದಂಡ ಸಂಹಿತೆ"** ಎನ್ನುವ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಕಾಲೇಜು ಶಿಕ್ಷಣ

೧೯೪೦ರ ಅಂದಿನ ದಿನಗಳಲ್ಲಿ ಬಳ್ಳಾರಿ, ಅನಂತಪುರ, ಕಡಪ, ಕರ್ನೂಲ್ ನಾಲ್ಕು ಜಿಲ್ಲೆಗಳಿಗೆ ಇದ್ದ ಅನಂತಪುರದ ದತ್ತು ಮಂಡಲ ಕಾಲೇಜಿಗೆ ಸೇರಿದರು. ಮೊದಲನೆಯ ವರ್ಷ ಅಂದರೆ ೧೯೪೦-೪೧ರಲ್ಲಿ ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ಸೇರಿದರು. ಅನಂತಪುರದಲ್ಲಿ ಇವರು ಹೊರಗಡೆ ಹೋದಾಗ ಕನ್ನಡ ಭಾಷೆಯನ್ನು ಮಾತ್ರ ಬಳಸುತ್ತಿದ್ದರು.

೧೯೪೩ರಲ್ಲಿ ಜರುಗಿದ ಪರೀಕ್ಷೆಯಲ್ಲಿ ವೀರಭದ್ರಯ್ಯನವರು ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲೇಜಿನಿಂದ ಶೇಕಡ ೮೨% ವಿದ್ಯಾರ್ಥಿಗಳು ತೇರ್ಗಡೆಯಾಗಿ ಮದ್ರಾಸ್ ಪ್ರಾಂತ್ಯಕ್ಕೆ ಪ್ರಥಮ ಸ್ಥಾನವನ್ನು ತಂದುಕೊಟ್ಟರು. ಅನಂತರ ಬಳ್ಳಾರಿಗೆ ಹೋಗಿ ಅಂದು ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದ ವೈ. ಮಹಾಬಲೇಶ್ವರಪ್ಪನವರ ನೆರವಿನಿಂದ ಕಾನೂನು ವಿದ್ಯಾಭ್ಯಾಸಕ್ಕಾಗಿ ಬೆಳಗಾವಿಗೆ ಹೋದರು.

ಆಗ ೨ನೇ ಪ್ರಪಂಚ ಯುದ್ಧದ ಸಮಯವಾಗಿತ್ತು. ಸರ್ಕಾರದವರು 'ಸ್ಟ್ಯಾಂಡರ್ಡ್ ಬಟ್ಟೆ' ಎನ್ನುವ ಶಿರೋನಾಮೆಯಲ್ಲಿ ಬಟ್ಟೆಯನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರು. ವೀರಭದ್ರಯ್ಯನವರು ೨ ಗಜ ಬಟ್ಟೆಯ ಲುಂಗಿಯನ್ನು

* ಉಪನ್ಯಾಸಕರು, ಇತಿಹಾಸ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
** ಕೊಂಗನಹೊಸೂರು ಅಂಚೆ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ರಾಷ್ಟ್ರ ವಿ ಗಾ ಆಕರ್ಷಿತರಾಗಿ ಅರ್ಧ ತೋಳಿನ ಅಂಗಿಯನ್ನು ತೊಡುತ್ತಿದ್ದರು ಹಾಗೂ ಇದೇ ಉಡುಗೆಯಲ್ಲಿ ಕಾಲೇಜಿಗೆ ಹೋಗುತ್ತಿದ್ದರು. ಕಾಲೇಜಿನ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ದೃಷ್ಟಿಯಲ್ಲಿ ಇವರೊಬ್ಬರು ವಿಚಿತ್ರ ವ್ಯಕ್ತಿಯಂತೆ ಕಾಣುತ್ತಿದ್ದರು. ಆಗಿನ ದಿನಗಳಲ್ಲಿ ಇವರಿಗೆ ಬಟ್ಟೆಬರೆಯ ಕಡೆ ಗಮನವಿರಲಿಲ್ಲ. ಇವರ ಗಮನ ಒಂದೆಡೆ ತನ್ನ ದೇಶದ ರೈತರ ಅಭಿವೃದ್ಧಿ, ಇನ್ನೊಂದೆಡೆ ದೇಶದ ಸ್ವಾತಂತ್ರ್ಯದ ಕಡೆಯೇ ಕೇಂದ್ರೀಕೃತ ವಾಗಿರುತ್ತಿತ್ತು. ಜೊತೆಗೆ ವಿದ್ಯಾಭ್ಯಾಸವನ್ನು ಕೈಬಿಡದೆ ಎಲ್ಲವನ್ನೂ ಸಾಧಿಸಬೇಕಾದ ಅನಿವಾರ್ಯತೆಯೂ ಇತ್ತು.

ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಬಗೆ

ಅಖಿಲ ಭಾರತ ಕಾಂಗ್ರೆಸ್ಸಿನವರು ೮-೮-೧೯೪೨ **"ಆಂಗ್ಲರೇ ಭಾರತ ಬಿಟ್ಟು ತೊಲಗಿ"** ಎನ್ನುವ ಚಳುವಳಿಯನ್ನು ಗಾಂಧೀಜಿಯವರ ನೇತೃತ್ವದಲ್ಲಿ ಪ್ರಾರಂಭಿಸಿದರು. ಆಗ ಇವರು ಬೆಳಗಾವಿಯಲ್ಲಿ ಕಾನೂನು ಪದವಿ ಓದುತ್ತಿದ್ದರು. ಚಳುವಳಿಯು ಭಾರತದಾದ್ಯಂತ ವ್ಯಾಪಿಸಿತು. ಈ ಚಳವಳಿಯಿಂದ ಪ್ರೇರಿತ ರಾಗಿ ತಮ್ಮ ಮಿತ್ರ ಡಾ. ಕೇದಾರನಾಥ ಮತ್ತು ಲಿಂಗರಾಜ ಹಿರೇಮಠ ವೀರಭದ್ರಯ್ಯನವರು ಸಹ ಈ ಚಳುವಳಿಯಲ್ಲಿ ಸಕ್ರಿಯ ಪಾತ್ರವಹಿಸಲು ನಿರ್ಧರಿಸಿದರು. ಇವರು ವಿದ್ಯಾರ್ಥಿ ದಿಸೆಯಲ್ಲಿ ಕ್ರಾಂತಿವೀರರಾದ ಭಗತ್‌ಸಿಂಗ್, ರಾಜಗುರು, ಸುಖದೇವರಾಯ ಮೊದಲಾದವರಿಂದ ಪ್ರಭಾವಿತರಾಗಿದ್ದರು. ಕೇವಲ ಅಹಿಂಸಾ ಚಳುವಳಿಯಿಂದ ಸ್ವಾತಂತ್ರ್ಯ ದೊರೆಯು ವುದಿಲ್ಲ. ನೇತಾಜಿ ಸುಭಾಷ್ ಚಂದ್ರಬೋಸ್‌ರು ಹೇಳಿದಂತೆ ರಕ್ತತರ್ಪಣ ಮಾಡದಿದ್ದರೆ ಸ್ವಾತಂತ್ರ್ಯ ದೊರೆಯುವು ದಿಲ್ಲವೆನ್ನುವ ಭಾವನೆ ಈ ತರುಣ ಮಿತ್ರರದಾಗಿತ್ತು. ಗಾಂಧೀಜಿ ಯವರ ಶಾಂತಿ ಮಾರ್ಗ ಹಾಗೂ ಸುಭಾಷ್ ಚಂದ್ರಬೋಸರ ಕ್ರಾಂತಿ ಮಾರ್ಗ ಇವೆರಡರ ಸಂಯೋಜನೆ ಹರಪನಹಳ್ಳಿ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಇದ್ದದ್ದು ಒಂದು ವಿಶೇಷ.

ವೀರಭದ್ರಯ್ಯ ಮತ್ತು ಕೆಲವು ತರುಣರು ನೇತಾಜಿ ಸುಭಾಷ್ ಚಂದ್ರಬೋಸ್‌ರ ಅನುಯಾಯಿಗಳಾಗಿದ್ದರು. ಆಗ ನೇತಾಜಿಯವರು ಜಪಾನ್‌ನಲ್ಲಿರುವುದು ಇವರಿಗೆ ತಿಳಿದಿತ್ತು. ಬೋಸ್‌ರು ಜಪಾನಿನಿಂದ ವಿಮಾನಗಳಲ್ಲಿ ಭಾರತೀಯರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸುವರೆಂತಲೂ ಅವುಗಳನ್ನು ಉಪಯೋಗಿಸುವುದನ್ನು ಇವರು ಕಲಿತುಕೊಳ್ಳಬೇಕೆಂದು ನಂಬಿ ಇವರ ಸ್ನೇಹಿತರಲ್ಲಿದ್ದ ಒಂದು ಬಂದೂಕನ್ನು ತೆಗೆದು ಕೊಂಡು ಹೋಗಿ ಅಂದು ಬೆಳಗಾವಿಯ ಸಮೀಪವಿದ್ದ ಒಂದು ದಟ್ಟವಾದ ಕಾಡಿನಲ್ಲಿ ಬಂದೂಕನ್ನು ಉಪಯೋಗಿಸುವ ತರಬೇತಿಯನ್ನು ಜನರಿಗೆ ಕೊಡುತ್ತಿದ್ದರು. ಇವರ ಕೋಣೆಯು ಸ್ವಾತಂತ್ರ್ಯ ಆಂದೋಲನದ ಚಟುವಟಿಕೆಯ ಕೇಂದ್ರವಾಗಿತ್ತು. ಇವರು ಕಾರ್ಯಾಚರಣೆ ಯೋಜನೆಯನ್ನು ರೂಪಿಸುವಾಗ ಬಹಳ ಜಾಗರೂಕತೆಯಿಂದ ವರ್ತಿಸುತ್ತಿದ್ದರು. ಬೆಳಗಾವಿ ನಗರಕ್ಕೆ ಹೊಂದಿಕೊಂಡಿದ್ದ ಶಹಾಪುರವು ಸಾಂಗ್ಲಿ ಸಂಸ್ಥಾನದಲ್ಲಿತ್ತು. ಅಂತೆಯೇ ಅನಗೋಳ ಸಂಸ್ಥಾನ ಸಹಿತ ಬೆಳಗಾವಿ ನಗರಕ್ಕೆ ಹೊಂದಿಕೊಂಡಿತ್ತು. ಬೆಳಗಾವಿ ನಗರವು ಮುಂಬೈ ಪ್ರಾಂತ್ಯದಲ್ಲಿದ್ದು, ಅಲ್ಲಿನ ಪೋಲಿಸರು ಬಹಳ ಚುರುಕಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಆದ್ದರಿಂದ ಈ ಯುವಕರು ಈ ಮೂರು ವಿಭಿನ್ನ ಆಡಳಿತ ಪ್ರದೇಶಗಳು ಕೂಡುತ್ತಿದ್ದ ಜಾಗದಲ್ಲಿ ಸಾರ್ವಜನಿಕ ಸಭೆಗಳನ್ನು ಜರುಗಿಸುತ್ತಿದ್ದರು. ಜನತೆಯನ್ನುದ್ದೇಶಿಸಿ **"ಭಾರತ ಮಾತೆಯ ಮಕ್ಕಳೇ ಏಳಿರಿ, ಎದ್ದೇಳಿರಿ"** ಭಾರತ ಮಾತೆಯ ವಿಮೋಚನೆಗೆ ಹೋರಾಡಲು ಸಿದ್ಧರಾಗಿರಿ, ನೇತಾಜಿಯವರು ಮದ್ದು ಗುಂಡುಗಳನ್ನು ಕೊಡುವರು. ನಿಮ್ಮ ರಕ್ತ ತರ್ಪಣೆಗೆ ಸಿದ್ಧರಾಗಿರಿ. **"ದೇಶದ ಸ್ವಾತಂತ್ರ್ಯಕ್ಕೆ ನಿಮ್ಮಲ್ಲಿರುವುದೆಲ್ಲವನ್ನೂ ಅರ್ಪಿಸಿರಿ"** ಎಂದು ಭಾವುಕರಾಗಿ ಹೇಳಿದರು. ಇವರ ಕೋಣೆಯಲ್ಲಿ ಕನ್ನಡ, ಇಂಗ್ಲೀಷ್ ಮತ್ತು ಮರಾಠಿಯಲ್ಲಿ ಕರಪತ್ರಗಳ ಹಸ್ತಪ್ರತಿಗಳನ್ನು ತಯಾರಿಸಿ ಅವುಗಳ ಎಡತುದಿಗೆ ರಕ್ತವನ್ನು ಅಂಟಿಸಿ ಹಂಚಿದರು. ಆ ಕರಪತ್ರಗಳು ಜನರನ್ನು ಸ್ವಾತಂತ್ರ್ಯ ಸಂಗ್ರಾಮ ದಲ್ಲಿ ಧುಮುಕಲು ಪ್ರೇರೇಪಿಸುವಂತಹವುಗಳಾದ್ದವು.

ವೀರಭದ್ರಯ್ಯನವರು ತಾವು ಇದ್ದ ಕೋಣೆಯಲ್ಲಿ ನಾಡಬಾಂಬುಗಳನ್ನು ತಯಾರಿಸುತ್ತಿದ್ದರು, ೨೦-೮-೧೯೪೨ರಲ್ಲಿ ರಾತ್ರಿ ಶಹಪುರದ ಪೋಲಿಸರು ವಾಸ ಮಾಡಿದ್ದ ಶಾಲೆಯ ಮೇಲೆ ಇವರ ನೇತೃತ್ವದಲ್ಲಿ ಬಾಂಬ್‌ನ್ನು ಸಿಡಿಸಿದರು. ಭಯಂಕರ ಶಬ್ದದೊಡನೆ ಬಾಂಬುಗಳು ಸ್ಫೋಟಗೊಂಡವು. ಓಡಿ ಹೋಗಿ ಇವರು ಕೋಣೆಯಲ್ಲಿ ಅವಿತುಕೊಂಡು ಪಾರಾದರು. ಆದರೆ ಇವರ ಗೆಳೆಯ ಮುಂಡರಗಿ ವಾಸಿ ಡಾ. ಸಿ.ಎಂ. ಚುರ್ಚಾಳುಮಠರವರ ಕೋಣೆಯು ಆ ಶಾಲೆಗೆ ಸಮೀಪವಿದ್ದರಿಂದ ಅವರು ಬಂಧಿತರಾದರು.

ಬಾಂಬ್ ಸಿಡಿಸಿದ ಮರುದಿವಸ ಕೇಂದ್ರ ಅಂಚೆ ಕಛೇರಿಯ ಒಳಗಡೆ ಸ್ಫೋಟಕ ತುಂಬಿದ ಲಕೋಟೆಗಳನ್ನಿಟ್ಟು ಅದರಲ್ಲಿ ನಿಗಧಿತ ಸಮಯಕ್ಕೆ ಬೆಂಕಿ ಹೊತ್ತುವ ವ್ಯವಸ್ಥೆ ಮಾಡಲಾಗಿತ್ತು. ಕಛೇರಿ ಮುಗಿದು ಬಾಗಿಲು ಹಾಕಿಕೊಂಡು ಸಿಬ್ಬಂದಿ ಹೋದಮೇಲೆ ರಾತ್ರಿಯಿಡಿ ಕಛೇರಿಯ ಒಳಗಡೆ ಬೆಂಕಿ ಹೊತ್ತಿ ಉರಿದು ಅಲ್ಲಿನ ಕೆಲವು ಕಡತಗಳು ನಾಶವಾದವು. ಸರ್ಕಾರದವರು ಈ ದುಷ್ಕೃತ್ಯವನ್ನು ಖಂಡಿಸಿ, ವಿಚ್ಛಿದ್ರಕಾರಕ ಕಾರ್ಯ ಮಾಡುವವರಿಗೆ ಕಠಿಣ ಶಿಕ್ಷೆ ವಿಧಿಸುವುದಾಗಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಲ್ಲದೆ ಡಂಗೂರ ಸಾರಿಸುವ ಮೂಲಕ ಜನತೆಗೆ ಎಚ್ಚರಿಕೆಯನ್ನು ನೀಡಿದರು. ಅಂದಿನ ದಿನಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ನಾಡ ಪಿಸ್ತೂಲು ಗಳೂ ದೊರೆಯುತ್ತಿದುದರಿಂದ ಹಣ ಸಂಗ್ರಹಿಸಿ, ಪಿಸ್ತೂಲು

ಗಳನ್ನು ಹೊಂದುವ ಅಭಿಲಾಷೆ ಇವರದಾಗಿತ್ತು. ಆ ಉದ್ದೇಶದಿಂದ ಒಂದು ದಿವಸ ನಾಲ್ಕು ಜನ ಗೆಳೆಯರೊಡನೆ. ಕೈಯಲ್ಲಿ ಖಾರದ ಪುಡಿ ಹಿಡಿದು, ಒಂದು ಹಾಳು ಮನೆಯಲ್ಲಿ ಅವಿತುಕೊಂಡು ಆ ಮಾರ್ಗವಾಗಿ ಅಂಗಡಿಯಿಂದ ಮನೆಗೆ ಸೈಕಲ್ ಮೇಲೆ ಹೋಗುತ್ತಿದ್ದ ವರ್ತಕನೊಬ್ಬನನ್ನು ದೋಚಲು ಯೋಚಿಸಿದ್ದರು. ಆದರೆ ಆತನು ಆ ದಿವಸ ತನ್ನ ಮನೆಗೆ ತನ್ನ ಸ್ನೇಹಿತರ ಕಾರಿನಲ್ಲಿ ತೆರಳಿದ್ದರಿಂದ, ಸ್ವಾತಂತ್ರ್ಯ ಹೋರಾಟಕ್ಕಾಗಿ ವಾಮಮಾರ್ಗ ಹಿಡಿದು ಕಳಂಕಕ್ಕೆ ಪಾತ್ರರಾಗಲಿಲ್ಲ. ಇವರು ಸ್ನೇಹಿತರೊಡಗೂಡಿ ಬೆಳಗಾವಿಯ ಪೋಸ್ಟ್ ಆಫೀಸನ್ನು ಸುಟ್ಟಿದ್ದು, ಇದಾದ ನಂತರ ಒಂದು ದಿವಸ ಬೆಳಗ್ಗೆ ಇವರು ಬಹಿರ್ದೆಸೆಗೆ ಹೋಗಿ ಬರುವುದರೊಳಗೆ ಇಬ್ಬರು ಪೋಲಿಸರು ಸಾದಾ ಉಡುಪಿನಲ್ಲಿ ಇವರ ಕೋಣೆಯಲ್ಲಿ ಕುಳಿತಿದ್ದರು. ಕಾನೂನು ಬಲ್ಲ ವಿದ್ಯಾರ್ಥಿಯಾಗಿದ್ದ ಇವರು ಏತಕ್ಕಾಗಿ ಇವರ ಕೋಣೆಯಲ್ಲಿ ಅಕ್ರಮ ಪ್ರವೇಶ ಮಾಡಿದರೆಂದು ಅವರನ್ನು ತರಾಟೆಗೆ ತೆಗೆದುಕೊಂಡರು. ಅವರು ಸೌಮ್ಯರೀತಿಯಲ್ಲಿ ತಾವು ಪೋಲಿಸರೆಂತಲೂ ಇವರ ಕೋಣೆ ಶೋಧ ಮಾಡಲು ಬಂದಿರುವುದಾಗಿಯೂ ತಿಳಿಸಿದರು. ವೀರಭದ್ರಯ್ಯನವರು ಏರಿದ ಧ್ವನಿಯಲ್ಲಿ **"ಜಪ್ತಿ ವಾರೆಂಟ್ ತೋರಿಸಿರಿ"** ಎಂದು ಕೇಳಿದರು. ಅದನ್ನು ತಂದಿಲ್ಲವೆಂದು ಪೋಲಿಸರು ಹೇಳಿದರು. "ಹಾಗಾದರೆ ಹೊರಗೆ ಹೋಗಿರಿ. ಶೋಧನೆ ವಾರೆಂಟ್ ತಂದಲ್ಲಿ ಮಾತ್ರ ನನ್ನ ಕೋಣೆಯನ್ನು ಶೋಧಿಸಲು ಅವಕಾಶ ಕೊಡುವೆನು" ಎಂದು ಹೇಳಿದರು. ಅವರು ಹಾಗೇ ಮಾಡುವುದಾಗಿ ಹೇಳಿ ಹೊರಟು ಹೋದರು. ಆ ಸಮಯದಲ್ಲಿ ಇವರ ಕೋಣೆಯಲ್ಲಿ ಬಾಂಬುಗಳನ್ನು ತಯಾರಿಸುವ ಸಕಲ ಸಾಮಾಗ್ರಿಗಳು ಇದ್ದವು. ಅವರು ಹೋದ ಕೂಡಲೇ ಆ ಸಾಮಾಗ್ರಿಗಳನ್ನೆಲ್ಲಾ ಎತ್ತಿಕೊಂಡು ಹೋಗಿ ಆ ಮನೆಯೊಳಗಿದ್ದ ಬಾವಿಯಲ್ಲಿ ಹಾಕಿದರು. ಆನಂತರ ಕೋಣೆಗೆ ಬೀಗ ಹಾಕಿ ಕೂಡಲೇ ವೀರಭದ್ರಯ್ಯನವರ ಅಣ್ಣಂದಿರು ಕಾರ್ಯ ನಿರ್ವಹಿಸುತ್ತಿದ್ದ ರಾಯದುರ್ಗಕ್ಕೆ ಹೋದರು. ಅಲ್ಲಿ ಇವರ ಸ್ನೇಹಿತರಿಂದೊಡಗೂಡಿ ರಾತ್ರಿ ಸಮಯದಲ್ಲಿ ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿದರು.

ಮರುದಿವಸ ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು ದೊಡ್ಡ ಅಪರಾಧ. ಅದನ್ನು ಯಾರು ಮಾಡಿದರೆಂದು ತಿಳಿಸಿದವರಿಗೆ ಬಹುಮಾನ ಕೊಡುವುದಾಗಿ ಸರ್ಕಾರದವರು ಡಂಗುರ ಹೊಡಿಸಿದರು.

ಇವರ ಮೇಲೆ ಸಾಂಗ್ಲಿ, ಆನೆಗೊಂದಿ ಸಂಸ್ಥಾನಗಳಲ್ಲದೇ, ಮುಂಬೈ ಪ್ರಾಂತ್ಯಕ್ಕೆ ಸೇರಿದ ಬೆಳಗಾವಿಯಲ್ಲಿ ಸಹಿತ ದಸ್ತಗಿರಿಯ ವಾರೆಂಟುಗಳಿದ್ದವು. ಇವರೆಲ್ಲರ ಕಣ್ಣು ತಪ್ಪಿಸಿ ಭೂಗತರಾಗಿ ಇವರು ಕಾರ್ಯನಿರ್ವಹಿಸಿದರು. ಇವರ ಮೇಲಿನ ಮೂರು ರಾಜ್ಯಗಳ ವಾರೆಂಟುಗಳಿಂದ ಯಶಸ್ವಿಯಾಗಿ ತಪ್ಪಿಸಿಕೊಂಡು ಭೂಗತ ಚಳವಳಿ ಮಾಡಿದ ನೇತಾರರೆನಿಸಿಕೊಂಡರು.

ವೀರಭದ್ರಯ್ಯನವರು ಬಳ್ಳಾರಿಗೆ ಹೋಗಿ ಅಲ್ಲಿಯ ಸುಪ್ರಸಿದ್ಧ ವಕೀಲರಾಗಿದ್ದ ಶ್ರೀನಿವಾಸ್ ಅಯ್ಯರ್ ಅವರ ಆಫೀಸಿನಲ್ಲಿ ಉಮೇದುವಾರಿಕೆಯ ಅವಧಿಯ ವಿದ್ಯಾಭ್ಯಾಸವನ್ನು ಒಂದು ವರ್ಷ ಪೂರೈಸಿದರು. ಪಿ.ಭೀಮರಾವ್, ಹನುಮಂತರಾವ್, ಸತ್ಯವಂತರಾವ್, ಎಂ.ರಾಮರಾವ್, ಶ್ರೀಪತಿರಾವ್, ಪಂಪನಗೌಡ್ರು, ಕೋಲಾರ ರಾಮರಾವ್ ಮೊದಲಾದ ಹಿರಿಯ ವಕೀಲರು ಜರುಗಿಸುತ್ತಿದ್ದ ಅಪರಾಧಿಕ ಮತ್ತು ದಿವಾಣಿ ಕೇಸುಗಳನ್ನು ಇವರು ನೋಡುತ್ತಿದ್ದರು.

ವೀರಭದ್ರಯ್ಯನವರು ವಕಾಲತ್ತು ಪ್ರಾರಂಭಿಸಿದ ಸ್ವಲ್ಪ ಸಮಯದಲ್ಲಿ ಇವರಿಗೆ ಆತ್ಮೀಯರಾಗಿದ್ದ ಕೊಟ್ಟೂರಿನ ದೇವೇಂದ್ರಪ್ಪನವರೊಡಗೂಡಿ ಬಳ್ಳಾರಿಯಲ್ಲಿ ವಾಲ್ಮೀಕಿ ವಿದ್ಯಾರ್ಥಿ ನಿಲಯ ಪ್ರಾರಂಭಿಸುವಂತೆ ಮಾಡಿದರು. ಸಮಾಜವಾದಿಯೂ ದೈನಂದಿನ ಕಷ್ಟಗಳಿಗೆ ಸ್ಪಂದಿಸುವವರಾದ ವೀರಭದ್ರಯ್ಯನವರು ಕೊಟ್ಟೂರು, ಕೂಡ್ಲಿಗಿ ಮತ್ತು ಹರಪನಹಳ್ಳಿಗಳಲ್ಲಿ ನಿಮ್ನವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಕಾರಣಕರ್ತರಾದರು.

ಕೃಷಿ ಕ್ಷೇತ್ರದಲ್ಲಿ

ಸಾಮಾಜಿಕ ಚಿಂತನೆಗಳಲ್ಲದೆ ಕೃಷಿ ಕ್ಷೇತ್ರದಲ್ಲೂ ಇವರು ಗಮನ ಹರಿಸಿದ್ದಾರೆ. ಭತ್ತ, ರಾಗಿ, ಜೋಳ ಹೊಸ ತಳಿಗಳನ್ನು ಬೆಳೆದ ಬೀಜಗಳ ವೀರಭದ್ರಯ್ಯ ಎಂದೂ ಖ್ಯಾತರಾಗಿದ್ದಾರೆ. ಜಪಾನಿನ ತಳಿಯ ತೊಗರಿ ಬೀಜವನ್ನು ಸಹಿತ ಬೆಳೆದು ಪ್ರಗತಿಪರ ರೈತರಾಗಿ, ಬೀಜೋತ್ಪಾದಕರಾಗಿ ರೈತರ ಸೇವೆಯಲ್ಲಿ ತೊಡಗಿದ್ದಾರೆ. ರಾಜ್ಯದಲ್ಲಿ ಪ್ರಪ್ರಥಮವಾಗಿ ಗ್ರಾಮೀಣ ಗೃಹ ನಿರ್ಮಾಣ ಸಹಕಾರ ಸಂಘ ಸ್ಥಾಪಿಸಿದರು. ಈ ಮೂಲಕ ಮನೆ ಇಲ್ಲದ ಗ್ರಾಮೀಣರಿಗೆ ಮನೆ ನಿರ್ಮಾಣ ಮಾಡಿಕೊಡಲಾಯಿತು. **'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು'** ಎಂಬ ತತ್ವದಲ್ಲಿ ಇವರಿಗೆ ನಂಬಿಕೆಯಿದೆ. ಸ್ವಂತಃ ಕೃಷಿಕರೂ ಆಗಿರುವ ವೀರಭದ್ರಯ್ಯನವರು ಭತ್ತ, ರಾಗಿ, ಸಜ್ಜೆಗಳನ್ನು ಹೊಸ ತಳಿಗಳನ್ನು ಬೆಳೆದು ಬೀಜಗಳ ವೀರಭದ್ರಯ್ಯ ಎಂದು ಖ್ಯಾತರಾಗಿದ್ದಾರೆ. ೧೯೬೮–೧೯೬೯ರಲ್ಲಿ ಹೈಬ್ರಿಡ್, ಸಿ.ಎಸ್.ಹೆಚ್–೧ ಜೋಳದ ತಳಿಯನ್ನು ಕೇಂದ್ರ ಸರ್ಕಾರದವರು ಜನರ ಉಪಯೋಗಕ್ಕಾಗಿ ಬಿಡುಗಡೆ ಮಾಡಿದ್ದರು. ಆ ತಳಿಯ ಬೀಜವನ್ನು ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದಿಂದ ಪಡೆದು ಬೀಜೋತ್ಪಾದನೆಯನ್ನು ಮಾಡಿದರು.

ಆ ಸಮಯದಲ್ಲಿ ಇವರ ಗ್ರಾಮದ ರಾಮಾಚಾರ್ ಮತ್ತು ಬೊಮ್ಮಘಟ್ಟ ಗ್ರಾಮದ ಶಾನುಭೋಗರು ಸಹಿತ

ಬೀಜೋತ್ಪಾದನೆಯನ್ನು ಮಾಡಿದ್ದರು. ಅವರು ಸಹಿತ ೩ ಘಟಕದಲ್ಲಿ ಬೀಜಗಳನ್ನು ಸಂಸ್ಕರಿಸಿ ಸರ್ಕಾರದವರಿಗೆ ಮಾರಾಟ ಮಾಡಿದರು. ೧೯೬೯ರಿಂದ ಹೈಬ್ರಿಡ್ ಬೀಜದ ಜೋಳ, ಇಂಡಾಫ್‌ರಾಗಿ, ಅಧಿಕ ಇಳುವರಿಯ ಐ.ಆರ್.೮ ಮತ್ತು ೨೦ ಐ.ಆರ್.೬೪ ಹಾಗೂ ಐ.ಇ.ಟಿ. ೧೯೧೯ ತಳಿಯ ಭತ್ತಗಳನ್ನು ಮತ್ತು ಮಂಡ್ಯದ ಇತ್ತೀಚಿನ ಹೈಬ್ರಿಡ್ ಭತ್ತವನ್ನು ಬೆಳೆದಿರುವುದಲ್ಲದೆ, ಜಪಾನಿ ತಳಿಯ ತೊಗರಿ ಬೀಜವನ್ನು ಸಹಿತ ಬೆಳೆದು ಪ್ರಗತಿಪರ ರೈತರಾಗಿ, ಬೀಜೋತ್ಪಾದಕರಾಗಿ ರೈತರ ಸೇವೆಯಲ್ಲಿ ತೊಡಗಿದ್ದಾರೆ.

೧೯೭೪ರಲ್ಲಿ ವಿಶ್ವೇಶ್ವರಯ್ಯ ಬೀಜ ಕೇಂದ್ರ ಚನ್ನಪಟ್ಟಣ ದಿಂದ ಇಂಡಾಫ್-೧ ರಾಗಿ ಬೀಜವನ್ನು ತಂದು ವಡ್ಡಿನಕಟ್ಟೆ ಗ್ರಾಮದ ಇವರ ಗದ್ದೆಯಲ್ಲಿ ಬೆಳೆದು ಕ್ಷೇತ್ರೋತ್ಸವ ಮಾಡಿಸಿದರು. ಈ ಬೆಳೆಯನ್ನು ನೋಡಲು ಹರಪನಹಳ್ಳಿಯಿಂದ ಇವರ ಸ್ನೇಹಿತರಾದ ಕಟ್ಟಿ ಸೇತು ರಾಮಾಚಾರ್, ಸಿನಿಮಾ ರಾಜಣ್ಣ ಮೊದಲಾದವರು ಬಂದಿದ್ದರು. ಬೆಳೆಯು ಅತ್ಯುತ್ತಮವಾಗಿ ಬಂದಿದ್ದು ಉತ್ತಮ ಇಳುವರಿ ಕೊಟ್ಟಿದ್ದರಿಂದ ಈ ಬೆಳೆಯ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದಲ್ಲದೆ ಧಾರವಾಡ ಆಕಾಶವಾಣಿಯಲ್ಲಿ ಸಹಿತ ಈ ಸಮಾಚಾರವನ್ನು ಬಿತ್ತರಿಸಲಾಯಿತು.

೧೯೮೪-೮೫, ೧೯೮೫-೮೬ ಸಂವತ್ಸರಗಳಲ್ಲಿ ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದ ಅಧಿಕ ಇಳುವರಿ ಮತ್ತು ಉತ್ತಮ ಮೇವು ಕೊಡಬಲ್ಲ ಡಿ.ಎಸ್.ವಿ-೧ ಜೋಳದ ಬೀಜಗಳನ್ನು ಪಡೆದು ವೀರಭದ್ರಯ್ಯನವರು ತಮ್ಮ ಚೋರನೂರು ಜಮೀನುಗಳಲ್ಲಿ ಬೆಳೆಗಳನ್ನು ಬೆಳೆದು ಸಂಡೂರಿನ ಕೃಷಿ ಉಪನಿರ್ದೇಶಕರ ನೇತೃತ್ವದಲ್ಲಿ ಕ್ಷೇತ್ರೋತ್ಸವವನ್ನು ಮಾಡಿದರು. ಬಿಜಾಪುರ ಮತ್ತು ಕಲಬುರಗಿಯಂತಹ ಬಹಳ ದೂರದ ಊರುಗಳಿಂದ ರೈತರು ಹರಪನಹಳ್ಳಿಗೆ ಬಂದು ಬೀಜವನ್ನು ಕ್ರಯಕ್ಕೆ ತೆಗೆದುಕೊಂಡು ಹೋದರು. ಅಧಿಕ ಇಳುವರಿಯ ಮೆಕ್ಕೆಜೋಳ, ಸಜ್ಜೆ ಮತ್ತು ಭತ್ತವನ್ನು ಸಹಿತ ಬೆಳೆದು ಸಂಡೂರಿನ ಕೃಷಿ ಇಲಾಖೆಯಿಂದ ಕ್ಷೇತ್ರೋತ್ಸವವನ್ನು ಮಾಡಿದರು. ೧೯೭೪ರಲ್ಲಿ ಕಲಬುರಗಿಯಲ್ಲಿ ಭೀಕರ ಬರಗಾಲ ಬಂದಾಗ ಹರಪನಹಳ್ಳಿಯಿಂದ ಅನೇಕ ಲಾರಿಗಳಿಂದ ಜೋಳದ ಮೇವನ್ನು ಉಚಿತವಾಗಿ ಅಲ್ಲಿಗೆ ಒದಗಿಸಿದರು.

ಸಮಾಜಮುಖಿ ಚಿಂತನೆ

ಹಿಂದುಳಿದ ವರ್ಗಗಳ ಪರ ಹೋರಾಟ ಮಾಡಿದವರಲ್ಲಿ ಹಿರೇಮಠ ವೀರಭದ್ರಯ್ಯನವರು ಒಬ್ಬರು. ದೀನ ದಲಿತರ ಬಗ್ಗೆ ಅವರಿಗೆ ಅಪಾರವಾದ ಕಾಳಜಿ. ಹರಿಜನ ವಿದ್ಯಾರ್ಥಿ ನಿಲಯಗಳನ್ನು ಚೋರನೂರು, ಕೂಡ್ಲಿಗಿ ಮತ್ತು ಕೆಲವು ಕಡೆ ಸ್ಥಾಪಿಸಿದರು. ಮತ್ತು ಹಿಂದುಳಿದ ವರ್ಗಗಳ ಏಳಿಗೆಗೆ ಶ್ರಮಿಸಿದರು.

ವೀರಭದ್ರಯ್ಯನವರರದ್ದು ಜಾತ್ಯತೀತ ನಿಲುವು. ಹಳ್ಳಿಗಳ ರೈತ ಕಾರ್ಮಿಕರ ಮಕ್ಕಳು ವಿದ್ಯಾವಂತರಾಗಿ, ಒಳ್ಳೆಯ ಪ್ರಜೆಗಳಾಗಬೇಕು ಎಂದು ಕನಸು ಕಂಡವರು. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ವಿದ್ಯೆ ಅಗತ್ಯ ಎಂದು ಸಾರಿದವರು. ಆಗಿನ ಕಾಲದಲ್ಲಿ ಹೆಣ್ಣುಮಕ್ಕಳು ಶಾಲೆಗೆ ಬಾರದಿದ್ದಾಗ ಪ್ರೋತ್ಸಾಹಿಸಿದವರು. ಬಡ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಹಾಸ್ಟೆಲ್ ತೆರೆದುಕೊಟ್ಟರು. ಕೂಡ್ಲಿಗಿ, ಹರಪನಹಳ್ಳಿ, ಕೊಟ್ಟೂರು ಗಳಲ್ಲಿ ದಲಿತ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ನಿರ್ಮಾಣಕ್ಕೆ ದಾರಿ ಮಾಡಿ ಕೊಟ್ಟವರು.

ಆಧಾರಸೂಚಿ

೧. ಹಿರೇಮಠ ವೀರಭದ್ರಯ್ಯ. "ಹರಪನಹಳ್ಳಿ ತಾಲ್ಲೂಕು ಸ್ವಾತಂತ್ರ್ಯ ಹೋರಾಟಗಾರರು". ಶ್ರೀ ಜಗದ್ಗುರು ರೇಣುಕ ಪ್ರಕಾಶನ, ತೆಗ್ಗಿನಮಠ, ಹರಪನಹಳ್ಳಿ, ೧೯೯೮.

೨. ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಂ. ವೀರಭದ್ರಯ್ಯನವರೊಡನೆ ಸಂದರ್ಶನ. ದಿ. ೯ ಆಗಸ್ಟ್, ೨೦೧೪

೩. ಕುಂ.ಬಾ. ಸದಾಶಿವಪ್ಪ, "ಹರಪನಹಳ್ಳಿ ತಾಲ್ಲೂಕಿನ ಪರಿಚಯ", ಮಾಲತೇಶ ಪ್ರಕಾಶನ, ಹರಪನಹಳ್ಳಿ, ೨೦೦೦.

೪. ನಾಗಭೂಷಣಗೌಡ ಪಿ., "ಪ್ರಿನ್ಸಲೀ ಸ್ಟೇಟ್ಸ್ ಆಫ್ ಮೈಸೂರ್ ಆ್ಯಂಡ್ ಹೈದರಾಬಾದ್". ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ೨೦೦೦.

೫. ಸೂರ್ಯನಾಥ ಕಾಮತ್. "ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ", ಲೋಕಶಿಕ್ಷಣ ಟ್ರಸ್ಟ್ ಗ್ರಂಥಮಾಲೆ, ಬೆಂಗಳೂರು, ೧೯೯೨.

೬. ಸೂರ್ಯನಾಥ ಕಾಮತ್. "ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು" ಸಂಪುಟ ೧, ೨ ಮತ್ತು ೩. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ೧೯೯೮.

೭. Government of Karnataka, **"who is who"**.

೮. "ಕ್ವಿಟ್ ಇಂಡಿಯಾ ಚಳವಳಿ ೫೦ರ ನೆನಪು". ಸ್ವಾತಂತ್ರ್ಯ ಹೋರಾಟಗಾರರ ಮತ್ತು ಉತ್ತರಾಧಿಕಾರಿಗಳ ಸಂಘ, ಬೆಂಗಳೂರು, ೧೯೯೨.

೯. ಗೋಪಾಲರಾವ್.ಹೆಚ್.ಎಸ್. "ಕರ್ನಾಟಕ ಏಕೀಕರಣ ಇತಿಹಾಸ", ನವಕರ್ನಾಟಕ ಪ್ರಕಾಶನ, ಬೆಂಗಳೂರು–೧೯೯೬.

೧೦. Nijalingappa.S., **"My Life And Politics "**, Vision Books, Delhi, ೨೦೦೦.

೧೨೮

ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ತಿಮ್ಮನಗೌಡ ಪಾಟೀಲ್ ಮೆಣಸಿನಹಾಳ್

ಡಾ. ಬಿ.ಸಿ. ರಾಕೇಶ್* ಬಿ. ವನಜಾಕ್ಷಿ**

ಪ್ರಸ್ತುತ ನಮ್ಮ ಲೇಖನವು ಧೀರ ಸ್ವಾತಂತ್ರ ಹೋರಾಟಗಾರ ಹುತಾತ್ಮ ತಿಮ್ಮನಗೌಡ ಪಾಟೀಲ್ ಮೆಣಸಿನಹಾಳ್ ಅವರ ಜೀವನ ಮತ್ತು ಹೋರಾಟಕ್ಕೆ ಸಂಬಂಧಿಸಿದ್ದಾಗಿದೆ. ಸ್ವಾತಂತ್ರ ಹೋರಾಟದ ಸಮಯದಲ್ಲಿ ಅವರಿಗೆ ಸ್ಫೂರ್ತಿ ನೀಡಿದ ಅಂಶಗಳು ಮತ್ತು ಕೆಲವು ದಿಟ್ಟ ಹಾಗೂ ಕ್ರಾಂತಿಕಾರಕ ಹೋರಾಟಗಳು, ಸೆರೆಮನೆ ವಾಸ ಬ್ರಿಟೀಷ್‌ರಿಗೆ ಸಿಂಹಸ್ವಪ್ನವಾಗಿ ಕಾಡಿದ ವಿಚಾರಗಳನ್ನು ಲೇಖನದಲ್ಲಿ ವಿವರಿಸಲಾಗಿದೆ. ಉತ್ತರ ಕರ್ನಾಟಕದ ಅಂದರೆ ತುಂಗಭದ್ರ ನದಿಯನ್ನು ಒಳಗೊಂಡ ಉತ್ತರಭಾಗ ಆಮು ಸ್ವತಂತ್ರ ಪೂರ್ವದಲ್ಲಿ ಮುಂಬಾಯಿ ಪ್ರಾಂತ್ಯದಲ್ಲಿ ಇತ್ತು ಉತ್ತರ ಕರ್ನಾಟಕದ ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ಉತ್ತರಕನ್ನಡ ಜಿಲ್ಲೆಗಳು ಅದರಲ್ಲಿ ಸೇರಿಕೊಂಡಿದ್ದವು. ಬ್ರಿಟೀಷ್‌ರ ನೇರ ಆಡಳಿತ ಇದ್ದಂತಹ ಈ ಭಾಗದಲ್ಲಿ ಮೊಟ್ಟ ಮೊದಲ ಬಾರಿಗೆ ಸ್ವಾತಂತ್ರ ಹೋರಾಟದ ಅಲೆಗಳು ಹುಟ್ಟಿಕೊಂಡವು. ಬಾಲಗಂಗಾದರ ತಿಲಕ್ ಮತ್ತು ಮಹತ್ಮಾಗಾಂಧಿಯವರ ಪ್ರಭಾವ ಹೆಚ್ಚಾಗಿರುವುದನ್ನು ನಾವುಗಮನಿಸಬಹುದು. ೧೯೨೪ರ ಭಾರತೀಯ ರಾಷ್ಟ್ರೀಯ ಕಾಂಗ್ರೇಸ ಅಧಿವೇಶನ ನಡೆದು ಅದರ ಅಧ್ಯಕ್ಷತೆಯನ್ನು ಮಹತ್ಮಾಗಾಂಧಿಜಿ ವಹಿಸಿ ಕೊಂಡಿದ್ದರು. ಈ ಘಟನೆಯಿಂದ ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ ಹೋರಾಟದ ಅಲೆಗಳು ಹೆಚ್ಚಾಗಿ ಬೀಸತೊಡಗಿದವು.

ಹುತಾತ್ಮ ತಿಮ್ಮನಗೌಡ ಪಾಟೀಲರು ದಿನಾಂಕ: ೦೮-೧೦-೧೯೧೧ರಲ್ಲಿ ಜನಿಸಿದರು. ಮೆಣಸಿನಹಾಳ ಇವರು ಜನಿಸಿದ ಸ್ಥಳ. ಈ ಗ್ರಾಮವು ಹಾವೇರಿ ಜಿಲ್ಲೆಯ, ರಾಣೆಬೆನ್ನೂರು ತಾಲ್ಲೂಕಿನ ಕುಪ್ಪೆಲೂರು ಹೋಬಳಿಯಲ್ಲಿ ಬರುವ ಗ್ರಾಮವಾಗಿದೆ. ಶ್ರೀ ಹನುಮಗೌಡ ಪಾಟೀಲ್ ಮತ್ತು ನೀಲಮ್ಮ ತಂದೆ ತಾಯಿಗಳು. ಇವರುಗಳಿಗೆ ಮೂರು ಜನ ಗಂಡು ಮಕ್ಕಳು ಅವರಲ್ಲಿ ಹುತಾತ್ಮ ತಿಮ್ಮನಗೌಡರು ಕಿರಿಯವರು. ಈ ಮನೆತನವು ಕೃಷಿಯಾದರಿತವಾಗಿದ್ದು, ಇವರ ಮನೆದೇವರು ತಿರುಪತಿ ತಿಮ್ಮಪ್ಪ ಮತ್ತು ನೊಳಂಬ ವೀರಶೈವ ಲಿಂಗಾಯಿತ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಹುತಾತ್ಮ ತಿಮ್ಮನಗೌಡರು ನೆರೆಯ ಗ್ರಾಮವಾದ ತುಮ್ಮಿನಕಟ್ಟೆಯಲ್ಲಿ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಮಾಧ್ಯಮ ಏಳನೆಯ ತರಗತಿಯವರೆಗೆ ಓದಿದರು. ಈಗಲು ನಾವು ಅವರು ಓದಿದ ಶಾಲೆಯನ್ನು ನೋಡಬಹುದು, ಮುಖ್ಯ ಗುರುಗಳಾಗಿದ್ದ ಶ್ರೀ ಬಸವನಗೌಡ ಬಳ್ಳೂರು ರವರು ಇವರ ಆದರ್ಶ ಗುರುಗಳಾಗಿದ್ದರು. ವಿದ್ಯಾರ್ಥಿಗಳಿಗೆ ಸರ್ವವಿಧದಿಂದ ಸಹಾಯ ಮಾಡುತ್ತಿದ್ದರು. ಈ ಭಾಗದ ಮಕ್ಕಳಿಗೆ ತುಮ್ಮಿನಕಟ್ಟೆ ಶೈಕ್ಷಣಿಕ ಕೇಂದ್ರವಾಗಿತ್ತು. ರಾಷ್ಟ್ರ ಭಾವನೆ ಮತ್ತು ಹಿಂದೆ ನಡೆದ ಸ್ವಾತಂತ್ರ್ಯ ಹೋರಾಟದ ಕುರುಹುಗಳಾದ ನರಗುಂದ ಬಂಡಾಯ, ವೀರರಾಣಿ ಕಿತ್ತೂರು ಚನ್ನಮ್ಮನ ಕಥೆ, ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಮೊದಲಾದ ವೀರಚರಿತ್ರೆಗಳನ್ನು ಹೇಳುತ್ತಿದ್ದರು. ಇಂತಹ ವಾತಾವರಣದಲ್ಲಿ ತಿಮ್ಮನಗೌಡರು ವ್ಯಾಸಾಂಗ ಮಾಡುತ್ತಿರುವಾಗ ಕ್ರಿ.ಶ. ೧೯೩೨ರಲ್ಲಿ ಕಾನೂನು ಭಂಗ ಚಳುವಳಿ ಆರಂಭವಾಯಿತು. ಆ ಕಾಲಕ್ಕೆ ಒಂದು ದಿನ ಶಾಲಾ ಮಕ್ಕಳೊಂದಿಗೆ ರಾತ್ರೋ ರಾತ್ರಿ ಹೊರಟು ಹೀರೆಕೇರೂರು ತಾಲ್ಲೂಕಿನ ಹಾರಿಕಟ್ಟೆ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಈ ಸಂದರ್ಭಾದಲ್ಲಿ ಹುತಾತ್ಮ ತಿಮ್ಮನಗೌಡರಿಗೆ ೨ ವರ್ಷ ಕಠಿಣ ಶಿಕ್ಷೆ ಮತ್ತು ಐವತ್ತು ರೂಪಾಯಿ ದಂಡ ಕೊಡದಿದ್ದರೆ ಪುನಃ ಮೂರು ತಿಂಗಳ ಜೈಲುವಾಸ ಈ ರೀತಿಯಾಗಿ ತಿಮ್ಮನಗೌಡರಿಗೆ ಸ್ವಾತಂತ್ರ ಹೋರಾಟದ ಮೊದಲ ಶಿಕ್ಷೆಯನ್ನು ವಿಧಿಸಲಾಯಿತು. ಆಕಾಲಕ್ಕೆ ಸರಕಾರವು ರಾಷ್ಟ್ರೀಯ ಕೈದಿಗಳನ್ನು ಬಹಳ ಕ್ರೂರವಾಗಿ ನಡೆಯಿಸಿಕೊಳ್ಳುತ್ತಿದ್ದರು ಸರ್ವ ವಿಧಿತ. ಇವರನ್ನು ಪುಣೆಯ ಯರವಾಡ ಜೈಲಿನಲ್ಲಿ ಬಂಧಿಸಿಡಲಾಗಿತ್ತು ಈ ಸಂದರ್ಭದಲ್ಲಿ ರಾಷ್ಟ್ರೀಯ ಹೋರಾಟಗಾರರ ಪರಿಚಯವಾಯಿತು ಅಮೂಲಕ ಹಿಂದಿ ಭಾಷೆಯನ್ನು ಕಲಿತರು. ಜೊತೆಗೆ ರಾಷ್ಟ್ರೀಯ ಮುಖಂಡರ ಸಹವಾಸದಿಂದ ಉಜ್ವಲ ರಾಷ್ಟ್ರಭಕ್ತರಾದರು. ಕಟ್ಟಾ ದೇಶಾಭಿಮಾನದ ದೇಶಭಕ್ತನಾಗಿ

* ಸಹಾಯಕ ಪ್ರಾಧ್ಯಾಪಕರು ಹಾಗೂ ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ, ಎ ಆರ್ ಎಂ ಪ್ರಥಮ ದರ್ಜೆ ಕಾಲೇಜು
ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ-೦೪.

ಹೋರ ಬಂದ ಇವರು ಸಹಾ ಕಾಂಗ್ರೆಸ್ ಅಭಿಮಾನಿಗಳಾಗಿ ಸಾರ್ವಜನಿಕ ಸೇವೆಯಲ್ಲಿ ನಿರತರಾದರು. ತಿಮ್ಮನಗೌಡರು ತಮ್ಮ ಜೀವನದಲ್ಲಿ ರಾಷ್ಟ್ರೀಯತೆಯನ್ನು ಅಳವಡಿಸಿ ಕೊಂಡಿದ್ದರು. ಮಹಾತ್ಮ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆಯ ಕರೆ ಕೊಟ್ಟರು. ತಮ್ಮ ಮನೆಯಲ್ಲಿ ಹರಿಜನರನ್ನೇ ನೌಕರಿಗೆ ಇಟ್ಟುಕೊಂಡು ಮತ್ತು ಆತ್ಮೀಯತೆಯಿಂದ ನಡೆಸಿಕೊಂಡರು. ಈ ಭಾಗದಲ್ಲಿ ಹರಿಜನರಿಗೆ ಬಾವಿಗಳಲ್ಲಿ ಹರಿಜನರಿಗೆ ನೀರು ತುಂಬಲು ಅನುಕೂಲತೆಗಳನ್ನು ಮಾಡಿ ಕೊಟ್ಟರು. ಪ್ರತಿದಿನ ತಾವು ನೂತ ನೂಲಿನಿಂದಲೇ ಅರಿವೆ ತಯಾರಿಸಿ ತೊಡುವುದು ಬಡಜನರ ಕಷ್ಟಗಳಲ್ಲಿ ನೆರವಾಗು ವುದು ಮೊದಲಾದ ಕಾರ್ಯಗಳಲ್ಲಿ ಶ್ರೀ ಹುತಾತ್ಮ ತಿಮ್ಮನ ಗೌಡರು ಇದ್ದೇ ಇರಬೇಕು. ಇವರು ತಮ್ಮ ಹಳ್ಳಿಯಲ್ಲಿ ಬೈಲಾಟದ ಮೇಳ ಕಟ್ಟಿದರು ಮತ್ತು ಅದರಲ್ಲಿ ಅನೇಕ ಪಾತ್ರಗಳನ್ನು ಸಹ ಮಾಡುತ್ತಿದ್ದರು.

ಮೆಣಸಿನಹಾಳ್ ಗ್ರಾಮದಲ್ಲಿ ಸಿರಿವಂತ ಜಮೀನುದಾರ ಮನೆತನವಾದ ಹಾಲಪ್ಪಗೌಡರ ಮನೆತನ ಒಂದಿತ್ತು ಈ ಮನೆತನದ ಶ್ರೀಮತಿ ಹಾಲಮ್ಮನವರು ೧೯೩೬ರಲ್ಲಿ ದತ್ತು ಮಗನನ್ನಾಗಿ ಮಾಡಿಕೊಂಡರು. ಈ ರೀತಿಯಾಗಿ ಬಂದ ಸಂಪತ್ತಿನಿಂದ ಅವರು ಹಿಗ್ಗದೆ ಮೊದಲಿನಿಂದಲೂ ಸರಳ ಜೀವಿಯಾಗಿ ಸಂಪತ್ತಿನ ಉಪಯೋಗವನ್ನು ಬಡವರ ಬಂಧು ವಾಗಿ ಧೀನ ದಲಿತರ ಉದ್ಧಾರಕ್ಕೂ ಉಜ್ವಲ ರಾಷ್ಟ್ರಭಕ್ತರಾಗಿ ಜೀವನ ನಡೆಸುತ್ತಿದ್ದರು. ತಿಮ್ಮನಗೌಡ ಪಾಟೀಲರ ವಿವಾಹವು ಕ್ರಿ.ಶ. ೧೯೩೭ರಲ್ಲಿ ಆಡಂಬರವಿಲ್ಲದೇ ಸರಳ ರೀತಿಯಲ್ಲಿ ಅಣಜಿ ಗ್ರಾಮ ರೈತ ಕುಟುಂಬದ ಸಂಗಮ್ಮ ಎಂಬ ಕನ್ಯೆ ಯೊಡನೆ ಮದುವೆ ನೆರವೇರಿತು. ಇವರಿಗೆ ಶ್ರೀ ಬಸವನಗೌಡ ತಿಮ್ಮನಗೌಡ ಪಾಟೀಲ್ ಹಾಗೂ ಶ್ರೀಮತಿ ಮಹಾದೇವಕ್ಕ, ಹನುಮಗೌಡ ಪಾಟೀಲ್ ಎಂಬ ಮಕ್ಕಳು ಇದ್ದರು.

ಇವರು ೧೯೩೮ರಲ್ಲಿ ಪ್ರಾಂತೀಕ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಅಂದಿನ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಮುಖಂಡರ ನಕಟ ಸಂಪರ್ಕದಲ್ಲಿ ಭಾರತ ಬಂಧನ ವಿಮೋಚನೆಯ ಕಾರ್ಯದಲ್ಲಿ ತನು, ಮನ, ಧನದಿಂದ ಅವಿಶ್ರಾಂತವಾಗಿ ದುಡಿದರು. ಕ್ರಿ.ಶ. ೧೯೪೨ ಆಗಸ್ಟ್ ತಿಂಗಳಿನಲ್ಲಿ ಮುಂಬಾಯಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ "ಚಲೇಜಾವ್ ಚಳುವಳಿ ಬ್ರಿಟೀಷರೇ ಭಾರತದಿಂದ ತೊಲಗಿರಿ' ಎಂಬ ಗೊತ್ತುವಳಿ ಸ್ವಿಕೃತವಾದ ನಂತರ. ಇದು ಭಾರತೀಯರ ಕೊನೆಯ ಹೋರಾಟವಾಗಿಲಿ ಎಂದು ಈ ಕ್ರಾಂತಿಯಲ್ಲಿ ಪ್ರಾಣಾರ್ಪಣೆ ಮಾಡಲು ಕರೆಯಿತ್ತರು. ಕ್ರಾಂತಿ ಹತ್ತಿಕ್ಕಲು ಸರಕಾರವು ಲಾಠಿ ಪ್ರಹಾರ ಗೋಲಿಬಾರ, ನರಹತ್ಯೆ ನಡೆಸಿತು. ಆಗ ಎಲ್ಲೆಲ್ಲಿಯೂ ದಬ್ಬಾಳಿಕೆ ವಿಚಾರಣೆಯಿಲ್ಲದೆ ಬಂಧಿಸಿ ಬಂಧನವಾಯಿತು. ಇದರಿಂದ ಕುಪಿತರಾದ ಜನತೆ ಕ್ರಾಂತಿಯಲ್ಲಿ ಧುಮುಕಿದರು ತುಮ್ಮಿನಕಟ್ಟಿಯಲ್ಲಿ ಬುಧವಾರ ನಡೆಯುತ್ತಿದ್ದ ಸಂತೆಯನ್ನು ಹರತಾಳ ಮಾಡಿ ಬಂದ್ ಆಚರಿಸಿದರು ಮತ್ತು ಆ ಭಾಗದಲ್ಲಿ ಕ್ರಾಂತಿ ಸೈನ್ಯವನ್ನು ಸಂಘಟಿಸಿ ನೇತರರಾದರು. ಕ್ವಿಟ್ ಇಂಡಿಯಾ ಗೊತ್ತುವಳಿ ಅಂಗೀಕಾರವಾಗುವ ಮುನ್ನ ಅನಿರೀಕ್ಷಿತ ಬಂಧನದಿಂದ ಕ್ರಾಂತಿಯ ಮಾರ್ಗದರ್ಶನವಿರು ತ್ತಿರಲಿಲ್ಲ ತಿಮ್ಮನಗೌಡರು ಭಾರತವು ಸ್ವತಂತ್ರವಾಗುವವರೆಗೆ ಟೊಪ್ಪಿಗೆಯನ್ನು ಧರಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಇದರಿಂದ ಕುಪಿತರಾದ ಪಾಟೀಲರ ಕ್ರಾಂತಿ ಪಡೆಯ ಸೈನಿಕರು ಪೋಲಿಸರ ಮಾಲನ್ನು ಕಸಿದುಕೊಂಡು ಅಗ್ನಿ ಸ್ಪರ್ಶ ಮಾಡಿ ದರು. ಇವರನ್ನು ಬಂಧಿಸಲಾಗದೆ ಪೋಲೀಸರು ಅಶಕ್ತರಾಗಿ ಮರಳಿದರು.

ತಿಮ್ಮನಗೌಡ ಪಾಟೀಲರು ಮನೆಯಿಂದ ಹೊರ ಬೀಳುವ ಮುನ್ನ ತನ್ನಲ್ಲಿದ್ದ ೪೦,೦೦೦ ರೂಗಳ ಸಾಲ ಪತ್ರಗಳನ್ನು ತೆಗೆದು ಸಾಲಗಾರರನ್ನು ಕರೆಸಿ ಅವರೆದರು ಅವನ್ನೆಲ್ಲಾ ಹರಿದು ಹಾಕಿದರು. ಅಡವಿಟ್ಟಿದ್ದ ಚಿನ್ನದಾಗಿನ ಗಳನ್ನೆಲ್ಲಾ ಅವರವರಿಗೆ ತಿರುಗಿ ಕೊಟ್ಟರು. "ನೀವಿನ್ನು ಸಾಲಗಾರರಲ್ಲ ಸ್ವತಂತ್ರವಾಗಿ ಹೋಗಿರಿ ಮತ್ತು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿರಿ" ಎಂದು ಆಶೀರ್ವದಿಸಿ ಕಳುಹಿಸಿದರು. ಈ ಘಟನೆ ಸುತ್ತಲೂ ಹಬ್ಬಿ ಜನತೆ ತಿಮ್ಮನ ಗೌಡರನ್ನು ಅತ್ಯಂತ ಗೌರವ ಅಭಿಮಾನಗಳಿಂದ ಕಾಣ ಹತ್ತಿದರು. ಸ್ವಾತಂತ್ರ್ಯ ಯೋದರಲ್ಲಿ ತಿಮ್ಮನಗೌಡ ಪಾಟೀಲರು ಸೇನಾಪತಿಯಾಗಿಯೂ ಮತ್ತು ಇವರ ದಳದಲ್ಲಿ ಶಿವಪ್ಪನವರು, ಡಿ.ಆರ್. ಸೆಸ್ವಿ, ತಿರುಕಪ್ಪ ಹುಚ್ಚಪ್ಪನವರು, ವೀರಪ್ಪ ಹಂಚಿನಮನೆ, ರಾಜೋಟಪ್ಪ ಚನ್ನಪ್ಪ ಹಾವೇರಿ, ವೆಂಕಟಪ್ಪ ಪಾಸನದ, ಮಲ್ಲೇಶಪ್ಪ ಬಣಕಾರ, ಚಿಕ್ಕೊಣತಿ ಜಯದೇವಪ್ಪ ಚಿಕ್ಕೇರೂರ, ದೇಸಾಯಿ ಸೊಡಂಜಿ ಕೂಪ್ಪೇರ ಜೆಟಕೇರೂರ್, ಸಜ್ಜರ, ಶಿವಪ್ಪ ತಳವಾರ, ಮೆಣಸಿನಹಾಳ್, ನಿಂಗನಗೌಡ ಪಾಟೀಲ್ ಮೆಣಸಿನಹಾಳ್ ಬಾಲಪ್ಪನವರ ಮಾಸ್ತರರು, ಶ್ರೀಪತಿ ಅಂತರವಳ್ಳಿ, ವೀರ ಭದ್ರಪ್ಪ, ನ್ಯಾಮತಿ ಮೊದಲಾದವರಿದ್ದರು ಅಲ್ಲದೇ ಇವರು ಹೋದಲ್ಲೆಲ್ಲಾ ಸಾಕಷ್ಟು ತರುಣ ತಂಡ ಕಾರ್ಯ ಮಾಡಲು ಮುಂದಾಗುತ್ತಿದ್ದರು, ಸ್ವಾತಂತ್ರ್ಯ ಯೋಧರಿಗೆ ಸಕಲ ರೀತಿಯಿಂದ ಸಹಾಯ ಮಾಡುತ್ತಿದ್ದರು.

ಶ್ರೀ ವೀರಭದ್ರಪ್ಪ ನ್ಯಾಮತಿ ಇವರು ಪ್ರಚಾರ ಕಾರ್ಯ ದಲ್ಲಿ ಬುಲೆಟಿನ್ ಹಂಚುವುದರಲ್ಲಿ ಪಳಗಿದವರಿದ್ದು ಚಾಣಕ್ಷತನ ದಿಂದ ಮಾಡುತ್ತಿದ್ದರು ಕರ ಪತ್ರಗಳನ್ನು ತಯಾರಿಸುವ ಕೇಂದ್ರ ತುಮ್ಮಿನಕಟ್ಟಿಯ ಗ್ರಾಮ ಪಂಚಾಯಿತಿ ಕಛೇರಿಯೇ ಆಗಿತ್ತು. ಆಗಿನ ಪಂಚಾಯಿತಿ ಅಧ್ಯಕ್ಷರಾಗಿದ್ದ ರಾಮಚಂದ್ರಪ್ಪ

ಪಾಟೀಲ್ ಯೋಧರಿಗೆ ಸಕಲ ರೀತಿಯಿಂದ ಸಹಾಯ ಮತ್ತು ಸೂಚನೆಗಳನ್ನು ಕೊಡುತ್ತಿದ್ದರು. ಆಗಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿದ್ದ ಡಿ.ಜಿ.ಅಜ್ಜಂಪುರ ಇವರು ಕರಪತ್ರಗಳನ್ನು ತಯಾರಿಸುವಲ್ಲಿ ಮುದ್ರಣ ಯಂತ್ರವಾಗಿದ್ದರು. ಶ್ರೀ. ತಿಮ್ಮನಗೌಡ ಪಾಟೀಲರು ತಮ್ಮ ತಂಡದೊಡನೆ ರಾಣೆಬೇನ್ನೂರು, ಹಿರೇಕೇರೂರು, ಶಿಕಾರಿಪುರ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ಪ್ರಚಾರ ಕೈಗೊಂಡು ಅಲ್ಲಿಯ ಜನತೆಯು ಸರಕಾರದ ವಿರುದ್ಧ ಬಂಡೇಳಲು ಪ್ರೇರೇಪಿಸಿದರು ಮತ್ತು ಹರತಾಳ ಮಾಡಿಸ ಹತ್ತಿದರು. ಇವರ ಕ್ರಾಂತಿ ಕಾರಕ ಚಟುವಟಿಕೆಗಳು ಬ್ರಿಟೀಷ್ ಸರ್ಕಾರದ ಕಣ್ಣನ್ನು ಕುಕ್ಕಿತು. ಇವರನ್ನು ಬಂಧಿಸಲು ಪೋಲೀಸ್ ಪಡೆಯನ್ನೇ ನೇಮಿಸಿತು. ಅಂದಿನಿಂದ ಇವರು ಅಜ್ಞಾತ ವಾಗಿದ್ದು ಕಾರ್ಯಕ್ರಮಗಳನ್ನು ರೂಪಿಸಲು ಆಗಾಗ ಬ್ಯಾಡಗಿಗೆ ಹೋಗಿ ಕೆ.ಎಸ್. ಪಾಟೀಲ್‌ರನ್ನು ಕಂಡು ಅವರೊಡನೆ ಅಗಾಗ್ಗ ಅಪ್ತಾಲೋಚನೆ ಹಾಗೂ ಕಾರ್ಯಕ್ರಮ ಗಳನ್ನು ನಿರ್ಧಾರ ಮಾಡಿಕೊಂಡು ಅವರ ನೇತೃತ್ವದಲ್ಲಿ ಕಾರ್ಯ ನೆಡೆಸುತ್ತಿದ್ದರು. ಬ್ಯಾಡಗಿಯಲ್ಲಿ ಉಳಿದಾಗ ಶ್ರೀ ಮುರಿಗೆಪ್ಪ ಶೆಟ್ಟರ ಅಂಗಡಿ ಎದುರಿಗಿನ ಮೆಣಸಿನ ಕಾಯಿ ಅಂಗಡಿಗಳ ಮೇಲೆಯೇ ಮಲಗುತ್ತಿದ್ದರು.

ಶ್ರೀ ಮೈಲಾರ ಮಹಾದೇವ ಇವರನ್ನು ತೋಟದ ಯಲ್ಲಾಪುರದಲ್ಲಿ ಸಂಧಿಸಿ. ತಿಂಗಳಲ್ಲಿ ಎರಡು ಕಾರ್ಯಕ್ರಮ ಗಳನ್ನು ಮಾಡಲೇಬೇಕೆಂದು ನಿರ್ಧರಿಸಿದರು. ದಿನಾಂಕ: ೧೫ ಮತ್ತು ತಿಂಗಳ ಕೊನೆಯ ದಿನಗಳು ಮಾಡಲೇಬೇಕಾದ ಕಾರ್ಯಗಳಿಗೆ ಮೀಸಲು, ಉಳಿದ ದಿನಗಳಲ್ಲಿ ಅನುಕೂಲ ವಾದಾಗ ಸರ್ಕಾರಿ ಆಸ್ತಿಗಳ ನಾಶ, ಹಪ್ತೆ, ಲೂಟಿ, ಟಪಾಲ್ ಅಪಹರಣ, ಪೋಲೀಸ್‌ರಿಂದ ಶಸ್ತ್ರ ಅಪಹರಣ ಮುಂತಾದ ಕಾರ್ಯಗಳನ್ನು ಯೋಜನಾ ಬದ್ಧವಾಗಿ ಮಾಡಲು ಕಾರ್ಯಕ್ರಮ ಹಾಕಿಕೊಂಡರು. ಮುಂದೆ ಒಂದು ದಿವಸ ಹರತಾಳ ಪ್ರಚಾರ ಮಾಡುವಾಗ ೮ ಜನ ಸಶಸ್ತ್ರ ಪೋಲಿಸರು ಬಂದು ಬಂಧಿಸಲು ಹೆಣಗಿದರು ಆಗ ಮಿಂಚಿನ ವೇಗದಿಂದ ತಿಮ್ಮನಗೌಡರು ತಮ್ಮ ಗುಂಪಿನೊಂದಿಗೆ ಪೋಲಿಸರ ಮೇಲೆ ಎರಗಿದರು ಮತ್ತು ಅವರ ಬಂದೂಕುಗಳನ್ನು ಕಸಿದು ಕೊಂಡರು ಇದರಿಂದ ಸರ್ಕಾರ ರೊಚ್ಚಿಗೆದ್ದು ತಿಮ್ಮನಗೌಡ ಪಾಟೀಲರನ್ನು ಹಿಡಿದುಕೊಟ್ಟವರಿಗೆ ಒಂದು ಸಾವಿರ ರೂಪಾಯಿಗಳನ್ನು ಬಹುಮಾನ ಕೊಡುವುದಾಗಿ ಸಾರಿತು ಮತ್ತು ಬಲವಾದ ಪೋಲೀಸ್ ಪಡೆಯನ್ನು ನೇಮಿಸಿ ಅವರಿಗೆ ಗುಂಡಿಕ್ಕಿಯಾದರು ಹೆಣವನ್ನು ತರಲು ಅಜ್ಞೆಮಾಡಿತು. ಇದರಿಂದ ಕುಪಿತರಾದ ತಿಮ್ಮನಗೌಡ ಪಾಟೀಲರು ಮತ್ತಷ್ಟು ಆವೇಶದಿಂದ ವೇಶಾಂತರ ಹೊಂದಿ ತಮ್ಮ ಕಾರ್ಯವನ್ನು ತೀವ್ರಗತಿಯಿಂದ ಸಾಗಿಸ ಹತ್ತಿದರು ಮತ್ತು ಮಾರಕಾಸ್ತ್ರಗಳ ಸಂಗ್ರಹ ಹೆಚ್ಚಿಸಿದರು ಪ್ರತಿ ದಾಳಿಗೆ ಸಿದ್ದರಾದರು. ಗುಡ್ಡದ ಮಾದಪುರ ಆರಕ್ಷಕ ಕಛೇರಿಯ ಮೇಲೆ ದಾಳಿ ಮಾಡಿ ಬಂದೂಕು ಕಸಿದು ಕಛೇರಿಯನ್ನು ಆಗ್ನಿಗೆ ಅರ್ಪಿಸಿದರು. ೧೫ನೇ ಸೆಪ್ಟೆಂಬರ್ ೧೯೪೨ರಂದು ಬ್ಯಾಡಗಿ ರೈಲ್ವೆ ನಿಲ್ದಾಣವನ್ನು ಸುಡುವ ಕಾರ್ಯಕ್ರಮ ಸಿದ್ದ ಮಾಡಿಕೊಂಡರು. ಸುಣಕಲ್ ಬಿದರಿಗೆ ಎಲ್ಲಾ ಕ್ರಾಂತಿಕಾರರು ಬಂದು ಅಲ್ಲಿ ಕೂಡಿಕೊಂಡರು ವೀರಮಾತೆಯಾದ ಕುಸುಗೂರು ಬಸಮ್ಮ ನವರು ಎಲ್ಲಾ ಮಕ್ಕಳಿಗೆ ಉಪಚಾರ ಮಾಡಿ ಅಶೀರ್ವದಿಸಿ ಅವಶ್ಯವೆನಿಸಿದಾಗ ಬರಲು ತಿಳಿಸಿದರು. ಇವರ ಮನೆ ಕ್ರಾಂತಿ ಕಾರರ ಬಿಡಾಯಿತು. ಕಾಕೋಳದಲ್ಲಿ ಸಂಗೂರು ಕರಿಯಪ್ಪ ನವರ ಗುಂಪಿನೊಡನೆ ಕೂಡಿಕೊಂಡು ಬ್ಯಾಡಗಿ ರೈಲ್ವೆ ನಿಲ್ದಾಣದ ಮೇಲೆ ಹಲ್ಲೆ ಮಾಡಲು ಹೊರಟರು ಶ್ರೀ ವೆಂಕಟಪ್ಪ ನವರು ಮಾರವಾಡಿ ವೇಷ ಧರಿಸಿ ಹಿಂದಿಯಲ್ಲಿ ಸ್ಟೇಷನ್ ಮಾಸ್ಟರ್ ಜೊತೆ ಮಾತನಾಡುತ್ತಾ ಅವರ ಮೇಲೆ ಎರಗಿ ಅವರನ್ನು ಅಪಹರಿಸಿ ನಿಲ್ದಾಣಕ್ಕೆ ಬೆಂಕಿಯನ್ನು ಹತ್ತಿಸಿ ರಾತ್ರೋರಾತ್ರಿ ಕಡೂರು ಗ್ರಾಮಕ್ಕೆ ಬಂದು ತುಮ್ಮಿನಕಟ್ಟೆಯ ಶ್ರೀ ಬಸವಣ್ಯಪ್ಪನವರ ಮನೆಯಲ್ಲಿ ತಂಗಿದರು.

ದಿನಾಂಕ: ೨-೧೦-೧೯೪೨ ರಂದು ಗಾಂಧೀಜಿ ಯವರ ಜನ್ಮ ದಿನ ತುಮ್ಮಿನಕಟ್ಟೆ ಗ್ರಾಮದಲ್ಲಿ ಬೆಳಗಿನ ಆರು ಗಂಟೆಗೆ ನಗರ ಸಂಕೀರ್ತನೆ ಹೊರಟು ಬೀದಿ ಬೀದಿ ಸುತ್ತಿ ಬಸವೇಶ್ವರ ದೇವಾಲಯದ ಎದರು ಧ್ವಜ ವಂದನೆಯು ಸಿದ್ದರಾಮಪ್ಪ ಅಜ್ಜಂಪುರ ಇವರ ಹಸ್ತದಿಂದ ನೆರವೇರಿತು. ಮಧ್ಯಾಹ್ನ ೧೨.೩೦ರ ವೇಳೆಗೆ ೨೫ರಿಂದ ೩೦ ಜನ ಪೋಲೀಸರು ಸ್ಥಳಕ್ಕೆ ಬಂದು ಮೆರವಣಿಗೆಯನ್ನು ತಡೆದರು. ಅದರೆ ಶಾಂತ ರೀತಿಯ ಮೇರವಣಿಗೆಯನ್ನು ಮಾಡುವುದಾಗಿ ಭರವಸೆ ನೀಡಿದರು. ಅಂದು ತುಮ್ಮಿನಕಟ್ಟೆಯ ಸಂತೆ, ಮಳೆಯೂ ಬಂದಿತ್ತು ಈ ಉತ್ಸವದಿಂದ ಪುಳಕಿತರಾದ ಜನರು ರಾಷ್ಟ್ರ ಪ್ರೇಮಿಗಳಾದರು ಇದಕ್ಕೆಲ್ಲಾ ತಿಮ್ಮನಗೌಡ ಪಾಟೀಲರೆ ಕಾರಣರಾಗಿದ್ದರು. ಇದರಿಂದ ರೊಚ್ಚಿಗೆದ್ದ ಸರಕಾರ ಈ ಭಾಗದ ಜನರನ್ನು ಸದೆ ಬಡಿಯಲು ಮತ್ತು ತಿಮ್ಮನಗೌಡ ಪಾಟೀಲರನ್ನು ಸೆರೆ ಹಿಡಿಯಲು ಮಿಲಿಟರಿ ಸಹಾಯ ಕೋರಿತು. ಸಂತೆಗೆ ಮತ್ತು ಉತ್ಸವಕ್ಕೆ ಬಂದ ಜನರು ತುಮ್ಮಿನ ಕಟ್ಟೆಯಲ್ಲಿಯೇ ವಸತಿ ಮಾಡಿದರು. ರಾತ್ರೋರಾತ್ರಿಯಲ್ಲಿ ನಾಲ್ಕೈದು ನೂರು ಸಶಸ್ತ್ರ ಪರದೇಶಿ ಮಿಲಿಟರಿಯವರು ತುಮ್ಮಿನಕಟ್ಟೆ ಮತ್ತು ಮೆಣಸಿನಹಾಳ್ ಗ್ರಾಮಗಳನ್ನು ಮುತ್ತಿಗೆ ಹಾಕಿದರೂ ಜನರಿಗೆ ಚಿತ್ರ ಹಿಂಸೆ ಕೊಟ್ಟರು ನಿಶ್ಯಸ್ತ್ರರಾದ ಜನರು ಏನು ಮಾಡಲು ಸಾಧ್ಯ ಮನೆ ಮನೆಗಳನ್ನು ನುಗ್ಗಿದರು ಗಂಡು ಮಕ್ಕಳನ್ನು ಹಿಡಿದುತಂದರು. ಆ ಕಾಲಕ್ಕೆ

[illegible] ಕಾಯುವರು ನಾವು ಕಂಡು ಜನರನ್ನು ಬಂಧಿಸುವೆವೆಂದು ಜನರನ್ನು ಅಮಾನುಷ ರೀತಿಯಲ್ಲಿ ನಡೆಸಿ ಕೊಂಡು ಸುತ್ತಲೂ ಮಹಿಳೆಗಳನ್ನು ಹಚ್ಚಿ ಹೊಡೆಯುವುದನ್ನು ತೋರಿಸಿ ಎಂದು ಅಧಿಕಾರದ ದರ್ಪವನ್ನು ತೋರಿಸಿದರು ಅದರೆ ತಿಮ್ಮನಗೌಡ ಪಾಟೀಲರು ಸಿಗಲಿಲ್ಲ ಮೆಣಸಿನಹಾಳ್ ಗ್ರಾಮದಲ್ಲಿ ಇದೇ ತರಹದ ದಬ್ಬಾಳಿಕೆ ಮಾಡಿ ಚಿತ್ರಹಿಂಸೆ ಮಾಡಿ ಶ್ರೀ ತಿಮ್ಮನಗೌಡರ ತಾಯಿ ಶ್ರೀಮತಿ ಹಾಲಮ್ಮ ಮತ್ತು ಅವರ ಅಣ್ಣ ತಮ್ಮಂದಿರನ್ನು ಬಂಧು ವರ್ಗದವರನ್ನು ಬಂಧಿಸಿಕೊಂಡು ಹೋದರು.

ಈ ಕಾಲಕ್ಕೆ ತಡಕನಹಳ್ಳಿಯ ಪಾಟೀಲರ ಮನೆತನಗಳಲ್ಲಿ ಗಂಗನಗೌಡ ಪಾಟೀಲ್, ಮಹದೇವಗೌಡ ಪಾಟೀಲರು ಇವರೆಲ್ಲಾ ಕೆ.ಫ್ ಪಾಟೀಲ್ ಮಾಸ್ತರರ ಶಿಷ್ಯರಾಗಿದ್ದರು. ಗಂಗನಗೌಡ ಪಾಟೀಲರು ೧೯೩೨ರಲ್ಲಿಯೇ ವಿದ್ಯಾರ್ಥಿ ಗಳಾಗಿದ್ದಾಗ ಮೂರು ವರ್ಷಗಳ ಕಾರಗೃಹ ಅನುಭವಿಸಿದರು. ಗಂಗನಗೌಡರ ಮನೆಯ ಮೇಲೆ ದಾಳಿ ಮಾಡಿದಾಗ ಗಂಗನ ಗೌಡರ ತಂದೆ ಹನುಮಗೌಡರು ಪ್ರತಿರೋಧವನ್ನು ಬಡ್ಡಿದರು ಅಕ್ರಮ ಪ್ರವೇಶದ ಮನವರಿಕೆ ಮಾಡಿಕೊಟ್ಟರು ಇವರು ಕೂಡ ಸ್ವಾತಂತ್ರ ಹೋರಾಟಗಾರರಿಗೆ ಸಹಕಾರಿಯಾಗಿದ್ದರು. ಶ್ರೀ ಗಂಗನಗೌಡರು ಹಂಸಭಾವಿಯಲ್ಲಿ ವಿದ್ಯಾರ್ಥಿಯಾಗಿದ್ದಾಗ ೧೯೩೨ರಲ್ಲಿ ಈ ಚಲ ಮರ ಕಡಿದಿದ್ದಕ್ಕಾಗಿ ಉಳಿದ ಅನೇಕ ವಿದ್ಯಾರ್ಥಿಗಳೊಡನೆ ೩ ವರ್ಷ ಶಿಕ್ಷೆ ಅನುಭವಿಸಿದ್ದರು. ಆಗ ಕೆ.ಎಫ್. ಪಾಟೀಲರು ಹಂಸಭಾವಿಯಲ್ಲಿ ಶಾಲಾ ಮುಖ್ಯಸ್ಥ ರಾಗಿದ್ದರು ಇವರನ್ನು ಸರ್ಕಾರವು ಬಂಧಿಸಿ ೬ ತಿಂಗಳು ಕಾಲ ಶಿಕ್ಷೆಗೆ ಗುರಿ ಮಾಡಿತ್ತು.

ಬ್ಯಾಡಗಿಯಿಂದ ಹಿರೇಕೆರೂರಿಗೆ ಬರತಕ್ಕ ಟಪಾಲ ಬಸ್ ಅನ್ನು ಅಡಗಿ ಕುಳಿತಿದ್ದ ತಿಮ್ಮನಗೌಡರು ಹಾಗೂ ಸಂಗೂರು ಕರಿಯಪ್ಪನವರು ತಮ್ಮ ಸಂಗಡಿಗರೊಡನೆ ಬಸ್ಸಿನ ಮೇಲರಗಿ ಎಲ್ಲಾ ಕಾಗದಗಳಿಗೆ ಅಗ್ನಿಸ್ಪರ್ಶ ಮಾಡಿದರು. ಇಷ್ಟರಲ್ಲಿಯೇ ತಿಮ್ಮನಗೌಡರ ಬಳಗವು ಬಂದೂಕು ಪಿಸ್ತೂಲ್ ಕೈಬಾಂಬ್ ಮೊದಲಾದ ಮಾರಕಾಸ್ತ್ರಗಳಿಂದ ಸಜ್ಜಾಗಿತ್ತು ಇದನ್ನು ತಿಳಿದ ಸರಕಾರ ದೊಡ್ಡ ಪಡೆಯನ್ನು ನೇಮಿಸಿ ಕಂಡಲ್ಲಿ ಗುಂಡಿಕ್ಕಲು ಆಜ್ಞೆ ಮಾಡಿತು ಕಾಗಿನೆಲ್ಲಿ ಜೇನಹಳ್ಳಿ ಮುಂತಾದ ಹಳ್ಳಿಗಳಲ್ಲಿ ವೇಶಾಂತರದಿಂದ ಇದು ಕಾರ್ಯಾಚರಣೆಯನ್ನು ಮಾಡುತ್ತಿದ್ದರು ತಮ್ಮಲ್ಲಿದ್ದ ನಗದು ಹಣ ಖರ್ಚಾಗಿತ್ತು. ತಮ್ಮ ಸ್ಥಿರಾಸ್ತಿ ೮೦ ಎಕರೆ ಜಮೀನಿನ ಸ್ವಲ್ಪ ಭಾಗ ಜಮೀನನ್ನು ಅಡವಿಟ್ಟು ೧೦ ಸಾವಿರ ರೂಪಾಯಿಗಳನ್ನು ಸಾಲ ಮಾಡಿದರು.

ಮೈಲಾರ ಮಹದೇವ ಮತ್ತು ತಿಮ್ಮನಗೌಡರು ಅಜ್ಞಾತ ಸ್ಥಳದಲ್ಲಿ ಸಂಧಿಸಿ ಹೊಸ್ರಿತ್ತಿ ಖಜಾನೆಯನ್ನು, ಮೈಲಾರ ಮಹದೇವರು ಕುಪ್ಪೆಲೂರು ಖಜಾನೆಯನ್ನು, ತಿಮ್ಮನಗೌಡರು ತಮ್ಮ ಗುಂಪುಗಳೊಂದಿಗೆ ಲೂಟಿ ಮಾಡುವ ಕಾರ್ಯಕ್ರಮ ವನ್ನು ಹಾಕಿಕೊಂಡರು, ಸಶಸ್ತ್ರ ಪೋಲೀಸರನ್ನು ಎದುರಿಸಲು ಬಂದೂಕು ಪಿಸ್ತೂಲ್ ಮತ್ತು ಕೈಬಾಂಬುಗಳಿಂದ ದಾಳಿ ಮಾಡುವ ಯೋಜನೆಯನ್ನು ರೂಪಿಸಿದರು.

ದಿನಾಂಕ: ೧೮-೦೨-೧೯೪೩ರಂದು ತಿಮ್ಮನಗೌಡರು ದಳದ ಎಲ್ಲಾ ಸೈನಿಕರಿಗೆ ಅಂತರವಳ್ಳಿಗೆ ಬರಲು ತಿಳಿಸಿದ ಪ್ರಕಾರ ಎಲ್ಲರೂ ಕೂಡಿ ಕುಪ್ಪೆಲೂರಿಗೆ ರಾತ್ರಿ ೧೦ ಗಂಟೆ ಸಮಯಕ್ಕೆ ಬಂದರು. ಕುಪ್ಪೆಲೂರು ಚಾವಡಿಯಲ್ಲಿ ಸಂಧಿಸಿದ ಹಳ್ಳಿಹಳ್ಳಿ ಗ್ರಾಮಸ್ಥರು ತಾವು ಶೇಖರಿಸಿದ ಕಂದಾಯವನ್ನು ಶೇಖದಾರರ ಕಡೆಗೆ ಜಮಾ ಮಾಡಿದ್ದರು ಸಂಗ್ರಹಿಸಿದ್ದ ಹಣವನ್ನು ಚಾವಡಿಯ ಕೊಠಡಿಯಲ್ಲಿಟ್ಟು ಬೀಗ ಹಾಕಲಾಗಿತ್ತು. ತಿಮ್ಮನಗೌಡರು ತಮ್ಮ ಗುಂಪಿನೊಳಗೆ ಮಿಂಚಿನಂತೆ ಚಾವಡಿಯ ಮೇಲೆ ದಾಳಿ ಮಾಡಿದರು ಮತ್ತು ಶ್ಯಾನುಬೋಗರು ಕಕ್ಕ ಜಿಕ್ಕೆಯಾದವರು ಖಜಾನೆಯ ಹಣ ಎಲ್ಲಿದೆಯೆಂದು ತಿಮ್ಮನ ಗೌಡರು ಗರ್ಜಿಸಿದರು ಮತ್ತು ಕೊಡಲಿಯಿಂದ ಬೀಗವನ್ನು ಮುರಿದರು ಆದರೆ ತಮ್ಮ ಕೈಯಲ್ಲಿದ್ದ ಕೈಬಾಂಬ್ ಕೈ ಜಗಿತ ದಿಂದ ಸ್ಫೋಟವಾಗಿ ಎಡಗೈಯನ್ನು ಛಿದ್ರಛಿದ್ರ ಮಾಡಿತ್ತು. ಎಡಕೈನಿಂದ ಒಂದೆ ಸಮನೆ ರಕ್ತ ಸುರಿಯುತ್ತಿದ್ದರು ಲೆಕ್ಕಿಸದೆ ಖಜಾನೆಯನ್ನು ಲೂಟಿ ಮಾಡಿ ಹೊರಟರು. ಸ್ವಲ್ಪ ಭಾಗವನ್ನು ಅಲ್ಲಿನ ರೈತರಿಗೆ ಕೊಟ್ಟು ಉಳಿದ ಹಣದೊಂದಿಗೆ ಅಲ್ಲಿಂದ ಹೊರಟರು. ಹೆಚ್ಚಿಗೆ ರಕ್ತಸ್ರಾವವಾಗಿ ತಿಮ್ಮನಗೌಡರು ಮೂರ್ಛೆ ಹೋದರು. ಸಂಗಡಿಗರು ಗಾಬರಿಯಾಗಿ ಅವರನ್ನು ಹೊತ್ತು ಕೊಂಡು ಹೊರಟರು, ತುಂಗಭದ್ರ ನದಿಯ ಆಚೆ ದಡದಲ್ಲಿ ರುವ ಸೋದರಿಯ ಊರು ಪಾಳ್ಯಕ್ಕೆ ಹೋಗಲು ಸೂಚಿಸಿ ದರು. ಅಲ್ಲಿ ಇವರ ಬಳಗ ಬಹಳವಿತ್ತು ಅದರೂ ರಕ್ತಸ್ರಾವ ನಿಲ್ಲಲಿಲ್ಲ. ಸಂಗಡಿಗರು ದಾವಣಗೆರೆಗೆ ಹೋಗಿ ಚಿಕಿತ್ಸೆ ಪಡೆಯಲು ಸಲಹೆ ನೀಡಿದರೂ ತಿಮ್ಮನಗೌಡರು ಒಪ್ಪಲಿಲ್ಲ. ಸರ್ಕಾರಕ್ಕೆ ಸಿಕ್ಕದೆ ಭಾರತದ ಬಂಧ ವಿಮೋಚನೆಗೆ ಮಾಡುವ ಕೆಲಸಗಳು ಬಹಳಿವೆ. ಹಳ್ಳಿಯಲ್ಲಿಯೇ ಗಿಡ ಮೂಲಿಕೆಗಳ ವೈದ್ಯ ಚಿಕಿತ್ಸೆ ನಡೆಯಿತು. ಅದರೆ ಗಾಯ ಬಲವಾಗಿತ್ತು ಮತ್ತು ರಕ್ತಸ್ರಾವ ಹೆಚ್ಚಾಗಿತ್ತು ತುಮ್ಮಿನಕಟ್ಟೆಗೆ ಬಂದು ಚೋಳನಹಳ್ಳಿಯವರ ಮನೆಯಲ್ಲಿಟ್ಟು ಮಧ್ಯ ಭುಜಂಗರಾವ್ ಐರಣಿಯವರು ಒಂದು ದಿನ ಉಪಚರಿಸಿ. ದಾವಣಗೆರೆ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಹೋಗಲು ತಿಳಿಸಿದರು. ಆ ಪ್ರಕಾರ ಚಕ್ಕಡಿಗೆ ಹಿಂದೆ ಮುಂದೆ ಬರುಕೆ ಹಾಕಿ ದಾವಣಗೆರೆಗೆ ಕೊಂಡೊಯ್ದರು. ಇಂತ ವೀರನ ಸ್ಥಿತಿ ಕಂಡು ವೈದ್ಯರು ಮರುಗಿ ದರು. ನಾಲ್ಕು ದಿವಸ ಮುಂಚೆ ತಂದಿದ್ದರೆ ಬದುಕಿಸಬಹು ದಿತ್ತೆಂದು ಆದರೆ ಈಗ ಅಂತ್ಯಾವಸ್ಥೆಯಲ್ಲಿದೆಯೆಂದು ತಿಳಿಸಿ ದರು ಸಾಧ್ಯವಾದಷ್ಟು ಉಪಚರಿಸಿ ತೆಗೆದುಕೊಂಡು ಹೋಗಲು

ಬಹು ದುಃಖದಿಂದ ಬೀಳ್ಕೊಟ್ಟರು. ಸಂಗಡಿಗರು ತಿಮ್ಮನಗೌಡರನ್ನು ಪುನಃ ನಂದಿಗುಡಿಗೆ ತಂದರು. ತಿಮ್ಮನಗೌಡರ ಅದೇಶದಂತೆ ತನ್ನ ಜನ್ಮ ಭೂಮಿಯಲ್ಲಿ ತಾನು ಮಣ್ಣಾಗಬೇಕೆಂಬ ಹಂಬಲದಂತೆ ಮೆಣಸಿನಹಾಳ್ ಗ್ರಾಮಕ್ಕೆ ಸಾಗಿಸುವುದೆಂದು ನಿರ್ಧರಿಸಿ ಊರಿನಿಂದ ಗುಪ್ತವಾಗಿ ನದಿಯ ಪಶ್ಚಿಮ ಭಾಗದಲ್ಲಿಯ ಕುಸಗಟ್ಟಿಯ ಹತ್ತಿರಕ್ಕೆ ಇರಿಸಿದರು. ರಾತ್ರಿ ಒಂದು ಗಂಟೆಯ ನಂತರ ತಿಮ್ಮನಗೌಡರನ್ನು ಕಾರ್ಯಕರ್ತರು ಹೆಗಲ ಮೇಲೇರಿಕೊಂಡು ತುಂಗಭದ್ರಾ ನದಿಯನ್ನು ದಾಟಿದರು. ಬೆಳಗಿನ ೩ ಗಂಟೆಯ ಜಾವಕ್ಕೆ ನದಿ ಮಧ್ಯಭಾಗದಲ್ಲಿರುವಾಗಲೇ ಕಾರ್ಯಕರ್ತರ ಹೆಗಲ ಮೇಲೆ ತಿಮ್ಮನಗೌಡರ ಪ್ರಾಣಪಕ್ಷಿ ಹಾರಿ ಹೋಗಿದ್ದನ್ನು ಗಮನಿಸಿ ಕಕ್ಕಾಬಿಕ್ಕಿ ಆದರು. ಚಕ್ಕಡಿಯ ಮೇಲೆ ಶರೀರವನ್ನು ಮೆಣಸಿನಹಾಳ್ ಗ್ರಾಮಕ್ಕೆ ೪.೩೦ರ ಸುಮಾರಿಗೆ ತಂದು ಕಟ್ಟೆಯ ಮೇಲೆ ಮಲಗಿಸಿ. ಮೇಲೆ ಪಂಚೆಯನ್ನು ಹೊದಿಸಿ ಯಾರಕಣ್ಣಿಗೆ ಬೀಳದೆ ಪರಾರಿಯಾದರು ಸಂಶಯದಿಂದಲೇ ಬೆನ್ನಟ್ಟಿದ್ದ ಪೋಲೀಸರು ಅದೇ ಚಕ್ಕಡಿಯಲ್ಲಿ ತಿಮ್ಮನಗೌಡ ಪಾಟೀಲರ ಶರೀರವನ್ನು ರಾಣೆಬೆನ್ನೂರು ಪೋಲೀಸ್ ಕಛೇರಿಗೆ ತಂದು ಇಟ್ಟರು. ತಿಮ್ಮನಗೌಡ ಪಾಟೀಲರದೇ ಈ ಶರೀರವೆಂದು ಪತ್ನಿಯನ್ನು ಕರೆಸಿ ಖಚಿತ ಪಡಿಸಿಕೊಂಡರು. ಪಂಚನಾಮೆ ಮಾಡಿ ಸರ್ಕಾರದ ಅಧಿಕಾರಗಳಿಂದಲೇ ರಾಣೆಬೆನ್ನೂರಿನ ಮಣ್ಣಿನಲ್ಲಿಯೇ ಮಣ್ಣಾಗಿ ಬೆರೆತು ತಾಲ್ಲೂಕಿಗೂ, ನಾಡಿಗೂ ಚಿರಸ್ಫೂರ್ತಿದಾಯಕವಾಗಿದೆ. ಸಾಹಸ, ಧೈರ್ಯ, ತ್ಯಾಗ ಬಲಿದಾನಗಳ ಸಂಕೇತವಾಗಿ ಅವರ ಹೆಸರು ಅಮರವಾಗಿದೆ.

ಧೀರ ಸ್ವಾತಂತ್ರ ಹೋರಾಟಗಾರ ಮತ್ತು ಕ್ರಾಂತಿಕಾರಿ ಹುತಾತ್ಮ ತಿಮ್ಮನಗೌಡ ಪಾಟೀಲ್ ಮೆಣಸಿನಹಾಳ್ ಅವರು ಸ್ವಾತಂತ್ರ ಸಂಗ್ರಾಮದಲ್ಲಿ ಕ್ರಾಂತಿಕಾರಕ ಮತ್ತು ಬಂಡಾಯಗಳಿಂದ ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದರು. ತಿಮ್ಮನಗೌಡ ಪಾಟೀಲರು ಸ್ವಾತಂತ್ರ ಹೋರಾಟದಲ್ಲಿ ತಮ್ಮ ಜೀವದ ಹಂಗು ತೊರೆದು ಕೊನೆಗೆ ಕ್ರಾಂತಿಕಾರಕ ಘಟನೆಯಲ್ಲಿ ತಮ್ಮ ಜೀವನವನ್ನು ಕಳೆದುಕೊಂಡರು ಇವರು ಹುತಾತ್ಮರಾದ ಮೇಲೆ ಬ್ರಿಟೀಷ ಸರ್ಕಾರ ವಿಚಾರಣೆ ಮಾಡಿ ಅವರ ಮೃತ ದೇಹವನ್ನು ಸರ್ಕಾರಿ ಗೌರವಗಳೊಂದಿಗೆ ರಾಣೆಬೆನ್ನೂರಿನಲ್ಲಿ ಮಣ್ಣು ಮಾಡಲಾಯಿತು. ಸ್ವಾತಂತ್ರ ಹೋರಾಟದ ನೆನಪಿಗಾಗಿ ಸ್ವಾತಂತ್ರ್ಯ ನಂತರ ವೀರಗಲ್ಲನ್ನು ಹಾಕಿಸಲಾಯಿತು. ಇವರ ಸಮಾಧಿಯು ರಾಣೆಬೆನ್ನೂರಿನ ಹೃದಯ ಭಾಗ ಬಸ್ಸು ನಿಲ್ದಾಣದ ಬಳಿ ಇದೆ.

ತಿಮ್ಮನಗೌಡ ಪಾಟೀಲರು ಬದುಕಿದ್ದು ೩೨ ವರ್ಷ ೮ ತಿಂಗಳು ೧೦ ದಿವಸಗಳು (ಜನನ ೮-೯-೧೯೧೧, ಮರಣ ೨೮-೯-೧೯೪೩) ಮಾತ್ರ ಇವರ ಜೀವನ ಚರಿತ್ರೆ ಪ್ರಾಥಮಿಕ ಪ್ರೌಢಶಿಕ್ಷಣ, ಪಿಯುಸಿ ಮತ್ತು ಪದವಿ ಕರ್ನಾಟಕ ಇತಿಹಾಸದಲ್ಲಿ ಇವರ ಸಾಧನೆ ಕುರಿತು ಬರೆಯಬೇಕು ಮತ್ತು ಅದನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕು. ಈ ರೀತಿಯಾಗಿ ಮಾಡವುದರಿಂದ ಎಲ್ಲರಲ್ಲೂ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳಸಬೇಕಾಗಿದೆ.

ಆಕರ ಗ್ರಂಥಗಳು

೧. ಕಿಚ್ಚಿದೆಯ ವೀರ ಹುತಾತ್ಮ ತಿಮ್ಮನಗೌಡ ಪಾಟೀಲ್ ಮೆಣಸಿನಹಾಳ್, ಸಂಗ್ರಹ ಮತ್ತು ಪ್ರಕಟಣೆ- ಸ್ವಾತಂತ್ರ್ಯ ಯೋಧರ ಸಂಘ. ೨೪/೧/೧೯೭೫, ರಾಣೆಬೇನ್ನೂರು.

೨. ಬಿ.ಜಿ. ಬಣಕಾರ್, ಮೈಲಾರ ಮಹದೇವ – ಭಾರತ ಸ್ವಾತಂತ್ರ್ಯ ಪ್ರಜಾ ತಂತ್ರ, ಬಿ.ಜಿ.ಬಿ. ಪ್ರತಿಷ್ಠಾನ ೨೦೧೧ ಹಿರೇಕೆರೂರು.

೩. ವೈ.ಆರ್. ಚನ್ನಬಸವಯ್ಯ, ನೊಳಂಬ ವಾರ್ತೆ ತ್ರೈಮಾಸಿಕ ಸಂಪುಟ ೨, ಸಂಚಿಕೆ ೧ ಜನವರಿ, ಫೆಬ್ರವರಿ & ಮಾರ್ಚ್ ೨೦೧೩, ಬೆಂಗಳೂರು.

ಕೊಡಗಿನ ಶಾಸನ, ಪುರಾಣ, ಇತಿಹಾಸ ಜಾನಪದದಲ್ಲಿ ಸ್ತ್ರೀಸ್ವರೂಪಗಳು

ಡಾ. ಎಂ.ಜಿ. ನಾಗರಾಜ್*

ಪುರಾಣ ಪರಂಪರೆ

ಭಾರತೀಯ ಸಾಂಸ್ಕೃತಿಕ ತಲೆಮಾರುಗಳಲ್ಲಿ, ಹೆಣ್ಣು ಯಾವುದೇ ಹಂತದಲ್ಲಿಯೂ ತನ್ನ ಇರುವಿಕೆ ತೋರಿದ್ದಾಳೆ. ಬುಡಕಟ್ಟು ಮೂಲಕ ಬೇಸಾಯದ ಆರಂಭ ಕಾಲದಲ್ಲಿ ಮೊದಲಿಗಳು ಅವಳೇ, ವೇದಕಾಲೀನ ಘೋಷೆಗೆ ಪುರೋಹಿತನ ಹಿತನುಡಿಗಳಲ್ಲಿ, ಕೌಟುಂಬಿಕ ಅದ್ಯತೆ ಅವಳಿಗೆ ಇತ್ತು. ಆ ಕಾಲಕ್ಕೆ ಅರಣ್ಯದೇವತೆ 'ಅರಣ್ಯಾನಿ' ಎಂದು ಹೆಣ್ಣು ಪರಿಸರದ ಅದ್ಯ ನಿರ್ವಹಣಾಕಾರ್ತಿಯಾಗಿದ್ದಳು. ಶಾಸನಾಕ್ಷರ ಗಳಿಗೆ 'ಬಾಂಬಿ' ಎಂದು ಬೋಧನೆಗೊಂಡವಳು. ಪುರಾಣ, ಕಾವ್ಯ, ಇತಿಹಾಸ, ಜಾನಪದದ ಪಥಗಳಲ್ಲಿ ಅವಳು ಹೆಜ್ಜೆಯನ್ನಿರಿಸಿದವಳೇ ದಿಟ. ಹಾಗೆಯೇ ಕಾಲಾಂತರದಲ್ಲಿ ಅವಳು ಶೋಷಣೆ, ನಿರ್ಲಕ್ಷ್ಯಕ್ಕೆ ಒಳಗಾದಳೆಂಸರೂ ಆಕೆಯ ಮಾತೃತ್ವಕ್ಕೆ ಸಾಂಸ್ಕೃತಿಕ ಮೌಲ್ಯ ಕಳಚಿಕೊಳ್ಳಲಿಲ್ಲ. ಇದಲ್ಲದೆ ಹಿಂದೂ ವಿಚಾರಶೀಲರಲ್ಲಿ: ಕಾತ್ಯಾಯನ, ಹೆಣ್ಣಿನ ಆಸ್ತಿಯನ್ನು ಬಲವಂತದಿಂದ ಕಸಿಯಬಾರದು ಎಂದಿದ್ದಾನೆ; ಕೌಟಿಲ್ಯ, ಹೆಣ್ಣನ್ನು ಬಲಾತ್ಕರಿಸಿದವರಿಗೆ ಮರಣದಂಡನೆ ವಿಧಿಸಬೇಕು ಎಂದಿದ್ದಾನೆ; ಮನು, ತಂದೆ ತಾಯಿಯಾದಿಯಾಗಿ ಬಂಧುಗಳು ನೀಡುವ ಚರ, ಸ್ಥಿರ ಆಸ್ತಿಯ 'ಸ್ತ್ರೀಧನ' ಎಂಬ ಗೌರವಾನ್ವಿತ ಕೊಡುಗೆಯಾಗಿ ಆಕೆಗೆ ಬದುಕಿನ ಆಸರೆಯಾಗುತ್ತದೆ ಎಂದು ಹೇಳಿದ್ದಾನೆ. ಆಕೆಯನ್ನು 'ಕ್ಷೇತ್ರಭೂಮಿ' ಎಂದು ಕರೆದು, ಆಕೆ ಚೆನ್ನಾಗಿದ್ದಲ್ಲಿ ಮಾತ್ರ ಉತ್ತಮ ಬೆಳೆ (ಸಂತಾನ) ಎಂಬ ಅಭಿಮತ ಮನುವಿನದು[೧] ಎಂಬ ಅಭಿಪ್ರಾಯವಿದೆ. ಕೊಡಗಿನ ಸಂದರ್ಭದಲ್ಲಿ ಆಕೆ ತನ್ನದೇ ಆದ ಅಸ್ತಿತ್ವವನ್ನು ತೋರಿ ಕೊಂಡಿದ್ದಾಳೆ.

ಕೊಡಗು ಮಲೆಪ್ರದೇಶವಾಗಿ, ಬೃಹತ್ ಶಿಲಾಯುಗ ಕಾಲದಲ್ಲಿಯೂ ಬೇಸಾಯದ ಭೂಮಿಯ ಕುರುಹುಗಳನ್ನು ಅವಶೇಷಗಳಲ್ಲಿ ತೋರಿದೆ. ಅದಾಗಿ ಹೆಣ್ಣಿನ ಪಾತ್ರದ ಉಲ್ಲೇಖ ಅಜ್ಞಾತವಾಗಿದ್ದರೂ, ಸಾಂದರ್ಭಿಕ ಕುರುಹುಗಳು ಅದನ್ನು ಜತನವಾಗಿಟ್ಟುದುದು ಆಚಾರಣಾ ಪರಂಪರೆಯಿಂದಲೂ ತಿಳಿಯುತ್ತದೆ.

ಕೊಡಗು, ಕುಡಂ (ಪಶ್ಚಿಮ ಮುಖ್ಯ ಕವಲುಗಳನ್ನು ಹೊಂದಿದ್ದ ಕಾವೇರಿ) ಹೊಳೆ ಕಾವೇರಿಯಿಂದಾಗಿಯೇ ಹೆಸರು ಮೂಡಲು ಕಾರಣವಾಗಿದೆ. ಅಗಸ್ತ್ಯ ಬಂದ ಕಾಲಕ್ಕೆ ಪೌರಾಣಿಕವಾಗಿ ಅವಳಿಗೆ ಕಥೆಗಳು ಅಂಟಿವೆ. ಕವೇರಪುತ್ರಿ ಕಾವೇರಿ ಎನಿಸಿದ್ದೂ ಪಾರ್ವತಿ ಅಂಶವೆನಿಸಿದ ಕಥೆಗಳೂ ಇವೆ. ಕುಡ-ಕುಡಕಂ ಹೊಳೆಯೆನಿಸಿದ್ದವಳಿಗೆ ನೈಸರ್ಗಿಕವಾಗಿ ತುಸು ಕಾವಿನ (ಉಷ್ಣ) ಪ್ರಕೃತಿಯ ಜಲಧಾರೆಯಾಗಿದ್ದ ಅವಳಿಗೆ ಕಾಲಾಂತರದಲ್ಲಿ ಅನ್ವಯಿಕವಾಗಿ ಪೌರಾಣಿಕವಾಗಿ 'ಕಾವೇರಿ' ಎಂಬ ಹೆಸರು ದಟ್ಟವಾಗಿ ಅಂಟಿದ್ದು ಕವೇರನಿಂದಾಗಿಯೇ. ಅವಳ ಜೊತೆಗೆ ಕನ್ನಿಕೆ, ಸುಜ್ಯೋತಿಯರೂ ಸಂಗಮಗೊಂಡು, ಕಾವೇರಿಯ ಹರಿವನ್ನು ವಿಶಾಲಗೊಳಿಸಿದರು. ಈ ಸಂಬಂಧದ ಸಾಂಸ್ಕೃತಿಕ ಹಬ್ಬ ತಲಕಾವೇರಿ (ಕಾವೇರಿ ಉಗಮದ ನೆಲೆ)ಯ ತುಲಾಸಂಕ್ರಮಣದ ತೀರ್ಥೋದ್ಭವದಂದು ಇಂದಿಗೂ ನಡೆಯುತ್ತಿರುವುದು ವಾರ್ಷಿಕ ಪವಿತ್ರ ಸಂತೋಷದ ಹಬ್ಬವೆನಿಸಿದೆ. ಈ ತ್ರಯ ನದಿದೇವತೆಯರ ಸಂಗಮ ನೆಲೆಯೆ ಭಗಂಡಕ್ಷೇತ್ರ–ಭಗಂಡೇಶ್ವರನ ದೇಗುಲದ ತಾಣ.

ಶಾಸನೋಕ್ತವಾಗಿ ಕ್ರಿ.ಶ. ೫೫೦ರ ಮಾಂಬಳ್ಳಿ ಶಾಸನದಲ್ಲಿ[೨], ಪುನ್ನಾಟದ ತಾಮ್ರಕಶ್ಯಪ ವಂಶದ ರಾಷ್ಟ್ರವರ್ಮನ ರಾಜ್ಯ ಕಾವೇರ–ಕಪಿನಿಯಿಂದ ಶೋಭಿತವಾಗಿದ್ದ ಬಗ್ಗೆ ಹೇಳಿದೆ. ಬಾದಾಮಿ ಚಾಲುಕ್ಯರ ಕ್ರಿ.ಶ. ೫೫೦ರ ಶಾಸನದಲ್ಲಿಯೂ ಕಾವೇರಿ ಉಕ್ತವಾಗಿದ್ದಾಳೆ. ವರಾಹಮಿಹಿರನ ಬೃಹತ್ ಸಂಹಿತೆಯಲ್ಲಿ (ಕ್ರಿ.ಶ. ೫೦೫–೫೮೭) 'ಕಾವೇರ್ಯೋರಿಷ್ಯ ಮೂಕಶ್ಚೆ' ಎಂದು ಉಕ್ತಳಾಗಿದ್ದಾಳೆ. ನಿಜಗುಣ ಶಿವಯೋಗಿಗಳು ಆಕೆಗೆ ಋಗ್ವೇದದಲ್ಲಿ 'ಮರುದ್ವೃದೇ ವಿತಸ್ತಯಾ' ಎಂದಿರುವುದನ್ನು ಗಮನಿಸಿದ್ದಾರೆ: 'ಮರುದ್ವೃದೆ' ಎಂದು 'ಕಾವೇರಿ'ಯ. ಇನ್ನೊಂದು ಹೆಸರಾಗಿ (ಕವಲುಗಳುಳ್ಳವಳು) ತಮ್ಮ ಕೃತಿಯಲ್ಲಿ (ವಿವೇಕ ಚಿಂತಾಮಣಿ) ಉಕ್ತಮಾಡಿದ್ದಾರೆ. ಅಂತಾಗಿ ಋಗ್ವೇದೋಕ್ತ ಮರುದ್ವೃದೆ, ಸ್ಕಾಂತಪುರಾಣದಲ್ಲಿ 'ಕಾವೇರಿ' ಎಂದು ಹೆಸರುಗೊಂಡಿದ್ದಾಳೆ[೩]. ಹಾಗೂ ತ್ರಿಗುಣ ಎಂಬ ಬ್ರಾಹ್ಮಣನಿಗೆ, ಗಂಗೆಯು, ಕಾವೇರಿಯ ಬಗ್ಗೆ ಹೇಳುತ್ತ

* 'ಅನರ್ಘ್ಯ', ಶ್ರೀ ಜಟನಿ ಕೃಪ, ನಂ. ೨೨೧, ೩೮ನೇ ಅಡ್ಡರಸ್ತೆ, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–೫೬೦೦೧೦.

ಕಾವೇರಿಯು ಪವಿತ್ರಳು, ದಿವ್ಯಳು, ಅವಳ ದರ್ಶನದಿಂದ ಪಾಪ ಪರಿಹಾರ, ಅವಳಲ್ಲಿ ಮಿಂದು ಬಾ ಎನ್ನುತ್ತಾಳೆ; ಯಮುನೆಯು ಗಂಗೆಯ ಬಳಿ ಬಂದು ಆಕೆಯ ಒದ್ದೆಯಾದ ವಸ್ತ್ರ ಮತ್ತು ಕೂದಲನ್ನು ನೋಡಿ ಏಕೆ ನೆನೆದಿದೆ? ಎಂದು ಕೇಳಿದಳಂತೆ. ಆಗ ಗಂಗೆ, ಶ್ರೇಷ್ಠವಾದ ಕಾವೇರಿ ತೀರ್ಥದ ದರ್ಶನ ಮಾಡಿ, ಅವಳಲ್ಲಿ ಮಿಂದು ಬಂದೆ. ಅದು ಕಾರಣ ವಸ್ತ್ರ ಮತ್ತು ಕೂದಲು ಒದ್ದೆ ಆಗಿವೆ ಎಂದಳಂತೆ. ಸ್ಕಾಂದ ಪುರಾಣದ ಈ ಕಥಾಸಂಚಲನದಲ್ಲಿ, ಕಾವೇರಿ, ಪ್ರಸಿದ್ಧಳಾದ ಗಂಗೆಯಿಂದ ಹೇಗೆ ಸ್ಮರಿತಳು ಎಂಬುದು ವಿದಿತವಾಗುತ್ತದೆ; ಸ್ತ್ರೀ ಗೌರವಾದರ ಸಹಿತ ಆರಾಧ್ಯತೆಯ ಬಗ್ಗೆ ಭಾವಮಾನಸ ದೃಷ್ಟಿ ಗೋಚರಕ್ಕೆ ಬರುತ್ತದೆ.

ಕೊಡಗಿನ ಕೆಂಬಟ್ಟಿಗಳ ಜಾನಪದ ಗೀತೆಯಲ್ಲಿ, ಕೊಡವರ ಕಾವೇರಿ ಪುರಾಣದಲ್ಲಿ ಆಕೆಯ ಕುರಿತಂತೆ ಸ್ತುತಿ, ಕತೆಗಳು ಪುಳಕಪೂರಿತವಾಗಿವೆ. ಆಕೆ ಲೋಕಕಲ್ಯಾಣಕ್ಕಾಗಿ ಕೊಡಗಿನಿಂದ ಹರಿದುಹೋದ ಕತೆಗಳು ರೂಪುಗೊಂಡಿವೆ. ಕಾವೇರಿ ಕೊಡಗಿನ ಆದಿ ಹೆಣ್ಣು ಎನಿಸಿದ್ದಾಳೆ. ದೇವತೆಯಾಗಿದ್ದಾಳೆ.

ಎಡಕಲ್ಲುಗುಡ್ಡದ ಕದಂಬರ ವಿಷ್ಣುವರ್ಮನ ಕ್ರಿ.ಶ. ಸು. ೪ನೇ ಶತಮಾನದ ಬ್ರಾಹ್ಮಿಶಾಸನದಲ್ಲಿ, ಬಲಗಡೆಯಿಂದ ಓದಿದರೆ 'ಕವೇರನ ತಪೋಭೂಮಿ' ಎಂಬ ಅರ್ಥ ಒದಗುವಂತಿದೆ[೪], ಅಂತಾಗಿ 'ಕಾವೇರಿ' ಶಾಸನೋಕ್ತ ಪರೋಕ್ಷ ಉಲ್ಲೇಖದ ಪೌರಾಣಿಕ ಸೂಚನೆ (ಕವೇರಪುತ್ರಿ ಕಾವೇರಿ) ಕ್ರಿ.ಶ. ಸು. ೪ನೇ ಶತಮಾನದಲ್ಲಿಯೇ ಕೊಡಗಿನಲ್ಲಿ ಒದಗುತ್ತದೆ. ನಂತರ ಕ್ರಿ.ಶ. ೧೦೦೧ರ ಮಡಿಕೇರಿ ಶಾಸನದಲ್ಲಿ[೫] 'ಮೊದಲ್ಕಾವೇರಿ'; ಕ್ರಿ.ಶ. ಸು. ೧೦೦೪ರ ಕೊಡಗಿನ ಮೂಲಂಜಿ ಶಾಸನದಲ್ಲಿ[೬] 'ಕವೇರಕನ್ಯೆ' ಎಂದು ಉಕ್ತವಾಗಿದ್ದಾಳೆ. ಕ್ರಿ.ಶ. ೧೮೩೯ರ ಭಾಗಮಂಡಲದ ಭಗಂಡೇಶ್ವರ ದೇಗುಲದ ಬೆಳ್ಳಿಪೀಠದ ಶಾಸನದಲ್ಲಿ[೭] 'ಶ್ರೀ ಮೂಲಕಾವೇರ್ರಿ ಅಂಮ' ಎಂದು ಭಕ್ತಿಪೂರ್ವಕವಾಗಿ ನಮೂದುಗೊಂಡಿದ್ದಾಳೆ.

ಅಗಸ್ತ್ಯನು ದಕ್ಷಿಣ ಭಾರತಕ್ಕೆ ೧೮ ವೇಳೀರರ ಕುಟುಂಬಗಳನ್ನು ಅರುವಲರ್ ಬುಡಕಟ್ಟಿನವರನ್ನು ಕರೆದುಕೊಂಡು ಕ್ರಿ.ಶ. ೧೦೭೫ರ ವೇಳೆಗೆ ಬಂದು ಪಶ್ಚಿಮಘಟ್ಟಗಳ ಪ್ರದೇಶದಲ್ಲಿ ನೆಲೆಗೊಳಿಸಿದನೆಂದು ಕೇರಳದ ಗ್ರಂಥಗಳು ತಿಳಿಸುತ್ತವೆ[೮]. ಅಂದರೆ ಅಗಸ್ತ್ಯ-ಕಾವೇರಿಯರ ಪೌರಾಣಿಕ ದಾಂಪತ್ಯ ಸಂಬಂಧದ ಹಿನ್ನೆಲೆಯಲ್ಲಿ ಗಮನಿಸಿದರೆ ಕಾವೇರಿಯ ಇತಿಹಾಸ ಕ್ರಿ.ಪೂ. ೧೧ನೆಯ ಶತಮಾನಕ್ಕೆ ಸರಿಯುತ್ತದೆ. ಭೂವಿಜ್ಞಾನದ ಹಿನ್ನೆಲೆಯಲ್ಲಿ ಹೇಳಿದರೆ ಆಕೆಯ ಇತಿಹಾಸ ಸುಮಾರು ೭.೫ ಮಿಲಿಯನ್ ವರ್ಷಗಳಷ್ಟು ಪ್ರಾಚೀನವಾಗುತ್ತದೆ. ಹಿಮಲಯ ಹುಟ್ಟುವ ಮುನ್ನಿನ ಇತಿಹಾಸ, ಆಕೆಯ ಪ್ರಾಗಿತಿಹಾಸದಲ್ಲಿ ಮಿಂದುಬರುತ್ತದೆ. ಇಂದು ಕೊಡಗಿನ ಜನಜೀವನದಲ್ಲಿ ಕುಲದೇವತೆಯಾಗಿ ಆಕೆ ದೈವೀಕರಣಗೊಂಡಿದ್ದಾಳೆ. ಅಂತರ್ಗತವಾಗಿ ಮೂರ್ತರೂಪದ ಜಲದೇವತೆಯಾಗಿ, ಬದುಕು, ಹಸನಾಗಿಸಿರುವ ಮಾತೃದೇವತೆಯಾಗಿದ್ದಾಳೆ. ತುಲಾಸಂಕ್ರಮಣದ ತೀರ್ಥೋದ್ಭವದ ಸಮಯದಲ್ಲಿ 'ಕಣಿಪೂಜು' (ಸೌತೆ, ಇತ್ಯಾದಿ ತರಕಾರಿಗಳ ಅಲಂಕೃತ ರೂಪ)ವಿನಲ್ಲಿ ಸಂಕೇತಗೊಂಡು ಪೂಜೆಗೊಳ್ಳುವಲ್ಲಿ ಮನಮನದ ಮನೆಮನೆಯ ನಿರಂತರ ಇತಿಹಾಸವಾಗಿದ್ದಾಳೆ. ಆಕೆಗೆ ಕೈಬಳ ಬಳ್ಳಿಯ 'ಬೊತ್ತು'ವನ್ನು ವೃತ್ತಾಕಾರವಾಗಿ ಬಳ್ಳಿ ಸುತ್ತಿ ತ್ರಿಕೋನಾಕಾರ ಬಿದಿರುಕಡ್ಡಿಗಳ ಮೇಲೆ ನಿಲ್ಲಿಸುವಲ್ಲಿ, ಭೂಮಿಗೆ ಹಸಿರುಡುಗೆ ತಂದವಳು ಭೂಮಿಯನ್ನೆಲ್ಲ ಸುತ್ತಿ ತಂಪು ತಂದಿರುವಳು ಎಂಬ ನಂಬುಗೆ ಕೊಡಗಿನಲ್ಲಿದೆ. 'ಗುಹ್ಯ' ಗ್ರಾಮ ಪರಿಸರ, ಉತ್ತರ ಕೊಡಗಿನಲ್ಲಿ ವೀರಶೈವಮಠಗಳೂ ಸೇರಿದಂತೆ, ತುಲಾಮಾಸದ ಬದಲು ದೀಪಾವಳಿಯಲ್ಲಿ 'ಬೊತ್ತು'ವನ್ನು **ಮದ್ದಿನ ತೆಕ್ಕೆ** ಎಂದು ನಿಲ್ಲಿಸುವ ರೂಢಿ ಇದೆ.

ಕೊಡವ ಭಾಷೆಯ ಜನಪದ ಗೀತೆಯಲ್ಲಿ – ಹುತ್ತರಿ ಕಳಿಪಾಟ್‌ನಲ್ಲಿ 'ಕಾವೇರಿ ಅಮ್ಮೆರ ಪುತ್ತರಿ ನಮ್ಮೆ' – ಕಾವೇರಮ್ಮೆಯ ಹುತ್ತರಿ, ಹುತ್ತರಿಹಬ್ಬ ಎಂದು ಹಾಡುತ್ತಾರೆ. ಹೊಸ ಅಕ್ಕಿ ಕದಿರು ತರುವ ಹಬ್ಬ ಹುತ್ತರಿ, ಹೊಸ ಅಕ್ಕಿಯ ಕೊಡಲು ನೆರವಾದ ಅಮ್ಮ, ಕಾವೇರಮ್ಮ ಎಂದು ವ್ಯಕ್ತೀಕರಣದ ಆರೋಪ ಮಾಡಿ ಹೇಳುತ್ತಾರೆ. ಕೊಡವ ಭಾಷೆಯ 'ಕಾವೇರಿ ಪುರಾಣ' ಜನಪದ ಗೀತೆಯಲ್ಲಿ 'ಕನ್ನಿ ಬಾಳೋ ಕಾವೇರಿ। ಗಂಗೆ ಬಾಳೊ ತೀರ್ಥ – ಕಾವೇರಿ ಬಾಳಲಿ, ಗಂಗೆಯಂಥ ತೀರ್ಥ ನೀಡಲಿ ಎಂದು ಹರಸಿಕೊಳ್ಳುತ್ತಾರೆ. ದಲಿತ ಕೆಂಬಟ್ಟಿಗಳಲ್ಲೂ ಕೊಡವ ಭಾಷಿಕ ಕಾವೇರಿ ಹಾಡು ಇದೆ. 'ಉಮ್ಮತ್ತಾಟ್' ಆಡುವಲ್ಲಿ ಕಾವೇರಿ ಜ್ಯೋತಿ ಇಟ್ಟು ಸುತ್ತ ಹೆಂಗಳೆಯರು, 'ಕಾವೇರಮ್ಮ ದೇವಿ ತಾಯಿ ಕಾಪಾಂಡೆಂಗಳಾ, ಬಾಳಂಡೂಂದ್ ನಲ್ಲದ್ ಮಾಡಿ' – ಕಾವೇರಮ್ಮ ತಾಯಿ ನಮ್ಮೆನ್ನೆಲ್ಲ ಬಾಳಿಸಿ ಒಳ್ಳೇದು ಮಾಡಿ, ಕಾಪಾಡಲಿ ಎಂದು ಪ್ರಾರ್ಥಿಸುತ್ತಾರೆ. ಹೀಗೆ ಕೊಡಗಿನ ಜೀವಂತ ನದಿಗೆ, ಪೌರಾಣಿಕವಾಗಿ, ಐತಿಕವಾಗಿ, ಜನಪದೀಯವಾಗಿ ದೇವತಾಮೂರ್ತತ್ವವನ್ನು ಆರೋಪ ಮಾಡಿ, ಹೆಂಗಳೆಯ ಔನ್ನತ್ಯವನ್ನು, ಲೋಕಕಲ್ಯಾಣವನ್ನು ಸಂಕೇತವವಾಗಿ ಕಂಡುಕೊಂಡಿದ್ದಾರೆ. ಅದೊಂದು ರೀತಿ Female deity personification ಎಂಬಂತಿದೆ. ಕಾರಣ ಕಾವೇರಿ ಲೋಕಹಿತಕಲ್ಕಾಗಿ ಹರಿಯುತ್ತ ಬಂದಿರುವುದೇ ಆಗಿದೆ.

ಕಾವೇರಿಯ ಅಸ್ತಿತ್ವ ಪ್ರಾಗಿತಿಹಾಸ ಕಾಲದ್ದು, ಅವಳ ಜೊತೆಗೆ ಕನ್ನಿಕೆ, ಸುಜ್ಯೋತಿ, ಕಿರುನದಿಗಳೂ ಭಾಗಮಂಡಲ

ವನ್ನ ಈ ಹಿಂದೆಯೇ ಹೇಳುವಂತೆ ಸಂಗಮಿಸುತ್ತದೆ. ಕಾವೇರಿ ತನ್ನ ಪಶ್ಚಿಮ ಕವಲಿನ ಪಥವನ್ನು ಬರಪೊಳೆಗೆ ನದಿಪಥ ಸ್ವಾಧೀನ (river capture)ಕ್ಕೆ ಪಶ್ಚಿಮಘಟ್ಟಗಳ ಏರು ಹೆಚ್ಚಿದಾಗ ಬಿಟ್ಟು ಕೊಟ್ಟವಳು; ಹಿಮಾಲಯ ಹುಟ್ಟಿದ ಕಾಲವೂ ಅದೇ ಆಗಿದೆ. ಇದೆಲ್ಲ ಪ್ರಾಗಿತಿಹಾಸ ಕಾಲದ ಘಟನೆಗಳು.

ಶಾಸನಗಳ ಅಂಗಳ

ಕದಂಬರ ವಿಷ್ಣುವರ್ಧನನ ಕ್ರಿ.ಶ. ಸು. ೪ನೇ ಶತಮಾನದದ ಕ್ರಿ.ಶ. ೧೦೦೧ ಮಡಿಕೇರಿ ಶಾಸನ, ಕ್ರಿ.ಶ. ೧೦೦೪ರ ಮಾಲಂಬಿ ಶಾಸನ ಬಿಟ್ಟರೆ, ೧೦ನೇ ಶತಮಾನದ ಗಂಗ ಎಟೆಯಪ್ಪನ (ನೀತಿಮಾರ್ಗ II?) ಕಾಲದ ಗಾಳಿಕಲ್ಲು ಎಂದು ರೂಢಿಗೊಂಡಿದ್ದ ಹರದೂರಿನ ವೀರಮಾಸ್ತಿಗಲ್ಲಿನಲ್ಲಿ 'ರಣಾನ್ತ್ಯವಳೆಣ್ಬವಳು' ಸತ್ತು ಕಲ್ನಾಡು ಪಡೆದ ವಿಷಯವಿದೆ. ಶಾಸನದ ಈ ಪದ ಸ್ಪಷ್ಟವಾಗಿ ಸ್ತ್ರೀವೀರೆಯ ಹೆಸರನ್ನು 'ರಣಾನ್ತ್ಯವಳ್' ಎಂದು ಸ್ತ್ರೀವಾಚಿಯಾಗಿ ಸೂಚಿಸುತ್ತದೆ. ಅವಳು 'ಕಲ್ನಾಡು' ಪಡೆದಿರುವುದನ್ನು ನೋಡಿದರೆ ಕಾಳಗದಲ್ಲಿ ಜಯ ತಂದದು ಕೊಟ್ಟು ವೀರಸ್ವರ್ಗವೇರಿದ ಸೂಚನೆ ಕಾಣುತ್ತದೆ. ಬಹುಶಃ ಗಂಗರ ಕಾಲದ ಕೊಡಗಿನ ಮೊದಲ ವೀರಸತಿಗಲ್ಲು ಇದಾಗಿರುವಂತಿದೆ. ಅರ್ಥಾತ್ ಕೊಡಗಿನ ವೀರಸತಿಯೊಬ್ಬಳ ಮೊದಲ ಉಲ್ಲೇಖ ಇಲ್ಲಿ ಕಾಣುತ್ತದೆ. ರಣವನ್ನು ಕೊನೆಗಾಣಿಸುವ ನಿಷ್ಣಾತೆ ಅಂದರೆ ಜಯ ತಂದು ಕೊಡುತ್ತಿದ್ದವಳು (ರಣಾನ್ತ್ಯವಳೆ) 'ರಣಾನ್ತ್ಯೆ'(!) ಎನಿಸಿದ್ದಳು. ೧೦ನೇ ಶತಮಾನದಲ್ಲಿಯೆ ಕೊಡಗಿನಲ್ಲಿ ವೀರರಮಣಿಯರಿದ್ದ ಸೂಚನೆ ಇದಾಗಿದೆ. ಈ ಪರಂಪರೆ ಹಾಲೇರಿ ಅರಸರ ಕಾಲದವರೆಗೆ ನಡೆದು ಬಂದಿರುವುದು ಗೋಚರವಾಗುತ್ತದೆ.

ಮುಳ್ಳೂರಿನಲ್ಲಿ ಪಾರ್ಶ್ವನಾಥ, ಚಂದ್ರನಾಥ ಹಾಗೂ ಶಾಂತಿನಾಥ ಬಸದಿಗಳು ಒಂದೇ ಸಾಲಿನಲ್ಲಿದ್ದು ಅದಕ್ಕೆ ಕೊಂಗಾಳ್ವರಾಣಿ ಪೋಚಬ್ಬರಸಿಯ ಭಕ್ತಿ ಗೌರವ ಸಂಬಂಧವಾಗಿದೆ. ಈ ಮೂರೂ ಬಸದಿಗಳನ್ನು ನಿರ್ಮಿಸಿದರು ಯಾರು? ಎಂಬುದು ಈ ಅರಸಿಯ ದೃಷ್ಟಿಯಿಂದ ಗಮನಿಸಬೇಕಾಗಿದೆ.

ಕ್ರಿ.ಶ. ೧೦೫೮ರ ಮುಳ್ಳೂರು ಬಸದಿಯ ಬಳೀಯ (ಇಮ್ಮಡಿ) ರಾಜೇಂದ್ರ ಕೊಂಗ್ವಾಳನ ಶಾಸನದಲ್ಲಿ[೧೦] (ಇಮ್ಮಡಿ) ರಾಜೇಂದ್ರ ಕೊಂಗ್ವಾಳನು ತನ್ನ ತಂದೆ (ಒಂದನೇ) ರಾಜಾಧಿರಾಜ ಕೊಂಗ್ವಾಳ ಮಾಡಿಸಿದ ಬಸದಿಯ ಹಾರುವನಹಳ್ಳಿ, ಅರಕನಹಳ್ಳಿ ಇತ್ಯಾದಿ ಗ್ರಾಮಗಳಲ್ಲಿಯ ಭೂಮಿಯನ್ನು ಗಾಣದೆಣ್ಣೆ ಸಹಿತ ಕೊಟ್ಟ ಬಗ್ಗೆ (ಮಂಜೂರು) ಹೇಳಿದೆ. ಅದನ್ನು ಬಸದಿಯಲ್ಲಿನ (ಪೋಚಬ್ಬರಸಿಯ [illegible] ಗುರುಗಳು) ಗುರು ಗುಣಸೇನ ಪಂಡಿತರಿಗೆ ಅರ್ಪಿಸಿದವಳು. (ಇಮ್ಮಡಿ) ರಾಜಾಧಿರಾಜನ ಅಜ್ಜಿಯಾದ (ಇಮ್ಮಡಿ) ರಾಜೇಂದ್ರ ಕೊಂಗಾಳ್ವನ ಪತ್ನಿಯಾದ ಪೋಚಬ್ಬರಸಿ, ಹೀಗಿರುವಲ್ಲಿ ಒಂದನೇ ರಾಜಾಧಿರಾಜ ಕಟ್ಟಿಸಿದ ಬಸದಿ ಯಾವುದು?

ಮುಳ್ಳೂರಿನ ಶಾಂತಿನಾಥ (ಶಾಂತೀಶ್ವರ) ಬಸದಿಯ ಶಾಂತಿನಾಥ ವಿಗ್ರಹ ಪೀಠದ ಮೇಲಿನ ಶಾಸನದಲ್ಲಿ[೧೧] ಶ್ರೀಪಾಳತ್ರೈವಿದ್ಯದೇವರ ಶಿಷ್ಯರು ಮಲ್ಲಿಷೇಣದೇವರು ಮುಳ್ಳೂರ ಬಸದಿಯ ಪ್ರತಿಷ್ಠೆಯಂ ಮಾಡಿದರು ಎಂದಿದೆ. ಶ್ರೀಪಾಳತ್ರೈವಿದ್ಯದೇವರ ಕಾಲ ಕ್ರಿ.ಶ.೧೧೨೫. ಅವನ ಶಿಷ್ಯ ಮಲ್ಲಿಷೇಣದೇವರು ಎಂದೂ ಶಾಸನ ಸಂಪುಟ ಹೇಳಿದೆ. ಬಸದಿ ಶಿಥಿಲವಾಗಿ ಬಿದ್ದುಹೋಗಿದ್ದುದು, ಜೀರ್ಣೋದ್ಧಾರವಾಗಿ ಪುನಪ್ರತಿಷ್ಠೆಯಾಗಿದ್ದು. ಆದರ ಮೂಲನಿರ್ಮಾಣ ಕಾಲ ೧೦ನೆಯ ಶತಮಾನದ ಸುಮಾರಿನದು ಎಂದಿದೆ. ಆದರೆ ಕ್ರಿ.ಶ. ೧೦೫೮ರ ರಾಜೇಂದ್ರ ಕೊಂಗಾಳ್ವನ ಶಾಸನವು (ಕೊಡಗು ೭೨) ಆ ಕೊಂಗಾಳ್ವನ ತಂದೆ (ಒಂದನೇ) ರಾಜಾಧಿರಾಜ ಕೊಂಗಾಳ್ವರ ಅಧಿಕೃತ ರಾಜವಂಶವು, ಮನಿಜನ ಮೂಲಕ ಕ್ರಿ.ಶ. ಸು. ೧೦೦೪ರಲ್ಲಿ ಆರಂಭವಾಗಿದುವಲ್ಲಿ ಈ ಶಾಂತಿನಾಥ ಬಸದಿ ೧೧ನೇ ಶತಮಾನದ ಅವಧಿಯಲ್ಲಿ (ಕ್ರಿ.ಶ. ಸು. ೧೦೨೬-೧೦೫೮) ನಿರ್ಮಾಣಗೊಂಡಿತೆನ್ನಬೇಕು. ಈ ಶಾಂತಿನಾಥ ಬಸದಿಯ ಪೋಚಬ್ಬರಸಿ, ತನ್ನ ಪತಿ ಕೊಡಮಾಡಿದ ದಾನವನ್ನು ತನ್ನ ಗುರುವಿಗೆ ಅರ್ಪಿಸಿದಳೆನ್ನಬೇಕು. ಮಾವ ಕಟ್ಟಿಸಿದ ಬಸದಿಗೆ ಸೊಸೆಯಾಗಿ, ಪತಿ ಕೊಟ್ಟ ದಾನವನ್ನು, ಗುರುವಿನ ಶಿಷ್ಯೆಯಾಗಿ ಆ ಮೂಲಕ ಕೊಟ್ಟ ಸಂಗತಿ ಇಲ್ಲಿ ಕಾಣುತ್ತದೆ.

ಮುಳ್ಳೂರಿನ ಪಾರ್ಶ್ವನಾಥ ಬಸದಿಯ ಭಿತ್ತಿಯ ೧೧ನೇ ಶತಮಾನ ಮಧ್ಯಕಾಲೀನ ಶಾಸನದಲ್ಲಿ[೧೨] 'ಶ್ರೀ ರಾಜಾಧಿರಾಜ ಕೊಂಗಾಳ್ವನಬ್ಬೆ ಪೋಚಬ್ಬರಸಿಯುರ್ದ್ರವಿಳಗಣದ ನನ್ದಿಸಂಘದರುಙ್ಗಳಾನ್ವಯದ ಗುಣಸೇನಪಣ್ಡಿತದೇವರ ಗುಡ್ಡಿ ಮಾಡಿಸಿದ ಬಸದಿ' ಎಂದಿದೆ. ಅಂದರೆ ಪೋಚಬ್ಬರಸಿ ಗುಣಸೇನ ಪಂಡಿತದೇವರ ಶಿಷ್ಯೆ (ಗುಡ್ಡಿ), ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದಳೆಂದು ತಿಳಿಯುತ್ತದೆ.

ಚಂದ್ರನಾಥ ಬಸದಿಯ ಬಳಿಯ ಕ್ರಿ.ಶ. ೧೩೯೦ರ ಮುಳ್ಳೂರು ಶಾಸನದಲ್ಲಿ[೧೩] ವಿಜಯನಗರದ ಇಮ್ಮಡಿ ಹರಿಹರನ ಕಾಲದಲ್ಲಿ ಬಸದಿ ಜೀರ್ಣೋದ್ಧಾರವಾದ ಬಗ್ಗೆ ಹೇಳಿದೆ. ಪ್ರಾಸಂಗಿಕವಾಗಿ (ಇಮ್ಮಡಿ) ರಾಜಾಧಿರಾಜ ಕೊಂಗಾಳ್ವನು, 'ಸ್ವಜನನಿ...ಆ ಪೋಚಬ್ಬರಸಿಗೆ ಪುಣ್ಯಾರ್ತ್ಥವಾಗಿ ಪ್ರತಿಷ್ಟೆಯನು ಮಾಡ್ಸಿ ಅಜ್ಜರಜ್ಜಭೋಗ ಬಿಟ್ಟ ಊರು ಅಣಿಲವಾಡಿ ... ಹಾರುವಹಳ್ಳಿ...' ಇತ್ಯಾದಿ ಕಡೆಯ ಭೂದಾನದ ಬಗ್ಗೆ ಹೇಳಿದೆ. ಅಂದರೆ ೧೧ನೆಯ ಶತಮಾನದ ಸುಮಾರು ೬೦ರ ದಶಕದಲ್ಲಿ (ಇಮ್ಮಡಿ) ರಾಜಾಧಿರಾಜ ಕೊಂಗಾಳ್ವನು

ತಾಯಿ ಪೋಚಬ್ಬರಸಿಗಾಗಿ ನಿರ್ಮಿಸಿದ ಬಸದಿ ಬಹುಶಃ ಚಂದ್ರನಾಥ ಬಸದಿ ಎಂದಾಗುತ್ತದೆ. ಹೀಗಾಗಿ ಒಂದನೇ ರಾಜಾಧಿರಾಜ ಮಾಡಿಸಿದ ಶಾಂತಿನಾಥ ಬಸದಿ, ಇಮ್ಮಡಿ ರಾಜಾಧಿರಾಜ ಪ್ರತಿಷ್ಠಿತ ಚಂದ್ರನಾಥ ಬಸದಿ(!) ಹಾಗೂ ಸ್ವಯಂ ಮಾಡಿಸಿದ ಪಾರ್ಶ್ವನಾಥ ಬಸದಿ–ಈ ಮೂರು ಬಸದಿಗಳ ಸಂಬಂಧ ಪೋಚಬ್ಬರಸಿಗಾಗಿತ್ತು.

ಮೇಲಿನ ಸಂದರ್ಭಗಳಿಂದ ಕೊಂಗಾಳ್ವ ರಾಣಿ, ಪೋಚಬ್ಬರಸಿಯ ಹಿರಿಯರ ಸ್ಮರಣಾ ವಿಧೇಯತೆ, ಗುರುಭಕ್ತಿ, ಉದಾರ ದಾನಗುಣ ಅವಳ ವರ್ಚಸ್ವಿ ವ್ಯಕ್ತಿತ್ವವು ವ್ಯಕ್ತವಾಗುತ್ತವೆ. ಒಂದೆಡೆ ಸೊಸೆಯಾಗಿ, ಒಂದೆಡೆ ಪತ್ನಿಯಾಗಿ, ಒಂದೆಡೆ ತಾಯಿಯಾಗಿ ಹಾಗೂ ಗುರುವಿನ ಗುಡ್ಡಿಯಾಗಿ, ತನ್ನ ವಿಶಿಷ್ಟ ಸ್ತ್ರೀಸ್ವರೂಪವನ್ನು ಹೀಗೆಲ್ಲ ತೋರಿದ್ದಾಳೆ.

ಮುಳ್ಳೂರಿನ ಪಾರ್ಶ್ವನಾಥ ಬಸದಿಯ ನವರಂಗ ದಲ್ಲಿಟ್ಟಿರುವ ೧೧ನೇ ಶತಮಾನದ ಶಾಸನದಲ್ಲಿ 'ರುಗ್ಮಿಣಿ ಮಹಾದೇವಿಯ ಪ್ರತಿಷ್ಠೆ' ಎಂದಿದ್ದು ವಿಗ್ರಹ ಪ್ರತಿಷ್ಠೆಯೊಂದನ್ನು ರುಗ್ಮಿಣಿ ಮಹಾದೇವಿ ಮಾಡಿದ ಸೂಚನೆ ಇದೆ. ಹೀಗೆಯೇ ಚಂದ್ರನಾಥ ಬಸದಿಯ ಬಳಿ ಇರುವ ಕ್ರಿ.ಶ. ೧೩೯೦ರ ಇಮ್ಮಡಿ ಹರಿಹರದೇವನ ಶಾಸನದಲ್ಲಿ ಪ್ರಾಸಂಗಿಕವಾಗಿ 'ಶ್ರೀ ರಾಜಾ[ಧಿರಾಜನು] ಕೊಂಗಾಳ್ವ ರುಗ್ಮಿಣಿದೇವಿಯ ದೇಹಾರದ ವಿಜಯದೇವರ ದ್ವಾರಾ ನೆಲೆನಿಂದುದು...' ಎಂದು ೧೧ನೇ ಶತಮಾನದ ಇಮ್ಮಡಿ ರಾಜಾಧಿರಾಜ ಕೊಂಗಾಳ್ವನನ್ನು ಹೆಸರಿಸಲಾಗಿದೆ. ಜೊತೆಗೆ 'ರುಗ್ಮಿಣಿದೇವಿ'ಯನ್ನು ದೇವಿಯ ದೇಹಾರದ ಅಂದರೆ 'ದೇವಿಯ ದೇಗುಲ (ಪದ್ಮಾವತಿ!)ವನ್ನು ಬಸದಿ ಪ್ರದೇಶದಲ್ಲಿ ರುಗ್ಮಿಣಿದೇವಿ ವಿಜಯದೇವರ ಮೂಲಕ ವಿಷಯವಿದಾಗಿರುವಂತಿದೆ. ಆದಾಗಿ ರುಗ್ಮಿಣಿದೇವಿಯನ್ನು 'ರುಗ್ಮಿಣಿ ಮಹಾದೇವಿ' ಎಂದೂ ಶಾಸನೋಕ್ತ ಮಾಡಿರುವಲ್ಲಿ ಆಕೆ ಈ ರಾಜಾಧಿರಾಜನ ಅರಸಿಯಾಗಿರಬೇಕು. ಜಿನಧರ್ಮಿ ಯಾಗಿ ಆಕೆ ಜಿನವಿಗ್ರಹಗಳ ಪ್ರತಿಷ್ಠೆ ಮಾಡಿರುವುದು ಆಕೆಯ ಜಿನಭಕ್ತಿಯ ತೀವ್ರತೆಯ ಚಿತ್ರ ಸಿಗುತ್ತದೆ.

ಈ ಚಂದ್ರನಾಥ ಬಸದಿಯ ಶಾಸನದ ಶಾಪಾಶಯದಲ್ಲಿ 'ಈ ಧರ್ಮಕ್ಕೆ ಆಳಿಪಿದವರು ಪಸು ಸಿಸು ಹೆಣ್ಣು ಗುರು ಇವರ ಕೊಂದ ಕೋಟಿ ಪಾಪದಲಿ ಹೋಹರು' ಎಂದಿದೆ. ಶಾಪಾಶಯದಲ್ಲಿ 'ಹೆಣ್ಣನ್ನು' ಕೊಂದರೆ ಪಾಪ ಬರುತ್ತದೆ ಎಂಬ ಅಂಶ ಕೊಡಗಿನ ಈ ಶಾಸನದಲ್ಲಿರುವುದು ಗಮನಾರ್ಹ. ಪಾಪಪ್ರಜ್ಞೆಯನ್ನು ಹೀಗೆ ವ್ಯಕ್ತ ಮಾಡಿರುವುದು ಕೊಡಗಿನಲ್ಲಿ ೧೪ನೇ ಶತಮಾನದಲ್ಲಿಯೂ ೧೬ನೇ ಶತಮಾನದ ಚೌಡ್ಲು ಶಾಸನದಲ್ಲಿಯ 'ಹೆಂನಿಂಗೆ ಸಲುವ ಸ್ವಾಸ್ತೆ ಮರಿಯಾದಿಯ' ಎಂಬ ಪರಂಪರೆಯ ಮುಂದುವರಿಕೆಯ ಸಂವಾದಿರೂಪ ವಾಗಿ ಕಾಣುತ್ತದೆ.

ಕ್ರಿ.ಶ. ೧೦೭೭ರ ಕೆರೆ ಏರಿಯ ವೀರಗಲ್ಲು ಶಾಸನವು ರಾಜೇಂದ್ರಚೋಳ ಕೊಂಗಾಳ್ವಂ ರಾಜ್ಯಂ ಗೆಯ್ಯುತ್ತಿರುವಲ್ಲಿ ಅವನ ಪಟ್ಟದರಸಿ ಪದ್ಮಲದೇವಿ ಸತ್ತ ಸಂಗತಿಯನ್ನು ದಾಖಲಿಸಿದೆ. ನಂತರ ಮುಂದಿನ ಸಾಲು 'ನೀಪ ಕಾವರದಿಂದಂ ತಾನುಂ ತನ್ನ ಪೆಣ್ಣು...' ಎಂದಿದೆ.

ಶಾಸನದ ಕಾಲದ ದೃಷ್ಟಿಯಿಂದ 'ರಾಜೇಂದ್ರಚೋಳ ಪ್ರಿಥುವಿಕೊಂಗಾಳ್ವನಿಗೆ ಶಾಸನ ಸಂಪುಟವು ಅನ್ವಯಿಸಿ ಕೊಂಡಿರುವುದು ಸರಿ ಎಂದು ತೋರುತ್ತದೆ. ಅವನ ಪದ್ಮಲದೇವಿ ತೀರಿದಾಗ, ಆಕೆಯ ಅಗಲಿಕೆಯನ್ನು ಸಹಿಸಲಾಗದೆ, ತೀವ್ರ ಉದ್ವೇಗ ದುಃಖಿತರಾಗಿ ಆಕೆಯ ಆಪ್ತಿಯವಲ್ಲಿದ್ದ(!) ಗಂಡ ಹೆಡಂತಿ ಆತ್ಮಾರ್ಪಣೆ ಮಾಡಿಕೊಂಡ ಸೂಚನೆ ಶಾಸನದ ಕೊನೆಯ ಸಾಲಿನಿಂದ ವ್ಯಕ್ತವಾಗುತ್ತದೆ ('ನೀಪ' ಎಂದರೆ ಆಳವಾದ 'ಕಾವರ' ಎಂದರೆ ಆವೇಶ, ಉದ್ವೇಗ ಎಂಬ ಅರ್ಥಾನ್ವಯ ಇಲ್ಲಿದೆ). ಶಾಸನ ಸಂಪುಟವು ಈ ಗಂಡಹೆಂಡತಿ ಗರುಡರಾಗಿ ಆತ್ಮಾರ್ಪಣೆ ಮಾಡಿಕೊಂಡಿರ ಬಹುದೆಂದು ಸೂಚಿಸಿದೆ. ಆ ನಿಟ್ಟಿನಿಂದ ನೋಡಿದರೆ ಬಹುಶಃ ಪದ್ಮಲದೇವಿಯ ಸೇವೆಗಿದ್ದವರು, ಆತ್ಮೀಯ ಗೌರವಭಾವ ಹೊಂದಿದ್ದವರು, ಭಾಷೆ ಕೊಟ್ಟಿದ್ದವರು, ಆಕೆಯ ಮರಣ ಹೊಂದಿದಾಗ ಅಗಲಿಕೆಯನ್ನು ತಾಳಲಾರದೆ ತೀವ್ರ ಭಾವೋದ್ವೇಗದಿಂದ ಪ್ರಾಣಾರ್ಪಣೆ ಮಾಡಿರಬಹುದು. ಅಂತಾದರೆ ಕೊಂಗಾಳ್ವ ರಾಣಿಯಲ್ಲಿ ಸಾಮಾನ್ಯ ಜನತೆಗಿದ್ದ ಪ್ರೀತಿಯ ಪ್ರತೀಕವಾಗಿ ಈ ಗಂಡಹೆಂಡಿರ ಆತ್ಮಾರ್ಪಣೆಯಾಗಿರ ಬಹುದು. ಅದೊಂದು ರೀತಿ 'ಗರುಡ'ತನ; ಇಲ್ಲಿ ಗಂಡನಲ್ಲದೆ, ಹೆಂಡತಿಯೂ ಕುವರಲಕ್ಷ್ಮನಲ್ಲಿಯ ಘಟನೆಗೆ ಪೂರ್ವ ಪರಂಪರೆಯ ಗರುಡರಾಗಿ ಕಾಣಬರುತ್ತಾರೆ ಎನ್ನಬೇಕು. ವಿಶೇಷವೆಂದರೆ ಚೋಳರ ಸಾಮಂತರಾಗಿದ್ದ ಕೊಂಗಾಳ್ವರ ಕಾಲದಲ್ಲಿಯೆ, ಹೊಯ್ಸಳರು, ಚೋಳರನ್ನು ಸಂಪೂರ್ಣವಾಗಿ ೧೧೧೬ರಲ್ಲಿ ಸೋಲಿಸಿ ತಮ್ಮಲ್ಲಿಯ ಪದ್ಧತಿಗಳ ಪ್ರಭಾವ ಬೀರುವ ಮುನ್ನವೆ, ಕೊಡಗಿನ ಕೊಂಗಾಳ್ವರ ಆಡಳಿತದಲ್ಲಿ 'ಗರುಡ'ತನದ ಒಂದು ಬಗೆ ಇತ್ತೆನ್ನುವುದಾಗುತ್ತದೆ ಅಥವಾ ಹೊಯ್ಸಳರ ಕಾಲದ ಲೆಂಕರಿಗೆ ಇದೊಂದು ಮಾದರಿಯಾಗಿ ಕಂಡಿತೆ? ಎಂಬ ಪ್ರಶ್ನೆಯೂ ಮುಂದೆ ನಿಲ್ಲುತ್ತದೆ. ಅದೇನೆ ಇರಲಿ ರಾಣಿಯ ಪ್ರೇಮಕ್ಕೆ ಭಾಜನರಾಗಿದ್ದ ವೀರ–ಮಾಸ್ತಿಯವರಿಗೆ ಒಡತಿಯೊಡನೆ ವೀರಸ್ವರ್ಗದ ಸಂಗಮದ ಕಾತರವಾಗಿ ಈ ಆತ್ಮಾರ್ಪಣೆ ನಡೆದಂತಿದೆ.

ಮುಳ್ಳೂರು ಪಾರ್ಶ್ವನಾಥ ಬಸದಿಯ ಬದಿಗಿರುವ ಕ್ರಿ.ಶ. ೧೧ನೇ ಶತಮಾನದ ರಾಜೇಂದ್ರಪ್ರಿಥುವೀ ಕೊಂಗಾಳ್ವನ ಶಾಸನದಲ್ಲಿ ಬಹುಶಃ ಅವನ ಅರಸಿ ಪದ್ಮಲದೇವಿ

ನಿಷಧಿಯಾಗಿ ಸೇಬಾಗ ಅದಕ್ಕಾಗಿ ಹಾಕಿದ ಸ್ಮಾರಕ ಶಾಸನವಿದು... ಸೂಚನೆ ಕಾಣುತ್ತದೆ. ಶಾಸನವು '...ಲದೇವಿ... ವಿನಿರ್ಗತ...ಲೋಕಪಿಖ್ಯಾತೆ ಮೋಕ್ಷದೆ... ದಿಪಿಜಲೋಕ... ಪ್ರಭುವಿ ಕೊಂಗಾಳ್ವನರಸಿ..." ಎಂಬ ಶಬ್ದಗಳಿರುವ ತ್ರುಟಿತ ಅಕ್ಷರಗಳ ಶಾಸನವಾಗಿದೆ. ಹೀಗಾಗಿ ರಾಜೇಂದ್ರ ಪ್ರಭುವಿ ಕೊಂಗಾಳ್ವನ ಅರಸಿ ಪದ್ಮಲದೇವಿ, ಲೋಕವಿಖ್ಯಾತೆಯಾಗಿದ್ದಳು. 'ವಿನಿರ್ಗತ' ಎಂದರೆ 'ಹೊರಬಿದ್ದ' ಎಂಬ ಅರ್ಥವಿದ್ದು, ಬಸದಿಯ ಬಳಿಯ ಶಾಸನವಾಗಿರಲು, 'ಮೋಕ್ಷದ' ಎಂಬ ಶಬ್ದವೂ ಇರುವಲ್ಲಿ ಸಲ್ಲೇಖನದಿಂದ ಪದ್ಮಲದೇವಿ ದಿವಿಜಲೋಕ ಸೇರಿದಳೇ? ಇದು ಆಕೆಯ ನಿಷಧಿ ಶಾಸನವೇ? ಎಂಬ ಊಹಾತ್ಮಕ ಅನುಮಾನಕ್ಕೆ ಅವಕಾಶವಾಗುವಂತಿದೆ. ಆದರೆ ಈ ಪದ್ಮಲದೇವಿಗೂ. ಕ್ರಿ.ಶ. ೧೧೭೫ರ ನಂದಿಗುಂದದ ವೀರಚೋಳ ಕೊಂಗಾಳುವ ದೇವನ ಶಾಸನದಲ್ಲಿ (ಕೊಡಗು ೮೭) ಬರುವ ತಾಯಿ ಪದುಮಲದೇವಿಗೂ ಯಾವ ಸಂಬಂಧವೂ ಕಾಲಾನುಕ್ರಮಣಿಕೆಯಲ್ಲಿ (೧೦೦ ವರ್ಷ ಮೀರವಲ್ಲಿ) ಕಾಣಬರುವುದಿಲ್ಲ.

ಕ್ರಿ.ಶ. ೧೧ನೇ ಶತಮಾನದ ನಲ್ಲೂರು ನಿಷಧಿ ಶಾಸನದಲ್ಲಿ[೧೮] ಕಸ್ತೂರಿಭಟ್ಟಾರರ ಶ್ರಾವಕಿ ಚನ್ದಯಬ್ಬೆ ಗಾವುಣ್ಡಿಯ ಮಂತ್ರಕಿಯಾದ ಜಕ್ಕಿಯಬ್ಬೆ, ಪರಮಶ್ರಾವಕ ಎಡಯ್ಯನ ಪತ್ನಿಯಾಗಿದ್ದು, ಸನ್ಯಸನ ವಿಧಿಯಿಂದ ಮುಡುಪಿನ ಬಗ್ಗೆ ಉಕ್ತವಿದೆ. ಜಕ್ಕಿಯಬ್ಬೆ, ಕಸ್ತೂರಿಭಟ್ಟಾರರ ಶಿಷ್ಯೆಯಾಗಿ ಬೋಧೆಯನ್ನು 'ಆಲಿಸುತ್ತ ೫ ಅಣುವತ್ರ', ೨ ಗುಣವ್ರತ, ೪ ಶಿಕ್ಷಾವ್ರತ ಹೀಗೆ ಒಟ್ಟು ೧೨ ಜೈನವ್ರತಗಳನ್ನು ಆಚರಿಸುತ್ತ ಶ್ರಾವಕಿ ಎನಿಸಿದ್ದಳು. ಅಂಥದೇ ವ್ರತಗಳನ್ನು ಆಚರಿಸುತ್ತಿದ್ದ ಶ್ರಾವಕ ಎಡಯ್ಯನ ಸತಿಯಾಗಿದ್ದಳು. ಇದಲ್ಲದೆ, ಮಂತ್ರಕಿಯಾದ ಕಾರಣ. ಜೈನದೀಕ್ಷಾನ್ವಯ ಕ್ರಿಯಾಭಾಗದ ಆರನೆಯ ಮಂತ್ರೋಚ್ಚಾರ ಮಾಡುವಂಥ, ಪವಿತ್ರ ವಾಕ್ಯವಾದ ಐದು ಮಂತ್ರಗಳಾದ 'ಣಮೋ ಅರಹಂತಾಣಾಂ' ಎಂದು ಉಚ್ಚಾರಗಳನ್ನು ಹೇಳುತ್ತಿದ್ದ ನಿಷ್ಠಾವಂತ ಜೈನಗೃಹಿಣಿ ಸನ್ಯಸನ ವಿಧಿಯಿಂದ ಮರಣವಪ್ಪುತ್ತಾಳೆ. ಅಂದರೆ ಆಕೆ 'ವ್ರತಮಾಧ್ಯಮದ ಸತಿ' ಅರ್ಥಾತ್ ದೀಕ್ಷಾಮರಣ ಸತಿಯಾದವಳು. ಹೀಗೆ ೧೧ನೇ ಶತಮಾನದ ಜಕ್ಕಿಯಬ್ಬೆ ಜಿನತತ್ತ್ವಗಳನ್ನು ವತ್ರಗಳನ್ನು, ಮಂತ್ರಗಳನ್ನು ತಿಳಿದ ಸಂಸ್ಕಾರವಂತ ಜೈನಗೃಹಿಣಿಯಾಗಿದ್ದಳು. ಇನ್ನು ಚನ್ದಿಯಬ್ಬೆ ಗಾವುಣ್ಡಿಯೂ ಜಿನಸಮಯ ಪಾಲನೆ ಮಾಡುತ್ತಿದ್ದ ಕಾರಣವೇನೋ ಜಕ್ಕಿಯಬ್ಬೆ ಅವಳಿಗೆ ಮಂತ್ರಕಿಯಾಗಿದ್ದಿರಬೇಕು. ಜೈನ ಸ್ತ್ರೀಯರು ಗಾವುಣ್ಡತನ ಹೊಂದಿ ಗಾವುಣ್ಡಿಯರಾಗಿ ಕಾಯಕವನ್ನು ನಿತ್ತರಿಸುತ್ತಿದ್ದರು ಎಂದು ಈ ಶಾಸನದಿಂದ ಸೂಚನೆಗೊಳ್ಳುವಂತಿದೆ.

ಕ್ರಿ.ಶ. ೧೨೬೪ರ ವೀರ ಮುನಿವರಾದಿತ್ಯ ಗೋಕುಳ ದೇವರಸನ ಉಲುಗುಲಿಯ ಶಾಸನದಲ್ಲಿ[೧೯] 'ಯಟಿಫಳೆಯ ತುಙು ಇಡಿಸಿದಲ್ಲಿ ಮಾಸಲ ಬ । ಣ್ಣ ಮೇಲಾಳಿಯ ಮರುಳಕಾರ ಯೋಶಿಯಾಳು ಬಿದಡೆ ಗರುಡವಶತಲ್ಲಿ ಬಿಟ್ಟು ದಾಣಿಗೆ ಕಾಲೆಗೆ ಸಂದುದು ಮುಕ್ಕೊಡವೆ' ಎಂದಿದೆ. ಇಲ್ಲಿ ಉಕ್ತವಾಗಿರುವ 'ಯಟಿಫಳೆ' ಸ್ಥಳನಾಮ ಇಂದಿನ 'ಉಲುಗಲಿ' ಸ್ಥಳನಾಮದ ೯-೧೦ನೇ ಶತಮಾನದ ಪ್ರಾಚೀನ ರೂಪ. ಗಂಗರ ಕಾಲದಲ್ಲಿ ಬಳಕೆಗಿದ್ದ ರೂಪ. 'ಯಟಿಫಳೆ' ಗಂಗರ ಕಾಲದಲ್ಲಿ ವೇಳೆವಾಳಿಗಳಿಗೆ ಆಸರೆಯಾಗಿದ್ದ ಪ್ರಸಿದ್ಧ ನೆಲೆ ಎಂಬುದು ಕ್ರಿ.ಶ. ೯೧೧ರ ಅಪ್ರಕಟಿತ ಗುಡಗೂರು ಶಾಸನದಿಂದ[೨೦] ಸೂಚಿತವಾಗಿದೆ. ಬಹುಶಃ ಚಂಗಾಳ್ವ ವಂಶಿಕನಾಗಿದ್ದ ಮುನಿವರಾದಿತ್ಯ ಗೋಕುಳದೇವರಸನ ಕಾಲದ ತುರುಗೋಳ ವೀರ-ಮಾಸ್ತಿಗಲ್ಲು ಈ ಉಲುಗುಲಿಯದಾಗಿದೆ. ಶಾಸನದ ಸಾಲಿನ 'ಮಾ(ಮೀ)ಸಲು ಬಣ್ಣ' ಶಬ್ದವು 'ಮೇಲಾಳಿ'ಯ ವೇಳವಾಳಿತನ, 'ಗರುಡ'ನನ್ನು ಸೂಚಿಸುವಂತಿದೆ. 'ಗರುಡವಶತಲ್ಲಿ' ಶಬ್ದವು ಇದಕ್ಕೆ ಪೋಷಕವಾಗಿದೆ. 'ಮೇಲಾಳಿ' ಎಂದರೆ ಅಶ್ವಾರೋಹಿ ವೀರರ 'ಯೋಷಿತೆ' ಎಂದರೆ ಹೆಂಡತಿ ಎಂಬುದು ನಿಘಂಟಿನ ಅರ್ಥ. ಅಂತಾಗಿ 'ಯೋಶಿತೆ'-'ಯೋಶಿಯಾಳು' ಎಂಬ ಶಾಸನೋಕ್ತಿಗೆ ಮೀಸಲುಬಣ್ಣ ಮೇಲಾಳಿಯ ಸತಿ, ಎಂದು ಪೂರಕವಾದ ಅರ್ಥ ಒದಗುತ್ತದೆ. ತುಙುಗೋಳ ಕಾಳಗದ ಸಂದರ್ಭದಲ್ಲಿ 'ಬಿದಡೆ ... ದಾಣಿಗೆ ಕಾಲೆಗೆ ಸಂದುದು ಎಂದಿರುವ ಗ್ರಾಮೀಣ ಸೊಗಡಿನ ವಾಕ್ಯವು, ಗರುಡವಶತರಾಗಿದ್ದ 'ಮೇಲಾಳಿ ಮತ್ತು ಯೋಶಿಯಾಳು' ಅಂದರೆ ಗಂಡಹೆಂಡತಿ ಗರುಡ ಭಾಷೆ ಕೊಟ್ಟಂತೆ ಹೋಗಿ ಹೋರಾಡಿ ಮಡಿದಂತಿದೆ. ವೀರ-ಮಾಸ್ತಿ ದಂಪತಿಗಳಂತೆ ಇವರು ಕಾಣಬರುತ್ತಾರೆ. ಇವರಿಗೆ ಮೂರು ಹಂತದ ವೀರಮಾಸ್ತಿ ಶಾಸನಶಿಲ್ಪವನ್ನು ಕೆತ್ತಲಾಗಿದೆ. ಶಿಲ್ಪದ ಚಹರೆಗಳು ವೀರಮಾಸ್ತಿಯನ್ನು ಬಿಂಬಿಸುತ್ತವೆ.

ದಾಣಿಗೆ (ಆಯುಧ) ಎಂದರೆ ವೀರನ ಕತ್ತಿಗೆ, ಕಾಲೆಗೆ, ಸತಿ-ಪತಿಯ ಕಾಲ್ವೆಣ್ಣಗೆ ಮುಕ್ಕೊಡವೆ ಎಂದರೆ ಮೂರು ವಡವೆಗಳ ಮೌಲ್ಯದ ದಾನ ನೀಡಲಾಯಿತು ಎಂದು ಪರಿಭಾವಿಸಲು ಅವಕಾಶವಿದೆ. ಶಾಸನ ಹಾಗೂ ಶಿಲ್ಪದ ವಿವರದ ಹಿನ್ನೆಲೆಯಲ್ಲಿ ಮೀಸಲುಬಣ್ಣ ಮೇಲಾಳಿ-ಯೋಶಿಯಾಳು' ಅವರ ವೀರ-ಮಾಸ್ತಿಯರ ಗರುಡತನವನ್ನು ಅರ್ಥೈಸಿಕೊಳ್ಳಬಹುದು. ೧೩ನೇ ಶತಮಾನದ ವೀರಮಾಸ್ತಿಯ ಚಿತ್ರ ಹೀಗೆ ದೊರಕುತ್ತದೆ. ಉಲುಗುಲಿಯಲ್ಲಿ ೧೪ನೇ ಶತಮಾನದ ಹೊಯ್ಸಳರ ಎರಡು ಹಂತದ ಅಪ್ರಕಟಿತ ವೀರಮಾಸ್ತಿಗಲ್ಲು, ನಂಜರಾಯಪಟ್ಟಣದ ಕಾವೇರಿ ದಂಡೆಯಾಚೆಗಿನ ದುಬಾರೆ ಕಾಡಿನ ಅಪ್ರಕಟಿತ

ವೀರವಮಾಸ್ತಿಗಲ್ಲು, ಗೆಜ್ಜೆಹಣಕೋಡಿನ ಅಪ್ರಕಟಿತ ವೀರಮಾಸ್ತಿಗಲ್ಲುಗಳು 'ಸಹಗಮನಿಸತಿ'ಯರ ಶಿಲ್ಪಗಳನ್ನು ಹೊಂದಿವೆ. ಆ ಕಾಲದ ವೀರಸಹಗಮನಿ ಸತಿಯರ ಚಿತ್ರಣ ಇವುಗಳಲ್ಲಿ ದೊರಕುತ್ತವೆ.

ಕ್ರಿ.ಶ. ೧೧೮೫ರ ಹಾನುಗಲ್ ಕದಂಬ ಶಾಖೆಯಾದ ಕೊಡಗಿನ ಕದಂಬರ ದುದ್ದರಸನ ಯಡೂರು ಶಾಸನದಲ್ಲಿ 'ದುದ್ದರಸಂ ಹಿಟ್ಟೆಯರಸಂಗಂ ಜುಂಜಲದೇವಿಗಂ ಪುಟ್ಟಿ', 'ಕುಲಸ್ತ್ರೀ ಚಿಕಲದೇವಿಯುಂ ಬೆಸಕಯ್ಯೆ ... ರಾಜ ... ಕೆಱೆಯುಂ ಕಟ್ಟಿಸಿ...' ಎಂಬ ಶಬ್ದಗಳು ಕನ್ನಡ ಭಾಷೆಯ ದೇಸಿ ಆವರಣದ ಗತ್ತನ್ನು ತೋರಿರುವಂತೆ ದುದ್ದರಸನ ತಾಯಿ ಹಾಗೂ (ಕಿರಿಯ) ರಾಣಿ ಚಿಕಲದೇವಿಯನ್ನು ಉಲ್ಲೇಖಿಸಲಾಗಿದೆ. ಇಂಥ ತಂದೆ ತಾಯಿಯರ ಪುತ್ರ ಎಂದು ಹೇಳಿಕೊಳ್ಳುವ ಹೆಮ್ಮೆ ಇಲ್ಲಿದೆ; ಜೊತೆಗೆ ಕುಲವಧು ಚಿಕಲದೇವಿಯನ್ನು ರಾಣಿಯಾಗಿ ಹೊಂದಿರುವ ತನ್ನದೆಂದು ದುದ್ದರಸ ಹೇಳಿಕೊಂಡಂತಿದೆ. ಬಹುಶಃ ಆಕೆಯ ಆಶಯವೂ ಸೇರಿದಂತೆ ಜನೋಪಕಾರಿಯಾದ ಕೆಱೆಯನ್ನು ಕಟ್ಟಿಸಿದಂತೆ ತೋರುತ್ತದೆ. ಹೀಗಾಗಿ ೧೧ನೆಯ ಶತಮಾನದಲ್ಲಿ ರಾಜಸ್ತ್ರೀಯರಿಗಿದ್ದ ರಾಜಗೌರವ, ಆದರ, ಸ್ವರಣಾಧನ್ಯತೆಯ ಚಿತ್ರ ಇಲ್ಲಿ ಕಾಣುತ್ತದೆ.

೧೩ನೇ ಶತಮಾನದ ಗಣಗೂರು ಶಾಸನದಲ್ಲಿ ಹೆಣ್ಣುಮಕ್ಕಳಿಗೆ ವಂಶಪಾರಂಪರ್ಯ ಹಕ್ಕು ಇದ್ದ ಸಂದರ್ಭವನ್ನು ತಿಳಿಸಲಾಗಿದೆ. 'ತೆಂಕಗುಂದನಾಡೆಪ್ಪತ್ತಕ್ಕಂ ಕಾರುಣ್ಯಗೆಯ್ದು ... ಗಂಡಿಲ್ಲದಿರ್ದೊಡೆ ಹೆಣ್ಣಿಂಗೆ ಹೆಣ್ಣುಮಕ್ಕಳಂಗೆ ಸಲ್ಲುವುದು ಈ ಧರ್ಮ' ಎಂದಿರುವ ಶಾಸನೋಕ್ತಿಯಲ್ಲಿ ಉತ್ತರ ಕೊಡಗಿನಲ್ಲಿ ಹೆಂಗಳೆಯರಿಗೆ ಅವರ ಹೆಣ್ಣುಮಕ್ಕಳಿಗೆ, ವಂಶದ ಗಂಡುಮಕ್ಕಳಿಲ್ಲದಿದ್ದಾಗ ಅನ್ಯರಿಗೆ ಆಸ್ತಿ ಹೋಗಬಾರದು, ವಂಶದ ಹೆಣ್ಣುಸಂತಾನಕ್ಕೆ ದಕ್ಕಬೇಕು ಎಂಬ ಶಾಸನೋಕ್ತ ನಿಯಮ ತೆಂಕಗುಂದನಾಡಿನಲ್ಲಿದ್ದ ಬಗ್ಗೆ ತಿಳಿಯುತ್ತದೆ. ಇಂಥದೊಂದು ಪೂರ್ವಮರ್ಯಾದಾ ಪರಂಪರೆ ಹೆಂಗಳೆಯರಿಗಿತ್ತು. ಇದಕ್ಕೆ ಪೋಷಕವಾಗಿ ಚಂಗಾಳ್ವ (!) ಹರಿಹರದೇವನ ೧೩ನೇ ಶತಮಾನದ ಚೌಡ್ಲು ಗ್ರಾಮದ ಸುಗ್ಗಿಗುಡಿ ಬಳಿಯ ಶಾಸನವೂ ಸಾಕ್ಷಿಯಾಗಿದೆ. ಆ ಶಾಸನದಲ್ಲಿ 'ಕುಂದೂರಿಂಗೆ ಪೂರ್ವ್ವದಲಿ ಹೆಂಣಿಂಗೆ ಸಲುವ ಸ್ವಾಸ್ತೆಮರಿಯಾದಿಯ ಕೊಟ್ಟ ಕ್ರಮವೆಂತೆಂದಡೆ ಹೆಣ್ಣಿಂಗೆ ಹೆಣ್ಣುಮಕ್ಕಳಿಂಗೆ ತೊತ್ತಿನ ಮಕಳಿಂಗೆ ಸಲುವುದು ಚವುಡ .. ಮಾನೆಯಾಳು ... ಕುಂದೂರ ತಾವಮಾನೆಯೊಳು...' ಎಂದಿದೆ. ಈ ಶಾಸನ ಗಣಗೂರು ಶಾಸನಕ್ಕಿಂತ ಹೆಚ್ಚು ನಿಖರವಾಗಿ ಹೆಣ್ಣಿಗೆ ಆಕೆಯ ಹೆಣ್ಣುಮಕ್ಕಳಿಗೆ ಅಷ್ಟೇ, ಅಲ್ಲ (ಹೆಣ್ಣು) ತೊತ್ತಿನ ಮಕ್ಕಳಿಗೆ ಪೂರ್ವ ಪರಂಪರೆಯಾಗಿ ಬಂದ ಸ್ವಾಸ್ತೆ ಮರ್ಯಾದೆ ಕುರಿತು ಹೇಳಿದೆ. ಚವುಡತಾವಮಾನೆ (ಚೌಡ್ಲುಗ್ರಾಮ ಪರಿಸರ), ಕುಂದೂರತಾವಮಾನೆಯಲ್ಲೂ ಈ ಪರಂಪರೆ ನಡೆದು ಬಂದಿದ್ದುದು, ಗಂಡಿಲ್ಲದಿರ್ದೊಡೆ-ಗಂಡು ಸಂತಾನವಿಲ್ಲದಿದ್ದರೂ ಹೆಣ್ಣಿಗೆ, ಹೆಣ್ಣುಸಂತಾನಕ್ಕೆ, ತೊತ್ತಿಗೆ ಸಲ್ಲುತ್ತಿದ್ದ ಸ್ವಾಸ್ತೆ ಮರ್ಯಾದೆಯ ಚಿತ್ರವಿಲ್ಲಿದೆ. ಅಂದರೆ ಅವರ ಅಭಿವೃದ್ಧಿ, ಬೆಳವಣಿಗೆಗೆ ದತ್ತಿ, ದಾನವಾಗಿ ಭೂಮಿಯನ್ನು ಕೊಡುತ್ತಿದ್ದ ಪರಂಪರೆ, ಹೆಂಗಳೆಯರಿಗೆ ಸಂದಾಯವಾದ ಗೌರವವಾಗಿತ್ತು. ಬಹುಶಃ ಈ ಪರಂಪರೆಯ ಕಾರಣ ಕೊಡಗಿನಲ್ಲಿ ಮಾತೃಮರ್ಯಾದಾ ಸಂಕೇತಗಳು ವಿವಿಧ ಸಾಂಸ್ಕೃತಿಕ ಆಚರಣೆಗಳಲ್ಲಿ ಕಾಣಬರುತ್ತವೆ. ಬಹುಶಃ ಆದ್ಯ ಕುಲದೇವತೆ ಕಾವೇರಿಯಾರಾಧನೆಯಲ್ಲಿ (ಕಣಿಪೂಜು, ಬೊತ್ತಲೆ); ಕಾರಣಬ್ಬೆ (ಸ್ತ್ರೀಕಾರೋಣ-ಮನೆತನದ ಹಿರಿಯ ಪಟ್ಟದಾಕೆ); ತಾಯಿಯೆ ಮದುವೆ ಸಂದರ್ಭದಲ್ಲಿ ಹೆಣ್ಣಿಗೆ ಪತ್ತಾಕ (ತಾಳಿಪದಕ ಕಟ್ಟುವುದು, ಗಂಡುಹೆಣ್ಣು ವೇಷ ಧರಿಸಿ, ಹೆಣ್ಣು-ಗಂಡುವೇಷ ಧರಿಸಿ ಪೊಮ್ಮಂಗಲ ಹರಕೆ ತೀರಿಸುವುದು ಇತ್ಯಾದಿಗಳಲ್ಲಿ ಅದು ಕಾಣಬರುವಂತಿದೆ.

೧೩ನೇ ಶತಮಾನದ (ಕ್ರಿ.ಶ. ಸು. ೧೨೮೬) ಮುಳ್ಳೂರಿನ ಶಾಸನವು ಚಂಗಾಳ್ವ (!) ಹರಿಹರದೇವನ ಆಳ್ವಿಕೆಯ ಸಂದರ್ಭದಲ್ಲಿ ಮುಳ್ಳೂರ ಕೋಟೆಯನ್ನು ಬೆಳಹುನಾಡು, ಗೊದ್ದುಂಬಾಡಿ ಮುಳವರಾದಿತ್ಯ ನಾಡು, ನಿಡಿತ, ಮಣಸ ಮೊದಲಾಗಿ ನಾಡೆಲ್ಲ ನೆರದೆತ್ತಿ ಬಂದು ಹತ್ತಿದ ಸಂದರ್ಭ. ಆಗ ಬೊಪ್ಪಗೌಡಿಯ ಮಗ ಮಲ್ಲೆಯ ಕೋಟೆಯನ್ನು ಕಾಯ್ದು, ಜಯ ತಂದುಕೊಟ್ಟು ಮಡಿದ. ಅವನು ಅವಿವಾಹಿತನಾಗಿ ವೀರಸ್ವರ್ಗವೇರಿದವ. ಅಂಥವನಿಗೆ ಇಲ್ಲಿ ವೀರಸೇಸೆ (ಕೊಡಿಗನ ಪದ್ಧತಿಯಂತೆ ಮದುಮಕ್ಕಳಿಗೆ ಮಾಡುವ ಸೇಸೆಯಂತೆ) ಹಾಕಿ ವೀರಗಲ್ಲು ನೆಡಲಾಯಿತು. ಆಗ ಬೊಪ್ಪಗೌಡಿಯ ಇತರ ಮಕ್ಕಳಾದ ಮಾಲ್ಲೆಯ ಮದ್ದೆಯನಿಗೆ ಸರ್ವಬಾದಾ ಪರಿಹಾರಿವಾಗಿ ಭೂಮಿ ದಾನ ಮಾಡಿದ್ದು ಉಕ್ತವಿದೆ. ಆದರೆ ಉಭಯ ಸಂದರ್ಭದಲ್ಲಿಯೂ 'ಬೊಪ್ಪಗೌಡಿಯ ಮಲ್ಲೆಯ' 'ಬೊಪ್ಪಗೌಡಿಯ ಮಾಲ್ಲೆಯ, ಮದ್ದೆಯ' ಎಂದಿರುವುದು. ತಂದೆಯ ಬದಲು ತಾಯಿಯ ಹೆಸರಿನ ಮೂಲಕ ಗಂಡುಮಕ್ಕಳ ಹೆಸರನ್ನು ದಾಖಲಿಸಿರುವುದು. ಮಾತೃಪ್ರಾಧಾನ್ಯತೆಗಿದ್ದ ಮಾನ್ಯತೆಯ ಕುರುಹಾಗಿ ಕಾಣಿಸುತ್ತದೆ (ಗೌತಮಿಪುತ್ರ ಸಾತಕರ್ಣಿ, ವಾಸಿಷ್ಠಿಪುತ್ರ ಸಾತಕರ್ಣಿ ಇತ್ಯಾದಿ ಶಾತವಾಹನ ಪದ್ಧತಿಯ ನೆನಪು ಇಲ್ಲಿ ಆಗುತ್ತದೆ.)

೧೮ನೇ ಶತಮಾನದ ತಲಕಾವೇರಿ ಅಗಸ್ತ್ಯೇಶ್ವರ ದೇಗುಲಕಟ್ಟೆಯ ಶಾಸನವು ಮನೆಯ ಪಂಡ ಮೊಣ್ಣಪ್ಪನವರ ಪತ್ನಿ ಮುದ್ದಮ್ಮನವರ ಜ್ಞಾಪಕಾರ್ಥವಾಗಿ ಗಂಟೆಯನ್ನು

ಕಾಣಿಕೆಯಾದ ಬಗ್ಗೆ ಹೇಳಿದೆ. 'ಮನೆಯಪಂಡ' ಕೊಡವರಲ್ಲಿಯ ಒಂದು ಪ್ರಾಚೀನ ಮನೆತನದ ಹೆಸರು (ಮನೆಪದೆ). ಪತ್ನಿಯ ಕಾಲುಗುಣಕ್ಕೆ ಬಾಗವಾಗಿ ಅರ್ಪಿಸಿದ ಗಂಟೆ, ಸಾಮಾನ್ಯ ಚರ್ಚೆ ಎನಿಸಿದರೂ, ಕೊಡಗಿನಲ್ಲಿ ಅದರಲ್ಲೂ ಕಾವೇರಿ ಸನ್ನಿಧಿಯಲ್ಲಿ ವಿಶೇಷ. ಕ್ರಿ.ಶ. ೧೨೫೫ರ ಅಂಜನಗಿರಿ ಬಸದಿಯ ಶಾಸನವು ಹನಸೋಗೆಯ ಆದಿಶ್ರೀ ಅವ್ವಗಳು, ಅಂಮನ ಹೊಸಹಳ್ಳಿಯ ಭುಜಬಲಿಶ್ರೀ ಅವ್ವಗಳು ಬಸದಿಯ ಗರ್ಭಗೃಹದ ಕಲ್ಲುಕೆಲಸಕ್ಕೆ ೩೦ ಹೊನ್ನುಗಳನ್ನು, ಗುರು ಚಾರುಕೀರ್ತಿ ಪಂಡಿತದೇವರುಗಳಿಗೆ ನೈವೇದ್ಯ ವ್ಯವಸ್ಥೆಗೆ ೫೦ ಗದ್ಯಾಣವನ್ನು ದಾನ ನೀಡಿದ ಸಂಗತಿ ಹೇಳಿದೆ. ಈ ಅವ್ವಗಳ ಜೊತೆಗೆ ಅನಂತಮತಿ ಅವ್ವಗಳು, ನೇಮಿಶ್ರೀ ಅವ್ವಗಳು ವಿಜಮೆಯಶ್ರೀ ಅವ್ವಗಳಿಂದ ಮಲುಗನಹಳ್ಳಿಯ ಆದ್ಯಕ್ಕಗಳಿಂದ (ಹಿರಿಯಳಿಂದ) ದೇಗುಲ ನಿರ್ಮಾಣಕ್ಕೆ ಕುಲದೇವರ ಪ್ರತಿಷ್ಠೆಗೆ ಹೊನ್ನುಗಳನ್ನು ಅರ್ಪಿಸಿದ ವಿಷಯವಿದೆ. (ಹಿರಿಯ–ಕಿರಿಯ) ಜೈನ ಹೆಂಗಳೆಯರು ಜಿನಾಲಯ ಅಭಿವೃದ್ಧಿಗೆ, ನಿರ್ಮಾಣಕ್ಕೆ, ಹಾಗೂ ಗುರುಗಳ ನೈವೇದ್ಯ ವ್ಯವಸ್ಥೆಗೆ ಮುಂದಾಗುತ್ತಿದ್ದುದು, ಅವರ ಧರ್ಮನಿಷ್ಠೆ, ಜಿನಭಕ್ತಿ ಗುರುಭಕ್ತಿಯ ದ್ಯೋತಕವಾಗಿದೆ.

ಕ್ರಿ.ಶ. ೧೧೭೫ರ ನಂದಿಗುಂಡ ಶಾಸನದಲ್ಲಿ[೩೨] ಮಹಾಮಣ್ಡಳೇಶ್ವರ ವೀರಚೋಳಕೊಂಗಾಳ್ವದೇವನು ಆಳ್ವಿಕೆಯ ಕಾಲದಲ್ಲಿ, 'ತಾಯಿ ಪದುಮಲದೇವಿ, ಸೋಮಲದೇವಿ, ತೋಳೂರು ದುದ್ಧರಸ, ಬಲ್ಲೆಯ ದಂಡನಾಯಕ ಮುಂತಾದವರ ಸಮ್ಮುಖದಲ್ಲಿ ಸುಂಕಪರಿಹಾರವನ್ನು ಮುಳ್ಳುನಾಡು ೭೦ಕ್ಕೆ ಬಿಟ್ಟ ವಿಷಯವಿದೆ. ಶಾಸನ ಸಂಪುಟವು (ಪ್ರಸ್ತಾವನೆ ಪುಟ xxxiii) ರೈಸರು, ಪದುಮಲದೇವಿ ಮತ್ತು ಸೋಮಲದೇವಿಯರು ಹೊಯ್ಸಳ ರಾಣಿ, ಹಾಗೂ ರಾಜಕುವರಿ ಎಂದು ಸೂಚಿಸಿರುವುದು ಅನುಮಾನಾಸ್ಪದ. ಸಾರ್ವಭೌಮನ ಪತ್ನಿ, ರಾಜಗುವರಿ ಸಾಮಂತನೊಬ್ಬನ ಶಾಸನದಲ್ಲಿ ಯಾವ ಬಿರುದೂ ಇಲ್ಲದೆ ಹೆಸರಷ್ಟನ್ನೆ ಹೇಳಿರುವುದು ಸಂದೇಹಕ್ಕೆ ಆಸ್ಪದ ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿದೆ. ಸರಿಯೆ. ಆದರೆ ಇದೇ ಶಾಸನದಲ್ಲಿ ಹಾನುಗಲ್ಲು ಕದಂಬವಂಶಿಕ ಕೊಡಗಿನ ಕ್ರಿ.ಶ. ೧೧೯೫ರ ಯಡೂರಿನ ಶಾಸನೋಕ್ತ ಕದಂಬ ದೊರೆ ದುದ್ದರಸನ ವಂಶಿಕನಿರಬಹುದಾದ ತೋಳೂರ ದುದ್ದರಸ, ಹಾಗೂ ಹೊಯ್ಸಳ ದಂಡನಾಯಕ ಬಲ್ಲೆಯ ದಣ್ಡನಾಯಕರಂಥ ಗಣ್ಯರ ಸಮ್ಮುಖ ಸಾಕ್ಷಿಯೂ ಈ ಸುಂಕ ರಿಯಾಯಿತಿಗಿದೆ. ಅಲ್ಲದೆ ಅವರು ಹೊಯ್ಸಳರಾಣಿ, ಹಾಗೂ ರಾಜಗುವರಿ ಎನ್ನುವ ಬದಲು ವೀರಚೋಳ ಕೊಂಗಾಳ್ವದೇವನ ಶಾಸನದಲ್ಲಿರುವುದು. ತಾಯಿ ಪದುಮಲದೇವಿ ಹಾಗೂ ಅವನ ಸತಿ ಸೋಮಲದೇವಿಯೂ ಆಗಿರಬಹುದಲ್ಲವೆ? ಅಂದರೆ ಈ ಮಾಂಡಲೀಕ್ಷರನ ಕುಟುಂಬದವರೂ ಆವರಾಗಿ ರಾಜಗೌರವಾನ್ವಿತ ಮಹಿಳೆಯರೆಂದು ಪರಿಗಣಿಸಬೇಕಾಗುತ್ತದೆ. ಜೊತೆಗೆ ಕ್ರಿ.ಶ. ೧೦೭೭ರ ರಾಜೇಂದ್ರಪೃಥ್ವೀ ಕೊಂಗಾಳ್ವನ ಪತ್ನಿಯ ಹೆಸರೂ ಪದ್ಮಲದೇವಿ ಎಂದಿದೆ. ಆ ಪರಂಪರೆಯಲ್ಲಿ ಕೊಂಗಾಳ್ವರ ಅರಸು ಕುಟುಂಬದ ಕ್ರಿ.ಶ. ೧೧೭೫ರ ಅವಧಿ ಅಂದರೆ ಸುಮಾರು ನೂರು ವರ್ಷದಾಚೆಗಿನ ಹೆಂಗಳೆಯರಿಗೆ ಆ ಹೆಸರು ಪುನರಾವರ್ತನೆಯಾಗಿರುವ ಸಾಧ್ಯತೆಯನ್ನು ಈ ಸಂದರ್ಭದಲ್ಲಿ ಪರಿಗಣಿಸಬೇಕಾಗುತ್ತದೆ. ಆದಾಗಿ ಸಾಮಂತ ದೊರೆಗಳ ಕುಟುಂಬದ ಅರಸಿಯರು ಸಾಕ್ಷ್ಯಗೌರವ ಸಮ್ಮುಖಕ್ಕೆ ಗಣ್ಯಭಾಜನನರಾಗಿದ್ದರು ಎಂದು ತಿಳಿಪಿಗೆ ಬರುತ್ತದೆ. ರಾಣಿ ಪದುಮಲದೇವಿ ರಾಜಮಾತೆಯಾಗಿ ನಾಡಿಗೆ ಬಯಸಿದ ಆಸರೆ ಹಾರೈಕೆಯನ್ನು ಈ ಶಾಸನ ಧ್ವನಿಸುವಂತಿದೆ. ಕ್ರಿ.ಶ. ೧೧೧೫–೧೬ರಲ್ಲಿ ಹೊಯ್ಸಳ ವಿಷ್ಣುವರ್ಧನನು ಕೊಂಗಾಳ್ವ ರಾಜಕುಮಾರಿ ಚಂದಲದೇವಿಯು ವಿಷ್ಣುವರ್ಧನನ ರಾಣಿಯಾದಳು.

ಇತಿಹಾಸದ ಅಂಗಳದಲ್ಲಿ

ಶಾಸನದಲ್ಲಿ ಬರುವ ಕೊಂಗಾಳ್ವ ರಾಣಿಯರಾದ ಜುಂಜಲದೇವಿ, ರುಗ್ಮಿಣಿದೇವಿ, ಪದ್ಮಲದೇವಿ, ರಾಜಗುವರಿ, ಸೋಮಲದೇವಿಯರನ್ನುಳಿದರೆ. ಚಾರಿತ್ರಿಕ ದಾಖಲೆಯ ರೀತ್ಯಾ ಹಾಲೇರಿ ಮೊದಲರಸ ವೀರರಾಜ (ವೀರಪ್ಪ) ಒಡೆಯನ 'ರಾಣಿ ಲಕ್ಕಮ್ಮಾಜಿ'ಯ ಉಲ್ಲೇಖ ಕೇಳಿಬರುತ್ತದೆ[೩೯]. ಬಹುಶಃ ಚೆಂಗಾಳ್ವರ ಪೆರಿಯರಾಜನ ಮಗಳು ಈಕೆಯಾಗಿರಬಹುದು.

'ಇಕ್ಕೇರಿ ಲಕ್ಕಮ್ಮ ಇಳಿದು ಬಾರೆ' ಎಂಬ ಜನಪದ ಗೀತೆಯು ಈಕೆಯನ್ನು ಕುರಿತಂತೆ ಹೇಳಿರುವಂತಿದೆ. ಇದು ಚಂಗಾಳ್ವ ರಾಜಕುಮಾರಿ ಲಕ್ಕಮಾಂಬೆ, ಲಕ್ಕಮ್ಮಾಜಿ, ಇಕ್ಕೇರಿ ರಾಜಕುಟುಂಬಕ್ಕೆ ವಧುವಾಗಿ ಹೋದ ಸಂದರ್ಭವೋ, ಅಥವಾ ಹಾಲೇರಿ ಮೊದಲರಸ ವೀರರಾಜ ಒಡೆಯ ಮದುವೆಯಾದ ಪೆರಿಯರಾಜನ ಮಗಳೋ ಎಂಬುದು ಸ್ಪಷ್ಟವಿಲ್ಲ. ಸಿದ್ದೇಶ್ವರ ಬೆಟ್ಟವು, ಪಿರಿಯಾಪಟ್ಟಣ ಹಾಗೂ ಇಂದಿನ ಕೊಡಗಿನ ನಡುವಣ 'ಗಡಿಬೆಟ್ಟ' ಎಂಬುದೂ ಇಲ್ಲಿ ಗಮನಾರ್ಹ. ಈ ಘೋಷ ಕೊಡಗಿಗೆ ವಧುವನ್ನು ಕರೆದು ತರುವಲ್ಲಿ ಮಾಡುವ ಜನಪದ ರೂಢಿಯ ಘೋಷವೋ ಎಂಬುದೂ ಸ್ಪಷ್ಟವಿಲ್ಲ. ಅದೇನೇ ಇರಲಿ ಹಾಲೇರಿ ಅರಸರ ಒಂದು ಚಾರಿತ್ರಿಕ ಸ್ತ್ರೀಪಾತ್ರ ಜನಪ್ರಿಯವಾಗಿದ್ದ, ಮನೆಮಾತಾಗಿದ್ದ ಸಂದರ್ಭವನ್ನು ಅದು ಹೇಳುವಂತಿದೆ.

ವೀರರಾಜ ಒಡೆಯನ ಹಿರಿಯ ಮಗ ಅಪ್ಪಾಜಿ ರಾಜೇಂದ್ರ ಒಡೆಯನ ರಾಣಿ ಬೇಲೂರು ಅರಸರ (ಬಲಂ ಅರಸರ) ರಾಜಗುವರಿಯಾಗಿದ್ದಳು. ಕೆಳದಿ ಶಿವಪ್ಪನಾಯಕ

ಅಪ್ಪಾಜಿರಾಜೇಂದ್ರ ಒಡೆಯನನ್ನು ಕಾಳಗದಲ್ಲಿ ಸೆರೆ ಹಿಡಿದಾಗ, ಇಕ್ಕೇರಿಯೊಡನಿದ್ದ ಬಲಂ ಅರಸರ ವೈವಾಹಿಕ ಸಂಬಂಧದ ಹಿನ್ನೆಲೆಯಲ್ಲಿಲ, ಪ್ರಾರ್ಥಿಸಿ ಸೆರೆ ಬಿಡಿಸಿ ತನ್ನ ಸಮಯ ಕೌಶಲವನ್ನು ಮೆರೆದಳು. ಕಿರಿಯ ಮಗ ನಂಜುಂಡರಸು, ಮೈಸೂರು ಸೈನ್ಯದೊಡನಾದ ಕಾಳಗದಲ್ಲಿ ಕ್ರಿ.ಶ. ೧೬೪೪ರಲ್ಲಿ ಪತನವಾದ ಪಿರಿಯಾಪಟ್ಟಣ ಬಿಟ್ಟು, ಕೊಡಗಿನ ಅಂದಿನ ಹಾಲೇರಿ ವಂಶದರಸ ಮುದ್ದರಾಜನ ಆಶ್ರಯಕ್ಕೆ ಪತ್ನಿ ದೇವಮ್ಮಾಜಿಯೊಡನೆ ನಂಜರಾಜಪಟ್ಟಣದಲ್ಲಿ ವಾಸ್ತವ್ಯ ಮಾಡಿದ. ಅಪ್ಪಾಜಿರಾಜೇಂದ್ರ ಒಡೆಯನಿಗೆ ಮುದ್ದರಾಜ ಮಗ ದೇವಮ್ಮಾಜಿ ಸೊಸೆ ಆಗಿದ್ದರು. ಮುಂದೆ ಕಾಲಾಂತರದಲ್ಲಿ ಪಟ್ಟಕ್ಕೆ ಬಂದ (ಕ್ರಿ.ಶ. ೧೬೮೧–೧೭೩೩)ರ ಸಿರಿಬಾಯಿ ದೊಡ್ಡವೀರಪ್ಪನಿಗೆ ಮುದ್ದಮ್ಮಾಜಿ ಮತ್ತು ದೇವಮ್ಮಾಜಿ ಎಂಬ ಪಟ್ಟದ ರಾಣಿಯರಿದ್ದರು. ಅವನು ಶಿವಾಧೀನನಾದಾಗ ಆ ಈರ್ವ ಪಟ್ಟದರಾಣಿಯರೂ ಅವನ ಸಂಗಡವೇ ಸಹಗಮನ ಮಾಡಿದರೆಂದು ರಾಜೇಂದ್ರನಾಮೆ ತಿಳಿಸಿದೆ[೨೯]. ವೀರಶೈವಧರ್ಮಿಗಳಲ್ಲಿ ಚಿತೆ ಏರುವ ಅಥವಾ ಸತಿಸಹಗಮನ ಪದ್ಧತಿ ಇಲ್ಲ. ಬಹುಶಃ ಕೊಡವ ಪಂಗಡದಿಂದ ಬಂದು ವೀರಶೈವ ದೀಕ್ಷಿತರಾಗಿ ಸಿರಿಬಾಯಿ ದೊಡ್ಡವೀರಪ್ಪನಿಗೆ ರಾಣಿಯಾಗಿದ್ದಿರಬೇಕು. ಕೊಡವರಲ್ಲಿಯ ಪದ್ಧತಿಯನ್ನು ಮಾನಿಸಿ ಈರ್ವ ರಾಣಿಯರು ಸಹಗಮನ ಮಾಡಿರಬಹುದು. ಅಥವಾ ದೊಡ್ಡ ವೀರಪ್ಪನಿಗೆ ಪೂರ್ವನಿಶ್ಚಿತ ಸಮಾಧಿ ಗದ್ದುಗೆ ಇದ್ದಿದ್ದು, ಅವನ ರಾಣಿಯರು ಸ್ವಯಿಚ್ಛೆಯಿಂದ ಆ ಗದ್ದುಗೆಯಲ್ಲಿ ಜೀವಂತ ಸಮಾಧಿಗೊಂಡಿರಬೇಕು. ಅವರ ಗದ್ದುಗೆಗಳ ಕುರುಹು ಇಂದು ಮಡಿಕೇರಿಯ ಉತ್ತರ ದಿಸೆಯ ರಾಜರ ಗದ್ದುಗೆಗಳ ಆವರಣದಲ್ಲಿ ಕಾಣಬರುವುದಿಲ್ಲವಾದರೂ ರಾಜಮನೆತನದ ರುದ್ರಭೂಮಿಯ ನೆಲೆ ಅದಾಗಿದ್ದು, ಅಲ್ಲಿದ್ದ ಅವರ ಸಮಾಧಿ ಗದ್ದುಗೆಗಳ ಗುರುತು ಅಳಿದಿರಬೇಕು. ಹಾಲೇರಿಯಲ್ಲಿಯೂ ಅವರ ಗದ್ದುಗೆ ಸಮಾಧಿ ಕುರುಹಗಳ ಬಗ್ಗೆ ಕೇಳಿಬರದು. ಅಂತು ಈ ರಾಣಿಯರಲ್ಲಿದ್ದ ಪ್ರೀತಿ ಕಾರಣವೇನೋ ದೊಡ್ಡವೀರಪ್ಪನ ಕಾಲದಲ್ಲಿ ಪ್ರಾದೇಶಿಕ ಧಾರ್ಮಿಕ ಪದ್ಧತಿಯನ್ನು ಮಾನಿಸಿದ್ದ ಬಗೆ ಇದಾಗಿದ್ದಿರುವಂತಿದೆ.

ಮುದ್ದರಾಜ (ಕ್ರಿ.ಶ. ೧೬೩೩–೧೬೮೭)ನ ಕೊನೆಯ ಮಗಳು, ಸಿರಿಬಾಯಿ ದೊಡ್ಡವೀರಪ್ಪನ ಕಿರಿಯ ಸೋದರಿ ನೀಲಮ್ಮಾಜಿ. ಅವಳನ್ನು ಅರಮೇರಿಯ ಕೊಡವ ಮನೆತನ ಉತ್ತುನಾಯಕನನ್ನು, ರಾಜಾಶ್ರಯದಲ್ಲಿ ಬೆಳೆಸಿ ವೀರಶೈವ ದೀಕ್ಷೆ ಕೊಟ್ಟ ಮೇಲೆ, ಅವನಿಗೆ ಚನ್ನಬಸಪ್ಪ ಎಂದು ಹೆಸರಿಟ್ಟು ಮದುವೆ ಮಾಡಿಕೊಡಲಾಯಿತು. ಅವನು ದೊಡ್ಡವೀರಪ್ಪನ ಕಾಲದಲ್ಲಿ ಅವನ ವಿರುದ್ಧ ಕೇರಳದ ಕೋಟಂಗಡಿ ವೀರವರ್ಮನೊಡನೆ ಸೇರಿ ಯುದ್ಧದಲ್ಲಿ ಪಾಲ್ಗೊಂಡು ಸೋತು ಬೈತೂರಿಗೆ ಓಡಿಹೋಗಿಯೋ, ಅಮರಸೂಳ್ಯದಲ್ಲಿಯೋ ಹೋಗಿ ಸತ್ತು ಸಮಾಧಿಯಾದ ಎಂದು ಹೇಳಲಾಗಿದೆ. ಆಗ ದೊಡ್ಡವೀರಪ್ಪ ತಂಗಿಗೆ ಅರಮನೆಗೆ ಬಂದಿರಲು ಹೇಳಿದ. ಆದರೆ ಆಕೆ ಗಂಡನಿದ್ದ ಮನೆಯೆ ನನ್ನದು ಎಂದು ಅರಮೇರಿಯಲ್ಲಿಯೆ ಉಳಿದಳು. ಅವಳಿಗೆ ದೊಡ್ಡವೀರಪ್ಪ ಸದ್ಬೋಧೆಗಾಗಿ ಅರಮೇರಿ ಮಠವನ್ನು ಕ್ರಿ.ಶ. ಸು. ೧೬೯೦ರಲ್ಲಿ ಸ್ಥಾಪಿಸಿ ಗುರುಗಳನ್ನಿಟ್ಟ. ನೀಲಮ್ಮ ಅಲ್ಲಿಯೇ ಇದ್ದು ಶಿವೈಕ್ಯಳಾದ ಮೇಲೆ ಸ್ಮಾರಕ ಕಟ್ಟಡವಾಗಿ 'ಕೈಮಡ'ವನ್ನು ನಿರ್ಮಿಸಲಾಯಿತು. ಚನ್ನಬಸಪ್ಪನಾಗಿದ್ದ ಉತ್ತುನಾಯಕನಿಗೆ ವಂಶಿಕರು ವೀರಶೈವರಿಂದ ಪೂಜಾದಿ ಎಡೆಗಳನ್ನಿಡಿಸುತ್ತಿದ್ದರು. ಇಂದು ಆ ಕೈಮಡಕ್ಕೆ ವಂಶಿಕರೇ ಸಾತ್ವಿಕಾಹಾರವನ್ನು ಎಡೆ ಮಾಡಿ ಪೂಜಿಸುತ್ತಾರೆ. ಹುತ್ತರಿಹಬ್ಬದಲ್ಲಿ ಈ ಕೈಮಡ ಬಳಿಯೇ ಕೋಲಾಟ ಮಾಡುತ್ತಾರೆ. ಇದೆಲ್ಲ ನೀಲಮ್ಮಾಜಿಯ ಪತಿಭಕ್ತಿ, ದೃಢಚಿತ್ತ, ಗುರುಭಕ್ತಿ ಹಾಗೂ ವರ್ಚಸ್ವೀ ಪ್ರೇರಕ ಶಕ್ತಿಯಾಗಿ ವಂಶಿಕರಲ್ಲಿ ಉಳಿದ ಬಗ್ಗೆ ತಿಳಿಯುತ್ತದೆ.

ಹಾಲೇರಿ ರಾಜಕುಟುಂಬದಲ್ಲಿ, ಹಾಲೇರಿ ಹಾಗೂ ಹೊರಮಲೆ ಶಾಖೆಗಳಲ್ಲಿ ಸಿಂಹಾಸನದ ಉತ್ತರಾಧಿಕಾರಕ್ಕೆ ಮುದ್ದಯ್ಯರಾಜ, ಮುದ್ದುರಾಜ (೧೭೬೬–೭೦)ರ ಆಳ್ವಿಕೆಯ ನಂತರ ಹೋರಾಟವಾಯಿತು. ಆಗ ಹೊರಮಲೆ ಶಾಖೆಯ ಮಲ್ಲಯ್ಯ ಅರಸುಪಿನ ಮಗ ದೇವಪ್ಪರಾಜನಿಗೆ ಪಟ್ಟವಾಗಲು, ಹಾಲೇರಿ ಶಾಖೆಯ ೨ನೇ ಅಪ್ಪಾಜಿರಾಯನ ಮಗ ೧ನೇ ಲಿಂಗರಾಜೇಂದ್ರ ಒಡೆಯ ಹಾಗೂ ಅವನ ಅಣ್ಣನ ಮಕ್ಕಳಿಗೆ ಕಿರುಕುಳ ಶುರುವಾಯಿತು. ಅದನ್ನು ತಾಳಲಾಗದೆ ಈ ಒಡೆಯನು ಹಾಸನ ಜಿಲ್ಲೆ ಐಗೂರು ರಾಜವಂಶದ ಬಸಪ್ಪರಾಜನಲ್ಲಿ ಆಸರೆಗೆ ಹೋದ. ಅಲ್ಲಿನ ಬಸಪ್ಪರಾಜ, ಲಿಂಗರಾಜೇಂದ್ರ ಒಡೆಯನ ಸೋದರಿ ದೇವಮ್ಮಾಜಿಯನ್ನು ಮದುವೆ ಆಗಿದ್ದ. ಹೀಗಾಗಿ ಆ ಸೋದರಿ ತನ್ನ ಅಣ್ಣನಿಗೆ ಹಾಗೂ ದೊಡ್ಡಣ್ಣನ ಮಕ್ಕಳಿಗೆ ಆಸರೆದಾತೆಯಾದಳು. ಅದು ಅವಳು ತವರಿಗೆ ಕೊಟ್ಟ ಭಾವಸಂಸ್ಕೃತಿಯ ಕೊಡುಗೆ ಆಗಿತ್ತು. ಹಾಲೇರಿ ವಂಶದ ದೇವಪ್ಪರಾಜನನ್ನು ಹೈದರಾಲಿ, ಕುಟುಂಬ ಸಹಿತ ಸೆರೆಗಿಟ್ಟು ನಿರ್ನಾಮ ಮಾಡಿದ. ಅನಂತರದಲ್ಲಿ ವಂಶ ಉಳಿಸಿ, ಎತ್ತಿ ಹಿಡಿದ ಕೀರ್ತಿ ದೇವಮ್ಮಾಜಿಯದಾಗಿತ್ತು.

ಈ ಒಂದನೇ ಲಿಂಗರಾಜೇಂದ್ರ ಒಡೆಯನಿಗೆ ದೊಡ್ಡವೀರ ರಾಜೇಂದ್ರ ಒಡೆಯ, ೨ನೇ ಲಿಂಗರಾಜೇಂದ್ರ ಒಡೆಯ ಎಂಬ ಗಂಡುಮಕ್ಕಳಿದ್ದರು. ಇವರಲ್ಲಿ ದೊಡ್ಡವೀರರಾಜೇಂದ್ರನಿಗೆ ಪ್ರೀತಿಯ ರಾಣಿ ಮಹಾದೇವಮ್ಮಾಜಿ ಇದ್ದಳು. ಅವಳಲ್ಲಿ (ರಾಣಿ) ದೇವಮ್ಮಾಜಿ ಎಂಬ ಮಗಳು ಹುಟ್ಟಿದವಳು. ರಾಜನ ಪ್ರೀತಿಯ ರಾಣಿ ಮಹದೇವಮ್ಮಾಜಿ ಕ್ರಿ.ಶ. ೧೮೦೭ರಲ್ಲಿ

ತೀರದಾಗ, ತನಗಾಗಿ ಮೊದಲೇ ಗದ್ದುಗೆ ನಿರ್ಮಾಣ ಆರಂಭಿಸಿದ್ದು, ಅದರ ಪಕ್ಕದಲ್ಲಿ ಆಕೆಯ ಸಮಾಧಿ ಕಟ್ಟಿಡ [illegible]. ಇಂದು ಮಧ್ಯಕಟ್ಟಡದಲ್ಲಿ ದಂಪತಿಗಳ ಗದ್ದುಗೆ [illegible]. ಈ ರಾಣಿಯ ನೆನಪಿಗಾಗಿ ಬಹುಶಃ ಮಡಿಕೇರಿಯಲ್ಲಿ 'ಮಹದೇವಪೇಟೆ'ಯನ್ನು ಸ್ಥಾಪಿಸಿದನೆನ್ನಬೇಕು.

ಈ ಒಡೆಯನ ನಂತರ ಅಂದರೆ ದೊಡ್ಡವೀರರಾಜೇಂದ್ರ ಒಡೆಯನ (ಕ್ರಿ.ಶ. ೧೭೮೮–೧೮೦೯) ಮಗಳು ರಾಣಿ ದೇವಮ್ಮಾಜಿ ಪಟ್ಟಕ್ಕೆ ಬಂದಳು.

ದೊಡ್ಡವೀರರಾಜೇಂದ್ರ ಒಡೆಯನು ಪಿರಿಯಾಪಟ್ಟಣದ ಸೆರೆಯಲ್ಲಿದ್ದ ಹೊಂಬಾಳೆನಾಯಕ, ಇಸ್ಮಾಯಿಲ್ ಖಾನ್, ಚೇಲಾವರ ಗ್ರಾಮದ ಪಟ್ಟಚರವನ ಬೋಳುಕ, ಕಿರಂದಾಡು ಗ್ರಾಮದ ಅಪ್ಪನೆರವನ ಅಚ್ಚಯ್ಯ ಮುಂತಾದವರೆಲ್ಲ ಸಂಘಟನೆ ಮಾಡಿ ಸೆರೆಯಿಂದ ತಪ್ಪಿಸಿ ಅವನನ್ನು ಕೊಡಗಿಗೆ ಕರೆತಂದರು. ದೊಡ್ಡವೀರರಾಜೇಂದ್ರ ಒಡೆಯನು ಯೋಧಸಂಘಟನೆ ಮಾಡಿ ಟೀಪುವು ಆಕ್ರಮಿಸಿದ್ದ ಕೋಟೆಗಳನ್ನು ಒಂದೊಂದಾಗಿ ತೆಗೆದುಕೊಳ್ಳತೊಡಗಿದ. ಭಾಗಮಂಡಲದ ಕೋಟೆಯನ್ನು ಉಳಿಸಿಕೊಳ್ಳಲು ಟೀಪುಸುಲ್ತಾನನು ಬರಾನುದ್ದೀನನ್ನು ಕಾಳಗದ ಸಂದರ್ಭಕ್ಕೆ ಕಳುಹಿಸಿದ ಸಮಯ. ಬೆಪ್ಪುನಾಡಿನ ಮೂಲಕ (ಆರಮೇರಿ ಪ್ರದೇಶ) ಟೀಪುವನ್ನು ಮಲಬಾರಿನಲ್ಲಿ ಸೇರಲು ಹೆಗ್ಗಳದ ಮೂಲಕ ಬರಾನುದ್ದೀನ್ ಸಾಗುತ್ತಿದ್ದ. ಅಲ್ಲಿ ಕೊಡಗಿನ ಸೈನ್ಯವು ಅಡ್ಡಹಾಕಿ ಕಾಳಗ ಕೊಡಲು ಬರಾನುದ್ದೀನ್ ಅದನ್ನು ಎದುರಿಸಲಾಗದೆ ಸಿದ್ದೇಶ್ವರ ಬೆಟ್ಟದ ಮೂಲಕ ಶ್ರೀರಂಗಪಟ್ಟಣಕ್ಕೆ ಹಿಂದಿರುಗಿದ. ಈ ಸಂದರ್ಭದಲ್ಲಿ 'ಅಮ್ಮಕ್ಕದೇವಿ' ಎಂಬ ವೀರೆ ಗಮನಕ್ಕೆ ಬರುತ್ತಾಳೆ. ಹೆಗ್ಗಳದ ಪ್ರದೇಶಕ್ಕೆ ಸನಿಹವಾದುದು ಬೇಟೋಳಿ ಗ್ರಾಮ (ವೀರರಾಜೇಂದ್ರಪೇಟೆ ತಾಲೂಕಿಗೆ ಇವು ಸೇರಿದಂಥವು.) ಬೇಟೋಳಿಯ ಅಮ್ಮಣಕುಟ್ಟಂಡ ಮನೆತನದ ಚರಿತ್ರೆಯಲ್ಲಿ ತಿಳಿದುಬರುತ್ತದೆ. ಆ ಮನೆಯ ಹೆಂಗಳೆ ಅಮ್ಮಕ್ಕದೇವಿ ಕುಪ್ಪಸವಟ್ಟ ತೊಟ್ಟು ಟೀಪು ಸೈನ್ಯದೆದುರು ಹೋರಾಡಿದವಳಾಗಿದ್ದಾಳೆ[೨೦]. ಬಹುಶಃ ಈ ಬರಾನುದ್ದೀನನು ಹೆಗ್ಗಳದ ಮೂಲಕ ಸೈನ್ಯ ತರುವಲ್ಲಿ ಆ ಸೈನ್ಯಕ್ಕೆ ಎದುರಾದ ಸಂದರ್ಭವೇ, ಮನೆತನದ ಚರಿತ್ರೆಯ ಈ ಸೂಚಿತ ಘಟನೆಯಲ್ಲಿದ್ದಿರುವಂತಿದೆ.

ದೊಡ್ಡವೀರರಾಜೇಂದ್ರ ಒಡೆಯನ ಕಾಲದ ಈ ವೀರೆಯ ಕತೆಯಿಂದ ಅವನ ಕಾಲದಲ್ಲಿಯೂ ಕೊಡಗಿನಲ್ಲಿ ಸ್ತ್ರೀಪಡೆಯೂ, ರಾಜ್ಯರಕ್ಷಣೆಗಿತ್ತು ಎಂಬುದಾಗುತ್ತದೆ. ಇದಕ್ಕೆ ಕ್ರಿ.ಶ. ೧೬೩೩ರ ಹಾಲೇರಿ ವಂಶದ ಮೂರನೆಯ ಅರಸ ಮುದ್ದರಾಜನ ಕಾಲದ ಸ್ತ್ರೀನಾಯಕಿ ಅಳವಂಡ ದೊಡ್ಡವ್ವನ ಕತೆಯೇ ಮಾದರಿಯಾಗಿ ಮುಂದಿನ ಪರಂಪರೆಗೆ ಪ್ರೇರಣೆ ಕೊಟ್ಟಂತಾಗಿತ್ತು, ಎನ್ನಬೇಕು. ಮುದ್ದರಾಜ ರಾಜ್ಯದ ಅರಸನಾಗಿ ರಾಜ್ಯಸಂಚಾರಕ್ಕೆ ಹೋಗಿ, ಜನರ ಯೋಗಕ್ಷೇಮ [illegible] [illegible] [illegible] ಸ್ತ್ರೀಯರನ್ನು ಬಹಳ ಮರ್ಯಾದೆಯಿಂದ ಕಾಣುತ್ತಿದ್ದ. ಬೆಪ್ಪುನಾಡಿನ ಅಳಮಂಡ ಮನೆತನದ ದೊಡ್ಡವ್ವ ಇಂಥ ಗೌರವಕ್ಕೆ ಪಾತ್ರಳಾಗಿದ್ದಳು. ಅಳಮಂಡ ದೊಡ್ಡಮ್ಮ ಶ್ರೀಮಂತೆ, ಬುದ್ಧಿವಂತೆ. ತಾನೇ ಸ್ವತಃ ಮಲಬಾರಿಗೆ ಕರಾವಳಿ ಹೇರನ್ನು ಸಾಗಿಸಿ ಮಾರಾಟ ಮಾಡಲು ಸಿದ್ಧಮಾಡಿ ಗಂಡನೊಡನೆ ಹೋಗಿ ಬರುತ್ತಿದ್ದ ವ್ಯವಹಾರ ಚತುರೆ ಆಗಿದ್ದಳು. ಈಕೆಯ ಸಾಮರ್ಥ್ಯ ಕಂಡು ಬೆಪ್ಪುನಾಡಿಗೆ ಸಂಚಾರಕ್ಕೆ ಬಂದಾಗ ಈಕೆಯ ಮನೆಗೆ ಹೋಗಿ ಮುದ್ದರಾಜ [illegible] ವಿಚಾರಿಸುತ್ತಿದ್ದ. ಈಕೆಯ ಸಾಮರ್ಥ್ಯಕ್ಕಾಗಿಯೆ ಅಳಮಂಡ ಕುಟುಂಬಕ್ಕೆ '[illegible]ರುತಕ್ಕಾಮೆ'ಯನ್ನು ನೀಡಿದ. ಆರಮೇರಿ ಹಾಗೂ ಬೆಂಗುನಾಡಿನ ಕೊಟ್ಟೂರಿನಲ್ಲಿ ಉಂಬಳಿಭೂಮಿ ನೀಡಿದ. ಹೀಗೆಯೇ ಕಾಂತು ಮೂರ್ನಾಡಿನ ಬೋನಿರಮುತ್ತಣ್ಣನ ತಾಯಿ ಚೆಣ್ಣವ್ವನ ಸಾಮರ್ಥ್ಯವನ್ನು ಮುದ್ದುರಾಜ ಮೆಚ್ಚಿ ಗೌರವಿಸುತ್ತಿದ್ದ[೨೧]. ಹಾಲೇರಿ ಅರಸರ ಕಾಲದಲ್ಲಿ ಹೆಣ್ಣಿಗೆ ನಾಯಕತ್ವದ ಗೌರವ ನೀಡಿದ ಉದಾಹರಣೆ ೧೭ನೆಯ ಶತಮಾನದಲ್ಲಿಯೇ ಹೀಗೆ ಕಾಣಬರುತ್ತದೆ.

ಕ್ರಿ.ಶ. ೧೮೨೦–೩೪ರ ಚಿಕ್ಕವೀರರಾಜೇಂದ್ರ ಒಡೆಯನು ಸ್ತ್ರೀಸೈನ್ಯ (ಪಡೆ)ವನ್ನು ರೂಪುಗೊಳಿಸಿದ್ದ. ಇವರಿಗೂ ಗಂಡು ಸೈನಿಕರಿಗೆ ಮಾಡಿಸುವಂತೆ ವ್ಯಾಯಾಮ–ಕಸರತ್ತುಗಳನ್ನು ಮಾಡಿಸಲಾಗುತ್ತಿತ್ತು. ರಾಜನು ಸವಾರಿ ಹೋಗುವಾಗ ಇವರನ್ನು ಕರೆದೊಯ್ಯುತ್ತಿದ್ದ[೨೨]. ಇದಕ್ಕೆ ಪೂರಕವಾಗಿ ದಲಿತ ಕೆಂಬಟ್ಟಿಗಳ ಹುತ್ತರಿ ಹಾಡಿನಲ್ಲಿಯ ಸಾಲುಗಳು ಸಾಕ್ಷಿಯಾಗಿವೆ.

"ಆಣ್ ಪಡೆ ಪೋಪು ಮಹಾಲೋಕತ್‌ಉಳ್ಳ್ ।
ಪೊಂಗ ಪಡೆ ಪೋಪೆ ಕಣ್ಣಾರೆ ಕಂಡ'
– ಗಂಡಾಳ್ಪಡೆಯೆ ಕಾಳಗಕೆನೆ ನಡೆವುದು ಲೋಕದಿ ।
ಹೆಣ್ಣಾಳ್ಪಡೆ ಕಾಳಗಕೋಗುವ ಸೋಜಿಗ ಕಂಡೆ ಲೋಕದಿ೩೩

ದೊಡ್ಡವೀರರಾಜೇಂದ್ರನ ಒಡೆಯನ ನಂತರ (೧೮೦೯–೧೮೧೧) ಎರಡು ವರ್ಷ ಕಾಲ ಅವನ ಮಗಳು ರಾಣಿ ದೇವಮ್ಮಾಜಿ ಕೊಡಗನ್ನು ಆಳಿದಳು. ಆದರೆ ೧೦ನೇ ವಯಸ್ಸಿನಲ್ಲಿ ಪಟ್ಟವೇರಿದ ಸಂದರ್ಭವಾಗಿ ಅವಳು ಪ್ರಾಯಕ್ಕೆ ಬರುವವರಿಗೂ ಮೊದಲನೆ ಅಳಿಯ ಸೋದೆ ಬಸವ ಲಿಂಗರಾಜನು ರಾಜ್ಯಭಾರವನ್ನು ಆಕೆಯ ಹೆಸರಿನಲ್ಲಿ ಮಾಡಬೇಕೆಂದು ದೊಡ್ಡವೀರರಾಜೇಂದ್ರ ಒಡೆಯ ಮರಣಶಾಸನದಲ್ಲಿ ಬರೆದಿದ್ದ. ರಾಜಕೀಯ ಕಾರಣಗಳಿಂದ ಕೆಲ ಕಾಲಾನಂತರ ದೊಡ್ಡವೀರರಾಜೇಂದ್ರ ಒಡೆಯನ ಸೋದರ ಎರಡನೇ ಲಿಂಗರಾಜೇಂದ್ರ ಒಡೆಯನು ಮುಖ್ಯ ದಿವಾನನಾದ. ಕೊನೆಗೆ ಅವನಿಗೆ ರಾಜ್ಯಾಧಿಕಾರವನ್ನು ಚಿಕ್ಕಪ್ಪ

ನೆಂಬ ಭಾವನಾತ್ಮಕ ದೌರ್ಬಲ್ಯದಿಂದ ರಾಣಿ ದೇವಮ್ಮಾಜಿ ಬಿಟ್ಟುಕೊಟ್ಟಳು. ವಯಸ್ಸಿನ ಕಾರಣ ನಿಸ್ಸಹಾಯಕಳೂ ಆಗಿದ್ದಳು. ಅದೇನೇ ಇರಲಿ, ಸಿಂಹಾಸನದಲ್ಲಿ ಹೆಣ್ಣಾಗಿ ಕುಳಿತ ಕೀರ್ತಿಯೂ ಅವಳಿಗಿದೆ. ಪಹರೆದಾರ ಶಿಖಂಡಿಗಳ ಉಪದ್ವ್ಯಾಪವನ್ನೂ ತನ್ನ ಆಡಳಿತದಲ್ಲಿ ತಪ್ಪಿಸಿದ್ದು ಇವಳ ಕಾಲದ ಒಂದು ಗಮನಾರ್ಹ ಅಂಶ.

೨ನೇ ಲಿಂಗರಾಜೇಂದ್ರ ಒಡೆಯನಿಗೆ ಕಾವ್ಯ ಸಹಯೋಗಕ್ಕೆ 'ಚಿತ್ರಾ' ಎಂಬ ಬ್ರಾಹ್ಮಣ ಪತ್ನಿ ಇದ್ದಳಂತೆ. ಈ ಒಡೆಯ ಸಾಹಿತಿಯೂ ಆಗಿದ್ದ. ಒಡೆಯನ ಕಾವ್ಯಸ್ಫೂರ್ತಿಯಾಗಿದ್ದ ಈ ಚಿತ್ರಾ ಓಂಕಾರೇಶ್ವರ ಗುಡಿಯ ಕಟ್ಟುವ ಮುನ್ನವೇ ಇದ್ದ ಎದುರಿನ ಪುಷ್ಕರಿಣಿಯಲ್ಲಿ ಕಾಲು ಜಾರಿ ಮುಳುಗಿದಳು ಎನ್ನುವ ಕತೆಯೂ ಇದೆ. ಈ ಒಡೆಯನು ತನ್ನ ಒಬ್ಬ ಪತ್ನಿಯನ್ನು ಸಂಬೋಧಿಸಿ ಬರೆದ ಕವಿತೆಗಳು ಕ್ರಿ.ಶ. ೧೯೭೭ರಲ್ಲಿಯೂ ಸುರಕ್ಷಿತವಾಗಿದ್ದ ಬಗ್ಗೆ ಮೊಗ್ಲಿಂಗ್ ಹೇಳಿದ್ದಾನೆ[೩೪]. ಅರಸನ ಪತ್ನಿಯರು ಕಾವ್ಯ-ಸಾಹಿತ್ಯ ವಾತಾವರಣಕ್ಕೆ ಪೋಷಕವಾಗಿದ್ದರು ಎಂಬುದು ಇಲ್ಲಿನ ಸಾರಾಂಶ. ಓಂಕಾರೇಶ್ವರ ಗುಡಿಯ ಮುಂದಿನ ಪುಷ್ಕರಣೀ-ಕುಶಲ ಮಂಟಪವನ್ನು ಮನೋಹರವಾಗಿ ಪ್ರಿಯಪತ್ನಿ ಚಿತ್ರಾಳ ನೆನಪಿಗಾಗಿ ಕಟ್ಟಿಸಿದ ಎಂದೂ ಹೇಳುವುದಿದೆ.

ಐತಿಹ್ಯ-ಜಾನಪದೀಯ ಅಂಗಳ

ಪ್ರಾಗಿತಿಹಾಸದ ದೃಷ್ಟಿಯಿಂದ ಯಡೂರು, ಚೌಡ್ಲು ಮುಂತಾದ ಕಡೆ, ಕಲ್ಲುರಾಶಿಗೆ, ವೃತ್ತಾಕಾರವಾಗಿ ಜೋಡಿಸಿದ ಕಲ್ಲುಜೋಡಣೆಗಳಿರುವ ಬನಕಾಡುಗಳಿವೆ. ಅವನ್ನು 'ಅಜ್ಜಿಬನ'ವೆನ್ನುತ್ತಾರೆ. ಅಜ್ಜಿಮಠದಿಂದ ಹೆಗ್ಗಡಹಳ್ಳಿಯ ಬುಡದಲ್ಲಿಯ ಪುಷ್ಪಗಿರಿಗೆ ಹೋಗುವ ದಾರಿಯಲ್ಲಿ 'ಪಟ್ಟೆಪಾರಿ ಕಲ್ಲು' ರಾಶಿಯ ನೆಲೆ ಇದೆ. ಗುರುಸೇವೆ ಸಲ್ಲಿಸಿದ 'ಪಟ್ಟೆಪಾರಿ'ಯನ್ನು ನೆನಸುವ ಬಗೆ ಇದಾಗಿದೆ. ಅಜ್ಜಿಮಠದ ಶಾಂತಮಲ್ಲ ಸ್ವಾಮಿಗಳ ಸೇವೆಯಲ್ಲಿ ಜೋಗಿಯ ಮಗಳಿದ್ದಳು., ಸ್ವಾಮಿಗಳು ಪುಷ್ಪಗಿರಿಯಲ್ಲಿ ಸಮಾಧಿಗೊಳ್ಳಲು ಸಾಗಿದಾಗ ಅವಳು ಹಿಂಬಾಲಿಸಿದಾಗ ಲಿಂಗದ ಹೊಳೆ ಆಚೆ ಬರದಿರಲು ಗುರುವಿನಾಣತಿಯಾಯಿತು. ಅದಾಗಿ ಪಟ್ಟೆಪಾರಿ ಪಾರ್ವತಿ ಎಂದು ಹೆಸರಿದ್ದ ನಿಂತ ನೆಲೆಗೆ 'ಪಟ್ಟೆಪಾರಿ ಕಲ್ಲು' ಎಂದು ಹೆಸರಾಯಿತಂತೆ. ಅಲ್ಲಿ ಕಲ್ಲುಗಳನ್ನು ಗುಡಿ-ಗೋಪುರದಂತೆ ಜೋಡಿಸಿ ನಿಲ್ಲಿಸುವ ಬಗೆ ಪ್ರಾಗೈತಿಹಾಸಿಕ ಪದ್ಧತಿಯ ಒಂದು ಮಾದರಿಯಾಗಿ ಕಾಣುತ್ತದೆ. ಅದು ಏಕಶಿಲಾ ಗರ್ಭಗುಡಿಯ ಗೋಪುರದಂತೆ ಕರಡುರೂಪದಲ್ಲಿಯೂ ಕಲಾತ್ಮಕವಾಗಿ ಕಾಣುತ್ತದೆ. ಇದೇ ರೀತಿ ತೊರೆನೂರು ಮಠದ ಶರಣೆಯಲ್ಲೂ ಕೇಳಿ ಬರುತ್ತದೆ. ಗುರುಗಳು ಗದ್ದುಗೆಗೊಳ್ಳಲು ಹೋಗುವಲ್ಲಿ ಮಠದ ಶರಣೆ ತನ್ನ ಗತಿಯ ಬಗ್ಗೆ ಪ್ರಾರ್ಥಿಸಲಾಗಿ, ವೀರಶೈವ ಮಠಗಳಲ್ಲೆಲ್ಲ 'ಮಠದ ಚೌಡಿ'ಯಾಗಿ ಪೂಜೆಗೊಳ್ಳು ಎಂದು ಹರಸಿದರಂತೆ. ಕೊಡಗಿನ ವೀರಶೈವ ಮಠಗಳಲ್ಲಿ ಮಠದ ಚೌಡಿಯ ನೆಲೆಗಳಿದ್ದು ಇಂದೂ ಪೂಜೆಗೊಳ್ಳುತ್ತಿವೆ.

ಶನಿವಾರಸಂತೆ ಹೋಬಳಿ ಬೆಂಬಳೂರಿನ ಗ್ರಾಮ ದಂತೆ-ಸುಗ್ಗಿಕಟ್ಟೆ ದೇವತೆ ಬಾಣತಮ್ಮನ ಏಳು ಜನ ಗಂಡುಮಕ್ಕಳಲ್ಲಿ ಮಲುಕೊಂಡಯ್ಯ ಪ್ರಸಿದ್ಧ. ಹೊಲೆಯರ ಹರಿಜನ ಹೆಣ್ಣನ್ನು ಒಲಿಸಿಕೊಂಡವ. ಅವನು ವೀರಶೈವ ಜಂಗಮನಾಗಿದ್ದು, ತಾಯಿಗೂ ತನ್ನ ಪ್ರೇಯಸಿಯ ಗುಣಗಳನ್ನು ಹೇಳಿ ಒಪ್ಪಿಸಿದ. ಪ್ರೇಮದ ಈ ಕತೆಯ ಸಂಕೇತವಾಗಿ ವಾರ್ಷಿಕ ಅವರದಾಳು ಸಂಕ್ರಾಂತಿ ಸಮಯದ ಜಾತ್ರೆಯಲ್ಲಿ ಈ ಹೆಣ್ಣಿಗೆ ದೀಪ ಉರಿಸಿ ವೀರಶೈವ ಹೆಂಗಳೆಯರು 'ಮಾದಿಗಿತ್ತಿ ಕಟ್ಟೆ' ಎಂದು ಪೂಜೆ ಸಲ್ಲಿಸುತ್ತಾರೆ. ಇಲ್ಲಿ ಇದು ಅಸ್ಪೃಶ್ಯತೆಯ ನಗಣ್ಯತೆಯನ್ನು ತೋರಿಸುತ್ತದೆ.

ಹಾಲೇರಿ ವಂಶಿಕ ನಂಜುಂಡರಸು ಅಂಜಿಗೇರಿನಾಡಿನ ಕಟ್ಟೆಮನೆ ಚಿಟ್ಟಪ್ಪನಾಯಕನ ಮಗಳನ್ನು (ಅಚ್ಚುನಾಯಕನ ಹಿರಿಯ ಸೋದರಿ) ಮದುವೆಯಾಗಿದ್ದನೆನ್ನಲಾಗಿದೆ. ಮಾಚಂಗಳ ನಾಯಕ ದೇವಯ್ಯನಿಗೆ ಚಿಟ್ಟಪ್ಪನಾಯಕನ ತಂಗಿ ಅಜ್ಜವ್ವನೊಡನೆ ಮದುವೆ ಆಗಿತ್ತು. ಉಭಯ ಕೌಟುಂಬಿಕ ಕಲಹದಲ್ಲಿ ಚಿಟ್ಟಪ್ಪನಾಯಕನ ಮನೆ ಸುಟ್ಟು ಅವನು ತೀರಿದ. ಆಗ ಉಳಿದಿದ್ದ ಅವನ ಮಗು ಅಚ್ಚುನಾಯಕನನ್ನು ಅಮ್ಮ ಕೊಡವತಿ ಮೇದಮ್ಮಂಡ ಅಯ್ಯವ್ವ (ಈಕೆಯನ್ನು ಮೇದಮಾಡ ಐಯ್ಯವ್ವಗೌಡಿ, ಗೌಡಿಚಿ ಎನ್ನುವುದೂ ಉಂಟು) ಕಾಪಾಡಿ ಪಿರಿಯಾಪಟ್ಟಣದ ನಂಜುಂಡರಸುವಿನಲ್ಲಿ ರಕ್ಷಣೆಗೆ ಬಿಟ್ಟಳು. ಇದು ಓತ್ಪ್ರೇಷಿ ಹೆಣ್ಣು ಮನೆತನ ಉಳಿಸಿ ಮನೆತನಕ್ಕೆ ತೀರಿಸಿದ ಋಣ. ಇನ್ನು ಕೊಟ್ಟಗೇರಿಯ ಮಾಚಂಗಳ ಗುರುಕಾರೋಣ ಮಾಸ್ತಿ ಕೈಮಡದಲ್ಲಿ (ಹಿರಿಯರ ಸ್ಮಾರಕ ಕಟ್ಟಡ) ದೇವಯ್ಯ ತೀರಿದಾಗ ಚಿತೆ ಹಾರಿ ಅಜ್ಜವ್ವ ಪ್ರಾಣಾರ್ಪಣೆ ಮಾಡಿಕೊಂಡಳು. ಅದಾಗಿ ವೀರ-ಮಾಸ್ತಿ ಕೈಮಡವಿದಾಗಿದೆ. ಬಲಿ ಇಲ್ಲದ ಸಾತ್ವಿಕ ಪೂಜೆ ಇಲ್ಲಿ ನಡೆಯುತ್ತದೆ. ಇದಕ್ಕೆ ಗುರುಕಾರೋಣ ಕೈಮಡವೆನ್ನುತ್ತಾರೆ. ಪವಿತ್ರ ದೇವರಕಾಡಿನಂತೆ ಇದಕ್ಕೆ ಕೈಮಡ ಕಾಡೂ ಇದೆ. ಪೊನ್ನಂಪೇಟೆಯ ಬಳಿಯ ಹಳ್ಳಿಗಟ್ಟು ಗ್ರಾಮದಲ್ಲಿ ಮೂಕಳೇರ ಮನೆತನದ ಪ್ರತ್ಯೇಕ ಜೊತೆ ಕೈಮಡಗಳಿವೆ. ಒಂದು ಬದಿಗೆ ಅಮ್ಮ ಕೊಡವತಿ. ಇನ್ನೊಂದು ಬದಿಗೆ ಕೊಡವ ಪುರುಷನ ಕೈಮಡ ಇದೆ. ಅವು ದಂಪತಿಗಳ ಕೈಮಡಗಳಾಗಿವೆ. ಅಮ್ಮಕೊಡವತಿ ಕೈಮಡಕ್ಕೆ ಸಾತ್ವಿಕಾಹಾರ ಮಾತ್ರ ನಿವೇದನವಾಗುತ್ತದೆ.

ಇದೇ ಗ್ರಾಮದಲ್ಲಿ ಅಜ್ಜಿಯಂಡ ಮನೆತನದ ಬೆಳ್ಳಿಯಪ್ಪಮ್ಮಯ್ಯನ ಕೈಮಡವಿದೆ. ಈ ಬೆಳ್ಳಿಯಪ್ಪಮ್ಮಯ್ಯನ ಹೆಂಡತಿ 'ಅಜ್ಜಿ' ಆಕೆಯ ಹೆಸರಿನಲ್ಲಿ ಇಲ್ಲಿನ ಮಣ್ಣು (ಜಮೀನು)

ಔದಾರ್ಯದಿಂದ ಆಕೆಯಿಂದಾಗಿ, ಮನೆತನಕ್ಕೆ ಆಕೆಯಿಂದಾಗಿ, ಮನೆತನಕ್ಕೆ ಸೇರಿ ಒದಗಿದ ಕಾರಣ 'ಅಚ್ಚಿಯಂಡ' ಎಂಬ ಸ್ಮಾರಕ ಮನೆಪದ (ಮನೆತನದ ಹೆಸರು) ರೂಪುಗೊಂಡಿತಂತೆ. ಇದು ಸ್ತ್ರೀಗೆ ಆಕೆ ಕೊಟ್ಟ ಸಲ್ಲಿಸಿದ ಶಾಶ್ವತ ಗೌರವ. ಹೀಗೆಯೇ ಹಳ್ಳಿಗಟ್ಟು ಗ್ರಾಮದಲ್ಲಿ ಪಿಂಜಡೀರ ಕುತ್ತಿಗೆ (ವಂಶದ) ಸೇರಿದ ಪಿಂಜಡೀರ ಕಾರಣಚ್ಚಿಯ ಮಾಸ್ತಿ ಕೈಮಡವಿದೆ. ಈ ಮನೆತನ ಇಂದಿಲ್ಲದಿದ್ದರೂ ನೆರೆಯ ಅಚ್ಚಿಯಂಡ ಮನೆಯವರು ಧನುರ್ಮಾಸದಲ್ಲಿ ಪಾಲೆಯರಿಂದ ಕೋಲ ಕಟ್ಟಿಸುತ್ತಾರೆ. ಇದು ಕೊಡಗಿನಲ್ಲಿ ಕಾಣಬರುವ ಸ್ತ್ರೀವರ್ಚಸ್ಸು ಹಾಗೂ ಸಹಯೋಗದ ಗೌರವದ ಸ್ಮರಣೆ[೨೫].

ಕೊಡಗಿನ ಪ್ರಸಿದ್ಧ 'ಪನ್ನಂಗಾಲತಮ್ಮೆ'ಯ ಕತೆ, ಜಾನಪದ ಕೃತಿ 'ಪಟ್ಟೋಲೆಪಳಮೆ'ಯಲ್ಲಿ ಕೊಡವ ಭಾಷೆಯ 'ಎವ್ವಮಕ್ಕ ದೇಬುವಡ ಪಾಟ್'ನಲ್ಲಿ ಸವಿಸ್ತಾರವಾಗಿ ಬರುತ್ತದೆ. ಕೇರಳದಿಂದ (ಮಾಣಿಕತ್ಯಮಲೆನಾಡು) ಆರು ಜನ ಸೋದರರೊಡನೆ ಹೊರಟು ಕೊಡಗಿಗೆ ಬಂದು ನೆಲೆ ನಿಂತು ಪನ್ನಂಗಾಲತಮ್ಮೆ ದಲಿತಕೆಂಬಟ್ಟಿಗಳ ಮನೆದೇವತೆಯಾದಳು. ಕೆಂಬಟ್ಟಿಗಳ ಪೂಜಾರಿತನದಲ್ಲಿಯೆ ಯವಕಪಾಡಿ ಗ್ರಾಮದಲ್ಲಿ ಆಕೆಯ ಪೂಜಾಚರಣೆಗಳು ನಡೆಯುತ್ತವೆ. ವಿಶೇಷವಾಗಿ 'ಕೊಡೆಹಬ್ಬ', ಸನಿಹದ ಕಕ್ಕಬೆ ಮಾರ್ಗದ ಸೋದರಪಾಡಿ ಬಗ್ಗುತಪ್ಪನಿರುವ ದಿಕ್ಕಿನಿಂದ ಕೊಡೆಬರುವತ್ತ ಗಮನಾರ್ಹವಾಗಿದೆ. 'ಪನ್ನಂಗಾಲತಮ್ಮೆ ಓಡಿಬರುವ' ಆದರೆ ಅವಳನ್ನು ತಡೆಯುವ ದೃಶ್ಯ ಅತ್ಯಂತ ಕರುಣಾರಸ ಉಕ್ಕಿಸುವ ದೃಶ್ಯವಾಗಿದೆ. ಅದು ಸೋದರರಿಂದ ಪನ್ನಂಗಾಲತಮ್ಮೆ ಬೇರ್ಪಟ್ಟ ಕತೆಯ ಸಂಕೇತವನ್ನು ಪೂರ್ಣವಾಗಿ ನಿದರ್ಶಿಸುತ್ತದೆ. ಅರಮೇರಿಯಲ್ಲಿಯೂ ಈಕೆಗೆ ನೆಲೆ ಇದೆ. ಈಕೆಯ ಹಬ್ಬಕ್ಕೆ ಕೊಡಗಿನ ಸರ್ವಜನಾಂಗೀಯರೂ ಬರುತ್ತಾರೆ. ದೇಗುಲ ನಿರ್ವಹಣೆಯ ಮುಖ್ಯಸ್ಥರಲ್ಲಿ (ಭಟ್ಟತ್ತಕ್ಕರು) ಕೊಡವರು ಹಾಗೂ ಇತರರು ದಲಿತಕೆಂಬಟ್ಟಿಗಳೊಡನೆ ಸೇರಿದ್ದಾರೆ. ಅಂತಾಗಿ ಪನ್ನಂಗಾಲತಮ್ಮೆ, 'ಅಸ್ಪೃಶ್ಯತೆ' ಮೀರಿದ ವ್ಯಕ್ತಿತ್ವವಾಗಿ ಜನಮನದಲ್ಲಿ ಮೂಡಿ ಅಚ್ಚುಗೊಂಡಿದ್ದಾಳೆ[೨೬]; ಅಸ್ಪೃಶ್ಯತೆಯನ್ನು ನಗಣ್ಯಗೊಳಿಸುವ ಪ್ರೇರಕ ಮಾದರಿಯಾಗಿಯೂ ಜನಜೀವನದಲ್ಲಿ ಆರಾಧಿತಳಾಗಿದ್ದಾಳೆ.

ಜನಪದ ಸ್ತ್ರೀದೇವತೆಗಳಾಗಿ ಮೇಲ್ಭಾಗ ಹೆಣ್ಣಿನ ಲಕ್ಷಣ, ಕೆಳಭಾಗ ಗಂಡಿನ ಚಹರೆಗಳುಳ್ಳ ದೇವತೆಯಂತಿರುವ ಕುಂದ ಗ್ರಾಮದ ಗ್ರಾಮದೇವತೆ ದಬ್ಬುಮ್ಮೆ, ನೀಲಮ್ಮ ದೇವತೆ, ಪನ್ನಿಲಮ್ಮೆ, ಸಜ್ಜಿಲಮ್ಮೆ, ಮೂರ್ತಿಅಮ್ಮೆ, ಕೃಷ್ಣೋದಿಅಮ್ಮೆ, ಚಾಮುಂಡಿಅಮ್ಮೆ, ಪಿರಿಯಾಪಟ್ಟಣದಮ್ಮ ಮುಂತಾದವು ಕಾಣಬಂದು ಕೊಡಗಿನಲ್ಲಿ ಸ್ತ್ರೀದೇವತಾ ಪ್ರಾಧಾನ್ಯವನ್ನು ತೋರಿವೆ.

ದೊಡ್ಡಮಳತೆಯ ಹೊನ್ನಮ್ಮ, ಕೆರೆಗೆ ಹಾರವಾದವಳು, ಜನಪದ ಗೀತೆಯಲ್ಲಿ ವರ್ಣಿತಳಾಗಿದ್ದಾಳೆ. 'ಅಮ್ಮಾಳೆ' ಎಂಬ ಜನಪದ ಹೆಸರಿನಲ್ಲಿ ಪಾರ್ವತಿ ಪೂಜಿತಳಾಗಿದ್ದಾಳೆ. ನಾಗರಹೊಳೆ ಜೇನುಕುರುಬರಿಂದಲೂ ಪೂಜಿತಳು; [illegible] ಕಾಡಿನ ಪಂಚವನ್ ಮಹಾರಾಯ (ಮೊದಲನೆಯ ರಾಜೇಂದ್ರ ಚೋಳ)ನಿಂದ ಸ್ಥಾಪಿತ ಪಂಚಲಿಂಗೇಶ್ವರ ದೇಗುಲದ ಬಳಿ 'ಅಮ್ಮಾಳೆ' ದೇಗುಲ, ಅಮ್ಮಾಳೆ ಕೆರೆ ಹೆಸರಿಗೆ ಇವಳು ಕಾರಣವಾದಾಕೆ. ಬೆಕ್ಕೆಸೊಡ್ಲೂರಿನ ಗ್ರಾಮದೇವತೆ 'ಮಂದತಾಳಪ್ಪ' ಸ್ತಂಭರೂಪಿ; ಈಕೆ ಪಾರ್ವತಿ ಅವತಾರವಾಗಿ ಕುದುರೆಬೋಡುಕಳಿ ಇತ್ಯಾದಿ ಜನಪದ ಆಚರಣೆಗಳು ಇವಳಿಗೆ ಉತ್ಸವ ವೈಭವದಲ್ಲಿವೆ.

ಭದ್ರಕಾಳಿಗೆ ವೈಭವಯುತ ಉತ್ಸವಾಚರಣೆಗಳು ಏಳುನೆಲೆ ಭದ್ರಕಾಳಿ ಎಂದೇ ಪ್ರಸಿದ್ಧಳಾಗಿ ನಡೆಯುತ್ತವೆ. (ಹಾಲೇರಿ, ಮಕ್ಕಂದೂರು, ಗಾಳಿಬೀಡು, ಮುವತ್ತೊಕ್ಕಲು, ಕಾಟಕೇರಿ, ಕೆದಕಲ್, ಇಬ್ನಿವಳವಾಡಿ–ಇವು ಈಕೆಯ ೭ ನೆಲೆಗಳು) ಇವಲ್ಲದೆ ಕುಂದಕುಕ್ಲೂರು ಭದ್ರಕಾಳಿಯೂ ಪ್ರಸಿದ್ಧಳು. ಜೊತೆಗೆ ಭದ್ರಗೊಳದ ಭದ್ರಕಾಳಿ ಹಬ್ಬವು, ಬುಡಕಟ್ಟು–ದಲಿತ ಜನಾಂಗದವರು (ಜೇನುಕುರುಬ, ಬೆಟ್ಟಕುರುಬ, ಕೆಂಬಟ್ಟಿಗಳಿಂದ) ಆಚರಿಸುವ, 'ಕುಂಡೆಹಬ್ಬ' ವೆಂದೇ ಪ್ರಸಿದ್ಧಿಯಾಗಿದೆ. ಅದು ಭದ್ರಕಾಳಿಗೆ ಒಂದು ರೀತಿ ನಿಂದಾಸ್ತುತಿಯ ಹಬ್ಬವೆನ್ನಬೇಕು. ಶಿವನಿಗೆ (ವೀರಭದ್ರನ್ನಿಯ) ಬೆನ್ನು ತೋರಿಸಿ ಹೋದವಳೆಂದು ಆಡಿಕೊಂಡು ಹೇಳುವ ಜಾನಪದೀಯ ಬೈಗುಳಗಳೂ ಇಲ್ಲಿ ಸೇರಿವೆ. ಇದಲ್ಲದೆ ರಾಟೆ ಭಗವತಿ, ನಾಪೋಕ್ಲು ಭಗವತಿ, ಕುಂಜಿಲ ಭಗವತಿ ಇತ್ಯಾದಿ ದೇವತೆಗಳ ಹಬ್ಬ ಜನಪದ ಆಚರಣೆಗಳ ವೈಭವದಿಂದ ಕೂಡಿವೆ.

ಸುಗ್ಗಿಕಟ್ಟೆ ಹಬ್ಬದಲ್ಲಿ ಸಪ್ತಮಾತೃಕೆಯ ಆರಾಧನೆಯ ಸಂಕೇತವಿದೆ. ಸಬತಾಯಿ ಎಂದು ಜನಪದ ವಾಡಿಕೆ ಇದೆ. ಇದರಲ್ಲಿ, ಪ್ರಾಗೈತಿಹಾಸಿಕ ನೆಲೆಗಳ ಆರಾಧನೆ, ಬೇಟೆಗಾರಿಕೆ ಹುತ್ತದ ಪೂಜೆ (ಹೆದ್ದೇವರು), ಕೃಷಿಮೂಲದ ಹೊನ್ನಾರು ಉತ್ಸವ, ಓಕುಳಿ, ಕೇಲು (ಮಡಕೆ ಪೂಜೆ), ಬಿಲ್ಲಾಟ (ಬಿಲ್ಲುಸುಗ್ಗಿ) ಮಲ್ಲುಸುಗ್ಗಿ (ಬಾಳೆತರಗು ಪಂಜು ಎಸೆದಾಟ), ಕೊಂಡೋತ್ಸವ, ದಲಿತರ ಮೆರವಣಿಗೆ ಇತ್ಯಾದಿ ಸಮೂಹ ಸಂಯುಕ್ತ ಆಚರಣೆಗಳಿದ್ದು, ಅಸ್ಪೃಶ್ಯತೆಯ ನಗಣ್ಯತೆ ಹಾಗೂ ಯೋಧಮಾನಸದ ಬೆಳವಣಿಗೆಗೆ ಪೋಷಕವಾಗಿದೆ. ಮಾದ್ರೆ ಗ್ರಾಮದ ಸುಗ್ಗಿಕಟ್ಟೆ ಹಬ್ಬದಲ್ಲಿ ಸುಗ್ಗಿಯಮ್ಮ ಕೆಂಚಮ್ಮ, ದೇವೀರಮ್ಮ ಎಂಬ ತ್ರಯ ದೇವತೆಗಳು ವೀರಭದ್ರನೊಡಗೂಡಿದ (ಬಹುಶಃ ಭದ್ರಕಾಳಿ ಸಂಕೇತ) ದೇಗುಲ ಹೊಂದಿ, ದೇವಾಚರಣೆಗಳನ್ನು ಕೂಡಿಕೊಂಡಿವೆ.

ಬಲ್ಲಮಾವಟಿ ಗ್ರಾಮದ ಗಡಿಪ್ರದೇಶವಾದ ಕುರ್ಚಿಂದಲೆ ಅಯ್ಯಪ್ಪದೇವರ ಕಾಡಿನಲ್ಲಿ ಹಿಂದಿನ ಅಯ್ಯಪ್ಪನಿಗೆ ಹುಟ್ಟುಡುಗೆಯಲ್ಲಿ ಆರಾಧಿಸುತ್ತ ಧನೆ ಹಾಡು ಹೇಳುತ್ತ, ಕುಣಿದು ಹಾಗೂ ರೊಟ್ಟಿ ನೈವೇದ್ಯ ಮಾಡಿ ಪೂಜಿಸುತ್ತಿದ್ದರಂತೆ. ಇಂದು ಒಳಬಿಳಿ ಉಡುಗೆಯಲ್ಲಿ ಆರಾಧಿಸಿದ ಮೇಲೆ ಹೆಂಗಳೆಯರು ಶುಭ್ರ ಶ್ವೇತವಸ್ತ್ರದುಡಿಗೆಯಲ್ಲಿ ಊರೊಳಗೆ ಬಂದು ರೊಟ್ಟಿ ಪ್ರಸಾದ ಹಂಚುವರು. ಅಂದು ಇಡೀ ಕುರ್ಚಿಂದಲೆ ಕಾಡುಪ್ರದೇಶದಲ್ಲಿ ಯಾವ ಗಂಡಸಿಗೂ ಪ್ರವೇಶ ನಿಷೇಧವಿದೆ. ಇದೊಂದು ರೀತಿ ಹೆಂಗೆಳೆಯರ ಸರ್ವಾರ್ಪಣ ಮಾನಸಪೂಜೆಯ ರಹಸ್ಯ ಸಂಕೇತವೆನಿಸುತ್ತದೆ. ಅಲ್ಲಿ ಹಾಡುವ ಹಾಡನ್ನು ಹೆಂಗಳೆಯರ ಹೊರತಾಗಿ ಬೇರೆಯವರಿಗೆ ಗೊತ್ತಿಲ್ಲ, ಹೇಳಿಕೊಡುವುದಿಲ್ಲ ಇನ್ನು ಅಯ್ಯಂಗೇರಿಯ ಚೆನ್ನತಪ್ಪ ಹಬ್ಬ (ಕೃಷ್ಣನ ಅವತಾರ)ದಲ್ಲಿ ಹೆಂಗಳೆಯರು ಶುಭ್ರವಸ್ತ್ರಧಾರಿಗಳಾಗಿ ನೈವೇದ್ಯದ ಹರಕೆ ಹೊತ್ತು ಬರುವ ದೃಶ್ಯವೇ ಮಂಗಳಕರವಾಗಿ ಕಾಣಬರುತ್ತದೆ: ಮಂಗಳವನಿತೆಯರ ಉತ್ಸವವಾಗಿ ಕಾಣಬರುತ್ತದೆ.

ಹಾಸನ ಜಿಲ್ಲೆ ಹೆತ್ತೂರು–ಕೂತಿನಾಡಮ್ಮನ ಕರ್ಕಳ್ಳಿ ಸುಗ್ಗಿಕಟ್ಟೆಯು ಹೆಣ್ಣುಮಕ್ಕಳಿಗೆ ಮೀಸಲಾದ ಸುಗ್ಗಿಕಟ್ಟೆ ಹಬ್ಬ. ಅದು ಕಾರಣ ಇಲ್ಲಿಯ ಸುಗ್ಗಿಯನ್ನು 'ಹೆಣ್ಣುಮಕ್ಕಳ ಸುಗ್ಗಿ' ಎನ್ನುತ್ತಾರೆ. ಹುತ್ತದ ಮಾದರಿಯಲ್ಲಿ ಮರದ ಬುಡದಲ್ಲಿ ಮೂಡುವ ಕಳಶವನ್ನು ಸುಗ್ಗಿದೇವರೆಂದು ಪೂಜಿಸುತ್ತಾರೆ. ಸ್ತ್ರೀಯರ ಹೊರತು ಅನ್ಯರಿಗೆ ಇಲ್ಲಿ ಪ್ರವೇಶವಿಲ್ಲ. ಬೇರೆ ಯಾರೇ ಪುರುಷರಿಗೂ ಈ ಪ್ರಸಾದ ನೀಡುವುದಿಲ್ಲ. ಬಹುಶಃ ಈ ಘಟನೆಗಳು ಒಂದು ಕಾಲಕ್ಕೆ ಇಲ್ಲಿ ನಡೆಯುತ್ತಿದ್ದ 'ಹುಟ್ಟುಡುಗೆ' ಪೂಜೆಯ ಸಂಕೇತವಿದಾಗಿರುವಂತಿದೆ. ಇದು ಬಲ್ಲಮಾವಟಿಯ ಕುರ್ಚಿಂದಲೆ ಅಯ್ಯಪ್ಪನಿಗೆ ಇದೇ ಬಗೆಯಲ್ಲಿ ಹುಟ್ಟುಡುಗೆಯಲ್ಲಿ ಸ್ತ್ರೀ ಆರಾಧನೆಯು ಪ್ರಾಚೀನದಲ್ಲಿ ನಡೆಯುತ್ತಿದ್ದಿತ್ತಂತೆ, ಎಂದಿರುವಲ್ಲಿ ಸಂವಾದಿ ಉದಾಹರಣೆ ಯಾಗಿ ಕಾಣುತ್ತದೆ. ಕೊಡಗಿಗೆ ಒಂದು ಕಾಲಕ್ಕೆ ಮಂಜರಾಬಾದ್‌ವರೆಗೆ ಸೇರಿದ್ದ ಪ್ರದೇಶದಲ್ಲಿ ಹೆತ್ತೂರು–ಕೂತಿನಾಡಮ್ಮನ ಕರ್ಕಳ್ಳಿ ಇರುವುದು ಗಮನಾರ್ಹ. ಹೀಗಾಗಿ ಪಾರಂಪರಿಕ ಸ್ತ್ರೀಪ್ರಧಾನದ ಆಚರಣೆಗಳು ಉಳಿದು ಬಂದಂತಿದೆ.

ಕೊಡಗಿನ ಕುಮಾರಹಳ್ಳಿ ಸುಗ್ಗಿಕಟ್ಟೆಹಬ್ಬದಲ್ಲಿ, ಕಟ್ಟೆಯ ಬಳಿ ಸೊಡರು ಇಟ್ಟು ಭತ್ತವಿಟ್ಟು ಭದ್ರಕಾಳಿಯ ಮುಖವಾಡ ವಿಟ್ಟು ಪೂಜೆ ನಡೆಸುತ್ತಾರೆ. ಸಪ್ತಮಾತೃಕೆಯರ ರಕ್ಷಕನೆನಿಸಿರುವ (ಭದ್ರಕಾಳಿ ಪ್ರಿಯೋನಿತ್ಯಂ ಮಾತೃಣಾಂ ಅಭಿರಕ್ಷಕಃ) ವೀರಭದ್ರನ ಸತಿ ಭದ್ರಕಾಳಿಯನ್ನು ಈ ಸಬತಾಯಿ ಸುಗ್ಗಿಕಟ್ಟೆಯಲ್ಲಿ ಆರಾಧಿಸುವುದು ವಿಶೇಷ. ಉತ್ತರ ಕೊಡಗಿನಲ್ಲಿ ಸಬತಾಯಿ ಸುಗ್ಗಿಕಟೆಯಲ್ಲಿ ಆರಾಧಿಸುವುದು ವಿಶೇಷ. ಉತ್ತರ ಕೊಡಗಿನಲ್ಲಿ ಸಬತಾಯಿ ಸುಗ್ಗಿಕಟ್ಟೆಯಗಳು ಬಹಳ ಪ್ರಚಲಿತದಲ್ಲಿವೆ.

ಕೊಡಗಿನಲ್ಲಿ ಸಾಹಿತ್ಯವಲಯದಲ್ಲಿ ಕೊಡಗಿನ ಗೌರಮ್ಮ ತಮ್ಮ ಕಥಾಸಾಹಿತ್ಯದ ಮೂಲಕ, ನವೋದಯ ಕಾಲದಲ್ಲಿ ಮುವತ್ತರ ದಶಕದಲ್ಲಿ ಪ್ರಸಿದ್ಧಿಯಾದವರು. ವರದಕ್ಷಿಣೆ, ಬಾಲ್ಯವಿವಾಹ, ಬಾಲವಿಧವೆ, ವರ್ಗಭೇದ ಮತಾಂತರ, ಸ್ತ್ರೀಶಿಕ್ಷಣ, ಹದಿಹರಯದ ತವಕ–ತಲ್ಲಣಗಳು, ಜೀವವಿರೋಧಿ ಕಂದಾಚಾರಗಳನ್ನು ಕುರಿತು ಜನಮನಕ್ಕೆ ಮುಟ್ಟಿಸಿ ಅವುಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂಬ ಸೂಚನೆಯನ್ನು ತಮ್ಮ ಕಥಾಸಂಕಲನದ ಮೂಲಕ ಸಂವಹನಿಸಿದವರಾಗಿದ್ದಾರೆ.

ಇಂದು ಚಲನಚಿತ್ರ, ಕ್ರೀಡೆ, ದೂರದರ್ಶನ, ಸಂಗೀತ, ಜಾನಪದ, ಶಿಕ್ಷಣ, ಕೃಷಿ, ಕಲಾಕೃತಿ, ಪತ್ರಿಕೋದ್ಯಮ ಪ್ರದರ್ಶನ, ಕಾವ್ಯ, ಕಥೆ, ಸಂಶೋಧನ ಕ್ಷೇತ್ರದಲ್ಲಿ ಹೆಸರು ಮಾಡಿರುವ ಹೆಂಗಳೆಯರು ಕೊಡಗಿನಲ್ಲಿ ಹಾಗೂ ಕೊಡಗಿನವರಾಗಿ ಹೊರಪ್ರದೇಶದಲ್ಲಿ ಕಾಣಸಿಗುತ್ತಾರೆ. ಕ್ರಿ.ಶ. ೧೮೯೦ರಲ್ಲಿಯೇ ಕೊಡಂದೇರ ಸೀತಮ್ಮ ಅವರು ಮದರಾಸಿನಲ್ಲಿ ತಮ್ಮ ಕಲಾಕೃತಿಗಳ ಪ್ರದರ್ಶನ ನೀಡಿದ್ದರು. ಹೀಗೆ ಸ್ತ್ರೀಸಾಧನೆಗಳು ಪ್ರಾಗಿತಿಹಾಸಿಕ ಕಾಲದಿಂದಲೂ ಇಂದಿನವರೆಗೆ, ಆಚರಣೆಗಳು ಹಾಗೂ ವಾಸ್ತವ ಕುರುಹುಗಳ ಮೂಲಕ ತಮ್ಮ ಸ್ವರೂಪ ಮಾದರಿಗಳನ್ನು ಬಯಲು ಮಾಡಿವೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಡಾ. ಹಾದಿಗಲ್ಲು ಲಕ್ಷ್ಮೀನಾರಾಯಣ, ಕನ್ನಡಪ್ರಭ, ಧರ್ಮಜ್ಯೋತಿ, ೨–೨–೨೦೧೦.

೨. ಎ.ಕ. ಸಂ. ೪ (ಹೊಸತು). ೧೯೭೫. ಮೈಸೂರು ಜಿಲ್ಲೆ, ಯಳಂದೂರು ೧೬೯ (ಮಾಂಬಳ್ಳಿ, ಕ್ರಿ.ಶ. ೫೫೦), ಮೈ.ವಿ.ವಿ.

೩. ಡಾ. ಎಂ.ಜಿ. ನಾಗರಾಜ್, ೨೦೧೦. ಕರ್ನಾಟಕ ರೈತ ಚಳವಳಿ, ಸತ್ಯಾಗ್ರಹಗಳು: ಕಾವೇರಿ ಜಲವಿವಾದ: ಐತಿಪೂರ್ವ–ಚಳವಳಿಗಳು, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ, ವಿಧಾನಸೌಧ, ಬೆಂಗಳೂರು, ಸಂಪುಟ–೫, ಪುಟ ೧೨೮೮.

೪. ಡಾ. ಎಂ.ಜಿ. ಚಂದ್ರಕಾಂತ್ ಮತ್ತು ಎಂ.ಜಿ. ನಾಗರಾಜ್, 'ಕೊಡಗಿನ ನಾಗರಹೊಳೆಯ ಸಾಂಸ್ಕೃತಿಕ ಇತಿಹಾಸ ಮತ್ತು ಚೆಂಗಾಳ್ವರು', ಇತಿಹಾಸ ದರ್ಶನ, ಸಂ. ೧೨/೧೯೯೭, ಪುಟ ೧೪೧, ೧೪೯, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.

೫. ಎ.ಕ. ಸಂ. ೧ (ಹೊಸತು), ೧೯೭೨, ಕೊಡಗು ಜಿಲ್ಲೆ, ಕೊಡಗು ೨ (ಮಡಿಕೇರಿ, ಕ್ರಿ.ಶ. ೧೦೦೧), ಮೈ.ವಿ.ವಿ.
೬. ಅದೇ., ಕೊಡಗು ೬೫ (ಸೋಮವಾರಪೇಟೆ ತಾ. ಮಾಲಂಬಿ, ಕ್ರಿ.ಶ. ಸು. ೧೦೦೪)
೭. ಅದೇ., ಕೊಡಗು ೨೪ (ಮಡಿಕೇರಿ ತಾ. ಭಾಗಮಂಡಲ, ಕ್ರಿ.ಶ. ೧೮೩೯).
೮. K. Mammen, 1942, Kerala Culture, pp. 80-81.
೯. ಎ.ಕ. ಸಂ. ೧ (ಹೊಸತು) ಕೊಡಗು ೬೪ (ಹರದೂರು, ೧೦ನೇ ಶತಮಾನ).
೧೦. ಅದೇ., ಕೊಡಗು ೭೨ (ಮುಳ್ಳೂರು; ಕ್ರಿ.ಶ. ೧೦೩೯).
೧೧. ಅದೇ., ಕೊಡಗು ೭೭ (ಮುಳ್ಳೂರು; ಕ್ರಿ.ಶ. ಸು. ೧೨ನೇ ಶತಮಾನದ ಮಧ್ಯಂತರ ಕಾಲ).
೧೨. ಅದೇ., ಕೊಡಗು ೬೮ (ಮುಳ್ಳೂರು; ಕ್ರಿ.ಶ. ಸು. ೧೧ನೇ ಶತಮಾನ ಮಧ್ಯಂತರ ಕಾಲ).
೧೩. ಅದೇ., ಕೊಡಗು ೭೫ (ಮುಳ್ಳೂರು; ಕ್ರಿ.ಶ. ೧೩೯೦).
೧೪. ಅದೇ., ಕೊಡಗು ೭೦ (ಮುಳ್ಳೂರು; ಕ್ರಿ.ಶ. ಸು. ೧೧ನೇ ಶತಮಾನ).
೧೫. ಅದೇ., ಕೊಡಗು ೭೫ (ಮುಳ್ಳೂರು; ಕ್ರಿ.ಶ. ೧೩೯೦).
೧೬. ಅದೇ., ಕೊಡಗು ೮೧ (ಮುಳ್ಳೂರು; ಕ್ರಿ . ೧೦೭೭).
೧೭. ಅದೇ., ಕೊಡಗು ೭೩ (ಮುಳ್ಳೂರು; ಕ್ರಿ.ශ. ಸು. ೧೧ನೇ ಶತಮಾನ).
೧೮. ಅದೇ., ಕೊಡಗು ೧೦೦ (ನಲ್ಲೂರು; ಕ್ರಿ.ಶ. ಸು. ೧೧ನೇ ಶತಮಾನ).
೧೯. ಅದೇ., ಕೊಡಗು ೯೫ (ಉಲುಗುಲಿ; ಕ್ರಿ.ಶ. ೧೨೬೪).
೨೦. ಎಂ.ಜಿ. ನಾಗರಾಜ್, 'ಕೊಡಗಿನ ಕೊಲೆ ಕಲ್ಲುಗಳು' ಹರತಿಸಿರಿ (ಸಂ.) ಲಕ್ಷ್ಮಣ ತೆಲಗಾವಿ, ೧೯೯೯, ಹರ್ತಿಕೋಟೆ.
೨೧. (೧) ಎ.ಕ. ಸಂ. ೧ (ಹೊ) ಅದೇ., ಕೊಡಗು ೬೨ (ಯಡೂರು, ಕ್ರಿ.ಶ. ೧೧೯೫).
(೨) ಎಂ.ಜಿ. ನಾಗರಾಜ್., 'ಕೊಡಗಿನ ಕೊಲೆಕಲ್ಲುಗಳು' ಹರತಿಸಿರಿ, ಅದೇ., ಪುಟ ೭೧೬.
೨೨. ಅದೇ., ಕೊಡಗು ೫೨ (ಗಣಗೂರು; ೧೩ನೇ ಶತಮಾನ).
೨೩. ಅದೇ., ಕೊಡಗು ೬೦ (ಚೌಡ್ಲು; ೧೩ನೇ ಶತಮಾನ).
೨೪. ಅದೇ., ಕೊಡಗು ೮೦ (ಮುಳ್ಳೂರು; ೧೩ನೇ ಶತಮಾನ).
೨೫. ಅದೇ., ಕೊಡಗು ೨೫ (ತಲಕಾವೇರಿ; ೧೯ನೇ ಶತಮಾನ).
೨೬. ಅದೇ., ಕೊಡಗು ೧೯ (ಅಂಜನಗಿರಿ; ಕ್ರಿ.ಶ. ೧೫೪೪).
೨೭. ಅದೇ., ಕೊಡಗು ೮೭ (ನಂದಿಗುಂದ; ಕ್ರಿ.ಶ. ೧೧೭೫).
೨೮. ಎಂ.ಜಿ. ನಾಗರಾಜ್, ೨೦೦೪, 'ಕೊಡಗಿನ ಹಾಲೇರಿ ರಾಜವಂಶವು', ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪುಟ ೯೯–೧೦೦.
೨೯. ರಾಜೇಂದ್ರನಾಮೆ, ೧೯೯೯ (ಸಂ.) ಡಿ.ಎನ್. ಕೃಷ್ಣಯ್ಯ, ಎಂ.ಎಸ್. ಸುಬ್ಬರಾಯ (೨ನೇ ಮುದ್ರಣ), ಮಡಿಕೇರಿ, ಪುಟ ೧೪.
೩೦. ಕೊಡಗಿನ ಹಾಲೇರಿ ರಾಜವಂಶವು, ಅದೇ., ಪುಟ ೩೧೪.
೩೧. ಡಿ.ಎನ್. ಕೃಷ್ಣಯ್ಯ, ಕೊಡಗಿನ ಇತಿಹಾಸ, ೧೯೭೪, ಮೈ.ವಿ.ವಿ. ಪುಟ ೮೬.
೩೨. G. Richter, Coorg Gazetter, p. 320.
೩೩. ಕೊಡಗಿನ ಹಾಲೇರಿ ರಾಜವಂಶವು, ಅದೇ., ಪುಟ ೨೨೮.
೩೪. Mocgling, 1855, Coorg Memoirs, Bangalore, p. 187.
೩೫. ಎಂ.ಜಿ. ನಾಗರಾಜ್, ೨೦೦೪, 'ಕೊಡಗಿನ ಕೈಮಡಗಳು', ಕನ್ನಡ ಸಾಹಿತ್ಯ ಪರಿಷತ್ತು, ಪುಟ ೫೦.
೩೬. ಎಂ.ಜಿ. ನಾಗರಾಜ್, ೧೯೯೩, ಕೆಂಬಟ್ಟೆ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪುಟ ೨೨೩, ೨೨೭, ೨೩೮.

ಸ್ವಾತಂತ್ರ್ಯ ಹೋರಾಟಗಾರ ಗುದ್ಲೇಪ್ಪ ಹಳ್ಳಿಕೇರಿ

ಡಾ. ಸಿದ್ಧಲಿಂಗಮ್ಮ ಬಿ.ಜಿ.*

ಗುದ್ಲೇಪ್ಪನವರು ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ ಇವೆರಡೂ ಗುರಿಗಳನ್ನು ಜೊತೆಯಾಗಿಟ್ಟುಕೊಂಡು ಹೋರಾಟ ಮಾಡಿದರು. ಇವೆರಡನ್ನೂ ಸಾಧಿಸಿದ ನಂತರ ಕರ್ನಾಟಕದಲ್ಲಿ ಅವರು ವಿಧಾನ ಪರಿಷತ್ ಸದಸ್ಯರಾಗಿ, ಸಭಾಪತಿಯಾಗಿ ದುಡಿದರು.

ಸ್ವಾತಂತ್ರ್ಯ ಚಳುವಳಿಯ ನೇತಾರರಾಗಿ ಗುದ್ಲೇಪ್ಪನವರು

೧೯೨೦ರಲ್ಲಿ ಭಾರತದ ಸ್ವಾತಂತ್ರ್ಯಾಂದೋಲನದ ಮಹಾನಾಯಕತ್ವವನ್ನು ಗಾಂಧೀಜಿ ವಹಿಸಿಕೊಂಡು ತಮ್ಮ ಸರಳ ಜೀವನ, ಶುದ್ಧ ಚಾರಿತ್ರ್ಯ, ಅಪಾರ ದೇಶಪ್ರೇಮ ಮುಂತಾದ ಸದ್ಗುಣಗಳಿಂದ ಜನಸಮೂಹದ ಮೇಲೆ ಅದ್ಭುತ ಪ್ರಭಾವ ಬೀರಿದರು. ಅಸಹಕಾರ ಆಂದೋಲನ ಆರಂಭವಾಗಿ ಎಲ್ಲ ವರ್ಗದ ಜನರೂ ಮುಕ್ತವಾಗಿ ಪಾಲ್ಗೊಂಡರು. ಇದರಿಂದ ಕಾಂಗ್ರೆಸ್ ಸಂಘಟನೆಯು ಜನಸಾಮಾನ್ಯರ ಸಂಘಟನೆಯಾಯಿತು.

೧೯೨೦ರ ನಂತರ ಕರ್ನಾಟಕ ಪ್ರದೇಶ ಕಾಂಗ್ರೆಸ್ ರಚನೆಯಾಗಿ ಕಾಂಗ್ರೆಸ್ ಚಟುವಟಿಕೆಗಳು ಹೆಚ್ಚು ಚುರುಕುಗೊಂಡವು.

೧೯೨೪ರ ಬೆಳಗಾವಿಯ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಅಲ್ಲಲ್ಲಿ ಸಭೆ ಸಮಾರಂಭಗಳು ಏರ್ಪಟ್ಟವು. ಅದರಲ್ಲಿ ೧೯೨೩ರ ನವೆಂಬರನಲ್ಲಿ ಹಾವೇರಿಯಲ್ಲಿ ಧಾರವಾಡ ಜಿಲ್ಲಾ ರಾಷ್ಟ್ರೀಯ ಪರಿಷತ್ತು ಸೇರಿತ್ತು. ಈ ಪರಿಷತ್ತಿನ ಅಧ್ಯಕ್ಷತೆಯನ್ನು ಹರ್ಡೇಕರ್ ಮಂಜಪ್ಪನವರು ವಹಿಸಿದ್ದು, ಈ ಪರಿಷತ್ತಿಗೆ ಹೊಸರಿತ್ತಿಯ ತರುಣ ಗುದ್ಲೇಪ್ಪನವರು, ಕರ್ಜಗಿಯ ಪರಮಣ್ಣ ಹೊಸಮನಿ ಹಾಗೂ ತಾಲೂಕಿನ ಅನೇಕ ಕಾರ್ಯಕರ್ತರು ಆಗಮಿಸಿದ್ದರು. ಈ ಪರಿಷತ್ತಿನ ಪ್ರಭಾವದಿಂದ ಅಹಿಂಸೆ, ವಿದೇಶಿ ವಸ್ತುಗಳ ಬಹಿಷ್ಕಾರ, ಅಸಹಕಾರ ಚಳುವಳಿಗಳನ್ನು ಬೆಂಬಲಿಸುವುದು ಮುಂತಾದ ವಿಧಾಯಕ ಕಾರ್ಯಕ್ರಮಗಳತ್ತ ಜನರು ಗಮನವಿತ್ತರು. ಈ ಪರಿಷತ್ತಿನ ಪ್ರಭಾವದಿಂದಾಗಿ ಹಾವೇರಿಯಲ್ಲಿ ಸಾವಿರಾರು ಜನರು ಕಾಂಗ್ರೇಸ್‌ನ್ನು ಸೇರಿದರು. ೧೯೨೪ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ೪೦ನೇ ಅಖಿಲ ಭಾರತ ಕಾಂಗ್ರೇಸ್ ಅಧಿವೇಶನವು ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಈ ಅಧಿವೇಶನವು ಹೊಸ ಹುಮ್ಮಸ್ಸು ಚೈತನ್ಯ ನೀಡಿತು.

ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಪರದೇಶಿ ವಸ್ತು ಬಹಿಷ್ಕಾರ, ಖಾದಿ, ಹಿಂದು–ಮುಸ್ಲಿಂ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ ಕುರಿತು ಹೃದಯಸ್ಪರ್ಶಿಯಾಗಿ ಮಾತನಾಡಿದರು. ತರುಣ ಗುದ್ಲೇಪ್ಪನವರು ಸ್ವಯಂಸೇವಕರಾಗಿ ಅಧಿವೇಶನದಲ್ಲಿ ಪಾಲ್ಗೊಂಡು ಶಿಸ್ತು, ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಅಧಿವೇಶನದಲ್ಲಿ ಪಾಲ್ಗೊಂಡ ರಾಷ್ಟ್ರೀಯ ನಾಯಕರಾದ ಸರ್ದಾರ ವಲ್ಲಭಭಾಯಿ ಪಟೇಲ್, ಜವಹರಲಾಲ್ ನೆಹರು, ಸಿ. ರಾಜಗೋಪಾಲಾಚಾರಿ, ರಾಜೇಂದ್ರ ಪ್ರಸಾದ್, ಅಲಿ ಸಹೋದರರು, ಶೌಕತ್ ಖುರೇಶಿ, ಜಮ್ನಾಲಾಲ ಬಜಾಜ್, ಖಾನ್ ಅಬ್ದುಲ ಗಫಾರ್ ಖಾನ್ ಮುಂತಾದವರನ್ನು ಸನಿಹದಿಂದ ಕಂಡು ಸ್ಫೂರ್ತಿ ಹೊಂದಿದರು. ಗಾಂಧೀಜಿಯವರ ಭಾಷಣದಿಂದ ಪ್ರೇರಿತರಾಗಿ ಅವರ ತತ್ವಗಳನ್ನು ಸಾಕಾರಗೊಳಿಸಲು ಸಂಕಲ್ಪಿಸಿ ಕಾರ್ಯೋನ್ಮುಖರಾದರು.

ರಾಷ್ಟ್ರೀಯತೆ, ದೇಶಾಭಿಮಾನ, ದೇಶದ ಸ್ವಾತಂತ್ರ್ಯ ಇವುಗಳನ್ನೇ ತಲೆಯಲ್ಲಿ ತುಂಬಿಕೊಂಡ ತರುಣ ಗುದ್ಲೇಪ್ಪ ತನ್ನಂತಹ ಉತ್ಸಾಹಿ ತೇಜಸ್ವಿ ಯುವಕರನ್ನು ಸಂಘಟಿಸಿ ಮುಂದಾಳತ್ವ ವಹಿಸಿ, ಧಾರವಾಡದಲ್ಲಿ ೧೯೨೭ ಅಕ್ಟೋಬರ್ ೨ರಂದು ಯುವಕರ ತಂಡವೊಂದನ್ನು ಕಟ್ಟಿದರು. ಅದುವೇ "ಭಾರತೀಯ ತರುಣ ಸಂಘ". ಇದರಲ್ಲಿ ನಿಜಗುಣಾರ್ಯ ಹಿರೇಮಠ, ಸಿದ್ಧಲಿಂಗಸ್ವಾಮಿ ಎಸ್. ಕಜ್ಜರಿ, ಲಿಂಗರಾಜ ಮುದ್ದಣ್ಣವರ, ವೆಂಕಟೇಶ ಮಾಗಡಿ, ಲಂಬಿ, ಕುಂಬಿ, ತಲ್ಲೂರ ರಾಯನಗೌಡ ಪಾಟೀಲ, ಕಂಬಿ ಮಠ, ಸುಬುದ್ಧಿ ಸ್ವಾಮಿ ಹಿರೇಮಠ, ಜವಳಿ, ಪವಾರ ಮಾಸ್ತರ, ಸಿರಿಯಣ್ಣನವರು, ಹೊಂಬಣ್ಣನವರ, ಕೆ.ಎಫ್. ಪಾಟೀಲ ಮುಂತಾದ ವರು ಇದ್ದರು.

ಗಾಂಧೀಜಿಯವರು ರೂಪಿಸಿದ ೧೫ ರಚನಾತ್ಮಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ಭಾರತೀಯ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಣಿಬೆನ್ನೂರು-೫೮೧೧೧೫.

ತರುಣ ಸಂಘದ ಕಾರ್ಯಕರ್ತರು ಹಳ್ಳಿಹಳ್ಳಿಗಳಿಗೆ ಹೋಗಿ ಜನರಲ್ಲಿ ಬಿತ್ತರಿಸುತ್ತಿದ್ದರು. ಅವು ಇಂತಿವೆ: ಜಾತಿ–ಜಾತಿಗಳ ನಡುವೆ ಸಾಮರಸ್ಯ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ಖಾದಿ ಪ್ರಸಾರ, ಗ್ರಾಮೋದ್ಯೋಗ, ಮೂಲ ಶಿಕ್ಷಣ, ಗ್ರಾಮೋದ್ಧಾರ, ಪ್ರೌಢಶಿಕ್ಷಣ, ಸ್ತ್ರೀಯರ ಉನ್ನತಿ, ಆರೋಗ್ಯ ಮತ್ತು ಸ್ವಚ್ಛತೆ, ರಾಷ್ಟ್ರಭಾಷಾ ಪ್ರಸಾರ ಮುಂತಾದವುಗಳು.

ಸ್ವಾತಂತ್ರ್ಯವೊಂದೇ ಎಲ್ಲರ ಏಳ್ಗೆಯ ಮಾರ್ಗ ವೆಂಬುದನ್ನು ಹಳ್ಳಿಹಳ್ಳಿಗಳಲ್ಲಿಯೂ ಬಿತ್ತರಿಸುವುದು, ಗುಲಾಮ ಗಿರಿಯನ್ನು ಬೋಧಿಸುವ ಶಾಲೆ–ಕಾಲೇಜುಗಳ ಶಿಕ್ಷಣಕ್ಕೆ ಬಹಿಷ್ಕಾರ ಹಾಕುವುದು, ರಾಷ್ಟ್ರಪ್ರಜ್ಞೆ ಜಾಗೃತಗೊಳಿಸುವುದು ಮತ್ತು ಸ್ವಾತಂತ್ರ್ಯ ಸೇನಾನಿಗಳನ್ನು ತಯಾರಿಸುವುದು ಈ ಸಂಘದ ಇನ್ನಿತರ ಕಾರ್ಯಗಳಾಗಿದ್ದವು.

ಗುದ್ಲೇಪ್ಪನವರ ದೃಷ್ಟಿಯಲ್ಲಿ ಕರ್ನಾಟಕದ ರಾಜಕೀಯ ರಂಗದಲ್ಲಿ ಮೊದಲ ನಾಯಕರಾಗಿದ್ದ ಗಂಗಾಧರರಾವ್ ದೇಶಪಾಂಡೆ, ಕಾರ್ನಾಡ ಸದಾಶಿವರಾವ, ಮುದವೀದು ಕೃಷ್ಣರಾವ್, ಆಲೂರು ವೆಂಕಟರಾವ್, ಕೌಜಲಗಿ ಶ್ರೀನಿವಾಸ ರಾವ್, ರಂಗನಾಥ ದಿವಾಕರ ಮುಂತಾದವರ ಗಮನವನ್ನು ಭಾರತೀಯ ತರುಣ ಸಂಘ ತನ್ನತ್ತ ಸೆಳೆಯಿತು. ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಸ್ವಾತಂತ್ರ್ಯ ಸೇನಾನಿ ಗಳನ್ನು ನಿರ್ಮಿಸಿದ ಈ ಸಂಘದ ಹೆಸರು ಚಿರಸ್ಥಾಯಿ ಯಾಗಿದೆ.

ಮೈಲಾರ ಮಹಾದೇವರು ಈ ಸಂಘಕ್ಕೆ ಸೇರ್ಪಡೆ ಗೊಂಡು, ವಿಶೇಷ ತರಬೇತಿಗಾಗಿ ಗಾಂಧೀಜಿಯವರ ಸಾಬರಮತಿ ಆಶ್ರಮಕ್ಕೆ ಹೋಗಿಬಂದರು.

ಭಾರತೀಯ ತರುಣ ಸಂಘದ ಕಾರ್ಯಕರ್ತರು ಪೋಲೀಸರ ಕಣ್ಣು ತಪ್ಪಿಸಿ ಭೂಗತರಾಗಿ ರಾಷ್ಟ್ರೀಯ ಕಾರ್ಯ ಗಳನ್ನು ನೆರವೇರಿಸುತ್ತಿದ್ದರು. ಗುದ್ಲೇಪ್ಪನವರ ನೇತೃತ್ವದಲ್ಲಿ ಸಂಘವು ಅತ್ಯಲ್ಪ ಕಾಲದಲ್ಲಿಯೇ ಅದು ಜಯರಾಮದಾಸ್, ದೌಲತರಾಮ, ಕಾಕಾ ಕಾಲೇಲಕರ, 'ಯಂಗ್ ಇಂಡಿಯಾ'ದ ಸಂಪಾದಕ ಕಿಶೋರಲಾಲ ಮಶ್ರೂವಾಲಾ, ನರಹರಿಭಾಯಿ ಪಾರೀಖರಂಥ ಅಖಿಲ ಭಾರತ ನಾಯಕರ ಗಮನ ಸೆಳೆಯಿತು.

ಭಾರತೀಯ ತರುಣ ಸಂಘದ ಚಟುವಟಿಕೆಗಳನ್ನು ತೀವ್ರಗೊಳಿಸುತ್ತ ೧೯೨೮ರಲ್ಲಿ 'ಕರ್ನಾಟಕ ಯುಥ್ ಲೀಗ್' ಎಂಬ ಸಂಘಟನೆಯನ್ನೂ ಗುದ್ಲೇಪ್ಪನವರು ಸ್ಥಾಪಿಸಿದರು. ಅವರಲ್ಲಿ ಆಲೂರು ವೆಂಕಟರಾವ್, ಮೌಲ್ವಿ ಮುಂತಾದವರು ಸೇರಿ ತಮ್ಮ ಅನುಭವ ಮತ್ತು ಜ್ಞಾನಗಳಿಂದ ಅದನ್ನು ಬಲಪಡಿಸಿದರು.

ವಿಶೇಷವಾಗಿ ಗುದ್ಲೇಪ್ಪನವರು ಸ್ವತಃ ಕಾಂಗ್ರೆಸ್ ಸೇರಿ ಮಾದರಿ ಹಾಕಿಕೊಟ್ಟು, ಮುಂದಾಳುತನ ವಹಿಸಿ, ಬಹು ಸಂಖ್ಯೆಯ ಬ್ರಾಹ್ಮಣೇತರ ತರುಣರನ್ನು ಕಾಂಗ್ರೆಸ್ಸಿಗರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದರು. ಇದರಿಂದಾಗಿ ಕಾಂಗ್ರೆಸ್ಸಿಗೆ ಹೆಚ್ಚಿನ ಬಲಬಂದು ಸ್ವಾತಂತ್ರ್ಯ ಹೋರಾಟವು ನಗರಗಳಿಂದ ಹಳ್ಳಿಗಳವರೆಗೂ ವ್ಯಾಪಿಸಿತು. ಈ ದಿಸೆಯಲ್ಲಿ ಗುದ್ಲೇಪ್ಪನವರು ಸ್ಥಾಪಿಸಿದ ಭಾರತೀಯ ತರುಣ ಸಂಘದ ಕಾರ್ಯ ಗಮನಾರ್ಹವಾದುದು.

೧೯೨೮ರ ಫೆಬ್ರುವರಿ ೩ರಂದು 'ಸೈಮನ್ ಕಮೀಷನ್' ಮುಂಬಯಿಗೆ ಬಂದಿತು. ಅಬಾಲ ವೃದ್ಧರಾದಿಯಾಗಿ ಎಲ್ಲರಿಂದಲೂ 'ಸೈಮನ್ ಹಿಂತಿರುಗಿ' ಎಂಬ ಘೋಷಣೆ, ಹರತಾಳಗಳು ಪ್ರಾರಂಭವಾದವು. ಆಗ ಗುದ್ಲೇಪ್ಪನವರು ಮುಂಬಯಿಯಲ್ಲಿದ್ದರು. ಅಲ್ಲಿ ಜರುಗಿದ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಶಾಲೆ–ಕಾಲೇಜುಗಳನ್ನು ತೊರೆದು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅವರು ಎಲ್ಲ ಫಲಕಗಳನ್ನು ಹಿಡಿದುಕೊಂಡು ಘೋಷಣೆಗಳನ್ನು ಕೂಗುತ್ತ ಸಂಚರಿಸು ತ್ತಿದ್ದರು. ಪ್ರತ್ಯಕ್ಷದರ್ಶಿ ಗುದ್ಲೇಪ್ಪನವರು ಹೀಗೆ ಹೇಳುತ್ತಾರೆ: 'ನಾನು ಮುಂಬೈಯಲ್ಲಿ ನೋಡಿದಂತೆ ಸೈಮನ್ ಕಮೀಷನ್ ಭೇಟಿ ಇತ್ತ ಎಲ್ಲ ಸ್ಥಳಗಳಲ್ಲಿಯೂ ಅದರ ವಿರುದ್ಧ ಪ್ರತಿಭಟನೆ ಗಳು ನಡೆದವು. ಜನರ ಭಾವನೆಗಳಿಗೆ ನಿಸರ್ಗವು ಸ್ಪಂದಿಸಿ ದಂತಿತ್ತು. ಮಳೆಯಿಲ್ಲದ ಸಂದರ್ಭದಲ್ಲಿ ಭೀಕರ ಚಂಡ ಮಾರುತವೆದ್ದು, ಭಾರಿ ಮಳೆ ಸುರಿದು ಕಮೀಷನ್ನಿನ ಭೇಟಿಗೆ ಅಸಂತೋಷವನ್ನು ತೋರ್ಪಡಿಸಿದಂತಾಯಿತು. ಸೈಮನ್ ಕಮೀಷನ್ ವಿರುದ್ಧ ಏರ್ಪಡಿಸಿದ ಪ್ರತಿಭಟನೆ ಮತ್ತು ಮೆರವಣಿಗೆಯಲ್ಲಿ ನಮ್ಮ ಭಾರತೀಯ ತರುಣ ಸಂಘವು ಮಹತ್ವದ ಪಾತ್ರ ವಹಿಸಿತ್ತು. ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಇತರ ಜನರಲ್ಲಿರುವಂತೆ ತೀವ್ರ ಆಸಕ್ತಿ ಕರ್ನಾಟಕ ಏಕೀಕರಣಕ್ಕಾಗಿ ನಮ್ಮಲ್ಲಿಯೂ ಇತ್ತು'.

ಗುದ್ಲೇಪ್ಪನವರ ನೇತೃತ್ವದಲ್ಲಿ ಭಾರತೀಯ ತರುಣ ಸಂಘವು ಸೈಮನ್ ಕಮೀಷನ್ ವಿರುದ್ಧ ಮೆರವಣಿಗೆ, ಸಭೆಗಳನ್ನು ಸಂಘಟಿಸಿ ಪ್ರತಿಭಟನೆ ವ್ಯಕ್ತಪಡಿಸಿತು.

ಮಹಾತ್ಮ ಗಾಂಧೀಜಿಯವರ ವಿಚಾರಗಳನ್ನು, ತತ್ವಗಳನ್ನು ಕಾರ್ಯರೂಪದಲ್ಲಿ ತರಲು ಅನೇಕ ಆಶ್ರಮಗಳು ಸ್ಥಾಪನೆಗೊಂಡಿದ್ದವು. ಗಾಂಧೀಜಿಯವರು ಗುಜರಾತ್ ರಾಜ್ಯದ ಅಹಮದಾಬಾದ ಬಳಿ ಸಾಬರಮತಿ ನದಿ ದಂಡೆಯ ಮೇಲೆ ಸಾಬರಮತಿ ಆಶ್ರಮವೊಂದನ್ನು ಸ್ಥಾಪಿಸಿದರು.

ಗುದ್ಲೇಪ್ಪನವರು ಸಂಕಲ್ಪಿಸಿದಂತೆ ಸಾಬರಮತಿ ಆಶ್ರಮದ ಮಾದರಿಯ ಗಾಂಧಿತತ್ವ ಪ್ರಣಾಲಿಯಂತೆ ವೈವಿಧ್ಯಮಯವಾದ ವಿಧಾಯಕ ಕಾರ್ಯಕ್ರಮಗಳ ಪ್ರಯೋಜನ ತನ್ನ ಗ್ರಾಮೀಣ

ಜನರಿಗೆ ಲಭಿಸಲೆಂಬ ಮಹದುದ್ದೇಶದೊಂದಿಗೆ ೧೯೨೮ರಲ್ಲಿ ಹೊಸರಿತ್ತಿಯಲ್ಲಿ 'ಗಾಂಧಿ ಆಶ್ರಮ' ಪ್ರಾರಂಭಿಸಿದರು.

ಅಸ್ಪೃಶ್ಯತಾ ನಿವಾರಣೆ, ಗ್ರಾಮೋದ್ಯೋಗ, ಖಾದಿ ಉತ್ಪಾದನೆ ಮತ್ತು ಖಾದಿಯನ್ನು ಹಳ್ಳಿಗಳಲ್ಲಿ ಸಂಚರಿಸಿ ಮಾರಾಟ ಮಾಡುವುದು, ಗ್ರಾಮ ನೈರ್ಮಲ್ಯ, ಶಿಕ್ಷಣಪ್ರಸಾರ, ರಾಷ್ಟ್ರಭಾಷೆ ಹಿಂದಿ ಕಲಿಸುವುದು ಇಂಥ ಚಟುವಟಿಕೆಗಳಲ್ಲಿ ಆಶ್ರಮವು ಮಹತ್ವದ ಪಾತ್ರ ವಹಿಸಿತ್ತು. ಸ್ವತಃ ಗುದ್ಲೇಪ್ಪನವರೆ ಆಶ್ರಮದಲ್ಲಿ ತಯಾರಾದ ಖಾದಿ ಬಟ್ಟೆಯನ್ನು ಹಳ್ಳಿಗಳಿಗೆ ತೆರಳಿ ಮಾರಿದರು. ತಳವಾರ ಬಸಪ್ಪ, ನರಗುಂದ ಬಸಪ್ಪ ಇವರೆಲ್ಲ ಅವರ ಜೊತೆಗೆ ಖಾದಿ ಬಟ್ಟೆ ಒಯ್ಯುತ್ತಿದ್ದರು.

ಗುದ್ಲೇಪ್ಪನವರ ಪ್ರಭಾವ ಪ್ರೇರಣೆಯಿಂದ ಸುತ್ತಲಿನ ಹಳ್ಳಿಗಳು ಗಾಂಧಿಗ್ರಾಮಗಳಾಗಿ ಪರಿವರ್ತಿತವಾದವು. ಕಾಂಗ್ರೆಸ್ಸಿನ ಪ್ರಭಾವ ವ್ಯಾಪಕವಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಸುತ್ತಲಿನ ಹಳ್ಳಿಗಳಿಂದ ಸುಮಾರು ಐದು ಸಾವಿರ ಜನರು ಹಾಗೂ ಹೊಸರಿತ್ತಿಯೊಂದರಿಂದಲೇ ಒಂದು ಸಾವಿರ ಜನರು ಸತ್ಯಾಗ್ರಹಿಗಳಾಗಿ ಪಾಲ್ಗೊಂಡರು. ಇದು ಗುದ್ಲೇಪ್ಪನವರ ಸಂಘಟನಾ ಸಾಮರ್ಥ್ಯಕ್ಕೆ ಉಜ್ವಲ ನಿದರ್ಶನವಾಗಿದೆ. ಹೊಸರಿತ್ತಿಯ ಗಾಂಧಿ ಆಶ್ರಮದ ಪ್ರಭಾವ ದಿಂದ ಮುಂದೆ ಮೈಲಾರ ಮಹದೇವಪ್ಪರವರು ಕೊರಡೂರಿನಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು.

ಗುದ್ಲೇಪ್ಪನವರು ರೈತಪರಿಷತ್ತನ್ನು ಏರ್ಪಡಿಸಿ ರೈತರಲ್ಲಿ ರಾಷ್ಟ್ರೀಯ ಭಾವನೆ ಬಿತ್ತರಿಸುವ ಭಾಷಣಗಳನ್ನು ಸ್ವತಃ ತಾವು ಮಾಡುತ್ತಿದ್ದರಲ್ಲದೆ ಬೇರೆ ಮುಖಂಡರ ಕಡೆಯಿಂದಲೂ ಮಾಡಿಸಿ ರೈತರಲ್ಲಿ ರಾಷ್ಟ್ರಾಭಿಮಾನ ಬಿಂಬಿಸುತ್ತಿದ್ದರು. ಕೃಷಿ ತಜ್ಞರನ್ನು ಕರೆಯಿಸಿ ಕೃಷಿ ಮತ್ತು ಪಶುಸಂಗೋಪನೆಯ ಬಗ್ಗೆ ಭಾಷಣ ಮಾಡಿಸಿ, ಉತ್ತಮ ತಳಿ ದನಗಳಿಗೆ ಪಾರಿತೋಷಕ ವಿತರಣೆ ಮಾಡಿಸುತ್ತಿದ್ದರು.

ಜನರಲ್ಲಿ ರಾಷ್ಟ್ರೀಯ ಭಾವನೆ ಬೆಳೆಸಲು ಅಕ್ಷರ ಜ್ಞಾನ ಅವಶ್ಯ. ಈ ದೃಷ್ಟಿಯಿಂದ ಗಾಂಧಿ ವಾಚನಾಲಯವು ಸ್ಥಾಪಿತವಾಯಿತು. ಇದು ಹಳ್ಳಿಗರಲ್ಲಿ ಓದುವ ಅಭಿರುಚಿಯನ್ನು ಬೆಳೆಸುವಲ್ಲಿ ಶ್ಲಾಘನೀಯ ಕಾರ್ಯ ಮಾಡಿತು. ವಾಚನಾಲಯಕ್ಕಾಗಿಯೇ ಹಳ್ಳಿಗರಿಗೆ, ಮಕ್ಕಳಿಗೆ, ಮಹಿಳೆಯರಿಗೆ ಬಹಳಷ್ಟು ಪುಸ್ತಕಗಳನ್ನು ಗುದ್ಲೆಪ್ಪನವರು ಸಂಗ್ರಹಿಸಿದರು. ಜನರಲ್ಲಿ ವಾಚನಾಭಿರುಚಿ ಹೆಚ್ಚಿದಂತೆ ಸಾಮಾಜಿಕ ಮತ್ತು ರಾಷ್ಟ್ರೀಯ ಪ್ರಜ್ಞೆ ಜಾಗೃತವಾಯಿತು.

ಬಡರೋಗಿಗಳಿಗೆ ಉಚಿತ ಔಷಧೋಪಚಾರವನ್ನು, ಆರೋಗ್ಯ ಸಲಹೆಗಳನ್ನು ನೀಡುವುದಕ್ಕಾಗಿ ಹಳ್ಳಿಕೇರಿಯವರು ಹೊಸರಿತ್ತಿಯಲ್ಲಿ ಗಾಂಧಿ ಚಿಕಿತ್ಸಾಲಯವನ್ನು ತೆರೆದರು.

೧೯೨೯ರ ಡಿಸೆಂಬರ್ ೩೧ರಂದು ಲಾಹೋರದಲ್ಲಿ ಜವಾಹರಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವರಾಜ್ಯ ಸಿಗಬೇಕು ಎಂಬ ನಿರ್ಣಯ ಸರ್ವಾನುಮತದಿಂದ ಸ್ವೀಕೃತವಾಯಿತು. ಇನ್ನು ಮುಂದೆ ಜನವರಿ ೨೬ನೇ ದಿನವನ್ನು ಸ್ವಾತಂತ್ರ್ಯ ದಿನವೆಂದು ಆಚರಿಸಬೇಕೆಂಬ ನಿರ್ಣಯ ಕೈಗೊಳ್ಳಲಾಯಿತು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ೧೯೩೦ರ ಫೆಬ್ರವರಿ ೧೪ರಿಂದ ೧೬ರ ವರೆಗೆ ಸಾಬರಮತಿ ಆಶ್ರಮದಲ್ಲಿ ಸೇರಿ ಗಾಂಧೀಜಿಯವರಿಗೆ ಕಾನೂನುಭಂಗ ಚಳುವಳಿ ಕೈಗೊಳ್ಳಲು ಸಂಪೂರ್ಣ ಅಧಿಕಾರ ನೀಡಿತು. ಈ ಚಳುವಳಿಯ ಅಂಗವಾಗಿ ಬ್ರಿಟಿಷ್ ಸರಕಾರವು ಜನಜೀವನದ ನಿತ್ಯ ಬಳಕೆಯ ಉಪ್ಪಿನ ಮೇಲೆ ವಿಧಿಸಿದ್ದ ಕರವನ್ನು ವಿರೋಧಿಸಿ, ಕಾನೂನು ಭಂಗಗೊಳಿಸುವ ಚಳುವಳಿ ಆರಂಭಿಸಲು ಗಾಂಧೀಜಿಯವರು ನಿರ್ಧರಿಸಿದರು.

ಗಾಂಧೀಜಿಯವರು ಉಪ್ಪಿನ ಕಾನೂನುಭಂಗ ಮಾಡುವುದಕ್ಕಾಗಿ ದಂಡಿ ಯಾತ್ರೆ ಕೈಕೊಂಡರು. ೭೯ ಜನ ತರಬೇತಿ ಹೊಂದಿದ ದೇಶದ ಎಲ್ಲ ಪ್ರದೇಶ ಮತ್ತು ಧರ್ಮಕ್ಕೆ ಸಂಬಂಧಿಸಿದ ಸತ್ಯಾಗ್ರಹಿಗಳನ್ನು ಅವರೊಂದಿಗೆ ಕರೆದೊಯ್ಯಲು ಆಯ್ಕೆ ಮಾಡಲಾಯಿತು. ಇವರಿಗೆ ತರಬೇತಿ ನೀಡಲು ಗಾಂಧೀಜಿಯವರು ಜಮನಾಲಾಲ್ ಬಜಾಜ್ ಅವರಿಗೆ ವಹಿಸಿಕೊಟ್ಟಿದ್ದರು. ಗುದ್ಲೇಪ್ಪನವರು ಮೈಲಾರ ಮಹಾದೇವಪ್ಪರನ್ನು ತರಬೇತಿ ಪಡೆಯಲು ಗಾಂಧೀಜಿಯವರ ಆಶ್ರಮಕ್ಕೆ ಕಳುಹಿಸಿದರು. ಬಜಾಜರು ಗುದ್ಲೇಪ್ಪನವರಿಗೆ ಪತ್ರ ಬರೆದು ಮಹಾದೇವರಿಗೆ ಅನಾರೋಗ್ಯವಿರುವುದರಿಂದ ಅವರನ್ನು ಆಯ್ಕೆ ಮಾಡಲಾಗುವುದಿಲ್ಲವೆಂದು ತಿಳಿಸಿದರು. ಆದರೆ ಗುದ್ಲೇಪ್ಪನವರು ಮತ್ತೆ ಬಜಾಜರಿಗೆ ಪತ್ರ ಬರೆದು ಆಯ್ಕೆ ಮಾಡಲೇಬೇಕೆಂದು ಒತ್ತಾಯಿಸಿದರು. ಆಗ ಮಹಾದೇವಪ್ಪರನ್ನು ಆಯ್ಕೆ ಮಾಡಲಾಗಿ, ದಂಡಿ ಯಾತ್ರೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದರು. ಈ ಯಾತ್ರೆಯಲ್ಲಿ ಅತ್ಯಂತ ಕಿರಿಯ ವಯಸ್ಸಿನವರೆಂದರೆ ೧೮ ವರ್ಷದ ಮೈಲಾರ ಮಹಾದೇವಪ್ಪನವರಾಗಿದ್ದರು. ಅತ್ಯಂತ ಹಿರಿಯ ವಯಸ್ಸಿನವರೆಂದರೆ ೬೧ ವರ್ಷದ ಗಾಂಧೀಜಿಯವರೇ ಆಗಿದ್ದರು.

೧೯೩೦ರ ಮಾರ್ಚ ೧೨ರಂದು ಗಾಂಧೀಜಿ ನೇತೃತ್ವದಲ್ಲಿ ಸತ್ಯಾಗ್ರಹಿಗಳು ಸಾಬರಮತಿ ಆಶ್ರಮದಿಂದ ಸುಪ್ರಸಿದ್ಧ ದಂಡಿ ಯಾತ್ರೆ ಕೈಕೊಂಡರು. ಗುಜರಾತಿನ ಪಶ್ಚಿಮ ಕರಾವಳಿಯಲ್ಲಿನ ಒಂದು ಹಳ್ಳಿ ದಂಡಿ. ಅಹಮದಾಬಾದಿನಿಂದ ೨೪೦ ಕಿ.ಮೀ. ದೂರದಲ್ಲಿರುವ ದಂಡಿಯನ್ನು ಕಾಲ್ನಡಿಗೆಯಿಂದ ತಲುಪಲು ಇವರಿಗೆಲ್ಲ ೨೪ ದಿನಗಳು ಬೇಕಾದವು. ೧೯೩೦ರ ಏಪ್ರಿಲ್ ೫ರಂದು ದಂಡಿಯನ್ನು ತಲುಪಿದರು. ಸಮುದ್ರ

ದಂಡಿಯನ್ನು ತಲುಪಿದ ಮರುದಿವಸ ಏಪ್ರಿಲ್ ೬ರಂದು ತಯಾರಿಸಿದ ಉಪ್ಪನ್ನು ಕೈಯಿಂದ ಎತ್ತಿಹಿಡಿದು ಏಪ್ರಿಲ್ ೧೩ರವರೆಗಿನ ವಾರವನ್ನು ಉಪ್ಪಿನ ಕಾನೂನುಭಂಗದ ರಾಷ್ಟ್ರೀಯ ವಾರವಾಗಿ ಘೋಷಿಸಿದರು. ಅಂದಿನಿಂದ ದೇಶದ ಎಲ್ಲೆಡೆಯಲ್ಲಿ ಕಾನೂನು ಭಂಗ ಚಳುವಳಿಗಳು ನಡೆದು ಉಪ್ಪನ್ನು ತಯಾರಿಸಿ ಮಾರಾಟ ಮಾಡಲಾಯಿತು.

ಅಂಕೋಲಾದಲ್ಲಿ ಉಪ್ಪಿನ ಸತ್ಯಾಗ್ರಹ

ಅಂಕೋಲೆಯಲ್ಲಿ ೧೯೩೦, ಏಪ್ರಿಲ್ ೧೩ರಂದು ಉಪ್ಪಿನ ಸತ್ಯಾಗ್ರಹ ಆರಂಭಿಸಲಾಯಿತು. ಗುಜರಾತ್ ವಿದ್ಯಾಪೀಠದಲ್ಲಿ ಗಾಂಧೀಜಿಯವರ ಮಾರ್ಗದರ್ಶನದಂತೆ ತರಬೇತಿ ಪಡೆದುಕೊಂಡು ಬಂದ ಅದಮ್ಯ ಉತ್ಸಾಹದ ಕಾರ್ಯಕರ್ತ ಗುದ್ಲೇಪ್ಪ ಹಳ್ಳಿಕೇರಿಯವರು ತಮ್ಮ ಸಂಗಡಿಗರೊಂದಿಗೆ ಅಂಕೋಲೆಗೆ ಬಂದರು. ರಾಜ್ಯದ ಮೂಲೆ ಮೂಲೆಗಳಿಂದ ಸತ್ಯಾಗ್ರಹಿಗಳು ತಂಡೋಪತಂಡವಾಗಿ ಅಂಕೋಲೆಗೆ ಧಾವಿಸಿದರು. ಅಲ್ಲಿ ಸತ್ಯಾಗ್ರಹಿಗಳನ್ನುದ್ದೇಶಿಸಿ ಸತ್ಯಾಗ್ರಹ ತಂತ್ರಗಳನ್ನು ತಮ್ಮ ಭಾಷಣದಲ್ಲಿ ತಿಳಿಸುತ್ತ ಹುರಿದುಂಬಿಸಿದರು. ಸುಮಾರು ಮೂವತ್ತು ಸಾವಿರಕ್ಕಿಂತಲು ಹೆಚ್ಚಿನ ಜನರು ಇಲ್ಲಿ ಭಾಗವಹಿಸಿದ್ದರು. ಈ ಚಳುವಳಿಯ ಮುಖಂಡರಾದ ಗುದ್ಲೇಪ್ಪ ಹಳ್ಳಿಕೇರಿ, ಎಂ.ಪಿ. ನಾಡಕರ್ಣಿ, ಸ್ವಾಮಿ ವಿದ್ಯಾನಂದ ಮುಂತಾದವರು ಸಭೆಯಲ್ಲಿ ಸ್ಫೂರ್ತಿಯುತ ಭಾಷಣ ಮಾಡಿ ಜನರಲ್ಲಿ ಪ್ರೇರಣೆ, ಉತ್ಸಾಹ ತುಂಬಿದರು. ಗುದ್ಲೇಪ್ಪನವರು ಮೇ ತಿಂಗಳ ಕೊನೆಯ ವರೆಗೆ ಅಂಕೋಲೆಯಲ್ಲಿಯೇ ಇದ್ದು ಜನರಲ್ಲಿ ನವಚೈತನ್ಯ ತುಂಬಿದರು.

ಉಪ್ಪಿನ ಸತ್ಯಾಗ್ರಹವು ಮಂಗಳೂರು, ಕುಂದಾಪುರ, ಪಡುಬಿದ್ರೆ, ಉಡುಪಿ, ಕಾರ್ಕಳ, ಪುತ್ತೂರು, ಮಲ್ಪೆ, ಕಾಪು (ಉಡುಪಿ ಜಿಲ್ಲೆ), ಬಿಸನಾಳ (ಬಿಜಾಪುರ ಜಿಲ್ಲೆ), ನವಲಗುಂದ, ಕಿರೇಸೂರು, ಯಾವಗಲ್ಲ (ಧಾರವಾಡ ಜಿಲ್ಲೆ) ಹೀಗೆ ಕರ್ನಾಟಕದ ಸುಮಾರು ೩೦ ಸ್ಥಳಗಳಲ್ಲಿ ನಡೆಯಿತು.

ವಿದೇಶಿ ವಸ್ತುಗಳ ಬಹಿಷ್ಕಾರ

ಗುದ್ಲೇಪ್ಪನವರು ಉತ್ತರ ಕನ್ನಡ ಜಿಲ್ಲೆಯ ತುಂಬ ಸಂಚರಿಸಿ ಮಹತ್ವದ ಸ್ಥಳಗಳಲ್ಲಿ ಸತ್ಯಾಗ್ರಹ ಶಿಬಿರಗಳನ್ನು ಸ್ಥಾಪಿಸಿದರು. ಹೋರಾಟದ ಸ್ವರೂಪವನ್ನು, ನಿರ್ವಹಿಸುವ ಕರ್ತವ್ಯ ಮತ್ತು ಹೊಣೆಗಾರಿಕೆಯನ್ನು ತಿಳಿಸಿಕೊಟ್ಟರು. ಗುದ್ಲೇಪ್ಪನವರ ಭಾಷಣದಿಂದ ಪ್ರೇರೇಪಿತರಾದ ಜನರು ವಿದೇಶಿ ವಸ್ತುಗಳನ್ನು ಸುಟ್ಟರು. ವಿದೇಶಿ ಸಾಬೂನು, ಸಿಗರೇಟು, ಸಕ್ಕರೆಯನ್ನೂ ಸಹ ಸಮುದ್ರಕ್ಕೆ ಚೆಲ್ಲಿದರು.

ಗುದ್ಲೇಪ್ಪನವರ ಹೊಸರಿತ್ತಿಯ ಗಾಂಧಿ ಆಶ್ರಮವಾಸಿಗಳಾಗಿದ್ದ ರಮಾನಂದ ಮನ್ನಂಗಿ, ಶಿವಾನಂದ ಎಲಿ ಇವರು ಗುದ್ಲೇಪ್ಪನವರ ಆದೇಶದಂತೆ ನಲವತ್ತು ಸ್ವಯಂಸೇವಕರನ್ನು ಕರೆದುಕೊಂಡು ಬಂದು ಶಿರಸಿಗೆ. ಶಿರಸಿಯ ಅಂಗಡಿಗಳಲ್ಲಿ ಮತ ಪ್ರದರ್ಶನ ಮಾಡಿ ವಿದೇಶಿ ಬಟ್ಟೆಗಳನ್ನು ಮಾಲೀಕರು ಗಂಟು ಕಟ್ಟಿಟ್ಟು ಮಾರಲು ಬಾರದಂತೆ ಮಾಡಿದರು.

ಗುದ್ಲೇಪ್ಪನವರು ಹೊಸರಿತ್ತಿಗೆ ಬಂದು ತರುಣರನ್ನು ಒಗ್ಗೂಡಿಸಿ ಬೃಹತ್ ಪ್ರಮಾಣದಲ್ಲಿ ಈಚಲು ಗಿಡಗಳನ್ನು ಕಡಿಯುವ ಕಾರ್ಯವನ್ನು ವ್ಯಾಪಕವಾಗಿ ಕೈಗೊಂಡರು.

ಕರ ನಿರಾಕರಣೆ ಚಳುವಳಿ

ಗುಜರಾತಿನ ಬಾರ್ಡೋಲಿಯಲ್ಲಿ ನಡೆದ ಕರ ನಿರಾಕರಣ ಚಳುವಳಿಯು ಯಶಸ್ವಿಯಾದ ನಂತರ ಇದರ ಪ್ರಭಾವವು ಕರ್ನಾಟಕಕ್ಕೂ ಹಬ್ಬಿತು. ಕರ್ನಾಟಕದಲ್ಲಿ ಈ ಚಳುವಳಿಯನ್ನು ನಡೆಸಲು ಧಾರವಾಡ ಜಿಲ್ಲೆಯ ಹಿರೇಕೆರೂರು, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಶಿರಸಿ, ಸಿದ್ದಾಪುರ ತಾಲ್ಲೂಕುಗಳನ್ನು ಆಯ್ದುಕೊಳ್ಳಲಾಗಿತ್ತು. ಕರ ನಿರಾಕರಣ ಚಳುವಳಿಯು ಹಿರೇಕೆರೂರು ತಾಲೂಕಿನಲ್ಲಿ ವ್ಯಾಪಕವಾಗಿ ನಡೆದು ಯಶಸ್ಸು ಪಡೆಯಿತು. ಈ ಕಾರ್ಯದಲ್ಲಿ ಗುದ್ಲೇಪ್ಪನವರು ಅತ್ಯಂತ ಉತ್ಸಾಹದಿಂದ ನಾಯಕತ್ವ ವಹಿಸಿ ಚಳುವಳಿಯ ಬಿಸಿಯನ್ನು ಆಡಳಿತಕ್ಕೆ ಮುಟ್ಟಿಸಿದರು.

ಗುದ್ಲೇಪ್ಪನವರ ಬಂಧನ

ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಗುದ್ಲೇಪ್ಪನವರು ಅನೇಕ ಕಡೆ ಭಾಷಣಗಳನ್ನು ಮಾಡಿ, ಬ್ರಿಟಿಷರ ವಿರುದ್ಧ ಜನರ ಸಂಘಟನೆ ಮಾಡುತ್ತ ೧೯೩೦ರ ಜುಲೈನಲ್ಲಿ ಗುತ್ತಲಕ್ಕೆ ಬಂದರು. ಅಲ್ಲಿ ಬೃಹತ್ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಸತ್ಯಾಗ್ರಹಿಗಳಾದ ಕೃ.ವೆಂ. ದೇಶಪಾಂಡೆ, ಕೃಷ್ಣಾಬಾಯಿ ಪಂಜೀಕರ, ದಿನಕರ ಗೋಪಾಳ ವಾಟವೆ ಅವರು ಜೊತೆಗಿದ್ದರು. ಈ ಮೊದಲೇ ಗುದ್ಲೇಪ್ಪನವರನ್ನು ಬಂಧಿಸಲು ವಾರಂಟ್ ಹೊರಡಿಸಲಾಗಿತ್ತು. ಆ ಮೇರೆಗೆ ಪೋಲೀಸರು ಗುತ್ತಲದಲ್ಲಿಯೇ ಅವರನ್ನು ಬಂಧಿಸಿದರು. ಇದು ಗುದ್ಲೇಪ್ಪನವರ ಹೋರಾಟದ ಜೀವನದಲ್ಲಿ ನಡೆದ ಪ್ರಥಮ ಬಂಧನ. ಅವರು ಮೂರು ತಿಂಗಳ ಶಿಕ್ಷೆ ಅನುಭವಿಸಿ ಬಿಡುಗಡೆಯಾದರು.

ಬಿಡುಗಡೆಯ ನಂತರ ಮತ್ತೆ ಚಳುವಳಿಯಲ್ಲಿ ಧುಮುಕಿದರು. ಅದೇದೆ ವರ್ಷದ ಅಕ್ಟೋಬರ್‌ನಲ್ಲಿ ಎರಡನೇ ಬಾರಿ ಅವರನ್ನು ಬಂಧಿಸಲಾಯಿತು. ಮೂರು ತಿಂಗಳು ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಶಿಕ್ಷೆ ಅನುಭವಿಸಿ ಡಿಸೆಂಬರ್ ೧೭ರಂದು ಬಿಡುಗಡೆ ಹೊಂದಿದರು. ಹೊರಗೆ ಬಂದಾಗ ಶಿಷ್ಯ ಮಹಾದೇವಪ್ಪ ಮೈಲಾರ ಅವರು ಗುದ್ಲೇಪ್ಪನವರನ್ನು ಸ್ವಾಗತಿಸಿದರು.

೧೯೩೧ರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಕರಾಚಿಯಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಗುದ್ಲೇಪ್ಪನವರು ಹೋಗಿ ಬಂದರು. ಅದೇ ವರ್ಷ ಅವರು ಧಾರವಾಡ ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದರು. ೧೯೩೧ರ ಡಿಸೆಂಬರ್ ಕೊನೆಯ ವಾರದಲ್ಲಿ ಗುದ್ಲೇಪ್ಪನವರು ಜವಾಹರಲಾಲ್ ನೆಹರು ಅವರನ್ನು ಹುಬ್ಬಳ್ಳಿಗೆ ಕರೆಯಿಸಿ ರಾಷ್ಟ್ರೀಯ ಚಳುವಳಿಯನ್ನು ಇನ್ನಷ್ಟು ಪ್ರಬಲಗೊಳಿಸಿದರು.

ಗುದ್ಲೇಪ್ಪನವರು ತಮ್ಮ ಸಂಗಡಿಗರೊಂದಿಗೆ ಭೂಗತರಾಗಿದ್ದಾಗ ರಾತ್ರಿ ಹಳ್ಳಿ-ಹಳ್ಳಿಗಳಿಗೆ ಹೋಗಿ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಬಿಂಬಿಸಿ ಯುವಕರನ್ನು ಹೋರಾಟಕ್ಕೆ ಹುರಿದುಂಬಿಸುತ್ತಿದ್ದರು.

ರಾಷ್ಟ್ರವ್ಯಾಪಿ ಅಹಿಂಸಾತ್ಮಕ ಹೋರಾಟ ಆರಂಭಿಸಬೇಕೆಂದು ಕಾಂಗ್ರೇಸ್ ಕಾರ್ಯಸಮಿತಿ ನಿರ್ಣಯಿಸಿ, ಮಹಾತ್ಮಾ ಗಾಂಧೀಜಿಯವರ ನಾಯಕತ್ವದಲ್ಲಿ ನಡೆಯಬೇಕೆಂದು ನಿರ್ಧರಿಸಿತು. ಗಾಂಧೀಜಿ ಗೊತ್ತುವಳಿ ಕುರಿತು ಮಾತನಾಡಿ "ಭಾರತೀಯರೆ ಮಾಡು ಇಲ್ಲವೆ ಮಡಿಯಿರಿ" ಎಂದರು. ಬ್ರಿಟೀಷರಿಗೆ "ಕ್ವಿಟ್ ಇಂಡಿಯಾ ಚಲೇ ಜಾವ್" ಎಂದು ಉದ್ಘೋಷಿಸಿದರು. ಅಂದೇ ಸರಕಾರ ಪ್ರಮುಖ ನಾಯಕರು ಹಾಗೂ ಅವರ ಅನುಯಾಯಿಗಳನ್ನು ಬಂಧಿಸಿತು. ಈ ಚಳುವಳಿ ಮುಗಿಯುವವರೆಗೆ ಗುದ್ಲೆಪ್ಪನವರನ್ನು ಹಿಂಡಲಗಿ ಜೈಲಿನಲ್ಲಿ ಸ್ಥಾನಬದ್ಧ ಕೈದಿಯನ್ನಾಗಿ ಇಡಲಾಗಿತ್ತು. ಸರಕಾರವು ಎರಡು ವರ್ಷಗಳ ಸಶ್ರಮ ಶಿಕ್ಷೆ ವಿಧಿಸಿತು. ಗಾಂಧೀಜಿಯವರ ಬಿಡುಗಡೆಯೊಂದಿಗೆ ಸಾರ್ವತ್ರಿಕವಾಗಿ ಬಂಧಿತರನ್ನು ಬಿಡುಗಡೆ ಮಾಡಿದಾಗ ಗುದ್ಲೇಪ್ಪನವರನ್ನೂ ೧೯೪೪ರ ಮೇ ೬ರಂದು ಮುಕ್ತಗೊಳಿಸಲಾಯಿತು.

೧೯೪೫ರಲ್ಲಿ ಬ್ರಿಟನ್ನಿನಲ್ಲಿ ಲೇಬರ್ ಪಕ್ಷವು ಅಧಿಕಾರಕ್ಕೆ ಬಂದ ನಂತರ ಭಾರತಕ್ಕೆ ಸ್ವಾತಂತ್ರ್ಯ ಕೊಡಲು ನಿರ್ಣಯಿಸಿ, ಆ ಬಗ್ಗೆ ಪರಿಶೀಲನೆ ಮಾಡಲು ಲಾರ್ಡ್ ಪ್ಯಾಥಿಕ್ ಲಾರೆನ್ಸ್ ಅಧ್ಯಕ್ಷತೆಯಲ್ಲಿ ಕ್ಯಾಬಿನೆಟ್ ಆಯೋಗವನ್ನು ೧೯೪೬ರ ಮಾರ್ಚ್ ೨೪ರಂದು ಭಾರತಕ್ಕೆ ಕಳುಹಿಸಿತು. ೧೯೪೭ ಮಾರ್ಚ್ ೨೪ರಂದು ಲಾರ್ಡ್ ಮೌಂಟ್ ಬ್ಯಾಟನ್ನರು ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದರು. ದೇಶದ ಮುಖಂಡರೊಡನೆ ಚರ್ಚಿಸಿ ಭಾರತದ ವಿಭಜನೆಯನ್ನು ಒಳಗೊಂಡ ಹೊಸ ಯೋಜನೆಯನ್ನು ಬ್ರಿಟಿಷ್ ಸಂಸತ್ತಿಗೆ ಕಳುಹಿಸಿದರು. ಅದು ೧೯೪೭ರ ಜುಲೈ ೪ರಂದು ಭಾರತ ಸ್ವಾತಂತ್ರ್ಯ ಕಾಯ್ದೆಯನ್ನು ಅಂಗೀಕರಿಸಿತು. ಅದರ ಮೇರೆಗೆ ದೇಶ ವಿಭಜನೆಯಾಗಿ ೧೯೪೭ರ ಆಗಸ್ಟ್ ೧೫ರಂದು ಭಾರತ ಮತ್ತು ಪಾಕಿಸ್ತಾನವೆಂಬ ಎರಡು ಸ್ವತಂತ್ರ ರಾಷ್ಟ್ರಗಳು ಉದಯಿಸಿದವು.

ಧಾರವಾಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಗುದ್ಲೇಪ್ಪ ಹಳ್ಳಿಕೇರಿಯವರಿಂದ ೧೯೪೭ರ ಆಗಸ್ಟ್ ೧೫ರಂದು ಸ್ವಾತಂತ್ರ್ಯ ರಾಷ್ಟ್ರಧ್ವಜಾರೋಹಣವು ಹುಬ್ಬಳ್ಳಿಯ ದರ್ಗದ ಜೈಲಿನಲ್ಲಿ ಬೃಹತ್ ಜನಸ್ತೋಮದ ನಡುವೆ ಹರ್ಷೋದ್ಗಾರಗಳ ಮಧ್ಯೆ ನಡೆಯಿತು.

ಹೀಗೆ ಗುದ್ಲೇಪ್ಪನವರು ನಿಸ್ವಾರ್ಥ ಭಾವನೆಯಿಂದ ಅವಿಶ್ರಾಂತವಾಗಿ ದಿಟ್ಟತನದಿಂದ ಹೋರಾಡಿ ಯಶಸ್ವಿಯಾದರು.

ಆಧಾರಸೂಚಿ

೧. ಆರ್.ಎಲ್.ಎಂ. ಪಾಟೀಲ್., ಜಿ.ವಿ. ಹಳ್ಳಿಕೇರಿ. ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ-ಮಾಲಿಕೆ. ಕರ್ನಾಟಕ ವಿಧಾನಸಭೆ ಸಚಿವಾಲಯ, ಬೆಂಗಳೂರು, ೧೯೯೯.

೨. ಸೂರ್ಯನಾಥ ಕಾಮತ್, **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು**, ಸಂ-೧, ೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮.

೩. ಕುಲಕರ್ಣಿ ಆರ್.ಜಿ., **'ಶ್ರೀ ಜಿ.ವಿ. ಹಳ್ಳಿಕೇರಿಯವರು'**, ಸಂ: ಗೋಕಾಕ ವಿ.ಕೆ., ಮತ್ತು ಇತರರು. ರತ್ನದೀಪ, ಹಳ್ಳಿಕೇರಿ ಷಷ್ಟ್ಯಬ್ದಿಪೂರ್ತಿ ಸಮಾರಂಭ ಸಮಿತಿ, ಕಾಂಗ್ರೆಸ್ ಭವನ, ಹುಬ್ಬಳ್ಳಿ, ೧೯೬೬.

೪. ಸಿದ್ಧಲಿಂಗೇಶ ಸಂ. ಹಂಡಗಿ, **ಗುದ್ಲೇಪ್ಪ ಹಳ್ಳಿಕೇರಿ ರಾಜಕೀಯ ಜೀವನ ಮತ್ತು ಸಾಧನೆ**. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ೨೦೦೮.

ಮೈಸೂರಿನಲ್ಲಿ ತೋಟಗಾರಿಕೆ ಮತ್ತು ರಾಬರ್ಟ್ ಇಲಿಯಟ್

ರವಿರಾಜ್ ಬಿ.ವಿ.*

ಪೀಠಿಕೆ

ತೋಟಗಾರಿಕಾ ಬೆಳೆಗಳಾದ ರಬ್ಬರ್, ಸಕ್ಕರೆ, ಟೀ, ಕಾಫಿ, ಸಿಂಕೋನಾ, ಕೋಕೋ, ಸೆಣಬು ಮತ್ತು ನೀಲಿ ಬೆಳೆಗಳನ್ನು ಬೆಳೆಯುವ ಪ್ರಕ್ರಿಯೆಯು ವಸಹಾತುಶಾಹಿ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಾರಂಭವಾಯಿತು. ಏಷ್ಯಾ, ಆಫ್ರಿಕಾ ಹಾಗೂ ದಕ್ಷಿಣ ಅಮೇರಿಕಾದ ಪ್ರದೇಶಗಳಾದ ಇಂಡೋ ಚೈನಾ, ಜಾವಾ, ಮಲಯ, ಫಿಲಿಫೈನ್ಸ್, ಭಾರತ, ಶ್ರೀಲಂಕಾ, ಫಿಜಿ, ಮಾರಿಷಿಯಸ್, ಕೀನ್ಯಾ, ಉಗಾಂಡ, ಜಿಂಬಾಬ್ವೆ, ವೆಸ್ಟ್ಇಂಡೀಸ್ ಮತ್ತು ಲ್ಯಾಟಿನ್ ಅಮೇರಿಕಾದಂತಹ ದೇಶಗಳನ್ನು ಯುರೋಪಿಯನ್ನರು ತಮ್ಮ ವಸಹಾತುವನ್ನಾಗಿ ಮಾಡಿಕೊಂಡು ತೋಟಗಾರಿಕಾ ಅಥವಾ ವಾಣಿಜ್ಯ ಬೆಳೆಗಳನ್ನು ಬೆಳೆಯಲಾರಂಭಿಸಿದರು. ಭಾರತದ ಬೆಂಗಾಲ್, ಅಸ್ಸಾಂ, ಕೇರಳ, ತಮಿಳುನಾಡು ಮತ್ತು ಕರ್ನಾಟಕಗಳಲ್ಲಿಯೂ ತೋಟಗಾರಿಕೆಯು ವಸಾಹತುಷಾಹಿ ಆಡಳಿತಾವಧಿಯಲ್ಲಿಯೇ ಬೆಳವಣಿಗೆಯನ್ನು ಕಂಡಿತು.[೧]

ಮೈಸೂರಿನಲ್ಲಿ ತೋಟಗಾರಿಕೆ ಮತ್ತು ರಾಬರ್ಟ್ ಇಲಿಯಟ್

ಮೈಸೂರಿನಲ್ಲಿ ತೋಟಗಾರಿಕಾ ಬೆಳವಣಿಗೆಯು ವಸಹಾತುಶಾಹಿ ಕಾಲಾವಧಿಯಲ್ಲಿ ಪ್ರಾರಂಭವಾಯಿತು. ಆಂಗ್ಲರು ಐರೋಪ್ಯ ಬಂಡವಾಳವನ್ನು ವಾಣಿಜ್ಯ ಕೃಷಿಯನ್ನು ಬೆಳೆಯುವುದಕ್ಕೆ ಹೆಚ್ಚು ವ್ಯಯಮಾಡಿ ಅದರಿಂದ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಲಾಭವನ್ನು ಗಳಿಸುತ್ತಿದ್ದರು. ಹಾಗೆಯೇ ಅಂದಿನ ಮೈಸೂರು ರಾಜ್ಯದ ಒಡೆಯರುಗಳ ಸಹಕಾರವನ್ನು ಪಡೆದು ಹಾಗೂ ಬ್ರಿಟಿಷ್ ಸರ್ಕಾರದ ನಿರ್ದೇಶನದಂತೆ ತೋಟಗಾರಿಕಾ ಕೃಷಿಯನ್ನು ಮಾಡಲು ಬಟಾಯಿ ಭೂಮಿಗಳನ್ನು ವಿತರಿಸುವುದಾಗಿ ಆದೇಶ ಹೊರಡಿಸಿತು. ಇದರ ಪರಿಣಾಮವಾಗಿ ಹಲವಾರು ಸ್ಥಳೀಯ ಹಾಗೂ ಐರೋಪ್ಯ ಭೂ ಒಡೆಯರುಗಳು ಬಟಾಯಿ ಭೂಮಿಯನ್ನು ಪಡೆದು ವಾಣಿಜ್ಯ ಕೃಷಿಯನ್ನು ಬೆಳೆಯುವಲ್ಲಿ ಸಫಲರಾದರು, ಮೈಸೂರು ರಾಜ್ಯಕ್ಕೆ ನಿಗದಿತ ಪ್ರಮಾಣದ ಕಂದಾಯವನ್ನು ನೀಡಬೇಕಿತ್ತು. ೧೮೨೮ರಲ್ಲಿ ಪ್ಯಾರಿ ಮತ್ತು ಕಂಪೆನಿಯವರು ಪ್ರತಿ ವರ್ಷ ಸರ್ಕಾರಕ್ಕೆ ೪೨೭೦ ರೂ. ಕಂದಾಯ ಪಾವತಿ ಮಾಡುವ ಒಪ್ಪಂದವನ್ನು ಮಾಡಿಕೊಂಡು ಕಂದಾಯ ವಸೂಲಿ ಜವಾಬ್ದಾರಿಯನ್ನು ವಹಿಸಿಕೊಂಡಿತು.[೨]

ಮೈಸೂರು ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ಮತ್ತು ಕೊಡಗು ಜಿಲ್ಲೆಗಳು ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಯೋಗ್ಯವಾದ ನೈಸರ್ಗಿಕ ಸಂಪತ್ತನ್ನು ಹೊಂದಿರುವುದರಿಂದ ಯುರೋಪಿಯನ್ನರು ಈ ಭಾಗಗಳಲ್ಲಿಯೇ ಹೆಚ್ಚು ಕೇಂದ್ರಿತರಾಗಿ ತಮ್ಮ ಹಿತಾಸಕ್ತಿಗಳನ್ನು ತೋರಿ ತೋಟಗಾರಿಕೆಯನ್ನು ಆರಂಭಿಸಿದರು.[೩] ಮೈಸೂರು ರಾಜ್ಯವು ಕಮಿಷನರುಗಳ ಆಡಳಿತಕ್ಕೆ ಒಳಪಟ್ಟ ಸಂದರ್ಭದಲ್ಲಿ ಇವರುಗಳು ಅನುಸರಿಸಿದ ಉದಾರನೀತಿ, ಭೂಮಿಯ ಹಂಚಿಕೆ, ಕಂದಾಯಪಾವತಿ, ಭೂಮಿಯನ್ನು ಹೊಂದುವಂತಹ ನೀತಿಗಳನ್ನು ಜಾರಿಗೆ ತಂದು ರಾಜ್ಯದಲ್ಲಿ ರಸ್ತೆ ಸಾರಿಗೆ ಗಣಿಗಾರಿಕೆ ಮತ್ತು ತೋಟಗಾರಿಕೆಗಳನ್ನು ಅಭಿವೃದ್ಧಿ ಪಡಿಸಿದರು. ೧೮೫೦ರ ನಂತರ ತೋಟಗಾರಿಕಾ ಬೆಳೆಗಳ ಬೇಡಿಕೆ ಅಂತರಾಷ್ಟ್ರೀಯ ಮಟ್ಟದಲ್ಲೂ ಹೆಚ್ಚಿತು. ಹೀಗಾಗಿ ವಾಣಿಜ್ಯ ಮಾಧ್ಯಮವಾಗಿ ತೋಟಗಾರಿಕೆಯು ಬೆಳವಣಿಗೆಯಾಗಿ ಹೆಚ್ಚು ಹೆಚ್ಚು ಬಂಡವಾಳವನ್ನು ಹೂಡಿ ಹೆಚ್ಚು ಲಾಭ ಗಳಿಸುವಂತಹ ಮಾಧ್ಯಮವಾಗಿ ಬೆಳೆಯಿತು.[೪]

ಮೈಸೂರಿಗೆ ಕಾಫಿ ತೋಟವನ್ನು ಮಾಡಲು ಇಂಗ್ಲೆಂಡಿನಿಂದ ಬಂದ ಅನುಭವಿ ಪ್ಲಾಂಟರುಗಳಲ್ಲಿ ರಾಬರ್ಟ್ ಇಲಿಯಟನು ಒಬ್ಬ. ಈತನು ಸಕಲೇಶಪುರದ ಸಮೀಪ ಬರ್ಚಿನಹಳ್ಳ ತೋಟವನ್ನು ಮಾಡಿದ.[೫] ರಾಬರ್ಟ್ ಇಲಿಯಟನು ತನ್ನ ಇಂಗ್ಲೀಷ್ ಕೌಶಲ್ಯ ಮತ್ತು ಬಂಡವಾಳದ ಹಿಡಿತದಿಂದ ಹಲವಾರು ಉದ್ದೇಶಗಳನ್ನು ಇಟ್ಟುಕೊಂಡು ತನ್ನ ಹದಿನೆಂಟನೇ ವಯಸ್ಸಿನಲ್ಲಿ ಮಂಗಳೂರು ಮಾರ್ಗವಾಗಿ ಮೈಸೂರಿಗೆ ಬರುವಾಗ ಕಂಡ ಮಂಗಳೂರಿನ ಸೊಬಗನ್ನು ವರ್ಣಿಸುತ್ತಾ ಈ ಭಾಗವು ತುಂಬಾ ಆಹ್ಲಾದಕರವಾಗಿತ್ತು ಎನ್ನುತ್ತಾನೆ. ಮಂಗಳೂರಿನಿಂದ ಹಾಸನ ಜಿಲ್ಲೆಯ ಮಂಜರಾಬಾದ್‌ಗೆ ಹೊರಟು ಅಲ್ಲಿ ದಟ್ಟವಾದ ಅರಣ್ಯ

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ-೫೭೪ ೧೯೯

ಪ್ರದೇಶಗಳನ್ನು ಹೊಂದಿದ್ದ ಮಂಜರಾಬಾದ್ ಭಾಗದಲ್ಲಿ ನೆಲೆನಿಂತನು. ಈತನು ಬರುವುದಕ್ಕಿಂತಲೂ ಮೊದಲು ಐರೋಪ್ಯ ಪ್ಲಾಂಟರುಗಳು ತೋಟವನ್ನು ಮಾಡಿದ್ದರು. ಅವರಲ್ಲಿ ಪ್ರಮುಖರಾದವನೆಂದರೆ ಫ್ರೆಡರಿಕ್ ಗ್ರೀನ್ ಈತನು ೧೮೪೩ರಲ್ಲಿಯೇ ಈ ಭಾಗದಲ್ಲಿ ತೋಟವನ್ನು ಮಾಡಿದ್ದನು. ಇಲಿಯಟನ ಪ್ರಕಾರ ಬ್ರಿಟಿಷ್ ಕೌಶಲ್ಯದಿಂದ ಆ ಸರ್ಕಾರ ಮೈಸೂರಿನಲ್ಲಿ ಭೂ ಸ್ವಾಧೀನಮಾಡಿ ಬಂಡವಾಳ ಮತ್ತು ಶಕ್ತಿಯನ್ನು ಈ ಭಾಗದಲ್ಲಿ ಪ್ರದರ್ಶಿಸಿ ವಾಣಿಜ್ಯ ಬೆಳೆಗಳನ್ನು ಬೆಳೆಯುವ ತೋಟಗಳನ್ನು ಮಾಡಿತು ಎನ್ನುತ್ತಾನೆ. ಇವನು ೧೮೫೮ರಲ್ಲಿ ತೋಟವನ್ನು ಆರಂಭಿಸಿದಾಗ ಕಾರ್ಮಿಕನ ವೇತನವು ೨ ರೂ. ೪ ಆಣೆ ಆಗಿತ್ತು, ಆದರೆ ಈಗ ೬. ೭ ರೂ. ಗೆ ಹೆಚ್ಚಿಸಲಾಯಿತು. ಇದು ಪ್ರಗತಿಯನ್ನು ಸೂಚಿಸುತ್ತದೆ ಎನ್ನುತ್ತಾನೆ ಅಲ್ಲದೆ ತೋಟಗಾರಿಕಾ ವೃತ್ತಿಯಿಂದ ಕಾಫಿ ಸಂಸ್ಕೃತಿ ಅಥವಾ ಬದಲಾವಣೆ ಮಾಡುವುದರಲ್ಲಿ ಬದಲಾವಣೆಗಳಾದವು ಎನ್ನುತ್ತಾನೆ.[೬]

ಇಲಿಯಟನ ಪ್ರಕಾರ ಜೀವನದ ವೃತ್ತಿಗಳಲ್ಲಿ ತೋಟಗಾರಿಕೆಯೂ ಒಂದು ಎನ್ನುತ್ತಾನೆ; ಮೈಸೂರು ಭಾಗದಲ್ಲಿನ ಬೆಳೆಗಾರರ ಮುಖ್ಯ ಆಕಾಂಕ್ಷೆಯು ತಮ್ಮ ಆಹಾರ ಹಾಗೂ ಜೀವನ ನಿರ್ವಹಣೆಗಾಗಿ ಇದನ್ನು ವೃತ್ತಿಯನ್ನಾಗಿ ಮಾಡಲಾರಂಭಿಸಿದರು ಎನ್ನುತ್ತಾ, ಪ್ರಪಂಚದಲ್ಲಿ ವಿಶ್ವಾಸದಿಂದ ಮತ್ತು ಅತ್ಯಂತ ಪ್ರಿಯವಾದ ವೃತ್ತಿಗಳಲ್ಲಿ ತೋಟಗಾರಿಕೆಯೂ ಒಂದಾಗಿದೆ ಎನ್ನುತ್ತಾನೆ. ಮೈಸೂರು ಹೆಚ್ಚಾಗಿ ದಟ್ಟ ಅರಣ್ಯ ಪ್ರದೇಶಗಳನ್ನು ಒಳಗೊಂಡಿರುವುದರಿಂದ ತೋಟಕ್ಕೆ ಮೂಲಭೂತವಾಗಿ ಬೇಕಾದ ನೆರಳು ಮತ್ತು ಗೊಬ್ಬರ ಯಥೇಚ್ಛವಾಗಿ ಸಿಗುತ್ತಿತ್ತು.[೭] ಇಲಿಯಟನ ಪ್ರಕಾರ ತೋಟಗಾರಿಕಾ ಉದ್ಯೋಗವನ್ನು ಒಪ್ಪಿಕೊಳ್ಳುತ್ತಾ ಪ್ಲಾಂಟರನಾದವನ ಜೀವನವು ಎಲ್ಲಾ ವಿಚಾರಗಳಲ್ಲಿ ಭಾಗಿಯಾಗುವಾಗ ತುಂಬಾ ಜಾಗರೂಕತೆಯಿಂದ ಮತ್ತು ಕಾಳಜಿಯಿಂದ ವ್ಯವಹಾರವನ್ನು ಮಾಡಬೇಕು. ಇದೊಂದು ನಿಜವಾಗಿಯೂ ಕಷ್ಟದ ಕೆಲಸ ಅಲ್ಲದೆ ವಾತಾವರಣದ ಪೂರಕ ಸಹಾಯವೂ ಬೇಕಾಗುತ್ತದೆ. ಕಾಫಿಯ ಕೃಷಿಯನ್ನು ಮಾಡುವ ಜಿಲ್ಲೆಯಲ್ಲಿ ಮುಖ್ಯವಾಗಿ ಬೀಸುವ ಗಾಳಿ, ಹವಾಮಾನ, ವಾತಾವರಣ ಅತಿ ಮುಖ್ಯ. ಇವು ಹಿತವಾಗಿದ್ದಲ್ಲಿ ಬೆಳೆಯು ಅತ್ಯುತ್ತಮವಾಗಿ ಸಿಗುತ್ತದೆ. ಆದರೆ ಬೆಚ್ಚಗಿನ ವಾತಾವರಣದಲ್ಲಿ ತೋಟಗಾರಿಕಾ ಬೆಳೆಗಳು ಒಗ್ಗದೆ ಆರೋಗ್ಯಕರವಾದ ಫಸಲನ್ನು ಪಡೆಯಲು ಸಾಧ್ಯವಿಲ್ಲ. ಕಾಫಿ ತೋಟಕ್ಕೆ ಹೆಚ್ಚಾಗಿ ಎತ್ತರದ ಪ್ರದೇಶಗಳು ಬೇಕಾಗಿದ್ದು ಸಮುದ್ರ ಮಟ್ಟದಿಂದ ೪೦೦೦ ಅಡಿ ಅಥವಾ ೨೮೦೦ ಅಡಿಗಳಿಗಿಂತ ಎತ್ತರವಿರಬೇಕು. ಕಡಲ ಗಾಳಿ ಬೀಸುವಲ್ಲಿ ಈ ಕೃಷಿ ಮಾಡಲು ಸಾಧ್ಯವಿಲ್ಲ ಆದುದರಿಂದ ಪಶ್ಚಿಮ ಘಟ್ಟಪ್ರದೇಶಗಳು ತಣ್ಣನೆಯ ಹವಾಮಾನವನ್ನು ಹೊಂದಿರುವುದರಿಂದ ಕಾಫಿ ಕೃಷಿಗೆ ಯೋಗ್ಯವಾಗಿದೆ ಎನ್ನುತ್ತಾನೆ.[೮]

ದಟ್ಟ ಅರಣ್ಯ ಪ್ರದೇಶಗಳಿಂದ ಆವೃತವಾದ ಮೈಸೂರು ರಾಜ್ಯದ ಪಶ್ಚಿಮಕ್ಕಿರುವ ಪ್ರದೇಶವೇ ಮಂಜರಾಬಾದ್. ಇದು ಸಮುದ್ರ ಮಟ್ಟದಿಂದ ೩೫೦೦ ಅಡಿ ಎತ್ತರವಿದ್ದು; ಈ ಭಾಗಕ್ಕೆ ೧೮೫೫ರಲ್ಲಿ ಬಂದ ಇಲಿಯಟನು ಇಲ್ಲಿನ ಭೂಮಿಯು ಕಾಫಿ ಕೃಷಿಗೆ ಯೋಗ್ಯವಾದದ್ದೆಂದು ತಿಳಿದು ಇಲ್ಲಿನ ಜನರೊಂದಿಗೆ ಬೆರೆತು ಈ ಪ್ರದೇಶವನ್ನು ಎರಡು ವಿಧಗಳಾಗಿ ವಿಂಗಡಣೆ ಮಾಡುತ್ತಾನೆ. ೧. ಹಕ್ಕಿಗಳಿಂದ ಕೂಡಿದ ಅರಣ್ಯ ಪ್ರದೇಶ ೨. ಘಟ್ಟಪ್ರದೇಶಗಳಿಂದ ಕೂಡಿದ ಅರಣ್ಯ ಪ್ರದೇಶ. ಇವು ಈ ಭಾಗದಲ್ಲಿ ಬೆಟ್ಟಗಳಿಗೆ ಬಟ್ಟೆಯನ್ನು ಹೊದಿಸಿದಂತೆ ಕಾಣುತ್ತಿತ್ತು ಎನ್ನುತ್ತಾ ಇಲ್ಲಿ ಹಕ್ಕಿಗಳಿಂದ ಕೂಡಿದ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಾಗಿ ಭತ್ತ ಮತ್ತು ರಾಗಿಯನ್ನು ರೈತರು ಬೆಳೆಯುತ್ತಿದ್ದರು.[೯] ಆದರೆ ಘಟ್ಟಪ್ರದೇಶಗಳು ಬೆಟ್ಟಗಳಿಂದ, ಇಳಿಜಾರುಗಳಿಂದ ಆವೃತವಾಗಿದ್ದು ಇದು ಕಾಫಿ ಕೃಷಿಗೆ ಯೋಗ್ಯವಾಗಿತ್ತು ಎನ್ನುತ್ತಾನೆ. ಇವನು ಈ ಭಾಗದಲ್ಲಿ ಬಂದು ನೆಲೆನಿಂತ ಮೇಲೆ ಹಲವು ಸಮುದಾಯದ ಜನರನ್ನು ಕಾಣುತ್ತಾನೆ. ಅದರಲ್ಲಿ ಗೌಡರು, ಲಿಂಗಾಯತರು, ಕೆನರಾ ಮೂಲದ ಜನರು ಮತ್ತು ಮುಸ್ಲಿಂರು. ಅಕ್ಟೋಬರ್ ೧, ೧೮೫೬ರಂದು ದಟ್ಟ ಅರಣ್ಯದ ನಡುವೆ ಜೋಪಡಿಯೊಂದನ್ನು ಮಾಡಿ ನಂತರ ಜೂನ್ ತಿಂಗಳಲ್ಲಿ ನರ್ಸರಿಯನ್ನು ಮಾಡಿ ಕಾಫಿ ಕೃಷಿಯಲ್ಲಿ ತೊಡಗಿದ. ಕ್ರಮೇಣ ಎಸ್ಟೇಟಿನಲ್ಲಿ ಬೆಳೆದ ಕಾಫಿಯನ್ನು ಕೊಯ್ಯಲು ಮತ್ತು ಒಣಗಿಸಿ ಮಾರಾಟ ಮಾಡಲು ಸ್ಥಳೀಯ ರೈತರನ್ನು ಬಳಸಿ ಆ ನಂತರ ಎತ್ತಿನ ಗಾಡಿಗಳನ್ನು ಬಳಸಿ ಮಾರಾಟಕ್ಕೆ ಕೊಂಡೊಯ್ಯಲಾಗುತ್ತಿತ್ತು. ಸ್ಥಳೀಯರ ಕೃಷಿಕರು ಕೆಲವರು ಭತ್ತದ ಕೃಷಿಯಲ್ಲಿ ತೊಡಗಿದರೆ, ಕೆಲವರು ಕಾಫಿಯನ್ನು ಬೆಳೆಯುತ್ತಿದ್ದರು. ಅನಂತರ ಉತ್ತಮ ಬೆಲೆಯನ್ನು ನೋಡಿ ಮಾರಾಟ ಮಾಡುತ್ತಿದ್ದರು. ಅದರಿಂದ ಬರುತ್ತಿದ್ದ ಹಣವು ಮುಂದಿನ ವರ್ಷದ ಬೆಳೆಯುವರೆಗೆ ತುಂಬಾ ಕಷ್ಟದಿಂದ ಭರಿಸಬೇಕಿತ್ತು ಎನ್ನುತ್ತಾನೆ.[೧೦]

೧೮೬೬ರಲ್ಲಿ ಇಲಿಯಟನು ತನ್ನ ಗೆಳೆಯನಿಂದ ಉತ್ತಮ ಭೌಗೋಳಿಕ ಲಕ್ಷಣ ಹಾಗೂ ಹವಾಮಾನವನ್ನು ಹೊಂದಿದ ಸುಮಾರು ೨೫೦ ಎಕರೆಗಳಷ್ಟು ಕಾಫಿ ಆಸ್ತಿಯನ್ನು ಪಡೆದು ಅಲ್ಲಿ ೧೫೦ ಎಕರೆಗಳಷ್ಟು ಮೈಸೂರು ಮೂಲದ 'ಚಿಕ್' ಕಾಫಿಯನ್ನು ಬೆಳೆದನು ಇದು ಅವನಿಗೆ ಉತ್ತಮ ಫಸಲನ್ನು ನೀಡಿತು. ೩೦೬ ಮಂಜರಾಬಾದ್‌ನಲ್ಲಿ ಸುಮಾರು ೪೦೦ ಎಕರೆಗಳಷ್ಟು ಪ್ರದೇಶದಲ್ಲಿ ಕಾಫಿ ಕೃಷಿಯನ್ನು ಮಾಡಲಾಗುತ್ತಿತ್ತು ಇಲ್ಲಿನ ತೋಟಗಳ ನಿರ್ವಹಣೆ ಉತ್ತಮವಾಗಿತ್ತು ಆದರಲ್ಲೂ

ಮೈಸೂರಿನ ಉತ್ತರ ಭಾಗದಲ್ಲಿನ ಎಸ್ಟೇಟುಗಳು ಸಮೃದ್ಧ ಹಾಗಿದ್ದವಲ್ಲದೆ ಉತ್ತಮ ಗುಣಮಟ್ಟವನ್ನು ಹೊಂದಿದ್ದವು.[೧೧] ಇಲಿಯಟನು ಭಾರತಕ್ಕೆ ಮುಸಲ್ಮಾನ ವ್ಯಾಪಾರಿಗಳಿಂದ ಮೈಸೂರಿಗೆ ಪರಿಚಯಿಸಲ್ಪಟ್ಟ ಕಾಫಿಯ ಬಗ್ಗೆ ಪ್ರಸ್ತಾಪಿಸುತ್ತಾ ಮೈಸೂರು ಪ್ರಾಂತ್ಯದಲ್ಲಿ ೧೮೫೫ರ ಅವಧಿಯಲ್ಲಿ 'ಚಿಕ್' ವಿಧದ ಕಾಫಿಯನ್ನು ಬೆಳೆಯಲಾಗುತ್ತಿತ್ತು. ೧೮೭೦ರಲ್ಲಿ ಚಿಕ್ ಕಾಫಿಗೆ ಬೋರರ್ ಕೀಟ ಬಾಧೆ ಉಂಟಾಗಿದ್ದರಿಂದ ಇದರ ಹತೋಟಿ ತುಂಬಾ ಕಷ್ಟವಾಯಿತಲ್ಲದೆ ಇಳುವರಿಯಲ್ಲೂ ಕುಸಿತವುಂಟಾಗುತ್ತದೆ. ಮೈಸೂರಿನ ಇನ್ನೊಬ್ಬ ಪ್ಲಾಂಟರನಾದ ಸ್ಟ್ಯಾನ್ಲಿ ಜಫ್‌ನು ೧೮೭೦ರಲ್ಲಿ ಮೈಸೂರಿನ ನೈರುತ್ಯಕ್ಕಿರುವ ಕೊಡಗಿಗೆ ಭೇಟಿ ನೀಡಿ ಗಣನೀಯ ಪ್ರಮಾಣದಲ್ಲಿ ಪ್ರಯೋಗ ಗಳನ್ನು ಮಾಡಿ ಜಾಗರೂಕತೆಯಿಂದ ಕೊಡಗಿನಲ್ಲಿ ಕೊಡಗಿನ ವಾತಾವರಣಕ್ಕನುಗುಣವಾಗಿ ಬೆಳೆಯಬಹುದಾದ ಕಾಫಿಯ ತಳಿಗಳನ್ನು ಆಯ್ಕೆ ಮಾಡಿ ಅಂತಹ ತಳಿಗಳನ್ನು ಬೆಳೆಯಲು ಸಹಕಾರಿಯಾದನು. ಅಲ್ಲಿ ಬಿತ್ತಿದ ಕಾಫಿ ಬೀಜಗಳು ಅಸಾಮಾನ್ಯ ಚಟುವಟಿಕೆಯಿಂದ ಬೆಳೆದು ನಂತರ ಹೊಸ ವಿಧದ ತಳಿಯ ಉತ್ಪಾದನೆಗೆ ಸಹಕಾರಿಯಾಯಿತು ಆದರೆ ಚಿಕ್ ಕಾಫಿಯು ಕೊಡಗಿನ ಭೂಮಿಯಲ್ಲಿ ಕ್ರಮೇಣ ವಿಫಲತೆಯನ್ನು ಕಂಡಿತು.[೧೨]

ಮೈಸೂರಿನಲ್ಲಿ ಕಾಫಿ ಭೂಮಿಗೆ ಸಂಬಂಧಿಸಿದಂತೆ ಬೆಳೆಯಲು ಸೂಕ್ತವಾದ ಎಲ್ಲಾ ಭೂಮಿಯನ್ನು ಬಳಸ ತೊಡಗಿದರು, ಅಲ್ಲದೆ ಖಾಸಗಿ ವ್ಯಕ್ತಿಗಳ ಒಡೆತನದಲ್ಲೂ ಭೂಮಿ ಇದ್ದು ೧೮೫೫ರಲ್ಲಿ ಮೈಸೂರು ಕಾಫಿ ಲ್ಯಾಂಡ್ ನಿಯಮವನ್ನು ಔಪಚಾರಿಕವಾಗಿ ಸಾರ್ವಜನಿಕರ ಗಮನಕ್ಕೆ ತರಲಾಯಿತು. ಆ ಪ್ರಕಾರ ಒಂದೂವರೆ ಎಕರೆಯ ಬೆಲೆಯ ಭೂಮಿಗೆ ರೂ. ೧ ದರ ನಿಗದಿ ಮಾಡಲಾಯಿತು, ಪ್ರತಿ ೩೦ ವರ್ಷಕ್ಕೆ ಒಮ್ಮೆ ಪರಿಷ್ಕರಣೆ ಮಾಡಬೇಕಿತ್ತು. ೩೧ಳಿ ಮೈಸೂರು ಪ್ರಾಂತ್ಯದಲ್ಲಿ ಕಾಫಿ ಭೂಮಿಯನ್ನು ಯುರೋಪಿ ಯನ್ನರು ಮಾತ್ರವಲ್ಲದೆ ಸ್ಥಳೀಯರೂ ಕೂಡ ಬೆಳಸ ತೊಡಗಿದರು, ಇಲಿಯಟನು ನೀಡುವ ಮಾಹಿತಿಯ ಪ್ರಕಾರ ಮೈಸೂರಿನಲ್ಲಿ ಯಾವುದೇ ಬೆಳೆಯನ್ನು ಬೆಳೆಯದೇ ಇದ್ದ ಭೂಮಿಯೂ ಕೆಲವು ಕಡೆ ಇತ್ತು. ಮೈಸೂರಿನ ದಕ್ಷಿಣದಲ್ಲಿ ತೋಟವನ್ನು ಮಾಡಿ ದೀರ್ಘಕಾಲದ ಅನುಭವವಿದ್ದ ಇವನು ಹೇಳುವ ಪ್ರಕಾರ ಮೈಸೂರು ಪ್ರಾಂತ್ಯದ ಬಹುತೇಕ ಭಾಗಗಳು ತೋಟಗಾರಿಕೆಗೆ ಯೋಗ್ಯವಾಗಿದೆ. ಆದರೆ ದಕ್ಷಿಣ ಮೈಸೂರಿ ನಲ್ಲಿ ಬೆಳೆಯುತ್ತಿದ್ದಷ್ಟು ಬೆಳೆಯನ್ನು ಉತ್ತರ ಮೈಸೂರಿನಲ್ಲಿ ಬೆಳೆಯಲಾಗುತ್ತಿರಲಿಲ್ಲ. ಇದಕ್ಕಾಗಿ ತಾನು ಖಾಸಗಿಯಾಗಿ ಸರ್ಕಾರಕ್ಕೆ ಬಂದು ಪತ್ರವನ್ನು ಬರೆದು ಖಾಸಗಿ ಹಿಡುವಳಿ ದಾರರ ವಶದಲ್ಲಿದ್ದ ಭೂಮಿಯಲ್ಲಿ ಕೃಷಿಯನ್ನು ಮಾಡಲು ಸರ್ಕಾರವನ್ನು ಪ್ರೇರೇಪಿಸುತ್ತಾನೆ.[೧೩]

ತೋಟಗಾರಿಕಾ ಉದ್ಯಮದಿಂದಾಗಿ ಸರ್ಕಾರದಿಂದ ರಸ್ತೆಗಳು, ಅಂಚೆ, ರೈಲು ಮಾರ್ಗಗಳು, ದೂರವಾಣಿಗಳ ನಿರ್ಮಾಣವಾಗುವುದರ ಜೊತೆಗೆ ಸೌಲಭ್ಯಗಳನ್ನು ಬೆಳೆಗಾರರ ಮತ್ತು ರೈತರ ಹಿತದೃಷ್ಟಿಯಿಂದ ಸುಧಾರಿಸಲಾಯಿತಲ್ಲದೆ, ಕಾರ್ಮಿಕರ ಹಿತದೃಷ್ಟಿಯಿಂದ ಕೆಲವು ಆರೋಗ್ಯಕರ ಬೆಳವಣಿಗೆಗಳಾದವು. ವಸಾಹತುಷಾಹಿ ಮೈಸೂರಿನಲ್ಲಿ ಕೆಲವು ಗುತ್ತಿಗೆದಾರರು ಮತ್ತು ಮಾಲೀಕರು ಎಸಗುತ್ತಿದ್ದ ವಂಚನೆ, ಪ್ರಲೋಭನೆ, ಕಾರ್ಮಿಕರ ಸಂಭಾವನೆಯನ್ನು ನೀಡದೆ ವಂಚಿಸುವ ಗುತ್ತಿಗೆದಾರರ ಮತ್ತು ಬೆಳೆಗಾರರ ದಾಳಿ ಯಿಂದ ಕಾರ್ಮಿಕ ವರ್ಗದ ಮೇಲಾಗುತ್ತಿದ್ದ ದೌರ್ಜನ್ಯಗಳನ್ನು ಮತ್ತು ಇಂತಹ ಕೃತ್ಯಗಳನ್ನು ತಡೆಯಲು, ಕಾರ್ಮಿಕ ವರ್ಗದ ರಕ್ಷಣೆಗಾಗಿ ಸರ್ಕಾರವು ೧೮೫೯ರ ಆಕ್ಟ್ XIIIನ್ನು ಜಾರಿಗೊಳಿಸಿ ದೌರ್ಜನ್ಯಗಳನ್ನು ತಡೆಗಟ್ಟುವ ಕ್ರಮವನ್ನು ಕೈಗೊಂಡಿತು. ೧೮೯೨ರಲ್ಲಿ ಮೈಸೂರಿಗೆ ಭೇಟಿ ನೀಡಿದ ವೈಸ್‌ರಾಯನು ಬೆಳೆಗಾರರ ಮತ್ತು ರೈತರ ಹಿತದೃಷ್ಟಿಯಿಂದ ಇತ್ತೀಚಿನ ಭರವಸೆ ಗಳನ್ನು ತಿದ್ದುಪಡಿ ಮಾಡಿ ದಂಡರೂಪದ ಶಾಸನಗಳನ್ನು ಜಾರಿಗೆ ತಂದು ಕಾರ್ಮಿಕ ಸಂಸ್ಥೆಗಳ ಹಿತವನ್ನು ಕಾಪಾಡುವ ನಿರ್ಣಯಗಳನ್ನು ಕೈಗೊಂಡನು.[೧೪] ೧೮೯೧ರಲ್ಲಿ ಇಲಿಯಟನು ಮೈಸೂರು ಪ್ರತಿನಿಧಿ ಸಭೆಯ ಸದಸ್ಯನಾಗಿ ತೋಟಗಾರಿಕೆಗೆ ಸಂಬಂಧಿಸಿದ ಮತ್ತು ಕಾರ್ಮಿಕರ ಕೆಲವು ಬೇಡಿಕೆಗಳನ್ನು ಈ ಸಭೆಯಲ್ಲಿ ಪ್ರಸ್ತಾಪಿಸುತ್ತಾನೆ, ಈ ಬಿಲ್ಲಿನಲ್ಲಿ ಖಾತೆಗಳನ್ನು ನೋಂದಣಿ ಮಾಡಿಕೊಳ್ಳಬೇಕೆಂದು ಹೇಳುತ್ತಾನೆ. ಇದರ ಉದ್ದೇಶವು ಕಾರ್ಮಿಕನನ್ನು ಪ್ಲಾಂಟರನು ತನ್ನ ಹಿಡಿತ ದಲ್ಲಿಟ್ಟುಕೊಳ್ಳುವುದೇ ಆಗಿತ್ತು ಅಲ್ಲದೆ, ಕಾರ್ಮಿಕನನ್ನು ಒಂದು ರೀತಿಯಲ್ಲಿ ಬಂಧನದಲ್ಲಿರಿಸುವ ಬೆಳವಣಿಗೆ ಎನ್ನಬಹುದು.[೧೫] ಐರೋಪ್ಯರು ತಮ್ಮ ಸಾಮ್ರಾಜ್ಯಷಾಹಿ ಹಿತಾಸಕ್ತಿಯನ್ನು ಮುಂದುವರೆಸುತ್ತಾ ಸಮುದ್ರ ಮಟ್ಟದಿಂದ ೨೨೦೦ ರಿಂದ ೩೮೯೯ ಅಡಿ ಎತ್ತರದ ಪರ್ವತಮಯವಾದ ಮೈಸೂರಿನ ನೈರುತ್ಯಕ್ಕಿರುವ ಪ್ರದೇಶವಾದ ಕೊಡಗಿನಲ್ಲೂ ವಿಸ್ತರಿಸುತ್ತಾರೆ.

೧೮೩೪ರಲ್ಲಿ ಕೊಡಗಿನ ರಾಜ ಚಿಕ್ಕವೀರ ರಾಜೇಂದ್ರನ ಆಡಳಿತ ವೈಫಲ್ಯದಿಂದಾಗಿ ಬ್ರಿಟಿಷರ ವಶವಾದ ಮೇಲೆ ಬ್ರಿಟಿಷರು ತಮ್ಮ ವಸಾಹತುಷಾಹಿ ನೀತಿಯನ್ನು ಈ ಭಾಗದಲ್ಲೂ ವಿಸ್ತರಿಸುತ್ತಾ ಕೊಡಗಿನಲ್ಲಿದ್ದ ಅಪಾರವಾದ ನೈಸರ್ಗಿಕ ಸಂಪತ್ತು ಅವರನ್ನು ಆಕರ್ಷಿಸಿ ಇಲ್ಲೂ ಸಹ ಕೃಷಿಯ ವಾಣಿಜ್ಯೀಕರಣ ವಾಗಿ ಕ್ರಮೇಣ ತೋಟಗಾರಿಕೆಯ ಉದ್ಯಮವು ಪ್ರಾರಂಭ ವಾಯಿತು. ೧೮೫೦ರಲ್ಲಿ ಇಲಿಯಟನು ಕೊಡಗಿಗೆ ಮಂಗಳೂರು ಕಣ್ಣನೂರು ಮಾರ್ಗವಾಗಿ ಬಂದು ತಲುಪಿದಾಗ, ಆಗಲೇ ಐರೋಪ್ಯ ಪ್ಲಾಂಟರುಗಳು, ಜಮೀನುದಾರರು ತೋಟಗಳ ನಿರ್ಮಾಣಕ್ಕಾಗಿ ಅರಣ್ಯ ಪ್ರದೇಶಗಳನ್ನು ತೆರವುಗೊಳಿಸು

ವುದರಲ್ಲಿ ತಲ್ಲೀನರಾಗಿದ್ದರು. ಇಲಿಯಟನು ಬರುವ ಮೂರು ವರ್ಷ ಹಿಂದೆಯೇ ಇಲ್ಲಿ ಫೌಲರನು ೧೮೫೫ರಲ್ಲಿ ಮಡಿಕೇರಿ ಎಸ್ಟೇಟನ್ನು ಮಾಡಿದ್ದನು, ೧೮೫೫ರಲ್ಲಿ ಎಚ್. ಮನ್, ಮಿ. ಡೊನಾಲ್ಡ್ ಮತ್ತು ಸ್ಟುವರ್ಟ್‌ರವರು ಸಂಪಾಜೆ ನಡುತೋಪಿನ ಬಳಿ, ಮ್ಯಾಕ್ಸ್‌ವೆಲ್ಲನು ಪೆರಿಯಂಬಾಡಿ ಬಳಿ ೧೮೫೬ರಲ್ಲಿ, ಕೌಂಡಿನ್ಯನು ೧೮೫೭ರಲ್ಲಿ ಬಿದಿರು ಜಿಲ್ಲೆಯಲ್ಲಿ ತೋಟಗಳನ್ನು ತೆರೆದಿದ್ದರು. ಕೊಡಗಿನಲ್ಲಿ ಮೊದಲು ಐರೋಪ್ಯರ ತೋಟಗಳು ಪ್ರಾರಂಭವಾದದ್ದು ೧೮೫೪ರಲ್ಲಿ ಆದರೆ ಕೆಲವೊಂದು ದಾಖಲೆಗಳ ಪ್ರಕಾರ ಕಾಫಿ ಕೃಷಿಯನ್ನು ಸ್ಥಳೀಯರು ನಾಲ್ಕು ನಾಡು ಜಿಲ್ಲೆಯಲ್ಲಿ ಬೆಳೆಯುತ್ತಿದ್ದರು ಎಂದು ದಾಖಲೆಗಳಿಂದ ತಿಳಿದುಬರುತ್ತದೆ.[೧೬] ರೆ. ಜಿ. ರಿಕ್ಟರನು ಕೊಡಗಿನ ರೆಸಿಡೆಂಟ ನಾಗಿದ್ದಾಗ ತೋಟಗಾರಿಕಾ ಬೆಳೆಗಳಾದ ಕಾಫಿ, ಚಹಾ, ರಬ್ಬರ್, ಕೋಕೋ ಮುಂತಾದ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹ ನೀಡುತ್ತಿದ್ದನಲ್ಲದೆ ಅವುಗಳ ವೃದ್ಧಿಗೂ ಕಾರಣ ನಾದನು.[೧೭] ಕ್ರಮೇಣ ಕೊಡಗಿನಲ್ಲಿ ಸುಮಾರು ೧೩೦ ಐರೋಪ್ಯರ ಎಸ್ಟೇಟುಗಳು ನಿರ್ಮಾಣಗೊಂಡು ಅದು ೩೨,೩೨೩ ಎಕರೆಗಳವರೆಗೆ ವ್ಯಾಪಿಸಿತ್ತು. ಸ್ಥಳೀಯರು ೭೦,೬೪೯ ಎಕರೆಗಳಲ್ಲಿ ಎಸ್ಟೇಟುಗಳನ್ನು ಹೊಂದಿದ್ದರು. ಇದರಿಂದಾಗಿ ವಾರ್ಷಿಕವಾಗಿ ೪೦೦೦ದಿಂದ ೫೦೦೦ ಟನ್ನುಗಳಷ್ಟು ಕಾಫಿಯನ್ನು ಉತ್ಪಾದಿಸಲಾಗುತ್ತಿತ್ತು.[೧೮]

ಕೊಡಗು ಮೈಸೂರಿನ ಸಮೀಪವಿರುವುದರಿಂದ ಮೈಸೂರು ಮೂಲದ ಕಾರ್ಮಿಕರು ಕೊಡಗಿನ ತೋಟಗಳಲ್ಲಿ ಕೆಲಸವನ್ನು ಮಾಡಲಾರಂಭಿಸಿದರು. ಅಲ್ಲದೆ ಕೂಲಿಗಳಿಗೆ ನಿಗದಿತ ವೇತನವನ್ನು ಮಾಲೀಕರು ನೀಡುತ್ತಿದ್ದರು, ಇದರಿಂದಾಗಿ ಕಾರ್ಮಿಕರ ಜೀವನ ಮಟ್ಟವೂ ಸುಧಾರಿಸತೊಡಗಿತು. ಮೈಸೂರು ಮೂಲದ ಕೂಲಿಗಳಲ್ಲಿ ಪುರುಷ, ಮಹಿಳೆ ಮತ್ತು ಮಕ್ಕಳೂ ಸಹ ತೋಟಗಳಲ್ಲಿ ನೆಲೆನಿಂತು ಕೆಲಸ ಮಾಡ ಲಾರಂಭಿಸಿದರು. ನಾಲ್ಕು ಆಣೆಗೆ ಒಂದು ದಿನ ಕೆಲಸವನ್ನು ಮಾಡಬೇಕಿತ್ತು. ಕ್ರಮೇಣ ಮೈಸೂರು ಮೂಲದ ಕಾರ್ಮಿಕರ ಪೂರೈಕೆಯಲ್ಲಿ ಅಸ್ಥಿರತೆ ಉಂಟಾದಾಗ ಜಮೀನುದಾರರು, ಪ್ಲಾಂಟರುಗಳು ಮದ್ರಾಸ್ ಪ್ರೆಸಿಡೆನ್ಸಿ ಮೂಲದ ಕೂಲಿಗಳನ್ನು ಕರೆತಂದು ಕೆಲಸವನ್ನು ಮಾಡಿಸ ಲಾರಂಭಿಸಿದರು. ಕೂಲಿಗಳನ್ನು ಕರೆತರುವಲ್ಲಿ ಮೇಸ್ತ್ರಿಗಳು ಮಹತ್ತರ ಪಾತ್ರವನ್ನು ಇಲ್ಲಿ ವಹಿಸುತ್ತಿದ್ದರು. ಅವರು ಕೂಲಿಗಳಿಗೆ ಬೇಕಾದ ಹಣವನ್ನು ಪ್ಲಾಂಟರುಗಳಿಂದ ಪಡೆದು ನಂತರ ಕೂಲಿಗಳಿಗೆ ಮುಂಗಡ ವಾಗಿ ಹಣವನ್ನು ಪಾವತಿ ಮಾಡುತ್ತಿದ್ದರಲ್ಲದೆ, ಆನಂತರ ಕೂಲಿಗಳನ್ನು ಕುಟುಂಬ ಸಮೇತ ಕರೆಯಿಸಿ ತೋಟಗಳಲ್ಲಿ ಕೆಲಸವನ್ನು ನೀಡುತ್ತಿದ್ದರು. ಕೊಡಗಿನ ಬಹುತೇಕ ಯುರೋಪಿಯನ್ನರ ಎಸ್ಟೇಟು ಮತ್ತು ಕೆಲವು ಸ್ಥಳೀಯರ ಎಸ್ಟೇಟುಗಳಲ್ಲಿ "ವೇಸ್ಟ್ ಲ್ಯಾಂಡ್ ನಿಯಮ"ಗಳನ್ನು ಜಾರಿಗೆ ತರಲಾಯಿತು. ಅದರ ಪ್ರಕಾರ ೨ ರೂ. ಪ್ರತಿ ಎಕರೆಗೆ ನಿಗದಿ ಮಾಡಲಾಯಿತು. ಆದರೆ ಮೈಸೂರಿನಲ್ಲಿ ಎಕರೆಯ ಬೆಲೆ ೧೦ ರೂ. ಇತ್ತು. ತೋಟಗಳಲ್ಲಿರುವ ನೈಸರ್ಗಿಕ ಸಂಪತ್ತು ಮತ್ತು ಫಲವತ್ತತೆಯ ಆಧಾರದ ಮೇಲೆ ಹೆಚ್ಚುವರಿ ಹಣವನ್ನು ಪಾವತಿ ಮಾಡ ಬೇಕಿತ್ತು. ಹೀಗೆ ಇಲಿಯಟನು ವಸಾಹತು ಶಾಹಿ ಆಡಳಿತಾ ಪದ್ಧತಿಯಲ್ಲಿ ಬೆಳೆದು ಬಂದ ತೋಟಗಾರಿಕಾ ಬೆಳವಣಿಗೆ ಮತ್ತು ಮೈಸೂರು ಜನರ ರಾಜ್ಯದ ಸಾಮಾಜಿಕ, ಆರ್ಥಿಕ ಬದುಕನ್ನು ತನ್ನ ಪ್ರಮುಖ ಎರಡು ಕೃತಿಗಳಾದ ಎಕ್ಸ್‌ಪೀರಿಯೆನ್ಸಸ್ ಆಫ್ ಎ ಪ್ಲಾಂಟರ್ ಇನ್ ದ ಜಂಗಲ್ಸ್ ಆಫ್ ಮೈಸೂರ್, ೧೮೭೧ ಮತ್ತು ಗೋಲ್ಡ್ ಸ್ಪೋರ್ಟ್ ಅಂಡ್ ಕಾಫಿ ಪ್ಲಾಂಟಿಂಗ್ ಇನ್ ಮೈಸೂರ್, ೧೮೯೪ ಎಂಬ ಕೃತಿಗಳಲ್ಲಿ ರಾಜ್ಯದ ಸಮಗ್ರ ಚಿತ್ರಣ ಮತ್ತು ತೋಟಗಾರಿಕೆಯ ಅನುಭವಗಳನ್ನು ಹಂಚಿಕೊಂಡು ಭಾರತದ ಭವ್ಯ ಸೊಬಗನ್ನು ಕೊಂಡಾಡಿ, ಭಾರತದಲ್ಲಿ ಬ್ರಿಟಿಷ್ ನೀತಿಗಳನ್ನು ಖಂಡಿಸು ತ್ತಾನೆ.[೧೯] ಹೀಗೆ ತೋಟಗಾರನಾಗಿ ಅಪಾರ ಅನುಭವವಿದ್ದ ಇಲಿಯಟನು ತನ್ನ ಬದುಕನ್ನು ತೋಟಗಾರಿಕೆಯಲ್ಲಿಯೇ ಕಳೆದನು.

ಅಡಿಟಿಪ್ಪಣಿ

೧. Bhowmk, Sharit*Class Formation in the Plantation System*, New Delhi, 1981, p. 9.
೨. HayavadhanRao.,*Karnataka State gazetteer,* (Vol-5), Delhi, 1984, p.108.
೩. Rice, Lewis, Mysore and CoorgGazetteer, Vol III, Bangalore, 1878, p.14.
೪. Shetty, Ravichandra. *Coffee Naadina Jeevana Kathegalu.* (Kannada). Bagalore. 2003. p.8
೫. Nagegowda H.L., *BettadindaBattalige* (Kannada). Bangalore. 1978 (IInd Ed). p 117
೬. Elliot, Robert H., *Gold, Sport and Coffee Planting in Mysore*, London, 1894, p.19.
೭. Ibid, 302. ೮. Elliot, Robert H. op. cit., p.304.
೯. Robert H. Elliot, *The Experiences of a Planter in the Jungles of Mysore* vol I, London, 1871, p 6
೧೦. Ibid: p, 47. ೧೧. Ibid: p,.308. ೧೨. Elliot, Robert H. op. cit., p.311. ೧೩. Ibid: p,.315.
೧೪. Elliot, Robert H. op. cit., p,316. ೧೫. Ibid: p,.317. ೧೬. Ibid: p, 277. ೧೭. Ibid: p,.278.
೧೮. Ibid: p,.279. ೧೯. Elliot, Robert H. op. cit., p.286.

೧೩೨

ಹೆಮ್ಮರಗಾಲ ಗ್ರಾಮದಲ್ಲಿನ ಸ್ಮಾರಕಗಳು

ಡಾ. ಹೆಚ್.ಎನ್. ಕಾಳಸ್ವಾಮಿ*

"ದಕ್ಷಿಣಕಾಶಿ" ಎಂಬ ಹೆಗ್ಗಳಿಕೆಗೆ ಪಾತ್ರವಾದ ನಂಜನಗೂಡು ಐತಿಹಾಸಿಕ ಧಾರ್ಮಿಕ ಮತ್ತು ಸಾಂಸ್ಕೃತಿಕವಾದ ಹಿರಿಮೆಯನ್ನು ಪಡೆದುಕೊಂಡಿದೆ. ನಂಜನಗೂಡು ತಾಲೂಕಿಗೆ ಸೇರಿದ ಪ್ರಮುಖ ಗ್ರಾಮಗಳಲ್ಲಿ ಒಂದಾದ ಹೆಮ್ಮರಗಾಲ ಗ್ರಾಮವು ತನ್ನದೇ ಆದ ಗ್ರಾಮೀಣ ಸೊಗಡನ್ನು ಉಳಿಸಿಕೊಂಡಿದೆ.

ಇದು ನಂಜನಗೂಡಿನಿಂದ ಸು. ೧೫ ಕಿ.ಮೀ. ದೂರದಲ್ಲಿದ್ದು ಕೌಂಡಿನ್ಯ ಮಹರ್ಷಿಯ ತಪೋಭೂಮಿ ಪವಾಡ ಪುರುಷ 'ಶ್ರೀ ವೇಣುಗೋಪಾಲಸ್ವಾಮಿ ನೆಲೆಸಿರುವ ಶ್ರೀ ಕ್ಷೇತ್ರವೇ 'ಹೆಮ್ಮರಗಾಲ' ಈ ಗ್ರಾಮಕ್ಕೆ ಪೂರ್ವದಲ್ಲಿ ಸುಮಾರು ೧೫ ವೀರಗಲ್ಲುಗಳು ವೃತ್ತಾಕಾರದ ಮಾದರಿಯಲ್ಲಿ ಇರುವುದನ್ನು ಕಾಣಬಹುದು, ಹಾಗೂ ಮೂರ್ತಿಶಿಲ್ಪಗಳು ದೊರೆತ್ತಿದ್ದು, ಇದರ ಸಂಪೂರ್ಣ ಮಾಹಿತಿಯನ್ನು ನೀಡುವುದೇ ಈ ಲೇಖನದ ಉದ್ದೇಶವಾಗಿದೆ.

ವೀರಗಲ್ಲು : ಈ ವೀರಗಲ್ಲು ಸು. ೧.೫ ಅಡಿ ಎತ್ತರ ೨ ಅಡಿ ಅಗಲ ೪ ಇಂಚು ದಪ್ಪನಾಗಿದ್ದು ಒಂದು ಪಟ್ಟಿಕೆಯನ್ನು ಮಾತ್ರ ಹೊಂದಿದೆ. ಇದರಲ್ಲಿ ಎರಡು ಚಿತ್ರಗಳಿದ್ದು ಮೊದಲನೆಯದರಲ್ಲಿ ವೀರಯೋಧ ಕುದುರೆ ಮೇಲೆ ವೀರಾವೇಶದಿಂದ ಯುದ್ಧಕ್ಕೆ ಹೊರಡುತ್ತಿರುವ ದೃಶ್ಯವು ಚಿತ್ರದಲ್ಲಿ ಮೂಡಿಬಂದಿದ್ದು, ಹಾಗೂ ಯುದ್ದಕ್ಕೆ ಹೊರಟ ವೀರಯೋಧನ ಹಿಂಭಾಗದಲ್ಲಿ ಎದುರಾಳಿ ದೊಣ್ಣೆಯಿಂದ ವೀರಯೋಧನನ್ನು ಹೊಡೆಯುತ್ತಿರುವ ದೃಶ್ಯವನ್ನು ಕಾಣಬಹುದು. ೨ನೇ ಚಿತ್ರವು ೨.೫ ಅಡಿ ಉದ್ದ ೧ ಅಡಿ ಅಗಲವಾಗಿದ್ದು ೪ ಇಂಚು ದಪ್ಪವಾಗಿದೆ. ಈ ಚಿತ್ರದಲ್ಲಿ ಒಬ್ಬ ವೀರಯೋಧನು ಕತ್ತಿ ಮತ್ತು ಗುರಾಣಿ ಹಿಡಿದು ಯುದ್ಧಕ್ಕೆ ಸನ್ನದ್ಧನಾಗಿ ಹೊರಟು ನಿಂತಿರುವ ದೃಶ್ಯವನ್ನು ಕಾಣಬಹುದು. ಈ ವೀರಯೋಧನು ವಸ್ತ್ರಾಧಾರಿಯಾಗಿದ್ದು ವೀರನ ಕರ್ಣ ಕುಂಡಲವು ಸುಂದರವಾಗಿದ್ದು ಅಲ್ಲದೆ ಮಂಡನೆ ಮಾದರಿಯಲ್ಲಿ ಕೇಶಾಲಂಕಾರವಿದೆ.

ಮಾಸ್ತಿಗಲ್ಲು: ಸುಮಾರು ೨ ಅಡಿ ಎತ್ತರ ೧ ಅಡಿ ಅಗಲ ೪ ಇಂಚು ದಪ್ಪನಾಗಿದ್ದು ಕಪ್ಪು ಗ್ರಾನೈಟ್ ಶಿಲೆಯದ್ದಾಗಿದ್ದು ಒಂದು ಪಟ್ಟಿಕೆಯನ್ನು ಹೊಂದಿದೆ. ಯುದ್ಧದಲ್ಲಿ ಹೋರಾಡಿ ಇಬ್ಬರು ವ್ಯಕ್ತಿಗಳು ಮತ್ತು ಒಬ್ಬಳು ಸ್ತ್ರೀ ಒಟ್ಟಾಗಿ ಹಾರವಾಗಿರುವುದನ್ನು ನೋಡಿದರೆ ಒಂದೇ ಕುಟುಂಬಕ್ಕೆ ಸೇರಿದ ३ ಜನ ವ್ಯಕ್ತಿಗಳು ಹೋರಾಟವನ್ನು ಮಾಡಿ ಮಡಿದ ದೃಶ್ಯವನ್ನು ಚಿತ್ರದಲ್ಲಿ ಮೂಡಿರುವುದನ್ನು ಕಾಣುತ್ತೇವೆ.

ವೀರಗಲ್ಲು: ಈ ವೀರಗಲ್ಲನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದ್ದು ಯಾವುದೇ ರೀತಿಯ ಶಾಸನಗಳು ಕಂಡು ಬರುವುದಿಲ್ಲ. ಈ ವೀರಗಲ್ಲು ಸುಮಾರು ೨ ಅಡಿ ಎತ್ತರ ೨ ಅಡಿ ಅಗಲ ೪ ಇಂಚು ದಪ್ಪನಾಗಿದ್ದು ಇವುಗಳನ್ನು ಗುರುತಿಸಲು ಅಸಾಧ್ಯವಾದರೂ ಸಹ ಇಲ್ಲಿ ಮೂಡಿ ಬಂದಿರುವ ೫ ಜನ ವ್ಯಕ್ತಿಗಳ ಕೂದಲನ್ನು ಉಂಡೆ (ಜಡೆ) ರೀತಿಯಲ್ಲಿ ಕಟ್ಟದ್ದು ಇಲ್ಲಿ ಸ್ತ್ರೀ ಅಥವಾ ಪುರುಷನ ಚಿತ್ರಗಳು ಎಂಬುದನ್ನು ಸ್ಪಷ್ಟವಾಗಿ ಗೋಚರಿಸುತ್ತದೆ. ಒಂದು ತ್ಯಾಗಕ್ಕಾಗಿ ಇವರುಗಳು ಒಟ್ಟಾಗಿ ಹಾರ (ಸಮರ್ಪಣೆ)ವಾಗಿರುವುದು ಕಂಡು ಬರುತ್ತದೆ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ.

ವೀರಗಲ್ಲು: ಈ ವೀರಗಲ್ಲು ೧.೫ ಅಡಿ ಎತ್ತರ, ೧ ಅಡಿ ಅಗಲವಾಗಿದ್ದು ಇಬ್ಬರು ವೀರಯೋಧರು ಕತ್ತಿ ಮತ್ತು ಗುರಾಣಿ ಹಿಡಿದು ಹೋರಾಡುತ್ತಿರುವ ದೃಶ್ಯವನ್ನು ಚಿತ್ರದಲ್ಲಿ ಕಾಣಬಹುದಾಗಿದೆ. ಈ ವೀರಗಲ್ಲು ಸುಮಾರು ೨.೫ ಅಡಿ ಎತ್ತರ, ೧.೫ ಅಡಿ ಅಗಲ, ೪ ಇಂಚು ದಪ್ಪನಾಗಿದ್ದು ಒಂದು ಪಟ್ಟಿಕೆಯಿಂದ ಕೂಡಿದೆ. ಇದರಲ್ಲಿ ಇಬ್ಬರು ವ್ಯಕ್ತಿಗಳು ಕತ್ತಿಯನ್ನು ಹಿಡಿದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹೋರಾಡುತ್ತಿರುವ ದೃಶ್ಯವನ್ನು ಕಾಣಬಹುದು.

ವೀರಗಲ್ಲು: ಈ ಪ್ರದೇಶದಲ್ಲಿ ಮೂರು ವೀರಗಲ್ಲುಗಳಿದ್ದು ಸರಾಸರಿ ೨ ಅಡಿ ಎತ್ತರ, ೨ ಅಡಿ ಅಗಲ, ವೀರಗಲ್ಲು ೨ ಅಡಿ ಎತ್ತರ ೨ ಅಡಿ ಅಗಲ ೪ ಇಂಚು ದಪ್ಪನಾಗಿದ್ದು

* ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦೦೦೬

ಒಂದೆ ಪಟ್ಟಿಕೆಯನ್ನು ಹೊಂದಿದೆ. ಈ ಪಟ್ಟಿಕೆಯಲ್ಲಿ ಇಬ್ಬರು ವೀರರು ಈಟಿ ಮತ್ತು ಭರ್ಜಿಯನ್ನು ಹಿಡಿದು ಹೋರಾಟ ಮಾಡುತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ.

ವೀರಮಾಸ್ತಿಗಲ್ಲು: ಇದು ಸುಮಾರು ೨.೫ ಅಡಿ ಎತ್ತರ, ೨ ಅಡಿ ಅಗಲವಾಗಿದ್ದು ಗ್ರಾನೈಟ್ ಶಿಲೆಯದ್ದಾಗಿದೆ. ಇಲ್ಲಿ ಯಾವುದೇ ರೀತಿಯ ಶಾಸನಗಳು ಕಂಡುಬರುವುದಿಲ್ಲ. ಆದ್ದರಿಂದ ಇವುಗಳನ್ನು ಸ್ಪಷ್ಟವಾಗಿ ಗುರುತಿಸಲು ಅಸಾಧ್ಯವಾದರೂ ಸಹ ಇಲ್ಲಿ ಮೂಡಿ ಬಂದಿರುವ ೪ ಜನ ವ್ಯಕ್ತಿಗಳು ಕೇಶವನ್ನು ಕಟ್ಟಿದ್ದು ಇದರಿಂದ ಸ್ತ್ರೀ-ಪುರುಷನ ಚಿತ್ರಗಳು ಸ್ಪಷ್ಟವಾಗಿ ಗೋಚರಿಸುತ್ತದೆ. ಜೊತೆಗೆ ಮಗು ಇದ್ದರೂ ಒಂದು ತ್ಯಾಗಕ್ಕಾಗಿ ಇವರುಗಳೆಲ್ಲರು ಒಟ್ಟಾಗಿ ಹಾರವಾಗಿರುವುದು ಹಾಗೂ ಪರಸ್ಪರ ಕೈಗಳನ್ನಿಡಿದು ಸಾಲಾಗಿ ನಿಂತಿರುವುದನ್ನು ಕಾಣಬಹುದಾಗಿದೆ.

ರಾವಳೇಶ್ವರ ಶಿಲ್ಪ: ಈ ಶಿಲ್ಪವು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು ೨ ಅಡಿ ಎತ್ತರ, ೧.೫ ಅಡಿ ಅಗಲ ಹಾಗೂ ૩ ಇಂಚು ದಪ್ಪವಾಗಿದ್ದು ೩ ತಲೆಯನ್ನು ಹೊಂದಿದ್ದು ಚತುರ್ಭುಜ ಆಕಾರವನ್ನೊಂದಿದೆ. ಬಲಭಾಗದ ೨ ಕೈಗಳಲ್ಲಿ ಡಮರುಗವನ್ನೊಂದಿದ್ದು ಎಡಭಾಗದ ಒಂದು ಕೈಯಲ್ಲಿ ತ್ರಿಶೂಲ ಮತ್ತೊಂದು ಕೈಯನ್ನು ಕೆಳಗೆ ಇಳಿ ಬಿಟ್ಟಿರುವುದನ್ನು ಕಾಣುತ್ತೇವೆ. ಜೊತೆಗೆ ಬಲಭಾಗದ ಕಾಲನ್ನು ಕೆಳಗೆ ಇಳಿಬಿಟ್ಟಿರುವುದು ಹಾಗೂ ಎಡಭಾಗದ ಕಾಲನ್ನು ಮಡಿಚಿರುವಂತೆ ಕಾಣಬಹುದಾಗಿದೆ. ಇದರಿಂದ ಇದೊಂದು ದೇವತೆ ಶಿಲ್ಪ ಎಂದು ಹೇಳಬಹುದಾಗಿದೆ.

ವೀರಗಲ್ಲು: ಇದು ಒಂದು ಪಟ್ಟಿಕೆಯಿಂದ ಕೂಡಿದ್ದು ಇದರಲ್ಲಿ ಇಬ್ಬರು ಹೋರಾಟ ನಡೆಸಿ ಹಾರವಾಗಿರುವುದು ಈತನ ಬಲಭಾಗದಲ್ಲಿ ಒಂದು ಮಗುವಿನ ಚಿತ್ರವಿರುವುದನ್ನು ಕಾಣಬಹುದು. ಇದರಿಂದ ಒಂದೇ ಕುಟುಂಬದ ೩ ಜನ ವ್ಯಕ್ತಿಗಳು ಮಡಿದು ಹಾರವಾಗಿರುವ ದೃಶ್ಯವನ್ನು ಕಾಣಬಹುದು.

ಶಾಸನೋಕ್ತ ವೀರಗಲ್ಲು : ಇದು ಸು. ೪ ಅಡಿ ಎತ್ತರ, ಅಗಲ, ಮತ್ತು ೬ ಇಂಚು ದಪ್ಪವಾಗಿದ್ದು ೪ ಪಟ್ಟಿಕೆ ಗಳನ್ನು ಒಳಗೊಂಡಿದ್ದು ಗ್ರಾನೈಟ್ ಶಿಲೆಯಾಗಿದೆ. ಮೊದಲನೆ ಪಟ್ಟಿಕೆಯಲ್ಲಿ ಐದು ಜನ ವ್ಯಕ್ತಿಗಳು ಪರಸ್ಪರ ವೀರಾವೇಶದಿಂದ ಹೋರಾಡುತ್ತಿದ್ದು ತಮ್ಮ ಕೈಗಳಲ್ಲಿ ಕತ್ತಿ, ಈಟಿ-ಭರ್ಜಿಗಳನ್ನು ಹಿಡಿದುಕೊಂಡು ಹೋರಾಟ ಮಾಡುತ್ತಿರುವ ದೃಶ್ಯ ಕಂಡು ಬಂದಿದ್ದು ೨ನೇ ಪಟ್ಟಿಕೆಯಲ್ಲಿ ಈ ಹೋರಾಟದಲ್ಲಿ ಮಡಿದ ೩ ಜನ ವ್ಯಕ್ತಿಗಳನ್ನು ಇಬ್ಬರು ಚಾಮರಧಾರಣೆ ದೇವಕನ್ಯೆಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗವನ್ನು ಇಲ್ಲಿಯ ಪ್ರತಿಷ್ಠಾಪಿಸಿದ್ದು ವಿಮಾನವು ಅಲಂಕೃತವಾದ ಪ್ರಭಾವಳಿಯನ್ನು ಹೊಂದಿದ್ದು, ಈ ಶಿವಲಿಂಗಕ್ಕೆ ಯತಿಯು ಪೂಜೆಯನ್ನು ಸಲ್ಲಿಸುತ್ತಿದ್ದು ಬಲಭಾಗದಲ್ಲಿ ಮೂರು ಜನ ವ್ಯಕ್ತಿಗಳು ಭಕ್ತಿಯಿಂದ ಕೈ ಮುಗಿದು ಕುಳಿತಿರುವುದು ಪಕ್ಕದಲ್ಲಿ ಒಬ್ಬ ಭಕ್ತನು ಆಶೀರ್ವದಿಸುತ್ತಿರುವ ದೃಶ್ಯ ಕಂಡುಬಂದಿದ್ದು ಎಡಭಾಗದಲ್ಲಿ ನಂದಿ ಶಿಲ್ಪವನ್ನು ಕೆತ್ತಲಾಗಿದೆ. ನಾಲ್ಕನೇ ಪಟ್ಟಿಕೆಯಲ್ಲಿ ಮೈಸೂರು ಒಡೆಯರ ಕಾಲದ ಶಾಸನವಿದ್ದು ಕ್ರಿ.ಶ. ೧೭೬೭ರ ನಂಜರಾಜ ಒಡೆಯರ ಆಳ್ವಿಕೆಯ ಹೋರಾಟದ ದೃಶ್ಯಾವಳಿಗಳು ಈ ವೀರಗಲ್ಲಿನಲ್ಲಿ ಮೂಡಿ ಬಂದಿರುವುದನ್ನು ಕಾಣಬಹುದು. ಜೊತೆಗೆ ಈ ವೀರಗಲ್ಲು ಅತ್ಯಂತ ಅಲಂಕಾರಭರಿತವಾಗಿದ್ದು ಹೂ ಬಳ್ಳಿ, ಲತಾಬಳ್ಳಿಗಳ ಕೆತ್ತನೆಯಿದೆ. ಮೇಲ್ಭಾಗದಲ್ಲಿ ಸೂರ್ಯಚಂದ್ರರ ಉಬ್ಬುಶಿಲ್ಪ ಕೆತ್ತನೆಯನ್ನು ಕಂಡರಿಸಲಾಗಿದೆ.

ವೀರಗಲ್ಲು: ಈ ವೀರಗಲ್ಲು ಸುಮಾರು ೪ ಅಡಿ ಎತ್ತರ, ೨ ಅಡಿ ಅಗಲ, ೪ ಇಂಚು ದಪ್ಪನಾಗಿದ್ದು ೩ ಪಟ್ಟಿಕೆಯಿಂದ ಕೂಡಿದೆ. ಮೊದಲನೆ ಪಟ್ಟಿಕೆಯಲ್ಲಿ ೪ ಜನ ವ್ಯಕ್ತಿಗಳು ಕೈಗಳಲ್ಲಿ ಬಿಲ್ಲು, ಬಾಣ, ಕತ್ತಿ, ಗುರಾಣಿ, ಈಟಿ, ಭರ್ಜಿಯನ್ನು ಹಿಡಿದು ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯವನ್ನು ಕಾಣಬಹುದು. ೨ನೇ ಪಟ್ಟಿಕೆಯಲ್ಲಿ ಈ ಯುದ್ಧದಲ್ಲಿ ಮಡಿದ ವ್ಯಕ್ತಿಗಳನ್ನು ಸ್ವರ್ಗಲೋಕಕ್ಕೆ ಇಬ್ಬರು ದೇವಕನ್ಯೆಯರು ಎಳೆದೊಯ್ಯುತ್ತಿರುವ ದೃಶ್ಯ. ೩ನೇ ಪಟ್ಟಿಕೆಯಲ್ಲಿ ಅಲಂಕಾರ ಭರಿತವಾದ ಪಲ್ಲಕ್ಕಿಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದು ಬಲಭಾಗದಲ್ಲಿ ಇಬ್ಬರು ವ್ಯಕ್ತಿಗಳು ಕೈಮುಗಿದು ಕುಳಿತಿರುವ ದೃಶ್ಯ, ಎಡಭಾಗದಲ್ಲಿ ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಯತಿ ಪಕ್ಕದಲ್ಲಿ ನಂದಿ ಶಿಲ್ಪವನ್ನು ಕಂಡರಿಸಲಾಗಿದ್ದು ಜೊತೆಗೆ ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಕೆತ್ತಲಾಗಿದೆ.

ಭೈರವ ಶಿಲ್ಪ: ಶೈವ ಪರಂಪರೆಯಲ್ಲಿ ಭೈರವ ಸಂಸ್ಕೃತಿ ಕಂಡುಬಂದಿದ್ದು ಶಿವನ ಆರಾಧನೆ, ಪೂಜೆ ಮಾಡು ವುದು ಕರ್ನಾಟಕದಾದ್ಯಂತ ಕಂಡುಬರುತ್ತದೆ. ಈ ಶಿಲ್ಪ ೧.೫ ಅಡಿ ಎತ್ತರ, ೧ ಅಡಿ ಅಗಲ, ೩ ಇಂಚು ದಪ್ಪನಾಗಿದ್ದು ಭೈರವನ ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಮನುಷ್ಯನ ಕತ್ತರಿಸಿದ ತಲೆ ಬುರುಡೆ ಹಿಡಿದಿರುವ ದೃಶ್ಯ, ಕಿವಿಯಲ್ಲಿ ಕರ್ಣ ಮತ್ತು ಕುಂಡಲ ಕೇಶವನ್ನು ದುಂಡನೆಯ ಮಾದರಿ ಯಲ್ಲಿ ಕಟ್ಟಿದ್ದು ಸೊಂಟದಲ್ಲಿ ದಾಬನ್ನು ಧರಿಸಿದ್ದು ಬಟ್ಟಾರೆ ವಸ್ತ್ರಧಾರಿಯಾಗಿದ್ದು ಪಂಚೆಯನ್ನು ಕಚ್ಚೆಯಂತೆ ಕಟ್ಟಿದ್ದು ಜೊತೆಗೆ ಈತನು ದಷ್ಟಪುಷ್ಟವಾಗಿ ನಿಂತಿರುವ ದೃಶ್ಯಾವಳಿಯು ಅತ್ಯಂತ ಸೂಕ್ಷ್ಮ ಕುಸುರಿ ಕೆತ್ತನೆಯನ್ನೊಂದಿದೆ ಎನ್ನಬಹುದು.

ಕಲ್ಕಿ ಶಿಲ್ಪ: ಈ ಚಿತ್ರದಲ್ಲಿ ಕಾಣಬರುವ ಈ ಶಿಲ್ಪವು ಸುಂದರವಾದ ಮತ್ತು ಬಲಯುತವಾದ ಕುದುರೆ ಮೇಲೆ ಕುಳಿತಿರುವ ದೃಶ್ಯವು ಮತ್ತು ಈ ದುಂಡು ಶಿಲ್ಪವು ಉಬ್ಬುಶಿಲ್ಪ



ಸ್ಮಾರಕ ಶಿಲ್ಪಗಳು

ರಚನಾಶೈಲಿಯಲ್ಲಿದೆ ಎನ್ನಬಹುದು. ಈ ಚಿತ್ರದಲ್ಲಿ ಶಿವನ ಅವತಾರವನ್ನು ಹೊಂದಿರುವ ಮೂರ್ತಿಯು ಚತುರ್ಭುಜ ಧಾರಿಯಾಗಿದ್ದು ತ್ರಿಶೂಲ, ಡಮರುಗ, ಪಾಶ, ಅಂಕುಶವನ್ನು ಹಿಡಿದು ಕುದುರೆ ಮೇಲೆ ಕುಳಿತಿದ್ದು, ಇದರ ಕೆಳಭಾಗದಲ್ಲಿ ಒಬ್ಬ ಸ್ತ್ರೀ ಶಿಲ್ಪವು ಇದ್ದು ಇದನ್ನು ಗಮನಿಸಿದಾಗ ಶಿವನ ಅವತಾರವನ್ನೇ ನಿರೂಪಿಸಿದರೂ ಇದು ಶಿವನ ಮೂರ್ತಿಯಲ್ಲ. ಇದನ್ನು ಕಲ್ಕಿ ಎಂದು ಕರೆಯಲಾಗಿದೆ. ಇತ್ತೀಚೆಗೆ ಮಹಿಷ ಮಂಡಲ ಪ್ರಾಂತ್ಯದಲ್ಲಿ ಈ ರೀತಿಯ ಶಿಲ್ಪಗಳು ಹೆಚ್ಚಾಗಿ ದೊರೆತಿರುವುದನ್ನು ಕಾಣಬಹುದಾಗಿದೆ.

ವೀರಮಾಸ್ತಿಕಲ್ಲು: ಇದು ವೀರಮಾಸ್ತಿಗಲ್ಲಾಗಿದ್ದು ಇದು ಸುಮಾರು ೨ ಅಡಿ ಎತ್ತರ, ೩ ಅಡಿ ಅಗಲ, ೪ ಇಂಚು ದಪ್ಪನಾಗಿದ್ದು ಕಪ್ಪು ಗ್ರಾನೈಟ್ ಶಿಲೆಯಾಗಿದ್ದು ಸ್ಪಷ್ಟವಾಗಿ ಕಾಣುತ್ತಿಲ್ಲ ಹಾಗೂ ಯಾವುದೆ ರೀತಿಯ ಶಾಸನ ಪಾಠಗಳಿಲ್ಲ. ೬ ಜನ ವ್ಯಕ್ತಿಗಳಲ್ಲಿ ಮೂರು ಜನ ವೀರರು ಮತ್ತು ೩ ಜನ ಸ್ತ್ರೀಯರು ಅಕ್ಕಪಕ್ಕದಲ್ಲಿ ನಿಂತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಹಾಗೂ ಯಾವುದೋ ಒಂದು ಯುದ್ಧದಲ್ಲಿ ಜಯ ಸಾಧಿಸಿ ವಿಜಯದ ಸಂಕೇತವನ್ನು ಸೂಚಿಸುವಂತೆ ಕೈಯನ್ನು ಮೇಲಕ್ಕೆತ್ತಿ ಹಿಡಿದಿರುವುದನ್ನು ಚಿತ್ರದಲ್ಲಿ ಕಾಣುತ್ತೇವೆ. ಈ ವೀರಗಲ್ಲನ್ನು ಗಮನಿಸಿದಾಗ ವೀರರಿಗೆ ೩ ಜನ ಹೆಂಡತಿಯರಿದ್ದು ಅವರು ಸಹ ಗಂಡನ ಮರಣ ನಂತರ ಏಕಕಾಲದಲ್ಲಿ ಸತಿಯಾಗಿರ ಬೇಕೆಂದು ಹೇಳಬಹುದು.

ವೀರಗಲ್ಲು: ಈ ವೀರಗಲ್ಲು ಒಂದು ಪಟ್ಟಿಕೆಯಿಂದ ಕೂಡಿದ್ದು ೩ ಜನ ವ್ಯಕ್ತಿಗಳು ಯುದ್ಧದಲ್ಲಿ ಮಡಿದು ಹಾರ ವಾಗಿರುವುದನ್ನು ಕಾಣಬಹುದು.

ವೀರಗಲ್ಲು: ಇಲ್ಲಿ ಮೂರು ವೀರಗಲ್ಲುಗಳಿದ್ದು ಸುಮಾರು ೨ ಅಡಿ ಉದ್ದ, ೨ ಅಡಿ ಅಗಲ, ೪ ಇಂಚು ದಪ್ಪವಾಗಿದ್ದು ಇಬ್ಬರು ವೀರರು ಯುದ್ಧದಲ್ಲಿ ಹೋರಾಡುತ್ತಿರುವ ದೃಶ್ಯ. ಒಬ್ಬ ವೀರನು ಈಟಿ ಮತ್ತು ಭರ್ಜಿಯಿಂದ ಚುಚ್ಚುತ್ತಿರುವ ದೃಶ್ಯವನ್ನು ಕಾಣ ಬಹುದು.

ಇವುಗಳ ಕಾಲಮಾನವನ್ನು ಗಮನಿಸಿದಾಗ ಹೊಯ್ಸಳ, ವಿಜಯನಗರ ಮತ್ತು ಒಡೆಯರ ಕಾಲಕ್ಕೆ ಸೇರಿವೆ ಎಂಬುದನ್ನು ಸ್ಪಷ್ಟಪಡಿಸಬಹುದು.

ಆಧಾರಸೂಚಿ

೧. ಎಪಿಗ್ರಾಫಿಯಾ–ಕರ್ನಾಟಿಕ, ಸಂಪುಟ ೩, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೨೦೦೮, ಪ್ರಸಾರಾಂಗ, ಮೈ.ವಿ.ವಿ. ಮೈಸೂರು.

೩. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಧಾರವಾಡ ೧೯೮೨.

೪. ಪರಮಶಿವಮೂರ್ತಿ. ಡಿ.ವಿ., ಕನ್ನಡ ಶಾಸನಶಿಲ್ಪ, ೧೯೯೯, ಹಂಪಿ.

ಇತಿಹಾಸ ದರ್ಶನ : ಲೇಖಕ–ಲೇಖನ ಸೂಚಿ

(ಸಂಪುಟ ೨೬/೨೦೧೧ ರಿಂದ ಸಂಪುಟ ೩೦/೨೦೧೫ವರೆಗೆ)

(ಮೊದಲ ದಪ್ಪ ಸಂಖ್ಯೆ ಸಂಪುಟವನ್ನು, ಎರಡು ಮತ್ತು ಮೂರನೆಯ ಸಂಖ್ಯೆಗಳು ಲೇಖನದ ಪ್ರಾರಂಭದ ಪುಟ ಮತ್ತು ಅಂತ್ಯದ ಪುಟಗಳನ್ನು ಸೂಚಿಸುತ್ತವೆ. * ಈ ಗುರುತಿರುವ ಲೇಖನಗಳು ಇಬ್ಬರು ಲೇಖಕರ ಕರ್ತೃತ್ವವನ್ನು ಸೂಚಿಸುತ್ತದೆ).

–ಡಾ. ಪಿ.ವಿ. ಕೃಷ್ಣಮೂರ್ತಿ

–ಶ್ರೀಮತಿ ಎಸ್. ಗಂಗಾಂಬಿಕೆ ಗೋವರ್ಧನ್

[illegible] ೨೮, [illegible]

ತುಳಸಿರಾಮನಾಯಕ., ಬೆಂಗಳೂರಿನ ಶ್ರೀನಿವಾಸ ಮಂದಿರಂ ಧರ್ಮಸಂಸ್ಥೆಯ ಇತಿಹಾಸ, **೨೬**, ೪೫೮–೪೬೨. ಬೆಂಗಳೂರಿನ ಸಂತೂ ಸಾ ಪೇಟೆಯ ಇತಿಹಾಸ, **೨೭**, ೩೬೮–೩೭೦.

ದಯಾನಂದಕುಮಾರ್., ಖಾದಿ ಶಂಕರಪ್ಪ–೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಶಿವಮೊಗ್ಗ ಜಿಲ್ಲೆಯ ರೈತರ ಪ್ರೇರಕ, **೩೦**, ೪೪೭–೪೫೦.

ದೇವರಕೊಂಡಾರೆಡ್ಡಿ., ಕದಂಬ ರವಿವರ್ಮನ ದಾವಣಗೆರೆಯ ತಾಮ್ರಶಾಸನ, **೨೭**, ೫೯–೬೧. ಹಾನಗಲ್ ಹಳೇ ಕೋಟೆಯಲ್ಲಿ ದೊರೆತ ಬನವಾಸಿ ಕದಂಬರ ತಾಮ್ರಶಾಸನ, **೨೮**, ೩೦–೩೨.

ದೇವರಾಜ ಜೆ. ಬಾಗೇವಾಡಿ ಬಿ.ಕೆ., ಕರ್ನಾಟಕದಲ್ಲಿ ಬ್ರಹ್ಮಕುಮಾರಿ ಈಶ್ವರೀಯ ವಿ.ವಿ.ಯ ಆಧ್ಯಾತ್ಮಿಕ ಧಾರ್ಮಿಕ ಕೊಡುಗೆಗಳು, **೨೮**, ೪೯೪–೪೯೯. ಹಿಂದೂ ಮುಸ್ಲಿಂರ ಭಾವೈಕ್ಯತೆಯ ನೆಲೆ ಬಂಡೆಪ್ಪನಹಳ್ಳಿ, **೨೯**, ೪೧೪–೪೧೮.

ದೇವರಾಜಸ್ವಾಮಿ ಜಿ.ಕೆ., ಮಂಕುಂದದ ತಿಮ್ಮಪ್ಪನ ಬೆಟ್ಟದ ಆದಿಮಾನವ ಕಾಲದ ಕಲ್ಲಾಸರೆಗಳು ಹಾಗೂ ಬಣ್ಣದ ಚಿತ್ರಗಳು, **೨೬**, ೧೧–೧೪. ತೀರ್ಥಹಳ್ಳಿ ರಾಮಮಂಟಪದ ಸುತ್ತಮುತ್ತಲಿನ ಅಪ್ರಕಟಿತ ಶಾಸನಗಳು, **೨೭**, ೮೧–೮೩. ತೀರ್ಥಹಳ್ಳಿ ತಾಲ್ಲೂಕಿನ ಮೂರು ಸ್ಮಾರಕ ಶಾಸನಗಳು, **೨೮**, ೩೬–೩೮. ತೀರ್ಥಹಳ್ಳಿ ತಾಲ್ಲೂಕು ಮರುವಸೆಯ ಕದಂಬರ ಕಾಲದ ಅಪ್ರಕಟಿತ ಶಾಸನ, **೨೯**, ೨೨–೨೩.

ದೇವೇಗೌಡ ಎಸ್.ಕೆ., ಹಳೆಯಬೀಡು ಮತ್ತು ಹೊಸಕೋಟೆ ಗ್ರಾಮಗಳ ಪುರಾತತ್ವ ಮತ್ತು ಐತಿಹಾಸಿಕ ಕುರುಹುಗಳು, **೩೦**, ೩೬೮–೩೭೧.

ದೇವೇಂದ್ರ ಟಿ.ಎಸ್., ವಸಾಹತುಶಾಹಿ ವ್ಯವಸ್ಥೆಯಲ್ಲಿ ಮೈಸೂರು ಅರಸರ ಬ್ರಿಟಿಷ್ ಅಧಿಕಾರಿಗಳ ವಿಹಾರ ಮತ್ತು ಬೇಟೆ: ಒಂದು ಅಧ್ಯಯನ ೧೭೯೯–೧೯೪೭, **೨೭**, ೩೫೧–೩೫೫.

ದೊಡ್ಡಪ್ಪ ಬಿ.ಎನ್., ಬಂದಳಿಕೆ–ಒಂದು ಅವಲೋಕನ, **೨೯**, ೩೯೯–೪೦೧.

ಧನಂಜಯ ಸಿ., ಪಾವಗಡ ತಾಲ್ಲೂಕಿನ ನಲಿಗಾಹಳ್ಳಿಯಲ್ಲಿ ದೊರೆತ ಬೃಹತ್ ಶಿಲಾಯುಗದ ನೆಲೆ, **೨೯**, ೧೩–೧೪. ಶ್ರೀ ಕಾಳಹಸ್ತಿ ದೇವಾಲಯದ ಐತಿಹ್ಯವನ್ನು ತಿಳಿಸುವ ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿನ ಪ್ರಾಣಿ ಶಿಲ್ಪಗಳು, **೩೦**, ೨೦೩–೨೦೪.

ನಂಜುಂಡಸ್ವಾಮಿ ಎಸ್., ಶಾಸನೋಕ್ತ ಬಾಲಚಂದ್ರ ಜೈನಯತಿಗಳು, **೨೯**, ೯೩–೧೦೦.

ನಂಜುಂಡಸ್ವಾಮಿ ಬಿ., ಮರಿ ತೋಂಟದಾರ್ಯರ 'ವೀರಶೈವಾನಂದ ಚಂದ್ರಿಕೆ' ಗ್ರಂಥದ ಕ್ರಿಯಾಕಾಂಡದಲ್ಲಿ 'ಭೂಪಾಲ ವಂಶಾವಳಿ' ಕೆಳದಿ ಅರಸರ ಇತಿಹಾಸ, **೨೬**, ೩೧೨–೩೧೮. ಶ್ರೀ ಶಿವಗಂಗಾ ಮಠಕ್ಕೆ ಕೊಡಲ್ಪಟ್ಟ ಸನ್ನದುಗಳು ಮತ್ತು ಕೆಲವು ಕಾಗದ ಪತ್ರಗಳು, **೨೮**, ೭೫–೮೪. ಬೆಂಗಳೂರು ನಗರದ ಇನ್ನೊಂದು ಹೆಸರು 'ಕಲ್ಯಾಣನಗರ' ಇದರ ಉಲ್ಲೇಖ ಇರುವ ಬೆಂಗಳೂರು ನಗರೇಶ್ವರ ದೇವಾಲಯದ ಶಿಲಾಶಾಸನ **೨೯**, ೬೬–೬೮. ರಾಮಾಯಣದ ಕಥಾ ನಿರೂಪಣೆ ಉಬ್ಬು ಶಿಲ್ಪವಿರುವ ಶಾಸನೋಕ್ತ ಆಂಜನೇಯ ವಿಗ್ರಹ, **೩೦**, ೨೧೪–೨೧೫.

ನಂದೀಶ್ವರ ಎನ್., ಸಿರಾ ತಾಲ್ಲೂಕಿನ ಕೆಲವು ಅಪ್ರಕಟಿತ ಶಾಸನಗಳು, **೨೬**, ೧೬೩–೧೬೬. ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಕಸಾಪುರ ಮಿಡಿಗೇಶಿ ಹಾಗೂ ಆಂಧ್ರ ಪ್ರದೇಶದ ಮಡಕಶಿರಾ ತಾಲ್ಲೂಕಿನ ಕೆಲವು ಅಪ್ರಕಟಿತ ಶಾಸನಗಳು, **೨೭**, ೯೨–೯೩. ತುಮಕೂರು ಜಿಲ್ಲೆಯ ಕಸಾಪುರ ಮಿಡಿಗೇಶಿ ಹಾಗೂ ಆಂಧ್ರ ಪ್ರದೇಶದ ಮಡಕಶಿರಾ ತಾಲ್ಲೂಕಿನ ಕೆಲವು ಅಪ್ರಕಟಿತ ಶಾಸನಗಳು, **೨೮**, ೬೩–೬೫. ಬಡರಗುಂಟೆಯ ಗಂಟೆ ಶಾಸನ, ನಲ್ಲೇಕಾಮನಹಳ್ಳಿ ಮಿಡಿಗೇಶಿ, ರೆಡ್ಡಿಹಳ್ಳಿಯ ಹರೆಶಾಸನಗಳು ಹಾಗೂ ಮದಲೂರು ಶಾಸನ, **೨೯**, ೫೪–೫೭. ಸಿರಾ ತಾಲ್ಲೂಕು ಓಜಗುಂಟೆ, ಮಧುಗಿರಿ ತಾಲ್ಲೂಕಿನ ತಾಡಿ ಹಾಗೂ ಚೀಲನಹಳ್ಳಿಯ ಅಪ್ರಕಟಿತ ಶಾಸನಗಳು, **೩೦**, ೫೯–೬೧.

ನರಸಿಂಹನ್ ಕೆ.ಆರ್., ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಕುರುಡಮಲೆ ಶ್ರೀ ವಿನಾಯಕ ದೇವಾಲಯದ ಅಪ್ರಕಟಿತ ಶಾಸನ, **೨೭**, ೭೬–೭೮.

ನರಸಿಂಹಮೂರ್ತಿ ಎಂ., ಶ್ರೀ ಚಾಮುಂಡೇಶ್ವರಿ ನಾಟಕ ಸಭೆ ಪ್ರಾರಂಭ ಮತ್ತು ಅಂತ್ಯ, **೨೭**, ೪೩೫–೪೩೭.

ನರಸಿಂಹಮೂರ್ತಿ ಪಿ.ಎನ್., ಒಂದನೆಯ ಕುಲಶೇಖರ ನಾರಾವಿ ಶಾಸನ, **೨೬**, ೧೫೬–೧೬೦. ಆಳುಪ ಅರಸು ಮನೆತನದ ರಾಣಿಯರು ಮತ್ತು ರಾಜಕುವರಿಯರು, **೨೭**, ೨೨೯–೨೩೮. ವಿದ್ಯಾರಣ್ಯರ ಉಲ್ಲೇಖ ಇರುವ ಒಂದು ಪ್ರಾಚೀನ ಶಿಲಾಶಾಸನ, **೨೮**, ೪೫–೫೪. ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ಪ್ರಾಚೀನ ಶಾಸನಗಳು ಮರು ಅಧ್ಯಯನ, **೨೯**, ೧೧೯–೧೨೩.

ಪಂಪೇಶ ಕೃಷ್ಣ ದೇವಾಲಯದಲ್ಲಿರುವ ಅಪರೂಪದ ನೃತ್ಯ ಭೈರವಿ ಶಿಲ್ಪ, **೩೦,** ೨೧೨-೨೧೩.

ಪರಮೇಶ ಬಿ., ಸ್ವಾತಂತ್ರ್ಯ ಹೋರಾಟದಲ್ಲಿ ಹೊಸದುರ್ಗ ತಾಲ್ಲೂಕಿನ ಪಾತ್ರ, **೨೬,** ೪೭೦-೪೭೪. ಚಳ್ಳಕೆರೆ ತಾಲ್ಲೂಕು ಭೋಗನಹಳ್ಳಿಯ ಪ್ರಾಚ್ಯಾವಶೇಷಗಳು, **೨೭,** ೩೦-೩೨. ಬೆಳಗೆರೆ ಗ್ರಾಮದ ಪ್ರಾಚ್ಯಾವಶೇಷಗಳು, **೨೮,** ೨೦-೨೨, ಚಳ್ಳಕೆರೆ ತಾಲ್ಲೂಕಿನ ಸೂರನಹಳ್ಳಿಯ ವೀರಗಲ್ಲುಗಳು ಮತ್ತು ಮಹಾಸತಿ ಕಲ್ಲುಗಳು, **೨೯,** ೫೮-೬೦

ಪರಶಿವಮೂರ್ತಿ ಎಸ್., ಕರ್ನಾಟಕದಲ್ಲಿ ಬ್ರಹ್ಮದೇವರ ಆರಾಧನೆ, **೨೮,** ೩೯೨-೩೯೫. ಅರಸೀಕೆರೆ ತಾಲ್ಲೂಕಿನಲ್ಲಿ ಹೊಯ್ಸಳರ ಕಾಲದ ಮಲೆಯಾಳಿ ವೈದ್ಯರು ಮತ್ತು ವ್ಯಾಪಾರಿಗಳು, **೨೯,** ೨೩೭-೨೩೯.

ಪ್ರಕಾಶ್ ಕೆ.ಪಿ., ಕನಕಪುರ ಶಾಸನಗಳಲ್ಲಿ ಕುಲಸಂಬಂಧಿ ಕಲಹಗಳು, **೨೯,** ೧೨೪-೧೨೬.

ಪ್ರಭಾಕರ್ ಎಂ.ಎಸ್., ಕಂಬದಹಳ್ಳಿ ಪಂಚಕೂಟ ಬಸದಿ: ದಾಕ್ಷಿಣಾತ್ಯ ಸಂಪ್ರದಾಯದ ಮೂರು ಶೈಲಿಗಳು, **೨೬,** ೩೨-೩೫. ಮಂಡ್ಯ ಜಿಲ್ಲೆಯ ಬಸರಾಳು ಮಲ್ಲಿಕಾರ್ಜುನ ದೇವಾಲಯ ಒಂದು ವಿಸ್ತೃತ ಅಧ್ಯಯನ, **೨೭,** ೧೭೫-೧೭೭. ಹೊಯ್ಸಳ ವಂಶದ ಆರಂಭದ ವಿವರಗಳಲ್ಲಿ ಕೆಲವು ಮಿಥ್ಯಗಳು ಮತ್ತು ಸತ್ಯಗಳು, **೨೮,** ೨೭೯-೨೭೭. ಪಾಶುಪಥ ಮತ್ತು ಕಾಳಾಮುಖ ಸಂಪ್ರದಾಯಗಳು, **೨೯,** ೨೦೧-೨೦೯. ಔತ್ತರೇಯ ಸಂಪ್ರದಾಯ ಮತ್ತು ಕರ್ನಾಟಕದಲ್ಲಿ ಪಿರಿದುಂ ನಾಗರಶೈಲಿ, **೩೦,** ೨೩೧-೨೩೮.

ಪ್ರಭಾಕರ ಎಂ.ಎ., ಹೆದ್ದೂರು ಪರಿಸರದ ಪ್ರಾಗೈತಿಹಾಸಿಕ ಸಲಕರಣೆಗಳು, **೨೯,** ೧೮-೧೯. ತೀರ್ಥಹಳ್ಳಿ ತಾಲ್ಲೂಕಿನ ನಿವಣೆ ಗ್ರಾಮದ ಅಪ್ರಕಟಿತ ವೀರಗಲ್ಲು ಶಾಸನ, **೩೦,** ೭೮-೭೯.

ಪ್ರಭು ಕೆ., ಅಮೃತಾಪುರದ ಅಮೃತೇಶ್ವರ ದೇವಾಲಯದ ಕಪಿಶಿರ ಶಿಲ್ಪಗಳು, **೨೬,** ೧೨೬-೧೨೮.

ಪ್ರಮೋದ್ ಎಂ.ಜಿ., ದಕ್ಷಿಣ ಕನ್ನಡದಲ್ಲಿ ರಾಷ್ಟ್ರೀಯ ಸಂಗ್ರಾಮ ಮತ್ತು ಗಾಂಧೀಜಿಯ ಚಿಂತನೆಗಳು: ಒಂದು ಅವಲೋಕನ, **೩೦,** ೪೧೨-೪೧೬.

ಪ್ರವೀಣ್‌ಕುಮಾರ್ ಕೆ., ಹಳೆಯಬೀಡು ಮತ್ತು ಹೊಸಕೋಟೆ ಗ್ರಾಮಗಳ ಪುರಾತತ್ವ ಮತ್ತು ಐತಿಹಾಸಿಕ ಕುರುಹುಗಳು, **೩೦,** ೩೬೮-೩೭೧.

ಪ್ರವೀಣ್ ಬೆಳ್ತಂಗಡಿ., ಬೃಹತ್ ಶಿಲಾಯುಗದ ನೆಲೆಗಳು: ಅಗ್ಗುಂದ-ಗೊಲ್ಲರಹಟ್ಟಿ, **೨೬,** ೧೫-೧೭. ಅರಸೀಕೆರೆ ತಾಲ್ಲೂಕಿನ ಪ್ರಾಗೈತಿಹಾಸಿಕ ನೆಲೆಗಳು, **೨೭,** ೧೨-೧೪. *ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಮಾಸ್ತಿ ಕಲ್ಲುಗಳು ಒಂದು ಅಧ್ಯಯನ, **೨೮,** ೧೩೬-೧೩೯. ಅರಸೀಕೆರೆ ತಾಲ್ಲೂಕಿನ ಬೃಹತ್ ಶಿಲಾಯುಗದ ನೆಲೆಗಳು ಒಂದು ಅಧ್ಯಯನ, **೨೯,** ೪-೭. *ಅರಸೀಕೆರೆ ತಾಲ್ಲೂಕಿನ ವೀರಗಲ್ಲುಗಳು ಒಂದು ಐತಿಹಾಸಿಕ ವಿಶ್ಲೇಷಣೆ, **೩೦,** ೧೦೦-೧೦೩.

ಪ್ರಶಾಂತ್ ಕೆ.ಜಿ., ಶೃಂಗೇರಿ ಶಾರದಾ ಪೀಠ ಮತ್ತು ಮೈಸೂರು ಸಂಸ್ಥಾನ ಒಂದು ಅಧ್ಯಯನ, **೨೮,** ೧೨೩-೧೨೯.

ಪ್ರಸಾದ್ ಎನ್., ಮಧ್ಯಯುಗೀನ ದಕ್ಷಿಣ ಕನ್ನಡದ ಭತ್ತದ ಗದ್ದೆಗಳ ಹೆಸರುಗಳು, **೨೬,** ೩೦೩-೩೦೮.

ಪಾಂಡುರಂಗ ಹೆಚ್.ಆರ್., ಕಳಸದ ಅಪ್ರಕಟಿತ ಪ್ರತಿಮಾ ಶಾಸನಗಳು ಹಾಗೂ ಚಾರಿತ್ರಿಕ ಕಲ್ಲಿನ ಚಾವಿಗಳು, **೩೦,** ೮೯-೯೧.

ಪಾಟೀಲ ಕೆ.ಎಸ್., ಸಮ್ಮಸಗಿಯ ಪಾರ್ಶ್ವನಾಥ ತೀರ್ಥಂಕರರ ಪಾದಪೀಠ ಶಾಸನ, **೨೬,** ೧೮೦-೧೮೧. ಆರನೆಯ ವಿಕ್ರಮಾದಿತ್ಯನ ಹಾವೇರಿ ಜಿಲ್ಲೆ ಹಾನಗಲ್ಲು ತಾಲ್ಲೂಕಿನ ಅಪ್ರಕಟಿತ ಶಾಸನ, **೨೭,** ೬೬-೬೮. ಹೂಲಿ: ಕಾಳಾಮುಖ ಮಹಾ ಅಗ್ರಹಾರ, **೨೯,** ೨೧೮-೨೨೦.

ಪಾಟೀಲ್ ಎಸ್.ಸಿ., ಸ್ವಾತಂತ್ರ್ಯಪೂರ್ವ ಕರ್ನಾಟಕದಲ್ಲಿ ಚಿತ್ರಕಲಾ ಶಿಕ್ಷಣ ಸಂಸ್ಥೆಗಳ ಐತಿಹಾಸಿಕ ಹಿನ್ನೆಲೆ, **೨೮,** ೨೭೬-೪೭೮. ಹೆಮ್ಮವಾಡಿಗೆಯ ಶಾಸನೋಕ್ತ ಹಂಡೇಶ್ವರ ದೇವಸ್ಥಾನ, **೩೦,** ೨೫೪-೨೫೬.

ಪಾಟೀಲ್ ಎಂ.ಬಿ., ಚಿಕ್ಕಮಗಳೂರು ಜಿಲ್ಲೆಯಲ್ಲಿ ಬ್ಯಾಂಕಿಂಗ್ ಉದ್ಯಮದ ಆರಂಭ ಮತ್ತು ಬೆಳವಣಿಗೆ ಪ್ರಾಥಮಿಕ ಹಂತದ ಸಮೀಕ್ಷೆ, **೨೮,** ೫೫೧-೫೫೫.

ಪಾವಗಡ ಚೆಲುವರಾಜ್, ಚಿಕ್ಕಜಾಲೋಡು ಅಪ್ರಕಟಿತ ತಾಮ್ರ ಶಾಸನ, **೨೮,** ೫೮-೬೨, ಪಾವಗಡದ ಜಂಗಮರ ಮಠದ ಕೈಫಿಯತ್ತು, **೨೯,** ೧೩೦-೧೩೨.

ಪುಂಡಿಕ್ಯ ಗಣಪಯ್ಯ ಭಟ್., ಪುತ್ತೂರಿನಲ್ಲಿ ಬೆಳಕು ಕಂಡ ಚಿನ್ನದ ನಾಣ್ಯಗಳು, **೨೯,** ೧೪೫-೧೪೭.

ಪುಟ್ಟಸ್ವಾಮಿ ಬಿ.ಎಸ್., ಮಂಡ್ಯ ಜಿಲ್ಲೆಯ ಜೈನ ಕೇಂದ್ರಗಳು ಒಂದು ಅಧ್ಯಯನ, **೨೬,** ೧೪೦-೧೪೩. ಮೈಸೂರು ಮತ್ತು ಐಗೂರು (ಬಲಂ) ನಾಯಕರ ಸಂಬಂಧಗಳು, **೨೭,** ೩೩೭-೩೩೯. ಯಲಹಂಕ ನಾಡಪ್ರಭುಗಳ ಕಾಲದ ಒಂದು ಅಪ್ರಕಟಿತ ತಾಮ್ರ ಶಾಸನ, **೨೮,** ೫೬-೫೭. ಸಾಮಾಜಿಕ ಚಳವಳಿಯಲ್ಲಿ ಒಕ್ಕಲಿಗರ ಪತ್ರಿಕೆಯ ಪಾತ್ರ,

೨೯, ೫೪೧–೫೪೪. ಬೂದನೂರು: ಒಂದು ಚಾರಿತ್ರಿಕ ಅಧ್ಯಯನ, **೩೦**, ೩೯೩–೩೯೮.

ಬಸವರಾಜ ಟಿ.ಹೆಚ್.ಎಂ., ಕರ್ನಾಟಕ ಏಕೀಕರಣಕ್ಕೆ ಬಳ್ಳಾರಿಯ ಕರ್ನಾಟಕ ಸಂಘದ ಕೊಡುಗೆ, **೨೮**, ೪೭೯–೪೮೨. ಶಾಸನಗಳಲ್ಲಿ ಜಾನಪದ ವಾದ್ಯ ಮದ್ದಳೆ ಮತ್ತು ಕಂಸಾಳೆ, **೩೦**, ೧೧೫–೧೧೬.

ಬಸವರಾಜ ಎಸ್. ಮಠ., ಜೈನಧರ್ಮಕ್ಕೆ ಮುದ್ದೇಬಿಹಾಳ ಪ್ರದೇಶ ಕೊಡುಗೆ, **೨೮**, ೩೮೯–೩೯೧.

ಬಸವರಾಜಪ್ಪ ಕಂದಗಲ್ ಪಿ., ಕಂದಗಲ್ಲಿನ ಗುಹೆಯಂತಿರುವ ಕಲ್ಲೇಶ್ವರ ದೇವಸ್ಥಾನ, **೩೦**, ೨೭೫.

ಬಸವರಾಜಪ್ಪ ಎಚ್.ಈ., ಶ್ರೀರಂಗಪಟ್ಟಣದ ಗಂಜಾಂನಲ್ಲಿದ್ದ ಕ್ರೈಸ್ತ ಮಿಷನರಿ, **೨೬**, ೪೬೩–೪೬೫. ಕನಕಗಿರಿ ಪಾಳೆಯಗಾರರ ಕಾಲದ ಲೌಕಿಕ ಸ್ಮಾರಕಗಳು, **೨೮**, ೨೦೪–೨೦೯. ವಿಜಯ ಪುರದ ಆದಿಲ್‌ಷಾಹಿ ಹಸ್ತಪ್ರತಿ ಚಿತ್ರಕಲೆ, **೩೦**, ೨೨೭–೨೩೦.

ಬಸವರಾಜು ಬಿ., *ಯಳಂದೂರು ತಾಲ್ಲೂಕು ಅಗರ ಗ್ರಾಮದ ಪ್ರಾಚ್ಯಾವಶೇಷಗಳು ಮತ್ತು ದೇಗುಲಗಳು, **೨೬**, ೧೦೦–೧೦೫.

ಬಸವರಾಜು ತರಗಪುರ ಬಿ., ಬದನಗುಪ್ಪೆ ಪರಿಸರದ ಪ್ರಾಚ್ಯಾವಶೇಷಗಳ ಶೋಧನೆ. **೨೭**, ೩೭–೩೯. *ಚಾಮರಾಜ ನಗರದ ಚಾಮರಾಜೇಶ್ವರ ದೇವಾಲಯದ ಸಮಗ್ರ ವಾಸ್ತುಶಿಲ್ಪ ರಚನಾ ನೋಟ. **೨೮**, ೨೫೮–೨೬೪. *ಕೊಳ್ಳೇಗಾಲ ಪಟ್ಟಣ ದಲ್ಲಿ ರಾವಳೇಶ್ವರ ರಾವಣೇಶ್ವರ ಶಿಲ್ಪಗಳು, **೨೯**, ೧೮೦–೧೮೨. *ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಕೆಲವು ಪ್ರಾಚೀನ ನೆಲೆಗಳ ಶೋಧ. **೩೦**, ೧೬–೧೮.

ಬಸವೇಗೌಡ ಎಚ್.ಎಸ್., ಚನ್ನಪಟ್ಟಣ ಬೊಂಬೆ ತಯಾರಿಕೆ ಉದ್ಯಮದ ಇತಿಹಾಸ, **೨೮**, ೫೩೦–೫೩೭.

ಬಾಲಕೃಷ್ಣ ಹೆಗಡೆ., *ಪುಲುಕೋಟೆಯ ಶೇಷಶಯನ ವಿಷ್ಣುಮೂರ್ತಿ, **೨೬**, ೧೩೨. ಗುರುಪುರ (ಪುರಲೆ) ವೀರಸೋಮೇಶ್ವರ ದೇವಾಲಯ: ಒಂದು ಟಿಪ್ಪಣಿ, **೨೮**, ೧೮೩–೧೮೪. ಯಲವಟ್ಟಿಯಲ್ಲಿ ನವಶೋಧಿತ ಜೈನಶಿಲ್ಪ, **೨೯**, ೧೫೭.

ಬುರುಡೇಕಟ್ಟೆ ಮಂಜಪ್ಪ., ಕುಂದವಾಡದ ಉಚ್ಚಂಗಿ ಪಾಂಡ್ಯರ ಕಾಲದ ಅಪ್ರಕಟಿತ ಶಾಸನ (ಕ್ರಿ.ಶ. ೧೧೨೩), **೨೮**, ೩೪–೩೫. ದಾವಣಗೆರೆ ತಾಲ್ಲೂಕು ಬೇತೂರಿನ ವಿಜಯಪಾಂಡ್ಯ ದೇವನ ಅಪ್ರಕಟಿತ ಶಾಸನ, **೨೯**, ೨೬–೨೭.

ಬೆನ್ನೂರ ಎಂ.ಎಸ್., *ಹಳಂಗಳಿಯಲ್ಲಿ ಶೋಧವಾದ ಪಾರ್ಶ್ವನಾಥ ಮೂರ್ತಿ. **೨೮**, ೫೬೭–೫೬೮. *ನವಶೋಧಿತ ಜೈನ ಶಿಲ್ಪಮೂರ್ತಿಗಳು, **೨೯**, ೧೫೪–೧೫೬. ಬಿಜಾಪುರದ ಆದಿಲ್‌ಷಾಹಿಗಳ ಧಾರ್ಮಿಕೇತರ ಕಟ್ಟಡಗಳು, **೨೯**, ೩೫೧–೩೫೫. *ಬಿಜಾಪುರದ ಶಾಸನೋಕ್ತ ಕೋಟೆ ಮತ್ತು ಕೊತ್ತಲಗಳು, **೩೦**, ೧೬೧–೧೬೩.

ಬೈರಪ್ಪ ಎಂ.ಜಿ., *ಉಪ್ಪಾರ್ತಿಯ ಅಪ್ರಕಟಿತ ಶಾಸನಗಳು, ರಾಮನಗರ ಜಿಲ್ಲೆ, **೩೦**, ೬೨–೬೩.

ಬೋಜ್ಯನಾಯ್ಕ ಎಲ್.ಎಚ್., ಸೊಂಡೂರು ಸಂಸ್ಥಾನಿಕರ ಮೂಲ ಮತ್ತು ಬೆಳವಣಿಗೆ, **೩೦**, ೪೪೭–೪೫೦.

ಮಂಜಣ್ಣ ಪಿ.ಬಿ., *ಚಳ್ಳಕೆರೆ ತಾಲ್ಲೂಕು ಕೊಂಡ್ಲಹಳ್ಳಿ ಹಟ್ಟಿಯಲ್ಲಿ ಬೃಹತ್ ಶಿಲಾಯುಗದ ನೆಲೆಯ ಶೋಧ, **೨೮**, ೧. ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ, **೨೯**, ೪೫೦–೪೫೪. ಜಗಳೂರು ತಾ. ಗುಹೇಶ್ವರ ಗುಡ್ಡದ ಬಳಿ ಕಬ್ಬಿಣಯುಗದ ಬೃಹತ್ ಶಿಲಾಗೋರಿ ನೆಲೆಯ ಹೊಸ ಶೋಧ. **೩೦**, ೭–೮.

ಮಂಜುನಾಥ ಎಂ.ಕೆ., *ನುಣ್ಣೂರು ಗ್ರಾಮದಲ್ಲಿ ದೊರೆತ ಹೊಯ್ಸಳ ನರಸಿಂಹನ ಕಾಲದ ಅಪ್ರಕಟಿತ ಶಾಸನ. **೨೯**, ೩೮–೩೯. ಚನ್ನಪಟ್ಟಣ ತಾಲ್ಲೂಕಿನ ಅಪ್ರಕಟಿತ ಶಾಸನಗಳು, **೩೦**, ೫೦–೫೬. ಚನ್ನಪಟ್ಟಣ ತಾಲ್ಲೂಕಿನ ವೈಶಿಷ್ಟ್ಯಪೂರ್ಣ ಸ್ಮಾರಕ ಶಿಲ್ಪಗಳು, **೩೦**, ೧೯೯–೨೦೨.

ಮಂಜುನಾಥ ಎಸ್. ಪಾಟೀಲ್., ಇಂಗಳೇಶ್ವರ ಗ್ರಾಮದಲ್ಲಿನ ಕಲ್ಯಾಣ ಚಾಳುಕ್ಯರ ಕಾಲದ ಕೋಟೆ, **೩೦**, ೩೨೯–೩೩೦.

ಮಂಜುಳ ಆಚಾರಿ., ಮೂರುಜಾವಿದೇವರ ಮಠ ಪರಂಪರೆ, **೨೮**, ೩೮೪–೩೮೮. ಬಳ್ಳಾರಿ ಜಿಲ್ಲೆಯ ಕಾಳಾಮುಖ ಸ್ಥಾನಾಚಾರ್ಯರು. **೨೯**, ೧೨೭–೧೨೯. ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ಕಾಳಾಮುಖ ಸ್ಥಾನಾಚಾರ್ಯರು, **೩೦**, ೧೨೯–೧೩೧.

ಮಂಜುಳಾ ತಿ. ಯಲಿಗಾರ., ಹೊಯ್ಸಳರ ಜೈನ ಶಾಸನ ರೂವಾರಿಗಳು. **೨೬**, ೨೧೭–೨೧೮.

ಮಂಜುಳ ಎ.ಸಿ., ಪರವಾಸು ದೇವಾಲಯದ ಇತಿಹಾಸ ಮತ್ತು ವಾಸ್ತು ವೈಶಿಷ್ಟ್ಯತೆ, **೩೦**, ೨೭೦–೨೭೧.

ಮಂದರ್ಕೆ ನಿತ್ಯಾನಂದ ಪೈ., ಉಚ್ಚಂಗಿ ಪಾಂಡ್ಯರ ಅಪರೂಪದ ಗದ್ಯಾಣ, **೨೭**, ೧೦೪–೧೦೬. ಹೈದರಾಲಿಯ ಬಹು ಅಪರೂಪದ ಬಹಾದೂರಿ ಪಗೋಡಾ. **೨೮**, ೯೪–೯೫. *ಪುತ್ತೂರಿನಲ್ಲಿ ಬೆಳಕು ಕಂಡ ಚಿನ್ನದ ನಾಣ್ಯಗಳು, **೨೯**, ೧೪೫–೧೪೭.

ಮಧುಗಣಪತಿರಾವ್ ಮುಡೆನೂರು., ಕೋಳೂರು ಹಾಗೂ ಆಣಂದೂರಿನ ಅಪ್ರಕಟಿತ ಶಾಸನಗಳು, **೨೬,** ೧೮೨–೧೮೫. ಶಿವಮೊಗ್ಗ ಜಿಲ್ಲೆ ಸೂಡೂರಿನ ಅಪ್ರಕಟಿತ ಶಾಸನ, **೨೭,** ೭೪–೭೫. ಹೆಡತಲೆಯ ಮನ್ನೆಯ ಅರಸರು, **೨೮,** ೨೭೭.

ಮಧುರಾಜ್., ಚನ್ನರಾಯಪಟ್ಟಣ ತಾಲೂಕಿನ ಹೊಯ್ಸಳರ ಕಾಲದ ಶಾಸನೋಕ್ತ ತೆರಿಗೆಗಳು, **೨೭,** ೨೮೨–೨೮೬. *ಹೊಳೆನರಸೀಪುರ ತಾಲೂಕಿನ ಹೊಯ್ಸಳರ ಕಾಲದ ಶಾಸನೋಕ್ತ ತೆರಿಗೆಗಳು, **೨೮,** ೩೦೦–೩೦೬. ಸಾಮಾಜಿಕ ಪರಿವರ್ತನೆಯಲ್ಲಿ ತುಳುನಾಡಿನ ಗರೊಡಿಗಳು, **೨೯,** ೪೦೫–೪೧೦.

ಮನೋಜ್., ವಿಜಯವಿಠಲ ದೇವಾಲಯದ ಮಹಾಮಂಟಪದಲ್ಲಿರುವ ಸಂಯುಕ್ತ ಸ್ತಂಭಗಳು ಸ್ವರೂಪ, **೨೯,** ೨೧೨–೨೧೪.

ಮಮತಾರಾಣಿ., ಕೆಸ್ತೂರಿನ ವೀರಭದ್ರ ಮತ್ತು ಚೊಕ್ಕನಾಥೇಶ್ವರ ದೇವಾಲಯಗಳ ಕ್ಷೇತ್ರ ಅಧ್ಯಯನ, **೩೦,** ೩೧೭–೩೧೮.

ಮಲ್ಲಿಕಾರ್ಜುನ ಕುಂಬಾರ., ರಾಜೂರ ಗ್ರಾಮದ ಶಾಸನೋಕ್ತ 'ಜೋಗ ಗಾವುಂಡ', **೨೬,** ೨೪೦–೨೪೧. ಕಾಳಾಮುಖ ಪರಂಪರೆಯ ಸೂಡಿಯ ಕಳಕೇಶ್ವರ ಯತಿಗಳು, **೨೭,** ೨೦೬–೨೦೭. ರೋಣ ತಾಲೂಕಿನ ಶಾಸನ ಕವಿಗಳು ಮತ್ತು ಶಾಸನ ಶಿಲ್ಪಿಗಳು, **೨೮,** ೧೫೪–೧೫೮. 'ಲಕ್ಕುಂಡಿಯ ಶರಣ ಅಜಗಣ್ಣ' ಒಂದು ಹೊಸ ಸುಳಿವು, **೨೯,** ೨೯೫–೨೯೬. ಶಾಸನಗಳಲ್ಲಿ "ಸೂಡಿ ಸಂತೆ", **೩೦,** ೧೫೫–೧೫೬.

ಮಲ್ಲಿಕಾರ್ಜುನಪ್ಪ ಜಿ.ಕೆ., ಹರಪನಹಳ್ಳಿ ಪಾಳೇಗಾರರ ಕಾಲದ ಬಂಡ್ರಿ, **೨೬,** ೩೨೭–೩೨೯. ನರಸಪ್ಪನ ಬೆಟ್ಟ ಒಂದು ಐತಿಹಾಸಿಕ ಪರಿಶೀಲನೆ, **೨೭,** ೧೯೧–೧೯೪. ಹಿರೇಮ್ಯಾಗಳೇರಿ ಪರಿಸರದ ಪ್ರಾಚ್ಯಾವಶೇಷಗಳು, **೨೮,** ೧೦–೧೨.

ಮಲ್ಲಿಕಾರ್ಜುನ ಸಿ. ಬಾಗೋಡಿ., ಕಾಲಗರ್ಭದಲ್ಲಿ ಲೀನವಾದ ರಾಯಚೂರು ಹನುಮಾನ ಮಂದಿರದ ಭಿತ್ತಿಚಿತ್ರಗಳು, **೨೭,** ೧೨೮–೧೩೦. ನಾಲವಾರ ವಾರದ್ ಮನೆಯಲ್ಲಿನ ಭಿತ್ತಿಚಿತ್ರಗಳು, **೨೯,** ೩೧೨–೩೧೩.

ಮಲ್ಲಿಗವಾಡ ಕೆ.ಸಿ., ಕಲಾ ಕುಸರಿನ ಕಡಕೋಳದ ಶ್ರೀ ಕಲ್ಮೇಶ್ವರ ದೇವಾಲಯ, **೨೯,** ೧೯೯–೨೦೦. ಕಾವಲುವಾಡದ ಪ್ರಾಚ್ಯಾವಶೇಷಗಳು, **೩೦,** ೩೭೮–೩೮೧.

ಮಲ್ಲೇಶ್ ಕೆ.ಎಫ್., ಕಲ್ಲವತ್ತಿಯ ಪ್ರಾಚ್ಯಾವಶೇಷಗಳು ಮತ್ತು ನವಶೋಧಿತ ವೀರಗಲ್ಲುಗಳು, **೩೦,** ೯೭–೯೯.

ಮಹಂತೇಶ ಎನ್.ಎಸ್., ಹೊಸದುರ್ಗ ತಾಲೂಕಿನ ಕೆಲವು ಪ್ರಾಗೈತಿಹಾಸಿಕ ನೆಲೆಗಳ ಶೋಧ, **೨೬,** ೧–೧೦. ಹೊಳಲ್ಕೆರೆ ತಾಲೂಕಿನಲ್ಲಿ ಕೆಲವು ಬೃಹತ್ ಶಿಲಾಯುಗದ ನೆಲೆಗಳ ಶೋಧ, **೨೭,** ೫–೭.

ಮಹಾಂತೇಶ ಕುತನಿ., ಶ್ರೀರಂಗಪಟ್ಟಣದ ಗೇಣಿದಾರರ ಹೋರಾಟದಲ್ಲಿ ಡಾ. ಸಿ. ಬಂಡೀಗೌಡರ ಪಾತ್ರ, **೨೯,** ೪೯೩–೪೯೬. ಸ್ವಾತಂತ್ರ್ಯ ಚಳುವಳಿಯಲ್ಲಿ ಹಾವೇರಿ ಜಿಲ್ಲೆಯ ಪಾತ್ರ, **೩೦,** ೪೨೬–೪೩೦.

ಮಹ್ಮದ್ ಕಲೀಂಉಲ್ಲ., ಬೆಟ್ಟದ ಮಲ್ಲೇನಹಳ್ಳಿಯ ವೀರಗಾರರ ನೆತ್ತು ಹಾಗೂ ಎಚ್.ಎನ್. ಕಾವಲಿನ ಪ್ರಾಚೀನ ದೇವಾಲಯದ ಅವಶೇಷಗಳು, **೩೦,** ೩೪೩–೩೪೫.

ಮಹಾದೇವ ಸಿ., ಆದಿಚುಂಚನಗಿರಿಯ ಇತಿಹಾಸ ಮತ್ತು ಪುರಾತತ್ವ, **೨೬,** ೨೧–೩೧. ನವಶಿಲಾಯುಗದ ನೆಲೆ ಬೆನಕನಮಟ್ಟಿ: ಒಂದು ಟಿಪ್ಪಣಿ, **೨೯,** ೨೦–೨೧. ಕನ್ನಡ ಗಾದೆಗಳಲ್ಲಿ ನಂದರ ನಾಣ್ಯ, **೩೦,** ೪೦೩–೪೦೪.

ಮಹಾದೇವಿ., ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರವಾಸಗಳು, ರಾಜ್ಯಾಭಿವೃದ್ಧಿಯಲ್ಲಿ ಅವುಗಳ ಪ್ರಭಾವ, **೨೭,** ೪೩೮–೪೪೮. *ಶೃಂಗೇರಿ ಶಾರದಾಪೀಠ ಮತ್ತು ಮೈಸೂರು ಸಂಸ್ಥಾನ ಒಂದು ಅಧ್ಯಯನ, **೨೮,** ೧೨೩–೧೨೯. ಟಿಪ್ಪುಸುಲ್ತಾನನು ಜಾರಿಗೆ ತಂದ ಕೆಲವು ಆಡಳಿತಾತ್ಮಕ ಸುಧಾರಣೆಗಳು, **೨೯,** ೫೩೭–೫೪೦.

ಮಹೇಂದ್ರಕುಮಾರ ಕೆ.ಸಿ., ಬೇಲೂರಿನ ಅರಸ ಮೂರನೆಯ ವೆಂಕಟಾದ್ರಿನಾಯಕ (೧೬೫೯–೧೬೭೦), **೨೬,** ೩೪೦–೩೪೪

ಮಹೇಂದ್ರಕುಮಾರ್ ಎ.ಎಸ್. ಅಕ್ಕೂರು., ಚನ್ನಪಟ್ಟಣ ತಾಲೂಕಿನ ಐತಿಹಾಸಿಕ ಮಹತ್ವದ ನೆಲೆಗಳು, **೨೮,** ೩೬೦–೩೬೬.

ಮಹೇಶ್ ಕೆ., ರಾವಿಯಹಾಳು ಗ್ರಾಮದ ಚೆನ್ನಕೇಶವ ಶಿಲ್ಪ, **೨೬,** ೭೮–೭೯. *ಸಿರುಗುಪ್ಪ ಪ್ರದೇಶದ ಜೈನಧರ್ಮ : ಒಂದು ಅವಲೋಕನ, **೩೦,** ೨೯೭–೩೦೧.

ಮಹೇಶಕುಮಾರ್ ಹ. ಪಾಟೀಲ., *ಮುದ್ದೇಬಿಹಾಳದ ಅಪ್ರಕಟಿತ ಶಾಸನಗಳು, **೩೦,** ೬೭–೬೯. ಹುಬ್ಬಳ್ಳಿ ಪ್ರದೇಶದ ಶಾಸನೋಕ್ತ ದೇವಾಲಯಗಳು, **೩೦,** ೨೪೮–೨೫೩.

ಮಹೇಶ ಬ. ಅಂಗಡಿ, ಸವದತ್ತಿ ಪ್ರದೇಶದ ಪ್ರಾಚ್ಯಾವಶೇಷಗಳು, **೨೬,** ೯೪-೯೯. ಹಿರೇಕುಂಬಿಯ ಅಪ್ರತಿಮ ಹೋರಾಟಗಾರ ಹಾಗೂ ರಾಜಕೀಯ ಮುತ್ಸದ್ದಿ ಶ್ರೀ ಗವಿಸಿದ್ದಪ್ಪ ಬೆಳವಡಿ, **೨೮,** ೫೧೦-೫೧೧.

ಮೀನಾಕ್ಷಿ ಎಂ.ಎಂ., ಮಡಿಕೇರಿ ಪಟ್ಟಣದ ನಗರೀಕರಣ ವಸಾಹತುಷಾಹಿ ಅನುಭವ (ಕ್ರಿ.ಶ. ೧೮೩೪-೧೯೪೭), **೨೮,** ೫೧೨-೫೧೭. ಕರ್ನಾಟಕದಲ್ಲಿ ಕೊಡಗು ರಾಜ್ಯದ ವಿಲೀನ, ೧೯೫೬: ಇತಿಹಾಸ ಕಥನದ ಅವಲೋಕನ, **೨೯,** ೪೨೭-೪೩೦. ವಸಾಹತುಷಾಹಿ ಕೊಡಗು ಹಾಗೂ ಜಾರ್ಜ್ ರಿಕ್ಟರ್‌ನ ಕೊಡಗು ಗೆಸೆಟಿಯರ್ ಒಂದು ವಿಮರ್ಶಾತ್ಮಕ ಅವಲೋಕನ, **೩೦,** ೪೩೨-೪೪೨.

ಮುತ್ತುರಾಜು., ಪಿಟ್ಲಾಲಿ ಮತ್ತು ಕುಂದಲಗುರು ಪರಿಸರದ ಪ್ರಾಚೀನ ಹೊಸ ವೀರ ಮಾಸ್ತಿ ಸ್ಮಾರಕಗಳು, **೨೬,** ೨೨೩-೨೨೮. ಹೂವಿನಹಳ್ಳಿಯ ಪ್ರಾಚೀನ ಸ್ಮಾರಕಗಳು ಮತ್ತು ಅಪ್ರಕಟಿತ ಶಾಸನ, **೨೭,** ೬೪-೬೫. ಬೆಂಗಳೂರು ದಕ್ಷಿಣ ತಾಲೂಕಿನ ಕೆಲವು ನವಶೋಧಿತ ಪ್ರಾಚ್ಯಾವಶೇಷಗಳು, **೨೮,** ೬-೯. ಇಗ್ಗನೂರಿನ ಪ್ರಾಚ್ಯಾವಶೇಷಗಳು, **೨೯,** ೩೧೯-೩೨೦.

ಮುನಿರತ್ನಮ್ಮ ಕೆ.ಎಚ್., ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲೂಕಿನ ಕೈವಾರದ ಸುಗಟೂರು ಅರಸರ ಅಪ್ರಕಟಿತ ಶಾಸನ, **೨೭,** ೭೯-೮೦. ಶಿಡ್ಲಘಟ್ಟ ತಾಲೂಕಿನ ಸಪ್ತಕನ್ನಿಕಾ ಶಿಲ್ಪಗಳು, **೨೮,** ೧೬೬-೧೬೮.

ಮುರಳಿ ಕೆ.ವಿ., ಚನ್ನಪಟ್ಟಣ ತಾಲೂಕಿನ ವೈಶಿಷ್ಟ್ಯಪೂರ್ಣ ಸ್ಮಾರಕ ಶಿಲ್ಪಗಳು, **೩೦,** ೧೯೯-೨೦೨.

ಮುರುಗೇಶಿ ಟಿ., *ಉಡುಪಿಯ ಅಪ್ರಕಟಿತ ಕೋಟಿಕುಳಿ ಶಾಸನ, **೨೮,** ೫೫. *ಪುನ್ನಾಟದ ಪುರಾತನ ಬಂಡಿ, **೨೮,** ೧೭೮-೧೮೦. ಪಳ್ಳಿಯಲ್ಲಿ ಪತ್ತೆಯಾದ ಬೃಹತ್ ಶಿಲಾಯುಗದ ಸಮಾಧಿ ನೆಲೆ, **೨೯,** ೧೫-೧೭.

ಮೇಕನಗದ್ದೆ ಲಕ್ಷ್ಮಣಗೌಡ., ಕುನ್ನಹಳ್ಳಿಯ ಸ್ಮಾರಕ ಶಾಸನ ಹಾಗೂ ಕುಂದ ಗ್ರಾಮದ ಅಪ್ರಕಟಿತ ನಿಶಿಧಿ ಶಾಸನ, **೩೦,** ೫೭-೫೮.

ಮೇಲಕಾರ ಎಸ್.,* ಮಾದನಭಾವಿ ಗ್ರಾಮದಲ್ಲಿ ದೊರೆತ ಸುಂದರ ಶಿಲ್ಪ ಮತ್ತು ಸುತ್ತಮುತ್ತಲಿನ ಪ್ರಾಚ್ಯಾವಶೇಷಗಳು, **೨೭,** ೫೦೫-೫೧.

ಮೇಲಕಾರ ಎಸ್.ಕೆ., ಆದಿಲ್ ಶಾಹಿಗಳ ಅಪ್ರಕಟಿತ ಫರ್ಮಾನು ಮತ್ತು ಸನದುಗಳು, **೨೬,** ೨೫೧-೨೫೩. *ಗದಗ ಜಿಲ್ಲೆ ರೋಣ ತಾಲೂಕಿನ ಜಾಸ್ಲಾಪುರದ ನವಶೋಧಿತ ಶಾಸನ, **೨೭,** ೧೦೨-೧೦೩. ಬೆಳಗಾವಿಯಲ್ಲಿ ಶೋಧವಾದ ಕಂಚಿನ ಶಿವನ ವಿಗ್ರಹದ ನಂದಿ, **೨೮,** ೫೬೭-೫೬೮. *ಹಳಂಗಳಿಯಲ್ಲಿ ಶೋಧವಾದ ಪಾರ್ಶ್ವನಾಥಮೂರ್ತಿ, **೨೮,** ೫೬೯-೫೭೦. *ನವಶೋಧಿತ ಜೈನ ಶಿಲ್ಪಮೂರ್ತಿಗಳು, **೨೯,** ೧೫೪-೧೫೬. ದೇವಗಿರಿ ನವಶೋಧಿತ ಜೈನ ವಿಗ್ರಹಗಳು, **೩೦,** ೨೧೦-೨೧೨. *ಬಿಜಾಪುರದ ಶಾಸನೋಕ್ತ ಕೋಟೆ ಕೊತ್ತಲಗಳು, **೩೦,** ೧೬೧-೧೬೩.

ಮಹಮ್ಮದ್ ಶರೀಫ್ ಕೆ., ಕರ್ನಾಟಕದ ಮಹಮದೀಯ ಶಾಸನಗಳು-ಒಂದು ಸಮೀಕ್ಷೆ (ಡಾ.ರಾ. ಗೋಪಾಲ್ ಶಾಸನ ಪ್ರಶಸ್ತಿ ಉಪನ್ಯಾಸ). **೨೭,** xlv-lxiii.

ಮೋಹನ್ ಕೆ.ಎನ್., ಹುಲ್ಲಹಳ್ಳಿಯ ಪ್ರಾಚ್ಯಾವಶೇಷಗಳು, **೨೬,** ೮೫-೯೦. ಚಟ್ಟೇಶ್ವರ ದೇವಾಲಯ: ಒಂದು ಅಧ್ಯಯನ, **೨೭,** ೧೮೩-೧೮೫. *ಮೊಸಳೆಯ ನಾಗೇಶ್ವರ ಮತ್ತು ಚನ್ನಕೇಶವ ದೇವಾಲಯಗಳ ಶಿಲ್ಪಗಳು ಒಂದು ಅಧ್ಯಯನ, **೨೮,** ೧೬೯-೧೭೩. ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನೋಕ್ತ ದೇವಾಲಯಗಳು, **೨೮,** ೨೬೫-೨೬೮. ಕೊಡಗಿನಲ್ಲಿ ಜೈನ ಧರ್ಮ, **೨೯,** ೪೧೧-೪೧೩.. ಪಿರಿಯಾಪಟ್ಟಣ ತಾಲೂಕಿನ ಶಾಸನಗಳ ಹಿನ್ನೆಲೆಯ ಚಂಗಾಳ್ವರ ಕಾಲದ ಅಧ್ಯಯನ, **೩೦,** ೧೬೪-೧೬೬.

ಮೋಹನ ರಾ., ಮುಲ್ಲೂರ, ಚಿಂಚಖಂಡಿ ಮತ್ತು ಈಶ್ವರಪ್ಪನ ಕೊಳ್ಳದ ಶಿಲಾಯುಗ ಸಂಸ್ಕೃತಿಯ ಒಂದು ಪುರಾತಾತ್ವಿಕ ಅಧ್ಯಯನ, **೨೯,** ೧೦-೧೨. ಧರ್ಮಪುರ: ಕಲ್ಗುಳಿ ನೆಲೆಯ ಅನ್ವೇಷಣೆ ಮತ್ತು ಸಮಗ್ರ ಅಧ್ಯಯನ, **೩೦,** ೧೩-೧೫.

ಯೋಗೀಂದ್ರಕುಮಾರ್., ಶ್ರೀ ಸುರೇಂದ್ರತೀರ್ಥರ ಮಠ ಮತ್ತು ಬೃಂದಾವನ ಹಂಪೆಯಲ್ಲಿ ಇತ್ತೇ!, **೩೦,** ೨೯೪-೨೯೬.

ಯೋಗೀಶ್ವರಪ್ಪ ಡಿ.ಎನ್., ಮಗರೆ ಮುಸ್ಲೂರರ ಮೊದಲ ಬಾಡ ಕಳಿಕಟ್ಟೆಯ ಸಾಮಂತರು, **೨೬,** ೨೮೧-೨೯೦. ಕೃಷ್ಣದೇವರಾಯನ ಸಚಿವ ಸಂಪುಟದ ಪ್ರಭಾವಿ ಸಾಳುವ ತಿಮ್ಮರಸು, **೨೭,** ೨೫೨-೨೫೮. ನಾಯಕರ ಪದ್ಧತಿ ವ್ಯಾಪ್ತಿಗಳು, ಮರು ಪರಿಶೀಲನೆ, **೨೮,** ೫೦೦-೫೦೬.

ರಂಗನಾಥ ವೈ., ಮಹಾಕೂಟೇಶ್ವರ ದೇಗುಲದ ಆತ್ಮಲಿಂಗ: ಅಪರೂಪ ಕಥಾನಕ ಶಿಲ್ಪ, **೨೬,** ೧೧೧-೧೧೨.

ರಂಗಸ್ವಾಮಿ ಆರ್., ಕೃಷ್ಣರಾಜಪೇಟೆ ತಾಲ್ಲೂಕಿನ ಕೈಗೋನಹಳ್ಳಿ ಗ್ರಾಮದ ಅಪ್ರಕಟಿತ ವೀರಗಲ್ಲು ಶಾಸನ, **೨೭,** ೭೨-೭೩.

ಶಾಸ್ತ್ರಿ ಎ.ಕೆ., ಗೋಕರ್ಣದ ಬಂಡಿಕೇರಿಯಲ್ಲಿ ಶ್ರೀ ಪರಿಜ್ಞಾನಾಶ್ರಮ ಸ್ವಾಮಿಗಳಿಂದ ಚಿತ್ರಾಪುರ ಸಾರಸ್ವತ ಮಠ ಸ್ಥಾಪನೆ, **೨೬**, ೩೯೫–೩೯೭. ಶ್ರೀ ಪಾಂಡುರಂಗಾಶ್ರಮರ ಕಾಲದಲ್ಲಿ ಚಿತ್ರಾಪುರ ಸಾರಸ್ವತ ಸಮಾಜದಲ್ಲಿ ಬದಲಾವಣೆ, **೨೭**, ೩೪೦–೩೪೪. ಶೃಂಗೇರಿ ಮಠದ ಚಾರಿತ್ರಿಕ ದಾಖಲೆಗಳ ಸಂಕ್ಷಿಪ್ತ ಪರಿಚಯ, **೨೮**, ೧೦೭–೧೧೨. ಶ್ರೀ ಆನಂದಾಶ್ರಮರ ಕಾಲದಲ್ಲಿ ಚಿತ್ರಾಪುರ ಸಾರಸ್ವತರು, **೨೯**, ೩೦೦–೩೦೩. ಶೃಂಗೇರಿ ಮಠದ ಕಡತದಲ್ಲಿ ದಾಖಲಾದ ಹಾಲಾಡಿಯೊಳಗಿನ ಹುಯ್ಯಾರು–ಹೊಂಸಗಲ್ಲು ಗ್ರಾಮಗಳ ಶಿಲಾಶಾಸನ ಪ್ರತಿ, **೩೦**, ೯೪–೯೬.

ಶಾಶ್ವತಸ್ವಾಮಿ ಮುಕ್ಕುಂದಿಮಠ., ವೆಂಗಿ ವಿಷಯ, ವೆಂಗಿ ಮಂಡಳ, ವೆಂಗಿಪಳು: ಒಂದು ವಿಚಾರ, **೨೮**, ೩೪೩–೩೪೭.

ಶಾಹೀನಾ ಬಾನೂ., ಹಜರತ್ ಖ್ವಾಜಾ ಬಂದಾನವಾಜ್ ಗೇಸೂದರಾಜ್ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳು: ಒಂದು ವಿಶ್ಲೇಷಣೆ, **೨೭**, ೩೨೫–೩೨೯. ಕೋಲಾರದ ಸೂಫಿ ಸಂತ ಹಜರತ್ ಖಾಜಾ ಸೈಯದ್ ಉಸ್ಮಾನ್ ಶಾವಲ್ಲಿ, **೨೮**, ೪೯೧–೪೯೩. ಹಜರತ್ ಷಮ್‌ಶುದ್ದೀನ್ ರಹಮತ್ ಉಲ್ಲಾ ಅಲೈಹಿ ಬಂಗಾರಪೇಟೆಯ ಸೂಫಿ ಸಂತ, **೨೯**, ೫೦೪–೫೦೫.

ಸಿ.ಆರ್. ಶ್ಯಾಮಲ., ಪೂರ್ವ ಕರ್ನಾಟಕದ ಪಾಳೇಗಾರರ ಆಡಳಿತ ಒಂದು ನೋಟ, **೨೭**, ೨೫೯–೨೬೧.

ಶ್ಯಾಮಲಾ ರತ್ನಕುಮಾರಿ ಬೆಂ.ಶಾ., ಕ್ಯಾಲನೂರು ಗ್ರಾಮದ ಐತಿಹಾಸಿಕ ಸ್ಮಾರಕಗಳು, **೨೬**, ೨೩೬–೨೩೯. ಬೆಂಗಳೂರು ವಾರ್ಡ್ ನಂ. ೧೫೪ರಲ್ಲಿ ಅಂತರ್ಗತ ಐತಿಹಾಸಿಕ ಗ್ರಾಮ ನಾಗಸಂದ್ರ, **೨೭**, ೩೭೧–೩೮೨. ಬೆಂಗಳೂರಿನ ಶಾಸ್ತ್ರಿನಗರದಲ್ಲಿ ಬಾಲಾಂಬಿಕಾ ದೇವಾಲಯ, **೨೮**, ೫೪೫–೫೪೬. ಬೆಂಗಳೂರು ನಗರದ ವಿಶ್ವೇಶ್ವರಪುರದ ಮರಾಠಾ ಗಣ್ಯರು, **೨೯**, ೪೮೭–೪೯೨.

ಶಿವಕುಮಾರ್ ಎ., *ಕರ್ನಾಟಕದಲ್ಲಿ ಗಾಂಧೀಜಿಯವರ ಪಾನ ನಿರೋಧ ಚಳವಳಿ ಒಂದು ಅಧ್ಯಯನ, **೨೭**, ೪೨೭–೪೨೯. ಹುದಲಿ ಖಾದಿ ಗ್ರಾಮೋದ್ಯೋಗ ಕೇಂದ್ರ ಒಂದು ನೋಟ, **೨೯**, ೫೩೪–೫೩೬.

ಶಿವಪ್ಪ ನ. ನೀರಲಗಿ., ನಡುಕೂರಿನ ಪ್ರಾಚ್ಯಾವಶೇಷಗಳು, **೨೬**, ೯೧–೯೩. ತಾಳಿಕೋಟೆಯ ಪ್ರಾಚ್ಯಾವಶೇಷಗಳು, **೨೮**, ೧೩–೧೪. ಹೈದರಾಬಾದ ಕರ್ನಾಟಕ ವಿಮೋಚನಾ ಹೋರಾಟದಲ್ಲಿ ತಾಳಿಕೋಟೆ ಮತ್ತು ಇತರೆ ಕೇಂದ್ರಗಳ ಪಾತ್ರ, **೨೯**, ೪೫೫ ೪೫೭. ಭಂಟನೂರಿನ ಪ್ರಾಚ್ಯಾವಶೇಷ ಗಳು, **೩೦**, ೩೫೨–೩೫೪.

ಶಿವರಾಜ ಯತಗಲ್., ಕೊಡೇಕಲ್ಲು ನಾಯಕ ಮನೆತನ, **೨೯**, ೩೮೮–೩೯೧.

ಶಿವರಾಮು ಎಸ್., ಶಿವಾರದ ವೀರಗಲ್ಲುಗಳು ಮತ್ತು ಮಹಾಸತಿ ಕಲ್ಲುಗಳು, **೨೬**, ೨೧೯–೨೨೨. ಮಂಡ್ಯ ಜಿಲ್ಲೆಯ ಚೋಳ ಶಾಸನಗಳು: ಒಂದು ವಿವೇಚನೆ, **೨೭**, ೨೧೫–೨೧೭. ಹೊಯ್ಸಳ ವಿಷ್ಣುವರ್ಧನನ ಕಾಲದ ಶಾಸನೋಕ್ತ ಮಂಡ್ಯ ಪ್ರದೇಶ, **೨೮**, ೨೮೫–೨೯೦. ಮಂಡ್ಯ ಜಿಲ್ಲೆಯ ಹೊಯ್ಸಳರ ಶಾಸನೋಕ್ತ ಮಹಿಳೆಯರು, **೨೯**, ೧೧೯–೧೧೪. ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯರ ದೇವಾಲಯ ಪ್ರವೇಶ ಚಳುವಳಿ: ಒಂದು ಚಾರಿತ್ರಿಕ ಅಧ್ಯಯನ, **೩೦**, ೩೮೯–೩೯೨.

ಶಿವಯೋಗಿ ಕೋರಿಶೆಟ್ಟರ., ಪ್ರಾಚೀನ ಶಕ್ತಿದೇವತೆಯ ಆರಾಧನಾ ಕೇಂದ್ರ ದಿವ್ಯಾದಪೆವೊಸವೂರು, **೨೯**, ೨೧೫–೨೧೭. ಬಾಸವೂರು ಪರಿಸರದ ಶಾಸನೋಕ್ತ ಮಹಿಳೆಯರು, **೩೦**, ೧೫೨–೧೫೪.

ಶ್ರೀನಿವಾಸ ಎ.ಜಿ., ನಿಟ್ಟೂರಿನ ಶಾಂತಿನಾಥ ಜಿನಾಲಯ, **೨೭**, ೧೬೧–೧೬೩.

ಶ್ರೀನಿವಾಸಮೂರ್ತಿ ಎಸ್.ಎಲ್., ಮೆಕೆಂಜಿಯ ದೇಶಿಯ ಸಹಾಯಕ: ದಸ್ತೂರ ನಾರಾಯಣರಾವ್ ಮುತ್ಸದ್ದಿ, **೨೬**, ೩೪೮–೩೪೯. ಕರಸ್ಥಲ ಲಿಂಗಪೂಜೆಯ ವೈದಿಕ ರೂಪ: ಪಾರ್ಥಿವೇಶ್ವರ ಪೂಜೆ, **೨೮**, ೧೦೨–೧೦೪.

ಶ್ರೀಶೈಲ ಮನಗುತ್ತಿ., ಹಂಪೆಯ ಪರೋಕ್ಷ ವಿನಯ ದೇವಾಲಯ., **೩೦**, ೨೭೨–೨೭೪.

ಶುಭಾ., ಸುರಪುರ ಸಂಸ್ಥಾನದಲ್ಲಿ ನಿಷ್ಠಿ ಸಹೋದರರ ಪಾತ್ರ, **೨೮**, ೫೨೫–೫೨೯.

ಶೇಜೇಶ್ವರ ಆರ್., ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಬೃಹತ್ ಶಿಲಾಯುಗ (ಕಬ್ಬಿಣಯುಗ) ಸಂಸ್ಕೃತಿಯ ಗೋರಿಗಳ ಕುರಿತು ಒಂದು ವಿವೇಚನೆ, **೨೮**, ೪. ಮಂಗಳೂರಿನ ಶ್ರೀಮಂತಿಬಾಯಿ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿರುವ ಕಂಚಿನ ವಜ್ರಸತ್ವದ ಹಿಂಭಾಗದಲ್ಲಿರುವ ಅಪ್ರಕಟಿತ ಶಾಸನ, **೨೯**, ೨೮–೨೯. ಮಂಗಳೂರಿನ ಶ್ರೀಮಂತಿಬಾಯಿ ಸ್ಮಾರಕ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿರುವ ಅಪ್ರಕಟಿತ ಶಾಸನಗಳು, **೩೦**, ೭೦–೭೧.

ಪ್ರದೇಶದ ಪಾರಂಪರಿಕ ಬೀದಿಗಳು ಮತ್ತು ಓಣಿಗಳು ಒಂದು ಅವಲೋಕನ, **೨೯**, ೪೬೧-೪೬೪.

ಸ್ಮಿತಾರೆಡ್ಡಿ ಡಿ., ಕರ್ನಾಟಕ ಸ್ವಾತಂತ್ರ್ಯ ಚಳುವಳಿಯಲ್ಲಿ ಎನ್.ಸಿ. ನಾಗರೆಡ್ಡಿಯವರ ಕುಟುಂಬದ ಪಾತ್ರ., **೨೬**, ೪೨೬-೪೩೩. ಘಾಟಿ ಪರಿಸರದ ಪ್ರಾಗೈತಿಹಾಸಿಕ ನೆಲೆಗಳು-ಒಂದು ಶೋಧ, **೨೭**, ೨೫-೨೬. ಹಿರಿಯೂರು ತಾಲೂಕಿನ ಧರ್ಮಪುರದ ಪ್ರಾಚ್ಯಾವಶೇಷಗಳು, **೨೮**, ೧೫-೧೯. ದಾರವಂದದ ಇತಿಹಾಸ ಮತ್ತು ಪ್ರಾಚ್ಯಾವಶೇಷಗಳು, **೨೯**, ೩೪೫-೩೪೭. ಮರಸೂರು ಮಡಿವಾಳದ ಗಂಗರ ಅಪೂರ್ವ ಚಾಮುಂಡಾ ಶಿಲ್ಪ, **೩೦**, ೨೧೬-೨೧೭.

ಸೀತಾರಾಮು ಪಿ., ಅಸಹಕಾರ ಚಳುವಳಿಯ ಹುಟ್ಟು ಮತ್ತು ಸೌತ್ ಕೆನರಾದಲ್ಲಿ ಇದರ ಪ್ರತಿಫಲನ: ಸ್ವದೇಶಾಭಿಮಾನಿ ಪತ್ರಿಕೆಯನ್ನು ಅನುಲಕ್ಷಿಸಿ, **೩೦**, ೪೨೦-೪೨೫.

ಸುಂಕಂ ಗೋವರ್ಧನ., ಶಾಸನಗಳ ಹಿನ್ನೆಲೆಯಲ್ಲಿ ಆರಗ ರಾಜ್ಯದ ಭೌಗೋಳಿಕ ವ್ಯಾಪ್ತಿ, **೨೭**, ೨೨೪-೨೨೮. ಬಯಲುನಾಡು ಕದಂಬರು, **೨೯**, ೩೮೧-೩೮೭.

ಸುಜಾತ., ದಕ್ಷಿಣ ಕನ್ನಡ ಜಿಲ್ಲೆಯ ವಿಜಯನಗರ ಕಾಲದ ಕುರಿತಾದ ಇತಿಹಾಸ ಕಥನ ಒಂದು ಅವಲೋಕನ., **೨೯**, ೫೧೩-೫೧೯. ದಕ್ಷಿಣ ಕನ್ನಡ ಜಿಲ್ಲೆಯ ಕೆಳದಿ ಕಾಲದ ಚಾರಿತ್ರಿಕ, ಸಾಂಸ್ಕೃತಿಕ ನೆಲೆಗಳು, **೩೦**, ೪೦೮-೪೧೧.

ಸುರೇಶ ಕ. ಹಾನಗಲ್ಲ., ಕಲ್ಲಾಪೂರ ಗ್ರಾಮದ ಪ್ರಾಚ್ಯಾವಶೇಷಗಳು, **೩೦**, ೩೮೪-೩೮೫.

ಸುಜಾತ ಎನ್.ಸಿ., ಕೊಡಗಿನ ಕೆಲ ಸ್ಥಳೀಯ ನಾಯಕರು-ಒಂದು ಅಧ್ಯಯನ, **೩೦**, ೩೨೪-೩೨೭.

ಸುದರ್ಶನ್ ಎಸ್., ಹೊಯ್ಸಳರ ಶಿಲ್ಪಕಲೆಯಲ್ಲಿ ರಾಮಾಯಣದ ಪ್ರಧಾನ ಮಹಿಳಾ ಶಿಲ್ಪಗಳು, **೨೬**, ೧೨೧-೧೨೫.

ಸುಧಾಮಣಿ ಬಿ.ವಿ, ಬಸವ ಕವಿಯ ಸಿದ್ಧಲಿಂಗ ಕಾವ್ಯದಲ್ಲಿನ ಚಾರಿತ್ರಿಕ ಅಂಶಗಳು, **೨೬**, ೩೩೬-೩೩೯. ೩೩೮-೩೪೪. ಶೃಂಗೇರಿಯ ಶ್ರೀಮಠ ಮತ್ತು ಮೈಸೂರು ಒಡೆಯರ ಸಂಬಂಧ ಒಂದು ಅವಲೋಕನ, **೨೮**, ೧೧೩-೧೨೦. ಬಸವಾಪಟ್ಟಣ ಗ್ರಾಮದ ಇತಿಹಾಸ ಮತ್ತು ಸಂಸ್ಕೃತಿ ಒಂದು ಅವಲೋಕನ, **೨೯**, ೩೩೮-೩೪೪.

ಸುಮಂಗಲಾ ಮೇಟಿ., ಮುಚಖಂಡಿಯ ಐತಿಹಾಸಿಕ ಸೇತುವೆ, **೩೦**, ೩೩೭.

ಸುರೇಶ ಬಿ.ಸಿ., ಚಾಮರಾಜನಗರ ಜಿಲ್ಲೆಯ ಜೈನಧರ್ಮ, **೨೭**, ೨೦೮-೨೧೦. ವೈದ್ಯನಾಥಪುರದ ವೈದ್ಯನಾಥೇಶ್ವರ ದೇವಾಲಯದ ವಿಶೇಷತೆಗಳು, **೨೮**, ೧೮೫-೧೯೦. ಐತಿಹಾಸಿಕ ಮೈಸೂರು ದಸರಾ ಕಾರ್ಯಕ್ರಮದಲ್ಲಿ ಪೊಲೀಸರ ಪಾತ್ರ, **೨೯**, ೪೬೫-೪೬೯.

ಸುರೇಶ ಬಿ., ಗುಂಜಿಗನೂರಿನ ಐತಿಹಾಸಿಕ ದೇಗುಲ-ಶಿಲ್ಪಗಳು., **೨೬**, ೨೯೪-೨೯೭. ಹಿರಿಯೂರು ತಾಲ್ಲೂಕಿನ ಸ್ಮಾರಕ ಶಿಲ್ಪಗಳು, **೨೭**, ೧೨೫-೧೨೭. ಚಿತ್ರದುರ್ಗ ಜಿಲ್ಲೆಯಲ್ಲಿ ಶ್ರೀ ವೈಷ್ಣವ ಆಳ್ವಾರರು, **೨೮**, ೪೩೬-೪೩೯. ಮುಳಗುಂದ ನಾಡಿನ ದೇವಾಲಯಗಳು, **೩೦**, ೨೬೩-೨೬೭.

ಸುಷಮಾ ಆರೂರ್., ಕರ್ನಾಟಕದಲ್ಲಿ ಶಿವಾಜಿಯ ಕೋಟೆಗಳು, **೨೯**, ೩೫೮-೩೬೨. ಶಿಕ್ಷಣಕ್ಕಾಗಿ ಬದುಕನ್ನು ಸವೆದ ಮಂಗಳೂರಿನ ಅಪರೂಪದ ದಂಪತಿಗಳು ಬೆನಗಲ್ ಸಂಜೀವರಾವ್ ಮತ್ತು ಬೆನಗಲ್ ಪದ್ಮಾಬಾಯಿ, **೩೦**, ೪೫೧-೪೫೫.

ಸೋಮಣ್ಣ ಆರ್., ಮೈಸೂರು ಜಿಲ್ಲೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳ ಅಧ್ಯಯನ, **೩೦**, ೪೧೩-೪೧೯.

ಸೋಮಶೇಖರ್ ಎಸ್.ವೈ., ಶಿರಾ-ರತ್ನಗಿರಿಯ ರಾಜ ರಂಗಪ್ಪನ ಅಪ್ರಕಟಿತ ತಾಮ್ರಶಾಸನ, **೨೮**, ೫೭೧-೫೭೩. ಪ್ರಾಚೀನ ಕರ್ನಾಟಕದ ಅರಸು ಮನೆತನಗಳ ಮೂಲವನ್ನು ಸಾರುವ ಬಿರುದಾವಳಿಗಳು, **೨೯**, ೨೩೨-೨೩೬. ಚಿತ್ರದುರ್ಗ ಜಿಲ್ಲೆಯ ಪ್ರಾಚೀನ ಇಟ್ಟಿಗೆ ದೇವಾಲಯಗಳು, **೩೦**, ೨೩೯-೨೪೭.

ಎಸ್. ಹನುಮಂತ ಜೋಯಿಸ್., ಶಿವಮೊಗ್ಗ ಜಿಲ್ಲೆಯ ನಗರದಲ್ಲಿರುವ ಬಿದನೂರು ಅರಸರ ಕಾಲದ ಪ್ರಾಚೀನ ದೇವಾಲಯದ ಅಧ್ಯಯನ, **೨೮**, ೨೫೪-೨೫೭.

ಹನುಮಂತಮ್ಮ ಎಂ., ವಿ.ಆರ್. ಹನುಮಂತಯ್ಯನವರ 'ವಿಜಯನಗರ ಸಾಮ್ರಾಜ್ಯ ಚರಿತ್ರೆ', **೨೬**, ೨೧೯-೩೨೩. ಬಳ್ಳಾರಿ ಜಿಲ್ಲೆಯ ರೇವಣಸಿದ್ದೇಶ್ವರ ಮಠಗಳು, **೨೮**, ೩೭೪-೪೭೭.

ಹನುಮನಾಯಕ., ಅರಸೀಕೆರೆ ತಾಲೂಕಿನ ಶಾಸನೋಕ್ತ ಅಗ್ರಹಾರಗಳು: ಒಂದು ವಿಶ್ಲೇಷಣೆ, **೨೭**, ೨೭೫-೨೮೧. *ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಮಾಸ್ತಿ ಕಲ್ಲುಗಳು: ಒಂದು ಅಧ್ಯಯನ, **೨೮**, ೧೩೬-೧೩೯. *ಅರಸೀಕೆರೆ ತಾಲ್ಲೂಕಿನ ಬೃಹತ್ ಶಿಲಾಯುಗದ ನೆಲೆಗಳು ಒಂದು

ಅಧ್ಯಯನ, ೨೯, ೪–೭. *ಅರಸೀಕೆರೆ ತಾಲೂಕಿನ ವೀರಗಲ್ಲುಗಳ ಒಂದು ಐತಿಹಾಸಿಕ ವಿಶ್ಲೇಷಣೆ, ೩೦, ೧೦೦–೧೦೩. ಪೂರ್ವ ಮಧ್ಯಯುಗೀನ ಕಾಲದ ವರ್ತಕ ಸಂಘಗಳು: ಒಂದು ಐತಿಹಾಸಿಕ ವಿಶ್ಲೇಷಣೆ, ೩೦, ೧೮೩–೧೮೭.

ಹನುಮಾಕ್ಷಿ ಗೋಗಿ., ಮೊದಲನೆಯ ಕೊಕ್ಕುಳಿ ವಿಕ್ರಮಾದಿತ್ಯನ ಕೆರಿಕ್ಯಾತನಹಳ್ಳಿ ಶಾಸನ, **೨೬,** ೪೮೫–೪೮೭. ಗದಗ ಜಿಲ್ಲಾ ಮುಂಡರಗಿ ತಾಲೂಕಿನ ಹಮ್ಮಿಗಿಯ ಮತ್ತು ಹಾವೇರಿ ಜಿಲ್ಲಾ ಶಿಗ್ಗಾಂವ ತಾಲ್ಲೂಕಿನ ಅರತಾಳದ ಅಪ್ರಕಟಿತ ಶಾಸನಗಳು, **೨೭,** ೮೪–೯೧. ಕ್ಯಾಸನೂರು ಮತ್ತು ದೇವಿಕೊಪ್ಪದ ಹೊಸ ಶಾಸನಗಳು, **೨೯,** ೩೦–೩೭. ಲಕ್ಕುಂಡಿಯಲ್ಲಿ ಹೊಸದಾಗಿ ದೊರೆತಿರುವ ಶಾಸನಗಳು, **೩೦,** ೩೧–೪೧.

ಹರಿಹರ ಶ್ರೀನಿವಾಸರಾವ್., ಹರಿಹರೇಶ್ವರ ದೇವಾಲಯಗಳ ಹೊರಭಿತ್ತಿಯಲ್ಲಿರುವ ನೃತ್ಯಶಿಲ್ಪಗಳ ವಿವೇಚನೆ, **೨೭,** ೧೧೬–೧೧೯. ಹರಿಹರದ ಹರಿಹರೇಶ್ವರ ಮೂರ್ತಿಶಿಲ್ಪ–ಇತ್ತೀಚಿನ ವಿಶ್ಲೇಷಣೆ, **೨೯,** ೧೭೪–೧೭೯. ಹರಿಹರೇಶ್ವರನ ಎಡಭಾಗದ ಪೀಠದಲ್ಲಿರುವ ಮೂರ್ತಿ 'ಪ್ರೋಲಾಕ್ಷ' ದಂಡನಾಯಕನದೇ? **೩೦,** ೨೨೦–೨೨೪.

ಹಳ್ಳಿಕೇರಿ ಎಫ್.ಟಿ., ಹಾಲುಮತ ಗುರುಪರಂಪರೆಯಲ್ಲಿ ಮರುಳಸಿದ್ದೇಶ್ವರ, **೨೬,** ೩೬೬–೩೭೩. ಬೀರಪ್ಪ–ವೀರಭದ್ರರ ಸಮನ್ವಯ ಸಂಗತಿಗಳು, **೨೭,** ೩೦೮–೩೧೨. ಮಹಾರಾಷ್ಟ್ರದ ಪತ್ತೂರು: ತಪೋಭೂಮಿಸಿದ್ಧ ಪರಂಪರೆಯ ನೆಲೆ, **೨೮,** ೪೧೩–೪೧೮. ತುರವಿಹಾಳ ಗ್ರಾಮದಲ್ಲಿ ಹಾಲುಮತ ದಾಖಲೆಗಳ ಶೋಧ, **೨೯,** ೨೫೪–೨೬೦. ಕುರುಬಸೇಣಿ: ಪ್ರಾಚೀನ ಕಾಲದ ಒಂದು ಸಹಕಾರಿ ಸಂಘ, **೩೦,** ೧೫೭–೧೬೦.

ಹೇಮಾವತಿ ಶಿ. ಮೆಣಸಗಿ., ರೋಣ ತಾಲೂಕಿನ ವಿಶಿಷ್ಟ ತ್ರೈಪುರುಷ ಶಿಲ್ಪ, **೨೬,** ೧೦೬–೧೧೦. ಹಂಪಿಯ ಶಿಲ್ಪಗಳಲ್ಲಿ ಮಹಾಭಾರತ ಉಲ್ಲೇಖಿತ ಪುರುಷಮೃಗ ಶಿಲ್ಪ, **೩೦,** ೨೦೫–೨೦೭.



ಲೇಖನ–೧: ನವಶಿಲಾಯುಗದ ಆಯುಧಗಳು



ಲೇಖನ–೨: ಬಳಗುಟ್ಟೆ – ಸಮಾಧಿ




ಲೇಖನ–೨: ಬಳಗುಟ್ಟೆ – ಸಮಾಧಿ



ಲೇಖನ–೨: ಬಳಗುಟ್ಟೆ – ಸಳ ಹುಲಿ ಕೊಲ್ಲುವ ದೃಶ್ಯ



ಲೇಖನ–೨: ಅಕ್ಕನಹಳ್ಳಿ – ವೀರಗಲ್ಲು



ಲೇಖನ-೭: ಮಾಚೋನಾಯಕನ ಹಳ್ಳಿಯ ಮೂವರು ವೀರರ ವೀರಗಲ್ಲು (ಮುಮ್ಮುಖಿ)



ಮಾಚೋನಾಯಕನ ಹಳ್ಳಿಯ ಇಬ್ಬರು ವೀರರ ವೀರಗಲ್ಲು (ಹಿಮ್ಮುಖಿ)



ಪಾಪಾಬೋವಿ ಪಾಳ್ಯದ ವೀರಗಲ್ಲು



ಬೆಟ್ಟಹಳ್ಳಿ ಪಾಳ್ಯದ ಮತ್ತೊಂದು ಬೃಹತ್ ಶಿಲಾಯುಗದ ಸಮಾಧಿ



ಲೇಖನ-೮: ಕುಮತಿಯ ಎರಡು ಮಾನವಾಕೃತಿಯ ಶಿಲಾಶಿಲ್ಪಗಳು (೧೯-೯-೧೯೯೬).



ಕೊಡಗಿನ ಎರವ ಬುಡಕಟ್ಟು ಜನಾಂಗದವರು ಸತ್ತವರ ಸಮಾಧಿಯ ಮೇಲೆ ಇಡುವ ಅಕ್ಕಿಕಾಳಿನ ಮಾನವಾಕೃತಿಯ ಕಲೆ.



ಲೇಖನ–೧೧: ವಚನವಿರುವ ಏಕೈಕ ಶಿಲಾಶಾಸನ



ಲೇಖನ–೧೨: ಪದ್ಮಾವತಿ ದೇವಸ್ಥಾನದ ಆದಿನಾಥನ ಮೂರ್ತಿಯ ಪಾದಪೀಠದ ಶಾಸನ




ಲೇಖನ–೧೪: ಓಜಗುಂಟೆ ಮಲ್ಲೇಶ್ವರ ದೇವಾಲಯದಲ್ಲಿರುವ ಹರೆಶಾಸನ



ಮಧುಗಿರಿ–ತಾಡಿಯ ಚಿಕ್ಕಣ್ಣಸ್ವಾಮಿ ದೇವಾಲಯದಲ್ಲಿರುವ ಹರೆಶಾಸನ




ಲೇಖನ–೧೮: ಕಂಚಿನ ಅಳತೆ ಪಾತ್ರೆ



ತೂಕದ ಕಲ್ಲು

ಲೇಖನ–೧೯:



ಸಿದ್ದಾಪುರದ ಗಡ್ಡದ ಶಿವಯ್ಯಸ್ವಾಮಿಗಳ ಶಿಷ್ಯರ ವಂಶಾವಳಿಯ ತಾಮಪತ್ರ



ರಾಯದುರ್ಗದ ಹಿರೇಮಠದ ಹಾಗೂ ಚಳ್ಳೂರ ಸಿದ್ಧಯ್ಯಸ್ವಾಮಿಗಳ ಶಿಷ್ಯರ ವಂಶಾವಳಿ



ಲೇಖನ–೨೧: ಲಿಂಗಪ್ಪ ಕುರುಬರ ಜಮೀನಿನ ಕಟ್ಟೆಯಲ್ಲಿರುವ ವೀರಗಲ್ಲುಗಳು



ವೀರಗಲ್ಲು (ಕೆರೆಯ ಒಡ್ಡಿನ ಮೇಲೆ)




ಜುಮ್ಮಾ ಮಸೀದಿಯ ಪಾರ್ಶ್ವ ನೋಟ



ಮಹಾವೀರ ತೀರ್ಥಂಕರನ ಪೀಠದ ಭಾಗ



ಸೂರ್ಯ ವಿಗ್ರಹ



ಅಪ್ರಕಟಿತ ಶಾಸನ



ಲೇಖನ-೨೨: ಹಿರೆಹಾಲಿವಾಣದಲ್ಲಿ ದೊರೆತ ವೀರಗಲ್ಲುಗಳು



ಲೇಖನ-೨೪: ಕನಕೂರು ಗ್ರಾಮದ ಶಾಸನ ಮತ್ತು ವೀರಗಲ್ಲುಗಳು




ಲೇಖನ-೨೫: ಗಂಟೆಯ ಮೇಲಿನ ಶಾಸನ



ಲೇಖನ-೨೯: ಹುಲಿ ಬೇಟೆ ವೀರಗಲ್ಲು

ಲೇಖನ-೨೯:
ವೀರಗಲ್ಲು ಸ್ಮಾರಕಗಳು





ಲೇಖನ-೫೪: ರೈತನ ಸ್ಮಾರಕ,
ನೆಲಮಾಕನಹಳ್ಳಿ




ಶಾಸನಶಿಲ್ಪ
ಬೈರಾಪಟ್ಣ



ವೀರಮಾಸ್ತಿಗಲ್ಲು
ಬ್ಯಾಡರಹಳ್ಳಿ



ಲೇಖನ-೫೪: ಶಾಸನಶಿಲ್ಪ, ಐತಲೇನಹಳ್ಳಿ



ಸ್ಮಾರಕ, ಬೇವೂರು



ಲೇಖನ-೧೩:
ಕುನ್ನಹಳ್ಳಿ ಶಾಸನ



ಲೇಖನ-೫೮: ಜೈನ ತೀರ್ಥಂಕರ



ಕುಂದ ಗ್ರಾಮದ ಶಾಸನ



ಲೇಖನ-೬೦: ಆಂಜನೇಯ-ರಾಮಾಯಣ ಚಿತ್ರ



ಲೇಖನ-೬೬: ಪಿರಿದುಂನಾಗರ ಶೈಲಿ



ಲೇಖನ-೬೬: ಪಿರಿದುಂನಾಗರ ಶೈಲಿ







ಲೇಖನ-೭೨: ಸಿದ್ದೇಶ್ವರ ದೇವಾಲಯ



ಪಾರ್ಶ್ವನಾಥ ಬಸದಿ



ಅನ್ನದಾನೇಶ್ವರ ದೇವಾಲಯ



ಲೇಖನ-೯೬: ಬೆಟ್ಟದ ಮಲ್ಲೇನಹಳ್ಳಿಯ ವೀರಗಾರರ ನೆತ್ತು



ಲೇಖನ-೯೨: ಸೇವಾದಳದ ಮೂಲ ಕಟ್ಟಡ



ಸರ್ವೋದಯ ವಾಚನಾಲಯದ ಕಟ್ಟಡ



ತಿಜಾಬಾಯಿ ಹೆರಿಗೆ ಆಸ್ಪತ್ರೆ ಮೂಲ ಕಟ್ಟಡ



ಬಾಗಲಕೋಟೆ ನವನಗರದಲ್ಲಿ ನಿರ್ಮಾಣಗೊಂಡ ನೂತನ ಸೇವಾದಳದ ಕಟ್ಟಡ



ಲೇಖನ-೯೯: ಗಂಡಸಿ ಕೆರೆ ಏರಿ ಮೇಲಿರುವ
ದೇವಾಲಯದ ಅವಶೇಷಗಳು





ಲೇಖನ-೧೦೦: ಭಂಟನೂರಿನ ಪ್ರಾಚ್ಯಾವಶೇಷಗಳು

ಲೇಖನ-೧೦೧: ನಲ್ಲೂರಿನ ಪ್ರಾಚ್ಯಾವಶೇಷಗಳು



ಲೇಖನ-೧೦೪: ಗುಂಬಳ್ಳಿಯ ಪ್ರಾಚ್ಯಾವಶೇಷಗಳು





ಲೇಖನ–೧೧೨

ನಾಣ್ಯಗಳ ಮುಂಭಾಗ
(ಚಿತ್ರ ೧)

ನಾಣ್ಯಗಳ ಹಿಂಭಾಗ
(ಚಿತ್ರ ೨)

ಲೇಖನ–೧೩೨ : ಸ್ಮಾರಕ ಶಿಲ್ಪಗಳು



೨೮ನೇ ವಾರ್ಷಿಕ ಸಮ್ಮೇಳನದಲ್ಲಿ ಪಿಎಚ್.ಡಿ/ಡಿಲಿಟ್ ಪಡೆದ ಸದಸ್ಯರಿಗೆ ಸನ್ಮಾನ



ಡಾ. ಸುಭಾಷ್ ಕಮ್ಮಾರ್



ಡಾ. ನಾಗರಾಜ್ ಪಿ. ನಾಡಗೌಂಡರ್



ಡಾ. ಸುಮಂಗಲಾ ಮೇಟಿ

೨೮ನೇ ವಾರ್ಷಿಕ ಸಮ್ಮೇಳನದ ಛಾಯಾಚಿತ್ರಗಳು









ಕರ್ನಾಟಕ ಇತಿಹಾಸ ಅಕಾದೆಮಿ (ರಿ).

ನಂ. ೪೩/೧೩, ಮಾತೃಕೃಪಾ, ೨ನೇ ಮುಖ್ಯರಸ್ತೆ, ೫ನೇ ಅಡ್ಡರಸ್ತೆ
ಮೌಂಟ್‌ಜಾಯ್ ಬಡಾವಣೆ, ಹನುಮಂತನಗರ, ಬೆಂಗಳೂರು – ೫೬೦ ೦೧೯

೨೦೧೪–೧೫ನೆಯ ಸಾಲಿನ ವಾರ್ಷಿಕ ವರದಿ

ಪ್ರಿಯ ಸದಸ್ಯ ಬಂಧುಗಳೇ,

ಕರ್ನಾಟಕ ಇತಿಹಾಸ ಅಕಾದೆಮಿಯ ೨೯ನೆಯ ವಾರ್ಷಿಕ ಸಮ್ಮೇಳನಕ್ಕಾಗಿ ನಾವೆಲ್ಲಾ ಮಂಡ್ಯ ಜಿಲ್ಲೆಯ ಕರ್ನಾಟಕ ಸಂಘದ ಸಭಾಂಗಣದಲ್ಲಿ ಸಮಾವೇಶಗೊಂಡಿದ್ದೇವೆ. ಕಳೆದ ಸುಮಾರು ಮೂರು ದಶಕಗಳಿಂದ ಅಕಾದೆಮಿಯ ಅಭ್ಯುದಯದಲ್ಲಿ ನಿರಂತರವಾಗಿ ಸಹಕರಿಸುತ್ತಾ ಬಂದಿರುವ ಎಲ್ಲರಿಗೂ ಅನಂತ ಧನ್ಯವಾದಗಳು. ಕಳೆದ ೨೮ ಸಮ್ಮೇಳನಗಳಿಗೆ ಆಶ್ರಯ ನೀಡಿ ಅಕಾದೆಮಿಯನ್ನು ಪೋಷಿಸಿರುವ ಎಲ್ಲಾ ಸಂಘಸಂಸ್ಥೆ ಹಾಗೂ ಧರ್ಮಪೀಠಗಳಿಗೆ ಅಕಾದೆಮಿಯು ಕೃತಜ್ಞವಾಗಿದೆ.

ಐತಿಹಾಸಿಕ ಪರಂಪರೆ ಉಳಿಸಿ–೨೦೧೪

೨೦೧೪ನೇ ಸಾಲಿನ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹದ ಉದ್ಘಾಟನಾ ಸಮಾರಂಭವನ್ನು ದಿನಾಂಕ ೧೬–೦೮–೨೦೧೪ರ ಶನಿವಾರ ಸಂಜೆ ೫.೦೦ ಗಂಟೆಗೆ ಬೆಂಗಳೂರಿನ ಬಸವನಗುಡಿಯಲ್ಲಿರುವ ನ್ಯಾಷನಲ್ ಕಾಲೇಜಿನ ಮಲ್ಟಿಮೀಡಿಯಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವರ್ಷವೂ ಎಂದಿನಂತೆ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆರ್ಥಿಕ ಸಹಯೋಗ ದೊರೆತಿತ್ತು.

ಮೊದಲಿಗೆ ಡಾ. ಕೂ.ಸ.ಅಪರ್ಣ ಮತ್ತು ಸಂಗಡಿಗರಿಂದ ಪ್ರಾರ್ಥನೆ ಹಾಗೂ ಲಾವಣಿಯ ಗಾಯನದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರು ಸಭೆಗೆ ಸ್ವಾಗತ ಕೋರಿ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದ ಉದ್ಘಾಟನೆಯಲ್ಲಿ ಭಾಗವಹಿಸಿದ್ದ ಡಾ. ಸಿ.ಆರ್. ಸಂಪತ್‌ಕುಮಾರಿ, ಪ್ರಾಂಶುಪಾಲರು, ನ್ಯಾಷನಲ್ ಪದವಿ ಕಾಲೇಜು, ಬಸವನಗುಡಿ, ಬೆಂಗಳೂರು ಅವರು "ಐತಿಹಾಸಿಕ ಪರಂಪರೆ ಉಳಿಸಿ" ಸಪ್ತಾಹವನ್ನು ಜ್ಯೋತಿ ಬೆಳಗಿಸುವ ಮೂಲಕ ವಿಧಿವತ್ತಾಗಿ ಉದ್ಘಾಟಿಸಿ, ಪರಂಪರೆ–ಸಂಸ್ಕೃತಿ ಬಗ್ಗೆ ತಿಳಿಸಿದ್ದಲ್ಲದೆ, ಐತಿಹಾಸಿಕ ಪರಂಪರೆ ಮಹತ್ವವನ್ನು ಪಠ್ಯಪುಸ್ತಕಗಳಲ್ಲಿ ತರಬೇಕಾದ ಅವಶ್ಯಕತೆ ಮತ್ತು ವಿದ್ಯಾರ್ಥಿಗಳಲ್ಲಿ ಅವುಗಳ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನವಾಗಬೇಕೆಂದು ತಿಳಿಸಿದರು. ಅಕಾದೆಮಿಯು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಮೂಲಕ ಜಾಗೃತಿ ಮೂಡಿಸುತ್ತಿರುವುದನ್ನು ಶ್ಲಾಘಿಸಿದರು. ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ನಿರ್ದೇಶಕರು (ಪ್ರಭಾರ ಪ್ರಾಚ್ಯವಸ್ತು) ಶ್ರೀ ಟಿ.ಎಸ್. ಗಂಗಾಧರ್ ಅವರು, ಈ ಸಂದರ್ಭಕ್ಕೆಂದೇ ಕಲಾವಿದ ಶ್ರೀನಿವಾಸ್ ಟ. ಅವರು ಅಕಾದೆಮಿಗಾಗಿ ಸಿದ್ಧಪಡಿಸಿದ್ದ ವಿಶೇಷ ಭಿತ್ತಿಚಿತ್ರ ವಿನ್ಯಾಸವನ್ನು ಅನಾವರಣ ಮಾಡಿದರು. ಶ್ರೀ ಟಿ.ಎಸ್. ಗಂಗಾಧರ್ ಅವರು, ಐತಿಹಾಸಿಕ ಸ್ಮಾರಕಗಳ ರಕ್ಷಣೆ, ಜನರಲ್ಲಿ ಜಾಗೃತಿ, ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವ ಬಗ್ಗೆ ತಿಳಿಸಿದರು. ಅಕಾದೆಮಿಯು ಪ್ರಾಚ್ಯವಸ್ತು ಪರಂಪರ ಇಲಾಖೆಯೊಂದಿಗೆ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದನ್ನು ಶ್ಲಾಘಿಸಿದ್ದಲ್ಲದೆ, ತಮ್ಮ ಸಂಸ್ಥೆಯಿಂದ ಇನ್ನೂ ಹೆಚ್ಚಿನ ಸಹಕಾರ ನೀಡುವ ಭರವಸೆ ನೀಡಿದರು. ಅಕಾದೆಮಿಯ ಸದಸ್ಯರಲ್ಲಿ ಹಿರಿಯ ವಿದ್ವಾಂಸರು ಅಂತರಾಷ್ಟ್ರೀಯ ಖ್ಯಾತಿ ಪಡೆದವರನ್ನು ಸ್ಮರಿಸಿದರು.

ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ದೇವರಕೊಂಡಾರೆಡ್ಡಿ, ಅಧ್ಯಕ್ಷರು, ಕರ್ನಾಟಕ ಇತಿಹಾಸ ಅಕಾದೆಮಿ, ಅವರು ಅಕಾದೆಮಿಯ ಕಾರ್ಯಚಟುವಟಿಕೆಗಳು ಬಗ್ಗೆ ಹಾಗೂ ಪರಂಪರೆ ಉಳಿಸಿ ಕಾರ್ಯಕ್ರಮಗಳ ಬಗ್ಗೆ ಸದಸ್ಯರು, ಮುಖ್ಯವಾಗಿ ಕಾಲೇಜು ಉಪನ್ಯಾಸಕರು ಹೆಚ್ಚಿನ ಆಸಕ್ತಿ ವಹಿಸಿ ನಡೆಸುವಂತಾಗಬೇಕು ಎಂದು ತಿಳಿಸಿದರು. ಅಕಾದೆಮಿಯೊಂದಿಗೆ ಸಹಕಾರ ನೀಡುತ್ತಿರುವ ಪ್ರಾಚ್ಯವಸ್ತು ಪರಂಪರೆ ಇಲಾಖೆ ಹಾಗೂ ಸಂಘಸಂಸ್ಥೆಗಳನ್ನು ನೆನೆಯುತ್ತಾ ಅವುಗಳ ಸಹಕಾರದಿಂದ ಅಕಾದೆಮಿಯು ನಿರಂತರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು ಘಟಕವು ಡಾ. ಇಂದಿರಾ ಹೆಗ್ಗಡೆ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರು ನಗರದ ಪ್ರೌಢಶಾಲೆ, ಪದವಿಪೂರ್ವ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸಿದ ಭಾಷಣ ಹಾಗೂ ಪ್ರಬಂಧಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಡಾ. ಸಿ.ಆರ್. ಸಂಪತ್‌ಕುಮಾರಿ, ಶ್ರೀ ಟಿ.ಎಸ್. ಗಂಗಾಧರ್, ಡಾ. ದೇವರಕೊಂಡಾರೆಡ್ಡಿ ಮತ್ತು ಡಾ. ಇಂದಿರಾ ಹೆಗ್ಗಡೆ ಅವರು ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಿದರು. ಭಾಷಣ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ಒಟ್ಟು ೩೩೬ ಸ್ಪರ್ಧಿಗಳು ಭಾಗವಹಿಸಿದ್ದರು. ಪಾರಿತೋಷಕಗಳನ್ನು ಪ್ರಾಯೋಜಿಸಿದ ಪ್ರಾಯೋಜಕರಿಗೆ ಗೌರವಾದರವನ್ನೂ ಮತ್ತು

ಸ್ಪರ್ಧಾ ಕಾರ್ಯಕ್ರಮದಲ್ಲಿ ಸಹಕರಿಸಿದ ಸ್ವಯಂಸೇವಕರು ಹಾಗೂ ತೀರ್ಪುಗಾರರಿಗೆ ಡಾ. ಇಂದಿರಾ ಹೆಗ್ಗಡೆ ಅವರು ಕೃತಜ್ಞತೆ ಸಲ್ಲಿಸಿದರು.

ಅಕಾಡೆಮಿಯು ೨೦೧೮ನೇ ಸಾಲಿನ "ಐತಿಹಾಸಿಕ ಪರಂಪರೆ ಉಳಿಸಿ" ಸಪ್ತಾಹ ಕಾರ್ಯಕ್ರಮ ಉದ್ಘಾಟನೆ ಹಾಗೂ ಸ್ಪರ್ಧೆಗಳನ್ನು ನಡೆಸಲು ಎಲ್ಲಾ ರೀತಿಯಿಂದ ಸಹಕರಿಸಿದ, ಸ್ಥಳಾವಕಾಶ ಮಾಡಿಕೊಟ್ಟ ಬಸವನಗುಡಿ ನ್ಯಾಷನಲ್ ಕಾಲೇಜಿನ ಆಡಳಿತ ವರ್ಗಕ್ಕೆ ಅಕಾಡೆಮಿಯು ಕೃತಜ್ಞತೆ ಸಲ್ಲಿಸಿತು. ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ಕಾರ್ಯಕ್ರಮ ಸಂಯೋಜನೆ ಹಾಗೂ ನಿರೂಪಣೆ ಮಾಡಿದರು. ಈ ಕಾರ್ಯಕ್ರಮವು ಯಶಸ್ವಿಯಾಗುವಲ್ಲಿ ಸಹಕರಿಸಿದ ಸರ್ವರಿಗೂ ಅಕಾಡೆಮಿಯು ಡಾ. ಕೆ. ವಸಂತಲಕ್ಷ್ಮೀ ಅವರು ವಂದನೆ ಅರ್ಪಿಸುವುದರೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಬೆಂಗಳೂರು ನಗರದಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ ವತಿಯಿಂದ ರಾಜ್ಯಮಟ್ಟದಲ್ಲಿ "ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ" ಕಾರ್ಯಕ್ರಮವು ಉದ್ಘಾಟನೆಗೊಂಡು ಸದರಿ ವರ್ಷದಲ್ಲಿ ವಿಶೇಷ ಭಿತ್ತಿಪತ್ರಗಳ ಅನಾವರಣದ ನಂತರ ರಾಜ್ಯದಾದ್ಯಂತ ವಿವಿಧ ಸ್ಥಳಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳು ನಡೆದಿವೆ. ಅಕಾಡೆಮಿಯು ಸದಸ್ಯರ ಅಪೇಕ್ಷೆಯಂತೆ ಅಗತ್ಯವಿರುವ ಭಿತ್ತಿಪತ್ರ, ಸಂಬಂಧಿತ ಸಾಹಿತ್ಯ ಹಾಗೂ ಪ್ರಚಾರಪತ್ರಗಳನ್ನು ಸದಸ್ಯರಿಗೆ ಮುಂಚಿತವಾಗಿ ಕಳುಹಿಸಲಾಗಿತ್ತು. ಆ ಪ್ರಕಾರ ಅಕಾಡೆಮಿಯ ಸದಸ್ಯರು, ಇತಿಹಾಸ ಆಸಕ್ತರು ಹಾಗೂ ಸಂಘಸಂಸ್ಥೆಗಳು ನಾಡಿನಾದ್ಯಂತ ವರ್ಷದುದ್ದಕ್ಕೂ "ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ಹಮ್ಮಿಕೊಂಡು ಆಚರಿಸಿದ ಕಾರ್ಯಕ್ರಮಗಳ ವಿವರವನ್ನಿಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

ದಿನಾಂಕ ೨೦-೮-೨೦೧೮ ರಿಂದ ೨೬-೮-೨೦೧೮ರವರೆಗೆ ರಾಮನಗರ ಜಿಲ್ಲೆ

ಕನಕಪುರ ರೂರಲ್ ಪದವಿ ಕಾಲೇಜಿನ ಇತಿಹಾಸ ಮತ್ತು ಪ್ರವಾಸೋದ್ಯಮ ವಿಭಾಗ, ರಾಮನಗರ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಂಘ, ಕನಕಪುರ, ಸಹೃದಯ ಪ್ರತಿಷ್ಠಾನ ಮಾಗಡಿ ಇವರ ಸಹಯೋಗದೊಂದಿಗೆ ದಿನಾಂಕ: ೨೦-೮-೨೦೧೮ ರಿಂದ ೨೬-೮-೨೦೧೮ರವರೆಗೆ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವು ರಾಮನಗರ ಜಿಲ್ಲೆಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ದಿನಾಂಕ : ೨೦-೮-೨೦೧೮ ಬುಧವಾರ ರೂರಲ್ ಪದವಿ ಕಾಲೇಜು ಸೆಮಿನಾರ್ ಹಾಲಿನಲ್ಲಿ ಬೆಳಿಗ್ಗೆ ೧೧ ಗಂಟೆಗೆ ಶ್ರೀ ಸಿ. ರಮೇಶ್, ಗೌರವ ಕಾರ್ಯದರ್ಶಿ, ಗ್ರಾ.ವಿ.ಪ್ರ.ಸಂಘ, ಅವರಿಂದ ಉದ್ಘಾಟನೆಗೊಂಡಿತು. ಶ್ರೀ ಮರಳವಾಡಿ ಉಮಾಶಂಕರ್, ಅಧ್ಯಕ್ಷರು, ಕರ್ನಾಟಕ ಸಂಘ, ಕನಕಪುರ, ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಡಾ. ಜಿ. ಜ್ಞಾನೇಶ್ವರಿ, ಸಹ ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಪುರ ಇವರಿಂದ ವಿಶೇಷ ಉಪನ್ಯಾಸವೇರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಮೇಜರ್ ಮುನಿರಾಜಪ್ಪ, ಪ್ರಾಂಶುಪಾಲರು, ರೂರಲ್ ಪದವಿ ಕಾಲೇಜು, ಕನಕಪುರ ಇವರು ವಹಿಸಿದ್ದರು.

ರಾಮನಗರ ಜಿಲ್ಲಾದ್ಯಂತ ಕಾರ್ಯಕ್ರಮ ರೂಪಿಸಿದವರು ಡಾ. ಮೇಜರ್ ಮುನಿರಾಜಪ್ಪ, ಪ್ರಾಂಶುಪಾಲರು, ರೂರಲ್ ಪದವಿ ಕಾಲೇಜು, ಕನಕಪುರ, ಶ್ರೀ ಬಿ.ಟಿ. ನಾಗೇಶ್, ಅಧ್ಯಕ್ಷರು, ಕ.ಸಾ.ಪ. ರಾಮನಗರ ಜಿಲ್ಲೆ, ಶ್ರೀ ಮರಳವಾಡಿ ಉಮಾಶಂಕರ್, ಅಧ್ಯಕ್ಷರು, ಕರ್ನಾಟಕ ಸಂಘ, ಕನಕಪುರ, ಶ್ರೀ ಎಲ್ಲೇಗೌಡ ಬೆಸಗರಹಳ್ಳಿ, ಸಂಯೋಜಕರು, ಕ.ಇ.ಅ. ಮತ್ತು ಪ್ರೊ. ಜೋಗಯ್ಯ, ಮುಖ್ಯಸ್ಥರು, ಇತಿಹಾಸ ಮತ್ತು ಪ್ರವಾಸೋದ್ಯಮ ವಿಭಾಗ, ಇವರ ನೇತೃತ್ವದಲ್ಲಿ ಕಾರ್ಯಕ್ರಮಗಳು ಯಶಸ್ವಿಯಾಗಿ ೧೮ ಶಾಲಾ-ಕಾಲೇಜುಗಳಲ್ಲಿ ನಡೆದಿದೆ. ಒಟ್ಟು ಕಾರ್ಯಕ್ರಮದ ಸಮಾರೋಪವು ದಿನಾಂಕ: ೨೬-೮-೨೦೧೮ ಮಂಗಳವಾರ ರೂರಲ್ ಪದವಿಪೂರ್ವ ಕಾಲೇಜು, ಸಾತನೂರು ಇಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಪುಟ್ಟಸ್ವಾಮಿಗೌಡರು, ಅಧ್ಯಕ್ಷರು, ಕಾಲೇಜು ಅಭಿವೃದ್ಧಿ ಸಮಿತಿ ರೂ.ಪ.ಪೂ. ಕಾಲೇಜು, ಸಾತನೂರು ಇವರು ಆಗಮಿಸಿದ್ದಲ್ಲದೆ, ಡಾ. ಟಿ.ಎಸ್. ವೆಂಕಟೇಶ, ಉಪನ್ಯಾಸಕರು, ಎಸ್. ಕರಿಯಪ್ಪ ರೂರಲ್ ಸ್ನಾತಕೋತ್ತರ ಕೇಂದ್ರ, ಕನಕಪುರ ಇವರು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಶ್ರೀ ರಾಮಚಂದ್ರೇಗೌಡ ಅವರು ವಹಿಸಿ ಕಾರ್ಯಕ್ರಮವು ಯಶಸ್ವಿಯಾಯಿತು. ಕಾರ್ಯಕ್ರಮ ವಿವರ ಈ ಕೆಳಕಂಡಂತಿದೆ.

ವಿಶೇಷ ಉಪನ್ಯಾಸ ಕಾರ್ಯಕ್ರಮ – ಕನಕಪುರ ತಾಲ್ಲೂಕು

ದಿನಾಂಕ	ಸ್ಥಳ	ಅಧ್ಯಕ್ಷತೆ	ಅತಿಥಿ ಉಪನ್ಯಾಸಕರು
೨೦-೮-೨೦೧೮ರ ಬುಧವಾರ	ರೂರಲ್ ಪದವಿ ಪೂರ್ವ ಕಾಲೇಜು ಕನಕಪುರ	ಶ್ರೀ ದೇವರಾಜು ಪ್ರಾಂಶುಪಾಲರು	ಶ್ರೀಮತಿ ಶಶಿಕಲಾ ಸ.ಪ್ರ.ದ.ಕಾಲೇಜು, ಕನಕಪುರ

೨೧-೮-೨೦೧೪ರ ಗುರುವಾರ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಪುರ	ಡಾ. ವೇಣುಗೋಪಾಲ್ ಪ್ರಾಂಶುಪಾಲರು	ಡಾ. ಎಚ್.ಜಿ. ಪಾರ್ಥಸಾರಥಿ ಎಸ್. ಕರಿಯಪ್ಪ ರೂ. ಸ್ನಾತಕೋತ್ತರ ಕೇಂದ್ರ
	ಶಿವಯೋಗಿ ಮುನೇಶ್ವರ ಪದವಿ ಪೂರ್ವ ಕಾಲೇಜು, ಮರಳೆಗವಿಮಠ	ಶ್ರೀ ಮಂಜುನಾಥ್ ಪ್ರಾಂಶುಪಾಲರು	ಶ್ರೀ ಪ್ರಸನ್ನ ಎಚ್.ಬಿ. ರೂರಲ್ ಪದವಿ ಕಾಲೇಜು, ಕನಕಪುರ
೨೨-೮-೨೦೧೪ರ ಶುಕ್ರವಾರ	ಬ್ಲಾಸಮ್ ಪ್ರೌಢಶಾಲೆ ಕನಕಪುರ	ಶ್ರೀಮತಿ ಗಂಗಾಂಬಿಕಾ ಪ್ರಾಂಶುಪಾಲರು	ಶ್ರೀ ಪ್ರಸನ್ನ ಎಚ್.ಬಿ. ರೂರಲ್ ಪದವಿ ಕಾಲೇಜು, ಕನಕಪುರ
೨೩-೮-೨೦೧೪ರ ಶನಿವಾರ	ಎಸ್.ಎನ್.ಆರ್.ಪ್ರೌಢಶಾಲೆ ಶ್ರೀ ದೇಗುಲ ಮಠ, ಕನಕಪುರ	ಶ್ರೀಮತಿ ಜಿ.ಬಿ. ಶೈಲಜ ಮುಖ್ಯೋಪಾಧ್ಯಾಯರು	ಶ್ರೀ ವಿಜೇಂದ್ರ ರೂರಲ್ ಪದವಿ ಕಾಲೇಜು, ಕನಪುರ
	ಎಕ್ಸ್ ಮುನಿಸಿಪಲ್ ಪದವಿಪೂರ್ವ ಕಾಲೇಜು, ಕನಕಪುರ	ಶ್ರೀ ಷಡಕ್ಷರಸ್ವಾಮಿ ಪ್ರಾಂಶುಪಾಲರು	ಡಾ. ಎಂ. ಗೋವಿಂದಪ್ಪ ಮುಖ್ಯಸ್ಥರು, ಎಸ್. ಕರಿಯಪ್ಪ ರೂರಲ್ ಸ್ನಾತಕೋತ್ತರ ಕೇಂದ್ರ
೨೫-೮-೨೦೧೪ರ ಸೋಮವಾರ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೋಡಿಹಳ್ಳಿ	ಡಾ. ಜೆ.ಸಿ. ರಾಧಾ ಪ್ರಾಂಶುಪಾಲರು	ಡಾ. ಟಿ.ಎಸ್. ವೆಂಕಟೇಶ ಯು.ಜಿ.ಸಿ. ಪೋಸ್ಟ್ ಡಾಕ್ಟರಲ್ ಫೆಲೋ, ಕನಕಪುರ
	ಮಾನಸ ಸ್ವತಂತ್ರ ಪದವಿಪೂರ್ವ ಕಾಲೇಜು, ಕನಕಪುರ	ಶ್ರೀ ಮಂಜುನಾಥ್ ಪ್ರಾಂಶುಪಾಲರು	ಪ್ರೊ. ಡಿ. ಕೃಷ್ಣಯ್ಯ ರೂರಲ್ ಪದವಿ ಕಾಲೇಜು, ಕನಕಪುರ
	ರಾಮನಗರ ತಾಲ್ಲೂಕು		
೨೨-೮-೨೦೧೪ರ ಶುಕ್ರವಾರ	ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು, ರಾಮನಗರ	ಶ್ರೀ ಟಿ.ಎಸ್. ರಾಜಣ್ಣ ಪ್ರಾಂಶುಪಾಲರು	ಡಾ. ಕನ್ಯಾಕುಮಾರ್ ಬಾ.ಸ.ಪ.ಪೂ.ಕಾಲೇಜು, ರಾಮನಗರ
	ಸರ್ಕಾರಿ ಪದವಿಪೂರ್ವ ಕಾಲೇಜು ಸುಗ್ಗನಹಳ್ಳಿ	ಶ್ರೀ ವನರಾಜು ಪ್ರಾಂಶುಪಾಲರು	ಶ್ರೀಮತಿ ವಿಜಯಕುಮಾರಿ ಸ.ಪ.ಪೂ. ಕಾಲೇಜು, ಸುಗ್ಗನಹಳ್ಳಿ
೨೩-೮-೨೦೧೪ರ ಶನಿವಾರ	ಸರ್ಕಾರಿ ಪದವಿಪೂರ್ವ ಕಾಲೇಜು ಕೂನಗಲ್ಲು	ಶ್ರೀಮತಿ ಗೀತಾ ಪ್ರಾಂಶುಪಾಲರು	ಶ್ರೀ ನಾಗೇಶ್ ಸ.ಪ.ಪೂ. ಕಾಲೇಜು, ಕೂನಗಲ್ಲು
	ಭಾರತೀಯ ಸಂಸ್ಕೃತಿ ವಿದ್ಯಾಪೀಠ ಪ.ಪೂ. ಕಾಲೇಜು, ರಾಮನಗರ	ಶ್ರೀ ಟಿ.ಗೋಪಾಲ್ ಪ್ರಾಂಶುಪಾಲರು	ಪ್ರೊ. ಎಸ್.ಬಿ. ಬೋರೇಗೌಡ ಸ.ಪ್ರ.ದರ್ಜೆ ಕಾಲೇಜು, ಕೊಪ್ಪ
	ಮಾಗಡಿ ತಾಲ್ಲೂಕು		
೨೨-೮-೨೦೧೪ರ ಶುಕ್ರವಾರ	ಪದವಿಪೂರ್ವ ಕಾಲೇಜು, ಹುಲಿಕಟ್ಟೆ	ಎಂ.ಸಿ. ಗೋವಿಂದ ಪ್ರಾಂಶುಪಾಲರು	ಪ್ರೊ. ತಿಮ್ಮಹನುಮಯ್ಯ ಸ.ಪ್ರ.ದ. ಕಾಲೇಜು, ಮಾಗಡಿ
೨೩-೮-೨೦೧೪ರ ಶನಿವಾರ	ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಾಗಡಿ	ಪ್ರೊ. ಎ.ಹೆಚ್.ಫಾರೂಕಿ ಪ್ರಾಂಶುಪಾಲರು	ಡಾ. ಚಿಕ್ಕಚನ್ನಯ್ಯ ಸ.ಪ್ರ.ದ.ಕಾ., ರಾಜಾಜಿನಗರ
	ಸರ್ಕಾರಿ ಪದವಿಪೂರ್ವ ಕಾಲೇಜು ಅಗಲಕೋಟೆ	ಶ್ರೀ ಜಯರಾಮು ಪ್ರಾಂಶುಪಾಲರು	ಪ್ರೊ. ತಿಮ್ಮಹನುಮಯ್ಯ ಸ.ಪ್ರ.ದ.ಕಾಲೇಜು, ಮಾಗಡಿ
	ಮಾನಸ ವಿದ್ಯಾ ನಿಧಿ ಕೆಂಪೇಗೌಡ ಪ್ರೌಢಶಾಲೆ, ಮಾಗಡಿ	ಶ್ರೀ ಶಿವಕುಮಾರ್ ಮುಖ್ಯೋಪಾಧ್ಯಾಯರು	ಡಾ. ಎಚ್. ಕೃಷ್ಣೇಗೌಡ ಸ.ಪ್ರ.ದರ್ಜೆ ಕಾಲೇಜು, ಮದ್ದೂರು
	ಚನ್ನಪಟ್ಟಣ ತಾಲ್ಲೂಕು		
೨೧-೮-೨೦೧೪ರ ಗುರುವಾರ	ಶ್ರೀ ಕುವೆಂಪು ಪದವಿ ಕಾಲೇಜು ಕೆಂಗಲ್, ಚನ್ನಪಟ್ಟಣ	ಪ್ರೊ. ಕೆ. ಶಿವಲಿಂಗಪ್ಪ ಪ್ರಾಂಶುಪಾಲರು	ಡಾ. ಎಚ್. ಕೃಷ್ಣೇಗೌಡ ಸ.ಪ್ರ.ದರ್ಜೆ ಕಾಲೇಜು, ಮದ್ದೂರು
೨೨-೮-೨೦೧೪ರ ಶುಕ್ರವಾರ	ಬಾಲಕರ ಸ.ಪ.ಪೂ. ಕಾಲೇಜು ಚನ್ನಪಟ್ಟಣ	ಶ್ರೀ ಸಿದ್ದರಾಜೇಗೌಡ ಪ್ರಾಂಶುಪಾಲರು	ಭೂಹಳ್ಳಿ ಪುಟ್ಟಸ್ವಾಮಿ ಉಪನ್ಯಾಸಕರು

ದಿನಾಂಕ ೧೦-೯-೨೦೧೪, ವಿಜಾಪುರ

ಕರ್ನಾಟಕ ಪದವಿಪೂರ್ವ ಕಾಲೇಜು ಕಗ್ಗೋಡ ವಿಜಾಪುರದಲ್ಲಿ ದಿನಾಂಕ ೧೦.೯.೨೦೧೪ರಂದು ಬೆಳಿಗ್ಗೆ ಕಾಲೇಜಿನ ಸಭಾಭವನದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಪ್ರಾಂಶುಪಾಲರಾದ ಶ್ರೀ ಕೆ.ಆರ್. ಇನಾಮದಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಗೀತ ಪಾಟೀಲ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭಿಸಿ ಶ್ರೀ ಬಿ.ಪಿ. ಕೊಟ್ನಾಳ ಇತಿಹಾಸ ಉಪನ್ಯಾಸಕರು ಅವರು ಸ್ವಾಗತಿಸಿದರು. ವಿದ್ಯಾರ್ಥಿಗಳು ಐತಿಹಾಸಿಕ ಪರಂಪರೆ ಹಾಗೂ ಅದರ ಮಹತ್ವದ ಬಗ್ಗೆ ಮಾತನಾಡಿದರು. ಇತಿಹಾಸ ಉಪನ್ಯಾಸಕ ಶ್ರೀ ಬಿ.ಪಿ. ಕೊಟ್ನಾಳ ಅವರು ಶಿಲಾಶಾಸನ, ನಾಣ್ಯ, ಹಸ್ತಪ್ರತಿ, ಸ್ಮಾರಕ, ದೇವಾಲಯ, ಇತ್ಯಾದಿಗಳ ಮಹತ್ವ ಹಾಗೂ ಅವುಗಳ ರಕ್ಷಣೆ ಬಗ್ಗೆ ಸವಿವರವಾಗಿ ತಿಳಿಸಿದರು. ಅಧ್ಯಕ್ಷರಾದ ಶ್ರೀ ಕೆ.ಆರ್. ಇನಾಮದಾರ ಅವರು ದೇವಾಲಯ, ಚರ್ಚ್, ಮಸೀದಿ, ವಿಗ್ರಹಗಳ ಬಗ್ಗೆ ಅವುಗಳ ಪರಂಪರೆ ಕುರಿತು ತಿಳಿಸಿದರು. ಎಲ್ಲಾ ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗವಹಿಸಿದ್ದಲ್ಲದೆ ಶ್ರೀ ಎಂ.ಎಚ್. ಮೋಕಾಶಿ ಅವರು ವಂದನಾರ್ಪಣೆ ಅರ್ಪಿಸಿದರು.

ದಿನಾಂಕ ೨೯-೯-೨೦೧೪, ಚಿಕ್ಕಮಗಳೂರು

ಹೆಚ್. ನರಸಿಂಹಯ್ಯ ಪ್ರೌಢಶಾಲೆಯಲ್ಲಿ ದಿನಾಂಕ: ೨೯-೯.೨೦೧೪ರಂದು ಕಾರ್ಯಕ್ರಮವನ್ನು ಎಂ.ಎಲ್.ಎಂ.ಎನ್. ಶಿಕ್ಷಣ ಮಹಾವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕ ಪ್ರೊ. ಆರ್.ಎನ್. ತಳವಾರ ಅವರು ಐತಿಹಾಸಿಕ ಸ್ಮಾರಕಗಳ ರಕ್ಷಣೆ ಕುರಿತು ವಿವರವಾಗಿ ತಿಳಿಸಿದರು. ಶಿಕ್ಷಕರಾದ ಮೇಕನಗದ್ದೆ ಲಕ್ಷ್ಮಣಗೌಡ ಅವರು ಐತಿಹಾಸಿಕ ಸ್ಮಾರಕಗಳು ಹಾಗೂ ಅದರ ಬಗ್ಗೆ ಸಂಶೋಧನೆ ಕುರಿತು ತಿಳಿಸಿದರು. ಮುಖ್ಯ ಶಿಕ್ಷಕರಾದ ಟಿ.ಜಿ. ಚಂದ್ರನಾಯಕ್ ಅಧ್ಯಕ್ಷತೆ ವಹಿಸಿದ್ದು ಐತಿಹಾಸಿಕ ಪರಂಪರೆ ಮಹತ್ವ ತಿಳಿಸಿದರು. ಶ್ರೀ ಜಿ.ಎಸ್. ಬೋರಯ್ಯ ಅವರು ವಂದಿಸಿದರು.

ದಿನಾಂಕ ೦೭-೧೦-೨೦೧೪, ದಾವಣಗೆರೆ

ಶ್ರೀ ಬೀರಲಿಂಗೇಶ್ವರ ಪ್ರಥಮ ದರ್ಜೆ ಕಾಲೇಜು, ದಾವಣಗೆರೆಯಲ್ಲಿ ದಿನಾಂಕ ೭-೧೦-೨೦೧೪ರಂದು ಶ್ರೀ ಬಾಗೂರು ಆನಂದಪ್ಪ ಇವರ ಅಧ್ಯಕ್ಷತೆಯಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ಜರುಗಿತು. ಡಾ. ಹರಿಹರ ಶ್ರೀನಿವಾಸರಾವ್ ಅವರು ಸುತ್ತಮುತ್ತಲಿನ ನೀರಾವರಿ ಕೆರೆ ಕಟ್ಟೆಗಳಿಗೆ ಕಾರಣವಾದ ಐತಿಹಾಸಿಕ ಅಂಶ, ಸ್ಥಳನಾಮ, ವೀರಗಲ್ಲುಗಳನ್ನು ಕುರಿತು ಮಾತನಾಡಿದರು.

ದಿನಾಂಕ ೨-೧-೨೦೧೫, ಹುಲಕೋಟಿ

ಹುಲಕೋಟಿಯಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು, ಜಿಲ್ಲಾ ಘಟಕ ಗದಗ ಮತ್ತು ಗ.ಸ.ಜಿ.ಗಿ. ಪದವಿಪೂರ್ವ ಮಹಾವಿದ್ಯಾಲಯ, ಹುಲಕೋಟಿ ಇವರ ಸಂಯುಕ್ತಾಶ್ರಯದಲ್ಲಿ ನಡೆದ 'ಐತಿಹಾಸಿಕ ಪರಂಪರೆ ಉಳಿಸಿ ಹಾಗೂ ಇತಿಹಾಸ ವಿಶೇಷ ಉಪನ್ಯಾಸ ಕಾರ್ಯಕ್ರಮ' ನಿವೃತ್ತ ನಿರ್ದೇಶಕರಾದ ಡಾ. ಎಸ್.ವಿ. ವೆಂಕಟೇಶಯ್ಯ ಉದ್ಘಾಟಿಸಿದರು.

ನಮ್ಮ ನಾಡನ್ನಾಳಿದ ರಾಜ ಮಹಾರಾಜರು ಹಲವಾರು ದೇವಾಲಯಗಳನ್ನು, ಮಸೀದಿ, ಇಗರ್ಜಿಗಳನ್ನು ನಿರ್ಮಿಸಿ ಅಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿ ಕಲಾ ಕೇಂದ್ರಗಳನ್ನಾಗಿ ನಿರ್ಮಿಸಿದ್ದರು. ದೇವಾಲಯಗಳಲ್ಲಿ ದೇವರ ಆರಾಧನೆ ಜೊತೆಗೆ ಪಾಠಶಾಲೆ, ನೃತ್ಯಶಾಲೆ, ಧರ್ಮಶಾಲೆ, ಚಿಂತನಶಾಲೆಗಳಾಗಿ ಕಾರ್ಯನಿರ್ವಹಿಸುತ್ತಿದ್ದು ವಿಶ್ವವಿದ್ಯಾಲಯಗಳಂತೆ ಜ್ಞಾನದ ಆಲಯಗಳಾಗಿದ್ದವು ಎಂದು ಭಾರತೀಯ ಪುರಾತತ್ವ ಇಲಾಖೆ, ನವದೆಹಲಿ - ನಿವೃತ್ತ ನಿರ್ದೇಶಕರಾದ ಡಾ. ಎಸ್.ವಿ. ವೆಂಕಟೇಶಯ್ಯ ನುಡಿದರು.

ಸ್ಮಾರಕ ನಿರ್ಮಿಸುವಲ್ಲಿ ಬಳಸಿದ ಪ್ರತಿ ಕಲ್ಲುಗಳು ಗತ ಇತಿಹಾಸ ಹೇಳುತ್ತಿವೆ. ಶತಶತಮಾನಗಳ ಹಿಂದೆ ನಿರ್ಮಿಸಿದ ಸ್ಮಾರಕಗಳು ಅಚ್ಚಳಿಯದೆ ಉಳಿದಿವೆ. ಹೀಗಾಗಿ ನಾವು ನಮ್ಮ ಹಿರಿಯರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ ಮತ್ತು ಪರಂಪರೆಗಳನ್ನು ರಕ್ಷಿಸುವುದು ಯುವಕರ ಹೊಣೆಯಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಪ್ರೊ. ದತ್ತಪ್ರಸನ್ನ ಪಾಟೀಲ "ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಮತ್ತು ಏಕೀಕರಣ ಚಳುವಳಿ" ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿ ಸ್ವಾತಂತ್ರ್ಯ ಆಂದೋಲನ ಮತ್ತು ಏಕೀಕರಣ ಹೇಗೆ ಜೊತೆಯಾಗಿ ನಡೆದವು ಮತ್ತು ಎರಡು ಕ್ರಾಂತಿಗಳಲ್ಲಿ ಪಾಲ್ಗೊಂಡ ದೇಶಭಕ್ತರು ತಮ್ಮ ತ್ಯಾಗ ಬಲಿದಾನದ ಮೂಲಕ ಹೇಗೆ ಸೊಗಸಾದ ನಾಡನ್ನು ಕಟ್ಟಿದರು ಮತ್ತು ಅದನ್ನು ಹೇಗೆ ಸಂರಕ್ಷಿಸಿ ಮುಂದಿನ ಪೀಳಿಗೆಗೆ ಸಾಗಿಸಬೇಕೆಂದು ತಿಳಿಸಿದರು.

ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಶ್ರೀ ಬಿ.ವಾಯ್. ಹರ್ಲಾಪೂರ ವಹಿಸಿದ್ದರು. ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಾದ ಶ್ರೀ ಎಸ್.ಎನ್. ಪಂಚಬಾವಿ, ಡಾ. ವಾಯ್.ಆರ್. ಬೇಲೇರಿ ಹಾಗೂ ಪ್ರೊ. ಶಿವಣ್ಣ ಉಪಸ್ಥಿತರಿದ್ದರು. ಕಾರ್ಯಕ್ರಮವು ಕುಮಾರಿ ಭೀಮವ್ವ ಇಬ್ರಾಹಿಂಪೂರ ಹಾಗೂ ಸಂಗಡಿಗರ ಪ್ರಾರ್ಥನೆ ಗೀತೆಯೊಂದಿಗೆ ಪ್ರಾರಂಭವಾಯಿತು. ಪ್ರಾಚಾರ್ಯರು ಸರ್ವರನ್ನು ಸ್ವಾಗತಿಸಿದರು. ಪ್ರಾಸ್ತಾವಿಕ ಪರಿಚಯವನ್ನು ಪ್ರೊ. ಕೆ.ಎಂ. ಗರಗ ಮಾಡಿದರು.

ನಿರೂಪಣೆಯನ್ನು ಕುಮಾರಿ ಪ್ರೀತಿ ಅಕ್ಕಿ ಹಾಗೂ ಕುಮಾರಿ ವೀಣಾ ಮಾಳಿ ಸರ್ವರಿಗೂ ವಂದನಾರ್ಪಣೆ ಸಲ್ಲಿಸಿದರು.

ದಿನಾಂಕ ೧೬-೧-೨೦೧೫, ಬೆಂಗಳೂರು

ಶುಭಮಂಗಲ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆ, ಇಟ್ಟಮಡುವು ಬೆಂಗಳೂರು ಸಂಸ್ಥೆಯ ನಾಗಭೂಷಣ ಅವರ ಅಧ್ಯಕ್ಷತೆಯಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಜರುಗಿತು. ಪ್ರೊ. ಹೆಬ್ಬನಿ ರಾಮಚಂದ್ರರಾವ್ ನಿವೃತ್ತ ಪ್ರಾಂಶುಪಾಲರು ಎಂ.ಇ.ಎಸ್. ಕಾಲೇಜು, ಮತ್ತು ನ್ಯಾಷನಲ್ ಇನ್ಸಿಟ್ಯೂಟ್ ಆಫ್ ವೇದಿಕ್ ಸೈನ್ಸ್ ಇವರು ಹಾಗೂ ಶಾಲಾ ಶಿಕ್ಷಕ ಶಿಕ್ಷಕಿಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಡಾ. ಹರಿಹರ ಶ್ರೀನಿವಾಸರಾವ್ ಅವರು ದಾಸ ಸಾಹಿತ್ಯದಲ್ಲಿ ನೀರಿನ ಮಹತ್ವದ ವಿಷಯಗಳನ್ನೊಳಗೊಂಡಂತೆ ಕೆಲವು ಕ್ಷೇತ್ರಗಳ ಮಹತ್ವದೊಂದಿಗೆ ಮಾತನಾಡಿದರು.

ದಿನಾಂಕ ೧೬ ಮತ್ತು ೧೭ ಜನವರಿ ೨೦೧೫, ಬೆಂಗಳೂರು

ಸದಸ್ಯರಾದ ಶ್ರೀಯುತ ರಾಜೀವ್ ಸ್ನೇಹಿತರು ಹಾಗೂ ಶಿಷ್ಯರೊಂದಿಗೆ ಹುಟ್ಟುಹಾಕಿದ ರಿವೈವಲ್ ಹೆರಿಟೇಜ್ ಹಬ್ ಹಾಗೂ ಕನಾಟಕ ಇತಿಹಾಸ ಅಕಾದೆಮಿ ಸಹಯೋಗದೊಂದಿಗೆ ದಿನಾಂಕ ೨೦೧೫ ಜನವರಿ ೧೬ ಮತ್ತು ೧೭ರಂದು ಬೆಂಗಳೂರಿನ ದಿ ಆಕ್ಸ್‌ಫರ್ಡ್ ಪದವಿಪೂರ್ವ ಕಾಲೇಜಿನಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ನಡೆಸಿದರು. ಐತಿಹಾಸಿಕ ವಸ್ತು ಚಿತ್ರ ಇತ್ಯಾದಿಗಳ ವಸ್ತು ಪ್ರದರ್ಶನ ಏರ್ಪಡಿಸಿ ಅದರ ಮಹತ್ವ ಹಾಗೂ ಸಂರಕ್ಷಣೆ ಬಗ್ಗೆ ತಿಳಿಸಿದರು. ದಿ ಆಕ್ಸ್‌ಫರ್ಡ್ ಶಾಲೆ ಐಸಿಎಸ್‌ಸಿಯ ಪ್ರಾಂಶುಪಾಲರಾದ ಶ್ರೀ ಆಲಿಸ್ಟರ್ ಲೆಫರ್ಜ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನೆರವೇರಿತು ಐನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಂಸ್ಥೆಯ ಫೇಸ್‌ಬುಕ್ ಬ್ಲಾಗ್ ಲೋಕಾರ್ಪಣೆ ಮಾಡಲಾಯಿತು.

ದಿನಾಂಕ ೨೫ ಜನವರಿ ೨೦೧೫, ಕನಕಪುರ

ರಿವೈವಲ್ ಹೆರಿಟೇಜ್ ಹಬ್ ಹಾಗೂ ಕರ್ನಾಟಕ ಇತಿಹಾಸ ಅಕಾದೆಮಿ ಸಹಯೋಗದೊಂದಿಗೆ ಸರ್ಕಾರಿ ಪದವಿ ಕಾಲೇಜು ಕನಕಪುರ, ರಾಮನಗರ ಜಿಲ್ಲೆ ಇಲ್ಲಿ ಐತಿಹಾಸಿಕ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಪ್ರಾಂಶುಪಾಲರಾದ ಡಾ. ವೇಣುಗೋಪಾಲ್ ಅವರ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಿತು. ಶ್ರೀ ರಾಜೀವ್ ಅವರ ತಂಡ ಇದನ್ನು ಆಯೋಜಿಸಿತ್ತು.

ದಿನಾಂಕ ೧-೩-೨೦೧೫, ಬಳ್ಳಾರಿ

ಹರಪನಹಳ್ಳಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಇತಿಹಾಸ ಅಕಾದೆಮಿ, ಸಂಯುಕ್ತಾಶ್ರಯದಲ್ಲಿ ಕಲಬುರ್ಗಿಯ ಚಾಳುಕ್ಯ ಸಂಸ್ಕೃತಿಯ ಅಧ್ಯಯನ ಪೀಠ ಇವರ ಸಹಕಾರದೊಂದಿಗೆ, ಕರ್ನಾಟಕ ಏಕೀಕರಣ ಹೋರಾಟಗಾರ, ಧರ್ಮಜ್ಞಶೇಖರ ನ್ಯಾಯಾಧೀಶ ಟಿ.ಎಚ್.ಎಂ. ಸದಾಶಿವಯ್ಯನವರು ರಚಿಸಿದ, ಕರ್ನಾಟಕದ ಗಡಿ ಗೆರೆಗಳು ಮರು ಮುದ್ರಣ ಪುಸ್ತಕ ಬಿಡುಗಡೆ ಸಮಾರಂಭವನ್ನು ದಿನಾಂಕ ೦೧-೦೩-೨೦೧೫ ರವಿವಾರ, ಬೆಳಗ್ಗೆ ೧೧ ಗಂಟೆಗೆ ಹರಪನಹಳ್ಳಿ ತೆಗ್ಗಿನಮಠ ಸಂಸ್ಥಾನ, ಶ್ರೀ ಚಂದ್ರಶೇಖರಸ್ವಾಮಿ ಧರ್ಮಭವನದಲ್ಲಿ ಹಮ್ಮಿಕೊಳ್ಳಲಾಯಿತು. ಕರ್ನಾಟಕ ಇತಿಹಾಸ ಕಟ್ಟಿಕೊಡುವಲ್ಲಿ ನಾವು ತುಂಬಾ ಹಿಂದೆ ಬಿದ್ದಿದ್ದೇವೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪಕುಲಸಚಿವರು ಹಾಗೂ ಇತಿಹಾಸ ಅಕಾದೆಮಿ ಸದಸ್ಯರು ಆದ ಡಾ. ಕೆ. ರವೀಂದ್ರನಾಥ್ ಅಭಿಪ್ರಾಯಪಟ್ಟರು. ಅವರು ಪಟ್ಟಣದ ತೆಗ್ಗಿನಮಠ ಸಂಸ್ಥಾನದಲ್ಲಿ ಪುಸ್ತಕ ಕುರಿತು ಮಾತನಾಡುತ್ತಾ ಕರ್ನಾಟಕ ಏಕೀಕರಣ ಏನ್ನುವಂತದ್ದು ಹೋರಾಟದ ಕಥೆಯಾಗಿತ್ತು. ಟಿ.ಹೆಚ್.ಎಂ. ಸದಾಶಿವಯ್ಯನವರು ಏಕೀಕರಣ ಹೋರಾಟಕ್ಕೆ ಸೇವೆ ಸಲ್ಲಿಸಿ ಹೋರಾಡಿ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು. ಹರಿಹರದ ಸಾಹಿತಿ ಹಾಗೂ ಸಂಶೋಧಕ ಹೆಚ್.ವಿ. ಭಿಕ್ಷಾವರ್ತಿಮಠ ಅವರು ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ ಇತಿಹಾಸದ ಪ್ರಜ್ಞೆ ಇಲ್ಲದವರು ಇತಿಹಾಸ ಕಟ್ಟಲಾರರು. ಪುರಾಣದ ಬಗ್ಗೆ ತಿಳಿದುಕೊಳ್ಳುತ್ತಾರೆ, ಇತಿಹಾಸದ ಬಗ್ಗೆ ತಿಳಿದುಕೊಳ್ಳುವುದಿಲ್ಲ ಎಂದು ವಿಷಾದಿಸಿದರು. ಕನ್ನಡಿಗರ ಅಭಿಮಾನದ ಕೊರತೆಯಿಂದ ಭಾಷಾ ವಿಚಾರದಲ್ಲಿ ಹಿನ್ನಡೆಯಾಗಿದೆ. ಯಾರು ಇತಿಹಾಸವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುತ್ತಾರೋ ಅಂತವರು ಉಳಿದ ಇತಿಹಾಸವನ್ನು ತಿಳಿದುಕೊಳ್ಳುತ್ತಾರೆ. ಕರ್ನಾಟಕ ಇತಿಹಾಸ ಹೇಳುವ ಪುಸ್ತಕಗಳನ್ನು ಮಕ್ಕಳಿಗೆ ಓದಿಸಬೇಕು ಎಂದರು. ಕಾರ್ಯಕ್ರಮದ ಉದ್ಘಾಟನೆಯನ್ನು ಧಾರವಾಡದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ, ಶಿವಶಂಕರಯ್ಯ ಹಿರೇಮಠ ನೆರವೇರಿಸಿ, ಟಿ.ಹೆಚ್.ಎಂ. ಸದಾಶಿವಯ್ಯನವರು ಶ್ರೀಶೈಲದಿಂದ ಅನಂತಪುರದವರೆಗೆ ಕನ್ನಡಿಗರ ಪ್ರದೇಶವಾಗಿದ್ದು, ವಿಜಯನಗರ ಸಾಮ್ರಾಜ್ಯ ಅಲ್ಲಿಯವರೆಗೂ ಹರಡಿತ್ತು ಎಂದು ಒಬ್ಬ ನ್ಯಾಯಾಧೀಶರಾಗಿ ಶಾಸನಗಳ ಕ್ಷೇತ್ರ ಕಾರ್ಯ ಮಾಡಿ ಕರ್ನಾಟಕದ ಗಡಿಗೆರೆಗಳು ಎಂಬ ಪುಸ್ತಕವನ್ನು ೧೯೪೮ರಲ್ಲಿ ರಚಿಸಿದ್ದರು ಎಂದು ತಿಳಿಸಿದರು. ಕರ್ನಾಟಕ ಇತಿಹಾಸ ಅಕಾದೆಮಿ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ಟಿ.ಹೆಚ್.ಎಂ. ಬಸವರಾಜ ಮಾತನಾಡುತ್ತಾ ಟಿ.ಹೆಚ್.ಎಂ. ಸದಾಶಿವಯ್ಯನವರು, ಜಿಲ್ಲಾ ನ್ಯಾಯಾಧೀಶರಿಂದ ಆಯ್ಕೆಯಾಗಿ ಆಂಧ್ರದ ಹೈಕೋರ್ಟ್ ನ್ಯಾಯಾಧೀಶರಾಗಿ ಭಡ್ತಿ ಪಡೆದಿದ್ದರು ಆಗ, ಮುಖ್ಯಮಂತ್ರಿಯಾಗಿದ್ದ ಟಿ. ಪ್ರಕಾಶಂ ಹಾಗೂ ಮುಖ್ಯ ನ್ಯಾಯಾಧೀಶರಾಗಿದ್ದ ಕೋಕಾ ಸುಬ್ಬರಾವ್ ಇವರ ಸೇವೆಯನ್ನು ಮೆಚ್ಚಿ ಬಡ್ತಿ ಕೊಟ್ಟಿದ್ದರು. ಆದರೆ, ಸದಾಶಿವಯ್ಯನವರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕರ್ನಾಟಕ ಏಕೀಕರಣ ಚಳುವಳಿಗೆ ಬೆಂಬಲ ಕೊಟ್ಟದ್ದರಿಂದ ಅಲ್ಲಿಯ ಜನರಿಂದ ಬಹಳಷ್ಟು ವಿರೋಧ ವ್ಯಕ್ತವಾಯಿತು.

ಹರಪನಹಳ್ಳಿ ಪುರಸಭೆ ಅಧ್ಯಕ್ಷೆ ಪ್ರಭಾ ಅಬ್ದುಲ್ಲನವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಐತಿಹಾಸಿಕ ಸ್ಮಾರಕಗಳನ್ನು, ಶಿಲೆಗಳನ್ನು, ದೇಗುಲಗಳನ್ನು, ಶಾಸನಗಳನ್ನು, ವಾಡೆಗಳನ್ನು ಕಾಪಾಡುವುದು ನಮ್ಮ [illegible] ಕರ್ತವ್ಯವೆಂದರು. ಹರಪನಹಳ್ಳಿ [illegible] ಅಧ್ಯಕ್ಷರಾದ ಜಿ. ರಾಮಪ್ರಸಾದ ಗಾಂಧಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯದರ್ಶಿ [illegible] ಸ್ವಾಗತಿಸಿದರು. [illegible] ಹಿರೇಮಠ್ ವಂದಿಸಿದರು. ಕೋಶಾಧ್ಯಕ್ಷ ಕೆ. ರಾಘವೇಂದ್ರ ಶೆಟ್ಟಿ ಅತಿಥಿಗಳನ್ನು ಸನ್ಮಾನಿಸಿದರು. ಹರಪನಹಳ್ಳಿ ಪುರ ಪ್ರಮುಖರಾದ ಟಿ.ಹೆಚ್.ಎಂ. ವಿರೂಪಾಕ್ಷಯ್ಯ, ಟಿ.ಎಂ. ಚಂದ್ರಶೇಖರಯ್ಯ, ಟಿ.ಹೆಚ್.ಎಂ. ಚನ್ನಬಸಯ್ಯಸ್ವಾಮಿ, ಟಿ.ಹೆಚ್.ಎಂ. ಶಿವಾನಂದಯ್ಯ, ಟಿ. ರಾಮನಗೌಡ, ಹೆಚ್.ಕೆ. ಹಾಲೇಶ್, ಎಂ.ಟಿ. [illegible], ಎಂ. ರಾಜಶೇಖರ, ಎಂ.ಪಿ. ಅಂಜಿನಪ್ಪ, ಹೆಚ್. ಮಲ್ಲಿಕಾರ್ಜುನ, ಎಂ.ಬಿ.ಎಂ. ಶಾಂತವೀರಯ್ಯ, ಹೆಚ್.ಎಂ. [illegible], ಸೊಪ್ಪಿನ ಶ್ರೀನಿವಾಸ, ಶ್ರೀಮತಿ ಕುಸುಮ. ಎನ್. ಸುಬ್ರಮಣ್ಯ, ಡಾ. ಮೃತ್ಯುಂಜಯ ಹಿರೇಮಠ್, ಶ್ರೀ ಎಸ್.ಬಿ. [illegible], ಸದಾಶಿವಯ್ಯನವರ ಮಕ್ಕಳಾದ ಶ್ರೀಮತಿ ಇಂದುಮತಿ, ಶ್ರೀಮತಿ [illegible] ಮುಂತಾದವರು ಉಪಸ್ಥಿತರಿದ್ದರು. ಕೊನೆಯಲ್ಲಿ ಹರಪನಹಳ್ಳಿಯ ಪರಮೇಶ ಭಜನ ಮಂಡಳಿಯಿಂದ ಹರಪನಹಳ್ಳಿ ಭೀಮವ್ವನವರ ಹಾಡುಗಳು ಮತ್ತು [illegible] ಹಾಡುಗಳ ವಾಚನಗಾಯನ, ಪ್ರೊ. ಸುಶೀಲಾ ಹಿರೇಮಠ್ ಮತ್ತು ಪ್ರೊ. ಮಧು ಹಿರೇಮಠ್, ಇವರಿಂದ ವಚನಗಾಯನ ನಡೆಯಿತು. ಹಾರ್ಮೋನಿಯಂ ಸಾಥ ಶ್ರೀಮತಿ ಶಾಂತ ಧೀರೇಂದ್ರಚಾರ್, ತಬಲ ಸಾಥ್ ಸಾಗರ್ ಹರಪನಹಳ್ಳಿ ಇವರಿಂದ ನೆರವೇರಿತು.

ದಿನಾಂಕ ೭-೩-೨೦೧೫, ಬೆಂಗಳೂರು

ನೆಹರು ಎಜುಕೇಷನಲ್ ಟ್ರಸ್ಟ್, ದೇವರಜೀವನಹಳ್ಳಿ ಬೆಳ್ಳಂದೂರು ಇಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ದಿನಾಂಕ: ೭-೩-೨೦೧೫ರಂದು ನಡೆಯಿತು. ಶ್ರೀ ಅದಪ್ಪ ಹಾಸೋಟಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರಾಚೀನ ಸ್ಮಾರಕಗಳು ಆಧುನಿಕ ಬಡಾವಣೆಗಳ ವಿಸ್ತರಣಾ ಸಂದರ್ಭದಲ್ಲಿ ಹಾಳಾಗುತ್ತಿವೆ. ಹಿರಿಯರು ರಕ್ಷಿಸಿಕೊಂಡು ಬಂದಂತೆ ಈಗಲೂ ರಕ್ಷಿಸುವ ಅಗತ್ಯವಿದೆ ಎಂದು ತಿಳಿಸುತ್ತಾ ಸುತ್ತಮುತ್ತಲಿನ ಸ್ಮಾರಕಗಳಿಗೆ ಹಾನಿಯಾಗಿರುವುದನ್ನು ವಿವರಿಸಿದರು. ಶಾಲೆಯ ಮುಖ್ಯಸ್ಥರಾದ ಶ್ರೀಮತಿ ಲಕ್ಷ್ಮೀದೇವಿ ಅವರು ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಶ್ರೀ ಅನಂದೇಶ್ವರ, ಊರಿನ ಹಿರಿಯರಾದ ರಾಮಣ್ಣನವರು ಆಗಮಿಸಿದ್ದರು. ಟ್ರಸ್ಟ್‌ನ ಸಂಸ್ಥಾಪಕರಾದ ಶ್ರೀ ಎಂ. ಹನುಮಂತರಾಯಪ್ಪನವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ದಿನಾಂಕ ೧೪-೩-೨೦೧೫, ಮಂಡ್ಯ

ಪ್ರೇರಣಾ ಅಂಗವಿಕಲ ವಿದ್ಯಾರ್ಥಿ ನಿಲಯ ಮಂಡ್ಯದಲ್ಲಿ ಶ್ರೀಧರ್ ಸಮಾಜ ಸೇವಕರು ಹಾಗೂ ಸಂಸ್ಥಾಪಕ ಕಾರ್ಯದರ್ಶಿಗಳು ಅವರ ನೇತೃತ್ವದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ನೆರವೇರಿತು. ಟ್ರಸ್ಟ್‌ನ ಹಾಲಿ ಕಾರ್ಯದರ್ಶಿಗಳಾದ ಶ್ರೀ ರವಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಡಾ. ಹರಿಹರ ಶ್ರೀನಿವಾಸರಾವ್ ಅವರು ಐತಿಹಾಸಿಕ ಪರಿಚಯದೊಂದಿಗೆ ತೊಣ್ಣೂರು ಕೆರೆಯ ಜಲತಂತ್ರ ಜ್ಞಾನವನ್ನು ಐತಿಹಾಸಿಕವಾಗಿ ವಿವರಿಸಿದರು.

ದಿನಾಂಕ ೩-೪-೨೦೧೫, ಬಳ್ಳಾರಿ

ಸಿರುಗುಪ್ಪ ತಾಲ್ಲೂಕಿನ ನಿಟ್ಟೂರು ಹಾಗು ಉಡೇಗೋಳ ಗ್ರಾಮದಲ್ಲಿನ ಅಶೋಕನ ಕಾಲದ ಐತಿಹಾಸಿಕ ಸ್ಮಾರಕಗಳು ಹಾಗು ಶಾಸನಗಳು ಗಣಿಗಾರಿಕೆಗೆ ತುತ್ತಾಗಿವೆ. ಇವುಗಳಿಗೆ ಸೂಕ್ತ ರಕ್ಷಣೆಯನ್ನು ಮಾಡಿಸಬೇಕೆಂದು ಸ್ಥಳೀಯ ಶಾಸಕರಾದ ಬಿ.ಎಂ. ನಾಗರಾಜರವರಿಗೆ ಕರ್ನಾಟಕ ಇತಿಹಾಸ ಅಕಾಡೆಮಿಯ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಟಿ.ಹೆಚ್.ಎಂ. ಬಸವರಾಜ ಮನವಿ ಮಾಡಿದರು. ಸಿರುಗುಪ್ಪ ಪಟ್ಟಣದಲ್ಲಿ ರಾಜ್ಯ ಇತಿಹಾಸ ಅಕಾಡೆಮಿ ಹಾಗು ಬಳ್ಳಾರಿಯ ಪ್ರಜ್ಞೆ ಪ್ರತಿಷ್ಠಾನ ಜಂಟಿಯಾಗಿ ಹಮ್ಮಿಕೊಂಡಿದ್ದ ಪುಸ್ತಕ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಿರುಗುಪ್ಪ ತಾಲ್ಲೂಕಿನಲ್ಲಿ ಅನೇಕ ಪುರಾತನ ಕಾಲದ ಕುರುಹುಗಳು ತೆಕ್ಕಲಕೋಟೆಯಲ್ಲಿ ಲಭ್ಯವಾಗಿದ್ದು ಅವುಗಳಿಗೆ ಸೂಕ್ತ ರಸ್ತೆ ಹಾಗು ನಾಮಫಲಕಗಳನ್ನು ಹಾಕಿಸಬೇಕು ಅಲ್ಲದೇ ಎ.ಎಸ್.ಐ. ಇಲಾಖೆಯವರು ಬರೀ ರಕ್ಷಣೆಯ ಫಲಕ ಹಾಕಿದರೆ ಸಾಲದು ಅದರ ಜೊತೆಯಲ್ಲೇ ಆ ಸ್ಥಳದ ಸಂಕ್ಷಿಪ್ತ ಪರಿಚಯ ಮಾಡಿಕೊಡುವ ಫಲಕವನ್ನು ಹಾಕಿಸಬೇಕೆಂದು ಶಾಸಕರಲ್ಲಿ ಮನವಿ ಮಾಡಿದರು. ಲೇಖಕ ಜೆ. ಶಂಕರ ರಚಿಸಿದ "ಸಿರುಗುಪ್ಪ ತಾಲ್ಲೂಕಿನ ಐತಿಹಾಸಿಕ ಸಿರಿ" ಎಂಬ ಗ್ರಂಥದ ಲೋಕಾರ್ಪಣೆ ಸಮಾರಂಭವನ್ನು ಉದ್ಘಾಟಿಸಿದ ಶಾಸಕರಾದ ಬಿ.ಎಂ. ನಾಗರಾಜರವರು ಮಾತನಾಡುತ್ತಾ, ಸ್ಮಾರಕಗಳಿಗೆ ಸೂಕ್ತ ರಕ್ಷಣೆ ಒದಗಿಸಲು ಕ್ರಮ ಕೈಗೊಳ್ಳುತ್ತೇನೆಂದು ತಿಳಿಸಿದರು. ಸಾಮಾನ್ಯರಿಗೆ ತಿಳಿಯುವಂತೆ ಸರಳವಾಗಿ ಪುಸ್ತಕ ರಚಿಸಿದ ಜೆ. ಶಂಕರರವರನ್ನು ಅಭಿನಂದಿಸಿದರು. ಪುಸ್ತಕ ಬಿಡುಗಡೆ ಮಾಡಿದ ಇತಿಹಾಸ ತಜ್ಞ ವೈ. ಹನುಮಂತರೆಡ್ಡಿ ಕ್ರಿ.ಶ. ೯೫೦ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೂ ಪೂರ್ವದಲ್ಲಿಯೇ ೩೦೦ ಗ್ರಾಮಗಳನ್ನು ಒಳಗೊಂಡ ಬಲುಕುಂದಿ ರಾಜಧಾನಿಯಾಗಿತ್ತು ಎಂದು ತಿಳಿಸಿದರು. ಎಂ. ಪಂಪನಗೌಡ ಮಾತನಾಡುತ್ತಾ ಕೃಷ್ಣದೇವರಾಯ ವಿ.ವಿ.ಯಲ್ಲಿ ಬುಡಕಟ್ಟು ಅಧ್ಯಯನ ಪೀಠ ಸ್ಥಾಪಿಸಬೇಕೆಂದು ಮನವಿ ಮಾಡಿದರು. ಪ್ರಜ್ಞೆ ಪ್ರತಿಷ್ಠಾನದ ಅಧ್ಯಕ್ಷ ಸಿದ್ದರಾಮ ಕಲ್ಮಠ ಇತಿಹಾಸ ತಿಳಿಯದವರು ಇತಿಹಾಸ ಬರೆಯಲಾರರು ಎಂದು ಮಾತನಾಡಿದರು. ಸಾನಿಧ್ಯ ವಹಿಸಿದ್ದ ಬಸವ ಮಠದ ಶ್ರೀ ಮ.ನಿ.ಪ್ರ. ಬಸವ ಭೂಷಣ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ಇಂತಹ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳು ಆಗಾಗ್ಗೆ ಜರುಗಿ ಜನರಲ್ಲಿ ಇತಿಹಾಸ ಪ್ರಜ್ಞೆ ಬೆಳೆಸಬೇಕೆಂದು ತಿಳಿಸಿದರು.

ಲೇಖಕ ಜೆ. ಶಂಕರ ಗಣ್ಯರನ್ನು ಸನ್ಮಾನಿಸಿ ಗೌರವಿಸಿದರು. ಜಿ. ಶಂಭುಲಿಂಗಯ್ಯ ಗಾಣದಾಳ ಮಠ ಕಾರ್ಯಕ್ರಮ ನಿರೂಪಿಸಿದರು. ದಿವಾಕರ ನಾರಾಯಣ ವಂದಿಸಿದರು.

ದಿನಾಂಕ ೧೦-೦೩-೨೦೧೫, ಹುಲಕೋಟಿ

ಹುಲಕೋಟಿಯ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀ ಮೋಹನ ದುರಗಣ್ಣನವರು ಉದ್ಘಾಟಿಸಿದರು. ಕರ್ನಾಟಕ ಇತಿಹಾಸ ಅಕಾದೆಮಿಯ ಪೋಷಕರು ಮತ್ತು ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಎಸ್.ಎನ್. ಪಂಚಭಾವಿಯವರನ್ನು ಸನ್ಮಾನಿಸಲಾಯಿತು. ಪ್ರಾಚೀನ ಭಾರತದ ಭವ್ಯ ಪರಂಪರೆ, ಇತಿಹಾಸ, ಸಂಸ್ಕೃತಿ, ಜಗತ್ತಿನಲ್ಲಿಯೇ ಶ್ರೇಷ್ಠವಾದದ್ದು. ನಮ್ಮ ಚರಿತ್ರೆಯಲ್ಲಿ ಮಾನವನ ಸರ್ವಾಂಗೀಣ ಪ್ರಗತಿಯ ಲಕ್ಷಣಗಳು ಶ್ರೇಷ್ಠ ಗ್ರಂಥಗಳಾದ ರಾಮಾಯಣ, ಮಹಾಭಾರತ, ಭಗವದ್ಗೀತೆ, ಉಪನಿಷತ್ತುಗಳು ವೇದಗಳು ಆಗಮಗಳಲ್ಲಿವೆ. ಇಂದಿನ ಸಮಾಜ ಅಶಾಂತಿ ನೆಮ್ಮದಿ ದುಃಖ ದುಮ್ಮಾನ ನೈತಿಕ ಹೀನತೆಯಿಂದ ಬಳಲುತ್ತಿದೆ. ಆದ್ದರಿಂದ ಇವೆಲ್ಲವುಗಳನ್ನು ತೊಡೆದುಹಾಕಲು ಸಾತ್ವಿಕ ಬದುಕನ್ನು ಕಟ್ಟಿಕೊಳ್ಳಲು ಇತಿಹಾಸ ಮತ್ತು ಪರಂಪರೆ ನೆರವಾಗುವುದು. ಆದ್ದರಿಂದ ಐತಿಹಾಸಿಕ ಪರಂಪರೆ ಉಳಿಸುವ ಮತ್ತು ಅಧ್ಯಯನ ಮಾಡುವ ಗುರುತರ ಜವಾಬ್ದಾರಿ ಯುವಕರ ಮೇಲಿದೆ ಎಂದು ಶ್ರೀ ಮೋಹನ ದುರಗಣ್ಣನವರು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಡಾ. ಶಿವಪ್ಪ ಎಂ.ಕುರಿ, ಅಧ್ಯಕ್ಷರು ಗದಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಾತನಾಡಿ ಯುವಕರು ಆಧುನಿಕತೆಯ ಭರಾಟೆಯಲ್ಲಿ ನಮ್ಮ ನಾಡಿನ ಹಿರಿಯರಿಂದ ಪಡೆದ ಸಂಸ್ಕೃತಿ, ಸಾಹಿತ್ಯ ರಕ್ಷಣೆ, ಸ್ಮಾರಕ ಅವಶೇಷಗಳ ಮಹತ್ವ ತಿಳಿಯುಟಿಕೆ, ಮೌಲ್ಯಗಳ ಪಾಲನೆ ಕಡಿಮೆಯಾಗಿದೆ ಎಂದರು.

ಡಾ. ಅಪ್ಪಣ್ಣ ಹಂಜೆಯವರು ಸ್ಮಾರಕಗಳು ಮತ್ತು ಪರಂಪರೆ ಎಂಬ ಉಪನ್ಯಾಸ ನೀಡಿ ಜಗತ್ತಿನಲ್ಲಿ ವಿವಿಧತೆಯಲ್ಲಿ ಏಕತೆ ನಮ್ಮ ಪರಂಪರೆಯಲ್ಲಿವೆ ಪ್ರಪಂಚದ ಯಾವುದೇ ವಸ್ತುಸಂಗ್ರಹಾಲಯ ನೋಡಿದರೆ ಅಲ್ಲಿವೆ ನಮ್ಮ ಸ್ಮಾರಕ ಅವಶೇಷಗಳು, ವಿಶಿಷ್ಟ ಮೂರ್ತಿಗಳು, ಪ್ರಾಚೀನ ವಸ್ತುಗಳು, ನಮ್ಮ ದೇಶದ ಪರಂಪರೆಗೆ ವಿದೇಶದಲ್ಲಿ ಮಹತ್ವವಿದೆ ಎಂದು ಹೇಳಿ ಶೈವ, ವೈಷ್ಣವ, ಜೈನ, ಬೌದ್ಧ, ಸ್ಮಾರಕಗಳು ಮತ್ತು ಅವುಗಳ ಪರಂಪರೆಗಳ ಬಗ್ಗೆ ತಿಳಿಸಿಕೊಟ್ಟರು.

ಡಾ. ವಾಯ್.ಆರ್. ಬೇಲೇರಿಯವರು ಶಾಸನಗಳು ಮತ್ತು ಪರಂಪರೆ ಎಂಬ ಉಪನ್ಯಾಸ ನೀಡಿ ಶಾಸನಗಳ ಪ್ರಾಚೀನತೆ ರಾಜರ ಆಜ್ಞೆಗಳು ಮೌಲ್ಯಗಳು ಪೂರ್ವಜರ ಬದುಕಿನ ಚಿತ್ರಣ ನೆನಪಿಸುತ್ತಿವೆ. ಶಾಸನ ಸಂಪತ್ತಿನಲ್ಲಿ ಕರ್ನಾಟಕ ಶ್ರೀಮಂತವಾಗಿದ್ದು ನೆರೆಯ ರಾಜ್ಯಗಳಲ್ಲಿ ಕನ್ನಡ ಭಾಷೆ ಶಾಸನ ಬಳಸಿ ತಮ್ಮ ಸಾಹಿತ್ಯ ರಚಿಸಿದ್ದಾರೆಂದರು. ಆದ್ದರಿಂದ ಶಾಸನ, ವೀರಗಲ್ಲು, ಸ್ಮಾರಕ ಇವುಗಳನ್ನು ವಿರೂಪಗೊಳಿಸುವುದು ಯುವಕರಿಗೆ ಸಲ್ಲದು. ಅವುಗಳನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕೆಂದರು.

ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಬಿ.ಟಿ. ಲಮಾಣಿಯವರು ವಿದ್ಯಾರ್ಥಿಗಳು ಮಾನವೀಯ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಸಮಾಜಕ್ಕೆ ಮೂರು ಮುಖ್ಯ ಅಂಶಗಳಾದ ಒಳ್ಳೆಯ ಮಗು ಒಳ್ಳೆಯ ಮರ, ಒಳ್ಳೆಯ ಪುಸ್ತಕ ಅವಶ್ಯಕವೆಂದು ನಮ್ಮ ಹಿರಿಯರಿಂದ ಪಡೆದ ಬದುಕು ಮೌಲ್ಯಯುತವಾಗಿರಬೇಕು ಎಂದು ಹೇಳಿದರು.

ಕರ್ನಾಟಕ ಇತಿಹಾಸ ಅಕಾದೆಮಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಪ್ರೊ. ಕೆ.ಎಂ. ಗರಗ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರೊ ಶಕುಂತಲಾ ಸಿಂಧೂರ, ಶ್ರೀ ಎಚ್.ಡಿ. ಬಿದಾಜಿ, ಶ್ರೀ ಪ್ರೊ. ಹೇಮಾ ಪಾಟೀಲ ಪಾಲ್ಗೊಂಡಿದ್ದರು.

ಕಾರ್ಯಕ್ರಮವನ್ನು ಕುಮಾರ ಬಸವರಾಜ ಗೊರವರ ಹಾಗೂ ಸಂಗಡಿಗರ ನಾಡಗೀತೆ ಗಾಯನದೊಂದಿಗೆ ಪ್ರಾರಂಭಿಸಲಾಯಿತು. ಕಾರ್ಯಕ್ರಮದಲ್ಲಿ ಅತಿಥಿ ಅಧ್ಯಕ್ಷರನ್ನು ಪ್ರೊ. ಆರ್.ಸಿ. ನದಾಫ್ ಸ್ವಾಗತಿಸಿ ಪರಿಚಯಿಸಿದರು. ಪ್ರೊ. ಎಫ್.ಬಿ. ಆನಿಯವರು ವಂದಿಸಿದರು. ಡಾ. ಎ.ಪಿ. ರೊಟ್ಟಿಗವಾಡರವರು ನಿರೂಪಿಸಿದರು.

ದಿನಾಂಕ ೧೧-೩-೨೦೧೫, ಬೆಂಗಳೂರು

ಹೋಲಿ ವಿಷನ್ ಪ್ರಾಥಮಿಕ ಮತ್ತು ಪ್ರೌಢಶಾಲೆ ಬಿ. ನಾರಾಯಣಪುರ, ಬೆಂಗಳೂರು: ಇಲ್ಲಿ ಐತಿಹಾಸಿಕ ಪರಂಪರೆ ಕಾರ್ಯಕ್ರಮ ದಿನಾಂಕ ೧೧-೩-೨೦೧೫ರಂದು ಹಮ್ಮಿಕೊಂಡಿದ್ದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಪಿ.ಎಂ. ಐಸಾಕ್ ಅವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಪಿ.ಎಂ. ವರ್ಗೀಸ್, ಶ್ರೀ ಕೆ.ಎಂ. ಪೀಟರ್ ಮತ್ತು ಹೆಚ್.ಎಂ. ರೀಟಾ ಅವರು ಭಾಗವಹಿಸಿದ್ದರು. ಶ್ರೀ ಆದಪ್ಪ ಪಾಸೋಡಿ ಅವರು ಐತಿಹಾಸಿಕ ಸ್ಮಾರಕಗಳು, ಪರಂಪರೆ, ಅವುಗಳ ರಕ್ಷಣೆ ಕುರಿತು ವಿದ್ಯಾರ್ಥಿಗಳಿಗೆ ಚಿತ್ರಗಳೊಂದಿಗೆ ವಿವರಿಸಿದರು.

ದಿನಾಂಕ ೪, ಜುಲೈ ೨೦೧೫, ಡೆಂಕಣಿಕೋಟೆ

ರಿವೈವಲ್ ಹೆರಿಟೇಜ್ ಹಬ್ ಹಾಗೂ ಕರ್ನಾಟಕ ಇತಿಹಾಸ ಅಕಾದೆಮಿ ಸಹಯೋಗದೊಂದಿಗೆ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಡೆಂಕಣಿಕೋಟೆ ತಾಲ್ಲೂಕಿನ ಉರಿಗಂ ಗ್ರಾಮದ ನಮಸಂ ಎಸ್.ಜಿ.ಟಿ. ಸಂಸ್ಥೆಯೊಂದಿಗೆ ಐತಿಹಾಸಿಕ

ವಸ್ತುಪ್ರದರ್ಶನ ಏರ್ಪಡಿಸಲಾಗಿತ್ತು ಐತಿಹಾಸಿಕ ಮಹತ್ವ ಹಾಗೂ ಸಂರಕ್ಷಣೆ ಕುರಿತು ಭಾಷಣ ಹಾಗೂ ಇತರರು ಮಾತನಾಡಿದರು ಶಾಲಾ-ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ದಿನಾಂಕ ೭-೮-೨೦೧೫, ಶಿರ್ವ ಉಡುಪಿ ಜಿಲ್ಲೆ

ಉಡುಪಿ ಜಿಲ್ಲೆಯ ಶಿರ್ವ ಮುಲ್ಕಿ ಸುಂದರರಾಮಶೆಟ್ಟಿ ಕಾಲೇಜಿನ ಇತಿಹಾಸ ವಿಭಾಗದಲ್ಲಿ 'ಭಾರತೀಯರ ಐತಿಹಾಸಿಕ ಪ್ರಜ್ಞೆ' ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಪ್ರೊ. ಪ್ರಮೀಳಾ ಶೆಟ್ಟಿ ಮೈಂದೂರುರವರು, ಜರ್ಮನರ ಸಿದ್ಧ ಮಾದರಿಯ ಐತಿಹಾಸಿಕ ಪ್ರಜ್ಞೆ ಭಾರತದಲ್ಲಿ ಇರಲಿಲ್ಲ. ಆದರೆ ಭಾರತೀಯರು ತಮ್ಮದೇ ಮಾದರಿಯ ಐತಿಹಾಸಿಕ ಪ್ರಜ್ಞೆಯನ್ನು ಹೊಂದಿದ್ದರು. ಭಾರತ ಬಹು ಸಂಸ್ಕೃತಿಯ ದೇಶವಾದ್ದರಿಂದ ಇಲ್ಲಿ ಏಕರೂಪದ ಐತಿಹಾಸಿಕ ಪ್ರಜ್ಞೆಗೆ ಬದಲಾಗಿ ಬಹುರೂಪಿ ಐತಿಹಾಸಿಕ ಪ್ರಜ್ಞೆಯಿತ್ತು. ಉನ್ನತ ನಾಗರೀಕತೆ ಮತ್ತು ಸಂಸ್ಕೃತಿಯನ್ನು ಹೊಂದಿದ್ದ ಭಾರತೀಯರು ವಿದೇಶಿಯರಿಂದ ನಾಗರೀಕತೆಯ ಪಾಠ ಕಲಿಯುವ ಅಗತ್ಯವಿರಲಿಲ್ಲ. ಆದರೆ ಬ್ರಿಟಿಷರು ತಮ್ಮ ವಸಾಹತು ಆಳ್ವಿಕೆಯ ಸಮರ್ಥನೆಗಾಗಿ ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆ ಇರಲಿಲ್ಲ ಎಂಬ ಸಿದ್ಧಾಂತವನ್ನು ಸೃಷ್ಟಿಸಿದರು ಎಂದು ನುಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಪ್ರೊ. ವಿನೋಬನಾಥ ಪ್ರಾಸಂಗಿಕವಾಗಿ ಮಾತನಾಡಿದರು. ವಿಭಾಗ ಮುಖ್ಯಸ್ಥರಾದ ಪ್ರೊ. ಟಿ. ಮುರುಗೇಶಿಯವರು ಅತಿಥಿಗಳನ್ನು ಪರಿಚಯಿಸಿದರು. ಕು. ಪ್ರಿಯಾಂಕ ಅಂತಿಮ ಬಿ.ಎ. ಸ್ವಾಗತಿಸಿದರು, ಕು. ಶ್ರೀದೇವಿ ಧನ್ಯವಾದ ಸಮರ್ಪಿಸಿದರು.

ಸತ್ಯವಿಠಲ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ಬಿ.ವಿ. ಸತ್ಯನಾರಾಯಣ ಅವರು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಅಂಗವಾಗಿ ಪ್ರಸ್ತುತ ವರ್ಷದಲ್ಲಿ ಕರ್ನಾಟಕದ ಎಪ್ಪತ್ತೈದಕ್ಕೂ ಹೆಚ್ಚು ಶಾಲಾ-ಕಾಲೇಜುಗಳಲ್ಲಿ ಕಾರ್ಯಕ್ರಮ ನಡೆಸಿದ್ದಾರೆ. ತಾವೇ ರಚಿಸಿದ ಇತಿಹಾಸ ಪರಂಪರೆ ಉಳಿಸಿ ಲಾವಣಿ ಹಾಡಿ, ಹಾಡಿಸುವುದರೊಂದಿಗೆ ಹಾಗೂ ಐತಿಹಾಸಿಕ ಪರಂಪರೆ ಉಳಿಸಿ ಮಹತ್ವವನ್ನು ಕುರಿತು ಮಾತನಾಡಿದ್ದಾರೆ.

ಇತಿಹಾಸ ಪರಂಪರೆಯನ್ನುಳಿಸಿ

ಉಳಿಸಿಉಳಿಸಿ ಇತಿಹಾಸಪರಂಪರೆ
ಭವ್ಯತೆಗಳನುಳಿಸೀ
ಕನ್ನಡಸಿರಿತನ ಸಂಸ್ಕೃತಿಸಂಪದ
ಪರಂಪರೆಯನುಳಿಸೀ
ವೀರಗಲ್ಲುಗಳ ಮಾಸ್ತಿಗಲ್ಲುಗಳ
ರಕ್ತಕೊಡುಗೆಗಳ ಶಾಸನವು
ದಾನಶಾಸನವು ವಿಜಯಶಾಸನವು
ಇತಿಹಾಸದ ಘನವು ॥ ೧ ॥

ಕರ್ನಾಟಕದ ಗ್ರಾಮಗ್ರಾಮ
ಇತಿಹಾಸದ ಮಹವಯ್ಯ
ಶಾಲೆಮಕ್ಕಳಿಗೆ ತಿಳಿಸಿ ಹೆಮ್ಮೆ
ಅಭಿಮಾನ ಬೆಳೆಸಿರಯ್ಯ
ಮಹನೀಯರ ವೀರತ್ವದ ತ್ಯಾಗದ
ವಿಷಯವರುಹಿರಯ್ಯ
ನಿಮ್ಮೂರಿನ ಇತಿಹಾಸ ವಿಶೇಷವ
ಜನಕೆ ತಿಳಿಸಿರಯ್ಯ ॥ ೨ ॥

ಐತಿಹಾಸಿಕದ ಗುಡಿಗೋಪುರಗಳು
ಮಸೀದಿ ಚರ್ಚುಗಳು
ತಾಮ್ರಶಾಸನವು ಓಲೆಯ ಗರಿಗಳು
ಕನ್ನಡ ತನದಗುಳು
ಕೋಟೆ ಕೊತ್ತಲವ ವಾಸ್ತುವಿಶಿಷ್ಟತೆ
ಶಿಲ್ಪಮಹತನುಳಿಸೀ
ವೀರವಿಭವತೆಯ ಸಂಸ್ಕೃತಿ ಮಹತಿನ
ಘನ ಕುರುಹುಗಳುಳಿಸೀ ॥ ೩ ॥

ಇಪ್ಪತ್ತೆಂಟನೆಯ ವಾರ್ಷಿಕ ಸಮ್ಮೇಳನ

ಕರ್ನಾಟಕ ಇತಿಹಾಸ ಅಕಾದೆಮಿಯು ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜು ಶಿರ್ವ ಉಡುಪಿ ಜಿಲ್ಲೆ ಹಾಗೂ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ಮಂಗಳೂರು ವಿ.ವಿ. ಕಾಲೇಜು ಇತಿಹಾಸ ಅಧ್ಯಾಪಕರ ಸಂಘ (ಮಾಸುಷ) ಸಹಯೋಗದೊಂದಿಗೆ ೨೦೧೫ ಸೆಪ್ಟೆಂಬರ್ ೨೬ ರಿಂದ ೨೮ ರವರೆಗೆ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ೨೮ನೇ ವಾರ್ಷಿಕ ಸಮ್ಮೇಳನಕ್ಕೆ ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜು ಶಿರ್ವ ಉಡುಪಿ ಜಿಲ್ಲೆ ಆತಿಥ್ಯ ನೀಡಿತು.

ಉದ್ಘಾಟನಾ ಸಮಾರಂಭ ದಿನಾಂಕ: ೨೬-೯-೨೦೧೫ನೇ ಶುಕ್ರವಾರ ಬೆಳಗ್ಗೆ ೧೦ ಗಂಟೆಗೆ ಡಾ. ಬಿ.ಎ. ವಿವೇಕ ರೈ, ವಿಶ್ರಾಂತ ಕುಲಪತಿಗಳು, ಮಂಗಳೂರು ಇವರು ಜ್ಯೋತಿ ಬೆಳಗಿಸಿ ಸಮ್ಮೇಳನವನ್ನು ಉದ್ಘಾಟಿಸಿ ಡಾ. ಎಫ್.ಟಿ. ಹಳ್ಳಿಕೇರಿ ಅವರ ಕೃತಿ ಕಂತಪತ್ರ-೩ ಮತ್ತು ಡಾ. ರವೀಂದ್ರನಾಥ್.ಕೆ. ಅವರ ಕೃತಿ ಕನ್ನಡ ದಾಖಲು ಸಾಹಿತ್ಯ ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ಡಾ. ದೇವರಕೊಂಡಾರೆಡ್ಡಿ ಹಾಗೂ ಶ್ರೀ ಜಿ.ಕೆ. ದೇವರಾಜಸ್ವಾಮಿ ಸಂಪಾದಿತ 'ಇತಿಹಾಸ ದರ್ಶನ' ೨೯ನೇ ವಾರ್ಷಿಕ ಸಂಪುಟವನ್ನು ಶ್ರೀ ವಿ. ಸುಬ್ಬಯ್ಯಹೆಗಡೆ, ಸಂಚಾಲಕರು, ವಿದ್ಯಾವರ್ಧಕ ಸಂಘ ಶಿರ್ವ, ಅವರು ಬಿಡುಗಡೆ ಮಾಡಿದರು. ಸಂಶೋಧನಾ ಪ್ರಬಂಧಗಳ ಸಂಪುಟ ನಿರಂತರವಾಗಿ ಬರುತ್ತಿರುವುದನ್ನು ಶ್ಲಾಘಿಸಿ ಸಂಶೋಧನಾ ಮಹತ್ವವನ್ನು ತಮ್ಮ ಮಾತಿನಲ್ಲಿ ತಿಳಿಸಿದರು.

ಡಾ. ಪಾ.ರಾ. ಗೋಪಾಲ ಪ್ರಶಸ್ತಿಯನ್ನು ಶಾಸನ ತಜ್ಞರಾದ ಶ್ರೀಯುತ ಎಚ್.ಎಂ. ನಾಗರಾಜರಾವ್ ಮೈಸೂರು ಅವರಿಗೆ ಪ್ರೊ. ವೈ ಭಾಸ್ಕರಶೆಟ್ಟಿ, ಆಡಳಿತಾಧಿಕಾರಿಗಳು, ವಿದ್ಯಾವರ್ಧಕ ಸಂಘ, ಶಿರ್ವ ಅವರು ಪ್ರದಾನ ಮಾಡಿದರು. ಡಾ.

ಸಂದರ್ಭದಲ್ಲಿ ಶ್ರೀಮತಿ ಸೀತಾಲಕ್ಷ್ಮಿರಾವ್ ಅವರು ಸನ್ಮಾನಿತರ ಕಿರುಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಪ್ರೈಸಾನಿ ರುಕ್ಮಿಣಿಯಮ್ಮ ರತ್ನಂಶೆಟ್ಟಿ ನೆನಪಿನಲ್ಲಿ ನೀಡುವ "ಇತಿಹಾಸ ಸಂಸ್ಕೃತಿ ಶ್ರೀ" ಪ್ರಶಸ್ತಿಯನ್ನು ಮೂರನೇ ಬಾರಿಗೆ ಖ್ಯಾತ ಇತಿಹಾಸ ತಜ್ಞರಾದ ಡಾ. ಅ. ಸುಂದರ ಅವರಿಗೆ ಬಿ.ಆರ್.ಆರ್. ಚಾರಿಟೆಬಲ್ ಟ್ರಸ್ಟ್‌ನ ಕಾರ್ಯದರ್ಶಿಗಳಾದ ಶ್ರೀಯುತ ಅಶೋಕ್‌ಕುಮಾರ್ ಅವರು ಇತರ ಗಣ್ಯರೊಂದಿಗೆ ಪ್ರಧಾನ ಮಾಡಿದರು. ಸಂಶೋಧಕರನ್ನು ಗುರುತಿಸಿ ಪ್ರಶಸ್ತಿ ನೀಡುವ ಬಿ.ಆರ್.ಆರ್. ಫ್ಯಾಮಿಲಿ ಟ್ರಸ್ಟ್‌ಗೆ ಕೃತಜ್ಞತೆ ಸಲ್ಲಿಸಿ, ಸಂಶೋಧನೆಯ ಮಹತ್ವ ಹಾಗೂ ಇಂದಿನ ಸಂಶೋಧನೆಯ ಹಾದಿಯನ್ನು ಕುರಿತು ಮಾತನಾಡಿದರು. ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ವೇದಿಕೆಯನ್ನು ಅಲಂಕರಿಸಿದ್ದ ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ಡಾ. ಎಸ್.ಕೆ. ಜೋಷಿ ಪುರಾತತ್ವವಿದರು ಹಾಗೂ ಸಂಶೋಧಕರು ಅವರು ಅಕಾದೆಮಿಯ ಚಟುವಟಿಕೆಗಳು ಹಾಗೂ ಸಂಶೋಧನೆ ಕುರಿತು ಮಾತನಾಡಿದರು. ಡಾ. ಕೆ.ಜಿ. ವಸಂತಮಾಧವ ಅವರ ಕಿರು ಪರಿಚಯವನ್ನು ಸಭೆಗೆ ಮಾಡಿಕೊಡಲಾಯಿತು.

ಅಕಾದೆಮಿಯ ೨೮ನೇ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷ ಪದವಿಯ ಗೌರವಕ್ಕೆ ಪಾತ್ರರಾಗಿದ್ದ ಪುರಾತತ್ವವಿದರೂ ಮತ್ತು ಸಂಶೋಧಕರೂ ಆದ ಡಾ. ಕೆ.ಜಿ. ವಸಂತಮಾಧವ ಅವರು ಸನ್ಮಾನವನ್ನು ಸ್ವೀಕರಿಸಿ, ಇತಿಹಾಸ ಮತ್ತು ಸಂಶೋಧನೆ, ಕರ್ನಾಟಕದ ಇತಿಹಾಸ ಅಂದು ಇಂದು, ಕರ್ನಾಟಕವನ್ನೊಳಗೊಂಡ ತುಳುನಾಡಿನ ಇತಿಹಾಸ, ಸಂಶೋಧನೆ ಮತ್ತು ಆಕರಗಳನ್ನು ಇಂದಿನ ಯುವ ಸಂಶೋಧಕರು ಬಳಸಿಕೊಳ್ಳುವ ವಿಚಾರಗಳನ್ನು ಕುರಿತು ಮಾತನಾಡಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ವಹಿಸಿದ್ದರು.

ಹಿಂದಿನ ಸಮ್ಮೇಳನ ೨೦೧೩-೧೪ನೇ ಶೈಕ್ಷಣಿಕ ಸಾಲಿನಲ್ಲಿ ನಂತರ ಸದಸ್ಯರು ಪಿಎಚ್.ಡಿ/ಡಿ.ಲಿಟ್ ಪದವಿ ಪಡೆದು ಗೌರವಕ್ಕೆ ಪಾತ್ರರಾದವರಿಗೆ ೨೦೧೩-೧೪ನೇ ಶೈಕ್ಷಣಿಕ ಸಾಲಿನಲ್ಲಿ ಪಿ.ಎಚ್‌ಡಿ/ಡಿ.ಲಿಟ್ ಪದವಿ ಪಡೆದು ಅಕಾದೆಮಿಯ ಗೌರವ ಮತ್ತು ಸನ್ಮಾನಕ್ಕೆ ಪಾತ್ರರಾದ ಸದಸ್ಯರಿಗೆ ಶ್ರೀ ಮಟ್ಟಾರು ರತ್ನಾಕರ್ ಹೆಗಡೆ, ಸಂಚಾಲಕರು, ವಿದ್ಯಾವರ್ಧಕ ಸೆಂಟ್ರಲ್ ಸ್ಕೂಲ್, ಶಿರ್ವ ಅವರು ಸನ್ಮಾನಿಸಿ, ಸಂಶೋಧನೆ ಮತ್ತು ಅಕಾದೆಮಿಯ ಚಟುವಟಿಕೆಯ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಪಿ.ಎಚ್‌ಡಿ./ಡಿಲಿಟ್ ಪದವಿ ಪಡೆದ ಸಂಶೋಧಕರಿಗೆ ಪ್ರಸ್ತುತ ವರ್ಷದಿಂದ ಶ್ರೀ ಜಿ. ರಾಜನ್ ತುಮಕೂರು ಅವರು ತಲಾ ಐನೂರು ರೂಪಾಯಿಗಳನ್ನು ಸನ್ಮಾನಿತ ಸಂಶೋಧಕರಿಗೆ ಅಕಾದೆಮಿಯ ಮೂಲಕ ನೀಡುತ್ತಿದ್ದಾರೆ. ಇದಕ್ಕಾಗಿ ಕರ್ನಾಟಕ ಇತಿಹಾಸ ಅಕಾದೆಮಿಯಲ್ಲಿ ರೂ. ಐವತ್ತು ಸಾವಿರದ ದತ್ತಿಯೊಂದನ್ನು, ಅಕಾಡೆಮಿಯ ಮೇಲಿನ ಪ್ರೀತಿಯಿಂದ ಸ್ಥಾಪಿಸಿದ್ದಾರೆ. ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜು ಶಿರ್ವದ ವಿದ್ಯಾರ್ಥಿನಿಯರಿಂದ ಪ್ರಾರ್ಥನೆ, ನಾಡಗೀತೆಯೊಂದಿಗೆ ಸಮಾರಂಭವು ಆರಂಭಗೊಂಡಿತು. ಅಕಾದೆಮಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರೊ. ಮುರುಗೇಶಿ ಇತಿಹಾಸ ಉಪನ್ಯಾಸಕರು ಇವರು ಸ್ವಾಗತ ಕೋರಿದರು. ಅಕಾದೆಮಿ ಪ್ರಧಾನ ಕಾರ್ಯದರ್ಶಿಗಳಾದ ಜಿ.ಕೆ. ದೇವರಾಜಸ್ವಾಮಿಯವರು ವಂದನಾರ್ಪಣೆ ಸಲ್ಲಿಸಿದರು.

ಪಿ.ಎಚ್‌ಡಿ ಮತ್ತು ಡಿ.ಲಿಟ್ ಪದವಿ ಪಡೆದ ಸನ್ಮಾನಿತರು

ಕ್ರ. ಸಂ.	ಪಿಎಚ್.ಡಿ./ಡಿ.ಲಿಟ್ ಪದವಿ ಪಡೆದವರ ಹೆಸರು	ಮಾರ್ಗದರ್ಶಕರ ಹೆಸರು	ವಿಷಯ	ವಿಶ್ವವಿದ್ಯಾಲಯ
೧	ಡಾ.ನಾಗರಾಜ್ ಪಿ.ನಾಡಗೌಂಡರ್	ಡಾ. ಕೆ. ರವೀಂದ್ರನಾಥ್	ಕನ್ನಡ ಟೀಕಿನ ವಚನಗಳು ಒಂದು ಅಧ್ಯಯನ	ಕನ್ನಡ ವಿ.ವಿ. ಡಿಸೆಂಬರ್ ೨೦೧೩
೨	ಡಾ. ಸುಮಂಗಳಾ ಮೇಟಿ	ಡಾ. ಕೆ. ರವೀಂದ್ರನಾಥ್	ಕರ್ನಾಟಕ ಲಿಂಗಾಯತ ರಾಣಿಯರು ಒಂದು ಅಧ್ಯಯನ	ಕನ್ನಡ ವಿ.ವಿ., ಹಂಪಿ ಮಾರ್ಚ್ ೨೦೧೪
೩	ಡಾ. ಸುಭಾಷ್ ಕಮ್ಮಾರ್	ಡಾ.ಆರ್. ಶೇಷಶಾಸ್ತ್ರಿ ಡಾ.ಎಚ್.ಎಸ್.ಗೋಪಾಲರಾವ್	ಬಾದಾಮಿ ಚಾಲುಕ್ಯರ ಶಾಸನಗಳು, ಶಿಲ್ಪಗಳು ಮತ್ತು ಲಿಪಿಗಳು	ದ್ರಾವಿಡ ವಿ.ವಿ. ಕುಪ್ಪಂ, ಆಂಧ್ರ ಪ್ರದೇಶ

೨೮ನೇ ಸಮ್ಮೇಳನದಲ್ಲಿ ನಡೆದ ಗೋಷ್ಠಿಗಳು : ಮೂರು ದಿನ ನಡೆದ ಸಮ್ಮೇಳನದಲ್ಲಿ ದಿನಾಂಕ : ೨೬-೯-೨೦೧೪ರ ಶುಕ್ರವಾರ ಮಧ್ಯಾಹ್ನ ೨.೦೦ ಗಂಟೆಯಿಂದ ದಿನಾಂಕ: ೨೮-೯-೨೦೧೪ ಭಾನುವಾರ ಸಂಜೆ ೫ ಗಂಟೆವರೆಗೆ, ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜು ಶಿರ್ವ ಉಡುಪಿ ಜಿಲ್ಲೆಯಲ್ಲಿ ಎರಡೂ ಸಭಾಂಗಣದಲ್ಲಿ ನಡೆದ ೧೬ ಸಮಾನಾಂತರ ಗೋಷ್ಠಿಗಳಲ್ಲಿ ಒಟ್ಟು ೧೬೩ಕ್ಕೂ ಹೆಚ್ಚು ಪ್ರಬಂಧಗಳು ಮಂಡನೆಯಾದವು.

ಗೋಷ್ಠಿಗಳ ಅಧ್ಯಕ್ಷತೆಯನ್ನು ಕ್ರಮವಾಗಿ ಡಾ. ಎ.ಕೆ. ಶಾಸ್ತ್ರಿ, ಡಾ. ಎಚ್. ಚಂದ್ರಶೇಖರ, ಡಾ. ಎಫ್.ಟಿ. ಹಳ್ಳಿಕೇರಿ, ಡಾ. ಕೆ. ರವೀಂದ್ರನಾಥ್, ಡಾ. ಎಂ.ಜಿ. ನಾಗರಾಜ್, ಡಾ. ಹನುಮನಾಯಕ್, ಡಾ. ಎಚ್.ಎಸ್. ಗೋಪಾಲರಾವ್, ಡಾ. ಸಿ. ಮಹದೇವ್, ಡಾ. ಜಗದೀಶ್, ಡಾ. ಹನುಮಾಕ್ಷಿಗೋಗಿ, ಡಾ. ಕುಮಾರಸ್ವಾಮಿ, ಡಾ. ಶರಣಬಸಪ್ಪ ಕೋಲ್ಕಾರ, ಶ್ರೀ ಎಂ.ಬಿ.

ಪಾಟೀಲ್, ಡಾ. ಆನಂದ ... [illegible], ಶ್ರೀ ಎಂ.ಎಸ್. ಪ್ರಭಾಕರ್, ಡಾ. ಪ್ರಿಯಾಂಕ [illegible] ಅವರುಗಳು ತಮ್ಮ ಪಿಎಚ್.ಡಿ. ಗೋಷ್ಠಿಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಗೋಷ್ಠಿಗಳನ್ನು ಕ್ರಮವಾಗಿ ಮಂಜುಳಾ [illegible], [illegible] ಡಾ. ಶಿವಲಿಂಗಪ್ಪ, ಡಾ. ಮಹೇಶಕುಮಾರ್ [illegible], [illegible], ಡಾ. ಜಯಮ್ಮ ಕರಿಯಣ್ಣ, ಶ್ರೀಮತಿ [illegible]ಲಕ್ಷ್ಮೀರಾವ್, [illegible], [illegible] ಎಸ್., ಶ್ರೀಮತಿ [illegible], ಕಾಂತರಾಜ್ ಎಚ್. ದೊಡ್ಡನೆ, ಡಾ. ನಂದೀಶ್ವರ ಅವರುಗಳು ನಿರ್ವಹಣೆ ಮಾಡಿದರು.

ಸಮಾರೋಪ ಸಮಾರಂಭ

ದಿನಾಂಕ: ೨೮-೯-೨೦೧೪ರಂದು ಸಂಜೆ ೪.೩೦ ಗಂಟೆಗೆ ಸಮಾರೋಪ ಸಮಾರಂಭವು ಮೂಲ್ಕಿ ಸುಂದರರಾಮಶೆಟ್ಟಿ ಕಾಲೇಜಿನ ವಿದ್ಯಾರ್ಥಿನಿಯರಾದ ಕುಮಾರಿ ಅಕ್ಷತ ಮತ್ತು ಕರಿಷ್ಮ ಅವರುಗಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಡಾ. ಮುರುಗೇಶಿ, ಇತಿಹಾಸ ಪ್ರಾಧ್ಯಾಪಕರು, ಎಂ.ಎಸ್.ಆರ್.ಎಸ್. ಕಾಲೇಜು ಶಿರ್ವ ಇವರು ಸರ್ವರಿಗೂ ಸ್ವಾಗತ ಕೋರಿದರು. ಸಮ್ಮೇಳನದಲ್ಲಿ ಪ್ರತಿನಿಧಿಗಳಾದ ಶ್ರೀ ಟಿ.ಎಂ.ಎಚ್. ಬಸವರಾಜ್ ಬಳ್ಳಾರಿ ಅವರು ಮತ್ತು ಡಾ. ಜಯಮ್ಮ ಕರಿಯಣ್ಣ ಅವರೂ, ಸುಂದರರಾಮಶೆಟ್ಟಿ ಕಾಲೇಜಿನ ಆಡಳಿತಾಧಿಕಾರಿಗಳೂ, ವಿದ್ಯಾರ್ಥಿಗಳೂ ಸೇರಿ ಶ್ರೀ ಮುರುಗೇಶಿ ಅವರ ನೇತೃತ್ವದಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಪ್ರೀತಿಯಿಂದ ನೋಡಿಕೊಂಡಿದ್ದ ತುಳುನಾಡಿನ ಜನರ ಅರಿವು, ಆಚಾರ ಮತ್ತು ಹೃದಯ ಶ್ರೀಮಂತಿಕೆಯನ್ನು ಹೊಗಳಿದರು.

ಮುಖ್ಯ ಅತಿಥಿಗಳಾಗಿ ಶ್ರೀ ರಾಜಗೋಪಾಲ್, ಪ್ರಾಂಶುಪಾಲರು, ಎಂ.ಎಸ್.ಆರ್.ಎಸ್. ಪಿ.ಯು. ಕಾಲೇಜು ಶಿರ್ವ, ಇವರು ಭಾಗವಹಿಸಿದ್ದರು. ಅಕಾದೆಮಿಯು ತನ್ನೆಲ್ಲಾ ಸದಸ್ಯರನ್ನು ಅವರು ಕೈಗೊಂಡ ಸಂಶೋಧನಾ ಕಾರ್ಯ, ಚಟುವಟಿಕೆ ಕುರಿತು ಚರ್ಚಿಸಲು ಮೂರು ದಿನ ಸೇರಿರುವುದು ಆಶ್ಚರ್ಯ ಹಾಗೂ ಹಿರಿಯ ಅನೇಕ ವಿದ್ವಾಂಸರನ್ನು ನೋಡಿ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶ ಕೊಟ್ಟ ತಮ್ಮ ಸಂಸ್ಥೆ ಹಾಗೂ ಅಕಾದೆಮಿಗೆ ಧನ್ಯವಾದ ಹೇಳಿದರು.

ಸಮಾರೋಪ ಸಮಾರಂಭಕ್ಕೆ ಆಗಮಿಸಿದ್ದ ಶ್ರೀ ಪ್ರಶಾಂತ್ ನಂಜಿಯಾರ್, ಪ್ರಾಂಶುಪಾಲರು ವಿದ್ಯಾವರ್ಧಕ ಸಂಘ ಆಂಗ್ಲ ಮಾಧ್ಯಮ ಶಾಲೆ ಶಿರ್ವ ಇವರು ಇತಿಹಾಸದ ಘಟನೆಗಳು ಮತ್ತು ಆಗುಹೋಗುಗಳಿಂದ ನಿರ್ಣಯಗಳನ್ನು ಕೈಗೊಳ್ಳುವ ಬಗ್ಗೆ ಒಂದು ಉತ್ತಮ ಪಾಠ ಕಲಿಯಬಹುದೆಂಬ ಅಭಿಪ್ರಾಯ ವ್ಯಕ್ತಪಡಿಸಿ ಅಕಾದೆಮಿಯ ಚಟುವಟಿಕೆಯ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಡಾ. ವಸಂತಮಾಧವ ಅವರು ಮಾತನಾಡಿ, ಸಂಶೋಧನಾ ಪ್ರಬಂಧಗಳ ಬಗ್ಗೆ ಮೆಚ್ಚುಗೆ ಸೂಚಿಸಿ, ಇನ್ನೂ ಮೌಲ್ಯಾಧಾರಿತ ವಿಷಯಗಳಿಗೆ ಮತ್ತು ಗುಣಮಟ್ಟದ ಸಂಶೋಧನೆಗೆ ಯುವ ವಿದ್ವಾಂಸ ಪೀಳಿಗೆಯು ಒತ್ತು ಕೊಡಬೇಕೆಂಬ ಅಭಿಪ್ರಾಯಪಟ್ಟರು. ಸಮ್ಮೇಳನವು ಯಶಸ್ವಿಯಾಗಿ ನಡೆದ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಅತಿಥಿಗಳಿಗೆ ಸನ್ಮಾನಿಸಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರು ಮಾತನಾಡಿ, ಈ ಸಮ್ಮೇಳನವು ಯಶಸ್ವಿಯಾಗುವಲ್ಲಿ ಸಹಕರಿಸಿರುವ ಸರ್ವರಿಗೂ ವಂದನಾರ್ಪಣೆ ಮಾಡುವುದರೊಂದಿಗೆ ೨೮ನೇ ವಾರ್ಷಿಕ ಸಮ್ಮೇಳನವು ಮುಕ್ತಾಯಗೊಂಡಿತು.

ಸರ್ವಸದಸ್ಯರ ಸಭೆಯ ವರದಿ: ೨೦೧೪-೨೦೧೫

ದಿನಾಂಕ ೨೭-೦೯-೨೦೧೪ ಶನಿವಾರ ಸಂಜೆ ೬.೩೦ ಗಂಟೆಗೆ ಅಕಾದೆಮಿಯ ೨೮ನೆಯ ವಾರ್ಷಿಕ ಸಮ್ಮೇಳನದ ಸಭಾಸ್ಥಾನವಾದ ಉಡುಪಿ ಜಿಲ್ಲೆಯ ಶಿರ್ವದ ಮೂಲ್ಕಿ ಸುಂದರರಾಮ ಶೆಟ್ಟಿ ಕಾಲೇಜಿನ ಸಭಾಂಗಣದಲ್ಲಿ ಈ ಮೊದಲೇ ಸರ್ವಸದಸ್ಯರಿಗೂ ದಿನಾಂಕ ೩೦-೮-೨೦೧೪ರ ಪತ್ರಮುಖೇನ ತಿಳಿಸಿದ್ದಂತೆ, ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಸದಸ್ಯರ ಸಭೆಯ ನಡಾವಳಿಗಳು ಈ ಕೆಳಕಂಡಂತಿವೆ.

ಸಭೆಯ ನಡವಳಿಕೆಗಳು

೧. **ಸಂತಾಪ ಸೂಚಕ ಸಭೆ ಮತ್ತು ಶ್ರದ್ಧಾಂಜಲಿ:-** ಕಳೆದ ಸರ್ವಸದಸ್ಯರ ಸಭೆಯ ನಂತರ ಈವರೆಗೆ ನಿಧನರಾಗಿರುವ ಅಕಾದೆಮಿಯ ಸದಸ್ಯರು ಹಾಗೂ ಇತರ ಗಣ್ಯವ್ಯಕ್ತಿಗಳ ನಿಧನಕ್ಕಾಗಿ, ಸಭೆಯು ಒಂದು ನಿಮಿಷ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು. ಸದಸ್ಯರು ಮತ್ತು ಇತರ ಗಣ್ಯವ್ಯಕ್ತಿಗಳ ಪಟ್ಟಿ ಈ ರೀತಿ ಇದೆ.

ಸದಸ್ಯರು: ಡಾ. ಬಸವರಾಜ ಮಲಶೆಟ್ಟಿ, ಹೊಸಪೇಟೆ; ಡಾ. ಗಿರಿಜಾ, ದಾವಣಗೆರೆ, ಶ್ರೀಮತಿ ಪಿ. ಸುರೇಖಾ ಜಿಗಳೇರ, ದಾವಣಗೆರೆ, ಶ್ರೀ ಕೃಷ್ಣಕಾಂತ, ತುಮಕೂರು; ಡಾ. ಜಿ.ಆರ್. ಪಾಂಡುರಂಗ, ಶ್ರೀ ಎಂ.ಎಂ. ಮುಕುಂದಪ್ರಭು.

ಇತರ ಗಣ್ಯವ್ಯಕ್ತಿಗಳು: ಡಾ. ಬಸವಾರಾಧ್ಯ, ಹಸ್ತಪ್ರತಿ ತಜ್ಞರು; ಡಾ. ಕಮಲೇಶ್, ಕಲಾವಿದರು; ಡಾ. ನೀಲತ್ತಹಳ್ಳಿ ಕಸ್ತೂರಿ, ಸಾಹಿತಿಗಳು; ಡಾ. ಯು.ಆರ್. ಅನಂತಮೂರ್ತಿ, ಸಾಹಿತಿಗಳು; ಡಾ. ಜಿ.ಎಸ್. ಶಿವರುದ್ರಪ್ಪ, ಸಾಹಿತಿಗಳು; ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಬಹದ್ದೂರ್, ಮೈಸೂರು ಅರಸರ ವಂಶದ ಕೊನೆಯ ದೊರೆ.

೨. ಶ್ರೀ ಟಿ.ಎಚ್.ಎಂ. ಬಸವರಾಜ್, ಬಳ್ಳಾರಿ ಜಿಲ್ಲೆಯ ಸದಸ್ಯರ ಪ್ರಾರ್ಥನೆಯೊಂದಿಗೆ ಸಭೆಗೆ ವಿದ್ಯುಕ್ತ ಚಾಲನೆ ದೊರೆಯಿತು. ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರು ಹಾಜರಿದ್ದ ಎಲ್ಲಾ ಸದಸ್ಯರಿಗೆ ಸ್ವಾಗತ ಕೋರಿ, ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಮನವಿ ಮಾಡಿಕೊಂಡರು.

೩. ಸಭೆಯಲ್ಲಿ ೬೦ ಜನ ಸದಸ್ಯರು ಹಾಜರಿದ್ದರು. ಸದಸ್ಯರ ಹಾಜರಾತಿ ಪಟ್ಟಿಯನ್ನು ಈ ವರದಿಯ ಜೊತೆಗೆ ಲಗತ್ತಿಸಿದೆ. ಸರ್ವಸದಸ್ಯರ ಸಭೆಯ ದಿನಾಂಕ ೩೦-೮-೨೦೧೪ರ ಸೂಚನಾಪತ್ರವನ್ನು ಅಂಚೆಯ ಮೂಲಕ ಎಲ್ಲಾ ಸದಸ್ಯರಿಗೂ ಮೊದಲೇ ಕಳುಹಿಸಲಾಗಿತ್ತು. ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಜಿ.ಕೆ. ದೇವರಾಜಸ್ವಾಮಿಯವರು ಸರ್ವಸದಸ್ಯರ ಸಭೆಯ ಸೂಚನಾಪತ್ರವನ್ನು ಸಭೆಗೆ ಓದಿದ ನಂತರ ದಾಖಲು ಮಾಡಲಾಯಿತು. ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿಯವರು ಸಭೆಯನ್ನು ಆರಂಭಿಸಲು ಹಾಜರಿದ್ದ ಸದಸ್ಯರ ಅನುಮತಿ ಕೋರಿದರು. ಸರ್ವಸದಸ್ಯರ ಸಭೆಯ ಆರಂಭಕ್ಕೆ ಅನುಮೋದನೆ ನೀಡಬಹುದೆಂದು ಡಾ. ಎಚ್. ಚಂದ್ರಶೇಖರ್ ಅವರ ಸೂಚನೆಯನ್ನು ಡಾ. ಎಂ.ಜಿ. ನಾಗರಾಜ್ ಅವರು ಅನುಮೋದಿಸಿದರು. ಸರ್ವಸದಸ್ಯರೂ ಸಭೆಯ ಪ್ರಾರಂಭಕ್ಕೆ ಒಮ್ಮತದಿಂದ ಅನುಮೋದನೆ ನೀಡಿದರು.

೪. ೨೦೧೩-೧೪ನೆಯ ಸಾಲಿನ ವರದಿಯನ್ನು ಅನುಮೋದಿಸುವುದು: ೨೦೧೩-೧೪ನೆಯ ಸಾಲಿನ ವಾರ್ಷಿಕ ಚಟುವಟಿಕೆಗಳು/ ಕಾರ್ಯಕ್ರಮಗಳು ಸಭೆಯ ಪ್ರಾರಂಭದಲ್ಲೇ ಎಲ್ಲಾ ಸದಸ್ಯರಿಗೂ ವಿತರಿಸಲಾಗಿತ್ತು. ಆದರೂ ಸರ್ವಸದಸ್ಯರ ಅಪೇಕ್ಷೆಯ ಮೇರೆಗೆ ಅಕಾದೆಮಿಯ ಕೆಲವು ಮುಖ್ಯ ಕಾರ್ಯಕ್ರಮಗಳನ್ನು / ಚಟುವಟಿಕೆಗಳನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ವಾಚಿಸಿದರು. ನಂತರ ೨೦೧೩-೧೪ನೇ ಸಾಲಿನ ವರದಿಯನ್ನು ಯಾವುದೇ ಚರ್ಚೆಯಿಲ್ಲದೆ ಸಭೆಯು ಒಪ್ಪಿ ನಂತರ ದಾಖಲಿಸಿತು.

೫. ೨೦೧೩-೧೪ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರ ಮಂಡನೆ: ಸಭೆಯ ಆರಂಭದಲ್ಲೇ ಎಲ್ಲಾ ಸದಸ್ಯರಿಗೂ ಲೆಕ್ಕಪತ್ರಗಳ ವರದಿಯನ್ನು ನೀಡಲಾಗಿತ್ತು. ಅಕಾದೆಮಿಯ ಆರ್ಥಿಕ ಸ್ಥಿತಿಗತಿಗಳನ್ನು ಕೋಶಾಧಿಕಾರಿಗಳಾದ ಶ್ರೀ ಎಂ.ಜಿ. ಪಾಟೀಲ್‌ರವರು ಮಂಡಿಸಿದರು. ನಂತರ ತುಮಕೂರಿನ ಸದಸ್ಯರಾದ ಶ್ರೀ ಜಿ. ರಾಜನ್‌ರವರು ಅಕಾದೆಮಿಯಲ್ಲಿ ಪಿಎಚ್.ಡಿ./ಡಿ.ಲಿಟ್. ಪದವಿ ಪಡೆದವರಿಗೆ ರೂ.೫೦,೦೦೦/- ಸಾವಿರದ ದತ್ತಿನಿಧಿಯನ್ನು, ಅದರ ಉದ್ದೇಶವನ್ನೂ, ಅದರಿಂದ ಉತ್ಪತ್ತಿಯಾಗುವ ಬಡ್ಡಿಹಣದಿಂದ ಪಿಎಚ್.ಡಿ./ಡಿ.ಲಿಟ್. ಪದವಿ ಪಡೆದವರಿಗೆ ಗೌರವಧನ ವಿತರಿಸುವ ಅವರ ಸದುದ್ದೇಶವನ್ನು, ಅಕಾದೆಮಿಯು ಆ ನಿಧಿಯನ್ನು ನಿಭಾಯಿಸುವ ರೀತಿಯನ್ನು ಸಭೆಗೆ ತಿಳಿಸಿದರು. ನಂತರ ರೂ.೧೦೦೦೦/-ಕ್ಕೂ ಮೇಲ್ಪಟ್ಟು ನೀಡಿದ ದಾನಿಗಳ ಹೆಸರನ್ನೂ ಮತ್ತು ಸಂಘಸಂಸ್ಥೆಗಳನ್ನೂ ಸರ್ವಸದಸ್ಯರ ಗಮನಕ್ಕೆ ತರಲಾಯಿತು. ಇದೇ ಸಂದರ್ಭದಲ್ಲಿ ಕೋಶಾಧಿಕಾರಿಗಳು ಇತಿಹಾಸ ದರ್ಶನ ಮುದ್ರಣದ ಖರ್ಚು, ವಾರ್ಷಿಕ ಸಮ್ಮೇಳನ ನಡೆಸುವ ಸಲುವಾಗಿ ತಗಲುವ ಖರ್ಚು, ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಅಂಗವಾಗಿ ಶಾಲಾಕಾಲೇಜುಗಳಿಗೆ ನಡೆಸುವ ಸ್ಪರ್ಧೆಗಳನ್ನು ನಡೆಸುವ ಹೊಣೆ, ಖರ್ಚು ಮತ್ತು ಇತರೇ ಸಣ್ಣ ಪ್ರಮಾಣದ ಕಾರ್ಯಕ್ರಮದ ಖರ್ಚುಗಳು, ಕಚೇರಿ ನಡೆಸಲು ಬೇಕಾದ ಖರ್ಚುಗಳ ಬಗ್ಗೆ ಸದಸ್ಯರು ಕೇಳಿದ ಅಂಶಗಳಿಗೆ ಸಮಜಾಯಿಷಿ ನೀಡಿದ ನಂತರ, ೨೦೧೩-೧೪ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರವನ್ನು ಮಹಾಸಭೆ ಸರ್ವಾನುಮತದಿಂದ ಅನುಮೋದಿಸಿ ದಾಖಲು ಮಾಡಲಾಯಿತು.

೬. ೨೦೧೩-೧೪ನೆಯ ಸಾಲಿನ ಮುಂಗಡ ಲೆಕ್ಕಪತ್ರಗಳ ಮಂಜೂರಾತಿ:- ಸಭೆಯ ಪ್ರಾರಂಭದಲ್ಲೇ ೨೦೧೩-೧೪ನೆಯ ಸಾಲಿನ ಮುಂಗಡ ಲೆಕ್ಕಪತ್ರಗಳ ಪ್ರತಿಗಳನ್ನು ಸದಸ್ಯರಿಗೆ ನೀಡಲಾಗಿತ್ತು. ಅದನ್ನು ಕೋಶಾಧಿಕಾರಿಗಳಾದ ಶ್ರೀ ಎಂ.ಜಿ. ಪಾಟೀಲ್‌ರವರು ಸಭೆಗೆ ಮಂಡಿಸಿದರು. ಸರ್ವಸದಸ್ಯರ ಹೆಚ್ಚಿನ ವಿವರಗಳಿಗೆ ಶ್ರೀ ಪಾಟೀಲ್‌ರವರು ಸಮಜಾಯಿಷಿ ನೀಡಿದ ನಂತರ ಮುಂಗಡ ಲೆಕ್ಕಪತ್ರಗಳನ್ನು ಸರ್ವಸದಸ್ಯರ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿದ ನಂತರ ದಾಖಲು ಮಾಡಲಾಯಿತು.

೭. ೨೦೧೩-೧೪ನೆಯ ಸಾಲಿನ ಲೆಕ್ಕ ಪರಿಶೋಧಕರ (ಆಡಿಟರ್) ನೇಮಕ ಕುರಿತು:- ಈವರೆಗೆ ಅಕಾದೆಮಿಯ ಲೆಕ್ಕಪತ್ರಗಳನ್ನು ಪರಿಶೋಧಿಸಿ ಕೊಡುತ್ತಿರುವ ಶ್ರೀ ಕೆ.ವಿ. ಆಚಾರ್ಯ ಅಂಡ್ ಕಂಪೆನಿ, ಬೆಂಗಳೂರು ಅವರನ್ನೇ ೨೦೧೩-೧೪ನೆಯ ಸಾಲಿನ ಲೆಕ್ಕಪತ್ರಗಳ ಪರಿಶೋಧನೆಗೆ ಮುಂದುವರಿಸಿ ಅವರಿಗೆ ರೂ.೧೦,೦೦೦/- ಸಂಭಾವನೆಯನ್ನು ಮತ್ತು ಸರ್ವಿಸ್ ಟ್ಯಾಕ್ಸ್ ನೀಡಿ ನೇಮಿಸಿಕೊಳ್ಳಬಹುದೆಂದು ಡಾ. ಮಲ್ಲಿಗವಾಡರವರು ಸೂಚಿಸಿದರು. ಈ ಸೂಚನೆಯನ್ನು ಶ್ರೀ ಪಟ್ಟಮನಿಯವರು ಅನುಮೋದಿಸಿದರು. ಸರ್ವಸದಸ್ಯರೂ ಸಹ ಲೆಕ್ಕಪರಿಶೋಧಕರ ನೇಮಕವನ್ನು ಅನುಮೋದಿಸಿದರು ಮತ್ತು ನಂತರ ದಾಖಲು ಮಾಡಲಾಯಿತು.

೮. ೨೦೧೫-೧೬ನೆಯ ಮತ್ತು ೨೦೧೬-೧೭ನೆಯ ಸಾಲಿನ ಕಾರ್ಯಕಾರೀ ಸಮಿತಿಯ ಆಯ್ಕೆ:- ೨೦೧೩-೧೪ ಮತ್ತು ೨೦೧೪-೧೫ ಎರಡು ವರ್ಷದ ಅವಧಿಗೆ ಆಯ್ಕೆಯಾಗಿದ್ದ ಕಾರ್ಯಕಾರೀ ಸಮಿತಿಯ ಅಧಿಕಾರಾವಧಿಯು ಮುಗಿದಿರುವ ಕಾರಣದಿಂದ, ಮುಂದಿನ ಎರಡು ವರ್ಷಗಳ ಅಂದರೆ ೨೦೧೫-೧೬ ಮತ್ತು ೨೦೧೬-೧೭ನೆಯ ಸಾಲಿಗೆ ನೂತನವಾಗಿ ಕಾರ್ಯಕಾರಿ ಸಮಿತಿಯ ಆಯ್ಕೆ ಆಗಬೇಕಾಗಿದ್ದು, ಸರ್ವ ಸದಸ್ಯರಿಗೆ ಈ ಬಗ್ಗೆ ದಿನಾಂಕ ೩೦-೦೮-೨೦೧೫ರ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಅದನ್ನು ಗಮನಿಸಿದ ಸದಸ್ಯರಲ್ಲಿ ಒಬ್ಬರಾದ ಶ್ರೀಮತಿ ಎಸ್.ವೈ. ನಿರ್ಮಲಾ, ಬೆಂಗಳೂರು ಅವರು, ತಾವು ಸಿದ್ಧಪಡಿಸಿದ್ದ ೨೧ ಸದಸ್ಯರ ಹೆಸರಿನ ಪಟ್ಟಿಯೊಂದನ್ನು ಸಭೆಗೆ ಓದಿ ತಿಳಿಸಿದರು. ಈ ಪಟ್ಟಿಯಲ್ಲಿನ ಸದಸ್ಯರ ಹೆಸರುಗಳು ಈ ಕೆಳಕಂಡಂತಿವೆ.

೧. ಡಾ. ದೇವರಕೊಂಡಾರೆಡ್ಡಿ, ಬೆಂಗಳೂರು
೨. ಡಾ. ಎಂ.ಜಿ. ನಾಗರಾಜ್, ಬೆಂಗಳೂರು
೩. ಡಾ. ಎಚ್.ಎಸ್. ಗೋಪಾಲರಾವ್, ಬೆಂಗಳೂರು
೪. ಶ್ರೀ ಜಿ.ಕೆ. ದೇವರಾಜಸ್ವಾಮಿ, ಬೆಂಗಳೂರು
೫. ಡಾ. ಪಿ.ವಿ. ಕೃಷ್ಣಮೂರ್ತಿ, ಬೆಂಗಳೂರು
೬. ಡಾ. ಎಚ್. ಜಯಮ್ಮ, ಬೆಂಗಳೂರು
೭. ಶ್ರೀ ಎಂ.ಬಿ. ಪಾಟೀಲ್, ಬೆಂಗಳೂರು
೮. ಡಾ. ವೆಂಕಟೇಶ್ ಜೋಯಿಸ್, ಕೆಳದಿ
೯. ಶ್ರೀ ಬಿ.ಎಸ್. ಗುರುಪ್ರಸಾದ್, ಬೆಂಗಳೂರು
೧೦. ಡಾ. ಎ.ಕೆ. ಶಾಸ್ತ್ರಿ, ಶಿರಸಿ,
೧೧. ಡಾ. ಬಾಲಕೃಷ್ಣ ಹೆಗಡೆ, ಶಿವಮೊಗ್ಗ
೧೨. ಡಾ. ಅಮರೇಶ್ ಯತಗಲ್, ಬಿಜಾಪುರ
೧೩. ಪ್ರೊ. ಟಿ. ಮುರುಗೇಶಿ, ಉಡುಪಿ
೧೪. ಶ್ರೀ ಸಿದ್ದರಗಿರಿ ಚಂದ್ರೇಗೌಡ
೧೫. ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ
೧೬. ಶ್ರೀ ಟಿ.ಎಚ್.ಎಂ. ಬಸವರಾಜ್, ಬಳ್ಳಾರಿ
೧೭. ಶ್ರೀಮತಿ ಹನುಮಾಕ್ಷಿ ಗೋಗಿ, ಹುಬ್ಬಳ್ಳಿ
೧೮. ಶ್ರೀ ಎಂ.ಎನ್. ಪ್ರಭಾಕರ್, ಮೈಸೂರು
೧೯. ಡಾ. ಶರಣಬಸಪ್ಪ ಕೋಲ್ಕಾರ್, ಗಂಗಾವತಿ
೨೦. ಪ್ರೊ. ರಾಮಚಂದ್ರ ಮಿಟ್ಟಿಮನಿ, ಧಾರವಾಡ
೨೧. ಶ್ರೀ ಕಲ್ಲಪ್ಪ ಮಹಾದೇವಪ್ಪ ಗರಗ, ಗದಗ

ಮೇಲೆ ಹೇಳಿದ ಸದಸ್ಯರು ಸಭೆಯಲ್ಲಿ ಹಾಜರಿದ್ದು, ತಮ್ಮನ್ನು ಸಭೆಗೆ ಪರಿಚಯಿಸಿಕೊಂಡರು. ಈ ೨೧ ಸದಸ್ಯರ ಪಟ್ಟಿಯನ್ನು ನೂತನ ಕಾರ್ಯಕಾರೀ ಸಮಿತಿಯ ಆಯ್ಕೆಗೆ ಸರ್ವ ಸದಸ್ಯರ ಸಭೆ ಒಪ್ಪಿಗೆ ಸೂಚಿಸಿತು. ಕಾರ್ಯಕಾರಿ ಸಮಿತಿಯಲ್ಲಿ ಇನ್ನೂ ಹೆಚ್ಚಿನ ಸದಸ್ಯರನ್ನು ಆಹ್ವಾನಿತ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲು, ಸರ್ವಸದಸ್ಯರ ಸಭೆಯು, ನೂತನ ಕಾರ್ಯಕಾರಿ ಸಮಿತಿಗೆ ಅನುಮತಿ ನೀಡಿತು. ಇದಲ್ಲದೆ, ಡಾ. ಸೂರ್ಯನಾಥ ಯು. ಕಾಮತ್ ಅವರನ್ನು ಅಕಾದೆಮಿಯ ಗೌರವಾಧ್ಯಕ್ಷರನ್ನಾಗಿ ಮುಂದುವರೆಯುವಂತೆ ಸರ್ವಸದಸ್ಯರ ಒಮ್ಮತದ ಕೋರಿಕೆಯಂತೆ ನಿರ್ಣಯ ಕೈಗೊಳ್ಳಲಾಯಿತು.

೯. ಅಕಾದೆಮಿಯ ೨೯ನೆಯ ವಾರ್ಷಿಕ ಸಮ್ಮೇಳನ ಆಯೋಜಿಸುವ ಬಗ್ಗೆ:- ಮಂಡ್ಯದ ಕೆಲವು ಸದಸ್ಯರು, ಮುಂದಿನ ೨೯ನೆಯ ವಾರ್ಷಿಕ ಸಮ್ಮೇಳನವನ್ನು ತಮ್ಮ ಸ್ಥಳದಲ್ಲಿ ಆಯೋಜಿಸುವ ಬಗ್ಗೆ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದರೆಂದು ಡಾ. ದೇವರಕೊಂಡಾರೆಡ್ಡಿ ಅವರು ಸಭೆಗೆ ತಿಳಿಸಿದರು. ಮೊದಲು ಆಹ್ವಾನ ಬಂದ ಸಂಸ್ಥೆಯೊಂದಿಗೆ ಸಮಾಲೋಚಿಸಿ ಮುಂದಿನ ೨೯ನೆಯ ವಾರ್ಷಿಕ ಸಮ್ಮೇಳನ ನಡೆಸಲಾಗುವುದೆಂದು ಸಭೆಗೆ ತಿಳಿಸಿದರು. ಸರ್ವಸದಸ್ಯರೂ ಒಮ್ಮತದಿಂದ ಅಕಾದೆಮಿ ಅಧ್ಯಕ್ಷರು ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಅಧಿಕಾರ ನೀಡಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೆ ಬಂದ ಇತರೇ ವಿಷಯಗಳು:

(೧) ಕಾರ್ಯಕಾರಿ ಸಮಿತಿಯ ಸಭೆಗೆ, ಎಲ್ಲಾ ಸದಸ್ಯರು ಹಾಜರಾಗುತ್ತಿದ್ದಾರೆಯೇ? ಹಾಗೂ ಗೈರುಹಾಜರಾದ ಸದಸ್ಯರಿಗೆ ಅಕಾದೆಮಿಯು ಯಾವ ಕ್ರಮ ಕೈಗೊಳ್ಳುತ್ತಿದೆ ಎಂಬ ವಿವರವನ್ನು ಶ್ರೀ ಎಚ್. ಚಂದ್ರಶೇಖರ್ ಅವರು ಬಯಸಿದರು.

ಡಾ. ದೇವರಕೊಂಡಾರೆಡ್ಡಿಯವರು ಯಾವ ಸದಸ್ಯರಿಗೂ ಅಕಾದೆಮಿಯು ವಾಹನ ಭತ್ಯೆ ನೀಡುತ್ತಿಲ್ಲವಾದ್ದರಿಂದ, ಅಕಾದೆಮಿ ಸದಸ್ಯರಿಗೆ ಕಾರ್ಯಕಾರಿ ಸಮಿತಿಯ ಸಭೆಗೆ ಹಾಜರಾಗಬೇಕೆಂದು ಕಡ್ಡಾಯವಾಗಿ ಸೂಚನೆ ಕೊಟ್ಟಿಲ್ಲ. ನಾನಾ ಕಾರಣಗಳಿಂದ ಸದಸ್ಯರು ಸಭೆಗೆ ಬರಲಾಗುವುದಿಲ್ಲ (ವೈಯುಕ್ತಿಕ, ಆರೋಗ್ಯ ನಿಮಿತ್ತ, ಕಚೇರಿಯ ಕೆಲಸದ ನಿಮಿತ್ತ, ಸಾಂಸಾರಿಕ ತೊಂದರೆಗಳು, ಇತ್ಯಾದಿ). ಅಂತಹ ಸದಸ್ಯರಿಂದ ಚರ್ಚೆಗೆ ಬಂದಿರುವ ವಿಷಯದ ಬಗ್ಗೆ ಅವರ ಅಭಿಪ್ರಾಯವನ್ನು ದೂರವಾಣಿ, ಈಮೇಲ್, ಮೆಸೇಜ್ ಹಾಗೂ ಪತ್ರದ ಮೂಲಕ ಪಡೆದು ದಾಖಲಿಸುತ್ತದೆ. ಹಾಗಾಗಿ ಈವರೆಗೂ ಸಭೆಯಲ್ಲಿ ವಿಷಯಗಳ ಬಗ್ಗೆ ನಿರ್ಣಯಕ್ಕೆ ಬರಲು ಯಾವ ತೊಂದರೆಯೂ ಕಂಡುಬಂದಿಲ್ಲ. ಅದ್ದರಿಂದ ಇದೇ ರೀತಿಯ ಕ್ರಮವನ್ನು ಮುಂದುವರೆಸಿಕೊಂಡು ಬರಲು ತೊಂದರೆ ಕಾಣುವುದಿಲ್ಲವೆಂದು ತಿಳಿಸಿದರು. ಇದಕ್ಕೆ ಸಭೆಯು ಒಪ್ಪಿಗೆ ನೀಡಿತು.

ಇತರ ಜಿಲ್ಲೆಗಳಲ್ಲಿ ಅಕಾದೆಮಿಯ ಕಾರ್ಯಕಾರಿ ಸಮಿತಿ ಸಭೆಯನ್ನು ನಡೆಸುವ ಸಲಹೆಯನ್ನು ಪರಿಶೀಲಿಸಬೇಕಾಗಿದೆ. ಅದನ್ನು ಅಕಾದೆಮಿ ಅಧ್ಯಕ್ಷರ ತೀರ್ಮಾನಕ್ಕೆ ಬಿಡಲು ಸಭೆಯು ಸೂಚಿಸಿತು.

(೨) ಅಕಾದೆಮಿಗೆ ದೇಣಿಗೆ: ಬಳ್ಳಾರಿಯ ನಮ್ಮ ಸದಸ್ಯರಾದ ಶ್ರೀ ಟಿ.ಎಂ.ಎಚ್. ಬಸವರಾಜ್‌ರವರಿಂದ ಈ ವರ್ಷವೂ ಸಹ ಸರ್ವಸದಸ್ಯರ ಸಭೆಯಲ್ಲಿ ಅಕಾದೆಮಿಗೆ ನೀಡಿದ ರೂ.೧೦೦೦೦/-ವನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿದೆ.

(೩) ಜಿಲ್ಲಾಘಟಕಗಳ ಕಾರ್ಯಚಟುವಟಿಕೆಗಳು: ಕೆಲವು ಸದಸ್ಯರುಗಳು ಜಿಲ್ಲಾಘಟಕಗಳ ಕಾರ್ಯಚಟುವಟಿಕೆಗಳನ್ನು ತಿಳಿಯಬಯಸಿದರು. ಡಾ. ದೇವರಕೊಂಡಾರೆಡ್ಡಿಯವರು ಸಮಜಾಯಿಷಿ ನೀಡಿದರು. ಕೆಲವು ಜಿಲ್ಲಾ ಘಟಕಗಳು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳನ್ನು ಬಹಳ ಶ್ರದ್ಧೆಯಿಂದ ಮತ್ತು ಸಂಭ್ರಮದಿಂದ ಶಾಲಾ ಕಾಲೇಜುಗಳಲ್ಲಿ ಆಚರಿಸಿಕೊಂಡು ಬರುತ್ತಿವೆ. ಇದೊಂದು ಉತ್ತಮ ಬೆಳವಣಿಗೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಭಿತ್ತಿಪತ್ರಗಳು ಮತ್ತು ಕರಪತ್ರಗಳು ಕೇಂದ್ರದಿಂದ ಜಿಲ್ಲಾಘಟಕಗಳಿಗೆ ಅಂಚೆಮೂಲಕ ಕಳುಹಿಸಲ್ಪಡುತ್ತಿವೆ. ಕೆಲವು ಜಿಲ್ಲಾಘಟಕಗಳು, ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಸಣ್ಣಪ್ರಮಾಣದ ಆರ್ಥಿಕ ನೆರವನ್ನು ಅಕಾದೆಮಿಯು ನೀಡಿದೆ. ಪ್ರತೀ ವರ್ಷದಲ್ಲೂ ಆರ್ಥಿಕ ಸಹಾಯ ಎಲ್ಲಾ ಘಟಕಗಳಿಗೂ ವಿಸ್ತರಿಸಲು ಸಾಧ್ಯವಾಗುವುದಿಲ್ಲ. ಆದರೂ ಕಾರ್ಯಕ್ರಮ ನಡೆಸಿದ ಬಗ್ಗೆ ವರದಿಗಳು ಜಿಲ್ಲಾಘಟಕಗಳಿಂದ ನಿರೀಕ್ಷಿಸಿದಂತೆ ಬರುತ್ತಿಲ್ಲ. ಈ ಕಾರ್ಯಕ್ರಮವನ್ನು ಮತ್ತಷ್ಟೂ ಜನಪ್ರಿಯಗೊಳಿಸಬೇಕಾಗಿದೆ ಎಂದರು.

(೪) ಅಕಾದೆಮಿಯ ಸದಸ್ಯತ್ವದ ಶುಲ್ಕ ಹೆಚ್ಚಿಸುವ ವಿಷಯ: ಡಾ. ಎಚ್. ಚಂದ್ರಶೇಖರ್, ಡಾ. ಬಾಲಕೃಷ್ಣ ಹೆಗ್ಗಡೆ, ಡಾ. ಅಮರೇಶ್ ಯತಗಲ್, ಶ್ರೀ ಎಂ.ಎಸ್. ಪ್ರಭಾಕರ ಇವರುಗಳ ಮುಂದಾಳತ್ವದಲ್ಲಿ ಇನ್ನೂ ಹಲವರು, ಅಕಾದೆಮಿಯ ಅಜೀವ ಸದಸ್ಯತ್ವದ ಶುಲ್ಕವನ್ನು ಹೆಚ್ಚಿಸುವ ಬಗ್ಗೆ ಒಕ್ಕೊರಲಿನಿಂದ ಧ್ವನಿಗೂಡಿಸಿದರು. ದೀರ್ಘ ಚರ್ಚೆಯ ನಂತರ ಸಭೆಯು ಈ ಕೆಳಕಂಡ ನಿರ್ಣಯಕ್ಕೆ ಸಮ್ಮತಿಸಿತು.

(ಅ) ಈವರೆಗೂ ಚಾಲ್ತಿಯಲ್ಲಿದ್ದ ವಾರ್ಷಿಕ ಸಾಮಾನ್ಯ ಸದಸ್ಯತ್ವ (ರೂ.೧೦೦/-)ವನ್ನು ಕೈಬಿಡಬೇಕೆಂದು ಸಭೆ ತೀರ್ಮಾನಿಸಲಾಯಿತು.

(ಆ) ಅಜೀವ ಸದಸ್ಯತ್ವದ ಶುಲ್ಕವನ್ನು ರೂ.೧೦೦೦/- ದಿಂದ ರೂ.೨,೦೦೦/-ಕ್ಕೆ ಹೆಚ್ಚಿಸಲಾಯಿತು. ಈ ಹೆಚ್ಚಳಕ್ಕೂ ಸರ್ವಸದಸ್ಯರು ತಮ್ಮ ಅನುಮೋದನೆಯನ್ನು ನೀಡಿದ್ದನ್ನು, ದಾಖಲಿಸಲಾಯಿತು.

(ಇ) ಸಂಘ, ಸಂಸ್ಥೆಗಳ ಸದಸ್ಯತ್ವವನ್ನು ಸಭೆಯು ರೂ.೨೦೦೦/-ರಿಂದ ರೂ.೪,೦೦೦/-ಕ್ಕೆ ಹೆಚ್ಚಿಸಬೇಕೆಂಬ ಸರ್ವಾನುಮತದ ನಿರ್ಣಯವನ್ನು ದಾಖಲಿಸಲಾಯಿತು.

ಈ ಹೆಚ್ಚಳದ ಶುಲ್ಕವನ್ನು ನವೆಂಬರ್ ೧, ೨೦೧೪ರಿಂದ ಜಾರಿಗೊಳಿಸಲು ತೀರ್ಮಾನಿಸಲಾಯಿತು.

೫. ಪ್ರತಿನಿಧಿ ಶುಲ್ಕದ ಬಗ್ಗೆ ಹೆಚ್ಚಿನ ಮಾಹಿತಿ ಬಯಸಿದ ಸದಸ್ಯ ಡಾ. ಎಚ್. ಚಂದ್ರಶೇಖರ್: ಶ್ರೀ ಎಂ.ಬಿ. ಪಾಟೀಲ್‌ರವರು, ಪ್ರತಿನಿಧಿಶುಲ್ಕವನ್ನು ಕುರಿತು, ಪ್ರತಿನಿಧಿಗಳಿಗೆ ನೀಡುವ ವಸತಿ, ಸತ್ಕಾರ, ಸ್ಮರಣಿಕೆ, ಲೇಖನ ಸಾಮಗ್ರಿ, ಸಮ್ಮೇಳನದ ಮಾಹಿತಿ, ಅಕಾದೆಮಿಯ ಧ್ಯೇಯ, ಸಾಧನೆಗಳು, ಕೈಚೀಲ ಮುಂತಾದವುಗಳನ್ನು ನೀಡುವ ಬಗ್ಗೆ ತಗಲುವ ವೆಚ್ಚ, ಅತಿಥೇಯರ ಕರ್ತವ್ಯಗಳೇನು (Hosts responsibilities), ಗಣ್ಯ ಅತಿಥಿಗಳ ವಾಹನ ವೆಚ್ಚ ಯಾರು ವಹಿಸಬೇಕು? ಹೀಗೆ ಮುಂತಾದ ಅನೇಕ ಅಂಶಗಳನ್ನೊಳಗೊಂಡಿವೆ ಎಂದು ವಿವರಿಸಿರು. ಈ ಮೇಲೆ ಹೇಳಿದ ಎಲ್ಲಾ ವೆಚ್ಚಗಳನ್ನು ಅಥವಾ ಕೆಲವನ್ನು ಅತಿಥೇಯರು ವಹಿಸಿಕೊಂಡ ಪಕ್ಷದಲ್ಲಿ, ಪ್ರತಿನಿಧಿ ಶುಲ್ಕವನ್ನು ಅತಿಥೇಯರು ಸಂಗ್ರಹಿಸುತ್ತಾರೆ. ಹಾಗಿಲ್ಲದ ಪಕ್ಷದಲ್ಲಿ ಅಕಾದೆಮಿಯು ಪ್ರತಿನಿಧಿ ಶುಲ್ಕವನ್ನು ಸಂಗ್ರಹಿಸಿ "ಮೂಲನಿಧಿ" (Corpus Fund) ಎಂಬ Accounts Head ಶೀರ್ಷಿಕೆಯಡಿಯಲ್ಲಿ ಜಮಾ ಮಾಡಿ ಮೇಲೆ ಹೇಳಿದ ಖರ್ಚುಗಳನ್ನು ಪೂರೈಸಿ, ಅಗತ್ಯಬಿದ್ದಲ್ಲಿ ಅಕಾದೆಮಿಯೇ ಹೆಚ್ಚುವರಿ ವೆಚ್ಚವನ್ನು ಭರಿಸುತ್ತದೆ ಮತ್ತು ಭರಿಸಿಕೊಂಡು ಬಂದಿದೆ ಎಂದು ಸಮಜಾಯಿಷಿ ನೀಡಿದ ನಂತರ, ಸಭೆ ಮುಂದಿನ ಕಾರ್ಯದತ್ತ ಗಮನ ಹರಿಸಿತು.

೬. ಹಿಂದಿನ ವಾರ್ಷಿಕ ಸಭೆಯಲ್ಲಿ ಕೈಗೊಂಡ ಠರಾವು ಬಗ್ಗೆ ಅಕಾದೆಮಿಯು ಯಾವ ಕ್ರಮವನ್ನು ಕೈಗೊಂಡಿತು ಎಂದು ಶ್ರೀ ಸಮತೀಂದ್ರ ನಾಡಿಗ್ ತಿಳಿಸಬಯಸಿದರು: ೨೦೧೩ರಲ್ಲಿ ಮಂಡನೆಯಾದ ಠರಾವು "ಕರ್ನಾಟಕ ಸರ್ಕಾರದ ದ್ವಿತೀಯ ಪಿ.ಯು.ಸಿ. ಇತಿಹಾಸ ಪಠ್ಯಕ್ರಮದ ಪರಿಷ್ಕರಣೆಗಾಗಿ ಈಗ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ಭಾರತ ಹಾಗೂ ಕರ್ನಾಟಕದ ಇತಿಹಾಸ ಒಳಗೊಂಡಿರುತ್ತದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಬನವಾಸಿ ಕದಂಬರ ಶಾಸನವಾದ, ಗುಡ್ನಾಪುರದ ರವಿವರ್ಮನ ಶಾಸನ ಅಥವಾ ಅರತಲೆಯ ಪ್ರಿಯವೃತವರ್ಮನ ಶಾಸನಗಳನ್ನು ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಪದವಿಪೂರ್ವ ಶಿಕ್ಷಣ ಇಲಾಖೆಯನ್ನು, ಸರ್ವಸದಸ್ಯರ ಈ ಸಭೆಯು ಒತ್ತಾಯಿಸುತ್ತದೆ" ಎಂಬ ಠರಾವಿನ ಬಗ್ಗೆ–

ಸಮಜಾಯಿಷಿ: ಈಗಾಗಲೇ ಸರ್ಕಾರವು ಹೊಸ ಪಠ್ಯಕ್ರಮವನ್ನು ಜಾರಿಗೆ ತಂದಿರುವುದರಿಂದ, ಈ ಠರಾವನ್ನು ಸರ್ಕಾರಕ್ಕೆ ರವಾನಿಸುವ ಅವಶ್ಯಕತೆ ಕಂಡುಬರಲಿಲ್ಲ. ಮುಂದೆ ಅಗತ್ಯಬಿದ್ದಲ್ಲಿ, ಈ ವಿಷಯವನ್ನು ಸಾಂಘಿಕ ಸೂಕ್ತಕ್ರಮವನ್ನು ಕೈಗೊಳ್ಳಬಹುದಾಗಿ ಡಾ. ದೇವರಕೊಂಡಾರೆಡ್ಡಿಯವರು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸರ್ವಸದಸ್ಯರ ಸಭೆಯಲ್ಲಿ ಬೇರಾವ ಠರಾವುಗಳು ಮಂಡನೆಯಾಗಲಿಲ್ಲ.

೧೦. **ಅಧ್ಯಕ್ಷರ ಭಾಷಣ:-** ಅಕಾದೆಮಿಯ ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹಲವಾರು ಅಂಶಗಳನ್ನು ಪ್ರಸ್ತಾಪಿಸಿದ್ದು, ಅವುಗಳನ್ನು ಇಲ್ಲಿ ಸಾರಾಂಶ ರೂಪದಲ್ಲಿ ಕೊಡಲಾಗಿದೆ.

ಅ. ಕರ್ನಾಟಕ ಇತಿಹಾಸ ಅಕಾದೆಮಿಯ ಜಾಲತಾಣವನ್ನು ವೀಕ್ಷಿಸುವ ಜನಸಾಗರ ದಿನೇ ದಿನೇ ಹೆಚ್ಚುತ್ತಿದೆ. ಅಂದರೆ ಇತಿಹಾಸಪ್ರಜ್ಞೆ ಜನರಲ್ಲಿ ನಿಧಾನವಾಗಿಯಾದರೂ, ಅಧಿಕವಾಗುವ ಸೂಚನೆಗಳು ಕಂಡುಬರುತ್ತಿವೆ. ಜನರು ನಮ್ಮ ಜಾಲತಾಣವನ್ನು ವೀಕ್ಷಿಸಿ, ಅವರ ಅನಿಸಿಕೆಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದಾರೆ. ಆದ್ದರಿಂದ ಸದಸ್ಯರು ತಮ್ಮ ಬಳಿಯಿರುವ ಅಪರೂಪದ ವೀರಗಲ್ಲುಗಳು, ಶಾಸನಗಳು, ಇತರೆ ಸ್ಮಾರಕಗಳು ಮುಂತಾದ ವಿಶೇಷ ಛಾಯಾಚಿತ್ರಗಳನ್ನು ನಮ್ಮ ಗಮನಕ್ಕೆ ತಂದು ಜನರನ್ನು ತಲುಪುವ ವ್ಯವಸ್ಥೆ ಮಾಡಬೇಕಾಗಿದೆ. ಇದಕ್ಕೆ ಸದಸ್ಯರ ಬೆಂಬಲ ಬೇಕಾಗಿದೆ. ಇಂಗ್ಲೀಷಿನಲ್ಲಿ ಸಾರಾಂಶ ಕೊಡುವ ವ್ಯವಸ್ಥೆಯಾಗಬೇಕಾಗಿದೆ. ಸದಸ್ಯರ ಸಹಕಾರ ಈ ನಿಟ್ಟಿನಲ್ಲಿ ಸ್ವಾಗತಾರ್ಹ.

ಆ. ಇನ್ನು ಮುಂದೆ ಇತಿಹಾಸ ದರ್ಶನವು ಅಕಾದೆಮಿಯ ಜಾಲತಾಣದಲ್ಲಿ ಲಭ್ಯವಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ವೀಕ್ಷಕರಿದ್ದು, ವಿದ್ವಾಂಸರು ತಮ್ಮ ಲೇಖನದ ಗುಣಮಟ್ಟವನ್ನು ಇನ್ನೂ ಹೆಚ್ಚಿಸಿಕೊಳ್ಳಲು ಶ್ರಮವಹಿಸಬೇಕು.

ಇ. ಅಕಾದೆಮಿಗೆ ಇನ್ನು ಮುಂದೆ ಭಾರತೀಯ ಇತಿಹಾಸ ಅನುಸಂಧಾನ, ನವದೆಹಲಿ (ICHR, New Delhi) ಸಂಸ್ಥೆಯಿಂದ ಆರ್ಥಿಕ ನೆರವನ್ನು ಇತಿಹಾಸ ದರ್ಶನ ಮುದ್ರಣಕ್ಕೂ ಮತ್ತು ಸಮ್ಮೇಳನಕ್ಕೂ ಪಡೆಯುವ ಉದ್ದೇಶವಿದೆ. ಆದ್ದರಿಂದ ಸದಸ್ಯರು ಹೆಚ್ಚಿನ ಶ್ರಮವಹಿಸಿ, ತಮ್ಮ ಸಂಶೋಧನಾತ್ಮಕ ಪ್ರಬಂಧಗಳ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕಾಗುತ್ತದೆ.

ಈ. ಸದಸ್ಯರ ವಿಳಾಸಪಟ್ಟಿಯನ್ನು ಅಕಾದೆಮಿಯ ಜಾಲತಾಣದಲ್ಲಿ ಹಾಕಲಾಗಿದೆ. ಸದಸ್ಯರು ಇದರ ಸದುಪಯೋಗ ಪಡೆದುಕೊಳ್ಳಬೇಕು.

ಉ. ಡಿ.ಲಿಟ್./ಪಿಎಚ್.ಡಿ ಪಡೆದ ಪದವೀಧರರ ಶ್ರಮ ಮತ್ತು ಸಮಯ ಬಹಳ ಅಮೂಲ್ಯವಾದದ್ದು. ಇದನ್ನು ಮನಗಂಡ ನಮ್ಮ ತುಮಕೂರಿನ ಸದಸ್ಯರಾದ ಶ್ರೀ ಜಿ. ರಾಜನ್‌ರವರು ಅಕಾದೆಮಿಯಲ್ಲಿ ಒಂದು ದತ್ತಿನಿಧಿ ಸ್ಥಾಪಿಸಿ, ಪ್ರತಿವರ್ಷ ಅಕಾದೆಮಿಯ ಸನ್ಮಾನದ ಜೊತೆಗೆ, ಪ್ರೋತ್ಸಾಹ ಧನವನ್ನು ಕೊಡುವ ಶ್ಲಾಘನೀಯ ಕೆಲಸಕ್ಕೆ ನಮ್ಮ ಅಭಿನಂದನೆಗಳು. ಇದು ಈ ಸಮ್ಮೇಳನದಿಂದ ಆರಂಭಗೊಂಡಿದೆ.

ಊ. **ಜಿಲ್ಲಾ ಘಟಕಗಳು:** ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಿವೆ. ಕಾರ್ಯಕ್ರಮದ ವರದಿಯನ್ನು ನಮಗೆ ಕಳುಹಿಸಿಕೊಟ್ಟಲ್ಲಿ, ಇತಿಹಾಸ ದರ್ಶನದಲ್ಲಿ ಅದರ ಪ್ರಕಟಣೆಯಾಗಬೇಕು. ಆದ್ದರಿಂದ ವರದಿಯನ್ನು ಅಕಾದೆಮಿಗೆ ಕಳುಹಿಸಿಕೊಡುವ ವ್ಯವಸ್ಥೆಯಾಗಬೇಕು.

ಋ. ಅಕಾದೆಮಿಯಲ್ಲಿ ವರ್ಷದಲ್ಲಿ ಮೂರು ಕಾರ್ಯಕ್ರಮಗಳು ಜಾಚೂತಪ್ಪದೆ ನಡೆಸಿಕೊಂಡು ಬಂದಿರುವುದು – (೧) ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮ, (೨) ಮೂರು ದಿನಗಳ ವಾರ್ಷಿಕ ಸಮ್ಮೇಳನ ಮತ್ತು (೩) ಇತಿಹಾಸ ದರ್ಶನದ ಬಿಡುಗಡೆ – ಈ ಎಲ್ಲಾ ಕಾರ್ಯಕ್ರಮಗಳಿಗೆ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮತ್ತು ಬಾಳೆಹೊನ್ನೂರು ರಂಭಾಪುರಿ ಮಠದ ವತಿಯಿಂದ, ಅಕಾದೆಮಿಗೆ ಧನಸಹಾಯ ಬರುತ್ತಿದೆ. ಈ ವರ್ಷ ಭಾರತೀಯ ಇತಿಹಾಸ ಅನುಸಂಧಾನ (ICHR, New Delhi) ಸಹ, ನಮ್ಮ ಇತಿಹಾಸ ದರ್ಶನದ ಸಂಪುಟ ೨೮ಕ್ಕೆ ಧನಸಹಾಯ ಒದಗಿಸಿದೆ (ರೂ.೪೫,೦೦೦/–) ಈ ಎಲ್ಲಾ ಸಂಸ್ಥೆಗಳಿಗೆ ನಾವು ಚಿರಋಣಿಗಳಾಗಿದ್ದೇವೆ.

ಎ. ಈಗಿರುವ ಪರಿಸ್ಥಿತಿಯಲ್ಲಿ ಅಕಾದೆಮಿಗೆ ಪ್ರತಿವರ್ಷ ಸಮ್ಮೇಳನ ನಡೆಸಲು ಒಂದು ಸಂಘ, ಸಂಸ್ಥೆಯ ಆತಿಥೇಯತ್ವದ ಅವಶ್ಯಕತೆಯಿದ್ದೇ ಇರುತ್ತದೆ. ಹೀಗಿರುವಾಗ ೨೦೧೫ರಲ್ಲಿ ನಮ್ಮ ೨೯ನೇ ವಾರ್ಷಿಕ ಸಮ್ಮೇಳನಕ್ಕೆ ಈಗಿನಿಂದಲೇ ಕಾರ್ಯಪ್ರವೃತ್ತರಾಗಬೇಕೆಂದು, ಸದಸ್ಯರಲ್ಲಿ ಮನವಿ ಮಾಡಿಕೊಂಡರು. ಈ ವಿಷಯದಲ್ಲಿ ಸದಸ್ಯರು ಮುಕ್ತವಾಗಿ ತಮ್ಮೊಂದಿಗೆ ಚರ್ಚಿಸಬಹುದು. ಮುಂದಿನ ವರ್ಷದ ಸಮ್ಮೇಳನ ಎಲ್ಲಿ ಆಯೋಜಿಸುವುದು ಎಂಬ ಸಲಹೆ ಜಿಲ್ಲಾ ಘಟಕಗಳಿಂದ ಬಂದರೆ, ಚರ್ಚಿಸಲು ಸಿದ್ಧ ಎಂದು ತಿಳಿಸಿದರು.

ಏ. ಕೊನೆಯದಾಗಿ ಅಕಾದೆಮಿಯ ಕಾರ್ಯಶೈಲಿಯನ್ನು ಮತ್ತು ಅಕಾದೆಮಿಯ ಎಲ್ಲಾ ಚಟುವಟಿಕೆಗಳನ್ನು, ಕಾರ್ಯಕ್ರಮಗಳನ್ನು ಗಮನಿಸಿ ಪ್ರೋತ್ಸಾಹಕರವಾಗಿ ಮಾತನಾಡಿದ ಗಣ್ಯರೆಲ್ಲರಿಗೂ ಹೃತ್ಪೂರ್ವಕವಾಗಿ ವಂದನೆಗಳನ್ನು ಸಲ್ಲಿಸಿದರು.

ವಂದನಾರ್ಪಣೆ / ಕೃತಜ್ಞತೆಗಳು:

ಅಕಾದೆಮಿಯ ೨೮ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ, ಎಲ್ಲಾ ಗಣ್ಯರಿಗೂ ಮತ್ತು ಸದಸ್ಯರಿಗೂ ಸಂತೋಷವಾಗುವಂತೆ ಸಮರ್ಪಕವಾಗಿ ಸಮ್ಮೇಳನವನ್ನು ನಡೆಸಿಕೊಟ್ಟ ವಿದ್ಯಾವರ್ಧಕ ಸಂಘ, ಶಿರ್ವ, ಇದರ ಆಡಳಿತಾಧಿಕಾರಿಗಳಿಗೂ, ಸಂಚಾಲಕರಿಗೂ, ಪ್ರಾಧ್ಯಾಪಕ ವರ್ಗದವರಿಗೂ, ವಿದ್ಯಾರ್ಥಿಗಳಿಗೂ, ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿದ ಡಾ. ದೇವರಕೊಂಡಾರೆಡ್ಡಿ ಅವರಿಗೂ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ಕೆ. ದೇವರಾಜಸ್ವಾಮಿಯವರಿಗೂ, ಮತ್ತು ಕೋಶಾಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರಿಗೂ, ಕಾರ್ಯದರ್ಶಿ ಡಾ. ಜಯಮ್ಮ ಅವರುಗಳಿಗೆ, ಹಾಗೂ ಸರ್ವಸದಸ್ಯರುಗಳಿಗೆ ಕಾರ್ಯದರ್ಶಿಗಳಾದ ಡಾ. ಪಿ.ವಿ. ಕೃಷ್ಣಮೂರ್ತಿ, ಧನ್ಯವಾದಗಳನ್ನು ಸಲ್ಲಿಸುವುದರೊಂದಿಗೆ ಸರ್ವಸದಸ್ಯರ ಸಭೆ ಮುಕ್ತಾಯವಾಯಿತು.

೨೦೧೪-೧೫ ಮತ್ತು ೨೦೧೫-೧೬ ಸಾಲಿಗೆ ರೂಪಗೊಂಡ ೧೫ನೆಯ ಕಾರ್ಯಕಾರಿ ಸಮಿತಿ ಸಭೆ

ದಿನಾಂಕ ೨೭-೯-೨೦೧೪ರಂದು ಶನಿವಾರ ಸಂಜೆ ೭.೩೦ಕ್ಕೆ ೨೮ನೇ ವಾರ್ಷಿಕ ಸಮ್ಮೇಳನದ ಸಭಾಸ್ಥಾನವಾದ ಉಡುಪಿ ಜಿಲ್ಲೆಯ ಶಿರ್ವದ ಮೂಲ್ಕಿ ಸುಂದರರಾಮ ಶೆಟ್ಟಿ ಕಾಲೇಜಿನ ಸಭಾಂಗಣದಲ್ಲಿ ಡಾ. ದೇವರಕೊಂಡಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಹದಿನೈದನೆಯ ಕಾರ್ಯಕಾರಿ ಸಮಿತಿಯ ಮೊದಲ ಸಭೆಯ ನಡಾವಳಿಗಳು.

ಕಾರ್ಯಕ್ರಮ ಸೂಚಿ

(೧) ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳ ಆಯ್ಕೆ

(೨) ಕಾರ್ಯಕಾರಿ ಸಮಿತಿಗೆ ನಾಮಕರಣ ಸದಸ್ಯರ ಆಯ್ಕೆ (Nomination) ಮತ್ತು

(೩) ಇತರೇ ವಿಷಯವಿದ್ದಲ್ಲಿ, ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚೆಗೆ ಅವಕಾಶ

ಸಭೆಯಲ್ಲಿ ಹಾಜರಿದ್ದ ಕಾರ್ಯಕಾರಿ ಸಮಿತಿಯ ಸದಸ್ಯರುಗಳು:

(೧) ಡಾ. ದೇವರಕೊಂಡಾರೆಡ್ಡಿ

(೨) ಡಾ. ಎಂ.ಜಿ. ನಾಗರಾಜ್

(೩) ಶ್ರೀ ಎಂ.ಬಿ. ಪಾಟೀಲ್

(೪) ಡಾ. ಎಚ್.ಎಸ್. ಗೋಪಾಲರಾವ್

(೫) ಡಾ. ಎಚ್. ಜಯಮ್ಮ ಕರಿಯಣ್ಣ

(೬) ಡಾ. ಎ.ಕೆ. ಶಾಸ್ತ್ರಿ, ಶಿರಸಿ

(೭) ಡಾ. ಅಮರೇಶ ಯತಗಲ್

(೮) ಶ್ರೀ ಸಿದ್ದರಗಿರಿ ಓ. ಚಂದ್ರೇಗೌಡ

(೯) ಡಾ. ಪಿ.ವಿ. ಕೃಷ್ಣಮೂರ್ತಿ

(೧೦) ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ

(೧೧) ಡಾ. ಬಾಲಕೃಷ್ಣ ಹೆಗಡೆ

(೧೨) ಡಾ. ಕೆಳದಿ ವೆಂಕಟೇಶ ಜೋಯಿಸ್

(೧೩) ಪ್ರೊ. ಕಲ್ಲಪ್ಪ ಮಹಾದೇವಪ್ಪ ಗರಗ

(೧೪) ಶ್ರೀ ಜಿ.ಕೆ. ದೇವರಾಜಸ್ವಾಮಿ

(೧೫) ಪ್ರೊ. ಟಿ. ಮುರುಗೇಶಿ, ಉಡುಪಿ

(೧೬) ಶ್ರೀ ಟಿ.ಎಚ್.ಎಂ. ಬಸವರಾಜ್, ಬಳ್ಳಾರಿ

(೧೭) ಶ್ರೀಮತಿ ಹನುಮಾಕ್ಷಿ ಗೋಗಿ, ಹುಬ್ಬಳ್ಳಿ

(೧೮) ಶ್ರೀ ಎಂ.ಎನ್. ಪ್ರಭಾಕರ್, ಮೈಸೂರು

(೧೯) ಶ್ರೀ ಬಿ.ಎಸ್. ಗುರುಪ್ರಸಾದ್, ಬೆಂಗಳೂರು

(೨೦) ಡಾ. ಶರಣಬಸಪ್ಪ ಕೋಲ್ಕಾರ್, ಗಂಗಾವತಿ

(೨೧) ಪ್ರೊ. ರಾಮಚಂದ್ರ ಮಿಟ್ಟಿಮನಿ, ಧಾರವಾಡ

ಸಭೆಯ ನಡಾವಳಿಗಳು:

೧. ಸಭೆಯ ಅಧ್ಯಕ್ಷತೆಯನ್ನು ವಹಿಸಲು ಡಾ. ದೇವರಕೊಂಡಾರೆಡ್ಡಿ ಅವರನ್ನು ಕೋರಲಾಯಿತು. ಶ್ರೀ ಜಿ.ಕೆ. ದೇವರಾಜಸ್ವಾಮಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

೨. ೨೦೧೩ರಿಂದ ೨೦೧೫ರ ಈ ಎರಡೂ ವರ್ಷಗಳ ಅವಧಿಯಲ್ಲಿ ಅಕಾದೆಮಿಯ ಕಾರ್ಯಚಟುವಟಿಕೆಗಳನ್ನು ಅತ್ಯಂತ ಯಶಸ್ವಿಯಾಗಿ ಹಾಗೂ ಸಮರ್ಪಕವಾಗಿ ನಿರ್ವಹಿಸಿದ ಹಿಂದಿನ ಕಾರ್ಯಕಾರಿ ಸಮಿತಿಗೆ ಧನ್ಯವಾದಗಳೊಂದಿಗೆ ವಂದನೆ ಸಲ್ಲಿಸಲಾಯಿತು.

೩. ಮುಂದಿನ ಎರಡು ವರ್ಷಗಳ ಅವಧಿಗೆ ಆಯ್ಕೆಯಾಗಿರುವ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಸ್ವಾಗತ ಕೋರಲಾಯಿತು.

೪. ನೂತನ ಕಾರ್ಯಕಾರಿ ಸಮಿತಿಯು ಮುಂದಿನ ಎರಡು ವರ್ಷಗಳ ಅವಧಿಗೆ ಈ ಕೆಳಕಂಡ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು. ಕಳೆದ ಬಾರಿಯಂತೆ, ಈ ವರ್ಷವೂ ಸರ್ವಸದಸ್ಯರು, ಸರ್ವಸದಸ್ಯರ ಸಭೆಯಲ್ಲಿ ಡಾ. ಸೂರ್ಯನಾಥ ಯು. ಕಾಮತ್ ಅವರೇ ಅಕಾದೆಮಿಯ ಗೌರವಾಧ್ಯಕ್ಷರಾಗಿ ಮುಂದುವರೆಯಬೇಕೆಂದು ಒಮ್ಮತದಿಂದ ಬಂದ ಒಪ್ಪಿಗೆಯಂತೆ, ಅವರ ಹೆಸರನ್ನು ಅಕಾದೆಮಿಯ ಗೌರವಾಧ್ಯಕ್ಷ ಸ್ಥಾನಕ್ಕೆ ನೂತನ ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಸ್ವೀಕರಿಸಿತು.

ನೂತನ ಪದಾಧಿಕಾರಿಗಳ ಸ್ಥಾನ, ಸೂಚನೆ ಮತ್ತು ಅನುಮೋದನೆ:

ಅಧ್ಯಕ್ಷರು:

ಡಾ. ದೇವರಕೊಂಡಾರೆಡ್ಡಿ	–	ಸೂಚನೆ: ಎಂ.ಬಿ. ಪಾಟೀಲ್ ಅನುಮೋದನೆ: ಶ್ರೀ ದೇವರಾಜಸ್ವಾಮಿ

ಉಪಾಧ್ಯಕ್ಷರುಗಳು:

೧. ಡಾ. ಎಂ.ಜಿ. ನಾಗರಾಜ್	–	ಸೂಚನೆ: ಸಿದ್ದನಗಿರಿ ಓ. ಚಂದ್ರೇಗೌಡ
೨. ಡಾ. ಎಚ್.ಎಸ್. ಗೋಪಾಲರಾವ್	–	ಅನುಮೋದನೆ: ಡಾ. ಅಮರೇಶ್ ಯತಗಲ್

ಪ್ರಧಾನ ಕಾರ್ಯದರ್ಶಿ:

ಶ್ರೀ ಜಿ.ಕೆ. ದೇವರಾಜಸ್ವಾಮಿ	–	ಸೂಚನೆ: ಡಾ. ಎಚ್.ಎಸ್. ಗೋಪಾಲರಾವ್ ಅನುಮೋದನೆ: ಶ್ರೀ ಎಂ.ಬಿ. ಪಾಟೀಲ್

ಕಾರ್ಯದರ್ಶಿಗಳು:

೧. ಡಾ. ಪಿ.ವಿ. ಕೃಷ್ಣಮೂರ್ತಿ	–	ಸೂಚನೆ: ಡಾ. ಎಂ.ಜಿ. ನಾಗರಾಜ್ ಅನುಮೋದನೆ: ಡಾ. ದೇವರಕೊಂಡಾರೆಡ್ಡಿ
೨. ಡಾ. ಜಯಮ್ಮ ಕರಿಯಣ್ಣ	–	ಸೂಚನೆ: ಶ್ರೀ ಜಿ.ಕೆ. ದೇವರಾಜಸ್ವಾಮಿ ಅನುಮೋದನೆ: ಕಲ್ಲಪ್ಪ ಮಹಾದೇವಪ್ಪ ಗರಗ

ಕೋಶಾಧಿಕಾರಿ:

ಶ್ರೀ ಎಂ.ಬಿ. ಪಾಟೀಲ್	–	ಸೂಚನೆ: ಡಾ. ದೇವರಕೊಂಡಾರೆಡ್ಡಿ ಅನುಮೋದನೆ: ಶ್ರೀ ಬಿ.ಎಸ್. ಗುರುಪ್ರಸಾದ್

೫. ಕಾರ್ಯಕಾರಿ ಸಮಿತಿಗೆ, ಅವಶ್ಯಕತೆಗನುಗುಣವಾಗಿ, ಆಹ್ವಾನಿತ ಸದಸ್ಯರನ್ನು ನಾಮಕರಣ ಮಾಡುವ ಹಕ್ಕನ್ನು ಸಭೆಯು ಅಧ್ಯಕ್ಷರಿಗೆ ನೀಡಿತು. ಆಹ್ವಾನಿತ ಸದಸ್ಯರನ್ನು ತೆಗೆದುಕೊಳ್ಳುವ ಬಗ್ಗೆ ಸರ್ವಸದಸ್ಯರ ಸಭೆಯಲ್ಲಿ ಸದಸ್ಯರ ಸೂಚನೆಗಳು ಬಂದಿದ್ದರೂ ಕಾರ್ಯಕಾರಿ ಸಮಿತಿಗೆ ತೆಗೆದುಕೊಳ್ಳುವ ನಿರ್ಧಾರವನ್ನು ಸಭೆಯು ನೀಡಿತ್ತು. ಸರ್ವಸದಸ್ಯರ ಸಭೆಯಲ್ಲಿ ಹಾಜರಿದ್ದ ಡಾ. ನಂಜುಂಡಸ್ವಾಮಿ, ತುಮಕೂರು, ಶ್ರೀ ಪಾಟೀಲ್ ಬಸವನಗೌಡ, ಯಾದಗಿರಿ, ಡಾ. ಸ್ಮಿತಾ ಸುರೇಬಾನ್‌ಕರ್, ಬೆಳಗಾವಿ, ಡಾ. ಎಫ್.ಟಿ. ಹಳ್ಳಿಕೇರಿ, ಬಳ್ಳಾರಿ, ಇವರುಗಳನ್ನು ಆಹ್ವಾನಿತ ಸದಸ್ಯರನ್ನಾಗಿ ತೆಗೆದುಕೊಳ್ಳಬಹುದೆಂದು ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರು ಸೂಚಿಸಿದ್ದನ್ನು ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು. ಆಹ್ವಾನಿತ ಸದಸ್ಯರ ಅವಶ್ಯಕತೆ ಇದ್ದಲ್ಲಿ ಕಾರ್ಯಕಾರಿ ಸಮಿತಿಗೆ ತೆಗೆದುಕೊಳ್ಳಲು ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರಿಗೆ ಸಭೆಯು ಒಮ್ಮತದಿಂದ ಒಪ್ಪಿಗೆ ನೀಡಿತು.

೬. ಇತಿಹಾಸ ದರ್ಶನ ಮಾರಾಟ ವಿಷಯದಲ್ಲಿ, ವಾರ್ಷಿಕ ಸಮ್ಮೇಳನದಿಂದ ಮುಂದಿನ ವಾರ್ಷಿಕ ಸಮ್ಮೇಳನದವರೆಗೆ ಸದಸ್ಯರಿಗೆ ಆ ಸಾಲಿನ ಇತಿಹಾಸ ದರ್ಶನವನ್ನು ಕೇವಲ ನೂರು ರೂಪಾಯಿಗಳಿಗೆ ನೀಡಲಾಗುತ್ತಿದೆ. ಅನಂತರ ಸದಸ್ಯರಿಗೆ ಇತಿಹಾಸ ದರ್ಶನ ಹಿಂದಿನ ಸಾಲಿನ ಸಂಪುಟಗಳು ಬೇಕಾದಲ್ಲಿ ಶೇಕಡಾ ಇಪ್ಪತ್ತೈದು (೨೫%)ರಷ್ಟು ರಿಯಾಯಿತಿ ದರದಲ್ಲಿ ನೀಡಬಹುದು, ಅಲ್ಲದೆ ಸದಸ್ಯರ ಲೇಖನವಿದ್ದು, ಹಿಂದೆ ತೆಗೆದುಕೊಳ್ಳದಿದ್ದಲ್ಲಿ ಅವರಿಗೆ ರೂ.೧೦೦/- ಗಳಿಗೆ ನೀಡಬಹುದು ಎಂಬ ಸಲಹೆ ನೀಡಿದ ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರು ಸೂಚಿಸಿದ್ದನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಇತಿಹಾಸ ದರ್ಶನ ಸಂಪುಟ ೨೫ರ ಹಿಂದಿನ ಸಂಪುಟಗಳನ್ನು ಶೇಕಡಾ ಐವತ್ತು (೫೦%)ರಷ್ಟನ್ನು ಯಾವ ಯಾವ ಸಂಪುಟಗಳಿವೆಯೋ ಅವುಗಳಿಗೆ ರಿಯಾಯಿತಿ ನೀಡಬಹುದು ಎಂದು ಎಂ.ಬಿ. ಪಾಟೀಲರು ಸೂಚಿಸಿರುವುದನ್ನು ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

೭. ಎಲ್ಲಾ ಕಾರ್ಯಕಾರಿ ಸಮಿತಿಯ ಸಭೆಗಳಿಗೆ, ಸದಸ್ಯರು ಹಾಜರಾಗಲು, ಅನಾನುಕೂಲವಾದಲ್ಲಿ, ಅವರ ಗೈರುಹಾಜರಾತಿಯನ್ನು ಅಧ್ಯಕ್ಷರಿಗಾಗಲೀ / ಪ್ರಧಾನ ಕಾರ್ಯದರ್ಶಿಗಾಗಲೀ ಪತ್ರಮುಖೇನ / ದೂರವಾಣಿ ಮೂಲಕ / ಎಸ್.ಎಂ.ಎಸ್. ಮೂಲಕವಾಗಲೀ ಕಾರ್ಯಸೂಚಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಕಾರ್ಯಕಾರಿ ಸಮಿತಿಯು ಕಡ್ಡಾಯವಾಗಿ ಅಪೇಕ್ಷಿಸುತ್ತದೆ.

೮. ಕೆಲವು ಕಾರ್ಯಕಾರಿ ಸಮಿತಿಯ ಸದಸ್ಯರು ತಮ್ಮ ಜಿಲ್ಲೆಗಳಲ್ಲಿ ಕಾರ್ಯಕಾರಿ ಸಮಿತಿಯ ಸಭೆಯನ್ನು ನಡೆಸುವುದಾಗಿ ಉತ್ಸಾಹ ತೋರಿಸಿದ್ದಾರೆ. ಅಗತ್ಯವಿದ್ದಲ್ಲಿ ಅವರ ಕೋರಿಕೆಯನ್ನು ಪರಿಶೀಲಿಸಿ ಅಂತಹ ಜಿಲ್ಲೆಗಳಲ್ಲಿ ಸಭೆ ನಡೆಸುವ ಸಂದರ್ಭ ಬಂದಲ್ಲಿ, ಅವರಿಗೆ ಸಾಕಷ್ಟು ಮುಂಚಿತವಾಗಿ ಸೂಚನೆ ಕೊಡುವ ಏರ್ಪಾಡು ಮಾಡಲಾಗುವುದು.

೯. ನೂತನ ಸದಸ್ಯತ್ವದ ಶುಲ್ಕ ಜಾರಿಗೊಳಿಸುವ ಬಗ್ಗೆ: ಸರ್ವಸದಸ್ಯರ ಸಭೆಯ ತೀರ್ಮಾನಿಸಿದಂತೆ, ಆಜೀವ ಸದಸ್ಯತ್ವ ಶುಲ್ಕ ರೂ.೨೦೦೦/- ಮತ್ತು ಸಂಘಸಂಸ್ಥೆಗಳ ಸದಸ್ಯರ ಶುಲ್ಕ ರೂ.೪೦೦೦/-ವನ್ನು ೨೦೧೪ರ ನವೆಂಬರ್ ಒಂದರಿಂದಲೇ ಜಾರಿಗೊಳಿಸಲು ಕಾರ್ಯಕಾರಿ ಸಮಿತಿ ಸರ್ವಾನುಮತದಿಂದ ನಿರ್ಧರಿಸಿತು.

ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿಯವರ ವಂದನಾರ್ಪಣೆಯೊಂದಿಗೆ, ನೂತನ ಕಾರ್ಯಕಾರಿ ಸಮಿತಿಯ ಮೊದಲ ಸಭೆ ಮುಕ್ತಾಯವಾಯಿತು.

ಕಾರ್ಯಕಾರಿ ಸಮಿತಿಯ ಸದಸ್ಯರು

ಕ್ರಸಂ.	ಹೆಸರು ಮತ್ತು ವಿಳಾಸ	ವಯಸ್ಸು	ವೃತ್ತಿ	ಧಾರಣ ಮಾಡಿರುವ ಪದನಾಮ
೧.	ಡಾ. ದೇವರಕೊಂಡಾರೆಡ್ಡಿ ನಂ. ೩೫/೧, ೨೦ನೆಯ ಮುಖ್ಯರಸ್ತೆ, ವೆಂಕಟೇಶ್ವರ ಲೇಔಟ್, ಬಿ.ಟಿ.ಎಂ. ೧ನೆಯ ಹಂತ, ಬೆಂಗಳೂರು–೬೮.	೬೬	ನಿವೃತ್ತ ಪ್ರಾಧ್ಯಾಪಕರು ಶಾಸನ ತಜ್ಞರು ಸಂಶೋಧಕರು	ಅಧ್ಯಕ್ಷರು
೨.	ಡಾ. ನಾಗರಾಜ್ ಎಂ.ಜಿ. ನಂ. ೨೨೧, ೬೮ನೇ ಕ್ರಾಸ್ ೫ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು–೫೬೦೦೧೦.	೮೪	ಸಾಹಿತಿಗಳು ಮತ್ತು ಸಂಶೋಧಕರು	ಉಪಾಧ್ಯಕ್ಷರು
೩.	ಡಾ. ಗೋಪಾಲರಾವ್.ಎಚ್.ಎಸ್. 'ಸ್ಮೃತಿ ಶ್ರೀ ಸ್ಕಂದ' ನಂ. ೧೪೪ ಅರಸಿನಕುಂಟೆ, ನೆಲಮಂಗಲ ತಾ. ಬೆಂಗಳೂರು ಗ್ರಾಮಾಂತರ–೨೩.	೬೬	ಸರ್ಕಾರಿ ನಿವೃತ್ತ ಇಂಜಿನಿಯರ್ ಕ.ವಿ.ಪ್ರ. ನಿಗಮ	ಉಪಾಧ್ಯಕ್ಷರು
೪.	ದೇವರಾಜಸ್ವಾಮಿ ಜಿ.ಕೆ. ನಂ. ೫೬. 'ತ್ರಯಿ' ಮೈಸೂರು ಲ್ಯಾಂಪ್ಸ್ ಲೇಔಟ್ ಚನ್ನನಾಯಕನಪಾಳ್ಯ ೨ನೇ ಹಂತ ನಾಗಸಂದ್ರ ಅಂಚೆ ಬೆಂಗಳೂರು–೫೬೦೦೭೩.	೫೫	ಕನ್ನಡ ಉಪನ್ಯಾಸಕರು ಸಂಶೋಧಕರು	ಪ್ರಧಾನ ಕಾರ್ಯದರ್ಶಿ
೫.	ಡಾ. ಕೃಷ್ಣಮೂರ್ತಿ ಪಿ.ವಿ. ನಂ. ೩೭, ೩ನೇ ಅಡ್ಡರಸ್ತೆ ಸುಬ್ಬಣ್ಣ ಲೇಔಟ್, ಹರಿನಗರ ಕ್ರಾಸ್, ಬೆಂಗಳೂರು–೬೨.	೬೨	ನಿವೃತ್ತ ಇಂಜಿನಿಯರ್ ಸಂಶೋಧಕರು	ಕಾರ್ಯದರ್ಶಿ
೬.	ಡಾ. ಜಯಮ್ಮ ಹೆಚ್. ಕರಿಯಣ್ಣ 'ಆಶೀರ್ವಾದ', ನಂ. ೨೯೩೩ ೧೩ನೇ ಮುಖ್ಯರಸ್ತೆ ವಿಜಯನಗರ, ೨ನೇ ಹಂತ ಬೆಂಗಳೂರು–೫೬೦೦೪೦	೭೪	ನಿವೃತ್ತ ಮೇನೇಜರ್ ಲೋಕೋಪಯೋಗಿ ಇಲಾಖೆ, ಬೆಂಗಳೂರು	ಕಾರ್ಯದರ್ಶಿ

೭.	[illegible]	[illegible]	ನಿವೃತ್ತ ಮುಖ್ಯ ಸಂಪಾದಕರು ಕರ್ನಾಟಕ ಗ್ಯಾಸೆಟಿಯರ್ ಬೆಂಗಳೂರು	[illegible]
೮.	ಡಾ. ವೆಂಕಟೇಶ್ ಜೋಯಿಸ್ ಕೆಳದಿ, ಪ್ರಾಚ್ಯವಸ್ತು ಸಂಗ್ರಹಾಲಯ, ಕೆಳದಿ ಸಾಗರ ತಾಲ್ಲೂಕು ಶಿವಮೊಗ್ಗ-೫೭೭೪೦೧.	೫೨	ಕ್ಯುರೇಟರ್ ವಸ್ತುಸಂಗ್ರಹಾಲಯ ಕೆಳದಿ	ಸದಸ್ಯರು
೯.	ಡಾ. ಹನುಮಾಕ್ಷಿ ಗೋಗಿ 'ಕಾರ್ತೀಕಶ್ರೀ', ಹೆಚ್.ಐ.ಜಿ. ೨೭, ನವನಗರ, ಹುಬ್ಬಳ್ಳಿ ಧಾರವಾಡ ಜಿಲ್ಲೆ-೫೮೦೦೨೫.	೫೮	ನಿವೃತ್ತ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್ ಸಂಶೋಧಕರು	ಸದಸ್ಯರು
೧೦.	ಡಾ. ಬಾಲಕೃಷ್ಣ ಹೆಗಡೆ ಉಪನ್ಯಾಸಕರು, ಇತಿಹಾಸ ವಿಭಾಗ, ಕಮಲಾ ನೆಹರು ಮಹಿಳಾ ಕಾಲೇಜು ಕೆ.ಟಿ. ಶಾಮಯ್ಯಗೌಡ ರಸ್ತೆ ಶಿವಮೊಗ್ಗ-೫೭೭೨೦೧.		ಇತಿಹಾಸ ಉಪನ್ಯಾಸಕರು ಶಿವಮೊಗ್ಗ	ಸದಸ್ಯರು
೧೧.	ಶ್ರೀ ಬಸವರಾಜ ಟಿ.ಎಚ್.ಎಂ. ನಂ. ೩೬/೨೫, ವಿದ್ಯಾಗಿರಿ ಅಗ್ನಿಶಾಮಕ ದಳದ ಹಿಂಭಾಗ ಬಳ್ಳಾರಿ ಕ್ಲಬ್ ಹತ್ತಿರ ಬಳ್ಳಾರಿ-೫೮೩೧೦೪.	೬೫	ನಿವೃತ್ತ ಅಧಿಕಾರಿಗಳು	ಸದಸ್ಯರು
೧೨.	ಶ್ರೀ ಪ್ರಭಾಕರ್ ಎಂ.ಎನ್. 'ಪದ್ಮಪ್ರಭಾ' ನಂ. ೪೨ ಬ್ಲಾಕ್-೧೭, ಶ್ರೀರಾಮಪುರ ೨ನೇ ಹಂತ, ಮೈಸೂರು-೧೧.	೫೦	ನಿವೃತ್ತ ಬ್ಯಾಂಕ್ ಅಧಿಕಾರಿ	ಸದಸ್ಯರು
೧೩.	ಶ್ರೀ ಅಮರೇಶ್ ಯತಗಲ್ ಪ್ರಾಧ್ಯಾಪಕ ಇತಿಹಾಸ ವಿಭಾಗ ವಚನಸಂಗಮ ಸ್ನಾತಕೋತ್ತರ ಕೇಂದ್ರ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ತೊರವಿ ಬಿಜಾಪುರ-೫೮೬೧೦೮.	೪೧	ಇತಿಹಾಸ ಉಪನ್ಯಾಸಕರು ಸಂಶೋಧಕರು	ಸದಸ್ಯರು
೧೪.	ಶ್ರೀ ಗುರುಪ್ರಸಾದ್ ಬಿ.ಎಸ್. ನಂ. ೩೧, ೩೩ನೇ 'ಎ' ಅಡ್ಡರಸ್ತೆ, ೪ನೇ ಬ್ಲಾಕ್ ಜಯನಗರ, ಬೆಂಗಳೂರು-೪೧ ಧಾರವಾಡ-೫೮೦೦೦೩.	೬೫	ನಿವೃತ್ತ ಆಡಳಿತಾಧಿಕಾರಿ ಜೀವವಿಮಾ ನಿಗಮ	ಸದಸ್ಯರು
೧೫.	ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ ವಿಶ್ರಾಂತ ಪ್ರಾಂಶುಪಾಲರು ಪಟೇಲ್‌ವಾಡಿ, ಸಿಂಧನೂರು ರಾಯಚೂರು ಜಿಲ್ಲೆ-೨೮.	೬೬	ನಿವೃತ್ತ ಪ್ರಾಂಶುಪಾಲರು	ಸದಸ್ಯರು

೧೬.	ಶ್ರೀ ಸಿದ್ದರಗಿರಿ ಓ.ಎಲ್. ಚಂದ್ರೇಗೌಡ, ಸಿದ್ದಗಿರಿ ಕಾಫಿ ಎಸ್ಟೇಟ್, ಜಾಗರ ಅಂಚೆ ಚಿಕ್ಕಮಗಳೂರು ಜಿಲ್ಲೆ-೩೦.	೭೨	ಕಾಫಿ ಬೆಳೆಗಾರರು	ಸದಸ್ಯರು
೧೭.	ಡಾ. ಶಾಸ್ತ್ರಿ ಎ.ಕೆ. ಭವಾನಿ ಬಿಲ್ಡಿಂಗ್ ಹೊಸ ಮಾರ್ಕೆಟ್ ಯಾರ್ಡ್ ಬಳಿ, ಸಿರಸಿ, ಉತ್ತರ ಕನ್ನಡ ಜಿಲ್ಲೆ-೫೮೧೪೦೨.	೭೫	ನಿವೃತ್ತ ಉಪನ್ಯಾಸಕರು ಸಂಶೋಧಕರು	ಸದಸ್ಯರು
೧೮.	ಶ್ರೀ ಮುರಿಗೆಪ್ಪ ಟಿ. ಉಪನ್ಯಾಸಕರು ಎಂ.ಎಸ್.ಆರ್.ಎಸ್. ಕಾಲೇಜು, ಶಿರ್ವ, ಉಡುಪಿ ಜಿಲ್ಲೆ-೫೭೪೧೧೬.		ಇತಿಹಾಸ ಉಪನ್ಯಾಸಕರು ಸಂಶೋಧಕರು	ಸದಸ್ಯರು
೧೯.	ಶ್ರೀ ಕಲ್ಲಪ್ಪ ಮಹಾದೇವಪ್ಪ ಗದಗ ಇತಿಹಾಸ ಉಪನ್ಯಾಸಕರು ಜೆ.ಸಿ.ಟಿ.ಎಂ. ಪಿ.ಯು. ಕಾಲೇಜು ಮುಲಕೋಟ, ಗದಗ ಜಿಲ್ಲೆ-೦೫.	೪೩	ಇತಿಹಾಸ ಉಪನ್ಯಾಸಕರು ಸಂಶೋಧಕರು	ಸದಸ್ಯರು
೨೦.	ಡಾ. ಶರಣಬಸಪ್ಪ ಕೋಲ್ಕಾರ ಪ್ರಾಚಾರ್ಯರು, ಕಲ್ಮಠ ಶ್ರೀ ಚನ್ನಬಸವಸ್ವಾಮಿ ಮಹಿಳಾ ಮಹಾವಿದ್ಯಾಲಯ, ಗಂಗಾವತಿ ತಾ. ಕೊಪ್ಪಳ ಜಿಲ್ಲೆ-೫೮೩೨೨೭.	೪೮	ಇತಿಹಾಸ ಉಪನ್ಯಾಸಕರು ಸಂಶೋಧಕರು	ಸದಸ್ಯರು
೨೧.	ಪ್ರೊ. ರಾಮಚಂದ್ರ ಮಿಟ್ಟಿಮನಿ ಇತಿಹಾಸ ವಿಭಾಗ, ಕೆ.ಎಲ್.ಇ. ಸಂಸ್ಥೆ ಕಲಾ, ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ ವಿದ್ಯಾನಗರ.	೫೨	ಇತಿಹಾಸ ಉಪನ್ಯಾಸಕರು ಸಂಶೋಧಕರು	ಸದಸ್ಯರು

ಕಾರ್ಯಕಾರಿ ಸಮಿತಿ ಸಭೆಗಳು

೨೦೧೪-೧೫ನೇ ಸಾಲಿನಲ್ಲಿ ಅಕಾದೆಮಿಯ ಕಾರ್ಯಕಾರಿ ಸಮಿತಿಯ ಸಭೆಗಳು ಒಟ್ಟು ೩ ಬಾರಿ ನಡೆದಿವೆ. ಸದಸ್ಯರು ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ಖುದ್ದು ಹಾಜರಿದ್ದು ಅಥವಾ ಪತ್ರದ ಮೂಲಕ ಇಲ್ಲವೆ ದೂರವಾಣಿ ಎಸ್.ಎಂ.ಎಸ್. ವಿದ್ಯುನ್ಮಾನ ಟಪಾಲುಗಳ ಮೂಲಕ ಸೂಚನೆ ಸಲಹೆಗಳನ್ನು ನೀಡಿ ಅಕಾದೆಮಿಯ ಯಶಸ್ಸಿಗೆ ಸಹಕರಿಸುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು.

ಅಕಾದೆಮಿಯ ಸದಸ್ಯಬಲ

ಈ ಸಮ್ಮೇಳನದ ಆರಂಭದ ವೇಳೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯತ್ವ ಬಲ : ಆಜೀವ ಸದಸ್ಯತ್ವ ಹೊಂದಿರುವವರು ಒಟ್ಟು ೧೭೭೩.

ಅಕಾದೆಮಿಯ ಜಿಲ್ಲಾ ಘಟಕಗಳು

ಬೆಂಗಳೂರು ನಗರ ಜಿಲ್ಲಾ ಘಟಕ : ಡಾ. ಇಂದಿರಾ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ಗುರುಪ್ರಸಾದ್ ಅವರ ಕಾರ್ಯದರ್ಶಿತ್ವದಲ್ಲಿ ಬೆಂಗಳೂರು ಘಟಕವು ಕಾರ್ಯನಿರ್ವಹಿಸುತ್ತಿದ್ದು, ಎಂದಿನಂತೆ ಈ ವರ್ಷವು ಕೂಡ ಆಯ ನಗರದ ಪ್ರೌಢಶಾಲೆ, ಪದವಿಪೂರ್ವ ಪದವಿ ಕಾಲೇಜುಗಳಲ್ಲಿ ವ್ಯಾಸಂಗಾರ್ಥಿಗಳಿಗೆ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ಪಾರಿತೋಷಕಗಳನ್ನು ನೀಡಿ ಪ್ರೋತ್ಸಾಹಿಸುತ್ತಿದೆ.

ಬೆಂಗಳೂರು ಜಿಲ್ಲಾ ಘಟಕವು ಪ್ರಸಕ್ತ ಸಾಲಿನಲ್ಲಿ ಎರಡು ಕ್ಷೇತ್ರಕಾರ್ಯಗಳ ಪ್ರವಾಸಗಳನ್ನು ಏರ್ಪಡಿಸಿತ್ತು.

೧. ಏಪ್ರಿಲ್ ೨೦೧೫ರಲ್ಲಿ ಒಂದು ದಿವಸದ ಪ್ರವಾಸವು ಮಂಡ್ಯ ಜಿಲ್ಲೆಯ ನಾಗಮಂಗಲದ ಸೌಮ್ಯಕೇಶವ ದೇವಾಲಯ, ತೊಣ್ಣೂರಿನ ನಂಬಿನಾರಾಯಣ ದೇವಾಲಯ, ಮೇಲುಕೋಟೆಯ ಚೆಲುವನಾರಾಯಣ ದೇವಾಲಯಗಳಿಗೆ ಭೇಟಿ ನೀಡಿ ದೇವಾಲಯದ ವಾಸ್ತುಗಳ ಮತ್ತು ಅಲ್ಲಿನ ಶಾಸನಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಲಾಯಿತು.

೨. ೨೧ ಜನರ ಸದಸ್ಯರ ಮತ್ತು ಅವರ ಸ್ನೇಹಿತರ ತಂಡವು ಜುಲೈ ೧೮ ಮತ್ತು ೧೯ರಂದು "ಹೊಯ್ಸಳ ವಾಸ್ತು-ಶಿಲ್ಪ ವೈಭವ ದರ್ಶನ" ವೆಂಬ ಎರಡು ದಿವಸದ ಪ್ರವಾಸವನ್ನು ಕೆ.ಆರ್.ಪೇಟೆ ತಾಲ್ಲೂಕು ಹೊಸಹೊಳಲು ಲಕ್ಷ್ಮೀನಾರಾಯಣ ದೇವಾಲಯ, (೧೩ನೇ ಶತಮಾನ) ಅಗ್ರಹಾರ ಬಾಚಳ್ಳಿ ಗ್ರಾಮ [ಹೊಯ್ಸಳರ ಕಾಲದ ಗರುಡ ಪದ್ಧತಿಯನ್ನು ಬಿಂಬಿಸುವ ಗರುಡಸ್ತಂಭಗಳು]ದಲ್ಲಿ ಗರುಡಸ್ತಂಭಗಳು, ವೀರಗಲ್ಲುಗಳು ಮುಂತಾದವುಗಳನ್ನು ವೀಕ್ಷಿಸಿ, ನಂತರ ಕಿಕ್ಕೇರಿ, ಗೋವಿಂದನಹಳ್ಳಿ [ಪಂಚಲಿಂಗೇಶ್ವರ ಮತ್ತು ವೇಣುಗೋಪಾಲ ಸ್ವಾಮಿ ದೇವಸ್ಥಾನ] ಗಳಿಗೆ ಭೇಟಿ ನೀಡಿ ರಾತ್ರಿ ತಂಗಲು ತಂಡವು ಶ್ರವಣಬೆಳಗೊಳಕ್ಕೆ ತೆರಳಿತು. ಮರುದಿನ ಶ್ರವಣಬೆಳಗೊಳದಲ್ಲಿ ಅಕ್ಕನ ಬಸದಿಯಿಂದ ಪ್ರಾರಂಭಿಸಿ, ಸಿದ್ಧಾಂತ ಬಸದಿ, ದಾನಶಾಲೆ, ನಗರದ

[illegible] ಭೇಟಿ ನೀಡಿತು. [illegible] ಶಾಂತಿನಾಥ [illegible] ಭೇಟಿ ನೀಡಿತು. ನಂತರ [illegible] ಭೇಟಿ ನೀಡಿತು. [illegible] ಭೇಟಿ ನೀಡಿತು. [illegible] ಇಲ್ಲಿ [illegible] ನವರಂಗದ [illegible] ವೀಕ್ಷಿಸಿ, ರಾತ್ರಿ ೯ ಗಂಟೆಗೆ ಬೆಂಗಳೂರು ತಲುಪಿತು.

ಈ ಎಲ್ಲಾ ಪ್ರವಾಸಗಳನ್ನು ಅಕಾಡೆಮಿಯ ಕಾರ್ಯದರ್ಶಿಗಳಾದ ಡಾ. ಜಯಮ್ಮ ಎಚ್. ಕರಿಯಣ್ಣರವರು ಸಮರ್ಥವಾಗಿ ಮತ್ತು ಅಚ್ಚುಕಟ್ಟಾಗಿ ಆಯೋಜಿಸಿದ್ದರು. ಅಂತೆಯೇ ಈ ಪ್ರವಾಸದ ಸಂಪೂರ್ಣ ವರದಿಯನ್ನು ಅಕಾಡೆಮಿಗೆ ನೀಡಿದೆ.

ಹೊಸಪೇಟೆ ತಾಲ್ಲೂಕು ಘಟಕ: ಡಾ. ಕೆ.ಎಂ. ಸುರೇಶ್, ಡಾ. ಎಂ. ಕೊಟ್ರೇಶ್, ಡಾ. ಟಿ. ಮಂಜುನಾಥ, ಡಾ. ಕೆ. ರವೀಂದ್ರನಾಥ ಮುಂತಾದ ಸ್ನೇಹಿತರೊಡಗೂಡಿ ಬೇರೆ ಬೇರೆ ಸ್ಥಳಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹಗಳನ್ನು ಎಂದಿನಂತೆ ನಡೆಸಿಕೊಂಡು ಬರುತ್ತಿದೆ.

ಉಡುಪಿ ಜಿಲ್ಲಾ ಘಟಕ: ಡಾ. ಜಗದೀಶ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯವಾಗಿ ಶಾಲಾಕಾಲೇಜುಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳನ್ನು ಆಯೋಜಿಸಿ ಐತಿಹಾಸಿಕ ಅರಿವನ್ನು ಜಾಗೃತಗೊಳಿಸುವ ಕೆಲಸವನ್ನು ಮಾಡುತ್ತಿದೆ.

ಶಿವಮೊಗ್ಗ ಜಿಲ್ಲಾ ಘಟಕ: ಬೆಕ್ಕಿನ ಕಲ್ಮಠದ ಸ್ವಾಮೀಜಿಯವರ ಪೋಷಣೆಯಲ್ಲಿ ಶ್ರೀ ಎಚ್.ಎಂ. ಚಂದ್ರಶೇಖರಪ್ಪ (ಅಧ್ಯಕ್ಷರು), ಶ್ರೀ ಬಲದೇವಕೃಷ್ಣ ಜೆನಕೇರಿ (ಪ್ರಧಾನ ಕಾರ್ಯದರ್ಶಿ), ಡಾ. ಎಸ್.ಜಿ. ಸಾಮಕ್, ಡಾ. ಜಿ. ಜಗದೀಶ, ಡಾ. ಕೆಳದಿ ವೆಂಕಟೇಶ್ ಜೋಯಿಸ್, ಡಾ. ಕೆಳದಿ ಗುಂಡಾ ಜೋಯಿಸ್, ಡಾ. ಜಿ.ಸಿ. ಕಲ್ಲಾಪುರ ಮುಂತಾದವರ ಸಹಭಾಗಿತ್ವದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳ ಜೊತೆಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ಮೈಸೂರು ಜಿಲ್ಲಾಘಟಕ (ಮಂಡ್ಯ ಜಿಲ್ಲೆಯೂ ಸೇರಿ): ಈ ಘಟಕವು ಕಾರ್ಯಾರಂಭ ಮಾಡಿದ್ದು, ಪ್ರೊ. ಚಂದ್ರರಾಜೇ ಅರಸ್ ಅವರ ಗೌರವಾಧ್ಯಕ್ಷತೆಯಲ್ಲಿ ಡಾ. ಎಚ್.ಎಸ್. ಉಷಾರಾಣಿ (ಕಾರ್ಯಾಧ್ಯಕ್ಷೆ), ಶ್ರೀ ಶ್ರೀಲೂರು ವೆಂಕಟಕೃಷ್ಣ, ಡಾ. ಜಿ.ಸಿ. ಇಂದಿರಾ, ಡಾ. ಎಸ್. ಸದಾಶಿವ (ಉಪಾಧ್ಯಕ್ಷ), ಡಾ. ಜಿ.ಸಿ. ಸುಧಾಮಣಿ (ಪ್ರಧಾನ ಕಾರ್ಯದರ್ಶಿ), ಶ್ರೀ ಎಚ್.ಡಿ. ಹರೀಶ್ ಹಾಗೂ ಪ್ರೊ. ನಯಿಂ-ಉರ್-ರೆಹಮಾನ್ (ಸಹ ಕಾರ್ಯದರ್ಶಿಗಳು) ಹಾಗೂ ಶ್ರೀಮತಿ ಜಿ.ಎಸ್. ಸುಭದ್ರ ಖಜಾಂಚಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಇತಿಹಾಸ ಕಾರ್ಯಾಗಾರ ಮಾಸಿಕ ಉಪನ್ಯಾಸ, ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಚಾರಿತ್ರಿಕ ಅರಿವನ್ನು ಮೂಡಿಸಲು ಶ್ರಮಿಸುತ್ತಿದೆ.

ಬೆಳಗಾವಿ ಜಿಲ್ಲಾ ಘಟಕ: ಡಾ. ಸ್ಮಿತಾ ಸುರೇಬಾನಕರ್, ಶ್ರೀ ಜಿ.ಐ. ಚೆನಗೋಡಿ, ಡಾ. ಎಚ್.ಜಿ. ಕೋಲಕಾರ, ಡಾ. ಜಿ.ಆರ್. ಹಂದೂರು, ಶ್ರೀ ಮಂಜುನಾಥ ಹದ್ದಿ ಮುಂತಾದವರ ನೇತೃತ್ವ ಮತ್ತು ಚಚಡಿಯ ಸರ್ಕಾರ ಪ್ರಿ.ಜಿ.ದೇಸಾಯಿ ಫೌಂಡೇಷನ್ ಅಧ್ಯಕ್ಷ ಶ್ರೀ ನಾಗರಾಜ ಈಶಪ್ರನಾಯಕ ದೇಸಾಯಿ ಅವರ ಸಹಕಾರದೊಂದಿಗೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಕೃತಜ್ಞತೆಗಳು: ಕರ್ನಾಟಕ ಇತಿಹಾಸ ಅಕಾಡೆಮಿಯನ್ನು ಸೋದರ ಸಂಸ್ಥೆ ಎಂಬಂತೆ ಪರಿಗಣಿಸಿ ಸಹಕರಿಸುತ್ತಾ ಬಂದಿರುವ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ, ಅಕಾಡೆಮಿಯ ವಾರ್ಷಿಕ ಸಮ್ಮೇಳನ ಸಂದರ್ಭದಲ್ಲಿ ವಸ್ತುಪ್ರದರ್ಶನ ಏರ್ಪಡಿಸಿ, ಸಹಕರಿಸುತ್ತಿರುವ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ, ೨೦೧೫ರ "ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹ ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಆಶ್ರಯನೀಡಿ ಸಹಕರಿಸಿರುವ ಬೆಂಗಳೂರಿನ ನ್ಯಾಷನಲ್ ಕಾಲೇಜು, ಬಸವನಗುಡಿಯ ಆಡಳಿತ ಮಂಡಳಿ, ಅಧಿಕಾರಿ ಮತ್ತು ಸಿಬ್ಬಂದಿ ವರ್ಗ, ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಬಿ.ಎಂ.ಶ್ರೀ. ಪ್ರತಿಷ್ಠಾನದ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಶ್ರೀ ದೈಸಾನಿ ರುಕ್ಮಿಣಮ್ಮ ರತ್ನಂಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಶ್ರೀ ಅಶೋಕ ಕುಮಾರ್, ವಾಗ್ದೇವಿ ಮುದ್ರಣಾಲಯದ ಶ್ರೀ ಪೃಥು ಮತ್ತು ಸಿಬ್ಬಂದಿ ವರ್ಗ, ಶ್ರೀ ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಗಾಳಿಸ್ವಾಮಿ, ಡಾ. ಬಾ.ರಾ.ಗೋಪಾಲ ಪ್ರಶಸ್ತಿಗೆ ದತ್ತಿ ನೀಡಿರುವ ಡಾ. ಬಾ.ರಾ.ಗೋಪಾಲ್ ಕುಟುಂಬ ವರ್ಗ, ಸಮ್ಮೇಳನಾಧ್ಯಕ್ಷರ ಗೌರವಸ್ಮರಣ ಫಲಕವನ್ನು ಪ್ರಾಯೋಜಿಸಿರುವ ಶ್ರೀ ಕೆ. ಅಭಿಶಂಕರ ಕುಟುಂಬ ವರ್ಗ, "ಇತಿಹಾಸ ಸಂಸ್ಕೃತಿಶ್ರೀ" ಪ್ರಶಸ್ತಿಯನ್ನು ಪ್ರಾಯೋಜಿಸುತ್ತಿರುವ ದೈಸಾನಿ ಶ್ರೀಮತಿ ರುಕ್ಮಿಣಮ್ಮ ಶ್ರೀ ರತ್ನಂಶೆಟ್ಟಿ ಟ್ರಸ್ಟಿನವರಿಗೆ, ಡಾ. ಬಾ.ರಾ. ಗೋಪಾಲ್ ಪ್ರಶಸ್ತಿಯ ಸ್ಮರಣಫಲಕವನ್ನು ಪ್ರಾಯೋಜಿಸುತ್ತಾ ಬಂದಿರುವ ಶ್ರೀ ವೇಮಗಲ್ ಸೋಮಶೇಖರ್, ಇತಿಹಾಸ ದರ್ಶನ ವಾರ್ಷಿಕ ಸಂಚಿಕೆಯ ಮುದ್ರಣಕ್ಕೆ ಆಶೀರ್ವಾದಪೂರ್ವಕವಾಗಿ ಪ್ರತಿ ವರ್ಷದಂತೆ ಈ ವರ್ಷವೂ ರೂ.೭೫,೦೦೦/- (ಎಪ್ಪತ್ತೈದು ಸಾವಿರ ರೂ.) ನೆರವು ನೀಡಿರುವ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ಮಹಾಸಂಸ್ಥಾನದ ಜ.ಶ್ರೀ.ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಅವರಿಗೆ ಅಕಾಡೆಮಿಯು ೨೯ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ ಸಮ್ಮೇಳನದ ಯಶಸ್ವಿಗೆ ಕಾರಣರಾದ ಮೂಲ್ಕಿ ಸುಂದರರಾಮ್ ಶೆಟ್ಟಿ ಕಾಲೇಜು, ಶಿರ್ವ, ಉಡುಪಿ ಜಿಲ್ಲೆಯ ಆಡಳಿತಾಧಿಕಾರಿಗಳು ಹಾಗೂ ಇತರ ಕಾರ್ಯಕರ್ತರಿಗೂ ಅಕಾಡೆಮಿಯು ಆಭಾರಿಯಾಗಿದೆ. ಇತಿಹಾಸ ದರ್ಶನ ಸಂಚಿಕೆಯ ೩೦ನೆಯ ಸಂಪುಟವನ್ನು ಸಂಪಾದಿಸಿಕೊಟ್ಟಿರುವ ಸಂಪಾದಕರಾದ ಡಾ. ದೇವರಕೊಂಡಾರೆಡ್ಡಿ, ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರಿಗೆ, ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದ ಮಾಲೀಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಅಕಾಡೆಮಿಯು ಆಭಾರಿಯಾಗಿದೆ.

ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ

ಗೌರವಾಧ್ಯಕ್ಷರು ಡಾ. ಸೂರ್ಯನಾಥ ಯು. ಕಾಮತ್

ಡಾ. ದೇವರಕೊಂಡಾರೆಡ್ಡಿ
ಅಧ್ಯಕ್ಷರು

ಡಾ. ಎಂ.ಜಿ. ನಾಗರಾಜ್
ಡಾ. ಎಚ್.ಎಸ್. ಗೋಪಾಲರಾವ್
ಉಪಾಧ್ಯಕ್ಷರುಗಳು

ಪ್ರೊ. ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ

ಶ್ರೀ ಎಂ.ಬಿ. ಪಾಟೀಲ
ಕೋಶಾಧಿಕಾರಿ

ಡಾ. ಪಿ.ವಿ. ಕೃಷ್ಣಮೂರ್ತಿ
ಡಾ. ಜಯಮ್ಮ ಹೆಚ್. ಕರಿಯಣ್ಣ
ಕಾರ್ಯದರ್ಶಿಗಳು



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಉದ್ಘಾಟನೆ–ಬಳ್ಳಾರಿ.



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ–ಪದವಿಪೂರ್ವ ಕಾಲೇಜು, ಕಗ್ಗೋಡ, ವಿಜಾಪುರ.



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ವಿದ್ವಾಂಸರಿಂದ ಭಾಷಣ.



ವಿವೇಕಾನಂದ ಎಜುಕೇಷನ್ ಟ್ರಸ್ಟ್, ಹರಿಹರ.



ಹೋಲಿವಿಷನ್ ಪ್ರೌಢಶಾಲೆ, ಬಿ. ನಾರಾಯಣಪುರ, ಬೆಂಗಳೂರು.





ಹುಲಕೋಟಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀ ಮೋಹನ್ ಮರಗಣ್ಣನವರಿಂದ ಉದ್ಘಾಟನೆ ಹಾಗೂ ಶ್ರೀ ಹಂಚಬಾವಿಯವರಿಗೆ ಸನ್ಮಾನ.



ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ, ಟಿ.ಎಚ್.ಎಂ. ಸದಾಶಿವಯ್ಯನವರ ಕರ್ನಾಟಕದ ಗಡಿ ಗೆರೆಗಳು ಪುಸ್ತಕ ಬಿಡುಗಡೆ, ಹರಪ್ಪನಹಳ್ಳಿ.



ನೆಹರು ಕಾನ್ವೆಂಟ್ ಶಾಲೆ, ದೇವರಬಿಸನಹಳ್ಳಿ, ಬೆಂಗಳೂರು.



ಪರಂಪರೆ ಉಳಿಸಿ ಕಾರ್ಯಕ್ರಮ, ಮೂಲ್ಕಿ ಸುಂದರರಾಮ್ ಶೆಟ್ಟಿ ಕಾಲೇಜು, ಶಿರ್ವ, ಉಡುಪಿ.

ದಿನಾಂಕ ೦೯-೦೯-೨೦೧೪ ರಿಂದ ೮-೧೦-೨೦೧೫ರವರೆಗೆ
ದಾನಿಗಳು

೧.	ಶ್ರೀ ರಂಭಾಪುರಿ ಮಠ, ಬಾಳೆಹೊನ್ನೂರು	೨೫,೦೦೦.೦೦
೨.	ಡಾ. ಶ್ರೀಮತಿ ಇಂದಿರಾ ಹೆಗಡೆ	೧೧,೦೦೦.೦೦
೩.	ಶ್ರೀ ಕೆ.ಎಸ್. ಮಂಜು ಲಕ್ಷ್ಮೀ ಮುದ್ರಣಾಲಯ, ಬೆಂ.	೧೦,೦೦೦.೦೦
೪.	ಶ್ರೀ ಟಿ. ವೆಂಕಟೇಶ್, ಬೆಂಗಳೂರು	೮,೦೦೦.೦೦
೫.	ಶ್ರೀಮತಿ ಶಾಂತಿಪ್ರಭು, ಬೆಂಗಳೂರು	೬,೪೦೦.೦೦
೬.	ಶ್ರೀಮತಿ ಗೌರಿ, ಬೆಂಗಳೂರು	೫,೫೦೦.೦೦
೭.	ಡಾ. ಜಯಮ್ಮ ಕರಿಯಣ್ಣ, ಬೆಂಗಳೂರು	೫,೩೦೦.೦೦
೮.	ಶ್ರೀ ಸಿದ್ಧನಗಿರಿ ಚಂದ್ರೇಗೌಡ, ಚಿಕ್ಕಮಗಳೂರು	೫,೦೦೦.೦೦
೯.	ಶ್ರೀ ಟಿ.ಹೆಚ್.ಎಂ. ಬಸವರಾಜ್, ಬಳ್ಳಾರಿ	೧,೦೦೦.೦೦
೧೦.	ಶ್ರೀಮತಿ ಸ್ಮಿತಾರೆಡ್ಡಿ, ಬೆಂಗಳೂರು	೧,೦೦೦.೦೦
	ಒಟ್ಟು	೭೮,೨೦೦.೦೦

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು


ಆಡಳಿತ ಮಂಡಲಿಯ ಸದಸ್ಯರು ೨೦೧೪-೧೬



ಡಾ॥ ಜಿ.ಎಸ್. ಧೀಕ್ಷಿತ್
ಗೌರವ ಅಧ್ಯಕ್ಷರು (೨೦೦೪ರ ವರೆಗೆ)



ಡಾ॥ ಸೂರ್ಯನಾಥ ಕಾಮತ್
ಗೌರವ ಅಧ್ಯಕ್ಷರು



ಡಾ॥ ದೇವರಕೊಂಡಾರೆಡ್ಡಿ
ಕಾರ್ಯಾಧ್ಯಕ್ಷರು



ಡಾ॥ ಎಂ.ಜಿ. ನಾಗರಾಜ್
ಉಪಾಧ್ಯಕ್ಷರು



ಡಾ॥ ಎಚ್.ಎಸ್. ಗೋಪಾಲರಾವ್
ಉಪಾಧ್ಯಕ್ಷರು



ಶ್ರೀ ಎಂ.ಬಿ. ಪಾಟೀಲ್
ಕೋಶಾಧ್ಯಕ್ಷರು



ಶ್ರೀ ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ



ಡಾ॥ ಪಿ.ವಿ. ಕೃಷ್ಣಮೂರ್ತಿ
ಕಾರ್ಯದರ್ಶಿ



ಡಾ॥ ಜಯಮ್ಮ ಎಚ್. ಕರಿಯಣ್ಣ
ಕಾರ್ಯದರ್ಶಿ

ಕಾರ್ಯಕಾರಿ ಸಮಿತಿ ಸದಸ್ಯರು



ಡಾ॥ ಎ.ಕೆ. ಶಾಸ್ತ್ರಿ
ಶಿರಸಿ



ಡಾ॥ ವೆಂಕಟೇಶ್ ಜೋಯಿಶ್
ಕೆಳದಿ



ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ
ರಾಯಚೂರು



ಡಾ॥ ಹನುಮಾಕ್ಷಿ ಗೋಗಿ
ಧಾರವಾಡ



ಡಾ॥ ಅಮರೇಶ್ ಯತಗಲ್
ಬಿಜಾಪುರ



ಡಾ॥ ಬಾಲಕೃಷ್ಣ ಹೆಗ್ಗಡೆ
ಶಿವಮೊಗ್ಗ



ಪ್ರೊ. ಮುರುಗೇಶಿ ಓ.
ಉಡುಪಿ



ಶ್ರೀ ಪ್ರಭಾಕರ್ ಎಂ.ಎನ್.
ಮೈಸೂರು



ಶ್ರೀ ಗುರುಪ್ರಸಾದ್ ಬಿ.ಎಸ್.
ಬೆಂಗಳೂರು



ಶ್ರೀ ಟಿ.ಎಚ್.ಎಂ. ಬಸವರಾಜ
ಬಳ್ಳಾರಿ



ಶ್ರೀ ಕಲ್ಲಪ್ಪ ಮಹದೇವಪ್ಪ ಗುರಗ
ಗದಗ



ಶ್ರೀ ಸಿದ್ದಗಿರಿ ಓ.ಎಲ್. ಚಂದ್ರೇಗೌಡ
ಚಿಕ್ಕಮಗಳೂರು



ಡಾ. ಶರಣಬಸಪ್ಪ ಕೋಲ್ಕಾರ್
ಗಂಗಾವತಿ



ಪ್ರೊ. ರಾಮಚಂದ್ರ ಮಿಟ್ಟಿಮನಿ
ಧಾರವಾಡ



ಡಾ॥ ನಂಜುಂಡಸ್ವಾಮಿ
ತುಮಕೂರು



ಡಾ॥ ಸ್ಮಿತಾ ಪಿ. ಸುರೇಬಾನಕರ
ಬೆಳಗಾವಿ



ಡಾ॥ ಎಫ್.ಟಿ. ಹಳ್ಳಿಕೇರಿ,
ಹಂಪಿ



ಶ್ರೀ ಪಾಟೀಲ್ ಬಸನಗೌಡ
ಯಾದಗಿರಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ)

ಸಹಯೋಗ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

ಐತಿಹಾಸಿಕ ಪರಂಪರೆ ಉಳಿಸಿ



ಮರ-ಗಿಡಗಳಿಂದ ಸ್ಮಾರಕಗಳನ್ನು ರಕ್ಷಿಸಿ

ನಡುವೆ ಬೆಳೆಯುವ ಮರ ಗಿಡ ಅಲುಗಿಸುವುದು ಸ್ಮಾರಕದ ತಳ ಬುಡ



ಪ್ರಾಚೀನ ಗುಡಿ
ಚರ್ಚ್ ಮಸೀದಿ
ನಮ್ಮ ಹಿರಿಯರ
ಭವ್ಯ ಮುಡಿ



ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಭಿತ್ತಿ ಪತ್ರ - 2015

E-mail : karnatakaitihasaacademy25@gmail.com
Blog : itihasaacademy.blogspot.in
web : www.karnatakaitihasaacademy.org

ISBN-978-81-921255-5-8
9 788192 125558